ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೧—೧೯೫೧ನೇ ಸೋಮವಾರ [ಸಂಚಿಕೆ ೧೦೧

ವಿಶ್ವ ಶಾಂತಿಗಾಗಿ ಎಲ್ಲರೂ ಶ್ರಮಿಸಬೇಕು

ಜನರೆಲ್ಲರೂ ತಮ್ಮ ಭೇದಭಾವವನ್ನಳಿದು ಮುಂದೆ ಬರಬಹುದಾದ ಘಟನೆಗಳನ್ನು ಒಗ್ಗಟ್ಟಿನಿಂದ ಎದುರಿಸಬೇಕು

ಇನ್ನು ಸ್ವಲ್ಪ ಗಂಟೆಗಳೊಳಗಾಗಿ ಹೊಸ ವರ್ಷ ಪ್ರಾರಂಭವಾಗುವುದು. ಅಲ್ಲದೆ ಅರ್ಧ ಶತಮಾನವು ಕಳೆದು ಹೋಗುವುದು ಈ ಕಾಲದಲ್ಲಿ ಪ್ರಪಂಚದಲ್ಲೆಲ್ಲಾ ಅನೇಕ ಘಟನೆಗಳು ನಡೆದು ವಿಶೇಷ ಬದಲಾವಣೆಗಳಾಗಿವೆ ಆದರೆ ಶಾಂತಿಯೆಲ್ಲಿಯೂ ಕಾಣಬರದೆ ನಮ್ಮ ಮುಂದೆ ಕಷ್ಟಗಳು ಕವಿದಿದೆ ಭಾರತದಲ್ಲೂ ಇತ್ತೀಚೆಗೆ ಅನೇಕ ಘಟನೆಗಳು ನಡೆದಿವೆ ಅವುಗಳಲ್ಲೆಲ್ಲಾ ಭಾರಿಯಾದ ದು ಸ್ವತಂತ್ರಗಳಿಸುವದಕ್ಕೆ ದುಡಿದ, ಮಹಾವೀರ, ರಾಜನಿರ್ಮಾಣಕ, ಸಂಘಟನಕಾರರಾಗಿದ್ದ ಸರ್ದಾರ ಪಟೇಲರ ನಿಧನ ಅವರ ಕೆಲಸವು ಮುಗಿಯಿತ ಆದರೆ ನಾವು ಉತ್ತಮ ಸಲಹೆಯನ್ನು ಕೊಡುವವರನ್ನು ಕಳೆದುಕೊಂಡೆವು ಮತ್ತೊಂದು ದೇಶವನ್ನೆಲ್ಲಾ ಆಕ್ರಮಿಸಿಕೊಂಡಿರುವುದು, ಆಹಾರ ಅಭಾವ ; ಪ್ರಪಂಚದ ಅನೇಕ ಭಾಗಗಳಿಂದ ಆಹಾರ ವನ್ನು ತರಿಸಿಕೊಳ್ಳಲು ತಕ್ಕ ಏರ್ಪಾಡು ಮಾಡಲಾಗುತ್ತಲಿದೆ ದೇಶದಲ್ಲಿ ಒಂದೆಡೆ ವಿಶೇಷ ಆಹಾರಧಾನ್ಯವಿರುವುದು, ಮತ್ತೊಂದೆಡೆ ಆಹಾರ ಕೊರತೆಯಿರುವುದನ್ನು ನೋಡಿ ಸುಮ್ಮನಿರುವುದಕ್ಕಾಗುವದಿಲ್ಲ. ಸಮನಾದ ಹಂಚಿಕೆಯಾಗಲೇಬೇಕು. ಸ್ವಲ್ಪವನ್ನೂ ವ್ಯರ್ಥಮಾಡದೆ ಸರಿಯಾಗಿ ಹಂಚಿಕೆಯಾಗಲು ಎಲ್ಲರೂ ಸಹಕರಿಸಬೇಕು ರೇಷನ್ ಮತ್ತು ಕಂಟ್ರೋಲ್ ಯಾರಿಗೂ ಬೇಕಾಗಿಲ್ಲ. ಆದರೆ ಅಭಾವ ಕಾಲದಲ್ಲಿ ಇವುಗಳನ್ನು ವಿಧಿಯಿಲ್ಲದೆ ಜಾರಿಗೆ ತರಬೇಕಾಗಿದೆ, ಎಂದು ಭಾರತ ಪ್ರಧಾನಿ ನೆಹರೂರವರು ನಿನ್ನೆ ರಾತ್ರಿ ಹೊಸ ವರ್ಷ ಸಮಯದಲ್ಲಿತ್ತ ಸಂದೇಶದಲ್ಲಿ ನುಡಿದರು.

ಕಾಂಗ್ರೆಸ್ಸಿ ಸಂಸ್ಥೆಯ ವಿಷಯವಾಗಿ ಮಾತನಾಡುತ್ತಾ ೩೫ ವರ್ಷಗಳಿಂದ ನಾನು ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿದಿದ್ದೇನೆ ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ಕಾಂಗ್ರೆಸ್ಸಿನಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿದೆ. ಬರೀ ಸ್ಥಾನವನ್ನು ಗಳಿಸುವುದೇ ನಮ್ಮ ಕಾರ್ಯವಲ್ಲ ಸೇವಾ ತತ್ಪರರಾಗಿ, ಅಧಿಕಾರಲಾಲಸೆಯನ್ನು ಬಿಟ್ಟು ಕೆಲಸಮಾಡಬೇಕಾಗಿದೆ ನಮ್ಮಲ್ಲಿ ಹುಟ್ಟಿರುವ ಭೇದಭಾವವನ್ನೆಲ್ಲಾ ಮರೆತು ದುಡಿಯಬೇಕು

ಇಂದಿನ ಪರಿಸ್ಥಿತಿಯಲ್ಲಿ ಭಾರತವನ್ನು ಬಿಟ್ಟು ಹೊರಗೆ ಪ್ರವಾಸ ಕೈಗೊಳ್ಳಲು ನನಗೆ ಇಷ್ಟವಿಲ್ಲ. ಆದರೆ ಅಂತರ ರಾಷ್ಟ್ರೀಯ ಪರಿಸ್ಥಿತಿಯು ವಿಷಮಿಸಿಕೊಳ್ಳುತ್ತಲಿರುವುದರಿಂದ ಶಾಂತಿಪಾಲನೆಗಾಗಿ ಒಂದು ಮಾರ್ಗವನ್ನು ಸರಿಸಲು ಎಲ್ಲಾ ಕಾಮನ್‌ವೆಲ್ತ್ ರಾಷ್ಟ್ರಗಳ ಮುಖ್ಯ ಮಂತ್ರಿಗಳೆಲ್ಲರೂ ಸೇರುವ ಈ ಸಮ್ಮೇಳನದಲ್ಲಿ ಭಾಗವಹಿಸಲೋಸುಗ ನಾನು ಹೋಗಬೇಕಾಗಿದೆ. ಪ್ರಪಂಚದ ಸಣ್ಣ ಭಾಗವಾದ ಕೊರಿಯಾದಲ್ಲಿ ಯುದ್ಧವು ಪ್ರಾರಂಭವಾಗಿ ಅಲ್ಲಿ ಜನರು ಅಪಾರವಾದ ಕಷ್ಟವನ್ನನುಭವಿಸುತ್ತಲಿರುವರು ನಾವು ಇನ್ನೊಬ್ಬರಿಗೆ ಶರಣಾಗತರಾಗುವುದಿಲ್ಲ. ಆದರೆ ಶಾಂತಿಯನ್ನು ಕಾಪಾಡಲು ಯತ್ನಿಸಬೇಕಾಗಿದೆ. ಪ್ರಪಂಚದಲ್ಲೆಲ್ಲಾ ಶಾಂತಿ ಬೇಕಾಗಿದೆ.

ನಾನು ಹೋಗುತ್ತಲಿರುವ ಈ ಉತ್ತಮ ಕಾರ್ಯಕ್ಕೆ ತಮ್ಮೆಲ್ಲರ ಸಹಕಾರ, ಆಶೀರ್ವಾದ ನೀಡಿ ಎಂದು ಹೇಳಿದರು.

ಉದಾರ ದಾನ

ಬೆಂಗಳೂರಿನಲ್ಲಿರುವ ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಂ. ನಾರಾಯಣರಾಯರು ೩,೦೦೦ ರೂ.ಗಳನ್ನು ಕೊಟ್ಟು ದಿವಂಗತ ಶ್ರೀ ಕೆ. ಆರ್. ಪೂರ್ಣಯರವರ ಹೆಸರಿನಲ್ಲಿ ಪೊಲಿಟಿಕಲ್ ಸೈನ್ಸ್ ಶಾಖೆಯಲ್ಲಿ ಒಂದು ವಿದ್ಯಾರ್ಥಿವೇತನ ಕೊಡುವುದಕ್ಕಾಗಿ ಉದಾರದಾನ ಮಾಡಿದ್ದಾರೆ

ಹೈದರಾಬಾದಿನ ಶ್ರೀ ಲಕ್ಷ್ಮೀನರಸುರವರು ಮಹಾರಾಜಾಕಾಲೇಜು ಶತಮಾನೋತ್ಸವಕ್ಕೆ ೧೦೦ ರೂಪಾಯಿಗಳನ್ನು ಕೊಟ್ಟಿರುವರು

ಕೊರಿಯಾದಲ್ಲಿ ಹೊಸ ವರ್ಷಾರಂಭ

ಕೊರಿಯಾದಲ್ಲಿ ಹೊಸವರ್ಷದ ೩೮ನೇ ಅಕ್ಷಾಂಶದ ಉತ್ತರ ಮತ್ತು ದಕ್ಷಿಣ ಕೊರಿಯನ್ನರು ಒಬ್ಬರ ಮೇಲೊಬ್ಬರು ಗುಂಡುಹಾರಿಸಿ ಪ್ರಾರಂಭವಾಯಿತು. ಈ ಘಟನೆ ಸ್ವಲ್ಪಕಾಲ ನಡೆದು ನಿಂತಿತು. ಉಗ್ರಘಟನೆಗಳು ಸದ್ಯದಲ್ಲೇ ನಡೆಯುವ ಪರಿಸ್ಥಿತಿಯು ಕಾಣಬರುತ್ತಲಿದೆಯೆಂದು ಹೇಳಲಾಗಿದೆ.

ಟಿಬೆಟ್‌ನಲ್ಲಿ ಸಭೆ

ಟಿಬೆಟ್‌ನಲ್ಲಿ ಲಾಮಾಗಳೆಲ್ಲರೂ ಸೇರಿ ಸಭೆ ನಡೆಸಿ ಸರ್ದಾರ ಪಟೇಲರ ಬಗ್ಗೆ ತಕ್ಕ ಶೋಕವನ್ನು ವ್ಯಕ್ತಪಡಿಸುದುದಲ್ಲದೆ ನೆಹರೂರವರ ಸರ್ಕಾರಕ್ಕೆ ತಮ್ಮ ಪೂರ್ಣ ಬೆಂಬಲವಿದೆಯೆಂದು ತಿಳಿಸಿರುವರು.

ಮೈಸೂರಿಗೆ ಗೋಧಿ

ಮೊನ್ನೆ ಮದರಾಸಿಗೆ ಎರಡು ಹಡಗುಗಳಲ್ಲಿ ೫,೦೦೦ ಟನ್ ಗೋಧಿ ಬಂದಿದೆಯೆಂದೂ ಅದರಲ್ಲಿ ಮೈಸೂರಿಗೆ ೧೪,೦೦೦ ಟನ್ ಗೋಧಿಯು ಕೊಡಲ್ಪಡುವುದೆಂದೂ ತಿಳಿಯಬರುತ್ತದೆ.

ಆಹಾರಕೇಂದ್ರಕ್ಕೆ ವಿಜ್ಞಾನಿಗಳ ಭೇಟಿ

ಮೈಸೂರು ಜ. ೧

ಬೆಂಗಳೂರಿನಲ್ಲಿ ನಡೆಯಲಿರುವ ವಿಜ್ಞಾನಿಗಳ ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳಲ್ಲಿ ಕೆಲವರು ಇಂದು ಬೆಳಗ್ಗೆ ಆಹಾರಕೇಂದ್ರಕ್ಕೆ ಭೇಟಿಯಿತ್ತರು. ಕೇಂದ್ರದ ಡೈರೆಕ್ಟರಾದ ಡಾ|| ಸುಬ್ರಹ್ಮಣ್ಯಂರವರು ಅತಿಥಿಗಳನ್ನು ಸ್ವಾಗತಿಸಿ, ಕೇಂದ್ರದ ಪ್ರಯೋಗಶಾಲೆಗಳಿಗೆಲ್ಲಾ ಅವರನ್ನು ಕೊಂಡೊಯ್ದು ಉಪಹಾರವಾದನಂತರ ಕೇಂದ್ರದ ಕೆಲಸಕಾರ್ಯಗಳನ್ನು ವಿವರಿಸಿದರು. ಅತಿಥಿಗಳು ಕೇಂದ್ರವು ಮಾಡುತ್ತಲಿರುವ ಕೆಲಸಗಳಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಕಾಮನ್‌ವೆಲ್ತ್ ಪ್ರಧಾನಿಗಳ ಸಭೆ

ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳ ಸಮ್ಮೇಳನವು ಗುರುವಾರ ಪ್ರಾರಂಭವಾಗುವುದು. ಭಾರತಪ್ರಧಾನಿ ಪಂಡಿತ ನೆಹರೂರವರು ಬೆಂಗಳೂರಿನಿಂದ ನಾಳೆ ಲಂಡನ್ನಿಗೆ ತೆರಳುವರು. ಪಾಕಿಸ್ಥಾನ ಪ್ರಧಾನಿ ಲಿಯಾಖತ್ ಅಲಿ ಖಾನರವರು ಇನ್ನೂ ಈ ಸಮ್ಮೇಳನಕ್ಕೆ ಹೋಗುವ ವಿಷಯದಲ್ಲಿ ಯಾವ ನಿರ್ಧಾರವೂ ಮಾಡಿಲ್ಲವೆಂದು ತಿಳಿಯಬರುತ್ತದೆ. ಕಾಶ್ಮೀರ ವಿಷಯವನ್ನು ಸಮ್ಮೇಳನದಲ್ಲಿ ಚರ್ಚಿಸಬೇಕೆಂದು ಅವರು ಬ್ರಿಟಿಷ್ ಪ್ರಧಾನಿಯೊಡನೆ ವ್ಯವಹರಿಸುತ್ತಲಿದ್ದಾರೆ. ಅದಕ್ಕೆ ಉತ್ತರವನ್ನು ಅವರು ನಿರೀಕ್ಷಿಸುತ್ತಲಿರುವುದಾಗಿ ಹೇಳಲಾಗಿದೆ. ಭಾರತಕ್ಕೆ ಅಧಿಕೃತವಾಗಿ ಈ ವಿಷಯ ತಿಳಿಯಬಂದಿಲ್ಲ

LATEST

ಪಂಡಿತ ನೆಹರೂರವರ ಆಗಮನ

ಸ್ವ. ಸು. (ಫೋನ್) ಬೆಂಗಳೂರು ಜ ೧

ಇಂದು ಮಧ್ಯಾಹ್ನ ಭಾರತ ಪ್ರಧಾನಿ ನೆಹರೂರವರು ತಮ್ಮ ಪುತ್ರಿ ಶ್ರೀಮತಿ ಇಂದಿರಾ ನೆಹರೂ ಮತ್ತು ಆಪ್ತಕಾರ್ಯದರ್ಶಿ ಶ್ರೀ ಎಂ ಸಿ. ಮಥಾಯ್‌ರವರೊಡನೆ ಹಿಂದೂಸ್ಥಾನ ವಿಮಾನನಿಲ್ದಾಣದಲ್ಲಿ ಆಗಮಿಸಿದರು.

ಶ್ರೀಮನ್ಮಹಾರಾಜರವರ, ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಅವರನ್ನು ಸ್ವಾಗತಿಸಿದರು ಇತರ ಮಂತ್ರಿಗಳು, ಶ್ರೇಷ್ಠ ನ್ಯಾಯಾಧಿಪತಿ, ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯ ವಿಜ್ಞಾನಮಂದಿರದ ಡೈರೆಕ್ಟರ್, ಭಾರತ ದಂಡನಾಯಕ ಶ್ರೀ ಕಾರಿಯಪ್ಪ ಮುಂತಾದವರೆಲ್ಲರೂ ಹಾಜರಿದ್ದರು ಪ್ರಧಾನಿ ನೆಹರೂರವರು ಮಿಲಿಟರಿ ಗೌರವವನ್ನು ಸ್ವೀಕರಿಸಿದ ಮೇಲೆ ಮಹಾರಾಜರು ಎಲ್ಲರನ್ನು ಪರಿಚಯ ಮಾಡಿಕೊಟ್ಟರು ಅನಂತರ ಪ್ರಧಾನಿ, ಶ್ರೀಮನ್ಮಹಾರಾಜರು ಮುಖ್ಯಮಂತ್ರಿ ಎಲ್ಲರೂ ಸರ್ಕಾರಿ ಭವನಕ್ಕೆ ತೆರಳಿದರು.

ಜರ್ಮನಿ ಶತ್ರುರಾಷ್ಟ್ರವಲ್ಲ

೧೯೫೧ನೇ ಜನವರಿ ೧ರಿಂದ ಜರ್ಮನಿಯೊಡನೆ ಅಧಿಕೃತವಾಗಿ ಯುದ್ಧ ಪರಿಸ್ಥಿತಿ ರದ್ದುಗೊಳಿಸಲು ಭಾರತ ಸರ್ಕಾರ ನಿರ್ಧರಿಸಿದೆ ಇದರಿಂದ ಆ ತಾರೀಖಿನಿಂದಾಚೆಗೆ ಎರಡೂ ರಾಷ್ಟ್ರಗಳ ನಡುವೆ ಏರ್ಪಡುವ ವ್ಯವಹಾರ, ವಾಣಿಜ್ಯ ಒಪ್ಪಂದಗಳಿಗೆ ಯಾವ ಅಡ್ಡಿ ಆತಂಕಗಳೂ ಇರದೆ ಮಿತ್ರತರ ಸ್ನೇಹಪರ ರಾಷ್ಟ್ರಗಳ ನಡುವೆ ಜರುಗುವ ಮಾಮೂಲಿನ ವ್ಯವಹಾರದಂತೆ ಪರಿಗಣಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.

ಮಿಲಿಟರಿ ಶಿಕ್ಷಣ ಕಡ್ಡಾಯವಾಗಿ ಕೊಡಬೇಕು

ಭಾರತ ದಂಡನಾಯಕರ ಅಭಿಪ್ರಾಯ

ಮೈಸೂರು ಡಿ. ೩೧

ಕಾಲೇಜು ವಿದ್ಯಾರ್ಥಿಗಳಿಗೆ ಮಿಲಿಟರಿ ಶಿಕ್ಷಣವನ್ನು ಕೊಡುವುದು ಅವರು ಸೈನ್ಯಕ್ಕೆ ಸೇರಬೇಕೆಂದಲ್ಲ. ತಾವು ಕಲಿತ ಶಿಸ್ತು, ಸಂಪ್ರದಾಯಗಳು ಇತರರಿಗೆ ಮಾದರಿಯಾಗುವಂತೆ ಮಾಡಲು. ಸೈನ್ಯಕ್ಕೆ ಸೇರಲು ಅರ್ಹರಾಗಿರುವವರೆಲ್ಲರೂ ಸೈನ್ಯಕ್ಕೆ ಸೇರಲು ಅಭ್ಯಂತರವಿಲ್ಲ. ಆದರೆ ಮಿಲಿಟರಿ ಶಿಕ್ಷಣ ಪಡೆದ ಇತರರು ಗ್ರಾಮಾಂತರ ಜನರಿಗೆಲ್ಲಾ ತಕ್ಕ ತಿಳುವಳಿಕೆಯನ್ನು ಕೊಡಲು ಪ್ರಯತ್ನಿಸಬೇಕು. ಸೈನ್ಯವೆಂದರೆ ಜನರನ್ನು ವಧಿಸುವುದೆಂದಲ್ಲ. ದೇಶರಕ್ಷಣೆಗೆ ಅತ್ಯವಶ್ಯಕವಾದುದು ಯುದ್ಧವಿರಲಿ ಇಲ್ಲದಿರಲಿ ಸೈನ್ಯದ ಅವಶ್ಯಕತೆಯಿದೆ. ದೇಶದಲ್ಲಿ ಉಂಟಾಗುವ ಅನೇಕ ದುರ್ಘಟನೆಗಳ ನಿವಾರಣೆಗೆ ಸೈನ್ಯವು ಅತ್ಯವಶ್ಯಕ. ಸೈನ್ಯ ಶಿಕ್ಷಣವನ್ನು ಭಾರತದಲ್ಲೆಲ್ಲಾ ಕಡ್ಡಾಯವಾಗಿ ಪಾಠಶಾಲೆಗಳಲ್ಲಿ ಕೊಡುವಂತೇರ್ಪಡಿಸಬೇಕು. ಆದರೆ ಇಂದಿನ ಆರ್ಥಿಕಸ್ಥಿತಿಯಿಂದ ಸಾಧ್ಯವಿಲ್ಲ. ಆದರೆ ಆರ್ಥಿಕಸ್ಥಿತಿಯು ಉತ್ತಮವಾದ ಮೇಲೆ ಮಾಡಲೇಬೇಕು.

ಸೈನ್ಯಕ್ಕೆ ಯುದ್ಧಬೇಕಿಲ್ಲ. ಯುದ್ಧವೆಲ್ಲವೂ ರಾಜಕೀಯದಲ್ಲಿರುವವರಿಗೆ ಬೇಕು. ಸೈನ್ಯಕ್ಕೆ ಯುದ್ಧ ಬೇಡವಾದರೂ ಆಡಳಿತಗಾರರ ಆಜ್ಞೆಯನ್ನು ಪಾಲಿಸಲು ಸಿದ್ಧವಾಗಿರಬೇಕು, ಎಂದು ಭಾರತದಂಡನಾಯಕ ಜ। ಕಾರಿಯಪ್ಪನವರು ಇಂದು ಬೆಳಿಗ್ಗೆ ನಂಜನಗೂಡು ಬಳಿ ಮಿಲಿಟರಿ ಶಿಕ್ಷಣಪಡೆಯುತ್ತಲಿರುವ ಬೆಂಗಳೂರು ಇಂಜನೀಯರಿಂಗ್ ಕಾಲೇಜು ಮತ್ತು ಮದರಾಸ್ ಗಿಂಡಿಯ ಇಂಜನೀಯರಿಂಗ್ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡುತ್ತಾ ಹೇಳಿದರು

ಇಂದು ಬೆಳಗ್ಗೆ ೮-೩೦ ಗಂಟೆ ವೇಳೆಗೆ ದಂಡನಾಯಕರು ಬೆಂಗಳೂರಿನಿಂದ ಮೈಸೂರಿಗೆ ವಿಮಾನದಲ್ಲಿ ಆಗಮಿಸಿ ಇಲ್ಲಿಂದ ನಂಜನಗೂಡಿಗೆ ತೆರಳಿ ಅಲ್ಲಿ ಇಂಜನಿಯರಿಂಗ್ ಶಾಖೆಯಲ್ಲಿ ಮಿಲಿಟರಿ ಶಿಕ್ಷಣ ಪಡೆಯುತ್ತಲಿರುವ ವಿದ್ಯಾರ್ಥಿ ಕೇಂದ್ರವನ್ನು ಪರಿಶೀಲಿಸಿ ಅಲ್ಲಿಂದ ಮೈಸೂರಿಗೆ ೭ ಮೈಲಿಯಲ್ಲಿರುವ ಇಲವಾಲದ ಬಳಿ ಇರುವ ಇನ್‌ಫೆಂಟ್ರಿಯಲ್ಲಿ ಶಿಕ್ಷಣಪಡೆಯುತ್ತಲಿರುವ ವಿದ್ಯಾರ್ಥಿಕೇಂದ್ರವನ್ನು ಪರಿಶೀಲಿಸಿ ಬೆಂಗಳೂರಿಗೆ ಹಿಂತಿರುಗಿದರು.

ಭಾವಚಿತ್ರ ಅನಾವರಣ

ಮೈಸೂರು ಡಿ. ೩೧

ಇಂದು ಬೆಳಗ್ಗೆ ಮೈಸೂರು ಸಹಕಾರಭವನದಲ್ಲಿ ಡಾ॥ ಸಿ. ಆರ್. ರೆಡ್ಡಿಯವರು, ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಶ್ರಮಿಸಿದ ದಿವಂಗತ ಎಂ. ಶಾಮರಾಯರ ಭಾವಚಿತ್ರ ಅನಾವರಣವನ್ನು ಮಾಡಿದರು.

ನೇಪಾಳದ ಪರಿಸ್ಥಿತಿ

ನೇಪಾಳದಲ್ಲಿ ಕಾಂಗ್ರೆಸ್ ಮತ್ತು ಸರ್ಕಾರಿ ಪಡೆಗಳಿಗೆ ಘರ್ಷಣೆಗಳು ಹೆಚ್ಚುತಿತ್ತಿದೆ. ಬೀರ್‌ಗಂಜ್ ಮುಂತಾದೆಡೆ ಕಾಂಗ್ರೆಸ್ ಪಡೆಗಳು ವಿಶೇಷ ಧಾಳಿ ನಡೆಸುತ್ತಲಿವೆಯೆಂದೂ ಅನೇಕ ಭಾಗಗಲ್ಲಿ ತನ್ನ ಕೈವಶಪಡಿಸಿಕೊಳ್ಳುತ್ತಲಿವೆಯೆಂದೂ ವರದಿಯಾಗಿದೆ.

ವಾರ್ಷಿಕೋತ್ಸವ

ಮೈಸೂರು ಡಿ. ೩೧

ಇಂದು ಸಂಜೆ ಮೈಸೂರು ನಗರದ ಚಿಲ್ಲರೆ ಬಟ್ಟೆ ವ್ಯಾಪಾರಸ್ಥರ ಸಂಘದ ೭ ನೇ ವಾರ್ಷಿಕೋತ್ಸವವು ಚಾಮುಂಡೇಶ್ವರೀ ಭವನದಲ್ಲಿ ನಡೆಯಿತು. ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ಅಧ್ಯಕ್ಷತೆವಹಿಸಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಯು. ಎಲ್. ರಾಮಚಂದ್ರರಾಯರು ಅತಿಥಿಗಳನ್ನು ಸ್ವಾಗತಿಸಿದರು.

ಕಾರ್ಯದರ್ಶಿಗಳಾದ ಶ್ರೀ ಬಿ. ಎಸ್. ರುದ್ರಪ್ಪನವರು ಸಂಘದ ವರದಿಯನ್ನೋದಿ, ಬಟ್ಟೆಯ ಹತೋಟಿಯಿಂದ ವರ್ತಕರಿಗೆ ಆಗುತ್ತಲಿರುವ ತೊಂದರೆಗಳನ್ನು ವಿವರಿಸಿ ವರ್ತಕರೆಲ್ಲರೂ ಸರ್ಕಾರಕ್ಕೆ ಬಿಲ್‌ಕಲೆಕ್ಟರೇ ಆಗಿರುವರೆಂದೂ ನಿಜವಾಗಿಯೂ ವ್ಯಾಪಾರಸ್ಥರಾಗಿಲ್ಲವೆಂದೂ ಇದೇ ರೀತಿ ಸ್ವಲ್ಪಕಾಲ ನಡೆದಲ್ಲಿ ತಮ್ಮ ವ್ಯಾಪಾರವನ್ನೆಲ್ಲಾ ನಿಲ್ಲಿಸಬೇಕಾಗುವುದು. ಕೂಡಲೇ ಸರಕಾರದವರು ಅನೇಕ ವಿಧದಲ್ಲಿ ಹಾಕಿರುವ ತೆರಿಗೆಗಳನ್ನು ತೆಗೆದುಹಾಕುವುದಲ್ಲದೆ ಬಟ್ಟೆಯ ಹತೋಟಿಯನ್ನು ರದ್ದುಗೊಳಿಸಬೇಕೆಂದು ತಿಳಿಸಿದರು.

ರಾಷ್ಟ್ರಾಧ್ಯಕ್ಷರ ಸಂದೇಶ

ನೂತನ ವರ್ಷಾರಂಭದಲ್ಲಿ ರಾಷ್ಟ್ರಾಧ್ಯಕ್ಷ ಶ್ರೀ ಬಾಬು ರಾಜೇಂದ್ರಪ್ರಸಾದರವರು ದೇಶಕ್ಕೆ ಒಂದು ಸಂದೇಶವನ್ನಿತ್ತು ವಿಶ್ವ ಸಂಗ್ರಾಮದ ಪರಿಣಾಮ ಯೋಚನೆಮಾಡಿ ಯುದ್ಧ ಸಂಭವವಾಗದಂತೆ ಎಲ್ಲರೂ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅದಕ್ಕೆ ಭಾರತವು ಶ್ರಮಿಸುತ್ತಲಿದೆಯೆಂದು ತಿಳಿಸಿದರು.

ಒಲಂಪಿಯಾ

28-12-50 ರಿಂದ ದಿನವಹಿ 3 ಆಟಗಳು

ವಿವಿಧ ನೃತ್ಯಗಳಿಂದ ನಿಮ್ಮ ಮನಸ್ಸನ್ನು ಸೂರೆಗೊಳ್ಳುವ

ರೆಹನ, ಸಿತಾರ ಮತ್ತು ಪ್ಯಾರೋ ಪಾತ್ರವಹಿಸಿರುವ

ಕಿಶೋರ್ ಸಾಹುರವರ

★ ಬಿಜಲಿ ★

(ಹಿಂದಿ)

ಬೆಳಗಿನ ಪ್ರದರ್ಶನ

28-12-50 ರಿಂದ 5 ದಿನಗಳು ಮಾತ್ರ

ಶೋಕಿನ್

ನ್ಯೂ ಅಪೇರಾ

ಟಾಕೀಸ್

ಮೈಸೂರು

೩೦-೧೨-೫೦ ಪ್ರತಿದಿನ ೩ ಆಟಗಳು

ಕೃಷ್ಣ ವಿಜಯಂ

(ತಮಿಳು)

ಆರ್. ಬಾಲಸುಬ್ರಮಣ್ಯಂ

ಲಲಿತ : ಪದ್ಮಿನಿ-ಪ್ರೇಮಾವತಿ

ಅಂಗ ಮುತ್ತು : ನರಸಿಂಹಭಾರತಿ

ವಸಂತಕೋಕಿಲಂ : ಭಾಗ್ಯವತ್

ರಣಜಿತ್

29-12-50 ರಿಂದ 3 ನೇ ವಾರ

ದಿನವಹಿ 3 ಪ್ರದರ್ಶನಗಳು

ಫಿಲಂಸ್ಥಾನರವರ

★ ಸರ್ಗಮ್ ★

(ಹಿಂದಿ)

ಪಾತ್ರ : ● ರಹೇನಾ ● ರಾಜಕಪೂರ್

ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 514

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೧—೧೯೫೧ನೇ ಮಂಗಳವಾರ [ಸಂಚಿಕೆ ೧೦೨

ವೈಜ್ಞಾನಿಕ ಸಮ್ಮೇಳನದ ಪ್ರಾರಂಭೋತ್ಸವ

ದೇಶದ ಪ್ರಗತಿಗಾಗಿ ವೈಜ್ಞಾನಿಕ ಬೆಳವಣಿಗೆ ಅತ್ಯಾವಶ್ಯಕ

ಸ್ವ. ಸು. ಬೆಂಗಳೂರು ಜ. ೨

ಇಂದು ಬೆಳಗ್ಗೆ ಭಾರತಪ್ರಧಾನಿ ನೆಹರೂರವರು ಟಾಟಾವಿಜ್ಞಾನ ಮಂದಿರದಲ್ಲಿ ೩೮ನೇ ವೈಜ್ಞಾನಿಕ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು.

ಪ್ರಪಂಚದ ನಾನಾ ದೇಶಗಳಿಂದ ಬಂದಿದ್ದ ೧೫೦೦ ಕ್ಕಿಂತ ಹೆಚ್ಚಾಗಿ ಪ್ರತಿನಿಧಿಗಳು ಸಾವಿರಾರು ಖಾಸಗೀ ಮಹನೀಯರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು ಶ್ರೀಮನ್ಮಹಾರಾಜರವರು ಭಾಷಣಮಾಡುತ್ತಾ, ಈ ಸಮ್ಮೇಳನದ ಉದ್ಘಾಟನೆಯನ್ನು ಮಾಡಬೇಕೆಂದು ಪ್ರಧಾನಿಯವರನ್ನು ಕೋರಿದರು. ವಿಜ್ಞಾನದ ಒಳ್ಳೆಯ ಪರಿಣಾಮವನ್ನು ಸದ್ವಿನಿಯೋಗ ಮಾಡಿಕೊಳ್ಳದೆ ದುಷ್ಕಾರ್ಯಗಳಿಗಾಗಿ ಉಪಯೋಗಿಸಿಕೊಳ್ಳುತ್ತಿರುವುದರಿಂದ ವಿಶ್ವಕ್ಕೆ ಕೇಡುಂಟಾಗಿದೆ. ಮಾನವ ಸಮಸ್ಯೆಗಳನ್ನು ಮಾನವೀಯ ದೃಷ್ಟಿಯಿಂದಲೇ ಪರಿಹರಿಸಬೇಕೆಂದು ಪಂಡಿತ ನೆಹರೂ ಹೇಳಿದರು.

ಶ್ರೀಮನ್ಮಹಾರಾಜರವರ ಭಾಷಣ

ಲಂಡನ್ನಿನಲ್ಲಿ ನಡೆಯಲಿರುವ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು, ಸ್ವಲ್ಪ ಕಾಲದಲ್ಲಿಯೇ ತೆರಳಲಿರುವ ಭಾರತ ಪ್ರಧಾನಿ ಪಂಡಿತ ನೆಹರೂರವರು ಇಂದು ಉದ್ಘಾಟನೋತ್ಸವವನ್ನು ನಡೆಸಲು ಈ ಸಮಾರಂಭಕ್ಕೆ ಬಂದಿರುವುದು ವಿಜ್ಞಾನ ಪರಿಶೋಧನಾಭಿವೃದ್ಧಿಯಲ್ಲಿ ಅವರಿಗೆ ಎಷ್ಟು ಆಸಕ್ತಿಯಿದೆಯೆಂಬುದು ವಿಶದವಾಗುತ್ತದೆ.

ಆಸ್ಟ್ರೇಲಿಯಾ, ಬರ್ಮಾ, ಸಿಂಹಳ, ಫ್ರಾನ್ಸ್, ಹಾಲೆಂಡ್, ಇಟಲಿ, ಮಡಗಾಸ್ಕರ್, ಮಲಯ, ನ್ಯೂಜಿಲೆಂಡ್, ಪಾಕಿಸ್ಥಾನ, ಪೋರ್ಚುಗಲ್ಲು, ಸ್ವೀಡನ್, ಇಂಗ್ಲೆಂಡ್ ಮತ್ತು ಅಮೆರಿಕಾ ಮುಂತಾದ ಪ್ರಪಂಚದ ನಾನಾ ಭಾಗಗಳಿಂದ ವಿಜ್ಞಾನ ನಿಪುಣರು ಇಲ್ಲಿ ಸೇರಿರುವುದು ಒಂದು ಹೆಮ್ಮೆಯ ವಿಷಯವಾಗಿದೆ. ಹಿಂದೂಸಾಗರಕ್ಕೆ ಸೇರಿರುವ ಅಕ್ಕಪಕ್ಕದ ದೇಶದ ಪ್ರತಿನಿಧಿಗಳು ಇಲ್ಲಿ ಸೇರಿರುವುದು ಈ ಸಮ್ಮೇಳನಕ್ಕೆ ಹೆಚ್ಚಿಗೆ ಸ್ಥಾನವನ್ನು ಕೊಟ್ಟಿದೆ.

ನಮ್ಮ ಮುಂದೆ ಭಯಂಕರವಾದ ಸಮಸ್ಯೆಗಳ ಚರ್ಚೆ ನಡೆದು ವಿಶ್ವದ ಹಿತರಕ್ಷಣೆ ಸಾಧಿಸಬೇಕಾಗಿದೆ. ಎಲ್ಲಕ್ಕಿಂತಲೂ ಮಿಗಿಲಾದ ಸಮಸ್ಯೆ ಆಹಾರ ವಿಷಯ ಪರದೇಶಗಳಿಂದ ಆಹಾರ ತರಿಸಿಕೊಳ್ಳಲು ನಮ್ಮ ಭಂಡಾರವನ್ನೆಲ್ಲಾ ಬರಿದುಮಾಡುತ್ತಲಿದ್ದೇವೆ. ದೇಶದಲ್ಲಿ ನಾನಾ ರೀತಿಯ ರಾಷ್ಟ್ರೀಯ ರಚನಾತ್ಮಕ ಕಾರ್ಯಗಳು ನಡೆಯಬೇಕಾಗಿದೆ. ಆದ್ದರಿಂದ ನಾವು ಆಹಾರಕ್ಕಾಗಿ ಪರದೇಶಗಳಿಗೆ ಹಣಕೊಡುವುದನ್ನು ನಿಲ್ಲಿಸಿ ನಮ್ಮ ದೇಶದಲ್ಲಿಯೇ ಅಧಿಕ ಆಹಾರ ಬೆಳೆಯುವಂತೆ ಮಾಡಬೇಕಾಗಿದೆ. ಆ ಕಾರ್ಯಕ್ಕೆ ಈ ಸಮ್ಮೇಳನವು ನೆರವಾಗುವುದರಲ್ಲಿ ಸಂಶಯವಿಲ್ಲ.

ಬೆಂಗಳೂರಿನಲ್ಲಿ ಹಿಂದೆ ಭಾರತ ವೈಜ್ಞಾನಿಕ ಸಮ್ಮೇಳನವು ನಡೆದಿವೆ. ಈಗ ಪುನಃ ನಡೆಯುತ್ತಲಿದೆ. ವಿಜ್ಞಾನ ಮಂದಿರದ ಡೈರೆಕ್ಟರು ವಿಶೇಷವಾಗಿ ಶ್ರಮಿಸಿ ಈ ಸಮ್ಮೇಳನವು ನಡೆಯಲು ತಕ್ಕ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಸ್ವಲ್ಪವೂ ವಿರಾಮವಿಲ್ಲದಂತಿರುವ ನಿಮ್ಮ ಕಾರ್ಯಗೌರವಗಳಲ್ಲಿ ಸ್ವಲ್ಪವಾದರೂ ವಿರಾಮವನ್ನು ಕಲ್ಪಿಸಿಕೊಂಡು ಸಂಸ್ಥಾನದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿಯುವರೆಂದು ನಂಬುತ್ತೇನೆ ಎಂದು ಹೇಳಿದರು.

ಪಾರ್ಲಿಮೆಂಟು ಸಭೆ

ಮುಂದಿನ ಪಾರ್ಲಿಮೆಂಟು ಸಭೆಯು ಫೆಬ್ರವರಿ ೫ ರಿಂದ ಪ್ರಾರಂಭವಾಗಿ ಏಪ್ರಿಲ್ ೨೦ ರ ವರೆಗೆ ನಡೆಯುತ್ತಗು.

ಭೂಕಂಪ

೧೯೫೦ ರಲ್ಲಿ ಪ್ರಪಂಚದಲ್ಲೆಲ್ಲಾ ೭೯೬ ಸಲ ಭೂಕಂಪವಾಗಿದೆಯೆಂದು ತಿಳಿಯಬಂದಿದೆ. ಈ ಭೂಕಂಪಗಳ ಒಟ್ಟು ಶಕ್ತಿಯು ನ್ಯೂಮೆಕ್ಸಿಕೋನಲ್ಲಿ ಹಾಕಿದ ಮೊದಲನೇ ಅಣು ಬಾಂಬಿನ ೪೦ ಲಕ್ಷದಷ್ಟು ಅಂದಾಜು ಮಾಡಲಾಗಿದೆ. ಶೇಕಡ ೭೫ ರಷ್ಟು ಹಿಮಾಲಯ ಪ್ರದೇಶದಲ್ಲೇ ಭೂಕಂಪವಾಗಿದೆ ಇದರಿಂದ ೫ ಸಾವಿರ ಜನವಾದರೂ ಮಡಿದಿರುವರು. ಎಂದು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಡೈರೆಕ್ಟರ್ ಡಾ॥ ಲೀಯವರು ಹೇಳಿರುವರು.

ಮಲಬಾರ್ ಪ್ರಿನ್ಸೆಸ್ ಬೆಲೆ

ನವಂಬರ್‌ನಲ್ಲಿ ಅಪಘಾತಕ್ಕೀಡಾದ 'ಮಲಬಾರ್ ಪ್ರಿನ್ಸೆಸ್' ವಿಮಾನಕ್ಕೆ ೫೬,೦೦,೦೦೦ ರೂಪಾಯಿಗಳ ಬೆಲೆಯನ್ನು ಕೊಡಲಾಗಿತ್ತು, ಅದನ್ನು ೫೫,೦೦,೦೦೦ ರೂಪಾಯಿಗಳಿಗೆ ವಿಮಾ ಮಾಡಲಾಗಿತ್ತು.

ಮನೆಗಳ ಬಾಡಿಗೆ ಹೆಚ್ಚುವುದೇ?

ದೇಶಾದ್ಯಂತ ವಾಸಕ್ಕೆ ಮನೆಗಳ ಅಭಾವವುಂಟಾಗಿರುವುದರಿಂದ, ಸರ್ಕಾರದವರು ಮನೆಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಲಿರುವುದಕ್ಕೆ ಸಂಬಂಧಪಟ್ಟ ಕಾನೂನಿನಲ್ಲಿ ಬದಲಾವಣೆಗಳಾಗಬೇಕೆಂದು ಪಾರ್ಲಿಮೆಂಟ್ ವೃತ್ತಗಳಲ್ಲಿ ಮಾತುಕಥೆ ನಡೆಸುತ್ತಲಿರುವುದಾಗಿ ತಿಳಿಯಬರುತ್ತದೆ.

ಜನವರಿ ಒಂದರಿಂದ ಹೊಸದಾಗಿ ಕಟ್ಟುವ ಮನೆಗಳನ್ನು ೯-೧೦ ವರ್ಷಗಳವರೆಗೆ ಸರ್ಕಾರದವರು ಕೇಳದೆ ಇರುವಂತೆ ಕಾನೂನನ್ನು ಬದಲಾಯಿಸಬೇಕೆಂದಿರುವುದಾಗಿ ಹೇಳಲಾಗಿದೆ. ಇಂದಿನ ಆರ್ಥಿಕಸ್ಥಿತಿಗನುಸಾರವಾಗಿ ಮನೆಬಾಡಿಗೆಗಳನ್ನು ಹೆಚ್ಚಿಸುವ ವಿಷಯವೂ ಸರ್ಕಾರದ ಗಮನದಲ್ಲಿರುವುದಾಗಿ ಕಂಡುಬರುತ್ತದೆ ಮಾಲೀಕರಿಗೆ ಸ್ವಲ್ಪ ಸೌಕರ್ಯಗಳನ್ನು ಕಲ್ಪಿಸುವರೆಂದು ಹೇಳಲಾಗಿದೆ.

ರಾಜಾಜಿ ಮದರಾಸಿಗೆ

ಕೇಂದ್ರ ಗೃಹಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಇದೇ ಮಾಹೆ ಕೊನೆಯವಾರದಲ್ಲಿ ಮದರಾಸಿಗೆ ಭೇಟಿಕೊಡುವರೆಂದು ತಿಳಿಯಬರುತ್ತದೆ. ಆಗ ತಂಜಾವೂರಿನ ಬಳಿ ತಿರುವದಿಯಲ್ಲಿ ತ್ಯಾಗರಾಜ ಮಹೋತ್ಸವವನ್ನು ಉದ್ಘಾಟಿಸುವರು.

ಡಾಕ್ಟರುಗಳ ಮುಷ್ಕರ

ತಮಗೆ ಸರಿಯಾದ ಸಂಬಳ ದೊರೆತದಿದ್ದಲ್ಲಿ ೬ನೇ ತಾ॥ ಮುಷ್ಕರ ಹೂಡುವುದಾಗಿ ಪೂರ್ವಪಾಕಿಸ್ಥಾನದಲ್ಲಿರುವವರೆಲ್ಲಾ ವೈದ್ಯರು ನಿಶ್ಚಯ ಮಾಡಿರುವರು.

ವ್ಯಾಪಾರ ತೆರಿಗೆ ವಜಾ

ಜನವರಿ ಒಂದನೇ ತಾರೀಖಿನಿಂದ ಮೈಸೂರು ಸಂಸ್ಥಾನದಲ್ಲಿ ಪತ್ರಿಕೆಗಳ ಮೇಲೆ ವ್ಯಾಪಾರ ತೆರಿಗೆಯನ್ನು ವಸೂಲ್ಮಾಡುವುದನ್ನು ನಿಲ್ಲಿಸಲಾಗಿದೆ

ಷಾಪ್ ಅಸಿಸ್ಟೆಂಟ್ ಶಾಸನ

ಪೆಟ್ರೋಲ್ ಬಂಕು ಮತ್ತು ಪೆಟ್ರೋಲ್ ಸ್ಟೋರೇಜು ಡಿಪೋಗಳಿಗೆ ಮೈಸೂರು ಷಾಪ್ ಅಸಿಸ್ಟೆಂಟು ಆಕ್ಟ್ ಅನ್ವಯಿಸುವುದಿಲ್ಲವೆಂದು ಸರ್ಕಾರಿ ಆಜ್ಞೆ ತಿಳಿಸುತ್ತದೆ

ಪ್ರಧಾನಿ-ಮುಖ್ಯಮಂತ್ರಿಗಳ ಭೇಟಿ

ಬೆಂಗಳೂರು ಜ ೧

ಕೆಲವು ದಿವಸಗಳಿಂದ ಅಸ್ವಸ್ಥರಾಗಿರುವ ಮುಖ್ಯಮಂತ್ರಿ ಶ್ರೀ. ಕೆ ಸಿ. ರೆಡ್ಡಿಯವರನ್ನು ಪ್ರಧಾನಿ ನೆಹರೂರವರು ಅವರ ನಿವಾಸಕ್ಕೆ ಹೋಗಿ ಅವರ ಆರೋಗ್ಯವನ್ನು ವಿಚಾರಿಸಿ ನೋಡಿಕೊಂಡು ಬಂದರು.

ರಾತ್ರಿ ಪಂಡಿತ ನೆಹರೂರವರು ಬೆಂಗಳೂರು ಅರಮನೆಯಲ್ಲಿ ಶ್ರೀಮನ್ಮಹಾರಾಜರೊಡನೆ ಭೋಜನ ಸ್ವೀಕರಿಸಿದರು.

LATEST

ಬಹುಮತದಂತೆ ನಡೆಯಿರಿ

ಸ್ವ. ಸು. ಬೆಂಗಳೂರು ಡಿ. ೨

ಇಂದು ಬೆಳಗ್ಗೆ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರನ್ನುದ್ದೇಶಿಸಿ ಪ್ರಧಾನಿ ನೆಹರೂರವರು ಭಾಷಣ ಮಾಡುತ್ತಾ ಪಾರ್ಲಿಮೆಂಟರಿ ಪದ್ಧತಿಯನ್ನರಿತ ನೀವೆಲ್ಲರೂ ದೇಶದ ಮತ್ತು ಪಕ್ಷದ ಕೀರ್ತಿಗೆ ಕಳಂಕ ತರದಂತೆ ಬಹುಮತ ಯಾವ ರೀತಿ ಅಭಿಪ್ರಾಯಪಡುತ್ತೋ ಅದರಂತೆ ನಡೆಯಿರಿ ಎಂದು ಹೇಳಿದರು.

ನೆಹರೂ ಹಿಂತಿರುಗಿದರು

ಸೈನ್ಸ್ ಕಾಂಗ್ರೆಸ್ ಉದ್ಘಾಟನೆಯು ಇಂದು ಬೆಳಗ್ಗೆ ಪಂಡಿತ ನೆಹರೂ ನೆರವೇರಿಸಿದನಂತರ ೧೨ ಗಂಟೆವೇಳೆಗೆ ಪರಿವಾರಸಮೇತ ಬೊಂಬಾಯಿಗೆ ತೆರಳಿದರು. ಅಲ್ಲಿಂದ ನೇರವಾಗಿ ಲಂಡನ್ನಿಗೆ ಇಂದೇ ಹೊರಡುವರು.

ಸಮಾಚಾರ

ಮಂಗಳವಾರ ತಾರೀಖು ೨

ದರ ಏರಿಸಿರುವುದು ನ್ಯಾಯವಲ್ಲ

ಮೈಸೂರು ಬೆಂಗಳೂರು ನಗರದಲ್ಲಿ ಟೆಲಿಫೋನ್ ಇಟ್ಟುಕೊಂಡಿರುವವರು ಬೆಂಗಳೂರು ಮೈಸೂರು ಟ್ರಂಕ್ ಟೆಲಿಫೋನ್ ಮಾಡಲು ನಿನ್ನೆಯಿಂದ ಮೂರು ನಿಮಿಷಕ್ಕೆ ಹನ್ನೆರಡಾಣೆಕೊಡುತ್ತಲಿದ್ದುದಕ್ಕೆ ಬದಲಾಗಿ ಎರಡು ರೂಪಾಯಿ ಎರಡು ಆಣೆ ಕೊಡಬೇಕಾಗಿ ಬಂದಿರುವುದು ಹೊಸ ವರ್ಷದ ಶುಭಸೂಚನೆಯೆ?

ಟೆಲಿಫೋನ್ ಇಟ್ಟುಕೊಂಡಿರುವವರಿಗೆಲ್ಲಾ ಯಾವ ತಿಳುವಳಿಕೆಯನ್ನೂ ಕೊಡದೆ ಇದ್ದಕ್ಕಿದ್ದ ಹಾಗೆ ದರವನ್ನು ಏರಿಸಿರುವುದೂ—ಅದರಲ್ಲಿ ಪ್ರಜಾಪ್ರಭುತ್ವ ತತ್ವವನ್ನು ಕಾಪಾಡುತ್ತೇವೆಂದೂ, ಜನರ ಹಿತಚಿಂತನೆಗೆ ಶ್ರಮಿಸುತ್ತಲಿರುವೆವೆಂದೂ ಹೇಳುವ ಕೇಂದ್ರ ಸರ್ಕಾರದವರು ಈರೀತಿ ಮಾಡಿರುವುದು ಅತ್ಯಂತ ಶೋಚನೀಯ.

ಪ್ರಾಂತ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಈ ಇಲಾಖೆಯು ಬದಲಾವಣೆಯಾದೊಡನೇ ಇಲಾಖೆಯಲ್ಲಿ ಅವ್ಯವಸ್ಥೆಯು ಹೆಚ್ಚಿ, ಟೆಲಿಫೋನ್ ರಿಸೀವರ್ ಕೈಗೆ ತೆಗೆದೊಡನೆಯೇ ಹತ್ತಾರು ಶಬ್ದಗಳು ಕೇಳಿಬರುವುದು, ಒಂದು ಗಂಟೆಕಾಲವಾದರೂ ಜವಾಬು ಬರದಿರುವುದು ಮುಂತಾದುವುಗಳಿಂದ ಅನೇಕ ತೊಂದರೆಗಳು ಪ್ರಾರಂಭವಾದುವು. ಈಗ ಇದ್ದಕ್ಕಿದ್ದಂತೆಯೇ ದರಗಳನ್ನು ಏರಿಸಿರುವುದು ಮತ್ತೂ ತೊಂದರೆಗೀಡಾದಂತೆಯೇ ಸರಿ.

ಒಂದು ಪೋಸ್ಟು ಕಾರ್ಡು ಬೆಲೆಯನ್ನು ಏರಿಸಬೇಕಾದರೆ ಇಲಾಖೆಯ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿ ಅವರ ಒಪ್ಪಿಗೆಯನ್ನು ಪಡೆದು ಜಾರಿಗೆ ಕೊಡುವರು. ಹೀಗಿರುವಲ್ಲಿ ಟೆಲಿಫೋನ್ ದರವನ್ನು ಏರಿಸಲು ಪಾರ್ಲಿಮೆಂಟಿನ ಒಪ್ಪಿಗೆಯನ್ನೇನಾದರೂ ಪಡೆದಿರುವರೆ? ಇದು ಪ್ರಜಾಪ್ರಭುತ್ವ ತತ್ವವೆ? ಟೆಲಿಫೋನ್ ಇಟ್ಟುಕೊಂಡಿರುವವರೆಲ್ಲರೂ ಶ್ರೀಮಂತರು ಎಷ್ಟು ಬೇಕಾದರೂ ಕೊಡಬಹುದೆಂಬ ಅಭಿಪ್ರಾಯದಿಂದ ಈ ರೀತಿ ಮಾಡಿರುವರೇ? ಜನರಿಗೆ ಟೆಲಿಫೋನ್ ಸೌಕರ್ಯಗಳನ್ನು ಹೆಚ್ಚಿಸಿ, ದರವನ್ನು ಕಡಮೆಮಾಡಿ ಜನರು ಅದರ ಪ್ರತಿಫಲವನ್ನು ಹೊಂದುವ ಹಾಗೆಮಾಡದೆ ಇದ್ದಕ್ಕಿದಂತೆಯೇ ದರವನ್ನು ಏರಿಸಿರುವುದು ನ್ಯಾಯವಲ್ಲ. ಯಾವ ತೆರಿಗೆಯನ್ನು ಹೆಚ್ಚಿಸಬೇಕಾದರೂ ಚಾಲ್ತಿಯಲ್ಲಿರುವ ದರದ ಮೇಲೆ ಶೇಕಡ ೨೦-೨೫ ರಷ್ಟು ಸಾಮಾನ್ಯವಾಗಿ ಏರಿಸುವುದು ಪದ್ಧತಿ ಅದನ್ನು ಬಿಟ್ಟು ಶೇಕಡ ೩೦೦ ರಷ್ಟು ಏರಿಸಿರುವುದು ಯಾವ ನ್ಯಾಯ. ಕೂಡಲೇ ಕೇಂದ್ರ ಸರ್ಕಾರದವರು ಇದನ್ನು ಪುನರ್ವಿಮರ್ಶಿಸಿ ತಕ್ಕ ಬದಲಾವಣೆ ಮಾಡುವರೆಂದು ನಂಬಿದ್ದೇವೆ. ಅಲ್ಲದೆ ಬೆಂಗಳೂರಿನ ಛೇಂಬರ್ ಆಫ್ ಕಾಮರ್ಸ್ ಸಂಸ್ಥೆ, ಪತ್ರಿಕೋದ್ಯೋಗಿಗಳ ಸಂಘ, ವರ್ತಕ ಸಂಘ ಮುಂತಾದವರು ಈ ವಿಷಯವನ್ನು ಕೂಡಲೇ ಪರ್ಯಾಲೋಚಿಸಿ, ವರ್ತಕರು, ಪತ್ರಿಕೋದ್ಯೋಗಿಗಳು ಎಲ್ಲರಿಗೂ ಇದರಿಂದಾಗುವ ತೊಂದರೆಯನ್ನು ಗಮನಿಸಿ ಕೂಡಲೇ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವರೆಂದು ನಂಬಿದ್ದೇವೆ.

ಪಂಡಿತ ನೆಹರೂರವರ ಆಗಮನ

ಅಭೂತ ಸ್ವಾಗತ

ಸ್ವ. ಸು. ಬೆಂಗಳೂರು ಜ ೨

ಪಂಡಿತ ನೆಹರೂರವರು ನಿನ್ನೆ ಮಧ್ಯಾಹ್ನ ೩-೩೦ ಗಂಟೆಗೆ ಬೊಂಬಾಯಿನಿಂದ ಬೆಂಗಳೂರಿಗೆ ಐ.ಎ.ಎಫ್. ಡಕೋಟಿ ವಿಮಾನದಲ್ಲ ಆಗಮಿಸಿದರು. ಶ್ರೀಮನ್ಮಹಾರಾಜರವರು, ಶ್ರೀ ಹೆಚ್. ಸಿ. ದಾಸಪ್ಪ, ಇತರ ಮಂತ್ರಿಗಳು ಪ್ರಧಾನಿಯವರನ್ನು ಸ್ವಾಗತಿಸಿದರು. ಅನಾರೋಗ್ಯನಿಮಿತ್ತ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಹಾಜರಿರಲಿಲ್ಲ.

ಪಂಡಿತ ನೆಹರೂರವರ ಜೊತೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಅವರ ಸಹೋದರಿ ಶ್ರೀಮತಿ ಹಥೀಸಿಂಗ್‌ರವರೂ ಬಂದಿರುವರು.

ವಿಮಾನದಿಂದ ಪಂಡಿತನೆಹರೂರವರು ಎಲ್ಲರಿಗೂ ಕೈಮುಗಿದು ಇಳಿದರು. ಶ್ರೀಮನ್ಮಹಾರಾಜರವರು ನೆಹರೂರವರಿಗೆ ಪುಷ್ಪಹಾರವನ್ನು ಅರ್ಪಿಸಿದರು. ಸೈನ್ಯದ ಸೆಲ್ಯೂಟ್ ಸ್ವೀಕರಿಸಿದ ವೇಳೆ ಶ್ರೀ ದಾಸಪ್ಪನವರು ನೆಹರೂರವರಿಗೆ ಇತರ ಮಂತ್ರಿ ಮತ್ತು ಮಹನೀಯರನ್ನು ಪರಿಚಯಮಾಡಿಕೊಟ್ಟರು. ಶಾಸನಸಭೆಯ ಸ್ಪೀಕರ್ ಶ್ರೀ ವಿ. ವೆಂಕಟಪ್ಪ, ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ. ಮೇದಪ್ಪ, ಚೀಫ್ ಸೆಕ್ರೆಟರಿ ಶ್ರೀ ಕೆ. ಶ್ರೀನಿವಾಸನ್, ಐ. ಜಿ. ಪಿ. ಶ್ರೀ ನಾಗರಾಜರಾವ್, ಶ್ರೀಗಳಾದ ಕೆ. ಶಾಮರಾಜಯ್ಯಂಗಾರ್, ಹೆಚ್. ಆರ್. ಗುರುವಾರೆಡ್ಡಿ, ಎ.ಜಿ. ರಾಮಚಂದ್ರರಾವ್, ಬ್ರಿಗೇಡಿಯರ್ ಹಬೀಬುಲ್ಲಾ, ಬ್ರಿಗೇಡಿಯರ್ ಹೊನ್ನಪ್ಪ, ಚಂದ್ರಾವರ್ಕರ್, ಡಾ|| ಎಸ್. ಎಸ್. ಭಾಟ್‌ನಗರ್, ಹೆಚ್. ಜೆ. ಬಾಬಾ, ಸರ್ ಸಿ. ವಿ. ರಾಮನ್, ಸರ್. ಎಂ. ಮಿರ್ಜಾ ಎಂ.ಎ. ಶ್ರೀನಿವಾಸನ್ ಮುಂತಾದವರೆಲ್ಲರೂ ನಿಲ್ದಾಣಕ್ಕೆ ಆಗಮಿಸಿದ್ದರು.

ಪಂಡಿತ ನೆಹರೂರವರೂ, ಶ್ರೀಮನ್ಮಹಾರಾಜರೂ ಅನಂತರ ವಿಮಾನಕಾರ್ಖಾನೆಗೆ ಭೇಟಿಯಿತ್ತು, ಅದನ್ನು ಪರಿಶೀಲಿಸಿ ಅಲ್ಲಿಂದ ಕಾರಿನಲ್ಲಿ ರೆಸಿಡೆನ್ಸಿಗೆ ತೆರಳಿದರು. ೭ ಮೈಲಿ ಉದ್ದವೂ ಸಹಸ್ರಾರು ಜನರು ಕಿಕ್ಕಿರಿದು ನಿಂತು ಅಭೂತಸ್ವಾಗತವನ್ನು ಹರ್ಷಧ್ವನಿಗಳಿಂದ ನೀಡಿದರು.

ವೈಜ್ಞಾನಿಕ ಸಮ್ಮೇಳನಕ್ಕೆ

ಬೆಂಗಳೂರಿನಲ್ಲಿ ಇಂದು ಪ್ರಾರಂಭವಾದ ವೈಜ್ಞಾನಿಕ ಸಮ್ಮೇಳನದಲ್ಲಿ ಭಾಗವಹಿಸಲು ೧,೫೦೦ ಶಾಸ್ತ್ರಜ್ಞರು ಬಂದಿರುವರು.

ಚೈನಾ ಅಕ್ಕಿ ಭಾರತಕ್ಕೆ

ಭಾರತ ಸರ್ಕಾರವು ಚೈನಾ ಪ್ರಜಾ ಸರ್ಕಾರದಿಂದ ೫೦,೦೦೦ ಟನ್ನು ಅಕ್ಕಿಯನ್ನು ಕೊಳ್ಳಲು ಏರ್ಪಾಡು ನಡೆದಿದೆ.

ಪ್ರದರ್ಶನ

ಮಹಾರಾಜರವರ ಕಾಲೇಜಿನ ಶತಮಾನೋತ್ಸವದ ಅಂಗವಾಗಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಕಾಲೇಜಿನ ಹಿಂದಿನ ಮತ್ತು ಈಗಿನ ವಿದ್ಯಾರ್ಥಿಗಳಿಂದ ರಚಿತವಾದ ಕಲಾವಸ್ತು, ಚಿತ್ರಪಟ, ಗ್ರಂಥ, ಶಾಸನ ಇಲಾಖೆ ಮತ್ತು ಓರಿಯೆಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ಗಳಲ್ಲಿರುವ ಅಪೂರ್ವ ವಸ್ತುಗಳು ಗ್ರಂಥ ಇವುಗಳನ್ನು ಪ್ರದರ್ಶಿಸಲಾಗುವುದು. ಕಾಲೇಜಿನ ವಿದ್ಯಾರ್ಥಿಗಳೆಲ್ಲರು ತಮ್ಮಲ್ಲಿರುವ ಮತ್ತು ಪ್ರದರ್ಶಿಸಲರ್ಹವಾದ ವಸ್ತುಗಳನ್ನೂ ಗ್ರಂಥಗಳನ್ನೂ ೧೯೫೧ ನೇ ಇಸ್ವಿ ಜನವರಿ ೧೫ ನೇ ತಾರೀಖಿನೊಳಗಾಗಿ ಶತಮಾನೋತ್ಸವದ ಕಚೇರಿಗೆ ಕಳುಹಿಸಿ ಸಹಾಯಮಾಡಬೇಕಾಗಿ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಮಾತುಕಥೆ ಮುಗಿದುವು

ನೇಪಾಳ ಪ್ರತಿನಿಧಿಗೂ ಭಾರತಸರ್ಕಾರಕ್ಕೂ ನೇಪಾಳದಲ್ಲಿ ತರಬೇಕೆಂದಿರುವ ಸುಧಾರಣೆವಿಷಯವಾಗಿ ಮಾತುಕಥೆಗಳು ಮುಗಿದುವೆಂದೂ, ಆಶಾದಾಯಕವಾಗಿದೆಯೆಂದೂ ಹೇಳಲಾಗಿದೆ. ನೇಪಾಳದ ಪ್ರತಿನಿಧಿಯು ತಮ್ಮ ಸರ್ಕಾರಕ್ಕೆ ಈ ವಿಷಯವನ್ನು ತಿಳಿಸಲು ಹಿಂತಿರುಗುವರು.

ಅಮೆರಿಕಾದಿಂದ ಭಾರತಕ್ಕೆಗೋಧಿ

ಅಮೆರಿಕಾದಿಂದ ಭಾರತಕ್ಕೆ ಉಭಯತ್ರರಿಗೂ ಸರಿಯಾದ ರೀತಿಯಲ್ಲಿ ಒಪ್ಪಂದವಾದ ಮೇಲೆ ೨೦,೦೦,೦೦೦ ಟನ್ ಗೋಧಿಯನ್ನು ಕಳುಹಿಸಲು ಕಾರ್ಯಕ್ರಮ ನಡೆಯುತ್ತಲಿರುವುದಾಗಿ ತಿಳಿದುಬರುತ್ತದೆ.

ನ್ಯೂ ಅಪೇರಾ
ಟಾಕೀಸ್
ಮೈಸೂರು
೩೦-೧೨-೫೦ ಪ್ರತಿದಿನ ೩ ಆಟಗಳು
ಕೃಷ್ಣ ವಿಜಯಂ
(ತಮಿಳು)
ಆರ್. ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ ಪ್ರೇಮಾವತಿ
ಅಂಗ ಮುತ್ತು : ನರಸಿಂಹಭಾರತಿ
ವಸಂತಕೋಕಿಲಂ : ಭಾಗ್ಯಮ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ   ದಿನ ಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩—೧—೧೯೫೧ನೇ ಬುಧವಾರ [ಸಂಚಿಕೆ ೧೦೩

ಪಕ್ಷದ ತೀರ್ಮಾನಕ್ಕೆ ಮನ್ನಣೆ ಕೊಡಬೇಕು

ಸಂಸ್ಥೆಯ ಘನತೆ ಒಗ್ಗಟ್ಟು ಕಾಪಾಡಬೇಕು

ಬೆಂಗಳೂರು ಜ. ೨

ಪ್ರಜಾ ಪ್ರಭುತ್ವತತ್ವವನ್ನು ಯಾರೂ ವಿರೋಧಿಸಲಾಗುವುದಿಲ್ಲ. ಕಾಂಗ್ರೆಸ್ ಸಂಸ್ಥೆಯು ಪ್ರಜಾಪ್ರಭುತ್ವತತ್ವಕ್ಕೇ ಹೋರಾಡುತ್ತಲಿದೆ ಕಾಂಗ್ರೆಸ್ ಕೆಲಸಗಾರರು ಈ ತತ್ವಕ್ಕೆ ಮನ್ನಣೆಯನ್ನಿತ್ತು ಅದರಂತೆ ನಡೆಯಬೇಕು ಕಾಂಗ್ರೆಸ್ಸಿನವರಲ್ಲಿ ಶಿಸ್ತು ಮುಖ್ಯ ಪಕ್ಷದ ತೀರ್ಮಾನಕ್ಕೆ ತಲೆಬಾಗಲೇಬೇಕು. ಪಕ್ಷದಲ್ಲಿ ತೀರ್ಮಾನ ಮಾಡುವಾಗ ಸಂಸ್ಥೆಯ ಒಗ್ಗಟ್ಟು ಘನತೆಯ ಕಡೆ ಹೆಚ್ಚು ಗಮನವನ್ನೀಯಬೇಕು. ಬಹುಮತ ಯಾವ ರೀತಿಯಾಗಿ ಹೇಳುವುದೋ ಅದರಂತೆ ಪಕ್ಷದ ನಾಯಕರು ನಡೆಯಬೇಕು.

ಎಂದು ಭಾರತ ಪ್ರಧಾನಿ ನೆಹರೂರವರು ಇಂದು ಬೆಂಗ್ಳೂ ರೆಸಿಡೆನ್ಸಿಯಲ್ಲಿ ಸುಮಾರು ಅರ್ಧ ಗಂಟೆ ಕಾಲ ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರನ್ನು ದ್ದೇಶಿಸಿ ಮಾಡಿದ ಭಾಷಣದಲ್ಲಿ ಹೇಳಿದರು. ಸುಮಾರು ೫೦ ಜನ ಸದಸ್ಯರು ಹಾಜರಿದ್ದರು. ಮುಖ್ಯಮಂತ್ರಿಗಳು ದೇಹಾಲಸ್ಯ ನಿಮಿತ್ತ ಹಾಜರಿರಲಿಲ್ಲ.

ಪ್ರಧಾನಿಗಳು ತಮ್ಮ ಭಾಷಣದಲ್ಲಿ ಅಂತರರಾಷ್ಟ್ರೀಯ ಮತ್ತು ಭಾರತದ ಇಂದಿನ ಆಹಾರ ಪರಿಸ್ಥಿತಿಯನ್ನು ವಿವರಿಸಿ ಎಲ್ಲರೂ ಯಾವ ಭೇದಭಾವವೂ ಇಲ್ಲದೆ ಸೇವಾತತ್ಪರರಾಗಿ ಸಹಕರಿಸಿ ದೇಶೋನ್ನತಿಗೆ ನೆರವಾಗಬೇಕೆಂದು ಹೇಳಿದರು ದೇಶದ ಆಗು ಹೋಗುಗಳೆಲ್ಲವೂ ಕಾಂಗ್ರೆಸ್ ಸಂಸ್ಥೆಯ ಜವಾಬ್ದಾರಿಯಾಗಿರುವ ಈ ಕಾಲದಲ್ಲಿ ಸಂಸ್ಥೆಯ ಘನತೆಯನ್ನು ಕಾಪಾಡುತ್ತ ಪ್ರಜಾವರ್ಗದ ಹಿತಕ್ಕಾಗಿ ಎಲ್ಲರೂ ದುಡಿಯಬೇಕೆಂದು ಹೇಳಿದರು.

ಶ್ರೀ ಕೆ.ಸಿ ರೆಡ್ಡಿಯವರನ್ನು ತಾವು ಹೋಗಿ ನೋಡಿಕೊಂಡು ಬಂದರೆಂದೂ ಅವರು ಬಹಳ ಯೋಚನಾಪರವಶರಾಗಿ, ನಿಶ್ಶಕ್ತರಾಗಿರುವರೆಂದೂ, ಇಂದಿನ ಪರಿಸ್ಥಿತಿಯಲ್ಲಿ ಪಕ್ಷದ ತೀರ್ಮಾನಕ್ಕೆ ಅವರು ವಿರೋಧವಾಗಿ ಹೋಗುವವರಲ್ಲವೆಂದು ಪ್ರಧಾನಿಗಳು ಹೇಳಿದುದಾಗಿ ತಿಳಿಯಬಂದಿದೆ.

ಸಂತಾಪಸೂಚನೆ

ಭಾರತ ವೈಜ್ಞಾನಿಕ ಸಮ್ಮೇಳನ ಪ್ರಾರಂಭೋತ್ಸವ ...ನ್ನ ಸರ್ದಾರ್ ಪಟೇಲರ ನಿಧನದ ಬಗ್ಗೆ ಸಂತಾಪ ...ಚಕ ನಿರ್ಣಯವನ್ನು ಶ್ರೀಮನ್ಮಹಾರಾಜರವರು ...ಯಲ್ಲಿ ಮಂಡಿಸಿದರು. ಸರ್ದಾರರ ನಿಧನದಿಂದ ಭಾ...ದ ಪುತ್ರಶ್ರೇಷ್ಠರಲ್ಲೊಬ್ಬರ ನಷ್ಟವಾಗಿದೆ. ಸ್ವಾತ್ರಸಂಗ್ರಾಮದಲ್ಲಿ ಅವರು ನಿರ್ವಹಿಸಿದ ಪಾತ್ರ ಇತಿ...ಸ ಪ್ರಸಿದ್ಧವಾದುದು. ಭಾರತದ ಸಂಘಟನೆ ಸಾಧಿಸಿ ...ಶದಲ್ಲಿ ಶಿಸ್ತು ಸುವ್ಯವಸ್ಥೆಯನ್ನುಂಟುಮಾಡಿದರು. ...ಸೂರಿನ ಪ್ರಜೆಗಳು ಮತ್ತು ಮೈಸೂರಿನ ಅಭಿವೃದ್ಧಿ...ಲ್ಲಿ ಸರ್ದಾರರಿಗೆ ವಿಶೇಷಾಸಕ್ತಿಯಿತ್ತು. ಅವರ ನಿಧನದ ನಮಗೆ ಅಧಿಕ ನಷ್ಟವಾಗಿದೆ ಎಂದು ಮಹಾರಾಜ...ರು ಹೇಳಿದರು. ಸಭೆ ಎರಡು ನಿಮಿಷ ಮೌನವನ್ನು ...ರಿಸಿತು.

ಕಮ್ಯೂನಿಸ್ಟ್ ಚೀಣಾಕ್ಕೆ ಸ್ಥಾನ

ಕಮ್ಯೂನಿಸ್ಟ್ ಚೀಣಾಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನ...ವನ್ನು ಕೊಡಬೇಕೆಂಬ ವಿಷಯವನ್ನು ಲಂಡನ್ನಿನಲ್ಲಿ ...ಳೆಯಿಂದ ನಡೆಯಲಿರುವ ಕಾಮನ್‌ವೆಲ್ತ್ ಪ್ರಧಾನಿ ಸಮ್ಮೇಳನದಲ್ಲಿ ತಾವು ವಾದಿಸುದಾಗಿ ಪಂಡಿತ ...ಹರೂರವರು ಲಂಡನ್ನಿಗೆ ಹೊರಡುವ ಮುನ್ನ ಬೊಂಬಾಯಿನಲ್ಲಿ ಹೇಳಿದರು.

ಹೊಸ ವರ್ಷಾರಂಭ

ಅಧ್ಯಕ್ಷ ಟ್ರೂಮನ್, ಜ॥ ಮೆಕಾರ್ಥರ್ ಮತ್ತು ...ದ ಯುದ್ಧಾಸಕ್ತ ಮುಖಂಡರ ಕಾಗದದ ಪ್ರತಿಮೆಗಳ...ನ್ನು ಲೆ ಗುಂಡು ಹಾರಿಸಿ ಚೀಣೀ ಯುವಕರು ನೂತನ ವರ್ಷಾರಂಭದ ಹಬ್ಬವನ್ನಾಚರಿಸಿದರೆಂದು ಪಿಕಿಂಗ್ ರೇಡಿಯೋ ಪ್ರಕಟಿಸಿದೆ.

ಲಂಡನ್ನಿಗೆ ಪ್ರಯಾಣ

ಭಾರತಪ್ರಧಾನಿ ಪಂಡಿತನೆಹರೂರವರು ನಿನ್ನೆ ಮಧ್ಯಾಹ್ನ ಬೆಂಗಳೂರಿನಿಂದ ಬೊಂಬಾಯಿಗೆ ತೆರಳಿ ಅಲ್ಲಿ ಎರಡು ಗಂಟೆ ಕಾಲ ವಿಶ್ರಮಿಸಿಕೊಂಡು ಲಂಡನ್ನಿಗೆ ತೆರಳಿದರು. ವಿದೇಶಾಂಗ ಶಾಖಾ ಪ್ರಧಾನ ಕಾರ್ಯದರ್ಶಿ ಶ್ರೀ ಗಿರಿಜಾ ಶಂಕರಬಾಜಪೈ ಮತ್ತು ಪ್ರಧಾನಿ ಕಾರ್ಯದರ್ಶಿ ಶ್ರೀ ವೆ ಥಾಮತ್‌ರವರು ಅವರೊಡನೆ ಪ್ರಯಾಣ ಮಾಡಿದರು.

ಶಿಲಾಪ್ರತಿಮೆ ಅನಾವರಣ

ನಿನ್ನೆದಿನ ಬೊಂಬಾಯಿನಲ್ಲಿ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರವರು ದಿವಂಗತ ವಿಠಲಭಾಯಿ ಪಟೇಲರ ಶಿಲಾಪ್ರತಿಮೆ ಅನಾವರಣಮಾಡುತ್ತಾ, ವಿಠಲಭಾಯಿ ಪಟೇಲರು ೧೯೩೦ ಸತ್ಯಾಗ್ರಹ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿ, ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿದ್ದು ಅನೇಕ ರೀತಿ ದೇಶ ಸೇವೆಗೈದು ದೇಶಕ್ಕೆ ಮಾರ್ಗದರ್ಶಕರಾಗಿದ್ದರು. ಅವರ ಉನ್ನತ ಔದಾರ್ಯ ಮತ್ತು ಸೇವಾತತ್ಪರತೆಯು ಎಲ್ಲರಿಗೂ ಮೇಲ್ಪಂಕ್ತಿಯಾಗಿದೆ ಎಂದು ಹೇಳಿದರು.

ಶಿಲಾಪ್ರತಿಮೆಯು ೧೧॥ ಎತ್ತರವಿದ್ದು ಕಂಚಿನಿಂದ ಮಾಡಿದೆ ೧೫ ಅಡಿ ಎತ್ತರದ ಸ್ತಂಭದ ಮೇಲಿಡಲಾಗಿದೆ.

ಕೊರಿಯಾ ಪರಿಸ್ಥಿತಿ

ಕೊರಿಯಾ ಯುದ್ಧ ಪರಿಸ್ಥಿತಿಯು ಗಭೀರವಾಗಿದೆ ಆದರೆ ಉತ್ಕಟವಾಗಿಲ್ಲ ವಿಶ್ವ ಸಂಸ್ಥೆಯ ಸೈನ್ಯಗಳು ೭ ಸ್ಥಾನಗಳಿಂದ ಹಿಂತೆಗೆದಿವೆ. ಚೀಣೀಯರ ೩ ಸೈನ್ಯಗಳು, ಉತ್ತರ ಕೊರಿಯನ್ನರ ೩ ಸೈನ್ಯಗಳು ಸರ್ವತೋಮುಖವಾಗಿ ಆಕ್ರಮಣ ಪ್ರಾರಂಭಮಾಡಿವೆ. ದಕ್ಷಿಣ ಕೊರಿಯ ರಾಜಧಾನಿಯು ಜನರಹಿತವಾಗಿದೆ. ವಿಶ್ವಸಂಸ್ಥೆಯ ಸೈನ್ಯಗಳು ಹಿಂತೆಗೆಯುತ್ತ, ಶತ್ರುಗಳು ಆಕ್ರಮಿಸಿಕೊಳ್ಳುವ ಪ್ರದೇಶವು ಅವರಿಗೆ ಅಪ್ರಯೋಜನವಾಗುವಂತೆ ಆ ಪ್ರದೇಶಗಳನ್ನು ನಾಶಮಾಡುತ್ತ ಇವೆ ಎಂದು ವರದಿ ಬಂದಿದೆ.

ಉಗ್ರಕಾರ್ಯಕ್ರಮ

ಕೊರಿಯಾ ಯುದ್ಧರಂಗದಲ್ಲಿ ಚೈನಾವಿನ ಆಕ್ರಮಣ ಕಾರ್ಯವು ಇದೇ ರೀತಿಯಾಗಿ ಮುಂದುವರಿದರೆ ಚೀಣಾದ ಮೇಲೆ ಉಗ್ರಕಾರ್ಯಾಚರಣೆಯನ್ನು ತೆಗೆದುಕೊಳ್ಳಬೇಕೆಂದೂ ವಿಶ್ವಸಂಸ್ಥೆಯ ಮಹಾಸಭೆಯನ್ನು ಅಮೆರಿಕಾ ಕೇಳುವುದಾಗಿ ತಿಳಿಯಬಂದಿದೆ.

ಪಾಕಿಸ್ಥಾನಪ್ರಧಾನಿ ಲಂಡನ್ನಿಗೆ

ಪಾಕಿಸ್ಥಾನ ಪ್ರಧಾನಿ ಮಿ॥ ಲಿಯಾಕತ್ ಅಲಿಖಾನ್‌ರವರು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಲು ಇನ್ನೂ ನಿರ್ಧರಿಸಿಲ್ಲವೆಂದೂ, ಬ್ರಿಟಿಷ್ ಪ್ರಧಾನಿಯೊಡನೆ ಕಾಶ್ಮೀರ ಪ್ರಶ್ನೆಯನ್ನು ಈ ಸಮ್ಮೇಳನದಲ್ಲಿ ಚರ್ಚಿಸುವ ವಿಷಯದಲ್ಲ ಪತ್ರವ್ಯವಹಾರ ಇನ್ನೂ ಮುಗಿದಿಲ್ಲವೆಂದೂ ಹೇಳಲಾಗಿದೆ.

ಮುಖ್ಯ ಮಂತ್ರಿಗಳ ದೇಹಾಲಸ್ಯ

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ದೇಹಾಲಸ್ಯದಿಂದ ಹಾಸಿಗೆ ಹಿಡಿದಿದ್ದಾರೆ. ಇತ್ತೀಚೆಗೆ ಅವರು ಯಾರಿಗೂ ಭೇಟಿಯಿಯುತ್ತಲಿಲ್ಲವೆಂದು ತಿಳಿಯಬಂದಿದೆ

ವಿ. ಪಿ ಮೆನನ್ನರ ಆಗಮನ

ಬೆಂಗಳೂರು ಜ ೨

ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ ವಿ.ಪಿ. ಮೆನನ್ನರು ತಮ್ಮ ಪತ್ನೀ ಸಮೇತ ನಾಳೆ ಬರುವರೆಂದು ತಿಳಿಯಬರುತ್ತದೆ.

ಪಕ್ಷದ ಸಭೆ

ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಸದಸ್ಯರ ಸಭೆಯು ಇದೇ ಮಾಹೆ ೧೦ನೇ ತಾ॥ ನಡೆಯುವುದಾಗಿ ತಿಳಿಯಬರುತ್ತದೆ.

ಶ್ರೀ ರೆಡ್ಡಿಯವರ ಆರೋಗ್ಯ

ಶ್ರೀಮನ್ಮಹಾರಾಜರವರು ನಿನ್ನೆ ಸಂಜೆ ಕಾರಲ್‌ಟನ್ ಭವನಕ್ಕೆ ಹೋಗಿ ಅಸ್ವಸ್ಥತೆಯಿಂದಿರುವ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ನೋಡಿಕೊಂಡು, ಅವರ ಯೋಗಕ್ಷೇಮವನ್ನು ವಿಚಾರಿಸಿದರು.

ಇನ್‌ಛಾರ್ಜ್ ಮುಖ್ಯಮಂತ್ರಿ

ಶ್ರೀ ಕೆ. ಸಿ. ರೆಡ್ಡಿಯವರ ಅನಾರೋಗ್ಯ ನಿಮಿತ್ತ ನಿನ್ನೆಯಿಂದ ಸಚಿವ ಶ್ರೀ ದಾಸಪ್ಪನವರು ಮುಖ್ಯಮಂತ್ರಿಗಳ ಕಾರ್ಯವನ್ನು ನೋಡುತ್ತಲಿರುವರು.

ಅಧಿಕಾರ ಸ್ವೀಕಾರ

ಮೈಸೂರು ಜ ೧

ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಮೈಸೂರು ನಗರ ಪೌರಸಭಾಧ್ಯಕ್ಷ, ಶ್ರೀ ಎಂ ಎಸ್. ನಂಜಪ್ಪನವರು ಉಪಾಧ್ಯಕ್ಷ ಅಧಿಕಾರವನ್ನು ಇಂದು ಸಂಜೆ ಸ್ವೀಕರಿಸಿದರು

ವಿಜ್ಞಾನಿಗಳು ಶಾಂತಿಗಾಗಿ ಪ್ರಯತ್ನಿಸಬೇಕು

ಬೆಂಗಳೂರು ಜ. ೨

ಭಾರತ ಮತ್ತು ಭಾರತದ ಜನರಲ್ಲಿ ವಿಜ್ಞಾನ ಮನೋಭಾವ ಬೆಳೆಯಬೇಕು. ಭಾರತದಲ್ಲಿ ವಿಜ್ಞಾನ ಪರಿಶೋಧನೆ ಅಭಿವೃದ್ಧಿಗೊಂಡು ನಮ್ಮ ಸಮಸ್ಯೆಗಳಿಗೆಲ್ಲ ವಿಜ್ಞಾನ ಪರಿಹಾರ ಕಲ್ಪಿಸುವಂತೆ ಆಗಬೇಕು. ಅವಕ್ಕಾಗಿ ಎಲ್ಲ ವಿಧದಲ್ಲೂ ಸಹಾಯಮಾಡಲು ನಾನು ಸಿದ್ಧ.

ವಿಜ್ಞಾನಿಗಳು ಶಾಂತಿಗಾಗಿ ಪ್ರಯತ್ನಿಸಬೇಕೇ ವಿನಹ ಯುದ್ಧಕ್ಕಾಗಿ ಅಲ್ಲ. ಎಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಇಂದು ಬೆಳಗ್ಗೆ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಮತ್ತು ಪಾನ್ ಇಂಡಿಯನ್ ಓಷನ್ ಸೈನ್ಸ್ ಕಾಂಗ್ರೆಸ್ ಅಧಿವೇಶನಗಳ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಹೇಳಿದರು.

ಭಾರತ ಕೇಂದ್ರ ಸರ್ಕಾರದಲ್ಲಿ ವಿಜ್ಞಾನ ಪರಿಶೋಧನೆ ಮತ್ತು ಪ್ರಕೃತಿದತ್ತವಾದ ಸಾಧನ ಸಂಪತ್ತುಗಳ ಮೇಲ್ವಿಚಾರಣೆಗಾಗಿಯೇ ಈಗ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಲಾಗಿದೆ.

ವಿಜ್ಞಾನಕ್ಕೆ ಮತ್ತು ವಿಜ್ಞಾನ ಪರಿಶೋಧನೆಗೆ ಪ್ರೋತ್ಸಾಹ ಅತ್ಯಗತ್ಯವೆಂದು ನಾನು ಮೊದಲಿನಿಂದ ಭಾವಿಸಿದ್ದೇನೆ. ಅನೇಕ ವೈಜ್ಞಾನಿಕ ಸಂಸ್ಥೆಗಳೊಡನೆ ನಾನು ಸಂಪರ್ಕವಿಟ್ಟುಕೊಂಡಿದ್ದೇನೆ. ಆಟಾಮಿಕ್ ಸಮಿತಿಯಲ್ಲಿ ನಾನು ಸದಸ್ಯ ಅಂದಮಾತ್ರಕ್ಕೆ ನನಗೆ ವಿಜ್ಞಾನದ ವಿಷಯವಾಗಿಯಾಗಲೀ ಅಣುಶಕ್ತಿ ವಿಷಯವಾಗಿ ಆಗಲೀ ವಿಶೇಷ ಜ್ಞಾನವಿದೆಯೆಂದಲ್ಲ. ಸರ್ಕಾರದಿಂದ ವಿಜ್ಞಾನ ಬೆಳವಣಿಗೆಗೆ ಯಾವ ರೀತಿಯಾದ ಸಹಾಯ ನೀಡಬೇಕೋ ಅದನ್ನೆಲ್ಲಾ ನೀಡಲು ನಾನು ಆ ಸಮಿತಿಯಲ್ಲಿರುವೆನು. ವಿಜ್ಞಾನ ಬೆಳವಣಿಗೆಗೆ ಭಾರತ ಸರ್ಕಾರವು ಸರ್ವಸಹಾಯ ನೀಡಲು ಸದಾ ಸಿದ್ಧವಾಗಿರುತ್ತದೆ. ಎಂದು ಪಂಡಿತ ನೆಹರೂ ತಿಳಿಸಿದರು.

ಮೈಸೂರು ಜಿಲ್ಲಾ ರೈತರ ಸಮ್ಮೇಳನ

ಸೋಮವಾರ ಮಧ್ಯಾಹ್ನ ೨ ಗಂಟೆಗೆ ಕಳಸವಾಡಿ ಸುಬ್ಬರಾಯನಕೆರೆ ತೋಪಿನಲ್ಲಿ ಮೈಸೂರು ತಾ॥ ನಾಗನಹಳ್ಳಿ ಸರ್ಕಲ್ ಶ್ರೀರಂಗಪಟ್ಟಣದ ಮತ್ತು ಇತರ ಗ್ರಾಮಗಳ ರೈತರ ಸಂಘದ ಕಾರ್ಯದರ್ಶಿಯವರಾದ ಶ್ರೀ ಸಿ. ಜೆ. ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಶ್ರೀ ಶಿವನಂಜೇಗೌಡರು ಸ್ವಾಗತ ಭಾಷಣವನ್ನು ಮಾಡಿದರು. ಶ್ರೀಗಳಾದ ಪುಟ್ಟಸ್ವಾಮಿ, ಅನಂತಶೆಟ್ಟಿ, ಪುಟ್ಟಪ್ಪ, ಶ್ರೀ ಚಂದಗಾಲ್ ಮರಿಯಪ್ಪನವರು, ಮತ್ತಿತರರು ಆ ಪ್ರಾಂತ್ಯದ ರೈತರ ಕಷ್ಟಗಳ ಮತ್ತು ಸಮಸ್ಯೆಗಳ ಬಗ್ಗೆ ಭಾಷಣಮಾಡಿದರು. ಶ್ರೀ ಸಿ. ಜೆ. ದೇವನಾಥ್‌ರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ರೈತರು ಸತ್ಯದಿಂದಲೂ ಉದಾರಮನೋಭಾವನೆಯಿಂದಲೂ ದೇಶದ ಹಿತದೃಷ್ಟಿಯಿಂದಲೂ ವರ್ತಿಸಬೇಕೆಂದು ತಿಳಿಸಿದರು. ಮುಂದುವರೆದು, ರೈತಸಂಘಗಳ ಆವಶ್ಯಕತೆ ಮತ್ತು ಉಪಯೋಗಗಳನ್ನು ವಿವರಿಸಿ ಮೈಸೂರು ಜಿಲ್ಲಾ ರೈತಸಂಘ ಮಾಡಿರುವ ಕೆಲಸಗಳನ್ನು ವಿವರಿಸಿ ಸುವ್ಯವಸ್ಥಿತ ರೈತಸಂಘಗಳನ್ನು ಏರ್ಪಡಿಸಿ ರಾಜಕೀಯದಲ್ಲಿ ಸಿಕ್ಕದ ರಚನಾತ್ಮಕ ಕ್ಷೇತ್ರದಲ್ಲಿ ಕೆಲಸಮಾಡಬೇಕೆಂದು ಸೂಚಿಸಿದರು. ಅಧಿಕಾರಿವರ್ಗದವರಲ್ಲಿ ಅಸಹಕಾರ ಮನೋಭಾವನೆಯನ್ನು ತೋರದೆ ರಾಷ್ಟ್ರಹಿತಚಿಂತನೆಯಿಂದಲೂ ಧಾರಾಳ ಮನೋಭಾವನೆಯಿಂದಲೂ ವರ್ತಿಸಬೇಕೆಂದು ಅನ್ಯಾಯ, ಅಧರ್ಮ ಮತ್ತು ಕಿರುಕುಳಗಳನ್ನು ಎದುರಿಸಲು ಸದಾ ಸಿದ್ಧರಾಗಿರಬೇಕೆಂದು ತಿಳಿಸಿದರು. ಸಮ್ಮೇಳನದ ಕಾರ್ಯಕಲಾಪಗಳ ಮುಂಚೆ ಅಧ್ಯಕ್ಷರು ದಿವಗಂತ ಸರ್ದಾರ್ ಪಟೇಲ್‌ರವರು ರೈತರಿಗೆ ಸಗಿದಸೇವೆಯನ್ನು ಕೊಂಡಾಡಿ ಅವರ ನಿಧನಕ್ಕಾಗಿ ಶೋಕನಿರ್ಣಯವನ್ನು ಮಂಡಿಸಿದರು. ಸಮ್ಮೇಳನಕೆ ಅನೇಕ ಗ್ರಾಮಗಳಿಂದ ರೈತಪ್ರತಿನಿಧಿಗಳೂ ರೈತರೂ ಆಗಮಿಸಿದ್ದರು.

ಆರ್ಥಿಕಸ್ಥಿತಿ ಹತೋಟಿಗೆ ತರಲು ತೆರಿಗೆ ಹೆಚ್ಚಿಸಲಾಯಿತು

ಮೈಸೂರು ಜ. ೨

ಮೈಸೂರು ನಗರ ಪೌರಸಭೆಯ ವರಮಾನಕ್ಕಿಂತ ಖರ್ಚು ಅಧಿಕವಾಗುತ್ತಲಿದೆ. ಇದಕ್ಕೆ ಈಗಿನ ದೇಶದ ಪರಿಸ್ಥಿತಿಯೇ ಮುಖ್ಯಕಾರಣ. ಈ ಅಧಿಕ ವೆಚ್ಚಕ್ಕೆ ಹಣವನ್ನೊದಗಿಸಲು ಕಂದಾಯ, ಲೈಸೆನ್ಸ್ ಫೀ ವ್ಯಾಪಾರ ಮುಂತಾದ ಬಾಬುಗಳಲ್ಲಿ ವರಮಾನವನ್ನು ಹೆಚ್ಚಿಸಿಕೊಳ್ಳಬೇಕು. ಅದಕ್ಕೆ ಜನಗಳಿಗೆ ಹೆಚ್ಚಿಗೆ ಭಾರವನ್ನು ಹೊರಿಸದೆ ಅಲ್ಪಸ್ವಲ್ಪ ಕಂದಾಯವನ್ನು ಹೆಚ್ಚಿಸಬೇಕಾಗಿ ಬಂತು. ಪ್ರಾರಂಭದಲ್ಲಿ ಇದಕ್ಕೆ ಅನೇಕರು ಸಮ್ಮತಿಸಲಿಲ್ಲವಾದರೂ ಅವರಿಗೆ ನಮ್ಮ ಸ್ಥಿತಿಗತಿಗಳನ್ನು ತಿಳಿಸಿದ ಮೇಲೆ ಎಲ್ಲರೂ ಅದನ್ನು ಸ್ವಾಗತಿಸಿರುವರು ಎಂದು ಮೈಸೂರು ನಗರ ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ನಿನ್ನೆ ತಾವು ಇತ್ತ ಸತ್ಕಾರಕೂಟದಲ್ಲಿ ತಿಳಿಸಿದರು. ತಮ್ಮ ಭಾಷಣದಲ್ಲಿ ಅವರು ನಗರ ಪೌರಸಭೆಗೆ ಈಗ ೯ ಲಕ್ಷ ರೂಪಾಯಿಗಳ ಸಾಲವಿದೆ. ಮುಂದಿನ ವರ್ಷದಲ್ಲಿ ೬॥ ಲಕ್ಷ ಸಾಲವನ್ನು ತೀರಿಸಬೇಕಾಗಿದೆ ೧೫ ವರ್ಷಗಳಿಂದ ಈ ಸಾಲಕ್ಕೆ ೩೫ ಸಾವಿರ ರೂಪಾಯಿಗಳನ್ನು ಕೊಡುತ್ತಾ ಬಂದಿದ್ದೇವೆ ಕೂಡಲೇ ಈ ಸಾಲಗಳನ್ನು ತೀರಿಸಿದರೆ ಪೌರಸಭೆಯ ಆರ್ಥಿಕಸ್ಥಿತಿಯು ಉತ್ತಮಗೊಂಡು ನಗರದಲ್ಲಿ ಹೆಚ್ಚಿಗೆ ಸೌಕರ್ಯಗಳನ್ನು ಕಲ್ಪಿಸಬಹುದು. ಪೌರಸಭೆಯ ಆರ್ಥಿಕಸ್ಥಿತಿಯನ್ನು ಹತೋಟಿಗೆ ತರಲು ಈ ವರ್ಷವೆಲ್ಲಾ ಶ್ರಮಿಸಿ ಒಂದು ಸ್ಥಿತಿಗೆ ತರಲಾಗಿದೆ ಈ ಕಾರ್ಯದಲ್ಲಿ ಸಹೋದ್ಯೋಗಿಗಳು, ಅಧಿಕಾರಿ ವರ್ಗದವರು ವಿಶೇಷವಾಗಿ ಸಹಕಾರ ನೀಡಿ ಕಾರ್ಯವು ಸುಸೂತ್ರವಾಗಿ ನಡೆಯಲು ನೆರವಾದರೆಂದು ಹೇಳಿದರು ಉಪಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಶ್ರೀ ಲಿಂಗಣ್ಣನವರ ಸೇವೆಯನ್ನು ಪ್ರಶಂಸಿಸಿ ವಂದನೆಯನ್ನರ್ಪಿಸಿದರು.

ಗಡಿನಾಡಿನ ಗಾಂಧಿ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್‌ಗಫಾರ್‌ಖಾನ್‌ರವರ ಆರೋಗ್ಯವು ಕ್ಷೀಣವಾಗುತ್ತಲಿದೆಯೆಂದು ಕಾಬೂಲ್ ರೇಡಿಯೋ ತಿಳಿಸಿದೆ

ಅಮೆರಿಕಾ ಜನಸಂಖ್ಯೆ

ಅಮೆರಿಕಾ ಸಂಯುಕ್ತಸಂಸ್ಥಾನದ ಈಗಿನ ಜನಸಂಖ್ಯೆಯು ೧೫೨,೩೪೦,೦೦೦ ಎಂಬುದಾಗಿ ಜನಗಣತಿ ಸಂಸ್ಥೆಯು ಪ್ರಕಟಿಸಿದೆ.

ಕೊರಿಯಾ ಯುದ್ಧ ಪರಿಸ್ಥಿತಿ

ಚೈನಾ ಮತ್ತು ಉತ್ತರಕೊರಿಯಾ ಸೈನ್ಯಗಳು ದಕ್ಷಿಣ ಕೊರಿಯಾ ಕಡೆಗೆ ಸಮಗ್ರಧಾಳಿಯನ್ನು ಪುನಃ ಪ್ರಾರಂಭಿಸಿವೆ. ಈ ಕಾರ್ಯದಲ್ಲಿ ಸುಮಾರು ೨,೦೦,೦೦೦ ಸೈನಿಕರು ಭಾಗ ವಹಿಸಿರುವರೆಂದು ಹೇಳಲಾಗಿದೆ. ಚೈನಾ ಸಂಖ್ಯೆಯೇ ಹೆಚ್ಚಾಗಿವೆಯೆಂದು ಹೇಳಲಾಗಿದೆ. ವಿಶ್ವಸಂಸ್ಥೆಯ ಬಲಗಳು ಹಿಂದಕ್ಕೆ ಹೋಗುತ್ತಲಿವೆ.

೩,೫೦೦ ಸಲ ವಿಮಾನಗಳು ಧಾಳಿಗಳಿಗೆ ಓಡಾಡಿವೆ, ಕೊರಿಯಾ ಯುದ್ಧ ಪ್ರಾರಂಭವಾದಾಗಿನಿಂದ ನಡೆದ ಪ್ರಬಲವಾದ ಧಾಳಿಯೆಂದು ಹೇಳಲಾಗಿದೆ.

ರಜತ ಮಹೋತ್ಸವ

ಪ್ರೈವೆಟ್ ಕಾಮರ್ಸ್ ಕಾಲೇಜಿನ ರಜತಮಹೋತ್ಸವವು ಇದೇ ಮಾಹೆ ೭ ಮತ್ತು ೮ನೆಯ ತಾ॥ ಗಳಲ್ಲಿ ಶ್ರೀ ಜೆ. ಬಿ ಮಲ್ಲಾರಾಧ್ಯ ಇವರ ಅಧ್ಯಕ್ಷತೆಯಲ್ಲಿ ರಂಗಾಚಾರ್ಲು ಪುರಭವನದಲ್ಲಿ ನಡೆಯುವುದು. ಇದೇ ಸಂದರ್ಭದಲ್ಲಿ ೭ನೆಯ ತಾ॥ ಪ್ರಾತಃಕಾಲ ೯ ಗಂಟೆಗೆ ಸಹಕಾರ ಭವನದಲ್ಲಿ ಶೀಘ್ರಲಿಪಿ ಕಲಾಪ್ರದರ್ಶನವನ್ನು ಪತ್ರ ಮಹಾತ್ಮ ಗಾಂಧಿಯವರ ಭಾವಚಿತ್ರ ಅನಾವರಣವನ್ನೂ ಏರ್ಪಡಿಸಿರುತ್ತೆ. ಶ್ರೀ ಎನ್. ಶ್ರೀನಿವಾಸಮೂರ್ತಿಯವರು ಕಲಾಪ್ರದರ್ಶನದ ಆರಂಭೋತ್ಸವವನ್ನು ನಡೆಸುವರು.

ನ್ಯೂ ಅಪೇರಾ

ಶ್ರೀ

ಟಾಕೀಸ್

ಮೈಸೂರು

೩೦-೧೨-೫೦ ಪ್ರತಿದಿನ ೩ ಆಟಗಳು

ಕೃಷ್ಣ ವಿಜಯಂ

(ತಮಿಳು)

ಆರ್. ಬಾಲಸುಬ್ರಮಣ್ಯಂ

ಲಲಿತ : ಪದ್ಮಿನಿ ಪ್ರೇಮಾವತಿ

ಅಂಗಮುತ್ತು : ನರಸಿಂಹಭಾರತಿ

ವಸಂತಕೋಕಿಲಂ : ಭಾಗ್ಯವತ್

ಸಂಪಾದಕರು ಮತ್ತು ಪ್ರಕಾಶಕರು : ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು

ಬಿಡಿ ಪತ್ರಿಕೆ 3 ಪೈ   ದಿನ ಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೪—೧—೧೯೫೧ನೇ ಗುರುವಾರ [ಸಂಚಿಕೆ ೧೦೪

ಒಂದು ರಾಷ್ಟ್ರದಲ್ಲಿ ಪರರಾಷ್ಟ್ರ ಸೈನ್ಯವಿರಕೂಡದು

ಯುದ್ಧ ಕಾಲದಲ್ಲಿ ಮಿತ್ರ ರಾಷ್ಟ್ರ ಸೈನ್ಯಗಳಿರಲು ಅವಕಾಶ ಕೊಡಬೇಕು

ಪಂಡಿತ ನೆಹರೂ ಲಂಡನ್ನಿಗೆ ತೆರಳುತ್ತಾ ಕೈರೋದಲ್ಲಿಳಿದಾಗ, ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯಗಳು ಬಿಟ್ಟು ಹೋಗಬೇಕೆಂಬ ವಿಷಯದಲ್ಲಿ ಅವರ ಅಭಿಪ್ರಾಯವೇನೆಂದು ಕೇಳಲು, ಯಾವ ದೇಶದಲ್ಲಿಯೂ ಪರರಾಜ್ಯದ ಸೈನ್ಯಗಳಿರುವುದನ್ನು ನಾನು ಒಪ್ಪುವುದಿಲ್ಲ ಸಂಪೂರ್ಣವಾಗಿ ಅವು ಹೊರಟುಹೋಗಬೇಕು. ಆದರೆ ಯುದ್ಧ ಕಾಲದಲ್ಲಿ ರಕ್ಷಣೆಗಾಗಿ ಮಿತ್ರ ರಾಷ್ಟ್ರಗಳ ಸೈನ್ಯವು ಇರಬಹುದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಭೆ

ಬೆಂಗಳೂರು ೩.

ಮೈಸೂರು ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿ ಸಭೆಯು ನಿನ್ನೆ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಕಾಂಗ್ರೆಸ್ ಕೆಲಸಗಾರರಿಗೆ ಪಂಡಿತ ನೆಹರೂರವರು ಕೊಟ್ಟ ಬುದ್ಧಿವಾದದ ಹಿನ್ನೆಲೆಯಲ್ಲಿ ಮೈಸೂರಿನ ರಾ ಜ ಕೀ ಯ ಪರಿಸ್ಥಿತಿಯನ್ನು ಪರಿಶೀಲಿಸಿದರೆಂದು ಗೊತ್ತಾಗಿದೆ.

ನೆಹರೂ ಲಂಡನ್ನಿನಲ್ಲಿ

ಕಾಮನ್ವೆಲ್ತ್ ಸಮ್ಮೇಳನಕ್ಕೆ ಹೊರಟ ಭಾರತ ಪ್ರಧಾನಿ ನೆಹರೂರವರು ನಿನ್ನೆ ರಾತ್ರಿ ಲಂಡನ್ನನ್ನು ತಲುಪಿದರು. ಇಂದು ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನ ಪ್ರಾರಂಭವಾಗುವುದು.

ಸಿಯಾಲ್ ಪಟ್ಟಣ ಉರಿಯುತ್ತಿದೆ

ಕೊರಿಯಾರಣರಂಗ

ಚೈನಾ, ಉತ್ತರ ಕೊರಿಯ ಸೈನ್ಯಗಳಿಗೂ, ವಿಶ್ವಸಂಸ್ಥೆಯ ಸೈನ್ಯಗಳಿಗೂ ಬಿರುಸಾಗಿ ಕದನ ನಡೆಯುತ್ತಲಿದೆ. ಸ್ವಲ್ಪವೂ ವಿರಾಮವಿಲ್ಲದೆ ಕಾದಾಟವಾಗುತ್ತಲಿದೆ ಕೆಲವೆಡೆ ವಿಶ್ವಸೈನ್ಯವು ಹಿಂದಕ್ಕೆ ಹೋಗುತ್ತಲಿದೆ. ೬೦೦,೦೦೦ ಚೈನಾ ಸೈನ್ಯದ ಜೊತೆಗೆ ಇನ್ನೂ ವಿಶೇಷ ಸಂಖ್ಯೆಯಲ್ಲಿ ಸೈನ್ಯವು ಬಂದು ಸೇರುತ್ತಲಿದೆಯೆಂದು ಹೇಳಲಾಗಿದೆ. ಸಿಯಾಲ್ ಪಟ್ಟಣವನ್ನು ಎಲ್ಲರೂ ತ್ಯಜಿಸಿರುವರು. ಪಟ್ಟಣಕ್ಕೆಲ್ಲಾ ಬೆಂಕಿ ಹಾಕಿದೆ ಅಸಾಧ್ಯವಾಗಿ ಉರಿಯುತ್ತಲಿದೆ ಎಂದು ತಿಳಿಯಬರುತ್ತದೆ. ಶತ್ರುಗಳು ಪಾದಚಾರಿಗಳಾಗಿ, ಕುದುರೆ ಮತ್ತು ಬೈಸಿಕಲ್ ಮೇಲೆ ಮುನ್ನುಗ್ಗುತ್ತಿದ್ದಾರೆಂದು ಹೇಳಲಾಗಿದೆ.

ಪೂಸಾನ್ ಹೊಸ ರಾಜಧಾನಿ

ದಕ್ಷಿಣ ಕೊರಿಯಾ ಸರ್ಕಾರವು ಸಿಯಲ್ ರಾಜಧಾನಿಯನ್ನು ಸಂಪೂರ್ಣವಾಗಿ ಬಿಟ್ಟು ಪೂಸಾನ್ನನ್ನು ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡಿದೆಯೆಂದು ವರದಿಯಾಗಿದೆ.

ವಿಶ್ವಸಂಸ್ಥೆಯಲ್ಲಿ ಜನಪ್ರತಿನಿಧಿಗಳಿಗೆ ಸ್ಥಳ

ವಿಶ್ವಸಂಸ್ಥೆಯಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಜಾಗವನ್ನು ಕಲ್ಪಿಸಿಕೊಡಬೇಕು. ಈಗ ಪ್ರಜೆಗಳ ಪ್ರತಿನಿಧಿಗಳ ಸಂಖ್ಯೆ ಕಡಿಮೆ, ಪ್ರಜಾ ಸರ್ಕಾರಗಳಿಗೆ ಮೊದಲು ಸ್ಥಾನವನ್ನು ಕೊಡಬೇಕೆಂದು ರಷ್ಯಾದ ಭಾರತ ರಾಯಭಾರಿ ಡಾ|| ರಾಧಾಕೃಷ್ಣನ್‌ರವರು ಗೋಷ್ಠಿಯಲ್ಲಿ ಮಾತನಾಡುತ್ತ ಹೇಳಿದರು.

ಭವಿಷ್ಯನುಡಿ

ಈಗಿರುವ ಮಂತ್ರಿ ಮಂಡಲ ಬದಲಾವಣೆಯಾಗುವುದಿಲ್ಲ. ೧೯೫೧ನೇ ವರ್ಷ ಮಧ್ಯ ಭಾಗದಲ್ಲಿ ಶ್ರೀ ರೆಡ್ಡಿಯವರು ತಮ್ಮ ಪದವಿಗೆ ರಾಜೀನಾಮೆ ಕೊಡುವರೆಂದು ಸೈಂಟಿಫಿಕ್ ಆಸ್ಟ್ರೋಲಾಜಿಸ್ಟ್‌ರಾದ ಶ್ರೀ ಎಂ. ವಿ ವಾಸುದೇವರಾಯರು ಭವಿಷ್ಯ ನುಡಿದಿದ್ದಾರೆ

ವಸ್ತುಪ್ರದರ್ಶನಾರಂಭ

ಭಾರತದಲ್ಲಿ ಇಷ್ಟು ಮಂದಿ ವಿಜ್ಞಾನಿಗಳಿದ್ದಾರೆಂಬುದು ಹೆಮ್ಮೆಯನ್ನುಂಟುಮಾಡುವ ವಿಷಯ ಆಸ್ಟ್ರೇಲಿಯಾ, ಇಂಡೊನೇಷ್ಯಾ, ಪೂರ್ವ ಏಷ್ಯಾ ರಾಷ್ಟ್ರಗಳು ಮತ್ತು ಭಾರತ ನಿಕಟ ಸಂಬಂಧವನ್ನಿಟ್ಟುಕೊಂಡು ದುಡಿಯಬೇಕಾದ ಕಾಲಸನ್ನಿಹಿತವಾಗಿದೆ. ಇಂದು ಭಾರತದಲ್ಲಿ ವೈಜ್ಞಾನಿಗಳು ಶ್ರಮಪಟ್ಟು ತಮ್ಮ ಪರಿಶೋಧನೆಗಳನ್ನು ನಡೆಸಲು ಉತ್ತಮ ವಾತಾವರಣವೇರ್ಪಟ್ಟಿದೆ. ಎಲ್ಲ ಕ್ಷೇತ್ರದಲ್ಲೂ ವಿಜ್ಞಾನ ತನ್ನ ಶಕ್ತಿಯನ್ನು ಬೀರಿದೆ. ವಿಜ್ಞಾನಿಗಳಿಂದ ಮಾನವ ಕೋಟಿಗೆ ಒದಗಿರುವ ಸೇವೆ ಅಸಾಧಾರಣವಾಗಿದೆ. ಕೈಗಾರಿಕಾ ಸಂಸ್ಥೆಗಳೇ ತನ್ನ ಕೈಗಾರಿಕೆಗೆ ಸಂಬಂಧಪಟ್ಟ ಪರಿಶೋಧನೆಗಳನ್ನು ನಡೆಸಲು ಸಂಶೋಧನಾಲಯಗಳನ್ನು ಸ್ಥಾಪಿಸಿಕೊಳ್ಳಬೇಕು ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವಂತಹ ರೀತಿಯಲ್ಲಿ ಕಾರ್ಯಗಳನ್ನು ಮಾಡುವುದು ಒಳ್ಳೆಯದು. ನಾವು ಉತ್ಪತ್ತಿಯಲ್ಲಿ ಪರಿಪೂರ್ಣತೆಯನ್ನು ಹೊಂದಬೇಕು ಎಂದು ಕೈಗಾರಿಕಾ ಮತ್ತು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಭಾರತ ವಿಜ್ಞಾನ ಸಮ್ಮೇಳನದ ಅಂಗವಾಗಿ ಏರ್ಪಾಡಾಗಿರುವ ವಿಜ್ಞಾನ ಮತ್ತು ಕೈಗಾರಿಕಾ ವಸ್ತುಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುತ್ತಾ ಹೇಳಿದರು

ಇನ್ನೂ ಪತ್ತೆಯಿಲ್ಲ

ಜನವರಿ ಎರಡರಲ್ಲಿ ದೆಹಲಿಯ ಗೂಡಾಡಿಯ ಬ್ಯಾಂಕಿಗೆ ಮಧ್ಯಾಹ್ನ ೧೨-೪೫ ವೇಳೆಗೆ ನುಗ್ಗಿ ಬ್ಯಾಂಕಿನ ಅಕೌಂಟೆಂಟ್ ೨೮ ವರ್ಷ ವಯಸ್ಸಿನ ಪ್ರೇಮ್ ಚಂದ್ ಎಂಬುವವರಿಗೆ ೪ ಬಾರಿ ಗುಂಡುಹಾರಿಸಿ, ೧೮೯,೦೦ ರೂ. ಗಳನ್ನು ಅಪಹರಿಸಿಕೊಂಡು ಹೋದ ಸಶಸ್ತ್ರರಾದ ನಾಲ್ಕು ಯುವಕರನ್ನು ಪತ್ತೆಮಾಡಲು ದೆಹಲಿ ಪೋಲೀಸಿನವರು ವಿಶೇಷ ಶ್ರಮಪಡುತ್ತಲಿರುವರು. ದುರಾತ್ಮರು ಇನ್ನು ಪತ್ತೆಯಾಗಿಲ್ಲ

ಬೆಂಗಳೂರಿಗೆ ವಿ. ಪಿ. ಮೆನನ್

ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ.ಪಿ. ಮೆನನ್‌ರವರು ನಿನ್ನೆ ಬೆಂಗಳೂರಿಗೆ ಆಗಮಿಸಿ ಅಲ್ಲಿ ಮೈಸೂರಿನ ರಾಜಪ್ರಮುಖರನ್ನು ಭೇಟಿಮಾಡಿ ಮೈಸೂರಿನ ರಾಜ

ಪ್ರಜೆಗಳ ಸ್ಥಿತಿಯನ್ನು ಉತ್ತಮಗೊಳಿಸಿ

ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದರವರು ಬೊಂಬಾಯಿನಲ್ಲಿ ಸರ್ದಾರ್ ಪಟೇಲರ ಸಹೋದರ ದಿವಂಗತ ಶ್ರೀ ವಿಠಲಬಾಯಿ ಪಟೇಲರ ಶಿಲಾಪ್ರತಿಮೆಯನ್ನು ಅನಾವರಣಮಾಡುತ್ತಲಿರುವ ಸಮಯದಲ್ಲಿ ಗುಂಪಿನಿಂದ ಅವರ ಕಡೆಗೆ ಸತ್ಯಪ್ರಕಾಶ ಚಕ್ರಪಾಣಿ ಎಂಬ ೨೫ ವರ್ಷದ ಯುವಕನು ೪ ಕಲ್ಲುಗಳನ್ನೆಸದನು. ಒಂದು ಕಲ್ಲು ಬೊಂಬಾಯಿ ಗೌರ್ನರ್ ರಾಜಾ ಮಹಾರಾಜಸಿಂಗ್‌ರವರ ಹತ್ತಿರಬಿತ್ತು. ಇನ್ನೊಂದು ಕಾಂಗ್ರೆಸ್ ಸ್ವಯಂಸೇವಕನಿಗೆ ತಗಲಿ ಗಾಯವಾಗಿ ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಸತ್ಯಪ್ರಕಾಶನನ್ನು ಪೋಲೀಸಿನವರು ಅಲ್ಲಿಯೇ ದಸ್ತಗಿರಿ ಮಾಡಿದರು. ಜನರ ಸ್ಥಿತಿಗಳನ್ನು ಉತ್ತಮಗೊಳಿಸದಿರುವುದರಿಂದ ಸರ್ಕಾರದ ಗಮನವನ್ನು ಇತ್ತ ಸೆಳೆಯಲು ಈರೀತಿ ಮಾಡಿದುದಾಗಿ ಅವನು ತಿಳಿಸಿದನು ತನಿಖೆ ನಡೆಯುತ್ತಲಿದೆ.

ಪಾಕಿಸ್ಥಾನವು ಕಾಮನ್‌ವೆಲ್ತನ್ನು ತ್ಯಜಿಸುವುದೆ ?

ಮಿ|| ಲಿಯಾಕತ್ ಅಲಿಖಾನ್‌ರವರು ತಮ್ಮ ಪ್ರಯಾಣವನ್ನು ಮುಂದ ಹಾಕಿದುದರಿಂದಲೂ ಮತ್ತು ಪಾಕಿಸ್ಥಾನದ ಮಂತ್ರಿಗಳು ಬ್ರಿಟನ್ನು ತಮ್ಮ ಸೈನ್ಯವನ್ನು ಈಜಿಪ್ಟಿನಿಂದ ತೆಗೆಯದಿದ್ದರೆ ಪಾಕಿಸ್ಥಾನವು ಕಾಮನ್‌ವೆಲ್ತನ್ನು ತ್ಯಜಿಸುವುದೆಂದೂ ಹೇಳುತ್ತಿರುವುದರಿಂದಲೂ ಈ ಕಾರಣಗಳಿಂದ ಪಾಕಿಸ್ಥಾನವು ಕಾಮನ್‌ವೆಲ್ತನ್ನು ತ್ಯಜಿಸಬಹುದೆಂದು ಕೆಲವು ಪತ್ರಿಕೆಗಳಲ್ಲಿ ಹೇಳಲಾಗುತ್ತಿದೆ.

ಹೈಕೋರ್ಟ್ ಆಜ್ಞೆ

ಹೈದರಾಬಾದಿನ ಹೈಕೋರ್ಟು ಒಂದು ಆಜ್ಞೆಯನ್ನು ಹೊರಡಿಸಿ ಲಾಯಕ್ ಅಲಿ ಮಂತ್ರಿಮಂಡಲದ ಮೇಲಿನ ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯವು ವಿಚಾರಿಸಕೂಡದೆಂದೂ ಇನ್ನೊಂದು ಪುನರ್ರಚಿತವಾಗುವ ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದೂ ತಿಳಿಸಿದೆ.

ಕೀಯವನ್ನು ಕುರಿತು ಪ್ರಸ್ತಾಪಿಸಿದರೆಂದು ತಿಳಿಯಬರುತ್ತದೆ. ಅವರು ಶ್ರೀ ಕೆ. ಸಿ. ರೆಡ್ಡಿಯವರನ್ನೂ ಕಂಡು ಅವರ ಆರೋಗ್ಯ ವಿಚಾರಿಸಿದರು.

ಸರ್ವೋದಯ ವ್ಯಾಸಂಗಗೋಷ್ಠಿ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಹತ್ತಿರದಲ್ಲಿರುವ ಪಶ್ಚಿಮವಾಹಿನಿಯಲ್ಲಿ ಇದೇ ತಿಂಗಳು ೩೦ನೇ ತಾ|| ನಿಂದ ಫೆಬ್ರವರಿ ೧೨ನೇ ತಾ|| ವರೆಗೆ ಸರ್ವೋದಯ ವ್ಯಾಸಂಗಗೋಷ್ಠಿ, (ಸೆಮಿನಾರ್) ಸರ್ವೋದಯ ಪ್ರದರ್ಶನ ಮತ್ತು ಸಮ್ಮೇಳನಗಳು ನಡೆಯುತ್ತವೆ ಅದರ ಅಂಗವಾಗಿ ಮೇಲ್ಕಂಡ ೧೫ ದಿವಸಗಳ ಅವಧಿಯಲ್ಲಿ ಖಾದಿವಸ್ತ್ರ ಸ್ವಾವಲಂಬನ ಶಿಬಿರವನ್ನು ಸ್ಥಾಪಿಸಿ ಬಿದುರಿನಿಂದ ಚರಖಾ ತಯಾರಿಸುವುದು, ಹತ್ತಿ ಅರೆಯುವುದು, ಅರಳೆ ಹಿಂಜುವುದು, ತನಾಯಿ, ನೂಲುವುದು ಮೊದಲಾದ ವಸ್ತ್ರ ಸ್ವಾವಲಂಬನಕ್ಕೆ ಅತಿ ಅವಶ್ಯಕವಾದ ಶಿಕ್ಷಣವನ್ನು ಕೊಡಲಾಗುವುದು

ಶಿಬಿರದಲ್ಲಿ ತಯಾರಾದ [illegible] ನೇ[illegible] ಗುತ್ತದರ ಜೊತೆಗೆ ನೇಯಿಗೆ ಬಗ್ಗೆ ಸಾಮಾನ್ಯ ಜ್ಞಾನವನ್ನು ಸಹ ಮಾಡಿಕೊಡಲಾಗುವುದು ಸಂಸ್ಥಾನದ ಎಲಾ ಜಿಲ್ಲೆಗಳಿಂದ ಸುಮಾರು ೬೦ ಜನ ಕಾರ್ಯಕರ್ತರು ಶಿಕ್ಷಣ ಪಡೆಯಲು ಅವಕಾಶವನ್ನು ಕಲ್ಪಿಸಿದೆ ಆದ್ದರಿಂದ ಖಾದಿ ಪ್ರೇಮಿಗಳೂ, ರಚನಾತ್ಮಕ ಸಂಸ್ಥೆಗಳವರೂ, ಖಾದಿ ಕೇಂದ್ರದವರೂ ಮತ್ತು ನೂಲುವ ಮಂಡಲಿಯವರೂ, ತಮ್ಮ ಪ್ರತಿನಿಧಿಗಳನ್ನು ಕಳಿಸಿಕೊಟ್ಟು ಶಿಬಿರದ ಪೂರ್ಣ ಲಾಭವನ್ನು ಹೊಂದಬೇಕಾಗಿ ಕೋರಿದೆ. ಶಿಬಿರದಲ್ಲಿ ಪ್ರವೇಶ ಹೊಂದುವವರು ತಮ್ಮ ಪ್ರಯಾಣದ ಬಗ್ಗೆ ಖರ್ಚನ್ನು ವಹಿಸಿಕೊಳ್ಳಬೇಕಾಗುವುದು ಊಟ ಮತ್ತು ತಿಂಡಿ ವೆಚ್ಚವನ್ನು ಸರ್ವೋದಯ ಪಕ್ಷಾಚರಣೆ ಸಮಿತಿಯು ವಹಿಸುವುದು. ಸೇರಲಿಚ್ಛೆಯುಳ್ಳವರು ಕಾರ್ಯದರ್ಶಿ, ಸರ್ವೋದಯ ಪಕ್ಷಾಚರಣೆ ಸಮಿತಿ, ೩೯೪ ಚಾಮರಾಜರಸ್ತೆ, ಮೈಸೂರು, ಈ ವಿಳಾಸಕ್ಕೆ ಜನವರಿ ೧೫ನೇ ತಾ|| ಒಳಗಾಗಿ ತಲುಪುವಂತೆ ಬರೆದುಕೊಳ್ಳಬೇಕಾಗಿ ವಿನಂತಿ. ಶಿಕ್ಷಾರ್ಥಿಗಳು ಶಿಬಿರಕ್ಕೆ ಬರುವಾಗ ತಮ್ಮ ಜೊತೆಯಲ್ಲಿ ತಟ್ಟೆ, ಬಟ್ಟಲು, ಹಾಸಿಗೆ, ಹೊದಿಕೆ, ಚರಖ, ತಕಲಿ, ನೋಟುಪುಸ್ತಕ, ಗೀತೆ ಇಷ್ಟನ್ನು ಅವಶ್ಯಕವಾಗಿ ತರಬೇಕು. ಹೆಚ್ಚಿನ ವಿವರಗಳಿಗೆ ಬರೆದು ತಿಳಿದುಕೊಳ್ಳಬಹುದು ಎಂದು ತಿಳಿಸಲಾಗಿದೆ.

ರಣಜಿತ್

29-12-50 ರಿಂದ ೪ ನೇ ವಾರ

ದಿನವಹಿ 3 ಪ್ರದರ್ಶನಗಳು

ಫಿಲಂಸ್ಥಾನರವರ

★ ಸರ್ಗಮ್ ★

(ಹಿಂದಿ)

ಪಾತ್ರ: ● ರಹೇನಾ ● ರಾಜಕಪೂರ್

ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ

ಬೆಳಗಿನ ಪ್ರದರ್ಶನ

೫-೧-೫೧ ರಿಂದ ೩ ದಿನ ಮಾತ್ರ

ಕರಿದಾರ್ ರವರ

"ಶ್ರೀಮತ್"

ಪಾತ್ರ:—ಸುಲೋಚನ ಚಟರ್ಜಿ

ನೇಪಾಳ ಸೈನ್ಯ ಹಿಂತಿರುಗಿತು

ಹೊಸ ವರ್ಷದಾರಂಭ ದಿವಸ ೨೦೦ ನೇಪಾಳಿ ಸರ್ಕಾರ ಸೈನ್ಯವು ಬೀರತ್‌ನಗರಕ್ಕೆ ೩೦ ಮೈಲಿ ಪಶ್ಚಿಮದಲಿ ಹಿಮ್ಮೆಟ್ಟಿದುವೆಂದು ತಿಳಿಯಬರುತ್ತದೆ ಕಾಂಗ್ರೆಸ್ ಸ್ವಯಂಸೇವಕರಿಗೂ ಸರ್ಕಾರ ಸೈನ್ಯಕ್ಕೂ ಘರ್ಷಣೆ [illegible]ಆಗಿ ಸರ್ಕಾರಿ ಸೈನಿಕರನೇಕರು ಮಡಿದರೆಂದೂ ೧೬ ಜನರು ಸೆರೆಯಾದರೆಂದೂ ಹೇಳಲಾಗಿದೆ.

ಸರ್ಕಾರಿ ಆಜ್ಞೆ

ರಜದಮೇಲಿರುವ ಬೆಂಗಳೂರು ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟರಾದ ಜನಾಬ್ ಟಿ ಎಂ ಅಮೀರ್‌ರವರು ಗ್ರಾಮಾಭಿವೃದ್ಧಿ ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ವರ್ಗವಾಗಿದ್ದಾರೆ

ಸರ್ಕಾರಿ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರಾದ ಶ್ರೀ ಎಂ. ವಿ. ಚಲಪ್‌ರವರನ್ನು ಬೆಂಗಳೂರು ಸಿವಿಲ್ ಸ್ಟೇಷನ್ನಿನ ಸೂಪರಿಂಟೆಂಡೆಂಟರಾಗಿ, ೨ನೇ ದರ್ಜೆಯ ಸೂಪರಿಂಟೆನ್‌ಡೆಂಟರಾದ ಶ್ರೀ ಎಂ ಜಿ ಶ್ರೀನಾಥ್‌ರವರನ್ನು ಸರ್ಕಾರದ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರಾಗಿ, ಅಸಿಸ್ಟೆಂಟ್ ಸೂಪರಿನ್‌ಟೆನ್‌ಡೆಂಟರಾದ ಶ್ರೀ ಎಂ. ಟಿ. ಶ್ರೀನಿವಾಸನ್‌ರವರನ್ನು ಶಿವನಸಮುದ್ರದಲ್ಲಿಯ ಹೈಡ್ರಾಲಿಕ್ ಇಂಜನಿಯರಾಗಿ, ಬೆಂಗಳೂರು ಬಿ. ಸ್ಟೇಷನ್ನಿನ ಅಸಿಸ್ಟೆಂಟು ಸೂಪರಿನ್‌ಟೆನ್‌ಡೆಂಟರಾದ ಶ್ರೀ ಕೆ ಎಸ್ ಗಂಗಸ್ವಾಮಿಯವರನ್ನು ಚೀಫ್ ಎಲೆಕ್ಟ್ರಿಕಲ್ ಇಂಜನಿಯ ಟೆಕ್ನಿಕಲ್ ಅಸಿಸ್ಟೆಂಟರಾಗಿ ವರ್ಗವಾಗಿದ್ದಾರೆ.

ಶಿವಮೊಗ್ಗಾ ಡಿವಿಜನ್ನಿನ ಎಗ್ಜಿಕ್ಯೂಟಿವ್ ಇನ್‌ಜನಿಯರ್ ಶ್ರೀ ಎಲ್ ಮುನಿಸ್ವಾಮಿರೆಡ್ಡಿಯವರು ತುಂಗಾ ಅಣೆಕಟ್ಟು ಡಿವಿಜನ್ನಿಗೆ, ಮಂಡ್ಯ ಡಿವಿಜನ್ನಿನ ಶ್ರೀ ಎಂ ವಿ ಜಯಧ್ವಜರಾಯರು ಶಿವಮೊಗ್ಗಾ ಡಿವಿಜನ್ನಿಗೆ, ರಜದ ಮೇಲಿರುವ ಶ್ರೀ ಸಿ ಆರ್ ಕೃಷ್ಣಸ್ವಾಮಿ ಮೊದಲಿಯಾರ್‌ರವರನ್ನು ಮಂಡ್ಯ ಡಿವಿಜನ್ನಿಗೆ ವರ್ಗವಾಗಿದ್ದಾರೆ

ನ್ಯೂ ಅಪೇರಾ

ಟಾಕೀಸ್

ಮೈಸೂರು

೩೦-೧೨-೫೦ ಪ್ರತಿದಿನ ೪ ಆಟಗಳು

ಕೃಷ್ಣ ವಿಜಯಂ

(ತಮಿಳು)

ಆರ್. ಬಾಲಸುಬ್ರಮಣ್ಯಂ

ಲಲಿತ. ಪದ್ಮಿನಿ-ಪ್ರೇಮಾವತಿ

ಅಂಗ ಮುತ್ತು: ನರಸಿಂಹಭಾರತಿ

ವಸಂತಕೋಕಿಲಂ: ಭಾಗ್ಯಮ್

ಶ್ರೀಮತಿ ವಿಜಯಲಕ್ಷ್ಮಿಯವರು ಲಂಡನ್ನಿಗೆ

ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಇಂದಿನ ಭಾರತ ಮತ್ತು ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಚರ್ಚಿಸಿ, ಸಲಹೆಗಳನ್ನು ಪಡೆಯಲು ಅಮೆರಿಕಾದಿಂದ ಭಾರತರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿಯವರು ಲಂಡನ್ನಿಗೆ ಆಗಮಿಸಿದ್ದಾರೆ.

ನೆಹರೂ ಕೈರೋನಲ್ಲಿ

ಪಂಡಿತ ನೆಹರೂ ಲಂಡನ್ನಿಗೆ ಹೋಗುವಾಗ ದಾರಿಯಲ್ಲಿ ಕೈರೋವಿನಲ್ಲಿಳಿದರು. ಅಲ್ಲಿ ಮಾತನಾಡುತ್ತಾ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಕೊರಿಯ ಯುದ್ಧ ವಿಷಯದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಚರ್ಚೆ ನಡೆಸುವೆವು ಆದರಿಂದ ಅಂತರ ರಾಷ್ಟ್ರೀಯ ಪರಿಸ್ಥಿತಿಯು ಉತ್ತಮಗೊಳ್ಳಬಹುದು. ಸದ್ಯದಲ್ಲಿ ವಿಶ್ವವು ಉತ್ಕಟ ಸ್ಥಿತಿಯಲ್ಲಿದೆ ಯುದ್ಧವನ್ನು ತಡೆಗಟ್ಟಬೇಕೆಂದೂ ಎಲ್ಲರೂ ಹಾತೊರೆಯುತ್ತಲಿರುವರು, ಎಂದು ತಿಳಿಸಿದರು

ಪಾಕಿಸ್ಥಾನ ಬಗ್ಗೆ ನೆಹರೂ

ಪಾಕಿಸ್ಥಾನ ಪ್ರಧಾನಿ ಲಿಯಾಕತ್ ಅಲಿಖಾನರವರು ಕಾಮನ್ವೆಲ್ತ್ ಸಮ್ಮೇಳನಕ್ಕೆ ಬರದಿರುವ ವಿಷಯವನ್ನು ಪತ್ರಿಕಾಕರ್ತರು ಪ್ರಶ್ನಿಸಲಾಗಿ ನೆಹರೂರವರು ಆ ವಿಷಯ ತಮಗೆ ತಿಳಿಯದೆಂದೂ ಅವರು ಸಮ್ಮೇಳನಕ್ಕೆ ಬಾರದಿದ್ದಲ್ಲಿ ತಮಗೆ ಅತಿವಿಷಾದವಾಗುವುದೆಂದು ತಿಳಿಸಿದರು

ನೆಹರೂ ಅಟ್ಲೀ ಭೇಟಿ

ಲಂಡನ್ನಿಗೆ ಆಗಮಿಸಿದ ಸ್ವಲ್ಪ ಗಂಟೆಗಳೊಳಗೇ ಪಂಡಿತ ನೆಹರೂರವರು ಬ್ರಿಟಿಷ್ ಪ್ರಧಾನಿ ಮಿ| ಅಟ್ಲೀಯವರನ್ನು ಭೇಟಿಮಾಡಿ ೯೦ ನಿಮಿಷ ಮಾತನಾಡುತ್ತಲಿದ್ದರೆಂದು ತಿಳಿಯಬರುತ್ತದೆ.

ಪಾಕಿಸ್ಥಾನ ಪಾತ್ರವಿಲ್ಲ

ಇಂದಿನಿಂದ ಪ್ರಾರಂಭವಾಗುವ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪಾಕಿಸ್ಥಾನ ಪ್ರಧಾನಿ ಇನ್ನೂ ಹೊರಟಿಲ್ಲ ಪಾಕಿಸ್ಥಾನ ಪ್ರತಿನಿಧಿಗಳಾರೂ ಇಂದಿನ ಸಭೆಯಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಯಬರುತ್ತದೆ

ಒಲಂಪಿಯಾ

೪-೧-೫೧ರಿಂದ ಪ್ರತಿದಿನ ೩ ಆಟಗಳು

ಐನಾಪಿಕ್ಚರ್ಸ್‌ರವರ

ಗೃಹಸ್ಥಿ

ಪಾತ್ರ—ಯಾಕೂಬ್, ಕುಲದೀಪ್ ಮತ್ತು ಸುಲೋಚನಾಚಟರ್ಜಿ.

ಬೆಳಗಿನ ಪ್ರದರ್ಶನ

೫-೧-೫೧ ರಿಂದ ೩ ದಿನಗಳು ಮಾತ್ರ

ಫಿಲಂಸ್ಥಾನ್‌ರವರ— ಷಹನಾಯ್

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್ ಸ್ವಾಮಿ, ನ್ಯೂಸ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್ ರಾಮರಾವ್, ಬಿ ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ   ದಿನ ಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧]   ೫—೧—೧೯೫೧ ಶುಕ್ರವಾರ   [ಸಂಚಿಕೆ ೧೦೫

ಚೀಣಾವು ರಷ್ಯಾ ಆಶ್ರಿತ ದೇಶವೆನ್ನುವುದು ಮೌಢ್ಯ ಅಸಂಬದ್ಧ ಪ್ರಲಾಪ

ಚೀಣಾ ರಷ್ಯಾದ ಅಡಿಯಾಳಲ್ಲ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ನಿನ್ನೆ ಮಧ್ಯಾಹ್ನ ೪-೩೦ ಗಂಟೆ ವೇಳೆಗೆ ಲಂಡನ್ನಿನಲ್ಲಿ ಪ್ರಾರಂಭವಾಯಿತು. ಕಾಮನ್‌ವೆಲ್ತಿಗೆ ಸೇರಿದ ಎಲ್ಲಾ ಪ್ರಧಾನಿಗಳೂ, ಪಾಕಿಸ್ಥಾನದ ಹೊರತು, ಸಮ್ಮೇಳನಕ್ಕೆ ಆಗಮಿಸಿದ್ದರು.

ಪ್ರಾರಂಭದಲ್ಲಿ ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲಿಯವರೂ ತವರೂ ಅಧ್ಯಕ್ಷ ಟ್ರೂಮನ್ನರಿಗೂ ನಡೆದ ಬೇಟಿಯ ವಿಷಯ ಪ್ರಸ್ತಾಪಿಸಿ ಸೂಕ್ಷ್ಮವಾಗಿ ಅಲ್ಲಿ ನಡೆದ ಮಾತುಕಥೆ, ತೀರ್ಮಾನಗಳನ್ನು ತಿಳಿಸಿದರು.

ಭಾರತಪ್ರಧಾನಿ ಪಂಡಿತನೆಹರೂರವರು ಮಾತನಾಡುತ್ತಾ ಏಷ್ಯಾಖಂಡವು ಬಡತನದಿಂದ ಕೂಡಿದೆ. ಯುದ್ಧವು ಬೇಕಾಗಿಲ್ಲ. ಏಷ್ಯಾಖಂಡದಲ್ಲಿರುವ ರಾಜ್ಯಗಳಿಗೆಲ್ಲಾ ಶಾಂತಿಬೇಕಾಗಿದೆ. ಚೀಣಾರಾಜ್ಯವು ರಷ್ಯಾದ ಆಶ್ರಿತ ದೇಶವೆಂದು ಹೇಳುವುದು ಮೌಢ್ಯ ಮತ್ತು ಅಸಂಬದ್ಧ ಪ್ರಲಾಪ. ಖಂಡಿತವಾಗಿಯೂ ಚೈನಾ ರಷ್ಯಾದ ಅಡಿಯಾಳಾಗಿಲ್ಲ. ಚೀಣಾ ಪ್ರಪಂಚದಲ್ಲೆಲ್ಲಾ, ಅದರಲ್ಲೂ ಏಷ್ಯಾದಲ್ಲೆಲ್ಲಾ ಪ್ರಬಲರಾಜ್ಯ ಅದಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯವನ್ನು ಕೊಡುವುದು ಅತ್ಯಗತ್ಯ. ಚೈನಾಕ್ಕೆ ಸರಿಯಾದ ಮಾನ್ಯತೆಕೊಡದೆ ಹೋಗಿ ಯುದ್ಧವು ಪ್ರಾರಂಭವಾದಲ್ಲಿ ಪ್ರಪಂಚದಲ್ಲೆಲ್ಲಾ ಅಧಿಕ ಬಿಕ್ಕಟ್ಟು ಉಂಟಾಗುವುದು ಎಂದು ಹೇಳಿದರು.

ಶ್ರೀಮನ್ಮಹಾರಾಜರು

ಬೆಂಗಳೂರಿಗೆ ವಿಜ್ಞಾನ ಸಮ್ಮೇಳನಕ್ಕೆ ತೆರಳಿದ್ದ ಶ್ರೀಮನ್ಮಹಾರಾಜರವರು ಇಂದು ರಾಜಧಾನಿಗೆ ಹಿಂತಿರುಗಿದರು.

ಭಾರತಕ್ಕೆ ಅಮೆರಿಕಾ ಭೂಗರ್ಭ ಶಾಸ್ತ್ರಜ್ಞರು

ಭಾರತದಲ್ಲಿ ಭೂಗರ್ಭ ಪರಿಶೋಧನಾ ಅಭಿವೃದ್ಧಿ ಕಾರ್ಯಕ್ಕಾಗಿ ಸಲಹೆಯಿತ್ತಲು ಅಮೆರಿಕಾದಿಂದ ೩ ಜನ ಭೂಗರ್ಭಶಾಸ್ತ್ರಜ್ಞರು ಬರಲಿರುವರು.

ವಿದ್ಯಾರ್ಥಿವೇತನ

೫೦ ಜನ ಭಾರತೀಯರಿಗೆ ಉಚ್ಚಶಿಕ್ಷಣಕ್ಕಾಗಿ ಆಸ್ಟ್ರೇಲಿಯ ಸರ್ಕಾರವು ವಿದ್ಯಾರ್ಥಿ ವೇತನವನ್ನು ಕೊಡುವುದಾಗಿ ತಿಳಿಯಬಂದಿದೆ.

ಕೊರಿಯಾ ರಣರಂಗ

ವಿಶ್ವಸಂಸ್ಥೆ ಸೈನ್ಯಗಳು ಸಿಯೂಲ್ ನಗರವನ್ನು ಸಂಪೂರ್ಣವಾಗಿ ತ್ಯಜಿಸಿವೆ. ಚೈನಾದ ಅಸಂಖ್ಯಾತ ಮಿಲಿಟರಿ ಪಡೆಯು ರಣರಂಗವನ್ನು ಪ್ರವೇಶಿಸುತ್ತಲಿದೆ.

ಚೈನಾಮೇಲೆ ಬಾಂಬು

ಚೈನಾ ದೇಶದ ಮೇಲೆ ಅಮೆರಿಕಾ ಸೈನ್ಯಗಳು ವಿಶ್ವಸಂಸ್ಥೆಯ ಅಪ್ಪಣೆ ಪಡೆಯದೆ ಬಾಂಬುಗಳನ್ನು ಹಾಕುವುದಿಲ್ಲವೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವುದಾಗಿ ವರದಿಯಾಗಿದೆ.

ಆಹಾರ ಬಿಕ್ಕಟ್ಟು ಪರಿಹಾರವಾಗಬಹುದು

ಮುಂದಿನ ವರ್ಷ ಮಳೆಬೆಳೆಗಳು ಸರಿಯಾಗಿ ಆಗಿ, ಜನರು ಆಹಾರವನ್ನು ಸ್ವಲ್ಪವೂ ವ್ಯರ್ಥಮಾಡದೆ ಸಹಕರಿಸಿ, ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಹದಗೆಟ್ಟು ಯುದ್ಧವಾಗದಿದ್ದಲ್ಲಿ ಭಾರತದಲ್ಲಿ ಆಹಾರ ಬಿಕ್ಕಟ್ಟು ಪರಿಹಾರವಾಗುವುದೆಂದು ಆಹಾರ ಮಂತ್ರಿ ಶ್ರೀ. ಕೆ ಎಂ ಮುನ್ಷಿಯವರು ಹೇಳಿರುವರು.

೧೯೫೧ಕ್ಕೆ ಆಹಾರ

೧೯೫೧ನೇ ವರ್ಷಕ್ಕೆ ಪರದೇಶಗಳಿಂದ ೩೭ ಲಕ್ಷ ಟನ್ ಆಹಾರವನ್ನು ತರಿಸಿಕೊಳ್ಳಲು ಕಾರ್ಯಕ್ರಮ ನಡೆಯುತ್ತಲಿರುವುದಾಗಿ ಆಹಾರ ಸಚಿವ ಶ್ರೀ ಕೆ ಎಂ. ಮುನ್ಷಿಯವರು ಕಲ್ಕತ್ತಾದಲ್ಲಿ ಹೇಳಿದರು. ಅಮೆರಿಕಾವು ೨೦ ಲಕ್ಷ ಟನ್ ಆಹಾರ ಪದಾರ್ಥವನ್ನು ಕೊಡಲಿದೆಯೆಂದು ಅವರು ತಿಳಿಸಿದರು.

ಬರ್ಮಾ, ಚೈನಾ, ವಿಯಟ್‌ನಾಮ್ ಮುಂತಾದ ದೇಶಗಳಿಂದಲೂ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳಲು ಕಾರ್ಯಕ್ರಮ ಜರುಗುತ್ತಲಿದೆಯೆಂದೂ ಅವರು ಹೇಳಿದರು.

ಭಾರತಕ್ಕೆ ವೀಟ್‌ನಾಮ್ ಅಕ್ಕಿ

ವೀಟ್‌ನಾಮ್ ಭಾರತಕ್ಕೆ ೧೯೫೧ ರಲ್ಲಿ ೩೧,೦೦೦ ಟನ್ ಅಕ್ಕಿ ಕೊಡುವುದಾಗಿ ತಿಳಿಸಿದೆ. ಭಾರತ ಸರ್ಕಾರಕ್ಕೂ ವೀಟ್‌ನಾಮ್ ಪ್ರತಿನಿಧಿಗಳಿಗೂ ಮಾತುಕತೆಗಳು ಪ್ರಾರಂಭವಾಗಿವೆ.

ಮಂತ್ರಿಮಂಡಲದ ವಿಚಾರಣೆಗೆ ಹೊಸ ನ್ಯಾಯಾಲಯ

ಹೈದರಾಬಾದಿನ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಯಾಗುತ್ತಲಿರುವ ಲಾಯಕ್ ಅಲಿ ಮಂತ್ರಿಮಂಡಲದ ಮೊಕದ್ದಮೆಯನ್ನು ಆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಕೂಡದೆಂದೂ ಹೊಸದಾಗಿ ರಚಿಸಲಾಗುವ ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಬೇಕೆಂದೂ ಹೈದರಾಬಾದ್ ಹೈಕೋರ್ಟು ಆಜ್ಞೆಯಿತ್ತಿದೆ.

ಮದರಾಸಿನಲ್ಲಿ ಆಹಾರ ಪರಿಸ್ಥಿತಿ

ಮದರಾಸಿನಲ್ಲಿ ಮುಂಗಾರು ಹಿಂಗಾರು ಮಳೆಗಳು ಬೀಳದೆ ಪೈರೆಲ್ಲವೂ ಹಾಳಾಗಿಹೋಗಿವೆ. ಆಹಾರ ಪರಿಸ್ಥಿತಿಯು ಹದಗೆಟ್ಟಿದೆ. ಮುಂದಿನ ವರ್ಷ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುವ ಸಂಭವವಿಲ್ಲವೆಂದು ಹೇಳಲಾಗಿದೆ.

ಶಾಂತಿಮಾರ್ಗ

ಕಾಮನ್ವೆಲ್ತ್ ಸಮ್ಮೇಳನದಲ್ಲಿ ಚರ್ಚೆಮಾಡಬೇಕಾದ ವಿಷಯಗಳಲ್ಲಿ ಯುದ್ಧವನ್ನು ತಡೆಗಟ್ಟಲು ಯಾವ ರೀತಿ ಶಾಂತಿ ಮಾರ್ಗವನ್ನು ಕಂಡುಹಿಡಿಯಬೇಕೆಂಬುದನ್ನು ಚರ್ಚಿಸಬೇಕೇ ವಿನಹ ಯುದ್ಧಮಾಡಲು ಯಾವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬ ವಿಷಯವನ್ನು ಚರ್ಚಿಸಕೂಡದೆಂದು ತೀರ್ಮಾನಿಸಿರುವುದಾಗಿ ವರದಿಯಾಗಿದೆ.

ಹಟಮಾರಿತನ

ಕಾಶ್ಮೀರ ಪ್ರಶ್ನೆಯನ್ನು ಚರ್ಚಿಸಲು ಕಾಮನ್ವೆಲ್ತ್ ಪ್ರಧಾನಿಗಳು ಒಪ್ಪುವುದಾದರೆ ಮಾತ್ರ ಪಾಕಿಸ್ಥಾನವು ಲಂಡನ್ನಿನಲ್ಲಿ ನಡೆಯುತ್ತಲಿರುವ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸುವದೆಂದು ಪಾಕಿಸ್ಥಾನದಿಂದ ಸರ್ಕಾರವು ಹೇಳಿರುವುದಾಗಿ ವರದಿಯಾಗಿದೆ. ನಿನ್ನೆ ಪ್ರಾರಂಭವಾದ ಸಮ್ಮೇಳನದಲ್ಲಿ ಪಾಕಿಸ್ಥಾನದ ಪ್ರತಿನಿಧಿಗಳಾರೂ ಇರಲಿಲ್ಲ.

ಸಕ್ಕರೆ ಪಡಿತರ ಕಡಮೆಯಾಗುವುದಿಲ್ಲ

ಸರ್ಕಾರಕ್ಕೆ ನಿಗದಿಯಾಗಿರುವಷ್ಟು ಸಕ್ಕರೆ ಪ್ರಮಾಣವನ್ನು ಕೊಟ್ಟಮೇಲೆ ೫೦,೦೦೦ ಟನ್ ಮಾರ್ಕೆಟ್ಟಿನಲ್ಲಿ ಮಾರಲು ಈ ವರ್ಷದಲ್ಲಿ ಸಿಗುವುದೆಂದು ಹೇಳಲಾಗಿದೆ. ಈಗ ಕೊಡುತ್ತಿರುವ ಸಕ್ಕರೆ ಪಡಿತರ ಪ್ರಮಾಣ ಕಡಿಮೆಯಾಗುವುದಿಲ್ಲವೆಂದು ತಿಳಿಯಬರುತ್ತದೆ.

ಸತ್ಯಾಗ್ರಹ

ಮೈಸೂರು ಜ. ೫

ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಸೆಕ್ರಿಟರಿ ಶ್ರೀ ಸೂರ್ಯನಾರಾಯಣರಾಯರು ನಡೆಸುತ್ತಲಿರುವ ಸತ್ಯಾಗ್ರಹದ ವಿಷಯದಲ್ಲಿ ಶ್ರೀಗಳಾದ ಎಂ ಆರ್. ಸಿ. ಬಸಪ್ಪ ಮತ್ತು ಎ ಕೃಷ್ಣಮೂರ್ತಿರಾಯರು ಸಹಕಾರ ಮಂತ್ರಿ ಮತ್ತು ಸಹಕಾರ ಇಲಾಖಾ ರಿಜಿಸ್ಟ್ರಾರ್‌ರಿಗೆ, ಮೈಸೂರು ಕೋ-ಆಪರೇಟಿವ ಬ್ಯಾಂಕಿನ ವಿದ್ಯಮಾನಗಳು ಕೆಡುತ್ತಲಿವೆ. ಸೆಕ್ರಿಟರಿಯವರನ್ನು ಒಲವಂತವಾಗಿ ಸವಸ್ಯತನದಿಂದ ತೆಗೆಯಲಾಗಿದೆ. ಅವರು ಸತ್ಯಾಗ್ರಹವನ್ನು ಆಚರಿಸುತ್ತಲಿದ್ದಾರೆ. ಸರ್ಕಾರದವರು ಬ್ಯಾಂಕಿನ ಆಡಳಿತವನ್ನು ವಹಿಸಿಕೊಂಡು ಕೂಡಲೇ ವಿಚಾರಣೆ ನಡೆಸಬೇಕೆಂದು ತಂತೀ ಕಳುಹಿಸಿರುವರು.

ಸತ್ಯವಾದಿ ಉಚಿತವಾಚನಾಲಯ.

ಮೆಕ್ಲ್ಯಾಂಡ ಉಚಿತವಾಚನಾಲಯವನ್ನು ಚಾಮರಾಜಪುರದಲ್ಲಿರುವ ಸತ್ಯವಾದಿ ಬಿಲ್ಡಿಂಗ್‌ನಲ್ಲಿ (ಲಾಂಜೆಟೀರ್ ಎದುರು) ಪ್ರಾರಂಭಿಸಿದ್ದೇವೆಂದು ತಿಳಿಸಲು ಸಂತೋಷವಾಗುತ್ತದೆ. ಸಾರ್ವಜನಿಕರು ಇದರ ಉಪಯೋಗವನ್ನು ಪಡೆಯಲೆಂದೂ, ಸಂಬಂಧಪಟ್ಟವರೆಲ್ಲರೂ ಪ್ರೀತ್ಯಪೂರ್ವಕ ಸಹಕಾರನೀಡಲೆಂದೂ ಸತ್ಯವಾದಿ ಪತ್ರಿಕಾ ಸಂಪಾದಕರು ಆಶಿಸುತ್ತಾರೆ.

ಸಂಸ್ಥಾನದ ರೇಷನಿಂಗ್ ನೀತಿಯಲ್ಲಿ ಬದಲಾವಣೆಯಿಲ್ಲ

ಸಂಸ್ಥಾನದಲ್ಲಿ ರೇಷನಿಂಗ್ ಮತ್ತು ಧಾನ್ಯ ಶೇಖರಣೆ ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಅಧಿಕೃತವಾಗಿ ಹೇಳಲಾಗಿದೆ

ರಾಜಪ್ರಮುಖರೇ ಆಡಳಿತ ವಹಿಸಿಕೊಳ್ಳುವರು

ರಾಜಾಸ್ಥಾನದಲ್ಲಿ ಭದ್ರವಾದ ಮಂತ್ರಿಮಂಡಲ ರಚನೆಯಗುವವರೆಗೂ ಸಂಸ್ಥಾನದ ಆಡಳಿತವನ್ನು ಈ ವಾರಾಂತ್ಯದಲ್ಲಿ ಅಲ್ಲಿನ ರಾಜಪ್ರಮುಖರೇ ವಹಿಸಿಕೊಳ್ಳುವರೆಂದು ತಿಳಿದುಬಂದಿದೆ. ಇಬ್ಬರು ಅಧಿಕಾರಿ ಸಚಿವರ ಸಮಿತಿ ಅವರಿಗೆ ಸಹಾಯಕೊಡಲಿ... ವಾ... ಶಿಕ ಕಮೀಷನರ್ ಶ್ರೀ ವೆಂಕಟಾಚಾರ್ ಮತ್ತು ಎಂ. ಎನ್. ಝೂ ಇವರನ್ನು ಸಚಿವರಾಗಿ ನೇಮಿಸಬಹುದೆಂದು ಹೇಳಲಾಗಿದೆ.

ರಾಜಾಸ್ಥಾನದ ಮುಖ್ಯಮಂತ್ರಿ ಶ್ರೀ ಹೀರಾಲಾಲ್ ಶಾಸ್ತ್ರಿಯವರು ಈ ವಾರಾಂತ್ಯದಲ್ಲಿ ರಾಜೀನಾಮೆ ಸಲ್ಲಿಸುವರೆಂದೂ ತಿಳಿದುಬಂದಿದೆ

ಸೇನಾಸಂಖ್ಯೆ ಇಳಿಸುವುದರಿಂದ ದೇಶರಕ್ಷಣೆಗೆ ಧಕ್ಕೆಯಿಲ್ಲ

ಭಾರತಸೇನೆಯ ಸಂಖ್ಯೆ ಇಳಿಸುವುದರಿಂದ ದೇಶದ ರಕ್ಷಣೆ ಮತ್ತು ಭದ್ರತೆಗಳಿಗೆ ಚ್ಯುತಿಬರುವುದಿಲ್ಲವೆಂದು ಪ್ರಧಾನ ಸೇನಾನಿ ಜ|| ಕಾರಿಯಪ್ಪನವರು ಇಂದು ತಿಳಿಸಿದರು.

ದೇಶದ ಪ್ರಗತಿಗೆ ಬೇಕಾಗಿರುವ ಕೆಲವು ಮುಖ್ಯ ಅಭಿವೃದ್ಧಿಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ವಿ ತವ್ಯಯ ಅಗತ್ಯವಾದ್ದರಿಂದಲೇ ಸೇನೆಯ ವೆಚ್ಚವನ್ನು ಕ್ರಮೇಣ ಇಳಿಸಲು ನಿರ್ಧರಿಸಲಾಗಿದೆಯೆಂದು ಅವರು ಹೇಳಿದರು.

ಮೈಸೂರಿನ ಬಗ್ಗೆ ಸಂಸ್ಥಾನ ಇಲಾಖೆಗೆ ನೆಹರೂ ಸೂಚನೆ

ತಮ್ಮ ಗೈರುಹಾಜರಿಯಲ್ಲಿ ಮೈಸೂರಿನ ಮಂತ್ರಿಮಂಡಲದಲ್ಲಿ ಯಾವ ಬದಲಾವಣೆಯೇ ಆದರೂ, ಅಲ್ಲಿನ ಆಡಳಿತದದಕ್ಷತೆ ಮತ್ತು ಕಾಂಗ್ರೆಸ್ ಪಕ್ಷದ ಐಕಮತ್ಯಕ್ಕೆ ಭಂಗವುಂಟಾಗದಂತೆ ನೋಡಿಕೊಳ್ಳಬೇಕೆಂದು ಪ್ರಧಾನಿ ನೆಹರೂರವರು ಲಂಡನ್ನಿಗೆ ತೆರಳುವ ಮುನ್ನ ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಗೆ ತಂತಿಯನ್ನು ಕಳುಹಿಸಿದ್ದರೆಂದು ವರದಿಯಾಗಿದೆ

ಚಿತ್ರಮಂದಿರದಲ್ಲಿ ಧೂಮಪಾನ ಮಾಡುವವರಿಗೆ ಶಿಕ್ಷೆ

ಚಿತ್ರಮಂದಿರಗಳಲ್ಲಿ ಧೂಮಪಾನಮಾಡುವವರಿಗೆ ೫೦ ರೂ ಗಳವರೆಗೂ ದಂಡವಿಧಿಸುವ ಮಸೂದೆಯನ್ನು ಮದರಾಸ್ ಸರ್ಕಾರ ಇಂದು ಪ್ರಕಟಿಸಿದೆ ಮ್ಯಾಟಿನಿಗಳಲ್ಲಿ ಚಿತ್ರಮಂದಿರಗಳಲ್ಲಿ ಧೂಮಪಾನ ಮಾಡಕೂಡದೆಂಬ ನಿಯಮ ಜಾರಿಯಲ್ಲಿದ್ದರೂ ಅದನ್ನು ಹೆಚ್ಚು ಜನ ಉಲ್ಲಂಘಿಸುತ್ತಿರುವುದರಿಂದ ಹೆಚ್ಚಿನ ಶಿಕ್ಷೆ ವಿಧಿಸುವ ಈ ಮಸೂದೆ ಹೊರಡಿಸಲಾಗಿದೆ.

ಶ್ರೀ ಪ್ರಕಾಶಂರ ಮೇಲೆ ಶಿಸ್ತಿನಕ್ರಮ

ಮಾರ್ಚಿ ತಿಂಗಳಲ್ಲಿ ಮದರಾಸಿನಲ್ಲಿ ಸೇರಲಿರುವ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಶ್ರೀ ಪ್ರಕಾಶಂ ಮತ್ತು ಇತರ ಐದು ಜನರ ಮೇಲೆ ಶಿಸ್ತಿನ ಕ್ರಮವನ್ನು ನಿರ್ಧರಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ಹೇಳಿರುವರು.

ನ್ಯೂ ಆಪೇರಾ ಟಾಕೀಸ್
ಮೈಸೂರು
೩೦-೧೨-೫೦ ಪ್ರತಿದಿನ ೩ ಆಟಗಳು
ಕೃಷ್ಣ ವಿಜಯಂ
(ತಮಿಳು)
ಆರ್ ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ ಪ್ರೇಮಾವತಿ
ಅಂಗ ಮುತ್ತು : ನರಸಿಂಹಭಾರತಿ
ವಸಂತಕೋಕಿಲಂ : ಭಾಗ್ಯಮ್

ಶ್ರೀ ಬಿ. ಎನ್. ರಾವ್ ಲಂಡನ್ನಿಗೆ

ಪಂಡಿತ ನೆಹರೂರವರನ್ನು ಭೇಟಿಮಾಡಿ ಅವರ ಸಲಹೆಯನ್ನು ಪಡೆಯಲು ಶ್ರೀ ಬಿ. ಎನ್. ರಾವ್‌ರವರು ಅಮೆರಿಕಾದಿಂದ ಲಂಡನ್ನಿಗೆ ತೆರಳಲಿರುವರು.

ರಣಜಿತ್
29 12-50 ರಿಂದ 4 ನೇ ವಾರ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾರರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ
ಬೆಳಗಿನ ಪ್ರದರ್ಶನ
೫-೧-೫೧ ರಿಂದ ೩ ದಿನ ಮಾತ್ರ
ಕರೆದಾರ್‌ರವರ
"ಕೀಮತ್"
ಪಾತ್ರ :—ಸುಲೋಚನ ಚಟರ್ಜಿ

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ
ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವುವು!!
ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!
ಮೈಸೂರು ಉಕ್ಕಿನ ಸಾಮಾನುಗಳು
ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಪೀಪಾಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು
ಮೈಸೂರು ಬೀಡು ಕಬ್ಬಿಣ (Charcoal Pig Iron)
ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು
ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)
೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.
ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)
ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಟುಗ್ಗಗಳೂ, ಮಹಡಿ ಹಂತಗಳು, ಕಿಟಕಿಗಳು ಇತ್ಯಾದಿ,
ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)
ಟಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳ
ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.
ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬— ೧— ೧೯೫೧ ನೇ ಶನಿವಾರ [ಸಂಚಿಕೆ ೧೦೬

ಮೈಸೂರು ರೈಲ್ವೆ ನೌಕರರಿಗೆ ಸಂಬಳ ಬಡ್ತಿ

೧೯೫೦ ನೇ ಏಪ್ರಿಲ್‌ನಿಂದಲೇ ಜಾರಿಗೆ ತರಲು ಕಾರ್ಯಕ್ರಮ

ನೌಕರರ ದಕ್ಷತೆ ಹೆಚ್ಚಬೇಕಾದರೆ ಅವರ ಜೀವನ ಸುಖಮಯವಾಗಿರಬೇಕು

ಕೇಂದ್ರ ಸಂಬಳ ನಿರ್ಧಾರ ಸಮಿತಿಯ ಶಿಫಾರಸುಗಳನ್ನು ಮೈಸೂರು ರೈಲ್ವೆ ನೌಕರರಿಗೂ ಅನ್ವಯಿಸುವಂತೆ ವ್ಯವಸ್ಥೆ ಮಾಡಲಾಗುವುದೆಂದು ಕೇಂದ್ರ ಸರ್ಕಾರದ ರೈಲ್ವೆ ಉಪಸಚಿವ ಶ್ರೀ. ಕೆ. ಸಂತಾನಂರವರು ಬೆಂಗಳೂರು ರೈಲ್ವೆ ಇನ್‌ಸ್ಟಿಟ್ಯೂಟಿನಲ್ಲಿ ಮಾತನಾಡುತ್ತಾ ಹೇಳಿದರು.

ಮೈಸೂರು ಸರ್ಕಾರವು ಒಪ್ಪುವುದಾದರೆ ಹಿಂದೆ ಪಡೆದ ಐದು ಮಂದಿಯನ್ನು ಪುನಃ ನೇಮಿಸಿಕೊಳ್ಳಲು ಭಾರತ ಸರ್ಕಾರವು ಸಿದ್ಧವಿದೆಯೆಂದು ತಿಳಿಸಿದರು.

ಅಮೆರಿಕಾ ಮುಂತಾದೆಡೆ ರೈಲ್ವೆ ಕೆಲಸಗಾರರ ಜೀವನವು ಹೆಚ್ಚು ಸೌಕರ್ಯಗಳಿಂದ ಕೂಡಿರುವುದರಿಂದ ನಮ್ಮ ಕೆಲಸಗಾರರ ೬-೭ ರಷ್ಟು ಹೆಚ್ಚಾಗಿ ಕಾರ್ಯನಿರ್ವಹಣ ಮಾಡುವರೆಂದು ಹೇಳಿದರು.

ಕೇಂದ್ರ ಸಂಬಳ ನಿರ್ಧಾರ ಸಮಿತಿಯ ಹೊಸ ವೇತನ ಪಟ್ಟಿಯನ್ನು ಅನ್ವಯಿಸಲು ಭಾರತ ಸರ್ಕಾರ ಸಮಿತಿಯೊಂದನ್ನು ನೇಮಿಸಿದೆ. ಆ ಸಮಿತಿ ಸದ್ಯದಲ್ಲೇ ಬೆಂಗಳೂರಿಗೆ ಬರುವುದಾಗಿಯೂ ಅವರು ತಿಳಿಸಿದರು.

ಶ್ರೀ ಕೆ ಸಂತಾನಂ

ಬೆಂಗಳೂರ ಜ ೫

ಕೇಂದ್ರ ಟ್ರಾನ್ಸ್‌ಪೋರ್ಟ್ ಉಪಸಚಿವ ಶ್ರೀ ಕೆ. ಸಂತಾನಂರವರು ಬೆಂಗಳೂರಿಗೆ ಆಗಮಿಸಿದ್ದಾರೆ.

ಮೌಂಟ್ ಬೇಟನ್ ನೆಹರೂ ಭೇಟಿ

ಪಂಡಿತ ನೆಹರೂರವರು ಮೌಂಟ್ ಬೇಟನ್ ದಂಪತಿಗಳೊಡನೆ "ಹಿಸ್ ಎಕ್ಸ್‌ಲೆನ್ಸಿ" ಎಂಬ ಎಂಬ ನಾಟಕವನ್ನು ನೋಡಲು ಹೋಗಿದ್ದರು.

ಈ ವಾರಾಂತ್ಯವನ್ನು ಪಂಡಿತ ನೆಹರೂರವರು ಮೌಂಟ್ ಬೇಟನ್ ದಂಪತಿಗಳೊಡನೆ ಅವರ ಗೃಹದಲ್ಲಿ ಕಳೆಯುವರು. ಶ್ರೀಮತಿ ವಿಜಯಲಕ್ಷ್ಮಿಯವರೂ ಅವರೊಡನೆ ಯಾರ್ಕ್‌ಷೈರಿಗೆ ತೆರಳುವರು.

ಜಲಶಕ್ತಿ ಇಂಜನಿಯರ ಸಮ್ಮೇಳನ

೨೭ ರಾಷ್ಟ್ರಗಳ ಜಲಶಕ್ತಿ ಇಂಜನಿಯರುಗಳ ಸಮ್ಮೇಳನವು ನಿನ್ನೆ ಬೊಂಬಾಯಿನಲ್ಲಿ ಮುಕ್ತಾಯವಾಯಿತು. ಮುಂದಿನ ವರ್ಷ ಸಮ್ಮೇಳನವು ಅಮೆರಿಕದಲ್ಲಿ ನಡೆಯುವುದು. ಈ ಸಮ್ಮೇಳನದ ಪ್ರತಿನಿಧಿಗಳೆಲ್ಲರೂ, ಅಂತರರಾಷ್ಟ್ರೀಯ ಇಂಜನಿಯರುಗಳ ಸಮ್ಮೇಳನದಲ್ಲಿ ಭಾಗವಹಿಸಲು ದೆಹಲಿಗೆ ತೆರಳಲಿರುವರು.

ಪ್ರಾದೇಶಿಕ ಸೈನ್ಯ ಸಪ್ತಾಹ

ಭಾರತಾದ್ಯಂತ ಇಂದು ಪ್ರಾದೇಶಿಕ ಸೈನ್ಯ ಸಪ್ತಾಹವನ್ನು ಆಚರಿಸಲಾಗುವುದು. ರಕ್ಷಣಾ ಸಚಿವ ಸರದಾರ್ ಬಲದೇವ್ ಸಿಂಗರವರು ಈ ಸಂದರ್ಭದಲ್ಲಿ ಒಂದು ಮನವಿಯನ್ನು ಹೊರಡಿಸುತ್ತಾ, ನಗರದಲ್ಲಿರುವ ನಾಗರಿಕರೆಲ್ಲರೂ ಈ ಪ್ರಾದೇಶಿಕ ಸೈನ್ಯಕ್ಕೆ ಸೇರಿ ಶಿಕ್ಷಣವನ್ನು ಪಡೆದು ದೇಶದ ರಕ್ಷಣೆಗೆ ನೆರವಾಗಬೇಕು. ಈ ತಂಡವು ಕ್ರಮಬದ್ಧವಾದ ಸೈನ್ಯವಲ್ಲದಿದ್ದರೂ ದೇಶದ ರಕ್ಷಣೆಗೆ ಕ್ರಮಬದ್ಧ ಸೈನ್ಯಕ್ಕೆ ಸಹಾಯಮಾಡಬಹುದಾಗಿದೆ. ಅಲ್ಲದೆ ದೇಶದಲ್ಲಿ ಶಿಸ್ತಿನ ಅಭ್ಯಾಸವಾಗಿ ಉತ್ತಮ ಪ್ರಜೆಗಳಾಗಲು ತಕ್ಕ ತರಪೇತು ಪಡೆಯಲವಕಾಶವಾಗುತ್ತದೆ ಎಂದು ಹೇಳಿರುವರು.

ವೈಮಾನಿಕದಳದ ಪ್ರಶಂಸೆ

ಭಾರತದ ವೈಮಾನಿಕದಳದ ದಂಡನಾಯಕರು ಭಾರತ ವೈಮಾನಿಕದಳವು ಮಾಡಿರುವ ಕಾರ್ಯವನ್ನು ಪ್ರಶಂಸಿಸುತ್ತ ಸಾಮಾನುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯುವ ಕಾರ್ಯ, ಅಸ್ಸಾಂನಲ್ಲಿ ಪರಿಹಾರಕಾರ್ಯ ಮುಂತಾದ ಕೆಲಸಕಾರ್ಯಗಳನ್ನು ವಿಶೇಷ ರೀತಿಯಲ್ಲಿ ನಡೆಸಿವೆಯೆಂದು ಹೇಳಿರುವರು.

ಕೊರಿಯಾ ಆಕ್ರಮಣ

ಕೊರಿಯಾದಲ್ಲಿ ಚೈನಾ ಸೈನ್ಯದ ಆಕ್ರಮಣ ತೀವ್ರವಾಗಿದೆ. ಅಮೆರಿಕಾ ಅನೇಕ ಸೈನ್ಯವನ್ನು ಸುತ್ತುಕಟ್ಟಲು ೩,೦೦,೦೦೦ ಚೈನಾ ಸೈನ್ಯವು ಹೋರಾಡುತ್ತಲಿದೆ. ಎಲ್ಲೆಡೆಗಳಲ್ಲಿಯೂ ಚೈನಾ ಸೈನ್ಯವೇ ಮುಖ್ಯ ಪಾತ್ರವನ್ನು ವಹಿಸಿಕೊಂಡಿದೆ.

ಶಿಸ್ತಿನ ವಿರೋಧ ನಡವಳಿಕೆ

ಕಳೆದ ಡಿಸೆಂಬರ್ ೩೦ ನೇ ತಾರೀಖು ನಡೆದ ಕಾರ್ಪೊರೇಷನ್ನಿನ ಆಲ್ಡರ್‌ಮನ್ ಚುನಾವಣೆಯಲ್ಲಿ ಪಾರ್ಟಿಯ ಶಿಸ್ತು ನಿರೂಪಕ್ಕನುಗುಣವಾಗಿ ಓಟುಮಾಡದೆ ಹೋದುದೂ ಅಲ್ಲದೆ ಅದಕ್ಕೆ ವ್ಯತಿರಿಕ್ತವಾಗಿ ಓಟುಮಾಡಿ ತನ್ಮೂಲಕ ಕಾಂಗ್ರೆಸ್ ಶಿಸ್ತನ್ನು ನಡೆಯದೆ ಹೋದ ಕೆಲವು ಕಾಂಗ್ರೆಸ್ ಕಾರ್ಪೊರೇಟರುಗಳ ವರ್ತನೆಯ ಬಗ್ಗೆ ನಗರ ಕಾಂಗ್ರೆಸ್ ಸಮಿತಿಯು ತುಂಬಾ ವಿಷಾದಪಡುವುದು ಮತ್ತು ಅವರ ವರ್ತನೆ ಬಗ್ಗೆ ಅಸಮ್ಮತಿಯನ್ನೂ ಸೂಚಿಸುವುದು. ಈ ವಿಷಯದಲ್ಲಿ ತನಿಖೆ ನಡೆಸಬೇಕೆಂದೂ ಪಕ್ಷದಲ್ಲಿ ಶಿಸ್ತು ನೆಲಗೊಳ್ಳುವುದಕ್ಕೆ ಆವಶ್ಯಕವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ಸಮಿತಿಯು ಪಕ್ಷದ ನಾಯಕರನ್ನು ಕೋರುತ್ತದೆ ಎಂದು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯ ಕಾರ್ಯ ನಿರ್ವಾಹಕ ಸಭೆಯು ತೀರ್ಮಾನಿಸಿದೆ.

ಪುನಶ್ಶಸ್ತ್ರೀಕರಣ ಖಂಡನೆ

ಪುನಶ್ಶಸ್ತ್ರೀಕರಣಕ್ಕಾಗಿ ರಾಷ್ಟ್ರಗಳು ಪೈಪೋಟಿಯಿಂದ ಮುನ್ನುಗ್ಗುತ್ತಿವೆ. ಇದರಿಂದ ಪ್ರಪಂಚದಲ್ಲಿ ಈಗೊದಗಿರುವ ವಿಷಮ ಪರಿಸ್ಥಿತಿ ನಿವಾರಣೆಯಾಗದೆ ವಿಷಮಿಸಿಕೊಳ್ಳುವುದು. ಶಾಂತಿಸಾಧನೆಯೇ ಎಲ್ಲರ ಮುಖ್ಯೋದ್ದೇಶವಾಗಬೇಕು. ಪ್ರತಿಯೊಂದು ರಾಷ್ಟ್ರವೂ ಈಗ ಶಸ್ತ್ರಾಸ್ತ್ರಗಳಿಗಾಗಿ ವಿಪರೀತ ಹಣವನ್ನು ವ್ಯಯಮಾಡುತ್ತಲಿದೆ. ಈ ಹಣವನ್ನು ಮಾನವನ ಶ್ರೇಯಸ್ಸಿಗಾಗಿ ಉಪಯೋಗಿಸಬೇಕು. ಭಾರತವೊಂದೇ ಈಗ ತನ್ನ ರಕ್ಷಣಾ ಖರ್ಚನ್ನು ಶೇಕಡ ೧೫ ರಷ್ಟು ಕಡಮೆ ಮಾಡಿರುವುದು. ಅಂದ ಮಾತ್ರಕ್ಕೆ ಭಾರತ ರಕ್ಷಣಾ ಬಲವನ್ನು ಕಡಿಮೆಮಾಡುತ್ತಿರುವುದಾಗಿ ಅರ್ಥವಲ್ಲ. ಭಾರತದ ಜನತೆಯ ಶ್ರೇಯಸ್ಸಿಗಾಗಿ ಹೆಚ್ಚು ಹಣವನ್ನು ವಿನಿಯೋಗ ಮಾಡಲಾಗುವುದು ಎಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಹೇಳಿದರು.

ಕಾಂಗ್ರೆಸ್ ವಸ್ತು ಪ್ರದರ್ಶನ

ಕಾಂಗ್ರೆಸ್ ವಸ್ತುಪ್ರದರ್ಶನವು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಫೆಬ್ರವರಿ ೩ ನೇ ತಾರೀಖಿನಿಂದ ಸುಭಾಸನಗರದಲ್ಲಿ ನಡೆಯುವುದು.

ವೈದ್ಯ ಸಮ್ಮೇಳನ

ಮೈಸೂರು ಮೆಡಿಕಲ್ ಅಸೋಸಿಯೇಷನ್ನಿನ ೧೯ನೆಯ ವಾರ್ಷಿಕ ಸಮ್ಮೇಳನವು ಇದೇ ಮಾಹೆ ೧೯, ೨೦, ೨೧ನೇ ತಾರೀಖು ಹಾಸನದಲ್ಲಿ ನಡೆಯುವುದು. ಡಾ॥ ಆರ್. ನಾಗೇಂದ್ರರವರು ಪ್ರಾರಂಭೋತ್ಸವ ನಡೆಸುವರು.

ಹೋಟೇಲು ಊಟದ ಬೆಲೆ

ಮದ್ರಾಸು ಸರ್ಕಾರವು ಹೋಟೇಲುಗಳಲ್ಲಿ ಊಟದ ಬೆಲೆಯನ್ನು ೮ ಆಣೆಯಿಂದ ೧೦ ಆಣೆಗೆ ಏರಿಸಿ ಆಜ್ಞೆಯನ್ನಿತ್ತಿದ್ದರು. ಸಾರ್ವಜನಿಕರು ಇದನ್ನು ಪ್ರತಿಭಟಿಸಿದ ಪರಿಣಾಮವಾಗಿ ಬೆಲೆ ಏರಿಸಿರುವುದನ್ನು ಸದ್ಯಕ್ಕೆ ಜಾರಿಗೆ ತರದಂತೆ ಹೊಸ ಆಜ್ಞೆಯನ್ನಿತ್ತಿದೆ.

ಸತ್ಯಾಗ್ರಹ ಮುಂದುವರಿಯುತ್ತಲಿದೆ

ಮೈಸೂರು ಜ ೬

ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಬಿ ಎಸ್. ಸೂರ್ಯನಾರಾಯಣರಾಯರು ಸತ್ಯಾಗ್ರಹವನ್ನು ಮುಂದುವರಿಸುತ್ತಲಿರುವರು. ಸಹಕಾರಸಂಘಗಳ ರಿಜಿಸ್ಟ್ರಾರ್ ಶ್ರೀ ಎನ್. ಎಸ್. ಹಿರಿಯಣ್ಣಯ್ಯ, ಜಿಲ್ಲಾಧಿಕಾರಿ ಜನಾಬ್ ಮಹಮ್ಮದ್ ಅಹಮ್ಮದ್ ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಕೃಷ್ಣಮೂರ್ತಿ, ಶ್ರೀ ಎಂ. ಎಸ್. ಜೋಯಿಸ್ ಮತ್ತು ಇತರರು ಇಂದು ಬೆಳಗ್ಗೆ ಬ್ಯಾಂಕಿನ ಬಳಿ ಹೋಗಿ ಶ್ರೀ ಸೂರ್ಯನಾರಾಯಣರಾಯರನ್ನು ನೋಡಿಕೊಂಡು ಬ್ಯಾಂಕಿನ ವಿದ್ಯಮಾನವನ್ನೆಲ್ಲಾ ಅವರಿಂದ ಅರಿತುಕೊಂಡು ಕಾನೂನು ರೀತ್ಯ ತಾವು ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಕೂಡಲೇ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಸಲಹೆಯಿತ್ತರು.

 Reg. No. M. 5318

ಕಾಮನ್‌ವೆಲ್ತ್ ಪ್ರಧಾನಿಗಳ ಕರೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಬರಬೇಕೆಂದು ಪ್ರಧಾನಿಗಳು ಒಂದು ತಂತಿಯನ್ನು ಪಾಕಿಸ್ಥಾನ ಪ್ರಧಾನಿ ಮಿ|| ಲಿಯಾಕತ್ ಅಲೀಖಾನ್‌ರವರಿಗೆ ಕಳುಹಿಸಿರುವರೆಂದು ತಿಳಿಯಬರುತ್ತದೆ.

ನೆಹರೂ ಬೆವಿನ್ ಭೇಟಿ

ಭಾರತ ಪ್ರಧಾನಿ ನೆಹರೂ ಮತ್ತು ಬೆವಿನ್ನರ ಭೇಟಿ ನಡೆದು ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಚರ್ಚಿಸಿದರೆಂದು ತಿಳಿಯಬರುತ್ತದೆ.

ನಾಟಕದಲ್ಲಿ ಉನ್ನತಾಧಿಕಾರಿಗಳ ಪಾತ್ರ

ಬೆಂಗಳೂರು ಜ. ೫

ಮಹಾರಾಜಾ ಕಾಲೇಜು ಶತಮಾನೋತ್ಸವ ಸಮಾರಂಭ ಸಹಾಯಾರ್ಥವಾಗಿ ೮ ನೇ ತಾರೀಖು ಬೆಂಗಳೂರು ಪುರಭವನದಲ್ಲಿ 'ನಾಗರಿಕ' ಎಂಬ ನಾಟಕ ನಡೆಯುವುದು. ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರು, ಅಸಿಸ್ಟೆಂಟು ಕಾರ್ಯದರ್ಶಿಗಳು, ಸೂಪರಿಂಟೆಂಡೆಂಟರು ಮತ್ತಿತರ ಅಧಿಕಾರಿಗಳು ನಾಟಕದಲ್ಲಿ ಪಾತ್ರವಹಿಸುವರೆಂದು ತಿಳಿಯಬರುತ್ತದೆ.

ಮೆನನ್-ರೆಡ್ಡಿ ಭೇಟಿ

ಸಂಸ್ಥಾನಶಾಖಾ ಕಾರ್ಯದರ್ಶಿ ಶ್ರೀ ವಿ ಪಿ ಮೆನನ್‌ರವರಿಗೂ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೂ ಭೇಟಿ ನಡೆದು ಮಾತುಕಥೆ ನಡೆಯಿತೆಂದು ತಿಳಿಯಬರುತ್ತದೆ.

ಸಂಸ್ಥಾನದ ಆರ್ಥಿಕ ವಿಲನೀಕರಣ, ಐ. ಎ. ಎಸ್. ವಿಲನೀಕರಣ, ಪಬ್ಲಿಕ್‌ಸರ್ವಿಸ್ ಕಮಿಷನ್ ರಚನೆ ಈ ಬಗ್ಗೆ ಅಧಿಕಾರಿಗಳೊಡನೆ ಚರ್ಚೆ ನಡೆಸಲು ಅವರು ಬಂದಿರುವುದಾಗಿ ಹೇಳಲಾಗಿದೆ. ಕೇಂದ್ರ ಸಂಸ್ಥಾನ ಶಾಖೆಯ ಆರ್ಥಿಕ ಕಾರ್ಯದರ್ಶಿ ಶ್ರೀ ಜಿ. ಸ್ವಾಮಿನಾಥನ್‌ರವರೂ ಈ ಬಗ್ಗೆ ಚರ್ಚಿಸಿದರೆಂದು ಹೇಳಲಾಗಿದೆ.

ನ್ಯೂ ಅಪೇರಾ
ಟಾಕೀಸ್
ಮೈಸೂರು
೫-೧-೫೧ ಪ್ರತಿದಿನ ೩ ಆಟಗಳು
ಎರಡನೇ ವಾರ
ಕೃಷ್ಣ ವಿಜಯಂ
(ತಮಿಳು)
ಆರ್. ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ ಪ್ರೇಮಾವತಿ
ಅಂಗ ಮುತ್ತು : ನರಸಿಂಹಭಾರತಿ
ವಸಂತಕೋಕಿಲಂ : ಭಾಗ್ಯಮ್

ಪ್ರಧಾನಿಗಳ ಸಮ್ಮೇಳನ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ನಿನ್ನೆ ಎರಡುಬಾರಿ ಸೇರಿತ್ತು. ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಮಿ|| ಬೆವಿನ್ನರು ಸಮ್ಮೇಳನವನ್ನುದ್ದೇಶಿಸಿ ಭಾಷಣಮಾಡುತ್ತಾ ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿದರು. ಚೈನಾಪ್ರಜಾ ಸರ್ಕಾರಕ್ಕೆ ಮನ್ನಣೆಯಿತ್ತರೆ ಮಾತ್ರ ಕೊರಿಯಾ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದೂ, ಮನ್ನಣೆಯಿತ್ತಮಾತ್ರಕ್ಕೆ ಶರಣಾಗತರಾದಂತಲ್ಲ. ಚೈನಾದೊಡನೆ ಸಂಧಾನ ನಡೆಸಬೇಕಾದಲ್ಲಿ ಅವರಿಗೆ ಮನ್ನಣೆಯನ್ನಿತ್ತರೆ ಮಾತ್ರ ಸಾಧ್ಯ. ಮನ್ನಣೆಯೀಯದೆ ಸಂಧಾನಕ್ಕೆ ಅವರನ್ನು ಕರೆಯುವುದು ಮೂಢತನವೆಂದು ಅವರು ಹೇಳಿದರು.

ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಇಂಡಿಯಾ, ಪಾಕಿಸ್ಥಾನ, ಸಿಂಹಳ ಮತ್ತು ಬ್ರಿಟನ್ ಚೈನಾ ಪ್ರಜಾ ಸರ್ಕಾರಕ್ಕೆ ಮನ್ನಣೆಯನ್ನಿತ್ತಿವೆ. ಇತರ ೪ ರಾಷ್ಟ್ರಗಳು ಇನ್ನೂ ಮನ್ನಣೆಯನ್ನಿತ್ತಿಲ್ಲ.

ಕಾಂಗ್ರೆಸ್ ಪಕ್ಷ ಸಭೆ

ಬೆಂಗಳೂರು ಜ. ೫

ಮುಖ್ಯಮಂತ್ರಿ ಮತ್ತು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ ಸಿ. ರೆಡ್ಡಿಯವರು ಪಕ್ಷದ ಸದಸ್ಯರ ವಿಶ್ವಾಸಕೋರುವದಕ್ಕಾಗಿ ೧೦ನೇ ತಾ|| ಪಕ್ಷದ ಸಭೆಯಲ್ಲಿ ಕರೆದಿರುವರು. ಅಂದು ಮಧ್ಯಾಹ್ನ ೩ ಗಂಟೆಗೆ ಕುಮಾರಾಪಾರ್ಕಿನಲ್ಲಿ ಸೇರುವುದು.

ಮುಖ್ಯಮಂತ್ರಿ ಮಾಯವೆ ?

ರಾಜಸ್ಥಾನದ ಮುಖ್ಯಮಂತ್ರಿ ಶ್ರೀ ಹೀರಾಲಾಲ್ ಶಾಸ್ತ್ರಿಯವರು ಕಳೆದ ಐದು ದಿವಸಗಳಿಂದ ಜಯಪುರದಲ್ಲಿ ಪತ್ತೆಯಿಲ್ಲದಿದ್ದಾರೆ. ಡಿಸೆಂಬರ್ ೨೯ ರಲ್ಲಿ ಮುಖ್ಯಮಂತ್ರಿ ಸರ್ದಾರ್ ಪಟೇಲರ ಅಸ್ತಿ ಸಂಚಯನಕ್ಕೆ ಅಲಹಾಬಾದಿಗೆ ತೆರಳಿದ್ದು ಮಾರನೇ ದಿನ ಹಿಂತಿರುಗಿದರೆಂದೂ ಆಗಿನಿಂದ ಅವರು ಪತ್ತೆಯಿಲ್ಲವೆಂದು ಹೇಳಲಾಗಿದೆ.

ರಣಜಿತ್
29-12-50 ರಿಂದ 4 ನೇ ವಾರ
ದಿವಸಕ್ಕೆ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.
ಬೆಳಗಿನ ಪ್ರದರ್ಶನ
೫-೧-೫೧ ರಿಂದ ೩ ದಿನ ಮಾತ್ರ
ಕರಿದಾರ್‌ರವರ
"ಕೀಮತ್"
ಪಾತ್ರ:—ಸುಲೋಚನ ಚಟರ್ಜಿ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಜನವರಿ ೭ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಮಿತ್ರಮಾಧುರ್ಯ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ಜಲತರಂಗ್, ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ.

ಸಂಜೆ ೫-೩೦ ಬಿ. ಎಸ್. ಚಿನ್ನಮ್ಮ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಚಿತ್ರಸಂಗೀತ (ರಿ) ೭-೩೦ ಟಿ. ಎಸ್. ಚಿನ್ನಮ್ಮ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಆರ್ ಕೇಶವಮೂರ್ತಿ (ಪಿಟೀ). ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಬಿ.ಪಿ. ಕೈಲಾಸಂರವರ "ನಿಮ್ಮ ಕಂಪೆನಿ" ಎಂಬ ನಾಟಕ. ೧೦-೦ ಮುಕ್ತಾಯ.

ಜನವರಿ ೮ ನೇ ಸೋಮವಾರ

ಬೆಳಗ್ಗೆ ೭-೧೫ ಸುಪ್ರಭಾತ ಮತ್ತು ಕಾರ್ಯಕ್ರಮ ವಿವರಣೆ. ೭-೨೦ ಚಿತ್ರಸಂಗೀತ (ರಿ) ೭-೩೫ ಪಕ್ಷಿನೋಟ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಸಿತಾರ್ ೧-೫೫ ಹಿಂದಿ ಶಿಕ್ಷಣ. ೨-೦ ಜನರಂಜಿನಿ (ರಿ) ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಕೆ. ಎಸ್. ಚಂಗಲರಾಯಪ್ಪ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ (ಸಂಗೀತ ಶಿಕ್ಷಣ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿಯಲ್ಲಿ ಭಾಷಣ. ೭-೧೫ ಕೆ.ಎಸ್. ಚಂಗಲರಾಯಪ್ಪ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದಸುಧಾ (ರಿ) ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಎಮ್. ಎ. ನರಸಿಂಹಾಚಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಎಮ್. ಎ. ನರಸಿಂಹಾಚಾರ್ (ಸಂಗೀತ) ೧೦-೦ ಮುಕ್ತಾಯ.

ನೆಹರೂ-ಬ್ರಿಟಿಷ್ ದೊರೆಗಳ ಭೇಟಿ

ಕಾಮನ್‌ವೆಲ್ತ್ ಸಮ್ಮೇಳನದ ಪ್ರಥಮಾಧಿವೇಶನ ಮುಗಿದ ಮೇಲೆ ನೆಹರೂರವರು ಬ್ರಿಟಿಷ್ ರಾಜದಂಪತಿಗಳನ್ನು ಭೇಟಿ ಮಾಡಿದ್ದರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು: ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ., ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ ೩ ಪೈ ದಿನ ಪತ್ರಿಕೆ Phone: 514

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೧—೧೯೫೧ ನೇ ಸೋಮವಾರ [ಸಂಚಿಕೆ ೧೦೮

ಈಗಿನ ಮಂತ್ರಿಮಂಡಲದಲ್ಲಿ ದಕ್ಷತೆಯಿಲ್ಲ

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಬಿಕ್ಕಟ್ಟಿನ ಸಂಬಂಧ ಚರ್ಚೆ ಅನಗತ್ಯ

ಸ್ವ. ಸು. ಕಾನಕಾನಹಳ್ಳಿ ಜ. ೭

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದಲ್ಲಿ ತಲೆದೋರಿರುವ ಬಿಕ್ಕಟ್ಟಿನ ವಿಷಯ ಕುರಿತು ಇಂದು ಬೆಳಗ್ಗೆ, ಕಾನಕಾನಹಳ್ಳಿಯಲ್ಲಿ ನಡೆಯುತ್ತಲಿರುವ ಎಂ. ಪಿ. ಸಿ. ಸಿ. ಅಧಿವೇಶನದಲ್ಲಿ ಚರ್ಚೆ ಮುಂದುವರಿಯಿತು.

ಈ ವಿಚಾರದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅಭಿಪ್ರಾಯವನ್ನು ಸಭೆಯ ಮುಂದಿಡಬೇಕೆಂದು ಸದಸ್ಯರೊಬ್ಬರು ಅಭಿಪ್ರಾಯಪಟ್ಟರು.

ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಹನುಮಂತಯ್ಯನವರು ಮಾತನಾಡುತ್ತಾ, ಕಾರ್ಯನಿರ್ವಾಹಕ ಸಮಿತಿ ನಾನಾ ವಿಷಯಗಳನ್ನು ವಿಮರ್ಶಿಸಿತು. ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧಿಕಾರ ವ್ಯಾಪ್ತಿಯೇನು? ಇಂದು ನಾವು ನಿರ್ಣಯಮಾಡಿದರೆ ಅದು ಎಷ್ಟರಮಟ್ಟಿಗೆ ಕಾಂಗ್ರೆಸ್ ಶಾಸನ ಸಭೆಯನ್ನು ಬಂಧಿಸುವುದು ಎಂಬುದು ಮುಖ್ಯವಾದ ವಿಷಯ. ಕಾಂಗ್ರೆಸ್‌ಪಕ್ಷದ ನಾಯಕರ ಅಭಿಪ್ರಾಯವನ್ನು ಪಡೆಯದೆ ತೀರ್ಮಾನಕ್ಕೆ ಬರುವುದು ಸಾಧ್ಯವಲ್ಲ. ಈ ದೃಷ್ಟಿಯಿಂದ ಕಾರ್ಯಕಾರಿ ಸಮಿತಿಯು ನಿರ್ಣಯ ಮಂಡಿಸಲು ಸಾಧ್ಯವಿಲ್ಲ. ಅಲ್ಲದೆ ಇತರ ಸದಸ್ಯರ ನಿರ್ಣಯ ಚರ್ಚಿಸಿದರೂ ಏನಾಗಲಾರದು.

ಸರಕಾರ ಜವಾಬ್ದಾರಿ ಬರುವುದಕ್ಕೆ ಪೂರ್ವ ಕಾಂಗ್ರೆಸ್ಸಿಗೆ ಬೇರೆ ಕೆಲಸವಿತ್ತು.

ಈಗ ಕಾಂಗ್ರೆಸ್ ಸಂಸ್ಥೆಯೇ ಬೇರೆ, ಸರ್ಕಾರವೇ ಬೇರೆ, ಕಾಂಗ್ರೆಸ್ ಪ್ರತಿನಿಧಿಗಳು ಆಡಳಿತಾಧಿಕಾರ ವಹಿಸಿಕೊಂಡಮೇಲೆ ಅದು ಸುಸೂತ್ರವಾಗಿ ನಡೆದುಕೊಳ್ಳುವಂತೆ ನೋಡಿಕೊಳ್ಳುವುದು ಕಾಂಗ್ರೆಸ್ ಸಂಸ್ಥೆಗೆ ಸೇರಿದ್ದು. ಮಂತ್ರಿಮಂಡಲದಲ್ಲಿ ಸರಿಯಾಗಿ ಕೆಲಸ ಆಗದಿದ್ದಲ್ಲಿ ಕಾಂಗ್ರೆಸ್ಸಿಗೆ ಅಪಖ್ಯಾತಿ. ಈಗಿನ ಮಂತ್ರಿಮಂಡಲದಿಂದ ಯಾವ ಸೇವೆಯನ್ನು ಜನರು ನಿರೀಕ್ಷಿಸಿದ್ದರೋ ಅಷ್ಟು ಆಗಿಲ್ಲ. ಇದು ತಪ್ಪೆಂದಾದ ನಾನು ಅಧ್ಯಕ್ಷಸ್ಥಾನ ಬಿಡಲು ಸಿದ್ಧ ಎಂದು ಹೇಳಿದರು

ಶ್ರೀ ಕುಮಾರಸ್ವಾಮಿಯವರು ಮತ್ತು ನಾಲ್ವರು ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹನುಮಂತಯ್ಯನವರು ಶಾಸನ ಸಭೆಯ ಕಾಂಗ್ರೆಸು ಪಕ್ಷದ ನಾಯಕರ ಬದಲಾವಣೆ ವಿಚಾರದಲ್ಲಿ ಸದರಿ ನಾಯಕ ವಿಚಾರದಲ್ಲೂ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಭಾಗವಹಿಸಿರುವುದರಿಂದ ದೇಶದಲ್ಲಿ ಕಾಂಗ್ರೆಸ್ ವಿಚಾರದಲ್ಲಿ ಪ್ರಾಕಾರಾಂತ ಭಾವನೆ ಉದ್ಭವವಾಗಲು ಸಹಾಯಕವಾಗಿರುವುದರಿಂದ ಅಧ್ಯಕ್ಷ ಶ್ರೀ ಹನುಮಂತಯ್ಯನವರ ವರ್ತನೆಯನ್ನು ಈ ಸಭೆಯು ಕಳವಳದಿಂದ ಅವಲೋಕಿಸಿ ಅವರ ಕಾರ್ಯನೀತಿಯನ್ನು ಕಟುವಾಗಿ ವಿರೋಧಿಸುತ್ತ ಇನ್ನು ಮುಂದಾದರೂ ಅವರು ಯಾವ ಪಕ್ಷದ ಪರವಾಗಿಯೂ, ವರ್ತಿಸದೆ ಸಂಸ್ಥೆಯ ಸಂಘಟನೆ, ಐಕ್ಯತೆಗೆ ಸಾಧಕವಾಗುವ ಸೌಹಾರ್ದ ರೀತಿಯಲ್ಲಿ ನಡೆದುಕೊಂಡು ಹೋಗಬೇಕೆಂದ. ನಿರ್ಣಯವನ್ನು ಮಂಡಿಸಿದರು ಈ ನಿರ್ಣಯವನ್ನು ಸಭೆಯು ತೆಗೆದುಕೊಳ್ಳಬಹುದೇ ಎಂಬ ವಿಷಯವು ಓಟು ಹಾಕಲಾಗಿ ೧೮-೧೫ ಓಟುಗಳಿಂದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿಲ್ಲವೆಂದು ತೀರ್ಮಾನವಾಯಿತು. ಶ್ರೀ

ಅಮೆರಿಕಾ ಸೈನ್ಯವನ್ನು ಹಿಂದಕ್ಕೆ ಕರೆಯಿರಿ

ವಿಶ್ವಸಂಸ್ಥೆಯ ಇತರ ಸದಸ್ಯರೆಲ್ಲರೂ ತಮ್ಮ ದೇಶದ ಪ್ರಜಾಸಂಖ್ಯೆಯನ್ನನುಸರಿಸಿ ಸಾಕಷ್ಟು ಸೈನ್ಯವನ್ನು ಕೊರಿಯಾ ಯುದ್ಧಕ್ಕೆ ಇನ್ನು ೧೫ ದಿನಗಳೊಳಗಾಗಿ ಕಳುಹಿಸದಿದ್ದಲ್ಲಿ ಅಮೆರಿಕಾ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಯಿಸಿಕೊಳ್ಳಿ ಎಂದು ಅಮೆರಿಕಾ ರಿಪಬ್ಲಿಕ್ ಸೆನೆಟರ್ ಕೆನೆಟ್‌ವೆರಿಯವರು ಹೇಳಿರುವರು.

ಅಮೆರಿಕಾ ಸೈನ್ಯವು ಕೂಡಲೇ ಕೊರಿಯಾದಿಂದ ಹಿಂತಿರುಗುವಂತೆ ಆಜ್ಞೆಯನ್ನು ಕೊಡಿ. ಅಮೆರಿಕಾ ಸೈನಿಕ ಮತ್ತು ನೌಕಾಬಲಗಳು ಮುಂದಿನ ಆಕ್ರಮಣವನ್ನು ನಿಲ್ಲಿಸಿದೆ ಎಂದು ಕೂಡಲೇ ಘೋಷಿಸಿ ಎಂದು ಅಮೆರಿಕಾದ ಪ್ರೋಗ್ರೆಸಿವ್ ಪಕ್ಷವು ಅಧ್ಯಕ್ಷ ಟ್ರೂಮನ್ನರಿಗೆ ತಿಳಿಸಿದೆ.

ಚೈನಾಮೇಲೆ ಯುದ್ಧ ಘೋಷಣೆ ಯಾಕೆ ಮಾಡಬಾರದು ?

ಅಮೆರಿಕಾ ಅಧ್ಯಕ್ಷ ಟ್ರೂಮನ್‌ರು ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಪಡೆಯದೆ ಯೂರೋಪಿನ ರಕ್ಷಣೆಗೆ ಅಮೆರಿಕಾ ಸೈನ್ಯವನ್ನು ಸೇರಿಸುವ ಆಜ್ಞೆಯಿತ್ತಿರುವುದು, ಅಂತರರಾಷ್ಟ್ರೀಯ ಸೈನ್ಯವನ್ನು ಕಲ್ಪಿಸಿ, ಅಮೆರಿಕಾದ ದಂಡನಾಯಕರನ್ನು ಅದಕ್ಕೆ ನೇಮಿಸುವುದರಲ್ಲಿ ನಾಯಕತ್ವವನ್ನು ಅಮೆರಿಕಾ ತೆಗೆದುಕೊಂಡಿರುವುದು ಸಾಧುವಲ್ಲ. ಕೊರಿಯಾ ಯುದ್ಧಕ್ಕೆ ಅಮೆರಿಕಾ ಸೈನ್ಯವನ್ನು ಕಳುಹಿಸಿ ಅಧ್ಯಕ್ಷ ಟ್ರೂಮನ್ನರು ಕಾನೂನು ಮತ್ತು ರಾಜ್ಯಾಂಗಕ್ಕೆ ವಿರುದ್ಧವಾಗಿ ವರ್ತಿಸಿರುವರು. ಯಾವ ಘೋಷಣೆಯೂ ಇಲ್ಲದೆ ಯುದ್ಧ ಮಾಡುತ್ತಲಿರುವಾಗ ಚೈನಾದ ಮೇಲೆ ನೇರವಾಗಿ ಯುದ್ಧವನ್ನೇಕೆ ಘೋಷಿಸಬಾರದು ಎಂದು ಅಮೆರಿಕಾ ರಿಪಬ್ಲಿಕ್ ನಾಯಕ ಸೆನೆಟರ್ ರಾಬರ್ಟ್‌ಟಾಫ್‌ರವರು ಹೇಳಿರುವರು.

ಸತ್ಯಾಗ್ರಹ ಮುಂದುವರಿಯುತ್ತಲಿದೆ

ಮೈಸೂರು ಜ. ೮

ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಸೂರ್ಯನಾರಾಯಣರಾಯರು ತಮ್ಮ ಸತ್ಯಾಗ್ರಹವನ್ನು ಮುಂದುವರಿಸುತ್ತಲಿರುವರು. ಇಂದು ಬೆಳಗ್ಗೆ ಡಾ|| ಬಿ. ಎಸ್. ವೆಂಕಟದಾಸಪ್ಪನವರು ಬಂದು ಅವರ ದೇಹಸ್ಥಿತಿಯನ್ನು ಪರಿಶೀಲಿಸಿದರು.

ಬ್ಯಾಂಕಿನ ವ್ಯವಹಾರವನ್ನು ಪರಿಶೀಲಿಸಲು ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಮರುದೇವೇಗೌಡರು ಬಂದಿರುವರು.

೧೦೦ಕ್ಕಿಂತ ಹೆಚ್ಚು ಸದಸ್ಯರು ಸಹಿ ಮಾಡಿ, ಕೂಡಲೇ ಜನರಲ್‌ಬಾಡಿ ಮೀಟಿಂಗ್ ಕರೆಯಬೇಕೆಂದು ಅರ್ಜಿಯನ್ನು ಬ್ಯಾಂಕಿಗೆ ಕೊಟ್ಟಿರುವರು.

ಚೈನಾವನ್ನು ಸೋಲಿಸಲು ಸಾಧ್ಯವೆ ?

ಕೊರಿಯಾದಿಂದ ಬರುತ್ತಲಿರುವ ಸುದ್ದಿಯು ನಿರಾಶೆಯನ್ನುಂಟುಮಾಡುತ್ತಲಿದೆ ಮತ್ತು ಅರ್ಥಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಚೈನಾ ಸೈನ್ಯವನ್ನು ಸೋಲಿಸಲಾಗುವುದೇ ಎಂಬುದೇ ಒಂದು ದೊಡ್ಡ ಶಂಕೆ. ವಿಶ್ವಸಂಸ್ಥೆಯ ಸೈನ್ಯವು ಹಿಮ್ಮೆಟ್ಟುತ್ತಿರುವುದನ್ನು ನೋಡಿದರೆ ಸಂಪೂರ್ಣವಾಗಿ ಹಿಂದಕ್ಕೆ ಹೋಗುವುದೇ ಲೇಸೆಂದು ತೋರುತ್ತದೆ ಆಕ್ರಮಣವನ್ನು ಎದುರಿಸಿ, ಅನಂತರ ಕೊರಿಯಾದಲ್ಲಿ ಸಮಗ್ರ ಸ್ವಾತಂತ್ರ್ಯ ಸರ್ಕಾರವನ್ನು ಸ್ಥಾಪಿಸಬೇಕೆಂದು ವಿಶ್ವ ಸಂಸ್ಥೆಯ ಗುರಿಯಿದೆ. ಅನೇಕ ದೊಡ್ಡಪಟ್ಟಣಗಳಿಗೆ ಬಾಂಬು ಹಾಕುತ್ತ ಭಸ್ಮಮಾಡುತ್ತಲಿರುವಾಗ ಇದು ಹೇಗೆ ಸಾಧ್ಯ. ಈ ಸ್ಥಿತಿಯಲ್ಲಿ ಮುಂದುವರಿಯುತ್ತಲಿದ್ದರೆ ಕೊರಿಯಾದ ಪುನರ್ನಿರ್ಮಾಣ ಕಾರ್ಯವು ಸಾಧ್ಯವೇ ಎಂಬುದನ್ನು ಗಮನಿಸಿ ಕಾರ್ಯಮಾಡಬೇಕಾಗಿದೆ ಎಂದು ಮಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆದಿದೆ.

ಟೆಲಿಫೋನ್ ಬಿಲ್ಲು ತಿಳಿಯಲು ರುಸುಂ

ಟೆಲಿಫೋನ್ ಇಟ್ಟುಕೊಂಡಿರುವವರು ತಮ್ಮ ತಿಂಗಳ ಬಿಲ್ಲಿನ ಮೊಬಲಗು ಎಷ್ಟೆಂದು ತಿಳಿದುಕೊಳ್ಳಲು ४ ಆಣೆ ರುಸುಂ ಕೊಡಬೇಕೆಂದು ಅಂಚೆ ಮತ್ತು ತಂತಿ ಇಲಾಖಾ ಡೈರೆಕ್ಟರ್ ಜನರಲ್‌ರವರು ಪ್ರಕಟಿಸಿರುವರು.

ನೂತನ ಕಾರ್ಯಕಾರಿ ಸಮಿತಿ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಶ್ರೀಗಳಾದ ಎಸ್. ಚನ್ನಯ್ಯ (ಮೈಸೂರು ಜಿಲ್ಲೆ), ಕೆ. ಕೆಂಚಪ್ಪ (ಚಿತ್ರದುರ್ಗ), ಕೆ. ಟಿ. ಭಾಷ್ಯಂ (ಬೆಂಗಳೂರು ನಗರ), ಕೆ. ಸುಬ್ಬರಾವ್ (ಬೆಂಗಳೂರು ಜಿಲ್ಲೆ) ಇವರು ಚುನಾಯಿತರಾದ್ದಾರೆ. ಇತರ ಜಿಲ್ಲೆಗಳಲ್ಲಿ ಚುನಾವಣೆ ನಡೆದು ಶ್ರೀಗಳಾದ ಕೆ. ಲಕ್ಕಪ್ಪಗೌಡ (ಹಾಸನ), ಹೆಚ್. ಎಸ್. ರುದ್ರಪ್ಪ (ಶಿವಮೊಗ್ಗ), ವೈ. ಎಂ ಚಂದ್ರಶೇಖರಯ್ಯ (ಚಿಕ್ಕಮಗಳೂರು), ಹೆಚ್. ಸಿ. ಲಿಂಗಾರೆಡ್ಡಿ (ಕೋಲಾರ), ಹೆಚ್. ಕೆ. ವೀರಣ್ಣಗೌಡ (ಮಂಡ್ಯ) ಚುನಾಯಿತರಾಗಿರುವರು.

ಕುಮಾರಸ್ವಾಮಿಯವರು ಪೋಲ್ ಕೇಳಿದರು ಪೋಲ್ ಅನಗತ್ಯವೆಂದು ಅಧ್ಯಕ್ಷರು ತೀರ್ಮಾನಿಸಲಾಗಿ ಶ್ರೀಗಳಾದ ಕುಮಾರಸ್ವಾಮಿ ಮತ್ತು ಬಿ. ನಾರಾಯಣಸ್ವಾಮಿವರು ೮ ಮಂದಿ ಸಭಾ ಪರಿತ್ಯಾಗಮಾಡಿದರು.

ಎಂ. ಪಿ. ಸಿ. ಸಿ. ಪರವಾಗಿ ಶ್ರೀ ಹೆಚ್. ಎಸ್. ರುದ್ರಪ್ಪನವರು ಸ್ವಾಗತಸಮಿತಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ವಂದನೆಯೊಡನೆ ಅಧಿವೇಶನ ಮುಕ್ತಾಯವಾಯಿತು.

ಸಮಾಚಾರ

ಸೋಮವಾರ ತಾರೀಖು ೮

ಸರ್ವಾಧಿಕಾರತ್ವ ತೊಲಗಬೇಕು

ಮೈಸೂರು ನಗರ ಕೋ-ಆಪರೇಟಿವ್ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಸೂರ್ಯನಾರಾಯಣರಾಯರು ೪ನೇ ತಾ|| ನಿಂದ ಸತ್ಯಾಗ್ರಹವನ್ನು ಆಚರಿಸುತ್ತಲಿರುವುದು ಮೈಸೂರು ಜನತೆಯಲ್ಲಿ ಅತ್ಯಂತ ಖೇದ ಮತ್ತು ಮರುಕವನ್ನುಂಟುಮಾಡಿದೆ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದ ಪರಸ್ಪರ ಸಹಾಯಸಂಘಗಳಲ್ಲೆಲ್ಲಾ ಮೊದಲನೆಯದು ಈ ಬ್ಯಾಂಕು ಸ್ಥಾಪಿತವಾದಾಗಿನಿಂದ ಅತ್ಯಂತ ಪ್ರಬುದ್ಧಮಾನಕ್ಕೆ ಬಂದು ಈಗ್ಗೆ ಹತ್ತಾರು ವರ್ಷಗಳಿಂದ ಕೆಲವು ಸ್ವಾರ್ಥರ ಕೈನಾಡಕೊಳಗಾಗಿ ಬ್ಯಾಂಕಿನ ವ್ಯವಹಾರವೆಲ್ಲವೂ ಕಲುಷಿತವಾಗುತ್ತಬಂದಿವೆ

ಈ ಬ್ಯಾಂಕಿನ ವಿದ್ಯಮಾನಗಳನ್ನೆಲ್ಲಾ ಹೊರಗೆಡಹಲು ಶ್ರೀ ಸೂರ್ಯನಾರಾಯಣರಾಯರು ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ಬ್ಯಾಂಕಿನಲ್ಲಿ ಸರ್ವಾಧಿಕಾರತ್ವವು ಈಗಿನ ಪ್ರಜಾಪ್ರಭುತ್ವಕಾಲದಲ್ಲಿಯೂ ಕಾಣಬರುತ್ತಲಿದೆ.

ಪ್ರಕೃತ ಸ್ಥಿತಿಯಲ್ಲಿ, ಒಬ್ಬ ಸದಸ್ಯರಿಗೆ ಸಾಲವನ್ನು ಕೊಟ್ಟ ವಿಷಯದಲ್ಲಿ ಕೆಲವು ಆಕ್ಷೇಪಣೆಗಳು ಬರಲು ಬ್ಯಾಂಕಿನ ಕಾರ್ಯದರ್ಶಿ ಶ್ರೀಯುತ ಸೂರ್ಯನಾರಾಯಣರಾಯರು ಪರಿಶೀಲಿಸಬೇಕೆಂದು ಅವರಿಗೆ ಸಾಲ ಕೊಟ್ಟದ್ದ ಹಣದಲ್ಲಿ ಸ್ವಲ್ಪ ಭಾಗವನ್ನು ಪಾವತಿಮಾಡುವುದನ್ನು ನಿಧಾನಿಸಿದರೆಂಬ ಅಪಾದನೆ ಮೇಲೆ ಶ್ರೀ ಸೂರ್ಯನಾರಾಯಣರಾಯರನ್ನು ಕೆಲವು ಡೈರೆಕ್ಟರು ಬ್ಯಾಂಕಿನ ಸದಸ್ಯತ್ವದಿಂದ ತೆಗೆದುಹಾಕಿ ತಮ್ಮ ಸರ್ವಾಧಿಕಾರತ್ವವನ್ನು ವ್ಯಕ್ತಪಡಿಸಿರುವಂತೆ ಕಾಣುತ್ತದೆ ಇದಕ್ಕಾಗಿಯೇ ಈ ಸತ್ಯಾಗ್ರಹ ನಡೆಯುತ್ತಲಿರುವುದು. ಬ್ಯಾಂಕಿನ ಸದಸ್ಯರಿಗೆ ಬ್ಯಾಂಕಿನಲ್ಲಿ ನಡೆಯುವ ಈರೀತಿಯಾದ ವಿದ್ಯಮಾನಗಳನ್ನು ಗಮನಕ್ಕೆ ತರಬೇಕಾದರೆ ಸತ್ಯಾಗ್ರಹವೂ ಒಂದು ಉತ್ತಮ ಮಾರ್ಗ ಆದರೆ ಈ ಸತ್ಯಾಗ್ರಹಕ್ಕೆ ಕಾರಣಕರ್ತರು, ಸರ್ಕಾರವೂ ಕೂಡಲೇ ಈ ವಿಷಯವನ್ನು ಪರಿಶೀಲಿಸಿ ಬ್ಯಾಂಕಿನ ವ್ಯವಹಾರ ಉತ್ತಮರೀತಿಯಲ್ಲಿ ನಡೆಯುತ್ತ, ಸಹಕಾರತತ್ವವನ್ನು ಎತ್ತಿಹಿಡಿದು, ಅದು ದುರುಪಯೋಗವಾಗದಂತೆ ನೋಡಿಕೊಳ್ಳುವುದು ಮುಖ್ಯ ಕರ್ತವ್ಯ ಈ ಬ್ಯಾಂಕಿನಲ್ಲಿ ಈ ರೀತಿಯಾದ ಕಹಿ ಪ್ರಸಂಗಗಳು ಹಿಂದೆ ಅನೇಕ ನಡೆದಿವೆ

ಇಲಾಖಾ ಮುಖ್ಯಾಧಿಕಾರಿಗಳು ತಾವೇ ಖುದ್ದಾಗಿ ಇಂದಿನ ಪ್ರಸಂಗಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲಿಸಿ, ಕಾರ್ಯಕಾರಿಸಮಿತಿಗೆ ತಾನು ಮಾಡಿರುವ ತಪ್ಪನ್ನು ತೋರಿಸಿಕೊಟ್ಟು, ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿ, ಶ್ರೀ ಸೂರ್ಯನಾರಾಯಣರಾಯರು ತಮ್ಮ ಕಾರ್ಯದರ್ಶಿ ಕೆಲಸವನ್ನು ಸುಸೂತ್ರವಾಗಿ ನಡೆಸುವಂತೆ ಏರ್ಪಾಡುಮಾಡುವುದು ಪ್ರಥಮ ಕರ್ತವ್ಯ ಅದಕ್ಕೆ ಬದಲಾಗಿ ವಿಚಾರಣೆಗೆ ಅಧಿಕಾರಿಗಳನ್ನು ನೇಮಿಸಿ, ಅವರ ವರದಿ ಮುಂತಾದುವಕ್ಕೆ ಕಾದು ಕಾಲವಿಳಂಬಮಾಡುತ್ತ ಬಂದಲ್ಲಿ ಅನಾಹುತಕ್ಕೀಡಾಗುವುದು. ಕೂಡಲೇ ಎಚ್ಚತ್ತು ಸತ್ಯಾಗ್ರಹವು ಮುಕ್ತಾಯವಾಗಿ ಸರ್ವಾಧಿಕಾರತ್ವವು ಬೆಳೆಯದಂತೆ ಮಾಡುವುದು ಇಲಾಖೆಯವರ ಗುರುತರವಾದ ಜವಾಬ್ದಾರಿ

ಕಾರ್ಯಕಾರಿ ಸಮಿತಿಯು ಇಲಾಖೆಯವರ ಸಲಹೆಗಳನ್ನು ಗಮನಿಸದಿದ್ದಲ್ಲಿ ಸರ್ಕಾರವೇ ಈ ಬ್ಯಾಂಕಿನ ಆಡಳಿತವನ್ನು ವಹಿಸಿಕೊಂಡು, ಸದಸ್ಯರ ವಿಶೇಷ ಸಭೆಯನ್ನೊಂದನ್ನು ಕರೆದು ವಿಷಯಗಳನ್ನೆಲ್ಲಾ ಸದಸ್ಯರ ಗಮನಕ್ಕೆ ತಂದು ಈ ಕಹಿ ಪ್ರಸಂಗಕ್ಕೆ ಕಾರಣಕರ್ತರು ಇನ್ನು ಮುಂದೆ ಈ ಬ್ಯಾಂಕಿನಲ್ಲಿ ಸದಸ್ಯರಾಗದಂತೆ ಮಾಡಿದಲ್ಲಿ ಬ್ಯಾಂಕು ಉತ್ತಮಸ್ಥಿತಿಗೆ ಬರುವುದು. ಇಲ್ಲದಿದ್ದಲ್ಲಿ ಬ್ಯಾಂಕಿನ ಕೀರ್ತಿಗೆ ಚ್ಯುತಿಯುಂಟಾಗುವುದು

೧೮ ವರ್ಷಕ್ಕೆ ಮೇಲ್ಪಟ್ಟವರು ಸೈನ್ಯಕ್ಕೆ

೧೮ ವರ್ಷಕ್ಕೆ ಮೇಲ್ಪಟ್ಟವರೆಲ್ಲರೂ ಸೈನ್ಯಕ್ಕೆ ಸೇರಲೇಬೇಕೆಂದು ಸದ್ಯದಲ್ಲೇ ಅಮೆರಿಕಾ ಸರ್ಕಾರವು ಆಜ್ಞೆಯಾಗಿಲಿದೆಯೆಂದು ತಿಳಿಯಬರುತ್ತದೆ.

ಅಮೇರಿಕಾ ಶಸ್ತ್ರಾಸ್ತ್ರಗಳು ಚೈನಾ ಸೈನ್ಯದಲ್ಲಿ

ಅಮೆರಿಕಾದಲ್ಲಿ ತಯಾರಾದ ಅನೇಕ ಶಸ್ತ್ರಾಸ್ತ್ರಗಳನ್ನು ಚೀಣಾ ಸೈನ್ಯವು ಕೊರಿಯಾ ರಣರಂಗದಲ್ಲಿ ಉಪಯೋಗಿಸುತ್ತಲಿವೆ ಕಳ್ಳತನದಿಂದ ಅವರಿಗೆ ಈ ಶಸ್ತ್ರಾಸ್ತ್ರಗಳ ಸರಬರಾಯಿ ಆಗುತ್ತಲಿವೆ. ಇದನ್ನು ತಡೆಗಟ್ಟಲು ಎಲ್ಲಾ ಮಿತ್ರರಾಷ್ಟ್ರಗಳು ಸಹಕರಿಸಬೇಕೆಂದು ಅಮೆರಿಕಾ ಸಂಕಟವು ಮಿತ್ರರಾಷ್ಟ್ರಗಳಿಗೆಲ್ಲಾ ಮನವಿಮಾಡಿದೆ

ಅಣುಶಸ್ತ್ರಗಳಿಗೆ ಬಹಿಷ್ಕರಿಸಿ

ಅಣುಶಸ್ತ್ರಗಳನ್ನು ಎಲ್ಲಾ ಸರ್ಕಾರಿಗಳೂ ಬಹಿಷ್ಕರಿಸಿ, ಅಣುಶಕ್ತಿಯನ್ನು ಶಾಂತಿಯುತ ಕಾರ್ಯಗಳಿಗೆ ಉಪಯೋಗಿಸುವಂತೆ ಮಾಡಿ ಎಂದು ಭಾರತ ವೈಜ್ಞಾನಿಕ ಕಾರ್ಯಕರ್ತರ ಸಂಘದವರು ನಿರ್ಣಯವನ್ನು ಮಾಡಿರುವರು.

ಭಾರತ ಸ್ಕೌಟುಗಳಿಗೆ ಆಹ್ವಾನ

೧೯೫೧ನೇ ಆಗಸ್ಟ್ ೩ ರಿಂದ ೧೮ ರ ವರೆಗೆ ಆಸ್ಟ್ರಿಯಾದ ಸೇನ್‌ಬರ್ಗ್ ಎಂಬಲ್ಲಿ ನಡೆಯುವ ೭ನೇ ವಿಶ್ವ ಸ್ಕೌಟುದಳ ಸಮಾರಂಭಕ್ಕೆ ಭಾರತದಿಂದ ೧೦೦ ಜನ ಬಾಲಚಮೂಗಳ ಒಂದು ತಂಡವನ್ನು ಕಳುಹಿಸಬೇಕೆಂದು ಆಹ್ವಾನ ಬಂದಿದೆ.

ಓಟರ ಪಟ್ಟಿಯಲ್ಲಿ ಭಾರತ ರಾಷ್ಟ್ರಾಧ್ಯಕ್ಷರ ಹೆಸರೇ ಇಲ್ಲ

ಭಾರತ ರಾಷ್ಟ್ರಾಧ್ಯಕ್ಷರ ಬಾಬುರಾಜೇಂದ್ರಪ್ರಸಾದರ ಹೆಸರು ದೆಹಲಿ ಪಾಟ್ನಾ ಅಥವಾ ಅವರ ಗ್ರಾಮವಾದ ಸಿರಾದೆಯ, ಯಾವ ಮತದಾರರ ಪಟ್ಟಿಯಲ್ಲಿ ಸೇರಿಸಿಲ್ಲ ಓಟರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಿಕೊಳ್ಳಬೇಕೆಂದು ಪಾಟ್ನಾ ಸರ್ಕಾರಕ್ಕೆ ರಾಷ್ಟ್ರಾಧ್ಯಕ್ಷರು ಅರ್ಜಿಯನ್ನು ಹಾಕಿರುವರು.

ರಷ್ಯಾದಲ್ಲಿ ನಾಲಾ ಕೆಲಸಗಳಿಗೆ ಜರ್ಮನ್ ಖೈದಿಗಳು

ರಷ್ಯಾದಲ್ಲಿ ಓಲ್ಗಾ ಮತ್ತು ಡೋನ್ ನದಿಗಳನ್ನು ಸೇರಿಸಲು ತೆಗೆಯಬೇಕೆಂದಿರುವ ೭೦ ಮೈಲಿ ಉದ್ದದ ನಾಲಾ ಕೆಲಸಗಳಿಗೆ ೨೫ ಸಾವಿರ ಜರ್ಮನ್ ಯುದ್ಧ ಖೈದಿಗಳನ್ನು ನೇಮಕ ಮಾಡಿಕೊಂಡು, ಅವರಿಗಿತ್ತಿರುವ ಶಿಕ್ಷೆಯಲ್ಲಿ ೩ನೇ ಭಾಗವನ್ನು ವಿನಾಯಿತಿ ಕೊಡಲಿರುವರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ಖೈದಿಗಳ ಪರಾರಿ

ನೇಪಾಳ ಸರ್ಕಾರವು ಬೀರಜ್‌ಗಂಜ್ ಜೈಲಿನಲ್ಲಿ ಸೆರೆಯಿಟ್ಟಿದ್ದ ಕಾಂಗ್ರೆಸ್ ಖೈದಿಗಳಲ್ಲಿ ೪೨ ಜನರು ಜೈಲಿನ ಗೋಡೆಯೊಳಗೆ ಒಂದು ದೊಡ್ಡ ರಂಧ್ರವನ್ನು ಮಾಡಿಕೊಂಡು ಪರಾರಿಯಾಗಿರುವರೆಂದು ವರದಿಯಾಗಿದೆ ಈ ಖೈದಿಗಳು ಪರಾರಿಯಾದ ವೇಳೆಯಲ್ಲಿ ೧೫೦ ಸರ್ಕಾರಿ ಸೈನಿಕರು ಮಿಷಿನ್‌ಗನ್ ಮತ್ತು ಬ್ರೆನ್‌ಗನ್ನುಗಳನ್ನು ಹಿಡಿದು ಕಾವಲು ಕಾಯುತ್ತಲಿದ್ದರೆಂದು ತಿಳಿಯಬರುತ್ತದೆ.

ಕಮ್ಯೂನಿಸ್ಟ್ ಖೈದಿಗಳ ಬಿಡುಗಡೆ

ಪಶ್ಚಿಮ ಬಂಗಾಳದ ಮುಖ್ಯ ನ್ಯಾಯಾಲಯದ ಆಜ್ಞೆಯ ಪ್ರಕಾರ ಸರ್ಕಾರವು ಬಂಧನದಲ್ಲಿಟ್ಟ ೩೪೬ ಕಮ್ಯೂನಿಸ್ಟ್ ಖೈದಿಗಳನ್ನು ಬಿಡುಗಡೆಮಾಡಿದೆ.

ಈ ಖೈದಿಗಳ ಬಿಡುಗಡೆಯ ಆಜ್ಞೆಯನ್ನೀಯುತ್ತ ಕಲ್ಕತ್ತಾ ಮುಖ್ಯನ್ಯಾಯಾಲಯವು ಕಮ್ಯೂನಿಸ್ಟ್ ಪಕ್ಷವನ್ನು ನ್ಯಾಯಬದ್ಧವಲ್ಲವೆಂದು ಸರ್ಕಾರವು ಆಜ್ಞೆಯಿತ್ತಿರುವುದು, ಅವರ ಸದಸ್ಯರನ್ನು ಬಂಧನದಲ್ಲಿಟ್ಟಿರುವುದು ಭಾರತರಾಜ್ಯಾಂಗಕ್ಕೆ ವಿರೋಧ. ಅಲ್ಲದೆ ಪ್ರಿವೆಂಟಿವ್ ಡಿಟೆನ್‌ಷನ್ ಆಕ್ಟ್ ಜಾರಿಯಾದ ೨೪ ಗಂಟೆಗಳೊಳಗಾಗಿ ೩೬೪ ಜನರು ದೇಶದ ನ್ಯಾಯಪರಿಪಾಲನೆ ಮತ್ತು ಶಿಸ್ತಿಗೆ ವಿರೋಧವಾಗಿ ನಡೆದರೆಂದು ತೀರ್ಮಾನಿಸುವುದು ಅಸಾಧ್ಯ ಕೆಲಸ ಒಬ್ಬ ಪ್ರಜೆಗಿರುವ ಸ್ವಾತಂತ್ರ್ಯವನ್ನು ಮಟುಕುಮಾಡಲವಕಾಶವಿಲ್ಲದ ರೀತಿಯಲ್ಲಿ ನೂತನ ರಾಜ್ಯಾಂಗವು ರಚಿತವಾಗಿರುವಾಗ ಅದನ್ನು ಅಕ್ಷರಶಃ ಪಾಲಿಸಬೇಕೇ ವಿನಹ ಯಾವ ರೀತಿಯಲ್ಲೂ ಪ್ರಜೆಗೆ ಇರುವ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಕಾಪಾಡುವುದು ಪ್ರಜಾಪ್ರಭುತ್ವ ರಾಷ್ಟ್ರದ ನ್ಯಾಯಮೂರ್ತಿಗಳ ಕರ್ತವ್ಯವೆಂದು ಹೇಳಿರುವರು.

ನ್ಯೂ ಅಪೇರಾ ಟಾಕೀಸ್
ಮೈಸೂರು
೫-೧-೫೧ ಪ್ರತಿದಿನ ೩ ಆಟಗಳು
ಎರಡನೇ ವಾರ
ಕೃಷ್ಣ ವಿಜಯಂ
(ತಮಿಳು)
ಆರ್. ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ-ಪ್ರೇಮಾವತಿ
ಅಂಗಮುತ್ತು : ನರಸಿಂಹಭಾರತಿ
ವಸಂತಕೋಕಿಲಂ · ಭಾಗ್ಯಮ್

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್ ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್ ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೧—೧೯೫೧ ನೇ ಮಂಗಳವಾರ [ಸಂಚಿಕೆ ೧೦೯

ಪ್ರಾಂತ್ಯ ಸರ್ಕಾರಗಳು ಮಾರಾಟ ತೆರಿಗೆ ವಿಧಿಸುವಂತಿಲ್ಲ

ಮಾರಾಟ ತೆರಿಗೆ ವಿಧಿಸುವುದು ಕೇಂದ್ರ ಸರ್ಕಾರಕ್ಕೆ ಸೇರುವುದು

ವಿಶ್ವವನ್ನು ನುಂಗುವ ಯತ್ನ

ರಷ್ಯವು ಪ್ರಧಾನರಾಷ್ಟ್ರವಾಗಿ, ವಿಶ್ವವನ್ನೆಲ್ಲಾ ತನ್ನ ವಶಪಡಿಸಿಕೊಳ್ಳುವ ಯತ್ನದಲ್ಲಿದೆ. ಪ್ರಪಂಚದ ಸಾಮೂಹಿಕ ರಕ್ಷಣೆ, ಅಮೇರಿಕಾ ಭದ್ರತೆಗೆ ಬ್ಲಡಾ ಅಮೇರಿಕಾಗೆ ಸೇರಿದ್ದು ದಾಳಿಗಳನ್ನು ಪ್ರತಿಭಟಿಸಬೇಕಾದುದು ಅಮೇರಿಕಾ ಕೆಲಸವಾಗಿದೆ. ಅವಶ್ಯಬಿದ್ದಲ್ಲಿ ವರ್ಷಕ್ಕೆ ೫೦ ಸಾವಿರ ವಿಮಾನ ಮತ್ತು ೩೫ ಸಾವಿರ ಟ್ಯಾಂಕುಗಳನ್ನು ನಾವು ತಯಾರಿಸಲು ಸಿದ್ಧವಾಗಿದ್ದೇವೆಂದು ಅಮೇರಿಕಾ ಅಧ್ಯಕ್ಷ ಟ್ರೂಮನ್ನರು ಹೇಳಿರುವರು. ಗೌರವಯುತ ಒಪ್ಪಂದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ ಆದರೆ ಭಯ ಭೀತಿಗಳಿಗೆ ಹೆದರುವವರಲ್ಲವೆಂದೂ ತಿಳಿಸಿರುವರು.

ಬೆವಿನ್ನರ ಸಲಹೆ

ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಮಿ|| ಬೆವಿನ್ನರವರು ಕೊರಿಯಾ ಯುದ್ಧದ ವಿಷಯದಲ್ಲಿ ಒಂದು ಯೋಚನೆಯನ್ನು ತಯಾರಿಸಿ ಕಾಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಸಮ್ಮೇಳನದ ಮುಂದಿಟ್ಟಿರುವರು. ಅದರಂತೆ ಚೈನಾಪ್ರಜಾ ಸರ್ಕಾರಕ್ಕೆ ಮನ್ನಣೆ, ವಿದೇಶ ಸೈನ್ಯಗಳೆಲ್ಲಾ ಕೊರಿಯಾದಿಂದ ನಿರ್ಗಮನ ಮತ್ತು ಕೊರಿಯಾದಲ್ಲಿ ಏಕಚಕ್ರಾಧಿಪತ್ಯ ಸ್ಥಾಪನೆ ಇವು ಅವರ ಸಲಹೆಯಲ್ಲಿ ಅಡಕವಾಗಿವೆ.

ಹತೋಟಿಗಳನ್ನು ರದ್ದುಗೊಳಿಸುವುದು ಅಸಾಧ್ಯ

ಭಾರತದಲ್ಲಿ ಹತೋಟಿಗಳನ್ನು ರದ್ದುಗೊಳಿಸುವುದು ಅಸಾಧ್ಯ. ರದ್ದುಗೊಳಿಸುವುದರಿಂದ ಪರಿಸ್ಥಿತಿಯು ಹದಗೆಡುವುದು. ನಗರ ವಾಸಿಗಳಿಗೆ ಹತೋಟಿ ರದ್ದುಗೊಳಿಸುವುದರಿಂದ ಸ್ವಲ್ಪ ಪ್ರಯೋಜನವಾಗಬಹುದು. ಆದರೆ ಗ್ರಾಮಾಂತರದವರಿಗೆ ವಿಶೇಷ ಕಷ್ಟವಾಗುತ್ತದೆ ಎಂದು ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣಮಹತಾಬ್‌ರವರು ಮದರಾಸಿನಲ್ಲಿ ಹೇಳಿರುವರು.

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಸಮಸ್ಯೆ ಪರಿಹಾರವಾದ ಹೊರತು ಏಷ್ಯಾದಲ್ಲಿ ಶಾಂತಿಪಾಲನಾ ಕಾರ್ಯದಲ್ಲಿ ಭಾರತವಾಗಲೀ ಪಾಕಿಸ್ತಾನವಾಗಲೀ ಸರಿಯಾದ ಪಾತ್ರವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ಪಾಕಿಸ್ತಾನ ಪ್ರಧಾನಿ ಮಿ|| ಲಿಯಾಖತ್ ಅಲಿಖಾನ್‌ರವರು ಲಂಡನ್ ತಲಪಿದೊಡನೆಯೇ ತಿಳಿಸಿದರು.

ಕಾಶ್ಮೀರ ಸಮಸ್ಯೆ ಪರಿಹಾರದಿಂದ ಪ್ರಪಂಚ ಪರಿಸ್ಥಿತಿ ಮೇಲೆ ಮಹತ್ಪರಿಣಾಮವುಂಟಾಗುವುದು. ಸಮಸ್ಯಾ ಪರಿಹಾರದಿಂದ ಪಾಕಿಸ್ತಾನ ಮತ್ತು ಕಾಶ್ಮೀರ ಜನರು ನ್ಯಾಯಸಂದಿತೆಂದು ಭಾವಿಸಲು ಅವಕಾಶವಾಗುವುದು ಮತ್ತು ಶಾಂತಿಪಾಲನಾಕಾರ್ಯದಲ್ಲಿ ಪಾಕಿಸ್ತಾನ ಕಾರ್ಯಕ್ರಮವನ್ನು ಮಾಡಲು ಸಾಧ್ಯವಾಗುವುದೆಂದು ಹೇಳಿದರು.

LATEST

ಮಂತ್ರಿಗಳ ಸಭೆ

ಸ್ವ. ಸು. (ಫೋನ್) ಬೆಂಗಳೂರು ಜ. ೯

ನಿನ್ನೆದಿನ ಕಾರ್ಲ್‌ಟನ್ ಭವನದಲ್ಲಿ ಮಂತ್ರಿಗಳ ಸಭೆಯು ನಡೆಯಿತು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಸ್ವಲ್ಪ ಗ... ...ದ ಅವರೂ ಸಭೆಯಲ್ಲಿ ಭಾಗವಹಿಸಿದ್ದರು. ಸಂಸ್ಥಾನದ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಹಿ. ಮೆನನ್ನರು ಸಭೆಯಲ್ಲಿ ಹಾಜರಿದ್ದರು. ಮೈಸೂರು ರಾಜಪ್ರಮುಖರ ಆಸ್ತಿ, ಮೈಸೂರು ಸಂಸ್ಥಾನದಲ್ಲಿ ನಡೆಯಬೇಕಾದ ಅಭಿವೃದ್ಧಿಕಾರ್ಯಗಳಿಗೆ ಕೇಂದ್ರದ ದ್ರವ್ಯಸಹಾಯ, ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ಸಿಗೆ ಮೈಸೂರು ಅಧಿಕಾರಿಗಳನ್ನು ಸೇರಿಸಿಕೊಳ್ಳುವ ವಿಷಯ ಮುಂತಾದುವು ಈ ಸಭೆಯಲ್ಲಿ ಪರಿಶೀಲಿಸಲಾಯಿತೆಂದು ತಿಳಿಯಬರುತ್ತದೆ.

ಶ್ರೀ ಪಿ. ಹಿ ಮೆನನ್ನರು ಇಂದು ಬೆಳಗ್ಗೆ ಪ್ಲೇನಿನ ಬಾದಗೆ ತೆರಳಿದರು.

ಸತ್ಯಾಗ್ರಹ ಮುಂದುವರಿಯುತ್ತಲಿದೆ

ಮೈಸೂರು ಜ. ೯

ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರು ಶ್ರೀ ಬಿ. ಎಸ್. ಸೂರ್ಯನಾರಾಯಣರಾಯರು ತಮ್ಮ ಸತ್ಯಾಗ್ರಹವನ್ನು ಮುಂದುವರಿಸುತ್ತಲಿರುವರು. ಇಂದು ಬೆಳಗ್ಗೆ ಡಾ|| ಮರಿಸ್ವಾಮಿ, ಡಾ|| ಬಿ. ಎನ್ ವೆಂಕಟದಾಸಪ್ಪ, ಡಾ|| ಅಣ್ಣಾಜಪ್ಪ ಮುಂತಾದವರು ಬಂದು ಸೂರ್ಯನಾರಾಯಣರಾಯರ ದೇಹಸ್ಥಿತಿಯನ್ನು ಪರಿಶೀಲಿಸಿದರು. ಸ್ವಲ್ಪ ನಿಶ್ಶಕ್ತರಾಗಿರುವಂತೆ ಕಾಣುತ್ತದೆ. ಆದರೆ ಎಂದಿನಂತೆ ಚಟುವಟಿಕೆಯಿಂದಿರುವರು.

ನಿನ್ನೆದಿನ ನಗರ ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ ಮುಂತಾದವರು ಬಂದು ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಅವರ ಸತ್ಯಾಗ್ರಹವು ಯಶಸ್ವಿಯಾಗಿ ಸೊಸೈಟಿಯಲ್ಲಿ ಸಂಪ್ರತಿಕಾರತ್ವವು ತಪ್ಪಲೆಂದು ಹಾರೈಸಿದರೆಂದು ತಿಳಿಯಬರುತ್ತದೆ.

ಇಂದು ಆಸಿಸ್ಟೆಂಟ್ ರಿಜಿಸ್ಟ್ರಾರರ ಕೋರ್ಟಿನಲ್ಲಿ ಸದಸ್ಯತನದಿಂದ ತೆಗೆದಿರುವ ವಿಚಾರದಲ್ಲಿ ವಿಚಾರಣೆ ನಡೆಯಿತು. ಸಂಘದ ಪರವಾಗಿ ಅ|| ಸೆಕ್ರೆಟರಿ ಬಂದು ಅಡ್ಜರ್ನ್‌ಮೆಂಟು ಕೇಳಿದರು. ಕೋರ್ಟು ಆಗುವುದಿಲ್ಲವೆಂದು ತಿಳಿಸಿ, ಶ್ರೀ ಸೂರ್ಯನಾರಾಯಣರಾಯರ ಹೇಳಿಕೆಯನ್ನು ತೆಗೆದುಕೊಂಡು, ಕಾಗದಪತ್ರಗಳನ್ನು ಪರಿಶೀಲಿಸಿ, ಕೂಡಲೇ ತೀರ್ಪನ್ನು ಕೊಡುವುದಾಗಿ ತಿಳಿಸಿದರು.

ಮಾರಾಟ ತೆರಿಗೆಯ ವಸೂಲಿ ಮಾರ್ಚಿ ಮಾಹೆಯಿಂದ ಕೇಂದ್ರ ಸರ್ಕಾರಕ್ಕೆ ಸೇರುವುದು. ಪ್ರಾಂತ್ಯ ಸರ್ಕಾರಗಳು ಮಾರಾಟ ತೆರಿಗೆಯನ್ನು ವಿಧಿಸುವಂತಿಲ್ಲ. ಅಲ್ಲದೆ ಮಾರಾಟ ತೆರಿಗೆಯನ್ನು ಒಂದೆಡೆ ಮಾತ್ರ ವಿಧಿಸಲಾಗುವುದೆಂದು ಭಾರತ ಸರ್ಕಾರದ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಮದರಾಸಿನಲ್ಲಿ ಮಾತನಾಡುತ್ತ ಹೇಳಿರುವರು.

ಮಾರಾಟತೆರಿಗೆ ರಿಯಾಯಿತಿ

ಕೈಮಗ್ಗದ ಬಟ್ಟೆಗಳ ಮೇಲೆ ಮಾರಾಟ ತೆರಿಗೆಯು ರಿಯಾಯಿತಿ ಕೊಡಬಹುದೆಂದು ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣಮಹತಾಬ್‌ರವರು ಹೇಳಿರುವರು.

೫೦೭ ವಿಮಾನಗಳನ್ನು ಉರುಳಿಸಲಾಗಿದೆ

ಉತ್ತರ ಕೊರಿಯನ್ ಆಂಟಿ-ಏರ್‌ಕ್ರಾಫ್ಟ್ ಪಡೆಗಳು ೧೯೫೦ ನೇ ಜೂನ್‌ರಿಂದ ಡಿಸೆಂಬರ್‌ವರೆಗೆ ೫೦೭ ಅಮೇರಿಕಾ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಪೀಕಿಂಗ್ ರೇಡಿಯೋ ತಿಳಿಸಿದೆ. ಅದರಲ್ಲಿ ಜೆಟ್‌ಫೈಟರ್ ವಿಮಾನಗಳು ೨೫೩, ಸೂಪರ್ ಫೈಟರ್‌ಗಳು ೫೩, ಉಳಿದುವು ಇತರ ಬಗೆಯ ವಿಮಾನಗಳು.

ಸನ್ಮಾನ ಸಭೆ

ಮೈಸೂರು ಇಟ್ಟಿಗೆಗೂಡು ನಿವಾಸಿಗಳು ನಿವೃತ್ತ ಮತ್ತು ನೂತನ ಪೌರಸಭಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಾದ ಶ್ರೀ ಗಳಾದ ಎಸ್. ಲಿಂಗಣ್ಣ, ನರಸಿಂಹಯ್ಯಂಗಾರ್, ಎ. ಕೃಷ್ಣಮೂರ್ತಿರಾವ್ ಮತ್ತು ಎಂ. ಎಸ್. ನಂಜಪ್ಪ ಇವರುಗಳಿಗೆ ನಾಳೆ ಸಂಜೆ ೫||ಗೆ ಟೌನ್ ಹಾಲ್‌ನಲ್ಲಿ ಸನ್ಮಾನ ಸಭೆಯನ್ನು ಏರ್ಪಡಿಸಿರುವರು.

ಸಿಮೆಂಟು ಹತೋಟಿ ರದ್ದು

ಭಾರತಾದ್ಯಂತ ಸಿಮೆಂಟು ಹತೋಟಿಯನ್ನು ರದ್ದುಗೊಳಿಸಲಾಗಿದೆಯೆಂದು ಭಾರತ ಕೈಗಾರಿಕ ಮಂತ್ರಿಗಳು ತಿಳಿಸಿರುವರು.

ಸರ್ಕಾರವೇ ನಿರ್ವಹಿಸಬೇಕು

ಈಗಿನ ಆಹಾರ ಪರಿಸ್ಥಿತಿಯಲ್ಲಿ, ಆಹಾರ ಸಂಗ್ರಹಣೆ ವಿನಿಯೋಗ ಮತ್ತು ಆಮದು ಮುಂತಾದ ಕಾರ್ಯಗಳನ್ನೆಲ್ಲಾ ಸರ್ಕಾರವೇ ನಿರ್ವಹಿಸಬೇಕೆಂದು ಆಹಾರ ಉಪಸಚಿವ ಶ್ರೀ ತಿರುಮಲರಾಯರು ಹೇಳಿರುವರು.

ರೇಷನ್ ಪದಾರ್ಥಗಳಿಲ್ಲ

ಮೈಸೂರು ಜ. ೯

ಮೈಸೂರು ನಗರದ ಅನೇಕ ರೇಷನ್ ಡಿಪೋಗಳಲ್ಲಿ ಆಹಾರ ರೇಷನ್ ಪದಾರ್ಥಗಳಾವುವೂ ಇಲ್ಲದೆ ಜನರು ತೊಂದರೆ ಪಡುತ್ತಲಿರುವುದಾಗಿ ತಿಳಿಯಬರುತ್ತದೆ. ಕೆಲವು ಡಿಪೋಗಳಲ್ಲಿ ಗೋಧಿಯಿಲ್ಲ, ಮತ್ತೆ ಕೆಲವಲ್ಲಿ ಅಕ್ಕಿಯಿಲ್ಲ ಇನ್ನು ಕೆಲವಲ್ಲಿ ಗೋಧಿ, ಅಕ್ಕಿ ಯಾವುವೂ ಇಲ್ಲ ವಿಚಾರಿಸಿದಲ್ಲಿ ಸರಬರಾಯಿ ಆಗಿಲ್ಲವೆಂದು ಹೇಳುತ್ತಲಿದ್ದಾರೆ.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದರವರು ಮಾರ್ಚಿ ಮಾಹೆಯಲ್ಲಿ ದಕ್ಷಿಣಭಾರತ ಪ್ರವಾಸಕ್ಕೈಗೊಳ್ಳುವರು.

ಶ್ರೀ ವಿ. ಪಿ. ಮೆನನ್

ಸಂಸ್ಥಾನಶಾಖಾ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ನರು ಮೈಸೂರು ಸರ್ಕಾರದ ಸುಮಾರು ೧೪೦ ಗೆಜೆಟೆಡ್ ಅಧಿಕಾರಿಗಳನ್ನು ಭೇಟಿಮಾಡಿ, ಭಾರತ ಸರ್ಕಾರದೊಡನೆ ಮೈಸೂರು ಸರ್ಕಾರದ ಅಧಿಕಾರಿಗಳ ಐಕ್ಯತೆ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟರೆಂದು ವರದಿಯಾಗಿದೆ.

ವೈದ್ಯರಮೇಲೆ ತೆರಿಗೆ

ವೈದ್ಯರು, ವಕೀಲರು ಮತ್ತು ವೇಶ್ಯೆಯರ ಮೇಲೆ ಅವರ ಆದಾಯವನ್ನು ಗಮನಿಸದೆ ವರ್ಷಕ್ಕೆ ೫೦ ರೂ. ತೆರಿಗೆಯನ್ನು ಕಾಶಿ ಪೌರಸಭೆಯು ವಿಧಿಸಿದೆ. ಯಾತ್ರಾರ್ಥಿಗಳ ಮೇಲೂ ತೆರಿಗೆ ವಿಧಿಸಲು ಯೋಚಿಸುತ್ತಿದೆ.

ಸಮ್ಮೇಳನ

ಅಖಿಲಭಾರತ ಔಷಧಿ ಪದಾರ್ಥಗಳನ್ನು ತಯಾರಿಸುವವರ ಸಮ್ಮೇಳನವು ಬೆಂಗಳೂರು ವಿಜ್ಞಾನಮಂದಿರದಲ್ಲಿ ಡಿಸೆಂಬರ್ ೩೧ ರಂದು ಸೇರಿದಾಗ ಮೈಸೂರು ಸಂಸ್ಥಾನದಲ್ಲಿ ಶಾಖೆಯೊಂದು ಸ್ಥಾಪಿಸಲು ಸೂಚಿಸಿದೆ.

ಜರೂರು ಮಸೂದೆ

ಕೊರಿಯಾ ಯುದ್ಧ ಮತ್ತು ರಕ್ಷಣೆಗಾಗಿ ಎರಡು ಸಾವಿರ ಕೋಟಿ ಡಾಲರುಗಳ ಒಂದು ಮಸೂದೆಗೆ ಅಧ್ಯಕ್ಷ ಟ್ರೂಮನ್ನರು ಸಹಿ ಹಾಕಿದ್ದಾರೆ.

ವಿಜ್ಞಾನ ಅಧಿವೇಶನ ಮುಕ್ತಾಯ

ಒಂದು ವಾರದಿಂದ ಬೆಂಗಳೂರಿನಲ್ಲಿ ನಡೆಯುತ್ತಲಿದ್ದ ಭಾರತವಿಜ್ಞಾನ ಪರಿಷತ್ತು ನಿನ್ನೆ ಮುಕ್ತಾಯವಾಯಿತು.

ಕೃತಕ ಮಳೆ

ಕೃತಕಮಳೆಯನ್ನು ಬರಿಸುವ ವಿಷಯದಲ್ಲಿ ತಾವು ಕೈಗೊಂಡಿರುವ ಪರಿಶೋಧನೆ ವಿಷಯವಾಗಿ ಆಸ್ಟ್ರೇಲಿಯ ಪ್ರತಿನಿಧಿಯು ನಿನ್ನೆ ಭಾರತವಿಜ್ಞಾನಪರಿಷತ್ತಿನಲ್ಲಿ ಭಾಷಣ ಮಾಡಿದರು.

ಅಂತರರಾಷ್ಟ್ರೀಯ ಇಂಜನಿಯರ ಸಮ್ಮೇಳನ

ಅಂತರರಾಷ್ಟ್ರೀಯ ಇಂಜನಿಯರುಗಳ ಸಮ್ಮೇಳನವು ನಾಳೆಯಿಂದ ದೆಹಲಿಯಲ್ಲಿ ಪ್ರಾರಂಭವಾಗುವುದು ಈಗಾಗಲೇ ವಿದೇಶಗಳಿಂದ ೧೦೦ ಮಂದಿ ಪ್ರತಿನಿಧಿಗಳು ಆಗಮಿಸಿರುವರು. ೫೦ ಮಂದಿ ಪ್ರತಿನಿಧಿಗಳು ಅಮೇರಿಕಾದಿಂದ ಬಂದು ಈ ಸಮ್ಮೇಳನದಲ್ಲಿ ಭಾಗವಹಿಸುವರು. ೨ ಕೋಟಿ ರೂಪಾಯಿಗಳ ಬೆಲೆಬಾಳುವ ವಿವಿಧ ಸಾಮಾನುಗಳ ಪ್ರದರ್ಶನ ಈ ಸಮ್ಮೇಳದ ಅಂಗವಾಗಿ ನಾಳೆ ಪ್ರಾರಂಭವಾಗಲಿದೆ ೧೯ ರಾಷ್ಟ್ರಗಳು ಈ ಪ್ರದರ್ಶನದಲ್ಲಿ ಭಾಗ ವಹಿಸುವುವು.

● ಬೊಂಬಾಯಿನಲ್ಲಿ ಹಿಂದೆ ನಡೆದ ಬಟ್ಟೆ ಗಿರಣಿಗಳ ಮುಷ್ಕರವು ನ್ಯಾಯಬದ್ಧವಲ್ಲವೆಂದು ಬೊಂಬಾಯಿ ಮುಖ್ಯ ನ್ಯಾಯಾಲಯವು ತೀರ್ಪಿತ್ತಿದೆ.

ಪಾಕಿಸ್ಥಾನ ಕಾಶ್ಮೀರ ಬಿಟ್ಟು ಹೊರಡಬೇಕು

ಕಾಶ್ಮೀರವನ್ನು ಪಾಕಿಸ್ಥಾನ ಬಿಟ್ಟು ಹೊರಡಬೇಕು. ಪಾಕಿಸ್ಥಾನ ಅಂತರ ರಾಷ್ಟ್ರೀಯ ನೀತಿಯನ್ನುಲ್ಲಂಘಿಸಿದೆ. ಪಾಕಿಸ್ಥಾನವು ಕಾಶ್ಮೀರದಲ್ಲಿ ಸೈನ್ಯವನ್ನಿಟ್ಟಿರುವುದು ನ್ಯಾಯವಲ್ಲ. ಕೂಡಲೇ ತನ್ನ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕಾಶ್ಮೀರ ಪ್ರಧಾನಿ ಶೇಕ್ ಅಬ್ದುಲ್ಲಾರವರು ಬೊಂಬಾಯಿನಲ್ಲಿ ಮಾತನಾಡುತ್ತಾ ಹೇಳಿರುವರು.

ನೇಪಾಳದಲ್ಲಿ ಸುಧಾರಣೆಗಳು

ನೇಪಾಳದಲ್ಲಿ ಸುಧಾರಣೆಗಳನ್ನು ಮಾಡುವ ವಿಷಯದಲ್ಲಿ ನೇಪಾಳ ಸರ್ಕಾರವು ಒಂದು ಪ್ರಕಟನೆಯನ್ನು ಹೊರಡಿಸಿದೆ.

ನೇಪಾಳದ ರಾಜರಾದ ತ್ರಿಭುವನ ವೀರ ವಿಕ್ರಮ ಷಾರವರು ರಾಜ್ಯಕ್ಕೆ ಹಿಂತಿರುಗಿ ಸಿಂಹಾಸನಾರೂಢರಾಗಬೇಕು. ಅವರು ಹಿಂತಿರುಗುವುದು ನಿಧಾನವಾದಲ್ಲಿ ರಾಜ್ಯ ಪರಿಪಾಲಕರನ್ನು ಅವರೇ ನೇಮಿಸಬಹುದು, ೧೪ ಮಂತ್ರಿಗಳನ್ನೊಳಗೊಂಡ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿ, ಅದರಲ್ಲಿ ೭ ಸ್ಥಾನಗಳನ್ನು ಪ್ರಜಾಪ್ರತಿನಿಧಿಗಳಿಗೆ ಕೊಡುವುದು ಮತ್ತು ಮಂತ್ರಿ ಮಂಡಲವು ಸಂಯುಕ್ತ ಜವಾಬ್ದಾರಿಯಿಂದ ಕೂಡಿರತಕ್ಕದ್ದು, ಸಂಗ್ರಾಮದಲ್ಲಿ ಭಾಗವಹಿಸಿ, ಸೆರೆಯಲ್ಲಿರುವವರನ್ನೆಲ್ಲಾ ಬಿಟ್ಟುಬಿಡುವುದು ಮತ್ತು ಅದರಲ್ಲಿ ಪಾತ್ರವಹಿಸಿದವರ ಮೇಲೆ ಕಾರ್ಯಕ್ರಮ ನಿಲ್ಲಿಸುವುದು ನ್ಯಾಯ ವಿರೋಧವಲ್ಲದ ಯಾವ ಪಂಗಡಗಳು ಬೇಕಾದರೂ ರಾಜ್ಯದಲ್ಲಿ ರಚನೆಯಾಗಬಹುದು. ವಯಸ್ಕರ ಪದ್ಧತಿ ಪ್ರಕಾರ ಚುನಾವಣೆ ನಡೆದು ೧೯೫೨ರ ವೇಳೆಗೆ ರಾಜ್ಯಾಂಗ ಶಾಸನ ಸಭೆಯನ್ನು ಸ್ಥಾಪಿಸಿ ರಾಜ್ಯದ ಮುಂದಿನ ರಾಜ್ಯಾಂಗವನ್ನು ಆ ಸಭೆಯು ನಿಶ್ಚಯಿಸುವುದು. ಈ ರೀತಿ ನೂತನ ಸುಧಾರಣೆಗಳನ್ನು ನೇಪಾಳ ಸರ್ಕಾರವು ಪ್ರಕಟಿಸಿದೆ ಇವುಗಳೆಲ್ಲವೂ ಭಾರತ ಸರ್ಕಾರವು ಮಾಡಿರುವ ಸಲಹೆಗಳಾಗಿವೆ

ನ್ಯೂ ಆಪೇರಾ ಟಾಕೀಸ್
ಮೈಸೂರು
೫-೧-೫೧ ಪ್ರತಿದಿನ ೩ ಆಟಗಳು
ಎರಡನೇ ವಾರ
ಕೃಷ್ಣ ವಿಜಯಂ
(ತಮಿಳು)
ಆರ್. ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ-ಪ್ರೇಮಾವತಿ
ಅಂಗ ಮುತ್ತು : ನರಸಿಂಹಭಾರತಿ
ವಸಂತಕೋಕಿಲಂ : ಭಾಗ್ಯಮ್

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ಜನವರಿ ೧೦ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಪುಟ್ಟರಾಜು (ನಾಗಸ್ವರ) ೭-೩೫ ಚಿತ್ರ ಸಂಗೀತ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್‌ರುಬ ೧-೪೫ ಹಿಂದಿ ಶಿಕ್ಷಣ ೨-೦ ವನಿತಾವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಪುಟ್ಟರಾಜು (ನಾಗಪುರ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಹಿಂದಿಯಲ್ಲಿ ಕಥೆ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ ೮-೦ ಎಂ. ಎಸ್. ಚಂದ್ರಶೇಖರಯ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು ೧೦-೦ ಮುಕ್ತಾಯ.

ಬರ್ಮ ಅಕ್ಕಿ ಭಾರತಕ್ಕೆ

ಬರ್ಮಾದಿಂದ ಭಾರತಕ್ಕೆ ಅಕ್ಕಿಯನ್ನು ತರಿಸಿಕೊಳ್ಳುವ ವಿಷಯದಲ್ಲಿ ದೀರ್ಘವಾದ ಯೋಜನೆಯು ಭಾರತ ನಡೆಸುತ್ತಲಿದೆಯೆಂದು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಹೇಳಿರುವರು.

ರಣಜಿತ್
29-12-50 ರಿಂದ 4 ನೇ ವಾರ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ ೩ ಪೈ | ದಿನ ಪತ್ರಿಕೆ | Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೧—೧೯೫೧ ನೇ ಗುರುವಾರ [ಸಂಚಿಕೆ ೧೧೦

ಕೇಂದ್ರದಿಂದ ಮೈಸೂರಿಗೆ ೩ ಕೋಟಿ ರೂ. ಗಳ ಸಾಲ

ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಲಾಗುವುದು

ಬೆಂಗಳೂರು ಜ. ೧೦

ಮೈಸೂರಿನ ಪ್ರಮುಖ ಅಭಿವೃದ್ಧಿ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದವರು ೩ ಕೋಟಿ ರೂ. ಸಾಲ ಕೊಡಲಿದ್ದಾರೆ. ೧೯೫೦-೫೧ ರಲ್ಲಿ ಸಾಲದಲ್ಲಿ ಅರ್ಧ ಭಾಗವನ್ನೂ ೧೯೫೧-೫೨ ರಲ್ಲಿ ಉಳಿದಭಾಗವನ್ನೂ ಕೊಡಲಾಗುವುದು.

ಈ ಸಾಲ ದೊರೆಯದೆ ಹೋಗಿದ್ದರೆ ಮೈಸೂರು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಹಣಕ್ಕಾಗಿ ಸಾರ್ವಜನಿಕರಿಂದ ಸಾಲವೆತ್ತಬೇಕಾಗಿತ್ತು. ಇಲ್ಲವೆ ಸೆಕ್ಯೂರಿಟಿಗಳನ್ನು ಮಾರಬೇಕಾಗಿತ್ತು.

ಪಕ್ಷದ ವಿಶ್ವಾಸವಿದೆ

ಬೆಂಗಳೂರು ಜ ೧೦

ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನು ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಮರು ಮತ ವಿಶ್ವಾಸವಿದೆಯೆಂದು ಇಂದು ಸಂಜೆ ಕುಮಾರ ಪಾರ್ಕಿನಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಯಿತು.

ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ಇಂದು ಮಧ್ಯಾಹ್ನ ೩-೧೦ ಗಂಟೆ ವೇಳೆಗೆ ಕುಮಾರ ಪಾರ್ಕಿನಲ್ಲಿ ಪ್ರಾರಂಭವಾಯಿತು. ಪಕ್ಷದ ನಾಯಕರಾದ ಶ್ರೀ ಕೆ. ಸಿ. ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಶಾಸನಸಭೆಯ ಸ್ಪೀಕರ್ ಶ್ರೀ ವಿ. ವೆಂಕಟಪ್ಪನವರ, ಎಲ್ಲಾ ಮಂತ್ರಿಗಳೂ ಸಭೆಗೆ ಬಂದಿದ್ದರು. ಹೊರಗಿನವರಿಗಾರಿಗೂ ಪ್ರವೇಶವಿರಲಿಲ್ಲ. ಕಾರ್ಯಕಲಾಪಗಳೆಲ್ಲವೂ ಗುಪ್ತವಾಗಿ ನಡೆಯಲೋಸುಗ ಬಾಗಿಲುಗಳನ್ನೆಲ್ಲಾ ಮುಚ್ಚಲಾಗಿತ್ತು. ಕುಮಾರಪಾರ್ಕಿನ ಹೊರಗಡೆ ಸಾವಿರಾರು ಜನರು ಗುಂಪುಕಟ್ಟಿಕೊಂಡು ವಿಧವಿಧ ಮಾತನಾಡುತ್ತಾ ಫಲಿತಾಂಶಕ್ಕೆ ಕಾದಿದ್ದರು.

ಸಭೆಯು ಪ್ರಾರಂಭವಾದೊಡನೆಯೇ ಶ್ರೀ ಕೆ ಸಿ. ರೆಡ್ಡಿಯವರು ಪೀಠಿಕಾರೂಪವಾಗಿ ಭಾಷಣಮಾಡಿ, ಇಂದು ಸಭೆಯಲ್ಲಿ ಕಂಡಿರುವ ವಿಷಯದಲ್ಲಿ ಹಿಂದೆ ಹೇಳಬೇಕಾದುದನ್ನೆಲ್ಲಾ ಹಿಂದೆಯೇ ತಿಳಿಸಲಾಗಿದೆ. ಪಕ್ಷದ ಸದಸ್ಯರಿಗೆ ತನ್ನಲ್ಲಿ ವಿಶ್ವಾಸವಿದೆಯೇ ಎಂಬುದನ್ನು ಅರಿತುಕೊಳ್ಳಲು ಇಂದು ಓಟ್ ಮೂಲಕ ನಿರ್ಧರಿಸುವ ಕೆಲಸ ನಡೆಯಬೇಕಾಗಿದೆಯೆಂದು ಹೇಳಿದರು.

ಓಟಿಂಗ್ ರಹಸ್ಯ ಬ್ಯಾಲೆಟ್ ಮೂಲಕ ಪ್ರಾರಂಭವಾಯಿತು. ಒಂದು ಚೀಟಿಯ ಮೇಲೆ "ಶ್ರೀ ಕೆ ಸಿ. ರೆಡ್ಡಿಯವರು" ಎಂದು ಬರೆದಿತ್ತು. ವಿಶ್ವಾಸವಿದ್ದವರು ಹೆಸರಿನ ಮುಂದೆ X ಮಾರ್ಕ್ ಹಾಕಬೇಕಾಗಿತ್ತು. ವಿಶ್ವಾಸವಿಲ್ಲದಿದ್ದವರು ಹೆಸರನ್ನು ಹೊಡೆದು ಹಾಕಬೇಕಾಗಿತ್ತು. ಓಟಿಂಗ್ ಪೂರ್ಣವಾಗಿ ೪-೧೫ ರ ವೇಳೆಗೆ ಫಲಿತಾಂಶವು ಹೊರಬಿತ್ತು. ಅದರಲ್ಲಿ ವಿಶ್ವಾಸವಿದೆಯೆಂದು ೩೪, ವಿಶ್ವಾಸವಿಲ್ಲವೆಂದು ೩೦ ಮಂದಿ ಓಟು ಮಾಡಿದ್ದರು. ಒಬ್ಬ ಸದಸ್ಯರು ತಾಟಸ್ಥ್ಯ ವಹಿಸಿದ್ದರು.

ಫಲಿತಾಂಶವು ಹೊರಬಿದ್ದೊಡನೆಯೇ ಎಲ್ಲರೂ ಶ್ರೀ ರೆಡ್ಡಿಯವರನ್ನು ಅಭಿನಂದಿಸಿ, ವಿರೋಧವಾಗಿ ಓಟು ಮಾಡಿದವರೂ ಶ್ರೀ ರೆಡ್ಡಿಯವರ ಕೆಲಸಕಾರ್ಯಗಳಿಗೆ ತಮ್ಮ ಬೆಂಬಲವನ್ನು ನೀಡುವುದಾಗಿ ತಿಳಿಸಿದರೆಂದು ಹೇಳಲಾಗಿದೆ.

ಸರ್ಕಾರಿ ನೇಮಕ

ಪಾಟ್ನಾ ವಿಶ್ವವಿದ್ಯಾನಿಲಯದ ಅಸಿಸ್ಟೆಂಟು ಪ್ರೊಫೆಸರಾದ ಜನಾಬ್ ಸಯದ್ ಅಕ್ಬರ್ ಅಹಮ್ಮದ್‌ರವರು ೪೦೦-೨೫-೭೦೦ ಗ್ರೇಡಿನಲ್ಲಿ ೪೦೦ ರೂ ಗಳ ವೇತನದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉರ್ದು ಪ್ರೊಫೆಸರಾಗಿ ನೇಮಕವಾಗಿದ್ದಾರೆ.

ಇಂಜನಿಯರುಗಳ ವರ್ಗ

ಮಂಡ್ಯದಲ್ಲಿ ಎಗ್ಸಿಕ್ಯುಟಿವ್ ಇಂಜನಿಯರಾಗಿದ್ದ ಶ್ರೀ ವಿಜಯಧ್ವಜರಾಯರನ್ನು ಕೃಷ್ಣರಾಜಸಾಗರ ಎಗ್ಸಿಕ್ಯುಟಿವ್ ಇಂಜನಿಯರಾಗಿ ಶ್ರೀ ಸಿ. ಕೆ. ರಂಗರಾಜ ಯ್ಯಂಗಾರ್‌ರವರನ್ನು ಶಿವಮೊಗ್ಗ ಡಿವಿಷನ್ನಿಗೆ ವರ್ಗಾಯಿಸಲಾಗಿದೆ.

ಸರ್ಕಾರಿ ಆಜ್ಞೆ

೧೯೫೧ನೇ ಜನವರಿ ೧ನೇ ತಾ॥ ಗೆ ಮುಗಿದ ಏ ಜಿ ಪಿ. ಶ್ರೀ ರಣಜೋಧ್‌ಸಿಂಗರವರ ರಜವನ್ನು ಇನ್ನೂ ಒಂದು ತಿಂಗಳು ಮುಂದುವರಿಸಲಾಗಿದೆ.

ಭದ್ರಾವತಿ ಸಿಲ್ವರ್ ಜ್ಯುಬಿಲಿ ಟೆಕ್ನಿಕಲ್ ಸ್ಕೂಲಿನ ಸೂಪರಿಂಟೆಂಡೆಂಟರಾದ ಶ್ರೀ ಡಿ. ಬಿ. ನರಸಿಂಹಯ್ಯನವರು ಇಂಜನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜನಿಯರಿಂಗ್ ಪ್ರೊಫೆಸರಾಗಿ ನೇಮಕವಾಗಿದ್ದಾರೆ.

ಗೋಧಿ ಬೆಲೆ ಹೆಚ್ಚುವುದು

ವಿದೇಶಗಳಿಂದ ಆಮದಾಗುವ ಗೋಧಿಯನ್ನು ಒಕ್ಕಲಿಗಾರರಿಗೆ ಕೊಡುವ ಬೆಲೆಯನ್ನು ಜನವರಿ ಒಂದನೇ ತಾರೀಖಿನಿಂದ ಸೇ ೧೫ ರಷ್ಟು ಹೆಚ್ಚಿಸಲಾಗಿದೆ.

ಹೊರಗಡೆಯಿಂದ ತರಿಸುವ ಗೋಧಿಯ ಬೆಲೆ ಹೆಚ್ಚಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಭಾರತ ಸರ್ಕಾರವು ಪ್ರಾಂತೀಯ ಸರ್ಕಾರಗಳಿಗೆ ಆಹಾರ ಧಾನ್ಯಗಳಿಗೆ ಕೊಡುತ್ತಲಿದ್ದ ಸಹಾಯದ್ರವ್ಯವನ್ನು ನಿಲ್ಲಿಸುವುದು.

ಭಾರತದ ೨೦ ನಗರಗಳಲ್ಲಿ ಸರಬರಾಜಾಗುವ ಆಹಾರ ಪದಾರ್ಥಗಳಿಗೆ ಮಾತ್ರ ಇನ್ನು ಮುಂದೆ ಸಬ್ಸಿಡಿ ದೊರೆಯುವುದು. ನಮ್ಮ ಸಂಸ್ಥಾನದಲ್ಲಿ ಮೈಸೂರು, ಬೆಂಗಳೂರು ನಗರಗಳಿಗೆ ಮಾತ್ರ ಸಬ್‌ಸಿಡಿ ಕೊಡಲಾಗುವುದು. ಇತರ ಊರುಗಳಲ್ಲಿ ಆಹಾರಧಾನ್ಯದ ಬೆಲೆ ಏರಿಸಬೇಕು ಇಲ್ಲವೆ ಮೈಸೂರು ಸರ್ಕಾರವು ಹೆಚ್ಚಿಗೆ ಖರ್ಚಿನ ಹೊರೆಯನ್ನು ವಹಿಸಿಕೊಳ್ಳಬೇಕಾಗುವುದು.

ಶ್ರೀ ಕೆ.ಟಿ. ಭಾಷ್ಯಂ

ನ್ಯಾಯಾಂಗ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರು ನಾಳೆ ಮೈಸೂರಿಗೆ ಆಗಮಿಸಿ ಮೈಸೂರು ವಯಸ್ಕರ ಶಿಕ್ಷಣಸಮಿತಿಯ ಕಛೇರಿಗೆ ಭೇಟಿಕೊಟ್ಟಿರುವರು. ಮಧ್ಯಾಹ್ನ ೩ ಗಂಟೆ ವೇಳೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆಯಲ್ಲಿ ಭಾಗವಹಿಸುವರು. ರಾತ್ರಿ ಆಲ್ ಇಂಡಿಯಾ ರೇಡಿಯೋ ಕೇಂದ್ರದಲ್ಲಿ 'ಮೈಸೂರಿನಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ' ವಿಷಯವನ್ನು ಭಾಷಣ ಮಾಡುವರು.

ಬಂಧಿತ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತರು

ಕಮ್ಯೂನಿಸ್ಟರೆಂದು ಬಂಧಿತರಾದ ೪ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪೋಲೀಸರ ಬಂಧನದಲ್ಲಿಯೇ ಪರೀಕ್ಷೆಯ ಪತ್ರಿಕೆಗಳನ್ನು ಬರೆದರು. ಒಬ್ಬರು ಫೈನಲ್ ಮೆಡಿಕಲ್ ಡಿಗ್ರಿ ಪರೀಕ್ಷೆಗೆ ಕುಳಿತಿದ್ದರು. ಇನ್ನೂ ಮೂವರು ಎಕನಾಮಿಕ್ಸ್ ಡಿಗ್ರಿ ಪರೀಕ್ಷೆಗೆ ಕುಳಿತಿದ್ದರು.

೬,೦೦೦ ರೂ. ನ ಚಿನ್ನದ ಪತ್ತೆ

ಎಸ್. ಎಸ್. ದ್ವಾರಕಾ ಎಂಬ ಹಡಗಿನಲ್ಲಿ ಪ್ರಯಾಣಿಕರಲ್ಲಿ ಸಿರಿವಂತನಾದ ಅರಬ್ ವ್ಯಾಪಾರಿಯ ಬಳಿ ಇದ್ದ ೫೦ ತೊಲ ಚಿನ್ನ (ಇದರ ಬೆಲೆ ೬,೦೦೦ ರೂ)ಯನ್ನು ಸುಂಕದ ಅಧಿಕಾರಿಗಳು ಪತ್ತೆ ಹಚ್ಚಿದರು. ದ್ವಾರಕಾ ಎಂಬ ಹಡಗು ಪರ್ಷಿಯ ಕೊಲ್ಲಿಯಿಂದ ೪೦೦ ಜನ ಪ್ರಯಾಣಿಕರೊಡನೆ ಈದಿನ ಬೊಂಬಾಯಿಗೆ ಬಂದಿತು.

ಪತ್ತೆ ಮಾಡಿದ ಚಿನ್ನ ವ್ಯಾಪಾರಿಯ ಬಟ್ಟೆಯಲ್ಲಿತ್ತು.

ಚೀಣದೊಂದಿಗೆ ಶಾಂತಿ ಒಪ್ಪಂದವಾಗಬೇಕು

ನೈಕಾಂಟ್ ಸ್ವಾಯಿನ್ಸ್ ಗೇಟರ ನೇತೃತ್ವದಲ್ಲಿ "ಚೀಣದೊಡನೆ ಶಾಂತಿ" ಸಮಿತಿಯ ನಿಯೋಗವೊಂದು ಪಂಡಿತ ನೆಹರು ಅವರನ್ನು ಕಂಡು ತನ್ನ ನಿರ್ಣಯವನ್ನು ಅವರ ಮುಂದಿಟ್ಟಿತು. ನೆಹರೂರವರು ೪೦ ನಿಮಿಷಗಳ ಕಾಲ ಈ ನಿಯೋಗದೊಡನೆ ಇದ್ದು ಈ ನಿರ್ಣಯಕ್ಕೆ ತಮ್ಮ ಪೂರ್ಣ ಸಹಾನುಭೂತಿಯುಂಟೆಂದು ತಿಳಿಸಿದರು.

ನಿರ್ಣಯವು ನಿನ್ನೆ ರಾತ್ರಿ ಲಂಡನ್ನಿನಲ್ಲಿ ನಡೆದ ಭಾರಿ ಸಭೆಯಲ್ಲಿ ಸ್ವೀಕೃತವಾಯಿತು.

ಚೀಣದೊಂದಿಗೆ ಶಾಂತಿ-ಒಪ್ಪಂದವಾಗಬೇಕು. ವಿಶ್ವಸಂಸ್ಥೆಯಲ್ಲಿ ಕಮ್ಯುನಿಸ್ಟ್ ಚೀಣಾಕ್ಕೆ ಪ್ರಾತಿನಿಧ್ಯ ದೊರೆಯಬೇಕು. ಕೈರೋ ಮತ್ತು ಪೋಟ್ಸ್ ಡ್ಯಾಮ್ ಸಮ್ಮೇಳನಗಳಲ್ಲಿ ಫಾರ್ಮೋಸಾ ಬಗ್ಗೆ ಮಾಡಿದ ಘೋಷಣೆಗಳನ್ನು ನಡೆಸಿಕೊಡುವುದಾಗಿ ಭರವಸೆ ಕೊಡಬೇಕು. ಇದೇ ನಿರ್ಣಯದ ಮುಖ್ಯಾಂಶ.

ಮೈಸೂರಿಗೆ ಮೈಲೋ

ಅಮೆರಿಕಾದಿಂದ ಮದರಾಸ್ ಬಂದರಿಗೆ ೨,೦೦೦ ಟನ್ ಮೈಲೋಹೊತ್ತು ಜೀಲ್ಯಾಂಡ್ ಹಡಗು ಬಂದಿದೆ. ಈ ಪೈಕಿ ೫೦೦ ಟನ್ ಮದರಾಸಿಗೆ, ೫೦೦ ಟನ್ ಮೈಸೂರಿಗೆ ಉಳಿದುದು ಹೈದರಾಬಾದಿಗೆ ಹಂಚಲಾಗುವುದು.

ಕಾಶ್ಮೀರ ಪ್ರಶ್ನೆ ರಹಸ್ಯ ಚರ್ಚೆ

ಲಂಡನ್ನಿನಲ್ಲಿ ಆಸ್ಟ್ರೇಲಿಯ ಪ್ರಧಾನಿ ಮಿ॥ ರಾಬರ್ಟ್ ಮೆಂಜೀಸ್‌ರವರು ಇಳಿದುಕೊಂಡಿರುವ ವೆಸ್ಟ್‌ಎಂಡಿನ ಸವಾಯ್ ಹೊಟೇಲಿನಲ್ಲಿ ಕಾಮನ್ವೆಲ್ತ್ ಪ್ರಧಾನಿಗಳು ಸೇರಿ ಕಾಶ್ಮೀರ ಪ್ರಶ್ನೆ ವಿಷಯವಾಗಿ ಅತಿ ಗುಪ್ತರೀತಿಯಲ್ಲಿ ಚರ್ಚೆ ನಡೆಸಿದರೆಂದು ವರದಿಯಾಗಿದೆ. ಭಾರತ ಪಾಕಿಸ್ಥಾನ, ಬ್ರಿಟನ್, ಕೆನಡಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಸಿಲೋನ್ ಪ್ರಧಾನಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆಂದು ಹೇಳಲಾಗಿದೆ ಯಾವ ಸಮ್ಮೇಳನದಲ್ಲೂ ಇಲ್ಲದಿದ್ದಷ್ಟು ರಹಸ್ಯವಾಗಿ ಸಭೆಯು ನಡೆಯಿತು ಯಾರ್ಯಾರು ಈ ಸಭೆಯಲ್ಲಿ ಭಾಗವಹಿಸಿದರೆಂಬುದು ಸಹ ಗುಪ್ತವಾಗಿಡಲಾಗಿತ್ತು. ಪ್ರಧಾನ ಮಂತ್ರಿಗಳ ನಿಯೋಗಗಳಲ್ಲಿನ ಮುಖ್ಯಾಧಿಕಾರಿಗಳಿಗೆ ಸಹಾ ಈ ಸಭೆಗೆ ಪ್ರವೇಶವಿರಲಿಲ್ಲ.

ಸವಾಯ್ ಹೊಟೇಲಿಗೆ ಕಾಮನ್ವೆಲ್ತ್ ಮಂತ್ರಿಗಳು ಥೇಮ್ಸ್‌ನದಿ ಕಡೆಯಿರುವ ಹಿಂಬಾಗಿಲಿನ ಮೂಲಕ ಪ್ರವೇಶಿಸಿದರೆಂದು ಹೇಳಲಾಗಿದೆ. ಅವರುಗಳ ಕಾರುಗಳ ಮೇಲೆ ಅವರ ರಾಷ್ಟ್ರಗಳ ಸಂಕೇತ ಧ್ವಜಗಳನ್ನೂ ಸಹ ತೆಗೆದುಹಾಕಲಾಗಿತ್ತು. ಪ್ರಧಾನ ಮಂತ್ರಿಗಳ ಕಾರುಗಳನ್ನು ಸಹ ಗುರುತು ಹಚ್ಚದಂತೆ ಅಲ್ಲಿ ಇದ್ದ ಅನೇಕ ಕಾರುಗಳ ನಡುವೆ ಇವುಗಳನ್ನು ಬಿಡಲಾಗಿತ್ತೆಂದು ಹೇಳಲಾಗಿದೆ.

ಆಕ್ರಮಣರಾಷ್ಟ್ರ

ಕಮ್ಯೂನಿಸ್ಟ್ ಚೀಣಾವನ್ನೂ 'ಆಕ್ರಮಣರಾಷ್ಟ್ರ'ವೆಂದು ಘೋಷಿಸಬೇಕೆಂದು ಅಮೆರಿಕಾ ಸಲಹೆ ಶುದ್ಧ ಹುಚ್ಚು ಮನೋಭಾವನೆ. ಅಮೆರಿಕಾ ಸಲಹೆಯನ್ನು ಅಂಗೀಕರಿಸಿದರೆ ಆಗ ಏಷ್ಯಾದಲ್ಲಿರುವ ಯಾವ ರಾಷ್ಟ್ರವೂ ನಮ್ಮೊಂದಿಗೆ ಸಹಕರಿಸುವುದಿಲ್ಲವೆಂದು ಬ್ರಿಟಿಷ್ ಲೇಬರ್ ಪಕ್ಷಕ್ಕೆ ಸೇರಿದ ಲಾರ್ಡ್‌ಸ್ಟಾನ್‌ಗೇಟ್‌ರವರು ಹೇಳಿದ್ದಾರೆ.

ರಿಪಬ್ಲಿಕ್ ದಿನಾಚರಣೆ

ಬೆಂಗಳೂರು ಜ. ೯

ಜನವರಿ ೨೬ ನೇ ತಾರೀಖು ರಿಪಬ್ಲಿಕ್ ದಿನಾಚರಣೆಯ ಪ್ರಯುಕ್ತ ರಜಾ ದಿನವೆಂದು ಸರ್ಕಾರ ಪ್ರಕಟಿಸಿದೆ ದ್ರವ್ಯ ಹಣದ ಮುಗ್ಗಟ್ಟಿನಿಂದ ದೀಪೋತ್ಸವ ಈ ಸಾರಿ ಇರುವುದಿಲ್ಲವೆಂದೂ, ಆಹಾರಾಭಾವ ಪ್ರಯುಕ್ತ ಪಾರ್ಟಿ ಮೊದಲಾದ ಔತಣದ ಕೂಟಗಳು ಕೂಡದೆಂದೂ, ಮಿಲಿಟರಿ ಪೆರೇಡು ಬಾಯ್ ಸ್ಕೌಟುಗಳು ಗರ್ಲ್‌ಗೈಡುಗಳು ಸೇವಾದಳಗಳು, ಮೊದಲಾದ ಪಡೆಗಳ ಪೆರೇಡುಗಳಿಗೆ ಅಪಚಾರವಿದೆಯೆಂದು ಸೂಚಿಸಿ, ಸಂಸ್ಥಾನಾ ಆದ್ಯಂತ ಅಧಿಕಾರಿಗಳಿಗೆ ತಕ್ಕ ತಿಳುವಳಿಕೆ ಕೊಡಲಾಗಿದೆ.

ನೇಪಾಳ ಕಾಂಗ್ರೆಸ್ ಮಂತ್ರಿಮಂಡಲ

ಸೇರುವ ಸಂಭವವಿಲ್ಲ

ಕಳೆದ ನವೆಂಬರ್ ತಿಂಗಳಲ್ಲಿ ಬೀರ್‌ಗಂಜ್ ನೇಪಾಳಿ ಕಾಂಗ್ರೆಸ್ ಪಡೆಗಳ ವಶದಲ್ಲಿದ್ದಾಗ ಅದರ ತಾತ್ಕಾಲಿಕ ಆಡಳಿತಾಧಿಕಾರಿಗಳಾಗಿದ್ದ ನೇಪಾಳ ಕಾಂಗ್ರೆಸ್ಸಿನ ಪ್ರಮುಖ ನಾಯಕರಾದ ತೇಜಬಹದ್ದೂರ್ ಅವರು "ನೇಪಾಳಿ ಕಾಂಗ್ರೆಸ್ ಹೊಸ ಮಂತ್ರಿಮಂಡಲವು ಸೇರುವುದಿಲ್ಲ. ಅದು ಪೂರ್ಣ ಜಯ ಪಡೆಯುವವರೆಗೆ ತನ್ನ ಕಾರ್ಯಕ್ರಮವನ್ನು ಮುಂದುವರಿಸುವುದು. ಎಂದು ರಾಣಾರವರ ಘೋಷಣೆಯ ಬಗ್ಗೆ ಟೀಕೆ ಮಾಡುತ್ತಾ ತಿಳಿಸಿದರು.

ಶ್ರೀಯುತರು ಮುಂದುವರಿದು "ಹೊಸ ಮಂತ್ರಿಮಂಡಲ ರಚನೆಯ ವಿಚಾರದಲ್ಲಿ ಭಾರತ ಸರ್ಕಾರವಾಗಲಿ, ಅಥವಾ ರಾಣಾ ಸರ್ಕಾರವಾಗಲಿ, ನೇಪಾಳಿ ಕಾಂಗ್ರೆಸ್ಸಿನೊಡನೆ ವಿಚಾರ ವಿನಿಮಯ ನಡೆಸಿಲ್ಲ" ಎಂದು ತಿಳಿಸಿದರು.

ವ್ಯಾಪಾರ ಪ್ರಾರಂಭಿಸಬೇಕು

ಭಾರತ ಪಾಕಿಸ್ಥಾನಗಳಿಗಿರುವ ರಾಜಕೀಯ ಭಿನ್ನತೆಗಳನ್ನು ಗಮನಿಸದೆ ಉಭಯ ರಾಷ್ಟ್ರಗಳೂ ವ್ಯಾಪಾರವನ್ನು ಪ್ರಾರಂಭಿಸಬೇಕೆಂದು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಹೇಳಿರುವರು.

ಚುಂಚನಕಟ್ಟೆ ಜಾತ್ರೆ

ಜನವರಿ ಎರಡನೇ ವಾರದಲ್ಲಿ ಚುಂಚನಕಟ್ಟೆ ಜಾತ್ರೆಯು ನಡೆಯುವುದೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಮೈಸೂರು ಗೆದ್ದಿತು

ಹೈದರಾಬಾದಿನಲ್ಲಿ ನಡೆದ ಅಂತರ ವಿಶ್ವವಿದ್ಯಾಲಯ ಕ್ರಿಕೆಟ್ ಟೋರ್ನಮೆಂಟಿನ ದಕ್ಷಿಣ ಜೋನಿನ ಫೈನಲ್ ಪಂದ್ಯದಲ್ಲಿ ಮದರಾಸಿನ ಮೇಲೆ 'ಮೈಸೂರು ವಿಜಯವನ್ನು ಗಳಿಸಿತು.

ಹೊಸಸುಧಾರಣೆಗಳ ಪರಿಶೀಲನೆ

ನೇಪಾಳ ಮುಖ್ಯಮಂತ್ರಿಗಳು ಘೋಷಿಸಿರುವ ನೂತನ ಸುಧಾರಣೆಗಳನ್ನು ನೇಪಾಳ ಅರಸರಾದ ತ್ರಿಭುವನ ವೀರ ವಿಕ್ರಮಷಾರವರು ದೆಹಲಿಯಲ್ಲಿ ಪರಿಶೀಲಿಸುತ್ತಿರುವರು. ಭಾರತದಲ್ಲಿ ನೇಪಾಳ ರಾಯಭಾರಿ ಮತ್ತು ಇತರ ಅಧಿಕಾರಿಗಳನ್ನು ಕರೆಸಿಕೊಂಡು ಮಾತು ಕಥೆ ನಡೆಸಿದರೆಂದು ತಿಳಿಯಬರುತ್ತದೆ.

ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನ

ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ನಿನ್ನೆ ದೂರಪ್ರಾಚ್ಯ ಮತ್ತು ಜಪಾನಿನ ಶಾಂತಿ ಕರಾರು ವಿಷಯವಾಗಿ ಚರ್ಚೆ ನಡೆಯಿತು. ಶಾಂತಿ ಸಾಗರದ ಎಲ್ಲಾ ರಾಷ್ಟ್ರಗಳೂ, ಚೈನಾ, ರಷ್ಯಾ ಮುಂದಾವುವೆಲ್ಲವೂ ಜಪಾನಿನ ಶಾಂತಿಕರಾರಿನಲ್ಲಿ ಭಾಗವಹಿಸಬೇಕೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬರುತ್ತದೆ. ಚೈನಾ ಪ್ರಜಾಸರ್ಕಾರಕ್ಕೆ ಮನ್ನಣೆಯನ್ನೀಯದ ಆಸ್ಟ್ರೇಲಿಯ ನ್ಯೂಜಿಲೆಂಡ್ ಕೆನಡಾ ಮುಂತಾದ ಕಾಮನ್ವೆಲ್ತ್ ರಾಷ್ಟ್ರಗಳು ಇದಕ್ಕೆ ಸಮ್ಮತಿ ಸೂಚಿಸಿವೆ.

ಮಿ॥ ಬೆವಿನ್ನರು ಕೊರಿಯ ಸಮಸ್ಯೆ ವಿಷಯದಲ್ಲಿ ಮಂಡಿಸಿರುವ ಸಲಹೆಗಳ ಚರ್ಚೆಯು ನಡೆಯಿತು.

ಪಾಕಿಸ್ಥಾನ ವಿಷಯ

ಆಸ್ಟ್ರೇಲಿಯ ಪ್ರಧಾನಿ ಇಳಿದುಕೊಂಡಿರುವ ವೆಸ್ಟೆಂಡ್ ಹೊಟೇಲಿನಲ್ಲಿ ಕಾಶ್ಮೀರ ಪ್ರಶ್ನೆಯ ವಿಷಯವಾಗಿ ಅನಾಧಿಕೃತ ಚರ್ಚೆ ನಡೆಯಿತು ಕನಡಾ, ನ್ಯೂಜಿಲೆಂಡ್ ಬ್ರಿಟನ್ ಪ್ರಧಾನಿಗಳು ಇದರಲ್ಲಿ ಭಾಗವಹಿಸಿದ್ದರು.

ರಣಜಿತ್

ತಾ॥ ೧೨-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ, ದಿವಂಗತ ಮಜಾರ್‌ಖಾನ್

ಬೆಳಗಿನ ಪ್ರದರ್ಶನ ೩ ದಿನ ಮಾತ್ರ

ಮೆಹಬೂಬರವರ

ಅ ನೋ ಖಿ - ಅ ದ

ನಾಸೀಂ ಮತ್ತು ಸುರೇಂದ್ರ

ನ್ಯೂ ಅಪೇರಾ

ಮೈಸೂರು

ತಾ॥ ೧೧-೧-೫೧ ರಿಂದ

★ ಮಂಗಯರ್ ಕರಸಿ ★

ಅ ಭಿ ನ ಯ

ಪಿ. ವಿ ಚಿನ್ನಪ್ಪ: ಪಿ. ಕನ್ನಾಂಬ,

ಅಂಜಲೀದೇವಿ: ಲಲಿತಾ-ಪದ್ಮಿನಿ,

ಎನ್ ಎಸ್. ಕೃಷ್ಣನ್: ಟಿ. ಎ. ಮಧುರಂ

ಪ್ರತಿದಿನ ೩ ಆಟಗಳು

ಒಲಂಪಿಯಾ

೧೧-೧-೫೧ರಿಂದ ಪ್ರತಿದಿನ ೩ ಆಟಗಳು

ಪಾತ್ರವಹಿಸಿರುವ

ನಿಗಾರ್, ಕರಣದಿವಾನ್, ನಿರೂಪರಾಯ್

ರಣಜಿತ್‌ರವರ ಅಪೂರ್ವ ಕಲಾಕೃತಿ

ಮಿಟ್ಟಿ ಕೆ ಖಿಲೋನೆ

ಬೆಳಗಿನ ಪ್ರದರ್ಶನ : ೧೨-೧-೫೧ ರಿಂದ

ಪೋಲೀಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಕೆ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨—೧—೧೯೫೧ ನೇ ಗುರುವಾರ [ಸಂಚಿಕೆ ೧೧೧

ಸದ್ಯಕ್ಕೆ ಗೋಧಿ ಬೆಲೆ ಏರುವುದಿಲ್ಲ

ಮೈಸೂರು ೧

ಆಹಾರಾಧಿಕಾರಿಗಳ ವಿವರಣೆ

ಮೈಸೂರು ನಗರದಲ್ಲಿ ಈಗ್ಗೆ ಕೆಲವು ದಿನಗಳಿಂದ ರೇಷನ್ ಡಿಪೋ ಆಹಾರಪದಾರ್ಥಗಳಿಲ್ಲದೆ ತೊಂದರೆಪಡುತ್ತಲಿರುವ ವಿಷಯವನ್ನು ಆಹಾರ ಗಳ ಗಮನಕ್ಕೆ ತಂದು, ಈ ಅಭಾವಕ್ಕೆ ಕಾರಣವೇನೆಂದು ವಿಚಾರಿಸಲಾಗಿ ವಸೂಲಾಗುವುದು ಒಂದು ತಿಂಗಳು ತಡವಾದ ಅಕ್ಕಿಯನ್ನು ಎಲ್ಲಾ ಡಿಪೋಗಳಿಗೆ ಹಂಚಲು ಯಿತೆಂದೂ ಈಗಾಗಲೇ ೩೦೦-೪೦೦ ಪಲ್ಲಾ ಬಂದು ಎಲ್ಲಾ ಡಿಪೋಗಳಿಗ ಹಂಚಲಾಗಿದೆ ತಿಳಿಸಿರುವರು.

ಒಂದೆರಡು ದಿನಗಳಲ್ಲಿ ಮಾಮೂಲಿನಂತೆ ಎಲ್ಲಾ ಡಿಪೋಗಳಿಗೆ ಸಾಕಷ್ಟು ದಾಸ್ತಾನು ಹಂಚುವುದಾಗಿಯೂ ಆಹಾರದ ಅಭಾವಕ್ಕಾಗಲೀ ಕಳವಳಕ್ಕಾಗಲೀ ಕಾರಣ ವಿಲ್ಲವೆಂದು ತಿಳಿಸಿರುವರು.

ಗೋಧಿಯ ದಾಸ್ತಾನು ಇರುವವರೆಗೆ ಈಗಿರುವ ಬೆಲೆ ಯಲ್ಲಿಯೇ ಗೋಧಿಯನ್ನು ಮಾರಲಾಗುತ್ತದೆಂದು ತಿಳಿ ಯಬರುತ್ತದೆ.

ಚೀಣಾಮೇಲೆ ಕಾರ್ಯಕ್ರಮ

ಚೀಣಾ ರಾಷ್ಟ್ರದ ಮೇಲೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮವನ್ನು ಅಮೆರಿಕಾ ಮುಖ್ಯ ಪ್ರತಿನಿಧಿ ವಿ॥ ವಾರನ್ ಆಸ್ಟಿನ್‌ರವರು ಸೂಚಿಸಿರುವರು.

(೧) ಚೀಣದ ಕಮ್ಯೂನಿಸ್ಟ್ ಸರ್ಕಾರವು ಪ್ರಪಂಚ ಸಂಸ್ಥೆ ಅಧಿಕಾರಕ್ಕೆ ವಿರೋಧವಾಗಿ ನಡೆದಿದೆ ಮತ್ತು ಕೊರಿಯಾದಲ್ಲಿ ಆಕ್ರಮಣ ನಡೆಸಿದೆ

(೨) ಪ್ರಪಂಚ ಸಂಸ್ಥೆ ಕೊರಿಯಾದಲ್ಲಿ ನಡೆಸಬೇಕಾದ ಕರ್ತವ್ಯಗಳ ಉದ್ದಿಶ್ಯಗಳನ್ನು ಸಮರ್ಥನೆ ಮಾಡುವುದು.

(೩) ಕೊರಿಯಾ ವಿಚಾರದಲ್ಲಿ ಪ್ರಪಂಚ ಸಂಸ್ಥೆ ನಿರ್ಧರಿಸುವ ಕಾರ್ಯಕ್ರಮಕ್ಕೆ ಪ್ರಪಂಚಸಂಸ್ಥೆಯ ಸದಸ್ಯ ರಾಷ್ಟ್ರಗಳು ತಮ್ಮ ಬೆಂಬಲಕೊಟ್ಟು ಅದರಂತೆ ನಡೆದುಕೊಳ್ಳುವುದು.

(೪) ಕೊರಿಯಾದಲ್ಲಿ ಆಕ್ರಮಣ ನಿಲ್ಲಿಸಲಿ. ಸಾಮೂಹಿಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು.

ಇಂಜನಿಯರುಗಳಿಗೆ ಸರ್ಕಾರವನ್ನು ವಹಿಸಬಹುದು

ಇಂಜನಿಯರಿಂಗಿನಲ್ಲಿ ಪ್ರತಿಭೆ ಸಂಪಾದನೆಬೇಕಾದರೆ ಬುದ್ಧಿವಂತಿಕೆ ಮತ್ತು ನೈತಿಕಪ್ರಾಮಾಣಿಕತೆಬೇಕು. ಧೈರ್ಯ, ವಿಚಾರಸ್ವಾತಂತ್ರ್ಯ, ಔಚಿತ್ಯಗುಣ, ಒಳ್ಳೆಯ ಬುದ್ಧಿ, ಸರಿಯಾದ ತೀರ್ಮಾನ, ಶಕ್ತಿ, ತಾಳ್ಮೆ, ಉತ್ಸಾಹಶಾಲಿತ್ವ, ಕ್ರಮಬದ್ಧತೆ, ಸಹಜತೆ, ಪ್ರಯೋಗಬುದ್ಧಿ ಇವುಗಳೆಲ್ಲಾ ಇರಬೇಕು. ಲೆಕ್ಕಾಚಾರಹಾಕುವ, ಸಮತೋಲವಾಡುವ ಪರಿಣಾಮ ಮತ್ತು ಕಾರಣಗಳನ್ನು ಗೊತ್ತುಹಚ್ಚುವ ಹಣ ಕಂಡುಹಿಡಿದ ತತ್ವಗಳನ್ನು ಕಾರ್ಯಸಾಧನೆಯಲ್ಲಿ ಪ್ರಯೋಗಿಸುವ ಶಕ್ತಿಯಿರಬೇಕು ಜನರೊಡನೆ ನಡೆದುಕೊಳ್ಳುವಾಗ ಅದರೊಡನೆ ಸಹಕರಿಸುವ, ಅವರನ್ನು ವ್ಯವಸ್ಥೆಗೊಳಿಸುವ, ಸ್ಥಿತಿಗತಿಗಳನ್ನು ಅಧ್ಯಯನಮಾಡಿ ವಿಶ್ಲೇಷಿಸುವ ಸಮಸ್ಯೆಗಳನ್ನು ಏರ್ಪಡಿಸುವ ಮತ್ತು ಇತರರ ಶ್ರಮಶಕ್ತಿಗಳನ್ನು ಸೆಳೆದು ಸರಿಯಾದದಾರಿಯಲ್ಲಿ ವಿನಿಯೋಗಿಸುವ ಚಾತುರ್ಯ ಇರಬೇಕು. ಯಾವರೀತಿ ಸತ್ಯ ಧರ್ಮಮಾರ್ಗದಲ್ಲಿ ಜನರಿಗೆ ವಿಷಯಗಳನ್ನು ತಿಳಿಸಬೇಕು. ಯಾವರೀತಿ ಅವರಿಗೆ ನಂಬಿಕೆ ಹುಟ್ಟಿಸಬೇಕು, ಅವರ ವಿಶ್ವಾಸಪಡೆಯಬೇಕು ಎಂಬುದು ತಿಳಿದಿರಬೇಕು. ಅವರು ಜಾಗರೂಕರಾಗಿರಬೇಕು. ಜ್ಞಾನಾರ್ಜನೆಗೆ ಕಾತುರರಾಗಿರಬೇಕು, ಮುಚ್ಚುಮರೆಯಿಲ್ಲದವರಾಗಿರಬೇಕು. ಪ್ರತಿಯೊಂದು ವಿಶೇಷ ಜ್ಞಾನವನ್ನು ಹೊಂದಿರಬೇಕಲ್ಲದೆ ಸದಾಕಾಲವೂ ವಿದ್ಯಾರ್ಥಿಯಾಗಿದ್ದ ಜ್ಞಾನಪ್ರಗತಿಯ ಕಾಲಧರ್ಮವನ್ನು ತಿಳಿದು ಅದಕ್ಕೆ ಸರಿಯಾಗಿ ವರ್ತಿಸುವವರಾಗಿರಬೇಕು.

ಭಾರತದಲ್ಲೆಲ್ಲಾ ಎಲ್ಲಾ ಇಂಜನಿಯರುಗಳೂ ಇಂತಹವರೇ ಆಗುವುದಾದರೆ ರಾಷ್ಟ್ರದ ಎಲ್ಲಾ ಸಾರ್ವಜನಿಕ ಕಾಮಗಾರಿಗಳನ್ನು ಅವರ ಕೈಗೆ ಕೊಡುವುದಷ್ಟೇ ಅಲ್ಲ. ಇಡೀ ಸರ್ಕಾರವನ್ನೇ ಅವರಿಗೆ ಒಪ್ಪಿಸಬಹುದು ಎಂದು ಗೃಹ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಅಂತರರಾಷ್ಟ್ರೀಯ ಇಂಜನಿಯರ ಸಮ್ಮೇಳನದಲ್ಲಿ ಭಾಷಣ ಮಾಡುತ್ತ ಹೇಳಿದರು.

ಅಧ್ಯಕ್ಷ ಉಪಾಧ್ಯಕ್ಷರುಗಳಿಗೆ ಸತ್ಕಾರಕೂಟ

ಮೈಸೂರು ೧೧

ಪೌರಸಭೆಯ ನಿವೃತ್ತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಮತ್ತು ಹಾಲೀ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನು ಇಟ್ಟಿಗೆಗೂಡಿನ ನಿವಾಸಿಗಳು ಬರಮಾಡಿಕೊಂಡು ಟೌನ್‌ಹಾಲಿನಲ್ಲಿ ನಿನ್ನೆ ಸತ್ಕರಿಸಿದರು.

ಇಟ್ಟಿಗೆಗೂಡಿನ ನಿವಾಸಿಗಳ ಪರವಾಗಿ ಶ್ರೀ ಕೃಷ್ಣರವರು ಮಾತಾಡಿ ಮುಖ್ಯ ಅತಿಥಿಗಳು ಮೈಸೂರಿನ ನಗರಕ್ಕೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ ಎಲ್ಲರನ್ನೂ ಸ್ವಾಗತಿಸಿದರು. ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯವರು ಪೌರರಿಗೆ ಇನ್ನೂ ಹೆಚ್ಚಿನ ಸೇವೆಸಲ್ಲಿಸುವಂತೆ ಆಶಿಸಿದರು.

ನಿವೃತ್ತ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರು ಮಾತಾಡಿ ಇಟ್ಟಿಗೇ ಗೂಡಿನ ನಿವಾಸಿಗಳಿಗೆ ಹೆಚ್ಚಿನ ಉಪಕಾರವೂಮಾಡಲು ತಮಗೆ ಸಾಧ್ಯವಾಗಲಿಲ್ಲವೆಂದೂ ಇಟ್ಟಿಗೆಗೂಡಿನವರಿಗೆ ಸೈಟ್‌ಗಳನ್ನು ಕೊಡಿಸುವುದಾಗಿ ಶ್ರೀಗಳಾದ ಕೆ. ಸಿ. ರೆಡ್ಡಿಯವರು, ಹೆಚ್. ಸಿ. ದಾಸಪ್ಪನವರು ಮತ್ತು ಎಸ್. ಚೆನ್ನಯ್ಯನವರು ಭರವಸೆ ನೀಡಿರುವುದರಿಂದ ಇಟ್ಟಿಗೆಗೂಡಿನವರು ಸ್ವಲ್ಪಕಾಲ ದೇವರಮೇಲೆ ಭಾರಹಾಕಿ ಕಾಯುವುದರಿಂದ ಅವರ ಕಷ್ಟಕಾರ್ಪಣ್ಯಗಳು ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿ ತಮ್ಮ ಅಧ್ಯಕ್ಷಗಿರಿಯ ಯಶಸ್ಸಿಗೆ ಕಾರಣರಾದ ಪೌರಸಭೆಯ ಕಮೀಷನರ್ ಮತ್ತು ಅಧಿಕಾರ ವರ್ಗದವರನ್ನು ವಂದಿಸಿದರು.

ಶ್ರೀಗಳಾದ ಎ. ಕೃಷ್ಣಮೂರ್ತಿ, ಟಿ. ನರಸಿಂಹ ಅಯ್ಯಂಗಾರ್ ಮತ್ತು ಎಂ. ಎಸ್. ನಂಜಪ್ಪನವರು ಮಾತಾಡಿ ಶ್ರೀ ಲಿಂಗಣ್ಣನವರ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ಲಿಂಗಣ್ಣನವರು ಪೌರಸಭಾಧ್ಯಕ್ಷರಾಗಿದ್ದಾಗ ಕ್ಯಾತಮಾನಹಳ್ಳಿ ಮತ್ತು ಕುಂಬಾರಕೊಪ್ಪಲಿಗೆ ವಿದ್ಯುತ್ ಒದಗಿಸಲಾಯಿತೆಂದೂ, ಕ್ಯಾತಮಾನಹಳ್ಳಿ ಮತ್ತು ಕೆಸರಿಗೆ ನೀರು ಸರಬರಾಜನ್ನು ಮತ್ತೆ ಒದಗಿಸಲಾಯಿತೆಂದೂ ಮಂಡೀ ಮತ್ತು ಲಷ್ಕರ್‌ಗಳಲ್ಲಿದ್ದ ಕೊಳೆಸಾಗಿಸಿ ನೈರ್ಮಲ್ಯವನ್ನು ಹೆಚ್ಚಿಸಲಾಯಿತೆಂದು ಪೌರಸಭೆಯ ಕಮೀಷನರ್ ಶ್ರೀ ಸಿ ನರಸಿಂಹಮೂರ್ತಿಯವರು ತಿಳಿಸಿ ಸರ್ವರನ್ನೂ ವಂದಿಸಿದರು.

ಜನಗಣ ಗೀತೆಯೊಡನೆ ಸಮಾರಂಭ ಮುಕ್ತಾಯವಾಯಿತು.

ಅಕ್ಕಿರೇಷನ್ ಹೆಚ್ಚುವುದು

೬ ಔನ್ಸಿನಿಂದ ೭ ಔನ್ಸಿಗೆ ಅಕ್ಕಿ ರೇಷನ್ನನ್ನು ಹೆಚ್ಚಿಸುವ ವಿಚಾರದಲ್ಲಿ ಮದರಾಸು ಸರ್ಕಾರವು ಪರಿಶೀಲಿಸುತ್ತಲಿದೆ

ಇಂಜನಿಯರುಗಳ ಕರ್ತವ್ಯ

ಇಂಜನಿಯರುಗಳು ಜನರ ಹಿತಸಾಧನೆಗಾಗಿ ಕೆಲಸ ಮಾಡಬೇಕು. ಉನ್ನತ ಮಟ್ಟದ ಸಾಧನೆಗಾಗಿ ದುಡಿಯಬೇಕು ಎಂದು ಭಾರತ ಗೃಹ ಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಪ್ರಪಂಚ ವಿದ್ಯುಚ್ಛಕ್ತಿ ಸಂಬಂಧ ಸಮ್ಮೇಳನ, ದೊಡ್ಡ ಆಣೆಕಟ್ಟುಗಳಿಗೂ ಅಂತರಾಷ್ಟ್ರೀಯ ನೀರಾವರಿ ಮತ್ತು ಕಾಲುವೆಗಳಿಗೆ ಸಂಬಂಧಪಟ್ಟ ಅಂತರಾಷ್ಟ್ರೀಯ ಕಮೀಷನ್ನಿನ ಸಂಯುಕ್ತ ಅಧಿವೇಶನದಲ್ಲಿ ದೆಹಲಿಯಲ್ಲಿ ಮಾತನಾಡುತ್ತ ಹೇಳಿದರು.

ನಿಜಾಮರಿಗೆ ವರ್ಷಕ್ಕೆ ೫೦ ಲಕ್ಷ ರೂ. ಗಳು

ಹೈದರಾಬಾದ್ ನಿಜಾಮರಿಗೆ ವರ್ಷಕ್ಕೆ ೫೦ ಲಕ್ಷ ರೂ. ರಾಜಧನವನ್ನು ಕೇಂದ್ರ ಸರ್ಕಾರ ಕೊಡುವುದೆಂದು ಕೇಂದ್ರದ ಸಂಸ್ಥಾನ ಶಾಖೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್‌ರವರು ನಿನ್ನೆ ಹೈದರಾಬಾದಿನಲ್ಲಿ ತಿಳಿಸಿದರು. ಕೇಂದ್ರದೊಡನೆ ಹೈದರಾಬಾದ್‌ನ ಆರ್ಥಿಕ ವಿಲೀನ ಕ್ರಮದ ಸಂಬಂಧವಾಗಿ ಶ್ರೀ ವಿ. ಪಿ. ಮೆನನ್‌ರವರು ನಿನ್ನೆ ಹೇಳಿಕೆಯೊಂದನ್ನಿತ್ತರು.

ಪಟೇಲರಸ್ಥಾನ ಅವರ ಪುತ್ರಿಗೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಪಟೇಲರ ನಿಧನದಿಂದ ಖಾಲಿಯಾದ ಸ್ಥಾನಕ್ಕೆ ಅವರ ಪುತ್ರಿ ಶ್ರೀಮತಿ ಮಣಿಬೆನ್ ಪಟೇಲರನ್ನು ನೇಮಕ ಮಾಡಲಾಗುವುದೆಂದು ತಿಳಿಯಬರುತ್ತದೆ.

ಅಡಿಕೆ ಪರಿಶೋಧನಾಕೇಂದ್ರ

ಮೈಸೂರು ಸಂಸ್ಥಾನದಲ್ಲಿ ಒಂದು ಅಡಿಕೆ ಪರಿಶೋಧನಾಕೇಂದ್ರವನ್ನು ಸ್ಥಾಪನೆಮಾಡಬೇಕೆಂದು ಕೇಂದ್ರ ಅಡಿಕೆ ಸಮಿತಿಯು ನಿರ್ಧರಿಸಿದೆ.

ರಜತಮಹೋತ್ಸವ

ಮೈಸೂರು, ಜ. ೬

ಮೈಸೂರು ಪ್ರೈವೇಟ್-ಕಾಲೇಜ್-ಆಫ್ ಕಾಮರ್ಸಿನ ರಜತಮಹೋತ್ಸವವು ಇಂದು ಬೆಳಗ್ಗೆ ೯-೩೦ ಗಂಟೆಗೆ ಸಹಕಾರಭವನದಲ್ಲಿ ಸೈನ್ಸಸ್ ಕಮಿಷನರಾದ ಶ್ರೀಮಾನ್ ಜೆ. ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯ ಸಭೆಯು ನಡೆಯಿತು. ಬೆಳಗ್ಗೆ ಸಂಸ್ಥೆಯ ಪ್ರಿನ್ಸಿಪಾಲರಾದ ಶ್ರೀ ಕೆ ಸೀತಾರಾಮರಾವ್‌ರವರು ಸ್ವಾಗತಭಾಷಣಮಾಡಿದರು ಅಧ್ಯಕ್ಷರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅನಾವರಣಮಾಡಿ, ತರುವಾಯ ಕಾರ್ಯದರ್ಶಿಯವರಾದ ಶ್ರೀ ಕೆ. ಎ. ಹನುಮಂತರಾವ್‌ರವರು ವಂದನಾರ್ಪಣೆಯೊಡನೆ ಬೆಳಗಿನ ಸಭೆಯು ಮುಕ್ತಾಯಗೊಂಡಿತು

ಸಂಜೆ ಪುರಭವನದಲ್ಲಿ ಅಧ್ಯಕ್ಷರು ನಾನಾ ಸ್ಪರ್ಧೆಗಳಲ್ಲಿ ಜಯಿಸಿದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಹಂಚಿದರು. "ವಾಣಿಜ್ಯ ವಿದ್ಯಾಭ್ಯಾಸಕ್ಕೆ ಹೆಚ್ಚು ಉತ್ತೇಜನ ದೊರಕಬೇಕು. ಮಹಿಳೆಯರೂ ಈ ಶಿಕ್ಷಣವನ್ನು ಪಡೆಯುತ್ತಿರುವುದು ಶ್ಲಾಘನೀಯ" ವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ನುಡಿದರು.

ದೇವತಾಪ್ರಾರ್ಥನೆ, ನಾಟಕ, ನೃತ್ಯ ಮುಂತಾದ ಮನೋರಂಜನೆಗಳು ನಡೆದುವು

ಮಾರನೆಯ ದಿನವೂ ಕೂಡ ಸಭೆಯು ಸಂಜೆ ೫-೩೦ ಗಂಟೆಗೆ ಪುರಭವನದಲ್ಲಿ ಸೇರಿತ್ತು. ನಾಟಕ, ಮಕ್ಕಳ ಕಾರ್ಯಕ್ರಮ, ಸಂಗೀತ ಇವುಗಳಾದನಂತರ ಕಾರ್ಯದರ್ಶಿಯವರು ಎಲ್ಲರಿಗೂ ವಂದನಾರ್ಪಣೆಯನ್ನು ಸಲ್ಲಿಸಿದರು. ವಂದೇಮಾತರಂನೊಡನೆ ಸಭೆಯು ಮುಕ್ತಾಯಗೊಂಡಿತು.

ವಂದನೆಗಳು

ಡಾ|| ಸೂರ್ಯನಾರಾಯಣರಾಯರು ಹೇಳಿಕೆಯೊಂದನ್ನಿತ್ತು ತಾವು ಉಪವಾಸ ಕೈಕೊಂಡಾಗ ತಮಗೆ ಬೆಂಬಲ ನೀಡಿ ತಮ್ಮ ಉದ್ಯಮವನ್ನು ಜಯಪ್ರದವನ್ನಾಗಿ ಮಾಡಲು ಸಹಕರಿಸಿದ ಪತ್ರಿಕೆಗಳು, ಸಾರ್ವಜನಿಕ ಮಹನೀಯರು ಮತ್ತು ಸಹಕಾರ ಇಲಾಖೆಯವರನ್ನು ಹೃತ್ಪೂರ್ವಕವಾಗಿ ವಂದಿಸುವುದಾಗಿ ತಿಳಿಸಿರುವರು.

ನ್ಯೂ ಅಪೇರಾ

ಮೈಸೂರು

ತಾ|| ೧೧-೧-೫೧ ರಿಂದ

★ ಮಂಗಯರ್ ಕರೆಸಿ ★

ಅಭಿನಯ

ಪಿ. ವಿ. ಚಿನ್ನಪ್ಪ: ಪಿ. ಕನ್ನಾಂಬ,

ಅಂಜಲೀದೇವಿ: ಲಲಿತಾ-ಪದ್ಮಿನಿ,

ಎನ್. ಎಸ್. ಕೃಷ್ಣನ್: ಟಿ. ಎ. ಮಧುರಂ

ಪ್ರತಿದಿನ ೩ ಆಟಗಳು

ಸಲಹಾಸಮಿತಿಗಳ ನೇಮಕ

ಬೆಂಗಳೂರು ಜ. ೧೦

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಶಾಸನಸಭಾ ಕಾಂಗ್ರೆಸ್‌ಪಕ್ಷದ ಸಭೆಯಲ್ಲಿ ಮಾತನಾಡುತ್ತಾ, ಕೈಗಾರಿಕೆ, ಹಣಕಾಸು, ಶಿಕ್ಷಣ, ಆರೋಗ್ಯ ವಿಷಯಗಳ ಬಗ್ಗೆ ಆಯಾ ಇಲಾಖೆಗೆ ಸಲಹೆಯನೀಡಲು ಹತ್ತು ಸಲಹಾಸಮಿತಿಗಳನ್ನು ಸದ್ಯದಲ್ಲೇ ರಚಿಸಲಾಗುವುದೆಂದು ಹೇಳಿದುದಾಗಿ ತಿಳಿಯಬಂದಿದೆ.

ಹಾಂಕಾಂಗ್ ಬಿಟ್ಟು ಹೊರಡಿ

ಇಂದಿನ ಪರಿಸ್ಥಿತಿಯು ಹದಗೆಡುತ್ತಲಿರುವುದರಿಂದ ಅಮೆರಿಕನ್ನರೆಲ್ಲರೂ ಕೂಡಲೇ ಹಾಂಕಾಂಗ್ ಬಿಟ್ಟು ಹೋಗುವುದು ಉತ್ತಮ ಎಂದು ಹಾಂಕಾಂಗ್‌ನಲ್ಲಿರುವ ಅಮೆರಿಕಾದ ಕೌನ್ಸಿಲ್ ಜನರಲ್‌ರವರು ಅಮೆರಿಕನ್ನರಿಗೆ ಎಚ್ಚರಿಸಿದಾರೆ.

ಭಾರತದ ಮೇಲೆ ಅಮೆರಿಕಾ ಸ್ಪರ್ಧೆ

ಕ್ಯೂಬಾದಿಂದ ಭಾರತವು ಸಕ್ಕರೆಯನ್ನು ಕೊಳ್ಳಲು ವ್ಯವಸ್ಥೆಮಾಡಿದ್ದಿತು. ಅಮೆರಿಕಾವು ಆ ಸಕ್ಕರೆಗೆ ಭಾರತವು ಕೊಡಬೇಕೆಂದಿದ್ದ ಬೆಲೆಯ ದ್ವಿಗುಣದಷ್ಟು ಕೊಟ್ಟು ಎಲ್ಲವನ್ನೂ ಕೊಂಡುಕೊಂಡು ಹೋಯಿತೆಂದು ಭಾರತ ಕೈಗಾರಿಕಾಸಚಿವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ತಿಳಿಸಿರುವರು.

ಲೈಸನ್ಸ್ ಬದಲಾಯಿಸಲಾಗದು

ವರ್ತಕರು ತಮಗಿರುವ ಆಮದು ಲೈಸನ್ಸ್‌ನ್ನು ಮತ್ತೊಬ್ಬರಿಗೆ ಬದಲಾಯಿಸಲಾಗದು ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗುತ್ತಾರೆಂದು ಕೈಗಾರಿಕಾ ಮಂತ್ರಿ ಶ್ರೀ ಮೆಹತಾಬ್‌ರವರು ತಿರುಚನಾಪಳ್ಳಿಯಲ್ಲಿ ಮಾತನಾಡುತ್ತ ಹೇಳಿರುವರು.

ರಣಜಿತ್

ತಾ|| ೧೭-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ,

ದಿವಂಗತೆ ಮಜಾರ್‌ಖಾ

ಬೆಳಗಿನ ಪ್ರದರ್ಶನ ೩ ದಿನ ಮಾತ್ರ

ಮೆಹಬೂಬರವರ

ಅ ನೋ ಖಿ - ಅ ದ

ನಾಸೀಂ ಮತ್ತು ಸುರೇಂದ್ರ

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಪ್ರಶ್ನೆ ವಿಷಯದಲ್ಲಿ ಎರಡನೆ ಬಾರಿ ಚರ್ಚೆಯು ನಿನ್ನೆಯ ದಿನ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ನಡೆಯಿತೆಂದು ತಿಳಿಯಬರುತ್ತದೆ.

ಕಾಮನ್ವೆಲ್ತ್ ಸಮ್ಮೇಳನ

ಲಂಡನ್ನಿನಲ್ಲಿ ಒಂದು ವಾರದಿಂದ ಸಮಾವೇಶಗೊಂಡಿದ್ದ ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನವು ಇಂದು ಮುಕ್ತಾಯವಾಗುವುದು.

ಶ್ರೀ ಬಿ. ಎನ್. ರಾವ್

ವಿಶ್ವಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯಾಗಿ ಕೊರಿಯ ಯುದ್ಧ ಮುಕ್ತಾಯ ವಿಷಯದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಲಿರುವ ಶ್ರೀ ಬಿ. ಎನ್. ರಾವ್‌ರವರು ಪ್ಯಾರಿಸ್ಸಿನಲ್ಲಿ ಬರುವ ಬುಧವಾರ ಶ್ರೀ ನೆಹರೂರವರನ್ನು ಭೇಟಿ ಮಾಡುವರೆಂದು ತಿಳಿಯಬರುತ್ತದೆ.

ರಸ್ತೆಗಳಿಗೆ ದೀಪಗಳಿಲ್ಲ

ಕಲ್ಲಿದ್ದಲ ಅಭಾವದಿಂದ ಡಕ್ಕಾದಲ್ಲಿ ಸಿನಿಮಾಗಳನೆಲ್ಲಾ ನಿಲ್ಲಿಸಲಾಗಿದೆ. ರಸ್ತೆಗಳಲ್ಲಿ ಸಹ ಸಾಲುದೀಪಗಳನ್ನು ಹಚ್ಚುವುದನ್ನು ನಿಲಿಸಲಾಗಿದೆ.

ನಿಜವಲ್ಲ

ಹೈದರಾಬಾದಿನ ಮುಖ್ಯಮಂತ್ರಿಯವರು ಬದಲಾವಣೆಯಾಗುವರೆಂದು ಪತ್ರಿಕೆಗಳಲ್ಲಿ ಬಂದಿರುವ ಸುದ್ದಿ ನಿರಾಧಾರವಾದುದೆಂದು ಪ್ರಕಟಿಸಲಾಗಿದೆ. ಶ್ರೀ ವೆಲ್ಲೋಡಿಯವರೇ ಈಗ ಹೈದರಾಬಾದಿನ ಮುಖ್ಯಮಂತ್ರಿಗಳು.

ಪ್ರಯೋಜನವೇನು ?

ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲ ನಡೆದ ಮಾತುಕಥೆಗಳಲ್ಲಿ ಹೊಸ ಸಲಹೆಗಳೇನೂ ಸೂಚಿತವಾಗಿಲ್ಲವೆಂದು ಗೊತ್ತಾಗಿದೆ. ಹಳೆಯ ವಿಷಯಗಳನ್ನೇ ಪುನಃ ಚರ್ಚಿಸಿದ್ದರಿಂದ ಪ್ರಯೋಜನವೇನೂ ಆಗಲಿಲ್ಲ. ಪಾಕಿಸ್ಥಾನ ಪ್ರಧಾನಿ ಹೊಸ ಸಲಹೆಗಳನ್ನೇನೂ ಮುಂದಿಡದೇ ಹೋದಲ್ಲಿ ಇಂತಹ ಸಭೆಗಳಿಂದ ಪ್ರಯೋಜನವೇನು? ತಾವು ಕಾಶ್ಮೀರದ ಬಗ್ಗೆ ಸಭೆ ಸೇರಿ ಚರ್ಚಿಸಲು ಸದಾ ಸಿದ್ಧವೆಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಹೇಳಿರುವಂತೆ ತಿಳಿಯಬರುತ್ತದೆ.

ಒಲಂಪಿಯಾ

೧೧-೧-೫೧ರಿಂದ ಪ್ರತಿದಿನ ೩ ಆಟಗಳು

ಪಾತ್ರವಹಿಸಿರುವ

ನಿಗಾರ್, ಕರ್ಣದಿವಾನ್, ನಿರೂಪರಾಯ್

ರಣಜಿತ್‌ರವರ ಅಪೂರ್ವ ಕಲಾಕೃತಿ

ಮಿಟ್ಟಿ ಕೆ ಖಿಲೋನೆ

ಬೆಳಗಿನ ಪ್ರದರ್ಶನ: ೧೩-೧-೫೧ ರಿಂದ

ಪೋಲೀಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg No. M. 5318 · ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩—೧—೧೯೫೧ ನೇ ಶನಿವಾರ [ಸಂಚಿಕೆ ೧೧೨

ರೈಲ್ವೆ ದರ ಏರುವುದೆ?

ಕೇಂದ್ರ ಸರ್ಕಾರವು ತನ್ನ ವೆಚ್ಚವನ್ನೆಲ್ಲಾ ಕಡಮೆ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಲಿದೆ. ದೇಶದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ಈಗಿನ ರೈಲ್ವೆ ದರವನ್ನು ಏರಿಸಬಹುದೆಂದು ತಿಳಿಯಬಂದಿದೆ.

ಪುಸ್ತಕ ಭಂಡಾರ ಪ್ರಾರಂಭೋತ್ಸವ

ಮೈಸೂರು ಜ. ೧೩

ಮೈಸೂರು ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯವರು ನಂಜನಗೂಡು ತಾಲ್ಲೂಕು ತಗಡೂರಿನಲ್ಲಿ ಯುವ ಸಂಘದ ಆಶ್ರಯದಲ್ಲಿ ನೂತನ ಪುಸ್ತಕಭಂಡಾರವನ್ನು ನಿನ್ನೆ ತೆರೆದರು.

ಮೈಸೂರು ಜಿಲ್ಲಾಧಿಕಾರಿಗಳಾದ ಜನಾಬ್ ಮಹಮ್ಮದ್ ಅಹಮ್ಮದ್‌ರವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಟಿ. ಮಾದಯ್ಯಗೌಡರವರು ಪ್ರಾರಂಭೋತ್ಸವ ನಡೆಸಿದರು.

ಹಿಂದೆ ರಾಜರು ಬೇರೆ, ಪ್ರಜೆಗಳು ಬೇರೆ, ಸರ್ಕಾರ ಬೇರೆ ಎಂಬ ಮನೋಭಾವದಿಂದ ದೇಶದಲ್ಲೆಲ್ಲಾ ಕಾರ್ಯ ಕೆಲಸಗಳು ನಡೆಯುತ್ತಲಿದ್ದುವು. ಸ್ವಾತಂತ್ರ್ಯ ಬಂದ ಮೇಲೆ ಪ್ರಜೆಗಳೇ ಸರ್ಕಾರ, ಸರ್ಕಾರವೇ ಪ್ರಜೆ. ಈಗ ದೇಶವು ಉನ್ನತಸ್ಥಿತಿಗೆ ಬಂದು ಇತರ ದೇಶಗಳೊಡನೆ ಸರಿಸಮಾನವಾಗುವಂತೆ ಮಾಡಲು ಎಲ್ಲರೂ ಶ್ರಮಿಸಬೇಕು. ವಿದ್ಯಾ, ಆರ್ಥಿಕ ಮುಂತಾದುವುಗಳಲ್ಲೆಲ್ಲಾ ದೇಶದಲ್ಲಿ ಸಮಾನತೆಯಿರಬೇಕು. ಬಡವ ಬಲ್ಲಿದನೆಂಬ ವ್ಯತ್ಯಾಸವಿರಬಾರದು. ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳಬೇಕು. ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ನಾವೆಲ್ಲರೂ ಶ್ರಮಿಸಬೇಕು. ಇವುಗಳನ್ನು ಮಾಡಬೇಕಾದಲ್ಲಿ ಅಕ್ಷರಜ್ಞಾನ ಅತ್ಯವಶ್ಯಕ. ಪುಸ್ತಕಭಂಡಾರಗಳು ಜ್ಞಾನೋದಯವನ್ನು ಮಾಡಲು ಸಾಧನಗಳು ಎಂದು ಶ್ರೀ ಟಿ. ಮಾದಯ್ಯಗೌಡರು ತಮ್ಮ ಪ್ರಾರಂಭೋತ್ಸವ ಭಾಷಣದಲ್ಲಿ ನುಡಿದರು.

ಇಂದಿನ ಪರಿಸ್ಥಿತಿಯು ಮೃಗಾಲಯದಿಂದ ಮೃಗಗಳನ್ನು ಹೊರಕ್ಕೆ ಬಿಟ್ಟಂತಾಗಿದೆ. ಜಾತಿವೈಷಮ್ಯ ಬಡವ ಬಲ್ಲಿದನೆಂಬ ಭೇದಭಾವ ಮುಂತಾದ ರೀತಿ ವ್ಯತ್ಯಾಸಗಳು ತಲೆದೋರಿವೆ. ಈ ವ್ಯತ್ಯಾಸಗಳಲ್ಲಿ ತಿರುಳಿಲ್ಲ, ದುಷ್ಟಶಕ್ತಿಗಳು ಅನೇಕವು ಹೊರಕ್ಕೆ ಬಂದಿದೆ. ಅವು ನಾಶವಾಗಲೇಬೇಕಾಗಿದೆ. ಅಹಿಂಸಾಯುತವಾಗಿ ದ್ರೋಹ, ವಂಚನೆ, ದ್ವೇಷ ಮುಂತಾದುವಕ್ಕೆ ಎಡೆಗೊಡದೆ ಸದ್ಗುಣಗಳಿಗೆ ಬೆಲೆಕೊಡುತ್ತಾ ಉತ್ತಮವಾದ ಹೊಸ ಕಾರ್ಯಕ್ರಮವನ್ನು ಮುಂದಿಟ್ಟುಕೊಂಡು ಕಾರ್ಯತತ್ಪರರಾಗಬೇಕೆಂದು ತಾ॥ ಅಭಿವೃದ್ಧಿಸಮಿತಿ ಅಧ್ಯಕ್ಷ ಶ್ರೀ ವಿಶ್ವೇಶ್ವರಗೌಡರು ತಮ್ಮ ಭಾಷಣದಲ್ಲಿ ಹೇಳಿದರು.

ಸಮತಾವಾದಿ ಪಕ್ಷದ ಪ್ರಮುಖರಾದ ಶ್ರೀ ಶ್ರೀಕಂಠಪ್ಪನವರು, ಶಿಕ್ಷಣಸಮಿತಿ ಮುಖ್ಯಾಧಿಕಾರಿಗಳಾದ ಶ್ರೀ ಟಿ. ಎನ್ ಕೃಷ್ಣರಾಯರು ಭಾಷಣಮಾಡುತ್ತಾ ಜ್ಞಾನಾರ್ಜನೆಗೆ ವಿದ್ಯೆಯನ್ನು ಕಲಿಯಬೇಕಾದುದು ಅತ್ಯವಶ್ಯಕವೆಂದೂ, ದೇಶೋಭಿವೃದ್ಧಿಯಾಗಬೇಕಾದರೆ ಎಲ್ಲರೂ ಅಕ್ಷರಸ್ಥರಾಗಬೇಕೆಂದೂ ತಿಳಿಸಿದರು. ಅಧ್ಯಕ್ಷತೆವಹಿಸಿದ್ದ ಜನಾಬ್ ಮಹಮದ್ ಅಹಮದ್‌ರವರು ಯುವಕಸಂಘವು ಮಾಡುತ್ತಲಿರುವ ಕಾರ್ಯವನ್ನು ಪ್ರಶಂಸಿಸಿ, ಜನರು ಈ ಸಂಘದ ಕಾರ್ಯಕ್ರಮವನ್ನು ಚೆನ್ನಾಗಿ ಅರಿತು ಅದಕ್ಕೆ ತಕ್ಕ ಬೆಂಬಲವಿತ್ತು ಗ್ರಾಮವನ್ನು ಉತ್ತಮಸ್ಥಿತಿಗೆ ತರುವುದಕ್ಕೆ ತಕ್ಕ ಸ್ಥಾನಗಳನ್ನು ಕಲ್ಪಿಸಿಕೊಂಡು ತಮ್ಮ ಆರ್ಥಿಕ, ವಿದ್ಯಾ ಮುಂತಾದುವುಗಳಲ್ಲಿ ಪ್ರಗತಿ ಪಡೆಯಬೇಕೆಂದು ಕೋರಿದರು.

ಮಹಾರಾಜ ಕಾಲೇಜ ವಿದ್ಯಾರ್ಥಿ, ಸಮತಾವಾದ ಪಕ್ಷದ ಸದಸ್ಯರೂ, ತಗಡೂರು ನಿವಾಸಿಗಳು ಆದ ಶ್ರೀ ಶ್ರೀನಿವಾಸರಾಯರು ಅತಿಥಿಗಳನ್ನು ಸ್ವಾಗತಿಸಿ ಸಂಘವು ಕೈಗೊಂಡಿರುವ ಕಾರ್ಯವನ್ನು ವಿವರಿಸಿ, ಹರಿಜನರು ಗ್ರಾಮದಲ್ಲಿ ಸ್ಥಳಾಭಾವದಿಂದ ಪಡುತ್ತಲಿರುವ ತೊಂದರೆಯನ್ನು ವಿವರಿಸಿ ಅದನ್ನು ನಿವಾರಣೆಮಾಡಿಕೊಡಬೇಕೆಂದು ಕೇಳಿಕೊಂಡರು

ರಜತಮಹೋತ್ಸವ

ಮೈಸೂರು ಖದ್ದರ್ ಪರಸ್ಪರ ಸಹಾಯಸಂಘದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ನಡೆದು ೨೬-೧-೫೧ ರಲ್ಲಿ ರಜತಮಹೋತ್ಸವವನ್ನು ನಡೆಸಬೇಕೆಂದೂ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಎಂ ಲಕ್ಷ್ಮೀನಾರಾಯಣರಾಯರ ಮತ್ತು ದಿವಂಗತ ಶ್ರೀ ವೆಂಕಟಕೃಷ್ಣಯ್ಯನವರ ಭಾವಚಿತ್ರಗಳನ್ನು ಅನಾವರಣ ಮಾಡಬೇಕೆಂದು ನಿರ್ಣಯ ಮಾಡಿದರು

ಅಧಿಕಾರ ವಹಿಸಿಕೊಂಡರು

ಮೈಸೂರು ಕೋ-ಆಪರೇಟೀವ್ ಬ್ಯಾಂಕಿನಲ್ಲಿ ಸದಸ್ಯತನವನ್ನು ತೆಗೆದುಹಾಕಿದುದು ನ್ಯಾಯಬದ್ಧವಲ್ಲವೆಂದು ಅ॥ ರಿಜಿಸ್ಟ್ರಾರರು ಇತ್ತ ಆಜ್ಞೆಯ ಪ್ರಕಾರ ಡಾ॥ ಸೂರ್ಯನಾರಾಯಣರಾಯರು ನಿನ್ನೆ ಕಾರ್ಯದರ್ಶಿಗಳ ಅಧಿಕಾರವನ್ನು ವಹಿಸಿಕೊಂಡರು ಇದಕ್ಕೆ ಮುನ್ನ ಕಾರ್ಯಕಾರಿ ಸಮಿತಿಯ ಸಭೆಯು ನಡೆದು ಅಸಿಸ್ಟೆಂಟು ರಿಜಿಸ್ಟ್ರಾರರವರು ಇತ್ತ ಆಜ್ಞೆಯನ್ನು ಅಂಗೀಕರಿಸಿ ಡಾ॥ ಸೂರ್ಯನಾರಾಯಣರಾಯರು ಅಧಿಕಾರ ವಹಿಸಿಕೊಳ್ಳಬೇಕೆಂದು ತೀರ್ಮಾನಿಸಿತು.

ಮೈಸೂರು ಸಂಸ್ಥಾನದಲ್ಲಿ ಸಕ್ಕರೆ ಅಭಾವ

ಮೈಸೂರು ಸಂಸ್ಥಾನದಲ್ಲಿ ಸಕ್ಕರೆ ಸರಬರಾಜ ಪರಿಸ್ಥಿತಿ ಸರಿಯಾಗಿಲ್ಲವೆಂದೂ, ಸಕ್ಕರೆ ತಯಾರಿಕೆ ಸಾಕಾಗುವಷ್ಟಿಲ್ಲವಾಗಿ ಜನರು ಸರಕಾರದೊಂದಿಗೆ ಸಹಕರಿಸಿ, ಹೆಚ್ಚಿಗೆ ಸಕ್ಕರೆಯನ್ನು ಕೇಳಬಾರದೆಂದೂ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ. ಹಬ್ಬಕ್ಕಾಗಿ ಹೆಚ್ಚಾಗಿ ಸಕ್ಕರೆಯನ್ನು ಕೊಡಲಾಗುವುದಿಲ್ಲ.

ಹೊಸ ಮಂತ್ರಿಗಳು

ಬೆಂಗಳೂರು ಜ ೧೨

ಮೈಸೂರಿನ ಮಂತ್ರಿಮಂಡಲಕ್ಕೆ ರಾಜೀನಾಮೆಯಿತ್ತ ಶ್ರೀ ಸಿದ್ದಲಿಂಗಯ್ಯನವರ ಸ್ಥಾನಕ್ಕೆ ಬೇರೊಬ್ಬರನ್ನು ತೆಗೆದುಕೊಳ್ಳುವ ವಿಚಾರವನ್ನು ಶ್ರೀ ಕೆ. ಸಿ. ರೆಡ್ಡಿಯವರು ಸದ್ಯದಲ್ಲೇ ನಿರ್ಧರಿಸುವರೆಂದು ತಿಳಿಯಬಂದಿದೆ.

ಅಕ್ಷರ ಪ್ರಚಾರಸಮಿತಿಗೆ ಭೇಟಿ

ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ಮಧ್ಯಾಹ್ನ ಮೈಸೂರು ಅಕ್ಷರ ಪ್ರಚಾರ ಸಮಿತಿಗೆ ಭೇಟಿಯಿತ್ತು, ಅಲ್ಲಿಯ ಕಾರ್ಯಕಲಾಪಗಳನ್ನು, ಚಿತ್ರ ಪ್ರದರ್ಶನವನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ನೇಪಾಳಿನಲ್ಲಿ ಸತ್ಯಾಗ್ರಹ

ನೇಪಾಳನಲ್ಲಿ ಅಹಿಂಸಾಯುತ ಸತ್ಯಾಗ್ರಹ ಚಳುವಳಿಯನ್ನು ಹೂಡಲು ಜನವರಿ ೧೪ ರಂದು ಕೆಲವು ರಾಜಕೀಯ ದೇಶಭ್ರಷ್ಟರೊಡನೆ ರಾಕ್ಸಾಲ್ ಬಳಿ ಭಾರತದ ಗಡಿಯನ್ನು ದಾಟಿ ನೇಪಾಳವನ್ನು ತಾವು ಪ್ರವೇಶಿಸುವುದಾಗಿ ನೇಪಾಳೀ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಡಿ ಆರ್. ರೆಗ್ಮಿಯವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದರು

ಬಿ. ಬಿ. ಸಿ. ಯಲ್ಲಿ ನೆಹರೂರವರ ಭಾಷಣ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನಿಗೆ ತೆರಳಿರುವ ಭಾರತ ಮಹಾಪ್ರಧಾನಿ ಪಂಡಿತ ನೆಹರೂರವರೂ ಮತ್ತು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಜನವರಿ ೧೭ನೇಯ ತಾರೀಖು ಬುಧವಾರ ಸಂಜೆ ೮-೩೦ ಗಂಟೆಗೆ ಬಿ. ಬಿ.ಸಿ. ಮೂಲಕ ಪ್ರಸಾರಣ ಭಾಷಣ ಮಾಡುವರು.

ಎ. ಐ. ಸಿ. ಸಿ. ಸಭೆ

ಇದೇ ತಿಂಗಳು ೨೯, ೩೦ ಮತ್ತು ೩೧ನೆಯ ತಾ॥ ಗಳಲ್ಲಿ ಅಹಮದಾಬಾದಿನಲ್ಲಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಬರಲಿರುವ ಸದಸ್ಯರುಗಳಿಗೆ ಗುಜರಾತ್ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಿದ್ದಾರೆ.

ರೇಷನ್ ಕೋಟಾ

ಬೊಂಬಾಯಿ ಸಂಸ್ಥಾನದ ರೇಷನ್ ವ್ಯವಸ್ಥೆಗೊಳಪಟ್ಟ ಪ್ರದೇಶಗಳಲ್ಲಿ ಈಗ ಹಾಲಿ ಕೊಡುತ್ತಿರುವ ತಲಾ ೧೨ ಔನ್ಸ್ ಆಹಾರ ಧಾನ್ಯವನ್ನು ೯ ಔನ್ಸಿಗೆ ಇಳಿಸಲಾಗಿದೆ. ಈ ಆಜ್ಞೆ ಜನವರಿ ೧೪ ರಿಂದ ಜಾರಿಗೆ ಬರಲಿದೆ ಎಂದು ಬೊಂಬಾಯಿ ಆಹಾರ ಸಚಿವ ಶ್ರೀ ದಿನಕರರಾವ್ ದೇಸಾಯಿಯವರು ತಿಳಿಸಿದರು.

ಸುಧಾರಣೆಗಳ ಸ್ವಾಗತ

ನೇಪಾಳದಲ್ಲಿ ನಡೆಯಬೇಕೆಂದಿರುವ ನೂತನ ಸುಧಾರಣೆಗಳನ್ನು ಭಾರತಪ್ರಧಾನಿ ಪಂಡಿತ ನೆಹರೂರವರು ಸ್ವಾಗತಿಸಿದ್ದಾರೆಂದು ಗೊತ್ತಾಗಿದೆ.

ಈ ರಾಜಕೀಯ ಬದಲಾವಣೆಯಿಂದ ಉಂಟಾಗಬಹುದಾದ ಎಲ್ಲಾ ಪ್ರಯೋಜನವನ್ನು ನೇಪಾಳದ ಜನರು ಪಡೆದು ಹೊಸ ಬದಲಾವಣೆಗೆ ಸಹಕಾರ ನೀಡಬೇಕೆಂದು ಇವರು ಆಶಿಸಿದ್ದಾರೆ

ನೇಪಾಳ ಮಹಾರಾಜರು ಹಿಂತಿರುಗುವರು

ನೇಪಾಳ ಮಹಾರಾಜರಿಗೂ ಮುಖ್ಯ ಮಂತ್ರಿಯವರಿಗೂ ಮಾತು ಕಥೆಗಳು ನಡೆದು, ಈಗ ಮಹಾರಾಜರು ನೇಪಾಳಕ್ಕೆ ಹಿಂತಿಗಿದರೆ ದೇಶದಲ್ಲಿ ಶಾಂತಿಯುಂಟಾಗುವುದೆಂದು ಮುಖ್ಯ ಮಂತ್ರಿಗಳು ಮಹಾರಾಜರಿಗೆ ತಿಳಿಸಿರುವರೆಂದು ವರದಿಯಾಗಿದೆ.

ಶ್ರೀ ಎಲ್. ಎಸ್. ರಾಜುರವರ ದಸ್ತಗಿರಿ

ಮಾಟಮಾಡಿ ಹೆದರಿಸಲು ಸಹಾಯಮಾಡಿದ್ದಕ್ಕೆ

ಬೆಂಗಳೂರು ಜ. ೧೨

ಶ್ರೀಗಳಾದ ಎಲ್. ಎಸ್ ರಾಜು ಮತ್ತು ದಾಸಪ್ಪನಾಯಿಡುರವರ ಮೇಲೆ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆದಿನ ಕ್ರಿಮಿನಲ್ ಕೇಸೊಂದನ್ನು ಐ ಪಿ ಸಿ. ೪೪೭,೫೦೬ ಮತ್ತು ೧೦೯ನೇ ಸೆಕ್ಷನ್ ಪ್ರಕಾರ ದಾಖಲಾಗಿದೆ

೧೫ ೧೨ ೫೦ ರಲ್ಲಿ ಎರಡನೇ ಅಪಾದಿತರಾದ ಶ್ರೀ ದಾಸಪ್ಪನಾಯಿಡುರವರು ಮೊದಲನೇ ಆಪಾದಿತ ಶ್ರೀ ಎಲ್. ಎಸ್. ರಾಜುರವರ ಪ್ರೇರಣೆಮೇರೆಗೆ ಅಡ್ವೋಕೇಟ್ ಜನರಲ್ ಶ್ರೀ ಸೋಮನಾಥ ಅಯ್ಯರ್‌ರವರ ಬಂಗಲೆಗೆ ಅತಿಕ್ರಮಪ್ರವೇಶ ಮಾಡಿ, ಏನೋ ಮಂತ್ರಗಳನ್ನು ಹೇಳುತ್ತ ಮಾಟಮಾಡಿ ಶ್ರೀ ಸೋಮನಾಥ ಅಯ್ಯರವರ ಶರೀರಕ್ಕೂ ವ್ಯಕ್ತಿತ್ವಕ್ಕೂ ನೋವುಂಟಾಗುವಂತೆ ವರ್ತಿಸಿದರೆಂದು ನಮೂದಿಸಲಾಗಿದೆ

ಈ ಕೇಸಿನಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿಯಾದ ಶ್ರೀ ನಟೇಶ ಮೊದಲಿಯಾರವರು ಶ್ರೀ ದಾಸಪ್ಪನಾಯ್ಡುರವರನ್ನು ಹಿಡಿದುಕೊಂಡರೆಂದೂ ಅವರ ಮೇಲೆ ಶ್ರೀ ದಾಸಪ್ಪನವರು ಏನೋ ಮಂತ್ರ ಹೇಳುತ್ತಾ ಬೂದಿ ಎಸೆದರೆಂದೂ, ಶ್ರೀ ದಾಸಪ್ಪನಾಯುಡುರವರು ಶ್ರೀ ನಟೇಶಮೊದಲಿಯಾರರನ್ನು ಬೈದು-ಹೊಡೆದು ಭಯಪಡಿಸಿದರೆಂದೂ ಮತ್ತು ತಮ್ಮನ್ನು ಬಿಡದಿದ್ದರೆ ಅವರನ್ನು ನಾಶಗೊಳಿಸುವುದಾಗಿ ಶ್ರೀ ನಟೇಶಮೊದಲಿಯಾರ್‌ರವರಿಗೆ ಹೇಳಿ ಹೆದರಿಸಿದರೆಂದು ಆಪಾದಿಸಲಾಗಿದೆ.

ಹೈಗ್ರೌಂಡು ಪೋಲೀಸು ಇನ್‌ವೆಸ್ಟಿಗೇಟರ್ ಆಫೀಸರು ಶ್ರೀ ಎಸ್. ಜಿ. ನಾರಾಯಣರಾಯರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಇವರ ಮೇಲೆ ಚಾರ್ಜಷೀಟು ಹಾಕಿರುವರು. ಶ್ರೀ ಎಲ್. ಎಸ್. ರಾಜರವರನ್ನು ನಿನ್ನೆ ಸಂಜೆ ದಸ್ತಗಿರಿ ಮಾಡಲಾಯಿತು. ೫೦೦ ರೂ.ನ ಜಾಮೀನಿನ ಮೇಲೆ ಅವರನ್ನು ಶ್ರೀ ದಾಸಪ್ಪನಾಯಿಡುರವರನ್ನು ಬಿಡಲಾಗಿದೆ.

೧೫-೧-೫೧ಕ್ಕೆ ಕೇಸನ್ನು ವಿಚಾರಣೆ ಮಾಡಲಾಗಿದೆ.

ಅಮೆರಿಕಾಕ್ಕೆ ಭೇಟಿ ?

ಪ್ರಧಾನಿ ಪಂಡಿತ ನೆಹರೂರವರು ಲಂಡನ್ನಿನಿಂದ ಅಮೆರಿಕಾಕ್ಕೆ ಭೇಟಿಯಿಯಲು ಯೋಚಿಸುತ್ತಲಿರುವರೆಂದು ಲಂಡನ್ನಿನಲ್ಲಿರುವ ಅಮೆರಿಕಾ ರೇಡಿಯೋ ಸಮೂಹದ ಒಬ್ಬ ಬಾತ್ಮೀದಾರರು ವರದಿಮಾಡಿದ್ದಾರೆಂದು ತಿಳಿಯಬರುತ್ತದೆ.

ನೂತನ ಮೇಯರ್

ಬೆಂಗಳೂರು ಕಾರ್ಪೊರೇಷನ್ನಿಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ವೆಂಕಟರಾಮನ್‌ರವರು ಮೇಯರಾಗಿ ನಿನ್ನೆ ನಡೆದ ಸಭೆಯಲ್ಲಿ ಬಹುಮತದಿಂದ ಚುನಾಯಿತರಾಗಿದ್ದಾರೆ.

ನ್ಯೂ ಅಪೇರಾ

ಮೈಸೂರು

ತಾ|| ೧೧-೧-೫೧ ರಿಂದ

★ ಮಂಗಯರ್ ಕರಸಿ ★

ಅಭಿನಯ

ಪಿ. ವಿ ಚಿನ್ನಪ್ಪ . ಪಿ. ಕನ್ನಾಂಬ,

ಅಂಜಲೀದೇವಿ: ಲಲಿತಾ-ಪದ್ಮಿನಿ,

ಎನ್. ಎಸ್. ಕೃಷ್ಣನ್ : ಟಿ ಎ. ಮಧುರಂ

ಪ್ರತಿದಿನ ೩ ಆಟಗಳು

ರಣಜಿತ್

ತಾ|| ೧೨-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ,
ದಿವಂಗತ ಮಜಾರ್‌ಖಾನ

ಬೆಳಗಿನ ಪ್ರದರ್ಶನ ೪ ದಿನ ಮಾತ್ರ

ಮೆಹಬೂಬರವರ

ಅನೋಖಿ-ಅದ

ನಾಸೀಂ ಮತ್ತು ಸುರೇಂದ್ರ

ಭೋಜನ ಕೂಟ

ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನವು ಮುಕ್ತಾಯವಾದೊಡನೆಯೇ ಬ್ರಿಟನ್ ಪ್ರಧಾನಿ ಮಿ|| ಅಟ್ಲಿಯವರು ತಮ್ಮ ವರದಿಯನ್ನು ಅರಸರಿಗೆ ಒಪ್ಪಿಸಿದರು ಅನಂತರ ಒಂದು ಭೋಜನ ಕೂಟವನ್ನೇರ್ಪಡಿಸಿದ್ದರು.

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಪ್ರಶ್ನೆ ವಿಷಯವಾಗಿ ನಿನ್ನೆಯ ಚರ್ಚೆಗಳು ನಡೆದುವೆಂದೂ ಯಾವ ಪರಿಹಾರ ಮಾರ್ಗವಾಗಲೀ ನಿರ್ಧಾರವಾಗಲೀ ಆಗಲಿಲ್ಲವೆಂದು ತಿಳಿಯಬರುತ್ತವೆ ಈ ಚರ್ಚೆಯಲ್ಲಿ ಭಾರತ, ಪಾಕಿಸ್ತಾನ, ಬ್ರಿಟನ್, ಕನಡಾ ಸಿಂಹಳ, ಪ್ರಧಾನಿಗಳು ಭಾಗವಹಿಸಿದ್ದರೆಂದು ಹೇಳಲಾಗಿದೆ

ಸಮ್ಮೇಳನ ಮುಕ್ತಾಯವಾಯಿತು

ಕಾಮನ್ವೆಲ್ತ್ ಪ್ರಧಾನಿಗಳ ಸಮ್ಮೇಳನವು ನಿನ್ನೆ ಮುಕ್ತಾಯವಾಯಿತು.

ರಷ್ಯಾ, ಚೈನ ರಾಷ್ಟ್ರಗಳೂ ಇತರ ರಾಷ್ಟ್ರಗಳು ಸೇರಿ ಶಾಂತಿಸ್ಥಾಪನೆಗೆ ಮಾರ್ಗವನ್ನು ಕಲ್ಪಿಸುವುದರಲ್ಲಿ ತಾವೆಲ್ಲರೂ ಸಂತೋಷದಿಂದ ಸ್ವಾಗತಿಸುವುದಾಗಿಯೂ, ಜರ್ಮನಿ, ಜಪಾನ್ ದೇಶಗಳಲ್ಲಿ ಶಾಂತಿ ಒಪ್ಪಂದಗಳು ಕೂಡಲೇ ಮುಗಿದು ಪ್ರಪಂಚದಲ್ಲಿ ಕೋಟ್ಯಾಂತರ ಮಂದಿ ದಟ್ಟದಾರಿದ್ರರ ಆರ್ಥಿಕಮಟ್ಟ ಉತ್ತಮಗೊಳ್ಳುವಂತೆ ಮಾಡಲು ಎಲ್ಲಾ ಶಾಂತಿ ಪ್ರಗತಿಕಾರ್ಯಗಳಿಗೆ ತಮ್ಮ ಬೆಂಬಲವಿದೆಯೆಂದೂ ಎಲ್ಲಾ ರಾಷ್ಟ್ರಗಳೂ ಸೌಜನ್ಯದಿಂದ ವರ್ತಿಸಿ ವಿಶ್ವಸಂಸ್ಥೆಯನ್ನು ಬಲಗೊಳಿಸಬೇಕೆಂದು ಸಮ್ಮೇಳನವು ಮುಗಿದನಂತರ ಹೊರಬಿದ್ದ ಒಂದು ಸಂಯುಕ್ತ ಘೋಷಣೆಯು ತಿಳಿಸುತ್ತದೆ.

ರಿಯಾಯತಿ

ರಿಪೊಬ್ಲಿಕ್ ದಿನಾಚರಣೆ ಪ್ರಯುಕ್ತ ಖದ್ದರ್ ಪರಸ್ಪರ ಸಹಾಯಸಂಘದಲ್ಲಿ ಖಾದಿ ಕೊಳ್ಳುವವರಿಗ ೧ ರೂಪಾಯಿಗೆ ಒಂದಾಣೆ ರಿಯಾಯತಿ ಕೊಡಲಾಗುವುದೆಂದು ತಿಳಿಯಬರುತ್ತದೆ.

ಒಲಂಪಿಯಾ

೧೧-೧-೫೧ರಿಂದ ಪ್ರತಿದಿನ ೩ ಆಟಗಳು

ಪಾತ್ರ :

ನಿಗಾರ್, ಕರಣದಿವಾನ್, ನಿರೂಪರಾಯ್

ರಣಜಿತ್‌ರವರ ಅಪೂರ್ವ ಕಲಾಕೃತಿ

ಮಿಟ್ಟಿ ಕೆ ಖಿಲೋನೆ

ಬೆಳಗಿನ ಪ್ರದರ್ಶನ : ೧೩-೧-೫೧ ರಿಂದ

ಪೋಲೀಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

eg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೫—೧—೧೯೫೧ನೇ ಸೋಮವಾರ [ಸಂಚಿಕೆ ೧೧೩

ಭಾರತಾದ್ಯಂತ ಆಹಾರ ಪಡಿತರ ಶೇಕಡ ೨೫ ರಷ್ಟು ಖೋತಾ

೧೯ನೇ ತಾರೀಖು ಶುಕ್ರವಾರ ಸರ್ಕಾರಿ ಆಜ್ಞೆ ಹೊರ ಬೀಳಲಿದೆ

ಎಲ್ಲಾ ಪ್ರಾಂತ್ಯಗಳಲ್ಲೂ ಜನರು ಸಮನಾಗಿ ತ್ಯಾಗ ಮಾಡಿ, ಇಂದಿನ ಆಹಾರ ಪರಿಸ್ಥಿತಿಯನ್ನು ಎದುರಿಸಬೇಕೆಂದು ಭಾರತ ಪ್ರಧಾನಿಗಳ ಮನವಿಯನ್ನು ಪಾಲಿಸಲು ಭಾರತ ಸರ್ಕಾರವು ಆಹಾರ ಪಡಿತರವನ್ನು ಹಂಗಾಮಿಯಾಗಿ ಶೇಕಡ ೨೫ ರಷ್ಟು ಖೋತಾಮಾಡಬೇಕೆಂದು ಪ್ರಾಂತ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಆಜ್ಞೆಯನ್ನೀಯುವುದೆಂದು ತಿಳಿಯಬರುತ್ತದೆ.

ಇದು ಉತ್ತಮ ಮಾರ್ಗವೆಂದು ಒಪ್ಪಿಕೊಂಡು ಬೊಂಬಾಯಿನಲ್ಲಿ ಆಹಾರ ಪಡಿತರವನ್ನು ೧೨ ಔನ್ಸ್‌ಗಳಿಂದ ೯ ಔನ್ಸ್‌ಗಳಿಗೆ ಜನವರಿ ೧೪ ರಿಂದ ಇಳಿಸಲಾಗಿದೆ, ಎಂದು ಬೊಂಬಾಯಿ ಆಹಾರ ಮಂತ್ರಿ ಶ್ರೀ ದಿನಕರರಾವ್ ದೇಸಾಯಿಯವರು ಹೇಳಿರುವರು

ಈ ವಿಷಯದಲ್ಲಿ ಮದರಾಸು ಸರ್ಕಾರಕ್ಕೆ ಇನ್ನೂ ಯಾವ ಆಜ್ಞೆಯೂ ಬಂದಿಲ್ಲವೆಂದು ಅಲ್ಲಿಯ ಆಹಾರಾಧಿಕಾರಿಗಳು ತಿಳಿಸಿರುವರು. ಈ ಆಜ್ಞೆ ಬಂದಾಗ್ಯೂ ೧೦ ಔನ್ಸ್‌ಗಳಿಗಿಂತ ಕಡಮೆ ಕೊಡುವುದಿಲ್ಲವೆಂದು ಅವರು ತಿಳಿಸಿರುವರು.

ಇಂಜನಿಯರುಗಳ ಸಮ್ಮೇಳನ

ಮೈಸೂರು ಜ. ೧೫

ಇನ್‌ಸ್ಟಿಟ್ಯೂಷನ್ ಆಫ್ ಇಂಜನಿಯರುಗಳ ೩೧ ನೇ ವಾರ್ಷಿಕಾಧಿವೇಶನವು ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಮುಂದಿನ ಫೆಬ್ರವರಿ ೩ ರಿಂದ ೧೦ ನೇ ತಾರೀಖಿನ ವರೆಗೆ ನಡೆಯುವುದು. ೪ ನೇ ತಾರೀಖು ಭಾನುವಾರ ಬೆಳಗ್ಗೆ ೧೦ ಗಂಟೆಗೆ ಅಧಿವೇಶನ ಪ್ರಾರಂಭವಾಗುವುದು ಶ್ರೀಮನ್ಮಹಾರಾಜರವರು ಉದ್ಘಾಟನ ಮಾಡುವರು.

ಕಳ್ಳತನ

ಮೈಸೂರು ಜನವರಿ ೧೩

ಚಾಮುಂಡೀ ವಿಹಾರಕ್ಕೆ ಸೇರಿದ ಚಾಮುಂಡೀ ದೇವಸ್ಥಾನದಲ್ಲಿ ನಿನ್ನೆ ೧೫ ಸಾವಿರ ರೂಪಾಯಿ ಬೆಲೆಬಾಳುವ ಆಭರಣಗಳ ಕಳುವಾಗಿದೆ.

ದೇವಾಲಯದ ಮಹಾದ್ವಾರಕ್ಕೆ ಹಾಕಿದ್ದ ಬೀಗ ಮುದ್ರೆ ಹಾಗೆಯೇ ಇದೆ. ಬಲವಾದ ಕಾವಲು ಇದ್ದರೂ ಸಹ ಕಳ್ಳರು ಚಿಲಕವನ್ನು ಗರಗಸದಿಂದ ಕೊಯ್ದು ದೇವಾಲಯವನ್ನು ಹೊಕ್ಕು, ಒಳಗಿದ್ದ ೮೦೦೦ ರೂ. ಗಳ ಬೆಲೆ ಬಾಳುವ ರತ್ನಖಚಿತ ಕಿರೀಟ, ಮುತ್ತಿನ ಹಾರ ಮತ್ತಿತರ ಆಭರಣಗಳ ಅಪಹೃತವಾಗಿವೆ

ಮದುವೆಮಾಡಿಸುವವರೇ ಇಲ್ಲ

ಉತ್ತರ ಇಂಗ್ಲೆಂಡಿನಲ್ಲಿ ಇನ್‌ಫ್ಲುಯೆನ್ಜಾ ಉಪದ್ರವವು ತಲೆದೋರಿ ಸಾವಿರಾರು ಜನರು ಮಡಿಯುತ್ತಲಿರುವರು. ೧೯೧೮ರಲ್ಲಿ ತಲೆದೋರಿದ ಉಪದ್ರವಕ್ಕಿಂತಲೂ ಇದು ಉಗ್ರವಾಗಿರುವಂತೆ ಕಾಣುತ್ತದೆ. ಬಸ್ಸು ನಡೆಯಿಸುವವರಿಲ್ಲದೆ ಬಸ್ಸುಗಳ ಚಲನ ನಿಂತುಹೋಗಿದೆ. ಲಿವರ್‌ಪೂಲ್ ನಗರದಲ್ಲಿ ಇದರಿಂದ ವಿಶೇಷ ತೊಂದರೆಯುಂಟಾಗಿದೆ.

ಪಾದ್ರಿಗಳು ಶವ ಸಂಸ್ಕಾರ ಕೆಲಸದಲ್ಲಿ ಮಗ್ನರಾಗಿರುವುದರಿಂದ ಮದುವೆ ಮುಂತಾದ ಕಾರ್ಯಗಳನ್ನು ಮಾಡಿಸುವವರೇ ಇಲ್ಲದೆ. ಈ ಶುಭಕಾರ್ಯಗಳೆಲ್ಲವೂ ಮುಂದುವಾದಿವೆ.

ರೋಗವು ಯುರೋಪು ಖಂಡದ ಅನೇಕ ಭಾಗಗಳಿಗೆ ಹರಡಿರುವಂತೆ ವರದಿಗಳು ಬಂದಿವೆ.

೩ನೇ ತರಗತಿ ರೈಲ್ವೆದರ ಮಾತ್ರ ಹೆಚ್ಚುವುದು

೩ನೇ ತರಗತಿ ರೈಲ್ವೆ ದರವನ್ನು ಮೈಲಿಯೊಂದಕ್ಕೆ ಒಂದು ಕಾಸಿನಂತೆ ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಇದಕ್ಕೆ ರೈಲ್ವೆ ಬೋರ್ಡಿನವರು ಅಂಗೀಕಾರವಿತ್ತಲ್ಲಿ, ಫೆಬ್ರವರಿ ೧೫ರಲ್ಲಿ ನಡೆಯುವ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುವ ರೈಲ್ವೆ ಬಜೆಟ್ಟಿನಲ್ಲಿ ಸೇರಿಸಲಾಗುವುದೆಂದು ತಿಳಿಯಬರುತ್ತದೆ.

ಅಧಿಕಾರಿಗಳ ನಿವೃತ್ತಿ

೨೫ ವರ್ಷ ಸರ್ವೀಸು ಮಾಡಿ, ಈಗ ಕೆಲಸದಲ್ಲಿ ಆಲಸ್ಯವಿರುವ ಅಧಿಕಾರಿಗಳನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಬೇಕೆಂದು ಬೀಹಾರ ಸರ್ಕಾರವು ಆಜ್ಞೆಮಾಡಿದೆ.

ಸಂಸ್ಕೃತವನ್ನು ಕಡ್ಡಾಯವಾಗಿ ಭೋದಿಸಬೇಕು

ಯು. ಪಿ. ಸರ್ಕಾರವು ನೇಮಕಮಾಡಿದ್ದ ವಿದ್ಯಾಭೋದಕ ಸಮಿತಿಯು ಎಲ್ಲಾ ಮಾಧ್ಯಮಿಕ ಪಾಠಶಾಲೆಗಳಲ್ಲೂ ಸಂಸ್ಕೃತವನ್ನು ಕಡ್ಡಾಯವಾಗಿ ಹೇಳಿಕೊಡಬೇಕೆಂದು ಶಿಫಾರಸ್ಸು ಮಾಡಿದೆ.

ದೌರ್ಜನ್ಯ ಕೃತ್ಯಗಳನ್ನು ನಿಲ್ಲಿಸಿ

ಸಂಸ್ಥೆ ಮತ್ತು ಅದರ ಕೆಲಸಗಾರರು ನಾಶವಾಗುವುದು ತಪ್ಪಬೇಕಾದರೆ ಕೂಡಲೆ ಎಲ್ಲರೂ ದೌರ್ಜನ್ಯಕೃತ್ಯಗಳನ್ನು ನಿಲ್ಲಿಸಿ. ದೌರ್ಜನ್ಯ ಕೃತ್ಯಗಳಲ್ಲಿ ತೊಡಗಿ ಅನೇಕ ಕೆಲಸಗಾರರು, ಪೋಲೀಸು, ಮಿಲಿಟರಿ ಮುಂತಾದವರಿಂದ ತೊಂದರೆಗಳನ್ನು ಅನುಭವಿಸಿರುವರು. ಅನೇಕರು ತಮ್ಮ ಪ್ರಾಣಗಳನ್ನೇ ಕಳೆದುಕೊಂಡಿರುವುದು ಇದನ್ನು ಗಮನಿಸಿ ಎಂದು ಕಮ್ಯೂನಿಸ್ಟ್ ನಾಯಕರೊಬ್ಬರು ತಮ್ಮ ಪಕ್ಷದ ಜನರಿಗೆ ಎಚ್ಚರಿಕೆಯನ್ನಿತ್ತಿದ್ದಾರೆ.

ಮೈಸೂರಿಗೆ ಸಾಲ

ಕೇಂದ್ರ ಸರ್ಕಾರವು, ಅಭಿವೃದ್ಧಿಕಾರ್ಯಗಳಿಗಾಗಿ ಮೈಸೂರು ಸರ್ಕಾರಕ್ಕೆ ೧॥ ಕೋಟಿ ರೂ. ಗಳ ಸಾಲವನ್ನು ಮಂಜೂರ್ಮಾಡಿದೆ ಎಂದು ಸಂಸ್ಥಾನಶಾಖಾ ಕಾರ್ಯದರ್ಶಿ ಶ್ರೀ ವಿ.ಪಿ. ಮೆನನ್ನರು ಬೋಂಬಾಯಿನಲ್ಲಿ ಪತ್ರಿಕಾಕರ್ತರೊಡನೆ ಮಾತನಾಡುತ್ತಾ ತಿಳಿಸಿದರು.

ಸಂಸ್ಥಾನಕ್ಕೆ ಕೇಂದ್ರದಿಂದ ದ್ರವ್ಯಸಹಾಯ ಮತ್ತು ಮಹಾರಾಜರ ಆಸ್ತಿಪಾಸ್ತಿಗಳ ಸಂದರ್ಭದಲ್ಲಿ ತಾವು ಮೈಸೂರು ಸಂಸ್ಥಾನಕ್ಕೆ ಭೇಟಿಯಿತ್ತಿದ್ದರೆಂದೂ ತಿಳಿಸಿದರು.

೫೭೦೦ಟನ್ ಆಹಾರ ಧಾನ್ಯ

ಈ ವಾರಾಂತ್ಯದಲ್ಲಿ ಕೇಂದ್ರ ಸರ್ಕಾರವು ಮೈಸೂರಿಗೆ ೫೭೮೦ ಟನ್ ಆಹಾರಧಾನ್ಯಗಳನ್ನು ಸರಬರಾಯಿ ಮಾಡಿರುವುದಾಗಿ ತಿಳಿಯಬರುತ್ತದೆ.

ಬುಧವಾರ ಪ್ಯಾರಿಸ್ಸಿಗೆ

ಭಾರತ ಪ್ರಧಾನಿ ನೆಹರೂರವರು ಪ್ಯಾರಿಸ್ಸಿಗೆ ಮುಂದಿನ ಬುಧವಾರ ಹೊರಡುವರು.

ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಲಂಡನಿಗೆ ಪಂಡಿತನೆಹರೂರವರನ್ನು ಭೇಟಿಮಾಡಲು ಅಮೆರಿಕಾದಿಂದ ಹೊರಟರು. ಅವರು ಪ್ಯಾರಿಸ್ಸಿಗೂ ಹೋಗುವರೆಂದು ತಿಳಿಯಬರುತ್ತದೆ.

ಪುನಃ ಮಾತುಕಥೆ

ಭಾರತ, ಪಾಕಿಸ್ಥಾನ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ಪ್ರಧಾನಿಗಳು ಪುನಃ ಕಾಶ್ಮೀರ ವಿಷಯವಾಗಿ ಚರ್ಚೆಯು ಅಟ್ಲೀಯವರ ಭವನದಲ್ಲಿ ನಡೆಯಿತೆಂದು ತಿಳಿಯಬರುತ್ತದೆ.

ಪ್ರಮಾಣ ಸ್ವೀಕಾರ

ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸುತ್ತಲಿದ್ದುದಕ್ಕೆ ಬದಲಾಗಿ 'ಭಾರತರಾಜ್ಯಾಂಗ'ದ ಹೆಸರಿನಲ್ಲಿ ಇನ್ನು ಮುಂದೆ ಪ್ರಮಾಣವನ್ನು ಸ್ವೀಕರಿಸುವಂತೆ ಬೆಂಗಳೂರು ಕಾರ್ಪೊರೇಷನ್ ಆಕ್ಟಿನಲ್ಲಿ ತಿದ್ದುಪಡಿಯನ್ನು ಸರ್ಕಾರದವರು ಮಾಡಿರುವರು.

ಹತೋಟಿ ತೆಗೆದರೆ ಹಣವಂತರಿಗೆ ಪ್ರಯೋಜನ

ಹತೋಟಿಯನ್ನು ತೆಗೆದುಹಾಕಿದರೆ ಹಣವಂತರಿಗೆ ಮಾತ್ರ ಪ್ರಯೋಜನವಾಗುತ್ತದೆ ಆದ್ದರಿಂದ ಈಗ ಹತೋಟಿ ತೆಗೆಯುವುದು ಸರಿಯಲ್ಲವೆಂದು ಕೇಂದ್ರ ಮಂತ್ರಿ ಹರೇಕೃಷ್ಣ ಮೆಹತಾಬ್‌ರವರು ಗುಂಟೂರಿನಲ್ಲಿ ಮಾತನಾಡುತ್ತಾ ಹೇಳಿರುವರು.

ಗ್ರೀಕ್ ಜನರ ಅಭಿಮಾನ

ಮಹಾತ್ಮ ಗಾಂಧಿಯವರಲ್ಲಿ ಗ್ರೀಕರ ಗೌರವವನ್ನು ತೋರ್ಪಡಿಸಲು, ಇಂಜನಿಯರಿಂಗ್ ಸಮ್ಮೇಳನಕ್ಕೆ ಆಗಮಿಸಿರುವ ತಮ್ಮ ಪ್ರತಿನಿಧಿಗಳ ಜೊತೆಯಲ್ಲಿ ಒಂದು ಗಿಡದ ಸಸಿಯನ್ನು ಕಳುಹಿಸಿರುವರು. ಕೇಂದ್ರ ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ರಾಜಘಾಟಿನಲ್ಲಿ ಮಹಾತ್ಮರ ಸಮಾಧಿಯ ಬಳಿ ಆ ಸಸಿಗಳನ್ನು ಇಂದು ನೆಟ್ಟರು.

ವಿಧಾನಸಭೆಯ ಮುಂದೆ ಬರುವ ಹೊಸ ಮಸೂದೆಗಳು

ಬೆಂಗಳೂರು ಜ. ೧೫

ಬಾಟಲಿ ಮತ್ತು ಬಡುಗಾನ ಸ್ಪೆಷಲ್ ಟಮೋಟ್ರಿ, ಕಾರ್ಪೊರೇಷನ್ ಮತ್ತು ಟೌನ್ ಮುನಿಸಿಪಲ್ ಸಭೆ ಮತ್ತು ಚೌಲ್ಟ್ರಿ, ಸಾರಿ ಬದ್ಧಿರುವ ಸಾಗುವಳಿದಾರರು ಮತ್ತು ವಿಧಾನಸಭಾ ಸದಸ್ಯರ ಸಂಬಳ ಇವುಗಳಿಗೆ ಸಂಬಂಧಪಟ್ಟ ಮಸೂದೆಗಳನ್ನು ಇದೇ ತಿಂಗಳು ೧೭ನೇ ತಾ|| ನಡೆಯಲಿರುವ ವಿಧಾನಸಭಾ ಅಧಿವೇಶನದಲ್ಲಿ ಮಂಡಿಸಲಾಗುವುದು.

ಪಾರ್ಲಿಮೆಂಟಿನ ಜಮೀನು ಸಾಗುವಳಿ ಮಸೂದೆಯ ಪ್ರಕಾರ ಜಮೀನಿನ ಯಜಮಾನನು ಸರ್ಕಾರದ ತೀರುವಳಿ ಹೊರತಾಗಿ ಸಾಗುವಳಿ ಮಾಡುತ್ತಿರುವ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದನ್ನು ಸಾಗುವಳಿ ನಿಷೇಧಿಸಲಾಗುತ್ತದೆ.

ವಿಧಾನಸಭಾ ಸದಸ್ಯರ ಸಂಬಳಕ್ಕೆ ಸಂಬಂಧಪಟ್ಟ ಮಸೂದೆಯ ಪ್ರಕಾರ ವಿಧಾನಸಭಾ ಸದಸ್ಯರಿಗೆ ಮಾಸಿಯಾನ ೧೦೦ ರೂ ವೇತನ ಕೊಡಲಾಗುವುದು. ಅಧಿವೇಶನ ನಡೆಯುವ ಕಾಲದಲ್ಲಿ ದಿನ ಒಂದಕ್ಕೆ ೧೫ ರೂ. ಭತ್ಯೆಯನ್ನು ಕೊಡಲಾಗುವುದು.

ಸಾರ್ವಜನಿಕ ಬಾಬತಿಗೆ ಚೌಲ್ಟ್ರಿಗೆ ಸಂಬಂಧಪಟ್ಟ ಮಸೂದೆಯ ಪ್ರಕಾರ ಅವನ್ನು ಮುಂದೆ ಬಾಡಿಗೆದಾರರ ಸೌಕರ್ಯಕ್ಕೆ ಬಳಸಿ ಖಾಲಿ ಮಾಡಿಸುವ ವಿಷಯ ಮುಂತಾದುವಕ್ಕೆ ಸಂಬಂಧಪಟ್ಟ ವ್ಯವಹಾರಗಳನ್ನೆಲ್ಲಾ ಮುನಿಸಿಪಲ್ ಕೋರ್ಟುಗಳು ಸಿವಿಲ್ ಕೋರ್ಟುಗಳಂತೆ ಇತ್ಯರ್ಥಪಡಿಸಿಕೊಳ್ಳಬಹುದು.

ಸಂಸ್ಥಾನದ ಜನಗಣತಿಯ ಪರಿಸ್ಥಿತಿಯನ್ನು ಪರಿಶೀಲಿಸಿ ವರದಿಯನ್ನು ಒಪ್ಪಿಸಲು ನೇಮಿಸಲಾಯಿತೆಂದು ಪ್ರತ್ಯೇಕ ಒಂದು ಸಮಿತಿಯನ್ನು ನೇಮಿಸಬೇಕೆಂದು ಸಭಾ ನಿರ್ಧರಿಸಿದ ಶ್ರೀ ಎ. ಜಿ. ಚಂದ್ರಶೇಖರ ಅಯ್ಯನವರು ಮಂಡಿಸಿರುವ ನಿರ್ಣಯಕ್ಕೆ ಸದಸ್ಯರು ಸಂಬಂಧಿಸಿದ ತಿದ್ದುಪಡಿಗಳನ್ನು ಮಂಡಿಸಲಿದ್ದಾರೆ.

ಅಮೇರಿಕಾ ಪುನರ್ಶಸ್ತ್ರೀಕರಣ

ಅಮೇರಿಕಾ ಪುನಶ್ಶಸ್ತ್ರೀಕರಣಕ್ಕೆ ೧೪,೦೦೦ ಕೋಟಿ ಡಾಲರುಗಳು ಬೇಕಾಗುವವೆಂದು ಅಧ್ಯಕ್ಷ ಟ್ರೂಮನ್ನರು ಅಮೇರಿಕಾ ಜನತೆಯನ್ನು ಕೇಳಿದ್ದಾರೆ. ೧೦ ಲಕ್ಷ ಹೆಚ್ಚಿನ ಸೈನಿಕರು ಬೇಕಾಗುತ್ತಾರೆ. ಜನರು ಹೆಚ್ಚಿನ ತ್ಯಾಗ ಮತ್ತು ಶ್ರಮ ವಹಿಸಲು ಸಿದ್ಧರಾಗಿರಬೇಕು ಎಂದು ಮನವಿ ಮಾಡಿಕೊಂಡಿರುವರು.

ಕೊರಿಯಾದಿಂದ ದೂರಕ್ಕೆ

ಕೊರಿಯಾದಿಂದ ಸುರಕ್ಷಿತವಾಗಿ ಉತ್ತರಕ್ಕೆ ವಿಶ್ವಸಂಸ್ಥೆ ಸೇನೆಗಳು ಹಿಂತೆಗೆಯುತ್ತಿವೆ. ಅಮೆರಿಕಾ ಚೀನಾ ಸೈನ್ಯಗಳ ವಿರೋಧ ... ಬಹಳ ದಕ್ಷಿಣಕ್ಕೆ ... ಸೇನೆ ... ಬಂದಿರುವರು.

... ಹಿಂದೆಗೆಯುವುದು

... ಕ್ಷಿಪ್ತವಾಗಿ ಹಿಂದೆಗೆಯುವ ...

ಪಂಡಿತ ನೆಹರೂ ಪ್ಯಾರಿಸ್ಸಿಗೆ

ಭಾರತ ಪ್ರಧಾನಿ ಪಂಡಿತ ನೆಹರೂರವರು ಪ್ಯಾರಿಸ್ಸಿಗೆ ಭೇಟಿಯಿತ್ತು ೩ ದಿನ ಅಲ್ಲಿರುವರೆಂದು ತಿಳಿಯಬರುತ್ತದೆ. ಫ್ರೆಂಚ್ ಅಧ್ಯಕ್ಷ ಮತ್ತು ಪ್ರಧಾನ, ವಿದೇಶಾಂಗ ಮಂತ್ರಿಗಳೊಡನೆ ಮಾತುಕತೆ ನಡೆಸುವರು.

ಪಶ್ಚಿಮ ಯೂರೋಪಿನಲ್ಲಿರುವ ಎಲ್ಲಾ ಭಾರತ ರಾಯಭಾರಿಗಳು ಪ್ಯಾರಿಸ್ಸಿಗೆ ಬಂದು ಪ್ರಧಾನಿ ನೆಹರೂರವರೊಡನೆ ಸಮಾಲೋಚನೆ ನಡೆಸುವರು. ಈ ಸಮ್ಮೇಳನದಲ್ಲಿ ಅಂತರರಾಷ್ಟ್ರೀಯ ಸಮಸ್ಯೆಗಳೂ ಚರ್ಚಿಸಲಾಗುವುವೆಂದು ಹೇಳಲಾಗಿದೆ.

ದಸ್ತಗಿರಿ ಯಾಗಲಿಲ್ಲ

ಹಿಂದೆ ಪತ್ರಿಕೆಯಲ್ಲಿ ವರದಿಯಾಗಿದ್ದಂತೆ ಶ್ರೀ ಎಚ್. ಎಸ್. ರಾಜು ರವರು ದಸ್ತಗಿರಿಯಾಗಲಿಲ್ಲವೆಂದೂ ಅವರ ಮೇಲೆ ಚಾರ್ಜ್‌ಶೀಟ್ ದಾಖಲಾಗಿಯೂ, ಕೋರ್ಟಿಗೆ ಮಾರನೇ ದಿನ ೧೧ ಗಂಟೆ ವೇಳೆಗೆ ಹಾಜರಾಗಬೇಕೆಂದು ಬೈಗ್ರೌಂಡ್ ಪೊಲೀಸ್ ಇನ್ಸ್‌ಪೆಕ್ಟರು ೧೧ನೇ ತಾ|| ಹೇಳಿ ಹೋದರೆಂದು ತಿಳಿಯಬರುತ್ತದೆ

ರೇಷನ್ ಡಿಪೋಗಳಲ್ಲಿ ಅಕ್ಕಿ, ಗೋಧಿ ಸರಬರಾಜು

ಈ ವರ್ಷ ಸುಗ್ಗಿಯು ಸ್ವಲ್ಪ ವಿಳಂಬವಾದ್ದರಿಂದ ರಾಜಧಾನಿಯಲ್ಲಿ ಮಾಮೂಲಾಗಿ ಕೊಡುತ್ತಿದ್ದ ಪ್ರಮಾಣದಲ್ಲಿ ಅಕ್ಕಿಯನ್ನು ಈ ತಿಂಗಳ ಮೊದಲನೆಯ ವಾರದಲ್ಲಿ ಕೊಡಲು ಸಾಧ್ಯವಾಗಲಿಲ್ಲ. ಆದರೂ ದಿನಂಪ್ರತಿ ಅವಶ್ಯಕತೆಗೆ ಅನುಗುಣವಾಗಿ ಎಲ್ಲಾ ಡಿಪೋಗಳಲ್ಲಿಯೂ ಅಕ್ಕಿಯನ್ನು ಒದಗಿಸಲಾಯಿತು. ಈಗ ಅಕ್ಕಿಯ ಸರಬರಾಜಿನ ಸ್ಥಿತಿಯು ಉತ್ತಮವಾಗಿದೆ. ವಾರಕ್ಕೆ ಬೇಕಾಗುವಷ್ಟು ಪಡಿತರವನ್ನು ಒದಗಿಸಲು ಸಾಧ್ಯವಾಗಿದೆ ಎಲ್ಲಾ ಡಿಪೋಗಳಲ್ಲಿಯೂ ಅಕ್ಕಿಯ ದಾಸ್ತಾನು ಸಾಕಾದಷ್ಟಿದೆ. ಯಾವ ವಿಧವಾದ ಕಂಟಕವೂ ಕಾರಣವಿಲ್ಲ. ಗೋಧಿಯ ದಾಸ್ತಾನೂ ಸಾಕಾದಷ್ಟು ಎಲ್ಲಾ ಡಿಪೋಗಳಲ್ಲಿಯೂ ಇದೆ. ರೇಷನ್ ಕಾರ್ಡುದಾರರು ತಮ್ಮ ಪಡಿತರವನ್ನು ವಾರಂವಾರಕ್ಕೆ ಪಡೆಯಬಹುದು, ಎಂದು ರೇಷನ್ ಅಧಿಕಾರಿಗಳು ತಿಳಿಸುತ್ತಾರೆ.

ಭಾರತಕ್ಕೆ ೨೦ ಲಕ್ಷ ಟನ್ ಆಹಾರ

ಭಾರತಕ್ಕೆ ೨೦ ಲಕ್ಷ ಟನ್ ಆಹಾರಧಾನ್ಯವನ್ನು ಕಳುಹಿಸಬೇಕೆಂದು ಅಮೇರಿಕನ್ ಸೆನೆಟ್ ಸದಸ್ಯರು ಟ್ರೂಮನ್ನರನ್ನು, ಕಾಂಗ್ರೆಸ್ಸನ್ನು ಒತ್ತಾಯಪಡಿಸಿದ್ದಾರೆ.

Maharaja's College CENTENARY

Maharaja's College Centenary will be celebrated in Mysore on 20th and 21st J... ..., 19... All the old Students are requested to participate in the Celebrations and kindly send their subscriptions.

N. NARASIMHA RAO.

ರೇಡಿಯೋ

ಆ. ಇ. ಆರ್. ಮೈಸೂರು

೩೧೦ ಮೀಟರು ೯೬೭ ಕಿ. ಸೈಕಲ್ಸು

ಜನವರಿ ೧೬ ಮಂಗಳವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಟಿ. ನಾಗರತ್ನ (ಗಾಯನ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಬೊಂಬಾಯಿ ೧-೪೫ ಹಿಂದಿ ವಿನೋದ ೨-೦ ಉಂಡರಸ್ವಾಮಿ ಸಂಗೀತ ೨-೩೦ ಮುಕ್ತಾಯ.

ಸಂಜೆ ೫-೩೦ ಟಿ. ಎಸ್. ಶಾಂತಬಾಯ್ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಹಿಂದೂಸ್ಥಾನಿ (ಸಂಗೀತ) ೭-೩೦ ಕನ್ನಡದಲ್ಲಿ ಭಾಷಣ. ಎ. ವೆಂಕಟರಮಣಪ್ಪ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಟಿ. ಎಸ್. ಶಾಂತಬಾಯ್ (ಪಿಟೀಲು) ೮-೩೦ ವೃಂದ ಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನಾಮೃತ (೮) ೧೦-೦ ಮುಕ್ತಾಯ

ಸ್ಟಾಲಿನ್‌ರ ಮಗ ಬದುಕಿರುವನು?

ಕಳೆದ ಮಹಾಯುದ್ಧದಲ್ಲಿ ಸತ್ತನೆಂದು ಹೇಳಲಾದ ಮಾ|| ಸ್ಟಾಲಿನ್ನರ ಮಗನು ಬದುಕಿರುವನೆಂದೂ ಯೂರೋಪಿನಲ್ಲಿ ಎಲ್ಲಿಯೋ ಇರುವನೆಂದೂ ಆನಾಮಧೇಯ ಪತ್ರವೊಂದು ರಷ್ಯಾ ಸರ್ಕಾರಕ್ಕೆ ಬಂದಿದೆ.

ಮಗನನ್ನು ಪತ್ತೆ ಹಚ್ಚಿಕೊಟ್ಟವರಿಗೆ ೧೦,೦೦,೦೦೦ ರೂಬಲ್ (ರಷ್ಯಾನಾಣ್ಯ) ಹಣವನ್ನು ಬಹುಮಾನವಾಗಿ ಮಾ|| ಸ್ಟಾಲಿನ್‌ರು ಘೋಷಿಸಿದ್ದಾರೆ

ನ್ಯೂ ಲಿಬರ್ಟಿ
ಮೈಸೂರು
ತಾ|| ೧೫-೧-೫೧ ರಿಂದ
ಮಂಗಯರ್ ಕರಸಿ
ಅಭಿನಯ
ಪಿ. ಯು. ಚಿನ್ನಪ್ಪ · ಪಿ. ಕಣ್ಣಾಂಬ,
ಎಂ. ಎಸ್. ... ಎಂ. ಆರ್. ...
ಎನ್. ಎಸ್. ಕೃಷ್ಣನ್ : ಟಿ. ಎ. ಮಧುರಂ
ಪ್ರತಿದಿನ ೩ ಆಟಗಳು

Reg. No. M. 5318 ದಿನ ಪತ್ರಿಕೆ Phone: 524

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೧—೧೯೫೧ನೇ ಮಂಗಳವಾರ [ಸಂಚಿಕೆ ೧೧೪

ಶಾಸನಸಭೆಯಲ್ಲಿ ಮಂಡಿಸಿರುವ ನಿರ್ಣಯಗಳು

ಅಲ್ಪಸಂಖ್ಯಾತರಿಗಾಗಿ ಒಬ್ಬ ಮಂತ್ರಿ: ಆಹಾರ ಸಹಕೋಟಿ ರದ್ದುಗೊಳಿಸಿ: ಪ್ರೊ ಖಾನ್‌ಬಿಲರ ಹುದ್ದೆ ರದ್ದುಗೊಳಿಸಿ: ಮಂತ್ರಿಮಂಡಲ ಕೆಲಸ ಪರಿಶೀಲಿಸಲು ಸಮಿತಿ

ಬೆಂಗಳೂರು ಜ. ೧೫

ನಾಳೆಯಿಂದ ನಡೆಯಲಿರುವ ಶಾಸನ ಸಭಾಧಿವೇಶನದಲ್ಲಿ ಶಾಸನಸಭೆಗೆ ೧೯೫೦-೫೧ ರಿಂದ ಪಾಕಿಸ್ತಾನ ರೋಗಿಗಳನ್ನು ಜಾರಿ ತರಬೇಕೆಂಬ ನಿರ್ಣಯವು ಮುಖ್ಯವಾದುದಾಗಿದೆ.

೫೦ ಸೇರು ಧಾನ್ಯ ಸಾಗಣೆಗೆ ಅವಕಾಶ

ಯಾವ ಅಪ್ಪಣೆ ಇಲ್ಲದೆ ಸಂಸ್ಥಾನದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ೫೦ ಸೇರು ಆಹಾರ ಧಾನ್ಯವನ್ನು ಸಾಗಿಸಲು ಅವಕಾಶವೀಯಬೇಕೆಂದು ಶ್ರೀ ಹೆಚ್. ಎಂ. ಮಲ್ಲಿಕಾರ್ಜುನಪ್ಪನವರು ನಿರ್ಣಯ ಕಳುಹಿಸುವರು.

ಜಮೀನಿನ ಪರಮಾವಧಿ

ಒಬ್ಬನು ಹೊಂದಬಹುದಾದ ಜಮೀನಿನ ಪರಮಾವಧಿ ಮಿತಿಯನ್ನು ಗೊತ್ತುಪಡಿಸಿ, ಅದಕ್ಕಿಂತ ಹೆಚ್ಚು ಹೊಂದಿರುವವರಿಂದ ಜಮೀನನ್ನು ವಶಪಡಿಸಿಕೊಂಡು ಜಮೀನಿಲ್ಲದವರಿಗೆ ಅದನ್ನು ಹಂಚಬೇಕೆಂದು ಶ್ರೀ ಲೇಶಾಳ್ ಮಂಜಪ್ಪನವರು ನಿರ್ಣಯವಿದೆ.

ಅಲ್ಪಸಂಖ್ಯಾತರಿಗಾಗಿ ಮಂತ್ರಿ

ಮೈಸೂರು ಮಂತ್ರಿಮಂಡಲದಲ್ಲಿ ಸದಾ ಕಾಲದಲ್ಲೂ ಅಲ್ಪಸಂಖ್ಯಾತರಿಗಾಗಿ ಒಬ್ಬ ಮಂತ್ರಿ ಇರಬೇಕೆಂದು ಜನಾಬ್ ವಲಿಯುಲ್ಲಾರವರು ನಿರ್ಣಯ ಕಳುಹಿಸುವರು.

ಮಂತ್ರಿಮಂಡಲ ಕೆಲಸ ಪರಿಶೀಲನೆ

ಮಂತ್ರಿಮಂಡಲದ ಅಧಿಕಾರಕ್ಕೆ ಬಂದಮೇಲೆ ಮಾಡಿರುವ ಕೆಲಸಕಾರ್ಯಗಳನ್ನು ಪರಿಶೀಲಿಸಲು ಶಾಸನಸಭಾ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ರಚಿಸಬೇಕೆಂದು ಜನಾಬ್ ಮಹಮ್ಮದ್ ಇಮಾಂರವರ ನಿರ್ಣಯ ತಿಳಿಸುತ್ತದೆ.

ಆಹಾರ ಸಹಕೋಟಿ ಅಕ್ಕಿ ರದ್ದುಗೊಳಿಸಿ

ಆಹಾರ ಸಹಕೋಟಿ ಅಕ್ಕಿಯನ್ನು ಕೂಡಲೇ ರದ್ದುಗೊಳಿಸಬೇಕೆಂದು ಶ್ರೀ ಬಿ. ಮುದ್ದೇಗೌಡರು ನಿರ್ಣಯ ಕಳುಹಿಸುವರು.

ಪ್ರೊ ಖಾನ್‌ಬಿಲರ ಹುದ್ದೆ ರದ್ದುಗೊಳಿಸಿ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ ಖಾನ್‌ಬಿಲರ ಹುದ್ದೆಯನ್ನು ರದ್ದುಗೊಳಿಸಬೇಕೆಂದು ಶ್ರೀ ಸಂಜೀವಗಿರಿನಾಯ್ಡುರವರು ನಿರ್ಣಯ ಕಳುಹಿಸುವರು.

ಕನ್ನಡದಲ್ಲಿ ವ್ಯವಹಾರ

ಸಂಸ್ಥಾನದಲ್ಲಿ ಆಡಳಿತ ವ್ಯವಹಾರವನ್ನು ಕನ್ನಡದಲ್ಲೇ ನಡೆಯಬೇಕೆಂದು ಶ್ರೀ ಕೆ. ಪುಟ್ಟಸ್ವಾಮಿಯವರ ನಿರ್ಣಯವಿದೆ.

ಒಪ್ಪಂದವಿಲ್ಲ

ಕಾಶ್ಮೀರ ಪ್ರಶ್ನೆ ವಿಷಯವಾಗಿ ಕಾಮನ್ವೆಲ್ತ್ ಪ್ರಧಾನಿಗಳಲ್ಲಿ ಅನಧಿಕೃತವಾಗಿ ಮೂರುಬಾರಿ ಚರ್ಚೆ ನಡೆಯಿತು. ಸಲಹೆ ಸೂಚನೆಗಳು ಬಂದುವು. ಆದರೆ ಒಪ್ಪಂದವೇನೂ ಆಗಲಿಲ್ಲ. ಮಾಡಿರುವ ಸಲಹೆಗಳನ್ನು ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವುದು ಉತ್ತಮವೆಂದು ಎಲ್ಲರೂ ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ.

ಸಕ್ಕರೆ ತಯಾರಿಕೆಗಾರರಿಗೆ ಎಚ್ಚರಿಕೆ

ಕೊಯಮತ್ತೂರಿನಲ್ಲಿ ನಡೆದ ಸಕ್ಕರೆ ಸಂಶೋಧನೆ ಕೆಲಸಗಾರರ ಸಂಘದ ಸಮ್ಮೇಳನದಲ್ಲಿ ಕೇಂದ್ರ ಆಹಾರ ಉಪಮಂತ್ರಿಗಳಾದ ಶ್ರೀ ಬಿ. ತಿರುಮಲರಾಯರು ಮಾತಾಡಿ ಸಕ್ಕರೆ ತಯಾರಿಕೆಗಾರರು ಕಾಲಧರ್ಮವನ್ನು ಅರಿತು ವರ್ತಿಸಬೇಕೆಂದೂ ಇಲ್ಲದಿದ್ದರೆ ಅವರ ಹಿತಕ್ಕೆ ಧಕ್ಕೆ ತಗಲುವುದು ಖಂಡಿತವೆಂದು ತಿಳಿಸಿದರು.

ಶ್ರೀ ಬಿ. ತಿರುಮಲರಾಯರು ಮುಂದುವರಿದು ಕೇಂದ್ರ ಸರ್ಕಾರವು ಸಕ್ಕರೆ ತಯಾರಿಕೆಗಾರರಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಇನ್ನು ಮುಂದುವರಿಸುವುದಿಲ್ಲವೆಂದೂ ಸಕ್ಕರೆ ತಯಾರಿಕೆಗಾರರು ಲಾಭ್ಯವಾಗಲು ಬೆಳೆಯುವವರನ್ನು ಕಡೆಗಣ್ಣಿನಿಂದ ಕಾಣುವುದನ್ನು ಬಿಡಬೇಕೆಂದು ತಿಳಿಸಿರುವರು.

ಶ್ರೀ ಬಿ. ತಿರುಮಲರಾಯರು ತಮಗೆ ಪೌರಸಭೆ ಇತ್ತ ಬಿನ್ನವತ್ತಳೆಗೆ ಉತ್ತರವಾಗಿ ದೇಶದ ಜನರಿಗೆ ಬೇಕಾಗುವಷ್ಟು ಅಕ್ಕಿಯನ್ನು ಹೊರದೇಶದಿಂದ ತರಿಸಲು ಭಾರತ ಸರ್ಕಾರ ಕಾರ್ಯ ಕೈಕೊಂಡಿದೆ ಎಂದು ತಿಳಿಸಿದರು.

ನೆಹರೂ ಮಾಸ್ಕೋಗೆ ಹೋಗುವುದಿಲ್ಲ

ಮಾರ್ಷಲ್ ಸ್ಟಾಲಿನ್ನರನ್ನು ನೋಡಲು ಪಂಡಿತ ನೆಹರೂ ಹೋಗುವರೆಂಬ ಸುದ್ದಿ ನಿರಾಧಾರವಾದುದೆಂದು ಪ್ರಕಟವಾಗಿದೆ.

ನೇತಾಜಿಯೇ?

ಜಾಂಷೆಡ್‌ಬಾಗ್ ಸ್ಟೇಷನ್ನಿನಲ್ಲಿ ದೆಹಲಿಗೆ ಹೋಗುವ ರೈಲು ನಿಲ್ಲುತ್ತಲೇ ಜನರು ಸನ್ಯಾಸಿಯೊಬ್ಬರನ್ನು ಮುತ್ತಿದರು. ಅವರ ಆಕೃತಿ ನೇತಾಜಿ ಸುಭಾಷ್‌ಚಂದ್ರ ಬೋಸರಂತೇ ಹೋಲುತ್ತಿತ್ತು.

ಆ ವ್ಯಕ್ತಿಯು ತನ್ನ ಹೆಸರನ್ನು ಹೇಳಲಿಲ್ಲ. ಜನರು ಅವರನ್ನು ನೇತಾಜಿ ಎಂದು ತಿಳಿದು ಜಯಕಾರ ಮಾಡತೊಡಗಿದರು.

ಗುರು ಮಹಾಪ್ರಭುಗಳ ಶಿಷ್ಯ ಭಕ್ತಿಪದಿ ಬಾ!! ರಾಜೇಂದ್ರ ಪ್ರಸಾದರನ್ನು ಸಂದರ್ಶಿಸಲು ದೆಹಲಿಗೆ ಹೋಗುತ್ತೇನೆ ಎಂದು ಅವರು ಹೇಳಿದರು.

ಉದಾರ ದಾನ

ಮೈಸೂರು ಜ ೧೬

ಮಧ್ಯಭಾರತದಲ್ಲಿ ಅಕೌಂಟೆಂಟ್ ಜನರಲ್ಲರಾದ ಶ್ರೀ ಸಿ. ಸುಂದರರಾಮರಾಯರು ಮಹಾರಾಜಾ ಕಾಲೇಜು ಶತಮಾನೋತ್ಸವ ಸಂದರ್ಭದಲ್ಲಿ, ಉತ್ತಮ ದರ್ಜೆಯ ವಿದ್ಯಾರ್ಥಿನಿಗೆ ಪ್ರತಿವರ್ಷವೂ ೮ ತಿಂಗಳು ಕಾಲ ೧೦ ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ಅಥವಾ ಬಿ. ಎಸ್ಸಿ. ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆಯುವ ವಿದ್ಯಾರ್ಥಿನಿಗೆ ಚಿನ್ನದ ಪದಕವನ್ನು ಕೊಡಲು ಉಪಯೋಗಿಸಬೇಕೆಂದು, ತಮ್ಮ ಪತ್ನಿ ದಿವಂಗತ ಶ್ರೀಮತಿ ಪಾರ್ವತಮ್ಮನವರ ಹೆಸರಿನಲ್ಲಿ ೨೦೦೦ ರೂಪಾಯಿಗಳ ಉದಾರದಾನ ಮಾಡಿದ್ದಾರೆ.

ಇವರ, ಮೈಸೂರು ಪೌರಸಭೆಯಲ್ಲಿ ಕಮಿಷನರಾಗಿದ್ದ ಶ್ರೀ!! ಆನಂದರಾಮರಾಯರ ಹಿರಿಯ ಸಹೋದರರು.

ಅಮೆರಿಕಾ ಬಜೆಟ್

ಅಮೆರಿಕಾ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷ ಟ್ರೂಮನ್ನರು ೧೯೫೧ನೇ ಜುಲೈನಿಂದ ೧೯೫೨ನೇ ಜೂನ್ ಅಂತ್ಯದವರೆಗೆ ಸರ್ಕಾರದ ಬಜೆಟ್ಟನ್ನು ಮಂಡಿಸಿರುವರು. ಸೈನ್ಯ [illegible] ಒದಗಿಸಲು ೪೧೪೨ ಕೋಟಿ ೧೦ ಲಕ್ಷ ಡಾಲರುಗಳು. ಮಿತ್ರ ಸೈನ್ಯಬಲವನ್ನು ಹೆಚ್ಚಿಸಲು [illegible] ಕೋಟಿ ೩೦ ಲಕ್ಷ ಡಾಲರುಗಳ ಒಟ್ಟು ೭೧೫೯ ಕೋಟಿ ೪೦ ಲಕ್ಷ ಡಾಲರುಗಳ ವೆಚ್ಚದ ಅಂದಾಜನ್ನು ತೋರಿಸಿರುವರು.

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ಬೆಂಗಳೂರು ಜ. ೧೫

ಪಕ್ಷದ ಸಾಮಾನ್ಯ ಸದಸ್ಯರ ಸಭೆಯು ಈ ತಿಂಗಳು ೧೭ನೇ ತಾ!! ರಾತ್ರಿ ೮-೩೦ಕ್ಕೆ ಕುಮಾರ್ ಪಾರ್ಕಿನಲ್ಲಿ ಸೇರುವುದು. ಕಾರ್ಯನಿರ್ವಾಹಕ ಸಮಿತಿಗೆ ಚುನಾವಣೆ, ವಿವಿಧ ಇಲಾಖೆಗಳ ಸಲಹಾಸಮಿತಿಗಳ ರಚನೆ ಇತ್ಯಾದಿ ವಿಷಯಗಳು ಪರಿಶೀಲನೆಗೆ ಬರಲಿವೆ.

ಮೈಸೂರು ಫಿಲಂ ಸೆನ್ಸಾರ್ ಬೋರ್ಡು ರದ್ದು

ಭಾರತಾದ್ಯಂತ ಫಿಲಂಗಳನ್ನು ಸೆನ್ಸಾರ್ ಮಾಡಲು ಕೇಂದ್ರ ಸಮಿತಿಯನ್ನು ನೇಮಿಸಿರುವುದರಿಂದ ಮೈಸೂರು ದೇಶದಲ್ಲಿ ಸರ್ಕಾರವು ನೇಮಿಸಿದ್ದ ಫಿಲಂಸೆನ್ಸಾರ್ ಬೋರ್ಡನ್ನು ೧೫-೧-೧೯೫೧ ರಿಂದ ರದ್ದುಮಾಡಲಾಗಿದೆ. ಇನ್ನು ಬೊಂಬಾಯಿನಲ್ಲಿರುವ ಕಛೇರಿಗೆ ಬರೆದು ಕೊಳ್ಳಬೇಕಾಗಿದೆ.

ಪ್ರೆಸ್-ಆಕ್ಟ್ ತಿದ್ದುಪಡಿ ಸಮಿತಿ

೧೯೪೦ನೇ ಪ್ರೆಸ್ ಅಂಡ್ ಮತ್ತು ನ್ಯೂಸ್‌ಪೇಪರ್ ಆಕ್ಟನ್ನು ಈಗ ರಾಜ್ಯಾಂಗಕ್ಕನುಗುಣವಾಗಿ ತಿದ್ದುಪಡಿ ಮಾಡಲು, ಮಾಜಿ ವಿದ್ಯಾಮಂತ್ರಿ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರವು ನೇಮಿಸಲಿದೆಯೆಂದು ತಿಳಿಯಬರುತ್ತದೆ.

ಫ್ರೆಂಚ್ ರೆಸಿಡೆಂಟರಿಗೆ ಸಭಾ ಮತ್ತು ಗಡೀಪಾರು

ಜನಗಣತಿಗೆ ಪ್ರಜೆಗೆ ಹೋದ ಪಾಂಡಿಚೇರಿಯ [illegible] ಮಾಡಿದರೆಂಬ ಆಪಾದನೆ ಮೇಲೆ [illegible] ಫ್ರೆಂಚ್ ರೆಸಿಡೆಂಟರಿಗೆ [illegible] ದಿನ [illegible] [illegible] ಆ ಶಿಕ್ಷೆಯನ್ನು [illegible] ನಂತರ [illegible] ಹೊಂದಬೇಕೆಂದು ಆಜ್ಞೆ ಮಾಡಲಾಗಿದೆ.

ಸಮಾಚಾರ

ಮಂಗಳವಾರ ತಾರೀಖು ೧೬

ಸರ್ಕಾರವು ಆಸ್ಪದವೀಯಕೂಡದು

ಭಾರತಾದ್ಯಂತ ಎಲ್ಲಾ ಪ್ರಾಂತ್ಯಗಳಲ್ಲೂ ಆಹಾರ ಪಡಿತರವನ್ನು ಖೋತಾ ಮಾಡಲಾಗುವುವೆಂಬ ಸುದ್ದಿಯು ಜನತೆಗೆ ತಿಳಿದೊಡನೆಯೇ ಸಿಡಿಲು ಬಡಿದಂತಾಗಿದೆ. ರೇಷನ್ ಜಾರಿಯಾದಾಗಿನಿಂದ ಜನರು ನಾನಾತರಹದ ಕಷ್ಟನಷ್ಟಗಳನ್ನು ಅನುಭವಿಸುತ್ತಲಿರುವರು. ಉತ್ತಮ ಆಹಾರವು ದೊರೆಯದೆ ಅನೇಕರು ರೋಗಪೀಡಿತರಾಗಿರುವರು. ಕೊಡುವ ಆಹಾರವು ಸಾಲದೆ, ಮಕ್ಕಳು-ಮರಿಗಳಿಗೆ ಅರ್ಧ ಹೊಟ್ಟೆ ಆಹಾರಹಾಕಿ, ತಾವುಗಳು ಉಪವಾಸಮಾಡುತ್ತಾ, ದೇಹಶೋಷಣೆಮಾಡಿಕೊಳ್ಳುತ್ತಲಿರುವರು. ಹಣವಿರುವವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಆಹಾರ-ಪದಾರ್ಥಗಳನ್ನು ಕೊಂಡು ಗಳಿಸಿದ ಹಣವನ್ನೆಲ್ಲಾ ಹಾಳುಮಾಡಿಕೊಳ್ಳುತ್ತಲಿರುವರು. ಮನೆಯಲ್ಲಿ ಮಕ್ಕಳು-ಮರಿಗಳ ಗೋಳನ್ನು ತಡೆಯಲಾರದೆ, ಅನೇಕರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಕೊಂಡು ನಿರ್ಗತಿಕರಾಗುತ್ತಲಿರುವರು. ಭಾರತಾದ್ಯಂತ ೧೨ ಔನ್ಸ್ ಪಡಿತರವನ್ನು ಮೊದಲಿನಿಂದಲೂ ಹಂಚುತ್ತಲಿರುವರು. ಭತ್ತದ ಬೆಳೆಗೆ ಪ್ರಸಿದ್ಧವಾದ, ಅನೇಕ ನೀರಾವರೀ ಉದ್ಯಮಗಳಿರುವ ನಮ್ಮ ಸಂಸ್ಥಾನದಲ್ಲಿ ಮೊದಲಿನಿಂದಲೂ ೯ ಔನ್ಸು ಪಡಿತರವನ್ನೇ ಕೊಡುತ್ತಲಿರುವರು. ಅಕ್ಕಿಯನ್ನೇ ಉಪಯೋಗಿಸುವ ಪ್ರಾಂತ್ಯಗಳಲ್ಲಿ ಅಕ್ಕಿ ಪಡಿತರವು ಕೊಡುತ್ತಲಿರುವುದು, ನಮ್ಮಲ್ಲಿಯ ಕಡಮೆಯೆಂದೇ ಹೇಳಬೇಕಾಗಿದೆ.

ನಾಲ್ಕಾರು ವರ್ಷಗಳಿಂದ ಆಹಾರವನ್ನು ಹೊರಗಿನಿಂದ ತರಿಸಿಕೊಳ್ಳುತ್ತ ಬಂದರೂ ನಮ್ಮ ದೇಶದಲ್ಲಿ ಆಹಾರ ಅಭಾವವು ನೀಗದೆ, ಹೆಚ್ಚು ಆಹಾರಬೆಳೆಯ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳು ವೆಚ್ಚವಾಗಿ, ಏನೂ ಫಲಕಾರಿಯಾಗಿಲ್ಲ

ಈಗ ದೇಶಾದ್ಯಂತ ಪಡಿತರವನ್ನು ಶೇಕಡ ೨೫ರಷ್ಟು ಕಡಮೆ ಮಾಡುವರೆಂಬ ಸುದ್ದಿಯು ಹೊರಬಿದ್ದಿದೆ. ಇತರ ಪ್ರಾಂತ್ಯಗಳಲ್ಲಿ ಇದನ್ನು ಜಾರಿಗೆ ತಂದರೆ ಅವರಿಗೆ ೯ ಔನ್ಸ್ ಆಹಾರ-ಧಾನ್ಯ ದೊರೆಯುವುದು. ಆದರೆ ನಮ್ಮ ಪ್ರಾಂತ್ಯದ ಜನರ ಗತಿಯೇನು? ಕೇವಲ 6¾ ಔನ್ಸ್ ಗಳಿಯುವುದು. ಈಗಲೇ ಆಹಾರವಿಲ್ಲದೆ ತೊಂದರೆಪಡುತ್ತಲಿರುವವರಿಗೆ ಇದು ದೊಡ್ಡ ಕೊಡಲಿಪೆಟ್ಟು.

ಆಯಾ ಪ್ರಾಂತ್ಯದ ಸ್ಥಿತಿಗತಿಗಳನ್ನರಿತು ಕೇಂದ್ರದೊಡನೆ ಹೋರಾಡಿ ಜನತೆಗೆ ಮದರಾಸ್ ಪ್ರಾಂತ್ಯ ಮುಂತಾದುವು ಹೇಗೆ ಸೌಕರ್ಯಗಳನ್ನು ಕಲ್ಪಿಸುತ್ತಲಿವೆಯೋ ಅದೇ ರೀತಿ ನಮ್ಮ ಸರ್ಕಾರವೂ ಕೇಂದ್ರದೊಡನೆ ಹೋರಾಡಿ ನಮ್ಮ ದೇಶದಲ್ಲಿ ಪಡಿತರ ಖೋತಾ ಆಗದಂತೆ ನೋಡಿಕೊಳ್ಳುವುದು ಅವರ ಪ್ರಥಮಕರ್ತವ್ಯ. ಇಲ್ಲದಿದ್ದಲ್ಲಿ ದೇಶದಲ್ಲಿ ಸ್ಥಿತಿಯು ಹದಗೆಟ್ಟು ಏನೇನು ಹಾನಿಯಾಗುವುದೋ ಹೇಳಲಾಗುವುದಿಲ್ಲ. ಸರ್ಕಾರದವರು ಈಗ ಅತ್ಯಂತ ಜಾಗರೂಕತೆಯಿಂದ ವರ್ತಿಸಬೇಕಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಷನ್ ಕಾರ್ಡುಗಳಲ್ಲಿ ತಿದ್ದುಪಡಿ

ಅಚಾತುರ್ಯದಿಂದ ಮುದ್ರಣವಾಯಿತು

ಮೈಸೂರು ಜ. ೧೫

ನಗರದ ಮುಖ್ಯ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ ನರಸಿಂಹಮೂರ್ತಿಯವರು ಈ ಬೆಳಿಗ್ಗೆ ಪೌರಸಭಾ ಭವನದಲ್ಲಿ ಪತ್ರಿಕಾ ಸಮ್ಮೇಳನವನ್ನು ನಡೆಸಿ ನಗರದ ಆಹಾರ ಸರಬರಾಜಿನ ಪರಿಸ್ಥಿತಿಯನ್ನು ವಿವರಿಸಿದರು. ರೇಷನಿಂಗ್ ಅಧಿಕಾರಿಗಳಾದ ಶ್ರೀ ಡಿ. ಜೆ. ಬಾಲರಾಜ್‌ರವರೂ ಸಹ ಬಂದಿದ್ದರು ರೇಷನ್ ಪದಾರ್ಥಗಳನ್ನು ಕಾರ್ಡಿನಲ್ಲಿ ಕಂಡಂತೆ ಒದಗಿಸುವ ಭರವಸೆ ಕೊಡಲಾಗುವುದಿಲ್ಲವೆಂಬುದಾಗಿ ಹೊಸ ರೇಷನ್ ಕಾರ್ಡುಗಳಲ್ಲಿ ನಮೂದಿಸಿರುವ ಅಂಶವು ವಿಶೇಷ ಟೀಕೆಗೂ ಮತ್ತು ದುರಭಿಪ್ರಾಯಗಳಿಗೂ ಅವಕಾಶ ಉಂಟುಮಾಡಿರುವ ವಿಷಯವನ್ನು ರೇಷನಿಂಗ್ ಅಧಿಕಾರಿಗಳು ಪ್ರಸ್ತಾಪಿಸಿ ಈ ಕಲಮನ್ನು ಕೂಡಲೇ ರದ್ದು ಮಾಡುವಂತೆ ಸರ್ಕಾರದಿಂದ ಸೂಚನೆ ಬಂದಿರುವುದಾಗಿ ತಿಳಿಸಿದರು. ಇದು ಕೇವಲ ಅಚಾತುರ್ಯದಿಂದ ಮುದ್ರಣವಾಗಿರುತ್ತದೆ. ಇದರಲ್ಲಿ ಯಾವ ಉದ್ದೇಶವೂ ಇರಲಿಲ್ಲ. ಅಧಿಕೃತವಾದ ಪಡಿತರ ಪದ್ಧತಿಯು ಜಾರಿಗುಳ್ಳ ಕಡೆಗಳಿಗೆ ಮಾತ್ರ ಈ ವಿಷಯವು ಅನ್ವಯಿಸುತ್ತದೆ ಮೈಸೂರು, ಬೆಂಗಳೂರು ಮುಂತಾದ ನಗರಗಳಿಗೆ ಅನ್ವಯಿಸುವುದಿಲ್ಲ. ಆಯಾ ಡಿಪೋಗಳಿಗೆ ಕಾರ್ಡುಗಳನ್ನು ತೆಗೆದುಕೊಂಡು ಹೋದಂತೆಲ್ಲಾ ಈ ಕಲಮನ್ನು ರದ್ದು ಮಾಡಿಕೊಡುವಂತೆ ಸೂಚನೆ ಕೊಡಲಾಗುವುದು, ಇನ್ನು ಮುಂದೆ ಎಂದಿನಂತೆ ಎಲ್ಲಾ ರೇಷನ್ ಪದಾರ್ಥಗಳನ್ನು ಸರಿಯಾಗಿ ಹಂಚುವಂತೆ ಏರ್ಪಾಡು ಮಾಡಲಾಗಿದೆ ಮಹಾಜನರು ಯಾವ ಕಳವಳಕ್ಕೂ ಆಸ್ಪದ ಕೊಡಬಾರದು-ಎಂದು ಅವರು ತಿಳಿಸಿದರು

ಈಗ ಆಹಾರದ ಪರಿಸ್ಥಿತಿಯು ಉತ್ತಮಗೊಂಡಿರುತ್ತದೆ. ಎಲ್ಲಾ ಡಿಪೋಗಳಲ್ಲಿಯೂ ಒಂದೊಂದು ವಾರದ ಪಡಿತರವನ್ನು ಎಲ್ಲರಿಗೂ ಕೊಡಲು ಏರ್ಪಾಡು ಮಾಡಲಾಗಿದೆ ತಿಂಗಳ ಪ್ರಾರಂಭದಲ್ಲಿ ನಗರದ ಡಿಪೋಗಳಿಗೆ ಒಟ್ಟು ೪,೫೦೦ ಪಲ್ಲಕ್ಕಿಂತಲೂ ಹೆಚ್ಚು ಧಾನ್ಯವನ್ನು ಒದಗಿಸಲಾಯಿತು. ಒಟ್ಟು ತಿಂಗಳಿನ ಪ್ರಮಾಣದಲ್ಲಿ ಇದು ಅರ್ಧದಷ್ಟಾಗುವುದು. ಕೆಲವರು ಹೆಚ್ಚುಹೆಚ್ಚಾಗಿ ಪಡಿತರವನ್ನು ತೆಗೆದುಕೊಂಡುದರಿಂದ ಇನ್ನು ಕೆಲವರಿಗೆ ಸಿಗಲು ತೊಂದರೆಯಾಯಿತು. ಇನ್ನುಮುಂದೆ ಹಾಗೆ ಆಗದೆ ಎಲ್ಲರಿಗೂ ಅವಶ್ಯಕವಾದಷ್ಟು ಧಾನ್ಯವು ಒದಗುವಂತೆ ಮಾಡಲಾಗುವುದು.

ರಾಗಿಯ ದಾಸ್ತಾನು ಕಡಿಮೆಯಿದ್ದರೂ, ಜೋಳವು ಸಾಕಾದಷ್ಟು ಇರುತ್ತದೆ. ಆದುದರಿಂದ ಮುಕ್ಕಾಲು ಭಾಗದಷ್ಟು ಜೋಳವನ್ನೂ, ಕಾಲುಭಾಗದಷ್ಟು ರಾಗಿಯನ್ನೂ ಕೊಡಲಾಗುತ್ತಿದೆ. ಸದ್ಯದಲ್ಲಿಯೇ ಇನ್ನೂ ಹೆಚ್ಚು ಧಾನ್ಯದ ಸರಬರಾಜಾಗುವ ನಿರೀಕ್ಷಣೆಯಿದೆ.

ಸುಳ್ಳು ರೇಷನ್ ಕಾರ್ಡುಗಳನ್ನು ಪತ್ತೆ ಹಚ್ಚಿ ಆ ಮೂಲಕ ಇತ್ತೀಚೆಗೆ ಸುಮಾರು ಹತ್ತು ಸಾವಿರ ಜನರ ಪಡಿತರವನ್ನು ಉಳಿತಾಯ ಮಾಡಲಾಗಿದೆ.

ಹೋಟೆಲುಗಳ ಊಟದ ಪ್ರಮಾಣ ಮತ್ತು ದರಗಳನ್ನು ನಿಗದಿಮಾಡುವ ಬಗ್ಗೆ ಸರ್ಕಾರಕ್ಕೆ ಶಿಫಾರ್ಸು ಮಾಡಲಾಗಿದೆ.

ಸಕ್ಕರೆ ಸರಬರಾಜಿನ ಸ್ಥಿತಿಯು ಇಡೀ ಭರತಖಂಡದಲ್ಲೆಲ್ಲಾ ಅಸಮರ್ಪಕವಾಗಿದೆ ಆದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಒದಗಿಸಲು ಸಾಧ್ಯವಿಲ್ಲ ಬೆಲ್ಲದ ತಯಾರಿ ಮತ್ತು ರವಾನೆಯ ನಿರ್ಬಂಧವನ್ನು ತೆಗೆದುಹಾಕಿರುವುದರಿಂದ ಅದು ಧಾರಾಳವಾಗಿ ದೊರೆಯುತ್ತಿದೆ ಹಲವು ರೇಷನ್ ಡಿಪೋಗಳಲ್ಲೂ ಸಹ ಅದನ್ನು ಮಾರಲಾಗುತ್ತಿದೆ.

ರೇಷನ್ ಡಿಪೋಗಳಲ್ಲಿರುವ ನ್ಯೂನಾತಿರೇಕಗಳನ್ನು ಪರಿಶೀಲಿಸಿ ಸರಿಪಡಿಸಲು ಅಧಿಕಾರಿಗಳು ಆಗಿಂದಾಗ್ಯೆ ಅನಿರೀಕ್ಷಿತ ಭೇಟಿಗಳನ್ನು ಕೊಡುತ್ತಿರುವರು. ಮಹಾಜನರೂ ಸಹ ಈ ವಿಷಯದಲ್ಲಿ ನ್ಯೂನಾತಿರೇಕಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೆ ಕೂಡಲೇ ಕ್ರಮಪಡಿಸಲಾಗುವುದು ಎಂಬುದಾಗಿ ತಿಳಿಸಿದರು.

ನ್ಯೂ ಅಪೇರಾ

ಮೈಸೂರು

ತಾ॥ ೧೧-೧-೫೧ ರಿಂದ

★ ಮಂಗಯರ್ ಕರಸಿ ★

ಅಭಿನಯ

ಪಿ. ಯು ಚಿನ್ನಪ್ಪ: ಪಿ. ಕಣ್ಣಾಂಬ,

ಅಂಜಲೀದೇವಿ: ಲಲಿತಾ-ಪದ್ಮಿನಿ,

ಎನ್. ಎಸ್. ಕೃಷ್ಣನ್: ಟಿ. ಎ. ಮಧುರಂ

ಪ್ರತಿದಿನ ೩ ಆಟಗಳು

ಗ್ರಾಮ ಕೈಗಾರಿಕೆ ಯೋಜನಾ ಸಮಿತಿಯ ನೇಮಕ

ಗ್ರಾಮ ಕೈಗಾರಿಕೆಗಳ ಬಗ್ಗೆ ಸರ್ ಎಂ. ವಿಶ್ವೇಶ್ವರಯ್ಯನವರು ತಯಾರಿಸಿರುವ ಯೋಜನೆಗಳನ್ನು ಬೇಗನೆ ಕಾರ್ಯಗತಮಾಡುವ ಸಲುವಾಗಿ ಸರ್ಕಾರದವರು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುವರು. ಅದರಲ್ಲಿ ಏಳು ಮಂದಿ ಅಧಿಕಾರಿ ಮತ್ತು ಖಾಸಗಿ ಸದಸ್ಯರಿರುವರು.

ಕಮ್ಯೂನಿಸ್ಟರೊಡನೆ ಸಹಕರಿಸಲು ಸಿದ್ಧ

ಕಾರ್ಮಿಕ, ರೈತ ಮತ್ತು ಶಾಂತಿ ಸಂಬಂಧವಾದ ವಿಷಯಗಳಲ್ಲಿ ಅಖಿಲಭಾರತ ಫಾರ್ವರ್ಡ್ ಬ್ಲಾಕಿನವರು ಕಮ್ಯೂನಿಸ್ಟ್ ಪಕ್ಷದೊಡನೆ ಸಹಕರಿಸಲು ಸಿದ್ಧವಾಗಿರುವುದಾಗಿ ಫಾರ್ವರ್ಡ್ ಬ್ಲಾಕಿನ ಉಪಾಧ್ಯಕ್ಷ ಶ್ರೀ ಶೀಲಭದ್ರಯಾಜಿಯವರು ತಿಳಿಸಿರುವರೆಂದು ವರದಿಯಾಗಿದೆ.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೧—೧೯೫೧ನೇ ಬುಧವಾರ [ಸಂಚಿಕೆ ೧೧೫

ಸಂಸ್ಥಾನದ ಅಧಿಕಾರಿಗಳ ಹಿತಾಶಯಕ್ಕೆ ಚ್ಯುತಿಯಿಲ್ಲ

ಶಾಸನಸಭೆಯಲ್ಲಿ ಶ್ರೀಮನ್ಮಹಾರಾಜರ ಭಾಷಣ

ಇಂದು ಮಧ್ಯಾಹ್ನ ೩ ಗಂಟೆಗೆ ಬೆಂಗಳೂರಿನಲ್ಲಿ ಶಾಸನ ಸಭಾಧಿವೇಶನವು ಪ್ರಾರಂಭವಾಯಿತು

ಕಾಶ್ಮೀರ ಆಡಳಿತದಲ್ಲಿ ಪ್ರವೇಶಿಸಲು ಪಾಕಿಸ್ತಾನಕ್ಕೆ ಸಮನಾದ ಭಾಗವಿಲ್ಲ

ಕಾಶ್ಮೀರದಲ್ಲಿ ಸೈನ್ಯವನ್ನಿಟ್ಟಿರಲು ಮತ್ತು ಆ ಪ್ರಾಂತ್ಯದ ಆಡಳಿತದಲ್ಲಿ ಪ್ರವೇಶಿಸಲು ಭಾರತದಷ್ಟು ಹಕ್ಕು, ಸಮಾನತೆ ಪಾಕಿಸ್ತಾನಕ್ಕಿಲ್ಲ. ಶಾಂತಿಯುತ ಇತ್ಯರ್ಥದ ಬಗ್ಗೆ ಭಾರತವು ಸದಾ ಕಾತುರತೆಯನ್ನು ತೋರ್ಪಡಿಸುತ್ತಲಿದೆ. ಈಗಾಗಲೇ ಭಾರತವು ದೇಶದ ರಕ್ಷಣೆಗೆ ಸಾಕಾದಷ್ಟು ಸೈನ್ಯವನ್ನು ಮಾತ್ರ ಅಲ್ಲಿಟ್ಟು ಹೆಚ್ಚಿಗಿರುವುದನ್ನೆಲ್ಲಾ ಹಿಂದಕ್ಕೆ ಕರೆಸಿಕೊಂಡಿದೆ. ಪಾಕಿಸ್ತಾನವು ತನ್ನ ಆಕ್ರಮಣ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಯಿಸಿಕೊಂಡಲ್ಲಿ ಭಾರತವೂ ಸೈನ್ಯವನ್ನು ಇನ್ನೂ ಹಿಂದಕ್ಕೆ ಕರೆಸಿಕೊಳ್ಳಲು ಸಿದ್ಧವಿದೆ ಆದರೆ ೧೯೪೭ ರಲ್ಲಿ ನಡೆದ ದುರಂತವು ಮರುಕಳಿಸದಂತೆ ಸ್ಪಷ್ಟವಾದ ನಿರ್ಧಾರವಾಗಬೇಕು ಎಂದು ಭಾರತ ಪ್ರಧಾನಿ, ಪಂಡಿತ ನೆಹರೂರವರು ಲಂಡನ್ನಿನಲ್ಲಿ ಕಾಶ್ಮೀರ ವಿಷಯವಾಗಿ ಮಾತನಾಡುತ್ತಾ ಹೇಳಿದರು.

ಅವರು ತಮ್ಮ ಭಾಷಣದಲ್ಲಿ ಮಿ॥ ಲಿಯಾಖತ್ ಅಲೀಖಾನರವರು ಕಾಮನ್ವೆಲ್ತ್ ಪ್ರಧಾನಿಗಳು ಅನಧಿಕೃತವಾಗಿ ನಡೆಸಿದ ಚರ್ಚೆಯ ವಿಷಯಗಳನ್ನು ಬಹಿರಂಗಪಡಿಸಿರುವುದು ಅಸಂಪ್ರದಾಯ. ಅಲ್ಲದೆ ಅವರ ಹೇಳಿಕೆ ಸರಿಯಾಗಿಲ್ಲ. ಸಲಹೆಗಳು ವಿಚಿತ್ರವಾಗಿವೆ ಮಿ॥ ಲಿಯಾಖತ್ ಅಲಿಖಾನರವರು ಸರ್ವ ಪ್ರಜಾಭಿಪ್ರಾಯವನ್ನು ಒತ್ತಿ ಹೇಳುತ್ತ, ಕಾಮನ್ವೆಲ್ತ್ ರಾಜ್ಯಗಳೆಲ್ಲವೂ ಈ ಸಮಯದಲ್ಲಿ ತಮ್ಮ ಸೈನ್ಯ ಪಂಗಡಗಳನ್ನು ಕಾಶ್ಮೀರದಲ್ಲಿಟ್ಟು, ಅದರ ವೆಚ್ಚವನ್ನೆಲ್ಲಾ ಆಯಾ ರಾಷ್ಟ್ರಗಳೇ ಕೊಡಬೇಕು ಅವರೇ ಸ್ಥಳೀಯ ಸಂಯುಕ್ತ ಸೈನ್ಯವ್ಯವಸ್ಥೆಮಾಡಬೇಕು ಇತರ ಸೈನ್ಯವನ್ನೆಲ್ಲಾ ವಿಸರ್ಜಿಸಬೇಕೆಂದು ಪ್ರತಿಪಾದಿಸಿದ್ದಾರೆ. ಇದು ಅರ್ಥವಿಲ್ಲದ್ದು. ಬಲವಂತವಾಗಿ ನಾವು ಯಾವ ನಿರ್ಧಾರವನ್ನೂ ಹೊರಿಸಲಾಗುವುದಿಲ್ಲ. ಪ್ರಜೆಗಳೇ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕು ಈಗ ಇವರು ಮಾಡಿದ್ದುದರಲ್ಲಿ ಹೊಸ ಸಲಹೆಗಳೇನೂ ಇಲ್ಲ ಹಳೇ ಸಲಹೆಗಳಿಗೇ ಹೊಸ ರೂಪ ಕೊಡಲಾಗಿದೆ ಎಂದು ಹೇಳಿದರು

ಅವರು ಮುಂದುವರಿಯುತ್ತ, ಪಾಕಿಸ್ತಾನವು ಪ್ರಾರಂಭದಿಂದಲೂ ಜಾತೀಯ ಭಾವನೆಯಿಂದಲೇ ವರ್ತಿಸುತ್ತಲಿದೆ. ಜಾತಿ ಆಧಾರದ ಮೇಲೆ ಕಾರ್ಯವೆಸಗಿದಲ್ಲಿ ದುಷ್ಪರಿಣಾಮಗಳಾಗುವುದು. ಭಾರತದಲ್ಲಿರುವ ೪ ಕೋಟಿ ಮುಸ್ಲಿಮರು, ಪಾಕಿಸ್ತಾನದಲ್ಲಿ ೧॥ ಕೋಟಿ ಹಿಂದುಗಳುಪರದೇಶೀಯರಂತೆ ಪರಿಗಣಿಸಬೇಕಾಗುತ್ತದೆ ಅಲ್ಲದೆ ಅವರು ಉತ್ತಮಪ್ರಜೆಗಳಾಗದಿರಬಹುದು. ಕಾಶ್ಮೀರದಲ್ಲಿ ಈ ಸ್ಥಿತಿ ಸ್ವಲ್ಪ ಶಾಂತಿರೂಪ ತಾಳಿತ್ತು ಆದರೆ ಜಾತೀಯ ಯುದ್ಧ ಚಳುವಳಿ ಪ್ರಾರಂಭವಾದಾಗಿನಿಂದ ಹದಗೆಟ್ಟಿತು. ಹಿರಿಯಪಂಗಡದ ಇಚ್ಛೆಗೆ ಮಾನ್ಯತೆ ಕೊಟ್ಟು ರಕ್ಷಣೆ, ವಿದೇಶಾಂಗ ನೀತಿಯನ್ನು, ಭಾರತವು ವಹಿಸಿಕೊಂಡಿದೆ. ಆದರೆ ಒಳ ವ್ಯವಹಾರಗಳಲ್ಲಿ ಪ್ರವೇಶಿಸುವುದಿಲ್ಲ ರಾಜ್ಯ ಪ್ರಜೆಗಳೇ ಅವುಗಳನ್ನು ನಿರ್ಧರಿಸಿಕೊಳ್ಳಬೇಕೆಂದು ತಿಳಿಸಿದರು.

ವಿದೇಶಾಂಗನೀತಿ, ಸಂಯುಕ್ತರಕ್ಷಣೆ, ಅಂತರ ಪರಿಸ್ಥಿತಿ ವಿಷಯವಾಗಿಯೂ ಪ್ರಸ್ತಾಪಿಸಿದರು. ಭಾರತವು ಹೆಚ್ಚು ವಿದೇಶೀಯ ರಾಷ್ಟ್ರಗಳೊಡನೆ ಸ್ನೇಹ ಬೆಳಸಲು ಹೋರಟಿದೆ ಆದರೆ ಅನ್ಯ [illegible] ನೀತಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಅವುಗಳನ್ನು ಟೀಕಿಸಿ ಪ್ರಯೋಜನವಿಲ್ಲ.

ದೇಶದಲ್ಲಿ ೬ ತಿಂಗಳ ಹಿಂದೆ ಆಹಾರಪರಿಸ್ಥಿತಿ ತೃಪ್ತಿಕರವಾಗಿತ್ತು ಅನೇಕ ಕಾರಣಗಳಿಂದ ಈಗ ಅಭಾವವುಂಟಾಗಿದೆ. ೨ ೩ ವರ್ಷಗಳೊಳಗಾಗಿ ಸರಿಹೋಗಬಹುದು. ಆದರೆ ೩ ೪ ವರ್ಷಗಳನ್ನು ಕಷ್ಟದಿಂದ ಕಳೆಯಬೇಕಾಗಿದೆ ಪ್ರಪಂಚದ ಅನೇಕ ದೇಶಗಳಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳಲು ಭಾರತವು ಸಂಧಾನ ನಡೆಸುತ್ತಲಿದೆ ಫಲಕಾರಿಯಾಗುತ್ತಲೂ ಇದೆಯೆಂದ ಅವರು ಹೇಳಿದರು

ಲಾಗಿದೆ ಇವುಗಳ ಜೊತೆಗೆ ದೀರ್ಘಾವಧಿ ಯೋಜನೆಗಳಾದ ಲಕ್ಕವಳ್ಳಿ, ತುಂಗ, ನುಗು ಜಲಾಶಯಗಳ ನೀರಾವರೀ ಕೆಲಸಗಳ ಕಡೆಗೂ ನಮ್ಮ ಸರ್ಕಾರವು ಗಮನವೀಯುತ್ತಲಿದೆ

ಭಾರಿ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳೂ ಸಹ ತ್ವರಿತವಾಗಿ ನಡೆಯುತ್ತಲಿವೆ ಶಿವಮೊಗ್ಗದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದು, ಖಾದಿ ಕೈಗಾರಿಕೆ ಅಭಿವೃದ್ಧಿ ಪ್ರೋಸೆಸ್ ಕೈಗಾರಿಕಾ ಮುಂತಾದ ವಿಷಯದಲ್ಲಿ ಪ್ರಗತಿ ಮಾರ್ಗವನ್ನು ಕೈಗೊಳ್ಳಲಾಗುತ್ತಲಿದೆ. ನಮ್ಮ ದೇಶದಲ್ಲಿ ತಯಾರಾಗುತ್ತಲಿರುವ ವಿದ್ಯುಚ್ಛಕ್ತಿಯು ಮುಂದಿನ ಕೆಲವು ವರ್ಷಗಳಲ್ಲಿ ಸಾಲದೇ ಹೋಗಬಹುದೆಂದು, ಈಗಾಗಲೇ ನೂತನ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗೊಳ್ಳಲು ಕಾವೇರಿ ಮತ್ತು ಶರಾವತೀ ನದಿಗಳ ಪಾತ್ರಗಳಲ್ಲಿ ಸರ್ವೆ ನಡೆಸಲಾಗುತ್ತಲಿದೆ. ಇದರಿಂದ ಕೈಗಾರಿಕಾಭಿವೃದ್ಧಿಗೆ ಮಾರ್ಗವಾಗುವುದು.

ಶಾಸನ ಸಭೆಯ ಸದಸ್ಯರ ಸಲಹೆಗಳನ್ನು ಪಡೆಯಲು ಕೆಲವು ಸಲಹಾಸಮಿತಿಗಳನ್ನು ನೇಮಿಸಲು ಸರ್ಕಾರವು ನಿಶ್ಚಯಿಸಿದೆ

ಅಂತರರಾಷ್ಟ್ರೀಯ ಪರಿಸ್ಥಿತಿಯು ಕಾರ್ಮೋಡಗಳಿಂದ ಮುಚ್ಚಿದೆ. ಕೊರಿಯಾ ಸ್ಥಿತಿಯು ಹದಗೆಡುತ್ತಿದೆ. ನೇಪಾಳ ಟಿಬೆಟ್‌ಗಳಲ್ಲಿ ಅಚಾತುರ್ಯಗಳು ನಡೆದಿವೆ ಕಾಶ್ಮೀರ ಪ್ರಶ್ನೆಯು ಇನ್ನೂ ಇತ್ಯರ್ಥವಾಗಿಲ್ಲ. ಇನ್ನೊಂದು ಮಹಾ ಯುದ್ಧವನ್ನು ತಡೆಗಟ್ಟಬೇಕೆಂದು ಶ್ರಮಿಸುತ್ತಲಿರುವ ನಮ್ಮ ನಾಯಕರ ಕಾರ್ಯವು ಜಯಪ್ರದವಾಗಿ ಪ್ರಪಂಚದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ನಾವುಗಳು ಪ್ರಾರ್ಥಿಸೋಣ ನಾವು ಇನ್ನೂ ಅಸಾಧ್ಯವಾದ ಕಾರ್ಯಗಳನ್ನು ಎದುರಿಸಬೇಕಾಗಿದೆ ಉಗ್ರಪರಿಸ್ಥಿತಿಯನ್ನು ಶಾಂತರೀತಿಯಲ್ಲಿ ಎದುರಿಸೋಣ ಎಂದು ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ತಿಳಿಸಿದರು.

ಬೆಂಗಳೂರು ಜ. ೧೭

ಶ್ರೀಮನ್ಮಹಾರಾಜರವರು ಪ್ರಾರಂಭ ಭಾಷಣಮಾಡುತ್ತ, ಸರ್ದಾರ ಪಟೇಲರು ಭಾರತಕ್ಕೆ ಆಧಾರ ಸ್ತಂಭವಾಗಿದ್ದು ಅವರ ನಿಧನದಿಂದ ಅಪಾರ ನಷ್ಟವಾಗಿರುತ್ತದೆ ದೇಶದ ಸ್ವಾತಂತ್ರ್ಯ ಸಾಧನೆಗೆ ಅವರ ಪಾತ್ರ, ಸಂಸ್ಥಾನಗಳ ಐಕ್ಯತೆಗಾಗಿ ಅವರು ಶ್ರಮಿಸಿರುವುದು ಚರಿತ್ರೆಯಲ್ಲಿ ಶಾಶ್ವತವಾಗಿರುವುದು. ಅವರ ನಿಧನಕ್ಕೆ ನಾವು ದುಃಖಪಡುತ್ತಾ, ಅವರ ಮಾರ್ಗವನ್ನನುಸರಿಸಿ ನಮ್ಮ ಮುಂದಿನ ಕರ್ತವ್ಯ ಮಾಡಬೇಕಾಗಿದೆ ಎಂದು ಸರದಾರ್ ಪಟೇಲರ ನಿಧನಬಗ್ಗೆ ತಮ್ಮ ಅನುತಾಪವನ್ನು ಸೂಚಿಸಿದರು

ನಮ್ಮ ಸಂಸ್ಥಾನದ ಸರ್ಕಾರಿ ನೌಕರರು ಭಾರತ ಸರ್ಕಾರದೊಡನೆ ಮಿಳಿತವಾಗುವ ವಿಷಯದಲ್ಲಿ ಭಾರತ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಈಗಾಗಲೇ ಒಪ್ಪಂದವಾಗಿದೆ, ಹಿಂದಿನ ಶಾಸನ ಸಭೆಯಲ್ಲಿ ನಡೆದ ಚರ್ಚೆಗಳೆಲ್ಲವೂ ನಮ್ಮ ಸರ್ಕಾರದ ಗಮನದಲ್ಲಿದೆ ನಮ್ಮ ಅಧಿಕಾರಿಗಳ ಹಿತಾಶಯವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕಾರ್ಯಕ್ರಮವನ್ನು ಎಸಗುವರು. ಮೈಸೂರು ಸರ್ಕಾರದ ಅಭಿಪ್ರಾಯವನ್ನು ಪಡೆಯದೆ ಯಾವ ಬದಲಾವಣೆಗಳನ್ನು ಮಾಡುವುದಿಲ್ಲ ಕೇಂದ್ರದ ಸ್ಪೆಷಲ್ ರಿಕ್ರೂಟ್‌ಮೆಂಟ್ ಬೋರ್ಡಿನವರು ಸದ್ಯದಲ್ಲೇ (ಮುಂದಿನ ತಿಂಗಳು) ಅಧಿಕಾರಿಗಳನ್ನು ಚುನಾಯಿಸಲು ಸಂಸ್ಥಾನಕ್ಕೆ ಬರಲಿರುವರು.

ಭಾರತ ಮತ್ತು ನಮ್ಮ ಸರ್ಕಾರಗಳಿಗೆ ಆರ್ಥಿಕ ಕೇಂದ್ರೀಕರಣ ವಿಷಯದಲ್ಲಿ ಒಪ್ಪಂದವಾಗಿರುವುದು ತಿಳಿದೇಯಿದೆ ಇದರಿಂದ ನಮಗಾಗುವ ನಷ್ಟವನ್ನು ಸರಿತೂಗಿಸಲು ಕೇಂದ್ರ ಸರ್ಕಾರವು ೩೪೫ ಲಕ್ಷ ರೂಪಾಯಿಗಳನ್ನು ಒಂದು ನಿರ್ದಿಷ್ಟಕಾಲದವರೆಗೆ ಕೊಡಲೊಪ್ಪಿರುವುದು ಎಂಬುದು ತೃಪ್ತಿಕರವಾದ ವಿಷಯ ಅಧಿಕ ಆಹಾರ ಬೆಳೆಯ ಯೋಜನೆಗೆ ೧೯೪೯ ೫೦ನೇ ಸಾಲಿಗೆ ೪೨ ೬೩ ಲಕ್ಷ ರೂ ಗಳ ಗ್ರಾಂಟು, ೨೯ ೫ ಲಕ್ಷ ರೂ. ಗಳ ಸಾಲ, ೧೯೫೦ ೫೧ನೇ ಸಾಲಿಗೆ ೩೩.೫೫ ಲಕ್ಷ ರೂ. ಗಳ ಗ್ರಾಂಟು ಮತ್ತು ೬೦ ಲಕ್ಷ ರೂ. ಗಳ ಸಾಲವನ್ನು ಕೇಂದ್ರ ಸರ್ಕಾರವು ಕೊಟ್ಟಿರುವುದಲ್ಲದೆ ೫೦-೫೧ ಮತ್ತು ೫೧-೫೨ನೇ ಸಾಲಿನಲ್ಲಿ ಅಭಿವೃದ್ಧಿಕಾರ್ಯಗಳಿಗೆ ೧॥ ಕೋಟಿ ರೂ ಗಳ ಸಾಲವನ್ನೂ, ಗ್ರಾಮ ಕೈಗಾರಿಕಾಭಿವೃದ್ಧಿ ಕಾರ್ಯಗಳಿಗೆ ೭॥ ಲಕ್ಷ ರೂ. ಗಳ ಗ್ರಾಂಟನ್ನು ಕೊಡುವುದಾಗಿ ಭರವಸೆ ಇತ್ತಿರುವರು

ಮಿತವ್ಯಯ ತನಿಖಾ ಸಮಿತಿಯ ವರದಿಯನ್ನು ಸರ್ಕಾರದವರು ಪರಿಶೀಲಿಸಿ ಸಾಧ್ಯವಾದೆಡೆ ಹಣದ ವೆಚ್ಚವನ್ನು ಕಡಮೆಮಾಡುತ್ತಿದ್ದಾರೆ

ಇತ್ತೀಚೆಗೆ ದೇಶದಲ್ಲಿ ಭೂಕಂಪ ಪ್ರವಾಹ ಮುಂತಾದವುಗಳಿಂದ ಆಹಾರಪರಿಸ್ಥಿತಿಯು ವಿಶೇಷವಾಗಿ ಹದಗೆಟ್ಟಿದೆ. ಪರದೇಶಗಳಿಂದ ಆಹಾರ ತರಿಸಿಕೊಳ್ಳುವುದಕ್ಕೂ ಸೌಕರ್ಯಗಳು ಕಡಮೆಯಾಗಿವೆ ಇರುವ ಆಹಾರವನ್ನು ಸಮನಾಗಿ ಎಲ್ಲರೂ ಹಂಚಿಕೊಳ್ಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೆಳೆಯು ಕೆಟ್ಟಿಲ್ಲವಾದರೂ ಕೆಲವೆಡೆ ಮಳೆ ಬಾರದೆ ತೊಂದರೆಯಾಗಿದೆ ೧॥ ಲಕ್ಷ ಟನ್ನಿನ ಆಹಾರವು ನಮಗೆ ಕಡಮೆಯಾಗುತ್ತದೆ. ಕೇಂದ್ರವು ೧೬೫೦೦೦ ಟನ್ನು ಸರಬರಾಯಿಮಾಡುವುದಾಗಿ ತಿಳಿಸಿದೆ. ಕೇಂದ್ರ ಸರ್ಕಾರದ ಸಹಾಯದಿಂದ ಕೆಲವು ಅಲ್ಪಕಾಲದ ನೀರಾವರೀ ಕೆಲಸಗಳಿಗಾಗಿ ೧೯೪೯-೫೦ ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡ

ಪೌರಸಭಾ ಭವನದಲ್ಲಿ ಹೆಲ್ತ್ ಇನ್ಸ್‌ಪೆಕ್ಟರ ದಸ್ತಗಿರಿ

ಲಂಚ ಕೊಟ್ಟ ೧೦ ರೂ. ನೋಟಿನ ವಶ

ಮೈಸೂರು ಜ. ೧೬

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸೌದೆ ವರ್ತಕರಾದ ಶ್ರೀ ನಾರಾಯಣರಾಯರಿಂದ ೧೦ ರೂ. ಲಂಚವನ್ನು ಪಡೆದ ಅಪಾದನೆ ಮೇಲೆ ಸೀನಿಯರ್ ಸ್ಯಾನಿಟರಿ ಇನ್ಸ್‌ಪೆಕ್ಟರ್ ಚನ್ನಕೇಶವಾಚಾರಿ ಎಂಬುವರನ್ನು ನೆನ್ನೆ ಸಂಜೆ ನಗರದ ಪೋಲೀಸಿನವರು ನೋಟಿನ ಸಮೇತ ಪುರಸಭಾ ಭವನದ ಕೊಟಡಿಯಲ್ಲಿ ದಸ್ತಗಿರಿ ಮಾಡಿದರು.

ಅಪಾದಿತರು ಶ್ರೀ ನಾರಾಯಣರಾಯರಲ್ಲಿಗೆ ಅನೇಕಾವರ್ತಿ ಹೋಗಿ ಅವರ ಅಂಗಡಿಯ ಲೈಸನ್ಸನ್ನು ರದ್ದು ಮಾಡಿಸುವುದಾಗಿ ಬೆದರಿಸಿ ಲಂಚವನ್ನು ಕೇಳುತ್ತಿದ್ದು, ಅದನ್ನು ಅವರು ಕೊಡದಿದ್ದುದರಿಂದ ಅವರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದುದಲ್ಲದೆ ಬಲಾತ್ಕಾರವಾಗಿ ಅವರ ಅಂಗಡಿಯನ್ನೂ ಮುಚ್ಚಿಸಿ ಅನೇಕ ಬಗೆಯಾಗಿ ತೊಂದರೆಕೊಡುತ್ತಿರುವ ಬಗ್ಗೆ ಶ್ರೀ ನಾರಾಯಣರಾಯರು ಪೌರಸಭಾಧಿಕಾರಿಗಳಿಗೆ ಮೊದಲೇ ಸೂಚನೆ ಕೊಟ್ಟಿದ್ದರೆಂದೂ ಗೊತ್ತಾಗಿದೆ.

ಪೌರಸಭೆಯ ಇಂಜನಿಯರ್ ಶ್ರೀ ವಿ. ಕೆ. ಮುಕುಂದರವರಿಂದ ಮುಂಚಿತವಾಗಿಯೇ ರುಜು ಮಾಡಲಾಗಿದ್ದ ೧೦ ರೂ. ನೋಟನ್ನು ಶ್ರೀ ನಾರಾಯಣರಾಯರು ಅಪಾದಿತರಿಗೆ ನಿನ್ನೆ ದಿನ ಕೊಟ್ಟರೆಂದೂ, ಅನಂತರ ಅವರಿಬ್ಬರೂ ಅಲ್ಲಿನ ಹೋಟಲಿಗೆ ಹೋಗಿ ಇತರ ನಾಲ್ಕಾರು ಮಿತ್ರರೊಡನೆ ಉಪಾಹಾರವನ್ನು ಸ್ವೀಕರಿಸಿದನಂತರ ಅಪಾದಿತರು ಮೇಲ್ಕಂಡ ನೋಟನ್ನು ತೆಗೆದು ಹೋಟಲಿನವರಿಗೆ ಕೊಡಲು ಹೋದಾಗ ಅಲ್ಲಿಯೇ ಮುಂಚಿನಿಂದಲೂ ಕುಳಿತಿದ್ದ ಲಂಚ ನಿರೋಧ ಇಲಾಖಾಧಿಕಾರಿಗಳು ಸದರಿ ನೋಟನ್ನು ವಶಪಡಿಸಿಕೊಂಡು ಶ್ರೀ ಆಚಾರಿಯವರನ್ನು ದಸ್ತಗಿರಿ ಮಾಡಿದರೆಂದೂ ಗೊತ್ತಾಗಿದೆ ಅನಂತರ ಕ್ರೈಂ ಬ್ರಾಂಚಿನ ಪೋಲೀಸ್ ಅಧಿಕಾರಿಗಳು ತಕ್ಷ ಸಿಬ್ಬಂದಿಯೊಡನೆ ಬಂದು ಮಹಜರು ಕ್ರಮವನ್ನು ನಡೆಸಿ ಅಪಾದಿತರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು.

ರಾತ್ರಿ ೯ ಗಂಟೆಗೆ ೫೦೦ ರೂ.ನ ಎರಡು ಜಾಮೀನುಗಳನ್ನು ತೆಗೆದುಕೊಂಡು ಅಪಾದಿತರನ್ನು ಬಿಡುಗಡೆ ಮಾಡಲಾಯಿತು. ಅವರ ಮೇಲೆ ಮೊಕದ್ದಮೆ ಹೂಡಲು ಸರ್ಕಾರದ ಅನುಮತಿಯನ್ನು ಕೋರಲಾಗಿದೆ.

ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರ ನೇಮಕ

ಮೈಸೂರು ಮಹಾರಾಣಿ ಕಾಲೇಜಿನ ಹಂಗಾಮಿ ಪ್ರಿನ್ಸಿಪಾಲರಾದ ಶ್ರೀಮತಿ ಸುಂದರಿ ಕೃಷ್ಣಸ್ವಾಮಿಯವರನ್ನು ಬೆಂಗಳೂರಿನ ಮಹಾರಾಜ ಕಾಲೇಜಿಗೂ, ಅಲ್ಲಿನ ಹಂಗಾಮಿ ಪ್ರಿನ್ಸಿಪಾಲರಾದ ಶ್ರೀಮತಿ ಎಂ. ಜಯಲಕ್ಷ್ಮಮ್ಮಣ್ಣಿಯವರನ್ನು ಮೈಸೂರಿನ ಮಹಾರಾಣಿ ಕಾಲೇಜಿಗೆ ಖಾಯಂ ಪ್ರಿನ್ಸಿಪಾಲರನ್ನಾಗಿ ನೇಮಿಸಿ ವರ್ಗಮಾಡಲಾಗಿದೆ.

ಕ್ರಿಕೆಟ್

ಶಾರದಾವಿಲಾಸ್ ಹೈಸ್ಕೂಲಿನವರು ಫೈನಲ್ಸ್ ಕ್ರಿಕೆಟ್ ಪಂದ್ಯದಲ್ಲಿ ಮರಿಮಲ್ಲಪ್ಪ ಹೈಸ್ಕೂಲಿನವರ ಮೇಲೆ ೮ ವಿಕೆಟ್ಟು ಮತ್ತು ೭ ರನ್ನಿನಿಂದ ವಿಜಯಹೊಂದಿದರು.

ಮೈಸೂರಿನ ಆದರ್ಶವನ್ನು ಭಾರತದ ಇತರ ಪ್ರಾಂತ್ಯಗಳು ಅನುಸರಿಸಲಿ

ಡಾ|| ಕಾರಿಯಪ್ಪನವರ ಸದಾಶಯ

ಮೈಸೂರಿನ ಭಾರತ ಸೇವಾದಳದ ಆದರ್ಶ ರೀತಿನೀತಿಯ ಧ್ಯೇಯಂಗಳನ್ನು ಅನುಸರಿಸಿ (ರಾಜಕೀಯದ ಸೋಂಕಿನಿಂದ ದೂರ ಇರುವ ಈ ಸಂಸ್ಥೆಯಂತೆ) ಭಾರತದ ಇತರ ಎಲ್ಲ ಕಡೆಗಳಲ್ಲಿಯೂ ಸೇವಾದಳಗಳು ಅಧಿಕ ಸಂಖ್ಯೆಯಲ್ಲಿ ವ್ಯವಸ್ಥೆಗೊಳ್ಳಲಿ. ಡಿಸೆಂಬರ್ ೩೧ ನೇ ದಿನದ ರ್‍ಯಾಲಿಯಲ್ಲಿ ಮೈಸೂರು ಸಂಸ್ಥಾನದ ಎರಡು ಸಹಸ್ರ ಮಕ್ಕಳು ಭಾಗವಹಿಸಿ ತೋರಿಸಿದ ಆದರ್ಶನಿಲಯ ಪ್ರದರ್ಶನೇ ನಿದರ್ಶನ ತುಂಬಾ ಕಡಿಮೆಕಾಲದಲ್ಲಿ ಭಾರತ ಸೇವಾದಳವು ಸಾಧಿಸಿರುವ ಕಾರ್ಯಕ್ಕಾಗಿ ನನ್ನ ಅಭಿನಂದನೆಗಳು ಭಗವಂತನು ಭಾವೀಜನಾಂಗವಾದ ಈ ಮಕ್ಕಳನ್ನು ಸಂರಕ್ಷಿಸಿಕೊಂಡು ಬರಲೆಂದು ನನ್ನ ಅನನ್ಯ ಪ್ರಾರ್ಥನೆ.

೧-೧-೫೧ನೆ, ರಾತ್ರಿ ಬೆಂಗಳೂರು ರೆಸಿಡೆನ್ಸಿಯ ಭವ್ಯ ಆವರಣದಲ್ಲಿ ವಿದ್ಯುದ್ದೀಪದ ಪ್ರಭೆಯ ಮಧ್ಯೆ ಏರ್ಪಡಿಸಲಾಗಿದ್ದ ಈ ಎರಡು ಸಹಸ್ರ ಮಕ್ಕಳ ಪೆರೇಡಂತೂ ಪ್ರಥಮ ಶ್ರೇಣಿಯದಾಗಿತ್ತು. ಈ ಸಡಗರದ ಮಕ್ಕಳಿಂದ ಭಾರತದ ಮಹಾಪ್ರಧಾನಿ ಶ್ರೀ|| ಜವಾಹರ್ ಲಾಲ್ ನೆಹರೂರವರು ಸೆಲ್ಯೂಟನ್ನು ಸ್ವೀಕರಿಸಿ ಸೇವಾದಳದ ಬಗ್ಗೆ ಮಾಡಿದ ಪ್ರಶಂಸೆಯನ್ನು ಸಹ ಈ ಸಮಯದಲ್ಲಿ ನಾನಾದರೋ ನೆನೆಸಲು ಆಶಿಸುತ್ತೇನೆ.

ಭಾರತ ಸೇವಾದಳದ ರ್‍ಯಾಲಿಯ ಅಧ್ಯಕ್ಷತೆ ವಹಿಸಲು ಅವಕಾಶ ಮಾಡಿದ್ದಕ್ಕಾಗಿ ಭಾರತ ಸೇವಾದಳದ ಅಧ್ಯಕ್ಷರಿಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಅನಂತ ವಂದನೆಗಳನ್ನು ತಿಳಿಸಬೇಕೆಂದು ಕೋರಿ ಜ|| ಕಾರಿಯಪ್ಪನವರು ಸೇವಾದಳದ ಸಂಸ್ಥಾಪನಾಚಾರ್ಯರಾದ ಡಾ|| ಹರ್ಡೀಕರ್‌ರವರಿಗೆ ಬರೆದಿದ್ದಾರೆ.

ಡಿ. ಪುಟ್ಟಯ್ಯನವರ ಮೇಲೆ ಚಾರ್ಜುಷೀಟು

ಕಳೆದ ಏಪ್ರಿಲ್ ೨೦ನೇ ತಾ|| ಹಾರ್ಲಿಕ್ಸನ್ನು ನಿಗದಿ ಮಾಡಿದ್ದಕ್ಕಿಂತ ಹೆಚ್ಚಿನ ಬೆಲೆಗೆ ಮಾರಿದ್ದರೆಂದು ಆಪಾದಿಸಿ ಪೋಲೀಸರು ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ಡಿ. ಪುಟ್ಟಯ್ಯನವರು ಮತ್ತು ಅವರ ಅಂಗಡಿಯ ಇಬ್ಬರು ನೌಕರರ ಮೇಲೆ ಛಾರ್ಜುಷೀಟು ಹಾಕಿರುವರು.

ಬಟ್ಟೆ ವರ್ತಕರ ಸಂಘದ ಅಧಿಕಾರಿ ವರ್ಗ

ರಾಜಧಾನಿಯ ಬಟ್ಟೆ ವರ್ತಕರ ಸಂಘದ ಆಡಳಿತ ಸಮಿತಿಗೆ ಪ್ರಸಕ್ತಸಾಲಿಗೆ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ:— ಜನಾಬ್ ಜಿ. ಅಹಮದ್ ಖಾನ್ ಸಾಹೇಬ್ ಅಧ್ಯಕ್ಷರು, ಶ್ರೀ ಜಿ. ವಿ. ಸೂರ್ಯನಾರಾಯಣಶೆಟ್ಟರು ಉಪಾಧ್ಯಕ್ಷರು, ಶ್ರೀ ಕೆ. ಜಿ. ರಂಗಸ್ವಾಮಿ ಗೌರವಕಾರ್ಯದರ್ಶಿ, ಶ್ರೀ ಪುಖ್‌ರಾಜ್ ಜಂಟಿ ಕಾರ್ಯದರ್ಶಿ, ಮೆಸರ್ಸ್ ಎಸ್. ಆರ್. ಎಲ್. ಶಲ್ಲಂ ಅಂಡ್ ಕೋ ಖಜಾಂಚಿಗಳು.

ಫುಟ್‌ಬಾಲ್

ಶಾರದಾವಿಲಾಸ್ ಹೈಸ್ಕೂಲಿನವರು ಸಿಲ್ವರ್ ಜ್ಯೂಬಿಲಿ ಫುಟ್‌ಬಾಲ್ ಪಂದ್ಯದಲ್ಲಿ ದಳವಾಯಿ ಹೈಸ್ಕೂಲಿನವರನ್ನು ೧ ಗೋಲಿನಿಂದ ಸೋಲಿಸಿದರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಜನವರಿ ೧೮ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಎಸ್. ರಾಮಚಂದ್ರರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಹಿಂದಿ ಶಿಕ್ಷಣ ೨-೦ ಇತರ ಗೀತೆ ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ಆರ್. ದೊರೆಸ್ವಾಮಿ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭.೫ ಬಿ. ಎಸ್. ರಾಜಯ್ಯಂಗಾರ್ (ರ) ೭-೧೫ ಎಸ್. ರಾಮಚಂದ್ರರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಶಕುಂತಲಾಬಾಯಿ ಪಾಂಡುರಂಗರಾವ್ (ಭಾರತವಚನ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಎಂ. ಆರ್. ದೊರೆಸ್ವಾಮಿ (ಕೊಳಲು) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಪದ್ಯ ರೂಪದಲ್ಲಿ ಕಥೆ ೧೦-೦ ಮುಕ್ತಾಯ.

ಯುದ್ಧ ನಿಲ್ಲಿಸಲು ಆಜ್ಞೆ

ಕಾಂಗ್ರೆಸ್ ಕಾರ್ಯಾಚರಣೆಯನ್ನೆಲ್ಲಾ ನಿಲ್ಲಿಸಿ ಸುಧಾರಣೆಗಳನ್ನು ತರುವ ವಿಷಯದಲ್ಲಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನೇಪಾಳ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೊಯಿರಾಲಾರವರು ಕಾಂಗ್ರೆಸ್ ಸ್ವಯಂಸೇವಕರಿಗೆ ಆಜ್ಞೆಯಿತ್ತಿದ್ದಾರೆಂದು ತಿಳಿಯಬರುತ್ತದೆ.

ನ್ಯೂ ಅಪೇರಾ

ಮೈಸೂರು

ತಾ|| ೧೮-೧-೫೧ ರಿಂದ

“ ಫ್ಲೈಯಿಂಗ್ ಎಕ್ಸ್‌ಪ್ರೆಸ್ ”

—: ಅಭಿನಯ :—

ಪ್ರಕಾಶ, ಸಿರಾಜ, ಮಿಸ್. ಮೋತಿ, ಗುಲನಾರ್.

ಪ್ರತಿದಿನ ೩ ಆಟಗಳು

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೧—೧೯೫೧ನೇ ಗುರುವಾರ [ಸಂಚಿಕೆ ೧೧೩

ಕರ್ನಾಟಕ ಏಕೀಕರಣಕ್ಕೆ ಮೈಸೂರು ಮುಖಂಡರೇ ಅಡ್ಡಿ

ಸ್ವಾರ್ಥದೃಷ್ಟಿಯಿಂದ ಅಡ್ಡಿಬರುತ್ತ ಜನತೆಯ ಮೇಲೆ ತಪ್ಪನ್ನು ಹೊರಿಸುತ್ತಲಿರುವರು

ಮೈಸೂರು ಜ. ೧೭

ಸಾಮಾನ್ಯ ಜನತೆಯನ್ನು ಮುಂದಿಟ್ಟುಕೊಂಡು ಮೈಸೂರು ಕಾಂಗ್ರೆಸ್ ಮುಖಂಡರುಗಳೇ ಕರ್ನಾಟಕ ಏಕೀಕರಣಕ್ಕೆ ಅಡ್ಡಿ ಬರುತ್ತಲಿರುವರು. ಇದು ಪ್ರಾಮಾಣಿಕ ಲಕ್ಷಣವಲ್ಲ. ಮಂತ್ರಿ ವರ್ಗದವರೂ ಅದೇ ರೀತಿಯಿರುವರು. ಮಾತಿನಲ್ಲಿ ಏಕೀಕರಣವನ್ನು ಯಾರೂ ವಿರೋಧಿಸದೆ ಒಪ್ಪುತ್ತ ಕಾರ್ಯತಃ ಮುಂದು ತಳ್ಳುತ್ತಲಿರುವರು. ಮಂಗಳೂರು, ಕೊಡಗು, ಬಳ್ಳಾರಿ, ಹೈದರಾಬಾದು ಮುಂತಾದೆಡೆಯಿರುವ ಕನ್ನಡಿಗರೆಲ್ಲರೂ ಮೈಸೂರಿನ ಕಡೆಗೇ ಕೈ ತೋರಿಸುತ್ತಾ ಮೈಸೂರು ಸೇರಿದರೆ ತಮ್ಮದೇನೂ ಅಡ್ಡಿಯಿಲ್ಲವೆನ್ನುವರು. ದೆಹಲಿಯ ಮುಖಂಡರೂ ಸಹ ಇದೇ ಮಾತನ್ನಾಡುತ್ತಲಿರುವರು. ಸ್ವಾತಂತ್ರ ಹೋರಾಟದ ಕಾಲದಲ್ಲಿ ಏಕೀಕರಣ ಪ್ರಶ್ನೆಯು ಅನೇಕ ಕಡೆ ಚರ್ಚೆಗಳಾಗಿ ಕರ್ನಾಟಕ ರಾಜ್ಯವು ಸ್ಥಾಪನೆಯಾಗಬೇಕೆಂದು ತೀರ್ಮಾನಗಳಾದುವು. ಪ್ರಾರಂಭದಲ್ಲಿ ಮಹಾರಾಜರ ಪ್ರಶ್ನೆಯೆದ್ದಿತು. ಹರಿಪುರದಲ್ಲಿ ಕೆ.ಪಿ.ಸಿ.ಸಿ. ಅಧಿವೇಶನ ನಡೆದು ಮಹಾರಾಜರು ಇರಬಹುದು, ಬೆಂಗಳೂರನ್ನೇ ರಾಜಧಾನಿಯಾಗಿ ಮಾಡಿಕೊಂಡು ಕರ್ನಾಟಕಪ್ರಾಂತ್ಯರಚನೆ ಮಾಡಬಹುದೆಂದು ತೀರ್ಮಾನವಾಯಿತು ಸರ್ಕಾರ ಅಧಿಕಾರವನ್ನು ವಹಿಸುಕೊಳ್ಳುವವರಿಗೆ ನಮ್ಮ ಮುಖಂಡರನೇಕರು ತಮ್ಮ ಸಂಪೂರ್ಣ ಬೆಂಬಲವನ್ನಿತ್ತರು. ಈಗ ಆ ವಿಚಾರದಲ್ಲಿ ಹೆಚ್ಚಾಗಿ ಚರ್ಚಿಸಲೂ ಅವಕಾಶವೆ ಕೊಡದೆ ಜನತೆಯ ಮೇಲೆ ತಪ್ಪನ್ನು ಹೊರಿಸುತ್ತಲಿರುವರು ಆದ್ದರಿಂದ ಪತ್ರಿಕೆಗಳು ಕರ್ನಾಟಕ ಪ್ರಾಂತ್ಯರಚನಾ ವಿಚಾರದಲ್ಲಿ ತಮ್ಮ ಸಂಪೂರ್ಣ ನೆರವನ್ನು ನೀಡಿ ಕಾರ್ಯಸಾಧನೆಯಾಗುವಂತೆ ಮಾಡಬೇಕು. ಜನರನ್ನು ಮತ್ತು ಮುಖಂಡರನ್ನು ಎಚ್ಚರಿಸಬೇಕಾದರೆ ಪತ್ರಿಕೆಗಳೇ ಮುಖ್ಯವಾದ ಪಾತ್ರವನ್ನು ವಹಿಸಬೇಕಾಗಿದೆ ಎಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರೂ, ಉಪಾಧ್ಯಕ್ಷ ಶ್ರೀ ನಜ್ಜಯನವರ [illegible] ಪತ್ರಿಕೆ ಮಾಲೀಕರಾದ ಶ್ರೀ ಅಗರಂ ರಂಗಯ್ಯನವರಿತ್ತ ಸತ್ಕಾರ ಕೂಟದಲ್ಲಿ ಇಂದು ಮಾತನಾಡುತ್ತಾ ಹೇಳಿದರು.

ಕಾಂಗ್ರೆಸು ಕೆಲಸಗಾರರ ಪರವಾಗಿ ಮಾತನಾಡುತ್ತ ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಕೆಲಸಗಾರರ ಅಭಾವವುಂಟಾಗಿದೆ. ಹಳೇ ಕೆಲಸಗಾರರೆಲ್ಲರೂ ಕಾರಣಾಂತರದಿಂದ ಕೆಲಸದಲ್ಲಿ ಪ್ರವರ್ತವಾಗಿಲ್ಲ. ಈಗ ಹೊಸ ರಕ್ತವು ಬಂದು ಕಾಂಗ್ರೆಸು ಸಂಸ್ಥೆಯನ್ನು ಸೇರಿ ಜನರಿಗೆ ತಕ್ಕ ತಿಳುವಳಿಕೆ ಕೊಡಬೇಕಾಗಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಕಾಂಗ್ರೆಸ್ ಸರ್ಕಾರವು ತಮಗೆ ಸೌಲಭ್ಯಗಳನ್ನು ಲಭಿಸಿಕೊಡುತ್ತಲಿಲ್ಲವೆಂದು ದೂಷಿಸುತ್ತಲಿದ್ದರೂ ದೇಶೋದ್ಧಾರವಾಗಬೇಕಾದರೆ ಕಾಂಗ್ರೆಸು ಸಂಸ್ಥೆಗೊಂದೇ ಸಾಧ್ಯವೆಂದು ಅರಿತಿರುವರು ಎಂದು ನುಡಿದರು.

ಶ್ರೀ ಜೆ. ಬಿ. ಕೃಪಲಾನಿಯವರು

[illegible]

ಡೆಮೊಕ್ರಾಟಿಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಜೆ ಬಿ. ಕೃಪಲಾನಿಯವರು ಕೊಯಮತ್ತೂರಿನಿಂದ ನಿನ್ನೆ ಮದ್ರಾಸಿಗೆ ಆಗಮಿಸಿದರು ವೈದ್ಯಕೀಯ ಸಲಹೆ ಪಡೆಯಲು ದಕ್ಷಿಣದೇಶಕ್ಕೆ ಬಂದಿರುವುದಾಗಿ, ಒಂದು ವಾರ ಇಲ್ಲಿರುವುದಾಗಿ ಅವರು ತಿಳಿಸಿದರು

ಸರ್ವಿಸ್ ಸ್ಟೇಷನ್ನುಗಳು

ಸಾರ್ವಜನಿಕರ ಅನುಕೂಲಕ್ಕಾಗಿ ಮೈಸೂರು ವಿದ್ಯುಚ್ಛಕ್ತಿ ಇಲಾಖೆಯವರು ಇದೇ ತಿಂಗಳು ೧೫ ರಿಂದ 'ಸರ್ವಿಸು ಸ್ಟೇಷನ್ನು'ಗಳನ್ನು ತೆರೆದಿರುವರು. ಈ ಸ್ಥಳದಲಿ ಟೆಲಿಫೋನ್ ಸೌಕರ್ಯ ಮತ್ತು ತಕ್ಕ ಸಿಬ್ಬಂದಿ ಇಡಲಾಗಿದೆ. ಆಯಾ ಮೊಹಲ್ಲಾ ಜನರು ತಮ್ಮ ವಿದ್ಯುಚ್ಛಕ್ತಿ ಸರಬರಾಜು ನಿಂತಲ್ಲಿ ಅಲ್ಲಿಯ ಸರ್ವಿಸ್ ಸ್ಟೇಷನ್ನಿಗೆ ಖುದ್ದಾಗಿ ಆಗಲೀ ಅಥವಾ ಟೆಲಿಫೋನ್ ಮೂಲಕವಾಗಲಿ ತಿಳಿಸಿ ತಮ್ಮ ತೊಂದರೆಗಳನ್ನು ಪರಿಹರಿಸಿಕೊಳ್ಳಬಹುದೆಂದು ವಿದ್ಯುಚ್ಛಕ್ತಿಯಿಲಾಖೆಯವರು ಪ್ರಕಟಣೆ ಹೊರಡಿಸಿರುವರು.

ಪವರ್ ಅಂಡ್ ಲೈಟು ಆಫೀಸು ಟೆಲಿಫೋನ್ ೬೪೨ ನರಸಿಂಹರಾಜಮೊಹಲ್ಲಾ ಪವರ್‌ಸ್ಟೇಷನ್ (೬೨೩) ಮಂಡಿ ಮೊಹಲ್ಲಾ ಮಾರ್ಕೆಟ್ (೬೩೬) ಕೃಷ್ಣಮೂರ್ತಿಪುರಂ ಮುನಿಸಿಪಲ್ ಆಸ್ಪತ್ರೆ ಬಳಿ (೫೦೮).

ಸಾರ್ವಜನಿಕ ರಜಾ

ಬೆಂಗಳೂರು ಜ. ೧೮

ಜನವರಿ ೨೦ ನೇ ತಾರೀಖು ಮಹಾರಾಜಾ ಕಾಲೇಜು ಶತಮಾನೋತ್ಸವ ನಡೆಯುವುದರಿಂದ ಅಂದು ಮೈಸೂರು ಸಿಟಿಯಲ್ಲಿ ಎಲ್ಲಾ ಕೋರ್ಟು, ಕಛೇರಿ, ಶಾಲಾ ಕಾಲೇಜುಗಳಿಗೆ ಸಾರ್ವಜನಿಕ ರಜಾ ಕೊಡಲಾಗಿದೆ.

ಬಂಗನಪಲ್ಲಿ ನವಾಬರ ರಾಜೀನಾಮೆ

ಬೊಂಬಾಯಿಯಲ್ಲಿ, ಬರೋಡಾ ಮಹಾರಾಜರ ನೇತೃತ್ವದಲ್ಲಿ ನಡೆದ ರಾಜರ ಸಂಘದ ಸದಸ್ಯತ್ವಕ್ಕೆ ಬಂಗನಪಲ್ಲಿ ನವಾಬರು ರಾಜೀನಾಮೆಯನ್ನಿತ್ತು ಈ ರೀತಿ ಹೇಳಿಕೆ ಕೊಟ್ಟಿರುವರು.

ಬೊಂಬಾಯಿನಲ್ಲಿ ನಡೆದ ಸಭೆಯು ಅಕಾಲಿಕವಾದುದು. ಆದರಿಂದ ಭಾರತ ಸರ್ಕಾರದ ಮನಸ್ಸಿನಲ್ಲಿ ನಮ್ಮ ಬಗ್ಗೆ ಅಪನಂಬಿಕೆಯನ್ನು ಅನುಮಾನವನ್ನು ಖಂಡಿತವಾಗಿ ಉಂಟುಮಾಡುತ್ತದೆ ಭಾರತ ಸರ್ಕಾರದವರು ಅರಸುಗಳ ಬಗ್ಗೆ ಬಹಳ ಸೌಜನ್ಯದಿಂದ ಮತ್ತು ಔದಾರ್ಯದಿಂದ ನಡೆದುಕೊಂಡಿದ್ದಾರೆ. ಇಂದಿನ ಪ್ರಜಾಪ್ರಭುತ್ವಕಾಲದಲ್ಲಿ ಅರಸುಗಳಿಗೆ ಹಿಂದಿನ ಅಧಿಕಾರ ವರ್ಗಗಳು ಬೇಕೆಂದು ಹೋರಾಡುವುದು ಹಾಸ್ಯಾಸ್ಪದವೇ ಸರಿ 'ಎಂದು ಹೇಳಿರುವರು.

ವೃತ್ತಪತ್ರಿಕಾಶಾಸನ ಪರಿಶೀಲನೆ

ಬೆಂಗಳೂರು ಜ. ೧೭

ಮೈಸೂರು ವೃತ್ತ ಪತ್ರಿಕಾಶಾಸನವನ್ನು ಪರಿಶೀಲಿಸಲು ಶ್ರೀ ಡಿ. ಹೆಚ್. ಚಂದ್ರಶೇಖರಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿರುವರು. ಇದರಲ್ಲಿ ನ್ಯಾಯಾಂಗ ಕಾರ್ಯದರ್ಶಿ, ಪೋಲೀಸು ಐ ಜಿ. ಬೆಂಗಳೂರು ಜಿಲ್ಲಾಧಿಕಾರಿಗಳು, ಅಡ್ವೋಕೇಟ್ ಜನರಲ್, ಶ್ರೀ ಗಳಾದ ಪಿ ಆರ್. ರಾಮಯ್ಯ ಕೆ ಜೀವಣ್ಣರಾವ್, ಹೆಚ್ ಎಸ್. ದೊರೆಸ್ವಾಮಿ ಎಂ. ಎಸ್. ಗುರುಸ್ವಾಮಿ ಮತ್ತು ಟಿ ನಾರಾಯಣ ಇವರುಗಳಿರುವರು.

ಮತದಾರರ ಪಟ್ಟಿ

ಮತದಾರರ ಪಟ್ಟಿಗೆ ಸಂಬಂಧಪಟ್ಟಂತೆ ಆಕ್ಷೇಪಣೆ ಅಥವಾ ತಿದ್ದುಪಡಿ ಸೂಚಿಸಲು ಮೈಸೂರು ಸಂಸ್ಥಾನದಲ್ಲಿ ಅವಧಿಯನ್ನು ಫೆಬ್ರವರಿ ೧೫ ರ ವರೆಗೆ ಹೆಚ್ಚಿಸಲಾಗಿದೆ

ಹಾರ್ಲಿಕ್ಸ್ ಬೆಲೆ

ಹಾರ್ಲಿಕ್ಸ್ ಪೌಂಡಿಗೆ ೩-೮-೦, ಅರ್ಧ ಪೌಂಡು ೨ ರೂ. ಗ್ಲಾಕ್ಸೋ ಒಂದು ಪೌಂಡಿಗೆ ೩-೨-೦, ಎರಡು ಪೌಂಡಿಗೆ ೫-೧೫-೦, ಅಸ್ಟರ್ ಮಿಲ್ಕ್ ಪೌಂಡಿಗೆ ೩-೩-೦, ಎರಡು ಪೌಂಡಿಗೆ ೬ ರೂ ಎಂದು ಸರ್ಕಾರದವರು ಬೆಲೆ ನಿರ್ಧರಿಸಿರುವರು

ನೆಹರೂ ಪ್ಯಾರಿಸ್ಸಿನಲ್ಲಿ

ಪ್ರಧಾನಿ ನೆಹರೂರವರು ಲಂಡನ್ನಿನಿಂದ ಪ್ಯಾರಿಸ್ಸಿಗೆ ನಿನ್ನೆ ಪ್ರಯಾಣಮಾಡಿದರು. ಶ್ರೀ ಬಿ. ಎನ್. ರಾವ್ ರವರೂ ಅವರೊಡನೆ ಹೋದರು. ಪ್ರಧಾನಿಗಳು ಪ್ಯಾರಿಸ್ಸಿನಲ್ಲಿ ಮೂರುದಿನ ಇರುವರೆಂದು ತಿಳಿಯಬರುತ್ತದೆ.

ಧಾನ್ಯರೂಪದಲ್ಲಿ ಕಂದಾಯ ವಸೂಲಿ

ವರ್ಷಕ್ಕೆ ಒಂದು ಲಕ್ಷ ೩೦ ಸಾವಿರ ಟನ್ ಭತ್ತವನ್ನು ಕಂದಾಯರೂಪದಲ್ಲಿ ಸಂಗ್ರಹಿಸುವ ಹೊಸ ಯೋಜನೆಯನ್ನು ತಿರುವಾಂಕೂರು ಕೊಚ್ಚಿನ್ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷ ತಯಾರಿಸಿದೆ

ಕರ್ನಾಟಕ ಪ್ರಾಂತ್ಯರಚನೆಗೆ ಯಾರೂ ಅಡ್ಡಿಬಂದ, ಇಲ್ಲದಸೊಲ್ಲದ ಕುಂಟುನೆಪಗಳನ್ನು ಹಾಕಿಕೊಂಡು ಮುಂದುವರಿಸುವುದು ಸಾಧುವಲ್ಲ. ಜವಾಬ್ದಾರಿ ಸರ್ಕಾರ ಚಳುವಳಿ ನಡೆಸಿದಾಗ ಮುಖಂಡರೇ ತೀರ್ಮಾನಕ್ಕೆ ಬಂದು, ಜನತೆಯ ಸಹಕಾರದಿಂದ ನಡೆಸಿದರು ಅದೇ ರೀತಿ ಜನತೆಯ ಸಹಕಾರದಿಂದ ಮುಖಂಡರೇ ಈ ತೀರ್ಮಾನಕ್ಕೆ ಬರಬೇಕು. ಸ್ವಾರ್ಥವನ್ನು ಮುಂದಿಟ್ಟುಕೊಂಡು ತಡಮಾಡುವುದು ಪ್ರಗತಿಗೆ ಅಡ್ಡಿ ಆತಂಕಗಳನ್ನು ತಂದಂತಾಗುವುದೆಂದು ಹೇಳಿದರು.

ಸಮಾಚಾರ

ಗುರುವಾರ ತಾರೀಖು ೧೮

ಸ್ವಾತಂತ್ರ್ಯದ ಕುರುಹು

ಭಾರತಾದ್ಯಂತವೂ ಮತದಾರರ ಪಟ್ಟಿಯನ್ನು ತಯಾರಿಸಿ ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಾಗಿದೆ. ಹೆಸರುಗಳು ಬಿಟ್ಟುಹೋಗಿದ್ದರೆ, ಅಥವಾ ಇನ್ನಾವರೀತಿಯಾದ ತಕರಾರು ಇದ್ದಲ್ಲಿ ಫೆಬ್ರವರಿ ೧೫ನೇ ತಾ॥ ನೊಳಗೆ ಚುನಾವಣಾಧಿಕಾರಿಗಳಲ್ಲಿ ಅರ್ಜಿಯನ್ನು ಬರೆದುಕೊಳ್ಳಬಹುದೆಂದು ಸೂಚನೆ ಕೊಡಲಾಗಿದೆ. ನಿರ್ದಿಷ್ಟವಾದ ಫಾರಂನ್ನು ಪಡೆದು ತಮ್ಮ ತಕರಾರನ್ನು ಅದರಲ್ಲಿ ನಮೂದಿಸಿ ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕು. ಅವರು ಅದನ್ನು ಸಂಬಂಧಪಟ್ಟ ಮುನಸೀಫ್ ಕೋರ್ಟಿಗೆ ಕಳುಹಿಸುವರು. ತಕರಾರುದಾರರು ಮುನಿಸಿಫ್‌ರು ನಿಯಮಿಸಿದ ದಿನ ಆ ಕೋರ್ಟಿಗೆ ಹಾಜರಾಗಿ ತಕ್ಕ ಸಾಕ್ಷ್ಯಾಧಾರದಿಂದ ತಮ್ಮ ತಂಟೆಯನ್ನು ಸ್ಥಿರಪಡಿಸಬೇಕಾಗಿದೆ.

ಭಾರತ ರಾಜ್ಯಾಂಗದ ಪ್ರಕಾರ ೨೧ ವರ್ಷಕ್ಕೆ ಮೇಲ್ಪಟ್ಟವರಿಗೆಲ್ಲಾ ಮತದಾನಮಾಡುವ ಹಕ್ಕುಂಟು. ಮತದಾರರ ಪಟ್ಟಿಯನ್ನು ತಯಾರಿಸುವ ಅಧಿಕಾರಿಗಳ ಜಾಗರೂಕತೆಯಿಂದ ವಿಚಾರಣೆ ನಡೆಸಿ ಪಟ್ಟಿಯನ್ನು ತಯಾರಿಸಬೇಕಾಗಿದೆ. ಒಂದೇ ಮನೆಯಲ್ಲಿ ಹೆಂಡತಿ-ಮಕ್ಕಳ ಹೆಸರುಗಳಿವೆ ಆದರೆ ಯಜಮಾನನ ಹೆಸರೇ ಇಲ್ಲ, ತನಿಖಾಧಿಕಾರಿಗಳ ಅಜಾಗರೂಕತೆಯಿಂದಲೋ ಅಥವಾ ಮುದ್ರಣ ತಪ್ಪಿನಿಂದಲೋ ಗಂಡಸು ಎನ್ನುವುದಕ್ಕೆ ಹೆಂಗಸು ಎಂದು ಬಿದ್ದಿವೆ. ಈರೀತಿಯಾದ ಅನೇಕ ದೋಷಗಳು ಕಾಣಬರುತ್ತಲಿವೆ. ಹೀಗೆ ಪ್ರಕಟವಾದುದಕ್ಕೆ ತಕರಾರನ್ನು ಹಾಕಿದರೆ ಅವರು ಮುನಸೀಫ್‌ಕೋರ್ಟಿನ ಮುಂದೆ ಹಾಜರಾಗಿ ಸರಿಯಾದ ರುಜುವಾತು ಕೊಟ್ಟು ತಮ್ಮ ಹೆಸರನ್ನು ಸೇರಿಸಿಕೊಳ್ಳುವುದೇ ಅಥವಾ ತಪ್ಪುಗಳನ್ನು ತಿದ್ದಿಸುವುದೋ ಮಾಡಬೇಕಾಗಿದ್ದರೆ, ಎಲ್ಲಿಂದ ರುಜುವಾತು ತರುವುದು. ಮತದಾರರ ಪಟ್ಟಿ ತಯಾರು ಮಾಡುವವರು ಪ್ರಮಾದವೆಸಗಿದ್ದಕ್ಕೆ ಮತದಾರನು ಕೋರ್ಟು ಅಲೆಯುವುದೆಂಬುದು ಯಾವ ನ್ಯಾಯ. ಅದರಲ್ಲೂ ಸಿವಿಲ್ ಕೋರ್ಟು, ತನ್ನ ಕಾರ್ಯಗಾರವಗಳನ್ನೆಲ್ಲಾ ಬಿಟ್ಟು ಕೋರ್ಟಿನ ಬಳಿ ಕಾದಿದ್ದು ಅವರು ಕೂಗಿಸಿದಾಗ ಹೋಗಬೇಕಾಗಿದೆ. ಕಾರಣಾಂತರದಿಂದ ಅಂದು ವಿಚಾರಣೆ ನಡೆಯದಿದ್ದರೆ ಪುನಃ ಹೋಗಬೇಕು. ಅದರಲ್ಲೂ ಸ್ತ್ರೀಯರ ಗತಿಯೇನು?

ಮತದಾರರ ಪಟ್ಟಿಯಲ್ಲಿ ಭಾರತ ರಾಷ್ಟ್ರಾಧ್ಯಕ್ಷರ ಹೆಸರು ಬಿಟ್ಟುಹೋಗಿ ಅವರೂ ತಕರಾರು ಅರ್ಜಿಯನ್ನು ಸಲ್ಲಿಸಿರುವುದಾಗಿ ವರದಿಯಾಗಿದೆ. ಹೀಗೆ ಸಾವಿರಾರು ಜನರ ಹೆಸರು ಈ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಸಂದರ್ಭವುಂಟು ಅವರೆಲ್ಲರೂ ನ್ಯಾಯಾಲಯದ ಮುಂದೆ ಹೋಗಿ ನಿಲ್ಲಲಾಗುತ್ತದೆಯೆ? ದೊಡ್ಡವರಿಗೆ ಬೇಕಾದರೆ ವಿನಾಯತಿಮಾಡಬಹುದು ಆದರೆ ಇತರರ ಗತಿಯೇನು? ಪಟ್ಟಣವಾಸದವರಿಗೆ ಹೀಗೆ ತೊಂದರೆಯಾದರೆ ಗ್ರಾಮಾಂತರದ ಜನರ ಸ್ಥಿತಿಯೇನಾಗುವುದು? ಈರೀತಿ ತೊಂದರೆಯನ್ನನುಭವಿಸುವುದಕ್ಕಿಂತ ಸುಮ್ಮನಿರುವುದೇ ಲೇಸೆಂದು ಅನೇಕರು ತಮ್ಮ ಓಟಿನ ಹಕ್ಕನ್ನೇ ಕಳೆದುಕೊಳ್ಳುವರು.

ಈಗಾಗಲೇ ಮಾರ್ಚಿ ತಿಂಗಳಲ್ಲಿ ಜನಗಣತಿ ನಡೆಯುವುದು. ನಿರ್ದಿಷ್ಟವಾದ ಪಟ್ಟಿಯು ಒಂದೆರಡು ತಿಂಗಳೊಳಗೆ ತಯಾರಾಗುವುದು. ಅಧಿಕಾರಿಗಳೇ ಜನಗಣತಿ ಪಟ್ಟಿಗಳನ್ನು ಮತದಾರರ ಪಟ್ಟಿಯನ್ನು ಹೋಲಿಸಿ ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಖುದ್ದಾಗಿ ಅದನ್ನು ಪರಿಶೀಲಿಸಿದರೆ ಮತದಾರರ ಪಟ್ಟಿ ಪರಿಪೂರ್ಣವಾಗುವುದು. ಅಥವಾ ತಕರಾರು ಅರ್ಜಿಯನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ತನಿಖೆ ನಡೆಸಿ ತಕ್ಕ ತಿದ್ದುಪಡಿ ಮಾಡಿದರೆ ಉಭಯತ್ರರಿಗೂ ಸುಲಭವಾಗುತ್ತದೆ.

ಆದ್ದರಿಂದ ಈಗಿನ ಪದ್ಧತಿಯನ್ನು ಕೂಡಲೇ ಮಾರ್ಪಡಿಸುವಂತೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಉಚಿತ.

ಪತ್ರವ್ಯವಹಾರ

ಭಾರತದ ಅಹಾರ ನೀತಿ ಸಮರ್ಪಕವಾಗಿಲ್ಲ

ಸ್ವಾಮಿ,

ಸಮಗ್ರ ಭಾರತದ ಆಹಾರದ ಹತೋಟಿ ಕೇಂದ್ರದ ಕೈಯಲ್ಲಿದೆ. ಆದುದರಿಂದ ಇಂದಿನ ಆಹಾರದ ಕಷ್ಟನಷ್ಟಗಳಿಗೆಲ್ಲಾ ಆಹಾರ ಮಂತ್ರಿ ಶ್ರೀ ಮುನಶಿಯವರೇ ಕಾರಣ. ಶ್ರೀ ಮುನಶಿಯವರು ದಕ್ಷರಾದ ವಕೀಲರಾಗಿರಬಹುದು ಆದರೆ ಅವರಿಗೆ ಆಹಾರ ವ್ಯವಸಾಯಗಳ ವಿಷಯವೇನು ಗೊತ್ತು? ಮೊನ್ನೆ ಮೊನ್ನೆ ಇವರ ನೇತೃತ್ವದಲ್ಲಿ ಬೊಂಬಾಯಿನಲ್ಲಿ ಒಂದು ಸಭೆ ಸೇರಿ ಗ್ರಾಮಾಂತರ ಪಡಿತರವನ್ನು ವಜಾಮಾಡಲಾಯಿತು. ಈ ಆಜ್ಞೆ ಮದರಾಸ್ ಪ್ರಾಂತ್ಯದಲ್ಲಿ ಜಾರಿಗೆ ಬಂದ ಕೂಡಲೇ, ಗ್ರಾಮಾಂತರಗಳಲ್ಲಿ ದವಸವೇ ಸಿಕ್ಕದಂತಾಗಿ, ಕಾಳಸಂತೆಯ ವ್ಯಾಪಾರವು ಮಾತ್ರ ತಡೆಬಡೆಯಿಲ್ಲದೆ ನಡೆಯುತ್ತಿದೆ. ಹೀಗಾದರೆ ಬಡವರ ಗತಿಯೇನು? ಈಗ ಭಾರತದ ೨೦ ಮುಖ್ಯ ನಗರಗಳಿಗೆ ವಿನಾ ಗ್ರಾಮಾಂತರಗಳ ಆಹಾರ ಸರಬರಾಜಿಗೆ 'ಸಬ್ಸಿಡಿ' ಕೊಡುವುದಿಲ್ಲವೆಂದ ಮತ್ತೊಂದು ಆಜ್ಞೆ ಹೊರಟಿದೆ. ಇದರಿಂದ ಗ್ರಾಮಾಂತರಗಳಲ್ಲಿ ವಾಸಿಸುವವರ ಸ್ಥಿತಿಯು ಮತ್ತಷ್ಟು ಶೋಚನೀಯವಾಗುವುದು. ಹಳ್ಳಿಗಳ ಉದ್ಧಾರಕ್ಕಾಗಿ ಹುಟ್ಟಿದ ಕಾಂಗ್ರೆಸ್, ತನ್ನ ಕೈಗೆ ಬಂದ ಅಧಿಕಾರವನ್ನು ಈ ರೀತಿ ಹಳ್ಳಿಗಾಡಿನ ಜನರ ದುರ್ದೆಶೆಯನ್ನು ಹೆಚ್ಚಿಸುವುದಕ್ಕೆ ಉಪಯೋಗಿಸುವುದೆಂದರೆ, ಇದಕ್ಕಿಂತಲೂ ಹೆಚ್ಚಿನ ದೌರ್ಭಾಗ್ಯವೇ ಇಲ್ಲ. ಇತ್ತ ಮೈಸೂರು, ಮದರಾಸ್, ಬೊಂಬಾಯಿ ಮುಂತಾದ ಕಡೆಗಳಲ್ಲಿ ಈ ಸುಗ್ಗಿಯ ಕಾಲದಲ್ಲೇ ಡಿಪೋಗಳಲ್ಲಿ ದವಸವಿಲ್ಲದ, ಜನರಲ್ಲಿ ಹಾಹಾಕಾರವುಂಟಾಗಿದೆ.

ಬೊಂಬಾಯಿನಲ್ಲಿ ಪಡಿತರ ೧೨ ಔನ್ಸಿನಿಂದ ೯ ಔನ್ಸಿಗೆ ಇಳಿಯಲಿದೆ. ಮದರಾಸಿನಲ್ಲಿ ಅಕ್ಕಿ ೬ ಔನ್ಸಿನಿಂದ ೭ ಔನ್ಸಿಗೆ ಹೆಚ್ಚಿದೆ. ನಮ್ಮ ಮೈಸೂರು ಆಹಾರ ಮಂತ್ರಿಗಳು ಪಡಿತರವನ್ನು ೧೦ ಔನ್ಸಿನಿಂದ ೧೨-೧೬ ಔನ್ಸಿಗೆ ಹೆಚ್ಚಿಸುವುದಾಗಿ ಮಾಡಿದ ವಾಗ್ದಾನ ಬರೀ ಮಾತಿನಲ್ಲಿಯೇ ಮುಗಿದಿದೆ. ಅತ್ತ ಕೇಂದ್ರದವರು ಇಡೀ ಭಾರತದಲ್ಲಿ ಪಡಿತರವನ್ನು ೯ ಔನ್ಸಿಗೆ ಇಳಿಸುವುದಾಗಿ ಹೇಳಿದ್ದಾರೆ ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಾಗಿ ಒಬ್ಬೊಬ್ಬರ ಬಾಯಿಂದ ಒಂದೊಂದು ತೆರನಾಗಿ ಬರುವ ಆಜ್ಞೆಗಳನ್ನು ನೋಡಿದರೆ, ಕೇಂದ್ರ ಸರಕಾರವು ಆಹಾರದ ವಿಷಯದಲ್ಲಿ ಯಾವ ನಿರ್ದಿಷ್ಟವಾದ ನೀತಿಯನ್ನೂ ಅನುಸರಿಸುತ್ತಿಲ್ಲವೆಂದು ಅರ್ಥವಾಗುತ್ತದೆ.

ಈಗಲೂ ಸರಕಾರದವರು ದವಸಗಳ ಶೇಖರಣೆಯನ್ನು ಚುರುಕಾಗಿ ನಡೆಯಿಸಿದರೆ ಪರಿಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಕಾಲಾವಕಾಶಕ್ಕೆ ಎಡೆಗೊಡದೆ, ಎಲ್ಲ ದವಸವನ್ನೂ ಯಾವ ದಾಕ್ಷಿಣ್ಯವಿಲ್ಲದೆ ಶೇಖರಿಸಿ, ಅಲ್ಲಲ್ಲಿಯೇ ದಾಸ್ತಾನು ಮಾಡಿ, ಆ ಪ್ರಾಂತಕ್ಕೆ ಸಾಕಾಗಿ ಹೆಚ್ಚು ಉಳಿಯುವುದನ್ನು ಮಾತ್ರ ಅವಶ್ಯಕ ಇರುವ ಕಡೆಗೆ ಸಾಗಿಸಬೇಕು. ಪ್ರತಿಯೊಂದು ಪ್ರಾಂತ್ಯ ಮತ್ತು ಸಂಸ್ಥಾನದ ಬೆಳೆ ಮತ್ತು ಆಹಾರದ ಕೊರತೆಯ ಪ್ರಮಾಣವನ್ನು ಸರಿಯಾಗಿ ವಿಮರ್ಶಿಸಿ, ಸಮರ್ಪಕವಾದ ರೀತಿಯಲ್ಲಿ (ನಗರ ಮತ್ತು ಗ್ರಾಮಗಳಲ್ಲಿ ಯಾವ ಭೇದವನ್ನೂ ಮಾಡದೆ) ಹಂಚಿಕೆ ಮಾಡಬೇಕು. ಇದು, ಆಹಾರದ ಮೇಲೆ ಹತೋಟಿ ಹಾಕಿರುವ ಸರಕಾರದ ಪ್ರಥಮ ಕರ್ತವ್ಯ. ಈ ಜವಾಬ್ದಾರಿಯನ್ನು ನಿರ್ವಹಿಸಲು ಅಸಾಧ್ಯವಾದರೆ ಶ್ರೀ ಮುನ್‌ಶಿಯವರು ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಟ್ಟು ಇತರರಿಗೆ ಅವಕಾಶ ಕೊಡಬೇಕು. ಹೀಗೆ ಪರಿಣಾಮಕಾರಿಯಾದ ಯಾವ ಮಾರ್ಗವನ್ನೂ ಅನುಸರಿಸದೆ, ಹೊರಗಿನಿಂದ ಆಹಾರ ಬರುವುದೆಂದು ನಂಬಿಕೊಂಡಿದ್ದರೆ ಮುಂದೆ ಮಹಾ ಅನರ್ಥಕ್ಕೆ ಕಾರಣವಾಗಬಹುದೆಂಬುದನ್ನು ಶ್ರೀ ಮುನ್‌ಶಿಯವರು ಅರಿತು ಈಗಲೇ ಸೂಕ್ತವಾದ ಮಾರ್ಗವನ್ನು ಅನುಸರಿಸುವುದು ಒಳ್ಳೆಯದು.

ಎಂ. ಆರ್. ಸಿ. ಬಸಪ್ಪ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಜನವರಿ ೧೯ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ಆರ್. ಕೆ. ಶ್ರೀಕಂಠನ್ (ದೇವೀಭಜನೆ) ೭-೩೫ ಸೆಮ್ಮಂಗುಡಿ ಶ್ರೀನಿವಾಸಯ್ಯರ್ (೦) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೋನೆಟ್ ೧-೪೫ ಹಿಂದಿ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ಟಿ. ಆರ್. ರಂಗಸ್ವಾಮಿ (ಸಂಗೀತ) ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಭಕ್ತಕಬೀರ್-ಕೆ-ಪಾಡ್ ೭-೧೫ ಟಿ. ಆರ್. ರಂಗಸ್ವಾಮಿ(ಸಂಗೀತ) ೭-೩೦ ವಿಶ್ವವಾರ್ತೆ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಕೆ. ಎಸ್. ನಾರಾಯಣಯ್ಯಂಗಾರ್ ಗೋಟುವಾದ್ಯ (೨) ೮-೧೫ ವಿ. ವೆಂಕಟಸುಬ್ಬರಾವ್ (ವೀಣೆ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಮೈಸೂರು ಅರಮನೆ ಕರ್ಣಾಟಕ ಬ್ಯಾಂಡು ೧೧-೦ ಮುಕ್ತಾಯ.

ಒಲಿಂಪಿಯಾ

೧೮-೧-೫೧ರಿಂದ ಪ್ರತಿದಿನ ೩ ಆಟಗಳು

ಎರಡನೇ ವಾರ

ಪಾತ್ರ:

ನಿಗಾರ್, ಕರಣದಿವಾನ್, ನಿರೂಪರಾಯ್

ರಣಜಿತ್‌ರವರ ಅಪೂರ್ವ ಕಲಾಕೃತಿ

ಮಿಟ್ಟಿ ಕೆ ಖಿಲೋನೆ

ನ್ಯೂ ಅಪೇರಾ

ಮೈಸೂರು

ತಾ॥ ೧೮-೧-೫೧ ರಿಂದ

'ಫ್ಲೈಯಿಂಗ್ ಎಕ್ಸ್‌ಪ್ರೆಸ್'

-: ಅಭಿನಯ :-

ಪ್ರಕಾಶ್, ಸಿರಾಜ, ಮಿಸ್. ಮೋತಿ, ಗುಲನಾರ್

ಪ್ರತಿದಿನ ೩ ಆಟಗಳು

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Rge. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೧—೧೯೫೧ನೇ ಶುಕ್ರವಾರ [ಸಂಚಿಕೆ ೧೧೭

ಚೈನಾ ಆಕ್ರಮಣರಾಷ್ಟ್ರವೆಂದು ಘೋಷಿಸಿ:—ಅಮೆರಿಕಾ

ಸಂಧಾನದಿಂದ ಸಾಮಸ್ಯಾ ಪರಿಹಾರಕ್ಕೆ ದಾರಿಯಿದೆ ನಿರಾಶೆಗೊಳ್ಳಬೇಕಾಗಿಲ್ಲ:—ನೆಹರೂ

ಕೊರಿಯಾದಲ್ಲಿ ಸೀಸ್‌ಫೈರಿಗಾಗಿ ಮಾಡಿದ್ದ ನೂತನ ಸಲಹೆಗಳನ್ನು ಚೈನಾ ಸರ್ಕಾರವು ನಿರಾಕರಿಸಿ ಪ್ರತಿ ಸಲಹೆಗಳನ್ನು ಕಳುಹಿಸಿದೆ. ಈ ಪ್ರತಿ ಸಲಹೆಗಳು ಕೊರಿಯಾದಿಂದ ಎಲ್ಲಾ ಸೈನ್ಯಗಳನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕು, ಫಾರ್ಮೋಸಾದಿಂದ ಅಮೆರಿಕಾ ಸೈನ್ಯವನ್ನು ವಾಪಸ್ಸು ಕರೆಸಿಕೊಳ್ಳಬೇಕು ವಿಶ್ವ ಸಂಸ್ಥೆಯಲ್ಲಿ ಚೈನಾಕ್ಕೆ ಯುಕ್ತಸ್ಥಾನ ಕೊಡಬೇಕು ಈ ಸಂಧಾನಗಳಲ್ಲಿ ಚೀನಾ, ರಷ್ಯಾ, ಬ್ರಿಟನ್, ಅಮೆರಿಕಾ, ಫ್ರಾನ್ಸ್, ಭಾರತ ಮತ್ತು ಈಜಿಪ್ಟ್ ರಾಷ್ಟ್ರಗಳು ಭಾಗ ವಹಿಸಬೇಕು ಎನ್ನುವುದೇ

ಈ ವಿಷಯದಲ್ಲಿ ರಾಜಕೀಯ ಸಮಿತಿಯು ನಿನ್ನೆ ಸಭೆ ಸೇರಿ ಚರ್ಚೆಯನ್ನು ಮುಂದುವರಿಸಿತು.

ಅಮೆರಿಕಾ ಪ್ರತಿನಿಧಿ ಮಿ|| ವಾರನ್ ಆಸ್ಟಿನ್‌ರು ಒಂದು ನಿರ್ಣಯವನ್ನು ಮಂಡಿಸಲು ಚೈನಾವನ್ನು ಆಕ್ರಮಣರಾಷ್ಟ್ರವೆಂದು ಘೋಷಿಸಬೇಕು. ಸದಸ್ಯ ರಾಷ್ಟ್ರಗಳೆಲ್ಲವೂ ಚೈನಾಕ್ಕೆ ಯಾವ ಮನ್ನಣೆ, ಸಹಾಯನೀಡದೆ. ಚೈನಾದೊಡನೆ ಯುದ್ಧಮಾಡಲು ಸಿದ್ಧರಾಗಬೇಕು. ಸಂಧಾನಸಮಿತಿಯವರು ಮೂರು ಬಾರಿ ಪ್ರಯತ್ನಿಸಿ ವಿಫಲವಾಯಿತು. ಚೈನಾವು ಕೊಟ್ಟಿರುವ ಪ್ರತಿ ಸಲಹೆಗಳಲ್ಲಿ ಒಪ್ಪಲಾಗುವುದಿಲ್ಲವೆಂದು ಹೇಳಿದರು.

ಆಸ್ಟ್ರೇಲಿಯ ೨ ಫ್ರೆಂಚ್, ಬ್ರಿಟನ್ ಮತ್ತು ಕೆನಡಾ ಪ್ರತಿನಿಧಿಗಳು, ಚೈನಾವು ಕಳುಹಿಸಿರುವ ಸಲಹೆಗಳನ್ನು ಖಂಡನೀಯವಾಗಿಲ್ಲ ಅವುಗಳಲ್ಲಿ ಶಾಂತಿಯುತರೀತಿಯ ಸಂಧಾನಕ್ಕೆ ಅವಕಾಶವಿದೆ ಅವುಗಳನ್ನು ಸಾವಧಾನದಿಂದ ಪರಿಶೀಲಿಸಿ ತಕ್ಕ ತೀರ್ಮಾನಕ್ಕೆ ಬರಬೇಕಾಗಿದೆ. ಆಕ್ರಮಣರಾಷ್ಟ್ರವೆಂದು ಈಗಲೇ ಘೋಷಿಸುವುದು ಯುಕ್ತವಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ

ಇದೇ ವಿಷಯದಲ್ಲಿ ಭಾರತ ಪ್ರಧಾನಿ ಪಂಡಿತ ನೆಹರೂರವರು ಪ್ಯಾರಿಸ್ಸಿನಲ್ಲಿ ಮಾತನಾಡುತ್ತ ಚೀನಾ ಉತ್ತರವನ್ನು ಸಲಹೆಗಳ ಸಂಪೂರ್ಣ ತಿರಸ್ಕಾರವೆಂದು ಭಾವಿಸಬೇಕಾಗಿಲ್ಲ. ಎಷ್ಟೋ ವಿಷಯಗಳಲ್ಲಿ ರಾಜಕೀಯ ಸಮಿತಿ ನಿರ್ಣಯವೂ ಚೈನಾಸಲಹೆಯೂ ಒಂದೇ ರೀತಿ ಇವೆ ಈ ವಿಚಾರದಲ್ಲಿ ಯಾರೇ ಆಗಲಿ ಬಹಳ ಆತುರದಿಂದ ವರ್ತಿಸಬಾರದು ಸಂಧಾನ ಮಾರ್ಗಗಳಿಂದ ಸಮಸ್ಯಾ ಪರಿಹಾರಕ್ಕೆ ಇನ್ನೂ ಮಾರ್ಗವಿದೆ ಎಂದು ಹೇಳಿರುವರು

ಚಿನ್ನದಗಣಿಯಲ್ಲಿ ಪಾಲು

ಬೆಂಗಳೂರು ಜ. ೧೮

ನಿನ್ನೆ ನಡೆದ ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಕೈಗಾರಿಕಾ ಸಚಿವ ದಾಸಪ್ಪನವರು ಕೋಲಾರದ ಚಿನ್ನದಗಣಿಯಲ್ಲಿ ಸಂಪೂರ್ಣವಾಗಿ ಮೈಸೂರು ಸರ್ಕಾರ ವಹಿಸಿಕೊಳ್ಳುವ ಆಲೋಚನೆಯಿಲ್ಲ, ಆದರೆ ಬಂಡವಾಳದಲ್ಲಿ ಭಾಗವಹಿಸುವ ಯೋಚನೆಯಿದೆಯೆಂದು ತಿಳಿಸಿದರು.

ಕಾಂಗ್ರೆಸ್ ವಸ್ತು ಪ್ರದರ್ಶನ

ಮುಂದಿನ ತಿಂಗಳು ಬೆಂಗಳೂರಿನಲ್ಲಿ ನಡೆಯಲಿರುವ ಕಾಂಗ್ರೆಸ್ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಲು ಮಹಾರಾಜರನ್ನು ಆಹ್ವಾನಿಸಲಾಗುವುದೆಂದು ತಿಳಿಯಬಂದಿದೆ.

ಬೆಲೆ ಏರಿಕೆ

ರೇಷನ್ ಪದಾರ್ಥಗಳ ಮೇಲಿ ಬೆಲೆಯನ್ನು ಫೆಬ್ರವರಿ ೧ ರಿಂದ ಶೇಕಡ ೫೦ರಷ್ಟು ಏರಿಸಲು ಬೊಂಬಾಯಿ ಸರ್ಕಾರವು ಯೋಚಿಸುತ್ತಲಿರುವರು.

ಭೇಟಿ

ಶಾಸನಸಭಾಧ್ಯಕ್ಷರಾದ ಶ್ರೀ ಪಿ ವೆಂಕಟಪ್ಪನವರು ಮೊನ್ನೆ ಮಧ್ಯಾನ್ಹ ೧|| ಗಂಟೆಗೆ ಬೆಂಗಳೂರು ಅರಮನೆಯಲ್ಲಿ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದರು.

ಆದಾಯತೆರಿಗೆ ಅಧಿಕಾರಿಗಳಿಗೆ ವಿಶೇಷಾಧಿಕಾರ

ಆದಾಯತೆರಿಗೆ ಕೊಡದಿರುವವರನ್ನು ಪತ್ತೆಹಚ್ಚಲು ಆದಾಯತೆರಿಗೆ ಅಧಿಕಾರಿಗಳಿಗೆ ವಿಶೇಷಾಧಿಕಾರವನ್ನು ಕೊಡುವ ಸೂಚನೆಯನ್ನು ಭಾರತ ಸರ್ಕಾರವು ಪಾರ್ಲಿಮೆಂಟಿನಲ್ಲಿ ತರಲಿರುವುದು.

ಗ್ರಾಮಾಭಿವೃದ್ಧಿ ಸಮಿತಿಗಳ ಪುನರ್ರಚನೆ

ಜಿಲ್ಲಾ ಬೋರ್ಡುಗಳು, ಗ್ರಾಮಾಭಿವೃದ್ಧಿ ಸಮಿತಿಗಳು, ಮತ್ತು ಗ್ರಾಮಪಂಚಾಯಿತಿಗಳು ನಡೆಸುತ್ತಿರುವ ಗ್ರಾಮಾಭಿವೃದ್ಧಿಕಾರ್ಯ ವಿಲೀನೀಕರಣವಾಗಿ, ಪರಸ್ಪರ ಸಹಕರಿಸುವಂತಾಗಲು ಸಲಹೆಗಳನ್ನೀಯಲು ನೇಮಿಸಲ್ಪಟ್ಟಿದ್ದ ಸಮಿತಿಯ ಸಲಹೆಗಳಲ್ಲಿ ಸರ್ಕಾರವು ಅಂಗೀಕರಿಸಿವೆ. ಅದರ ಆಧಾರದ ಮೇಲೆ ಶಾಸನ ತಯಾರಾಗುವುದು.

ಥಕ್ಕರ್‌ಬಾಬಾ ಅಸ್ವಸ್ಥರಾಗಿದ್ದಾರೆ

ಭಾವನಗರದಲ್ಲಿ ಥಕ್ಕರ್ ಬಾಬಾರವರು ಅಸ್ವಸ್ಥರಾಗಿ ಹಾಸಿಗೆ ಹಿಡಿದಿರುವರು. ಅವರ ದೇಹಸ್ಥಿತಿ ವಿಷಮಿಸಿಕೊಂಡಿದೆಯೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರು.

ಕ್ರೀಡಾರಂಗ

ಮೈಸೂರು ಜ ೧೮

ನಿನ್ನೆ ನಡೆದ ಸಿಲ್ವರ್ ಜ್ಯೂಬಲಿ ಫುಟ್‌ಬಾಲ್ ಟೋರ್ನಮೆಂಟಿನಲ್ಲಿ ಸೆಂಟ್ ಫಿಲೋಮಿನ ಹೈಸ್ಕೂಲಿನವರು ಹಾರ್ಡ್‌ವಿಕ್ ಹೈಸ್ಕೂಲಿನವರನ್ನು ೭-೧ ಗೋಲುಗಳಿಂದ ಸೋಲಿಸಿದರು.

ನಿರ್ಬಂಧವಿಲ್ಲ

ಬೆಂಗಳೂರು ಜ. ೧೮

ಬೆಣ್ಣೆಯನ್ನು ಮೈಸೂರು ಸಂಸ್ಥಾನದ ಹೊರಕ್ಕೆ ಕಳುಹಿಸಲಿದ್ದ ನಿರ್ಬಂಧವನ್ನು ತೆಗೆದುಹಾಕಿರುವುದಾಗಿ ಸರ್ಕಾರಿ ಪ್ರಕಟಣೆ ಹೊರಬಿದ್ದಿವೆ.

ವಿವಿಧ ಸಮಿತಿಗಳು

ಬೆಂಗಳೂರು ಜ ೧೮

ಹಣಕಾಸು, ವ್ಯವಸಾಯ, ಆಹಾರ, ಶಿಕ್ಷಣ, ವಿದ್ಯುಚ್ಛಕ್ತಿ- ಪಬ್ಲಿಕ್‌ವರ್ಕ್ಸ್, ಸ್ಥಳೀಯ ಸಂಸ್ಥೆಗಳು, ಕೈಗಾರಿಕೆ ಮತ್ತು ವಾಣಿಜ್ಯ. ಕಾರ್ಮಿಕ, ಗ್ರಾಮಾಭಿವೃದ್ಧಿ, ಪ್ರಚಾರ ಮುಂತಾದ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನೀಯಲು ಶಾಸನಸಭೆಯ ಸದಸ್ಯರನ್ನೊಳಗೊಂಡ ಹನ್ನೊಂದು ಸಲಹಾಸಮಿತಿಗಳನ್ನು ರಚಿಸಲಾಗುವುದೆಂದು ತಿಳಿಯಬರುತ್ತದೆ

ಲಂಚ ವಿರೋಧಸಮಿತಿ ಚಟುವಟಿಕೆ

ಲಂಚಕೊಡಲು ಹೋದುದಕ್ಕೆ ೨೦೦ ಜುಲ್ಮಾನೆ

ಬೆಂಗಳೂರು ಜ. ೧೮

ತನ್ನ ತಮ್ಮನನ್ನು ವರ್ಗಮಾಡುವ ವಿಷಯದಲ್ಲಿ ಸ್ಕೂಲಿನ ಇನ್‌ಸ್ಪೆಕ್ಟರಿಗೆ ಲಂಚಕೊಡಲು ಹೋದ ವೆಂಕಟಪ್ಪಗೌಡ ಎಂಬುವವರಿಗೆ ಕೋಲಾರದ ೨ ನೇ ಮ್ಯಾಜಿಸ್ಟ್ರೇಟರು ೨೦೦ ರೂ ಜುಲ್ಮಾನೆ ಅಥವಾ ಒಂದು ತಿಂಗಳು ಸಾದಾಶಿಕ್ಷೆಯನ್ನು ವಿಧಿಸಿರುವರು.

ಉಪಾಧ್ಯಾಯನ ಹೆಸರಿನಲ್ಲಿ ಸಂಬಳವನ್ನು ಡ್ರಾಮಾಡಿ ದುರುಪಯೋಗಪಡಿಸಿಕೊಂಡುದಕ್ಕೆ ಒಬ್ಬ ಉಪಾಧ್ಯಾಯ ಮತ್ತು ಸ್ಕೂಲ್ ಇನ್‌ಸ್ಪೆಕ್ಟರನ್ನು ಪ್ರಾಸಿಕ್ಯೂಟ್ ಮಾಡಲಾಗಿದೆ

ಒಬ್ಬ ಇಲಾಖಾ ಮುಖ್ಯಾಧಿಕಾರಿ, ಸಿಲ್ಕ್‌ಫಾರಂ ಜನರಲ್ ಮ್ಯಾನೇಜರ್, ಒಬ್ಬ ಎಗ್ಸಿಕ್ಯೂಟಿವ್ ಇನ್‌ಜನಿಯರ್, ಇಬ್ಬರು ಅಸಿಸ್ಟೆಂಟ್ ಇಂಜನಿಯರು, ಒಬ್ಬ ಅಮಲ್ದಾರ್‌ರವರು ರೆವಿನ್ಯೂ ಇನ್‌ಸ್ಪೆಕ್ಟರು ಮುಂತಾದ ಕೆಲವು ಅಧಿಕಾರಿಗಳ ವಿಷಯದಲ್ಲಿ ಪರಿಶೀಲನೆ ನಡೆದು ಸದ್ಯದಲ್ಲೇ ಆಜ್ಞೆಯು ಹೊರಬೀಳಲಿದೆ.

ಕಾರ್ಖಾನೆಗಳ ಇನ್‌ಸ್ಪೆಕ್ಟರು

ಮೈಸೂರು ಸರ್ಕಾರದ ಕಾರ್ಮಿಕ ಕಮಿಷನರನ್ನು ಕಾರ್ಖಾನೆಗಳ ಮುಖ್ಯ ಇನ್‌ಸ್ಪೆಕ್ಟರಾಗಿ ನೇಮಿಸಲಾಗಿದೆ.

ಸೆರೆಮನೆಯಿಂದ ಬರಲು ನಿರಾಕರಣೆ

ನೂತನ ಸುಧಾರಣೆಗಳ ಘೋಷಣೆಯಂತೆ ನೇಪಾಳದಲ್ಲಿ ಈಗಾಗಲೇ ೧೨೫ ಜನ ರಾಜಕೀಯ ಖೈದಿಗಳನ್ನು ಬಿಡಲಾಗಿದೆ ಇನ್ನೂ ಜೈಲಿನಲ್ಲಿರುವ ೨೬೭ರ ಪೈ ೮ ಜನ ವಿನಹ ಮಿಕ್ಕವರನ್ನೆಲ್ಲಾ ಬಿಡಲು ಸರ್ಕಾರದ ಆಜ್ಞೆಯಾಗಿದೆ. ಖಾಟ್ಮಂಡುವಿನಲ್ಲಿ ೮ ಜನ ಡೆಟಿನ್ಯೂಗಳನ್ನು ಬಿಟ್ಟರೆ ಮಾತ್ರ ತಾವು ಹೊರಗೆ ಹೋಗುವುದಾಗಿ ಸುಮಾರು ೧೫೦ ರಾಜಕೀಯ ಖೈದಿಗಳು, ಜೈಲಿನಿಂದ ಹೊರಕ್ಕೆ ಬರಲು ನಿರಾಕರಿಸಿರುವುದಾಗಿ ತಿಳಿಯಬಂದಿದೆ.

ಮಹಾರಾಜ ಕಾಲೇಜು ಶತಮಾನೋತ್ಸವದ ಕಾರ್ಯ ಕಲಾಪಗಳು

ಮೈಸೂರು ಜ. ೧೯

ಮಹಾರಾಜ ಕಾಲೇಜಿನ ಶತಮಾನೋತ್ಸವದ ಕಾರ್ಯ ಕಲಾಪಗಳು ನಾಳೆ ಬೆಳಗ್ಗೆ ೧೦-೪೫ ಗಂಟೆಗೆ ಆರಂಭವಾಗುವುವು. ಶ್ರೀಮನ್ಮಹಾರಾಜರು ಆರಂಭಭಾಷಣ ಮಾಡಿ ಸರಸ್ವತಿ ವಿಗ್ರಹದ ಪ್ರತಿಷ್ಠೆ, ಅಶೋಕಸ್ತಂಭದ ಅನಾವರಣ ಮಾಡಿ ಶ್ರೀ ಜಯಚಾಮರಾಜೇಂದ್ರ ನಾಮಾಂಕಿತ ಶತಮಾನೋತ್ಸವ ಹಾಲಿನ ಅಸ್ತಿಭಾರ ಶಿಲಾ ಪ್ರತಿಷ್ಠಾಪನೆಯನ್ನೂ ಮಾಡುವರು.

ಹನ್ನೆರಡು ಗಂಟೆಗೆ ಯೂನಿಯನ್ ಹಾಲಿನಲ್ಲಿ ವಸ್ತು ಪ್ರದರ್ಶನದ ಆರಂಭೋತ್ಸವ ನಡೆಯುವುದು. ಅದೇ ದಿನ ಸಂಜೆ ೬ ಗಂಟೆಗೆ ಪ್ರೊ|| ಛಾನ್ಸಲರ್ [illegible] ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಹಳೆಯ ವಿದ್ಯಾರ್ಥಿಗಳು, ಈಗಿನ ವಿದ್ಯಾರ್ಥಿಗಳ ಮತ್ತು ಅಧ್ಯಾಪಕವರ್ಗದವರ ಭಾಷಣ ನಡೆಯುವುದು. ಶ್ರೀ ವಿ. ದೊರೆಸ್ವಾಮಿ ಅಯ್ಯಂಗಾರ್‌ರವರ ವೀಣಾವಾದನವಾದ ನಂತರ ನಾಟಕ ನಡೆಯುತ್ತದೆ.

೨೦ನೇ ತಾ|| ಬೆಳಗ್ಗೆ ೧೦-೪೫ ಗಂಟೆಗೆ ಕ್ರಾಫರ್ಡ್ ಹಾಲ್ ಬಳಿ ಸಭೆ ಆರಂಭವಾಗಿ ವೈಸ್-ಛಾನ್ಸಲರ್ ರವರ ಸ್ವಾಗತ ಭಾಷಣ ನಡೆಯುವುದು. ಶ್ರೀಮನ್ಮಹಾರಾಜರು ಕ್ರಾಫರ್ಡ್ ವ್ಯಾಯಾಮ ಶಾಲೆಯ ಅಸ್ತಿಶಿಲಾ ಪ್ರತಿಷ್ಠಾಪನೆ ಮಾಡುವರು.

ಸಂಜೆ ೫|| ಗಂಟೆಗೆ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಗಿ ರೆವಿನ್ಯೂ ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರು ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣ ಮಾಡುವರು. ಶ್ರೀ ಎ. ಆರ್. ವಾಡಿಯಾರವರು ದಿವಂಗತ ಪ್ರೊ|| ಹಿರಿಯಣ್ಣರವರ ಭಾವಚಿತ್ರ ಅನಾವರಣ ಮಾಡುವರು. ಸ್ಪೋರ್ಟ್ಸ್, ವಿವಿಧವೇಶಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನವಿನಿಯೋಗ ಮಾಡುವರು. ನಾಟಕವಾದನಂತರ ಶ್ರೀ ಎಸ್. ಎನ್. ಸ್ವಾಮಿಯವರ ನೃತ್ಯ ಪ್ರದರ್ಶನ ನಡೆಯುವುದು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಜನವರಿ ೨೦ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ಚಿತ್ರಜಗತ್. ೭-೪೫ ಕನ್ನಡದಲ್ಲಿ ವಾರ್ತೆ. ೮-೦| ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ [illegible] ೧-೪೫ ಆರ್. ಶ್ರೀಕಂಠನ್ (ಕನ್ನಡ ಗೀತೆಗಳು) ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಎಸ್. ಬಿ. ಕೇಶವಮೂರ್ತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಡಿ. ಕೆ. ಪಟ್ಟಮ್ಮಾಳ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ತಾಳವಾದ್ಯ ೭-೧೫ ವನಿತಾ ವಿಹಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಹೆಚ್. ಟಿ. ಶಾಮಣ್ಣ (ಕಥಾಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯಸಮ್ಮೇಳನ ೯-೪೫ ಗಾನವಿಹಾರ. ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವುವು!!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು.

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು.

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ;

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ನ್ಯೂ ಆಪೇರಾ

ಮೈಸೂರು

ತಾ|| ೧೮-೧-೫೧ ರಿಂದ

'ಫ್ಲೈಯಿಂಗ್ ಎಕ್ಸ್‌ಪ್ರೆಸ್'

-: ಅಭಿನಯ :-

ಪ್ರಕಾಶ, ಸಿರಾಜ, ಮಿಸ್. ಮೋತಿ, ಗುಲನಾರ್

ಪ್ರತಿದಿನ ೩ ಆಟಗಳು

ರಣಜಿತ್

ತಾ|| ೧೨-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ, ದಿವಂಗತ ಮಜಾರ್‌ಖಾನ್

ಬೆಳಗಿನ ಪ್ರದರ್ಶನ ೧೯-೧-೫೧ ರಿಂದ

ಷಹರ್ - ಕೆ - ದೂರ್

ಪಾತ್ರ: ವೀಣಾ

ಒಲಂಪಿಯಾ

೧೮-೧-೫೧ರಿಂದ ಪ್ರತಿದಿನ ೩ ಆಟಗಳು

ಎರಡನೇ ವಾರ

ಪಾತ್ರ:

ನಿಗಾರ್, ಕರಣದಿವಾನ್, ನಿರೂಪರಾಯ್

ರಣಜಿತ್‌ರವರ ಅಪೂರ್ವ ಕಲಾಕೃತಿ

ಮಿಟ್ಟಿ ಕೆ ಖಿಲೋನೆ

ಬೆಳಗಿನ ಪ್ರದರ್ಶನ ೧೯-೧-೧೯೫೧ ರಿಂದ

ಸೈಗಾಲ್, ಸುಮಿತ್ರ ಪಾತ್ರ ವಹಿಸಿರುವ

ನ್ಯೂ ಥಿಯೇಟರ್ಸ್‌ರವರ

ಮೈ ಸಿಸ್ಟರ್

(ಮೇರಿ ಬಹೆನ್)

Rge. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೧—೧೯೫೧ನೇ ಶನಿವಾರ [ಸಂಚಿಕೆ ೧೧೮

ವಿಜ್ಞಾನಯುಗದಲ್ಲಿ ಮಾನವತ್ವಕ್ಕೆ ವಿಶೇಷ ಮಹತ್ವವಿದೆ

ಮಹಾರಾಜಾಕಾಲೇಜು ಶತಮಾನೋತ್ಸವದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ಜ. ೨೦

ಮಹಾರಾಜಾ ಕಾಲೇಜಿನ ಇತಿಹಾಸ ಪ್ರಾರಂಭದಲ್ಲಿ ಆರಂಭಿಸಿದ ಪಾಶ್ಚಾತ್ಯ ವಿದ್ಯಾಭ್ಯಾಸದ ಮತ್ತು ಈಗಿನ ರಾಷ್ಟ್ರೀಯ ಶಿಕ್ಷಣದ ಯೋಜನೆಯಂತೆ ಮಾತೃಭಾಷೆಯ ಮೂಲಕ ಶಿಕ್ಷಣ ಕ್ರಮಕ್ಕೆ ಸಂಬಂಧಸಾಧನವಾಗಿದೆ. ವಿಜ್ಞಾನ ಮತ್ತು ಸಾಹಿತ್ಯ ವಿದ್ಯೆಯ ಆಧಾರದ ಮೇಲೆ ಜ್ಞಾನಭಂಡಾರ ಅಭಿವೃದ್ಧಿಯಾಗಬೇಕು. ವಿಜ್ಞಾನಯುಗದಲ್ಲಿ ಸಾಹಿತ್ಯ ವಿದ್ಯೆಯ ಅಭ್ಯಾಸವು ಎಂದಿಗಿಂತಲೂ ಹೆಚ್ಚಿಗೆ ಪ್ರಮುಖಸ್ಥಾನಗಳಿಸಿದೆ. ಮನುಷ್ಯನು ಪ್ರಕೃತಿಯ ಶಕ್ತಿಯಮೇಲೆ ಹೊಂದಿರುವ ಹತೋಟಿಯು ಅವನ ಪೂರ್ಣವಾದ ಜ್ಞಾನ ಮತ್ತು ಶಕ್ತಿಯನ್ನು ಅವಲಂಬಿಸಿದೆ. ವಿದ್ಯೆಯು ಮಾತ್ರ ಈ ಶಕ್ತಿಯನ್ನು ಕೊಡಬಲ್ಲದು ಎಂದು ಶ್ರೀಮನ್ಮಹಾರಾಜರು ಇಂದು ಬೆಳಗ್ಗೆ ಮಹಾರಾಜಾ ಕಾಲೇಜು ಶತಮಾನೋತ್ಸವ ಸಮಾರಂಭದ ಆರಂಭ ಭಾಷಣ ಮಾಡುತ್ತ ನುಡಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ, ವಿದ್ಯೆಯು ನಾಗರೀಕತೆಯ ಬೆಳವಣಿಗೆಯನ್ನು ತತ್ವಬೋಧಕವಾದ ಯೋಚನೆ ಮತ್ತು ವಿಜ್ಞಾನ ದೃಷ್ಟಿಯಿಂದ ಮುಂದುವರಿಸಿ ಮನುಷ್ಯನ ನಿತ್ಯ ಜೀವನಕ್ಕೆ ಈ ನಾಗರೀಕತೆಯು ಸಹಾಯ ನೀಡುವಂತಿರಬೇಕು. ವಿಶ್ವಸೌಹಾರ್ದ ಮತ್ತು ಪ್ರೀತಿಯು ಮನುಷ್ಯನ ವಿವೇಕಯುತವಾದ ಸಾಮಾಜಿಕ ಮತ್ತು ನೈತಿಕ ಮಟ್ಟದಿಂದ ಕೂಡಿದ ಇತಿಹಾಸದ ಓದುವಿಕೆಯಿಂದ ಕೂಡಿದೆ.

ಭೂಕಂಪವು ಕಳೆದ ವರ್ಷಗಳಲ್ಲಿ ಹೇಗೆ ಮಾನವ ಮತ್ತು ಸಂಪತ್ತನ್ನು ಹಾಳುಮಾಡಿ, ಉಳಿದವರನ್ನು ಬೇಗೆಯಿಂದ ಕೂಡಿದ ಭೂಮಿಯ ಮೇಲೆ ಆಹಾರ ಮತ್ತು ಬಟ್ಟೆಗೆ ಅಲೆದಾಡುವಂತೆ ಮಾಡಿದೆಯೋ ಅದೇ ಸದ್ಭಾವನೆ ಮತ್ತು ಸನ್ನಿಹಿತಗಳಿಂದ ಕೂಡಿದ್ದರೆ ಜ್ಞಾನವು ಇಂಥವುಗಳಿಗೆ ಅವಕಾಶ ಕೊಡುವುದಿಲ್ಲ.

ಕಳೆದ ಒಂದು ಶತಮಾನದಲ್ಲಿ ಮಹಾರಾಜಾ ಕಾಲೇಜು ಕೊಟ್ಟಿರುವ ಶಿಕ್ಷಣವನ್ನು ಅಳೆಯಲು ಅಸಾಧ್ಯವಾಗಿದೆ. ವಿಶ್ವಾಸ ಮತ್ತು ಸೌ[illegible]ದ ಕೂಡಿ ಬುದ್ಧಿವಂತತನದಿಂದ ಕಲಿತ ಪಾಶ್ಚಾತ್ಯ ವಿದ್ಯಾಭ್ಯಾಸ ಉನ್ನತ ಮಟ್ಟದ ಸಂಶೋಧನೆ ಮತ್ತು ಜ್ಞಾನಬೋಧಕವಾದ ಶಿಕ್ಷಣ ಇವೇ ಮುಂತಾದುವುಗಳಿಂದ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದವು ನಿಜವಾದ ಸಂತೋಷವನ್ನು ಪಡೆಯುತ್ತಲಿರುವುದು.

ಭಾರತ ಕಲೆ ಮತ್ತು ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸವನ್ನು ಅಭ್ಯಾಸಿಸಲು ಅನುಕೂಲವಾಗುವಂತೆ ಈಗ ಕಟ್ಟಲಿರುವ ಶತಮಾನೋತ್ಸವ ಕಟ್ಟಡವು ಸಹಾಯವಾಗಲೆಂಬುದೇ ನನ್ನ ಆಶಯ

ಕಲಾವಿದರು, ಕವಿಗಳು, ತತ್ವ ಶಾಸ್ತ್ರಜ್ಞರು, ಮಹರ್ಷಿಗಳು ಇವರೇ ಮುಂತಾದವರು ಹೇಗೆ ಶ್ರಮಿಸಿ ಭಾರತದ ಕೀರ್ತಿ ಗೌರವಗಳನ್ನು ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿಸಿದರೋ ಅದೇ ಹಾದಿಯಲ್ಲಿ ನಮ್ಮ ಮೈಸೂರು ಯುವಕರು ನಡೆದು ಭಾರತದ ಪ್ರಗತಿಗೆ ಶ್ರಮಿಸುವರೆಂದು ನಾನು ಆಶಿಸುತ್ತೇನೆ.

ಶತಮಾನೋತ್ಸವವು ನಮ್ಮೆಲ್ಲರ ಸದ್ಭಾವನೆಯನ್ನು ಬೆಳಗಿಸಿ, ಇನ್ನೂ ಹೆಚ್ಚಿನ ಸೇವೆಗೆ ಮಾರ್ಗವನ್ನು ತೋರಲಿ. ಈಗ ಪ್ರತಿಷ್ಠಿಸುವ ಸರಸ್ವತೀ ವಿಗ್ರಹವು [illegible]ಸ್ಥನ ದೈವಭಕ್ತಿಯನ್ನು ಹೆಚ್ಚಿಸಲಿ. ಈಗ ಅನಾವರಣ ಮಾಡಲಿರುವ ಅಶೋಕ ಸ್ತಂಭವು ಮಹಾಪುರುಷರು ಬೋಧಿಸಿದ ದಿವ್ಯ ಅಸ್ತ್ರವಾದ ಅಹಿಂಸೆಗೆ ಸ್ಫೂರ್ತಿ ನೀಡಲಿ ಎಂದು ಹೇಳಿದರು.

ಪ್ರಾರಂಭದಲ್ಲಿ ಶತಮಾನೋತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಅತಿಥಿಗಳನ್ನೂ, ಹಳೇ ಮತ್ತು ಈಗಿನ ವಿದ್ಯಾರ್ಥಿಗಳನ್ನೂ ಈ ಸಮಾರಂಭಕ್ಕೆ ಸ್ವಾಗತಿಸುತ್ತ ಈ ರೀತಿ ಹೇಳಿದರು :

ಮಹಾರಾಜಕಾಲೇಜಿನ ವಿದ್ಯಾರ್ಥಿಗಳು ಯಥಾನುಶಕ್ತಿಯಾಗಿ ಇಲ್ಲಿಂದ ಜ್ಞಾನವನ್ನು ಬೆಳೆಸಿಕೊಂಡು ಈ ಕಾಲೇಜಿನ ಕೀರ್ತಿ ಗೌರವ ಹೆಚ್ಚಿಸಲು ಕೈಲಾದಷ್ಟು ಶ್ರಮಿಸಿದ್ದಾರೆ. ಮಹಾರಾಜಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಂಸ್ಥಾನದ ಮತ್ತು ಭಾರತದಲ್ಲಿ ಸಾರ್ವಜನಿಕ ಮತ್ತು ಸಾಮಾಜಿಕ ಸೇವಾಕ್ಷೇತ್ರಗಳಲ್ಲಿ ವಿಶೇಷವಾಗಿ ಶ್ರಮಿಸಿ ಗುಣ ಮತ್ತು ದಕ್ಷತೆಯಲ್ಲಿ ವಿಶೇಷವಾದ ಹೆಸರುಗಳಿಸಿರುವರು, ಹಾಗಿಲ್ಲದವರು ಅತಿ ವಿರಳ.

ಕಲೆ, ಜ್ಞಾನ ಮತ್ತು ಇತರ ಸಾರ್ವಜನಿಕ ರಂಗಗಳಲ್ಲಿ ಉನ್ನತಸ್ಥಾನ ಗಳಿಸಲೆಂಬುದೇ ಈ ಕಾಲೇಜಿನ ಘನ ಉದ್ದೇಶಗಳಲ್ಲೊಂದಾಗಿದೆ.

ಈ ೧೧೭ ವರ್ಷದಲ್ಲಿ ಕಾಲೇಜು ಕೇವಲ ಬೋಧಪ್ರಧವಾದ ಸಂಸ್ಥೆಯಾಗಿರದೆ, ಇತಿಹಾಸ ಪ್ರಸಿದ್ಧವಾದ ಭಾರತದಲ್ಲಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಂದಾಗಿದೆ. ಶತಮಾನೋತ್ಸವವು ಹದಿನೇಳು ವರ್ಷದ ಹಿಂದೆಯೇ ನಡೆಯಬೇಕಾಗಿತ್ತು. ಆರ್ಥಿಕ ಮುಗ್ಗಟ್ಟು, ರಾಜಕೀಯ ಗೊಂದಲ ಮತ್ತು ಭಾರತದ ಸ್ವಾತಂತ್ರ್ಯ ಚಳುವಳಿ ಇವೇ ಮುಂತಾದ ಕಾರಣಗಳಿಂದ ಮುಂದುವರಿಸಲಾಯಿತು. ಇಲ್ಲಿನ ವಿದ್ಯಾರ್ಥಿಗಳು ನಮ್ಮ ಕರೆಗೆ ವಿಶೇಷವಾದ ಮನ್ನಣೆಯಿತ್ತು ಕೈಲಾದ ಸಹಾಯ ನೀಡಿದ್ದಾರೆ.

ಶ್ರೀ ಟಿ. ಸಿದ್ಧಲಿಂಗಯ್ಯನವರು ಮುಂದುವರಿದು ಶ್ರೀಮನ್ ಮಹಾರಾಜರನ್ನು ಪ್ರಶಂಸಿಸಿದರು. ಈ ಉತ್ಸವದ ಕುರುಹಾಗಿ ಇತ್ತಿರುವ ದಾನಿಗಳನ್ನೂ ಕರ್ನಲ್ ಕ್ರಾಫ್ ರ್ಡ್, ಶ್ರೀ ಶಿಲ್ಪಿ ಸಿದ್ದಲಿಂಗಸ್ವಾಮಿ ಮತ್ತು ಶ್ರೀ ಎಸ್. ಎನ್. ಸ್ವಾಮಿಯವರುಗಳ ಔದಾರ್ಯವನ್ನು ಶ್ರೀ ಟಿ. ಸಿದ್ದಲಿಂಗಯ್ಯನವರು ಕೊಂಡಾಡಿ ತಮ್ಮ ಸ್ವಾಗತ ಭಾಷಣವನ್ನು ಮುಗಿಸಿದರು.

ಆಫ್ಘನ್ ಪ್ರಧಾನಿ

ಆಫ್ಘನ್ ಪ್ರಧಾನಿಗಳು ಇಂದು ಭಾರತದಿಂದ ಲಂಡನ್ನಿಗೆ ಪ್ರಯಾಣ ಬೆಳಸಿದರು. ನಾಳೆ ಲಂಡನನ್ನು ಸೇರಿ ಅಲ್ಲಿ ಮೂರು ದಿನಗಳಿದ್ದು ವೈದ್ಯ ಚಿಕಿತ್ಸೆಗಾಗಿ ಅಮೇರಿಕಕ್ಕೆ ತೆರಳುವರು.

ಏಕಕಾಲದಲ್ಲಿ ಯುದ್ಧ ಮುಕ್ತಾಯ ಮತ್ತು ಸಂಧಾನ

ಏಕಕಾಲದಲ್ಲಿ ಯುದ್ಧ ಮುಕ್ತಾಯ ಮತ್ತು ಸಂಧಾನ ಪ್ರಾರಂಭಿಸಬೇಕಾಗಿದೆ. ಚೈನಾದನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸುವುದರಿಂದ ವಿಶೇಷ ಹಾನಿಯುಂಟಾಗುವುದು. ವಿಶ್ವಸಂಸ್ಥೆಯಲ್ಲಿ ಬಹುಮತ ಸದಸ್ಯರಿಗೆ ಈ ರೀತಿ ಘೋಷಿಸುವುದಕ್ಕೆ ಇಷ್ಟವಿಲ್ಲ.

ಕೊರಿಯಾ ಪ್ರಶ್ನೆ ಇತ್ಯರ್ಥವಾಗುವವರೆಗೆ ಇಂಡೋಚೈನಾ ಸಮಸ್ಯೆಯೂ ಇತ್ಯರ್ಥವಾಗುವುದಿಲ್ಲ. ಶಾಂತಿರೀತಿಯಿಂದ ನಿಧಾನವಾಗಿ ಕಾರ್ಯ ಸಾಧಿಸಬೇಕಾಗಿದೆ ಎಂದು ಭಾರತಪ್ರಧಾನಿ ನೆಹರೂರವರು ಕೊರಿಯಾ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇದನ್ನು ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರಿಗೆ ತಿಳಿಸಿರುವರು.

ನೇಪಾಳ ಸುಧಾರಣೆಗಳ ಸ್ವಾಗತ

ಭಾರತದ ವಿದ್ಯಾ ಸಚಿವ ಮೌಲಾನಾ ಆಜಾದ್‌ರವರು ನೇಪಾಳ ಸರ್ಕಾರವು ಘೋಷಿಸಿರುವ ನೂತನಸುಧಾರಣೆಗಳನ್ನು ಸ್ವಾಗತಿಸುತ್ತ, ಇದು ಜನಾಭಿಪ್ರಾಯಕ್ಕೆ ಜಯವಾದ ಸೂಚನೆ. ವಯಸ್ಕರ ಮತದ ಪದ್ಧತಿಪ್ರಕಾರ ರಾಜ್ಯಾಂಗ ಸಭೆಯನ್ನು ರಚಿಸಲು ರಾಣಾ ಸರ್ಕಾರವು ಒಪ್ಪಿರುವುದೂ, ರಾಜ್ಯಾಂಗ ರಚನೆಯಾಗಿ ಪ್ರಜಾ ಸರ್ಕಾರ ಸ್ಥಾಪನೆಯಾಗುವವರೆಗೆ ಪ್ರಜಾ ಪ್ರತಿನಿಧಿಗಳನ್ನೊಳಗೊಂಡ ತಾತ್ಕಾಲಿಕ ಸರ್ಕಾರ ಸ್ಥಾಪನೆ ಇವೆಲ್ಲವೂ ಸ್ವಾತಂತ್ರ್ಯದ ಕುರುಹು. ನೇಪಾಳ ಸರ್ಕಾರವೂ ಮತ್ತು ಕಾಂಗ್ರೆಸ್ಸೂ ಈ ಸುಧಾರಣೆಗಳನ್ನೂ ಜಾರಿಗೆ ತರಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ಪರಸ್ಪರ ಘರ್ಷಣೆಗಳನ್ನು ನಿಲ್ಲಿಸಿ ಸಂಧಾನಕ್ಕೆ ಹೊರಟಿರುವುದು ಅಭಿನಂದನೀಯವಾದುದು.

ಇಲ್ಲಿಯವರೆಗೂ ನೇಪಾಳದ ಸಂಪೂರ್ಣಾಧಿಕಾರಿಯಾಗಿದ್ದ ಮುಖ್ಯ ಮಂತ್ರಿಗಳು ಅಧಿಕಾರ ವರ್ಗಾವಣೆಗಳ ಸಂಬಂಧಪಟ್ಟಂತೆ ಮತ್ತೊಂದು ಘೋಷಣೆಯನ್ನು ಹೊರಡಿಸಿ, ದೊರೆಗಳ ಅಂಗೀಕಾರವನ್ನು ಪಡೆದು ರಾಜಘೋಷಣೆಯನ್ನು ಹೊರಡಿಸಿದರು.

ಭಾರತಾದ್ಯಂತ ಆಹಾರ ಪಡಿತರ ಖೋತಾ

೧೨ ಔನ್ಸ್‌ಗಳಿಂದ ೯ ಔನ್ಸ್‌ಗಳಿಗಿಳಿಯಿತು

ಭಾರತಾದ್ಯಂತ, ನಿನ್ನೆಯಿಂದ ಆಹಾರಪಡಿತರವನ್ನು ೧೨ ಔನ್ಸ್‌ಗಳಿಂದ ೯ ಔನ್ಸ್‌ಗಳಿಗೆ ತಾತ್ಕಾಲಿಕವಾಗಿ ಇಳಿಸಲು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ಕೇಂದ್ರ ಆಹಾರಮಂತ್ರಿ ಶ್ರೀ ಮುನ್ಷಿಯವರು ತಿಳಿಸಿರುವರು. ದೇಶದಲ್ಲಿ ಅನೇಕಕಡೆ ಉಂಟಾದ ನೈಸರ್ಗಿಕ ದುರಂತಗಳ ಪರಿಣಾಮ ಮತ್ತು ನಿರೀಕ್ಷಿಸಿದಷ್ಟು ಆಹಾರವು ಹೊರ ರಾಷ್ಟ್ರಗಳಿಂದ ಬಂದಿಲ್ಲವಾಗಿ, ಅನಿವಾರ್ಯವಾಗಿ ಈ ಮಾರ್ಗವನ್ನು ಕೈಗೊಳ್ಳಬೇಕಾಗಿದೆ. [illegible] ಒದಗದಿದ್ದರೆ ವಿದೇಶಗಳಿಂದ ೩೭ ಲಕ್ಷ ಟನ್ ಆಹಾರವನ್ನು ಆಮದುಮಾಡಿಕೊಳ್ಳಲಾಗುವುದು. ಬ್ರಿಟನ್ ಮತ್ತು ಅಮೇರಿಕಾ ಆಹಾರ ಒದಗಿಸಲು ಕಾರ್ಯಕ್ರಮ ನಡೆಸುತ್ತಲಿವೆ. ನಾವೂ ಸಹ ಇಂದಿನ ಪರಿಸ್ಥಿತಿಯನ್ನೆದುರಿಸಲು ಸರ್ವಪ್ರಯತ್ನ ಮಾಡುತ್ತಲಿದ್ದೇವೆ. ಅನುದಿನಪರಿಣಾಮವನ್ನು ಪರಮಾವಧಿಗೇರಿಸಲಾಗಿದೆ. ಧೈರ್ಯ ಮತ್ತು ಸ್ವಾರ್ಥತ್ಯಾಗ ಬುದ್ಧಿಯಿಂದ ಇಂದಿನ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯ. ಸಮಾನತ್ಯಾಗವು ಈಗ ಅತ್ಯಗತ್ಯ. ಪರಿಸ್ಥಿತಿಯು ಉತ್ತಮಗೊಂಡಲ್ಲಿ ಹಿಂದಿನ ಸ್ಥಿತಿಗೇ ಪಡಿತರಕೊಡಲು ಸಿದ್ಧರಿದ್ದೇವೆಂದು ಅವರು ಹೇಳಿರುವರು.

[ಮೈಸೂರು ಸಂಸ್ಥಾನದಲ್ಲಿ ಎ ಕ್ಲಾಸಿಗೆ ೯.೫ ಔನ್ಸ್, ಬಿ ಕ್ಲಾಸಿಗೆ ೧೨ ಔನ್ಸ್, ಶ್ರಮಜೀವಿಗಳಿಗೆ ೧೫ ಔನ್ಸ್ ಕೊಡಲಾಗುತ್ತಲಿತ್ತು. ಇನ್ನು ಮುಂದೆ ಎ ಕ್ಲಾಸಿಗೆ ೧/೨ ಔನ್ಸ್, ಬಿ ಕ್ಲಾಸಿಗೆ ೩ ಔನ್ಸ್, ಶ್ರಮಜೀವಿಗಳಿಗೆ ೨ ಔನ್ಸ್ ಕಡಮೆಯಾಗುವುದು.]

ಸಲಹೆಯನ್ನು ಉಭಯರಾಷ್ಟ್ರಗಳು ಒಪ್ಪಲಿಲ್ಲ

ಕಾಶ್ಮೀರ ವಿಷಯವಾಗಿ ಕಾಮನ್ವೆಲ್ತ್ ಪ್ರಧಾನಿಗಳು ನಡೆಸಿದ ಅನಧಿಕೃತ ಚರ್ಚೆ ವಿಷಯವಾಗಿ ಆಸ್ಟ್ರೇಲಿಯ ಪ್ರಧಾನಿ ಮಾತನಾಡುತ್ತಾ, ಕಾಶ್ಮೀರದಲ್ಲಿ ಈಗಿರುವ ಭಾರತ ಮತ್ತು ಪಾಕಿಸ್ಥಾನ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಂಡು ಕಾಮನ್ವೆಲ್ತ್ ಸೈನ್ಯಗಳನ್ನಿಡಬೇಕೆಂಬ ಸಲಹೆಯನ್ನು ತಾವು ಇತ್ತಿದುದಾಗಿಯೂ, ಅದನ್ನು ಉಭಯರಾಷ್ಟ್ರಗಳೂ ಒಪ್ಪಲಿಲ್ಲವೆಂದು ಹೇಳಿರುವರು.

ಥಕ್ಕರ್‌ಬಾಪಾ ನಿಧನರಾದರು

ಸಮಾಜಸೇವಾ ದುರಂಧರರಲ್ಲೊಬ್ಬರಾದ ಶ್ರೀ ಥಕ್ಕರ್‌ಬಾಪಾರವರು ನಿನ್ನೆ ಸಂಜೆ ಭಾವನಗರದಲ್ಲಿ ನಿಧನರಾದರು. ಈಗ್ಗೆ ಕೆಲವು ದಿವಸಗಳಿಂದ ಅವರು ಅಸ್ವಸ್ಥರಾಗಿದ್ದು ಗುರುವಾರದಿನ ಅವರಸ್ಥಿತಿಯು ಚಿಂತಾಜನಕವಾಯಿತು. ಅವರಿಗೆ ೮೨ ವರ್ಷ ವಯಸ್ಸು.

ಶ್ರೀ ಥಕ್ಕರ್‌ಬಾಪಾರವರು ಎಂಜನಿಯರಾಗಿ ತಮ್ಮ ಜೀವನವನ್ನು ಪ್ರಾರಂಭಿಸಿ ಪೂರ್ವ ಆಫ್ರಿಕಾದಲ್ಲಿ ಸ್ವಲ್ಪ ಕಾಲ ಕೆಲಸಮಾಡಿದರು. ೧೯೧೪ರಲ್ಲಿ ಸರ್ವೆಂಟ್-ಆಫ್-ಇಂಡಿಯಾ ಸಂಸ್ಥೆಯ ಅಜೀವ ಸದಸ್ಯರಾಗಿ ಸಮಾಜಸೇವಾರಂಗಕ್ಕಿಳಿದು ಹರಿಜನ, ಹಿಂದುಳಿದಜನ ಮತ್ತು ಮೂಲವಾಸಿಗಳ ಉದ್ಧಾರಕ್ಕಾಗಿ ತಮ್ಮ ಜೀವಮಾನವನ್ನೆಲ್ಲಾ ಕಳೆದರು. ಅಸ್ಪೃಶ್ಯತಾ ಸಂಗ್ರಾಮದಲ್ಲಿ ಮಹಾತ್ಮ ಗಾಂಧಿಯವರಿಗೆ ಮುಖ್ಯ ಬೆಂಬಲರಾಗಿ ಬಹಳ ಸೇವೆಗೈದಿದ್ದಾರೆ. ಸರ್ದಾರ್ ಪಟೇಲರ ನಿಧನನಂತರ ಇವರು ಕಸ್ತೂರಿಬಾ ರಾಷ್ಟ್ರೀಯ ಸ್ಮಾರಕಸಮಿತಿಯ ಅಧ್ಯಕ್ಷರಾಗಿದ್ದರು.

ಹೊಸ ಯೋಜನೆ

ಕೊರಿಯಾ ಪರಿಸ್ಥಿತಿಯನ್ನು ಶಾಂತಿರೀತಿಯಿಂದ ತೀರ್ಮಾನಿಸಲು ಏಷ್ಯಾ ಮತ್ತು ಅರಬ್‌ರಾಷ್ಟ್ರಗಳು ಇನ್ನೊಂದು ಹೊಸ ಯೋಜನೆಯನ್ನು ತಯಾರಿಸುತ್ತಲಿವೆಯೆಂದು ತಿಳಿಯಬರುತ್ತದೆ.

ತೀರ್ಮಾನ ನ್ಯಾಯಬದ್ಧವಲ್ಲ

ಚೈನಾಕ್ಕೆ ಪ್ರಾತಿನಿಧ್ಯಕೊಡದೆ, ಅದರ ಪ್ರತಿನಿಧಿಯು ಚರ್ಚೆಗಳಲ್ಲಿ ಭಾಗವಹಿಸದೆ ವಿಶ್ವಸಂಸ್ಥೆಯು ಕೊರಿಯಾ ಯುದ್ಧ ವಿಷಯದಲ್ಲಿ ಯಾವ ತೀರ್ಮಾನ ಮಾಡಿದರೂ ಅದು ನ್ಯಾಯಬಾಹಿರವಾದುದೆಂದು ಚೈನಾ ವಿದೇಶಾಂಗ ಮಂತ್ರಿಯು ವಿಶ್ವಸಂಸ್ಥೆಗೆ ತಿಳಿಸಿರುವುದಾಗಿ ವರದಿಯಾಗಿದೆ.

ಶ್ರೀ ಬಿ. ಎನ್. ರಾವ್ ಅಮೆರಿಕಾಕ್ಕೆ

ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಲೇಕ್ ಸಕ್ಸೆಸ್ಸಿಗೆ ಪ್ಯಾರಿಸ್ಸಿನಿಂದ ಹೊರಟರು.

ರಣಜಿತ್

ತಾ|| ೧೨-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ, ದಿವಂಗತ ಮಜಾರ್‌ಖಾನ್

ಬೆಳಗಿನ ಪ್ರದರ್ಶನ ೧೯-೧-೫೧ ರಿಂದ

ಷಹರ್ - ಕೆ - ದೂರ್

ಪಾತ್ರ : ವೀಣಾ

ಸಂಪಾದಕರು ಮತ್ತು ಪ್ರಕಾಶಕರು : ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಜನವರಿ ೨೧ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ಮಿಶ್ರ ಮಾಧುರ್ಯ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು ೨-೩೦ ಮುಕ್ತಾಯ.

ಸಂಜೆ ೫.೩೦ ಎಮ್. ಎನ್. ಲೀಲಾವತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಚಿತ್ರಸಂಗೀತ (ರಿ) ೭-೩೦ ಎಮ್. ಎನ್. ಲೀಲಾವತಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಎನ್. ದೊರೆಸ್ವಾಮಿ (ವೀಣೆ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ 'ಬಿರಳ್ಳ ಕೊರಳ್' ಕೆ. ವಿ. ಪುಟ್ಟಪ್ಪನವರ ಒಂದು ನಾಟಕ ೧೦-೦ ಮುಕ್ತಾಯ.

ಜನವರಿ ೨೨ ನೇ ಸೋಮವಾರ

ಬೆಳಗ್ಗೆ ೭-೧೫ ಸುಪ್ರಭಾತ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಚಿತ್ರಗೀತೆ (ರಿ) ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಹಿಂದಿ ಶಿಕ್ಷಣ. ೨-೦ ಜನರಂಜಿನಿ (ರಿ) ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಸಿ. ಕೆ. ಶಂಕರನಾರಾಯಣರಾವ್ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಸಂಗೀತ ಶಿಕ್ಷಣ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿ ಕಾರ್ಯಕ್ರಮ. ೭-೧೫ ಸಿ.ಕೆ. ಶಂಕರನಾರಾಯಣ ರಾವ್ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧ (ರಿ) ೮-೧೫ ಕನ್ನಡದಲ್ಲಿ ಭಾಷಣ ೮-೩೦ ಎಸ್. ಲಕ್ಷ್ಮಣಶಾಸ್ತ್ರಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಎಸ್. ಲಕ್ಷ್ಮಣಶಾಸ್ತ್ರಿ (ಸಂಗೀತ) ೧೦-೦ ಮುಕ್ತಾಯ.

ನ್ಯೂ ಅಪೇರಾ

ಮೈಸೂರು

ತಾ|| ೧೮-೧-೫೧ ರಿಂದ

'ಫ್ಲೈಯಿಂಗ್ ಎಕ್ಸ್‌ಪ್ರೆಸ್'

- : ಅಭಿನಯ : -

ಪ್ರಕಾಶ, ಸಿರಾಜ, ಮಿಸ್. ಮೋತಿ, ಗುಲನಾರ್

ಪ್ರತಿದಿನ ೩ ಆಟಗಳು

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೧—೧೯೫೧ನೇ ಸೋಮವಾರ [ಸಂಚಿಕೆ ೧೧೯

ವಿಶ್ವದೆಲ್ಲೆಡೆಯಲ್ಲಿಯೂ ಯುದ್ಧ ಭೀತಿ

ಶಾಂತಿ ಸ್ಥಾಪನೆಗಾಗಿ ಕಾತುರತೆ

ಎಲ್ಲರೂ ಭಾರತವನ್ನೇ ನಂಬಿದ್ದಾರೆ

ಪ್ರಪಂಚದ ಎಲ್ಲಾ ಭಾಗಗಳೂ ಯುದ್ಧವಾಗಬಹುದೆಂಬ ಭೀತಿಯು ತಲೆದೋರಿದೆ ಶಾಂತಿಸ್ಥಾಪನೆಯಾಗಿ ಯಾವುದಾದರೂ ರೀತಿಯಲ್ಲಿ ಯುದ್ಧವಾಗದಿರಲೆಂದು ಜನರು ಆಶಿಸುತ್ತಲಿರುವರು. ಭಾರತವು ಶಾಂತಿಸ್ಥಾಪನೆಗಾಗಿ ದುಡಿಯುತ್ತಿರುವುದನ್ನು ಎಲ್ಲರೂ ಸ್ವಾಗತಿಸುತ್ತಾ ಭಾರತವನ್ನೇ ನಂಬಿದ್ದಾರೆ. ಈಗ ಭಾರತವು ಪ್ರಪಂಚದಲ್ಲಿ ಅತಿ ಮುಖ್ಯವಾದ ಸ್ಥಾನವನ್ನು ಪಡೆದಿದೆ ಎಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಯೂರೋಪಿನ ೨೦ ದಿವಸ ಪ್ರವಾಸದಲ್ಲಿ ಹಿಂತಿರುಗಿ ನಿನ್ನೆ ಬೊಂಬಾಯಿಗೆ ಆಗಮಿಸಿದ ಒಂದೆರಡು ತಾಸುಗಳಲ್ಲಿಯೇ ಪತ್ರಿಕಾ ವರದಿಗಾರರೊಡನೆ ಮಾತನಾಡುತ್ತ ಹೇಳಿದರು.

ವಿಶ್ವಸಂಸ್ಥೆಯು ಮಾಡಿದ್ದ ಸಲಹೆಗಳಿಗೆ ಚೈನಾವು ಪ್ರತಿ ಸಲಹೆಗಳನ್ನು ನೀಡಿರುವುದನ್ನು ಸಲಹೆಗಳ ನಿರಾಕರಣೆಯೆಂದು ಭಾವಿಸಬಾರದು ಸಂಧಾನಕ್ಕೆ ಇನ್ನು ಮಾರ್ಗವಿದೆ. ಚೈನಾದ ಉತ್ತರದಲ್ಲಿ ಭಾಷೆಯು ಕಟುವಾಗಿದೆ ಆದರೆ ಅದು ಪ್ರಾಮುಖ್ಯವಲ್ಲ. ವಿಶ್ವಸಂಸ್ಥೆಯ ಮತ್ತು ಚೈನಾದ ಸಿದ್ಧಾಂತಗಳಲ್ಲಿ ವ್ಯತ್ಯಾಸ ಕಾಣಬರುವುದಿಲ್ಲ. ಇತರ ರಾಷ್ಟ್ರಗಳನ್ನು ನಾವು ಖಂಡಿಸುತ್ತಾ ಬಂದರೆ ಸ್ಥಿತಿ ಉತ್ತಮಗೊಳ್ಳದೆ ಹದಗೆಡುವುದು ಆದ್ದರಿಂದ ಕಾರ್ಯವನ್ನು ಸಾವಧಾನದಿಂದ ಪರಿಶೀಲಿಸಿ ಮಾಡಬೇಕಾಗಿದೆ. ಆತುರದಿಂದ ನಿರ್ದಿಷ್ಟಕ್ಕೆ ಬರುವ ಸಮಯವಲ್ಲ ಅಮೆರಿಕಾವು ಚೈನಾವನ್ನು ಆಕ್ರಮಣಕಾರಿ ಎಂದು ಘೋಷಿಸಬೇಕೆಂದು ಆತುರಪಡುತ್ತಲಿರುವುದಕ್ಕೆ ಭಾರತವು ಸಮ್ಮತಿಯೀಯಲಾರದು ರಾಜಕಾರಣಿಗಳೂ ಇತರರೂ ಎಲ್ಲರೂ ಒಗ್ಗಟ್ಟಿನಿಂದ ಶಾಂತಿಗೆ ಕೆಲಸಮಾಡಬೇಕು ಎಂದು ಹೇಳಿದರು.

ಕಾಶ್ಮೀರ ವಿಷಯವಾಗಿ ಪ್ರಸ್ತಾಪಿಸುತ್ತ, ಹೊಸದಾಗಿ ಏನೂ ಆಗುವವರೆಗೆ ಈಗಿನ ಪರಿಸ್ಥಿತಿಯನ್ನೇ ಅಂಗೀಕರಿಸಿ ನಾವು ಮುಂದುವರಿಯಬೇಕಾಗಿದೆ ಪಾಕಿಸ್ತಾನವು ಆಕ್ರಮಣಕಾರ್ಯವನ್ನೆಸಗುತ್ತಲಿದ್ದರೂ ಭಾರತವು ದೃಢನೀತಿಯಿಂದ, ಶಾಂತಿಭಾವದಿಂದ ನಡೆಯುತ್ತಲಿದೆ ಎಂದು ತಿಳಿಸಿದರು

ಸರ್ಕಾರಿ ವೈದ್ಯರಿಗೆ ಖಾಸಗಿ ವೃತ್ತಿ

ಸರ್ಕಾರಿ ವೈದ್ಯರು ಖಾಸಗೀ ವೃತ್ತಿಯನ್ನು ಮಾಡಬಹುದೆಂದೂ ಆದರೆ ಸರ್ಕಾರಿ ಸಂಸ್ಥೆಗಳಲ್ಲಿ ಆಸ್ಪತ್ರೆಗಳಲ್ಲಿ ನಡೆಸುವ ಸೇವೆಗೆ ಸಂಭಾವನೆ ಪಡೆಯಬಾರದು. ಆದರೆ ತಾವು ಮಾಡಿದ ಸೇವೆಗೆ ಸದುದ್ದೇಶದಿಂದ ಯಾರಾದರೂ ಬಹುಮಾನ ಕೊಟ್ಟರೆ ಸ್ವೀಕರಿಸಬಹುದೆಂಬುದಾಗಿ, ವಿಶೇಷ ಚಾರ್ಜುಗಳನ್ನು ಬಿಟ್ಟರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯ ಕೊಡಲಾಗುವುದೆಂದೂ ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ವ್ಯಾಪಾರಿತೆರಿಗೆ ಅಧಿಕಾರಿಗಳ ವರ್ಗ

ಮೈಸೂರು ಸಿಟಿ ಅಸಿಸ್ಟೆಂಟ್ ಸೇಲ್ಸ್ ಟಾಕ್ಸ್ ಆಫೀಸರಾದ ಶ್ರೀ ಟಿ. ಕೆ. ರಾಘವಾಚಾರ್‌ರವರನ್ನು ಬೆಂಗಳೂರು ೩ ನೇ ಸರ್ಕಲ್ಲಿನ ಸೇಲ್ಸ್‌ಟಾಕ್ಸ್ ಆಫೀಸರಾಗಿಯೂ, ಮಧುಗಿರಿಯಲ್ಲಿ ಅಸಿಸ್ಟೆಂಟು ಸೇಲ್ಸ್ ಟಾಕ್ಸ್ ಆಫೀಸರಾದ ಶ್ರೀ ಆರ್. ಎಸ್. ರಾಮಶೆಟ್ಟಿಯವರನ್ನು ಮೈಸೂರು ಸಿಟಿ ಅಸಿಸ್ಟೆಂಟ್ ಸೇಲ್ಸ್ ಟಾಕ್ಸ್ ಆಫೀಸರಾಗಿಯೂ ವರ್ಗಾಯಿಸಲಾಗಿದೆ.

ಮಹಾರಾಜಾ ಪೋಲೀಸ್ ಮೆಡಲ್

ರಾಮನಗರದ ಪೋಲೀಸ್ ಕಾನ್‌ಸ್ಟೇಬಲ್ ಶ್ರೀ ಹೇಮಸಿಂಗ್ ಎಂಬುವರು ೧೯೪೬ ನೇ ನವಂಬರಿನಲ್ಲಿ ಚಿಕ್ಕ ಎಂಬ ಪ್ರಸಿದ್ಧ ಕೇಡಿಯನ್ನು, ತಮ್ಮ ಜೀವದ ಆಸೆಯೂ ಇಲ್ಲದೆ ಬಹು ಚಾತುರ್ಯದಿಂದ ಹಿಡಿದುದಕ್ಕಾಗಿ, ಅವರ ಸೇವೆಯನ್ನು ಮೆಚ್ಚಿ ಮಹಾರಾಜರವರು ಶ್ರೀ ಹೇಮಸಿಂಗ್‌ರವರಿಗೆ ಮಹಾರಾಜಾ ಪೋಲೀಸು ಮೆಡಲನ್ನು ಕೊಟ್ಟಿರುವರು

ಹೊಸ ಸಲಹೆ

ಕೊರಿಯದಲ್ಲಿ ಕದನ ಮುಕ್ತಾಯವಾಗಿ ಶಾಂತಿ ಸ್ಥಾಪನೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ನಿರ್ಧರಿಸಲು ಚೈನಾದ ಸಲಹೆಯಂತೆ ಭಾರತ, ಈಜಿಪ್ಟ್, ಚೈನಾ, ರಷ್ಯಾ ಮುಂತಾದ ಸಪ್ತ ರಾಷ್ಟ್ರಗಳ ಸಮಿತಿಯನ್ನು ನೇಮಿಸಬೇಕೆಂಬ ಹೊಸ ಸಲಹೆಯನ್ನು ಅರಬ್ ಮತ್ತು ದೂರ ಪ್ರಾಚ್ಯ ರಾಷ್ಟ್ರಗಳು ರಾಜಕೀಯ ಸಮಿತಿಯಲ್ಲಿ ಮಂಡಿಸಲಿದೆಯೆಂದು ತಿಳಿದುಬರುತ್ತದೆ.

ಬಟ್ಟೆ ಬೆಲೆ ಏರಿತು

ಒರಟು ಬಟ್ಟೆ ಬೆಲೆ ಶೇಕಡ ೭॥ ಉತ್ತಮ ದರ್ಜೆಯ ಬಟ್ಟೆ ಶೇ| ೧೫, ಅತ್ಯುತ್ತಮವಾದ ದರ್ಜೆ ಬಟ್ಟೆ ಶೇ|| ೬ ರೀತಿ ಹೆಚ್ಚಿಸಿರುವುದಾಗಿ ಕೇಂದ್ರ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ. ಸಾಧಾರಣವಾದ ಬಟ್ಟೆಯ ಬೆಲೆಯನ್ನು ಏರಿಸಿಲ್ಲ.

ಅಮೆರಿಕಾ ಖಂಡನಾನಿರ್ಣಯ

ಅಮೆರಿಕಾವು ಚೈನಾವನ್ನು ಆಕ್ರಮಣಕಾರಿ ಎಂದು ನಿರ್ಧರಿಸಬೇಕೆಂದು ಮಂಡಿಸಲಿರುವ ಖಂಡನಾ ನಿರ್ಣಯಕ್ಕೆ ಬಹುಮತ ದೊರೆಯುವುದೆಂದು ಅಮೆರಿಕಾವು ಆಶೆಯನ್ನು ಹೊಂದಿದೆ. ಆದರೆ ಪ್ರಸ್ತುತ ಸ್ಥಿತಿಯಲ್ಲಿ ಬಹುಮತ ದೊರೆಯುವುದು ಕಷ್ಟವೆಂದು ಅನೇಕರು ಅಭಿಪ್ರಾಯಪಡುತ್ತಲಿರುವರು.

'ಆಟ್ಲಿ ಮಾಸ್ಕೋಯಾತ್ರೆ ಮಾಡಲಿ'

ರಷ್ಯಾ ಪ್ರಧಾನಿ ಮಾರ್ಷಲ್ ಸ್ಟಾಲಿನರೊಡನೆ ಸಂಧಾನ ನಡೆಸಲು, ಪ್ರಧಾನಿ ನೆಹರೂ ಅಥವಾ ಇತರ ಕಾಮನ್ವೆಲ್ತ್ ಪ್ರಧಾನಿಗಳೊಡನೆ, ಬ್ರಿಟಿಷ್ ಪ್ರಧಾನಿ ಅಟ್ಲಿಯವರು ಮಾಸ್ಕೋವಿಗೆ ಪ್ರಯಾಣ ಮಾಡಬೇಕೆಂದು, ವಾಮಪಕ್ಷ ಪತ್ರಿಕೆಯಾದ "ರೇನಾಲ್ಡ್ಸ್ ನ್ಯೂಸ್" ಸಲಹೆಯಿತ್ತಿದೆ

"ಈ ಸಂದಿಗ್ಧ ಸಮಯವನ್ನು ಕಾಮನ್ವೆಲ್ತ್ ರಾಷ್ಟ್ರಗಳು ಸದುಪಯೋಗಿಸಿಕೊಳ್ಳಬೇಕು" ಎಂದು ಪತ್ರಿಕೆಯು ತಿಳಿಸುತ್ತದೆ

ಲಕ್ನೋನಗರದಲ್ಲಿ ಪೋಲೀಸರ ಗುಂಡು

ಸಕ್ಕರೆ ಕಾರ್ಖಾನೆ ಮುಷ್ಕರಗಾರರಲ್ಲಿ ಇಬ್ಬರಿಗೆ ತೀವ್ರ ಪೆಟ್ಟು

ಉತ್ತರ ಪ್ರದೇಶ ಸಂಸ್ಥಾನದ ಸಕ್ಕರೆ ಕಾರ್ಖಾನೆಗಳ ಕಾರ್ಮಿಕರು ಮುಷ್ಕರ ಹೂಡಿದ ಪರಿಣಾಮವಾಗಿ ಸಂಸ್ಥಾನದ ನಾಲ್ಕು ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿವೆ ಎಂಟು ಕಾರ್ಖಾನೆಗಳಲ್ಲಿ ಪೂರ್ಣ ಕೆಲಸ ನಡೆಯುತ್ತಿಲ್ಲ. ಸುಮಾರು ಒಂದು ಸಾವಿರ ಕಾರ್ಮಿಕರು ಮುಷ್ಕರದಲ್ಲಿ ತೊಡಗಿದ್ದಾರೆಂದು ವರದಿಯಾಗಿದೆ

೨೦ನೇ ತಾ ಮಧ್ಯಾಹ್ನ ಮುಷ್ಕರಗಾರರ ಮೇಲೆ ಸಂಸ್ಥಾನದ ಪೋಲೀಸರು ಗುಂಡುಹಾರಿಸಿದ ಪರಿಣಾಮವಾಗಿ ಇಬ್ಬರಿಗೆ ಏಟ ಬಿದ್ದಿದೆ. ಮುಷ್ಕರಗಾರರು ಪೋಲೀಸರ ಮೇಲೆ ಕಲ್ಲೆಸೆಯಲ್ಲಾರಂಭಿಸಿದ್ದರಿಂದ ಗುಂಡು ಹಾರಿಸಬೇಕಾಗಿ ಬಂದಿತೆಂದು ಸರ್ಕಾರೀ ವಕ್ತಾರರೊಬ್ಬರು ತಿಳಿಸಿದರು.

ವಿದ್ಯೋದಯ ಹೈಸ್ಕೂಲಿಗೆ ದಾನ

ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ, ನಡೆಯುತ್ತಿರುವ ಗ್ರಾಮ ವಿದ್ಯೋದಯ ಪ್ರೌಢಶಾಲೆಯ ನೂತನ ಕಟ್ಟಡದ ನಿಧಿಗೆ ಟಿ. ನರಸೀಪುರದ ವಾಸಿ ಷರಾಫ್ ವ್ಯಾಪಾರಿಗಳಾದ ಶ್ರೀ ಮುದ್ದಣ್ಣನವರು ೨೦೦೧ ರೂ. ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ.

LATEST

ರೈಲ್ವೆ ದುರಂತ

ಬೆಂಗಳೂರು ಜನವರಿ ೨೨

ಬೆಂಗಳೂರು ಪೂನಾ ಲೈನಿನಲ್ಲಿ ನಿನ್ನೆ ಮಧ್ಯಾಹ್ನ ೧೨-೧೦ ವೇಳೆಯಲ್ಲಿ ಹುಬ್ಬಳ್ಳಿಗೆ ಸ್ವಲ್ಪ ದೂರದಲ್ಲಿ ರೈಲ್ವೆ ಅಪಘಾತ ನಡೆದು ೧೪ ಜನರಿಗೆ ತೀವ್ರ ಗಾಯಗಳಾಗಿ ಅವರ ಪೈಕಿ ೧೧ ಜನರು ಆಸ್ಪತ್ರೆಯಲ್ಲಿ ಮಡಿದರೆಂದು ತಿಳಿಯಬರುತ್ತದೆ.

ಸರ್ ಮಿರ್ಜಾ ಇಂಡೋನೇಷಿಯಾಕ್ಕೆ

ಇಂಡೋನೇಷಿಯಾದಲ್ಲಿ ವಿಶ್ವಸಂಸ್ಥೆಯು ಏರ್ಪಡಿಸಲಿರುವ ಟೆಕ್ನಿಕಲ್ ಪ್ರವೀಣರ ನಾಯಕತ್ವದ ಹುದ್ದೆಗೆ ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಹೋಗಲು ಒಪ್ಪಿರುವುದಾಗಿ ತಿಳಿಯಬಂದಿದೆ. ಇಂಡೋನೇಷಿಯಾವು ಒಬ್ಬ ಭಾರತೀಯರನ್ನು ಈ ಹುದ್ದೆಗೆ ಕಳುಹಿಸಬೇಕೆಂದು ವಿಶ್ವಸಂಸ್ಥೆಯನ್ನು ಕೇಳಿತ್ತು. ಪಂಡಿತ ನೆಹರೂರವರು ಸರ್ ಮಿರ್ಜಾರವರ ಹೆಸರನ್ನು ಸೂಚಿಸಿದ್ದರು.

ಸರ್ ಮಿರ್ಜಾರವರು ಜಕಾರ್ತಾಗೆ ಇನ್ನೊಂದು ತಿಂಗಳೊಳಗೆ ಹೋಗಲಿರುವರು. ಪ್ರಾರಂಭದಲ್ಲಿ ಒಂದು ವರ್ಷ ಕಾಲ ಅಲ್ಲಿರುವುದಾಗಿ ತಿಳಿಯಬಂದಿದೆ.

ದಿವಂಗತ ಥಕ್ಕರ್ ಬಾಪಾ

೧೮೬೯ ರಲ್ಲಿ ಭಾವನಗರದಲ್ಲಿ ಜನಿಸಿ, ೧೮೮೬ ರಲ್ಲಿ ಅಲ್ಲಿಯ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮಾಡಿ, ಅಮೃತಲಾಲ್ ಥಕ್ಕರ್‌ರವರು ಪೂನಾ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು. ೧೮೯೧ ರಿಂದ ೧೮೯೯ ರ ವರೆಗೆ ಶ್ರೀಯುತರು ಅನೇಕ ಕಡೆ ಇಂಜನಿಯರಿಂಗ್ ಕೆಲಸದಲ್ಲಿದ್ದು ೧೮೯೯ ರಿಂದ ೩ ವರ್ಷ ಕಾಲ ಪೂರ್ವ ಆಫ್ರಿಕಾದಲ್ಲಿ ಯುಗಾಂಡ ರೈಲ್ವೆಯಲ್ಲಿ ಕೆಲಸದಲ್ಲಿದ್ದರು. ೧೯೦೪-೧೯೦೫ ರಲ್ಲಿ ಸಾಂಗ್ಲಿ ಸಂಸ್ಥಾನದಲ್ಲಿ ಇಂಜನಿಯರಾಗಿದ್ದು, ೧೯೦೬ ರಲ್ಲಿ ಬೊಂಬಾಯಿ ಪೌರಸಭೆಯಲ್ಲಿ ರೋಡ್ ಇಂಜನಿಯರಾಗಿದ್ದರು.

೧೯೧೪ ರಿಂದ ಅವರು ಜನಸೇವೆಯಲ್ಲಿಳಿದರು. ದಿವಂಗತ ಪ್ರಸಿದ್ಧ ಗೋಪಾಲಕೃಷ್ಣ ಗೋಖಲೆಯವರು ಇವರನ್ನು ಸರ್ವೆಂಟ್ಸ್ ಆಫ್ ಇಂಡಿಯ ಸಂಸ್ಥೆಗೆ ಸೇರಿಸಿದರು. ಇವರು ಜೀವಾವಧಿ ಸದಸ್ಯರಾಗಿ ಸೇರಿಕೊಂಡು ಸಂಯುಕ್ತ ಪ್ರಾಂತ್ಯದಲ್ಲಿ ಆಗತಾನೇ ತಲೆದೋರಿದ್ದ ಕ್ಷಾಮದ ನಿವಾರಣಾ ಕಾರ್ಯಕ್ಕೆ ತೊಡಗಿದರು. ಬೊಂಬಾಯಿ, ಅಹಮದಾಬಾದ್ ಮುಂತಾದೆಡೆ ಅನೇಕ ರೀತಿಯಾಗಿ ಸೇವೆಯನ್ನೆಸಗಿ ೧೯೧೭ ರಿಂದ ೧೯೨೨ ರ ವರೆಗೆ ದೇಶಾದ್ಯಂತ ಕ್ಷಾಮ ನಿವಾರಣ ಕಾರ್ಯದಲ್ಲಿ ತೊಡಗಿ, ಹಿಂದುಳಿದವರ ಮತ್ತು ಹರಿಜನರ ಉದ್ಧಾರ ಕಾರ್ಯಕ್ಕಾಗಿ ಕಂಕಣಬದ್ಧರಾಗಿ ಕೆಲಸ ಮಾಡಲು ಹೊರಟರು. ೧೯೧೭ ರಲ್ಲಿ ಭಾವನಗರ ಸಂಸ್ಥಾನದ ಪ್ರಜಾಪರಿಷತ್ತು, ೧೯೨೮ ರಲ್ಲಿ ಪಂಜಾಬ್ ಪ್ರಜಾಪರಿಷತ್ತಿನ ಅಧ್ಯಕ್ಷತೆ ವಹಿಸಿದರು. ಅಲ್ಲದೆ ಪಾಟಿಯಾಲಾ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿಯೂ ಇದ್ದರು.

ಅನಂತರ ಅವರು ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾಗಿ ಮಹಾತ್ಮ ಗಾಂಧಿಯವರ ಮುಖ್ಯ ಬೆಂಬಲಿಗರಾಗಿ ಹಿಂದುಳಿದ ಮತ್ತು ಮೂಲವಾಸಿಗಳ ಉದ್ಧಾರಕ್ಕಾಗಿಯೂ ಅಸ್ಪೃಶ್ಯತಾ ಸಂಗ್ರಾಮದಲ್ಲಿ ಸೇವೆಗೈಯಲು ತಮ್ಮ ಜೀವಮಾನವನ್ನೆಲ್ಲಾ ಕಳೆದರು. ಮೂಲವಾಸಿಗಳು ಇವರನ್ನು ಆದರದಿಂದ "ಥಕ್ಕರ್ ಬಾಪಾ" ಎಂದು ಕರೆಯುತ್ತಲಿದ್ದರು.

ಸರದಾರ ಪಟೇಲರ ನಿಧನದ ನಂತರ ಇವರು ಕಸ್ತೂರಿಬಾ ಸ್ಮಾರಕ ಸಮಿತಿ ಅಧ್ಯಕ್ಷರಾದರು.

ಭಾರತದಲ್ಲಿ ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಹರಿಜನೋದ್ಧಾರಕ್ಕಾಗಿ ತಮ್ಮ ತನುಮನವನ್ನು ಅರ್ಪಿಸಿದ ಮಹಾತ್ಮರಲ್ಲಿ ಇವರು ಮೊದಲನೆಯವರು.

ದೇಹದಾರ್ಢ್ಯ ಅತ್ಯಾವಶ್ಯಕ

ಮೈಸೂರು ಜ. ೨೧

ಮಾನವನಿಗೆ ಎಷ್ಟೇ ಬುದ್ಧಿಶಕ್ತಿಯಿರಲಿ ದೇಹದಾರ್ಢ್ಯವಿಲ್ಲದೆ ಅದು ಫಲಕಾರಿಯಾಗಲು ಸಾಧ್ಯವಿಲ್ಲ. ಬುದ್ಧಿಶಕ್ತಿಯ ಜೊತೆಗೆ ದೇಹದಾರ್ಢ್ಯವನ್ನು ಬೆಳಸಿಕೊಂಡು ಹೋಗಲೇಬೇಕು ವ್ಯಾಯಾಮವು ಜೀವನದಲ್ಲಿ ಒಂದು ಮುಖ್ಯವಾದ ಭಾಗ. ಇಂದಿನ ಯುಗದಲ್ಲಿ ಇದಕ್ಕೆ ಉನ್ನತಸ್ಥಾನ ದೊರೆತಿದೆ. ಕ್ರಾಫರ್ಡ್ ಸಹೋದರರು ಈ ರೀತಿಯ ಮಹತ್ಕಾರ್ಯಗಳಿಗೆ ಸಹಾಯಮಾಡಿ ಇತರರಿಗೆ ಮಾರ್ಗ ತೋರಿಸಿಕೊಟ್ಟಿರುವರು. ಈರೀತಿಯಾದ ಮಹತ್ಕಾರ್ಯಗಳಿಗೆ ಎಲ್ಲಾ ಧನಿಕರು ಮುಂದೆ ಬಂದು ದೇಶಸೇವೆಗೈಯ್ಯಬೇಕೆಂದು ಶ್ರೀಮನ್ಮಹಾರಾಜರವರು ಇಂದು ಬೆಳಗ್ಗೆ ಕ್ರಾಫರ್ಡ್ ವ್ಯಾಯಾಮಶಾಲೆಯ ಶಂಕುಸ್ಥಾಪನಾಮಹೋತ್ಸವಕಾಲದಲ್ಲಿ ತಿಳಿಸಿದರು

ಪ್ರಾರಂಭದಲ್ಲಿ ವಿಶ್ವವಿದ್ಯಾನಿಲಯದ ವೈಸ್-ಛಾನ್ಸಲರಾದ ಶ್ರೀ ಮಂಜನಾಥ್‌ರವರು ಕ್ರಾಫರ್ಡ್ ಸಹೋದರರು ಮಾಡಿರುವ ಸೇವೆಯನ್ನು ಪ್ರಶಂಸಿಸುತ್ತ, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಸ್ಥಾಪಿಸಲ್ಪಟ್ಟ ಮೈಸೂರು ವಿಶ್ವವಿದ್ಯಾನಿಲಯವು ಎಲ್ಲಾ ವಿಧದಲ್ಲಿಯೂ ಮುಂದುವರಿದಿದೆ. ವಿದ್ಯಾಭ್ಯಾಸ ಶಿಕ್ಷಣದಲ್ಲಿ ಇದು ಉನ್ನತಸ್ಥಾನಗಳಿಸಿದೆ. ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದ ಶರೀರ ದಾರ್ಢ್ಯಕ್ಕೂ ಹೆಚ್ಚಿಗೆ ಗಮನವೀಯಲು ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವ ಕೆಲಸವನ್ನು ವಿಶ್ವವಿದ್ಯಾನಿಲಯವು ಕೈಗೊಳ್ಳುತ್ತಲಿದೆ. ಪ್ರಕೃತ ನಿರ್ಮಿಸಬೇಕೆಂದಿರುವ ವ್ಯಾಯಾಮಶಾಲೆಗೆ ೧,೧೭,೦೦೦ ರೂ. ಗಳ ಅಂದಾಜು ಹಾಕಲಾಗಿದೆ. ಅದರ ಪೈಕಿ ೫೦ ಸಾವಿರ ರೂ. ಗಳನ್ನು ಕ್ರಾಫರ್ಡ್ ಸಹೋದರರು ಕೊಟ್ಟಿರುವುದು ಅವರ ಔದಾರ್ಯವನ್ನು ತೋರಿಸುತ್ತದೆ ಎಂದು ಹೇಳಿದರು.

ರೈತರು ಗೋಸಂಪತ್ತು ಬೆಳಸಬೇಕು

ನಿನ್ನೆ ಸಂಜೆ ಚುಂಚನಕಟ್ಟೆ ದನಗಳ ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳನ್ನು ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಹಂಚಿದರು.

ಶ್ರೀ ರೆಡ್ಡಿಯವರು ಭಾಷಣಮಾಡುತ್ತಾ ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ನೀಡಿದ್ದ ಎಷ್ಟೋ ಭರವಸೆಗಳನ್ನು ಈಗ ಪೂರೈಸಿಲ್ಲ. ಬಹಳಕಾಲ ಹಿಡಿಯುವುದನ್ನು ಒಂದೆರಡು ವರ್ಷಗಳಲ್ಲಿ ಮಾಡಲಾಗುವುದಿಲ್ಲ. ಕೆಲಸವಾಗಬೇಕಾದರೆ ಹಣಬೇಕು ಸರ್ಕಾರವು ತನ್ನ ನಿತ್ಯಕಾರ್ಯಗಳನ್ನು ಮಾಡುತ್ತಾ ವಿದ್ಯಾಭ್ಯಾಸ, ವೈದ್ಯ ಮುಂತಾದ ಬಾಬುಗಳಲ್ಲಿ ಸಾಧ್ಯವಾದಷ್ಟು ಸಹಾಯವನ್ನು ಜನತೆಗೆ ನೀಡಿದೆ. ಇನ್ನೂ ಬೇಡಿಕೆಗಳು ವಿಶೇಷವಾಗಿ ಬರುತ್ತಲಿದೆ. ಇವುಗಳನ್ನೆಲ್ಲಾ ಏಕಕಾಲದಲ್ಲಿ ಪೂರೈಸಲು ಸಾಧ್ಯವಿಲ್ಲ. ಅತ್ಯಾತುರವಾಗಿರುವುದನ್ನು ಮೊದಲುಮಾಡಬೇಕಾಗಿದೆ ಜನರು ಶಾಂತತೆಯಿಂದ ವರ್ತಿಸಿ ಸರ್ಕಾರದೊಡನೆ ಸಹಕರಿಸಬೇಕಾಗಿದೆ.

ರೈತರಿಗೆ ಇಲ್ಲಿಯವರೆಗೆ ಗೊಬ್ಬರವನ್ನು ರಿಯಾಯತಿಯಿಂದ ಕೊಡಲಾಯಿತು. ಇನ್ನು ಮುಂದೆ ಈ ರಿಯಾಯತಿಯನ್ನು ಕೊಡಲು ಸಾಧ್ಯವಿಲ್ಲ. ರೈತರು ದನಕರುಗಳನ್ನು ಸಾಕಿ ಪಶುಸಂಪತ್ತನ್ನು ಬೆಳೆಸಬೇಕೆಂದು ತಿಳಿಸಿದರು.

ಚುಂಚನಕಟ್ಟೆ ಗುರುಕುಲ ಹೈಸ್ಕೂಲಿಗೆ ಸಹಾಯ ಕೊಡುವ ವಿಷಯದಲ್ಲಿ ಯಾರ ಸಹಾಯವನ್ನು ಕೋರದೆ ಪಾಠಶಾಲೆಯನ್ನು ಸ್ಥಾಪಿಸಿ ಉತ್ತಮಕೆಲಸ ಮಾಡುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಅದಕ್ಕೆ ತಕ್ಕ ಧನಸಹಾಯ ಕೊಡಲಾಗುವುದೆಂದೂ ಹೇಳಿದರು.

MYSORE CITY MUNICIPALITY

Sealed tenders will be received up to 4 P.M. on 30-1-51 by the Muncipal Engineer for (1) Metalling Anegundi Urs Road from Sawday Road up to Rampartwall Road, Mandi Mohalla (2) Installing heating circuit to the Bus Stand Hotel in Mandi Mohalla (3) constructing a combined dispensary of 24 beds at Vanivilasapuram, Mysore.

Each tender should be accompanied with a challan for having remitted in the Municipal Treasury Rs. 140/-Rs. 40/- and Rs. 3280/- respectively as earnest money. Tenders without furnishing details of rate etc., as called for in the detailed notification will not be considered on any account. Please see detailed notification on the office notice board.

(*Sd*) **V. K. Mukundan,**
Municipal Engineer.

ನ್ಯೂ ಅಪೇರಾ
ಮೈಸೂರು
ತಾ|| ೧೮-೧-೫೧ ರಿಂದ
'ಫ್ಲೈಯಿಂಗ್ ಎಕ್ಸ್‌ಪ್ರೆಸ್'
—: ಅಭಿನಯ :—
ಪ್ರಕಾಶ, ಬಿರಾಜ, ಮಿಸ್. ಮೋತಿ,
ಗುಲನಾರ್
ಪ್ರತಿದಿನ ೩ ಆಟಗಳು

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೧—೧೯೫೧ನೇ ಮಂಗಳವಾರ [ಸಂಚಿಕೆ ೧೨೦

ಜೋಡಿ ಗ್ರಾಮಗಳ ರೈತರ ಪ್ರದರ್ಶನ

ಜೋಡಿಪದ್ಧತಿ ರದ್ದಾಗಲಿ: ಭೂಮಿ ಉಳುವವನಿಗೆ ಸೇರಲಿ: ಸರ್ಕಾರದವರೇ ಅನ್ನ ಕೊಡಲಿ

ಬೆಂಗಳೂರು ಜ. ೨.

ಕೋಲಾರ ಜಿಲ್ಲೆಯ ಸುಮಾರು ೨೦೦ ಮಂದಿ ರೈತರು ಬೆಂಗಳೂರುನಗರದ ಮುಖ್ಯ ಬೀದಿಗಳಲ್ಲಿ "ಜೋಡಿ ಪದ್ಧತಿ ರದ್ದಾಗಲಿ, ಭೂಮಿ ಉಳುವವನಿಗೆ ಸೇರಲಿ, ಸರ್ಕಾರದವರೇ ಅನ್ನ ಕೊಡಲಿ" ಎಂಬ ಬೋರ್ಡುಗಳನ್ನು ಹಿಡಿದುಕೊಂಡು ಶಾಸನಸಭೆ ಮಧ್ಯಾಹ್ನ ೧ ಗಂಟೆಗೆ ಸೇರುವಾಗ ಅಠಾರ ಕಛೇರಿಯ ಬಳಿ ಬಂದರು. ಪೋಲೀಸಿನವರು ಕಛೇರಿಯ ಹೊರ ಆವರಣದಲ್ಲಿಯೇ ಅವರನ್ನು ತಡೆದರು. ರೈತರ ಪ್ರತಿನಿಧಿಗಳಾದ ಶ್ರೀಗಳಾದ ಟಿ ವೆಂಕಟಗಿರಿಯಪ್ಪ, ಸಿ. ನಾರಾಯಣಪ್ಪ ಮುಂತಾದವರು ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರನ್ನು ಭೇಟಿಮಾಡಿ ಜೋಡಿ ಗ್ರಾಮಗಳ ರೈತರ ಕಷ್ಟಗಳನ್ನು ತಿಳಿಸಿದರು. ಜೋಡಿ ಗ್ರಾಮಗಳ ಬಗ್ಗೆ ಸುಧಾರಣೆಗಳನ್ನೊಳಗೊಂಡ ಮಸೂದೆಯನ್ನು ಮುಂದಿನ ಶಾಸನ ಸಭೆಯ ಅಧಿವೇಶನದಲ್ಲಿ ಜಾರಿಗೆ ತರುವುದಾಗಿ ಮುಖ್ಯ ಮಂತ್ರಿಗಳು ಭರವಸೆಯಿತ್ತರೆಂದು ತಿಳಿಯಬರುತ್ತದೆ

ವಿಶ್ವೇಶ್ವರಯ್ಯ ಮತ್ತು ಹಿರಿಯಣ್ಣನವರ ಭಾವಚಿತ್ರ ಅನಾವರಣ

ಮೈಸೂರು ಜ. ೨೨

ನೆನ್ನೆ ದಿನ ಸಂಜೆ ಮಹಾರಾಜಾ ಕಾಲೇಜು ಶತಮಾನೋತ್ಸವದ ಅಂಗವಾಗಿ ನಡೆದ ಸಮಾರಂಭದಲ್ಲಿ ಸಚಿವರಾದ ಶ್ರೀ ಸಿದ್ದಯ್ಯನವರು ಸರ್ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರವನ್ನೂ ಪ್ರೊ॥ ಎ. ಆರ್. ವಾಡಿಯಾರವರು ದಿವಂಗತ ಪ್ರೊ॥ ಹಿರಿಯಣ್ಣನವರ ಭಾವಚಿತ್ರವನ್ನೂ ಅನಾವರಣ ಮಾಡಿದರು. ಆರ್ಥಿಕ ಸಚಿವರಾದ ಶ್ರೀ ಎಚ್. ಸಿ ದಾಸಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ಹಳೆಯ ವಿದ್ಯಾರ್ಥಿಯಾದ ಶ್ರೀ ಎಸ್. ಗೋಪಾಲಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು. ಶ್ರೀ ಎಚ್. ಸಿದ್ದಯ್ಯನವರು ತಮ್ಮ ಭಾಷಣದಲ್ಲಿ ಸರ್ ಎಂ, ವಿಶ್ವೇಶ್ವರಯ್ಯನವರ ಅಮೋಘವಾದ ಗುಣಗಳನ್ನೂ, ಸೇವೆಯನ್ನೂ ಕೊಂಡಾಡಿದರು. ಅವರು ಮಾಡಿರುವ ಎಲ್ಲಾ ಮಹತ್ಕಾರ್ಯಗಳಿಗಿಂತಲೂ ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆಯು ಅತ್ಯಂತ ಅಮೂಲ್ಯವಾದುದೆಂದು ಹೇಳಿದರು. ಇದಲ್ಲದೆ ಭದ್ರಾವತಿ, ಕೃಷ್ಣರಾಜಸಾಗರ, ಅರಸೀಕೆರೆ ರೈಲ್ವೆ, ಮೈಸೂರು ಬ್ಯಾಂಕಿನ ಸ್ಥಾಪನೆ, ಗ್ರಾಮಾಭಿವೃದ್ಧಿ ಯೋಜನೆ ಮುಂತಾದ ಅನೇಕ ಮಾರ್ಗಗಳಲ್ಲಿ ವಿಶ್ವೇಶ್ವರಯ್ಯನವರ ಸೇವೆಯನ್ನು ಅವರು ವಿವರಿಸಿ ಅವರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನು ಕೊಡಲೆಂದು ಪ್ರಾರ್ಥಿಸಿದರು.

ಪ್ರೊ॥ ಹಿರಿಯಣ್ಣನವರ ಅಸಾಧಾರಣವಾದ ಪ್ರತಿಭೆಯನ್ನೂ, ಅತ್ಯಂತ ಸರಳವಾದ ಜೀವನವನ್ನೂ ಪ್ರೊ॥ ವಾಡಿಯಾರವರು ವಿವರಿಸಿ ಭಾರತದ ತತ್ತ್ವ ಶಾಸ್ತ್ರಜ್ಞರ ಮಂಡಲಿಗೆ ಅವರು ಶಿರೋರತ್ನಪ್ರಾಯರಾಗಿದ್ದರೆಂದು ತಿಳಿಸಿದರು. ಅವರಿಗೆ ಮೈಸೂರು ವಿಶ್ವವಿದ್ಯಾಲಯದವರು ಗೌರವದ ಪ್ರಶಸ್ತಿಯನ್ನು ಕೊಡಲು ಹಿಂದೆ ನಿರ್ಧರಿಸಿದ್ದ ಆಲೋಚನೆಯನ್ನು ಈಗಲೂ ಮುಂದುವರಿಸಿ ಮರಣಾನಂತರವೂ ರಾಷ್ಟ್ರ ಸೇವಕರುಗಳಿಗೆ ಕೊಡುವ ಸನ್ಮಾನದಂತೆ ಅವರಿಗೆ ಪರೋಕ್ಷವಾಗಿ ಈ ಪ್ರಶಸ್ತಿಯನ್ನು ಕೊಟ್ಟು ಒಂದು ಹೊಸ ಸಂಪ್ರದಾಯವನ್ನು ಸ್ಥಾಪಿಸುವುದಲ್ಲದೆ ತಮ್ಮ ಗೌರವವನ್ನೂ ಅಂತಸ್ತನ್ನೂ ಆ ಮೂಲಕ ಹೆಚ್ಚು ಮಾಡಿಕೊಳ್ಳಬೇಕೆಂದು ಸೂಚಿಸಿದರು.

ಉತ್ಸವದ ಸಂಬಂಧವಾಗಿ ನಡೆದ ವಿವಿಧ ಪಂದ್ಯಗಳಲ್ಲಿ ಬಹುಮಾನ ಪಡೆದವರ ಪಟ್ಟಿಯನ್ನು ಓದಲಾಯಿತು ಅವುಗಳಲ್ಲಿ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪ ಮತ್ತು ಬೆಂಗಳೂರಿನ ಮಾಜಿ ಮೇಯರ್ ಶ್ರೀ ಎಗ್. ಕೇಶವಯ್ಯಂಗಾರ್ಯರ ಹೆಸರುಗಳು ಪ್ರಾಮುಖ್ಯವಾಗಿದ್ದುವು.

ಅಧ್ಯಕ್ಷರ ಭಾಷಣವಾದ ನಂತರ ಪ್ರೊ॥ ವಿ. ಎಲ್. ಡಿಸೌಜಾರವರು ಧನ್ಯವಾದಗಳನ್ನು ಅರ್ಪಿಸಿದರು. ಕ್ಷೀರಸಾಗರರವರಿಂದ ರಚಿತವಾದ "ಹಣ ಹದ್ದು" ಎಂಬ ನಾಟಕವೂ ಶ್ರೀ ಎಸ್. ಎನ್. ಸ್ವಾಮಿಯವರಿಂದ ನೃತ್ಯವೂ ಆದನಂತರ ಸಮಾರಂಭವು ಮುಕ್ತಾಯವಾಯಿತು.

ಮರಣ ದಂಡನೆ

ಬೆಂಗಳೂರು ಜ ೨೨

ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟು ಆವರಣದಲ್ಲಿ ಬಾಲೂಸಾ ವೆಂಕೂಸಾರವರನ್ನು ೧೯೫೦ ಸೇ ಜನವರಿಯಲ್ಲಿ ಕೊಲೆಮಾಡಿದ ಮೊಕದ್ದಮೆಯಲ್ಲಿ ಬೆಂಗಳೂರು ಸೆಷನ್ಸ್ ಜಡ್ಜರು ವೆಂಕೂಸಾಗೆ ಮರಣದಂಡನೆಯನ್ನು ವಿಧಿಸಿದ್ದರು ಇದರ ಮೇಲೆ ಹೈಕೋರ್ಟಿನಲ್ಲಿ ಅಪೀಲು ಹೂಡಲಾಗಿತ್ತು. ಹೈಕೋರ್ಟಿನ ಚೀಫ್ ಜಸ್ಟಿಸ್ ಮತ್ತು ಜಸ್ಟಿಸ್ ಶ್ರೀ ವಾಸುದೇವಮೂರ್ತಿಯವರು ಮರಣದಂಡನೆಯನ್ನು ಖಾಯಂಮಾಡಿ, ಅಪೀಲು ವಜಾ ಮಾಡಿದರು.

ಪಾನನಿರೋಧಾಧಿಕಾರಿಗಳು

ಬೆಂಗಳೂರು ಜ ೨೨

ಪೋಲೀಸು ಐ ಜಿ ಯವರನ್ನು ಪಾನನಿರೋಧಕ್ಕೆ ಸಂಬಂಧಪಟ್ಟ ಕಮಿಷನರಾಗಿಯೂ, ಪೋಲೀಸು ಇನ್ಸ್ಪೆಕ್ಟರು ಮತ್ತು ಸಬ್ ಇನ್ಸ್ಪೆಕ್ಟರುಗಳನ್ನು ಪಾನನಿರೋಧಾಧಿಕಾರಿಗಳನ್ನಾಗಿ ಸರ್ಕಾರದವರು ನೇಮಿಸಿರುವರು.

ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲಾ ಪೋಲೀಸು ಸೂಪರಿನ್‌ಟೆನ್‌ಡೆಂಟರು ಪಾನನಿರೋಧ ವಿಷಯದಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಆಡಳಿತ ಮತ್ತು ಮತ್ತು ಕಾರ್ಯವನ್ನೆಲ್ಲಾ ಎಸಗುವಂತೆ ಆಜ್ಞೆಯನ್ನಿರುವರು

ಪೂನಾ ರೈಲು ಕಂಬಿ ತಪ್ಪಿತು

ಬೆಂಗಳೂರ ಪೂನಾ ಮೇಲ್ ರೈಲು ನಿನ್ನೆ ದಿನ ಹುಬ್ಬಳಿಗೆ ೧೬ ಮೈಲಿ ದೂರದಲ್ಲಿರುವ ನೌಸಿ ಎಂಬ ಸ್ಥಳದ ಬಳಿ ಹೋಗುತ್ತಿರುವಾಗ ಹಿಂದಿನ ಗಾಡಿ ಕಂಬಿ ತಪ್ಪಿದರ ಪರಿಣಾಮವಾಗಿ ೧೮ ಮಂದಿ ಗಾಯಗೊಂಡರು. ಆ ಪೈಕಿ ಮೂರು ಮಂದಿ ತೀವ್ರವಾಗಿ ಗಾಯಗೊಂಡಿರುವುದಾಗಿ ವರದಿಯಾಗಿದೆ.

ಗಾಯಗೊಂಡವರ ಪೈಕಿ ೧೦ ಮಂದಿಯನ್ನು ಹುಬ್ಬಳ್ಳಿಯ ರೈಲ್ವೆ ಆಸ್ಪತ್ರೆಗೆ ಸೇರಿಸಲಾಯಿತೆಂದೂ, ಉಳಿದವರಿಗೆ ಚಿಕಿತ್ಸೆ ಮಾಡಲಾಯಿತೆಂದೂ ಹುಬ್ಬಳ್ಳಿಯ ಡಿ॥ ಟ್ರಾನ್ಸ್‌ಪೋರ್ಟ್ ಸೂಪರಿನ್‌ಟೆನ್‌ಡೆಂಟರು ಪ್ರಕಟಣೆ ಹೊರಡಿಸಿದ್ದಾರೆ. ನಿನ್ನೆ ಮಧ್ಯಾಹ್ನ ೧೨-೧೦ ಗಂಟೆಯಲ್ಲಿ ಈ ಅಪಘಾತ ಸಂಭವಿಸಿತೆಂದು ಆ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಸ್ವಾತಂತ್ರ್ಯೋತ್ಸವ

ಸ್ವಾತಂತ್ರ್ಯೋತ್ಸವ ಸಮಾರಂಭದ ಅಂಗವಾಗಿ ಮೈಸೂರು ನಗರ ಪೌರಸಭೆಯ ಆಶ್ರಯದಲ್ಲಿ ೨೬ ನೇ ತಾರೀಖು ಬೆಳಗ್ಗೆ ೯ ಗಂಟೆಗೆ ಪುರಭವನ ಮೈದಾನದಲ್ಲಿ ಧ್ವಜಾರೋಹಣ ಮತ್ತು ಪೆರೇಡೂ, ಸಂಜೆ ೬ ಗಂಟೆಗೆ ಬಹಿರಂಗಸಭೆಯೂ ಏರ್ಪಡಿಸಲಾಗಿದೆ

೯೪ ಕೋಟಿ ರೂಪಾಯಿಗಳ ಆಹಾರ ಮುಫತ್ತಾಗಿ ಭಾರತಕ್ಕೆ

೨,೦೦೦ ಲಕ್ಷ ಡಾಲರುಗಳ (೯೪ ಕೋಟಿ ರೂ) ಬೆಲೆಯ ಆಹಾರವನ್ನು ಅಮೇರಿಕಾವು ಭಾರತಕ್ಕೆ ಮುಫತ್ತಾಗಿ ಕೊಡುವ ವಿಷಯವು ಅಮೆರಿಕಾ ಕಾಂಗ್ರೆಸ್ಸಿನ ಪರಿಶೀಲನೆಯಲ್ಲಿದೆ. ಕೊರಿಯಾ ವಿಷಯದಲ್ಲಿ ಅಮೆರಿಕಾಕ್ಕೆ ಬೆಂಬಲವನ್ನು ತೋರಿಸದೆ. ಪಂಡಿತನೆಹರೂರವರಿತ್ತಿರುವ ಹೇಳಿಕೆಯು ಕೆಲವು ವಿರೋಧಿಗಳ ಗಮನವನ್ನು ಸೆಳೆದಿರುವುದಾಗಿ ಹೇಳಲಾಗಿದೆ

ಪ್ರಸಿದ್ಧ ವ್ಯಾಪಾರಿ ದಸ್ತಗಿರಿ

ಕಾನ್‌ಪುರದ ಪ್ರಮುಖ ಕಬ್ಬಿಣ ವ್ಯಾಪಾರಿಯೊಬ್ಬನನ್ನು ಅತ್ಯಗತ್ಯ ಸರಬರಾಜು ಶಾಸನ ಪ್ರಕಾರ ದಸ್ತಗಿರಿ ಮಾಡಲಾಗಿದೆ. ಆತನಿಗೆ ಸೇರಿದ ಐದು ಮಳಿಗೆಗಳನ್ನು ಪೋಲೀಸಿನವರು ವಶಪಡಿಸಿಕೊಂಡರು.

ಸಿವಿಲ್ ಮತ್ತು ಮಿಲಿಟರಿ ಪೆರೇಡು

ಬೆಂಗಳೂರು ಜ. ೨೨

ಸ್ವಾತಂತ್ರ್ಯೋತ್ಸವದ ಅಂಗವಾಗಿ ೨೬ನೇ ತಾ॥ ೯ ಗಂಟೆಗೆ ಬೆಂಗಳೂರು ಜಯಚಾಮರಾಜೇಂದ್ರ ಕ್ರೀಡಾಕ್ಷೇತ್ರದಲ್ಲಿ ಬೆಂಗಳೂರು ಸಬ್‌ಏರಿಯಾ, ಭಾರತ ವಿಮಾನದಳ, ಮೈಸೂರು ಸೈನ್ಯ, ಪೋಲೀಸು, ಹಿಂದೂಸ್ಥಾನ ಸೇವಾದಳ, ಹೋಮ್‌ಗಾರ್ಡುಗಳು, ಸ್ಕೌಟುಗಳು ಎಲ್ಲರೂ ಸೇರಿದ ಪೆರೇಡು ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪತ್ರವ್ಯವಹಾರ

ಪೌರಸಭಾಧ್ಯಕ್ಷರಿಗೆ ಗೌರವ

ಸ್ವಾಮಿ,—

ಮೈಸೂರು ಬೆಂಗಳೂರು ನಗರದಲ್ಲಿರುವ ಪೌರಸಭೆಗಳ ಅಧ್ಯಕ್ಷರ ಪದವಿಯು ಸಚಿವ ದರ್ಜೆಗೆ ಕಡಮೆಯಾದುದಲ್ಲ. ಅದರಲ್ಲೂ ೨-೩ ಲಕ್ಷ ಪ್ರಜೆಗಳಿರುವ ಪೌರಸಭೆಯ ಹಿರಿಯ ಪ್ರಜೆ ಎಂದರೆ ಪೌರಸಭಾಧ್ಯಕ್ಷ. ಅವರಿಗೆ, ವ್ಯಕ್ತಿಭಾವನೆಯೇ ಇಲ್ಲದೆ, ಎಲ್ಲರಿಗಿಂತಲೂ ಮಿಗಿಲಾದ ಮರ್ಯಾದೆ ಸಲ್ಲಬೇಕಾದುದು ಅತ್ಯವಶ್ಯಕ. ಅಂದರೆ ಈಗ ಸಲ್ಲುತ್ತಲಿಲ್ಲವೆಂಬ ಅರ್ಥವಲ್ಲ ಸರ್ಕಾರ ಮತ್ತು ಪ್ರಜೆಗಳಿಂದ ಸಲ್ಲುತ್ತಲಿದೆ. ಆದರೆ ಅ... ಪದ್ಧತಿ ಕೆಲವು ಕಟ್ಟುನಿಟ್ಟುಗಳಿಂದ ಅವರ ದರ್ಜೆಯು ಕೆಲವರ ಭಾವನೆಯಲ್ಲಿ ಸ್ವಲ್ಪ ಕಡಮೆಯಾಗಿ ಕಾಣುವಂತೆ ತೋರಿಬರುತ್ತದೆ. ಆದರಲ್ಲೂ ಮೈಸೂರು ಪೌರಸಭೆಯಲ್ಲಿ ಇದು ಜನರಿಗೆ ಎದ್ದು ಕಾಣುತ್ತಲಿದೆ. ೧೯೪೮ ರಲ್ಲಿ ಮೈಸೂರು ನಗರ ಪೌರಸಭೆಗೆ ಖಾಸಗೀ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ದೊರೆಯಿತು ಅವರ ಘನತೆಗೆ ತಕ್ಕಂತೆ ಪೌರಸಭೆಯವರು ಮುಂದಾಲೋಚನೆಯಿಂದ, ಅವರ ಓಡಾಟಕ್ಕೆ ಒಂದು ಮೋಟಾರುಕಾರನ್ನು ಕೊಡಲಾಯಿತು ಕೊಟ್ಟ ಒಂದೆರಡು ತಿಂಗಳೊಳಗಾಗಿ ಅದರ ಉಪಯೋಗದ ಮೇಲೆ ಇಲ್ಲದ ಸಲ್ಲದ ಟೀಕೆಗಳು ಒರಲಾರಂಭವಾಗಿ ಅಧ್ಯಕ್ಷರ ಪಕ್ಷಕ್ಕೆ ಸೇರಿದವರೇ ಅದರ ಉಪಯೋಗದ ವಿಷಯದಲ್ಲಿ ಕೆಲವು ನಿರ್ಬಂಧನೆಗಳನ್ನು ಹಾಕಿದರು. ಅದು ಮುಂದುವರಿಯುತ್ತಾ ಬರುತ್ತಲಿದೆ ಇತ್ತೀಚೆಗೆ ಆ ಕಟ್ಟುನಿಟ್ಟು ಸ್ವಲ್ಪ ಬಿಗಿಯಾದಂತೆಯೇ ಕಾಣಬರುತ್ತದೆ

ಒಂದು ಸ್ಥಾನಕ್ಕೆ ಒಬ್ಬ ಪ್ರಜೆಯನ್ನು ಚುನಾಯಿಸಿದ ಮೇಲೆ ಅವರ ಸ್ವಾತಂತ್ರ್ಯ ಮೊಟಕು ಮಾಡಬಾರದು ಆ ಸ್ಥಾನದಲ್ಲಿರುವವರು ತಮ್ಮ ಸ್ಥಾನಬಲದಿಂದುಂಟಾದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ. ದುರುಪಯೋಗಪಡಿಸಿಕೊಂಡರೆ ಕಾರ್ಯಕ್ರಮ ತೆಗೆದುಕೊಳ್ಳಲು ಅನೇಕ ಮಾರ್ಗವಿವೆ ಅವರಿಗೆ ಕೊಟ್ಟಿರುವ ಮೋಟಾರುಕಾರಿನ ಉಪಯೋಗದ ವಿಷಯವಾಗಿ ಸದಸ್ಯರೆಲ್ಲರೂ ಸಂಕುಚಿತ ಮನೋಭಾವದಿಂದ ಪ್ರವರ್ತಿಸಬಾರದು. ಪೌರಸಭೆಗೆ ಸಂಬಂಧಪಡದ ಇತರ ಕೆಲಸಗಳಿಗೆ ಉಪಯೋಗಿಸುವರು, ಮನೆಯವರೆಲ್ಲರೂ ಉಪಯೋಗಿಸುವರು ಎಂದು ಟೀಕಿಸುತ್ತಾ ಕಾರು ಪೌರಸಭಾ ಕಛೇರಿಯಲ್ಲಿಯೇ ಇರಬೇಕು. ಬೇಕಾದಾಗ ಅದನ್ನು ತರಿಸಿಕೊಂಡು ಉಪಯೋಗಿಸಬೇಕೆಂಬ ಅನೇಕ ನಿರ್ಬಂಧಗಳನ್ನು ಹಾಕಿರುವುದು ಶೋಚನೀಯ ಪೌರಸಭಾಧ್ಯಕ್ಷರು ತಮ್ಮ ಅಧಿಕಾರ ಕಾಲದಲ್ಲಾದರೂ ಆಫೀಸಿಗೆ ಬಸ್ಸುಗಳಲ್ಲಿ ಬರುವುದು ಆಫೀಸಿನಿಂದ ಮನೆಗೆ ಹೋಗುವಾಗ ನಡೆದುಕೊಂಡು ಹೋಗುವುದು, ತ್ವರಿತಕಾರ್ಯ ಸಮಯದಲ್ಲಿ ಪೌರಸಭೆಯ ಮೋಟಾರು ತಮ್ಮ ಸುಪರ್ದಿನಲ್ಲಿಲ್ಲದೆ ಇತರರ ದಾಕ್ಷಿಣ್ಯಕ್ಕೊಳಗಾಗುವುದು ಮುಂತಾದುವು ಕಾಣಬರುತ್ತದೆ. ಪ್ರಜೆಗಳಿಂದ ಚುನಾಯಿತರಾದ, ನಮ್ಮ ಪ್ರತಿನಿಧಿಗಳು ಇತರ ಎಲ್ಲಾ ಅಧಿಕಾರಿಗಳು ಮತ್ತು ಖಾಸಗೀ ಮಹನೀಯರಂತೆ ಮೋಟಾರಿನಲ್ಲಿ ಕುಳಿತು ಹೋಗುತ್ತಲಿದ್ದರೆ ಪೌರರಿಗೆ ಸಂತೋಷವೇ ಹೊರತು ದುಃಖವಿಲ್ಲ. ನಮ್ಮ ಪೌರಸಭಾ ಸದಸ್ಯರು ತಮ್ಮ ಸಂಕುಚಿತ ಮನೋಭಾವವನ್ನು ಬಿಟ್ಟು ಅಧ್ಯಕ್ಷರು ತಮ್ಮ ಅಧಿಕಾರ ಕಾಲದಲ್ಲಿ ಮೋಟಾರುಕಾರನ್ನು ಮಂತ್ರಿಗಳು ಮುಂತಾದವರು ಉಪಯೋಗಿಸುವಂತೆ, ತಮ್ಮ ಸ್ವಂತ ಕಾರಿನಂತೆ ಉಪಯೋಗಿಸಲು ಯಾರ ಅಡ್ಡಿ ಆತಂಕವನ್ನು ತರದಂತೆ ವರ್ತಿಸುವರೆಂದು ನಂಬಿದೆ.

ಓರ್ವ ಪ್ರಜೆ.

ಸೇವಾದಳಕ್ಕೆ ಶ್ರೀ ಠಕ್ಕರ್ ಬಾಪಾರವರಿಂದ ಆದ ಮಹದುಪಕಾರ

ರಜಾಕಾರರ ಉಪಟಳಗಿಂದ ಮೈಸೂರಿನಲ್ಲಿ ಕಳವಳ ಉಂಟಾಗಿದ್ದ ಕಾಲವದು. ಸೈನ್ಯ ಜಮಾವಣೆಗಾಗಿ ಶ್ರೀ ಬಿ ವೀರಪ್ಪನವರನ್ನು ಸರ್ಕಾರವು ನಿಯೋಜಿಸಿತ್ತು. ಈ ಕಾಲದಲ್ಲಿ ಬೆಂಗಳೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ತಾ॥ ಕೇಂದ್ರದಲ್ಲಿಯೂ ಸೇವಾದಳದ ಕವಾಯತ ಪ್ರದರ್ಶನ ಜರುಗುವುದರಿಂದ ಸೈನ್ಯ ಜಮಾವಣೆಯ ಕಾರ್ಯಕ್ಕೆ ಅನುಕೂಲವಾಗುವುದೆಂಬ ಸಲಹೆಯನ್ನು ಕೀರ್ತಿಶೇಷರಾದ ಶ್ರೀ ಠಕ್ಕರ್ ಬಾಪಾರವರಲ್ಲಿ ನಿವೇದಿಸಲಾಯಿತು. ಶ್ರೀ ಬಾಪಾರವರು ದೊಡ್ಡಬಳ್ಳಾಪುರದಲ್ಲಿ ಜರುಗುತ್ತಿದ್ದ ದ್ವಿತೀಯ ಶಿಕ್ಷಕರ ಶಿಬಿರಕ್ಕೆ ಭೇಟಿ ಕರುಣಿಸಿ ಶ್ರೀ ರಾಮಗಿರಿ ಮೈದಾನದಲ್ಲಿ ನಡೆದ ಕವಾಯತ್ ಪ್ರದರ್ಶನವನ್ನು ಕಂಡು ಸೇವಾದಳವನ್ನು ಆಶೀರ್ವದಿಸಿದರು ಮೇಲಣ ಅಭಿಪ್ರಾಯವು ಫಲದಾಯಕವಾಗುವಂತೆ ಮೈಸೂರು ಸರ್ಕಾರದಲ್ಲಿ ತಮ್ಮ ವರ್ಚಸ್ಸನ್ನು ಬೀರಿದರು. ಇದರ ಪರಿಣಾಮವಾಗಿ ಇಡೀ ಮೈಸೂರು ಸಂಸ್ಥಾನದಲ್ಲಿ ಸೇವಾದಳದ ಆವಶ್ಯಕತೆಯು ಸಲುವಾಗಿ ಪ್ರಜಾಕೋಟಿಯ ಬೆಂಬಲವು ದೊರಯಿತು. ಇಂದಿನ ಭಾರತಸೇವಾದಳದ ಅಸ್ತಿಭಾರವು ಭದ್ರವಾಗಲು ಶ್ರೀ ಬಾಪಾರವರು ಕಾರಣರಾದರು ಸೇವಾದಳದ ಕಾರ್ಯಕರ್ತರು ನಿಷ್ಕಾಮಸೇವೆಯನ್ನು ಮುಂದೆ ಸಲ್ಲಿಸುವುದರ ಮೂಲಕ ಈ ಕರ್ಮಯೋಗಿಗಳ ಸವಿತ್ರಾತ್ಮಕ್ಕೆ ಹೆಚ್ಚು ಸಂತೋಷವನ್ನು ಉಂಟುಮಾಡಲು ಸಾಧ್ಯವಿದೆ ಎಂಬುದನ್ನು ಮರೆಯುವಂತಿಲ್ಲ ಎಂದು ಭಾರತಸೇವಾದಳ ವ್ಯವಸ್ಥಾಪಕರಾದ ಶ್ರೀ ರುಮಾಲೆ ಚನ್ನಬಸವಯ್ಯನವರು ಬರೆಯುತ್ತಾರೆ.

ನ್ಯೂ ಅಪೇರಾ

ಮೈಸೂರು

ತಾ॥ ೧೯-೧-೫೧ ರಿಂದ

'ಫ್ಲೈಯಿಂಗ್ ಎಕ್ಸ್‌ಪ್ರೆಸ್'

—: ಅಭಿನಯ :—

ಪ್ರಕಾಶ, ಸಿರಾಜ, ಮಿಸ್. ಮೋತಿ, ಗುಲನಾರ್

ಪ್ರತಿದಿನ ೩ ಆಟಗಳು

ವಾರ್ಷಿಕೋತ್ಸವ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಐದನೇ ವಾರ್ಷಿಕೋತ್ಸವವು ೩೧ನೇ ತಾ॥ ಸಂಜೆ ೫ ಗಂಟೆಗೆ ಸಹಕಾರಭವನದಲ್ಲಿ, ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಕೆ. ಗುರುದತ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯ ೪೬ ಮೀಟರು

ಜನವರಿ ೨೪ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ಎ. ವಿ. ನಾರಾಯಣಪ್ಪ (ನಾಗಸ್ವರ) ೭-೩೫ ಚಿತ್ರ ಜಗತ್ (೧) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ४೦ ವೀಣೆ ೧-೪೫ ಹಿಂದುಸ್ಥಾನಿ ೨-೦ ವನಿತಾವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಎ. ವಿ. ನಾರಾಯಣಪ್ಪ (ನಾಗಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲ ಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿಯಲ್ಲಿ ಕಥೆ. ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಬಿ. ಎಸ್. ರಾಜಯ್ಯಂಗಾರ್ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೦ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು. ೧೦-೦ ಮುಕ್ತಾಯ.

ರಣಜಿತ್

ತಾ॥ ೧೭-೧-೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ಸಂತೋಷಿಯವರ

ನಿರಾಲ (Nirala)

(ಹಿಂದಿ)

ಪಾತ್ರ

ಮಧುಬಾಲ, ಯಾಕೂಬ, ದೇವಾ ಆನಂದ, ದಿವಂಗತ ಮಜಾರ್‌ಖಾನ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೧—೧೯೫೧ನೇ ಬುಧವಾರ [ಸಂಚಿಕೆ ೧೨೧

ಬೆರಕೆ ಎಣ್ಣೆ ತಯಾರಿಕೆಯ ವಿರೋಧಶಾಸನ

ಶಾಸನ ಸಭೆಯಲ್ಲಿ ಮಸೂದೆ ಅಂಗೀಕಾರವಾಯಿತು

ಬೆಂಗಳೂರು ಜ ೨೩

ಕೊಬ್ಬರಿ ಎಣ್ಣೆ, ಕಡಲೆಕಾಯಿ ಎಣ್ಣೆ, ಎಳ್ಳೆಣ್ಣೆ ಮತ್ತು ಹುಚ್ಚೆಳ್ಳೆಣ್ಣೆಯನ್ನು ಆಹಾರಪದಾರ್ಥ ತಯಾರಿಸಲು ಉಪಯೋಗಿಸಲಾಗುತ್ತಿದೆ. ಇತ್ತೀಚೆಗೆ ಅವುಗಳಿಗೆ ಕಲ್ಲೆಣ್ಣೆ ಮತ್ತು ಕೆಲವು ಎಣ್ಣೆಗಳನ್ನು ಮಿಶ್ರಣಮಾಡುತ್ತ, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತಲಿರುವುದರಿಂದ ಅದನ್ನು ತಡೆಗಟ್ಟಲು ಇಂದು ನಡೆದ ಶಾಸನ ಸಭೆಯಲ್ಲಿ ಮೈಸೂರು ಪ್ರಿವೆನ್ಷನ್ ಆಫ್ ಅಡಲ್ಟರೇಷನ್ (ತಿದ್ದುಪಡಿ) ಮಸೂದೆಯು, ಈ ಕಾನೂನನ್ನು ಉಲ್ಲಂಘಿಸಿದವರಿಗೆ ಮೂರು ತಿಂಗಳು ಬದಲು ೬ ತಿಂಗಳ ಸಜಾ ೨೦೦ ರೂಪಾಯಿ ಬದಲು ೫೦೦ ರೂ. ಜುಲ್ಮಾನೆಯಿರಬೇಕೆಂದು ಶ್ರೀ ಸಿದ್ದವೀರಪ್ಪನವರು ಸೂಚಿಸಿದ ತಿದ್ದುಪಡಿಯೊಡನೆ ಸರ್ವಾನುಮತದಿಂದ ಅಂಗೀಕಾರವಾಯಿತು.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಯವ್ಯಯ ಅಂದಾಜು ಸಭೆ

ಮೈಸೂರು ಜ ೨೩

ಇದೇ ೨೧ ನೆಯ ತಾರೀಖು ಭಾನುವಾರ ಮಧ್ಯಾಹ್ನ ೩ ಘಂಟೆಗೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಾಲಯದಲ್ಲಿ ಸಮಿತಿಯ ಆಯವ್ಯಯ ಅಂದಾಜು ಸಭೆ ಸೇರಿತ್ತು. ಶ್ರೀ ಟಿ ಮಾದಯ್ಯ ಗೌಡರವರು ಅಧ್ಯಕ್ಷತೆ ವಹಿಸಿದ್ದರು

ಅಧ್ಯಕ್ಷರು ಸದಸ್ಯರನ್ನು ಸ್ವಾಗತಿಸುತ್ತ ಈ ಸಾಲಿನಲ್ಲಿ ಇದುವರೆಗೆ ಸಮಿತಿ ನಡಸಿರುವ ಕಾರ್ಯಗಳಲ್ಲಿ ಮುಖ್ಯವಾದ ಮೂರು ಸಂಗತಿಗಳನ್ನು ಸಭೆಯ ಗಮನಕ್ಕೆ ತಂದರು. ಶ್ರೀ ಕುವೆಂಪುರವರು ಬರೆದಿರುವ ಮಹಾಗ್ರಂಥ "ಜನಪ್ರಿಯ ರಾಮಾಯಣ" ವನ್ನು ಗಾಂಧಿ ಜಯಂತಿಯ ದಿನ ವಿಶೇಷ ರೀತಿಯಲ್ಲಿ ಪ್ರತಿಪಾದಿಸಿದುದು ಜಬ್ಬಲ್‌ಪುರದಲ್ಲಿ ನಡೆದ "ಸೆಮಿನಾರ್" ನಲ್ಲಿ ಇಲ್ಲಿಯ ಸದಸ್ಯರು ಭಾಗಿಗಳಾದ ಸಂದರ್ಭದಲ್ಲಿ ಅಲ್ಲಿಯ ಜನ ಮೈಸೂರಿನ ವಯಸ್ಕರ ಶಿಕ್ಷಣ ಕಾರ್ಯವನ್ನು ಪ್ರಶಂಸಿಸಿದುದು, ಹೈದರಾಬಾದಿನಲ್ಲಿ ನಡೆದ ಅಖಿಲ ಭಾರತ ಶಿಕ್ಷಣ ಸಮ್ಮೇಳನದಲ್ಲಿ ಡಾ|| ಅಮರನಾಥಾ ಝಾ ಅವರು ಮೈಸೂರಿನಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಕಾರ್ಯವನ್ನು ಪ್ರಶಂಸಿಸಿದುದು ಸಂತೋಷದ ಸಂಗತಿ ಎಂದು ಅಧ್ಯಕ್ಷರು ತಿಳಿಸಿದರು.

ಅನಂತರ ಮೂರು ಸಂತಾಪ ಸೂಚಕ ನಿರ್ಣಯಗಳನ್ನು ಸಭೆ ಅಂಗೀಕರಿಸಿತು. ಇಂದಿನ ಭಾರತ ನಿರ್ಮಾಪಕರು ಸರ್ದಾರ್ ವಲ್ಲಭಬಾಯಿ ಪಟೇಲ್, ಮಹಾಯೋಗಿ ಶ್ರೀ ಅರವಿಂದರು ಮತ್ತು ಶ್ರೀ ಥಕ್ಕರ್ ಬಾಪಾ ಅವರ ನಿಧನದ ಬಗ್ಗೆ ಸಭೆ ಎದ್ದುನಿಂತು ಸಂತಾಪಸೂಚಿಸಿತು

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಉಪಾಧ್ಯಕ್ಷರೂ, ಸ್ಥಾಪಕ ಸದಸ್ಯರೂ ಆದ ಪ್ರೊಫೆಸರ್ ಡಬ್ಲ್ಯು ಜಿ. ಈಗಲ್‌ಟನ್ ಅವರಿಗೆ "ಯುನೆಸ್ಕೊ" ಸಂಸ್ಥೆಯಲ್ಲಿ ಮುಖ್ಯವಾದ ಒಂದು ಹುದ್ದೆ ದೊರೆತುದಕ್ಕಾಗಿ, ಸಮಿತಿಯ ಸದಸ್ಯರಾದ ಶ್ರೀಮತಿ ಬಿ. ಇಂದಿರಮ್ಮನವರಿಗೆ ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರವರ ಹುದ್ದೆ ದೊರೆದುದಕ್ಕಾಗಿ ಸಭೆ ಅವರನ್ನು ವಂದಿಸಿತು.

ಆಮೇಲೆ ಕಾರ್ಯಕ್ರಮದಂತೆ ಹಿಂದಿನ ಸಭೆಯ ವರದಿಯನ್ನು ಸದಸ್ಯರಿಗೆ ಹಂಚಲಾಯಿತು.

ಅನಂತರ ಕಾರ್ಯದರ್ಶಿಗಳು ಈ ಒಂಭತ್ತು ತಿಂಗಳ ಕಾರ್ಯ ವರದಿಯನ್ನು ಸಭೆಯ ಮುಂದಿಟ್ಟರು. ೯ ತಿಂಗಳ ಜಮಾ ಖರ್ಚು ಪಟ್ಟಿಯನ್ನು ಸಭೆ ಪರಿಶೀಲಿಸಿ ಅದನ್ನು ಅಂಗೀಕರಿಸಿತು. ಈ ಸಂದರ್ಭದಲ್ಲಿ ಸದಸ್ಯರು ನಾನಾಬಗೆಯ ಸೂಕ್ತವಾದ ಸಲಹೆಗಳನ್ನು ಇತ್ತರು.

ಹೊಸಸಾಲಿನ ಆಯವ್ಯಯ ಪಟ್ಟಿಯನ್ನು ಸಭೆಯ ಮುಂದೆ ಇಡಲಾಯಿತು. ಮುಂದಿನ ಸಾಲಿನಲ್ಲಿಯೂ ಸರಕಾರದಿಂದ ೫ ಲಕ್ಷ ೮೦ ಸಾವಿರ ರೂಪಾಯಿಗಳಿಗೆ ಮಾತ್ರ ಒಂದು ಅಂದಾಜು ಪಟ್ಟಿಯನ್ನು ಸಮಿತಿ ತಯಾರಿಸಿದೆ. ಈ ಅಂದಾಜನ್ನು, ಸಮಿತಿಯ ಸದಸ್ಯರು ಅಂಗೀಕರಿಸಿದರು.

ಕಾರ್ಯದರ್ಶಿಗಳ ವಂದನೆಯೊಡನೆ ಸಮಿತಿಯ ಸಭೆ ಕೊನೆಗೊಂಡಿತು.

ಸ್ಕೌಟುರ್‍ಯಾಲಿ

ಮೈಸೂರು ಜ, ೨೩.

ಮೈಸೂರು ಸ್ಕೌಟು ಕೌನ್ಸಿಲ್ಲಿನವರು ಇದೇ ಮಾಹೆ ೨೬-೨೭ ರಲ್ಲಿ ಮೈಸೂರು ನಗರದಲ್ಲಿ ರ್‍ಯಾಲಿಯನ್ನು ನಡೆಯಿಸುವರು. ೨೬ನೇ ತಾರೀಖು ಬೆಳಗ್ಗೆ ೯ ಗಂಟೆಗೆ ಪುರಭವನ ಮೈದಾನದಲ್ಲಿ ರ್‍ಯಾಲಿ ಮತ್ತುಧ್ವಜವಂದನೆ, ಮಧ್ಯಾಹ್ನ ೩ ಗಂಟೆಗೆ ಭಾಷೀರನ ಕುಣಿತ, ಡ್ಯಾನ್ಸ್ ಮುಂತಾದುವು ಆರಾರ್ಕಬೀರಿ ಮೈದಾನದಲ್ಲೂ, ೨೭ನೇ ತಾರೀಖು ಮಧ್ಯಾಹ್ನ ೩ ಗಂಟೆಗೆ ಪುರಭವನ ಮೈದಾನದಲ್ಲಿ ಘೋಷಗರ್ಜನೆ ಕಸ್ರತ್ತು, ಕುಸ್ತಿಯ ಮುಂತಾದ ಆಟಗಳೂ, ಮೈಸೂರು ರಾಷ್ಟ್ರಗೀತೆಯ ಹಾಡುವುದು, ಸಂಜೆ ೫-೩೦ ಗಂಟೆಗೆ ಶಿಬಿರಾಗ್ನಿ ನಡೆಯುವುದು. ೨೮ ನೇ ತಾರೀಖು ಸಂಜೆ ೫-೩೦ ಗಂಟೆಗೆ ಬಹುಮಾನ ವಿನಿಯೋಗ ನಡೆಯುವುದು.

ಸಂತಾಪ ಸಭೆ

ಮೈಸೂರು ಜ. ೨೩

ಇಂದು ಸಂಜೆ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಭೆಯು ಶ್ರೀ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಸಮಾಜ ಸುಧಾರಕರೂ ಹರಿಜನರಿಗಾಗಿ ತಮ್ಮ ಪ್ರಾಣವನ್ನು ಮುಡುಪಾಗಿಟ್ಟು ಅದಕ್ಕಾಗಿ ಅರ್ಪಣೆಮಾಡಿದ ಠಕರ್ ಬಾಪಾರವರ ನಿಧನ ಬಗ್ಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮಾಡಿತು.

ಮೈಸೂರು ಸಂಸ್ಥಾನದಲ್ಲಿ ಸಮಗ್ರ ಆಟೋಮೊಬೈಲ್ ಕೆಲಸಗಾರರ ಫೆಡರೇಷನ್ ಸ್ಥಾಪಿಸಬೇಕೆಂದೂ ತೀರ್ಮಾನ ಮಾಡಿತು ಮತ್ತು ಸಮ್ಮೇಳನವನ್ನು ಶೀಘ್ರವಾಗಿ ಮೈಸೂರಿನಲ್ಲೇ ಕರೆಯಬೇಕೆಂದು ನಿರ್ಧರಿಸಿತು.

ಬಟ್ಟೆಗಿರಣಿ ಮಾಲೀಕರ ಪ್ರತಿಭಟನೆ

ಬಟ್ಟೆ ಬೆಲೆಯನ್ನು ಕೇಂದ್ರ ಸರ್ಕಾರದವರು ಹೆಚ್ಚಿಸುವಾಗ ಮಾಡಿಯುಂ ಬಟ್ಟೆಯ ಬೆಲೆಯನ್ನು ಏರಿಸದಿರುವುದನ್ನು ಅಹಮದಾಬಾದಿನ ಬಟ್ಟೆ ಗಿರಣಿ ಮಾಲೀಕರು ಪ್ರತಿಭಟಿಸಿ ಅದರ ಬೆಲೆಯನ್ನು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿರುವರು ಈ ವಿಷಯ ನಿರ್ಧಾರವಾಗುವವರೆಗೆ ಬಟ್ಟೆಯನ್ನು ತಾವು ಯಾರಿಗೂ ಕಳುಹಿಸುವುದಿಲ್ಲವೆಂದೂ ತಿಳಿಸಿರುವರೆಂದು ಗೊತ್ತಾಗಿದೆ

ನಾಮಕರಣ

ಬೆಂಗಳೂರು ಜ. ೨೩

ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರು ಕಾರ್ಯನಿರ್ವಾಹಕ ಸಮಿತಿಗೆ ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಕೆ. ಸಿ. ರೆಡ್ಡಿ, ಎ. ಜಿ ರಾಮಚಂದ್ರರಾವ್, ಎನ್. ಹುಚ್ಚಮಾಸ್ತಿಗೌಡ ಮತ್ತು ಆರ್. ಸುಬ್ಬಣ್ಣನವರನ್ನು ನಾಮಕರಣ ಮಾಡಿದ್ದಾರೆ.

ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎ. ಜಿ ರಾಮಚಂದ್ರರಾಯರನ್ನು ಪ್ರಧಾನ ಕಾರ್ಯದರ್ಶಿಗಳನ್ನಾಗಿ, ಶ್ರೀ ಎನ್. ಹುಚ್ಚಮಾಸ್ತಿಗೌಡರನ್ನು ಜಂಟೀ ಕಾರ್ಯದರ್ಶಿಗಳನ್ನಾಗಿ ಶ್ರೀ ಆರ್. ಸುಬ್ಬಣ್ಣನವರನ್ನು ಖಜಾಂಚಿಗಳಾಗಿ ನೇಮಕಮಾಡಿ ಇದ್ದಾರೆ.

ಹೆಚ್ಚುಬೆಳೆ ಬೆಳೆಯಲು ವ್ಯವಸ್ಥೆ

ಬೆಂಗಳೂರು ಜ. ೨೩

ಮೈಸೂರು ಸರ್ಕಾರ ಹೆಚ್ಚು ಬೆಳೆ ತೆಗೆಯುವ ಕಾರ್ಯಕ್ರಮದಲ್ಲಿ ಈ ಮುಂದೆ ಕಂಡ ಕೆಲಸಗಳನ್ನು ಮುಂದುವರಿಸಿವೆ ಎಂದು ತಿಳಿಯುಬರುತ್ತವೆ. ಟಿ. ನರಸೀಪುರದ ತಾಲ್ಲೂಕು ಕಾಲೋನಿಯಲ್ಲಿ ಗೋಧಿಬೆಳೆಯುವ ಕಾರ್ಯಕ್ರಮ, ನದಿ ಮತ್ತು ಕೆರೆಗಳ ಫೀಡರ್ ಚಾನಲ್‌ಗಳ ಕೆಲಸ, ಹಾಸನ, ಶಿವಮೊಗ್ಗ ಮತ್ತು ಕಾವೇರಿ ಮೇಲ್ಭಾಗದ ಕೆಲಸ ಪೂರೈಸಿರುವುದು. ಕೋಲಾರಜಿಲ್ಲೆ ಕಾಚಿ ಮಿಟ್ಟೇನಹಳ್ಳಿಯ ಅರನಕುಂಟೆ ಕೆರೆಯ ಹೂಳನ್ನು ಬುಲ್‌ಡೋಜರ್‌ಗಳಿಂದ ತೆಗೆಯಿಸಿರುವುದು, ೩೫೩೧೧ ರೂ. ಗಳ ವೆಚ್ಚದಿಂದ ಜಿಲ್ಲಾಮಳೆ ೭೫ ನೀರಾವರಿ ಭಾವಿಗಳನ್ನು ತೋಡಿಸಿರುವುದು, ೨೧೦೦ ಎಕರೆ ಹೊಸ ಜಮೀನನ್ನು ವ್ಯವಸಾಯಕ್ಕೆ ಕೊಟ್ಟಿರುವುದು, ಸಂಸ್ಥಾನದಲ್ಲೆಲ್ಲಾ ಒಟ್ಟು ೩,೫೩,೮೨೩ ಸಸಿಗಳನ್ನು ನೆಟ್ಟಿರುವುದು ಬೇಸಿಗೆ ರಾಗಿಯನ್ನು ೨೦,೦೦೦ ಎಕರೆಗಳಲ್ಲಿಯೂ ಭತ್ತವನ್ನು ೫,೦೦೦ ಎಕರೆಗಳಲ್ಲೂ ಮಂಡ್ಯ ಜಿಲ್ಲೆಯಲ್ಲಿ ಬೆಳೆಯುವಂತೆ ಕಾರ್ಯಕ್ರಮಕ್ಕೈಗೊಂಡಿರುವುದು.

ರೈತರಿಗೆ ಸಾಲ

ಬೆಂಗಳೂರು ಜ. ೨೩

ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇರೆಗೆ ಸಂಸ್ಥಾನದಲ್ಲಿ ರೈತರಿಗೆ ಪರಸ್ಪರ ಸಹಾಯ ಸಂಘಗಳ ಮೂಲಕ ಅಲ್ಪಾವಧಿಸಾಲಗಳನ್ನು ಕೊಡುವ ವಿಚಾರ ಸರ್ಕಾರವು ಪರಿಶೀಲಿಸುತ್ತಲಿದೆಯೆಂದೂ, ಸಂಸ್ಥಾನದಲ್ಲಿ ಅಗ್ರಿಕಲ್ಚರಲ್ ಕ್ರೆಡಿಟ್ ಕಾರ್ಪೊರೇಷನ್ ಸ್ಥಾಪನೆ ಬಗ್ಗೆ ಪರಿಶೀಲನೆ ನಡೆಯುತ್ತಲಿದೆ ಎಂದು ತಿಳಿಯಬರುತ್ತದೆ.

ಅರ್ಧ ಗೋಧಿ, ಅರ್ಧ ಜೋಳ

ಮೈಸೂರು ಜ ೨೩

ಗೋಧಿ ದಾಸ್ತಾನು ಕಡಿಮೆಯಾಗಿ ಇನ್ನೂ ಹೊರಗಿನಿಂದ ಬಂದಿಲ್ಲದಿರುವುದರಿಂದ ದಾಸ್ತಾನು ಬರುವವರೆಗೆ ಎಲ್ಲಾ ರೇಷನ್‌ದಾರರಿಗೂ ಮೈಸೂರು ನಗರದಲ್ಲಿ ಅರ್ಧ ಭಾಗ ಗೋಧಿ, ಅರ್ಧ ಭಾಗ ಜೋಳವನ್ನು ಕೊಡಲಾಗುವುದೆಂದು ರೇಷನ್ ಇಲಾಖಾಧಿಕಾರಿಗಳು ತಿಳಿಸುತ್ತಾರೆ.

ಮಲೇರಿಯಾ ಹತೋಟಿ

ರಾಕ್‌ಫೆಲ್ಲರ್ ಫೌಂಡೇಷನ್ನಿನ ಸಂಸ್ಥೆಯ ಅಂತರ ರಾಷ್ಟ್ರೀಯ ಆರೋಗ್ಯವಿಭಾಗದವರು ಮೈಸೂರು ಸಂಸ್ಥಾನದಲ್ಲಿ ಮಲೇರಿಯಾವನ್ನು ಹತೋಟಿಗೆ ತರಲು ಒಂದು ಯೋಜನೆಯನ್ನು ತಯಾರಿಸಿದ್ದಾರೆಂದು ತಿಳಿಯಬರುತ್ತದೆ.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ

ಬೆಂಗಳೂರು ಜ. ೨೩

ಪಂಡಿತ ಮತ್ತು ಮುನ್ಷಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಮಾತ್ರ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಇಂಗ್ಲೀಷ್ ವಿಭಾಗಕ್ಕೆ ಖಾಸಗಿಯಾಗಿ ಕುಳಿತುಕೊಳ್ಳಬಹುದೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ರೇಡಿಯೋ ಭಾಷಣ

ಇಂದು ರಾತ್ರಿ ೮-೩೦ ಗಂಟೆಗೆ ಪಂಡಿತ ನೆಹರೂರವರು ರೇಡಿಯೋ ಭಾಷಣ ಮಾಡುವರು.

CITY MUNICIPAL OFFICE
MYSORE, Dated 19-1-1951

NOTIFICATION

Re. Quotations for the supply of badges as detailed below for the year 1951-52

Notice is hereby given that sealed Tenders with samples will be received by the undersigned at the office for the supply of badges for the year 1951-52 on or before 3-2-1951 at 4 P.M.

1. Each tender must be accompanied by a challan for having deposited Rs. 100/- in cash to the Municipal Treasury as earnest money in default of which tenders will be rejected

2. Particulars may be had at the office on all working days on a reference to the office.

DETAILS

1. Cycle badges
2. Tonga badges
3. Councillors cycle free badges
4. Cycle free badges
5. Devaraja Market Cooly badges
6. Dog badges
7. Sweepers badges.

(*Sd*) **C. NARASIMHA MOORTY**
Municipal Commissioner.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು
ಜನವರಿ ೨೫ ಗುರುವಾರ

ಬೆಳಗ್ಗೆ ೭-೦ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ಎಸ್. ಎ. ಶ್ರೀನಿವಾಸರಾವ್ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಕನ್ನಡದಲ್ಲಿ ವಾರ್ತೆ. ೧-೪೦ ಗಿಟಾರ್ ೧-೪೫ ಹಿಂದೀ ಶಿಕ್ಷಣ ೨-೦ ತಾರಾಮಾಹಿನಿ(ರ) ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ಆರ್. ಶಂಕರಮೂರ್ತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಾತ್ಯ ಸಂಗೀತ (ರ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಜೂತಿರಾರಾಯ್(ರ) ೭-೧೫ ಎಸ್. ಎ. ಶ್ರೀನಿವಾಸರಾವ್ (ಕೊಳಲು) ೮-೦ ಮಲ್ಲಿಕಾರ್ಜುನಪ್ಪ (ವಾಚನ) ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಎಂ. ಆರ್. ಶಂಕರಮೂರ್ತಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅಂತರ ಕಾಲೇಜು ಚರ್ಚಾಗೋಷ್ಠಿ ೧೦-೦ ಮುಕ್ತಾಯ.

ಸರ್ಕಾರಿ ಪ್ರಕಟಣೆ

ಕನ್ನಡ ಎ ಟಿ ಸಿ. ಪರೀಕ್ಷೆಯನ್ನು ಮಾಡಿದವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಇಂಗ್ಲೀಷ್ ಪತ್ರಿಕೆಗೆ ಮಾತ್ರ ೧೯೫೧ ನೇ ಪರೀಕ್ಷೆಗೆ ಕುಳಿತುಕೊಳ್ಳಬಹುದೆಂದು ಯಾವುದೋ ಒಂದು ಪತ್ರಿಕೆಯು ಪ್ರಕಟಿಸಿರುವುದು ಸತ್ಯಾಂಶಕ್ಕೆ ದೂರವೆಂದು ಸರ್ಕಾರೀ ಪ್ರಕಟಣೆಯು ತಿಳಿಸುತ್ತದೆ.

ರಣಜಿತ್

ತಾ|| ೧೯-೧-೫೧ ರಿಂದ ಎರಡನೇ ವಾರ
ಪ್ರತಿದಿನ ೩ ಪ್ರದರ್ಶನಗಳು
ಸಂತೋಷಿಯವರ

ನಿರಾಲ (Nirala)
(ಹಿಂದಿ)

ಪಾತ್ರ
ಮಧುಬಾಲ, ಯಾಕೂಬ, ದೇವಾ ಆನಂದ, ದಿವಂಗತ ಮಜಾರ್‌ಖಾ

ಪ್ರಭಾ

ಅಮೋಘ ಪ್ರಾರಂಭ

ತಾ|| ೨೬-೧ ೧೯೫೧ ರಿಂದ ಪ್ರತಿದಿನ ೩ ಆಟಗಳು

ಶ್ರೀ ಗೋಪಾಲ ಪಿಕ್ಚರ್ಸ್‌ರವರ

★ ಅಫ್‌ಸಾರ್ ★

ಪಾತ್ರ :—ಅಶೋಕ್‌ಕುಮಾರ್, ವೀಣಾ, ಪ್ರಾಣ್, ಕುಲದೀಪ್, ಜೀವನ್, ಕಕ್ಕು,

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M: 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೧—೧೯೫೧ ಗುರುವಾರ [ಸಂಚಿಕೆ ೬೨

ಚೈನಾವು ಶಾಂತಿಸ್ಥಾಪನೆಗೆ ಕಾತುರವಾಗಿದೆ

ಯುದ್ಧದ ಯೋಚನೆಯನ್ನು ಬಿಟ್ಟು ಎಲ್ಲರೂ ಶಾಂತಿವಿಧಾನಗಳನ್ನು ಅನುಸರಿಸಬೇಕು

ಪ್ರಧಾನಿ ನೆಹರೂರವರ ರೇಡಿಯೋ ಭಾಷಣ

ಅಮೆರಿಕಾವು ಚೈನಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸಬೇಕೆಂದು ತಂದಿರುವ ನಿರ್ಣಯದಲ್ಲಿ ಸ್ವಲ್ಪವೂ ಅರ್ಥವಿಲ್ಲ. ಶಾಂತಿಸ್ಥಾಪನೆಗಾಗಿ ಚೈನಾ ಸರ್ಕಾರವು ಕಾತುರವಾಗಿದೆ. ವಿಶ್ವಸಂಸ್ಥೆಯ ಸಲಹೆಗಳಿಗೆ ಹೊಸ ಸಲಹೆಗಳನ್ನು ಚೈನಾವು ಕೊಟ್ಟಿದ್ದರೂ, ವಿಶ್ವಸಂಸ್ಥೆಯ ನಿಯಮಗಳನ್ನು ನಿರಾಕರಿಸಿಲ್ಲ. ಅದರಲ್ಲಿ ನಿಯಮಗಳ ಅಂಗೀಕಾರವು ತೋರುತ್ತದೆ. ಶಾಂತಿಯುತ ಸಂಧಾನಕ್ಕೆ ಚೈನಾವು ಸದಾ ಸಿದ್ಧವಿದೆ. ಸಂಬಂಧಪಟ್ಟ ರಾಷ್ಟ್ರಗಳು, ಸಾವಿರಾರು ಮೈಲಿಗಳಿಂದ ವ್ಯವಹಾರ ನಡಸುವ ಬದಲು ಒಂದೆಡೆ ಸೇರಿ ವಿಚಾರವಿನಿಯಮ ಮಾಡಿಕೊಂಡು ಶಾಂತಿಸ್ಥಾಪನೆಗಾಗಿ ಮಾರ್ಗವನ್ನು ಶೋಧಿಸುವುದು ಉತ್ತಮ. ಇಂದಿನ ಪರಿಸ್ಥಿತಿಯಲ್ಲಿ ಭೀಕರ ವಿಪತ್ತು ಕಾಣಬರುತ್ತಲಿದೆ. ಯುದ್ಧವೇನಾದರೂ ಮುಂದುವರಿದರೆ ವಿಪರೀತ ವಿನಾಶವಾಗುತ್ತದೆ. ಜನರು ಮತ್ತೂ ಕಲುಷಿತರಾಗುವರು. ಈಗಾಗಲೇ ಕೊರಿಯಾದಲ್ಲಿ ಅಮಾನುಷ ಯುದ್ಧ ನಡೆದು ಸಾವಿರಾರು ನಿರಪರಾಧಿ ಜನ ನಾಶವಾಗಿದ್ದಾರೆ. ಈಗ ಶಾಂತಿರೀತಿಯಿಂದಲೇ ಮುಂದೆ ನಾವು ಸಾಗಬೇಕೆಂದು ಪಂಡಿತ ನೆಹರೂರವರು ನಿನ್ನೆ ರಾತ್ರಿ ರೇಡಿಯೋ ಭಾಷಣ ಮಾಡುತ್ತ ತಿಳಿಸಿದರು.

ತಮ್ಮ ಭಾಷಣವನ್ನು ಮುಂದುವರಿಸುತ್ತ ಚೈನಾಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ಕೊಡಬೇಕೆಂದು ಭಾರತವು ಎಷ್ಟು ಒತ್ತಾಯಪಡಿಸಿದರೂ ಯಾರೂ ಗಮನಿಸಲಿಲ್ಲ. ಆ ರಾಷ್ಟ್ರಕ್ಕೆ ತಕ್ಕ ಸ್ಥಾನವನ್ನು ಕೊಟ್ಟಿದ್ದರೆ ವಿಶ್ವದ ಇಂದಿನ ಗತಿಯೇ ಬೇರೆ ರೀತಿಯಾಗಿರುತ್ತಿತ್ತು. ೩೮ನೇ ಅಕ್ಷಾಂಶವನ್ನು ದಾಟುವಾಗಲೂ ಭಾರತವಿತ್ತ ಎಚ್ಚರಿಕೆಯನ್ನು ಯಾರೂ ಗಮನಿಸಲಿಲ್ಲ. ಗತಕಾಲದ ವಿಷಯದಿಂದೇನು ಪ್ರಯೋಜನವೇನ್ನಬಹುದು. ಅದರಿಂದ ಪಾಠಕಲಿಯಬಹುದಾಗಿದೆ. ಆದರೆ ಇಲ್ಲಿ ಪಾಠವನ್ನು ಕಲಿತಿಲ್ಲ ಅಮೆರಿಕಾ ಸೂಚನೆಗೆ ನಾವು ಮನ್ನಣೆಯಿತ್ತು ಒಪ್ಪಿಕೊಂಡರೆ ಸಂಧಾನಕ್ಕೆ ದಾರಿಯೇ ಇರುವುದಿಲ್ಲ. ಚೈನಾ ವಿಷಯದಲ್ಲಿ ಅನುಮಾನದಿಂದ ವರ್ತಿಸುತ್ತ ಬರುವುದರಿಂದ ಕಷ್ಟಪರಂಪರೆಗಳು ಹೆಚ್ಚಾಗುವುದೇ ವಿನಹ ಪ್ರಯೋಜನವಿಲ್ಲ. ಈಗ ನಾವು ಶಾಂತಿ ವಿಧಾನಗಳನ್ನೇ ಅನುಸರಿಸಿ ವಿಶ್ವಶಾಂತಿಯನ್ನು ಬೆಳಗಬೇಕೆಂದು ತಿಳಿಸಿದರು.

ಒಳದೇಶದ ವಿಷಯವಾಗಿ ಮಾತನಾಡುತ್ತಾ, ನಾವುಗಳು ಸದ್ಯದಲ್ಲೇ ಅಲಹಾಬಾದಿನಲ್ಲಿ ನಡೆಯಲಿರುವ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸೇರಲಿರುವೆವು. ನಾವುಗಳೆಲ್ಲರೂ ನಮ್ಮಲ್ಲಿರುವ ಭಿನ್ನಭಾವಗಳನ್ನು ಮರೆತು, ದೇಶದ ಪ್ರಗತಿಗಾಗಿ ಒಬ್ಬರೊಡನೊಬ್ಬರು ಸಹಕರಿಸಿ ದುಡಿಯೋಣ ಎಂದು ಹೇಳಿದರು.

ದೇವಾಲಯ ಮಸೂದೆ ತಿದ್ದುಪಡಿ

ಬೆಂಗಳೂರು ಜ. ೨೪

ನಿನ್ನೆ ಶಾಸನ ಸಭೆಯಲ್ಲಿ, ಅಂಗೀಕಾರವಾದ ಮೈಸೂರು ದೇವಾಲಯ ತಿದ್ದುಪಡಿ ಮಸೂದೆಯು ಜೈನ ದೇವಾಲಯಗಳಿಗೂ ಅನ್ವಯಿಸುವುದು

ರಾಷ್ಟ್ರೀಯ ಕ್ರೀಡಾರಂಗ

ಭಾರತದ ಮೊದಲನೇ ರಾಷ್ಟ್ರೀಯ ಕ್ರೀಡಾರಂಗದ ಉದ್ಘಾಟನೆಯನ್ನು ಭಾರತ ಪ್ರಧಾನಿ ಪಂಡಿತ ನೆಹರೂರವರು ಇಂದು ಸಂಜೆ ನಡೆಸುವರು.

ಜಮೀನ್ದಾರಿ ರದ್ದು

ಉತ್ತರ ಪ್ರದೇಶದಲ್ಲಿ ಜಮೀನ್ದಾರಿ ರದ್ದು ಮಸೂದೆಗೆ ರಾಷ್ಟ್ರಾಧ್ಯಕ್ಷರು ಅಂಗೀಕಾರ ನೀಡಿದ್ದಾರೆ ಅದು ನಾಳೆಯಿಂದ ಜಾರಿಗೆ ಬರುವುದು.

ಮಿ|| ಬೆವಿನ್ನರು ಅಸ್ವಸ್ಥ

ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ೮೦ ವರ್ಷದ ಮಿ|| ಬೆವಿನ್ನರು ನ್ಯುಮೋನಿಯಾದಿಂದ ಹಾಸಿಗೆ ಹಿಡಿದಿದ್ದಾರೆ

ಮತ್ತೊಂದು ಸಂದೇಶ

ಕೊರಿಯಾ ಯುದ್ಧ ಮುಕ್ತಾಯವಾಗುವ ವಿಷಯದಲ್ಲಿ ಚೈನಾವು ಅಮೆರಿಕಾದಲ್ಲಿರುವ ಭಾರತ ಪ್ರತಿನಿಧಿಗೆ ಮತ್ತೊಂದು ಸಂದೇಶವನ್ನು ಕಳುಹಿಸುವುದಾಗಿ ವರದಿ ಬಂದಿದೆ.

ಶ್ರೀ ಸಿ. ಆರ್‌ರ ಭಾವಚಿತ್ರ ಅನಾವರಣ

ಮೈಸೂರು ಜ. ೨೫

ಕೇಂದ್ರ ಗೃಹ ಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರ ಭಾವಚಿತ್ರವನ್ನು ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಪೌರಸಭಾ ಕಛೇರಿಯಲ್ಲಿ ಮುಂದಿನ ಮಾಹೆ ೩ನೇ ತಾ|| ಅನಾವರಣ ಮಾಡುವರೆಂದು ತಿಳಿಯಬಂದಿದೆ. ಶ್ರೀ ಕೆ. ಸತ್ಯನಾರಾಯಣರಾವ್‌ರವರು ಈ ಭಾವಚಿತ್ರವನ್ನು ಪೌರಸಭೆಗೆ ದಾನಮಾಡಿರುವರು.

ಅವಿಶ್ವಾಸ ಪತ್ರಕ್ಕೆ ರುಜು ಹಾಕಿದವರ ಸಭೆ

ಬೆಂಗಳೂರು ಜ. ೨೪

ಮುಖ್ಯ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರಿಗೆ ಸಲ್ಲಿಸಿದ ಅವಿಶ್ವಾಸ ಪತ್ರಕ್ಕೆ ರುಜುಮಾಡಿದ್ದ ಶಾಸನ ಸಭೆ ಕಾಂಗ್ರೆಸ್ ಪಕ್ಷದ ಸದಸ್ಯರು ನಿನ್ನೆ ಶ್ರೀ ಸಿದ್ದಲಿಂಗಯ್ಯನವರ ಮನೆಯಲ್ಲಿ ಸಭೆ ನಡೆಸಿದರೆಂದೂ ರುಜು ಮಾಡಿದ ಸದಸ್ಯರು ಅಸೆಂಬ್ಲಿ ಕಾರ್ಯಕಲಾಪಗಳಲ್ಲಿ ಮೌನವಾಗಿರಬೇಕೆಂದು ಪಾರ್ಟಿ ಮೀಟಿಂಗುಗಳಲ್ಲಿ ಚರ್ಚೆ ನಡೆಸಬೇಕೆಂದು ನಿರ್ಧರಿಸಲಾಯಿತೆಂದು ಗೊತ್ತಾಗಿದೆ.

ಪತ್ರಿಕೆಗೆ ರಜಾ

ರಿಪಬ್ಲಿಕ್ ದಿನಾಚರಣೆ ಪ್ರಯುಕ್ತ ನಾಳೆ ಪತ್ರಿಕೆಗೆ ರಜಾ ಕೊಡಲಾಗಿದೆ

ಐ ಜಿ ಪಿ ಮತ್ತು ಡಿ ಐ ಜಿ ಗಳಿಗೆ ರಜ ಇತ್ತ ಕಾರಣ ತಿಳಿಸಲಸಾಧ್ಯ

ಬೆಂಗಳೂರು ಜ. ೨೩

ಐ ಜಿ ಪಿ ಶ್ರೀ ಸಿ ಎಂ ಎಚ್ ರಣಜೋಧಿಸಿಂಗ್ ಮತ್ತು ಡೆಪ್ಯುಟಿ ಐ ಜಿ ಶ್ರೀ ಯು ಕೆ ಸೋಮಪ್ಪನವರಿಗೆ ಕೊಟ್ಟಿರುವ ದೀರ್ಘಕಾಲದ ರಜದ ಕಾರಣವನ್ನು ಆಡಳಿತ ದೃಷ್ಟಿಯಿಂದ ಹೊರಗೆಡಹುವುದು ಸಾಧುವಲ್ಲವೆಂದು ಈ ದಿನ ಮೈಸೂರು ಶಾಸನ ಸಭೆಯಲ್ಲಿ ಶ್ರೀ ಟಿ ರಾಮಾಚಾರ್‌ರವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ತಿಳಿಸಿದರು.

ವಿಚಾರಣೆಗಳು ನಡೆಯುವ ಸಂಬಂಧದಲ್ಲಿ ಅವರ ಪ್ರಭಾವವಿರಬಾರದೆಂದು ರಜಾ ಕೊಡಲಾಗಿದೆಯೆಂದು ಶ್ರೀ ಕಡಿದಾಳ್ ಮಂಜಪ್ಪನವರಿಗೆ ತಿಳಿಸಲಾಯಿತು

ಈ ಬಗ್ಗೆ ಲಂಚನಿರೋಧ ಶಾಖೆಯವರು ವರದಿ ಮಾಡಿರುವರೆಂದು ಶ್ರೀ ಹೆಚ್. ಸಿ ಲಿಂಗಾರೆಡ್ಡಿಯವರ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು

ನೇಪಾಳ ವಿಷಯವಾಗಿ ಪ್ರಸ್ತಾಪಿಸುತ್ತಾ, ನೇಪಾಳ ಸರ್ಕಾರವು ಮುಂದಾಲೋಚನೆಯಿಂದ ಸುಧಾರಣೆಗಳನ್ನು ತರಲು ಕಾರ್ಯಕ್ರಮವೆಸಗುತ್ತಿದೆ ತಾತ್ಕಾಲಿಕ ಸರ್ಕಾರ ಸ್ಥಾಪಿಸಿ, ರಾಜ್ಯಾಡಳಿತವನ್ನು ಸುಸೂತ್ರವಾಗಿ ನಡೆಯಿಸಿಕೊಂಡು, ಸ್ವತಂತ್ರರಾಷ್ಟ್ರವಾದ ನೇಪಾಳವು ಉತ್ತಮಸ್ಥಾನಕ್ಕೆ ಬರುವಂತೆ ಮಾಡಬೇಕಾದುದು ಅಲ್ಲಿಯ ಜನರ ಕರ್ತವ್ಯವಾಗಿದೆ. ಎಲ್ಲರೂ ಸಹಕರಿಸಿ ನಡೆದಲ್ಲಿ ನೇಪಾಳದಲ್ಲಿ ವಿಜಯವು ಖಂಡಿತ. ಪ್ರಜಾಸರ್ಕಾರವು ಸ್ಥಾಪನೆಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ತಿಳಿಸಿದರು

ಭಾರತದ ಇಂದಿನ ಆಹಾರ ಸಮಸ್ಯೆ ವಿಷಯವಾಗಿ ಮಾತನಾಡುತ್ತಾ ವಿದೇಶಗಳಿಂದ ಆಹಾರವನ್ನು ತರಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು ಮಾಡುತ್ತಲಿದ್ದೇವೆ. ಕೆಲವರಿಗೆ ಹೆಚ್ಚಿಗೆ ಆಹಾರ ಮತ್ತೆ ಕೆಲವರಿಗೆ ಸ್ವಲ್ಪ ದೊರೆಯುವುದು ನ್ಯಾಯವಲ್ಲ. ಈಗಿನ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಎಲ್ಲರೂ ಸಮಭಾಗಿಗಳಾಗಿ ಆಹಾರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ ಎಂದು ಹೇಳಿದರು.

ಥಕ್ಕರ್ ಬಾಪಾರವರ ನಿಧನದ ಬಗ್ಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸುತ್ತಾ, ಹಿಂದುಳಿದವರ, ನಿರ್ಭಾಗ್ಯವಂತರ ಮತ್ತು ಬುಡಕಟ್ಟಿನವರ ಅಭಿವೃದ್ಧಿಗಾಗಿ ವಿಶೇಷ ಸೇವೆಗೈದ ಥಕ್ಕರ್ ಬಾಪಾರವರ ನಿಧನದಿಂದ ದೇಶಕ್ಕೆ ಅಪಾರವಾದ ನಷ್ಟವುಂಟಾಗಿದೆ ಎಂದು ತಿಳಿಸಿದರು.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾ ೨೦ ಲಕ್ಷ ಟನ್ ಆಹಾರವನ್ನು ಸರಬರಾಜು ಮಾಡುವ ವಿಷಯವನ್ನು ಅಮೆರಿಕಾ ಸರಕಾರವು ಸಹಾನುಭೂತಿಯಿಂದ ಪರಿಶೀಲಿಸುತ್ತಲಿದೆಯೆಂದು ಅಮೆರಿಕಾ ಸೆಕ್ರಿಟರಿ ಆಫ್‌ಸ್ಟೇಟ್ ಮಿ|| ಡೀನ್ ಅಚಿನ್‌ಸನ್‌ರವರು ಹೇಳಿರುವರು. ಪ್ರಧಾನಿ ನೆಹರೂರವರು ಕೊರಿಯಾ ವಿಷಯದಲ್ಲಿ ಅಮೆರಿಕಾಕ್ಕೆ ಬೆಂಬಲ ನೀಡದೆ ಹೇಳಿಕೆ ಕೊಟ್ಟಿರುವುದರಿಂದ ಈ ಆಹಾರ ಸರಬರಾಜಿಗೆ ತೊಂದರೆಯಾಗಬಹುದೇ ಎಂಬ ಪ್ರಶ್ನೆಗೆ ಅವರು ಈಗ ಯಾವ ಉತ್ತರವನ್ನೂ ಕೊಡಲಾಗುವುದಿಲ್ಲವೆಂದು ತಿಳಿಸಿದರು.

ಅಮೆರಿಕಾ ಸಲಹೆಗೆ ಬೆಂಬಲ

ಚೈನಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸಬೇಕೆಂದು ಅಮೆರಿಕಾ ಇತ್ತಿರುವ ಸಲಹೆಗೆ ಫ್ರಾನ್ಸ್ ಮತ್ತು ನ್ಯೂಜಿಲೆಂಡ್ ರಾಷ್ಟ್ರಗಳು ಮಾತ್ರ ಬೆಂಬಲ ವಿತ್ತಿವೆ.

ವರ್ಗಾ

ಚಿಕ್ಕಮಗಳೂರು ವೈದ್ಯಾಧಿಕಾರಿಗಳಾದ ಶ್ರೀ ಬಿ ನಾರಾಯಣರಾಯರನ್ನು ಹಾಸನಕ್ಕೂ, ಹಾಸನದಲ್ಲಿರುವ ಶ್ರೀ ಬಿ ಸುಬ್ಬರಾಮಯ್ಯನವರನ್ನು ಚಿಕ್ಕಮಗಳೂರಿಗೂ ವರ್ಗಾಯಿಸಲಾಗಿದೆ

ರಣಜಿತ್
೨೬-೧-೫೧ ರಿಂದ ಪ್ರತಿದಿನ ೩ ಆಟಗಳು
ರಿಪಬ್ಲಿಕ್ ದಿನೋತ್ಸವದ ಸ್ಪೆಷಲ್ ಪ್ರೋಗ್ರಾಂ
ನಿಮ್ಮಿ (ಬರಸಾತ್ ಪ್ರಖ್ಯಾತಿ) ನಟಿಸಿರುವ
ಹಿಂದಿ ಚಿತ್ರ
ಜಲ್ ತೆದೀಪ್
ಬೆಳಗಿನ ಪ್ರದರ್ಶನ ೨೬-೧-೫೧ ರಿಂದ
ಮೂರು ದಿನ ಮಾತ್ರ
ಸೂರಯ್ಯ ನಟಿಸಿರುವ ನಾಟಕ್

ರಜಾ

ಬೆಂಗಳೂರು ಜ. ೨೫

ಕಾಮನ್ವೆಲ್ತ್ ಕ್ರಿಕೆಟ್ ಟೀಮಿಗೂ ಮೈಸೂರು ಸ್ಟೇಟ್ XI ಟೀಮಿಗೂ ನಡೆಯುವ ಕ್ರಿಕೆಟ್ ಪಂದ್ಯಕ್ಕಾಗಿ ಬೆಂಗಳೂರು ನಗರದಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ೨೬ ಮತ್ತು ೨೭ ನೇ ತಾರೀಖು ರಜಾ ಕೊಡಲಾಗಿದೆ.

ಚೀಣಾ ಆಕ್ರಮಣ ರಾಷ್ಟ್ರ

ಪ್ರಪಂಚ ಸಂಸ್ಥೆಯು ಚೀಣಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸಿ ಅದರ ಮೇಲೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುವ ನಿರ್ಣಯವನ್ನು ಅಮೆರಿಕಾ ಸೆನೆಟ್ ಸಭೆ ಅನುಮೋದಿಸಿದೆ ಇನ್ನೊಂದು ನಿರ್ಣಯದಲ್ಲಿ ಚೈನಾಕ್ಕೆ ಪ್ರಪಂಚ ಸಂಸ್ಥೆಯಲ್ಲಿ ಸದಸ್ಯತ್ವ ಕೊಡಕೂಡದೆಂದೂ ಒತ್ತಾಯಪಡಿಸಿದ

ರಾಣಾಗಳ ಚುನಾವಣೆ

ನೇಪಾಳದಲ್ಲಿ ಸ್ಥಾಪಿಸಲಾಗುವ ತಾತ್ಕಾಲಿಕ ಸರ್ಕಾರಕ್ಕೆ ರಾಣಾ ಸದಸ್ಯರನ್ನು ನಾಮಕರಣಮಾಡುವ ಬದಲು ಚುನಾವಣಾ ಮೂಲಕ ಆರಿಸಬೇಕೆಂದು ನೂರಕ್ಕೆ ಹೆಚ್ಚು ರಾಣಾಗಳು ನೇಪಾಳ ಮುಖ್ಯ ಮಂತ್ರಿಗೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ

ಒಲಂಪಿಯಾ
ಚಿತ್ರಮಂದಿರದಲ್ಲಿ ೨೫-೧-೫೧ರಿಂದ
ರಿಪಬ್ಲಿಕ್ ಇಂಡಿಯಾ ಫಿಲಂರವರ
“ ಅಲಕ್ ನಿರಂಜನ್ ”
ಅಥವಾ
“ ರಾಜ ಗೋಪಿಚಂದ್ ”
ಪಾತ್ರ :—ನಿರೂಪರಾಯ್, ತ್ರಿಲೋಕ ಕಪೂರ್, ದುರ್ಗಾಕೋಟೆ, ಸಪ್ರು, ಉಲ್ಲಾಸ್
ಬೆಳಗಿನ ಪ್ರದರ್ಶನ ೨೬-೧-೧೯೫೧ ರಿಂದ
ಮೂರುದಿನಗಳು ಮಾತ್ರ
ಪ್ರಕಾಶರವರ
“ ಸ್ಟೇಷನ್ ಮಾಸ್ಟರ್ ”
ರತ್ನಮಾಲ, ಪ್ರೇಮ ಅಧಿಬ್ ಸುರಯ್ಯ

ಪ್ರಭಾ ★
ತಾ|| ೨೬-೧ ೧೯೫೧ ರಿಂದ
ಪ್ರತಿದಿನ ೩ ಆಟಗಳು
ಅಮೋಘ ಪ್ರಾರಂಭ
ಶ್ರೀ ಗೋಪಾಲ ಪಿಕ್ಚರ್ಸ್‌ರವರ
★ ಅಫ್‌ಸಾನ ★
ಪಾತ್ರ :—ಅಶೋಕ್‌ಕುಮಾರ್, ವೀಣಾ, ಪ್ರಾಣ್, ಕುಲದೀಪ್, ಜೀವನ್, ಕಕ್ಕು,

ರೇಡಿಯೋ ಭಾಷಣ

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರವರು ಇಂದು ರಾತ್ರಿ ೮-೩೦ ಗಂಟೆಗೆ ದೇಶವನ್ನುದ್ದೇಶಿಸಿ ರೇಡಿಯೋ ಭಾಷಣ ಮಾಡುವರು.

ನಾಳೆ ರಾತ್ರಿ ೮-೩೫ ಗಂಟೆಗೆ ಮೈಸೂರು ಎ. ಐ. ಆರನಲ್ಲಿ, ರಿಪಬ್ಲಿಕ್ ದಿನಾಚರಣೆ ಅಂಗವಾಗಿ ಶ್ರೀಮನ್ ಮಹಾರಾಜರು ರೇಡಿಯೋ ಭಾಷಣ ಮಾಡುವರು.

ರೇಡಿಯೋ

ಎ. ಐ. ಆರ್. ಮೈಸೂರು

೪೧೦ ಮೀಟರು ೪೯ ೪೬ ಮೀಟರು

ಜನವರಿ ೨೬ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ, ೭-೨೦ ನೀಲಮ್ಮ ಕಡಾಂಬಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದುಂದುಭಿ ಮಕ್ಕಳ ಕಾರ್ಯಕ್ರಮ ೨-೦ ಸ್ವತಂತ್ರ ಗೀತೆಗಳು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಚಿಂತನವಲ್ಲಿ ರಾಮಚಂದ್ರರಾವ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಭೇರಿ. ಸ್ತ್ರೀಯರ ಕಾರ್ಯಕ್ರಮ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ರಾಷ್ಟ್ರೀಯ ಗೀತೆಗಳು (ಹಿಂದಿ) ೭-೧೫ ಕೆ. ಎಸ್. ನಾರಾಯಣಯ್ಯಂಗಾರ್ (ಗೋಟುವಾದ್ಯ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ಭಾಷಣ. ೮-೧೫ ನೀಲಮ್ಮ ಕಡಾಂಬಿ (ಸಂಗೀತ) ೮-೩೦ ದೆಹಲಿಯ ಕಾರ್ಯಕ್ರಮ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕಟ್ಟುವೆವು ನಾವು (ಕನ್ನಡಪದ್ಯ) ೧೦-೦ ಮುಕ್ತಾಯ.

ಶನಿವಾರ ಜನವರಿ ೨೭

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ ೭ ೨೦ ತ್ಯಾಗರಾಜಯೋಗವೈಭವಂ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಮುಖವೀಣೆ ೧ ೪೫ ಎಸ್. ಆರ್. ತುಂಗ (ಕನ್ನಡ ಗೀತೆಗಳು) ೨-೦ ಬಾಲಜಗತ್ ೨ ೩೦ ಮುಕ್ತಾಯ.

ಸಂಜೆ ೫-೩೦ ಜಿ. ಎನ್. ಗಣೇಶಶಾಸ್ತ್ರಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಚಂಬೆ ವೈದ್ಯನಾಥಭಾಗವತರು (ರಿ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ದಕ್ಷಿಣದ ಗಾನಯೋಗಿಗಳು ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ತ್ಯಾಗರಾಜ ದಿನೋತ್ಸವ ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೯—೧—೧೯೫೧ನೇ ಸೋಮವಾರ [ಸಂಚಿಕೆ ೧೨೩

ಅಮೆರಿಕಾದಿಂದ ಭಾರತಕ್ಕೆ ಆಹಾರ ಸರಬರಾಜು

ಕಾಂಗ್ರೆಸ್‌ನಲ್ಲಿ ಭಾರತ ವಿದೇಶಾಂಗನೀತಿಯ ವಿಷಯದಲ್ಲಿ ತೀವ್ರ ಚರ್ಚೆಯ ಸಂಭವ

ಇತ್ತೀಚೆಗೆ ಭಾರತ ಪ್ರಧಾನಿ ನೆಹರೂರವರು ಕೊರಿಯಾ ಯುದ್ಧ ನೀತಿಯಲ್ಲಿ ಅಮೆರಿಕಾಕ್ಕೆ ಬೆಂಬಲವನ್ನು ಕೊಡುವ ವಿರುದ್ಧ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ ಭಾರತಕ್ಕೆ ಅಮೆರಿಕಾವು ೨೦ ಲಕ್ಷ ಟನ್ ಆಹಾರ ಧಾನ್ಯವನ್ನು ಕೊಡುವ ವಿಷಯದಲ್ಲಿ ಅಮೆರಿಕಾ ಸೆನೆಟ್ ಸಭೆಯಲ್ಲಿ ಭಾರತದ ವಿದೇಶಾಂಗ ನೀತಿಯ ಬಗ್ಗೆ ತೀವ್ರ ಚರ್ಚೆಯಾಗುವುದೆಂದು ಹೇಳಲಾಗಿದೆ.

ಚೈನಾವನ್ನು ಆಕ್ರಮಣಕಾರಿ ಎಂಬ ಅಮೆರಿಕಾ ನೀತಿಯನ್ನು ಭಾರತ ಪ್ರಧಾನಿ ನೆಹರೂ ವಿರೋಧಿಸುತ್ತ ಮಹತ್ವದ್ಯೋತಕವನ್ನಾಡುತ್ತಲಿರುವರು ಎಂದು ಸೆನೆಟರ್ ವಾಲ್ಟರ್ ಜಾರ್ಜ್‌ರವರು ಹೇಳುತ್ತಾ, ಇಂದಿನ ಪರಿಸ್ಥಿತಿಯಲ್ಲಿ ಭಾರತಕ್ಕೆ ಆಹಾರ ಸರಬರಾಜನ್ನು ಮಾಡುವ ವಿಷಯದಲ್ಲಿ ತಾವು ಯಾವ ಗಮನವನ್ನೂ ಕೊಡುವುದಿಲ್ಲವೆಂದು ತಿಳಿಸಿರುವರು.

ಲೋಕರಾಜ್ಯ ದಿನಾಚರಣೆ

ಮೈಸೂರು ಜ ೨೬

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ರಿಪಬ್ಲಿಕ್ ದಿನಾಚರಣೆಯ ಅಂಗವಾಗಿ ಬೆಳಗ್ಗೆ ೬ ಗಂಟೆಯಲ್ಲಿ ಶ್ರೀ ವಿ. ಕೆ. ಗೌಡ ಬಿ.ಎ. ಎಲ್.ಎಲ್.ಬಿ. ರವರಿಂದ ರಾಷ್ಟ್ರಧ್ವಜಾರೋಹಣವಾದನಂತರ ಸಂಘದ ಅಧ್ಯಕ್ಷರಾದ ಶ್ರೀ ಆರ್. ವಾಸುದೇವಮೂರ್ತಿ (ಬಿಕಾಂ) ರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಪ್ರಾರಂಭದಲ್ಲಿ ಶ್ರೀ ಟಿ ಎಸ್. ಸುಬ್ಬಣ್ಣನವರು ಪರಿಚಯ ಮತ್ತು ಸ್ವಾಗತ ಭಾಷಣಮಾಡಿದನಂತರ ವಿ. ಕೆ. ಗೌಡರವರು ಮಾತನಾಡಿ ಭಾರತದ ಇಂದಿನ ಸಮಸ್ಯೆಗಳನ್ನು ಬಗೆಹರಿಸಲು ಜಾತ್ಯಾತೀತವಾದ ರಾಷ್ಟ್ರದಿಂದಲೇ ಸಾಧ್ಯವೆಂದು ತಿಳಿಸಿದರು, ನಂತರ ಅಧ್ಯಕ್ಷರು ಮಾತನಾಡಿ ಜಾತ್ಯಾತೀತವಾದ ರಾಷ್ಟ್ರವನ್ನು ಸ್ಥಾಪಿಸುವುದೇ ನಮ್ಮ ಧ್ಯೇಯ ಅದಕ್ಕೆ ಎಲ್ಲರೂ ಇಂದೇ ಪಣತೊಟ್ಟು ನಿಲ್ಲಬೇಕೆಂದು ತಿಳಿಸಿದರು. ನಂತರ ಶ್ರೀ ಮಹಮದ್ ಬಾಷಾರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು. ಭಾರತ ಸೇವಾದಳದವರು ಭಾಗವಹಿಸಿದ್ದರು.

ಮೈಸೂರು ಭಾರತ ಸೇವಾದಳದ ಸರ್ವೋದಯ ಮತ್ತು ಹರ್ಡೀಕರ್ ಶಾಖೆಗಳವರು ೨೯ ನೇ ತಾರೀಖಿನಲ್ಲಿ ಕೇಂದ್ರನಾಯಕ್ ಬಿ. ಎ. ನಾರಾಯಣಸ್ವಾಮಿ ಮಾಲೂರುರವರ ನಾಯಕತ್ವದಲ್ಲಿ ನಗರದಲ್ಲೆಲ್ಲಾ ಪ್ರಭಾತಭೇರಿ ನಡೆಸಿದರು. ನಂತರ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿಯೂ ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಡೆದ ಧ್ವಜಾರೋಹಣದಲ್ಲಿಯೂ ಭಾಗ ವಹಿಸಿ ಮಾಜಿ ವಿದ್ಯಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಾಲೇಜಿನ ಆಶ್ರಯದಲ್ಲಿ ಧ್ವಜಾರೋಹಣ ಮಾಡಿದರು. ಸಾಯಂಕಾಲ ಶ್ರೀ ಬಿ. ಎ. ನಾರಾಯಣಸ್ವಾಮಿ ಮಾಲೂರುರವರು ಅಧ್ಯಕ್ಷತೆಯಲ್ಲಿ ಸೇವಾದಳ ಸಭೆ ಸೇರಿತ್ತು. ಶಿಕ್ಷಕರಾದ ಶ್ರೀ ನರಸಿಂಹಯ್ಯ ಮತ್ತು ನಾರಾಯಣ್‌ರವರು ಭಾರತ ಗಣರಾಜ್ಯದ ಬಗ್ಗೆ ಭಾಷಣ ಮಾಡಿದರು. ಸಾಯಂಕಾಲ ಧ್ವಜಾವರೋಹಣದ ನಂತರ ಕಾರ್ಯಕ್ರಮ ಮುಕ್ತಾಯವಾಯಿತು.

ಮುಖ್ಯ ಮಂತ್ರಿಗಳ ಸತ್ಕಾರಕೂಟ

ಬೆಂಗಳೂರು ಜ. ೨೮

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಸಂಜೆ ಕಾರ್ಲ್‌ಟನ್ ಭವನದಲ್ಲಿ ಕಾಮನ್‌ವೆಲ್ತ್ ಕ್ರಿಕೆಟ್ ಟೀಮಿನವರ ಹಾಗೂ, ಅಖಿಲ ಭಾರತ ಮಹಿಳಾ ಸಮ್ಮೇಳನದ ಸ್ಥಾಯೀಸಮಿತಿ ಸದಸ್ಯರ ಗೌರವಾರ್ಥವಾಗಿ ಸತ್ಕಾರಕೂಟವೊಂದನ್ನೇರ್ಪಡಿಸಿದ್ದರು.

ಚೈನಾದಲ್ಲಿ ನಷ್ಟ

ಕೊರಿಯಾ ಯುದ್ಧರಂಗದಲ್ಲಿ ಇದೇ ಮಾಹೆ ೨೫ನೇ ತಾ॥ನಿಂದ ಇಲ್ಲಿಯವರೆಗೆ ೪೦,೦೦೦ ಸೈನಿಕರು ಮಡಿದು, ೧ ೨೦,೦೦೦ ಸೈನಿಕರು ಗಾಯಹೊಂದಿರುವರೆಂದು ಅಂದಾಜು ಮಾಡಲಾಗಿದೆ

ಫ್ರೆಂಚ್ ಪ್ರಧಾನಿ-ಟ್ರೂಮನ್ ಭೇಟಿ

ಫ್ರೆಂಚ್ ಪ್ರಧಾನಿ ಮಿ॥ ಪ್ಲೆವಾನ್‌ರವರಿಗೂ ಅಧ್ಯಕ್ಷ ಟ್ರೂಮನ್ನರಿಗೂ ಇಂದು ಭೇಟಿ ನಡೆಯಲಿದೆ. ಅಂತರ ರಾಷ್ಟ್ರೀಯ ಪರಿಸ್ಥಿತಿಯ ವಿಷಯವಲ್ಲದೆ ಉಭಯರಾಷ್ಟ್ರಗಳ ಸೈನ್ಯ, ಆರ್ಥಿಕ ಮತ್ತು ಸೈನ್ಯ ಸಾಮಗ್ರಿಗಳ ವಿಷಯದಲ್ಲಿ ಚರ್ಚೆ ನಡೆಯಲಿದೆಯೆಂದು ತಿಳಿಯಬರುತ್ತದೆ.

ರೇಡಿಯೋ ಭಾಷಣ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ರಾತ್ರಿ, ಮೈಸೂರು ಎ.ಐ ಆರ್ ರೇಡಿಯೋ ಕೇಂದ್ರದಲ್ಲಿ, ಸರ್ವೋದಯ ವಿಷಯವಾಗಿ ಮಾತನಾಡಲಿರುವರು.

ಅಖಿಲಭಾರತ ಮಹಿಳಾ ಸಮ್ಮೇಳನ

ಬೆಂಗಳೂರು ಜ ೨೮

ಅಖಿಲಭಾರತ ಮಹಿಳಾ ಸಮ್ಮೇಳನವು ನಿನ್ನೆದಿನ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಪ್ರಧಾನಿ ನೆಹರೂ, ಮೈಸೂರು ಮಹಾರಾಜರ ಸಮ್ಮೇಳನಕ್ಕೆ ಯಶಸ್ಸನ್ನು ಕೋರಿ ಶುಭಸಂದೇಶಗಳನ್ನು ಕಳುಹಿಸಿದ್ದರು. ಶ್ರೀಮತಿ ಹಂಸಮಹತಾರವರು ಹಿಂದೂ ಧಾರ್ಮಿಕ ಮಸೂದೆಗೆ ಬೆಂಬಲವಿತ್ತು ಮಾತನಾಡಿದರು.

ಭೇಟಿ ಮತ್ತು ಸತ್ಕಾರ

ಕೃಷ್ಣರಾಜಸಾಗರ ಜ. ೨೮

ಅಂತರ ರಾಷ್ಟ್ರೀಯ ಪವರ್ ಸಮ್ಮೇಳನ ಮುಕ್ತಾಯ ಅಧಿವೇಶನವು ಮೈಸೂರಿನಲ್ಲಿ ಫೆಬ್ರವರಿ ಒಂದನೇ ತಾರೀಖು ಕ್ರಾಫರ್ಡ್ ಹಾಲಿನಲ್ಲಿ ಬೆಳಗ್ಗೆ ೧೦-೩೦ ಗಂಟೆಯಿಂದ ೧೨ ಗಂಟೆವರೆಗೆ ನಡೆಯುವುದು. ಶ್ರೀಮನ್ಮಹಾರಾಜರು ಭಾಷಣ ಮಾಡುವರು. ಅಂದು ಸಂಜೆ ೫ ಗಂಟೆಗೆ ಮೈಸೂರು ಚಾಮುಂಡಿ ಜಮಖಾನದಲ್ಲಿ ಅತಿಥಿಗಳ ಗೌರವಾರ್ಥವಾಗಿ ಶ್ರೀಮನ್ಮಹಾರಾಜರು ಸತ್ಕಾರಕೂಟವನ್ನು ಏರ್ಪಡಿಸಿರುವರು. ಅದೇ ಸಂಜೆ ೫-೩೦ ಗಂಟೆಗೆ ಸಮ್ಮೇಳನ ಪ್ರತಿನಿಧಿಗಳೆಲ್ಲರೂ ಕೃಷ್ಣರಾಜನಗರಕ್ಕೆ ಭೇಟಿಯಿತ್ತು, ಇಂಜನಿಯರಿಂಗ್ ಕೆಲಸಗಳನ್ನೆಲ್ಲಾ ಪರಿಶೀಲಿಸಿ,, ಅಲ್ಲಿಯೇ ರಾತ್ರಿ ಏರ್ಪಡಿಸಿರುವ ಬ್ಯಾಂಕ್ವೆಟ್‌ನಲ್ಲಿ ಭಾಗವಹಿಸುವರು. ಆ ಸಮಯದಲ್ಲಿ ಮೈಸೂರಿನ ನಟರಾದ ಶ್ರೀ ಎಸ್.ಎನ್. ಸ್ವಾಮಿ ಪಾರ್ಟಿಯವರಿಂದ ನೃತ್ಯವು ನಡೆಯುವುದು.

ಅಖಿಲಭಾರತ ಕಾಂಗ್ರೆಸ್ ಮಹಾಸಭೆ

ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಇಂದಿನಿಂದ ಅಹಮದಾಬಾದಿನಲ್ಲಿ ಪ್ರಾರಂಭವಾಯಿತು. ಮೂರುದಿನ ಅಧಿವೇಶನವು ನಡೆಯುವುದು.

ಉದಾರ ದಾನ

ಮೈಸೂರುನಗರದ ಧರ್ಮಪರಾಯಿಣಿ ಶ್ರೀಮತಿ ದೇವಿ ನಾಗಮ್ಮನವರು ತಮ್ಮ ಹೆಸರಿನಲ್ಲಿ ಕಟ್ಟಡ ಕಟ್ಟಿಸಲು ಹನ್ನೆರಡು ಸಹಸ್ರ ರೂಪಾಯಿಗಳನ್ನು ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ದಾನಮಾಡಿರುತ್ತಾರೆ.

ಅಕಸ್ಮಾತ್ ಬೆಂಕಿತಗುಲಿ ಬಸ್ ಭಸ್ಮ

ಬೆಂಗಳೂರಿನಿಂದ ಕೋಲಾರ ಮಾರ್ಗವಾಗಿ ತಾಯಲೂರಿಗೆ ಹೋಗುವ ಸರ್ಕಾರೀ ರೋಡ್ ಟ್ರಾನ್ಸ್‌ಪೋರ್ಟ್ ಬಸ್ ೫೪ನೇ ತಾ॥ ಶುಕ್ರವಾರ ರಾತ್ರಿ ಸುಮಾರು ೯-೩೦ ಗಂಟೆಗೆ ಕೋಲಾರದ ಊರ ಹೊರಗಣ (ಬೆಂಗಳೂರು ರಸ್ತೆ) ಟೋಲ್‌ಗೇಟ್ ಬಳಿ ಆಕಸ್ಮಿಕವಾಗಿ ಬೆಂಕಿತಗುಲಿ ಭಸ್ಮವಾದ ಘಟನೆ ವರದಿಯಾಗಿದೆ. ಪೆಟ್ರೋಲ್ ತೊಂದರೆಯಿಂದ ಟೋಲ್‌ಗೇಟ್ ಬಳಿ ನಿಲ್ಲಿಸಿ ಡ್ರೈವರು, ಮೋಟಾರ್ ಕೆಳಗೆ ಮಲಗಿ, ಸೀಮೆಯೆಣ್ಣೆಯ ಲ್ಯಾಂಟ್ರನ್ ಹಿಡಿದುಕೊಂಡು ರಿಪೇರಿಗೆ ಯತ್ನಿಸಿದಾಗ ಟ್ಯಾಂಕಿನಿಂದ ಸೋರುತ್ತಿದ್ದ ಪೆಟ್ರೋಲು ದೀಪದಮೇಲೆ ಬಿದ್ದು ಭಗ್ಗನೆ ಬೆಂಕಿ ಹೊತ್ತಿಕೊಂಡು ಕ್ಷಣಮಾತ್ರದಲ್ಲೇ ಬಸ್ಸೆಲ್ಲಾ ಹತ್ತಿಕೊಂಡು ಉರಿಯಿತೆಂದು ಸುಮಾರು ೧ ಗಂಟೆ ಉರಿದನಂತರ ಬಸ್ಸೆಲ್ಲಾ ಬಸ್ಮವಾಗಿ ಮುಂದಿನ ಎರಡು ಚಕ್ರಗಳು ಮಾತ್ರ ಉಳಿದಿವೆಯೆಂದು ವರದಿಯಾಗಿದೆ ಯಾರಿಗೂ ಏನೂ ಅಪಾಯವಾಗಿಲ್ಲ.

ಕಂಪನಿಗಳ ಕಾನೂನು ವಿಚಾರಣಾಸಮಿತಿ ಆಗಮನ

ಕೇಂದ್ರ ಸರ್ಕಾರ ರಚಿಸಿರುವ ಕಂಪೆನಿಗಳ ಕಾನೂನು ವಿಚಾರಣಾ ಸಮಿತಿಯು ಸೋಮವಾರ ನಗರಕ್ಕಾಗಮಿಸಿ ಕಂಪೆನಿಗಳ ಶಾಸನ ಮತ್ತಿತರ ವಿಷಯಗಳ ಬಗ್ಗೆ ಸರ್ಕಾರ ಮತ್ತು ವ್ಯಾಪಾರಿಗಳೊಂದಿಗೆ ಮಾತುಕತೆ ನಡೆಸುವುದು ಮೈಸೂರು ವಾಣಿಜ್ಯ ಸಂಸ್ಥೆಯು ಮಂಗಳವಾರ ಸಮಿತಿಯನ್ನು ಸತ್ಕರಿಸಿ ಮನವಿ ಪತ್ರವನ್ನರ್ಪಿಸುವುದು.

ಸಮಾಚಾರ

ಸೋಮವಾರ ತಾರೀಖು ೨೯

ಸರ್ವೋದಯ ದಿನ

ಮಹಾತ್ಮ ಗಾಂಧಿಯವರು ಅಪಮೃತ್ಯುಗೀಡಾಗಿ ನಾಳೆಗೆ ಮೂರು ವರ್ಷಗಳಾಯಿತು. ಅವರು ನಮ್ಮನ್ನಗಲಿ ಹೋದಾರಭ್ಯ ಇಲ್ಲಿಯವರೆಗೆ ಪ್ರಪಂಚದ ಪರಿಸ್ಥಿತಿಯು ವಿಶೇಷವಾಗಿ ಬದಲಾವಣೆಗಳಿಂದ ಅಂಧಕಾರಮಯವಾಗಿ ಕಾಣುತ್ತಲಿದೆ. ಎಲ್ಲೆಡೆಯಲ್ಲಿಯೂ ಯುದ್ಧ ಭೀತಿಯು ಕಾಣಬರುತ್ತಲಿದೆ ಅದನ್ನು ತಡೆಗಟ್ಟಿ ಪ್ರಪಂಚದಲ್ಲಿ ಶಾಂತಿ ನೆಲಸುವಂತೆ ನಮ್ಮ ನಾಯಕರು ಸರ್ವಪ್ರಯತ್ನ ಮಾಡುತ್ತಲಿರುವರು.

ಮಹಾತ್ಮಾಜೀಯವರ ಸತ್ಯ, ಅಹಿಂಸೆ, ನಿಸ್ವಾರ್ಥ ತ್ಯಾಗಬಲದಿಂದ ಭಾರತವು ಸ್ವಾತಂತ್ರ್ಯ ಗಳಿಸಿತು. ದೇಶದಲ್ಲಿ ಅನೇಕ ಜಟಿಲವಾದ ಪ್ರಶ್ನೆಗಳು ನಿತ್ಯವೂ ಉದ್ಭವಿಸುತ್ತಲಿವೆ. ಅವುಗಳನ್ನು ನಮ್ಮ ನಾಯಕರು ಧೈರ್ಯದಿಂದ ಎದುರಿಸಿ, ಜನತೆಗೆ ಕೈಲಾದಷ್ಟು ಸೌಕರ್ಯಗಳನ್ನು ಕಲ್ಪಿಸಲು ದುಡಿಯುತ್ತಲಿರುವರು. ಆದರೆ ಮಹಾತ್ಮರ ಹಿತನುಡಿಗಳನ್ನು ಮರೆತ ಕೆಲವು ಸ್ವಾರ್ಥಿಗಳ ಚಟುವಟಿಕೆಯಿಂದ ದೇಶ, ಸಂಸ್ಥೆ ಕಲುಷಿತವಾಗುತ್ತಲಿದೆ. ಇದೇ ರೀತಿಯಾಗಿ ಸ್ಥಿತಿಯು ಮುಂದುವರಿದರೆ ಮಹಾತ್ಮರಧ್ಯೇಯಗಳೊಂದೇ ಅಲ್ಲ, ಅವರ ಹೆಸರನ್ನೂ ಮರೆಯುವ ಸಂದರ್ಭಗಳು ಒದಗಬಹುದು.

ಕಾಂಗ್ರೆಸ್ ನಾಯಕರು, ಅಧಿಕಾರಿಗಳು, ಸಾರ್ವಜನಿಕರು ಎಲ್ಲರೂ ಮಹಾತ್ಮರು ಹಾಕಿಕೊಟ್ಟಿರುವ ಮಾರ್ಗವನ್ನು ಅವಲಂಬಿಸಿ, ತಮ್ಮಲ್ಲಿ ಹುಟ್ಟಿರುವ ಭೇದಭಾವವನ್ನು ತೊರೆದು ದೇಶದ ಶಾಂತಿರಕ್ಷಣೆಗೆ ದುಡಿಯುತ್ತೇವೆಂದು ಭಾರತೀಯರೆಲ್ಲರೂ ಮಹಾತ್ಮಜಿಯವರ ಆದರ್ಶಕ್ಕಾಗಿ ಆತ್ಮಸಮರ್ಪಣೆಮಾಡಿ ಕಾರ್ಯೋನ್ಮುಖರಾಗುತ್ತೇವೆಂದು ಇನ್ನು ಮುಂದಾದರೂ ಕಂಕಣಬದ್ಧರಾಗಲಿ.

ಕೃಷ್ಣರಾಜಸಾಗರಕ್ಕೆ ಸಾರ್ವಜನಿಕರಿಗೆ ಪ್ರವೇಶವಿಲ್ಲ

ಕೃಷ್ಣರಾಜಸಾಗರ ಜ. ೨೮

ಕೃಷ್ಣಾರಾಜಸಾಗರಕ್ಕೆ ಅಂತರರಾಷ್ಟ್ರೀಯ ಪವರ್ ಸಮ್ಮೇಳನದ ಸುಮಾರು ೩೦೦ ಪ್ರತಿನಿಧಿಗಳು ಫೆಬ್ರವರಿ ಒಂದನೇ ತಾರೀಖು ಸಂಜೆ ಭೇಟಿಯಾಯುವುದರಿಂದಲೂ ಅದೇ ರಾತ್ರಿ ಅವರಿಗಾಗಿ ಬೃಂದಾವನದಲ್ಲಿ ಬ್ಯಾಂಕ್ವೆಟ್ ಏರ್ಪಡಿಸಿರುವುದರಿಂದಲೂ ಅಂದು ಮಧ್ಯಾನ್ಹ ೧೨-೩೦ ಗಂಟೆಯಿಂದ ಸಾರ್ವಜನಿಕರಿಗೆ ಕೃಷ್ಣರಾಜಸಾಗರಕ್ಕೆ ಪ್ರವೇಶವಿಲ್ಲವೆಂದು ತಿಳಿಯುಬರುತ್ತದೆ

ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಫೆಬ್ರವರಿ ೬ ನೇ ತಾರೀಖು ಬ್ಯಾಂಕ್ವೆಟ್ ನಡೆಯುವುದರಿಂದ ಆದಿನವೂ ಸಾರ್ವಜನಿಕರಿಗೆ ೧೨ ಗಂಟೆಯ ಮೇಲೆ ಕೃಷ್ಣರಾಜಸಾಗರಕ್ಕೆ ಪ್ರವೇಶವಿಲ್ಲ.

ಸರ್ವೋದಯ ಪಕ್ಷ

ಮೈಸೂರು ಜ ೨೯

ಮಹಾತ್ಮ ಗಾಂಧಿಯವರ ಮೂರನೇ ವರ್ಷಾಬ್ದೀಕದ ಸಂದರ್ಭದಲ್ಲಿ ಸರ್ವೋದಯ ಪಕ್ಷವು ಪಶ್ಚಿಮವಾಹಿನಿಯಲ್ಲಿ ನಾಳೆಯಿಂದ ಫೆಬ್ರವರಿ ೧೨ನೇ ತಾರೀಖಿನವರೆಗೆ ನಡೆಯುವುದು ಈ ಸರ್ವೋದಯ ಪಕ್ಷದ ಕಾರ್ಯಕ್ರಮ.

ಜನವರಿ ೩೦ನೇ ತಾರೀಖು ಮಂಗಳವಾರ ಬೆಳಗ್ಗೆ ೯ ಗಂಟೆಗೆ ಶ್ರೀ ಜೆ ಸಿ ಕುಮಾರಪ್ಪನವರಿಂದ ಉದ್ಘಾಟನೆ, ಶ್ರೀ ದಾದಾಧರ್ಮಾಧಿಕಾರಿಯವರಿಂದ ವಸ್ತ್ರ ಸ್ವಾವಲಂಬಲನ ಶಿಕ್ಷಣ ಮತ್ತು ಶ್ರೀ ಮಥುರಾದಾಸ್ ಪುರುಷೋತ್ತಮ್‌ರವರಿಂದ ಸರ್ವೋದಯ ಪ್ರದರ್ಶನ ಪ್ರಾರಂಭ ಸಂಜೆ ೪ ರಿಂದ ೪-೪೫ ರ ವರೆಗೆ ಸಾಮೂಹಿಕ ಸೂತ್ರಯಜ್ಞ ೫ ಗಂಟೆಗೆ ಪ್ರಾರ್ಥನಾ ಮತ್ತು ಅಖಂ[illegible] ಪ್ರಾರಂಭ ಫೆಬ್ರವರಿ ೨ ನೇ ಶುಕ್ರವಾರ ಬೆಳಗ್ಗೆ ೮-೩೦ ಗೆ ಶ್ರೀಮತಿ ಯಶೋಧರ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮಹಿಳಾ ಸಮ್ಮೇಳನ, ಫೆಬ್ರವರಿ ೪ ನೇ ಭಾನುವಾರ ಬೆಳಗ್ಗೆ ೮-೩೦ ಗೆ ವಿದ್ಯಾರ್ಥಿ ಸಮ್ಮೇಳನ ಫೆಬ್ರವರಿ ೯ ನೇ ಶುಕ್ರವಾರ ಬೆಳಗ್ಗೆ ೮ ೩೦ ಶ್ರೀ ಟುರ್ಲಿ ಬಿಂದು ಮಾಧವರವರ ಅಧ್ಯಕ್ಷತೆಯಲ್ಲಿ ಗಾಂಧಿ ಸಾಹಿತ್ಯ ಸಮ್ಮೇಳನ ಫೆಬ್ರವರಿ ೧೦ ಮತ್ತು ೧೧ ಶನಿವಾರ ಮತ್ತು ಭಾನುವಾರ ಬೆಳಗ್ಗೆ ೮-೩೦ ಗಂಟೆಗೆ ಸರ್ವೋದಯ ಸಮ್ಮೇಳನ ಫೆಬ್ರವರಿ ೧೨ ನೇ ಸೋಮವಾರ ಸರ್ವೋದಯ ಮೇಳ.

ಜಾತ್ರೆಗೆ ಹೋಗುವವರಿಗೆ ರೇಷನ್ ಇಲ್ಲ

ಬೆಂಗಳೂರು ಜ ೨೭

ವೈರಮುಡಿ ಜಾತ್ರೆ, ಹೇಮಗಿರಿ, ಕೋಟಿಬೆಟ್ಟ ರಥೋತ್ಸವ ಮುಂತಾದುವುಗಳಿಗೆ ಹೋಗುವವರಿಗೆ, ಈಗಿನ ಆಹಾರ ಪರಿಸ್ಥಿತಿಯಲ್ಲಿ ರೇಷನ್ ಪದಾರ್ಥಗಳನ್ನು ಕೊಡಲು ಸಾಧ್ಯವಿಲ್ಲವೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಬೆಲ್ಲದ ಹತೋಟಿ

ಬೆಂಗಳೂರು ಜ ೨೭

ಸಂಸ್ಥಾನ ಹೊರಗೂ, ಒಳಗೂ ಬೆಲ್ಲದ ರವಾನೆಗೆ, ಮಂಡ್ಯ ಜಿಲ್ಲೆಯಲ್ಲಿ ವಿನಹ ಇತರ ಪ್ರದೇಶಗಳಲ್ಲಿ ಯಾವ ರೀತಿಯಾದ ನಿರ್ಬಂಧವೂ ಇಲ್ಲವೆಂದು ಸರ್ಕಾರ ಪ್ರಕಟಣೆ ಹೊರಬಿದ್ದಿವೆ ಆದರೆ ಸರ್ಕಾರದವರು ನಿಗದಿ ಮಾಡಿರುವ ಬೆಲೆಗೆ ಮಾತ್ರ ಮಾರಬೇಕಾಗಿದೆ.

ರಾಜರ ಜಮೀನೆಲ್ಲಾ ರೈತರಿಗೆ

ಟೆಹರಾನಿನಲ್ಲಿರುವ ಇರಾನ್ ಷಾರವರು ತಮ್ಮ ಸ್ವಂತ ಜಮೀನುಗಳನ್ನೆಲ್ಲಾ ರೈತರಿಗೆ ಮಾರಲು ನಿರ್ಧರಿಸಿ ಒಂದು ಘೋಷಣೆಯನ್ನು ಹೊರಡಿಸಿರುವರು.

ಉಪನ್ಯಾಸ

ಮೈಸೂರು ಜ. ೨೮

ರಾಮಾಯಣ ವಿಚಾರದಲ್ಲಿ ವಿದ್ಯಾವಾಚಸ್ಪತಿ ಶ್ರೀ ದೂರಸ್ವಾಮಿಶಾಸ್ತ್ರಿಗಳು ಇದೇ ಮಾಹೆ ೨೯ನೇ ತಾರೀಖಿನಿಂದ ೫ ದಿನಗಳು ಸದ್ವಿದ್ಯಾ ಪಾಠಶಾಲೆಯಲ್ಲಿ ಪ್ರತಿದಿನ ಸಂಜೆ ೬ ಗಂಟೆಗೆ ಉಪನ್ಯಾಸ ಮಾಡುವರು ಸಾರ್ವಜನಿಕರಿಗೆ ಆಹ್ವಾನವುಂಟು.

ಸಪ್ತರಾಷ್ಟ್ರ ಸಮ್ಮೇಳನ

ಕೊರಿಯಾ ಯುದ್ಧ ಸಮಾಪ್ತಿ ವಿಷಯದಲ್ಲಿ ಸಪ್ತರಾಷ್ಟ್ರ ಸಂಘವನ್ನು ಸ್ಥಾಪಿಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುವ ವಿಷಯದಲ್ಲಿ ರಾಜಕೀಯ ಸಮಿತಿಯಲ್ಲಿ ಇಂದೂ ಚರ್ಚೆ ನಡೆಯಲಿದೆ

ಸಚಿವರ ಭೇಟಿ

ಕೃಷ್ಣರಾಜಸಾಗರ ಜ- ೨೮

ಮೈಸೂರಿನಲ್ಲಿ ಫೆಬ್ರವರಿ ಮೊದಲನೇ ವಾರದಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಪವರ್ ಸಮ್ಮೇಳನ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ ಸಮ್ಮೇಳನದ ಪ್ರತಿನಿಧಿಗಳ ಬಿಡಾರ ಮತ್ತು ಸತ್ಕಾರ ಸಂದರ್ಭದಲ್ಲಿ ನಡೆಯುತ್ತಲಿರುವ ಏರ್ಪಾಡುಗಳನ್ನು ಪರಿಶೀಲಿಸಲು ನಿನ್ನೆ ಸಂಜೆ ೬ ಗಂಟೆಗೆ ನ್ಯಾಯಾಂಗ ಸಚಿವ ಶ್ರೀ ಕೆ. ಟಿ ಭಾಷ್ಯಂರವರು ಕೃಷ್ಣರಾಜಸಾಗರ ಬೃಂದಾವನ ತೋಟ ಮತ್ತು ಹೋಟೇಲುಗಳಿಗೆ ಭೇಟಿಯಿತ್ತು ಕೆಲಸಕಾರ್ಯಗಳನ್ನು ಪರಿಶೀಲಿಸಿದರು ಅವರು ನೇರವಾಗಿ ಬೆಂಗಳೂರಿನಿಂದ ಒಂದು ಪರಿಶೀಲನೆ ನಡೆಮೊಡನೆಯೇ ಬೆಂಗಳೂರಿಗೆ ಹಿಂತಿರುಗಿದರು ಕೃಷ್ಣರಾಜಸಾಗರದ ಎಗ್ಜಿಕ್ಯುಟಿವ್ ಇಂಜನಿಯರ್ ಶ್ರೀ ವಿಜಯಧ್ವಜರಾಯರು, ಇತರ ಇಂಜನಿಯರ್ ಇಲಾಖಾಧಿಕಾರಿಗಳು ಸ್ಪೆಷಲ್ ಆಫೀಸರ್ ಶ್ರೀ ಮ್ಯಾಥನ್ ಮುಂತಾದವರೆಲ್ಲರೂ ಹಾಜರಿದ್ದು, ಅಲ್ಲಿಯ ಏರ್ಪಾಡುಗಳನ್ನು ವಿವರಿಸಿದರು.

ದೀಪೋತ್ಸವವನ್ನು ಇನ್ನೂ ಹೆಚ್ಚಿಗೆ ಆಕರ್ಷಣೀಯವಾಗಿ ಮಾಡಲು ಕೆಲವು ಹೊಸ ಏರ್ಪಾಡುಗಳನ್ನು ಮಾಡುವ ವಿಷಯದಲ್ಲಿ ಸಚಿವರು ಸಲಹೆಯಿತ್ತರು.

★ ರಣಜಿತ್
೨೬-೧-೫೧ ರಿಂದ ಪ್ರತಿದಿನ ೩ ಆಟಗಳು
ರಿಪಬ್ಲಿಕ್ ದಿನೋತ್ಸವದ ಸ್ಪೆಷಲ್ ಪ್ರೋಗ್ರಾಂ
ನಿಮ್ಮಿ (ಬರಸಾತ್ ಪ್ರಖ್ಯಾತಿ) ನಟಿಸಿರುವ
ಹಿಂದಿ ಚಿತ್ರ
ಜಲ್ತೆ ದೀಪ್ ★

ಪ್ರಭಾ ★ ತಾ|| ೨೬-೧ ೧೯೫೧ ರಿಂದ
ಪ್ರತಿದಿನ ೩ ಆಟಗಳು
ಅಮೋಘ ಪ್ರಾರಂಭ
ಶ್ರೀ ಗೋಪಾಲ ಪಿಕ್ಚರ್ಸ್‌ರವರ
★ ಅಫ್ಸಾನ ★
ಪಾತ್ರ :— ಅಶೋಕ್‌ಕುಮಾರ್, ವೀಣಾ, ಪ್ರಾಣ್, ಕುಲದೀಪ್, ಜೀವನ್, ಕಕ್ಕು,

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್ ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂ

Reg. No. M. 5318 **ದಿನ ಪತ್ರಿಕೆ** **Phone: 574**

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೧—೧೯೫೧ನೇ ಮಂಗಳವಾರ [ಸಂಚಿಕೆ ೨೪

ಕಾಂಗ್ರೆಸ್ಸಿನವರು ಕಾಂಗ್ರೆಸ್ಸಿನ ಧ್ಯೇಯವನ್ನು ಮರೆತಿದ್ದಾರೆ

ಕೋಮುವಾರು ಐಕ್ಯತೆ ಕಾಂಗ್ರೆಸ್ಸಿನ ಧ್ಯೇಯ

ಎ. ಐ. ಸಿ. ಸಿ. ಯಲ್ಲಿ ನೆಹರೂರವರ ಭಾಷಣ

ಆಸ್ಟ್ರೇಲಿಯ ಗೋಧಿ ಭಾರತಕ್ಕೆ

ಆಸ್ಟ್ರೇಲಿಯಾದಿಂದ ೬೦೦೦ ಟನ್ನು ಗೋಧಿಯು ಬೊಂಬಾಯಿಗೆ ಆಗಮಿಸಿದೆ

ಸತ್ಯಾಗ್ರಹಗಳು ನಡೆಯಬೇಕಾಗಿದೆ

ಲಂಚಕೋರತನ ಮತ್ತು ಕಳ್ಳಪೇಟೆಯನ್ನು ತಡೆಗಟ್ಟಲೂ ಇನ್ನೂ ಅನೇಕಬಾರಿ ಸತ್ಯಾಗ್ರಹವನ್ನು ಹೂಡಬೇಕಾಗಿದೆ. ದೇಶಾಭ್ಯುದಯದ ಸ್ವಾತಂತ್ರ್ಯದ ಕುರುಹೇನೆಂಬುದೇ ಯಾರೂ ಅರಿತಿಲ್ಲ ಎಂದು ಆಚಾರ್ಯ ಕೃಪಲಾನಿಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಅಲಹಾಬಾದಿನಲ್ಲಿ ಮಾತನಾಡುತ್ತಾ ಹೇಳಿರುವರು

೪ ವರ್ಷಕಾಲ ಕೊಠಡಿಯಲ್ಲಿ ಜೈಲುವಾಸ

ಹೇಮಂತ ಬೆನರ್ಜಿಯೆಂಬ ೧೭ ವರ್ಷ ಬಾಲಕನ ಆಸ್ತಿಯನ್ನೆಲ್ಲಾ ತಾನೇ ಪಡೆಯಬೇಕೆಂದ ದುರುದ್ದೇಶದಿಂದ ಅವನ ಚಿಕ್ಕಪ್ಪನು ಬಾಲಕನನ್ನು ೪ ವರ್ಷಗಳಿಂದ ಕೊಠಡಿಯಲ್ಲಿ ಕೂಡಿ ಹಾಕಿದ್ದುದನ್ನು ಹೂಗ್ಲಿ ಜಿಲ್ಲೆಯ ಗುಪ್ತಿಪುರವೆಂಬಲ್ಲಿ ಪೋಲೀಸಿನವರು ಕಂಡು ಹಿಡಿದು, ಚಿಕಿತ್ಸೆಗಾಗಿ ಬಾಲಕನನ್ನು ಆಸ್ಪತ್ರೆಗೆ ದಾಖಲ್ಮಾಡಿರುವರು

ಬೂರಾಸಕ್ಕರೆ ಬೆಲೆ

ಬೂರಾಸಕ್ಕರೆಯ ಬೆಲೆಯು ಮೋರಿಷ್ ಸಕ್ಕರೆಗಿಂತ ಹೆಚ್ಚಾಗಿರಕೂಡದೆಂದು ಕೇಂದ್ರ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿರುವರು ಆದರೆ ಕಲ್ಲುಸಕ್ಕರೆಯ ಬೆಲೆಯು ಸಕ್ಕರೆ ಬೆಲೆಗಿಂತ ಮಣಕ್ಕೆ ೫ ರೂ ಮೀರಕೂಡದೆಂದೂ ತಿಳಿಸಿರುವರು.

ಮುದ್ರಣಮಸಿ ಆಮದು

ಭಾರತದಲ್ಲಿ ಮುದ್ರಣ ಮಸಿಯ ಕೈಗಾರಿಕೆಗೆ ಉತ್ತೇಜನವನ್ನೀಯಬೇಕಾಗಿರುವುದರಿಂದ ವಿದೇಶಗಳಿಂದ ಮುದ್ರಣದ ಮಸಿಯನ್ನು ತರಿಸಿಕೊಳ್ಳುತ್ತಲಿರುವುದನ್ನು ನಿಲ್ಲಿಸಲಾಗುವುದೆಂದು ಬೊಂಬಾಯಿ ಆರ್ಥಿಕ ಸಚಿವ ಶ್ರೀ ವೈಕುಂಠ ಮೆಹ್ತಾರವರು ಹೇಳಿರುವರು ವರ್ಷಕ್ಕೆ ಸುಮಾರು ೧೫ ಲಕ್ಷ ರೂಪಾಯಿಗಳ ಬೆಲೆಯ ಮುದ್ರಣದ ಮಸಿಯನ್ನು ಯುರೋಪು, ಅಮೇರಿಕಾ ಮತ್ತು ಜಪಾನಿನಿಂದ ಭಾರತಕ್ಕೆ ಆಮದಾಗುತ್ತಲಿದೆ

ಒಂದು ರೂ. ಸದಸ್ಯತ್ವ

ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವವನ್ನು ಪುನಃ ಪ್ರಾರಂಭಿಸಿ, ಅದರ ಶುಲ್ಕ ಒಂದು ರೂ. ಇರಬೇಕೆಂದು ಬಹುಮತದಿಂದ ಎ. ಐ. ಸಿ. ಸಿ. ಯಲ್ಲಿ ತೀರ್ಮಾನವಾಯಿತು

ಕೆನಡಾ ಗೋಧಿ ಮೈಸೂರಿಗೆ

ಕೆನಡಾದಿಂದ ಮದರಾಸಿಗೆ ಬಂದ ೯,೫೦೦ ಟನ್ ಗೋಧಿಯಲ್ಲಿ ೧,೫೦೦ ಟನ್ನುಗಳನ್ನು ಮೈಸೂರಿಗೆ ಕೊಡಲಾಗುವುದೆಂದು ತಿಳಿಯಬರುತ್ತದೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಜಿ

ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ನಿಧನರಾಗಿ ಇಂದಿಗೆ ಮೂರು ವರ್ಷಗಳಾದುವು. ಸಾಂಪ್ರದಾಯಕವಾಗಿ ಭಾಷಣ ಮುಂತಾದುವನ್ನು ಮಾಡದೆ ಮಹಾತ್ಮರು ಯಾವ ಮಹಾತತ್ವ ಜನಸೇವೆ, ಕರ್ತವ್ಯ ಪರಿಪಾಲನೆಗಾಗಿ ತಮ್ಮ ಪ್ರಾಣವನ್ನು ನೀಗಿದರೋ ಅದನ್ನು ಸ್ಮರಿಸಿಕೊಂಡು ಅವರ ಜೀವನ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವುದಲ್ಲದೆ; ದರಿದ್ರನಾರಾಯಣನ ದೇಶವಾದ ಭಾರತ ದೇಶದ ಜನರ ಆರ್ಥಿಕ, ಸಾಮಾಜಿಕ ಮಟ್ಟವನ್ನು ಹೆಚ್ಚಿಸಲು ಅಧಿಕಾರಲಾಲಸೆ, ಸ್ವಕಾರ್ಯ ಧುರಂಧರತೆ, ಜಾತಿ ವೈಷಮ್ಯವನ್ನು ತೊರೆದು ಕೋಮುವಾರ ಸೌಹಾರ್ದನೀತಿಯನ್ನು ಸಮರ್ಥಿಸಿ ದೇಶದ ಶಾಂತಿ ಮತ್ತು ಕಲ್ಯಾಣಕ್ಕಾಗಿ ನಮ್ಮ ತನುಮನವನ್ನೆಲ್ಲಾ ಅರ್ಪಿಸಲು ಸಿದ್ಧರಾಗಿ ಕಾರ್ಯನಿರತರಾಗೋಣ.

ಕೋಮುವಾರು ಐಕ್ಯತೆ ಕಾಂಗ್ರೆಸ್ಸಿನ ಧ್ಯೇಯ ಅದನ್ನು ಬಿಡಬೇಕೆನ್ನುವವರನ್ನು ನಾನು ಎದುರಿಸುತ್ತೇನೆ

ಕಾಂಗ್ರೆಸ್ಸಿನವರು ಕಾಂಗ್ರೆಸ್ಸಿನ ಧ್ಯೇಯವನ್ನು ಮರೆತಿದೆ ಕಾಂಗ್ರೆಸ್ಸು ಹರಿತವಾದ ಖಡ್ಗ, ಅಸ್ತ್ರ, ಅದರಿಂದ ಗುಲಾಮಗಿರಿಯ ಸರಪಣಿಯನ್ನು ಕತ್ತರಿಸಲಾಯಿತು. ಅದೇ ಅಸ್ತ್ರದಿಂದಲೇ ಈಗ ಇತರ ಕಾಳಗಗಳನ್ನು ಎದುರಿಸಿ ದೇಶವನ್ನು ಪ್ರಗತಿಪಥದಲ್ಲೊಯ್ಯಬೇಕಾಗಿದೆ ಕಾಂಗ್ರೆಸ್ ಸದಸ್ಯತ್ವ ಗಾಂಧಿ ಟೋಪಿ, ಧ್ವಜ ಶುಲ್ಕವಲ್ಲ. ಕಾಂಗ್ರೆಸ್ಸಿನ ಧ್ಯೇಯ ಜನತಾಸೇವೆ ಅದರಲ್ಲಿ ಕಾಂಗ್ರೆಸ್ ಸೋತರು ಅದು ಸಾಯುವುದು ಎಂದು ಪಂಡಿತ ನೆಹರೂರವರು ಎ ಐ ಸಿ. ಸಿ ಯಲ್ಲಿ ಮಾತನಾಡುತ್ತಾ ಹೇಳಿದರು

ಅಂತರ್ರಾಷ್ಟ್ರೀಯ ಎಂಜನಿಯರಿಂಗ್ ಸಮ್ಮೇಳನಗಳು

ಅಂತ್ಯಾಧಿವೇಶನ ಮೈಸೂರಿನಲ್ಲಿ

ಬೆಂಗಳೂರು ಜ ೩೦

ಅಂತರ್ರಾಷ್ಟ್ರೀಯ ಎಂಜಿನಿಯರಿಂಗ್ ಸಮ್ಮೇಳನಗಳು ಇತ್ತೀಚೆಗೆ ನವದೆಹಲಿಯಲ್ಲಿ ಒಳಾಡಳಿತ ಮಂತ್ರಿ ಶ್ರೀ ಸಿ ರಾಜಗೋಪಾಲಾಚಾರ್ಯರಿಂದ ಆರಂಭಿಸಲ್ಪಟ್ಟು ನಡೆಯಿತು ಆ ಸಮ್ಮೇಳನಗಳಿಗಾಗಿ ವಿಶ್ವದ ನಾನಾರಾಷ್ಟ್ರಗಳಿಂದ ಸುಮಾರು ೬೦೦ ಮಂದಿ ಪ್ರತಿನಿಧಿಗಳು ಬಂದಿದ್ದರು ಅವರಲ್ಲಿ ಈಗ ೩೦೦ ಮಂದಿ ಎರಡು ವಾರಗಳ ಪ್ರವಾಸವನ್ನು ಕೈಕೊಂಡಿರುತ್ತಾರೆ.

ಈ ಪ್ರತಿನಿಧಿಗಳು ಇಂದು ಬೆಂಗಳೂರಿಗೆ ಬಂದು ಚಿನ್ನದಗಣಿ, ವಿಮಾನತಯಾರಿಕೆ ಕಾರ್ಖಾನೆ, ಟೆಲಿಫೋನ್ ಕಾರ್ಖಾನೆ, ಮತ್ತಿತರ ಕಾರ್ಖಾನೆಗಳನ್ನು ಸಂದರ್ಶಿಸಿ ಸಂಜೆಯೇ ಜೋಗಿಗೆ ಹೋಗಿ ಅಲ್ಲಿನ ಮಹಾತ್ಮ ಗಾಂಧಿ ವಿದ್ಯುಚ್ಛಕ್ತಿ ನಿರ್ಮಾಣ ನಿಲ್ದಾಣವನ್ನು ಸಂದರ್ಶಿಸಿ ಫೆಬ್ರವರಿ ೧ಕ್ಕೆ ಮೈಸೂರಿಗೆ ಬಂದು ಸಮ್ಮೇಳನವನ್ನು ಪೂರೈಸಲಿದ್ದಾರೆ. ಆಗ ಸಮ್ಮೇಳನವನ್ನುದ್ದೇಶಿಸಿ ಶ್ರೀಮನ್ಮಹಾರಾಜರು ಭಾಷಣ ಮಾಡಲೊಪ್ಪಿದ್ದಾರೆ

ಈ ಸಮ್ಮೇಳನದಲ್ಲಿ ಭಾಗವಹಿಸಲು ವಿಶ್ವದ ಅತ್ಯಂತ ಪ್ರಮುಖ ಎಂಜನಿಯರುಗಳು ಬಂದಿರುವುದರಿಂದ ಭಾರತಕ್ಕೆ ಮಹತ್ಪ್ರಯೋಜನವಾಗುವುದೆಂದು ನಿರೀಕ್ಷಿಸಲಾಗಿದೆ

LATEST

ಕಾಮನ್ವೆಲ್ತ್ ಆಟಗಾರರ ಆಗಮನ

ಮೈಸೂರು ಜ. ೩೦

ಕಾಮನ್ವೆಲ್ತ್ ಕ್ರಿಕೆಟ್ ಆಟಗಾರರೆಲ್ಲರೂ ಇಂದು ೧೨ ಗಂಟೆಗೆ ಮೈಸೂರಿಗೆ ಬಂದು ಸರ್ಕಾರಿ ಭವನದಲ್ಲಿ ತಂಗಿರುವರು. ಮಧ್ಯಾಹ್ನ ಪ್ರೇಕ್ಷಣೀಯ ಸ್ಥಳಗಳ ಭೇಟಿಯಿತ್ತು ಸಂಜೆ ಕೃಷ್ಣರಾಜಸಾಗರಕ್ಕೆ ಹೋಗುವರು ಅಲ್ಲಿಯೇ ರಾತ್ರಿ ಬಿಡಾರಮಾಡಿದ್ದು ನಾಳೆ ಬೆಳಿಗ್ಗೆ ಬೆಂಗಳೂರಿಗೆ ಹಿಂತಿರುಗುವರು

ವಿಜ್ಞಾನ ಪ್ರದರ್ಶನ

ಸೇಂಟ್ ಫಿಲೋಮಿನಾಸ್ ಹೈಸ್ಕೂಲಿನವರು ನಾಳೆಯಿಂದ ೩ ದಿನ ಹೈಸ್ಕೂಲು ವಿದ್ಯಾರ್ಥಿಗಳ ಶಾಲಾಪಾಠ ಪ್ರವಚನಗಳಿಗೆ ಸಹಾಯವಾಗುವಂತೆ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಶರೀರ ಶಾಸ್ತ್ರ ಮುಂತಾದ ವಿಜ್ಞಾನಶಾಸ್ತ್ರಗಳ ಪ್ರಯೋಗಗಳನ್ನೆಲ್ಲಾ ತೋರಿಸಲು ವಿಜ್ಞಾನ ಪ್ರದರ್ಶನವನ್ನು ಏರ್ಪಡಿಸಿರುವರು.

ಎ. ಐ. ಸಿ. ಸಿ. ಸಭೆ

ನಿನ್ನೆ ಮಧ್ಯಾಹ್ನ ಅಹಮದಾಬಾದಿನಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ ಅಧಿವೇಶನವು ಬಾಬು ಪುರುಷೋತ್ತಮದಾಸ್ ಟಾಂಡನ್ನರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಕಾಂಗ್ರೆಸ್ ಅಧ್ಯಕ್ಷರು ಭಾಷಣಮಾಡಿ, ಸರ್ದಾರರು, ಅರವಿಂದ ಘೋಷ್ ಮತ್ತು ಥಕ್ಕರ್ ಬಾಪಾರವರ ನಿಧನದಿಂದ ದೇಶಕ್ಕುಂಟಾದ ನಷ್ಟವನ್ನು ವ್ಯಸನಪೂರಿತವಾಗಿ ತಿಳಿಸಿ ನಮ್ಮ ಅಚ್ಚುಮೆಚ್ಚಿನ ನಾಯಕರು ನಮ್ಮನ್ನಗಲಿದರೂ, ನಾವು ನಮ್ಮ ಕರ್ತವ್ಯವನ್ನು ಮರೆಯಲಾಗದು ಎಂದು ಹೇಳಿದರು.

ಕಾಂಗ್ರೆಸ್ ಅಂಗರಚನೆಯಲ್ಲಿ ಒಂದೊಂದೇ ವಿಧಿಯನ್ನೂ ಪರಿಶೀಲನೆಗೆ ತೆಗೆದುಕೊಂಡು ಚರ್ಚೆ ನಡೆಯಿತು. ಕಾಂಗ್ರೆಸ್ ಧ್ಯೇಯ ಮತ್ತು ಅಂಗ ಸಂಸ್ಥೆಗಳಿಗೆ ಸಂಬಂಧಿಸಿದ ಎರಡು ವಿಧಿಗಳು ಅಂಗೀಕೃತವಾದುವು

ದೇಶದ ಸಮಸ್ಯೆಗಳನ್ನೆದುರಿಸಲು ಐಕಮತ್ಯ ಅತ್ಯಗತ್ಯವೆಂದು ರಾಷ್ಟ್ರಕ್ಕೆ ಮನವಿಮಾಡುವ ನಿರ್ಣಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿನ್ನೆ ಬೆಳಗ್ಗೆ ನಡೆದ ಸಭೆಯಲ್ಲಿ ತೀರ್ಮಾನವಾಯಿತು,

ತಿಂಗಳಿಗೊಂದು ರೂಪಾಯಿ ಸಂಬಳ

ಎರಡು ತಿಂಗಳ ರಜಾ ತೆಗೆದುಕೊಂಡಿರುವ ಮದರಾಸಿನ ಮಂತ್ರಿ ಶ್ರೀ ರಾಜನ್‌ರವರು ತಮ್ಮ ರಜಾಕಾಲದಲ್ಲಿ ತಿಂಗಳಿಗೊಂದು ರೂಪಾಯಿ ಮಾತ್ರ ಸಂಬಳವನ್ನು ತೆಗೆದುಕೊಳ್ಳುತ್ತಾರೆಂದು ತಿಳಿಯುಬರುತ್ತದೆ.

ಬೆವಿನ್ನರು ಉತ್ತಮ

ನ್ಯೂಮೋನಿಯಾದಿಂದ ಹಾಸಿಗೆ ಹಿಡಿದಿರುವ ಬ್ರಿಟಿಷ್ ವಿದೇಶಾಂಗಮಂತ್ರಿ ಮಿ|| ಬೆವಿನ್ನರು ಈಗ ಉತ್ತಮಗೊಂಡಿದ್ದಾರೆಂದು ಪ್ರಕಟವಾಗಿದೆ.

ಕಾಂಗ್ರೆಸ್ ಧ್ಯೇಯಗಳನ್ನು ಪಾಲಿಸಿ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್ನರು ನಿನ್ನೆ ಬೆಳಗ್ಗೆ ಅಹಮದಾಬಾದಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಪ್ರಾರಂಭೋತ್ಸವ ಸಮಯದಲ್ಲಿ ಧ್ವಜಾರೋಹಣ ಮಾಡುತ್ತ ಅಹಮದಾಬಾದ್ ನಗರವು ನಮಗೆ ಮಹಾತ್ಮ ಗಾಂಧಿ ಮತ್ತು ಸರ್ದಾರ್ ಪಟೇಲರ ಸ್ಮರಣೆಯನ್ನು ತಂದುಕೊಡುತ್ತದೆ. ಅವರಿಬ್ಬರ ಜೀವನ ಸಂಬಂಧದಲ್ಲಿ ಗಾಂಧಿಯವರು ಹಾಕಿಕೊಟ್ಟ ಆದರ್ಶವನ್ನು ಪಾಲಿಸಲು ಸರ್ದಾರರು ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದ ಸತ್ಸಂಗತಿಯನ್ನು ನೆನಪು ಮಾಡಿಕೊಡುತ್ತದೆ ಆರ್ಥಿಕ ಸಮಸ್ಯೆಗಳು ಪ್ರಾಮುಖ್ಯವೇ ಆದರೂ ಸಂಸ್ಕೃತಿಕ ವಿಷಯಗಳಿಗೆ ಅವಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ಅವರು ಹೇಳಿದರು.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧ ಮಾಡಿದಂತೆ ೧೮ ನೇ ಯಾತ್ರೆಯ ಟೂರಿಸ್ಟ ರೈಲ್ವೆ ಟಿಕೀಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆ ಟಿಕೀಟುಗಳನ್ನು ಪಡೆದ ಯಾತ್ರಿಕರು ತಾ|| ೧೭-೨-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.

೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ. ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿ ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಪಂಖಾಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ ಮಾಡಿರುತ್ತದೆ

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೬-೨-೫೧ನೇ ದಿವಸ ಒಳ್ಳೆ ಸೌಕರ್ಯವುಳ್ಳ ಸ್ಪೆಷಲ್ ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧-೪-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು

ಹೆಚ್ಚಿನ ತರಗತಿಯು ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ. ಮುಂಗಡ ಹಣವನ್ನು ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವಮಾಡಲಾಗುವುದು. ಮುಂದೆ ಅವಲ್ಲಿ ಖಂಡಿತವಾಗಿ ಟಿಕೀಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ ಟಿಕೀಟು ಲಗತ್ತಿಸಿ ಕಳಿಸಿರಿ.

ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟ)
ಕುಡಚಿ-ಮಾರ್ಗ. ಎಂ. ಎಸ್. ಎಂ. ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ|| ಪಿ. ಡಿ. ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

ಶ್ರೀಮಂತರ ವಿವಾಹ ಸಮಾರಂಭ

ಮೈಸೂರಿನ ಮಾಜಿ ದಿವಾನರಾದ ಶ್ರೀ ರಾಮಸ್ವಾಮಿ ಮೊದಲಿಯಾರ್‌ರವರ ಸಹೋದರ ಶ್ರೀ ಲಕ್ಷ್ಮಣಸ್ವಾಮಿ ಮೊದಲಿಯಾರವರ ಪುತ್ರಿ ಶ್ರೀಮತಿ ಮಹಾಲಕ್ಷ್ಮಿ ಮತ್ತು ಮೈಸೂರಿನ ಗಣ್ಯ ವ್ಯಕ್ತಿಗಳಾದ ಶ್ರೀ ರಾಜಾರಾಂ ಮೊದಲಿಯಾರ್‌ರವರ ಪುತ್ರ ಶ್ರೀ ವಿ. ಎನ್. ರಾಮಕೃಷ್ಣರವರಿಗೂ ನಡೆದ ವಿವಾಹದ ಅಂಗವಾಗಿ ನಿನ್ನೆ ಸಂಜೆ ವಸಂತಮಹಲಿನಲ್ಲಿ ಸ್ವಾಗತ ಸತ್ಕಾರ ಸಮಾರಂಭವು ನಡೆಯಿತು. ಶ್ರೀ ಮನ್ಮಹಾರಾಜರವರು ಅನೇಕ ಗಣ್ಯವ್ಯಕ್ತಿಗಳು ಈ ಸಮಾರಂಭಕ್ಕೆ ಬಂದಿದ್ದರು. ಶ್ರೀಮತಿ ಚೊಕ್ಕಮ್ಮನವರ ಸಂಗೀತ ನಡೆಯಿತು. ಶ್ರೀ ರಾಮಸ್ವಾಮಿ ಮೊದಲಿಯಾರ್ ಮತ್ತು ಶ್ರೀ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ಅತಿಥಿಗಳನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದರು.

ಅಗಸನಿಗೆ ಮಹಾವೀರಚಕ್ರ

ಕಾಶ್ಮೀರ ಎಂಜನಿಯರ್ ದಳದಲ್ಲಿ ಕೆಲಸಮಾಡುತ್ತಲಿದ್ದ ಸಿವಿಲಿಯನ್ ಅಗಸನಾದ ಶ್ರೀ ರಾಮಚಂದರ್ ಎಂಬುವವನು ೧೯೪೭ನೇ ಡಿಸೆಂಬರ್ ೧೮ರಲ್ಲಿ ಭಾಂಬ್ಲಾ ಎಂಬಲ್ಲಿ ಸೈನ್ಯಪಡೆಯೊಂದರ ಮೇಲೆ ಶತ್ರುಗಳು ಬಿದ್ದಾಗ ಅಪ್ರತಿಮ ಸಾಹಸವನ್ನು ತೋರಿಸಿ ಶತ್ರುಗಳೊಡನೆ ಹೋರಾಡಿ ಆ ಪಡೆಯ ಅಧಿಕಾರಿಯ ಜೀವವನ್ನು ಉಳಿಸಿದ್ದಕ್ಕಾಗಿ ಭಾರತಸೈನ್ಯದ ಅತ್ಯುನ್ನತ ಪ್ರಶಸ್ತಿಯಾದ ಮಹಾವೀರಚಕ್ರವನ್ನು ನಿನ್ನೆ ಭಾರತಸೈನ್ಯ ದಂಡನಾಯಕ ಜನರಲ್ ಕಾರಿಯಪ್ಪನವರು ದೆಹಲಿಯಲ್ಲಿ ನಡೆದ ಪೆರೇಡಿನಲ್ಲಿ ರಾಮಚಂದರ್‌ಗೆ ಕೊಟ್ಟರು.

ಸಂಸ್ಥಾನ ಸಚಿವರು ಹೈದರಾಬಾದಿನಲ್ಲಿ

ಕೇಂದ್ರ ಸಂಸ್ಥಾನ ಮಂತ್ರಿಗಳಾದ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್‌ರವರು ಹೈದರಾಬಾದಿಗೆ ಆಗಮಿಸಿರುವರು. ನಿನ್ನೆ ಅವರಿಗೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿಂದೂರವರಿಗೆ ಭೇಟಿ ನಡೆದು ಮಾತುಕಥೆಗಳಾದುವು.

ಬ್ರಿಟನ್ನಿನಲ್ಲಿ ಸೈನ್ಯ ವಿಸ್ತರಣೆ

ಬ್ರಿಟನ್ನಿನಲ್ಲಿ ಸೈನ್ಯ ಪಡೆಯಲ್ಲಿ ಹೆಚ್ಚಿಸಿಕೊಳ್ಳಲಾಗುತ್ತಲಿದೆ. ಟಾಂಕು, ವಿಮಾನ ಮುಂತಾದುವುಗಳ ಉತ್ಪನ್ನವು ಇನ್ನು ಮೂರು ವರ್ಷಗಳಲ್ಲಿ ಈಗಿರುವುದಕ್ಕಿಂತ ನಾಲ್ಕರಷ್ಟು ಹೆಚ್ಚುವಂತೆ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಯುದ್ಧ ಅನಿವಾರ್ಯವಲ್ಲವಾದರೂ ದೇಶದ ರಕ್ಷಣೆಗೆ ಇದು ಅತ್ಯಗತ್ಯವೆಂದು ಬ್ರಿಟನ್ನಿನ ಪ್ರಧಾನಿ ಮಿ|| ಅಟ್ಲೀಯವರು ಹೇಳಿರುವರು.

★

ರಣಜಿತ್

೨೬-೧-೫೧ ರಿಂದ ಪ್ರತಿದಿನ ೩ ಆಟಗಳು

ರಿಪಬ್ಲಿಕ್ ದಿನೋತ್ಸವದ ಸ್ಪೆಷಲ್ ಪ್ರೋಗ್ರಾಂ

ನಿಮ್ಮಿ (ಬರಸಾತ್ ಪ್ರಖ್ಯಾತಿ) ನಟಿಸಿರುವ
ಹಿಂದಿ ಚಿತ್ರ

ಜಲ್ತೆ ದೀಪ್

★

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೧—೧—೧೯೫೧ ಬುಧವಾರ [ಸಂಚಿಕೆ ೧೨೫

೧೦ ಔನ್ಸ್ ಪಡಿತರವಿರಲು ಕೇಂದ್ರದ ಅನುಮತಿ ಕೇಳಲಾಗಿದೆ

ಉತ್ತರ ಬರುವವರೆಗೆ ಪಡಿತರ ಖೋತಾಯಿಲ್ಲ

ಶಾಸನಸಭೆಯಲ್ಲಿ ಆಹಾರಮಂತ್ರಿಗಳ ವಿವರಣೆ

ಬೆಂಗಳೂರು ಜ ೩೦

ಸ್ವಲ್ಪಕಾಲ ಪಡಿತರವನ್ನು ಒಟ್ಟಿನಲ್ಲಿ ೯ ಔನ್ಸಿಗೆ ಇಳಿಸಬೇಕೆಂದು ಕೇಂದ್ರ ಸರ್ಕಾರದಿಂದ ಸೂಚನೆ ಬಂದಿದೆ. ಈ ಖೋತಾ ಕೇವಲ ತಾತ್ಕಾಲಿಕ ಎಂದು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಇಂದು ನಡೆದ ಶಾಸನ ಸಭೆಯಲ್ಲಿ ಶ್ರೀ ವಿ. ಎಸ್. ನಾರಾಯಣರಾಯರು ಕೇಳಿದ್ದ ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರಕೊಡುತ್ತಾ ತಿಳಿಸಿದರು.

ಈ ರೀತಿ ಪಡಿತರ ಇಳಿಸುವುದರಿಂದ ಜನರಿಗೆ ತೊಂದರೆಯಾಗುವುದೆಂದೂ ಒಟ್ಟಿನಲ್ಲಿ ತಲಾ ೧೦ ಔನ್ಸ್ ಪಡಿತರವಿರಲು ಅನುಮತಿಕೊಡಬೇಕೆಂದೂ ತಿಳಿಸಿ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ

ಕೇಂದ್ರದಿಂದ ಉತ್ತರ ಬರುವವರೆಗೂ ಸರ್ಕಾರ ಪಡಿತರ ಇಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವುದಿಲ್ಲವೆಂದು ತಿಳಿದುಬಂದಿದೆ.

ಕೇಂದ್ರ ಸರ್ಕಾರ ಕಳುಹಿಸಿರುವ ಸೂಚನೆಯಲ್ಲಿ ಬೆಲೆಯ ವ್ಯತ್ಯಾಸದ ಬಗ್ಗೆ ಏನೂ ಇಲ್ಲವೆಂದು ಪಡಿತರ ಖೋತಾ ಕೇಂದ್ರ ಒದಗಿಸುವ ಆಹಾರ ಧಾನ್ಯದ ಕೋಟಾ ಮೇಲೆ ಪರಿಣಾಮವನ್ನೇನೂ ಉಂಟುಮಾಡುವುದಿಲ್ಲವೆಂದೂ ಕೇಂದ್ರದ ಖೋತಾ ಕಡಿಮೆಯಾಗುವುದಿಲ್ಲವೆಂದೂ ತಿಳಿಸಿದರು.

ಶ್ರೀಗಳಾದ ಎಚ್. ಬಿ. ಗುಂಡಪ್ಪಗೌಡ ಮತ್ತು ಮಹಮದ್ ಇಮಾಂರವರ ಪ್ರಶ್ನೆಗಳಿಗೆ "ಆಹಾರ ಸಚಿವರು ಪಡಿತರದ ಖೋತಾ ಕೇವಲ ತಾತ್ಕಾಲಿಕ, ಕೇಂದ್ರ ತನ್ನ ಸೂಚನೆಯಲ್ಲಿ ಖೋತಾ ಜಾರಿಯಲ್ಲಿರುವ ಕಾಲದ ನಿಗದಿಯನ್ನೇನೂ ತಿಳಿಸಿಲ್ಲ. ಖೋತಾ ಅಲ್ಪ ಕಾಲವಿರುವುದೆಂದು ಭಾವಿಸೋಣ" ಎಂದು ತಿಳಿಸಿದರು.

ಪಡಿತರ ಖೋತಾ ಇತರ ಧಾನ್ಯಗಳ ಪ್ರಮಾಣದಲ್ಲೇ ವಿನಹಾ ಅಕ್ಕಿಯ ಪ್ರಮಾಣದಲ್ಲಿ ಅಲ್ಲ

ಇಂಜನಿಯರುಗಳ ಸಮ್ಮೇಳನ

ಬೆಂಗಳೂರು ಜ. ೩೦

ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್‌ಗಳ ಸಮ್ಮೇಳನವು ಮುಂದಿನ ತಿಂಗಳು ೩ನೇ ತಾರೀಖಿನಿಂದ ೧೦ನೇ ತಾರೀಖಿನವರೆಗೆ ಮೈಸೂರು ಸ್ಥಳೀಯ ಕೇಂದ್ರದ ಆಹ್ವಾನದ ಮೇಲೆ ಮೈಸೂರು ನಗರದಲ್ಲಿ ನಡೆಯುವುದು. ನಾನಾ ಪ್ರಾಂತ್ಯಗಳ ಚೀಫ್ ಇಂಜನಿಯರುಗಳು ಸೇರಿ ಸುಮಾರು ೩೦೦ ಇಂಜನಿಯರುಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು. ಸಮ್ಮೇಳನವನ್ನು ಫೆಬ್ರವರಿ ೪ ನೇ ತಾರೀಖು ಮೈಸೂರು ಕ್ರಾಫರ್ಡ್ ಹಾಲಿನಲ್ಲಿ ಶ್ರೀಮನ್ಮಹಾರಾಜರು ಉದ್ಘಾಟಿಸುವರು. ರೈಲ್ವೆ ಚೀಫ್ ಕಮಿಷನರ್ ಶ್ರೀ ಕೆ. ಸಿ. ಭಕ್ಲೆಯವರು ಅಧ್ಯಕ್ಷತೆ ವಹಿಸುವರು. ಮೈಸೂರು ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಸ್ವಾಗತಿಸುವರು.

ಇಂಜನಿಯರಿಂಗ್ ಉದ್ಯಮಕ್ಕೆ ಸಂಬಂಧಪಟ್ಟ ಪ್ರೇಕ್ಷಣೀಯ ಸ್ಥಳಗಳಾದ ಕೃಷ್ಣರಾಜಸಾಗರ, ಶಿವಸಮುದ್ರ ಸೋಮನಾಥಪುರ, ಭದ್ರಾವತಿ, ಗೇರುಸೊಪ್ಪ ಮುಂತಾದುವಕ್ಕೆ ಅವರು ಭೇಟಿಯಿಯುವುದಲ್ಲದೆ ಪ್ರಯೋಗಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಚರ್ಚೆಗಳನ್ನು ನಡೆಸುವರು. ಸ್ಥಳೀಯ ಕೇಂದ್ರದ ಅಧ್ಯಕ್ಷರಾದ ಜನಾಬ್ ಎಂ. ಸಯಾತ್‌ರವರು ಸಮ್ಮೇಳನ ನಡೆಯಲು ತಕ್ಕ ಸಿದ್ಧತೆಗಳನ್ನು ಮಾಡುತ್ತಲಿರುವರು.

೧೯೨೦ರಲ್ಲಿ ಭಾರತದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್ ಸಂಸ್ಥೆಯು ಸ್ಥಾಪಿತವಾಗಿ ಇಂಜನಿಯರಿಂಗ್ ಶಾಖೆಗಳಿಗೆ ಸೇರಿದ ಸುಮಾರು ೫,೦೦೦ ಸದಸ್ಯರಿರುವರು. ಮೈಸೂರಿನ ಶಾಖೆಯು ೧೯೩೫ರಲ್ಲಿ ದಿವಂಗತ ಶ್ರೀಮದ್ಯುವರಾಜರಿಂದ ಉದ್ಘಾಟಿಸಲ್ಪಟ್ಟು ಸ್ಥಾಪಿತವಾಗಿ ೧೨೦ ಇಂಜನಿಯರ್ ಸದಸ್ಯರು, ೧೦೦ ವಿದ್ಯಾರ್ಥಿ ಸದಸ್ಯರಿರುವರು.

ಇಂಜನಿಯರಿಂಗ್ ಉದ್ಯಮವನ್ನು ಅಭಿವೃದ್ಧಿಗೊಳಿಸುವುದು, ಇಂಜನಿಯರಿಂಗ್ ಶಿಕ್ಷಣಕ್ಕೆ ತಕ್ಕ ಸಂಸ್ಥೆಗಳನ್ನು ಸ್ಥಾಪಿಸುವುದು ಮುಂತಾದುವು ಈ ಸಂಸ್ಥೆಯ ಮುಖ್ಯಧ್ಯೇಯಗಳಾಗಿವೆ.

ಕಾಶ್ಮೀರ ವಿಚಾರ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಅನಧಿಕೃತವಾಗಿ ನಡೆದ ಕಾಶ್ಮೀರ ಚರ್ಚೆಯ ವಿಷಯವಾಗಿ ತಾವು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸುವುದಿಲ್ಲವೆಂದು ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು. ಆದರೆ ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆ ಚರ್ಚೆಗೆ ಬಂದಾಗ ತಮ್ಮ ಪ್ರತಿನಿಧಿ ಯಾವ ರೀತಿ ವರ್ತಿಸಬೇಕೆಂಬ ವಿಷಯವು ಸರ್ಕಾರ ಆಲೋಚಿಸುತ್ತಲಿದೆಯೆಂದು ತಿಳಿಸಿರುವರು.

ಮಹಾರಾಣಿ ಕಾಲೇಜ್ ದಿನೋತ್ಸವ

ಬೆಂಗಳೂರು ಜ. ೨೯

ಫೆಬ್ರವರಿ ೫ನೇ ತಾ॥ ಮೈಸೂರು ಮಹಾರಾಣಿ ಕಾಲೇಜು ದಿನೋತ್ಸವವು ನಡೆಯುವುದು ಮೈಸೂರು ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ಅಧ್ಯಕ್ಷತೆವಹಿಸುವರು

ಸಮ್ಮತಿಯೀಯಲಿಲ್ಲ

ಕಾಂಗ್ರೆಸ್ ನಿಯಮಾವಳಿಯನ್ನು ಜರೂರು ಸಂದರ್ಭದಲ್ಲಿ ಕಾರ್ಯಕಾರಿಸಮಿತಿಯು ತಿದ್ದುಪಡಿಸಲು ಅಧಿಕಾರ ವೀಯಬೇಕೆಂದು ತಂದಿದ್ದ ನಿರ್ಣಯಕ್ಕೆ ಅಹಮದಾಬಾದಿನಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸಮರ್ಥನೆ ದೊರೆಯಲಿಲ್ಲ.

ಬ್ರಿಟನ್ನಿನ ಸಮರ್ಥನೆ

ಅಮೆರಿಕಾವು ಚೈನಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸಬೇಕೆಂದು ತಂದಿರುವ ನಿರ್ಣಯವನ್ನು ಬ್ರಿಟನ್ ಮತ್ತು ಕನ್ನಡಾ ರಾಷ್ಟ್ರಗಳು ಸಮರ್ಥಿಸುವುದಾಗಿ ತಿಳಿಯಬಂದಿದೆ.

ಲಾಟರಿ ಮತ್ತು ಸ್ಪರ್ಧೆಗಳ ಹತೋಟಿ

ಬೆಂಗಳೂರು ಜ. ೩೦

ಲೈಸೆನ್ಸ್ ಪಡೆಯದಿರುವ ಲಾಟರಿಗಳು ಮತ್ತು ಬಹುಮಾನಸ್ಪರ್ಧೆಗಳನ್ನು ಕ್ರಮಬಾಹಿರವೆಂದು ಸಾರುವ ಮತ್ತು ಅವುಗಳ ಮೇಲೆ ತೆರಿಗೆ ವಿಧಿಸಲು ಸರ್ಕಾರಕ್ಕೆ ಅವಕಾಶಕೊಡುವ ಲಾಟರಿ ಮತ್ತು ಬಹುಮಾನವುಳ್ಳ ಸ್ಪರ್ಧೆಗಳ ಹತೋಟಿ ಮತ್ತು ತೆರಿಗೆಯ ಮಸೂದೆಯು ಇಂದು ನಡೆದ ಶಾಸನಸಭೆಯಲ್ಲಿ ಅಂಗೀಕಾರವಾಯಿತು.

ಮನರಂಜನೆಗಾಗಿ ಪೂರ್ವಭಾವಿಯಾಗಿ ಸರ್ಕಾರದ ಅನುಮತಿ ಪಡೆದು ನಡೆಸುವ ಲಾಟರಿಗಳು ಕ್ರಮಬಾಹಿರವಾಗುವುದಿಲ್ಲ. ಲೈಸೆನ್ಸ್ ಪಡೆಯಲು ರುಸುಂಕೊಡಬೇಕು. ಲಾಟರಿಯಲ್ಲಿ ವಸೂಲಾದ ಒಟ್ಟು ಹಣದಲ್ಲಿ ಶೇ. ೧೨॥ ರೊಳಗೆ ತೆರಿಗೆ ವಿಧಿಸಬಹುದು. ಬಹುಮಾನಗಳುಳ್ಳ ಸ್ಪರ್ಧೆಗಳ ಮೇಲೆ ಶೇ. ೨೫ ರಷ್ಟರೊಳಗೆ ತೆರಿಗೆ ವಿಧಿಸಬಹುದು.

ಚೈನಾ ಆಕ್ರಮಣರಾಷ್ಟ್ರವೆಂದು ನಿರ್ಣಯ ಅಂಗೀಕಾರವಾಯಿತು

ಚೈನಾ ಆಕ್ರಮಣರಾಷ್ಟ್ರವೆಂದು ಘೋಷಿಸಬೇಕೆಂದು ರಾಜಕೀಯ ಸಮಿತಿಯಲ್ಲಿ ಅಮೆರಿಕಾವು ಮಂಡಿಸಿದ್ದ ನಿರ್ಣಯವು ಅಂಗೀಕಾರವಾಯಿತು. ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಸಮರ್ಥಿಸಿದುವು ಭಾರತ, ರಷ್ಯಾ, ಈಜಿಪ್ಟ್ ರಾಷ್ಟ್ರಗಳು ವಿರೋಧಿಸಿದುವು ಪಾಕಿಸ್ಥಾನವು ತಟಸ್ಥವಾಗಿತ್ತು.

ಏಷ್ಯಾ, ಅರಬ್ಬ್ ರಾಷ್ಟ್ರಗಳು ಮಂಡಿಸಿದ್ದ ನಿರ್ಣಯವು ತಿರಸ್ಕೃತವಾಯಿತು.

ರೇಡಿಯೋ ಭಾಷಣ

ಬೆಂಗಳೂರು ಜ. ೨೯

'ಮೈಸೂರಿನಲ್ಲಿ ಜೈಲು ಸುಧಾರಣೆಗಳು' ಎಂಬ ವಿಷಯದಲ್ಲಿ ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಫೆಬ್ರವರಿ ೫ನೇ ತಾ॥ ಸಂಜೆ ಮೈಸೂರು ಎ. ಐ. ಆರ್. ಕೇಂದ್ರದಲ್ಲಿ ಭಾಷಣ ಮಾಡುವರು.

ಮಹಾತ್ಮರಿಗೆ ಭಾಷ್ಪಾಂಜಲಿ

ಸರ್ವೋದಯ ಸಂದರ್ಭದಲ್ಲಿ ನಿನ್ನೆ ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರವರು ರಾಜಘಾಟಿಗೆ ಭೇಟಿಯಿತ್ತು ಮಹಾತ್ಮ ಗಾಂಧಿಯವರ ಸಮಾಧಿಗೆ ಪುಷ್ಪಗಳನ್ನರ್ಪಿಸಿದರು. ಭಾರತದಲ್ಲಿರುವ ಫ್ರೆಂಚ್ ರಾಯಭಾರಿ, ಚೈನಾರಾಯಭಾರಿ ಮತ್ತು ನೇಪಾಳ ಮಹಾರಾಜರೂ ಸಮಾಧಿಗೆ ಪುಷ್ಪಗಳನ್ನರ್ಪಿಸಿದರು.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧಮಾಡಿದಂತೆ ೧೮ನೇ ಯಾತ್ರೆಯ ಟೂರಿಸ್ಟ ರೈಲ್ವೆ ಟಿಕೇಟು ಗಳು ಭರ್ತಿ ಆಗಿರುತ್ತವೆ, ಟೂರಿಸ್ಟ ರೈಲ್ವೆಟಿಕೇಟು ಗಳನ್ನು ಪಡೆದ ಯಾತ್ರಿಕರು ತಾ|| ೧೧-೨-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ. ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಪಂಖಾಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨-೫೧ನೇ ದಿವಸ ಒಳ್ಳೆಸೌಕರ್ಯವುಳ್ಳ ಸ್ಪೆಷಲ್ ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು [illegible] ಕ್ಕೆ [illegible] ಬೆಂಗಳೂರು ಸ್ಟೇಷನ್ನಿಗೆ ಬರುವುದು

ಹೆಚ್ಚಿನ ತರಗತಿಯ ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ. ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್‌ಮಾಡಲಾಗುವುದು. ಮುಸ್ತಿ ಆದಲ್ಲಿ ಖಂಡಿತವಾಗಿ ಟಿಕೇಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟು)
ಕುಡಚಿ-ಮಾರ್ಗ. ಎಂ. ಎಸ್. ಎಂ. ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ|| ಪಿ. ಡಿ. ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

ವಯಸ್ಕರ ಶಿಕ್ಷಣಸಮಿತಿಗೆ ಭೇಟಿ

ಬೆಂಗಳೂರು ಜ. ೨೯

ನ್ಯಾಯಾಂಗ ಸಚಿವ ಶ್ರೀ ಕೆ. ಟಿ ಭಾಷ್ಯಂರವರು ಫೆಬ್ರವರಿ ೨ನೇ ತಾ|| ವಯಸ್ಕರ ಶಿಕ್ಷಣಸಮಿತಿ ಕಛೇರಿಗೆ ಭೇಟಿಯಿತ್ತಾಯುವರು. ಮಾರನೇದಿನ ಮೈಸೂರು ಪುರಭವನದಲ್ಲಿ ನಡೆಯುವ ಉಪಹಾರ ಮಂದಿರಗಳ ಕೆಲಸಗಾರರ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸುವರು.

ಖುಷ್ಕಿ ಜಮೀನಿನಲ್ಲಿ ಭತ್ತ ಬೆಳೆಯುವುದಕ್ಕೆ ತರಿ ಕಂದಾಯ

ಸರ್ಕಾರಿ ಕೆರೆಗಳು ಅಥವಾ ನೀರಾವರಿ ಉದ್ಯಮಗಳಲ್ಲದೆ ಇತರ ರೀತಿಯಲ್ಲಿ ಅಮಲ್ದಾರರ ಅಪ್ಪಣೆಪಡೆದು ನೀರನ್ನು ಉಪಯೋಗಿಸಿ ಖುಷ್ಕಿ ಜಮೀನಿನಲ್ಲಿ ಭತ್ತವನ್ನು ಬೆಳೆದರೆ ಖುಷ್ಕಿ ಮತ್ತು ತರಿ ಜಮೀನುಗಳ ಕಂದಾಯ ವ್ಯತ್ಯಾಸವನ್ನು ಮಾತ್ರ ವಸೂಲ್ಮಾಡುವುದಾಗಿಯೂ, ಹಾಗೆ ಅಪ್ಪಣೆ ಪಡೆಯದೆ ಉಪಯೋಗಿಸಿದಲ್ಲಿ ಆ ವ್ಯತ್ಯಾಸದ ಎರಡರಷ್ಟು ವಾಟರ್ ರೇಟ್ ಕೊಡಬೇಕಾಗುವುದೆಂದು ಮೈಸೂರು ಸರ್ಕಾರದವರು ಮೈಸೂರು ಲ್ಯಾಂಡ್ ರೆವೆನ್ಯೂ ಕೋಡಿಗೆ ಬಂದು ತಿದ್ದುಪಡಿ ತಂದಿರುವರು..

ಸರ್ವೋದಯ ತತ್ವಗಳನ್ನು ಆಚರಿಸಿ

ಮೈಸೂರು ಜ. ೩೦

ಸತ್ಯ ಮತ್ತು ಅಹಿಂಸೆಯಿಂದಲೇ ಸಕಲರ ಅಭ್ಯುದಯವನ್ನು ಸಾಧಿಸುವುದೇ ಸರ್ವೋದಯದ ಧ್ಯೇಯ ಅನೇಕ ಸೌಲಭ್ಯಗಳನ್ನು ಒದಗಿಸುವುದು ಪ್ರಜಾಪ್ರಭುತ್ವದ ಗುರಿ ನೀತಿ ಮತ್ತು ಆಧ್ಯಾತ್ಮಿಕ ಜೀವನವೇ ಸರ್ವೋದಯದ ತಳಹದಿ ಕೇವಲ ಧನ ಸಂಗ್ರಹ ಮಾತ್ರವಲ್ಲ ಮನುಷ್ಯನಿಗೂ ಮೃಗಗಳಿಗೂ ಇರುವ ವ್ಯತ್ಯಾಸ ನೈತಿಕ ಜೀವನದಲ್ಲಿ ಕಮ್ಯೂನಿಸ್ಟ ಮತ್ತು ಸಮತವಾದಿ ರಾಷ್ಟ್ರಗಳು ಪ್ರಜೆಗಳನ್ನೆಲ್ಲಾ ಮೃಗಗಳಂತೆ ಬೆಳಸುತ್ತಲಿರುವರು ದೇಶದ ಆರ್ಥಿಕ ಉನ್ನತಿಗಾಗಿ ಜನರೆಲ್ಲರೂ ಯಂತ್ರಗಳಂತೆ ನಡೆಯುತ್ತಲಿರುವರು. ಆದರೆ ಸರ್ವೋದಯ ಸಮಾಜದಲ್ಲಿ ಮನುಷ್ಯನ ಶೀಲಸಂಪನ್ನತೆ ಮತ್ತು ವ್ಯಕ್ತಿತ್ವದ ಬೆಳೆವಣಿಗೆಗೆ ಪ್ರಾಧಾನ್ಯವಿರುತ್ತದೆ. ಆತ್ಮಾವಲಂಬನವೇ ಇದರ ಹೆಗ್ಗುರುತಾಗಿದೆ ಖಾದಿ ಕೈಗಾರಿಕೆಯು ಈ ಮಾರ್ಗದ ಮುಖ್ಯ ಕೇಂದ್ರವಾಗಿರುತ್ತದೆ. ಇದರ ಮೂಲಕ ನಮ್ಮ ದೇಶದ ಸಕಲ ಕೈಗಾರಿಕೆಗಳ ಬೆಳವಣಿಗೆ ಆಗಬೇಕಾಗಿದೆ. ಎಂದು ಅಖಿಲ ಭಾರತ ಗ್ರಾಮಕೈಗಾರಿಕೆಗಳ ಸಂಘದ ಸಂಚಾಲಕರಾದ ಶ್ರೀ ಜೆ. ಸಿ. ಕುಮಾರಪ್ಪನವರು ಪಶ್ಚಿಮವಾಹಿನಿಯಲ್ಲಿ ಇಂದು ಸರ್ವೋದಯ ಪಕ್ಷದ ಆರಂಭೋತ್ಸವ ಮಾಡುತ್ತಾ ಹೇಳಿದರು.

ಗ್ರಾಮ ಕೈಗಾರಿಕೆಗಳ ವಿಷಯವಾಗಿ ಅವರು ಮಾತನಾಡುತ್ತಾ, ಇತ್ತೀಚೆಗೆ ಗ್ರಾಮ ಕೈಗಾರಿಕೆಗಳು ಕ್ಷೀಣಿಸುತ್ತಿರುವುದು ವಿಷಾದಕರ. ಬದನವಾಳು ಖಾದಿ ಕೇಂದ್ರವು ಪಾಳು ಕೊಂಪೆಯಂತೆ ಕಾಣಬರುತ್ತಿದೆ ಪರದೇಶಿ ಬಟ್ಟೆ, ಯಂತ್ರದಿಂದ ತಯಾರಾದ ಕಾಗದ, ಗಿರಣಿಯಲ್ಲಿ ಕುಟ್ಟಿದ ಅಕ್ಕಿ, ವನಸ್ಪತಿ ತುಪ್ಪ ಇವುಗಳನ್ನು ಉಪಯೋಗಿಸುವುದು ಸರ್ವೋದಯ ತತ್ವಕ್ಕೆ ವಿರುದ್ಧವಾದುದು ಅಲ್ಲದೆ ಇದರಿಂದ ಗ್ರಾಮಕೈಗಾರಿಕೆಗಳೆಲ್ಲವೂ ಕ್ಷೀಣಿಸುತ್ತಲಿವೆ. ಸರ್ವೋದಯ ತತ್ವಗಳನ್ನು ಜನರು ಆಚರಣೆ ತರಲೇಬೇಕು. ಎಂದು ನುಡಿದರು.

ಸಂತಾನನಿಯಂತ್ರಣಕ್ಕೆ ಮಹಿಳೆಯರ ಒತ್ತಾಯ

ಬೆಂಗಳೂರು ಜ. ೩೦

ಸಂತಾನನಿಯಂತ್ರಣಕ್ಕಾಗಿ ಎಲ್ಲಾ ಅಸ್ಪತ್ರೆ ಕೇಂದ್ರಗಳಲ್ಲೂ "ಬರ್ತ್‌ಕಂಟ್ರೋಲ್ ಕ್ಲಿನಿಕ್" ಗಳನ್ನು ಸ್ಥಾಪಿಸಬೇಕೆಂದು ಬೆಂಗಳೂರಿನಲ್ಲಿ ಸೇರಿರುವ ಅಖಿಲ ಭಾರತ ಮಹಿಳಾ ಸಮ್ಮೇಳನದಲ್ಲಿ ನಿರ್ಣಯವನ್ನು ಮಾಡಲಾಗಿದೆ. ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಲು ಸರ್ಕಾರವು ವ್ಯವಸ್ಥಿತರೀತಿಯಲ್ಲಿ ಕಾರ್ಯಕ್ರಮಕೈಗೊಳ್ಳಬೇಕೆಂದು ಒತ್ತಾಯಪಡಿಸುವ ಮತ್ತೊಂದು ನಿರ್ಣಯವನ್ನು ಅಂಗೀಕರಿಸಲಾಗಿದೆ.

ಪಾನನಿರೋಧನೀತಿ ಪುನಃ ಪರಿಶೀಲನೆ

ಬೆಂಗಳೂರು ಜ. ೨೯

ನಮಗೆ ಪಾನನಿರೋಧದ ಉಪಯುಕ್ತತೆಯಲ್ಲಿ ನಂಬಿಕೆ ಹೋಗಿಲ್ಲ. ಆದರೆ ಇದುವರೆವಿಗೂ ಈ ಬಗ್ಗೆ ಅನುಸರಿಸಿದ ನೀತಿಯಿಂದ ಎಷ್ಟುಫಲ ದೊರಕಿದೆ ಇದನ್ನು ಮುಂದುವರಿಸುವುದು ಎಷ್ಟು ಸಾಧುವಾದುದು ಎಂಬುದನ್ನು ಸದ್ಯದಲ್ಲೇ ಕೂಲಂಕಷವಾಗಿ ಪರಿಶೀಲಿಸಿ ನಮ್ಮ ನೀತಿಯನ್ನು ನಿರ್ಧರಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈದಿನ ಶಾಸನ ಸಭೆಯಲ್ಲಿ ಪಾನನಿರೋಧ ಯೋಜನೆಯು ವಿಫಲವಾಗಿದೆಯೆಂದು ಕೆಲವು ಸದಸ್ಯರು ಮಾಡಿದ ಟೀಕೆಗೆ ಉತ್ತರವಿತ್ತರು.

★

ರಣಜಿತ್

೨-೨-೫೧ ರಿಂದ ಪ್ರತಿದಿನ ೩ ಆಟಗಳು

—: ಫಿಲ್ಮಿಸ್ತಾನ್‌ರವರ :—

ಸಾವರಿಯಾ
(SAWARIYA)

ಪಾತ್ರ :—ರೆಹಮಾನ್, ವೀರಾ ಮತ್ತು ಹಫೀಜ್‌ಖಾನ್

★

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ANNOUNCEMENT

Theatre building old materials and furniture are being sold very cheap.

Apply to :—The New Opara Talkies, Mysore.

ಸಿನಿಮಾ ಕಟ್ಟಡದ ಹಳೇ ಸಾಮಾನುಗಳು ಮತ್ತು ಫರ್ನಿಚರುಗಳೂ ಸುಲಭಬೆಲೆಗೆ ಮಾರಾಟಕ್ಕೆ ಇದೆ.

ವಿವರಕ್ಕೆ ಬರೆಯಿರಿ :— ನ್ಯೂ ಅಪೇರಾ ಟಾಕೀಸ್, ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೨—೧೯೫೧ ನೇ ಗುರುವಾರ [ಸಂಚಿಕೆ ೧೨೬

ಅಂತರರಾಷ್ಟ್ರೀಯ ಅಭಿಮಾನ ಮತ್ತು ಸಹಕಾರ ವಿಶ್ವದಲ್ಲಿ ಅತ್ಯವಶ್ಯಕ

ವಿಶ್ವದಲ್ಲಿ ಆರ್ಥಿಕ ಬೆಳವಣಿಗೆಗೆ ಇಂಜನಿಯರು ಹಾಗು ವಿಜ್ಞಾನಿಗಳ ಪಾತ್ರ ಮುಖ್ಯವಾದುದು

ಅಂತರ ರಾಷ್ಟ್ರೀಯ ಇಂಜನಿಯರ್ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ಫೆ. ೧

ವಿಶ್ವದ ಆರ್ಥಿಕ ಬೆಳವಣಿಗೆಗೆ ಇಂಜನಿಯರುಗಳ ಪಾತ್ರ, ಕರ್ತವ್ಯವು ಇಂದಿನ ಯುಗದಲ್ಲಿ ಅತ್ಯಂತ ಮುಖ್ಯವಾದುದು. ವಿಜ್ಞಾನಿಗಳೂ ಇಂಜನಿಯರುಗಳೂ ಕಲೆತು ಸಹಕಾರ ಮತ್ತು ಮಧುರ ಮೈತ್ರಿಯಿಂದ ಕರ್ತವ್ಯವೆಸಗಿದಲ್ಲಿ ಜನರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದಲ್ಲದೆ, ಮನುಷ್ಯನು ಸಂತುಷ್ಟ ಜೀವನವನ್ನು ನಡೆಸಲು ಸುಖಮಯವಾಗುತ್ತದೆ. ನೀವುಗಳೆಲ್ಲರೂ ಭಾರತಕ್ಕೆ ಬಂದು ವೈಜ್ಞಾನಿಕ ಮತ್ತು ಪ್ರಯೋಗಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ರೀತಿ ಕೆಲಸ ಮಾಡಿದ್ದೀರಿ. ಆದಾಗ್ಯೂ ಭಾರತಕ್ಕೆ ಬಂದಿರುವ ಈ ನಿಯೋಗಗಳ ಸಂಪರ್ಕದಿಂದ ಅಂತರರಾಷ್ಟ್ರೀಯ ಸಹಕಾರ ಮತ್ತು ಅಭಿಮಾನ ಬೆಳೆಯಲವಕಾಶವಾಯಿತು. ಎಂದು ಶ್ರೀಮನ್ಮಹಾರಾಜರು ಇಂದು ಅಂತರರಾಷ್ಟ್ರೀಯ ಇಂಜನಿಯರಿಂಗ್ ಸಮ್ಮೇಳನದ ಮುಕ್ತಾಯ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದರು.

ವಿದ್ಯುಚ್ಛಕ್ತಿ ಮತ್ತು ನೀರಾವರೀ ಇಂಜನಿಯರುಗಳ ಸಮ್ಮೇಳನವು ಜನವರಿ ೯ನೇ ತಾ। ಕೇಂದ್ರ ಸಚಿವ ಶ್ರೀ ರಾಜಗೋಪಾಲಾಚಾರಿಯವರಿಂದ ಪ್ರಾರಂಭವಾಗಿ ಇಂದು ಮೈಸೂರಿನಲ್ಲಿ ಮುಕ್ತಾಯ ಅಧಿವೇಶನವು ನಡೆಯುವುದು ಮೈಸೂರು ಸಂಸ್ಥಾನಕ್ಕೆ ಒಂದು ಹೆಮ್ಮೆಯ ವಿಷಯವಾಗಿದೆ. ಮೈಸೂರು ಸಂಸ್ಥಾನದಲ್ಲಿ ನಡೆದಿರುವ ವಿವಿಧ ಇಂಜನಿಯರಿಂಗ್ ಕೆಲಸಗಳನ್ನು ವಿಶ್ವದ ಇಂಜನಿಯರುಗಳು ನೋಡಲು ಒಂದು ಸಂದರ್ಭ ದೊರೆತಿದುದು ಸಂತೋಷ ವಿಷಯ. ಮೈಸೂರು ಇಂಜನಿಯರುಗಳ ಸಾಮರ್ಥ್ಯವನ್ನು ತೋರ್ಪಡಿಸುವ ಅನೇಕ ಇಂಜನಿಯರು ಉದ್ಯಮಗಳನ್ನೆಸಗಿರುವರು. ಈ ಸಮಯದಲ್ಲಿ ಪ್ರಖ್ಯಾತ ಇಂಜನಿಯರು ಮತ್ತು ರಾಜಕಾರಿಣಿ ಶ್ರೀ ವಿಶ್ವೇಶ್ವರಯ್ಯನವರು ಸಂಸ್ಥಾನದಲ್ಲಿ ಇಂಜನಿಯರಿಂಗ್ ಪ್ರಗತಿಗೆ ಕಾರಣಕರ್ತರೆನ್ನುವುದನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಈ ಉದ್ಯಮಗಳಲ್ಲೆಲ್ಲಾ ಕೃಷ್ಣರಾಜಸಾಗರ ಆಣೆಕಟ್ಟು ಮುಖ್ಯವಾದುದು. ಈ ಜಲಾಶಯ ನಿರ್ಮಾಣದಿಂದ ೧ ಲಕ್ಷ ಎಕರೆ ಬೆಳೆಗೆ ಮತ್ತು ವಿದ್ಯುಚ್ಛಕ್ತಿಗೆ ಉತ್ಪಾದನೆಗೆ ಸಹಾಯಕವಾಗಿರುವುದು. ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಪ್ರಗತಿ ಬೆಳೆದಷ್ಟೂ ಇನ್ನೂ ಹೆಚ್ಚಿನ ವಿದ್ಯುಚ್ಛಕ್ತಿ ಬೇಕಾಗಿರುವುದರಿಂದ ಹೊಸ ಉದ್ಯಮಗಳನ್ನು ಕೈಗೊಳ್ಳಲಾಗುತ್ತಲಿದೆ. ಭಾರತದ ಇತರೆಡೆಗಳಲ್ಲೆಲ್ಲಾ ಅನೇಕ ಆಣೆಕಟ್ಟುಗಳನ್ನು ನಿರ್ಮಿಸಿ ವ್ಯವಸಾಯ ಮತ್ತು ಕೈಗಾರಿಕಾಭಿವೃದ್ಧಿಗೆ ಕೇಂದ್ರ ಸರ್ಕಾರವೂ ಕಾರ್ಯವನ್ನೆಸಗುತ್ತಲಿದೆ. ಇದರಿಂದ ದೇಶದ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕೆ ಉಪಯೋಗಿಸುವುದು, ವಿದ್ಯುಚ್ಛಕ್ತಿಯಿಂದ ಕೈಗಾರಿಕಾ ಬೆಳವಣಿಗೆಯು [illegible]

ಸರ್ಕಾರದ ಆಹಾರ ನೀತಿ ಬಗ್ಗೆ ಸದಸ್ಯರ ಟೀಕೆ

ಬೆಂಗಳೂರು ಜ ೩೧

ಈ ದಿನ ಪ್ರಾತಃಕಾಲ ನಡೆದ ಮೈಸೂರು ಶಾಸನ ಸಭೆ ವಿಶೇಷ ಅಧಿವೇಶನದಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಕೆಲವು ಸದಸ್ಯರು ಸರ್ಕಾರದ ಆಹಾರ ನೀತಿಯನ್ನು ಕಟುವಾಗಿ ಟೀಕಿದರು. ಒಟ್ಟು ಸದಸ್ಯರಂತೂ ಹತೋಟಿ ಆಜ್ಞೆಯನ್ನು ಆತ್ಮ ಘಾತುಕವೆಂದು ಕರೆದರು. ಆಹಾರದ ಮೇಲಿನ ಹತೋಟಿ ಹೋಗುವ ವಿಷಯದಲ್ಲಿ ಅಭಿಪ್ರಾಯಪಡುತ್ತ ಕೆಲವು ಸದಸ್ಯರು ಕೂಡಲೇ ಹೋಗಬೇಕೆಂದೂ ಮತ್ತೆ ಕೆಲವು ಸದಸ್ಯರು ಕೂಡಲೇ ಹೋಗುವುದರಿಂದ ಅನೇಕ ಸಮಸ್ಯೆಗಳು ಉದ್ಭವಿಸುವುದೆಂದೂ ಆದುದರಿಂದ ಅದನ್ನು ವಿವಿಧ ಹಂತಗಳಲ್ಲಿ ತೆಗೆಯುವ ಯೋಜನೆ ಮಾಡಬೇಕೆಂದೂ ಅಭಿಪ್ರಾಯಪಟ್ಟರು. ಸಾಮಾನ್ಯವಾಗಿ ಎಲ್ಲರೂ ಹತೋಟಿ ಇಂದಲ್ಲ ನಾಳೆ ಹೋಗಬೇಕೆನ್ನುವ ಅಭಿಪ್ರಾಯ ಹೊಂದಿದ್ದಂತೆ ಕಂಡು ಬಂದಿತು.

ಆಹಾರ ಶಾಖೆ ಸಚಿವರು ಚರ್ಚೆಗೆ ಉತ್ತರ ಕೊಡುತ್ತಾ ಹತೋಟಿ ಆಜ್ಞೆಗಳು ಸದಾಕಾಲ ಇರಬೇಕೆಂದ ಕೇಂದ್ರ ಅಥವ ಮೈಸೂರು ಸರ್ಕಾರದ ಬಯಕೆಯಲ್ಲವೆಂದೂ ಆದರೆ ನೀತಿ ವಿರಸವಾಗಿರುವುದಕ್ಕೆ ಆಹಾರದ ಮೇಲಿನ ಹತೋಟಿಯೊಂದೇ ಕಾರಣವಲ್ಲವೆಂದು ಸ್ಪಷ್ಟಪಡಿಸಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹತೋಟಿಗಳಿದ್ದು ಅವು ಫಲಕಾರಿಯಾಗಿರುವುದನ್ನು ಸದಸ್ಯರ ಗಮನಕ್ಕೆ ತಂದರು.

ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಭೆ ಆರಂಭದಲ್ಲಿ ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ಹೇಳಿಕೆಯೊಂದನ್ನೀಯುತ್ತ ಕೋಲಾರ ಮತ್ತು ಚಿತ್ರದುರ್ಗದ ಕೆಲವು ಪ್ರದೇಶಗಳಲ್ಲಿ ಸಾಕಷ್ಟು ಮಳೆ ಬಾರದೆ ರಾಗಿ ಮತ್ತು ಜೋಳದ ಬೆಳೆ ಕೆಟ್ಟಿರುವುದನ್ನು ಬಿಟ್ಟರೆ ಸಾಮಾನ್ಯವಾಗಿ ಸಂಸ್ಥಾನದ ೧೯೫೦-೫೧ ನೇ ಸಾಲಿನ ಬೆಳೆ ತೃಪ್ತಿಕರವಾಗಿದೆ. ಎಂದು ಹೇಳಬಹುದು ಎಂದರು.

ಶ್ರೀ ಸಿದ್ದಲಿಂಗಯ್ಯನವರ ರಾಜೀನಾಮೆ ಪ್ರಕರಣ

ಬೆಂಗಳೂರು ಜ. ೩೧

ಆರೋಗ್ಯ ಮಂತ್ರಿಗಳಾಗಿದ್ದ ಶ್ರೀ ಸಿದ್ದಲಿಂಗಯ್ಯನವರು ರಾಜೀನಾಮೆಕೊಟ್ಟ ಬಗ್ಗೆ ಕಾರಣಗಳನ್ನು ತಿಳಿಸಬೇಕಾದುದು ಸರ್ಕಾರದ ಕರ್ತವ್ಯವಲ್ಲ. ಅಷ್ಟೇ ಅಲ್ಲದೆ ಈ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆಕೊಡಬೇಕೆಂದು ಕಡ್ಡಾಯ ಕೂಡ ಇಲ್ಲವೆಂದು ಮುಖ್ಯ ಮಂತ್ರಿಗಳು ಶಾಸನ ಸಭೆಯಲ್ಲಿ ಜನಾಬ್ ಇಮಾಂರವರ ಪ್ರಶ್ನೆಗೆ ಉತ್ತರವಿತ್ತರು.

ಚೀಣಾ ಆಕ್ರಮಣ ರಾಷ್ಟ್ರ

ಕಮ್ಯೂನಿಸ್ಟ್ ಚೀಣಾ ಆಕ್ರಮಣ ರಾಷ್ಟ್ರವೆಂದು ಸಾರುವ ಅಮೆರಿಕದ ನಿರ್ಣಯವನ್ನು ಪ್ರಪಂಚ ಸಂಸ್ಥೆಯ ರಾಜಕೀಯ ಸಮಿತಿಯು ೪೪-೭ ಓಟುಗಳಿಂದ ಅಂಗೀಕರಿಸಿತು.

ಭಾರತ, ಬರ್ಮಾ, ರಷ್ಯ, ಬೈಲೋ-ರಷ್ಯ, ಜೆಕೋಸ್ಲೋವೇಕಿಯ, ಪೋಲೆಂಡ್ ಮತ್ತು ಯುಕ್ರೇನ್ ನಿರ್ಣಯವನ್ನು ವಿರೋಧಿಸಿದವು. ಪಾಕಿಸ್ಥಾನ ಓಟುಮಾಡದೆ ತಟಸ್ಥವಾಗಿತ್ತು.

ಕಮ್ಯೂನಿಸ್ಟ್ ಚೀಣಾವನ್ನು ಆಕ್ರಮಣ ರಾಷ್ಟ್ರವೆಂದು ಸಾರಿದನಂತರ ಚೀಣಾ ವಿರುದ್ಧ ಕಾರ್ಯಾಚರಣೆಯನ್ನು ಎಲ್ಲಾ ಶಾಂತಿ ಮಾರ್ಗಗಳು ವಿಫಲವಾದ ನಂತರ ನಡೆಸಬೇಕೆಂಬ ಲೆಬನಾನ್ ಸೂಚಿಸಿದ ತಿದ್ದುಪಡಿಯೊಡನೆ ನಿರ್ಣಯವು ಅಂಗೀಕಾರವಾಯಿತು.

ಬ್ರಿಟನ್, ಫ್ರಾನ್ಸ್, ಕೆನಡಾ ಮುಂತಾದ ರಾಷ್ಟ್ರಗಳೂ ಈ ನಿರ್ಣಯಕ್ಕೆ ಬೆಂಬಲವಿತ್ತವು.

ಪ್ರಾವಿನ್ಷಿಯಲ್ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟ್

ಬೆಂಗಳೂರು ಜ. ೩೦

ಸಂಸ್ಥಾನದ ಪ್ರೋವಿನ್ಷಿಯಲ್ ಕೋ-ಆಪರೇಟೀವ್ ಇನ್‌ಸ್ಟಿಟ್ಯೂಟಿನ ಸರ್ವಸದಸ್ಯರ ಸಭೆಯು ಮುಂದಿನ ಮಾಹೆ ೧೧ನೇ ತಾ॥ ಮಧ್ಯಾಹ್ನ ೪ ಗಂಟೆಗೆ ನಡೆಯುವುದು.

ಈ ಸಭೆಯಲ್ಲಿ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟಿಗೆ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಕೋಶಾಧಿಕಾರಿಗಳನ್ನು ಮತ್ತು ಆಡಿಟರನ್ನು ಚುನಾಯಿಸಲಾಗುವುದು. ನಂತರ ಕಾರ್ಯನಿರ್ವಾಹಕಮಂಡಲಿ ಮತ್ತು ಸಹಕಾರ ಪತ್ರಿಕೆಗೆ ಸಂಪಾದಕಮಂಡಲಿ ಸಹ ಚುನಾಯಿಸಲಾಗುವುದು.

ಆರೋಗ್ಯ ಸೆಸ್ಸ್?

ಬೆಂಗಳೂರು ಜ ೩೦

ಸಂಸ್ಥಾನದ ಆದಾಯ ಹೆಚ್ಚಿಸಲು ಎಲ್ಲಾ ರೀತಿಯ ತೆರಿಗೆಯಮೇಲೂ ಆರೋಗ್ಯ ಸೆಸ್ ವಿಧಿಸಬೇಕೆಂದು ಮಿತವ್ಯಯಾಧಿಕಾರಿಗಳು ಶಿಫಾರಸುಮಾಡಿರುವುದನ್ನು ಸರಕಾರ ತೀವ್ರವಾಗಿ ಪರಿಶೀಲಿಸುತ್ತದೆ. ಎಂದು ಈ ದಿವಸ ಶಾಸನ ಸಭೆಯಲ್ಲಿ ಆರ್ಥಿಕ ಸಚಿವ ತಿಳಿಸಿದರು.

ತ್ತದೆ. ಇದು ಭಾರತಕ್ಕೆ ವಿಶೇಷ ಉಪಯುಕ್ತವಾಗುತ್ತದೆ. ವಿಶ್ವದ ಎಲ್ಲಾ ಇಂಜನಿಯರುಗಳು ಸೇರಿ ವಿಚಾರ ವಿನಿಮಯ ನಡೆಯಿಸುವುದರಿಂದ ದೇಶವು ಅತ್ಯಂತ ಪ್ರಗತಿಗೆ [illegible] ಸಾಧ್ಯವಾಗುತ್ತದೆ ಎಂದು ಹೇಳಿದರು.

ಶಾಂತಿ ಸಂಧಾನಕ್ಕೆ ಸಿದ್ಧ

ಸಪ್ತರಾಷ್ಟ್ರಗಳ ಸಮ್ಮೇಳನ ನಡೆದು ಸಂಗ್ರಾಮ ಮುಯ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅರಬ್ ಮತ್ತು ಏಷ್ಯಾ ರಾಷ್ಟ್ರಗಳು ಸೂಚಿಸಿರುವ ನಿರ್ಣಯವನ್ನು ಚೈನಾ ಸರ್ಕಾರವು ಮನ್ನಣೆಯಿತ್ತು, ಇದು ಶಾಂತಿ ಸಂಧಾನಕ್ಕೆ ನಿಜವಾದ ಮಾರ್ಗವೆಂದೂ ಅದರಲ್ಲಿ ತಾನು ಭಾಗವಹಿಸಲು ಸಿದ್ಧವಿರುವುದಾಗಿ ಖಚಿತವಾಗಿ ತಮಗೆ ತಿಳಿದು ಬಂದಿರುವುದಾಗಿ ಭಾರತ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಹರಾಯರು ನಿನ್ನೆ ರಾಜಕೀಯ ಸಮಿತಿಯಲ್ಲಿ ತಿಳಿಸುತ್ತ, ಚೈನಾವನ್ನು ಆಕ್ರಮಣಕಾರಿ ಎಂದು ಘೋಷಿಸಬೇಕೆಂದು ಅಮೆರಿಕಾದ ನಿರ್ಣಯವು ಶಾಂತಿ ಮಾರ್ಗಕ್ಕೆ ಭಂಗತರುವುದಾದ್ದರಿಂದ ಅದನ್ನು ಸಮರ್ಥಿಸಕೂಡದೆಂದು ತಿಳಿಸಿರುವರು.

ಕೊರಿಯ ಯುದ್ಧದಲ್ಲಿ ಚೈನಾವು ಪ್ರವೇಶಿಸಬೇಕಾದ ಅವಶ್ಯಕವೇನೆಂಬುದನ್ನು ಪರಿಶೀಲಿಸಬೇಕಾಗಿದೆ. ತನ್ನ ರಾಷ್ಟ್ರದ ಭದ್ರತೆಯನ್ನು ಕಾಪಾಡಲು ಯುದ್ಧದಲ್ಲಿ ಪ್ರವೇಶಿಸಿದೆ. ಆ ರಾಷ್ಟ್ರವನ್ನು ಆಕ್ರಮಣಕಾರಿಯೆಂದು ಹೇಳುವುದು ನ್ಯಾಯ ಬಾಹಿರವಾದುದು. ಅಲ್ಲದೆ ಚೈನಾ ಕಮ್ಯೂನಿಸ್ಟ್ ಸರ್ಕಾರ ಸ್ಥಾನವೇನೆಂಬುದನ್ನು ಗಮನಿಸಬೇಕು. ಪೀಕಿಂಗ್ ಸರ್ಕಾರಕ್ಕೆ ವಿಶ್ವಸಂಸ್ಥೆಯ ಮಾನ್ಯತೆಯೇ ಇಲ್ಲದಿರುವುದರಿಂದ ಖಾಸಗೀ ಸಂಸ್ಥೆಯನ್ನು ಆಕ್ರಮಣಕಾರಿಯೆಂದು ಘೋಷಿಸಲು ವಿಶ್ವಸಂಸ್ಥೆಗೆ ಅಧಿಕಾರವೆಲ್ಲಿದೆ? ಅದಾಗ್ಯೂ ಪ್ರಪಂಚದಲ್ಲೆಲ್ಲಾ ಒಂದು ದೊಡ್ಡ ರಾಷ್ಟ್ರವಾದ ಆ ರಾಜ್ಯವು ಶಾಂತಿಸಂಧಾನಕ್ಕೆ ಸಿದ್ಧವಿರುವಾಗ, ಆಕ್ರಮಣಕಾರಿಯೆಂದು ಘೋಷಿಸುವುದು ದುಷ್ಪರಿಣಾಮಕಾರಿಯಾಗುವುದೆಂದು ಎಚ್ಚರಿಸಿದರು.

ಸಾರ್ವಜನಿಕ ಸಭೆಯಿಂದ ಪೋಲೀಸರು ಹೊರಕ್ಕೆ

ನಿನ್ನೆ ಅಹಮದಾಬಾದಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲು ಪಂಡಿತ ನೆಹರೂರವರು ಬಂದೊಡನೆಯೇ ವೇದಿಕೆಯನ್ನು ಕಾಯಲು ಇದ್ದ ೩೦ ಜನ ಪೋಲೀಸಿನವರನ್ನು, ನೆಹರೂರವರು ಕಂಡು, ಹೊರಕ್ಕೆ ಹೋಗಬೇಕೆಂದು ಆಜ್ಞೆಯಿತ್ತರು.

ರಷ್ಯಾದಿಂದ ಭಾರತಕ್ಕೆ ಗೋಧಿ?

ಭಾರತವು ಗೋಧಿ ಸರಬರಾಜಿಗೆ ರಷ್ಯಾ ದೇಶವನ್ನೇನಾದರೂ ಕೇಳಿದಲ್ಲಿ ಸಮರ್ಪಕವಾದ ಬೆಲೆಯಲ್ಲಿ ಎಷ್ಟು ಬೇಕಾದರೂ ದೊರೆಯುವುದು. ಆದರೆ ಭಾರತವು ರಷ್ಯಾವನ್ನು ಈ ವಿಷಯದಲ್ಲಿ ಪ್ರಾರ್ಥಿಸಿದೆಯೆಂಬುದು ತಿಳಿಯದು. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಭಾರತ ಸರ್ಕಾರದ ಮನಸ್ಸು ಹಿಂತೆಗೆಯುತ್ತಿದೆಯೆಂದು ಹೇಳಲಾಗಿದೆ.

ವನಸ್ಪತಿ ನಿಷೇಧ

ವನಸ್ಪತಿ ನಿಷೇಧಿಸಬೇಕೆಂಬ ನಿರ್ಣಯವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ೧೦೧—೫೬ ಓಟುಗಳಿಂದ ಅಂಗೀಕಾರವಾಯಿತು.

ಭಾಷ್ಪಾಂಜಲಿ

ಮೈಸೂರು ಜ. ೩೧

ಶ್ರೀ ಥಕ್ಕರ್ ಬಾಪಾರವರ ನಿಧನದ ಬಗ್ಗೆ ಸಂತಾಪ ಸೂಚನಾ ನಿರ್ಣಯವನ್ನು ಇಂದು ನಡೆದ ಪೌರಸಭೆಯು ೨ ನಿಮಿಷ ಮೌನದಿಂದ ಅಂಗೀಕರಿಸಿತು.

ಮೈಸೂರಿನಲ್ಲಿ ಕಾಲರಾ ಉಪದ್ರವವಿಲ್ಲ

ಮೈಸೂರು ಜ. ೩೧

ಮೈಸೂರಿನಲ್ಲಿ ಕಾಲರಾ ಉಪದ್ರವದ ವಿಷಯವಾಗಿ [illegible] ಪುರಸಭಾಧಿವೇಶನ ಸದಸ್ಯರು ಪ್ರಶ್ನಿಸಲಾಗಿ, ಮಹದೇಶ್ವರನ ಜಾತ್ರೆಗೆ ಹೋಗಿದ್ದವರಲ್ಲಿ ಕೆಲವರಿಂದ ಈ ರೋಗವು ನಗರಕ್ಕೆ ಬಂದಿತೆಂದೂ ಇಹಲ್ವರೆಗೆ ೧೬ ಜನರಿಗೆ ರೋಗತಗುಲಿ ೫ ಜನ ಮೃತಹೊಂದಿದರೆಂದೂ. ರೋಗವು ಹರಡದಂತೆ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗಿ ಈಗ ಎಲ್ಲಿಯೂ ರೋಗವಿಲ್ಲ. ಯಾರೂ ಗಾಬರಿ ಪಡಬೇಕಾಗಿಲ್ಲವೆಂದು ವಿವರಣೆಯನ್ನು ಕೊಡಲಾಯಿತು.

ಭಾರತ ವ್ಯಾಪಾರಿಗೆ ಬ್ರಿಟನ್ನಿನಲ್ಲಿ ಶಿಕ್ಷೆ

ಭಾರತದ ವರ್ತಕನಾದ ವಿರಲ್ ಸೀತಾರಾಮ ಬನರಾಸಿ ಮತ್ತು ಆತನ ಹೆಂಡತಿ ಶಾಂತಿ ಎಂಬುವವರು ಬ್ರಿಟನ್ನಿಂದ ರಹದಾರಿಯಿಲ್ಲದೆ ೯ ತೊಲ ಚಿನ್ನವನ್ನು ತೆಗೆದುಕೊಂಡು ಹೋಗಲು ಯತ್ನಿಸಿದರೆಂಬ ಆಪಾದನೆ ಮೇಲೆ ಇಬ್ಬರಿಗೂ ಒಂದು ವರ್ಷ ಶಿಕ್ಷೆಯನ್ನು ವಿಧಿಸಲಾಗಿದೆ. ಇವರ ಸಂಬಂಧಿ ೧೬ ವರ್ಷದ ಸುಲೋಚನಾ ಚಟರ್ಜಿ ಎಂಬುವವಳ ಮೇಲೂ ಆಪಾದನೆಯಾಗಿ ಶರತ್ತುಗಳ ಮೇಲೆ ಬಿಡಲಾಯಿತು.

ಆಸ್ತಿಪಾಸ್ತಿಗಳ ವಿವರಣೆ

ಸರ್ಕಾರಿ ನೌಕರರು ವಿಶೇಷವಾಗಿ ಆಸ್ತಿಯನ್ನು ಲಂಚಕೋರತನ ಮುಂತಾದುವುಗಳಿಂದ ಸಂಪಾದಿಸುವುದನ್ನು ತಡೆಗಟ್ಟಲು ಸರ್ಕಾರಿ ಕೆಲಸಕ್ಕೆ ಸೇರುವಾಗ ತಮ್ಮ ಆಸ್ತಿಯ ವಿವರವನ್ನು ಕೊಡಬೇಕಲ್ಲದೆ ತಾವು ಕೆಲಸದಲ್ಲಿರುವಾಗ ಚರಸ್ಥಿರ ಆಸ್ತಿಗಳ ವ್ಯವಹಾರವನ್ನೂ ಸಹ ಸರ್ಕಾರಕ್ಕೆ ತಿಳಿಸಬೇಕೆಂದು ಪಾಕಿಸ್ಥಾನ ಪಂಜಾಬ ಸರ್ಕಾರವು ಆಜ್ಞೆಮಾಡಿರುವುದಾಗಿ ವರದಿಯಾಗಿದೆ.

ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಕೇಂದ್ರ

ಕಲ್ಕತ್ತಾದಲ್ಲಿ ಒಂದು ಗರ್ಭಿಣಿ ಮತ್ತು ಶಿಶು ಸಂರಕ್ಷಣಾಕೇಂದ್ರವನ್ನು ಸ್ಥಾಪಿಸಲು ವಿಶ್ವಸಂಸ್ಥೆಯು ೧೦ ಲಕ್ಷ ಡಾಲರುಗಳನ್ನು ಕೊಡುವುದಾಗಿ ತಿಳಿಯಬರುತ್ತದೆ. ಭಾರತವೂ ಸುಮಾರು ೪೫ ಲಕ್ಷ ರೂಪಾಯಿಗಳನ್ನು ಈ ಕೇಂದ್ರಕ್ಕೆ ವೆಚ್ಚಮಾಡುವುದು.

ವಿರೋಧ ಪ್ರದರ್ಶನ

ರೇಷನ್ ಪ್ರಮಾಣವನ್ನು ಕೇಂದ್ರ ಸರ್ಕಾರವು ಕಡಿತ ಮಾಡಿರುವುದನ್ನು ಪ್ರತಿಭಟಿಸಿ ಅಹಮದಾಬಾದಿನಲ್ಲಿ ಪಂಡಿತ ನೆಹರೂರವರ ನಿವಾಸದ ಮುಂದೆ ಪ್ರದರ್ಶನ ನಡೆಸಲು ಹೊರಟ ಐದು ಸೋಷಿಯಲಿಸ್ಟರ ಗುಂಪುಗಳನ್ನು ಪೋಲೀಸಿನವರು ಅಡ್ಡಿಪಡಿಸಿದರು. ಮಧ್ಯರಾತ್ರಿಯವರೆಗೂ ಎಲ್ಲರೂ ರಸ್ತೆಯಲ್ಲೇ ಕುಳಿತಿದ್ದರು.

ಸುಳ್ಳು ವಯಸ್ಸು ಕೊಟ್ಟವರ ಮೇಲೆ ಕಾರ್ಯಕ್ರಮ

ಬೆಂಗಳೂರು ಜ. ೩೧

ಸರ್ಕಾರಿ ಅಧಿಕಾರಿಗಳು ಸುಳ್ಳು ವಯಸ್ಸು ಕೊಟ್ಟಿರುವ ೨೭೨ ಪ್ರಸಂಗಗಳು ವರದಿಯಾಗಿದೆ. ಇವುಗಳಲ್ಲಿ ೩-೪ ಕೇಸುಗಳನ್ನು ಇತ್ಯರ್ಥಮಾಡಲಾಗಿದೆ. ಅವುಗಳಲ್ಲಿ ಒಂದು ಪುನರ್ವಿಮರ್ಶೆಯಲ್ಲಿದೆ. ಎಂದು ಮುಖ್ಯಮಂತ್ರಿಗಳು ಶಾಸನ ಸಭೆಯ ಅಧಿವೇಶನದಲ್ಲಿ ತಿಳಿಸಿದರು.

CITY MUNICIPALITY MYSORE

Dated 29th January 51

QUOTATION NOTIFICATION

Re: Construction of night soil carts by using peneumatic tyres and equipment.

Quotations are called for the Manufacture and supply of sixteen night soil carts so as to reach this office on or before the *5th February 1951*. Particulars may be had in the office on all working days.

(*Sd*) C. Narasimha Moorty,
Municipal Commissioner.

ಒಲಂಪಿಯಾ

೧-೨-೫೧ರಿಂದ ಪ್ರತಿದಿನ ೩ ಆಟಗಳು

ಶನ್ ಸಾರಿಯಾ

ಭೂಮಿಕೆ:—ಗೀತಾಬಾಲ, ಓಂಪ್ರಕಾಶ್, ಕುಲದೀಪ್, ರಾಮಸಿಂಗ್

ಬೆಳಗಿನ ಪ್ರದರ್ಶನ

೨-೨-೫೧ರಿಂದ ೩ ದಿನ ಮಾತ್ರ

ನ್ಯೂಥಿಯೇಟರ್ಸ್‌ರವರ—* ಕಾಶಿನಾಥ್ *

ANNOUNCEMENT

Theatre building old materials and furniture are being sold very cheap.

Apply to :—The New Opara Talkies, Mysore.

ಸಿನಿಮಾ ಕಟ್ಟಡದ ಹಳೇ ಸಾಮಾನುಗಳು ಮತ್ತು ಫರ್ನಿಚರುಗಳೂ ಸುಲಭಬೆಲೆಗೆ ಮಾರಾಟಕ್ಕೆ ಇದೆ.

ವಿವರಕ್ಕೆ ಬರೆಯಿರಿ :— ನ್ಯೂ ಅಪೇರಾ ಟಾಕೀಸ್, ಮೈಸೂರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

Reg. No. M. 5318 ದಿನ ಪತ್ರಿಕೆ Phone: 524

ಸಮಾಚಾರ

SAMACHARA, MYSORE

ಸಂಪಾದಕ ಜಿ. ಎಲ್. ಸ್ವಾಮಿ

ಸಂಪುಟ ೧ | ೩—೨—೧೯೫೧ ನೇ ಶನಿವಾರ | ಸಂಚಿಕೆ ೧೨೭

ಮೈಸೂರು ನಗರದಲ್ಲಿ ಕಾಲರಾ ಹರಡದಂತೆ ಮುಂಜಾಗ್ರತೆ ಕಾರ್ಯಕ್ರಮ

ಸುಮಾರು ೧೭೦ ಹೋಟೇಲುಗಳನ್ನು ಒಂದುವಾರ ಮುಚ್ಚಲು ನೋಟೀಸ್ ಕೊಡಲಾಗಿದೆ-

ಜನವರಿ ೩೦ ರ ವರೆಗೆ ೧೭ ಜನಕ್ಕೆ ರೋಗ ತಗಲಿ ೬ ಮರಣ

ಮೈಸೂರು ಫೆ. ೩

ಮಹದೇಶ್ವರನ ಜಾತ್ರೆಯ ಪರಿಣಾಮವಾಗಿ ಮೈಸೂರು ನಗರದಲ್ಲಿ ೧೬ ಜನರಿಗೆ ಕಾಲರಾ ತಗುಲಿ ೬ ಜನರು ಮೃತರಾದರು. ಉಳಿದವರು ಆ ಡಿ ಆಸ್ಪತ್ರೆಯಲ್ಲಿ ಗುಣಮುಖರಾಗುತ್ತಲಿರುವರು. ೩೦ ನೇ ತಾರೀಖಿನಿಂದ ಈಚೆಗೆ ಯಾವ ಹೊಸ ಕೇಸುಗಳೂ ಕಾಣಬಂದಿಲ್ಲ ರೋಗವು ಹರಡದಂತೆ ಪೌರಸಭೆಯ ಆರೋಗ್ಯ ಶಾಖೆಯವರು ಮುಂಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿರುವರು. ಆರೋಗ್ಯ ದೃಷ್ಟಿಯಿಂದ ಉತ್ತಮ ರೀತಿಯಲ್ಲಿಲ್ಲದ ಸುಮಾರು ೧೭೦ ಹೋಟೇಲುಗಳನ್ನು ಒಂದು ವಾರ ಮುಚ್ಚಬೇಕೆಂದು ನೋಟೀಸು ಕೊಟ್ಟಿರುವರು. ಇತರ ಸುಮಾರು ೧೩೦ ಹೋಟೇಲುಗಳನ್ನೆಲ್ಲಾ ಸ್ವಚ್ಛವಾಗಿಟ್ಟುಕೊಳ್ಳಲು ಎಚ್ಚರಿಕೆಯನ್ನಿತ್ತು ಅವರಿಗೆ ತಕ್ಕ ಆರೋಗ್ಯರಸಾಯನಿಕ ದ್ರವ್ಯ ಪದಾರ್ಥಗಳನ್ನು ಸರಬರಾಯಿ ಮಾಡುತ್ತಲಿರುವರು ನಗರದ ಅನೇಕ ಭಾಗಗಳಲ್ಲಿ ಕಾಲರಾ ಇನಾಕ್ಯುಲೇಷನ್ ನಡೆಯುತ್ತಲಿದೆ. ಈಗಾಗಲೇ ಸುಮಾರು ೩,೦೦೦ ಇನಾಕ್ಯುಲೇಷನ್ ಮಾಡಲಾಗಿದೆ. ಹುಣಸೂರು ಟಿ. ನರಸೀಪುರ ಮತ್ತು ನಂಜನಗೂಡು ರಸ್ತೆಗಳಿಂದ ಹಾಲು, ಮೊಸಲು ಬರುವುದನ್ನು ತಡೆಗಟ್ಟಿರುವರು. ಹೊರಗಿನಿಂದ ಬರುವವರಿಗೆ ಇನಾಕ್ಯುಲೇಷನ್ ಮಾಡಲಾಗುತ್ತಲಿದೆ.

ಪದವೀಧರರಿಗೆ ಶ್ರೀ ರಾಜಮನ್ನಾರರವರ ಹಿತೋಕ್ತಿ

ಮೈಸೂರು ಫೆ. ೨

ಈದಿನ ಬೆಳಗ್ಗೆ ಕ್ರಾಫರ್ಡ್ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭವು ನೆರವೇರಿತು ಶ್ರೀಮನ್ಮಹಾರಾಜರು ಅಗ್ರಾಸನವನ್ನು ವಹಿಸಿ ಸುಮಾರು ೨,೦೦೦ ಪದವೀಧರರುಗಳಿಗೆ ಪ್ರಶಸ್ತಿಗಳನ್ನು ಕೊಟ್ಟರು ವಿಶೇಷ ತರಗತಿಗಳಲ್ಲಿ ಉತ್ತೀರ್ಣರಾದವರಿಗೆ ಪದಕಗಳನ್ನೂ ಮತ್ತು ಇತರ ಪಾರಿತೋಷಕಗಳನ್ನೂ ವಿನಿಯೋಗಿಸಿದರು. ಸುಮಾರು ೭೨೦ ಜನ ಮಹಿಳೆಯರು ಪದವಿಗಳನ್ನು ಪಡೆದರು.

ಮದರಾಸ್ ಹೈ-ಕೋರ್ಟಿನ ಶ್ರೇಷ್ಠನ್ಯಾಯಾಧೀಶರಾದ ಶ್ರೀ ಪಿ. ವಿ. ರಾಜಮನ್ನಾರ್‌ರವರು ಪದವೀಧರರನ್ನುದ್ದೇಶಿಸಿ ಭಾಷಣ ಮಾಡಿದರು:

ಭಾರತದ ಸಂಸ್ಥಾನಗಳ ಪೈಕಿಯಲ್ಲೆಲ್ಲಾ ಪ್ರಥಮತಃ ಸ್ಥಾಪಿಸಲಾದ ಮೈಸೂರು ವಿಶ್ವವಿದ್ಯಾಲಯವು ಕಲ್ಕತ್ತ, ಮದರಾಸ್, ಬೊಂಬಾಯಿ ವಿಶ್ವವಿದ್ಯಾಲಯಗಳಿಗಿಂತಲೂ ಇತ್ತೀಚೆಗೆ ಜನ್ಮತಾಳಿತಾದರೂ ಇದು ಅವುಗಳಿಗೆ ಸರಿಸಮನಾದ ಖ್ಯಾತಿಯನ್ನು ಗಳಿಸಿದೆ ಸರ್ ಎಂ ವಿಶ್ವೇಶ್ವರಯ್ಯನವರು ಇದರ ಸ್ಥಾಪನೆ ಮತ್ತು ಪ್ರಗತಿಗೆ ಸತತವಾಗಿ ಶ್ರಮಿಸಿದ್ದಾರೆ

ದಿವಂಗತ ಸರ್ದಾರ್ ವಲ್ಲಭಾಯಿ ಪಟೇಲರ ದೇಶಭಕ್ತಿ ಸ್ವಾರ್ಥತ್ಯಾಗ ಮತ್ತು ಶಕ್ತಿ ಸಾಹಸಗಳನ್ನು ನಾವು ಸ್ಮರಿಸಿಕೊಳ್ಳುವುದಲ್ಲದೆ ಇಲ್ಲಿ ನೆರೆದಿರುವ ಎಲ್ಲರೂ ಅವರ ಉದಾತ್ತ ಧ್ಯೇಯಗಳನ್ನೂ ಮತ್ತು ಮೇಲ್ಪಂಕ್ತಿಯನ್ನೂ ಅನುಸರಿಸಬೇಕು.

ಇಂದು ವಿಶ್ವದ ಪರಿಸ್ಥಿತಿಯು ಬಹಳ ಉತ್ಕಟಾವಸ್ಥೆಯಲ್ಲಿದೆ. ಎಲ್ಲೆಡೆಯಲ್ಲಿಯೂ ಅಶಾಂತಿ, ಅಸೂಯೆ, ಅನೀತಿಗಳು ತಲೆದೋರಿ ದೇಶದ ರಾಜಕೀಯ, ಆರ್ಥಿಕ ಭದ್ರತೆಗೆ ಒಲವಾದ ಪೆಟ್ಟು ತಗುಲಿದೆ ಶಾಂತಿ ಎಂಬುದು ನಾಮ ಮಾತ್ರದಲ್ಲಿ ಉಳಿದಿದೆ. ಪ್ರಪಂಚದಾದ್ಯಂತ ನಿರಾಶೆಯು ತಾಂಡವಾಡುತ್ತಿದೆ ಭಾರತವೂ ಸಹ ಪ್ರಪಂಚದ ಪರಿಸ್ಥಿತಿಯ ಬದಲಾವಣೆಗಳಿಂದ ತೊಡಕಿಗೆ ಸಿಕ್ಕಿದೆ. ಈ ಸನ್ನಿವೇಶದಲ್ಲಿ ಯಾವ ರಾಷ್ಟ್ರವೂ ಏಕಾಂಗಿಯಾಗಿರುವುದು ಸಾಧ್ಯವಿಲ್ಲ. ಆದುದರಿಂದ ಭಾರತವೂ ಈ ಆಂದೋಳನದಲ್ಲಿ ಸಿಕ್ಕಿ ತೊಳಲುತ್ತಿದೆ. ಅನೇಕ ವರ್ಷಗಳಿಂದ ಪರದಾಸ್ಯದಲ್ಲಿದ್ದು ಈಗತಾನೆ ಸ್ವಾತಂತ್ರ್ಯಗಳಿಸಿರುವ ನಮ್ಮ ದೇಶದ ಒಳ ಸಮಸ್ಯೆಗಳ ಮೇಲೂ ವಿಶ್ವದ ಇತರ ರಾಷ್ಟ್ರಗಳ ಸಮಸ್ಯೆ ಮತ್ತು ಘರ್ಷಣೆಗಳು ತಮ್ಮ ಪ್ರಭಾವವನ್ನು ಬೀರಿವೆ. ಇಂದಿನ ಪರಿಸ್ಥಿತಿಯಲ್ಲಿ ಯುವಕರಾದ ನೀವು ಮಹತ್ತರವಾದ ಪಾತ್ರವನ್ನು ವಹಿಸುವ ಸನ್ನಿವೇಶವೊದಗಿದೆ. ನೀವುಗಳು ವಿಶ್ವ ಪರ್ಯಟನೆ ಮಾಡಿ ಪ್ರಕೃತ ಪರಿಸ್ಥಿತಿಗಳ ಬಗ್ಗೆ ಪರಿಶೋಧನೆ ನಡೆಸಿ ನಿಮ್ಮಜ್ಞಾನವನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸದವಕಾಶವೊದಗಿದೆ

ನಮ್ಮ ದೇಶದ ಯುವಕರು ಜೀವನವು ಒಂದು ಮಹತ್ತಾದ ಸಾಹಸವೆಂದು ಭಾವಿಸಿ ಪ್ರಗತಿ ಪಥದಲ್ಲಿ ನಡೆಯಬೇಕು. ರಾಜಾಜಿಯವರು ಬೋಧಿಸಿರುವಂತೆ ಜೀವನವು ಒಂದು ಪರೋಪಕಾರಾರ್ಥ ಪ್ರವಾಸ ಈ ಪ್ರವಾಸದಲ್ಲಿ ಒದಗಬಹುದಾದ ಎಲ್ಲ ಎಡರುತೊಡರುಗಳನ್ನೂ ನಾವು ಧೈರ್ಯವಾಗಿಯೂ, ಶಾಂತಚಿತ್ತರಾಗಿಯೂ ಎದುರಿಸಬೇಕು ಮತ್ತು ನಮ್ಮ ಪ್ರಯತ್ನಗಳು ವಿಫಲವಾದಲ್ಲಿ ಆದರಿಂದ ಕುಗ್ಗಬಾರದು ಮತ್ತು ಅನೀತಿಗೆ ಅವಕಾಶವಿರಬಾರದು, ಇದೇ ಜೀವನಪಥದಲ್ಲಿ ಅನುಸರಿಸಬೇಕಾದ ಮಾರ್ಗ. ಈ ಗುರಿಯಲ್ಲಿ ನಮ್ಮ ಪೂರ್ವಿಕರು ಬಹು ಮಟ್ಟಿಗೆ ಮುಂದುವರಿದಿದ್ದರು

ನಮ್ಮ ದೇಶದ ನಾವಿಕರು ಒಳ್ಳೆಯ ಖ್ಯಾತಿಯನ್ನು ಪಡೆದು ಏಷ್ಯ ಮತ್ತು ಯೂರೋಪುಗಳೊಡನೆ ವ್ಯಾಪಾರ ಸಂಬಂಧವನ್ನು ಬೆಳಸಿ ಅನೇಕ ಕಡೆ ವಸಾಹತುಗಳನ್ನು ಸ್ಥಾಪಿಸಿದ್ದರು ನೂರಾರು ಸಾವಿರ ವರ್ಷಗಳ ಕಾಲ ಭಾರತವು ವಿಶ್ವದಲ್ಲಿ ಪ್ರಮುಖಸ್ಥಾನವನ್ನು ಆಕ್ರಮಿಸಿತ್ತು ಇದರಿಂದ ನಮ್ಮ ದೇಶದ ಸಂಸ್ಕೃತಿಯನ್ನು ಹೊರದೇಶಗಳಲ್ಲಿ ಹರಡಲೂ ಅನುಕೂಲವಾಗಿತ್ತು.

ನಿಮ್ಮಲ್ಲಿ ಅನೇಕರು ಸರ್ಕಾರಿ ಉದ್ಯೋಗವನ್ನು ಪಡೆಯಲು ಪ್ರಯತ್ನಿಸಿ ನಿರಾಶರಾಗಲು ಸಿದ್ಧರಿರಬೇಕು. ಕೆಲವರಿಗೆ ಸರ್ಕಾರಿ ಉದ್ಯೋಗ ದೊರೆಯಬಹುದಾದರೂ, ಅದಕ್ಕಾಗಿಯೇ ಕಾತರಿಸುವುದು ತಪ್ಪಬೇಕು ಅನೇಕ ಪದವೀಧರರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡನಂತರ ಸರ್ಕಾರೀ ಉದ್ಯೋಗ ದೊರೆಯದ ಬಗ್ಗೆ ನಿರಾಶೆಗೊಳ್ಳುವರು ಗುಮಾಸ್ತೆ ಕೆಲಸವನ್ನು ಪಡೆಯುವುದೇ ವಿಶ್ವವಿದ್ಯಾಲಯದ ವಿದ್ಯಾಭ್ಯಾಸ ಪಡೆಯುವುದರ ಗುರಿಯಾದರೆ ಅಂತಹ ವಿದ್ಯಾಭ್ಯಾಸವು ವ್ಯರ್ಥವೇ ಸರಿ ಉದರಭರಣದ ಮಾರ್ಗವೇನೆಂಬ ಪ್ರಶ್ನೆ ಏಳುವುದು ಸಹಜ ಆದರೆ ವಿಶ್ವವಿದ್ಯಾಲಯದ ವಿದ್ಯಾಭ್ಯಾಸದ ಗುರಿಯೇನೆಂಬುದನ್ನು ಅರಿತರೆ ಮೇಲ್ಕಂಡ ಪ್ರಶ್ನೆಯು ಉದ್ಭವಿಸುವುದಿಲ್ಲ. ಕಾಲೇಜೀವನದ ಮಾರ್ಗವನ್ನು ಕಲ್ಪಿಸುವುದು, ವಿಶ್ವವಿದ್ಯಾಲಯದ ಶಿಕ್ಷಣದ ಗುರಿಯಲ್ಲ ಸಾಹಿತ್ಯ, ಕಲೆ, ನೀತಿ ಧರ್ಮ ಮೊದಲಾದವುಗಳಲ್ಲಿ ಉಚ್ಚ ಧ್ಯೇಯ ಸಾಧನೆಗಳ ಸಂಶೋಧನೆ ನಡೆಸಿ ಅವುಗಳು ಅಭಿವೃದ್ಧಿಗೊಳ್ಳುವಂತೆ ಮಾಡುವುದೇ ವಿಶ್ವವಿದ್ಯಾಲಯದ ಶಿಕ್ಷಣದ ಗುರಿಯಾಗಬೇಕು. ಈ ದೃಷ್ಟಿಯಿಂದ ವಿಶ್ವವಿದ್ಯಾಲಯದ ಶಿಕ್ಷಣ ಪದ್ಧತಿಯನ್ನು ಮಾರ್ಪಡಿಸುವುದನ್ನು ನಾನು ಸ್ವಾಗತಿಸುತ್ತೇನೆ

ಶಿಕ್ಷಣ ಕ್ರಮದಲ್ಲಿ ಭಾರತದ ಚರಿತ್ರೆಗೆ ಪ್ರಾಧಾನ್ಯತೆ ಕೊಡಬೇಕು ಭಾಷಾ ಸಮಸ್ಯೆಯು ಅಷ್ಟೇನೂ ಪ್ರಧಾನವಲ್ಲ. ವಿಶ್ವವಿದ್ಯಾಲಯದ ಶಿಕ್ಷಣವನ್ನು ಪಡೆದವರು ಸಂಸ್ಕೃತಿಯ ರಕ್ಷಕರೂ ಮತ್ತು ಆರಾಧಕರೂ ಆಗಿರುವರು. ಅವರು ಜನಜಾಗೃತಿಯನ್ನುಂಟುಮಾಡಬೇಕು ಸಾಮಾಜಿಕ, ಆರ್ಥಿಕ ಸಮಾನತೆಯು ನೆಲೆಸುವಂತೆ ಮಾಡಬೇಕು ಪದವೀಧರರು ಲಲಿತ ಕಲೆಗಳಲ್ಲಿ ಯಾವುದಾದರೊಂದನ್ನು ಅಭ್ಯಾಸಮಾಡಬೇಕು. ಮತ್ತು ನೀತಿಯುತವಾದ ಹಾಸ್ಯರಸವನ್ನೂ ಅನುಷ್ಠಾನಕ್ಕೆ ತರಬೇಕು.

ಇತರರ ಐಶ್ವರ್ಯಕ್ಕಾಗಿ ಆಸೆ ಪಡಬೇಡ, ಯಾವುದನ್ನು ನೀನು ತ್ಯಾಗ ಮಾಡುವೆಯೋ ಅದರಿಂದಲೇ ನಿನ್ನ ಆನಂದವು ಬೆಳೆಯುವುದು - ಎಂಬ ಉಪನಿಷದ್ವಾಕ್ಯವೇ ಇಂದಿನ ಸಮಸ್ತ ಕಷ್ಟಗಳಿಗೂ ಪರಿಹಾರೋಪಾಯವು. ಈ ಧ್ಯೇಯವು ಕೇವಲ ವಿದ್ಯಾವಂತರು ಮತ್ತು ಪದವೀಧರರಲ್ಲಿಯೇ ಇರುವುದಿಲ್ಲ ಗ್ರಾಮಾಂತರಗಳಲ್ಲಿರುವ ರೈತರುಗಳು ತಮ್ಮ ಜೀವನದ ಪ್ರತಿಯೊಂದು ಅಂತಸ್ಥನಲ್ಲಿಯೂ ಈಶ್ವರನ ಸಾನ್ನಿಧ್ಯವನ್ನು ಅರಿತುಕೊಂಡೇ ನಡೆಯುವರು ಪ್ರತಿಯೊಂದು ಜನಾಂಗವೂ ತನಗೆ ಇರುವ ಐಶ್ವರ್ಯದಲ್ಲಿಯೇ ತೃಪ್ತಿಹೊಂದಿ ಇತರರ ಧನಕ್ಕೆ ಆಸೆಪಡದಿದ್ದರೆ ಪ್ರಪಂಚದಲ್ಲಿ ಯುದ್ಧದ ಸಂಭವವೇ ಇರುವುದಿಲ್ಲ. ವಿಜ್ಞಾನದ ಮಹಾ ಸಂಶೋಧನೆಗಳೆಲ್ಲವೂ ಮಾನವ ಜೀವನದ ಪರಿಪೂರ್ಣತೆಗಾಗಿ ವಿನಿಯೋಗವಾಗುವುವು ಇಲ್ಲವಾದರೆ ಘೋರ ಸಂಗ್ರಾಮಗಳು ಒಂದನ್ನೊಂದು ಹಿಂಬಾಲಿಸಿ ಬರುತ್ತಲೇ ಇರುವುವು ಈ ಉದಾತ್ತ ಧ್ಯೇಯಕ್ಕೆ ಅನುಗುಣವಾಗಿ ಪರಿವರ್ತನೆಯು ಜಗತ್ತಿನಲ್ಲಿ ಸಂಭವಿಸುವುದೆಂಬ ವಿಶ್ವಾಸವು ನನಗಿರುತ್ತದೆ. ಭಾರತ ದೇಶವು ಅದರಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುವುದರಲ್ಲಿ ಸಂಶಯವಿಲ್ಲ ಈ ಸಂದೇಶವು ನಿಮ್ಮ ಕಿವಿಗಳಲಿ ಪ್ರತಿಧ್ವನಿ ಮಾಡುತ್ತಿರುವವರೆಗೂ ನೀವು ನಿಮಗಾಗಲೀ ಮಾತೃಭೂಮಿಗಾಗಲೀ, ಎರಡು ಬಗೆಯಲು ಸಾಧ್ಯವಿಲ್ಲ ಪರಮಾತ್ಮನು ನಿಮ್ಮೆಲ್ಲರನ್ನೂ ಆಶೀರ್ವದಿಸಲಿ.

ರೇಷನ್ ಕೇವಲ ೭೦ ರಷ್ಟು ಕೋತಾ

ಇಂದಿನ ಆಹಾರ ಅಭಾವ ಪರಿಸ್ಥಿತಿಯನ್ನು ಎದುರಿಸಲು ರಾಜಸ್ಥಾನ ಸರ್ಕಾರವು ಶೇಕಡ ೭೦ರಷ್ಟು ರೇಷನ್ ಕೋತಾ ಮಾಡಿದೆ ಪಟ್ಟಣಗಳಲ್ಲಿ ಆಹಾರ ಪಡಿತರವನ್ನು ೧೬ ಔನ್ಸ್‌ಗಳಿಂದ ೬ ಔನ್ಸ್‌ಗಳಿಗೆ ಇಳಿಸಲಾಗಿದೆ ಇತರ ಪ್ರದೇಶಗಳಲ್ಲಿ ಹಳ್ಳಿಗಳಲ್ಲಿ ಆಹಾರ ಸರಬರಾಜನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಕಾಂಗ್ರೆಸ್ ಪಕ್ಷ ವಿನಹ ಎಲ್ಲಾ ಪಕ್ಷಗಳೂ ಒಟ್ಟುಗೂಡಿ ಆಹಾರ ಕೋತಾಮಾಡಿರುವುದನ್ನು ಪ್ರತಿಭಟಿಸುತ್ತಲಿರುವುದಾಗಿ ತಿಳಿಯಬಂದಿದೆ.

ಸತ್ಕಾರಕೂಟ

ಮೈಸೂರು ಫೆ. ೩

ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ ಸಮ್ಮೇಳದ ಪ್ರತಿನಿಧಿಗಳ ಗೌರವಾರ್ಥವಾಗಿ ಮುಖ್ಯಮಂತ್ರಿಯವರು ನಾಳೆ ಸಂಜೆ ೫-೩೦ ಗಂಟೆಗೆ ಚಾಮುಂಡಿ ಜಮಖಾನದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿರುವರು.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧಮಾಡಿದಂತೆ **೧೮ನೇ ಯಾತ್ರೆಯ** ಟೂರಿಸ್ಟ ರೈಲ್ವೆ ಟಿಕೇಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆಟಿಕೇಟುಗಳನ್ನು ಪಡೆದ ಯಾತ್ರಿಕರು ತಾ|| ೧೧-೨ ೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿ ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಖಾಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ

ತಾ|| ೨೫ ೨ ೫೧ ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨ ೫೧ನೇ ದಿವಸ ಒಳ್ಳೆ [illegible] ಸ್ಥಾನದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧-೪ ೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು

ಹೆಚ್ಚಿನ ತರಗತಿಯ ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್ ಮಾಡಲಾಗುವುದು. ಸುಸ್ತಿ ಆದಲ್ಲಿ ಖಂಡಿತವಾಗಿ ಟಿಕೇಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦ ೨-೦ ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟ್)
ಕುಡಚಿ ಮಾರ್ಗ ಎಂ ಎಸ್ ಎಂ. ರೈಲ್ವೆ.

ಸೂ ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ| ಪಿ ಟಿ ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

ಮುಂದಿನ ಎ. ಐ ಸಿ. ಸಿ. ಅಧಿವೇಶನ

ಮುಂದಿನ ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ಏಪ್ರೆಲ್ ಅಂತ್ಯದಲ್ಲಿ ಅಥವಾ ಮೇ ಪ್ರಾರಂಭದಲ್ಲಿ ಕಲ್ಕತ್ತಾದಲ್ಲಿ ನಡೆಯಬಹುದೆಂದು ಹೇಳಲಾಗಿದೆ

ಬಲಾತ್ಕಾರದಿಂದ ಅಮೆರಿಕಾ ಓಟು ಪಡೆಯಿತು

ಕಮ್ಯುನಿಸ್ಟ್ ಚೀಣಾವನ್ನು ಆಕ್ರಮಣರಾಷ್ಟ್ರವೆಂದು ಘೋಷಿಸಲು ಅಮೆರಿಕದ ನಿರ್ಣಯಕ್ಕೆ ಬೆಂಬಲವೀಯುವಂತೆ ಅಮೆರಿಕಾವು ಅನೇಕ ರಾಷ್ಟ್ರಗಳನ್ನು ವಿವಿಧ ರೀತಿಯಲ್ಲಿ ಹೆದರಿಸಿ ಬಲಾತ್ಕರಿಸಿತೆಂದು ಅಮೆರಿಕದ ಪ್ರೋಗ್ರೆಸಿವ್ ಪಕ್ಷವು ಆಪಾದನೆ ಮಾಡಿದೆ. ಈ ನಿರ್ಣಯವನ್ನು ವಿರೋಧಿಸಿದಕ್ಕೆ ಶ್ರೀ ಬಿ ಎನ್. ರಾವ್‌ರವರಿಗೆ ಒಂದು ಪ್ರಶಂಸನೀಯ ಪತ್ರವನ್ನು ಬರೆಯಲಾಗಿದೆ.

ರಣಜಿತ್

೨-೨-೫೧ ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಸ್ತಾನರವರ ಅಮೋಘ ಹಿಂದಿ ಚಿತ್ರ

ಸಾವರಿಯಾ
(SAWARIYA)

ಪಾತ್ರ:—ವೀರಾ, ಹಫೀಜ್ ಜಹಾನ್, ರೆಹಮಾನ್

ಬೆಳಗಿನ ಪ್ರದರ್ಶನಗಳು

ತಾ|| ೩ ೨ ೫೧ ರಿಂದ ೩ ದಿನ ಮಾತ್ರ

ಸೈಗಾಲ್, ಖುರ್ಷಿದ್ ನಟಿಸಿರುವ

—: ಭಕ್ತ ಸೂರದಾಸ್ :—

ಪ್ರಭಾ ★

ಅಮೋಘವಾದ ೨ ನೇ ವಾರ
ತಾ|| ೨-೨ ೧೯೫೧ ರಿಂದ
ಪ್ರತಿದಿನ ೩ ಆಟಗಳು

ಮಾನವ ಬದುಕಿನ ಪ್ರಜ್ವಲಿಸುವ ಕಥೆ! ಹಿಂದೆ ಇಂತಹ ಕಥೆಯನ್ನು ಎಂದೂ ತೆರೆಯಮೇಲೆ ನೋಡಿರಲಾರಿರಿ.

ಶ್ರೀ ಗೋಪಾಲ್ ಪಿಕ್ಚರ್ಸ್‌ರವರ

★ ಅಫ್‌ಸಾನ ★
(ಹಿಂದಿ)
AFSANA

ಮೊದಲನೆಯಬಾರಿ ೨ ಪಾತ್ರಗಳಲ್ಲಿ

ಅಶೋಕ್‌ಕುಮಾರ್, ವೀಣಾ, ಪ್ರಾಣ್, ಕುಲದೀಪ್, ಜೀವನ್, ಕುಕ್ಕೂ.

ಸಂಗೀತ:—ಹುಸ್ನಲಾಲ್, ಭಗತ್‌ರಾಂ

ANNOUNCEMENT

Theatre building old materials and furnituic are being sold very cheap.

Apply to .—The New Opara Talkies, Mysore.

ಸಿನಿಮಾ ಕಟ್ಟಡದ ಹಳೇ ಸಾಮಾನುಗಳು ಮತ್ತು ಫರ್ನಿಚರುಗಳೂ ಸುಲಭಬೆಲೆಗೆ ಮಾರಾಟಕ್ಕೆ ಇದೆ.

ವಿವರಕ್ಕೆ ಬರೆಯಿರಿ:—ನ್ಯೂ ಅಪೇರಾ ಟಾಕೀಸ್, ಮೈಸೂರು

ಸಂಘ ದಿನಾಚರಣೆ

ಡಿ. ಬನುಮಯ್ಯ ಕಾಮರ್ಸ್ ಕಾಲೇಜಿನ ಸಂಘದ ದಿನಾಚರಣೆಯು ೪ ನೇ ತಾರೀಖು ಭಾನುವಾರ ಸಂಜೆ ೬ ಗಂಟೆಗೆ ಕಾಲೇಜು ಆವರಣದಲ್ಲಿ ಸೆಂಟ್‌ಫಿಲೊಮಿನಾ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಸಿ. ಜಿ. ವಾರ್ಕಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ನ್ಯಾಯಾಂಗ ದೋಷ

ಚೀಣಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸುವುದರ ಮೂಲಕ ತನ್ನ ಅಧಿಕಾರವನ್ನು ಅತಿಕ್ರಮಿಸಿ ನ್ಯಾಯಾಂಗ ದೋಷವನ್ನು ವಿಶ್ವಸಂಸ್ಥೆಯೆಸಗದೆಯೆಂದು ಶ್ರೀ ಬಿ. ಎನ್. ರಾವ್‌ರವರು ಹೇಳಿರುವರು.

ಒಲಂಪಿಯಾ

೧-೨-೫೧ರಿಂದ ಪ್ರತಿದಿನ ೩ ಆಟಗಳು

ಬನ್‌ಸಾರಿಯಾ

ಭೂಮಿಕೆ:—ಗೀತಾಬಾಲಿ, ಓಂಪ್ರಕಾಶ್, ಕುಲದೀಪ್, ರಾಮಸಿಂಗ್

ಬೆಳಗಿನ ಪ್ರದರ್ಶನ

೨-೨-೫೧ರಿಂದ ೩ ದಿನ ಮಾತ್ರ

: ಪಾತ್ರವಹಿಸಿರುವ :

ಅಶೀತ್ ಬರನ್, ಭಾರತಿ, ನೀಮೋ

ನ್ಯೂಥಿಯೇಟರ್ಸ್‌ರವರ—* ಕಾಶಿನಾಥ್ *

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೨—೧೯೫೧ ನೇ ಸೋಮವಾರ [ಸಂಚಿಕೆ ೧೨೮

ದೇಶದ ಅಭ್ಯುದಯಕ್ಕೆ ಇಂಜನಿಯರುಗಳು ಶ್ರಮಿಸಬೇಕು

ಇದು ಇಂಜನಿಯರುಗಳ ಯುಗ

ಇಂಜನಿಯರು ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರಿಂದ ಭಾಷಣ

ಮೈಸೂರು ಫೆ. ೪

ಇದು ಇಂಜನಿಯರುಗಳ ಯುಗ ನಮ್ಮ ದೇಶದ ಪ್ರಗತಿಗೆ ಇವರು ಮಹತ್ವ ಸೇವೆಯನ್ನೆಸಗಬೇಕಾಗಿದೆ. ದೇಶದ ಪ್ರಗತಿಗೆ ಸ್ವಾಭಾವಿಕವಾದ ಸಾಧನಗಳು ನಮ್ಮಲ್ಲಿ ವಿಶೇಷವಾಗಿವೆ. ಅವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿ ಜನಕ್ಕೆ ಉಪಯುಕ್ತವಾಗುವಂತೆ ಮಾಡುವವರು ಬೇಕಾಗಿದ್ದಾರೆ. ಧೈರ್ಯವಾಗಿ ಯಾವ ಭಯ ದಾಕ್ಷಿಣ್ಯಕ್ಕೂ ಒಳಪಡದೆ ಕೆಲಸ ಮಾಡಬೇಕಾದುದು ಇಂಜನಿಯರುಗಳ ಕರ್ತವ್ಯ. ಉತ್ತಮ ದರ್ಜೆಯ ನೈತಿಕ ನಡೆವಳಿಕೆಯನ್ನು ಕಾಪಾಡಿಕೊಂಡು ಒಂದು ದೇಶದ ಪ್ರಗತಿಯನ್ನು ಸಾಧಿಸಬೇಕಾಗಿದೆ. ಈ ಕರ್ತವ್ಯವು ಇಂಜನಿಯರುಗಳಿಂದ ಸಾಧ್ಯ ತಾವು ಕಲಿತ ವಿದ್ಯೆಯನ್ನು ಯಾವ ಕಾರಣದಿಂದಲೂ ಅಗೌರವ ರೀತಿಯಲ್ಲಿ ದುರುಪಯೋಗವಾಗದಂತೆ ವರ್ತಿಸಿಕೊಳ್ಳಬೇಕಾಗಿದೆ. ಇಂಜನಿಯರುಗಳ ಸೇವೆಯು ನಾನಾರೂಪದಲ್ಲಿದೆ. ಮಾನವನ ಅಭ್ಯುದಯ ಕಾರ್ಯಗಳಲ್ಲಾವುದರಲ್ಲೂ ಅತನ ಪಾತ್ರವಿಲ್ಲದಿದ್ದರೆ ಅದು ಕಾರ್ಯಗತವಾಗುವುದಿಲ್ಲ. ಅವರು ಒಂದು ರೀತಿಯಲ್ಲಿ ನಿರ್ಮಾಣಕರು, ವಿನಾಶಕರ್ತರು ಮತ್ತು ರಕ್ಷಿಸುವವರು. ಉತ್ತಮ ಮಾರ್ಗದಲ್ಲಿ ಇವರ ಸೇವೆಯನ್ನು ಉಪಯೋಗಿಸಿಕೊಳ್ಳುವುದು ರಾಜಕಾರಣಗಳ ಕರ್ತವ್ಯ ಎಂದು ಶ್ರೀಮನ್ಮಹಾರಾಜರು ಇಂದು ಭಾರತ ಇಂಜನಿಯರುಗಳ ಸಮ್ಮೇಳನದಲ್ಲಿ ಮಾತನಾಡುತ್ತಾ ತಿಳಿಸಿದರು.

ಮೈಸೂರು ದೇಶದಲ್ಲಿ ಇಂಜನಿಯರು ಪ್ರಗತಿಯನ್ನು ಪ್ರಸ್ತಾಪಿಸುತ್ತ ಅನೇಕ ಶತಮಾನಗಳಿಂದ ಮೈಸೂರು ದೇಶದಲ್ಲಿ ನಮ್ಮ ಇಂಜನಿಯರುಗಳು ಎಸಗಿರುವ ಕಾರ್ಯವು ಸ್ತುತ್ಯಾರ್ಹವಾಗಿದೆ ನಮ್ಮ ಸಂಸ್ಥಾನದ ಇಂಜನಿಯರುಗಳ ಕರ್ತವ್ಯ ದೃಷ್ಟಿ, ಧೈರ್ಯ ಸಾಹಸಗಳೇ ಇದಕ್ಕೆ ಕಾರಣವಾಗಿದೆ ಅವರಲ್ಲೆಲ್ಲಾ ಪ್ರಮುಖರಾದ ಶ್ರೀ ಎಂ. ವಿಶ್ವೇಶ್ವರಯ್ಯನವರು ನಮ್ಮವರನ್ನಾಗಿ ನಾವು ಹೊಂದಿರುವುದಕ್ಕೆ ಸಂತೋಷಪಡಬೇಕಾಗಿದೆ. ಅವರ ಹೆಸರು ಮನೆಮಾತಾಗಿದೆ. ಅರ್ಧಶತಮಾನದ ಹಿಂದೆ, ಪ್ರಖ್ಯಾತರಾದ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರವರ ಕಾಲದಲ್ಲಿ, ನಮ್ಮ ಇಂಜನಿಯರುಗಳು ಸೂಯಜ್ ಕಾಲುವೆ ಪೂರ್ವದಿಕ್ಕಿನಲ್ಲೆಲ್ಲಾ ಪ್ರಥಮ ವಿದ್ಯುಚ್ಛಕ್ತಿಯೋಜನೆಯು ಶಿವನಸಮುದ್ರದಲ್ಲಿ ಕಾರ್ಯಗತಮಾಡಿದರು.

ಆಹಾರ ಬೆಳೆಯನ್ನು ಹೆಚ್ಚಿಸುವ ವಿಷಯದಲ್ಲಿ ಇಂಜನಿಯರುಗಳು ಈಗ ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ ಸ್ವತಂತ್ರವಾಗಿ ನಮಗೆ ಬೇಕಾಗುವಷ್ಟು ಆಹಾರವನ್ನು ಪಡೆಯುವಂತೆ ನಾವು ಆಗಬೇಕು ಅನಂತರ ಇತರ ವಿಷಯಗಳು ಇದು ಇಂಜನಿಯರುಗಳಿಂದ ಮಾತ್ರ ಸಾಧ್ಯ. ಇವಲ್ಲದೆ ಜನರ ಜೀವನಮಟ್ಟವೂ ಏರಿ ಆರ್ಥಿಕಾಭಿವೃದ್ಧಿಯಾಗಬೇಕಾದರೆ ಇಂಜನಿಯರುಗಳ

ಭಾವಚಿತ್ರಗಳ ಅನಾವರಣ

ಮೈಸೂರು ಫೆ ೪

ಭಾರತ ಸ್ವಾತಂತ್ರ್ಯ ರಾಷ್ಟ್ರ ನಿರ್ಮಾಣಕರಾದ ಮಹಾತ್ಮ ಗಾಂಧಿಯವರ ಶಿಷ್ಯವರ್ಗದಲ್ಲಿ ಅತ್ಯುನ್ನತಸ್ಥಾನವನ್ನು ಪಡೆದ ಶ್ರೀ ರಾಜಗೋಪಾಲಾಚಾರಿಯವರು ರಾಜಕೀಯ ಧುರಂಧರರು. ಅವರು ಭಾರತಕ್ಕೆ ಸಲ್ಲಿಸಿರುವ ಮತ್ತು ಸಲ್ಲಿಸುತ್ತಲಿರುವ ಸೇವೆ, ಬುದ್ಧಿವಂತಿಕೆ, ನೈಪುಣ್ಯತೆ, ಮುಂತಾದುವುಗಳಲ್ಲಿ ಅವರನ್ನು ಮೀರಿಸುವವರಾರೂ ಇಲ್ಲ, ಇವರು ಉನ್ನತ ಮಟ್ಟದಲ್ಲಿ ಶ್ರಮಿಸಿದರ ಫಲವೇ ನಮಗೆ ಬಂದಿರುವ ಸ್ವಾತಂತ್ರ್ಯವೆಂದು ಹೇಳಬೇಕಾಗಿದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪುರಸಭೆಯ ಕಛೇರಿಯಲ್ಲಿ ಮಾಜಿ ಪೌರಸಭಾ ಸದಸ್ಯ ಶ್ರೀ ಕೆ.ಎಸ್. ಸತ್ಯನಾರಾಯಣರಾಯರು ಶ್ರೀ ರಾಜಾಜಿಯವರ ಇತ್ತ ಭಾವಚಿತ್ರವನ್ನು ಅನಾವರಣ ಮಾಡುತ್ತ ಹೇಳಿದರು.

ಶ್ರೀಮತಿ ಲೀಲಾವತಿ ಅಂಜನಪ್ಪನವರಿತ್ತ ಶ್ರೀಮತಿ [illegible] ಭಾವ ಚಿತ್ರವನ್ನು ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಅನಾವರಣ ಮಾಡುತ್ತಾ ಅವರೂ ಮಹಾತ್ಮರ ಮುಖ್ಯ ಶಿಷ್ಯರಲ್ಲೊಬ್ಬರಾಗಿ ದೇಶಸೇವೆಯನ್ನೆಸಗಿರುವರು. ಭಾರತದಲ್ಲಿ ಸ್ತ್ರೀಯರಿಗೆ ಪ್ರಮುಖಪಾತ್ರವಿದೆ. ತಕ್ಕ ಸನ್ಮಾನ ಮತ್ತು ಸ್ಥಾನ ದೊರೆಯುತ್ತೆಂಬುದು ನಮಗೆ ಸ್ವಾತಂತ್ರ್ಯ ಬಂದೊಡನೆಯೇ ಸ್ತ್ರೀಯರಿಗೆ ರಾಯಭಾರಿ, ಗೌರ್ನರ್ ಮುಂತಾದ ಕೆಲಸವನ್ನು ಕೊಟ್ಟಿರುವ ನಿದರ್ಶನಗಳಿಂದ ತಿಳಿಯಬರುತ್ತದೆ. ಈ ಸ್ಥಾನಗಳಲ್ಲಿ ಅತ್ಯುನ್ನತ ರೀತಿಯಲ್ಲಿ ಕೆಲಸಕಾರ್ಯವನ್ನೆಸಗಿ ಮಹಿಳೆಯರೂ ನಮ ದೇಶಕ್ಕೆ ಕೀರ್ತಿಯನ್ನು ತಂದಿರುವರು. ಇವರ ಆದರ್ಶವನ್ನು ಯಾರೂ ಮರೆಯಬಾರದು ಎಂದು ತಿಳಿಸಿದರು.

ಎನ್ಯೂಮರೇಟರುಗಳಿಗೆ ಸಂದೇಶ

ಫೆಬ್ರವರಿ ೯ ರಿಂದ ಆರಂಭವಾಗಲಿರುವ ಸೆನ್ಸಸ್ ಸಂಬಂಧವಾದ ಕಾರ್ಯಕ್ರಮಗಳನ್ನು ನಡೆಸಲು ನೇಮಕವಾಗಿರುವ ಆರು ಲಕ್ಷ ಎನ್ಯೂಮರೇಟರುಗಳಿಗೆ ಕೇಂದ್ರ ಗೃಹಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಒಂದು ಸಂದೇಶವನ್ನಿತ್ತು ಈ ರಾಷ್ಟ್ರೀಯ ಕೆಲಸವನ್ನು ಅವರು ಅಭಿಮಾನ ಪೂರ್ವಕವಾಗಿ, ಉತ್ತಮರೀತಿಯಲ್ಲಿ ನಿರ್ವಹಿಸಬೇಕೆಂದು ತಿಳಿಸಿರುವರು.

ಮೈಸೂರು ಸಂಸ್ಥಾನದ ಸ್ಥಳೀಯ ಸಂಸ್ಥೆಯ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರೂ ಒಂದು ಸಂದೇಶವನ್ನಿತ್ತು ಎನ್ಯೂಮರೇಟರುಗಳು ಉತ್ತಮ ರೀತಿಯಲ್ಲಿ, ಶ್ರದ್ಧೆಯಿಂದ ಕಾರ್ಯವೆಸಗಿ ಮೈಸೂರಿಗೆ ಒಳ್ಳೆಯ ಕೀರ್ತಿಯನ್ನು ತರಬೇಕೆಂದು ಕೋರಿದ್ದಾರೆ.

ಚಂದ್ರನಗರ ಭಾರತಕ್ಕೆ

ಚಂದ್ರನಗರವನ್ನು ಭಾರತಕ್ಕೆ ಸಂಪೂರ್ಣವಾಗಿ ವಹಿಸಿ ಭಾರತ ಯೂನಿಯನ್ನಲ್ಲಿಯೇ ಅಡಕವಾಗುವಂತೆ ಭಾರತ ಮತ್ತು ಫ್ರೆಂಚ್ ಸರ್ಕಾರಗಳ ಕರಾರಿಗೆ ಸಹಿಯಾಯಿತೆಂದು ವರದಿಯಾಗಿದೆ. ಈ ಕರಾರು ಫ್ರೆಂಚ್ ಶಾಸನ ಸಭೆಯು ಅಂಗೀಕರಿಸಿದೊಡನೆಯೇ ಚಂದ್ರನಗರವು ಭಾರತಕ್ಕೆ ಸೇರುವುದು.

ಜನಗಣತಿ

ಬೆಂಗಳೂರು ಫೆ ೪

ಮೈಸೂರು ದೇಶದಲ್ಲಿ ಜನಗಣತಿ ವಿಷಯವಾಗಿ ಸೆನ್ಸಸ್ ಕಮಿಷನರು ಒಂದು ಪ್ರಕಟಣೆ ಹೊರಡಿಸಿರುವರು.

ಫೆಬ್ರವರಿ ೯ ನೇ ತಾರೀಖಿನಿಂದ ಮಾರ್ಚಿ ೧ ನೇ ತಾರೀಖು ಮಧ್ಯಾಹ್ನದವರೆಗೆ ಜನಗಣತಿ ಕೆಲಸ ನಡೆಯುವುದು. ಎನ್ಯೂಮರೇಟರ್ ನಿಮ್ಮಲ್ಲಿಗೆ ಬಂದಾಗ ಆತನ ಪ್ರಶ್ನೆಗಳಿಗೆ ಸತ್ಯವಾದ ಉತ್ತರವನ್ನು ಎಲ್ಲರು ಕೊಡಬೇಕಾದುದು ನ್ಯಾಯರೀತ್ಯಾ ಕರ್ತವ್ಯ. ಉತ್ತರಗಳನ್ನು ರಹಸ್ಯವಾಗಿಟ್ಟಿರುವುದಲ್ಲದೆ ಸರ್ಕಾರಿ ಇಲಾಖೆಗಳಿಗಾಗಲೀ ಕೋರ್ಟುಗಳಿಗಾಗಲೀ ತಿಳಿಸಲಾಗುವುದಿಲ್ಲ. ನಿಮ್ಮ ಉತ್ತರಗಳನ್ನು ರೇಷನ್ ಕಾರ್ಡುಗಳೊಡನೆ ಹೋಲಿಸಲು ಅವಕಾಶವೀಯುವುದಿಲ್ಲ. ಸುಳ್ಳು ಉತ್ತರಗಳನ್ನು ಕೊಟ್ಟಲ್ಲಿ ೧೦೦೦ ರೂಪಾಯಿ ಜುಲ್ಮಾನೆ ವಿಧಿಸಲವಕಾಶವಿದೆ. ಸೆನ್ಸಸ್ ವಿಷಯಗಳನ್ನು ಹೊರಗೆಡಹಿದವರಿಗೆ ಜುಲ್ಮಾನೆ ಮತ್ತು ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ಈ ಪ್ರಕಟಣೆಯಲ್ಲಿ ತಿಳಿಸಿರುವರು.

ಜುಬಿಮೆಯಿಂದ ಮಾತ್ರ ಅದನ್ನರಿತು ಅವರು ದೇಶಸೇವಾದೃಷ್ಟಿಯಿಂದ ಕೆಲಸಮಾಡಬೇಕಾಗಿದೆ ಎಂದು ತಿಳಿಸಿದರು.

ಇಂದು ಬೆಳಗ್ಗೆ ಭಾರತ ಇಂಜನಿಯರುಗಳ ೩೧ನೇ ಸಮ್ಮೇಳನವು ಮೈಸೂರು ಕ್ರಾಫರ್ಡ್ ಭವನದಲ್ಲಿ ಪ್ರಾರಂಭವಾಯಿತು ಮುಂದಿನ ಸಾಲಿಗೆ ಭಾರತ ರೈಲ್ವೆ ಚೀಫ್ ಕಮಿಷನರಾದ ಶ್ರೀ ಕೆ.ಸಿ. ಭಕ್ಲೆಯವರು ಅಧ್ಯಕ್ಷರಾಗಿ ಚುನಾಯಿತರಾದರು. ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪ್ರತಿನಿಧಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು. ಅನಂತರ ಶ್ರೀ ಕೆ.ಸಿ. ಭಕ್ಲೆಯವರು ಭಾರತದಲ್ಲಿಯ ಇಂಜನಿಯರ್ ಪ್ರಗತಿ, ಇಂಜನಿಯರುಗಳ ಕರ್ತವ್ಯ ಮುಂತಾದ ವಿಷಯಗಳನ್ನು ಕುರಿತು ಭಾಷಣ ಮಾಡಿದರು.

ಸಂಜೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ಸಮ್ಮೇಳನದ ಗೌರವಾರ್ಥವಾಗಿ ಚಾಮುಂಡೀ ಜನಪ್ರವಾನದಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧಪಡಿಸಿದಂತೆ ೧೮ನೇ ಯಾತ್ರೆಯ ಟೂರಿಸ್ಟ ರೈಲ್ವೆ ಟಿಕೇಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆಟಿಕೇಟುಗಳನ್ನು ಪಡೆದ ಯಾತ್ರಿಕರು ತಾ॥ ೧೧-೨-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗೂ ೫ ಸ್ವಯಂಭೋದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಡಾಸಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ

ತಾ॥ ೩೫-೨ ೫೧ನೇ ದಿವಸ ಮುಂಚಾನೆ [illegible] ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಪರ್ಸಸ್ ರಿಜರ್ವಿನಿಂದ ಹೊರಟು ೨೭-೨-೫೧ನೇ ದಿವಸ ಒಳ್ಳೆ ಸೌಕರ್ಯವುಳ್ಳ, ಸ್ಪೆಷಲ್ ಬೋಗಿಗಳಲ್ಲಿ ಪೂನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧೪ ೪ ೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು

ಹೆಚ್ಚಿನ ತರಗತಿಯ ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ ಕನ್ಸೆಷನ್ ಸೀಟ್ ೧ ಕ್ಕೆ ೨೫ ರೂ ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್ ಮಾಡಲಾಗುವುದು. ಸುಸ್ತಿ ಅರ್ಜಿ ಖಂಡಿತವಾಗಿ ಟಿಕೇಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತ. ನೋಡಿರಿ—

ಉತ್ತರ ಸಲುವಾಗಿ ೦-೨-೦ ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ

ಶ್ರೀ ಶಿವ ನಂದ ಯಾತ್ರಾ ಕಂಪನಿ

ಒನದಪ್ಪಿ (ವೈಸ್ಟು)

ಕುಡಚಿ-ಮಾರ್ಗ ಎಂ ಎಸ್ ಎಂ ರೈಲ್ವೆ

ಸೂ ಹೆಚ್ಚಿನ ಮಾಹಿತಿ ಸಲುವಾಗಿ ಮು॥ ರಾ॥ ಸಿ. ಟಿ. ಮಲ್ಲಪ್ಪ, ಸಂತೇಪೇಟ, ಮೈಸೂರು ಇವರನ್ನು ವಿಚಾರಿಸಿ

ಪ್ರಭಾ

ಅಮೋಘವಾದ ೨ ನೇ ವಾರ
ತಾ॥ ೨-೨ ೧೯೫೧ ರಿಂದ
ಪ್ರತಿದಿನ ೩ ಆಟಗಳು

ಮಾನವ ಬದುಕಿನ ಪ್ರಜ್ವಲಿಸುವ [illegible] ಇಂತಹ ಕತೆಯನ್ನು ಎಂದೂ ತೆರೆಯಮೇಲೆ ನೋಡಿರಲಾರಿ

ಶ್ರೀ ಗೋಪಾಲ್ ಪಿಕ್ಚರ್ಸ್‌ರವರ

ಅಫ್‌ಸಾನ (ಹಿಂದಿ) AFSANA

ಮೊದಲನೆಯಬಾರಿ ೨ ಪಾತ್ರಗಳಲ್ಲಿ ಅಶೋಕ್‌ಕುಮಾರ್

ವೀಣಾ, ಪ್ರಾಣ್, ಕುಲದೀಪ್, ಜೀವನ್, ಕುಕ್ಕೂ. ಸಂಗೀತ:—ಹುಸ್ನಲಾಲ್, ಭಗತ್‌ರಾಂ

ಲಾರಿ ಅಪಘಾತ

ಮೈಸೂರು ಫೆ ೪

ನಿನ್ನೆದಿನ ಟಿ ನರಸೀಪುರದ ಕಡೆಯಿಂದ ಮೈಸೂರಿಗೆ ಬರುತ್ತಿದ್ದ ಎಂಪೈರ್ ಮೋಟಾರ್ ಸರ್ವಿಸ್ಸಿನ ಬಸ್ಸು ಮೇಗಳಪುರದ ಬಳಿ ೧೨ನೇ ಮೈಲಿ ಕಲ್ಲನ್ನು ಸಮೀಪಿಸಿದಾಗ ಎದುರಾಗಿ ಮೈಸೂರಿನ ಕಡೆ ಬರುತ್ತಿದ್ದ ಎಂ ವೈ. ೧೧೨ ಎಕ್ಸ್ ನಂಬರಿನ ಲಾರಿಯು ಬಸ್ಸನ್ನು ದಾಟಿ ಹೋಗುತ್ತಿರುವಲ್ಲಿ ಬಸ್ಸಿನಲ್ಲಿದ್ದ ಇಬ್ಬರು ಪ್ರಯಾಣಿಕರಿಗೆ ಕೈ ತೀವ್ರವಾಗಿ ತರಚಿಹೋಯಿತೆಂದೂ, ಒಬ್ಬ ಹೆಂಗಸಿಗೂ ಗಾಯವಾಗಿರುವುದಾಗಿಯೂ ತಿಳಿದುಬಂದಿದೆ ಲಾರಿಯ ಡ್ರೈವರ್ ಮಲ್ಲಿಗೌಡ ಎಂಬಾತನು ತಕ್ಷಣವೇ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿ ಲಾರಿಯನ್ನು ಮೈಸೂರಿನ ಮಾರ್ಗವಾಗಿ ಓಡಿಸಿದನು ಬಸ್ಸಿನವರು ಗಾಯಗೊಂಡವರನ್ನು ಕೂರಿಸಿಕೊಂಡು ಹಿಂದೆಯೇ ಬಂದರು ಸಾಹಸದಿಂದ ೧೨ ಮೈಲಿ ದೂರ ಓಡಿಸಿ ರಾಜಧಾನಿಗೆ ಬಂದು ಅನೇಕ ರಸ್ತೆಗಳಲ್ಲೆಲ್ಲಾ ನುಗ್ಗಿ ಕಡೆಗೆ ಚಾಮರಾಜ ರಸ್ತೆಯ ಸಹಕಾರ ಭವನದ ಬಳಿ ಸಿಕ್ಕಿಬಿದ್ದನು. ಅನಂತರ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ತಾ॥ ಪೋಲೀಸರು ಮಲ್ಲಿಗೌಡನ ಮೇಲೆ ಮೊಕದ್ದಮೆ ಹೂಡಿರುವರು.

ಜಿಲ್ಲಾ ಕಾಂಗ್ರೆಸ್ ಆಡಳಿತ ವರ್ಗದ ಚುನಾವಣೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಈ ದಿನ ಸೇರಿ ನಂಜನಗೂಡಿನ ಶ್ರೀ ಎಸ್ ನಾರಾಯಣರಾಯರು ಅಧ್ಯಕ್ಷರಾಗಿಯೂ, ಕೃಷ್ಣರಾಜನಗರದ ಶ್ರೀ ವೈ ಎನ್ ನಂಜುಂಡಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀ ಎಚ್ ಕೆ ಕುಮಾರಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಮಹದೇವಪ್ಪನವರು ಖಜಾಂಚಿಯಾಗಿಯೂ ಚುನಾಯಿತರಾದರು.

ಎಲ್. ಎಸ್. ಉಪನ್ಯಾಸ ತರಗತಿ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮಸಹಾಯ ಸಂಘದಲ್ಲಿ ಲೋವರ್‌ಸೆಕೆಂಡರಿ ಉಪನ್ಯಾಸ ತರಗತಿಗಳು ನಡೆಯುತ್ತಿವೆ ಸೇರಲಿಚ್ಛಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ತಿಂಗಳು ಎಂಟನೇ ತಾರೀಖಿನ ಒಳಗೆ ತಮ್ಮ ಅರ್ಜಿಗಳನ್ನು ಸಲ್ಲಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಕೆ. ಮ್ಯಾಥನ್‌ರವರ ನಿಧನ

ಸ್ವಂ ಸು. ಬೆಂಗಳೂರು ಫೆ ೪

ಸಂಸ್ಥಾನದ ಮಂತ್ರಿಮಂಡಲದ ಮೊದಲನೆ ಕೌನ್ಸಿಲರಾಗಿ ವಿಶ್ರಾಂತರಾಗಿದ್ದ ಶ್ರೀ ಕೆ ಮ್ಯಾಥ್ಯೂರವರು ನೆನ್ನೆ ರಾತ್ರಿ ಹೃದಯರೋಗದಿಂದ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಗೃಹ ನಿರ್ಮಾಣ ಸಹಕಾರ ಸಂಘ

ಮೈಸೂರು ಫೆ.

ಮೈಸೂರು ಗೃಹನಿರ್ಮಾಣ ಸಹಕಾರಸಂಘದ ಅಧ್ಯಕ್ಷರಾಗಿ ಶ್ರೀ ಎಸ್. ಚಿನ್ನಸ್ವಾಮಿಶೆಟ್ಟರೂ, ಉಪಾಧ್ಯಕ್ಷರಾಗಿ ಶ್ರೀ ಮೇಲೂ ಸಿಂಗ್‌ರವರೂ, ಕಾರ್ಯದರ್ಶಿಗಳಾಗಿ ಶ್ರೀ ಎ. ಕೃಷ್ಣಮೂರ್ತಿರಾಯರೂ ಮತ್ತು ಶ್ರೀ ಪಿ ಆರ್. ನಾರಾಯಣಸ್ವಾಮಿಯವರು ನ್ಯಾಯಾಂಗ ಸಲಹೆಗಾರರಾಗಿಯೂ ಚುನಾಯಿತರಾಗಿದ್ದಾರೆ.

ಇಂಗ್ಲೀಷು ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು

ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್ ಕಲಿಯುವುದನ್ನು ಭಾರತವು ಖಂಡಿತವಾಗಿಯೂ ಬಿಡಕೂಡದು. ಪ್ರಾರಂಭದಿಂದಲೇ ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಯುವಂತೆ ಮಾಡಬೇಕು. ಆಯಾ ಪ್ರಾಂತೀಯ ಭಾಷೆಗಳಿಗೆ ಮುಖ್ಯ ಸ್ಥಾನವನ್ನು ಕೊಡಬೇಕಾದುದು ಅತ್ಯಾವಶ್ಯಕವಾದರೂ ರಾಷ್ಟ್ರ ಭಾಷೆಯನ್ನು, ಇಂಗ್ಲೀಷ ಭಾಷೆಯನ್ನೂ ಬಿಡಬಾರದು. ಪ್ರತಿಯೊಬ್ಬ ಪ್ರಜೆಯೂ ತನ್ನ ಪ್ರಾಂತೀಯ ಭಾಷೆ, ರಾಷ್ಟ್ರಭಾಷೆ ಮತ್ತು ಅಂತರರಾಷ್ಟ್ರೀಯಭಾಷೆ—ಈ ಮೂರು ಭಾಷೆಗಳನ್ನು ಕಲಿಯಲೇಬೇಕು ಸ್ವಿಟ್ಜರ್‌ಲೆಂಡಿನಲ್ಲಿ ಒಬ್ಬ ಬಾಲಕನು ಸ್ವಿಸ್ ಭಾಷೆಯಲ್ಲದೆ ಫ್ರೆಂಚ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳನ್ನು ಸುಲಭವಾಗಿ ಕಲಿಯುವನು ಹಾಗಿರುವಲ್ಲಿ ನಾವು ಅಂತರ ರಾಷ್ಟ್ರೀಯ ಭಾಷೆಯ ಪ್ರಾಮುಖ್ಯತೆಯನ್ನರಿತು ಇಂಗ್ಲೀಷ್ ಕಲಿಯುವುದನ್ನು ನಿಷೇಧಿಸಬಾರದೆಂದು ಕೇಂದ್ರ ಆರೋಗ್ಯ ಮಂತ್ರಿ ಶ್ರೀಮತಿ ಅಮೃತ ಕೌರ್‌ರವರು ಪಾಟಿಯಾಲಾದಲ್ಲಿ ಮಾತನಾಡುತ್ತಾ ಹೇಳಿದರು

ಸಿಝೋಸ್ಲೋವೇಕಿಯಾ ನ್ಯೂಸ್ ಪ್ರಿಂಟ್ ಭಾರತಕ್ಕೆ ?

ಇಂದಿನ ರಾಜಕೀಯ ತೊಂದರೆಗಳಿಂದ ಬ್ರಿಟನ ಮತ್ತು ಜೆಕ್ ವ್ಯಾಪಾರವು ಕಡಿಮೆಯಾಗುತ್ತಲಿರುವುದರಿಂದ ಬ್ರಿಟನ್ನಿಗೆ ಕೊಡಬೇಕೆಂದಿದ್ದ ನ್ಯೂಸ್ ಪ್ರಿಂಟ್ ಕಾಗದವನ್ನು ಭಾರತವು ಸಿಝೋಸ್ಲೋವೇಕಿಯಾವನ್ನು ಕೇಳಿದಲ್ಲಿ ದೊರೆಯಬಹುದೆಂದು ತಿಳಿಯಬರುತ್ತದೆ

ರಣಜಿತ್

೨-೨-೫೧ ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಸ್ತಾನ್‌ರವರ ಅಮೋಘ ಹಿಂದಿ ಚಿತ್ರ

ಸಾವರಿಯಾ (SAWARIYA)

ಪಾತ್ರ:—ಮೀರಾ, ಹಫೀಜ್ ಜಹಾನ್, ರಹಮಾನ್

ಸಂಪಾದಕರು ಮತ್ತು ಪ್ರಕಾಶಕರು. ಜಿ ಎಲ್ ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬—೨—೧೯೫೧ ನೇ ಮಂಗಳವಾರ [ಸಂಚಿಕೆ ೨೨೯

ಮಧ್ಯಸ್ಥಿಕೆ ಸಮಿತಿಗೆ ಸೇರಲು ಭಾರತದ ನಿರಾಕರಣೆ

ಈ ಸಮಿತಿಯು ಯಾವ ಕಾರ್ಯವನ್ನೂ ಮಾಡಲು ಸಾಧ್ಯವಿಲ್ಲ

ರಾಜಕೀಯ ಸಮಿತಿಯ ಅಧ್ಯಕ್ಷರ ಆಹ್ವಾನಕ್ಕೆ ಶ್ರೀ ಬಿ. ಎನ್. ರಾಯರ ಉತ್ತರ

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ಚೈನಾವನ್ನು ಆಕ್ರಮಣ ರಾಷ್ಟ್ರವೆಂದು ಘೋಷಿಸಬೇಕೆಂದು ಅಮೇರಿಕ ಮಂಡಿಸಿದ್ದ ನಿರ್ಣಯವನ್ನು ಬಹುಮತದಿಂದ ಅಂಗೀಕರಿಸಿದುದರ ಅಂಗವಾಗಿ ಅಧ್ಯಕ್ಷರು ಬಂದು ಮಧ್ಯಸ್ಥಿಕೆ ಸಮಿತಿಯು ನೇಮಿಸಲು ಕಾರ್ಯಕ್ರಮ ಕೈಗೊಂಡಿರುವರು. ಈ ಸಮಿತಿಯನ್ನು ಸೇರಲು ಭಾರತ ಪ್ರತಿನಿಧಿಗೆ ಆಹ್ವಾನಕೊಡಲಾಯಿತು. ಈ ಆಹ್ವಾನವನ್ನು ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ನಿರಾಕರಿಸುತ್ತಾ ಈ ಮಧ್ಯಸ್ಥಿಕೆ ಸಮಿತಿಯು ನೇಮಕದಿಂದ ಯಾವ ಕಾರ್ಯಸಾಧನೆಯೂ ನಡೆಯುವುದಿಲ್ಲವೆಂದೂ ಶಾಂತಿಸ್ಥಾಪನೆಗೆ ಭಾರತವು ಸದಾ ನೆರವಾಗಲು ಸಿದ್ಧವಾಗಿದೆಯಾದರೂ ಶಾಂತಿಸ್ಥಾಪನೆ ಕಾರ್ಯವನ್ನು ಈ ಸಮಿತಿಯು ಮಾಡಲಾರದೆಂದೂ, ತಾವು ವಿರೋಧಿಸಿದ ಅಮೇರಿಕಾ ನಿರ್ಣಯಕ್ಕೆ ಸಂಬಂಧಪಟ್ಟ ಈ ಮಧ್ಯಸ್ಥಿಕೆ ಸಮಿತಿಯಲ್ಲಿ ತಾವು ಸೇರುವುದಿಲ್ಲವೆಂದು ತಿಳಿಸಿರುವರು.

ಕೆನಡಾ ಪ್ರತಿನಿಧಿಯೂ ಸಹ ಈ ಸಮಿತಿಯಲ್ಲಿ ಸೇರಲು ನಿರಾಕರಿಸಬಹುದೆಂದು ಹೇಳಲಾಗಿದೆ

ಯುವಜನೋತ್ಸವ

ಬೆಂಗಳೂರು ಫೆ. ೫

ಮಾನಸಿಕ ಸುಸಂಸ್ಕೃತಿಯ ವಿಕಾಸಕ್ಕೆಷ್ಟು ಗಮನ ಕೊಡಬೇಕೋ ಅಷ್ಟೇ ಗಮನವನ್ನು ದೇಹದಾರ್ಢ್ಯದ ಕಡೆಗೂ ಕೊಡಬೇಕಾದುದು ಅತ್ಯಗತ್ಯ. ಸುಶಿಕ್ಷಣವು ಮನಸ್ಸಿಗೆ ಜ್ಞಾನಕೊಡುವುದರ ಜೊತೆಗೆ ವಿದ್ಯಾರ್ಥಿಗಳ ದೇಹಪುಷ್ಟಿಗೆ ತರಪೇತು ನೀಡಬೇಕು. ವ್ಯಾಯಾಮವನ್ನು ಏಕಾಂಗಿ ಮಾಡುವುದರಿಂದ ಉತ್ತಮ ಪರಿಣಾಮ ವುಂಟಾದರೂ, ಸಾಮೂಹಿಕವಾಗಿ ಮಾಡುವುದರಿಂದ ವಿಶೇಷ ಪರಿಣಾಮವನ್ನುಂಟುಮಾಡುವುದು ಎಂದು ಶ್ರೀಮನ್ಮಹಾರಾಜರು ಇಂದು ಒಲಂಪಿಕ್ ಸ್ಟೇಡಿಯಂ ಮೈದಾನದಲ್ಲಿ ಯುವಜನೋತ್ಸವವನ್ನು ಪ್ರಾರಂಭಿಸುತ್ತಾ ಹೇಳಿದರು.

ಪಾಶ್ಚಿಮಾತ್ಯ ದೇಶಗಳಲ್ಲಿ ನಡೆಯುವ ವ್ಯಾಯಾಮವು ಮುಂತಾದ ವಿಷಯವಾಗಿ ಪ್ರಸ್ತಾಪಿಸುತ್ತಾ, ಪಾಶ್ಚಿಮಾತ್ಯ ದೇಶಗಳಲ್ಲಿ ಅಂಗಸಾಧನೆ ಮತ್ತು ವಿದ್ಯಾರ್ಥಿಗಳ ಆಟಪಾಟಗಳಿಗೆ ವಿಶೇಷವಾಗಿ ಗಮನವೀಯುವರು. ಉದಾಹರಣೆಗೆ ಬ್ರಿಟಿಷ್ ಸರ್ಕಾರವು ೧೯೪೯ ರಲ್ಲಿ ಯುವಜನೋತ್ಸವಕ್ಕೆ ೩೩೦,೦೦೦ ಪೌಂಡುಗಳನ್ನು ಆಟಪಾಟಗಳ ಅಭಿವೃದ್ಧಿಗೆ ೩೫೦,೦೦೦ ಪೌಂಡುಗಳನ್ನು ವೆಚ್ಚಮಾಡಿತು. ಆಫ್ರಿಕಾದಲ್ಲಿ ಪ್ರಜೆಗಳಿತ್ತ ೧,೦೦೦,೦೦೦ ಪೌಂಡುಗಳಲ್ಲಿ ೪೫೦,೦೦೦ ಪೌಂಡುಗಳನ್ನು ಯುವಜನೋತ್ಸವಕ್ಕೆ ಕೊಡಲಾಯಿತು. ಅಮೇರಿಕಾದೇಶದಲ್ಲಿಯೂ ವಿಶೇಷ ಆಸಕ್ತಿಯಿಂದ ಸರ್ಕಾರವು ಈ ಕಾರ್ಯವನ್ನೆಸಗುತ್ತಲಿದೆ.

ನಮ್ಮ ದೇಶದಲ್ಲಿ ಈ ಯುವಜನೋತ್ಸವಗಳು ಈಗ ಹೊಸದು. ಇದರ ಅವಶ್ಯಕತೆಯನ್ನು ಜನರು ಅರಿತುಕೊಂಡು ಬರುತ್ತಾ, ಈ ಕಾರ್ಯಚಟುವಟಿಕೆಗಳಿಗೆ ಸರ್ಕಾರ ಮತ್ತು ಪ್ರಜೆಗಳು ಧನಸಹಾಯವೆಸಗುವುದರಲ್ಲಿ ಸಂದೇಹವಿಲ್ಲ.

ಸ್ಕೌಟು, ಗೈಡು ಮತ್ತು ಸೇವಾದಳ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿ, ನಮ್ಮ ದೇಶದ ಯುವಕ ಸ್ತ್ರೀ ಪುರುಷರಲ್ಲಿ ಸಹೋದರ ಮನೋಭಾವ ಮತ್ತು ಸಮಾಜಸೇವೆ ಮುಂತಾದುವು ಉದ್ಭವಿಸಲು ಕಾರಣವಾಗಿವೆ. ಸ್ವಾತಂತ್ರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರುವುದೇ ಪ್ರಜಾಪ್ರಭುತ್ವ. ಭಾರತದಲ್ಲಿ ಯುವಕಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರುವ ಕರ್ತವ್ಯವು ಬರೀ ಸರ್ಕಾರಕ್ಕೆ ಸೇರಿದುದಲ್ಲ. ಪ್ರಜೆಗಳಿಗೆ ಅದರಲ್ಲೂ ಯುವಕರಿಗೆ ವಿಶೇಷವಾಗಿ ಸೇರಿದೆ. ಅನೇಕ ಕಷ್ಟಪರಂಪರೆಗಳನ್ನು ಅನುಭವಿಸಿ ತ್ಯಾಗಮಾಡಿ ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದು, ದೇಶದ ಐಕ್ಯತೆಯನ್ನು ಕಾಪಾಡಬೇಕಾದರೆ ವಿದ್ಯಾರ್ಜನೆ ಮತ್ತು ಶಿಸ್ತು ಅತ್ಯಗತ್ಯ. ದೇಶದ ಅಭ್ಯುದಯವು ಯುವಕರ ಬುದ್ಧಿ ಶಕ್ತಿಯ ಮೇಲೆ ನಿಂತಿದೆ. ಆದ್ದರಿಂದ ಉತ್ತಮ ದೇಹಶಕ್ತಿಯನ್ನು ಹೊಂದಿ ಅದರಿಂದ ಮಾನಸಿಕ ಸಂಸ್ಕೃತಿಯ ವಿಕಾಸಕ್ಕೆ ಎಡೆಕೊಟ್ಟು ದೇಶದ ಅಭ್ಯುದಯಕ್ಕೆ ಯುವಕರೆಲ್ಲರೂ ನೆರವಾಗಬೇಕೆಂದು ಹೇಳಿದರು.

ಈ ಉತ್ಸವದಲ್ಲಿ ಬೆಂಗಳೂರುನಗರ, ಸಿವಿಲ್ ಏರಿಯದಲ್ಲಿರುವ ಶಾಲೆಗಳ ಬಾಲಕಬಾಲಕಿಯರು, ಸ್ವಯಂಸೇವಕರು, ಸ್ಕೌಟುಗಳು ಆದರು ಸುಮಾರು ೬೦೦೦ ಯುವಜನರು ಸೇರಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಕೆ. ಗುರುದತ್‌ರವರು ಶ್ರೀಮನ್ಮಹಾರಾಜರನ್ನು ಸ್ವಾಗತಿಸಿದರು.

ಜೈಲುಗಳ ಸುಧಾರಣೆ

ಮೈಸೂರು ಫೆ ೬

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ೧,೨೨೦೦೦ ರೂಪಾಯಿನ ಯೋಜನೆಯೊಂದು ಮಂಜೂರಾಗಿದೆ ಎಂದು ನಿನ್ನೆ ರಾತ್ರಿ ಮೈಸೂರು ರೇಡಿಯೋ ನಿಲಯದಿಂದ "ಮೈಸೂರಿನಲ್ಲಿ ಜೈಲು ಸುಧಾರಣೆಗಳು" ಎಂಬ ವಿಷಯದ ಬಗ್ಗೆ ಭಾಷಣ ಮಾಡುತ್ತ ನ್ಯಾಯಾಂಗ ಸಚಿವರಿಂದ ಶ್ರೀ ಕೆ. ಟಿ. ಭಾಷ್ಯಂರವರು ತಿಳಿಸಿದರು.

ಸಚಿವರು ತಮ್ಮ ಭಾಷಣದಲ್ಲಿ ಮೈಸೂರು ಸಂಸ್ಥಾನದ ಜೈಲಿನ ೧೨೦ ವರ್ಷದ ಇತಿಹಾಸವನ್ನು ಪ್ರಸ್ತಾಪಿಸಿ ೧೮೩೦ ರಿಂದ ಈಚೆಗೆ ಜೈಲಿನ ಸುಧಾರಣೆಗಳು ಜಾರಿಗೆ ಬಂದವೆಂದರು.

ಈಗ ಸಂಸ್ಥಾನದ ಜೈಲುಗಳಲ್ಲಿ ೧೬೨೮ ಮಂದಿ ಬಂದಿಗಳಿದ್ದಾರೆಂದೂ ಅವರಲ್ಲಿ ೧೨೯೫ ಮಂದಿ ಬೆಂಗಳೂರು ಮತ್ತು ಮೈಸೂರು ಜೈಲುಗಳಲ್ಲಿರುವರೆಂದೂ ತಿಳಿಸಿದರು.

ಈ ಜೈಲುಗಳ ವ್ಯವಸ್ಥೆಗಾಗಿ ವರ್ಷಕ್ಕೆ ೬,೩೯,೧೮೫ ರೂಪಾಯಿ ವೆಚ್ಚವಾಗುತ್ತದೆ

ಬಂದಿಗಳಲ್ಲಿ ಬಹುಸಂಖ್ಯಾತರು ಜಡ್ಡುಬಿದ್ದ ಬಂದಿಗಳಲ್ಲವೆಂದೂ ಸಕಾಲದಲ್ಲಿ ಸಹಾಯ ದೊರಕಿದರೆ ಅವರು ಸರಿಯಾದ ಬಾಳುವೆಯನ್ನು ಬಾಳಲು ಸಾಧ್ಯವೆಂಬುದೂ ಅನುಭವದಿಂದ ತಿಳಿದುಬಂದಿದೆ. ಆದುದರಿಂದ ಸಾರ್ವಜನಿಕರು ಈ ಬಂದಿಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಅವರಿಗಾಗಿ ಸ್ಥಾಪಿಸಲ್ಪಟ್ಟಿರುವ "ಬಿಡುಗಡೆಯಾದ ಬಂದಿಗಳ ಸಹಾಯ ಸಂಘ"ಕ್ಕೆ ಸಹಾಯ ನೀಡಬೇಕೆಂದೂ ಸಚಿವರು ಪ್ರಾರ್ಥಿಸಿದರು.

ತೆರಿಗೆ ಹೆಚ್ಚಿಸಲಾಯಿತು

ವರಮಾನ ಮತ್ತು ಭೋಗ್ಯವಸ್ತುಗಳ ಮೇಲೆ ಅಮೆರಿಕಾವು ಇನ್ನೂ ವಿಶೇಷ ತೆರಿಗೆ ಹಾಕಲು ನೂತನ ಆಜ್ಞೆಯನ್ನು ಹೊರಡಿಸಲಿದೆ. ಇದರಿಂದ ೧೦೦ ಕೋಟಿ ಡಾಲರುಗಳು ಉತ್ಪತ್ತಿಯಾಗುವುದೆಂದು ಹೇಳಲಾಗಿದೆ.

ಪೆಟ್ರೋಲ್, ಸಿಗರೇಟು, ವಿಸ್ಕಿ, ಬೀರ್, ಮೋಟಾರುಕಾರು, ಟೆಲಿವಿಷನ್ ಮತ್ತು ರೇಡಿಯೋಸೆಟ್ ಮುಂತಾದುವುಗಳ ಮೇಲೆ ವಿಶೇಷ ತೆರಿಗೆ ವಿಧಿಸಲಾಗುವುದು.

ಡಿಸೆಂಬರೊಳಗಾಗಿ ಮಹಾ ಚುನಾವಣೆಗೆ ಸಿದ್ಧ

ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿರುವಂತೆ ೧೯೫೧ರ ನವೆಂಬರ್ ಡಿಸೆಂಬರ್ ಒಳಗಾಗಿ ಎಲ್ಲವೂ ಮುಗಿದು ದೇಶ ಮಹಾ ಚುನಾವಣೆಗೆ ಸಿದ್ಧವಿರುವುದೆಂದು ಚುನಾವಣಾ ಕಮಿಷನರಾದ ಶ್ರೀ ಸೇನ್‌ರವರು ತಿಳಿಸಿದರು

ಶ್ರೀ ಸೇನ್‌ರವರು ಬೃಹತ್ ಬೊಂಬಾಯಿಯ ಚುನಾವಣಾ ಕ್ಷೇತ್ರ ಗಡಿ ನಿರ್ಧಾರಕ್ಕಾಗಿ ಬೊಂಬಾಯಿಗೆ ಬಂದಿದ್ದಾರೆ.

ಶ್ರೀ ವಿ. ಟಿ. ಶ್ರೀನಿವಾಸನ್‌ರವರು ಎಂ. ಎಸ್. ಎಂ. ರೈಲ್ವೆ ಚೀಫ್ ಆಡಿಟರು?

ಮೈಸೂರು ಅಕೌಂಟೆಂಟ್ ಜನರಲ್ ಆದ ಶ್ರೀ ವಿ. ಟಿ. ಶ್ರೀನಿವಾಸನ್ನರನ್ನು ಎಂ. ಅಂಡ್ ಎಸ್. ಎಂ. ರೈಲ್ವೆ ಚೀಫ್ ಆಡಿಟರನ್ನಾಗಿ ನೇಮಿಸಲಾಗುವುದೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ನಮ್ಮ ಹೆಣ್ಣುಮಕ್ಕಳು ಸಂಪಾದಿಸಿ ಜೀವನ ನಡೆಸಬೇಕಾಗಿಲ್ಲ

ಶೀಲವಂತರಾಗಿ ಪ್ರಪಂಚಕ್ಕೆ ಮಾರ್ಗದರ್ಶಕರಾಗಲಿ

ಮೈಸೂರು ಫೆ ೫

ಉತ್ತಮ ನಡತೆ, ಕರ್ತವ್ಯಪರಾಯಣತೆ, ಸೇವಾ ಮನೋಭಾವ ಮುಂತಾದ ಸದ್ಗುಣಗಳು ಸ್ತ್ರೀಯರು ವಿದ್ಯಾಭ್ಯಾಸದಿಂದ ಕಲಿತು ಭಾರತಕ್ಕೇ ಅಲ್ಲ ಪ್ರಪಂಚಕ್ಕೆ ಆದರ್ಶವಾಗಿರುವಂತಿರಬೇಕು ಇಂದಿನ ವಿದ್ಯೆಯ ಕ್ರಮವು ಸಂಪೂರ್ಣವಾಗಿ ಮಾರ್ಪಾಟಾಗುವುದು ಅತ್ಯವಶ್ಯಕ. ವಿದ್ಯಾನಿಪುಣರೆಲ್ಲರೂ ಸೇರಿ ಈಗಿರುವ ಪಾಶ್ಚಿಮಾತ್ಯ ರೀತಿಯ ವಿದ್ಯಾಕ್ರಮವನ್ನು ಯಾವರೀತಿ ಮಾರ್ಪಡಿಸಿದರೆ, ಸ್ವತಂತ್ರಭಾರತಕ್ಕೆ ಸರಿಯೋಗುತ್ತೆಂಬ ಯೋಜನೆಯನ್ನು ತಯಾರಿಸಿ ಸರ್ಕಾರದ ಮುಂದಿಟ್ಟರೆ ಅದನ್ನು ಜಾರಿಗೆ ತರಲು ಸರ್ಕಾರವು ಸಿದ್ಧವಿದೆ.

ಸ್ತ್ರೀಯರು ನಮ್ಮ ಪೂರ್ವಪದ್ಧತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆಯಬಾರದು. ಯಾವಾಗಲೂ ಸೀತಾ, ಸಾವಿತ್ರಿ, ಕಸ್ತೂರಿಬಾ ಮುಂತಾದವರ ಆದರ್ಶವನ್ನು ಮುಂದಿಟ್ಟುಕೊಂಡು ತಮ್ಮ ಕರ್ತವ್ಯಪಾಲನೆ ಮಾಡಬೇಕಾಗಿದೆ ಭಾರತ ದೇಶದಲ್ಲಿ ಎಂಥೆಂಥಹ ಪತಿವ್ರತಾ ಶಿರೋಮಣಿಗಳು ಎಷ್ಟು ವಿದ್ಯಾವಂತರಾಗಿ ದೇಶಕ್ಕೆ ಕೀರ್ತಿಯನ್ನು ಗಳಿಸಿದ್ದಾರೆಂಬುದನ್ನು ಯಾವಾಗಲೂ ಜ್ಞಾಪಕವಿಟ್ಟುಕೊಂಡಿರಬೇಕು ಪ್ರಪಂಚದ ನಾನಾರಾಷ್ಟ್ರಗಳಲ್ಲಿರುವ ಸ್ತ್ರೀಯರಲ್ಲಿ ಭಾರತ ಸ್ತ್ರೀಯರಿಗೆ ಶೀಲಸಂಪನ್ನೆ ಮುಂತಾದುವಲ್ಲಿ ಅಗ್ರಸ್ಥಾನವನ್ನು ಕೊಡಬೇಕಾಗಿದೆ ಪಾಶ್ಚಿಮಾತ್ಯ ದೇಶಗಳಲ್ಲಿ ಸ್ತ್ರೀಯರಿಗೆ ದಾಂಪತ್ಯ ವಿಚ್ಛೇದನದ ಮತ್ತು ತಮಗೆ ಬೇಕಾದವರನ್ನು ಲಗ್ನವಾಗುವ ಹಕ್ಕುಂಟು. ಇದೇ ಸ್ವಾತಂತ್ರವೆಂದು ಅನೇಕರು ತಿಳಿದಿರುವರು. ಆದರೆ ಅದರ ಪರಿಣಾಮವೇನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ ಅವರಲ್ಲಿ ಮೊದಲು ಪ್ರೀತಿ ಅನಂತರ ವಿವಾಹ ನಮ್ಮಲ್ಲಿ ಮೊದಲು ವಿವಾಹ ಅನಂತರ ಪ್ರೀತಿ. ನಮ್ಮಲ್ಲಿ ಸುಖಸಂಪತ್ತುಗಳು ಹೆಚ್ಚಾಗಿ ಬೆಳೆದು ಜೀವನವು ಸುಖಮಯವಾಗುವುದೇ ವಿನಹ ಊನವಾಗಲಿಲ್ಲ. ಮುಖ್ಯವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸ್ತ್ರೀಯರು ರಾತ್ರಿ-ಹಗಲು ಪುರುಷರಿಗಿಂತ ಹೆಚ್ಚಾಗಿ ಗಿರಣಿಗಳು, ಮುಂತಾದೆಡೆ ಕೆಲಸ ಮಾಡಿ ದುಡಿದು ಸಂಪಾದನೆ ಮಾಡಿ ಅನೇಕರನ್ನು ಸಾಕುತ್ತಲಿರುವರು ನಮ್ಮ ಹೆಣ್ಣುಮಕ್ಕಳು ಈ ರೀತಿ ಸಂಪಾದಿಸಿ ಜೀವನ ನಡೆಸುವುದು ಬೇಡ ಅವರು ಮನೆಯಲ್ಲಿಯೇ ಮಕ್ಕಳು, ಗಂಡ ಮುಂತಾದವರಿಗೆ ತಕ್ಕ ಶಿಕ್ಷಣವನ್ನು ಕೊಟ್ಟು ಅವರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡಿ ತಾವೂ ಆದರ್ಶಮಾತೆಯರಾಗಿರಬೇಕು ನಮ್ಮಲ್ಲಿ ಸ್ತ್ರೀಯರಿಗೆ ಸ್ವಾತಂತ್ರವಿಲ್ಲವೆಂದು ಹೇಳುವುದು ಸಮಂಜಸವಿಲ್ಲ ಅವರಿಗೆ ಸಂಪೂರ್ಣ ಸ್ವಾತಂತ್ರವಿದೆ. ಯಾರು ಯೇನು ತಪ್ಪು ಮಾಡಿದರೂ, ಅಡ್ಡ ದಾರಿ ಹೋದರೂ ತಿದ್ದುವ ಹಕ್ಕುಯಿದೆ. ಅವರು ಗೃಹ ರಾಣಿಯರು. ಅಲ್ಲಿ ಅವರ ಕರ್ತವ್ಯವನ್ನು ನಿಷ್ಠೆಯಿಂದ ಪಾಲಿಸಿದಲ್ಲಿ ದೇಶದ ಅಭ್ಯುದಯವಾಗುವುದರಲ್ಲಿ ಸಂದೇಹವಿಲ್ಲ. ಸ್ತ್ರೀಯರು ಪುರುಷರಿಗಿಂತ ಬುದ್ಧಿವಂತರು ಸ್ತ್ರೀಯರು ಯಾವಾಗಲೂ ವಿಶ್ವವಿದ್ಯಾನಿಲಯದಂತೆ ಮನೆಯಲ್ಲಿರುವವರನ್ನೆಲ್ಲಾ ಬುದ್ಧಿವಂತರನ್ನಾಗಿ ಮಾಡುವವರು ಅವರೇ. ಪುರುಷರು ಎಷ್ಟು ವಿದ್ಯಾವಂತರಾದರೂ ಚಲಿಸುವ ಪುಸ್ತಕಭಂಡಾರಗಳಂತೆ ಜೀವನವು ಸುಖವಾಗಿ ನಡೆಯಬೇಕಾದರೆ ನಮ್ಮ ಹೆಣ್ಣುಮಕ್ಕಳು ಪಡುವ ಶ್ರಮದ ಫಲವೇ ವಿನಹ ಪುರುಷನ ಶ್ರಮದಿಂದಲ್ಲ.

ಮಹಾತ್ಮಾಜಿ, ಪಂಡಿತ ನೆಹರೂ, ಬಾಬುರಾಜೇಂದ್ರಪ್ರಸಾದ್, ಸರದಾರ್ ಪಟೇಲ್, ರಾಜಾಜಿ ಮುಂತಾದವರಿಗೆ ಜನ್ಮವಿತ್ತ ಮಾತೆಯರು ಭಾಗ್ಯವಂತರು. ನಮ್ಮ ಸ್ತ್ರೀಯರೆಲ್ಲರೂ ಅಂತಹ ಮಾತೆಯರಾಗಬೇಕು. ಎಷ್ಟು ಕಷ್ಟಬಂದರೂ ಸಂತೋಷಚಿತ್ತರಾಗಿ ಅವುಗಳನ್ನು ಅನುಭವಿಸುವವರೇ ಧನ್ಯರು. ನಡೆ, ನುಡಿ ಮುಂತಾದುವುಗಳೆಲ್ಲಾ ಹಿಂದೆ ನಮ್ಮ ಹಿರಿಯರು ಯಾವರೀತಿಯಾದ ಕೀರ್ತಿಯನ್ನು ಗಳಿಸಿದ್ದರೋ ಅದನ್ನು ನಮ್ಮ ಬಾಲಕಿಯರೂ ಗಳಿಸಬೇಕು ಸಂಪೂರ್ಣವಾಗಿ ನಮ್ಮ ಹಿರಿಯರ ಪದ್ಧತಿಗಳನ್ನೆಲ್ಲಾ ನಾವು ಅನುಸರಿಸಲಾಗುವುದಿಲ್ಲ. ಅವಶ್ಯವಿದ್ದೆಡೆ ಮಾತ್ರ ಕಾಲಕ್ಕೆ ತಕ್ಕಂತೆ ಸುಧಾರಣೆಗಳನ್ನು ಆಚರಣೆಗೆ ತರಲೇಬೇಕು, ಇದು ಸ್ತ್ರೀಯರ ಕರ್ತವ್ಯ. ಎಂದು ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂ [illegible] ಕಾಲೇಜು ಸಂಘದ ದಿನೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸಿದಾಗ ಮಾಡಿದ ಭಾಷಣದಲ್ಲಿ ತಿಳಿಸಿದರು

ಪ್ರಾರಂಭದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಸುಂದರಿಕೃಷ್ಣಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು. ವಿವಿಧ ಕ್ರೀಡೆಗಳಲ್ಲಿ ಸ್ಪರ್ಧಿಸಿದವರಿಗೆ ಸಚಿವರು ಬಹುಮಾನವನ್ನು ಹಂಚಿದರು.

ಕುಮಾರಿ ಶಾಂತಾ, ಕುಮಾರಿ ವಸುಮತಿ ಕುಮಾರಿ ಪ್ರೇಮಲತಾ, ಶ್ರೀ ಎಸ್. ಎನ್. ಸ್ವಾಮಿ ಇವರುಗಳಿಂದ ನೃತ್ಯ ಪ್ರದರ್ಶನ ನಡೆಯಿತು

ಭೇದಭಾವನೆ ಮರೆತು ಐಕಮತ್ಯದಿಂದ ವರ್ತಿಸಿ

" ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅಮೇರಿಕವು ಇಂದು ಬಹುಮುಖ್ಯ ಪಾತ್ರವಹಿಸಿದೆ. ಮತ್ಯಾವ ರಾಷ್ಟ್ರವನ್ನಾದರೂ ಸಹ ಕುಸಿಸಿ ಹಾಕಬಹುದಾದಂತಹ ಸನ್ನಿವೇಶದಲ್ಲಿ ಅಮೇರಿಕಾವು ಆ ಭಾರದ ಹೊರೆಯನ್ನು ಹೊರಲು ಮುಂದ ಬಂದಿದೆ ಇಡೀ ಮಾನವ ಕಲ್ಯಾಣಕ್ಕಾಗಿ ವಿಶ್ವದ ಒಂದು ರಾಷ್ಟ್ರವಾದ ಅಮೇರಿಕಾವು ಮತ್ತು ಮಾಡುತ್ತಿರುವ ಮಹಾ ಸೇವೆಯನ್ನು (ಆರ್ಥಿಕ ನೆರವು, ದಾರಿದ್ರ ನಿವಾರಣೆ, ಜೀವನದ ಸ್ಥಿತಿ ಉತ್ತಮಪಡಿಸುವಿಕೆ ಕಮ್ಯೂನಿಸ್ಟರ ಆಕ್ರಮಣವನ್ನು ಎದುರಿಸುವಿಕೆ) ವಿಶ್ವದ ಇತಿಹಾಸದಲ್ಲಿ ಎಲ್ಲಿಯೂ ಕಾಣಲು ಸಾಧ್ಯವಿಲ್ಲ ನಾವೆಷ್ಟು ಋಣಿಗಳೆಂಬುದನ್ನು ಮರೆಯದಿರೋಣ. ಸರ್ವರ ಯೋಗಕ್ಷೇಮಕ್ಕಾಗಿ ನಿಸ್ವಾರ್ಥ ಮನೋಭಾವನೆಯ ಔದಾರ್ಯವನ್ನು ತೋರುತ್ತಿರುವ ಅಮೇರಿಕಾದ ನೀತಿಗೆ ನಮ್ಮ ಮೆಚ್ಚುಗೆಯನ್ನು ಪ್ರಶಂಸೆಯನ್ನು ವ್ಯಕ್ತಪಡಿಸೋಣ ವಿಶ್ವದ ಪ್ರಕೃತ ಪರಿಸ್ಥಿತಿಯಲ್ಲಿ, ನಮ್ಮ ರಾಜಕೀಯ ಅಭಿಪ್ರಾಯಗಳು ಏನೇ ಇರಲಿ, ನಮ್ಮ ವೈಯಕ್ತಿಕ ಭೇದಭಾವನೆಗಳು ಮತ್ತು ಕೋಮುವಾರು ದ್ವೇಷಭಾವನೆ, ಭಾಷಾವಾರು ಪ್ರಾಂತ್ಯ ಮನೋಭಾವಗಳನ್ನು ಮರೆತು, ನಮ್ಮ ಮಾತೃಭೂಮಿಯ ಸೇವೆಯೇ ಮಿಗಿಲೆಂದು ಭಾವಿಸಿ ಐಕಮತ್ಯದಿಂದ ವರ್ತಿಸೋಣ "

ಎಂದು, ಮೈಸೂರಿನ ದಿವಾನರಾಗಿದ್ದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು, ಅಲೀಘರ್ ಮುಸ್ಲಿಂ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣಮಾಡುವಾಗ ತಿಳಿಸಿದರು.

ಸ್ಕೌಟುಗಳ ರ‍್ಯಾಲಿ

ಬೆಂಗಳೂರು ಫೆ. ೪

ಮೈಸೂರು ಸಂಸ್ಥಾನದ ಭಾರತ್ ಸ್ಕೌಟು ಮತ್ತು ಗೈಡುಗಳ ಸಂಯುಕ್ತ ರ‍್ಯಾಲಿಯು ಫೆಬ್ರವರಿ ೯ ನೇ ತಾರೀಖು ಸಂಜೆ ೫ ಗಂಟೆಗೆ ಬೆಂಗಳೂರು ಸ್ಕೌಟು ಹೆಡ್ ಕ್ವಾರ್ಟರ್ಸ್ಸಿನ ಮೈದಾನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೯೬೮ ಕಿ. ಸೈಕಲ್ಸು

ಫೆಬ್ರವರಿ ೭ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೭-೩೫ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್ ೧-೪೫ ಹಿಂದೀ ಶಿಕ್ಷಣ ೨-೦ ವನಿತಾ ವಿಹಾರ ೨-೩೦ ಮುಕ್ತಾಯ.

ಸಂಜೆ ೬ ೩೦ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭ ೦ ಸ್ಥಳೀಯ ಪ್ರಕಟಣೆ ೭-೫ ಹಿಂದೀ ಸಾಹಿತ್ಯ ಮೋಸಾರಿ. ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಅನೂರು ಸೂರ್ಯನಾರಾಯಣ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ. ೯ ೩೦ ನಿಮ್ಮ ಮೆಚ್ಚಿನ ಗೀತೆಗಳು ೧೦-೦ ಮುಕ್ತಾಯ.

ರಣಜಿತ್
೯-೨-೫೧ ರಿಂದ ಪ್ರತಿದಿನ ೩ ಆಟಗಳು
ಕರದಾರ್ ಮತ್ತು ನೌಷದ್‌ರವರ
ದಾಸ್ತಾನ್
(Dastan)
ಪಾತ್ರ :—ರಾಜಕಪೂರ್, ಸುರಯ್ಯ, ಅದನಸೀರ್
ಬೆಳಗಿನ ಪ್ರದರ್ಶನ
೯-೨-೫೧ ರಿಂದ ೩ ದಿನ ಮಾತ್ರ
ಮೆಹಬೂಬ್‌ರವರ,
ಹುಮಾಯೂನ್
ಪಾತ್ರ:-ಅಶೋಕ್ ಕುಮಾರ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೨—೧೯೫೧ ನೇ ಬುಧವಾರ [ಸಂಚಿಕೆ ೧೩೦

ಕಾಶ್ಮೀರ ವಿಭಜನೆಯೆ?

ವಿಶ್ವ ಸಂಸ್ಥೆಯಲ್ಲಿ ಬ್ರಿಟನ್ನಿನ ಸಲಹೆ

ಭಾರತವನ್ನು ಒಪ್ಪಿಸಲು ಬ್ರಿಟನ್ನಿನ ಆಶಯ

ಮುಸ್ಲಿಮರಿರುವ ಪ್ರದೇಶವನ್ನು ಪಾಕಿಸ್ಥಾನಕ್ಕೆ ಹಿಂದುಗಳಿರುವ ಪ್ರದೇಶವನ್ನು ಭಾರತಕ್ಕೆ ಸೇರುವಂತೆ ಕಾಶ್ಮೀರವನ್ನು ವಿಭಜನೆ ಮಾಡಬೇಕೆಂದು ಬ್ರಿಟನ್ನು ವಿಶ್ವಸಂಸ್ಥೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಲಿದೆಯೆಂದು ತಿಳಿಯುಬರುತ್ತದೆ.

ಮುಂದಿನ ವಾರದಲ್ಲಿಯೇ ಕಾಶ್ಮೀರ ಪ್ರಶ್ನೆಯನ್ನು ವಿಶ್ವಸಂಸ್ಥೆಯಲ್ಲಿ ಚರ್ಚೆ ಪುನಂತೇರ್ಪಡಿಸಲು ಬ್ರಿಟನ್ನಿನ ಪ್ರತಿನಿಧಿ ಮಿ ಗ್ಲಾಡ್ವಿನ್ ಜೆಬ್‌ರವರನ್ನು ನೋಡಲು ಕಾಶ್ಮೀರಕ್ಕೆ ಸಂಬಂಧಪಟ್ಟ ಬ್ರಿಟನ್ನಿನ ಪ್ರವೀಣ ಮಿ|| ಫ್ಲೋಲರ್‌ರವರು ಲಂಡನ್ನಿನಿಂದ ಲೇಕ್ ಸಕ್ಸೆಸ್ಸಿಗೆ ಹೊರಟಿರುವರು.

೧೯೪೭ ರಲ್ಲಿ ಭಾರತ ವಿಭಜನೆಯಲ್ಲಿ ದೀನ ನಿರಾಶ್ರಿತರು ಬಿಟ್ಟುಹೋದ ಆಸ್ತಿಪಾಸ್ತಿಗಳಿಗೆ ಭಾರತಕ್ಕೆ ಪಾಕಿಸ್ಥಾನವು ಪ್ರತಿಫಲಕೊಡುವಂತೆ ಬ್ರಿಟನ್ನು ಏರ್ಪಡಿಸಿ, ಕಾಶ್ಮೀರ ವಿಭಜನೆಗೆ ಭಾರತವು ಒಪ್ಪುವಂತೆ ಮಾಡುವುದಾಗಿ ಹೇಳಲಾಗಿದೆ.

ಭಾರತ ಮತ್ತು ಕಾಶ್ಮೀರಕ್ಕಿರುವ ಸಂಬಂಧವನ್ನು ಮುರಿಯಲು ಪ್ರಪಂಚದಲ್ಲಿರುವ ಯಾವ ರಾಷ್ಟ್ರಕ್ಕೂ ಆಗುವುದಿಲ್ಲವೆಂದು ಕಾಶ್ಮೀರ ಉಪಪ್ರಧಾನಿ ಮಿ|| ಗುಲಾಮ್ ಮಹಮ್ಮದ್‌ರವರು ಹೇಳಿರುವರು.

ಸತ್ಕಾರ ಸಮಾರಂಭ

ಅಖಿಲ ಭಾರತ ಇಂಜನಿಯರುಗಳ ಸಂಘದ ಮೈಸೂರು ಶಾಖೆಯವರು ನಿನ್ನೆ ಚಾಮುಂಡಿ ಜಮಖಾನದಲ್ಲಿ ಇಂಜನಿಯರುಗಳ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳ ಗೌರವಾರ್ಥವಾಗಿ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಜ|| ಹಯಾತ್ ಮತ್ತು ಶ್ರೀ ಟಿ. ಎಸ್. ನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದರು.

ಅಮಲ್ದಾರ್‌ರವರಿಗೆ ಹೊಡೆಯಲು ಪ್ರಯತ್ನ

ಮೈಸೂರು ಫೆ. ೬

ನಂಜನಗೂಡಿನ ಅಮಲ್ದಾರ್‌ರವರಾದ ಶ್ರೀ ಸಿ. ಎಸ್. ರಾಮಸ್ವಾಮಿಯವರು ಮೊನ್ನೆ ಹೊರಳವಾಡಿಗೆ ಬತ್ತದ ಸಂಗ್ರಹಣೆಗೆ ತೆರಳಿದ್ದರು. ಶ್ರೀ ಮಾರಪ್ಪ ಎಂಬುವನ ಹೆಚ್ಚಿನ ಬತ್ತವು ಶ್ರೀ ಪುಟ್ಟಬಸಪ್ಪನೆಂಬುವನ ಮನೆಯಲ್ಲಿದ್ದುದು ಪತ್ತೆಯಾಗಿ ಅಮಲ್ದಾರರವರು ಆ ಬತ್ತವನ್ನು ಸೀಸ್ ಮಾಡುವುದಾಗಿ ತಿಳಿಸಿದರು.

ಕೋಪಗೊಂಡ ಪುಟ್ಟಬಸಪ್ಪನು ಅಮಲ್ದಾರ್‌ರವರನ್ನು ತಳ್ಳಿ ಒಳಗಡೆ ಹೋಗಿ ಮಚ್ಚುಕತ್ತಿಯನ್ನು ತಂದು [illegible] ಪ್ರಯತ್ನಿಸಿದನೆಂದೂ ಅವನ ಹೆಂಡತಿಯು ಅಡ್ಡಬಂದು ಅದನ್ನು ತಡೆಗಟ್ಟಿದಳೆಂದೂ ಕೋಪದಿಂದ ಮತ್ತಷ್ಟು ಕೆರಳಿದ ಪುಟ್ಟಬಸಪ್ಪನು ಅಮಲ್ದಾರ್‌ರವರಿಗೆ ಚುಚ್ಚಲು ರೊಚ್ಚೆಯನ್ನು ತೆಗೆದು ಎಸೆದನೆಂದು ತಿಳಿದು ಬಂದಿದೆ. ನಿನ್ನೆ ಡಿ. ಎಸ್. ಪಿ. ಯವರು ಪೋಲೀಸರೊಂದಿಗೆ ಮತ್ತು ಅಮಲ್ದಾರ್‌ರವರೊಡನೆ ಮರಳವಾಡಿಗೆ ತೆರಳಿ ಪುಟ್ಟಬಸಪ್ಪನನ್ನು ದಸ್ತಗಿರಿ ಮಾಡಿದರು. ಬತ್ತದ ಸಂಗ್ರಹಣೆಯನ್ನು ಮಾಡಿಕೊಂಡು ಬಂದರು. ಈಗ ಪರಿಸ್ಥಿತಿ ಶಾಂತವಾಗಿದೆ.

ರೆಗ್ಯುಲೇಟ್ ಮಾರ್ಕೆಟ್ಟಿಗೆ ಮುಖ್ಯ ಸಚಿವರ ಭೇಟಿ

ಮೈಸೂರು ಫೆ. ೬

ಮೊನ್ನೆ ರೆಗ್ಯುಲೇಟ್ ಮಾರ್ಕೆಟ್ಟಿನ ಸ್ಥಳ ಪರಿಶೀಲನೆಗೆ ಮುಖ್ಯಮಂತ್ರಿಯವರಾದ ಶ್ರೀ ಕೆ. ಸಿ. ರೆಡ್ಡಿಯವರು ಮತ್ತು ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರು ತೆರಳಿದ್ದರು. ಜಿಲ್ಲಾಧಿಕಾರಿಗಳೂ ಮತ್ತು ನಗರಾಭಿವೃದ್ಧಿ ಛೇರ್ಮನ್ನರೂ ಹಾಜರಿದ್ದು ಮಾರ್ಕೆಟ್ಟನ್ನು ಕಟ್ಟುವ ಅಂಶಗಳ ಬಗ್ಗೆ ವಿವರಣೆ ಇತ್ತರು. ಈ ಸಂದರ್ಭದಲ್ಲಿ ವರ್ತಕರು ಸಚಿವರಿಗೆ ತಮ್ಮ ಕುಂದುಕೊರತೆ ಬಗ್ಗೆ ಮನವಿ ಸಲ್ಲಿಸಿದರು

ರಜಾ

ಆಕ್ಟಿಂಗ್ ಸೂಪರಿನ್‌ಟೆನ್‌ಡೆಂಟ್ ಇಂಜನಿಯರಾದ ಶ್ರೀ ಜಿ. ಸುಬ್ಬರಾಯರಿಗೆ ನಿವೃತ್ತರಾಗುವ ಮುನ್ನ ಫೆಬ್ರವರಿ ೫ ನೇ ತಾರೀಖಿನಿಂದ ೬ ತಿಂಗಳು ರಜಾ ಕೊಡಲಾಗಿದೆ.

ಶಾಸನ ಸಭಾ ಉಮೇದುವಾರಿಕೆ

ಬೆಂಗಳೂರು ಫೆ. ೫

ಮೈಸೂರು ಶಾಸನ ಸಭೆಗೆ ಪದವೀಧರರ ಕ್ಷೇತ್ರದಿಂದ ಉಮೇದುವಾರಿಕೆಗೆ ಇಲ್ಲಿ ನಮೂದಿಸುವ ಪರೀಕ್ಷೆಗಳನ್ನು ಮಾಡಿರುವವರೂ ನಿಲ್ಲಲು ಅವಕಾಶಕೊಡಲಾಗಿದೆ.

(೧) ಕಾಮನ್ವೆಲ್ತಿಗೆ ಸೇರಿದ ರಾಷ್ಟ್ರಗಳ ಮತ್ತು ಬ್ರಿಟನ್ನಿನ ವಿಶ್ವವಿದ್ಯಾನಿಲಯಗಳ ಪದವೀಧರರು

(೨) ಭಾರತ ಅಂತರ ವಿಶ್ವವಿದ್ಯಾನಿಲಯ ಬೋರ್ಡಿನ ಒಪ್ಪಿಗೆ ಇರುವ ಫ್ರೆಂಚ್, ಜರ್ಮನ್, ಅಮೆರಿಕಾ ವಿಶ್ವವಿದ್ಯಾನಿಲಯದ ಡಿಗ್ರೀ ಪಡೆದವರು.

(೩) ಭಾರತದ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್‌ನ ಎ ಎಂ ಸಿ. ಇ., ಎ. ಎಂ ಐ. ಇ ಇ., ಎ ಎಂ ಐ ಎಂ. ಇ ಮತ್ತು ವೈದ್ಯಶಾಖೆಯ ಎಂ. ಸಿ. ಪಿ. ಎಸ್. ಪರೀಕ್ಷೆಮಾಡಿದವರು ಮತ್ತು ಮೈಸೂರು ವಿದ್ಯಾ ಇಲಾಖಾ ಅಥವ ಭಾರತದ ವಿಶ್ವವಿದ್ಯಾನಿಲಯಗಳು ಇತ್ತಿರುವ ಸಂಗೀತ ಅಥವಾ ಭಾಷೆಯ ಸನ್ಮಾನಿತರು

(೪) ಕಾಮನ್ವೆಲ್ತ್ ಅಥವಾ ಬ್ರಿಟನ್ನಿನ ರಾಯಲ್ ಕಾಲೇಜಿನ ಸದಸ್ಯರು ಮತ್ತು ಇಂಗ್ಲೆಂಡ್, (ಐರ್ಲೆಂಡ್ ಅಥವಾ ಸ್ಕಾಟ್ಲೆಂಡಿನಲ್ಲಿ ಬ್ಯಾರಿಸ್ಟರಾಗಿ ರಿಜಿಸ್ಟರಾಗಿರುವವರು

ದುರಂತ ಮರಣ

ಇಂಜನೀಯರಿಂಗ್ ಕಾಲೇಜಿನ ಪದವೀಧರರಾದ ಶ್ರೀ ಚಂದ್ರಪ್ಪ ಎಂಬುವರು ಮೊನ್ನೆ ಘಟಿಕೋತ್ಸವದಲ್ಲಿ ಪ್ರಶಸ್ತಿಯನ್ನೂ ಮತ್ತು ಶ್ರೀ ಬಿ ಕೃಷ್ಣಯ್ಯಂಗಾರ್‌ರವರ ಪದಕವನ್ನೂ ಪಡೆದು ನಂಜನಗೂಡಿಗೆ ದೇವರ ಸೇವೆಗೆ ಮಾತಾ-ಪಿತೃಗಳು ಮತ್ತು ಭಾರ್ಯೆಯೊಡನೆ ತೆರಳಿದ್ದರು. ಮೊನ್ನೆ ಕಪಿಲಾನದಿಯಲ್ಲಿ ಸ್ನಾನಮಾಡುತ್ತಾ ಸುಳಿಗೆ ಸಿಕ್ಕಿ ಮೃತರಾದರು ನಿನ್ನೆ ಪೋಲೀಸರು ಶವದ ಮಹಜರ್ ನಡೆಸಿದರು. ಮಾತಾಪಿತೃಗಳ ದುಃಖ ವರ್ಣನಾತೀತ.

ನಿವೃತ್ತ ಸೈನಿಕರಿಗೆ ಎಚ್ಚರಿಕೆ

ತಾತ್ಕಾಲಿಕವಾಗಿ ಭಾರತ ಸೇನೆಗೆ ಸೇರಿ ವಿವಿಧ ಪದವಿಗಳಲ್ಲಿದ್ದು ನಿವೃತ್ತರಾದನಂತರವೂ ಇದೇ ಪದವಿಗಳನ್ನು ತಮ್ಮ ಹೆಸರಿನ ಜತೆಗೆ ಹಾಕಿಕೊಂಡು ಹೋಗುವುದು ಅನ್ಯಾಯವೆಂದು ಭಾರತ ಸರ್ಕಾರ ಎಚ್ಚರಿಸಿದೆ.

ಕಡಲೆಕಾಯಿ ಮಾರಾಟಕ್ಕೆ ತಡೆ

ಬೊಂಬಾಯಿ, ಕಲ್ಕತ್ತಾ ಮತ್ತು ಮದರಾಸಿನಲ್ಲಿರುವ ರಫ್ತು ಮಾಡಲು ಲೈಸನ್ಸ್ ಕೊಡುವ ಅಧಿಕಾರಿಗಳು ಕಡಲೆಕಾಯಿ ಎಣ್ಣೆ ಮತ್ತು ಹೆಚ್ ಪಿ ಎಸ್. ಕಡಲೆಕಾಯಿ ಮಾರಾಟವನ್ನು ಇನ್ನು ಮುಂದೆ ರಿಜಿಸ್ಟರ್ ಮಾಡಿಕೊಳ್ಳಕೂಡದೆಂದು ಕೇಂದ್ರ ಸರ್ಕಾರವು ಆಜ್ಞೆಯಿತ್ತಿದೆ.

ನ್ಯಾಯಾಲಯ ಮುಚ್ಚಲಾಗಿದೆ

ಮಧುಗಿರಿಯಲ್ಲಿ ಪ್ಲೇಗು ಮತ್ತು ರಾಮನಗರಂನಲ್ಲಿ ಕಾಲರಾ ಉಪದ್ರವವಿರುವ ಪ್ರಯುಕ್ತ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ಮಧುಗಿರಿಯಲ್ಲಿ ಒಂದು ವಾರ, ರಾಮನಗರಂನಲ್ಲಿ ಎರಡುವಾರ ಮುಚ್ಚಲಾಗಿದೆ.

ನ್ಯೂಸ್ ಪ್ರಿಂಟ್ ಉಪಯೋಗ ತಡೆಗಟ್ಟಬೇಕು

ನ್ಯೂಸ್ ಪ್ರಿಂಟಿನ ಅಭಾವ ತಲೆದೋರುವುದರಿಂದ ಇದನ್ನು ವೃತ್ತಪತ್ರಿಕೆಗಳ ವಿನಹ ಮತ್ತಾವುದಕ್ಕೂ ಉಪಯೋಗಿಸದಂತೆ ಆಜ್ಞೆಯನ್ನು ಕೇಂದ್ರ ಸರ್ಕಾರವು ಕೂಡಲೇ ಹೊರಡಿಸಬೇಕೆಂದು ಇಂಡಿಯನ್ ಮತ್ತು ಈಸ್ಟರನ್ ನ್ಯೂಸು ಪೇಪರು ಸಂಘದವರು ಭಾರತ ಸರ್ಕಾರವನ್ನು ಕೋರಿದ್ದಾರೆ.

ಸೈಕಲ್‌ನಿಂದ ಬಿದ್ದು ಮರಣ

ಮೈಸೂರು ಫೆ. ೭

ರಂಗಪ್ಪರೆಡ್ಡಿ ಎಂಬ ಜೂನಿಯರ್ ಬಿ.ಎ. ಕ್ಲಾಸಿನ ವಿದ್ಯಾರ್ಥಿಯು ಸ್ಯಾನಿಟೋರಿಯಂನಲ್ಲಿ ಮಲಗಿರುವ ಆತನ ಸಹೋದರನನ್ನು ನಿನ್ನೆ ನೋಡಲು ಹೋಗುವಾಗ ಒಂಟಿಕೊಪ್ಪಲಿನ ಹತ್ತಿರ ಇಳಜಾರು ರಸ್ತೆಯಲ್ಲಿ ಸೈಕಲ್‌ನಿಂದ ಬಿದ್ದು ಜ್ಞಾನತಪ್ಪಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಸಂಜೆನೆ ಮೃತ ಹೊಂದಿದನು ಈತನ ಜೊತೆಯಲ್ಲಿಯೇ ಹೋಗುತ್ತಲಿದ್ದ ಮತ್ತೊಬ್ಬ ವಿದ್ಯಾರ್ಥಿಗೂ ಸ್ವಲ್ಪ ಗಾಯಗಳಾಗಿ ಹುಷಾರಾಗಿರುತ್ತಾನೆ.

ಭಾರತದಲ್ಲಿನ ಕಾಗದದ ಉತ್ಪತ್ತಿ

ಭಾರತ ೧,೧೦,೯೦೦ ಟನ್ನು ಕಾಗದವನ್ನು ಉತ್ಪತ್ತಿ ಮಾಡಿದೆ ಅದು ೧,[illegible]೦,೦೦೦ ಟನ್ ಉತ್ಪತ್ತಿ ಮಾಡಬೇಕೆಂದು ನಿರ್ಧರಿಸಿತ್ತು.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ “ಮೈಸೂರು ರೇಷ್ಮೆ” ಬಟ್ಟೆಗಳು ಆದರ್ಶನೀಯವಾದುವು

“ಮೈಸೂರು ರೇಷ್ಮೆ” ಬಟ್ಟೆಗಳು ತುಂಬಾ ಚನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟವು

ಪರೀಕ್ಷಿಸಿ ಸಂತುಷ್ಟರಾಗಿರಿ

★

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮೈಸೂರು

OFFICE OF THE PRESIDENT, DISTRICT BOARD. MYSORE

Sealed tenders will be received at the Office of the President, District Board, Mysore up to 3 P.M. on 12-2-1951 for the following works :-

1. The works are to be completed by the end of June 1951 and the monthly progress should not be less than Rs. 3,000.

2. Tenders should be quoted on percentage basis either above or below the sanctioned estimate.

3. Items not provided in the estimate will be calculated as per shedule rates or as per date worked out during the execution of the work.

4. Each tender must be accompained by the duplicate challan for having credited into the Treasury the deposit amounts noted against each work.

5. The stipulated progress must be shown from the very commencement, failing which the earnest money will be forfeited and contract cancelled without further notice.

6. Controlled articles required for construction will be supplied Departmentally at the prevailing rates and the incidental charges and centage will be charged in addition.

7. Plan and other details connected with the work can be seen in the office on any working dav during Office hours.

8. The successful tenderer will be required to produce an Income Tax clearance or varification certificate before executing the work.

9 The President reserves the right of accepting or rejecting the tender without assigning any reason.

10. The decessions of the District Board in respect of any dispute regarding rates and other matters arising will be final.

	Eatimate	Earnest	Money
1. Construction of a Sarvajanaka Vidyarthi-Nilaya at Mysore		12,000	400
2. Construction of High School building at Ravandur		30,000	500
3. Travellers Bungalow at Ravandur		15,300	500

H. M. Channabasappa,
President,
District Board, Mysore.

ಸುಪ್ರೀಂ ಕೋರ್ಟಿನ ನ್ಯಾಯಾಧೀಶರು

ನಾಗಪುರದ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶ ಶ್ರೀ ವಿವಿಯನ್ ಬೋಸ್‌ರವರನ್ನು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿಯೂ ಪಾಟ್ನಾ ಹೈಕೋರ್ಟಿನ ಜಡ್ಜರಾದ ಶ್ರೀ ಭುವನೇಶ್ವರ ಪ್ರಸಾದ ಸಿನ್ಹರವರನ್ನು ನಾಗಪುರದ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾಗಿ ನೇಮಕ ಮಾಡಲಾಗಿದೆ

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಫೆಬ್ರವರಿ ೮ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಎ. ನಾರಾಯಣರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಪಿಟೀಲು ೧-೪೫ ಹಿಂದೀ ಶಿಕ್ಷಣ ೨-೦ ತಾರಾವಾಹಿನಿ (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎ. ನಾರಾಯಣರಾವ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ರಸನಿಮಿಷ (ರಿ) ೭-೧೫ ಎ. ಕೆ. ಸುಬ್ಬರಾವ್ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಹೆಚ್. ಕೆ. ಕುಮಾರಸ್ವಾಮಿ (ಕಾವ್ಯವಾಚನ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಎ.ಕೆ. ಸುಬ್ಬರಾವ್ (ಕೊಳಲು) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕ್ವಿಜ್ ಕಾರ್ಯಕ್ರಮ. ೧೦-೦ ಮುಕ್ತಾಯ.

ರಣಜಿತ್

೯-೨-೫೧ ರಿಂದ ಪ್ರತಿದಿನ ೩ ಆಟಗಳು

ಕರದಾರ್ ಮತ್ತು ನೌಷದ್‌ರವರ

ದಾಸ್ತಾನ್ (Dastan)

ಪಾತ್ರ :—ರಾಜಕಪೂರ್, ಸುರಯ್ಯ, ಅಲನಸೀರ್

ಬೆಳಗಿನ ಪ್ರದರ್ಶನ

೯-೨-೫೧ ರಿಂದ ೩ ದಿನ ಮಾತ್ರ

ಮೆಹಬೂಬ್‌ರವರ,

ಹುಮಾಯೂನ್

ಪಾತ್ರ:-ಅಶೋಕ್ ಕುಮಾರ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೨—೧೯೫೧ ನೇ ಗುರುವಾರ [ಸಂಚಿಕೆ ೧೬೧

ಮೈಸೂರು ಸಂಸ್ಥಾನದಲ್ಲಿ ಆಹಾರ ಖೋತಾ

'ಬಿ' ಕ್ಲಾಸಿನವರಿಗೆ ೧೨ ಔನ್ಸ್‌ನಿಂದ ೧೦ ಔನ್ಸಿಗೆ ಮಾತ್ರ ಇಳಿತಾಯ

ರಿಯಾಯತಿಗೆ ಭಾರತ ಸರ್ಕಾರದ ಒಪ್ಪಿಗೆ

ಬೆಂಗಳೂರು ಫೆ. ೭

ಕೇಂದ್ರ ಸರ್ಕಾರದವರು ಭಾರತಾದ್ಯಂತ ೯ ಔನ್ಸ್ ರೇಷನ್ ಪಡಿತರವನ್ನು ಕೊಡಬೇಕೆಂದು ಆಜ್ಞೆಯಿತ್ತಿದ್ದರಷ್ಟೆ. ಮೈಸೂರು ಸಂಸ್ಥಾನದಲ್ಲಿ ಪ್ರಕೃತ ಎ ಕ್ಲಾಸಿನವರಿಗೆ ೯-೫ ಔನ್ಸ್, ಬಿ ಕ್ಲಾಸಿಗೆ ೧೨ ಔನ್ಸು ಕೊಡುತ್ತಿದ್ದುದು, ಕೇಂದ್ರದ ಆಜ್ಞೆಯ ಪ್ರಕಾರ ಎಲ್ಲರಿಗೂ ೯ ಔನ್ಸು ಕೊಡುವ ವಿಷಯವನ್ನು ನಮ್ಮ ಸರ್ಕಾರದವರು ಪರಿಶೀಲಿಸಿ, ನಮ್ಮ ಸಂಸ್ಥಾನದಲ್ಲಿ ರೇಷನ್ ಪ್ರಮಾಣವನ್ನು ೯ ಔನ್ಸಿಗೆ ಇಳಿಸಬಾರದೆಂದೂ, ಬಿ ಕ್ಲಾಸಿನವರಿಗಾದರೂ ೧೦ ಔನ್ಸ್ ಕೊಡಬೇಕೆಂದು ಮೈಸೂರು ಆಹಾರ ಮಂತ್ರಿಗಳು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿದುದರ ಫಲವಾಗಿ 'ಬಿ' ಕ್ಲಾಸಿನವರಿಗೆ ೧೦ ಔನ್ಸ್ ಪಡಿತರ ಕೊಡುವುದಕ್ಕೆ ಭಾರತ ಸರ್ಕಾರವು ಒಪ್ಪಿಗೆಯಿತ್ತಿದೆಯೆಂದು ತಿಳಿಯುಬರುತ್ತದೆ.

ನೇಪಾಳ ದೊರೆಗೆ ಸತ್ಕಾರ

ನೇಪಾಳ ದೊರೆಯ ಗೌರವಾರ್ಥವಾಗಿ ದೆಹಲಿಯಲ್ಲಿ ಭಾರತ ರಾಷ್ಟ್ರಾಧ್ಯಕ್ಷರು ಒಂದು ಔತಣಕೂಟವನ್ನೇರ್ಪಡಿಸಿದ್ದರು.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾದಿಂದ ೨೦ ಲಕ್ಷ ಟನ್ನುಗಳ ಆಹಾರವನ್ನು ಸರಬರಾಯಿ ಮಾಡುವ ವಿಷಯದಲ್ಲಿ ಅಮೆರಿಕಾ ಅಧ್ಯಕ್ಷ ಟ್ರೂಮನ್‌ರವರಿಗೂ ಮಾಜಿ ಅಧ್ಯಕ್ಷ ಮಿ॥ ಹರ್ಬರ್ಟ್ ಹೂವರ್‌ರವರಿಗೂ ಮಾತುಕಥೆ ನಡೆಯಿತೆಂದೂ ತಿಳಿಯಬಂದಿದೆ ಭಾರತಕ್ಕೆ ಕೂಡಲೇ ಆಹಾರವನ್ನು ಸರಬರಾಯಿ ಮಾಡಬೇಕೆಂದೂ ಅವರು ತಿಳಿಸಿರುವರು. ಇದಕ್ಕಾಗಿ ರವಾನೆ ವೆಚ್ಚವು ೩೦ ಕೋಟಿ ಡಾಲರುಗಳಾಗುವುದು. ಕಾಂಗ್ರೆಸಿನಲ್ಲಿ ಈ ವೆಚ್ಚಕ್ಕಾಗಿ ಹೊಸ ಶಾಸನವನ್ನು ಮಂಡಿಸಲಾಗುವುದೆಂದು ತಿಳಿಯುಬರುತ್ತದೆ

ಮೈಸೂರಿನ ಅಕೌಂಟೆಂಟ್ ಜನರಲ್

ಬೆಂಗಳೂರು ಫೆ. ೭

ಭಾರತ ಇಂಟಗ್ರೇಷನ್ ಕೆಲಸಗಳನ್ನು ನಿರ್ವಹಿಸುತ್ತಿದ್ದ ಶ್ರೀ ಗುಪ್ತ ಎಂಬುವವರು ಮೈಸೂರಿನ ಅಕೌಂಟೆಂಟ್ ಜನರಲ್ಲರಾಗಿ ಮಾರ್ಚಿ ೧ ನೇ ತಾರೀಖು ಅಧಿಕಾರವಹಿಸಿಕೊಳ್ಳುವರೆಂದು ತಿಳಿಯುಬರುತ್ತದೆ.

ವಿಮಾನದಳದ ಮುಖ್ಯಾಧಿಕಾರಿ ಮೈಸೂರಿಗೆ

ಭಾರತ ವಿಮಾನದಳದ ದಂಡನಾಯಕರಾದ ಏರ್ ಮಾರ್ಷಲ್ ಆರ್ ಐವಾ ಚಾಪ್‌ಮನ್‌ರವರು ವಿಮಾನದಲ್ಲಿ ೧೦ ನೇ ತಾರೀಖು ಮೈಸೂರಿಗೆ ಆಗಮಿಸುವರು. ೧೨ ನೇ ತಾರೀಖು ಬೆಂಗಳೂರಿಗೆ ತೆರಳಿ ಮಿಲಿಟರಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ೧೭ ನೇ ತಾರೀಖು ದೆಹಲಿಗೆ ಪ್ರಯಾಣ ಮಾಡುವರು.

ಟೆಲಿಫೋನ್ ದರ ಏರಿಸಿದ್ದಕ್ಕೆ ಖಂಡನೆ

ಮೈಸೂರು ಫೆ. ೮

ಬೆಂಗಳೂರು ಮೈಸೂರು ಟ್ರಂಕ್ ದರವನ್ನು ೦-೧೨-೦ ನಿಂದ ೨-೨-೦ ಗೆ ಏರಿಸಿದ್ದಕ್ಕೆ ಮೈಸೂರು ನಗರ ಟೆಲಿಫೋನ್ ಉದ್ಯೋಗಿ ಸಂಘದ ವಾರ್ಷಿಕ ಸಭೆಯಲ್ಲಿ ನಿನ್ನೆ ಖಂಡಿಸಿ ಒಂದು ನಿರ್ಣಯವನ್ನು ಮಾಡಿ, ಇದರ ತೊಂದರೆಯನ್ನು ವಿವರವಾಗಿ ಕೂಡಲೇ ಮೈಸೂರು ಮತ್ತು ಕೇಂದ್ರ ಸರ್ಕಾರ ಮತ್ತು ಮೈಸೂರಿನ ಪರವಾಗಿ ಕೇಂದ್ರ ಪಾರ್ಲಿಮೆಂಟಿನಲ್ಲಿರುವ ಸದಸ್ಯರಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

ಅಲ್ಲದೆ ಮೈಸೂರು ನಗರದಲ್ಲಿರುವ ಎಲ್ಲಾ ಟೆಲಿಫೋನ್ ಇಟ್ಟುಕೊಂಡಿರುವವರ ಒಂದು ಸಭೆಯನ್ನು ಸಂಘದ ಆಶ್ರಯದಲ್ಲಿ ಪುರಭವನದಲ್ಲಿ ನಡೆಯುವಂತೇರ್ಪಡಿಸಬೇಕೆಂದೂ ತೀರ್ಮಾನವಾಯಿತು.

ಸರ್ವೋದಯ ಪಕ್ಷ

ಮೈಸೂರು ಫೆ. ೮

ಪಶ್ಚಿಮವಾಹಿನಿಯಲ್ಲಿ ನಡೆಯುತ್ತಲಿರುವ ಸರ್ವೋದಯಪಕ್ಷದ ಕಾರ್ಯಕ್ರಮಗಳಲ್ಲಿ ನಾಳೆ ಬೆಳಗ್ಗೆ ೮-೩೦ ಗಂಟೆಗೆ ಗಾಂಧೀ ಸಾಹಿತ್ಯಸಮ್ಮೇಳನ ನಡೆಯುವುದು. ಶ್ರೀ ಬಿ. ಎಂ. ಮಾಧವರವರು ಅಧ್ಯಕ್ಷತೆವಹಿಸುವರು.

೧೦-೧೧ನೇ ತಾ॥ ಗಳಲ್ಲಿ ಸರ್ವೋದಯ ಸಮ್ಮೇಳನವು ಶ್ರೀ ಮಥುರಾದಾಸ್ ಪುರುಷೋತ್ತಮದಾಸ್‌ರವರ ಅಧ್ಯಕ್ಷತೆಯಲ್ಲಿ ಸೇರುವುದು ಸರ್ವರಿಗೂ ಆಹ್ವಾನವುಂಟು.

ಮೈಸೂರಿಗೆ ಗೋಧಿ

ಬೆಂಗಳೂರು ಫೆ. ೭

ಆರ್ಜೆಂಟೈನಾದಿಂದ ಮದರಾಸಿಗೆ ಬಂದ ಹಡಗಿನಲ್ಲಿನ ಗೋಧಿಯಲ್ಲಿ ಮೈಸೂರಿಗೆ ೫೦೦ ಟನ್ ದೊರೆಯುವುದು.

ಜನರು ಆಹಾರವಿಲ್ಲದೆ ಹುಲ್ಲು ತಿನ್ನುತ್ತಿರುವರು

ಉದಯಪುರದ ಡಿವಿಜನ್ನಿನಲ್ಲಿರುವ ಭೈಲಾ ಜನರೆಲ್ಲರೂ ಆಹಾರವಿಲ್ಲದೆ ಹುಲ್ಲುತಿನ್ನುತ್ತಲಿರುವುದಾಗಿ ವರದಿಯಾಗಿದೆ. ಶನಿವಾರ ಆಹಾರವಿಲ್ಲದೆ ಅವರಲ್ಲೊಬ್ಬನು ಸತ್ತನೆಂದೂ ತಿಳಿಯುಬರುತ್ತದೆ.

ಶ್ರೀ ಮೇದಪ್ಪನವರಿಗೆ ವಿಷಪ್ರಾಶನ ಯತ್ನ

ಪೋಲೀಸರು ತನಿಖೆ ನಡೆಸುತ್ತಿದ್ದಾರೆ

ಬೆಂಗಳೂರು ಫೆ. ೭

ಜನವರಿ ೨೯ನೆಯ ತಾ॥ ಸಂಜೆ ಮೈಸೂರು ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ. ಮೇದಪ್ಪನವರ ಮನೆಯವರೆಲ್ಲರೂ ಹೊರಗೆ ಹೋಗಿದ್ದಾಗ ಶ್ರೇಷ್ಠ ನ್ಯಾಯಾಧೀಶರ ಮನೆಯ ಸೇವಕರನ್ನು ಒಳಹಾಕಿಕೊಂಡು ಅವರ ನೆರವಿನಿಂದ ಶ್ರೀ ಪಿ. ಮೇದಪ್ಪನವರಿಗೆ ವಿಷಪ್ರಾಶನ ಮಾಡಿಸುವ ಹೇಡಿತನದ ಪ್ರಯತ್ನವೊಂದು ನಡೆಯಿತೆಂದು ನಂಬಿಕೆಗೆ ಅರ್ಹವಾದ ಕಡೆಗಳಿಂದ ನಿರ್ದಿಷ್ಟವಾಗಿ ತಿಳಿಯಬಂದಿದೆ.

ಈ ವಿಷಪ್ರಾಶನ ಪ್ರಯತ್ನದಲ್ಲಿ ಉಪಯೋಗಿಸಲಾದ ಕರಾಳ ವಿಷವು 'ಮರ್ಕ್ಯೂರಿಕ್ ಕ್ಲೋರೈಡ್' ಎಂದೂ ಈ ವಿಷವು ಸಾಮಾನ್ಯವಾಗಿ ದೊರೆಯುವಂತಹುದಲ್ಲವೆಂದೂ ಗೊತ್ತಾಗಿದೆ. ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ಈ ವಿಷವನ್ನು ಅವರು ಕುಡಿಯಲಿದ್ದ 'ಟೀ' ಯಲ್ಲಿ ಹಾಕಲಾಗಿತ್ತೆಂದೂ, ಈ ವಿಪತ್ತಿನಿಂದ ಅವರು ಪಾರಾದುದು ದೈವವಶವೆಂದೂ ತಿಳಿದು ಬಂದಿದೆ.

ಈ ವಿಚಾರದ ಬಗ್ಗೆ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆಂದು ಗೊತ್ತಾಗಿದೆ.

ಮೈಸೂರಿಗೆ ಕೇಂದ್ರದ ಧನ ಸಹಾಯ

ಭಾರತದ ೭ ಪ್ರಾಂತಗಳ ಪೈಕಿ ಉತ್ತರ ಪ್ರದೇಶಕ್ಕೆ ಗ್ರಾಮ ಪುನರುದ್ಧಾರಕ್ಕಾಗಿ ಕೇಂದ್ರದಿಂದ ಹೆಚ್ಚಿನ ಹಣ ಲಭ್ಯವಾಗುವುದು ಉ॥ ಪ್ರದೇಶಕ್ಕೆ ೨೩,೧೬,೦೦೦ ರೂ. ಮಧ್ಯ ಭಾರತಕ್ಕೆ ೧೫,೫೦,೦೦೦ ರೂ. ಹೈದರಾಬಾದಿಗೆ ೭,೫,೦೦೦ ಭೂಪಾಲಿಗೆ ೩,೧೬,೦೦೦ ರೂ. ರಾಜಸ್ಥಾನಕ್ಕೆ ೧೦,೦೦,೦೦೦ ರೂ. ಪೆಪ್ಸುವಿಗೆ ೫ ಲಕ್ಷ ರೂಪಾಯಿ ಮೈಸೂರಿಗೆ ೨,೩೬,೦೦೦ ರೂ. ಕಛ್‌ಗೆ ೧,೦೦,೦೦೦ ರೂ ಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಪಾರ್ಲಿಮೆಂಟ್ ಅಧ್ಯಕ್ಷರಿಗೆ ಮಹಿಳಾ ಸದಸ್ಯರ ಮನವಿ

ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡ್ ಮಸೂದೆಯ ಮೇಲೆ ಮಾತನಾಡುತ್ತಾ ಶ್ರೀ ರೋಹಿಣಿ ಕುಮಾರ ಚೌಧುರಿಯವರು ಮಾಡಿದ ಕೆಲವು ಟೀಕೆಗಳು ಸ್ತ್ರೀಯರ ಮನಸ್ಸನ್ನು ನೋಯಿಸಿದ್ದು ಮಾತ್ರವಲ್ಲದೆ ಸಭೆಯ ಘನತೆಗೂ ಸಹನೀಯವಲ್ಲದ್ದೆಂದು ಪ್ರತಿಭಟಿಸಿ ಪಾರ್ಲಿಮೆಂಟಿನ ಮಹಿಳಾ ಸದಸ್ಯರೆಲ್ಲರೂ ಸೇರಿ ಅಧ್ಯಕ್ಷ ಶ್ರೀ ಜಿ. ವಿ. ಮಾವಳಂಕರ್‌ರವರಿಗೆ ಜಂಟೀ ಪತ್ರವೊಂದನ್ನು ಸಲ್ಲಿಸಿದ್ದಾರೆ.

ಶ್ರೀ ಚೌಧುರಿಯವರು ತಾವು ಬಳಸಿದ ಭಾಷೆಗಾಗಿ ಸಭೆಗೆ ಬೇಷರತ್ತಾದ ಕ್ಷಮಾಪತ್ರವೊಂದನ್ನು ಸಲ್ಲಿಸಬೇಕೆಂದೂ, ಅವರ ಟೀಕೆಗಳನ್ನು ಸಭೆಯ ರಿಕಾರ್ಡಿನಿಂದ ತೆಗೆದುಹಾಕಬೇಕೆಂದೂ, ಸ್ತ್ರೀ ಸದಸ್ಯರುಗಳು ಒತ್ತಾಯ ಮಾಡಿದ್ದಾರೆ.

ಪಾರ್ಲಿಮೆಂಟಿನ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಶ್ರೀ ಚೌಧುರಿಯವರ ಭಾಷಣದ ಕೆಲವು ಅಂಶಗಳನ್ನು ತೆಗೆದುಹಾಕಬೇಕೆಂದು ನೆನ್ನೆಯ ದಿನವೇ ಆಜ್ಞೆಯಿತ್ತಿದ್ದರು. ಸಭೆಯ ಘನತೆಯನ್ನು ಪರಿಪಾಲಿಸುವ ಅವಶ್ಯಕತೆಯ ದೃಷ್ಟಿಯಿಂದ ಮಹಿಳಾ ಸದಸ್ಯರ ಪ್ರತಿಭಟನಾ ಮನವಿ ಪತ್ರಕ್ಕೆ ಅನೇಕ ಮಂದಿ ಪುರುಷ ಸದಸ್ಯರೂ ಸಹಿ ಹಾಕಿದರು.

ನೂತನ ಅಧಿಕಾರಿ ವರ್ಗ

ಮೈಸೂರು ಫೆ. ೮

ಮೈಸೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ನಿನ್ನೆ ನಡೆದು ಮುಂದಿನ ಸಾಲಿಗೆ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಅಧ್ಯಕ್ಷರಾಗಿಯು, ಶ್ರೀ ಟಿ. ಕೃಷ್ಣರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಕಾಳಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು.

ಮದ್ರಾಸಿನಲ್ಲಿ

ವಿದ್ಯುತ್‌ಚ್ಛಕ್ತಿ ಸರಬರಾಜು ಖೋತಾ

ಮೆಟ್ಟೂರು ಜಲಾಶಯದಲ್ಲಿ ನೀರಿನ ಮಟ್ಟ ಕಡಿಮೆಯಾಗಿರುವುದರಿಂದ ಮದ್ರಾಸಿನಲ್ಲಿ ಜನರಿಗೆ ಒದಗಿಸುವ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ ಶೇಕಡ ೧೫ ರಷ್ಟನ್ನು ಖೋತಾಮಾಡಲಾಗಿದೆ.

CITY MUNICIPAL OFFICE, MYSORE

Dated 2-2-1951

NOTIFICATION

Re :—Quotations for the supply of Phenyle as detailed below for the year 1951-52.

Notice is hereby given that sealed tenders with samples will be received by the undersigned at the office for the year 1951—52 on or before 20-2-51.

1. Each tender must be accompanied by a challan for having deposited the tender deposit as noted below against the item in each of the Municipal Treasury as earnest money in default of which tenders will be rejected.

2. Particulars may be had at the office on all the working days on a reference to the office.

Details.

Particulars.	Deposit.
Phenyle	Rs. 100/-

(About 1,600 gallons)

(Sd) C, Narasimha Moorty,
Municipal Commissioner.

ಕಾಂಗ್ರೆಸ್ ವಸ್ತುಪ್ರದರ್ಶನ

ಬೆಂಗಳೂರಿನಲ್ಲಿ ನಡೆಯಲಿರುವ ಕಾಂಗ್ರೆಸ್ ವಸ್ತುಪ್ರದರ್ಶನದ ಆರಂಭೋತ್ಸವವನ್ನು ಈ ಮಾಹೆ ೨೩ ನೇ ತಾ|| ಶ್ರೀಮನ್ಮಹಾರಾಜರು ನೆರವೇರಿಸುವರು.

ಶ್ರೀ. ಬಿ. ವಿ. ನಾರಾಯಣರೆಡ್ಡಿ

ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರಾದ ಶ್ರೀ ಬಿ. ವಿ. ನಾರಾಯಣರೆಡ್ಡಿಯವರನ್ನು ಮೈಸೂರು ಸೆಂಟ್ರಲ್ ಕೋ-ಆಪರೇಟಿವ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಟ್ರಸ್ಟಿಯಾಗಿ ಸರ್ಕಾರದವರು ನೇಮಿಸಿರುವರು

ಆಹಾರಭಾವದಿಂದ ಸತ್ತ ಕುದುರೆಯ ಪ್ರದರ್ಶನ

ಆಹಾರ ಅಭಾವದಿಂದ ಸತ್ತ ಕುದುರೆಯ ಶವವೊಂದನ್ನು [illegible] ೧೫೦ ಜನ ಟಾಂಗಾ ಹೊಡೆಯುವವರೂ, ಪೆಪ್ಸು ವ್ಯಾಪಾರ ಮಂಡಲದ ಅಧ್ಯಕ್ಷರು ಟಾಂಗಾ ಡ್ರೈವರುಗಳ ಸಂಘದ ಅಧ್ಯಕ್ಷರೂ, ಕೇಂದ್ರ ಕಾರ್ಮಿಕ ಸಂಘದ ಕಾರ್ಯದರ್ಶಿಗಳೂ ಮುಂತಾದವರು ಪಾಟಿಯಾಲದಲ್ಲಿ ಸೆಕ್ರಿಯೇಟಿನ ಮುಂದೆ ಪ್ರದರ್ಶನ ನಡೆಸಿದರು. ಅವರ ಪೈಕಿ ೩೬ ಜನರು ದಸ್ತಗಿರಿಯಾಗಿ ೩೩ ಜನ ಜಾಮೀನಿನ ಮೇಲೆ ಬಿಡುಗಡೆಯಾಗಲು ನಿರಾಕರಿಸಿ ಲಾಕಪ್ಪಿಗೆ ಹೋದರು. ಇಬ್ಬರನ್ನು ಬಿಡುಗಡೆ ಮಾಡಲಾಯಿತು. ಒಬ್ಬನನ್ನು ಜಾಮೀನಿನಮೇಲೆ ಬಿಡಲಾಯಿತು.

ಮೈಸೂರು ಸಿಟಿ ಮುನಸಿಪಲ್ ಕಮಿಷನರ್ ಮತ್ತು ಡಿವಿಜನಲ್ ಸೆನ್ಸಸ್ ಆಫೀಸರವರ ಆಫೀಸಿನಿಂದಾ

ತಾ|| 7-2-1951

ಪ್ರ ಕ ಟ ಣೆ

ಈ ತಿಂಗಳು ೯ ನೇ ತಾರೀಖಿನಿಂದಾ ತಿಂಗಳ ಕೊನೆಯವರಿವಿಗೂ ಮೈಸೂರು ನಗರದಲ್ಲಿ ಸೆನ್ಸಸ್ ಲೆಖ್ಖವನ್ನು ತೆಗೆದುಕೊಳ್ಳಲು ಎನ್ಯೂಮರೇಟರುಗಳು ಮನೆಮನೆಗೂ ಬರುತ್ತಾರೆ. ಆ ಸಮಯದಲ್ಲಿ ಅವರಿಗೆ ಎಲ್ಲರೂ ತಮ್ಮ ಮನೆಗೆ ಸಂಬಂಧಪಟ್ಟಂತೆ ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಡಬೇಕು. ಸೆನ್ಸಸ್ಸಿಗೆ ಕೊಡುವ ಅಂಕಿ ಅಂಶಗಳನ್ನು ರಹಸ್ಯವಾಗಿ ಇಡಲಾಗುವುದು ಪುರಜನರೆಲ್ಲಾ ಸೆನ್ಸಸ್ ಕೆಲಸದಲ್ಲಿ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ.

(ಸಹಿ) ಸಿ. ನರಸಿಂಹಮೂರ್ತಿ,
ಮುನಸಿಪಲ್ ಕಮಿಷನರ್ ಮತ್ತು ಡಿವಿಜನಲ್ ಸೆನ್ಸಸ್ ಆಫೀಸರ್.

ಅಕ್ರಮ ರೇಷನ್ ಕಾರ್ಡ್ ಪತ್ತೆಗಾಗಿ ಕರ್ಫ್ಯೂ

ಅಕ್ರಮ ರೇಷನ್ ಕಾರ್ಡುಗಳನ್ನು ಪತ್ತೆ ಮಾಡಲೋಸುಗ ಪುಣೆ ಜಿಲ್ಲೆಯ ಅಧಿಕಾರಿಗಳು ಪುಣೆಯ ಒಂದು ಪ್ರದೇಶದಲ್ಲಿ ೧೦ ಗಂಟೆಕಾಲ ಕರ್ಫ್ಯೂ ಜಾರಿಗೆ ತಂದು ತನಿಖೆ ನಡಸಿ ಹಲವಾರು ಅಕ್ರಮ ಕಾರ್ಡುಗಳನ್ನು ಪತ್ತೆ ಹಚ್ಚಿದರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಫೆಬ್ರವರಿ ೯ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಬಿ ವರದರಾಜಐಯ್ಯಂಗಾರ್ (ದೇವಿಭಜನೆ) ೭-೩೫ ಚಿತ್ರಲೋಕ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ನಾಗಸ್ವರ ೧-೪೫ ಹಿಂದೀ ಶಿಕ್ಷಣ. ೨-೦ ನಿಮ್ಮ ಮೆಚ್ಚಿನ ಕಲಾವಿಧರು ೨-೩೦ ಮುಕ್ತಾಯ.

ಸಂಜೆ ೫-೩೦ ಎ. ವಿ. ಕೃಷ್ಣಮಾಚಾರ್ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. ೭-೫ ಹಿಂದೀ ಕಾಲಕ್ಷೇಪ ೭-೧೫ ಎ. ವಿ. ಕೃಷ್ಣಮಾಚಾರ್ (ಪಿಟೀಲ್) ೭-೩೦ ಎನ್. ಎನ್. ಶಾಸ್ತ್ರಿ ವಿಶ್ವವಾರ್ತೆ. ೮-೦ ನಾದ ಶ್ರೀ (ರಿ) ೮-೧೫ ಬಿ ವರದರಾಜಯ್ಯಂಗಾರ್ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿ ಶಿಕ್ಷಣ. ೯-೩೦ ಅರಮನೆ ಕರ್ನಾಟಕ ಬ್ಯಾಂಡು ೧೦-೦ ಮುಕ್ತಾಯ.

ರಣಜಿತ್

೯-೨-೫೧ ರಿಂದ ಪ್ರತಿದಿನ ೩ ಆಟಗಳು

ಕೇರದಾರ್ ಮತ್ತು ನೌಷದ್‌ರವರ

ದಾಸ್ತಾನ್

(Dastan)

ಪಾತ್ರ :—ರಾಜಕಪೂರ್, ಸುರಯ್ಯ, ಅದನಸೀರ್

ಬೆಳಗಿನ ಪ್ರದರ್ಶನ

೯-೨-೫೧ ರಿಂದ ೩ ದಿನ ಮಾತ್ರ

ಮೆಹಬೂಬ್‌ರವರ,

ಹುಮಾಯೂನ್

ಪಾತ್ರ:-ಅಶೋಕ್‌ಕುಮಾರ್

ಒಲಂಪಿಯಾ

೮-೨-೫೧ರಿಂದ ಪ್ರತಿದಿನ ೩ ಆಟಗಳು

ಪಾತ್ರ :—ಬೇಗಂಪ್ಯಾರ, ಸಾದಿಕ್ ಅಲಿ, ಮನೋರಮ

ಸುಹಾಗಿ

ಬೆಳಗಿನ ಪ್ರದರ್ಶನ

೯—೨—೧೯೫೧ರಿಂದ

ಚಂದ್ರಮೋಹನ್, ಸ್ವರ್ಣಲತ, ಸ್ನೇಹಪ್ರಭಾ ನಟಿಸಿರುವ

ಪ್ರೀತ್

ಸಂಪಾದಕರು ಮತ್ತು ಪ್ರಕಾಶಕರು : ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೦-೨-೧೯೫೧ನೇ ಶನಿವಾರ [ಸಂಚಿಕೆ ೧೪೨

ಆಹಾರ ಧಾನ್ಯಗಳ ಬೆಲೆ ಏರುವುದು

ಬೆಂಗಳೂರು ಫೆ. ೯

ಮುಂದಿನವಾರದಿಂದ ಆಹಾರಧಾನ್ಯಗಳ ಬೆಲೆ ಹೆಚ್ಚಿಸಲಾಗುವುದೆಂದೂ, ಅದರಿಂದ ಉಳಿತಾಯವಾಗುವ ಹಣವನ್ನು ಜನರ ಸೌಕರ್ಯಕ್ಕಾಗಿ ಉಪಯೋಗಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಕೋಲಾರ ಜಿಲ್ಲಾ ಪ್ರವಾಸಕಾಲದಲ್ಲಿ ತಿಳಿಸಿರುವರು.

ಭಾರತಕ್ಕೆ ನ್ಯೂಸ್ ಪ್ರಿಂಟ್

ಭಾರತಕ್ಕೆ ಬ್ರಿಟನ್ನು ೧೫೦೦೦೦ ಟನ್ನು ನ್ಯೂಸ್ ಪ್ರಿಂಟನ್ನು ಒದಗಿಸಬೇಕೆಂದು ಬ್ರಿಟನ್ನಿನಲ್ಲಿರುವ ಭಾರತ ಹೈಕಮಿಷನರ್‌ರು ಬ್ರಿಟನ್ನು ಸರ್ಕಾರವನ್ನು ಕೇಳಲು ಕಾರ್ಯಕ್ರಮವೆಸಗುತ್ತಲಿರುವರು.

ಇತರ ದೇಶಗಳಿಂದ ಈ ವರ್ಷ ೩೧,೦೦೦ ಟನ್ ಕಾಗದವು ಬರುವ ಸಂಭವವಿದೆ.

ಆರ್ಥಿಕ ಸಚಿವರ ಪ್ರವಾಸ

ಬೆಂಗಳೂರು ಫೆ ೯

ಆರ್ಥಿಕ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಇದೇ ಮಾಹೆ ೧೨ರಿಂದ ೧೭ರವರೆಗೆ ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

೧೬ನೇ ತಾ|| ಮಧ್ಯಾಹ್ನ ಚಪ್ಪರದ ಹಳ್ಳಿಯಲ್ಲಿ ಪಶುವೈದ್ಯಶಾಲೆ ಮತ್ತು ಅತ್ತಿಗೋಡಲ್ಲ ಪ್ರಾಥಮಿಕ ಪಾಠಶಾಲೆ ಪ್ರಾರಂಭೋತ್ಸವ ನಡೆಸುವರು.

ಸಾರ್ವಜನಿಕ ವಿದ್ಯಾರ್ಥಿನಿಲಯ ಶಂಕುಸ್ಥಾಪನೆ

ಸಾರ್ವಜನಿಕ ವಿದ್ಯಾರ್ಥಿನಿಲಯ ಕಟ್ಟಡದ ಶಂಕುಸ್ಥಾಪನೆಯನ್ನು ಮೈಸೂರಿನ ಆರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಇದೇ ತಿಂಗಳು ೧೬ನೇ ತಾ|| ಮೈಸೂರಿನಲ್ಲಿ ನಡೆಸುವರು.

ಸಂಬಳ ಪರಿಮಿತಿ

ಭಾರತ ಸರ್ಕಾರಿ ಅಧಿಕಾರಿಗಳಿಗೆ ೩,೦೦೦ ರೂ. ಗಳಿಗೆ ಹೆಚ್ಚು ಸಂಬಳ ಇರಬಾರದೆಂದೂ ಆರೀತಿ ಹೆಚ್ಚಿಗೆ ಸಂಬಳ ಪಡೆಯುವವರು ತಾವಾಗಿ ಹೆಚ್ಚಿಗೆ ಸಂಬಳವನ್ನು [illegible]ಬೇಕೆಂದು ಆರ್ಥಿಕ ಅಂದಾಜು ಸಮಿತಿಯು ಕೇಂದ್ರ ಪಾರ್ಲಿಮೆಂಟಿಗೆ ಶಿಫಾರಸು ಮಾಡಿದೆ.

ಕ್ರಿಮಿನಲ್ ಪ್ರೊಸೀಜರ್ ಕೋಡ್

೧೮೯೮ನೇ ಇಸವಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ಭಾರತಕ್ಕೆಲ್ಲ ಅನ್ವಯಿಸುವಂತೆ ಪಾರ್ಲಿಮೆಂಟು ತೀರ್ಮಾನಿಸಿದೆ. ಇದುವರೆಗೆ ಅದು ಪ್ರಾಂತಗಳಿಗೂ ಕೇಂದ್ರ ಸರ್ಕಾರದ ಆಡಳಿತದಲ್ಲಿದ್ದ ಪ್ರದೇಶಗಳಿಗೂ ಮಾತ್ರ ಅನ್ವಯವಾಗಿತ್ತು. ಈಗ ಅದು ಸಂಸ್ಥಾನಗಳಿಗೂ ಅನ್ವಯವಾಗುವುದು.

ಕೇಂದ್ರದ ದ್ರವ್ಯ ಸಹಾಯ

ಬೆಂಗಳೂರು ಫೆ. ೯

ಸಂಸ್ಥಾನದ ಅಭಿವೃದ್ಧಿಯ ಎರಡು ವರ್ಷದ ಯೋಜನೆಯನ್ನು ಸುಮಾರು ೩|| ಕೋಟಿ ರೂ. ವೆಚ್ಚದಲ್ಲಿ ತಯಾರಿಸಿ ಅರ್ಧ ಭಾಗವನ್ನು ಕೇಂದ್ರ ಸರ್ಕಾರ ಕೊಡಬೇಕೆಂದು ಕೇಳಲಾಗಿದೆ. ಆಹಾರ ಬೆಳೆಯೋಜನೆಗೆ ೧೯೫೧-೫೨ನೇ ಸಾಲಿಗೆ ಒಂದೂವರೆ ಕೋಟಿ ರೂ. ಗಳನ್ನು ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಲಾಗಿದೆಯೆಂದು ತಿಳಿಯಬರುತ್ತದೆ.

ನಿಜಾಮರ ಅರಮನೆಯಲ್ಲಿ ಕಳ್ಳತನ

ಸಿಕಂದರಾಬಾದಿನಲ್ಲಿರುವ ಬೋಲಾರಾಂ ಅರಮನೆಯಲ್ಲಿರುವ ಬೆಲೆಬಾಳುವ ಒಡವೆಗಳನ್ನೂ ಸುಂದರವಾದ ಚಿನ್ನದ ಸಾಮಾನುಗಳನ್ನೂ ಅಪಹರಿಸಿರುವರೆಂದು ಹೇಳಲಾಗಿದೆ. ಮೂವರನ್ನು ಈ ಸಂದರ್ಭದಲ್ಲಿ ದಸ್ತಗಿರಿ ಮಾಡಲಾಗಿದೆ.

ಪಾಕೀಸ್ಥಾನದಲ್ಲಿ ಅಸ್ತಿಸಂಚಯನಕ್ಕೂ ಸರ್ಕಾರದ ಅಪ್ಪಣೆ

ಪಾಕಿಸ್ಥಾನದಲ್ಲಿ ಮೃತರಾದ ಹಿಂದೂಗಳ ಅಸ್ತಿಯನ್ನು ಗಂಗಾ ನದಿಯಲ್ಲಿ ವಿಸರ್ಜಿಸಲು ಭಾರತಕ್ಕೆ ತರಬೇಕಾದರೆ ಸರ್ಕಾರದ ಅಪ್ಪಣೆಬೇಕು. ಈ ರೀತಿ ಬಂದ ನಿರ್ಣಯಕ್ಕೆ ಹಿಂದೂಗಳು ಒಪ್ಪಿಗೆಯನ್ನಿತ್ತು ಈಗ ಅವರು ಬಹಳ ಶ್ರಮಪಡುತ್ತಿರುವರೆಂದೂ, ಶವವನ್ನೂ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲು ಹಿಂದೂಗಳಿಗೆ ಹೆದರಿಕೆಯುಂಟಾಗಿ ಮೋಟಾರಿನಲ್ಲಿ ಶವವನ್ನು ಸಾಗಿಸುತ್ತಿರುವರೆಂದೂ ವರದಿಯಾಗಿದೆ.

ರೇಷನ್ ಹೆಚ್ಚಿಸಲಾಗುವುದು

ಆಹಾರ ಆಮದಿಗೆ ನೌಕಾ ವ್ಯವಸ್ಥೆ ಉತ್ತಮಗೊಂಡಲ್ಲಿ ಮಾರ್ಚಿ ಕೊನೆಯ ಹೊತ್ತಿಗೆ ರೇಷನ್ ಪ್ರಮಾಣವನ್ನು ಹೆಚ್ಚಿಸಲಾಗುವುದೆಂದು ತಿಳಿಯಬರುತ್ತದೆ.

ಜನಗಣತಿ

ಭಾರತದ್ಯಂತ ನಿನ್ನೆಯಿಂದ ಜನಗಣತಿ ಕಾರ್ಯವು ಪ್ರಾರಂಭವಾಗಿದೆ. ೨೦ ದಿನಗಳವರೆಗೆ ನಡೆಯುವ ಜನಗಣತಿಯ ಕಾಲದಲ್ಲಿ ಭಾರತಾದ್ಯಂತ ೩೫ ಕೋಟಿಗಿಂತ ಅಧಿಕವಾಗಿರುವ ಜನಸಂಖ್ಯೆಯನ್ನು ವಿಶದವಾಗಿ ಎಣಿಕೆಮಾಡಿ ಜನರ ವಯಸ್ಸು, ಉದ್ಯೋಗ, ಸ್ವಾವಲಂಬನೆ ಆರ್ಥಿಕಸ್ಥಿತಿ ಮುಂತಾಗಿ ೮೦ ಮುಖ್ಯಬಾಬುಗಳಲ್ಲಿ ವಿಷಯ ಸಂಗ್ರಹಣೆ ನಡೆಯಲಾವುದವಾಗಿದೆ. ಈ ಕಾರ್ಯ ಸಂಗ್ರಹಣೆಗೆ ದೇಶಾದ್ಯಂತ ೬ ಲಕ್ಷ ಎನ್ಯೂಮರೇಟರುಗಳು ಕಾರ್ಯೋನ್ಮುಖರಾಗಿರುವರು.

ದೆಹಲಿಯಲ್ಲಿ ಪ್ರಥಮವಾಗಿ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದ್‌ರವರ ನಿವಾಸದಲ್ಲಿ ಜನಗಣತಿಕಾರ್ಯ ಪ್ರಾರಂಭವಾಯಿತು.

ಮೆಕ್ಸಿಕೋಗೆ ರಾಯಭಾರಿ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಮೆಕ್ಸಿಕೋವಿ ಪ್ರಥಮ ರಾಯಭಾರಿಯಾಗಿ ತಮ್ಮ ಪ್ರಶಸ್ತಿ ಪರಿಚಯ ಪತ್ರಗಳನ್ನು ಒಪ್ಪಿಸಿದರು. ಅಮೆರಿಕಾ ರಾಯಭಾರಿ ಹುದ್ದೆಯ ಜೊತೆಗೆ ಈ ಕೆಲಸನ್ನೂ ಅವರು ಮಾಡುವರು.

ಮೈಸೂರು ವಿದ್ಯಾರ್ಥಿಗೆ ಶಿಕ್ಷಣ ವೇತನ

ಭಾರತೀಯ ವಿಶ್ವವಿದ್ಯಾನಿಲಯಗಳ ೮ ವಿದ್ಯಾರ್ಥಿಗಳಿಗೆ ವಿದೇಶಗಳಲ್ಲಿ ಉಚ್ಚ ಶಿಕ್ಷಣಪಡೆಯಲು ವಿದ್ಯಾರ್ಥಿ ವೇತನ ದೊರೆಕಿದೆ. ಇವರ ಪೈಕಿ ಬೆಂಗಳೂರು ಸರ್ಕಾರಿ ಇಂಜನೀಯರಿಂಗ್ ಕಾಲೇಜು ಪದವೀಧರರಾದ ಶ್ರೀ ಎಂ. ಆರ್. ಶ್ರೀನಿವಾಸ್‌ರವರಿಗೂ ವೇತನ ದೊರೆಕಿದೆ. ಇವರು ಮೆಕಾನಿಕಲ್ ಇಂಜನೀಯರಿಂಗ್ ಪರೀಕ್ಷೆಯಲ್ಲಿ ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾದವರು.

ಪೌರಸಭಾಧ್ಯಕ್ಷ ಉಪಾಧ್ಯಕ್ಷರುಗಳಗೆ ಸತ್ಕಾರಕೂಟ

ಮೈಸೂರು ಫೆ. ೧೦

ಮೈಸೂರು ಮಾಜಿ ಮತ್ತು ಈಗಿನ ಪೌರಸಭಾಧ್ಯಕ್ಷ ಮತ್ತು ಉಪಾಧ್ಯಕ್ಷರ ಗೌರವಾರ್ಥವಾಗಿ ಮೈಸೂರು ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ನಿನವರು [illegible] ಭವನದಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿರುವರು.

ಬೆಂಗಳೂರಿನಲ್ಲಿ ಜನಗಣತಿ

ಬೆಂಗಳೂರು ಫೆ. ೯

ಪ್ರಥಮವಾಗಿ ಜನಗಣತಿ ಕಾರ್ಯವು ಇಂದು ಬೆಳಗ್ಗೆ ಮುಖ್ಯ ಮಂತ್ರಿಗಳ ಭವನದಲ್ಲಿ ಪ್ರಾರಂಭವಾಯಿತು. ಮುಖ್ಯ ಮಂತ್ರಿಗಳು ಪ್ರವಾಸದಲ್ಲಿರುವುದರಿಂದ ಅವರ ಪತ್ನಿ ಶ್ರೀಮತಿ ಸರೋಜಮ್ಮನವರು ಲೇಡಿ ಎನ್ಯೂಮರೇಟರ್‌ಗಳಿಗೆ ವಿವರಗಳನ್ನಿತ್ತರು.

ನಗರದಲ್ಲಿ ೯೦೨ ಎನ್ಯೂಮರೇಟರ್, ೧೭೧ ಸೂಪರ್‌ವೈಜರ್ ಮತ್ತು ೧೫ ಚಾರ್ಜ್ ಸೂಪರಿಂಟೆಂಡೆಂಟರುಗಳು ನಾನಾ ಅಂಕಿ ಅಂಶಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿರುವರು. ಇವರಲ್ಲಿ ೭೧೮೦ ಲೇಡಿ ಎನ್ಯೂಮರೇಟರುಗಳಿರುವರು.

ಸಂಸ್ಥಾನಾದ್ಯಂತ ೨೨,೬೫೦ ಎನ್ಯೂಮರೇಟರ್ ಮತ್ತು ೧೪೪೫ ಸೂಪರ್‌ವೈಜರ್‌ಗಳು ಸೆನ್ಸಸ್ ಕೆಲಸ ಮಾಡಲಾರಂಭಿಸಿರುವರು.

ನೂಲಿನ ಸರಬರಾಜು

ನೂಲಿನಿಂದ ಕೆಲಸಮಾಡಿ ಜೀವನಮಾಡುವ ಕೇವಲ ಬಡವರಾದ ಹೆಂಗಸರು ಮಕ್ಕಳುಗಳಿಗೆ ತಿಂಗಳುಗಟ್ಟಲೆ ನೂಲುಸಿಕ್ಕದಿರುವುದರಿಂದ ಹೊಟ್ಟೆಗೆನ್ನವಿಲ್ಲದೆ ಪ್ರಾಣ ಬಿಡುವ ಸ್ಥಿತಿಯಲ್ಲಿರುವುದರಿಂದ ಸರ್ಕಾರದವರು ನೂಲು ಹಂಚುವ ರೀತಿನೀತಿಗಳ ಒಂದು ನಿರ್ಧಾರಕ್ಕೆ ಬರುವವರೆಗೂ ತಾತ್ಕಾಲಿಕವಾಗಿಯಾದರೂ ನೂಲುಹಂಚಿ ಬಡವರಿಗುಂಟಾಗಿರುವ ಅಪಾಯವನ್ನು ಒಡನೆಯೇ ತಪ್ಪಿಸಬೇಕೆಂದು ಕಾಟೇಜ್ ಇಂಡಸ್ಟ್ರೀಸ್ ಕಮಿಟಿಯ ಸದಸ್ಯರಾದ ಶ್ರೀ ಎಂ. ಪಿ. ಲಿಂಗಪ್ಪಯ್ಯನವರು ಸಿವಿಲ್ ಸಪ್ಲೈ ಆಫೀಸರುಗಳು ಮತ್ತು ಅಡಿಷನಲ್ ಇಂಡಸ್ಟ್ರೀಸ್ ಡೈರೆಕ್ಟರಿಗೂ ಟೆಲಿಗ್ರಾಂಗಳನ್ನು ಕಳುಹಿಸುವುದಾಗಿ ತಿಳಿಯಬರುತ್ತದೆ.

ಮಾರಾಟ ತೆರಿಗೆ

ಮದರಾಸಿನಲ್ಲಿ ಕೈಮಗ್ಗದ ಬಟ್ಟೆಯ ಮೇಲೆ ಮಾರಾಟದ ತೆರಿಗೆಯನ್ನು ರೂಪಾಯಿಗೆ ೩ ಪೈ ಯಿಂದ ೧|| ಪೈಗೆ ಕಡಮೆ ಮಾಡಿರುವುದು ಇದೇ ಮಾಹೆ ೧೫ರಿಂದ ಜಾರಿಗೆ ಬರಲಿದೆ.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧಮಾಡಿದಂತೆ ೧೮ನೇ ಯಾತ್ರೆಯ ಟೂರಿಸ್ಟ ರೈಲ್ವೆ ಟಿಕೀಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆಟಿಕೀಟುಗಳನ್ನು ಪಡೆದ ಯಾತ್ರಿಕರು ತಾ|| ೧೧-೨-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತಾ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಥಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಡಾಸಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ.

ತಾ|| ೨೫-೨-೫೧ ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್‌ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨-೫೧ ನೇ ದಿವಸ ಒಳ್ಳೆಸೌಕರ್ಯವುಳ್ಳ ಸ್ಪೆಷಲ್ ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧-೪-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು.

ಹೆಚ್ಚಿನ ತರಗತಿಯ ೩ ನೇ ವರ್ಗ ರೈಲ್ವೆ ಚಾರ್ಜು [illegible] ಸೀಟ್ ೧ ಕ್ಕೆ ೨೫ ರೂ. ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್‌ಮಾಡಲಾಗುವುದು. ಸುಸ್ತಿ ಆದಲ್ಲಿ ಖಂಡಿತವಾಗಿ ಟಿಕೀಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟು)
ಕುಡಚಿ-ಮಾರ್ಗ. ಎಂ. ಎಸ್. ಎಂ. ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ|| ಪಿ. ಟಿ. ಸುಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

CITY MUNICIPAL OFFICE,
MYSORE

Dated 2-2-1951

NOTIFICATION

Re :—Quotations for Carting stock articles from Railway station to Ml. stores. as detailed below for the year 1951-52.

Notice is hereby given that sealed tenders with samples will be received by the undersigned at the office for the year 1951--52 on or before 20-2-51 **at** 4 **P.M.**

1. Each tender must be accompanied by a challan for having deposited the tender deposit as noted below against the item in each at the Municipal Treasury as earnest money in default of which tenders will be rejected.

2. Particulars may be had at the office on all the working days on a reference to the office.

Details

Particulars.	Deposit.
	Rs. 25/
(1) Tar Drums	
(2) Cement	
(3) Iron materials Such as M S Rods Etc.	
(4) Sundry articles.	

(*Sd*) **C, Narasimha Moorty,**
Municipal Commissioner.

ಮೈಸೂರು ಸಿಟಿ ಮುನಸಿಪಲ್
ಕಮಿಷನರ್ ಮತ್ತು ಡಿವಿಜನಲ್ ಸೆನ್ಸಸ್
ಆಫೀಸರವರ ಆಫೀಸಿನಿಂದಾ

ತಾ|| 7-2-1951

ಪ್ರ ಕ ಟ ಣೆ

ಈ ತಿಂಗಳು ೯ ನೇ ತಾರೀಖಿನಿಂದಾ ತಿಂಗಳ ಕೊನೆಯವರಿವಿಗೂ ಮೈಸೂರು ನಗರದಲ್ಲಿ ಸೆನ್ಸಸ್ ಲೆಖ್ಖವನ್ನು ತೆಗೆದುಕೊಳ್ಳಲು ಎನ್ಯೂಮರೇಟರುಗಳು ಮನೆ ಮನೆಗೂ ಬರುತ್ತಾರೆ. ಆ ಸಮಯದಲ್ಲಿ ಅವರಿಗೆ ಎಲ್ಲರೂ ತಮ್ಮ ಮನೆಗೆ ಸಂಬಂಧಪಟ್ಟಂತೆ ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಡಬೇಕು. ಸೆನ್ಸಸ್ಸಿಗೆ ಕೊಡುವ ಅಂಕಿ ಅಂಶಗಳನ್ನು ರಹಸ್ಯವಾಗಿ ಇಡಲಾಗುವುದು ಪುರಜನರೆಲ್ಲಾ ಸೆನ್ಸಸ್ ಕೆಲಸದಲ್ಲಿ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ.

(ಸಹಿ), ಸಿ. ನರಸಿಂಹ್ಮಮೂರ್ತಿ,
ಮುನಸಿಪಲ್ ಕಮಿಷನರ್ ಮತ್ತು ಡಿವಿಜನಲ್
ಸೆನ್ಸಸ್ ಆಫೀಸರ್.

ಸರ್ವೋದಯ ಪಕ್ಷಾಚರಣೆ

ವಿದ್ಯಾರ್ಥಿ ಸಮ್ಮೇಳನ

ಪಶ್ಚಿಮವಾಹಿನಿ ೫

ಸರ್ವೋದಯ ಪಕ್ಷಾಚರಣೆಯ ಅಂಗವಾಗಿ ಇದೇ ೪ ನೇ ತಾ|| ವಿದ್ಯಾರ್ಥಿ ಸಮ್ಮೇಳನವನ್ನು ನ್ಯಾಷನಲ್ ಸ್ಕೂಲಿನ ಹೆಡ್ಮಾಸ್ಟರು ಶ್ರೀ ಕೆ. ಎಸ್. ಕೃಷ್ಣಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಂಸ್ಥಾನದ ಮುಖ್ಯ ಮಂತ್ರಿಯವರಾದ ಶ್ರೀ ಕೆ. ಸಿ. ರೆಡ್ಡಿಯವರು ಸಮ್ಮೇಳನದಲ್ಲಿ ಉಧ್ಘಾಟನೆ ನಡೆಸಿದರು.

ಸಮ್ಮೇಳನದಲ್ಲಿ ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಲಾಯಿತು.

(೧) ಸರ್ವೋದಯ ಸಮಾಜದ ಅಂಗವಾಗಿ ವಿದ್ಯಾರ್ಥಿ ವಿಭಾಗವನ್ನು ತೆರೆಯತಕ್ಕದ್ದು.

(೨) ಸರ್ವೋದಯ ಸಮಾಜದವರು ಪ್ರತಿ ಭಾನುವಾರವೂ ನಡೆಸುವ ಪ್ರಾರ್ಥನೆ ನೂಲುವಿಕೆ ಮತ್ತು ಗೀತಾ ಪ್ರವಚನದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದಲ್ಲದೆ ಸಂಸ್ಥಾನಾದ್ಯಂತ ಇಂತಹ ಸಭೆಗಳನ್ನು ನಡೆಸಲು ಏರ್ಪಡಿಸುವುದು.

(೩) ಈಸಲದ ಬೇಸಿಗೆಯಲ್ಲಿ ಕಗೆಡೂರಿನಲ್ಲಿ ಈ ಸಮಾಜದ ಆಶ್ರಯದಲ್ಲಿ ಸೇವಾ ಕೇಂದ್ರವನ್ನು ತೆರೆಯುವುದು ಶ್ರೀ ಜಿ. ವಿ. ಶ್ರೀನಿವಾಸರಾಯರು ಈ ಕೇಂದ್ರದ ಮೇಲ್ವಿಚಾರಕರಾಗಿರುವರು.

(೪) ವಿದ್ಯಾರ್ಥಿ ವಿಭಾಗಕ್ಕೆ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿ ಶ್ರೀಗಳಾದ ಜಿ. ಶ್ರೀಕಂಠಪ್ಪ, ಟಿ ವಿ. ಶ್ರೀನಿವಾಸರಾಯರು, ಸುಬ್ಬರಾವ್ ಮತ್ತು ಶ್ರೀಮತಿ ಸಾವಿತ್ರಿಯವರನ್ನು ಸದಸ್ಯರನ್ನಾಗಿ ಚುನಾಯಿಸಲಾಯಿತು. ಶ್ರೀ ಎಂ. ಆರ್. ನಾರಾಯಣರಾಯರು ಸಮಿತಿಯ ಸಂಚಾಲಕರಾಗಿಯೂ, ಶ್ರೀ ಟಿ. ವಿ. ಶ್ರೀನಿವಾಸರಾಯರು ಸಂಚಾಲಕರಿಲ್ಲದ ವೇಳೆಯಲ್ಲಿ ಸಂಚಾಲಕರಾಗಿಯೂ ಕೆಲಸಮಾಡತಕ್ಕದ್ದು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯ ೪೬ ಮೀಟರು

ಫೆಬ್ರವರಿ ೧೧ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಮಿಶ್ರಮಾಧುರ್ಯ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾನ್ಹ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್, ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ.

ಸಂಜೆ ೫-೩೦ ವೇದವ್ವ ಸಿಂಗ್ರಾಚಾರ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯಸಮ್ಮೇಳನ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. ೭-೫ ಚಿತ್ರಸಂಗೀತ (ರಿ) ೭-೩೦ ವೇದಮ್ಮ ಸಿಂಗ್ರಾಚಾರ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಟಿ. ಎಸ್. ರಾಮಚಂದ್ರನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕನ್ನಡ ನಾಟಕ ೧೦-೦ ಮುಕ್ತಾಯ.

ಸರ್ವೋದಯ ಪಕ್ಷ ಶಿಬಿರ

ಪಶ್ಚಿಮವಾಹಿನಿ ೯

ಮೇಲ್ಕಂಡ ಶಿಬಿರದ ಕೊನೆಯ ಕಾರ್ಯಕ್ರಮವಾಗಿ ೧೨-೨-೫೧ನೇ ಸೋಮವಾರ ಸರ್ವೋದಯ ಜಾತ್ರೆ ನಡೆಯುತ್ತದೆ ಈ ಜಾತ್ರೆಗೆ ಬಂದವರಲ್ಲಿ ಯಾರಾದರೂ ತಾವೇ ನೂತ ಒಂದು ಲಡಿ ದಾರವನ್ನು ಕಾಣಿಕೆಯಾಗಿ ಕೊಟ್ಟರೆ ಸ್ವೀಕರಿಸಲಾಗುವುದು ಗ್ರಾಮಾಂತರಗಳಿಂದ ಭಜನೆ ಗುಂಪುಗಳೂ ಜನರೂ ಈ ಮೇಳಕ್ಕೆಯಾತ್ರಾರ್ಥಿಗಳಾಗಿ ಬರಬೇಕಾಗಿ ಪ್ರಾರ್ಥನೆ.

ಕಾರ್ಯಕ್ರಮ.

ಪ್ರಾರ್ಥನಾಸಭೆ	ಬೆಳಿಗ್ಗೆ ೫ ಮತ್ತು ೧೦ ಘಂಟೆಗೆ ಸಂಜೆ ೫ ಘಂಟೆಗೆ
ಪ್ರಭಾ ತಭೇರಿ	ಬೆಳಗೆ ೫ ರಿಂದ ಆರು ಘಂಟೆ
ಭಜನೆ ಗೀತಾಪಠನ ಇತ್ಯಾದಿ	ಬೆಳಗ್ಗೆ ಆರರಿಂದ ಸಂಜೆ ೫ ರವರಿವಿಗೆ
ಮೆರವಣಿಗೆ	ಬೆಳಗ್ಗೆ ಏಳರಿಂದ ಹತ್ತು ಘಂಟೆ
ಸಾಮೂಹಿಕ ನೂಲುವುದು	ಬೆಳಗ್ಗೆ ೯ ರಿಂದ ೧೦ಘಂಟೆ ಸಂಜೆ ೪ ರಿಂದ ೫ ಘಂಟೆ
ಸೂತ್ರಯಜ್ಞ (ಕಳೆದ ೧೩ ದಿನದಿಂದ)	ಸಂಜೆ ೫ ಘಂ.
ರೈತರ ಇನ್ನಿತರ ಜಾತಾಗಳ ಆಗಮನ	ಸಂಜೆ ೫ ರ ವರೆಗೆ
ಸೂತ್ರಾಂಜಲಿ ಸ್ವತಃ ತೆಗೆದ ನೂಲಿನ ಸಮರ್ಪಣೆ	ಸಂಜೆ ೫ ರ ವರಿವಿಗೆ
ಸರ್ವೋದಯ ಪ್ರದರ್ಶನ (ಹಿಂದಿನ ೧೩ ದಿನಗಳಿಂದ)	

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್. ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨-೨-೧೯೫೧ ಸೋಮವಾರ [ಸಂಚಿಕೆ ೧೩೪

ಆಹಾರಧಾನ್ಯಗಳ ಬೆಲೆ ಏರಿತು

ರೇಷನ್ ಪ್ರಮಾಣ ಕಡಮೆಯಾಯಿತು

ಫೆಬ್ರವರಿ ೧೨ ರಿಂದ ಜಾರಿಗೆ ಬರುವುದು

ಬೆಂಗಳೂರು, ಫೆ. ೧೧

ಮೈಸೂರು ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಸರ್ಕಾರದಲ್ಲಿರುವ ಆರ್ಥಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರವು ಕೊಡುತ್ತಲಿದ್ದ ಸಬ್ಸಿಡಿ ಕಡಮೆ ಮಾಡಿರುವುದನ್ನೂ, ಅಕ್ಕಪಕ್ಕ ಪ್ರಾಂತ್ಯಗಳಲ್ಲಿರುವ ಆಹಾರ ಪದಾರ್ಥಗಳ ಬೆಲೆ ಮುಂತಾದುವನ್ನು ಪರಿಶೀಲಿಸಿ ಆಹಾರ-ಧಾನ್ಯಗಳ ಬೆಲೆಯನ್ನು ಫೆಬ್ರವರಿ ೧೨ನೇ ತಾ|| ನಿಂದ ಏರಿಸಲಾಗಿದೆಯೆಂದು ತಿಳಿಸಿರುವರು.

ಒಂದನೇ ದರ್ಜೆ ಅಕ್ಕಿ	ರೂ.ಗೆ	೨ ಸೇರು.
ಎರಡನೇ ದರ್ಜೆ ಅಕ್ಕಿ	ರೂ.ಗೆ	೨½ ಸೇರು.
ಜೋಳ ಮತ್ತು ಮಿಲೆಟ್ಸ್‌ಗಳು	ರೂ.ಗೆ ೪|| ಸೇರು.	
ಗೋಧಿ	ಸೇರಿಗೆ ೦-೭-೮ ಪೈ.	

ರೇಷನ್ ಆಹಾರಪರಿಸ್ಥಿತಿಯು ಉತ್ತಮವಾಗಿಲ್ಲವಾಗಿ ಕೇಂದ್ರ ಸರ್ಕಾರವು ಭಾರತಾದ್ಯಂತ ೯ ಔನ್ಸ್ ಆಹಾರಪಡಿತರವನ್ನು ಕೊಡಬೇಕೆಂದು ನಿರ್ಧರಿಸಿರುವುದರಿಂದ ಮೈಸೂರು ಸಂಸ್ಥಾನದಲ್ಲೂ ಆಹಾರಪಡಿತರವನ್ನು ಫೆಬ್ರವರಿ ೧೨ನೇ ತಾ|| ನಿಂದ ಕಡಮೆಮಾಡಲಾಗಿದೆ.

ಅಕ್ಕಿ ಗೋಧಿ ಮಿಲೆಟ್ಸ್ ಒಟ್ಟು (ಔನ್ಸ್)

ಎ. ಕ್ಲಾಸು	೧೪-೧೪	೩-೦೧	—	೯
ಬಿ. ಕ್ಲಾಸು	೭-೪	೧-೦	೭-೭	೧೦
ಶ್ರಮಜೀವಿಗಳು	೭-೩	೧-೦	೯-೭	೧೮
ಸ್ಟಾಂಡರ್ಡ್	೧೪-೧೪	೩-೦	೭-೧೪	೯
ಗೋಧಿತಿನ್ನುವವರು	೯-೦			

(ಈ ಹೊಸ ಆಜ್ಞೆ ಪ್ರಕಾರ ಎ. ಕ್ಲಾಸಿನವರಿಗೆ ಅರ್ಧ ಔನ್ಸು ಗೋಧಿ ಕಡಮೆ; ಬಿ ಕ್ಲಾಸಿನವರಿಗೆ ೨-೮ ಔನ್ಸ್ ಗೋಧಿ ಕಡಮೆ ಮತ್ತು ೨ ಔನ್ಸ್ ಮಿಲೆಟ್ಸ್ ಹೆಚ್ಚಾಗಿ ಬರುವುದು.)

ಖಂಡನೆ

ಬ್ರಿಟನ್ ಪಾರ್ಲಿಮೆಂಟಿನ ೧೩ ಜನ ಲೇಬರ್ ಸದಸ್ಯರು, ಚೈನಾವನ್ನು ಆಕ್ರಮಣಕಾರಿಯೆಂದು ಯು.ನ. ಸಂಸ್ಥೆಯು ಮಾಡಿರುವ ನಿರ್ಣಯವನ್ನು ತೀವ್ರವಾಗಿ ಖಂಡಿಸಿ ಪಾರ್ಲಿಮೆಂಟಿನಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ.

ಶ್ರೀ ಕೆ. ಸಿ. ಬಕ್ಲೆಯವರಿಗೆ ವಿಶ್ರಾಂತಿ

ಭಾರತ ರೈಲ್ವೆ ಚೀಫ್ ಇಂಜನೀಯರಾದ ಶ್ರೀ ಕೆ. ಸಿ. ಬಕ್ಲೆಯವರು ವಿಶ್ರಾಂತಿ ಮುನ್ನ ಏಪ್ರಿಲ್ ಒಂದರಿಂದ ರಜಾದ ಮೇಲೆ ಹೋಗುವರು. ಅವರಿಗೆ ೫೭ ವರ್ಷ ವಯಸ್ಸು.

ರೈಲ್ವೆ ಕೆಲಸಗಾರರು ಹಿಂತಿರುಗಿದರು

'ಕೆಲಸಕ್ಕೆ ಹಿಂತಿರುಗಿ ಇಲ್ಲವಾದರೆ ಕೋರ್ಟಿನ ಖಾಯಿಲೆಗೆ ತುತ್ತಾಗಿ' ಎಂಬ ಸೈನ್ಯದ ಅಂತಿಮ ಘೋಷಣೆಗೆ ಹೆದರಿ ಸಾವಿರಾರು ರೈಲ್ವೆ ಕೆಲಸಗಾರರು ಅಮೇರಿಕಾದಲ್ಲಿ ಕೆಲಸಕ್ಕೆ ಹಿಂತಿರುಗಿದ್ದಾರೆ.

ದರೋಡೆ

ನಾಲ್ಕು ಶಸ್ತ್ರ ಸಜ್ಜಿತ ದರೋಡೆಗಾರರು ಕಲ್ಕತ್ತಾದಲ್ಲಿ ಒಬ್ಬ ವರ್ತಕನ ಮನೆಗೆ ನುಗ್ಗಿ ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವ ನಗ ನಾಣ್ಯಗಳನ್ನು ಕೊಂಡೊಯ್ದು ಟ್ಯಾಕ್ಸಿಯಲ್ಲಿ ಪರಾರಿಯಾಗಿರುವರೆಂದು ತಿಳಿಯಬರುತ್ತದೆ.

ಏರ್ ಮಾರ್ಷಲ್ ಐವಾನ್ ಛಾಪ್‌ಮೆನ್

ಮೈಸೂರು, ಫೆ. ೧೧

ಭಾರತ ವಿಮಾನ ದಳದ ಮುಖ್ಯಾಧಿಕಾರಿ ಏರ್ ಮಾರ್ಷಲ್ ಐವಾನ್ ಛಾಪ್‌ಮನ್‌ರವರು ಇಂದು ಬೆಳಿಗ್ಗೆ ವಿಶೇಷ ವಿಮಾನದಲ್ಲಿ ಮದರಾಸಿನಿಂದ ಮೈಸೂರಿಗೆ ಆಗಮಿಸಿ, ಸರ್ಕಾರಿ ಭವನದಲ್ಲಿ ತಂಗಿರುವರು. ಶ್ರೀಮನ್ಮಹಾರಾಜರ ಪರವಾಗಿ ಅವರ ಆಪ್ತ ಕಾರ್ಯದರ್ಶಿ ಶ್ರೀ ಷಫಿ ದಾರಾಷಾ, ಲೆ|| ಕ|| ಅಜೀಮ್, ಮೇಜರ್ ಕರೀಂ ಬೇಗ್, ಪೋಲೀಸ್ ಜಿಲ್ಲಾಧಿಕಾರಿಗಳು ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ನಾಳೆ ಸಂಜೆ ಅವರು ಬೆಂಗಳೂರಿಗೆ ತೆರಳುವರು. ಇದು ಖಾಸಗಿ ಭೇಟಿಯೆಂದು ತಿಳಿಯಬರುತ್ತದೆ.

ಶ್ರೀ ಕುರ್ಷಿದ್ ಲಾಲ್ ಪಾಕೀಸ್ಥಾನ ಹೈಕಮಿಷನರ್

ಭಾರತ ಸರ್ಕಾರದ ಉಪ ಸಚಿವರಾದ ಶ್ರೀ ಕುರ್ಷಿದ್ ಲಾಲ್‌ರವರು ಪಾಕೀಸ್ಥಾನದಲ್ಲಿ ಭಾರತ ಹೈಕಮಿಷನರಾಗಿ ನೇಮಕವಾಗಿರುವುದಾಗಿ ತಿಳಿಯಬರುತ್ತದೆ.

ಡೊವೇಜರ್ ಮಹಾರಾಣಿಯವರ ಭೇಟಿ

ಪಶ್ಚಿಮಪಾಕಿಸ್ಥಾನ, ಫೆ. ೧೦

ಪಶ್ಚಿಮಪಾಕಿಸ್ಥಾನದಲ್ಲಿ ನಡೆಯುತ್ತಲಿರುವ ಸರ್ವೋದಯಪಕ್ಷ ಕಾರ್ಯಕಲಾಪಗಳನ್ನು ವೀಕ್ಷಿಸಲು ನಿನ್ನೆ ಮಧ್ಯಾಹ್ನ ಡೋವೇಜರ್ ಮಹಾರಾಣಿಯವರು ಶ್ರೀಮದ್ಯಶೋಧರಾ ದಾಸಪ್ಪನವರೊಡನೆ ಪಶ್ಚಿಮಪಾಕಿಸ್ಥಾನಕ್ಕೆ ಬಿಜಯಮಾಡಿಸಿ, ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಬೆಂಗಳೂರಿನಿಂದ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಪತ್ನಿ ಶ್ರೀಮತಿ ಸರೋಜಮ್ಮನವರು ನಿನ್ನೆ ಬೆಳಿಗ್ಗೆ ಪಶ್ಚಿಮಪಾಕಿಸ್ಥಾನಕ್ಕೆ ಆಗಮಿಸಿ, ಸಂಜೆಯವರೆಗೂ ಅಲ್ಲಿಯೇ ಇದ್ದು ಎಲ್ಲಾ ಕಾರ್ಯಕಲಾಪಗಳನ್ನು ವೀಕ್ಷಿಸಿದರು.

ಪಕ್ರಾಡವರಿಗೆ ಉತ್ತೇಜನವಿಲ್ಲ

ಆರ್ಥಿಕ ವಿಚಾರಣಾ ಸಮಿತಿಯು ಪಾರ್ಲಿಮೆಂಟಿಗೆ ನೀಡಿರುವ ವಿಚಾರಣೆಗಳಲ್ಲಿ "ಕೇಂದ್ರ ಸರ್ಕಾರವು ಯಾವ ಪರಿಮಿತಿಯಿಲ್ಲದೆ ಹೊಸ ಹುದ್ದೆಗಳನ್ನು ಸ್ಥಾಪಿಸಿ, ಹೆಚ್ಚು ಹೊಸಹೊಸ ಅಧಿಕಾರಿಗಳಿಗೆ ಕೊಡುತ್ತಲಿರುವುದರಿಂದ ಪಕ್ಷಪಾತದ ಧೋರಣೆಯ ನೌಕರರುಗಳಿಗೆ ಬಡತಿಸಿಕ್ಕದೆ ಅಸಂತುಷ್ಟರಾಗಿ ಕೆಲಸಗಾರರುಗಳು ದಕ್ಷತೆಯಿಂದ ನಡೆಯುತ್ತಲಿಲ್ಲ ಅದನ್ನು ತಪ್ಪಿಸಬೇಕು. ಅಲ್ಲದೆ ಹಣಕಾಸಿನ ಖಾತೆಯು ಸ್ವಾತಂತ್ರ್ಯ ಹೆಚ್ಚುಗಳಲ್ಲಿ ಬಹಳ ಮಿತಿತವನ್ನು, ಹೆಚ್ಚಿನ ವೆಚ್ಚಗಳಲ್ಲಿ ಧಾರಾಳತ್ವವನ್ನು ತೋರಿಸುತ್ತಲಿರುವುದು ಕಾಣಬರುತ್ತಲಿದೆ. ಇದನ್ನು ತಡೆಗಟ್ಟಬೇಕೆಂದು ಅಭಿಪ್ರಾಯಪಟ್ಟಿರುವರು.

ಚಿಕ್ಕಮಗಳೂರು ಜಿಲ್ಲೆಗೆ ಮಂತ್ರಿಸ್ಥಾನ

ಮೈಸೂರು ಸಂಸ್ಥಾನದ ಮಂತ್ರಿಮಂಡಲದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಒಂದು ಸ್ಥಾನಕೊಡಬೇಕು, ಚಿಕ್ಕಮಗಳೂರು ಪೌರಸಭಾಧ್ಯಕ್ಷ ಉಪಾಧ್ಯಕ್ಷರ ಅವಧಿ ಒಂದು ವರ್ಷವಿರಬೇಕೆಂಬ ನಿರ್ಣಯಗಳನ್ನು ಪರಿಶೀಲಿಸಲು ಪೌರಸಭೆಯ ಒಂದು ವಿಶೇಷ ಸಭೆಯನ್ನು ನಡೆಯಬೇಕೆಂದು ಅಲ್ಲಿಯ ಪೌರಸಭೆಯ ಕೆಲವು ಸದಸ್ಯರು ಅಧ್ಯಕ್ಷರನ್ನು ಕೋರಿದ್ದಾರೆ.

ಪಿಳ್ಳೈ-ಲಿಯಾಖತ್ ಭೇಟಿ

ಭಾರತ ಸರ್ಕಾರದ ಮಂತ್ರಿಮಂಡಲದ ಕಾರ್ಯದರ್ಶಿ ಶ್ರೀ ಎನ್. ರಾಘವನ್ ಪಿಳ್ಳೆಯವರಿಗೂ ಪಾಕಿಸ್ಥಾನ ಪ್ರಧಾನಿ ಮಿ|| ಲಿಯಾಖತ್ ಅಲಿಖಾನರವರಿಗೂ ಭಾರತ ಪಾಕಿಸ್ಥಾನಗಳ ವ್ಯಾಪಾರಿಕ್ಕ ಸಂಬಂಧಪಟ್ಟ ವಿಷಯಗಳ ಚರ್ಚೆಗಾಗಿ ಕರಾಚಿಯಲ್ಲಿ ಭೇಟಿ ನಡೆಯಿತು.

ಮೈಸೂರು ಜಿಲ್ಲೆಯಲ್ಲಿ ಕಾಲರಾ ಪರಿಸ್ಥಿತಿ

ಇದೇ ಮಾರ್ಚ್ ೮ನೇ ತಾ||ನ ವರೆಗೆ ಮೈಸೂರು ಜಿಲ್ಲೆಯ ಟಿ. ನರಸೀಪುರ, ಚಾಮರಾಜನಗರ, ಯಳಂದೂರು ಮತ್ತು ಕೃಷ್ಣರಾಜನಗರ ತಾ|| ಗಳ ಕೆಲವು ಹಳ್ಳಿಗಳಲ್ಲಿ ಮಾತ್ರ ಕಾಲರಾ ಹಾವಳಿ ಕಾಣ್ಪಿಸಿಕೊಂಡಿದೆ. ಈಗಾಗಲೇ ಜಿಲ್ಲೆಯಲ್ಲಿ ೫೦,೦೦೦ ಜನಕ್ಕೆ ಇನಾಕ್ಯುಲೇಷನ್ ಮಾಡಲಾಗಿದೆ.

ಟಿ. ನರಸೀಪುರ ತಾ|| ನಲ್ಲಿ ೧೩ ಗ್ರಾಮಗಳಲ್ಲಿ ೧೧೧ ಜನರಿಗೆ ರೋಗ ತಗುಲಿ ೧೧೭ ಮರಣ, ಚಾಮರಾಜನಗರ ತಾ|| ನಲ್ಲಿ ೬ ಗ್ರಾಮಗಳಲ್ಲಿ ೧೬ ಜನರಿಗೆ ರೋಗ ತಗುಲಿ ೧೧ ಮರಣ, ಯಳಂದೂರಿನ ೧ ಗ್ರಾಮಗಳಲ್ಲಿ ೫೧ ಜನರಿಗೆ ರೋಗ ತಗುಲಿ ೨೧ ಮರಣ, ಕೃಷ್ಣರಾಜನಗರ ತಾ|| ನ ೭ ಗ್ರಾಮಗಳಲ್ಲಿ ೧೩ ಜನರಿಗೆ ರೋಗತಗುಲಿ ೧೦ ಮರಣಗಳಾಗಿವೆಯೆಂದು ತಿಳಿಯಬರುತ್ತದೆ.

ಮೌಲಾನಾ ಅಜಾದ್

ಪಾರ್ಲಿಮೆಂಟಿನ ಕಾಂಗ್ರೆಸ್‌ಪಕ್ಷದ ಉಪನಾಯಕರಾಗಿ ಮೌಲಾನಾ ಅಜಾದ್‌ರವರನ್ನು ಚುನಾಯಿಸಲಾಗುವುದೆಂದು ಹೇಳಲಾಗಿದೆ.

ಶ್ರೀ ಕಾಶಿ ಮಹಾಯಾತ್ರೆ



ಸೂಚನೆ: ಈ ಮೊದಲು ಪ್ರಸಿದ್ಧಮಾಡಿದಂತೆ ೧೮ನೇ **ಯಾತ್ರೆಯ** ಟೂರಿಸ್ಟ ರೈಲ್ವೆ ಟಿಕೀಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆ ಟಿಕೀಟುಗಳನ್ನು ಪಡೆದ ಯಾತ್ರಿಕರು ತಾ|| ೧೧-೩-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.

೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಪಂಖಾಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ.

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್ ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨-೫೧ನೇ ದಿವಸ '...' ...ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧-೪-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು.

ಹೆಚ್ಚಿನ ತರಗತಿಯು ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್ ಮಾಡಲಾಗುವುದು. ಸುಸ್ತಿ ಆದಲ್ಲಿ ಖಂಡಿತವಾಗಿ ಟಿಕೇಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತ ನೋಡಿರಿ—

ಉತ್ತರ ಸಲುವಾಗಿ ೦-೨-೦ ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಒನಿಪಟ್ಟೆ (ಪೋಸ್ಟು)
ಕುಡಚಿ-ಮಾರ್ಗ ಎಂ ಎಸ್ ಎಂ ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮಾ|| ರಾ|| ಪಿ. ಟಿ. ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

ಸರ್ವೋದಯ ಪಕ್ಷ ಶಿಬಿರ

ಪಶ್ಚಿಮವಾಹಿನಿ ೯

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರ ಸಂದೇಶ

ಪ್ರತಿಯೊಬ್ಬ ಮಾನವನ ಆರ್ಥಿಕಾಭಿವೃದ್ಧಿಯಾಗಿ ಅವನ ಸಾಮಾಜಿಕ ಜೀವನವನ್ನು ಅಭಿವೃದ್ಧಿಪಡಿಸಿ ವಿಕಾಸಗೊಳಿಸಲು ಅನುಕೂಲವಾದಂತಹ ಸನ್ನಿವೇಶವು ಪ್ರಾಪ್ತವಾಗಲೆಂಬುದೇ ನಮ್ಮ ರಾಜಕೀಯ ಕ್ರಾಂತಿಯ ಧ್ಯೇಯ, ಇದು ಅಹಿಂಸೆಯ ತತ್ವದ ಸಿದ್ಧಾಂತದಮೇಲೆ ಪೂರ್ಣವಾಗುವುದು ಸಾಧ್ಯ.

ನಾವು ಈ ಧ್ಯೇಯವನ್ನು ಇನ್ನು ಹೊಂದಬೇಕಾಗಿದೆ. ಈ ಸಾಧನೆಯಲ್ಲಿ ಸರ್ವೋದಯ ಸಮಾಜವು ಬಹಳ ಫಲಪ್ರದವಾಗಿ ಮಾರ್ಗದರ್ಶನಮಾಡಬಲ್ಲದು. ಸಮಾಜದಲ್ಲಿ ಅಜ್ಞಾನ ಮತ್ತು ದ್ವೇಷದಿಂದ ಆಗುತ್ತಿರುವ ಜಗಳದಿಂದ ವ್ಯರ್ಥವಾಗಿ ಮಾನವನ ಅವಹಾನಿಯಾಗುತ್ತಿದೆ. ಎಲ್ಲರನ್ನೂ ಪ್ರೇಮಸೂತ್ರದಿಂದ ಬಂಧಿಸಿ ಉನ್ನತಿಯ ಪಥದಲ್ಲಿ ನಡೆಯಿಸುವ ಕೆಲವು ಸರ್ವೋದಯ ಸಮಾಜದಿಂದ ಮಾತ್ರಸಾಧ್ಯ. ಸರ್ವೋದಯ ಪಕ್ಷದಲ್ಲಿ ಸಮಾಜಕ್ಕೆ ಹೊಸಸ್ಫೂರ್ತಿ ಮತ್ತು ಉತ್ಸಾಹ ದೊರೆಯಲಿ ಮತ್ತು ಅದು ದೃಢಚಿತ್ತದಿಂದ ನಮಗೆ ಸಕ್ರಿಯಾತ್ಮಕವಾಗಿ ಮಾರ್ಗದರ್ಶನವನ್ನೀಡಲಿ ಎಂಬುದೇ ನನ್ನ ಆಶಯ !

೧೦೮ ನೇ ವಯಸ್ಸಿನಲ್ಲಿ ೧೪ ಸಲ ಮದುವೆ

ಕಲ್ಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟನ್ನು ೧೦೮ ವರ್ಷದ ಒಬ್ಬ ಮುದುಕನು, ತನ್ನ ಒಬ್ಬಳು ಗಂಡುಮಕ್ಕಳು ಮತ್ತು ಸೊಸೆ ತನ್ನ ಮನೆಗೆ ನುಗ್ಗಿ ತನ್ನ ವ್ಯಾಪಾರಕ್ಕೆ ತೊಂದರೆಮಾಡುತ್ತಲಿರುವರೆಂದು ಒಬ್ಬ ಕೇಸನ್ನು ಹೂಡಿದ್ದಾನೆ ಪ್ರತಿವಾದಿಗಳು ಈ ಮುದುಕನು ೧೦೮ ನೇ ವಯಸ್ಸಿನಲ್ಲಿ ೧೪ ಸಲ ಮದುವೆಯಾಗಿ, ಮೂವರು ಹೆಂಡಿರು ಅವನ ಜೊತೆಯಲ್ಲಿ ವಾಸಿಸುತ್ತಲಿರುವರೆಂದು ಕೊನೆಯ ೧೬ ವರ್ಷದ ಹೆಂಡತಿಗೆ ತನ್ನ ಆಸ್ತಿಯನ್ನೆಲ್ಲಾ ಬರೆಯಲು ತಾವು ಅಡ್ಡಿಪಡಿಸಿದುದರಿಂದ ಈ ಸುಳ್ಳು ವ್ಯವಹಾರವನ್ನು ಹೂಡಿರುವುದಾಗಿ ಹೇಳಿರುವರು.

ಪರ್ಶಿಯಾಷಾಗೆ ಭಾರತದ ಉಡುಗೊರೆ

ಪರ್ಶಿಯಾ ಷಾರವರ ವಿವಾಹಕ್ಕೆ ಭಾರತ ರಾಷ್ಟ್ರಾಧ್ಯಕ್ಷರು ಭಾರತದ ಪರವಾಗಿ ಮೈಸೂರು ರೇಷ್ಮೆಯಿಂದ ಹಮಾರಾದ ಅತ್ಯುತ್ತಮವಾದ ಕಲಾಬತ್ತಿನ ಎರಡು ಮಗ್ಗುಲು ಹಾಸಿಗೆಯನ್ನು ಉಡುಗೊರೆಯಾಗಿ ಕಳುಹಿಸಿರುವರು.

ರಣಜಿತ್ * 9—2—51ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಸರ್ದಾರ್ ಪುತ್ತೂ ನೌಷದ್‌ರವರ
ದಾಸ್ತಾನ್
ಪಾತ್ರ—ಸುರಯ್ಯಾ, ರಾಜಕಪೂರ್, ಅಲ್ ನಸೀರ್,
ವೀಣಾ, ಸುರೇಶ್, ಮುಂತಾದವರು.

ರೇಷನ್ ಪ್ರಮಾಣದ ಇಳಿಸಿ, ಬೆಲೆ ಏರಿಸಿದ್ದಕ್ಕೆ ಸರ್ಕಾರದ ಸಮಾಧಾನ

ವಿವಿಧ ಕಾರಣಗಳಿಂದಾಗಿ ಆಹಾರ ದಾಸ್ತಾನು ಕೊರತಾ ಬಿದ್ದಿರುವುದರಿಂದ ಒಟ್ಟು ರೇಷನ್ ಪ್ರಮಾಣವನ್ನು ೯ ಔನ್ಸಿಗಿಳಿಸಬೇಕೆಂದು ಕೇಂದ್ರಸರ್ಕಾರ ಸೂಚಿಸಿದೆ ಶ್ರಮಜೀವಿಗಳಿಗೆ ಮಾತ್ರ ೪ ಔನ್ಸ್ ಹೆಚ್ಚಿನ ರೇಷನ್ ಕೊಡಬಹುದೆಂದು ಸರ್ಕಾರ ತಿಳಿಸಿದೆ ಅಲ್ಲದೆ ಸಂಸ್ಥಾನದ 'ಬಿ' ತರಗತಿಯ ರೇಷನ್ ಕಾರ್ಡುಗಳಲ್ಲಿ ಬಹುಮಂದಿ ಕಾರ್ಮಿಕರೇ ಆಗಿರುವುದರಿಂದ ಅವರಿಗೆ ೧೦ ಔನ್ಸ್ ಪ್ರಮಾಣದ ರೇಷನ್ ಕೊಡಬಹುದೆಂದು ಸರ್ಕಾರ ತಿಳಿಸಿದೆ ಗೋಧಿ ತಿನ್ನುವವರಿಗೂ 'ಎ' ತರಗತಿ ರೇಷನ್ ಕಾರ್ಡುದಾರರಿಗೂ ೯ ಔನ್ಸ್ ಪಡಿತರ ಗೊತ್ತು ಮಾಡಲಾಗಿದೆ.

ಆಮದುಮಾಡಿಕೊಂಡ ಆಹಾರ ಪದಾರ್ಥಗಳಿಗಲ್ಲದೆ ಸ್ಥಳದಲ್ಲಿ ಬೆಳೆದ ಆಹಾರ ಪದಾರ್ಥಗಳಿಗೂ ಸಬ್ಸಿಡಿ ಕೊಡುತ್ತಿರುವುದು ಭಾರತದಲ್ಲೆಲ್ಲಾ ಮೈಸೂರು ಸಂಸ್ಥಾನ ಒಂದರಲ್ಲಿಯೇ ೧೯೪೮ ರವರೆಗೆ ಇಡೀ ಸಬ್ಸಿಡಿ ಭಾರತ ಸಂಸ್ಥಾನದ ಮೇಲೆಯೇ ಬೀಳುತ್ತಿತ್ತು ಆದರೆ ಆ ಬಳಿಕ ಭಾರತ ಸರ್ಕಾರವು ವಿದೇಶಗಳಿಂದ ಆಮದುಮಾಡಿಕೊಂಡ ಆಹಾರವನ್ನು ಗಳಿಸಿಕೊಡಬೇಕಾಗಿ ಬರುವ ಸಬ್ಸಿಡಿ ಭಾಗದಲ್ಲಿ ಶೇ|| ೫೦ ರಷ್ಟನ್ನು ವಹಿಸಿಕೊಂಡಿದ್ದು ೧೯೫೦ರ ಎಪ್ರಿಲ್ ತಿಂಗಳಲ್ಲಿ ಸಂಸ್ಥಾನದ ಆರ್ಥಿಕ ವಿಲೀನೀಕರಣವಾದ ನಂತರ 'ಎ' ಪ್ರಾಂತಗಳಿಗೆ ಕೊಡುತ್ತಿರುವಂತೆ ಶೇ|| ೭೫ ಭಾಗ ಸಬ್ಸಿಡಿ ಕೊಡಲು ಪ್ರಾರಂಭಿಸಿತು. ಈ ಸಬ್ಸಿಡಿಸಂಸ್ಥಾನೀ ಸರ್ಕಾರಕ್ಕೆ ಆಹಾರಶಾಖೆಗೆ ಮಾತ್ರವೇ ವರ್ಷಕ್ಕೆ ತಗಲುತ್ತಿದ್ದ ೩೦ ಲಕ್ಷ ರೂಗಳನ್ನು ಬಿಟ್ಟು ಉಳಿದುದು.

೧೯೪೮-೪೯ ಮತ್ತು ೧೯೪೯-೫೦ ರಲ್ಲಿ ಆಹಾರ ಶಾಖೆಯ ವೆಚ್ಚಬಿಟ್ಟು ಸಂಸ್ಥಾನೀ ಸರ್ಕಾರ ಈ ಸಬ್ಸಿಡಿಗಾಗಿ ೧,೫೦,೬೧,೬೦೩ ಮತ್ತು ೧,೨೬,೦೦,೬೦೦ ರೂಗಳನ್ನು ಕೊಟ್ಟಿತು. ಇದುವರೆವಿಗೆ ಆಹಾರಶಾಖೆ ಮತ್ತು ಸಬ್ಸಿಡಿ ರೂಪದಲ್ಲಿ ಸರ್ಕಾರ ೪,೫೦,೦೦,೦೦೦ ರೂಗಳಷ್ಟು ನಷ್ಟಪಡೆದಿದೆ. ಮತ್ತು ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಈ ಸರ್ಕಾರವು ಈ ನಷ್ಟವನ್ನು ಇಗಿನ ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲವಾಗಿದೆ ನಮ್ಮ ನೆರೆಯ ಪ್ರಾಂತಗಳಿಗೆ ಈ ನಷ್ಟ ಸಂಭವಿಸುತ್ತಿಲ್ಲ ಏಕೆಂದರೆ ಧಾನ್ಯಕೊಳ್ಳಲು ಮತ್ತು ಹಂಚಲು ಬೀಳುವ ವೆಚ್ಚಕ್ಕೆ ಅನುಗುಣವಾಗಿ ಅವರು ಮಾರಾಟ ಮಾಡುತ್ತಿದ್ದಾರೆ ಇದರಲ್ಲಿ ಆಹಾರಶಾಖೆಯ ವೆಚ್ಚವನ್ನು ಸೇರಿಸುತ್ತಿರಲಾಗಿದೆ ತತ್ಕಾರಣ ನಮ್ಮ ಸಂಸ್ಥಾನದಲ್ಲಿ ಆಹಾರದ ಮಾರಾಟದ ಬೆಲೆಗಿಂತ ನೆರೆಯ ಪ್ರಾಂತಗಳಲ್ಲಿನ ಆಹಾರದ ಮಾರಾಟ ಬೆಲೆ ಜಾಸ್ತಿಯಾಗಿಯೇ ಇದೆ ಈ ಎಲ್ಲಹಿನ್ನೆಲೆಗಳ ಫಲವಾಗಿ ಈ ಸರ್ಕಾರವು ಕೇಂದ್ರ ಸರ್ಕಾರದೊಡನೆ ನಡೆಸಿದ ಮಾತುಕತೆಗಳಿಗನುಗುಣವಾಗಿ ೧೯೫೦ ನೇ ಆಗಸ್ಟ್ ೧ ರಿಂದ ಆಹಾರದ ಬೆಲೆಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಯಿತು.

	ಪ್ರಥಮದರ್ಜೆ	೧ ರೂಗೆ	೨½ ಸೇರು
ಅಕ್ಕಿ	ದ್ವಿತೀಯ ದರ್ಜೆ	೧ ರೂಗೆ	೨ ಸೇರು
ಇತರ ಧಾನ್ಯ	—	೧ ರೂಗೆ	೪||| ಸೇರು

ಈ ಏರಿಸಿದ ಬೆಲೆಯನ್ನು ಸಹ ನೆರೆಯ ಪ್ರಾಂತಗಳ ಮಾರಾಟ ಬೆಲೆಯೊಂದಿಗೆ ಹೋಲಿಸಿದಲ್ಲಿ ಇದು ಅತ್ಯಂತ ಕಡಮೆಯಾಗಿದೆ ಆದರೆ ಮೇಲ್ಕಂಡ ಬದಲಾವಣೆಮಾಡಿದಂದೀಚೆಗೆ ಪರಿಸ್ಥಿತಿ ಇನ್ನು ಹದಗಟ್ಟಿದೆ. ಸಂಸ್ಥಾನದ ಆರ್ಥಿಕಪರಿಸ್ಥಿತಿಯೊಂದುಕಡೆ, ಕೇಂದ್ರಸರ್ಕಾರ ಕೊಡುತ್ತಿದ್ದ ಸಬ್ಸಿಡಿಯನ್ನು ಕಡಮೆಮಾಡಿರುವುದ ಮತ್ತೊಂದು ಕಡೆ ಈ ಎರಡು ತೊಂದರೆಗಳಿಂದ ಧಾನ್ಯದ ಮಾರಾಟ ಬೆಲೆಯಲ್ಲಿ ಸ್ವಲ್ಪ ಹೆಚ್ಚಿಸಲೇಬೇಕಾದ ಪ್ರಸಂಗ ಒದಗಿದೆ.

ಇತ್ತೀಚೆಗೆ ನಡೆದ ಶಾಸನ ಸಭಾಧಿವೇಶನದ ಮುಂಚೆ ಆಹಾರಪರಿಸ್ಥಿತಿಯನ್ನು ಪ್ರಧಾನವಾಗಿ ತರಲಾಗಿತು. ಒಟ್ಟು ವೆಚ್ಚದ ಬೆಲೆಗನುಗುಣವಾಗಿ ಆಹಾರವನ್ನು ಮಾರಬೇಕೆಂದು ಸಭೆ ನಿರ್ಧರಿಸಿತು.

ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಧಾನ್ಯದಮಾರಾಟ ಬೆಲೆಯನ್ನು ಕೇಂದ್ರಸರ್ಕಾರ ನಿಗಧಿಮಾಡುವುದಕ್ಕಿಂತ ಮೇಲ್ಕಂಡ ಬೆಲೆ ಕಡಮೆ ಆಗಿರುವುದಲ್ಲದೆ ಮುಂಬೈ ಮದರಾಸು ಮತ್ತು ಭಾರತದ ಇನ್ನಿತರ ಪ್ರಾಂತಗಳೆಲ್ಲದರಲ್ಲಿನ ಮಾರಾಟ ಬೆಲೆಗಿಂತ ಕಡಮೆ ಆಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩-೨-೧೯೫೧ ಮಂಗಳವಾರ [ಸಂಚಿಕೆ ೧೩೫

ಸರ್ವರಾಷ್ಟ್ರ ಮೈತ್ರಿಯೇ ಭಾರತದ ಧೋರಣೆ

ಭಾರತವು ಎಂದಿಗೂ ತನ್ನ ಶಾಂತಿಯುತ ಮಾರ್ಗವನ್ನೇ ಅವಲಂಬಿಸುವುದು

ಪಾರ್ಲಿಮೆಂಟಿನಲ್ಲಿ ನೆಹರೂ ಭಾಷಣ

ಕಾಶ್ಮೀರ ಪ್ರಶ್ನೆಯ ತತ್ವಗಳನ್ನು ನಾವು ಎಂದಿಗೂ ಯಾರು ಎಷ್ಟು ಪ್ರೇರೇಪಿಸಿದರೂ ನಾವು ಬಿಡಲಾಗುವುದಿಲ್ಲ. ಕಾಶ್ಮೀರ ವಿಷಯದಲ್ಲಿ ಕಾಮನ್ವೆಲ್ತ್ ಪ್ರಧಾನಿಗಳ ಚರ್ಚೆಗಳು ನಡೆಯಲಿಲ್ಲ. ಸಮ್ಮೇಳನದಲ್ಲಿ ಅನಧಿಕೃತವಾಗಿ ಸಮ್ಮೇಳನದ ಹೊರಗೆ ಚರ್ಚೆಗಳು ನಡೆದುವು. ಅಲ್ಲಿ ಯಾವ ತೀರ್ಮಾನಗಳೂ ಆಗಲಿಲ್ಲ. ನಾವು ಮೊದಲಿನಿಂದಲೂ ಕಾಶ್ಮೀರ ಭವಿಷ್ಯವನ್ನು ಕಾಶ್ಮೀರ ಜನರೇ ಇತ್ಯರ್ಥಪಡಿಸಿಕೊಳ್ಳಬೇಕೆಂದು ತಿಳಿಸುತ್ತಲಿದ್ದೇವೆ. ಒಳಾಡಳಿತ ವಿಷಯದಲ್ಲಿ ಯಾರೂ ಪ್ರವೇಶಿಸುವಂತಿಲ್ಲ. ರಕ್ಷಣಾ ಕರ್ತವ್ಯವು ಮಾತ್ರ ಭಾರತಕ್ಕೆ ಸೇರಿದುದು. ವಿಶ್ವಸಂಸ್ಥೆಯ ಸೈನ್ಯಗಳು ಕಾಶ್ಮೀರದಲ್ಲಿರಬೇಕೆಂಬ ಸಲಹೆಗೆ ನಾವು ಒಪ್ಪಲಿಲ್ಲ. ಬೇರೊಂದು ಸೈನ್ಯವನ್ನು ಕಾಶ್ಮೀರದಲ್ಲಿಡಬೇಕೆಂದು ಹೇಳುವ ಕರ್ತವ್ಯವು ನಮ್ಮದಲ್ಲ. ಹಿಂದೆ ಪಾಕಿಸ್ತಾನವು ಪ್ಲೆಬಿಸೈಟ್ ವಿಷಯವಾಗಿ ಮಾತೇ ಆಡುತ್ತಿರಲಿಲ್ಲ. ಈಗ ಜಾತಿಯತೆಯನ್ನು ಮುಂದಿಟ್ಟುಕೊಂಡು ಪಾಕಿಸ್ತಾನ ಕಾಶ್ಮೀರದ ಮೇಲೆ ಆಕ್ರಮಣ ನಡೆಸುತ್ತ ಬಂದಿದೆ. ಕಾಶ್ಮೀರದಲ್ಲಿ ಪ್ರಬಲವಾದ ರಾಷ್ಟ್ರೀಯ ಸಂಸ್ಥೆಯು ಸ್ಥಾಪನೆಯಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲಿದೆ.

ಪಾಕಿಸ್ತಾನವನ್ನು ಆಕ್ರಮಣಶಾಲಿಯೆಂದು ಘೋಷಿಸಬೇಕೆಂದು ನಾವು ವಿಶ್ವಸಂಸ್ಥೆಯನ್ನು ಕೇಳಿಲ್ಲ. ಆದರೆ ಅದರ ಆಕ್ರಮಣಕಾರ್ಯವನ್ನು ಗಮನಿಸಬೇಕೆಂದು ಹೇಳುತ್ತಲಿದ್ದೇವೆ ಎಂದು ಭಾರತ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಭಾರತನೀತಿಯ ವಿಷಯವಾಗಿ ಮಾತನಾಡುತ್ತಾ ತಿಳಿಸಿದರು.

ಕೊರಿಯಾ ಯುದ್ಧ ವಿಷಯವನ್ನು ಪ್ರಸ್ತಾಪಿಸಿ, ಚೈನಾವನ್ನು ಕೊರಿಯಾದಲ್ಲಿ ಆಕ್ರಮಣಕಾರಿಯೆಂದು ವಿಶ್ವಸಂಸ್ಥೆಯು ಘೋಷಿಸುವುದರಿಂದ ಶಾಂತಿಸಂಧಾನವು ಸಧ್ಯಕ್ಕೆ ಕೊನೆಗೊಂಡಿದೆ. ಈ ನಿರ್ಣಯವನ್ನು ಮಾಡಿರುವುದು ವಿವೇಕಯುತವಲ್ಲ. ಪರರಾಷ್ಟ್ರಗಳೊಡನೆ ಭಿನ್ನಾಭಿಪ್ರಾಯಗಳಿದ್ದರೂ ಸರ್ವರಾಷ್ಟ್ರ ಮೈತ್ರಿಯೇ ಭಾರತದ ಧೋರಣೆ, ಅಲ್ಲದೆ ಶಾಂತಿಯುತ ಮಾರ್ಗವನ್ನವಲಂಬಿಸುವುದೇ ಭಾರತದ ಮಾರ್ಗವೆಂದು ತಿಳಿಸಿದರು.

ಮುಖ್ಯ ಮಂತ್ರಿಗಳ ಸಮ್ಮೇಳನ ಮುಕ್ತಾಯ

ಮೂರು ದಿವಸಗಳಿಂದ ದೆಹಲಿಯಲ್ಲಿ ನಡೆಯುತ್ತಲಿದ್ದ 'ಬಿ' ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಮ್ಮೇಳನವು ಮುಕ್ತಾಯವಾಯಿತು. ಭೂ ಸುಧಾರಣೆಗಳ ವಿಷಯದಲ್ಲಿ ಮುಖ್ಯ ಚರ್ಚೆಯಾಯಿತೆಂದೂ ಕೆಲವು ಸಂಸ್ಥಾನಗಳಲ್ಲಿ ಮಾರಾಟ ತೆರಿಗೆಯನ್ನು ಹಾಕುವ ವಿಷಯದಲ್ಲಿ ಚರ್ಚೆಗಳು ನಡೆದು ಯಾವ ನಿರ್ಧಾರಕ್ಕೂ ಬರಲಿಲ್ಲವೆಂದು ತಿಳಿಯಬರುತ್ತದೆ.

ಅಪೀಲಿಗೆ ಅನುಮತಿ ದೊರೆಯಿತು

ಮದರಾಸು ಶ್ರೇಷ್ಠ ನ್ಯಾಯಾಲಯವು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಕೋಮುವಾರು ಆಜ್ಞೆಯ ವಿರುದ್ಧಯಿತ್ತ ತೀರ್ಮಾನದ ಮೇಲೆ ಭಾರತ ಶ್ರೇಷ್ಠ ನ್ಯಾಯಾಲಯದಲ್ಲಿ ಅಪೀಲು ಮಾಡಲು ಅನುಮತಿ ದೊರತಿದೆ.

ಮುಸ್ಲಿಂ ರಾಷ್ಟ್ರ ಲೀಗ್

ಮುಸ್ಲಿಂ ರಾಷ್ಟ್ರಗಳ ಲೀಗೊಂದನ್ನು ಸ್ಥಾಪಿಸಬೇಕೆಂಬ ನಿರ್ಣಯವು ಕರಾಚಿಯಲ್ಲಿ ಸಭೆ ಸೇರುವ ಪ್ರಪಂಚ ಮುಸ್ಲಿಂ ಸಮ್ಮೇಳನದ ರಾಜಕೀಯ ಸಮಿತಿಯು ಸಿದ್ಧಗೊಳಿಸಿ ಬಹಿರಂಗ ಅಧಿವೇಶನದಲ್ಲಿ ಅಂಗೀಕೃತವಾಗಲಿದೆಯೆಂದು ತಿಳಿಯಬರುತ್ತದೆ.

ಬಸ್ ರಾಷ್ಟ್ರೀಕರಣ ನೀತಿ ಬದಲಾವಣೆಯಿಲ್ಲವೆಂದು ಸರ್ಕಾರೀ ಪ್ರಕಟಣೆ

ಬೆಂಗಳೂರು ಫೆ. ೧೨

ಕಳೆದ ಶಾಸನಸಭಾಧಿವೇಶನದಲ್ಲಿ ಬಸ್ ರಾಷ್ಟ್ರೀಕರಣದ ನೀತಿಗೆ ಸಂಬಂಧಪಟ್ಟಂತೆ ಸರ್ಕಾರ ಇತ್ತ ಉತ್ತರಗಳ ಬಗ್ಗೆ ಸರ್ಕಾರದ ನೀತಿ ಅನುಸರಣೆ ಬಗ್ಗೆ ಸಂದೇಹ ವ್ಯಕ್ತಪಡಿಸಿ ಸ್ಥಳೀಯ ೨ ಪತ್ರಿಕೆಗಳ ಸಂಪಾದಕೀಯ ಲೇಖನಗಳ ಬಗ್ಗೆ ಸರ್ಕಾರ ಇಂದು ಪ್ರಕಟಣೆಯೊಂದನ್ನು ಹೊರಡಿಸಿ —

"ಬಸ್ ರಾಷ್ಟ್ರೀಕರಣದ ಬಗ್ಗೆ ಸರ್ಕಾರ ಈಗಾಗಲೇ ಘೋಷಿಸಿರುವ ರೀತಿಯಲ್ಲಿ ಬದಲಾವಣೆಯೇನೂ ಇಲ್ಲವೆಂದು ಸರ್ಕಾರ ಸ್ಪಷ್ಟಪಡಿಸುತ್ತದೆ.

ರಸ್ತೆ ಸಂಚಾರ ಇಲಾಖೆಯ ಆಡಳಿತದ ಬಗ್ಗೆ ಸಲಹೆಗಳನ್ನು ಮಾಡಲು, ಕೆಲವು ಖಾಸಗಿ ಮಹನೀಯರನ್ನು ಆಡಳಿತಕ್ಕೆ ಸೇರಿಸಬೇಕೆಂಬುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಎಂದು ಮಾತ್ರ ಶ್ರೀ ಎ. ಭೀಮಪ್ಪನಾಯಕ್‌ರವರ ೧೦೫ನೇ ಪ್ರಶ್ನೆಗೆ ಉತ್ತರ ಕೊಡಲಾಯಿತು.

ಬಸ್ಸುಗಳಲ್ಲಿ ಸಂಚಾರ ಮಾಡುವ ಸಾರ್ವಜನಿಕರ ದೃಷ್ಟಿಯಲ್ಲಿ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವಂತಾಗಲು ಸರ್ಕಾರ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಈ ಸಂದರ್ಭದಲ್ಲಿ ಧರವಸೆ ನೀಡುತ್ತದೆ.

ಮುಷ್ಕರ

ಕಲ್ಕತ್ತಾ ಬಂದರಿನಲ್ಲಿ ೩೦೦೦೦ ಕೆಲಸಗಾರರು ಮುಷ್ಕರವನ್ನು ಹೂಡಿದ್ದಾರೆ. ಇದರಿಂದ ನಾವೆಯ ಕೆಲಸಕಾರ್ಯಗಳೆಲ್ಲವೂ ನಿಂತುಹೋಗಿವೆ. ಕೆಲಸಗಾರರ ವೈದ್ಯ ಪರೀಕ್ಷೆ ವಿಷಯದಲ್ಲಿ ಭಿನ್ನಾಭಿಪ್ರಾಯವು ತಲೆದೋರಿ, ಈ ಮುಷ್ಕರ ಪ್ರಾರಂಭವಾಯಿತೆಂದು ತಿಳಿಯಬರುತ್ತದೆ.

ಮದ್ರಾಸ್ ಮಂತ್ರಿ ಮಂಡಲ ರಾಜಿನಾಮೆ ಕೊಡಲಿ

ಕೇಂದ್ರ ಸರ್ಕಾರವು ಈ ವರ್ಷದಲ್ಲಿ ಮದ್ರಾಸಿಗೆ ೨೦ ಲಕ್ಷ ಟನ್ ಅಕ್ಕಿಯನ್ನು ಕಳುಹಿಸದಿದ್ದರೆ ಈಗಿನ ಮದ್ರಾಸ್ ಮಂತ್ರಿ ಮಂಡಲವು ರಾಜಿನಾಮೆಕೊಡಬೇಕೆಂದು ಸಂಘಟಿತ ಪ್ರಜಾ ಪಕ್ಷದ ನಾಯಕ ಶ್ರೀ ಎಂ. ಎ. ಮುತ್ತಯ್ಯಚೆಟ್ಟಿಯವರು ಮದ್ರಾಸ್ ಅಸೆಂಬ್ಲಿಯಲ್ಲಿ ನಿನ್ನೆ ದಿನ ಹೇಳಿದರು.

ಸರ್ಕಾರದೊಡನೆ ಸಹಕರಿಸಿ

"ಸ್ವಾತಂತ್ರ್ಯ ಬಂದು ಮೂರು ವರ್ಷಗಳಾದರೂ, ಜನತೆಗಾಳಿಯ ಗೋಪುರಗಳನ್ನು ಕಟ್ಟುವುದರಲ್ಲೇ ಮಗ್ನರಾಗಿದ್ದಾರೆ. ದೇಶದ ಪ್ರಗತಿಯನ್ನು ಸಾಧಿಸಲು ಪ್ರತಿ ಹೆಜ್ಜೆಯಲ್ಲಿಯೂ ಸರ್ಕಾರದೊಡನೆ ಜನತೆ ಸಂಪೂರ್ಣವಾಗಿ ಸಹಕರಿಸಬೇಕು. ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಕೈಕಟ್ಟಿ ಕುಳಿತುಕೊಳ್ಳುವ ಕಾಲ ಹೋಯಿತು. ಜನವೆ ಇದನ್ನರಿಯಬೇಕು" ಎಂದು ಮೈಸೂರಿನ ಗೃಹಸಚಿವರಾದ ಮಾನ್ಯ ಶ್ರೀ ಟಿ. ಮರಿಯಪ್ಪನವರು, ಉಜ್ಜಂಗಿಯಲ್ಲಿ ಮಾಧ್ಯಮಿಕಶಾಲೆಯ ಶಂಕುಸ್ಥಾಪನಾ ಮಹೋತ್ಸವದಲ್ಲಿ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ನುಡಿದರು.

ಭಾರತಕ್ಕೆ ಆಹಾರ

ಕ್ಷುತ್ಬಾಧೆಯಿಂದ ನರಳುತ್ತಲಿರುವ ಭಾರತೀಯರಿಗೆ ಆಹಾರವನ್ನು ಒದಗಿಸಬೇಕಾದುದು ಮಾನವತ್ವದೃಷ್ಟಿಯಿಂದ ನಮ್ಮ ಕರ್ತವ್ಯ. ರಾಜಕೀಯ ಭಿನ್ನತೆಗಳು ಆಹಾರ ಸರಬರಾಯಿ ಮಾಡುವಾಗ ಗಮನಿಸಬಾರದು. ಈ ಭಿನ್ನತೆಗಳನ್ನು ನಿವಾರಿಸಿಕೊಳ್ಳಲು ಇದು ಸುಗಮವಾದ ಮಾರ್ಗ ಎಂದು ಅಮೆರಿಕಾದ ಅನೇಕ ಪತ್ರಿಕಗಳು ಭಾರತಕ್ಕೆ ಆಹಾರ ಸರಬರಾಯಿ ಮಾಡುವುದಕ್ಕೆ ಬೆಂಬಲನಿತ್ತಿದೆ.

ಅಮೇರಿಕಾ ವಿಶ್ವವಿದ್ಯಾನಿಲಯಗಳಲ್ಲಿ ಭಾರತ ಉಪನ್ಯಾಸಕರು

ಅಮೇರಿಕಾ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ಒಂದು ವರ್ಷ ಕಾಲ ಭಾರತ ಸರ್ಕಾರದವರು ನಾಮಕರಣಮಾಡಿದ ಒಬ್ಬ ಅಧ್ಯಾಪಕರನ್ನು ಉಪನ್ಯಾಸಕನನ್ನಾಗಿ ನೇಮಕ ಮಾಡಿಕೊಳ್ಳಲು ಏರ್ಪಾಡು ನಡೆದಿದೆ. ರಾಷ್ಟ್ರಗಳ ನಡುವೆ ಮಧುರಬಾಂಧವ್ಯವು ಬೆಳೆಯಲು ಈ ಏರ್ಪಾಡು ಮಾಡಲಾಗಿದೆ.

ಸಕ್ಕರೆ ಆಮದುಮಾಡುವುದಿಲ್ಲ

ದೇಶದಲ್ಲಿ ಸಾಕಾಗುವಷ್ಟು ಸಕ್ಕರೆ ಇರುವುದರಿಂದ ಇನ್ನೂ ಹೆಚ್ಚಿಗೆ ಸಕ್ಕರೆಯನ್ನು ಹೊರಗಿನಿಂದ ತರಿಸಿಕೊಳ್ಳುವುದಿಲ್ಲವೆಂದು ಆಹಾರಮಂತ್ರಿ ಶ್ರೀ ಕೆ. ಎಂ. ಮುನಿಷಿಯವರು ಪಾರ್ಲಿಮೆಂಟಿನಲ್ಲಿ ಆಹಾರಪರಿಸ್ಥಿತಿ ವಿಷಯವಾಗಿ ಮಾತನಾಡುತ್ತಾ ತಿಳಿಸಿರುವರು.

ರೇಷನ್ ಪ್ರಮಾಣವನ್ನು ಕಡಮೆಮಾಡಿರುವುದರಿಂದ ೧೨ ಲಕ್ಷ ಟನ್ ಆಹಾರದ ಉಳಿತಾಯವಾಗುವುದೆಂದು ಅವರು ತಿಳಿಸಿರುವರು.

ಸರ್ವೋದಯ ಶಿಬಿರದ ಕಾರ್ಯಕಲಾಪಗಳು

ಪಶ್ಚಿಮವಾಹಿನಿ ಫೆ. ೯

ಸರ್ವೋದಯ ಪಕ್ಷಾಚರಣೆಯ ಅಂಗವಾಗಿ ಒಂದು ವಸ್ತ್ರ ಸ್ವಾವಲಂಬನ ಶಿಕ್ಷಣ ಶಿಬಿರ ಮತ್ತು ಸರ್ವೋದಯ ಯೋಜನೆಯನ್ನು ಸಂಸ್ಥಾನದ ವಾತಾವರಣಕ್ಕೆ ಹೊಂದಿಸಿಕೊಂಡು ಕೆಲಸಮಾಡಲು ಅನುಕೂಲವಾಗುವಂತೆ ಯೋಜನೆ ತಯಾರಿಸಲು ವ್ಯಾಸಂಗ ಗೋಷ್ಠಿಯನ್ನು ಆರಂಭಿಸಲಾಗಿದೆ. ಸ್ವಾವಲಂಬನ ಶಿಕ್ಷಣ ಶಿಬಿರದಲ್ಲಿ ೨೨ ಪುರುಷರು ೨೪ ಮಹಿಳೆಯರು ಶಿಕ್ಷಣಪಡೆಯುತ್ತಿದ್ದಾರೆ. ಈ ಶಿಬಿರದಲ್ಲಿ ಹತ್ತಿಯಿಂದ ಹಂಜಿ, ನೂಲು ಮತ್ತು ಬಟ್ಟೆ ಮಾಡಿಕೊಳ್ಳುವವರಿಗೆ ಎಲ್ಲಾ ಸಾಧ್ಯವನ್ನು ಪ್ರಯೋಗಮಾಡಿ ಶಿಕ್ಷಣ ಕೊಡಲಾಗುತ್ತಿದೆ. ಈ ಶಿಬಿರವು ಬದನವಾಳು ನೂಲುವ ಕೇಂದ್ರ ಮತ್ತು ಅಖಿಲ ಭಾರತ ಚರಕಾ ಸಂಘಗಳವರ ಸಹಕಾರದಿಂದ ನಡೆಯುತ್ತಿದೆ.

ಗಾಂಧೀಜೀಯವರು ರಚನಾತ್ಮಕ ಕಾರ್ಯಕ್ರಮಗಳನ್ನು ಚಿತ್ರಿಸುವಂತೆ ಒಂದು ಸರ್ವೋದಯ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರು ಐದು ದಿನಗಳ ಕಾಲ ಇದ್ದು ಸರ್ವೋದಯ ವ್ಯಾಸಂಗ ಗೋಷ್ಠಿಯನ್ನು ಆರಂಭಿಸಿದ್ದಾರೆ. ಶ್ರೀ ಮಥುರಾದಾಸ್ ಪುರುಷೋತ್ತಂ ಇವರ ನೇತೃತ್ವದಲ್ಲಿ ಮೈಸೂರಿಗೆ ಅನ್ವಯವಾಗುವಂತೆ ಒಂದು ಸರ್ವೋದಯ ಯೋಜನೆ ತಯಾರಾಗುತ್ತಿದೆ. ಶಿಬಿರದ ಈ ವ್ಯಾಸಂಗ ಗೋಷ್ಠಿಯಲ್ಲಿ ಶ್ರೀಗಳಾದ ತಗಡೂರು ರಾಮಚಂದ್ರರಾಯರು, ಬೆಳಗುಂಬ ನಾರಣಪ್ಪನವರು, ಚರಕಾ ಸಂಘದ ವಾಸುದೇವರಾಯರು, ಗೊರೂರು ರಾಮಸ್ವಾಮಯ್ಯಂಗಾರ್, ಬದನವಾಳಿನ ರಾಜಾರಾಮ ಅಯ್ಯಂಗಾರ್, ಸ. ಭದ್ರಯ್ಯ, ಎಸ್. ಎ. ಶ್ರೀನಿವಾಸರಾವ್, ಬಾಗೆಮನೆ ದೇವೇಗೌಡರು, ವೆಂಕಟರಮಣಯ್ಯ, ಎಸ್. ಪಿ. ಮಂಜುನಾಥನ್, ಕೆ. ಎಸ್. ನಾರಾಯಣಸ್ವಾಮಿ, ಎಸ್. ಎಸ್. ಶಾಸ್ತ್ರಿ, ಟಿ. ಎಸ್. ಶಾಮರಾವ್, ಕೆ. ರಾಮಸ್ವಾಮಿ, ಕೆ. ಎಸ್. ಕೃಷ್ಣಯ್ಯರ್, ಮತ್ತು ಶ್ರೀಮತಿ ಯಶೋಧರ ದಾಸಪ್ಪನವರು ಭಾಗವಹಿಸಿದ್ದರು. ಈ ಶಿಬಿರಕ್ಕೆ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು, ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು, ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು, ಸಾಹುಕಾರ್ ಶ್ರೀ ಎಸ್. ಚನ್ನಯ್ಯನವರು, ಬೆಂಗಳೂರಿನ ಮೇಯರ್ ಮತ್ತು ಮೈಸೂರು ಪುರಸಭೆಯ ಅಧ್ಯಕ್ಷರು ಎಂ. ಎಲ್. ನಂಜರಾಜೇಅರಸ್, ಟಿ. ವೆಂಕಟರಮಣಯ್ಯ ಮತ್ತು ಸಾಲಿಗ್ರಾಮ ಸೀತಾರಾಮಯ್ಯನವರು ಭೇಟಿಕೊಟ್ಟು ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು.

ಆದಾಯತೆರಿಗೆ ವಸೂಲಿ

೧೯೫೦ರಲ್ಲಿ ಆದಾಯತೆರಿಗೆ ತನಿಖೆ ಕಮಿಷನ್ನಿನವರು ತೆರಿಗೆಕೊಡದೆ ತಪ್ಪಿಸಿಕೊಂಡಿದ್ದ ಸುಮಾರು ೮,೧೧,೪೨,೯೮೫ ರೂ. ಮೊಬಲಗಿನ ೨೩೨ ಪ್ರಕರಣಗಳನ್ನು ತನಿಖೆಮಾಡಿ ಇತ್ಯರ್ಥ ಮಾಡಿರುವರು.

ರಬ್ಬರ್ ಕೈಗಾರಿಕೆಯ ಸಾಮಗ್ರಿಗಳ ಸರಬರಾಜು

ಭಾರತದ ರಬ್ಬರ್ ಕೈಗಾರಿಕೆಗೆ ಬೇಕಾದ ಸಾಮಗ್ರಿಗಳನ್ನು ಅಮೆರಿಕಾವು ಸರಬರಾಜು ಮಾಡದಂತೆ ಪ್ರಯತ್ನಗಳು ನಡೆಯುತ್ತಲಿವೆಯೆಂದು ತಿಳಿಯಬರುತ್ತದೆ.

ಮೈಸೂರು ಪ್ರಾವಿನ್ಷಿಯಲ್ ಕೊ-ಆಪರೇಟಿವ್ ಸಂಘದ ಕಾರ್ಯಕಾರಿ ಸಮಿತಿ

ಸ್ವಂ.ಸು.] ಬೆಂಗಳೂರು ೧೨

ಸಂಸ್ಥಾನದ ಮೈಸೂರು ಪ್ರಾವಿನ್ಷಿಯಲ್ ಕೋ-ಆಪರೇಟಿವ್ ಕೌನ್ಸಿಲ್ಲಿನ ಸದಸ್ಯರ ಸಭೆಯು ನಿನ್ನೆ ಶ್ರೀ ಎಸ್. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ನಡೆದು ಕಾರ್ಯನಿರ್ವಾಹಕ ಸಮಿತಿಯನ್ನೂ, ಅಧ್ಯಕ್ಷ ಉಪಾಧ್ಯಕ್ಷರುಗಳನ್ನೂ ಚುನಾಯಿಸಲಾಯಿತು.

ಶ್ರೀ ಎಸ್. ಶ್ರೀನಿವಾಸರವರು ಅಧ್ಯಕ್ಷರಾಗಿಯೂ, ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ ... ಕಾರ್ಯದರ್ಶಿಗಳಾಗಿಯೂ, ಶ್ರೀ ಬಿ. ಪಿ. ಪುರುಷೋತ್ತಂರವರು ಖಜಾಂಚಿಯಾಗಿ ಮತ್ತು ಶ್ರೀ ಕೆ. ವೆಂಕಟರಾಮಯ್ಯನವರು ಆಡಿಟರಾಗಿಯೂ ಚುನಾಯಿತರಾಗಿರುವರು.

ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಪಿ. ಗೋಪಾಲಕೃಷ್ಣಶೆಟ್ಟರು ಬಿ. ಆರ್. ನಾಯ್ಡುರವರು, ಎಸ್. ಚೆನ್ನಸ್ವಾಮಿಶೆಟ್ಟರು, ಎಂ. ಆರ್. ಸಿ. ಬಸಪ್ಪನವರು, ಜಿ. ವಿ. ಸುಂದರಮೂರ್ತಿಯವರು, ಬಿ. ಎಂ. ಗೋಪಾಲಾಚಾರ್‌ರವರು, ಕೆ. ಆರ್. ಶ್ರೀಕಂಠೇಶ್ವರ್‌ರವರು, ಡಾ|| ಬಿ. ಎಸ್. ಸೂರ್ಯನಾರಾಯಣರಾವ್, ಸಿ. ಎಸ್. ಕೃಷ್ಣಪ್ಪನವರು, ಜನಾಬ್ ಅಬ್ದುಲ್‌ವಾಜಿದ್‌ರವರು ಚುನಾಯಿಸಲ್ಪಟ್ಟರು. ಸಹಕಾರ ಪತ್ರಿಕೆಯ ಸಂಪಾದಕರಾಗಿ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರೂ, ಡಾ|| ಶ್ರೀಕಂಠೇಶ್ವರ್‌ರವರು ಸಹ ಸಂಪಾದಕರಾಗಿಯೂ ಶ್ರೀಗಳಾದ ಎಂ. ಎಸ್. ರಾಮಸ್ವಾಮಿ ಎಂ. ಎ. ಗೋಪಾಲಸ್ವಾಮಯ್ಯಂಗಾರ್ ಮತ್ತು ಎಸ್. ಶ್ರೀನಿವಾಸಮೂರ್ತಿಯವರು ಸಂಪಾದಕ ಮಂಡಲಿಯ ಸದಸ್ಯರಾಗಿಯೂ ಚುನಾಯಿಸಲ್ಪಟ್ಟರು.

ವಾರ್ಷಿಕೋತ್ಸವ

ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ವಾರ್ಷಿಕೋತ್ಸವವನ್ನು ೧೬ನೇ ತಾ|| ಶುಕ್ರವಾರ ಪ್ರಾತಃಕಾಲ ಸ್ಥಳೀಯ ಸಚಿವರಾದ ಶ್ರೀ ಆರ್. ಚೆನ್ನಿಗರಾಮಯ್ಯನವರು ಉದ್ಘಾಟಿಸುವರು. ಶ್ರೀ ವಾಸುದೇವಮೂರ್ತಿಯವರು ಅಧ್ಯಕ್ಷತೆ ವಹಿಸುವರು.

೩೮ನೇ ಅಕ್ಷಾಂಶ ದಾಟಲಾಗದು

ಈಗಿನ ಕೊರಿಯಾ ಯುದ್ಧರಂಗದಲ್ಲಿ ವಿಶ್ವ ಸೈನ್ಯಗಳು ೩೮ನೇ ಅಕ್ಷಾಂಶವನ್ನು ದಾಟಬಾರದು. ಮಿಲಿಟರಿ ಪ್ರವೀಣರ ಸಲಹೆ ಮತ್ತು ಪರಿಸ್ಥಿತಿಯನ್ನು ಪರಿಶೀಲಿಸಿ ಅನಂತರ ನಿಷ್ಕರ್ಷೆ ಮಾಡಬೇಕೆಂಬುದೇ ಬ್ರಿಟನ್ನಿನ ಅಭಿಪ್ರಾಯವೆಂದು ಪ್ರಧಾನಿ ಅಟ್ಲೀಯವರು ಕಾಮನ್ಸ್ ಸಭೆಯಲ್ಲಿ ತಿಳಿಸಿರುವರು.

ಪವಾಡಪುರುಷನ ದಸ್ತಗಿರಿ

ಬೆಂಗಳೂರು ಫೆ. ೧೨

'ಪವಾಡಪುರುಷ' ಜಹಾಂಗೀರ್‌ಖಾನನ್ನು ಈದಿನ ಪೊಲೀಸಿನವರು ದಸ್ತಗಿರಿ ಮಾಡಿ ೧೦ ದಿನ ಕಾಲ ರಿಮ್ಯಾಂಡ್ ಪಡೆದಿರುತ್ತಾರೆ. ಅವರ ಮೇಲೆ ಕ್ರಿ.ಪ್ರೊ. ಕೋಡು ೧೮೯ನೇ ಸೆಕ್ಷನ್ ಪ್ರಕಾರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ಫೆಬ್ರವರಿ ೧೪ನೇ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ ೭-೨೦ ನಾಗರಾಜಪ್ಪ (ನಾಗಸ್ವರ) ೭-೭೫ ಚಿತ್ರಜಗತ್ (ರೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ,

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಪಿಟೀಲು ೧-೪೫ ಹಿಂದೀ ಶಿಕ್ಷಣ ೨-೦ ವನಿತಾವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ನಾಗರಾಜಪ್ಪ (ನಾಗಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಪುಸ್ತಕವಿಮರ್ಶೆ ೭-೧೫ ಗೀತಾಂಜಲಿ ೭-೩೦ ಜನಗಣತಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ವಿ. ದೊರಸ್ವಾಮಯ್ಯಂಗಾರ್ (ವೀಣೆ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು (ರೆ) ೧೦-೦ ಮುಕ್ತಾಯ.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾವು ೨೦ ಲಕ್ಷ ಟನ್ ಆಹಾರವನ್ನು ಸರಬರಾಜು ಮಾಡಬೇಕೆಂಬ ಕೋರಿಕೆಯನ್ನು ವಿಶದವಾಗಿ ಪರಿಶೀಲಿಸಿ ಅಮೆರಿಕಾ ಅಧ್ಯಕ್ಷ ಟ್ರೂಮನ್ನರು, ೨೦ ಲಕ್ಷ ಟನ್ ಆಹಾರ ಪೈಕಿ ೧೦ ಲಕ್ಷ ಟನ್ ಆಹಾರವನ್ನು ಕೂಡಲೇ ಸರಬರಾಜು ಮಾಡಲು ಕಾಂಗ್ರೆಸು ಸಭೆಯನ್ನು ಕೋರಿದ್ದಾರೆ. ಭಾರತಕ್ಕೆ ಈ ೧೦ ಲಕ್ಷ ಟನ್ ಆಹಾರವನ್ನು ಉಚಿತವಾಗಿ ಕೊಡಬೇಕೆಂದೂ, ಭಾರತವು ರವಾನೆ ಖರ್ಚನ್ನು ವಹಿಸಿಕೊಳ್ಳಬೇಕೆಂದು ಅವರು ತಿಳಿಸಿರುವರು. ಕೊರಿಯಾ ಯುದ್ಧ ವಿಷಯದಲ್ಲಿ ಭಾರತ ಅಮೆರಿಕಾಗಳ ಭಿನ್ನತೆಯನ್ನು ಸಹ ಈಗ ಗಮನಿಸಲಾಗಿದೆ. ಜನತೆಯ ಅವಶ್ಯಕತೆ ಬಗ್ಗೆ ಸ್ನೇಹ ಪೂರ್ಣವಾಗಿ ಭಾರತದ ಕೋರಿಕೆಯಂತೆ ಆಹಾರವನ್ನು ಸರಬರಾಜು ಮಾಡಬೇಕಾಗಿದೆಯೇ ವಿನಹ ರಾಜಕೀಯ ಭಿನ್ನತೆಗೇ ವಿಶೇಷವಾಗಿ ಪ್ರಾಮುಖ್ಯತೆ ಕೊಡಬೇಕಾಗಿಲ್ಲವೆಂದು ಅವರು ತಿಳಿಸಿರುವುದಾಗಿ ವರದಿಯಾಗಿದೆ.

ರಣಜಿತ್* 9—2—51ರಿಂದ ಅಮೋಘಪ್ರಾರಂಭ

ಪ್ರತಿದಿನ 3 ಆಟಗಳು

ಕರ್ದಾರ್ ಮತ್ತು ನೌಷದ್‌ರವರ

ದಾಸ್ತಾನ್

ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್, ವೀಣ, ಸುರೇಶ್, ಮುಂತಾದವರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪-೨-೧೯೫೧ ಬುಧವಾರ [ಸಂಚಿಕೆ ೧೩೬

ಶ್ರೀ ಕೆ. ಸಿ. ರೆಡ್ಡಿ-ಪಂಡಿತ ನೆಹರೂ ಭೇಟಿ

ಆಹಾರ ಮತ್ತು ವಿಸರ್ಜಿಸಲ್ಪಡುವ ಸೈನಿಕರ ಪುನರುದ್ಯೋಗ ವಿಷಯ ಚರ್ಚೆ

ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಮ್ಮೇಳನಕ್ಕೆ ತೆರಳಿದ್ದ ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಆಹಾರ ಪರಿಸ್ಥಿತಿ ಮತ್ತು ವಿಸರ್ಜಿಸಲ್ಪಡುವ ಸೈನಿಕರ ಪುನರುದ್ಯೋಗ ವಿಷಯಗಳಲ್ಲಿ ಚರ್ಚೆ ನಡೆಸಿದರೆಂದು ತಿಳಿಯಬರುತ್ತದೆ. ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೈಸೂರು ಮತ್ತಿತರ ಸಂಸ್ಥಾನಗಳು ಭಾರತ ಸರ್ಕಾರವು ಕೊಡುತ್ತಲಿದ್ದ ಆಹಾರ ಪದಾರ್ಥಗಳ ಸಬ್ಸಿಡಿಯನ್ನು ... ಕೊಡಬೇಕೆಂದೂ ಅದನ್ನು ನಿಲ್ಲಿಸಬಾರದೆಂದೂ ಒತ್ತಾಯಪಡಿಸಿರುವುದಾಗಿಯೂ, ಸಂಸ್ಥಾನಗಳು ನಿವೃತ್ತ ಸೈನಿಕರಿಗೆ ಪುನಃ ಉದ್ಯೋಗವನ್ನು ಸಂಸ್ಥಾನಗಳೇ ಒದಗಿಸಬೇಕಾದಲ್ಲಿ ಗ್ರಾಂಟು ಕೊಡಬೇಕೆಂದು ತಿಳಿಸಿರುವುದಾಗಿ ಗೊತ್ತಾಗಿದೆ. ಸಂಸ್ಥಾನಗಳು ಸಬ್ಸಿಡಿಯನ್ನು ಕೊಡಬೇಕೆಂದು ಒತ್ತಾಯಪಡಿಸಿರುವ ವಿಷಯವು ಕೂಡಲೇ ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚಿಸಲಾಗುವುದೆಂದು ಹೇಳಲಾಗಿದೆ.

ಹಿಂದಿನಂತೆಯೇ ಸಬ್ಸಿಡಿ ಕೊಟ್ಟರೆ ಕೇಂದ್ರ ಸರ್ಕಾರಕ್ಕೆ ವರ್ಷಕ್ಕೆ ೪೦ ಕೋಟಿ ರೂಪಾಯಿಗಳ ವೆಚ್ಚವಾಗಬಹುದು. ಕೈಗಾರಿಕಾ ಪಟ್ಟಣಗಳೆಂದು ಕೆಲವು ಪಟ್ಟಣಗಳಿಗೆ ಮಾತ್ರ ಸಬ್ಸಿಡಿ ಕೊಡುತ್ತಲಿರುವ ವಿಷಯದಲ್ಲಿ ತೀವ್ರವಾದ ಟೀಕೆಗಳು ಬರುತ್ತಲಿರುವುದರಿಂದ ಅದನ್ನು ನಿಲ್ಲಿಸಿ, ಸಂಸ್ಥಾನಗಳಿಗೆ ಸ್ವಲ್ಪ ದ್ರವ್ಯವನ್ನು ಸಹಾಯ ರೂಪವಾಗಿ ಕೊಡುವ ವಿಷಯವು ಕೇಂದ್ರ ಸರ್ಕಾರದ ಗಮನದಲ್ಲಿದೆಯೆಂದು ಹೇಳಲಾಗಿದೆ.

ಕಾಶ್ಮೀರವು ಪಾಕಿಸ್ಥಾನದ ಒಂದು ಭಾಗ

ಕಾಶ್ಮೀರವು ಪಾಕಿಸ್ಥಾನದ ಒಂದು ವಿಭಾಗ. ಜಮ್ಮು ಮತ್ತು ಕಾಶ್ಮೀರ ಸಂಸ್ಥಾನವು ಆರ್ಥಿಕ, ಸಾಮಾಜಿಕ ಭೂಗೋಳಿಕ, ಭಾಷೆ ಮತ್ತು ಮತ ಮುಂತಾದವುಗಳಲ್ಲೆಲ್ಲಾ ಮುಸ್ಲಿಂರಾಜ್ಯವಾದ ಪಾಕಿಸ್ಥಾನದ ಒಂದು ಅಭೇದವಾದಭಾಗ. ಕಾಶ್ಮೀರ ಮತ್ತು ಪಾಕಿಸ್ಥಾನಕ್ಕಿರುವ ಸಂಬಂಧವನ್ನು ಪ್ರಪಂಚದ ಯಾವ ಶಕ್ತಿಯೂ ಕಡಿದುಹಾಕಲಾರದು ಎಂದು ಪ್ರಪಂಚ ಮುಸ್ಲಿಂ ಸಮ್ಮೇಳನವು ಒಂದು ನಿರ್ಣಯವನ್ನು ಮಾಡಿದೆ.

"ಹಸಿವಿನಿಂದ ಸಾಯಲು ಅವಕಾಶ ಕೊಡೆವು"

ದೇಶದ ಯಾವೊಬ್ಬ ವ್ಯಕ್ತಿಯೂ ಹಸಿವಿನಿಂದ ಸಾಯಲು ಎಂದಿಗೂ ಭಾರತ ಸರ್ಕಾರ ಅವಕಾಶ ಕೊಡದು, ಎಂದು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಜಯಪುರದಲ್ಲಿ ತಿಳಿಸಿದರು.

ರಷ್ಯಾನಿರ್ಣಯ ತಿರಸ್ಕಾರ

ಅಮೆರಿಕವು ಕೊರಿಯಾದಲ್ಲಿ ಆಕ್ರಮಣಕಾರಿಯೆಂದು ... ರಷ್ಯಾ ಅಪಾದನೆ ಮಾಡಿ ತಂದಿದ್ದ ನಿರ್ಣಯವು ವಿಶ್ವ ಸಂಸ್ಥೆಯ ಮಹಾ ಸಭೆಯಲ್ಲಿ ೪೮-೬ ಓಟುಗಳಿಂದ ತಿರಸ್ಕೃತವಾಯಿತು. ಇಂಡೋನೇಷಿಯ, ಬರ್ಮಾ ಮತ್ತು ಯುಗಸ್ಲೋವೇಕಿಯ ಮತವೀಯಲಿಲ್ಲ. ಭಾರತವು ವಿರೋಧವಾಗಿ ಮತವಿತ್ತು. ರಾಷ್ಟ್ರಗಳನ್ನು ಆಕ್ರಮಣ ರಾಜ್ಯಗಳೆಂದು ತೀರ್ಮಾನಿಸುತ್ತ ಬರುವುದು ಶಾಂತಿಯುತ ಮಾರ್ಗವಲ್ಲ. ಶಾಂತಿಯುತ ಮಾರ್ಗವನ್ನು ಅವಲಂಬಿಸುತ್ತಲಿರುವ ಭಾರತವು ಈ ನಿರ್ಣಯಕ್ಕೆ ಸಮ್ಮತಿಯನ್ನು ಕೊಡಲಾಗುವುದಿಲ್ಲವೆಂದು ತಿಳಿಸಿದೆ.

ಕಾಳ ಸಂತೆಯಲ್ಲಿ ಬಟ್ಟೆ ಮಾರಾಟ?

ಕೃಷ್ಣರಾಜನಗರದ ಬಟ್ಟೆ ಬಟ್ಟೆ ವ್ಯಾಪಾರಿಗಳಾದ ಶ್ರೀಮಾನ್ ವೈ. ಎಲ್. ನಂಜುಂಡಪ್ಪನವರು ತಮ್ಮಲ್ಲಿದ್ದ ಜವಳಿಯನ್ನು ಚಿಲ್ಲರೆ ಮಾರುವ ವರ್ತಕರಿಗೆ ಕಾಳ ಸಂತೆಯಲ್ಲಿ ಮಾರಿದ್ದನ್ನು ಕೆಲವು ವರ್ತಕರು ಪತ್ತೆ ಮಾಡಿರುವುದಾಗಿ ತಿಳಿದುಬಂದಿದೆ. ಇದನ್ನು ಪ್ರತಿಭಟಿಸಲೋಸುಗ ಸುಮಾರು ೩೦ ಜನ ವರ್ತಕರು ನಿನ್ನೆ ಸಭೆ ಸೇರಿ ಸದರೀ ಹೋಲ್‌ಸೇಲ್ ಬಟ್ಟೆ ವರ್ತಕರ ಅಪ್ರಾಮಾಣಿಕತೆಯಿಂದ ಇತರ ವರ್ತಕರಿಗೂ ಬಟ್ಟೆ ಕೊಳ್ಳುವವರಿಗೂ ಆಗುವ ತೊಂದರೆಯನ್ನು ವಿವರಿಸಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದಲ್ಲದೆ ತಂತಿ ಮುಖೇನ ಮಾನ್ಯ ಗೃಹ ಮಂತ್ರಿಗಳ ಅವಗಾಹನೆಗೆ ತಂದಿರುತ್ತಾರೆಂದು ಗೊತ್ತಾಗಿದೆ.

ಮೈಸೂರಿನಲ್ಲಿ ಸೌದೆ ಅಭಾವ

ಮೈಸೂರು ಫೆ. ೧೪

ಮೈಸೂರಿನಲ್ಲಿ ಸೌದೆ ಅಭಾವವು ವಿಶೇಷವಾಗಿ ತಲೆದೋರಿದೆ. ಯಾವ ಡಿಪೋವಿನಲ್ಲಿ ನೋಡಿದರೂ ಸೌದೆಯಿಲ್ಲ. ಕೆಲವು ಡಿಪೋಗಳಲ್ಲಿ ರೂ. ೧ || ಮಣದಂತೆ ಮಾರುತ್ತಲಿರುವರು. ಅಲ್ಲಿಯೂ ಕೂಡ ೦-೮-೦, ೦-೮-೦ ಕೊಡಲಾರಂಭಿಸಿರುವರು.

ಪೆಟ್ರೋಲ್ ರೇಷನ್ ಆದಾಗ ಸೌದೆ ಡಿಪೋದವರು ಪೌರಸಭೆಯಿಂದ ಪೆಟ್ರೋಲ್ ಕೂಪನ್ನು ಪಡೆದು ಸೌದೆಯನ್ನು ತರುತ್ತಲಿದ್ದರು. ಪೆಟ್ರೋಲ್ ಕೂಪನ್ನು ಪಡೆಯುತ್ತಲಿದ್ದುದರಿಂದ ಕಡ್ಡಾಯವಾಗಿ ಸೌದೆಯನ್ನು ತರಬೇಕಾಗಿತ್ತು. ಈಗ ಆ ಲಾರಿಗಳನ್ನು ಬೇರೆ ರೀತಿಯಲ್ಲಿ ಉಪಯೋಗಿಸಲಾರಂಭಿಸುವುದರಿಂದ ಮೊದಲಿನಂತೆ ಸೌದೆ ಸರಬರಾಜು ಕಡಮೆಯಾಗುತ್ತಿದೆ.

ಪೌರಸಭೆಗೆ ಸೌದೆ ಸರಬರಾಜಿನ ಹತೋಟಿಯು ಸಂಪೂರ್ಣವಾಗಿ ತಪ್ಪಿಹೋಗಿದೆ. ಇದೇ ಸೌದೆ ಅಭಾವಕ್ಕೆ ಕಾರಣವೆಂದು ತಿಳಿಯಬರುತ್ತದೆ.

ಡಿಪೋಗಳಲ್ಲಿ ಸಕ್ಕರೆಯಿಲ್ಲ ಗೋಧಿಯಿಲ್ಲ

ಮೈಸೂರು ಫೆ. ೧೪

ನಗರದ ಅನೇಕ ಆಹಾರ ಡಿಪೋಗಳಲ್ಲಿ ಸಕ್ಕರೆ ಮತ್ತು ಗೋಧಿ ಇಲ್ಲವೆಂದು ತಿಳಿಯಬರುತ್ತದೆ. ಅದರಲ್ಲೂ ಬಹಳ ಡಿಪೋಗಳಲ್ಲಿ ಈ ಆಹಾರ-ಪದಾರ್ಥಗಳಿಲ್ಲದೆ ತೊಂದರೆಯುಂಟಾಗಿದೆ. ವಿಚಾರಿಸಿದ್ದರಲ್ಲಿ ಸರಬರಾಯಿ ಆಗಿಲ್ಲವೆಂದು ಹೇಳುತ್ತಾರೆ.

ವಸ್ತ್ರಸ್ವಾವಲಂಬನ ಶಿಕ್ಷಣ

ಮೈಸೂರು ಫೆ. ೧೫

ಸರ್ವೋದಯಪಕ್ಷ ಸಮಾರಂಭವು ನಿನ್ನೆ ಸಪ್ತಾಹ ವಾಹಿನಿಯಲ್ಲಿ ಮುಕ್ತಾಯವಾಯಿತು. ಜನವರಿ ೩೦ ರಿಂದ ಈ ಪಕ್ಷವು ಪ್ರಾರಂಭವಾಗಿ ಬಹಳ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ ೨೨ ಪುರುಷರಿಗೆ ಮತ್ತು ೭೦ ಸ್ತ್ರೀಯರಿಗೆ ವಸ್ತ್ರಸ್ವಾವಲಂಬನ ಶಿಕ್ಷಣ ನಡೆದು ಸರ್ಟಿಫಿಕೇಟು ಗಳನ್ನು ಮತ್ತು ಇವರು ತಯಾರಿಸಿದ ನೂಲಿನಿಂದ ಮಾಡಿದ ವಸ್ತ್ರಗಳ ಬಹುಮಾನಗಳನ್ನು ಇವರಿಗೆ ಶ್ರೀ ಮಧುರದಾಸ್ ಪುರುಷೋತ್ತಮರವರು ಹಂಚಿದರು.

ಮೈಸೂರು ಸಂಸ್ಥಾನದ ರಚನಾತ್ಮಕ ಕಾರ್ಯಕರ್ತರ ಸಭೆಯನ್ನು ಇದೇ ಮೇ ತಿಂಗಳಿನಲ್ಲಿ ರಾಮನಗರಂ ಬಳಿಯಿರುವ ಕುಂಭಾಪುರದಲ್ಲಿ ನಡೆಯಬೇಕೆಂದು ನಿರ್ಧರಿಸಲಾಯಿತು.

ಆಕಾಶಯಾನ ರಾಷ್ಟ್ರೀಕರಣವಿಲ್ಲ

ಇಂದಿನ ಆರ್ಥಿಕಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ಆಕಾಶಯಾನ ರಾಷ್ಟ್ರೀಕರಣಕ್ಕೆ ಕೈ ಹಾಕುವುದಿಲ್ಲವೆಂದು ತಿಳಿಯಬರುತ್ತದೆ.

ವಿಮಾನಶಿಕ್ಷಣ ಕಾಲೇಜು

ಬೆಂಗಳೂರು ಫೆ. ೧೪

ಭಾರತದ ವೈಮಾನಿಕದಳದ ಪ್ರಧಾನಿ ಏರ್ ಮಾರ್ಷಲ್ ಐವಲಾಟ್‌ಮುನ್‌ಶರವರು ಇಂದು ಬೆಳಗ್ಗೆ ಜಾಲಹಳ್ಳಿಯಲ್ಲಿ ಭಾರತವಿಮಾನದಳದ ಟೆಕ್ನಿಕಲ್ ಶಿಕ್ಷಣ ಕಾಲೇಜು ಪ್ರಾರಂಭೋತ್ಸವವನ್ನು ನಡೆಸಿದರು.

ಭಾರತದಲ್ಲಿ ಬಟ್ಟೆ ಹಂಚಿಕೆ

ಭಾರತದಲ್ಲಿ ತಯಾರಾಗುವ ಬಟ್ಟೆಯಲ್ಲಿ ಶೇಕಡ ೬೦ ರಷ್ಟನ್ನು ಭಾರತದಲ್ಲಿಯೇ ಮಾರಾಟಕ್ಕಾಗಿ ಕೊಡಬೇಕೆಂದು ಭಾರತ ಸರ್ಕಾರ ಬಟ್ಟೆ ಗಿರಣಿಗಳಿಗೆ ಸೂಚಿಸುತ್ತಿದೆ.

ಅಮೆರಿಕಾ ಒಪ್ಪಿಗೆ

ಶಿಲನೇ ಅಕ್ಷಾಂಶವನ್ನು ವಿಶ್ವಸಂಸ್ಥೆ ಸೈನ್ಯಗಳು ದಾಟಬೇಕಾದರೆ ವಿಶ್ವಸಂಸ್ಥೆಯ ಸದಸ್ಯರು ಚರ್ಚಿಸಬೇಕಾದುದು ಅವಶ್ಯಕವೆಂದು ಬ್ರಿಟನ್ನು ಮಾಡಿರುವ ಸಲಹೆಯನ್ನು ಅಮೆರಿಕಾ ಒಪ್ಪಿದೆ.

ವಿವಾಹ

ಪ್ರಸಿದ್ಧ ಕಂಟ್ರಾಕ್ಟರ್ ರಾವ್ ಸಾಹೇಬ್ ಶ್ರೀ ಬಿ. ಮುನಿವೆಂಕಟಪ್ಪನವರ ಪುತ್ರ ಶ್ರೀ ಬಿ. ಎಂ. ನಾರಾಯಣಸ್ವಾಮಿಯವರಿಗೆ ಬೆಂಗಳೂರಿನ ಡಾ|| ಪಿ. ಟಿ. ಆಂಜನೇಯಚೆಟ್ಟಿಯವರ ಪುತ್ರಿ ಶ್ರೀಮತಿ ಲೀಲಾವತಿಯನ್ನು ಕೊಟ್ಟು ೧೬ನೇ ತಾರೀಖು ಶುಕ್ರವಾರ ಬೆಂಗಳೂರು ಬಸವನಗುಡಿಯಲ್ಲಿ ವಿವಾಹವು ನಡೆಯಲಿದೆ.

ಶ್ರಮಜೀವಿಗಳಿಗೆ ರೇಷನ್

ಇದೇ ಮಾಹೆ ೧೯ನೇ ತಾರೀಖಿನಿಂದ ಶ್ರಮಜೀವಿಗಳಿಗೆ ಹಿಂದೆ ಕೊಡುತ್ತಿದ್ದಂತೆ ರೇಷನ್ ಪ್ರಮಾಣವನ್ನು ೧೬ ಔನ್ಸ್ ಕೊಡಲಾಗುವುದೆಂದು ಕೇಂದ್ರ ಸರ್ಕಾರವು ಆಜ್ಞೆಯಿತ್ತಿದೆ. ಆಹಾರ ಪರಿಸ್ಥಿತಿಯು ಸ್ವಲ್ಪ ಸುಧಾರಿಸಿರುವುದರಿಂದ ಇವರಿಗೆ ಮಾಡಿದ್ದ ಕೋತಾವನ್ನು ಮನ್ನಾ ಮಾಡಲಾಗಿದೆ. ಮಾರ್ಚಿ ಆಖೈರಯೊಳಗೆ ಪುನಃ ದೇಶದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲಾಗುವುದು. ಆ ಹೊತ್ತಿಗೆ ಎಲ್ಲಾ ದರ್ಜೆಯವರಿಗೂ ಹಿಂದಿನ ಪ್ರಮಾಣದಲ್ಲಿಯೇ ಆಹಾರವನ್ನು ಒದಗಿಸಲು ಸಾಧ್ಯವಾಗಬಹುದೆಂದು ಹೇಳಲಾಗಿದೆ.

ದೇಸಾಯಿಯವರ ಎಚ್ಚರಿಕೆ

ಬೊಂಬಾಯಿ ಸರ್ಕಾರದ ಗೃಹ ಸಚಿವರಾದ ಶ್ರೀ ಮುರಾರ್ಜಿ ದೇಸಾಯಿಯವರು ಶಾಸನಸಭೆಯಲ್ಲಿ ಮಾತನಾಡುತ್ತಾ ಜಾತೀಯತೆಯನ್ನು ಪ್ರಸಾರ ಮಾಡುವ ಸಂಸ್ಥೆಗಳಿಗೆ ಸರ್ಕಾರವು ಯಾವ ರೀತಿಯಾದ ಉತ್ತೇಜನವನ್ನೂ ಕೊಡುವುದಿಲ್ಲ, ಅಂತಹ ಸಂಸ್ಥೆಗಳು ಜಾತೀಯತೆಯು ಬೆಳೆಯಲು ಮಾಡುವ ಚಟುವಟಿಕೆಗಳನ್ನು ನಿಲ್ಲಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ಹೇಳಿರುವರು.

ಚೈನಾಕ್ಕೆ ಸರಬರಾಜು ಮಾಡಿದರೆ?

ಚೈನಾಕ್ಕೆ ಭಾರತವೇನಾದರೂ ರಬ್ಬರ್ ಸಾಮಾನು ಸರಬರಾಜು ಮಾಡುತ್ತಿದ್ದರೆ ಅಮೇರಿಕಾವು ಭಾರತಕ್ಕೆ ರಬ್ಬರ್ ಸಾಮಾನು ತಯಾರಿಕೆಗೆ ಬೇಕಾದ ಇತರ ಸಾಮಾಗ್ರಿಗಳ ಸರಬರಾಯಿಯನ್ನು ಕಡಮೆ ಮಾಡುವುದಾಗಿ ಅಮೇರಿಕಾ ವಿದೇಶಾಂಗ ಶಾಖಾ ವಕ್ತಾರರೊಬ್ಬರು ತಿಳಿಸಿರುವರು.

ಜನಗಣತಿಯಲ್ಲಿ 'ಉದ್ಯೋಗ'

ಜನಗಣತಿಯ ಎನ್ಯುಮರೇಟರುಗಳಿಗೆ ಜನರು ತಮ್ಮ ಉದ್ಯೋಗವನ್ನು ತಿಳಿಸುವಾಗ ವಿವಿಧ ಉತ್ತರಗಳನ್ನು ಕೊಟ್ಟಿರುವರು. ಒಂದೆಡೆಯಲ್ಲಿ, ಸಂಪಾದನೆಗೆ, ಕ್ರಮ ಮಾರ್ಗವಿಲ್ಲದರು ತಮ್ಮ ಉದ್ಯೋಗವು 'ಜೇಬು ಕಳ್ಳತನ' ಎಂದು ಹೇಳಿರುವರು. ಜೈಲಿನಿಂದ ಆಗ ತಾನೇ ಹೊರಗೆ ಬಂದವನು, ಅವನ ಖಾಯಂ ನಿವಾಸವು ಜೈಲೆಂದು ತಿಳಿಸಿರುವನು. ಮತ್ತೊಂದೆಡೆ ಸಚ್ಚಾರಿತ್ರ ಸ್ತ್ರೀಯೊಬ್ಬಳು ತಾನು ಮಾಡುವ ಕೆಲಸ, ಸಂಪಾದನೆಯೆಲ್ಲವೂ ದೇವರಿಗೆ ಸೇರಿದುವುದಾಗಿಯೂ ಆತನ ಪ್ರೇರೇಪಣೆ ಮೇಲೆ ಜನರ ಸೇವೆಯು ಸಾಗುತ್ತಲಿರುವುದಾಗಿಯೂ ತನ್ನ ವೃತ್ತಿಯನ್ನು 'ಸಾರ್ವಜನಿಕ ಮನರಂಜನೆ' ಎಂದು ಬರೆದುಕೊಳ್ಳಬೇಕೆಂದು ತಿಳಿಸಿರುವಳು.

ಕೊರಿಯಾ ಯುದ್ಧರಂಗ

ಕೊರಿಯಾ ಯುದ್ಧರಂಗದಲ್ಲಿ ಘರ್ಷಣೆಯು ಸ್ವಲ್ಪ ಕಡಮೆಯಾಗಿದೆ. ಚೈನಾ ಮತ್ತು ಕೊರಿಯಾ ಸೈನ್ಯಗಳು ಒಟ್ಟುಗೂಡಿ ಪ್ರಬಲ ಧಾಳಿಯನ್ನೆಸಗಲು ಕಾರ್ಯಾಚರಣೆ ನಡೆಸುತ್ತಲಿರುವುದಾಗಿ ಹೇಳಲಾಗಿದೆ.

ಕರ್ನಾಟಕ ಸಂಘದ ವಾರ್ಷಿಕೋತ್ಸವ

ಮೈಸೂರು ಫೆ. ೧೩

ಕರ್ನಾಟಕ ಸಂಘದ ವಾರ್ಷಿಕೋತ್ಸವವು ನಿನ್ನೆ ಶ್ರೀ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಮಹಾರಾಜ ಕಾಲೇಜಿನಲ್ಲಿ ವೈಭವದಿಂದ ನಡೆಯಿತು. ಸ್ವಾಮಿ ಸೋಮನಾಥ ನಂದಜೀಯವರು ಮುಕ್ತಾಯ ಭಾಷಣ ಮಾಡಿದರು. ಶಾರದಾ ವಿಲಾಸ ಕಾಲೇಜಿನ ಅಧ್ಯಾಪಕರಾದ ಶ್ರೀ ಎಂ. ಗೋಪಾಲಕೃಷ್ಣ ಅಡಿಗರವರು ಕಾವ್ಯವಾಚನ ಮಾಡಿದರು.

ಮೈಸೂರಿನಲ್ಲಿ ಹೊಸ ವಿರೋಧ ಪಕ್ಷ ಸ್ಥಾಪನೆ ಪ್ರಯತ್ನ

ಬೆಂಗಳೂರು ಫೆ. ೧೨

[illegible] ವಿರೋಧ ಪಕ್ಷವನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ.

ಈ ಬಗ್ಗೆ ಕೆಲವು ಪ್ರಮುಖರ ಸಮ್ಮೇಳನವು ಮುಂದಿನ ತಿಂಗಳು ಹತ್ತನೇ ತಾರೀಖು ಬೆಂಗಳೂರಿನಲ್ಲಿ ನಡೆಯುವುದೆಂದೂ ಇದಕ್ಕಾಗಿ ಶಾಸನ ಸಭಾ ಸದಸ್ಯರೂ, ಮೈಸೂರಿನ ಮಾಜಿ ಮಂತ್ರಿಗಳೂ ಆದ ಶ್ರೀ ಎಲ್. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಎಂದೂ ಗೊತ್ತಾಗಿದೆ.

ಕಾಲರಾದಿಂದ ಜಾತ್ರೆಗಳು ನಿಂತಿತು

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಮತ್ತು ಮಳವಳ್ಳಿ ತಾಲ್ಲೋಕುಗಳಲ್ಲಿ ಕಾಲರಾ ಇರುವುದರಿಂದ, ಮದರಾಸಿನ ಚಿಕ್ಕಮಳೂರು ಜಾತ್ರೆಯಿಂದ ಬರುವ ಜನರು ಈ ಸೋಂಕಿಗೆ ಈಡಾಗಬಹುದೆಂಬ ಕಾರಣದ ಮೇಲೆ ಮಂಡ್ಯಾ ಜಿಲ್ಲೆಯ ಡೆಪ್ಯುಟಿ ಕಮೀಷನರು ಸಂಕ್ರಾಮಿಕ ರೋಗಗಳ ಹತೋಟಿ ಕಾನೂನಿನಂತೆ ಮಂಡ್ಯಾ ಜಿಲ್ಲೆಯಲ್ಲಿ ಯಾವ ಜಾತ್ರೆಯನ್ನೂ ಮತ್ತು ದನದ ಪ್ರದರ್ಶನಗಳನ್ನೂ ನಡೆಸಕೂಡದೆಂದು ತಿಳಿಸಿ ಆಜ್ಞೆ ಹೊರಡಿಸಿರುವರು.

ಮೈಸೂರು ಜಿಲ್ಲಾಧಿಕಾರಿಗಳೂ ಸಹ ಮುಡುಕತೊರೆ ಜಾತ್ರೆಯನ್ನು ಪ್ರತಿಬಂಧಿಸಿರುವರು. ಆದರೆ ದೇವಾಲಯದೊಳಗೆ ಶಾಸ್ತ್ರೋಕ್ತವಾದ ಕೆಲಸಕಾರ್ಯ ನಡೆಯಲು ಅಡ್ಡಿ ಇಲ್ಲವೆಂದು ಹೇಳಲಾಗಿದೆ.

ಅಂತರರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಮ್ಮೇಳನ

ಸೆಪ್ಟಂಬರ್ ೨ನೇ ವಾರದಲ್ಲಿ ಅಂತರರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಮ್ಮೇಳನವು ಸಿಂಹಳ ದ್ವೀಪದಲ್ಲಿ ನವಾರ ಎಲಿಯಾದಲ್ಲಿ ನಡೆಯುವುದು. ೨೦ ರಾಷ್ಟ್ರಗಳಿಂದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು,

ಸ್ಥಳ ಬದಲಾವಣೆ

ಹಳೇ ಬಂಡಿಕೇರಿಯಲ್ಲಿದ್ದ ಶ್ರೀ ನೃತ್ಯ ಕಲಾ ಮಂದಿರವನ್ನು ಇದೇ ಮಾಹೆ 12ರಿಂದ 447 ಲಕ್ಷ್ಮೀವಿಲಾಸ ಅಗ್ರಹಾರಕ್ಕೆ ಬದಲಾಯಿಸಿರುತ್ತೆ. ಕಲಾಭಿಮಾನಿಗಳು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ಫೆಬ್ರವರಿ ೧೫ನೇ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ ೭-೨೦ ಕೆ. ಎಸ್. ನಾರಾಯಣಮೂರ್ತಿ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ,

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೊನೆಟ್ ೧-೪೫ ಹಿಂದೀ ಶಿಕ್ಷಣ ೨-೦·ಹಿಂದೀ ಶಿಕ್ಷಣ. ೨-೦ ಚಿತ್ರಸಂಗೀತ (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಕೆ. ಎಸ್. ನಾರಾಯಣಮೂರ್ತಿ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಾತ್ಯ ಸಂಗೀತ (ರಿ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ರೌಲಟ್ ಮಹಮದ್ (ರಿ) ೭-೧೫ ಪಿ. ಕೃಷ್ಣಪ್ಪ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಂ. ಕೆ. ಶರ್ಮ (ಕನ್ನಡ ಗೀತೆಗಳು) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಬಿ. ಕೃಷ್ಣಪ್ಪ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕಥೆ ೧೦-೦ ಮುಕ್ತಾಯ.

ಒಲಿಂಪಿಯಾ
೧೫-೨-೫೧ರಿಂದ ಪ್ರತಿದಿನ ೩ ಆಟಗಳು
ನಳಿನಿಜಯವಂತ್, ಯಾಕೂಬ್,
ಯಶೋಧರ ಖಟ್ಟು, ಭಾರತ್‌ಭೂಷಣ್ ಕುಕ್ಕೂ
ನಟಿಸಿರುವ
* ಆಂಖೆ *
ಬೆಳಗಿನ ಪ್ರದರ್ಶನ
೧೬-೨-೫೧ರಿಂದ ೩ ದಿನಗಳು
ಚಾರ್ಲಿ, ಚಂದ್ರಪ್ರಭಾ
ಪಾತ್ರ ವಹಿಸಿರುವ
† ದುಲ್ಹ †

ರಣಜಿತ್* 9—2—51ರಿಂದ ಅಮೋಘಪ್ರಾರಂಭ
ಪ್ರತಿದಿನ 3 ಆಟಗಳು
ಕರ್ದಾರ್ ಮತ್ತು ನೌಷದ್‌ರವರ
ದಾಸ್ತಾನ್
ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್,
ವೀಣ, ಸುರೇಶ್, ಮುಂತಾದವರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು/ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೫-೨-೧೯೫೧ ಗುರುವಾರ [ಸಂಚಿಕೆ ೧೩೭

ಶಾಂತಿರಕ್ಷಣೆಗೆ ವಿಶ್ವರಾಷ್ಟ್ರಗಳ ಸಹಕಾರ ಅತ್ಯಗತ್ಯ

ಡಾ|| ರಾಧಾಕೃಷ್ಣನ್‌ರವರ ಸ್ಪಷ್ಟೋಕ್ತಿ

ನ್ಯೂಸ್‌ಪ್ರಿಂಟ್ ತೊಂದರೆ ತಪ್ಪಿಸಲು ಪ್ರಯತ್ನ

ಬೆಂಗಳೂರು ಫೆ. ೧೪

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಹಕಾರಸಂಘದ ಕಾರ್ಯನಿರ್ವಾಹಕ ಸಮಿತಿಯು ನಿನ್ನೆ ಉಪಾಧ್ಯಕ್ಷರಾದ ಶ್ರೀ ಹೆಚ್. ಎಸ್. ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿ ನ್ಯೂಸ್‌ಪ್ರಿಂಟ್ ಅಭಾವದಿಂದ ಪತ್ರಿಕೆಗಳಿಗುಂಟಾಗಿರುವ ತೊಂದರೆಯನ್ನು ಪರಿಶೀಲಿಸಿತು.

ನ್ಯೂಸ್ ಪ್ರಿಂಟನ್ನು ಸಹಕಾರಸಂಘವು ತರಿಸಿ ಸ್ಟಾಕುಮಾಡಿ ಪತ್ರಿಕೆಗಳಿಗೆ ಹಂಚಬೇಕೆಂದೂ, ನ್ಯೂಸ್ ಪ್ರಿಂಟ್ ತರಿಸಲು ಬೇಕಾದ ಲೈಸನ್ಸ್ ಮುಂತಾದ ಸೌಲಭ್ಯಗಳಿಗಾಗಿ ಸರ್ಕಾರವನ್ನು ಪ್ರಾರ್ಥಿಸಬೇಕೆಂದೂ ತೀರ್ಮಾನವಾಯಿತು.

ಪತ್ರಿಕಾ ಪ್ರಕಟಣೆಗಳಲ್ಲದೆ ಬೇರೆ ಯಾವುದಕ್ಕೂ ನ್ಯೂಸ್‌ಪ್ರಿಂಟ್ ಉಪಯೋಗಿಸದಂತೆ ಪ್ರತಿಬಂಧಕವನ್ನು ಹಾಕಲು ಸರ್ಕಾರಕ್ಕೆ ಸಲಹೆ ನೀಡಬೇಕೆಂದೂ ತೀರ್ಮಾನವಾಯಿತು.

ಭಾರತದ ಮಕ್ಕಳಿಗೆ ಆಹಾರ

ಭಾರತದಲ್ಲಿ ೨,೭೫,೦೦೦ ಮಕ್ಕಳ ಆಹಾರಕ್ಕಾಗಿ ಮುಂದಿನ ಆರು ತಿಂಗಳಲ್ಲಿ ಪ್ರಪಂಚ ಸಂಸ್ಥೆಯ ಮಕ್ಕಳ ನಿಧಿಯಿಂದ ೨,೪೦,೦೦೦ ಡಾಲರುಗಳ ಬೆಲೆಯ ಅಕ್ಕಿಯನ್ನು ಭಾರತಕ್ಕೆ ಕಳಿಸಿಕೊಡಬೇಕೆಂದು ಸಮ್ಮತಿಯಿಂದ ತೀರ್ಮಾನಿಸಲಾಗಿದೆ.

ಮೌಲಾನಾ ಅಜಾದರು

ಭಾರತ ವಿದ್ಯಾ ಸಚಿವ ಮೌಲಾನಾ ಅಬ್ದುಲ್‌ಕಲಾಂ ಅಜಾದರು ಪಾರ್ಲಿಮೆಂಟಿನ ಕಾಂಗ್ರೆಸ್‌ಪಕ್ಷದ ಉಪನಾಯಕರಾಗಿ ಚುನಾಯಿತರಾಗಿದ್ದಾರೆ.

ಪ್ರಧಾನಿ ನೆಹರೂರವರು ಪಕ್ಷದ ನಾಯಕರಾಗಿ ಹಿಂದೆಯೇ ಚುನಾಯಿತರಾಗಿರುವುದರಿಂದ, ನಾಯಕ ಚುನಾವಣೆಯಾಗದೆ ಇತರ ಕಾರ್ಯಕರ್ತರ ಚುನಾವಣೆ ನಡೆಯಿತು.

ಬಾಲಕರ ಧೂಮಪಾನ ನಿಷೇಧ

ಬಾಲಕರು ಧೂಮಪಾನ ಮಾಡುವುದನ್ನು ಪ್ರತಿಬಂಧಿಸಲು ತಯಾರಿಸಲಾಗಿರುವ ಮಸೂದೆಯನ್ನು ಶಾಸನಸಭೆಯಲ್ಲಿ ಮಂಡಿಸುವ ಮುನ್ನ ಅದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಲೋಸುಗ ಮುಂಬಯಿ ಸರ್ಕಾರವು ಅದನ್ನು ಸಾರ್ವಜನಿಕರಿಗೆ ಹಂಚುವರು.

† ಈಗ ಸಂಸ್ಥಾನದಲ್ಲಿ ಹರಡಿರುವ ಸಂಕ್ರಾಮಿಕ ಜಾಡ್ಯಗಳಿಂದ ೧೧ನೇ ತಾರೀಖಿನ ವರೆಗೆ ೭೭೮ ಜನಕ್ಕೆ ಕಾಲರಾ ತಗುಲಿ ೪೧೨ ಮೃತರಾಗಿರುವರೆಂದು ಆರೋಗ್ಯ ಇಲಾಖಾ ಪ್ರಕಟನೆ ತಿಳಿಸಿದೆ.

ಚಿಲ್ಲರೆ ವ್ಯಾಪಾರಿಗಳಿಗೆ ಜವಳಿ

ಬೆಂಗಳೂರು ಫೆ. ೧೪

ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಿಗೆ ಸೇರಿದ ಹೋಲ್‌ಸೇಲ್ ಬಟ್ಟೆ ವರ್ತಕರು ಆಯಾ ತಾ|| ಆಯಾ ಪ್ರದೇಶಗಳಿಗೆ ಸೇರಿದ ಚಿಲ್ಲರೆ ವ್ಯಾಪಾರಿಗಳಿಗೆ ತಿಂಗಳೊಂದಕ್ಕೆ ೫೦೦ ಗಜಗಳವರೆಗೆ ಬೊಂಬಾಯಿ, ಅಹಮದಾಬಾದ್ ಮತ್ತು ಶೋಲಾಪುರ ಗಿರಣಿಗಳ ಬಟ್ಟೆಯನ್ನು ಮಾರಬೇಕೆಂದೂ ಉಳಿದ ಜಿಲ್ಲೆಗಳಲ್ಲಿ ಹೋಲ್‌ಸೇಲ್ ವರ್ತಕರು ಆಯಾ ತಾ|| ಆಯಾ ಪ್ರದೇಶಗಳಿಗೆ ಸೇರಿದ ಚಿಲ್ಲರೆ ವ್ಯಾಪಾರಿಗಳಿಗೆ ೩೦೦ ಗಜಗಳಷ್ಟು ಈ ಬಟ್ಟೆಗಳನ್ನು ತಿಂಗಳೊಂದಕ್ಕೆ ಕೊಡಬೇಕೆಂದೂ ಸಿವಿಲ್ ಸಪ್ಲೈಸ್ ಕಂಟ್ರೋಲರು ಪ್ರಕಟಣೆ ಹೊರಡಿಸಿದ್ದಾರೆ.

ಭಾರತ ರಾಜ್ಯಾಂಗ ತಿದ್ದುಪಡಿ

ಭಾರತದಲ್ಲಿ ನೂತನ ರಾಜ್ಯಾಂಗವು ಜಾರಿಯಾದ ಒಂದು ವರ್ಷದಲ್ಲಿ ಬಂದಿರ ತಕ್ಕ ಅನುಭವದಿಂದ ಕೆಲವು ನ್ಯಾಯಾಲಯಗಳು ಹಕ್ಕುಬಾಧ್ಯತೆ ವಿಷಯಗಳ ಇತ್ತಿದ ತೀರ್ಪನ್ನು ಗಮನಿಸಿ ಯಾವ ರೀತಿಯಾದ ತಿದ್ದುಪಡಿಗಳನ್ನು ಮಾಡಬೇಕೆಂಬ ವಿಷಯವು ಸರ್ಕಾರದ ಮತ್ತು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಆಲೋಚನೆಯಲ್ಲಿದೆ. ಜನತೆಗೆ ಸ್ವಾತಂತ್ರ್ಯದ ಹಕ್ಕನ್ನು ಮೊಟಕು ಮಾಡದೆ ಯಾವ ರೀತಿಯಾದ ತಿದ್ದುಪಡಿ ಮಾಡಿದರೆ ರಾಜ್ಯಾಂಗವು ಪರಿಪೂರ್ಣವಾಗುತ್ತೆಂಬುದೇ ಒಂದು ದೊಡ್ಡ ಪ್ರಶ್ನೆಯಾಗಿದೆ. ಸರ್ವ ಸಮ್ಮತವಾಗಿ ತಿದ್ದುಪಡಿಯು ತಯಾರಾದಲ್ಲಿ ಮುಂದಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಅದನ್ನು ಮಂಡಿಸಲಾಗುವುದೆಂದು ಹೇಳಲಾಗಿದೆ.

ನೂತನ ಮಹಾ ದಂಡನಾಯಕರು

ವೈಸ್ ಅಡ್ಮಿರಲ್ ಪ್ಯಾರಿಯವರ ಸ್ಥಾನದಲ್ಲಿ ನೌಕಾದಳದ ಮಹಾ ದಂಡನಾಯಕರನ್ನಾಗಿ ರೇರ್ ಅಡ್ಮಿರಲ್ ಸಿ. ಟಿ. ಎಂ. ಪೈಜಿಯವರನ್ನು ಈ ವರ್ಷ ಅಕ್ಟೋಬರಿನಿಂದ ನೇಮಿಸಿರುವುದಾಗಿ ಭಾರತ ಸರ್ಕಾರ ಪ್ರಕಟಿಸಿದೆ.

ಖಂಡನೆ

ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಸಿ. ಮೇದಪ್ಪನವರ ಪ್ರಾಣಹರಣ ಮಾಡಲು ನಡೆದ ಯತ್ನವನ್ನು, ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಸಿ. ಎಸ್. ವೆಂಕಟಸ್ವಾಮಿ ನಾಯ್ಡುರ ಅಧ್ಯಕ್ಷತೆಯಲ್ಲಿ ನಡೆದ ಲಾ ಅಸೋಸಿಯೇಷನ್ನಿನ ಸಭೆಯಲ್ಲಿ ಸರ್ವಾನುಮತದಿಂದ ಖಂಡಿಸಲಾಯಿತು.

ಶ್ರೀ ಜಿ. ಎಲ್. ಉಲ್ಲಾಳರು ನಿರ್ಣಯವನ್ನು ಮಂಡಿಸಿದರು. ಶ್ರೀ ಬೆಂಗಳೂರರು ಅನುಮೋದಿಸಿದರು. ನಿರ್ಣಯವನ್ನು ಶ್ರೀ ಮೇದಪ್ಪನವರಿಗೂ ಮೈಸೂರು ಸರ್ಕಾರದ ಗೃಹಶಾಖೆಗೂ ಕಳುಹಿಸತಕ್ಕದೆಂದು ನಿರ್ಧರಿಸಲಾಯಿತು.

ಪ್ರಾಂತೀಯ ಮನೋಭಾವದಿಂದ ಕೂಡಿರುವ ಜನ ಮತ್ತು ರಾಷ್ಟ್ರಗಳ ಮೇಲೆ ಅಂತರರಾಷ್ಟ್ರೀಯ ಜೀವನಮಾರ್ಗವನ್ನು ಹೇರಲು ಯತ್ನಿಸುತ್ತಿರುವುದರಿಂದಲೇ ಶಾಂತಿಯನ್ನು ಉಳಿಸುವುದರಲ್ಲಿ ವಿಶ್ವಸಂಸ್ಥೆ ವಿಮುಖವಾಗಿದೆ. ಶಾಂತಿಯು ಇಂದು ಅಪಾಯಕರ ಪರಿಸ್ಥಿತಿಯಲ್ಲಿದೆ. ವಿಶ್ವದ ರಾಷ್ಟ್ರಗಳೆಲ್ಲ ನಿಜವಾದ ಸಹಕಾರ ಮನೋಭಾವದಿಂದ ಶ್ರಮಿಸಿದರೆ ಮಾತ್ರ ಶಾಂತಿ ಸ್ಥಾಪನೆಯಾಗುವುದೆಂದು ರಷ್ಯಾದಲ್ಲಿ ಭಾರತ ರಾಯಭಾರಿ ಡಾ|| ರಾಧಾಕೃಷ್ಣನ್‌ರವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಮಾತನಾಡುತ್ತಾ ಹೇಳಿರುವರು.

ಡಿಟೆನ್‌ಷನ್ ಕಾನೂನು ದುರುಪಯೋಗ?

ಪಾರ್ಲಿಮೆಂಟಿನಲ್ಲಿ ಡಿಟೆನ್‌ಷನ್ ಕಾನೂನು ತಿದ್ದುಪಡಿಯ ಚರ್ಚೆ ನಡೆಯುತ್ತಿದ್ದಾಗ ಮದರಾಸಿನ ಮಿ|| ಫ್ರಾಂಕ್ ಆಂಥೋನಿಯವರು ಈ ತಿದ್ದುಪಡಿ ವಿಷಯವಾಗಿ ಮಾತನಾಡುತ್ತಾ ಅನೇಕರು ಈ ಆಜ್ಞೆಯನ್ನು ದುರುಪಯೋಗಪಡಿಸಿಕೊಳ್ಳುವರು, ಉದಾಹರಣೆಗೆ ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ತನ್ನ ನಿವಾಸದ ಮಗ್ಗುಲ ಮನೆಯಾತನ ಮೇಲೆ ಕಣ್ಣು ಬೀಳಲು, ಮನೆಯ ಯಜಮಾನನನ್ನು ಈ ಆಜ್ಞೆಯ ಪ್ರಕಾರ ಬಂಧಿಸಿದನೆಂದು ಪ್ರಮುಖ ವಕೀಲರೊಬ್ಬರು ತಮಗೆ ತಿಳಿಸಿದರೆಂದು ಹೇಳಲು ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿ, ಮತ್ತಿತ್ತರ ಸದಸ್ಯರು ಇದನ್ನು ಪ್ರತಿಭಟಿಸಿದರು ಅಸಂಪ್ರದಾಯ ರೀತಿಯಲ್ಲಿ ಈ ರೀತಿ ಹೇಳುವುದು ತಪ್ಪೆಂದು ಅಧ್ಯಕ್ಷರು ತಿಳಿಸಲು ಆಂಥೋನಿಯವರು ತಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಂಡರು.

ಅಸಿಸ್ಟೆಂಟ್ ಫುಡ್ ಇನ್‌ಸ್ಪೆಕ್ಟರು ಸಸ್ಪೆಂಡು

ಮೈಸೂರು ಫೆ. ೧೫

ಮೈಸೂರು ಮೊಗರಿಬೀದಿಯಲ್ಲಿರುವ ಸರ್ಕಾರಿ ಉಗ್ರಾಣದಿಂದ ಗೋಧಿ ಕಳುವಾದ ಸಂದರ್ಭದಲ್ಲಿ ಅ|| ಫುಡ್ ಇನ್‌ಸ್ಪೆಕ್ಟರು ಶ್ರೀ ಕರಿಯಣ್ಣನೆಂಬುವರನ್ನು ಸಸ್ಪೆಂಡು ಮಾಡಿ, ಪೋಲೀಸಿನವರು ಮುಂದಿನ ತನಿಖೆ ನಡೆಸುತ್ತಿರುವುದಾಗಿ ತಿಳಿಯಬಂದಿದೆ.

೭೫ ಕೋಟಿ ರೂಪಾಯಿ ಮಾಯ

ಹೈದರಾಬಾದಿನ ಸರ್ಕಾರಿ ಭಂಡಾರದಲ್ಲಿದ್ದ ೭೫ ಕೋಟಿ ರೂಪಾಯಿಗಳೆಲ್ಲವೂ ಪೋಲೀಸು ಕಾರ್ಯಾಚರಣೆಯ ಮುನ್ನ ಮಾಯವಾದುದನ್ನು ಭಾರತ ಸರ್ಕಾರವು ಈಗ ಕಂಡು ಹಿಡಿದಿದೆಯೆಂದು ಕಂದಾಯ ಮಂತ್ರಿ ಶ್ರೀ ರಾಮಕೃಷ್ಣರಾಯರು ಸಿಕಂದರಾಬಾದಿನಲ್ಲಿ ಮಾತನಾಡುತ್ತಾ ಹೇಳಿರುವರು,

ಸಮಾಚಾರ

ಮೈಸೂರು ತಾ|| ೧೫ನೇ ಗುರುವಾರ

ಆಹಾರ ನೀತಿ ಸ್ವಲ್ಪ ಮಾರ್ಪಾಡಲಿ

ತಾಯಂದಿರು ಮಕ್ಕಳಿಗೆ ಸ್ವಲ್ಪ ಊಟಮಾಡಿ ಎಂದು ಹೇಳುವುದು, ಮನೆಯ ಯಜಮಾನನು ಈಗಿನ ಪರಿಸ್ಥಿತಿಯಲ್ಲಿ ಇನ್ನು ಆಹಾರವನ್ನು ಕೊಂಡು ತಂದು ಹಾಕಲಾರೆ ಒಂದೆಂಡೆ ರೇಷನ್ ಜೋಳ, ಇನ್ನೊಂದೆಡೆ ಬೆಲೆ ಏರಿಸಿರುವುದು ಸುಧಾರಿಸುವುದು ಕಷ್ಟ ಎನ್ನುವುದು ಎಲ್ಲರ ಮನೆ ಮಾತಾಗಿದೆ

ಸರ್ಕಾರವು ಹಲವಾರು ವರ್ಷಗಳಿಂದ ಆಹಾರ ಪದಾರ್ಥಗಳಿಗೆ ಹೆಚ್ಚಿಗೆ ಹಣ ಕೊಟ್ಟುಕೊಂಡು ತನ್ನ ಭಂಡಾರವನ್ನೆಲ್ಲಾ ಬರಿದು ಮಾಡಿಕೊಂಡು ಬಿಡದು ಇನ್ನು ಹೆಚ್ಚಿಗೆ ಹಣ ಕೊಡಲಾರದೆ ಜನರೇ ಆ ಭಾರವನ್ನು ಹೊರಬೇಕೆಂದು ಪದಾರ್ಥಗಳ ಬೆಲೆಯನ್ನು ಏರಿಸಿರುವರು. ಹೊರಗಿನಿಂದ ಹೆಚ್ಚಿಗೆ ಹಣದಲ್ಲಿ ಪದಾರ್ಥಗಳನ್ನು ತಂದು ಕಮ್ಮಿ ದರ ಮಾರುತ್ತಾ ಬಂದಲ್ಲಿ ಎಂದಾದರೂ ಈ ರೀತಿ ಆಗಬೇಕಾದುದು ಸಹಜವೇ.

ಆದರೆ ಸರ್ಕಾರದವರು ಪಡಿತರವನ್ನು ಜೋಳ ಮಾಡಿ ಅದೇ ಸಮಯದಲ್ಲಿ ದರವನ್ನು ಏರಿಸಿರುವುದು ಜನರಿಗೆ ದಿಕ್ಕು ತೋಚದಂತಾಗಿದೆ.

ಎಲ್ಲಾ ವಿಧದಲ್ಲೂ ದೀರ್ಘಾಲೋಚನೆ ನಡೆಸಿ ಸರ್ಕಾರವು ಈ ಮಾರ್ಗವನ್ನು ವಿಧಿಯಿಲ್ಲದೆ ಕೈಗೊಳ್ಳಬೇಕಾಯಿತೆಂಬುದೂ ಅನೇಕರ ಗಮನಕ್ಕೆ ಬಂದಿದೆ. ತೊಂದರೆಯನ್ನನುಭವಿಸದೆ ಅನೇಕರು ಅನೇಕ ರೀತಿ ಮಾತನಾಡಲಾರಂಭಿಸಿರುವರು ಇದು ಸಹಜ.

ಈಗ ಜನರು ಮುಖ್ಯವಾಗಿ ಅನುಸರಿಸಬೇಕಾದ ಮಾರ್ಗ- ಮಿತವ್ಯಯ, ಮತ್ತು ಆಹಾರ ಉಪಯೋಗದಲ್ಲಿದ ಬದಲಾವಣೆ, ರೈತರು ಹೆಚ್ಚು ಬೆಳೆಯುವುದು.

ಸರ್ಕಾರದವರು ಮುಖ್ಯವಾಗಿ ಅನುಸರಿಸಬೇಕಾದ ಮಾರ್ಗವಾವುದೆಂದರೆ ಆಹಾರ ಸಂಗ್ರಹಣೆಕಾರ್ಯವನ್ನು ಆದಷ್ಟು ಸಾಮರ್ಥದಿಂದ ನಡೆಸುವುದು. ದಯಾದಾಕ್ಷಿಣ್ಯಕ್ಕೊಳಗಾಗದೆ ಆಹಾರ ವಿಷಯದಲ್ಲಿ ಆಜ್ಞೆಗಳನ್ನು ಉಲ್ಲಂಘಿಸಿದವರ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುವುದು. ಈಗಾಗಲೇ ದೇಶಾದ್ಯಂತ ಆಹಾರ ಸಂಗ್ರಹಣೆ ಕಾರ್ಯವು ಯಶಸ್ವಿಯಾಗಿ ನಡೆದಿದೆಯೆಂದು ಸರ್ಕಾರವು ತಿಳಿಸುತ್ತಲಿದೆ. ಸಂಗ್ರಹಣೆಯಾಗಿ ಉಳಿದಿರುವ ಆಹಾರವು ಜನರಿಗೆ ಸರಿಯಾ ಸಿಗಲೆಂಬುದು ಸರ್ಕಾರದ ಅಭಿಮತವಾದರೆ ಆಹಾರ ಪದಾರ್ಥಗಳ ಸಾಗಾಣಿಕೆಯ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆದುಹಾಕಿ, ಕೊನೆಗೆ ಬಂದು ಎಲ್ಲೆಯಲ್ಲಿಯೇ ಆಹಾರ ಸಾಗಾಣಿಕೆಗೆ ಅನುಮತಿಕೊಟ್ಟು ಸರ್ಕಾರಿ ಡಿಪೋಗಳಲ್ಲದೆ ಅಂಗಡಿಗಳಲ್ಲಿ ಯಾವ ನಿರ್ಬಂಧವೂ ಇಲ್ಲದೆ ಸರ್ಕಾರಿ ದರದಲ್ಲಿ ಆಹಾರವನ್ನು ಮಾರಬಹುದೆಂದು ಆಜ್ಞೆಯನ್ನಿತ್ತರೆ, ಆಹಾರ ಸುಲಭವಾಗಿ ದೊರೆಯುವುದೆಂದು ಜನರಿಗೆ ತಿಳಿದೊಡನೆಯೇ ಜನರಲ್ಲಿ ಈಗ ಹುಟ್ಟಿರುವ ದುರ್ಭಾವನೆ ಮತ್ತು ಹಾಹಾಕಾರವೆಲ್ಲವೂ ಮಾಯವಾಗುವುದು.

ಸರ್ಕಾರದವರು ಇದನ್ನು ಗಮನಿಸುವರೇ? ಈರೀತಿ ಸರ್ಕಾರ ನಿರ್ಬಂಧ ತೆಗೆದುಹಾಕಿದಲ್ಲಿ ಮುಚ್ಚಿಟ್ಟಿರುವ ಆಹಾರ-ಪದಾರ್ಥಗಳೆಲ್ಲವೂ ತಾವಾಗಿಯೇ ಹೊರಗೆ ಬರುವುವು.

ಸ್ಥಳ ಬದಲಾವಣೆ

ಹಳೇ ಬಂಡಿಕೇರಿಯಲ್ಲಿದ್ದ ಶ್ರೀ ನೃತ್ಯ ಕಲಾ ಮಂದಿರವನ್ನು ಇದೇ ಮಾಹೆ 12ರಿಂದ 447 ಲಕ್ಷ್ಮೀವಿಲಾಸ ಅಗ್ರಹಾರಕ್ಕೆ ಬದಲಾಯಿಸಿರುತ್ತೆ. ಕಲಾಭಿಮಾನಿಗಳು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ.

ಟೆಲಿಫೋನ್ ಬಾಡಿಗೆ ದರ ಏರುವುದು

ಭಾರತದ ಇತರ ಪ್ರಾಂತ್ಯಗಳಲ್ಲಿರುವ ಟೆಲಿಫೋನ್ ದರಗಳಿಗೆ ಅನುಗುಣವಾಗಿ ಮೈಸೂರು ಸಂಸ್ಥಾನದಲ್ಲಿ ಟೆಲಿಫೋನ್ ಬಾಡಿಗೆ ದರವನ್ನು ಮಾಹೆಯಾನಾ ೧೫ ರೂಪಾಯಿಗಳಿಂದ ೨೭ ರೂಪಾಯಿಗಳಿಗೆ ಆಗಸ್ಟ್ ೧೫ರಿಂದ ಏರಿಸಲಾಗುವುದು. ಪ್ರತಿ ತಿಂಗಳಲ್ಲೂ ಸಕಾಲದಲ್ಲಿ ಸಲ್ಲಿಸುವವರಿಗೆ ಶೇಕಡ ೧೦ ರಷ್ಟು ರಿಯಾಯತಿ ಕೊಡಲಾಗುವುದು. ಬಾಡಿಗೆಯನ್ನು ಪ್ರತಿ ಮಾಹೆಯಲ್ಲೂ ಮುಂಗಡವಾಗಿಯೇ ಕೊಡಬೇಕಾಗಿದೆ. ವರ್ಷಕ್ಕೊಮ್ಮೆ ಮುಂಗಡವಾಗಿ ಕೊಟ್ಟಲ್ಲಿ ೨೫೨ ರೂಪಾಯಿ ಮಾತ್ರ ಕೊಡುವುದು. ಟೆಲಿಫೋನ್ ಎಕ್ಸ್‌ಛೇಂಜಿಗೂ ಟೆಲಿಫೋನ್ ಇರುವ ಜಾಗಕ್ಕೂ ಇರುವ ದೂರದ ಮೇಲೆ ದರವು ವ್ಯತ್ಯಾಸವಾಗುವುದು.

ಈ ವಿಷಯದಲ್ಲಿ ಈಗಾಗಲೇ ಟೆಲಿಫೋನ್ ಇಟ್ಟುಕೊಂಡಿರುವವರಿಗೆ ತಿಳುವಳಿಕೆ ಕೊಡಲಾಗಿದೆ.

ನೇಪಾಳ ದೊರೆಗಳು ಹಿಂತಿರುಗಿದರು

ನೇಪಾಳ ಅರಸರಾದ ರಾಜಾ ತ್ರಿಭುವನ ವಿಕ್ರಮರವರು ದೆಹಲಿಯಿಂದ ಇಂದು ಖಾಟ್ಮಂಡುವಿಗೆ ಹಿಂತಿರುಗಿದರು. ವಿಮಾನ ನಿಲ್ದಾಣದಲ್ಲಿ ರಾಜ ಮರ್ಯಾದೆಗಳೊಡನೆ ಭಾರತ ಸರ್ಕಾರವು ಅವರನ್ನು ಬೀಳ್ಕೊಟ್ಟಿತು.

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರೂ ಪ್ರಧಾನಿ ನೆಹರೂ, ಮತ್ತಿತರ ಸಚಿವರೂ ಅನೇಕ ಪ್ರಮುಖರು ಬೀಳ್ಕೊಟ್ಟರು. ಭಾರತ ಸರ್ಕಾರದ ಪರವಾಗಿ ವಿದೇಶಾಂಗ ಶಾಖಾ ಕಾರ್ಯದರ್ಶಿ ಶ್ರೀ ಜಕ್ಸಾರ್‌ರವರು ನೇಪಾಳ ಮಹಾರಾಜರೊಡನೆ ಖಾಟ್ಮಂಡುವಿಗೆ ಹೊರಟಿರುವರು.

ಖಾಟ್ಮಂಡುವಿನಲ್ಲಿ ಅವರಿಗೆ ಅದ್ಭುತ ಸ್ವಾಗತವಿತ್ತು ಪ್ರಜೆಗಳೆಲ್ಲರೂ ತಮ್ಮ ರಾಜಭಕ್ತಿಯನ್ನು ಸಮರ್ಪಣೆ ಮಾಡಬೇಕೆಂದೂ, ಹೊಸದಾಗಿ ಬರಲಿರುವ ಸುಧಾರಣೆಗಳಿಗೆ ಎಲ್ಲಾ ಪಕ್ಷದವರೂ ಸಹಕಾರವಿತ್ತು ನೂತನ ಮಂತ್ರಿ ಮಂಡಲವು ಯಶಸ್ವಿಯಾಗಿ ಕಾರ್ಯಗತವಾಗಲು ಬೆಂಬಲೀಯಬೇಕೆಂದು ನೇಪಾಳ ಮುಖ್ಯ ಮಂತ್ರಿಗಳು ಕೋರಿದ್ದಾರೆ.

ಖಂಡನಾ ಸಭೆ

ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿದ್ದೂ, ಪಡಿತರ ಕಡಮೆಮಾಡಿದುದೂ ಸರಿಯಲ್ಲವೆಂದು ಸಮತಾವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಜಿ. ಸದಾಶಿವರಾಯರು ಹೇಳಿಕೆಯಿತ್ತಿದ್ದಾರೆ. ಇದನ್ನು ಪ್ರತಿಭಟಿಸಲು ಸಂಸ್ಥಾನಾದ್ಯಂತ ಇದೇ ಮಾಹೆ ೨೫ನೇ ತಾ|| ಖಂಡನಾ ದಿನಾಚರಣೆಯನ್ನು ಸಮತಾವಾದಿಪಕ್ಷ ನಡೆಸುವುದಾಗಿ ಅವರು ಹೇಳಿರುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೯೬-೯೭ ಮೀಟರು

ಫೆಬ್ರವರಿ ೧೬ನೇ ಶುಕ್ರವಾರ

ಬೆಳಗ್ಗೆ ೬-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ ೬-೨೦ ಆರ್. ಅನಂತಕೃಷ್ಣಶರ್ಮ (ದೇವಿಭಜನೆ) ೬-೩೫ ಚಿತ್ರಲೋಕ (ರಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ,

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ನಾಗಸ್ವರ ೧-೪೫ ಹಿಂದೀ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಸ್. ರಾಮಚಂದ್ರರಾವ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಪದ್ಯವಾಚನೆ ೭-೧೫ ಎಸ್. ರಾಮಚಂದ್ರರಾವ್ (ಸಂಗೀತ) ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ (ರಿ) ೮-೧೫ ಆರ್. ಅನಂತಕೃಷ್ಣಶರ್ಮ (ರಾಗ, ತಾನಪಲ್ಲವಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೩೦ ಮೈಸೂರು ಅರಮನೆ ಆರ್ಕೆಸ್ಟ್ರಾ ೧೦-೦ ಮುಕ್ತಾಯ.

ರಣಜಿತ್ * 9—2—51ರಿಂದ ಅಮೋಘಪ್ರಾರಂಭ

ಪ್ರತಿದಿನ 3 ಆಟಗಳು

ಕರ್ದಾರ್ ಮತ್ತು ನೌಷದ್‌ರವರ

ದಾಸ್ತಾನ್

ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್, ವೀಣ, ಸುರೇಶ್, ಮುಂತಾದವರು.

ಒಲಂಪಿಯಾ

೧೫-೨-೫೧ರಿಂದ ಪ್ರತಿದಿನ ೩ ಆಟಗಳು

ನಳನಿಜಯವಂತ್, ಯಾಕೂಬ್, ಯಶೋಧರ ಖಟ್ಟು, ಭಾರತ್‌ಭೂಷಣ್ ಕುಕ್ಕೂ

ನಟಿಸಿರುವ

* ಆಂಖೆ *

ಬೆಳಗಿನ ಪ್ರದರ್ಶನ

೧೬-೨-೫೧ರಿಂದ ೩ ದಿನಗಳು

ಚಾರ್ಲಿ, ಚಂದ್ರಪ್ರಭಾ

ಪಾತ್ರ ನಟಿಸಿರುವ

† ಡೋಲ್ಸ್ †

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಜಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

Reg. No. M. 5318 ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬-೨-೧೯೫೧ ಶುಕ್ರವಾರ [ಸಂಚಿಕೆ ೧೩೮

ಚೀಣಾದಿಂದ ಭಾರತಕ್ಕೆ ಅಕ್ಕಿ

ಗೋಣಿಚೀಲಕೊಟ್ಟು ಅಕ್ಕಿ ತರಿಸಲಾಗುತ್ತದೆ

ಪಾರ್ಲಿಮಂಟಿನಲ್ಲಿ ಆಹಾರ ಉಪಮಂತ್ರಿಗಳ ವಿವರಣೆ

(ಹಿಂದಿನ ಪುಟದಿಂದ ಮುಂದುವರಿದುದು)

ಎಂದ ಸರ್ಕಾರಕ್ಕೆ ಎಷ್ಟು ಲಾಭ ಬರುವುದೆಂಬುದು ಈ ಮುಂದಿನ ಅಂಕಿ ಅಂಶಗಳಿಂದ ವೇದ್ಯವಾಗುತ್ತದೆ.

(೧) ದಪ್ಪ ಭತ್ತವನ್ನು ಕೊಳ್ಳುವುದರ ಪಲ್ಲಾ ೧ಕ್ಕೆ ೧೮ರೂ. ಅಕ್ಕಿಮಾಡಿಸುವ ಮತ್ತಿತ್ತರ ಖರ್ಚು ರೂ. ೧—೪—೦, ರೇಷನ್ ಡಿಪೋಗಳಿಗೆ ಕಮಿಷನ್ ೦—೧೨—೦, ಜುಮ್ಲಾ ೨೧—೦—೦, ಆದರಿಂದ ೫೭ ಸೇರು ಅಕ್ಕಿ ಆಗುತ್ತದೆ. ಅದನ್ನು ರೂ. ೧ಕ್ಕೆ ೨ಸೇರು ಒಂದೂವರೆ ಪಾವಿನಂತೆ ಮಾರಿದರೆ ರೂ. ೨೪| ಆಗುತ್ತದೆ. ಅಂದರೆ ಪಲ್ಲಾ ೧ಕ್ಕೆ ೩ ರೂ. ಲಾಭವಾಗುತ್ತದೆ.

(೨) ಸಣ್ಣ ಭತ್ತ ಕೊಳ್ಳುವುದಕ್ಕೆ ಪಲ್ಲಾ ೧ಕ್ಕೆ ೨೧ ರೂ. ಖರ್ಚು ರೂ. ೧-೪-೦ ಕಮಿಷನ್ ೦-೧೨-೦ ಜುಮ್ಲಾ ೨೩ರೂ ಆದರಿಂದ ೫೮ ಸೇರು ಅಕ್ಕಿ ಆಗುತ್ತದೆ. ಅದನ್ನು ರೂ. ೧ಕ್ಕೆ ೨ ಸೇರಿನಂತೆ ಮಾರಿದರೆ ೨೯ರೂ. ಆಗುತ್ತದೆ. ಅಂದರೆ ಪಲ್ಲಾ ೧ಕ್ಕೆ ೬ರೂ. ಲಾಭವಾಗುತ್ತದೆ. ಅದರಂತೆ (೩) ರಾಗಿ ಮತ್ತು ಜೋಳವನ್ನು ಪಲ್ಲಾ ೧ಕ್ಕೆ ೨೦ರೂ. ಸಂತೆ ಕೊಂಡ [illegible] ನಾಲ್ಕುವರೆ ಸೇರಿನಂತೆ ಮಾರುವುದರಿಂದ ಕಮಿಷನ್ ಪಲ್ಲಾ ೧ಕ್ಕೆ ೧೨ ಆಣೆ ಜಾತಾ ೧-೬-೦ ಲಾಭವಾಗುತ್ತದೆ. ಈ ರೀತಿ ಸಂಸ್ಥಾನದಾದ್ಯಂತ ಆಗುವ ಎಷ್ಟು ಬೆಳೆಯಿಂದ ಸರ್ಕಾರಕ್ಕೆ ಎಷ್ಟು ಲಾಭವಾಗುವುದೆಂಬುದನ್ನು ವಾಚಕರು ಊಹಿಸಬಹುದಾಗಿದೆ.

ಹಿಂದಿನ ಬೇಜವಾಬ್ದಾರೀ ಸರ್ಕಾರ ಲುಕ್ಸಾನು ಮಾಡಿಕೊಂಡಾದರೂ ಜನರಿಗೆ ಕಡಿಮೆ ಬೆಲೆಯಲ್ಲಿ ಹೆಚ್ಚು ಪಡಿತರವನ್ನು ಕೊಡುತ್ತಿತ್ತು. ಆದರೆ ರೈತರ ಉದ್ಧಾರ ಮಾಡಲು ಹೊರಟ ಈಗಿನ ಜವಾಬ್ದಾರೀ ಸರ್ಕಾರ ಕೊಳ್ಳುವವರ ಬಾಯಿಗೆ ಕುಕ್ಕೇಕಟ್ಟಿ ರೈತರನ್ನೂ ಕೈಬಿಟ್ಟು ಸರ್ಕಾರದ ಬೊಕ್ಕಸವನ್ನು ತುಂಬುವುದರಲ್ಲಿ ಮಾತ್ರವೇ ನಿರತವಾಗಿದೆ. ಇಂತಹ ಲಾಭಸಂಪಾದನೆಯ ನೀತಿಯು ಸರಿಯಲ್ಲವೆಂದೂ, ವ್ಯಾಪಾರದ ಅನುಭವವಿಲ್ಲದ ಸರ್ಕಾರ ಜನಹಿತವನ್ನೂ ಗಮನದಲ್ಲಿಟ್ಟು ವ್ಯಾಪಾರದ ಆಗುಹೋಗುಗಳನ್ನು ರೈತರಿಗೂ ಮತ್ತು ವರ್ತಕರಿಗೇ ಬಿಡುವುದು ಒಳ್ಳೆಯದೆಂದೂ ಮೇಲಿಂದ ಮೇಲೆ ಸೂಚಿಸುತ್ತಲೇ ಬಂದಿದ್ದೇವೆ. ಸರ್ಕಾರದ ಲಾಭದ ನೀತಿಯಿಂದ ರೈತರು, ಕೊಳ್ಳುವವರು, ವರ್ತಕರು, ಎಲ್ಲರೂ ಕಟ್ಟಿದ್ದಾರೆ. ಈಗಲೂ ಸರ್ಕಾರದವರು ಪ್ರಜೆಗಳ ಕಷ್ಟನಷ್ಟಗಳನ್ನೂ ಗಮನದಲ್ಲಿಟ್ಟು, ತಮ್ಮ ಲಾಭಸಂಪಾದನೆಯ ನೀತಿಯನ್ನು ಬದಲಾಯಿಸದೆ ಹೋದಲ್ಲಿ ಪರಿಸ್ಥಿತಿಯು ಹದಗೆಡುವುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ಇಂದಿನ ನಮ್ಮ ಸರ್ಕಾರದ ಆಹಾರನೀತಿ ಕಾಳಸಂತೆಯ ಅಭಿವೃದ್ಧಿಗೆ ಮಾತ್ರ ಸಹಕಾರಿಯಾಗಿದೆಯೆಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆಯೆಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ತಿಳಿಸುತ್ತಾರೆ.

ಕಾರ್ಯಕಾರಿ ಸಮಿತಿಗೆ

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮೈಸೂರಿನ ಶ್ರೀ ಕೆ ಹನುಮಂತಯ್ಯನವರು ಚುನಾಯಿತರಾಗಿದ್ದಾರೆ.

ಶ್ರೀ ಹಿರಾಲಾಲ್ ಕನಿಯಾ

ಸುಪ್ರಿಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹಿರಾಲಾಲ್ ಕನಿಯಾರವರು ನಾಳೆ ಬೆಂಗಳೂರಿಗೆ ಆಗಮಿಸಿ ಎರಡು ದಿನ ಇಲ್ಲಿರುವರೆಂದು ತಿಳಿದುಬಂದಿದೆ. ಇಲ್ಲಿಂದ ಅವರು ತಿರುವಾಂಕೂರು—ಕೊಚ್ಚಿನ್ ಸಂಸ್ಥಾನಕ್ಕೆ ತೆರಳಿ ಅಲ್ಲಿಂದ ಬೆಂಗಳೂರಿಗೆ ೨೧ನೇ ತಾರೀಖು ಬರುವರು. ನಾನಾ ಕೋರ್ಟಿನ ಪರಿಶೀಲನೆಗಾಗಿ ಅವರು ಈ ಭೇಟಿಯಿತ್ತಿರುವರು.

ಕಟ್ಟಡ ಶಂಕುಸ್ಥಾಪನೆ

ಮೈಸೂರು ಫೆ. ೧೬

ಚಾಮುಂಡೀ ಬಡಾವಣೆಯಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಇಂದು ಬೆಳಿಗ್ಗೆ ಮೈಸೂರು ಹಣಕಾಸಿನ ಸಚಿವ ಶ್ರೀ ದಾಸಪ್ಪನವರು ನೆರವೇರಿಸಿದರು. ಈ ಕಟ್ಟಡಕ್ಕಾಗಿ ಶ್ರೀಮತಿ ದೇವಿನಾಕಮ್ಮನವರು ೨೦ ಸಹಸ್ರ ರೂಪಾಯನ್ನು ಉದಾರ ದಾನ ಮಾಡಿರುತ್ತಾರೆ.

ಮಾನಂದವಾಡಿ ರಸ್ತೆಯಲ್ಲಿ ಶಿಲ್ಕ್ ಫ್ಯಾಕ್ಟರಿಯ ಹಿಂಭಾಗದಲ್ಲಿ ಈ ನೂತನ ಕಟ್ಟಡವನ್ನು ಕಟ್ಟಲಾಗುವುದು.

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಂಘದ ವಾರ್ಷಿಕೋತ್ಸವವನ್ನು ಇಂದು ಸ್ಥಳೀಯ ಸಂಸ್ಥೆ ಸಚಿವ ಶ್ರೀ ಆರ್. ಚೆನ್ನಿಗರಾಮಯ್ಯನವರು ನಡೆಸಿದರು.

ಬೆಲ್ಲದಲ್ಲಿ ಸಗಣಿ

ಬೆಲ್ಲದ ಹತೋಟಿ ಕಾಲದಲ್ಲಿ ದೀಪಾವಳಿ ಕಾಲದಲ್ಲಿ ಕೆಲವು ವರ್ತಕರು ಬೆಲ್ಲಕ್ಕೆ ಸಗಣಿಯನ್ನು ಬೆರಸಿ ಮಾರಿದರೆಂದು ಮದರಾಸಿಗೆ ತಾವು ಭೇಟಿಯಿತ್ತಾಗ ದೂರುಗಳು ಬಂದವೆಂದು ಗೃಹಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಶ್ರೀ ಮಹಾವೀರತ್ಯಾಗಿ ಹಣಕಾಸಿನ ರಾಜ್ಯ ಸಚಿವ

ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಮಹಾವೀರ ತ್ಯಾಗಿಯವರು ಹಣಕಾಸಿನ ರಾಜ್ಯ ರಾಜ್ಯಸಚಿವರಾಗಿ ನೇಮಕವಾಗಿದ್ದಾರೆ. ಅವರು ಇಂದು ಅಧಿಕಾರವಹಿಸಿಕೊಂಡರು.

ನೂತನ ಆಸ್ಪತ್ರೆ ಶಂಕುಸ್ಥಾಪನೆ

ಮೈಸೂರು ಫೆ. ೧೬

ವಾಣಿವಿಲಾಸಪುರಂ ಮಹಾಜನಾ ಮೈಸ್ಕೂಲಿನ ಬಳಿ ಶ್ರೀ ಎ. ಶಂಕರಶೆಟ್ಟರ ಸಿಂಬೈನ್ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ೧೯ನೇ ತಾ|| ಸೋಮವಾರ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆರವೇರಿಸುವರು.

"ಭಾರತದಿಂದ ಚೈನಾಕ್ಕೆ ಗೋಣಿ ಚೀಲಗಳನ್ನು ಸರಬರಾಜು ಮಾಡಿ ಅದಕ್ಕೆ ಬದಲಾಗಿ ಅಕ್ಕಿಯನ್ನು ತರಿಸಲಾಗುತ್ತಿದೆ. ಇನ್ನೂ ೫೦೦೦೦ ಟನ್ ಅಕ್ಕಿಯನ್ನು ತರಲು ಪ್ರಯತ್ನ ನಡೆಯುತ್ತಲಿದೆ. ೧೯೫೦ನೇ ಡಿಸೆಂಬರಿನಿಂದ ದಿನಕ್ಕೆ ಒಂದು ಹಡಗಿನ ಕಮ್ಮಿಯಿಲ್ಲದಂತೆ ಚೀಣಾದಿಂದ ಅಕ್ಕಿ ಬರುತ್ತಲಿದೆ. ಡಿಸೆಂಬರಿನಲ್ಲಿ ೪೪, ಜನವರಿಯಲ್ಲಿ ೫೮ ಹಡಗುಗಳ ಅಕ್ಕಿ ಬಂದಿತೆಂದೂ ಪ್ರತಿಯೊಂದರಲ್ಲೂ ೮—೯ ಸಾವಿರ ಟನ್, ಅಕ್ಕಿ ಹಿಡಿಸುವುದೆಂದೂ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ತಿರುಮಲರಾಯರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು. ಫೆಬ್ರವರಿಯಲ್ಲಿ ೩ ಲಕ್ಷ ೭೦ ಸಾವಿರ ಟನ್, ಮಾರ್ಚಿಯಲ್ಲಿ ೩ ಲಕ್ಷ ೧೮ ಸಾವಿರ ಟನ್ ಅಕ್ಕಿ ಬರಲಿದೆಯೆಂದೂ ಅವರು ತಿಳಿಸಿದರು.

ನ್ಯಾಯಾಂಗ ಸಚಿವರ ಪ್ರವಾಸ

ಬೆಂಗಳೂರು ಫೆ. ೧೫

ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನಾಳೆಯಿಂದ ೪ ದಿನಗಳು ತುಮಕೂರು, ಹಾಸನ, ಬೆಂಗಳೂರು, ಮೈಸೂರು ಮತ್ತು ಮಂಡ್ಯಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

ಭಾನುವಾರ ಮಧ್ಯಾಹ್ನ ಅವರು ಮೈಸೂರಿಗೆ ಆಗಮಿಸಿ, ಮೈಸೂರು ಪ್ರಭಾ ದಿನ ಪತ್ರಿಕೆಯ ಪ್ರಾರಂಭೋತ್ಸವವನ್ನು ನಡೆಸಿ, ಸಂಜೆ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾಗವಹಿಸುವರು.

ಸ್ಪೆಷಲ್ ಪ್ರೊಬ್ಲಿಕ್ ಪ್ರಾಸಿಕ್ಯೂಟರುಗಳು

ಬೆಂಗಳೂರು ಫೆ. ೧೫

ಸಂಸ್ಥಾನದಲ್ಲಿರುವ ಎಲ್ಲಾ ಸೇಲ್ಸ್‌ಟ್ಯಾಕ್ಸ್ ಆಫೀಸರು ಮತ್ತು ಅಸಿಸ್ಟೆಂಟು ಸೇಲ್ಸ್‌ಟ್ಯಾಕ್ಸ್ ಆಫೀಸರುಗಳನ್ನು, ವ್ಯಾಪಾರ ತೆರಿಗೆ ಕಾನೂನು ಪ್ರಕಾರ, ಸ್ಪೆಷಲ್ ಪ್ರೊಬ್ಲಿಕ್ ಪ್ರಾಸಿಕ್ಯೂಟರುಗಳಾಗಿ ನೇಮಕ ಮಾಡಲಾಗಿದೆ.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಆಹಾರ ಸರಬರಾಯಿ ಮಾಡುವ ವಿಷಯದಲ್ಲಿ ಅಮೆರಿಕಾಕ್ಕೆ ರಾಜಕೀಯ ಅಭಿಲಾಷೆಯೇನೂ ಇಲ್ಲವೆಂದೂ ಇದರಿಂದ ಆರಾಷ್ಟ್ರಗಳ ನೀತಿ ಬದಲಾವಣೆಯಾಗುವುದಿಲ್ಲವೆಂದು ಟ್ರೂಮನ್ನರು ಹೇಳಿರುವರು.

ದೀಪೋತ್ಸವ

ಬೆಂಗಳೂರು ಫೆ. ೧೫

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಭಾನುವಾರ ಸಂಜೆ ಗುಂಡ್ಲುಪೇಟೆಯಲ್ಲಿ ವಿದ್ಯುಚ್ಛಕ್ತಿ ದೀಪೋತ್ಸವ ಪ್ರಾರಂಭ ಮಾಡಲಿರುವರು.

Office of the Municipal Commissioner, City Municipality, Mysore.

NOTIFICATION

No. C 2 P 73|50-51 *Dated 12-2-51*

Notice is hereby given to the inhabitants of the Municipality of Mysore that the Municipal Council desire to amend the existing byelows No. 4 (b) Chapter XXIV of the Mysore City Municipal Rules and Bye-laws relating to Dangerous and Offensive trades so as to enhance the levy of Licensing fee as noted below on such of the trades as are carried on with the help of electric motors on the basis of horse power of the electric motor noted on the name plates of the motors :—

EXISTING	PROPOSED
1 Upto 5 H P. – A minimum of Rs. 5/—p a	Upto 2 H P. (inclusive of 2 H P.): Rs 5/—p.a.
2. From 5 H P - Upto 10 H P. A fee of Re. 1/—per H P p a	Above 2 H P. upto 5 H P. (inclusive of 5 H.P): Rs. 10/—p.a
3 Above 10 H P - Re 1—8—0 for every additional H.P. per annum.	Above 5 H P. upto 10 H P (inclusive of 10 H.P): Rs. 15/— per annum.
	Above 10 H P. . For every additional H P. Rs 1—8—0 per H.P p a.

In the case of the different motors used for the same trade or more than one trade or business, levy will be made separately for each such motor or trade or business.

Any inhabitant of the Municipality objecting to the proposed amendment may, within one month from the date of this notice, send his objections to the Municipal Council.

Note:—This cancels notification dated 3rd May 1940 published in the Mysore Gazette Dated 11 - 5 - 1950

Sd/ C. **Narasimha Moorty**,
Municipal Commissioner

ಪ್ರಭಾ * ಅಮೋಘ ಪ್ರಾರಂಭ

೧೬-೨-೧೯೫೧ ರಿಂದ

ದಿನವಹಿ ೩ ಆಟಗಳು

ಮನರಂಜನಯೇ ಚಿತ್ರದ ಮಹೋದ್ದೇಶ ಸಂಗೀತ ಮತ್ತು ನೃತ್ಯಗಳಿಂದ ಕೂಡಿದ

ಕುಲ್‌ದೀಪ್‌ರವರ— * ಷಾನ್ * [ಹಿಂದಿ]

ಕೀರ್ತಿ

ಪಾತ್ರ;— †† ಸುರೈಯ್ಯಾ †† ರೆಹಮಾನ್ †† ಮನೋರಮ †† ಡೇವಿಡ್ †† ಸಪ್ರು.

ದಿಗ್ದರ್ಶಕರು—ಜಯಂತ್ ದೇಸಾಯ್

ಕಾಲ ಹೆಚ್ಚಿಸಲಾಗಿದೆ

ಬೆಂಗಳೂರು ಫೆ. ೧೫

ಚುನಾವಣಾ ಪಟ್ಟಿಗೆ ಸಂಬಂಧಪಟ್ಟ ತಕರಾರನ್ನು ಕೂಡಲು ನಿಗದಿ ಮಾಡಿದ್ದ ಕಾಲವನ್ನು ಮಾರ್ಚಿ ೧೫ರ ವರೆಗೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಪ್ರಕಟಣೆ [illegible]

ಅಕ್ಕಿ ಸರಬರಾಜು ಮಾಡಿ

ಅಮೆರಿಕಾ ಕಾಂಗ್ರೆಸ್ ಸದಸ್ಯರನ್ನು ಭಾರತ ಪಾರ್ಲಿಮೆಂಟಿನ ೪೭ ಸದಸ್ಯರು, ಭಾರತಕ್ಕೆ ತ್ವರಿತವಾಗಿ ೨೦ ಲಕ್ಷ ಟನ್ ಆಹಾರವನ್ನು ಸರಬರಾಜು ಮಾಡಲು ಕಾನೂನಿಗೆ ಅನುಮೋದಿಸಿ ಎಂದು ಕೋರಿ ಒಂದು ಮನವಿ ಕಳುಹಿಸುವುದಾಗಿ [illegible]

ಪತ್ರವ್ಯವಹಾರ

ಮೈಸೂರು ಸರ್ಕಾರ ಲಾಭ ಸಂಪಾದಿಸಲು ಹೊರಟಿದೆ

ಸ್ವಾಮಿ,—

ಇದೇ ಫೆಬ್ರವರಿ ೧೨ನೇ ತಾರೀಖಿನಿಂದ ಪಡಿತರವನ್ನು ೯ ಔನ್ಸಿಗೆ ಕಡಿಮೆ ಮಾಡುವ ಆಜ್ಞೆ ನಮ್ಮ ಸಂಸ್ಥಾನದಲ್ಲಿಯೂ ಜಾರಿಗೆ ಬಂದಿದೆ. ಸರ್ಕಾರದ ಹೇಳಿಕೆಯಂತೆ ಸರಿಯಾಗಿ ಮಳೆ ಬೆಳೆಯಿಲ್ಲದೆ ದಾಸ್ತಾನು ಕಡಿಮೆಯಾಗಿರುವುದು ಮತ್ತು ಭೂಕಂಪ ಮೊದಲಾದ ಕಾರಣಗಳಿಂದ ಆಹಾರ ಪದಾರ್ಥಗಳ ನಷ್ಟ ಇದರಿಂದ ಪಡಿತರವನ್ನು ಕಡಿಮೆಮಾಡಿದ ತತ್ವವನ್ನು ಸರಿಯೆಂದು ಒಪ್ಪಿದರೂ ನಮ್ಮ ಮೈಸೂರು ಸರ್ಕಾರದವರು ಬೆಲೆಯನ್ನು ಹೆಚ್ಚಿಸಿರುವುದು ಬುಣ್ಣಿನ ಮೇಲೆ ಬರೆ ಎಳೆದಂತಾಗಿದೆ.

ನಮ್ಮ ಪ್ರಜಾ ಸರ್ಕಾರದವರು ಪಡಿತರ ವ್ಯವಸ್ಥೆಯಿಂದ ಪ್ರತಿ ವರ್ಷವೂ ತಮಗೆ ಲಕ್ಷಾಂತರ ರೂಪಾಯಿಗಳ ಲುಕ್ಸಾನಾಗುತ್ತಿತ್ತೆಂದೂ, ಮುಂದೆಯೂ ಹಾಗೆ ಲುಕ್ಸಾನುವಹಿಸುವುದು ಸಾಧ್ಯವಿಲ್ಲವೆಂದೂ ಹೇಳಿರುವುದು ನಮಗೆ ಅರ್ಥವೇ ಆಗುವುದಿಲ್ಲ. ಏಕೆಂದರೆ ಈ ಮೊದಲು ಅಕ್ಕಿ, ರಾಗಿ, ಜೋಳ ಇವುಗಳ ಬೆಲೆಯನ್ನು ಹೆಚ್ಚಿಸಿದುದರಿಂದ ಸರ್ಕಾರಕ್ಕೆ ೧೦ ೨೦ ಲಕ್ಷ ರೂಪಾಯಿಗಳ ಲಾಭವಾಯಿತು. ಈಗಲೂ ಸಹ ಸರ್ಕಾರದವರು ದಪ್ಪ ಭತ್ತವನ್ನು ಪಲ್ಲಾ ೧ಕ್ಕೆ ೧೯ ರೂಪಾಯಿ ಸಂತೆಯೂ, ಸಣ್ಣ ಭತ್ತವನ್ನು ೨೧ ರೂ. ಸಂತೆಯೂ ಮುಕ್ಕಾಲು ಪಾಲು ದಾಸ್ತಾನು ಮಾಡಿರುತ್ತಾರೆ. ಈಗ ಹಠಾತ್ತಾಗಿ ಮತ್ತೆ ಬೆಲೆಯನ್ನು ಏರಿಸಿದ್ದರಿಂದ ಸರ್ಕಾರಕ್ಕೆ ಒಂದಕ್ಕೆ ಎರಡರಷ್ಟು ಲಾಭವಾಗುತ್ತದೆ. ಅಕ್ಕಿ ರಾಗಿ, ಜೋಳ ಇವುಗಳ ದಾಸ್ತಾನು ಮತ್ತು ಮಾರಾಟ

(ಮುಂದಿನ ಪುಟ ನೋಡಿ)

ಒಲಂಪಿಯಾ

೧೫-೨-೫೧ರಿಂದ ಪ್ರತಿದಿನ ೩ ಆಟಗಳು

ನಳನಿಜಯಂತ್, ಯಾಕೂಬ್,

ಯಶೋಧರ ಖಡ್ಕ, ಭಾರತ್‌ಭೂಷಣ್, ಕುಕ್ಕೂ

ನಟಿಸಿರುವ

* ಆಂಖೆ *

ಬೆಳಗಿನ ಪ್ರದರ್ಶನ

೧೬-೨-೫೧ರಿಂದ ೩ ದಿನಗಳು

ಚಾರ್ಲಿ, ಚಂದ್ರಪ್ರಭಾ

ಪಾತ್ರ ವಹಿಸಿರುವ

† ದುಲ್ಹ †

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್ ಸ್ವಾಮಿ ಟ್ಯೂರಿಸ್ಟ್‌ಬ್ಯೂರೋ, ಮೈಸೂರು ಮುದ್ರಕರ ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರ [illegible]

Reg. No. M. 5318 ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮-೨-೧೯೫೦ ಶನಿವಾರ [ಸಂಚಿಕೆ ೧೪೯

ವಿಷ ಪ್ರಯೋಗದ ಪರಿಣಾಮ

ನಾಲ್ವರ ದಸ್ತಗಿರಿ

ಬೆಂಗಳೂರು ಫೆ. ೧೭

ಮೈಸೂರು ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ವಿಷಪ್ರಯೋಗ ಮಾಡಿಸಲು ಪ್ರಯತ್ನಿಸಿದ ಸಂದರ್ಭದಲ್ಲಿ ಸಿವಿಲ್ ಸ್ಪೇಷಲ್ ಬ್ರ್ಯಾಂಚ್ ಪೋಲೀಸಿನವರು ತಮ್ಮ ತನಿಖೆಕ್ರಮವನ್ನು ಮುಂದುವರಿಸುತ್ತಲಿರುವರು. ಆಯುರ್ವೇದಪಂಡಿತ ನಾರಾಯಣಪ್ರಸಾದ, ಶ್ರೀ ಮೇದಪ್ಪನವರ ಮನೆಯಾಳು, ಅಗ್ನಿಸ್ ಅಡ್ವೋಕೇಟ್ ಶ್ರೀ ಎಲ್. ಎಸ್. ರಾಜು ಮತ್ತು ಶ್ರೀ ರಾಮಸ್ವಾಮಿನಾಯುಡುರವರನ್ನು ದಸ್ತಗಿರಿ ಮಾಡಿರುವರು.

ಐ. ಎನ್. ಟಿ. ಯು. ಸಿ. ಸಮ್ಮೇಳನ

ಮೈಸೂರು ಪ್ರಾಂತಿಕ ಐ. ಎನ್. ಟಿ. ಯು. ಸಿ. ಸಮ್ಮೇಳನವನ್ನು ಏಪ್ರಿಲ್ ೨ನೇ ವಾರದಲ್ಲಿ ಮೈಸೂರಿನಲ್ಲಿ ಸೇರಿಸಲು ನಿರ್ಧರಿಸುವುದರಿಂದ ಅದಕ್ಕಾಗಿ ಸ್ವಾಗತ ಸಮಿತಿ ರಚನೆ ಮತ್ತಿತರ ವ್ಯವಸ್ಥೆಗಳ ಏರ್ಪಾಡಿಗಾಗಿ ಮೈಸೂರು ನಗರದ ಐ. ಎನ್. ಟಿ. ಯು. ಸಿ. ಗೆ ಸೇರಿದ ಸಂಘಗಳ ಅಧಿಕಾರ ವರ್ಗದ ಸಭೆಯನ್ನು ೧೮-೨-೫೦ನೇ ಭಾನುವಾರ ಬೆಳಿಗ್ಗೆ ೯ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ವಿಜಯ' ಕಾರ್ಯಾಲಯದಲ್ಲಿ ಕರೆಯಲಾಗಿದೆ ಆದ್ದರಿಂದ ಅಫಿಲಿಯೇಟಾದ ಕೆಲಸಗಾರರ ಸಂಘಗಳ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಖಜಾಂಚಿಯವರೊಡನೆ ತಪ್ಪದೆ ಸಭೆಗೆ ಬರಬೇಕಾಗಿ ವಿನಂತಿ.

ದಕ್ಷಿಣ ರೈಲ್ವೆ ಜೋನ್

ಏಪ್ರಿಲ್ ಒಂದರಿಂದ ದಕ್ಷಿಣರೈಲ್ವೆ ಜೋನ್ ಸ್ಥಾಪಿಸಲಾಗುವುದು. ತಿರುಚನಾಪಳ್ಳಿಯಲ್ಲಿರುವ ಎಸ್. ಐ. ರೈಲ್ವೆ ಮತ್ತು ಮೈಸೂರಿನಲ್ಲಿರುವ ರೈಲ್ವೆಕೇಂದ್ರ ಕಛೇರಿಗಳನ್ನು ರದ್ದುಮಾಡಿ, ಕೇಂದ್ರ ಕಛೇರಿಯನ್ನು ಮದರಾಸಿನಲ್ಲಿ ಸ್ಥಾಪಿಸಲಾಗುವುದು.

ಮದರಾಸು, ತಿರುಚನಾಪಳ್ಳಿ ಮತ್ತು ಹುಬ್ಬಳ್ಳಿಗಳಲ್ಲಿ ವರ್ಕ್‌ಷಾಪ್‌ಗಳಿರುವುವು. ಹುಬ್ಬಳ್ಳಿಯಲ್ಲಿ ಸ್ಥಾಪಿಸುವವರೆಗೆ ಮೈಸೂರು ಅಥವಾ ಬೆಂಗಳೂರಿನಲ್ಲಿಯೇ ಇಡಲಾಗುವುದು.

ಈ ಹೊಸ ಏರ್ಪಾಡಿನಿಂದ ಪ್ರತಿವರ್ಷವೂ ೧೭ ಲಕ್ಷ ರೂ. ಗಳು ಪ್ರಾರಂಭದಲ್ಲಿ ಒಂದು ಕೋಟಿ ರೂ. ಗಳ ಉಳಿತಾಯವಾಗುವುದೆಂದು ಹೇಳಲಾಗಿದೆ.

ದಂತವೈದರ ಸಮ್ಮೇಳನ

ಬೆಂಗಳೂರು ಫೆ. ೧೭

ಭಾರತದಲ್ಲಿ ದಂತವೈದರ ಅಭಾವ ಅಪರಿಮಿತವಾಗಿದೆ. ಸರಾಸರಿ ನಾಲ್ಕು ಜನರಿಗೆ ಒಬ್ಬ ದಂತವೈದ್ಯರಿರುವರು ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ನಾಲ್ಕು ಸಾವಿರ ಜನಗೆ ಒಬ್ಬರಿರುವರು. ಭಾರತದಲ್ಲೆಲ್ಲಾ ಒಟ್ಟು ೭೫೦೦ ದಂತವೈದ್ಯರಿರುವರು. ಅವರಲ್ಲಿ ಸರಿಯಾದ ಅರ್ಹತೆಯಿರುವವರು ಕೇವಲ ೧,೫೦೦ ಆದ್ದರಿಂದ ದಂತವೈದ್ಯ ಸಂಖ್ಯೆಯು ಭಾರತದಲ್ಲಿ ನೂರ್ಮಡಿಗಿಂತ ಹೆಚ್ಚಬೇಕಾಗಿದೆ. ಎಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅಖಿಲ ಭಾರತ ದಂತವೈದ್ಯರ ಸಮ್ಮೇಳನವನ್ನು ಪ್ರಾರಂಭಿಸುತ್ತಾ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಂತವೈದ್ಯದ ಶಾಸ್ತ್ರಾಭ್ಯಾಸ ಏರ್ಪಡಿಸಬೇಕೆಂದೂ ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ದಂತವೈದ್ಯದ ಪಾಠ ಆಗಬೇಕೆಂದೂ ಅವರು ತಮ್ಮ ಭಾಷಣದಲ್ಲಿ ತಿಳಿಸಿದರು.

ನೂತನ ದಿನಪತ್ರಿಕೆ

ಮೈಸೂರು ಫೆ. ೧೭

ಮೈಸೂರು ಪ್ರಭಾ ಎಂಬ ನೂತನ ದಿನಪತ್ರಿಕೆಯು ರಾಜಧಾನಿಯಲ್ಲಿ ನಾಳೆಯಿಂದ ಹೊರಡಲಿದೆ. ನ್ಯಾಯ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಪ್ರಾರಂಭೋತ್ಸವವನ್ನು ನೆರವೇರಿಸುವರು.

ಷಾಪ್ ಮತ್ತು ಎಸ್ಟಾಬ್ಲಿಷ್‌ಮೆಂಟ್ಸ್ ಆಕ್ಟ್

ಬೆಂಗಳೂರು ಫೆ. ೧೭

ತರಕಾರಿ, ಮಾಂಸ, ಮೀನು, ಹಾಲಿನ ಪದಾರ್ಥಗಳು, ಬ್ರೆಡ್ ಮತ್ತು ಹೂವು ಮಾರುವ ಅಂಗಡಿಗಳಿಗೆ ಷಾಪ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಕಾನೂನು ಅನ್ವಯಿಸುವುದಿಲ್ಲವೆಂದು ಸರ್ಕಾರದವರು ಆಜ್ಞೆ ಹೊರಡಿಸಿರುವರು.

ಮೈಸೂರು ಸಂಸ್ಥಾನದಲ್ಲಿ ಇಂಡಿಯಾ ಕಾಫಿ ಬೋರ್ಡಿನವರು ನಡೆಯಿಸುವ ಕೇಂದ್ರಗಳಿಗೂ ಈ ಕಾನೂನು ಅನ್ವಯಿಸುವುದಿಲ್ಲ.

ಅಶೋಕ ಬಾಗ್

ನೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರು ವಾಸಿಸುತ್ತಿರುವ ಸರ್ಕಾರಿ ಭವನಕ್ಕೆ 'ಅಶೋಕ ಬಾಗ್' ಎಂದು ಹೊಸ ಹೆಸರು ಕೊಡಲಾಗುತ್ತದೆ. ಸಿಮ್ಲಾದಲ್ಲಿರುವ ಸರ್ಕಾರಿ ಭವನಕ್ಕೆ 'ಅಶೋಕಗಿರಿ' ಎಂದು ಹೆಸರು ಕೊಡಲಾಗುವುದು.

ಆಕ್ಷೇಪಣೆ

ಭಾರತಕ್ಕೆ ಆಹಾರಧಾನ್ಯ ಕಳುಹಿಸಬೇಕೆಂಬ ಮಸೂದೆಯನ್ನು ಅಂಗೀಕರಿಸಬೇಕೆಂದು ಭಾರತ ಪಾರ್ಲಿಮೆಂಟಿನ ಸದಸ್ಯರು ಅಮೆರಿಕಾ ಕಾಂಗ್ರೆಸ್ಸಿಗೆ ಮನವಿ ಮಾಡಿರುವುದನ್ನು ಪ್ರಧಾನಿ ನೆಹರೂರವರು ಆಕ್ಷೇಪಿಸಿದ್ದಾರೆ.

ವಿದೇಶಾಂಗ ವ್ಯವಹಾರ ವಿಚಾರದಲ್ಲಿ ನೇರವಾಗಿ ಶಾಸನಸಭೆಯ ಸದಸ್ಯರು ವ್ಯವಹರಿಸುವುದು ಅಷ್ಟು ಉತ್ತಮವಾಗಲಾರದು. ಸರ್ಕಾರದ ವಿದೇಶಾಂಗ ಖಾತೆಯು ಈ ಕೆಲಸವನ್ನು ಮಾಡುತ್ತಲೇ ಇದೆ. ಈ ರೀತಿಯಾದ ಪದ್ಧತಿಯಿಂದ ಅಪಾರ್ಥಕ್ಕೂ ಗೊಂದಲಕ್ಕೂ ಕಾರಣವಾಗುವುದೆಂದು ಅವರು ತಿಳಿಸಿರುವರು.

ಕೇಂದ್ರಕ್ಕೆ ಇನ್ನೂ ಇಬ್ಬರು ಮಂತ್ರಿಗಳು ?

ಕೇಂದ್ರ ಸರ್ಕಾರಕ್ಕೆ ಇನ್ನೂ ಇಬ್ಬರು ಮಂತ್ರಿಗಳನ್ನು ತೆಗೆದುಕೊಳ್ಳುವ ಇಚ್ಛೆಯು ಸದ್ಯದಲ್ಲೇ ಹೊರಬೀಳಲಿದೆಯೆಂದು ಹೇಳಲಾಗಿದೆ.

"ಸ್ಟೇಟ್ಸ್ ವಿಲೀನೀಕರಣದಿಂದ ನಿರುದ್ಯೋಗಿಗಳಾಗಿರುವ ಸ್ಟೇಟ್ಸ್ ನೌಕರರಿಗೆ ಪುನರ್ವಸತಿ ವಿಷಯದಲ್ಲಿ ಒಂದು ಯೋಜನೆಯನ್ನು ಮೈಸೂರು ಸರಕಾರವು ಕೇಂದ್ರಕ್ಕೆ ಕಳುಹಿಸಲಿದೆ.

ಉನ್ನತಾಧಿಕಾರಿಗಳ ಮೇಲೆ ಕಾರ್ಯಕ್ರಮ

ವಿಸ್ತೃತ ಪಾಲಿಸಿಕೊಳ್ಳುವೆಂಬ ಅಪಾದನೆ ಮೇಲೆ ಬರ್ಮಾದ ನೌಕಾ ಮುಖ್ಯಾಧಿಕಾರಿ ಕಮ್ಯಾಂಡರ್ ಖಿನ್‌ಮಾಂಗ್ ಬೊ ಮತ್ತಿತರ ನಾಲ್ವರನ್ನು ಬರ್ಮಾ ಸರ್ಕಾರವು ಡಿಸ್ಮಿಸ್ ಮಾಡಿರುವರೆಂದು ತಿಳಿಯಬರುತ್ತದೆ.

ರಾಷ್ಟ್ರಾಧ್ಯಕ್ಷರು ಮೈಸೂರಿಗೆ

ಬೆಂಗಳೂರು ಫೆ. ೧೭

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರವರು ಏಪ್ರಿಲ್ ಮೊದಲನೇ ವಾರದಲ್ಲಿ ಸಂಸ್ಥಾನಕ್ಕೆ ಭೇಟಿ ಕೊಡುವರು. ಬೆಂಗಳೂರಿನಲ್ಲಿ ಎರಡು ದಿನ ಮೈಸೂರಿನಲ್ಲಿ ಒಂದು ದಿನ ಅವರಿರುವರೆಂದೂ ವಿಕ್ಟೋರಿಯಾ ಆಸ್ಪತ್ರೆ ವಜ್ರಮಹೋತ್ಸವ, ಗುಂಡ್ಲುಪೇಟೆ ಕಸ್ತೂರಿಬಾ ನಿಧಿಯ ಪ್ರಾರಂಭೋತ್ಸವ, ವಿಶೇಷ ಕಾನ್ವೊಕೇಷನ್ ಸಮಾರಂಭಗಳು ಅವರ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆಯೆಂದು ತಿಳಿಯಬರುತ್ತದೆ.

ಪಬ್ಲಿಕ್ ಸರ್ವಿಸ್ ಕಮಿಷನ್

ಮೈಸೂರಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಒಂದು ವಾರದೊಳಗೆ ರೂಪಗೊಳ್ಳುವುದೆಂದು ತಿಳಿಯಬರುತ್ತದೆ.

ಹೈಕೋರ್ಟಿನ ಅಧಿಕಾರ ವ್ಯಾಪ್ತಿ

ಇನ್ನು ಮುಂದೆ ಮೈಸೂರು ಹೈಕೋರ್ಟಿನ ಅಧಿಕಾರ ವ್ಯಾಪ್ತಿಯು ಕೊಡಗಿಗೂ ಅನ್ವಯಿಸುವುದು. ಮದರಾಸು ಹೈಕೋರ್ಟಿಗೆ ಅಪೀಲು ಹೋಗುವ ಬದಲು ಮೈಸೂರು ಹೈಕೋರ್ಟಿಗೆ ಬರುವುದು.

ಲಕ್ಕವಳ್ಳಿ ಯೋಜನೆ ಕೇಂದ್ರಕ್ಕೆ ?

ಬೆಂಗಳೂರು ಫೆ. ೧೭

ಲಕ್ಕವಳ್ಳಿ ನೀರಾವರಿ ಯೋಜನೆಯನ್ನು ಕೇಂದ್ರ ಸರ್ಕಾರವು ವಹಿಸಿಕೊಳ್ಳುವಂತೆ ಸಲಹೆ ಮಾಡಿರುವುದಾಗಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರಿಗೆ ಆಹಾರ

೧,೪೦,೦೦೦ ಟನ್ ಆಹಾರ ಧಾನ್ಯವನ್ನು ಮೈಸೂರಿಗೆ ಒದಗಿಸಬೇಕೆಂದು ಕೇಳಿರುವುದರ ಪ್ರತಿ ಕೇಂದ್ರವು ೭೫,೦೦೦ ಟನ್ ಧಾನ್ಯ ಒದಗಿಸಲು ಒಪ್ಪಿದೆಯೆಂದು ಮುಖ್ಯ ಮಂತ್ರಿಗಳು ತಿಳಿಸಿರುವರು.

ಸಮಾಚಾರ

ಮೈಸೂರು ತಾ|| ೧೭ನೇ ಶನಿವಾರ

ಕೃತಕ ಅಕ್ಕಿ

ಮೈಸೂರಿನಲ್ಲಿರುವ ಆಹಾರ ಸಂಶೋಧನಾ ಕೇಂದ್ರದ ಡೈರೆಕ್ಟರ್ ಡಾ|| ಸುಬ್ರಹ್ಮಣ್ಯಂರವರು ಕೇಂದ್ರದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ, ದಕ್ಷಿಣ ಭಾರತದಲ್ಲಿ ಅದರಲ್ಲೂ ತಿರುವಾಂಕೂರಿನಲ್ಲಿ ಬೆಳೆಯುವ ಟೋಪಿಯೋಕಾವನ್ನು ಶೇಕಡ ೧೦ ರಷ್ಟು ಕಡಲೆಕಾಯಿ ಹಿಂಡಿಯೊಡನೆ ಬೆರಸಿ, ಕೃತಕ ಅಕ್ಕಿಯನ್ನು ತಯಾರ್ಮಾಡಿ, ಅದರ ವಿಷಯದಲ್ಲಿ ಅನೇಕ ಪ್ರಕಟನೆಗಳನ್ನು ಹೊರಡಿಸಿರುವುದಲ್ಲದೆ, ಜನರ ತಿಳುವಳಿಕಗಾಗಿ ರೇಡಿಯೋ ಬಾಷಣಗಳನ್ನು ಕೂಡ ಮಾಡಿರುವರು. ಈ ಕೃತಕ ಅಕ್ಕಿಯು ಸಾಧಾರಣ ಅಕ್ಕಿಗಿಂತಲೂ ೩ ರಷ್ಟು ಪುಷ್ಟಿಯಾದುದೆಂದು ಸಹ ಅವರು ತಿಳಿಸಿರುವರು.

ಈಗಾಗಲೇ ಈ ಪ್ರಯೋಗವು ನಡೆದು ಹಲವಾರು ತಿಂಗಳುಗಳಾಯಿತು. ಆದರೆ ಹೆಚ್ಚಿಗೆ ಪ್ರಮಾಣದಲ್ಲಿ ಇದನ್ನು ತಯಾರಿಸಿ ಜನರಿಗೆ ಒದಗಿಸಲು ತಕ್ಕ ಕಾರ್ಯಕ್ರಮವನ್ನು ಎಲ್ಲಾ ಸರ್ಕಾರದವರು ಯಾವ ರೀತಿ ಕೈಗೊಂಡಿರುವರೆಂಬುದು ಇನ್ನು ಯಾರೂ ಪ್ರಕಟಪಡಿಸಿಲ್ಲ. ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ಈ ಪ್ರಯೋಗವನ್ನು ಮಾಡಿ ಉತ್ತಮ ತರಹದ ಕೃತಕ ಅಕ್ಕಿಯನ್ನು ತಯಾರಿಸಿ ಕೇಂದ್ರದಲ್ಲಿ ಒಂದೆರಡು ಸೀಸೆಗಳಲ್ಲಿಟ್ಟು, ಕೇಂದ್ರಕ್ಕೆ ಭೇಟಿಯಾಗುವವರಿಗೆ ಅಥವಾ ಪ್ರಕಟಣೆ, ಭಾಷಣಗಳಿಂದ ಜನರಿಗೆ ತಿಳುವಳಿಕೆ ಕೊಟ್ಟಲ್ಲಿ ಜನರಿಗದರಿಂದುಂಟಾಗುವ ಪ್ರಯೋಜನವೇನು? ವ್ಯವಸಾಯ ಇಲಾಖೆಯವರು ಕೂಡಲೇ ಸಾಧ್ಯವಾದೆಡೆಯಲ್ಲೆಲ್ಲಾ ಟೋಪಿಯೋಕಾವನ್ನು ಬೆಳೆದು, ಕೂಡಲೇ ತಯಾರಿಕಾ ಕೇಂದ್ರಗಳನ್ನು ಸ್ಥಾಪಿಸಿ ಕೃತಕ ಅಕ್ಕಿಯನ್ನು ಹೆಚ್ಚಿಗೆ ಪ್ರಮಾಣದಲ್ಲಿ ತಯಾರಿಸಿ ಜನರಿಗೆ ಒದಗಿಸುತ್ತ ಬಂದಲ್ಲಿ, ಅಕ್ಕಿಯ ಅಭಾವವು ಸ್ವಲ್ಪ ಕಡಮೆಯಾಗುವುದು. ಅದಕ್ಕೆ ಯಾವ ರೀತಿಯಾದ ಕಾರ್ಯಕ್ರಮವನ್ನು ಕೇಂದ್ರ, ಪ್ರಾಂತ್ಯ ಸರ್ಕಾರಗಳು ತೆಗೆದುಕೊಳ್ಳಬೇಕೆಂದು ಕೂಡಲೇ ಪರಿಶೀಲಿಸಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಈ ಕೃತಕ ಅಕ್ಕಿಯು ಮಾರಾಟಕ್ಕೆ ಬರುವಂತೆ ಮಾಡುವುದು ಉತ್ತಮ. ಇದಕ್ಕೆ ಪ್ರಜೆಗಳ ಸಹಕಾರ ದೊರೆಯುವುದರಲ್ಲಿ ಸಂದೇಹವಿಲ್ಲ

ಹೆಚ್ಚು ಆಹಾರಬೆಳೆಯ ಯೋಜನೆಯಲ್ಲಿ ಈ ನೂತನ ಯೋಜನೆಯನ್ನೂ ಸೇರಿಸಿಕೊಂಡು ಡಾ|| ಸುಬ್ರಹ್ಮಣ್ಯಂರವರ ಸಹಕಾರದಿಂದ ಕಾರ್ಯತತ್ಪರರಾಗುವುದು ಪ್ರಥಮ ಕರ್ತವ್ಯವಾಗಿರುತ್ತದೆ

ಆಹಾರಪರಿಸ್ಥಿತಿ ಉತ್ಕಟವಾಗುತ್ತಲಿದೆ

ಎಷ್ಟೇ ಕಷ್ಟಪಟ್ಟು ಪ್ರಯತ್ನ ನಡೆಸಿದರೂ ಪ್ರಾಂತ್ಯದಲ್ಲಿ ಆಹಾರ-ಪರಿಸ್ಥಿತಿ ದಿನದಿನಕ್ಕೆ ಹೆಚ್ಚು ಜಟಿಲವಾಗುತ್ತಲಿದೆಯೆಂದು ಮದರಾಸ್ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿರಾಜಾ ಹೇಳಿರುವರು

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಜಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧಮಾಡಿದಂತೆ **೧೮ನೇ ಯಾತ್ರೆಯ** ಟೂರಿಸ್ಟ ರೈಲ್ವೆ ಟಿಕೀಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆ ಟಿಕೀಟುಗಳನ್ನು ಪಡೆದ ಯಾತ್ರಿಕರು ತಾ|| ೧೭-೩-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ, ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೂ ದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳ ಮಹಾಶಿವರಾತ್ರಿ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಡಾಸಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ ಮಾಡಿರುತ್ತದೆ

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವೇಷನ್‌ದ ಹೊರಟು ೨೭-೨-೫೧ನೇ ದಿವಸ ಒಳ್ಳೆ ಸೌಕರ್ಯವುಳ್ಳ ಸ್ಪೆಷಲ್ ಬೋಗಿಗಳಲ್ಲಿ ಪುಣೆಯಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧೪-೫-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು.

ಹೆಚ್ಚಿನ ತರಗತಿಯು ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವಮಾಡಲಾಗುವುದು. ಮುಸ್ತಿ ಅರ್ಜಿ ಬಂದಾಗ ಟಿಕೀಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ ಟಿಕೇಟು ಲಗತ್ತಿಸಿ ಕಳಿಸಿರಿ ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟು)
ಕುಡಚಿ-ಮಾರ್ಗ. ಎಂ. ಎಸ್ ಎಂ. ರೈಲ್ವೆ.

ಸೂ ಹೆಚ್ಚಿನ ಮಾಹಿತಿ ಸಲುವಾಗಿ ಮಿ|| ರಾ|| ಪಿ ಟಿ. ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ

ಮೈಸೂರು ಸಿಟಿ ಮುನಿಸಿಪಾಲಿಟಿ

ತಾ|| 12—2—51

ಪ್ರಕಟಣೆ

ಅಂಗಡಿ ಕಂದಾಯ

ಸಿಟಿ ಮುನಿಸಿಪಾಲಿಟಿಗಳ ಆಕ್ಟು ೮೩ನೇ ಸೆಕ್ಷನ್ 12ನೇ ಕಲಂ ಅಂಶಗಳಿಗೊಳಪಟ್ಟು ನಗರದಲ್ಲಿನ ಅಂಗಡಿಗಳ ಮೇಲೂ, ಇತರೆ ವ್ಯಾಪಾರಸ್ಥರು ಮಾಡುವ ಸ್ಥಳಗಳ ಮೇಲೂ "ಅಂಗಡಿ ಕಂದಾಯ" ದಾಖಲ್ ಮಾಡುವ ಬಗ್ಗೆ ಪೌರಸಭೆಯವರು ತಯಾರಿಸಿರುವ ನಿಯಮಾವಳಿಯು 26ನೇ ಜನವರಿ 1951ನೇ ತಾ|| ಮೈಸೂರು ಗೆಜೆಟ್ ಪಾರ್ಟ 3 ರಲ್ಲಿ (ಇಂಗ್ಲೀಷಿನಲ್ಲಿ) ಪ್ರಕಟವಾಗಿದೆ. ಸದರಿ ನಿಯಮಾವಳಿಯನ್ನು ಮುನಿಸಿಪಲ್ ಆಫೀಸಿನ ನೋಟೀಸು ಬೋರ್ಡಿನಲ್ಲೂ ಸಹ ಪ್ರಕಟಿಸಲಾಗಿದೆ.

ಸದರಿ ನಿಯಮಾವಳಿಗಳ ವಿಚಾರದಲ್ಲಿ ಏನಾದರೂ ತಕರಾರು ಇದ್ದಲ್ಲಿ ಆ ಬಗ್ಗೆ ಪ್ರಕಟಣೆಯ ತಾರೀಖಿನಿಂದ ಒಂದು ತಿಂಗಳೊಳಗಾಗಿ ಮುನಿಸಿಪಲ್ ಆಫೀಸಿಗೆ ಲಿಖಿತಮೂಲಕ ತಿಳಿಸತಕ್ಕದ್ದು.

(ಸಹಿ) ಸಿ. ನರಸಿಂಹಮೂರ್ತಿ,
ಮುನಿಸಿಪಲ್ ಕಮೀಷನರ್.

ಪ್ರಭಾ * ಅಮೋಘ ಪ್ರಾರಂಭ

೧೬-೨-೧೯೫೧ ರಿಂದ

ದಿನವಹಿ ೩ ಆಟಗಳು

ಮನರಂಜನೆಯ ಚಿತ್ರದ ಮಹೋತ್ಸವ — ಸಂಗೀತ ಮತ್ತು ನೃತ್ಯಗಳಿಂದ ಕೂಡಿದ

ಕುಲದೀಪ್‌ರವರ— * ಷಾನ್ * SHAAN [ಹಿಂದಿ]

ಕೀರ್ತಿ

ಪಾತ್ರ:— †† ಸುರೈಯ್ಯಾ †† ರೆಹಮಾನ್ †† ಮನೋರಮ †† ಡೇವಿಡ್ †† ನಿಪ್ಪು.

ದಿಗ್ದರ್ಶಕರು—ಜಯಂತ್ ದೇಶಾಯ್

ಮೈಸೂರಿನಲ್ಲಿ ನ್ಯಾಯಾಂಗ ಬೇರ್ಪಡುವುದು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೨—೧೯೫೧ನೇ ಸೋಮವಾರ [ಸಂಚಿಕೆ ೧೪೧

ಹಾಲು ಸರಬರಾಜು ಕೇಂದ್ರ

ಬೊಂಬಾಯಿನಲ್ಲಿರುವಂತೆ ಹಾಲು ತಯಾರಿಕೆ ಮತ್ತು ಸರಬರಾಜು ಕೇಂದ್ರವನ್ನು ಮೈಸೂರು ಸಂಸ್ಥಾನದಲ್ಲಿ ಸಹ ಸ್ಥಾಪಿಸಿ ನಡೆಸುವುದು ಸೂಕ್ತವಾಗಿದೆ. ಬೊಂಬಾಯಿನ ಏರ್ಪಾಡು ಚೆನ್ನಾಗಿದೆ ಎಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುವರು.

ಶಾಂತಿಯೇ ರಷ್ಯ ಧ್ಯೇಯ

ಯುದ್ಧ ಅನಿವಾರ್ಯವೆಂದು ಸದ್ಯಕ್ಕೆ ಭಾವಿಸಲು ಸಾಧ್ಯವಿಲ್ಲ. ಆದರೆ ಯುದ್ಧಾಸಕ್ತರು ಜನರನ್ನು ವಂಚಿಸಿ, ಸುಳ್ಳುಹೇಳಿ ಯುದ್ಧಕೆಳೆದರೆ ಆಗ ಯುದ್ಧ ಅನಿವಾರ್ಯವಾಗುವುದೆಂದು ಮಾರ್ಷಲ್ ಸ್ಟಾಲಿನ್‌ರು ಮಾಸ್ಕೋದಲ್ಲಿ ತಿಳಿಸಿರುವರು.

ಹೊಸದೊಂದು ಜಗತ್ತಿನ ಯುದ್ಧವನ್ನಾರಂಭಿಸಲು ಪ್ರಪಂಚ ಸಂಸ್ಥೆ ಈಗ ಒಂದು ಸಾಧನವಾಗಿ ಪರಿಣಮಿಸಿದೆ ಅದು ನಿಜವಾದ ಪ್ರಪಂಚಸಂಸ್ಥೆಯಲ್ಲ ಅಮೆರಿಕಾಕ್ಕಾಗಿ ಕೆಲಸ ಮಾಡುತ್ತಿರುವ ಅಮೆರಿಕನ್ ಸಂಸ್ಥೆ ಚೀಣದ ಶಾಂತಿ ಸಲಹೆಯನ್ನು ಅಮೆರಿಕ ಬ್ರಿಟನ್ ನಿರಾಕರಿಸಿದ್ದೇ ಆದರೆ ಕೊರಿಯದಲ್ಲಿ ಮಧ್ಯೆ ಪ್ರವೇಶಿಸುವವರಿಗೆ ಪೂರ್ಣ ಸೋಲು ಎಂದು ಹೇಳಿರುವರು.

ನಿಶ್ಶಸ್ತ್ರೀಕರಣ ಕಾರ್ಯದ ವಿಚಾರವಾಗಿ ಬ್ರಿಟಿಷ್ ಪ್ರಧಾನ ಮಂತ್ರಿ ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಕೊಟ್ಟ ಹೇಳಿಕೆಯನು ಅವರು ಖಂಡಿಸಿದ್ದಾರೆ.

ಆತ್ಮಹತ್ಯೆ

ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರ ಮನೆಯಲ್ಲಿದ್ದ ಅಡಿಗೆಯವನು ಆತ್ಮಹತ್ಯ ಮಾಡಿಕೊಂಡು ಸತ್ತನೆಂದು ವರದಿಯಾಗಿದೆ.

ಗ್ರಾಮದ ಎಲ್ಲಾ ಜನರ ದಸ್ತಗಿರಿ

ಮಲೆಯಾದಲ್ಲಿ ಕಾಲಾಲಾಂಪುರಕ್ಕೆ ೧೭ ಮೈಲಿಯಲ್ಲಿರುವ ಜುಧಿರಾಂ ಎಂಬ ಗ್ರಾಮದಲ್ಲಿ ವಾಸಿಸುತ್ತಲಿದ್ದ ೧೫೦೦ ಜನರನ್ನೆಲ್ಲಾ ದಸ್ತಗಿರಿ ಮಾಡಿದ್ದಾರೆ. ಅದರಲ್ಲಿ ಚೀಣಿ, ಮಲಯ, ಇಂಡೊನೇಷಿಯಾದ ಗಂಡಸರು, ಹೆಂಗಸರು ಮತ್ತು ಮಕ್ಕಳು ಇರುವರು. ಇವರನ್ನು ದಸ್ತಗಿರಿ ಮಾಡಲು ಬ್ರಿಟಿಷ್, ಘೂರ್ಕಾ ಮತ್ತು ಮಲೆಯಾದ ಪೋಲೀಸ್ ಮತ್ತು ಮಿಲಿಟರಿಯ ೧೦೦೦ ಜನರು ಉದ್ಯುಕ್ತರಾಗಿದ್ದರು. ದೇಶದ ರಕ್ಷಣೆಗಾಗಿ ಇವರನ್ನು ದಸ್ತಗಿರಿ ಮಾಡಲಾಗಿದೆಯೆಂದು ಹೇಳಲಾಗಿದೆ. ಆ ಗ್ರಾಮದಲ್ಲಿರುವ ಮನೆಗಳನ್ನೆಲ್ಲಾ ನಿರ್ಮೂಲಮಾಡುವರೆಂದು ತಿಳಿಯಬರುತ್ತದೆ.

ಶಂಕರಶೆಟ್ಟಿ ಆಸ್ಪತ್ರೆ ಶಂಕುಸ್ಥಾಪನೆ

೫೦ ಸಹಸ್ರ ರೂಗಳ ಉದಾರದಾನ

ಮೈಸೂರು ಫೆ. ೧೯

ನಮ್ಮ ಸಂಸ್ಥಾನದಲ್ಲಿ ವೈದ್ಯಕೀಯ ಸೌಲಭ್ಯಗಳಿವೆ. ಆದರೆ ಅವು ಸಾಕೆಂದು ಸುಮ್ಮನೆ ಕೂಡುವ ಹಾಗಿಲ್ಲ. ಇನ್ನೂ ಸೌಲಭ್ಯಗಳನ್ನು ಮುಂದುವರಿಸಬೇಕಾಗಿದೆ ಇದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ ಸರ್ಕಾರ ಸ್ಥಳೀಯ ಸಂಸ್ಥೆಗಳು ಮತ್ತು ಶ್ರೀ ಶಂಕರಶೆಟ್ಟರಂಥ ದಾನಿಗಳ ಸಂಯುಕ್ತ ಸಹಕಾರದಿಂದ ಮಾತ್ರ ಸಾಧ್ಯ. ಅನೇಕ ವರ್ಷಗಳಿಂದ ನಮ್ಮ ಸಂಸ್ಥಾನದ ಜನರಲ್ಲಿ ತಾವು ಕಷ್ಟಪಟ್ಟು ಆರ್ಜಿಸಿದ ದ್ರವ್ಯದಲ್ಲಿ ಸ್ವಲ್ಪ ಭಾಗವನ್ನು ದಾನ ಧರ್ಮಗಳ ಮೂಲಕ ಜನಸೇವೆಗಾಗಿ ಉಪಯೋಗಿಸುವ ಸದ್ಗುಣವಿದೆಯೆಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಶಂಕರಶೆಟ್ಟಿ ಸಂಯುಕ್ತ ಆಸ್ಪತ್ರೆಯ ಶಂಕುಸ್ಥಾಪನ ಮಾಡುತ್ತಾ ತಿಳಿಸಿದರು.

ಮೈಸೂರು ನಗರ ಒಂಟಿಕೊಪ್ಪಲು ಬಡಾವಣೆಯಲ್ಲಿ ಒಂದು ಸಂಯುಕ್ತ ಆಸ್ಪತ್ರೆಯನ್ನು ಕಟ್ಟಲು ಮೈಸೂರಿನ ಪ್ರಮುಖ ಸರಾಫು ಮತ್ತು ಜವಳಿ ವ್ಯಾಪಾರಿಗಳಾದ ಶ್ರೀ ಎ. ಶಂಕರಶೆಟ್ಟಿಯವರು ಉದಾರ ದಾನ ಮಾಡಿರುವ ೫೦೦೦೦ ರೂಪಾಯಿಗಳ ವೆಚ್ಚದಿಂದ ನಗರ ಪೌರಸಭೆಯವರು ಒಂದು ಆಸ್ಪತ್ರೆಯನ್ನು ಕಟ್ಟಲು ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಲು ನಗರ ಪೌರಸಭೆಯ ಅಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಮುಖ್ಯಮಂತ್ರಿಗಳನ್ನು ಕೋರುತ್ತ ನಗರದಲ್ಲಿರುವ ವೈದ್ಯಕೀಯ ಸೌಕರ್ಯಗಳನ್ನು ವಿವರಿಸಿ ಶ್ರೀ ಶಂಕರಶೆಟ್ಟರಂತಹ ದಾನಿಗಳ ಸಹಾಯದಿಂದ ಇನ್ನು ಹೆಚ್ಚಿಗೆ ಸೌಕರ್ಯ ಒದಗಿಸಲು ಸಾಧ್ಯವೆಂದು ತಿಳಿಸಿದರು.

ಮುಖ್ಯ ಮಂತ್ರಿಗಳು ತಮ್ಮ ಭಾಷಣವನ್ನು ಮುಂದುವರಿಯುತ್ತಾ ಬಡ ಬಾಲಿಗಳನ್ನು ಮನ್ನಾ ಮಾಡಬೇಕೆಂಬ ಸಲಹೆಗೆ ಕೆಲವರು ತಪ್ಪಾಭಿಪ್ರಾಯವನ್ನು ಕಲ್ಪಿಸಿದ್ದರು ಉದಾರ ದಾನಿಗಳು ಆತ್ಮ ಸಂತೋಷದಿಂದ ಜನ ಸೇವಾ ಮನೋಭಾವದಿಂದ ದಾನ ಧರ್ಮಗಳನ್ನು ಮಾಡುತ್ತಿದ್ದಾರೇ ಹೊರತು ಬರಿದು ಬಾನಲಿಗಳಿಲ್ಲ ಎಂಬುದು ಶ್ರೀ ಶಂಕರಶೆಟ್ಟರ ದಾನದಿಂದ ಜನರು ತಿಳಿದುಕೊಳ್ಳಬಹುದಾಗಿದೆ.

ಇಂದಿನ ಸರ್ಕಾರದ ಹಣಕಾಸಿನ ಸ್ಥಿತಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಸರ್ಕಾರವು ಕಲ್ಪಿಸುವುದು ಕಷ್ಟ. ಶಕ್ತಿ . . . ಸೌಲಭ್ಯ ಕಲ್ಪಿಸಲಾಗುತ್ತಲಿದೆ. ಇನ್ನೂ ಹೆಚ್ಚಿಗೆ ಸೌಲಭ್ಯಗಳು ಬೇಕಾದಲ್ಲಿ ತೆರಿಗೆ ಹೆಚ್ಚಿಸಬೇಕು ಇಲ್ಲವೆ ಖಾಸಗಿ ಜನರು ಮತ್ತು ಸಂಸ್ಥೆಗಳು ಮುನ್ನುಗ್ಗಿ ಪ್ರಗತಿ ಕಾರ್ಯಕ್ಕೆ ನೆರವಾಗಬೇಕು ಈ ಎರಡು ಮಾರ್ಗಗಳೂ ಸೂಕ್ತವಾದವು ಎಂದು ಹೇಳಿದರು.

ಶಂಕುಸ್ಥಾಪನೆಯಾದನಂತರ ಬೆಳ್ಳಿಯ ಕರಣೆಯನ್ನು ಹರಾಜು ಹಾಕಲಾಯಿತು. ಶ್ರೀ ಶಂಕರಶೆಟ್ಟರ ಮೊಮ್ಮಕ್ಕಳು ಅದನ್ನು ೫೦೧ ರೂಪಾಯಿಗಳಿಗೆ ತೆಗೆದುಕೊಂಡರು.

ತುಮಕೂರಿನಲ್ಲಿ ಮುಖ್ಯ ಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಇಂದು ತುಮಕೂರಿನಲ್ಲಿ ಮಾತನಾಡುತ್ತಾ ಮೈಸೂರು ಸಂಸ್ಥಾನದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗವನ್ನು ಬೇರ್ಪಡಿಸಿ ಕೂಡಲೇ ಇದನ್ನು ಕಾರ್ಯರೂಪಕ್ಕೆ ತರಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತಲಿದೆಯೆಂದು ಹೇಳಿದರು.

'ಮೈಸೂರು ಪ್ರಭಾ' ಪ್ರಾರಂಭೋತ್ಸವ

ಮೈಸೂರು ಫೆ. ೧೭

ಮೈಸೂರು ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಇಂದು ಮೈಸೂರು ಪ್ರಭಾ ದಿನಪತ್ರಿಕೆಯ ಪ್ರಾರಂಭೋತ್ಸವವನ್ನು ನಡೆಸುತ್ತಾ ಪ್ರಜಾಪ್ರಭುತ್ವ ಸ್ಥಾಪನೆಯ ಕಾಲದಲ್ಲಿ ಪತ್ರಿಕೆಗಳು ವಿಶೇಷ ಪಾತ್ರವನ್ನು ವಹಿಸಬೇಕಾಗಿದೆ. ನಿರ್ದಾಕ್ಷಿಣ್ಯವಾಗಿ, ಸತ್ಯವಾಗಿ ಬರೆಯುವ ಪತ್ರಿಕೆಗಳು ಯಾವಾಗಲೂ ಉನ್ನತಸ್ಥಿತಿಗೆ ಬಂದು ಎಲ್ಲರ ಮನ್ನಣೆ ದೊರೆಯುವುದರಲ್ಲಿ ಸಂದೇಹವಿಲ್ಲವೆಂದು ನುಡಿದರು.

ಕೊಡಗಿಗೆ ಮೈಸೂರು ವಿದ್ಯುಚ್ಛಕ್ತಿ

ಕೊಡಗಿಗೆ ಮೈಸೂರಿಂದ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲು ಸರ್ಕಾರ ಒಪ್ಪಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು ೧೭ ಲಕ್ಷ ರೂಗಳ ವೆಚ್ಚವನ್ನು ವಹಿಸಿಕೊಳ್ಳುವುದು.

ಹೆಚ್ಚಿನ ಅಧಿಕಾರ

ಸರ್ಕಾರ ಕೆಲಸಗಳು ಇನ್ನೂ ದಕ್ಷತೆಯಾಗಿ ನಡೆಯಲು ಸರ್ಕಾರದ ನಾನಾ ಇಲಾಖೆಯ ಮುಖ್ಯಾಧಿಕಾರಿ ಮತ್ತು ಕಾರ್ಯದರ್ಶಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕೆಂಬ ವಿಷಯವು ಸರ್ಕಾರವು ಸದ್ಯದಲ್ಲೇ ಪರಿಶೀಲಿಸಲಿದೆ.

ಇರಾನ್ ರಾಯಭಾರಿ ಕೃಷ್ಣರಾಜಸಾಗರಕ್ಕೆ

ಮೈಸೂರು ಫೆ. ೧೮

ಭಾರತದಲ್ಲಿರುವ ಇರಾನ್ ರಾಯಭಾರಿ ಮಿ|| ನಾಸರ್ ಎಸ್‌ಫಿರ್‌ದಿಯಾರಿಯವರು ನಿನ್ನೆ ಸಂಜೆ ನಿವೃತ್ತ ದಿವಾನ್ ಸರ್ ಮಿ. ಜಾರ್ ಇಸ್ಮಾಯಿಲ್‌ರೊಡನೆ ಕೃಷ್ಣರಾಜಸಾಗರಕ್ಕೆ ಆಗಮಿಸಿ ಇಂದು ಬೆಳಗ್ಗೆ ಬೆಂಗಳೂರಿಗೆ ಹಿಂತಿರುಗಿದರು.

ಕೃಷ್ಣರಾಜಸಾಗರ ಎಗ್ಜಿಕ್ಯುಟಿವ್ ಇಂಜನಿಯರು ಸರ್ ಮಿರ್ಜಾರವರನ್ನು ಭೇಟಿಮಾಡಿದಾಗ ಕೃಷ್ಣರಾಜಸಾಗರವನ್ನು ಇನ್ನೂ ಆಕರ್ಷಣೀಯವಾಗಿ ಮಾಡಲು ಕೆಲವು ಬದಲಾವಣೆಗಳ ವಿಷಯದಲ್ಲಿ ಸಲಹೆಯಿತ್ತರೆಂದು ತಿಳಿಯಬರುತ್ತದೆ.

ನೇಪಾಳದಲ್ಲಿ ಪ್ರಜಾ ಸರ್ಕಾರ

ನೂತನ ರಾಜ್ಯಾಂಗದ ರಾಜ ಘೋಷಣೆಯು ನಿನ್ನೆ ನೇಪಾಳದಲ್ಲಿ ಆದೊಡನೆಯೇ ನೂತನ ೧೦ ಜನ ಮಂತ್ರಿಗಳು ಅಧಿಕಾರ ಸ್ವೀಕರಿಸಿದರು. ರಾಣಾ ಪಂಗಡಕ್ಕೆ ಸೇರಿದ ೫ ಜನರು ಮತ್ತು ನೇಪಾಳ ಕಾಂಗ್ರೆಸ್ಸಿಗೆ ಸೇರಿದ ೫ ಜನರು ಈ ನೂತನ ಮಂತ್ರಿ ಮಂಡಲದಲ್ಲಿರುವರು. ಈ ಮಂತ್ರಿ ಮಂಡಲವು ಒಟ್ಟಾಗಿ ಅರಸರಿಗೆ ಜವಾಬ್ದಾರಿ ಮತ್ತು ಮಂತ್ರಿಗಳನ್ನು ಅರಸರು ಬೇಕಾದಾಗ ತೆಗೆದುಹಾಕಬಹುದು. ಈ ಘೋಷಣೆಯ ಪ್ರಕಾರ ಎಲ್ಲಾ ರಾಜಕೀಯ ಬಂದಿಗಳ ಬಿಡುಗಡೆಯಾಗಿದೆ. ರಾಜ್ಯಾದಡಳಿತ ಮುಖ್ಯವಾದ ಹಣಕಾಸು ಕೈಗಾರಿಕೆ, ವ್ಯಾಪಾರ, ಆಹಾರ, ವ್ಯವಸಾಯ ಒಳಾಡಳಿತ ಶಾಖೆಗಳು ಕಾಂಗ್ರೆಸ್ ಪಕ್ಷದ ಸಚಿವರಿಗೆ ವಹಿಸಲಾಗಿದೆ. ಮುಖ್ಯ ಮಂತ್ರಿಗಳಾದ ಮೋಹನಶಂಷೇರ್ ಜಂಗ್‌ರವರಿಗೆ ವಿದೇಶಾಂಗ ಶಾಖೆ ಮಾತ್ರ ಸೇರಿವೆ.

ಶ್ರೀ ಕಾಶಿ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧ ಮಾಡಿದಂತೆ **೧೮ನೇ ಯಾತ್ರೆಯ** ಟೂರಿಸ್ಟ ರೈಲ್ವೆ ಟಕೀಟು ಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆಟಕೀಟು ಗಳನ್ನು ಪಡೆದ ಯಾತ್ರಿಕರು ತಾ|| ೧೧-೩-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇ ಕಾಗಿ ಕೋರಿದೆ.



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಧುರಾ, ಆಗ್ರಾ, ಉಜ್ಜಯಿನಿ, ಮುಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೂದಿವ್ಯ ಜ್ಯೋತಿ ರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಡಾಸಗಳು, ನಲ್ಲಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ್ ಮಾಡಿರುತ್ತದೆ

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨-೫೧ನೇ ದಿವಸ ಒಳ್ಳೆ ಕಂಪಾರ್ಟ್‌ಮೆಂಟ್ ಸ್ಪೆಷಲ್ ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥಯಾತ್ರೆಗಳನ್ನು ಮಾಡಿಕೊಂಡು ೧-೪-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು

ಹೆಚ್ಚಿನ ತರಗತಿಯು ೩ ನೇ ವರ್ಗ ರೈಲ್ವೆ ಚಾರ್ಜು ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ ಯಂತೆ ಅಡ್ವಾನ್ಸ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವ್ ಮಾಡಲಾಗುವುದು. ಮುಸ್ತಿ ಅದಲ್ಲಿ ಖಂಡಿತ ವಾಗಿ ಟಕೀಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ಟಿಕೇಟು ಲಗತ್ತಿಸಿ ಕಳಿಸಿರಿ ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟು)
ಕುಡಚಿ-ಮಾರ್ಗ. ಎಂ. ಎಸ್ ಎಂ ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ|| ಪಿ. ಟಿ. ಮಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ

ಮಹದೇಶ್ವರನ ಜಾತ್ರೆಗೆ ಹೋಗಬೇಡಿ

ಬೆಂಗಳೂರು ಫೆ, ೧೭

ಆರೋಗ್ಯ ಇಲಾಖೆಯವರು ಈ ರೀತಿ ಬರೆಯುತ್ತಾರೆ.—

ಮಹದೇಶ್ವರನ ಜಾತ್ರೆಯು ಮಾರ್ಚಿ ೭ನೇ ತಾರೀಖಿನಿಂದ ಪ್ರಾರಂಭವಾಗಲಿದೆ ಈಗಾಗಲೇ ಅಲ್ಲಿಗೆ ಸಮೀಪದ ಚಿಕ್ಕಲ್ಲೂರು ಜಾತ್ರೆಯ ಪ್ರಭಾವದಿಂದ ಮೈಸೂರು ಸಂಸ್ಥಾನದ-ಗಡಿಯಲ್ಲಿರುವ ಕಾನಕಾನಹಳ್ಳಿ, ಮಳವಳ್ಳಿ, ಟಿ-ನರಸೀಪುರದ ತಾಲ್ಲೂಕುಗಳಲ್ಲಿ ಕಾಲರಾ ಉಪದ್ರವವು ಕಾಣಿಸಿಕೊಂಡು ಕಾಡ್ಗಿಚ್ಚಿನಂತೆ-ನೂರಾರು ಜನರ ಪ್ರಾಣಗಳನ್ನು ಆಹುತಿ ತೆಗೆದುಕೊಂಡಿದೆ ಮತ್ತು ಇನ್ನೂ ತೆಗೆದುಕೊಳ್ಳಲಿದೆ ಅದರ ಪ್ರಳಯ ಸ್ವರೂಪವನ್ನು ದಮನ ಮಾಡಲು ಜನಾರೋಗ್ಯ ಇಲಾಖೆಯವರು ಸರ್ವ ಸಾಹಸವನ್ನೂ ಮಾಡುತ್ತಲಿದ್ದಾರೆ, ಹೀಗಿರುವಾಗ ಮಹದೇಶ್ವರನ ಜಾತ್ರೆಯು ಉಪದ್ರವದ ಹರಡುವಿಕೆಯನ್ನು ಮತ್ತಷ್ಟು ಹೆಚ್ಚಿಸುವುದೆಂದು ಜನರು ಭಯಭ್ರಾಂತರಾಗಿದ್ದಾರೆ. ಹೋದ ವರ್ಷ ಮಹದೇಶ್ವರನ ಜಾತ್ರೆಯ ಫಲವಾಗಿ ಕಾಲರಾ ಉಪದ್ರವದಿಂದ ಎಷ್ಟು ಜನರು ಬಲಿಯಾದರೆಂಬುದನ್ನು ಜ್ಞಾಪಿಸಿಕೊಂಡರೆ ಭಯದಿಂದ ಮೈ ಜುಂ ಮೆನ್ನುವುದು.

ಆದ್ದರಿಂದ ಈ ವರ್ಷದ ಮಹದೇಶ್ವರನ ಜಾತ್ರೆಗೆ ಮೈಸೂರು ಸಂಸ್ಥಾನದಿಂದ ಯಾರೂ ಹೋಗಬಾರದೆಂದು ಈ ಮೂಲಕ ಪ್ರಾರ್ಥಿಸಲಾಗಿದೆ, ಹರಕೆ ಹನ್ನೆರಡು ವರ್ಷ ಎಂಬ ನಾಣ್ಣುಡಿಗನುಸಾರವಾಗಿ ದೇವರ ಸೇವೆಯನ್ನು ಖುದ್ದು ಮಾಡಬೇಕೆಂದಿರುವವರು ಪರಿಸ್ಥಿತಿಯು ತೃಪ್ತಿಕರವಾಗಿದ್ದರೆ ಮುಂದಿನ ವರ್ಷ ಸಲ್ಲಿಸಬಹುದು,

ಹಾಗೂ ಒಂದುವೇಳೆ ಯಾರಾದರೂ ಬ್ಬರು ಹೋಗಲೇಬೇಕಾದ ಅನಿವಾರ್ಯವಿದ್ದರೆ ಅಂಥವರು ಸಂಸ್ಥಾನದ ಗಡಿಯ ನಾನಾ ಸ್ಥಳಗಳಲ್ಲಿ ಜನಾರೋಗ್ಯ ಇಲಾಖೆಯವರಿಂದ ಇನಾಕ್ಯುಲೇಷನ್ ಮೂಲಕ ಕಾಲರ ಸೂಂಕು ತಗಲದಂತೆ ರಕ್ಷಣೆ ಪಡೆದುಕೊಂಡು ಆಬಗ್ಗೆ ಸರ್ಟಿಫಿಕೇಟ್ ಪಡೆಯಬೇಕು ಹಾಗೆ ಸರ್ಟಿಫಿಕೇಟ್ ಪಡೆಯದಿದ್ದವರನ್ನು ನಿರ್ದಿಷ್ಟ ಕಾಲದವರೆಗೆ ಸಂಸ್ಥಾನದ ಗಡಿಯೊಳಕ್ಕೆ ಸೇರಿಸಲಾಗುವುದಿಲ್ಲ. ಈ ಬಗ್ಗೆ ಬೇಕಾದ ಎಲ್ಲಾ ವೈದ್ಯಕೀಯ ಸಹಾಯವನ್ನೂ ಪೋಲೀಸ್ ಬಂದೋಬಸ್ತಿನ ಏರ್ಪಾಡನ್ನೂ ಮಾಡಲಾಗಿದೆ.

ಹೇಳ್ಕಿದಂತೆ ರಕ್ಷಣೆಪಡೆದು ಜಾತ್ರೆಗೆ ಹೋದವರೂ ಕೂಡ ತಮ್ಮ ತಿಂಡಿತೀರ್ಥಗಳ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು ಸಿಕ್ಕಿದ ಪದಾರ್ಥಗಳನ್ನೆಲ್ಲಾ ತಿನ್ನಬಾರದು ನೀರನ್ನು ಕಾಯಿಸಿ ಕುಡಿಯಬೇಕು. ತಿಂಡಿ-ಪದಾರ್ಥಗಳ ಮೇಲೆ ನೊಣಗಳು ಕುಳಿತುಕೊಳ್ಳದಂತೆ ನೋಡಿಕೊಳ್ಳಬೇಕು, ಹೇಗಿದ್ದರೂ ಸಾಧ್ಯವಾದ ಮಟ್ಟಿಗೂ ಈ ವರ್ಷ ಯಾರೂ ಜಾತ್ರೆಗೆ ಹೋಗದೆ ಇರುವುದೇ ಒಳ್ಳೆಯದೆಂದು ಪ್ರಾರ್ಥಿಸಲಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ಪ್ರಶಸ್ತಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಬರುವ ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿಯಿತ್ತು ಮೂರು ದಿನಗಳು ಇರುವರೆಂದೂ, ಆಗ ವಿಶ್ವವಿದ್ಯಾನಿಲಯದವರು ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಡಲು ಒಂದು ವಿಶೇಷ ಘಟಿಕೋತ್ಸವವನ್ನು ಏರ್ಪಡಿಸಲಾಗುವುದೆಂದೂ ತಿಳಿದುಬಂದಿದೆ.

ಭಾರತದ ಉಪಸಚಿವ ಖುರ್ಷಿದ್ ಲಾಲರ ನಿಧನ

ಭಾರತದ ಸರ್ಕಾರದ ಮಾರ್ಗಾಸಂಪರ್ಕ ಇಲಾಖೆಯ ಉಪಸಚಿವರಾಗಿದ್ದ ಶ್ರೀ ಖುರ್ಷಿದ್‌ಲಾಲರು ನಿನ್ನೆ ಬೆಳಿಗ್ಗೆ ೭ ಗಂಟೆ ಸಮಯದಲ್ಲಿ ಹೃದಯ ಕ್ರಿಯೆನಿಂತು ನಿಧನರಾದರೆಂಬ ವಿಷಾದ ವಾರ್ತೆ ಬಂದಿರುತ್ತದೆ.

ವಾರ್ಷಿಕೋತ್ಸವ.

ರಾಜಧಾನಿಯ ಸೊಪ್ಪಿನ ಕೊಳದ ಬೀದಿಯಲ್ಲಿರುವ ಫ್ರೆಂಡ್ಸ್ ಅಸೋಸಿಯೇಷನ್ನಿನ ವಾರ್ಷಿಕೋತ್ಸವವನ್ನು ಶ್ರೀ ಚಾಮುಂಡೇಶ್ವರಿ ಉಪಹಾರ ಭವನದಲ್ಲಿ ನೆರವೇರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ.ಎಂ. ಎಲ್. ನರಸಿಂಹನ್‌ರವರು ಮಹಾರಾಜ ಕಾಲೇಜಿನ ಸಂಸ್ಕೃತ ಉಪ ಪ್ರಧ್ಯಾಪಕರಾದ ಶ್ರೀ ಎ. ಟಿ. ತಿರು ನಾರಾಯಣ ಅಯ್ಯಂಗಾರ್ರವರನ್ನು ಅಧ್ಯಕ್ಷ ಸ್ಥಾನಕ್ಕೆ ಸ್ವಾಗತಿಸಿದರು ಅಧ್ಯಕ್ಷರು ಸಂಘದವರಿಗೆ ಬಹಳ ಸ್ವಾರಸ್ಯವಾಗಿ ಕೆಲವು ಹಿತವಚನಗಳನ್ನು ನುಡಿದು ಸಂಘದ ಶ್ರೇಯೋಭಿವೃದ್ಧಿಯನ್ನು ಕೋರಿದರು.

ಮಂತ್ರಿ ಸ್ಥಾನ ಖಾಲಿಯಿಲ್ಲ

ಶ್ರೀ ಟಿ. ಸಿದ್ದಲಿಂಗಯ್ಯನವರು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟಿರುವುದರಿಂದ ಖಾಲಿ ಬಿದ್ದಿರುವ ಸ್ಥಾನಕ್ಕೆ ಭರ್ತಿ ಮಾಡುವುದಿಲ್ಲವೇ ಎಂಬ ಪ್ರಶ್ನೆಗೆ ಮಂಡಲದಲ್ಲಿ ಮಂತ್ರಿ ಸ್ಥಾನ ಖಾಲಿಯಿಲ್ಲ ಮಂತ್ರಿಗಳ ಸಂಖ್ಯೆ ನಿಗದಿಯಾಗಿಲ್ಲವೆಂದು ಮುಖ್ಯ ಮಂತ್ರಿಗಳು ತಿಳಿಸಿರುವರು.

ರಣಜಿತ್

16—2—51ರಿಂದ ಅಮೋಘ 2ನೇ ವಾರ
ಪ್ರತಿದಿನ 3 ಆಟಗಳು
ಕರ್ದಾರ್ ಮತ್ತು ನೌಷದ್‌ರವರ

ದಾಸ್ತಾನ್

ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್, ವೀಣಾ, ಸುರೇಶ್, ಮುಂತಾದವರು

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಪ್ರಭಾ * ಅಮೋಘ ಪ್ರಾರಂಭ
೧೭-೨-೧೯೫೧ರಿಂದ ದಿನ ೩ ಆಟ
ಮನರಂಜನೆಯೇ ಚಿತ್ರದ ಮಹೋದ್ದೇಶ
ಸಂಗೀತ ಮತ್ತು ನೃತ್ಯಗಳಿಂದ ಕೂಡಿದ

ಕುಲ್‌ದೀಪ್‌ರವರ— * ಷಾನ್ * SHAAN
ಕೀರ್ತಿ [ಹಿಂದಿ]

ಪಾತ್ರ— † ಸುರೈಯ್ಯ † ರೆಹಮಾನ್ † ಮನೋರಮ † ಜೀವನ್ † ಸಪ್ರು
ದಿಗ್ದರ್ಶಕರು—ಜಯಂತ್ ದೇಸಾಯಿ

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦-೨-೧೯೫೧ನೇ ಮಂಗಳವಾರ [ಸಂಚಿಕೆ ೧೪೧

ಶ್ರದ್ಧಾಂಜಲಿ

ಸಂಚಾರ ಶಾಖಾ ಉಪ ಮಂತ್ರಿಗಳಾಗಿದ್ದ ಶ್ರೀ ಖುರ್ಷಿದ್‌ಲಾಲ್‌ರ ಸ್ಮರಣಾರ್ಥವಾಗಿ ನಿನ್ನೆ ಪಾರ್ಲಿಮೆಂಟು ಮಧ್ಯಾಹ್ನ ಎರಡು ಗಂಟೆಯ ವರೆಗೆ ಮುಂದಕ್ಕೆ ಹೋಯಿತು. ಪ್ರಧಾನಿ ನೆಹರೂ, ರಫಿ ಅಹ್ಮದ್‌ಕಿದ್ವಾಯಿಯವರು ದಿವಂಗತರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಕಾಂಗ್ರೆಸ್ ಅಧ್ಯಕ್ಷರ ಗಾಡಿಗೆ ಕಲ್ಲಿನೇಟು

ಕಾಂತಿಹಾರ್ ಪೌರಸಭೆಯವರು ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಾಂಡನ್ನರವರು ಕೊಟ್ಟ ಮಾನಪತ್ರ ಸ್ವೀಕರಿಸಿ ಅಧ್ಯಕ್ಷರು ರೈಲ್ವೆ ನಿಲ್ದಾಣಕ್ಕೆ ಹೊರಟುವಾಗ ಕಮ್ಯೂನಿಸ್ಟರು ಗಲಾಟೆಮಾಡಿ ರೈಲ್ವೆಬೋಗಿಗೆ ಕಲ್ಲುಗಳನ್ನು ಹೊಡೆದರು ೬ ಜನರ ದಸ್ತಗಿರಿಯಾಗಿದೆ.

ಒಂದೇ ದಿನದಲ್ಲಿ ೧೭೦೦ ಮದುವೆ

ಬೊಂಬಾಯಿನಲ್ಲಿ ಕಳೆದ ಶುಕ್ರವಾರ ಒಂದೇ ದಿನದಲ್ಲಿ ೧೭೦೦ ವಿವಾಹಗಳಾದುವು. ಆ ಸಂದರ್ಭದಲ್ಲಿ ೨೦ ಗ್ಯಾಲನ್ ಪನ್ನೀರು, ೮ ಟನ್ ಹೂವು ೮೦೦೦ ಗ್ಯಾಲನ್ ಕುಮಿತವಾದ ಖರ್ಚಾಗಿದೆ.

ಪೌರಸಭೆಯ ಅಧಿವೇಶನ

ಮೈಸೂರು ಫೆ. ೨೦

ಮೈಸೂರು ಪೌರಸಭೆಯ ಮಾಹೆಯಾನ ಅಧಿವೇಶನವು ಇದೇ ಮಾಹೆ ೨೭ನೇ ತಾ|| ಮಂಗಳವಾರ ನಡೆಯಲಿದೆ.

ಶ್ರೀ ಲಿಂಗಯ್ಯನವರು ಆಧಿಕರ್ನಾಟಕ ಪುರದ ಹೆಸರನ್ನು ಜಯಚಾಮರಾಜಪುರವೆಂದು ಬದಲಾಯಿಸಬೇಕೆಂದು, ಶ್ರೀ ಚೌಡಯ್ಯನವರು ಮುನಿಸಿಪಲ್ ಆಕ್ಟನ್ನು ಕೂಡಲೇ ಆಮೂಲಾಗ್ರವಾಗಿ ತಿದ್ದುಪಡಿ ಮಾಡಬೇಕೆಂದು, ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಪೆಪ್ಪರೆಮೆಂಟು ಮುಂತಾದ ಪದಾರ್ಥಗಳನ್ನು ತಯಾರಿಸುವುದನ್ನು, ಸಕ್ಕರೆ ಅಭಾವದ ಪ್ರಯುಕ್ತ ನಿಲ್ಲಿಸಬೇಕೆಂದೂ ರೇಷನ್ ಡಿಪೋಗಳಲ್ಲಿ ಪಾಲಿಷ್ ಮಾಡಿದ ಅಕ್ಕಿಯನ್ನು ಈಗಿನ ದರದಂತೆಯೇ ಕೊಡಬೇಕೆಂದು ಜನಾಬ್ ಅಹಮದ್‌ಖಾನರವರು ನಿರ್ಣಯಗಳನ್ನು ಮಂಡಿಸಿರುವರು.

ಸಿನಿಮಾ ಮಂದಿರಗಳಲ್ಲಿ ಧೂಮಪಾನ ಮಾಡುವುದನ್ನು ಕೂಡಲೇ ತಪ್ಪಿಸಬೇಕೆಂದೂ ಸಿನಿಮಾಗಳಲ್ಲಿ ತಿಂಡಿ ಪಾನೀಯ ಮಾರುವುದನ್ನು ತಡಗಟ್ಟಬೇಕೆಂದೂ ಜನ ಸಂದಣಿ ಹೆಚ್ಚಾಗಿರುವ ರಸ್ತೆಗಳಿಗೆ ನೀರನ್ನು ಹಾಕಿಸಬೇಕೆಂಬ ನಿರ್ಣಯಗಳನ್ನು ಶ್ರೀ ಬಿ. ಜಿ. ದಾಸ್‌ರವರು ಮಂಡಿಸಿರುವರು.

ಮುಂಜಾಗರೂಕತೆಯ ಸ್ಥಾನಬದ್ಧತೆ

ತಿದ್ದುಪಡಿ ಮಸೂದೆಗೆ ಪಾರ್ಲಿಮೆಂಟಿನ ಒಪ್ಪಿಗೆ

ಪಾರ್ಲಿಮೆಂಟಿನಲ್ಲಿ ಮುಂಜಾಗರೂಕತೆಯ ಸ್ಥಾನಬದ್ಧತೆಯ ತಿದ್ದುಪಡಿ ಮಸೂದೆಯು ಅಂಗೀಕೃತವಾಯಿತು. ಇದಕ್ಕಾಗಿ ೭ ದಿನ ಚರ್ಚೆ ನಡೆಯಿತು.

ಈ ಮಸೂದೆಯ ಅಂಗೀಕಾರದಿಂದ ಮುಂಜಾಗರೂಕತೆಯ ಸ್ಥಾನಬದ್ಧತೆಗೆ ಸರ್ಕಾರಕ್ಕೆ ಇನ್ನೊಂದು ವರ್ಷಕಾಲ ಅವಕಾಶದೊರೆತು ಕಾರ್ಯವನ್ನು ಹೆಚ್ಚು ಸುಲಭಪಡಿಸಲಾಯಿತು.

ಆಹಾರ ನೀತಿ ಪುನರ್ವಿಮರ್ಶಿಸಿ

ಕಾರ್ಪೊರೇಷನ್ ಸೂಚನೆ

ಬೆಂಗಳೂರು ಫೆ. ೧೯

ಇತ್ತೀಚೆಗೆ ಆಹಾರದ ಪಡಿತರದ ಪ್ರಮಾಣವನ್ನು ಕಡಮೆ ಮಾಡಿರುವುದನ್ನೂ ಆಹಾರ-ಧಾನ್ಯಗಳ ಬೆಲೆ ಹೆಚ್ಚಿಸಿರುವುದನ್ನೂ ಈ ಸಭೆಯು ಗಮನಿಸಿ ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಸರ್ಕಾರದವರು ತಮ್ಮ ನೀತಿಯನ್ನು ಪುನಃ ಪರಿಶೀಲಿಸಬೇಕೆಂದು ಕೋರುತ್ತದೆ ಎಂಬ ನಿರ್ಣಯವನ್ನು ನಿನ್ನೆ ಬೆಂಗಳೂರಿನಲ್ಲಿ ನಡೆದ ಕಾರ್ಪೊರೇಷನ್ ಸಭೆಯಲ್ಲಿ ಆಹಾರ ವಿಷಯದಲ್ಲಿ ದೀರ್ಘ ಚರ್ಚೆ ನಡೆದು, ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಪತ್ರಿಕಾ ಜಾಹಿರಾತಿಗೆ ತೆರಿಗೆ

ಕೊಚ್ಚಿನ್ ತಿರುವಾಂಕೂರು ಒಕ್ಕೂಟದ ಶೆಂಕೋತ ಪೌರಸಭಾ ಗಡಿಯೊಳಗೆ ಪತ್ರಿಕಾ ಜಾಹಿರಾತು ಚೀಟಿ ಕಂಡು ಬಂದಲ್ಲಿ ಅದರ ಮೇಲೆ ತಿಂಗಳಿಗೆ ೩ ರೂ. ತೆರಿಗೆ ವಸೂಲ್ಮಾಡಲು ಪೌರಸಭೆ ನಿರ್ಧರಿಸಲಾಗಿದೆ

ನಾಗಪಲ್ಲಿಯಲ್ಲಿ ನಾಗಕನ್ಯೆ!

ಘಟಸರ್ಪವೊಂದು ಹೆಂಗಸೊಬ್ಬಳ ಮೈಗೆ ಸುತ್ತಿಕೊಂಡು, ಪೂಜಾದಿಗಳನ್ನು ಮಾಡಿಸಿಕೊಂಡು, ಅನಂತರ ಕಣ್ಮರೆಯಾದ ವಿಚಿತ್ರ ಸುದ್ದಿ ತುಮಕೂರು ತಾಲ್ಲೂಕು ನಾಗಪಲ್ಲಿ ಗ್ರಾಮದಿಂದ ವರದಿಯಾಗಿದೆ.

ಆ ಗ್ರಾಮದ ಗೋವಿಂದಯ್ಯ ಎಂಬುವನ ಹೆಂಡತಿಯು ತಮ್ಮ ಹೊಲಕ್ಕೆ ಕೆಲಸ ಮಾಡಲು ನಿತ್ಯ ಹೋಗುತ್ತಿದ್ದಳು. ಆ ಹೊಲದ ಮುನೀಶ್ವರನ [illegible] ಆಕೆಗೆ ಗೋಚರವಾಗಿ "ಬರಲೇ ಬರಲೇ" ಎಂದು ಕೇಳುತ್ತಿತ್ತು. ತಾ|| ೧೫ನೇ ರಾತ್ರಿ ಆಕೆಯು ಸ್ನಾನಮಾಡಿ ಹೊಲಕ್ಕೆ ಹೋದಳು. ಆ ಘಟಸರ್ಪವು ಹರಿದು ಬಂದು ಅವಳ ಮೈಗೆ ಸುತ್ತಿಕೊಂಡಿತು. ಆಕೆಯು ಮನೆಗೆ ಬಂದಳು ಸರ್ಪಕ್ಕೆ ಪೂಜಾದಿಗಳು ಬೆಳಗಿನ ಜಾವದವರೆಗೆ ನಡೆದುವು ಹಾಲನ್ನೂ ಎರೆದಿದ್ದಾಯಿತು. ಸರ್ಪವು ಪುನಃ ಆಕೆಗೆ ಸುತ್ತಿಕೊಂಡಿತು. ಆಕೆ ಊರ ಹೊರಗಿನ ಅಶ್ವತ್ಥಕಟ್ಟೆಯವರೆಗೂ ಹೋದನಂತರ ಸರ್ಪವು ಅಲ್ಲಿ ಮಾಯವಾಯಿತು ಎಂಬುದಾಗಿ ವರದಿಯಾಗಿದೆ.

ಈ ಪ್ರಸಂಗ ಗ್ರಾಮಸ್ಥರನ್ನು ಬೆರಗುಗೊಳಿಸಿದೆ.

ಮುಖ್ಯ ಮಂತ್ರಿಗಳಿಂದ ಪರಿಶೀಲನೆ

ಮೈಸೂರು ಫೆ. ೨೦

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಸಂಜೆ ೬ ಗಂಟೆಯಿಂದ ೯ ಗಂಟೆ ವರೆಗೆ ಕ್ರಾಫರ್ಡ್ ಹಾಲು, ವಸ್ತು ಪ್ರದರ್ಶನಾಲಯ, ಸರ್ಕಾರಿ ಭವನ, ಚಲುವಾಂಬಾ ಆಸ್ಪತ್ರೆ, ಗೆಸ್ಟ್‌ಕ್ವಾರ್ಟರ್ಸ್, ಪಡುವಾರಳ್ಳಿ, ಆದಿಕರ್ನಾಟಕಪುರ ಮುಂತಾದ ಸ್ಥಳಗಳಿಗೆ ಭೇಟಿಯಿತ್ತು ಪರಿಶೀಲನೆ ನಡೆಸಿದರು.

ಖಂಡನೆ

ಹಿಂದೂ ಮಹಾ ಸಭೆಯ ಕಾರ್ಯಕಾರಿ ಸಮಿತಿಯು ದೆಹಲಿಯಲ್ಲಿ ಸೇರಿ ಪ್ರಿವೆಂಟಿವ್ ಡಿಟೆಕ್ಷನ್ ಕಾನೂನು ಭಾರತೀಯನಿಗಿರುವ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುವ ಒಂದು ಅಕ್ರಮವಾದ ಕಾನೂನಾಗಿದೆ ಎಂಬ ನಿರ್ಣಯವನ್ನು ಮಾಡಿದೆ.

ದೇಶದಲ್ಲಿ ಲಂಚರುಷುವತ್ತು ತಾಂಡವಾಡುತ್ತಿದೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಮೂರು ವರ್ಷಗಳಾದುವು. ಕಾಂಗ್ರೆಸ್ ಸಂಸ್ಥೆ ದೇಶದಲ್ಲಿ ಸರ್ಕಾರವನ್ನು ನಡೆಸುತ್ತಲಿದೆ. ಆದರೆ ದೇಶ ನಿರೀಕ್ಷಿಸಿದಷ್ಟು ಪ್ರಜಾ ಸರ್ಕಾರ ನೆರವೇರಿಸಿಲ್ಲ. ದೇಶದಲ್ಲೆಲ್ಲಿ ನೋಡಿದರೂ ಲಂಚರುಷುವತ್ತುಗಳು ತಾಂಡವಾಡುತ್ತಿದೆ. ಎಲ್ಲಿ ನೋಡಿದರೂ ಕಾಳಸಂತೆ ಹಾವಳಿ. ಸರ್ಕಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಯಲ್ಲಿಯೂ ಮಂತ್ರಿಗಳಲ್ಲಿ ಕೂಡ ಸ್ವಾರ್ಥತೆ ತುಂಬಿದೆ ಜನರು ಧರ್ಮವನ್ನು ಬಿಟ್ಟು ಅಧರ್ಮ ದಾರಿಯಲ್ಲಿ ನಡೆಯುತ್ತಿದ್ದಾರೆ.

ಆದರೆ ಇಂದಿನ ವಿದ್ಯಾರ್ಥಿಗಳೇ ಮುಂದಿನ ಪ್ರಜೆಗಳು ವಿದ್ಯಾರ್ಥಿಗಳು ಇಂದಿನಿಂದ ಶಿಸ್ತು, ಸಂಯಮ, ನಿಸ್ವಾರ್ಥತೆ ಸೇವಾ ಮನೋಭಾವ ಬೆಳೆಸದಿದ್ದಲ್ಲಿ ಇಂದಿನ ನಮ್ಮ ನ್ಯೂನತೆಗಳು ಹೋಗುವುದಿಲ್ಲ ಎಂದು ಶ್ರೀ ಟಿ. ಸಿದ್ದಲಿಂಗಯ್ಯನವರು ಸಿದ್ಧಗಂಗಾ ಹೈಸ್ಕೂಲಿನಲ್ಲಿ ಮಾತನಾಡುತ್ತಾ ಹೇಳಿದರು.

ಮನೆ ಬಿಕರಿಗಿದೆ

ಚಾಮುಂಡಿ ಪುರಂನಲ್ಲಿ ೩ 'ಔಟ್ ಹೌಸ್', 'ಕಾಂಪೌಂಡ್' 'ಪ್ಲಷ್', ನಲ್ಲಿ, ದೀಪ, ಭಾವಿ, ಉಳ್ಳ ತಿಂಗಳಿಗೆ ಸುಮಾರು ೮೦ ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ
ಅಂಡ್-ಕೋ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು.

ರಣಜಿತ್

16—2—51ರಿಂದ ಅಮೋಘ 2ನೇ ವಾರ

ಪ್ರತಿದಿನ 3 ಆಟಗಳು

ಕರ್ದಾರ್ ಮತ್ತು ನೌಷಾದರವರ

ದಾಸ್ತಾನ್

ಪಾತ್ರ—ಸುರಯ್ಯ, ರಾಜಕಪೂರ್,
ಅಲ್ ನಸೀರ್, ವೀಣಾ, ಸುರೇಶ್,
ಮುಂತಾದವರು

ವಿದ್ಯುಚ್ಛಕ್ತಿಯನ್ನುಪಯೋಗಿಸಿ ದೇಶದ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಿ

ಗುಂಡ್ಲುಪೇಟೆ ಫೆ. ೧೮

ಸಂಸ್ಥಾನದಲ್ಲಿ ಯಾವ ಯಾವ ಭಾಗದಲ್ಲಿ ವಿದ್ಯುಚ್ಛಕ್ತಿ ಸರಬರಾಯಿ ಇಲ್ಲವೋ ಅಲ್ಲಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂಬುದೇ ಸರ್ಕಾರದ ಆಶನು. ಆದರೆ ಎಲ್ಲವನ್ನು ಏಕಕಾಲದಲ್ಲಿ ಮಾಡಲು ಸಾಧ್ಯವಿಲ್ಲ. ಆದಷ್ಟು ಜಾಗ್ರತೆಯಾಗಿ ಎಲ್ಲಿಡೆಗೂ ಸೌಕರ್ಯವನ್ನು ಒದಗಿಸಲು ಸರ್ಕಾರವು ಸಿದ್ಧವಿದೆ. ಹಣಕಾಸಿನಸ್ಥಿತಿ, ಸಿಬ್ಬಂದಿ, ಸಾಮಗ್ರಿಗಳು ಮುಂತಾದುವನ್ನೆಲ್ಲಾ ಗಮನಿಸಿ ಕಾರ್ಯ ವಸಗಬೇಕಾಗಿದೆ.

ಪ್ರಜಾ ಸರ್ಕಾರ ಸ್ಥಾಪನೆಯಾದ ೨ ವರ್ಷಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವು ವೇಗವಾಗಿ ನಡೆದಿದೆ. ಮೈಸೂರು ಜಿಲ್ಲೆಯಲ್ಲಿ ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಮತ್ತು ಯಳಂದೂರಿಗೆ ಮಾತ್ರ ಒದಗಿಸಬೇಕಾಗಿದೆ. ಸದ್ಯದಲ್ಲಿ ಆ ಕೆಲಸವು ನಡೆಯುತ್ತಿದೆ. ಸಂಸ್ಥಾನದಲ್ಲಿ ಈಗ ಉತ್ಪತ್ತಿಯಾಗುತ್ತಲಿರುವ ವಿದ್ಯುಚ್ಛಕ್ತಿ ಪ್ರಮಾಣವು ಸಾಲದಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ಕೊಡಲಿರುವ ಧನಸಹಾಯದಲ್ಲಿ ೫೦ ಲಕ್ಷ ರೂ. ಗಳು ಈ ವರ್ಷವೂ ಮತ್ತು ಮುಂದಿನ ವರ್ಷವೂ ವಿದ್ಯುಚ್ಛಕ್ತಿ ಅಭಿವೃದ್ಧಿಗಾಗಿ ವೆಚ್ಚ ಮಾಡಬೇಕೆಂದಿದ್ದೇವೆ. ಮೇಕೆದಾಟುಬಳಿ ಒಂದು ಹೊಸಕೇಂದ್ರವನ್ನು ಸ್ಥಾಪಿಸುವುದಲ್ಲದೆ ಶಿಂಷಾ ಕೇಂದ್ರವನ್ನು ಇನ್ನು ವಿಸ್ತರಿಸಬೇಕೆಂಬ ಯೋಜನೆಗಳಿವೆ. ಎಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಗುಂಡ್ಲುಪೇಟೆಯಲ್ಲಿ ದೀಪೋತ್ಸವ ಪ್ರಾರಂಭ ನಡೆಸುತ್ತ ಹೇಳಿದರು. ಶ್ರೀ ರೆಡ್ಡಿಯವರು ಮುಂದುವರಿಸುತ್ತ ಜನರು ತಮ್ಮ ಊರಿಗೆ ವಿದ್ಯುಚ್ಛಕ್ತಿ ಸೌಕರ್ಯಬೇಕೆಂದು ಒತ್ತಾಯಪಡಿಸಿ ಈಕೆ ಪಡೆದರು. ಈಗ ಜನರಲ್ಲಿ ಅದರ ಉಪಯೋಗವಿಷಯದಲ್ಲಿ ಉದಾಸೀನಪಟ್ಟಿರುವಂತಿದೆ. ಪ್ರತಿಮನೆಗೂ ದೀಪದ ಉಪಯೋಗಕ್ಕಾಗಿ ವಿದ್ಯುಚ್ಛಕ್ತಿಯನ್ನುಪಯೋಗಿಸಲು ಪ್ರಾರಂಭಿಸುವುದಲ್ಲದೆ ಸಣ್ಣ ಪುಟ್ಟ ಗೃಹಕೈಗಾರಿಕೆ ಮುಂತಾದುವುಗಳಿಗೆಲ್ಲಾ ಉಪಯೋಗಿಸಿ ತಮ್ಮ ಆರ್ಥಿಕ ಸ್ಥಿತಿಯಲ್ಲಿ ಉತ್ತಮಗೊಳಿಸಿಕೊಂಡು ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂದು ನುಡಿದರು.

ಅನಂತರ ವಿದ್ಯುಚ್ಛಕ್ತಿ ಶಾಖಾ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರೂ ಮಾತನಾಡಿ ಸ್ವಿಟ್ಜರ್ಲೆಂಡ್ ಮುಂತಾದ ಸಣ್ಣ ಸಣ್ಣ ದೇಶಗಳಲ್ಲಿ ವಿದ್ಯುಚ್ಛಕ್ತಿಯ ಉಪಯೋಗದಿಂದ ಹಲವಾರು ಕೈಗಾರಿಕೆಗಳಲ್ಲಿ ಮನೆಗಳಲ್ಲಿಯೇ ಸ್ಥಾಪಿಸಿ ಗೃಹಕೈಗಾರಿಕೆಗಳ ಅಭಿವೃದ್ಧಿಪಡಿಸುತ್ತಲಿರುವರಲ್ಲದೆ ಮನೆಯಲ್ಲಿ ಹೆಂಗಸರು ಮಕ್ಕಳು ಆದಿಯಾಗಿ ಸಂಪಾದನಾಪರರಾಗಿರುವರು. ಅದೇ ರೀತಿ ನಮ್ಮ ದೇಶದಲ್ಲಿ ಜನರು ಈ ವಿದ್ಯುಚ್ಛಕ್ತಿ ಉಪಯೋಗದಲ್ಲಿ ಇದರ ಉಪಯೋಗವನ್ನು ಚೆನ್ನಾಗಿ ಅರಿತು ಕೈಗಾರಿಕೆ, ವ್ಯವಸಾಯ, ನಿತ್ಯಜೀವನ ಸೌಕರ್ಯ ಮುಂತಾದುವುಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನುಪಯೋಗಿಸಿ ದೇಶದ ಆರ್ಥಿಕ ಪ್ರಗತಿಗೆ ಕಾರಣರಾಗಬೇಕೆಂದೂ, ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಜನಪ್ರಿಯತೆಗೆ ಇಲಾಖಾ ಮುಖ್ಯಾಧಿಕಾರಿ ಜನಾಬ್ ಹಯಾತ್‌ರವರು 'ವಿದ್ಯುಚ್ಛಕ್ತಿ ಶಿಲ್ಪಿ' ಯೋಪಾದಿಕೆಲಸಮಾಡುತ್ತಲಿರುವರೆಂದು ತಿಳಿಸಿದರು. ಪ್ರಾರಂಭದಲ್ಲಿ ಪೌರ ಸಭಾಧ್ಯಕ್ಷ ಜನಾಬ್ ಗಫಾರ್‌ರವರು ಬಿನ್ನವತ್ತಳೆಯನ್ನರ್ಪಿಸಿ ಸ್ವಾಗತಿಸಿದರು.

ಆಹಾರ ಹತೋಟಿ ತೆಗೆಯಲು ಮುಖ್ಯ ಮಂತ್ರಿಗಳಲ್ಲಿ ಮೊರೆ

ನಂಜನಗೂಡು ಫೆ. ೧೯

ನಿನ್ನೆ ರಾತ್ರಿ ಇಲ್ಲಿಗೆ ಭೇಟಿಯಿತ್ತ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಇಲ್ಲಿನ ತಾ|| ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಹೆಜ್ಜಿಗೆ ಲಿಂಗಣ್ಣನವರೂ ಇತರ ಹಲವು ಪ್ರಮುಖರೂ ಕಂಡು ನರಸಾಂಬುಧಿ ಕೆರೆಯು ಒಣಗಿ ಹೋಗಿರುವುದರಿಂದ ಸುಮಾರು ೧೩೦೦ ಎಕರೆ ಜಮೀನಿನ ಸಾಗುವಳಿಗೆ ತೊಂದರೆಯಾಗಿರುವ ಅಂಶವನ್ನು ವಿವರಿಸಿದರು ಮತ್ತು ಆಹಾರದ ಹತೋಟಿಯಿಂದ ಪ್ರಜೆಗಳಿಗೆ ಉಂಟಾಗಿರುವ ತೊಂದರೆಯನ್ನು ತಿಳಿಸಿ ಅದನ್ನು ತೆಗೆದು ಹಾಕಬೇಕೆಂದು ಕೋರಿದರು. ಭಾರತ ಸರ್ಕಾರದ ಸಹಾಯವು ಈ ವಿಷಯದಲ್ಲಿ ಸಂಪೂರ್ಣವಾಗಿ ಬೇಕಾಗಿರುವುದರಿಂದ ಅವರ ನೀತಿಯನ್ನೇ ಅನುಸರಿಸಬೇಕಾಗಿದೆಯೆಂದು ಶ್ರೀ ರೆಡ್ಡಿಯವರು ತಿಳಿಸಿ ನಮ್ಮ ದೇಶದಲ್ಲಿ ಜನರ ನೈತಿಕ ಮಟ್ಟವು ಬಹಳ ಕಡಿಮೆಯಾಗಿರುವುದೆಂದೂ, ಇದಕ್ಕೆ ಬಡತನ ಮತ್ತು ಅಜ್ಞಾನಗಳೇ ಕಾರಣವೆಂದೂ ಹೇಳಿ, ಪಾಶ್ಚಿಮಾತ್ಯ ದೇಶಗಳಂತೆ ನಮ್ಮವರೂ ದೇಶದ ಪರಿಸ್ಥಿತಿಯನ್ನು ಅರಿತು ಸರ್ಕಾರದೊಡನೆ ಸಹಕರಿಸಬೇಕೆಂದು ಕೋರಿದರು.

ದಸ್ತಗಿರಿ

ಬೆಂಗಳೂರು ಫೆ. ೧೯

ಶ್ರೇಷ್ಠ ನ್ಯಾಯಾಧೀಶರಿಗೆ ವಿಷಪಾನ ಮಾಡಲು ನಡೆದ ಪಿತೂರಿಗೆ ಸಂಬಂಧಿಸಿದಂತೆ ಮತ್ತಿಬ್ಬರ ದಸ್ತಗಿರಿಯಾಗಿದೆ. ದಿ|| ರಾಮಲಿಂಗಂರವರ ಮಕ್ಕಳಾದ ಶ್ರೀ ಆರ್. ವಿಶ್ವನಾಥ ಮತ್ತು ಶ್ರೀ ಎಲ್. ಎಸ್. ರಾಜುರವರ ಮಗ ಶ್ರೀ ಜಯರಾಮ್‌ರವರನ್ನು ನಿನ್ನೆ ದಸ್ತಗಿರಿ ಮಾಡಿ ತನಿಖೆ ಮಾಡಲಾಗುತ್ತಿದೆ. ಇದುವರೆವಿಗೆ ಒಟ್ಟು ೮ ದಸ್ತಗಿರಿಗಳಾಗಿವೆ.

ರೈಲ್ವೆ ಮುಷ್ಕರ

ಬ್ರಿಟನ್ನಿನಾದ್ಯಂತ ಸಾವಿರಾರು ಕೆಲಸಗಾರರು ಅಲ್ಲಲ್ಲೇ ಮುಷ್ಕರ ನಡೆಸಿ ದೇಶಾದ್ಯಂತ ಸಂಚಾರ ವ್ಯವಸ್ಥೆ ಭಗ್ನಗೊಳಿಸುವ ಯತ್ನಗಳು ನಡೆಯುತ್ತಲಿವೆ. ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂಬ ಅವರ ಬೇಡಿಕೆ ಸರ್ಕಾರಕ್ಕೂ ಟ್ರೇಡ್ ಯೂನಿಯನ್ ಮುಖಂಡರಿಗೂ ಸಂಧಾನ ನಡೆಯುತ್ತಲಿದೆ.

ಮೈಸೂರು ಶಾಸನ ಸಭೆಯ ಬಡ್ಜೆಟ್ ಅಧಿವೇಶನ

ಮೈಸೂರು ಶಾಸನ ಸಭೆಯ ಬಡ್ಜೆಟ್ ಅಧಿವೇಶನವು ಮಾರ್ಚಿ ೧೫ನೇ ತಾರೀಖಿನಿಂದ ಆರಂಭವಾಗುವುದು.

ಕಾಂಗ್ರೆಸ್ ಸೇರುವುದಿಲ್ಲ

ಎ. ಐ. ಸಿ. ಸಿ. ಯಲ್ಲಿ ತೀರ್ಮಾನಿಸಿದಂತೆ ಸಮತಾವಾದ ಪಕ್ಷವು ಕಾಂಗ್ರೆಸ್ ಸೇರುವ ಸಂಭವವಿಲ್ಲ. ಸಮತಾವಾದ ತತ್ವವನ್ನು ಕಾಂಗ್ರೆಸ್ ಅಂಗೀಕರಿಸಿದರೆ ಮಾತ್ರ ಇದು ಸಾಧ್ಯವೆಂದು ಸಮತವಾದಿ ಮುಖಂಡ ಶ್ರೀ ಜಯಪ್ರಕಾಶ ನಾರಾಯಣರವರು ಮದರಾಸಿನಲ್ಲಿ ಮಾತನಾಡುತ್ತಾ ಹೇಳಿದರು.

ವ್ಯಾಪಾರ ನಿಯೋಗ

ಜಪಾನ್ ಮತ್ತು ಇರಾಕ್ ರಾಷ್ಟ್ರಗಳ ನಿಯೋಗದವರು ವ್ಯಾಪಾರ ವಿಷಯದಲ್ಲಿ ಚರ್ಚೆಗಳನ್ನು ನಡೆಸಲು ಭಾರತಕ್ಕೆ ಆಗಮಿಸಿರುವರು.

ಭಾರತ ಪಾಕಿಸ್ಥಾನ ವ್ಯಾಪಾರದ ಮಾತುಕತೆಗಳು ಇಂದಿನಿಂದ ಕರಾಚಿಯಲ್ಲಿ ಪುನಃ ಪ್ರಾರಂಭವಾಗಲಿವೆ.

ರಾಷ್ಟ್ರಪತಿಯವರ ಎಚ್ಚರಿಕೆ

ವಿಜ್ಞಾನದ ಅನುಭವವನ್ನು ದುರುಪಯೋಗ ಪಡಿಸಬೇಡಿ ಅದರಿಂದ ಜಗತ್ತಿಗೇ ಹಾನಿ. ವಿಜ್ಞಾನವನ್ನು ಮಾನವ ಹಿತದ ಕಡೆಗೇ ವಿನಿಯೋಗಿಸಲು ಲಕ್ಷ್ಯ ಕೊಡಬೇಕೆಂದು ರಾಷ್ಟ್ರಾಧ್ಯಕ್ಷರು ಲಕ್ನೋ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ನೂತನ ಕಟ್ಟಡ ಆರಂಭಗೊಳಿಸುತ್ತಾ ತಿಳಿಸಿರುವರು.

ಭಾರತ ಶ್ರೇಷ್ಠ ನ್ಯಾಯಾಧೀಶರು

ಮೈಸೂರು ಫೆ. ೧೯

ಭಾರತಶ್ರೇಷ್ಠ ನ್ಯಾಯಾಧೀಶ ಶ್ರೀ ಹೀರಾಲಾಲ್ ಕನಿಯಾರವರು ನಿನ್ನೆ ಮಧ್ಯಾಹ್ನ ಮೈಸೂರಿಗೆ ಆಗಮಿಸಿ ಶ್ರೀಮನ್ಮಹಾರಾಜರನ್ನು ಭೇಟಿಮಾಡಿ ಬೆಂಗಳೂರಿಗೆ ಹಿಂತಿರುಗಿದರು.

ಸಿಮೆಂಟು ಹತೋಟಿ ಆಜ್ಞೆ

ಬೆಂಗಳೂರು ಫೆ. ೧೯

ಮೈಸೂರು, ಬೆಂಗಳೂರುಗಳಲ್ಲಿ ರಹದಾರಿಯಿಲ್ಲದೆ ೨ ಮಣದ ವರೆಗೆ ಸಿಮೆಂಟು ಮಾರಲು, ಈ ಮಾಹೆಯಾಖೈರಿನ ವರೆಗಿದ್ದ ವಿನಾಯಿತಿಯನ್ನು ಇನ್ನು ಮೂರು ತಿಂಗಳ ಕಾಲ ಹೆಚ್ಚಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ರಾಮನಗರಂನಲ್ಲಿ ಕೋರ್ಟುಗಳು ಮುಚ್ಚಲಾಗಿವೆ

ರಾಮನಗರಂನಲ್ಲಿರುವ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳನ್ನು ಕಾಲರಾ ಉಪದ್ರವ ಪ್ರಯುಕ್ತ ಈ ಮಾಹೆ ಅಂತ್ಯದ ವರೆಗೆ ಮುಚ್ಚಲಾಗಿದೆ.

ಸರ್ ಮಿರ್ಜಾರವರಿಗೆ ನೂತನ ಹುದ್ದೆ

ಬೆಂಗಳೂರು ಫೆ. ೧೯

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮೈಲ್‌ರವರನ್ನು ಹಿಂದೆಯೇ ತಿಳಿಸಿದ್ದಂತೆ, ಇಂಡೋನೇಷಿಯದಲ್ಲಿ ಪ್ರಪಂಚ ಸಂಸ್ಥೆ ಟೆಕ್ನಿಕಲ್ ಸಹಾಯದ ಮೇಲ್ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ.

ಸರ್ ಮಿರ್ಜಾರವರು ಮುಂದಿನ ತಿಂಗಳು ಪ್ರಾರಂಭದಲ್ಲಿ ತಮ್ಮ ಅಧಿಕಾರ ಸ್ವೀಕಾರ ಮಾಡುವರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೨—೧೯೫೧ನೇ ಬುಧವಾರ [ಸಂಚಿಕೆ ೧೪೨

ಅಮೆರಿಕಾದಿಂದ ಭಾರತಕ್ಕೆ ಆಹಾರ

ಏಪ್ರೆಲ್ ಮೊದಲನೇ ವಾರದಿಂದ ಬರಲು ಪ್ರಾರಂಭವಾಗುವುದು

ವಿದೇಶಾಂಗ ಕಾರ್ಯದರ್ಶಿ ಮಿ|| ಅಚಿಸನ್‌ರವರ ಹೇಳಿಕೆ

ಅಧ್ಯಕ್ಷ ಟ್ರೂಮನ್ನರ ಸೂಚನೆಯಂತೆ ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಅನುಕೂಲಕರ ಸರಬರಾಜು ಮಾಡುವುದು ಭಾರತದ ಗಂಭೀರ ಆಹಾರ ಪರಿಸ್ಥಿತಿಯಲ್ಲಿ ಪ್ರಧಾನ ಕರ್ತವ್ಯವಾಗಿದೆ. ಕೊರಿಯಾ ಯುದ್ಧ ವಿಷಯದಲ್ಲಿ ಭಾರತ ಅಮೆರಿಕಾಗಳಿಗೆ ಭಿನ್ನಾಭಿಪ್ರಾಯ ಎದ್ದಾಗ್ಯೂ ಉಭಯರಾಷ್ಟ್ರಗಳ ಗುರಿಯು ಶಾಂತಿಸ್ಥಾಪನೆಯೇ. ಈ ಭಿನ್ನಾಭಿಪ್ರಾಯಗಳಿಗೂ ಆಹಾರ ಸರಬರಾಜಿಗೂ ಸಂಬಂಧ ಕಲ್ಪಿಸುವುದು ಸೂಕ್ತವಲ್ಲ. ಮಾನವತ್ವ ಮತ್ತು ಆಹಾರದ ಆವಶ್ಯಕತೆಯನ್ನು ಗಮನಕ್ಕೆ ತಂದುಕೊಂಡು ಆಹಾರವನ್ನು ಒದಗಿಸಬೇಕಾಗಿದೆ.

ಏಪ್ರೆಲ್ ಮೊದಲನೇ ವಾರದಿಂದ ಭಾರತಕ್ಕೆ ಆಹಾರವನ್ನು ರಫ್ತು ಮಾಡಲು ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಆಗಸ್ಟ್ ತಿಂಗಳ ಕೊನೆಗಾಗಿ ೧೦ ಲಕ್ಷ ಟನ್ ಆಹಾರವನ್ನು ಸರಬರಾಜು ಮಾಡಲಾಗುವುದು. ಅನಂತರ ಭಾರತದ ಆಹಾರ ಪರಿಸ್ಥಿತಿ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಗಳನ್ನು ಪರಿಶೀಲಿಸಿ ಮಿಕ್ಕ ೧೦ ಲಕ್ಷ ಟನ್ ಆಹಾರವನ್ನು ಸರಬರಾಜು ಮಾಡುವ ಏರ್ಪಾಡು ಮಾಡಲಾಗುವುದು ಎಂದು ಅಮೆರಿಕಾ ವಿದೇಶಾಂಗ ಶಾಖಾ ಕಾರ್ಯದರ್ಶಿ ಮಿ|| ಅಚಿಸನ್‌ರವರು ಹೇಳಿರುವರು.

ಸತ್ಯಾಗ್ರಹವೆ ?

ಆಹಾರದ ಅಭಾವ ಮತ್ತು ಕ್ಷಾಮದ ಭಯವನ್ನು ಎದುರಿಸಲು ಭಾರತದ ಸೋಷಿಯಲಿಸ್ಟ್ ಪಕ್ಷದವರು ಅಖಿಲ ಭಾರತದಲ್ಲಿ ಸರ್ಕಾರಿ ಕಛೇರಿಗಳ ಮುಂದೆ ಸತ್ಯಾಗ್ರಹ ನಡಸುವರು. ಆಹಾರ ಅಭಾವ ಮತ್ತು ಕ್ಷಾಮದ ಭಯವನ್ನು ನಿವಾರಿಸಲು ಸರ್ಕಾರವು ಬೇಗನೆ ವ್ಯವಸ್ಥೆ ಮಾಡಬೇಕು ಎಂದು ಡಾ|| ರಾಮ ಮನೋಹರಲೋಹಿಯಾರವರು ಗ್ವಾಲಿಯರಿನಲ್ಲಿ ಮಾತನಾಡುತ್ತಾ ಹೇಳಿರುವರು.

ಸಮಾನ ಹಕ್ಕುಬಾಧ್ಯತೆ ಕೊಡಿ

ಪುರುಷರಂತೆ ಸಮಾನ ಹಕ್ಕುಬಾಧ್ಯತೆ ಕೊಡಬೇಕೆಂದು ೧೫೦೦ ಮಹಿಳೆಯರು ಈಜಿಪ್ಟಿನ ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿ ಪ್ರದರ್ಶನ ನಡೆಸಿದರು. ಸಭೆ ಸೇರಿದ್ದ ಪಾರ್ಲಿಮೆಂಟು ಭವನಕ್ಕೆ ಅವರು ನುಗ್ಗಲು ಪ್ರಯತ್ನಿಸಿದುದನ್ನು ಪೋಲೀಸಿನವರು ತಡೆದರು.

ತ್ಯಾಗರಾಜ ಪುರಂದರದಾಸರ ಜಯಂತ್ಯುತ್ಸವ

ಮೈಸೂರು ಫೆ. ೨೧

ಶ್ರೀ ಸರಸ್ವತೀ ಸಂಗೀತ ಸಮಾಜದ ಆಶ್ರಯದಲ್ಲಿ ಇದೇ ಮಾಹೇ ೨೪-೨೫ನೇ ತಾ|| ಗಳಲ್ಲಿ ಶ್ರೀ ತ್ಯಾಗರಾಜ ಮತ್ತು ಪುರಂಧರದಾಸರ ಜಯಂತ್ಯುತ್ಸವವು ಸಮಾಜ ಕಾರ್ಯಭವನದಲ್ಲಿ ನಡೆಯುವುದು.

೨೪ನೇ ತಾ|| ಶನಿವಾರ ಸಂಜೆ ೫-೩೦ ಗಂಟೆಗೆ ಪೂಜೆ, ೮ ಗಂಟೆಯವರೆಗೆ ವಿದ್ವಾಂಸರುಗಳಿಂದ ಸಂಗೀತ, ೨೫ನೇ ಭಾನುವಾರ ಬೆಳಗ್ಗೆ ೮-೩೦ಗೆ ಸಂಗೀತ ಸ್ಪರ್ಧೆ ಸಂಜೆ ೫-೩೦ ಗಂಟೆಗೆ ಬಹುಮಾನ ವಿನಿಯೋಗ ಅನಂತರ ೮ ಗಂಟೆಯವರೆಗೆ ಸಂಗೀತ ನಡೆಯುವುದು.

ದಂಡಿನಲ್ಲಿ ಬೆಂಕಿ ಅನಾಹುತ

ಬೆಂಗಳೂರು ಫೆ. ೨೦

ದಂಡಿನ ರಸೆಲ್ ಮಾರ್ಕೆಟಿನ ಎದುರಿನಲ್ಲಿರುವ ಮೋಟಾರ್ ಟೈರ್ ಅಂಗಡಿಯಲ್ಲಿ ಇಂದು ರಾತ್ರಿ ಬೆಂಕಿ ಅನಾಹುತ ಸಂಭವಿಸಿ, ಸುಮಾರು ೧೦ ಸಾವಿರ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ ಎಂದು ಅಂದಾಜು ಮಾಡಲಾಗಿದೆ.

ಸುಮಾರು ೧೦—೩೦ಕ್ಕೆ ಕರೆಸಲ್ಪಟ್ಟ ದಂಡಿನ ಫೈರ್ ಬ್ರಿಗೇಡ್ ದಳದವರು ಅರ್ಧ ಗಂಟೆ ಹೋರಾಡಿ ಬೆಂಕಿಯನ್ನು ಹತೋಟಿಗೆ ತಂದರು.

ಉಪನ್ಯಾಸ

ಮೈಸೂರು ಫೆ. ೨೧

ಮೈಸೂರು ಕಾಟಿಲ್ಯ ಮಂಡಲಿಯ ಆಶ್ರಯದಲ್ಲಿ, 'ಹಿಂದೂಶಾಸನ ಮಸೂದೆ'ಯ ವಿಷಯವಾಗಿ ನಟರಾಜಭವನದಲ್ಲಿ ಅಡ್ವೊಕೇಟ್ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಭಾಷಣಮಾಡುವರು. ಶ್ರೀ ಎಂ. ಎ. ಗೋಪಾಲಸ್ವಾಮಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸುವರು.

ಕಾಫಿ ಕ್ಯೂರಿಂಗ್ ಕೆಲಸಗಾರರ ಸಂಘ

ಮೈಸೂರು ಫೆ. ೨೦

ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘದ ಸಕಲ ಸದಸ್ಯರ ಸಭೆಯು ನಿನ್ನೆ ಸಂಜೆ ವರ್ಕ್ಸ್ ಒಳಗೆ ಇರುವ ಸಂಘದಾವರಣದಲ್ಲಿ ಅಧ್ಯಕ್ಷ ಶ್ರೀ ಬಿ. ಬಾಲಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಮಂಡಿಸಿದ್ದ ೧೯೫೦ನೇ ಸಾಲಿನ ವರದಿ ಮತ್ತು ಲೆಕ್ಕ ಪತ್ರಗಳನ್ನು ಸಭೆ ಸರ್ವಾನುಮತದಿಂದ ಒಪ್ಪಿತು. ವರದಿಯಲ್ಲಿ ಸಂಘ ಈ ವರೆಗೆ ಸಾಧಿಸಿದ ಕಾರ್ಯ ಕೆಲಸಗಾರರಿಗೆ ಅದರಲ್ಲಿ ಗಾರ್ಬಲ್ ಕೆಲಸಗಾರರಿಗೆ ಒದಗಿಸಿಕೊಟ್ಟಿರುವ ಸೌಲಭ್ಯ ಕಾರ್ಖಾನೆಯ ಕೆಲ ಸಣ್ಣ ಪುಟ್ಟ ನೌಕರರು ಕೊಡುತ್ತಿರುವ ಕಿರುಕುಳ ರೆಮ್ಮಂಟ್ ಕಾಫಿ ಗಾರ್ಬಲ್ ಕೆಲಸಗಾರರಿಗೂ ಕೊಡಬೇಕೆಂದು ಸಂಘ ಮಾಡಿದ ಪ್ರಯತ್ನದಲ್ಲಿ ಕೆಲಸಗಾರರ ಪೈಕಿ ಕೆಲವರಿಂದ ಬಂದ ವಿರೋಧ ಇತ್ಯಾದಿಗಳನ್ನು ವಿಮರ್ಶಿಸಲಾಯಿತು. ಸಭೆ ಸರ್ದಾರ್ ಪಟೇಲರ ನಿಧನಕ್ಕಾಗಿ ಸಂತಾಪ ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಿತು.

ಗಾರ್ಬಲ್ ಕೆಲಸಗಾರರಿಗೆ ಮುಂದಿನ ವರ್ಷದಿಂದಲಾದರೂ ರೆಮ್ಮಂಟ್ ಕಾಫಿ ಕೊಡಬೇಕೆಂದೂ ಒತ್ತಾಯ ಪಡಿಸುವುದು ಕೂಲಿ ದರ ಮತ್ತು ತುಟ್ಟಿ ಭತ್ಯಗಳನ್ನು ಹೆಚ್ಚಿಸಬೇಕೆನ್ನುವ ನಿರ್ಣಯಗಳು ಅಂಗೀಕೃತವಾದುವು.

ಕೊನೆಯಲ್ಲಿ ಶ್ರೀ ಎ. ರಾಮಣ್ಣನವರು ಮಾತನಾಡಿ ಕೆಲಸಗಾರರು ಯಾರ ದುರ್ಬೋಧನೆಗಳಿಗೂ ಕಿವಿಗೊಡದೆ ಸಂಘವನ್ನು ಬಲಪಡಿಸಿ ತಮ್ಮ ನ್ಯಾಯಬದ್ಧವಾದ ಬೇಡಿಕಗಳನ್ನು ಈಡೇರಿಸಿಕೊಳ್ಳಬೇಕೆಂದರು.

ತಪ್ಪಿ ನಡೆದರೇ ಹಿಂದಕ್ಕೆ ಕರೆ

ನೇಪಾಳಿ ಕಾಂಗ್ರೆಸ್ ಸತ್ಯಾಗ್ರಹ ಕಾಲದಲ್ಲಿ ಯಾವ ತತ್ವಗಳನ್ನು ಪ್ರತಿಪಾದಿಸಿ ಘೋಷಣೆ ಹೊರಡಿಸಿತ್ತೊ, ಅದನ್ನು ಪಾಲಿಸಿಕೊಂಡು ಬರುವ ಧೃಢಸಂಕಲ್ಪದಿಂದ ಈಗ ತನ್ನ ಪ್ರತಿನಿಧಿಗಳನ್ನು ಮಂತ್ರಿಮಂಡಲಕ್ಕೆ ಕಳುಹಿಸಲಾಗಿದೆ, ಅವರು ತಪ್ಪಿ ನಡೆದರೆ ಮಂತ್ರಿಮಂಡಲದಿಂದ ಹಿಂದಕ್ಕೆ ಕರೆಸಿಕೊಳ್ಳಲಾಗುವುದೆಂದು ನೇಪಾಳಿ ಕಾಂಗ್ರೆಸು ಅಧ್ಯಕ್ಷರು ತಿಳಿಸುವರು.

ಉಪನ್ಯಾಸ ತರಗತಿಗಳು

ಮೈಸೂರು ಯಂಗ್‌ಮೆನ್ಸ್‌ಲೀಗಿನ ಮಹಿಳಾ ವಿಭಾಗದವರು ಇದೇ ಮಾಹೆ ೨೧-೨೪ರ ವರೆಗೆ ಲೋವರ್‌ಸೆಕೆಂಡರಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಉಪನ್ಯಾಸ ತರಗತಿಗಳನ್ನು ಮಾದರಿ ಶಾಲೆಯಲ್ಲಿ ಪ್ರತಿದಿನವೂ ೫ ಗಂಟೆಯಿಂದ ನಡೆಯಲು ಏರ್ಪಡಿಸಿರುವರು.

ಆಹಾರ ವಿಷಯದಲ್ಲಿ ಸರ್ಕಾರದ ಧೋರಣೆ

ಆಹಾರ ಭಾರತದಲ್ಲೆಲ್ಲಾ ಕಣಜ ಕೊಂಡಿರುವ ಪೆಪ್ಸು ಪ್ರಾಂತ್ಯದಲ್ಲೀ ಅಭಾವವು ವಿಶೇಷವಾಗಿ ಉಂ ಕ್ಷಾಮ ತಲೆದೋರಿದೆಯೆಂದು ವರದಿಗಿದೆ.

ಕ್ಷಾಮಪೀಡಿತರಾದ ಜನರೆಲ್ಲರೂ ಪೆಪ್ಸುವಿನಲ್ಲಿಯೂ ಪ್ರದರ್ಶನಗಳನ್ನು ನಡೆಸುತ್ತಲಿರುವರು. ಸಾಮಾನ್ಯವಾಗಿ ಯಾರು ೧೦ ಮಣಕ್ಕಿಂತ ಹೆಚ್ಚಿಗೆ ಆಹಾರವನ್ನು ಶೇಖರಿಸಕೂಡದೆಂಬ ಆಜ್ಞೆಯಿದ್ದರೂ ಜಮೀನುದಾರರು ಸಾವಿರಾರು ಮಣ ಆಹಾರವನ್ನು ಹೂಳಿರುವರು. ಸರ್ಕಾರದವರು ಆಹಾರ ಪದಾರ್ಥಗಳನ್ನು ಪಸೂಲ್ಮಾಡದೆ ಸಮೃದ್ಧ ಪ್ರಾಂತ್ಯವು ಸುಭಿಕ್ಷ ದಿವಿದೆಯೆಂದು ಪ್ರಕಟಣೆ ಹೊರಡಿಸುತ್ತಲಿರುವರು. ಮಾರ್ಚ್‌ರಂಭದಲ್ಲಿ ಸರ್ಕಾರವು ಗೋಧಿಯನ್ನು ಮಣಕ್ಕೆ ೧೨ರೂ ಅಂತೆ ಕೊಂಡು ಈಗ ಮಣಕ್ಕೆ ೧೫—೧೬ ರೂ ನಂತೆ ಮಾರುತ್ತಾ ಲಾಭ ಸಂಪಾದಿಸಲು ಪ್ರಾರಂಭಮಾಡಿದೆ. ಜನರು ಪ್ರದರ್ಶನ, ಸಭೆ ನಡೆಸದಂತೆ ಪ್ರಾಂತ್ಯದಲ್ಲಿ ೧೪೪ನೇ ಸೆಕ್ಷನ್ ಜಾರಿ ಮಾಡಿರುವರು. ಈಗಾಗಲೇ ನಭಾ, ಪಾಟಿಯಾಲಾ ಮೊದಲಾದೆಡೆ ಅನೇಕ ಪ್ರದರ್ಶನಕಾರರ ದಸ್ತಗಿರಿಗಳಾಗುತ್ತಲಿವೆ ಎಂದು ಹೇಳಲಾಗಿದೆ.

ಅಕ್ಕಿ ಕೊಡಕೂಡದು

ರೇಷನ್ ತೆಗೆದುಹಾಕಿರುವ ಪ್ರದೇಶಗಳಲ್ಲಿರುವ ಹೋಟೆಲ್ಸ್ ಡಿಪೋಗಳಲ್ಲಿ ಯಾರಿಗೂ ಅಕ್ಕಿಯನ್ನು ಮಾರಲಾಗದು. ಅಲ್ಲದೆ ಆಹಾರ ಪದಾರ್ಥವನ್ನು ಈ ಪ್ರಾಂತ್ಯಗಳಲ್ಲಿ ಕೂಡುವಾಗ ಗೋಧಿ [illegible] ಮುಲೆಟ್ಸ್ ಗಳನ್ನು ಪ್ರತಿಯೊಬ್ಬನಿಗೆ ದಿನಕ್ಕೆ ೬ ಔನ್ಸ್‌ಗಳಿಗಿಂತ ಹೆಚ್ಚಾಗಿ ಕೊಡಕೂಡದು. ಶ್ರಮಜೀವಿಗಳಿಗೆ ಹೆಚ್ಚಿಗೆ ಪಡಿತರ ಕೊಡುವುದು ಈ ರೇಷನ್ ತೆಗೆದುಹಾಕಿರುವ ಪ್ರಾಂತ್ಯಗಳಿಗೆ ಅನ್ವಯಿಸುವುದಿಲ್ಲವೆಂದು ಮದರಾಸ್ ಸರ್ಕಾರವು ಆಜ್ಞೆ ಮಾಡಿದೆ.

ಸಮಾಚಾರ

ಮೈಸೂರು ತಾ|| ೨೧ನೇ ಬುಧವಾರ

ಮುನ್ನೆಚ್ಚರಿಕೆ ಕಾರ್ಯಕ್ರಮ

ಮಹದೇಶ್ವರನ ಬೆಟ್ಟದ ಹತ್ತಿರವಿರುವ ಚಿಕ್ಕಲ್ಲೂರು ಜಾತ್ರೆಯ ಪ್ರಭಾವದಿಂದ ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ಕಾಲರಾ ಉಪದ್ರವವು ಹರಡಿ ಅನೇಕರು ಈ ರೋಗಕ್ಕೆ ಬಲಿಯಾದುದು ಆರೋಗ್ಯಾಧಿಕಾರಿಗಳ ಗಮನಕ್ಕೆ ಬಂದೊಡನೆಯೇ ರೋಗವು ಹರಡದಂತೆ ಕಾರ್ಯವನ್ನೆಸಗಿ, ರೋಗವನ್ನು ಅಲ್ಲಿಯೇ ಅಡಗಿಸುವರು.

ಮುಂದಿನ ಮಾಹೆಯ ಮೊದಲನೇ ವಾರದಲ್ಲಿ ಮಹದೇಶ್ವರನ ಜಾತ್ರೆಯು ಪ್ರಾರಂಭವಾಗಲಿದೆ. ಮಾಮೂಲಿನಂತೆ ಜನರು ಈ ಜಾತ್ರೆಗೆ ಹೋಗಿ ಪುನಃ ರೋಗವು ಎಲ್ಲೆಡೆಯಲ್ಲಿಯೂ ಹರಡಿ ಸಾವಿರಾರು ಜನರ ಪ್ರಾಣಗಳನ್ನು ಹರಣ ಮಾಡದಂತೆ ಮಾಡುವುದು ಯಾತ್ರಾರ್ಥಿಗಳು ತಮ್ಮ ಕರ್ತವ್ಯವೆಂದರಿತು, ತಾವು ಮತ್ತು ತಮ್ಮ ಪರಿವಾರ ಧೃಢಕಾಯರಾಗಿದ್ದರೆ ಎಂದಾದರೂ ಜಾತ್ರೆಗೆ ಹೋಗಬಹುದೆಂಬುದನ್ನು ಪರಿಗಣಿಸಿ ಈ ಜಾತ್ರೆಗೆ ಹೋಗದಿರುವುದು ಅತ್ಯುತ್ತಮವಾದ ಮಾರ್ಗ. ಕಾಲರಾ ತಗಲದಂತೆ ಮೊದಲೇ ಇನಾಕ್ಯುಲೇಷನ್ ಮಾಡಿಸಿ ರಕ್ಷಣೆ ಪಡೆದಲ್ಲಿ ಅಲ್ಲಿಗೆ ಹೋಗುವುದು ಮಧ್ಯಮ ಮಾರ್ಗ.

ಈಗಾಗಲೇ ಮೈಸೂರು ನಗರದ ಆರೋಗ್ಯ ಇಲಾಖೆಯವರು ಹೋದ ಮಾಹೆಯಂತ್ಯದಲ್ಲಿ ಕಾಲರಾ ರೋಗ ತಗುಲಿದವರು ನಗರಕ್ಕೆ ಬಂದೊಡನೆಯೇ ಮುನ್ನೆಚ್ಚರಿಕೆ ಕಾರ್ಯಕ್ರಮವನ್ನು ಕೈಗೊಂಡು ರೋಗವು ಹರಡದೆ ಅಲ್ಲೇ ಶಮನವಾಗುವಂತೆ ಮಾಡಿರುವರು. ಸಾವಿರಾರು ಇನಾಕ್ಯುಲೇಷನ್ ಮಾಡಿರುವರು. ಹೆಚ್ಚು ಜನ ಸಂದಣಿಯಾಗುವ ಮತ್ತು ಆರೋಗ್ಯ ನಿಯಮಕ್ಕೆ ವ್ಯತಿರಿಕ್ತವಾಗಿರುವ ಹೋಟೇಲುಗಳನ್ನು ಒಂದುವಾರ ಮುಚ್ಚಿಸಿದರು. ಇದರಿಂದ ಹೋಟೇಲು ಮಾಲೀಕರಿಗೆ ವ್ಯಾಪಾರವಿಲ್ಲದೆ ನಷ್ಟವುಂಟಾದರೂ ನಗರದ ಆರೋಗ್ಯವು ಉತ್ತಮ ಸ್ಥಿತಿಗೆ ಬಂದಿತು. ಈ ಕಾರ್ಯದಲ್ಲಿ ಆರೋಗ್ಯ ಇಲಾಖೆಯವರ ಕರ್ತವ್ಯನಿಷ್ಠೆ ಸ್ತುತ್ಯವಾದುದು. ಹೊಸದಾಗಿ ನಮ್ಮ ನಗರಕ್ಕೆ ಬಂದಿರುವ ಆರೋಗ್ಯಾಧಿಕಾರಿಗಳಾದ ಡಾ|| ಶೇಷಗಿರಿರಾಯರು ಶ್ರಮಪಟ್ಟಿದ್ದು ಸಾರ್ಥಕವಾಯಿತು.

ಮಹದೇಶ್ವರನ ಜಾತ್ರೆಗೆ ಹೋಗಬೇಡಿರೆಂದು ಪುನಃ ಆರೋಗ್ಯಾಧಿಕಾರಿಗಳು ಎಚ್ಚರಿಕೆಯುತ್ತಿರುವರು. ಎಲ್ಲರೂ ಇವರಿತ್ತಿರುವ ಎಚ್ಚರಿಕೆಯನ್ನು ಗಮನಿಸಿ ನಗರವು ಈ ರೋಗಕ್ಕೆ ತುತ್ತಾಗದಂತೆ ಮಾಡಲು ಎಲ್ಲರೂ ಸಹಕರಿಸಬೇಕಾದುದು ಮುಖ್ಯ ಕರ್ತವ್ಯವಾಗಿದೆ.

ಶ್ರೀ ಕಾಶೀ ಮಹಾಯಾತ್ರೆ

ಸೂಚನೆ: ಈ ಮೊದಲು ಪ್ರಸಿದ್ಧ ಮಾಡಿದಂತೆ ೧೮ನೇ ಯಾತ್ರೆಯ ಟೂರಿಸ್ಟ ರೈಲ್ವೆ ಟಕೀಟುಗಳು ಭರ್ತಿ ಆಗಿರುತ್ತವೆ. ಟೂರಿಸ್ಟ ರೈಲ್ವೆಟಕೀಟುಗಳನ್ನು ಪಡೆದ ಯಾತ್ರಿಕರು ತಾ|| ೧೧-೩-೫೧ ಕ್ಕೆ ಹೊರಡುವ ಯಾತ್ರೆಗೆ ಸರ್ವ ತಯಾರಿಯಲ್ಲಿರಬೇಕಾಗಿ ಕೋರಿದೆ.



೧೯ ನೇ ಯಾತ್ರೆಯ ರೈಲು

೧೯ ನೇ ಶ್ರೀ ಕಾಶಿ, ಕಲ್ಕತ್ತ, ಗಯಾ, ಪ್ರಯಾಗ, ಹರಿದ್ವಾರ, ದೆಹಲಿ, ಅಯೋಧ್ಯಾ, ಮಥುರಾ ಆಗ್ರಾ, ಉಜ್ಜಯಿನಿ, ಬೊಂಬಾಯಿ ಮುಂತಾದ ಸುಪ್ರಸಿದ್ಧ ಯಾತ್ರೆಗಳು ಹಾಗು ೫ ಸ್ವಯಂಭೋದಿವ್ಯ ಜ್ಯೋತಿರ್ಲಿಂಗಗಳ ದರ್ಶನವು ಅನೇಕ ಸುಂದರ ಪಟ್ಟಣಗಳು ಮಹಾಶಿವರಾತ್ರಿಗೆ ಭೂಕೈಲಾಸ ಶ್ರೀ ಕಾಶೀವಿಶ್ವನಾಥನ ಜಯಂತಿ ಭಾರಿ ಮಹೋತ್ಸವಕ್ಕೆ ೫ ದಿನ ಮೊಕ್ಕಾಂ-ಟ್ರೇನಿನಲ್ಲಿ ರಾತ್ರಿ ಮಲಗಲಿಕ್ಕೆ ಒಳ್ಳೆ ಸೌಕರ್ಯ-ಸಂಡಾಸಗಳು, ನಳ್ಳಿ, ರಾತ್ರಿ ಮಲಗಲಿಕ್ಕೆ ಬೆಂಚುವುಳ್ಳ ಸ್ಪೆಷಲ್ ಬೋಗಿಗಳನ್ನು ಪ್ರವಾಸ ಸುಖಕರವಾಗಲೆಂದು ರಿಜರ್ವ ಮಾಡಿರುತ್ತದೆ

ತಾ|| ೨೫-೨-೫೧ನೇ ದಿವಸ ಮುಂಜಾನೆ ಬೆಂಗಳೂರು ಸ್ಟೇಷನ್ನಿನಿಂದ ಎಕ್ಸ್‌ಪ್ರೆಸ್ ಗಾಡಿಗೆ ಟ್ರೇನ್ ಸರ್ವಿಸ್ ರಿಜರ್ವಿನಿಂದ ಹೊರಟು ೨೭-೨-೫೧ನೇ ದಿವಸ ಒಳ್ಳೆ ಸೌಕರ್ಯವುಳ್ಳ ಸ್ಪೆಷಲ್ ಬೋಗಿಗಳಲ್ಲಿ ಪುನಾದಿಂದ ಹೊರಟು ಎಲ್ಲಾ ತೀರ್ಥ ಯಾತ್ರೆಗಳನ್ನು ಮಾಡಿಕೊಂಡು ೧-೪-೫೧ ಕ್ಕೆ ವಾಪಸ್ಸು ಬೆಂಗಳೂರು ಸ್ಟೇಷನ್ನಿಗೆ ಬರುವುದು.

ಹೆಚ್ಚಿನ ತರಗತಿಯು ೩ ನೇ ವರ್ಗ ರೈಲ್ವೆ ಚಾರ್ಜ ೧೭೫ ರೂ. ಕೂಡಲೇ ಸೀಟ್ ೧ ಕ್ಕೆ ೨೫ ರೂ. ಯಂತೆ ಅಡ್ವಾನ್ಸ್ ಕಳಿಸಿದಲ್ಲಿ ನಿಮ್ಮ ನಿಮ್ಮ ಸ್ಥಳಗಳನ್ನು ರಿಜರ್ವಮಾಡಲಾಗುವುದು. ಸುಸ್ತಿ ಆದಲ್ಲಿ ಖಂಡಿತವಾಗಿ ಟಿಕೇಟುಗಳು ಸಿಗಲಾರವು. ತ್ವರೆಮಾಡಿರಿ ಹೆಚ್ಚಿನ ಮಾಹಿತಿ ಜಾಹಿರಾತು ನೋಡಿರಿ—

ಉತ್ತರ ಸಲುವಾಗಿ ೦-೨-೦ಟಿಕೇಟು ಲಗತ್ತಿಸಿ ಕಳಿಸಿರಿ. ಯಾತ್ರಾ ಹೊರಡುವ ದಿವಸ ಸ್ವಲ್ಪ ಉಳಿದಿವೆ.

ಶ್ರೀ ಶಿವಾನಂದ ಯಾತ್ರಾ ಕಂಪನಿ
ಬನಹಟ್ಟಿ (ಪೋಸ್ಟು)
ಕುಡಚಿ-ಮಾರ್ಗ. ಎಂ. ಎಸ್. ಎಂ. ರೈಲ್ವೆ.

ಸೂ. ಹೆಚ್ಚಿನ ಮಾಹಿತಿ ಸಲುವಾಗಿ ಮ|| ರಾ|| ಪಿ. ಬಿ. ಪುಲ್ಲಪ್ಪ, ಸಂತೇಪೇಟೆ, ಮೈಸೂರು ಇವರನ್ನು ವಿಚಾರಿಸಿರಿ.

ಮನೆ ಬಿಕರಿಗಿದೆ

ಚಾಮುಂಡಿ ಪುರಂನಲ್ಲಿ ೨ ಔಟ್ ಹೌಸ್, ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ, ಉಳ್ಳ ತಿಂಗಳಿಗೆ ಸುಮಾರು ೮೦ ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೋ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು.

ರ ಣ ಜಿ ತ್

16—2—51ರಿಂದ ಅಮೋಘ 2ನೇ ವಾರ
ಪ್ರತಿದಿನ 3 ಆಟಗಳು
ಕರ್ದಾರ್ ಮತ್ತು ನೌಷದಾರವರ

ದಾ ಸ್ತಾ ನ್

ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್, ವೀಣಾ, ಸುರೇಶ್, ಮುಂತಾದವರು

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

*

**ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು**

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಬಿಕ್ಕಟ್ಟನ್ನು ಬಗೆಹರಿಸಲು ಬ್ರಿಟನ್ ಮತ್ತು ಅಮೆರಿಕಾಗಳು ಸಲಹೆಗಳನ್ನು ತಯಾರಿಸಿ ವಿಶ್ವಸಂಸ್ಥೆಯ ಮುಂದಿಟ್ಟಿವೆ. ಈ ವಿಷಯದಲ್ಲಿ ಇಂದಿನಿಂದ ಚರ್ಚೆ ನಡೆಯಲಿದೆ.

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೨—೧೯೫೧ನೇ ಗುರುವಾರ [ಸಂಚಿಕೆ ೧೪೩

ಅಸ್ಸಾಂ, ಮಣಿಪುರಗಳಲ್ಲಿ ಕಮ್ಯೂನಿಸ್ಟರ ಹಾವಳಿ

ವಿವಿಧ ಶಸ್ತ್ರಾಸ್ತ್ರಗಳ ವಶ

ಅಸ್ಸಾಂ, ಮಣಿಪುರ ಪ್ರಾಂತಗಳಲ್ಲಿ ಬಲಾತ್ಕಾರದಿಂದ ಭತ್ತ ವಸೂಲಿ, ತಮ್ಮ ಅಕ್ರಮ ಕಾರ್ಯಾಚರಣೆಗೆ ನೆರವಾಗದವರ ಮನೆಗಳಿಗೆ ಅಗ್ನಿಸ್ಪರ್ಶ ಸರ್ಕಾರ ನೌಕರರ ಮೇಲೆ ಬೀಳುವುದು ದರೋಡೆ, ಮುಂತಾದ ಅನೇಕ ಕೃತ್ಯಗಳು ನಡೆಯುತ್ತಲಿವೆ ಈ ಭಯೋತ್ಪಾದಕ ಚಟುವಟಿಕೆಗಳನ್ನು ತಡೆಗಟ್ಟಲು ನಡೆದ ಪೋಲೀಸ್ ಕಾರ್ಯಾಚರಣೆಯಲ್ಲಿ 124 ಪಿಸ್ತೂಲ್, 1 ಬ್ರೆನ್‌ಗನ್ 2 ಮಿಷನ್‌ಗನ್, 300 ಕಾರ್ಬೈನ್ 228 ಸಬ್ ಮಿಷನ್‌ಗನ್, 240 ಗ್ರೆನೈಡ್, 145 ಪಿಸ್ತೂಲು ಮ್ಯಾಗಜೈನ್ ಮುಂತಾದ ಶಸ್ತ್ರಾಸ್ತ್ರಗಳು ದೊರೆತಿವೆ.

೩೮ನೇ ಅಕ್ಷಾಂಶ

ಕೊರಿಯಾದಲ್ಲಿ ೩೮ನೇ ಅಕ್ಷಾಂಶವನ್ನು ದಾಟುವ ವಿಷಯವು ರಾಜಕೀಯ ವ್ಯಾಪ್ತಿಗೆ ಒಳಪಟ್ಟಿದೆ. ಯುದ್ಧದಲ್ಲಿ ಭಾಗವಹಿಸುತ್ತಲಿರುವ ರಾಷ್ಟ್ರಗಳು ಸಮಾಲೋಚನೆ ನಡೆಸುವುದು ಅವಶ್ಯಕವೆಂದು ಪಾರ್ಲಿಮೆಂಟಿನಲ್ಲಿ ಬ್ರಿಟಿಷ್ ಅಂಡರ್ ಸೆಕ್ರೆಟರಿಯವರು ತಿಳಿಸಿರುವರು.

ಅಮೆರಿಕಾ ಜನಸಂಖ್ಯೆ

ಜನವರಿ ಮೊದಲನೇ ವಾರದಲ್ಲಿ ಅಮೆರಿಕಾದ ಜನಸಂಖ್ಯೆಯು ೧೫೫,೦೦,೮೫,೦೦೦.

ಶಿಕ್ಷೆ

ಬೆಂಗಳೂರು ಫೆ. ೨೧

ದಿವಂಗತ ಜಸ್ಟಿಸ್ ಟಿ. ಪರಮಶಿವಯ್ಯನವರ ಎಸ್ಟೇಟಿನ ಸಂಬಂಧದಲ್ಲಿ ಸುಳ್ಳು ಸಾಕ್ಷ್ಯದ ಅಪಾದನೆ ಮೇಲೆ ಶ್ರೀ ಎಲ್. ಎಸ್. ರಾಜುರವರಿಗೆ ಬೆಂಗಳೂರು ಮೊದಲನೇ ಸಿಟಿ ಮ್ಯಾಜಿಸ್ಟ್ರೇಟರು ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವರು.

ಅಸ್ವಸ್ಥರಾಗಿರುವ ಶ್ರೀ ಎಲ್. ಎಸ್. ರಾಜುರವರನ್ನು ನೆನ್ನೆ ಮೊದಲನೇ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಅಂಬುಲೆನ್ಸ್ ವಾಹನದಲ್ಲಿ ಕರೆತಂದು ಕೋರ್ಟಿನೊಳಕ್ಕೆ ಸ್ಟ್ರೆಚರಿನಲ್ಲಿ ತರಲಾಯಿತು.

ಮಾರಾಟ ತೆರಿಗೆ ವಿನಾ

ಟ್ರ್ಯಾಕ್ಟರುಗಳ ಮೇಲಿನ ಮಾರಾಟ ತೆರಿಗೆಯನ್ನು ಮದರಾಸು ಸರ್ಕಾರವು ವಿನಾ ಮಾಡಿದೆ.

ರೈಲ್ವೆ ಪ್ರಯಾಣದರ ಏರುವುದು

ಚೀಫ್ ಕಮಿಷನರ ಹುದ್ದೆ ರದ್ದು

೧೯೫೧ನೇ ಏಪ್ರಿಲ್ ಒಂದರಿಂದ ಭಾರತಾದ್ಯಂತ ಎಲ್ಲಾ ರೈಲುಗಳಲ್ಲೂ ಪ್ರಯಾಣ ದರವನ್ನು ಏರಿಸಲು ಭಾರತ ಸರ್ಕಾರವು ನಿರ್ಧರಿಸಿದೆ.

ಮೈಲಿಯೊಂದಕ್ಕೆ ೩ನೇ ತರಗತಿಗೆ ೧ ಪೈ ಇಂಟರ್ ೧॥ ಪೈ ೨ನೇ ತರಗತಿ, ೨ ಪೈ ಮತ್ತು ಒಂದನೇ ತರಗತಿ ೩ ಪೈ ನಂತೆ ಹೆಚ್ಚಿಸಲಾಗುವುದು. ಇದರಿಂದ ಮುಂದಿನ ಸಾಲಿನಲ್ಲಿ ಹತ್ತೊಂಭತ್ತು ಕೋಟಿ ರೂ. ಗಳ ಹೆಚ್ಚಿಗೆ ಆದಾಯ ಬರುವ ನಿರೀಕ್ಷಣೆಯಿದೆ.

ಕೇಂದ್ರ ರೈಲ್ವೆ ಬೋರ್ಡಿನಲ್ಲೂ ಕೆಲವು ಬದಲಾವಣೆಗಳನ್ನು ಮಾಡಲಾಗುವುದು. ಬೋರ್ಡಿನಲ್ಲಿರುವ ಸದಸ್ಯರ ಸಂಖ್ಯೆಯನ್ನು ಕಡಮೆಮಾಡುವುದಲ್ಲದೆ ಶ್ರೀ ಬಕ್ಲೆಯವರು ನಿವೃತ್ತರಾದೊಡನೆಯೇ ರೈಲ್ವೆ ಚೀಫ್ ಕಮಿಷನರ ಹುದ್ದೆಯನ್ನು ರದ್ದುಗೊಳಿಸಲಾಗುವುದು.

ಭದ್ರತಾ ಸಮಿತಿಯಲ್ಲಿ ಪುನಃ ಕಾಶ್ಮೀರ ಪ್ರಶ್ನೆ ಚರ್ಚೆ

ಬ್ರಿಟನ್-ಅಮೆರಿಕಾ ಸಂಯುಕ್ತ ಯೋಜನೆ

ಸದಸ್ಯರಾಷ್ಟ್ರಗಳ ಸೈನ್ಯವನ್ನು ಕಾಶ್ಮೀರದಲ್ಲಿಡಬೇಕು

ಬ್ರಿಟನ್ ಮತ್ತು ಅಮೆರಿಕಾ ರಾಷ್ಟ್ರಗಳು ಭದ್ರತಾಸಮಿತಿಯಲ್ಲಿ- ಕಾಶ್ಮೀರ ಪ್ರಶ್ನೆ ವಿಷಯದಲ್ಲಿ ಒಂದು ಹೊಸ ಸಂಯುಕ್ತ ಯೋಜನೆಯನ್ನು ಮಂಡಿಸಿವೆ

ಸರ್ ಡಿಕ್ಸನ್ನರ ಕಾರ್ಯವನ್ನು ಪ್ರಶಂಸಿ ಅವರ ರಾಜೀನಾಮೆಯನ್ನು ಅಂಗೀಕರಿಸಿ ಬೇರೊಬ್ಬ ಮಧ್ಯಸ್ಥಿಕೆಗಾರರನ್ನು ನೇಮಿಸಿಕೊಳ್ಳಬೇಕು, ಸಮಿತಿಯ ಆಧಾರದ ಮೇಲೆ ಮುಂದಿನ ಕಾರ್ಯಕ್ರಮವನ್ನ ನಡಸಬೇಕು. ಆದರೆ ಅವರು ತಮ್ಮ ವರದಿಯಲ್ಲಿ ಕಾಶ್ಮೀರ ಪ್ರಶ್ನೆಯನ್ನು ಭಾರತ ಪಾಕಿಸ್ತಾನಗಳಿಗೆ ಬಿಟ್ಟುಬಿಡಬೇಕೆಂದು ಹೇಳಿರುವುದನ್ನು ಒಪ್ಪಲಾಗುವುದಿಲ್ಲ. ವಿಶ್ವಸಂಸ್ಥೆಯ ಆಶ್ರಯದಲ್ಲಿ ಪ್ರಜಾಭಿಪ್ರಾಯವಡೆಯಬೇಕು. ಗಡಿಯಲ್ಲಿರುವ ಜನರ ಅಭಿಪ್ರಾಯ ಮತ್ತು ಇತರರ ಅಭಿಪ್ರಾಯದಲ್ಲಿ ಒಮ್ಮತ ಬರದಿದ್ದಲ್ಲಿ, ಅಂತರಾಷ್ಟ್ರೀಯ ನ್ಯಾಯಸ್ಥಾನವು ಭಾರತ ಪಾಕಿಸ್ತಾನಗಳ ಸಲಹೆಯನ್ನು ಪಡೆದು ನೇಮಿಸುವ ಪಂಚಾಯಿತಿಯು ತೀರ್ಮಾನ ಮಾಡಬೇಕು ಎಂಬ ಅಂಶಗಳು ಈ ಹೊಸ ಯೋಜನೆಯ ಅಡಕವಾಗಿವೆ. ಈ ವಿಷಯಗಳನ್ನು ಪರಿಶೀಲಿಸಲು ಸಭೆಯನ್ನು ಒಂದುವಾರ ಮುಂದೆ ಹಾಕಲಾಯಿತು. ಮುಂದಿನ ವಾರದಲ್ಲಿ ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಭದ್ರತ ಸಮಿತಿಯ ಅಧ್ಯಕ್ಷರಾಗಬೇಕಾಗಿದೆ. ಕಾಶ್ಮೀರ ಪ್ರಶ್ನೆಯನ್ನು ಸಮಿತಿಯಲ್ಲಿ ಚರ್ಚಿಸಬೇಕಾಗಿರುವುದರಿಂದ ಅವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವುದಿಲ್ಲ. ನೆದರ್‌ಲ್ಯಾಂಡಿನ ಪ್ರತಿನಿಧಿಯು ಆಗ ಅಧ್ಯಕ್ಷರಾಗುವರು.

ಹೆಚ್ಚು ತೆರಿಗೆಯಿಲ್ಲ

ಮುಂದಿನ ಸಾಲಿನಲ್ಲಿ ಹೆಚ್ಚು ತೆರಿಗೆಯನ್ನು ವಿಧಿಸುವ ಯೋಜನೆಯು ಸರ್ಕಾರಕ್ಕಿಲ್ಲವೆಂದು ತಿರುವಾಂಕೂರು ಕೊಚ್ಚಿನ್ ಉಪರಾಜಪ್ರಮುಖರು ಶಾಸನಸಭೆಯ ಪ್ರಾರಂಭಭಾಷಣದಲ್ಲಿ ತಿಳಿಸಿರುವರು.

ನಿಧನ

ಮೈಸೂರು ಫೆ. 22

ಸಾಕಮ್ಮ ಕಾಫಿ ವರ್ಕ್ಸ್ ಮಾಲೀಕರಾದ ಧರ್ಮಪರಾಯಣೆ ಸಾಕಮ್ಮನವರು ಇಂದುಬೆಳಗ್ಗೆ ೮-೩೦ ಗಂಟೆಯಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರು. ಈಗ್ಗೆ ಕೆಲವು ತಿಂಗಳುಗಳಿಂದ ಅವರು ಖಾಯಿಲೆ ಇದ್ದರು.

ಸಕ್ಕರೆ ಪರಿಸ್ಥಿತಿ

ಸಕ್ಕರೆ ಪರಿಸ್ಥಿತಿಯು ಹೋದ ವರ್ಷಕ್ಕಿಂತ ಈ ವರ್ಷ ಉತ್ತಮಗೊಂಡಿದೆ ಎಂದು ಆಹಾರಸಚಿವ ಶ್ರೀ ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಪ್ರಗತಿ ಸಮರ್ಪಕವಾಗಿಲ್ಲ

ದಾಮೋದರ ಕಣಿವೆ ಯೋಜನೆಯ ಕಾರ್ಯಕ್ರಮ ಪ್ರಗತಿಯು ಅಷ್ಟು ಸಮರ್ಪಕವಾಗಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಕೆಲವು ಸದಸ್ಯರು ಟೀಕಿಸಿರುವರು. ೫೫ ಕೋಟಿ ರೂಪಾಯಿಗಳ ಈ ಯೋಜನೆಯಲ್ಲಿ ೧೧೦ ಕೋಟಿ ರೂಪಾಯಿಗಳು ವೆಚ್ಚ ಮಾಡಬೇಕಾಗುವುದೆಂದು ಸರ್ಕಾರವು ಪಾರ್ಲಿಮೆಂಟಿನಲ್ಲಿ ತಿಳಿಸಿದೆ.

ಆಹಾರ ಇಲಾಖಾಧಿಕಾರಿಗಳ ದುಂಡಾವೃತ್ತಿಯೆ ?

ಕೃಷ್ಣರಾಜ ನಗರಕ್ಕೆ ೮ ಮೈಲಿಯಲ್ಲಿರುವ ದೆಗ್ಗನಹಳ್ಳಿ ಗ್ರಾಮಕ್ಕೆ ತಾ॥ ನ ಫುಡ್ ಶಿರಸ್ತೇದಾರರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರು ಇದೇ 17ನೇ ತಾ॥ ಹೋಗಿ, ರೈತರುಗಳಾದ ಯಜಮಾನ್ ಸಿದ್ದೇಗೌಡ ಕರೀಗೌಡ ಮತ್ತು ಚಿಕ್ಕಣ್ಣ ಎಂಬುವವರ ಮನೆಗೆ, ಗಂಡಸರಿಲ್ಲದ ವೇಳೆ ಹೋಗಿ, ಕಾನೂನು ರೀತ್ಯಾ ಅವರು ಭತ್ತವನ್ನು ಸರ್ಕಾರಕ್ಕೆ ಕೊಟ್ಟಿದ್ದಾಗ್ಯೂ, ತಮ್ಮ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದ ಭತ್ತವನ್ನೆಲ್ಲಾ, ಮನೆಯಲ್ಲಿದ್ದ ಹೆಂಗಸನ್ನು ಹೆದರಿಸಿ ಬೋರಕ ದೂಡಿ ವಶಪಡಿಸಿಕೊಂಡು ಹೋದರು. ಇದೇರೀತಿಯಾಗಿ ಆ ತಾ॥ ನ ಸುಮಾರು 25 ಗ್ರಾಮಗಳಲ್ಲಿ ಆಹಾರ ಇಲಾಖಾಧಿಕಾರಿಗಳು ಜನರಿಗೆ ಕಿರುಕುಳಕೊಡುತ್ತಲಿರುವರೆಂಬ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಕೃಷ್ಣರಾಜನಗರದ ರೈತರುಗಳಾದ ಎಲ್. ಬಿ. ಪುಟ್ಟಬಸಪ್ಪ, ವೈ. ಎನ್. ವೆಂಕಟಸುಬ್ಬಯ್ಯ ಮತ್ತಿತರು 19ನೇ ತಾ॥ ಮೈಸೂರಿನಲ್ಲಿ ಮುಖ್ಯಮಂತ್ರಿಗಳಲ್ಲಿ ನಿಯೋಗ ಹೋಗಿ ವಿಶದೀಕರಿಸಿದರು. ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆಯಿತ್ತರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಚೈನಾದ ಭಾರತ ರಾಯಭಾರಿಯ ರಾಜಿನಾಮೆಯೆ?

ಚೈನಾದಲ್ಲಿರುವ ಭಾರತ ರಾಯಭಾರಿ ಶ್ರೀ ಪನ್ನಿಕರ್‌ರವರು, ತಮ್ಮ ಹುದ್ದೆಗೆ ರಾಜಿನಾಮೆಯಿಯಬೇಕೆಂಬ ಅಭಿಲಾಷೆಯುಳ್ಳವರಾಗಿರುವುದ್ದಾರೆಂದು ಲಂಡನ್ನಿನಲ್ಲಿರುವ ತಮ್ಮ ಮಿತ್ರರಿಗೆ ಕಾಗದ ಬರೆದಿರುವುದಾಗಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ವರದಿಮಾಡಿದೆ

ವಕೀಲರು ಸಹಾಯ ನೀಡಬಾರದು

ವಿಶೇಷ ಬಡ್ಡಿಯನ್ನು ತೆಗೆದುಕೊಂಡು ಜನರನ್ನು ಅನೇಕ ರೀತಿ ಬಾಧಿಸಿ, ಅವರನ್ನು ಸುಲಿಯುತ್ತಲಿರುವ ಸಾಲ ಕೊಡುವವರ ಸಹಾಯಕ್ಕೆ ವಕೀಲರು ಬರಬಾರದು ಎಂದು ಮದರಾಸಿನ ಹೈಕೋರ್ಟಿನಲ್ಲಿ ಒಂದು ವಿವಾದದಲ್ಲಿ ನ್ಯಾಯಮೂರ್ತಿಗಳು ತೀರ್ಪು ಕೊಡುತ್ತಾ ಹೇಳಿರುವರು.

ಅಂತಹ ಸುಲಿಗೆಗಾರರಿಗೆ ನ್ಯಾಯಾಸ್ಥಾನಗಳು ರಕ್ಷಣೆ ಕೊಡಬಾರದೆಂದೂ ಹೇಳಿರುವರು.

೧೧೦ ರೈಲ್ವೆ ಇಂಜನ್ನುಗಳು

ಮೀಟರ್ ಗೇಜಿನ ೧೧೦ ರೈಲ್ವೆ ಎಂಜನ್ನುಗಳಿಗೆ ಭಾರತ ಸರ್ಕಾರವು ಬ್ರಿಟನ್ನಿನ ಸಂಸ್ಥೆಯೊಂದಕ್ಕೆ ಆರ್ಡರ್ ಕೊಟ್ಟಿದೆ ಇದರ ಬೆಲೆ ೩೧೪ ಲಕ್ಷ ರೂಪಾಯಿಗಳಾಗುವುವು ೧೯೫೧ನೇ ಸೆಪ್ಟಂಬರ್ ವೇಳೆಗೆ ಈ ಎಂಜನ್ನುಗಳು ಭಾರತಕ್ಕೆ ಬರುವುವು.

ಬಸ್ಸು, ಮತ್ತು ೩ನೇ ತರಗತಿ ರೈಲಿನಲ್ಲಿ ಗೌರ್ನರರ ಪ್ರಯಾಣ

ಬೊಂಬಾಯಿನ ಗೌರ್ನರ್ ೭೨ ವರ್ಷ ವಯಸ್ಸಿನ ರಾಜಾ ಮಹಾರಾಜ ಸಿಂಗ್‌ರವರು ಬೊಂಬಾಯಿ ನಗರದ ಬಸ್ಸಿನಲ್ಲಿ ೫ ಮೈಲಿ ಪ್ರಯಾಣ ಮಾಡಿದರು. ಹಿಂದೆಯೊಮ್ಮೆ ಅನಿರೀಕ್ಷಿತವಾಗಿ ೩ನೇ ತರಗತಿಯ ರೈಲಿನಲ್ಲಿ ಪ್ರಯಾಣ ಮಾಡಿದ್ದರು.

ವಿಶೇಷಾಜ್ಞೆ

ಅಸ್ಸಾಂನಲ್ಲಿ ನಡೆಯುತ್ತಲಿರುವ ಗಲಭೆ ಗೊಂದಲಗಳನಡಗಿಸಲು ಅಸ್ಸಾಂ ಗೌರ್ನರ್ ಒಂದು ವಿಶೇಷಾಜ್ಞೆಯನ್ನು ಹೊರಡಿಸಿರುವರು.

ಮೂಲ ಶಿಕ್ಷಣ ಶಾಸನ

ಒರಿಸ್ಸಾದಲ್ಲಿ ಮೂಲ ಶಿಕ್ಷಣ ಶಾಸನವನ್ನು ಜಾರಿಗೆ ತರಲಾಗುವುದು ಇದರಿಂದ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗುವುದು.

ಎರಡು ತಿಂಗಳ ಕಾಲ ೧೪೪ನೇ ಸೆಕ್ಷನ್

ತಗಡೂರು ಪರಿವಾರದ ಕೋಮಿನ ಜನರು, ಮಾರಿಹಬ್ಬಕ್ಕೂ ಅದರ ಅಂಗವಾದ ಶ್ರೀ ಅಂಕನಾಥೇಶ್ವರಸ್ವಾಮಿಯವರು ಮತ್ತು ಶ್ರೀ ಪಟ್ಟದಮ್ಮನವರ ಕೊಂಡಕ್ಕೂ ಲೈಸನ್ಸಿಗಾಗಿ, ತಾ॥ ಅಮಲ್ದಾರ್ರವರಲ್ಲಿ ಅರ್ಜಿ ಹಾಕಿಕೊಂಡಿದ್ದರು. ತಾ॥ ಅಮಲ್ದಾರು, ತಾ॥ ಪೋಲೀಸ್ ಇನ್‌ಸ್ಪೆಕ್ಟರವರು ಸಬ್ ಡಿವಿಜನ್ ಆಫೀಸರವರು ಮತ್ತು ಡೆಪ್ಯುಟೀ ಕಮೀಷನರ್‌ರವರುಗಳಿಗೆ ಎರಡೆರಡು ರಿಜಿಸ್ಟಾರ್ ಪತ್ರಗಳನ್ನು ಬರೆದಿದ್ದಾರೆ. ಕೌಲಂದೆ ಸಬ್ ಇನ್‌ಸ್ಪೆಕ್ಟರವರು …ನ್ನು ಕಾನೂನಿಗೆ ವಿರೋಧವಾಗಿ ಕೋರ್ಟಿಗೆ ಹಾಜರ್ ಮಾಡಿದರು ಅದರಿಂದ ಪರಿವಾರದ ಮತ್ತು ಗಾಣಿಗ ಸೆಟ್ಟಿಗಳ ಮತಸ್ಥರು ಕೊಂಡಗಳನ್ನು ಮಾಡಕೂಡದೆಂದು ಫೆಬ್ರವರಿ ೧೫ರಿಂದ ಎರಡು ತಿಂಗಳ ಕಾಲ ನಂಜನಗೂಡು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರು ೧೪೪ನೇ ಸೆಕ್ಷನ್ ಜಾರಿ ಮಾಡಿದ್ದಾರೆ. ಈ ಆರ್ಡರನ್ನು ರದ್ದುಪಡಿಸಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸದರಿ ಕೋರ್ಟಿನಲ್ಲಿ ೧೭ನೇ ತಾ॥ ದಿವಸ ಪರಿವಾರ ಜನರು ಅರ್ಜಿ ದಾಖಲ್ ಮಾಡಿದ್ದಾರೆ ಇದೇ ತಿಂಗಳು ೨೭ಕ್ಕೆ ಹೀರಿಂಗ್ ಇರುತ್ತೆ ಎಂದು ತಗಡೂರು ರಾಮಚಂದ್ರರಾಯರು ಬರೆಯುತ್ತಾರೆ.

ಅಕ್ಕಿ ಬಂದಿದ್ದಕ್ಕೆ ಸತ್ಕಾರ ಕೂಟ

ಚೈನಾದಿಂದ ಭಾರತಕ್ಕೆ ಅಕ್ಕಿ ಬಂದಿದ್ದಕ್ಕೆ ಕಲ್ಕತ್ತಾದಲ್ಲಿರುವ ಚೈನಾ ರಾಯಭಾರಿ ಕಛೇರಿಯವರು ಒಂದು ಸತ್ಕಾರ ಕೂಟವನ್ನೇರ್ಪಡಿಸಿ, ಚೈನಾವು ಭಾರತಕ್ಕೆ ಅಕ್ಕಿಯನ್ನು ಕಳುಹಿಸಿರುವುದು ಸ್ನೇಹದ ಚಿಹ್ನೆ ಎಂದು ತಿಳಿಸಿದೆ.

ಜನಸಂಖ್ಯೆ ಸಮಸ್ಯೆ

ಭಾರತದಲ್ಲಿ ವಿಪರೀತವಾಗುತ್ತಲಿರುವ ಜನಸಂಖ್ಯೆ ಸಮಸ್ಯೆಯನ್ನು ಪರಿಹಾರ ಮಾಡಿದ ಹೊರತು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣವಾಗಲು ಸಾಧ್ಯವಿಲ್ಲವೆಂದು ಬೊಂಬಾಯಿ ಶ್ರೇಷ್ಠ ನ್ಯಾಯಾಧೀಶ ಶ್ರೀ ಎಂ. ಸಿ. ಚಾಗ್ಲಯವರು ತಿಳಿಸಿರುವರು.

ತಾಮ್ರವನ್ನು ಉಪಯೋಗಿಸಕೂಡದು

ತಾಮ್ರವನ್ನು ಅಡಿಗೆಮನೆ ಪಾತ್ರೆಗಳಿಗೂ ಇತರ ೫೦ ಸಾಮಾನುಗಳಿಗೂ ಏಪ್ರೆಲ್ ೧ರಿಂದ ಉಪಯೋಗಿಸಕೂಡದೆಂದು ಅಮೆರಿಕಾ ಸರ್ಕಾರ ಆಜ್ಞೆ ಹೊರಡಿಸಿದೆ.

ಗುಡ್ಸ್‌ರೈಲು ಉರುಳಿತು

ಗುಡ್ಸ್‌ರೈಲಿನ ಎಂಜನ್ನು ೧೨ ವ್ಯಾಗನ್ನುಗಳು ಕಲ್ಕತ್ತಕ್ಕೆ ೪೫ ಮೈಲಿ ದೂರದಲ್ಲಿ ಉರುಳಿಬಿದ್ದು ಇಬ್ಬರು ರೈಲ್ವೆ ಕೆಲಸಗಾರರು ಮೃತಪಟ್ಟರು.

ಮುಷ್ಕರ

ಬ್ರಿಟನ್ನಿನಲ್ಲಿ ಮುಷ್ಕರದ ಪರಂಪರೆಯೇ ನಡೆಯುತ್ತಲಿದೆ ಕೆಲವು ರೇವುಗಳಲ್ಲೂ ರೈಲುಗಳಲೂ ಕೆಲಸವೆಲ್ಲ ಅವ್ಯವಸ್ಥೆಯಾಗಿದೆ.

ಮುನಿಸಿಪಲ್ ಕಮಿಷನರವರ ಆಫೀಸ್, ಮೈಸೂರು

ತಾ॥ ೨೦-೨-೫೧

ಟೆಂಡರ್ ನೋಟೀಸ್

೧೯೫೧-೫೨ನೇ ಸಾಲಿಗೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳ ಸಪ್ಲೈ ಬಗ್ಗೆ ಮೊಹರಾದ ಟೆಂಡರುಗಳನ್ನು, ಮುನಿಸಿಪಲ್ ಆಫೀಸಿನಲ್ಲಿ ಕಮಿಷನರವರಿಂದ ಅಥವಾ ಅವರಿಂದ ಮೊಕರೂರಾದವರಿಂದ ತಾ॥ ೨೮-೨-೫೧ನೇ ದಿನ ೪ ಗಂಟೆಯವರೆಗೆ ತೆಗೆದುಕೊಳ್ಳಲಾಗುತ್ತೆ.

ಪ್ರತಿ ಟೆಂಡರೊಡನೆ ಮುನಿಸಿಪಲ್ ಖಜಾನೆಗೆ ರೂ. ೧೦೦ ಟೆಂಡರ್ ಡಿಪಾಜಿಟ್ಟು ಕಟ್ಟಿದ ಸರ್ಟಿಫೈಡ್ ಚಲನನ್ನು ಕಳುಹಿಸತಕ್ಕದ್ದು. ಹಾಗೆ ಟೆಂಡರ್ ಡಿಪಾಜಿಟ್ಟಿಲ್ಲದ ಟೆಂಡರುಗಳನ್ನು ನಿರಾಕರಿಸಲಾಗುತ್ತೆ.

ಹೆಚ್ಚಿಗೆ ವಿವರಗಳನ್ನು ಆಫೀಸುವೇಳೆಯಲ್ಲಿ ಪಡೆಯಬಹುದು ಇಲ್ಲದೆ ಆಫೀಸ್ ನೋಟೀಸ್ ಬೋರ್ಡುಗಳಲ್ಲಿಯೂ ನೋಡಬಹುದು.

ವಿವರ—ತೆಂಗಿನಕಡ್ಡಿ ಬರಲು, ಈಚಲ ಚಕ್ಕೆ, ಬಾವಿಹಗ್ಗ, ಬೊಂಬು, ಗಳು ವಗೈರೆ ಸಾಮಾನುಗಳು

(ಸಹಿ) **ಸಿ. ನರಸಿಹ್ಮಮೂರ್ತಿ,**
ಮುನಿಸಿಪಲ್ ಕಮಿಷನರ್.

ಮನೆ ಬಿಕರಿಗಿದೆ

ಚಾಮುಂಡಿ ಪುರಂನಲ್ಲಿ ೨ ಔಟ್ ಹೌಸ್, ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ, ಉಳ್ಳ ತಿಂಗಳಿಗೆ ಸುಮಾರು ೮೦ ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ

ಎಂ. ಸುಬ್ಬರಾಮಯ್ಯ ಅಂಡ್-ಕೋ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

ಚಂದ್ರಮಂಡಲಕ್ಕೆ

ಚಂದ್ರಮಂಡಲಕ್ಕೆ ಹೋಗುವುದು ಸುಲಭವೆಂದು ಇದಕ್ಕಾಗಿ ೫ ಹಂತಗಳ ರಾಕೆಟ್ ತಯಾರಿಕ ಬಗ್ಗೆ ಯೋಜನೆ ಮಾಡಲಾಗಿದೆಯೆಂದು ಎು॥ ಆರ್ಥರ್ ವಿಸೆಂಟ್ ಬರ್ನ್ಯೆರವರು ತಿಳಿಸಿದ್ದಾರೆ.

ಹೈಕೋರ್ಟು ಜಡ್ಜ್‌ಗಳ ವೇತನ

'ಬ' ವಿಭಾಗದ ಸಂಸ್ಥಾನಗಳಲ್ಲಿನ ಹೈಕೋರ್ಟು ನ್ಯಾಯಾಧೀಶರುಗಳ ವೇತನದ ಪ್ರಶ್ನೆಯು ಭಾರತ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆಯೆಂದೂ ಈ ಬಗ್ಗೆ ಸದ್ಯದಲ್ಲಿಯೇ ಆಜ್ಞೆ ಹೊರಡಿಸಲಾಗುವುದೆಂದೂ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಪಾರ್ಲಿಮೆಂಟಿನಲ್ಲಿ ಲಿಖಿತ ಉತ್ತರವಿತ್ತಿರುವರು.

ಮುನಿಸಿಪಲ್ ಕಮಿಷನರವರ ಆಫೀಸ್, ಮೈಸೂರು

ತಾ॥ ೨೦-೨-೫೧

ರೀ ಟೆಂಡರ್ ನೋಟೀಸ್

೧೯೫೧-೫೨ನೇ ಸಾಲಿಗೆ ಮುನಿಸಿಪಾಲಿಟಿಗೆ ಸೇರಿದ ಎತ್ತುಗಳಿಗೆ ಬೇಕಾಗುವ ಸ್ಲೋಹುಲ್ಲನ್ನು ಸಪ್ಲೈ ಮಾಡಲು ಮೊಹರಾದ ಟೆಂಡರುಗಳನ್ನೂ, ೧೯೫೧ನೇ ಫೆಬ್ರವರಿ ಮಾಹೆ, ತಾ॥ ೨೭ನೇ ದಿನ ದಿವಿ ೧೨ ಗಂಟೆವರೆವಿಗೂ ಸ್ವೀಕರಿಸಲಾಗುತ್ತದೆ. ಅಪೇಕ್ಷೆಯುಳ್ಳವರು ೩೦೦ ರೂ ಟೆಂಡರ್ ಡಿಪಾಜಿಟ್ಟು ಹಣವನ್ನು ಮುನಿಸಿಪಲ್ ಖಜಾನೆಗೆ ಜಮಾ ಮಾಡಿ ಸರ್ಟಿಫೈಡ್ ಚಲನ್ ಸಮೇತ ಟೆಂಡರುಗಳನ್ನು ಕಳುಹಿಸತಕ್ಕದ್ದು.

ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು, ಮತ್ತು ಆಫೀಸ್ ನೋಟೀಸ್ ಬೋರ್ಡಿನಲ್ಲಿಯೂ ನೋಡಬಹುದು.

(ಸಹಿ) **ಸಿ. ನರಸಿಹ್ಮಮೂರ್ತಿ,**
ಮುನಿಸಿಪಲ್ ಕಮಿಷನರ್.

ರ ಣ ಜಿ ತ್

16—೭—೫೧ರಿಂದ ಅಪಾರ್ಥ 2ನೇ ವಾರ
ಪ್ರತಿದಿನ 3 ಆಟಗಳು
ಕದಾರ್ ಮತ್ತು ನೌಷದ್‌ರವರ

ದಾ ಸ್ತಾ ನ್

ಪಾತ್ರ—ಸುರಯ್ಯ, ರಾಜಕಪೂರ್
ಅಲಾ ನಸೀರ್, ವೀಣ, ಸುರೇಶ
ಮುಂತಾದವರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೨—೧೯೫೧ನೇ ಶುಕ್ರವಾರ [ಸಂಚಿಕೆ ೧೪೮

ಭಾರತೀಯರು ರಾಜಕೀಯ ಆರ್ಥಿಕ ಸ್ವಾತ್ರಂತವನ್ನು ಬಲಿಗೊಡರು

ನಿರಶನವ್ರತವನ್ನಾದರೂ ಆಚರಿಸಲು ಸಿದ್ಧ

ಭಾರತದಲ್ಲಿ ದಾರುಣವಾದ ಆಹಾರ ಪರಿಸ್ಥಿತಿಯನ್ನು ಎದುರಿಸಲು ಭಾರತ ಸರ್ಕಾರವು ಅಮೆರಿಕಾವನ್ನು ಆಹಾರ ಕೇಳಿರುವುದು ಅಷ್ಟು ಸುಲಭವಾಗಲಿಲ್ಲ. ಭಾರತೀಯರು ಆಹಾರವಿಲ್ಲದೆ ಉಪವಾಸವಿರುವುದಕ್ಕಾದರೂ ಸಿದ್ಧರಿರುವರೇ ವಿನಃ ತಮ್ಮ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರವನ್ನು ಕಳೆದುಕೊಳ್ಳಲು ಸಿದ್ಧರಾಗಿಲ್ಲ. ಹೀಗೆ ಹೊರಗೂ ಒಳಗೂ ಅನೇಕ ತೊಂದರೆಗಳನ್ನು ಭಾರತವು ಅನುಭವಿಸುತ್ತಲಿರುವಾಗ ಅಮೆರಿಕಾವು ಸಹಾಯ ನೀಡದಿದ್ದರೆ ಭಾರತೀಯರು ವಿಶೇಷ ತೊಂದರೇಡಾಗುವರು. ಇದರಿಂದ ಭಾರತ ಅಮೆರಿಕಾ ಮೈತ್ರಿಗೆ ಆತಂಕವಾಗಬಹುದು ಎಂದು ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಲೇ ಹೆಂಡರ್‌ಸನ್‌ರವರು ಹೇಳಿರುವರು.

ಧಾನ್ಯವನ್ನು ಕಾಳಸಂತೆಗೆ ಸಾಗಿಸುವರೇ ?

[ವಿಶೇಷ ಸುದ್ದಿಗಾರರಿಂದ]

ಚನ್ನರಾಯಪಟ್ಟಣ ಫೆ. ೨೧

ಕಾಂತರಾಜಪುರದ ಬಂಡವಾಳ ಶಾಹಿಗಳೂ, ಪ್ರಸಿದ್ಧ ಕಾಂಗ್ರೆಸ್ ನಾಯಕರೂ ಹಾಗೂ ಗಾಂಧೀ ಭಕ್ತರೆನಿಸಿಕೊಂಡವರೊಬ್ಬರು ಒಂದು ಗಾಡಿ ಭತ್ತವನ್ನು ಕಾಳ ಸಂತೆ ವ್ಯಾಪಾರಕ್ಕಾಗಿ ಪರ್ಮಿಟ್ ಇಲ್ಲದೆ ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ತೇಜ್ ಎಸ್. ನಂಜುಡಯ್ಯನವರು ಪತ್ತೆ ಹಚ್ಚಿ ಪೋಲೀಸರ ವಶಕ್ಕೆ ಕೊಟ್ಟಿರುತ್ತಾರೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎ. ಟಿ. ವಿಜಯ ರಾಘವನ್‌ರವರು ಮುಂದಿನ ತನಿಖೆ ಕ್ರಮ ಜರುಗಿಸುತ್ತಿದ್ದಾರೆಂದು ವರದಿಯಾಗಿದೆ.

ಪ್ರಪಂಚ ಪರ್ಯಟನ

ಹೈದರಾಬಾದಿನಿಂದ ಸೈಕಲ್ಲುಗಳ ಮೇಲೆ ಪ್ರಪಂಚ ಪರ್ಯಟನೆ ಹೊರಟಿರುವ ಮೂರು ಬಾಲಕವರಾಗಳು ಈಗಾಗಲೇ ೧೯೦೦ ಮೈಲಿ ಪ್ರಯಾಣ ಮಾಡಿ ಗ್ವಾಲಿಯರಿಗೆ ಆಗಮಿಸಿರುವರು.

ವಿಶ್ವಸಂಸ್ಥೆಯ ಸಹಾಯ

ಭೂಕಂಪಕ್ಕೀಡಾಗಿ ತೊಂದರೆಯನ್ನನುಭವಿಸುತ್ತಲಿರುವ ಅಸ್ಸಾಂ ಪ್ರಾಂತ್ಯದಲ್ಲಿ ಪಾಠಶಾಲೆ ಮುಂತಾದವನ್ನು ಕಟ್ಟಲೋಸುಗ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು ೧೫ ಸಾವಿರ ಡಾಲರುಗಳ ಸಹಾಯ ನೀಡಲು ನಿರ್ಧರಿಸಿದೆ. ಸುಮಾರು ೮೦೦೦ ಶಾಲೆಗಳ ಕಟ್ಟಡಗಳು ಬಿದ್ದು ೨೦ ಲಕ್ಷ ರೂಪಾಯಿ ನಷ್ಟವಾಗಿದೆ.

ನಿಸ್ಪೃಹತೆಯಿಂದ ದುಡಿಯಬೇಕು

ದೇಶವು ಉತ್ಕಟಪರಿಸ್ಥಿತಿಯಲ್ಲಿದೆ ನಿಸ್ಪೃಹತೆಯಿಂದ ಕೂಡಿದ ಶ್ರಮದ ಕೆಲಸದಿಂದ ಮಾತ್ರ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವೆಂದು ಸರ್ ಎಂ ವಿಶ್ವೇಶ್ವರಯ್ಯನವರು ತಿಳಿಸಿರುವರು.

ಸರ್ ಎಂ. ವಿ. ಯವರು ೨೫ನೇ ತಾರೀಖು ಬೊಂಬಾಯಿನಿಂದ ಬೆಂಗಳೂರಿಗೆ ಆಗಮಿಸಿ ೩ ದಿನಗಳಿದ್ದು ಬೊಂಬಾಯಿಗೆ ಹಿಂತಿರುಗುವರು.

ವಾಣಿಜ್ಯ ಮಾತುಕತೆ

ಭಾರತ ಪಾಕಿಸ್ಥಾನ ವಾಣಿಜ್ಯ ಮಾತುಕತೆಗಳು ಇನ್ನೂ ಕರಾಚಿಯಲ್ಲಿ ನಡೆಯುತ್ತಲಿವೆ. ಚರ್ಚೆಗಳು ಸ್ನೇಹಪೂರಿತವಾಗಿ ನಡೆಯುತ್ತಲಿವೆಯೆಂದೂ ಇನ್ನು ೪-೫ ದಿನ ನಡೆಯಬಹುದೆಂದು ತಿಳಿಯಬರುತ್ತದೆ.

ಸಂಸ್ಥಾನದಲ್ಲಿ ೮೬೪೯ ಸುಳ್ಳು ರೇಷನ್ ಕಾರ್ಡುಗಳ ಪತ್ತೆ

ಮೈಸೂರು ನಗರದಲ್ಲಿ ೨೫೩೬ ಕಾರ್ಡುಗಳು

ಬೆಂಗಳೂರು ಫೆ. ೨೨

ಸಂಸ್ಥಾನಾದ್ಯಂತ ಆಹಾರ ಇಲಾಖೆಯವರು ೧೯೫೦ನೇ ಮೇ ಮಾಹೆಯಿಂದ ಈಚಿನ ವರೆಗೆ ೮೬೪೯ ಅಕ್ರಮ ರೇಷನ್ ಕಾರ್ಡುಗಳನ್ನು ಪತ್ತೆ ಹಚ್ಚಿರುವರು. ಮೈಸೂರು ನಗರದಲ್ಲಿ ೨೫೩೬, ಬೆಂಗಳೂರು ೧೦೫೦, ಚಿತ್ರದುರ್ಗ ೧೫೧೭ ಇತರ ಭಾಗಗಳಲ್ಲಿ ಉಳಿದುವು.

ವ್ಯವಸಾಯಕ್ಕೆ ಪ್ರಥಮ ಗಮನ ಕೊಡಬೇಕು

ಬೆಂಗಳೂರು ಫೆ. ೨೨

ಯಾವ ಒಂದು ದೇಶವೇ ಆಗಲಿ ಸ್ವಾವಲಂಭಿಯಾಗ ಬೇಕಾದಲ್ಲಿ ವ್ಯವಸಾಯಕ್ಕೆ ಪ್ರಥಮ ಗಮನ ಕೊಡಬೇಕು ಸ್ಥಿತಿ ಹೀಗಿರುವಲ್ಲಿ ವ್ಯವಸಾಯ ಶಾಸ್ತ್ರ ಓದುವವರು ತಮ್ಮ ಭವಿಷ್ಯದ ಬಗ್ಗೆ ನಿರಾಶೆಯಿಂದಿರಲು ಯಾವ ಕಾರಣವೂ ಇಲ್ಲ. ವ್ಯವಸಾಯಶಾಸ್ತ್ರ ಪದವೀಧರರಿಗೆ ಸರ್ಕಾರ ಇತರ ಪದವೀಧರರಿಗೆ ಕೊಡುವ ಪ್ರಾಮುಖ್ಯತೆಯನ್ನೇ ಕೊಡುವುದು. ಸರ್ಕಾರ ನೌಕರಿಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಲ್ಲಿ ನೀವು ನಿರಾಶೆ ಹೊಂದಬಹುದು. ದಿನೇ ದಿನೇ ಸಾರ್ವಜನಿಕ ಕ್ಷೇತ್ರ ವೃದ್ಧಿಗೊಳ್ಳುತ್ತಲಿದೆ ಇನ್ನು ಮೇಲೆ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡುವುದರಿಂದ ಪದವೀಧರರಿಗೆ ಸೇವೆ ಮಾಡಲು ಅವಕಾಶವಿದೆ ಎಂದು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ವ್ಯವಸಾಯ ಕಾಲೇಜು ಸಂಘದ ಬನಾವರಣೆಯಲ್ಲಿ ಮಾತನಾಡುತ್ತಾ ಹೇಳಿರುವರು.

ಜೈಲ್ ಕಸ್ಟಡಿಗೆ

ಶ್ರೇಷ್ಠ ನ್ಯಾಯಾಧೀಶರಿಗೆ ವಿಷಪ್ರಯೋಗ ಪ್ರಯತ್ನದ ಸಂಬಂಧಗಲ್ಲಿ ದಸ್ತಗಿರಿ ಮಾಡಿರುವ ಶ್ರೀ ಎಲ್. ಎಸ್. ರಾಜುರವರು ಜೈಲ್ ಕಸ್ಟಡಿಯಲ್ಲಿಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆಯಿತ್ತಿರುವುದರಿಂದ ಶ್ರೀ ಎಲ್. ಎಸ್. ರಾಜುರವರನ್ನು ಜೈಲಿಗೆ ಕರೆದೊಯ್ಯಲಾಯಿತು.

ಕ್ರಾಂತಿಕಾರರ ದಸ್ತಗಿರಿ

ಗೋರಕಪುರದ ಗಡಿಯಲ್ಲಿ ಹಾವಳಿ ಮಾಡುತ್ತಲಿದ್ದ ೩೪೮ ಕ್ರಾಂತಿಕಾರರನ್ನು ನೇಪಾಳ, ಭಾರತ ಸೈನ್ಯಗಳು ಸಂಯುಕ್ತ ಚಟುವಟಿಕೆಯಿಂದ ದ ಸ್ತ ಗಿ ರಿ ಮಾಡಿರುವರು.

ರೈಲ್ವೆ ಬಡ್ಜೆಟ್

ಭಾರತಕೇಂದ್ರ ಸರ್ಕಾರದ ರೈಲ್ವೆ ಸಚಿವ ಶ್ರೀ ಎನ್. ಗೋಪಾಲಸ್ವಾಮಿಯ್ಯಂಗಾರ್‌ರವರು ನಿನ್ನೆ ಪಾರ್ಲಿಮೆಂಟಿನಲ್ಲಿ ರೈಲ್ವೆ ಬಡ್ಜೆಟ್ಟನ್ನು ಮಂಡಿಸುತ್ತಾ ೧೯೫೧-೫೨ನೇ ಸಾಲಿನಲ್ಲಿ ೨-೮೫ ಕೋಟಿ ರೂ. ಗಳ ಲಾಭ ಬರುವುದೆಂದು ತಿಳಿಸಿದರು.

ರೈಲ್ವೆ ವ್ಯವಸ್ಥೆಯನ್ನು ಆರು ವಲಯಗಳನ್ನಾಗಿ ವಿಂಗಡಿಸಿ ಏಪ್ರಿಲ್ ಒಂದರಿಂದ ದಕ್ಷಿಣ ವಿಭಾಗದ ರೈಲ್ವೆಗಳನ್ನು ಒಂದುಗೂಡಿಸುವುದಾಗಿಯೂ ಅನಂತರ ಇತರ ರೈಲ್ವೆಗಳನ್ನು ಒಂದುಗೂಡಿಸುವುದಾಗಿಯೂ ತಿಳಿಸಿದರು.

ಈ ವರ್ಷದಲ್ಲಿ ರೈಲ್ವೆಯಿಂದ ಬಂದ ಆದಾಯವು ೨೬೩-೮ ಕೋಟಿ ರೂ. ಗಳು ಅಂದರೆ ಬಜೆಟ್‌ನಲ್ಲಿ ನಿರೀಕ್ಷಿಸಿದ್ದಕ್ಕಿಂತ ೩ ಕೋಟಿ ಹೆಚ್ಚಾಗಿದೆ, ೧೯೫೧-೫೨ನೇ ಆದಾಯವು ೧೮೬-೭೫ ಕೋಟಿ ರೂ. ಗಳಾಗುವುದೆಂದು ಅಂದಾಜು ಮಾಡಲಾಗಿದೆ ಎಂದೂ ಅವರು ತಿಳಿಸಿದರು.

೧೯೫೧ನೇ ಏಪ್ರಿಲ್ ಒಂದರಿಂದ ಭಾರತಾದ್ಯಂತ ಎಲ್ಲಾ ರೈಲುಗಳಲ್ಲೂ ಪ್ರಯಾಣ ದರವನ್ನು ಏರಿಸಲು ಭಾರತ ಸರ್ಕಾರವು ನಿರ್ಧರಿಸಿದೆ.

ಮೈಲಿಯೊಂದಕ್ಕೆ ೩ನೇ ತರಗತಿಗೆ ೧ ಪೈ ಇಂಟರ್ ೧|| ಪೈ ೨ನೇ ತರಗತಿ ೨ ಪೈ ಮತ್ತು ಒಂದನೇ ತರಗತಿ ೩ ಪೈ ನಂತೆ ಹೆಚ್ಚಿಸಲಾಗುವುದು. ಇದರಿಂದ ಮುಂದಿನ ಸಾಲಿನಲ್ಲಿ ಹತ್ತೊಂಭತ್ತು ಕೋಟಿ ರೂ. ಗಳ ಹೆಚ್ಚಿಗೆ ಆದಾಯ ಬರುವ ನಿರೀಕ್ಷಣೆಇದೆ.

ಕೇಂದ್ರ ರೈಲ್ವೆ ಬೋರ್ಡಿನಲ್ಲೂ ಕೆಲವು ಬದಲಾವಣೆಗಳನ್ನು ಮಾಡಲಾಗುವುದು. ಬೋರ್ಡಿನಲ್ಲಿರುವ ಸದಸ್ಯರ ಸಂಖ್ಯೆಯನ್ನು ಕಡಮೆಮಾಡುವುದಲ್ಲದೆ ಶ್ರೀ ಒಕ್ಲೆಯವರು ನಿವೃತ್ತರಾದೊಡನೆಯೇ ರೈಲ್ವೆ ಚೀಫ್ ಕಮಿಷನರ ಹುದ್ದೆಯನ್ನು ರದ್ದುಗೊಳಿಸಲಾಗುವುದು ಎಂದು ತಿಳಿಸಿರುವರು.

ಮುಂಜಾಗರೂಕತಾ ಸ್ಥಾನ ಬದ್ಧತ ಕಾನೂನು

ಮುಂಜಾಗರೂಕತಾ ಸ್ಥಾನಬದ್ಧತೆ ಮಸೂದೆಗೆ ರಾಷ್ಟ್ರಾಧ್ಯಕ್ಷರು ತಮ್ಮ ಅಂಗೀಕಾರವಿತ್ತಿರುವರು.

ಸಮಾಚಾರ

ಮೈಸೂರು ತಾ|| ೨೩ನೇ ಶುಕ್ರವಾರ

ಹೆಚ್ಚು ಆಹಾರ ಬೆಳೆ ಚಳುವಳಿ ನಿಷ್ಫಲ

ರಿಸರ್ವ್ ಬ್ಯಾಂಕಿನ ಪರಿಶೀಲನೆಯಿಂದ ವ್ಯಕ್ತಪಟ್ಟಿದೆ

ಭಾರತದಲ್ಲಿ ಕಳೆದ ೮-೯ ವರ್ಷಗಳಿಂದ ನಡೆಸುತ್ತಲಿರುವ ಹೆಚ್ಚು ಆಹಾರ ಬೆಳೆ ಚಳುವಳಿಯಿಂದ ಅಂತಹ ಪ್ರಯೋಜನವೇನೂ ಆಗಿಲ್ಲವೆಂದು ರಿಸರ್ವ್ ಬ್ಯಾಂಕಿನವರು ನಡೆಸಿರುವ ಪರಿಶೀಲನೆಯಿಂದ ವ್ಯಕ್ತಪಟ್ಟಿದೆ.

ದರ ಏರಿಸಿರುವುದು ಉಚಿತವಲ್ಲ

ಏಪ್ರಿಲ್ ಒಂದನೇ ತಾ|| ನಿಂದ ಭಾರತಾದ್ಯಂತ ರೈಲ್ವೆ ದರವನ್ನು ಏರಿಸಲಿರುವುದಾಗಿ ರೈಲ್ವೆ ಮಂತ್ರಿ ಶ್ರೀ ಗೋಪಾಲಸ್ವಾಮಯ್ಯಂಗಾರ್‌ರವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿರುವರು. ಸರ್ಕಾರ ಕೆಲಸಗಳಿಗೆ ಹೆಚ್ಚಿಗೆ ಹಣವೇನೋ ಬೇಕಾಗಿದೆ. ಆದರೆ ಈ ಹೊರೆಯನ್ನು ಪ್ರಜೆಗಳು ಹೊರುವ ರೀತಿಯಲ್ಲಿರುವರೇ ಎಂಬುದನ್ನು ಗಮನಿಸಬೇಕಾಗಿದೆ. ದೇಶದ ಇಂದಿನ ಆರ್ಥಿಕಸ್ಥಿತಿಯಲ್ಲಿ ಜನಜೀವನದ ಮಟ್ಟವು ದಿನೇದಿನೇ ಏರುತ್ತಲಿದೆ. ಆಹಾರ ಸಾಮಾನು ದೊರೆಯುವುದೇ ಕಷ್ಟ. ಪೆಟ್ರೋಲಿಯೋ ನಿತ್ಯವೂ ಏರುತ್ತಲಿದೆ. ಪೆಟ್ರೋಲ್ ಪದಾರ್ಥಗಳ ಬೆಲೆಯನ್ನು ಸರ್ಕಾರದವರು ಏರಿಸುತ್ತಲಿರುವರು ಇತರ ಪದಾರ್ಥಗಳ ಬೆಲೆಯನ್ನು ತಯಾರಿಸುವವರು, ಮಾರುವವರು, ಏರಿಸುತ್ತಲಿರುವರು ಇದರಿಂದ ಜನರು ಜೀವಿಸುವುದೇ ಕಷ್ಟವಾಗಿದೆ. ಹೀಗಿರುವಲ್ಲಿ ಪ್ರಯಾಣ ಸೌಕರ್ಯಗಳು ಕೊಡುತ್ತೇವೆಂಬ ಆಸೆಯನ್ನು ತೋರಿಸಿ ರೈಲ್ವೆ ದರವನ್ನು ಏರಿಸಿರುವುದು ಈಗಿನ ಜನರ ಆರ್ಥಿಕಸ್ಥಿತಿಯಲ್ಲಿ ಉಚಿತವಲ್ಲ. ಯುದ್ಧಕಾಲದಲ್ಲಿದ್ದ ರೈಲ್ವೆ ದರದ ನೂರು ಎರಡರಷ್ಟು ಈಗ ಕೊಡಬೇಕಾಗುವುದು. ಕೆಲವು ಪ್ರಾಂತ್ಯಗಳಲ್ಲಿ ಯುದ್ಧಕಾಲದಲ್ಲಿ ೨ನೇ ತರಗತಿಗೆ ಕೊಡುತ್ತಲಿದ್ದ ದರವನ್ನು ೩ನೇ ತರಗತಿಗೆ ಕೊಡಬೇಕಾಗಿದೆ. ಆದರೆ ಆಗ ೨ನೇ ತರಗತಿಯಲ್ಲಿದ್ದ ಸೌಕರ್ಯಗಳು ಈಗ ೩ನೇ ತರಗತಿಯಲ್ಲಿವೆಯೇ? ಹಿಂದೆ ೩ನೇ ತರಗತಿಯಲ್ಲಿ ಯಾವರೀತಿ ಅವ್ಯವಸ್ಥೆಯಿದ್ದಿತೋ ಈಗಲೂ ಅದೇ ರೀತಿಯಿದೆ. ಆದರೆ ದರ ಏರಿಸುವುದು ಯಾವ ನ್ಯಾಯ? ಅದರಲ್ಲೂ ೩ನೇ ಮತ್ತು ಇಂಟರ್ ತರಗತಿ ದರ ಏರಿಸಿರುವುದು ಸಾಮಾನ್ಯ ಪ್ರಜೆಗೆ ವಿಶೇಷ ಭಾರವನ್ನು ಹೊರಿಸಿದಂತಾಗುವುದು. ರೈಲ್ವೆ ಮಂತ್ರಿಗಳು ಈ ತೀರ್ಮಾನವನ್ನು ಪುನರ್ವಿಮರ್ಶಿಸುವುದು ಉಚಿತ.

ಆಶಾಭಂಗ

ಕಾಶ್ಮೀರದ ಬಗ್ಗೆ ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಸೂಚಿತವಾದ ನಿರ್ಣಯವನ್ನು ನೋಡಿದ ತಕ್ಷಣ ನನಗೆ ತೀವ್ರ ಆಶಾಭಂಗವಾಯಿತು ಎಂದು ಪಾಕಿಸ್ಥಾನ ಪ್ರತಿನಿಧಿ ಜಫರುಲ್ಲಾಖಾನ್‌ರವರು ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಹೇಳಿರುವರು.

ಬಿಡುಗಡೆ ಮತ್ತೆ ಬಂಧನ

ಕಮ್ಯೂನಿಸ್ಟ್ ನೇತಾರ ಶ್ರೀ ಎ. ಕೆ. ಗೋಪಾಲನ್‌ರವರ ಬಂಧನವು ಅಕ್ರಮವೆಂದೂ ತಕ್ಷಣ ಅವರನ್ನು ಬಿಡುಗಡೆ ಮಾಡಬೇಕೆಂದು ಮದರಾಸ್ ಮುಖ್ಯ ನ್ಯಾಯಾಲಯವು ತೀರ್ಪುಕೊಟ್ಟಿತು.

ಶ್ರೀ ಗೋಪಾಲನ್‌ರವರನ್ನು ತಕ್ಷಣ ಬಿಡುಗಡೆ ಮಾಡಲಾಯಿತು. ಕೋರ್ಟ್ ಆವರಣದಿಂದ ಹೊರಕ್ಕೆ ಬಂದೊಡನೆಯೇ ಪುನಃ ದಸ್ತಗಿರಿ ಮಾಡಲಾಯಿತು.

ಭಾವಚಿತ್ರ ಅನಾವರಣ

ಮೈಸೂರು ಫೆ ೨೨

ಗೌರ್ನಮೆಂಟ್ ಬ್ರಸಿಂಗಾ ಕಾಲೇಜಿನ ಉಪಾಧ್ಯಾಯ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ, ಸೀನಿಯರ್ ಸಂಸ್ಕೃತ ಪಂಡಿತರಾದ ಶ್ರೀ ಆರ್. ಸೀತಾರಾಮಶಾಸ್ತ್ರಿಗಳ ಭಾವಚಿತ್ರ ಅನಾವರಣವನ್ನು ನಾಳೆ ಬೆಳಗ್ಗೆ ಜನಾಬ್ ಒಬೇರ್ ಅಹಮದರವರ ಅಧ್ಯಕ್ಷತೆ ಮಹಾರಾಜಾ ಕಾಲೇಜಿನ ಶ್ರೀ ಎಂ ವಿ, ಕೃಷ್ಣರಾಯರು ನೆರವೇರಿಸುವರು.

ಒಪ್ಪಿಗೆಯಾಗುವುದಿಲ್ಲ

ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಮಂಡಿಸಿರುವ ಕಾಶ್ಮೀರ ಪ್ರಶ್ನೆ ವಿಷಯವಾದ ಸಲಹೆಯನ್ನು ಭಾರತ ಮಂತ್ರಿ ಮಂಡಲದ ವಿಶೇಷ ಸಮಿತಿಯು ಪರಿಶೀಲಿಸುತ್ತಲಿದೆ. ನಿರ್ಣಯದ ಅನೇಕ ಭಾಗಗಳು ಭಾರತಕ್ಕೆ ಒಪ್ಪಿಗೆಯಾಗುವುದಿಲ್ಲವೆಂದು ರಾಜಕೀಯ ವೃತ್ತಗಳಲ್ಲಿ ಹೇಳಲಾಗಿದೆ.

ನೇಪಾಳ ಸರ್ಕಾರದ ಆಡಳಿತದಲ್ಲಿ ಪುನರ್ರಚನೆ

ಕಿರಾತರ ಹಾವಳಿ

ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನೇಪಾಳ ಸರ್ಕಾರದ ಗೃಹ ಸಚಿವ ಶ್ರೀ ಬಿ. ಪಿ. ಕೊಯಿರಾಲಾರವರು ನೇಪಾಳ ಕಾಂಗ್ರೆಸ್ ವಶದಲ್ಲಿರುವ ಪ್ರಾಂತ್ಯದಲ್ಲೆಲ್ಲಾ ಆಡಳಿತ ಪುನರ್ವ್ಯವಸ್ಥೆಯನ್ನು ಸದ್ಯದಲ್ಲೇ ಮಾಡಲಾಗುವುದೆಂದು ಹೇಳಿರುವರು. ಸದ್ಯದಲ್ಲೇ ಸರ್ಕಾರ ನೇಮಕ ಮಾಡಲಿರುವ ಗೌರ್ನರುಗಳಿಗೆ ತಾತ್ಕಾಲಿಕವಾಗಿ ಆಡಳಿತ ನಡೆಸುತ್ತಲಿರುವ ಗೌರ್ನರುಗಳು ಕೆಲಸಗಳನ್ನು ವಹಿಸಬೇಕೆಂದೂ, ಹೋರಾಟ ಕಾಲದಲ್ಲಿ ದಸ್ತಗಿರಿಯಾಗಿರುವ ಸರ್ಕಾರಿ ನೌಕರರನ್ನೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕೆಂದು ತಾವು ಆಜ್ಞೆ ಯಿತ್ತಿರುವುದಾಗಿ ತಿಳಿಸಿರುವರು.

ನೇಪಾಳ—ಟಿಬೆಟ್ಟಿನ ಗಡಿಯಲ್ಲಿಯ ಬೆಟ್ಟಗುಡ್ಡ ವಾಸಿಗಳಾದ ಕಿರಾತರು ನೇಪಾಳದ ಪೂರ್ವ ಭಾಗದ ಅನೇಕ ಊರಗಳಿಗ ನುಗ್ಗಿ ಹಾವಳಿ ನಡಸಲಾರಂಭಿಸಿರುವುದನ್ನು ಕೂಡಲೇ ತಡೆಗಟ್ಟಬೇಕೆಂದು ನೇಪಾಳದ ಗೃಹ ಮಂತ್ರಿ ಶ್ರೀ ಕೊಯಿರಾಲಾರವರಲ್ಲಿ ಅನೇಕ ಕಿರಾಯಿ ಜನರು ನಿಯೋಗ ಹೋಗಿ ಬಿನ್ನವಿಸಿ ಕೊಂಡಿರುವರು, ಕೂಡಲೇ ಈ ಹಾವಳಿಯನ್ನು ತಪ್ಪಿಸುವುದಾಗಿ ಅವರು ಭರವಸೆಯಿತ್ತಿರುವರು.

ಒಲಂಪಿಯಾ

೨೨-೨-೫೧ರಿಂದ ಕಿಕ್ಕಿರಿದ ೨ನೇ ವಾರ

ಪ್ರತಿದಿನ ೩ ಆಟಗಳು

ಬೊಂಬಾಯಿನಲ್ಲಿ ರಜತಮಹೋತ್ಸವವನ್ನು ಪಡೆದ

* ಆಂಖೆ *

ಪಾತ್ರ—ನಳನಿಜಯವಂತ್ ಯಾಕೂಬ್ ಭಾರತ್‌ಭೂಷಣ ಮತ್ತು ಶೇಖರ್

ಬೆಳಗಿನ ಪ್ರದರ್ಶನ

೨೫-೨-೫೧ ರಿಂದ

ಪಾತ್ರ—ಯಾಕೂಬ್ ನಿಗರ್ ಶಾಮ್

† ಬಜಾರ್ †

ರಾಜರಿಗೆ ತೆರಿಗೆ ಹಾಕಿ

ಭಾರತವು ಅಮೆರಿಕಾದಿಂದ ಕೇಳುತ್ತಲಿರುವ ಆಹಾರ ಧಾನ್ಯಗಳ ಬೆಲೆಯನ್ನು ಅಲ್ಲಿಯ ಕೋಟ್ಯಾಧೀಶ್ವರರಾದ ರಾಜರ ಮೇಲೆ ತೆರಿಗೆ ಹಾಕಿ ಪಡೆಯಬಹುದು ಅಥವಾ ಥೋರಿಯಂ ಮತ್ತು ಯುರೇನಿಯಂ ಲೋಹವಾರಿ ಕೊಡಬಹುದು. ಇಲ್ಲವೇ ಬ್ರಿಟನ್ನಿನಿಂದ ಬರಬೇಕಾದ ಸ್ಟೆರ್ಲಿಂಗ್ ನಾಲಕ್ಕಾದರೂ ವಜಾ ಮಾಡಬಹುದು ಎಂದು ಅಮೆರಿಕಾ ಶಾಸನ ಸಭಾ ಸದಸ್ಯರೊಬ್ಬರು ಹೇಳಿರುವರು.

ಸಮಾಜದಲ್ಲಿ ಮಹಿಳೆಯರ ಪಾತ್ರ

ಕಛೇರಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದಕ್ಕಿಂತಲೂ ಮನೆಗಳಲ್ಲಿ ಕೆಲಸ ಮಾಡುವುದು ಅತಿ ಮುಖ್ಯವಾದುದು. ಮನೆಗಳಲ್ಲಿ ಈ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಲು ಮಹಿಳೆಯರಿಂದ ಮಾತ್ರ ಸಾಧ್ಯ. ಅಂದರೆ ಅವರ ಮನೆಯಲ್ಲಿಯೇ ಅವರು ಬಂದಿಗಳಾಗಿರಬೇಕೆಂಬ ಅರ್ಥವಲ್ಲ ಸಮಾಜಾಭಿವೃದ್ಧಿಗೆ ಪುರುಷರಿಗಿರುವಂತೆ ಸ್ತ್ರೀಯರಿಗೂ ಸಂಪೂರ್ಣ ಸ್ವಾತಂತ್ರ್ಯವಿರಲೇಬೇಕು. ಮಾನವನು ತನ್ನ ಕಾಲ ಮತ್ತು ಬುದ್ಧಿ ಶಕ್ತಿಯನ್ನು ತನ್ನ ಸಮಾಜದ ಏಳಿಗೆಗೆ ಉಪಯೋಗಿಸುವುದೇ ಸ್ವಾತಂತ್ರ್ಯ. ಹೊಸ ಸಂತತಿಯ ದೇಹ, ಮಾನಸಿಕ, ಮತ್ತು ನೈತಿಕ ಶಕ್ತಿಗಳನ್ನು ಉತ್ತಮ ರೀತಿಯಲ್ಲಿ ರೂಪಿಸುವ ಜವಾಬ್ದಾರಿಯೇ ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯವೆಂದು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರವರು ಪ್ರಯಾಗ ಮಹಿಳಾ ವಿದ್ಯಾಪೀಠದಲ್ಲಿ ಮಾತನಾಡುತ್ತಾ ಹೇಳಿರುವರು.

ರಣಜಿತ್

23—2—51ರಿಂದ ಅಮೋಘ 3ನೇ ವಾರ

ಪ್ರತಿದಿನ 3 ಆಟಗಳು

ಕರ್ದಾರ್ ಮತ್ತು ನೌಷದ್‌ರವರ

ದಾಸ್ತಾನ್

ಪಾತ್ರ—ಸುರಯ್ಯ, ರಾಜಕಪೂರ್, ಅಲ್ ನಸೀರ್, ವೀಣಾ, ಸುರೇಶ್, ಮುಂತಾದವರು

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್‌ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ಸಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೨—೧೯೫೧ನೇ ಶನಿವಾರ [ಸಂಚಿಕೆ ೧೪೫

ಸಂಸ್ಕೃತವನ್ನು ಕನ್ನಡ ಮಾಧ್ಯಮದಲ್ಲಿ ಬೋಧಿಸಬೇಕು

ಅಕಡೆಮಿಕ್ ಕೌನ್ಸಿಲ್ ಸಭೆಯ ತೀರ್ಮಾನ

ಮೈಸೂರು ಫೆ. ೨೪

ಮೈಸೂರು ವಿಶ್ವವಿದ್ಯಾನಿಲಯದ ಅಕಡೆಮಿಕ್ ಕೌನ್ಸಿಲ್ ಸಭೆಯು ವೈಸ್ ಛಾನ್ಸಲರ್ ಡಾ|| ಬಿ. ಎಲ್. ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ನೂತನ ಸದಸ್ಯರನ್ನು ಸ್ವಾಗತಿಸುತ್ತಾ ಡಾ|| ಮಂಜುನಾಥ್‌ರವರು ವಿಶ್ವವಿದ್ಯಾನಿಲಯದಲ್ಲಿ ಓದುವ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡಲು ಒದಗಿರತಕ್ಕ ಹೊಸ ಪ್ರದಾನಪಟ್ಟಿಗಳನ್ನು ವಿವರಿಸಿದರು.

ದಿವಾನ್ ಬಹದ್ದೂರ್ ಟಿ. ಆನಂದರಾವ್ ರಾಜಸೇವಾಸಕ್ತ ಗಂಗಾಧರರಾವ್ ಗಂಗಾಬಾಯಿಯವರಿಂದ ದೇಶಸ್ಥ ಬ್ರಾಹ್ಮಣರಲ್ಲಿ ಕೈಗಾರಿಕೆ ಮತ್ತು ಟೆಕ್ನಿಕಲ್ ವಿದ್ಯಾಭ್ಯಾಸದಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗೆ ಬಹುಮಾನವೀಯಲು ೮೦ ಸಾವಿರ ರೂ., ಸೆಟ್ಲೂರ್ ಶ್ರೀ ಶ್ರೀನಿವಾಸಚಾರ್ ಕಡಾಂಬಿಯವರು ಕಲ್ಕಂಟಿ ಮತ್ತು ಚೀಕನಹಳ್ಳಿ ಶ್ರೀ ವೈಷ್ಣವ ವಿದ್ಯಾರ್ಥಿಗಳಲ್ಲಿ ಕೈಗಾರಿಕೆ ಮತ್ತು ಟೆಕ್ನಿಕಲ್ ವಿದ್ಯಾಭ್ಯಾಸದಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗೆ ಬಹುಮಾನವೀಯಲು ೧ ಲಕ್ಷ ೨೦ ಸಾವಿರ ರೂಪಾಯಿಗಳು.

ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಜನಗಳಲ್ಲಿ ನ್ಯಾಯಶಾಸ್ತ್ರವನ್ನು ಬೋಧಿಸುವ ವಿಷಯದಲ್ಲಿ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಲ್. ನಾರಾಯಣರಾಯರು ಮಂಡಿಸಿದ್ದ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತವನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಹೇಳಿಕೊಡುತ್ತಲಿರುವುದನ್ನು ಕನ್ನಡದಲ್ಲಿ ಹೇಳಿಕೊಡಬೇಕೆಂದು ವಿದ್ಯಾರ್ಥಿಗಳು ಸಲ್ಲಿಸಿದ್ದ ಬೇಡಿಕೆಯ ಮೇಲೆ ಸರ್ಕಾರದವರು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ ಅಭಿಪ್ರಾಯವನ್ನು ಕೇಳಿದರಲಾಗಿ ಅವರು ಇಂಗ್ಲೀಷಿನಲ್ಲೇ ಬೋಧಿಸುವುದು ಸೂಕ್ತವೆಂದು ಇತ್ತ ಅಭಿಪ್ರಾಯವನ್ನು ಸಭೆಯು ಪರಿಶೀಲಿಸಿತು. ಶ್ರೀಗಳಾದ ಧರ್ಮಸ್ವನಾಯಕ, ಕೆ. ವಿ. ಪುಟ್ಟಪ್ಪ ಮುಂತಾದವರು ಸಂಸ್ಕೃತವನ್ನು ಮಾತೃಭಾಷೆಯಾದ ಕನ್ನಡದಲ್ಲೇ ಬೋಧಿಸಿದರೆ ಸಂಸ್ಕೃತ ಜ್ಞಾನ ಹೆಚ್ಚುವುದೆಂದೂ, ತತ್ಪರಿಣಾಮವಾಗಿ ಭಾರತದ ಇತಿಹಾಸಗಳಲ್ಲಿ ಅಡಗಿರುವ ಮಹತ್ತರವಾದ ಸಂಸ್ಕೃತಿಯೂ ಮತ್ತು ತತ್ವಗಳು ಜನರಿಗೆ ತಿಳಿಯಲು ಅನುಕೂಲವಾಗುವುದರಿಂದ ಕನ್ನಡದಲ್ಲೇ ಬೋಧಿಸುವುದು ಉತ್ತಮವೆಂದು ತಿಳಿಸಿದರು. ಸಭೆಯೂ ಅದೇ ಅಭಿಪ್ರಾಯಪಟ್ಟು ಕನ್ನಡದಲ್ಲೇ ಬೋಧಿಸಬೇಕೆಂದು ತೀರ್ಮಾನಿಸಿತು.

ನೆಯ್ಗೆ ಕೈಗಾರಿಕೆ ವಿದ್ಯಾಭ್ಯಾಸದಲ್ಲಿ ಉತ್ತೇಜನಕೊಡಲು ಶ್ರೀ ಇ. ಕೆ. ರಾಮಸ್ವಾಮಯ್ಯನವರು ತಮ್ಮ ತಂದೆ ಶ್ರೀ ಕೃಷ್ಣಸ್ವಾಮಯ್ಯನವರ ಹೆಸರಿನಲ್ಲಿ ಬಹುಮಾನವೀಯಲು ೨ ಸಾವಿರ ರೂ. ಇಂಜನೀಯರಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮಹಿಳೆಗೆ ಬಹುಮಾನವೀಯಲು ವಿಶ್ವಾಸ್ತದ ಶ್ರೀ ಗೋವಿಂದರಾಯರು ಕೊಟ್ಟ ೨ ರೂ.ಗಳನ್ನು ಸಭೆಯು ಅಂಗೀಕರಿಸಿತು.

ಸಂಗೀತ ಶಾಸ್ತ್ರರತ್ನ ಶ್ರೀ ವಾಸುದೇವಾಚಾರ್ಯರವರು ಮತ್ತು ಸಂಗೀತರತ್ನ ಶ್ರೀ ಟಿ. ಚೌಡಯ್ಯನವರುಗಳಿಗೆ ಗೌರವ ಡಾಕ್ಟರೇಟು ಪ್ರಶಸ್ತಿಯನ್ನು ಕೊಡಬೇಕೆಂದು ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ ಸೂಚಿಸಿದ್ದ ನಿರ್ಣಯದ ವಿಷಯದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಲೆ ವಿಭಾಗಸ್ಥಾಪಿಸಿದೊಡನೆಯೇ ಈ ಸೂಚನೆಯನ್ನು ಪರಿಶೀಲಿಸಬಹುದೆಂದು ಸಭೆಯು ತೀರ್ಮಾನಿಸಿತು.

ಮಂತ್ರಿಪದವಿಯಿಂದ ಉಚ್ಛಾಟನೆ

ಪೂರ್ವ ಬಂಗಾಳದ ಸಚಿವರಾಗಿದ್ದ ಮಿ|| ಹಮೀದ್‌ಹುಲ್ ಹಕ್ ಚೌಧರಿಯವರು ಮತ್ತು ಅವರ ಅನುಯಾಯಿಗಳಾದ ೭ ಜನ ಮುಸ್ಲಿಂ ಲೀಗಿನ ವಿರೋಧವಾಗಿ ವರ್ತಿಸಿದರೆಂಬ ಆಪಾದನೆ ಮೇಲೆ ಮಿ|| ಚೌಧರಿಯವರನ್ನು ೫ ವರ್ಷ ಉಳಿದವರನ್ನು ೩ ವರ್ಷ ಕಾಲ ಮುಸ್ಲಿಂ ಲೀಗಿಗೆ ಸೇರಿಸಕೂಡದೆಂದು ಲೀಗ್ ತೀರ್ಮಾನಿಸಿದೆ.

ವಿವಾಹ

ಮೈಸೂರು ತಾಲ್ಲೂಕು ಎಡಹಳ್ಳಿ ಜಹಗೀರ್‌ದಾರ್ ಶ್ರೀ ಎ. ಆರ್. ವೆಂಕಟೇಶಶೆಟ್ಟಿಯವರ ಪುತ್ರ, ರಾಮಚಂದ್ರ ಬುಕ್ ಡಿಪೋ ಮಾಲೀಕರಾದ ಶ್ರೀ ಎ. ನಂಜುಂಡಶೆಟ್ಟಿಯವರ ಮಗಳು ಶ್ರೀಮತಿ ಶಾರದಾಂಬಳನ್ನು ಕುಣಿಗಲಿನಲ್ಲಿರುವ ಶ್ರೀ ಉರುಕೆರೆ ನಾರಾಯಣಸ್ವಾಮಿಶೆಟ್ಟಿಯವರ ಮಗ ಶ್ರೀ ಕೆ. ಎನ್. ನರಸಿಂಹಮೂರ್ತಿಯವರಿಗೆ ಶ್ರೀ ಎ. ಆರ್. ವೆಂಕಟೇಶಶೆಟ್ಟಿಯವರ ಎರಡನೇ ಪುತ್ರ, ಶ್ರೀ ನೀಲಕಂಠಶೆಟ್ಟಿಯವರ ಮಗಳು ಶ್ರೀಮತಿ ರಾಮರತ್ನಮ್ಮನವರನ್ನು ಬೆಂಗಳೂರಿನ ಶ್ರೀ ಸಿ. ನಾರಾಯಣಶೆಟ್ಟಿಯವರ ಮಗ ಶ್ರೀ ಸಿ. ಎನ್. ರಾಜುರವರಿಗೆ ಕೊಟ್ಟು ವಿವಾಹ ಮಹೋತ್ಸವವು ಮೈಸೂರು ತಿಮ್ಮರಾಜು ಛತ್ರದಲ್ಲಿ ಇದೇ ೨೭ ಮತ್ತು ೨೮ನೇ ತಾರೀಖು ನಡೆಯಲಿದೆ.

ಮರಣದಂಡನೆ

ಸಾಮ್ರಾಜ್ಯ ಶಾಹಿ ಶಕ್ತಿಗಳ ಹಿಂಬಾಲಕರಾಗಿ ಜೀನಾಕ್ಕೆ ದ್ರೋಹವೆಸಗುವವರಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲಾಗುವುದೆಂದು ಕಮ್ಯೂನಿಸ್ಟ್ ಚೀನಾ ಸರ್ಕಾರ ಘೋಷಿಸಿದೆ.

ಪ್ರೊ- ಛಾನ್ಸಲರ್ ಡಾ|| ಸಿ. ಆರ್. ರೆಡ್ಡಿಯವರ ನಿಧನ

ಮದರಾಸು ಫೆ. ೨೪

ಮೈಸೂರು ವಿಶ್ವವಿದ್ಯಾನಿಲಯದ ಪ್ರೊ-ಛಾನ್ಸಲರಾಗಿದ್ದ ಡಾ|| ಸಿ. ಆರ್. ರೆಡ್ಡಿಯವರು ತಮ್ಮ ೭೦ನೇ ವಯಸ್ಸಿನಲ್ಲಿ ಚಿಕಿತ್ಸಾಕೇಂದ್ರವೊಂದರಲ್ಲಿ ಇಂದು ಬೆಳಿಗ್ಗೆ ಮದರಾಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದಿವಂಗತರು ಭಾರತದಲ್ಲೆಲ್ಲಾ ಬಹು ಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞರಾಗಿದ್ದರು. ೧೯೦೬ರಲ್ಲಿ ಇವರು ಪಾಶ್ಚಿಮಾತ್ಯ ಪ್ರವಾಸವನ್ನು ೧೯೧೮ರಲ್ಲಿ ಪ್ರಸಿದ್ಧ ಪರ್ಯಟನ ಹೊರಟು ಇಂಗ್ಲೆಂಡ್ ಅಮೆರಿಕಾ, ಜಪಾನ್ ಫಿಲಿಪೈನ್ಸ್ ಮುಂತಾದ ರಾಷ್ಟ್ರಗಳಿಗೆ ಭೇಟಿಯಿತ್ತರು. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಯೂನಿಯನ್ನಿನ ಉಪಾಧ್ಯಕ್ಷರಾಗಿದ್ದರು. ಈ ಸ್ಥಾನವನ್ನು ಭಾರತೀಯರು ಪಡೆದುದರಲ್ಲಿ ಇವರೇ ಅಗ್ರಗಣ್ಯರು. ಇವರು ಮೈಸೂರಿನ ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳಾಗಿಯೂ ಆಂಧ್ರ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾಗಿಯೂ ಇದ್ದರು. ಮದರಾಸಿನ ನ್ಯಾಯ ವಿಧಾಯಕ ಸಭೆಯಲ್ಲೂ ಕೆಲವು ವರ್ಷ ಸದಸ್ಯರಾಗಿದ್ದರು. ಇವರು ಸಂಸ್ಕೃತ ತೆಲುಗು ಭಾಷೆಗಳಲ್ಲಿ ಅಪ್ರತೀಯ ಪಾಂಡಿತ್ಯವನ್ನು ಹೊಂದಿದ್ದರು.

ಒಲಂಪಿಯಾ

೨೨-೨-೫೧ರಿಂದ ಕಿಕ್ಕಿರಿದ ೨ನೇ ವಾರ

ಪ್ರತಿದಿನ ೩ ಆಟಗಳು

ಬೊಂಬಾಯಿನಲ್ಲಿ ರಜತಮಹೋತ್ಸವವನ್ನು ಪಡೆದ

* ಆಂಖೆ *

ಪಾತ್ರ—ನಾಸಿಬಯಸಂತ್ ಯಾಕೂಬ್ ಭಾರತ್‌ಭೂಷಣ್ ಮತ್ತು ಶೀಖರ್

ಬೆಳಗಿನ ಪ್ರದರ್ಶನ

೨೫-೨-೫೧ ರಿಂದ

ಪಾತ್ರ—ಯಾಕೂಬ್ ನಿಗರ್ ಶ್ಯಾಮ್

† ಬಜಾರ್ †

ಸಮಾಚಾರ

ಫೆಬ್ರವರಿ ೨೪ನೇ ಶನಿವಾರ

ಸೌದೆ ಅಭಾವ

ಮೈಸೂರಿನಲ್ಲಿ ಇತ್ತೀಚೆಗೆ ಸೌದೆಯ ಅಭಾವವು ವಿಶೇಷವಾಗಿರುತ್ತದೆ. ಹೊರಗಿನಿಂದ ಬರುತ್ತಿರುವ ಪ್ರಮಾಣವೂ ಕಡಿಮೆಯಾಗಿದೆ. ಬರುವ ಸೌದೆಯು ಅವಶ್ಯಕರುವಿರುವವರು ಸರಿಯಾಗಿ ಪಡೆಯಲಾಗುತ್ತಲಿಲ್ಲ. ನಗರದ ಕಲವು ಡಿಪೋಗಳಲ್ಲಿ ಸೌದೆ ಇರುವವರು ರೂ. ಗೆ ೧-೧॥ ಮಣದಂತೆ ಮಾರುತ್ತಲಿರುವರು. ಬಂದ ಸೌದೆಯೆಲ್ಲವೂ ದಳ್ಳಾಳಿಗಳ ಮೂಲಕ ಈ ಸೌದೆ ಡಿಪೋಗಳಿಗೂ ಹೋಟೇಲುಗಳಿಗೂ ಹೋಗುತ್ತಲಿರುವುದರಿಂದ ನೇರವಾಗಿ ಜನರು ಕೊಳ್ಳಲಾರದವರಾಗಿದ್ದಾರೆ.

ಪಟ್ರೋಲ್ ರೇಷನ್ ಇದ್ದಾಗ ಸೌದೆ ತರಲು ಡಿಪೋದವರಿಗೆ ಪೌರಸಭೆಯವರು ಪೆಟ್ರೋಲ್ ಕೂಪನ್ನುಗಳನ್ನು ಕೊಡುತ್ತಲಿದ್ದರು. ಡಿಪೋದವರು ಸೌದೆಯನ್ನು ತಂದು ತಕ್ಕ ಲೆಕ್ಕಗಳನ್ನು ಪೌರಸಭೆಗೆ ಕೊಡಬೇಕಾಗಿತ್ತು. ಇದರಿಂದ ಈ ಡಿಪೋಗಳೆಲ್ಲವೂ ಪೌರಸಭೆಯ ಅಧೀನದಲ್ಲಿದ್ದುವು. ಪಟ್ರೋಲ್ ರೇಷನ್ ರದ್ದಾದ ಮೇಲೆ ಇವರ ಮೇಲೆ ಪೌರಸಭೆಯವರ ಹತೋಟಿ ಸಂಪೂರ್ಣವಾಗಿಲ್ಲವಾಗಿದೆ. ಪೆಟ್ರೋಲ್ ವಿಶೇಷವಾಗಿ ದೊರೆಯುವುದರಿಂದ ಹೆಚ್ಚಿಗೆ ಬಾಡಿಗೆ ಆಸೆಯಿಂದ ಲಾರಿಗಳನ್ನು ಬೇರೆ ರೀತಿ ಉಪಯೋಗಿಸುವುದರಿಂದ ಲಾರಿಗಳ ಮೂಲಕ ಸೌದೆ ರವಾನೆಗೆ ಕಡಮೆಯಾಗಿರುತ್ತದೆ.

ಪೌರಸಭೆಯು ತಮ್ಮಲ್ಲಿರುವ ಲಾರಿಗಳ ಸಹಾಯದಿಂದ ಹೊರಗಿನಿಂದ ಸೌದೆಯನ್ನು ತರಿಸಿ ನಿಗದಿಯಾದ ಬೆಲೆಗೆ ಮಾರುವಂತೇರ್ಪಡಿಸುವುದಲ್ಲದೆ ಹೊರಗಿನಿಂದ ಬರುವ ಸೌದೆಯು ದಳ್ಳಾಳಿಗಳ ವಶವಾಗದೆ ಪೌರಸಭೆಯ ಮೂಲಕ ಜನರಿಗೆ ದೊರೆಯುವಂತೇರ್ಪಡಿಸಲು ತಕ್ಕ ಕಾರ್ಯಕ್ರಮವನ್ನು ಪೌರಸಭೆಯು ಕೂಡಲೇ ತೆಗೆದುಕೊಳ್ಳಬೇಕಾಗಿದೆ ಸಾಮಾನುಗಳ ಅಭಾವ, ಇರುವ ಸಾಮಾನುಗಳ ಬೆಲೆ ವಿಪರೀತವಾಗಿರುವುದು ಮುಂತಾದ ಕಷ್ಟಗಳನ್ನು ಅನುಭವಿಸುವುದು ವರ್ಣಿಸಲಸಾಧ್ಯವಾಗಿದೆ ಈ ಸೌದೆ ಅಭಾವವನ್ನಾದರೂ ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಪೌರಸಭೆಯವರು ತಮ್ಮ ಗಮನವೀಯುವರೇ ?

ಹತ್ತಿ ಉತ್ಪತ್ತಿ

೧೯೫೧-೫೨ರಲ್ಲಿ ಭಾರತದಲ್ಲಿ ೪೦ ಲಕ್ಷ ಬೇಲು ಹತ್ತಿ ಉತ್ಪತ್ತಿಯಾಗುವ ನಿರೀಕ್ಷಣೆಯಿದೆಯೆಂದು ಹೇಳಲಾಗಿದೆ.

ಚೀಣಾಕ್ಕೆ ಪುನಃ ಸಂಧಾನ ಸೂಚನೆ

ಸ್ವೀಡನ್ ರಾಯಭಾರಿ ಮೂಲಕ

ಕೊರಿಯಾ ಯುದ್ಧ ಸಂಬಂಧದಲ್ಲಿ ವಿಶ್ವ ಸಂಸ್ಥೆಯು ನೂತನವಾಗಿ ರಚಿಸಿರುವ ಮಧ್ಯಸ್ಥಿಕಾಸಮಿತಿಯು, ಚೀಣಾದಲ್ಲಿರುವ ಸ್ವೀಡನ್ ಪ್ರತಿನಿಧಿಯ ಮೂಲಕ ಚೀಣಾಪ್ರಜಾ ಸರ್ಕಾರಕ್ಕೆ ಸಂಧಾನಸೂಚನೆಯನ್ನು ಕಳುಹಿಸಿದೆ. ಇಲ್ಲಿಯವರೆಗೆ ಪ್ರತ್ಯುತ್ತರವೇನೂ ಬಂದಿಲ್ಲವೆಂದು ತಿಳಿಯಬರುತ್ತದೆ.

ನೂತನ [illegible] ಬಗ್ಗೆ ಅಭಿಪ್ರಾಯ

ಕಾಶ್ಮೀರ ಪ್ರಶ್ನೆ ವಿಷಯವಾಗಿ ಹೊಸದಾಗಿ ಮಂಡಿಸಿರುವ ಆಂಗ್ಲೋ ಅಮೆರಿಕಾ ನಿರ್ಣಯದ ಬಗ್ಗೆ ಕಾಶ್ಮೀರ ಅಭಿವೃದ್ಧಿ ಶಾಖಾ ಮಂತ್ರಿ ಮಿ॥ ಗುಲಾಂ ಮಹಮ್ಮದ್ ಸಿದ್ದಿಕ್‌ರವರು ಮಾತನಾಡುತ್ತಾ ವಿಶ್ವ ಸಂಸ್ಥೆಯು ಎಲ್ಲಾ ಆಕ್ಷೇಪಕರ ಅಂಶಗಳು ಈ ಹೊಸ ನಿರ್ಣಯದಲ್ಲಿ ಅಡಕವಾಗಿದೆ. ರಾಜ್ಯಾಂಗ ಸಭೆಯ ವಿಷಯದಲ್ಲಿ ಈ ನಿರ್ಣಯದಲ್ಲಿ ನಮೂದಿಸಿರುವುದನ್ನು ನಾವು ಖಂಡಿಸಬೇಕಾಗಿದೆ. ಏನು ಸಂಭವಿಸಿದರೂ ನಾವು ನಮ್ಮ ಉದ್ದಿಶ್ಯವನ್ನು ಸಾಧಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುವೆಂದು ಹೇಳಿರುವರು. ಈಗಾಗಲೇ ರಾಜ್ಯಾಂಗ ಸಭೆಗೆ ಚುನಾವಣೆ ನಡೆಸಲು ಮತದಾರರ ಪಟ್ಟಿಯು ತಯಾರಾಗುತ್ತಲಿದೆ ಅದು ಮುಂದಿನ ಮಾಹೆ ಪ್ರಾರಂಭದಲ್ಲಿ ಪ್ರಕಟವಾಗಲಿವೆಯೆಂದು ಅವರು ತಿಳಿಸಿದರು.

ಮಿತವ್ಯಯ

ಕೇಂದ್ರ ಸರ್ಕಾರದ ಎಲ್ಲಾ ಶಾಖೆಗಳಲ್ಲೂ ಸ್ಟೇಷನರಿ, ಕಟ್ಟಡ ಜನ್ಸಿ ಮತ್ತು ಪ್ರಯಾಣ ಖರ್ಚುಗಳಲ್ಲಿ ಮಿತವ್ಯಯವನ್ನನುಸರಿಸಲು ಆಜ್ಞೆಯಿತ್ತಿರುವುದಾಗಿ ಹಣಕಾಸಿನ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಶಾಸನ ಸಭಾಧಿವೇಶನ

ಬೆಂಗಳೂರು ಫೆ. ೨೨

ಶ್ರೀಮನ್ಮಹಾರಾಜರವರು ಮೈಸೂರು ಶಾಸನ ಸಭಾಧಿವೇಶನವನ್ನು ಮಾರ್ಚಿ ೧೫ನೇ ತಾರೀಖಿನಿಂದ ಬೆಂಗಳೂರಿನಲ್ಲಿ ನಡೆಯಲು ಕರೆದಿರುವರು.

ಮದ್ರಾಸಿಗೆ ಆಹಾರ

ಮಾರ್ಚಿ ಮಾಹೆಯಲ್ಲಿ ಮದ್ರಾಸಿಗೆ ೪೧ ಸಾವಿರ ಟನ್ ಆಹಾರವನ್ನು ಭಾರತ ಸರ್ಕಾರವು ಸರಬರಾಯಿ ಮಾಡುವುದು.

ರೈಲ್ವೆದರ ಏರಿಸಲು ತೀವ್ರ ಪ್ರತಿಭಟನೆ

ಪಾರ್ಲಿಮೆಂಟಿನಲ್ಲಿ ಸದಸ್ಯರ ಟೀಕೆ

ರೈಲ್ವೆ ದರಗಳನ್ನು ಏಪ್ರಿಲ್ ೧ರಿಂದ ಹೆಚ್ಚಿಸುವುದಾಗಿ ರೈಲ್ವೆ ಮಂತ್ರಿಗಳು ಹೇಳಿದೊಡನೆಯೇ ಪಾರ್ಲಿಮೆಂಟಿನಲ್ಲಿ 'ಸರಿಯಲ್ಲ, ಸರಿಯಲ್ಲ' ಎಂಬ ಘೋಷಣೆಗಳು ಹೊರಬಿದ್ದುವು. ಕೆಲವು ಸದಸ್ಯರು 'ಲೂಟಿ ಲೂಟಿ' ಎಂದೂ ಕೂಗಿಕೊಂಡರು.

ದರವನ್ನು ಹೆಚ್ಚಿಸುವುದು, ಅದರಲ್ಲೂ ೩ನೇ ತರಗತಿಯ ದರ ಏರಿಸುವುದು, ವಿವೇಚನೆಯಿಲ್ಲ ಮತ್ತು ಖಂಡನೀಯವಾದ ವಿಷಯವೆಂದು ಪಾರ್ಲಿಮೆಂಟಿನ ಲಾಬಿ ವೃತ್ತಗಳಲ್ಲಿ ಅಭಿಪ್ರಾಯಪಡಲಾಗಿದೆ,

ರೈಲ್ವೆದರ ಹೆಚ್ಚಿದರೇನು ಬಂತು, ಕೆಲಸಗಾರರ ಹೊಟ್ಟೆ ಮಾತ್ರ ತುಂಬಲಿಲ್ಲ ಎಂದು ಅಖಿಲಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ ಎಸ್. ಗುರುಸ್ವಾಮಿಯವರು ಹೇಳಿರುವರು,

ಕೇವಲ ರೈಲ್ವೆ ಇಲಾಖೆಯ ಆರ್ಥಿಕ ಸ್ಥಿತಿಗಿಂತಲೂ ಹೆಚ್ಚಾಗಿ ಸಾರ್ವತ್ರಿಕ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ರೈಲ್ವೆ ದರಗಳನ್ನು ಹೆಚ್ಚಿಸಬೇಕಾಗಿದೆ ಎಂದು ರೈಲ್ವೆ ಇಲಾಖಾ ಆರ್ಥಿಕ ಕಮಿಷನರು ಶ್ರೀ ಎ. ಕೆ. ಚಂದಾರವರು ಹೇಳಿದ್ದಾರೆ.

ರಷ್ಯಾಕ್ಕೆ ಅಮೆರಿಕಾ ಸಹಾಯ

ವಾಷಿಂಗ್‌ಟನ್ ಫೆ. ೨೧

ಹಿಟ್ಲರನ್ನು ಸೋಲಿಸಲು ಅಮೆರಿಕಾವು ರಷ್ಯಾಕ್ಕೆ ೧೪೭೦೦ ವಿಮಾನ, ೭೦೦೦ ಟ್ಯಾಂಕು, ೫೨೦೦೦ ಜೀಪುಗಳು, ೫೫೦೦೦ ಮೋಟಾರು ಸೈಕಲ್ಲುಗಳು ೩,೭೫೦೦೦ ಟ್ರಕ್ಕುಗಳು. ೧೮೭ ನೌಕಾ ಹಡಗುಗಳು, ಅಲ್ಲದೆ ಇತರ ಯುದ್ಧ ಸಾಮಾಗ್ರಿಗಳು, ವೈದ್ಯ ಸಹಾಯ, ಸಂಚಾರ ಸಾಮಾನುಗಳನ್ನೆಲ್ಲಾ ಒದಗಿಸಿ ಸಹಾಯ ಮಾಡಿತು.

ಕೊರಿಯಾಕ್ಕೆ ಅಮೆರಿಕಾ ಸಹಾಯ

ವಾಷಿಂಗ್‌ಟನ್ ಫೆ. ೨೧

೧೯೫೦ರಲ್ಲಿ ಆಹಾರ, ಕಚ್ಚಾ ಸಾಮಾನು, ಗೊಬ್ಬರ ವೈದ್ಯ ಸಾಮಾನು ಮುಂತಾದ ೫೦೦ ಮಿಲಿಯನ್ ಡಾಲರುಗಳ ಬೆಲೆ ಬಾಳುವ ವಸ್ತುಗಳನ್ನು ಅಮೆರಿಕಾವು ಕೊರಿಯಾಕ್ಕೆ ಸಹಾಯ ನೀಡಿದೆ.

ತೂತುಬೀಳದ ಟೈರುಗಳು

ನ್ಯೂಯಾರ್ಕ್ ಫೆ. ೨೧

ಅಮೆರಿಕಾದಲ್ಲಿ ಒಂದು ಕಂಪೆನಿಯು ತೂತುಬೀಳದ ರಬ್ಬರ್ ಟೈರುಗಳನ್ನು ತಯಾರಿಸಿದೆ. ಹಾಗೇನಾದರೂ ಸಂಚಾರ ಸಮಯದಲ್ಲಿ ತೂತುಬಿದ್ದರೆ ಅದರೊಳಗಿರುವ ಬೇರೆ ರಬ್ಬರು ಆ ತೂತನ್ನು ಕೂಡಲೇ ಮುಚ್ಚಿಬಿಡುವುದು.

ಆಹಾರ ಉತ್ಪತ್ತಿ ಯೋಜನೆ

ಭಾರತದಲ್ಲಿ ಹೆಚ್ಚು ಆಹಾರ ಉತ್ಪತ್ತಿಗೆ ದೊಡ್ಡ ಯೋಜನೆಗಳನ್ನು ಕೈಗೊಳ್ಳುವ ಬದಲು ಸಣ್ಣ ಪುಟ್ಟ ನೀರಾವರಿ ಯೋಜನೆಗಳನ್ನು ಕೈಗೊಂಡಲ್ಲಿ ಪ್ರಯೋಜನ ಹೆಚ್ಚೆಂದು ಅಮೆರಿಕಾ ಅಣುಬಾಂಬು ಕಾರ್ಯಾಲಯದ ಮಾಜಿ ಅಧ್ಯಕ್ಷ ಮಿ॥ ಡೇವಿಡ್ ಲಿಲಿಯಂಥಾಲ್ ರವರು ಹೇಳಿರುವರು.

ಮೆಟ್ಟೂರಿನ ನೀರಿನ ಮಟ್ಟ

ಮದರಾಸಿನ ಮೆಟ್ಟೂರು ಜಲಾಶಯದಲ್ಲಿ ನೀರಿನ ಮಟ್ಟವು ೭೪.೪ ಅಡಿ ಇದೆ, ಕೃಷ್ಣರಾಜಸಾಗರದಲ್ಲಿ ಈಗ ನೀರಿನ ಮಟ್ಟವು ೯೯ ಅಡಿಯಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೊ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬—೨—೧೯೫೧ನೇ ಸೋಮವಾರ [ಸಂಚಿಕೆ ೧೪೬

ಸರ್ಕಾರದ ಆಹಾರನೀತಿ ಕೂಡಲೇ ಮಾರ್ಪಡಬೇಕು

ನಿರ್ದಿಷ್ಟಕಾಲದೊಳಗೆ ರೇಷನ್ ಪದ್ಧತಿಯನ್ನು ವಜಾ ಮಾಡಬೇಕು

ಶೇಖರಣೆಕಾರ್ಯದಲ್ಲಿ ಅಧಿಕಾರಿಗಳ ದುಂಡಾವೃತ್ತಿ

ಸಂಸ್ಥಾನದ ಆಹಾರ ವ್ಯವಹಾರಗಳಲ್ಲಿ ಕೇಂದ್ರ ಸರ್ಕಾರವು ಪ್ರವೇಶಿಸಬಾರದು, ಸಂಸ್ಥಾನದಿಂದ ಹೊರಕ್ಕೆ ಆಹಾರವು ಸಾಗಿಹೋಗುತ್ತಲಿರುವುದನ್ನು ತಡೆಗಟ್ಟಲು ಮಿಲಿಟರಿ ಹತೋಟಿಯನ್ನಿಡಬೇಕು, ಮುಂದಿನ ಸುಗ್ಗಿಯಿಂದ ಆಹಾರ ಹತೋಟಿಯನ್ನು ಸಂಪೂರ್ಣವಾಗಿ ವಜಾ ಮಾಡುವುದಾಗಿ ಈಗಲೇ ಸರ್ಕಾರವು ಘೋಷಿಸಬೇಕು ಆಹಾರ ದಾಸ್ತಾನು ಮತ್ತು ಕಳ್ಳಸಂತೆ ವ್ಯಾಪಾರವನ್ನು ಮಾಡದಂತೆ ಹೆಚ್ಚಿಗೆ ಮಿಲಿಟರಿ ಸಹಾಯ ಪಡೆದು ರೈತ, ವರ್ತಕ ಮುಂತಾದವರು ತಮಗೆ ಬೇಕಾಗುವ ಆಹಾರವನ್ನು ತಮ್ಮಲ್ಲಿಟ್ಟುಕೊಂಡು ಉಳಿಕೆಯನ್ನೆಲ್ಲಾ ಮಾರಾಟಕ್ಕೆ ದೊರೆಯುವಂತೇರ್ಪಡಿಸಬೇಕು, ಹೆಚ್ಚಿಗೆ ದಾಸ್ತಾನು, ಕಾಳಸಂತೆ ಮಾಡುವವರಿಗೆ ಕ್ರೂರ ಶಿಕ್ಷೆಯನ್ನು ವಿಧಿಸಬೇಕು, ದರಗಳ ಹತೋಟಿಯನ್ನು ತಪ್ಪಿಸಬೇಕು, ಹಣಕಾಸು ವ್ಯವಹಾರ ಸಂಸ್ಥೆಗಳು ದಾಸ್ತಾನು ಮಾಡಿದ ಆಹಾರ ಪದಾರ್ಥಗಳ ಮೇಲೆ ಸಾಲ ಕೊಡುವುದನ್ನು ನಿಷೇಧಿಸಬೇಕು ಪಟ್ಟಣಗಳಲ್ಲಿ ಹೊರಗಿನಿಂದ ಬರುವವರ ಉಪಯೋಗಕ್ಕೆ ಬೇಕಾಗುವಷ್ಟು ಊಟದ ಮತ್ತು ತಿಂಡಿಯ ಹೋಟೇಲುಗಳನ್ನಿಟ್ಟು ಉಳಿದುದನ್ನೆಲ್ಲಾ ಮುಚ್ಚಿಸಬೇಕು. ಸಣ್ಣ ಸಣ್ಣ ಸರ್ಕಾರಿ ನೌಕರುಗಳು ಕಲವು ತಿಂಗಳಿಗೆ ಬೇಕಾಗುವಷ್ಟು ಆಹಾರವನ್ನು ಕೊಳ್ಳಲು ಹಣವನ್ನು ಮುಂಗಡವಾಗಿ ಸಾಲದ ರೂಪದಲ್ಲಿ ಕೊಡಬೇಕು. ಆಹಾರ ಮತ್ತು ಹೆಚ್ಚು ಬೆಳೆ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚಬೇಕು. ದೊಡ್ಡ ದೊಡ್ಡ ಕೈಗಾರಿಕಾ ಕೇಂದ್ರಗಳು ತಮ್ಮಲ್ಲಿ ಕೆಲಸ ಮಾಡುವವರಿಗೆ ಆಹಾರವನ್ನು ಒದಗಿಸಲು ತಾವೇ ಸ್ವಂತವಾಗಿ ಆಹಾರವನ್ನು ಬೆಳೆಯಲು ತಕ್ಕ ಕಾರ್ಯಕ್ರಮವನ್ನೆಸಗಬೇಕು. ಈ ಸಲಹೆಗಳನ್ನು ಕಾರ್ಯರೂಪಕ್ಕೆ ತಂದರೆ ದೇಶದಲ್ಲಿ ಆಹಾರ ಅಭಾವವು ತಪ್ಪಿ ಶಾಂತ ವಾತಾವರಣ ಹುಟ್ಟುವುದು. ಇಲ್ಲದೆ ಈಗಿನ ಆಹಾರ ನೀತಿಯೇ ಮುಂದುವರಿದರೆ ದೇಶದಲ್ಲಿ ಅಶಾಂತಿಯು ವಿಪರೀತವಾಗಿ ತಲೆದೋರಿ ಸರ್ಕಾರವೇ ಕಳಚಿಬೀಳುವ ಪ್ರಸಂಗ ಒದಗುವುದರಲ್ಲಿ ಸಂದೇಹವಿಲ್ಲ ಎಂದು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಇಂದು ಪತ್ರಿಕಾಗೋಷ್ಠಿಯಲ್ಲಿ, ಸಂಸ್ಥಾನದ ಇಂದಿನ ಆಹಾರ-ಪರಿಸ್ಥಿತಿಯ ವಿಷಯವಾಗಿ ಮಾತನಾಡುತ್ತಾ ಹೇಳಿದರು.

1943-44 ರಿಂದ ತಹಲ್‌ವರೆವಿಗೆ ಸರ್ಕಾರದವರು ಆಹಾರಬೆಳೆ, ಉತ್ಪತ್ತಿ, ಶೇಖರಣೆ, ಆಮದು ಮುಂತಾದ ವಿಷಯದಲ್ಲಿ ಪ್ರಕಟಿಸಿರುವ ಲೆಕ್ಕಪತ್ರಗಳನ್ನೆಲ್ಲಾ ವಿವರಿಸಿ, ಸರ್ಕಾರ, ಆಹಾರ ಇಲಾಖೆ ಮತ್ತು ಹೆಚ್ಚು ಆಹಾರಬೆಳೆಯ ಇಲಾಖೆ ಎಲ್ಲವೂ ಅಸಂಬದ್ಧವಾದ ಲೆಕ್ಕಗಳನ್ನು ಶೇಖರಿಸಿ, ಪ್ರಕಟಿಸುತ್ತಲಿರುವರೆಂದೂ, ಆ ಲೆಕ್ಕಗಳನ್ನೇ ವಿಮರ್ಶಿಸಿದಲ್ಲಿ ಸಂಸ್ಥಾನದಲ್ಲಿ ಆಹಾರ ಬೆಳೆಯು ದಿನೇದಿನೇ ಕಡಮೆಯಾಗುತ್ತಲಿರುವುದು ಕಾಣಬರುತ್ತಲಿದೆಯೆಂದು ತಿಳಿಸಿದರು.

1943—44ರಲ್ಲಿ ದೇಶಾದ್ಯಂತ 37-97 ಲಕ್ಷ ಎಕರೆ ಭೂಮಿ ಸಾಗುವಳಿಯಲ್ಲಿತ್ತು, 50-51ರಲ್ಲಿ 29-58 ಲಕ್ಷಕ್ಕಿಳಿಯಿತು ಅಂದರೆ 6 ವರ್ಷಗಳಲ್ಲಿ 8-39 ಲಕ್ಷ ಎಕರೆಗಳಲ್ಲಿ ಬೆಳೆಯಿಲ್ಲದಾಯಿತು.

1944—45ರಲ್ಲಿ 25-13 ಲಕ್ಷ ಪಲ್ಲಾ ಆಹಾರ ಶೇಖರಣೆಯಾಯಿತು. 50-51ರಲ್ಲಿ 21-13 ಲಕ್ಷ ಅಂದರೆ 4 ಲಕ್ಷ ಪಲ್ಲಾ ಕಡಮೆಯಾಯಿತು.

1946—47ರಲ್ಲಿ 20-24 ಲಕ್ಷ ಪಲ್ಲಾ ಶೇಖರಣೆಯಾಯಿತು. ಹೊರಗಿನಿಂದ 24-3 ಲಕ್ಷ ಪಲ್ಲಾ ಆಹಾರ ತರಿಸಿಕೊಳ್ಳಲಾಯಿತು. 49-50ರಲ್ಲಿ 18-8 ಲಕ್ಷ ಪಲ್ಲಾ ಶೇಖರಣೆಯಾಗಿ 12-6 ಲಕ್ಷ ತರಿಸಿಕೊಳ್ಳಲಾಯಿತು.

1943—44ರಿಂದ ತಹಲ್ ವರೆವಿಗೆ ಸರ್ಕಾರದವರು ಹೆಚ್ಚು ಆಹಾರ ಉತ್ಪತ್ತಿಗಾಗಿ ಸುಮಾರು 1039-19 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರುವರು.

ಈ ಅಂಕಿ ಅಂಶಗಳನ್ನು ಪರಿಶೀಲಿಸಿದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಲವಾರು ವರ್ಷಗಳಿಂದ ಸರ್ಕಾರದವರು ವೆಚ್ಚ ಮಾಡುತ್ತಲಿದ್ದರೂ ಆಹಾರ ಪರಿಸ್ಥಿತಿಯು ಉತ್ತಮಗೊಂಡಿಲ್ಲ. ದೇಶದಲ್ಲಿ ಆಹಾರವಿಲ್ಲವೆಂದು ಹೇಳುವ ಹಾಗೂ ಇಲ್ಲಿಯವರೆಗೆ ಆಹಾರವಿಲ್ಲದೆ ಯಾರೂ ಸತ್ತಿಲ್ಲ. ಅಂದರೆ ಸರ್ಕಾರವು ಆಹಾರ ಪರಿಸ್ಥಿತಿಯನ್ನು ತಕ್ಕ ರೀತಿಯಲ್ಲಿ ಎದುರಿಸಲು ಸಾಮರ್ಥ್ಯವಿಲ್ಲವೆಂದು ವಿಶದವಾಗುತ್ತದೆ ಆದ್ದರಿಂದ ಕೂಡಲೇ ಸರ್ಕಾರವು ಹತೋಟಿಯನ್ನು ವಜಾಮಾಡಿ ಹಿಂದೆ ಆಹಾರ ಪದಾರ್ಥಗಳು ಯಾವ ರೀತಿ ಅಂಗಡಿಗಳಲ್ಲಿ ಮಾರುತ್ತಲಿದ್ದವೋ ಅದೇ ರೀತಿ ಮಾರಲು ತಕ್ಕ ಕಾರ್ಯಕ್ರಮವನ್ನು ಮಾಡುವುದು ಇಂದಿನ ಪರಿಸ್ಥಿತಿಯಲ್ಲಿ ಅತ್ಯಗತ್ಯವಾದುದೆಂದು ಅವರು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಆಹಾರವನ್ನು ಶೇಖರಿಸಲು ಹೊರಟಿರುವ ಅಧಿಕಾರಿಗಳು ನಂಜನಗೂಡು, ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ದರೋಡೆಗಾರರೋಪಾದಿಯಲ್ಲಿ ರಾತ್ರಿವೇಳೆ ರೆವೆನ್ಯೂ, ಪೋಲೀಸ್, ಆಹಾರ ಇಲಾಖಾಧಿಕಾರಿಗಳೆಲ್ಲರೂ ಒಟ್ಟುಗೂಡಿ ಹಳ್ಳಿಗಳಲ್ಲಿ ಸುಗ್ಗಿ ಗಂಡಸರು ಸಹ ಮನೆಯಲ್ಲಿಲ್ಲದ ವೇಳೆ, ತಾವು ತಿನ್ನಲು ಇಟ್ಟುಕೊಂಡಿರುವ ಆಹಾರ-ಪದಾರ್ಥಗಳನ್ನೆಲ್ಲಾ ಬಲಾತ್ಕಾರವಾಗಿ ಹಣಕಾಸನ್ನು ಕೊಡದೆ, ಜನರಿಗೆ ಚಿತ್ರಹಿಂಸೆಯನ್ನು ಕೊಟ್ಟು, ಎಲ್ಲವನ್ನೂ ಅಪಹರಣಮಾಡುತ್ತಲಿರುವುದಾಗಿಯೂ, ತಾವೂ 20-25 ಗ್ರಾಮಗಳಿಗೆ ಭೇಟಿಯಿತ್ತು ಜಿಲ್ಲಾಧಿಕಾರಿಗಳಲ್ಲದೆ ಮುಖ್ಯಮಂತ್ರಿಗಳ ಗಮನಕ್ಕೂ ತಂದಿರುವುದಾಗಿಯೂ, ತಹಲ್‌ವರೆಗೆ ಯಾವ ಹೊಸ ಕಾರ್ಯಕ್ರಮವನ್ನು ತೆಗೆದುಗೊಳ್ಳದೆ, ದುಂಡಾವೃತ್ತಿಯಲ್ಲಿ ಅವರು ಕೆಲಸ ವೆಸಗುತ್ತಲಿರುವುದು ಇನ್ನೂ ಮುಂದುವರಿಸುತ್ತಲಿರುವುದಾಗಿಯೂ ತಿಳಿಸಿದರು.

ಇದಕ್ಕೆ ಸಂಬಂಧಪಟ್ಟ ಅನೇಕ ನಿದರ್ಶನಗಳನ್ನಿತ್ತರು.

ಇನ್‌ಷೂರ್ ಕವರುಗಳು ಮಾಯ

ಕೊಚ್ಚಿನ್ನಿನ ಮಾಲ್ಪಜೇರಿ ಬ್ಯಾಂಕಿನಿಂದ ಟಪ್ಪಾಲಿಗೆ ಕಳುಹಿದ ೮ ಇನ್‌ಷೂರ್ ಕವರುಗಳು ಮಾಯವಾಗಿವೆ. ಅವುಗಳಲ್ಲಿ ಒಂದು ಲಕ್ಷ ರೂಪಾಯಿಗಳ ನೋಟುಗಳಿದ್ದವೆಂದು ಹೇಳಲಾಗಿದೆ.

ಕರ್ಣಾಟಕ ಸಂಗೀತ ಪರಿಷತ್ತಿನ ಸ್ಥಾಪನೆ

ಬೆಂಗಳೂರು ಫೆ. ೨೫

ಉತ್ತರ ಭಾರತದಲ್ಲಿರುವ ಹಿಂದೂಸ್ಥಾನಿ ಸಂಗೀತ ಪರಿಷತ್ತಿನ ಮಾದರಿಯಲ್ಲೇ ದಕ್ಷಿಣ ಭಾರತಕ್ಕೂ ಕರ್ನಾಟಕ ಸಂಗೀತ ಪರಿಷತ್ತನ್ನು ಸ್ಥಾಪಿಸುವ ವಿಷಯವು ಈ ಮಧ್ಯಾಹ್ನ ಕಾರಲ್‌ಟನ್ ಭವನದ ಸಭೆಯಲ್ಲಿ ಚರ್ಚೆಯಾಯಿತು.

ಮೈಸೂರು ಸರ್ಕಾರದ ಪರ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರ್ ಶ್ರೀ ಕೆ. ಗುರುದತ್ತ, ವಿದ್ಯಾಭ್ಯಾಸದ ಇಲಾಖೆ ಸೆಕ್ರೆಟರಿ ಶ್ರೀ ಎ. ಸಿ. ನಿರ್ವಾಣೆಗೌಡ, ಲಾ ಸೆಕ್ರೆಟರಿ ಶ್ರೀ ಬಿ. ಎಸ್. ಪುಟ್ಟಸ್ವಾಮಿ, ಪ್ಲಾನಿಂಗ್ ಕಮೀಷನರ್ ಶ್ರೀ ಜಿ. ಬಿ. ಮಲ್ಲರಾಧ್ಯ, ಮದರಾಸ್ ಸರ್ಕಾರದ ಪರ ಸಚಿವರಾದ ಶ್ರೀ ಕೆ. ಮಾಧವಮೆನನ್, ಹೈದರಾಬಾದ್ ಪರ ಸಚಿವರಾದ ಶ್ರೀ ರಾಮಕೃಷ್ಣರಾವ್ ಚರ್ಚೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ಸಾಮಾನ್ಯ ವಿಷಯಗಳು ಚರ್ಚೆಯಾಯಿತೆಂದೂ, ಚರ್ಚೆಯು ನಾಳೆಯೂ ಮುಂದುವರಿಯಲಿದೆಯೆಂದೂ ಗೊತ್ತಾಗಿದೆ.

ಸರ್ಕಾರಿ ಕೈಗಾರಿಕೆಗಳ ಆಡಳಿತ ಖಾಸಗಿಯವರಿಗೆ

ಬೆಂಗಳೂರು ಫೆ. ೨೫

ಮೈಸೂರು ಸರ್ಕಾರದವರು ಸ್ವಂತವಾಗಿ ನಡೆಸುತ್ತಲಿರುವ ಕೈಗಾರಿಕೆ ಸಂಸ್ಥೆಗಳಲ್ಲಿ ಕೆಲವನ್ನು ಖಾಸಗಿಯವರ ಆಡಳಿತ ಒಪ್ಪಿಸುವ ವಿಷಯ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಛೇಂಬರ್-ಆಫ್-ಕಾಮರ್ಸ್ ಸಂಸ್ಥೆಯಲ್ಲಿ ಮಾತನಾಡುತ್ತಾ ಹೇಳಿರುವರು.

ಬಿಡುಗಡೆ

ಚೀಫ್ ಜಸ್ಟಿಸರಿಗೆ ವಿಷಪತ್ರಿಕದ ಪ್ರಯತ್ನದ ಸಂದರ್ಭದಲ್ಲಿ ದಸ್ತಗಿರಿಯಾಗಿದ್ದ ಶ್ರೀ ಆರ್. ವಿಶ್ವನಾಥ ಮತ್ತು ಶ್ರೀ ಕೆ. ಆರ್. ಕೃಷ್ಣಮೂರ್ತಿಯವರು ಮೊನ್ನೆ ಬಿಡುಗಡೆಯಾದರು.

ಡಾ|| ಸಿ.ಆರ್. ರೆಡ್ಡಿ ನಿಧನದ ಬಗ್ಗೆ ಸಂತಾಪ

ಶ್ರೀ ಕೆ. ಸಿ. ರೆಡ್ಡಿಯವರ ಹೇಳಿಕೆ

ಬೆಂಗಳೂರು ಫೆ. ೨೪

ಡಾ|| ಸಿ.ಆರ್. ರೆಡ್ಡಿಯವರ ನಿಧನದ ಬಗ್ಗೆ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ಹೇಳಿಕೆಯೊಂದನ್ನು ಹೊರಡಿಸಿ ತಮ್ಮ ಸಂತಾಪವನ್ನು ಈ ರೀತಿ ಸೂಚಿಸಿದ್ದಾರೆ—

ಡಾ|| ಸಿ.ಆರ್. ರೆಡ್ಡಿಯವರು ಆಕಸ್ಮಿಕವಾಗಿ ನಿಧನರಾದುದು ನಮ್ಮ ದೇಶಕ್ಕೆ ಮತ್ತು ಜನಾಂಗಕ್ಕೆ ದೊಡ್ಡ ನಷ್ಟವುಂಟಾಗಿದೆ. ಡಾ|| ರೆಡ್ಡಿಯವರು ಪ್ರಖ್ಯಾತ ಮಹನೀಯರಾಗಿದ್ದರು, ಸಹಜವಾದ ದೇಶಾಭಿಮಾನಿಯಾಗಿದ್ದರು ಮತ್ತು ಕೀರ್ತಿ ಮೆತ್ತು ಶಿಕ್ಷಣಶಾಸ್ತ್ರ ಪ್ರವೀಣರಾಗಿದ್ದರು ರಾಜಕೀಯ ಚಟುವಟಿಕೆಗಳಲ್ಲಿಯೂ ಆವರು ಯಶಸ್ವಿಯಾದ ಪಾತ್ರ ವಹಿಸಿದ್ದರು. ಬರೋಡಾ, ಮೈಸೂರು, ಮದರಾಸು, ಮತ್ತು ಆಂಧ್ರಗಳಿಗೆ ಅವರು ಅಪಾರ ಸೇವೆ ಸಲ್ಲಿಸಿದರು. ಮೈಸೂರು ಸಂಸ್ಥಾನದಲ್ಲಿ ಅವರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದಾಗ ಅಮೌಲ್ಯವಾದ ಸುಧಾರಣೆಗಳನ್ನು ಜಾರಿಗೆ ತಂದರು ಇದನ್ನು ಯಾರೂ ಮರೆಯುವಂತಿಲ್ಲ. ನಿಮ್ನ ವರ್ಗದವರ ಮತ್ತು ಹರಿಜನರ ಅಭಿವೃದ್ಧಿ ವಿಚಾರದಲ್ಲಿ ಅವರು ಯಾವಾಗಲೂ ಆಸಕ್ತರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯಕ್ಕೂ, ಮೈಸೂರು ಸಂಸ್ಥಾನಕ್ಕೂ ಆಂಧ್ರ ವಿಶ್ವವಿದ್ಯಾನಿಲಯಕ್ಕೂ ಡಾ|| ಸಿ.ಆರ್. ರೆಡ್ಡಿಯವರು ವಿಶೇಷ ಸೇವೆ ಸಲ್ಲಿಸಿದರು. ಇವರ ನಿಧನದಿಂದ ಭಾರತಕ್ಕೆ ದೊಡ್ಡ ನಷ್ಟವುಂಟಾಗಿದೆ, ಇವರ ನಿಧನದಿಂದ ಉಂಟಾಗಿರುವ ವ್ಯಸನವನ್ನು ಸಹಿಸಲು ಭಗವಂತನು ನಮಗೆಲ್ಲರಿಗೂ ಮತ್ತು ಡಾ|| ರೆಡ್ಡಿಯವರ ಕುಟುಂಬದವರಿಗೂ ಶಕ್ತಿಯನ್ನು ಕೊಡಲಿ. ದಿವಂಗತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲಿ.

ಶ್ರೀ ಹೆಚ್.ಸಿ. ದಾಸಪ್ಪನವರ ಸಂತಾಪ

ಹಣಕಾಸಿನ ಮಂತ್ರಿಗಳಾದ ಶ್ರೀ ಹೆಚ್.ಸಿ. ದಾಸಪ್ಪನವರು ತಮ್ಮ ಸಂತಾಪವನ್ನು ಈ ರೀತಿ ಸೂಚಿಸಿರುತ್ತಾರೆ—

ನನ್ನ ಹಳೆಯ ಗುರುಗಳಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ಪ್ರೋಚಾನ್ಸಲರ್ ಆಗಿಯೂ ಇದ್ದ ಡಾ|| ಸಿ.ಆರ್. ರೆಡ್ಡಿಯವರು ನಿಧನರಾದ ಸುದ್ದಿ ಕೇಳಿ ನನಗೆ ಅತ್ಯಂತ ದುಃಖವಾಗಿದೆ. ಈಚೆಗೆ ಮೈಸೂರು ಮಹಾರಾಜಾ ಕಾಲೇಜಿನ ಶತಮಾನೋತ್ಸವ ಸಮಾರಂಭದಲ್ಲಿ ಅವರು ಹಿರಿಯರಾದ ಪ್ರಮುಖ ವ್ಯಕ್ತಿಗಳಾಗಿದ್ದರು. ಗೌರವ ಮತ್ತು ಚಟುವಟಿಕೆಯಿಂದ ಎಲ್ಲರನ್ನು ಆಕರ್ಷಿಸುತ್ತಿದ್ದರು. ಆಗ ಅವರನ್ನು ನೋಡಿ ನನಗೆ ಆನಂದವಾಯಿತು ಡಾ|| ರೆಡ್ಡಿಯವರು ಮಹಾರಾಜಾ ಕಾಲೇಜಿನ ಪ್ರೊಫೆಸರಾಗಿ ಮತ್ತು ಪ್ರಿನ್ಸಿಪಾಲರಾಗಿ ತಮ್ಮ ಸಹಸ್ರಗಟ್ಟಲೆ ಶಿಷ್ಯರನ್ನು ತಮ್ಮ ಅದ್ವಿತೀಯ ಪ್ರತಿಭೆ ಪ್ರೀತಿಗಳಿಂದ ಆಕರ್ಷಣೆ ಮಾಡಿ ಗೌರವ ಸಂಪಾದಿಸಿದ್ದರು. ಮೈಸೂರಿಗೆ ಅವರು ದೊಡ್ಡ ಸೇವೆ ಸಲ್ಲಿಸಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲಿ.

ಜೀವನ ಪರಿಚಯ

ಡಾ|| ಸಿ. ಆರ್. ರೆಡ್ಡಿಯವರು ಚಿತ್ತೂರು ಜಿಲ್ಲೆಯಲ್ಲಿ ೧೮೮೦ನೇ ಇಸವಿಯಲ್ಲಿ ಜನಿಸಿದರು. ಇವರು ಕಟ್ಟಮಂಚಿ ಶ್ರೀ ರಾಮಸ್ವಾಮಿರೆಡ್ಡಿಯವರ ಮಕ್ಕಳು. ಇವರು ಮದ್ರಾಸಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ೧೯೦೨-೧೯೦೬ರಲ್ಲಿ ಕೇಂಬ್ರಿಡ್ಜ್‌ನಲ್ಲಿ ಸೆಂಟಜಾನ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಇಂಡಿಯಾ ಸರ್ಕಾರದ ವಿದ್ಯಾರ್ಥಿ ವೇತನ ಪಡೆದ ಹೋಗಿದ್ದರು. ಹಿಸರಿ ಟ್ರೈಪಾಸ್‌ನಲ್ಲಿ ಫಸ್ಟ್ ಕ್ಲಾಸ್ ಪಡೆದು ಕೀರ್ತಿಗಳಿಸಿದರು. ಕೇಂಬ್ರಿಡ್ಜ ಯೂನಿಯನ್ ಸೊಸೈಟಿಯ ಉಪಾಧ್ಯಕ್ಷರಾಗಿ ಭಾರತದ ಯುವಕ ವರ್ಗಕ್ಕೆ ಕೀರ್ತಿ ತಂದರು. ಈ ಪದವಿಗೆ ಚುನಾಯಿತರಾದ ಭಾರತೀಯರಲ್ಲಿ ಇವರೇ ಮೊದಲನೆಯವರು. ಇವರು ಕೇಂಬ್ರಿಡ್ಜ್ ಯೂನಿವರ್ಸಿಟಿ ಲಿಬರಲ್ ಕ್ಲಬ್ಬಿನ ಸೆಕ್ರೆಟರಿಯಾಗಿ ಸಹಾ ಕೆಲಸ ಮಾಡಿದರು. ೧೯೦೬ರಲ್ಲಿ ಅಮರಿಕಾದಲ್ಲಿ ಪ್ರವಾಸ ಮಾಡಿದರು. ೧೯೦೮ರಲ್ಲಿ ಬರೋಡಾ ಕಾಲೇಜಿನ ವೈಸ್ ಪ್ರಿನ್ಸಿಪಾಲರಾದರು. ೧೯೧೩ ೧೯೧೪ರಲ್ಲಿ ಪ್ರಪಂಚ ಪ್ರವಾಸ ಮಾಡಿದರು. ಇದು ಅವರ ಎರಡನೆಯ ಪ್ರವಾಸ. ಇಂಗ್ಲೆಂಡ್, ಅಮೆರಿಕಾ, ಯೂರೋಪು, ಕೆನಡಾ ಜಪಾನ್ ಫಿಲಿಫೈನ್ ದ್ವೀಪಗಳು ಹಾಂಕಾಂಗ್ ಮಲಯಗಳಲ್ಲಿ ಪ್ರವಾಸ ಮಾಡಿದರು.

೧೯೧೬-೧೯೧೮ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿಯೂ, ಅದಕ್ಕೆ ಮುಂಚೆ ಸ್ವಲ್ಪ ಕಾಲ ಮಹಾರಾಜಾ ಕಾಲೇಜಿನ ಪ್ರೊಫೆಸರಾಗಿಯೂ ಇದ್ದರು. ೧೯೧೮ರಿಂದ ೧೯೨೧ರವರೆಗೆ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದರು. ಈ ಹುದ್ದೆಗೆ ೧೯೨೧ರಲ್ಲಿ ರಾಜಿನಾಮೆಯಿತ್ತರು. ೧೯೨೧ರಲ್ಲಿ ಭಾರತ ಎಜುಕೇಷನ್ ಸಲಹಾ ಬೋರ್ಡಿನ ಸದಸ್ಯರಾಗಿದ್ದರು. ೧೯೪೦ರಿಂದ ಮತ್ತೆ ಈ ಸಲಹಾ ಬೋರ್ಡಿನ ಸದಸ್ಯರಾದರು.

೧೯೨೪ರಲ್ಲಿ ಯುನೈಟೆಡ್ ನ್ಯಾಷನಲಿಸ್ಟ್ ಪಾರ್ಟಿಯ ಡೆಪ್ಯುಟಿ ಮುಖಂಡರಾಗಿಯೂ ವ್ಯವಸ್ಥಾಪಕರಾಗಿಯೂ ಇದ್ದರು. ೧೯೩೬ರಲ್ಲಿ ಮದ್ರಾಸ್ ಶಾಸನ ಸಭೆ ಸದಸ್ಯರಾಗಿ ಚುನಾಯಿತರಾದರು. ೧೯೩೬ರಲ್ಲಿ ಇವರಿಗೆ ಡಾಕ್ಟರ್ ಆಫ್ ಲಿಟರೇಚರ್ ಪ್ರಶಸ್ತಿ ದೊರೆಯಿತು.

ಇವರು ೧೯೨೬ರಿಂದ ೧೯೩೦ರವರೆಗೆ ಮತ್ತು ೧೯೩೬ರಿಂದ ೧೯೪೯ರವರೆಗೆ ಆಂಧ್ರ ಯೂನಿವರ್ಸಿಟಿ ವೈಸ್ ಚಾನ್ಸಲರ್ ಆಗಿದ್ದರು. 1949ರಲ್ಲಿ ಈ ಪದವಿಗೆ ರಾಜೀನಾಮೆಯಿತ್ತು, ಮೈಸೂರು ವಿಶ್ವವಿದ್ಯಾನಿಲಯದ ಪ್ರೋ ಚಾನ್ಸಲರ್ ಆದರು.

ಡಾ|| ಸಿ. ಆರ್. ರೆಡ್ಡಿಯವರು ಮದ್ರಾಸ್ ರಾಜಕೀಯದಲ್ಲಿ 1921ರಿಂದ ಪ್ರಮುಖ ಪಾತ್ರ ವಹಿಸಿ ಚಟುವಟಿಕೆಯಿಂದ ಕೆಲಸ ಮಾಡಿದ್ದರು.

ಇವರು ಪ್ರತಿಭಾವಂತರೂ ಬಹಳ ಮೇಧಾವಿಗಳೂ ಆಗಿದ್ದರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ವಿಶ್ವವಿದ್ಯಾನಿಲಯ ಸುಧಾರಣೆ ಮೇಲೆ ಉದ್ದಾಮ ಭಾಷಣಗಳನ್ನು ಮಾಡಿದ್ದಾರೆ. ಇವು ಗ್ರಂಥ ರೂಪದಲ್ಲಿ ಇಗ್ಲೀಷಿನಲ್ಲಿ ಪ್ರಕಟವಾಗಿವೆ. ತೆಲುಗು ಭಾಷೆಯಲ್ಲಿ ರಾಜನೀತಿ ಶಾಸ್ತ್ರ ಕುರಿತು ಪುಸ್ತಕ ಬರೆದಿದ್ದಾರೆ. ಇತರ ಗ್ರಂಥಗಳನ್ನೂ ಬರೆದಿದ್ದಾರೆ,

ಶಾಲಾ ಕಾಲೇಜುಗಳಿಗೂ ರಜಾ

ಬೆಂಗಳೂರು ಫೆ. ೨೪

ಡಾ|| ಸಿ. ಆರ್. ರೆಡ್ಡಿಯವರ ಗೌರವಾರ್ಥವಾಗಿ ಫೆಬ್ರವರಿ ೨೬ನೇ ತಾರೀಖು ಸಂಸ್ಥಾನಾಮಳೆ ಎಲ್ಲಾ ಶಾಲಾ ಕಾಲೇಜುಗಳಿಗೂ ರಜಾ ಕೊಡಲು ಸರ್ಕಾರದ ಆಜ್ಞೆಯಾಗಿದೆ,

ಪೋಲೀಸ್ ಅಧಿಕಾರಿಯ ಮನೆಗೇ ನುಗ್ಗಿದ ಧೀರ

ದೆಹಲಿಯ ಪೋಲೀಸ್ ಅಧಿಕಾರಿಯೊಬ್ಬರ ಮನೆಗೆ ಒಬ್ಬರು ನುಗ್ಗಿ ಅವರಿಗೆ ವಿಚಿತ್ರ ಪ್ರಶ್ನೆಗಳನ್ನು ಹಾಕಿ ಮನೆಯನ್ನೆಲ್ಲಾ ೨ ಗಂಟೆಗಳ ಕಾಲ ಶೋಧಿಸಿದರು. ಪೆಟ್ಟಿಗೆಗಳ ಬೀಗಗಳನ್ನೆಲ್ಲಾ ಒಡೆದು ನೋಡಿ ಎರಡು ಗಂಟೆಯನಂತರ ಏನನ್ನೂ ತೆಗೆದುಕೊಳ್ಳದೆ ಹಾಗೆಯೇ ಹೊರಟು ಹೋದರು. ಪೋಲೀಸ್ ಅಧಿಕಾರಿಯು ಸುಮ್ಮನೆ ಇದನ್ನೆಲ್ಲಾ ನೋಡುತ್ತಾ ಹಾಗೆಯೇ ಕುಳಿತಿದ್ದರು.

ಮಂತ್ರಿಮಂಡಲ ಅಧಿಕಾರ ತ್ಯಜಿಸಿತು

ಶ್ರೀ ಟಿ. ಕೆ. ನಾರಾಯಣಪಿಳ್ಳೆಯವರ ಮುಖ್ಯಮಂತ್ರಿತ್ವದಲ್ಲಿದ್ದ ತಿರುವಾಂಕೂರು ಕೊಚ್ಚಿ ಮಂತ್ರಿಮಂಡಲವು ಈ ಸಂಜೆ ರಾಜೀನಾಮೆ ಒಪ್ಪಿಸಿತು.

ಒಡಕು ಮುಚ್ಚಲು ಪ್ರಯತ್ನ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಂಡನ್ನರು ಕಾಂಗ್ರೆಸ್ ಡೆಮೊಕ್ರಾಟಿಕ್ ಗುಂಪಿನ ಆಚಾರ್ಯ ಕೃಪಲಾನಿಯವರೊಡನೆ ಈದಿನ ಮಾತುಕತೆ ನಡೆಸಿದರು. ಪ್ರಾಯಶಃ ಕಾಂಗ್ರೆಸ್ಸಿನಲ್ಲಿ ಒಡಕು ಮುಚ್ಚಲು ಪ್ರಯತ್ನವಿರಬಹುದು.

ಎ.ಐ.ಸಿ.ಸಿ ಆಫೀಸಿನಲ್ಲಿ ಕೆಲಸಮಾಡುತ್ತಿದ್ದ ಅಧ್ಯಕ್ಷರು ಏಕಾಏಕಿ ಎದ್ದು ಪಕ್ಕದಲ್ಲಿಯೇ ಇರುವ ಶ್ರೀ ಕೃಪಲಾನಿ ನಿವಾಸಕ್ಕೆ ಹೋದರು.

ವದಂತಿ ಸುಳ್ಳು

ಕಮ್ಯೂನಿಸ್ಟ್ ಚೀನಾ ನೀತಿಯಿಂದ ಬೇಸರಗೊಂಡು ಅಲ್ಲಿರುವ ಭಾರತ ರಾಯಭಾರಿ ಸರ್ದಾರ್ ಪಣಿಕರ್ ರಾಜೀನಾಮೆ ಕೊಡುವರೆಂಬ ಅಮೆರಿಕನ್ ವದಂತಿಗಳು ಶುದ್ಧಾಂಗ ಸುಳ್ಳೆಂದು ವಿದೇಶಾಂಗ ಇಲಾಖೆ ಪ್ರಕಟಿಸಿದೆ.

ಚಿಕ್ಕಪೇಟೆಯಲ್ಲಿ ಬೆಂಕಿ ಅನಾಹುತ

೧೦-೧೫ ಸಾವಿರ ರೂ. ಗಳ ನಷ್ಟ

ಬೆಂಗಳೂರು ಫೆ. ೨೬

ಚಿಕ್ಕಪೇಟೆಯಲ್ಲಿ ಶನಿವಾರ ಬೆಳಗ್ಗೆ ಎಲೆಕ್ಟ್ರಿಕ್ ಸ್ಟೋರ್ಸ್‌ನಒಂದು ಅಂಗಡಿಗೆ ಬೆಂಕಿ ಬಿದ್ದು ಕಟ್ಟಡ ಮತ್ತು ಎಲೆಕ್ಟ್ರಿಕಲ್ ಸಾಮಾನುಗಳೂ ಸೇರಿ ಸುಮಾರು ಹತ್ತು ಹದಿನೈದು ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ.

ಷಾರ್ಟ್ ಸರ್ಕ್ಯೂಟ್‌ನಿಂದ ಈ ಅನಾಹುತವುಂಟಾಗಿರುವುದೆಂದು ಹೇಳಲಾಗಿದೆ. ಸಿ. ಆರ್. ಪಿ. ಫೈರ್ ಬ್ರಿಗೇಡಿನವರು ಬಂದು ಬೆಂಕಿಯನ್ನು ಆರಿಸಿದರು.

ಬಟ್ಟೆ ರಫ್ತು ನಿರೋಧ

ಫೈನ್ ಮತ್ತು ಸೂಪರ್‌ಫೈನ್ ಬಟ್ಟೆಗಳನ್ನು ಭಾರತದಿಂದ ಹೊರಕ್ಕೆ ರವಾನಿಸುವುದನ್ನು ನಿರೋಧಿಸಿರುವುದಾಗಿ ಕೈಗಾರಿಕಾ ಶಾಖಾ ಉಪಮಂತ್ರಿ ಮಿ|| ಕಾರಮರ್‌ಕರ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೨—೧೯೫೫ನೇ ಮಂಗಳವಾರ [ಸಂಚಿಕೆ ೧೪೭

ಆಹಾರಾಧಿಕಾರಿಗಳ ಧಾನ್ಯ ಶೇಖರಣೆ ಕ್ರಮ

ಪತ್ರಿಕೋದ್ಯೋಗಿಗಳಿಂದ ಪರಿಶೀಲನೆ

ಹೃದಯದ್ರಾವಕ ದೃಶ್ಯಗಳು

ಮೈಸೂರು ಫೆ. ೨೬

ನಿನ್ನೆ ರಾತ್ರಿ ಮೈಸೂರು ನಗರದ ಕೆಲವು ಪತ್ರಿಕೋದ್ಯೋಗಿಗಳು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪ ಮತ್ತು ಕೃಷ್ಣರಾಜನಗರ ಕೆಲವು ಗಣ್ಯವ್ಯಕ್ತಿಗಳೊಡನೆ ದೊಡ್ಡಕೊಪ್ಪಲು, ಜೋರ್ನಹಳ್ಳಿ, ದುಗ್ಗನಹಳ್ಳಿ ಮುಂತಾದ ಹಲವು ಗ್ರಾಮಗಳಿಗೆ ಭೇಟಿಯಿತ್ತು ಧಾನ್ಯ ವಸೂಲಿ ನೆಪದಲ್ಲಿ ಆಹಾರಾಧಿಕಾರಿಗಳು ನಡೆಸುತ್ತಲಿರುವ ದಬ್ಬಾಳಿಕೆ ಕ್ರಮವನ್ನು ವಿಚಾರಿಸಿ ತಿಳಿದುಕೊಂಡು ಬೆಳಗಿನ ಜಾವ ೪ ಗಂಟೆ ವೇಳೆಗೆ ಮೈಸೂರಿಗೆ ಹಿಂದಿರುಗಿದರು.

ಕೃಷ್ಣರಾಜನಗರದ ಅಮಲ್ದಾರರು, ಶಿರಸ್ತೇದಾರರು, ಪೋಲೀಸು ಮಾಲೀಕರು ಮತ್ತು ಅವರ ನೌಕರರು ಸುಮಾರು ೨೦-೩೦ ಜನ ಹಳ್ಳಿಗಳಿಗೆ ಅರ್ಧ ರಾತ್ರಿಯಲ್ಲಿ ಹೋಗಿ ಜನರನ್ನು ಬೆದರಿಸಿ, ಹೊಡದು, ಜಮೀನಿಲ್ಲದವರ ಬಳಿ ಸಹ ಎಲ್ಲಾ ಭತ್ತವನ್ನೂ ದೋಚಿಕೊಂಡು ಹೋಗಿರುವುದಾಗಿ ತಿಳಿಯಬಂದಿತು

ಬಸವಾಪಟ್ಟಣದಲ್ಲಿ ಹುಟ್ಟ ಎಂಬ ಹರಿಜನರ ಮನೆಗೆ ನುಗ್ಗಿ ಅವನ ತಮ್ಮನ ಹೆಂಡತಿಯನ್ನು ಹೊಡೆದು ಭತ್ತವನ್ನೆಲ್ಲಾ ದೋಚಿಕೊಂಡು ಹೋಗಿರುವರು. ಸಾಕಿ, ಮರಿಸಿಂಗಿ ಎಂಬುವವರ ಮನೆಗೆ ಹೋಗಿ ಧಾನ್ಯವನ್ನೆಲ್ಲಾ ತೆಗೆದುಕೊಂಡು ಬೇರೆಯವರ ಹೆಸರಿನಲ್ಲಿ ಬಿಲ್ಲು ಹಾಕಿರುವರು. ಕೆಂಚವೆಂಬ ಗುತ್ತಿಗೆ ಭತ್ತವನ್ನೆಲ್ಲಾ ದೋಚಿಕೊಂಡು ಹೋಗಿರುವರು. ಬಿಲ್ಲು ಯಾರ ಹೆಸರಿನಲ್ಲಿ ಹಾಕಿರುವರೋ ತಿಳಿಯದು.

ದುಗ್ಗನಹಳ್ಳಿಂಬ ಗ್ರಾಮದಲ್ಲಿ ಇದೇ ರೀತಿ ವರ್ತಿಸಿ, ೧೫ ದಿನದ ಬಾಣಂತಿ ಮಗುವನ್ನು ಹೊರಕ್ಕೆ ದೂಡಿ, ಮತ್ತೊಂದು ಮನೆಯಲ್ಲಿ ಗಂಡನಿಲ್ಲದ ವೇಳೆ, ಕಣ್ಣು ಕಾಣದ, ಕಿವಿ ಕೇಳಿಸದ ೭೦ ವರ್ಷದ ಮುದುಕಿಯಿದ್ದಾಗ್ಯೂ, ಒಳಗೆ ನುಗ್ಗಿ ಭತ್ತವನ್ನೆಲ್ಲಾ ದೋಚಿಕೊಂಡು ಹೋಗಿರುವರು.

ಜೋರ್ನಹಳ್ಳಿಯಲ್ಲಿ ಸುಮಾರು ೩೦೦ ಹಿಂಡುಗಳನ್ನು ಬೆಳೆಯುವ ಅಂತೋಣಿ ಎಂಬುವವನು ಸರ್ಕಾರಕ್ಕೆ ತಾನು ಕೊಡಬೇಕಾಗಿದ್ದ ಭತ್ತವನ್ನೆಲ್ಲಾ ಕೊಟ್ಟಿದ್ದಾಗ್ಯೂ, ಅವನ ಹೆಂಡತಿಯು ಹಿಂದಿನ ಧನಸತ್ತು ತಿಂಗಳು ದಿನ ಇನ್ನು ಸಹ ಗಮನಿಸದೆ ಅವನ ಮನೆಗೆ ನುಗ್ಗಿ ಭತ್ತವನ್ನು ಕೊಂಡೊಯ್ದಿರುವರು. ಸರ್ಕಾರಕ್ಕೆ ಒಂದು ಸಾವಿರ ರೂ. ವರೆಗೆ ಕಂದಾಯ ಕೊಡುವ ಈತನು ಅಧಿಕಾರಿಗಳ ಕಾಲು ಹಿಡಿದು ಕೇಳಿಕೊಂಡರೂ, ಅವನನ್ನು ಒದ್ದು ತಳ್ಳಿದರೆಂದು ತಿಳಿಯಬಂದಿದೆ. ಅದೇ ಗ್ರಾಮದಲ್ಲಿ ಬಲಾತ್ಕಾರವಾಗಿ ಕೊಂಡೊಯ್ದು ಭತ್ತದ ಹಣವನ್ನೆಲ್ಲಾ ಕೊಡಿಸಲು ೩೫೦ ರೂ. ಲಂಚ ಕೇಳಿರುವುದಾಗಿಯೂ, ಅವರು ನಿರಾಕರಿಸಿರಲು ಇನ್ನು ಹಣವು ಬಾವತಿ ಮಾಡಿಲ್ಲವೆಂದೂ ಹೇಳಲಾಗಿದೆ.

ಈ ವಿಷಯಗಳನ್ನು ಆ ಬಡ ರೈತರು ಹೇಳುವಾಗ ಅವರ ದುಃಖವನ್ನು ಹೇಳಲಾಗದು. ಅನೇಕರು ಅಳುತ್ತಾ ನಿಂತುಬಿಟ್ಟರು.

ಇದೇ ರೀತಿ ಇನ್ನು ಅನೇಕ ಗ್ರಾಮಗಳಲ್ಲಿ ನಡೆದಿರುವುದಾಗಿ ತಿಳಿಸಿದರು. ದುಗ್ಗನಹಳ್ಳಿಯ ಗ್ರಾಮದವರಲ್ಲಿ ಒಬ್ಬನು ಮಂತ್ರಿಗಳ ಬಳಿ ಹೋಗುವನೆಂಬ ವಿಷಯವು ಈ ಅಧಿಕಾರಿಗಳಿಗೆ ತಿಳಿದೊಡನೆಯೇ ಆತನನ್ನು ಕರೆಸಿ ಆತನ ಭತ್ತವನ್ನು ಹಿಂದಕ್ಕೆ ತೆಗೆದುಕೊಂಡು ಹೋಗೆಂದು ಹೇಳುತ್ತಲಿರುವುದಾಗಿ ತಿಳಿಯಬಂದಿದೆ.

ಸಂಸ್ಥಾನದಲ್ಲಿ ಹೊಸ ರಾಜಕೀಯ ಪಕ್ಷ ಸ್ಥಾಪನೆ

ಮಾರ್ಚಿ ೧೦ ರಲ್ಲಿ ಪಕ್ಷದ ಸಮ್ಮೇಳನವು ಬೆಂಗಳೂರಿನಲ್ಲಿ

ಬೆಂಗಳೂರು ಫೆ. ೨೬

ದೇಶದ ಹಾಗೂ ಜನತೆಯ ಅಭಿವೃದ್ಧಿಗಾಗಿ ದುಡಿಯುವ ಮುಖ್ಯೋದ್ದೇಶದಿಂದ ಸಂಸ್ಥಾನದಲ್ಲಿ ಒಂದು ಹೊಸ ವಿರೋಧ ರಾಜಕೀಯ ಪಕ್ಷವನ್ನು ಕಟ್ಟಲು ಮುಂದಿನ ತಿಂಗಳು ೧೦ನೇ ತಾರೀಖು ಒಂದು ಅಧಿವೇಶನ ನಡೆಯಲಿದೆ. ಈಗಾಗಲೇ ಮಾಜಿ ಮಂತ್ರಿ ಶ್ರೀ ಎಚ್. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿ ರಚಿತವಾಗಿದೆ.

ಇದರ ಸಂಬಂಧವಾಗಿ ಇಂದು ಬೆಳಗ್ಗೆ ಪತ್ರಿಕಾಗೋಷ್ಠಿ ನಡೆಸಿ ಸಮ್ಮೇಳನದ ಬಗ್ಗೆ ವಿವರಗಳನ್ನು ಪಕ್ಷದ ರೀತಿನೀತಿ, ಧ್ಯೇಯಗಳನ್ನು ತಿಳಿಸಲಾಯಿತು.

ಜೈಲಿಗೆ ರಿಮ್ಯಾಂಡ್

ಬೆಂಗಳೂರು ಫೆ. ೨೬

ಮುಖ್ಯ ನ್ಯಾಯಾಧೀಶರಿಗೆ ವಿಷಪ್ರಯೋಗ ನಡೆಯಿತೆಂಬ ಸಂದರ್ಭದಲ್ಲಿ ಪೋಲೀಸರ ವಶದಲ್ಲಿದ್ದ ಶ್ರೀಗಳಾದ ನಾರಾಯಣ ಪ್ರಸಾದ್, ದಾಸಪ್ಪ ನಾಯಿಡು, ಜಯರಾಂ ಮತ್ತು ಶ್ರೀಮತಿ ಅಗ್ನಿಸ್‌ರವರು ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಮುಂದೆ ಮಾರ್ಚಿ ೩ನೇ ತಾ|| ವರೆಗೆ ಜೈಲಿಗೆ ರಿಮ್ಯಾಂಡ್ ಮಾಡಿದರು.

ಪುಸ್ತಕಗಳ ಪ್ರದರ್ಶನ

ಬೆಂಗಳೂರು ಫೆ. ೨೬

ಅಮೆರಿಕದ ಶಿಕ್ಷಣ ವಿದ್ಯಾಭ್ಯಾಸ ಸಭೆಯ ಸಂಬಂಧ ಪುಸ್ತಕಗಳ ಪ್ರದರ್ಶನದ ಆರಂಭೋತ್ಸವವನ್ನು ಇಂದು ಸಂಜೆ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಸೆಂಟ್ರಲ್ ಹೈಸ್ಕೂಲಿನಲ್ಲಿ ನೆರವೇರಿಸಿದರು.

ಪ್ರವಾಸ

ನ್ಯಾಯಾಂಗ ಸಚಿವ ಶ್ರೀ ಟಿ. ಚನ್ನಯ್ಯನವರು ಮಾರ್ಚಿ ೩ನೇ ತಾ||ನಿಂದ ೭ರ ವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸಮಾಡುವರು.

ಕಾರು ಅಪಘಾತ

ಮೈಸೂರು ಫೆ. ೨೬

ಶ್ರೀರಂಗಪಟ್ಟಣದಲ್ಲಿ ಎಂ ಎಸ್. ೭೭೭೮ ಬಸ್ ನಂಬರಿನ ಲಾರಿಯು ಬಸ್ ಸ್ಟಾಂಡಿನ ಬಳಿ ಬಾಲಕನ ಮೇಲೆ ಹರಿದು ಬಾಲಕನಿಗೆ ಪ್ರಾಣಾಪಾಯ, ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿರುವನೆಂದು ವರದಿಯಾಗಿದೆ.

ನಿನ್ನೆ ಮಧ್ಯಾಹ್ನ ಮೈಸೂರು ಹೊಸ ಗರಡಿಯಾಂದ ಬಳಿ ತಾ|| ನಂಜನಗೂಡಿನ ಕಡೆ ಹೋಗುತ್ತಿದ್ದ ಸಾರಿಗೆ ಬಸ್ಸು ಗಾಡಿಯು ಒಬ್ಬ ಹುಡುಗನ ಮೇಲೆ ಹರಿದು ಅವನ ಒಂದು ಕಾಲು ಮುರಿದು ಆಸ್ಪತ್ರೆಗೆ ದಾಖಲಾಗಿರುವನೆಂದು ತಿಳಿಯಬರುತ್ತದೆ.

ಬಿಡುಗಡೆ

ಬೆಂಗಳೂರು ಫೆ. ೨೬

ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ವಿಷಪ್ರಯೋಗ ಸಂಬಂಧದಲ್ಲಿ ದಸ್ತಗಿರಿಯಾಗಿದ್ದ ಶ್ರೀ ಚಿಕ್ಕೀರಮುನಿಯವರನ್ನು ಈ ಬೆಳಿಗ್ಗೆ ಪೋಲೀಸ್ ಕಸ್ಟಡಿಯಿಂದ ಬಿಡುಗಡೆ ಮಾಡಲಾಗಿದೆ.

ಬ್ಯಾಂಕುಗಳ ಕೆಲಸಾನಿಯಮ

ಬ್ಯಾಂಕುಗಳ ವಹಿವಾಟು ಕಾಲವನ್ನು ಕಡಿಮೆ ಮಾಡಿರುವುದರಿಂದ ವ್ಯಾಪಾರ ವರ್ಗಕ್ಕೆ ಉಂಟಾಗಿರುವ ತೊಂದರೆಯನ್ನು ಮನಗಂಡು ಕಾಲಾವಧಿಯ ಪುನರ್ವಿಮರ್ಶೆ ಬಗ್ಗೆ ರಿಜರ್ವ್ ಬ್ಯಾಂಕಿನೊಡನೆ ಸರ್ಕಾರವು ಸಮಾಲೋಚಿಸುತ್ತಲಿದೆಯೆಂದು ಅರ್ಥಿಕ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಸೆನ್ಸಸ್ ಕೆಲಸಕ್ಕೆ ಪ್ರತ್ಯೇಕ ಸಂಭಾವನೆ ಕೊಡಿ

ಬೊಂಬಾಯಿನಲ್ಲಿ ಜನಗಣತಿ ಕಾರ್ಯಕ್ಕೆ ಕರೆಯಲಾದ ಸರಕಾರಿ ಮತ್ತು ಪೌರಸಭಾ ಕೆಲಸಗಾರರು ತಮಗೆ ಪ್ರತ್ಯೇಕವಾಗಿ ಸಂಭಾವನೆ ಕೊಡಬೇಕೆಂದು ಕೋರಿದರು. ಈ ಕೆಲಸ ತಮ್ಮ ಉದ್ಯೋಗ ವ್ಯಾಪ್ತಿಗೆ ಸೇರಿದ್ದಲ್ಲವೆಂದು ಸರ್ಕಾರದ ಬವ್ವಾಯಿ ಸರಿಯಲ್ಲವೆಂದು ಅವರುಗಳ ಸಭೆ ಉಗ್ರ ಪ್ರತಿಭಟನ ಸೂಚಿಸಿತು.

ಕೊಲೆ ಅಪಾದಿತನ ಕೊಲೆ

ನ್ಯೂಯಾರ್ಕ್, ಕೊಲೆ ಅಪಾದನೆಯ ಮೇಲೆ ವಿಚಾರಣೆಗೆ ಒಳಗಾಗಬೇಕಾಗಿದ್ದ ದಿನಕ್ಕೆ ಒಂದು ದಿನ ಮುಂಚೆ ಆಲ್ಫ್ರೆಡ್ ಗೋರ್ಡನ್ ಎಂಬ ಅಮೆರಿಕದ ಬ್ಯಾಂಕುಕಾರ ಒಂದರಿಂದ ಧಾವಿಸಿ ಬಂದ ಗುಂಡುಗಳು ಸುರಿದುಕೊಂಡು ಕೊಲೆಯಾದನೆಂದು ತಿಳಿಯಬರುತ್ತದೆ.

ಸಮಾಚಾರ

ಮೈಸೂರು ತಾ|| ೨೭ನೇ ಮಂಗಳವಾರ

ಸರ್ಕಾರದವರು ಈ ಅನೀತಿಯನ್ನು ತಪ್ಪಿಸಬೇಕು

ಕೃಷ್ಣರಾಜನಗರದ ಕೆಲವು ಗ್ರಾಮಗಳಲ್ಲಿ ತಾ|| ನ ಆಹಾರಾಧಿಕಾರಿಗಳು, ಧಾನ್ಯವಸೂಲಿಗಾಗಿ ಹೋಗಿ, ಅಕ್ರಮ ರೀತಿಯಲ್ಲಿ ವರ್ತಿಸಿ, ಜನರಿಗೆ ಅನೇಕ ರೀತಿಯಾದ ತೊಂದರೆಗಳನ್ನು ಕೊಟ್ಟಿರುವ ನಿಜಾಂಶವನ್ನು ಅರಿತುಕೊಳ್ಳಲು ಮೈಸೂರು ನಗರದ ಕೆಲವು ಪತ್ರಿಕೋದ್ಯೋಗಿಗಳು ಆ ಗ್ರಾಮಗಳಿಗೆ ಭೇಟಿಯಿತ್ತು, ತೊಂದರೆ ಯನ್ನನುಭವಿಸಿದ ರೈತರಿಂದಲೇ ಎಲ್ಲವನ್ನು ಅರಿತುಕೊಂಡರು. ಸರ್ಕಾರಿ ನೌಕರಿಯಲ್ಲಿದ್ದು, ಜವಾಬ್ದಾರಿಯುತವಾದ ಅಧಿಕಾರಿಗಳು ಈ ರೀತಿ ವರ್ತಿಸುವುದು ಅತ್ಯಂತ ಖಂಡನೀಯವಾದುದು. ಅರ್ಧ ರಾತ್ರಿ ವೇಳೆಯಲ್ಲಿ ಹತ್ತಾರು ಮನೆಗಳಿರುವ ಗ್ರಾಮಗಳಿಗೆ, ದರೋಡೆಗಾರರೋಪಾದಿಯಲ್ಲಿ ನುಗ್ಗಿ, ಜವಿನಾನುಗಳಿಲ್ಲದೆ ಕೂಲಿ, ಮುಂತಾದುವನ್ನು ಮಾಡಿ ಅಲ್ಪಸ್ವಲ್ಪ ಆಹಾರ ಪದಾರ್ಥಗಳನ್ನು ಶೇಖರಿಸಿಕೊಂಡಿರುವಲ್ಲಿ, ಅವರಿಗೆ ತಿನ್ನಲು ಒಂದುಕಾಳೂ ಸಹ ಬಿಡದೆ ಹೆಂಗಸರು, ಮಕ್ಕಳು, ಮುದುಕರು ಮುಂತಾದವರನ್ನೆಲ್ಲಾ ಅವ್ಯಾಚ್ಯಶಬ್ದಗಳಿಂದ ಬೈದು, ಹೊಡೆದು ದವಸವನ್ನು ದೋಚಿಕೊಂಡು ಹೋಗಿರುವ ವಿವರಗಳನ್ನು ಆ ಬಡ ಹಳ್ಳಿಗಾರರು ಹೇಳುತ್ತಲಿದ್ದರೆ ಕಡೆಯಲಾರದ ದುಃಖವು ಎಲ್ಲರಿಗೂ ಉಂಟಾಯಿತು. ಈ ಅಕ್ರಮ ರೀತಿಯನ್ನು ಏನೆಂದು ಹೇಳುವುದು ಇದೇನು ದುಂಡಾವೃತ್ತಿಯೇ, ಹೈದರಾಬಾದಿನಲ್ಲಿ ನಡೆದ ರಜಾಕಾರರ ಹಾವಳಿಯಂತೆ ಹಾವಳಿಯೇ, ತಾ|| ಅಮಲ್ದಾರರು, ಶಿರಸ್ತೇದಾರರು, ಇತರ ಆಹಾರ ಅಧಿಕಾರಿಗಳು ಕೆಲವು ಮಿಲ್ಲುಗಳ ಮಾಲೀಕ ಮತ್ತು ಅವರ ಸಿಬ್ಬಂದಿಯವರ ಸಹಕಾರದಿಂದ ಈ ರೀತಿ ವರ್ತಿಸಿರುವುದು, ಈ ವಿಷಯವು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿದಾಗ್ಯೂ ಸುಮ್ಮನೆ ಕುಳಿತಿರುವುದು ಅವರಿಗೆ ಪತ್ರಪ್ಟು ಉತ್ತೇಜನ ವಿದ್ದಂತಾಗಿದೆ.

ಈ ಸಣ್ಣ ಪುಟ್ಟ ನೌಕರರುಗಳ ವರ್ತನೆಯು ಮಂತ್ರಿಗಳಿಗೆ, ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವುದಾಗಿದೆ.

ಆಹಾರ ಮಂತ್ರಿಗಳು, ಇಲಾಖಾ ಮುಖ್ಯಾಧಿಕಾರಿಗಳು ಕೂಡಲೇ ಈ ವಿಷಯದಲ್ಲಿ ತಮ್ಮ ಐನೂರು ಗಮನವನ್ನಿತ್ತು, ವಿಚಾರಣೆ ನಡೆಯಿಸುತ್ತೇವೆಂದು ನಿಧಾನಿಸದೆ, ಕೂಡಲೇ ಆ ಗ್ರಾಮಗಳಿಗೆ ಭೇಟಿಯಿತ್ತು ನಿಜಾಂಶವನ್ನು ತಾವೂ ಅರಿತುಕೊಂಡು, ಎಲ್ಲಿಯೂ, ಯಾವಾಗಲೂ ಈ ರೀತಿಯಾದ ಅನೀತಿ ವರ್ತನೆ ನಡೆದು ಸಂಸ್ಥಾನಕ್ಕೆ ಅಪಕೀರ್ತಿಯೂ, ಜನರಿಗೆ ತೊಂದರೆಯೂ ಆಗದಂತೆ ನೋಡಿಕೊಳ್ಳುವರೆಂದು ನಂಬಿದ್ದೇವೆ.

ಈ ಪರಿಶೀಲನೆ ನಡೆದು ಮುಂದಿನ ಕಾರ್ಯಕ್ರಮ ವಹಿಸುವವರೆಗೆ ಕೃಷ್ಣರಾಜನಗರದ ಆಹಾರಾಧಿಕಾರಿ ಶೇಖರಣೆ ಕೆಲಸಕ್ಕೆ ಹೋಗುವುದನ್ನು ತಡೆಗಟ್ಟುವುದು ಉತ್ತಮ.

ಭಾರತಕ್ಕೆ ಪಾಕಿಸ್ತಾನ ಧಾನ್ಯ ಒದಗಿಸಲು ಒಪ್ಪಂದ

ಭಾರತ ಪಾಕಿಸ್ತಾನಗಳ ನಡುವೆ ವ್ಯಾಪಾರ ಒಪ್ಪಂದವು ಮೊನ್ನೆ ಯಶಸ್ವಿಯಾಗಿ ಮುಕ್ತಾಯಗೊಂಡು ಎರಡು ಪಕ್ಷದ ಪ್ರತಿನಿಧಿಗಳೂ ಅದಕ್ಕೆ ರುಜು ಮಾಡಿದರು. ಅದರ ಷರತ್ತಿನ ಪ್ರಕಾರ ಭಾರತವು ಕಲ್ಲಿದ್ದಲು, ಉಕ್ಕು, ಬಟ್ಟೆ ಮತ್ತು ಸಿಮೆಂಟನ್ನು ಪಾಕಿಸ್ತಾನಕ್ಕೆ ರಫ್ತು ಮಾಡಿ ಅದಕ್ಕೆ ಪ್ರತಿಯಾಗಿ ಅಲ್ಲಿಂದ ಕಚ್ಚಾ ಹತ್ತಿ, ಸೆಣಬು ಮತ್ತು ಆಹಾರ ಧಾನ್ಯವನ್ನು ಭಾರತಕ್ಕೆ ಆಮದು ಮಾಡಿಕೊಳ್ಳುವುದೆಂದು ತಿಳಿದುಬಂದಿದೆ. ಒಪ್ಪಂದವು ಮುಂಗಾಮಿ ಜೂನ್ ೩೦ ತಿಂಗಳ ಕಾಲ ಜಾರಿಯಲ್ಲಿರುವುದೆಂದು ಗೊತ್ತಾಗಿದೆ.

ಅಧಿಕಾರಿಯ ದುರ್ವರ್ತನೆ

ಅಧಿಕಾರ ಕ್ಷೇತ್ರದಲ್ಲಿ ತನಗೆ ಅನ್ಯಾಯವಾಗಿ ತಮ್ಮ ಕೈಕೆಳಗೆ ಕೆಲಸಮಾಡುತ್ತಲಿದ್ದವರೆಲ್ಲರೂ ತಮ್ಮ ಅಧಿಕಾರಿಗಳಾಗಿದ್ದುದನ್ನು ತಡೆಯಲಾರದೆ ಚಿಕ್ಕೋಟೆಯ ಅಸಿಸ್ಟೆಂಟು ಪೋಲೀಸು ಸೂಪರಿಂಟೆಂಡೆಂಟಾದ ಮಿ|| ಬುದ್ಧಾಜಿ ಪೋಸರ್‌ದಾರ್ ಎಂಬುವವರು ಸೂರತ್ತಿನಲ್ಲಿ ವಿಷ ಕುಡಿದು ಮರಣ ಹೊಂದಿದರೆಂದು ತಿಳಿಯಬರುತ್ತದೆ.

ಮಿ|| ಬಿ. ಎನ್. ಕೌಲ್

ಕೇಂದ್ರ ಮಂತ್ರಿ ಮಂಡಲದ ಸಹಕಾರ್ಯದರ್ಶಿಗಳಾಗಿದ್ದ ಮಿ|| ಬಿ. ಎನ್. ಕೌಲ್‌ರವರು ಪ್ರಧಾನಿ ನೆಹರೂರವರ ಮುಖ್ಯ ಆಪ್ತ ಕಾರ್ಯದರ್ಶಿಗಳಾಗಿ ನೇಮಕವಾಗಿದ್ದಾರೆ.

* ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಬಾಂಬೆ ಇಂದ್ರಭವನದಲ್ಲಿ ಈದಿನ ರಾತ್ರಿ (ತಾ|| ೨೭-೨-೫೧) ೮ ಗಂಟೆಗೆ ತಂಜಾವೂರು ಸಂಗೀತ, ಹರಿಕಥಾ ವಿದ್ವಾನ್ ವೇ|| ಬ್ರ|| ಶ್ರೀ|| ಶೇಷಗಿರಿದಾಸರಿಂದ "ಭಕ್ತನಂದನಾರ್" ಎಂಬ ಶಿವಕಥೆಯು ನಡೆಯುವುದು

ಉದಾರಿಗಳ ದಾನ

ಮೈಸೂರಿನಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದ ಕಟ್ಟಡದ ಬಡಾವಣೆಗಾಗಿ ಹುಣಸೂರು ತಾ|| ಗಾವಡಗೆರೆಯ ಮೈಸೂರು ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀಮಾನ್ ಟಿ. ಎನ್. ಸುಬ್ಬರಾವ್ ಪಾಟೀಲರವರು ೨೫೦೦, ರೂ, ಗಳ ವೆಚ್ಚದಲ್ಲಿ ಒಂದು ರೂಮನ್ನು ಕಟ್ಟಿಸಿಕೊಡಲು ಒಪ್ಪಿಕೊಂಡಿರುತ್ತಾರೆ.

ಪಿರಿಯಾಪಟ್ಟಣದ ತಾಲ್ಲೂಕ ರಾವಂದೂರು ಸಾಹುಕಾರ್ ಶ್ರೀ ಆರ್. ಎಸ್. ಶಿವಲಿಂಗಸ್ವಶೆಟ್ಟರವರು ತಮ್ಮ ಜೇಷ್ಠಕುಮಾರ ಶ್ರೀ ಆರ್. ಎಸ್. ಸಿದ್ದಣ್ಣಶೆಟ್ಟರವರ ವಿವಾಹದ ಜ್ಞಾಪಕಾರ್ಥವಾಗಿ ೨೫೦೦ ರೂಪಾಯಿಗಳ ವೆಚ್ಚದಲ್ಲಿ ಮತ್ತೊಂದು ರೂಮನ್ನು ಹಾಕಿಸಿಕೊಡಲು ಒಪ್ಪಿದ್ದಾರೆ.

ಖಂಡನೆ. ಶಿಸ್ತಿನ ಕ್ರಮವಿಲ್ಲ

ಕಾರ್ಯಕಾರಿ ಸಮಿತಿಯು ಬೇಡವೆಂದು ಹೇಳಿದ್ದರೂ ಮದರಾಸು ಮಂತ್ರಿಗಳ ಮೇಲೆ ಅವಿಶ್ವಾಸದ ಠರಾವು, ವಿಚಾರಣೆ ನಡೆಸಬೇಕೆಂದು, ಮದರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ಪ್ರಕಾಶಂರವರು ಶಾಸನಸಭೆಯಲ್ಲಿ ನಿರ್ಣಯವುಂಡಿಸಿದ್ದನ್ನು ದೆಹಲಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಪರಿಶೀಲಿಸಿ, ಅವರ ವರ್ತನೆಯನ್ನು ಖಂಡಿಸಿ, ಅವರ ವಯಸ್ಸನ್ನು ಗಣನೆಗೆ ತೆಗೆದುಕೊಂಡು ಶಿಸ್ತಿನಕ್ರಮವನ್ನು ಕೈಗೊಳ್ಳಬೇಕಾಗಿಲ್ಲವೆಂದು ನಿರ್ಧರಿಸಿರುವರು,

ಮನರಂಜನೆ ತೆರಿಗೆ ವಜಾ

ಮದ್ರಾಸ್ ಪ್ರಾಂತ್ಯದಲ್ಲಿ ನಾಟಕಗಳ ಮೇಲೆ ಮನರಂಜನೆ ತೆರಿಗೆ ವಿಧಿಸಿರುವುದನ್ನು ತೆಗೆದುಹಾಕಿದ್ದಾರೆ. ನಾಟಕ ಕಲೆಯ ಮುನ್ನಡೆಗೆ ಸಹಾಯವಾಗಲು ಈ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂದು ಅರ್ಥಿಕ ಸಚಿವ ಶ್ರೀ ಬಿ. ಗೋಪಾಲರೆಡ್ಡಿಯವರು ಹೇಳಿರುವರು.

ಯುದ್ಧ ಮಾಡುವುದಿಲ್ಲ

ಪ್ರಪಂಚ ಮಹಾ ರಾಷ್ಟ್ರಗಳಾದ ಅಮೇರಿಕ, ರಷ್ಯ, ಬ್ರಿಟನ್, ಫ್ರಾನ್ಸ್ ಮತ್ತು ಚೈನಾಗಳು ಯುದ್ಧ ಮಾಡುವುದಿಲ್ಲವೆಂದು ಒಪ್ಪಂದ ಮಾಡಿಕೊಳ್ಳಬೇಕೆಂದು ಪ್ರಪಂಚ ಶಾಂತಿ ಸಮಿತಿಯು ಮನವಿ ಮಾಡಿಕೊಂಡಿದೆ.

ಓವರ್ ಲೋಡು

ರಾಮನಗರಂ ಫೆ. ೨೬

ರಾಮನಗರಂ ಮಾರ್ಗವಾಗಿ ಬನಶಂಕರಿಯಿಂದ ಕಾನಕಾನಹಳ್ಳಿಗೆ ಹೋಗುತ್ತಲಿದ್ದ ಕೆ. ಎನ್. ಎಸ್. ಮೋಟಾರಿನಲ್ಲಿ (ಎಂ. ಐ. ೨೫೭೫ ಜಡ್) ೨೬ ಜನರು ಕೂಡುವ ಪ್ರಮಾಣವಿರುವ ಬಸ್ಸಿನಲ್ಲಿ ೭೦ ಜನರನ್ನು ಕೂರಿಸಿಕೊಂಡು, ಲೈಸೆನ್ಸ್ ಸಹ ಇಲ್ಲದೆ, ಹೋಗುತ್ತಲಿದ್ದುದನ್ನು, ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಲಿದ್ದ ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಬಸ್ಸಿನ ಎಲ್ಲಾ ಭಾಗಗಳಲ್ಲಿಯೂ ಜನರು ನಿಂತಿರುವ ದೃಶ್ಯವನ್ನು ನೋಡಿ, ಬಸ್ಸು ನಿಲ್ಲಿಸಿ ತನಿಖೆ ನಡೆಸಿ ಕೂಡಲೇ ರಾಮನಗರಂ ಪೋಲೀಸ್ ಸಬ್ ಇನ್ಸ್‌ಪೆಕ್ಟರಿಗೆ ತಿಳಿಸಿದರು. ಪೋಲೀಸಿನವರು ಕೇಸು ರಿಜಿಸ್ಟರು ಮಾಡಿರುವರು.

ಪಂ|| ನೆಹರೂಬೊಂಬಾಯಿಗೆ

ಪ್ರಧಾನಿ ಪಂಡಿತ ನೆಹರೂರವರು ಮಾರ್ಚಿ 3ರ ರಂದು ಬೊಂಬಾಯಿಗೆ ಆಗಮಿಸುವರು ಅಲ್ಲಿ 4ನೇ ತಾ|| ವಿಸ್ತಾರದಲ್ಲಿ ದೊಡ್ಡದಾದ ಒಂದು ಹಾಲಿನ ಕೇಂದ್ರದ ಪ್ರಾರಂಭೋತ್ಸವವನ್ನು ನಡೆಸುವರು. ನುತ್ತು ಕಾಮನ್ವೆಲ್ತ್ ಮತ್ತು ಪ್ರೈಮಿನಿಸ್ಟರ್ಸ್ ಇಲವೆನ್ನರವರಿಗೆ ನಡೆಯುವ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸುವರು ಅಂದೇ ಅವರು ಡೆಲ್ಲಿಗೆ ಹಿಂತಿರುಗುವರು.

ಚಕ್ರಬಂಧ ಸ್ಪರ್ಧೆ

ಚಕ್ರಬಂಧ ಸ್ಪರ್ಧೆ ಮುಂತಾದುವು ಹೆಚ್ಚದಂತೆ ಮಾಡಲು ಮದರಾಸು ಸರ್ಕಾರವು ಕಾರ್ಯಕ್ರಮ ಕೈಗೊಳ್ಳುವುದಾಗಿ ನ್ಯಾಯಾಂಗ ಮಂತ್ರಿಗಳು ತಿಳಿಸಿರುವರು.

ಆಹಾರ ಸ್ಥಿತಿ ಬಿಗಡಾಯಿಸಬಹುದು

ಬರುವ ವರ್ಷ ಆಹಾರ ಪರಿಸ್ಥಿತಿಯು ಮದರಾಸಿನಲ್ಲಿ ಕಷ್ಟಕರವಾಗಿರುವುದು ಕೇಳಿರುವ ೧೦ ಲಕ್ಷ ಟನ್ ಪೈಕಿ ಕೇಂದ್ರವು ೫ ಲಕ್ಷ ಟನ್ ಆಹಾರವನ್ನು ಮಾತ್ರ ನಿಗದಿ ಮಾಡಿದೆ ಎಂದು ಮದರಾಸಿನ ಆರ್ಥಿಕ ಮಂತ್ರಿ ಶ್ರೀ ಗೋಪಾಲರೆಡ್ಡಿಯವರು ಹೇಳಿರುವರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೪೧೧೮ ದಿನ ಪತ್ರಿಕೆ - ಫೋನ್: [illegible]

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೧] ೨೮-೨-೧೯೫೧ನೇ ಬುಧವಾರ [ಸಂಚಿಕೆ ೧೪೮

ರೈಲ್ವೆ ದರ ಹೆಚ್ಚಿಸಲು ಕಾಂಗ್ರೆಸ್ ಪಕ್ಷದ ಒಪ್ಪಿಗೆ

ಭಾರತ ಸರ್ಕಾರವು ರೈಲ್ವೆ ಪ್ರಯಾಣ ದರಗಳನ್ನು ಹೆಚ್ಚಿಸುವ ಬಗ್ಗೆ ಮಾಡಿರುವ ಸಲಹೆಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ತನ್ನ ಒಪ್ಪಿಗೆಯನ್ನು ಬಹುಮತದಿಂದ ಇತ್ತಿದೆ.

ಪಾರ್ಲಿಮೆಂಟಿನಲ್ಲಿ ಸಾರ್ವತ್ರಿಕ ಚರ್ಚೆ ಪ್ರಾರಂಭವಾದಾಗ ಪಂಡಿತ ಹರಿಹರಿಶಾಸ್ತ್ರಿ, ಪಂಡಿತ ಕುಂಜ್ರು, ಮಿ|| ಹುಸೇನ್ ಇಮಾಮರು ಸರ್ಕಾರ ನೀತಿಯನ್ನು ಖಂಡಿಸಿದರು.

ರೈಲ್ವೆ ದರವನ್ನು ಹೆಚ್ಚಿಸಲು ನಾನು ಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಶಾಖಾ ನಗರಗಳ ದರ ಹೆಚ್ಚ ಕೂಡದು ಮತ್ತು ದೂರ ಪ್ರಯಾಣ ಮಾಡುವವರಿಗೆ ರಿಯಾಯತಿ ಕೊಡಬೇಕೆಂದು ಅಖಿಲಭಾರತ ರೈಲ್ವೆ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ಹೇಳಿರುವರು.

ಆಹಾರ ಕಾನೂನಿನ ಉಲ್ಲಂಘನೆಗಾಗಿ ಶಿಕ್ಷೆಗಳು

ಬೆಂಗಳೂರು ಫೆ. ೨೭

ಮೈಸೂರು ನಗರದಲ್ಲಿ

ಮೈಸೂರು ನಗರದ ಮೂರನೇ ಡಿವಿಜನ್ನಿನ ಒಬ್ಬ ರೇಷನ್ ಮಾರಾಟಗಾರರು ಡಿಪೋವಿನಲ್ಲಿ ಆಹಾರದ ದಾಸ್ತಾನನ್ನು ಕಡಿಮೆ ಇಟ್ಟಿದ್ದಕ್ಕೆ ೧೦ ರೂ. ಜುಲ್ಮಾನೆ ವಿಧಿಸಲಾಯಿತು.

ಮೈಸೂರಿನ ಮೂರನೇ ಡಿವಿಜನ್ನಿನ ರೇಷನ್ ಅಂಗಡಿಯ ಮ್ಯಾನೇಜರೊಬ್ಬರು ರೇಷನ್ ಕಾರ್ಡಿನಂದಕ್ಕೆ ಹೆಚ್ಚಿಗೆ ರೇಷನನ್ನು ಕೊಟ್ಟಿದ್ದಕ್ಕೆ ೭೫ ರೂಗಳ ಜುಲ್ಮಾನೆಯನ್ನು ವಿಧಿಸಲಾಯಿತು.

ಮೈಸೂರಿನ ಎರಡನೇ ಡಿವಿಜನ್ನಿನ ಎರಡು ರೇಷನ್ ಅಂಗಡಿಗಳ ಲೈಸೆನ್ಸ್‌ದಾರರಿಬ್ಬರಿಗೆ ಡಿಪೋದಲ್ಲಿ ಕಂಡುಬಂದ ನ್ಯೂನಾತಿರೇಕಗಳಿಗಾಗಿ ವಿವರಣೆ ಕೇಳಲಾಗಿದೆ. ಅವುಗಳ ವಿಚಾರಣೆ ಇನ್ನೂ ನಡೆಯುತ್ತಿದೆ.

ಅನುಮತಿಯಿಲ್ಲದೆ ರಾಗಿಯನ್ನು ಸಾಗಿಸುತ್ತಿದ್ದ ಮೈಸೂರಿನವನೊಬ್ಬನಿಗೆ ಕೋರ್ಟ್ ಏಳುವವರೆಗೆ ಸಜಾ ಹಾಕಿ ೧೦ ರೂ. ಜುಲ್ಮಾನೆ ವಿಧಿಸಲಾಗಿದೆ. ಅನುಮತಿಯಿಲ್ಲದೆ ಬತ್ತ ಸಾಗಿಸಿದ ಅಪಾದನೆಗೆ ೫ ಜನರಿಗೆ ತಲಾ ೩೦ ರೂ. ಜುಲ್ಮಾನೆ ವಿಧಿಸಲಾಯಿತು. ಅನುಮತಿಯಿಲ್ಲದೆ ಹೋಟೆಲು ನಡೆಸಿದ ಅಪಾದನೆಗಾಗಿ ಮೈಸೂರಿನಲ್ಲಿ ಒಬ್ಬರಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೭೫ ರೂ ಜುಲ್ಮಾನೆ ವಿಧಿಸಲಾಯಿತು. ಅದೇ ಅಪಾದನೆಯ ಮೇಲೆ ಇನ್ನೊಬ್ಬರಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೫೦ ರೂ. ಜುಲ್ಮಾನೆ ವಿಧಿಸಲಾಯಿತು.

ಮಂತ್ರಿಮಂಡಲದ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸ್ ಅಧ್ಯಕ್ಷರ ಭೇಟಿ

ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಮೈಸೂರು, ಹೈದರಾಬಾದ್, ರಾಜಾಸ್ಥಾನ, ತಿರುವಾಂಕೂರು-ಕೊಚ್ಚಿನ್ ಸಂಸ್ಥಾನಗಳ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದಾಗ, ಈಗ ತಿರುವಾಂಕೂರು ಕೊಚ್ಚಿನ್ನಿನಲ್ಲಿ ಉದ್ಭವಿಸಿರುವ ಮಂತ್ರಿಮಂಡಲದ ಬಿಕ್ಕಟ್ಟನ್ನು ಅರಿತು ಅದನ್ನು ಪರಿಹರಿಸಲು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮ ಟಾಂಡನ್‌ರವರು ಶೀಘ್ರದಲ್ಲೇ ತಿರುವಾಂಕೂರು ಕೊಚ್ಚಿನ್ ಸಂಸ್ಥಾನಕ್ಕೆ ಭೇಟಿಕೊಡಲು ನಿರ್ಧರ ಮಾಡಿದರೆಂದು ತಿಳಿಯಬರುತ್ತದೆ.

ವ್ಯಾಪಾರಿಗೆ ಗುಂಡು ಹಾರಿಸಿ ೨೫೦೦ ರೂ. ಅಪಹಾರ

ಬೊಂಬಾಯಿನ ಜೋಗೇಶ್ವರಿ ರಸ್ತೆಯಲ್ಲಿ ಮೊನ್ನೆ ಬೆಳಿಗ್ಗೆ ಹಲವು ಮಂದಿ ಡಕಾಯಿತರು ಒಂದು ಅಂಗಡಿಗೆ ನುಗ್ಗಿ ವ್ಯಾಪಾರಿಯ ಮೇಲೆ ಗುಂಡು ಹಾರಿಸಿ ೨೫೦೦ ರೂ ನಗದು ಹಣವನ್ನು ಅಪಹರಿಸಿದರೆಂದು ವರದಿಯಾಗಿದೆ. ಗಾಯಗೊಂಡ ವ್ಯಾಪಾರಿಯನ್ನು ಆಸ್ಪತ್ರೆಗೆ ಸೇರಿಸಲಾಯಿತು ಮೂವರ ಬಂಧನವಾಗಿದೆ.

ವಿದ್ಯಾರ್ಥಿನಿಯರಿಗೆ ಸೈನ್ಯ ಶಿಕ್ಷಣ ಅನಗತ್ಯ

ರಾಷ್ಟ್ರವನ್ನು ರಕ್ಷಿಸಿಕೊಂಡು ಜನತೆಯನ್ನು ಕಾಪಾಡಲು ಮಹಾತ್ಮ ಗಾಂಧಿಯವರು ಬೋಧಿಸಿದ ಬೋಧನೆಯಂತೆ ಸತ್ಯ ಅಹಿಂಸಾವಾದಿಗಳಾದ ನಮ್ಮ ವಿದ್ಯಾರ್ಥಿನಿಯರಿಗೆ ಶಾಲಾ ಕಾಲೇಜುಗಳಲ್ಲಿ ಸೈನ್ಯ ಶಿಕ್ಷಣ ಅನಗತ್ಯವೆಂದು ಭಾರತ ಆರೋಗ್ಯ ಮಂತ್ರಿ ಶ್ರೀಮತಿ ರಾಜಕುಮಾರಿ ಅಮೃತಕೌರರವರು ವಾರ್ಧಾ ಸೇವಾಗ್ರಾಮದಲ್ಲಿ ಮಾತನಾಡುತ್ತಾ ಹೇಳಿರುವರು.

ಸುಭದ್ರ ಬಾಂಧವ್ಯ ಸಹೋದರಭಾವ

ಬೆಂಗಳೂರು ಫೆ. ೨೭

ವಿದ್ಯಾಭ್ಯಾಸ, ಸಂಸ್ಕೃತಿ, ಕಲೆ ಇತ್ಯಾದಿ ನಾನಾ ಅಂಶಗಳ ವಿಚಾರದಲ್ಲಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದರಿಂದ ದ್ವೇಷ, ಅಸೂಯೆ ಮತ್ತು ಯುದ್ಧಗಳಿಗೆ ಅವಕಾಶವಿರುವುದಿಲ್ಲ. ಸುಭದ್ರ ಬಾಂಧವ್ಯ ಮತ್ತು ಸಹೋದರಭಾವ ಹೆಚ್ಚಿ ಜಗತ್ತು ಶಾಂತಿಯಿಂದಿರಲು ಅನುಕೂಲವಾಗುತ್ತದೆ ಎಂದು ಮುಖ್ಯಮಂತ್ರಿಗಳು ನಿನ್ನೆ ಸಂಜೆ ಸೆಂಟ್ರಲ್ ಹೈಸ್ಕೂಲಿನ ಹಾಲಿನಲ್ಲಿ ಶಿಕ್ಷಣ ಪುಸ್ತಕಗಳ ಪ್ರಾರಂಭೋತ್ಸವವನ್ನು ನೆರವೇರಿಸುತ್ತ ಹೇಳಿದರು.

ಅಮೇರಿಕಾವು ವರ್ಗಾವಣೆಯಿಂದ ಭಾರತಕ್ಕೆ ೨೦ ಲಕ್ಷ ಟನ್ ಧಾನ್ಯ ಸಹಾಯ ಮಾಡಲು ಪ್ರಯತ್ನಿಸುತ್ತಿರುವುದಕ್ಕೆ ಅಮೆರಿಕಾಕ್ಕೆ ತಮ್ಮ ಕೃತಜ್ಞತೆ ಸೂಚಿಸಬಯಸಿದರು.

ಮೈಸೂರಿನಲ್ಲಿ ಪಠ್ಯಪುಸ್ತಕಗಳು ಅಚ್ಚಿಸುವ ವಿಷಯದಲ್ಲಿ ಮಾತನಾಡುತ್ತಾ, ಈ ಕ್ರಮವು ಮೈಸೂರಿನಲ್ಲಿ ಬಹಳ ಪುರಾತನವಾಗುವುದೆಂದೂ ಹೇಳಿದರು.

ಮಹಾರಾಜರ ಸಂತಾಪ

ಬೆಂಗಳೂರು ಫೆ. ೨೭

ಡಾ|| ಸಿ. ಆರ್. ರೆಡ್ಡಿಯವರ ನಿಧನದ ಬಗ್ಗೆ ಶ್ರೀಮನ್ಮಹಾರಾಜರು ತಮ್ಮ ಸಂತಾಪವನ್ನು ಸೂಚಿಸುತ್ತಾ, ಮೈಸೂರು ಸಂಸ್ಥಾನಕ್ಕೆ ಅಪಾರ ನಷ್ಟವಾಗಿದೆ ಡಾ|| ರೆಡ್ಡಿಯವರು ಸಂಸ್ಥಾನಕ್ಕೆ ಸಗಿರುವ ಸೇವೆ ಅಪಾರವಾದುದು. ಅವರ ವಿದ್ಯಾಪರಿಣತೆ, ಪ್ರತಿಭೆ, ರಾಜಕಾರಣ ಜ್ಞಾನ ಮಹತ್ತರವಾದುದು ಎಂದಾರೆ.

ಸೂಚನೆ

ತಾ|| 1—3—51ನೇ ಗುರುವಾರ ಜನಗಣತಿಯ ಪ್ರಯುಕ್ತ "ಸಮಾಚಾರ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ

ಜನಗಣತಿಗಾಗಿ ರಜಾ

ಬೆಂಗಳೂರು ಫೆ. ೨೭

ಜನಗಣತಿ ಪ್ರಯುಕ್ತ ಸಂಸ್ಥಾನಾದ್ಯಂತ ಮಾರ್ಚಿ ೧ನೇ ತಾ|| ಬ್ಯಾಂಕು, ಕಛೇರಿ, ಶಾಲಾ, ಕಾಲೇಜು ಕೈಗಾರಿಕಾ ಸಂಸ್ಥೆ ಮುಂತಾದುವುಗಳಿಗೆ ರಜಾ ದಿನವನ್ನಾಗಿ ಸರ್ಕಾರ ಆಜ್ಞೆಮಾಡಿದೆ.

ರೇಷನ್ ಡಿಪೋವಿನಿಂದ ಬ್ಲಾಕ್ ಮಾರ್ಕೆಟ್ಟಿಗೆ?

ಬೆಂಗಳೂರು ಫೆ. ೨೭

ಆಹಾರ ಶಾಖೆಯ ಡಿಪೋ ಸೆಕ್ಷನ್ನಿನವರೂ, ಸ್ಪೆಷಲ್ ಅಮಲ್ದಾರ್ ಶ್ರೀ ಟಿ.ಕೆ. ಕಣ್ಣನ್ ಮತ್ತು ದಕ್ಷಿಣ ಸರ್ಕಲ್ ಅಸಿಸ್ಟೆಂಟ್ ರೇಷನಿಂಗ್ ಆಫೀಸರ್ ಶ್ರೀ ಸಿ. ಎಸ್. ಸೋಮಶೇಖರರಾಯರು ಒಟ್ಟಿಗೆ ಸೇರಿ ಸೆಂಟ್ರಲ್ ಸಬ್ ಗೋದೌನಿನಿಂದ ೨ ಮೂಟೆ ಗೋಧಿಯನ್ನು ರೇಷನ್ ಅಂಗಡಿಯೊಂದಕ್ಕೆ ಸಾಗಿಹೋಗುತ್ತಿದ್ದುದನ್ನು ಬಹಳ ಶ್ರಮ ವಹಿಸಿ ಪತ್ತೆ ಹಚ್ಚಿ ಅದನ್ನು ಸರ್ಕಾರಕ್ಕೆ ವಶಪಡಿಸಿಕೊಂಡಿದ್ದಾರೆಂದು ಗೊತ್ತಾಗಿದೆ.

ಒಂದು ಸರ್ಕಾರಿ ರೇಷನ್ ಡಿಪೋವಿನಿಂದ ೨ ಮಣ ಸಕ್ಕರೆಯು ವಿಶ್ವೇಶ್ವರಪುರದಲ್ಲಿರುವ ಒಂದು ಹೋಟೆಲಿಗೆ ೫೦ ರೂ. ರೂ. ಗೆ ಮಾರಾಟವಾಗಿದ್ದುದನ್ನು ರೇಷನಿಂಗ್ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ವಿಶ್ವೇಶ್ವರಪುರದ ಒಂದು ಹೋಟೆಲಿನಲ್ಲಿ ಅಕ್ರಮವಾಗಿ ಒಂದು ಮೂಟೆ ಮೈದಾಹಿಟ್ಟು, ಒಂದು ಮೂಟೆ ಗೋಧಿಹಿಟ್ಟು ಇದ್ದುದನ್ನು ಪತ್ತೆ ಮಾಡಲಾಗಿದೆ ಎಂದೂ ತಿಳಿದುಬಂದಿದೆ.

ಹೈದರಾಬಾದಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪನೆಗೆ ಪ್ರಯತ್ನ?

ಹೈದರಾಬಾದಿನ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ಬಿ ಬಿಂದುರವರು ಕೇಂದ್ರ ಸರಕಾರದ ಸಂಸ್ಥಾನ ಶಾಖಾ ಸಚಿವರಾದ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್‌ರವರನ್ನು ಭೇಟಿಮಾಡಿ ಈಗಿನ ಮಂತ್ರಿಮಂಡಲವನ್ನು ಸಂಪೂರ್ಣವಾಗಿ ಕಾಂಗ್ರೆಸ್ ಮಂತ್ರಿ ಮಂಡಲಕ್ಕೆ ಮಾರ್ಪಡಿಸುವ ವಿಷಯದಲ್ಲಿ ಸಾಧಕ ಬಾಧಕಗಳನ್ನು ಕುರಿತು ಮಾತುಕತೆ ನಡೆಸಿದರು. ಇನ್ನು ಯಾವ ರೀತಿಯಾದ ನಿರ್ಧಾರಕ್ಕೂ ಬರಲಿಲ್ಲವೆಂದು ತಿಳಿಯಬರುತ್ತದೆ.

ಹೈದರಾಬಾದ್ ಸಂಸ್ಥಾನದ ಇಂದಿನ ಪರಿಸ್ಥಿತಿಯಲ್ಲಿ ಈಗಿನ ಮಂತ್ರಿ ಮಂಡಲವನ್ನು ಮಾರ್ಪಡಿಸುವುದು ಅಷ್ಟು ಹಿತಕರವಲ್ಲವೆಂದು ಹೇಳಲಾಗಿದೆ, ಆದರೂ ಪ್ರಯತ್ನಗಳು ನಡೆಯುತ್ತಲೇ ಇವೆ.

ರೈಲ್ವೆ ಗುಮಾಸ್ತನಿಗೆ ೧೪॥ ವರ್ಷ ಕಠಿಣ ಸಜಾ

ದೆಹಲಿಯಲ್ಲಿ ಪೂರ್ವ ಪಂಜಾಬ್ ರೈಲ್ವೆಯ ಆಹಾರ ಡಿಪೋ ಗುಮಾಸ್ತನಾದ ಗುರುಪ್ರಸಾದ್ ಎಂಬಾತನು ರಶೀತಿ ಪುಸ್ತಕದಲ್ಲಿ ಪ್ರತಿದಿನವೂ ಜಮಾ ಆದ ಮೊಬಲಗಿಗಿಂತ ಕಡಮೆ ಹಣವನ್ನು ನಮೂದಿಸಿ ಅಪಹಾರ ಮಾಡುತ್ತಿದ್ದ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿ ಮೂರು ಆಪಾದನೆ ಮೇಲೆ ಒಟ್ಟು ೧೪॥ ವರ್ಷ ಕಠಿಣ ಸಜಾ ಶಿಕ್ಷೆ ೧೦,೫೫೦ರೂ. ಜುಲ್ಮಾನೆ, ಜುಲ್ಮಾನೆ ಕೊಡದಿದ್ದರೆ ಮತ್ತೆ ಏಳು ವರ್ಷ ಕಠಿಣ ಸಜಾ ಶಿಕ್ಷೆಗೆ ಗುರಿಯಾಗಿರುವನು.

ಕಾರಣ ಕೊಡಬೇಕಾಗಿಲ್ಲ

ತಿರುವಾಂಕೂರು ಕೊಚ್ಚಿನ್ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕಾದ್ದಕ್ಕೆ ವಿವರಗಳನ್ನು ಕೊಡಬೇಕೆಂದು ಕೆಲವು ಸದಸ್ಯರು ಶಾಸನ ಸಭೆಯಲ್ಲಿ ಕೇಳಲಾಗಿ, ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂಬ ನಿಯಮವಿಲ್ಲವೆಂದೂ ಬೇಕಾದರೆ ಹೊಸ ನಾಯಕರು ಚುನಾವಣೆಯಾದ ಮೇಲೆ ಇವರು ವಿವರಣೆಯಿಯಬಹುದೆಂದು ಸಭಾಧ್ಯಕ್ಷರು ತಿಳಿಸಿದರು.

ಐ. ಎನ್. ಟಿ. ಯು. ಸಿ. ಪ್ರಾಂತೀಯ ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಫೆ ೨೮

ಪ್ರಾಂತೀಯ ಸಮಿತಿ ಅಂಗರಚನೆ ಹಾಗೂ ಇತರ ಮುಖ್ಯ ವಿಚಾರಗಳ ಪರಿಶೀಲನೆಗಾಗಿ ಐ. ಎನ್. ಟಿ. ಯು. ಸಿ. ಮೈಸೂರು ಪ್ರಾಂತೀಯ ಕಾರ್ಯಕಾರಿ ಸಮಿತಿಯ ಸಭೆಯು ೪-೩-೫೧ನೇ ಭಾನುವಾರ ಮಧ್ಯಾಹ್ನ ೨ ಗಂಟೆಗೆ ಬೆಂಗಳೂರು ಅರಳೇಪೇಟೆಯಲ್ಲಿರುವ ಕೇಂದ್ರ ಕಛೇರಿಯಲ್ಲಿ ನಡೆಯುವುದು. ಸದಸ್ಯರು ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಎ. ರಾಮಣ್ಣ ಮತ್ತು ಕೆ. ಹೆಚ್. ಕುಲಕರ್ಣಿಯವರು ತಿಳಿಸಿದ್ದಾರೆ.

ಪೌರಸಭಾಧಿವೇಶನ

ಮೈಸೂರು ಫೆ. ೨೭

ಮೈಸೂರು ನಗರ ಪೌರಸಭೆಯ ಮಾಸಿಯಾನಾಧಿವೇಶನವು ಇಂದು ಶ್ರೀ ಟಿ. ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯ ಸಾಮಾನ್ಯ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಡಾ॥ ಸಿ. ಆರ್. ರೆಡ್ಡಿಯವರ ನಿಧನದ ಬಗ್ಗೆ ಅನುತಾಪವನ್ನು ಸೂಚಿಸುವ ನಿರ್ಣಯವನ್ನು ಶ್ರೀ ಎ. ವೆಂಕಟೇಶಯ್ಯನವರು ಮಂಡಿಸಿದರು. ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅನುಮೋದಿಸಿದರು. ಸಭೆಯು ಎರಡು ನಿಮಿಷ ಮೌನವನ್ನಾಚರಿಸಿ, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿತು.

ರೈಲು-ಲಾರಿ ಡಿಕ್ಕಿ

ಗುಂಟೂರಿಗೆ ೮ ಮೈಲಿಯಲ್ಲಿರುವ ರೈಲ್ವೆ ಕ್ರಾಸಿಂಗಿನಲ್ಲಿ, ಪ್ಯಾಸೆಂಜರು ರೈಲಿನ ಎಂಜನ್ನು ಲಾರಿಯೊಂದಕ್ಕೆ ಡಿಕ್ಕಿಹೊಡೆದುದರ ಪರಿಣಾಮವಾಗಿ, ಒಬ್ಬನು ಸತ್ತು ೫ ಜನ ಗಾಯಗೊಂಡಿರುವರು.

ಎರಡಾಣೆಗಾಗಿ ಪ್ರಾಣಾಪಹರಣ

ಮುಂಬೈ ನಗರದ ವೀಳೆದೆಲೆ ಮತ್ತು ಅಡಿಕೆ ಅಂಗಡಿಯೊಂದಕ್ಕೆ ವ್ಯಾಪಾರಕ್ಕಾಗಿ ಹೋಗಿದ್ದ ಬಾಲಕನೊಬ್ಬನು ೨ ಆ. ಕೊಟ್ಟದ್ದಾಗಿಯೂ ಆದರೆ ಅಂಗಡಿಯ ಮಾಲೀಕ ಆ ಬಾಲಕನಿಂದ ೨ಆಣೆಯನ್ನು ಪಡೆಯಲಿಲ್ಲನೆಂದು ಇಬ್ಬರಿಗೂ ವಿವಾದ ಸಂಭವಿಸಿದಾಗ ಪರಿಸ್ಥಿತಿ ಕಠಿಣವಾಗಿ ಒಬ್ಬರ ಮರಣವೂ ಇಬ್ಬರಿಗೆ ತೀವ್ರ ಗಾಯವೂ ಸಂಭವಿಸಿತು

ಕೃತಕ ಅಕ್ಕಿ ತಯಾರಿಕಾ ಕಾರ್ಖಾನೆ

ಭಾರತದಲ್ಲಿ ಆಹಾರ ಕೊರತೆಯನ್ನು ನಿವಾರಿಸುವ ಸಲುವಾಗಿ ಕೃತಕ ಅಕ್ಕಿಯನ್ನು ತಯಾರಿಸುವ ಒಂದು ಕಾರ್ಖಾನೆಯನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿರುವುದಾಗಿಯೂ, ಅದರಲ್ಲಿ ದಿನವೊಂದಕ್ಕೆ ೬ ಲಕ್ಷ ಟನ್ ಅಕ್ಕಿಯನ್ನು ತಯಾರಿಸಬಹುದೆಂದೂ, ಒಂದು ಪೌಂಡು ಅಕ್ಕಿಯನ್ನು ತಯಾರಿಸಲು ಮೂರು ಆಣೆ ವೆಚ್ಚ ತಗಲಬಹುದೆಂದೂ ನೆನ್ನೆ ದಿನ ಕೇಂದ್ರ ಪಾರ್ಲಿಮೆಂಟಿನಲ್ಲಿ ಸಚಿವ ಶ್ರೀ ಪ್ರಕಾಶಕರು ತಿಳಿಸಿದರೆಂದು ವರದಿಯಾಗಿದೆ. ಟೋಪಿಯೋಕ ಗೆಡ್ಡೆ ಮತ್ತು ಕಡಲೆಕಾಯಿ ಹಿಂಡಿಯಿಂದ ಈ ಅಕ್ಕಿಯನ್ನು ತಯಾರಿಸಲಾಗುವುದೆಂದು ಹೇಳಲಾಗಿದೆ.

ಧಾರ್ಮಿಕ ಸಂಸ್ಥೆಗಳ ಇನಾಂತಿ ರದ್ದಿಗೆ ವಿರೋಧ

ಸ್ವಂ. ಸು.] ಬೆಂಗಳೂರು ಫೆ. ೨೭

ದೇವಾಲಯ ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಇನಾಂಗಳನ್ನು ಸರ್ಕಾರದವರು ವಶಪಡಿಸಿಕೊಂಡು ಅವುಗಳನ್ನು ಹರಾಜು ಮಾಡಬೇಕೆಂದು ಭೂ ಸುಧಾರಣಾ ಸಮಿತಿಯವರು ಮಾಡಿರುವ ಶಿಫಾರಸನ್ನು ಮೊನ್ನೆದಿನ ಇಲ್ಲಿ ನೆರೆದಿದ್ದ ಆಗಮತ್ರಯ ಮಂಡಲಿಯ ಸಭೆಯಲ್ಲಿ ಖಂಡಿಸಿ ನಿರ್ಣಯ ಮಾಡಲಾಯಿತು. ಶಾಸನ ಸಭಾ ಸದಸ್ಯರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಅಧ್ಯಕ್ಷತೆವಹಿಸಿದ್ದರು. ಸುಧಾರಣಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುವುದರಿಂದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾದ ದೇವಾಲಯಗಳು ಮತ್ತು ಮಂದಿರಗಳ ಪ್ರಾಮುಖ್ಯತೆಯು ಕುಂದುವುದೆಂದೂ ತಿಳಿಸಲಾಗಿದೆ. ನಿರ್ಣಯದ ಬಗ್ಗೆ ಸರ್ಕಾರಕ್ಕೆ ವಿವರಣೆಯನ್ನೀಯಲು ಏಳು ಜನರ ಒಂದು ಸಮಿತಿಯನ್ನು ರಚಿಸಲಾಗಿದೆ.

ಕೇಂದ್ರ ಚುನಾವಣೆ ಟ್ರಿಬ್ಯುನಲ್

ಕೇಂದ್ರ ಚುನಾವಣಾ ಟ್ರಿಬ್ಯುನಲ್ ಮತ್ತು ಸೆಂಟ್ರಲ್ ಕ್ರೆಡೆನ್ಷಿಯಲ್ ಸಮಿತಿಗಳಿಗೆ ಕಾಂಗ್ರೆಸ್ ನಿಯಮಾವಳಿಯಲ್ಲಿ ಇತ್ತೀಚೆಗೆ ಬದಲಾವಣೆಯಾಗಿರುವ ರೀತ್ಯಾ ಸದಸ್ಯರನ್ನು ನೇಮಿಸುವಂತೆ ಕಾಂಗ್ರೆಸ್-ಕಾರ್ಯಕಾರಿ ಸಮಿತಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ತಾಂಡನ್, ಪಂಡಿತ ನೆಹರೂ ಮತ್ತು ಶ್ರೀ ರಾಜಗೋಪಾಲಾಚಾರಿಯವರಿಗೆ ಅಧಿಕಾರವಿತ್ತಿದೆ.

ಪತ್ರಿಕಾ ಸಂಪಾದಕರುಗಳ ಸಭೆ

ಮುಖ್ಯ ಮಂತ್ರಿಗಳ ಸಲಹೆ

ಬೆಂಗಳೂರು ಫೆ. ೨೭

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಪತ್ರಿಕಾ ಸಂಪಾದಕರುಗಳ ಸಭೆಯೊಂದು ನಿನ್ನೆ ಬೆಳಿಗ್ಗೆ ಕಾರಲ್‌ಟನ್ ಭವನದಲ್ಲಿ ಸೇರಿತ್ತು.

ಹಲವು ಪತ್ರಿಕೆಗಳು ಪತ್ರಿಕಾ ವೃತ್ತಿಯ ಘನ ಆದರ್ಶಗಳನ್ನು ಮತ್ತು ಸಂಪ್ರದಾಯಗಳನ್ನು ಮರೆತು ಸುಳ್ಳು ಅಸಭ್ಯವಾದ ರೀತಿಯಲ್ಲಿ ಬರವಣಿಗೆಗಳನ್ನು ಪ್ರಕಟಿಸುತ್ತಿವೆಯೆಂದೂ, ಪತ್ರಿಕಾ ವೃತ್ತಿಯು ಇಷ್ಟು ಕೀಳು ದರ್ಜೆಗೆ ಇಳಿಯುವಂತೆ ನೋಡಿಕೊಳ್ಳುವುದು ಅಗತ್ಯವೆಂದು ಭಾರತದ ಪ್ರಧಾನಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದ ಅಂಶವನ್ನು ಕುರಿತು ಸಭೆಯಲ್ಲಿ ಚರ್ಚೆಯಾಯಿತು.

ಪತ್ರಿಕೆಗಳೆಲ್ಲವೂ ಅನುಸರಿಸಬೇಕಾದ ಪತ್ರಿಕಾ ವೃತ್ತಿಗೆ ಸಂಬಂಧಪಟ್ಟ ಒಂದು ನಿಯಮಾವಳಿಯನ್ನು ರಚಿಸಿ, ಅದನ್ನು ಪತ್ರಿಕಾ ಸಲಹಾ ಸಮಿತಿ ಅಥವಾ ಪತ್ರಿಕೋದ್ಯೋಗಿ ಸಂಘದ ಮೂಲಕ ತಪ್ಪುಹಾದಿ ಹಿಡಿಯುವ ಪತ್ರಿಕೆಗಳ ಗಮನಕ್ಕೆ ತರಬಹುದೆಂದು ಮುಖ್ಯ ಮಂತ್ರಿಗಳು ಸಲಹೆ ಮಾಡಿದರು. ಸಲಹೆಗೆ ಸದಸ್ಯರುಗಳು ಅದೇರೀತಿ ನಿರ್ಣಯಮಾಡಿದರು.

ಕೇಂದ್ರ ಅಧಿಕಾರಿಗಳ ಚುನಾವಣಾ ಸಮಿತಿ

ಬೆಂಗಳೂರು ಫೆ. ೨೭

ಕೇಂದ್ರ ಅಧಿಕಾರಿಗಳ ಚುನಾವಣಾ ಸಮಿತಿಯು ಮಾರ್ಚಿ ೬ನೇ ತಾರೀಖು ಬೆಂಗಳೂರಿಗೆ ಆಗಮಿಸಿ ೨೦ ದಿವಸಗಳಿರುವುದೆಂದು ಗೊತ್ತಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೩—೧೯೫೧ ಶುಕ್ರವಾರ [ಸಂಚಿಕೆ ೧೪೯

ಭಾರತದಲ್ಲಿ ಶಾಂತಿ ಸಮ್ಮೇಳನ

ವಿದೇಶೀಯರಿಗೆ ಆಹ್ವಾನಕೂಡದು

ದೆಹಲಿಯಲ್ಲಿ ನಡೆಯಲವಕಾಶವಿಲ್ಲ

ಅಖಿಲ ಭಾರತ ಶಾಂತಿ ಸಮ್ಮೇಳನವನ್ನು ದೆಹಲಿಯಲ್ಲಿ ನಡೆಸುವುದಕ್ಕೆ ಭಾರತ ಸರ್ಕಾರವು ಅನುಮತಿ ಕೊಡಲು ನಿರಾಕರಿಸಿದೆ. ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ, ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಶಾಂತಿ ಸಮ್ಮೇಳನವನ್ನು ೧೪ನೇ ಫೆಬ್ರವರಿ ಜಾರಿಯಲ್ಲಿ ದೆಹಲಿಯಲ್ಲಿ ಬಿಟ್ಟು ಇನ್ನೆಲ್ಲಿಯಾದರೂ ಮಾಡಬಹುದೆಂದೂ ಇಂದಿನ ಪರಿಸ್ಥಿತಿಯಲ್ಲಿ ಪರದೇಶದವರು ಈ ಸಮ್ಮೇಳನದಲ್ಲಿ ಭಾಗವಹಿಸುವವಕಾಶ ಕೊಡುವುದಕ್ಕಾಗುವುದಿಲ್ಲವಾಗಿ ಅವರಿಗೆ ಆಹ್ವಾನವನ್ನು ಕಳುಹಿಸಕೂಡದೆಂದೂ ತಿಳಿಸಿರುವರು.

ಭಾರತ ಸರ್ಕಾರದ ತಿರಸ್ಕಾರ

ಕಾಶ್ಮೀರ ಪ್ರಶ್ನೆ ವಿಷಯದಲ್ಲಿ ಬ್ರಿಟನ್-ಅಮೇರಿಕಾ ಸಂಯುಕ್ತಯೋಜನೆ

ಶ್ರೀ ಬಿ. ಎನ್ ರಾವ್‌ರವರ ವಿವರಣೆ

ವಿಶ್ವ ಸಂಸ್ಥೆಯಲ್ಲಿ ಕಾಶ್ಮೀರ ಸಂಬಂಧವಾಗಿ ಬ್ರಿಟನ್ ಮತ್ತು ಅಮೇರಿಕಾ ಮಂಡಿಸಿರುವ ನೂತನ ಯೋಜನೆಯನ್ನು ಭಾರತ ಸರ್ಕಾರವು ಒಪ್ಪುವುದಿಲ್ಲವೆಂದು ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಸಭೆಯಲ್ಲಿ ಈ ಚರ್ಚೆಯನ್ನು ತೆಗೆದುಕೊಂಡಾಗ ತಿಳಿಸಿರುವರು. ಈ ಹೊಸ ಸಲಹೆಯಂತೆ ಹಿಂದೆ ತೀರ್ಮಾನವಾದ ವಿಷಯಗಳನೇಕವು ಪುನಃ ವಿವಾದಕ್ಕೊಳಗಾಗುವುವು.

ಭಾರತ ಪಾಕಿಸ್ತಾನಗಳಿಗೆ ಮಧುರ ಬಾಂಧವ್ಯ ಹೆಚ್ಚಾಗುತ್ತಲಿದೆ. ಈ ವಿಷಯವನ್ನು ಉಭಯ ರಾಷ್ಟ್ರಗಳೇ ತೀರ್ಮಾನಕ್ಕೆ ಬರಲವಕಾಶವಿದೆ. ಕಾಶ್ಮೀರವು ಭಾರತ ಸಂಯುಕ್ತ ರಾಜ್ಯದ ಒಂದು ಅಂಗವಾಗಿದೆ. ರಕ್ಷಣೆ, ವಿದೇಶಾಂಗ ನೀತಿ ಮತ್ತು ಸಂಚಾರ ಮಾರ್ಗ ಈ ವಿಷಯಗಳನ್ನು ಬಿಟ್ಟರೆ ಉಳಿದ ವಿಷಯಗಳಲ್ಲಿ ಕಾಶ್ಮೀರವು ಸ್ವತಂತ್ರ ರಾಜ್ಯವಾಗಿದೆ. ಈಗಿರುವ ರಾಜ್ಯಾಡಳಿತವನ್ನು ಬದಲಾಯಿಸಿ ನೂತನ ಪ್ರತಿನಿಧಿಗೆ ಅಧಿಕಾರಕೊಡುವುದು ಒಪ್ಪತಕ್ಕ ವಿಷಯವಲ್ಲ. ಈಗಿರುವ ಸರ್ಕಾರವು ಬಹಳ ವಿಚಕ್ಷಣೆಯಿಂದ ರಾಜ್ಯಭಾರ ಮಾಡುತ್ತಲಿದೆ ಎಂದು ಅವರು ತಿಳಿಸಿದರು.

ತಿರುವಾಂಕೂರಿನ ಶಾಸನ ಸಭಾ ನಾಯಕರು

ತಿರುವಾಂಕೂರ್-ಕೊಚ್ಚಿನ್ ಶಾಸನಸಭಾ ಕಾಂ|| ಪಕ್ಷದ ನಾಯಕರಾಗಿ ಶ್ರೀ ಸಿ. ಕೇಶವನ್ ಅವಿರೋಧವಾಗಿ ಆರಿಸಲ್ಪಟ್ಟರು. ಇವರು ಪ್ರಥಮ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದರು.

ಮಂತ್ರಿಮಗನಿಗೆ ಶಿಕ್ಷೆ

ಬ್ರಿಟನ್ನಿನ ರಕ್ಷಣಾಮಂತ್ರಿ ಮಿ|| ವಿ ಮ್ಯಾನುಯಲ್ ಷಿನ್‌ವೆಲ್‌ರ ಮಗ ಮಿ|| ಅರ್ನೆಸ್ಟ್ ಷಿನ್‌ವೆಲ್‌ರವರು ಸಸೆಕ್ಸ್ ಕೋರ್ಟಿನಲ್ಲಿ ಸರ್ಕಾರಿ ಕಟ್ಟಡದ ರಿಪೇರಿಗೆ ಆವಕಾಶವಿದ್ದುದಕ್ಕಿಂತ ಹೆಚ್ಚು ಹಣವನ್ನು ವಿರ್ನಿಯೋಗಿಸಿದ್ದಕ್ಕೆ ೨೦೦೦ ಪೌಂಡು ಜುಲ್ಮಾನೆ ಮತ್ತು ೩ ತಿಂಗಳ ಸಜಾ ವಿಧಿಸಲಾಗಿದೆ.

ಬೃಹದಾಕಾರದ ಗಾಂಧಿ ಪ್ರತಿಮೆ

೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೧೦ ಅಡಿ ಎತ್ತರ ೧೨,೦೦೦ ಚದರಡಿ ಆಕ್ರಮಿಸಿಕೊಳ್ಳುವ ಒಂದು ಬೃಹದಾಕಾರದ ಗಾಂಧಿ ಪ್ರತಿಮೆಯನ್ನು ಬೊಂಬಾಯಿನ ಶಿಲ್ಪಿ ಶ್ರೀ ಕರಮರ್‌ಕರ್‌ರವರು ಯೋಚಿಸಿ ಪ್ಲಾಸ್ಟಿಕ್‌ನಲ್ಲಿ ಅದರ ಮಾದರಿಯನ್ನು ರಚಿಸಿ ಪಾರ್ಲಿಮೆಂಟಿನಲ್ಲಿ ಪ್ರದರ್ಶಿಸಿರುವರು.

ಈ ಪ್ರತಿಮೆಯು ದೇಹದ ಒಳಗೆ ರೂಮುಗಳು, ಕಛೇರಿಗಳು, ಗ್ಯಾಲರಿ, ಪುಸ್ತಕ ಭಂಡಾರ ಮುಂತಾದುವನ್ನೆಲ್ಲಾ ಇಡಲು, ಚಕ್ರದ ಮೂಲಕ ಮೆಟ್ಟಲುಗಳ ಮೇಲೆ ದೇಹದೊಳಕ್ಕೆ ಹತ್ತಬಹುದಾಗಿದೆ. ಇದರೊಳಗೆ ಯಂತ್ರೋಪಕರಣವು ಒಂದು ಎಲೆಕ್ಟ್ರಿಕ್‌ಲಿಫ್ಟ್ ಇರುವುದು. ಸ್ಥಾಪಿತವಾದ ಸ್ಥಳದಿಂದ ೫೦ ಮೈಲಿ ದೂರದಲ್ಲಿಯೇ ಇದನ್ನು ಕಾಣಬಹುದು.

ಚರ್ಚೆ ಮುಕ್ತಾಯ

ರೈಲ್ವೆ ಬಡ್ಜೆಟ್ಟಿನ ಚರ್ಚೆಯು ಭಾರತ ಪಾರ್ಲಿಮೆಂಟಿನಲ್ಲಿ ಮುಕ್ತಾಯವಾಯಿತು. ರೈಲ್ವೆ ಪ್ರಯಾಣದರ ಏರಿಸಲು ಒಪ್ಪಿಗೆ ದೊರೆಯಿತು.

ರೈಲ್ವೆ ಪಾಸುಗಳ ದರ ಏರುವುದಿಲ್ಲ

ರೈಲ್ವೆ ಸೀಸನ್ ಪಾಸುಗಳ ದರ ಏರಿಸುವುದಿಲ್ಲವೆಂದು ರೈಲ್ವೆ ಸಚಿವ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ನೋಬೆಲ್ ಬಹುಮಾನ ಬೇಡ

ತಾವು ತಮ್ಮ ಅಧಿಕಾರಾವಧಿಯಲ್ಲಿ ತಮ್ಮ ಕರ್ತವ್ಯವನ್ನು ಮಾಡಿರುವುದಾಗಿಯೂ, ಸಲ್ಲಿಸಿರುವ ಕಿಂಚಿತ್‌ಸೇವೆ ಈ ಬಹುಮಾನವನ್ನು ಪಡೆಯುವಷ್ಟು ಹೆಚ್ಚಿನದಲ್ಲವೆಂದು ಬ್ರಿಟಿಷ್ ಅಟಾರ್ನಿ ಜನರಲ್ ಷಾ ಕ್ರಾಸ್‌ರವರು ನೋಬೆಲ್‌ಶಾಂತಿ ಪಾರಿತೋಷಕ ಸಮಿತಿಗೆ ತಿಳಿಸಿ, ಶಾಂತಿ ಪಾರಿತೋಷಿಕ ಪಡೆಯುವವರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆದುಹಾಕಬೇಕೆಂದು ತಿಳಿಸಿದ್ದಾರೆ.

ಮೋಕ್ಷವಿಲ್ಲ

ಮುಂದಿನ ಮಹಾ ಚುನಾವಣೆಯಲ್ಲಿ ಈಗ ಅಧಿಕಾರದಲ್ಲಿರುವ ಪಕ್ಷವನ್ನು ಸೋಲಿಸಿ ನೂತನ ಸರ್ಕಾರ ರಚನೆಯಾದಲ್ಲಿ ಮಾತ್ರ ಪ್ರಜೆಗಳಿಗೆ ಮೋಕ್ಷ ದೂರೆಯಬಹುದೆಂಬುದಾಗಿ ಮದ್ರಾಸಿನ ಮಾಜಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರು ಆಯವ್ಯಯ ಪಟ್ಟಿಯ ಬಗ್ಗೆ ವಿಮರ್ಶೆ ಮಾಡುತ್ತಾ ತಿಳಿಸಿದರು.

ಪಾಕಿಸ್ತಾನದಿಂದ ಭಾರತಕ್ಕೆ ಗೋಧಿ

ಕಳೆದ ವರ್ಷ ಪಂಜಾಬಿನಲ್ಲಿ ಪ್ರವಾಹದ ಹಾವಳಿಯ ಫಲವಾಗಿ ನಿಲ್ಲಿಸಲ್ಪಟ್ಟಿದ್ದ ಗೋಧಿ ರಫ್ತನ್ನು ತತ್‌ಕ್ಷಣವೇ ಪುನಃ ಭಾರತಕ್ಕೆ ಮೊದಲು ರಫ್ತುಮಾಡಲಾಗುವುದು ಎಂದು ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.

ಮುಂದಿನ ಜೂನ್ ತಿಂಗಳೊಳಗೆ, ಪೂರ್ವ ಪಾಕಿಸ್ತಾನ ಸೀಮೆಯಿಂದ ೧೬,೦೦೦ ಟನ್ನುಗಳಷ್ಟು ಗೋಧಿಯನ್ನು ಕಳುಹಿಸಲಾಗುವುದು.

ದಾಮೋದರ್ ನೀರಾವರಿ ಯೋಜನೆ

ದಾಮೋದರ ನೀರಾವರಿ ನಿರ್ಮಾಣಕ್ಕಾಗಿ ಈ ಸಾಲಿನಲ್ಲಿ ೯ ಕೋಟಿ ರೂಪಾಯಿಗಳನ್ನು [illegible]ಲಾಗಿದೆ. ಈ ನೀರಾವರಿ ಯೋಜನೆಗೆ ೧೪೭ ಕೋಟಿ ೫೦ ಲಕ್ಷ ರೂಗಳ ಖರ್ಚಾಗುವುದು.

ಜಲಗಂಗಾ

ಭಾರತದ ಉಪಯೋಗಕ್ಕಾಗಿ ಪ್ರಥಮವಾಗಿ ಜಪಾನು ಕಟ್ಟಿರುವ ೨೦೦೦ ಟನ್ನಿನ 'ಜಲಗಂಗಾ' ಎಂಬ ಹಡಗನ್ನು ಜಪಾನಿನಲ್ಲಿರುವ ಭಾರತ ಪ್ರತಿನಿಧಿ ಶ್ರೀ ಚೆಟ್ಟೂರ್‌ರವರು ನಾಮಕರಣ ಮಾಡಿಸಿದರು.

ಚತುರಾಷ್ಟ್ರ ಸಮ್ಮೇಳನ

ವಿಶ್ವ ಮಹಾ ಚತುರಾಷ್ಟ್ರಗಳಾದ ಬ್ರಿಟನ್, ಅಮೇರಿಕಾ, ರಷ್ಯಾ ಮತ್ತು ಫ್ರಾನ್ಸ್ ರಾಷ್ಟ್ರಗಳ ಪ್ರತಿನಿಧಿಗಳು ಬರುವ ಸೋಮವಾರ ಪ್ಯಾರಿಸಿನಲ್ಲಿ ಸಭೆ ಸೇರಲಿರುವರು.

ಉಪನ್ಯಾಸ

ಮೈಸೂರು ಫೆ. ೩

ನಾಳೆ ಸಂಜೆ ೬-೩೦ ಗಂಟೆಗೆ ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ, ಮಾದರಿ ಶಾಲೆಯಲ್ಲಿ, ಶ್ರೀ ಎಲ್. ಶ್ರೀಕಂಠಯ್ಯನವರು 'ಚೀನಾ ಮತ್ತು ಪ್ರಪಂಚ ಸೃಷ್ಟಿ' ವಿಷಯವಾಗಿ ಉಪನ್ಯಾಸ ಮಾಡುವರು.

ಹೊಸದಾಗಿ ವಿಧಾಯಕ ವಾಗುವ ತೆರಿಗೆಗಳು

ಕೇಂದ್ರ ಆರ್ಥಿಕಸಚಿವರಿಂದ ವಿವರಣೆ

ಮುಂದಿನ ಸಾಲಿನಲ್ಲಿ ಕೇಂದ್ರ ಸರ್ಕಾರದವರು ಆಯವ್ಯಯವನ್ನು ಸರಿಪಡಿಸಲು ಕೆಲವು ಹೊಸ ತೆರಿಗೆಗಳನ್ನು ಹಾಕಲು ನಿಶ್ಚಯಿಸಿರುವುದಾಗಿ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ತಿಳಿಸಿರುವರು.

ಕಾರ್ಪೊರೇಷನ್ ತೆರಿಗೆಯನ್ನು ೦-೨-೬ ಆಣೆಯಿಂದ ೦-೨-೯ ಆಣೆಗೆ ಅಂದರೆ ೩ ಕಾಸುಗಳಷ್ಟು ಹೆಚ್ಚಿಸಲಾಗಿದೆ.

ಕೇಂದ್ರದ ಅವಶ್ಯಕತೆಗಳಿಗಾಗಿ ಎಲ್ಲಾ ಆದಾಯ ತೆರಿಗೆಗಳು ಮತ್ತು ಸೂಪರ್ ತೆರಿಗೆಗಳ ಮೇಲೆ ಶೇ|| ೫ ರಷ್ಟು ಸರ್‌ಛಾರ್ಜನ್ನು ಹಾಕುವುದಾಗಿ ತಿಳಿಸಿದ್ದಾರೆ. ಇದರಲ್ಲಿ ಕಾರ್ಪೊರೇಷನ್ ತೆರಿಗೆ ಸೇರಿಲ್ಲ. ಇದನ್ನು ಹಾಕುವುದರಿಂದ ೬ ಕೋಟಿ ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

ಆಮದು ಪದಾರ್ಥಗಳ ಮೇಲೆಲ್ಲಾ (ಒಪ್ಪಂದದಿಂದ ಕೂಡಿದ ಪದಾರ್ಥಗಳನ್ನು ಬಿಟ್ಟು) ಶೇ|| ೫ ರಷ್ಟನ್ನು ಸರ್‌ಛಾರ್ಜನ್ನು ಹಾಕಲಾಗುವುದು.

ಕಡ್ಲೆಕಾಯಿ ಬೀಜ (ಕರ್ನಲ್) ದ ಮೇಲೆ ಟನ್ನಿಗೆ ೮೦ ರೂ. ರಫ್ತು ಸುಂಕ ಮತ್ತು ಆಮದಾಗುವ ವಿದೇಶೀ ಮಧು (ವಲ್‌ಬಿರ್, ಪರ್ಮಂಟೆಡ್ ಲಿಕ್ಕರ್) ಗಳ ಮೇಲೆ ಶೇ|| ೧೦೦ ರಷ್ಟು ಸರ್‌ಛಾರ್ಜು ಇದರಿಂದ ೪೦ ಲಕ್ಷ ರೂಗಳ ಹೆಚ್ಚಿಗೆ ಆದಾಯ.

ಮೋಟಾರ್ ಸ್ಪಿರಿಟ್ ಮೇಲೆ ಶೇ|| ೫ ರಷ್ಟು ಎಕ್ಸೈಜು ಸುಂಕ.

ಕರಿಮೆಣಸು ಮತ್ತು ಹತ್ತಿಯ ವೇಸ್ಟ್ ಮೇಲಿನ ರಫ್ತು ಸುಂಕವನ್ನು ಆಡಳಿತದ ಆಜ್ಞೆಯಂತೆ ಹೆಚ್ಚಿಸಲಾಗುವುದು. ಇದರಿಂದ ೧ ಕೋಟಿ ರೂ. ಆದಾಯವನ್ನು ನಿರೀಕ್ಷಿಸಲಾಗಿದೆ.

ಹತ್ತಿಯ ಬಟ್ಟೆ ಮೇಲೆ ರಫ್ತು ತೆರಿಗೆಯನ್ನು ೧೯೪೯ರಲ್ಲಿ ತೆಗೆದುಹಾಕಿ ಒರಟು ಮತ್ತು ಮಧ್ಯಮ ತರಗತಿಯ ಬಟ್ಟೆಗಳಿಗೆ ಮಾತ್ರ ಹಾಕಲಾಗಿತ್ತು. ಅದಕ್ಕೆ ಶೇ|| ೧೦ ರಷ್ಟು ಅಡ್‌ವೆಲರಾಂ ನಿಗದಿ ಮಾಡಲಾಗಿದೆ. ಆದರಿಂದ ೨|| ಕೋಟಿ ರೂ. ಆದಾಯ ಹೆಚ್ಚಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಸೀಮೆಎಣ್ಣೆಯ ಮೇಲಿನ ಎಕ್ಸೈಜು ತೆರಿಗೆಯನ್ನು ಶೇ|| ೫ ರಷ್ಟು ಹೆಚ್ಚಿಸಲಾಗುವುದು.

ತಂಬಾಕಿನ ಮೇಲಿನ ತೆರಿಗೆಯನ್ನು ಬದಲಾಯಿಸಿರುವುದರಿಂದ ೧೩ ಕೋಟಿ ರೂಗಳ ಆದಾಯ.

ಈ ಹೊಸ ತೆರಿಗೆಗಳಿಂದ ೩೦—೩೫ ಕೋಟಿ ರೂಗಳ ಹೆಚ್ಚು ಆದಾಯವನ್ನು ನಿರೀಕ್ಷಿಸಲಾಗಿದೆ.

೧೦ ಸಿಗರೇಟುಗಳಿಗೆ ೨ ಆಣೆಗಿಂತ ಹೆಚ್ಚಾಗಿರುವುದಕ್ಕೆ ೩ ಕಾಸಿನಂತೆಯೂ. ೧೦ ಸಿಗರೇಟುಗಳಿಗೆ ೦—೫—೬ ಆಣೆಗಳಿಗಿಂತ ಹೆಚ್ಚಾಗಿರುವುದಕ್ಕೆ ೬ ಕಾಸುಗಳಂತೆಯೂ ಸರ್‌ಛಾರ್ಜನ್ನು ವಿಧಿಸಲಾಗುವುದು.

ಮಂಡ್ಯದಲ್ಲಿ ಬೆಂಕಿ ಅನಾಹುತ

ಮಂಡ್ಯ ಮಾ. ೧

ಮಂಡ್ಯ ಬಡಾವಣೆ ಜನರಲ್ ಆಸ್ಪತ್ರೆ ಹಿಂಭಾಗದಲ್ಲಿ ಕಾರ್ಮಿಕರ ವಸತಿಗಳಿಗೆ ಬೆಂಕಿ ತಗುಲಿ ೫೦ ಗುಡಿಸಲುಗಳು ಉರಿದುಹೋಗಿ ೧೦೦ ಸಂಸಾರಗಳಿಗೆ ವಸತಿಯಿಲ್ಲದಾಗಿದೆ. ಗುಡಿಸಲೊಂದರಲ್ಲಿ ಅಡಿಗೆ ಮಾಡುತ್ತಿದ್ದಾಗ ಬೆಂಕಿ ಹತ್ತಿಕೊಂಡಿತೆಂದು ಹೇಳಲಾಗಿದೆ. ಸುಮಾರು ೧೦,೦೦೦ ರೂ. ನಷ್ಟವಾಗಿದೆ. ಪ್ರಾಣ ಹಾನಿಯೇನೂ ಇಲ್ಲ. ಒಂದು ಎತ್ತಿಗೆ ಸುಟ್ಟ ಗಾಯಗಳಾಗಿವೆ

ವಿದ್ಯಾತಜ್ಞರ ಭೇಟಿ

ಮೈಸೂರು ಮಾ. ೨

ಪ್ರಪಂಚ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ವಿದ್ಯಾಭ್ಯಾಸಭಾಗದ ಡೈರೆಕ್ಟರಾದ ಮಿ|| ಲಯನಲ್ ಎಲ್ವಿನ್‌ರವರು ಬೆಂಗಳೂರಿಗೆ ಮಾರ್ಚಿ ೩ನೇ ತಾ|| ಆಗಮಿಸಿ ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಕಲಾಪಗಳನ್ನು ಪರಿಶೀಲಿಸಲು ೫ ದಿನ ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರು.

ಇದೇ ೬ನೇ ತಾರೀಖು ಮಧ್ಯಾಹ್ನ ಇವರು ಮೈಸೂರಿಗೆ ಆಗಮಿಸುವರು. ಸಂಜೆ ೬ ಗಂಟೆಗೆ ವಿದ್ಯಾಭ್ಯಾಸ ವಿಚಾರದಲ್ಲಿ ಪುರಭವನದಲ್ಲಿ ಉಪನ್ಯಾಸ ಮಾಡುವರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅಧ್ಯಕ್ಷತೆ ವಹಿಸುವರು.

ವಿಶ್ವದ ನಿಶ್ಶಸ್ತ್ರೀಕರಣ

ಅಮೆರಿಕಾ ಕಾಂಗ್ರೆಸ್ಸಿನ ೨೩ ಸದಸ್ಯರು ಅಧ್ಯಕ್ಷ ಟ್ರೂಮನ್ನರಿಗೆ ಒಂದು ಮನವಿಯನ್ನು ಕಳುಹಿಸಿ, ವಿಶ್ವನಿಶ್ಶಸ್ತ್ರೀಕರಣ ಮಾಡಿ, ಇದಕ್ಕಾಗಿ ವಿಶ್ವ ಸಂಸ್ಥೆಯು ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿರುವರು.

ಟೆಲಿಫೋನ್ ಕಾರ್ಖಾನೆ

ಬೆಂಗಳೂರು ಟೆಲಿಫೋನ್ ಕಾರ್ಖಾನೆಯು ಇಲ್ಲಿಯವರೆಗೆ ೨೪,೦೦೦ ಟೆಲಿಫೋನ್‌ಗಳನ್ನು ಜೋಡಿಸಿದೆ. ಟೆಲಿಫೋನಿನ ೩೬೫ ಭಾಗಗಳಲ್ಲಿ ೩೫೫ ಭಾಗಗಳನ್ನು ಕಾರ್ಖಾನೆಯಲ್ಲಿಯೇ ತಯಾರಿಸಲಾಗಿದೆ.

ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನ

ಪ್ರಾಂತ್ಯ ಗೌರ್ನರ್ ಮತ್ತು ರಾಜಪ್ರಮುಖರ ವಾರ್ಷಿಕಸಮ್ಮೇಳನವು ಇದೇ ಮಾರ್ಚಿ ೧೬ ಮತ್ತು ೧೭ ರಲ್ಲಿ ದೆಹಲಿಯಲ್ಲಿ ನಡೆಯಲಿದೆ.

ಎಲ್. ಎಸ್. ರಾಜು ಬಿಡುಗಡೆ

ಶ್ರೀ ಪರಮಶಿವಯ್ಯನವರ ಆಸ್ತಿಗಳ ನಿರ್ವಹಣೆ ಸಂಬಂಧದಲ್ಲಿ ಸುಳ್ಳು ಹೇಳಿಕೆಯಿತ್ತರೆಂಬ ಆಪಾದನೆ ಮೇಲೆ ನಗರ ನ್ಯಾಯಾಧೀಶರು ಶ್ರೀ ಎಲ್. ಎಸ್. ರಾಜುರವರಿಗೆ ಎರಡು ವರ್ಷ ಕಠಿಣ ಶಿಕ್ಷೆ ವಿಧಿಸಿ ಇತ್ತ ತೀರ್ಪಿನ ವಿರುದ್ಧ ಅಪೀಲು ಹೋಗಲಾಗಿದೆಯಷ್ಟೆ.

ಈ ಸಂಬಂಧದಲ್ಲಿ ಹಾಕಲಾಗಿದ್ದ ಜಾಮೀನು ಬಿಡುಗಡೆ ಅರ್ಜಿಯ ವಿಚಾರಣೆ ನಡೆದು ಸೆಕೆಂಡ್ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಶ್ರೀ ಕೆ. ಎನ್. ಪದ್ಮನಾಭಯ್ಯನವರು ೫ ಸಾವಿರ ರೂ ವೈಯಕ್ತಿಕ ಜಾಮೀನು ಮತ್ತು ಅಷ್ಟೇ ಮೊತ್ತದ ಇನ್ನೆರಡು ಜಾಮೀನುಗಳ ಮೇಲೆ ಬಿಡುಗಡೆ ಮಾಡಿದ್ದಾರೆ ಅಪೀಲು ವಿಚಾರಣೆ ಮಾರ್ಚ್ ೨೮ ನೇ ತಾ || ನಿಂದ ಆರಂಭವಾಗುವುದು.

ಮುಖ್ಯ ನ್ಯಾಯಾಧೀಶರ ಮೇಲೆ ವಿಷಪ್ರಯೋಗ ಮಾಡಿದರೆಂದು ಹೇಳಲಾಗಿರುವ ಸಂಬಂಧದಲ್ಲಿ ಶ್ರೀ ಎಲ್. ಎಸ್. ರಾಜುರವರು ಈಗ ಜೈಲಿನ ರಿಮ್ಯಾಂಡ್‌ನಲ್ಲಿದ್ದಾರೆ.

ಧಾನ್ಯ ಸಹಾಯ

ಭಾರತಕ್ಕೆ ೨೦ ಲಕ್ಷ ಟನ್ ಆಹಾರ-ಧಾನ್ಯವನ್ನು ದಾನವಾಗಿ ಕೊಡಬೇಕೆಂದು ಅಧ್ಯಕ್ಷ ಟ್ರೂಮನ್ನರು ಮಾಡಿರುವ ಸಲಹೆಯನ್ನು ಪ್ರತಿನಿಧಿ ಸಭೆಯ ವಿದೇಶಾಂಗ ವ್ಯವಹಾರ ಸಮಿತಿಯು ಅನುಮೋದಿಸಿದೆ.

ಮಹದೇಶ್ವರನ ಜಾತ್ರೆ ನಡೆಯುವ ಸಂಭವವಿಲ್ಲ

ಬೆಂಗಳೂರು ಫೆ. ೨೮

ಮಹಾಶಿವರಾತ್ರಿ ಪ್ರಯುಕ್ತ ಮಹದೇಶ್ವರಸ್ವಾಮಿ ಜಾತ್ರೆಯು ನಡೆಯುವ ಮಾಮೂಲು ಇರುವುದಷ್ಟೆ. ಆದರೆ ಜಾತ್ರೆ ನಡೆಯುವ ಕೊಳ್ಳೆಗಾಲದ ತಾಲ್ಲೂಕಿನಲ್ಲಿಯ ಮೈಸೂರು ಸಂಸ್ಥಾನದ ಮಳವಳ್ಳಿ ಟಿ ನರಸೀಪುರ ಗುಂಡ್ಲುಪೇಟೆ ಕಾನಕಾನಹಳ್ಳಿ ಇತ್ಯಾದಿ ಗಡಿಯ ತಾಲ್ಲೂಕುಗಳಲ್ಲಿಯೂ ಕಾಲರಾ ಸೋಂಕು ಇರುವುದರಿಂದ ಈ ವರ್ಷ ಜಾತ್ರೆ ನಡೆಯುವುದನ್ನು ತಪ್ಪಿಸಬೇಕೆಂದು ಮದರಾಸ್ ಜನಾರೋಗ್ಯ ಇಲಾಖಾ ಡೈರೆಕ್ಟರವರು ಕೊಯಮತ್ತೂರು ಜಿಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರಿಗೆ ಬರೆದಿರುತ್ತಾರೆ. ಆದ್ದರಿಂದ ಈ ವರ್ಷ ಜಾತ್ರೆ ನಡೆಯುವ ಸಂಭವ ಇಲ್ಲ. ಒಂದು ವೇಳೆ ಜಾತ್ರೆ ನಡೆಯುದಿದ್ದಾಗ್ಯೂ ಕೂಡ ಕೆಲವರು ಕಡ್ಡಾಯವಾಗಿ ಹರಕೆ ಸಲ್ಲಿಸಲು ಬೆಟ್ಟಕ್ಕಾದರೂ ಹೋಗಿ ಬರಲು ಆಶಿಸುತ್ತಾರೆ. ಹರಕೆಯನ್ನು ಈ ವರ್ಷ ಸಲ್ಲದಿದ್ದರೆ ಮುಂದೆ ಯಾವಾಗಲಾದರೂ ಸಲ್ಲಿಸಬಹುದು. ಅತ್ಯಲ್ಪ ಮಂದಿಯಾದರೂ ಕೂಡ ಹೋಗುವ ಮುನ್ನ ತಪ್ಪದೆ ಕಾಲರಾ ಇನಾಕ್ಯುಲೇಷನ್ ಮಾಡಿಸಿಕೊಂಡು ಜಾಡ್ಯವು ಅಂಟದಂತೆ ರಕ್ಷಣೆ ಪಡೆಯಬೇಕು. ಇದಕ್ಕಾಗಿ ಜನಾರೋಗ್ಯ ಇಲಾಖೆಯವರು ಮಾರ್ಗದಲ್ಲಿರುವ ಆಸ್ಪತ್ರೆಗಳಲ್ಲಿ ಬೇಕಾದ ಏರ್ಪಾಟುಗಳನ್ನು ಮಾಡಿದ್ದಾರೆ. ಜನರು ಹಾಗೆ ಇನಾಕ್ಯುಲೇಷನ್ ಮಾಡಿಸಿಕೊಂಡು ಕಾಲರಾ ಹರಡಲು ಅವಕಾಶವಾಗದಿರುವಂತೆ ಜನಾರೋಗ್ಯ ಇಲಾಖೆಯವರ ಕಾರ್ಯಕ್ರಮದಲ್ಲಿ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ.

ರಣಜಿತ್

2—3—51ರಿಂದ ಅಮೋಘ 4ನೇ ವಾರ

ಪ್ರತಿದಿನ 3 ಆಟಗಳು

ಸರ್ದಾರ್ ಮತ್ತು ನೌಷದ್‌ರವರ

✻ ದಾಸ್ತಾನ್ ✻

ಸಾಕ್ರ, ಸುರಯ್ಯ, ರಾಜಕಪೂರ್, ವೀಣಾ, ಅಲ್ ನಸೀರ್, ಸುರೇಶ್, ಮುಂತಾದವರು

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಜಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩—೩—೧೯೫೧ನೇ ಶನಿವಾರ [ಸಂಚಿಕೆ ೧೫೦

ಮೈಸೂರು ಕಾಂಗ್ರೆಸ್ಸಿನವರಲ್ಲಿ ಸಂಧಾನ

ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಮುಖಂಡರಲ್ಲಿ ಮಾತುಕಥೆ

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ತಲೆಹಾಕಿರುವ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಶ್ರೀ ಎಸ್. ಚನ್ನಯ್ಯನವರು ಪ್ರಯತ್ನಿಸಿ ಆ ಸಬಂಧದಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರನ್ನು ತುಮಕೂರಿನಲ್ಲಿ ಭೇಟಿಮಾಡಿ ಅವರೊಡನೆ ಸುಮಾರು ೬ ಗಂಟೆಗಳ ಕಾಲ ಮನಬಿಚ್ಚಿ ಮಾತನಾಡಿದರೆಂದೂ ಇದರ ಪರಿಣಾಮ ಸರ್ವಸಮ್ಮತವಾದ ಒಪ್ಪಂದಕ್ಕೆ ಬರುವ ಸಂಭವವಿದೆಯೆಂದೂ ಅವರೊಡನೆ ನಿಕಟಬಾಂಧವ್ಯವಿಟ್ಟುಕೊಂಡಿರುವ ಕ್ಷೇತ್ರದಿಂದ ತಿಳಿದು ಬಂದಿದೆ.

ಶ್ರೀ ಎಲ್. ಎಸ್. ರಾಜುರವರ ಮೇಲೆ ಚಾರ್ಜ್‌ಷೀಟ್

ಬೆಂಗಳೂರು ಮಾ. ೨

ಸಿವಿಲ್ ಸ್ಟೇಷನ್ನಿನ ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಜನಾಬ್ ಅಬ್ದುಲ್‌ಹಕ್‌ರ ಮುಂದೆ ಸಿವಿಲ್ ಸ್ಟೇಷನ್ನಿನ ಬಿ ಡಿವಿಜನ್ನಿನ ಪೋಲೀಸ್ ಇನ್ಸ್‌ಪೆಕ್ಟರಾದ ಶ್ರೀ ಎಸ್. ನೀಲಕಂಠಾರಾಧ್ಯರು ಈದಿನ ಶ್ರೀಗಳಾದ ೧. ಎಲ್. ಎಸ್. ರಾಜು, ಅಡ್ವೋಕೇಟ್, ಬೆಂಗಳೂರು, ೨. ಎಲ್. ಆರ್. ಬಜುರಾಂ, (ಶ್ರೀ ರಾಜುರವರ ಪುತ್ರ), ೩. ದಾಸಪ್ಪನಾಯ್ಡು ೪. ಡಾ|| ಬಿ. ನಾರಾಯಣಪ್ರಸಾದ್, (ಸೇಪ್ಪಿಂಗ್ಸ್ ರೋಡ್, ಸಿವಿಲ್ ಸ್ಟೇಷನ್) ಮತ್ತು ೫. ಮಿಸೆಸ್ ಆಗ್ನೆಸ್ ಇವರುಗಳ ಮೇಲೆ ಚೀಫ್ ಜಸ್ಟಿಸ್ ಶ್ರೀ ಪಿ. ಮೇದಪ್ಪನವರಿಗೆ ವಿಷ ಪ್ರಾಶನದ ಪ್ರಯತ್ನ ನಡೆದ ಆಪಾದನೆ ಪ್ರಕರಣದಲ್ಲಿ ಚಾರ್ಜ್‌ಷೀಟ್ ಹೂಡಿದರು.

ಉಪನ್ಯಾಸ

ಯುನೆಸ್ಕೋವಿನ ವಿದ್ಯಾಧಿಕಾರಿ ಪ್ರೊ|| ಲಿಯೋನಲ್ ಎಲ್ವಿನ್‌ರವರು ವಿದ್ಯಾಭ್ಯಾಸದ ವಿಷಯದಲ್ಲಿ ೪ನೇ ತಾ|| ಆದಿತ್ಯವಾರ ಸಂಜೆ ೫.೩೦ ಗಂಟೆಗೆ ಮಹಾರಾಜ ಕಾಲೇಜಿನ ಆವರಣದಲ್ಲಿ ಭಾಷಣ ಮಾಡುವರು. ಮುಖ್ಯ ಮಂತ್ರಿಗಳಾದ ಶ್ರೀ ಕೆ. ಚಂಗಲರಾಯರೆಡ್ಡಿಯವರು ಅಧ್ಯಕ್ಷತೆವಹಿಸುವರು.

ಹಿಂದೆ ತಿಳಿಸಿದ್ದಂತೆ ಈ ಭಾಷಣ ಪುರಭವನದಲ್ಲಿ ನಡೆಯುವುದಿಲ್ಲ.

ಮಹಿಳಾ ನೌಕರರಿಗೆ ವಸತಿ ಸೌಕರ್ಯ

ಮದ್ರಾಸು ಸರ್ಕಾರದ ಮಹಿಳಾ ನೌಕರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲೋಸುಗ ಮದ್ರಾಸು ನಗರದಲ್ಲಿ ೪೦ ಮನೆಗಳನ್ನು ಸರ್ಕಾರ ಕಟ್ಟಿಸಿಕೊಡುವುದು.

ಅವಿವಾಹಿತ ಮಹಿಳಾ ನೌಕರರಿಗೆ ಮಾತ್ರ ಈ ಮನೆಗಳನ್ನು ಕೊಡಲಾಗುವುದು.

೭೦ ಲಕ್ಷ ರೂ. ಗಳ ಮೋಸ

ಬೊಂಬಾಯಿ ಮಾ. ೨

ಎಂಪೈರ್ ಆಫ್ ಇಂಡಿಯಾ ಲೈಫ್ ಇನ್ಷ್ಯೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರೂ ಪಾರ್ಲಿಮೆಂಟ್ ಸದಸ್ಯರೂ ಆದ ಸೇಠ್ ದಾಮೋದರ್ ಸ್ವರೂಪ್‌ರವರು ಕಂಪೆನಿಗೆ ಸೇರಿದ ೭೦ ಲಕ್ಷ ರೂ. ಗಳನ್ನು ದುರುಪಯೋಗ ಮಾಡಿದ್ದಾರೆಂಬ ಆಪಾದನೆಮೇಲೆ ಈದಿನ ಅವರನ್ನು ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರೊಬ್ಬರ ಸಮ್ಮುಖದಲ್ಲಿ ಹಾಜರು ಪಡಿಸಲಾಯಿತು. ಅವರನ್ನು ಎರಡುಲಕ್ಷ ರೂ. ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ.

ಆಹಾರ ಪದಾರ್ಥಗಳ ಬೆಲೆ ಇಳಿಕೆ

ವ್ಯವಸಾಯದಲ್ಲಿ ಕಾರ್ಮಿಕರ ಉತ್ಪಾದನಾ ಶಕ್ತಿ ಬೆಳೆದು, ಉತ್ಪನ್ನ ಹೆಚ್ಚು ಕಡಿಮೆಯಾದುದರಿಂದಲೂ, ಕೈಗಾರಿಕಾಭಿವೃದ್ಧಿಯಲ್ಲಿ ಯಶಸ್ಸು ಲಭಿಸಿದುದರಿಂದಲೂ, ರಷ್ಯಾದಲ್ಲೆಲ್ಲಾ ಆಹಾರ ಪದಾರ್ಥಗಳ ಮತ್ತು ಬಳಕೆಯ ಸಾಮಗ್ರಿಗಳ ಚಿಲ್ಲರೆ ಬೆಲೆಗಳನ್ನು ಶೇಕಡ ೧೦ರಿಂದ ಶೇಕಡ ೨೦ರ ವರೆಗೆ ಇಳಿಸಲಾಗಿದೆಯೆಂದು ಮಾಸ್ಕೋ ರೇಡಿಯೋ ಪ್ರಸಾರ ಮಾಡಿದೆ.

ಈ ಬೆಲೆ ಇಳಿಕೆ ಸಲುವಾಗಿ ರಷ್ಯನ್ ಜನತೆಯು ಒಂದು ವರ್ಷದಲ್ಲಿ ೨೭-೫೦ ಕೋಟಿ ರೂಬೆಲ್‌ಗಳನ್ನು ಉಳಿತಾಯ ಮಾಡುವುದೆಂದೂ ಹೇಳಲಾಗಿದೆ. ಅಂದರೆ ಸರ್ಕಾರಕ್ಕೆ ೨೭.೫೦ ಕೋಟಿ ರೂಬೆಲ್‌ಗಳ ಆದಾಯ ತಪ್ಪಿಹೋಗುವುದು. ಜನರ ಸ್ಥಿತಿಯನ್ನು ಉತ್ತಮಗೊಳಿಸಲು ಸಮರ್ಥವಾದ ಸರ್ಕಾರವು ಈ ತ್ಯಾಗ ಮಾಡುತ್ತಿದೆ.

ಬ್ರೆಡ್, ಹಿಟ್ಟು, ಕೊಬ್ಬು, ಕೆನೆ ಮಾಂಸದ ಪದಾರ್ಥಗಳು ಮತ್ತು ಕೋಳಿಮೊಟ್ಟೆ, ಹಾಗೂ ಸೋಪುಗಳ ಬೆಲೆಗಳನ್ನು ೧೫ ರಂತೆ ಇಳಿಸಲಾಗಿದೆ.

ಬೆಂಕಿಕಡ್ಡಿ, ಪೆಟ್ರೋಲು ಮನೆಯ ವಸ್ತು ಸಾಮಗ್ರಿ ಮುಂತಾದವುಗಳ ಬೆಲೆಯಲ್ಲಿ ಶೇಕಡಾ ೨೦ ರಷ್ಟು ಖೋತಾ, ಸಿಗರೇಟ್, ತಂಬಾಕು, ಟೀ, ಕಾಫೀ, ಹಾಲು, ಮೊಟ್ಟೆ, ಮೀನು ಹಾಗೂ ಮೀನು ಪದಾರ್ಥಗಳೂ, ಸುಗಂಧ ವಸ್ತು, ಔಷಧಗಳು ಕನ್ನಡಿಗಳ ಬೆಲೆಯಲ್ಲಿ ಶೇಕಡಾ ೧೦ ರಷ್ಟು ಖೋತಾ, ಉಪ್ಪು [ಶೇಕಡಾ ೨೧ ರಷ್ಟು] ವೋಡ್ಕಾ [ಶೇಕಡಾ ೧೦ ರಷ್ಟು] ಕಬ್ಬಿಣದ ಮಂಚ [ಶೇಕಡಾ ೭೦ ರಷ್ಟು ಸಿಮೆಂಟ್ ಮತ್ತು ಹೊಲಿಯುವ ಯಂತ್ರಗಳು [ಇವೂ ಶೇಕಡಾ ೧೦ ರಷ್ಟು] ಪದಾರ್ಥಗಳ ಬೆಲೆಯಲ್ಲಿ ಮೇಲೆ ನಮೂದಿಸಿದಂತೆ ಕ್ರಮವಾಗಿ ಖೋತಾ ಮಾಡಲಾಗಿದೆ.

೪ ವರ್ಷಗಳ ಹಿಂದೆ ಹಣ ಸುಧಾರಣೆಯಾದ ಬಳಿಕ ಪದಾರ್ಥಗಳ ಬೆಲೆ ಇಳಿಸಿರುವುದು ಇದು ನಾಲ್ಕನೇ ಬಾರಿ.

ಬೆಂಕಿ ಅನಾಹುತ

ಮೈಸೂರು ಮಾ. ೩

ನೆನ್ನೆ ರಾತ್ರಿ ೮ ಗಂಟೆ ವೇಳೆಯಲ್ಲಿ ಮೈಸೂರು ಟೆಕ್ನಿಕಲ್ ಇನ್ಸ್‌ಟಿಟ್ಯೂಟಿನ ಹಿಂಭಾಗದಲ್ಲಿ ಒಂದು ಮನೆಯಲ್ಲಿ ಅಡಿಗೆ ಮಾಡುತ್ತಿದ್ದಾಗ ಬಟ್ಟೆಗಳಿಗೆ ಬೆಂಕಿತಗುಲಿ ಬೆಂಕಿ ಹರಡಿ ೧೦ ಸಾವಿರ ರೂ. ಗಳ ವರೆಗೆ ನಷ್ಟವಾಯಿತೆಂದು ತಿಳಿಯಬರುತ್ತದೆ. ಫೈರ್ ಬ್ರಿಗ್ರೇಡಿನವರು ಕೂಡಲೇ ಬಂದು ಬೆಂಕಿ ಆರಿಸಿದರು. ಫೈರ್ ಬ್ರಿಗೇಡಿಗೆ ಸೇರಿದವರೊಬ್ಬನಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಿದ್ದಾನೆ.

ಮೈಸೂರಿನಲ್ಲಿ ಹೊಸ ರಾಜಕೀಯ ಪಕ್ಷ

ಬೆಂಗಳೂರು ಮಾ. ೨

ಏಕ ಪಕ್ಷದ ಆಡಳಿತವು ಪ್ರಜಾ ಪೀಡಿತವಾಗಿದೆ. ಆದ್ದರಿಂದ ಜನಪ್ರಿಯವೂ ಮತ್ತು ಪ್ರಭಾವಶಾಲಿಯೂ ಆದ ಇನ್ನೊಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸುವುದು ಜನತೆಯ ಕರ್ತವ್ಯವಾಗಿದೆ. ಇಂಥಾ ಪಕ್ಷಕ್ಕೆ ಉತ್ತೇಜನ ಕೊಡುವುದು ಈಗ ಆಡಳಿತ ನಡೆಸುತ್ತಿರುವ ರಾಜಕೀಯ ಸಂಸ್ಥೆಯ ಆದ್ಯ ಕರ್ತವ್ಯವೂ ಆಗಿದೆ ಎಂದು ಮೈಸೂರಿನ ಮಾಜಿ ಮಂತ್ರಿಗಳೂ, ಮಾರ್ಚ್ ೧೦ ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಮೈಸೂರು ರಾಜಕೀಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಸಿದ್ದಪ್ಪನವರು ಒಂದು ಹೇಳಿಕೆ ಹೊರಡಿಸಿದ್ದಾರೆ.

ಮೈಸೂರಿನಲ್ಲಿ ಹೊಸ ರಾಜಕೀಯ ಪಕ್ಷ ಸ್ಥಾಪನೆಯ ಬಗ್ಗೆ ನಾನಾ ವಿಷಯಗಳನ್ನು ಪರಿಶೀಲಿಸಲು ಮಾರ್ಚ್ ೧೦ನೇ ತಾ|| ಬೆಂಗಳೂರು ಸಿಟಿ ವಿಶ್ವೇಶ್ವರಪುರದಲ್ಲಿರುವ ಶ್ರೀ ಅನಕೋಜಿರಾಯರ ಛತ್ರದಲ್ಲಿ ಬೆಳಿಗ್ಗೆ ೮ ಗಂಟೆಗೆ ಒಂದು ಸಮ್ಮೇಳನ ಸೇರುವುದು.

ಈ ಸಂದರ್ಭದಲ್ಲಿ ಶ್ರೀ ಎಚ್. ಸಿದ್ದಪ್ಪನವರು ಒಂದು ಮನವಿಯನ್ನು ಹೊರಡಿಸಿದ್ದಾರೆ.

ಅಧಿಕಾರಿಗಳ ಮೇಲೆ ಕಾನೂನು ಕ್ರಮ

ಧಾನ್ಯಸಂಗ್ರಹಣೆಕಾರ್ಯದಲ್ಲಿ ಇತ್ತೀಚೆಗೆ ಕೃಷ್ಣರಾಜ ನಗರ ತಾ|| ನಲ್ಲಿ ಅಧಿಕಾರಿ ವರ್ಗದವರು ಅಸಮರ್ಪಕರೀತಿಯಿಂದ ವರ್ತಿಸಿದ್ದಕ್ಕಾಗಿ, ಹೆಡ್ ಶಿರಸ್ತೇದಾರ್ ಶ್ರೀ ಮುನಿಸ್ವಾಮಿನಾಯಕ್, ರೆವೆನ್ಯೂ ಇನ್ಸ್‌ಪೆಕ್ಟರುಗಳಾದ ಶ್ರೀಗಳಾದ ಅಂದಾನಯ್ಯ, ಶ್ರೀ ನಿವಾಸರಾವ್, ಜನಾಬ್ ಕರೀಂರವರನ್ನು ಸಸ್ಪೆಂಡ್ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಮುಖ್ಯ ಮಂತ್ರಿಗಳಲ್ಲಿ ನಿಯೋಗ

ಮೈಸೂರು, ಮಾ. ೩

ಕೃಷ್ಣರಾಜನಗರ ತಾ|| ನ ಕೆಲವು ಗ್ರಾಮಗಳಲ್ಲಿ ಆಹಾರ ಶೇಖರಣೆ ಮಾಡುವ ಅಧಿಕಾರಿಗಳು ಅಸಮರ್ಪಕರೀತಿಯಲ್ಲಿ ವರ್ತಿಸಿ, ಜನರಿಗೆ ವಿಶೇಷ ತೊಂದರೆಯನ್ನು ಕೊಟ್ಟ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಶ್ರೀಗಳಾದ ಎಂ. ಎಸ್. ಜೋಯಿಸ್, ಪುಟ್ಟಬಸಪ್ಪ, ವೈ. ಶ್ರೀನಿವಾಸರಾವ್, ವೈ. ವಿ. ಗುಂಡುರಾವ್ ಮುಂತಾದವರು ಮುಖ್ಯಮಂತ್ರಿಗಳಲ್ಲಿ ನಿಯೋಗ ಹೋಗಿರುವುದಾಗಿ ತಿಳಿಯಬರುತ್ತದೆ.

ನೆಹರೂಗೆ ಜಪಾನಿನ ಪ್ರತಿಕಾಣಿಕೆ

ಮೈಸೂರು ಜೂನಲ್ಲಿಡಲಾಗುವುದು

ಜಪಾನಿ ಮಕ್ಕಳಿಗೆ ಪಂಡಿತ ನೆಹರೂರವರು ಕಳುಹಿಸಿದ್ದ 'ಇಂದಿರಾ' ಆನೆಗೆ ಬದಲಾಗಿ ... ಒಂದು ಜೊತೆ ಬ್ಯಾಡ್ಜರ್ ಕರಡಿ, ಒಂದು ಜೊತೆ ಪ್ಯಾಂಡರಿನ್ ಬಾತು ಮತ್ತು ಒಂದು ಜೊತೆ ಬೆಂಕಿ ಮೊಸಳೆಗಳನ್ನು, ದೆಹಲಿಗೆ ಏಷ್ಯನ್ ಕ್ರೀಡೋತ್ಸವಕ್ಕೆ ಬಂದಿರುವ ಜಪಾನೀ ಟೀಮಿನ ನಾಯಕರು ಟೋಕಿಯೋ ಗೌರ್ನರವರ ಪರವಾಗಿ ಪಂಡಿತ ನೆಹರೂರವರಿಗೆ ಒಪ್ಪಿಸಿರುವರು. ಆ ಪ್ರಾಣಿಗಳನ್ನು ಮೈಸೂರು ಜೂಗೆ ಕಳುಹಿಸುವುದಾಗಿ ಪಂಡಿತ ನೆಹರೂರವರು ತಿಳಿಸಿರುವರು.

ಮಾಂಟೆಸ್ಸೋರಿ ಕ್ರಮದಲ್ಲಿ ಶಿಕ್ಷಣ

ಮೈಸೂರು ಮಾ. ೨

ಸುಪ್ರಸಿದ್ಧ ಶಿಶುಶಿಕ್ಷಣ ನಿಪುಣೆಯಾದ ಮೇಡಂ ಮಾಂಟೆಸ್ಸೋರಿಯವರ ಶಿಕ್ಷಣ ವಿಧಾನದ ಪದ್ಧತಿಯ ಪ್ರಕಾರ ಮೈಸೂರು ನಗರದಲ್ಲಿ ಬರುವ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ, ಮಹಿಳೆಯರಿಗೂ, ಪುರುಷರಿಗೂ, ಶಿಶು ಶಿಕ್ಷಣದಲ್ಲಿ ತರಪೇತನ್ನು ಕೊಡಲು ಏರ್ಪಡಿಸಲಾಗಿದೆ. ಮೇಡಂ ಮಾಂಟೆಸ್ಸೋರಿಯವರ ಸ್ವಂತ ಪ್ರತಿನಿಧಿಯಾದ ಮಿ|| ಎ.ಎಂ. ಜೂಸ್ಟೆನ್‌ರವರು ಮತ್ತು ಅವರ ಅನುಯಾಯಿಗಳು ೧೫೦ ಜನರಿಗೆ ಶಿಕ್ಷಣವನ್ನು ಕೊಡಲು ಏರ್ಪಡಿಸಿರುತ್ತಾರೆ. ಈ ಶಿಕ್ಷಣವು ಶಿಶುವಿಹಾರವನ್ನು ನಡೆಸತಕ್ಕವರಿಗೂ, ಮಕ್ಕಳ ಶಿಕ್ಷಣದಲ್ಲಿ ಆಸಕ್ತಿಯುಳ್ಳವರಿಗೂ ಉಪಯುಕ್ತವಾಗಿರುತ್ತದೆ. ಶಿಕ್ಷಣದಲ್ಲಿ ತರಪೇತಾದವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲ್ಪಡುತ್ತವೆ. ಈ ಶಿಕ್ಷಣವನ್ನು ಪಡೆಯಬಯಸುವವರು ಮೈಸೂರು ಲಕ್ಷ್ಮೀವಿಲಾಸ ರಸ್ತೆಯಲ್ಲಿರುವ ಸದರಿ ಶಿಕ್ಷಣಕ್ಕಾಗಿ ಏರ್ಪಟ್ಟಿರುವ ಕಮಿಟಿಯ ಆರ್ಗನೈಜಿಂಗ್ ಸೆಕ್ರೆಟರಿಯವರಿಗೆ ಬರೆದು ಹೆಚ್ಚು ಮಾಹಿತಿಗಳನ್ನು ತಿಳಿಯಬಹುದು.

ರಾಜ್ಯಾಂಗ ಸಭೆಯೇ ಕಾಶ್ಮೀರ ಭವಿಷ್ಯ ನಿರ್ಧರಿಸುವುದು

ಪಾಕಿಸ್ತಾನ್, ಬ್ರಿಟನ್ ಮತ್ತು ಅಮೆರಿಕಾಗಳ ವಿರೋಧವೇನೇ ಇರಲಿ ಇಷ್ಟರಲ್ಲಿಯೇ ಸ್ಥಾಪಿತವಾಗಲಿರುವ ಕಾಶ್ಮೀರ ರಾಜ್ಯಾಂಗ ಸಭೆಯು ಕಾಶ್ಮೀರಕ್ಕೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದೆಂಬುದಾಗಿ ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು.

ನೇಪಾಳಕ್ಕೆ ಸಲಹೆಗಾರರು

ಸಂಯುಕ್ತ ಪ್ರಾಂತ್ಯ ಸರ್ಕಾರದ ಗೃಹಶಾಖಾ ಕಾರ್ಯದರ್ಶಿ ಶ್ರೀ ಗೋವಿಂದನಾರಾಯಣ್ ರವರನ್ನು ನೇಪಾಳದ ರಾಜಕೀಯ ಸಲಹೆಗಾರರನ್ನಾಗಿಯೂ ಭಾರತದ ಕೇಂದ್ರ ಸರ್ಕಾರದ ಹಣಕಾಸಿನ ಶಾಖೆಯ ಅಧಿಕಾರಿಗಳಾದ ಶ್ರೀ ಬ್ರಿಜ ನಾರಾಯಣರವರನ್ನು ನೇಪಾಳದ ಹಣಕಾಸಿನ ಸಲಹೆಗಾರರನ್ನಾಗಿಯೂ ಎರವಲು ಕೊಡಲಾಗಿದೆ.

ಯುದ್ಧ ಭಯ

ಯುದ್ಧ ಭಯ ನಿಜವಾದದ್ದು, ಆಸ್ಟ್ರೇಲಿಯಾ ಸಿದ್ಧವಾಗಿರಬೇಕೆಂದು ಆಸ್ಟ್ರೇಲಿಯ ಪ್ರಧಾನಿ ಮಿ|| ಮೆಂಜೀಸ್‌ರವರು ಹೇಳಿರುವರು.

ಅಖಿಲ ಭಾರತ ವಸ್ತು ಪ್ರದರ್ಶನ

ಬೆಂಗಳೂರು ಮಾ. ೨

ಇದೇ ಏಪ್ರಿಲ್ ಮೊದಲನೆಯ ವಾರದಿಂದ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ನಡೆಯಲಿರುವ ಅಖಿಲ ಭಾರತ ವಸ್ತು ಮತ್ತು ಕಲಾ ಪ್ರದರ್ಶನದಲ್ಲಿ ನಡೆಯುವ ಏರ್ಪಾಡುಗಳ ಬಗ್ಗೆ ಸಮಾಲೋಚಿಸಲು ಭಾರತ ವಿಮಾನ ಪಡೆಯ ಕಮ್ಯಾಂಡರ್—ಇನ್—ಚೀಫ್‌ರಾದ, ಮಾರ್ಷಲ್ ಏವಿಲಾ ಚಾಪ್‌ಮನ್‌ರವರೂ, ಜನರಲ್ ಕಾರಿಯಪ್ಪನವರ ಪರವಾಗಿ ಮಿಲಿಟರಿ ಸೆಕ್ರೆಟರಿಯವರೂ, ಇನ್ನೂ ಕೆಲವು ಉನ್ನತ ಮಿಲಿಟರಿ ಅಧಿಕಾರಿಗಳೂ, ಸೆಕ್ರೆಟರಿಗಳಾದ ಶ್ರೀ ಬಿ. ನಂಜಪ್ಪನವರನ್ನು ಕೆಲವು ದಿನಗಳ ಕೆಳಗೆ ರೆಸಿಡೆನ್ಸಿಗೆ ಬರಮಾಡಿಕೊಂಡು ಸತ್ಕರಿಸಿ, ಒಂದು ಗಂಟೆ ಕಾಲ ವಿಮರ್ಶಿಸಿದರು. ಇದರ ಅಂಗವಾಗಿ ಹೋಂ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ವಸ್ತು ಪ್ರದರ್ಶನ ನಡೆಯಲಿರುವ ಸ್ಥಳವನ್ನು ಪರಿಶೀಲಿಸಿದರು. ಪ್ರದರ್ಶನ ಸಮಿತಿ ಛೇರ್ಮನ್ನರಾದ ಶ್ರೀ ಎಸ್. ಸಿ. ನಾಗಯ್ಯರೆಡ್ಡಿಯವರೂ, ಸದಸ್ಯರೂ ಸ್ವಾಗತಿಸಿದರು.

ಭಾರತ ಚೀಣಾ ಬಾಂಧವ್ಯ

ಸಾಂಸ್ಕೃತಿಕ ಅಧ್ಯಯನಕ್ಕಾಗಿ ಭಾರತ ಮತ್ತು ಚೀಣಾಗಳ ವಿದ್ಯಾರ್ಥಿಗಳ ಪರಸ್ಪರ ವಿನಿಮಯಕ್ಕೆ ತಕ್ಕ ವ್ಯವಸ್ಥೆ ಮಾಡುವಿಕೆಯನ್ನು ಉಭಯ ಸರ್ಕಾರಗಳು ಪರಿಶೀಲಿಸುತ್ತಿವೆಯೆಂದು ಕೇಂದ್ರ ವಿದ್ಯಾ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಕಾಲರಾದಿಂದ ೬೨೩ ಮಂದಿಯ ಮರಣ

ಬೆಂಗಳೂರು, ಫೆ. ೨೮

ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳ ಅನೇಕ ಭಾಗಗಳಲ್ಲಿ ಒಂದು ತಿಂಗಳ ಹಿಂದೆ ಹರಡಿದ ಕಾಲರಾ ರೋಗ ೧೨೨೧ ಮಂದಿಗೆ ತಗುಲಿ ೬೨೩ ಮಂದಿ ಸತ್ತರೆಂದೂ, ರೋಗದ ಸೋಂಕಿರುವ ೧೪೮ ಹಳ್ಳಿಗಳು ಮತ್ತು ೯ ಟೌನ್‌ಗಳಲ್ಲಿ ೧೦೯೫೫೦ ಮಂದಿಗೆ ಇನಾಕ್ಯುಲೇಷನ್ ಹಾಕಲಾಗಿದೆಯೆಂದೂ, ಸಾರ್ವಜನಿಕ ಆರೋಗ್ಯ ಇಲಾಖೆಯ ಡೈರೆಕ್ಟರ್ ಡಾ|| ಟಿ. ಚಂದ್ರಶೇಖರಯ್ಯನವರು ತಿಳಿಸಿದರು.

ರೋಗ ಈಗ ಕಡಮೆಯಾಗುತ್ತಿದೆಯೆಂದೂ, ಕೆಲವು ವಾರಗಳಲ್ಲಿ ಪೂರ್ಣ ಹತೋಟಿಗೆ ಬರುವುದೆಂದು ತಿಳಿಸಿರುವರು.

ಬೇಸಿಗೆ ಹತ್ತಿರವಾಗುತ್ತಿರುವುದರಿಂದ ಮಕ್ಕಳು ಮತ್ತಿತರರು ಲಸಿಕೆ ಹಾಕಿಸಿಕೊಳ್ಳಬೇಕೆಂದೂ, ಇಲಾಖೆ ತಕ್ಕ ಸೌಕರ್ಯದ ವ್ಯವಸ್ಥೆ ಮಾಡಿದೆಯೆಂದೂ ತಿಳಿಸಿದರು.

ಪಾನನಿರೋಧಾಜ್ಞೆ ರದ್ದಾಗಲಿ

ಮುಂಬಯಿ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಡಾ|| ಎ. ಎ. ಖಾನರು ಸರ್ಕಾರದ ಪಾನನಿರೋಧಾಜ್ಞೆಯನ್ನು ಟೀಕಿಸಿ, ಕೂಡಲೇ ಈ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಶಾಸನ ಸಭೆಯಲ್ಲಿ ಒತ್ತಾಯ ಮಾಡಿದರು.

ಬ್ರಿಟನ್ ವಿದೇಶಾಂಗ ಮಂತ್ರಿ

ಬ್ರಿಟನ್ನಿನ ವಿದೇಶಾಂಗ ಮಂತ್ರಿ ಮಿ|| ಬೆವಿನ್‌ರವರು ಅಸ್ವಸ್ಥರಾಗಿರುವುದರಿಂದ ಬ್ರಿಟನ್ನಿನ ಪ್ರಧಾನಿ ಮಿ|| ಆಟ್ಲಿಯವರೇ ವಿದೇಶಾಂಗ ಸಚಿವರಾಗಿರಬೇಕೆಂದು ಲೇಬರ್ ಪಕ್ಷದ ಅನೇಕ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆಂದು ತಿಳಿಯಬರುತ್ತದೆ.

ವಾರ್ಷಿಕೋತ್ಸವ

ಇದೇ ೪ನೇ ತಾ|| ಸಾಯಂಕಾಲ ೬ ಗಂಟೆಗೆ ರಾಜಧಾನಿಯ ಮರಿಮಲ್ಲಪ್ಪನವರ ಸ್ಕೂಲಿನಲ್ಲಿರುವ ಟೀಚರ್ಸ್ ಕಾಲೇಜಿನ ಅಸೋಸಿಯೇಷನ್ ವಾರ್ಷಿಕೋತ್ಸವವು ಮೈಸೂರು ಪ್ರಧಾನ ಸಚಿವರಾದ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಇಂದು ಸಂಜೆ ೫-೩೦ ಗಂಟೆಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನೀಯರಿಂಗ್ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಶ್ರೀ ಸಿ. ಆರ್. ನರಸಿಂಹಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯುವುದು. ಕನ್ನಡ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರವರು ಮುಖ್ಯ ಭಾಷಣ ಮಾಡುವರು.

ರಣಜಿತ್

2—3—51ರಿಂದ ಆಮೋಘ 4ನೇ ವಾರ

ಪ್ರತಿದಿನ 3 ಆಟಗಳು

ಕರ್ದಾರ್ ಮತ್ತು ನೌಷದ್‌ರವರ

* ದಾಸ್ತಾನ್ *

ಪಾತ್ರ- ಸುರಯ್ಯ, ರಾಜಕಪೂರ್, ವೀಣಾ ಅಲ್ ನಸೀರ್, ಸುರೇಶ್, ಮುಂತಾದವರು

ಒಲಂಪಿಯಾ

೨—೩—೫೧ರಿಂದ

ಕಿಕ್ಕಿರಿದ ೩ನೇ ವಾರ

ಪ್ರತಿದಿನ 3 ಆಟಗಳು

ದಿನದಿನಕ್ಕೂ ಮೇಲೆ ನೋಡಿ ಸಹಸ್ರಾರು ಜನಗಳಿಗೆ ಆನಂದವನ್ನು ಉಂಟುಮಾಡಿದ ಗೋಯಲ್‌ರವರ

* ಆಂಖೆ *

ಪಾತ್ರ— **ನಳಿನಿಜಯವಂತ್**

ಶೇಖರ್, ಯಾಕೂಬ್, ಭಾರತ್‌ಭೂಷಣ್,

ಬೆಳಗಿನ ಪ್ರದರ್ಶನ

೨—೩—೫೧ರಿಂದ ೩ ದಿನಗಳು ಮಾತ್ರ

ಸ್ಟೂಡಿಯೋ ಥಿಯೇಟರ್ಸ್‌ರವರ—

ಹಮ್ರಾಹಿ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎನ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೩—೧೯೫೧ನೇ ಸೋಮವಾರ [ಸಂಚಿಕೆ ೧೫೯

ವಿದ್ಯಾಭ್ಯಾಸ ಕ್ರಮವು ಮಾರ್ಪಡಬೇಕು

ರಾಜಕಾರಣಿ ಮತ್ತು ಉತ್ತಮ ದರ್ಜೆಯ ಪ್ರಜೆಗಳನ್ನು ತಯಾರ್ಮಾಡುವುದು ಉಪಾಧ್ಯಾಯರ ಕರ್ತವ್ಯ

ಮೈಸೂರು ಮಾ. ೪

ಈಗಿನ ವಿದ್ಯಾಭ್ಯಾಸ ಕ್ರಮವು ಸಂಪೂರ್ಣವಾಗಿ ಭಾರತಾದ್ಯಂತ ಕುಸಿದು ಬಿದ್ದಿದೆ. ಕೂಡಲೇ ಈಗಿನ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಬೇಕಾಗಿದೆ. ಯಾವ ರೀತಿ ಮಾರ್ಪಬೇಕೆಂಬ ಅಂಶವು ವಿಶ್ವವಿದ್ಯಾನಿಲಯ, ವಿದ್ಯಾ ಪ್ರವೀಣರು ಮತ್ತು ಸರ್ಕಾರಗಳ ಗಮನದಲ್ಲಿದೆ.

ಪ್ರವೀಣರು, ಉತ್ತಮ ದರ್ಜೆಯ ಪ್ರಜೆಗಳು ಮತ್ತು ರಾಜಕಾರಣಿಗಳನ್ನು ತಯಾರ್ಮಾಡುವುದು ಉಪಾಧ್ಯಾಯರ ಮುಖ್ಯ ಕರ್ತವ್ಯವಾಗಿರುತ್ತದೆ. ಅದು ಉಪಾಧ್ಯಾಯರ ಬುದ್ಧಿ ಸಾಮರ್ಥ್ಯದಿಂದ ನಡೆಯಬೇಕಾಗಿದೆ. ಎಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಸಂಜೆ ವಿಶ್ವವಿದ್ಯಾನಿಲಯದ ಟೀಚರ್ಸ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಉಪಾಧ್ಯಾಯವೃತ್ತಿಯು ಅತ್ಯಂತ ಶ್ರೇಷ್ಠವಾದುದು ಆದಾಗ್ಯೂ ಇಂದಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳು ಉಪಾಧ್ಯಾಯರ ದಕ್ಷತೆಯನ್ನು ಇನ್ನೂ ಉತ್ತಮಗೊಳಿಸಲು ಅವಕಾಶವಿದೆ ಮತ್ತು ಅವಶ್ಯಕವೂ ಇದೆ. ಆ ಕೆಲಸವು ಉಪಾಧ್ಯಾಯರುಗಳಿಗೆ ಶಿಕ್ಷಣ ಕೊಡುವ ಸಂಸ್ಥೆಗಳಿಂದ ಸಾಧ್ಯ ಎಂದು ಹೇಳಿದರು.

ಪ್ರಾರಂಭದಲ್ಲಿ ಮೈಸೂರಿನಲ್ಲಿ ವಿದ್ಯಾಪ್ರಗತಿಗಾಗಿ ವಿದ್ಯಾ ಇಲಾಖೆಯಲ್ಲೂ ವಿಶ್ವವಿದ್ಯಾನಿಲಯದಲ್ಲೂ ದಿವಂಗತ ಶ್ರೀ ಸಿ. ಆರ್. ರೆಡ್ಡಿಯವರು ಎಸಗಿದ ಸೇವೆಯನ್ನು ಪ್ರಶಂಸಿಸಿದರು.

ನೂತನ ಅಕೌಂಟೆಂಟ್ ಜನರಲ್‌ರವರು

ದಕ್ಷಿಣ ಭಾಗದ. ರೈಲ್ವೆಗಳ ಮುಖ್ಯ ಲೆಕ್ಕತನಿಖೆ ಅಧಿಕಾರಿಗಳಾಗಿ ನೇಮಕವಾಗಿರುವ ಶ್ರೀ ವಿ ಟಿ. ಶ್ರೀನಿವಾಸನ್‌ರವರ ಸ್ಥಾನಕ್ಕೆ ಬಂದಿರುವ ಸಮರೇಂದ್ರ ಗುಪ್ತರು ಸಂಸ್ಥಾನದ ಅಕೌಂಟೆಂಟ್ ಜನರಲ್‌ರಾಗಿ ಅಧಿಕಾರವನ್ನು ವಹಿಸಿಕೊಂಡರು ಅವರು ಬೆಂಗಳೂರಿನಲ್ಲಿ ಕಳೆದ ತಿಂಗಳಿಂದ ವಿಲೀನೀಕರಣದ ಸಂಬಂಧದ ವಿಶೇಷ ಅಧಿಕಾರಿಗಳಾಗಿದ್ದರು.

೬ ಸಾವಿರ ಟ್ರಾಕ್ಟರುಗಳು

ಹೆಚ್ಚು ಆಹಾರ ಬೆಳೆ ಯೋಜನೆಗೆ ಉಪಯೋಗವಾಗುವಂತೆ ಬ್ರಿಟಿಷ್ ಕಂಪೆನಿಯೊಂದು ೬ ಸಾವಿರ ಟ್ರಾಕ್ಟರುಗಳನ್ನು ಭಾರತಕ್ಕೆ ಸರಬರಾಜು ಮಾಡಲಿದೆಯೆಂದು ತಿಳಿಯಬರುತ್ತದೆ.

೧೫ ಲಕ್ಷ ರೂಪಾಯಿ ಅಪಹಾರ

ಬಿಕನೀರ್ ಡಿವಿಜನ್ನಿಗೆ ಸೇರಿದ ಪಿಂಹರ್ ಎಂಬ ಗ್ರಾಮವೊಂದರಲ್ಲಿ ಒಂಟೆಗಳ ಮೇಲೆ ಸವಾರಿ ಮಾಡಿಕೊಂಡು ಬಂದು ಶಸ್ತ್ರಸಜ್ಜಿತರಾದ ೨೫ ಮಂದಿ ದರೋಡೆಗಾರರು ೧೫ ಲಕ್ಷ ರೂಪಾಯಿಗಳ ಬೆಲೆ ಬಾಳುವ ಚಿನ್ನ ಮತ್ತು ಬೆಳ್ಳಿಯನ್ನು ಅಪಹರಿಸಿಕೊಂಡು ಹೋಗಿರುವರು. ೨ ಗಂಟೆ ಕಾಲ ಈ ಕಾರ್ಯಾಚರಣೆಯಲ್ಲಿ ಅವರು ತೊಡಗಿದ್ದರು.

ವಿದ್ಯಾರ್ಥಿಯ ದಸ್ತಗಿರಿ

ರಾಜಧಾನಿಯ 'ಇಂಟರ್' ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿ ಗೋಪಾಲ ಎಂಬುವವನು ಬೀದಿ ಲೈಟಿನ ಗಾಜಿನ ಗ್ಲೋಬುಗಳನ್ನು ಒಡೆಯುತ್ತಿದ್ದನೆಂದು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ರಚನಾತ್ಮಕ ಕಾರ್ಯಾಸಕ್ತರಾಗಿ

ಬೃಹತ್ ಸಮಸ್ಯೆಗಳನ್ನು ಹೆಚ್ಚು ಶ್ರಮದಿಂದ ಎದುರಿಸಬೇಕು

ನಾವಿಂದು ಉಳಿಯಬೇಕಾದರೆ, ಆರ್ಥಿಕ ವ್ಯವಸ್ಥೆಯನ್ನು ಸುಭದ್ರಗೊಳಿಸಲು ಯತ್ನಿಸಬೇಕು. ಹಳೆಯದು ಹೊಸ ತೆರಿಗೆಗಳ ಹೊರೆಯನ್ನು ಹೊರಬೇಕು. ಆಹಾರದ ವಿಷಯದಲ್ಲಿ ತ್ಯಾಗಸಿದ್ಧರಾಗಿರಬೇಕು ಎಂದು ಪ್ರಧಾನಿ ನೆಹರೂರವರು ಬೊಂಬಾಯಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ನುಡಿದಿರುವರು.

ಭಾರತೀಯರು ಉದಾಸೀನ ಮನೋಭಾವವನ್ನು ತೊರೆದು. ರಚನಾತ್ಮಕ ಕಾರ್ಯದಲ್ಲಿ ಉದ್ಯುಕ್ತರಾಗಬೇಕಾಗಿದೆ. ಬರೀ ಟೀಕೆಗಳಲ್ಲಿ ಪ್ರಗತಿಯಾಗುವುದಿಲ್ಲ. ಹಿಂದೆ ಎಷ್ಟೋ ಕಷ್ಟಗಳನ್ನು ಅನುಭವಿಸಿ ಈಗ ರಾಜ್ಯಭಾರದ ಹೊರೆಯನ್ನೆಲ್ಲಾ ಹೊತ್ತು ದೇಶದ ಪ್ರಗತಿ ಸಾಧಿಸುವ ಸಮಯದಲ್ಲಿ ನಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲಾ ಮರೆತು ದೇಶದ ಅಭಿವೃದ್ಧಿಗೆ ಎಲ್ಲರೂ ಶ್ರಮಿಸಬೇಕು, ಜನತೆ ಇನ್ನೂ ಹೆಚ್ಚು ಶ್ರಮವಹಿಸಿ ಆಹಾರ ಬೆಳೆಯಬೇಕು. ಜೀವನದ ಇತರ ಅವಶ್ಯಕತೆ ಉತ್ಪನ್ನ ಹೆಚ್ಚಿಸಬೇಕು. ಸಂತಾನಾಭಿವೃದ್ಧಿಯನ್ನು ಹತೋಟಿಗೆ ತರಬೇಕು. ಈಗಿನ ನಮ್ಮ ತ್ಯಾಗಗಳಿಂದ ಮುಂದಿನ ಜನಾಂಗಕ್ಕೆ ಒಳ್ಳೆಯದಾಗುವುದೆಂದು ತಿಳಿಸಿದರು,

ಸತ್ತವನ ಬಿಡುಗಡೆಗಾಗಿ ಅರ್ಜಿ

ಹೈದರಾಬಾದ್ ಕಮ್ಯೂನಿಸ್ಟ್ ನಟಿಸ್ಟ್ ಪಿ. ರಂಗಾಚಾರಿಯೆಂಬುವನನ್ನು ಬಂಧನದಿಂದ ಬಿಡುಗಡೆ ಮಾಡಬೇಕೆಂಬ ಅರ್ಜಿ ಸುಪ್ರೀಂ ಕೋರ್ಟಿನ ಮುಂದೆ ಬಂದಿತ್ತು. ಬಂಧನದಿಂದ ಬಿಡುಗಡೆ ಹೊಂದಲು ಆ ನಟಿಸ್ಟ್ ಬದುಕಿಯೇ ಇಲ್ಲವೆಂದು ಅಡ್ವೋಕೇಟ್ ಜನರಲ್‌ರು ಉತ್ತರವಿತ್ತರು.

ಮಿಲಿಟರಿ ಕಸ್ಟಡಿಯಿಂದ ತಪ್ಪಿಸಿಕೊಂಡು ಹೋಗುತ್ತಿರುವಾಗ ರಂಗಾಚಾರಿಯವರನ್ನು ೧೯೪೯ನೆಯ ಅಕ್ಟೋಬರಿನಲ್ಲಿ ಗುಂಡಿನಿಂದ ಹೊಡೆದು ಕೊಲ್ಲಲಾಯಿತೆಂದು ತಿಳಿಸಲಾಯಿತು.

ಪ್ರತಿಬಂಧಕ

ಡಾ|| ನಿಡಿಯಾ ಪಾರ್ಕರ್ಸ್ ಲೂಥಿ ಎಂಬ ಜೀವಶಾಸ್ತ್ರಜ್ಞೆ ಅಮೆರಿಕದೊಳಕ್ಕೆ ಬರಬಾರದೆಂದು ಆಜ್ಞೆ ಮಾಡಲಾಗಿದೆ. ಆಕೆಯನ್ನು ಇಸ್ರೇಲಿಗೆ ರವಾನಿಸಿ ಕೊಡಲಾಗುವುದು.

ವ್ರಣರೋಗ ಚಿಕಿತ್ಸೆಯಲ್ಲಿ ಸಂಶೋಧನೆ ನಡೆಸಲು ಆಕೆಗೆ ರಾಕ್‌ಫೆಲರ್ ಫೌಂಡೇಷನ್ ಗ್ರಾಂಟ್ ದೊರಕಿತ್ತು. ಆದರೆ ಆಕೆ ಕಮ್ಯೂನಿಸ್ಟ್ ಪಕ್ಷದ ಸದಸ್ಯೆಯಾಗಿದ್ದಳೆಂದು ಆಕೆ ಅಮೆರಿಕಕ್ಕೆ ಬರಬಾರದೆಂದು ಆಜ್ಞೆ ಮಾಡಲಾಗಿದೆ.

ಆಡಳಿತ ಪರಿಶೀಲನೆ

ಕೇಂದ್ರ ಮತ್ತು ಸಂಸ್ಥಾನಗಳ ಆಡಳಿತ ವ್ಯವಸ್ಥೆಯನ್ನು ಪರಿಶೀಲಿಸಿ ಪ್ಲಾನಿಂಗ್ ಕಮಿಷನ್ನಿಗೆ ಒಂದು ವರದಿಯನ್ನು ಒಪ್ಪಿಸಬೇಕೆಂದು ಬೊಂಬಾಯಿನಲ್ಲಿ ಪ್ರಥಮ ದರ್ಜೆಯ ಐ. ಸಿ. ಎಸ್. ಆಫೀಸರಾಗಿದ್ದ ಶ್ರೀ ಗೋರ್‍ವಾಲಾರವರನ್ನು ಕೇಳಲಾಗಿದೆ.

ಸಾವಧಾನವಾಗಿ ಯೋಚಿಸಲು ಗ್ರಾಮಕ್ಕೆ ಪ್ರಯಾಣ

ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಅರ್ನೆಸ್ಟ್ ಬೆವಿನ್‌ರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಲಿರುವುದರಿಂದ ಅವರ ಸ್ಥಾನಕ್ಕೆ ಬೇರೆಯವರನ್ನು ನೇಮಿಸಬೇಕೆಂಬುದು ಪ್ರಧಾನಿ ಮಿ|| ಅಟ್ಲಿಯವರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆ ಬಗ್ಗೆ ಸಾವಧಾನವಾಗಿ ಆಲೋಚಿಸಲು ಮಿ|| ಅಟ್ಲಿಯವರು ಚೆಕರ್ಸ್‌ನಲ್ಲಿರುವ ತಮ್ಮ ಗ್ರಾಮಭವನಕ್ಕೆ ಲಂಡನ್ನಿಂದ ಪ್ರಯಾಣ ಮಾಡಿರುವರು.

ಮನೆ ಬಾಡಿಗೆಗೆ ಕೊಡಲು ೧೪೦೦೦ ರೂ. ಲಂಚ

ಹೊಸದಾಗಿ ಕಟ್ಟಿದ ತನ್ನ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಡಲು ವೀರೇಂದ್ರ ವಸಂತರಾವ್ ಪಿಟಲೆ ಎಂಬ ಬೊಂಬಾಯಿನ ಜಮೀನ್ದಾರನು ೧೪೦೦೦ ರೂ. ನಗದಿಯನ್ನು ಪಡೆದನೆಂಬ ಅಪಾದನೆ ಮೇಲೆ ದಸ್ತಗಿರಿಯಾಗಿದ್ದಾನೆ.

† ಮೈಸೂರು ಶ್ರೀರಾಂಪೇಟೆ ಸಲ್ಲಪ್ಪನ ರಾಣಾ ಬಳಿ ಅಂಭಾಭವನದ ಮುಂಭಾಗದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ನಾಳೆ ಸಂಜೆ ೭—೩೦ ಗಂಟೆಗೆ ಹರಿಕಥಾ ಕೇಸರಿ ವಿದ್ವಾನ್ ಶ್ರೀ ಹರಿಸರ್ವೋತ್ತಮದಾಸರಿಂದ "ಕಿರಾತಾರ್ಜುನ" ಎಂಬ ಹರಿಕಥೆಯನ್ನು ಭಕ್ತ ಮಂಡಲಿಯವರು ಏರ್ಪಡಿಸುವರು.

ರೇಷನ್ ಆಫೀಸಿಗೆ ಮುತ್ತಿಗೆ

ಸುಮಾರು ೪೦೦ ಜನ ಒಡ್ಡರ ಗುಂಪಿಗೆ ಸೇರಿದ ಗಂಡಸರು ಹೆಂಗಸರು, ತಮ್ಮಲ್ಲಿದ್ದ ಸುಳ್ಳು ರೇಷನ್ ಕಾರ್ಡುಗಳನ್ನು ಪತ್ತೆಹಚ್ಚಿ, ತೆಗೆದುಕೊಂಡು ಹೋದುದನ್ನು ಪ್ರತಿಭಟಿಸಿ, ಪೂನಾದಲ್ಲಿ ಡಕನ್ ಜಮಖಾನದಲ್ಲಿರುವ ರೇಷನ್ ಆಫೀಸಿಗೆ ಮುತ್ತಿಕಿಟಕಿ ಬಾಗಿಲುಗಳು ಮರದ ಸಾಮಾನು ಮುಂತಾದವನ್ನೆಲ್ಲಾ ಒಡೆಯಲಾರಂಭಿಸಿದರು. ಕೂಡಲೇ ಪೋಲೀಸ್‌ನವರು ಬರಲು ಗಂಡಸರೆಲ್ಲಾ ಓಡಿಹೋದರು. ೪೨ ಸ್ತ್ರೀಯರನ್ನು ಬಂಧಿಸಲಾಗಿದೆ.

ಪಂಡಿತ ಸಮ್ಮೇಳನ

ಅಖಿಲ ಭಾರತ ನಾನಾ ಭಾಷಾ ಪಂಡಿತೋತ್ತಮರ ಸಮ್ಮೇಳನವು ಇದೇ ೧೫ ಮತ್ತು ೧೬ ನೇ ತಾ|| ದೆಹಲಿಯಲ್ಲಿ ಸೇರಲಿದೆ.

ಪೆನಿಸಿಲಿನ್ ಕಾರ್ಖಾನೆ

ಪೂನಾದಲ್ಲಿ ಪೆನಿಸಿಲಿನ್ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲು ಭಾರತ ಸರ್ಕಾರ ನಿರ್ಧರಿಸಿದೆ.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

❋

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು

ಪ್ರಭಾ ❋ ೯-೩-೧೯೫೧ರಿಂದ [ದಿನವಹಿ
ಅನೋಘ ಪ್ರಾರಂಭ ೩ ಆಟಗಳು]

ಪಯನೀರ್ ಪಿಕ್ಚರ್ಸ್‌ರವರ

ಈಸ್ಟ್ ಇಂಡಿಯಾ ಕಂಪೆನಿಯ ಕಾಲದಲ್ಲಿ ನಡೆದ ಚರಿತ್ರಾರ್ಹವಾದ ಕದ. ಬಂಗಾಳದ ಪ್ರಖ್ಯಾತ ಬಂಕಿಮ್ ಚಂದ್ರರವರ ಅಮೂಲ್ಯ ಕಲಾಕೃತಿ.

ಚಂದ್ರಶೇಖರ್ (ಹಿಂದಿ)

ಪಾತ್ರ—† ಅಶೋಕ್‌ಕುಮಾರ್ †† ಕನ್ನನ್‌ಬಾಲ † ಭಾರತಿದೇವಿ
ಚಿತ್ರಸಂಗೀತ—† ಕಮಲ್‌ದಾಸ್‌ಗುಪ್ತ. ದಿಗ್ದರ್ಶಕ— ದೇವಕಿಬೋಸ್

ಅಧಿಕಾರ ಸ್ವೀಕಾರ

ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಮುಖ್ಯ ಮಂತ್ರಿಗಳಾಗಿ ಶ್ರೀ ಸಿ. ಕೇಶವನ್‌ರವರು ಅಲ್ಲಿನ ರಾಜಪ್ರಮುಖರ ಎದುರಿನಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದರು. ಅವರು ೨ ದಿನಗಳೊಳಗಾಗಿ ತಮ್ಮ ಸಹೋದ್ಯೋಗಿಗಳ ಹೆಸರುಗಳನ್ನು ಪ್ರಕಟಿಸಲಿರುವರು. ಕೆಲವು ದಿನಗಳ ಹಿಂದೆ ಅವರಿಗೆ ನರಗಳ ದೌರ್ಬಲ್ಯವುಂಟಾಗಿ ಸುಸ್ತಾಗಿದ್ದ ಕಾರಣ ಅವರು ಕನ್ಯಾಕುಮಾರಿಗೆ ಹೋಗಿ ಅಲ್ಲಿ ವಿಶ್ರಾಂತಿ ಪಡೆದು ಹಿಂದಿರುಗಿ ಮೊನ್ನೆ ಬಂದರು.

ಹೊಸ ಮಂತ್ರಿ ಮಂಡಲದಲ್ಲಿ ೫ ಜನ ಮಂತ್ರಿಗಳಿರುವರು. ಹಳೇ ಮಂತ್ರಿ ಮಂಡಲದಲ್ಲಿದ್ದ ಶ್ರೀ ಪಿ. ಗೋವಿಂದ ಮನನ್ನರು ಈ ಹೊಸ ಮಂತ್ರಿ ಮಂಡಲವನ್ನು ಸೇರಬಹುದು.

ಕಾಂಗ್ರೆಸ್ ಪಕ್ಷ ಮತ್ತು ಡೆಮೋಕ್ರಾಟಿಕ್ ಪಕ್ಷಗಳ ಮಾತುಕತೆಗಳಲ್ಲಿ ಒಪ್ಪಂದವಾದಂತೆ ಕಾಣಬಂದಿಲ್ಲ.

ಸತ್ಕಾರ

ಕೃಷ್ಣರಾಜನಗರ ಮಾ. ೨

ಈ ಮಧ್ಯಾಹ್ನ ಲೋಕಸೇವಾ ನಿರತ ಶ್ರೀ ಬಳೆ ಸಿದ್ದಲಿಂಗಶೆಟ್ಟರು ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಬಾಲಕಿಯರಿಂದ ಪ್ರಾರ್ಥನೆ ಮತ್ತು ವಿ|| ವಿಷಕಂಠರಾಯರಿಂದ ಲಾವಣಿಯಾದನಂತರ ಶ್ರೀ ಕೆ ಸಿ ರೆಡ್ಡಿ, ಶ್ರೀ ದಾಸಪ್ಪ, ಶ್ರೀ ಕೆ. ಟಿ. ಭಾಷ್ಯಂ, ಶ್ರೀ ಟಿ. ಮರಿಯಪ್ಪ, ಜ|| ಮಹಮದ್ ಅಹಮದ್ ಮತ್ತು ವಿದ್ವಾನ್ ಬಿ. ಶಿವಮೂರ್ತಿಶಾಸ್ತ್ರಿಗಳಿಂದ ಬಂದಿದ್ದ ಸಂದೇಶಗಳನ್ನು ಓದಲಾಯಿತು. ಅನಂತರ ಶ್ರೀ ಸಿದ್ದಲಿಂಗಶೆಟ್ಟರ ಪರವಾಗಿ ಅವರ ಮಕ್ಕಳು ಬಿನ್ನವತ್ತಳೆಯನ್ನು ಓದಿ ಮಿರ್ಜಾರವರನ್ನು ಹೊಗಳಿ, ಅವರ ಸೇವೆಯನ್ನು ಪ್ರಶಂಸಿಸಿದರು.

ಶ್ರೀಗಳಾದ ಎಂ. ರಾಮಸ್ವಾಮಿ ಮತ್ತು ತಿಪ್ಪೂರು ಸುಬ್ಬರಾಯರುಗಳು ಮಾತನಾಡಿ ಮಿರ್ಜಾರವರನ್ನು ಹೊಗಳಿದರು.

ಸರ್ ಮಿರ್ಜಾರವರು ಮಾತನಾಡುತ್ತಾ ಕೃಷ್ಣರಾಜನಗರವು ಇನ್ನೂ ಅಭಿವೃದ್ಧಿಗೆ ಬರಬೇಕೆಂದೂ ಈಗ ಬೃಂದಾವನವು ಮೊದಲಿನಷ್ಟು ಚೆನ್ನಾಗಿಲ್ಲವೆಂದೂ ಅದನ್ನು ಉತ್ತಮಗೊಳಿಸಬೇಕೆಂದೂ ನುಡಿದರು. ತಾವು ಇಂಡೋನೇಷ್ಯಕ್ಕೆ ವಿಶ್ವಸಂಸ್ಥೆಯ ಪರವಾಗಿ ಹೋಗುತ್ತಿರುವುದಾಗಿಯೂ ತಿಳಿಸಿದರು. ಇಂಡೋನೇಷ್ಯವು ಬಹಳ ಸುಂದರವಾಗಿದೆಯೆಂದೂ ಅದನ್ನು ನೋಡಲು ಮೈಸೂರಿನವರು ಬಂದರೆ ಎಲ್ಲಾ ಸೌಲಭ್ಯಗಳನ್ನೂ ಕಲ್ಪಿಸಿಕೊಡಲಾಗುವುದೆಂದೂ ಹೇಳಿದರು.

ಶ್ರೀಮನ್ಮಹಾರಾಜರಿಗಾಗಿ ಅತ್ಯಂತ ಭಾರಿ ಮೋಟಾರು

ಮೈಸೂರು ಶ್ರೀಮನ್ ಮಹಾರಾಜರ ಉಪಯೋಗಕ್ಕಾಗಿ ಇಂಗ್ಲೆಂಡಿನಲ್ಲಿ ವಿಶ್ವದಲ್ಲೆಲ್ಲಾ ಅತ್ಯಂತ ದೊಡ್ಡದಾದ ಮತ್ತು ಸುಂದರವಾದ ಮೋಟಾರು ಕಾರೊಂದನ್ನು ತಯಾರಿಸಲಾಗಿದೆ ಅದರ ಚಲನ ಚಿತ್ರವನ್ನು ತೆಗೆದು ಹಲವು ಕಡೆಗಳಲ್ಲಿ ಪ್ರದರ್ಶಿಸಲಾಗುತ್ತಿದೆ.

ರಾಜೀನಾಮೆ ಕೊಡಲು| ಬೆವಿನ್‌ರ ನಿರ್ಧಾರ

ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಅರ್ನೆಸ್ಟ್ ಬೆವಿನ್‌ರವರ ತಮ್ಮ ಹುದ್ದೆಗೆ ರಾಜೀನಾಮೆ ಕೊಡಲು ನಿರ್ಧರಿಸಿದ್ದಾರೆ ಎಂಬುದಾಗಿ ನಂಬಲರ್ಹವಾದ ವೃತ್ತದಿಂದ ತಿಳಿದುಬಂದಿದೆ.

ಮಿ|| ಬೆವಿನ್‌ರವರು ಅನೇಕ ದಿನಗಳಿಂದ ಅಸ್ವಸ್ಥರಾಗಿದ್ದು, ಅಧಿಕಾರದಲ್ಲಿರಲು ದೈಹಿಕವಾಗಿ ಅಶಕ್ತರಾಗಿದ್ದಾರೆಂದು ಟೀಕೆ ಈಚೆಗೆ ಹೆಚ್ಚಾಗುತ್ತಿರುವುದರಿಂದಲೇ ಅವರು ರಾಜೀನಾಮೆ ಕೊಡಲು ಸಿದ್ಧರಿರುವುದಾಗಿ ಹೇಳಲಾಗಿದೆ. ಬೆವಿನ್‌ರವರಿಗೆ ಮುಂದಿನ ವರ್ಷಕ್ಕೆ ೭೦ ವರ್ಷ ವಯಸ್ಸಾಗುವುದು. ಅವರು ಪೋರ್ಟ್‌ಫೋಲಿಯೋ ಇಲ್ಲದೆ ಮಂತ್ರಿಗಳಾಗಿ ಮಂತ್ರಿಮಂಡಲದಲ್ಲಿ ಇರುವ ಸಂಭವ ಇದೆ.

ಮೊನ್ನೆ ರಾತ್ರಿ ಮಿ|| ಅಟ್ಲಿಯವರೊಡನೆ ಖಾಸಗಿಯಾಗಿ ಮಾತುಕತೆ ನಡೆಸಿದನಂತರ ಬೆವಿನ್‌ರವರು ಈ ನಿರ್ಧಾರ ಕೈಗೊಂಡುದಾಗಿ ತಿಳಿಸಲಾಗಿದೆ.

ರಣಜಿತ್
೬—೩—೫೧ರಿಂದ
ಅನೋಘ ಪ್ರಾರಂಭ
ಪ್ರತಿದಿನ 3 ಆಟಗಳು
(ಮಹಾಶಿವರಾತ್ರಿ ಪ್ರಯುಕ್ತ ನಾಳೆ 4 ಆಟಗಳು)

ಬಾಬುಲ್
ಪಾತ್ರ- ನರ್ಗೀಸ್, ದಿಲೀಪ್‌ಕುಮಾರ್.

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ, ಮೈಸೂರು. ಮುದ್ರಕರು.ಬಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮   ದಿನ ಪತ್ರಿಕೆ   ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧]   ೭—೩—೧೯೫೧ನೇ ಬುಧವಾರ   [ಸಂಚಿಕೆ ೧೫೨

ಆಹಾರ ಪದಾರ್ಥಗಳ ಬೆಲೆ ಮೊದಲಿನಂತೆಯೇ ಇರಲಿ

ಸರ್ಕಾರಕ್ಕೆ ಪೌರಸಭೆಯ ಒತ್ತಾಯ

ಆಹಾರ ಪದಾರ್ಥಗಳನ್ನು ಕಂಟ್ರೋಲ್ ಮುಕ್ತ ಮಾಡಿ, ಬೆಲೆ ಏರಿಸಿರುವುದು ಜನರಿಗೆ ವಿಶೇಷ ತೊಂದರೆಯನ್ನುಂಟು ಮಾಡಿರುವುದರಿಂದ ಕಂಟ್ರೋಲ್ ಮಾಡಿರುವುದನ್ನು ನಿಲ್ಲಿಸಿ ಹಿಂದಿನ ದರದಂತೆಯೇ ಆಹಾರ ಸಾಮಾನು ದೊರೆಯುವಂತೆ ಕೂಡಲೇ ಸರ್ಕಾರದವರು ಮಾಡಬೇಕೆಂದು ಒತ್ತಾಯ ಮಾಡುವ ನಿರ್ಣಯವನ್ನು ಮೈಸೂರು ನಗರ ಪೌರಸಭೆಯವರು ನಿನ್ನೆ ನಡೆದ ವಿಶೇಷ ಅಧಿವೇಶನದಲ್ಲಿ ಒಮ್ಮತದಿಂದ ತೀರ್ಮಾನಿಸಿದರು.

ನಿರ್ಣಯವನ್ನು ಮಂಡಿಸುತ್ತಾ ಶ್ರೀ ಎ. ವೆಂಕಟೇಶಯ್ಯನವರು ಜನತಾ ಸರ್ಕಾರ ಸ್ಥಾಪನೆಯಾಗುವುದಕ್ಕೆ ಮುಂಚೆ ನಮ್ಮ ನಾಯಕರು ಜನರಲ್ಲಿ ವಿಶೇಷವಾಗಿ ನಂಬಿಕೆಯನ್ನು ಹುಟ್ಟಿಸಿ ಸರ್ಕಾರದ ಆಡಳಿತವನ್ನು ವಹಿಸಿಕೊಂಡರು. ಅವರಿತ್ತ ಭರವಸೆಗಳಂತೆ ಈಗ ನಡೆಯುತ್ತಿಲ್ಲ. ಜನರಿಗೆ ಮುಖ್ಯವಾಗಿ ಬೇಕಾದುದು ಅನ್ನ, ಬಟ್ಟೆ, ಇವುಗಳನ್ನು ಎಷ್ಟೇ ಬೆಲೆಯಾದರೂ ಸರ್ಕಾರಕ್ಕೆ ಎಷ್ಟು ನಷ್ಟವಾದರೂ ಒದಗಿಸಬೇಕಾದುದು ಸರ್ಕಾರದ ಕರ್ತವ್ಯ. ದೇಶದ ಪ್ರಗತಿಗೆಂದು ಅನೇಕ ಬಾಬುಗಳಲ್ಲಿ ಹಣವನ್ನು ವ್ಯಯ ಮಾಡುತ್ತಲಿರುವುದನ್ನೆಲ್ಲಾ ನಿಲ್ಲಿಸಿ ದೇಶದ ಜನರಿಗೆಲ್ಲಾ ಆಹಾರವನ್ನು ಒದಗಿಸುವಂತೆ ಸರ್ಕಾರ ಮಾಡಬೇಕಾಗಿದೆ. ಸರ್ಕಾರವು ಯಾವ ಸಮಜಾಯಿಸಿದುದನ್ನು ಕೊಟ್ಟಾಗ್ಯೂ ಹಸಿವಿನ ದಾಹವನ್ನು ಅಡಗಿಸಲಸಾಧ್ಯ ಎಂದು ಹೇಳಿದರು.

ಶ್ರೀ ಬಿ. ಜಿ. ದಾಸ್‌ರವರು ನಿರ್ಣಯವನ್ನು ಸಮರ್ಥಿಸುತ್ತಾ ಆಹಾರ ಅಭಾವದಿಂದ ಖಾಯಿಲೆಗಳು ಹೆಚ್ಚು ತ್ವಲಿವೆಯೆಂದೂ ತಿಳಿಸಿದರು.

ಶ್ರೀ ಪಿ. ಸೀತಾರಾಮಯ್ಯನವರೂ ನಿರ್ಣಯವನ್ನು ಸಮರ್ಥಿಸುತ್ತಾ ಸರ್ಕಾರವು ಆಹಾರ ಪರಿಸ್ಥಿತಿಗೆ ವಿಶೇಷ ಗಮನವನ್ನು ಕೊಟ್ಟು ಶ್ರಮವಹಿಸುತ್ತಲಿದೆ. ಜನರಲ್ಲೂ ಅನೀತಿಯುಂಟಾಗಿರುವುದರಿಂದ ಅಲ್ಲದೆ ದೈವೀಕವಾದ ಅನಾನುಕೂಲಗಳಿಂದ ಈ ಅಭಾವವುಂಟಾಗಿದೆಯೆಂದು ಹೇಳಿದರು.

ಜನಾಬ್ ಅಹಮದ್ ಖಾನ್‌ರವರು ಮಾತನಾಡುತ್ತಾ ಖಾಸಗಿ ಮಿಲ್ಲುಗಳಿಗೆ ಭತ್ತವನ್ನು ಮಿಲ್ಲು ಮಾಡಿಸುವುದನ್ನು ನಿಲ್ಲಿಸಿ ಸರ್ಕಾರದವರೇ ಏರ್ಪಾಡು ಮಾಡಿದಲ್ಲಿ ಅಕ್ಕಿಯನ್ನು ರೂಗೆ ೩ ಸೇರು ಕೊಡಲು ಸಾಧ್ಯವೆಂದು ಹೇಳಿದರು.

ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್‌ರವರು ಮಾತನಾಡುತ್ತಾ ಸರ್ಕಾರದವರು ಸರ್ವ ಪ್ರಯತ್ನ ಮಾಡುತ್ತಲಿದ್ದಾರೆ. ಅಧಿಕ ಆಹಾರ ಬೆಳೆಯ ಯೋಜನೆ ಧಾನ್ಯ ಸಂಗ್ರಹಣೆ ಕಾರ್ಯಗಳು ಜಯಪ್ರದವಾಗಿಲ್ಲ. ಜನರೂ ಪ್ರಾಮಾಣಿಕತೆಯಿಂದ ಸರ್ಕಾರದೊಡನೆ ಸಹಕರಿಸಿದಲ್ಲಿ ಈ ಆಹಾರ ಯುದ್ಧವನ್ನು ಎದುರಿಸಬಹುದು. ಇಲ್ಲಿರುವಂತೆ ಆಹಾರ ಪರಿಸ್ಥಿತಿಯು ಬೇರೆ ಯಾವ ದೇಶದಲ್ಲಾದರೂ ಇದ್ದಿದ್ದರೆ ಜನರು ದಂಗೆ ಏಳುತ್ತಲಿದ್ದರು. ಸಾಲವಾದರೂ ಚಿಂತೆಯಿಲ್ಲ. ಇತರ ಅನೇಕ ಬಾಬುಗಳಿಗೆ ವ್ಯಯ ಮಾಡುತ್ತಲಿರುವುದನ್ನು ನಿಲ್ಲಿಸಿ ನಷ್ಟವನ್ನು ಗಮನಿಸದೆ ಆಹಾರ ಸಮಸ್ಯೆ ಬಗೆಹರಿಸಲು ಸರ್ಕಾರದವರು ಪ್ರಥಮ ಸ್ಥಾನ ಕೊಡಬೇಕೆಂದು ಹೇಳಿದರು.

ಶ್ರೀಗಳಾದ ಮುದ್ದಯ್ಯ, ರಾಜಯ್ಯ ಡಾ|| ಡೇವಿಡ್, ರಾಮಸ್ವಾಮಿಶೆಟ್ಟಿ, ಕೆ. ಪುಟ್ಟಸ್ವಾಮಿ ಮುಂತಾದವರೆಲ್ಲರೂ ಮಾತನಾಡಿದರು.

ಶ್ರೀ ಪುಟ್ಟಸ್ವಾಮಿಯವರು ತಮ್ಮ ಭಾಷಣದಲ್ಲಿ ಭಾರತವು ಸತಧ್ಯಕ್ಷದೇಶ, ವ್ಯವಸಾಯ ದೇಶವೆಂದು ಪ್ರಸಿದ್ಧವಾಗಿದ್ದರೂ ಆಹಾರಕ್ಕಾಗಿ ಇತರರನ್ನು ಬೇಡುವ ಸ್ಥಿತಿ ಒದಗಿರುವುದು ನಾಚಿಗೆಗೇಡು, ಆಹಾರಭಾವಕ್ಕೆ ರಾಜಕೀಯ ಬಣ್ಣ ಕೊಟ್ಟ ಪಕ್ಷವನ್ನು ಆಲೋಚಿಸಿದರೆ ಪ್ರಯೋಜನವಿಲ್ಲ. ಪ್ರಜಾಸೌಖ್ಯ ಏರುತ್ತಲಿದೆ, ವ್ಯವಸಾಯ ಪೆಟ್ಟಿಗೆ, ಬಾವಿಗಳು ಹಾಳುಬಿದ್ದಿವೆ. ಇವೆಲ್ಲವನ್ನು ಗಮನಿಸಬೇಕು. ವ್ಯವಸಾಯದಲ್ಲೇ ತೊಡಗಿರುವ ಹಳ್ಳಿಗರಿಗೂ ಕಷ್ಟವಾಗಿದೆ. ಪಟ್ಟಣಗಳ ವಿಷಯದಲ್ಲಿ ಸರ್ಕಾರ ಪಕ್ಷಪಾತ ಮಾಡುತ್ತಲಿದೆ. ಅರಹೊಟ್ಟೆಗೂ ಆಹಾರವಿಲ್ಲದೆ ಹಳ್ಳಿಗಾಡಿನಲ್ಲಿ ಅನೇಕರು ತೊಂದರೆಪಡುತ್ತಲಿರುವರು. ಪ್ರಜಾಭಿಪ್ರಾಯ. ಸಹಕಾರ ಸರಿಯಾಗಿದ್ದಿದ್ದರೆ ಈ ತೊಂದರೆಯಾಗುತ್ತಲಿರಲಿಲ್ಲವೆಂದು ಹೇಳಿದರು.

ಅನಂತರ ಮುಖ್ಯ ರೇಷನ್ ಅಧಿಕಾರಿಗಳು, ಪೌರಸಭಾ ಕಮಿಷನರಾದ ಶ್ರೀ ನರಸಿಂಹ ಮೂರ್ತಿಯವರು ಮಾತನಾಡುತ್ತಾ ಸರ್ಕಾರವು ಸಂತೋಷದಿಂದ, ಸಮಾಧಾನದಿಂದ ಈ ಪದಾರ್ಥ ಕಂಟ್ರೋಲ್ ಮಾಡಿಲ್ಲ. ವಿಧಿಯಿಲ್ಲದೆ ಮಾಡಬೇಕಾಗಿ ಬಂದಿದ್ದರಿಂದ ತಾತ್ಕಾಲಿಕವಾಗಿ ಮಾಡಿದೆ. ಆದಾಗ್ಯೂ, ೧. ೨. ತರಗತಿಯವರಿಗೆ ಪದಾರ್ಥ ಕಡಮೆಯಾಗಿಲ್ಲ. ೩. ತರಗತಿಯವರಿಗೆ ರಾಗಿ, ಜೋಳ ಪದಾರ್ಥ ಹೆಚ್ಚಿಸಲಾಗಿದೆ. ಕಡಮೆಯಾಗಿರುವುದು ಗೋಧಿ ಪದಾರ್ಥ ಮಾತ್ರ. ಎ. ತರಗತಿಯವರಿಗೆ ೫ ಔನ್ಸ್ ಕಡಮೆಮಾಡಿದ್ದಾಗ್ಯೂ ಆಗಸ್ಟ್ ಮಾಹೆಗೆ ಮುಂಚೆ ಏನು ಕೊಡುತ್ತಲಿದ್ದೆವೋ ಅದೇ ಪ್ರಮಾಣ ಕೊಡಲಾಗುತ್ತಲಿದೆ. ಬೆಳೆಯ ವಿಚಾರದಲ್ಲಿ, ಸಾಮಾನುಗಳ ಮೇಲೆ ಎಷ್ಟು ಹಣವು ವ್ಯಯವಾಗುತ್ತಲಿದೆಯೋ ಅದನ್ನು ಗಮನಿಸಿ ಬೆಲೆ ಹೆಚ್ಚಿಸಲಾಗಿದೆ. ಖರ್ಚು ಕಡಮೆಯಾದಲ್ಲಿ ಬೆಲೆಯನ್ನು ಇಳಿಸಲಾಗುವುದೆಂದು ಹೇಳಿದರು.

ಅನಂತರ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ

ಮುಖ್ಯ ಮಂತ್ರಿಗಳು ರಾಜೀನಾಮೆಯಿಯದಿದ್ದರೆ

ಶಾಸನ ಸಭಾ ಸದಸ್ಯರ ರಾಜೀನಾಮೆ

ಕೊಚ್ಚಿನ್ ತಿರುವಾಂಕೂರು ಸಂಸ್ಥಾನದಲ್ಲಿ ನೂತನವಾಗಿ ಮುಖ್ಯ ಮಂತ್ರಿ ಪದವಿಯನ್ನು ಸ್ವೀಕರಿಸಿ ಹೊಸ ಮಂತ್ರಿ ಮಂಡಲವನ್ನು ರಚಿಸಿರುವ ಶ್ರೀ ಕೇಶವನ್‌ರವರ ನಾಯಕತ್ವದಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಕೊಚ್ಚಿನ್ ಶಾಸನ ಸಭಾ ಸದಸ್ಯರೆಲ್ಲರೂ ಒಂದು ಸಭೆ ಸೇರಿ ಒಮ್ಮತದಿಂದ ನಿರ್ಧರಿಸಿ ಶ್ರೀ ಕೇಶವನ್‌ರವರು ಕೂಡಲೇ ರಾಜೀನಾಮೆ ಕೊಡಬೇಕೆಂದು ತಿಳಿಸಿರುವರು. ಶನಿವಾರದೊಳಗಾಗಿ ಅವರು ಉತ್ತರ ಕೊಡದಿದ್ದಲ್ಲಿ ಎಲ್ಲಾ ಶಾಸನ ಸಭಾ ಸದಸ್ಯರೂ ರಾಜೀನಾಮೆಯೀಯಬೇಕೆಂದು ನಿರ್ಧರಿಸಿರುವರು.

ಈಗ ತಾನೇ ರಾಜೀನಾಮೆಯಿತ್ತ ಹಿಂದಿನ ಮಂತ್ರಿ ಶ್ರೀ ನಾರಾಯಣ ಮೆನನ್ ಮತ್ತು ಸಚಿವ ಮಿ|| ಜಾನ್ ರು ಶ್ರೀ ಕೇಶವನ್‌ರವರ ಮಂತ್ರಿ ಮಂಡಲವನ್ನು ಸೇರಿ ಮಂತ್ರಿಗಳಾಗಿ ನಿನ್ನೆ ಅಧಿಕಾರ ಸ್ವೀಕರಿಸಿದರು.

ಪಾಕಿಸ್ಥಾನದ ಮನೋ

ಕಾಶ್ಮೀರ ಪ್ರಶ್ನೆ ವಿಷಯ ಆಂಗ್ಲೋ ಅಮೆರಿಕನ್ ನಿರ್ಣಯದ ಮೇಲೆ ಪಾಕಿಸ್ಥಾನವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಕಾಶ್ಮೀರ ಪ್ರಶ್ನೆಯಲ್ಲಿ ಇತ್ಯರ್ಥಮಾಡಿಕೊಳ್ಳಲು ಸಂಬಂಧಪಟ್ಟ ಪಕ್ಷಗಳಿಗೆ ಬಿಡಬೇಕು. ಸರ್ ಡಿಕ್ಸನ್ನರು ಮಾಡಿರುವ ಸಲಹೆಯನ್ನು ತಾವು ಒಪ್ಪುವುದಿಲ್ಲ. ಕಾಶ್ಮೀರದಲ್ಲಿರುವ ಎಲ್ಲಾ ಪಕ್ಷಗಳ ಸೈನ್ಯಗಳು ವಿಸರ್ಜನೆಯಾಗಬೇಕು. ವಿಶ್ವಸಂಸ್ಥೆಯ ಪ್ರತಿನಿಧಿಯ ಸಂಪೂರ್ಣ ಅಧಿಕಾರದೊಡನೆ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬೇಕು. ಸರ್ಕಾರದ ಆಡಳಿತವನ್ನು ಅವರೇ ವಹಿಸಿಕೊಳ್ಳಬೇಕು. ರಾಜ್ಯಾಂಗ ಶಾಸನಸಭೆಯನ್ನು ರೂಪಗೊಳಿಸಬೇಕೆಂದಿರುವುದನ್ನು ತಡೆಗಟ್ಟಬೇಕೆಂದು ಹೇಳಿದೆ.

ಜಯಪ್ರಕಾಶರ ಪ್ರವಾಸ

ಬೆಂಗಳೂರು ಮಾ. ೭

ಸೋಷಿಯಲಿಸ್ಟ್ ಪಾರ್ಟಿ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣ್‌ರವರು ಏಪ್ರಿಲ್ ನಲ್ಲಿ ೨೦ ದಿವಸಗಳ ಕಾಲ ಸಂಸ್ಥಾನಾದ್ಯಂತ ಪ್ರವಾಸ ಕೈಕೊಳ್ಳಲಿರುವರೆಂದು ಗೊತ್ತಾಗಿದೆ.

ರಾಷ್ಟ್ರಾಧ್ಯಕ್ಷರು ಮೈಸೂರಿಗೆ

ಪೌರಸಭೆಯ ಅಭೂತ ಸ್ವಾಗತ ಮತ್ತು ಭಿನ್ನವತ್ತಳೆಗೆ ಏರ್ಪಾಡು

ಮೈಸೂರು ಮಾ. ೬

ಮೈಸೂರು ನಗರ ಪೌರಸಭೆಯು ನಿನ್ನೆ ಸಂಜೆ ಶ್ರೀ ಟಿ. ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ಸೇರಿತ್ತು. ಮುಂದಿನ ಮಾಹೆ ಮೊದಲನೇ ವಾರದಲ್ಲಿ ಇಂಡಿಯನ್ ಯೂನಿಯನ್ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರವರು ಮೈಸೂರು ನಗರಕ್ಕೆ ಭೇಟಿ ಈಯುವುದರಿಂದ, ಸ್ಥಾನಕ್ಕೆ ತಕ್ಕಂತೆ ವಿಶೇಷ ಏರ್ಪಾಡುಗಳನ್ನು ಮಾಡಿ ಅಭೂತಸ್ವಾಗತವನ್ನು ನೀಡಿ ಭಿನ್ನವತ್ತಳೆಯನ್ನು ಅರ್ಪಿಸಬೇಕೆಂಬ ವಿಷಯ ಚರ್ಚೆಯಾಗಿ ಸರ್ವಾನುಮತದಿಂದ ಇದಕ್ಕೆ ಸಮ್ಮತಿ ದೊರೆಯಿತು.

ಈ ಸಂದರ್ಭ ವಿಶೇಷ ಏರ್ಪಾಡುಗಳನ್ನು ಮಾಡಬೇಕಾಗಿರುವುದರಿಂದ ರಸ್ತೆ ರಿಪೇರಿ ಮುಂತಾದ ಕಾರ್ಯಗಳಿಗೆ ೨೦,೦೦೦ ಗ್ರ್ಯಾಂಟನ್ನು ಸರ್ಕಾರವು ಕೊಡುವಂತೆ ಕೇಳಲು ತೀರ್ಮಾನವಾಯಿತು. ಇದಲ್ಲದೆ ಇನ್ನೂ ೫,೦೦೦ ಸಾವಿರ ರೂಪಾಯಿಗಳವರೆಗೆ ವೆಚ್ಚವು ನಡೆಯಬೇಕಾಗುವುದರಿಂದ ಆಹ್ವಾನಪತ್ರ ಮುದ್ರಣ, ರಜತಕರಂಡ ಮುಂತಾದುವಕ್ಕೆ ಪೌರನಿಧಿಯಿಂದ ೨,೦೦೦ ರೂ. ಸ್ಪೆಷಲ್ ಗ್ರ್ಯಾಂಟು ಮಂಜೂರಾಯಿತು. ಇತರ ಸಣ್ಣ-ಪುಟ್ಟ ಕೆಲಸಗಳ ವೆಚ್ಚವನ್ನೆಲ್ಲಾ ಈಗಾಗಲೇ ಬಜೆಟ್ಟಿನಲ್ಲಿ ಒದಗಿಸಿರುವ ಹಣದಲ್ಲಿಯೇ ಪೂರ್ಣಮಾಡಬಹುದೆಂದು ತೀರ್ಮಾನವಾಯಿತು.

ಈ ಕಾರ್ಯಗಳನ್ನ ನಡೆಸಲು ಅಧ್ಯಕ್ಷರು, ಉಪಾಧ್ಯಕ್ಷರು, ಕಮಿಷನರು ಮತ್ತು ಶ್ರೀಗಳಾದ ಎಸ್. ಲಿಂಗಣ್ಣ, ಟಿ. ವೆಂಕಟರಮಣಯ್ಯ, ಸಿ. ಸೀತಾರಾಮಯ್ಯ ಮತ್ತು ಎ. ವೆಂಕಟೇಶಯ್ಯನವರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು.

ಐ. ಎನ್. ಟಿ. ಯು. ಸಿ. ಸಮಿತಿ ಸಭೆ

ಸರ್ಕಾರದ ಅಧೀನದಲ್ಲಿರುವ ಕೆಲವು ಕೈಗಾರಿಕೆಗಳನ್ನು ಖಾಸಗಿಯವರ ಆಡಳಿತಕ್ಕೆ ಒಪ್ಪಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುತ್ತಿದೆಯೆಂದು ಸಂಸ್ಥಾನದ ಮುಖ್ಯಮಂತ್ರಿಗಳು ಇತ್ತೀಚೆಗೆ ವಾಣಿಜ್ಯ ಸಂಘದಾಶ್ರಯದಲ್ಲಿ ಭಾಷಣ ಮಾಡುತ್ತಾ ವ್ಯಕ್ತಪಡಿಸಿದ ಅಭಿಪ್ರಾಯಕ್ಕಾಗಿ ಕಳವಳವ ವ್ಯಕ್ತಪಡಿಸಿ ಆ ರೀತಿ ಮಾಡುವುದು ರಾಷ್ಟ್ರೀಕರಣದ ನೀತಿಗೆ ತಿಲಾಂಜಲಿಯಿತ್ತಂತಾಗುವುದೆಂದೂ ಅಂತಹ ನೀತಿಯ ಬಿಟ್ಟು ಬಿಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಸಂಸ್ಥಾನದ ಐ. ಎನ್. ಟಿ. ಯು. ಸಿ. ಪ್ರಾಂತೀಯ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯು ಮೊನ್ನೆ ದಿನ ಅಂಗೀಕರಿಸಿತು.

ಸಮಿತಿಯು ಅಧ್ಯಕ್ಷರಾದ ಶ್ರೀ ಕೇಶವಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ಮೊನ್ನೆ ಮಧ್ಯಾಹ್ನ ಸೇರಿತು.

ಕಾರ್ಯದರ್ಶಿಗಳು ಸಿದ್ಧಗೊಳಿಸಿದ್ದ ಅಂಗರಚನೆಯನ್ನೂ ಕೆಲವು ಬದಲಾವಣೆಗಳೊಡನೆ ಸಭೆ ಅಂಗೀಕರಿಸಿತು.

ಅಲ್ಲದೆ ಸಾಮಗ್ರಿಗಳ ಬೆಲೆ ಮಿತಿಮೀರಿ ಹೆಚ್ಚುತ್ತಿರುವುದರಿಂದ ಈಗ ಕೊಡುತ್ತಿರುವ ತುಟ್ಟಿ ಭತ್ಯ ಅದರಲ್ಲೂ ಸರ್ಕಾರಿ ಕೈಗಾರಿಕೆಗಳ ಕಾರ್ಮಿಕರಿಗೆ ಕೊಡುತ್ತಿರುವ ತುಟ್ಟಿ ಭತ್ಯವು ತೀರಾ ಕಡಿಮೆಯಾಗಿರುವುದರಿಂದ ಜೀವನ ಅಂಕಿ ಅಂಶಗಳಿಗನುಸಾರವಾಗಿ ತುಟ್ಟಿ ಭತ್ಯವನ್ನು ಹೆಚ್ಚಿಸಿಕೊಡಬೇಕೆಂದು ಸರ್ಕಾರವನ್ನು ಹಾಗೆಯೇ ಖಾಸಗೀ ಮಾಲೀಕರುಗಳನ್ನು ಒತ್ತಾಯಪಡಿಸುವ, ಹತ್ತಿ ಗಿರಣಿಗಳ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿರ್ಧರಿಸಲು ನೇಮಕವಾಗಿದ್ದ ಸಮಿತಿಯು ಮೂರು ತಿಂಗಳೊಳಗಾಗಿ ತನ್ನ ಕೆಲಸವನ್ನು ಮುಗಿಸಬೇಕೆಂದು ಸರ್ಕಾರಿ ಆರ್ಡರಿನಲ್ಲಿದ್ದರೂ ಇನ್ನೂ ಆಗದಿರುವುದಕ್ಕಾಗಿ ಸಭೆ ವಿಷಾದ ವ್ಯಕ್ತಪಡಿಸಿ, ಕೂಡಲೇ ವರದಿ ಒಪ್ಪಿಸಬೇಕೆಂದು ಒತ್ತಾಯಪಡಿಸುವ, ಇಂಡಿಯಾ ಸರ್ಕಾರದವರು ಕಾರ್ಮಿಕರಿಗೆ ಕೊಡಲು ಗೊತ್ತುಮಾಡಿದ್ದ ಪ್ರಮಾಣದಷ್ಟೇ ರೇಷನನ್ನು ಮೈಸೂರಿನಲ್ಲಿ ಕೊಡಬೇಕೆಂದು ಕೇಳುವ ಮತ್ತು ಕಾರ್ಮಿಕ ವ್ಯವಹಾರಗಳನ್ನು ಆದಷ್ಟುಬೇಗನೆ ಇತ್ಯರ್ಥಪಡಿಸಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆನ್ನುವ ನಿರ್ಣಯಗಳು ಅಂಗೀಕೃತವಾದವು.

ಎಲುಬಿನ ಗಣಿ

ಅಹಮದಾಬಾದಿಗೆ ೬೦ ಮೈಲಿ ದೂರದಲ್ಲಿರುವ ಪಾಟಂ ಬಳಿ ಎಲುಬಿನ ಗಣಿಯೊಂದು ಸಿಕ್ಕಿದೆ. ಆನೆ, ಕುದುರೆ, ಒಂಟೆಗಳ ಎಲುಬುಗಳೆಲ್ಲಾ ಈ ಗಣಿಯಲ್ಲಿವೆ. ಪ್ರಾಯಶಃ ಈ ನಗರದ ಬಳಿ ಹಿಂದೆ ನಡೆದ ಯುದ್ಧದ ಅವಶೇಷಗಳು ಇವಿರಬಹುದೆಂದು ಊಹಿಸಲಾಗಿದೆ.

ಸ್ನಾನಕ್ಕೆ ಹೋಗಿ ಪ್ರಾಣ ಕಳೆದುಕೊಂಡರು

ಸಬರ್ಮತಿ ನದಿಯಲ್ಲಿ ಏಕಾದಶಿ ಸ್ನಾನಕ್ಕೆ ಹೋದ ಇಬ್ಬರು ಯುವಕರು ಮುಳುಗಿಹೋಗಿ ಪ್ರಾಣ ಬಿಟ್ಟರು. ಅವರ ದೇಹಗಳನ್ನು ಅನಂತರ ತೆಗೆಯಲಾಯಿತು.

ಹೈದರಾಬಾದ್ ಮುಖ್ಯ ಮಂತ್ರಿ ಸ್ವಿಜರ್ಲೆಂಡಿಗೆ

ಹೈದರಾಬಾದ್ ಮುಖ್ಯ ಮಂತ್ರಿ ಶ್ರೀ ಎಂ. ಕೆ. ವೆಲ್ಲೋಡಿಯವರು ನಿನ್ನೆ ಬೊಂಬಾಯಿ ಮಾರ್ಗವಾಗಿ ಸ್ವಿಜರ್ಲೆಂಡಿನ ಬರ್ನಿಗೆ ಪ್ರಯಾಣ ಬೆಳೆಸಿದರು. ಅವರು ೧೫ ದಿವಸಗಳ ಕಾಲ ಬರ್ನ್‌ನಲ್ಲಿರುತ್ತಾರೆ. ಅವರ ಈ ಭೇಟಿ ಖಾಸಗಿಯಾದುದೆಂದು ಹೇಳಲಾಗಿದೆ.

ವಿಷವಾಯು ಪ್ರಯೋಗ?

ಉತ್ತರ ಕೊರಿಯಾದಲ್ಲಿ ಚೀಣ ಮತ್ತು ಕೊರಿಯನ್ ಸೈನ್ಯಗಳ ಮೇಲೆ ಅಮೇರಿಕನ್ ಸೈನ್ಯಗಳು ವಿಷವಾಯು ಪ್ರಯೋಗ ನಡೆಸುತ್ತಿವೆಯೆಂದು ಪೆಕಿಂಗ್ ರೇಡಿಯೋ ಆಪಾದಿಸಿದೆ.

ಫೆಬ್ರವರಿ ೨೭ರಲ್ಲಿ ಸಿಯೂಲಿಗೆ ೨೦ ಮೈಲಿ ಆಗ್ನೇಯದಲ್ಲಿ ಅಮೆರಿಕನ್ ವಿಮಾನಗಳು ಹಾಕಿದ ಬಾಂಬುಗಳು ವಿಷವಾಯುವಿನಿಂದ ತುಂಬಲ್ಪಟ್ಟಿದ್ದುವೆಂದೂ, ಅಂತರರಾಷ್ಟ್ರೀಯ ಕಾನೂನನ್ನೇ ಉಲ್ಲಂಘಿಸಿ ಅಮೆರಿಕನ್ನರು ವಿಷವಾಯು ಪ್ರಯೋಗಿಸುತ್ತಿದ್ದಾರೆಂದೂ ಅದು ಹೇಳಿದೆ.

ಆಂಗ್ಲೋ—ಅಮೆರಿಕನ್ ನಿರ್ಣಯ ಬದಲಾವಣೆಯಾಗಬಹುದು

ಕಾಶ್ಮೀರ ವಿವಾದ ಪರಿಹಾರಕ್ಕಾಗಿ ಬ್ರಿಟನ್ ಮತ್ತು ಅಮೆರಿಕಾಗಳು ಸೂಚಿಸಿರುವ ನಿರ್ಣಯದ ಬಗ್ಗೆ ಮಂಗಳವಾರ ಪಾಕಿಸ್ತಾನ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು. ಅನಂತರ ನಿರ್ಣಯದಲ್ಲಿ ಕೆಲವು ಬದಲಾವಣೆಗಳಾಗಬಹುದೆಂದು ಹೇಳಲಾಗಿದೆ.

ಜೀವವಿಮಾ ಮೋಸ

ಜೀವಂತರಾಗಿರುವವರು ಸತ್ತು ಹೋಗಿರುವರೆಂದೂ, ಅನಾಮಧೇಯ ಹೆಸರುಗಳಲ್ಲಿಯೂ ೪೦,೦೦೦ ರೂ. ಗಳವರೆಗೆ ಒಂದು ಜೀವವಿಮಾ ಕಂಪನಿಯಿಂದ ಪಡೆದರೆಂದು ಸೂರತ್ತಿನಲ್ಲಿ ೩ ಜನರನ್ನು ದಸ್ತಗಿರಿ ಮಾಡಲಾಗಿದೆ. ಒಬ್ಬ ಸಾಧುವಿನ ಹೆಸರಿನಲ್ಲಿ ೧೦,೦೦೦ ರೂ. ಜೀವವಿಮಾ ಆಗಿ, ಆತನು ಈಗ ಬದುಕಿರುವಲ್ಲಿ ಸತ್ತುಹೋದನೆಂದು ಆ ಹಣವನ್ನು ಪಡೆಯಲಾಗಿದೆ.

ಮೈಸೂರು ಸೌತಿನಲ್ಲಿರುವ ಬಾಬಿನ್ ಫ್ಯಾಕ್ಟರಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ದಿನ ಸಂಜೆ ಸಂಘದ ಅಧ್ಯಕ್ಷರಾದ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಸಂಘವನ್ನು ಐ. ಎನ್. ಟಿ. ಯು. ಸಿ. ಗೆ ಅಫಿಲಿಯೇಟ್ ಮಾಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ವಿಶೇಷ ಆಹ್ವಾನದ ಮೇಲೆ ಹಾಜರಿದ್ದು ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಸಂಘದ ಅಧಿಕಾರ ವರ್ಗ ಹಾಗೂ ಸಮಿತಿ ಸದಸ್ಯರು ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಿ ಮಾಲೀಕ ಕಾರ್ಮಿಕರ ಮಧ್ಯೆ ಸದಾ ಸೌಹಾರ್ದ ಕುದುರುವಂತೆ ಮಾಡಬೇಕೆಂದರು.

ರಣಜಿತ್

೬—೩—೫೧ರಿಂದ

ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಬಾಬುಲ್

ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಬೆಳಗಿನ ಪ್ರದರ್ಶನ ೯—೩—೫೧ ರಿಂದ ಮೂರು ದಿನಗಳು ಮಾತ್ರ

*** ಆಗ್ ***

ಪಾತ್ರ—ರಾಜಕಪೂರ್, ನರ್ಗಿಸ್.

ಸಂಪಾದಕರು ಮತ್ತು ಪ್ರಕಾಶಕರು—ಬಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೩—೧೯೫೧ನೇ ಗುರುವಾರ [ಸಂಚಿಕ ೧೫೩

ಪರ್ಷಿಯ ಪ್ರಧಾನಿಯ ಕೊಲೆ

ಪರ್ಷಿಯ ಪ್ರಧಾನಿ ಮಿ|| ಅಲೀರಾಜ್ ಮಾರವರು ಟೆಹರಾನಿನಲ್ಲಿ ನಿನ್ನೆ ಪ್ರಾರ್ಥನೆ ನಡೆಸಿಕೊಂಡು ಹಿಂತಿರುಗುತ್ತಿದ್ದಾಗ ಮಸೀದಿಯಲ್ಲಿಯೇ ಯಾರೋ ದುರಾತ್ಮರು ಅವರ ಮೇಲೆ ೩ ಬಾರಿ ಗುಂಡು ಹಾರಿಸಿದರು. ಕತ್ತು, ಬೆನ್ನು ತಲೆಗೆ ಏಟು ಬಿದ್ದು ಕೂಡಲೇ ಪ್ರಧಾನಿಗಳು ಮೃತರಾದರು. ಕೊಲೆಗಡುಗರನ್ನು ಕೂಡಲೇ ದಸ್ತಗಿರಿ ಮಾಡಲಾಯಿತು. ಅವರು ಯಾರೆಂಬುದನ್ನು ಇನ್ನೂ ಗುಪ್ತವಾಗಿಡಲಾಗಿದೆ. ಮಿ|| ಅಲೀ ರಾಜ್‌ಮಾರವರು ೮ ತಿಂಗಳಿಂದ ಪ್ರಧಾನಿಯಾಗಿದ್ದರು. ಪರ್ಷಿಯ ಷಾರವರು ಒಂದು ಘೋಷಣೆಯನ್ನು ಹೊರಡಿಸಿ ದೇಶದ ನ್ಯಾಯ ಶಿಸ್ತು ಮತ್ತು ಶಾಂತಿಯನ್ನು ಎಲ್ಲರೂ ಕಾಪಾಡಬೇಕೆಂದು ಮನವಿಮಾಡಿಕೊಂಡಿರುವರು. ಹಿರಿಯ ರಾಜಕಾರಣಿ ಮತ್ತು ಶಾಸನ ಸಭೆಗಳ ಜರೂರು ಸಭೆಯನ್ನು, ಮುಂದಿನ ರಾಜ್ಯಾಡಳಿತ ವಿಷಯದಲ್ಲಿ ಸಲಹೆಯನ್ನು ಕೇಳಲು, ಷಾರವರು ಕರೆದಿರುವರು.

ನಿನ್ನೆ ಮಧ್ಯಾಹ್ನ ಈ ಕೊಲೆಯ ವರ್ತಮಾನವು ದೆಹಲಿಯಲ್ಲಿ ಕ್ರೀಡಾ ಸ್ಪರ್ಧೆಗಳು ನಡೆಯುತ್ತಲಿರುವ ಸ್ಟೇಡಿಯಂನಲ್ಲಿ ತಿಳಿದೊಡನೆಯೇ ಭಾರತ ಪ್ರಧಾನಿ ಮತ್ತು ವಿದೇಶೀಯ ರಾಯಭಾರಿಗಳೆಲ್ಲರೂ ೨ ನಿಮಿಷ ಮೌನವನ್ನಾಚರಿಸಿ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ದೆಹಲಿಯಲ್ಲೆಲ್ಲಾ ರಾಷ್ಟ್ರಧ್ವಜವನ್ನು ಅರ್ಧಮಟ್ಟಕ್ಕಿಳಿಸಲಾಯಿತು. ಪ್ರಧಾನಿ ನೆಹರೂರವರು ತಮ್ಮ ಮತ್ತು ಭಾರತೀಯರ ಸಂತಾಪವನ್ನು ಹಂಗಾಮಿ ಪ್ರಧಾನಿಗಳಿಗೆ ತಿಳಿಸಿರುವರು.

ಕೇಂದ್ರ ಹೆಚ್ಚು ನೆರವು ಈಯದಿದ್ದರೆ ಸರ್ಕಾರ ರಾಜೀನಾಮೆ ಕೊಡಲಿ

ಭಾರತ ಸರ್ಕಾರವು ಹೆಚ್ಚು ಆಹಾರವನ್ನು ಮದ್ರಾಸು ಸರ್ಕಾರಕ್ಕೆ ಕೊಡದಿದ್ದರೆ ಸರ್ಕಾರ ಮತ್ತು ಶಾಸನ ಸಭೆಗಳು ರಾಜೀನಾಮೆಕೊಡಬೇಕೆಂದು ಮದ್ರಾಸಿನ ಮಾಜಿ ಮುಖ್ಯ ಮಂತ್ರಿ ಶ್ರೀ ರಾಮಸ್ವಾಮಿ ರೆಡ್ಡಿಯವರು ಶಾಸನ ಸಭೆಯಲ್ಲಿ ತಿಳಿಸಿದರೆಂದು ಹೇಳಲಾಗಿದೆ.

ಮದರಾಸ್ ಪ್ರಾಂತ್ಯದ ಸುಮಾರು ೮ ಸಾವಿರ ಚದರ ಮೈಲಿ ಪ್ರದೇಶದಲ್ಲಿ ಕ್ಷಾಮ ತಲೆದೋರಿದೆ. ಏಪ್ರಿಲ್ ೧೫ರ ನಂತರ ಹಸಿವಿನಿಂದ ಸಾಯುವವರ ಸಂಖ್ಯೆ ಅಸಂಖ್ಯಾತವಾಗುವುದೆಂದು ಶ್ರೀ ರೆಡ್ಡಿಯವರು ಸರ್ಕಾರಕ್ಕೆ ಎಚ್ಚರಿಕೆಯಿತ್ತರು.

ಸುಮಾರು ೩೫ ಲಕ್ಷ ಟನ್ನುಗಳಷ್ಟು ಆಹಾರ ಕೊರತೆಯಿರುವುದೆಂದೂ, ಕೇವಲ ೧೦ ಲಕ್ಷ ಟನ್ನುಗಳಷ್ಟು ಕೊರತೆಯೆಂದು ಸರ್ಕಾರ ತಿಳಿಸಿರುವುದು ಬಹಳ ಕಮ್ಮಿ ಎಂದಾಚೆಂದೂ ಮಾಜಿ ಪ್ರಧಾನಿಗಳು ಅಭಿಪ್ರಾಯಪಟ್ಟರು.

ಅನಾವೃಷ್ಟಿಯಿಂದ ತಮ್ಮ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಪರಿಸ್ಥಿತಿ ಉತ್ಕಟವಾಗಿದೆ ಎಂದರು. ಸರ್ಕಾರದ ನೀತಿಯ ವಿರುದ್ಧವಾಗಿ ಅಧಿಕಾರಿಗಳು ಧಾನ್ಯ ಶೇಖರಿಸುತ್ತಾ, ರೈತರಿಗೆ ಹಿಂಸೆ ಕೊಡುತ್ತಿದ್ದಾರೆಂದು ಶ್ರೀ ರೆಡ್ಡಿ ಆಪಾದಿಸಿದರು.

"ಈ ನ್ಯೂನತೆಗಳನ್ನು ಸರಿಪಡಿಸದಿದ್ದಲ್ಲಿ ಸತ್ಯಾಗ್ರಹ ಹೂಡಿ, ಜನತೆಗೆ ಸೇವೆ ಸಲ್ಲಿಸುವುದಕ್ಕೆ ಉಪಾಯಪಡಿಸುತ್ತೇನೆ" ಎಂದು ಶ್ರೀ ರಾಮಸ್ವಾಮಿ ರೆಡ್ಡಿಯವರು ಘೋಷಿಸಿದರು.

ಕಳೆದ ೫ ವರ್ಷಗಳಲ್ಲಿ ಮುಂಗಾರು ಮಳೆ ಒಂದೇ ಸಮನಾಗಿ ಆಗದಿದ್ದುದರಿಂದ ರೈತರಿಗೆ ೨೦೦ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದರು.

ಚೈನಾ ಪಡೆಯ ವಿಸ್ತರಣೆ

ಕೊರಿಯಾ ಮಧ್ಯ ಭಾಗದಲ್ಲಿ ಚೈನಾವು ತನ್ನ ಪಡೆಯನ್ನು ವಿಸ್ತರಿಸಿಕೊಂಡಿದೆ. ೧೦—೧೨ ಸೈನ್ಯ ಪಡೆಗಳನ್ನು ಹೆಚ್ಚಿಸಿಕೊಂಡು ಪ್ರಬಲ ಧಾಳಿಗೆ ಸಿದ್ಧವಾಗುತ್ತಿರುವೆಂದು ಜ|| ಮೆಕಾರ್ಥರ್ ಹೇಳಿರುವರು.

ಸೆನ್ಸಸ್ ಕಮಿಷನರ ಆಗಮನ

ಬೆಂಗಳೂರು ಮಾ. ೭

ಭಾರತ ಸೆನ್ಸಸ್ ಕಮಿಷನರ್ ಶ್ರೀ ಆರ್. ಎ. ಗೋಪಾಲಸ್ವಾಮಿಯವರು ಬೆಂಗಳೂರಿಗೆ ಆಗಮಿಸಿರುವರು. ೧೧ನೇ ತಾರೀಖು ಜಿಲ್ಲಾ ಸೆನ್ಸಸ್ ಅಧಿಕಾರಿಗಳನ್ನು ಭೇಟಿ ಮಾಡುವರು.

ಭಾರತದಲ್ಲಿ ನ್ಯೂಸ್‌ಪ್ರಿಂಟ್

ಭಾರತದಲ್ಲಿ ಈಗಿರುವ ನ್ಯೂಸ್‌ಪ್ರಿಂಟ್ ಕಾಗದದ ದಾಸ್ತಾನೆಲ್ಲಾ ಮುಂದಿನ ಜುಲೈ ನಾಪಣೆ ವೇಳೆಗೆ ಮುಗಿದು ಹೋಗುವುದು. ಭಾರತದಲ್ಲಿರುವ ಕಾಗದ ಕಾರ್ಖಾನೆಗಳು ಪತ್ರಿಕೆಗಳಿಗೆ ಉಪಯೋಗಿಸಬಹುದಾದ ಕಾಗದವನ್ನು ತಯಾರ್ಮಾಡದಿದ್ದಲ್ಲಿ ಭಾರತದಲ್ಲಿ ಒಂದು ವೃತ್ತ ಪತ್ರಿಕೆಯನ್ನೂ ಪ್ರಕಟಿಸಲಾಗುವುದಿಲ್ಲ ಎಂದು ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಕಲ್ಕತ್ತಾದಲ್ಲಿ ಮಾತನಾಡುತ್ತಾ ಹೇಳಿರುವರು.

ರಾಷ್ಟ್ರಾಧ್ಯಕ್ಷರ ಭೇಟಿ ನಿಂತಿತು

ಭಾರತ ರಾಷ್ಟ್ರಾಧ್ಯಕ್ಷರು ಇಂದು ಮದರಾಸಿಗೆ ಬರಬೇಕಾಗಿತ್ತು. ಅನಾರೋಗ್ಯ ನಿಮಿತ್ತ ಪ್ರವಾಸ ರದ್ದಾಗಿದೆ.

ಅಸ್ಸಾಮಿನಲ್ಲಿ ಭೂಕಂಪ

ಎರಡು ನಿಮಿಷಗಳ ಕಾಲ ಭೂಕಂಪವು ನಿನ್ನೆ ಅಸ್ಸಾಮಿನ ಜೋರ್‌ಹತ್‌ನಲ್ಲಿ ಸಂಭವಿಸಿತು. ಕಳೆದ ಆಗಸ್ಟ್ ೧೫ರಲ್ಲಿ ಸಂಭವಿಸಿದ ಭೂಕಂಪದಷ್ಟೇ ದೊಡ್ಡದಾಗಿತ್ತೆಂದು ಹೇಳಲಾಗಿದೆ.

ಮೈಸೂರುಪತ್ರಿಕೆ ಸಂಪಾದಕರ ಮೇಲೆ ಕಂಟೆಮ್ಪ್ಟ್ ಮೊಕದ್ದಮೆ

ಕೆಲವು ತಿಂಗಳ ಹಿಂದೆ ಮೈಸೂರು ಪತ್ರಿಕೆಯು ಮೈಸೂರು ಹೈಕೋರ್ಟಿನಿಂದ ಮುಖ್ಯ ನ್ಯಾಯಾಧೀಶರ ನಿರ್ಗಮನವೇ? ಎಂಬ ಶೀರ್ಷಿಕೆಯ ಲೇಖನವನ್ನು ಪ್ರಕಟಿಸಿದುದರ ಮೇಲೆ, ಸಂಪಾದಕ ಶ್ರೀ ಟಿ. ನಾರಾಯಣರವರ ಮೇಲೆ ಕಂಟೆಮ್ಪ್ಟ್-ಆಫ್-ಕೋರ್ಟ್ ಶಾಸನದೀತ್ಯಾ ಹೈಕೋರ್ಟು ಅರ್ಜಿಯನ್ನು ಸ್ವೀಕರಿಸಿ, ಶ್ರೀ ಟಿ. ನಾರಾಯಣರವರಿಗೆ ಸಮನ್ಸ್ ಕಳುಹಿಸಿದೆ.

ವಯಸ್ಸು ಮೀರಿದ ನ್ಯಾಯಾಧೀಶರುಗಳು

ಬ' ಸಂಸ್ಥಾನಗಳ ಹೈಕೋರ್ಟುಗಳಲ್ಲಿ ಸರ್ವಿಸ್‌ನ ದೃಷ್ಟಿಯಿಂದ ವಯಸ್ಸು ಮೀರಿರುವ ನ್ಯಾಯಾಧೀಶರು ಐದು ಮಂದಿಯಿದ್ದಾರೆಂದು ಗೃಹ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು, ಪ್ರೊ|| ಎಸ್. ಎನ್. ಮಿಶ್ರರ ಪ್ರಶ್ನೆಗುತ್ತರವಾಗಿ ನಿನ್ನೆ ದಿನ ಪಾರ್ಲಿಮೆಂಟಿನಲ್ಲಿ ತಿಳಿಸಿದರು. ರಾಜ್ಯಾಂಗವು ಜಾರಿಗೆ ಬರುವ ಹೊತ್ತಿಗಾಗಲೇ ಇವರಲ್ಲಿ ಹೆಚ್ಚು ಮಂದಿ ಸರ್ವಿಸ್‌ನಲ್ಲಿದ್ದರೆಂದೂ ಇವರನ್ನು ಕೆಲಸದಿಂದ ತೆಗೆಯುವುದು ನ್ಯಾಯಪರಿಪಾಲನೆಯ ದೃಷ್ಟಿಯಿಂದ ವಿರುದ್ಧವೆಂದು ಭಾವಿಸಲ್ಪಟ್ಟಿದೆಯೆಂದೂ ಅವರು ಹೇಳಿದರು. ಪ್ರಾಂತೀಯ ಹೈಕೋರ್ಟುಗಳಲ್ಲಿ ಅವರ ಅನುಭವದಿಂದ ಅವರನ್ನು ಆ ಹುದ್ದೆಗಳಲ್ಲಿ ನೇಮಕ ಮಾಡಿರುವುದಾಗಿಯೂ, ಇವರ ಪೈಕಿ ಸೌರಾಷ್ಟ್ರದ ಜಸ್ಟಿಸ್ ದವೇತಿಯರು ಎಲ್ಲರಿಗಿಂತ ಹಿರಿಯರೆಂದೂ ಶ್ರೀ ರಾಜಗೋಪಾಲಾಚಾರಿಯವರು ತಿಳಿಸಿದರು.

ಸ್ಪೆಷಲ್ ರಿಕ್ರೂಟ್‌ಮೆಂಟ್ ಬೋರ್ಡ್ ಕೆಲಸಾರಂಭ

ಬೆಂಗಳೂರು ಮಾ. ೭

ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಮತ್ತು ಇಂಡಿಯನ್ ಪೋಲೀಸ್ ಸರ್ವಿಸ್ಸಿಗೆ ಮೈಸೂರಿನ ಅಧಿಕಾರಿಗಳನ್ನು ಆರಿಸುವ ಕಾರ್ಯವನ್ನು ನಗರದಲ್ಲಾಗಲಿರುವ ಸ್ಪೆಷಲ್ ರಿಕ್ರೂಟ್‌ಮೆಂಟ್ ಬೋರ್ಡ್ ಇಂದು ಆರಂಭಿಸಿತು. ಒಟ್ಟು ಐ. ಎ. ಎಸ್. ಸಂಬಂಧವಾಗಿ ೧೧೪ ಅಧಿಕಾರಿಗಳಿಗೂ, ಐ. ಪಿ. ಎಸ್. ಸಂಬಂಧವಾಗಿ ೩೮ ಅಧಿಕಾರಿಗಳಿಗೂ, ಬೋರ್ಡ್ ಭೇಟಿಕೊಟ್ಟು ಪರೀಕ್ಷೆ ನಡೆಸುವುದು.

ಅಧಿಕಾರಿಗಳ ಆಯ್ಕೆಯಲ್ಲಿ ಬೋರ್ಡಿಗೆ ಸಲಹೆ ಮಾಡಲು ಮೈಸೂರು ಸರ್ಕಾರದ ಪ್ರತಿನಿಧಿಗಳಾಗಿ ಸಚಿವ ಶ್ರೀ ಹೆಚ್. ಸಿದ್ದಯ್ಯ ಮತ್ತು ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಬೋರ್ಡಿನಲ್ಲಿದ್ದಾರೆ. ಐ. ಪಿ. ಎಸ್. ಆಯ್ಕೆ ಸಂಬಂಧದಲ್ಲಿ ಸಚಿವ ಶ್ರೀ ಟಿ. ಮರಿಯಪ್ಪನವರು ಬೋರ್ಡಿನಲ್ಲಿದ್ದು ಸಲಹೆ ಕೊಡುವರು.

ಇಂದು ೧೧ ಅಧಿಕಾರಿಗಳಿಗೆ ಬೋರ್ಡ್ ಭೇಟಿ ಕೊಟ್ಟಿತು.

ಮಂತ್ರಿಮಂಡಲ ವಿಸರ್ಜನೆಯೇ?

ಆಡಳಿತಗಾರರನ್ನು ನೇಮಿಸಬೇಕೆಂಬ ಅಭಿಪ್ರಾಯ

ತಿರುವಾಂಕೂರು—ಕೊಚ್ಚಿನ್ ಪ್ರಜೆಗಳ ಹಿತದೃಷ್ಟಿಯಿಂದ ಈಗ ಹೊಸದಾಗಿ ರಚಿತವಾಗಿರುವ ಮಂತ್ರಿಮಂಡಲವನ್ನು ವಿಸರ್ಜಿಸಿ, ಕೇಂದ್ರ ಸರ್ಕಾರವು ಒಬ್ಬ ಆಡಳಿತಗಾರರನ್ನು ನೇಮಿಸುವುದು ಉತ್ತಮವೆಂಬ ಅಭಿಪ್ರಾಯಕ್ಕೆ ವಿಶೇಷ ಮನ್ನಣೆಯು ಸಂಸ್ಥಾನದ ಪ್ರಜೆಗಳಲ್ಲಿ ದೊರೆಯುತ್ತಲಿದೆಯೆಂದು ತಿಳಿಯಬರುತ್ತದೆ.

ಇದು ಆಗದಿದ್ದಲ್ಲಿ ಕೊಚ್ಚಿನ್ ಪ್ರಾಂತ್ಯವನ್ನು ಮದರಾಸು ಸಂಸ್ಥಾನದೊಡನೆ ಐಕ್ಯಮಾಡುವುದು ಮೇಲೆಂದು ಜನರು ಅಭಿಪ್ರಾಯಪಡುತ್ತಲಿರುವರು.

ಶ್ರೀ ಟಿ. ಕೆ. ನಾರಾಯಣ ಪಿಳ್ಳೆಯವರ ಮಂತ್ರಿಮಂಡಲವು ರಾಜೀನಾಮೆಯಿತ್ತಮೇಲೆ ಶ್ರೀ ಕೇಶವನ್‌ರವರ ಮುಖಂಡತ್ವದಲ್ಲಿ ನೂತನವಾಗಿ ರಚಿಸಲಾಗಿರುವ ಮಂತ್ರಿಮಂಡಲದ ಮೇಲೆ, ಕೊಚ್ಚಿನ್ನಿನ ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಕೊಚ್ಚಿನ್ನಿನ ಶಾಸನಸಭಾ ಸದಸ್ಯರು ಶ್ರೀ ಕೇಶವನ್‌ರವರ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸಿರುವುದು ಸಂಸ್ಥಾನಾದ್ಯಂತ ಅತೃಪ್ತಿಮಾಡಿದೆಯೆಂಬುದಕ್ಕೆ ಸಾಕ್ಷಿಭೂತವಾಗಿದೆ.

ಶ್ರೀ ಕೆ. ಸಿ. ರೆಡ್ಡಿಯವರು ದೆಹಲಿಗೆ

ಬೆಂಗಳೂರು ಮಾ. ೭

ಮೈಸೂರು ಮಂತ್ರಿಮಂಡಲದ ವಿಷಯವಾಗಿ ಚರ್ಚೆ ನಡೆಸಲು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮ ತಾಂಡನ್ನರ ಕರೆಯ ಮೇಲೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ವಿಮಾನ ಮೂಲಕ ಪ್ರಯಾಣ ಮಾಡಿದರು. ೯ನೇ ತಾ|| ಮೈಸೂರಿಗೆ ಹಿಂತಿರುಗಲಿರುವರು. ಈ ಸಂಬಂಧದಲ್ಲಿ ಶ್ರೀ ಸಿದ್ದಲಿಂಗಯ್ಯನವರು ಈಗಾಗಲೇ ದೆಹಲಿಯಲ್ಲಿರುವರು.

ಖಾನ್ ಸೋದರರ ಬಿಡುಗಡೆ ಬಗ್ಗೆ ವಿಫಲ ಪ್ರಯತ್ನ

ಪಂಡಿತ ನೆಹರೂ ಹೇಳಿಕೆ

"ಖಾನ್ ಸಹೋದರರು ಪಾಕಿಸ್ಥಾನ ಜೈಲಿನಲ್ಲಿ ನರಳುತ್ತಿರುವುದು ದುಃಖದಾಯಕವಾಗಿದೆ. ಅವರನ್ನು ಬಿಡಿಸಲು ನನ ಪ್ರಯತ್ನ ನಿಷ್ಫಲವಾಯಿತು" ಎಂಬುದಾಗಿ ಪಂಡಿತ ನೆಹ್ರೂರವರು ಬೊಂಬಾಯಿನಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ತಿಳಿಸಿದರು.

೪೯೮ ಮಂದಿ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ

ಲಂಚದ ಆಪಾದನೆಗೆ ಗುರಿಯಾಗಿದ್ದ ೪೯೮ ಮಂದಿ ಪೋಲೀಸು ಆಫೀಸರುಗಳ ಮೇಲೆ ಉತ್ತರ ಪ್ರದೇಶ ಸರಕಾರವು ಶಿಕ್ಷೆ ವಿಧಿಸಿದೆ ಇವರಲ್ಲಿ ೧೧೬ ಮಂದಿಯನ್ನು ಕೆಲಸದಿಂದ ವಜಾಮಾಡಲಾಯಿತು. ೧೯೩ ಮಂದಿಯನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಯಿತು. ಇತರರನ್ನು ಕೆಳಗಿನ ದರ್ಜೆಗೆ ಇಳಿಸಲಾಯಿತು.

ಅಶ್ಲೀಲವಾದ ಪ್ರಕಟಣೆಗಳಿಗೆ ಸರ್ಕಾರದ ಎಚ್ಚರಿಕೆ

ಅಶ್ಲೀಲವಾದ ಲೇಖನಗಳು ಮತ್ತು ಮತ್ತಿತರ ವಿಷಯಗಳನ್ನು ಒಳಗೊಂಡ ಪತ್ರಿಕೆಗಳು ಇತ್ತೀಚೆಗೆ ಪ್ರಕಟವಾಗುತ್ತಲಿರುವುದು ಮದರಾಸು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಆ ರೀತಿಯಾದ ಅಶ್ಲೀಲವಾದ ಪ್ರಕಟಣೆಗಳನ್ನು ಮಾರುವುದು, ಪ್ರಕಟಿಸುವುದು ಇಂಡಿಯನ್ ಪೀನಲ್ ಕೋಡಿನ ಪ್ರಕಾರ ಶಿಕ್ಷಾರ್ಹವೆಂದು ಸರ್ಕಾರವು ಎಚ್ಚರಿಸಿದೆ.

ಸೆನೆಟ್ ಸಭೆ

ಮೈಸೂರು ಮಾ. ೮

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ಅಧಿವೇಶನವು ನಾಳೆ ನಡೆಯುವುದು.

ಶ್ರೀ ಗುಂಡಪ್ಪಗೌಡರು ಪಬ್ಲಿಕ್ ಸರ್ವಿಸ್ ಕಮಿಷನರು?

ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಶ್ರೀ ಗುಂಡಪ್ಪಗೌಡರನ್ನು ಅಧ್ಯಕ್ಷರಾಗಿ, ಮೈಸೂರಿನ ಶ್ರೀ ಎಸ್. ರಂಗರಾಮಯ್ಯ ಮತ್ತು ಕೋಲಾರ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ತಿಪ್ಪೆರುದ್ರಯ್ಯನವರನ್ನು ಸದಸ್ಯರಾಗಿ ನೇಮಿಸಲು ಸರ್ಕಾರ ತೀರ್ಮಾನಿಸಿದೆ, ಮುಖ್ಯಮಂತ್ರಿ ಶ್ರೀ ಕ. ಸಿ. ರೆಡ್ಡಿಯವರು ದಹಲಿಯಿಂದ ಹಿಂತಿರುಗಿದೊಡನೆಯೇ ಪ್ರಕಟಣೆ ಹೊರಬೀಳಲಿದೆಯೆಂದು ತಿಳಿಯಬರುತ್ತದೆ.

ಅಧಿಕ ಆಹಾರ ಬೆಳೆ ಪರಿಶೀಲನೆ

ಬೆಂಗಳೂರು ಮಾ. ೮

ಕೇಂದ್ರ ವ್ಯವಸಾಯ ಕಾರ್ಯದರ್ಶಿ ಶ್ರೀ ದತ್ತಾರ್‌ಸಿಂಗ್‌ರವರಿಗೂ ಮೈಸೂರಿನ ವ್ಯವಸಾಯ ಮಂತ್ರಿಗಳಿಗೂ ಭೇಟಿ ನಡೆದು, ಮೈಸೂರಿನಲ್ಲಿ ಅಧಿಕ ಆಹಾರ ಬೆಳೆ ಯೋಜನೆಯ ಪ್ರಕಾರವಾಗಿರುವ ಪ್ರಗತಿಯ ಪರಿಶೀಲನೆ ನಡೆದು ಇನ್ನೂ ಹೆಚ್ಚಿಗೆ ಆಹಾರ ಬೆಳೆಯುವ ವಿಷಯದಲ್ಲಿ ಮಾತುಕತೆ ನಡೆದವೆಂದು ತಿಳಿಯ ಬರುತ್ತದೆ.

ಭಾರತಕ್ಕೆ ಆಹಾರ

ಆಸ್ಟ್ರೇಲಿಯಾದಿಂದ ಬೊಂಬಾಯಿಗೆ ೦೦೦ ಟನ್ ಗೋಧಿ ಬಂದಿದೆ.

ಇದು ಕಾಳಸಂತೆಯಲ್ಲ

ಹೋಟೇಲುಗಳಿಗೆ ಹಾಲಿನ ಪುಡಿಯನ್ನು ಮಾರುವುದರಿಂದ ಪ್ರತಿವರ್ಷವೂ ಬೊಂಬಾಯಿ ಸರ್ಕಾರವು ೭೫ ಲಕ್ಷ ರೂಪಾಯಿಗಳ ಲಾಭ ಸಂಪಾದಿಸುತ್ತಲಿದೆಯೆಂದು ಸರಬರಾಜು ಮಂತ್ರಿ ಶ್ರೀ ದೇಸಾಯಿರವರು ಶಾಸನ ಸಭೆಯಲ್ಲಿ ತಿಳಿಸಿರುವರು.

ಹಾಲಿನ ಪುಡಿಯನ್ನು ಪೌಂಡು ೧ಕ್ಕೆ ೦-೧೨-೬ ಆಣೆಯಂತೆ ಸರ್ಕಾರವು ಕೊಂಡುಕೊಂಡು ಪೌಂಡು ೧ಕ್ಕೆ ರೂ ೧-೧೨-೦ ಯಂತೆ ಮಾರಲಾಗುತ್ತಿದೆಯೆಂದೂ ಅವರು ಹೇಳಿರುವರು.

ಆಯ್ಕೆಬೋರ್ಡ್ ಸದಸ್ಯರ ಆಗಮನ

ಬೆಂಗಳೂರು ಮಾ. ೭

ಸ್ಪೆಷಲ್ ರಿಕ್ರೂಟ್‌ಮೆಂಟು ಬೋರ್ಡಿನ ಸದಸ್ಯರಾದ ಶ್ರೀ ಡಬ್ಲ್ಯು. ಆರ್. ಪುರಾಣಿಕ್ ಮತ್ತು ಡಾ|| ಪನ್ನಾಲಾಲ್‌ರವರು ಮತ್ತು ಬೋರ್ಡಿನ ಅಧ್ಯಕ್ಷರಾದ ಶ್ರೀ ಆರ್. ಎನ್. ಬ್ಯಾನರ್ಜಿಯವರು ಬೆಂಗಳೂರಿಗೆ ಆಗಮಿಸಿರುವರು, ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ಸಿಗೆ ಮೈಸೂರಿನ ಅಧಿಕಾರಿಗಳಲ್ಲಿ ಆರಿಸಲು ಇವರು ಇಲ್ಲಿ ೧೦ ದಿನ ಇರುವರೆಂದು ಹೇಳಲಾಗಿದೆ.

ಸಂಸ್ಥಾನಕ್ಕೆ ಆಚಾರ್ಯ ಕೃಪಲಾನಿ ಭೇಟಿ

ಕಾಂಗ್ರೆಸ್ ಡೆಮೊಕ್ರಾಟಿಕ್ ಫ್ರಂಟ್ ನಾಯಕರಾದ ಆಚಾರ್ಯ ಕೃಪಲಾನಿಯವರು ಈ ಸಲದ ಪಾರ್ಲಿಮೆಂಟ್ ಅಧಿವೇಶನದನಂತರ ಪ್ರಾಯಶಃ ಏಪ್ರಿಲ್ ಪ್ರಾರಂಭದಲ್ಲಿ ದಕ್ಷಿಣ ಭಾರತದ ಪ್ರವಾಸಕ್ಕೆಗೊಳ್ಳಲಿದ್ದಾರೆಂದು ಗೊತ್ತಾಗಿದೆ. ಆಗ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡುವರು.

ಮದರಾಸು ನಗರದ ಜನಸಂಖ್ಯೆ

ಮದರಾಸಿನ ಜನಸಂಖ್ಯೆಯು ೧೦ ವರ್ಷಗಳಲ್ಲಿ ಶೇ|| ೮೨ ರಷ್ಟು ಹೆಚ್ಚಾಗಿದೆ. ೧೯೪೧ರಲ್ಲಿ ನಗರದಲ್ಲಿ ಜನಸಂಖ್ಯೆಯು ೭,೭೭,೦೦೦ ಇದ್ದಿತು. ೧೯೫೧ನೇ ಜನಗಣತಿ ಪ್ರಕಾರ ೧೪,೨೯,೩೬೪ (ಗಂ. ೭ ಲಕ್ಷ ೪೬ ಸಾವಿರ ಹೆಂ. ೬ ಲಕ್ಷ ೮೩ ಸಾವಿರ.)

ನಿಯೋಗ

ಪಾಕಿಸ್ಥಾನ, ಭಾರತ ವಾರ್ತಾವಿನಿಮಯ ವಿಚಾರದಲ್ಲಿ ಚರ್ಚೆ ನಡೆಸಲು ಕೇಂದ್ರ ವಾರ್ತಾ ಸಚಿವ ಶ್ರೀ ದಿವಾಕರರ ನಾಯಕತ್ವದಲ್ಲಿ ಒಂದು ನಿಯೋಗವು ಕರಾಚಿಗೆ ಹೋಗಿದೆ. ಶ್ರೀಗಳಾದ ದೇಶಬಂಧು ಗುಪ್ತ, ಸಿ. ಆರ್. ಶ್ರೀನಿವಾಸನ್, ದುರ್ಗಾದಾಸ್ ಮುಂತಾದವರು ಈ ನಿಯೋಗದಲ್ಲಿರುವರು, ಇವರ ಗೌರವಾರ್ಥವಾಗಿ ಪಾಕಿಸ್ತಾನ ಸರ್ಕಾರವು ನಿನ್ನೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿತ್ತು. ಈ ಸತ್ಕಾರಕೂಟದಲ್ಲಿ ಶ್ರೀ ದಿವಾಕರರು ಮಾತನಾಡುತ್ತಾ ಭಾರತ ಪಾಕಿಸ್ಥಾನಗಳಿಗಿರುವ ವಿವಾದವನ್ನು ಅಹಿಂಸಾ ರೀತಿಯಲ್ಲಿ ಬಗೆಹರಿಸಿಕೊಳ್ಳಬೇಕು. ಇಲ್ಲಿಯ ವರೆಗೆ ಅನೇಕ ವಿವಾದಗಳು ಬಗೆಹರಿಯದಿರುವುದು ವಿಷಾದಕರ ಬಿಕ್ಕಟ್ಟಿನಿಂದ ಪ್ರಯೋಜನವಿಲ್ಲ ಎಂದು ಹೇಳಿದರು. ಪಾಕಿಸ್ತಾನದ ವಾರ್ತಾ ಸಚಿವರು ಮಾತನಾಡುತ್ತಾ ಶ್ರೀ ಶ್ರೀ ದಿವಾಕರರು ಹೇಳಿರುವುದನ್ನು ತಾವು ಸಮರ್ಥಿಸುತ್ತಾ, ಒದಕ್ಕೊಂದುಉಭಯ ರಾಜ್ಯಗಳು ಹೊಂದಿಕೊಂಡು ಹೋಗಬೇಕಾಗಿದೆ ಎಂದು ಹೇಳಿರುವರು.

ಸಂಪಾದಕರು ಮತ್ತು ಪ್ರಕಾಶಕರು—ಜ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೩—೧೯೫೧ನೇ ಶುಕ್ರವಾರ [ಸಂಚಿಕೆ ೧೫೪

ಹೊಸ ಆಹಾರ ಆಜ್ಞೆ

ಅಕ್ಕಿಯಿಲ್ಲದೆ ಇಡ್ಲಿ-ದೋಸೆ ಮಾಡಬಹುದು

ಲೈಸನ್ಸ್ ಇಲ್ಲದೆ ಹೋಟೇಲು ನಡೆಸಕೂಡದು

ಬೆಂಗಳೂರು ಮಾ. ೮

ಸರ್ಕಾರದ ಈ ಆಜ್ಞೆ ಸಂಸ್ಥಾನದಲ್ಲಿ ತಕ್ಷಣ ಜಾರಿಗೆ ಬಂದಿದೆ. ಮೈಸೂರು ಸರ್ಕಾರದ ೧೯೫೧ರ ಈ ಆಹಾರ ಆಜ್ಞೆಯಂತೆ ಯಾವ ಫಲಹಾರ ಮಂದಿರಗಳೂ ಕೂಡ ಮಾರಾಟಕ್ಕಾಗಿ ಅಕ್ಕಿ ಅಥವಾ ಹಾಲನ್ನು ಉಪಯೋಗಿಸಿದ ತಿಂಡಿಗಳನ್ನು ತಯಾರು ಮಾಡಕೂಡದು ಮತ್ತು ಅಕ್ಕಿಯನ್ನು ಉಪಯೋಗಿಸಿ ಇಡ್ಲಿ ದೋಸೆಗಳನ್ನು ತಯಾರಿಸಕೂಡದೆಂದು ಅಥವ ಅದೇ ರೀತಿಯ ಇತರ ಪದಾರ್ಥಗಳನ್ನು ಮಾಡಕೂಡದೆಂದೂ ತಿಳಿಸಲಾಗಿದೆ.

ಈ ಆಜ್ಞೆಯ ಪ್ರಕಾರ ಮದುವೆಯ ಸಮಾರಂಭ ಮತ್ತು ತಿಥಿಸಮಾರಾಧನೆಯಲ್ಲಿ ನಡೆಸುವ ಭೋಜನಕೂಟಗಳಿಗೂ, ನಿರ್ಬಂಧ ಹಾಕಲಾಗಿದೆ. ಯಾರೇ ಆದರೂ ಮದುವೆ ಕಾಲದಲ್ಲಿ ಭೋಜನಕೂಟಕ್ಕಾಗಲೀ ಅಥವ ರೇಷನ್ ಪದಾರ್ಥಗಳನ್ನು ಉಪಯೋಗಿಸಿದ ಊಟಕ್ಕಾಗಲೀ ೫೦ ಜನರಿಗಿಂತಲೂ ಹೆಚ್ಚಾಗಿ ಆಹ್ವಾನಿಸಲಾಗದೆಂದೂ ಅದೇ ರೀತಿಯಲ್ಲಿ ತಿಥಿಯ ಕಾಲದಲ್ಲಿ ಕೂಡ ೫೦ ಮಂದಿಗಿಂತ ಹೆಚ್ಚಾಗಿ ಕರೆಯಕೂಡದೆಂದೂ, ಆಜ್ಞೆಯಲ್ಲಿ ತಿಳಿಸಲಾಗಿದೆ.

ಈ ಸಮಾರಂಭವನ್ನು ನಡೆಸುವವರ ಹೆಸರಿನಲ್ಲಿರುವ ರೇಷನ್ ಕಾರ್ಡಿನಲ್ಲಿ ಕಂಡ ಜನರ ಸಂಖ್ಯೆಯು ಇದರಲ್ಲಿ ಸೇರುವುದಿಲ್ಲ.

ಮದುವೆಯಲ್ಲಿ ಆಹ್ವಾನಿತರಿಗೆ ಎರಡು ಊಟ ಮತ್ತು ತಿಥಿಯಲ್ಲಿ ಒಂದು ಊಟಕ್ಕಿಂತಲೂ ಹೆಚ್ಚಾಗಿ ರೇಷನ್ ಪದಾರ್ಥಗಳನ್ನು ಉಪಯೋಗಿಸಕೂಡದೆಂದು ಆಜ್ಞೆಯಲ್ಲಿ ತಿಳಿಸಲಾಗಿದೆ.

ಸಂಘ ಸಂಸ್ಥೆಗಳು ನಡೆಸುವ ಚಂದಾ ಔತಣಕೂಟಗಳಲ್ಲಿ ಸಂಘದ ಸದಸ್ಯರಲ್ಲದೆ ಹೊರಗಿನವರು ೫೪ ಮಂದಿಗಿಂತಲೂ ಹೆಚ್ಚಾಗಿರಕೂಡದೆಂದೂ ಯಾವ ಹೋಟೇಲಿನವರಾದರೂ ಇಂತಹ ಕೂಟಗಳಲ್ಲಿ ೫೪ ಮಂದಿಗಿಂತಲೂ ಹೆಚ್ಚಾಗಿ ಊಟವನ್ನೊದಗಿಸಕೂಡದೆಂದು ತಿಳಿಸಲಾಗಿದೆ. ಲೈಸೆನ್ಸ್ ಇಲ್ಲದೆ ಹೋಟೇಲುಗಳನ್ನು ನಡೆಸುವುದನ್ನು ಈ ಆಜ್ಞೆ ಪ್ರಕಾರ ಪ್ರತಿಬಂಧಿಸಲಾಗಿದೆ.

ಇಡ್ಲಿ, ದೋಸೆಗಳನ್ನು ಅಕ್ಕಿ ಎನಹಾ ಇತರ ಪದಾರ್ಥಗಳಲ್ಲಿ ಮಾಡಲು ಈ ಆಜ್ಞೆ ಪ್ರಕಾರ ಅಡ್ಡಿಯಿಲ್ಲ.

ರಾಜಧಾನಿಯಲ್ಲಿ ಭೀಕರ ಕೊಲೆ

ರಾಜಧಾನಿಯ ಕಾರಂಜಿಕೆರೆಯಲ್ಲಿ ಮೊನ್ನೆ ದಿವಸ ಮಧ್ಯಾಹ್ನ ಒಂದು ಶವವನ್ನು ಯಾರೋ ದುರಾತ್ಮರು ಗೋಣೀ ಚೀಲದಲ್ಲಿ ಹಾಕಿ, ಬಾಯಿಕಟ್ಟಿ ಕೆರೆಯಲ್ಲಿ ಮುಳುಗುವಂತೆ ಕಲ್ಲುಕಟ್ಟಿ ಹಾಕಿದ್ದರು. ಮುಂದಿನ ತನಿಖೆ ನಡೆಯುತ್ತಿದೆಯೆಂದು ತಿಳಿದುಬಂದಿದೆ.

ವಿಶ್ವಶಾಂತಿ

ವಿಶ್ವದಲ್ಲಿ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತಿರುವುದು ಅತ್ಯಂತ ಶೋಚನೀಯ. ವಿಶ್ವಸಂಸ್ಥೆಯಲ್ಲಿ ಎಲ್ಲಾ ರಾಷ್ಟ್ರಗಳ ಪ್ರಾತಿನಿಧ್ಯತೆಯು ಇದ್ದು ವಿಶ್ವಶಾಂತಿಗಾಗಿ ಶ್ರಮಿಸಬೇಕೆಂದು ರಷ್ಯಾದಲ್ಲಿರುವ ಭಾರತ ರಾಯಭಾರಿ ಡಾ|| ರಾಧಾಕೃಷ್ಣನ್‌ರವರು ಲಂಡನ್ನಿನಿಂದ ಮಾಸ್ಕೋಗೆ ಪ್ರಯಾಣ ಮಾಡುವ ಮುನ್ನ ಹೇಳಿರುವರು.

ಬೆಂಗಳೂರಿನ ಜನಸಂಖ್ಯೆ

೧೯೫೧ನೇ ಜನಗಣತಿಪ್ರಕಾರ ಬೆಂಗಳೂರು ನಗರದ ಜನಸಂಖ್ಯೆಯು ೭,೭೮,೧೯೦.

ರೇಷನ್ ಲೆಕ್ಕಕ್ಕೂ ಸೆನ್ಸಸ್ ಲೆಕ್ಕಕ್ಕೂ ೯೦ ಸಾವಿರ ವ್ಯತ್ಯಾಸವಿದೆಯೆಂದು ತಿಳಿಯಬರುತ್ತದೆ.

ಮೀಸೆ ತೆಗೆಸಲು ಆಜ್ಞೆ

ಕೈರೋನಗರದ ಪೋಲೀಸ್ ಸಾರ್ಜಂಟ್ ಮಹಮದ್ ತನ್ನ ಭಾರಿ ಮೀಸೆಗಳನ್ನು ಕತ್ತರಿಸಿಹಾಕಬೇಕೆಂದು ಅಧಿಕಾರಿಗಳು ಆಜ್ಞೆಮಾಡಿದ್ದಾರೆ. ಅವನ ಮೀಸೆ ಯರೀತಿಯನ್ನು ನೋಡುತ್ತಾ ಕಾರ್ ಡ್ರೈವರುಗಳು, ಪಾದಚಾರಿಗಳು ಇತರರೂ ಮೈಮರೆಯುತ್ತಿದ್ದು ಇದರಿಂದ ಹಲವು ಅಕಸ್ಮಿಕಗಳು ಸಂಭವಿಸಿದುದೇ ಈ ಆಜ್ಞೆಗೆ ಕಾರಣ.

ಭಾರತ ಸೇವಾದಳದ ಅಧ್ಯಕ್ಷರ ಪ್ರವಾಸ

ಬೇಸಿಗೆ ಸೇವಾದಳದ ಶಿಬಿರಗಳ ವ್ಯವಸ್ಥೆಗಾಗಿ ತಾ|| ೧-೩-೫೧ರಿಂದ ೧೪-೩-೫೧ರವರೆಗೆ ಬೇಸಿಗೆಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಸೇವಾದಳ ಮಾಧ್ಯಮಿಕ ಶಿಕ್ಷಣ ಶಿಬಿರಗಳನ್ನು ಏರ್ಪಡಿಸಬೇಕಾಗಿದೆ. ಸೇವಾದಳದ ಶಿಕ್ಷಣದೊಂದಿಗೆ ಗ್ರಾಮ ಸೇವೆಯ ವಿಶೇಷ ಶಿಕ್ಷಣವನ್ನೂ ಕೊಡಲಾಗುವುದು. ಈ ಸಂಬಂಧದಲ್ಲಿ ಅಧ್ಯಕ್ಷರು ಮಾರ್ಚಿ ೧೧ರಿಂದ ೧೮ರ ವರೆಗೆ ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಮತ್ತು ಹಾಸನಗಳಲ್ಲಿ ಪ್ರವಾಸ ಕೈಕೊಂಡಿದ್ದಾರೆ.

ಈ ಶಿಬಿರಗಳನ್ನು ಏರ್ಪಡಿಸಲು ಮತ್ತು ಜರುಗಿಸಲು ಅಧಿಕೃತ ಸಮಿತಿಗಳನ್ನು ರಚಿಸುದೇ ಅಧ್ಯಕ್ಷರು ಕೈಗೊಳ್ಳುವ ಪ್ರವಾಸದ ಮುಖ್ಯ ಉದ್ದೇಶವಾಗಿದೆ. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿಯಿರುವ ಎಲ್ಲಾ ದೇಶಭಕ್ತ ಕಾರ್ಯಕರ್ತರೂ ಈ ಸಭೆಗಳಿಗೆ ಆಗಮಿಸಬೇಕಾಗಿ ಕೋರಲಾಗಿದೆ.

ಕೆಲಸದಿಂದ ವಜಾ ಮಾಡಿದ್ದಕ್ಕೆ ಹತ್ಮಹತ್ಯ

ಪೋಂಬಾಯಿನಲ್ಲಿ ಲಕ್ಷ್ಮೀಬಾಯಿ ಎಂಬಾಕೆ ಗಿರಣಿಯಲ್ಲಿ ಕೂಲಿ ಮಾಡಿಕೊಂಡು ತನ್ನ ೯ ಮಂದಿ ಮಕ್ಕಳನ್ನು ಪೋಷಿಸುತ್ತಿದ್ದಳು. ಒಂದು ತಿಂಗಳ ಹಿಂದೆ ಅವಳನ್ನು ಕೆಲಸದಿಂದ ವಜಾ ಮಾಡಲಾಯಿತು. ಎಲ್ಲಿಯೂ ಕೆಲಸ ಸಿಗಲಿಲ್ಲ. ಜೀವನ ಕಷ್ಟವಾಯಿತು. ಅದಕ್ಕಾಗಿ ಬಟ್ಟೆಗೆ ಬೆಂಕಿ ಹಚ್ಚಿಕೊಂಡು ಮೃತಳಾದಳೆಂದು ವರದಿಯಾಗಿದೆ.

ಸಹಾಯಾರ್ಥ ಪ್ರದರ್ಶನ

ದಳವಾಯಿ ಹೈಸ್ಕೂಲ್ ಕ್ಯಾಂಟೀನಿನ ಕಟ್ಟಡಕ್ಕಾಗಿ ಲಕ್ಷ್ಮೀ ಟಾಕೀಸಿನವರು ೧೧ನೇ ತಾ|| ಬೆಳಗ್ಗೆ ೧೦-೩೦ ಗಂಟೆಗೆ ನಡೆಯುವ 'ಶಮಾ' ಸಹಾಯಾರ್ಥ ಪ್ರದರ್ಶನವನ್ನು ಏರ್ಪಡಿಸಿರುವರು.

ಪರ್ಷಿಯಾದಲ್ಲಿ ಶೋಕ ದೃಶ್ಯ

ಮೂರು ವಾರಗಳ ಹಿಂದೆ ತಾನೇ ಷರವರ ಮದುವೆ ಉತ್ಸವಗಳಲ್ಲಿ ನಲಿಯುತ್ತಲಿದ್ದ ಪರ್ಷಿಯಾದ ರಾಜಧಾನಿ ನಗರವು ಪ್ರಧಾನಿ ಅಲಿ ರಜ್ಮಾರಾರವರ ನಿಧನ ಶೋಕದಿಂದ ಈಗ ಆವೃತ್ತವಾಗಿದೆ.

ರೇಷನ್ ಖೋತಾಕ್ಕೆ ಪ್ರತಿಭಟನೆ

ಜಯಪುರ ಸಂಸ್ಥಾನದಲ್ಲಿ ರೇಷನ ಖೋತಾಮಾಡಿದುದನ್ನು ಪ್ರತಿಭಟಿಸಿ ಜನರು ಸರ್ಕಾರದೊಡನೆ ಹೋರಾಟ ನಡೆಸಿದರು. ಅದರ ಪರಿಣಾಮವಾಗಿ ೧ ಚಟಾಕಿಂನಿದ ೭ ಚಟಾಕು ರೇಷನ್ ಕೊಡುವಂತೆ ಸರ್ಕಾರ ಆಜ್ಞೆಮಾಡಿದೆ.

ಕಾಫೀಪುಡಿಗೆ ಈಚಲ ಬೀಜದ ಪುಡಿ ಬೆರಕೆ

ಬೆಂಗಳೂರು ಮಾ. ೮

ಕಾಫೀಪುಡಿಯ ಜತೆಗೆ ಹುರಿದ ಈಚಲ ಬೀಜದ ಪುಡಿಯನ್ನು ಮಿಶ್ರಣ ಮಾಡಿ ನಗರದ ಜನರಿಗೆ ಮೋಸ ಮಾಡುತ್ತಿದ್ದ ಪ್ರಕರಣವೊಂದನ್ನು ಬೆಂಗಳೂರಿನ ಮೇಯರಾದ ಶ್ರೀ ಆರ್. ಅನಂತರಾಮನ್‌ರವರು ಈ ಬೆಳಿಗ್ಗೆ ಪತ್ತೆ ಮಾಡಿದ್ದಾರೆ.

ಪೋಲೀಸ್ ಮತ್ತು ಸ್ಯಾನಿಟರಿ ಸಿಬ್ಬಂದಿಯೊಂದಿಗೆ ಈ ಬೆಳಿಗ್ಗೆ ಅವರು ಮಕ್ಕಳ ಬಸವಣ್ಣನ ಗುಡಿ ಬೀದಿಯ ಮನೆಯೊಂದಕ್ಕೆ ಹಠಾತ್ತನೆ ಭೇಟಿ ಕೊಟ್ಟು ಶೋಧನೆ ನಡೆಸಿದಾಗ ಮಾರಾಟದ ಉದ್ದೇಶಕ್ಕಾಗಿ ಇಟ್ಟಿದ್ದ ನೂರಾರು ಮೂಟೆಗಳಷ್ಟು ಈಚಲು ಬೀಜ ಸಿಕ್ಕಿತೆಂದೂ ಎರಡು ಮೂಟೆಗಳಷ್ಟು ಹುರಿದಬೀಜ ಕೂಡಾ ಇದ್ದಿತೆಂದೂ ವರದಿಯಾಗಿದೆ

ಈ ಮೂಟೆಗಳನ್ನು ಪೋಲೀಸಿನವರು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉಪನ್ಯಾಸ

ಮೈಸೂರು ಸಾರ್ವಜನಿಕ ವಿದ್ಯಾಸಂಸ್ಥೆ ಆಶ್ರಯದಲ್ಲಿ ನಾಳೆ ಸಂಜೆ ೬-೧೫ಕ್ಕೆ ಗಂಟೆಗೆ ಮಾದರಿ ಶಾಲೆಯಲ್ಲಿ 'ಭಾರತದ ಆಯವ್ಯಯ' ಎಂಬ ವಿಷಯವಾಗಿ ಶ್ರೀಗಳಾದ ಟಿ. ಕೃಷ್ಣಮೂರ್ತಿ ಮತ್ತು ಎ. ವಿ. ಶ್ರೀನಿವಾಸಮೂರ್ತಿಯವರು ಉಪನ್ಯಾಸ ಮಾಡುವರು.

ಮಾವಿನಕಾಯಿ ಬುಟ್ಟಿಯಲ್ಲಿ ಚಿನ್ನ

ಗೋವಾದಿಂದ ಹಡಗೊಂದರಲ್ಲಿ ಬಂದ ಪ್ರಯಾಣಿಕನೊಬ್ಬನನ್ನು ಶೋಧಿಸಿದಾಗ ಮಾವಿನಕಾಯಿ ಬುಟ್ಟಿ ಮತ್ತು ಟಿಪನ್ ಕ್ಯಾರಿಯರ್‌ನಲ್ಲಿ ೪೦ ತೊಲ ಚಿನ್ನವಿದ್ದುದ ಕಂಡುಬಂತು.

ಮೈಸೂರು ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟು

ಶ್ರೀ ಟಾಂಡನ್‌ರವರ ಸಮಾಲೋಚನೆ

ಬೆಂಗಳೂರು ಮಾ. ೮

ಮೈಸೂರು ಕಾಂಗ್ರೆಸ್ ಸಂಸ್ಥೆಯಲ್ಲಿ ಉಂಟಾಗಿರುವ ರಾಜಕೀಯ ಭಿನ್ನಾಭಿಪ್ರಾಯವನ್ನು ದೂರಮಾಡಿ, ಎಲ್ಲರೂ ಒಗ್ಗಟ್ಟಿನಿಂದ ಸಂಸ್ಥೆಯ ಮತ್ತು ದೇಶದ ಹಿತದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಮುಂದುವರಿಸುವ ದೃಷ್ಟಿಯಿಂದ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ದೆಹಲಿಯಲ್ಲಿ ಮೈಸೂರು ಕಾಂಗ್ರೆಸ್ ನಾಯಕರುಗಳೊಡನೆ ಸಮಾಲೋಚನೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ

ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಈಚೆಗೆ ಸೇರಿ ಸಂಸ್ಥಾನಗಳ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿತೆಂದು ಗೊತ್ತಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರ ಆಹ್ವಾನದ ಮೇಲೆ ಶ್ರೀ ಟಿ ಸಿದ್ದಲಿಂಗಯ್ಯನವರು ದೆಹಲಿಗೆ ತೆರಳಿದ್ದಾರೆ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ ರೆಡ್ಡಿಯವರು ನಿನ್ನೆ ದಿವಸ ಬೆಳಿಗ್ಗೆ ದೆಹಲಿಗೆ ಪ್ರಯಾಣ ಮಾಡಿದರು. ಈ ಇಬ್ಬರು ಮೈಸೂರು ಕಾಂಗ್ರೆಸ್ ನಾಯಕರುಗಳೊಡನೆಯೂ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಕಾಂಗ್ರೆಸ್ ಸಂಸ್ಥೆಯಲ್ಲಿ ಐಕಮತ್ಯ ಉಂಟುಮಾಡಲು ಮಾತುಕತೆ ನಡೆಸುವರೆಂದು ಹೇಳಲಾಗಿದೆ.

[illegible] ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟಂತೆ ಸಂಸ್ಥಾನಗಳ ಶಾಖೆಯೊಡನೆ ಮಾತುಕತೆ ನಡೆಸಲಿರುವರು.

ಶ್ರೀ ಕೆ. ಸಿ. ರೆಡ್ಡಿಯವರು ದೆಹಲಿಯಿಂದ ಮದ್ರಾಸಿಗೆ ಹಿಂತಿರುಗಿ ಅಲ್ಲಿ ಕೆಲವು ವೈದ್ಯಕೀಯ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸಂಸ್ಥೆಗಳಿಗೆ ಭೇಟಿಯಿತ್ತು ಮಾರ್ಚಿ ೧೧ನೇ ತಾರೀಖು ಬೆಂಗಳೂರಿಗೆ ವಾಪಸು ಬರುವರು.

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಮಾರ್ಚಿ ೧೪ನೇ ತಾರೀಖು ಬೆಂಗಳೂರಿಗೆ ಆಗಮಿಸುವರು.

ಈ ತಿಂಗಳು ಕೊನೆಯ ಹೊತ್ತಿಗೆ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯು ಸೇರಿ ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲಿದೆ ಎಂದು ಹೇಳಲಾಗಿದೆ.

ಶ್ರೀ ರಾಜುರವರ ಜಾಮೀನು ಬಿಡುಗಡೆಗೆ ಅರ್ಜಿ

ಬೆಂಗಳೂರು ಮಾ. ೮

ಚೀಫ್ ಜಸ್ಟಿಸ್ ಶ್ರೀ ಪಿ. ಮೇದಪ್ಪನವರಿಗೆ ವಿಷಪ್ರಾಶನದ ಪ್ರಯತ್ನ ನಡೆಯಿತೆಂಬ ಆಪಾದನೆ ಪ್ರಕರಣದಲ್ಲಿ ಬಂಧಿತರಾಗಿರುವ ಶ್ರೀ ಎಲ್. ಎಸ್ ರಾಜು ಮತ್ತು ಅವರ ಪುತ್ರ ಶ್ರೀ ಎಲ್. ಆರ್. ಜಯರಾಂರನ್ನು ಜಾಮೀನು ಮೇಲೆ ಬಿಡುಗಡೆ ಮಾಡಬೇಕೆಂದು ಮದರಾಸಿನ ಲಾಯರ್ ಶ್ರೀ ಎನ್. ಎಸ್. ಮಣಿಯವರು ಈದಿನ ಸಿಟಿ ಸ್ಟೇಷನ್ ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಜನಾಬ್ ಅಬ್ದುಲ್ ಹಕ್‌ರ ಸಮ್ಮುಖದಲ್ಲಿ ವಾದ ಮಾಡಿದರು.

ಶ್ರೀ ರಾಜುರವರನ್ನು ಆರೋಗ್ಯದ ಕಾರಣ ಒಂದರಿಂದಲೇ ಬಿಡುಗಡೆ ಮಾಡಬೇಕಾಗಿರುವಾಗ ಇದರ ಜೊತೆಗೆ ಚಾರ್ಜ್‌ಷೀಟಿನಲ್ಲಿ ಲೋಪದೋಷಗಳೂ ಕೂಡಿರುವಾಗ ಬಿಡಲೇಬೇಕಾದುದು ಅಗತ್ಯವೆಂದು ಶ್ರೀ ಮಣಿಯವರು ವಾದಿಸಿದರು. ಆ ರೋಪಿಸಲ್ಪಟ್ಟಿರುವ ಚರಿತ್ರೆ ಮತ್ತು ಆಪಾದಿತರುಗಳ ಸಾರ್ವತ್ರಿಕ ಉದ್ದೇಶ ಮುಂತಾದ ವಿಷಯಗಳಲ್ಲಿ ಎರಡೂ ಇಲ್ಲವೆಂದೂ ಅವರು ಚಾರ್ಜ್‌ಷೀಟಿನ ಬಗ್ಗೆ ಆಕ್ಷೇಪಿಸಿದರು.

ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ದೊರೆಸ್ವಾಮಿಯವರು ಮಾತನಾಡಿ ಜಾಮೀನು ಮೇಲೆ ಬಿಡುಗಡೆ ಮಾಡಕೂಡದೆಂದು ವಾದಿಸಿದರು. ಚಾರ್ಜ್‌ಷೀಟಿನ ಲೋಪದೋಷಗಳು ಈಗಿನ ಹಂತದಲ್ಲಿ ಪರಿಗಣನೆಗೆ ಬರುವಂತಹವಲ್ಲವೆಂದೂ ಅಲ್ಲದೆ ಈ ಆಪಾದನೆಯಲ್ಲಿನ ಸ್ವರೂಪವು ಬಹಳ ತೀವ್ರ ತರದ್ದಾದುದರಿಂದಲೂ, ಈ ಆಪಾದಿತರುಗಳು ಬಹಳ ಪ್ರಭಾವಶಾಲಿಗಳಾದುದರಿಂದಲೂ ಅವರನ್ನು ಬಿಡುಗಡೆ ಮಾಡಿದಲ್ಲಿ ಮೊಕದ್ದಮೆಗೆ ಬಹಳ ತೊಂದರೆಯಾಗುವುದೆಂದೂ ಅವರು ಹೇಳಿದರು. ಅನಂತರ ನ್ಯಾಯಾಧೀಶರು ತಮ್ಮ ತೀರ್ಪನ್ನು ಕಾದಿಟ್ಟರು.

ಕಳ್ಳತನ ತಡೆಗಟ್ಟಲು ಕರ್ಫ್ಯೂ

ಫ್ರೆಂಚ್ ಭಾರತದ ರಾಜಧಾನಿಯಾದ ಪುದುಚೇರಿಯಲ್ಲಿ ೭ನೇ ತಾ|| ನಿಂದ ಪ್ರತಿದಿನ ರಾತ್ರಿ ೧೧-೪೫ ರಿಂದ ಬೆಳಗಿನ ಜಾವ ೫ ಗಂಟೆಯವರೆಗೆ ಕರ್ಫ್ಯೂ ವಿಧಿಸಲಾಗಿದೆ,

ನಗರದಲ್ಲಿ ಕಳ್ಳತನಗಳು ಒಂದೇಸಮನೆ ಹೆಚ್ಚುತ್ತಿರುವುದರಿಂದ ಈರೀತಿ ಕ್ರಮಕೈಗೊಳ್ಳಲಾಗಿದೆ.

ರೇಡಿಯೋ ಮೂಲಕ ಭಾಷಣ

ಮಹಾರಾಷ್ಟ್ರದಲ್ಲಿರುವ ಕಾಲೇಜುಗಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಭಾಷಣಗಳನ್ನು ಪ್ರಸಾರ ಮಾಡಲು ಪೂನಾ ವಿಶ್ವವಿದ್ಯಾನಿಲಯವು ಒಂದು ರೇಡಿಯೋ ಕೇಂದ್ರವನ್ನು ಸ್ಥಾಪಿಸಬೇಕೆಂದಿರುವುದಕ್ಕೆ ಭಾರತ ಸರ್ಕಾರವು ಅನುಮತಿಯಿತ್ತಿದೆ. ಜ್ಞಾನಾರ್ಜನೆಗಾಗಿಯೇ ಈ ಕೇಂದ್ರವನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಇದು ಸ್ಥಾಪಿತವಾದಲ್ಲಿ, ಭಾರತದಲ್ಲಿ ವಿದ್ಯಾಪ್ರಚಾರಕ್ಕೆ ರೇಡಿಯೋವನ್ನು ಉಪಯೋಗಿಸುವ ವಿಶ್ವವಿದ್ಯಾನಿಲಯಗಳಲ್ಲಿ ಇದು ಮೊದಲನೆಯದಾಗುವುದು.

ಒಲಂಪಿಯಾ

೮—೩—೫೧ರಿಂದ

ಕಿಕ್ಕಿರಿದ ೪ನೇ ವಾರ

ಪ್ರತಿದಿನ 3 ಆಟಗಳು

ಗೋಯಲ್ ಸಿನೀ ಕಾರ್ಪೋರೇಷನ್‌ರವರ

* ಆಂಖೆ *

ಪಾತ್ರ— ನಳಿನಿಜಯವಂತ್

ಶೇಖರ್, ಯಾಕೂಬ್, ಭಾರತ್‌ಭೂಷಣ್,

ಬೆಳಗಿನ ಪ್ರದರ್ಶನ

೯—೩—೫೧ರಿಂದ ೩ ದಿನಗಳ ಮಾತ್ರ

ಭಗವಾನ್ ಪಾತ್ರ ವಹಿಸಿರುವ—

"ಜೋಕರ್"

ರಣಜಿತ್

೭—೩—೫೧ರಿಂದ

ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಬಾಬುಲ್

ಪಾತ್ರ- ನರ್ಗಿಸ್,

ದಿಲೀಪ್‌ಕುಮಾರ್.

ಬೆಳಗಿನ ಪ್ರದರ್ಶನ ೯—೩—೫೧ರಿಂದ

ಮೂರು ದಿನಗಳು ಮಾತ್ರ

* ಆಗ್ *

ಪಾತ್ರ—ರಾಜಕಪೂರ್, ನರ್ಗಿಸ್.

ಮುನಿಸಿಪಲ್ ಆಫೀಸು, ಮೈಸೂರು.

ತಾ|| 7—3—51

ಟೆಂಡರ್ ನೋಟೀಸ್

1951-52ನೇ ಸಾಲಿಗೆ ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಮಾಡಿಸುವ ಮುದ್ರಣ ಕಾರ್ಯಗಳನ್ನು ಮುದ್ರಿಸಲು ಇದೇ 1951ನೇ ಇಸವಿ ಮಾರ್ಚಿ ತಿಂಗಳು 14ನೇ ತಾರೀಖು ಬುಧವಾರ ಮಧ್ಯಾಹ್ನ 4 ಗಂಟೆ ವರೆವಿಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು. ಈ ಟೆಂಡರನ್ನು ಕೊಡಲು 100|— (ನೂರು ರೂಪಾಯಿ) ಗಳನ್ನು ಮುನಿಸಿಪಲ್ ಖಜಾನೆಗೆ ಇರಸ್ಾಲ್ ಮಾಡಿ ರಸೀತಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಿ ಸೀಲ್ ಮಾಡಿದ ಕವರನ್ನು ಆಫೀಸಿಗೆ ಕೊಡತಕ್ಕದ್ದು. ಈ ಟೆಂಡರಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಸದರಿ ಆಫೀಸಿನಲ್ಲಿ ಆಫೀಸು ವೇಳೆಯ ಕಾಲದಲ್ಲಿ ತಿಳಿಯಬಹುದು.

(ಸಹಿ) ಸಿ. ನರಸಿಂಹಮೂರ್ತಿ,

ಮುನಿಸಿಪಲ್ ಕಮೀಷನರ್. ಮೈಸೂರು ಸಿಟಿ.

ಸಂಪಾದಕರು ಮತ್ತು ಪ್ರಕಾಶಕರು— ಟಿ ಎಸ್. ಸ್ವಾಮಿ, ಟ್ರೂಟಿಸ್ಟ್‌ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೦—೩—೧೯೫೧ನೇ ಶನಿವಾರ [ಸಂಚಿಕೆ ೧೫೫

ಉನ್ನತ ಮಿಲಿಟರಿ ಅಧಿಕಾರಿಗಳ ಬಂಧನ

ಬುಡಮೇಲುಮಾಡುವ ಆಪಾದನೆ

ಪಾಕಿಸ್ತಾನದಲ್ಲಿ ಬುಡಮೇಲು ಚಳುವಳಿ ಎಬ್ಬಿಸಲು ಪ್ರಯತ್ನ ನಡೆಸಿದ್ದರೆಂಬ ಆಪಾದನೆ ಮೇಲೆ ಪಾಕಿಸ್ತಾನದ ಚೀಫ್ ಆಫ್ ಸ್ಟಾಫ್ ಮೇಜರ್ ಜನರಲ್ ಅಕ್ಬರ್‌ಖಾನ್, ಕ್ವೆಟ್ಟಾದಲ್ಲಿದ್ದ ಬ್ರಿಗೇಡಿಯರ್ ಎಂ. ಎ. ಲತೀಫ್, ಪಾಕಿಸ್ತಾನ ಟೈಂಸ್ ಸಂಪಾದಕರಾದ ಫೈಜ್ ಅಹಮದ್‌ಫೈಜ್ ಮತ್ತು ಅಕ್ಬರ್‌ಖಾನರ ಪತ್ನಿ ಈ ನಾಲ್ವರನ್ನು ಅಲ್ಲದೆ ಇತರ ಜೊತೆಗಾರರಾಗಿದ್ದವರನ್ನೆಲ್ಲಾ ದಸ್ತಗಿರಿಮಾಡಲಾಗಿದೆ.

ಈ ಪಿತೂರಿಯು ಕಾರ್ಯರೂಪಕ್ಕೆ ಬರುವ ಮೊದಲೇ [illegible] ಪತ್ತೆಯಾಯಿತು. ಈ ಪಿತೂರಿಗಾರರ ವಂಚಿಕೆಗಳ ಸಿದ್ಧ ವಿವರಗಳನ್ನು ಸುರಕ್ಷತೆ ದೃಷ್ಟಿಯಿಂದ ಹೇಳಲಾಗುವುದಿಲ್ಲ. ಪಾಕಿಸ್ತಾನ ರಾಷ್ಟ್ರಕ್ಕೆ ಧಕ್ಕೆ ತರುವಂತಹ ಪಿತೂರಿ ನಡೆಯುತ್ತಲಿತ್ತೆಂದು ಪಾಕಿಸ್ತಾನ ಪ್ರಧಾನಿ ಮಿ|| ಲಿಯಾಖತ್ ಅಲಿಖಾನರವರು ಹೇಳಿರುವರು.

ಈಗಲೇ ಪ್ರಜಾ ಸರ್ಕಾರ ಸಾಧ್ಯವಿಲ್ಲ

ಹೈದರಾಬಾದಿಗೆ ಸಂಪೂರ್ಣವಾಗಿ ಪ್ರಜಾ ಸರ್ಕಾರವನ್ನು ರಚಿಸಬೇಕೆಂದು ಪ್ರಧಾನಿ ನೆಹರೂ, ಸಂಸ್ಥಾನ ಮಂತ್ರಿ ಶ್ರೀ ಗೋಪಾಲಸ್ವಾಮಯ್ಯಂಗಾರ್, ಸಂಸ್ಥಾನಗಳ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ನರನ್ನು ಒತ್ತಾಯಪಡಿಸಿರುವುದಾಗಿಯೂ, ಈಗಲೇ ಅದು ಸಾಧ್ಯವಿಲ್ಲವಾದರೂ ಪರಿಶೀಲಿಸುವುದಾಗಿ ಅವರು ಭರವಸೆ ಕೊಟ್ಟಿರುವರೆಂದು ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ಜಿ. ಬಿಂದೂರಾವ್ ಹೇಳಿರುವರು.

ಶ್ರೀಮತಿ ಮಣಿಬೆನ್ ಪಟೇಲ್

ಸರ್ದಾರ್ ಪಟೇಲರ ಸ್ಥಾನದಲ್ಲಿ ಅವರ ಪುತ್ರಿ ಶ್ರೀಮತಿ ಮಣಿಬೆನ್ ಪಟೇಲರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನಾಮಕರಣ ಮಾಡಿರುವುದಾಗಿ ಅಧ್ಯಕ್ಷ ಟಂಡನ್‌ರವರು ತಿಳಿಸಿರುವರು.

ಬಲಾತ್ಕಾರವಾಗಿ ಸತಿ

ರೇವಾ ಜಿಲ್ಲೆಯ ರಾಜಧರ್ ಮೂಸಿ ಎಂಬ ಗ್ರಾಮದಲ್ಲಿ ಗ್ರಾಮಸ್ಥರೆಲ್ಲರು ಬಲಾತ್ಕಾರವಾಗಿ ತನ್ನ ಗಂಡನ ಚಿತೆಯಲ್ಲಿ ಪ್ರವೇಶಿಸಿ ಸಹಗಮನವನ್ನು ಮಾಡಿಸಿದರೆಂದು ವರದಿಯಾಗಿದೆ. ಪೋಲೀಸಿನವನ್ನು ಒಂದು ಜಟ್ಟಿ ನಡೆಸಿದರೂ ಏನೂ ಪ್ರಯೋಜನವಾಗಲಿಲ್ಲ. ಇದರ ಪರಿಣಾಮವಾಗಿ ಕೆಲವು ದಸ್ತಗಿರಿಗಳಾಗಿವೆ.

"ಮಿ|| ಏಷ್ಯ ೧೯೫೦"

ಭಾರತದ ೨೨ ವರ್ಷ ವಯಸ್ಸಿನ ಪರಿಮಳರಾಜುರವರು ಅತ್ಯುತ್ತಮ ಮೈಕಟ್ಟುಳ್ಳವರೆಂದು ಹೊಸ ದೆಹಲಿಯಲ್ಲಿ ನಡೆದ ಸ್ಪರ್ಧೆಯಲ್ಲಿ ತೀರ್ಮಾನವಾಗಿ ಅವರಿಗೆ "ಮಿ|| ಏಷ್ಯ ೧೯೫೦" ಎಂಬ ಪ್ರಶಸ್ತಿ ದೊರೆಯಿತು.

ಓಪನ್ ಲೈಸನ್ಸ್

ಪಾಕಿಸ್ತಾನದಿಂದ ನೂಲು, ಹಣ್ಣು, ಹಾಲು, ಬೀಡಿ, ಸಿಗಾರ್, ಅಡಕೆ, ಬಣ್ಣ ಮತ್ತು ವಾರ್ನಿಷ್, ಬೇಸಾಯಗೆ ಬೇಕಾದ ಸಾಮಾನು, ಸೌದೆ, ಕೈಮಗ್ಗದ ಬಟ್ಟೆಗಳನ್ನು ತರಿಸಿಕೊಳ್ಳಲು ಓಪನ್ ಲೈಸನ್ಸ್ ಕೊಟ್ಟಿರುವುದಾಗಿ ಭಾರತ ಸರ್ಕಾರ ತಿಳಿಸಿದೆ.

೨೬ ಕೋಟಿ ಪೌಂಡು ಟೀ

ಬ್ರಿಟನ್ನಿಗೆ ೧೯೫೧ನೇ ವರ್ಷದಲ್ಲಿ ೨೬ ಕೋಟಿ ಪೌಂಡು ಟೀಯನ್ನು ಭಾರತದಿಂದ ಕಳುಹಿಸಲೇರ್ಪಾಡು ನಡೆಯುತ್ತಲಿರುವುದಾಗಿ ಭಾರತ ಟೀ ಸಂಘದ ಅಧ್ಯಕ್ಷರು ಹೇಳಿರುವರು.

ಶ್ರೀ ಕೃಷ್ಣಮೆನನ್ ಭಾರತಕ್ಕೆ

ಬ್ರಿಟನ್ನಿನಲ್ಲಿರುವ ಭಾರತ ರಾಯಭಾರಿ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಅಟ್ಲಿಯವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಅವರು ನಾಳೆ ಲಂಡನ್ನಿನಿಂದ ದೆಹಲಿಗೆ ಹೊರಡುವರು. ಸಮಾಲೋಚನೆಗಾಗಿ ಅವರು ದೆಹಲಿಯಲ್ಲಿ ೩ ವಾರವಿರುವರೆಂದು ತಿಳಿಯಬರುತ್ತದೆ.

ಕುದುರೆ ಜೂಜಿಗೆ ಅನುಮತಿ

ಇನ್ನೂ ೨ ವರ್ಷ ಕಾಲ, ಅಂದರೆ ಏಪ್ರಿಲ್ ೧೯೫೩ರವರೆಗೆ, ಕುದುರೆ ಜೂಜು ನಡೆಯಲು ಮದ್ರಾಸು ಸರ್ಕಾರವು ಅನುಮತಿಯಿತ್ತಿದೆ.

ಬೇಸಿಕ್ ವಿದ್ಯಾಭ್ಯಾಸದ ವಿಶ್ವವಿದ್ಯಾನಿಲಯ

ಮೂಲ ಶಿಕ್ಷಣ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕೆಂದು ಸೇವಾಗ್ರಾಮದಲ್ಲಿ ನಡೆದ ಅಖಿಲ ಭಾರತ ಮೂಲ ಶಿಕ್ಷಣ ಸಮ್ಮೇಳನವು ತೀರ್ಮಾನಿಸಿದೆ.

ಸಿರಾ ಗಲಭೆ ಮೊಕದ್ದಮೆ

ಬೆಂಗಳೂರು ಮಾ. ೯

ಸಿರಾ ಗಲಭೆ ಮೊಕದ್ದಮೆಗಳ ಪುನರ್ವಿಚಾರಣೆಯು ಈ ದಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರ ಮುಂದೆ ಮುಖ್ಯ ನ್ಯಾಯಾಲಯದಲ್ಲಿ ಪ್ರಾರಂಭವಾಯಿತು.

ಹೊಸ ಸೀನಿಯರ್ ಸರ್ಜನ್

ಕೃಷ್ಣರಾಜೇಂದ್ರ ಆಸ್ಪತ್ರೆ ಮೆಡಿಕಲ್ ಆಫೀಸರ್ ಆಗಿರುವ ಡಾ|| ಪಿ. ಆರ್. ರಾಮಲಿಂಗರೆಡ್ಡಿಯವರನ್ನು ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ನರನ್ನಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಎಲ್ಲೆಲ್ಲೂ ಲಂಚ

ಪಾಟ್ನದಿಂದ ಹಿಡಿದು ದೆಹಲಿಯ ವ[...]ಗೂ ಆಡಳಿತ ವರ್ಗವೆಲ್ಲ ಲಂಚ ರುಷು[...]ತ್ತುಗಳಿಂದ ಕೂಡಿದೆ. ಇದರಿಂದಲೇ [...]ನತೆ ವಿಪರೀತ ಸಂಕಟಕ್ಕೊಳಗಾಗಿ[...] ಪ್ರಜಾ ಸರ್ಕಾರ ಬೇಗ ತನ್ನ ರೀತಿ ನೀ[...]ಗಳನ್ನು ಬದಲಾಯಿಸಿಕೊಂಡು, ಜನತೆಯ ಕಷ್ಟನಿಷ್ಟುರಗಳನ್ನು ನಿವಾರಿಸದಿದ್ದರೆ, [...]ದಕ್ಕೆ ತೊಂದರೆ ಬರುವುದೆಂದು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರ ಹಿರಿಯ ಸಹೋದರಿ ಶ್ರೀಮತಿ ಭಗವದೇವಿಯವರು ಬಿಹಾರ ಅಸೆಂಬ್ಲಿಯ[...] ಹೇಳಿರುವರು.

ಕೊಲೆಗಡುಗ ರಾಷ್ಟ್ರಗಾರ್

ಪರ್ಷಿಯಾ ಪ್ರಧಾನಿ ಜ|| ರಜ್ಮಾರರವರನ್ನು ಕೊಲೆ ಮಾಡಿದವನ ಹೆಸರು ರಾ[...]ಷ್ಟ್ರಗಾರ್ ಎಂದು. ಅವನೂ ಅವನ ಜೊ[...]ಗಾರರೆಲ್ಲರೂ ಪ್ರದಾಯಿಯಾನ್ ಇಸ್ಲಾಂ[...] ಎಂಬ ಮತಾಂಧ ಸಂಸ್ಥೆಯ ಸದಸ್ಯರು.

ಇರಾಕಿನಲ್ಲಿ ಭಾರತ ರಾಯಭಾರಿ

ಮಿ|| ಮಹಮ್ಮದ್ ಯೂನಿಸ್‌ರವರನ್ನು ಇರಾಕಿನಲ್ಲಿ ಭಾರತ ರಾಯಭಾರಿಯಾಗಿ ಖಾಯಂ ಆಗಿ ನೇಮಿಸಲಾಗಿದೆ.

ನ್ಯೂಸ್ ಪ್ರಿಂಟ್ ಬಳಿಕೆ ಪಕೋಟ

ಪತ್ರಿಕೆಗಳಿಗೆ ನಿಗದಿ ಮಿತ್ಯಾಸ್ವದಕ್ಕೂ ಉಪಯೋಗಿಸಕೂಡದು

೧೯೫೦ರ ನ್ಯೂಸ್‌ಪ್ರಿಂಟ್ ಪಕೋಟ ಆಸ್ಟ್ರೇಲಿಯಾದಲ್ಲಿ ಪೂರ್ವನಿರ್ಧರಿತ ಪ[...] ಕೋಟಿ ಆಜ್ಞೆಯೊಂದನ್ನು ಭಾರತ ಸರ್ಕಾರದವರು ಹೊರಡಿಸಿರುವರು.

ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಸಾಮಾನ್ಯ ಅಥವಾ ವಿಶೇಷ ಸಂದರ್ಭಗ[...]ಳಲ್ಲಿ ದೊರೆತು ನ್ಯೂಸ್ ಪ್ರಿಂಟನ್ನು ಪತ್ರಿಕೆಗಳ ಪ್ರಕಟನೆಗೆ ವಿನಹಾ ಮಿತ್ಯಾಸ್ವದಕ್ಕೂ ಬಳಸಕೂಡದು.

ಪತ್ರಿಕಾ ಸಾಲೀಗ್ರಾಮದವರ ಬಳಿಯುಳ್ಳ ನ್ಯೂಸ್ ಪ್ರಿಂಟನ್ನು ಸರ್ಕಾರ[...] ಸೂಚಿಸುವವರಿಗೆ ಮಾತ್ರ ಮಾರಬೇಕಾಗಿದೆ.

ಮೋಟಾರು ಕಾರ್ಖಾನೆ

ಬೆಂಗಳೂರಿನಲ್ಲಿ ಒಂದು ಮೋಟಾರು ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಬಂದಿರುವ ಸಲಹೆಯನ್ನು ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಸ್ವಾಗತಿಸುತ್ತ, ಈ ಯೋಜನೆ ಕಾರ್ಯರೂಪಕ್ಕೆ ಬರಲು ಸಾಧ್ಯವಾದುದನ್ನೆಲ್ಲಾ ಮಾಡಲು ಮೈಸೂರು ಸರ್ಕಾರ ಸಿದ್ಧವಿದೆ ಯೆಂದು ಹೇಳಿರುವರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂಟೋರಿಯಲ್ ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಜಿ. ಟಿ. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಕಾರ್ಯಕಾರಿ ಸಮಿತಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಮುಂದಿನ ಮಾಹೆ ೭, ೮ರಲ್ಲಿ ದೆಹಲಿಯಲ್ಲಿ ಸೇರಲಿದೆ.

೭೦ ಸೆಣಬು ಗಿರಣಿಗಳು ಮುಚ್ಚಿವೆ

ಕಾರ್ಮಿಕರಿಗೆ ವರ್ಷಕ್ಕೆ ೧೦ ದಿನಗಳ ರಜಾವನ್ನು ಕೊಡಬೇಕೆಂಬ ಕಾನೂನು ಪ್ರಕಾರ ಎಲ್ಲಾ ಕಾರ್ಮಿಕರಿಗೂ ರಜಾ ಕೊಟ್ಟಿರುವ ಪ್ರಯುಕ್ತ ೭೦ ಸೆಣಬು ಗಿರಣಿಗಳನ್ನು ಪಶ್ಚಿಮ ಬಂಗಾಳದಲ್ಲಿ ಮುಚ್ಚಲಾಗಿವೆ.

ಚುನಾವಣೆ

ಪಾಕಿಸ್ತಾನದ ಪೂರ್ವ ಪಂಜಾಬಿನಲ್ಲಿ ಇಂದಿನಿಂದ ೧೧ ದಿನಗಳು ಚುನಾವಣೆ ನಡೆಯಲಿದೆ. ವಯಸ್ಕರ ಮತದಾನ ಪದ್ಧತಿ ಪ್ರಕಾರ ಪಾಕಿಸ್ತಾನದಲ್ಲಿ ಚುನಾವಣೆ ನಡೆಯುವುದು ಇದೇ ಪ್ರಥಮ. ೮೦ ಲಕ್ಷ ಜನರು ಈ ಚುನಾವಣೆಯಲ್ಲಿ ಭಾಗ ವಹಿಸುವರು. ಅವರ ಪೈಕಿ ೨೦ ಲಕ್ಷ ಸ್ತ್ರೀಯರು.

ದೆಹಲಿಗೆ ಹಿಂತಿರುಗಿದರು

ಕೇಂದ್ರ ವಾರ್ತಾ ಸಚಿವ ಶ್ರೀ ದಿವಾಕರರ ನಾಯಕತ್ವದಲ್ಲಿ ಕರಾಚಿಗೆ ತೆರಳಿದ್ದ ಸಮಾಚಾರ ಸಮಾಲೋಚನಾ ಸಮಿತಿ ಮತ್ತು ಸಂಯುಕ್ತ ಪತ್ರಿಕಾ ಸಮಿತಿಗಳ ನಿಯೋಗವು ದೆಹಲಿಗೆ ಹಿಂತಿರುಗಿದರು. ಕರಾಚಿಯಿಂದ ಹೊರಡುವ ಮುನ್ನ ಅಲ್ಲಿನ ಮುನಿಸಿಪಲ್ ಕಾರ್ಪೊರೇಷನ್ ನಿಯೋಗದ ಗೌರವಾರ್ಥವಾಗಿ ಒಂದು ಸ್ವಾಗತ ಸಮಾರಂಭವನ್ನೇರ್ಪಡಿಸಿದ್ದರು.

ಜೀಪ್‌ಕಾರು ಅನಾಹುತ

ಜೀಪ್‌ಕಾರು ಅನಾಹುತದಿಂದ ಲಕ್ಕವಳ್ಳಿ ಎಗ್ಜಿಕ್ಯುಟಿವ್ ಇಂಜನಿಯರ್ ಶ್ರೀ ಹೆಚ್. ಸಿ. ತಪನಿಪತಿಘಪ್ಪರಿಗೆ ಘಾಯಗಳಾಗಿ ಶಿವಮೊಗ್ಗಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಗಿದೆ.

ಶಿವಮೊಗ್ಗಾ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ರಂಗರಾಜಯ್ಯಂಗಾರ್ ಮತ್ತು ಸಬ್ ಓವರ್ಸಿಯರ್ ಶ್ರೀ ರಾಮರಾಜುರವರಿಗೂ ಸ್ವಲ್ಪ ಘಾಯಗಳಾಗಿವೆ.

ಬೆವಿನ್ನರ ರಾಜೀನಾಮೆ

ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಬೆವಿನ್ನರವರು ತಮ್ಮ ವಿದೇಶಾಂಗ ಮಂತ್ರಿ ಪದವಿಗೆ ರಾಜೀನಾಮೆಯಿತ್ತಿದ್ದಾರೆ. ಅವರು ಲಾರ್ಡ್ ಪ್ರೀ ಸಿಲ್ಲರಾಗಿ ಸಚಿವ ಮಂಡಲಿಯಲ್ಲಿ ಹಿರಿಯ ಸದಸ್ಯರಾಗಿರುವರು. ವಿದೇಶಾಂಗ ಮಂತ್ರಿಗಳಾಗಿ ಮಿ|| ಹರ್‌ಬರ್ಟ್ ಮಾರಿಸನ್‌ರವರು ನೇಮಿತರಾಗಿದ್ದಾರೆ.

ಆಶ್ಚರ್ಯಕರವಾದ ವಾದ

ಪಾಕಿಸ್ತಾನದ ಆರೋಪಣೆ ಆಧಾರರಹಿತವಾದುದು

ಕಾಶ್ಮೀರ ವಿಷಯದಲ್ಲಿ ಭಾರತವನ್ನು ಆಕ್ಷೇಪಿಸಿ ಪಾಕಿಸ್ತಾನದ ಪ್ರತಿನಿಧಿ ಮಿ|| ಜಫರುಲ್ಲಾಖಾನ್‌ರವರು ಭದ್ರತಾ ಸಮಿತಿಯಲ್ಲಿ ಇತ್ತ ಹೇಳಿಕೆಗೆ ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಪ್ರತ್ಯುತ್ತರವೀಯುತ್ತಾ ಮಿ|| ಷೇಕ್ ಅಬ್ದುಲ್ಲಾ ಮತ್ತು ಮಹಾರಾಜರ ಪಿತೂರಿಫಲವಾಗಿ ಭಾರತ ಸರ್ಕಾರವು ಕಾಶ್ಮೀರಕ್ಕೆ ಪ್ರವೇಶಿಸಿತು, ಮುಂತಾಗಿ ಮಾಡಿರುವ ಆರೋಪಣೆಗಳು ಆಧಾರರಹಿತವಾದುವು. ೧೯೪೭ನೇ ಸೆಪ್ಟಂಬರ್ ೨೯ರಲ್ಲಿ ಷೇಕ್ ಅಬ್ದುಲ್ಲಾರವರ ಬಿಡುಗಡೆಯಾಯಿತು. ಕಾಶ್ಮೀರದ ಮುಂದಿನ ಭವಿಷ್ಯದ ವಿಷಯ ಸಮಾಲೋಚಿಸುತ್ತಲಿದ್ದಾಗ ಪಾಕಿಸ್ತಾನದ ಧಾಳಿಕಾರರು ಕಾಶ್ಮೀರವನ್ನು ಪ್ರವೇಶಿಸಿದರು.

ಕಾಶ್ಮೀರ ಸರ್ಕಾರದ ಪ್ರಾರ್ಥನೆ ಮೇರೆ ಭಾರತವು ಅನಂತರ ತನ್ನ ಸೈನ್ಯವನ್ನು ಕಳುಹಿಸಿತು. ಮಿ|| ಷೇಕ್ ಅಬ್ದುಲ್ಲಾರವರು ಜನವಿಶ್ವಾಸವನ್ನು ಸಂಪೂರ್ಣವಾಗಿ ಪಡೆದಿರುವುದರಿಂದಲೇ ಅವರ ಸರ್ಕಾರವು ಸುಗಮವಾಗಿ ಕಾರ್‍ಯಗತಮಾಡಲು ಸಾಧ್ಯವಾಗಿದೆ. ಸಾವಿರಾರು ಮೈಲಿ ದೂರದಲ್ಲಿ ಲೇಕ್ ಸಕ್ಸೆಸ್‌ನಲ್ಲಿರುವ ಸದಸ್ಯರ ಮುಂದೆ ಆಶ್ಚರ್ಯಕರವಾದ ವಾದವನ್ನು ಪಾಕಿಸ್ತಾನವು ಮುಂದಿರಿಸಿದೆಯೆಂದು ಹೇಳಿದರು.

ಮಾರ್ಷಲ್ ಲಾ

ಪ್ರಧಾನಿಗಳ ಕೊಲೆಯಾದ ಮೇಲೆ ದೇಶದಲ್ಲಿ ಶಾಂತಿ ಭಂಗವಾದಂತ ಮುಂಜಾಗ್ರತೆಗಾಗಿ ಪರ್ಷಿಯಾ ದೇಶದಲ್ಲಿ ಮಾರ್ಷಲ್ ಲಾವನ್ನು ವಿಧಿಸಲಾಗಿದೆ.

ಬೆಲೆ ಹತೋಟಿ ರಜಾ

ಹತ್ತಿ ಸೆಣಬು ಮತ್ತು ಸೆಣಬಿನ ವಸ್ತುಗಳ ಮೇಲೆ ಸರ್ಕಾರದವರು ಹಾಕಿದ್ದ ಬೆಲೆ ಹತೋಟಿಯನ್ನು ತೆಗೆದುಹಾಕಲಾಗಿದೆಯೆಂದು ಕೈಗಾರಿಕಾ ಮಂತ್ರಿ ಶ್ರೀ ಮಹತಾಬರವರು ಹೇಳಿರುವರು.

ಸಲಹಾ ಸಮಿತಿ

ಪ್ರಿವೆನ್ಷನ್ ಡಿಟೆನ್ಷನ್ ಕಾನೂನು ಪ್ರಕಾರ ಸಲಹೆನೀಡಲು ಹೈದರಾಬಾದ್ ಸರ್ಕಾರವು ಸಮಿತಿಯನ್ನು ನೇಮಿಸಿದೆ. ಶ್ರೀಗಳಾದ ಹನುಮಂತರಾವ್, ಜಗನ್ನಾಥರಾವ್ ಮತ್ತು ಮಿ|| ಸಿಂಟೋರರವರು ಈ ಸಮಿತಿ ಸದಸ್ಯರು.

ಅರಮನೆಯಲ್ಲಿಯೇ ಬಂದಿ

ಮೊರಾಕೋ ಸುಲ್ತಾನರು ಅರಮನೆಯಲ್ಲಿಯೇ ಬಂದಿಯಾಗಿದ್ದು ಅರಮನೆ ಸುತ್ತ ಸೈನ್ಯಗಳು ಪಹರೆ ನಿಂತಿವೆ ಎಂದು ಮಾಸ್ಕೊ ರೇಡಿಯೋ ಪ್ರಕಟಿಸಿರುವುದಾಗಿ ವರದಿಯಾಗಿದೆ.

ವಾಣಿಜ್ಯ ಒಪ್ಪಂದ

ಭಾರತ ಪಾಕಿಸ್ತಾನಗಳ ವಾಣಿಜ್ಯ ಒಪ್ಪಂದವು ಅತ್ಯಂತ ತೃಪ್ತಿಕರವಾಗಿದೆ ಇದರಿಂದ ಉಭಯರಾಷ್ಟ್ರಗಳ ಮಧುರ ಬಾಂಧವ್ಯ ಬೆಳೆಯುವುದೆಂದು ಹೇಳಲಾಗಿದೆ.

ಆಂಧ್ರರಾಜ್ಯ ನಿರ್ಮಾಣ

ಆಂಧ್ರರಾಜ್ಯ ನಿರ್ಮಾಣ ವಿಷಯದಲ್ಲಿ ರಾಷ್ಟ್ರಾಧ್ಯಕ್ಷರು ಮತ್ತು ಕೇಂದ್ರ ಪಾರ್ಲಿಮೆಂಟಿನವರು ಕಾರ್ಯಕ್ರಮವನ್ನೆ ನಡೆಸಬೇಕೇ ವಿನಹ ಮದರಾಸ್ ಸರ್ಕಾರವು ಏನು ಮಾಡಲಾಗುವುದಿಲ್ಲವೆಂದು ಶ್ರೀ ಓ. ಗೋಪಾಲರೆಡ್ಡಿಯವರು ಮದರಾಸು ಶಾಸನ ಸಭೆಯಲ್ಲಿ ತಿಳಿಸಿರುವರು.

ಜಾಮೀನು ಅರ್ಜಿ ನಿರಾಕರಣೆ

ಶ್ರೀಸ್ವ ನ್ಯಾಯಾಧೀಶರಿಗೆ ವಿಷಪ್ರಯೋಗದ ಪ್ರಕರಣದಲ್ಲಿ ಆಪಾದಿತರಾದ ಶ್ರೀ ಎಚ್. ಎಸ್. ರಾಜು ಮತ್ತು ಶ್ರೀ ಎಲ್. ಆರ್. ಜಯರಾಂರವರನ್ನು ಜಾಮೀನಿನ ಮೇಲೆ ಬಿಡಲು ಮ್ಯಾಜಿಸ್ಟ್ರೇಟರಾದ ಜನಾಬ್ ಅಬ್ದುಲ್ ಹಕ್‌ರವರು ನಿರಾಕರಿಸಿದ್ದಾರೆ.

ಮರಣದಂಡನೆ

ಕಳೆದ ನವೆಂಬರ್‌ನಲ್ಲಿ ಅಧ್ಯಕ್ಷ ಟ್ರೂಮನ್ನರನ್ನು ಕೊಲ್ಲಲು ಗುಂಡು ಹಾರಿಸಿದಲ್ಲಿ ಒಬ್ಬನಾದ ಆಸ್ಕಾರ್‌ಕೊಲಾಜೋ ಎಂಬುವವನಿಗೆ ಮರಣದಂಡನೆ ವಿಧಿಸಲಾಗಿದೆ.

ಅಂಗರಕ್ಷಕರಲ್ಲಿ ಒಬ್ಬನನ್ನು ಗುಂಡು ಹಾರಿಸಿ ಕೊಲೆ ಮಾಡಿದ್ದಕ್ಕಾಗಿ ಇನ್ನೊಬ್ಬನಿಗೂ ಮರಣದಂಡನೆ ವಿಧಿಸಲಾಗಿದೆ.

ಪರಿಸ್ಥಿತಿ ತೃಪ್ತಿಕರವಾಗಿಲ್ಲ

ತಮಿಳನಾಡಿನ ಆಹಾರಪರಿಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲವೆಂದು ಮದರಾಸು ಶಾಸನ ಸಭೆಯಲ್ಲಿ ಆಹಾರ ಮಂತ್ರಿ ಶ್ರೀ ರೋಚ್ ವಿಕ್ಟೋರಿಯಾರವರು ಹೇಳಿರುವರು.

ಕೃಷ್ಣರಾಜನಗರದ ತಾ|| ರೈತರ ಸಮ್ಮೇಳನ

ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಇದೇ ತಾ|| ೧೧-೩-೫೧ನೇ ಭಾನುವಾರ ಮಧ್ಯಾಹ್ನ ೧ ಗಂಟೆಗೆ ಕೃಷ್ಣರಾಜನಗರದ ತಾ|| ರೈತರ ಸಮ್ಮೇಳನವನ್ನು ಕೃಷ್ಣರಾಜನಗರದಲ್ಲಿರುವ ಶ್ರೀ ಬಸವರಾಜಪ್ಪನವರ ಚಲನಚಿತ್ರಮಂದಿರದಲ್ಲಿ ಏರ್ಪಡಿಸಲಾಗಿದೆ. ತಾ|| ನ ರೈತರ ಕುಂದುಕೊರತೆಗಳ ಬಗ್ಗೆಯೂ ಮತ್ತು ಸಮಸ್ಯೆಗಳನ್ನು ಪರಿಶೀಲಿಸಲಾಗುವುದು. ಮೈಸೂರು ಜಿಲ್ಲಾ ರೈತರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಎಲ್. ನಂಜರಾಜೇ ಅರಸಿನವರು ಅಧ್ಯಕ್ಷತೆವಹಿಸುತ್ತಾರೆ. ತಾ|| ನ ಎಲ್ಲಾ ರೈತಾಪಿ ಜನಗಳೂ ಸಕಾಲದಲ್ಲಿ ದಯಮಾಡಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದೂ ಹೆಚ್ಚಿನ ಸಮಯವಿಲ್ಲದೆ ಇರುವುದರಿಂದ ಈ ಪತ್ರಿಕೆಯ ಪ್ರಕಟಣೆಯನ್ನು ಆಹ್ವಾನವನ್ನಾಗಿ ಭಾವಿಸಬೇಕೆಂದೂ ಮೈಸೂರು ಜಿಲ್ಲಾ ರೈತರ ಸಂಘದ ಕಾರ್ಯದರ್ಶಿಗಳಾದ ಸಿ. ಜೆ. ದೇವನಾಥರವರು ತಿಳಿಸುತ್ತಾರೆ.

ರಣಜಿತ್
೭—೩—೫೧ರಿಂದ
ಅಮೋಘ ಪ್ರಾರಂಭ
ಪ್ರತಿದಿನ ೩ ಆಟಗಳು
ಬಾಬುಲ್
ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಬೆಳಗಿನ ಪ್ರದರ್ಶನ ೯—೩—೫೧ರಿಂದ
ಮೂರು ದಿನಗಳು ಮಾತ್ರ
*** ಆಗ್ ***
ಪಾತ್ರ—ರಾಜಕಪೂರ್, ನರ್ಗಿಸ್.

ಒಲಂಪಿಯಾ
೮—೩—೫೧ರಿಂದ
ಕಿಕ್ಕಿರಿದ ೪ನೇ ವಾರ
ಪ್ರತಿದಿನ ೩ ಆಟಗಳು
ಗೋಯಲ್ ಸ್ಟೀನ್ ಕಾರ್ಪೊರೇಷನ್‌ರವರ
*** ಆಂಖೆ ***
ಪಾತ್ರ— ನಳಿನಿಜಯವಂತ್
ಶೇಖರ್, ಯಾಕೂಬ್, ಭಾರತ್‌ಭೂಷಣ್

ಬೆಳಗಿನ ಪ್ರದರ್ಶನ
೯—೩—೫೧ರಿಂದ ೩ ದಿನಗಳ ಮಾತ್ರ
ಭಗವಾನ್ ಪಾತ್ರ ವಹಿಸಿರುವ—
" ಜೋಕರ್ "

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨-೯-೧೯೫೬ ಸೋಮವಾರ [ಸಂಚಿಕೆ ೧೫೬

ಲಂಚಪಡೆದ ಮಂತ್ರಿಗೆ ಉಗ್ರಶಿಕ್ಷೆ

೩ ವರ್ಷ ಕಠಿಣಸಜಾ, ೨೦೦೦ ರೂ. ಜುಲ್ಮಾನೆ

ವಿಂಧ್ಯ ಪ್ರದೇಶದ ಮಾಜಿ ಮಂತ್ರಿ ಶ್ರೀಶಿಯೋಬಹದ್ದೂರ್ ಸಿಂಗ್‌ರವರು ೧೯೪೯ರಲ್ಲಿ ದೆಹಲಿಯ ಶಾಸನಸಭಾ ಭವನದಲ್ಲಿ ಲಂಚ ತೆಗೆದುಕೊಂಡರೆಂಬ ಆಪಾದನೆ ಮೇಲೆ ವಿಚಾರಣೆ ನಡೆದು ವಿಶೇಷ ನ್ಯಾಯಾಧೀಶರು ಅವರನ್ನು ಖುಲಾಸೆ ಮಾಡಿದ್ದರು. ಅದರ ಮೇಲೆ ಅಪೀಲು ಹೋಗಲು, ಅದನ್ನು ಅಂಗೀಕರಿಸಿ ವಿಂಧ್ಯ ಪ್ರದೇಶದ ಜುಡಿಷಿಯಲ್ ಕಮಿಷನರ್ ಮಿ|| ಕೃಷ್ಣನ್‌ರವರು ಕೆಳಗಿನ ಕೋರ್ಟಿನ ಆಜ್ಞೆಯನ್ನು ತಡೆದು, ಮಂತ್ರಿ ಬಹದ್ದೂರ್ ಸಿಂಗ್‌ರಿಗೆ ೩ ವರ್ಷ ಕಠಿಣ ಸಜಾ ೨೦೦೦ ರೂ. ಜುಲ್ಮಾನೆಯನ್ನು, ಮಂತ್ರಿಗಳ ಕಾರ್ಯದರ್ಶಿ ಶ್ರೀ ಮೋಹನಲಾಲ್ ಎಂಬುವವರಿಗೆ ಒಂದು ವರ್ಷ ಕಠಿಣ ಸಜಾ, ೧೦೦೦ ರೂ. ಜುಲ್ಮಾನೆಯನ್ನು ವಿಧಿಸಿರುವರು.

ಕೊಲೆಯ ಬೆದರಿಕೆ

ಪರ್ಷಿಯಾಪ್ರಧಾನಿ ಜನರಲ್ ಅಲಿ ರಾಜ್ಮಾರಾರವರನ್ನು ಕೊಲೆಮಾಡಿದ, ಅಬ್ದುಲ್ಲಾ ರಾಸ್ತೆಗಾರ್‌ನನ್ನು ೩ ದಿನಗಳೊಳಗಾಗಿ ಬಂಧನದಿಂದ ಬಿಡದಿದ್ದರೆ ಸಾವಿನದವಡೆಗೆ ತುತ್ತಾಗುವಿರಿ ಎಂದು ಪರ್ಷಿಯಾ ಷಾ ಮತ್ತು ಸಚಿವರುಗಳನ್ನು ಬೆದರಿಸಿ, ೫೦,೦೦೦ ಪರ್ಷಿಯನ್ನರಾದ ಮಜ್ಲಿಸ್‌ರವರು ಸಭೆ ನಡೆಸಿದನಂತರ ಘೋಷಣೆಯನ್ನು ಹೊರಡಿಸಿ, ಅಸಾಫ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸುವ್ರದಾಗಿ ತಿಳಿಯಬರುತ್ತದೆ.

೪೦ ಕೋಟಿ ಓಟಿನ ಶೀಟಿ

ಮುಂದೆ ನಡೆಯಲಿರುವ ಮಹಾ ಚುನಾವಣೆಗಳಲ್ಲಿ ೧೭-೧೮ ಕೋಟಿ ಜನರು ಮತದಾನಮಾಡುವರು. ಅದಕ್ಕಾಗಿ ೪೦ ಕೋಟಿ ಓಟಿನ ಚೀಟಿಗಳು ಬೇಕಾಗುತ್ತವೆ. ಅವುಗಳನ್ನೆಲ್ಲಾ ನಾಸಿಕದಲ್ಲಿರುವ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲಾಗುವುದೆಂದು ಚುನಾವಣಾಧಿಕಾರಿ ಶ್ರೀ ಸುಕುಮಾರಸೇನ್‌ರವರು ಹೇಳಿರುವರು.

ಸಂಗೀತೋತ್ಸವ

ವಾರ್ತಾ ಶಾಖಾ ಸಚಿವ ಶ್ರೀ ದಿವಾಕರರವರು ಆಲ್-ಇಂಡಿಯಾ ರೇಡಿಯೋ ದೇಹಲಿ ಕೇಂದ್ರವು ಹೊಸದಾಗಿ ಸ್ಥಾಪಿಸಿರುವ ಸಂಗೀತೋತ್ಸವವನ್ನು ಉದ್ಘಾಟಿಸುತ್ತಾ ಕರ್ಣಾಟಕ, ಹಿಂದೂಸ್ತಾನಿ ಸಂಗೀತ ಸಂಪ್ರದಾಯಗಳು ಬೇರೆಯಾದರೂ ಪದ್ಧತಿಗಳೆಲ್ಲವೂ ಒಂದೇ ಆವೆರಡೂ ಭಾರತೀಯ ಸಂಗೀತಗಳೆಂದೇ ಹೇಳಿದರು.

ಮೇಲುಕೋಟೆಗೆ ಹೋಗಲು ಪ್ರತಿಬಂಧಕ

ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ೧೯-೩-೫೧ರಂದು ನಡೆಯುವ ವೈರಮುಡಿ ಯಾತ್ರೆಗೆ ಬರುವುದನ್ನು ಪ್ರತಿಬಂಧಿಸಲಾಗಿದೆ. ಜಿಲ್ಲೆಯಲ್ಲಿ ಕಾಲರಾ ಉಪದ್ರವವಿರುವುದೇ ಕಾರಣ. ಯಾತ್ರಾರ್ಥಿಗಳು ಇದನ್ನು ಗಮನಿಸಬೇಕೆಂದು ಸೂಚಿಸಲಾಗಿದೆ.

ವಿಶ್ವ ಸಂಸ್ಕೃತ ಸಮ್ಮೇಳನ

ವಿಶ್ವದ ಸಂಸ್ಕೃತ ಸಮ್ಮೇಳನವು ಈ ವರ್ಷದ ಅಂತ್ಯದಲ್ಲಿ ಕಲ್ಕತ್ತಾದಲ್ಲಿ ನಡೆಯುವುದು.

ಮೈಸೂರು ಜನತಾಪಕ್ಷ

ಹೊಸ ರಾಜಕೀಯ ವಿರೋಧಪಕ್ಷ

ಶ್ರೀ ಪಿ. ಹುಚ್ಚೇಗೌಡರು ಅಧ್ಯಕ್ಷರು

ಬೆಂಗಳೂರು ಮಾ. ೧೧

ಮೈಸೂರು ಜನತಾಪಕ್ಷವೆಂಬ ಹೊಸ ರಾಜಕೀಯಪಕ್ಷವು ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೆ ಇದು ವಿರೋಧಪಕ್ಷವಾಗಿರುವುದು.

ಶಾಸನಸಭಾ ಸದಸ್ಯರಾದ ಶ್ರೀ ಪಿ. ಹುಚ್ಚೇಗೌಡರನ್ನು ಪಕ್ಷದ ಹಂಗಾಮಿ ಅಧ್ಯಕ್ಷರಾಗಿ ನೇಮಿಸಿಕೊಳ್ಳಲಾಯಿತು. ಪಕ್ಷದ ಕಾರ್ಯಕಾರಿಸಮಿತಿ ಮತ್ತು ಕಾರ್ಯನಿರ್ವಾಹಕರನ್ನು ನೇಮಿಸಿಕೊಳ್ಳಲು ಅವರಿಗೆ ಅನುಮತಿಯನ್ನೀಯಲಾಗಿದೆ. ೧ ಉಪಸಮಿತಿಯನ್ನು ನೇಮಿಸಿ ಪಕ್ಷದ ಧ್ಯೇಯ ಮುಂತಾದುವನ್ನೊಳಗೊಂಡ ಒಂದು ನಿಬಂಧನೆಯನ್ನು ರಚಿಸಬೇಕೆಂದು ತೀರ್ಮಾನವಾಯಿತು.

ವ್ಯಾಪಾರ ಒಪ್ಪಂದ

ಭಾರತ-ಇರಾಕ್ ರಾಷ್ಟ್ರಗಳಿಗೆ ವ್ಯಾಪಾರ ಒಪ್ಪಂದದ ಮಾತುಕಥೆಗಳು ನಡೆಯುತ್ತಲಿವೆ. ಇರಾಕಿಗೆ ಭಾರತದಿಂದ ಹತ್ತಿ, ಪತ್ತಿಬಟ್ಟೆಗಳು, ಸೆಣಬು ಮುಂತಾದ ವಸ್ತುಗಳು ಬೇಕಾಗಿವೆ.

ಆಂಧ್ರ ದೇಶದಲ್ಲಿ ಕಮ್ಯೂನಿಸ್ಟರ ಭಾರಿ ಧಾಳಿ

ಇದೇ ತಿಂಗಳು ೬ನೇ ತಾರೀಖು ೨೦೦ ಜನ ಕಮ್ಯೂನಿಸ್ಟರು ಬಂದೂಕುಗಳು, ಬಲ್ಲೆಗಳು ಮತ್ತು ಇತರ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಅಂತರನಾಡಿಯಿಂದ ಗೋದಾವರಿ ನದಿಯನ್ನು ದಾಟಿ ವೇಮುಲದೇವಿ ಹಳ್ಳಿಗೆ ಬಂದು ಪಟ್ಟಣಗೇರಿಗೆ ಮುತ್ತಿಗೆ ಹಾಕಿ ಮಂಗಳವನ್ನೆಲ್ಲಾ ಹೊರಗೆ ಒದನೂಡಿ ತಾಳಿಯ ಹೊರತಾಗಿ ಎಲ್ಲಾ ಆಭರಣಗಳನ್ನು ಕಿತ್ತುಕೊಂಡರು. ಕಬ್ಬಿಣದ ಪೆಟ್ಟಿಗೆಗಳನ್ನು ಸಹ ಧಾಳಿಕಾರರು ತೆರೆದು ನಗದು ಹಣ, ಆಭರಣಗಳೇ ಮೊದಲಾದುವುಗಳನ್ನು ಅಪಹರಿಸಿದರು. ಸುಮಾರು ಎರಡು ಲಕ್ಷ ರೂಪಾಯಿಗಳ ಸೆಕ್ಯೂರಿಟಿಗಳನ್ನು ಬೆಂಕಿಗೆಸೆದರು.

ಹಲವೂರು ರಿಜರ್ವ್ ಪಡೆ ಸ್ಥಳಕ್ಕೆ ತೆರಳಿದೆ. ಇಷ್ಟು ದೊಡ್ಡ ಧಾಳಿ ನಡೆದರೂ ಯಾರಿಗೂ ಘಾಯಗಳಾಗಿಲ್ಲ.

ಹೃದಯ ದೇಹದ ಬಲಗಡೆ

ತಿರುವಾಂಕೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನಿಗೆ ಹೃದಯ ದೇಹದ ಬಲಗಡೆ ಇರುವುದು ಪತ್ತೆಯಾಗಿದೆ. ಆತನ ಆರೋಗ್ಯವು ಸಮರ್ಪಕವಾಗಿದೆ.

ಸಿ. ವಿಭಾಗದ ಸಂಸ್ಥಾನಗಳಲ್ಲಿ ಪ್ರಜಾ ಸರ್ಕಾರ

ಸಿ. ವಿಭಾಗದ ಸಂಸ್ಥಾನಗಳ ಸಮ್ಮೇಳನದ ಕಾರ್ಯದರ್ಶಿಗಳಾದ ಡಾ|| ವೈ. ಎಸ್. ಪಾರ್‌ಮಾರ್‌ರವರು ಹೇಳಿಕೆಯೊಂದನ್ನು ಕೊಡುತ್ತಾ ಸಿ. ವಿಭಾಗದ ಸಂಸ್ಥಾನಗಳಲ್ಲಿ ಜನತಾ ಪ್ರತಿನಿಧಿ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿರುವುದಾಗಿ ತನಗೆ ತಿಳಿದು ಬಂದಿರುವುದಾಗಿ ತಿಳಿಸಿದರು.

ಮುಂದುವರಿದು ಈ ಸಂಸ್ಥಾನಗಳಿರುವ ಜನರಿಗೆ ಒಪ್ಪತಕ್ಕಂತಹ ಯೋಜನೆಯನ್ನು ಸರ್ಕಾರವು ಮುಂದಿಡಬಹುದೆಂದು ನಿರೀಕ್ಷಿಸಲಾಗಿದೆ ಜನರು ಅಥವಾ ರಾಜ್ಯಾಂಗದ ಹಕ್ಕುಗಳನ್ನು ತಿರಸ್ಕರಿಸಿ ಹೊಸ ಯೋಜನೆಯನ್ನು ಮುಂದಿಡುವುದೆಂದು ಸಂಭವ ಸಾಧ್ಯವಿಲ್ಲ ಎಂದು ತಿಳಿಸಿದರು.

ಪರ್ಷಿಯಾ ನೂತನಪ್ರಧಾನಿ

ಕೊಲೆಯಾದ ಮಿ|| ಅಲಿ ರಜ್ಮಾರಾರವರ ಸ್ಥಾನದಲ್ಲಿ, ಅಮೆರಿಕಾದಲ್ಲಿ ಪರ್ಷಿಯಾ ರಾಯಭಾರಿಯಾಗಿರುವ ಮಿ|| ಹುಸೇನ್ ಅಲಿಯವರನ್ನು ಪರ್ಷಿಯಾ ಷಾರವರು ಪ್ರಧಾನಿಯಾಗಿ ನೇಮಕ ಮಾಡಿದ್ದಾರೆ

ಕೊಲೆಗೆ ಒಳಸಂಚೆ?

ಪಾಕ್ ಪ್ರಧಾನಿ ಲಿಯಾಖತ್ ಆಲಿ ಖಾನರನ್ನು ರೈಲಾವುಲು ಲಾಹೋರ್ ಮಧ್ಯೆ ಪ್ರವಾಸ ಮಾಡುವ ಸಂದರ್ಭದಲ್ಲಿ ಹಿಡಿದು ಕೊಲೆ ಮಾಡಬೇಕೆಂದೂ ಈ ಕೊಲೆ ಮಾರ್ಚ್ ೩ನೇ ತಾರೀಖು ನಡೆಯಬೇಕೆಂದು ಸಂಚುಗಾರರು ತೀರ್ಮಾನಿಸಿದ್ದರೆಂದೂ, ಈ ಘಟನೆಯ ನಂತರದಲ್ಲಿ ಪಾಕ್ ಮಂತ್ರಿ ಮಂಡಲದ ಎಲ್ಲ ಸಚಿವರನ್ನೂ ಕೊಂದುಹಾಕಿ ಪಾಕಿಸ್ತಾನ್ ಸರ್ಕಾರವನ್ನೇ ತಮ್ಮ ವಶಪಡಿಸಿ ಕೊಳ್ಳುವುದು ಸಂಚುಗಾರರ ಉದ್ದೇಶವಾಗಿತ್ತೆಂದೂ ಲಂಡನ್ನಿನ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆ ತಿಳಿಸಿದೆ

ತೆರಿಗೆದಾರರ ಕೋಟ್ಯಾಂತರ ಹಣ ನಷ್ಟವಾಗಿದೆ

ಆಚಾರ್ಯ ಕೃಪಲಾನಿಯವರು ಸರ್ಕಾರದ ನೀತಿಯನ್ನು ಖಂಡಿಸಿ, ಹೆಚ್ಚು ಬೆಳೆ ಬೆಳೆಯುವ ಯೋಜನೆಗೆ ವಿಪರೀತ ಖರ್ಚಾಗಿದ್ದರೂ ಅದು ಯಶಸ್ವಿಯಾಗಿಲ್ಲ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅವ್ಯವಸ್ಥೆಯುಂಟಾಗಿ ತೆರಿಗೆದಾರರ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ ದೇಶದಲ್ಲೆಲ್ಲ ಕಾಳಸಂತೆ, ಅಧಿಕ ಲಾಭಸ್ತಾನ, ಕಲುಬೆರಿಕೆ ಮೊದಲಾದವುಗಳು ತಾಂಡವಾಡುತ್ತಿವೆ ಎಲ್ಲ ವರ್ಗದ ಜನರಲ್ಲೂ ನಿರಾಶಾ ಭಾವನೆ ಮೂಡಿದೆಯೆಂದೂ ತಿಳಿಸಿರುವರು.

ಆಡಳಿತ ವ್ಯವಸ್ಥೆಯೆಲ್ಲ ಲಂಚ ರುಷು ವತ್ತುಗಳ ಮಯವಾಗಿಯೆಂದೂ ಆಚಾರ್ಯ ಕೃಪಲಾನಿ ಟೀಕಿಸಿದರು. ಮೊದಲು ಸರ್ಕಾರಿ ನೌಕರಿ ಒಬ್ಬನಿಗೆ ದೊರೆಯಿತೆಂದರೆ ಅವನ ತೂಕದಷ್ಟು ಚಿನ್ನ ಅವನ ಮನೆಯವರಿಗೆ ದೊರೆತಂತೆ ಭಾವಿಸಲ್ಪಡುತ್ತಿತ್ತು. ಈಗ ಅದೇ ನೌಕರಿ ದೊರೆತರೆ ಅವನ ಮನೆಯವರಿಗೆ ಅವನ ತೂಕದಷ್ಟು ವಜ್ರ ಸಿಕ್ಕಿದಂತೆ ಎಂಬುದಾಗಿ ಜನ ಭಾವಿಸಿರುವುದು ತಪ್ಪಲ್ಲ ಎಂದು ಹೇಳಿರುವರು.

ಗಡಿ ಪೋಲಿಸ್ ಪಡೆ

ಬೆಂಗಳೂರು ಮಾ. ೧೧

ಗಡಿ ಪ್ರದೇಶದಲ್ಲಿ ನಡೆಯುತ್ತಿರುವ ಘಟನಾಯಿತಿಗಳನ್ನು ತಪ್ಪಿಸಲು ಜಂಟಿ ಗಡಿ ಪೋಲೀಸ್ ಪಡೆಯ ನಿರ್ಮಾಣದ ಬಗ್ಗೆ ಮೈಸೂರು ಮತ್ತು ಬೊಂಬಾಯಿ ಸರ್ಕಾರಗಳು ಆಲೋಚಿಸುತ್ತಿಯೆವೆಯೆಂದು ತಿಳಿದುಬಂದಿದೆ.

ಬೊಂಬಾಯಿ ಮತ್ತು ಮೈಸೂರು ಪೋಲೀಸರಿಂದ ಕೂಡಿದ ಜಂಟಿ ಪಡೆಯೊಂದನ್ನು ಗಡಿ ಪ್ರದೇಶದಲ್ಲಿ ಸ್ಥಾಪಿಸಲಾಗುವುದೆಂದು ಈ ಸಂಬಂಧದಲ್ಲಿ ಮೈಸೂರು ಅಥವಾ ಬೊಂಬಾಯಿನ ಅಧಿಕಾರಿಯೊಬ್ಬರನ್ನು ನೇಮಿಸಲಾಗುವುದೆಂದೂ ಅವರು ಡಿ. ಐ. ಜಿ. ದರ್ಜೆಯವರಾಗಿರುವರೆಂದೂ ತಿಳಿದುಬಂದಿದೆ.

ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನ

ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನವು ಮಾರ್ಚ್ ೧೫ರಿಂದ ದೆಹಲಿಯ ಚರಿತ್ರಾರ್ಹ ಕೆಂಪು ಕೋಟೆಯಲ್ಲಿ ಪ್ರಾರಂಭವಾಗಲಿದೆ.

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಈ ಸಮ್ಮೇಳನದ ಉದ್ಘಾಟನೆ ನಡೆಸುವರು. ಪ್ರಧಾನಿ ನೆಹರೂ ಮತ್ತು ವಿದ್ಯಾ ಸಚಿವ ಅಬುಲ್ ಕಲಾಂ ಅಜಾದರು ಭಾಷಣ ಮಾಡುವರು.

ಮಾರ್ಚಿ ೧೬ರಿಂದ ೩ ದಿನ ಭಾರತ ಸಂಸ್ಕೃತಿಯ ಮತ್ತೊಂದು ಅಂಗವಾದ ಸಂಗೀತ, ನೃತ್ಯ ಮುಂತಾದ ಕಾರ್ಯಕ್ರಮಗಳೂ ಪ್ರಾರಂಭವಾಗುವುವು. ಭಾರತದ ಸುಪ್ರಸಿದ್ಧ ಕಲಾವಿದರು ಭಾಗವಹಿಸುವರು.

ಭಾರತದ ಪ್ರಾಚೀನ ನೃತ್ಯ ನಿರೂಪಣೆಗೆ ಶ್ರೀಮತಿ ತಾರಾ ಚೌಧುರಿಗೆ ಆಹ್ವಾನ ಕಳುಹಿಸಲಾಗಿದೆ.

ಅಲ್ಲದೆ ಭಾರತದ ೧೪ ಭಾಷೆಗಳ ಹುಟ್ಟು ಬೆಳವಣಿಗೆ ಬಗ್ಗೆ ಪ್ರದರ್ಶನ ಏರ್ಪಡಿಸಲಾಗುವುದು.

ಸತ್ಯಾಗ್ರಹ

ಆಹಾರ ಹತೋಟಿ ಆಜ್ಞೆಯನ್ನು ವಿರೋಧಿಸಿ, ಸತ್ಯಾಗ್ರಹವು ಬೀಹಾರಿನಲ್ಲಿ ಪ್ರಾರಂಭವಾಗಿದೆ. ಮೊನ್ನೆ ದಿನ ೫೦ ಸತ್ಯಾಗ್ರಹಿಗಳು ಘೋಷಣೆಗಳನ್ನು ಮಾಡುತ್ತಾ ಊರಿನಲ್ಲೆಲ್ಲಾ ಪ್ರದರ್ಶನಗಳನ್ನು ನಡೆಸಿದರು. ಎರಡು ಮಣದಷ್ಟು ಅಕ್ಕಿಯನ್ನು ಪೇಟೆಯಲ್ಲಿ ಮಾರಿ, ಕೆಲವರು ಅದನ್ನು ಕೊಂಡು ಆಹಾರ ಹತೋಟಿ ಆಜ್ಞೆಯನ್ನು ಮುರಿದರೆಂದು ತಿಳಿಯುಬರುತ್ತದೆ.

ಭಾರತದ ಪುರಾತನ ಸಂಸ್ಕೃತಿಯ ಪುನರುದ್ಧಾರ

ಭಾರತ ತನ್ನ ಪುರಾತನ ಸಂಸ್ಕೃತಿಯ ಪುನರುದ್ಧಾರ ಮಾಡಿಕೊಂಡು ಅದನ್ನು ಆಚರಣೆಗೆ ತಂದುಕೊಂಡು ತಲ್ಲಣಿಸುತ್ತಿರುವ ವಿಶ್ವದ ಮುಂದೆ ತನ್ನ ಏಕೈಕ ತತ್ವವಾದ ಶಾಂತಿ ಮತ್ತು ನೈತಿಕ ಮಹತ್ವವನ್ನು ಮಂಡಿಸುವುದರ ಮೂಲಕ ಇಂದಿನ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಬಲ್ಲುದೆಂದೂ, ಆದರೆ ಹಾಗಾಗಲು ಭಾರತೀಯರು ತಮ್ಮ ಸ್ವಾರ್ಥವನ್ನು ತ್ಯಜಿಸಿ ಮಾನವನ ಹಿತಕ್ಕಾಗಿ ದುಡಿಯುವ ಮನೋಭಾವ ತಾಳುವುದು ಅತ್ಯವಶ್ಯಕವೆಂದೂ ಶ್ರೀ ಗೊಲ್ವಾಲಕರರು ಅಲಹಾಬಾದ್ ಸಂಘದಲ್ಲಿ ಮಾತನಾಡುತ್ತಾ ತಿಳಿಸಿದರು.

ಸಂಸ್ಥಾನದ ಜನಸಂಖ್ಯೆ

ಬೆಂಗಳೂರು ಮಾ. ೧೦

ಈ ತಿಂಗಳಿನಲ್ಲಿ ನಡೆದ ಜನಗಣತಿಪ್ರಕಾರ ಮೈಸೂರು ಸಂಸ್ಥಾನದ ಜನಸಂಖ್ಯೆಯು ೯೦ ಲಕ್ಷಕ್ಕೆ ಏರಿದೆ. ೧೦ ವರ್ಷದ ಅವಧಿಯಲ್ಲಿ ಶೇಕಡ ೨೩ರಷ್ಟು ಹೆಚ್ಚಿದೆ. ೧೯೪೧ರಲ್ಲಿ ೭೩,೨೯,೧೪೦ ಇದ್ದಿತು. ಈಗ ೯,೦೭೧,೬೭೮ ಇದೆ.

ಬೆಂಗಳೂರಿನಲ್ಲಿ (ಸಿವಿಲ್ ಸ್ಟೇಷನ್ ಸೇರಿ) ೧೯೪೧ರಲ್ಲಿ ಜನಸಂಖ್ಯೆಯು ೪.೦೬,೦೦೦ ಮಂದಿ ಇದ್ದರು. ಈಗ ಬೆಂಗಳೂರು ಕಾರ್ಪೋರೇಷನ್ನಿನ ಜನಸಂಖ್ಯೆ ೭,೭೬,೧೭೦ ಅಂದರೆ ಶೇಕಡ ೯೦ ರಷ್ಟು ಹೆಚ್ಚಿದೆ.

ಮೈಸೂರು ನಗರದ ಜನಸಂಖ್ಯೆಯು ೧೯೪೧ರಲ್ಲಿ ೧,೫೦,೫೪೦ ಇತ್ತು. ಈಗ ೨೪೪,೩೩೪ ಇದೆ- ಶೇಕಡ ೬೨ ರಷ್ಟು ಹೆಚ್ಚಿದೆ.

ಭಾರತಕ್ಕೆ ಅಮೆರಿಕದ ಆಹಾರ

ಮಸೂದೆಗೆ ವಿರೋಧ ಹೆಚ್ಚಿದೆ

ಭಾರತಕ್ಕೆ ೨೦ ಲಕ್ಷ ಟನ್ ಆಹಾರ ಧಾನ್ಯವನ್ನು ಉಚಿತವಾಗಿ ಕಳಿಸಿಕೊಡಬೇಕೆಂಬ ಮಸೂದೆಗೆ ಅಮೆರಿಕದ ಕಾಂಗ್ರೆಸ್ ಸಭೆಯಲ್ಲಿ ವಿರೋಧ ಹೆಚ್ಚಿದೆ.

ಭಾರತಕ್ಕೆ ಆಹಾರ ಧಾನ್ಯ ಕಳಿಸುವ ಮಸೂದೆಯನ್ನು ಕಾಂಗ್ರೆಸ್ ಸಭೆಯಲ್ಲಿ ಅನುಮೋದಿಸಿ ತ್ವರಿತವಾಗಿ ಕಳಿಸಿಕೊಡಬೇಕೆಂದು ನಿಯೋಜಿಸಲಾಗಿತ್ತು. ಆದರೆ ವಿರೋಧ ಹೆಚ್ಚಿದ ಪ್ರಯುಕ್ತ ಎಲ್ಲವೂ ನಿಧಾನವಾಗಿದೆ.

ಡಾ|| ಭರತನ್ ಕುಮಾರಪ್ಪನವರು [ಸಂ. ರಾ. ಪರಿಷತ್ತಿನ ಸಾಮಾಜಿಕ ಸಮಿತಿಯಲ್ಲಿ ಭಾರತದ ಪ್ರತಿನಿಧಿ] ಟೆಕ್ಸಾಸ್‌ನಲ್ಲಿ ಕೆಲ ವಾರಗಳ ಹಿಂದೆ ಮಾತನಾಡುವಾಗ ದೂರ ಪ್ರಾಚ್ಯದ ನಮ್ಮ ಪ್ರಮುಖ ಶತ್ರು ಕಮ್ಯೂನಿಸಂ ಅಲ್ಲ ಪಾಶ್ಚಾತ್ಯ ಸಾಮ್ರಾಜ್ಯ ಶಾಹಿ ಎಂದು ತಿಳಿಸಿದರು.

ಕಾಂಗ್ರೆಸ್ಸಿನ ಪ್ರತಿನಿಧಿಗಳು ಭಾರತ ಪ್ರತಿನಿಯ ಈ ವಿಚಾರಧಾರೆ ಕಮ್ಯೂನಿಸ್ಟ್ ಪರವಾದುದೆಂದು ಹೇಳುತ್ತಿದ್ದಾರೆ.

ಶ್ರೀ ಕುಮಾರಪ್ಪನವರು ಮೇಲ್ಕಂಡಂತೆ ಭಾಷಣಮಾಡಿದ ಮೇಲೆ ಮುಂದೆ ಅವರು ಮಾಡಬೇಕಾಗಿದ್ದ ಭಾಷಣಗಳು ಕೆಲವು ರದ್ದಾದವು.

ಡಾ|| ಭರತನ್ ಕುಮಾರಪ್ಪನವರ ಭಾಷಣದ ವಿಷಯವಾಗಿ ಭಾರತ ಸರ್ಕಾರವು ಒಂದು ಪ್ರಕಟನೆ ಹೊರಡಿಸಿ, ಅವರ ಅಭಿಪ್ರಾಯವು ವೈಯಕ್ತಿಕವೆಂದೂ ಭಾರತ ಸರ್ಕಾರದ ಪರವಾಗಿ ಅವರು ಮಾತನಾಡಲು ಅವರಿಗೆ ಆಶ್ವಾಸನ ಕೊಟ್ಟಿಲ್ಲವೆಂದು ತಿಳಿಸಿದೆ.

ಪಾಶ್ಚಿಮಾತ್ಯ ಪ್ರಭಾವ ವಿರಕೂಡದು

ಪರ್ಶಿಯಾದಲ್ಲಿ ಇತ್ತೀಚೆಗೆ ರಾಜಕೀಯ ಕೊಲೆಗಳು ಸಾಧಾರಣವಾಗಿ ಹೋಗಿವೆ.

೧೯೪೯ನೇ ನವೆಂಬರಿನಲ್ಲಿ ಪರ್ಶಿಯಾದ ಪ್ರಧಾನಿಯಾಗಿದ್ದ ಅಬ್ದುಲ್ ಹುಸೇನ್ ಹಜೀರ್‌ರವರನ್ನು ಒಂದು ಮಸೀದಿಯಲ್ಲಿ ಕೊಲೆ ಮಾಡಲಾಯಿತು. ಅವರ ನಂತರ ಈಗ ಪ್ರಧಾನಿ ಜನರಲ್ ಅಲಿ ರಜ್ಮಾರವರ ಕೊಲೆಯಾಗಿದೆ. ಹಿಂದಿನ ಪ್ರಧಾನಿಯನ್ನು ಕೊಲೆ ಮಾಡಿದವನು ಈಗ ಕೊಲೆ ಮಾಡಿದವನ ಗುಂಪಿಗೆ ಸೇರಿದವನು. ಇವರೆಲ್ಲರೂ ಫಾದಿಯನ್ ಇಸ್ಲಾಮಿಕ್ ಸಂಘಕ್ಕೆ ಸೇರಿದವರು. ಈ ಸಂಘದ ನಾಯಕರು ೨೩ ವಯಸ್ಸಿನ ಅಬುಲ್ ಕಾಷಾನಿಯೆಂಬುವರು. ಇವರು ಮೊದಲನೇ ಯುದ್ಧವಾದನಂತರ ಬ್ರಿಟಿಷರ ಮೇಲೆ ದಂಗೆಯೇಳಲು ಇರಾಕೀ ಜನರನ್ನು ಹುರುದುಂಬಿಸಿ ಚಳುವಳಿಕೆ ನಾಯಕತ್ವವನ್ನು ವಹಿಸಿದ್ದರು. ಪರ್ಶಿಯಾದಲ್ಲಿಯೂ ಪಾಶ್ಚಿಮಾತ್ಯ ಪ್ರಭಾವವಿರಕೂಡದು ಅದನ್ನು ತಡೆಗಟ್ಟಬೇಕೆಂಬುದೇ ಈ ಸಂಘದ ಮುಖ್ಯ ಧ್ಯೇಯ. ಪಾಶ್ಚಿಮಾತ್ಯ ಪ್ರಭಾವಕ್ಕೆ ಯಾರು ನೆರವಾಗುವರೋ ಅವರೆಲ್ಲರೂ ಇಸ್ಲಾಮಿನ ಶತ್ರುಗಳು ಅಂತಹವರನ್ನು ಕೊಲ್ಲಬೇಕೆಂಬುದೇ ಈ ಸಂಘದತತ್ವ.

ಜನರಲ್ ರಜ್ಮಾರವರ ಪ್ರಧಾನಿಯಾದೊಡನೆಯೇ ಕಾಷಾನಿಯವರನ್ನು ದೇಶಭ್ರಷ್ಟರನ್ನಾಗಿ ಮಾಡಿದರು. ಆದರೂ ಅವರು ಶಾಸನ ಸಭೆಗೆ ಚುನಾಯಿತರಾಗಿ ಬಂದರು. ಎಣ್ಣೆ ಕೈಗಾರಿಕೆಯ ರಾಷ್ಟ್ರೀಕರಣ ವಿಷಯದಲ್ಲಿ ಇರಾಕ್ ಮತ್ತು ಬ್ರಿಟನ್ ಒಪ್ಪಂದವಾಗುವುದನ್ನು ಈ ಸಂಘವು ನಿಶೇಧಿಸುತ್ತಲಿತ್ತು. ಈ ಸಂದರ್ಭದಲ್ಲಿ ಸಾಮೂಹಿಕ ಮುಷ್ಕರವನ್ನು ಹೂಡಬೇಕೆಂದು ಕಾಷಾನಿ ಚಳುವಳಿ ಹೂಡಿದ್ದರು. ಇದರ ಫಲವೇ ಈಗ ಜನರಲ್ ಅಲಿ ರಜ್ಮಾರವರ ಕೊಲೆಯೆಂದು ಹೇಳಲಾಗಿದೆ.

ರಣಜಿತ್

೭—೩—೫೧ರಿಂದ

ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಬಾಬುಲ್

ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೩—೧೯೫೪ನೇ ಮಂಗಳವಾರ [ಸಂಚಿಕೆ ೧೫೭

ಕಾಂಗ್ರೆಸ್ ಕಾರ್ಯಸಮಿತಿಗೆ ಪ್ರಕಾಶಂರ ಎಚ್ಚರಿಕೆ

ನಿರ್ಣಯ ವಾಪಸ್ಸು ಪಡೆಯದಿದ್ದರೆ ಕಾನೂನು ಪ್ರಯೋಗ

ತಮ್ಮ ವಿರುದ್ಧ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇತ್ತೀಚೆಗೆ ಮಾಡಿದ ನಿರ್ಣಯವನ್ನು ನಾಲ್ಕು ವಾರಗಳೊಳಗಾಗಿ ಹಿಂದಕ್ಕೆ ತೆಗೆದುಕೊಳ್ಳದಿದ್ದಲ್ಲಿ ನಿರ್ಣಯದಲ್ಲಿ ಭಾಗಿಗಳಾಗಿರುವವರ ಮೇಲೆ ಶಾಸನರೀತ್ಯಾ ತಾವು ಕಾರ್ಯಕ್ರಮತೆಗೆದುಕೊಳ್ಳುವುದಾಗಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ ಗೌತಮರವರಿಗೆ ಶ್ರೀ ಪ್ರಕಾಶಂರವರು ಎಚ್ಚರಿಕೆ ಪತ್ರ ಬರೆದಿರುವರೆಂದು ತಿಳಿಯಬರುತ್ತದೆ

ಅಸೆಂಬ್ಲಿ ಬಡ್ಜೆಟ್ ಅಧಿವೇಶನ

ಬೆಂಗಳೂರು ಮಾ. ೧೩

ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿಯ ಬಡ್ಜೆಟ್ ಅಧಿವೇಶನವು ಮಾರ್ಚಿ ೧೫ರಿಂದ ಏಪ್ರಿಲ್ ೫ರ ವರೆಗೆ ನಡೆಯುವುದು. ಪ್ರಾರಂಭದ ದಿನ ಟೌನ್ ಹಾಲಿನಲ್ಲೂ ಅನಂತರ ಲೆಜಿಸ್ಲೆಟಿವ್ ಅಸೆಂಬ್ಲಿ ಭವನದಲ್ಲೂ ಸಭೆ ನಡೆಯುವುದು. ೧೯ ನೇ ತಾ॥ ಸಭೆಯಲ್ಲಿ ಬಡ್ಜೆಟ್ಟನ್ನು ಮಂಡಿಸಲಾಗುವುದು. ಅಧಿವೇಶನಕ್ಕೆ ೫೭ ನಿರ್ಣಯಗಳೂ, ೨೪೫ ಸ್ಟಾರ್ಡ್ ಪ್ರಶ್ನೆಗಳೂ, ೧೨೯ ಸ್ಟಾರ್ಡ್ ಅಲ್ಲದ ಪ್ರಶ್ನೆಗಳೂ ಬಂದಿವೆ.

ಪ್ರಮುಖ ನಿರ್ಣಯಗಳು

ಸರ್ಕಾರಿ ನೌಕರರಿಗೆ ಸೇ. ೫೦ ರಷ್ಟು ತುಟ್ಟೀ ಭತ್ಯ ಹೆಚ್ಚಿಸಬೇಕೆಂದು ಶ್ರೀ ಡಿ ಹೆಚ್. ಚಂದ್ರಶೇಖರಯ್ಯನವರು ನಿರ್ಣಯ ತಂದಿದ್ದಾರೆ. ನಾನಾ ಶೈಕ್ಷಣಿಕ ಮಹತ್ವದ ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಒದಗಿಸುವದಕ್ಕಾಗಿ ಪ್ರತ್ಯೇಕ ಇಲಾಖೆ ಆಗಬೇಕೆಂದು ಶ್ರೀ ಎಂ ಸಿ ಶಿವಾನಂದ ಶರ್ಮರು ಸೂಚಿಸಿದ್ದಾರೆ. ಸಂಸ್ಥಾನದ ನಗರಗಳಲ್ಲಿ ಬಿಟ್ಟು ಉಳಿದ ಕಡೆ ಆಹಾರ ಕಂಟ್ರೋಲು ತೆಗೆಯಬೇಕೆಂದು ಶ್ರೀ ಕಡಿದಾಳ್ ಮಂಜಪ್ಪನವರ ಸೂಚನೆ ಮಾಡಿದ್ದಾರೆ.

ಆರು ಪೌಂಡಿಗೆ ರೇಡಿಯೋ

ಅಲ್ಯೂಮಿನಿಯಂ ಡಬರಿಯಂತಿರುವ ೬ ಪೌಂಡು ೫ ಷಿಲಿಂಗಿನ ಬೆಲೆಬಾಳುವ ಸುಲಭ ಬೆಲೆಯ ರೇಡಿಯೋವನ್ನು ಹೊಸದಾಗಿ ತಯಾರಿಸಲಾಗಿದೆ. ಪ್ರಥಮವಾಗಿ ತಯಾರಾದ ೨,೦೦೦ ಸೆಟ್ಟುಗಳು ಕೆಲವು ವಾರಗಳಲ್ಲಿ ಖರ್ಚಾಗಿವೆ.

ಕನ್ನಡವನ್ನೇ ಶಿಕ್ಷಣ ಮಾಧ್ಯಮ ಮಾಡಬೇಕೆಂದು ಶ್ರೀ ಡಿ ಎಂ ಸಿದ್ದಯ್ಯನವರೂ, ಕಡ್ಡಾಯವಾಗಿ ಬೇಸಿಕ್ ಶಿಕ್ಷಣ ಜಾರಿಗೆ ತರಬೇಕೆಂದು ಶ್ರೀ ಹೆಚ್. ಸಿದ್ದನಂಜಪ್ಪನವರೂ, ಮೂರು ಜನ ಸದಸ್ಯರುಳ್ಳ ಲಂಚ ನಿರೋಧ ಕಮಿಷನ್ ರಚಿಸಬೇಕೆಂದು ಶ್ರೀ ಎ. ಜಿ. ರಾಮಚಂದ್ರರಾಯರೂ ನಿರ್ಣಯ ಕಳಿಸಿದ್ದಾರೆ.

ಮಂತ್ರಿ ಮಂಡಲದ ಕೆಲಸಕಾರ್ಯ ವಿಮರ್ಶೆ ಮಾಡಲು ಸಮಿತಿಯೊಂದನ್ನು ನೇಮಿಸಬೇಕೆಂದು ಮುಷೀರ್-ಉಲ್-ಮುಲ್ಕ್ ಜೆ. ಎಂ ಇಮಾಂ ಕೇಳಿದ್ದಾರೆ. ನಾನಾ ಹತೋಟಿಗಳ ಸಾಧಕಬಾಧಕ ವಿಮರ್ಶೆಗೆ ಸಮಿತಿ ರಚಿಸಬೇಕೆಂದೂ ಅವರು ಒತ್ತಾಯ ಮಾಡಿದ್ದಾರೆ. ನ್ಯಾಯಾಂಗ ಕಾರ್ಯಾಂಗ ಪ್ರತ್ಯೇಕಗೊಳಿಸಬೇಕೆಂದು ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ನಿರ್ಣಯ ತಂದಿದ್ದಾರೆ.

ಅಣುಬಾಂಬು ಪ್ರಯೋಗಕ್ಕೆ ಸಿದ್ಧ

ಜ॥ ಐಸನ್‌ಹೋವರ್ ಹೇಳಿಕೆ

ನಿರೀಕ್ಷಿಸಿದ ಫಲವು ದೊರೆಯುವುದಾದರೆ ನಾನು ತಕ್ಷಣ ಅಣುಬಾಂಬನ್ನು ಉಪಯೋಗಿಸುತ್ತೇನೆ ಎಂದು ಅಟ್ಲಾಂಟಿಕ್ ಸೈನ್ಯದ ಮಹಾದಂಡನಾಯಕ ಜನರಲ್ ಐಸನ್ ಹೋವರ್‌ರವರು ವಾಷಿಂಗ್‌ಟನ್ನಿನಲ್ಲಿ ಮಾತನಾಡುತ್ತಾ ಹೇಳಿರುವರು.

೪೫ ದಿನಗಳ ನಂತರ ಎರಡನೇ ಮಗು

ಕಲ್ಕತ್ತಾ ಬಳಿ ಇರುವ ಹೌರಾ ನಗರದ ೨೭ ವರ್ಷದ ಒಬ್ಬ ಮಹಿಳೆಯು ಕಳೆದ ಜನವರಿಯ ೫ ನೇ ವಾರದಲ್ಲಿ ಒಂದು ಗಂಡು ಮಗುವನ್ನು ಹಡೆದಳು ಆದರೂ ಗರ್ಭಿಣಿಯಾಗಿರುವ ಸೂಚನೆಯೇ ಇದ್ದಿತು ೪೫ ದಿನಗಳಾದ ನಂತರ ಶಸ್ತ್ರಚಿಕಿತ್ಸೆ ನಡೆದಾಗ, ಮತ್ತೊಂದು ಗಂಡು ಮಗುವು ಹುಟ್ಟಿತು ತಾಯಿ ಮತ್ತು ಎರಡು ಮಕ್ಕಳೂ ಆರೋಗ್ಯವಾಗಿರುತ್ತಾರೆ

ಶ್ರೀ ಎಂ. ಆರ್. ಜಯರಾವ್—ನ್ಯಾಯಾಂಗ ಕಾರ್ಯದರ್ಶಿ

ಬೆಂಗಳೂರು ಮಾ. ೧೩

ನ್ಯಾಯಾಂಗ ಶಾಖಾ ಕಾರ್ಯದರ್ಶಿ ಶ್ರೀ ಟಿ. ಎಸ್. ಪುಟ್ಟಸ್ವಾಮಿಯವರನ್ನು ಸಂಸ್ಥಾನದ ಲೇಬರ್ ಕಮಿಷನರಾಗಿಯೂ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ. ಆರ್. ಜಯರಾಯರನ್ನು ನ್ಯಾಯಾಂಗ ಕಾರ್ಯದರ್ಶಿಯನ್ನಾಗಿಯೂ ನೇಮಿಸಲಾಗಿದೆ,

ನ್ಯೂಸ್‌ಪ್ರಿಂಟ್ ಬೆಲೆ

ಎರಡು ವರ್ಷಗಳ ಹಿಂದೆ ನ್ಯೂಸ್‌ಪ್ರಿಂಟಿನ ಬೆಲೆಯು ಟನ್ನಿಗೆ ೩೫ ಪೌಂಡು ಇತ್ತು. ಈಗ ೧೦೦ ಪೌಂಡಿಗೆ ಏರಿದೆ.

ಮೈಸೂರಿನಲ್ಲಿ ಸಾರ್ವತ್ರಿಕ ಚುನಾವಣೆ

ಮೈಸೂರಿನ ಸಾರ್ವತ್ರಿಕ ಚುನಾವಣೆ ನಡೆಯುವ ತಾರೀಖನ್ನು ಸರ್ಕಾರವು ನಿಗದಿ ಮಾಡಿ ಕೇಂದ್ರಕ್ಕೆ ತಿಳಿಸಿದೆ, ಕೇಂದ್ರದಿಂದ ನಿರ್ದೇಶನ ಬರಬೇಕಾಗಿದೆ.

ನೇಪಾಳದ ಮಂತ್ರಿಗಳಿಬ್ಬರ ಕೊಲೆಗೆ ಪಿತೂರಿ?

ನೇಪಾಳದ ಹೊಸ ಮಂತ್ರಿ ಮಂಡಲದಲ್ಲಿರುವ ಭಾರತ್‌ಮಣಿ ಶರ್ಮ ಮತ್ತು ಗಣೇಶ್ ಮಾನ್‌ಸಿಂಗ್ ಎಂಬುವರು ಖಟ್ಮಂಡುವಿಗೆ ೧೬ ಮೈಲಿದೂರ ಇರುವ ಬನೇಪ ಎಂಬ ಊರಿನಿಂದ ಕಾರಿನಲ್ಲಿ ಕಳೆದ ಶುಕ್ರವಾರ ಹಿಂತಿರುಗುತಿದ್ದಾಗ ಅವರು ಕಾರು ೫೦೦ ಅಡಿ ಕೆಳಗೆ ಉರುಳಿ ಅವರು ಮೃತ್ಯುಪಾಲಾಗುವುದರಲ್ಲಿದ್ದು ಅದೃಷ್ಟವಶಾತ್ ತಪ್ಪಿ, ಪಾರಾದರೆಂದು ವರದಿಯಾಗಿದೆ. ಒಂದು ಕಡೆ ಇಳಿಜಾರಿನ ತಿರುವಿನಲ್ಲಿ ಕಲ್ಲುಬಂಡೆಗಳನ್ನು ಉರುಳಿಸಲಾಗಿತ್ತೆಂದೂ, ಕಾರಿನ ಡ್ರೈವರನು ಹಠಾತ್ತನೆ ಅದನ್ನು ನಿಲ್ಲಿಸಲಾಗಿ ಅಪಾಯ ಸಂಭವಿಸಲಿಲ್ಲವೆಂದೂ ಹೇಳಲಾಗಿದೆ ಅಲ್ಲಿನ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಿರುವವರಿಂದ ಈ ಕೃತ್ಯವು ನಡೆದಿರಬಹುದೆಂದು ಹೇಳಲಾಗಿದೆ ಗಾಡಿಯಲ್ಲಿ ಇಬ್ಬರು ಪ್ರತಿಕೋಮಿನ್ಯೋಗಿಗಳೂ ಇದ್ದರು.

ಒಂದು ಟನ್ ಮರಳಿಗೆ ೨೫೦೦ ರೂ.

ತಿರುವಾಂಕೂರಿನಲ್ಲಿರುವ ಮರಳಿನಲ್ಲಿ ಥೋರಿಯಂ ಮತ್ತು ಸೆರಿಯಂ ಎಂಬ ಅಮೂಲ್ಯ ವಸ್ತುಗಳಿರುವುದರಿಂದ ಹಿಂದೆ ಟನ್ನಿಗೆ ೨೫ ರೂಗಳಿದ್ದ ಈ ಮರಳಿಗೆ ಈಗ ಭಾರತ ಸರ್ಕಾರಕ್ಕೆ ಟನ್ನಿಗೆ ೨೫೦೦ ರೂ. ಕೊಡುವುದಾಗಿ ವಿದೇಶಿಯರು ಕೇಳುತ್ತಿದ್ದಾರೆ.

ಪಾಕಿಸ್ತಾನ ರಾಜಕೀಯದಲ್ಲಿ ಒಂದು ಉದ್ರೇಕ ನಾಟಕ

ಮ್ಯಾಂಚೆಸ್ಟರ್ ಗಾರ್ಡಿಯನ್ ಟೀಕೆ

ಸರ್ಕಾರವನ್ನು ಉರುಳಿಸಬೇಕೆಂಬ ಒಳಸಂಚು ನಡೆಸಿದರೆಂಬ ಆಪಾದನೆ ಮೇಲೆ ದಸ್ತಗಿರಿಮಾಗಿರುವ ಪಾಕಿಸ್ತಾನದ ಮಿಲಿಟರಿ ಚೀಫ್‌ಆಫ್‌ಸ್ಟಾಫ್ಸ್ ಮಿ|| ಅಕ್ಬರ್ ಖಾನರನ್ನು ಬಂಧನದಲ್ಲಿಟ್ಟಿರುವ ಸ್ಥಳವನ್ನು ಗುಪ್ತವಾಗಿಡಲಾಗಿದೆ.

ಇದೇ ಸಂದರ್ಭದಲ್ಲಿ ಇನ್ನೂ ನಾಲ್ಕು ಮಂದಿ ಉನ್ನತ ಸೈನ್ಯಾಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿ ಗೃಹಬಂಧನದಲ್ಲಿಡಲಾಗಿದೆಯೆಂದು ತಿಳಿಯಬರುತ್ತದೆ. ಇವರನ್ನು ಪಾಕಿಸ್ತಾನದ ವಿಮಾನದಳದ ಉನ್ನತಾಧಿಕಾರಿ ಮಿ|| ಜಾಂಜುಯರವರು ಸೇರಿರುವರೆಂದು ತಿಳಿಯಬರುತ್ತದೆ.

ಪಾಕಿಸ್ಥಾನದಾದ್ಯಂತ ಕಮ್ಯೂನಿಸ್ಟ ರಾಜ್ಯವನ್ನು ಸ್ಥಾಪಿಸಬೇಕೆಂಬುದೇ ಈ ಒಳಸಂಚಿ ಅದಕ್ಕಾಗಿ ಎಲ್ಲಾ ಪದ್ಧತಿಗಳು ಪೂರೈಸುತ್ತಬಂದಿದ್ದು ದೈವವಶಾತ್ ಹೊರಬೀಳಲು ದೇಶದ ಹಿತಕ್ಕೆ ದಕ್ಕ ಬರುವುದು ನಿಂತಿತೆಂನೂ ಹೇಳಲಾಗಿದೆ.

ಮಿ|| ಅಕ್ಬರ್‌ಖಾನ್ ಮತ್ತಿತರು ಈ ಕಾರ್ಯದಲ್ಲಿ ತೊಡಗಿದ್ದುದಕ್ಕೆ ತಕ್ಕ ಆಧಾರಗಳು ದೊರೆತಿರುವುದಾಗಿ ಪಾಕಿಸ್ತಾನ ಪ್ರಧಾನಿ ದಂಡನಾಯಕರು ಹೇಳಿರುವುದಾಗಿ ವರದಿಯಾಗಿದೆ.

ಬ್ರಿಗೇಡಿಯರ್ ಲತೀಫ್‌ರವರನ್ನು ಹೈದರಾಬಾದ್ (ಸಿಂಧ್) ಜೈಲಿನಲ್ಲಿಡಲಾಗಿದೆ ಪಾಕಿಸ್ತಾನದಾದ್ಯಂತ ಸರ್ಕಾರವು ಕಮ್ಯೂನಿಸ್ಟ ಪಕ್ಷದ ಮೇಲೆ ಮುಟ್ಟುಗೋಲು ಹಾಕುವಂತೆ ಕಾಣುವುದಾಗಿ ತಿಳಿಯಬರುತ್ತದೆ. ಈ ದಸ್ತಗಿರಿಗಳಾದೊಡನೆಯೇ ಕೆಲವು ಕಮ್ಯೂನಿಸ್ಟ ಮುಖಂಡರು ತಲೆ ಮರಿಸಿಕೊಂಡಿರುವುದಾಗಿ ಹೇಳಲಾಗಿದೆ.

ಈ ಒಳಸಂಚು ಪ್ರಕರಣವು ನಿಜಾಂಶಕ್ಕೆ ದೂರವೆಂದೂ, ಮಿ|| ಲಿಯಾಖತ್ ಅಲಿಖಾನರವರ ಎಲೆಕ್ಷನ್ ಸ್ಟಂಟು ಅಲ್ಲದೆ ಬ್ರಿಟನ್ ಅಮೆರಿಕಾ ದೇಶಗಳಿಂದ ಸೈನ್ಯ ಸಹಾಯ ಪಡೆಯಲು ಹೂಡಿರುವ ಆಟವೆಂದು ಕೆಲವೆಡೆ ಹೇಳಲಾಗುತ್ತಲಿದೆಂದೂ ವರದಿಯಾಗಿದೆ.

ಹೊಸ ಟೆಲಿಫೋನ್ ದರ

ಏಪ್ರೆಲ್ ೧೬ನೇ ತಾ|| ನಿಂದ ಸಂಸ್ಥಾನಗಳಲ್ಲಿ ವಿಧಿಸುತ್ತಲಿದ್ದ ಟೆಲಿಫೋನ್ (ಬಾಡಿಗೆ) ದರಗಳನ್ನು ಭಾರತಾದ್ಯಂತ ಏಕಪ್ರಕಾರವಿರುವಂತೆ ಹೆಚ್ಚಿಸಲಾಗುವುದೆಂದು ಅಂಚೆ ಇಲಾಖೆಯು ಪ್ರಕಟಣೆ ಹೊರಡಿಸಿದೆ,

(ಅಗಸ್ಟು ೧೬ರಿಂದ ಹೊಸ ದರಗಳು ಜಾರಿಗೆ ಬರುವುದೆಂದು ಟೆಲಿಫೋನ್ ಇಲಾಖೆಯವರು ಟೆಲಿಫೋನ್ ಇಟ್ಟುಕೊಂಡಿರುವವರಿಗೆ ತಿಳಿಸಿದ್ದರು. ಆದರೆ ಈ ಹೊಸ ಪ್ರಕಟಣೆಪ್ರಕಾರ ಮುಂದಿನ ತಿಂಗಳಿನಿಂದಲೇ ಜಾರಿಗೆ ಬರುವುದು.)

ಹೊಸ ಔಷಧ

ವಿಷಮಶೀತಜ್ವರ, ಆಮಶಂಕೆ ಕ್ಷಯ ಮುಂತಾದ ರೋಗಗಳ ನಿವಾರಣೆಗೆ ನುಗ್ಗೆಕಾಯಿನಿಂದ ಒಂದು ಹೊಸ ಔಷಧವನ್ನು ಬೆಂಗಳೂರಿನಲ್ಲಿರುವ ಇಂಡಿಯನ್ ಸೈನ್ಸ್ ಇನ್‌ಸ್ಟಿಟ್ಯೂಟಿನವರು ಕಂಡು ಹಿಡಿದಿರುವರು. ಈ ಔಷಧವು ಪೆನಿಸಲಿನ್ ಔಷಧಕ್ಕೆ ಸಮನಾಗುವುದೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಪಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಹಿಂದುಳಿದ ರಾಜ್ಯಗಳಿಗೆ ನೆರವು

ಏಷ್ಯಾ, ಆಫ್ರಿಕಾ, ಮಧ್ಯಪ್ರಾಂತ್ಯ ಮುಂತಾದ ದೇಶಗಳಲ್ಲಿರುವ ಹಿಂದುಳಿದಿರುವ ರಾಜ್ಯಗಳಿಗೆ ೫೦೦ ಮಿಲಿಯನ್ ಡಾಲರುಗಳ ಸಹಾಯ ನೀಡಬೇಕೆಂಬುದು ಅಂತರರಾಷ್ಟ್ರೀಯ ಅಭಿವೃದ್ಧಿ ಸಮಿತಿಯು ಅಮೆರಿಕಾಕ್ಕೆ ವರದಿಯನ್ನೊಪ್ಪಿಸಿ, ತಿಳಿಸಿದೆ. ಅಧ್ಯಕ್ಷ ಟ್ರೂಮನ್ನರು ಈ ವರದಿಯನ್ನು ಕಾಂಗ್ರೆಸ್ಸಿನ ಮುಂದಿಟ್ಟು ಅನುಮತಿಯನ್ನು ಪಡೆಯಲಿರುವರು. ಈ ಹಣವನ್ನು ಅಧಿಕ ಆಹಾರಬೆಳೆ, ಯುದ್ಧ ... ಮುಂತಾದುವಕ್ಕೆ ಉಪಯೋಗಿಸಲಾಗುವುದುವುದು.

ನೌಕಾ ನಿರ್ಮಾಣಯೋಜನೆ

ಅಮೆರಿಕಾದಲ್ಲಿ ಹೊಸ ನೌಕಾ ನಿರ್ಮಾಣಯೋಜನೆಗೆ ೨೨೫ ಕೋಟಿ ಡಾಲರು ಗಳು ಖರ್ಚಾಗುವುವು. ಇದಕ್ಕೆ ಟ್ರೂಮನ್ನರ ಸಹಿ ಬಿದ್ದಿದೆ.

ಸಕ್ಕರೆ ಮಾರಲು ಅನುಮತಿ

ನಿಗದಿಯಾಗಿರುವ ಪ್ರಮಾಣಕ್ಕಿಂತ ಹೆಚ್ಚು ಸಕ್ಕರೆ ತಯಾರ್ಮಾಡುತ್ತಲಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಸಕ್ಕರೆಯನ್ನು ಪೇಟೆಯಲ್ಲಿ ಬಹಿರಂಗವಾಗಿ ಮಾರಬಹುದೆಂದು ಭಾರತ ಸರ್ಕಾರವು ಪ್ರಕಟಿಸಿದೆ.

ಸೆಂಚೂರಿಯನ್ ಎಂಬ ಹೊಸ ಬ್ರಿಟನ್ನಿನ ಟ್ಯಾಂಕು

ಮೈಸೂರಿಗೆ ಕೆನಡಾಗೋಧಿ

ಕೆನಡಾದಿಂದ ಮದರಾಸಿಗೆ ೧೧೫೦ ಟನ್ ಗೋಧಿ ಬಂದಿದೆ. ಅದರ ಪೈಕಿ ೭೫೦ ಟನ್ ಮದರಾಸಿಗೆ, ೫೦೦ ಟನ್ ಮೈಸೂರಿಗೆ ಕೊಡಲಾಗುವುದು.

ಡಕಾಯಿತರ ಬಂಧನ

ಭಾರತ ನೇಪಾಳ ಗಡಿಗಳಲ್ಲಿ ಡಕಾಯಿತರ ವಿಶೇಷ ಹಾವಳಿಗಳನ್ನು ಉಭಯ ಪ್ರಾಂತ್ಯಗಳಲ್ಲಿ ಮಾಡುತ್ತಲಿರುವುದನ್ನು ತಡೆಗಟ್ಟಲು ಭಾರತ ನೇಪಾಳ ಸರ್ಕಾರಗಳು ಸಂಯುಕ್ತ ಕಾರ್ಯಾಚರಣೆ ನಡೆಸಿ ಡಕಾಯಿತರನ್ನೆಲ್ಲಾ ಬಂಧಿಸಲಾಗಿದೆಯೆಂದು ಈಗ ಪರಿಸ್ಥಿತಿಯು ಉತ್ತಮಗೊಂಡಿದೆಯೆಂದೂ ಹೇಳಲಾಗಿದೆ.

೨೨೦ ಹಡಗುಗಳು

ಬ್ರಿಟಿಷ್ ಸರ್ಕಾರವು ಮುಂದಿನ ಸಾಲಿನಲ್ಲಿ ೨೨೦ ಹಡಗುಗಳನ್ನು ತಯಾರ್ಮಾಡುವುದಾಗಿ ತಿಳಿಸಿದೆ.

---

* ಶ್ರೀ ಟಿ. ಟಿ. ತಾತಾಚಾರ್ಯ ಶರ್ಮರವರ ನಿಧಿಗೆ, ಮೈಸೂರು ನಗರದಲ್ಲಿ ಹಣ ಸಹಾಯನೀಡುವವರು ಹಣವನ್ನು ಖದ್ದರ್ ಪರಸ್ಪರ ಸಹಾಯಸಂಘದಲ್ಲಿರುವ ಶ್ರೀ ಶ್ರೀಕಂಠಯ್ಯನವರಲ್ಲಿ ಕೊಡಬಹುದೆಂದು ನಿಧಿ ಸಂಗ್ರಹಣ ಸಂಚಾಲಕರಾದ ಶ್ರೀ ಹೆಚ್. ಎಸ್. ದೊರೆಸ್ವಾಮಿಗಳು ತಿಳಿಸುತ್ತಾರೆ.

ರಣಜಿತ್
೬—೩—೫೧ರಿಂದ
ಅಮೋಘ ಪ್ರಾರಂಭ
ಪ್ರತಿದಿನ ೩ ಆಟಗಳು
ಬಾಬುಲ್
ಪಾತ್ರ- ನರ್ಗಿಸ್,
ದಿಲೀಪ್‌ಕುಮಾರ್.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮-೩-೧೯೫೯ನೇ ಬುಧವಾರ [ಸಂಚಿಕೆ ೧೫೮

ತೂರಿ ಅಪಾದನೆಯಲ್ಲಿ ಸತ್ಯಾಂಶವಿಲ್ಲ

ಈ ಅಪಾದನೆಯಿಂದ ಚರ್ಚೆ ಮತ್ತು ನಿರ್ಧಾರಕ್ಕೆ ಅವಕಾಶವೆಲ್ಲಿದೆ ?

ಕಾಶ್ಮೀರದಲ್ಲಿ ಭಾರತ ಒಳಸಂಚು ನಡೆಸಿದೆ ಎಂದು ಪಾಕಿಸ್ತಾನ ವಿದೇಶಾಂಗ ಮಂತ್ರಿ ಮಿ|| ಜಫರುಲ್ಲಾ ಖಾನರವರು ವಿಶ್ವಸಂಸ್ಥೆಯಲ್ಲಿ ಮಾಡಿರುವ ಆರೋಪಣೆಯನ್ನು ಭಾರತ ಪ್ರಧಾನಿ ನೆಹರೂರವರು ಉಗ್ರವಾಗಿ ಟೀಕಿಸಿ, ಖಂಡಿಸಿದ್ದಾರೆ.

ಈ ಆರೋಪಣೆಯು ಸುಳ್ಳಿನ ಕಂತೆ ೧೯೪೭ರಲ್ಲಿ ಪಾಕಿಸ್ತಾನ ಕಾಶ್ಮೀರದಲ್ಲಿ ಆಕ್ರಮಣ ನಡೆಸಿದ ಮೇಲೆ ಕಾಶ್ಮೀರದ ಇಷ್ಟಪ್ರಕಾರ ಭಾರತವು ತನ್ನ ಸೈನ್ಯವನ್ನೂ ಕಳುಹಿಸಿತು. ಅಲ್ಲಿಯವರೆಗೆ ಸೈನ್ಯವನ್ನು ಕಳುಹಿಸುವ ಕಲ್ಪನೆಯೇ ಯಾರಿಗೂ ಇರಲಿಲ್ಲ. ಈ ರೀತಿಯಾದ ಸುಳ್ಳು ಆಪಾದನ ಕೊಡುತ್ತಾ ಹೋದಲ್ಲಿ ಕಾಶ್ಮೀರ ಪ್ರಶ್ನೆ ವಿಷಯದಲ್ಲಿ ಚರ್ಚೆ ನಡೆಸಲು, ನಿರ್ಧಾರಕ್ಕೆ ಬರಲು ಅವಕಾಶವೆಲ್ಲಿದೆ? ವಿದೇಶೀ ಸೈನ್ಯಗಳು ಕಾಶ್ಮೀರವನ್ನು ಪ್ರವೇಶಿಸಲು ಆಸ್ಪದವೀಯಲಾಗುವುದಿಲ್ಲ. ಕಾಶ್ಮೀರ ಭವಿಷ್ಯವನ್ನು ಅಲ್ಲಿಯ ಪ್ರಜೆಗಳೇ ನಿರ್ಧರಿಸಿಕೊಳ್ಳಬೇಕು. ಕಾಶ್ಮೀರವು ಭಾರತದ ಒಂದು ಭಾಗ. ಕಾಶ್ಮೀರದ ಮೇಲೆ ಧಾಳಿಯಾದರೆ ಭಾರತದ ಮೇಲೆ ಧಾಳಿಯಾದಂತೆ ಪರಿಗಣಿಸಲಾಗುವುದೆಂದು ಪಂಡಿತ ನೆಹರೂ ತಿಳಿಸಿದರು.

ಟಿಬೆಟ್ ಸಮಸ್ಯೆ ಬಗ್ಗೆ ಸಂಧಾನ

"ಟಿಬೆಟ್ ಸಮಸ್ಯೆಯನ್ನು ಬಗೆಹರಿಸುವ ವಿಚಾರದಲ್ಲಿ ದಲಾಯಿಲಾಮಾ ಪ್ರತಿನಿಧಿ ಮತ್ತು ಚೀನಾ ಸರ್ಕಾರಗಳಲ್ಲಿ ಶೀಘ್ರವಾಗಿ ಸಂಧಾನ ಮಾತುಕತೆಗಳು ಪ್ರಾರಂಭವಾಗಲಿವೆ. ದಲಾಯಿಲಾಮಾರವರ ಪ್ರತಿನಿಧಿಗಳು ಈಗ ಪೆಕಿಂಗ್‌ಗೆ ಹೊರಟಿದ್ದಾರೆ"

—ಎಂಬುದಾಗಿ ಪ್ರಧಾನಿ ನೆಹರೂ ಅವರು ಪತ್ರಿಕಾಗೋಷ್ಠಿಯಲ್ಲಿ ಟಿಬೆಟ್ ಪ್ರಶ್ನೆಯ ಕುರಿತು ಮಾತನಾಡುತ್ತಾ ತಿಳಿಸಿದರು.

ಪಶ್ಚಿಮ ಯೂರೋಪನ್ನು ನುಂಗಲು ರಷ್ಯಬಂದರೆ ಧ್ವಂಸ ಮಾಡುತ್ತೇವೆ

"ರಷ್ಯವೇನಾದರೂ ಪಶ್ಚಿಮ ಯೂರೋಪನ್ನು ಕಬಳಿಸಲು ಹವಣಿಕೆ ಹಾಕಿದರೆ, ನಮ್ಮ ಕೈಯಲ್ಲಿರುವ ಎಲ್ಲಾ ಶಸ್ತ್ರಗಳನ್ನೂ, ಪ್ರತಿಯೊಂದು ಅಣುಬಾಂಬನ್ನೂ ಉಪಯೋಗಿಸುತ್ತೇವೆ, ಯುದ್ಧವೇನಾದರೂ ಸಂಭವಿಸಿದಲ್ಲಿ ತೀರಾ 'ಹಿಂದುಳಿದಿರುವ ೧೯, ಕೋಟಿ ರಷ್ಯನರನ್ನು, ಪ್ರಭಾವ ಶಾಲಿಗಳಾಗಿರುವ ೧೬ ಕೋಟಿ ಅಮೆರಿಕನರು ಸದೆಬಡಿಯುವುದರಲ್ಲಿ ನನಗ ನಂಬಿಕೆ ಇದೆ." ಎಂಬುದಾಗಿ ಜ|| ಐಸನ್ ಹೋವರ್‌ರವರು ಸೆನೆಟ್ ಸಮಿತಿಯ ಮುಂದೆ ತಿಳಿಸಿರುವರು.

ಜ|| ಐಸನ್ ಹೋವರ್‌ರವರು ಮುಂದುವರಿದು, "ರಷ್ಯವು ಈಗೇನಾದರೂ ಯುದ್ಧ ಸಾರಿದರೆ, ಅವರಂಥ ಅವಿವೇಕಿಗಳನ್ನಿಲ್ಲವೆಂತಲೇ ಹೇಳಬೇಕು. ನನಗೆ ಕೇವಲ ೧೨ ಡಿವಿಜನ್ನುಗಳ ಸೇನೆಯನ್ನು ಕೊಡಿ ರಷ್ಯಾ ಸೇನೆಗಳನ್ನು ನಿರ್ನಾಮಮಾಡಿಸುತ್ತೇನೆ" ಎಂದು ಹೇಳಿ, ತಮ್ಮ ಸೇನೆಗಳನ್ನು ಯೂರೋಪಿನ ರಕ್ಷಣೆಗಾಗಿ ಇಟ್ಟುಕೊಂಡಿರುವುದಾಗಿಯೂ, ರಷ್ಯಾದ ಮೇಲೆ ಬೀಳಲಿಕ್ಕಲ್ಲವೆಂದೂ ಸ್ಪಷ್ಟಪಡಿಸಿದರು.

ಭಾರತಕ್ಕೆ ರಷ್ಯಾದಿಂದ ಆಹಾರ

ಭಾರತಕ್ಕೆ ಆಹಾರಧಾನ್ಯವನ್ನು ಒದಗಿಸುವುದಾಗಿ ರಷ್ಯಾ ಭರವಸೆಯನ್ನಿತ್ತರೆ, ಅದನ್ನು ಉಪಯೋಗಿಸಿಕೊಳ್ಳಲು ಸಿದ್ಧರಾಗಿದ್ದೇವೆಂದು ಪ್ರಧಾನಿ ನೆಹರೂರವರು ಹೇಳಿರುವರು.

ಬಟ್ಟೆ ರಫ್ತಿಗೆ ಖಂಡನೆ

ಭಾರತದಲ್ಲಿ ತಯಾರಾಗುತ್ತಲಿರುವ ಬಟ್ಟೆಯ ರಫ್ತಿಗೆ ಅವಕಾಶವೀಯುವ ಸರ್ಕಾರದ ನೀತಿಯನ್ನು ಬೊಂಬಾಯಿ ಶಾಸನಸಭೆಯಲ್ಲಿ ಕೆಲವು ಸದಸ್ಯರು ಖಂಡಿಸಿದ್ದಾರೆ.

ಹೊಸ ಸಚಿವರು

ಸಂಸ್ಥಾನ ಶಾಖಾ ಸಹ ಕಾರ್ಯದರ್ಶಿ ಶ್ರೀ ಹರಿಶರ್ಮರವರು ರಾಜಸ್ಥಾನದ ಸೂತನ ಮಂತ್ರಿ ಪದವಿಯನ್ನು ಸ್ವೀಕರಿಸಿದರು.

ರಾಷ್ಟ್ರಾಧ್ಯಕ್ಷರು ತಿರುವಾಂಕೂರಿಗೆ

ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರು ಇದೇ ಮಾರ್ಚಿ ೨೪ನೇ ತಾರೀಖು ತಿರುವಾಂಕೂರಿಗೆ ಭೇಟಿ ಕೊಡುವರು.

ಹುದ್ದೆ ರದ್ದು

ಮೈಸೂರು ಸರ್ಕಾರವು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲು ಸ್ಥಾಪಿಸಿದ್ದ ಸ್ಪೆಷಲ್ ಡ್ಯೂಟಿ ಕಮಿಷನರ ಹುದ್ದೆಯನ್ನು ಇದೇ ಏಪ್ರಿಲ್ ಒಂದರಿಂದ ರದ್ದುಗೊಳಿಸುವುದಾಗಿ ಹೇಳಲಾಗಿದೆ.

೫೧ ಜನರಿಗೆ ಗಲ್ಲು

ಅಮೆರಿಕಾ ಮತ್ತು ಚೀಣೀ ನ್ಯಾಷನಲಿಸ್ಟ್ ಗೂಢಚಾರರೆಂದು ೫೧ ಜನರನ್ನು ಚೀಣೀನಗರ ಕ್ಯಾಂಟಿನಲ್ಲಿ ಗಲ್ಲಿಗೇರಿಸಲಾಯಿತೆಂದು ವರದಿಯಾಗಿದೆ.

ಯುದ್ಧವಾದಲ್ಲಿ ಆಹಾರ ಸರಬರಾಜಿನ ವ್ಯವಸ್ಥೆ

ಒಂದು ಪಕ್ಷ ಯುದ್ಧ ಸಂಭವಿಸಿದಲ್ಲಿ ಅಷ್ಟು ಹೊತ್ತಿಗೆ ಭಾರತ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗದಿದ್ದಲ್ಲಿ, ಜನತೆಗೆ ಸಾಕಷ್ಟು ಆಹಾರ ಸರಬರಾಜು ದೊರೆಯುವಂತೆ ಸರ್ಕಾರ ಯಾವ ವ್ಯವಸ್ಥೆ ಮಾಡಿದೆಯೆಂಬ ವಿಷಯವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತಿಳಿಸುವಂತಿಲ್ಲವೆಂದು, ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿ ಈ ದಿನ ಪಾರ್ಲಿಮೆಂಟಿನಲ್ಲಿ ಶ್ರೀ ಸರದಾರ್ ಸಿಂಗ್ ಜೆಜ್ಜುವರಿಗೆ ಲಿಖಿತ ಮೂಲಕ ತಿಳಿಸಿದರು.

ಆದರೆ ಪ್ರಶ್ನೆಕಾರರು ಎತ್ತಿದ ಅಂಶವು ಸರ್ಕಾರವು ಪರಿಶೀಲಿಸುತ್ತಿರುವ ಸಮಸ್ಯೆಗಳಲ್ಲಿ ಹೆಚ್ಚು ಪ್ರಮುಖವಾದುದೆಂದು ಅವರು ಭರವಸೆಯಿತ್ತರು.

ಶ್ರೀ ಕೆ. ಸಿ. ರೆಡ್ಡಿಯವರು ವಾಪಸು

ಬೆಂಗಳೂರು ಮಾ. ೧೮

ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಬೆಂಗಳೂರಿಗೆ ಹಿಂತಿರುಗಿದರು.

ರಾಜ್ಯಾಂಗಕ್ಕೆ ತಿದ್ದುಪಡಿ

ಕೆಲವು ಜನೋಪಯುಕ್ತ ಕಾನೂನುಗಳನ್ನು ರಾಜ್ಯಾಂಗದ ಮೂಲಭೂತ ಹಕ್ಕಿಗೆ ವ್ಯತಿರಿಕ್ತವೆಂದು ಕೋರ್ಟುಗಳು ತಿರಸ್ಕರಿಸುತ್ತಲಿರುವುದರಿಂದ ಜನತೆಗೆ ಧಕ್ಕೆಯಾಗದಂತೆ ಮಾಡಲು ರಾಜ್ಯಾಂಗವನ್ನೇ ಸೂಕ್ತವಾಗಿ ತಿದ್ದಲು ಸರ್ಕಾರ ಯೋಚಿಸುತ್ತಲಿದೆಯೆಂದೂ ಪ್ರಸ್ತುತ ಪಾರ್ಲಿಮೆಂಟಿನ ಈ ಅಧಿವೇಶನದಲ್ಲಿಯೇ ತಿದ್ದುಪಡಿ ಒದಗಬಹುದೆಂದೂ ನೆಹರೂರವರು ತಿಳಿಸಿರುವರು.

ಕೊಡಗಿನ ಜನಸಂಖ್ಯೆ

ಇತ್ತೀಚಿನ ಜನಗಣತಿಪ್ರಕಾರ ಕೊಡಗಿನ ಜನಸಂಖ್ಯೆಯು ೩,೨೯,೨೨೫ ಎಂದು ತಿಳಿಯಬರುತ್ತದೆ.

ಹೊಡೆದಾಟ

ದೇವರಾಜ ಮಾರ್ಕೆಟ್ ಬಳಿ ೪-೫ ಜನ ಮುಸಲ್ಮಾನರು ಚಾಕುಗಳಿಂದ ಹೊಡೆದಾಡಿ ಕೆಲವರಿಗೆ ಸ್ವಲ್ಪ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದರು. ದೇವರಾಜ ಪೋಲೀಸ್ ಸ್ಟೇಷನ್ನಿನವರು ತನಿಖೆ ನಡೆಸುತ್ತಿದ್ದಾರೆ.

ಸಂಸ್ಥಾನದ ಆಹಾರ ಪರಿಸ್ಥಿತಿ ಕಠಿಣವಾಗಿದೆ

ಕೇಂದ್ರ ಸಹಾಯ ಅತ್ಯವಶ್ಯಕ

ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕು

ಬೆಂಗಳೂರು ಮಾ ೧೩

ಕೃಷ್ಣರಾಜಸಾಗರದಲ್ಲಿ ಸಾಕಾದಷ್ಟು ನೀರಿಲ್ಲದಿರುವುದರಿಂದ ವಿಶ್ವೇಶ್ವರಯ್ಯ ಕಾಲುವೆ ಪ್ರದೇಶದಲ್ಲಿ ಈಗ ಕಾರು ರಾಗಿ ಅಥವಾ ಬತ್ತವನ್ನು ಬೆಳೆಯುವುದಿಲ್ಲ.

ಸಂಸ್ಥಾನದ ಆಹಾರ ಪರಿಸ್ಥಿತಿ ಬಹಳ ಕಠಿಣವಾಗಿದೆ ಕೇಂದ್ರ ಸರ್ಕಾರ ಸಹಾಯ ಮಾಡದಿದ್ದರೆ ರೇಷನ್ ವ್ಯವಸ್ಥೆ ಮುರಿದು ಬೀಳುವ ಸಂಭವ ಒದಗಬಹುದೆಂಬ ಹೆದರಿಕೆ ಸಾಗಿದೆ ಆದರೆ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸುತ್ತೇವೆಂದು ಆಹಾರ ವ ಶ್ರೀ ಟಿ ಮರಿಯಪ್ಪನವರು ಹೇಳಿರುವುದಾಗಿ ತಿಳಿಯ ಬರುತ್ತದೆ.

ಕಾಳಸಂತೆ ವ್ಯಾಪಾರಿಗಳಿಗೆ ೪,೭೩,೬೦೦ ರೂ. ಜುಲ್ಮಾನೆ

ಕಾಳಸಂತೆ ವ್ಯಾಪಾರದಲ್ಲಿ ತೊಡಗಿದ್ದರೆಂಬ ಅಪಾದನೆ ಮೇಲೆ ೩೫ ವ್ಯಾಪಾರಿಗಳಿಗೆ ೧೫ ಮೊಕದ್ದಮೆಗಳಲ್ಲಿ ಕಾಶಿಯ ಮ್ಯಾಜಿಸ್ಟ್ರೇಟರು ಒಟ್ಟು ೪,೭೩,೬೦೦ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುವರು.

ಭೂ ಸುಧಾರಣೆ ಕಾನೂನು ನ್ಯಾಯಬಾಹಿರ

ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಲು ಬೀಹಾರಿನಲ್ಲಿ ಜಾರಿಗೆ ತಂದಿರುವ ಭೂ ಸುಧಾರಣಾ ಕಾನೂನು ಭಾರತ ರಾಜ್ಯಾಂಗದ ೧೪ನೇ ವಿಧಿಗೆ ವಿರುದ್ಧವಾಗಿರುವುದರಿಂದ, ಕಾನೂನು ನ್ಯಾಯಬದ್ಧವಿಲ್ಲವೆಂದು ಪಾಟ್ನ ಮುಖ್ಯ ನ್ಯಾಯಾಲಯ ತೀರ್ಮಾನಿಸಿದೆ

ವಿಮಾನ ನಿರ್ಮಾಣ ನಿರ್ಮಾಣ

ನೇಪಾಳದಲ್ಲಿ ರಸ್ತೆಗಳ ಸಂಚಾರಕ್ಕೆ ರಸ್ತೆಗಳ ಅಭಾವವಿರುವುದರಿಂದ ಸಂಚಾರಕ್ಕೆ ಸೌಕರ್ಯಗಳನ್ನು ತ್ವರಿತವಾಗಿ ಮಾಡಬೇಕಾಗಿರುವುದರಿಂದ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ನೇಪಾಳ ಮಂತ್ರಿಗಳು ಪರಿಶೀಲನೆ ನಡೆಸುತ್ತಲಿರುವರು ಭಾರತ ನೇಪಾಳ ಸೇನೆಯ ಇಂಜನಿಯರುಗಳ ಸಮ್ಮೇಳನವೊಂದನ್ನು ಅವರು ಕರೆದಿರುವರು.

ಕೈಗಾರಿಕಾ ಸಂಸ್ಥೆಗಳಿಗೆ ವಿದ್ಯುಚ್ಛಕ್ತಿ

ಬೆಂಗಳೂರು ಮಾ. ೧೩

ಬೇಸಿಗೆಕಾಲದಲ್ಲಿ, ಈಗಿನ ಪರಿಸ್ಥಿತಿಯಲ್ಲಿ, ಕೈಗಾರಿಕಾ ಸಂಸ್ಥೆಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತೇವೆಂಬ ಭರವಸೆಯನ್ನು ಕೊಡಲಾಗುವುದಿಲ್ಲವೆಂದು ಮೈಸೂರು ಸರ್ಕಾರವು ಕೈಗಾರಿಕಾ ಸಂಸ್ಥೆಗಳಿಗೆ ತಿಳಿಸಿರುವುದಾಗಿ ವರದಿಯಾಗಿದೆ,

ದ್ವಂದ್ವ ಯುದ್ಧ

ಇಟಲಿಯ ವಿಷಯವಾಗಿ ಅವಮಾನಕರವಾದ ರೀತಿಯಲ್ಲಿ ಟೀಕೆಯನ್ನು ಮಿ|| ಚರ್ಚಿಲ್ಲರು ಮಾಡಿರುವುದನ್ನು ಪ್ರತಿಭಟಿಸಿ, ಮುಸೋಲಿನಿ ಸೋದರಸೊಸೆ ಗಂಡನಾದ ೩೫ ವರ್ಷದ ಸಿಹ್ನಾರ್ ಸೆರ್ಲ್ಲೋಬಿನಿ ಯೆಂಬುವವನು ಅವರೊಡನೆ ದ್ವಂದ್ವ ಯುದ್ಧ ಮಾಡಬೇಕೆಂದು ಅವರಿಗೆ ಪತ್ರ ಬರೆದಿರುವನು, ದ್ವಂದ್ವ ಯುದ್ಧಕ್ಕೆ ಚರ್ಚಿಲ್ಲರು ವಯಸ್ಸು ಮೀರಿದ್ದರೆ ಅವರ ಮಗನೊಡನೆಯೇ ಯುದ್ಧ ಮಾಡುವುದಾಗಿ ಆತನು ತಿಳಿಸಿರುವನು.

ಒಲಂಪಿಯಾ ೧೫ ೩ ೫೧ ರಿಂದ ದಿನವೂ ೩ ಆಟಗಳು

ಮಧುಬಾಲ ದೇವ್‌ಆನಂದ್, ಜೀವನ್ ಪಾತ್ರವಹಿಸಿರುವ ರಣಜಿತ್‌ರವರ ಸಂಗೀತಮಯ ಚಿತ್ರ

* ಮಧುಬಾಲ *

ಬೆಳಗಿನ ಪ್ರದರ್ಶನ ೧೬—೩—೫೧ ರಿಂದ ಮೂರು ದಿನಗಳು

ನೂರ್‌ಜಹಾನ್ ಮತ್ತು ದಿಲೀಪ್‌ಕುಮಾರ್ ಪಾತ್ರವಹಿಸಿರುವ — ಜುಗ್ನು —

ಪೆನಿಸಿಲಿನ್ ಕಂಡು ಹಿಡಿದ ಬ್ರಿಟಿಷ್ ವಿಜ್ಞಾನಿ

ಸರ್ ಅಲೆಗ್ಸಾಂಡರ್ ಪ್ಲೆಮಿಂಗ್

ಇವರು ಭಾರತ ರಾಷ್ಟ್ರೀಯ ವಿಜ್ಞಾನ ಸಂಸ್ಥೆಯ ಗೌರವ ಸದಸ್ಯರು

ಪುನಃ ಭೂಕಂಪ

ದಿಬ್ರೂಘರಿನಲ್ಲಿ ಪುನಃ ಸೋಮವಾರ ೮೦ ಸೆಕೆಂಡುಗಳ ಕಾಲ ಭೂಕಂಪವುಂಟಾಗಿದೆ

ಕಮ್ಯೂನಿಸ್ಟ್ ಬಹಿಷ್ಕೃತ

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷವು ಕೆಲವೇ ಬಹಿಷ್ಕೃತವಾಗಿರುವುದು ಕಮ್ಯೂನಿಸಂ ತತ್ವಕ್ಕಲ್ಲ ಆ ಗುಂಪಿನವರು ನಡೆಸುತ್ತಿರುವ ದೌರ್ಜನ್ಯ ಕೃತ್ಯಗಳಿಗಾಗಿ ಎಂದು ಪಂಡಿತ ನೆಹರೂ ಹೇಳಿರುವರು

ಒಂದು ಎಕರೆಯಲ್ಲಿ ೮೪೩೫ ಪೌಂಡು ಭತ್ತ

ಪಶ್ಚಿಮಗೋದಾವರಿ ಜಿಲ್ಲೆಯ ಗದ್ದೆಯೊಂದರಲ್ಲಿ ಒಂದು ಎಕರೆಯಲ್ಲಿ ೮೪೩೫ ಪೌಂಡು ಭತ್ತವನ್ನು ಬೆಳೆಯಲಾಗಿದೆ ಭಾರತದಲ್ಲೆಲ್ಲಾ ಇದು ರಿಕಾರ್ಡ್ ಬೆಳೆ. ಇದನ್ನು ಬೆಳೆದವನಿಗೆ ಸರ್ಕಾರ ೧೦೦೦ ರೂ. ಬಹುಮಾನ ಕೊಟ್ಟಿದೆ.

ಬೊಂಬಾಯಿ ಜನಸಂಖ್ಯೆ

ಬೊಂಬಾಯಿನ ಜನಸಂಖ್ಯೆಯು ಈಗಿನ ಜನಗಣತಿಪ್ರಕಾರ ೨೮|| ಲಕ್ಷ.

ಶಾಸನಸಭಾ ಸದಸ್ಯರಿಗೆ ಸಂಬಳ

ಬೆಂಗಳೂರು ಮಾ ೧೨

ಶಾಸನಸಭಾ ಸದಸ್ಯರ ಸಂಬಳ ಕಾನೂನನ್ನು ಸರ್ಕಾರದವರು ಹೂಡಿಸಿ ಈ ಕಾನೂನು ರೀತ್ಯಾ ಶಾಸನಸಭಾ ಸದಸ್ಯರಿಗೆ ಮಾಹೆಯಾನಾ ೧೦೦ ರೂಪಾಯಿ ಸಂಬಳ ಸಭಾಧಿವೇಶನ ಸಮಯದಲ್ಲಿ ರೈಲ್ವೆ ಪ್ರಯಾಣಕ್ಕೆ ೨ ಒಂದನೇ ತರಗತಿ ಛಾರ್ಜು ರಸ್ತೆ ಪ್ರಯಾಣಕ್ಕೆ ೦೮೦ ಯಂತೆ ಮೈಲೇಜು, ೧೫ ರೂಪಾಯಿಯಂತೆ ದಿನ ಭತ್ಯ ಕೊಡಲಾಗುವುದು

ಮಹಾ ಚುನಾವಣೆಗಳು

ಮಹಾ ಚುನಾವಣೆಗಳು ಇದೇ ವರ್ಷ ನವೆಂಬರ್ ಡಿಸೆಂಬರ್‌ನಲ್ಲಿ ನಡೆಯುವುವು ದೇಶದ ಯಾವಭಾಗದಲ್ಲಾದರೂ ಚುನಾವಣೆಗೆ ಸರ್ಕಾರವು ಸಿದ್ಧವಾಗಿಲ್ಲದಿದ್ದರೆ, ಇತರ ಪ್ರದೇಶಗಳಲ್ಲಿ ಚುನಾವಣೆಗಳನ್ನು ನಿಲ್ಲಿಸುವುದಿಲ್ಲವೆಂದು ಪ್ರಧಾನಿ ನೆಹರೂ ಹೇಳಿರುವರು

ಬೆಂಗಳೂರಿಗೆ ಶ್ರೀಕೃಷ್ಣಮೆನನ್—ಗೌತಮ್‌ರು

ಸಂಸ್ಥಾನ ಕಾಂ ಕಾರ್ಯದರ್ಶಿ ಶ್ರೀ ವಿ ಪಿ ಮೆನನ್ ಮತ್ತು ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರವರು ಈ ವಾರಾಂತ್ಯದಲ್ಲಿ ಬೆಂಗಳೂರಿಗೆ ಬೇಟಿ ಕೊಡುವರು

ತಿರುವಾಂಕೂರಿನಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಅಲ್ಲಿಗೂ ಭೇಟಿಯಿಯುವರೆಂದು ತಿಳಿಯಬರುತ್ತದೆ ಈಗಿನ ಮಂತ್ರಿ ಮಂಡಲವನ್ನು ವಿಲೀನ ಮಾಡಿ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಿಸುವ ಸಂಭವವಿದೆಯೆಂದು ಹೇಳಲಾಗಿದೆ.

ರೈತರ ಸಮ್ಮೇಳನ

ಇದೇ ೧೧ನೇ ತಾ|| ಹೊಸಗ್ರಹಾರದಲ್ಲಿ ಹೋಬಳಿ ರೈತರ ಸಮ್ಮೇಳನವು ಜಿಲ್ಲಾ ರೈತರ ಸಂಘದ ಕಾರ್ಯದರ್ಶಿ ಶ್ರೀ ಸಿ. ಜಿ ದೇವನಾಥರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಾರನೇ ದಿನ ಕೃಷ್ಣರಾಜನಗರದಲ್ಲಿ ಸಮ್ಮೇಳನವು ರೈತರ ಸಂಘದ ಅಧ್ಯಕ್ಷ ಶ್ರೀ ಎಂ. ಎಲ್. ನಂಜರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯಿತು ಆದಷ್ಟು ಬೇಗ ಕಂಟ್ರೋಲ್ ತೆಗದುಹಾಕಬೇಕೆಂದು ಸಭೆ ತೀರ್ಮಾನಿಸಿತು

ಸಂಪಾದಕರು ಮತ್ತು ಪ್ರಕಾಶಕರು— ಬಿ ಎಲ್ ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ ಮೈಸೂರು ಮುದ್ರಕರು ಜಿ.ಹೆಚ್. ರಾಮರಾವ್, ಬಿ ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೫—೩—೧೯೫೧ನೇ ಗುರುವಾರ [ಸಂಚಿಕೆ ೧೫೪

ಪ್ಲಾನಿಂಗ್ ಕಮಿಷನ್ ಅಧ್ಯಕ್ಷರು

ಇದೇ ಮಾಹೆ ೧೭ನೇ ತಾರೀಖು ಪ್ಲಾನಿಂಗ್ ಕಮಿಷನ್ನಿನ ಅಧ್ಯಕ್ಷ ಶ್ರೀ ಎ. ಡಿ. ಗೋರ್‌ವಾಲಾರವರು ಬೆಂಗಳೂರಿಗೆ ಆಗಮಿಸಿ, ಮೈಸೂರು ಸರ್ಕಾರದವರು ತಯಾರಿಸಿರುವ ನಾನಾ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸುವರು

ಆಹಾರ ಅಧಿಕಾರಿಗಳ ಸಭೆ

ಇಂದಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ಎಲ್ಲಾ ಪ್ರಾಂತ್ಯದ ಆಹಾರಾಧಿಕಾರಿಗಳು ಇದೇ ಮಾಹೆ ೨೪ನೇ ತಾ|| ದೆಹಲಿಯಲ್ಲಿ ಸೇರಿ ಚರ್ಚೆ ನಡೆಸಲಿರುವರು.

ಅಮೆರಿಕಾದಿಂದ ಆಹಾರ ಬರುವ ವರೆಗೂ ಭಾರತಾದ್ಯಂತ ಶೇ|| ೨೫ರಷ್ಟು ಪಡಿತರ ಕಡಿಮೆ ಮಾಡಿರುವುದನ್ನು ಮುಂದುವರಿಸಲಾಗುವುದೆಂದು ಹೇಳಲಾಗುತ್ತಿದೆ.

ಮೈಸೂರು 'ಮಂತ್ರಿಮಂಡಲದ ಬಗ್ಗೆ' ದೆಹಲಿಯಲ್ಲಿ ಮಾತುಕತೆ

ಹೈದರಾಬಾದಿನಲ್ಲಿ ಕಾಂಗ್ರೆಸ್ಸಿನವರೇ ಮುಖ್ಯಮಂತ್ರಿಯಾಗಿರಬೇಕು

ಮಂತ್ರಿ ಮಂಡಲದ ಬದಲಾವಣೆಗೆ ಒತ್ತಾಯ

ಹೈದರಾಬಾದ್ ಮಂತ್ರಿ ಮಂಡಲದಲ್ಲಿ ಸಂಸ್ಥಾನ ಕಾಂಗ್ರೆಸ್ಸಿಗೇ ಬಹುಮತದ ಪ್ರಾತಿನಿಧ್ಯವಿರಬೇಕೆಂಬ ಒತ್ತಾಯದ ನಿರ್ಣಯವೊಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚೆಗೆ ಬರಲಿದೆಯೆಂದು ಗೊತ್ತಾಗಿದೆ.

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿಂದೂರವರು ದೆಹಲಿಗೆ ಭೇಟಿಯಿತ್ತಾಗ ಈ ಅಂಶವನ್ನು ಕಾಂಗ್ರೆಸ್ ವರಿಷ್ಠ ವರ್ಗದವರೊಡನೆ ಚರ್ಚಿಸಿದರೆಂದೂ ವರದಿಯಾಗಿದೆ.

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿಂದೂರರ ದೆಹಲಿಯ ಪ್ರವಾಸ ಅಲ್ಲಿಯ ಕಾಂಗ್ರೆಸ್ ವಲಯಗಳಲ್ಲಿ ಅನೇಕ ರೀತಿಯ ಊಹಾಪೋಹವನ್ನೆಬ್ಬಿಸಿದೆ. ಆದಷ್ಟು ಜಾಗ್ರತೆ ಪೂರ್ಣಮುಖ್ಯ ಸರ್ಕಾರ ರಚನೆಯಾಗದಿದ್ದರೆ, ಈಗ ಹಾಲಿ ಇರುವ ನಾಲ್ವರು ಕಾಂಗ್ರೆಸ್ ಪ್ರತಿನಿಧಿಗಳನ್ನು ಮಂತ್ರಿ ಮಂಡಲದಿಂದ ವಾಪಸ್ಸು ಬರುವಂತೆ ತಿಳಿಸುವುದಾಗಿಯೂ, ಜನತೆಯ ಮುಂದೆ, ಕಾಂಗ್ರೆಸ್ ತನ್ನ ಕರ್ತವ್ಯ ಪಾಲಿಸಲೂ ಜನತೆಯ ಸಹಕಾರವನ್ನು ನಿರೀಕ್ಷಿಸಲೂ, ಅವಕಾಶವಿಲ್ಲದಿರುವ ಪ್ರಸ್ತುತ ಪರಿಸ್ಥಿತಿಯನ್ನು ನಿವಾರಿಸಲು ತಕ್ಷಣವೇ ಮಂತ್ರಿ ಮಂಡಲದ ಬದಲಾವಣೆಯಾಗಬೇಕೆಂದು ಮುಂಬರುವ ಕಾಂಗ್ರೆಸ್ ಕಾರ್ಯ ಸಮಿತಿ ಮುಂದೆ ಒಂದು ಠರಾವು ಬರುವುದಾಗಿ ಖಚಿತವಾಗಿ ತಿಳಿದುಬಂದಿದೆ. ಮಂತ್ರಿ ಮಂಡಲದ ಬದಲಾವಣೆಯಲ್ಲಿ ಮೊದಲಾಗಿ, ಮುಖ್ಯ ಮಂತ್ರಿಯ ಸ್ಥಳಕ್ಕೆ ಕಾಂಗ್ರೆಸ್ಸಿನವರೇ ಇರಬೇಕೆಂದೂ ಠರಾವು ಬರುವುದಾಗಿಯೂ ತಿಳಿದುಬಂದಿದೆ. ಈ ಮಧ್ಯೆ ಮುಖ್ಯ ಮಂತ್ರಿಯ ಸ್ಥಾನಕ್ಕೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿಂದೂರರವರು ಬರುವರೋ ಅಥವಾ ಹಾಲಿ ಮಂತ್ರಿ ಮಂಡಲದಲ್ಲಿರುವ ಶ್ರೀ ಬಿ. ರಾಮಕೃಷ್ಣ ರಾಯರು ಬರುವರೋ ಎಂಬ ವಿಚಾರದಲ್ಲಿ ಊಹಾಪೋಹಗಳೆದ್ದಿವೆ. ಹಿಂದಿನ ಸರ್ಕಾರದಂತೆಯೇ, ಈಗಿನ ಸರ್ಕಾರ ಆಹಾರ ವ್ಯವಹಾರದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸುತ್ತಿಲ್ಲವೆಂದೂ, ಮುಖ್ಯ ಸರ್ಕಾರ ಬಂದಲ್ಲಿ ಎಲ್ಲವೂ ವ್ಯವಸ್ಥಿತ ರೀತಿಯಲ್ಲಿ ನಡೆಯುವುದೆಂದೂ, ಕಾಂಗ್ರೆಸ್ ವಲಯಗಳಲ್ಲಿ ಹೇಳಲಾಗುತ್ತಿದೆ.

ದೆಹಲಿಯಲ್ಲಿ ಮಾತುಕತೆ

ಬೆಂಗಳೂರು ಮಾ. ೧೪

"ಮೈಸೂರು ಮಂತ್ರಿ ಮಂಡಲದ" ಬಗ್ಗೆ ದೆಹಲಿಯಲ್ಲಿ ಪ್ರಧಾನಿ ಪಂಡಿತ ನೆಹರೂ, ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಂಡನ್‌ರವರೊಡನೆ ಮಾತುಕತೆ ನಡೆಸಿದ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯ ಮತ್ತು ಮಾಜಿ ಶಿಕ್ಷಣ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಇಂದು ನಗರಕ್ಕೆ ಹಿಂದಿರುಗಿದರು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಐಕಮತ್ಯ ಸಾಧಿಸುವ ಬಗ್ಗೆ ನಡೆಯಿತೆಂದು ತಿಳಿದುಬಂದಿದೆ. ಮಾತುಕತೆಗಳ ಕಾಲದಲ್ಲಿ ಆಗ್ಗೆ ದೆಹಲಿಯಲ್ಲಿದ್ದ ಶ್ರೀ ಕೆ. ಸಿ. ರೆಡ್ಡಿಯವರೂ ಹಾಜರಿದ್ದರು.

ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಂಡನ್‌ರವರು ಆಹ್ವಾನಪೂರ್ವಕ ಶ್ರೀಗಳಾದ ಟಿ. ಸಿದ್ದಲಿಂಗಯ್ಯ ಮತ್ತು ಕೆ. ಸಿ. ರೆಡ್ಡಿಯವರನ್ನು ದೆಹಲಿಗೆ ಕರೆಸಿಕೊಂಡಿದ್ದರು.

ಬೀಹಾರಿನ ಜನಸಂಖ್ಯೆ

ಬೀಹಾರಿನಲ್ಲಿ ಜನಸಂಖ್ಯೆ ೪ ಕೋಟಿ ೨ ಲಕ್ಷ ಇದೆ.

ಡಾ|| ಕೇದಾರ್‌ರವರ ನಿಧನ

ಮಧ್ಯಪ್ರದೇಶದ ಮಾಜಿ ಮಂತ್ರಿ ಡಾ|| ಟಿ. ಜಿ. ಕೇದಾರ್‌ರವರು ನಿನ್ನೆ ಹೃದಯಬಾಧೆಯಿಂದ ನಿಧನರಾದರು.

ಮಂತ್ರಿಗಳ ಮೇಲೆ ಅಪಾದನೆ

ಬೊಂಬಾಯಿ ಶಾಸನ ಸಭೆಯ ಸದಸ್ಯರಾದ ಶ್ರೀ ಪಿ. ಆರ್. ಪಟೇಲರವರು ಶಾಸನ ಸಭೆಯಲ್ಲಿ ಮಾತನಾಡುತ್ತಾ ಅಲ್ಲಿಯ ಸಿವಿಲ್ ಸಪ್ಲೈ ಮಂತ್ರಿ ಶ್ರೀ ದಿನಕರ್ ರಾವ್ ದೇಸಾಯಿಯವರು ಅವರ ಸಂಬಂಧಿಯಾದ ಒಬ್ಬ ವ್ಯಾಪಾರಿಗೆ ಸಹಾಯ ಮಾಡಿದರೆಂದು ಅವರ ಮೇಲೆ ಆಪಾದನೆಯನ್ನು ಹೊರಿಸಿದರು. ತಮಗೆ ಯಾರೂ ಬಟ್ಟೆ ವ್ಯಾಪಾರ ಮಾಡುವ ಸಂಬಂಧಿಗಳಿಲ್ಲವೆಂದೂ ಮತ್ತು ಹಾಗಿದ್ದಲ್ಲಿ ಅದನ್ನು ಸಮರ್ಥಿಸಬೇಕೆಂದೂ ಕೇಳಿದ್ದಕ್ಕೆ ಸದ್ಯದಲ್ಲಿ ತಮ್ಮಲ್ಲಿ ಯಾವ ವಿವರವೂ ಇಲ್ಲವೆಂದೂ ಮುಂದೆ ವಿವರವನ್ನು ಕೊಡುವೆನೆಂದೂ ಶ್ರೀ ಪಟೇಲ್ ಹೇಳಿದರು. ಸದ್ಯಕ್ಕೆ ಈ ಆಪಾದನೆಯನ್ನು ಹಿಂತೆಗೆದುಕೊಳ್ಳಬೇಕೆಂದು ತಿಳಿಸಿದರೂ ಶ್ರೀ ಪಟೇಲರವರು ಒಪ್ಪಲಿಲ್ಲವಾದ್ದರಿಂದ ಅಧ್ಯಕ್ಷರು ಇದನ್ನು ಹಕ್ಕುಬಾಧ್ಯತೆಗಳ ವಿಚಾರಣಾ ಸಮಿತಿಯಲ್ಲಿ ಚರ್ಚಿಸಬೇಕೆಂದು ಆಜ್ಞೆಯಿತ್ತರು.

ಪಶುಗಳ ರವಾನೆಗೆ ರಹದಾರಿ ಕೊಡಕೂಡದು

ತಮ್ಮ ಸಮ್ಮತಿಯನ್ನು ಪಡೆಯದೆ ಕೇಂದ್ರ ಸರ್ಕಾರವು ಮದ್ರಾಸು ಪ್ರಾಂತದಿಂದ ಪಶುಗಳನ್ನು ರವಾನೆ ಮಾಡಲು ರಹದಾರಿಯನ್ನು ಯಾರಿಗೂ ಕೊಡಕೂಡದೆಂದು ಮದ್ರಾಸು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದೆ.

ಸುಯಾಲ್ ಪ್ರವೇಶ

ವಿಶ್ವಸಂಸ್ಥೆ ಪಡೆಗಳು ಪುನಃ ಸುಯಾಲ್ ನಗರವನ್ನು ಪ್ರವೇಶಿಸಿದೆಯೆಂದು ವರದಿಯಾಗಿದೆ. ಜನವರಿ ೪ನೇ ತಾರೀಖು ಈ ನಗರವನ್ನು ವಿಶ್ವ ಸೈನ್ಯಗಳು ಬಿಟ್ಟು ಹೋಗಿದ್ದವು.

ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನ

ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನವು ಇಂದು ದೆಹಲಿಯಲ್ಲಿ ಪ್ರಾರಂಭವಾಗಿ ಮೂರು ದಿನಗಳು ನಡೆಯಲಿದೆ. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರು ಉದ್ಘಾಟನೆ ಮಾಡುವರು.

ಬಟ್ಟೆ ಮೇಲೆ ಸೇಲ್ಸ್‌ಟ್ಯಾಕ್ಸ್ ಇಲ್ಲ ?

ಭಾರತಾದ್ಯಂತ ಎಲ್ಲಾ ತರಹದ ಬಟ್ಟೆಗಳ ಮೇಲೂ ಮಾರಾಟ ತೆರಿಗೆಯನ್ನು ರದ್ದು ಮಾಡುವ ವಿಷಯವು ಕೇಂದ್ರದ ತೀವ್ರ ಗಮನದಲ್ಲಿದೆ. ಇದರ ವಿಷಯವಾಗಿ ಸದ್ಯದಲ್ಲೇ ಒಂದು ಪ್ರಕಟಣೆ ಹೊರಬೀಳಲಿದೆ.

ಔಷಧ ಸಾಮಗ್ರಿಗಳ ಮೇಲೂ ಮಾರಾಟ ತೆರಿಗೆ ವಿಧಿಸಿರುವುದನ್ನು ತೆಗೆಯಲಾಗುವುದೆಂದೂ ತಿಳಿಯಬರುತ್ತದೆ.

ವಿಚಾರಣೆ ಪ್ರಾರಂಭ

ಸರ್ಕಾರವನ್ನು ಉರುಳಿಸಲು ಪಿತೂರಿ ಮಾಡಿರುವರೆಂಬ ಆಪಾದನೆ ವಿಷಯಗಳಲ್ಲಿ ಮಿಲಿಟರಿ ಅಧಿಕಾರಿಗಳು ಸಿವಿಲ್ ಪೋಲೀಸರೂ ಪಾಕಿಸ್ತಾನದಲ್ಲಿ ವಿಚಾರಣೆ ನಡೆಸುತ್ತಲಿರುವರು. ಈ ಪಿತೂರಿಗೆ ರಾಜಕೀಯ ಪಕ್ಷಗಳಾವುವೂ ಸೇರಿಲ್ಲ. ಈ ಪಿತೂರಿ ವಿಷಯದಲ್ಲಿ ಪ್ರಧಾನಿ ಲಿಯಾಖತ್ ಅಲಿ ಖಾನ್ ರವರು ಪಾಕಿಸ್ತಾನ ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆ ಕೊಡುವರೆಂದು ಹೇಳಲಾಗಿದೆ.

ವಾರ್ಷಿಕೋತ್ಸವ

ಮೈಸೂರು ಮಾ. ೧೪

ರಾಜಧಾನಿಯ ಒಲಂಪಿಯಾ ಟಾಕೀಸಿನ ಪ್ರಥಮ ವಾರ್ಷಿಕೋತ್ಸವವು ಇಂದು ಬೆಳಿಗ್ಗೆ ನಡೆಯಿತು. ನಗರದ ಕೆಲವು ಪತ್ರಿಕೋದ್ಯೋಗಿಗಳು ಮತ್ತು ಗಣ್ಯ ಮಹನೀಯರು ಈ ಸಮಾರಂಭಕ್ಕೆ ಆಹ್ವಾನಿಸಲ್ಪಟ್ಟಿದ್ದರು. ಚಿತ್ರಮಂದಿರದ ಮಾಲೀಕರಾದ ಶ್ರೀಗಳಾದ ದೇಸಾಯಿ ಮತ್ತು ವೀರೇಂದ್ರಕುಮಾರ್‌ರವರು ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು. 'ಮಧುಬಾಲ' ಎಂಬ ಚಿತ್ರವನ್ನು ಪ್ರದರ್ಶಿಸಲಾಯಿತು.

೨೧ ಲಕ್ಷ ರೂ. ದಾನ

ಭಾರತದಲ್ಲಿ ರೇಡಿಯೋ ಕೈಗಾರಿಕಾಭಿವೃದ್ಧಿಗಾಗಿ ಶ್ರೀ ಜೆ. ಡಿ. ಬಿರ್ಲಾರವರು ೨೧ ಲಕ್ಷ ರೂ ಗಳ ದಾನ ಮಾಡಿರುವರು.

ಶ್ರೀ ಬಿ. ಜಿ. ಅಪ್ಪಾದೊರೆ ಮೊದಲಿಯಾರ್ ನಿಧನ

ಬೆಂಗಳೂರು ಮಾ. ೧೪

ನಿವೃತ್ತ ಕೈಗಾರಿಕಾ ಮತ್ತು ವಾಣಿಜ್ಯಶಾಖೆಯ ಡೈರೆಕ್ಟರಾದ ಶ್ರೀ ಬಿ. ಜಿ. ಅಪ್ಪಾದೊರೆ ಮೊದಲಿಯಾರ್‌ರವರು ಇಂದು ಬೆಳಗಿನ ಜಾವದಲ್ಲಿ ಬಸವನಗುಡಿಯಲ್ಲಿ ತಮ್ಮ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೈಸೂರು ಸರ್ಕಾರದ ನಾನಾ ಇಲಾಖೆಗಳಲ್ಲಿ ಸೇವೆಗೈದು ಇಲ್ಲಿ ನಿವೃತ್ತರಾದಮೇಲೆ ಸಿಂಹಳ ಸರ್ಕಾರದಕ್ಕೆ ಕೈಗಾರಿಕಾ ಸಲಹಗಾರರಾಗಿದ್ದರು. ಇವರಿಗೆ ಸುಮಾರು ೬೦ ವರ್ಷ ವಯಸ್ಸಾಗಿದ್ದಿತು

ಪೆಟ್ರೋಲ್ ಶುದ್ಧೀಕರಣ ಕಾರ್ಖಾನೆ

ಭಾರತದಲ್ಲಿ ಒಂದು ಪೆಟ್ರೋಲ್ ಶುದ್ಧೀಕರಣ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಭಾರತ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾಮಂಡಲಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವರು.

ಭಾರತದ ಮಹಿಳೆಗೆ ಅಮೆರಿಕದಲ್ಲಿ ಭಾರಿ ಹುದ್ದೆ

ನಾಗಪುರದ ಮಹಿಳಾ ಕಾಲೇಜಿನ ಮುಖ್ಯೋಪಾಧ್ಯಾಯಿನಿ ಶ್ರೀ|| ಕು|| ಡಾ|| ಶ್ರೀ ದೇವಿಯವರನ್ನು ಅಮೆರಿಕದ ಅಟಲಾಂಟಾ ವಿಶ್ವವಿದ್ಯಾನಿಲಯದ ಭಾರತೀಯ ದರ್ಶನ ಶಾಸ್ತ್ರದ ಪ್ರೊಫೆಸರರನ್ನಾಗಿ ನೇಮಿಸಲಾಗಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಇದೇ ಮಾಹೆ ೧೮ನೇ ತಾ|| ಭಾನುವಾರ ಮಧ್ಯಾಹ್ನ ೩ಗಂಟೆಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿ ಸಭೆಯು ಮೈಸೂರು ಸಿಟಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಿಟಿ ಕಾಂಗ್ರೆಸ್ ಕಛೇರಿಯಲ್ಲಿ ಜರುಗುವುದು ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಪ್ರಾರ್ಥಿಸುತ್ತಾರೆ.

೭೨ ಸಾವಿರ ಎಸ್.ಎಸ್.ಎಲ್.ಸಿ.ಗೆ

ಮದರಾಸಿನಲ್ಲಿ ನಿನ್ನೆಯಿಂದ ಪ್ರಾರಂಭವಾದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ೭೨,೦೦೦ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕುಳಿತಿರುವರು. ಕಳೆದ ವರ್ಷ ೬೮ ಸಾವಿರ ಜನರು ಕುಳಿತಿದ್ದರು.

ರಾಜಪ್ರಮುಖರ ಸಭೆ

ರಾಜಪ್ರಮುಖರ ಮತ್ತು ಗೌರ್ನರುಗಳ ಸಭೆಯು ಹೊಸ ದೆಹಲಿಯಲ್ಲಿ ಪ್ರಾರಂಭವಾಯಿತು ಸಂಸ್ಥಾನಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಿಅಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಜಾಹಿರಾತುಗಳು

ರೇಡಿಯೋ ಕೇಂದ್ರಗಳಲ್ಲಿ ಜಾಹಿರಾತುಗಳನ್ನು ಪ್ರಕಟಿಸುವ ವಿಷಯದಲ್ಲಿ ವಾರ್ತಾ ಸಚಿವ ಶ್ರೀ ದಿವಾಕರರು ಶಾಸನ ಸಭೆಯಲ್ಲಿ ಮಾತನಾಡುತ್ತಾ ರೇಡಿಯೋ ಕೇಂದ್ರಗಳ ಧ್ಯೇಯಕ್ಕೇ ಇದು ವಿರುದ್ಧವಾದ್ದರಿಂದ ಎ. ಐ. ಆರ್‌ನಲ್ಲಿ ಜಾಹಿರಾತುಗಳಿಗೆ ಅವಕಾಶವೆಂದು ಹೇಳಿರುವರು.

ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕೈಗಾರಿಕೋದ್ಯಮಗಳ ಲೈಸನ್ಸು-ಫೀಗಳನ್ನು ಉಪಯೋಗಿಸುವ ಎಲೆಕ್ಟ್ರಿಕ್ ಮೋಟಾರುಗಳ ತಲೆಬರಹದ ಮೇಲೆ ಇರುವ—ಹಾರ್ಸ್‌ಪವರ್ ಲೆಕ್ಕದ ಮೇಲೆ ಹೆಚ್ಚಿಸತಕ್ಕ ಬಗ್ಗೆ ಹೊರಡಿಸಿರುವ —ನೇ ನಂ. ಸಿ. ೨ ಪಿ. ೧೩ (೫೦-೫೧) ೧೨-೨ ೫೧ನೇ ತಾರೀಖು ಪ್ರಕಟಣೆಯ ಮೇಲೆ—ವಿರೋಧ ಸೂಚಿಸುವ ಒಗ್ಗೆ—ಚರ್ಚಿಸಲು ೧೭-೩-೫೧ನೇ ಶನಿವಾರ ಸಾಯಂಕಾಲ ೫ ಗಂಟೆಗೆ—ಹೊಸ ಸಂತೇಪೇಟೆಯಲ್ಲಿರುವ—ಮರ್ಚೆಂಟ್ಸ್ ಅಸೋಸಿಯೇಷನ್ ಬಿಲ್ಡಿಂಗ್ ಮಹಡಿಯ ಮೇಲೆ ರಾಜಸೇವಾಸಕ್ತ ಶ್ರೀಮಾನ್ ಸಿ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಏರ್ಪಡಿಸಿ ಇರುವುದರಿಂದ ಎಲ್ಲಾ ವಿಧವಾದ ಎಲೆಕ್ಟ್ರಿಕ್ ಮೋಟಾರುಗಳ ಗಿರಣಿ ಮಾಲೀಕರುಗಳು ದಯಮಾಡಿಸಬೇಕಾಗಿ ವ್ಯವಸ್ಥಾಪಕರು ಕೋರುತ್ತಾರೆ,

ಜಿಲ್ಲಾ ಬೋರ್ಡ್ ಸಭೆ

ಈ ತಿಂಗಳು ೩೧ನೇ ತಾ|| ಮಧ್ಯಾಹ್ನ ೧ ಗಂಟೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ಸೇರುವುದು.

ಟೆಕ್ನಿಕಲ್ ಅಸಿಸ್ಟೆಂಟು

ಮಹಾರಾಜಾ ಕಾಲೇಜಿನ ಲೆಕ್ಚರರಾದ ಶ್ರೀ ಎಂ. ವಿ. ಜಂಬುನಾಥನ್‌ರವರನ್ನು ಸೆನ್ಸಸ್ ಕಮಿಷನರ ಟೆಕ್ನಿಕಲ್ ಅಸಿಸ್ಟೆಂಟರಾಗಿ ನೇಮಿಸಲಾಗಿದೆ.

ಗೋಹತ್ಯ ವಿರುದ್ಧ ಉಪವಾಸ

ಗೋಹತ್ಯವನ್ನು ಪ್ರತಿಬಂಧಿಸಬೇಕೆಂದು ಕಳೆದ ಒಂದು ವಾರದಿಂದಲೂ ಉಪವಾಸಮಾಡುತ್ತಿರುವ ಶ್ರೀ ಅರ್ಜುನಭಗತ್‌ರವರ ಬಗ್ಗೆ ಸಹಾನುಭೂತಿಯನ್ನು ತೋರಿಸಲು ಅಹಮದಾಬಾದಿನ ೧೦ಕ್ಕೂ ಹೆಚ್ಚು ಬಟ್ಟೆ ಗಿರಣಿಗಳಲ್ಲಿ ಕೆಲಸಗಾರರು ಮುಷ್ಕರ ಹೂಡಿದ್ದಾರೆ.

ನಗರದಲ್ಲೆಲ್ಲಾ ೧೪೪ನೇ ಸೆಕ್ಷನ್ ಜಾರಿ ಮಾಡಲಾಗಿದೆ.

ಆಟಂಬಾಂಬು

ಯುದ್ಧದಲ್ಲಿ ನಾನಾ ರಾಷ್ಟ್ರಗಳು ಆಟಂಬಾಂಬನ್ನು ಪ್ರಯೋಗಿಸಿದರೆ ಮಾನವತೆ ನಾಶವಾಗುವುದೇ ವಿನಹ ಯಾವ ಕಾರ್ಯಸಾಧನೆಯೂ ಆಗುವುದಿಲ್ಲ. ಯಾರ ಮೇಲೆ ಪ್ರಯೋಗಿಸಲಾಗುವುದೋ ಅವರಿಗೇ ಅಲ್ಲದೆ ಸುತ್ತಮುತ್ತಲ ಜನರಿಗೂ ಇದರಿಂದ ಹಾನಿಯುಂಟಾಗುವುದೆಂದು ಭಾರತಪ್ರಧಾನಿ ನೆಹರೂ ಹೇಳಿರುವರು.

ಡೆನ್ಮಾರ್ಕಿನ ಚಿಕಿತ್ಸಾ ಹಡಗು

ಕೊರಿಯಾ ಯುದ್ಧದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನಡೆಸಲು ಒಂದುನೂರು ಹಾಸಿಗೆಗಳುಳ್ಳ ಒಂದು ಡಚ್ ಚಿಕಿತ್ಸಾ ಹಡಗು ಕೊರಿಯಾಕ್ಕೆ ಬಂದಿದೆ. ಈ ರೀತಿಯಾಗಿ ಹಡಗನ್ನು ವಿಶ್ವಸಂಸ್ಥೆಯ ಸಹಾಯಕ್ಕಾಗಿ ಕಳುಹಿಸಿರುವುದು ಇದು ಹನ್ನೊಂದನೆಯ ರಾಷ್ಟ್ರ.

ಕೊರಿಯಾಕ್ಕೆ ಸಹಾಯ

ಕೊರಿಯಾ ಯುದ್ಧಕ್ಕೆ ಇದುವರೆಗೂ ೪೦ ರಾಷ್ಟ್ರಗಳು ಸೈನ್ಯ ಬಲ, ಆಹಾರ ಮತ್ತು ಔಷಧಿ ಸಾಮಾನು ಆದಿಯಾಗಿ ಅನೇಕ ರೀತಿಯ ಸಹಾಯ ನೀಡುತ್ತಲಿದೆ.

ವಿವರಕೊಡಿ

ಶ್ರೀ ಎ. ಕೆ. ಗೋಪಾಲನ್‌ರ ಹೇಬಿಯಸ್‌ಕಾರ್ಪಸ್ ಅರ್ಜಿಯ ವಿಷಯದಲ್ಲಿ ಮುಖ್ಯ ನ್ಯಾಯಾಲಯವು ತೀರ್ಪಿತ್ತುವ ಮುನ್ನವೇ ಹೊಸಸ್ಥಾನಬದ್ಧತಾ ಆಜ್ಞೆಯನ್ನು ಹೊರಡಿಸಿದ ಸಂಬಂಧದಲ್ಲಿ, ಮದರಾಸು ಸರ್ಕಾರವು ಸಲಹೆ ಪಡೆದ ನ್ಯಾಯಾಂಗ ಸಲಹೆಗಾರರಾರೆಂಬ ವಿಷಯದಲ್ಲಿ ವಿವರಗಳನ್ನು ಕೊಡಬೇಕೆಂದು ಮದರಾಸಿಗೆ ಮುಖ್ಯ ನ್ಯಾಯಾಲಯವು ಸರ್ಕಾರದ ಸಾರ್ವಜನಿಕಪಾಲೆ ಅಭಿರಾಜ್ಯದರ್ಶಿಯವರಿಗೆ ಆಜ್ಞೆ ಇತ್ತಿದ್ದಾರೆ.

ಪ್ರಭಾ ಪಿಕ್ಚರ್ ಹೌಸ್

೧೬—೩—೫೧ ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಗೃಹಸ್ಥಿ' ಚಿತ್ರದನಂತರ ಮಹೋನ್ನತಚಿತ್ರ

ಎಸ್. ಎಂ. ಯೂಸುಫ್‌ರವರ

ಬಹುರಾಣಿ (ಹಿಂದಿ)

ಪ್ರತಿಸಂಸಾರವೂ ನೋಡಲೇಬೇಕಾದಚಿತ್ರ

ಪಾತ್ರ—ಸುಲೋಚನ ಚಟರ್ಜಿ, ಯಶೋಧರ ಕಟ್ಜು, ಲಲಿತಾಪವಾರ್, ದೇವಿಡ್ ಮತ್ತು ಗೋಪ್

ರಣಜಿತ್

೧೩—೩—೫೧ರಿಂದ

ಅಮೋಘವಾದ ೨ನೇ ವಾರ

ಪ್ರತಿದಿನ ೩ ಆಟಗಳು

*** ಬಾಬುಲ್ ***

ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಒಲಂಪಿಯಾ ೧೫—೩—೫೧ರಿಂದ

ಪ್ರತಿದಿದಿನ ಮೂರು ಆಟಗಳು

ಮಧುಬಾಲ, ದೇವ್‌ಆನಂದ್, ಜೀವನ್ ಪಾತ್ರವಹಿಸಿರುವ ರಣಜಿತ್‌ರವರ ಸಂಗೀತಮಯ ಚಿತ್ರ

*** ಮಧುಬಾಲ ***

ಬೆಳಗಿನ ಪ್ರದರ್ಶನ ೧೬-೩-೫೧ರಿಂದ ಮೂರು ದಿನಗಳು

ನೂರ್‌ಜಹಾನ್ ಮತ್ತು ದಿಲೀಪ್‌ಕುಮಾರ್ ಪಾತ್ರವಹಿಸಿರುವ — ಜುಗ್ನು —

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] [illegible] ಶುಕ್ರವಾರ [ಸಂಚಿಕೆ ೧೬೦

ಮಲೇರಿಯಾ ಪರಿಶೋಧನಾಲಯ

ರಾ ಕ್ ಫೆ ಲ ರ್ ಫೌಂಡೇಷನ್ನಿನವರು ಮಂಡ್ಯದಲ್ಲಿ ಮಲೇರಿಯಾ ಪರಿಶೋಧನಾಲಯವನ್ನು ಸ್ಥಾಪಿಸಲಿರುವರು. ಕಬ್ಬಿನ ಸೆಸ್ ನಿಧಿಯಲ್ಲಿ ಒಂದು ಲಕ್ಷ ರೂ.ಗಳನ್ನು ಇದಕ್ಕಾಗಿ ಉಪಯೋಗಿಸಲಾಗುವುದೆಂದು ತಿಳಿದುಬರುತ್ತದೆ

೯ ಲಕ್ಷ ಟನ್ ಸಕ್ಕರೆ ತಯಾರಿ

ಈ ವರ್ಷದಲ್ಲಿ ಭಾರತಾದ್ಯಂತ ೯ ಲಕ್ಷ ಟನ್ ಸಕ್ಕರೆಯನ್ನು ತಯಾರಿಸಲಾಗಿದೆ. ಕಳೆದ ಸಾಲಿಗಿಂತ ೧ ಲಕ್ಷ ಟನ್ ಹೆಚ್ಚು ತಯಾರಿಸಲಾಗಿದೆ ಇದರಲ್ಲಿ ಅರ್ಧ ಭಾಗವೆಲ್ಲವೂ ಉತ್ತರ ಪ್ರದೇಶದಲ್ಲಿಯೇ ತಯಾರಾಗಿದೆ.

ಸಂಸ್ಥಾನದ ಆಯವ್ಯಯ ಸುಸ್ಥಿತಿಯಲ್ಲಿದೆ

ಸ್ವಯಂಪರಿಪೂರ್ಣತೆಗೆ ಪ್ರಯತ್ನ ಅಗತ್ಯ

ಬೆಂಗಳೂರು ಮಾ. ೧೫.

ಇಂದು ಮಧ್ಯಾಹ್ನ ಮೈಸೂರು ಶಾಸನಸಭೆಯ ಬಜೆಟ್ಟು ಅಧಿವೇಶನವು ಪುರಭವನದಲ್ಲಿ ಪ್ರಾರಂಭವಾಯಿತು. ಶ್ರೀಮನ್ಮಹಾರಾಜರು ಅಧಿವೇಶನಾರಂಭ ಭಾಷಣ ಮಾಡಿದರು. ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಈರೀತಿ ಹೇಳಿರುವರು.

ಈಗ ಪ್ರಪಂಚದ ಆರ್ಥಿಕ ಪರಿಸ್ಥಿತಿಯೂ ಮತ್ತು ರಾಜಕೀಯ ಪರಿಸ್ಥಿತಿಯೂ ಅಸ್ತವ್ಯಸ್ತ ಹದಗೆಟ್ಟಿವೆಯೆಂಬುದು ಸರ್ವರಿಗೂ ತಿಳಿದಿರತಕ್ಕ ವಿಷಯವಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ಯುದ್ಧಸನ್ನಾಹದ ಸಿದ್ಧತೆಗಳು ನಡೆಯುತ್ತಿವೆ. ಹೀಗಿರುವುದರಿಂದ, ಮುಂದೆ ಕೆಲವು ಕಾಲದವರೆಗೆ ಧಾರಣೆಗಳು ಇಳಿಯುವ ಸಂಭವವೇ ಇಲ್ಲವೆಂದು ಈಗ ತೋರುತ್ತದೆ. ಅಂತರರಾಷ್ಟ್ರೀಯ ಪರಿಸ್ಥಿತಿಯು ಸುಸ್ಥಿರವಾದ ನೆಲೆಯನ್ನು ಕಾಣದೆ ಸಂದಿಗ್ಧವಾಗಿರುವುದರ ಪರಿಣಾಮವು ನಮ್ಮ ದೇಶದ ಆರ್ಥಿಕ ಸ್ಥಿತಿಗೂ ತಟ್ಟುತ್ತಿರುವುದು ಸಹಜವಾಗಿಯೇ ಇದೆ. ಸಾಮಾನ್ಯವಾಗಿ, ಪ್ರಪಂಚದ ಸ್ಥಿತಿಗತಿಗಳ ಇನ್ನೂ ಅಸ್ತವ್ಯಸ್ತವಾಗಿರುವುದರಿಂದ, ನಮ್ಮ ದೇಶದ ಸ್ಥಿತಿಯು ಉತ್ತಮಗೊಳಿಸುವುದಕ್ಕೆ ತಕ್ಕ ಅವಕಾಶವೇ ದೊರೆಯುವುದಿಲ್ಲ ಜನಗಳಿಗೆ ಮುಖ್ಯ ಬೇಕಾಗಿರುವುದು ಆಹಾರ ಮತ್ತು ಬಟ್ಟೆ. ಈ ಎರಡು ಪದಾರ್ಥಗಳೂ ಇನ್ನೂ ಸಾಕಾದಷ್ಟು ದೊರೆಯದ ಕೊರತೆಯುಂಟಾಗಿದೆ. ಇವುಗಳ ಧಾರಣೆಗಳಂತೂ ಸ್ಥಿಮಿತವಾಗಿಲ್ಲ. ಅಷ್ಟು ಮಾತ್ರವೇ ಅಲ್ಲದೆ ಅವು ದಿಗ್ಭ್ರಮೆಗೊಳಿಸುವಂತೆಯೂ ಇವೆ. ಇಂಥ ಪರಿಸ್ಥಿತಿಯಿಂದ ಪಾರಾಗುವುದು, ನಮ್ಮ ದೇಶವು ಸಾಧ್ಯವಾದಷ್ಟು ಶೀಘ್ರವಾಗಿ ಸ್ವಯಂ ಪರಿಪೂರ್ಣತೆಯನ್ನು ಪಡೆಯುವಂತೆ ಮಾಡಲು ಸರ್ಕಾರದವರು ಯೋಚಿಸಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರುವುದನ್ನೇ ಅವಲಂಬಿಸಿವೆಯೆಂದು ಹೇಳಬಹುದಾಗಿದೆ. ಆದುದರಿಂದ ಕಾರ್ಯತತ್ಪರರಾಗದೆ ಇದ್ದುದರಲ್ಲಿಯೇ ಸಮಾಧಾನಪಟ್ಟುಕೊಂಡು ಕುಳಿತಿರುವ ಕಾಲವಿದಲ್ಲ. ನೆಲದಮೇಲೆ ಅವಿಚ್ಛಿನ್ನವಾಗಿ ಪ್ರಯತ್ನಗಳನ್ನು ನಡೆಯಿಸುವುದು ಅವಶ್ಯಕ. ಉತ್ಪತ್ತಿಯನ್ನು ಹೆಚ್ಚಿಸುವುದೇ ಈಗಿನ ದುಸ್ಥಿತಿಯ ನಿವಾರಣೆಗೆ ಮುಖ್ಯವಾದ ಉಪಾಯ. ಈ ಸಂದರ್ಭದಲ್ಲಿ, ಭಾರತ ದೇಶಕ್ಕೂ ಪಾಕಿಸ್ಥಾನಕ್ಕೂ ಪರಸ್ಪರ ವ್ಯಾಪಾರ ವ್ಯವಹಾರಗಳ ಸಂಬಂಧಗಳ್ಲಿ ಇದ್ದ ಅಡಚಣೆಗಳನ್ನು ತೆಗೆದುಹಾಕುವ ವಿಚಾರದಲ್ಲಿ ಭಾರತ ಸರ್ಕಾರಕ್ಕೂ ಪಾಕಿಸ್ಥಾನ ಸರ್ಕಾರಕ್ಕೂ ಒಪ್ಪಂದ ನಡೆದಿರುವುದು ವಿಶೇಷ ಸಂತೋಷದ ಸಂಗತಿ. ಭಾರತ ಸರ್ಕಾರಕ್ಕೂ ಪಾಕಿಸ್ಥಾನ ಸರ್ಕಾರಕ್ಕೂ ಪರಸ್ಪರ ಭಿನ್ನಾಭಿಪ್ರಾಯವಿರತಕ್ಕ ಇತರ ವಿಚಾರಗಳೂ ಉಭಯತ್ರರಿಗೂ ತೃಪ್ತಿಕರವಾಗುವ ರೀತಿ ಎಲ್ಲಾ ಶೀಘ್ರವಾಗಿ ಬಗೆಹರಿಯುವಂತಾಗಲೆಂದು ಹಾರೈಸೋಣ.

ಆಯವ್ಯಯದ ಅಂದಾಜುಗಳು

ಮುಂದಿನ ವರ್ಷದ ಆಯವ್ಯಯದ ಅಂದಾಜು ಪಟ್ಟಿಯಲ್ಲಿ 'ಫೆಡರಲ್' ಸ್ವಭಾವದ ಹಣಕಾಸಿನ ವಿಲೀನೀಕರಣದ ಪರಿಣಾಮವಾಗಿ ಉಂಟಾದ ಅವಶ್ಯಕತೆಗನುಗುಣವಾಗಿ ಬದಲಾವಣೆಗಳನ್ನು ಮಾಡಿದೆ.

ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯು ಸ್ವಾಭಾವಿಕವಾಗಿಯೇ ಉತ್ತಮವಾದುದಾಗಿದೆಯೆಂದು ನಮ್ಮ ಸರ್ಕಾರದವರಿಗೆ ಸಮರ್ಪಕವಾಗಿ ಕಂಡುಬಂದಿದೆ. ಮತ್ತು ಸರ್ಕಾರದ ಹಣಕಾಸಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅಂಗೀಕೃತವಾದ ನಿಯಮಗಳಿಗೆ ವ್ಯತಿರಿಕ್ತವಾಗಿ ಹೋಗದೆಯೇ ನಮ್ಮ ಸರ್ಕಾರದವರು ಧೈರ್ಯದಿಂದ ಕಷ್ಟಗಳನ್ನು ಎದುರಿಸಿ ಆಯವ್ಯಯಗಳು ಸುಸ್ಥಿತಿಯಲ್ಲಿರುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆರ್ಥಿಕ ಅಭಿವೃದ್ಧಿ ಸಾಧನೆಗೆ ಸಂಬಂಧಪಟ್ಟ ನಮ್ಮ ಸರ್ಕಾರದವರ ಕಾರ್ಯನೀತಿಯು ಉದ್ದೇಶವು ಮುಖ್ಯ ಹೊರಟು, ದೇಶದ ಆಹಾರ ನಿರ್ವಹಣದಲ್ಲಿ ಮೂಲಭೂತವಾಗಿರತಕ್ಕ ರಾಜ್ಯನೀತಿನಿರ್ದೇಶಕ ತತ್ವಗಳಿಗೆ ಅನುಗುಣವಾಗಿದೆ.

ಹಣಕಾಸಿನ ವ್ಯವಸ್ಥೆಯ ವಿಚಾರಗಳು

ವಿಲೀನೀಕರಣದ ಯೋಜನೆಯ ಪ್ರಕಾರ ನಮ್ಮ ಸಂಸ್ಥಾನದ ಹುಟ್ಟುವಳಿಯು ವರ್ಷಕ್ಕೆ ೩೪೫ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುವುದು. ಹೀಗೆ ಕೊರತೆ ಬೀಳತಕ್ಕ ಮೊಬಲಗನ್ನು ಇಂಡಿಯಾ ಸರ್ಕಾರದವರು ೧೯೫೦ನೆಯ ಇಸವಿ ಏಪ್ರಿಲ್ ೧ನೆಯ ತಾರೀಖಿನಿಂದ ಐದು ವರ್ಷಗಳ ಕಾಲ ಪೂರ್ತಿಯಾಗಿ ಕೊಡುವುದಾಗಿಯೂ ಆ ತರುವಾಯ ಆ ಮೊಬಲಗನ್ನು ವರ್ಷ ವರ್ಷವೂ ಕಡಮೆ ಮಾಡುತ್ತಾ ಬಂದು ಹತ್ತನೆಯ ವರ್ಷದಲ್ಲಿ ಹುಟ್ಟುವಳಿಯ ನಿವ್ವಳ ನಷ್ಟದ ಮೊಬಲಗಿನಲ್ಲಿ ಶೇಕಡ ೭೦ ರಷ್ಟು ವಿಚಾರವಾಗಿದೆ.

ವಿಲೀನೀಕರಣದ ಯೋಜನೆಯ ಫಲಿತಾಂಶವಾಗಿ ಮುಂದಿನ ಕೆಲವು ವರ್ಷಗಳಲ್ಲಿ ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯಲ್ಲಿ ಯಾವ ರೀತಿ ಪರಿಣಾಮವುಂಟಾಗುತ್ತದೆಂಬುದನ್ನೂ ಮತ್ತು ಸಂಸ್ಥಾನದ ಆರ್ಥಿಕ ಪರಿಸ್ಥಿತಿಯು ಹದಗೆಡದಂತೆ ಯಾವ ರೀತಿಯಲ್ಲಾಗಲಿ ಆಯವ್ಯಯ ಅಸಮತೋಲವುಂಟಾಗುವುದನ್ನು ತಪ್ಪಿಸಲು ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅವಶ್ಯಕವೆಂಬುದನ್ನೂ ನಮ್ಮ ಸರ್ಕಾರದವರು ಸಾವಧಾನವಾಗಿ ಪರಿಶೀಲಿಸಿದ್ದಾರೆ.

ಜನಗಣತಿ

ನಮ್ಮ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಜನಗಣತಿಗೆ ಸಂಬಂಧಪಟ್ಟ ಕಾರ್ಯಕಲಾಪಗಳು ಪ್ರಾರಂಭಿಸಿವೆ. ಈ ಜನಗಣತಿಯಿಂದ ಕಂಡುಬರತಕ್ಕ ಲೆಕ್ಕಗಳಿಂದ ಸಾಮಾನ್ಯವಾಗಿ ನಾನಾ ಕಾರ್ಯಕ್ಷೇತ್ರಗಳಿಗೆ ಸಂಬಂಧಪಟ್ಟ ಸರ್ಕಾರದವರ ಕಾರ್ಯನೀತಿಗಳ ಮೇಲೂ ಮತ್ತು ವಿಶೇಷವಾಗಿ ಆಹಾರಕ್ಕೆ ಸಂಬಂಧಪಟ್ಟ ಅವರ ಕಾರ್ಯನೀತಿಯ ಮೇಲೂ ಬಹುಮುಖ್ಯ ಪರಿಣಾಮಗಳುಂಟಾಗಬಹುದೆಂದು ನಮ್ಮ ಸರ್ಕಾರದವರು ಭಾವಿಸುತ್ತಾರೆ.

ಭಾರತದ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಮತ್ತು ಭಾರತದ ಪೋಲೀಸ್ ಸರ್ವಿಸ್ ಹುದ್ದೆಗಳಿಗೆ ಅಧಿಕಾರಿಗಳನ್ನು ಆರಿಸಿಕೊಳ್ಳುವ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಸರ್ವಿಸ್ಸಿಗೆ ಸೇರಿದ ಅಧಿಕಾರಿಗಳ ನ್ಯಾಯವಾದ ಹಕ್ಕುಗಳೂ ಮತ್ತು ಹಿತ ಸಾಧನೆಯೂ ಸುರಕ್ಷಿತವಾಗಿರುವಂತೆ ಮಾಡಲು ಅವಶ್ಯಕವಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳುವುದಾಗಿಯೂ ಮತ್ತು ಈ ಬದಲಾವಣೆಗೆ ಸಂಬಂಧಪಟ್ಟ ಈ ಸಂಧಿಕಾಲದಲ್ಲಿ ತೃಪ್ತಿಕರವಾದ ಏರ್ಪಾಡುಗಳನ್ನು ಮಾಡುವುದಾಗಿಯೂ ನಿರೀಕ್ಷಿಸಿರುತ್ತಾರೆ.

ಸಂಸ್ಥಾನದ ಸೈನ್ಯದಳಗಳನ್ನು ೧೯೫೦ನೆಯ ಇಸವಿ ಏಪ್ರಿಲ್ ೧ನೆಯ ತಾರೀಖಿನ ದಿನ ಕೇಂದ್ರ ಸರ್ಕಾರದ ವಶಕ್ಕೆ ವಹಿಸಿಕೊಟ್ಟಿದೆ ಇದರ ಪರಿಣಾಮವಾಗಿ ಹಿಂದೆ ಮೈಸೂರು ಸಂಸ್ಥಾನದ ಸೈನ್ಯದಳಗಳಿಗೆ ಸೇರಿದವರಾಗಿದ್ದ ಸೈನಿಕರ ಹಿತಸಂರಕ್ಷಣೆಗಾಗಿ ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರದವರು ಕೈಕೊಳ್ಳುತ್ತಿದ್ದಾರೆ.

ಕೈಗಾರಿಕೆಗಳು

ಪ್ಲಾನಿಂಗ್ ಕಮಿಷನಿಗೆ ಒಪ್ಪಿಸಿರುವ ಕಾರ್ಯಕ್ರಮದ ಯೋಜನೆಗಳಿಗನುಸಾರವಾಗಿ ನಮ್ಮ ಸಂಸ್ಥಾನದಲ್ಲಿ ಕೈಕೊಳ್ಳಬೇಕಾಗಿರತಕ್ಕ ಕೈಗಾರಿಕೆಗಳ ಸಂಬಂಧವಾದ ಯೋಜನೆಗಳಿಗಾಗಿ ೩೧ ಕೋಟಿ ರೂ. ಗಳ ಮೊಬಲಗು ಬೇಕಾಗುವುದೆಂದು ಲೆಕ್ಕಮಾಡಲ್ಪಟ್ಟಿದೆ. ಈ ಯೋಜನೆಗಳಿಗೆ ಸಂಬಂಧಪಟ್ಟ ಕಾರ್ಯಗಳು ೧೫ ವರ್ಷಗಳ ಅವಧಿಯಲ್ಲಿ ನೆರವೇರುವುದಾಗಿವೆ. ವಿಶಿಷ್ಟ, ಗಿರಾಕಿಯು ಜಾಸ್ತಿಯಾಗಿರು

(೬ನೇ ಪುಟ ನೋಡಿ)

(೧ನೇ ಪುಟದಿಂದ ಮುಂದುವರಿದುದು)

ವಂದ ಅಥವಾ ನಮ್ಮ ದೇಶದ ಆರ್ಥಿಕಾಭಿವೃದ್ಧಿಗೆ ಅತ್ಯಾವಶ್ಯಕವಾಗಿರುವಂಥ ನಮ್ಮ ಸಂಸ್ಥಾನದ ಕೈಗಾರಿಕೆಗಳನ್ನು ಮಿತವಾದ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸುವ ಸಾಧನೋಪಾಯಗಳನ್ನು ಕುರಿತು ನಮ್ಮ ಸರ್ಕಾರದವರು ಪರಿಶೀಲನೆ ನಡೆಯಿಸುತ್ತಿದ್ದಾರೆ. ಸರ್ಕಾರದ ಸಾಬೂನು ಕಾರ್ಖಾನೆ, ರೇಷ್ಮೆ ನೇಯ್ಗೆ ಕಾರ್ಖಾನೆ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್—ಇವುಗಳನ್ನು ಬದಲಾವಣೆಗೊಳಿಸುವುದಕ್ಕೂ, ಮಣ್ಣಿನ ಪಾತ್ರೆಗಳನ್ನು ತಯಾರು ಮಾಡುವ (ಕುಂಭಕಲೆಯ) ಕಾರ್ಖಾನೆಯನ್ನೂ, ರತ್ನಕಂಬಳಿಗಳ ತಯಾರಿಕೆಗೆ ಸಂಬಂಧಪಟ್ಟ ಕಾರ್ಯಕ್ರಮದ ಯೋಜನೆಗಳು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ಜಪಾನ್ ಮಾದರಿಯ ಗೃಹಕೈಗಾರಿಕೆಯ ಯಂತ್ರ ಸಾಧನವನ್ನು ಉಪಯೋಗಿಸಿ ಬಳಕೆಗೆ ತರುವುದರ ಮೂಲಕ ನಮ್ಮ ಸಂಸ್ಥಾನದ ಗೃಹಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಲು ನಮ್ಮ ಸರ್ಕಾರದವರು ಪ್ರಯತ್ನಿಸುತ್ತಿದ್ದಾರೆ. ಈ ಯಂತ್ರ ಸಾಧನದಿಂದ ಕೆಲಸವು ಇನ್ನೂ ಹೆಚ್ಚು ದಕ್ಷತೆಯಿಂದ ನಡೆದು ಉತ್ಪನ್ನವು ಹೆಚ್ಚುವುದು ಮಾತ್ರವೇ ಅಲ್ಲದೆ ಒಂದು ನಿಯತಪ್ರಮಾಣದ ಮಟ್ಟದಲ್ಲಿ ವಸ್ತುಗಳು ತಯಾರಾಗಿ ಅವುಗಳು ಕೂಡಲೇ ಮಾರಾಟವಾಗುವ ಸಂಭವವೂ ಹೆಚ್ಚು ಮಾತಾಗುವುದೆಂದು ನಿರೀಕ್ಷಿಸಲಾಗಿದೆ.

ನಗರಾಭಿವೃದ್ಧಿ ಸಮಿತಿ ಬಡ್ಜೆಟ್ ಅಧಿವೇಶನ

ಮೈಸೂರು ಮಾ. ೧೬

ಮೈಸೂರು ನಗರಾಭಿವೃದ್ಧಿ ಸಮಿತಿಯ ಬಡ್ಜೆಟ್ ಅಧಿವೇಶನವು ೨೪ನೇ ತಾರೀಖು ಶನಿವಾರ ನಡೆಯುವುದು

ಗುಪ್ತ ಸಮಾಲೋಚನೆ

ವಿಶ್ವಸಂಸ್ಥೆ ಸೈನ್ಯಗಳು ೩೮ನೇ ಅಕ್ಷಾಂಶವನ್ನು ದಾಟುವ ವಿಷಯದಲ್ಲಿ ಬ್ರಿಟನ್ ಅಮೆರಿಕಾಗಳಿವೆ ಗುಪ್ತ ಸಮಾಲೋಚನೆ ನಡೆಯುತ್ತಲಿವೆ. ನಿರ್ಧಾರವನ್ನು ಗೋಪ್ಯವಾಗಿಡಲಾಗುವುದೆಂದು ಹೇಳಲಾಗಿದೆ.

ಜಲಾಶಯಗಳು

ಭಾರತದಲ್ಲೆಲ್ಲಾ ಒಟ್ಟು ೧೮೮ ಜಲಾಶಯಗಳಿವೆ. ಅವುಗಳಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ೪೮, ಮೈಸೂರಿನಲ್ಲಿ ೧೧ ಇವೆಯೆಂದು ಸಚಿವ ಶ್ರೀ ಪ್ರಕಾಶರವರು ಕೇಂದ್ರ ಶಾಸನಸಭೆಯಲ್ಲಿ ತಿಳಿಸಿರುವರು.

ಹೊಸ ರೇಷನ್ ಆಫೀಸರ್

ಮೈಸೂರು ಮಾ. ೧೬

ಮೈಸೂರು ರೆವೆನ್ಯೂ ಸಬ್‌ಡಿವಿಜನ್ ಆಫೀಸರಾಗಿರುವ ಶ್ರೀ ಕೆಚ್. ಜಿ ವಿಜಯರಾಘವರೆಡ್ಡಿಯವರನ್ನು ಮೈಸೂರು ಸಿಟಿ ರೇಷನ್ ಆಫೀಸರಾಗಿ ಶ್ರೀ ಡಿ. ಜಿ. ಬಾಲರಾಜ್‌ರವರ ಸ್ಥಾನದಲ್ಲಿ ವರ್ಗಾಯಿಸಲಾಗಿದೆ.

ಮಧುಗಿರಿ ಒಂದನೇ ದರ್ಜೆ ಮ್ಯಾಜಿಸ್ಟ್ರೇಟರಾದ ಶ್ರೀ ಟಿ. ಎಲ್ ಶ್ರೀನಿವಾಸಾಚಾರ್ಯರನ್ನು ಮೈಸೂರು ಸಬ್‌ಡಿವಿಜನ್ ಆಫೀಸರಾಗಿ ವರ್ಗ ಮಾಡಲಾಗಿದೆ.

ಅಶ್ಲೀಲ ಪ್ರಕಟಣೆಗಳಿಗೆ ಖಂಡನೆ

ಕೆಲವು ಪತ್ರಿಕೆಗಳು ಸುಳ್ಳು ಮತ್ತು ದುರುದ್ದೇಶಗಳಿಂದ ಕೂಡಿದ ಮತ್ತು ಅಶ್ಲೀಲವಾದ ವಿಷಯಗಳನ್ನು ಪ್ರಕಟಿಸುತ್ತಿರುವುದನ್ನು ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಸ್ಥಾಯಿ ಸಮಿತಿ ಖಂಡಿಸಿ ನಿರ್ಣಯ ಮಾಡಿದೆ.

ಈ ರೀತಿ ಸುಳ್ಳು ಮತ್ತು ಅಶ್ಲೀಲ ಪ್ರಕಟಣೆಗಳು, ಸುದ್ದಿ ಮತ್ತು ಅಭಿಪ್ರಾಯ ಪ್ರಕಟಣೆ ವಿಚಾರದಲ್ಲಿ ಅಂಗೀಕೃತವಾದ ಎಲ್ಲಾ ತತ್ವಗಳಿಗೂ ವಿರುದ್ಧವೆಂದು ಖಂಡಿಸಲಾಗಿದೆ.

ಚರ್ಚೆ ಮುಂದುವರಿಯಿತು

ವಿಶ್ವಸಂಸ್ಥೆಯಲ್ಲಿ ಇಂದು ನಡೆಯಬೇಕಾಗಿದ್ದ ಕಾಶ್ಮೀರ ಪ್ರಶ್ನೆ ಚರ್ಚೆಯು ೨೧ನೇ ತಾರೀಖಿನ ವರೆಗೆ ಮುಂದು ಹಾಕಲಾಗಿದೆಯೆಂದು ತಿಳಿಯಬರುತ್ತದೆ.

ಬೀರಷ್ ಪ್ರಯೋಗ ಕೇಂದ್ರ

ರಾಕ್‌ಫೆಲರ್ ಫೌಂಡೇಷನ್ ಸಂಸ್ಥೆಯವರು ಬೆಂಗಳೂರಿನಲ್ಲಿ ಸಾಂಕ್ರಾಮಿಕ ರೋಗಕ್ಕೆ ಸಂಬಂಧಪಟ್ಟ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವರೆಂದು ತಿಳಿಯಬರುತ್ತದೆ.

ಅಖಿಲ ಭಾರತ ಉತ್ಪತ್ತಿದಾರರ ಸಮ್ಮೇಳನ

ಅಖಿಲ ಭಾರತ ಉತ್ಪತ್ತಿದಾರರ ಸಮ್ಮೇಳನವು ಮಾರ್ಚಿ ೨೫ನೇ ತಾರೀಖು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ರಕ್ತಮನವಿ

ಪುರುಷರ ಸಮಾನ ಹಕ್ಕು ತಮಗೂ ಬೇಕೆಂದು ಈಜಿಪ್ಟ್ ಮಹಿಳೆಯರು ನಾಲ್ಕು ಬಸ್ಸುಗಳಲ್ಲಿ ರಾಜರ ಅರಮನೆಯ ಮುಂದೆ ಬಂದಿಳಿದು ಒಂದು ರಕ್ತದಲ್ಲಿ ಬರೆದ ಮನವಿಯನ್ನು ಈಜಿಪ್ಟಿನ ದೊರೆ ಫರೂಕರಿಗೆ ಒಪ್ಪಿಸಿರುವರು.

ಆಸ್ಪತ್ರೆಗಳ ಕಾರ್ಯದರ್ಶಿ

ರಜದಮೇಲಿರುವ ಅಮಲ್ದಾರ್ ಶ್ರೀ ಎಂ. ಆರ್. ನರಸಿಂಗರಾಯರನ್ನು ಮೈಸೂರು ನಗರದಲ್ಲಿ ಆಸ್ಪತ್ರೆಗಳ ಕಾರ್ಯದರ್ಶಿಗಳಾಗಿ ವರ್ಗಾಯಿಸಲಾಗಿದೆ.

ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ

ಶಾಸನ ಸಭೆಯ ಕಾರ್ಯಕಲಾಪಗಳನ್ನು ಟೀಕೆ ಮಾಡುವ ವಿಷಯದಲ್ಲಿ ಮದ್ರಾಸು ಶಾಸನಸಭಾಧ್ಯಕ್ಷರು ಇತ್ತಿರುವ ತೀರ್ಪನ್ನು ಅಖಿಲ ಭಾರತ ವೃತ್ತ ಪತ್ರಿಕಾ ಮಾಲೀಕರ ಕಾರ್ಯಕಾರಿ ಸಮಿತಿಯು ದೆಹಲಿಯಲ್ಲಿ ಪರಿಶೀಲಿಸಿ ಈ ರೀತಿ ತೀರ್ಪಿತ್ತಿರುವುದು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದಲ್ಲದೆ ರಾಜ್ಯಾಂಗ ಶಾಸನಕ್ಕೆ ವಿರೋಧವಾಗಿದೆಯೆಂದು ತೀರ್ಮಾನಿಸಿದೆ.

ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಒರ್ಸಿಸಂ ಶಿಕ್ಷಣವನ್ನು ಸ್ಥಾಪಿಸಬೇಕೆಂದೂ ಸಲಹೆಯಿತ್ತಿದೆ.

ಕಾಂಗ್ರೆಸ್ ಸದಸ್ಯರ ರಾಜಿನಾಮೆ

ಬೊಂಬಾಯಿ ಸರ್ಕಾರದ ಆಹಾರ ನೀತಿಯನ್ನು ವಿರೋಧಿಸಿ, ಬರೋಡಾದ ಆಹಾರ ಸಲಹಾಸಮಿತಿಯ ೨೧ ಜನ ಕಾಂಗ್ರೆಸ್ ಸದಸ್ಯರೆಲ್ಲಾ ಸಮಿತಿಗೆ ರಾಜೀನಾಮೆ ಯಿತ್ತಿರುವರು.

ನಿರಂಕುಶಾಧಿಕಾರಿಗಳಂತೆ ನೆಹರೂ ಮಾತನಾಡಿದ್ದಾರೆ

ಪ್ರಧಾನಿ ನೆಹರು ನಿರಂಕುಶಾಧಿಕಾರಿಗಳಂತೆ ಮಾತನಾಡಿದ್ದಾರೆ ಎಂದು ಪಂ|| ಹೃದಯನಾಥ್ ಕುಂಜ್ರು ಟೀಕಿಸಿರುವರು.

ಆದಾಯ ತೆರಿಗೆ ಇನ್‌ವೆಸ್ಟಿಗೇಷನ್ ಕಮಿಷನ್ ಮಸೂದೆಯ ತೃತೀಯ ವಾಚನದ ಸಂಬಂಧವಾಗಿ ಅಧ್ಯಕ್ಷರು ರೂಲಿಂಗ್ ಕೊಟ್ಟ ಸನ್ನಿವೇಶದಲ್ಲಿ ಪಾರ್ಲಿಮೆಂಟಿನಲ್ಲಿ ಬಿರುಸಾದ ಮಾತುಕತೆಗಳಾದವು. ಆಗ ನೆಹರೂ ಮಧ್ಯೆ ಬಂದು ತೀವ್ರ ರೀತಿಯಲ್ಲೀ ಉತ್ತರವಿತ್ತರು.

ಇದನ್ನು ಕಂಡೇ ಕುಂಜ್ರು ಮೇಲಿನಂತೆ ಟೀಕಿಸಿದರು.

ಪುನಃ ಗಲಭೆ

ಪೂರ್ವಬಂಗಾಳದಲ್ಲಿ ಪುನಃ ಗಲಭೆಗಳು ಪ್ರಾರಂಭವಾಗವೆಯೆಂದು ವರದಿಯಿದೆ. ಚಿಟಗಾಂಗ್, ನೋಕಾಲಿ ತ್ರಿಪುರ ಮುಂತಾದೆಡೆ ದರೋಡೆ, ಲೂಟಿ, ಇಂತ ಪ್ರಕರಣಗಳು ನಡೆದಿವೆ.

Office of the Secretary, Mysore Government Insurance Department, Bangalore, (Public Branch)

Dated 15th March 1951

Application having been received for the issue of duplicates of policy Nos. 35219-C, 55064 C, on the life of Sri C. Anandarama Rao, M.Sc, chemist, Health Office, Mysore City, it is hereby notified that the duplicates will be issued unless valid objection therefor is received by the undersigned within one month from this date.

B.M KRISHNAN
Secretary

ಪ್ರಭಾ ಪಿಕ್ಚರ್ ಹೌಸ್

೧೬—೩—೫೧ ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಗೃಹಸ್ಥಿ' ಚಿತ್ರದನಂತರ ಮಹೋನ್ನತಚಿತ್ರ
ಎಸ್. ಎಂ. ಯೂಸುಫ್‌ರವರ

ಬಹುರಾಣಿ (ಹಿಂದಿ)

ಪ್ರತಿಸಂಸಾರವೂ ನೋಡಲೇಬೇಕಾದಚಿತ್ರ
ಪಾತ್ರ—ಸುಲೋಚನ ಚಟರ್ಜಿ, ಯಶೋಧರ ಖಟ್ಜು, ಲಲಿತಾಪವಾರ್, ಡೇವಿಡ್ ಮತ್ತು ಗೋಪ್

ರಣಜಿತ್

೧೩—೩—೫೧ರಿಂದ
ಅಮೋಘವಾದ ೨ನೇ ವಾರ
ಪ್ರತಿದಿನ ೩ ಆಟಗಳು

* ಬಾಬುಲ್ *

ಪಾತ್ರ ನರ್ಗಿಸ್, ದಿಲೀಪ್‌ಕುಮಾರ್.

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಜಗತ್ತಿಗೆಲ್ಲ ಸರ್ವಸಾಮಾನ್ಯ ಸಂಸ್ಕೃತಿ

ಪ್ರಪಂಚದ ಎಲ್ಲ ಜನರಿಗೂ ಒಪ್ಪುವಂಥ, ಸರ್ವಸಾಮಾನ್ಯವಾದ ಸಂಸ್ಕೃತಿ ಅಗತ್ಯ ಎಂಬುದಾಗಿ ಪ್ರಧಾನಮಂತ್ರಿ ಪಂ|| ನೆಹರೂ ಅಖಿಲ ಭಾರತ ಸಾಂಸ್ಕೃತಿಕ ಸಮ್ಮೇಳನದ ಭಾಷಣದಲ್ಲಿ ಮನವಿಮಾಡಿಕೊಂಡರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೩—೧೯೫೧ನೇ ಶನಿವಾರ [ಸಂಚಿಕೆ ೧೬೧

ಸರ್ವೋದಯ ಸಭೆ

ಮೈಸೂರು ಮಾ. ೧೭

ಪ್ರತಿ ಭಾನುವಾರ ಬೆಳಗ್ಗೆ ೭ ಗಂಟೆಗೆ ಸರಿಯಾಗಿ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮಸಹಾಯಸಂಘದಲ್ಲಿ ಸರ್ವೋದಯದ ಸಭೆಯ ಅಂಗವಾಗಿ ಪ್ರಾರ್ಥನೆ ಸಭೆ, ಸೂತ್ರ ಯಜ್ಞ ನಡೆಯುವುದು. ನೂಲುವವರು ತಮ್ಮ ಚರಕಗಳನ್ನು ತರಬೇಕೆಂದು ವ್ಯವಸ್ಥಾಪಕರು ತಿಳಿಸುತ್ತಾರೆ.

ಚುನಾವಣೆಯಲ್ಲಿ ಅಧಿಕಾರ ಪ್ರಭಾವವಿರಕೂಡದು

ಅಧಿಕಾರದಲ್ಲಿರುವ ಪಕ್ಷ ಚುನಾವಣೆಯ ಮತದಾನದ ಮೇಲೆ ಪ್ರಭಾವ ಬೀರಲು ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಉಪಯೋಗಿಸಿಕೊಂಡರೆ ಅದ ಉಗ್ರ ಕ್ರಾಂತಿಗೆ ಮಾರ್ಗ ಮಾಡಿಕೊಟ್ಟಂತಾಗುತ್ತದೆ.

ಎಂಬುದಾಗಿ ಆಚಾರ್ಯ ಜೆ. ಬಿ. ಕೃಪಲಾನಿಯವರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಚುನಾವಣೆಯಲ್ಲಿ ಸರ್ಕಾರದ ಕೈವಾಡವನ್ನು ಕುರಿತು ಪ್ರಸ್ತಾಪಿಸುತ್ತ ತಮಗೆ ಪಶ್ಚಿಮ ಬಂಗಾಳದ ನಾಯಕರಾದ ಡಾಕ್ಟರ್ ಪ್ರಫುಲ್ಲ ಚಂದ್ರಘೋಷರವರು ತಂತಿಯೊಂದನ್ನು ಕಳಿಸಿದುದಾಗಿಯೂ ಅದರಲ್ಲಿ ಸರ್ಕಾರಿ ವಾಹನಗಳನ್ನು ಕಾಂಗ್ರೆಸ್ ಉಮೇದುವಾರನ ಬೆಂಬಲಕ್ಕಾಗಿ ಉಪಯೋಗಿಸಲಾಯಿತೆಂದು ತಿಳಿಸಿರುವುದಾಗಿಯೂ ಈ ಅಂಶಗಳಲ್ಲ ಕೂಲಂಕಷವಾಗಿ ವಿಚಾರಣೆ ನಡೆಸಿದ ಮೇಲೆ ಪ್ರಕಟಿಸಲಾಗಿದೆಯೆಂದರು.

ಇತ್ತೀಚೆಗೆ ಪೂರ್ವ ಬಂಗಾಳ ಶಾಸನ ಸಭೆಗೆ ನಡೆದ ಉಪ ಚುನಾವಣೆಯ ಘಟನೆಯೊಂದನ್ನು ಪುನಃ ಸ್ಮರಿಸಿ ಸಚಿವರುಗಳು ಕಾಂಗ್ರೆಸ್ ಉಮೇದುವಾರನಿಗೆ ಬೆಂಬಲ ನೀಡಲು ಪೋಲೀಸ್ ವ್ಯಾನಿನಲ್ಲಿ ಕುಳಿತು ಮತದಾನ ಕೇಂದ್ರಗಳಿಗೆಲ್ಲಾ ಭೇಟಿಕೊಟ್ಟರೆಂದೂ ಚುನಾವಣೆಯ ದಿನದಂದು ಚುನಾವಣೆ ಪ್ರಾರಂಭವಾದ ಹೊತ್ತಿನಲ್ಲಿ ವಿರೋಧ ಪಕ್ಷದ ಸದಸ್ಯರ ಬೆಂಬಲಿಗರಲ್ಲಿ ಹಲವರನ್ನು ಬಂಧಿಸಿದರೆಂದರು.

ಅನಿರ್ಬಾಧಿತವಾದ ಮತದಾನವೇ ಪ್ರಜಾಪ್ರಭುತ್ವದ ಪೌರ ಸರ್ವಸ್ವ. ಸರ್ಕಾರ ತನ್ನ ಅಸಂಖ್ಯ ಹಕೋಟಿಗಳನ್ನು ಉಪಯೋಗಿಸಿ ಚುನಾವಣೆಯಲ್ಲಿ ಕೈಹಾಕಿದರೆ "ಓಟಿನ ಪಟ್ಟಿಗೆ" ಮೂಲಕ ಸರ್ಕಾರವನ್ನು ಬದಲಿಸಲು ಸಾಧ್ಯವೇ ಇಲ್ಲ.

ಅನಿರ್ಬಾಧಿತವಾದ ಓಟಿನಿಂದ, ಶಾಂತ ರೀತಿಯಲ್ಲಿ ಸರ್ಕಾರವನ್ನು ಬದಲಿಸಲು ಸಾಧ್ಯವಾಗದೇ ಹೋದುದೇ ಆದರೆ, ಆ ಸರ್ಕಾರವನ್ನು ಕೇವಲ ಹಿಂಸಾಕ್ರಮದಿಂದ ಮಾತ್ರ ಬದಲಿಸಲು ಸಾಧ್ಯ ಎಂದರು.

ಬಹಿಷ್ಕಾರವಣೆಯಿಲ್ಲ

ಹೈದರಾಬಾದಿನ ಪ್ರಸ್ತುತ ಆಡಳಿತ ವ್ಯವಸ್ಥೆಯಲ್ಲಿ ಸದ್ಯಕ್ಕೆ ಏನೂ ಬದಲಾವಣೆಯಿಲ್ಲವೆಂದು ಸಂಸ್ಥಾನ ಸಚಿವ ಶ್ರೀ ಗೋಪಾಲಸ್ವಾಮಿಯಯ್ಯಂಗಾರ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಸಕ್ಕರೆ ಬೆಲೆ ಹಕೋಟಿಯಿಲ್ಲ

ಸಕ್ಕರೆ ಕಾರ್ಖಾನೆಗಳು ಸಕ್ಕರೆಯನ್ನು ತಮಗೆ ಬೇಕಾದವರಿಗೆ ಮಾರಲು ಬೆಲೆಯ ಹಕೋಟಿಯೇನೂ ಇರುವುದಿಲ್ಲ.

'ಸಿ' ವಿಭಾಗದ ಸಂಸ್ಥಾನಗಳು

ಭಾರತದ ಎಲ್ಲಾ ಪ್ರಾಂತ್ಯಗಳ ಆಡಳಿತವನ್ನು ಪ್ರಜಾ ಸತ್ತಾತ್ಮಕವನ್ನಾಗಿ ಮಾಡಲು, 'ಸಿ' ವಿಭಾಗದ ಸಂಸ್ಥಾನಗಳ ಆಡಳಿತದಲ್ಲಿ ಮಾರ್ಪಾಡು ಮಾಡಲು ಪಾರ್ಲಿಮೆಂಟಿನಲ್ಲಿ ಬಂದು ಮಸೂದೆಯನ್ನು ತರಲಾಗುವುದು. ಈಗ ಈ ೧೦ ಸಂಸ್ಥಾನಗಳ ಆಡಳಿತ ವ್ಯವಸ್ಥೆಯು ಕೇಂದ್ರ ಸರಕಾರದಿಂದಲೇ ನೇರವಾಗಿ ನಡೆಯುತ್ತಲಿದೆ. ಇನ್ನು ಮುಂದೆ ಅವು ಅಕ್ಕಪಕ್ಕದ ಪ್ರಾಂತ್ಯಗಳಿಗೆ ಸೇರಿಸಿ, ಕಮಿಷನರ್ ಮತ್ತು ಇಬ್ಬರು ಜನರ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯ ಆಡಳಿತಕ್ಕೊಳಪಡಿಸಲಾಗುವುದು. ಕೊಡಗು ಮೈಸೂರಿಗೆ ಅಥವಾ ಮದರಾಸಿಗೆ ಸೇರುವುದು.

ಈ ವಿಷಯದಲ್ಲಿ ನನ್ನೆ ಸಂಸ್ಥಾನ ಸಚಿವರು ಪಾರ್ಲಿಮೆಂಟಿನಲ್ಲಿ ವಿವರಣೆಯನ್ನಿತ್ತರು.

ಆಚಾರ್ಯ ಕೃಪಲಾನಿಯವರು ಮುಂದು ವರೆದು ಮಹಾಚುನಾವಣೆಗಳು ಶೀಘ್ರವೇ ಬರಲಿವೆ. ತಮ್ಮ ಅಧಿಕಾರವನ್ನು ಸುಸ್ಥಿರಗೊಳಿಸುವ ಕಾತುರತೆಯಲ್ಲಿ ಅಧಿಕಾರದಲ್ಲಿರುವ ಪಕ್ಷ ಪ್ರಜಾಸತ್ತಾತ್ಮಕ ತತ್ವಗಳಿಗೆ ಮತ್ತು ರಾಜ್ಯಾಂಗ ವಿಧಿಗಳಿಗೆ ಕಟ್ಟುಬೀಳದೆ ಹೋದರೆ ಅವರು ತಮಗೆ ಮಾತ್ರವಲ್ಲದೆ ಇಡೀ ದೇಶಕ್ಕೆ ಅಘಾತವನ್ನುಂಟು ಮಾಡಿಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ.

ಶಾಸನಸಭೆ ಕಾರ್ಯಕಲಾಪಗಳು

ಬೆಂಗಳೂರು ಮಾ. ೧೭

ಶಾಸನಸಭೆಯಲ್ಲಿ ಶ್ರೀಮನ್ಮಹಾರಾಜರು ಮಾಡಿದ ಭಾಷಣಕ್ಕೆ ಶ್ರೀ ಹೆಚ್. ಕೆ. ವೀರಣ್ಣಗೌಡರು ವಂದನೆಯನ್ನರ್ಪಿಸುವ ನಿರ್ಣಯವನ್ನು ಮಂಡಿಸಿದರು.

ಶ್ರೀ ಟಿ. ಮಾದಯ್ಯಗೌಡರು ನಿರ್ಣಯವನ್ನು ಅನುಮೋದಿಸುತ್ತಾ ಹಳ್ಳಿಗಾಡುಗಳಲ್ಲಿ ಪಾಳೇಗಾರರಿಂದ ನಾನಾ ಅನಾಹುತಗಳಾಗುತ್ತಿರುವುದರಿಂದ ಅವುಗಳನ್ನು ಸರ್ಕಾರದವರು ರದ್ದುಗೊಳಿಸಬೇಕೆಂದು ಸೂಚಿಸಿದರು.

ಈ ನಿರ್ಣಯದ ಮೇಲೆ ಶ್ರೀ ಎಂ. ಗೋವಿಂದರೆಡ್ಡಿಯವರು ಮಾತನಾಡುತ್ತಾ ಮೈಸೂರು ಪೋಲೀಸಿಯನ್ನು ಕೇಂದ್ರ ಸರ್ಕಾರಕ್ಕೆ ವಿಲೀನೀಕರಣ ಮಾಡಿರುವ ವಿಷಯದಲ್ಲಿ ಕೇಂದ್ರವು ಮೈಸೂರಿಗೆ ಅವಮಾನ ಮಾಡಿದೆಯೆಂದು ಹೇಳಿದರು. ಮೈಸೂರು ಸೈನ್ಯವನ್ನು ಕೇಂದ್ರ ಸೈನ್ಯದೊಡನೆ ಸೇರಿಸಲಾಗಿತ್ತು. ನಮ್ಮ ಸರ್ಕಾರದ ಅಭಿಮತವನ್ನು ಪಡೆಯದೆ ತಮಗಿಷ್ಟ ಬಂದಂತೆ ನಿವೃತ್ತಿಗೊಳಿಸಿರುವರು. ಈ ನೀತಿ ಅತೃಪ್ತಿಗೆ ಅವಕಾಶವಿತ್ತಿದೆಯೆಂದರು.

ಟ್ರೇಡ್ ಕಮಿಷನರ್ ಹುದ್ದೆ ವಿಷಯ ಪ್ರಸ್ತಾಪಿಸಿದಾಗ ಅರ್ಥ ಸಚಿವರು ಈ ಹುದ್ದೆಯನ್ನು ರದ್ದುಗೊಳಿಸುವುದಿಲ್ಲವೆಂದು ಹೇಳಿದರು.

ಶ್ರೀ ಡಿ. ಎಂ. ಸಿದ್ದಯ್ಯನವರು ಮಾತನಾಡುತ್ತಾ ಹೆಚ್ಚು ಆಹಾರ ಬೆಳೆ ಯೋಜನೆಯು ಸ್ವಲ್ಪವೂ ಪ್ರಯೋಜನಕಾರಿಯಾಗಿಲ್ಲ. ಬಟ್ಟೆ ಪರಿಸ್ಥಿತಿ ಬಹಳ ಕೆಟ್ಟಿದೆ. ಕಾಳಸಂತೆಯಲ್ಲಿ ಮಾತ್ರ ದೊರೆಯುತ್ತಿ. ಅದನ್ನು ಸರ್ಕಾರ ತಡೆಗಟ್ಟಬೇಕೆಂದರು.

ರಾಜೀನಾಮೆ ವಾಪಸ್

ರಾಜೀನಾಮೆ ಕೊಟ್ಟಿದ್ದ ಉತ್ತರ ಪ್ರದೇಶದ ಕಮ್ಯೂನಿಕೇಷನ್ ಮಂತ್ರಿ ಮಿ|| ಹಫೀಜ್ ಮಹಮದ್ ಇಬ್ರಾಹಿಂರವರು ತಮ್ಮ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ.

ಬಲಾತ್ಕಾರ ವಿದ್ಯಾಭ್ಯಾಸ

ಪಶ್ಚಿಮ ಬಂಗಾಳದ ಸರಕಾರವು ಬಲಾತ್ಕಾರದ ಪ್ರಾಥಮಿಕ ವಿದ್ಯಾಭ್ಯಾಸ ವ್ಯವಸ್ಥೆಗಾಗಿ ೯೯, ೩೩, ೦೦೦ ರೂಪಾಯಿಗಳ ವೆಚ್ಚದ ಯೋಜನೆಯೊಂದನ್ನು ಸಿದ್ಧಗೊಳಿಸಿದೆ ಮತ್ತು ಈ ಬಗ್ಗೆ ಶಿಕ್ಷಣ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಲಾಗಿದೆ.

ಸೋಮನಾಥ ದೇವಾಲಯ ಜೀರ್ಣೋದ್ಧಾರ

ಸೌರಾಷ್ಟ್ರದ ಪುರಾತನ ಸೋಮನಾಥ ದೇವಾಲಯದ ಜೀರ್ಣೋದ್ಧಾರ ಸಮಾರಂಭಕ್ಕೆ ಉತ್ತರ ಪ್ರದೇಶದ ಸರ್ಕಾರ ಗಂಗೋತ್ರಿ, ಯಮುನೋತ್ರಿ, ತ್ರಿವೇಣಿ, ಗಂಡಕಿ, ಮಾನಸಸರೋವರಗಳ ತೀರ್ಥವನ್ನೂ ಪುಣ್ಯ ಕ್ಷೇತ್ರಗಳ ಮೃತ್ತಿಕೆಯನ್ನೂ ಕಳುಹಿಸಿಕೊಟ್ಟಿದೆ.

ನರ್ಸಿಂಗ್ ನಿಪುಣರು

ಕಾಮನ್ವೆಲ್ತ್ ಟೆಕ್ನಿಕಲ್ ಯೋಜನೆಯ ಅಂಗವಾಗಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡಿನ ಕೆಲವು ನರ್ಸಿಂಗ್ ನಿಪುಣರು ಭಾರತ ಪ್ರಯೋಗ ಶಾಲೆಗಳಿಗೆ ಬರುವರು.

ಭಾರತದ ಕೆಲವು ನರ್ಸುಗಳನ್ನು ಶಿಕ್ಷಣಕ್ಕಾಗಿ ನ್ಯೂಜಿಲೆಂಡಿಗೆ ಕಳುಹಿಸಲಾಗುವುದು.

ವ್ಯಾಪಾರ ತೆರಿಗೆ ವಿಧಿಸಿದ್ದಕ್ಕೆ ಮುಷ್ಕರ

ವ್ಯಾಪಾರ ತೆರಿಗೆಯನ್ನು ವಿಧಿಸಿರುವುದಕ್ಕಾಗಿ ರಂಗೂನಿನ ವ್ಯಾಪಾರಸ್ಥರೆಲ್ಲರೂ ಮುಷ್ಕರವನ್ನು ಹೂಡಿದ್ದಾರೆ. ಇದರಿಂದ ಶಾಂತಿಭಂಗವಾಗದಂತೆ ಸರ್ಕಾರವು ಮುಂಜಾಗ್ರತೆ ಕಾರ್ಯಕ್ರಮ ಕೈಗೊಳ್ಳುತ್ತಲಿದೆ.

ಮೆನನ್ ಆಗಮನ

ಬೆಂಗಳೂರು ಮಾ. ೧೬

ಶ್ರೀ ವಿ. ಪಿ. ಮೆನನ್ನರು, ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಂರವರು ಇಂದು ಬೆಂಗಳೂರಿಗೆ ಆಗಮಿಸಿದರು.

ಸಂತಾಪ ಸೂಚಕ ನಿರ್ಣಯ

ಬೆಂಗಳೂರು ಮಾ. ೧೬

ಮೈಸೂರು ಶಾಸನ ಸಭೆಯು ಈ ಮಧ್ಯಾಹ್ನ ೧ ಗಂಟೆಗೆ ಶ್ರೀ ಹಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯ ಕಾರ್ಯಕಲಾಪಗಳು ಆರಂಭವಾಗುವ ಮೊದಲು ಸಭಾನಾಯಕರಾದ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ವಿಶ್ವವಿದ್ಯಾನಿಲಯದ ಪ್ರೋ ಚಾನ್ಸಲರೂ, ಮೈಸೂರು ಸರ್ಕಾರದ ಶಿಕ್ಷಣ ಸಲಹೆಗಾರರೂ ಆಗಿದ್ದ ಪ್ರೊ|| ಸಿ. ಆರ್. ರೆಡ್ಡಿಯವರ ಮತ್ತು ಮೈಸೂರಿನ ಮಾಜಿ ಮಂತ್ರಿಗಳಾಗಿದ್ದ ಶ್ರೀ ಕೆ. ವ್ಯಾಧನ್‌ರವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಆಪಾದನೆ ತನಿಖೆ

ಶ್ರೀಬರ್ ಕಮಾಷನರಾಗಿದ್ದ ಜ|| ಇಸ್ಮಾಯಿಲ್ ಪಟೇಲ್‌ರಿಗೆ ಸರ್ಕಾರದವರು ಒತ್ತಾಯವಾಗಿ ಆಡಳಿತ ಕಾರಣಗಳಿಗಾಗಿ ೩ ತಿಂಗಳು ರಜಾ ಕೊಟ್ಟಿದ್ದಾರೆ. ಅವರ ಮೇಲಿನ ಆಪಾದನೆಯನ್ನು ಒಂದು ವಿರೋಧ ಕಾಪಿಯಾಸು ತನಿಖೆ ನಡೆಸುತ್ತಿದ್ದಾರೆ.

ತಪ್ಪು ವಯಸ್ಸು

ತಪ್ಪು ವಯಸ್ಸನ್ನು ಕೊಟ್ಟಿದ್ದರಿಂದ ೧೯೪೯ರಲ್ಲಿ ೩ ಮಂದಿ ಮುಸ್ಲಿಂ ಅಧಿಕಾರಿಗಳಿಗೆ ರಜಾ ಕೊಡಲಾಗಿದೆ. ೧೯೪೯ರಲ್ಲಿ ಒಬ್ಬರಿಗೆ ರಜಾ ಕೊಡಲಾಗಿದೆ ಎಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಶಾಸನ ಸಭೆಯಲ್ಲಿ ತಿಳಿಸಿದರು.

ರಾಜಪ್ರಮುಖರ ಸಭೆ

ರಾಜಪ್ರಮುಖರು ಮತ್ತು ಗೌರ್‍ನರುಗಳ ಸಭೆಯನ್ನು ನಿನ್ನೆ ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರು ಪ್ರಾರಂಭ ಮಾಡಿದರು. ಪ್ರಧಾನಿ ನೆಹರೂರವರು ಸಭೆಯನ್ನುದ್ದೇಶಿಸಿ ಅಂತರರಾಷ್ಟ್ರೀಯ ಪರಿಸ್ಥಿತಿ, ಆಹಾರ ಮುಂತಾದ ವಿಷಯದಲ್ಲಿ ಮಾತನಾಡಿದರು.

೯೬೪ ದಸ್ತಗಿರಿ

ನಾಗಪುರದಲ್ಲಿ ನಾಲ್ಕು ದಿನಗಳಿಂದ ಸತ್ಯಾಗ್ರಹ ಮಾಡುತ್ತಲಿರುವ ಸೆಯ್ಯರ ದಸ್ತಗಿರಿ ಸಂಖ್ಯೆಯು ೯೬೪ಕ್ಕೆ ಏರಿದೆ.

ರಾಷ್ಟ್ರಾಧ್ಯಕ್ಷರ ಪ್ರವಾಸ

ಇದೇ ೨೪ನೇ ತಾರೀಖಿನಿಂದ ರಾಷ್ಟ್ರಾಧ್ಯಕ್ಷರು ತಿರುವಾಂಕೂರು, ಕೊಚ್ಚಿನ್ ಧಾರವಾಡಗಳ ಪ್ರವಾಸ ಕೈಗೊಂಡು ೩೧ನೇ ತಾರೀಖು ದೆಹಲಿಗೆ ಹಿಂತಿರುಗುವರು.

ಪಾಕಿಸ್ತಾನದ ಅಕ್ಕಿ ಭಾರತಕ್ಕೆ

ಸೋಮವಾರ ಪಾಕಿಸ್ತಾನವು ಭಾರತಕ್ಕೆ ೧೦೦೦ ಟನ್ ಅಕ್ಕಿಯನ್ನು ಕಳುಹಿಸಲಿದೆ. ೨೯ನೇ ತಾರೀಖು ೮೦೦೦ ಟನ್ ಅಕ್ಕಿಯನ್ನು [illegible]

ಆಹಾರ ಅಧಿಕಾರಿಗಳ ಸಭೆ

ಮಾರ್ಚಿ ೨೧ನೇ ತಾರೀಖು ದೆಹಲಿಯಲ್ಲಿ ಕೇಂದ್ರ ಮತ್ತು ಸಂಸ್ಥಾನ ಆಹಾರ ಅಧಿಕಾರಿಗಳ ಸಭೆ ನಡೆದು ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಆಹಾರ ಸರಬರಾಜಿನ ವಿಷಯದಲ್ಲಿ ಚರ್ಚೆ ನಡೆಸಲಿದೆ.

ಸೋಷಿಯಲಿಸ್ಟ್ ಪಕ್ಷದ ಸಭೆ

ಏಪ್ರಿಲ್ ನಾಲ್ಕನೇ ವಾರದಲ್ಲಿ ಶ್ರೀ ಜಯಪ್ರಕಾಶರ ಪ್ರವಾಸದ ವಿವರಣೆಗಳಿಗಾಗಿ ಭಾರತದ ಸಂಚೆ ಕಾರ್ಯಕರ್ತರ ಸಭೆಯು ಪಕ್ಷದ ಕಛೇರಿಯಲ್ಲಿ ನಡೆಯುವುದು.

ಥೈಲಾಂಡ್ ಅಕ್ಕಿ

ಭಾರತಕ್ಕೆ ಥೈಲಾಂಡಿನಲ್ಲಿ ೨ ಲಕ್ಷ ಟನ್ ಅಕ್ಕಿ ಈ ವರ್ಷ ಬರಲಿದೆ.

೩೮ನೇ ಅಕ್ಷಾಂಶ

ಕೊರಿಯಾದಲ್ಲಿ ೩೮ನೇ ಅಕ್ಷಾಂಶವನ್ನು ದಾಟುವ ನಿರ್ಧಾರ ಅಲ್ಲಿರುವ ರಣರಂಗದಲ್ಲಿರುವ ಸೇನಾಪತಿಯೇ ಕೈಗೊಳ್ಳಬೇಕಾಗಿದೆ ಎಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವರು.

ಮರಣದಂಡನೆ ಖಾಯಂ

ತೆಲಂಗಾಣದ ೧೨ ಕಮ್ಯೂನಿಸ್ಟರ ಮರಣದಂಡನೆ ಅಪೀಲನ್ನು ಸುಪ್ರೀಂ ಕೋರ್ಟು ವಜಾ ಮಾಡಿದೆ.

ತನಿಖೆಗಾಗಿ ೪೦ ಅಧಿಕಾರಿಗಳು

ಪಾಕಿಸ್ತಾನದ ಪಿತೂರಿ ಸಂಬಂಧವಾಗಿ ತನಿಖೆ ನಡೆಸಲು ೪೦ ಮಂದಿ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳನ್ನು ನೇಮಿಸಲಾಗಿದೆ.

ಅಧಿಕಾರಿಗಳ ಸಮ್ಮೇಳನ

ನೇಪಾಳದ ಗೌರ್‍ನರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರುಗಳ ಸಮ್ಮೇಳನವು ಇಂದು ಖಟ್ಮಂಡುವಿನಲ್ಲಿ ನೇಪಾಳ ಗೃಹಸಚಿವ ಶ್ರೀ ಕೊಯಿರಾಲಾರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಸಾರ್ವತ್ರಿಕ ಚುನಾವಣೆ

ಮೈಸೂರಿನಲ್ಲಿ ಸಾರ್ವತ್ರಿಕ ಚುನಾವಣೆಯು ಡಿಸೆಂಬರ್ ೩ ರಿಂದ ೧೫ರವರೆಗೆ ನಡೆಯಬಹುದೆಂದು ಹೇಳಲಾಗಿದೆ.

ನೃತ್ಯ, ಸಂಗೀತ ಸಮ್ಮೇಳನ

ಇಂದು ನವ ದೆಹಲಿಯಲ್ಲಿ ವಿದ್ಯಾ ಮಂತ್ರಿ ಮೌಲಾನಾ ಅಜಾದರ ಅಧ್ಯಕ್ಷತೆಯಲ್ಲಿ ನೃತ್ಯ, ನಾಟಕ ಮತ್ತು ಸಂಗೀತ ಸಮ್ಮೇಳನವು ಪ್ರಾರಂಭವಾಯಿತು. ಭಾರತದ ನಾನಾಭಾಗಗಳಿಂದ ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗಮಿಸಿರುವರು.

ಮದರಾಸಿಗೆ ಅಕ್ಕಿ

ಈ ಸಾಲಿನಲ್ಲಿ ಮದರಾಸಿಗೆ ಕೊಡಬೇಕಾದ ಅಕ್ಕಿಯ ಪ್ರಮಾಣವನ್ನು ಒಂದು ಲಕ್ಷ ಟನ್ನಿನಷ್ಟು ಹೆಚ್ಚಿಸಲಾಗಿದೆ.

ಟ್ರೂಮನ್ ಮಧ್ಯಸ್ಥಿಕೆ

ಮೊರಾಕೋ ಸಮಸ್ಯೆ ವಿಷಯವಾಗಿ ಅಧ್ಯಕ್ಷ ಟ್ರೂಮನ್ನರವರು ಫ್ರೆಂಚ್ ಸರ್ಕಾರದವರೊಡನೆ ಮಧ್ಯಸ್ಥಿಕೆ ನಡೆಸಬೇಕೆಂದು ಜೋರ್ಡಾನಿನ ದೊರೆ ಅಬ್ದುಲ್ಲಾರವರು ಮಾಡಿಕೊಂಡಿದ್ದ ಮನವಿಯನ್ನು ಈ ದಿನ ಇಲ್ಲಿರುವ ಜೋರ್ಡಾನ್ ರಾಯಭಾರಿ ಕಚೇರಿ ಪ್ರಕಟಿಸಿದೆ.

ಮೊರಾಕೋದಲ್ಲಿ ಫ್ರೆಂಚರು ಕ್ರೂರ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಅಬ್ದುಲ್ಲಾರವರು ಆಪಾದನೆ ಮಾಡಿ, ಅವರ ಫಲವಾಗಿ ಜಗತ್ತಿನಲ್ಲಿ ಪ್ರಜಾಸತ್ತೆಗೆ ವಿರುದ್ಧವಾದ ಪರಿಣಾಮಗಳುಂಟಾಗಬಹುದೆಂದು ತಿಳಿಸಿದ್ದಾರೆ.

"ಕೊರಿಯಾ ಯುದ್ಧ ನಿಲ್ಲಿಸಬೇಕು"

"ಪ್ರಪಂಚ ಸಂಸ್ಥೆಯು ಕೊರಿಯಾ ಯುದ್ಧ ನಿಲ್ಲಿಸಬೇಕು. ಈ ಬಗ್ಗೆ ಜರೂರು ಪ್ರಯತ್ನ ನಡೆಯಲಿ" ಎಂಬುದಾಗಿ ಸಿಯೋಲ್ ನಗರದಲ್ಲಿ ಪ್ರತಿಯೊಂದು ಕಟ್ಟಡದ ಬಾಗಿಲು ಮೇಲೆಯೂ ಕಂಬದ ಮೇಲೆಯೂ ಕಮ್ಯೂನಿಸ್ಟರು ಪ್ರಕಟಣೆಗಳನ್ನು ಹಚ್ಚಿದ್ದಾರೆ ಎಂಬುದಾಗಿ ಸಿಯೋಲ್ ನಗರವನ್ನು ಇದಿನ ಪ್ರವೇಶಮಾಡಿದ ದಕ್ಷಿಣಕೊರಿಯಾ ಸೈನಿಕರೂ ಅಮೆರಿಕಾ ಅಧಿಕಾರಿಗಳೂ ತಿಳಿಸಿದ್ದಾರೆ.

ಸಂಪಾದಕರು ಮತ್ತು ಪ್ರಕಾಶಕರು—ಬಿ. ಎಲ್. ಸ್ವಾಮಿ, ಟ್ಯುಟೋರಿಯಲ್ ಸ್ಕೂಲ್, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಸಿಂಗ್ ಹೌಸ್ ಮೈಸೂರು.

ಸಮಾಜಸೇವಾ ಶಿಕ್ಷಣಕ್ಕಾಗಿ ಲಂಡನ್ನಿಗೆ ಭೇಟಿಯಿತ್ತ ವಿಶ್ವಸಂಸ್ಥೆಯ ಸಮಾಜಸೇವಾ ಸಮಿತಿಯ ೨೨ ರಾಷ್ಟ್ರಗಳ ಸಮಿತಿಯ ಸದಸ್ಯರು

ರಿ. ನಂ. ಎಂ. ೫೪೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೩—೧೯೫೧ನೇ ಸೋಮವಾರ [ಸಂಚಿಕೆ ೧೬೩

ಶ್ರೀ ಮೋಹನಲಾಲ್ ಗೌತಮರ ಸಲಹೆ

ಕಾಂಗ್ರೆಸ್ ಜನರಲ್ ಸೆಕ್ರೆಟರಿ ಶ್ರೀ ಮೋಹನಲಾಲ್ ಗೌತಮರವರು ಕುಮಾರಾಪಾರ್ಕಿನಲ್ಲಿ ಕಾಂಗ್ರೆಸ್ ಅಸೆಂಬ್ಲಿ ಮೆಂಬರುಗಳನ್ನು ಕುರಿತು ತಮ್ಮ ಪಕ್ಷದಲ್ಲಿ ಒಗ್ಗಟ್ಟು ಇರಬೇಕಾದ ಅವಶ್ಯಕತೆಯನ್ನು ತಿಳಿಸಿದರು.

ಶ್ರೀ ವಿ. ಪಿ. ಮೆನನ್ ತಿರುವಾಂಕೂರಿನಲ್ಲಿ

ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮ್ ಮತ್ತು ಶ್ರೀ ವಿ. ಪಿ. ಮೆನನ್‌ರವರು ಮೊನ್ನೆ ತಿರುವಾಂಕೂರಿಗೆ ಆಗಮಿಸಿದರು. ಅವರು ಅಲ್ಲಿಯ ಕಾಂಗ್ರೆಸ್ ಪ್ರಮುಖರನ್ನು ಭೇಟಿ ಮಾಡುವರು.

ಉಪಾಧ್ಯಾಯರ ಸ್ಥಿತಿ ಸುಧಾರಿಸಲು ಮನವಿ

ಸೇವಕರಿಗಿಂತಲೂ ಉಪಾಧ್ಯಾಯರಿಗೆ ಕಡಿಮೆ ಸಂಬಳ ದೊರೆಯುತ್ತಿರುವುದು ಅನ್ಯಾಯ

ಆಹಾರವನ್ನು ಹೊರತು ವಿದ್ಯಾಭ್ಯಾಸಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಬಹಳ ನ್ಯೂನತೆಗಳಿವೆ. ವಿದ್ಯಾಭ್ಯಾಸವೆಂದರೆ ಶಾಲಾ ಕಾಲೇಜು ಸಂಖ್ಯೆಯ ಕಡೆ ಗಮನ ಕೊಡುತ್ತೇವೆ. ಈ ಸಂಕುಚಿತ ಅರ್ಥವನ್ನು ತ್ಯಜಿಸಬೇಕು. ಇಡೀ ಜೀವಮಾನದಲ್ಲಿ ಕಲಿಯುವುದನ್ನೆಲ್ಲಾ ವಿದ್ಯಾಭ್ಯಾಸವು ಒಳಗೊಳ್ಳುವುದು ಎಂದು ಕೇಂದ್ರ ಪಾರ್ಲಿಮೆಂಟಿನ ಸ್ಪೀಕರರಾದ ಶ್ರೀ ಮಾವಲಂಕರರು ದೆಹಲಿ ಸಂಸ್ಥಾನದ ಪದವೀಧರರ ಉಪಾಧ್ಯಾಯರ ಸಂಘದ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು. ಉಪಾಧ್ಯಾಯರ ಸಂಬಳ ತೀರಾ ಕಮ್ಮಿಯೆಂದೂ ಸರ್ಕಾರ ಇದಕ್ಕಾಗಿ ಹೆಚ್ಚು ನಿಧಿಯನ್ನು ಬೇರೆ ಇಡಬೇಕು ಎಂದೂ ಹೇಳಿದರು.

ಅನಂತರ ಶಿಕ್ಷಣ ಶಾಖೆ ಕಾರ್ಯದರ್ಶಿ ಡಾ|| ತಾರಾಚಂದ್‌ರವರು ಮಾತನಾಡುತ್ತಾ ಭಾರತದ ಏನಹ ಇನ್ಯಾವ ದೇಶದಲ್ಲೂ ಸೇವಕರ ಸಂಬಳಕ್ಕಿಂತಲೂ ಉಪಾಧ್ಯಾಯರ ಸಂಬಳವು ಕಡಿಮೆಯಾಗಿಲ್ಲವೆಂದರು. ಹೆಚ್ಚು ಹಣ ವೆಚ್ಚಮಾಡಿದಲ್ಲಿ ಹೆಚ್ಚು ಫಲ ಪಡೆಯಬಹುದು ಮತ್ತು ವಿದ್ಯಾಭ್ಯಾಸ ಪದ್ಧತಿ ಮತ್ತು ಕ್ರಮ ಬದಲಾಗಬೇಕು ಎಂದು ಹೇಳಿದರು.

ಕಾಂಗ್ರೆಸ್ ಕೆಲಸಗಾರರ ದಸ್ತಗಿರಿ

ಜಿಕನೇರಿನ ಒಬ್ಬ ಪ್ರಮುಖ ಕಾಂಗ್ರೆಸ್ ಕೆಲಸಗಾರರನ್ನು ರಾಜಾಸ್ಥಾನದ ಡಕಾಯಿತರಿಗೆ ಕಳ್ಳತನವಾಗಿ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿದ್ದರೆಂದೂ ಮತ್ತು ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆಂಬ ಅಪಾದನೆಗಳ ಮೇಲೆ ಅವರನ್ನು ಅಲ್ಲಿಯ ಪೋಲೀಸರು ದಸ್ತಗಿರಿಮಾಡಿ ಕೋರ್ಟಿನ ಮುಂದೆ ತಂದರೆಂದೂ, ಈಗ ಅವರನ್ನು ಎರಡು ಸಾವಿರ ರೂ. ಗಳ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆಂದೂ ತಿಳಿಯಬರುತ್ತದೆ.

ಮತ್ತೆ ವಾರ್ತಾ ಪ್ರಚಾರ

ಭಾರತ ಸರ್ಕಾರವು ಕಳೆದ ಅಕ್ಟೋಬರ್‌ನಲ್ಲಿ ಪೀಕಿಂಗ್‌ನಲ್ಲಿ ನಿಲ್ಲಿಸಿದ್ದ ವಾರ್ತಾ ಪ್ರಚಾರವು ಮತ್ತೆ ಪ್ರಾರಂಭವಾಯಿತು. ಇದಕ್ಕೆ ೮೮೦೦೦ ರೂಗಳನ್ನು ಖರ್ಚು ಮಾಡಲಾಗುವುದು.

ಮುಂದಿನ ಅಧಿವೇಶನ

ಫ್ರಾನ್ಸ್ ಸರ್ಕಾರವು ಅಂತರರಾಷ್ಟ್ರೀಯ ಸಂಸ್ಥೆಯ ಸೆಕ್ರೆಟರಿ ಜನರಲ್ ಮಿ|| ಟ್ರಿಗ್ವೆಲೀಯವರಿಗೆ ಒಂದು ಪತ್ರವನ್ನು ಬರೆದು ಸಂಸ್ಥೆಯು ತನ್ನ ಅರ್ಧ ಖರ್ಚನ್ನು ವಹಿಸಿಕೊಳ್ಳುವುದಾದರೆ ಅದರ ಅಧಿವೇಶನವನ್ನು ಪ್ಯಾರಿಸ್‌ನಲ್ಲಿ ನಡೆಸಬಹುದೆಂದು ತಿಳಿಸಿದೆ.

ರಾಯಭಾರಿ ಕಛೇರಿಗೆ ಸ್ಥಳ

ಭಾರತ ಸರ್ಕಾರವು ಟೋಕಿಯೋದಲ್ಲಿ ತನ್ನ ರಾಯಭಾರಿ ಕಛೇರಿಯ ಸ್ಥಳಕ್ಕೋಸ್ಕರ ಎಂಟು ಲಕ್ಷ ರೂಗಳನ್ನು ಖರ್ಚು ಮಾಡಿ ಒಂದು ನಿವೇಶನವನ್ನು ಕೊಳ್ಳಲು ತೀರ್ಮಾನಿಸಿದೆ. ಅಲ್ಲಿ ನಿವೇಶನದ ಅಭಾವ ಮತ್ತು ಜಾಸ್ತಿ ಬಾಡಿಗೆಯ ಪ್ರಯುಕ್ತ ಈ ರೀತಿ ಮಾಡಲು ತೀರ್ಮಾನಿಸಿದೆ.

ವಸತಿ ಸೌಕರ್ಯ

ಪಾಕೀಸ್ತಾನದಿಂದ ಬಂದಿರುವ ನಿರಾಶ್ರಿತರ ವಸತಿಗಾಗಿ ಭಾರತ ಸರ್ಕಾರದಿಂದ ಕೊಡಲ್ಪಟ್ಟಿರುವ ೨|| ಕೋಟಿ ರೂ.ಗಳನ್ನು ವಿನಿಯೋಗಿಸಿ ಮನೆಗಳನ್ನು ಕಟ್ಟುವ ಯೋಜನೆಯನ್ನು ತ್ವರಿತಗೊಳಿಸಲಾಗುವುದು. ಪುನರ್ವಸತಿ ಶಾಖೆಯ ಸಲಹೆಗಾರರಾದ ಶ್ರೀ ಮೆಹರ್‌ಚಂದ್ ಖನ್ನಾರವರು ಬೊಂಬಾಯಿನಲ್ಲಿರುವ ನಿರಾಶ್ರಿತರ ಶಿಬಿರವನ್ನು ಪುನರ್ವ್ಯವಸ್ಥೆಗೊಳಿಸಲು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಈ ಯೋಜನೆಯಂತೆ 'ಸರ್ದಾರ್ ನಗರ'ದಲ್ಲಿ ಇನ್ನೂ ೧೯೦೦ ವಸತಿಗಳನ್ನು ಏರ್ಪಡಿಸಲಾಗುವುದು. ಬೊಂಬಾಯಿನ ಕಲ್ಯಾಣ್‌ನಲ್ಲಿರವ ೩೨೦೦೦ ನಿರಾಶ್ರಿತರು ಉತ್ತಮವಾದ ಮನೆಗಳನ್ನು ಪಡೆಯುವರು.

ಸಮಾಜವಾದೀ ಪಕ್ಷದ ಕಾರ್ಯಕರ್ತರ ಸಭೆ

ತಾ|| ೧೮-೩-೫೧ನೇ ಭಾನುವಾರ ಸಂಜೆ ಮೈಸೂರು ನಗರ ಸಮಾಜವಾದೀ ಪಕ್ಷದ ಕಾರ್ಯಕರ್ತರ ಸಭೆ ಶ್ರೀ ಎಚ್. ವಿ. ಪ್ರಭಾಕರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಾರ್ಯದರ್ಶಿಗಳಾದ, ಟಿ.ವಿ. ಶ್ರೀನಿವಾಸರಾವ್‌ರವರಿಂದ ಸ್ವಾಗತ ಮತ್ತು ವರದಿಯಾಯಿತು. ಬೆಲೆ ಏರಿಸಿ ಹಾಗೂ ಪಡಿತರ ಪ್ರಮಾಣವನ್ನು ಕಡಿಮೆ ಮಾಡಿರುವ ಸರ್ಕಾರದ ಆಹಾರನೀತಿಯನ್ನು ತೀವ್ರವಾಗಿ ಖಂಡಿಸುವ ನಿರ್ಣಯವನ್ನೂ, ತಕ್ಷಣವಾಗಿ ಸರ್ಕಾರ ಹಿಂದಿನ ಆಹಾರ ಪ್ರಮಾಣ ಮತ್ತು ಬೆಲೆಯನ್ನು ತರಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು. ಮುಂದಿನ ಮಾಹೆಯಲ್ಲಿ ಶ್ರೀ ಜಯಪ್ರಕಾಶ ನಾರಾಯಣ್‌ರವರ ಪ್ರವಾಸದ ಸಂದರ್ಭದಲ್ಲಿನ ಏರ್ಪಾಡುಗಳಿಗಾಗಿ ಸ್ವಾಗತ ಸಮಿತಿಯನ್ನು ರಚಿಸಲು ತಾತ್ಕಾಲಿಕವಾಗಿ ಆರು ಜನರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರಿನ ಜನತೆ ಮತ್ತು ಕಾರ್ಮಿಕ ಸಂಘಗಳ ಸಹಕಾರವನ್ನು ಕೋರಲಾಗಿದೆ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ವಿಸರ್ಜನೆಯ ಸುದ್ದಿ ನಿರಾಧಾರವಾದುದು

ನಾಗಪುರದ "ಹಿತವಾದ" ಎಂಬ ಪತ್ರಿಕೆಗೆ ಆಚಾರ್ಯ ಜೆ. ಬಿ. ಕೃಪಲಾನಿಯವರು ಒಂದು ಪತ್ರವನ್ನು ಬರೆದು ಕಾಂಗ್ರೆಸ್ ಡೆಮೊಕ್ರಟಿಕ್ ಫ್ರಂಟನ್ನು ವಿಸರ್ಜಿಸುವ ಸುದ್ದಿ ನಿರಾಧಾರವಾದುದೆಂದು ತಿಳಿಸಿದ್ದಾರೆ. ಡೆಮೊಕ್ರಾಟಿಕ್ ಫ್ರಂಟ್ ಮೊದಲಿನಂತೆಯೇ ಕೆಲಸ ಮಾಡುವುದೆಂದೂ ಜನರಿಗೆ ಸಮಯೋಚಿತ ಸೂಚನೆಯನ್ನು ಕೊಡುವುದು ಈ ಸಂಸ್ಥೆಯ ಕೆಲಸವೆಂದೂ ಅದಕ್ಕೆ ಸರಿಯಾಗಿ ಜನರು ನಡೆದುಕೊಳ್ಳಬೇಕೆಂದು ಅವರು ತಿಳಿಸಿರುವರು.

ಭಾರಿ ವಜ್ರದ ಪತ್ತೆ

ಆರೆಂಜ್ ನದಿ ಬಳಿ ಇರುವ ಆಫ್ರಿಕದ ವಜ್ರದ ಗಣಿಯೊಂದರಲ್ಲಿ ೮೦,೦೦೦ ಸಾವಿರ ಪೌಂಡುಗಳಷ್ಟು ಬೆಲೆಬಾಳುವ ೧೬೦ ಕ್ಯಾರಟ್ ವಜ್ರವು ಸಿಕ್ಕಿದೆ. ಇದು ೧|| ಅಂಗುಲ ಉದ್ದ ಮುಕ್ಕಾಲು ಅಂಗುಲ ದಪ್ಪವಾಗಿಯೂ ಇದೆ.

ಸಂಶೋಧನಾಲಯ ಸ್ಥಾಪಿಸಲು ಯೋಜನೆ

ಆಸ್ಫೋಟಕ ವಸ್ತುಗಳ ಸಂಶೋಧನೆಗಾಗಿ ಕಲ್ಕತ್ತಾದಲ್ಲಿ ಸಂಪೂರ್ಣ ಸಾಧನಗಳಿಂದ ಕೂಡಿದ ಒಂದು ಸಂಶೋಧನಾಲಯವನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಆಲೋಚಿಸುತ್ತಿದೆ. ಆಸ್ಫೋಟಕ ವಸ್ತುಗಳ ಸಂಶೋಧನೆಯಲ್ಲಿ ಭಾರತವು ಸ್ವಯಂಪೂರ್ಣತೆ ಪಡೆಯಬೇಕೆಂಬ ಉದ್ದೇಶದಿಂದ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಆಲೋಚಿಸುತ್ತಿದೆ.

ವ್ಯಾಪಾರ ಸಂಬಂಧ

ಭಾರತ ಮತ್ತು ಈಜಿಪ್ಟ್ ರಾಜ್ಯಗಳ ವ್ಯಾಪಾರ ಸಂಬಂಧವಾಗಿ ಒಂದು ಒಪ್ಪಂದವಾಯಿತು. ಇದರ ಪ್ರಕಾರ ಈಜಿಪ್ಟ್ ಭಾರತಕ್ಕೆ ಕಚ್ಚಾ ಹತ್ತಿ ನೂಲು ಮುಂತಾದುವನ್ನು ಕಳುಹಿಸುವುದು, ಮತ್ತು ಭಾರತದ ಸೆಣಬಿನ ಬದಲು ಆಹಾರ ಪದಾರ್ಥಗಳನ್ನು ಕಳುಹಿಸುವುದು. ಭಾರತವು ಟೀ, ಕಚ್ಚಾ ತಂಬಾಕು, ಎಣ್ಣೆ ಬೀಜ ಕಾಫೀ, ಕಬ್ಬಿಣ ಮತ್ತು ಉಕ್ಕನ್ನು ಕಳುಹಿಸುವುದು ಮತ್ತು ಈ ಒಪ್ಪಂದವು ಸದ್ಯದಲ್ಲಿ ಒಂದು ವರ್ಷಕಾಲ ಜಾರಿಯಲ್ಲಿರುವುದೆಂದೂ ತಿಳಿಯಬರುತ್ತದೆ.

ಆಹಾರಾಧಿಕಾರಿಗಳ ಸಭೆ

ಈಗಿನ ದೇಶದ ಆಹಾರಪರಿಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಬುಧವಾರ ಎಲ್ಲಾ ರಾಜ್ಯಗಳ ಆಹಾರಾಧಿಕಾರಿಗಳ ಒಂದು ಸಭೆಯನ್ನು ಕರೆದಿದೆ. ಈ ಸಭೆಯಲ್ಲಿ ಕೇಂದ್ರ ಆಹಾರಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಭಾಷಣ ಮಾಡುವರೆಂದು ತಿಳಿಯಬರುತ್ತದೆ.

ಸರ್ಕಾರದ ಆಹಾರ ನೀತಿಯು ಸಮರ್ಪಕವಾಗಿಲ್ಲ

ಶಾಸನ ಸಭೆಯಲ್ಲಿ ಟೀಕೆ

ಮೊನ್ನೆ ಮೈಸೂರು ಅಸೆಂಬ್ಲಿಯಲ್ಲಿ ಸರ್ಕಾರದ ಧಾನ್ಯ ಶೇಖರಣೆ ನೀತಿಯನ್ನು ಬಹಳವಾಗಿ ಟೀಕಿಸಲಾಯಿತು. ರಾತ್ರಿ ಕಾಲದಲ್ಲಿ ಅಧಿಕಾರಿಗಳು ಹಳ್ಳಿಗಳಲ್ಲಿ ಮನೆಗಳಿಗೆ ನುಗ್ಗಿ ಇದ್ದ ಅಲ್ಪಸ್ವಲ್ಪ ಆಹಾರವನ್ನು ವಸೂಲು ಮಾಡುತ್ತಿದ್ದಾರೆಂದೂ ಇದು ಅಸಹ್ಯವೆಂದು ತೋರಿಸಿ ಕೊಡುವುದಾದರೆ ... ಕೊಡುವುದಾಗಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಹೇಳಿದರು.

ಆಹಾರ ಬೆಳೆ ಯೋಜನೆ ಸಫಲವಾಗಿ ನಡೆದಿಲ್ಲ. ಬಟ್ಟೆ ಅಭಾವ ಬಹಳ ಜಾಸ್ತಿಯಾಗಿದೆ. ಕಂಟ್ರೋಲಿನಿಂದ ಬಂದರೆ ಹೆಚ್ಚುತ್ತಿದೆ. ಹಣ ದುಬ್ಬರ ದಿನೇ ದಿನೇ ಅಧಿಕವಾಗುತ್ತಿದೆ ಎಂದು ಡಾ|| ಇಮಾಂ ಹೇಳಿದರು. ಶ್ರೀ ಎಂ. ಎಸ್. ಜೋಯಿಸರು ಕಾಲೇಜು ವಿದ್ಯಾಭ್ಯಾಸವನ್ನು ನಾಲ್ಕು ವರ್ಷ ನಿಲ್ಲಿಸಿದರೂ ನಷ್ಟವಾಗಿಲ್ಲ. ಎಲ್ಲರಿಗೂ ಪ್ರಾಥಮಿಕ ವಿದ್ಯಾಭ್ಯಾಸ ದೊರಕಬೇಕು. ಈಗಿನ ವಿದ್ಯಾಭ್ಯಾಸದಲ್ಲಿ ಒದಗಬೇಕಾದ ಅವಶ್ಯಕತೆ ನೋಡುತ್ತಿದ್ದೇವೆ. ಹೊರತು ಅದನ್ನು ಬದಲಾವಣೆ ಮಾಡಲು ಪ್ರಯತ್ನವೇ ನಡೆದಿಲ್ಲವೆಂದು ತಿಳಿಸಿದರು. ಮಲೆನಾಡಿನ ಅಭಿವೃದ್ಧಿ ಕಡೆ ಹೆಚ್ಚು ಗಮನ ಕೊಡಬೇಕು. ನಾಗಸಂತತಿಯನ್ನು ಬಳಕೆಗೆ ತರಲು ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಡಾ|| ಮಹಮದ ಶರೀಫರವರು ತಿಳಿಸಿದರು. ಗೃಹ ಮಂತ್ರಿ ಶ್ರೀ ಮರಿಯಪ್ಪನವರು ಇದಕ್ಕೆ ಉತ್ತರ ಕೊಡುತ್ತಾ ದೇಶದಲ್ಲಿ ಆಹಾರ ಅಭಾವ ಇರುವುದು ಗೊತ್ತಿರುವಾಗ ಹತ್ತೋಟಿ ತಗಡರ ಬೆಳೆಯು ಬಹಳ ವಿರಳವಾದುದು. ಅನೇಕ ನೈಸರ್ಗಿಕ ಕಾರಣಗಳಿಂದ ಆಹಾರ ಅಭಾವವು ಉಂಟಾಯಿತು. ಯಾರು ಸರ್‌ಪ್ಲಸ್ ಹೋಲ್ಡರುಗಳಲ್ಲ ಅವರಿಂದ ಧಾನ್ಯ ವಶಪಡಿಸಿಕೊಳ್ಳಬೇಕೆಂಬುದು ಸರ್ಕಾರದ ಅಭಿಪ್ರಾಯವಲ್ಲ. ಅನಾವಶ್ಯಕವಾಗಿ ಯಾರಿಂದಲೂ ಒಂದು ಪಲ್ಲಾ ಧಾನ್ಯವನ್ನು ತರಕೂಡದೆಂದು ಸರ್ಕಾರದವರು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ. ತಪ್ಪಿತಸ್ಥರಾದ ಅಧಿಕಾರಿಗಳನ್ನು ಶಿಕ್ಷಿಸ ಮಾಡಲು ಸರ್ಕಾರದವರು ಹಿಂಜರಿಯುವುದಿಲ್ಲ. ಮೈಸೂರಿನಲ್ಲಿ ಬಟ್ಟೆ ಅಭಾವವಿರುವುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಏಪ್ರಿಲ್‌ನಿಂದ ಬಟ್ಟೆಯನ್ನು ಹೆಚ್ಚಾಗಿ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆಂದು ತಿಳಿಸಿದರು. ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರಕೊಡುತ್ತಾ ಹೆಚ್ಚು ಆಹಾರ ಬೆಳೆ ಮತ್ತು ನಿರುದ್ಯೋಗಿಗಳ ಕಷ್ಟ ಈ ಎರಡು ವಿಷಯಗಳನ್ನು ಪ್ರಾಮುಖ್ಯವಾಗಿ ಪ್ರಸ್ತಾಪಿಸಲಾಗಿದೆ. ಇದರ ವಿಷಯವಾಗಿ ಎಲ್ಲಾ ಅಂಶಗಳನ್ನು ಸರ್ಕಾರದವರು ಈ ಸಭೆಯ ಮುಂದಿಡುವರು. ಮಿಲಿಟರಿಯವರ ಸಮಸ್ಯೆಯನ್ನು ಪರಿಹಾರ ಮಾಡದಿದ್ದರೆ ಮುಂದೆ ದೊಡ್ಡ ಅಪಾಯವನ್ನು ಎದುರಿಸಬೇಕಾಗಿಬರಬಹುದು ಎಂದು ತಿಳಿಸಿದರು. ಅನಂತರ ಇವರಾಂತವರ ನಿರ್ಣಯ ಓಟಿಗೆ ಹಾಕಿದಾಗ ಬಿದ್ದುಹೋಯಿತು. ಮಹಾರಾಜರಿಗೆ ವಂದನೆಯನ್ನರ್ಪಿಸುವ ವೀರಣ್ಣಗೌಡರ ನಿರ್ಣಯವು ಪಾಸಾಯಿತು.

ಸಮ್ಮೇಳನ ಮುಕ್ತಾಯ

ನಾಲ್ಕು ದಿನಗಳಿಂದ ದಿಲ್ಲಿಯಲ್ಲಿ ನಡೆಯುತ್ತಿದ್ದ ಅಖಿಲಭಾರತ ಸಾಂಸ್ಕೃತಿಕ ಸಮ್ಮೇಳನವು ನಿನ್ನೆ ಮುಕ್ತಾಯವಾಯಿತು. ಭಾರತೀಯ ಸಂಸ್ಕೃತಿ ಸಂಘವೊಂದನ್ನು ಸ್ಥಾಪಿಸಲಾಯಿತು, ಸಂಘದ ಅಂಗರಚನೆಯನ್ನು ಅಂಗೀಕರಿಸಲಾಯಿತು. ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಡಾ|| ರಾಜೇಂದ್ರ ಪ್ರಸಾದರು ಸಂಘದ ಅಂಗರಚನೆಯು ಅಂಗೀಕೃತವಾದಮೇಲೆ ಸಂಘವನ್ನು ಆಶೀರ್ವದಿಸಿದರು.

ಗೂಡ್ಸ್‌ರೈಲು ಉರುಳಿತು

ಕಾಶೀಯ ಸಮೀಪದ ಜಾಲೆಪುರ ಮತ್ತು ಸರದೌತಾ ಪುರದ ಮಧ್ಯೆ ಗೂಡ್ಸ್ ರೈಲು ಉರುಳಿದ್ದರಿಂದ ಅಲ್ಲಿ ರೈಲು ಒಡಾಟಕ್ಕೆ ೩೬ ಗಂಟೆಗಳಿಂದಲೂ ಬಹಳ ತೊಂದರೆಯಾಗಿದೆ. ಈ ಉರುಳಿದ ರೈಲನ್ನು ಎತ್ತಲು ತಂದಿದ್ದ ಸ್ಟೀಂ ಕ್ರೇನ್ ಉರುಳಿ ಮತ್ತಷ್ಟು ತೊಂದರೆಯಾಗಿದೆ. ಈಗ ಸ್ಥಳೀಯ ಇಂಜನೀಯರುಗಳು ಒಂದು ಸಾವಿರ ಅಡಿ ಹೊಸರೈಲು ಮಾರ್ಗವನ್ನು ಹಾಕಲು ಪ್ರಾರಂಭಿಸಿದ್ದಾರೆ.

ಅಧಿವೇಶನದ ಮುಕ್ತಾಯ

ಗವರ್ನರುಗಳ ಮತ್ತು ರಾಜಪ್ರಮುಖರುಗಳ ಅಧಿವೇಶನವು ಭಾರತದ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಮೊನ್ನೆ ಬೆಳಿಗ್ಗೆ ಮುಕ್ತಿ ಸಮಾವೇಶಗೊಂಡಿತ್ತು. ಪ್ರಧಾನ ಮಂತ್ರಿ, ಆರ್ಥಿಕ ಸಚಿವರಾದ ಶ್ರೀ ಸಿ. ಡಿ. ದೇಶಮುಖ್ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಶ್ರೀ ಕೆ. ಎಂ. ಮುನ್ಷಿ, ಮತ್ತು ಚೀಫ್ ಎಲೆಕ್ಷನ್ ಕಮಿಷನರ್ ಶ್ರೀ ಎಸ್. ಸೇನ್ ಇವರುಗಳು ಸಭೆಯಲ್ಲಿ ಭಾಗವಹಿಸಿದ್ದರು.

ಭಾರತದ ಆಹಾರ ಪರಿಸ್ಥಿತಿ ಆರ್ಥಿಕ ಪರಿಸ್ಥಿತಿ, ರಕ್ಷಣೆ, ಸಾರ್ವತ್ರಿಕ ಚುನಾವಣೆ ಈ ವಿಷಯಗಳನ್ನು ಚರ್ಚಿಸಲಾಯಿತು. ಎರಡು ದಿನದ ಅಧಿವೇಶನ ಮೊನ್ನೆ ಮುಕ್ತಾಯಗೊಂಡಿತು.

ಉಪವಾಸ ಮುಕ್ತಾಯ

ಅಹಮದಾಬಾದಿನಲ್ಲಿ ಗೋವಧೆಯನ್ನು ನಿಲ್ಲಿಸಲು ೧೩ ದಿವಸಗಳಿಂದಲೂ ಸತ್ಯಾಗ್ರಹ ಮಾಡುತ್ತಿದ್ದ ಶ್ರೀ ಅರ್ಜುನ್ ಭಗತ್ ಎಂಬುವವರು ಮೊನ್ನೆ ಬೆಳಿಗ್ಗೆ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದರು. ಅಲ್ಲಿಯ ಜಗನ್ನಾಥ ದೇವಾಲಯದ ಶ್ರೀ ಅರ್ಜುನ್‌ದಾಸ್ ಮತ್ತು ಮಹಾಂತ್ ಎಂಬುವವರ ಭರವಸೆಯ ಮೇಲೆ ಈ ರೀತಿ ಮಾಡಿದರು.

ಜಾತ್ರೆ ಇಲ್ಲ

ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಬಾಬಾಬುಡನ್‌ಗಿರಿಯಲ್ಲಿ ಕಾಲರಾ ಉಪದ್ರವವಿರುವದರಿಂದ ಅಲ್ಲಿ ಈ ಬಾರಿ ಜಾತ್ರೆಯನ್ನು ನಿಲ್ಲಿಸಲಾಗಿದೆ. ಜನರು ಸಹಕರಿಸಬೇಕೆಂದು ತಿಳಿಸಿದ್ದಾರೆ.

ಪಾಕಿಸ್ತಾನದ ಕಲ್ಲಿದ್ದಲು

ಭಾರತ ಪಾಕಿಸ್ತಾನಗಳ ವಾಣಿಜ್ಯ ಕರಾರಿನಂತೆ ಪಾಕಿಸ್ತಾನವು ಭಾರತಕ್ಕೆ ೧೦೦೦೦ ಟನ್ನಿನಷ್ಟು ಕಲ್ಲಿದ್ದಲನ್ನು ಕಳುಹಿಸಿದೆ.

ರಣಜಿತ್

೨೦—೩—೫೧ರಿಂದ

ಅಮೋಘವಾದ ೩ನೇ ವಾರ

ಪ್ರತಿದಿನ ೩ ಆಟಗಳ

* ಬಾಬುಲ್ *

ಪಾತ್ರ ನರ್ಗಿಸ್,
ದಿಲೀಪ್‌ಕುಮಾರ್.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ ಬಟ್ಟೆಗಳು ತುಂಬಾ ಚನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

*

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೩—೧೯೫೧ನೇ ಮಂಗಳವಾರ [ಸಂಚಿಕೆ ೧೭೩

ಬೊಂಬಾಯಿನಲ್ಲಿ ಸಮ್ಮೇಳನ

ಭಾರತದ ಸಾಂಸ್ಕೃತಿಕ ಸಮ್ಮೇಳನವು ಮಾರ್ಚಿ ೨೮ ರಿಂದ ೩೧ರ ವರೆಗೆ ಡೆಲ್ಲಿಯಲ್ಲಿ ನಡೆಯಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರದ ಅನುಮತಿ ಮೇರೆ ಬೊಂಬಾಯಿಯಲ್ಲಿ ಅದೇ ತಾರೀಖುಗಳಲ್ಲಿ ನಡೆಯಿಸಲು ಸಮಿತಿಯು ನಿರ್ಧರಿಸಿದೆ.

ಬಿಡುಗಡೆ

ಫೆಬ್ರವರಿ ೨೨ರಲ್ಲಿ ಶ್ರೀ ಗೋಪಾಲನ್‌ರ ಮೇಲೆ ಮದರಾಸು ಸರ್ಕಾರವು ಹೊರಡಿಸಿದ್ದ ಆಜ್ಞೆಯು ಸರಿಯಾದ ಅಧಿಕಾರ ಹೊಂದಿರಲಿಲ್ಲವೆಂಬ ಕಾರಣದಿಂದ ಕಡಲೂರ್ ಸೆಂಟ್ರಲ್ ಜೈಲಿನಲ್ಲಿ ಡಿಟೆನ್ಯೂ ಆಗಿದ್ದ ಕಮ್ಯೂನಿಸ್ಟ್ ಆದ ಅವರನ್ನು ಬಿಡುಗಡೆ ಮಾಡಲು ಮದರಾಸು ಹೈಕೋರ್ಟ್ ಆಜ್ಞೆ ಮಾಡಿತು.

ಚುನಾವಣೆಗಳನ್ನು ಮುಂದುವರಿಸಿ

ಶ್ರೀ ಅಶೋಕ ಮೆಹ್ತಾರವರ ಮನವಿ

ನವೆಂಬರ್ ಅಥವಾ ಡಿಸೆಂಬರ್ ಮಾಹೆಯಲ್ಲಿ ನಡೆಯಲಿರುವ ಮಹಾ ಚುನಾವಣೆಗಳನ್ನು ಮುಂದುವರಿಸಬೇಕೆಂದು ಸಮಾಜವಾದೀಪಕ್ಷದ ಕಾರ್ಯದರ್ಶಿ ಶ್ರೀ ಅಶೋಕ ಮೆಹ್ತಾರವರು ಕಟಕ್‌ನಲ್ಲಿ ತಿಳಿಸಿದ್ದಾರೆ. ಈ ಕಾಲದಲ್ಲಿ ಕೆಲವು ಕಡೆಗಳಲ್ಲಿ ರೈತರು ಬೇಸಾಯ ಕಾರ್ಯದಲ್ಲಿ ಮಗ್ನರಾಗಿರುವುದರಿಂದ ಚುನಾವಣೆಯನ್ನು ಮುಂದುವರಿಸಬೇಕು. ಚುನಾವಣೆಯಿಂದ ಮಾತ್ರ ರಾಜಕೀಯ ಜೀವನವನ್ನು ಸ್ಪಷ್ಟೀಕರಿಸಲು ಸಾಧ್ಯ. ಕೆಲವು ಕಾಂಗ್ರೆಸ್ ನಾಯಕರು ಏಪ್ರಿಲ್ ಅಥವಾ ಮೇ ತಿಂಗಳಿನ ಹೊತ್ತಿಗೆ ಕಾಂಗ್ರೆಸ್ಸನ್ನು ತ್ಯಜಿಸಿ ಸಮಾಜವಾದಿ ಪಕ್ಷದೊಡನೆ ಸಮಾಜವಾದಿ ಪಕ್ಷವು ಚುನಾವಣಾ ಪ್ರಚಾರಕ್ಕಾಗಿ ದೀರ್ಘಕಾಲದ ಒಪ್ಪಂದಕ್ಕೆ ಒಪ್ಪಬಹುದೆಂದು ಅವರು ಹೇಳಿದರು.

ಪಾರ್ಲಿಮೆಂಟಿನಲ್ಲಿ ಟೀಕೆ

ಕೇಂದ್ರ ಪಾರ್ಲಿಮೆಂಟಿನಲ್ಲಿ ಸಿನ್ಥೆಟಿಕ್ ರಬ್ಬರ್ ಗಳ ಬೆಲೆ ಏರಿಕೆ ಮೇಲೆ ಬಹಳವಾಗಿ ಚರ್ಚೆ ನಡೆಯಿತು. ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಭಾರತದ ಕಚ್ಚಾ ರಬ್ಬರಿನ ಬೆಲೆಯು ಕಡಿಮೆಯಿದ್ದಾಗ್ಯೂ, ಟೈರಿನ ಬೆಲೆಯನ್ನು ಏರಿಸಲು ಇದರಲ್ಲಿ ಯಾವುದೋ ಪಿತೂರಿಯಿದೆ ಎಂದು ಹೇಳಿದರು. ಭಾರತದ ರಬ್ಬರಿಗೆ ಜಾಸ್ತಿ ಬೆಲೆಯಿರುವ ಮಲಯಾ ರಬ್ಬರಿನಿಂದ ಬ್ರಿಟನ್ನಿನಲ್ಲಿ ತಯಾರಿಸಿದರೂ ಅಲ್ಲಿ ಇಷ್ಟು ಅಧಿಕವಾದ ಬೆಲೆ ಇಲ್ಲ. ಭಾರತದಲ್ಲಿ ವ್ಯವಸಾಯಗಾರರು ನಷ್ಟಮಾಡಿಕೊಳ್ಳುತ್ತಿರುವಾಗ ತಯಾರಕರು ಬಹಳ ಲಾಭ ಸಂಪಾದಿಸುತ್ತಿದ್ದಾರೆ ಎಂದು ಟೀಕಿಸಿದರು. ಕೈಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಉತ್ತರ ಕೊಡುತ್ತಾ, ರಬ್ಬರ್ ಬೋರ್ಡಿನಲ್ಲಿ ತಯಾರಕರ ಪ್ರತಿನಿಧಿಗಳು ಮಾತ್ರವಲ್ಲದೆ ರಬ್ಬರ್ ವ್ಯವಸಾಯಗಾರರು ಇರುವರು ಆದ್ದರಿಂದ ಈ ಬಗ್ಗೆ ಅನುಮಾನಪಡಲು ಕಾರಣವಿಲ್ಲ ಎಂದು ಹೇಳಿದರು.

ಹೊಸ ಮಸೂದೆ

ಬೆಂಗಳೂರು, ಮಾ. ೧೯

ಇಂದು ಶಾಸನ ಸಭೆಯಲ್ಲಿ ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಒಂದು ಹೊಸ ಮಸೂದೆಯನ್ನು ತಂದರು

ಇದರ ಪ್ರಕಾರ ಶಾಸನ ಸಭೆಯು ಸಭಾ ಭವನದ ಅರ್ಧ ಮೈಲಿ ದೂರದೊಳಗೆ ಸಭೆ, ಕೂಟ ಮತ್ತು ಪ್ರದರ್ಶನಗಳು ನಡೆಯಕೂಡದು. ಶಾಸನ ಸಭೆಯು ವೇಳೆಯಲ್ಲಿ ಶಾಸನವನ್ನು ರಚಿಸುವುದಕ್ಕೆ ಸರ್ವಾಧಿಕಾರ ಪಡೆದ ಸಂಸ್ಥೆ ಈ ಸಭೆ ಶಾಂತ ವಾತಾವರಣದಲ್ಲಿ ನಡೆಯಬೇಕು. ಜನರು ಸರಿಯಾದ ಕೋರಿಕೆಗಳನ್ನು ಮುಂದಿಡಲು ಯಾವಾಗ ಬೇಕಾದರೂ ಸರ್ಕಾರವನ್ನು ಕಾಣಬಹುದು. ಅಲ್ಲದೆ ಸಭೆಯ ಘನತೆಯ ದೃಷ್ಟಿಯಿಂದಲೂ ಅದಕ್ಕೆ ಯಾವ ಅಡ್ಡಿ ಆತಂಕಗಳಿರಬಾರದು. ಸರ್ಕಾರದ ಪೂರ್ವಭಾವಿ ಅನುಮತಿಯಿಂದ ಪ್ರದರ್ಶನ ಮಾಡುವುದು ನಿಯೋಗ ಬರುವುದು ಇವುಗಳಿಗೆ ಅವಕಾಶವಿದೆ ಎಂದು ಹೇಳಿದರು. ಅನೇಕ ಸದಸ್ಯರು ಮಸೂದೆಯನ್ನು ವಿರೋಧಿಸಿ ಕಟುವಾಗಿ ಟೀಕಿಸಿದರು. ಅನಂತರ ಬಹುಮತದಿಂದ ಒಪ್ಪಿಗೆಯನ್ನು ಪಡೆಯಿತು.

ವಿಚಾರಣೆ

ಕಲ್ಕತ್ತಾಕ್ಕೆ ೭ ಮೈಲಿ ದೂರದಲ್ಲಿ ಶುಕ್ರವಾರ ಎರಡು ಗುಂಪುಗಳಿಗೆ ಘರ್ಷಣೆಯಾಗಿ ಪೋಲೀಸರು ಗುಂಪನ್ನು ಚದರಿಸಲು ಗುಂಡು ಹಾರಿಸಿದರು. ಇದಕ್ಕಾಗಿ ಈಗ ಪಶ್ಚಿಮ ಬಂಗಾಳ ಸರ್ಕಾರದವರು ವಿಚಾರಣೆ ನಡೆಸಬೇಕೆಂದು ಆಜ್ಞೆ ಇತ್ತಿದ್ದಾರೆ.

ಆಸ್ಟ್ರೇಲಿಯಾ ಗೋಧಿ

೯,೨೦೦ ಟನ್ ಗೋಧಿಯನ್ನು ಹೊತ್ತ ಒಂದು ಹಡಗು ಆಸ್ಟ್ರೇಲಿಯಾದಿಂದ ಬೊಂಬಾಯಿ ಬಂದರಿಗೆ ಬಂದಿದೆ.

ರಾತ್ರಿಯ ವೇಳೆ ವಿಮಾನ ಪ್ರಯಾಣ

ಕೇಂದ್ರ ಸರ್ಕಾರದವರು ರಾತ್ರಿಯ ವೇಳೆಯ ವಿಮಾನ ಪ್ರಯಾಣದ ದರವನ್ನು ರೈಲಿನ ಮೊದಲನೇ ತರಗತಿಯ ದರವನ್ನು ಹೆಚ್ಚಿಸಿದಂತೆ ಇದನ್ನು ಹೆಚ್ಚಿಸಲು ಆಲೋಚಿಸುತ್ತಿದ್ದಾರೆಂದು ತಿಳಿಯಬರುತ್ತದೆ.

ಅನುಮತಿ ಬೇಕಾಗಿಲ್ಲ

ದೇಶದ ಇರುವ ಜಾಗದಿಂದ ಹೊರಗೆ ಹೋಗುವಾಗ ಒಬ್ಬ ಮನುಷ್ಯನು ಅರ್ಧ ಸೇರು ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಲು ಸರ್ಕಾರದ ಅನುಮತಿ ಬೇಕಾಗಿಲ್ಲವೆಂದು ಬೊಂಬಾಯಿ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿದ್ದಾರೆ.

ಕಾಶ್ಮೀರದ ರಾಜರ ಆಸ್ತಿಪಾಸ್ತಿಗಳು

ಕಾಶ್ಮೀರದ ರಾಜರ ಲಾಹೋರಿನ ಆಸ್ತಿಪಾಸ್ತಿಗಳನ್ನು ಕಾಶ್ಮೀರ ಸರ್ಕಾರದವರು ತಮ್ಮ ವಶಪಡಿಸಿಕೊಂಡಿದ್ದಾರೆ. ಇದುವರೆಗೂ ಈ ಆಸ್ತಿಯು ಪಂಜಾಬಿನ ಪುನರ್ವಸತಿಯ ಇಲಾಖೆಯ ಅಧೀನದಲ್ಲಿತ್ತು.

ರೆಕ್ರೂಟ್‌ಮೆಂಟ್ ಬೋರ್ಡ್ ವೀಕ್ಷಕರು

ರಾಜಮಂತ್ರಪ್ರವೀಣ ಶ್ರೀ ಮ. ಸಿ. ಸಿದ್ದಯ್ಯ ಮತ್ತು ಟಿ. ಮರಿಯಪ್ಪನವರು ಮೈಸೂರು ಸಿವಿಲ್ ಸರ್ವೀಸಿನ ಅಧಿಕಾರಿಗಳನ್ನು ಕೇಂದ್ರ ಸರ್ಕಾರದ ಆಡಳಿತ ಮತ್ತು ಪೋಲೀಸ್ ಶಾಖೆಗಳಿಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಕೇಂದ್ರ ಸರ್ಕಾರದ ರೆಕ್ರೂಟ್‌ಮೆಂಟ್ ಬೋರ್ಡಿನಲ್ಲಿ ಸಂಸ್ಥಾನದ ಪರವಾಗಿ ವೀಕ್ಷಕರಾಗಿದ್ದಾರೆ.

ಪಾರ್ಲಿಮೆಂಟು ನಡೆಯುವಾಗ ಸಚಿವರು ಇರಬೇಕು

ಪಾರ್ಲಿಮೆಂಟಿನಲ್ಲಿಂದು ಆಹಾರ ಮಂತ್ರಿ ಬಾಬತಿಗೆ ಹತ್ತು ಕೋಟಿ ಹಣ ಸಾಲ ಕೊಡುವ ಮಸೂದೆಯು ಚರ್ಚೆಗೆ ಬಂದಾಗ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ಹಾಜರಿಲ್ಲದಿದ್ದುದರಿಂದ ಬಿಸಿಬಿಸಿ ಚರ್ಚೆಯಾಯಿತು.

ಶ್ರೀ ಅನಂತಶಯನಂ ಅಯ್ಯಂಗಾರ್ಯರನ್ನು ಶ್ರೀ ದೇಶಬಂಧು ಗುಪ್ತರು ಪ್ರಶ್ನಿಸಲು ಅವರು ಉಪಾಹಾರದನಂತರ ಸಭೆಗೆ ಮಂತ್ರಿಗಳು ಇರಬೇಕೆಂದು ಆದರೂ ಮಂತ್ರಿಗಳು ಇಲ್ಲ ಅನಂತರ ಗಾಡ್ಗೀಳರು ಎಲ್ಲರಿಗೂ ಮನೆಗಳನ್ನು ಒದಗಿಸುತ್ತದೆ ಎಂದು ಸರ್ಕಾರ ಹೇಳಿ ತನ್ನ ನೌಕರರಿಗೆ ಮಾತ್ರ ಒದಗಿಸುತ್ತದೆ ಈ ಪ್ರಶ್ನೆಗೆ ನಾನೇ ಉತ್ತರ ಕೊಡುತ್ತೇನೆ ಯಾರಾದರೂ ಪತ್ರ ರೀತಿಯಲ್ಲಿ ಕೇಳಿದರೆ ನಾನು ಎದುರಿಸಲು ಸಿದ್ಧನಾಗಿದ್ದೇನೆ ಎಂದರು. ಅನಂತಶಯನಂ ಅಯ್ಯಂಗಾರ್ಯರು ಸಚಿವರು ಹಾಜರಿಲ್ಲ ಎಂಬ ಪ್ರಶ್ನೆಗೆ ಉತ್ತರ ಇದು ಸಂಯುಕ್ತ ಪಾರ್ಲಿಮೆಂಟಿನಲ್ಲಿ ಹಾಜರಿರುವ ಪದ್ಧತಿ ಮುಖ್ಯವಾದ ಕಾರ್ಯವೇನಿದೆ ಅವರು ಇಲ್ಲದೆ ಹೋದರೆ ಅದಕ್ಕೆ ಸರಿಯಾದ ಕಾರಣ ಕೊಡಬೇಕು ಎಂದು ಹೇಳಿದರು. ಅನಂತರ ಆರೋಗ್ಯ ಸಚಿವರು ಹಾಜರಿದ್ದರು.

ವಿಶ್ವವಿದ್ಯಾನಿಲಯದ ಅಧ್ಯಕ್ಷರ ಕೊಲೆ ಪ್ರಯತ್ನ

ಟೆಹರಾನಿನ ವಿಶ್ವವಿದ್ಯಾನಿಲಯದ ಅಧ್ಯಕ್ಷರಾದ ಡಾ|| ಜಾಂಗ್ನೇರವರ ಮೇಲೆ ನಿನ್ನೆ ಒಬ್ಬ ವಿದ್ಯಾರ್ಥಿಯು ಗುಂಡು ಹಾರಿಸಿ ಅವರನ್ನು ಗಾಯಗೊಳಿಸಿದನು ಇವರು ಟೂಡೆ ಪಾರ್ಟಿಯವರು ವಿಶ್ವವಿದ್ಯಾನಿಲಯ ಮತ್ತು ಶಾಲೆಗಳಲ್ಲಿ ಪ್ರಚಾರ ನಡೆಸುವುದನ್ನು ಪ್ರತಿಬಂಧಿಸಲು ಕಾರಣರಾಗಿದ್ದರು. ಆದ್ದರಿಂದಲೇ ಈ ಕಾನೂನು ಬಾಹಿರವಾದ ಪಕ್ಷದವರ ಕೋಪೋದ್ರೇಕಕ್ಕೆ ಅವರು ಒಳಗಾಗಿದ್ದರು ಎಂದು ಹೇಳಲಾಗಿದೆ.

ಮೈಸೂರು ಬಜೆಟ್ಟಿನಲ್ಲಿ ಖೋತಾ

ಇದಕ್ಕಾಗಿ ನಾಲ್ಕು ಹೊಸ ತೆರಿಗೆಗಳು

ಬೆಂಗಳೂರು ಮಾ. ೧೯

ಇಂದು ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ೧೯೫೧-೫೨ನೇ ಆಯವ್ಯಯ ಪಟ್ಟಿಯನ್ನು ಶಾಸನ ಸಭೆಯಲ್ಲಿ ಮಂಡಿಸಿದರು.

೧೯೫೧-೫೨ರಲ್ಲಿ ಆದಾಯವು ೧,೩೮,೫೬೯ ಲಕ್ಷ ರೂ. ಗಳೆಂದೂ ಖರ್ಚು ೧,೪೧,೮೨೭ ಲಕ್ಷ ರೂ. ಗಳೆಂದೂ ಅವರು ತಿಳಿಸಿದರು. ಈ ಖೋತಾವನ್ನು ಸರಿದೂಗಿಸಲು ಸರ್ಕಾರವು ನಾಲ್ಕು ಹೊಸ ತೆರಿಗೆಗಳನ್ನು ಹಾಕುವುದಾಗಿ ಹೇಳಿದರು. ಇದರಂತೆ, ಮೋಟಾರು ವಾಹನಗಳ ತೆರಿಗೆ ಹೆಚ್ಚಿಸುವುದು, ಸಿನಿಮಾ ಸೀಟುಗಳಿಗೆ ತೆರಿಗೆ ಹಾಕುವುದು, ಆರೋಗ್ಯಸೆಸ್ ವಿಧಿಸುವುದು ಮತ್ತು ರಿಜಿಸ್ಟ್ರೇಷನ್ ಫೀ ಶೇ. ೧೨ ರಷ್ಟು ಹೆಚ್ಚಿಸುವುದು. ಕೆಲವು ಬಾಬುಗಳಲ್ಲಿ ಆದಾಯ ಕಡಿಮೆಯಾಗಿರುವುದರಿಂದಲೂ ಮತ್ತೆ ಕೆಲವು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚಾಗಿ ಹಣ ಒದಗಿಸುವುದರಿಂದಲೂ ಈ ರೀತಿ ಖೋತಾ ಬಂದಿದೆ ಎಂದು ಶ್ರೀ ದಾಸಪ್ಪನವರು ತಿಳಿಸಿದರು. ಈ ಹೆಚ್ಚಿನ ತೆರಿಗೆಗಳಿಂದ ಸುಮಾರು ೨೫-೩೦ ಲಕ್ಷ ರೂ. ಗಳು ವರಮಾನ ಬರುವುದೆಂದು ಅಂದಾಜು ಮಾಡಲಾಗಿದೆಯೆಂದು ತಿಳಿಸಿದರು.

೧೯೫೦-೫೧ನೇ ಸಾಲಿನ ಆಯವ್ಯಯದಲ್ಲಿ ಆದಾಯವು ೧,೬೩,೩೫೫ ಲಕ್ಷ ರೂ. ಇದ್ದುದು ಪರಿಷ್ಕೃತ ೧,೩೫,೮೮೪ ಲಕ್ಷ ರೂ. ಗಳಿಗೆ ಏರಿತು. ವೆಚ್ಚವು ೧,೩೫,೨೧೫ ಲಕ್ಷ ರೂ. ಎಂದಿದ್ದುದು ೧,೦೪,೨೨೬ ಲಕ್ಷ ರೂ. ಗಳಾಯಿತು. ಆರ್ಥಿಕ ವಿಲೀನೀಕರಣದಿಂದ ೩೨೫ ಲಕ್ಷ ರೂ. ನಿರೀಕ್ಷಿಸಿದ್ದು ೩೪೫ ಲಕ್ಷ ರೂ. ಗಳು ಬಂದಿದ್ದರಿಂದಲೂ, ಮಾರಾಟದ ತೆರಿಗೆಯು ೧೪ ಲಕ್ಷ ರೂ. ಹೆಚ್ಚಿಗೆ ಬಂದುದರಿಂದಲೂ ಈ ರೀತಿ ೨೨ ಲಕ್ಷ ರೂ. ಗಳು ಹೆಚ್ಚಿಗೆ ಬಂದಂತೆ ಲೆಕ್ಕ ತೆಗೆದುಕೊಳ್ಳಲಾಯಿತು ಎಂದು ಹೇಳಿದರು.

೧೯೫೧-೫೨ ರಲ್ಲಿ ನೀರಾವರಿ ಕಾರ್ಯ ಹೆಚ್ಚಿಸಲು ೧,೧೨೫ ಲಕ್ಷ ರೂ. ಗಳನ್ನು, ರಸ್ತೆಗಳಿಗೂ ೧೭೫ ಲಕ್ಷ ರೂ. ಗಳನ್ನು, ಕೆರೆ ಮತ್ತು ಕಾಲುವೆಗಳಿಗೆ ೨೪ ಲಕ್ಷ ರೂ. ಜೈಲಿನ ಉತ್ಪಾದನೆ ಉಪಕರಣಗಳ ವ್ಯವಸ್ಥೆಗಾಗಿ ೧ ಲಕ್ಷ ರೂ. ವಿದ್ಯಾಭ್ಯಾಸಕ್ಕೆ ೨೦,೮೯೬ ಲಕ್ಷ ರೂ. ಇದರಲ್ಲಿ ವಿಶ್ವವಿದ್ಯಾನಿಲಯಕ್ಕೆ ೬೫ ಲಕ್ಷ, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ೬೯,೮೩ ರೂ. ಪ್ರೈಮರಿಗೆ ೧೫೧,೦೯ ಲಕ್ಷ ರೂ. ಸ್ಪೆಷಲ್ ಕೋಚಿಂಗ್‌ಗಳಿಗೆ ೧೬,೫೪ ಲಕ್ಷ ರೂ. ಇಂಡಸ್ಟ್ರಿಯಲ್ ಶಿಕ್ಷಣಕ್ಕೆ ೩೪ ಲಕ್ಷ ರೂ. ಉಳಿದದ್ದಕ್ಕೆ ೪೫,೬೮ ಲಕ್ಷ ರೂ. ಎಂದು ತಿಳಿಸಿದರು. ಇವಿಷ್ಟೂ ರೆವಿನ್ಯೂ ವೆಚ್ಚಕ್ಕೆ ಸಂಬಂಧಿಸಿದುದೆಂದೂ ವಿದ್ಯುಚ್ಛಕ್ತಿ, ನೀರಾವರಿ, ನೀರು ಸರಬರಾಜು ಶಾಖೆ ಮತ್ತು ಕೈಗಾರಿಕೆಗಳಿಗೆ ಒಟ್ಟು ೭೬೭ ಲಕ್ಷ ರೂ. ಗಳನ್ನು ಕ್ಯಾಪಿಟಲ್ ವೆಚ್ಚದಲ್ಲಿ ಒದಗಿಸಿದೆ ಎಂದು ಹೇಳಿದರು.

ಹೆಚ್ಚು ಆಹಾರಬೆಳೆ ಯೋಜನೆಗೆ ೧೯೫೦ನೇ ಜೂನ್ ಕೊನೆಯವರೆಗೆ ಕೇಂದ್ರದಿಂದ ೭೨,೬೩ ಲಕ್ಷ ಗಳು ಗ್ರಾಂಟು ಮತ್ತು ೨೯.೫ ಲಕ್ಷ ರೂ. ಸಾಲ ಬಂದಿದ್ದರೂ ೧೩೫ ಲಕ್ಷ ರೂ. ಹೆಚ್ಚು ಹಣವು ಖರ್ಚಾಗಿದೆ. ೧೯೫೦-೫೧ನೇ ಸಾಲಿಗೆ ಭಾರತ ಸರ್ಕಾರ ೧೩,೫೫ ಲಕ್ಷ ರೂ. ಗ್ರಾಂಟ್ ಮತ್ತು ೪೦ ಲಕ್ಷ ರೂ. ಸಾಲ ಕೊಟ್ಟಿದೆ. ೧೯೫೧-೫೨ ರಲ್ಲಿ ಹೆಚ್ಚು ಬೆಳೆ ಯೋಜನೆ ೧೮೦,೩೧ ಲಕ್ಷ ರೂ. ಗಳನ್ನು ಗ್ರಾಂಟು ಮಾಡಲಾಗಿದೆ. ಕೇಂದ್ರ ಸರ್ಕಾರ ೪೭ ಲಕ್ಷ ರೂ. ಸಹಾಯವನ್ನು ೮೦,೫೦ ಲಕ್ಷ ರೂ. ಸಾಲವನ್ನು ಕೊಡಬೇಕೆಂದು ಕೇಳಲಾಗಿದೆ ಎಂದು ಸಚಿವರು ತಿಳಿಸಿದರು. ಸರ್ಕಾರವು ಮಾಡಿರುವುದೆಲ್ಲಾ ಸಮರ್ಪಕವಾಗಿರುವುದೆಂದು ಹೇಳುವುದಕ್ಕಾಗುವುದಿಲ್ಲವೆಂದೂ, ಪ್ರಜಾಸತ್ತೆ ನಮ್ಮ ದೇಶಕ್ಕೆ ಹೊಸದು, ಅದನ್ನು ಒಳ್ಳೆಯ ಅಭಿಪ್ರಾಯದಲ್ಲಿ ನಿಲ್ಲಿಸಬೇಕಾದ ಕರ್ತವ್ಯ ನಮ್ಮದು. ಈ ಬಜೆಟ್ ಪ್ರಜಾಸತ್ತೆಯ ಅಗತ್ಯಗಳ ದೃಷ್ಟಿಯಿಂದ ತಯಾರಾಗಿದೆ ಎಂದು ಸಚಿವರು ತಿಳಿಸಿದರು.

ಸೇವಾಸಂಘ

ಇದೇ ಮಾಹೆ ೨೧ನೇ ಬುಧವಾರದಿಂದ ಪ್ರಾಥಮ ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಕುಳಿತು ಕೊಳ್ಳುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿದಿನ ಸಂಜೆ ೬ ಘಂಟೆಯಿಂದ ಹಿಂದೀ ತರಗತಿಗಳು ರಾಜಧಾನಿಯ ಜಗನ್ಮೋಹನ ಬಂಗಲಾ ಬಳಿ ಇರುವ ಮಾದರಿ ಶಾಲೆಯಲ್ಲಿ ಜರುಗುವುದು.

ಹಾಗೂ ವಿವಿಧ ಕಛೇರಿಗಳಲ್ಲಿ ಕೆಲಸ ಮಾಡುವ ಸದಸ್ಯರಿಗೆ ಅನುಕೂಲಿಸುವಂತೆ ಸಂಜೆ ೭ ಘಂಟೆಯಿಂದ ಮತ್ತೊಂದು ತರಗತಿಯನ್ನೂ ಏರ್ಪಡಿಸಿದೆ.

ಈ ಅವಕಾಶವನ್ನು ಎಲ್ಲರೂ ಸದುಪಯೋಗಪಡಿಸಿ ಕೊಳ್ಳಬೇಕೆಂದು ಎ. ಎನ್. ನರಸಿಂಹಾಚಾರ್, ತಿಳಿಸುತ್ತಾರೆ.

೮೦ ಕೋಟಿ ರಕ್ಷಣಾ ವೆಚ್ಚ

ಪಾಕಿಸ್ತಾನದ ಹಣಕಾಸಿನ ಸಚಿವರಾದ ಗುಲಾಮ್ ಮಹಮದ್‌ರವರು ಅಲ್ಲಿಯ ಅಸೆಂಬ್ಲಿಯಲ್ಲಿ ಪಾಕಿಸ್ತಾನದ ಸರ್ಕಾರವು ರಕ್ಷಣೆಗಾಗಿ ೮೦ ಕೋಟಿ ರೂಗಳನ್ನು ವೆಚ್ಚ ಮಾಡಲು ನಿರ್ಧರಿಸಿದೆ ಎಂದು ತಿಳಿಸಿದರು.

೧೯೫೧—೫೨ರ ಆದಾಯವು ೧೬೦ ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆಯೆಂದೂ, ವೆಚ್ಚವು ೧೪೪ ಕೋಟಿ ರೂ. ಎಂದು ತಿಳಿಸಿದರು. ಹಾಗೆಯೇ ವಿಮಾನ ಕಾರ್ಖಾನೆ, ಬ್ಯಾಂಕುಗಳು ಮತ್ತು ಹಡಗುಗಳ ಕಾರ್ಖಾನೆಗಳಿಗಾಗಿ ೭|| ಕೋಟಿ ರೂಗಳನ್ನು ಖರ್ಚು ಮಾಡುವುದಾಗಿ ತಿಳಿಸಿದ್ದಾರೆ. ಕಲ್ಲಿದ್ದಲಿನ ಮೇಲೆ ಸುಂಕವನ್ನು ರದ್ದು ಮಾಡುವುದಾಗಿಯೂ, ಮತ್ತು ಅಲ್ಯೂಮಿನಿಯಂ ಮೇಲೆ ಸುಂಕವನ್ನು ಸ್ವಲ್ಪ ಕಡಿಮೆ ಮಾಡುವುದಾಗಿಯೂ, ಪಾಕಿಸ್ತಾನವು ೩ ಸೆಣಬು ಕಾರ್ಖಾನೆಗಳನ್ನು ಸ್ಥಾಪಿಸಲು ಅದರಲ್ಲಿ ಭಾಗವಹಿಸಿದೆ ಎಂದೂ ಅವರು ಹೇಳಿದರು

ಸ್ವಾಗತ ಕೂಟ

ಸಮಾಚಾರ ಮತ್ತು ಪ್ರಸಾರ ಕೇಂದ್ರಗಳ ಮಂತ್ರಿಯಾದ ಶ್ರೀ ರಂಗನಾಥ ದಿವಾಕರರು ನಿನ್ನೆ ಡೆಲ್ಲಿಯ ಕರ್ನಾಟಕ ಸಂಘದ ಸ್ವಾಗತ ಕೂಟದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕರ್ಮರ್‌ಕರ್ ಹಾರ್ಡಿಕರ್, ಮಾ|| ವೆಂಕಟೇಶಐಂಗಾರ್, ಸಿ. ಕೆ. ವೆಂಕಟರಾಮಯ್ಯ, ಮತ್ತು ಅನಂತ ಶಯನಂ ಐಂಗಾರ್‌ರವರಗಳು ಭಾಗವಹಿಸಿದ್ದರು.

ಕಾಂಗ್ರೆಸ್ಸಿನವರು ಪ್ರಜಾಸತ್ತಾತ್ಮಕ ಸಂಘಕ್ಕೆ

ಬಂಗಾಳಾದ ೧೫೨ ಮಂದಿ ಕಾಂಗ್ರೆಸ್ಸಿನವರು ಆಚಾರ್ಯ ಕೃಪಲಾನಿಯವರ ಪ್ರಜಾಸತ್ತಾತ್ಮಕ ಸಂಘಕ್ಕೆ ಸೇರಲು ನಿರ್ಧರಿಸಿದ್ದಾರೆ.

ಉತ್ತರ ಕೊರಿಯಾಕ್ಕೆ ಸ್ಟಾಲಿನ್ನರ ಸಹಾಯವೆ ?

ಮಾ|| ಸ್ಟಾಲಿನ್ನರು ಉತ್ತರ ಕೊರಿಯಾ ಪ್ರಧಾನಿಗೆ ರಷ್ಯನರು ಉತ್ತರ ಕೊರಿಯಾ ಜನರಿಗೆ ಸಹಾಯ ಮಾಡಲು ಸಿದ್ಧವಾಗಿದ್ದಾರೆ ಎಂದು ಪತ್ರ ಬರೆದಿದ್ದಾರೆಂದು ಉ|| ಕೊರಿಯಾ ರೇಡಿಯೋ ಪ್ರಸಾರ ಮಾಡಿದೆ.

ಶ್ರೀ ರಾಜುರವರ ಜಾಮೀನು ಅರ್ಜಿ

ಶ್ರೀ ಎಲ್. ಎಸ್. ರಾಜು ಮತ್ತು ಅವರ ಮಗ ಶ್ರೀ ಜಯರಾಂರವರ ಜಾಮೀನು ಅರ್ಜಿಯು ಸಿವಿಲ್ ಸ್ಟೇಷನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಶ್ರೀ ಜಿ. ಆರ್. ರಾಮಲಿಂಗಯ್ಯನವರ ಮುಂದೆ ವಿಚಾರಣೆಗೆ ನಿನ್ನೆ ಬಂದು ಶ್ರೀ ಎನ್.ಎಸ್ ಮಣಿಯವರು ವಾದ ಮಾಡಿದರು. ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕಾವೇರಪ್ಪನವರು ಜಾಮೀನನ್ನು ವಿರೋಧಿಸಿದರು ಈ ದಿನ ಜಾಮೀನು ಬಗ್ಗೆ ತೀರ್ಪು ಕೊಡಲಾಗುವುದು.

ರಣಜಿತ್

೨೦—೩—೫೧ರಿಂದ

ಅಮೋಘವಾದ ೩ನೇ ವಾರ

ಪ್ರತಿದಿನ ೩ ಆಟಗಳು

* ಬಾಬುಲ್ *

ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಬೆಳಗಿನ ಪ್ರದರ್ಶನ

೨೩—೩—೫೧ ರಿಂದ ೩ ದಿನಗಳು ಮಾತ್ರ ರಣಜಿತ್‌ರವರ—

— ಶಾದಿ —

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂಟಿಸ್ಟ್‌ಬ್ಯೂರೋ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಜಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೨೧—೩—೧೯೫೧ನೇ ಬುಧವಾರ | ಸಂಚಿಕೆ ೧೬೪

ಮುಖ್ಯಾಧಿಕಾರಿಗಳು

ಭಾರತ ಸರ್ಕಾರದ ಡೈರೆಕ್ಟರ್ ಆಫ್ ಇನ್‌ಟೆಲಿಜೆನ್ಸ್‌ರಾದ ಶ್ರೀ ಬಿ. ಮಾಲಿಕ್‌ರವರು ಮದರಾಸಿನ ಮುಖ್ಯಾಧಿಕಾರಿಗಳೊಡನೆ ಮದರಾಸ್-ಹೈದರಾಬಾದ್ ಗಡಿಯಲ್ಲಿ ಉಂಟಾಗಿರುವ ಅನಾಯಕತ್ವವನ್ನು ನಿರ್ಮೂಲಗೊಳಿಸಲು ಕೈಕೊಳ್ಳುವ ಕಾರ್ಯಕ್ರಮದ ಬಗ್ಗೆ ಚರ್ಚಿಸಲು ಸದ್ಯದಲ್ಲೆ ಭೇಟಿ ನಡೆಸಲಿದ್ದಾರೆ.

೨೦|ಮಕ್ಕಳು ಸಾವು

ಉತ್ತರ ಬ್ರೆಜಿಲ್‌ನ ಪೀಟಾಸ್ ಎಂ[illegible] ಊರಿನಲ್ಲಿ ಉಗ್ರ ಕ್ಷಾಮ ತಲೆದೋರಿ, [illegible]ನಕ್ಕೆ ೨೦ ಮಕ್ಕಳಂತೆ ಹಸಿವು, ಬಾಯಾ[illegible]ರಿಕೆ, ರೋಗ ರುಜಿನಗಳಿಂದ ಸಾಯುತ್ತಿ[illegible] ಎಂಬುದಾಗಿ ವರದಿಯಾಗಿದೆ. ಕಳೆದ [illegible]ರು ತಿಂಗಳಿಂದ ಆ ಪ್ರಾಂತದಲ್ಲಿ ಮಳೆ [illegible]ದ್ದಿಲ್ಲ.

ನಿಷ್ಠ ಕಾಂಗ್ರೆಸ್ಸಿಗರಾದರೆ ತಪ್ಪೊಪ್ಪಿಕೊಳ್ಳಲಿ

ದೆಹಲಿಯಲ್ಲಿ ಮೈ|| ಮಂತ್ರಿಮಂಡಲದ ವಿಷಯ ಚರ್ಚಿಸಿ ಬಂದ ಶ್ರೀ ಹನುಮಂತಯ್ಯನವರ ಉತ್ತರ

ಬೆಂಗಳೂರು ಮಾ. ೨೦

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಮೈಸೂರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ದೆಹಲಿಗೆ ಮೈಸೂರು ಮಂತ್ರಿ ಮಂಡಲದ ವಿಷಯವನ್ನು ಚರ್ಚಿಸಲು ಆಹ್ವಾನಿಸಿದುದು ನಿಜ. ಈ ಚರ್ಚೆಯಲ್ಲಿ ಪಂ|| ನೆಹರೂ ಮತ್ತು ತಾವೂ ಭಾಗವಹಿಸಿರುವುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಇಂದು ಪತ್ರಿಕಾಕರ್ತರಿಗೆ ತಿಳಿಸಿದರು.

[illegible]ಯುತ್ತಾ ಪಂಡಿತ ನೆಹರೂ ಮತ್ತು ಕಾಂಗ್ರೆಸ್ ಅಧ್ಯಕ್ಷ ಟಾಂಡನ್ನರು ಅಭಿಪ್ರಾಯ ಸ್ವಾತಂತ್ರ್ಯವನ್ನು ಹೊಂದಿರುವ ಮೈಸೂರು ಶಾಸನ ಸಭಾ ಕಾಂಗ್ರೆಸ್ ಸದಸ್ಯರು ಮುಚ್ಚುಮರೆಯಿಲ್ಲದೆ, ಹೃತ್ಪೂರ್ವಕವಾಗಿ ಚರ್ಚಿಸಿ ಸೌಹಾರ್ದಯುತವಾದ ಒಪ್ಪಂದಕ್ಕೆ ಬರಬೇಕೆಂದು ಅವರು ಹೇಳಿದ್ದಾರೆಂದು ಶ್ರೀ ಹನುಮಂತಯ್ಯನವರು ಹೇಳಿದರು.

ಚರ್ಚೆಯಲ್ಲಿ ಜನವರಿ ೧೦ ರಂದು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಲ್ಲಿ ವಿಶ್ವಾಸ ವ್ಯಕ್ತಪಟ್ಟನಂತರ ಪರಿಸ್ಥಿತಿ ಸರಿಹೋಯಿತೆಂದು, ಈಗ ಯಾವ ತೊಂದರೆಯಿಲ್ಲವೆಂದೂ ಹೇಳಲಾಯಿತು. ವಿಶ್ವಾಸ ನಿರ್ಣಯವನ್ನು ವಿ ರೋ ಧಿ ಸಿ ಓಟು ಮಾಡಿದ್ದವರು ಈ ಅಭಿಪ್ರಾಯವನ್ನು ತೀವ್ರವಾಗಿ ಎದುರಿಸಿದ ಅಂದಿನ ಪರಿಸ್ಥಿತಿಯು ಈಗಲೂ ಹಾಗೆಯೇ ಉ ಳಿ ದಿ ದೆ ಯೆಂ ದು ಹೇ ಳ[illegible]ಲಾಯಿತು. ಮಂತ್ರಿ ಮಂಡಲದ ಮೇಲಿನ ವಿರೋಧವು ಇನ್ನೂ ಹಾಗೆಯೇ ಮುಂದುವರಿಯುತ್ತಿವೆ ತಮ್ಮ ಅಭಿಪ್ರಾಯದಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿರುವ ಸದಸ್ಯರು ಏನನ್ನು ಮರೆಮುಚ್ಚದೆ ಪ್ರಾಮಾಣಿಕತೆಯಿಂದ ವಿಷಯವನ್ನು ಚರ್ಚಿಸಿ ಒಂದು ಒಪ್ಪಂದಕ್ಕೆ ಬರಬೇಕು ಮತ್ತು

ಇದೇ ಸಲಹೆಯನ್ನು ಪಂ|| ನೆಹರೂ ಮತ್ತು ಬಾಬು ಪುರುಷೋತ್ತಮದಾಸ್ ಟಾಂಡನ್ನರು ಇತ್ತರು ಎಂದು ಅವರು ಹೇಳಿದರು.

ಕೆಲವು ಸದಸ್ಯರು ಹಿಂದೆ ಅವಿಶ್ವಾಸ ಪತ್ರಕ್ಕೆ ಸಹಿ ಹಾಕಿಯೂ ವಿರೋಧವಾಗಿ ಮತಕೊಟ್ಟಿರುವ ಅವರು ಅಸತ್ಯತೆಯಿಂದ ವರ್ತಿಸಿ ತಮ್ಮ ಯೋಗ್ಯತೆಯನ್ನೇ ಕಳೆದುಕೊಂಡಿರುವುದಲ್ಲದೆ ಕಾಂಗ್ರೆಸ್ಸನ್ನು ಹಾಳಿದ್ದಾರೆ ಕಾಂಗ್ರೆಸ್ಸಿನ ಮತ್ತು ತಮ್ಮ ಹಿತ ದೃಷ್ಟಿಯಿಂದ ಅವರು ತಪ್ಪನ್ನೊಪ್ಪಿಕೊಳ್ಳಬೇಕು ಎಂದು ಶ್ರೀ ಹನುಮಂತಯ್ಯನವರು ಹೇಳಿದರು.

ರಾಜೀನಾಮೆ

ಇಂಡೋನೇಷಿಯಾದ ಮುಖ್ಯ ಮಂತ್ರಿ ಡಾ|| ಮಹಮದ್ ನಾಸಿರ್‌ರವರು ತಮ್ಮ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದೆ ಎಂದು ತಿಳಿಸಿದ್ದಾರೆ.

ವಿದೇಶ ವ್ಯವಹಾರ

ಯಾವ ಸಂಸ್ಥಾನವಾಗಲೀ ಅಥವಾ ಪ್ರಾಂತ್ಯವಾಗಲೀ ವಿದೇಶ ಸರ್ಕಾರಗಳೊಡನೆ ವ್ಯವಹರಿಸಲು ಅದು ಕೇಂದ್ರ ಸರ್ಕಾರದ ವಿದೇಶಾಂಗ ಶಾಖೆಯ ಮೂಲಕ ನಡೆಸಬೇಕೆಂದು ಡಾ|| ಕೇಸ್ಕರರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಸಲಹಾ ಸಮಿತಿಯ ನೇಮಕ

ಮೈಸೂರು ಸರ್ಕಾರದವರು ರಾ. ಧ. ಪ್ರ. ಶ್ರೀ ಎ. ಆರ್ ನಾಗೇಶ್ವರ ಅಯ್ಯರ್ ರಾ. ಧ. ಪ್ರ. ಶ್ರೀ ಟಿ. ಸಿಂಗಾರವೇಲು ಮೊದಲಿಯಾರ್ ಮತ್ತು ನ್ಯಾಯಮೂರ್ತಿ ಶ್ರೀ ಜಿ. ವಾಸುದೇವಮೂರ್ತಿಯವರನ್ನೊಳಗೊಂಡ ಪ್ರಿವೆಂಟಿವ್ ಡಿಟೆನ್ಷನ್ ಶಾಸನಕ್ಕೆ ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ತಿದ್ದುಪಡಿಗನುಗುಣವಾಗಿ ಸಲಹಾ ಸಮಿತಿಯನ್ನು ನೇಮಿಸಿದ್ದಾರೆ.

ಚುನಾವಣೆ

ತಿರುವಾಂಕೂರು-ಕೊಚ್ಚಿನ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ಕೇಶವನ್‌ರವರು ಚುನಾಯಿತರಾಗಿದ್ದಾರೆ.

ಅರ್ಜಿ ವಜಾ

ಎ. ಐ. ಸಿ. ಸಿ ಯ ಪರೀಕ್ಷ ಚುನಾವಣಾ ಪ್ರತಿನಿಧಿ ಶ್ರೀ ಎಸ್. ಕೆ. ಪಾಟೀಲರು ಗುಂಟೂರಿನಿಂದ ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿಗೆ ಚುನಾವಣೆ ನಡೆಸಲು ತಮ್ಮ ಮೇಲೆ ಪ್ರತಿಬಂಧಕ ಹಾಕಿದ್ದನ್ನು ವಜಾ ಮಾಡಬೇಕೆಂದು ಹಾಕಿದ್ದ ರಿವಿಷನ್ ಅರ್ಜಿಯನ್ನಿಂದು ಮದ್ರಾಸಿನ ಹೈಕೋರ್ಟ್ ಜಡ್ಜರು ವಜಾ ಮಾಡಿದರು.

ಉಗಾದಿಗೆ ಬಟ್ಟೆ

ಸಾರ್ವಜನಿಕರ ಅನುಕೂಲಕ್ಕಾಗಿ ಉಗಾದಿ ಹಬ್ಬದ ಸಂದರ್ಭದಲ್ಲಿ ಸಂಸ್ಥಾನಾದ್ಯಂತ ಬಟ್ಟೆ ವರ್ತಕರಿಗೆ ೨೧೫೩೮ ಬೇಲು ಬಟ್ಟೆಯನ್ನು ಸರಬರಾಜು ಮಾಡಲಾಗಿದೆ. ಎಲ್ಲಾ ತಾಲ್ಲೋಕುಗಳಲ್ಲಿ ಅವುಗಳಿಂದ ಗುರುತು ಪಡೆಯುವ ಜನರಿಗೆ ಹಂಚಲಾಗುವುದು. ಜಿಲ್ಲಾಧಿಕಾರಿಗಳ ಸೂಚನೆಯಂತೆ ಜಿಲ್ಲೆಗಳಲ್ಲಿ ಪಂಚೆ ಮತ್ತು ಮೊಟ್ಟೂರು ಬಿಳಿ ಬಟ್ಟೆಯನ್ನು ಹಂಚಲಾಗುವುದು. ಕಾರ್ಪೊರೇಷನ್ ಪ್ರದೇಶಗಳಲ್ಲಿ ರೇಷನ್ ಕಾರ್ಡುಗಳ ಆಧಾರದ ಮೇಲೆ ಹಂಚಲಾಗುವುದು ಎಂದು ಸಾರ್ವಜನಿಕ ಸರಬರಾಜು ಕಂಟ್ರೋಲರ್ ಪ್ರಕಟಿಸಿದ್ದಾರೆ.

ಬರ್ಮಾ ಅಕ್ಕಿ

ಬರ್ಮಾದಿಂದ ಸಿಲೋನಿಗೆ ೧ ಲಕ್ಷ ಟನ್ ಅಕ್ಕಿ ದೊರಕಿಸಿಕೊಳ್ಳಲು ಸಂಧಾನಕ್ಕಾಗಿ ಸಿಲೋನ್ ಆಹಾರ ಕಮಿಷನರು ಅಲ್ಲಿಗೆ ಹೋಗಿದ್ದಾರೆ.

ಬಟ್ಟೆ ರಫ್ತಿನ ಮೇಲೆ ನಿರ್ಬಂಧ

ವಾಣಿಜ್ಯ ಶಾಖೆಯ ಉಪಮುಖ್ಯ ಮಂತ್ರಿ ಶ್ರೀ ಕರ್‌ಮರ್‌ಕರ್‌ರವರು ಪಾರ್ಲಿಮೆಂಟಿನಲ್ಲಿ ಭಾರತ ಸರ್ಕಾರವು ಬಟ್ಟೆ ರಫ್ತನ್ನು ನಿರ್ಬಂಧಿಸಿ ೧೯೫೧—೫೨ರಲ್ಲಿ ೮೦೦೦ ಲಕ್ಷ ಗಜ ಬಟ್ಟೆ ರಫ್ತು ಮಾಡಲು ನಿರ್ಧರಿಸಿದೆ.

೧೦೦ ದಶ ಲಕ್ಷ ಒರಟು ಬಟ್ಟೆಯನ್ನು ಸ್ಟರ್ಲಿಂಗ್ ಪ್ರದೇಶಕ್ಕೂ ಕಳುಹಿಸಲಾಗುವುದು ಎಂದರು.

ನೌಕಾಧಿಕಾರಿಗೆ ಮರಣದಂಡನೆ

ಅಂಡಮಾನ್ ದ್ವೀಪದಲ್ಲಿ ೧೯೪೩ರಲ್ಲಿ ೨೦೦ ಮಂದಿ ಆಸ್ಟ್ರೇಲಿಯ ಕೈದಿಗಳನ್ನು ಕೊಲೆಮಾಡಿದ ತಪ್ಪಿಗಾಗಿ ಜಪಾನಿನ ಮಾಜಿ ನೌಕಾಧಿಕಾರಿ ಲೆ|| ಟೆಕಾಹಿಕಿಜ್ ಸುಕಾಶಿ ಎಂಬುವರಿಗೆ ಮರಣದಂಡನೆವಿಧಿಸಲಾಯಿತು ನಿಯಿಗೊ ಕನಮಟೊ ಎಂಬ ವಾರಂಟ್ ಆಫೀಸರಿಗೆ ಜೀವಾವಧಿ [illegible] ವಿಧಿಸಲಾಯಿತು.

ಸೀನಿಯರ್ ಸರ್ಜನ್

ಮಾರ್ಚಿ ೩೧ರಿಂದ ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಡಾ|| ಪಿ. ಲಕ್ಷ್ಮೀನಾರಾಯಣ ಶೆಟ್ಟಿಯವರನ್ನು ಸೀನಿಯರ್ ಸರ್ಜನ್, ಚೀಫ್ ಮೆಡಿಕಲ್ ಆಫೀಸರ್ (ಇನ್ಶೂರೆನ್ಸ್ ಮತ್ತು ರೈಲ್ವೆ ಇಲಾಖೆ) ಜೈಲುಗಳ ಎಕ್ಸ್ ಆಫಿಷಿಯೋ ಐ. ಜಿ. ಯಾಗಿ ನೇಮಿಸಲಾಗಿದೆ.

ಸೀನಿಯರ್ ಸರ್ಜನ್ ಆಗಿರುವ ಶ್ರೀ ಎಸ್. ಎ. ಅಯ್ಯಂಗಾರ್ರವರು ನಿವೃತ್ತಿಯಾಗಿದ್ದಾರೆ.

ಡೆಪ್ಯುಟೇಷನ್ನಿಂದ ಹಿಂತಿರುಗಿರುವ ಶ್ರೀ ಟಿ. ಎನ್. ಎಸ್. ಮೂರ್ತಿರಾವ್ ಅಸಿಸ್ಟೆಂಟ್ ಸರ್ಜನ್ (ಫಸ್ಟ್‌ಕ್ಲಾಸ್) ರವರನ್ನು ಮುಖ್ಯಾಸ್ಪತ್ರೆಯಲ್ಲಿ ನೇಮಿಸಲಾಗಿದೆ ಅಲ್ಲಿಂದ ಶ್ರೀ ಕೆ. ಎಸ್. ನಾರಾಯಣಸ್ವಾಮಿಯವರನ್ನು ವಿಕ್ಟೋರಿಯಾ ಆಸ್ಪತ್ರೆಗ ವರ್ಗಾಯಿಸಲಾಗಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ಮಾ. ೧೯

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯು ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಜರುಗಿತು ಜಿಲ್ಲಾ ಟ್ರಿಬ್ಯೂನಲ್ ಸಮಿತಿಗೆ ಶ್ರೀಗಳಾದ ಎಂ. ಲಕ್ಷ್ಮೀನಾರಾಯಣ, ಎಸ್. ಶಿವಸ್ವಾಮಿ ಮತ್ತು ಕ. ಶೇಷಾದ್ರಿಗಳನ್ನೊಳಗೊಂಡ ಪೇನಲ್ ಕಳುಹಿಸಬಹುದೆಂದು ತೀರ್ಮಾನಿಸಲಾಯಿತು. ೧೯೫೧ರ ಜನಗಣತಿಯ ಪ್ರಕಾರ ಸಂಸ್ಥಾನ ಶಾಸನಸಭೆಗೂ, ಕೇಂದ್ರ ಪಾರ್ಲಿಮೆಂಟಿಗೂ, ಹೆಚ್ಚು ಸ್ಥಾನಗಳು ದೊರಕಬೇಕಾಗಿರುವ ಅಂಶವನ್ನು ಪ್ರಾಂತ್ಯ ಕಾಂಗ್ರೆಸ್ ಸರ್ಕಾರವು ಕೂಡಲೇ ಸಂಬಂಧಪಟ್ಟವರೊಡನೆ ವ್ಯವಹರಿಸಬೇಕೆಂದು ಸೂಚಿಸುವ ನಿರ್ಣಯ ಅಂಗೀಕಾರವಾಯಿತು. ಸರ್ಕಾರದವರು ಬದನವಾಳು ಖಾದಿ ಕೇಂದ್ರವನ್ನು ತಮ್ಮ ಆಡಳಿತದಲ್ಲಿ ಇನ್ನು ಹೆಚ್ಚು ಸೌಕರ್ಯವನ್ನು ಕಲ್ಪಿಸಿ ನಡೆಸಿಕೊಂಡು ಹೋಗಬೇಕೆಂದೂ, ಖಾದಿ ಕೈಗಾರಿಕೆಗೆ ಹೆಚ್ಚು ಸಹಾಯ ನೀಡಬೇಕೆಂದು ಕೋರುವ ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು ದೇಶದಲ್ಲಿ ತಲೆದೋರಿರುವ ಲಂಚ ಮುಂತಾದವುಗಳನ್ನು ನಿರ್ಮೂಲ ಮಾಡಲು ಸಾರ್ವಜನಿಕರೂ, ಅಧಿಕಾರಿಗಳೂ ಸತತ ಪ್ರಯತ್ನ ನಡೆಸಬೇಕೆಂದೂ, ಆಡಳಿತದಲ್ಲಿ ರಬಹುದಾದ ಈ ಹಾವಳಿಯನ್ನು ತಪ್ಪಿಸಲು ಇಲಾಖಾ ಮುಖ್ಯಾಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳಬೇಕೆಂದೂ, ಸರ್ಕಾರ ಈ ವಿಚಾರದಲ್ಲಿ ತೀವ್ರವಾದ ಕ್ರಮ ನಡೆಸಬೇಕೆಂದೂ ಒತ್ತಾಯಪಡಿಸುವ ನಿರ್ಣಯವೂ ಅಂಗೀಕಾರವಾಯಿತು. ಕಾಫಿ ಮತ್ತು ಟೀ ತೋಟಗಳವರು ಕಾರ್ಮಿಕರನ್ನು ಕ್ರೋಢೀಕರಿಸುವಂತ ವ್ಯವಸಾಯ ಕಾರ್ಮಿಕರನ್ನು ಶೇಖರಿಸಿ ಅವಶ್ಯಕವಾದೆಡೆಗೆ ಕಳುಹಿಸಿ ವ್ಯವಸಾಯ ಮಾಡಿಸಲು ಏರ್ಪಾಡು ಮಾಡಬೇಕೆಂದೂ, ಸದರಿ ಕಾರ್ಮಿಕರಿಗೆ ಆರೋಗ್ಯ, ವಸತಿ, ಸೌಕರ್ಯಗಳನ್ನು ಮಾಡಿಕೊಟ್ಟಲ್ಲಿ ಈ ಕಾರ್ಯ ಜಯಪ್ರದವಾಗುತ್ತದೆಂದೂ, ಈ ಬಗೆಯ ವ್ಯವಸಾಯ ಕಾರ್ಮಿಕ ದಳವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದೂ ಸೂಚಿಸುವ ನಿರ್ಣಯವೂ ಅಂಗೀಕಾರವಾಯಿತು. ಜಿಲ್ಲಾ ಕಾಂಗ್ರೆಸ್ಸಿನ ಹಿಂದಿನ ಲೆಖ್ಖಪತ್ರಗಳನ್ನು ಒಮ್ಮಾಖರ್ಚನ್ನು ಮುಂದಿನ ಸಭೆಗೆ ಮಂಡಿಸಬೇಕೆಂದೂ ಸಭೆ ಸೂಚಿಸಿತು. ಜಿಲ್ಲಾ ಕಾಂಗ್ರೆಸ್ ಅಧಿಕಾರವರ್ಗದವರು ಜಿಲ್ಲಾ ಪ್ರವಾಸಮಾಡಿ ಸಮಿತಿಗಳನ್ನು ಪುನರ್ರಚಿಸಿದನಂತರ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸಕಾರ್ಯ ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಶ್ರೀ ಹೆಚ್. ಕೆ ಕುಮಾರಸ್ವಾಮಿಯವರು ತಿಳಿಸುತ್ತಾರೆ

ಪಾಕಿಸ್ತಾನದ ಅಕ್ಕಿ

ಪಾಕಿಸ್ತಾನದಿಂದ ವಾಣಿಜ್ಯ ಒಪ್ಪಂದದ ಪ್ರಕಾರ ಬೊಂಬಾಯಿಗೆ ೮೦೦೦ ಟನ್ ಅಕ್ಕಿ ಬಂದಿದೆ.

ವಜಾ

ಸೆಷನ್ಸ್ ಜಡ್ಜ್ ಶ್ರೀ ರಾಮಲಿಂಗಯ್ಯನವರು ಅಡ್ವೋಕೇಟ್ ಶ್ರೀ ಎಲ್. ಎಸ್ ರಾಜು ಮತ್ತು ಅವರ ಪುತ್ರರ ಜಾಮೀನು ಬಿಡುಗಡೆ ಅರ್ಜಿಯನ್ನು ನಿನ್ನೆ ವಜಾ ಮಾಡಿದರು.

ಆಸ್ಟ್ರಿಯಾದ ಮಣ್ಣು

ಆಸ್ಟ್ರಿಯಾ ಸರ್ಕಾರವು ಸೋಮನಾಥ ದೇವಾಲಯವನ್ನು ವಿಶ್ವಶಾಂತಿಗಾಗಿ ನಾಮಕರಣ ಮಾಡಲು ಸಾಂಕೇತಿಕವಾಗಿ ಒಂದು ಪೌಂಡು ಆಸ್ಟ್ರಿಯಾ ಮಣ್ಣನ್ನು ಕಳುಹಿಸಿದೆ ಇತರ ರಾಷ್ಟ್ರಗಳು ಕಳುಹಿಸಿದ ಮಣ್ಣನ್ನು ದೇವಾಲಯದ ಜೀರ್ಣೋದ್ಧಾರಕ್ಕೆ ಉಪಯೋಗಿಸಲಾಗುವುದು.

ಮರಣದಂಡನೆ

ಅಬ್ದುಲ್ ರೆಹಮಾನ್ ಎಂಬ ಪಠಾಣನು ಬೆಂಗಳೂರು ಮದರಾಸು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀ ಚನ್ನಪ್ಪಯ್ಯ ಗೌಂಡರ್ ಮತ್ತು ಬೆಂಗಳೂರಿನ ಶ್ರೀ ಸಂಪತ್ ಎಂಬುವವರನ್ನು ಚೂರಿಯಿಂದ ಇರಿದು ಕೊಲೆ ಮಾಡಿದನೆಂಬ ಆಪಾದನೆಗಾಗಿ ಉತ್ತರ ಆರ್ಕಾಟ್ ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆ ವಿಧಿಸಿದರು.

ಇಂಜನೀಯರಿಂಗ್ ಕಂಟ್ರಾಕ್ಟರ್ ಶ್ರೀ ವರದರಾಜನ್ ಎಂಬುವವರಿಗೂ ಇತರ ನಾಲ್ಕುರಿಗೂ ಗಾಯಪಡಿಸಿದನೆಂದು ಅವನಿಗೆ ಕಾರಾಗೃಹ ಶಿಕ್ಷೆಗಳೂ ವಿಧಿಸಲ್ಪಟ್ಟವು

ಬೊಂಬಾಯಿನ ಅಹಾರ ಪರಿಸ್ಥಿತಿ

ಬೊಂಬಾಯಿನ ಆಹಾರ ಪರಿಸ್ಥಿತಿಯ ಬಗ್ಗೆ ಅಲ್ಲಿಯ ಶಾಸನ ಸಭೆಯಲ್ಲಿ ಸೋಮವಾರ ಚರ್ಚೆ ನಡೆಯಿತು ಆಹಾರ ಮಂತ್ರಿ ಶ್ರೀ ದಿನಕರರಾಯ್ ದೇಸಾಯಿಯವರು ಆಹಾರ ಪರಿಸ್ಥಿತಿಯನ್ನು ಮತ್ತು ಆಹಾರವನ್ನು ಹಂಚುವ ವಿಷಯದಲ್ಲಿದ್ದ ತೊಂದರೆಗಳನ್ನು ವಿವರಿಸಿದರು.

ಮನೆಗಳ ತೊಂದರೆಯನ್ನು ನಿವಾರಿಸಲು ಹೊಸ ಸಲಹೆ

ಕೇಂದ್ರ ಪಾರ್ಲಿಮೆಂಟಿನಲ್ಲಿ ಶ್ರೀ ದೇಶಬಂಧುಗುಪ್ತರವರು ಆಫೀಸುಗಳ ಮತ್ತು ಮನೆವಾರದ ಬಾಡಿಗೆ ಹತೋಟಿ ಶಾಸನವು ಚರ್ಚೆಗೆ ಬಂದಾಗ ಡೆಲ್ಲಿಯಲ್ಲಿ ಮನೆಗಳ ಅಭಾವವನ್ನು ನಿವಾರಿಸಲು ಒಂದು ಹಣಕಾಸಿನ ಆಡಳಿತ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಒಂದು ಹೊಸ ಸಲಹೆಯನ್ನಿತ್ತರು. ದೆಹಲಿಯಲ್ಲಿ ಈಗ ೭ ಲಕ್ಷ ಜನಕ್ಕೆ ೮೫ ಲಕ್ಷ ರೂ. ಖರ್ಚಿನಲ್ಲಿ ಹೊಸ ಮನೆಗಳನ್ನು ಕಟ್ಟಿಸಿಕೊಡಬೇಕು. ಸಧ್ಯದಲ್ಲಿ ಅಷ್ಟು ಹಣವು ಎಲ್ಲಿದೆ ೫೦ ಲಕ್ಷ ರೂ. ಗಳಿಂದ ಒಂದು ಹಣಕಾಸಿನ ಆಡಳಿತ ಸಂಸ್ಥೆಯೊಂದನ್ನು ರಚಿಸಿ ಆದರ ಮುಖಾಂತರ ಮನೆಗಳ ಅಭಾವದ ನಿವಾರಣೆಯನ್ನು ಹೋಗಲಾಡಿಸಬಹುದಾಗಿತ್ತು. ಈಗಲೂ ಅದಕ್ಕೆ ಕಾಲವಿದೆ ಭೂಮಿಯನ್ನು ಖರೀದಿ ಮಾಡಿ, ಮನೆಗಳನ್ನು ಕಟ್ಟಲು ಸಾಮಗ್ರಿಗಳನ್ನು ಸರಿಯಾದ ಬೆಲೆಯಲ್ಲಿ ಒದಗಿಸುವುದು ಇವುಗಳನ್ನು ಮಾಡಬೇಕು. ಬಾಡಿಗೆಯ ಹತೋಟಿಯಿಂದ ಮನೆಗಳ ಅಭಾವದ ನಿವಾರಣೆ ಮಾಡಲು ಆಗುವುದಿಲ್ಲ ಎಂದು ಅವರು ಹೇಳಿದರು.

ರಾಜೀನಾಮೆ ಇಲ್ಲ

ಮದರಾಸಿನ ಅಸೆಂಬ್ಲಿಯಲ್ಲಿ ಅಲ್ಲಿಯ ಆಹಾರಸಚಿವ ಡಾ|| ಕೋಜೆ ಎಕ್ಸೋಡಿಯಾರವರು ಕೇಂದ್ರ ಸರ್ಕಾರದಿಂದ ಆಹಾರ ಬಂದಿದ್ದರೆ ಈಗಿನ ಮಂತ್ರಿಗಳು ತಮ್ಮ ಹುದ್ದೆಗೆ ರಾಜೀನಾಮೆಕೊಡುವುದಿಲ್ಲವೆಂದು ಹೇಳಿದರು. ಜನಗಳಿಗೆ ಆಹಾರ ಅಭಾವದ ತೊಂದರೆಯನ್ನು ತಪ್ಪಿಸಲು ನಮ್ಮ ಕೈಲಾದಷ್ಟು ಕಷ್ಟಪಡುತ್ತೇವೆಯೇ ಹೊರತು ಬೇಡಿಗನಂತೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋದರೆ ಪ್ರಯೋಜನವೇನು ಎಂದು ಹೇಳಿದರು. ಹಾಗೆಯೇ ಇನ್ನು ೬ ವಾರಗಳಲ್ಲಿ ಆಹಾರವನ್ನು ಒದಗಿಸದಿದ್ದರೆ ಕೆಲವು ಸಾವುಗಳು ಉಂಟಾಗುವುವೆಂದು ಹೇಳಿದ ಕೆಲವು ಸದಸ್ಯರ ಅಭಿಪ್ರಾಯವನ್ನು ತಾವು ಒಪ್ಪುವುದಿಲ್ಲವೆಂದು ಹೇಳಿದರು.

ಸಾಲ

ಪಾಕಿಸ್ತಾನದಲ್ಲಿ ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ರೈಲ್ವೆಗಳು, ತಂತಿ ವಾರ್ತಾ ಸೌಕರ್ಯಗಳು ಮತ್ತು ಹೊಸ ಕೈಗಾರಿಕೆಗಳು—ಇವುಗಳ ಅಭಿವೃದ್ಧಿಗಾಗಿ ಪಾಕಿಸ್ತಾನಕ್ಕೆ ಸಾಲ ಕೊಡಲು ಸಿದ್ಧವಾಗಿರುವುದಾಗಿ ಪ್ರಪಂಚ ಬ್ಯಾಂಕ್ ಪ್ರಕಟಿಸಿದೆ.

ಹೊಸ ಸಂಘ

ಪಶ್ಚಿಮ ಬಂಗಾಳದಲ್ಲಿ ಡಾ|| ಪ್ರತಾಪ ಗುಹರಾಯ್‍ರವರ ನಾಯಕತ್ವದಲ್ಲಿ ಆಚಾರ್ಯ ಕೃಪಲಾನಿಯವರ ಡೆಮೋಕ್ರಾಟಿಕ್ ಫ್ರಂಟಿನ ಒಂದು ಹೊಸ ಸಂಘವು ಸೇರಿ ಅವರು ಅಲ್ಲಿಯ ಕಾಂಗ್ರೆಸ್ ಕೆಲಸಗಾರರೊಡನೆ ಏಪ್ರಿಲ್‍ನಲ್ಲಿ ಒಂದು ಸಭೆ ನಡೆಸಲು ತೀರ್ಮಾನಿಸಿದ್ದಾರೆ. ಇದಕ್ಕೆ ಆಚಾರ್ಯ ಕೃಪಲಾನಿಯವರು ಆಹ್ವಾನಿತರಾಗಿದ್ದಾರೆ. ಆಚಾರ್ಯ ಕೃಪಲಾನಿಯವರು ಈ ಆಹ್ವಾನಕ್ಕೆ ಒಪ್ಪಿದ್ದಾರೆ. ಮತ್ತು ಕೆಲವು ಕಾಂಗ್ರೆಸ್ ನಾಯಕರು ಈ ಸಭೆಯಲ್ಲಿ ಭಾಗವಹಿಸಬಹುದೆಂದು ಹೇಳಲಾಗಿದೆ. ಪಶ್ಚಿಮ ಬಂಗಾಳದ ಜಗಂತರ್ ಕಾಂಗ್ರೆಸ್ ಸಂಗಡವು ಕಾಂಗ್ರೆಸ್ಸಿನ ಡೆಮೋಕ್ರಾಟಿಕ್ ಫ್ರಂಟನ್ನು ಸೇರಲು ನಿರ್ಧರಿಸಿದ್ದಾರೆ.

ಪಾರ್ಲಿಮೆಂಟ್ ಸದಸ್ಯರ ಮುಷ್ಕರ

ಒಮಾನ್ ಪಾರ್ಲಿಮೆಂಟಿನ ೧೮ ಜನ ಸದಸ್ಯರು ಸಭೆಯಲ್ಲಿ ಪಾರ್ಲಿಮೆಂಟಿನ ಹಕ್ಕುಗಳನ್ನು ಮೊಟಕು ಮಾಡಿದ್ದರಿಂದ ಅದನ್ನು ವಿರೋಧಿಸಲು ೧೩೭ ಗಂಟೆಗಳ ಕಾಲ ಸಭೆಯೊಳಗೆ ಮುಷ್ಕರ ಹೂಡಿದ್ದಾರೆ ಅವರ ಸುತ್ತಲೂ ಸೈನ್ಯವು ಒಂದೂಕಗಳಿಂದ ಸುತ್ತುವರಿಯಲ್ಪಟ್ಟಿದೆ

ಬೀಹಾರಿನ ಆಹಾರ ಪರಿಸ್ಥಿತಿ ವಿಷಮಿಸಿದೆ

ಬೀಹಾರಿನ ಆಹಾರ ಮಂತ್ರಿಯವರು ಬೀಹಾರಿನ ಆಹಾರ ಪರಿಸ್ಥಿತಿಯು ಕಳೆದ ಎರಡೂವರೆ ತಿಂಗಳಿಂದ ಮಳೆಯಿಲ್ಲದೆ ಬಹಳವಾಗಿ ಬೆಳೆಗ ನಷ್ಟವಾಗಿರುವುದರಿಂದ ರಾಜ್ಯದಲ್ಲಿ ಆಹಾರ ಪರಿಸ್ಥಿತಿಯು ವಿಷಮಿಸಿದೆ. ಕೆಲವು ಸಾವುಗಳುಂಟಾಗಿವೆಯೆಂದು ವರ್ತಮಾನ ಬಂದಿದೆ ೧,೧೦,೦೦೦ ಟನ್ನಿನಷ್ಟು ಬೆಳೆಯು ನಷ್ಟವಾಗಿದೆ ಎಂದು ಹೇಳಿದ್ದಾರೆ

ಹೊಸ ಹುದ್ದೆ

ಜನರಲ್ ಐಸೆನ್ ಹೋವರ್‌ರವರು ಫೀಲ್ಡ್ ಮಾರ್ಷಲ್ ಮಾಂಟ್‍ಗಾಮರಿಯವರನ್ನು ಸರ್ವ ಶ್ರೇಷ್ಠ ಉಪ ಸೈನ್ಯಾಧಿಪತಿಯನ್ನಾಗಿ ನೇಮಿಸಿದ್ದಾರೆ

ಸಂಪಾದಕರು ಮತ್ತು ಪ್ರಕಾಶಕರು— ಜಿ ಎಚ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ ಹೆಚ್. ರಾಮರಾವ್, ಬಿ. ಎಸ್. ಸಿ, ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

[ಸಂಪುಟ ೧] ೨೨—೩—೧೯೫೧ನೇ ಗುರುವಾರ [ಸಂಚಿಕೆ ೧೬೪]

೩೮ನೇ ಅಕ್ಷಾಂಶವನ್ನು ದಾಟಬಹುದು

ನಿನ್ನೆ ಅಮೆರಿಕಾದ ವಿದೇಶಾಂಗ ಶಾಖೆಯ ಕಾರ್ಯದರ್ಶಿ ಮಿ|| ಡೀನ್ ಅಚಿಸನ್ನರು ೩೮ನೇ ಅಕ್ಷಾಂಶವನ್ನು ದಾಟಲು ಸಂಯುಕ್ತ ರಾಷ್ಟ್ರ ಸೇನೆಗೆ ಯಾರ ಅಪ್ಪಣೆಯೂ ಬೇಕಾಗಿಲ್ಲ ಎಂದು ತಿಳಿಸಿದ್ದಾರೆ.

ಪಾಕೀಸ್ತಾನದ ವೈದ್ಯಕೀಯ ಸಮ್ಮೇಳನ

ಪಾಕಿಸ್ತಾನದ ಪ್ರಧಾನಿ ಮಿ|| ಲಿಯಾಕತ್ ಅಲೀಖಾನರು ಮೊನ್ನೆ ಕರಾಚಿಯಲ್ಲಿ ಪಾಕಿಸ್ತಾನದ ವೈದ್ಯಕೀಯ ಸಮ್ಮೇಳನವನ್ನು ಆರಂಭಿಸಿದರು. ಇಂಡಿಯಾ ಫ್ರಾನ್ಸ್, ಇಂಡೋನೇಷಿಯಾ, ಇರಾನ್ ಮತ್ತು ಬ್ರಿಟನ್‌ನಿಂದ ಸಮ್ಮೇಳನಕ್ಕೆ ವೈದ್ಯಕೀಯರು ಬಂದಿದ್ದರು.

ಇನಾಂ ಗ್ರಾಮಗಳು ಸರ್ಕಾರದವರ ವಶ

ಶಾಸನ ಸಭೆಯಲ್ಲಿ ಸಚಿವ ಶ್ರೀ ಸಿದ್ದಯ್ಯನವರ ವರದಿ

ಬೆಂಗಳೂರು ಮಾ. ೨೧

ಇಂದು ಬೆಳಿಗ್ಗೆ ಶಾಸನಸಭೆಯಲ್ಲಿ ಮೈಸೂರು ಸಂಸ್ಥಾನದಲ್ಲಿರುವ ಇನಾಂ ಗ್ರಾಮಗಳನ್ನು ರದ್ದುಪಡಿಸಿ, ಇನಾಂದಾರರಿಗೆ ಪರಿಹಾರ ಕೊಡಲು ತಂದ ಸರ್ಕಾರದ ಮಸೂದೆಯ ಮೇಲೆ ಶಾಸನ ಸಭೆಯಲ್ಲಿ ಚರ್ಚೆ ನಡೆದು ಸೆಲೆಕ್ಟ್ ಸಮಿತಿಗೆ ಹಾಕಲ್ಪಟ್ಟಿತು. ಸೆಲೆಕ್ಟ್ ಸಮಿತಿಯು ತನ್ನ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಒಪ್ಪಿಸುವುದು.

ಮೈಸೂರು ಸಂಸ್ಥಾನದಲ್ಲಿ ಒಟ್ಟು ೨೦೦೦ಕ್ಕೂ ಮೇಲ್ಪಟ್ಟು ಇವೆಯೆಂದೂ ಮತ್ತು ಅವನ್ನು ವಶಪಡಿಸಿಕೊಂಡಲ್ಲಿ ಸರ್ಕಾರವು ಇನಾಂದಾರರಿಗೆ ೧—೭೫ ಕೋಟಿ ರೂಗಳನ್ನು ಪರಿಹಾರ ಕೊಡಬೇಕಾಗುವುದೆಂದು ರೆವಿನ್ಯೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಹೇಳಿದರು.

ವರದಿಯನ್ನು ಮುದ್ರಿಸಿಲ್ಲ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಶಾಸನ ಸಭೆಯಲ್ಲಿ ಹೆಚ್. ಲಿಂಗಾರೆಡ್ಡಿಯವರ ಪ್ರಶ್ನೆಗೆ ಪ್ರಶ್ನೋತ್ತರ ಕಾಲದಲ್ಲಿ ಉತ್ತರ ಕೊಡುತ್ತಾ, ಗೋಪಾಲರಾವ್ ವಿಚಾರಣೆ ಸಮಿತಿಯ ವರದಿಯ ಕೆಲವು ವಿಷಯಗಳು ಕೋರ್ಟಿನ ಮುಂದೆ ಹೋಗಿರುವುದರಿಂದಲೂ ಮತ್ತು ವರದಿಯನ್ನು ಮುದ್ರಿಸಿಲ್ಲವಾದುದರಿಂದಲೂ ಈಗಲೇ ವರದಿಯನ್ನು ಪ್ರಕಟಿಸಲು ಸಾಧ್ಯವಿಲ್ಲವೆಂದರು.

ನಿಯೋಗದ ಆಗಮನ

ಟಿಬೆಟ್ಟಿನಲ್ಲಿ ಶಾಂತಿಯನ್ನೇರ್ಪಡಿಸಲು ಚೀಣಾದೊಡನೆ ಸಂಧಾನ ನಡೆಸಲು ಹೊರಟಿರುವ ಟಿಬೆಟ್ಟಿನ ನಿಯೋಗದವರು ಕಲ್ಕತ್ತಾಕ್ಕೆ ಬಂದಿದ್ದಾರೆ. ಅವರು ಕೆಲವು ದಿನಗಳನಂತರ ದೆಹಲಿಗೆ ಬರಲಿದ್ದಾರೆ.

ಮುನಿಸಿಪಲ್ ಪ್ರಕಟಣೆ

ಮೈಸೂರು ನಗರದಲ್ಲಿ ಲಾಳ ಕಟ್ಟುವ ಕೆಲಸವು ಕ್ಲುಪ್ತವಾದ ಸ್ಥಳಗಳಲ್ಲಿ ಪ್ರಾಣಿಗಳಿಗೆ ಹಿಂಸೆ ಆಗದ ರೀತಿಯಲ್ಲಿ ನಡೆಯಲು ಅನುಕೂಲಿಸುವಂತೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಲಾಳ ಕಟ್ಟುವವರು ಮುನಿಸಿಪಾಲಿಟಿಯಿಂದ ವರ್ಷಕ್ಕೆ ನಾಲ್ಕಾಣೆ ರುಸುಂ ಕೊಟ್ಟು ಲೈಸೆನ್ಸನ್ನು ಪಡೆಯಬೇಕೆಂಬ ನಿಯಮವಿದೆ. ಈ ರೀತಿಯಾಗಿ ಲಾಳ ಕಟ್ಟುವವರು ಲೈಸೆನ್ಸ್ ಪಡೆಯಬೇಕೆಂದು ಅವರನ್ನು ಕೇಳಿದ ನೆಪ ಮಾಡಿಕೊಂಡು ಕೆಲವು ಸಂದರ್ಭಗಳಲ್ಲಿ ಲಾಳ ಕಟ್ಟುತ್ತಿಲ್ಲವೆಂದೂ, ಇನ್ನು ಕೆಲವು ಸಂದರ್ಭಗಳಲ್ಲಿ ದುಬಾರಿಯಾಗಿ ಜನರಿಂದ ಮೌಲ್ಯ ಕೇಳುತ್ತಿದ್ದಾರೆಂದು ತಿಳಿದು ಬಂದಿದೆ. ಪ್ರಾಣಿಗಳಿಗೆ ಹಿಂಸೆ ಆಗದಂತೆಯೂ ಮತ್ತು ಲಾಳ ಕಟ್ಟುವ ಕೆಲಸವು ಗೊತ್ತಾದ ಸ್ಥಳಗಳಲ್ಲಿ ಮಾತ್ರ ನಡೆಯುವಂತೆ ಮಾಡುವುದು ಮುನಿಸಿಪಾಲಿಟಿಯವರ ಉದ್ದೇಶ. ಆದರೆ ಲಾಳ ಕಟ್ಟುವವರು ಯಾವ ವಿಧವಾದ ಹತೋಟಿಯೂ ತಮ್ಮ ಮೇಲೆ ಇರಬಾರದೆಂಬ ಉದ್ದೇಶದಿಂದ ಪ್ರಜೆಗಳಿಗೆ ಅನಾನುಕೂಲ ಮಾಡಲು ಪ್ರಯತ್ನ ಮಾಡಿರುತ್ತಾರೆ.

ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಗಳನ್ನು ನಿವಾರಿಸುವ ಉದ್ದೇಶದಿಂದ ಮುನಿಸಿಪಲ್ ಆಫೀಸಿನ ಆವರಣದಲ್ಲಿ ವಿಶೇಷ ಜರೂರಾತಿ ಸಂದರ್ಭಗಳಲ್ಲಿ ಎತ್ತುಗಳಿಗೆ ಲಾಳ ಕಟ್ಟಿಸಿ ಕೊಡುವ ಏರ್ಪಾಡನ್ನು ತಾತ್ಕಾಲಿಕವಾಗಿ ಮಾಡಲಾಗಿದೆ. ಅವಶ್ಯಕತೆ ಇರುವವರು ಮುಂಚಿತವಾಗಿಯೇ ಹೆಲ್ತಾಫೀಸರಿಗೆ ತಿಳಿಸಿ ತಮ್ಮ ಎತ್ತುಗಳಿಗೆ ಲಾಳ ಕಟ್ಟಿಸಿಕೊಳ್ಳುವ ಅನುಕೂಲವನ್ನು ಮುನಿಸಿಪಾಲಿಟಿಯಿಂದ ಪಡೆಯಬಹುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ ಎಂದು ಮುನಿಸಿಪಲ್ ಕಮೀಷನರು ತಿಳಿಸುತಾರೆ.

ಜನರಲ್ ಅಸೆಂಬ್ಲಿ ಪ್ಯಾರಿಸ್ಸಿನಲ್ಲಿ

ಪ್ರಪಂಚ ಸಂಸ್ಥೆಯ ಜನರಲ್ ಅಸೆಂಬ್ಲಿಯ ಅಧಿವೇಶನವನ್ನು ಪ್ಯಾರಿಸಿನಲ್ಲಿ ನಡೆಸಲು ನಿನ್ನೆ ಅಸೆಂಬ್ಲಿಯು ತೀರ್ಮಾನಿಸಿತು. ಪ್ಯಾರಿಸಿನಲ್ಲಿ ನಡೆಯಕೂಡದೆಂದು ಭಾರತ, ಅಮೆರಿಕಾ ಮತ್ತು ಇತರ ಹದಿನೈದು ರಾಷ್ಟ್ರಗಳು ಓಟು ಮಾಡಿದವು. ಆದರೆ ಬ್ರಿಟನ್, ರಷ್ಯಾ ಇವುಗಳು ಸೇರಿ ಒಟ್ಟು ೨೪ ರಾಷ್ಟ್ರಗಳು ಅಲ್ಲೇ ನಡೆಯಬೇಕೆಂದು ಓಟು ಮಾಡಿದವು. ಈ ಅಧಿವೇಶನಕ್ಕೆ ೨೩|| ಲಕ್ಷ ಡಾಲರುಗಳಿಗಿಂತ ಹೆಚ್ಚಿಗೆ ವೆಚ್ಚವಾಗಕೂಡದೆಂದು ತೀರ್ಮಾನಿಸಿತು.

ರಾಯಭಾರಿಯ ನಿಧನ

ಸ್ವಿಟ್ಸರ್‌ಲೆಂಡ್‌ನಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ಧೀರೂಭಾಯಿ ದೇಸಾಯಿಯವರು ತಮ್ಮ ೪೮ನೇ ವಯಸ್ಸಿನಲ್ಲಿ ಬರ್ನ್‌ನಲ್ಲಿ ನಿಧನರಾದರು. ಇವರು ಬುಲಾಭಾಯಿ ದೇಸಾಯಿಯವರ ಮಕ್ಕಳು.

ಮತ್ತೆ ಪರಿಶೀಲನೆಗಾಗಿ

ಅಮೇರಿಕಾ ಮತ್ತು ಬ್ರಿಟನ್ ತಮ್ಮ ಕಾಶ್ಮೀರದ ಮೊದಲಿನ ನಿರ್ಣಯವನ್ನು ಪರಿವರ್ತಿಸಿ ಮತ್ತೆ ಪ್ರಪಂಚ ಸಂಸ್ಥೆಗೆ ಒಪ್ಪಿಸಿದೆ. ಇದರಲ್ಲಿ ಮೂಲ ನಿರ್ಣಯದ ಕೆಲವು ನಿರ್ಣಯಗಳನ್ನು ತೆಗೆದು ಹಾಕಲಾಗಿದೆ. ಸರ್ ಡಿಕ್ಸನ್ನರ ನಿರ್ಣಯವನ್ನು ಪರಿಶೀಲಿಸಬೇಕು, ಮತ್ತೆ ಒಬ್ಬ ಪ್ರತಿನಿಧಿಯು ಮೂರು ತಿಂಗಳ ಕಾಲ ಕಾಶ್ಮೀರದ ಮಧ್ಯಸ್ಥಿಕೆ ನಡೆಸಬೇಕು, ಕಾಶ್ಮೀರದಲ್ಲಿ ರಾಜ್ಯಾಂಗ ರಚನಾ ಸಭೆಯು ರಚಿಸಬೇಕೆಂಬ ಸಲಹೆ ಇವುಗಳನ್ನೊಳಗೊಂಡಿದೆ.

ಜುಲ್ಮಾನೆ ಮತ್ತು ಸಜಾ

ಸರ್ಕಾರಿ ಪ್ರಕಟಣೆಯೊಂದು ಮೈಸೂರಿನಲ್ಲಿ ೪ನೇ ಡಿವಿಸನ್ನಿನ ಒಬ್ಬ ಡಿಪೋ ಮಾಲೀಕರಿಗೆ ಒಬ್ಬ ರೇಷನ್ ಕಾರ್ಡುದಾರರಲ್ಲಿ ಅಸಭ್ಯವರ್ತನೆಯಿಂದ ವರ್ತಿಸಿದರೆಂದೂ ಅವರಿಗೆ ಎಚ್ಚರಿಕೆ ಕೊಡಲಾಗಿದೆ. ೨ನೇ ಡಿವಿಸನ್ನಿನ ಡಿಪೋದವನಿಗೆ ೧೫೦ ರೂ. ಜುಲ್ಮಾನೆ ಮತ್ತು ೨೫ ರೇಷನ್ ಕಾರ್ಡುಗಳನ್ನು ಅವನ ಅವಸ್ವಾಧೀನದಲ್ಲಿ ಸುಳ್ಳು ಲೆಕ್ಕ ಹೊಂದಿದ್ದರಿಂದ ಕಿತ್ತುಕೊಂಡಿದೆ. ೧ನೇ ಸರ್ಕಲಿನ ಒಂದು ಸೊಸೈಟಿಯಲ್ಲಿ ೬೯೦ ಸೇರು ಅಕ್ಕಿ ಕಡಿಮೆ ಬಂದುದರಿಂದ ಅದರ ಬೆಲೆ ಎರಡರಷ್ಟು ದಂಡವಾಕಿದೆ, ಅದೇ ಸರ್ಕಲ್ಲಿನ ಒಂದು ಡಿಪೋವಿನಲ್ಲಿ ಒಂದು ಕಾರ್ಡಿಗೆ ಒಂದು ವೀಸೆ ಸಕ್ಕರೆ ಹೆಚ್ಚಿಗೆ ಕೊಟ್ಟರೆಂದು ೧೦ ರೂ. ಜುಲ್ಮಾನೆಯನ್ನು ಹಾಕಿದೆ ಎಂದು ತಿಳಿಸುತ್ತದೆ.

ಪರೀಕ್ಷೆಗೆ ಮುನ್ನವೇ ಪ್ರಶ್ನೆ ಪತ್ರಿಕೆ ಹೊರಬಿದ್ದಿತು

ಮದರಾಸಿನಲ್ಲಿ ನಿನ್ನೆಯಿಂದ ಆರಂಭವಾದ ಇಂಟರ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮುಂಚೆಯೇ ಹೊರಬಿದ್ದಿತು ಎಂದು ಎಲ್. ಎಸ್. ಕರಯಾಳರ್‌ರವರು ನಿನ್ನೆ ಶಾಸನ ಸಭೆಯಲ್ಲಿ ತಿಳಿಸಿದರು. ಈ ಸುದ್ದಿಯನ್ನು ಕೇಳಿ ವೈಸ್ ಛಾನ್ಸಲರ್ ಶ್ರೀ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ತಮಗೆ ಇದು ಗೊತ್ತಿಲ್ಲವೆಂದು ರಿಜಿಸ್ಟ್ರಾರರನ್ನು ಕೇಳಬೇಕೆಂದು ಹೇಳಿದರು.

ಆತ್ಮಹತ್ಯ

ಬೆಂಗಳೂರಿನ ಬ್ಯಾಂಕರುಗಳಾದ ಶ್ರೀ ಕೆ. ಎಲ್. ದಾಸ್‌ರವರು ಬೆಂಗಳೂರಿನಿಂದ ಎರಡು ಎಂ. ವೈ. ಜಡ್. ೧೭೦೬ನೇ ನಂಬರಿನ ಕಾರಿನಲ್ಲಿ ಇಲ್ಲಿಗೆ ಬಂದು ಕಾರಂಜಿಕೆರೆ ಹತ್ತಿರ ಕಾರಿನಲ್ಲೆ ಪ್ರಜ್ಞಾಹೀನರಾಗಿ ಬಿದ್ದಿದರೆಂದೂ, ನಜರಬಾದು ಪೋಲೀಸು ಸ್ಟೇಷನ್ನಿನವರು ಆಸ್ಪತ್ರೆಗೆ ಸೇರಿಸಿದರೆಂದೂ ಅಲ್ಲಿ ನಿನ್ನೆ ಬೆಳಗಿನಜಾವ ೩ ಗಂಟೆಗೆ ನಿಧನರಾದರೆಂದೂ ತಿಳಿಯಬರುತ್ತದೆ. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಪ. ಬಂಗಾಳಾ ಪ್ರತಿನಿಧಿ

ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಪ. ಬಂಗಾಳದ ಪ್ರತಿನಿಧಿಯು ಕೇಂದ್ರ ಸರ್ಕಾರವು ಪ್ರಾಂತ್ಯ ಸರ್ಕಾರಗಳನ್ನು ದಮನಮಾಡುತ್ತಿದೆ ಎಂದು ಹೇಳಿದರು, ಸಭೆಯಲ್ಲಿ ಘಟ್ಟಿಯಾಗಿ ಘೋಷಣೆಗಳಾದವು.

೨೪ ಜನರ ದಸ್ತಗಿರಿ

ಸೂರತ್ತಿನಲ್ಲಿ ಮದ್ಯಪಾನವು ಹಕೋಟೆಯಲ್ಲಿದ್ದಾಗ್ಯೂ ಅಲ್ಲಿಯ ಕೆಲವು ಜನರು ಮದ್ಯವನ್ನು ಕುಡಿಯುತ್ತಿದ್ದುದರಿಂದ ೨೪ ಜನರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಅದರಲ್ಲಿ ೩ ಜನ ಹೆಂಗಸರೂ ಇರುವರು ಮತ್ತು ಪೋಲೀಸರು ಅವರಲ್ಲಿದ್ದ ೬ ಮಣ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ. ಇನ್ನೊಂದುಕಡೆ ಧಚನೆ ಮಾಡುತ್ತಿದ್ದ ೧೪ ಜನರು ಕುಡಿದಿದ್ದನ್ನು ಪತ್ತೆ ಹಚ್ಚಲಾಯಿತು.

ಪ್ರಾಂತ್ಯಗಳಿಗೆ ಧಾನ್ಯ

ಮುಂದಿನ ೨ ತಿಂಗಳಲ್ಲಿ ೬೦೦೦೦೦ ಟನ್ನಿನಷ್ಟು ಆಹಾರಧಾನ್ಯಗಳನ್ನು ಕೇಂದ್ರವು ಪ್ರಾಂತ್ಯಗಳಿಗೆ ಹಂಚಲು ದಾಸ್ತಾನಿದೆ ಎಂದು ತಿಳಿಯಬರುತ್ತದೆ.

ಒಲಿಂಪಿಯಾ

೨೩—೩—೫೧ರಿಂದ

ಪ್ರತಿದಿನ ೩ ಆಟಗಳು ಅಮೋಘವಾದ ೨ನೇ ವಾರ

ಈಗಾಗಲೇ ೧೫೦೦೦ ಜನರು ನೋಡಿ ಮತ್ತೊಮ್ಮೆ ನೋಡಬೇಕೆಂದು

ಆತುರಪಡುತ್ತಿರುವ ರಣಜಿತ ರವ ಅಪೂರ್ವ ಕಲಾಕೃತಿ

* ಮಧುಬಾಲ *

ಪಾತ್ರ—ಮಧುಬಾಲ, ದೇವಾನಂದ್, ಜೀವನ್,



ಬ್ರಿಟಿಷ್ ಕಂಪನಿಯು ಒಬ್ಬ ಪ್ರಸಿದ್ಧ ಡಾಕ್ಟರಿನ ಮೇಲ್ವಿಚಾರಣೆಯಲ್ಲಿ ತಯಾರಿಸಿರುವ ಪ್ಲಾಸ್ಟಿಕ್‌ನಿಂದ ಮಾಡಿದ ಮನುಷ್ಯನ ಎಲಬು ಗೂಡುಗಳು

ಕೆಲವು ರಾಯಭಾರಿಗಳ ಬದಲಾವಣೆಯೇ?

ವಿದೇಶಗಳಲ್ಲಿರುವ ರಾಯಭಾರಿಗಳಲ್ಲಿ ಬದಲಾವಣೆಗಳಾಗಬಹುದೆಂದು ಕೆಲವು ವೃತ್ತಗಳಲ್ಲಿ ಹೇಳಲಾಗುತ್ತಿದೆ. ಇಗಾಗಲೇ ಜೂನ್‌ನಿಂದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಕೆಲಸಮಾಡಲು ಇಷ್ಟವಿಲ್ಲವೆಂದೂ, ಭಾರತಕ್ಕೆ ಬಂದು ಅವರು ಮತ್ತೆ ರಾಜಕೀಯಕ್ಕೆ ಇಳಿಯಲಿಚ್ಛಿಸುತ್ತಿರುವರೆಂದೂ ಹೇಳಲಾಗಿದೆ. ಲಂಡನ್ನಿನ ಹೈಕಮೀಷನರಾಗಿರುವ ಶ್ರೀ ಕೃಷ್ಣ ಮೆನನ್‌ರವರು ಕಾರ್ಯದ ಹೊಣೆ ಹೆಚ್ಚಾಗಿ ಈಗ ಒಂದು ತಿಂಗಳ ಕಾಲ ವಿಶ್ರಾಂತಿಗೆ ಬಂದಿರುವರೆಂದೂ ಅವರ ಆರೋಗ್ಯ ಅಷ್ಟರಲ್ಲಿ ಉತ್ತಮವಾಗದಿದ್ದಲ್ಲಿ ಒಂದು ವರ್ಷಕಾಲ ರಜ ತೆಗೆದುಕೊಳ್ಳಬಹುದೆಂದೂ, ಹಾಗಾದರಲ್ಲಿ ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ನೇಮಿಸಬೇಕಾಗುವುದೆಂದೂ, ಇಂಡೋನೇಷ್ಯಾದ ರಾಯಭಾರಿ ಡಾ|| ಸುಬ್ಬರಾಯನ್ ಇಷ್ಟರಲ್ಲಿಯೇ ಅಲ್ಪಕಾಲದ ರಜದ ಮೇಲೆ ಭಾರತಕ್ಕೆ ಬರುವರೆಂದೂ, ಅವರು ಮದರಾಸಿನ ರಾಜಕೀಯದಲ್ಲಿ ಇಳಿಯಬಹುದೆಂದೂ ಹೇಳಲಾಗಿದೆ. ಈ ವಿಷಯದಲ್ಲಿ ಇಷ್ಟರಲ್ಲಿಯೇ ಸರ್ಕಾರಿ ಪ್ರಕಟಣೆಯೊಂದು ಹೊರಬರಲಿದೆಯೆಂದೂ ಹೇಳಲಾಗಿದೆ. ವಿದೇಶದ ಕೆಲವು ವಾಣಿಜ್ಯ ಕಾರ್ಯದರ್ಶಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುವುದೆಂದೂ ತಿಳಿದುಬರುತ್ತದೆ.

ಕಲ್ಲಿದ್ದಲಿನ ರಫ್ತು

ಇಂಡಿಯ ಪಾಕಿಸ್ತಾನದ ವಾಣಿಜ್ಯ ಒಪ್ಪಂದದ ಪ್ರಕಾರ ೪೦೦೦ ಟನ್ನಿನಷ್ಟು ಕಚ್ಚಾ ಕಲ್ಲಿದ್ದಲನ್ನು ಈ ತಿಂಗಳ ಕೊನೆಯ ಹೊತ್ತಿಗೆ ಭಾರತವು ಪಾಕಿಸ್ತಾನಕ್ಕೆ ಕಳುಹಿಸಲಿದೆ.

ರಾಜಕಪೂರ್ ಪಂಗಡ ಗೆದ್ದಿತು

ನಿನ್ನೆ ಬೊಂಬಾಯಿನಲ್ಲಿ ನಡೆದ ಪ್ರಸಿದ್ಧ ಸಿನಿಮಾ ನಟನಟಿಯರ ಕ್ರಿಕೆಟ್ ಪಂದ್ಯದಲ್ಲಿ ಶ್ರೀ ರಾಜಕಪೂರರವರ ಪಂಗಡವು ಶ್ರೀ ಮೋತೀಲಾಲರ ಪಂಗಡವನ್ನು ಸೋಲಿಸಿತು.

ದರೋಡೆ

ವಿಚಿತ್ರ ವೇಷಗಳಿಂದ ಕೈಯಲ್ಲಿ ಬಂದೂಕ, ಚ್ಯಾಟರಿ ಇವುಗಳಿಂದ ಕೂಡಿ ದಾವಣಗೆರೆಯ ಹನುಮಂತಪ್ಪನೆಂಬ ಸಾಹುಕಾರನ ಮನೆಗೆ ನುಗ್ಗಿ ಅವನ ಮನೆಯವರಿಗೆ ಹೆದರಿಸಿ ಸುಮಾರು ೩ ಸಾವಿರ ರೂ. ಅಪಹರಿಸಿಹೋಗಿದ್ದಾರೆ. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಬಿಹಾರಿಗೆ ಹೆಚ್ಚು ಆಹಾರಧಾನ್ಯ

ಬಿಹಾರಿನಲ್ಲಿ ಬಹಳವಾಗಿ ಕ್ಷಾಮವಿರುವುದರಿಂದ ಅಲ್ಲಿಯ ಆಹಾರದ ಕಮಿಷನರ್ ಶ್ರೀ ಬಿ. ಡಿ. ಪಾಂಡೆಯುವರು ಹೆಚ್ಚು ಆಹಾರವನ್ನು ಕೇಳಲು ಡೆಲ್ಲಿಗೆ ಹೊರಟಿದ್ದಾರೆ.

ಬೊಂಬಾಯಿಯಲ್ಲಿ ಡಾ|| ಕೇಸ್ಕರ್

ಕಾಶ್ಮೀರ ಪ್ರಜೆಗಳಿಗೆ ಸಮ್ಮತವಿಲ್ಲದಿರುವ ನಿರ್ಣಯವನ್ನು ಭಾರತವು ಒಪ್ಪುವುದಿಲ್ಲ. ಅಲ್ಲಿ ಅಲ್ಪ ಸಂಖ್ಯಾತರ ವಿಷಯವು ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿದೆ. ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯದಲ್ಲಿಯೂ ಸಮರ್ಪಕವಾಗಿದೆಯೆಂದರೆ ಅಡ್ಡಿಯಿಲ್ಲ ಎಂದು ಎಬೇಶಾಂಗ ಉಪ ಮಂತ್ರಿ ಡಾ|| ಕೇಸ್ಕರ್‌ರವರು ಬೊಂಬಾಯಿನಲ್ಲಿ ತಿಳಿಸಿದ್ದಾರೆ. ಟಿಬೆಟ್ಟಿನ ವಿಷಯದಲ್ಲಿ ಶಾಂತಿಯುತ ಒಪ್ಪಂದ ಏರ್ಪಡಬೇಕೆಂಬ ಭಾರತದ ನಿರ್ಣಯವನ್ನು ಚೀನಾ ಪರಿಶೀಲಿಸುತ್ತಿದೆ, ನೇಪಾಳದ ಸಂಬಂಧ ನಿಕಟವಾಗಿದೆ. ವಿದೇಶಿಯರು ಭಾರತದಲ್ಲಿ ಬಲಾತ್ಕಾರವಾಗಿ ಸ್ವಾಸ್ಥ್ಯಗಳನ್ನು ಹೊಂದಿರುವುದು ಸರಿಯಲ್ಲ ಅವು ಭಾರತದೊಡನೆ ಐಕ್ಯವಾಗಬೇಕು ಎಂದು ಅವರು ಹೇಳಿದರು. ಅವರು ಅಸ್ವಸ್ಥತೆ ನಿಮಿತ್ತ ಒಂದು ತಿಂಗಳು ವಿಶ್ರಾಂತಿ ತೆಗೆದುಕೊಳ್ಳಲು ಬೊಂಬಾಯಿಗೆ ಬಂದಿರುವರೆಂದು ಹೇಳಲಾಗಿದೆ.

ಭಾರತಕ್ಕೆ ಕೊಡುವ ಅಮೆರಿಕಾ ಆಹಾರಕ್ಕೆ ತಡೆ

ಭಾರತಕ್ಕೆ ಅಮೆರಿಕಾವು ೨೦ ಲಕ್ಷ ಟನ್‌ಗಳಷ್ಟು ಆಹಾರಧಾನ್ಯವನ್ನು ದಾನವಾಗಿ ಕೊಡಬೇಕೆಂಬ ತೀರ್ಮಾನಕ್ಕೆ ಅಮೆರಿಕನ್ ಕಾಂಗ್ರೆಸ್ ಒಪ್ಪುವಂತೆ ಕಾಣಬರುತ್ತಿಲ್ಲ. ಧಾನ್ಯವನ್ನು ದಾನವಾಗಿ ಕೊಡಲು ಒಪ್ಪದೆ ಸಾಲವಾಗಿ ಕೊಡಬೇಕೆಂದು ಒಪ್ಪುವಂತೆ ಕಾಣುತ್ತದೆ ಎಂದು ತಿಳಿಯಬರುತ್ತದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂಟಿನ್ಸ್ ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ ೨೧—೪—೧೯೫೦ನೇ ಶುಕ್ರವಾರ ಸಂಚಿಕೆ ೧೬೬

ರೇಡಿಯೋ ಕೇಂದ್ರ

ವಿದ್ಯಾಭ್ಯಾಸ ಉದ್ದೇಶಗಳಿಗಾಗಿಯೇ ಪ್ರಸಾರಕೇಂದ್ರವೊಂದನ್ನು ಪಾಕೀಸ್ತಾನದ ವಿದ್ಯಾರ್ಥಿಗಳಿಂದಲೇ ನಡೆಸುವಂತೆ ಏರ್ಪಡಿಸಲಾಗಿದೆ. ಇದಕ್ಕಾಗಿ ಕಟ್ಟಲ್ಪಟ್ಟ ಪ್ರಸಾರಭವನದಲ್ಲಿ ಮಿಷನ್ ಕಾಲೇಜಿನ ವಿಜ್ಞಾನಶಿಕ್ಷಕರು ಯಂತ್ರಗಳನ್ನು ಜೋಡಿಸುತ್ತಿದ್ದಾರೆ.

ಪಾಕೀಸ್ತಾನದ ಅಕ್ಕಿ

ಇದೇ ತಿಂಗಳು ೨೬ ರಿಂದ ೫೧ರ ವರೆಗೆ ಪಾಕೀಸ್ತಾನವು ಇಂಡಿಯಾ ಪಾಕೀಸ್ತಾನದ ವಾಣಿಜ್ಯ ಒಪ್ಪಂದದ ಪ್ರಕಾರ ೧೪,೫೦೦ ಟನ್ನಿನಷ್ಟು ಅಕ್ಕಿಯನ್ನು ಕಳುಹಿಸುವುದೆಂದು ಕರಾಚಿಯ ಒಂದು ಪ್ರಕಟಣೆ ತಿಳಿಸುತ್ತದೆ.

ಜನರ ಹಸಿವಿನ ಬೇನೆ ನೀಗಿಸದಿದ್ದಲ್ಲಿ ಕ್ರಾಂತಿ ಸಂಭವ

ಇಂದು ಶಾಸನ ಸಭೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ವಾದ

ಬೆಂಗಳೂರು ಏಪ್ರಿ. ೨೦

ಇಂದು ಶಾಸನ ಸಭೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರು ಮೈಸೂರು ಸರ್ಕಾರದ ಆಹಾರ ನೀತಿಯನ್ನು ಟೀಕಿಸುತ್ತಾ ಎಲ್ಲೆಲ್ಲೂ ಆಹಾರದ ಕೂಗು ಜಾಸ್ತಿಯಾಗುತ್ತಿದೆ ಇದನ್ನು ತಡೆಯಲು ಸರ್ಕಾರವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನೀರಿಲ್ಲ ಆದ್ದರಿಂದ ಬೆಳೆ ಇಲ್ಲ ಹೀಗೆ ಹೇಳಲು ಹುರುಳಿಲ್ಲ. ಕಾಲುವೆಗಳು ಮತ್ತು ಹುಲ್ಲು ಗಾವಲುಗಳು ಹೆಚ್ಚಬೇಕು. ಗೋವರ್ಧನ ಯೋಜನೆಯನ್ನು ಆಹಾರೋತ್ಪತ್ತಿಗಾಗಿ ಕೈಗೊಳ್ಳುವುದು ಸರಿಯಲ್ಲ ಸರ್ಕಾರವು ಹಸಿವಿನ ಬಾಧೆಯನ್ನು ಕೊನೆಗಾಣಿಸಲು ದುಡ್ಡಿಲ್ಲವೆಂದು ನಿರಾಶರಾಗಬಾರದು. ಹಣವನ್ನು ಖರ್ಚು ಮಾಡುವಾಗ ಒಳ್ಳೆ ಎಚ್ಚರಿಕೆಯಿಂದ ಸತ್ಪ್ರಯೋಜನವಾಗುವ ರೀತಿಯಲ್ಲಿ ಇರಬೇಕೆಂದು ಅವರು ಹೇಳಿದರು.

ಹಾಗೆಯೇ ಅವರು ಅಧಿಕಾರಕ್ಕೆ ನಾವು ಬಂದು ೨ ವರ್ಷಗಳಾದರೂ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣವನ್ನು ವೆಚ್ಚ ಮಾಡುತ್ತಿದ್ದೇವೆ ಆದರೂ ಜನರಿಗೆ ತೃಪ್ತಿ ಸಮಾಧಾನ ಕಂಡುಬಂದಿಲ್ಲ ದೇಶದಲ್ಲಿ ಸ್ವಯಂಪರಿಪೂರ್ಣತೆ ಇರಬೇಕೆಂಬುದೇ ನಮ್ಮ ಇಚ್ಛೆ ಎಂಬುದನ್ನು ನಾವು ಮರೆತಿದ್ದೇವೆ. ಅದರ ಉತ್ಪತ್ತಿ ಹೆಚ್ಚಬೇಕು ಅದರ ಪ್ರೋತ್ಸಾಹಕ್ಕೆ ಸರ್ಕಾರವು ೫-೧೦ ಲಕ್ಷ ರೂಗಳನ್ನಾದರೂ ಒದಗಿಸಬೇಕಾಗಿತ್ತು. ಆಹಾರ ಉತ್ಪತ್ತಿ ಅಧಿಕವಾದರೆ ಬಟ್ಟೆಯ ಬ್ಲಾಕ್ ಮಾರ್ಕೆಟ್ ಕಮ್ಮಿಯಾಗುವುದು ಎಂದು ಶ್ರೀ ಟಿ. ಸುಬ್ರಹ್ಮಣ್ಯಂರವರು ಹೇಳಿದರು.

ಮುಂಬಯಿಗೆ ೮೦ ಸಾವಿರ ಟನ್ ಆಹಾರ

ಏಪ್ರಿಲ್ ತಿಂಗಳಿಗೆ ೮೦ ಸಾವಿರ ಟನ್ನು ಆಹಾರ ಧಾನ್ಯವನ್ನು ಕೇಂದ್ರ ಸರ್ಕಾರವು ಮುಂಬಯಿಗೆ ಕಳುಹಿಸಲಿದೆ. ಮಾರ್ಚಿಗಿಂತ ೧೦ ಸಾವಿರ ಟನ್ ಹೆಚ್ಚು ಬರುತ್ತದೆ.

ಪೌರಸಭಾಧ್ಯಕ್ಷರ ಉಪವಾಸ

ಅಜ್ಜಂಪುರದ ಪೌರಸಭಾ ಸದಸ್ಯರ ಪಕ್ಕದ ಗ್ರಾಮ ಗೌರಾಪುರವನ್ನು ಅಜ್ಜಂಪುರಕ್ಕೆ ಸೇರಿಸಲು ತೀರ್ಮಾನ ಮಾಡಿ ಅಧ್ಯಕ್ಷರು ಅನೇಕ ಭಾರಿ ಯತ್ನಿಸಿ ವಿಫಲರಾದುದರಿಂದ ಆ ಗ್ರಾಮದ ಸೇರುವಿಕೆಗಾಗಿ "ಸಾರ್ವಜನಿಕ ಉಪವಾಸ" ವನ್ನು ಮಾಡಲು ನಿಶ್ಚಯಿಸಿರುವರು. ಇದರಿಂದ ಸತ್ಯಾಗ್ರಹ 'ಜನರೊಂದಿಗೆ' ಬಂದಿರಿ ೭೨ ಗಂಟೆಗಳ ಕಾಲ ಸತ್ಯಾಗ್ರಹ ಮಾಡಲು ತೀರ್ಮಾನಿಸಿದ್ದಾರೆ.

ಚೀಫ್ ಆಫೀಸರ ಮೇಲೆ ನಿರ್ಣಯ

ಹಾಸನದ ಪೌರಸಭೆಯವರು ಸರ್ಕಾರಕ್ಕೆ ಒಂದು ಪ್ರಾರ್ಥನೆಯನ್ನು ಸಲ್ಲಿಸಿ ಹಾಸನ ಪೌರಸಭೆಯ ಚೀಫ್ ಆಫೀಸರು ಪೌರಸಭೆಯ ಸದಸ್ಯರುಗಳಿಗೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾರೆಂದೂ ಅವರನ್ನು ವರ್ಗಾಯಿಸಬೇಕೆಂದೂ ಸಭೆಯಲ್ಲಿ ಒತ್ತಾಯಿಸಿದೆ.

ಗಾಡಿಯಿಂದ ಬಿದ್ದು ಮರಣ

ದೊಡ್ಡಮಂಗಲದ ವಾಸಿ ಹೀರಣ್ಣ ಎಂಬಾತನು ರಾಗಿಯನ್ನು ಭರ್ತಿ ಮಾಡಿಕೊಂಡು ಸರ್ಕಾರಿ ಡಿಪೋಗೆ ಕಟ್ಟಲು ಹೋಗುತ್ತಿದ್ದಾಗ ಎದುರಿಗೆ ಬಂದ ಸೈಕಲ್ಲನ್ನು ಕಂಡು ಎತ್ತುಗಳು ಹೆದರಿ ರಸ್ತೆ ಬಿಟ್ಟು ಹೋಗಲು ಗಾಡಿ ತಲೆಕೆಳಗಾಗಿ ಬಿದ್ದು ವಿಪರೀತ ಗಾಯಗಳಾಗಿ ಗಾಡಿಯಲ್ಲೇ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಮೃತಪಟ್ಟನೆಂದು ಆನಂತರ ಪೋಲೀಸರು ಮಹಜರು ನಡೆಸಿದರೆಂದು ವರದಿಯಾಗಿದೆ.

ಚೀನಾದಿಂದ ಅಕ್ಕಿ

ಮದರಾಸಿಗೆ ಕಂಪ ಚೀನಾ... ದ್ದದಲ್ಲಿಯೇ ಅಕ್ಕಿ ಬರಲಿದೆಯೆಂದು ಪೀಕಿಂಗ್ ರೇಡಿಯೋ ತಿಳಿಸಿದೆ. ಫೆಬ್ರವರಿ ೧೧ ಮತ್ತು ೨೬ರಂದು ೧೩,೦೦೦ ಟನ್ನಿನಷ್ಟು ಅಕ್ಕಿಯು ಕಲ್ಕತ್ತಾಕ್ಕೆ ಸೇರಿದೆಯೆಂದೂ ಸಮಯದಲ್ಲಿಯೇ ಸುದ್ದಿಯೊಂದನ್ನು ಉಲ್ಲೇಖಿಸುತ್ತಾ ಹೇಳಿದೆ. ಭಾರತವು ೧೮,೫೦೦ ಬೇಲುಗಳನ್ನು ಗೋಣಿ ಚೀಲಗಳನ್ನು ಕೊಡಬೇಕೆಂದೂ ಅದಕ್ಕೆ ಚೀನಾವು ೫೦,೦೦೦ ಟನ್ನಿನಷ್ಟು ಅಕ್ಕಿಯನ್ನು ಕೊಡುವುದೆಂದೂ ಹೇಳಿತ್ತು. ಇದರ ಪ್ರಕಾರ ಮೊದಲನೆಯ ಕಂತು ಈ ಅಕ್ಕಿಯನ್ನು ಕಳುಹಿಸಿದೆ ಎಂದು ಪ್ರಸಾರ ಮಾಡಿದೆ.

೩೫ ಜನರಿಗೆ ಗಾಯ

ಸಿಟಿ ತಿರುಪತಿಯಿಂದ ಮದರಾಸಿಗೆ ಹೊರಟ ಬಸ್ಸೊಂದು ದಾರಿಯಲ್ಲಿ ಅಡ್ಡ ಬಂದ ಒಬ್ಬ ಹುಡುಗನನ್ನು ತಪ್ಪಿಸಲು ಹೋಗಿ ಒಂದು ಮರಕ್ಕೆ ಡಿಕ್ಕಿ ಹೊಡೆದು ಡ್ರೈವರೂ, ಕಂಡಕ್ಟರೂ ಮತ್ತು ಇನ್ಸ್‌ಪೆಕ್ಟರೂ ಸೇರಿ ೩೫ ಜನರಿಗೆ ಗಾಯವಾಯಿತು. ಎಲ್ಲರೂ ಮದರಾಸಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ ಎಂದು ವರದಿಯಾಗಿದೆ.

ರೈಲ್ವೆ ಮುಷ್ಕರ

ಕಮ್ಯೂನಿಸ್ಟೇತರ ರೈಲ್ವೆ ಕೆಲಸಗಾರರ ಟ್ರೇಡ್ ಯೂನಿಯನ್ ಫೆಡರೇಷನ್ನಿನ ೮೦ ಗಂಟೆಗಳ ಕಾಲ ಫ್ರಾನ್ಸಿನಲ್ಲೆಲ್ಲ ರೈಲ್ವೆ ಕೆಲಸಗಾರರ ಮುಷ್ಕರ ಮಾಡಬೇಕೆಂದು ಆಜ್ಞೆ ಮಾಡಿತು. ಇದರ ಫಲವಾಗಿ ಫ್ರಾನ್ಸಿನಲ್ಲಿ ಅತ್ಯಂತ ವಿಷಮವಾದ ರಾಷ್ಟ್ರೀಯ ಬಿಕ್ಕಟ್ಟು ಒದಗಿದಂತಾಗಿದೆ.

ಸರ್ಕಾರದ ಬಟ್ಟೆ ಅಂಗಡಿಗಳು

ರಾಜಸ್ಥಾನದಲ್ಲಿ ಬಟ್ಟೆ ವ್ಯಾಪಾರಿಗಳು ಬಟ್ಟೆ ಬೆಲೆಯನ್ನು ಶೇ|| ೨೦೧-೪೦೦ ರಷ್ಟು ಹೆಚ್ಚಿಸಿ ವಿಪರೀತ ಲಾಭ ಗಳಿಸುತ್ತಿರುವುದರಿಂದ ಇದನ್ನು ತಡೆಗಟ್ಟಲು ಅಲ್ಲಿಯ ಸರ್ಕಾರವು ೧೧೦೦ ಬಟ್ಟೆ ಅಂಗಡಿಗಳನ್ನು ಮುಂದಿನ ಮೂರು ತಿಂಗಳಲ್ಲಿ ತೆಗೆಯುವುದು. ಜಯಪುರದಲ್ಲಿ ಎಂಟು ಜನ ಬಟ್ಟೆ ವ್ಯಾಪಾರಿಗಳನ್ನು ದಸ್ತಗಿರಿ ಮಾಡಲು ವಾರೆಂಟ್ ಹೊರಟಿದೆ. ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ ಒಂದು ಗಜ ಬಟ್ಟೆಯಂತೆ ಕೊಡಬೇಕೆಂದು ಲೈಸನ್ಸ್ ಅಂಗಡಿಗಳಿಗೆ ಸರ್ಕಾರವು ತಿಳಿಸಿದೆ.

ಗವರ್ನರ್ ಮತ್ತು ಮಂತ್ರಿಗಳಿಗೆ ಭಿನ್ನಾಭಿಪ್ರಾಯ

ಪೂರ್ವ ಬಂಗಾಳದ ಗವರ್ನರ್ ಶ್ರೀ ಫಿರೋಜಖಾನನೂನರವರು ಮತ್ತು ಆರೋಗ್ಯ ಮಂತ್ರಿ ಶ್ರೀ ಹಬೀಬುಲ್ಲ ಬಹಾರ್‌ರವರು ಪತ್ರಿಕಾಗೋಷ್ಠಿಯೊಂದರಲ್ಲಿ ಪೂರ್ವ ಬಂಗಾಳದಲ್ಲಿ ಬಂಗಾಳೀ ಭಾಷೆಯನ್ನು ಅರಬ್ ಲಿಪಿಯಲ್ಲಿ ಕಲಿಸಬೇಕೆ ಅಥವಾ ಬಂಗಾಳಿ ಲಿಪಿಯಲ್ಲಿ ಕಲಿಸಬೇಕೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಆತ್ಮಹತ್ಯೆ

ಕಳೆದ ಶನಿವಾರ ರಾತ್ರಿ ರೈಲಿಗೆ ಸಿಕ್ಕಿ ಮಾಧವ್ ಎಂಬ ೨೫ ವರ್ಷ ವಯಸ್ಸಿನ ಲಕ್ಷ್ಮಣರಾವ್ ಎಂಬ ಕಾಲೇಜು ವಿದ್ಯಾರ್ಥಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ. ಇವರು ಬಿ. ಎಸ್. ಸಿ ಆನರ್ಸ್ ಎಂದೂ ಹೇಳಲಾಗಿದೆ. ಬೆಂಗಳೂರು ಸಿಟಿ ಸ್ಟೇಷನ್ನಿನ ರೈಲ್ವೆ ಪೋಲೀಸರು ಶವವನ್ನು ಮಹಜರು ಮಾಡಿ ವಾರಸುದಾರರಿಗೆ ಶವವನ್ನು ಕೊಟ್ಟರೆಂದು ಗೊತ್ತಾಗಿದೆ.

ಅಕ್ಕಿ ನುಚ್ಚು

೫೦,೦೦೦ ಟನ್ನಿನಷ್ಟು ಅಕ್ಕಿ ನುಚ್ಚನ್ನು ಥೈಲಂಡಿನ್ನಿಂದ ತರಿಸಲು ಭಾರತ ಸರ್ಕಾರವು ಪ್ರಯತ್ನಪಡುತ್ತಿದೆ ಎಂದು ಆಹಾರ ಮಂತ್ರಿ ಶ್ರೀ ಕೆ. ಎಂ ಮುನ್ಶಿಯವರು ತಿಳಿಸಿದ್ದಾರೆ.

ಹಾಗೆಯೇ ಅವರು ದಮ್ಯಾವ್ರ ಎಷ್ಟು ಆಹಾರ ಯಾವ ರೀತಿ ಕಳಿಹಿಸುವ್ರದೆಂದು ಕೇಳಿದ್ದರೂ ಇನ್ನೂ ಯಾವ ರೀತಿ ಉತ್ತರವೂ ಬಂದಿಲ್ಲವೆಂದು ಹೇಳಿದರು.

ರಾಯಭಾರಿಯ ವರ್ಗಕ್ಕಾಗುವ ಖರ್ಚು

ಭಾರತದ ವಿದೇಶಾಂಗ ಇಲಾಖೆಯ ಸೆಕ್ರೆಟರಿ ಶ್ರೀ ಕೆ. ಪಿ. ಎಸ್. ಮೆನನ್‌ರವರು ಮಾತನಾಡುತ್ತಾ ವಿದೇಶಗಳಲ್ಲಿರುವ ರಾಯಭಾರಿ ವರ್ಗಕ್ಕಾಗಿ ಭಾರತವು ೨೬೫ ಲಕ್ಷ ರೂ. ಖರ್ಚು ಮಾಡುತ್ತಿದೆ. ಅತ್ಯಂತ ಕಡಿಮೆ ಖರ್ಚಿನಲ್ಲಿ ಸ್ವಲ್ಪ ಪ್ರಮಾಣದ ರಾಯಭಾರಿ ವರ್ಗವನ್ನು ಭಾರತವು ಹೊಂದಿದೆ. ಅನ್ಯಾವ ದೇಶವು ಈ ರೀತಿ ಇಷ್ಟು ಕಡಿಮೆ ಹಣ ವೆಚ್ಚಮಾಡಿ ಹೆಚ್ಚು ರಾಯಭಾರಿಗಳನ್ನು ಹೊಂದಿಲ್ಲ ಎಂದು ಹೇಳಿದರು.

ಅಪ ಪ್ರಚಾರ

ಪಾಕಿಸ್ತಾನದ ನಿರಾಶ್ರಿತ ಪುನರ್ವಸ್ವಾ ಮಂತ್ರಿ ಡಾ|| ಮಲೇಕಿಯವರು ರಾವಲ್ಪಿಂಡಿ ರೇಡಿಯೋ ಏನಲ್ಲಿ ಭಾಷಣ ಮಾಡುತ್ತಾ, ಭಾರತದಲ್ಲಿರುವ ಮುಸ್ಲಿಮರು ಸುರಕ್ಷಿತವಾಗಿದ್ದ ಹೊರತು ಪಾಕಿಸ್ತಾನದಲ್ಲಿನ ನಿರಾಶ್ರಿತರ ಸಮಸ್ಯೆಯು ಸುಮುಖವಾಗಿ ಪರಿಹಾರವಾಗುವಂತಿಲ್ಲ. ಈಗಲೂ ಭಾರತದಿಂದ ಪ್ರತಿದಿನವೂ ಪ. ಪಾಕಿಸ್ತಾನಕ್ಕೇ ೩೦೦ಕ್ಕೆ ಕಮ್ಮಿಯಿಲ್ಲದೆ ನಿರಾಶ್ರಿತರು ಬರುತ್ತಿದ್ದಾರೆ ಎಂದು ಹೇಳಿದರು.

ಬುಧವಾರ ಚರ್ಚೆಯಲ್ಲಿ ಭಾಗವಹಿಸುವರು

ಕಾಶ್ಮೀರದ ಬಗ್ಗೆ ಬ್ರಿಟಿಷ್ ಮತ್ತು ಅಮೆರಿಕಾವು ಪ್ರಪಂಚ ಸಂಸ್ಥೆಗೆ ಒಪ್ಪಿಸಿದ ನಿರ್ಣಯವು ಚರ್ಚೆಗೆ ಬಂದಾಗ ಅನಾರೋಗ್ಯದ ನಿಮಿತ್ತ ಭಾರತದ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಗರಾಯರು ಸಭೆಯಲ್ಲಿ ಹಾಜರಿರಲಿಲ್ಲ. ಅವರು ಬುಧವಾರದ ದಿನ ಚರ್ಚೆಯಲ್ಲಿ ಭಾಗವಹಿಸುವರೆಂದು, ಆದ್ದರಿಂದ ಕಾಶ್ಮೀರದ ಚರ್ಚೆಯು ಬುಧವಾರ ನಡೆಯುವುದೆಂದೂ ಹೇಳಲಾಗಿದೆ.

ರಾಜೀನಾಮೆ

ಸಿಂಧ್ ಪ್ರಾಂತ್ಯದ ಪ್ರಧಾನಿಯವರು ತಮ್ಮ ಪ್ರಾಂತ್ಯದ ಮುಸ್ಲಿಂಲೀಗಿನ ಅಧ್ಯಕ್ಷತನಕ್ಕೆ ರಾಜೀನಾಮೆಯಿತ್ತಿದ್ದಾರೆ. ಅವರ ಸ್ಥಾನಕ್ಕೆ ಮಿ|| ಖುರು ಎಂಬುವರನ್ನು ನೇಮಿಸಲಾಗಿದೆ.

ಮಿ|| ಆಟ್ಲಿಯವರು ಆಸ್ಪತ್ರೆಗೆ

ಬ್ರಿಟನ್ನಿನ ಪ್ರಧಾನಿ ಮಿ|| ಆಟ್ಲಿಯವರು ಆಸ್ಪತ್ರೆಗೆ ಸೇರಿದ್ದಾರೆ. ಅವರಿಗೆ ಊಟವಾದನಂತರ [illegible] ದ್ದುದರಿಂದ ಅವರು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಸೇರಿದ್ದಾರೆ.

ಲನೇ ಸಮ್ಮೇಳನ

ಅಧಿಕ ಉತ್ಪನ್ನದಲ್ಲಿ ದೊಡ್ಡ ಗಿರಣಿಗಳ ಬದಲು ಹೆಚ್ಚಾಗಿ ಸಣ್ಣ ಗಿರಣಿಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಜಪಾನಿನ ಕೈಗಾರಿಕೋದ್ಯೋಗಿಗಳನ್ನು ಕರೆಸಲು ಯೋಚಿಸುತ್ತಿದೆ ಎಂದು ಬಟ್ಟೆ ಕೈಗಾರಿಕೆಯ ಲನೇ ಸಮ್ಮೇಳನದಲ್ಲಿ ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮಹತಾಬಾರವರು ತಿಳಿಸಿದರು.

ವಿಮಾನಾಧಿಕಾರಿಗಳ ದಸ್ತಗಿರಿ

ಬಿ. ಓ. ಎ. ಸಿ. ವಿಮಾನವೊಂದರ ಇಬ್ಬರು ಬ್ರಿಟಿಷ್ ಸ್ಟೂಯರ್ಡ್‌ಗಳನ್ನು ಚಿಂಗಾಣಿನ್ನ ಅಕ್ರಮವಾಗಿ ಸಾಗಿಸುತ್ತಿದ್ದರೆಂಬ ಆಪಾದನೆಯ ಮೇಲೆ ಕೈರೋದ ಫರೂಕ್ ವಿಮಾನ ನಿಲ್ದಾಣದಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಅವರು ತಲಾ ೨೫ ಪೌಂಡು ತೂಕದಷ್ಟು ಚಿನ್ನ ಹೊಂದಿದ್ದರು.

ನಾಗಪುರದಲ್ಲಿ ೧೪೪ನೇ ಸೆಕ್ಷನ್

ನಾಗಪುರದ ಜಿಲ್ಲಾ ಮ್ಯಾಜಿಸ್ಟ್ರೇಟರು ನಾಗಪುರದಲ್ಲಿ ಏಳು ದಿನಗಳ ಕಾಲ ೧೪೪ನೇ ಸೆಕ್ಷನ್ನನ್ನು ಜಾರಿ ಮಾಡಿದ್ದಾರೆ. ಕಲವೆಡೆಗಳಲ್ಲಿ ಗಲಾಟೆಗಳಾದುದರಿಂದಲೇ ಈ ರೀತಿ ಜಾರಿ ಮಾಡಿದೆ ಎಲ್ಲಾ ಮೆರವಣಿಗೆಗಳೂ ಬಹಿರಂಗ ಸಭೆಗಳು ಲಾಡ್‌ಸ್ಪೀಕರುಗಳಲ್ಲಿಯ ಭಾಷಣ ಮುಂತಾದುವುಗಳನ್ನು ಬಹಿಷ್ಕರಿಸಿದ್ದಾರೆ. ನೂಲುವವರ ಸತ್ಯಾಗ್ರಹದಲ್ಲಿ ಇದುವರೆಗೂ ೧೧೫೦ ಜನರ ವರೆಗೂ ದಸ್ತಗಿರಿಯಾಗಿದ್ದಾರೆ ಎಂದು ತಿಳಿಯಬರುತ್ತದೆ.

ಚುನಾವಣೆಗೆ ಬಹಿಷ್ಕಾರ

ಹೈದರಾಬಾದ್ ಮತ್ತು ಸಿಕಂದರಾಬಾದ್‌ನಲ್ಲಿ ಮಾರ್ಚಿ ೨೯ ರಲ್ಲಿ ನಡೆಯುವ ಕಾರ್ಪೊರೇಷನ್ ಚುನಾವಣೆಗಳನ್ನು ಬಹಿಷ್ಕರಿಸಲು ಹೈದರಾಬಾದ್ ಸೋಷಲಿಷ್ಟ್ ಪಕ್ಷವು ನಿರ್ಧರಿಸಿದೆ.

ಕೈಗಾರಿಕಾ ಅಭಿವೃದ್ಧಿಗಾಗಿ ೧ಕೋಟಿ ೫೫ ಲಕ್ಷ

ಮದರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಸರ್ಕಾರವು ಕೈಗಾರಿಕಾ ಅಭಿವೃದ್ಧಿಗಾಗಿ ೧ ಕೋಟಿ ೫೫ ಲಕ್ಷ ರೂ.ಗಳನ್ನು ಖರ್ಚುಮಾಡಲು ತೀರ್ಮಾನಿಸಿದೆ. ಕನ್ನಡ, ತಮಿಳು ಮತ್ತು ಮಲಯಾಳದ ಉತ್ತಮ ಕಥೆ, ಕವನಗಳಿಗೆ ಬಹುಮಾನಕೊಡಬೇಕು. ೧೯೫೨ನೇ ಏಪ್ರಿಲ್‌ನಿಂದ ಕುದುರೆಜೂಜು ರದ್ದುಮಾಡಬೇಕು, ರಾಜ್ಯದ ಸಾಧನ ಸಂಪತ್ತಿನ ಅಭಿವೃದ್ಧಿಗಾಗಿ ಒಂದು ಆಲೋಚನಾಸಮಿತಿಯನ್ನು ರಚಿಸುವುದು ಇವೇ ಮುಂತಾದ ಏಳು ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಪಾಕಿಸ್ತಾನದ ಸೈನ್ಯ

ಪಾಕಿಸ್ತಾನದ ಪ್ರಧಾನಿ ಮಿ|| ಲಿಯಾಕತ್ ಅಲಿಖಾನರು ನ್ಯಾಯವಿಧಾಯಕ ಸಭೆಯಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನ ಸರ್ಕಾರವು ರಕ್ಷಣೆಗಾಗಿ ಸೈನ್ಯ ಮುಂತಾದವುಗಳನ್ನು ಹೆಚ್ಚಿಸುತ್ತಿದೆಯೆಂದು ಹೇಳಿದರು.

ಒಲಂಪಿಯಾ ೨೩—೩—೫೧ರಿಂದ
ಪ್ರತಿದಿನ ೩ ಆಟಗಳು ಅಮೋಘವಾದ ೨ನೇ ವಾರ
ಈಗಾಗಲೇ ೧೫೦೦೦ ಜನರು ನೋಡಿ ಮತ್ತೊಮ್ಮೆ ನೋಡಬೇಕೆಂದು
ಆತುರಪಡುತ್ತಿರುವ ರಣಜಿತ್‌ರ ಅಪೂರ್ವ ಕಲಾಕೃತಿ
* ಮಧುಬಾಲ *
ಪಾತ್ರ—ಮಧುಬಾಲ, ದೇವಾನಂದ್, ಜೀವನ್,

ಪ್ರಭಾ ಪಿಕ್ಚರ್ ಹೌಸ್
ಚ
೨೩—೩—೫೧ ರಿಂದ ಅಮೋಘವಾದ ೨ನೇ ವಾರ
ಪ್ರತಿದಿನ ಮೂರು ಆಟಗಳು
'ಗೃಹಸ್ಥಿ' ಚಿತ್ರದನಂತರ ಮಹೋನ್ನತ ಚಿತ್ರ, ಎಸ್. ಎಂ. ಯೂಸುಫ್‌ರವರ
* ಬಹುರಾಣಿ (ಹಿಂದಿ) *
ಪ್ರತಿಸಂಸಾರವೂ ನೋಡಲೇಬೇಕಾದ ಚಿತ್ರ
ಪಾತ್ರ- ಸುಲೋಚನ ಚಟರ್ಜಿ, ಯಶೋಧರ ಖಟ್ಟು, ಲಲಿತಾಪವಾರ್, ಡೇವಿಡ್ ಮತ್ತು ಗೋಪ್,

ರಣಜಿತ್
೨೦—೩—೫೧ರಿಂದ
ಅಮೋಘವಾದ ೩ನೇ ವಾರ
ಪ್ರತಿದಿನ ೩ ಆಟಗಳು
* ಬಾಬುಲ್ *
ಪಾತ್ರ- ನರ್ಗಿಸ್, ದಿಲೀಪ್‌ಕುಮಾರ್.

ಬೆಳಗಿನ ಪ್ರದರ್ಶನ
೨೩—೩—೫೧ ರಿಂದ ೩ ದಿನಗಳು ಮಾತ್ರ
ರಣಜಿತ್‌ರವರ—
— ಶಾದಿ —

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೩—೧೯೫೧ನೇ ಶನಿವಾರ [ಸಂಚಿಕೆ ೧೭೭

೫೦೦ ಜನರ ಬಂಧನ

ಕಲ್ಕತ್ತಾದಲ್ಲಿ ಹೋಳಿ ಹಬ್ಬದಲ್ಲಿ ಒಟ್ಟು ಎರಚುತ್ತಿದ್ದ ೫೦೦ ಜನರನ್ನು ಪೋಲೀಸರು ಹಿಡಿದುಕೊಂಡು ಹೋಗಿದ್ದಾರೆ. ಟ್ರ್ಯಾಮುಗಳಲ್ಲಾಗಲೀ, ಬಸ್ಸುಗಳಲ್ಲಾಗಲೀ, ಇತರ ವಾಹನಗಳಲ್ಲಾಗಲೀ ಬಣ್ಣ ಎರಚಬಾರದು ಇಲ್ಲದಂತೆ ಬಂದೋಬಸ್ತು ಮಾಡಲಾಗಿತ್ತು. ಪ್ರಮುಖ ರಸ್ತೆಗಳಲ್ಲಿ ಕಾವಲಿತ್ತು.

ಮಂತ್ರಿ ಮಂಡಲದ ಬದಲಾವಣೆ

ಸಿಂಧ್ ಮುಖ್ಯ ಮಂತ್ರಿಯಾದ ಮಿ॥ ಕಾಸಿಫಜುಲ್ಲಾರವರು ಸಿಂಧ್ ಅಸೆಂಬ್ಲಿ ಮುಸ್ಲಿಂ ಲೀಗಿನ ಪಕ್ಷದ ನಾಯಕತ್ವಕ್ಕೆ ಮೊನ್ನೆ ದಿನ ರಾಜೀನಾಮೆಯಿತ್ತರು. ಮಿ॥ ಖುರ್ರೋರವರು ಸಿಂಧ್ ಪಕ್ಷದ ನಾಯಕರಾಗಿ ಚುನಾಯಿತರಾದರು.

ಸರ್ಕಾರದವರು ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಕ್ರಮ ತೆಗೆದುಕೊಳ್ಳಬೇಕು

ಪ್ರತ್ಯಕ್ಷ, ಪರೋಕ್ಷ ತೆರಿಗೆ ವಿಧಿಸಿರುವ ಸರ್ಕಾರದ ನೀತಿಯನ್ನು ಕುರಿತು ಜನಾಬ್ ಇಮಾಂರವರ ಟೀಕೆ

ಬೆಂಗಳೂರು ಮಾ. ೨೩

ಇಂದು ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲದನಂತರ ಜ. ಇಮಾಂರವರು ಸರ್ಕಾರದ ಆಯವ್ಯಯ ಅಂದಾಜಿನ ಮೇಲೆ ಚರ್ಚಿಸುತ್ತಾ ಸಂಸ್ಥಾನದ ಆಯವ್ಯಯ ಒಂದೆರಡು ವರ್ಷ ಕೊರತಾ ಬಂದಲ್ಲಿ ಅದನ್ನು ಸಹಿಸಬಹುದು. ಆದರೆ ಅದೇ ಕ್ರಮವಾಗಿ ನಡೆದಲ್ಲಿ ಅದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇಂತಹ [illegible] ಅವಕಾಶಕೊಡಬಾರದು. ಸರ್ಕಾರದವರು ವಿವಿಧ ಉದ್ಯಮಗಳಿಗೆ ಸುಮಾರು ೮ ಕೋಟಿ ರೂ. ಗಳನ್ನು ಬೇರೆ ಬೇರೆ ನಿಧಿಗಳಿಂದ ಒಳಸಿಕೊಂಡಿದ್ದಾರೆ. ಇದು ದೇಶದ ಭದ್ರತೆಯಲ್ಲಿ ಲೇಶ ಮಾತ್ರವೂ ಒಳ್ಳೆಯದಲ್ಲ ಸರ್ಕಾರದವರು ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ತಕ್ಕ ಎಚ್ಚರಿಕೆ ತೆಗೆದುಕೊಳ್ಳಬೇಕು. ಪರೋಕ್ಷವಾಗಿಯಾಗಲೀ ಪ್ರತ್ಯಕ್ಷವಾಗಿಯಾಗಲೀ ಜನರ ಮೇಲೆ ತೆರಿಗೆ ಹೊರೆಯನ್ನು ಹೊರಿಸಲು ಯತ್ನಿಸಬಾರದು.

ಸಂಸ್ಥಾನದ ಪ್ರಜೆಗಳ ಮೇಲೆ ಇಂಡಿಯಾ ಸರ್ಕಾರವು ಮತ್ತು ಮೈಸೂರು ಸರ್ಕಾರ ಎರಡು ತೆರಿಗೆಯನ್ನು ಹಾಕಿದೆ. ಮುಖ್ಯ ಮಂತ್ರಿಗಳ ಭಾಷಣವೊಂದರಲ್ಲಿ ತೆರಿಗೆಯನ್ನು ಕಡಿಮೆ ಮಾಡುವುದಾಗಿ ತಿಳಿಸಿದ್ದರು. ಅದು ಕಾರ್ಯರೂಪಕ್ಕೆ ಬಂದಿಲ್ಲ ಅದರ ಬದಲು ಜನರ ಮೇಲೆ ಇನ್ನು ಹೆಚ್ಚು ಅಪ್ರತ್ಯಕ್ಷವಾಗಿ ತೆರಿಗೆಯನ್ನು ಹೊರಿಸಿದೆ. ರೋಡ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ತೃಪ್ತಿಕರವಾಗಿಲ್ಲ ಪ್ರತಿವರ್ಷವೂ ಆಹಾರೋತ್ಪತ್ತಿಗಾಗಿ ಅತ್ಯಧಿಕ ಹಣ ವೆಚ್ಚ ಮಾಡಿದರೂ ಆಹಾರ ಅಭಾವ ಹೋಗಿಲ್ಲ. ನಾವು ಕೊಡಬೇಕಾಗಿರುವ ೧೬ ಕೋಟಿ ರೂ. ಸಾಲವನ್ನು ಕೇಂದ್ರ ಸರ್ಕಾರವು

ಹೊಸ ಮಂತ್ರಿಮಂಡಲ ರಚನೆ

ತಿರುವಾಂಕೂರು-ಕೊಚ್ಚಿ ಒಕ್ಕೂಟದಲ್ಲಿ ಹಳೆಯ ಮಂತ್ರಿಗಳಿಲ್ಲದ ಹೊಸಮಂತ್ರಿಮಂಡಲ ರಚಿಸಬೇಕೆಂದು ಕಾಂಗ್ರೆಸ್ಸಿನ ಶಾಸನಸಭಾ ಸದಸ್ಯರು ತೀರ್ಮಾನಿಸಿದ್ದಾರೆಂದು ಗೊತ್ತಾಗಿದೆ.

ಚುನಾವಣೆಗಳಲ್ಲಿ ಅಕ್ರಮ

ಪಂಜಾಬಿನ ಚುನಾವಣೆಗಳಲ್ಲಿ ಹೇರಳ ಅಕ್ರಮಗಳು ನಡೆಯುತ್ತವೆಂದು, ಈಗ ನಡೆಯುತ್ತಿರುವ ಚುನಾವಣೆಯನ್ನು ರದ್ದುಪಡಿಸಿ ಪುನಃ ಚುನಾವಣೆಗೆ ಏರ್ಪಾಡು ಮಾಡಬೇಕೆಂದು ಮಿ॥ ಹೆಚ್. ಎಸ್. ಸು[illegible]ಯವರು ತಿಳಿಸಿದ್ದಾರೆ.

೧೫ ವರ್ಷಕಾಲ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಿರಲಿ

ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ೧೫ ವರ್ಷಕಾಲ ಇಂಗ್ಲೀಷ್ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಉಪಯೋಗಿಸಬೇಕು. ಅನಂತರ ಹಿಂದಿಯಲ್ಲಿ ಶಿಕ್ಷಣ ಏರ್ಪಡಬಹುದು. ಭಾರತದ ರಾಜ್ಯಾಂಗ ನಿಯಮಗಳಲ್ಲಿ ಇದು ಅಡಕವಾಗಿದೆ ಎಂಬುದಾಗಿ ಬೊಂಬಾಯಿ ವಿಶ್ವವಿದ್ಯಾನಿಲಯದ ಪುನರ್ವ್ಯವಸ್ಥೆ ಕಮಿಟಿಯು ಸಲಹೆಮಾಡಿದೆ. ಬೊಂಬಾಯಿ ವಿಶ್ವವಿದ್ಯಾನಿಲಯವು ಬೊಂಬಾಯಿ ಮಹಾನಗರಕ್ಕೆ ವ್ಯಾಪ್ತಿ ಹೊಂದಬೇಕೆಂದು ಸಲಹೆ ಮಾಡಿದೆ.

ಮೈಸೂರಿನ ಕೈಗಾರಿಕೆ ಪ್ರಗತಿ ಪಥದಲ್ಲಿಲ್ಲವೆಂದು ನಮ್ಮ ಆಸ್ತಿಪಾಸ್ತಿಗಳನ್ನು ಒತ್ತೆ ಇಟ್ಟುಕೊಂಡಿರುವುದರಿಂದ ಅವರೇ ಆ ಸಾಲವನ್ನು ತೀರಿಸಲಿ ಎಂದರು.

ಹೊಸ ದಿನಪತ್ರಿಕೆ

ಮೈಸೂರಿನಲ್ಲಿ ವರ್ತಮಾನ ಪತ್ರಿಕೆ ಹಿಂದೆ ಹೊರಡುತ್ತಿದ್ದ 'ಸಿಂಹನಾದ' ಪತ್ರಿಕೆಗೆ ಸಂಪಾದಕರಾಗಿದ್ದ ಶ್ರೀ ಕಾಂತರಾಜ ತುಮಕೂರಿನಿಂದ "ಸಿಂಹನಾದ" ಎಂಬ ದಿನಪತ್ರಿಕೆ ಹೊರಡಿಸುತ್ತಿದ್ದಾರೆ. ಇ[illegible]ಗಳಿಂದ ಕೂಡಿ ಅಂದವಾಗಿ ಮುದ್ರಿತವಾಗಿದೆ. ಬೆಲೆ ೬ ಪೈ. ಹೊಸ ಹೊಸ ಸಮಾಚಾರಗಳಿಂದ ಕೂಡಿದೆ ಈ ಪತ್ರಿಕೆಯು ಕೆಲವೇ ದಿನಗಳಲ್ಲಿ ಕನ್ನಡ ಜನ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ನ್ಯೂಸ್ ಪ್ರಿಂಟ್ ತಯಾರಿಕೆ

ನ್ಯೂಸ್ ಪ್ರಿಂಟ್ ತಯಾರಿಕೆ ಸಂಬಂಧ ಮತ್ತು ಹಂಚಿಕೆ ವಿಷಯದಲ್ಲಿ ಪರಿಶೀಲನೆ ನಡೆಸಿ ಸಲಹೆಗಳನ್ನು ಮಾಡಲು ಭಾರತ ರಾಷ್ಟ್ರೀಯ ಸಾಧನ ಸಂಪತ್ತಿನ ಸಮ್ಮೇಳನ ಒಂದು ಸಮಿತಿಯನ್ನು ನೇಮಕ ಮಾಡಿದೆ.

ಸಮಿತಿಯಲ್ಲಿರಲು ಆಹ್ವಾನಿತರಾಗಿರುವ ರಾಷ್ಟ್ರಗಳಿಂದ ಉತ್ತರ ಬಂದ ನಂತರ ಸದಸ್ಯರ ಹೆಸರನ್ನು ಪ್ರಕಟಿಸಲಾಗುವುದು.

೨೫ ಕೋಟಿ ರೂ. ಮಂಜೂರು

ನಿರಾಶ್ರಿತರ ಪುನರ್ವಸತಿ ಕಾರ್ಯ ಯೋಜನೆಗಳಿಗಾಗಿ ಭಾರತ ಸರ್ಕಾರವು ಸುಮಾರು ೨೫ ಕೋಟಿ ರೂ. ವೆಚ್ಚ ಮಾಡುವುದು. ಇದರಲ್ಲಿ ಪಾಕಿಸ್ತಾನದಿಂದ ಬಂದಿರುವ [illegible] ಲಕ್ಷ ನಿರಾಶ್ರಿತರಿಗೆ [illegible] ಕೋಟಿ ರೂ, ಪೂರ್ವ ಬಂಗಾಳದಿಂದ ಬಂದಿರುವ [illegible] ಲಕ್ಷ ಜನಕ್ಕೆ ೧೧ ಕೋಟಿ ರೂ. ವೆಚ್ಚ ಮಾಡಲಾಗುವುದು. ನಿರಾಶ್ರಿತರ ಪುನರ್ವಸತಿಯನ್ನು ಕಲ್ಪಿಸಿ ಕೊಟ್ಟಿರುವ ಸಂಸ್ಥಾನಗಳಿಗೆ [illegible] ಕೋಟಿ ರೂ. ಸಾಲವಾಗಿ ಕೊಡಲಾಗುವುದು ಎಂದು ಗೊತ್ತಾಗಿದೆ.

ನಗರಾಭಿವೃದ್ಧಿ ಸಮಿತಿಯ ೧೯೫೧-೫೨ರ ಬಜೆಟ್ ಅಧಿವೇಶನ

ಮೈಸೂರು ಮಾ. ೨೩

ಇಂದು ಬೆಳಿಗ್ಗೆ ಮೈಸೂರು ನಗರಾಭಿವೃದ್ಧಿ ಸಮಿತಿಯ ವಿಶೇಷ ಸಭೆಯಲ್ಲಿ ೫೧—೫೨ರ ಆಯವ್ಯಯ ಪಟ್ಟಿ ಮಂಡಿಸಲಾಯಿತು. ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆವಹಿಸಿದ್ದರು. ೧೯೫೧-೫೨ರ ಬಜೆಟ್ಟು ಆದಾಯವು [illegible] ರೂ. ಗಳೆಂದೂ, ಖರ್ಚು [illegible],೦೦೦ ರೂ. ಎಂದೂ, ಉಳಿತಾಯವು [illegible] ರೂ. ಗಳೆಂದೂ ಆಯವ್ಯಯ ಪಟ್ಟಿ ಪ್ರಕಾರ ಅಂದಾಜಾಗಿದೆ.

ಬಜೆಟಿನ ಬಾಬ್ತುಗಳನ್ನು ವಿವರಿಸುತ್ತಾ ಅಧ್ಯಕ್ಷರು ಒಳಚರಂಡಿ ಮತ್ತು ಇತರ ಕೆಲಸಗಳಿಗೆ ೨,೫೦,೦೦೦ ರೂ. ಗಳೆಂದೂ ಬಸ್ಸ್ಟಾಪ್ ಮತ್ತು ಮುಂದಿ[illegible]ಗಳಲ್ಲಿ ಒಳಚರಂಡಿ ಮತ್ತು ಇತರ ಕಾಮಗಾರಿಗಳಿಗೆ ೩೦೦,೦೦೦ ರೂ. ಗಳೆಂದೂ, ಕುರುಬರ ಹಳ್ಳಿಯ ಅಭಿವೃದ್ಧಿಗೋಸ್ಕರ ೫೦,೦೦೦ ರೂ, ಮಹೇಶ್ವರ[illegible] ೭೭,೦೦೦ ರೂ. ಗಳೆಂದೂ, ಶಂಕರಮಠದ ಹಿಂದುಗಡೆ [illegible] ನಿವೇಶನವನ್ನು ಮಾಡಲು [illegible] ರೂ. ಗಳೆಂದೂ, ಹೊಸ ಸಂಕೇತಸ್ಥಳಗಳನ್ನು ಮಾರಲು [illegible],೦೦೦ ರೂ. ಗಳೆಂದೂ, ಬಡವರಿಗೆ ಮನೆಗಳನ್ನು ಕಟ್ಟಿ ಕೊಡಿಸಲು ೧,೦೦,೦೦೦ ರೂ. ಗಳೆಂದೂ, ಹೇಳಿದರು.

ಪೂರ್ವಭಾವಿಯಾಗಿ ೫೦-೫೧ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಓದಲಾಯಿತು. ೫೦-೫೧ರ ಬಜೆಟ್ಟು ಆದಾಯವು [illegible] ರೂ. ಗಳೆಂದೂ ಬಜೆಟ್ಟು ಖರ್ಚು [illegible] ರೂ. ಗಳೆಂದೂ, ಉಳಿತಾಯವು ೧೦,[illegible] ರೂ. ಗಳೆಂದೂ ತಿಳಿಸಿದರು.

ಕಾಶ್ಮೀರದ ಹೊಸ ಯೋಜನೆ ಮೇಲೆ ಭಾರತ ಸರ್ಕಾರದ ಪ್ರತಿಕ್ರಿಯೆ

ಬ್ರಿಟನ್—ಅಮೆರಿಕಾದ ಕಾಶ್ಮೀರದ ಹೊಸ ನಿರ್ಣಯದ ಬಗ್ಗೆ ಭಾರತ ಸರ್ಕಾರವು ಕಲ್ಲ ಅಭ್ಯರು ನಿರ್ಧಾರವನ್ನು ಮುಂದಿನ ವಾರ ಪ್ರಕಟಿಸಬಹುದೆಂದು ಹೇಳಲಾಗಿದೆ. ಭಾರತದ ಕೆಲವು ಆಕ್ಷೇಪಣೆಗಳು ಈ ಹೊಸ ನಿರ್ಣಯದಲ್ಲಿರುವುದೆಂದೂ ಅದರಲ್ಲಿ ಮುಖ್ಯವಾದುದು ಕಾಶ್ಮೀರದಲ್ಲಿ ಪಂಚಾಯಿತಿಯನ್ನೇರ್ಪಡಿಸಕೂಡದೆಂಬ ಭಾರತ ... ಹಾಗೆಯೇ ಇರುವುದರಿಂದಲೂ ಮತ್ತು ಸೈನ್ಯವನ್ನು ಕಾಶ್ಮೀರದಿಂದ ಹಿಂತೆಗೆಯಬೇಕೆಂಬ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನಗಳಿಗೆ ಆಗಿರುವ ಕೆಲವು ಒಪ್ಪಂದಗಳನ್ನು ಮತ್ತೆ ಚರ್ಚೆಗೆ ಬರಬೇಕೆಂದು ಈ ನಿರ್ಣಯದಲ್ಲಿರುವುದರಿಂದಲೂ ಈ ನಿರ್ಣಯವನ್ನು ಭಾರತವು ಒಪ್ಪುವುದು ಅನುಮಾನವೆಂದು ಹೇಳಲಾಗಿದೆ.

೩ ಜನರಿಗೆ ವಿಮಾನ ಪ್ರಯಾಣದ ತಡೆ

ಬೊಂಬಾಯಿಯಿಂದ ಲಂಡನ್ನಿಗೆ ಹೊರಟ ಏರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನದಲ್ಲಿ ಮೂರು ಪ್ರಯಾಣಿಕರು ಸುಳ್ಳು ಹೆಸರಿನಲ್ಲಿ ರಹದಾರಿಯನ್ನು ಹೊಂದಿದ್ದರೆಂದು ಅವರನ್ನು ಸಾಂತಾ ಕ್ರೂಸ್ ವಿಮಾನ ನಿಲ್ದಾಣದಲ್ಲಿ ವಿಮಾನ ಹೊರಡುವುದಕ್ಕೆ ಮುಂಚೆಯೇ ವಿಮಾನದಿಂದ ಇಳಿಸಿ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಹೈದರಾಬಾದಿಗೆ ಸರ್ ಮಿರ್ಜಾ

ಮೈಸೂರಿನ ಮಾಜಿ ದಿವಾನರಾದ ಅಮಿನುಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮೇಲ್‌ರವರು ಹೈದರಾಬಾದ್ ನಿಜಾಮರ ಆಹ್ವಾನದ ಮೇರೆ ಹೈದರಾಬಾದಿಗೆ ಮಾರ್ಚಿ ೨೮ನೇ ತಾ|| ಹೋಗುವರೆಂದು ಗೊತ್ತಾಗಿದೆ

ಬಂಡಕೋರರದಷ್ಟು ಸೈನ್ಯ

ಇರಾನಿನ ಬಳಿಇರುವ ಸೋವಿಯಟ್ ರಷ್ಯಾದ ಸೈನ್ಯವನ್ನು ಎರಡರಷ್ಟು ಹೆಚ್ಚಿಸಲಾಗಿದೆ ಎಂದು ಮಾಸ್ಕೋ ರೇಡಿಯೋ ತಿಳಿಸಿದೆ. ಬ್ರಿಟಿಷ್ ಸೈನ್ಯವೇನಾದರೂ ಇರಾನಿನ ಒಳಕ್ಕೆ ಪ್ರವೇಶಿಸಿದರೆ ತಕ್ಷಣ ರಷ್ಯ ಸೈನ್ಯವೂ ಗಡಿದಾಟಿ ಬರುವುದೆಂದು ... ಹೇಳಲಾಗುತ್ತಿದೆ.

ದೆಹಲಿಯಲ್ಲಿ ಬೆಂಕಿ

ದೆಹಲಿಯ ಜನನಿಬಿಡ ಇಕ್ಕಟ್ಟಿನ ಪ್ರದೇಶವಾದ ಸದ್ದರ್ ಬಜಾರ್ ಪ್ರದೇಶದಲ್ಲಿ ಸಾಗುವಾನಿ ದಿಮ್ಮಿಯೊಂದಕ್ಕೆ ಬೆಂಕಿ ಬಿದ್ದು ಕೂಡಲೇ ಸುತ್ತಮುತ್ತಲ ಪ್ರದೇಶಗಳಿಗೆ ... ಹರಡಿತು. ಅನೇಕ ಗುಡಿಸಲುಗಳು ಸುಟ್ಟುಹೋದುದಲ್ಲದೆ ಹೊಸದಾಗಿ ಪ್ರಾರಂಭಿಸಿದ ಶಾಲಾ ಕಟ್ಟಡವೂ ಉರಿದುಹೋಯಿತು. ಅಂಗಡಿಗಳು, ಮನೆಗಳು, ಇತರ ಕಟ್ಟಡಗಳಲ್ಲಿದ್ದ ಜನರೆಲ್ಲ ಗಾಬರಿಯಿಂದ ಸಿಕ್ಕಿದ ಸಾಮಾನುಗಳನ್ನು ಹಿಡಿದುಕೊಂಡು ಸುರಕ್ಷಿತ ಪ್ರದೇಶಗಳಿಗೆ ಓಡಿದರು. ಪ್ರಾಣಹಾನಿಯೇನೂ ಇದುವರೆಗೆ ವರದಿಯಾಗಿಲ್ಲ. ಒಂದು ಲಕ್ಷ ರೂ ನಷ್ಟವಾಗಿದೆ.

ಹಿಂತಿರುಗಲು ಇಚ್ಛೆಯಿಲ್ಲ

ಸಿಂಕಿಯಾಂಗಿನ ಒಂದು ಜಾಗದಲ್ಲಿ ನೆಲೆಸಿರುವ ೩೦೦ ಜನ ನಿರಾಶ್ರಿತರು ಮತ್ತೆ ಸಿಂಕಿಯಾಂಗಿಗೆ ಹಿಂತಿರುಗಲು ಇಚ್ಛೆಪಡುತ್ತಿಲ್ಲವೆಂದು ಸಿಂಕಿಯಾಂಗಿನ ಸೇನಾನಿ ಜನರಲ್ ಆಗಿದ್ದ ಮತ್ತು ಚೀನಾದ ಕಮ್ಯೂನಿಸ್ಟರು ಸಿಂಕಿಯಾಂಗನ್ನು ಆಕ್ರಮಿಸಿಕೊಂಡಾಗಿನಿಂದ ದೇಶಭ್ರಷ್ಟರಾಗಿರುವ ಮಿ|| ಇಸಾವುಸಾಪ್ ಅಲಪ್ತಕಿಂಗ್ ಎಂಬುವವರು ಹೇಳಿದ್ದಾರೆ

ಅರ್ಜಿ ವಜಾ

ಕಡಲೂರಿನ ಸೆಂಟ್ರಲ್ ಜೈಲಿನಲ್ಲಿ ಡಿಟೆನ್ಯೂ ಆಗಿದ್ದ ಕಮ್ಯೂನಿಸ್ಟ್ ಶ್ರೀ ಎ. ಕೆ. ಗೋಪಾಲನ್‌ರವರು, ಮದ್ರಾಸ್ ಸರ್ಕಾರವು ಅವರ ವಿಚಾರಣೆ ನಡೆಯದೆ ತೀರ್ಪು ಕೊಡುವುದಕ್ಕೆ ಮುಂಚೆ ತಮ್ಮ ಪುನರ್ಬಂಧನಕ್ಕೆ ಆಜ್ಞೆ ಹೊರಡಿಸಿದ್ದುದು ಕಂಟೆಂಪ್ಟ್ ಆಫ್ ಕೋರ್ಟ್ ಎಂದು ಅರ್ಜಿಯನ್ನು ಸಲ್ಲಿಸಿದ್ದರು. ಮದ್ರಾಸ್ ಹೈಕೋರ್ಟಿನ ಜಸ್ಟಿಸ್ ಶ್ರೀ ಸತ್ಯನಾರಾಯಣರಾವ್ ಮತ್ತು ಜಸ್ಟಿಸ್ ಶ್ರೀ ರಾಜಮನ್ನಾರ್‌ರವರು ಈ ಅರ್ಜಿಯನ್ನು ತಳ್ಳಿಹಾಕಿದರು.

ಪುನರ್ಬಂಧನ ಆಜ್ಞೆಯು ಕಾನೂನುಬದ್ಧವಾಗಿಲ್ಲವೆಂದೂ ಅಪ್ರಮಾಣಿಕವೆಂದೂ ಸಾಧಿಸಿ ಇದೇ ನ್ಯಾಯಾಧೀಶರುಗಳು ಕೆಲವು ದಿನಗಳ ಹಿಂದೆ ತೀರ್ಪಿತ್ತಿದ್ದರು ... ವಿಷಯದಲ್ಲಿ ನಾವು ಸರ್ಕಾರದ ಬಗ್ಗೆ ನಿಂದನೆಯ ಮಾತನ್ನಾಡಿರಬಹುದಾದರೂ ಸರ್ಕಾರದ ಮೇಲೆ ನ್ಯಾಯ ಕ್ರಮವೂ ಬೇಕೆಂದೂ ಅದ್ದರಿಂದ ಈ ಅರ್ಜಿಯನ್ನು ವಜಾ ಮಾಡುವುದಾಗಿಯೂ ನ್ಯಾಯಾಧೀಶರುಗಳು ತಿಳಿಸಿದರು

ಪಗಾರ್ ಮತ್ತು ರಜಾ

ಚಿತ್ರದುರ್ಗದ ಜಿಲ್ಲೆಯ ಎಗ್ಜಿಕ್ಯುಟೀವ್ ಇಂಜನೀಯರ್ ಶ್ರೀ ಕೆ. ಎ. ಸಿದ್ದಬಸವಯ್ಯನವರನ್ನು ಭದ್ರಾವತಿ ಅಣೆಕಟ್ಟಿನ ಡಿವಿಷನ್ನಿಗೆ ವರ್ಗಾಯಿಸಿದ್ದು ವಜಾಮಾಡಲ್ಪಟ್ಟಿದೆ.

ಎಗ್ಜಿಕ್ಯುಟೀವ್ ಇಂಜನೀಯರ್ ಶ್ರೀ ಆರ್. ಎಚ್ ರಾಜುರವರನ್ನು ಆರಮನೆಯಿಂದ ಭದ್ರಾವತಿ ಅಣೆಕಟ್ಟಿನ ಡಿವಿಜನ್ನಿಗೆ ವರ್ಗಮಾಡಿದೆ.

ಭದ್ರಾವತಿ ಅಣೆಕಟ್ಟಿನ ಎಗ್ಜಿಕ್ಯುಟೀವ್ ಇಂಜನೀಯರ್ ಶ್ರೀ ಹೆಚ್. ಸಿ. ಕೆ ಭಟ್ಟರವರಿಗೆ ಮಾರ್ಚಿ ೭ ರಿಂದ ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಟ್ಟಿದೆ.

ಆಜಾದರು ವಿದೇಶಕ್ಕೆ

ಕೇಂದ್ರ ವಿದ್ಯಾಮಂತ್ರಿ ಶ್ರೀ ಮೌಲಾನಾ ... ಆಜಾದರು ತಮ್ಮ ಆರೋಗ್ಯವು ಸರಿಯಾಗಿಲ್ಲದಿರುವುದರಿಂದ ಪಾರ್ಲಿಮೆಂಟ್ ... ಮುಗಿದ ಮೇಲೆ ವಿದೇಶಕ್ಕೆ ಹೋಗುವರೆಂದೂ ಶ್ರೀ ... ಅವರ ಜೊತೆ ತೆರಳುವರೆಂದು ತಿಳಿದುಬಂದಿದೆ

ಡಾ|| ರಾಜೇಂದ್ರ ಪ್ರಸಾದರಿಂದ ಆರಂಭೋತ್ಸವ

ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಭಾರತದಲ್ಲಿ ಮೊದಲನೆಯದೂ ಮತ್ತು ದೊಡ್ಡದೂ ಆದ ಒಂದು ನಿರಾಶ್ರಿತ ಸಂಗನರ ಕಾಲೋನಿಯ ಆರಂಭೋತ್ಸವ ನಡೆಸಿದರು. ಇದಕ್ಕೆ "ಕಸ್ತೂರ್ಬಾ ನಿಕೇತನ" ಎಂದು ಹೆಸರಿಡಲಾಗಿದೆ.

ರಾಷ್ಟ್ರಪತಿ ಮತ್ತು ಪಂ|| ನೆಹರೂರವರಿಗೂ ಬಣ್ಣ ಬಿತ್ತು

ಬಣ್ಣದ ನೀರು ಮತ್ತು ಗುಲಾಲನ್ನು ಹಿಡಿದುಕೊಂಡು ಕೆಲವು ಗುಂಡಸರು ಸರ್ಕಾರಿ ಭವನದಲ್ಲಿ ರಾಷ್ಟ್ರಪತಿಗೆ ಶುಭಾಶಯ ಕೋರಲು ಒಂದು ಸಿಹಿತಿಂಡಿಯ ಮೇಲೆ ... ಎರಚಿದರು. ಅನಂತರ ರಾಷ್ಟ್ರಪತಿಯವರು ಎಲ್ಲ ಹುಡುಗರಿಗೆ ಸಿಹಿ ಹಂಚಿದರು. ಪಂ|| ನೆಹರೂರವರು ಸರ್ಕಾರಿ ಕಾಗದ ಪತ್ರ ಪರಿಶೀಲಿಸುತ್ತಿದ್ದಾಗ ಅವರ ಮೇಲೂ ಅವರ ಕಾರ್ಯದರ್ಶಿಯವರ ಮೇಲೂ ಲೆಕ್ಕವಿಲ್ಲದಷ್ಟು ಬಣ್ಣವನ್ನು ಎರಚಿದರು. ಗುಂಪಿನವರೊಬ್ಬರಿಂದ ಪಂ|| ನೆಹರೂರವರೂ ಬಣ್ಣವನ್ನು ಕಿತ್ತುಕೊಂಡು ಎಲ್ಲರಿಗೂ ಎರಚಿದರು.

ಇನ್ನೊಬ್ಬರ ದಸ್ತಗಿರಿ

ಪಾಕಿಸ್ತಾನದ ಮಹಿಳಾ ನ್ಯಾಷನಲ್ ಗಾರ್ಡುಗಳ ಕಮ್ಯಾಂಡಿಂಗ್ ಆಫೀಸರ್ ಮೇಜರ್ ಮಿಸ್ ಖಾನ್‌ರನ್ನು ಕೆಲಸದಿಂದ ವಜಾಮಾಡಿ ಗೃಹಬಂಧನದಲ್ಲಿಡಲಾಗಿದೆ. ಪಾಕಿಸ್ತಾನ ಸರ್ಕಾರದ ಮೇಲಿನ ಪಿತೂರಿಯಲ್ಲಿ ಅವರ ಕೈವಾಡ ಇತ್ತೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯುಟೋರಿಯಲ್ ಬ್ಯೂರೊ. ಮೈಸೂರು. ಮುದ್ರಕರು ಬಿ.ಹೆಚ್. ರಾಮರಾವ್, ಜಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

OFFICE OF THE MUNICIPAL ENGINEER
CITY MUNICIPAL COUNCIL

Dated 15th March 1951

NOTIFICATION

Sealed tenders will be received up to 4 p.m. on 29-3-51 by the Municipal Engineer for collection and consolidation of road materials in the City for the year 1951-52

Each tender other than that of a registered contractor in the Municipality must be accompanied with a challan for having remitted Rs 200/- in Municipal Treasury as earnest money. For full particulars please see the detailed notification on the notice board.

(Sd) V. K. MUKUNDAN
Municipal Engineer.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೩—೧೯೫೧ನೇ ಮಂಗಳವಾರ [ಸಂಚಿಕೆ ೧೬೮

ಮತ್ತೆ ಭೇಟಿ

ಸಂಸ್ಥಾನ ಇಲಾಖೆ ಸೆಕ್ರೆಟರಿ ಶ್ರೀ ವಿ ಪಿ ಮೆನನ್ನರು ಬೆಂಗಳೂರಿನಿಂದ ಹೈದರಾಬಾದಿಗೆ ವಿಮಾನದಲ್ಲಿ ಹೊರಟರು. ಅವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರೊಡನೆ ಏಪ್ರಿಲ್ ೧೫ರ ಹೊತ್ತಿಗೆ ಮತ್ತೆ ಎಂ ಬೆಂಗಳೂರಿಗೆ ಭೇಟಿ ಕೊಡುವರೆಂದು ಹೇಳಲಾಗಿದೆ.

ದಸ್ತಗಿರಿ

ಕಲ್ಕತ್ತಾವಿನ ಡಾ|| ರಾಯ್ ಎಂಬುವವರು ಮದರಾಸಿನ ಒಂದು ಹೋಟೇಲಿನಲ್ಲಿ ಇಳಿದುಕೊಂಡು ಗುಮಾಸ್ತರು ಕೆಲಸಕ್ಕೆ ಬೇಕು ಎಂದು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಪಡಿಸಿ, ಅದರಂತೆ ಕೆಲಸಕ್ಕೆ ಬಂದ ಇಬ್ಬರು ಆಂಗ್ಲೋ ಇಂಡಿಯನ್ ಹುಡುಗಿಯರನ್ನು ಅವಮಾನಪಡಿಸಿದರೆಂದು ಪೋಲೀಸರು ಅವರನ್ನು ದಸ್ತಗಿರಿಮಾಡಿದ್ದಾರೆ.

ಏಪ್ರಿಲ್ ಅಥವಾ ಮೇ ನಲ್ಲಿ ಅಕ್ಕಿ ಪ್ರಮಾಣ ಹೆಚ್ಚಬಹುದು

ಎಂದು ಶ್ರೀ ಟಿ. ಮರಿಯಪ್ಪನವರ ಭರವಸೆ

ಬೆಂಗಳೂರು ಮಾ. ೨೬

ಇಂದು ಶಾಸನ ಸಭೆಯಲ್ಲಿ ಶ್ರೀ ಟಿ ಮರಿಯಪ್ಪನವರು ಆಹಾರದ ಅಭಾವವನ್ನು ವಿಷದಪಡಿಸುತ್ತಾ ಕೇಂದ್ರ ಸರ್ಕಾರವು ಅಧಿಕ ಆಹಾರ ಕೊಡುವುದಾಗಿ ಭರವಸೆ ಇತ್ತಿದೆ ಆದ್ದರಿಂದ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಅಕ್ಕಿ ಪ್ರಮಾಣ ಹೆಚ್ಚಬಹುದು. ತಾತ್ಕಾಲಿಕವಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಿಗೆ ಆಹಾರ ಧಾನ್ಯವನ್ನು ಕಡಿಮೆ ಕೊಟ್ಟಿದೆ ಎಂದರು.

ಆಹಾರಾಭಾವದ ವಿಷಯದಲ್ಲಿ ಜನರಿಗೆ ಎಷ್ಟು ಅತೃಪ್ತಿಯುಂಟಾಗಿದೆಯೋ ಸರ್ಕಾರಕ್ಕೂ ಅಷ್ಟಿದೆ. ಸರಿಯಾಗಿ ಮಳೆ ಬೆಳೆಗಳಿಲ್ಲದೆ ಆಹಾರೋತ್ಪತ್ತಿ ಕಡಿಮೆ ಆಗಿದೆ. ಕಂಟ್ರೋಲ್ ಇರಬೇಕೆಂದು ಸರ್ಕಾರ ಇಚ್ಛಿಸುತ್ತಿಲ್ಲ. ಆಹಾರದ ವಿಷಯದಲ್ಲಿ ಮೈಸೂರಿಗೆ ಮಾತ್ರ ಅಭಾವ ಉಂಟಾಗಿಲ್ಲ. ಭಾರತಕ್ಕೆ ಉಂಟಾಗಿದೆ ಕೇಂದ್ರ ಸರ್ಕಾರವು ಬಟ್ಟೆಯನ್ನು ಡಾಲರ್ ಪಡೆಯಲು ರಫ್ತು ಮಾಡಿದ್ದರಿಂದ ಅಭಾವ ತೀವ್ರವಾಯಿತು. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಬಟ್ಟೆ ಅಭಾವ ತೊಲಗುವ ಭರವಸ ಇದೆ ಎಂದರು.

ನಂತರ ಶ್ರೀ ಸಿದ್ದಯ್ಯನವರು ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸು ಅಷ್ಟು ಕೆಟ್ಟಿಲ್ಲ. ೨ ವರ್ಷದಲ್ಲಿ ಇದರಿಂದ ಸರ್ಕಾರಕ್ಕೆ ಶೇ|| ೧೧ರಷ್ಟು ಲಾಭ ಬಂದಿದೆ. ಸಂಚಾರ ಸೌಲಭ್ಯವನ್ನು ಉತ್ತಮಪಡಿಸಲು ಬಸ್ ಲೈಸನ್ಸನ್ನು ಹೆಚ್ಚಿಸಿದೆ. ಲೋಪ ನಿವಾರಿಸಲು ಒಂದು ಸಮಿತಿಯನ್ನು ರಚಿಸಿದೆ, ಈ ಸರ್ವಿಸ್ಸನ್ನು ಕಾರ್ಪೊರೇಷನ್ನಾಗಿ ಮಾಡಲು ಆ ಸಮಿತಿ ಪರಿಶೀಲಿಸುವುದು ಎಂದರು.

ನ್ಯಾಯಾಂಗ ಸಚಿವ ಶ್ರೀ ಭಾಷ್ಯಂರವರು ಈ ವರ್ಷಾಂತ್ಯದಲ್ಲಿ ಎಲ್ಲಾ ತಾಲ್ಲೋಕುಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದೆಂಬ ಭರವಸ ಇದೆ ಇಲ್ಲಿಯವರೆಗೆ ವಿದ್ಯುಚ್ಛಕ್ತಿಯಿಂದ ಶೇ|| ೫ರಷ್ಟು ಲಾಭ ಬಂದಿದೆ ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ಬೇರ್ಪಡಿಸಲು ಸರ್ಕಾರ ಆತುರ ತೆಯಿಂದ ಬದೆ ಎಂದರು.

ನಂತರ ಅರ್ಥಸಚಿವ ದಾಸಪ್ಪನವರು ಮಾತನಾಡುತ್ತಾ ನಾನ್ ಗಜೆಟೆಡ್ ನೌಕರರಿಗೆ ತುಟ್ಟಿಭತ್ಯ ಹೆಚ್ಚಿಸಲು ಸಾಧ್ಯವಿಲ್ಲ. ಅಲ್ಪ ಲೋಪದೋಷಗಳನ್ನು ಗಮನಿಸುವುದರ ಬದಲು ಪರಸ್ಪರ ಸೌಹಾರ್ದದಿಂದ ಕೆಲಸ ಮಾಡೋಣ. ಮೈಸೂರು ಎಂದಿಗೂ ಖಾದಿಗೆ ಪ್ರೋತ್ಸಾಹನಿತ್ತಿದೆ ಮಹಾತ್ಮಾ ಗಾಂಧಿಯವರು ಬಯಸಿದ್ದಂತೆ ಏಕಮತ್ಯದಿಂದ ಒಂದೊಂದು ಕಾಸನ್ನು ಬಹಳ ಎಚ್ಚರಿಕೆಯಿಂದ ವೆಚ್ಚಮಾಡಿ ಜನರಿಗೆ ಅನುಕೂಲಪಡಿಸೋಣ ಎಂದರು

ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಾಳೆ ಉತ್ತರಕೊಡುವರು.

ಕಂಟ್ರೋಲ್ ಹೋಗಬೇಕು

ಶಾಸನಸಭೆಯಲ್ಲಿ ಶ್ರೀ ಡಿ. ಎಂ. ಸಿದ್ದಯ್ಯನವರು ಮಾತನಾಡುತ್ತಾ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾದಮೇಲೆ ಸುಖಸಂತೋಷದಿಂದ ಬಾಳಬಹುದೆಂಬ ಜನತೆಯ ಆಸೆ ವಿಫಲವಾಯಿತು. ಕಂಟ್ರೋಲಿನಿಂದ ಕಾಳಸಂತೆ ಹೆಚ್ಚಿದೆ. ರೈತರಿಗೆ ತೊಂದರೆ ಜಾಸ್ತಿಯಾಗಿದೆ ಅನೀತಿಗೆ ಕಂಟ್ರೋಲೇ ಕಾರಣ. ಆದುದರಿಂದ ಅದು ಹೋಗಬೇಕು ಎಂದರು.

ಫೀಜು ಜಾಸ್ತಿಮಾಡುವುದು ಬೇಡ

ಶ್ರೀ ಡಸ್ಸಪ್ಪೈರೇಗೌಡರು ಶಾಸನ ಸಭೆಯಲ್ಲಿ ಮಾತನಾಡಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಸರ್ಕಾರಿ ನೌಕರರಿಗೆ ಮಾತ್ರ ಸರಿಯಾದ ಪಡಿತರ ವ್ಯವಸ್ಥೆಯಿದೆ. ಉಳಿದವರಿಗೆ ರೂ. ಗೆ ೨ ಸೇರಿಯಷ್ಟು ಧಾನ್ಯ ಸಹ ದೊರೆಯುತ್ತಿಲ್ಲ. ಸರ್ಕಾರದ ಧಾನ್ಯ ವಸೂಲಿಕ್ರಮ ಸಹ ಸರಿಯಿಲ್ಲ. ಕಂಟ್ರೋಲುಗಳು ರದ್ದಾಗಬೇಕು. ಪ್ರಜಾ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಸರಿಯಾಗಿ ಮಾನ್ಯತೆ ಕೊಡದೆ ಮನಸ್ವೇಚ್ಛೆಯಾಗಿ ವರ್ತಿಸುವುದಾದರೆ ಅಂತಹ ಸರ್ಕಾರವನ್ನು 'ಪ್ರಜಾಪೀಡಿತ ಸರ್ಕಾರ' ವೆಂದು ಕರೆಯಬೇಕು ಹಿಂದಿನ ಸರ್ಕಾರಗಳ ನೀತಿಯನ್ನು ಖಂಡಿಸಿದ ನಾಯಕರೇ ಇಂದು ಆ ನೀತಿಯನ್ನು ಅನುಸರಿಸುತ್ತಿರುವುದರ ಅರ್ಥವೇನು? ಆಡಳಿತ ಚಕ್ಕಸಯು ಬಹಳ ಕೀಳ್ಮಟ್ಟದಲ್ಲಿದೆ ವಿಶ್ವವಿದ್ಯಾನಿಲಯದಲ್ಲಿ ಫೀಜು ಜಾಸ್ತಿಮಾಡುವುದು ಬೇಡ. ರಿಯಾಯಿತಿ ಕೊಡುವುದನ್ನು ಎಲ್ಲರಿಗೂ ಸರಿಯಾದ ರೀತಿಯಲ್ಲಿ ಒದಗಿಸಿ ಎಂದರು.

ಸರ್ಕಾರ ರಾಜೀನಾಮೆ ಕೊಡಲಿ

ಶ್ರೀ ಎ. ಜಿ. ರಾಮಚಂದ್ರರಾಯರು ಶಾಸನ ಸಭೆಯಲ್ಲಿ ಮಾತನಾಡುತ್ತಾ ಜವಾಬ್ದಾರಿ ಸರ್ಕಾರ ಬಂದ ಮೇಲೆ ಜನರ ಅತೃಪ್ತಿ ಜಾಸ್ತಿಯಾಗಿದೆ. ಮೈಸೂರು ಸೈನ್ಯವನ್ನು ಭಾರತವು ವಹಿಸಿಕೊಂಡ ಮೇಲೆ ಸುಮಾರು ೨೦೦೦ ಜನರಿಗೆ ಕೆಲಸವಿಲ್ಲದಂತಾಗಿದೆ. ಅವರಿಗೆ ಕೆಲಸ ಕೊಡುವ ಕೆಲಸವಾಗಿಲ್ಲ. ರಾಜಪ್ರಮುಖರು ಮತ್ತು ಮುಖ್ಯ ಮಂತ್ರಿಗಳ ಭರವಸೆ ಏನಾಯಿತು. ಈ ವಿಚಾರದಲ್ಲಿ ಈಗ ಆಗಿರುವ ಅನ್ಯಾಯವನ್ನು ಕೇಂದ್ರ ಸರ್ಕಾರ ಸರಿಪಡಿಸದಿದ್ದಲ್ಲಿ ನಮ್ಮ ಸರ್ಕಾರ ರಾಜೀನಾಮೆ ಕೊಡಲಿ, ನಾವೂ ರಾಜೀನಾಮೆ ಕೊಡುವೆವು ಕಂಟ್ರೋಲಿನಿಂದ ಲಂಚ ಹೆಚ್ಚಿದೆ. ಇರುವುದು, ಆದ್ದರಿಂದ ಅದನ್ನು ತೆಗೆಯಬೇಕು ಎಂದು ಹೇಳಿರುವರು.

ಆಜ್ಞೆ ರಾಜ್ಯಾಂಗ ವಿರುದ್ಧ

ಮದರಾಸ್ ಶ್ರೇಷ್ಠ ನ್ಯಾಯಾಸ್ಥಾನದ ತೀರ್ಪಿನ ವಿರುದ್ಧ ಮದರಾಸ್ ಸರ್ಕಾರವು ಹಾಕಿರುವ ಕೋಮು ಕೋಮುಗಳಿಗೆ ಇಷ್ಟಿಷ್ಟು ಸಂಖ್ಯೆಯೆಂದು ನಿರ್ದಿಷ್ಟಪಡಿಸುವ ಕಾಲೇಜು ಪ್ರವೇಶಕ್ಕ ಸಂಬಂಧಪಟ್ಟ ಮದರಾಸ್ ಸರ್ಕಾರದ ಆಜ್ಞೆ ಭಾರತ ರಾಜ್ಯಾಂಗದ [illegible] ವಿರುದ್ಧವಾಗಿದೆ ಎಂದು ಶ್ರೇಷ್ಠ ನ್ಯಾಯಾಧೀಶ ಶ್ರೀ ಹೆಚ್. ಕಾನಿಯಾರವರು ತೀರ್ಪಿತ್ತರು.

ಮಿ|| ಇಸ್ಮಾಯಿಲ್‌ರವರು ಇಂಡೋನೇಷ್ಯಾಕ್ಕೆ

ಮೈಸೂರಿನ ಮಾಜಿ ದಿವಾನರಾದ ಮಿ|| ಮಿರ್ಜಾ ಇಸ್ಮಾಯಿಲ್‌ರವರು ಇಂಡೋನೇಷ್ಯಾಕ್ಕೆ ಸಂಯುಕ್ತ ರಾಷ್ಟ್ರ ಪರಿಷತ್ತಿನಿಂದ ಟೆಕ್ನಿಕಲ್ ಸಹಾಯಕ್ಕಾಗಿ ಪ್ರತಿನಿಧಿಯಾಗಿ ತೆರಳುವರು. ಅವರು ಲೇಕ್‌ಸಕ್ಸೆಸ್ಸಿಗೆ ತೆರಳಿ ಅಲ್ಲಿ ಈ ವಿಷಯವನ್ನು ಚರ್ಚಿಸಿ ನಂತರ ಏಪ್ರಿಲ್ ಕೊನೆಯ ಹೊತ್ತಿಗೆ ಭಾರತಕ್ಕೆ ಹಿಂತಿರುಗಿ ಮೇ ಮೊದಲನೆ ಇಂಡೋನೇಷ್ಯಾಕ್ಕೆ ತೆರಳುವರು. ಇಂಡೋನೇಷ್ಯಾದ ಉಪ ಮೇರೆ ಪಂಡಿತ ನೆಹರೂರವರ ಸಲಹೆಯಂತೆ ಇವರನ್ನು ನೇಮಿಸಲಾಗಿದೆ. ಇವರು ಒಬ್ಬ ರಾಜ್ಯಭಾರಿಯ ಅರ್ಹತೆಯನ್ನು ಹೊಂದಿರುವರು

ಕಾಶ್ಮೀರದ ಹೊಸ ಯೋಜನೆ ಮೇಲೆ ಭಾರತ ಸರ್ಕಾರದ ಪ್ರತಿಕ್ರಿಯೆ

ಬ್ರಿಟಿಷ್—ಅಮೆರಿಕಾದ ಕಾಶ್ಮೀರದ ಹೊಸ ನಿರ್ಣಯದ ಬಗ್ಗೆ ಭಾರತ ಸರ್ಕಾರವು ತನ್ನ ಆಖೈರು ನಿರ್ಧಾರವನ್ನು ಮುಂದಿನ ವಾರ ಪ್ರಕಟಿಸಬಹುದೆಂದು ಹೇಳಲಾಗಿದೆ. ಭಾರತದ ಕಲವು ಆಕ್ಷೇಪಣೆಗಳು ಈ ಹೊಸ ನಿರ್ಣಯದಲ್ಲಿರುವುದೆಂದೂ ಅದರಲ್ಲಿ ಮುಖ್ಯವಾದುದು ಕಾಶ್ಮೀರದಲ್ಲಿ ಪಂಚಾಯಿತಿಯನ್ನೇರ್ಪಡಿಸಕೂಡದೆಂಬ ಭಾರತದ ಆಕ್ಷೇಪಣೆಯು ಹಾಗೆಯೇ ಇರುವುದರಿಂದಲೂ ಮತ್ತು ಸೈನ್ಯವನ್ನು ಕಾಶ್ಮೀರದಿಂದ ಹಿಂತೆಗೆಯಬೇಕೆಂಬ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನಗಳಿಗೆ ಆಗಿರುವ ಕಲವು ಒಪ್ಪಂದಗಳನ್ನು ಮತ್ತೆ ಚರ್ಚೆಗೆ ತರಬೇಕೆಂದು ಈ ನಿರ್ಣಯದಲ್ಲಿರುವುದರಿಂದಲೂ ಈ ನಿರ್ಣಯನ್ನು ಭಾರತವು ಒಪ್ಪುವುದು ಅನುಮಾನವೆಂದು ಹೇಳಲಾಗಿದೆ.

೫ ಜನರಿಗೆ ವಿಮಾನ ಪ್ರಯಾಣದ ತಡೆ

ಬೊಂಬಾಯಿಂದ ಲಂಡನ್ನಿಗ ಹೊರಟ ಏರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನದಲ್ಲಿ ಐದುಪ್ರಯಾಣಿಕರು ಸುಳ್ಳು ಹೆಸರಿನಲ್ಲಿ ರಹದಾರಿಯನ್ನು ಹೊಂದಿದ್ದರೆಂದು ಅವರನ್ನು ಸಾಂತಾ ಕ್ರೂಸ್ ವಿಮಾನ ನಿಲ್ದಾಣದಲ್ಲಿ ವಿಮಾನ ಹೊರಡುವುದಕ್ಕೆ ಮುಂಚೆಯೇ ವಿಮಾನದಿಂದ ಇಳಿಸಿ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಹೈದರಾಬಾದಿಗೆ ಸರ್ ಮಿರ್ಜಾ

ಮೈಸೂರಿನ ಮಾಜಿ ದಿವಾನರಾದ ಅಮಿನುಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮೈಲ್‌ರವರು ಹೈದರಾಬಾದ್ ನಿಜಾಮರ ಆಹ್ವಾನದ ಮೇಲೆ ಹೈದರಾಬಾದಿಗೆ ಮಾರ್ಚಿ ೨೮ನೇ ತಾ|| ಹೋಗುವರೆಂದು ಗೊತ್ತಾಗಿದೆ.

ಒಂದಕ್ಕೆರಡರಷ್ಟು ಸೈನ್ಯ

ಇರಾನಿನ ಬಳಿಇರುವ ಸೋವಿಯಟ್ ರಷ್ಯದ ಸೈನ್ಯವನ್ನು ಎರಡರಷ್ಟು ಹೆಚ್ಚಿಸಲಾಗಿದೆ ಎಂದು ಮಾಸ್ಕೋ ರೇಡಿಯೋ ತಿಳಿಸಿದೆ. ಬ್ರಿಟಿಷ್ ಸೈನ್ಯವೇನಾದರೂ ಇರಾನಿನ ಒಳಕ್ಕೆ ಪ್ರವೇಶಿಸಿದರೆ ತಕ್ಷಣವೇ ರಷ್ಯಾವೂ ಗಡಿದಾಟಿ ಬರಬಹುದೆಂದು ಕೆಲವೆಡೆಗಳಲ್ಲಿ ಹೇಳಲಾಗುತ್ತಿದೆ.

ದೆಹಲಿಯಲ್ಲಿ ಬೆಂಕಿ

ದೆಹಲಿಯ ಜನನಿಬಿಡ ಇಕ್ಕಟ್ಟಿನ ಪ್ರದೇಶವಾದ ಸದ್ದರ್ ಬಜಾರ್ ಪ್ರದೇಶದಲ್ಲಿ ಸಾಗುವಾನಿ ಡಿಪೋವೊಂದಕ್ಕೆ ಬೆಂಕಿ ಬಿದ್ದು ಕೂಡಲೇ ಸುತ್ತಮುತ್ತಲ ಪ್ರದೇಶಗಳಿಗೆಲ್ಲಾ ಬೆಂಕಿಹರಡಿತು. ಅನೇಕ ಗುಡಿಸಲುಗಳು ಸುಟ್ಟುಹೋದುದಲ್ಲದೆ ಹೊಸದಾಗಿ ಪ್ರಾರಂಭಿಸಿದ ಶಾಲಾ ಕಟ್ಟಡವೂ ಉರಿದುಹೋಯಿತು. ಅಂಗಡಿಗಳು, ಮನೆಗಳು, ಇತರ ಕಟ್ಟಡಗಳಲ್ಲಿದ್ದ ಜನರೆಲ್ಲ ಗಾಬರಿಯಿಂದ ಸಿಕ್ಕಿದ ಸಾಮಾನುಗಳನ್ನು ಹಿಡಿದುಕೊಂಡು ಸುರಕ್ಷಿತ ಪ್ರದೇಶಗಳಿಗೆ ಓಡಿದರು ಪ್ರಾಣಹಾನಿಯೇನೂ ಸಂಭವಿಸಿದಂತೆ ವರದಿಯಾಗಿಲ್ಲ. ಒಂದು ಲಕ್ಷ ರೂ ನಷ್ಟವಾಗಿದೆ.

ಓಂತಿರುಗಲು ಇಚ್ಛೆಯಿಲ್ಲ

ಸಿಂಕಿಯಾಂಗಿನ ಒಂದು ಭಾಗದಲ್ಲಿ ನೆಲೆಸಿರುವ ೩೦೦ ಜನ ನಿರಾಶ್ರಿತರು ಮತ್ತೆ ಸಿಂಕಿಯಾಂಗಿಗೆ ಹಿಂತಿರುಗಲು ಇಷ್ಟಪಡುತ್ತಿಲ್ಲವೆಂದು ಸಿಂಕಿಯಾಂಗಿನ ಸಕ್ರೆಟರಿ ಜನರಲ್ ಆಗಿದ್ದು ಮತ್ತು ಚೈನಾದ ಕಮ್ಯೂನಿಸ್ಟರು ಸಿಂಕಿಯಾಂಗನ್ನು ಆಕ್ರಮಿಸಿಕೊಂಡಾಗಿನಿಂದ ದೇಶಭ್ರಷ್ಟರಾಗಿರುವ ಮಿ|| ಇಸಾಮುಸಾಫ್ ಅಲಿಪ್ಟಕಿಂಗ್ ಎಂಬುವವರು ಹೇಳಿದ್ದಾರೆ

ಅರ್ಜಿ ವಜಾ

ಕಡಲೂರಿನ ಸೆಂಟ್ರಲ್ ಜೈಲಿನಲ್ಲ ಡಿಟಿನ್ಯೂ ಆಗಿದ್ದ ಕಮ್ಯೂನಿಸ್ಟ್, ಶ್ರೀ ಟಿ ಕೆ. ಗೋಪಾಲನ್‌ರವರು ಮದ್ರಾಸ್ ಸರ್ಕಾರವು ಅವರ ವಿಚಾರಣೆ ಮುಗಿದು ತೀರ್ಪು ಕೊಡುವುದಕ್ಕೂ ಮುಂಚೆ ತಮ್ಮ ಪುನರ್ಬಂಧನಕ್ಕೆ ಆಜ್ಞೆ ಹೊರಡಿಸಿದ್ದುದು ಕಂಟೆಂಪ್ಟ್ ಆಫ್ ಕೋರ್ಟ್ ಎಂದು ಅರ್ಜಿಯನ್ನು ಸಲ್ಲಿಸಿದ್ದರು. ಮದ್ರಾಸ್ ಹೈಕೋರ್ಟಿನ ಜಸ್ಟಿಸ್ ಶ್ರೀ ಸತ್ಯನಾರಾಯಣರಾವ್ ಮತ್ತು ಜಸ್ಟಿಸ್ ಶ್ರೀ ರಾಘವರಾವ್‌ರವರು ಈ ಅರ್ಜಿಯನ್ನು ತಳ್ಳಿಹಾಕಿದರು

ಪುನರ್ಬಂಧನ ಆಜ್ಞೆಯು ಕಾನೂನು ಬದ್ಧವಾಗಿಲ್ಲವೆಂದೂ ಅಪ್ರಮಾಣಿಕವೆಂದೂ ಸಾಧಿಸಿ ಇದೇ ನ್ಯಾಯಾಧೀಶರುಗಳು ಕೆಲವು ದಿನಗಳ ಹಿಂದೆ ತೀರ್ಮಾನಿಸಿದ್ದರು ತಮ್ಮ ತೀರ್ಪಿನಲ್ಲಿ ತಾವು ಸರ್ಕಾರದ ಬಗ್ಗೆ ನಿಂದನೆಯ ಮಾತನ್ನಾಡಿರುವುದೆ ನಾಕಂದೂ ಸರ್ಕಾರದ ಮೇಲೆ ಇನ್ನಾವ ಕ್ರಮವೂ ಬೇಡವೆಂದೂ ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡುವುದಾಗಿಯೂ ನ್ಯಾಯಾಧೀಶರುಗಳು ತಿಳಿಸಿದರು.

ವರ್ಗಾ ಮತ್ತು ರಜಾ

ಚಿತ್ರದುರ್ಗದ ಜಿಲ್ಲೆಯ ಎಗ್ಸಿಕ್ಯುಟೀವ್ ಇಂಜನೀಯರ್ ಶ್ರೀ ಕೆ. ಏ ಸಿದ್ದಬಸವಯ್ಯನವರನ್ನು ಭದ್ರಾವತಿ ಆಣೆಕಟ್ಟಿನ ಡಿವಿಷನ್ನಿಗೆ ವರ್ಗಾಯಿಸಿದ್ದು ಆಜ್ಞೆಯಾಗಿದೆ.

ಎಗ್ಸಿಕ್ಯುಟೀವ್ ಇಂಜನೀಯರ್ ಶ್ರೀ ಆರ್. ಎಚ್. ರಾಜುರವರನ್ನು ಅರಮನೆಯಿಂದ ಭದ್ರಾವತಿ ಆಣೆಕಟ್ಟಿನ ಡಿವಿಜನ್ನಿಗೆ ವರ್ಗಾಮಾಡಿದೆ.

ಭದ್ರಾವತಿ ಅಣೆಕಟ್ಟಿನ ಎಗ್ಸಿಕ್ಯುಟೀವ್ ಇಂಜನೀಯರ್ ಶ್ರೀ ಹೆಚ್. ಸಿ. ಕಭಟ್ಟರವರಿಗೆ ಮಾರ್ಚಿ ೭ ರಿಂದ ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಟ್ಟಿದೆ

ಆಜಾದರು ವಿದೇಶಕ್ಕೆ

ಕೇಂದ್ರ ವಿದ್ಯಾಮಂತ್ರಿ ಶ್ರೀ ಮೌಲಾನಾ ಅಬುಲ್‌ಕಲಾಂ ಆಜಾದರು ತಮ್ಮ ಆರೋಗ್ಯವು ಸರಿಯಾಗಿಲ್ಲದಿರುವುದರಿಂದ ಪಾರ್ಲಿಮೆಂಟ್ ಚರ್ಚೆ ಮುಗಿದ ಮೇಲೆ ವಿದೇಶಕ್ಕೆ ಒರಿಸ್ಸಾ ಗೌರ್ನರ್ ಶ್ರೀ ಅಸಫ್ ಅಲಿಯವರೊಡನೆ ತೆರಳುವರೆಂದು ಹೇಳಲಾಗಿದೆ

ಡಾ|| ರಾಜೇಂದ್ರ ಪ್ರಸಾದರಿಂದ ಆರಂಭೋತ್ಸವ

ಅಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ಭಾರತದಲ್ಲೆ ಮೊದಲನೆಯದೂ ಮತ್ತು ದೊಡ್ಡದೂ ಆದ ಒಂದು ನಿರಾಶ್ರಿತ ಹೆಂಗಸರ ಕಾಲೋನಿಯ ಆರಂಭೋತ್ಸವ ನಡೆಸಿದರು ಇದಕ್ಕೆ "ಕಸ್ತೂರ್ಬಾ ನಿಕೇತನ" ಎಂದು ಹೆಸರಿಡಲಾಗಿದೆ.

ರಾಷ್ಟ್ರಪತಿ ಮತ್ತು ಪಂ|| ನೆಹರೂರವರಿಗೂ ಬಣ್ಣ ಬಿತ್ತು

ಬಣ್ಣದ ನೀರು ಮತ್ತು ಗೂಲಾಲನ್ನು ಹಿಡಿದುಕೊಂಡು ಕೆಲವು ಗಂಡಸರು ಸರ್ಕಾರಿ ಭವನದಲ್ಲಿ ರಾಷ್ಟ್ರಪತಿಗೆ ಶುಭಾಶಯ ಕೋರಲು ಬಂದು ಸಿಬ್ಬಂದಿಯ ಮೇಲೆಲ್ಲಾ ಬಣ್ಣ ಎರಚಿದರು. ಅನಂತರ ರಾಷ್ಟ್ರಪತಿಯವರು ಎಸ್ಟೇಟಿನ ಮಕ್ಕಳಿಗೆ ಸಿಹಿ ಹಂಚಿದರು. ಪಂ|| ನೆಹರೂರವರು ಸರ್ಕಾರಿ ಕಾಗದ ಪತ್ರ ಪರಿಶೀಲಿಸುತ್ತಿದ್ದಾಗ ಅವರ ಮೇಲೂ ಅವರ ಸೆಕ್ರಟರಿಯವರ ಮೇಲೂ ಲೆಕ್ಕವಿಲ್ಲದಷ್ಟು ಜನ ನುಗ್ಗಿ ಬಣ್ಣವನ್ನು ಎರಚಿದರು. ಗುಂಪಿನವರೊಬ್ಬರಿಂದ ಪಂ|| ನೆಹರೂರವರೂ ಬಣ್ಣದ ಬಕೆಟನ್ನು ಕಿತ್ತುಕೊಂಡು ಎಲ್ಲರಿಗೂ ಎರಚಿದರು.

ಇನ್ನೊಬ್ಬರ ದಸ್ತಗಿರಿ

ಪಾಕಿಸ್ತಾನದ ಮಹಿಳಾ ನ್ಯಾಷನಲ್ ಗಾರ್ಡುಗಳ ಕಮ್ಯಾಂಡಿಂಗ್ ಆಫೀಸರ್ ಮೇಜರ್ ಮಿಸ್ ಖಾನ್‌ರನ್ನು ಕೆಲಸದಿಂದ ವಜಾಮಾಡಿ ಗೃಹಬಂಧನದಲ್ಲಿಡಲಾಗಿದೆ ಪಾಕಿಸ್ತಾನ ಸರ್ಕಾರದ ಪೋಲಿಸ ಪಿತೂರಿಯಲ್ಲಿ ಅವರ ಕೈಯೂ ಇತ್ತೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ ಮೈಸೂರು ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

OFFICE OF THE MUNICIPAL ENGINEER
CITY MUNICIPAL COUNCIL

Dated 15th March 1951

NOTIFICATION

Sealed tenders will be received up to 4 p m. on 29-3-51 by the Municipal Engineer for collection and consolidation of road materials in the City for the year 1951-52

Each tender other than that of a registered contractor in the Municipality must be accompanied with a challan for having remitted Rs 200/-in Municipal Treasury as earnest money For full particulars please see the detailed notification on the notice board.

(Sd) V. K MUKUNDAM
Municipal Engineer

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೩—೧೯೫೧ ನೆ ಮಂಗಳವಾರ [ಸಂಚಿಕೆ ೧೬೮

ಮತ್ತೆ ಭೇಟಿ

ಸಂಸ್ಥಾನ ಇಲಾಖೆ ಸೆಕ್ರೆಟರಿ ಶ್ರೀ ವಿ.ಪಿ. ಮೆನನ್ನರು ಬೆಂಗಳೂರಿನಿಂದ ಹೈದರಾಬಾದಿಗೆ ವಿಮಾನದಲ್ಲಿ ಹೊರಟರು. ಅವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಂಡನ್‌ರವರೊಡನೆ ಏಪ್ರಿಲ್ ೧೫ರ ಹೊತ್ತಿಗೆ ಮತ್ತೆ ತಿರುವಾಂಕೂರಿಗೆ ಭೇಟಿ ಕೊಡುವರೆಂದು ಹೇಳಲಾಗಿದೆ.

ದಸ್ತಗಿರಿ

ಕಲ್ಕತ್ತಾವಿನ ಡಾ|| ರಾಯ್ ಎಂಬುವವರು ಮದರಾಸಿನ ಒಂದು ಹೋಟೇಲಿನಲ್ಲಿ ಇದ್ದುಕೊಂಡು ಗುಮಾಸ್ತರು ಕೆಲಸಕ್ಕೆ ಬೇಕು ಎಂದು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಪಡಿಸಿ, ಅದರಂತೆ ಕೆಲಸಕ್ಕೆ ಬಂದ ಇಬ್ಬರು ಆಂಗ್ಲೋ ಇಂಡಿಯನ್ ಹುಡುಗಿಯರನ್ನು ಅವಮಾನ ಪಡಿಸಿದರೆಂದು ಪೋಲೀಸರು ಅವರನ್ನು ದಸ್ತಗಿರಿಮಾಡಿದ್ದಾರೆ.

ಏಪ್ರಿಲ್ ಅಥವಾ ಮೇನಲ್ಲಿ ಅಕ್ಕಿ ಪ್ರಮಾಣ ಹೆಚ್ಚಬಹುದು

ಎಂದು ಶ್ರೀ ಟಿ. ಮರಿಯಪ್ಪನವರ ಭರವಸೆ

ಬೆಂಗಳೂರು ಮಾ. ೨೬

ಇಂದು ಶಾಸನ ಸಭೆಯಲ್ಲಿ ಶ್ರೀ ಟಿ. ಮರಿಯಪ್ಪನವರು ಆಹಾರದ ಅಭಾವವನ್ನು ವಿಷದಪಡಿಸುತ್ತಾ ಕೇಂದ್ರ ಸರ್ಕಾರವು ಅಧಿಕ ಆಹಾರ ಕೊಡುವುದಾಗಿ ಭರವಸೆ ಇತ್ತಿದೆ. ಆದ್ದರಿಂದ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಅಕ್ಕಿ ಪ್ರಮಾಣ ಹೆಚ್ಚಬಹುದು. ತಾತ್ಕಾಲಿಕವಾಗಿ ಮೈಸೂರು ಮತ್ತು ಬೆಂಗಳೂರು ನಗರಗಳಿಗೆ ಆಹಾರ ಧಾನ್ಯವನ್ನು ಕಡಿಮೆ ಕೊಟ್ಟಿದೆ ಎಂದರು.

ಆಹಾರಾಭಾವದ ವಿಷಯದಲ್ಲಿ ಜನರಿಗೆ ಎಷ್ಟು ಅತೃಪ್ತಿಯುಂಟಾಗಿದೆಯೋ ಸರ್ಕಾರಕ್ಕೂ ಅಷ್ಟಿದೆ. ಸರಿಯಾಗಿ ಮಳೆ ಬೆಳೆಗಳಿಲ್ಲದೆ ಆಹಾರೋತ್ಪತ್ತಿ ಕಡಿಮೆ ಆಗಿದೆ. ಕಂಟ್ರೋಲ್ ಇರಬೇಕೆಂದು ಸರ್ಕಾರ ಇಚ್ಛಿಸುತ್ತಿಲ್ಲ. ಆಹಾರದ ವಿಷಯದಲ್ಲಿ ಮೈಸೂರಿಗೆ ಮಾತ್ರ ಅಭಾವ ಉಂಟಾಗಿಲ್ಲ, ಭಾರತಕ್ಕೆ ಉಂಟಾಗಿದೆ. ಕೇಂದ್ರ ಸರ್ಕಾರವು ಬಟ್ಟೆಯನ್ನು ಡಾಲರ್‌ಪಡೆಯಲು ರಫ್ತು ಮಾಡಿದ್ದರಿಂದ ಅಭಾವ ತೀವ್ರವಾಯಿತು. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಬಟ್ಟೆ ಅಭಾವ ತೊಲಗುವ ಭರವಸೆ ಇದೆ ಎಂದರು.

ನಂತರ ಶ್ರೀ ಸಿದ್ಧಯ್ಯನವರು ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸು ಅಷ್ಟು ಕೆಟ್ಟಿಲ್ಲ. ೨ ವರ್ಷದಲ್ಲಿ ಇದರಿಂದ ಸರ್ಕಾರಕ್ಕೆ ಲ|| ೧೦ರಷ್ಟು ಲಾಭ ಬಂದಿದೆ. ಸಂಚಾರ ಸೌಲಭ್ಯವನ್ನು ಉತ್ತಮಪಡಿಸಲು ಬಸ್ ಲೈಸನ್ಸನ್ನು ಹೆಚ್ಚಿಸಿದೆ. ಲೋಪ ಸರಿಪಡಿಸಲು ಒಂದು ಸಮಿತಿಯನ್ನು ರಚಿಸಿದೆ, ಈ ಸರ್ವಿಸ್ಸನ್ನು ಕಾರ್ಪೊರೇಷನ್ನಾಗಿ ಮಾಡಲು ಆ ಸಮಿತಿ ಪರಿಶೀಲಿಸುವುದು ಎಂದರು.

ನ್ಯಾಯಾಂಗ ಸಚಿವ ಶ್ರೀ ಭಾಷ್ಯಂರವರು ಈ ವರ್ಷಾಂತ್ಯದಲ್ಲಿ ಎಲ್ಲಾ ತಾಲ್ಲೋಕುಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದೆಂಬ ಭರವಸೆ ಇದೆ. ಇಲ್ಲಿಯವರೆಗೆ ವಿದ್ಯುಚ್ಛಕ್ತಿಯಿಂದ ಲ|| ೫೦ರಷ್ಟು ಲಾಭ ಬಂದಿದೆ. ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ಬೇರ್ಪಡಿಸಲು ಸರ್ಕಾರ ಕಾತುರತೆಯಿಂದಿದೆ ಎಂದರು.

ನಂತರ ಅರ್ಥಸಚಿವ ವಾಸಪ್ಪನವರು ಮಾತನಾಡುತ್ತಾ ನಾನ್ ಗಜೆಟೆಡ್ ನೌಕರರಿಗೆ ತುಟ್ಟಿಭತ್ಯ ಹೆಚ್ಚಿಸಲು ಸಾಧ್ಯವಿಲ್ಲ. ಅಲ್ಪ ಲೋಪದೋಷಗಳನ್ನು ಗಮನಿಸುವುದರ ಬದಲು ಪರಸ್ಪರ ಸೌಹಾರ್ದದಿಂದ ಕೆಲಸ ಮಾಡೋಣ. ಮೈಸೂರು ಎಂದಿಗೂ ಖಾದಿಗೆ ಪ್ರೋತ್ಸಾಹನಿತ್ತಿದೆ. ಮಹಾತ್ಮಾ ಗಾಂಧಿಯವರು ಬಯಸಿದ್ದಂತೆ ಏಕಮತ್ಯದಿಂದ ಒಂದೊಂದು ಕಾಸನ್ನು ಬಹಳ ಎಚ್ಚರಿಕೆಯಿಂದ ವೆಚ್ಚಮಾಡಿ ಜನರಿಗೆ ಅನುಕೂಲಪಡಿಸೋಣ ಎಂದರು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ಉತ್ತರಕೊಡುವರು.

ಕಂಟ್ರೋಲ್ ಹೋಗಬೇಕು

ಶಾಸನಸಭೆಯಲ್ಲಿ ಶ್ರೀ ಡಿ. ಎಂ. ಸಿದ್ದಯ್ಯನವರು ಮಾತನಾಡುತ್ತಾ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾದಮೇಲೆ ಸುಖಸಂತೋಷದಿಂದ ಬಾಳಬಹುದೆಂಬ ಜನತೆಯ ಆಸೆ ವಿಫಲವಾಯಿತು. ಕಂಟ್ರೋಲಿನಿಂದ ಕಾಳಸಂತೆ ಹೆಚ್ಚಿದೆ. ರೈತರಿಗೆ ತೊಂದರೆ ಜಾಸ್ತಿಯಾಗಿದೆ. ಅನೀತಿಗೆ ಕಂಟ್ರೋಲೇ ಕಾರಣ. ಆದುದರಿಂದ ಅದು ಹೋಗಬೇಕು ಎಂದರು.

ಫೀಜು ಜಾಸ್ತಿಮಾಡುವುದು ಬೇಡ

ಶ್ರೀ ಚನ್ನಬೈರೇಗೌಡರು ಶಾಸನ ಸಭೆಯಲ್ಲಿ ಮಾತನಾಡಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಸರ್ಕಾರಿ ನೌಕರರಿಗೆ ಮಾತ್ರ ಸರಿಯಾದ ವಸತಿಯ ವ್ಯವಸ್ಥೆಯಿದೆ. ಉಳಿದವರಿಗೆ ರೂ. ೧ ಕ್ಕೆ ೨ ಆಣೆಯಷ್ಟು ಧಾನ್ಯ ಸಹ ದೊರೆಯುತ್ತಿಲ್ಲ. ಸರ್ಕಾರದ ಧಾನ್ಯ ವಸೂಲಿಕ್ರಮ ಸಹ ಸರಿಯಿಲ್ಲ. ಕಂಟ್ರೋಲುಗಳು ರದ್ದಾಗಬೇಕು. ಪ್ರಜಾ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಸರಿಯಾಗಿ ಮಾನ್ಯತೆ ಕೊಡದೆ ಮನಸ್ವೇಚ್ಛೆಯಾಗಿ ವರ್ತಿಸುವುದಾದರೆ ಅಂತಹ ಸರ್ಕಾರವನ್ನು 'ಪ್ರಜಾಪೀಡಿತ ಸರ್ಕಾರ' ವೆಂದು ಕರೆಯಬೇಕು. ಹಿಂದಿನ ಸರ್ಕಾರಗಳ ನೀತಿಯನ್ನು ಖಂಡಿಸಿದ ನಾಯಕರೇ ಇಂದು ಆ ನೀತಿಯನ್ನು ಅನುಸರಿಸುತ್ತಿರುವುದರ ಅರ್ಥವೇನು? ಆಡಳಿತ ದಕ್ಷತೆಯು ಬಹಳ ಕೀಳ್ಮಟ್ಟದಲ್ಲಿದೆ. ವಿಶ್ವವಿದ್ಯಾನಿಲಯದಲ್ಲಿ ಫೀಜು ಜಾಸ್ತಿಮಾಡುವುದು ಬೇಡ. ರಿಯಾಯಿತಿ ಕೊಡುವುದನ್ನು ಎಲ್ಲರಿಗೂ ಸರಿಯಾದ ರೀತಿಯಲ್ಲಿ ಒದಗಿಸಿ ಎಂದರು.

ಸರ್ಕಾರ ರಾಜೀನಾಮೆ ಕೊಡಲಿ

ಶ್ರೀ ಎ. ಜಿ. ರಾಮಚಂದ್ರರಾಯರು ಶಾಸನ ಸಭೆಯಲ್ಲಿ ಮಾತನಾಡುತ್ತಾ ಜವಾಬ್ದಾರಿ ಸರ್ಕಾರ ಬಂದ ಮೇಲೆ ಜನರ ಅತೃಪ್ತಿ ಜಾಸ್ತಿಯಾಗಿದೆ. ಮೈಸೂರು ಸೈನ್ಯವನ್ನು ಭಾರತವು ವಹಿಸಿಕೊಂಡ ಮೇಲೆ ಸುಮಾರು ೨೦೦೦ ಜನಗಳಿಗೆ ಕೆಲಸವಿಲ್ಲದಂತಾಗಿದೆ. ಅವರಿಗೆ ಕೆಲಸ ಕೊಡುವ ಏರ್ಪಾಡು ಮಾಡುವೆವೆಂದು ರಾಜಪ್ರಮುಖರು ಮತ್ತು ಮುಖ್ಯ ಮಂತ್ರಿಗಳ ಭರವಸೆ ವಿಫಲವಾಯಿತು. ಈ ವಿಚಾರದಲ್ಲಿ ಈಗ ಆಗಿರುವ ಅನ್ಯಾಯವನ್ನು ಕೇಂದ್ರ ಸರ್ಕಾರ ಸರಿಪಡಿಸದಿದ್ದಲ್ಲಿ ನಮ್ಮ ಸರ್ಕಾರ ರಾಜೀನಾಮೆ ಕೊಡಲಿ, ನಾವೂ ರಾಜೀನಾಮೆ ಕೊಡುವೆವು. ಕಂಟ್ರೋಲಿನಿಂದ ಲಂಚ ಮುಂತಾದವು ಇರುವುದು, ಆದ್ದರಿಂದ ಅದನ್ನು ತೆಗೆಯಬೇಕು ಎಂದು ಹೇಳಿದರು.

ಆಜ್ಞೆ ರಾಜ್ಯಾಂಗ ವಿರುದ್ಧ

ಮದರಾಸ್ ಶ್ರೇಷ್ಠ ನ್ಯಾಯಾಸ್ಥಾನದ ತೀರ್ಪಿನ ವಿರುದ್ಧ ಮದರಾಸ್ ಸರ್ಕಾರವು ಹಾಕಿರುವ ಕೋಮು ಕೋಮುಗಳಿಗೆ ಇಷ್ಟಿಷ್ಟು ಸಂಖ್ಯೆಯೆಂದು ನಿರ್ದಿಷ್ಟಪಡಿಸುವ ಕಾಲೇಜು ಪ್ರವೇಶಕ್ಕೆ ಸಂಬಂಧಪಟ್ಟ ಮದರಾಸ್ ಸರ್ಕಾರದ ಆಜ್ಞೆ ಭಾರತ ರಾಜ್ಯಾಂಗದ ೨೯ (೨)ನೇ ಕಲಂಗೆ ವಿರುದ್ಧವಾಗಿದೆ ಎಂದು ಶ್ರೇಷ್ಠ ನ್ಯಾಯಾಧೀಶ ಶ್ರೀ ಹೆಚ್. ಕಾನಿಯಾರವರು ತೀರ್ಪಿತ್ತರು.

ಮಿ|| ಇಸ್ಮಾಯಿಲ್‌ರವರು ಇಂಡೋನೇಷ್ಯಾಕ್ಕೆ

ಮೈಸೂರಿನ ಮಾಜಿ ದಿವಾನರಾದ ಮಿ|| ಮಿರ್ಜಾ ಇಸ್ಮಾಯಿಲ್‌ರವರು ಇಂಡೋನೇಷ್ಯಾಕ್ಕೆ ಸಂಯುಕ್ತ ರಾಷ್ಟ್ರ ಪರಿಷತ್ತಿನಿಂದ ಟೆಕ್ನಿಕಲ್ ಸಹಾಯಕ್ಕಾಗಿ ಪ್ರತಿನಿಧಿಯಾಗಿ ತೆರಳುವರು. ಅವರು ಲೇಕ್‌ಸಕ್ಸೆಸ್ಸಿಗೆ ತೆರಳಿ ಅಲ್ಲಿ ಈ ವಿಷಯವನ್ನು ಚರ್ಚಿಸಿ ನಂತರ ಏಪ್ರಿಲ್ ಕೊನೆಯ ಹೊತ್ತಿಗೆ ಭಾರತಕ್ಕೆ ಹಿಂತಿರುಗಿ ಮೇ ಮೊದಲಿನಲ್ಲಿ ಇಂಡೋನೇಷ್ಯಾಕ್ಕೆ ತೆರಳುವರು. ಇಂಡೋನೇಷ್ಯಾದ ಇಚ್ಛೆ ಮೇರೆ ಪಂಡಿತ ನೆಹರೂರವರ ಸಲಹೆಯಂತೆ ಇವರನ್ನು ನೇಮಿಸಲಾಗಿದೆ. ಇವರು ಒಬ್ಬ ರಾಜ್ಯಭಾರಿಯ ಅರ್ಹತೆಯನ್ನು ಹೊಂದಿರುವರು.

ಮೈಸೂರು ಪುರಸಭೆಯ ಆಯವ್ಯಯ ಪಟ್ಟಿ

ಮೈಸೂರು ಮಾ. ೨೬

ಇಂದು ಮಧ್ಯಾಹ್ನ ಪೌರಸಭೆಯ ಬಜೆಟ್ಟಿನ ಒಂದು ವಿಶೇಷ ಸಭೆಯು ಅಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು

ಅಧ್ಯಕ್ಷರು ಭಾಷಣಮಾಡುತ್ತಾ ಪುರಸಭೆಗೆ ಸರ್ಕಾರವು ಈ ವರ್ಷಕ್ಕೆ ೫೦೦೦೦ ರೂ. ಗ್ರ್ಯಾಂಟ್ ಕೊಟ್ಟಿರುವುದು ಬಹಳ ಸಂತೋಷಕರವಾದ ವಿಷಯ ಈ ಹಣವನ್ನು ಯಾವುದಾದರೂ ಶಾಶ್ವತವಾದ ಕೆಲಸಕ್ಕೆ ಉಪಯೋಗಿಸಬೇಕು. ಈ ನವೆಂಬರ್ ಸಾಲಿನಲ್ಲಿ ಪುರಸಭೆಯು ಹಿಂದಕ್ಕೆ ಕೊಡಬೇಕಾದ ೪,೩೫,೦೦೦ ರೂ. ಸಾಲವನ್ನು ಪೂರ್ತಿಯಾಗಿ ತೀರಿಸಲು ಹಣವನ್ನು ಒದಗಿಸಿದೆ. ವರ್ಷ ವರ್ಷ ಕೊಡಬೇಕಾದ ಸಾಲದ ಕಂತುಗಳೂ ಸೇರಿ ಈ ವರ್ಷ ಸಾಲದ ತೀರ್ಪಿಗೆ ೫,೦೦,೩೦೦ ರೂ. ಗಳನ್ನು ಈ ಸಾಲಿನ ಬಜೆಟ್ಟಿನಲ್ಲಿ ಒದಗಿಸಲಾಗಿದೆ ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳ ಒಳ ಚರಂಡಿಗಳಿಗೋಸ್ಕರ ೬೫೦೦೦ ರೂ. ಗಳನ್ನು ತೆಗೆದಿಡಲಾಗಿದೆ ಎಂದರು ಈ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ ಆದಾಯವು ಹೋದ ಸಾಲಿನ ಆರಂಭದ ಉಳಿತಾಯವೂ ಸೇರಿ ೨೮,೮೪,೦೦೦ ರೂ. ಗಳೆಂದೂ ಖರ್ಚು ೫೧-೫೨ರ ಅಂತ್ಯದ ೨೫೦೦೦ ರೂ. ಉಳಿತಾಯವು ಬಿಟ್ಟು ೨೮,೫೯,೦೦೦ ರೂ. ಗಳೆಂದೂ ಈ ಆದಾಯವು ೫ ವರ್ಷಗಳ ಹಿಂದಿನ ಆದಾಯಕ್ಕಿಂತ ಶೇ|| ೬೫ ರಷ್ಟು ಹೆಚ್ಚಾಗಿದೆ ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಹಣಕಾಸಿನ ಪರಿಸ್ಥಿತಿಯು ಆಶಾದಾಯಕವಾಗಿದೆ ಎಂದರು.

ರಸ್ತೆಗಳಲ್ಲಿ ಧೂಳು ತಪ್ಪಿಸಲು, ರಸ್ತೆಗಳಿಗೆ ಟಾರನ್ನು ಹಾಕಲು ೫ ವರ್ಷದ ಒಂದು ಯೋಜನೆಯೊಂದನ್ನು ಮಾಡಿ ಅದಕ್ಕೆ ಬೇಕಾಗುವ ಹಣವನ್ನು ಒದಗಿಸುವುದು ಒಳ್ಳೆಯದು. ಮುಂದಿನ ಸಾಲಿನಲ್ಲಿ ಹಣಕಾಸಿನ ಪರಿಸ್ಥಿತಿಯು ಉತ್ತಮವಾಗಿರುವುದರಿಂದ ಯಾವ ಹೊಸ ಕಂದಾಯವಾಗಲಿ ಪುರಸಭೆಯು ಹಾಕುವುದಿಲ್ಲ. ಮೈಸೂರು ನಗರದ ನೀರಿನ ಸರಬರಾಜನ್ನು ಉತ್ತಮಗೊಳಿಸಲು ಒಂದು ಉಪಸಮಿತಿಯನ್ನು ಏರ್ಪಡಿಸಿ ವರದಿಯನ್ನು ಕೊಡಬೇಕೆಂದು ಸೂಚಿಸಲಾಗಿದೆ. ಚರಂಡಿಯ ವ್ಯವಸ್ಥೆಯನ್ನು ಸರ್ಕಾರದ ಸಹಾಯದಿಂದ ೫ ವರ್ಷಗಳಲ್ಲಾದರೂ ಮುಗಿಸಲು ಧ್ಯ ಎಂದು ಹೇಳಿದರು.

ಮದರಾಸಿನಲ್ಲಿ ಚುನಾವಣೆ ಡಿಶೆಂಬರ್‌ನಲ್ಲಿ

ಮದರಾಸಿನ ಶಾಸನ ಸಭೆಯಲ್ಲಿ ಹಣಕಾಸಿನ ಸಚಿವ ಶ್ರೀ ಗೋಪಾಲರೆಡ್ಡಿಯವರು ಇದೇ ಡಿಶೆಂಬರ್ ೧ ರಿಂದ ೨೧ರ ವರೆಗೆ ಚುನಾವಣೆ ನಡೆಯುವುದೆಂದು ಹೇಳಿದ್ದಾರೆ.

ಹೊಡೆದಾಟ

ಹಿಂದೂಗಳಿಗೂ ಮತ್ತು ಸಿಕ್ಖರಿಗೂ ಕಾನ್ಪುರದಲ್ಲಿ ಬಣ್ಣದ ನೀರನ್ನೆರಚಿದ್ದರಿಂದ ಹೊಡೆದಾಟ [illegible] ಗೊಂಡರು. ಪೋಲೀಸರು ೨೫ ಜನರನ್ನು ದಸ್ತಗಿರಿ ಮಾಡಿದರು. ಮತ್ತು ೧೪೪ನೇ ಸೆಕ್ಷನ್ ಜಾರಿಯಲ್ಲಿದೆ.

ಕರ್ಫ್ಯೂ ಆಜ್ಞೆ

ಲೂಧಿಯಾನಾದಲ್ಲಿ ಆರ್ಯ ಸಮಾಜದ ಒಂದು ಗುಂಪಿನ ಮೇಲೆ ಮತ್ತೊಂದು ಗುಂಪು ಕಲ್ಲುಗಳನ್ನೆಸೆದು ೧೨ ಜನರಿಗೆ ಗಾಯಗಳಾಗಿವೆ. ಪೋಲೀಸರು ಟಿಯರ್ ಗ್ಯಾಸನ್ನುಪಯೋಗಿಸಿ ಮತ್ತು ಗುಂಡನ್ನು ಹಾರಿಸಿ ಜನರನ್ನು ಚದುರಿಸಿದರು. ಈಗ ಅಲ್ಲಿ ಕರ್ಫ್ಯೂ ಆಜ್ಞೆ ವಿಧಿಸಲ್ಪಟ್ಟಿದೆ

ಸಕ್ಕರೆ ಬೆಲೆ ಇಳಿಯಿತು

ಹೈದರಾಬಾದ್ ಸರ್ಕಾರದವರು ೧ ಸೇರು ಸಕ್ಕರೆಗೆ ೧ ರೂ. ಇದ್ದಿದ್ದನ್ನು ೧೪ ಆಣೆ ೮ ಕಾಸಿಗೆ ಇಳಿಸಿದ್ದಾರೆ.

ಆಯುಧಗಳನ್ನುಪಯೋಗಿಸಕೂಡದು

ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳಲ್ಲಿ ಆಯುಧಗಳು, ಲಾರಿ ಅಥವಾ ದೊಣ್ಣೆ ಇವುಗಳನ್ನು ಉಪಯೋಗಿಸಬಾರದೆಂದು ಅಲ್ಲಿಯ ಕಮೀಷನ್ನರು ಆಜ್ಞೆ ಮಾಡಿದ್ದಾರೆ. ಮಾರ್ಚಿ ೨೯ರಂದು ಅಲ್ಲಿ ಚುನಾವಣೆಗಳಿರುವುದರಿಂದ ಬೀದಿಯಲ್ಲಿ ಕೂಗುವುದು ಹಾಡುಗಳನ್ನು ಮಾಡಕೂಡದೆಂದು ಆಜ್ಞೆಯಿತ್ತಿದ್ದಾರೆ.

ಈ ಪಟ್ಟಿಯ ಮೇಲೆ ೪ ಗಂಟೆಗಳ ಕಾಲ ಚರ್ಚೆ ನಡೆದು ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಂಡಿಸಿದ ನಿರ್ಣಯದ ಮೇಲೆ ಸರ್ವಾನುಮತದಿಂದ ಈ ಆಯವ್ಯಯಪಟ್ಟಿ ಅಂಗೀಕರಿಸಲಾಯಿತು.

ಶ್ರೀಗಳಾದ ಮನ್ಸೂರ್ ಹುಸೇನ್, ಡಾ|| ಟಿ. ಜಿ. ದಾಸ್, ಜಿ. ಅಹಮದ್ ಖಾನ್, ಎ. ವೆಂಕಟೇಶಯ್ಯ, ಚಾಮುಂಡಯ್ಯ ಮುದ್ದಣ್ಣ ಇನ್ನೂ ಇತರ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದ್ದರು.

ಮಾರ್ಷಲ್‌ಲಾ ಜಾರಿಗೆ

ಪರ್ಷಿಯಾದ ಏಳು ಎಣ್ಣೆ ಕಾರ್ಖಾನೆಗಳ ಕಾರ್ಮಿಕರು ಮುಷ್ಕರವನ್ನಾರಂಭಿಸಿದುದರಿಂದ ಅವರು ಕಾರ್ಖಾನೆಗಳಲ್ಲೂ ಮಾರ್ಷಲ್‌ಲಾವನ್ನು ಜಾರಿ ಮಾಡಲಾಗಿದೆ.

ಜಮೀನ್ದಾರರಿಗೆ ಪರಿಹಾರ

ನಿನ್ನೆ ಮದರಾಸಿನ ಶಾಸನ ಸಭೆಯಲ್ಲಿ ಹಣಕಾಸಿನ ಸಚಿವ ಶ್ರೀ ಗೋಪಾಲರೆಡ್ಡಿಯವರು ಜಮೀನ್ದಾರರಿಗೆ ೧ ಕೋಟಿ ೨೦ ಲಕ್ಷ ರೂ. ಪರಿಹಾರ ಕೊಡಲು ಸರ್ಕಾರವು ತೀರ್ಮಾನಿಸಿದೆ ಎಂದು ಹೇಳಿದರು.

೩೭೨೮ ಟನ್ ಸಕ್ಕರೆ

ನಿನ್ನೆ ಬೊಂಬಾಯಿಗೆ ೩೭೨೮ ಟನ್ ಸಕ್ಕರೆಯನ್ನು ಹೊತ್ತು ಜಲವಲ್ಲಭ ಎಂಬ ಹಡಗು ಬಂದಿತು ಹಾಗೆಯೇ ಅಮೆರಿಕಾದಿಂದ ೯೬೫೦೦ ಟನ್ನು ಮೈಲೋ ಹೊತ್ತಿದ್ದ ಇನ್ನೊಂದು ಹಡಗೂ ಬಂದಿದೆ.

ಆರ್ಥಿಕ ಸಚಿವರ ವಿದೇಶ ಪ್ರವಾಸದ ಖರ್ಚು

ಮುಖ್ಯ ಮಂತ್ರಿಗಳು ಶಾಸನಸಭೆಯಲ್ಲಿ ನಿನ್ನೆ ಮಾತನಾಡುತ್ತಾ ಹಣಕಾಸಿನ ಸಚಿವರ ವಿದೇಶ ಪ್ರಯಾಣಕ್ಕೆ ೧೨೧೨೫ ರೂ. ೧೩ ಆ ಖರ್ಚಾಯಿತು. ಈಗಿರುವ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಅವರು ವಿದೇಶ ಪ್ರವಾಸ ಕೈಗೊಂಡಿದ್ದರು ಎಂದು ಹೇಳಿದರು.

ಭಾರತ ಸರ್ಕಾರದ ರಕ್ಷಣಾ ವೆಚ್ಚ

ನಿನ್ನೆ ಶಾಸನ ಸಭೆಯಲ್ಲಿ ಕೇಂದ್ರ ರಕ್ಷಣಾ ಮಂತ್ರಿ ಶ್ರೀ ಬಲದೇವಸಿಂಗ್‌ರು ಭಾರತವು ರಕ್ಷಣಾ ಖರ್ಚಿಗಾಗಿ ೧೮೬|| ಕೋಟಿ ರೂ. ೫೧-೫೨ರಲ್ಲಿ ಖರ್ಚು ಮಾಡಲಿದೆಯೆಂದೂ ಅದರಲ್ಲಿ ವೈಮಾನಿಕರ ದಳಗಳನ್ನು ಉತ್ತಮಪಡಿಸಲು ೨೨ ಕೋಟಿ ರೂ. ನೌಕಾ ದಳವನ್ನು ಉತ್ತಮಪಡಿಸಲು ೮|| ಕೋಟಿ ರೂ. ಸೈನ್ಯಗಳಿಗಾಗಿ ೧೨ ಕೋಟಿ ರೂ. ಎಂದು ಹೇಳಿದರು. ಭಾರತ ಸರ್ಕಾರವು ೫೦೦೦೦ ಜನರ ಸೈನಿಕರನ್ನು ನಿವೃತ್ತಗೊಳಿಸಲು ತೀರ್ಮಾನಿಸಿದೆ. ಇದರಲ್ಲಿ ಈಗಾಗಲೇ ಅರ್ಧದಷ್ಟು ಜನರನ್ನು ನಿವೃತ್ತಿಗೊಳಿಸಲಾಗಿದೆ ಅವರಿಗೆ ಬೇರೆ ಕಡೆ ಕೆಲಸ ಕೊಡಲು ಭಾರತ ಸರ್ಕಾರವು ಪ್ರಯತ್ನಿಸುತ್ತಿದೆ ಎಂದು ಹೇಳಿದರು.

ಸಯಾಂನ ಅಕ್ಕಿ

ಸಯಾಂನಿಂದ ೬೫೦೦ ಟನ್ನಿನಷ್ಟು ಅಕ್ಕಿಯು ಮದ್ರಾಸಿಗೆ ಬಂದಿದೆ.

ರಾಷ್ಟ್ರದ ಅಗತ್ಯದಬಗ್ಗೆ ರಾಷ್ಟ್ರಪತಿ

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ತಿರುವಾಂಕೂರಿನಲ್ಲಿ ಭಾಷಣ ಮಾಡುತ್ತಾ ಮಹಾತ್ಮಾ ಗಾಂಧಿಯವರ ತ್ಯಾಗದಿಂದ ಮತ್ತು ಅವರ ಅನುಯಾಯಿಗಳಾದ ಬೇಕಾದಷ್ಟು ಜನರ ತ್ಯಾಗದಿಂದ ಭಾರತವು ಸ್ವಾತಂತ್ರ್ಯವನ್ನು ಗಳಿಸಿತು. ಸ್ವತಂತ್ರವೆಂದರೇನೆಂಬುದು ಜನಗಳಿಗೆ ಅರ್ಥವಾಗದಿದ್ದಲ್ಲಿ ಸ್ವತಂತ್ರವೆಂಬುದರಲ್ಲಿ ಅರ್ಥವಿಲ್ಲ. ಸ್ವತಂತ್ರಬಂದ ಅಲ್ಪಕಾಲದಲ್ಲಿಯೇ ನಾವು ಬಹಳ ಕೆಲಸವನ್ನು ಮಾಡಿದ್ದೇವೆ. ಸಣ್ಣ ಸಣ್ಣ ರಾಜ್ಯಗಳಿಂದ ಕೂಡಿದ ಭಾರತವು ಈಗ ಒಂದಾಗಿದೆ, ಭಾರತವು ವಿಭಾಗಿಸಲ್ಪಟ್ಟಿದ್ದರೂ, ಹಿಂದಿನ ಚರಿತ್ರೆಯಲ್ಲಿ ಇದ್ದ ಭಾರತಕ್ಕಿಂತಲೂ, ಹಿಂದಿನ ಚಕ್ರವರ್ತಿಗಳು ಆಳುತ್ತಿದ್ದ ಭಾರತಕ್ಕಿಂತಲೂ ಈಗಿನ ಭಾರತ ದೊಡ್ಡದಾಗಿದೆ, ಪ್ರಪಂಚದಲ್ಲಿ ಯಾವ ದೇಶದಲ್ಲೂ ಭಾರತದಲ್ಲಿ ಈ ವರ್ಷ ನಡೆಯುವಷ್ಟು ದೊಡ್ಡ ಚುನಾವಣೆ ನಡೆದಿಲ್ಲ ಎಂದು ಅವರು ಹೇಳಿದರು.

ಹಾಗೆಯೇ ಅವರು ಭಾರತಕ್ಕೆ ಈಗ ಬೇಕಾದುದು ಪ್ರಶಾಂತಿ ಮತ್ತು ಸ್ಥಬ್ಧತೆ ಮಾತ್ರ. ಅಷ್ಟು ದೊರೆತರೆ ಸಾಕು. ಬೇಕಾದ ಹಾಗೆ ಆಯಿತು ಎಂದು ಹೇಳಿದರು.

ರಣಜಿತ್
೨೭—೩—೫೧ರಿಂದ
ಆಕರ್ಷಣೀಯ ೪ನೇ ವಾರ
ಪ್ರತಿದಿನ ೩ ಆಟಗಳು
* ಬಾಬುಲ್ *
ಪಾತ್ರ— ನರ್ಗಿಸ್, ದಿಲೀಪ್‌ಕುಮಾರ್,
ಬೆಳಗಿನ ಪ್ರದರ್ಶನ ೩೦-೩-೫೧ರಿಂದ
ಮೂರು ದಿನಗಳು ಮಾತ್ರ
ಸುರಯ್ಯ ನಟಿಸಿರುವ
—:: ದರ್ದ್ ::—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೩—೧೯೫೧ನೇ ಬುಧವಾರ [ಸಂಚಿಕೆ ೧೭

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಬೆಂಗಳೂರಿನಲ್ಲಿ ಸೇರಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಂಘದ ನಾನಿರ್ಣಯನನ್ನು ಚರ್ಚಿಸಿತು.

ಕೊಲೆ ಪ್ರಯತ್ನ

ಟೆಹರಾನಿನ ಮಿಲಿಟರಿ ಗವರ್ನರ್, ಜನರಲ್ ಹಜಾಜಿಯವರ ಪ್ರಾಣಹರಣ ಪ್ರಯತ್ನದ ಸಂಬಂಧದಲ್ಲಿ ಫಡಾಯಿಯನ್ ಇಸ್ಲಾಂ ಎಂಬ ಸಂಸ್ಥೆಯ ೯ ಮಂದಿ ಶಸ್ತ್ರಸಜ್ಜಿತ ಸದಸ್ಯರನ್ನು ದಸ್ತಗಿರಿ ಮಾಡಲಾಗಿದೆಯೆಂದು ಪೋಲೀಸರು ತಿಳಿಸಿದ್ದಾರೆ.

ಅರಣ್ಯಗಳಿಂದ ಬರುತ್ತಿರುವ ಆದಾಯ ತೃಪ್ತಿಕರವಾಗಿಲ್ಲ

ಶಾಸನ ಸಭೆಯಲ್ಲಿ ಸದಸ್ಯರ ಟೀಕೆ

ಬೆಂಗಳೂರು ಮಾ. ೨೭

ಸಂಸ್ಥಾನದಲ್ಲಿ ಹೆಸರುವಾಸಿಯಾಗಿದ್ದ ಅಪಾರ ಅರಣ್ಯಸಂಪತ್ತು ಇಂದು ಬಹಳ ಕಡಿಮೆಯಾಗಿದೆ. ಇದರಿಂದ ಈಗ ಉತ್ಪತ್ತಿಯೂ ಸರಿಯಾಗಿ ಬರುತ್ತಿಲ್ಲ. ನಮ್ಮ ಅರಣ್ಯಸಂಪತ್ತನ್ನು ಅಭಿವೃದ್ಧಿಗೊಳಿಸಲು ಸರ್ಕಾರವು ಪ್ರಯತ್ನಿಸಬೇಕು, ಅದರಿಂದ ಬರುವ ಆದಾಯವನ್ನು ಹೆಚ್ಚಿಸಬೇಕು ಎಂದು ಇಂದು ಶಾಸನ ಸಭೆಯಲ್ಲಿ ಸದಸ್ಯರು ಅಭಿಪ್ರಾಯಪಟ್ಟರು.

ಸ್ಥಳೀಯ ಸಂಸ್ಥೆಗಳ ಶಾಖಾ ಸಚಿವ ಶ್ರೀ ಜನ್ನಿಗ ರಾಮಯ್ಯನವರು ಅರಣ್ಯಶಾಖೆಯ ಖರ್ಚಿಗೆ ೩೭೭೬೦೦ ರೂ. ಬೇಡಿಕೆಯನ್ನು ಮಂಡಿಸಿದರು. ಜ|| ಅಬ್ದುಲ್ ರಹಿಮಾನರು ಗಂಧದ ಮರಗಳ ಹೊರತು ಉಳಿದವುಗಳಿಂದ ಸರ್ಕಾರಕ್ಕೆ ಆದಾಯವೇನೂ ಹೆಚ್ಚಾಗಿ ಬರುತ್ತಿಲ್ಲ. ಆದಾಯವನ್ನು ಹೆಚ್ಚಿಸಬೇಕು ಎಂದರು. ಶ್ರೀ ಮಾಸ್ತಿಗೌಡರು ಇಜ್ಜಲು ಸುಡಲು ಅವಕಾಶಕೊಡಬಾರದು ಎಂದರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅರಣ್ಯ ಶಾಖೆಯವರು ಖರ್ಚುಮಾಡುವುದನ್ನು ಸದ್ವಿನಿಯೋಗವಾಗುವಂತೆ ಮಾಡಬೇಕು. ಅರಣ್ಯಸಂಪತ್ತನ್ನು ಹೆಚ್ಚಿಸಿ ಅಧಿಕ ಉತ್ಪತ್ತಿಗಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದರು.

ನಂತರ ಶ್ರೀ ಜನ್ನಿಗ ರಾಮಯ್ಯನವರು ಉತ್ತರವಿತ್ತು ಭಾರತದಲ್ಲಿ ಶೇ. ೩೩ರಷ್ಟು ಅರಣ್ಯವಿರಬೇಕು. ಆದರೆ ಇರುವುದು ಶೇ. ೧೪, ಇದನ್ನಾದರೂ ಸರಿಯಾಗಿ ಕಾಪಾಡಬೇಕು. ಮೈಸೂರು, ಬೆಂಗಳೂರು ಮುಂತಾದ ಕಡೆಗಳಿಗೆ ವಿಪರೀತವಾಗಿ ಇಜ್ಜಲು, ಸೌದೆ ಬೇಕು, ಕಳ್ಳತನದಲ್ಲಿ ಮರ ಮಟ್ಟುಕಾಡಿನಿಂದ ಸಾಗಿಸುವುದು ಕಡಿಮೆಯಾಗಿದೆ, ಒಂದು ಗೊತ್ತಾದ ಕಾರ್ಯಕ್ರಮದಂತೆ ಅರಣ್ಯ ಇಲಾಖೆಯು ಅರಣ್ಯಾಭಿವೃದ್ಧಿಕಾರ್ಯ ನಡೆಸುತ್ತಿದೆ ಎಂದರು. ಸಭೆಯಲ್ಲಿ ವಿವಿಧಶಾಖೆ ಸಚಿವರು ಮಂಡಿಸಿತ ವಿವಿಧಬಾಬುಗಳ ಹತ್ತು ಹಣಕಾಸಿನ ಬೇಡಿಕೆಗಳಿಗೆ ಮಂಜೂರಾತಿಯಿತ್ತರು. ಮಂಡಿಸಲ್ಪಟ್ಟ ಖೋತಾ ನಿರ್ಣಯಗಳೆಲ್ಲವೂ ವಾಪಸಾದವು.

ಗೂಡ್ಸ್ ರೈಲು ಉರುಳಿತು

ನಿನ್ನೆ ಡೆಲ್ಲಿ ಮತ್ತು ಬೊಂಬಾಯಿ ಮಧ್ಯೆ ಒಂದು ಗೂಡ್ಸ್ ರೈಲು ಉರುಳಿದ್ದರಿಂದ ರೈಲು ಸಂಚಾರಕ್ಕೆ ಅಡಚಣೆಯುಂಟಾಗಿದೆ. ಡೆಲ್ಲಿ ಮತ್ತು ಕಲ್ಕತ್ತಾದಿಂದ ಬೊಂಬಾಯಿಗೆ ರೈಲುಗಳು ಇಂದು ಹೊರಡಲಿಲ್ಲ.

ಚಿನ್ನ ಪತ್ತೆ

ಗೋವಾದಿಂದ ಬೊಂಬಾಯಿಗೆ ಬಂದ ಪ್ರವಾಸಿಯು ಒಬ್ಬನಲ್ಲಿದ್ದ ೨,೪೦೦ ರೂ. ಬೆಲೆಯ ೨೪ ತೊಲ ಚಿನ್ನವನ್ನು ಸುಂಕದ ಅಧಿಕಾರಿಗಳು ಪತ್ತೆ ಹಚ್ಚಿದರು. ಚಿನ್ನದ ಪ್ಲೇಟುಗಳು ಟ್ರಂಕಿನಲ್ಲಿ ಮುಚ್ಚಿಡಲ್ಪಟ್ಟಿದ್ದವು.

ಸಾಂಸ್ಕೃತಿಕ ಸ್ವಾತಂತ್ರ್ಯ ಸಮ್ಮೇಳನ

ಸೋಷಿಯಲಿಷ್ಟರಿಂದ ಏರ್ಪಡಿಸಲ್ಪಟ್ಟಿರುವ ಸಾಂಸ್ಕೃತಿಕ ಸ್ವಾತಂತ್ರ್ಯ ಸಮ್ಮೇಳನವು ಇಂದು ಬೊಂಬಾಯಿನಲ್ಲಿ ಆರಂಭವಾಗುವುದು. ವ್ಯವಸ್ಥಾಪಕರಾದ ಶ್ರೀ, ಗಳಾದ ಜಯಪ್ರಕಾಶ ನಾರಾಯಣರು ಕೆ. ಎಂ. ಮುನ್ಷಿ, ಅಂಬೇಡಕರ್, ಭಾಟನಗರ್ ಎಲ್ಲರೂ ಬಂದಿದ್ದಾರೆ. ಶ್ರೀ ಮುನ್ಷಿಯವರು ಆರಂಭ ಭಾಷಣ ಮಾಡುವರು. ಸಮ್ಮೇಳನದಲ್ಲಿ ಸರ್ಕಾರಿ ನೌಕರರು ಭಾಗವಹಿಸಕೂಡದೆಂದು ಭಾರತ ಸರ್ಕಾರ ಆಜ್ಞೆ ಮಾಡಿದೆ.

ಭಾರತದ ಇತಿಹಾಸ ೫ ವರ್ಷದಲ್ಲಿ

ಭಾರತದ ಇತಿಹಾಸವನ್ನು ಇನ್ನು ೫ ವರ್ಷಗಳೊಳಗಾಗಿ ಬರೆದು ಮುಗಿಸಬೇಕೆಂದು ಮೊನ್ನೆ ದಿನ ಸೇರಿದ್ದ ಚರಿತ್ರೆಯ ಪ್ರವೀಣರ ಸಭೆ ನಿರ್ಧರಿಸಿತು.

೨,೧೦೦ ಸಂ|| ರಾ|| ಸೈನಿಕರು ಹತರಾದರು

ಐಕ್ಯ ರಾಷ್ಟ್ರ ಸಂ|| ರಾ|| ಸೈನಿಕರು ಅನಂ ಬ್ರಾತವಾಗಿ ಪ್ಯಾರಾಚ್ಯೂಟ್ ಮುಖಾಂತರವಾಗಿ ಸಿಯೋಲಿನ ಉತ್ತರಕ್ಕೆ ಇಳಿದರು. ಆ ಸಂದರ್ಭದಲ್ಲಿ ನಡೆದ ಘರ್ಷಣೆಯಲ್ಲಿ ೨,೧೦೦ ಮಂದಿ ಪ್ರಾಣನೀಗಿದರೆಂದು ಉತ್ತರ ಕೊರಿಯಾ ವಾರ್ತಾ ಸಂಸ್ಥೆ ಪ್ರಚಾರ ಮಾಡಿದ ಸುದ್ದಿಯಿಂದ ಗೊತ್ತಾಗಿದೆ.

ಆಕ್ರಮಣವನ್ನು ಎದುರಿಸಲು ಅಮೆರಿಕ ಸಿದ್ಧವಾಗಬೇಕು

ಜಗತ್ತಿಗೆ ಈಗ ಸೋವಿಯಟ್ ರಷ್ಯದ ಆಕ್ರಮಣ ಭಯ ಒದಗಿದೆ ಕಮ್ಯೂನಿಸ್ಟರ ಆಕ್ರಮಣದಿಂದ ಪಾರಾಗಲು ಹೋರಾಟ ನಡೆಸುತ್ತಿರುವ ಯೂರೋಪ್ ಮತ್ತು ಏಷ್ಯಗಳ ಪ್ರಜೆಗಳಿಗೆ ಸಹಾಯ ಮಾಡಬೇಕಾದ್ದು ಅಮೆರಿಕನ್ ರಾಷ್ಟ್ರಗಳ ಕರ್ತವ್ಯವೆಂದೂ, ಅದಕ್ಕಾಗಿ ತಾವು ತಮ್ಮ ರಕ್ಷಣಾ ಬಲವನ್ನು ಹೆಚ್ಚಿಸಿಕೊಂಡು ಸಂಘಟಿತವಾಗಬೇಕೆಂದೂ ಅಧ್ಯಕ್ಷ ಟ್ರೂಮನ್ ವಾಷಿಂಗ್‌ಟನ್ನಿನಲ್ಲಿ ಸಮಾವೇಶವಾದ ಇಪ್ಪತ್ತೊಂದು ಅಮೆರಿಕನ್ ಪ್ರಜಾಪ್ರಭುತ್ವ ರಾಷ್ಟ್ರಗಳ ಸಭೆಯಲ್ಲಿ ತಿಳಿಸಿದರು.

ಆರೋಗ್ಯ ಸಚಿವರು ರಾಜೀನಾಮೆ ಕೊಡಲಿ

ನವದೆಹಲಿ ಮಾ. ೨೭

ಕೇಂದ್ರ ಪಾರ್ಲಿಮೆಂಟಿನಲ್ಲಿಂದು ಹೆಚ್. ವಿ. ಕಾಮತ್‌ರವರು ಸಿಸ್ದಗೃಹಗಳ ಕಾರ್ಖಾನೆ ಅವ್ಯವಸ್ಥೆಗೆ ಕಾರಣರಾರೆಂದು ಕಂಡು ಹಿಡಿಯಲು ಒಂದು ಸಮಿತಿಯನ್ನು ರಚಿಸದಿದ್ದರೆ ಆರೋಗ್ಯ ಸಚಿವರು ರಾಜೀನಾಮೆ ಕೊಡಲಿ ಎಂದರು.

ಸಚಿವರು ಉತ್ತರ ಕೊಡುತ್ತಾ ಕಾರ್ಖಾನೆ ಉಪಯುಕ್ತವಾಗುವಂತೆ ಮಾಡಲಾಗುವುದೆಂದೂ, ಪರಿಶೀಲನಾ ಸಮಿತಿಯ ನೇಮಕ ಅಗತ್ಯವಿಲ್ಲ, ಕಾರ್ಖಾನೆಯ ಸಂಗತಿಯೆಲ್ಲ ಸಭೆಯ ಮುಂದಿದೆ ಎಂದರು.

ಆಜಾದರು ವಿದ್ಯಾ ಸಚಿವ ಶಾಖೆಯ ಕಾರ್ಯಕಲಾಪಗಳು ಸಂಕುಚಿತವಾಗಿದೆಯೆಂಬ ಟೀಕೆಗೆ ಉತ್ತರವೀಯುತ್ತಾ ತಮ್ಮ ಕೈತುಂಬಾ ಬೇಕಾದಷ್ಟು ಯೋಜನೆಗಳಿವೆ ಆದರೆ ಜೇಬುಗಳೆಲ್ಲಾ ಬಿದಾಗಿವೆ ರಾಷ್ಟ್ರೀಯ ಶಿಕ್ಷಣ ಬಹು ಮುಖ್ಯವೆಂದು ಕಂಡರೆ ಹಣದ ವಿಷಯದಲ್ಲಿ ಇದಕ್ಕೆ ಪ್ರಾಮುಖ್ಯತೆ ಕೊಡಿ ಎಂದರು.

ಸಂಬಳ ಸಾಲದು

ಈಗ ಕೊಡುತ್ತಿರುವ ೩೦೦ ಸಾಲದೆಂದೂ ಸಚಿವರಿಗೆ ಅನೇಕ ತೊಂದರೆಗಳಿವೆ ಎಂದು ಮದರಾಸಿನ ಹಣಕಾಸಿನ ಸಚಿವ ಶ್ರೀ ಗೋಪಾಲರೆಡ್ಡಿಯವರು ಹೇಳಿದ್ದಾರೆ.

ಪಾಕೀಸ್ತಾನದ ಅಕ್ಕಿ

ಎಸ್. ಎಸ್. ಸರಸ್ವತಿ ಹಡಗಿನಲ್ಲಿ ಒಂದು ಸಹಸ್ರ ಟನ್ ಅಕ್ಕಿಯನ್ನು ಪಾಕೀಸ್ತಾನ ಮುಂಬೈಗೆ ಕಳುಹಿಸಿದೆ. ಈ ಮಾಹೆಯ ಅಂತ್ಯದ ವೇಳೆಗೆ ಮತ್ತೆ ೧೪ ಸಾವಿರ ಟನ್ ಅಕ್ಕಿ ಬರುವ ನಿರೀಕ್ಷಣೆಯಿದೆ.

ಶಾಸನ ಸಭೆಯು ಇನ್ನೂ ಕೆಲವು ದಿವಸ ನಡೆಯಬಹುದು

ಕೇಂದ್ರ ಶಾಸನ ಸಭೆಯಲ್ಲಿ ಹಣಕಾಸಿನ ಮೇಲಿನ ವಿಷಯದಲ್ಲಿ ಬಹಳ ಹೆಚ್ಚಾದ ಕಾರ್ಯಕ್ರಮಗಳಿರುವುದರಿಂದ ಸಭೆಯು ಮೇ ಮೊದಲನೇ ವಾರದವರೆಗೂ ನಡೆಯಬಹುದೆಂದು ಹೇಳಲಾಗಿದೆ. ಏಪ್ರಿಲ್ ೨೦ರ ಹೊತ್ತಿಗೆ ಈ ಸಭೆಯು ಮುಕ್ತಾಯವಾಗಬೇಕಾಗಿದ್ದಿತು. ಆದರೆ ಈಗ ಹಣಕಾಸಿನ ವಿಷಯದ ಚರ್ಚೆ ಇವುಗಳೇ ಇನ್ನು ಮುಂದಿನ ತಿಂಗಳ ೧೦ರ ವರೆಗೂ ನಡೆಯುವುದು ಎಂದು ಹೇಳಲಾಗಿದೆ.

ವಿದ್ಯಾಂಗ ಮತ್ತು ಆರೋಗ್ಯ ಖಾತೆ

ಕೇಂದ್ರ ಶಾಸನ ಸಭೆಯಲ್ಲಿ ನಿನ್ನೆ ವಿದ್ಯಾ ಸಚಿವ ಶ್ರೀ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು ವಿದ್ಯಾಂಗ ಮತ್ತು ಆರೋಗ್ಯಖಾತೆಗೆ ೫ ಕೋಟಿ ರೂ ಬೇಕಾಗುವುದೆಂದು ಹೇಳಿದರು. ಇದರಲ್ಲಿ ವಿದ್ಯಾಂಗಖಾತೆಗೆ ೩ಕೋಟಿ ೬ ಲಕ್ಷ ರೂ ಆರೋಗ್ಯಖಾತೆಗೆ ೧ಕೋಟಿ ೪ಲಕ್ಷ ರೂ. ಗಳೆಂದೂ ಹೇಳಿದರು. ಸಭೆಯು ಇದನ್ನು ಒಪ್ಪಿತು. ಉಪಾಧ್ಯಾಯರುಗಳಿಗೆ ಸಂಬಳವನ್ನು ಹೆಚ್ಚಿಸಬೇಕು. ಬಡ ವಿದ್ಯಾರ್ಥಿಗಳಿಗೆ ಸರ್ಕಾರವು ಸಹಾಯ ಮಾಡಬೇಕು ಇವೇ ಮುಂತಾದ ಸಲಹೆಗಳು ಸಭೆಯಲ್ಲಿ ಬಂದವು.

ಆಹಾರ ನೀತಿಯ ಖಂಡನೆ

ಭಾರತದ ಹಣಕಾಸಿನ ಸಚಿವರಾಗಿದ್ದ ಜಾನ್ ಮಥಾಯ್‌ರವರು ಬೊಂಬಾಯಿನಲ್ಲಿ ಸಭೆಯೊಂದರಲ್ಲಿ ಮಾತನಾಡುತ್ತಾ, ಭಾರತ ಸರ್ಕಾರದ ಆಹಾರ ನೀತಿ ಹಣಕಾಸು ಮತ್ತು ವಿದೇಶಾಂಗ ನೀತಿಯನ್ನು ಟೀಕಿಸಿದ್ದಾರೆ.

ಅವರು ಮಾತನಾಡುತ್ತಾ, ಸರ್ಕಾರ ಆಹಾರ ಸ್ವಾವಲಂಬನೆಯ ನೀತಿಯನ್ನು ತ್ಯಜಿಸಬೇಕು. ಸರ್ಕಾರವು ಬಡ ಜನರ ಮೇಲೆ ವಿಧಿಸಿರುವ ತೆರಿಗೆಯು ಜನರಿಗೆ ಮತ್ತಷ್ಟು ತೊಂದರೆಯನ್ನುಂಟು ಮಾಡುವುದು ಎಂದರು. ಹಾಗೆಯೇ ಅವರು ಸರ್ಕಾರದ ನೀತಿಯನ್ನು ಖಂಡಿಸುತ್ತಾ ಸರ್ಕಾರವು ಜನಗಳೊಂದಿಗೆ ಹೊಂದಿಕೊಂಡು ಹೋಗಲು ಅಶಕ್ತವಾಗಿದೆ. ಪಾಕೀಸ್ತಾನವು ಕಾಶ್ಮೀರದಲ್ಲಿ ಆಕ್ರಮಣ ನಡೆಸಿರುವುದು ತನಗೆ ತಾನೇ ಗೊತ್ತಾಗುವುದು ಅದನ್ನು ಯಾರೂ ತೋರಿಸಿಕೊಡಬೇಕಾಗಿಲ್ಲ. ಭಾರತದ ಈಗಿನ ಒಪ್ಪಟ್ಟಿನಲ್ಲಿ ಹಣವು ಹೆಚ್ಚಿಗೆ ಬೇಕಾದುದು ಅಗತ್ಯ. ಆದರೆ ಇದನ್ನು ಹೆಚ್ಚಿಸಲು ಹೆಚ್ಚಿಗೆ ತೆರಿಗೆಯನ್ನು ವಿಧಿಸುವುದು ಸರಿಯಾಗಿಲ್ಲ. ಇದರಿಂದ ಜನರಲ್ಲಿ ಭಿನ್ನಾಭಿಪ್ರಾಯಗಳುಂಟಾಗುವುವು. ಹಾಗೂ ಜನರ ತೆರಿಗೆ ಹಣವನ್ನು ಸರ್ಕಾರವು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕು. ಸದ್ಯದ ಪರಿಸ್ಥಿತಿಯಲ್ಲಿ ಹಣಕಾಸು ಹೆಚ್ಚಾಗಿ ಬೇಕಾಗಿರುವುದು. ಇದನ್ನು ತೀರ್ಮಾನಿಸಲು ಇದರ ಭಾರವು ಹೆಚ್ಚಾಗಿ ಹಣಕಾಸಿನ ಸಚಿವರ ಮೇಲೆ ಬಿದ್ದಿರುವುದು ಎಂದರು.

ಅಭಿವೃದ್ಧಿ ಕಾರ್ಯಗಳಿಗೆ ೧೫೪ ಕೋಟಿ ರೂ.

ಉತ್ತರ ಪ್ರದೇಶ ಸರ್ಕಾರವು ಅಭಿವೃದ್ಧಿ ಕಾರ್ಯಗಳಿಗಾಗಿ ೧೫೪ ಕೋಟಿ ರೂ. ಈ ವರ್ಷ ಖರ್ಚು ಮಾಡಲಿದೆಯೆಂದೂ, ಈ ಹಣವನ್ನು ವ್ಯವಸಾಯ ಮತ್ತು ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಗೊಳಿಸಲು ಉಪಯೋಗಿಸಲಾಗುವುದೆಂದೂ, ಇದರಿಂದ ರಾಜ್ಯವು ಆಹಾರದ ಬಗ್ಗೆ ಪರಿಪೂರ್ಣತೆ ಹೊಂದುವುದು ಎಂದು ಮುಖ್ಯ ಮಂತ್ರಿ ಶ್ರೀ ಗೋವಿಂದ ವಲ್ಲಭಪಂತರು ಹೇಳಿದ್ದಾರೆ.

ಬಡ್ಜೆಟ್ ಚರ್ಚೆಗೆ ಮುಖ್ಯ ಮಂತ್ರಿಗಳ ಉತ್ತರವಿಲ್ಲ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ಮೈಗೆ ಸ್ವಸ್ಥವಿಲ್ಲದ ಕಾರಣ ಅವರು ನಿನ್ನೆ ಸಂಸ್ಥಾನದ ಬಡ್ಜೆಟ್‌ಬಗ್ಗೆ ಅಸೆಂಬ್ಲಿಯಲ್ಲಿ ಸದಸ್ಯರುಗಳು ಮಾಡಿದ ಟೀಕೆಗಳಿಗೆ ಉತ್ತರಕೊಡಲಿಲ್ಲ. ಅವರು ಅಸೆಂಬ್ಲಿಯಲ್ಲಿ ಹಾಜರಾಗಿರಲಿಲ್ಲ.

ಇಂಡೊ-ಚೀಣಾಕ್ಕೆ ೧೫೦೦೦ ಜನ ಸೈನಿಕರು

ಸುಮಾರು ೧೫೦೦೦ ಜನ ಫ್ರೆಂಚ್ ಸೈನಿಕರನ್ನು ಇಂಡೊ ಚೀಣಾಕ್ಕೆ ವಿಯಟ್‌ಮಿನ್ನ್ ಸೈನ್ಯವನ್ನು ಎದುರಿಸಲು ಕಳುಹಿಸಲು ಫ್ರೆಂಚ್ ಸರ್ಕಾರವು ಯೋಚಿಸುತ್ತಿದೆ

ಮತ್ತೆ ವನಮಹೋತ್ಸವ

ಇದೇ ಜುಲೈ ತಿಂಗಳಲ್ಲಿ ಭಾರತಾದ್ಯಂತ ಮತ್ತೆ ವನಮಹೋತ್ಸವ ನಡೆಸಲು ಭಾರತ ಸರ್ಕಾರವು ನಿರ್ಧರಿಸಿದೆ ಎಂದು ಕೇಂದ್ರ ಆಹಾರ ಮಂತ್ರಿ ಶ್ರೀ ಮುನ್ಷಿ ಹೇಳಿದ್ದಾರೆ.

೧೫೮ ಜನರ ದಸ್ತಗಿರಿ

೧೪೪ನೇ ಸೆಕ್ಷನ್ನನ್ನು ಉಲ್ಲಂಘಿಸಿ ಮೆರವಣಿಗೆ ಹೊರಟಿದ್ದರಿಂದ ನಾಗಪುರದಲ್ಲಿ ೧೫೮ ಜನ ಸೋಷಲಿಸ್ಟ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದ್ದಾರೆ.

ಅರ್ಜಂಟೈನಾ ಗೋಧಿ

ಅರ್ಜಂಟೈನಾದಿಂದ ೮೦೨೫ ಟನ್ನು ಗೋಧಿ ತಂದ ಒಂದು ಹಡಗು ನಿನ್ನೆ ಮದ್ರಾಸಿಗೆ ಬಂದಿದೆ. ಇದರಲ್ಲಿ ೨೦೦೦ ಟನ್ನು ಮದ್ರಾಸಿಗೂ ಉಳಿದಿದು ಕಲ್ಕತ್ತಾಕಕ್ಕೂ ಕೊಡಲಾಗುವುದು ಎಂದು ಹೇಳಲಾಗಿದೆ.

೧೨ನೇ ಬಾರಿ ಅಧ್ಯಕ್ಷರಾಗಿ ಚುನಾಯಿತರಾದರು

ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅಖಿಲ ಭಾರತ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾಗಿ ೧೨ನೇ ಬಾರಿ ಚುನಾಯಿತರಾಗಿದ್ದಾರೆ.

ಮೈಸೂರಿಗೆ ಗೋಧಿ

ಮದ್ರಾಸ್ ಬಂದರಿಗೆ ಬಂದಿರುವ ಗೋಧಿಯಲ್ಲಿ ೫೦೦ ಟನ್ನಿನಷ್ಟು ಮೈಸೂರಿಗೆ ಬರಲಿದೆ.

ವಾಣಿಜ್ಯ ಸಲಹೆಗಾರರಾಗಿ ನೇಮಕ

ಪ್ರಧಾನಿ ಪಂ|| ನೆಹರೂರವರ ಆಪ್ತ ಕಾರ್ಯದರ್ಶಿಗಳೊಲ್ಲಬ್ಬರಾದ ಶ್ರೀ ಧರ್ಮವೀರ ಎಂಬುವವರು ಬ್ರಿಟನ್ನಿನಲ್ಲಿ ಇಂಡಿಯಾದ ರಾಯಭಾರಿಯ ವಾಣಿಜ್ಯ ಸಲಹೆಗಾರರಾಗಿ ನೇಮಿತರಾಗಿದ್ದಾರೆ. ಇವರು ಏಪ್ರಿಲ್‌ನಲ್ಲಿ ಲಂಡನ್ನಿಗೆ ಹೊರಡುವರು.

ಚುನಾವಣೆ ನಡೆದಿರುವುದು ಸರಿಯಾಗಿಲ್ಲ

ಪಂಜಾಬಿನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳು ತೃಪ್ತಿಕರವಾಗಿಲ್ಲ. ೯೦ ಲಕ್ಷ ಜನಕ್ಕೆ ೩೦ ಲಕ್ಷ ಜನರು ಮಾತ್ರ ಓಟು ಮಾಡಿದ್ದಾರೆ. ಈ ಚುನಾವಣೆಗಳನ್ನು ಮತ್ತೆ ನಡೆಸಬೇಕು ಎಂದು ಮಿ|| ಸಚ್ಚರ್‌ರವರು ಹೇಳಿದ್ದಾರೆ.

ಕೆನಡಾದಲ್ಲಿ ಯುರೋಪಿನ ವಿಮಾನ ಚಾಲಕರು ವಿಮಾನ ನಡೆಸುವುದನ್ನು ಅಭ್ಯಾಸ ಮಾಡುತ್ತಿರುವುದು

ರಾಲ್ಫ್‌ಬಂಚ್ ಕಾಶ್ಮೀರದ ಮಧ್ಯಸ್ಥಿಕೆಗಾರರಾಗಿ

ಆಂಗ್ಲೋ—ಅಮೆರಿಕನ್ ಸಲಹೆಯಂತೆ ಪ್ರಪಂಚ ಸಂಸ್ಥೆಯ ಪ್ಯಾಲಸ್ಟೈನ್ ಮಧ್ಯಸ್ಥಿಕಗಾರರಾಗಿದ್ದು ನೊಬೆಲ್ ಶಾಂತಿ ಪಾರಿತೋಷಕ ಬಹುಮಾನ ಪಡೆದ ಡಾ|| ರಾಲ್ಫ್‌ಬಂಚ್‌ರವರನ್ನು ಕಾಶ್ಮೀರದಲ್ಲಿ ಪ್ರಪಂಚ ಸಂಸ್ಥೆಯ ಮಧ್ಯಸ್ಥಿಕಗಾರರನ್ನಾಗಿ ಮಾಡಲಾಗುವುದೆಂದು ಹೇಳಲಾಗಿದೆ. ಈ ಆಂಗ್ಲೋ ಅಮೆರಿಕನ್ ಸಲಹೆಯನ್ನು ಭಾರತವು ಒಪ್ಪದಿದ್ದರೂ ಅದನ್ನು ಕಾರ್ಯರೂಪಕ್ಕೆ ತರಲಾಗುವುದೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೩೧೮ ದಿನ-ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧-೩-೧೯೫೧ ಗುರುವಾರ [ಸಂಚಿಕೆ ೧೭೦

ವಿದ್ಯಾಭ್ಯಾಸಕ್ಕೆ ೧೧॥ ಕೋಟಿ ರೂಪಾಯಿ

ಮದರಾಸಿನಲ್ಲಿ ೧೯೫೧-೫೨ರಲ್ಲಿ ವಿದ್ಯಾಭ್ಯಾಸಕ್ಕಾಗಿ ೧೧॥ ಕೋಟಿ ರೂ. ವೆಚ್ಚ ಮಾಡಲು ಶಾಸನ ಸಭೆಯು ಒಪ್ಪಿಗೆ ಇತ್ತಿತು.

ಮತ್ತೆ ಭೂಕಂಪ

ಡಿಬ್ರುಘರನಲ್ಲಿ ಮತ್ತೆ ೩೦ ಸೆಕೆಂಡು ಗಳಕಾಲ ನಿನ್ನೆ ಭೂಕಂಪವಾಯಿತು

ಮುಷ್ಕರ

ಸೋಲಾಪುರದಲ್ಲಿ ಪ್ರಾಥಮಿಕ ಉಪಾಧ್ಯಾಯರುಗಳಿಗೆ ಸರಿಯಾದ ತುಟ್ಟಿ ಭತ್ಯ ಕೊಡಲು ಪೌರಸಭೆಯವರು ಗ್ರಾಂಟು ಕೊಡಲು ಎರಡು ವರ್ಷದಿಂದ ಸಾವಕಾಶ ಮಾಡುತ್ತಿರುವುದರಿಂದ ಉಪಾಧ್ಯಾಯರುಗಳು ಏಪ್ರಿಲ್ ೧೦ ರಿಂದ ಉಪವಾಸ ಮುಷ್ಕರ ಮಾಡಲು ನಿರ್ಧರಿಸಿದ್ದಾರೆ.

ಆಂಗ್ಲೋ-ಅಮೆರಿಕನ್ ನಿರ್ಣಯದ ಬಗ್ಗೆ ಖಂಡನೆ

ಶಾಸನ ಸಭೆಯಲ್ಲಿ ಪಂಡಿತ ನೆಹರೂರವರ ಉತ್ತರ

ನವದೆಹಲಿ ಮಾ. ೨೮

ಕಾಶ್ಮೀರದ ಬಗ್ಗೆ ಬ್ರಿಟನ್ ಮತ್ತು ಅಮೆರಿಕಾಗಳು ಭದ್ರತಾ ಸಮಿತಿಯ ಮುಂದೆ ತಂದಿರುವ ನಿರ್ಣಯ ಮತ್ತು ಅದರ ಮೇಲೆ ಬ್ರಿಟನ್ನಿನ ಪ್ರತಿನಿಧಿಯು ಮಾಡಿರುವ ಭಾಷಣ ಪರಿಶೀಲಿಸಿದಲ್ಲಿ ಬ್ರಿಟನ್ನು ಕಾಶ್ಮೀರದ ಬಗ್ಗೆ ಅಜ್ಞಾನವಾಗಿದೆ. ಕಾಶ್ಮೀರ ನ್ಯಾಯಾತ್ಮಕವಾಗಿಯೂ ರಾಜಕೀಯವಾಗಿಯೂ ಭಾರತ ರಾಷ್ಟ್ರದ ಒಂದು ಅಂಶ, ಹೊರಗಿನ ಯಾವ ಸಿವಿಲ್ ಅಥವಾ ಮಿಲಿಟರಿ ಆಡಳಿತಕ್ಕೆ ಕಾಶ್ಮೀರವನ್ನು ಒಪ್ಪಿಸಲು ಸಾಧ್ಯವಿಲ್ಲ. ಶಾಂತಿ ರೀತಿಯಿಂದ ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಲು ಭಾರತವು ಸದಾ ಸಿದ್ಧವಾಗಿದೆ. ಪಾಕೀಸ್ತಾನದ ಸಹಾನುಭೂತಿಗಾರರನ್ನು ತೃಪ್ತಿಪಡಿಸಲು ನಾವು ಸಿದ್ಧರಾಲ್ಲ. ಕಾಶ್ಮೀರದ ಪ್ರಜೆಗಳು ಸ್ವತಃ ತಮ್ಮ ಭವಿಷ್ಯವನ್ನು ನಿರ್ಧರಿಸಬೇಕೆಂಬುದು ಭಾರತದ ವಾದ. ಮೂಲಬದ್ಧವಾದ ಕೆಲವು ಮುಖ್ಯ ನಿರ್ಣಯಗಳಲ್ಲಿ ಸಮಾಧಾನ ಮತ್ತು ಶಾಂತಿಗೆ ಹೊಸ ನಿರ್ಣಯದಲ್ಲಿ ಅವಕಾಶವಿಲ್ಲ. ಹಿಂದಿನ ನಿರ್ಣಯಗಳಿಗೆ ವ್ಯತಿರಿಕ್ತವಾಗಿರುವುದರಿಂದಲೇ ಈ ಹೊಸ ನಿರ್ಣಯವನ್ನು ಒಪ್ಪಲು ಸಾಧ್ಯವಿಲ್ಲ. ಭಾರತವು ಶಾಂತಿಯನ್ನೇ ಬಯಸುತ್ತದೆ. ಆದರೆ ಅವಮಾನಕ್ಕೆ ಬಗ್ಗುವಷ್ಟು ಭಾರತವು ಬಲಹೀನವಾಗಿಲ್ಲ ಎಂದು ಪ್ರಧಾನಿ ಪಂಡಿತ ನೆಹರೂರವರು ಇಂದು ಪಾರ್ಲಿಮೆಂಟಿನಲ್ಲಿ ಘೋಷಿಸಿದರು.

ಅವರು ಪಾಕೀಸ್ತಾನ ಭಾರತ ಸಂಬಂಧ ವಿಷಯ ಮಾತನಾಡುತ್ತಾ ಭಾರತವು ಪಾಕೀಸ್ತಾನದ ಸಂಬಂಧವು ಮೊದಲಿನಂತೆಯೇ ಹೊಂದಿಕೊಂಡು ಹೋಗಬೇಕು. ಉಭಯ ರಾಷ್ಟ್ರಗಳಲ್ಲೂ ಶಾಂತಿನೆಲಸಬೇಕು, ವಾಣಿಜ್ಯ ಸಂಪರ್ಕ ಬೆಳೆಯಬೇಕು ಎಂದರು. ಅನ್ಯದೇಶಗಳ ವಸಾಹತುಗಳನ್ನು ಭಾರತವು ಸಹಿಸುವುದಿಲ್ಲ. ಮೂರು ತಿಂಗಳು ಹಿಂದೆ ಇದ್ದ ಯುದ್ಧ ಭಯವು ಈಗ ಇಲ್ಲ ಎಂದರು. ಸಭಾ ಸದಸ್ಯರು ಭಾರತದ ವಿದೇಶಾಂಗ ನೀತಿಯನ್ನು ಸಾಮಾನ್ಯವಾಗಿ ಸಮರ್ಥಿಸಿದರು.

ಭಾರತದ ರೇಡಿಯೋ ಕೇಂದ್ರಗಳು

ಆಲ್-ಇಂಡಿಯಾ ರೇಡಿಯೋ ಕೇಂದ್ರಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮ ಹೋದ ವರ್ಷ ಮುಗಿಯಿತು. ಈಗ ಭಾರತದಲ್ಲಿ ೨೧ ಪ್ರಸಾರ ಕೇಂದ್ರಗಳು, ೬ ಉಪಪ್ರಸಾರ ಕೇಂದ್ರಗಳು ಇವೆ. ೨೧ ಭಾಷೆಗಳಲ್ಲಿ ೩೦೦೦ ವರ್ತಮಾನ ಪತ್ರಿಕೆಗಳಿಗೆ ವಾರ್ತಾ ಕೇಂದ್ರವು ಸಮಾಚಾರವನ್ನು ಒದಗಿಸಿದೆ. ವಾರ್ತಾ ಸಂಸ್ಥೆಯವರು ತಯಾರಿಸಿದ ಡಾಕ್ಯುಮೆಂಟರಿ ಫಿಲಂಗಳು ಇದುವರೆಗೆ ೩೦೦೦ ಚಿತ್ರಮಂದಿರಗಳಲ್ಲಿ ತೋರಿಸಲ್ಪಟ್ಟಿವೆ ಎಂದು ಶಾಸನ ಸಭೆಯಲ್ಲಿ ಶ್ರೀ ದಿವಾಕರರು ಹೇಳಿದರು.

ಭಿನ್ನಾಭಿಪ್ರಾಯ

ಶಾಸನದ ಪೌರಸಭಾಧ್ಯಕ್ಷರಿಗೂ, ಉಪಾಧ್ಯಕ್ಷರಿಗೂ, ಅಧ್ಯಕ್ಷರು ಕಲ್ಕತ್ತಾಗೆ ಹೋಗಿದ್ದಾಗ ಅವರ ಗೈರುಹಾಜರಿಯಲ್ಲಿ ನಡೆದ ನಡವಳಿಕೆಗಳ ಮೇಲೆ ಭಿನ್ನಾಭಿಪ್ರಾಯ ಉಂಟಾಗಿದೆಯೆಂದು ಹೇಳಲಾಗಿದೆ

ಮತ್ತೆ ಲಾಠಿ ಪ್ರಹಾರ

ನಿನ್ನೆ ಮಧ್ಯಾಹ್ನ ಅಶ್ವಾರೋಹಿ ಬೊಂಬಾಯಿ ಪೋಲೀಸರು ಕಾರ್ಜನ್ ಹಾಕ್-ಗಾಲ್-ಹೌಸ್ ಕಾರ್ನರ್ ಬಳಿ ಖಾಸಗಿ ಹಾಗೂ ಸರ್ಕಾರಿ ಭವನಗಳನ್ನೂ ಜಮೀನುಗಳನ್ನೂ ಅಕ್ರಮವಾಗಿ ಆಕ್ರಮಿಸಿರುವವರನ್ನು ಹೊರದೂಡಲು ಯತ್ನಿಸುವ ಮಸೂದೆಯೊಂದರ ವಿರುದ್ಧ ಪೆಲಿಂಗ್ ಟನ್ ಚೌಕದಲ್ಲಿ ಸಭೆ ಸೇರಿದ ಮೇಲೆ ಮೆರವಣಿಗೆ ಹೊರಟಿದ್ದ ಈ ಪ್ರದರ್ಶನಕಾರರು ಸ್ವಲ್ಪ ಹೊತ್ತಿನಲ್ಲಿ ಅದೇ ಜಾಗದಲ್ಲಿ ಸೇರಿದ್ದರಿಂದ ಅವರನ್ನು ಚದುರಿಸಲು ಲಾಠಿ ಪ್ರಹಾರ ಮಾಡಿದರು.

ಬಾಲಕನ ಮರಣ

ಭದ್ರಾವತಿಯ ರೈಲ್ವೆ ನೇತುವೆಯ ಮಗ್ಗುಲಿನಲ್ಲಿರುವ ಮನೆಯಲ್ಲಿ ವಾಸವಾಗಿದ್ದ ಶಂಕರ ಎಂಬ ಸುಮಾರು ಎಂಟು ವರ್ಷದ ಬಾಲಕನು ಮೊನ್ನೆ ಸೇತುವೆಯಿಂದ ಆಚೆ ಮಗ್ಗುಲಿನಲ್ಲಿರುವ ಶಾಲೆಗೆ ಬರುವುದಕ್ಕೋಸ್ಕರ ರೈಲ್ವೆ ಸೇತುವೆಯ ಮೇಲಿನಿಂದ ಬರುತ್ತಿದ್ದಾಗ ಮುಗ್ಗರಿಸಿ ಕೆಳಗಿರುವ ಬಂಡೆಯ ಮೇಲೆ ಬಿದ್ದು ತಕ್ಷಣ ಮೃತಪಟ್ಟನೆಂದು ತಿಳಿದುಬಂದಿದೆ.

ಪ್ರೊಬೇಷನರ್

ಶ್ರೀಗಳಾದ ಸಿ. ಸಿದ್ದಯ್ಯ, ಹೆಚ್. ಸಿ. ಹುಚ್ಚವೀರಪ್ಪ, ಎಸ್. ರಂಗಪ್ಪ, ಬಿ. ಎಸ್. ಸುಬ್ರಹ್ಮಣ್ಯಂ, ಟಿ. ಎಸ್. ಗೋವಿಂದಸ್ವಾಮಿ, ಮಹಮದ್ ಗೌಸ್‌ರನ್ನು ವ್ಯಾಪಾರ ತೆರಿಗೆ ಶಾಖೆಯಲ್ಲಿ ಪ್ರೊಬೇಷನರನ್ನಾಗಿ ನೇಮಿಸಲಾಗಿದೆ.

ಹಗಲು ದರೋಡೆಯ ವಿಷಯದ ಚರ್ಚೆ

ಬೆಂಗಳೂರು ಮಾ. ೨೮

ಬೊಂಬಾಯಿ ಮೈಸೂರು ಗಡಿಯ ಸಮೀಪ ಚಿತ್ರದುರ್ಗ ಜಿಲ್ಲೆಯ ಹಲವೆಡೆಗಳಲ್ಲಿ ಸಶಸ್ತ್ರ ಡಕಾಯಿತಿ ನಡೆದಿದೆ. ಡೆಪ್ಯುಟೀ ಜನರಲ್ ಪೋಲೀಸ್ ದರ್ಜೆಯ ಅಧಿಕಾರಿಯೋರ್ವರನ್ನು ಆ ಸ್ಥಳಕ್ಕೆ ಕಳುಹಿಸಿ ಪರಿಸ್ಥಿತಿಯನ್ನು ಹದಕ್ಕೆ ತರಲು ತಿಳಿಸಲಾಗಿದೆ,

—ಎಂದು ಶ್ರೀ ಟಿ. ಮರಿಯಪ್ಪನವರು ಇಂದಿನ ಶಾಸನ ಸಭೆಯಲ್ಲಿ ಶ್ರೀ ಹೆಚ್. ಸಿದ್ದವೀರಪ್ಪನವರು ಕತ್ತರಿ ಪ್ರಯೋಗಕ್ಕೆ ಉತ್ತರಕೊಡುತ್ತಾ ತಿಳಿಸಿದರು. ಸಚಿವರು ರಕ್ಷಣಾಶಾಖೆಗೆ ಆವಶ್ಯಕವಾದ ೯೧,೨೫,೦೦೦ ರೂ. ಗಳ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಿದಾಗ ಮೇಲಿನ ನಿರ್ಣಯ ಸಭೆಯ ಮುಂದೆ ಬಂದಿತು.

ಲಂಚ ನಿರೋಧ ಶಾಖೆ ಆಡಳಿತ ಬಲಪಡಿಸಬೇಕು

ಎಫಿಷಿಯೆನ್ಸಿ ಆಡಿಟ್ ಮತ್ತು ಲಂಚ ನಿರೋಧ ಶಾಖೆಯ ಆಡಳಿತ ದಕ್ಷತೆಯು ಉತ್ತಮಪಡಿಸುವ ಅವಶ್ಯಕತೆಯನ್ನು ಒತ್ತಾಯಪಡಿಸಲು ಶ್ರೀ ಎಸ್ ರಂಗರಾಮಯ್ಯನವರು ಕತ್ತರಿ ಪ್ರಯೋಗ ನಿರ್ಣಯ ಶಾಸನ ಸಭೆಯಲ್ಲಿ ತಂದು ಲಂಚ ಕೊಡುವ ತಕ್ಕ ನಿರೋಧಶಾಖೆಯ ಕಾರ್ಯದಕ್ಷತೆ ಉತ್ತಮಪಡಿಸಲು ಲಂಚ ಕೊಡುವಿಕೆ ಕಡಿಮೆಯಾಗಬೇಕು. ಲಂಚ ಕೊಡುವಿಕೆಯನ್ನು ಪೂರ್ಣವಾಗಿ ನಾಶಮಾಡಲು ಸಾಧ್ಯವಿಲ್ಲ. ಲಂಚ ಕೊಡುವಿಕೆಗೆ ಸಂಬಂಧಿಸಿದ ಅರ್ಜಿಗಳನ್ನು ಸ್ವೀಕರಿಸಲು ಡೆಪ್ಯುಟಿ ಕಮಿಷನರಿಗೆ ಅಧಿಕಾರವಿರಬೇಕು. ಈ ಶಾಖೆಯು ಕೇವಲ ಶಿಫಾರಸಿನ ಶಾಖೆಯಾಗಿದೆ. ಜವಾಬ್ದಾರಿ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಲು ಈ ಶಾಖೆಗೆ ಅಧಿಕಾರವಿತ್ತು ಶಿಕ್ಷೆಗೆ ಒಳಗಾದವರು ಸರ್ಕಾರಕ್ಕೆ ಅಪೀಲು ಮಾಡುವ ಅವಕಾಶ ಕೊಡಬೇಕು. ಒಬ್ಬ ಅಧಿಕಾರಿಗೆ ಬದಲು ಎಫಿಷಿಯೆನ್ಸಿ ಆಡಿಟ್ ಮತ್ತು ಲಂಚನಿರೋಧ ಕಮಿಷನ್ ಏರ್ಪಡಿಸಬೇಕು ಎಂದರು.

ವಸತಿ ನಿರ್ಮಾಣಕ್ಕೆ ಒಂದು ಕೋಟಿ ರೂ.

೧೯೫೧—೫೨ನೇ ಸಾಲಿಗೆ ಕಾರ್ಮಿಕರ ಗೃಹಗಳ ನಿರ್ಮಾಣ ಯೋಜನೆಗಾಗಿ ಬೊಂಬಾಯಿ ಕೇಂದ್ರದಿಂದ ಒಂದು ಕೋಟಿ ರೂ. ಸಾಲ ಪಡೆಯಲಿದೆ ಎಂದು ಖಚಿತವಾಗಿ ಗೊತ್ತಾಗಿದೆ.

ಸಕ್ಕರೆಯ ಕೋಟಾ ಮುಂಗಡ

ಸಕ್ಕರೆ ಕಾರ್ಖಾನೆಯ ಗೋಡೌನುಗಳಲ್ಲಿ ದಾಸ್ತಾನು ಹೆಚ್ಚಿರುವುದರಿಂದ ಕೇಂದ್ರ ಸರ್ಕಾರದ ಅಪ್ಪಣೆಯ ಮೇಲೆ ಮೈಸೂರು ಸರ್ಕಾರವು ೨ ತಿಂಗಳ ಸಕ್ಕರೆ ಕೋಟಾವನ್ನು ಮುಂಗಡವಾಗಿ ಕೊಡುವುದು. ಮೇ ತಿಂಗಳಿನ ಕೊನೆಯ ವರೆಗಿನ ಕೋಟಾವನ್ನು ಮಾತ್ರ ಮುಂಗಡವಾಗಿ ಕೊಡಲ್ಪಡುವುದು ಇಚ್ಛೆಯುಳ್ಳವರು ತಮ್ಮ ರೇಷನ್ ಕಾರ್ಡುಗಳನ್ನು ತೋರಿಸಿ ತಮ್ಮ ತಮ್ಮ ಡಿಪೋಗಳಲ್ಲಿ ಪಡೆಯಬಹುದು ಎಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಚುನಾವಣೆಗಳಲ್ಲಿ ಜನತೆಯ ನಿರಾಸಕ್ತಿ

ಪಾಕೀಸ್ತಾನದ ಪಂಜಾಬಿನಲ್ಲಿ ಇತ್ತೀಚೆಗೆ ವಯಸ್ಕರ ಮತದಾನ ಪದ್ಧತಿ ಮೇಲೆ ನಡೆದ ಶಾಸನಸಭಾ ಚುನಾವಣೆಗಳಲ್ಲಿ ೯೦ ಲಕ್ಷ ಓಟರುಗಳಲ್ಲಿ ೬೦ ಲಕ್ಷಕ್ಕೂ ಹೆಚ್ಚು ಜನರು ಓಟು ಮಾಡಲೇ ಇಲ್ಲ. ಇದು ಜನತೆಯ ನಿರಾಸಕ್ತಿಯನ್ನು ಎತ್ತಿ ತೋರಿಸುತ್ತದೆ.

ವಿರೋಧ ಪಕ್ಷಗಳು ವಿಪರೀತವಾಗಿದ್ದು ಹೆಚ್ಚಾಗಿ ಓಟುಗಳು ಹಂಚಿಕೆ ಆಗಿ ಹೋದುದರಿಂದ ಮುಸ್ಲಿಂಲೀಗಿಗೇ ಬಹುಮತ ಬಂದಿತು. ೧೯೭ ಸ್ಥಾನಗಳಲ್ಲಿ ೧೪೦ ಸ್ಥಾನಗಳು ಅದಕ್ಕೆ ಬಂದಿವೆಯೆಂದು ಹೇಳಲಾಗಿದೆ.

ಲಾಹೋರಿನಲ್ಲೇ ಮುಸ್ಲಿಂಲೀಗಿಗೆ ಶೇ|| ೮೦ರಷ್ಟು ಸ್ಥಾನ ಕೈಬಿಟ್ಟದು ದೊಡ್ಡ ಅಪಘಾತವಾದಂತಾಗಿದೆ.

ಹಿಂತೆಗೆದುಕೊಳ್ಳಿ

ಕೇಂದ್ರ ಪಾರ್ಲಿಮೆಂಟಿನಲ್ಲಿಂದು ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರು ಮಾತನಾಡುತ್ತಾ, ಸರ್ಕಾರವು ಕಾಶ್ಮೀರದ ಪ್ರಶ್ನೆಯನ್ನು ಸೆಕ್ಯೂರಿಟಿ ಕೌನ್ಸಿಲ್ಲಿನಿಂದ ಹಿಂತೆಗೆದುಕೊಳ್ಳುವ ಕಾಲ ಒದಗಿದೆ ಭಾರತವು ಕೂಡಲೇ ಒಂದು ಘೋಷಣೆಯನ್ನು ಹೊರಡಿಸಬೇಕು ಎಂದರು. ಹಾಗೆಯೇ ಅವರು ಪಾಕೀಸ್ತಾನವು ಕಾಶ್ಮೀರದಿಂದ ಸೈನ್ಯವನ್ನು ಹಿಂತೆಗೆಯದಿದ್ದರೆ ಭಾರತದ ಮೇಲೆ ಯುದ್ಧ ಮಾಡಿದಂತೆಯೇ ಸರಿ ಎಂದರು

ಒಪ್ಪುವ ನಿರೀಕ್ಷೆ

ಪಾಕೀಸ್ತಾನವು ಕಾಶ್ಮೀರದ ಬಗ್ಗೆ ಆಂಗ್ಲೋ ಅಮೆರಿಕನ್ ನಿರ್ಣಯವನ್ನು ಒಪ್ಪಿಕೊಳ್ಳುವುದೆಂದು ಹೇಳಲಾಗಿದೆ.

ಸಮಸ್ಯಾ ಪರಿಹಾರಕ್ಕೆ ಹಲವು ಸಮಿತಿಗಳ ನೇಮಕದ ಫಲ

ಕೊರಿಯದ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ರಾಜಕೀಯ ಒಪ್ಪಂದ ಮಾಡಿಕೊಳ್ಳಲು ವಾಷಿಂಗ್ಟನ್ ಟೋಕಿಯೋ ಮುಂತಾದೆಡೆಗಳಲ್ಲಿ ಅವ್ಯವಸ್ಥೆಯ ಪ್ರಯತ್ನಗಳು ನಡೆದಿರುವ ಫಲವಾಗಿ ಈ ದಿನ ಪ್ರಪಂಚ ಸಂಸ್ಥೆಯ ರಾಜಕಾರಿಣಿಗಳು ಮುಂದೇನು ಮಾಡಬೇಕೆಂಬುದು ತಿಳಿಯದೆ ಭ್ರಾಂತರಾಗಿದ್ದಾರೆ.

ಯಾರೊಡನೆ ಸಂಧಾನ ಆರಂಭಿಸಬೇಕೆಂಬ ಬಗ್ಗೆ ಚೀಣೀಯರಿಗೂ ದಿಕ್ಕು ತೋಚದಂತೆ ಆಗಿರಬಹುದೆಂದು ಕಲವರು ಅಭಿಪ್ರಾಯ ಪಟ್ಟಿದ್ದಾರೆ.

೯೦ ಸಾವಿರ ಕ|| ಸೈನಿಕರು ಸಿದ್ಧರಾಗಿ ನಿಂತಿದ್ದಾರೆ

ಮಧ್ಯ ಕೊರಿಯಾದಲ್ಲಿ ಕುಮ್ವ—ಚುಂಚಾನಾ ರಸ್ತೆಯ ಅಂಚಿನಲ್ಲಿ ೯೦ ಸಾವಿರ ಕಮ್ಯೂನಿಸ್ಟ್ ಸೈನಿಕರು ವ್ಯೂಹ ಕಟ್ಟಿ, ಯುದ್ಧ ಸನ್ನದ್ಧರಾಗಿ ನಿಂತಿದ್ದಾರೆಂಬುದಾಗಿ ಅಮೆರಿಕನ್ ಅಧಿಕಾರಿ ಪ್ರಮುಖರೊಬ್ಬರು ತಿಳಿಸಿದ್ದಾರೆ

ಈ ರಸ್ತೆ ಕುಮ್ವದಲ್ಲಿ ಆರಂಭವಾಗಿ ೩೮ನೇ ಅಕ್ಷಾಂಶವನ್ನು ದಾಟಿ ಅಮೆರಿಕನ್ ವಶದಲ್ಲಿರುವ ಚುಂಚಾನ್ನು ಸೇರುವುದು.

ಈ ೯೦ ಸಾವಿರ ಸೈನಿಕರಲ್ಲಿ ೧೦ ಸಾವಿರ ಮಂದಿ ೩೮ನೇ ಅಕ್ಷಾಂಶಕ್ಕೆ ದಕ್ಷಿಣದಲ್ಲಿದ್ದಾರೆ. ಉಳಿದವರು ಉತ್ತರದಲ್ಲಿದ್ದಾರೆ

ಕೊಲೆ ಆಪಾದನೆ

ಶಿವಮೊಗ್ಗಾ ತಾ|| ಕುಂಸಿ ಹೋಬಳಿ ಚಾಮೇನಹಳ್ಳಿಯಲ್ಲಿ ಗವಿಯಪ್ಪ ಎಂಬುವನ ಕೊಲೆಯಾಗಿರುವುದಾಗಿಯೂ, ಈ ಪ್ರಕರಣದಲ್ಲಿ ಒಬ್ಬನನ್ನು ದಸ್ತಗಿರಿ ಮಾಡಿರುವುದಾಗಿಯೂ ಮೃತನ ತಲೆಯು ಬಾವಿಯಲ್ಲಿ ಸಿಕ್ಕಿತೆಂದೂ ಪೋಲೀಸಿನವರು ತನಿಖೆ ಕ್ರಮ ನಡೆಸುತ್ತಿರುವುದಾಗಿಯೂ ತಿಳಿಯಬರುತ್ತದೆ.

೧೦ ಜನರ ಮರಣ

ಹಿಸ್ಸಾರಿನ ನಿರಾಶ್ರಿತ ಶಿಬಿರದಲ್ಲಿ ಕಳೆದ ವಾರದಲ್ಲಿ ಚಂಡಮಾರುತದ ಫಲವಾಗಿ ಹತ್ತು ಮಂದಿ ಸತ್ತು, ಒಂಬತ್ತು ಮಂದಿ ತೀವ್ರವಾಗಿ ಘಾಯಗೊಂಡಿದ್ದಾರೆ.

ಕಮ್ಯೂನಿಸ್ಟರನ್ನು ಎದುರಿಸಲು ಸಲಹೆ

ಕೇಂದ್ರ ಆಹಾರಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಬೊಂಬಾಯಿನಲ್ಲಿ ಸಾಂಸ್ಕೃತಿಕ ಸ್ವಾತಂತ್ರ್ಯ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಮಾನವನಲ್ಲಿ ಆತ್ಮವಿಶ್ವಾಸವನ್ನು ಹೆಚ್ಚು ಉಂಟುಮಾಡಿದರೆ ಕಮ್ಯೂನಿಸ್ಟರ ದಾಂಧಲೆ ತನಗೆ ತಾನೇ ಕಮ್ಮಿಯಾಗುವುದು ಎಂದರು. ಹಾಗೆಯೇ ಅವರು ಭಾರತದ ವಿದ್ಯಾವಂತರಿಗೆ ಸಂಸ್ಕೃತಿಯಲ್ಲಾಗಲೀ, ಸ್ವಾತಂತ್ರ್ಯದಲ್ಲಾಗಲೀ, ಮಾನವ ಘನತೆಯ ಬಗ್ಗೆಯಾಗಲೀ ವಿಶ್ವಾಸವಿಲ್ಲ. ಈ ರೀತಿಯ ಅವಿಶ್ವಾಸಕ್ಕೆ ಆಧುನಿಕ ವಿದ್ಯಾಭ್ಯಾಸಪದ್ಧತಿಯೇ ಕಾರಣ. ಈ ಆಧುನಿಕ ವಿದ್ಯಾಭ್ಯಾಸವು ಜನರಲ್ಲಿ ಆತ್ಮ ವಿಶ್ವಾಸ ಹುಟ್ಟಿಸುವ ಹಳೆಯ ಸಾಧನಗಳನ್ನು ಬುಡಮೇಲು ಮಾಡುತ್ತಿದೆ ಎಂದು ಹೇಳಿದರು.

ಉಪವಾಸ ಮುಷ್ಕರ

ತಿರುವಾಂಕೂರು ಮತ್ತು ಕೊಚ್ಚಿ ಮುಖ್ಯ ಮಂತ್ರಿ ಶ್ರೀ ಕೇಶವನ್‌ರವರು ಶಾಸನ ಸಭೆಯಲ್ಲಿ ಮಾತನಾಡುತ್ತಾ, ಅಲೆಪ್ಪಿಯಲ್ಲಿ ೧೪ ಮಂದಿ ವಿಚಾರಣೆಗೆ ಗುರಿಯಾಗಿರುವ ಕೈದಿಗಳು ಜೈಲಿನಲ್ಲಿ ಸರಿಯಾದ ಅನುಕೂಲತೆ ಇಲ್ಲವೆಂದು ಉಪವಾಸ ಮುಷ್ಕರ ನಡೆಸುತ್ತಿದ್ದಾರೆ. ಇದರ ಜೊತೆಗೆ ಇನ್ನು ಕೆಲವರು ಸೇರಿದ್ದಾರೆ ಎಂದು ಹೇಳಿದರು.

ಇನ್ನೊಂದು ಜಿಲ್ಲೆಯಲ್ಲಿ ಪಾನನಿರೋಧ

ಶ್ರೀ ಸಿದ್ದಯ್ಯನವರು ಶಾಸನ ಸಭೆಯಲ್ಲಿ ಟಿ. ಸುಬ್ರಹ್ಮಣ್ಯಂರವರ ಪ್ರಶ್ನೆಗೆ ಉತ್ತರಕೊಡುತ್ತಾ, ಸಂಸ್ಥಾನದಲ್ಲಿ ಇನ್ನೊಂದು ಜಿಲ್ಲೆಯಲ್ಲಿ ಪಾನನಿರೋಧ ಕ್ರಮವನ್ನು ಜಾರಿಗೆ ತರಲು ಯೋಚಿಸುತ್ತಿದೆ ಎಂದರು. ಈಗ ವರ್ಷಕ್ಕೆ ಪಾನನಿರೋಧದಿಂದ ೨,೧೦,೨೫,೦೦೦ ರೂ. ಗಳು ನಷ್ಟವಾಗುತ್ತಿದೆ ಎಂದು ಹೇಳಿದರು.

ರಜಾ

ಭದ್ರಾವತಿ ಎಲಕ್ಟ್ರಿಕಲ್ ಶಾಖೆಯ ಜೂನಿಯರ್ ಇಂಜನಿಯರ್ ಶ್ರೀ ಆರ್. ದಾನಪ್ಪನವರಿಗೆ ಏಪ್ರಿಲ್ ೧೫ರಿಂದ ೨ ತಿಂಗಳು ೧೫ ದಿವಸ ಪ್ರಿವಿಲೆಜ್ ರಜಾ ಮಂಜೂರಾಗಿದೆ.

ಸರ್ಕಾರದ ಎಲಕ್ಟ್ರಿಕ್ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ಇ. ಇ. ನಾಕ್‌ರವರಿಗೆ ೧೪ನೇ ನವೆಂಬರ್ ೫೦ರವರೆಗಿದ್ದ ರಜವನ್ನು ೨೪ನೇ ಫೆಬ್ರವರಿ ೫೧ರ ವರೆಗೆ ಹೆಚ್ಚಿಸಿದೆ ಅದನ್ನು ಪ್ರಿವಿಲೆಜ್ ರಜಾ ಎಂದು ಪರಿಗಣಿಸಲಾಗುವುದು.

ಪ್ರಧಾನಿ ಕೊಲೆಯತ್ನ

ಪರ್ಷಿಯಾದ ಹೊಸ ಪ್ರಧಾನಿಯವರನ್ನು ಕೊಲೆ ಮಾಡಲು ಒಳಸಂಚು ನಡೆಸುತ್ತಿದ್ದರೆಂಬ ಆಪಾದನೆಯ ಮೇಲೆ ತೀವ್ರಗಾಮಿಪಕ್ಷದ ೮ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಅಕ್ಕಿ ರೇಷನ್ ಹೆಚ್ಚುವುದು

ಮದರಾಸಿನ ರೇಷನ್ ಪ್ರದೇಶಗಳಲ್ಲಿ ೭ರಿಂದ ೮ ಔನ್ಸುಗಳಿಗೆ ಅಕ್ಕಿ ಕೋಟಾವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

ರಣಜಿತ್
೨೭—೩—೫೧ರಿಂದ
ಆಕರ್ಷಣೀಯ ೬ನೇ ವಾರ
ಪ್ರತಿದಿನ ೩ ಆಟಗಳು
* ಬಾಬುಲ್ *
ಪಾತ್ರ— ನರ್ಗಿಸ್, ದಿಲೀಪ್‌ಕುಮಾರ್,

ಬೆಳಗಿನ ಪ್ರದರ್ಶನ ೩೦-೩-೫೧ರಿಂದ
ಮೂರು ದಿನಗಳು ಮಾತ್ರ
ಅಶೋಕ್‌ಕುಮಾರ್, ವೀನಾ, ನಟಿಸಿರುವ
—:: ನಜ್ಮ ::—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಒಲಂಪಿಯಾ ೨೯—೩—೫೧ರಿಂದ
ಪ್ರತಿದಿನ ೩ ಆಟಗಳು ಅಮೋಘವಾದ ೩ನೇ ವಾರ
ರಣಜಿತ್‌ರವರ ಸಂಗೀತಮಯ ಚಿತ್ರ
* ಮಧುಬಾಲ *
ಮುಖ್ಯಭೂಮಿಕೆ:— ದೇವಾನಂದ್, ಮಧುಬಾಲ, ಜೀವನ್, ಮುಂತಾದವರು

ರಿ. ಸಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೩—೧೯೫೧ನೇ ಶುಕ್ರವಾರ [ಸಂಚಿಕೆ ೧೭೧

ಕಲ್ಲಿದ್ದಲು ಪತ್ತೆ

ಮದರಾಸ್ ಪ್ರಾಂತದ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ದೊರೆತಿರುವ ಲಿಗ್ನೈಟ್ ಕಲ್ಲಿದ್ದಲು ವಿಶ್ವದಲ್ಲೆಲ್ಲಾ ಅತ್ಯುತ್ತಮವಾದುದೆಂದು ಜರ್ಮನಿಯ ಭೂಗರ್ಭಶಾಸ್ತ್ರ ಪ್ರವೀಣರು ಅಭಿಪ್ರಾಯಪಟ್ಟಿದ್ದಾರೆ.

ಜೀವದಾನ ಮಾಡಿರೆಂದು ರಾಷ್ಟ್ರಪತಿಯವರಿಗೆ ಅರ್ಜಿ

ಮರಣದಂಡನೆಗೆ ಗುರಿಯಾಗಿರುವ ೧೨ ಜನ ತೆಲಂಗಾಣ ರೈತರು ತಮಗೆ ಜೀವದಾನ ಮಾಡಬೇಕೆಂದು ಕೋರಿ ರಾಷ್ಟ್ರಪತಿಗೂ ಮತ್ತು ಹೈದರಾಬಾದಿನ ರಾಜಪ್ರಮುಖರಿಗೂ ಸಂಯುಕ್ತ ಅರ್ಜಿಯನ್ನು ಸಲ್ಲಿಸಿದ್ದಾರೆ.

ವಿಶ್ವವಿದ್ಯಾನಿಲಯ ಸ್ವತಂತ್ರವಾಗಿರಬೇಕು

ಮೈಸೂರು ಶಾಸನ ಸಭೆಯಲ್ಲಿ ಕತ್ತರಿ ಪ್ರಯೋಗಗಳು

ಬೆಂಗಳೂರು ಮಾ. ೨೯

ವಿದ್ಯಾಭ್ಯಾಸ ಖಾತೆಗೆ ೫೧ನೇ ಸಾಲಿನಲ್ಲಿ ಖಾತೆ ಮಾಡಬೇಕಾಗಿರುವ ವೆಚ್ಚವನ್ನು ವಹಿಸಲು ಸರಕಾರದವರಿಗೆ ೩೦೪೯೬೦೦ ರೂ. ಗಳಿಗೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕೆಂಬ ನಿರ್ಣಯವನ್ನು ಶ್ರೀ ಆರ್. ಚನ್ನಿಗರಾಮಯ್ಯನವರು ಇಂದು ಶಾಸನ ಸಭೆಯಲ್ಲಿ ಮಂಡಿಸಿದರು.

ಶ್ರೀ ಎಸ್. ಶಿವಪ್ಪನವರು ಕತ್ತರಿ ಪ್ರಯೋಗ ನಿರ್ಣಯ ತಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರವು ಹಿಂದಿನ ಪದ್ಧತಿಯನ್ನು ಅನುಸರಿಸುತ್ತಿರುವುದು ವಿಷಾದಕರವೆಂದು ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸಬೇಕೆಂದರು. ಡಾ|| ಸೈಯದ್ ಅಬ್ದುಲ್ ರಹಮಾನ್‌ರವರು ಇಡೀ ಭಾರತದಲ್ಲಿ ಖ್ಯಾತಿಗೊಂಡಿರುವ ಮೈಸೂರು ವಿಶ್ವವಿದ್ಯಾನಿಲಯವು ತನ್ನ ಖ್ಯಾತಿಯನ್ನು ಉಳಿಸಲು ಅದು ಪೂರ್ಣವಾಗಿ ಸ್ವತಂತ್ರವಾಗಿರಬೇಕು. ಸಂಸ್ಥಾನದ ಆಡಳಿತ ಅಧಿಕಾರಕ್ಕೆ ಒಳಗಾಗಿರಬೇಕು. ವಿಶ್ವವಿದ್ಯಾನಿಲಯದ ಅಭಿವೃದ್ಧಿಯ ದೃಷ್ಟಿಯಿಂದ ಅದು ಸರಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯವು ಸ್ವತಂತ್ರವಾಗಿರಬೇಕೆಂದರು.

ಶ್ರೀ ಆರ್. ಚನ್ನಿಗರಾಮಯ್ಯನವರು ಉತ್ತರಕೊಡುತ್ತಾ ಮೈಸೂರು ಸಂಸ್ಥಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸಾಮಾನ್ಯವಾಗಿ ಸ್ವತಂತ್ರವಾಗಿದೆ. ಸರ್ಕಾರವು ೪೫ ಲಕ್ಷ ರೂ. ಧನಸಹಾಯ ವಿತ್ತಿದೆ. ಮುಂದಿನ ಅಧಿವೇಶನದಲ್ಲಿ ಆ ಸಂಬಂಧದ ಮಸೂದೆಯೊಂದು ಈ ಶಾಸನ ಸಭೆಯ ಮುಂದೆ ಬರಲಿದೆ. ಆಗ ಎಲ್ಲವನ್ನು ವಿಮರ್ಶಿಸಬಹುದು ಎಂದರು. ಸೂಚಕರು ಕತ್ತರಿಪ್ರಯೋಗವನ್ನು ಹಿಂತೆಗೆದುಕೊಂಡರು. ಜನಾಬ್ ಮಹಮದ್ ಷರೀಫ್, ಶ್ರೀ ಸಿಂಗಾರಿಗೌಡ, ಶ್ರೀ ಬಿ. ಎನ್. ಬೋರಣ್ಣಗೌಡ, ಶ್ರೀ ಶಿವಾನಂದ ಶರ್ಮ, ಶ್ರೀ ಕೆ. ಪುಟ್ಟಸ್ವಾಮಿ, ಮುಂತಾದವರು ಮಾತನಾಡಿದರು.

ಸಲಹೆ ಒಪ್ಪಲಾಗುವುದಿಲ್ಲ

ಪಂಚಾಯಿತಿ ವಿಧಾನದ ಮೂಲಕ ಸಂಧಾನ ನಡೆಸಲು ಸಾಧ್ಯವಿಲ್ಲ. ಧರ್ಮಯುದ್ಧದ ಮಧ್ಯೆ ಪಾಕೀಸ್ತಾನವು ವಿಶೇಷವಾಗಿ ಪ್ರಚಾರ ಮಾಡುತ್ತಿದೆ. ಈ ಸ್ಥಿತಿಯಲ್ಲಿ ಕಾಶ್ಮೀರ ಸಂಧಾನವು ನಡೆಯುವುದೆ ಕಷ್ಟ. ೧೯೪೮ನೇ ಆಗಸ್ಟ್‌ನ ಒಪ್ಪಂದವನ್ನು ಉಲ್ಲಂಘಿಸಿ ಪಾಕೀಸ್ತಾನವು ಕಾಶ್ಮೀರದಲ್ಲಿ ೩೨ ಸೈನ್ಯದಳಗಳನ್ನಿಟ್ಟಿದೆ. ಭಾರತವು ತನ್ನ ಸೈನ್ಯವನ್ನು ಈಗ ಹಿಂತೆಗೆದುಕೊಳ್ಳುವುದಕ್ಕಾಗುವುದಿಲ್ಲ ಪಾಕೀಸ್ತಾನದಲ್ಲಿ ಈಗ ಇರುವ ಮಿಲಿಟರಿ ಒಳಸಂಚಿನಿಂದ ಸ್ಥಿತಿಯು ಇನ್ನು ಹದಗೆಡುವುದು. ಮೂರನೆಯ ಪಕ್ಷಕ್ಕೆ ಕಾಶ್ಮೀರವನ್ನು ಬಿಟ್ಟು ಭಾರತವು ಬದಲಾದರೂ ಒಂದು ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಭದ್ರತಾಸಮಿತಿಯಲ್ಲಿ ಆಂಗ್ಲೋ ಅಮೆರಿಕನ್ ನಿರ್ಣಯದ ಮೇಲೆ ಭಾರತದ ಅಭಿಪ್ರಾಯವನ್ನು ತಿಳಿಸಿ ಆ ನಿರ್ಣಯವನ್ನು ಒಪ್ಪಲಾಗುವುದಿಲ್ಲವೆಂದರು.

ಮುಖ್ಯ ಮಂತ್ರಿಗಳ ಅಸ್ವಸ್ಥತೆ

ಬೆಂಗಳೂರು ಮಾ. ೨೯

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅನಾರೋಗ್ಯದಿಂದಿರುವ ಕಾರಣ ಅವರು ಕೆಲಸದ ಮೇಲೆ ಮತ್ತೆ ಹಾಜರಾಗುವವರೆಗೆ ಅರ್ಥಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಮುಖ್ಯಮಂತ್ರಿಗಳ ಕೆಲಸ ನೋಡಿಕೊಳ್ಳುವರು.

ಮೈಸೂರಿಗೆ ರಾಷ್ಟ್ರಪತಿ

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ಏಪ್ರಿಲ್ ೯ ಮತ್ತು ೧೦ನೇ ತಾರೀಖುಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡಲಿರುವರು. ಅವರ ಕಾರ್ಯಕ್ರಮ ಈ ರೀತಿ ಇದೆ—

ಏ|| ೯ರ ಬೆಳಿಗ್ಗೆ ೧೦ಕ್ಕೆ ಮದರಾಸಿನಿಂದ ಮೈಸೂರಿಗೆ ಬರುವರು. ೧೧-೩೦ಕ್ಕೆ ಮಂತ್ರಿಗಳೊಡನೆ ಭೇಟಿ. ಮಧ್ಯಾಹ್ನ ೧೨-೩೦ಕ್ಕೆ ಉಪಹಾರ ಸ್ವೀಕಾರ. ೪-೩೦ಕ್ಕೆ ಪೌರ ಸ್ವಾಗತ. ೫-೩೦ಕ್ಕೆ ಶ್ರೀಮನ್ಮಹಾರಾಜರೊಡನೆ ಅರಮನೆಯಲ್ಲಿ ಟೀ ಸ್ವೀಕರಿಸುವರು. ಸಂಜೆ ೭ಕ್ಕೆ ಚಾಮುಂಡಿ ಬ್ಯಾಂಕ್ವಾಂಟ್ ಹಾಲಿನಲ್ಲಿ ಗಾರ್ಡನ್ ಪಾರ್ಟಿ. ೭ಕ್ಕೆ ಕೃಷ್ಣರಾಜಸಾಗರಕ್ಕೆ ಭೇಟಿ. ೮ಕ್ಕೆ ಕೃಷ್ಣರಾಜಸಾಗರದ ಹೋಟೇಲಿನಲ್ಲಿ ಭೋಜನ ಕೂಟ. ೯-೪೫ಕ್ಕೆ ಚಾಮುಂಡಿ ಬೆಟ್ಟಕ್ಕೆ ಭೇಟಿ

ಏ|| ೧೦ರ ಬೆಳಿಗ್ಗೆ ೮-೩೦ಕ್ಕೆ ಶ್ರೀಮನ್ಮಹಾರಾಜರವರು ರಾಷ್ಟ್ರಪತಿಯನ್ನು ಭೇಟಿ ಮಾಡುವರು. ೮-೪೫ಕ್ಕೆ ರಾಷ್ಟ್ರಪತಿ ಲಲಿತ ಮಹಲ್‌ನಿಂದ ಅರಮನೆಗೆ ಹೊರಡುವರು. ೯-೩೦ಕ್ಕೆ ಕಾಫಿ ಪ್ರೋಕೇಷನ್ ಸಮಾರಂಭ. ೧೧-೩೦ಕ್ಕೆ ವಿಮಾನದಲ್ಲಿ ಬೆಂಗಳೂರಿಗೆ ಪ್ರಯಾಣ.

ಅವಧಿ ಹೆಚ್ಚಿಸಿದೆ

ಕೇಂದ್ರ ಸರ್ಕಾರದ ನಾನಾ ಶಾಖೆಗಳಿಗೆ ಕೆಲಸಕ್ಕೆ ನಿಯಮಿಸಿಕೊಳ್ಳಲು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ನಡೆಸುವ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ರಾಜಕೀಯ ಚಳುವಳಿಯಲ್ಲಿ ಭಾಗವಹಿಸಿದ್ದು ೩೫ ವಯಸ್ಸಿನಲ್ಲಿರುವರಿಗೆ ೧೯೫೦ನೇ ಡಿಸೆಂಬರ್ ೩೧ರ ವರೆಗೆ ಕೊಟ್ಟಿದ್ದ ಅವಕಾಶವನ್ನು ಭಾರತ ಸರ್ಕಾರದವರು ಈಗ ೧೯೫೧ನೇ ಡಿಸೆಂಬರ್ ೩೧ರ ವರೆಗೆ ಇನ್ನೂ ಒಂದು ವರ್ಷ ಕಾಲ ಹೆಚ್ಚಿಸಿದ್ದಾರೆ.

ಸಿಡುಬು ವ್ಯಾಧಿ ೧೮೭ ಮಂದಿಗೆ ತಗುಲಿ ೫೭ ಮಂದಿ ಸತ್ತರು

ಮಾರ್ಚ್ ೨೭ನೇ ತಾರೀಖಿಗೆ ಅಂತ್ಯವಾದ ವಾರದಲ್ಲಿ ಸಂಸ್ಥಾನದಲ್ಲೆಲ್ಲಾ ೫೨ ಜನರಿಗೆ ಕಾಲರಾ ತಗಲಿ ೮೫ ಮಂದಿ ಸತ್ತರು. ೧೩ ಮಂದಿಗೆ ಪ್ಲೇಗ್ ತಗಲಿ ೩೫ ಮಂದಿ ಸತ್ತರು. ಸಿಡುಬು ವ್ಯಾಧಿ ೧೮೭ ಜನರಿಗೆ ತಗಲಿ ೫೭ ಮಂದಿ ಸತ್ತರು ಎಂಬುದಾಗಿ ಸರ್ಕಾರಿ ಪ್ರಕಟಣೆಯಿಂದ ಗೊತ್ತಾಗಿದೆ.

ಬೆಂಗಳೂರು ನಗರದಲ್ಲಿ ಒಂದು ವಾರಕ್ಕೆ ೧೭೧ ಮಂದಿ ಸತ್ತರು ಕೆ. ಜಿ. ಎಫ್. ನಲ್ಲಿ ಒಂದು ದಿನದಲ್ಲಿ ೩ ಮಂದಿ ಸತ್ತರು ಎಂಬುದಾಗಿಯೂ ತಿಳಿಸಿದ್ದಾರೆ.

ಆಗಂತುಕ ವಿಮಾನ

ಭಾರತ ಸರ್ಕಾರದ ಅನುಮತಿ ಪಡೆಯದ ಒಂದು ವಿಮಾನವು ದೆಹಲಿಯ ಮೇಲೆ ನಿನ್ನೆ ಸುಮಾರು ೩೦೦೦೦ ಅಡಿಗಳ ಮೇಲೆ ಹಾರಾಡುತ್ತಲಿದ್ದುದು ಕಾಣಬಂದಿತು. ವಿಮಾನವು ಯಾವ ರಾಷ್ಟ್ರಕ್ಕೆ ಸೇರಿದ್ದೆಂಬುದು ಪತ್ತೆ ಹಚ್ಚಲಾಗಲಿಲ್ಲ.

ಈ ವಿಮಾನವು ರಜತವರ್ಣದ ಛಾಯೆಯನ್ನು ಬೀರಿತು. ಒಂದೇ ಎಂಜಿನ್ನಿಂದ ಕೂಡಿದ್ದೆಂದು ವಿಮಾನವು ಯಾವ ದುರುದ್ದೇಶದಿಂದಾಗಲೀ ಹೊರಟಿರುವಂತೆ ಕಾಣುವುದಿಲ್ಲವೆಂದು ವಿಮಾನ ದಳದವರು ಅಭಿಪ್ರಾಯಪಟ್ಟಿದ್ದಾರೆ. ಈಗ ಎಲ್ಲಾ ವಿಮಾನಕೇಂದ್ರಗಳಿಗೂ ಎಚ್ಚರಿಕೆ ಕೊಡಲಾಗಿದೆ ಎಂದು ಹೇಳಲಾಗಿದೆ.

ಗುಂಡಿಟ್ಟು ಕೊಲ್ಲಲಾಯಿತು

ಕರ್ನೂಲ್ ಜಿಲ್ಲೆಯ ಗಡಿಯಲ್ಲಿ ಕಮ್ಯೂನಿಸ್ಟನೊಬ್ಬನನ್ನು ಗುಂಡಿಟ್ಟು ಕೊಲ್ಲಲಾಯಿತೆಂದು ಗೊತ್ತಾಗಿದೆ.

ನೆಹರೂ ಕಾಶ್ಮೀರಕ್ಕೆ

ಪ್ರಧಾನಿ ಪಂ॥ ನೆಹರೂರವರು ಭಾನುವಾರದಿಂದ ೩ ದಿವಸ ಕಾಶ್ಮೀರದಲ್ಲಿ ಪ್ರವಾಸಗೊಳ್ಳುವರು.

ಕೇಂದ್ರದ ಸಹಾಯ

ಬೆಂಗಳೂರು ಮಾ. ೨೯

ಭಾರತ ಸರ್ಕಾರವು ಹೊರಗಿನಿಂದ ಬರುವ ಧಾನ್ಯವನ್ನು ಇಲ್ಲಿಯ ಬೆಲೆಗೆ ಮಾರಾಟ ಮಾಡಲು ೫೭೫೦೨೦೦ ರೂ. ಗಳ ಸಬ್‌ಸಿಡಿಯನ್ನು ೫೧ನೇ ಸಾಲಿಗೆ ಕೊಡುವುದು. ಮೈಸೂರು ೧೦ ಲಕ್ಷ ರೂ ಗಳನ್ನು ಇದಕ್ಕಾಗಿ ಉಪಯೋಗಿಸುವುದು. ೫೧ನೇ ಸಾಲಿಗೆ ಕ್ರಮಬದ್ಧ ರೇಷನ್ ಪ್ರದೇಶಕ್ಕೆ ೧೬೧೦೦೦ ಟನ್ನು ಬೇಕು. ೧೩೫೫೦೦ ಟನ್ ಧಾನ್ಯವನ್ನು ಪ್ರೊಕ್ಯೂರ್ ಮಾಡಲು ಸರ್ಕಾರ ಯೋಚಿಸಿದೆ ಇದರ ಬೆಲೆ ೪೮೬೨೧೨೫೦ ರೂ. ಆಗುವುದು. ಭಾರತ ಸರ್ಕಾರವು ೩೩೭೦೯೨೦೦ ರೂ. ಗಳ ಬೆಲೆಯ ೭೫೦೦ ಟನ್ ಧಾನ್ಯವನ್ನು ಕೊಡುವುದು. ಬೆಲೆಗಳನ್ನು ಹೆಚ್ಚಿಸಿದ ಮೇಲೆ ಈಗ ೬೬೬೦೩೭೫೦ ರೂ ಬರುವುದು. ಇದುವರೆಗೆ ೧೬೪೫೩೨೧ ಪಲ್ಲಾ ಭತ್ತ. ೧೩೬೫೬೪ ಪಲ್ಲಾ ರಾಗಿ ೧೫೬೩೫ ಪಲ್ಲಾ ಜೋಳ ಮತ್ತು ೬೧೪೬ ಪಲ್ಲಾ ಇತರ ಧಾನ್ಯಗಳು ವಸೂಲಾಗಿದೆ. ಕ್ರಮಬದ್ಧವಾದ ರೇಷನ್ ಪ್ರದೇಶದಲ್ಲಿ ೧೨೫೦೦೮೦ ಜನಸಂಖ್ಯೆ ಇದೆ. ಇನ್‌ಫಾರ್‌ಮಲ್ ಪ್ರದೇಶದಲ್ಲಿ ೨೫ ಲಕ್ಷವಿದೆ ಮೈಸೂರಿಗೆ ೧॥ ಲಕ್ಷ ಟನ್ ಧಾನ್ಯವನ್ನು ಹೆಚ್ಚಾಗಿ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳುತ್ತಲಿದೆ ಎಂದು ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಇಂದು ಶಾಸನ ಸಭೆಯಲ್ಲಿ ತಿಳಿಸಿದರು.

ರಾಷ್ಟ್ರಪತಿಯವರಿಗೆ ಬಿನ್ನವತ್ತಳೆ

ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರಿಗೆ ನಿನ್ನೆ ಇನಾರ್ಕುಲಂನ ಪೌರಸಭೆಯು ಬಿನ್ನವತ್ತಳೆಯನ್ನರ್ಪಿಸಿತು. ರಾಷ್ಟ್ರಪತಿಯವರು ಉತ್ತರವೀಯುತ್ತಾ ದೇಶದ ಆಹಾರ ಉತ್ಪಾದನೆ ಹೆಚ್ಚಿಸಲು ಜನರೆಲ್ಲರೂ ಸರ್ಕಾರದೊಡನೆ ಸಹಕರಿಸಬೇಕು. ಇದು ಜನರ ಪರಿಶ್ರಮ ಮತ್ತು ಜಾಗರೂಕತೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಪಾಕಿಸ್ತಾನಕ್ಕೆ ಕಲ್ಲಿದ್ದಲು

೪೦೦೦ ಟನ್ನು ಭಾರತದ ಕಲ್ಲಿದ್ದಲು ಕರಾಚಿಗೆ ಬಂದಿಳಿದೆ.

ಒಂದು ಸೀಟಿಗೆ ೧॥ ರೂ. ತೆರಿಗೆ

ಸಿನಿಮಾಗಳನ್ನು ಟೂರಿಂಗ್ ಸಿನಿಮಾಗಳು ಮತ್ತು ಒಂದೇ ಸ್ಥಳದಲ್ಲಿರುವ ಸಿನಿಮಾಗಳು ಎಂದು ಎರಡು ಭಾಗವಾಗಿ ವಿಂಗಡಿಸಿ ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಕ. ಜಿ. ಎಫ್. ಗಳಲ್ಲಿ ಒಂದೊಂದು ಸೀಟಿಗೆ ೧ ತಿಂಗಳಿಗೆ ೧॥ ರೂ. ಗಳಂತೆಯೂ, ಕೋಲಾರ, ತುಮಕೂರು, ಚಿತ್ರದುರ್ಗ. ಹಾಸನ, ಶಿವಮೊಗ್ಗ, ಚಿಕ್ಕಮಗಳೂರ್, ಮಂಡ್ಯಗಳಲ್ಲಿ ಸೀಟು ೧ಕ್ಕೆ ೧ ರೂ. ನಂತೆಯೂ ಸಿನಿಮಾ ಹಾಗಗಳ ಮೇಲೆ ತೆರಿಗೆಯನ್ನು ವಿಧಿಸಲಾಗಿದೆ. ಟೂರಿಂಗ್ ಟಾಕೀಸಿನವರ ಪ್ರತಿ ಒಂದು ಆಟಕ್ಕೂ ೨॥ ರೂ. ಗಳನ್ನು ವಿಧಿಸಲಾಗಿದೆ.

ಮರು ವಸತಿಗಾಗಿ ೧೫ ಕೋಟಿ ರೂ.

ಸ್ಥಳಾಂತರ ರಾದವರಿಗೆ ಮನೆ, ಮತ್ತು ಅಂಗಡಿ ಇವುಗಳನ್ನು ಕಟ್ಟಿಸಲು ಕೇಂದ್ರ ಸರ್ಕಾರದ ಮರುವಸತಿ ಶಾಖೆಯ ೧೫ ಕೋಟಿ ರೂ. ಗಳ ಬೇಡಿಕೆಯನ್ನು ಪಾರ್ಲಿಮೆಂಟು ಒಪ್ಪಿಗೆಯಿತ್ತಿತು.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾವು ಕೂಡಲೇ ೨೦ ಲಕ್ಷ ಟನ್ನು ಆಹಾರವನ್ನು ಉಚಿತವಾಗಿ ಕೊಡಬೇಕು. ಇಲ್ಲವಾದರೆ ಭಾರತದಲ್ಲಿ ಆಹಾರಪರಿಸ್ಥಿತಿಯು ಉತ್ಕಟವಾಗುತ್ತದೆ. ಅಮೆರಿಕಾ ಕಾಂಗ್ರೆಸ್ ಇದನ್ನು ಪರ್ಯಾಲೋಚಿಸಿ ತಮ್ಮ ಸಲಹೆಯನ್ನು ಕೂಡಲೇ ಒಪ್ಪಬೇಕೆಂದು ಅಧ್ಯಕ್ಷ ಟ್ರೂಮನ್ನರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿರುವರು.

ಸಲಹೆ ತಿರಸ್ಕಾರ

ಉ. ಕೊರಿಯಾದೊಡನೆ ತಾವು ಸಂಧಾನಕ್ಕಾಗಿ ಸಿದ್ಧವಿರುವೆವೆಂದು ಜ. ಮೆಕಾರ್ಥರ್ ಸಲಹೆಯನ್ನು ಚೀಣಾ ಜನರ ವಿಶ್ವಶಾಂತಿಯ ಸಮಿತಿಯು ತಿರಸ್ಕರಿಸಿ ಇದು ಶುದ್ಧ ಮೋಸವೆಂದು ಪೀಕಿಂಗ್ ರೇಡಿಯೋ ಪ್ರಸಾರ ಮಾಡಿದೆ.

ರಾಜಕೀಯಕ್ಕೆ ಸೇರಿದ್ದು

ಕೊರಿಯಾ ಯುದ್ಧದಲ್ಲಿ ವಿಶ್ವಸಂಸ್ಥೆಯ ಸೈನ್ಯವು ೩೮ನೇ ಅಕ್ಷಾಂಶವನ್ನು ದಾಟುವುದು ರಾಜಕೀಯ ವಿಷಯವೆಂದು ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಹೇಳಿರುವುದನ್ನು ಅಧ್ಯಕ್ಷ ಟ್ರೂಮನ್ನರು ಸಮರ್ಥಿಸಿದ್ದಾರೆ.

ಪಾಕಿಸ್ತಾನದ ಅಕ್ಕಿ

೧೨೦೦ ಟನ್ ಅಕ್ಕಿಯನ್ನು ಪಾಕಿಸ್ತಾನವು ಭಾರತಕ್ಕೆ ಕಳುಹಿಸಿದೆ. ಇನ್ನೂ ೬೬೦೦ ಟನ್ ಅಕ್ಕಿಯನ್ನು ನಾಳೆ ಕಳುಹಿಸಲಿದೆ.

ಜನಸಂಖ್ಯೆ

ಪ॥ ಬಂಗಾಳದ ಜನಸಂಖ್ಯೆಯು ಈಗಿನ ಜನಗಣತಿಯ ಪ್ರಕಾರ ೨ ಕೋಟಿ ೯ ಲಕ್ಷ ಎಂದು ಹೇಳಲಾಗಿದೆ.

ಭಾರತಕ್ಕೆ ಸೆಣಬು

ಪೂರ್ವ ಬಂಗಾಳದಿಂದ ಭಾರತಕ್ಕೆ ೩೫೦೦೦ ಮಣ ಕಚ್ಚಾ ಸೆಣಬು ಪಾಕಿಸ್ತಾನದಿಂದ ಬಂದಿದೆ. ಇನ್ನು ಒಂದು ಲಕ್ಷ ಮಣ, ಹಡಗುಗಳ ಮೂಲಕ ೪೦೦೦೦ ಮಣ ರೈಲಿನ ಮೂಲಕ ಬರಲಿದೆ.

ನೇಮಕ

ಮೊದಲನೆಯ ತರಗತಿಯ ಅಸಿಸ್ಟೆಂಟ್ ಸರ್ಜನರಾದ ಶ್ರೀ ಟಿ. ಎಸ್. ಜಯರಾಂರವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೇಮಕಮಾಡಲ್ಪಟ್ಟಿದೆ.

ಅಸಿಸ್ಟೆಂಟ್ ಕಮಾಂಡರ್ ಜ॥ ಅಬ್ದುಲ್ ಬಸಿತ್‌ರವರಿಗೆ ೧೬ನೇ ನವೆಂಬರ್ ೫೦ರ ವರೆಗೆ ಕೊಟ್ಟಿದ್ದ ರಜವನ್ನು ೨೪ನೇ ಡಿಸೆಂಬರ್ ೫೦ರ ವರೆಗೆ ಹೆಚ್ಚಿಸಿದೆ.

ಒಲಂಪಿಯಾ ೨೯—೩—೫೧ರಿಂದ
ಪ್ರತಿದಿನ ೩ ಆಟಗಳು ಅಮೋಘವಾದ ೩ನೇ ವಾರ
ರಣಜಿತ್‌ರವರ ಸಂಗೀತಮಯ ಚಿತ್ರ
* ಮಧುಬಾಲ *
ಮುಖ್ಯಭೂಮಿಕೆ:— ದೇವಾನಂದ್, ಮಧುಬಾಲ, ಜೀವನ್, ಮುಂತಾದವರು

ಪ್ರಭಾ ಪಿಕ್ಚರ್ ಹೌಸ್
ಇಂದಿನಿಂದ ಅಮೋಘವಾದ ೩ನೇ ವಾರ
ಪ್ರತಿದಿನ ಮೂರು ಆಟಗಳು
'ಗೃಹಸ್ತಿ' ಚಿತ್ರದನಂತರ ಮಹೋನ್ನತ ಚಿತ್ರ, ಎಸ್. ಎಂ. ಯೂಸುಫ್‌ರವರ
* ಬಹುರಾಣಿ (ಹಿಂದಿ) *
ಪ್ರತಿಸಂಸಾರವೂ ನೋಡಲೇಬೇಕಾದ ಚಿತ್ರ
ಪಾತ್ರ- ಸುಲೋಚನ ಚಟರ್ಜಿ, ಯಶೋಧರ ಖಟ್ಟು, ಲಲಿತಾಪವಾರ್, ಡೇವಿಡ್ ಮತ್ತು ಗೋಪ್,

ರಣಜಿತ್
೨೭—೩—೫೧ರಿಂದ
ಆಕರ್ಷಣೀಯ ೪ನೇ ವಾರ
ಪ್ರತಿದಿನ ೩ ಆಟಗಳು
* ಬಾಬುಲ್ *
ಪಾತ್ರ— ನರ್ಗಿಸ್, ದಿಲೀಪ್‌ಕುಮಾರ್,

ಬೆಳಗಿನ ಪ್ರದರ್ಶನ ೩೦-೩-೫೧ರಿಂದ
ಮೂರು ದಿನಗಳು ಮಾತ್ರ
ಅಶೋಕ್‌ಕುಮಾರ್, ವೀಣಾ, ನಟಿಸಿರುವ
—:: ನಜ್ಮ ::—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೪—೪—೧೯೫೫ನೇ ಸೋಮವಾರ [ಸಂಚಿಕೆ ೯೭

ಬಸ್ಸಿಗೆ ಸಿಕ್ಕಿ ಮರಣ

ಚಾಮರಾಜನಗರದ ತಾ|| ಮಂಗಲದ ಪೋಸ್ಟ್‌ಮಾಸ್ಟರ್ ಶ್ರೀ ಸುಬ್ರಹ್ಮಣ್ಯಂ ಎಂಬುವವರು ದಾರಿಯಲ್ಲಿ ಬರುತ್ತಾ ಸೋಮೇಶ್ವರ ಸರ್ವಿಸ್ಸಿನ ಬಸ್ಸಿಗೆ ಸಿಕ್ಕಿ ಮೊನ್ನೆ ಮೃತಹೊಂದಿದರು. ಪೋಲೀಸರು ಮಹಜರ್ ನಡೆಸಿದರು.

ವಿದ್ಯಾ ಇಲಾಖೆಗಳಿಗೆ ರಜಾ

ಇದೇ ೯ ರಂದು ರಾಷ್ಟ್ರಪತಿ ಡಾ|| ರಾಜೇಂದ್ರಪ್ರಸಾದರು ಮೈಸೂರಿಗೆ ಭೇಟಿ ಕೊಡುವ ಪ್ರಯುಕ್ತ ಅಂದು ಮೈಸೂರಿನಲ್ಲೂ ೧೦ ರಂದು ಬೆಂಗಳೂರಿಗೆ ಭೇಟಿ ಕೊಡುವ ಪ್ರಯುಕ್ತ ಅಂದು ಬೆಂಗಳೂರಿನಲ್ಲೂ ಪಬ್ಲಿಕ್ ಪರೀಕ್ಷೆಗಳನ್ನು ಬಿಟ್ಟು ಉಳಿದ ವಿದ್ಯಾ ಇಲಾಖೆಗಳಿಗೆ ರಜಾದಿನಗಳನ್ನಾಗಿ ಸರ್ಕಾರವು ಘೋಷಿಸಿದೆ.

ಕರ್ನಾಟಕ ಪ್ರಾಂತರಚನೆ ಕೂಡಲೇ ಆಗಬೇಕು

ರಾಷ್ಟ್ರಾಧ್ಯಕ್ಷರ ಬಳಿಗೆ ನಿಯೋಗ

ಧಾರವಾಡ ಏ ೧

ಶ್ರೀ ಎಸ್. ನಿಜಲಿಂಗಪ್ಪನವರ ಮುಖಂಡತ್ವದಲ್ಲಿ ಕರ್ನಾಟಕ ಪ್ರಾಂತೀಯ ನಿಯೋಗವೊಂದು ಡಾ|| ರಾಜೇಂದ್ರಪ್ರಸಾದರನ್ನು ಭೇಟಿ ಮಾಡಿ ಕರ್ನಾಟಕ ಪ್ರಾಂತ್ಯವನ್ನು ಕೂಡಲೇ ರಚಿಸಬೇಕೆಂದು ನಿಯೋಗದವರು ಒತ್ತಾಯ ಮಾಡಿದರು ಮತ್ತು ಏಕ ಕರ್ನಾಟಕ ಪ್ರಾಂತ್ಯರಚನೆಗೆ ಮೈಸೂರು ನಾಯಕರ ಮನಸ್ಸನ್ನು ಒಲಿಸಬೇಕು ಎಂದು ಕೇಳಿಕೊಂಡರು. ಇವರ ಜೊತೆಯಲ್ಲಿ ಮುಂಬಾಯಿ ಮುಖ್ಯಮಂತ್ರಿ ಶ್ರೀ ಬಿ. ಜಿ ಖೇರ್‌ರವರೂ, ವ್ಯವಸಾಯ ಮಂತ್ರಿ ಎಂ. ಪಿ ಪಾಟೀಲ್ ಮುಂತಾದವರು ಹಾಜರಿದ್ದರು

ನೆಹರೂ ನಿಲುವು ವಿಚಿತ್ರವಾಗಿದೆ

ಪಂ|| ನೆಹರೂರವರು ಆಂಗ್ಲೋ ಅಮೆರಿಕನ್‌ರು ತಂದಿದ್ದ ನಿರ್ಣಯದ ಬಗ್ಗೆ ತೋರಿಸಿರುವ ಪ್ರತಿಕ್ರಿಯೆ ವಿಚಿತ್ರವಾಗಿದೆ. ಭಾರತವು ಈ ನಿರ್ಣಯವನ್ನು ತಿರಸ್ಕರಿಸಿರುವುದರಿಂದ ಈ ನಿರ್ಣಯ ಕಾರ್ಯರೂಪಕ್ಕೆ ಬರುವುದು ವಿವಾದಾಸ್ಪದ ಎಂದು ಪಾಕೀಸ್ತಾನದ ಪ್ರಧಾನಿ ಮಿ|| ಲಿಯಾಕತ್ ಅಲೀಖಾನರು ಲಾಹೋರಿನಲ್ಲಿ ತಿಳಿಸಿದ್ದಾರೆ

ಪಂಜಾಬಿನ ಮುಖ್ಯ ಪಟ್ಟಣ

ಚಂಡೀಘರ್‌ನಲ್ಲಿ ಪಂಜಾಬಿನ ಮುಖ್ಯ ಪಟ್ಟಣ ಸ್ಥಾಪಿಸಬೇಕೆಂದು ಖಂಡಿತವಾಗಿ ನಿರ್ಧರಿಸಿರುವುದಾಗಿ ಪಂಜಾಬಿನ ಮುಖ್ಯಮಂತ್ರಿ ಗೋಪೀಚಂದ್ ಭಾರ್ಗವಾರವರು ಪ್ರಾಂತೀಯ ಶಾಸನ ಸಭೆಯಲ್ಲಿ ತಿಳಿಸಿದರು. ಈ ಮುಖ್ಯ ಪಟ್ಟಣವನ್ನು ನಿರ್ಮಿಸುವುದಕ್ಕಾಗಿ ಈಗಾಗಲೇ ೨೪೬೭ ಎಕರೆಗಳಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ

ಭಾರ್ಗವಾ ಮೇಲೆ ಅವಿಶ್ವಾಸ ನಿರ್ಣಯ

ಡಾ|| ಗೋಪೀಚಂದ ಭಾರ್ಗವಾರವರ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಶ್ರೀ ಭೀಮಸೇನಸಾಚಾರ್‌ರವರು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಅಪ್ಪಣೆ ಪಡೆದು ತಂದಿದ್ದಾರೆ

ಈ ಅವಿಶ್ವಾಸ ನಿರ್ಣಯ ಏಪ್ರಿಲ್ ೩ ರಂದು ಪ್ರಾಂತ ಶಾಸನ ಸಭಾ ಕಾಂ|| ಪಕ್ಷದ ಮುಂದೆ ಬರುವುದು.

ರೇಡಿಯೋ ಕೇಂದ್ರ ಭಸ್ಮವಾಯಿತು

ನಿನ್ನೆ ಕಾಶ್ಮೀರರೇಡಿಯೋ ಕೇಂದ್ರದ ಭವನಕ್ಕೆ ಆಕಸ್ಮಾತ್ತಾಗಿ ಬೆಂಕಿಬಿದ್ದು ಕೇವಲ ೧ ಗಂಟೆಯೊಳಗೆ ಕೇಂದ್ರವೆಲ್ಲ ಬೂದಿಯಾಯಿತು. ಬೆಂಕಿ ಆರಿಸಲು ನಡೆಸಿದ ಪ್ರಯತ್ನ ನಿಷ್ಫಲವಾಯಿತು. ಬಹು ಬೆಲಬಾಳುವ ಎರಡು ವಾರ್ತಾ ಪ್ರಸಾರ ಯಂತ್ರಗಳನ್ನು ಉಳಿಸಲಾಯಿತು. ಸುಮಾರು ೧೨ ಲಕ್ಷ ರೂ ನಷ್ಟವಾಗಿದೆ ಎಂದು ಹೇಳಲಾಗಿದೆ

ಆರಂಭೋತ್ಸವ

ಪ|| ಬಂಗಾಳದ ಮುಖ್ಯ ಮಂತ್ರಿ ಡಾ|| ಬಿ ಸಿ ರಾಯ್‌ರವರು ಕ್ಯಾನ್ಸರ್ ರೋಗದ ನಿವಾರಣೆಗಾಗಿ ೧೦ ಲಕ್ಷದ ವೋಲ್ಟ್ ವಿದ್ಯುಚ್ಛಕ್ತಿ ಒಳವುಳ್ಳ ನಿರೋಧ ಚಿಕಿತ್ಸಾ ಕ್ರಮವನ್ನು ಚಿತ್ತರಂಜನ್ ಆಸ್ಪತ್ರೆಯಲ್ಲಿ ಉದ್ಘಾಟಿಸಿದರು

ಜೀಪ್ ಅನಾಹುತ

ಪಂಜಾಬಿನ ಮುಖ್ಯ ಮಂತ್ರಿಗಳಾದ ಶ್ರೀ ಗೋಪೀಚಂದ್ ಭಾರ್ಗವಾರವರು ಜಲಂಧರ್‌ನಲ್ಲಿ ಹೋಗುತ್ತಿದ್ದಾಗ ಜೀಪ್ ಕಾರು ಉರುಳಿ ಅಪಘಾತಕ್ಕೀಡಾದರು. ಮುಖ್ಯ ಮಂತ್ರಿಗಳಿಗೆ ಅಪಾಯವೇನೂ ಆಗಲಿಲ್ಲ

ದೆಹಲಿಗೆ ರಾಷ್ಟ್ರಾಧ್ಯಕ್ಷರು

ತಿರುವಾಂಕೂರು—ಕೊಚ್ಚಿ ಮತ್ತು ಧಾರವಾಡಗಳ ಪ್ರವಾಸ ಮುಗಿಸಿಕೊಂಡು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನಿನ್ನೆದಿನ ದೆಹಲಿಗೆ ಹಿಂತಿರುಗಿದರು

ಶ್ರೀ ನಗರಕ್ಕೆ ಪ್ರಧಾನಿ ನೆಹರೂ

ಪ್ರಧಾನಿ ನೆಹರೂ ನಿನ್ನೆದಿನ ದೆಹಲಿಯಿಂದ ಶ್ರೀ ನಗರಕ್ಕೆ ಆಗಮಿಸಿದರು. ಈ ದಿನ ಅವರು ಕಾಶ್ಮೀರ ಮತ್ತು ಜಮ್ಮುವಿನ "ನ್ಯಾಷನಲ್ ಕಾನ್‌ಫರೆನ್ಸ್" ನ್ನುದ್ದೇಶಿಸಿ ಮಾತನಾಡುವರು. ಪ್ರಧಾನಿಗಳೊಡನೆ ಶ್ರೀ ವಿ ಕೆ ಕೃಷ್ಣಮೇನನ್ ಶ್ರೀಮತಿ ಇಂದಿರಾಗಾಂಧಿ ಲೇಡಿಮೌಂಟ್‌ಬೇಟನ್ನರೂ ಬಂದಿದ್ದಾರೆ

ಜನತೆಗೆ ಪ್ರಯೋಜನವಿಲ್ಲ

ಇಂದಿನ ಸರ್ಕಾರದಿಂದ ಜನಸಾಮಾನ್ಯರಿಗೆ ಏನೇನು ಉಪಯೋಗವಾಗುತ್ತಿಲ್ಲ. ಆದುದರಿಂದ ಈ ಸರ್ಕಾರವನ್ನು ಬದಲಾಯಿಸಲು ಮುಂದಿನ ಚುನಾವಣೆಗಳಲ್ಲಿ ಸರಿಯಾದವರ ಚುನಾವಣೆಗೆ ಎಲ್ಲರೂ ಸಿದ್ಧರಾಗಬೇಕು. ಎಂದು ಸೋಷಲಿಸ್ಟ್ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರವರು ಮಾಂಘೀರ ಜನರನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಅಧಿವೇಶನ ಮುಂದೆ ಹೋಯಿತು

ಜಯಪುರದಲ್ಲಿ ಎಪ್ರಿಲ್ ೭ ಮತ್ತು ೮ ರಂದು ನಡೆಯಬೇಕಾಗಿದ್ದ ಅಖಿಲ ಭಾರತ ಹಿಂದೂ ಮಹಾಸಭೆಯ ವಿಶೇಷ ಅಧಿವೇಶನವನ್ನು ೨೮ ಮತ್ತು ೨೯ನೇ ತಾರೀಖುಗಳಿಗೆ ಮುಂದೆ ಹಾಕಲಾಗಿದೆಯೆಂದು ಮಹಾಸಭೆಯ ಅಧ್ಯಕ್ಷ ಡಾ|| ಎನ್ ಬಿ. ಖರೆ ಹೇಳಿದ್ದಾರೆ.

ಸಾರ್ವಜನಿಕ ರಜಾ

ಇದೇ ಜೂನ್ ಮಾಹೆ ೩೦ ರಂದು ಅರ್ಧ ವರ್ಷದ ಬ್ಯಾಂಕುಗಳ ಲೆಕ್ಕಗಳ ಶನಿ ಪ್ರಯುಕ್ತ ಅಂದು ಸಾರ್ವಜನಿಕ ರಜಾ ಎಂದು ಸರ್ಕಾರ ಪ್ರಕಟಣೆಯು ತಿಳಿಸುತ್ತದೆ.

T ಇನ್ಷೂರೆನ್ಸ್ ಇಲಾಖೆಯ ಸೆಕ್ರೆಟರಿ ಶ್ರೀ ಎಸ್. ಶಂಭೂಚೆಟ್ಟರಿಗೆ ೫೦ರ ಡಿಸಂಬರ್ ೨೩ರಿಂದ ೫೧ರ ಫೆಬ್ರವರಿ ೧೮ರ ವರೆಗೆ ಕೊಟ್ಟಿದ್ದ ರಜಾವನ್ನು ಇನ್ನು ೨ ತಿಂಗಳು ಹೆಚ್ಚಿಸಲ್ಪಟ್ಟಿದೆ

೬೦ ಸ್ಥಾನಗಳು ಕಾಂಗ್ರೆಸ್ಸಿಗೆ

ಹೈದರಾಬಾದ್ ನಗರ ಕಾರ್ಪೊರೇಷನ್ ಚುನಾವಣೆಗಳಲ್ಲಿ ಇರುವ ೬೦ ಸ್ಥಾನಗಳು ಕಾಂಗ್ರೆಸ್ಸಿಗೆ ದೊರೆತಿವೆ. ಈ ಪೈಕಿ ೩೫ ಸ್ಥಾನಗಳಿಗೆ ಪ್ರತಿ ಸ್ಪರ್ಧಿಗಳೇ ಇರಲಿಲ್ಲ

ಸಿಕಂದರಾಬಾದಿನ ೨೫ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೨೪ ಸ್ಥಾನಗಳು ಬಂದಿವೆ.

ಮುಷ್ಕರ

ಸಹರಾನ್‌ಪುರದ ಸ್ಟಾರ್ ಪೇಪರ್ ಕಾರ್ಖಾನೆಯಲ್ಲಿ ೫ ದಿನಗಳಿಂದಲೂ ನಡೆಯುತ್ತಿರುವ ಕಾರ್ಮಿಕರ ಮುಷ್ಕರವು ಇಂದೂ ಮುಂದುವರಿಯಿತು.

ಮಾರ್ಚಿ ೨೦ ಸಂಜೆ ಮೆರವಣಿಗೆ ಹೊರಟು ಬಹಿರಂಗ ಸಭೆಯನ್ನು ನಡೆಸಿ ಕಾರ್ಖಾನೆಯ ಆಡಳಿತ ವರ್ಗದವರು ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸದೆ ಇರುವುದನ್ನು ಖಂಡಿಸಿದರು

ವಾರ್ಷಿಕೋತ್ಸವ

ಭಾರತ ವಿಮಾನದಳದ ೧೮ನೇ ವಾರ್ಷಿಕೋತ್ಸವವು ನಿನ್ನೆ ದೆಹಲಿ, ಶ್ರೀ ನಗರ, ಬೊಂಬಾಯಿ, ಮದರಾಸು ಮುಂತಾದೆಡೆಗಳಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು.

ವಯಸ್ಸಿನಲ್ಲಿ ಚಿಕ್ಕದಾದಾಗ್ಯೂ, ನಿಮ್ಮ ಅದ್ಭುತ ಶಕ್ತಿಸಾಮರ್ಥ್ಯಗಳಿಂದ ಸನ್ಮಾನವನ್ನು ಪಡೆದಿರುತ್ತೀರಿ. ಇದೇ ರೀತಿ ಇನ್ನೂ ಹೆಚ್ಚಿಗೆ ದೇಶಪ್ರೇಮ ಶಕ್ತಿ ಸಾಮರ್ಥ್ಯಗಳನ್ನು ತೋರ್ಪಡಿಸಿ, ಭಾರತ ಸೇವೆಯನ್ನು ಇನ್ನೂ ಯಶಸ್ವಿಯಾಗಿ ಮಾಡಿ ಎಂದು ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದ್‌ರವರು ಈ ಸಮಯದಲ್ಲಿ ವಿಮಾನದಳಕ್ಕೆ ಒಂದು ಸಂದೇಶವನ್ನು ಕಳುಹಿಸಿರುವರು.

ಈ ಸಮಾರಂಭಕ್ಕೆ ಸೇರಿದಂತ ಅನೇಕ ಕ್ರೀಡಾ ಸ್ಪರ್ಧೆಗಳು ನಡೆದುವು.

ರಾಜಕೀಯ ಮಹತ್ವ

ವಿಶ್ವಸಂಸ್ಥೆ ಸೈನ್ಯಗಳು ೩೮ನೇ ಅಕ್ಷಾಂಶವನ್ನು ದಾಟುವ ಮುನ್ನ ಸಂಪೂರ್ಣ ಸಮಾಲೋಚನೆ ನಡೆಯಬೇಕಾಗಿದೆ. ಈ ವಿಷಯವು ರಾಜಕೀಯ ಮಹತ್ವಕ್ಕೆ ಸೇರಿದೆ. ಇದನ್ನು ಮಿಲಿಟರಿ ಪರಿಣತರಿಗೆ ಬಿಡಬಾರದು. ನಮಗೆ ಬಿಕ್ಕಟ್ಟನ್ನುಂಟು ಮಾಡುವ ಇಷ್ಟವಿಲ್ಲ. ಆದರೆ ಚೀಣಾದೊಡನೆ ಎಲ್ಲವನ್ನು ಪರಿಹರಿಸಬೇಕು. ಚೀಣಾಕ್ಕೆ ವಿಶ್ವಸಂಸ್ಥೆಯು ಮನ್ನಣೆಯನ್ನು ಕೊಡಬೇಕೆಂದು ಬ್ರಿಟನ್ನು ಅನೇಕ ಸಲ ತಿಳಿಸಿದಾಗ್ಯೂ ಇತರರು ಇದಕ್ಕೆ ಒಪ್ಪದಿರುವುದು ಶೋಚನೀಯ. ಚೈನಾಕ್ಕೆ ಮನ್ನಣೆಯನ್ನಿತ್ತಿದ್ದರೆ ಕೊರಿಯಾದಲ್ಲಿ ಯುದ್ಧ ಪರಿಸ್ಥಿತಿಯನ್ನು ಹತಬಂದಿಗೆ ತರಬಹುದಾಗಿತ್ತು. ೩೮ನೇ ಅಕ್ಷಾಂಶವನ್ನು ದಾಟುವ ವಿಷಯದಲ್ಲಿ ತಾವು ಸರಿಯಾಗಿ ನಡೆದಿರುವುದಾಗಿ ಜ|| ಮೆಕಾರ್ಥರವರು ತಿಳಿದಿರಬಹುದು. ಆದರೆ ಇತರರ ಅಭಿಪ್ರಾಯವು ಅದೇ ರೀತಿಯಿಲ್ಲವೆಂದು ಬ್ರಿಟನ್ನಿನ ವಿದೇಶಾಂಗ ಮಂತ್ರಿ ಮಿ|| ಮಾರಿಸನ್ ಹೇಳಿರುವರು.

(Note: the last sentence ends "ಮಿ|| ಷೆರ್ ವೆಲ್‌ರವರು ಹೇಳಿರುವರು.")

ಮನೆ ಬಿದ್ದು ಮರಣ

ಇಂದೂರಿನಲ್ಲಿ ೩ ಅಂತಸ್ತಿನ ಒಂದು ಮನೆಯು ಕುಸಿದು ಬಿದ್ದು ೩೮ ಮಂದಿ ಸ್ತ್ರೀಯರು, ಮಕ್ಕಳು ಮಡಿದು ೧೮ ಜನಕ್ಕೆ ಗಾಯಗಳಾಗಿವೆ. ಸುಮಾರು ೧೦೦ ಮಂದಿ ಸ್ತ್ರೀಯರು ಧಾರ್ಮಿಕ ಕಾರ್ಯದಲ್ಲಿ ತತ್ಪರರಾಗಿದ್ದಾಗ ಮನೆಯು ಕುಸಿದುಬಿದ್ದಿತು.

ಪುನಃ ದಾಟಿತು

ವಿಶ್ವಸಂಸ್ಥೆಯ ಸೈನ್ಯಗಳು ಎರಡನೇ ಬಾರಿ ಪುನಃ ೩೮ನೇ ಅಕ್ಷಾಂಶವನ್ನು ದಾಟಿ, ಪಶ್ಚಿಮಭಾಗದಲ್ಲಿ ಷೆಲ್‌ಗಳನ್ನು ಹಾಕಿ ಹಿಂತಿರುಗಿದುವು.

ಕೊಡ ನೀರಿಗೆ ಎಂಟಾಣೆ

ರಂಗೂನಿನ ದಾಹ ಪೀಡಿತ ನಾಗರಿಕರ ಗುಂಪು ಸಿಹಿ ನೀರಿಗಾಗಿ ನಗರದ ಮಧ್ಯದಲ್ಲಿರುವ ಸರೋವರಗಳಿಗೆ ಮೊನ್ನೆ ದಿನ ಧಾವಿಸಿದಾಗ, ಮೂರು ಮಂದಿ ಸತ್ತರು. ನಗರಕ್ಕೆ ಸರಬರಾಜಾಗುವ ನೀರಿನ ಪೈಪ್ ಲೈನನ್ನು ಕಮ್ಯೂನಿಸ್ಟರು ಕಡಿದು ಹಾಕಿದರು. ನೀರನ್ನು ಬಿದ್ದು ಕಲಸು ಬಕೆಟ್ ನೀರಿಗೆ ಎಂಟಾಣೆಯಂತೆ ಮಾರಿದರು.

ನಗರದ ಕೆಲವರಿಗೆ ಅಡಿಗೆಗೆ ಸಾಕಾಗುವಷ್ಟು ನೀರು ದೊರೆಯಲಿಲ್ಲ. ಬೇರೆ ರೀತಿಯಲ್ಲಿ ನೀರಿನ ಸರಬರಾಜಿಗೆ ಸರ್ಕಾರ ಮಾಡಿದ ಯತ್ನಗಳು ಫಲಪ್ರದವಾಗಿಲ್ಲ.

ಅರ್ಧ ಔನ್ಸ್ ಅಕ್ಕಿ ಪ್ರಮಾಣ ಹೆಚ್ಚುವುದು

ಬೆಂಗಳೂರು ಮಾ. ೩೧

ಸಂಸ್ಥಾನದಲ್ಲಿರುವ ಎಲ್ಲ ತರಗತಿಯ ಪಡಿತರದಾರರಿಗೂ ಅವರಿಗೆ ದೊರೆಯುತ್ತಿರುವ ಪಡಿತರ ಪ್ರಮಾಣದಲ್ಲಿನ ಅಕ್ಕಿ ಪ್ರಮಾಣವನ್ನು ಸರ್ಕಾರ ಸದ್ಯದಲ್ಲೇ ಅರ್ಧ ಔನ್ಸಿನಿಂದ ಹೆಚ್ಚಿಸುವುದು. ಆದರೆ ಒಟ್ಟು ಪಡಿತರ ಪ್ರಮಾಣದಲ್ಲೇನೂ ಬದಲಾವಣೆಯಾಗುವುದಿಲ್ಲ. ೨ನೇ ತಾ|| ಸೋಮವಾರ ಈ ಸಂಬಂಧದಲ್ಲಿ ಸರ್ಕಾರ ಪ್ರಕಟಣೆಯೀಯುವುದೆಂದು ತಿಳಿದುಬಂದಿದೆ.

ಆಹಾರದ ಹಡಗುಗಳ ಆಗಮನ

ಗೋಧಿ, ಅಕ್ಕಿ, ಮಿಲೋ ಮತ್ತು ಸಕ್ಕರೆಯನ್ನು ಹೊತ್ತ ಐದು ಹಡಗುಗಳು ಮುಂಬಯಿಗೆ ಬಂದಿವೆ.

"ಜಲಜವಹರ್" ಹಡಗು ಮೊನ್ನೆ ಪಾಕೀಸ್ತಾನದಿಂದ ೧೦,೮೮೭ ಚೀಲ ಅಕ್ಕಿಯನ್ನು ತಂದಿತು. "ಕ್ಲಾರ್ಕ್ ಮೆಕ್‌ನೀಲ್" ಹಡಗು ಬ್ರಿಟನ್ನಿನಿಂದ ೧೦೦೦ ಟನ್ ಸಕ್ಕರೆಯನ್ನೂ, ಇತರ ಮೂರು ಹಡಗುಗಳು ಅರ್ಜೆಂಟೈನಾದಿಂದ ೯೯೦೦ ಟನ್ ಗೋಧಿಯನ್ನೂ, ಕೆನಡಾದಿಂದ ೯೪೫೦ ಟನ್ ಗೋಧಿಯನ್ನೂ ಅಮೆರಿಕದಿಂದ ೯೪೫೦ ಟನ್ ಮಿಲೋವನ್ನೂ ತಂದಿವೆ.

ಶ್ರೀ ಬಿ. ಎಸ್. ನರಸಿಂಗ ರಾಯರ ರಾಜೀನಾಮೆ

ಶಾಸನ ಸಭೆಯಲ್ಲಿ ನೀರಾವರಿ ಅಡ್ವೈಸರ್ ಹುದ್ದೆಗೆ ಶ್ರೀ ಬಿ. ಎಸ್. ನರಸಿಂಗ ರಾಯರನ್ನು ನೇಮಕಮಾಡಿರುವ ವಿಚಾರದಲ್ಲಿ ಪ್ರಶ್ನೋತ್ತರಗಳಾದ ಮಾರನೇ ದಿವಸ ಶ್ರೀ ಬಿ. ಎಸ್. ನರಸಿಂಗರಾಯರು ತಮ್ಮ ಹುದ್ದೆಗೆ ರಾಜೀನಾಮೆಕೊಟ್ಟಿದ್ದಾರೆ. ಭಾರೀ ನೀರಾವರಿ ಯೋಜನೆಗಳನ್ನು ಕೈಗೊಂಡಿರುವ ಸಂದರ್ಭದಲ್ಲಿ ಶ್ರೀ ಬಿ. ಎಸ್. ನರಸಿಂಗರಾಯರಂಥಾ ಅನುಭವಸ್ಥರಾದ ಅಧಿಕಾರಿಗಳ ಸೇವೆ ಅವಶ್ಯಕ. ೧೯೫೧ನೇ ಮಾ. ೩೧ನೇ ತಾ|| ಒಳಗೆ ತಮ್ಮನ್ನು "ರಿಲೀವ್" ಮಾಡಬೇಕೆಂದು ಒತ್ತಾಯಮಾಡಿದ್ದರಿಂದ ಅವರ ರಾಜೀನಾಮೆಯನ್ನು ಸರ್ಕಾರದವರು ಅಂಗೀಕರಿಸಿದ್ದಾರೆ ಎಂದು ಶ್ರೀ ಎಚ್. ಕೆ. ವೀರಣ್ಣಗೌಡರ ಅಲ್ಪ ಕಾಲಾವಧಿ ಪ್ರಶ್ನೆಗೆ ಸಚಿವ ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತರು.

ಪ್ರ—ರಾಜೀನಾಮೆಗೆ ಕಾರಣ ಕೊಟ್ಟಿದ್ದಾರೆಯೆ?

ಉ—ಕೊಟ್ಟಿದ್ದಾರೆ.

ಜಿಗುಪ್ಸೆ ಉಂಟಾಯಿತು

ಪ್ರ—ಅವುಗಳನ್ನು ತಿಳಿಸಲು ಸಾಧ್ಯವೇ?

ಉ—ಶಾಸನಸಭೆಯಲ್ಲಿ ನೀರಾವರಿ ಅಡ್ವೈಸರ್ ನೇಮಕದ ವಿಚಾರದಲ್ಲಿ ಪ್ರಶ್ನೋತ್ತರಗಳನ್ನು ಕೇಳಿರುವುದು ಜಿಗುಪ್ಸೆ ಉಂಟುಮಾಡಿವೆಯೆಂದು ಆದುದರಿಂದ ದಯವಿಟ್ಟು ಮಾ. ೩೧ನೇ ತಾ|| ಒಳಗೆ ರಿಲೀವ್ ಮಾಡಬೇಕೆಂದು ತಿಳಿಸಿದ್ದಾರೆ.

ಪ್ರ—ಬೇರೆ ಯಾರನ್ನಾದರೂ ಸಲಹೆಗಾರರನ್ನಾಗಿ ನೇಮಕಮಾಡುವ ಆಲೋಚನೆಯಿದೆಯೆ?

ಉ—ಇನ್ನೊಬ್ಬರನ್ನು ನೇಮಕಮಾಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರ—ಅವರ ಸೇವೆ ಉಳಿಸಿಕೊಳ್ಳಲು ಸರ್ಕಾರದವರೇನಾದರೂ ಪ್ರಯತ್ನಿಸಿದರೆ?

ಉ—ಹೌದು ಶಾಸನಸಭೆಯಲ್ಲಾದ ಪ್ರಶ್ನೋತ್ತರಗಳಿಂದ ಮನ ನೋಯಿಸಿಕೊಳ್ಳಬಾರದು. ಸರ್ಕಾರದವರು ನೇಮಕದ ಅವಶ್ಯಕತೆ, ಅಧಿಕಾರಿಯ ಅರ್ಹತೆ ಬಗ್ಗೆ ಸಮರ್ಥನೆ ಮಾಡಿದ್ದಾರೆಂದು ಅವರಿಗೆ ತಿಳಿಸಿದೆವು. ಆದರೂ ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಹೇಳಿದರು. ಆದರಿಂದ ಅವರ ರಾಜೀನಾಮೆ ಒಪ್ಪಿಕೊಳ್ಳಬೇಕಾಗಿ ಬಂತು.

ಆತ್ಮಹತ್ಯೆ

ತುಮಕೂರಿನಲ್ಲಿ ಲಿಫ್ಟ್ ಇರಿಗೇಷನ್ ಅಸಿಸ್ಟೆಂಟ್ ಎಂಜಿನಿಯರಾಗಿದ್ದ ಶ್ರೀ ಡಿ. ದೇವರಾಜರ್ಸ್‌ರವರು ೩೦ರ ರಾತ್ರಿ ಇಲ್ಲಿಯ ಹೋಟಲೊಂದರ ಕೊಠಡಿಯಲ್ಲಿ ನೇಣುಹಾಕಿ ಕೊಂಡು ಪ್ರಾಣಬಿಟ್ಟರೆಂದು ವರದಿಯಾಗಿದೆ. ಅವರು ಕೆ. ಆರ್. ನಗರದವರೆಂದೂ, ೩೦ ವರ್ಷ ವಯಸ್ಸಿನ ಅವಿವಾಹಿತರೆಂದೂ ಹೇಳಲಾಗಿದೆ. ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ. ಪೋಲೀಸಿನವರು ಮಹಜರ್ ಕ್ರಮನಡೆಸಿದರು.

ಚಿಕ್ಕಮಗಳೂರು ತರುಣ ವರ್ತಕರಾದ ಶ್ರೀ ಕೃಷ್ಣರಾಜು ಎಂಬುವರು ೨೮ರ ಮುಂಜಾನೆ ನೇಣು ಹಾಕಿಕೊಳ್ಳುವುದರ ಮೂಲಕ ಆತ್ಮಹತ್ಯೆ ಮಾಡಿಕೊಂಡು ಪ್ರಾಣ ಬಿಟ್ಟರು. ಶ್ರೀಯುತರಿಗೆ ಕೇವಲ ಮೂವತ್ತೆರಡು ವರ್ಷ ವಯಸ್ಸಾಗಿದ್ದಿತು.

ಜಿಲ್ಲಾ ಬೋರ್ಡಿನ ಬಜೆಟ್ ಸಭೆ

ಬಿಳಿಗಿರಿ ರಂಗನ ಬೆಟ್ಟದಲ್ಲಿ ಮೈಸೂರು ಜಿಲ್ಲಾ ಬೋರ್ಡಿನ ಬಜೆಟ್ ಸಭೆಯು ಶನಿವಾರ ಮಧ್ಯಾಹ್ನ ೩ ಗಂಟೆಗೆ ಆರಂಭವಾಯಿತು. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷತೆವಹಿಸಿದ್ದರು.

ಅಧ್ಯಕ್ಷರು ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ ೫೧-೫೨ರ ಆದಾಯವು ವರ್ಷದ ಮೊದಲಿನ ಉಳಿತಾಯವೂ ಸೇರಿ ೧೮,೮೧,೫೯೫ ರೂ. ಗಳೆಂದೂ, ಖರ್ಚು ೧೭,೦೬,೪೩೫ ರೂ. ಗಳೆಂದೂ, ವರ್ಷದ ಕೊನೆಯ ಉಳಿತಾಯವು ೧೪೧೬೦ ರೂ. ಗಳೆಂದೂ ಹೇಳಿದರು. ಇದರ ಮೇಲೆ ಸ್ವಲ್ಪಕಾಲ ಚರ್ಚೆ ನಡೆಯಿತು. ಬೋರ್ಡಿನ ಸದಸ್ಯರೆಲ್ಲರೂ ಹಾಜರಾಗಿದ್ದರು. ಬಿಳಿಗಿರಿರಂಗನ ಬೆಟ್ಟದವರ ಮತ್ತು ಯಳಂದೂರಿನವರ ಕುಂದುಕೊರತೆಗಳನ್ನು ನಿವಾರಿಸಲು ತಾವೂ ಪ್ರಯತ್ನ ಪಡುವುದಾಗಿ ಅಧ್ಯಕ್ಷರು ತಿಳಿಸಿದರು. ಅನಂತರ ಸಭೆಯು ಸಂಜೆ ೭ ಗಂಟೆಯ ಹೊತ್ತಿಗೆ ಮುಕ್ತಾಯವಾಯಿತು.

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩—೪—೧೯೫೧ನೇ ಮಂಗಳವಾರ [ಸಂಚಿಕೆ ೧೭೩

ಧೂಮಪಾನ ನಿಶೇಧ

ಸಿನಿಮಾ, ನಾಟಕ, ನೃತ್ಯ ಮಂದಿರಗಳಲ್ಲಿ ಧೂಮಪಾನ ನಿಶೇಧಕಾನೂನಿಗೆ ಮದರಾಸು ಶಾಸನ ಸಭೆಯಲ್ಲಿ ಅಂಗೀಕಾರ ದೊರೆಯಿತು. ಕಾನೂನು ಉಲ್ಲಂಘಿಸಿದವರಿಗೆ ೫೦ ರೂ. ದಂಡ ವಿಧಿಸಲಾಗುವುದು.

ಕಾಶ್ಮೀರಕ್ಕೆ ಡಿವ್ಯಾಲೆರಾರವರೆ ?

ಕಾಶ್ಮೀರದಲ್ಲಿ ಪ್ರಪಂಚ ಸಂಸ್ಥೆಯ ಮಧ್ಯಸ್ಥಗಾರರಾಗಿ ಮಿ|| ಈಮನ್ ಡಿ ವ್ಯಾಲೆರಾರನ್ನು ನೇಮಿಸಲಾಗುವುದೆಂದು ಒಂದಿರುವ ವದಂತಿ ಬಗ್ಗೆ ಡಿವ್ಯಾಲೆರಾರನ್ನು ಪ್ರಶ್ನಿಸಲಾಗಿ, ಅವರು ತಮಗೆ ಸಮಾಚಾರವೇ ಗೊತ್ತಿಲ್ಲವೆಂದು ನುಡಿದರು.

ಆಂಗ್ಲೋ-ಅಮೆರಿಕನ್ ನಿರ್ಣಯಕ್ಕೆ ಮನ್ನಣೆ ಕೊಡಲಾರೆವು

ನಾನ್ ಗೆಜಿಟೆಡ್ ನೌಕರರಿಗೆ ತುಟ್ಟಿಭತ್ಯ ಹೆಚ್ಚಿಸುವ ವಿಷಯ ಸರ್ಕಾರ ಪರಿಶೀಲಿಸುವುದು

ಬೆಂಗಳೂರು ಏ. ೨

ಜೀವನಮಟ್ಟವು ವಿಶೇಷವಾಗಿ ಏರುತ್ತಲಿರುವುದರಿಂದ ಸರ್ಕಾರಿ ಕೆಲಸದಲ್ಲಿರುವ ಎಲ್ಲಾ ನಾನ್ ಗೆಜಿಟೆಡ್ ನೌಕರುಗಳಿಗೆ ತುಟ್ಟಿಭತ್ಯವನ್ನು ಹೆಚ್ಚಿಸಬೇಕೆಂಬ ನಿರ್ಣಯವನ್ನು ಮಾಜಿ ಸಚಿವ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಇಂದು ಶಾಸನ ಸಭೆಯಲ್ಲಿ ಮಂಡಿಸಿದರು. ಅನೇಕ ಸದಸ್ಯರು ಈ ನಿರ್ಣಯವನ್ನು ಸಮರ್ಥಿಸಿ ಮಾತನಾಡಿದರು.

ಅರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಉತ್ತರವೀಯುತ್ತಾ, ನಾನ್ ಗೆಜಿಟೆಡ್ ನೌಕರರ ಕಷ್ಟಗಳು ಸರ್ಕಾರಕ್ಕೆ ತಿಳಿದಿವೆ. ತುಟ್ಟಿಭತ್ಯ ಹೆಚ್ಚಿಸುವ ವಿಷಯವನ್ನು ಸರ್ಕಾರವು ಸಹಾನುಭೂತಿಯಿಂದ ಪರಿಶೀಲಿಸುವುದು. ಆದರೆ ಸರ್ಕಾರದ ಆರ್ಥಿಕ ಪರಿಸ್ಥಿತಿಯಿಂದ ಈಗಲೇ ಯಾವ ಭರವಸೆಯನ್ನು ಕೊಡಲಾಗುವುದಿಲ್ಲವೆಂದು ಹೇಳಿದರು.

ನೀರಾವರೀ ಯೋಜನೆಗಳಿಗೆ ೪೯ ಕೋಟಿ ರೂ.

ಭಾರತ ಸರ್ಕಾರವು ನೀರಾವರೀ ಯೋಜನೆಗಳಿಗಾಗಿ ಪ್ರಾಂತ್ಯ ಸರ್ಕಾರಗಳಿಗೆ ಇಲ್ಲಿಯವರೆಗೆ ೪೯ ಕೋಟಿ ರೂ. ಗಳ ಸಾಲವನ್ನು ಕೊಟ್ಟಿದೆ.

ಗುರುತಿಸಲಾಗದ ವಿಮಾನ

ಕಳೆದ ವಾರದಲ್ಲಿ ದೆಹಲಿಯ ಮೇಲೆ ಸುಮಾರು ೩೦೦೦೦ ಸಾವಿರ ಅಡಿಗಳ ಎತ್ತರದಲ್ಲಿ ಹಾರಿಹೋದ ವಿಮಾನದೊಡನೆ ರೇಡಿಯೋ ಮೂಲಕ ಮಾತನಾಡಲು ಪಟ್ಟ ಪ್ರಯತ್ನವು ವಿಫಲವಾಯಿತು. ಅದು ಭಾರತದಲ್ಲೆಲ್ಲಿಯೂ ಇಳಿದಿಲ್ಲ ಎಂದು ಪಾರ್ಲಿಮೆಂಟಿನಲ್ಲಿ ರಕ್ಷಣಾ ಉಪ ಸಚಿವರು ತಿಳಿಸಿದರು.

ಬರ್ಮಾ ಅಕ್ಕಿ

ಬರ್ಮಾದಿಂದ ಭಾರತಕ್ಕೆ ನಿನ್ನೆ ೭೪೦೦ ಟನ್ ಅಕ್ಕಿ ಬಂದಿದೆ

೧|| ಕೋಟಿ ರೂ. ಸಾಲ

ತುಂಗಭದ್ರಾ ಯೋಜನೆಗೆ ಭಾರತ ಸರ್ಕಾರವು ಹೈದರಾಬಾದ್ ಸರ್ಕಾರಕ್ಕೆ ೧|| ಕೋಟಿ ರೂ. ಗಳ ಸಾಲ ಕೊಟ್ಟಿದೆ.

ಸಂಯುಕ್ತ ಕಾರ್ಯಾಚರಣೆ

ನೇಪಾಳ, ಭಾರತಗಡಿಗಳಲ್ಲಿ ಶಾಂತಿ ಸ್ಥಾಪನೆಗಾಗಿ ಸಂಯುಕ್ತ ಕಾರ್ಯಾಚರಣೆಯನ್ನು ತೆಗೆದುಕೊಳ್ಳಲು ಉಭಯ ದೇಶಗಳ ಪ್ರಧಾನ ಅಧಿಕಾರಿಗಳ ಸಮಾಲೋಚನೆ ನಡೆಯುತ್ತಲಿದೆ.

ಭೂಕಂದಾಯ ಇಳಿತಾಯ

ಜಹಗೀರಿಗಳಿಗೆ ಸೇರಿದ್ದು ಈಗ ಹೈದರಾಬಾದು ಸರ್ಕಾರವು ವಹಿಸಿಕೊಂಡಿರುವ ೫೫೦ ಹಳ್ಳಿಗಳಲ್ಲಿ ಭೂಕಂದಾಯವನ್ನು ಸರ್ಕಾರವು ಇಳಿಸಿರುವುದಾಗಿ ವರದಿಯಾಗಿದೆ.

ಬಟ್ಟೆ ರಫ್ತು ಅಗತ್ಯ

ಭಾರತದಿಂದ ಹೊರ ದೇಶಗಳಿಗೆ ಬಟ್ಟೆಗಳನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದು ಸದಸ್ಯರು ಕೇಂದ್ರ ಪಾರ್ಲಿಮೆಂಟಿನಲ್ಲಿತ್ತ ಸಲಹೆಗೆ ಕೈಗಾರಿಕಾ ಮಂತ್ರಿ ಶ್ರೀ ಮಹತಾಬ್‌ರವರು ಉತ್ತರವೀಯುತ್ತಾ ಬಟ್ಟೆ ರಫ್ತಿನಿಂದ ವಿದೇಶದಲ್ಲಿ ನಾಣ್ಯ ವಿನಿಮಯ ಸಂಪಾದನೆಯಾಗುತ್ತಲಿದೆ. ಆದರಿಂದ ನಮಗೆ ಬೇಕಾದ ಅಹಾರ, ಕಚ್ಚಾ ಸಾಮಾನು ಮುಂತಾದುವನ್ನು ತಂಸಿಕೊಳ್ಳಲವಕಾಶವಾಗುತ್ತಲಿದೆ ಆದ್ದರಿಂದ ಬಟ್ಟೆ ರಫ್ತಿನ ಅವಶ್ಯಕತೆಯನ್ನು ಎಲ್ಲರೂ ಸೂಕ್ಷ್ಮವಾಗಿ ಪರಿಗಣಿಸಬೇಕೆಂದು ಹೇಳಿದರು.

ಪ್ರತಿಭಟನಾ ಮೆರವಣಿಗೆ

ಕಾಶ್ಮೀರದ ಸಹಸ್ರಾರು ವಿದ್ಯಾರ್ಥಿಗಳು ಆಂಗ್ಲೋ-ಅಮೆರಿಕನ್ ನಿರ್ಣಯ ವಿರುದ್ಧ ಪ್ರತಿಭಟನೆಯನ್ನು ಪ್ರದರ್ಶಿಸುತ್ತ, ಖಂಡನಾ ಘೋಷಣೆಗಳನ್ನು ಮಾಡಿಕೊಂಡು ಜಮ್ಮುವಿನ ಮುಖ್ಯ ರಸ್ತೆಗಳಲ್ಲೆಲ್ಲಾ ನಿನ್ನೆ ಮೆರವಣಿಗೆಯನ್ನು ಹೊರಟಿದ್ದರು.

ಪ್ರಾದೇಶಿಕ ರೀತಿ ಕೈಗಾರಿಕೆ ಬೆಳೆವಣಿಗೆ

ದೇಶಾದ್ಯಂತ ಪ್ರಾದೇಶಿಕ ರೀತಿ ಕೈಗಾರಿಕೆಯು ವಿಕಾಸಗೊಳ್ಳಬೇಕಾಗಿದೆ. ಈ ವಿಷಯವನ್ನು ಎಲ್ಲಾ ಪ್ರಾಂತ್ಯ ಸರ್ಕಾರಗಳ ಗಮನಕ್ಕೆ ತರಲಾಗಿದೆ ಎಂದು ಕೈಗಾರಿಕಾ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಹೇಳಿರುವರು

ಪಾಕಿಸ್ತಾನ ಒಪ್ಪಿದೆ

ಕಾಶ್ಮೀರ ಬಗ್ಗೆ ವಿಶ್ವಸಂಸ್ಥೆಯಲ್ಲಿ ಮಂಡಿಸಿದ್ದ ಅಮೆರಿಕಾ ಬ್ರಿಟನ್ ನಿರ್ಣಯವನ್ನು ಪಾಕಿಸ್ತಾನ ಸರ್ಕಾರವು ಒಪ್ಪಿದೆ ಎಂದು ವಿದೇಶಾಂಗ ಮಂತ್ರಿ ಮಿ|| ಜಫರುಲ್ಲಾಖಾನ್‌ರವರು ಹೇಳಿರುವುದಾಗಿ ವರದಿಯಾಗಿದೆ.

ಸಮಾನ ಗೌರವ

"ಪಾಶ್ಚಾತ್ಯ ರಾಷ್ಟ್ರಗಳು ನಿಜವಾಗಿ ಸಮಾನ ಗೌರವ ತೋರಿಸದಿದ್ದಲ್ಲಿ ಏಷ್ಯಾವು ಎಂದೆಂದಿಗೂ ಅವರನ್ನು ನಂಬುವುದಿಲ್ಲ" ಎಂಬುದಾಗಿ ಬೊಂಬಾಯಿಯಲ್ಲಿ ನಡೆದ ಭಾರತೀಯ ಸಾಂಸ್ಕೃತಿಕ ಸ್ವಾತಂತ್ರ್ಯ ಸಮ್ಮೇಳನಕ್ಕೆ ಅಮೆರಿಕಾದಿಂದ ಬಂದಿದ್ದ ಪ್ರತಿನಿಧಿಯಾದ ಕವಿ ಡಬ್ಲ್ಯು ಹೆಚ್ ಆಡೆನ್ ಹೇಳಿದ್ದಾರೆ.

ಶ್ರೀ ಪಂಡಿತಾರಾಧ್ಯ

ದಾವಣಗೆರೆಯಲ್ಲಿ ಅಸಿಸ್ಟೆಂಟು ಇಂಜನಿಯರ್ ಆಗಿದ್ದ ಶ್ರೀ ಪಂಡಿತಾರಾಧ್ಯರನ್ನು ಶಿರವಸೆ ಸರ್ಕಸ್ಸಿಗೆ ವರ್ಗಾಯಿಸಲಾಗಿದೆ.

ಕ್ಯಾನ್ಸರ್ ಆಸ್ಪತ್ರೆ

ದಕ್ಷಿಣ ಕಲ್ಕತ್ತದಲ್ಲಿರುವ ಚಿತ್ತರಂಜನ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವಿಲಿಯನ್ ವೊಲ್ಟೇಜಿನ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಡಾ|| ಬಿ. ಸಿ. ರಾಯ್‌ರವರು ಆರಂಭಿಸಿದರು ಏಷ್ಯದಲ್ಲಿ ಇಂತಹ ಕೇಂದ್ರ ಏರ್ಪಡಿಸಿರುವುದು ಇದೇ ಮೊದಲು. ವಿಶ್ವದಲ್ಲೆಲ್ಲಾ ಇಂತಹ ಕೇಂದ್ರಗಳು ೮-೧೦ ಇರಬಹುದು.

ಪೌರರ ಹಣವು ವ್ಯಯಮಾಡಕೂಡದು

ಬೆಂಗಳೂರು ಕಾರ್ಪೊರೇಷನ್ನಿನವರು ಮಾಜಿ ದಿವಾನ್ ಸರ್ ಮಿರ್ಜಾರವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿರುವುದಕ್ಕೆ ಕಾರ್ಪೊರೇಷನ್ ಹಣವನ್ನು ವ್ಯಯ ಮಾಡದಂತೆ ತಡೆ ಅರ್ಜಿಯನ್ನು ಬೆಂಗಳೂರು ಶೇಷಾದ್ರಿಪುರ ನಿವಾಸಿ ಶ್ರೀ ಕೃಷ್ಣಯ್ಯ ಎಂಬುವವರು ಹೈಕೋರ್ಟಿಗೆ ಸಲ್ಲಿಸಿದ್ದ ಅರ್ಜಿಯು ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪ ಮತ್ತು ನ್ಯಾಯಮೂರ್ತಿ ಶ್ರೀ ವಾಸುದೇವಮೂರ್ತಿಯವರ ಸಮ್ಮುಖದಲ್ಲಿ ವಿಚಾರಣೆಗೆ ಬಂದಿತು. ಪೌರಸಭೆಯ ಪರವಾಗಿ ಶ್ರೀ ಸೀತಾರಾಮಯ್ಯನವರು ವಿವರವಾಗಿ ಹೇಳಿಕೆ ಕೊಡಲು ಕಾಲಾವಕಾಶ ಕೇಳಿ, ಕಾರ್ಪೊರೇಷನ್ ಹಣವನ್ನು ಈ ಸತ್ಕಾರಕ್ಕೆ ವ್ಯಯ ಮಾಡುವುದಿಲ್ಲವೆಂದು ಹೇಳಿದರು. ವಿಚಾರಣೆಯು ಮುಂದುವರಿಸಲಾಗಿದೆ.

ನಾವೇನು ಕುರಿಗಳಲ್ಲ

ಒಬ್ಬ ಪಂಚಾಯಿತದಾರನು ಒಂದು ಲಕ್ಷಾಂತರ ಜನರ ಬವಿಷ್ಯವನ್ನು ನಿರ್ಧಾರ ಮಾಡುವುದೆಂದರೆ ನಗೆಗೇಡು. ಆ ರೀತಿ ತೀರ್ಮಾನಕ್ಕೊಳಗಾಗುವುದಕ್ಕೆ ನಾವೇನು ಕುರಿ ಮಂದೆಯಲ್ಲ. ಹಿಂದೆ ನಾರ್ವೆ ಮತ್ತು ಬ್ರಿಟನ್ನಿನ ಒಕ್ಕಟ್ಟಿಂಟಾದಾಗ ಬ್ರಿಟನ್ನು ಪಂಚಾಯಿತ ವಿಧಾನದಲ್ಲಿ ಸಂಧಾನ ನಡೆಸಲು ಒಪ್ಪಲಿಲ್ಲ. ಅದೇ ಬ್ರಿಟನ್ನು ಈಗ ಪಂಚಾಯಿತಿ ವಿಧಾನವನ್ನು ಕಾಶ್ಮೀರದ ಮೇಲೆ ಹೊರಿಸಬೇಕೆಂಬುದರಲ್ಲಿ ಅರ್ಥವೇನು? ನಾವು ಖಚಿತ ಧ್ಯೇಯವನ್ನಿಟ್ಟುಕೊಂಡು ರಾಜ್ಯಾಂಗ ರಚನೆ ಮುಂತಾದ ಕಾರ್ಯಗಳನ್ನು ನಡೆಸುತ್ತಲಿರುವೆವು. ಈ ವಿಷಯದಲ್ಲಿ ಪರಕೀಯರ ಪ್ರವೇಶಕ್ಕ ಅವಕಾಶವಿಲ್ಲ. ನಾವು ಈಗ ವಿಶ್ವಸಂಸ್ಥೆಯು ಅಂಗೀಕರಿಸಿರುವ ಆಂಗ್ಲೋ-ಬ್ರಿಟನ್ ನಿರ್ಣಯವನ್ನು ಒಪ್ಪುವುದಿಲ್ಲ. ನಮ್ಮ ಕಾರ್ಯವನ್ನು ಮುಂದುವರಿಸುತ್ತೇವೆಂದು ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾರವರು ಜಮ್ಮುವಿನಲ್ಲಿ ಮಾತನಾಡುತ್ತಾ ಹೇಳಿರುವರು ಇದರ ಮುನ್ನ ಭಾರತ ಪ್ರಧಾನಿ ಪಂಡಿತ ನೆಹರೂರವರು ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ನಾವು ವಿರೋಧಿಸಿದರೂ ವಿಶ್ವಸಂಸ್ಥೆಯು ಆಂಗ್ಲೋ—ಅಮೆರಿಕನ್ ನಿರ್ಣಯವನ್ನು ಅಂಗೀಕರಿಸಿರುವುದರಲ್ಲಿ ಅರ್ಥವಿಲ್ಲ. ನಾವು ಅದನ್ನು ಕಾರ್ಯಗತ ಮಾಡಲಾರೆವು. ಬಲವಂತವಾಗಿ ಬಂದು ರಾಷ್ಟ್ರದ ಮೇಲೆ ಯಾರು ಏನೂ ಹೊರಿಸಲಾರರು ಇದರಿಂದ ಯಾರೂ ವಿಮುಖರಾಗಬೇಕಾಗಿಲ್ಲ- ಆದರೆ ಕಾಶ್ಮೀರ ವಿವಾದವನ್ನು ಶಾಂತಿಯುತವಾಗಿ ಪರಿಹಾರ ಮಾಡಲು ಯಾರು ಯಾವ ಸಲಹೆ, ಸಹಾಯ ನೀಡಿದರೂ ಅದನ್ನು ನಾವು ಸ್ವಾಗತಿಸುತ್ತೇವೆ ಆದರೆ ನಾವು ಕಾಶ್ಮೀರದ ಆತ್ಮಗೌರವಕ್ಕೆ ಧಕ್ಕೆ ಬರದಂತೆ ಯಾರಿಗೂ ಅಪಾಯವಾಗದಂತೆ ಕರ್ತವ್ಯ ನೆರವೇರಿಸುತ್ತೇವೆ. ಎಂದು ಅವರು ಹೇಳಿದರು.

೨೦ ಲಕ್ಷ ರೂ. ವೆಚ್ಚ

ತೆಲಿಂಗಾಣ ಪ್ರಾಂತ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತ ಸರ್ಕಾರವು ೨೦ ಲಕ್ಷ ರೂ.ಗಳ ವೆಚ್ಚವನ್ನು ಮಂಜೂರ್ಮಾಡಿದೆ.

† ಕಳೆದ ಮಾರ್ಚಿ ೨೮ನೇ ತಾ|| ಬನ್ನೂರು ಹೋಬಳಿಗೆ ಸೇರಿದ ಶೀಹಳ್ಳಿ ಗ್ರಾಮದಲ್ಲಿ ರೈತರ ಸಭೆಯು ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಬಟ್ಟೆ ಅಭಾವ ಪರಿಹಾರ

ಇನ್ನು ಒಂದೆರಡು ತಿಂಗಳುಗಳಲ್ಲಿಯೇ ದೇಶದಲ್ಲಿನ ಬಟ್ಟೆ ಮತ್ತು ನೂಲಿನ ಅಭಾವವು ತಪ್ಪಿ ಎಲ್ಲವೂ ಸರಿಹೋಗುವುದೆಂಬುದಾಗಿ ಭಾರತ ಪಾರ್ಲಿಮೆಂಟಿನಲ್ಲಿಂದು ಕೇಂದ್ರದ ಕೈಗಾರಿಕಾ ಸಚಿವ ಶ್ರೀ ಹರೆಕೃಷ್ಣ ಮೆಹತಾಬ್‌ರವರು ತಿಳಿಸಿದರು.

ಬಟ್ಟೆ ಮತ್ತು ನೂಲಿನ ಉತ್ಪನ್ನವು ಹೆಚ್ಚಾಗುತ್ತಿದೆಯೆಂದು ಅವರು ತಿಳಿಸಿದರು.

ವಿಷಪ್ರಯೋಗ ಪ್ರಯತ್ನದ ಮೊಖದ್ದಮೆ

ಬೆಂಗಳೂರು ಏ. ೨

ಶ್ರೀ ಎಲ್. ಎಸ್. ರಾಜು ಮತ್ತು ಇತರರ ಮೇಲೆ ಹೂಡಲಾಗಿರುವ ವಿಷಪ್ರಯೋಗ ಪ್ರಯತ್ನದ ಮೊಖದ್ದಮೆಯ ವಿಚಾರಣೆಯು ಇಂದು ನಡೆಯಬೇಕಾಗಿದ್ದು ೫ನೇ ತಾರೀಖಿಗೆ ಮುಂದುವರಿಯಿತು.

ಭಾರತಕ್ಕೆ ಚೀನಾ ಆಹಾರ

ಚೀನಾದಿಂದ ಆಹಾರ ಪದಾರ್ಥಗಳನ್ನು ಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಮಾತುಕತೆಗಳನ್ನು ನಡೆಸಲು ಭಾರತ ಸರ್ಕಾರದ ಆಹಾರ ಶಾಖೆಯ ಅಧಿಕಾರಿಯೊಬ್ಬರು ಸದ್ಯದಲ್ಲಿಯೇ ಪೀಕಿಂಗ್ ನಗರಕ್ಕೆ ತೆರಳಲಿರುವರು.

ಕೆಲವು ವಾರಗಳ ಹಿಂದೆ ಚೀನಾ ಸರ್ಕಾರವು ಭಾರತಕ್ಕ ೧೦ ಲಕ್ಷ ಟನ್ ಆಹಾರ ಧಾನ್ಯ ಅಂದರೆ. ಅಕ್ಕಿ, ಗೋಧಿ, ಕೆಂಪು ಜೋಳ ಇತ್ಯಾದಿಗಳನ್ನು ತಾತ್ಕಾಲಿಕವಾಗಿ ಕೊಡುವುದಾಗಿ ತಿಳಿಸಿತು.

ಬಂದೂಕ ಸಮೇತ ಬಂದಿಗಳ ಪರಾರಿ

ತುಮಕೂರು ಏ. ೨

ಬಾಬಿಗ, ವೆಂಕಟ, ಸಂಚಿಗ, ಚಿಕ್ಕವೆಂಕಟ ಈ ನಾಲ್ವರು ಕೇಡಿಗಳು ತುಮಕೂರು ಜಿಲ್ಲಾ ಜೈಲಿನಿಂದ ಒಂದನೇ ತಾ|| ಬೆಳಗಿನ ಜಾವ ೨-೩೦ ಗಂಟೆ ಸಮಯದಲ್ಲಿ ಪರಾರಿಯಾಗಿದ್ದಾರೆ. ಪರಾರಿಯಾಗಿರುವ ಈ ಕೇಡಿಗಳು ಜೈಲು ಬಾಗಿಲು ಮುರಿದು, ಪೋಲೀಸಿನವನ ಬಂದೂಕ ತೆಗೆದುಕೊಂಡು ಪರಾರಿಯಾಗಿದ್ದಾರೆಂದೂ, ಬಳಿಕ ಬಂದೂಕವನ್ನು ಜೈಲಿನ ಹತ್ತಿರ ಪತ್ತೆ ಮಾಡಲಾಯಿತೆಂದೂ ವರದಿಯಾಗಿದೆ.

ಆಧುನಿಕ ಸಿಮೆಂಟ್ ತಯಾರಿಕಾಲಯದ ಉದ್ಘಾಟನೆ

ಭಾರತದಲ್ಲೆಲ್ಲಾ ಅತ್ಯಂತ ಆಧುನಿಕದಾಗಿ ಸ್ಥಾಪಿತವಾಗಿರುವ ಸಿಮೆಂಟ್ ಫ್ಯಾಕ್ಟರಿಯ ಉದ್ಘಾಟನೆಯನ್ನು ಶ್ರೀ ಮೊರಾರ್ಜಿ ದೇಶಾಯಿಯವರು ಬೊಂಬಾಯಿಯಲ್ಲಿ ನಿನ್ನೆ ದಿನ ಉದ್ಘಾಟಿಸಿದರು.

ಈ ಕಾರ್ಖಾನೆ ಎ. ಸಿ. ಸಿ. ಕಂಪೆನಿಯವರಿಗೆ ಸೇರಿದ್ದು ವರ್ಷಕ್ಕೆ ೨ ಲಕ್ಷ ಟನ್ ಸಿಮೆಂಟ್ ತಯಾರಿಸುವುದು.

† ೧-೪-೫೧ನೇ ದಿನ ನಡೆದ ಐ. ಎನ್. ಟಿ. ಯು. ಸಿ. ಸಮ್ಮೇಳನದ ಸ್ವಾಗತ ಸಮಿತಿಯ ಸಭೆಯು 'ವಿಜಯ' ಕಾರ್ಯಾಲಯದಲ್ಲಿ ಶ್ರೀ ಎಂ. ಮಾದಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಈ ನಿರ್ಣಯಗಳು ಅಂಗೀಕಾರವಾದವು.

೧) ಇದೇ ತಿಂಗಳು ೨೮ ಮತ್ತು ೨೯ನೇ ತಾರೀಖುಗಳಲ್ಲಿ ಸಮ್ಮೇಳನವನ್ನು ನಡೆಸತಕ್ಕದ್ದು.

೨) ಆರಂಭೋತ್ಸವ ನಡೆಸಲು ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಹರಿಹರನಾಥಶಾಸ್ತ್ರಿಯವರನ್ನು ಆಹ್ವಾನಿಸತಕ್ಕದ್ದೆಂದೂ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಲು ಮೈಸೂರಿನ ಕಾರ್ಮಿಕ ಸಚಿವ ಶ್ರೀ ಕೆ. ಟಿ. ಭಾಷ್ಯಂರವರನ್ನು ಆಹ್ವಾನಿಸಬೇಕೆಂದೂ ತೀರ್ಮಾನಿಸಲಾಯಿತು.

೩) ಸಮ್ಮೇಳನದಲ್ಲಿ ಭಾಗವಹಿಸಲನುಕೂಲವಾಗುವಂತೆ ೨೮ನೇ ತಾರೀಖು ಮಧ್ಯಾಹ್ನ ನಗರದ ಎಲ್ಲಾ ಕಾರ್ಖಾನೆಗಳಿಗೂ (ಐ. ಎನ್. ಟಿ. ಯು. ಸಿ. ಸದಸ್ಯರಿರುವ) ರಜಾ ಕೊಡಬೇಕೆಂದೂ ತೀರ್ಮಾನಿಸಲಾಯಿತು.

೪) ಬಾಬಿನ್ ಫ್ಯಾಕ್ಟರಿ ಕೆಲಸಗಾರರ ಸಂಘದ ಅಧಿಕಾರ ವರ್ಗದವರನ್ನು ಸ್ವಾಗತ ಸಮಿತಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು.

ಮೈಸೂರು ಪ್ರಾಂತಿಕ ಐ. ಎನ್. ಟಿ. ಯು. ಸಿ. ಕಾರ್ಯನಿರ್ವಾಹಕ ಮಂಡಲಿ ಸಭೆಯು ೪-೪-೫೧ನೇ ಬುಧವಾರ ಮಧ್ಯಾಹ್ನ ೩ ಗಂಟೆಗೆ ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಯಲ್ಲಿ ಸೇರುವುದು. ಸದಸ್ಯರು ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

† ಮೈಸೂರು ಜಿಲ್ಲಾ ರೈತರ ಸಂಘದ ಕಾರ್ಯದರ್ಶಿಗಳಾದ ಶ್ರೀ ಸಿ. ಜಿ. ದೇವನಾಥ್‌ರವರು ಈರೀತಿ ಹೇಳಿಕೆಯನ್ನಿತ್ತಿದ್ದಾರೆ.

ಇತ್ತೀಚೆಗೆ ಹೊಸ ಅಗ್ರಹಾರದ ಹೋಬಳಿ ಮತ್ತು ಕೃಷ್ಣರಾಜನಗರದ ತಾ|| ರೈತರ ಸಮ್ಮೇಳನಗಳಲ್ಲಿ ಪ್ರತಿ ಎರಡು ಪಲ್ಲಾ ಭತ್ತಕ್ಕೆ ಒಂದು ಪಲ್ಲಾ ರಾಗಿ ಕೊಡಬೇಕೆಂದು ಮಂಜೂರಾದ ನಿರ್ಣಯಕ್ಕೆ ಸರ್ಕಾರದವರು ಪುರಸ್ಕಾರಕೊಟ್ಟು ಈರೀತಿ ಆಜ್ಞೆಯನ್ನು ಹೊರಡಿಸಿರುವುದು ಎಲ್ಲಾ ರೈತರಿಗೂ ಸಂತೋಷದ ವಿಷಯವಾಗಿದೆ. ಕಳೆದ ವರ್ಷಗಳಲ್ಲಿ ರೈತರು ತಮ್ಮ ಕೂಲಿ ಕಂಬಳಗಾರರಿಗೂ ಮತ್ತು ವ್ಯವಸಾಯಗಾರರ ಆವಶ್ಯಕತೆಗೆ ಒಂದು ಪಲ್ಲ ರಾಗಿ ಪಡೆಯಬೇಕಾದರೆ ಎರಡೂಕಾಲು ಪಲ್ಲ ಭತ್ತ ಕೊಡಬೇಕಾಗಿತ್ತು. ಇದರಿಂದ ರೈತರಿಗೆ ಬಹಳ ತೊಂದರೆಯಿತ್ತು. ಇತ್ತೀಚಿನ ರೈತರಸಮ್ಮೇಳನದ ನಿರ್ಣಯಗಳೂ ಮತ್ತು ಇದರ ಪರಿಣಾಮವಾಗಿ ಸರ್ಕಾರದವರ ಆಜ್ಞೆಯಿಂದ ರೈತರಿಗೆ ಬಹಳ ಅನುಕೂಲವಾಗಿದೆ. ಈ ಸಂದರ್ಭದಲ್ಲಿ ಸರ್ಕಾರದವರು ಈ ವಿಷಯವಾಗಿ ಸಹಾನುಭೂತಿಯಿಂದ ವರ್ತಿಸಿರುವುದಕ್ಕೂ ಮತ್ತು ಇದಕ್ಕ ನೆರವು ಮತ್ತು ಸಹಾಯಕ್ಕಾಗಿ ಸ್ಥಳೀಯ ಜಿಲ್ಲಾಧಿಕಾರಿಗಳಾದಿಯಾಗಿ ಎಲ್ಲಾ ಅಧಿಕಾರಿಗಳಿಗೂ ರೈತರ ಪರವಾಗಿ ನಮ್ಮ ಮೈಸೂರು ಜಿಲ್ಲಾ ರೈತರ ಸಂಘದ ಮೂಲಕ ಕೃತಜ್ಞತಾಪೂರ್ವಕವಾದ ಅಭಿನಂದನಗಳನ್ನು ಅರ್ಪಿಸುತ್ತೇವೆ. ರೈತರು ಕೇವಲ ಎರಡು ಪಲ್ಲ ಭತ್ತಕೊಟ್ಟು ಒಂದು ಪಲ್ಲ ರಾಗಿ ಪಡೆಯಬಹುದೆಂದು ತಿಳಿಯಪಡಿಸುತ್ತೇವೆ.

ಒಂದು ಬಕೆಟ್ ನೀರಿಗೆ ಒಂದೂವರೆ ರೂ.

ಬರ್ಮಾ ರಾಜಧಾನಿ ರಂಗೂನಿನಲ್ಲಿ ಮೊನ್ನೆ ನೀರಿಗೆ ತಾಪತ್ರಯವಾಗಿ ಒಂದು ಬಕೆಟ್ ನೀರಿಗೆ ಒಂದೂವರೆ ರೂಪಾಯಿ ಹೇಳುತ್ತಿದ್ದರು. ನಾಲ್ಕು ದಿನಗಳ ಹಿಂದೆ ಕಮ್ಯೂನಿಸ್ಟ್ ದೌರ್ಜನ್ಯಕಾರರು ನೀರು ಸರಬರಾಜು ವ್ಯವಸ್ಥೆಯನ್ನೇ ಕತ್ತರಿಸಿ ಹಾಕಿದರು.

ರಣಜಿತ್
೩—೪—೫೧ರಿಂದ
ಆಕರ್ಷಣೀಯ ೫ನೇ ವಾರ
ಪ್ರತಿದಿನ ೩ ಆಟಗಳು
* ಬಾಬುಲ್ *
ಪಾತ್ರ— ನರ್ಗಿಸ್, ದಿಲೀಪ್‌ಕುಮಾರ್,

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೪—೪—೧೯೫೧ನೇ ಬುಧವಾರ [ಸಂಚಿಕೆ ೧೭೪

ಉಪವಾಸ

ದಕ್ಷಿಣ ಆಫ್ರಿಕಾದ ವರ್ಣ ಪ್ರತ್ಯೇಕ ನೀತಿಯನ್ನು ಪ್ರತಿಭಟಿಸಿ ಮಹಾತ್ಮ ಗಾಂಧಿಯವರ ಪುತ್ರ ಶ್ರೀ ಮಣಿಲಾಲ್ ಗಾಂಧಿಯವರು ಶುಕ್ರವಾರದಿಂದ ಎರಡುವಾರ ಉಪವಾಸ ವ್ರತವನ್ನು ಆರಂಭಿಸಲಿರುವರು.

ಹೋಂಗಾರ್ಡ್ಸ್ ಸಂಸ್ಥೆ ರದ್ದು

ಬೆಂಗಳೂರು ಏ. ೩

೧೯೪೮ರಲ್ಲಿ ಸ್ಥಾಪಿತವಾದ ಹೋಂಗಾರ್ಡ್ಸ್ ಸಂಸ್ಥೆಯನ್ನು ಸರ್ಕಾರವು ರದ್ದುಗೊಳಿಸಿರುವುದಾಗಿ ಒಂದು ಪ್ರಕಟಣೆ ಹೊರಡಿಸಿದೆ. ದೇಶದಲ್ಲಿ ಶಾಂತಿ ಸ್ಥಾಪನೆಯಾಗಿರುವುದರಿಂದ ಈ ಸಂಸ್ಥೆಯ ಅಗತ್ಯವಿಲ್ಲವೆಂದು ತಿಳಿಸಲಾಗಿದೆ.

ನರೇಂದ್ರರ ಒಕ್ಕೂಟಕ್ಕೆ ಮನ್ನಣೆಯಿಲ್ಲ

ಸರ್ಕಾರಕ್ಕೆ ವಿರೋಧವಾಗಿ ವರ್ತಿಸುವ ಸಂಘಗಳನ್ನು ನದೆಬಡಿಯಲಾಗುವುದು

ಭಾರತದಲ್ಲಿ ಕೆಲವು ಅರಸರು ಸೇರಿ ಸ್ಥಾಪಿಸಿಕೊಂಡಿರುವ ಸಂಘಕ್ಕೆ ಸರ್ಕಾರವು ಮನ್ನಣೆಯಿತ್ತಿಲ್ಲ, ಈಯುವುದೂ ಇಲ್ಲ, ಇತ್ತೀಚೆಗೆ ಈ ಸಂಘವು ೪-೫ ದಿನ ದಿನ ಸಮಾಲೋಚನೆ ನಡೆಸಿ ಚಳುವಳಿ ಹೂಡಲು ಯೋಜನೆ ತಯಾರಿಸಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಸಂಸ್ಥಾನ ಸಂಘಟನೆ ವಿಷಯದಲ್ಲಿ ತಮ್ಮ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದಿವೆಯೆಂದೂ ಪುನಃ ಅವರು ತಮ್ಮ ಸಂಸ್ಥಾನಗಳನ್ನು ಹಿಂದಕ್ಕೆ ಪಡೆಯಬೇಕೆಂಬ ದುರುದ್ದೇಶ ಹೊಂದಿರುವರು. ದಿವಂಗತ ಸರ್ದಾರ್ ಪಟೇಲರು ಅಮೋಘವಾದ ಸೇವೆಯನ್ನು ಮಾಡಿ ಸಂಸ್ಥಾನಗಳ ಸಂಘಟನ ಕಾರ್ಯವನ್ನೆಸಗಿ ಶಾಶ್ವತವಾದ ಕಟ್ಟಡವನ್ನು ನಿರ್ಮಿಸಿದ್ದಾರೆ. ಇದನ್ನು ಶೋಧಿಸಲು ಪ್ರಯತ್ನಿಸುವ ಎಲ್ಲಾ ಸಂಘಗಳನ್ನು ಸರ್ಕಾರವು ನದೆಬಡಿಯುವುದು, ಅವರುಗಳಲ್ಲಿ ಕೆಲವರು ಮುಂದಿನ ಚುನಾವಣೆಗಳಲ್ಲಿ ಭಾಗವಹಿಸಿ ಆಡಳಿತಾಧಿಕಾರಿಗಳನ್ನು ವಹಿಸಿಕೊಳ್ಳಬೇಕೆಂದಿರುವರು ಅದು ಅಷ್ಟು ಸುಲಭಕಾರ್ಯವಲ್ಲ. ಹಲವಾರು ಜಮೀನ್ದಾರರು, ಇನಾಂದಾರರನ್ನು ತಾವು ಒಳಹಾಕಿಕೊಳ್ಳಲಿರುವರು. ಕಾಂಗ್ರೆಸ್ಸಿನವರು ಈಗ ಎಚ್ಚರಿಕೆಯಿಂದಿರಬೇಕೆಂದು ಸಂಸ್ಥಾನ ಶಾಖಾಸಚಿವ ಶ್ರೀ ಎನ್. ಗೋಪಾಲಸ್ವಾಮಿಅಯ್ಯಂಗಾರ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಸಿಂಹಳದ ಹೈ-ಕಮಿಷನರ್

ಮದರಾಸಿನ ಮಾತೃಭೂಮಿ ಪತ್ರಿಕೆ ಸಂಪಾದಕರಾದ ಶ್ರೀ ಕೆ. ಪಿ. ಕೇಶವ ಮೆನನ್‌ರವರು ಸಿಂಹಳದಲ್ಲಿ ಭಾರತ ಹೈಕಮಿಷನರಾಗಿ ನೇಮಕವಾಗಿದ್ದಾರೆಂದು ತಿಳಿಯಬರುತ್ತದೆ. ಮುಂದಿನ ಮಾಹೆ ಅಂತ್ಯದಲ್ಲಿ ಅವರು ತಮ್ಮ ಹುದ್ದೆಯನ್ನು ವಹಿಸಿಕೊಳ್ಳಲು ಹೊರಡಲಿರುವರೆಂದು ಹೇಳಲಾಗಿದೆ.

ಯುಗಾದಿ ಹಬ್ಬಕ್ಕಾಗಿ ೩೯೧ ಬೇಲ್ ಬಟ್ಟೆ

ಸಂಸ್ಥಾನದಲ್ಲಿ ಯುಗಾದಿ ಹಬ್ಬಕ್ಕಾಗಿ ಹಂಚಿಕೆಗಾಗಿ ಬಟ್ಟೆ ೩೯೧ ಬೇಲುಗಳನ್ನು ಪಂಚೆಯನ್ನು ಸಿವಿಲ್ ಸಪ್ಲೈಸ್ ಕಂಟ್ರೋಲರು ನಿಗದಿ ಮಾಡಿದ್ದು, ಸಾರ್ವಜನಿಕ ಬೇಡಿಕೆ ಹೆಚ್ಚಾಗಿರುವುದನ್ನು ಕಂಡು ಇನ್ನೂ ೧೭೦ ಬೇಲುಗಳನ್ನೀಗ ರಿಲೀಸ್ ಮಾಡಿದ್ದಾರೆ. . ಸಾರ್ವಜನಿಕರು ಅಗತ್ಯವಿದ್ದಲ್ಲಿ ಮಾತ್ರ ಪಂಚೆಗಳನ್ನು ಕೊಂಡು ಸಹಕರಿಸಬೇಕೆಂದೂ ಪ್ರಾರ್ಥಿಸಿದ್ದಾರೆ.

ವಸ್ತು ಸಂಗ್ರಹಾಲಯಗಳು

ದೆಹಲಿ, ವಾರ್ಧಾ, ಸಬರಮತಿ ಮತ್ತು ದಕ್ಷಿಣ ಭಾರತದ ಒಂದು ಪಟ್ಟಣದಲ್ಲಿ ಒಟ್ಟು ನಾಲ್ಕು ಮಹಾತ್ಮ ಗಾಂಧಿ ಸ್ಮಾರಕ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಬೇಕೆಂದು ಸ್ಮಾರಕ ಟ್ರಸ್ಟಿನವರು ನಿರ್ಧರಿಸಿರುವರು.

ಸಮರ ಮುಕ್ತಾಯ ?

ಕೊರಿಯಾದಲ್ಲಿ ಸಮರ ಮುಕ್ತಾಯವು ಸನ್ನಿಹಿತವಾಗಿದೆ ಎಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ|| ವಾರನ್ ಆಸ್ಟಿನ್ನರು ಹೇಳಿರುವರು.

ಅಧ್ಯಕ್ಷರಿಂದ ಕರೆ

ತಿರುವಾಂಕೂರು ಕೊಚ್ಚಿನ್ನಿನಲ್ಲಿ ಉಂಟಾಗಿರುವ ಮಂತ್ರಿಮಂಡಲ ಬಿಕ್ಕಟ್ಟನ್ನು ಪರಿಹರಿಸಲು ಮಾತುಕತೆ ನಡೆಸಲು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಾಂಡನ್‌ರವರು ತಿರುವಾಂಕೂರು, ಕೊಚ್ಚಿನ್ ಒಕ್ಕೂಟದ ಮುಖ್ಯಮಂತ್ರಿ ಶ್ರೀ ಸಿ. ಕೇಶವನ್, ಕೆ. ಪಿ. ಸಿ. ಸಿ. ಪ್ರೆಸಿಡೆಂಟ್ ಶ್ರೀ ಶಂಕುಪಿಳ್ಳೆ, ತಿರುವಾಂಕೂರ್-ಕೊಚ್ಚಿನ್ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿ ಶ್ರೀ ಕೆ. ಪಿ. ಮಾಧವಚಾರ್ಯರನ್ನು ದೆಹಲಿಗೆ ಕೂಡಲೆ ಬರಲು ತಂತಿ ಕಳುಹಿಸಿರುವರು.

ಪಡಿತರ ಪದ್ಧತಿ ವಜಾ ಮಾಡಿ

ಬೆಂಗಳೂರು ಏ. ೩

ಕೆಲವು ನಗರಗಳಲ್ಲಿ ವಿನಹ ಮಿಕ್ಕ ಪ್ರದೇಶಗಳಲ್ಲಿ ಅನಧಿಕೃತ ಪಡಿತರ ಪದ್ಧತಿಯನ್ನು ವಜಾ ಮಾಡಬೇಕೆಂದು ಶ್ರೀ ಕಡಿದಾಳ್ ಮಂಜಪ್ಪನವರು ಇಂದು ಶಾಸನ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದರು. ರಾಷ್ಟ್ರದಲ್ಲೆಲ್ಲಾ ಏಕ ರೀತಿಯಾದ ನೀತಿಯನ್ನು ಆಹಾರ ವಿಷಯದಲ್ಲಿ ಅನುಸರಿಸುತ್ತಲಿದೆ. ಈ ವಿಷಯವು ಕೇಂದ್ರಕ್ಕೆ ಸೇರಿದೆ ಎಂದು ಆಹಾರ ಮಂತ್ರಿಗಳು ಉತ್ತರವಿತ್ತರು.

ಜ|| ಮೆಕಾರ್ಥರ್ ೩೮ನೇ ಅಕ್ಷಾಂಶ ದಾಟಿದರು

ಕೊರಿಯಾ ಯುದ್ಧರಂಗದಲ್ಲಿ ಜನರಲ್ ಮೆಕಾರ್ಥರ್ ನಿನ್ನೆ ೩೮ನೇ ಅಕ್ಷಾಂಶವನ್ನು ದಾಟಿ ವಿಶ್ವಸಂಸ್ಥೆ ಸೈನ್ಯಕ್ಕೆ ಭೇಟಿಯಿತ್ತರು.

ನಿರಾಕರಣೆ

ದಕ್ಷಿಣ ಆಫ್ರಿಕಾದ ವರ್ಣಬೇಧ ನೀತಿಯನ್ನು ಚರ್ಚಿಸಲು ಚಕ್ರಗೋಷ್ಠಿಯನ್ನು ನಡೆಸಬೇಕೆಂಬ ವಿಶ್ವಸಂಸ್ಥೆಯ ತೀರ್ಮಾನದಂತೆ ನಡೆಯಲಿರುವ ಚಕ್ರಗೋಷ್ಠಿಯಲ್ಲಿ ದಕ್ಷಿಣ ಆಫ್ರಿಕಾವು ಭಾಗವಹಿಸುವುದಿಲ್ಲವೆಂದು ನಿರಾಕರಿಸಿದೆ.

ಖಂಡನೆ

ಕೊರಿಯಾದಲ್ಲಿ ಶಾಂತಿಸಂಧಾನಕ್ಕಾಗಿ ಜನರಲ್ ಮೆಕಾರ್ಥರ್ ಮಾಡಿರುವ ಸಲಹೆ ಕೆನೆಡಿಯನ್ ವಿದೇಶಾಂಗಮಂತ್ರಿ ಮಿ|| ಪಿಯರ್‌ಸನ್‌ರವರು ಟೀಕಿಸುತ್ತಾ ಸೈನ್ಯಾಧಿಕಾರಿಗಳು ಈ ರೀತಿಯಾದ ರಾಜಕೀಯ ಹೇಳಿಕೆಗಳನ್ನೀಯುವುದು ತಪ್ಪೆಂದೂ ಅವು ವಿಶೇಷ ಪರಿಣಾಮವನ್ನುಂಟುಮಾಡುವವೆಂದು ಹೇಳಿದ್ದಾರೆ.

ಶಾಂತಿಮನೆವಿಗೆ ಸಹಿ ಹಾಕಬಾರದು

ಸ್ಟಾಕ್‌ಹೋಂಶಾಂತಿ ಮನವಿಗೆ ಕಾಂಗ್ರೆಸ್ ಸದಸ್ಯರು ಸಹಿಯನ್ನು ಹಾಕಕೂಡದೆಂದು ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳನ್ನು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿಗಳು ಸೂಚಿಸುತ್ತಿರುವುದಾಗಿ ತಿಳಿಯಬರುತ್ತದೆ.

ಅವಿಶ್ವಾಸ ನಿರ್ಣಯ ಬಿದ್ದುಹೋಯಿತು

ಪಂಜಾಬಿನ ಮುಖ್ಯಮಂತ್ರಿ ಶ್ರೀ ಗೋಪಿಚಂದ್‌ಭಾರ್ಗವರ ಮೇಲಿನ ಅವಿಶ್ವಾಸನಿರ್ಣಯವು ೩೧-೩೪ ಓಟುಗಳಿಂದ ಬಿದ್ದುಹೋಯಿತು.

ಹೈದರಾಬಾದು ಟ್ರಸ್ಟು

ಹೈದರಾಬಾದು ನೈಜಾಮರ ಆಸ್ತಿಗೆ ಸಂಬಂಧಪಟ್ಟಂತೆ ಒಂದು ಟ್ರಸ್ಟನ್ನು ನಿರ್ಮಿಸಲಾಗಿದೆ. ಈ ಟ್ರಸ್ಟಿನಲ್ಲಿ ಭಾರತ ಸರ್ಕಾರದ ಅಧಿಕಾರಿಗಳೂ ಇರುವರು. ಆಸ್ತಿಪಾಸ್ತಿ ವಿಲೇವಾರಿ ವಿಷಯಗಳೆಲ್ಲವೂ ಈ ಟ್ರಸ್ಟಿಗೆ ಸೇರಿದೆ. ಈ ಟ್ರಸ್ಟಿನ ಬಹುಭಾಗ ಹಣವು ಹೈದರಾಬಾದಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗುವುದು.

ಸೈನ್ಯ ಜಮಾವಣೆ

ಕೊರಿಯಾ ಯುದ್ಧ ರಂಗದಲ್ಲಿ ಚೈನಾವು ೬ ಲಕ್ಷ ಮಂದಿ ಸೈನ್ಯವನ್ನು ಜಮಾವಣೆ ಮಾಡಿ ಭೀಕರ ಕದನಕ್ಕೆ ಸಿದ್ಧವಾಗುತ್ತಲಿದೆಯೆಂದು ವರದಿಯಾಗಿದೆ.

ವಾಣಿಜ್ಯ ಒಪ್ಪಂದ

ಭಾರತ ಜಪಾನಿನ ವಾಣಿಜ್ಯ ಒಪ್ಪಂದ ಪ್ರಕಾರ ಒಂದು ಕೋಟಿ ೭೦ ಲಕ್ಷ ಪೌಂಡುಗಳ ಸಾಮಾನು ಭಾರತಕ್ಕೆ ಆಮದಾಗಲಿದೆ

ಸ ಮಾ ಚಾ ರ

೪—೪—೧೯೫೧ನೇ ಬುಧವಾರ

ದೇಶ ದ್ರೋಹ

ಗುಲಾಮರಲ್ಲಿ ಗುಲಾಮರಂತಿದ್ದ ನೂರಾರು ಅರಸರನ್ನು ಗುಲಾಮಗಿರಿಯಿಂದ ತಪ್ಪಿಸಿ, ಅವರಿಗೆ ಇದ್ದ ಗೌರವ, ಸನ್ಮಾನಗಳನ್ನು ಉಳಿಸಿ ಕೊಟ್ಟ ಸ್ವತಂತ್ರ ಭಾರತ ಸರ್ಕಾರಕ್ಕೆ ವಿರೋಧವಾಗಿ ಚಳುವಳಿಯನ್ನು ಹೂಡಿ ಪುನಃ ತಮ್ಮ ಸಂಸ್ಥಾನಗಳಲ್ಲಿ ನಿರಂಕುಶಾಧಿಕಾರತ್ವವನ್ನು ಸ್ಥಾಪಿಸಬೇಕೆಂದು ಹಲವಾರು ರಾಜರುಗಳು ಒಂದು ಸಂಘವನ್ನು ಸ್ಥಾಪಿಸಿಕೊಂಡು ಸರ್ಕಾರದ ವಿರೋಧಿಸಾಮಿಗಳ ಸಹಾಯದಿಂದ ಚಳುವಳಿ ಹೂಡಲು ಯೋಜನೆಗಳನ್ನು ಮಾಡುತ್ತಲಿರುವರೆಂಬ ಅಂಶವನ್ನು ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್‌ರವರು ಕೇಂದ್ರ ಶಾಸನ ಸಭೆಯಲ್ಲಿ ಹೊರಗೆಡಹಿರುವರು.

ಕೆಲವು ಶತಮಾನಗಳಿಂದ ಬ್ರಿಟಿಷರ ಸಂಪೂರ್ಣ ಆಳ್ವಿಕೆಗೆ ಒಳಪಟ್ಟು ಅವರ ಅಡಿಯಾಳುಗಳಾಗಿದ್ದುಕೊಂಡು ಯಾವ ಕೆಂಪು ವರ್ಣದವನು ಬಂದರೂ ಅವನನ್ನು ಇಂದ್ರನೆಂದು ಹೊಗಳುತ್ತಾ ಅವನಿಗ ಇಲ್ಲದಸಲ್ಲದ ಮರ್ಯಾದೆಗಳನ್ನು ಮಾಡಿ ಅನೇಕ ಸಲ ತಮ್ಮ ಆತ್ಮಗೌರವಕ್ಕ ಚ್ಯುತಿಯನ್ನುಂಟುಮಾಡಿಕೊಡುತ್ತಲಿದ್ದಂಥ ರಾಜರುಗಳನ್ನು ಅದೇ ಬ್ರಿಟಿಷರು ನಡುನೀರಿನಲ್ಲಿ ಬಿಟ್ಟುಹೊಂಟು ಹೋದಾಗ್ಯೂ, ಸರ್ದಾರ್ ಪಟೇಲರು ತಮ್ಮ ಶಕ್ತಿ ಸಾಮರ್ಥ್ಯಗಳನ್ನುಪಯೋಗಿಸಿ, ಅನೇಕ ಕಡೆ ಪ್ರಜೆಗಳು ಸಹ ವಿರೋಧಿಸುತ್ತಲಿದ್ದಗ್ಯೂ, ರಾಜರಿಗೆ ಹಿಂದಿನಿಂದ ಬಂದ ಮರ್ಯಾದೆ ಸನ್ಮಾನಗಳನ್ನು ಉಳಿಸಿಕೊಟ್ಟ ಸರ್ಕಾರಕ್ಕ ಈಗ ವ್ಯತಿರಿಕ್ತವಾಗಿ ವರ್ತಿಸಬೇಕೆಂದು ಹೊರಟಿರುವ ಕೆಲವು ರಾಜರ ವರ್ತನೆಯು ತೀರಾ ಖಂಡನೀಯ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದೊಡನೆಯೇ ರಾಜರುಗಳಿಗೂ ಸ್ವಾತಂತ್ರ್ಯ ಲಭಿಸಿತು ರಾಜ ಪ್ರಜೆಗಳೆಂಬ ಬೇಧ ಭಾವವೆಲ್ಲವೂ ಅಳಿದು ದೇಶೋನ್ನತಿಗಾಗಿ ಎಲ್ಲರೂ ದುಡಿಯುವ ಕಾಲ ಬಂತು ಈಗಿನ ಸಂದರ್ಭದಲ್ಲಿ ರಾಜರುಗಳು ಸಹ ತಮ್ಮ ಬುದ್ಧಿ ಕೌಶಲ್ಯದಿಂದ ಜನ ಪ್ರೀತಿ ವಿಶ್ವಾಸ ಗಳಿಸಿ, ಕೇಂದ್ರಾಡಳಿತದಲ್ಲಿ ಸಹ ಭಾಗವಹಿಸಲವಕಾಶವಿರುವುದು. ರಾಷ್ಟ್ರಾಧ್ಯಕ್ಷರೂ ಸಹ ಆಗಬಹುದು ತಮ್ಮ ನಿರಂಕುಶಾಧಿಕಾರಕ್ಕೆ ಅವಕಾಶವಿಲ್ಲವಾದರೂ ಸ್ವಾತಂತ್ರ್ಯವು ಅವರುಗಳಿಗೆ ಹೆಚ್ಚಿದೆ. ತಮ್ಮ ಆಸ್ತಿಪಾಸ್ತಿ ಗೌರವಕ್ಕೆ ಚ್ಯುತಿಬಂದಿಲ್ಲ. ಈ ರಾಜರುಗಳ ರೆಕ್ಕೆ ಪುಕ್ಕಗಳನ್ನು ಕತ್ತರಿಸಿ, ಅವರ ಸರ್ವಸ್ವವನ್ನು ಸರ್ಕಾರ ವಶಪಡಿಸಿಕೊಂಡು ಸಾಮಾನ್ಯ ಪ್ರಜೆಯಂತೆ ಮಾಡಲು ಪ್ರಜಾ ಸರ್ಕಾರಕ್ಕೆ ಕಷ್ಟವಾಗಿರಲಿಲ್ಲ. ಕೆಲವು ಮುಂದುವರಿದ ಸಂಸ್ಥಾನಗಳಲ್ಲಿ ವಿನಹ ಮಿಕ್ಕಡೆ ಪ್ರಜೆಗಳಿಗೂ ರಾಜರಿಗೂ ನಿಕಟ ಸಂಬಂಧವೇ ಇರಲಿಲ್ಲ ಅವರ ಆಳ್ವಿಕೆಯಲ್ಲಿ ಜನರಿಗೆ ಸಂಪೂರ್ಣ ವಿಶ್ವಾಸವೇ ಇರಲಿಲ್ಲ ಆಂತಿರುವಲ್ಲಿ ರಾಜರಿಗೂ ಸಲ್ಲತಕ್ಕ ಸನ್ಮಾನವನ್ನು ಉಳಿಸಿ ಪ್ರಜಾ ಪ್ರಭುತ್ವ [illegible] ಪಟೇಲರಿಗೆ ಕೆಲವು ರಾಜರುಗಳು ಮನಬಿಚ್ಚಿ ಹೇಳಿರುವಂತೆ, ಚಿರಋಣಿಗಳಾಗಿರಬೇಕು.

ಈಗ ಸರ್ಕಾರಕ್ಕೆ ವಿರೋಧವಾಗಿ ವರ್ತಿಸಬೇಕೆಂದು ಹೊರಡಲಿರುವ ಹಲಕಲವು ರಾಜರು ತಾವು ಯೋಚಿಸಿರುವ ಮಾರ್ಗವು ತಮಗೇ ಹಾನಿಯೆಂಬುದನ್ನರಿತುಕೊಂಡು, ದೇಶದ ತಮ್ಮ ಹಿತದೃಷ್ಟಿಯಿಂದ ಕೂಡಲೇ ಪರಿವರ್ತನೆಯಾಗಿ ಭಾರತ ರಾಷ್ಟ್ರವು ಪ್ರಪಂಚ ರಾಷ್ಟ್ರಗಳಲ್ಲೆಲ್ಲಾ ಮಿಗಿಲಾದ ರಾಷ್ಟ್ರವೆನಿಸಿಗೊಳ್ಳುವಂತೆ ಮಾಡಲು ತಮ್ಮ ತನುಮನ ಧನಗಳನ್ನೆಲ್ಲಾ ಅರ್ಪಿಸಲು ಸಿದ್ಧರಾಗಲಿ.

ಕೇಂದ್ರ ಸರ್ಕಾರದೊಡನೆ ಮಿಳಿತವಾಗಲು ತಮ್ಮ ಸಂಪೂರ್ಣ ಒಪ್ಪಿಗೆಯನ್ನಿತ್ತು, ಈಗ ಇಲ್ಲವೆಂದು ಹೇಳುತ್ತಾ, ದೇಶದ್ರೋಹಿಗಳಂತೆ ವರ್ತಿಸಿ ಚಳುವಳಿ ಹೂಡಿದಲ್ಲಿ ಯಾರ ಹಂಬಲವೂ ದೊರೆಯುವುದಿಲ್ಲ ತಮ್ಮ ಸರ್ವ ನಾಶವಾಗುವುದರಲ್ಲಿ ಸಂದೇಹವಿಲ್ಲ. ಈಗಲೇ ಅವರು ಎಚ್ಚತ್ತುಕೊಳ್ಳುವುದು ಉಚಿತ.

ಸ॥ ಬಲದೇವಸಿಂಗ್ ಬೆಂಗಳೂರಿನಲ್ಲಿ

ಕೇಂದ್ರ ರಕ್ಷಣಾ ಸಚಿವರಾದ ಸರ್ದಾರ್ ಬಲದೇವಸಿಂಗ್‌ರವರು ರಕ್ಷಣಾ ಶಾಖೆಯ ಕಾರ್ಯದರ್ಶಿ ಶ್ರೀ ಎಸ್.ಎಂ ಪಾಟೀಲ್ ಭಾರತವಿಮಾನದಳದ ಉಪದಂಡನಾಯಕ ಏರ್‌ವೈಸ್, ಮಾರ್ಷಲ್ ಮುಖರ್ಜಿಯವರೊಡನೆ ನಿನ್ನೆ ಬೆಂಗಳೂರಿಗ ಆಗಮಿಸಿದರು. ಮೈಸೂರಿನ ಸಚಿವರುಗಳಾದ ಶ್ರೀ ಟಿ. ಮರಿಯಪ್ಪ, ಶ್ರೀ ಹೆಚ್. ಸಿ. ದಾಸಪ್ಪ ಇವರುಗಳೊಡನೆ ಸಮಾಲೋಚನೆ ನಡೆಸಿದರು. ನಾಳೆ ದೆಹಲಿಗೆ ತೆರಳುವರು.

ಜನರು ಸಿದ್ಧ

ತೆಲಂಗಾಣದಲ್ಲಿ ಕಮ್ಯೂನಿಸ್ಟರ ಸಮಾಜ ಘಾತುಕ ಹಾವಳಿಗಳನ್ನೆದುರಿಸಲು ಜನರು ಸಿದ್ಧರಾಗಿರುವರೆಂದು ಸಂಸ್ಥಾನ ಶಾಖಾ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಪೀಕಿಂಗಿಗೆ ಪ್ರಯಾಣ

ಚೈನಾವು ಭಾರತಕ್ಕೆ ಕೊಡಬೇಕಂದಿರುವ ೧೦ ಲಕ್ಷ ಟನ್ ಆಹಾರ ವಿಷಯದಲ್ಲಿ ಸಂಧಾನ ನಡೆಸಲು ಭಾರತ ಸರ್ಕಾರದ ಆಹಾರಶಾಖಾ ಸಹಕಾರ್ಯ ದರ್ಶಿಯವರು ಈ ತಿಂಗಳು ಮಧ್ಯಭಾಗದಲ್ಲಿ ಪೀಕಿಂಗಿಗೆ ತೆರಳಲಿರುವರೆಂದು ತಿಳಿಯಬರುತ್ತದೆ.

ನಿಧನ

ಸರ್ಕಾರದ ನಿವೃತ್ತ ನ್ಯಾಯ ಕಾರ್ಯದರ್ಶಿಗಳಾಗಿದ್ದ ಶ್ರೀ ಸಿ. ನಾರಾಯಣಸ್ವಾಮಿ ನಾಯ್ಡುರವರು ವೆಲ್ಲೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಆತ್ಮಹತ್ಯೆ

ಮೈಸೂರಿನ ನಾರಾಯಣಶಾಸ್ತ್ರಿ ರೋಡಿನಲ್ಲಿರುವ ತಮ್ಮ ಮನೆಯಲ್ಲಿ ಪೋಸ್ಟಲ್ ಕೆಲಸದಿಂದ ೩ನೇ ತಾ॥ ತೆಗೆದುಹಾಕಿದುದರಿಂದಲೂ ಮತ್ತು ಜೀವನದಲ್ಲಿ ಜಿಗುಪ್ಸೆಯಿಂಟಾದುದರಿಂದಲೂ ಶ್ರೀ ರಾಮಯ್ಯ ಎಂಬುವವರು ವಿಷ ಕುಡಿದು ಆತ್ಮಹತ್ಯ ಮಾಡಿಕೊಂಡಿದ್ದಾರೆ. ಪೋಲೀಸರು ಮಹಜರು ಕ್ರಮ ನಡೆಸಿದರು.

ಕನ್ನಡದ ಮೂಲ ಶಿಕ್ಷಣ

ಬೆಂಗಳೂರು ಏ. ೩

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಿರಬೇಕೆಂಬುದಾಗಿ ಈ ಸಭೆಯವರು ಅಭಿಪ್ರಾಯಪಡುತ್ತಾರೆಂಬ ನಿರ್ಣಯವನ್ನು ಶ್ರೀ ಡಿ. ಎಂ. ಸಿದ್ದಯ್ಯನವರು ಸಭೆಯ ಮುಂದಿಟ್ಟರು.

ಶಿಕ್ಷಣಶಾಖಾ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ಉತ್ತರಕೊಡುತ್ತಾ ಇದು ಪರಿಹಾರವಾಗಬೇಕೆಂಬ ಆಕಾಂಕ್ಷೆ ಬಹಳವಾಗಿದೆ. ನಾನಾ ಸಂಸ್ಥೆಗಳು ಈ ವಿಷಯ ಪರಿಶೀಲಿಸಿ ತಮ್ಮ ಸಲಹೆಗಳನ್ನು ಕಳುಹಿಸಿದ್ದಾರೆ. ಮೈಸೂರು ಸರ್ಕಾರವು ಇದನ್ನು ಪರಿಶೀಲಿಸುತ್ತಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಕನ್ನಡದ ಮೂಲಕ ಶಿಕ್ಷಣ ನಡೆಯುತ್ತಿದೆ. ಹೈಸ್ಕೂಲಿನಲ್ಲಿ ಹಿಂದಿಯು ಒತ್ತಾಯ ಭಾಷೆಯಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಇದನ್ನು ಜಾರಿಗೆ ತರುವುದು ಬಹುಕಷ್ಟ. ಲಾ, ವಿಜ್ಞಾನ ಮುಂತಾದ ವಿಭಾಗಗಳಲ್ಲಿ ಪಠ್ಯ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕಾಗಿದೆ. ಮಂತ್ರಿಮಂಡಲವು ಈ ವಿಷಯವನ್ನು ಪರಿಶೀಲಿಸುತ್ತಿದೆ ಎಂದರು. ನಿರ್ಣಯವನ್ನು ಸೂಚಕರು ಹಿಂತೆಗೆದುಕೊಂಡರು.

ಹಣಕಾಸಿನ ಸಚಿವರು ಆರೋಗ್ಯತೆರಿಗೆಯ ಚುನಾಯಿತ ಸಮಿತಿ ವರದಿಯನ್ನು ಸಭೆಯ ಮುಂದಿಟ್ಟರು.

ಭೂ ಸುಧಾರಣೆ

ಭಾರತದಲ್ಲಿರುವ ಜಮೀನುಗಳೆಲ್ಲವೂ ಕೆಲವರ ಅಧೀನದಲ್ಲಿದ್ದು ಅವರು ಮಾತ್ರ ಅದರ ಪ್ರಯೋಜನವನ್ನು ಅನುಭವಿಸುವುದು ತಪ್ಪುವುದಕ್ಕಾಗಿ ಭೂ ಸುಧಾರಣೆ ಅವಶ್ಯ ಎಂದು ಕಾಶ್ಮೀರದಲ್ಲುಂಟಾಗಿರುವ ಭೂಸುಧಾರಣಾಕ್ರಮವನ್ನು ವಿವರಿಸುತ್ತಾ ಭಾರತ ಪ್ರಧಾನಿ ಈ ರೀತಿ ಹೇಳಿರುವರು.

—: ಹೊಸ ವರ್ಷದ ಹೊಂಗಾಣಿಕೆ :—

* ಒ ಲಂ ಪಿ ಯಾ *

೫—೪—೫೧ ರಿಂದ ದಿನವಹಿ ೩ ಆಟಗಳು

ಸದಾ ಹರ್ಷದಾಯಕಳಾದ ಪ್ರಖ್ಯಾತಿ ಚೆಲ್ವಬಾಲೆ

— ಮೀ ನಾ —

("ಏಕ್—ಥಿ—ಲಡ್ಕಿ" ಯ "ಲಾರಾಲಪ್ಪಾ ಖ್ಯಾತಿ") ಪಾತ್ರವಹಿಸಿರುವ

ಕ್ಯಾಟ್ರಾ ಆರ್ಟ್ಸ್‌ರವರ—

ಏ ಕ್ ತೇ ರಿ ನಿ ಶಾ ನಿ

ಸಹಾಯಕ ಪಾತ್ರ— ತ್ರಿಲೋಕ್ ಕಪೂರ್, ಓಂ ಪ್ರಕಾಶ್, ಕಕ್ಕು, ಶ್ಯಾಮ

ಬೆಳಗಿನ ಪ್ರದರ್ಶನ ೬—೪—೫೧ ರಿಂದ

ಸ್ಟೂಡಿಯೋ ಟರ್ಸ್‌ರವರ — ನಾ ಪ ಸ್ —

ಸಂಪಾದಕರು ಮತ್ತು ಪ್ರಕಾಶಕರು— ಜಿ ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೪೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೪—೧೯೫೧ನೇ ಗುರುವಾರ [ಸಂಚಿಕೆ ೧೭೫

ಒಂದು ಎಕರೆಯಲ್ಲಿ ೬೨೨ ಮಣ ಆಲೂಗಡ್ಡೆ

ಪಶ್ಚಿಮ ಬಂಗಾಳದಲ್ಲಿ ಒಬ್ಬ ರೈತನು ಒಂದು ಎಕರೆ ಜಮೀನಿನಲ್ಲಿ ೬೨೨ ಮಣ ಆಲೂಗಡ್ಡೆಯನ್ನು ಬೆಳೆದುದ್ದಕ್ಕಾಗಿ ೧೫೦೦ ಬಹುಮಾನವನ್ನು ಸರ್ಕಾರದಿಂದ ಪಡೆದನು.

ಟ್ರಾಕ್ಟರುಗಳಿಂದ ಪ್ರಯೋಜನವಿಲ್ಲ

ಇಲ್ಲಿಯ ವರೆಗೆ ಟ್ರಾಕ್ಟರುಗಳಿಗೆ ೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪ್ರಯೋಜನವನ್ನೇನೂ ಪಡೆದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಶ್ರೀ ಪಂಜಾಬ್‌ರಾವ್ ದೇಶಮುಖ್‌ರವರು ಅಂಕಿಅಂಶಗಳ ಮೂಲಕ ತಿಳಿಸಿದರು.

ಅಕ್ಕಿ ಪಡಿತರ ಹೆಚ್ಚಿಸಲಾಗಿದೆ

ಅಮೆರಿಕಾ ಯಾವ ಷರತ್ತೂ ಇಲ್ಲದೆ ಭಾರತಕ್ಕೆ ಆಹಾರ ಸರಬರಾಜು ಮಾಡಬೇಕು

ಬೆಂಗಳೂರು, ೪

ಸಂಸ್ಥಾನದಲ್ಲಿ ಅಕ್ಕಿ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಅಕ್ಕಿ ಪಡಿತರವನ್ನು ಎಲ್ಲಾ ರೇಷನ್‌ದಾರರಿಗೂ ಏಪ್ರಿಲ್ ಒಂದರಿಂದ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಆಜ್ಞೆಯಾಗಿದೆ. ಈ ಹೊಸ ಆಜ್ಞೆ ಪ್ರಕಾರ ಪಡಿತರ ಈ ರೀತಿ ಕೊಡಲಾಗುವುದು.

	ಅಕ್ಕಿ	ಗೋಧಿ	ಇತರ ಧಾನ್ಯ	ಒಟ್ಟು
ಎ. ಕ್ಲಾಸು	೬ ಔ.	೩	—	೯
ಬಿ. ಕ್ಲಾಸು	೩	೧	೬	೧೦
ಪ್ಲಾಂಟೇಷನ್	೬	೧	೨	೯
ಶ್ರಮಜೀವಿಗಳಿಗೆ	೩	೧	೯	೧೩

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾದಿಂದ ಆಹಾರ ಸರಬರಾಜು ಮಾಡುವ ಮಸೂದೆಯನ್ನು ಕಾಂಗ್ರೆಸ್ ಯಾವ ಷರತ್ತೂ ಇಲ್ಲದೆ ಜರೂರಾಗಿ ಅಂಗೀಕರಿಸಬೇಕೆಂದು ಅಮೆರಿಕಾ ಸರ್ಕಾರ ಆಡಳಿತ ವರ್ಗದವರು ಕಾಂಗ್ರೆಸ್ಸನ್ನು ಕೇಳಿರುವರು. ಈಗಾಗಲೇ ಭಾರತವು ಮ್ಯಾಂಗನೀಸ್, ಅಭ್ರಕ ಮುಂತಾದುವನ್ನು ರಫ್ತುಮಾಡಿದೆ. ಷರತ್ತುಗಳನ್ನು ವಿಧಿಸಿದಲ್ಲಿ ಭಾರತ ಕಷ್ಟವನ್ನನುಭವಿಸಲು ಸಿದ್ಧವಿರುವುದೇ ವಿನಹ ಅದಕ್ಕೆ ಒಪ್ಪಲಾರದು. ಮಾನವತೆ ದೃಷ್ಟಿಯಿಂದ ನಾವು ಯಾವ ಷರತ್ತುಗಳನ್ನು ವಿಧಿಸಬಾರದು. ಭಾರತಕ್ಕೂ, ಅಮೆರಿಕಾಕ್ಕೂ ರಾಜಕೀಯ ಭಿನ್ನತೆಯಿದ್ದಾಗ್ಯೂ ಉತ್ತಮ ಬಾಂಧವ್ಯವಿದೆ. ಅಮೆರಿಕಾಕ್ಕೆ ಭಾರತದಲ್ಲೂ ಏಷ್ಯಾದಲ್ಲೂ ಇರುವ ಗೌರವವನ್ನು ಕಳೆದುಕೊಳ್ಳಲಾಗದು ಎಂದು ಆಡಳಿತವರ್ಗದವರು ತಮ್ಮ ಮನವಿಯಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ.

ಮಹಾ ಚುನಾವಣೆ

ಭಾರತಾದ್ಯಂತ ನಡೆಯಲಿರುವ ಮಹಾ ಚುನಾವಣೆಯ ವಿಷಯದಲ್ಲಿ ಚುನಾವಣಾ ಮುಖ್ಯಾಧಿಕಾರಿ ಶ್ರೀ ಸುಕುಮಾರಸೇನ್‌ರವರು ನಿನ್ನೆ ರೇಡಿಯೊ ಮೂಲಕ ಭಾಷಣ ಮಾಡುತ್ತಾ ಮಹಾ ಚುನಾವಣೆಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಸಾರ್ವಜನಿಕರು, ಸರ್ಕಾರಿ ಅಧಿಕಾರಿಗಳು ಎಲ್ಲರೂ ಸಹಕಾರ ನೀಡಬೇಕೆಂದು ಮನವಿ ಮಾಡಿಕೊಂಡರು. ಅವರು ತಮ್ಮ ಭಾಷಣದಲ್ಲಿ ಮಹಾ ಚುನಾವಣೆಯಲ್ಲಿ ೧೭ ಕೋಟಿ ಮತದಾರರು ಮತನೀಡಲು ೫೨ ಕೋಟಿ ಮತದಾರರ ಚೀಟಿ, ೧೯ ಲಕ್ಷ ಪೆಟ್ಟಿಗೆಗಳು ಬೇಕಾಗುವುದೆಂದೂ ೧ ಲಕ್ಷ ೭೫ ಸಾವಿರ ಚುನಾವಣಾ ಕೇಂದ್ರಗಳನ್ನು ಏರ್ಪಾಡು ಮಾಡಬೇಕೆಂದೂ ಇದಕ್ಕೆ ತಕ್ಕ ಸಿಬ್ಬಂದಿ ಬೇಕಾಗುವುದಲ್ಲದೆ ಯಾವ ಪ್ರಾಂತ್ಯದಲ್ಲಿಯೇ ಒಂದೇ ದಿನದಲ್ಲಿ ಮತದಾನ ನಡೆಯಲಾರದು. ಕೆಲವೆಡ ೭ ದಿನಗಳ ಕಾಲ ನಡೆಯಬೇಕಾಗುವುದೆಂದು ತಿಳಿಸಿದ್ದಾರೆ.

೫೦ ಬೇಲ್ ಬಟ್ಟೆ

ರಾಜಧಾನಿಯಲ್ಲಿ ಸಾರ್ವಜನಿಕರಿಗೆ ೫೦ ಬೇಲ್ ಪಂಚೆಯನ್ನು ತಕ್ಷಣ ಹಂಚಲು ಟೆಕ್ಸ್ಟೈಲ್ ಕಂಟ್ರೋಲರ್‌ರವರು ಆಜ್ಞೆ ಮಾಡಿದ್ದಾರೆ.

ಉಗ್ರ ಕದನ

ಕೊರಿಯಾ ರಣರಂಗದಲ್ಲಿ ವಿಶ್ವಸಂಸ್ಥೆ ಸೈನ್ಯಗಳಿಗೂ ಚೈನಾ ಪಡೆಗಳಿಗೂ ಉಗ್ರ ಕದನವು ೩೮ನೇ ಅಕ್ಷಾಂಶದ ಹತ್ತಿರ ಪ್ರಾರಂಭವಾಗಿದೆಯೆಂದು ವರದಿಯಾಗಿದೆ.

ಅಧಿಕಬೆಳೆ ಪರಿಶೀಲನೆ ಸಮಿತಿ

ಕಳೆದ ೫ ವರ್ಷಗಳಲ್ಲಿ ಭಾರತದಲ್ಲಿ ೮೮ ಕೋಟಿ ರೂ. ಗಳ ವೆಚ್ಚಮಾಡಿ ಅಧಿಕ ಬೆಳೆ ಕಾರ್ಯಕ್ರಮವು ಫಲದಾಯಕವಾಗಿಲ್ಲ. ದೇಶದಲ್ಲಿ ಆಹಾರ ಪರಿಸ್ಥಿತಿಯು ಈಗಿನ ರೀತಿಯಲ್ಲಿಯೇ ಮುಂದುವರಿದರೆ ಭಾರತ ವಿದೇಶಾಂಗನೀತಿಗೆ ತೊಂದರೆಯುಂಟಾಗುವುದು. ಆದ್ದರಿಂದ ಅಧಿಕಬೆಳೆಯ ಇಲ್ಲಿಯ ವರೆಗಿನ ಕಾರ್ಯಕ್ರಮಗಳನ್ನು ವಿಶದವಾಗಿ ಪರಿಶೀಲಿಸಲು ೧೦ ಸದಸ್ಯರ ಒಂದು ಸಮಿತಿಯನ್ನು ನೇಮಿಸಬೇಕೆಂದು ಡಾ|| ಪುರುಷೋತ್ತಮದಾಸ್‌ರವರು ಪಾರ್ಲಿಮೆಂಟಿನಲ್ಲಿ ಒಂದು ಠರಾವನ್ನು ಮಂಡಿಸಿದರು. ಅನೇಕ ಸದಸ್ಯರು ಇದನ್ನು ಅನುಮೋದಿಸಿ ಮಾತನಾಡಿದರು.

ಕಾಂಗ್ರೆಸ್ ಕಾರ್ಯಕಾರಿ ಸಭೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಭೆಯು ೭ನೇ ತಾರೀಖು ಶನಿವಾರ ದೆಹಲಿಯಲ್ಲಿ ನಡೆಯಲಿದೆ. ಸದಸ್ಯರಲ್ಲದೆ ೧೪ ಖಾಸಗಿ ಮುಖಂಡರಿಗೆ ಆಹ್ವಾನ ಕಳುಹಿಸಲಾಗಿದೆಯೆಂದು ತಿಳಿಯಬರುತ್ತದೆ.

೩೦ ಲಕ್ಷ ರೂ. ಲಾಭ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕಳೆದ ೩ ವರ್ಷಗಳಲ್ಲಿ ೩೦ ಲಕ್ಷ ರೂಪಾಯಿಗಳ ಲಾಭ ಬಂದಿದೆ. ಅಲ್ಲಿ ತಯಾರಾದ ಸಾಮಾನುಗಳನ್ನು ಭಾರತ ನಾನಾ ಭಾಗಗಳಿಗೆ ಸರಬರಾಜು ಮಾಡಲಾಗಿದೆ. ಮುಂದಿನ ಸಾಲಿನಲ್ಲಿ ೧೧ ಲಕ್ಷ ರೂಪಾಯಿಗಳ ಲಾಭ ಬರುವ ನಿರೀಕ್ಷೆಯಿದೆ ಎಂದು ಕೈಗಾರಿಕಾ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ನಿನ್ನೆ ಶಾಸನ ಸಭೆಯಲ್ಲಿ ತಿಳಿಸಿದರು.

ಅಧಿಕಬೆಳೆ ಚಳುವಳಿ ಮುಕ್ತಾಯ

೧೯೫೨ನೇ ಮಾರ್ಚಿ ಅಖೈರಿಗೆ ಅಧಿಕ ಬೆಳೆ ಚಳುವಳಿಯು ಭಾರತದಲ್ಲಿ ಮುಕ್ತಾಯವಾಗುವುದೆಂದು ಆಹಾರಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಭಾರತ ಪಡಿತರಪದ್ಧತಿ ಅತ್ಯುತ್ತಮ

ಭಾರತದಲ್ಲಿರುವ ಆಹಾರ-ಪಡಿತರ ಪದ್ಧತಿಯು ಪ್ರಪಂಚದಲ್ಲೆಲ್ಲಾ ಅತ್ಯುತ್ತಮವಾಗಿದೆ ಎಂದು ಅಮೆರಿಕಾ ಸಂಸ್ಥಾನ ಶಾಖೆಯು ತನ್ನ ವರದಿಯೊಂದರಲ್ಲಿ ತಿಳಿಸಿದೆ.

೮ ಕೋಟಿ ಸ್ತ್ರೀ ಅಭಿಮತಸ್ಥರು

ಬರಲಿರುವ ಮಹಾ ಚುನಾವಣೆಯಲ್ಲಿ ಭಾರತದಲ್ಲಿ ೮ ಕೋಟಿ ಸ್ತ್ರೀಯರು ಅಭಿಮತವನ್ನು ಕೊಡಲಿದ್ದಾರೆ. ಚುನಾವಣೆ ಬಗ್ಗೆ ಇವರುಗಳಿಗೆ ತಿಳುವಳಿಕೆ ಕೊಡಲು ಅ|| ಭಾ|| ಮಹಿಳಾ ಸಮ್ಮೇಳನವು ಭಾರತಾದ್ಯಂತ ಪ್ರಚಾರ ಕಾರ್ಯಕ್ರಮ ಕೈಗೊಳ್ಳಲಿದೆ ಎಂದು ಗೊತ್ತಾಗಿದೆ.

ದರ ಕಡಮೆ ಮಾಡುವುದಿಲ್ಲ

ರೈಲ್ವೆ ನಿಲ್ದಾಣಗಳಲ್ಲಿ ಪ್ಲಾಟ್‌ಫಾರಂ ಟಿಕೆಟ್ಟುಗಳ ದರವನ್ನು ಕಡಮೆ ಮಾಡುವುದಿಲ್ಲವೆಂದು ರೈಲ್ವೆ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರವಿತ್ತರು.

ಧೂಮಪಾನ ನಿಷೇಧ

ನಾಟಕ, ಚಲನಚಿತ್ರ ಮಂದಿರಗಳಲ್ಲಿ ಧೂಮಪಾನ ನಿಷೇಧ ಕಾನೂನನ್ನು ಪಂಜಾಬು ಶಾಸನ ಸಭೆಯು ಅಂಗೀಕರಿಸಿದೆ. ಈಗಾಗಲೇ ಮದರಾಸು, ಪಶ್ಚಿಮ ಬಂಗಾಳ...

ಮೈಸೂರು ಮಂತ್ರಿಮಂಡಲ ಸಮಸ್ಯೆ ಪರಿಹರಿಸಲು ಒಂದು ಹೊಸ ಸಮಿತಿ

ಬೆಂಗಳೂರು ಏ. ೪

ಬೆಂಗಳೂರಿನಲ್ಲಿಂದು ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯ ಸಭೆ ಸೇರಿ ಮೈಸೂರಿನ ಈಗಿನ ಮಂತ್ರಿಮಂಡಲದ ವಿಚಾರದಲ್ಲಿ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದವರಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸಿ, ಅದನ್ನು ಬಗೆಹರಿಸಲು, ಮುಖ್ಯಮಂತ್ರಿ, ಶ್ರೀ ಕೆ ಸಿ. ರೆಡ್ಡಿ [illegible] ಅಧ್ಯಕ್ಷ ಶ್ರೀ ಹನುಮಂತಯ್ಯ, ಮೈಸೂರು ಶಾಸನಸಭೆಯ ಕಾಂಗ್ರೆಸ್ ನಾಯಕ ಶ್ರೀ ಎಸ್. ಚನ್ನಯ್ಯ, ಮತ್ತು ಶ್ರೀ ಟಿ. ಸುಬ್ರಹ್ಮಣ್ಯಂರವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿತೆಂದು ಗೊತ್ತಾಗಿದೆ ಶ್ರೀ ಕೆ. ಸಿ. ರೆಡ್ಡಿಯವರು ಅಸ್ವಸ್ಥತೆಯ ಪ್ರಯುಕ್ತ ಸಭೆಗೆ ಬಂದಿರಲಿಲ್ಲ.

ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕತ್ವ ಬದಲಾವಣೆ, ಮಂತ್ರಿಮಂಡಲದ ಪುನರ್ರಚನೆ ಅಥವಾ ವಿಸ್ತಾರಗೊಳಿಸುವಿಕೆಯ ಅಂಶಗಳು ಸಭೆಯಲ್ಲಿ ಪರಿಶೀಲನೆ ಬಂದವೆಂದೂ, ಬಹುಮಂದಿ ಈಗಿನ ಮಂತ್ರಿಮಂಡಲವು ಇವೇ ರೀತಿ ಅಧಿಕಾರದಲ್ಲಿರುವ ನೀತಿಗೆ ಅತೃಪ್ತಿ ವ್ಯಕ್ತಪಡಿಸಿದರೆಂದೂ, ಸಮಿತಿಯು ಈ ವಿಚಾರದಲ್ಲಿ ಯಾವ ನಿರ್ಧಾರಕ್ಕೂ ಬರದೇ ನಾಲ್ವರ ಸಮಿತಿಗೆ ಸಮಸ್ಯೆಯನ್ನು ಬಗೆಹರಿಸಿ ಒಂದು ನಿರ್ಧಾರಕ್ಕೆ ಬರಲು ಒಪ್ಪಿಸಿದರೆಂದೂ ಗೊತ್ತಾಗಿದೆ. ಶ್ರೀ ರೆಡ್ಡಿಯವರು ಗುಣಮುಖವಾದೊಡನೆ ತೊಡಕಿಗೆ ಒಳಗಾಗಿರುವ ಅಂಶವನ್ನು ವಿಮರ್ಶಿಸಿ ಒಂದು ನಿರ್ಧಾರಕ್ಕೆ ಬರಬಹುದೆಂದೂ ಕೇಳಲಾಗಿದೆ.

—: ಹೊಸ ವರ್ಷದ ಕೊಡುಗೆ :—

* ಒ ಲಿಂ ಪಿ ಯಾ *

೫—೪—೫೧ ರಿಂದ ದಿನವಹಿ ೩ ಆಟಗಳು

ಸದಾ ಹರ್ಷದಾಯಕಳಾದ ಪ್ರಖ್ಯಾತಿ ಚೆಲ್ವಬಾಲೆ

— ಮೀನಾ —

("ಏಕ್—ಥಿ—ಲಡ್ಕಿ 'ಯ "ಲಾರಾಲಪ್ಪಾ ಖ್ಯಾತಿ") ಪಾತ್ರವಹಿಸಿರುವ

ಕ್ವಾಟ್ರಾ ಆರ್ಟ್ಸ್‌ರವರ—

ಏ ಕ್ ತೇ ರಿ ನಿ ಶಾ ನಿ

ಸಹಾಯಕ ಪಾತ್ರ— ತ್ರಿಲೋಕ್ ಕಪೂರ್, ಓಂ ಪ್ರಕಾಶ್, ಕಕ್ಕು, ಶ್ಯಾಮ

ಬೆಳಗಿನ ಪ್ರದರ್ಶನ ೬—೪—೫೧ ರಿಂದ

ನ್ಯೂಥಿಯೇಟರ್ಸ್‌ರವರ — ವಾ ಪ ಸ್ —

ರ ಣ ಜಿ ತ್

೭—೪—೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಪ್ಯಾರ್-ಕಿ-ಮಂಜಿಲ್

ಪಾತ್ರ- ಮುನವರ್ ಸುಲ್ತಾನ, ರೆಹಮಾನ್, ಗೋಪ್, ಕಮಲ ಮತ್ತಿತರರು

ಬೆಳಗಿನ ಪ್ರದರ್ಶನ— ೬-೪-೫೧ರಿಂದ

ಮೆಹಬೂಬ್‌ರವರ—

ಅ ನ್ಮೋ ೞ್ ಘ ಡಿ

ಪಾತ್ರ— ಸುರೇಂದ್ರ, ನೂರ್‌ಜಹಾನ್

ವರ್ಗ

ಸೀನಿಯರ್ ಸಿರಿಕಲ್ಚರ್ ಇನ್ಸ್‌ಪೆಕ್ಟರಾದ ಶ್ರೀ ಎಂ. ಮುದುಡಪ್ಪನವರನ್ನು ಶ್ರೀ ಟಿ. ಕೆ. ಕೃಷ್ಣಮೂರ್ತಿಯವರ ಸ್ಥಾನದಲ್ಲಿ ಸಿರಿಕಲ್ಚರ್ ಅಸಿಸ್ಟೆಂಟ್ ಡೈರೆಕ್ಟರಾಗಿ ಆಕ್ಟ್ ಮಾಡಲು ನೇಮಿಸಲಾಗಿದೆ. ಶ್ರೀ ಟಿ. ಕೆ. ಕೃಷ್ಣಮೂರ್ತಿಯವರು ಜಪಾನ್‌ಗೆ ಡೆಪ್ಯೂಟ್ ಮಾಡಲ್ಪಟ್ಟಿದ್ದಾರೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಕಾಶ್ಮೀರದಿಂದ ಭಾರತ ಸೇನೆಯನ್ನು ಹಿಂತೆಗೆಯುವುದಿಲ್ಲ

ಪಂಡಿತ ನೆಹರೂರವರು ಜಮ್ಮುವಿನಲ್ಲಿ ಭಾಷಣ ಮಾಡುತ್ತಾ, ಸ್ವಸ್ಥಾನದ ರಕ್ಷಣೆಗ ಇರಬೇಕೆಂದು ಜನರು ಇಚ್ಛಿಸುವವರೆಗೂ ಭಾರತ ಸೇನೆಯನ್ನು ಜಮ್ಮು ಮತ್ತು ಕಾಶ್ಮೀರದಿಂದ ಹಿಂತೆಗೆಯುವುದಿಲ್ಲ ತಮ್ಮ ಬಾಧ್ಯತೆಯನ್ನು ನಿರ್ವಹಿಸುವ ಈ ಕಾರ್ಯದಿಂದ ಯಾವ ರಾಷ್ಟ್ರವಾಗಲೀ ವಿಮುಖರನ್ನಾಗಿ ಮಾಡಲು ಅಡ್ಡಿಪಡಿಸುವ ಪ್ರಶ್ನೆಯೇ ಏಳುವುದಿಲ್ಲ ಎಂದು ತಿಳಿಸಿದರು. ಜಮ್ಮು ಮತ್ತು ಕಾಶ್ಮೀರದವರಲ್ಲದೆ ಇಡೀ ಭಾರತ ಜನತೆ ಪ್ರಜಾ ಸತ್ತೆಯ ಅಸ್ತಿಭಾಗಗಳನ್ನು ಭದ್ರಪಡಿಸಲೆತ್ನಿಸುವ ಕೆಲವರ ಮನಸ್ಸಂತೋಷ ಪಡಿಸಲು ತಾವು ಇತಿಹಾಸ ಚಕ್ರವನ್ನು ಹಿಂತಿರುಗಿಸಿ ಮಹಾರಾಜರನ್ನು ಹಿಂದಕ್ಕೆ ಕರೆಯುವುದಿಲ್ಲ ಎಂದೂ ಹೇಳಿದರು.

ರಾಷ್ಟ್ರಾಧ್ಯಕ್ಷರಿಗೆ ಪೌರಸಭೆಯ ಸನ್ಮಾನ

ಮೈಸೂರಿಗೆ ಡಾ|| ರಾಜೇಂದ್ರ ಪ್ರಸಾದರು ರಾಷ್ಟ್ರಾಧ್ಯಕ್ಷರಾದ ಮೇಲೆ ಮೊದಲನೆಯ ಸಲ ಮೈಸೂರಿಗೆ ಇದೇ ತಿಂಗಳು ೯ನೇ ತಾರೀಖು ಸೋಮವಾರ ದಯಮಾಡಿಸುವರು. ಆ ದಿವಸ ಸಂಜೆ ೪|| ಗಂಟೆಗೆ ಟವನ್ ಹಾಲಿನಲ್ಲಿ ರಾಷ್ಟ್ರಾಧ್ಯಕ್ಷರಿಗೆ ಪೌರಸ್ವಾಗತವನ್ನೀಯಲಾಗುವುದು. ಸಮಾರಂಭಕ್ಕೆ ಪುರಜನರಿಗೆಲ್ಲಾ ಆದರದ ಆಹ್ವಾನವಿದೆ. ನಗರನಿವಾಸಿಗಳೆಲ್ಲಾ ಅರ್ಧ ಗಂಟೆ ಮುಂಚೆ ಅಲ್ಲಿಗೆ ದಯಮಾಡಿಸಿ ಸಮಾರಂಭವು ಯಶಸ್ವಿಯಾಗುವಂತೆ ಪೌರಸಭೆಯವರೊಡನೆ ಸಹಕರಿಸಬೇಕೆಂದು ಪೌರಸಭಾಧ್ಯಕ್ಷರು ಪ್ರಾರ್ಥಿಸುತ್ತಾರೆ.

ಶಿರಾದಲ್ಲಿ ಘರ್ಷಣೆ

ಶಿರಾದಲ್ಲಿ ರೇಷನಿಂಗ್ ಅಧಿಕಾರಿಗಳು ಯುಗಾದಿ ಹಬ್ಬಕ್ಕಾಗಿ ಒಟ್ಟೆಯನ್ನು ಹಂಚುತ್ತಿದ್ದಾಗ ಕಾನ್ ಸ್ಟೇಬಲ್‌ನೊಬ್ಬನು ನುಗ್ಗುತ್ತಿದ್ದ ಜನರಿಗೆ ಲಾಠಿಯಿಂದ ಬಲವಾಗಿ ಹೊಡೆದ ಫಲವಾಗಿ ೮ ಜನರಿಗೆ ಘಾಯಗಳಾದವು. ಕೂಡಲೇ ಪೋಲೀಸ್ ಇನ್ಸ್‌ಪೆಕ್ಟರ್ ಇತರರೂ ಸ್ಥಳಕ್ಕೆ ಬಂದು ಗಲಾಟೆ ತಹಬಂದಿಗೆ ತಂದರು.

ಮೌ|| ಆಜಾದ್ ಲಂಡನ್ನಿಗೆ

ಬ್ರಿಟನ್ನಿನ ಶೈಕ್ಷಣಿಕ ವ್ಯವಸ್ಥೆಯನ್ನು ಪರಿಶೀಲಿಸಲು ಭಾರತದ ವಿದ್ಯಾ ಸಚಿವ ಮೌ|| ಅಬ್ದುಲ್ ಕಲಾಂ ಆಜಾದ್‌ರವರು ಮೇ ೨ರಂದು ಬ್ರಿಟನ್ನಿಗೆ ತೆರಳುವರು. ಅನಂತರ ಅಲ್ಲಿಂದ ಪ್ಯಾರಿಸ್ಸಿಗೆ ತೆರಳಿ ಸಂಯುಕ್ತ ರಾಷ್ಟ್ರ ಪರಿಷತ್ತಿನ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘದ ಮಹಾಧಿವೇಶನದಲ್ಲಿ ಭಾಗವಹಿಸುವರು. ಹಾಗೆಯೇ ಅವರು ಟರ್ಕಿ ಇರಾನ್‌ಗಳಿಗೂ ಭೇಟಿ ಕೊಡಲಿದ್ದಾರೆ.

ಶ್ರೀ ಸೋಮನಾಥ ಐಯ್ಯರ್ ದೆಹಲಿಗೆ

ಮೈಸೂರಿನ ಅಡ್ವೋಕೇಟ್ ಜನರಲ್ಲರಾದ ಶ್ರೀ ಸೋಮನಾಥ ಐಯ್ಯರ್‌ರವರು ಕೆಲವು ಶಾಸನ ಸಂಬಂಧವಾಗಿ ಭಾರತದ ಅಧ್ಯಕ್ಷರು ಸುಪ್ರೀಂ ಕೋರ್ಟಿನ ಅಭಿಪ್ರಾಯ ಕೇಳಿರುವ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಕೊಡಲು ಇದೇ ೮ನೇ ತಾರೀಖು ದೆಹಲಿಗೆ ತೆರಳುವರು. ಎಲ್ಲಾ ಸುಪ್ರೀಂ ಮತ್ತು ಹೈಕೋರ್ಟು ಜನರಲ್ಲುಗಳನ್ನು ಆಹ್ವಾನಿಸಲಾಗಿದೆ.

ಆಹಾರ ಧಾನ್ಯ ಖೋತಾ

ದೆಹಲಿ ಏ. ೪

ಈ ದಿನ ಪಾರ್ಲಿಮೆಂಟಿನಲ್ಲಿ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಒಂದೆ ಪ್ರಶ್ನೆಗೆ ಲಿಖಿತ ಉತ್ತರ ಕೊಡುತ್ತಾ, ೧೯೫೧ರಲ್ಲಿ ಸರ್ಕಾರವು ವಿವಿಧ ಪ್ರಾಂತಗಳಿಗೆ ೯೦ ಲಕ್ಷ ಟನ್ ಆಹಾರ ಧಾನ್ಯ ಒದಗಿಸಬೇಕೆಂದೂ, ೨೫ ಲಕ್ಷ ಟನ್ ಆಹಾರ ಶೇಖರವಾಗುವಂತಿರುವುದರಿಂದ 55 ಲಕ್ಷ ಟನ್ ಖೋತಾ ಬರುವುದೆಂದೂ ಇದಲ್ಲದೆ ವರ್ಷಾಂತ್ಯದಲ್ಲಿ ೯ ಲಕ್ಷ ಟನ್ ಆಹಾರವನ್ನು ಸರ್ಕಾರದ ದಾಸ್ತಾನಿಗೆ ಸೇರಿಸಬೇಕಾಗುವುದೆಂದೂ ತಿಳಿಸಿದರು.

ಭಾರತಾದ್ಯಂತ ಒಂದೇ ದರ

ರೈಲ್ವೆ ಶಾಖೆಯ ಉಪ ಸಚಿವ ಶ್ರೀ ಸಂತಾನಂರವರು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ರೈಲ್ವೆಗಳ ಕೆಲವು ಭಾಗಗಳಲ್ಲಿ ಜಾರಿಯಲ್ಲಿರುವ ಹೆಚ್ಚಿನ ದರಗಳನ್ನು ಸರ್ವತ್ರವಾಗಿ ಜಾರಿಯಲ್ಲಿಯ ಮಟ್ಟಕ್ಕೆ ತರುವ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದರು. ಕೆಲವೆಡೆಗಳಲ್ಲಿ ರೈಲ್ವೆ ನಿರ್ಮಾಣದ ಅತಿ ವೆಚ್ಚ, ಪರ್ವತ ಪ್ರದೇಶಗಳ ರೈಲ್ವೆಗಳಲ್ಲಿಯೂ, ಸಣ್ಣ ರೈಲ್ವೆಗಳಲ್ಲಿಯೂ, ಕಾರ್ಯನಿರ್ವಾಹಕ್ಕೆ ತಗಲುವ ಖರ್ಚು ದುಬಾರಿಯಾಗಿರುವುದರಿಂದ ಅಲ್ಲಿ ಈ ರೀತಿಯಾಗಿ ಹೆಚ್ಚು ದರ ಜಾರಿಯಲ್ಲಿದೆ ಎಂದು ಹೇಳಿದರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬—೪—೧೯೫೧ನೇ ಶುಕ್ರವಾರ [ಸಂಚಿಕೆ ೧೭೬

ಸಮಾಲೋಚನೆ

ಪ್ರಾಂತ್ಯಗಳಲ್ಲಿ ನಡೆಯಲಿರುವ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಸಮಾಲೋಚನ ನಡೆಸಲು ಆ ಯೋಜನಾ ಮಂಡಲಿಯು ಎಲ್ಲಾ ಪ್ರಾಂತ್ಯ ಸರ್ಕಾರಗಳೊಡನೆ ಚರ್ಚೆ ನಡೆಸಲಿದೆ. ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಈ ಸಮಾಲೋಚನೆಯಲ್ಲಿ ಭಾಗವಹಿಸಲಿರುವರು.

ಉತ್ಕಟ ಪರಿಸ್ಥಿತಿ

ಮಂಚೂರಿಯಾ ಗಡಿಯಲ್ಲಿ ಉತ್ತರ ಕೊರಿಯಾ ಚೈನಾ ಸೈನ್ಯಗಳಲ್ಲಿ ಬೇರೆ ರಾಷ್ಟ್ರಕ್ಕೆ ಸೇರಿದ ಸೈನ್ಯಗಳ ಜಮಾವಣೆಯು ವಿಶೇಷವಾಗಿ ನಡೆಯುತ್ತಾ ಪರಿಸ್ಥಿತಿಯು ಉತ್ಕಟವಾಗುತ್ತಲಿರುವುದಾಗಿ ವರದಿಯಾಗಿದೆ.

ಬಟ್ಟೆ, ನೂಲಿನ ಬೆಲೆ ಏರಿತು

ಸಂಸ್ಥಾನದಲ್ಲಿ ಅಕ್ಕಿ ಪಡಿತರವನ್ನು ೮ ಔನ್ಸು ಗಳಿಗೇರಿಸಲು ಕೇಂದ್ರಕ್ಕೆ ಮನವಿ

ಬಟ್ಟೆ ಮತ್ತು ನೂಲಿನ ಬೆಲೆಯನ್ನು ಸರ್ಕಾರವು ಏರಿಸಿರುವುದಾಗಿ ತಿಳಿಯಬರುತ್ತದೆ. ಒರಟು ಬಟ್ಟೆ ದರ ಶೇ. ೭-೪ ರಷ್ಟು, ನಾಜೂಕು ಬಟ್ಟೆ ದರ ಶೇ. ೩೩ ರಿಂದ ೩೫ ರಷ್ಟು ಹೆಚ್ಚಿಸಲಾಗಿದೆ. ನೂಲಿನ ಬೆಲೆಯನ್ನು ಇದೇ ರೀತಿ ಏರಿಸಲಾಗಿದೆ.

ಅಕ್ಕಿ ಪಡಿತರ ಹೆಚ್ಚಿಸಲು ಮನವಿ

ಬೆಂಗಳೂರು ಏ. ೫

ಇಂದಿನ ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ದಾಸಪ್ಪನವರು ಸರ್ಕಾರದ ಏಹಿತಿಯನ್ನಿ ಆಡಿಟ್‌ಸಿಬ್ಬಂದಿಯ ಕಾರ್ಯಚಟುವಟಿಕೆಗಳಿಗೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರಕೊಡುತ್ತಾ, ಸರ್ಕಾರದ ನಾನಾ ಇಲಾಖೆಗಳ ಕಚೇರಿಗಳಲ್ಲಿ ಎಹಿತಿಯನ್ನಿ ಆಡಿಟ್ ಕೆಲಸ ನಡೆದಿದೆಯೆಂದೂ, ಸರ್ಕಾರಕ್ಕೆ ನಷ್ಟ ಕಂಡುಬಂದಲ್ಲಿ ಆಯಾ ಇಲಾಖೆ ಮುಖ್ಯಾಧಿಕಾರಿಗಳ ಮೂಲಕ ನಷ್ಟವಾದ ಹೊಣಗಳನ್ನು ವಸೂಲು ಮಾಡಲು ಅಲ್ಲಲ್ಲಿ ಸೂಕ್ತವಾದ ಕ್ರಮ ತೆಗೆದುಕೊಳ್ಳಲಾಗುತ್ತಿದೆಯೆಂದೂ, ಇನ್ಸ್‌ಪೆಕ್ಷನ್ ಕಾಲದಲ್ಲಿ ಅಕ್ರಮಗಳು ಕಂಡುಬಂದಲ್ಲಿ ಅವನ್ನು ಆಯಾ ಇಲಾಖೆಯ ಮುಖ್ಯಾಧಿಕಾರಿಗಳ ಗಮನಕ್ಕೆ ತಂದು ಅಕ್ರಮಗಳನ್ನು ಸರಿಪಡಿಸಲು ಸಬಾರ್ಡಿನೇಟ್ ಅಧಿಕಾರಿಗಳು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಇಲಾಖಾ ಮುಖ್ಯಾಧಿಕಾರಿಗಳು ಸರ್ಕ್ಯುಲರ್ ಹೊರಡಿಸುವಂತೆ ಸರ್ಕಾರದ ಯೋಜನೆಯಾಗಿದೆಯೆಂದೂ, ಅಕ್ರಮಗಳಿಗೆ ಕಾರಣರಾದಂಥ ಅಧಿಕಾರಿಗಳ ಮೇಲೂ, ನೌಕರರುಗಳ ಮೇಲೂ ಸೂಕ್ತಕ್ರಮ ಕೈಕೊಳ್ಳಲಾಗಿದೆಯೆಂದೂ ತಿಳಿಸಿದರು.

ನಂತರ ಮದರಾಸಿನಲ್ಲಿ ಏಪ್ರಿಲ್ ೨ ರಿಂದ ಅಕ್ಕಿ ಪ್ರಮಾಣವನ್ನು ೬ ಔನ್ಸುಗಳಿಂದ ೮ ಔನ್ಸುಗಳಿಗೆ ಹೆಚ್ಚಿಸಿರುವಂತೆ ಮೈಸೂರು ಸಂಸ್ಥಾನದಲ್ಲಿ, ಹೆಚ್ಚಾಗುವುದಿಲ್ಲವೆ? ಎಂದು ಕೇಳಿದ ಶ್ರೀ ಎ. ಎಸ್. ನಾರಾಯಣರಾಯರ ಪ್ರಶ್ನೆಗೆ ಆಹಾರ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಉತ್ತರಕೊಡುತ್ತಾ, ತಾವು ಕೆಲವು ಪತ್ರಿಕೆಗಳಲ್ಲಿ ಮದ್ರಾಸಿನ ಸಚಿವರು ಹಾಗೆ ಹೇಳಿರುವುದು ವರದಿಯಾಗಿರುವುದನ್ನು ನೋಡಿದುದಾಗಿಯೂ, ಮೈಸೂರು ಸಂಸ್ಥಾನದಲ್ಲೂ ಅಕ್ಕಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಪ್ರಯತ್ನ ಪಡುತ್ತಿರುವುದಾಗಿಯೂ, ಈಗ ಸಂಸ್ಥಾನದಲ್ಲಿ ಕೊಡುತ್ತಿರುವ ಅಕ್ಕಿಯ ಪ್ರಮಾಣ ಬಹಳ ಕಮ್ಮಿಯಾಗಿರುವುದೆಂದೂ, ಇನ್ಯಾವ ಸಂಸ್ಥಾನದಲ್ಲೂ ಇಷ್ಟು ಕಡಿಮೆ ಪ್ರಮಾಣದಲ್ಲಿ ಅಕ್ಕಿಯನ್ನು ಕೊಡುತ್ತಿಲ್ಲವೆಂದೂ ಪ್ರಮಾಣವನ್ನು ೮ ಔನ್ಸುಗಳಿಗೆ ಹೆಚ್ಚಿಸುವುದು ಆಗತ್ಯವೆಂದೂ ಮೈಸೂರು ಸರ್ಕಾರ ಕೇಂದ್ರವನ್ನು ಕೇಳಿರುವುದೆಂದೂ, ಇನ್ನು ೨೫೦೦೦ ಟನ್ ಹೆಚ್ಚು ಅಕ್ಕಿ ಕೊಡಬೇಕೆಂದು ಒತ್ತಾಯಪಡಿಸಿರುವುದಾಗಿಯೂ ಹೇಳಿದರು.

ಈ ವರ್ಷ ಬೆಂಗಳೂರಿನಲ್ಲಿ ಮೇ ಮತ್ತು ಜೂನ್‌ನಲ್ಲಿ ಕುದುರೆ ಪಂದ್ಯಗಳು ನಡೆಯಲು ಇರುವ ಕಷ್ಟಗಳನ್ನು ಶ್ರೀ ದಾಸಪ್ಪನವರು ವಿವರಿಸಿದರು.

ಅನಂತರ ಮಸೂದೆಗಳ ಪರಿಶೀಲನೆ ಮುಂದುವರೆಸಲ್ಪಟ್ಟು ಆರೋಗ್ಯ ಸೆಸ್ ವಿಧಿಸುವ ಮಸೂದೆ ಮತ್ತು ಸಿನಿಮಾ ಮನರಂಜನೆಗಳ ಹೆಚ್ಚಿನ ತೆರಿಗೆ ವಿಧಿಸುವ ಮಸೂದೆ ಇವುಗಳು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಇಂದಿಗೆ ಶಾಸನ ಸಭೆಯ ಅಧಿವೇಶನವು ಮುಕ್ತಾಯವಾಯಿತು.

ವಿರೋಧ ಚಳುವಳಿ

ಆಂಗ್ಲೊ ಅಮೆರಿಕನ್ ನಿರ್ಣಯವನ್ನು ವಿರೋಧಿಸಿ ಪ್ರದರ್ಶನಗಳು ಕಾಶ್ಮೀರದಲ್ಲೆಲ್ಲಾ ಹೆಚ್ಚುತ್ತಲಿವೆ.

ಅಡ್ಡಿ ಆತಂಕವಿಲ್ಲ

ಬರಲಿರುವ ಮಹಾ ಚುನಾವಣೆಗಳಲ್ಲಿ ಯಾವ ಅಡ್ಡಿ ಆತಂಕಗಳನ್ನು ಒಡ್ಡುವುದಕ್ಕೂ ಸರ್ಕಾರದ ಇಷ್ಟವಿಲ್ಲ. ಹಿಂಸಾತ್ಮಕ ತತ್ವಗಳನ್ನು ಬಿಟ್ಟು ಎಲ್ಲ ಪಕ್ಷದವರೂ ಸ್ವತಂತ್ರ ಚುನಾವಣೆ ನಡೆಯಲು ಸಹಕರಿಸಬೇಕೆಂದು ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಸೂಚನೆ

ತಾ॥ ೭—೪—೧೯೫೧ನೇ ಶನಿವಾರ ಚಾಂದ್ರಮಾನ ಯುಗಾದಿ ಪ್ರಯುಕ್ತ "ಸಮಾಚಾರ" ಪತ್ರಿಕೆ ಹೊರಡುವುದಿಲ್ಲ.

ವ್ಯವಸ್ಥಾಪಕ.

ರಾಷ್ಟ್ರಗಳ ಸಮಾಲೋಚನೆ

ಕೊರಿಯಾ ಯುದ್ಧದಲ್ಲಿ ವಿಶ್ವಸಂಸ್ಥೆಗೆ ಸೈನ್ಯ ಸಹಾಯ ನೀಡುತ್ತಲಿರುವ ೧೬ ರಾಷ್ಟ್ರಗಳು ಕೊರಿಯಾ ಯುದ್ಧ ಪರಿಸ್ಥಿತಿಯನ್ನು ಚರ್ಚಿಸಲು ಸಮಾಲೋಚನೆಗೆ ಸೇರಿವೆ.

ಮಧ್ಯಸ್ಥಿಕೆಗಾರರನ್ನು ಬಹಿಷ್ಕರಿಸುವುದೇ ?

ಪ್ರಪಂಚ ಸಂಸ್ಥೆಯಿಂದ ಕಾಶ್ಮೀರಕ್ಕೆ ಬರುವ ಮಧ್ಯಸ್ಥಿಕೆಗಾರರನ್ನು ಕಾಶ್ಮೀರದ ಪ್ರಜೆಗಳು ಬಹಿಷ್ಕರಿಸುವರೆಂದು ಹೇಳಲಾಗಿದೆ. ಈಗಿನ ಷೇಕ್ ಅಬ್ದುಲ್ಲಾ ಸರ್ಕಾರವು ಮಧ್ಯಸ್ಥಿಕೆಗಾರರಿಗೆ ಯಾವ ಅನುಕೂಲಗಳನ್ನು ಒದಗಿಸುವುದಿಲ್ಲವೆಂದೂ, ಅವರಿಗೆ ವಸತಿಯನ್ನು ಸಹ ಏರ್ಪಡಿಸಲು ಇಚ್ಛಿಸುತ್ತಿಲ್ಲವೆಂದೂ ಹೇಳಲಾಗಿದೆ.

ಐದು ಜನರ ದಸ್ತಗಿರಿ

ಅಂಬಾಲ ಜಿಲ್ಲೆಯ ರೂಪರ್ ಎಂಬ ಗ್ರಾಮದಲ್ಲಿ ಎರಡು ಆಟೋಮ್ಯಾಟಿಕ್ ಬಂದೂಕುಗಳನ್ನು ತಯಾರಿಸಿದ್ದ ೫ ಜನರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಭಾರತದ ಮಕ್ಕಳಿಗಾಗಿ ಅಕ್ಕಿ

ಭಾರತದ ಮಕ್ಕಳಿಗಾಗಿ ಪ್ರಪಂಚ ಸಂಸ್ಥೆಯು ೨೦೦೦ ಟನ್ ಅಕ್ಕಿಯನ್ನು ಕಳುಹಿಸಲು ನಿರ್ಧರಿಸಿದೆ. ಥಾಯ್‌ಲ್ಯಾಂಡಿನಿಂದ ಈಗಾಗಲೇ ೧೪೪೩ ಟನ್ ಹೊತ್ತ ಹಡಗು ಮದರಾಸಿಗೆ ಹೊರಟಿದೆ.

ಬಿಡುಗಡೆ

ಮದರಾಸಿನ ಕಮ್ಯೂನಿಸ್ಟ್ ಶ್ರೀ ಮೋಹನಕುಮಾರ ಮಂಗಳಂರವರನ್ನು ಬಂಧಿಸಿದ್ದು ನ್ಯಾಯವಿರುದ್ಧವೆಂದು ಭಾರತ ಶ್ರೇಷ್ಠ ನ್ಯಾಯಾಲಯವು ಅವರನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಿದೆ.

ಉಪವಾಸ ಪ್ರಾರಂಭ

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದವನ್ನು ಪ್ರತಿಭಟಿಸಿ, ಮಹಾತ್ಮ ಗಾಂಧಿಯವರ ಪುತ್ರ ಶ್ರೀ ಮಣಿಲಾಲ್ ಗಾಂಧಿಯವರು ಒಂದು ಪಕ್ಷದ ಉಪವಾಸವನ್ನು ಪ್ರಾರಂಭಿಸಿರುವರು.

ಮುಂದುವರೆಯಿತು

ಮುಖ್ಯ ನ್ಯಾಯಾಧೀಶರಿಗೆ ವಿಷಪ್ರಾಶನ ಯತ್ನ ನಡೆಸಿದರೆಂದು ಆಪಾದಿಸಲ್ಪಟ್ಟಿರುವ ಶ್ರೀ ಎಲ್. ಎಸ್. ರಾಜು ಮತ್ತಿತರ ನಾಲ್ವರ ಮೇಲಿನ ಮೊಕದ್ದಮೆ ೯ನೇ ತಾರೀಖಿಗೆ ಮುಂದುವರಿದಿದೆ. ಶ್ರೀ ಎಲ್. ಎಸ್. ರಾಜುರವರ ಮೇಲಿನ ಉಳಿದೆರಡು ಮೊಕದ್ದಮೆಗಳೂ ೯ನೇ ತಾರೀಖಿಗೆ ಮುಂದುವರಿದಿದೆ.

ದಿ|| ಸರ್ದಾರ್‌ರವರ ಸ್ಮರಣೆ

ನವದೆಹಲಿ ಏ. ೫

ಪಾರ್ಲಿಮೆಂಟ್ ಸಭೆಯು ಇಂದು ಗೃಹ ಶಾಖೆಯು ಕೋರಿರುವ ೭೬೨೩೧೦೦೦ ರೂ. ಗಳ ಗ್ರಾಂಟ್ ಬಗ್ಗೆ ಚರ್ಚೆಯನ್ನಾರಂಭಿಸಿದಾಗ ಸದಸ್ಯರುಗಳು ದಿವಂಗತ ಸರ್ದಾರ್ ಪಟೇಲರು ರಾಷ್ಟ್ರಕ್ಕೆಸಗಿರುವ ಅಪಾರ ಸೇವೆಯ ಬಗ್ಗೆ ತಮ್ಮ ಅಭಿನಂದನೆಗಳನ್ನರ್ಪಿಸಿದರು.

ವಿಂಧ್ಯ ಪ್ರದೇಶದ ಕ್ಯಾಪ್ಟನ್ ಅವಧೇಶ್ ಪ್ರತಾಪ್‌ಸಿಂಗ್‌ರವರು ಮಾತನಾಡಿ ಪೋಲೀಸ್ ಇಲಾಖೆಯ ದಕ್ಷತೆಯನ್ನು ಹೆಚ್ಚಿಸಬೇಕು ಎಂದು ತಿಳಿಸಿದರು.

"ದೇಶದಲ್ಲಿನ ವಿಧ್ವಂಸಕ ಸಂಗಡಗಳನ್ನು ಮಟ್ಟಹಾಕಲು ಸಂಯುಕ್ತ ಯೋಜನೆಯೊಂದನ್ನು ತಯಾರಿಸುವುದು ಅವಶ್ಯಕ" ವೆಂದು ಶ್ರೀ ಬಾರ್ಗಾವಾರವರು ತಿಳಿಸಿದರು.

ಶ್ರೀ ಕಾಮತ್‌ರವರು ಕತ್ತರಿ ಪ್ರಯೋಗವೊಂದನ್ನು ತಂದು ಭಾರತ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ ಮಡಿದವರ ಸಂಸಾರಗಳಿಗೆ ಸರ್ಕಾರ ಪರಿಹಾರ ಕೊಡಬೇಕು ಎಂದು ತಿಳಿಸಿದರು.

ಐ. ಎ. ಎಸ್. ಮತ್ತಿತರ ಸರ್ವಿಸ್‌ಗಳಿಗೆ ನಡೆಯುವ ಆಯ್ಕೆಯಲ್ಲಿ ಮಹಿಳೆಯರಿಗೂ ಸರಿಸಮಾನ ಹಕ್ಕು ಕೊಡಬೇಕೆಂದು ಶ್ರೀ ದುರ್ಗಾಬಾಯಿಯವರು ತಿಳಿಸಿದರು. ಅಲ್ಲದೆ ಸರ್ಕಾರಿ ಕೆಲಸಗಳಿಗೆ ಸೇರಿಸಿಕೊಳ್ಳುವಾಗ ಕೋಮುವಾರು ಭೇದ ಭಾವನೆ ತೋರಿಸಕೂಡದೆಂದು ತಿಳಿಸಿದರು.

೪೦ ಕೋಟಿ ರೂ. ಚಿನ್ನ ಸಾಗಾಣಿಕೆ

ಕಳೆದ ವರ್ಷದಲ್ಲಿ ೪೦ ಕೋಟಿ ರೂ. ಗಳ ಬೆಲೆಬಾಳುವಷ್ಟು ಚಿನ್ನದ ಕಳ್ಳತನದ ಸಾಗಾಣಿಕೆ ಪ್ರಯತ್ನ ನಡೆದಿದೆ ಎಂದೂ ಅದನ್ನು ಸುಂಕದ ಅಧಿಕಾರಿಗಳು ಪತ್ತೆ ಹಚ್ಚಿ ಉಳಿಸಿದ್ದಾರೆಂದು ಭಾರತ ಸರ್ಕಾರದ ವರದಿಯೊಂದು ತಿಳಿಸಿದೆ.

ಸೈನ್ಯ ವಿಸ್ತರಣೆಗೆ

ಅಮೆರಿಕಾ ಸೈನ್ಯ ವಿಸ್ತರಣೆಗೆ ಅಧ್ಯಕ್ಷ ಟ್ರೂಮನ್ನರು ಇನ್ನೂ ೬೪೨ ಕೋಟಿ ೩೦ ಲಕ್ಷ ಡಾಲರುಗಳ ಹಣವನ್ನು ಕೇಳಿದ್ದಾರೆ. ಈಗಾಗಲೇ ೪೧೦೯ ಕೋಟಿ ಡಾಲರುಗಳು ಮಂಜೂರಾಗಿವೆ

ಮರಣ

ಕುಚ್‌ಬಿಹಾರ್‌ನ ಯುವರಾಜರ ಅರಮನೆಗೆ ಬೆಂಕಿ ಹತ್ತಿ, ಅವರು ಜೀವಸಹಿತ ಬೆಂಕಿಯಲ್ಲಿ ಸಿಕ್ಕಿ ಸುಟ್ಟುಹೋದರು.

ರಷ್ಯಾಕ್ಕೆ ನಿಯೋಗ

ರಷ್ಯಾವು ಭಾರತದಿಂದ ಸಾಂಸ್ಕೃತಿಕ ಬಾಂಧವ್ಯಕ್ಕಾಗಿ ನಿಯೋಗವೊಂದನ್ನು ಕಳುಹಿಸಬೇಕೆಂದು ಕೇಳಿದೆ. ಈತಿಂಗಳು ಕೊನೆಯ ಹೊತ್ತಿಗೆ ಈ ನಿಯೋಗವು ರಷ್ಯಾಕ್ಕೆ ತೆರಳಿ ಅಲ್ಲಿ ನಾಲ್ಕು ವಾರಗಳ ಕಾರ್ಯಕ್ರಮವನ್ನಿಟ್ಟುಕೊಂಡಿದೆ.

ಸಿಕಂದರಾಬಾದಿನಲ್ಲಿ ಆಚಾರ್ಯ ವಿನೋಬ ಭಾವೆ

ಹೈದರಾಬಾದ್ ಸಂಸ್ಥಾನದಲ್ಲಿ ನಡಿಗೆಯ ಪ್ರವಾಸ ಹೊರಟಿರುವ ಆಚಾರ್ಯ ವಿನೋಬ ಭಾವೆಯವರು ವಾರ್ಧಾದಿಂದ ಇಲ್ಲಿಗೆ ೩೫೦ ಮೈಲಿಗಳನ್ನು ೨೮ ದಿನಗಳಲ್ಲಿ ನಡೆದು ಬಂದರು. ಅವರು ತಮ್ಮ ಪ್ರವಾಸದಲ್ಲಿ ಹಲ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣಗಳನ್ನು ಮಾಡಿರುವರು.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರು ಮದರಾಸು, ಮೈಸೂರು ಪ್ರಾಂತ್ಯಗಳ ಪ್ರವಾಸಕ್ಕಾಗಿ ಇಂದು ಬೆಳಗ್ಗೆ ದೆಹಲಿಯಿಂದ ಹೊರಟರು.

ಭಾರತಕ್ಕೆ ಬೇಡ

ಕೆನಡಾವು ಭಾರತಕ್ಕೆ ಕೊಡಲು ಸಿದ್ಧವಿದ್ದ ಕಡಮೆ ದರ್ಜೆಯ ಗೋಧಿಯು ಭಾರತಕ್ಕೆ ಬೇಕಾಗಿಲ್ಲವೆಂದು ಕೆನಡಾ ಸರ್ಕಾರಕ್ಕೆ ಭಾರತವು ತಿಳಿಸಿದೆ

ರಾಜಾಜಿಯವರ ಕ್ಷಮಾಯಾಚನೆ

ಪಾರ್ಲಿಮೆಂಟಿನಲ್ಲಿ ನಿನ್ನೆ ಗೃಹಸಚಿವ ಶ್ರೀ ರಾಜಗೋಪಾಲಚಾರಿಯವರು ಚರ್ಚೆಯಲ್ಲಿ ಉತ್ತರಕೊಡುತ್ತಿದ್ದಾಗ ಗೊತ್ತಾದ ಕಾಲಕ್ಕಿಂತಲೂ ೧೫ ನಿಮಿಷ ಹೆಚ್ಚಿಗೆ ಮಾತನಾಡಿದರೆಂಬ ಆಕ್ಷೇಪಣೆಗೆ ಉತ್ತರಕೊಡುತ್ತಾ ತಾವು ಸಭೆಯವರ ಕ್ಷಮಾಪಣೆಯನ್ನು ಕೇಳುವುದಾಗಿಯೂ ತಾವು ಹೇಳಬೇಕಾದುದು ಏನೂ ಇಲ್ಲವೆಂದೂ, ಕಾರ್ಮಿಕ ಸಚಿವರು ೫೦೦೦೦ ಮಹಿಳೆಯರಿಗೆ ಉದ್ಯೋಗ ದೊರಕಿಸಿ ೨೦ ಸಾವಿರ ಜನರಿಗೆ ಪುನರ್ವಸತಿ ಕಲ್ಪಿಸಿರುವುದಾಗಿ ಹೇಳಿದರೆ ತಾವು ಅನೇಕರನ್ನು ಜೈಲಿಗೆ ಹಾಕಿದ್ದೇವೆಂದು ಹೇಳಬೇಕು, ಒಟ್ಟಿನಲ್ಲಿ ತಮಗೆ ಕೊಟ್ಟಿರುವ ಉದ್ಯೋಗ ಒಬ್ಬ ಜವಾನಮಾಲಿಯು ಕೆಲಸದಂತಹುದು ಎಂದರು.

ನಿಮ್ನ ವರ್ಗದವರ ಹಿತರಕ್ಷಣೆಗೆ ಭರವಸೆ

ದೆಹಲಿ ಏ. ೫

ಭಾರತದ ಪಾರ್ಲಿಮೆಂಟಿನಲ್ಲಿಂದು ಗೃಹ ಸಚಿವ ಶಾಖೆಯು ೭೬.೩ ಕೋಟಿ ರೂ. ಕಾರ್ಮಿಕ ಸಚಿವ ಶಾಖೆಯು ೨೦.೪೦ ಲಕ್ಷ ರೂ. ಗಳ ಬೇಡಿಕೆಯನ್ನು ಅನುಮೋದಿಸಲಾಯಿತು. ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಮುಂಬರುವ ಮಹಾ ಚುನಾವಣೆ ಎಲ್ಲಾ ದೃಷ್ಟಿಯಿಂದಲೂ ಸ್ವತಂತ್ರವಾಗಿ ನಡೆಯಬಹುದೆಂದು ಹೇಳಬಹುದು, ಎಲ್ಲಾ ರಾಜಕೀಯ ಪಕ್ಷಗಳವರೂ ಚುನಾವಣೆಯಲ್ಲಿ ಯಾವ ರೀತಿಯಲ್ಲೂ ಧಕ್ಕೆ ಬರದಂತಹ ರೀತಿಯಲ್ಲಿ ಸಹಕರಿಸಬೇಕು ಎಂದರು.

ನಿಮ್ನ ವರ್ಗದ, ಗುಡ್ಡ ನಾಡಿನ ಜನರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿ ಅವರನ್ನು ಸೂಕ್ತ ರೀತಿಯಲ್ಲಿ ರಕ್ಷಿಸಲಾಗುವುದೆಂದು ಹೇಳಿದರು.

ಹಿಂದುಳಿದವರ ಪಂಗಡದ ಒಂದು ಸಮಿತಿಯನ್ನು ಜನಗಣತಿ ಲೆಖ್ಖ ದೊರೆತೊಡನೇ ನೇಮಿಸಲಾಗುವುದೆಂದು ತಿಳಿಸಿದರು. ಕಾರ್ಮಿಕ ಸಚಿವ ಶ್ರೀ ಜಗಜೀವನರಾಂರವರು ಕಾರ್ಮಿಕ ಸಚಿವ ಶಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಗಳಿಗೆ ಉತ್ತರವಿತ್ತರು.

ಕೋಲಾರಕ್ಕೆ ಭೇಟಿ

ಬೆಂಗಳೂರು ಏ ೫

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಇದೇ ತಿಂಗಳ ೧೮ ನೇ ತಾರೀಖು ಕೋಲಾರದ ಚಿನ್ನದ ಗಣಿಗೆ ಭೇಟಿಯಿತ್ತು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಕೆಲಸ ಕಾರ್ಯಗಳನ್ನು ಪರಿಶೀಲಿಸುವರೆಂದೂ, ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸುವರೆಂದೂ ಗೊತ್ತಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಭಾರಿ ಆಸ್ಫೋಟನೆ

ಉತ್ತರ ಬೊಂಬಾಯಿಯ ಪರೇಲ್ ರೈಲ್ವೆ ನಿಲ್ದಾಣದ ಬಳಿ ನಿನ್ನೆ ಹೋಟಲೊಂದರಲ್ಲಿ ಆಸ್ಫೋಟನೆಯಾಗಿ ಇಬ್ಬರು ಒಬ್ಬನು ಸ್ಥಳದಲ್ಲೇ ಮತ್ತೊಬ್ಬನು ಆಸ್ಪತ್ರೆಯಲ್ಲಿ ಮೃತರಾದರು. ಮೂವರಿಗೆ ತೀವ್ರ ಗಾಯಗಳಾಗಿವೆ.

ಹೋಟೇಲಿನಲ್ಲಿ ಕೈಬಾಂಬಿನ ಚೂರುಗಳಿದ್ದವೆಂದೂ, ಅದು ಮಿಲಿಟರಿ ಕೈಬಾಂಬಿರಬಹುದೆಂದೂ ತನಿಖೆ ನಡೆಸಿದ ಬೊಂಬಾಯಿ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದರು.

ಲಾರಿಗೂ ರೈಲಿಗೂ ಢಿಕ್ಕಿ

ಅಸನ್‌ಸಾಲ್—ಪುರಿ ಮಧ್ಯೆ ಓಡಾಡುವ ಪ್ಯಾಸೆಂಜರ್ ರೈಲೊಂದಕ್ಕೆ ಸಾಲ್ಪೊನಿ—ಚಂದ್ರಕೋನ ನಿಲ್ದಾಣಗಳ ನಡುವೆ ಇರುವ ಲೆವಲ್ ಕ್ರಾಸಿಂಗ್ ಬಳಿ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮವಾಗಿ ಇಬ್ಬರು ಸತ್ತು ಮತ್ತಿಬ್ಬರು ಗಾಯಗೊಂಡರು.

ಬೆಂಗಾಲ್-ನಾಗಪುರ್ ರೈಲ್ವೆಯ ಶ್ರೀಕಾಲಂ ನಿಲ್ದಾಣದ ಗೂಡ್ಸ್‌ಷೆಡ್‌ನ ಒಂದು ಭಾಗ ಉರುಳಿದ ಪರಿಣಾಮವಾಗಿ ಇಬ್ಬರು ಸತ್ತು ನಾಲ್ವರು ಗಾಯಗೊಂಡರು.

ಕಾಳಸಂತೆಗಾಗಿ ಶಿಕ್ಷೆ

ಇದುವರೆಗೆ ೧೭೦೦ ಕ್ಕಿಂತ ಹೆಚ್ಚು ಕಾಳಸಂತೆಯ ಪ್ರಸಂಗಗಳನ್ನು ಲಕ್ನೋ ಸರ್ಕಾರದವರು ಕಂಡು ಹಿಡಿದಿದ್ದಾರೆ. ೯೦೦ ಜನರಿಗೆ ಶಿಕ್ಷೆಯಾಗಿದೆ.

ರಣಜಿತ್

೬—೪—೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಪ್ಯಾರ್-ಕಿ-ಮಂಜಿಲ್

ಪಾತ್ರ- ಮುನವರ್ ಸುಲ್ತಾನ, ರೆಹಮಾನ್ ಗೋಪ್, ಕಮಲ ಮತ್ತಿತರರು

ಬೆಳಗಿನ ಪ್ರದರ್ಶನ— ೬-೪-೫೧ರಿಂದ

ಮೆಹಬೂಬ್‌ರವರ—

ಅನ್ಮೋಲ್ ಘಡಿ

ಪಾತ್ರ— ಸುರೇಂದ್ರ, ನೂರ್‌ಜಹಾನ್

† ನಿರೀಕ್ಷಿಸಿ †

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೪—೧೯೫೦ನೇ ಸೋಮವಾರ [ಸಂಚಿಕೆ ೧೭೭

ಮರಣದಂಡನೆ ವಿಧಿಸಿ

ಕಳ್ಳಸಂತೆ ವ್ಯಾಪಾರ ಮಾಡುವವರಿಗೆ ಮರಣದಂಡನೆಯನ್ನು ವಿಧಿಸಿ ಎಂಬ ಸಲಹೆಯನ್ನು ಪಾರ್ಲಿಮೆಂಟಿನಲ್ಲಿ ಆಹಾರ ಪರಿಸ್ಥಿತಿಯ ವಿಷಯವಾಗಿ ಚರ್ಚೆ ನಡೆಯುತ್ತಲಿದ್ದಾಗ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ. ಸಿ. ಮಿಶ್ರಾರವರು ಸಲಹೆಯನ್ನಿತ್ತರು.

ಮನೆಯವರೆಲ್ಲಾ ಉಪವಾಸ

ಮಹಾತ್ಮ ಗಾಂಧಿಯವರ ಪುತ್ರರಾದ ಶ್ರೀ ಮಣಿಲಾಲ್ ಗಾಂಧಿಯವರು, ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಲಿರುವ ವರ್ಣಭೇದವನ್ನು ವಿರೋಧಿಸಿ, ಕೈಗೊಂಡಿರುವ ಉಪವಾಸವು ಮುಂದುವರಿಯುತ್ತಲಿದೆ. ಇದಕ್ಕೆ ಸಹಾನುಭೂತಿಯನ್ನು ತೋರಿಸಲು ಅವರ ಮನೆಯವರೆಲ್ಲಾ ನಿನ್ನೆ ದಿನ ಉಪವಾಸವನ್ನು ಕೈಗೊಂಡಿದ್ದರು.

ರಾಷ್ಟ್ರಾಧ್ಯಕ್ಷರ ಆಗಮನ

ರಾಜಧಾನಿಯಲ್ಲಿ ಅಭೂತ ಸ್ವಾಗತ

ಮೈಸೂರು ಏ. ೯

ಭಾರತರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದ್‌ರವರು ಇಂದು ಬೆಳಿಗ್ಗೆ ೧೦ ಗಂಟೆಗೆ ಮದರಾಸಿನಿಂದ ಆಗಮಿಸಿದರು. ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ವಿಮಾನವು ಆಗಮಿಸಿ, ರಾಷ್ಟ್ರಾಧ್ಯಕ್ಷರು ವಿಮಾನದಿಂದ ಇಳಿಯುವಾಗ ಶ್ರೀಮನ್ಮಹಾರಾಜರವರು ಅವರಿಗೆ ನಮಸ್ಕರಿಸಿ, ಹಸ್ತಲಾಘವನ್ನಿತ್ತು ಸ್ವಾಗತಿಸಿದರು. ಮುಖ್ಯ ಮಂತ್ರಿಗಳು ಶ್ರೀಮನ್ಮಹಾರಾಜರ ಜೊತೆಯಲ್ಲಿದ್ದು ರಾಷ್ಟ್ರಾಧ್ಯಕ್ಷರನ್ನು ಸ್ವಾಗತಿಸಿದರು. ಕುಶಲಪ್ರಶ್ನೆಯೊಡನೆಯೇ ಶ್ರೀಮನ್ಮಹಾರಾಜರವರು ಮುಖ್ಯಮಂತ್ರಿ ಆದಿಯಾಗಿ ಎಲ್ಲಾ ಸಚಿವರುಗಳನ್ನು, ಶ್ರೀಕೃಷ್ಣಸ್ವಾಮಿ ಯಾಜ್ಞ(ವಲ್ಕ್ಯ), ಶಾಸನಸಭಾಧ್ಯಕ್ಷರುಗಳನ್ನು ರಾಷ್ಟ್ರಾಧ್ಯಕ್ಷರಿಗೆ ಪರಿಚಯಮಾಡಿಕೊಟ್ಟರು. ಅನಂತರ ಸರ್ಕಾರದ ಶ್ರೇಷ್ಠಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸನ್, ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಡಾ|| ಮಂಜುನಾಥನ್. ಐ.ಜಿ.ಪಿ. ಶ್ರೀ ಜಿ. ಎನ್. ನಾಗರಾಜರಾವ್, ಪೌರಸಭಾಧ್ಯಕ್ಷ ಶ್ರೀ ನರಸಿಂಹಯ್ಯಂಗಾರ್, ಮಹಾರಾಜರ ಆಪ್ತ ಕಾರ್ಯದರ್ಶಿ ಶ್ರೀ ಷಫಿದಾರಾಷಾ, ಮೈಸೂರು ಜಿಲ್ಲಾಧಿಕಾರಿ ಜನಾಬ್ ಕೆ. ಮಹಮ್ಮದ್ ಅಹಮದ್, ಹುಜೂರ್ ಕಾರ್ಯದರ್ಶಿ ಶ್ರೀ ಎಚ್. ಎನ್. ಪಾಳೆಗಾರ್, ಮುನಿಸಿಪಲ್ ಕಮಿಷನರ್ ಶ್ರೀ ಸಿ. ನರಸಿಂಹಮೂರ್ತಿ, ಸ್ಟೇಟ್ ಕಮಾಂಡರ್ ಕರ್ನಲ್ ಡಿ. ಸಿ, ನಂಜರಾಜ ಬಹದ್ದೂರ್, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯ, ನಗರಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ನಾರಾಯಣರಾವ್, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪ, ಡಿ.ಐ.ಜಿ. ಶ್ರೀ ಮುತ್ತೋಜಿರಾವ್ ಸಿಂಧ್ಯೆಯವರುಗಳನ್ನು ಮುಖ್ಯ ಮಂತ್ರಿಗಳು ರಾಷ್ಟ್ರಾಧ್ಯಕ್ಷರಿಗೆ ಪರಿಚಯಮಾಡಿಕೊಟ್ಟರು.

ರಾಷ್ಟ್ರಾಧ್ಯಕ್ಷರು ಅರಮನೆ ಇನ್‌ಫೆಂಟ್ರಿಯವರಿಂದ ಮಿಲಿಟರಿ ಗೌರವವನ್ನು ಸ್ವೀಕರಿಸಿದರು. ಅನಂತರ ಶ್ರೀಮನ್ಮಹಾರಾಜರೊಡನೆ ಲಲಿತಮಹಲಿಗೆ ತೆರಳಿದರು. ದಾರಿಯುದ್ದಕ್ಕೂ ಸಾವಿರಾರು ಜನರು ಹರ್ಷೋದ್ಗಾರಗಳಿಂದ ರಾಷ್ಟ್ರಾಧ್ಯಕ್ಷರನ್ನು ಸ್ವಾಗತಿಸಿದರು. ಮುನಿಸಿಪಲ್ ಗಡಿಯ ಬಳಿ ಪೌರಸಭಾ ಉಪಾಧ್ಯಕ್ಷರು ರಾಷ್ಟ್ರಾಧ್ಯಕ್ಷರಿಗೆ ಪುಷ್ಪಹಾರವನ್ನರ್ಪಿಸಿದರು ಎಲ್ಲಾ ಪೌರ ಸಭಾಸದಸ್ಯರು ಹಾಜರಿದ್ದರು.

ಲಲಿತಮಹಲಿನಲ್ಲಿ, ರಾಷ್ಟ್ರಾಧ್ಯಕ್ಷರು ವಿಶ್ರಾಂತಿಪಡೆದನಂತರ, ಮೈಸೂರು ಸರ್ಕಾರದ ಎಲ್ಲಾ ಸಚಿವರುಗಳಿಗೆ ಭೇಟಿಯನ್ನಿತ್ತರು.

ಮಧ್ಯಾಹ್ನ ೪ ಗಂಟೆ ವೇಳೆಗೆ ರಾಷ್ಟ್ರಾಧ್ಯಕ್ಷರು ಆಹಾರ-ಸಂಶೋಧನಾ ಕೇಂದ್ರಕ್ಕೆ ಭೇಟಿಯನ್ನಿತ್ತು, ಅಲ್ಲಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಬು ಪುರುಷೋತ್ತಮದಾಸ್ ಟಾಂಡನ್‌ರವರು ತಿರುವಾಂಕೂರಿನಲ್ಲಿ ಭಾನುವಾರದಿಂದ ೪ ದಿನಗಳ ಪ್ರವಾಸವನ್ನು ಕೈಗೊಳ್ಳಲಿರುವರು. ತಿರುವಾಂಕೂರು-ಕೊಚ್ಚಿನ್ ಒಕ್ಕೂಟದಲ್ಲಿ ಉಂಟಾಗಿರುವ ಮಂತ್ರಿಮಂಡಲದ ಬಿಕ್ಕಟ್ಟನ್ನು ಪರಿಹರಿಸುವುದೇ ಈ ಪ್ರವಾಸದ ಉದ್ದಿಶ್ಯವೆಂದು ಹೇಳಲಾಗಿದೆ.

ಅಧಿಕ ಆಹಾರಬೆಳೆ ಚಳುವಳಿ

ಅಧಿಕ ಆಹಾರಬೆಳೆ ಚಳುವಳಿಯನ್ನು ಇನ್ನು ೩ ವರ್ಷಕಾಲ ನಡೆಯಿಸಬೇಕೆಂದು ಸರ್ಕಾರವು ತೀರ್ಮಾನಿಸಿರುವುದಾಗಿ ಆಹಾರಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಭಾರತ ಪಾರ್ಲಿಮೆಂಟು ಸಭೆಯಲ್ಲಿ ತಿಳಿಸಿರುವರು. ಈ ಚಳುವಳಿಯಿಂದ ೫೦ ಲಕ್ಷ ಎಕರೆ ಜಮೀನಿನಲ್ಲಿ ಹೆಚ್ಚು ಬೆಳೆ ಬೆಳೆದು ಮುಂದಿನ ಸಾಲಿನಲ್ಲಿ ೧೦ ಲಕ್ಷ ಟನ್ ಅಧಿಕ ಆಹಾರ ದೊರೆಯಲಿದೆಯೆಂದು ಅವರು ತಿಳಿಸಿದರು.

ಕಡ್ಡಾಯವಾಗಿ ಕೊರಾನ್ ಬೋಧನೆ

ಪಶ್ಚಿಮ ಪಾಕಿಸ್ತಾನದಲ್ಲಿ ಎಲ್ಲಾ ಶಾಲೆಗಳಲ್ಲೂ ಕೊರಾನನ್ನು ಕಡ್ಡಾಯವಾಗಿ ಬೋಧಿಸಬೇಕೆಂದು ಶಾಸನವನ್ನು ಪಾಕಿಸ್ತಾನ ಶಾಸನಸಭೆಯು ಅಂಗೀಕರಿಸಿದೆ.

ರಾಜರ ಸಂಘ

ಇತ್ತೀಚೆಗೆ ಸಂಸ್ಥಾನ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ರಾಜರ ಸಂಪದ ಚಟುವಟಿಕೆಗಳ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಸಲ್ಲದ ಆರೋಪಣೆಯನ್ನು ಮಾಡಿರುವರು, ಆರೋಪಣೆಗಳೆಲ್ಲವೂ ಸತ್ಯಾಂಶಕ್ಕೆ ದೂರವೆಂದು ಸಂಘದ ಅಧ್ಯಕ್ಷರಾದ ಬರೋಡಾ ಮಹಾರಾಜರು ಒಂದು ಹೇಳಿಕೆಯನ್ನಿತ್ತರು. ಅವರ ಈ ಹೇಳಿಕೆಯ ವಿಷಯವಾಗಿ ಸಂಸ್ಥಾನ ಶಾಖಾ ಸಚಿವರು ಪುನಃ ತಾವು ಒಂದು ಹೇಳಿಕೆಯನ್ನಿತ್ತು, ಪಾರ್ಲಿಮೆಂಟಿನಲ್ಲಿ ತಾವು ತಿಳಿಸಿದ ಅಂಶಗಳಿಗೆಲ್ಲಾ ತಮ್ಮಲ್ಲಿ ತಕ್ಕ ರುಜುವಾತು ಇದೆಯೆಂದೂ, ಇತ್ತೀಚೆಗೆ ಈ ರಾಜರುಗಳು ಗುಪ್ತ ಸಭೆನಡೆಸಿ ತೀರ್ಮಾನಕ್ಕೆ ಬಂದಿರುವುದು ನಿಜವೆಂದೂ ಅವಶ್ಯಕ ಬಿದ್ದಾಗ ತಾವು ಎಲ್ಲಾ ಅಂಶಗಳನ್ನು ಹೊರಗೆಡಹುವುದಾಗಿ ತಿಳಿಸಿ ಆ ರಾಜರುಗಳಿಗೆ ಪುನಃ ಎಚ್ಚರಿಕೆಯನ್ನಿತ್ತಿರುವರು.

ನ್ಯಾಯಾಸ್ಥಾನ ಭಾಷೆ

ಹೈದರಾಬಾದಿನ ಎಲ್ಲಾ ಸೆಷನ್ ಕೋರ್ಟುಗಳಲ್ಲಿ ನ್ಯಾಯಾಧೀಶರು ಸಾಕ್ಷಿಗಳ ಹೇಳಿಕೆಗಳನ್ನು ಇಂಗ್ಲೀಷಿನಲ್ಲೂ, ಇತರ ಮ್ಯಾಜಿಸ್ಟ್ರೇಟರುಗಳು ಉರ್ದುವಿನಲ್ಲಿ ಬರೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆಯನ್ನಿತ್ತಿದೆ.

ಭೂಕಂಪ

ಗೌಹತಿಯಲ್ಲಿ ಮೊನ್ನೆ ಭೀಕರವಾದ ಭೂಕಂಪವುಂಟಾಯಿತೆಂದು ವರದಿಯಾಗಿದೆ.

ಅಖಿಲಭಾರತ ಪೋಸ್ಟ್‌ಮೆನ್ ಸಮ್ಮೇಳನ

ಅಖಿಲಭಾರತ ಪೋಸ್ಟ್‌ಮೆನ್‌ರ ಸಮ್ಮೇಳನವು ದೆಹಲಿಯಲ್ಲಿ ೭-೮ ತಾ|| ಗಳಲ್ಲಿ ಶ್ರೀ ಜಯಪ್ರಕಾಶ ನಾರಾಯಣರವರ ಅಧ್ಯಕ್ಷತೆಯಲ್ಲಿ ಜರುಗಿತು.

ಹತೋಟಿ ತೆಗೆಯುವುದಿಲ್ಲ

ಸಿಮೆಂಟು ಹತೋಟಿಯನ್ನು ಸದ್ಯದಲ್ಲೇ ತೆಗೆಯಲಾಗುವುದಿಲ್ಲವೆಂದು ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಸಕ್ಕರೆ ತಯಾರಿ ಹೆಚ್ಚಿದೆ

ಭಾರತದಲ್ಲಿ ಸರ್ಕಾರವು ಯೋಜಿಸಿದ್ದಕ್ಕಿಂತ ೫೦ ಸಾವಿರ ಟನ್ ಸಕ್ಕರೆಯು ಹೆಚ್ಚಾಗಿ ತಯಾರಿಸಲಾಗಿದೆ. ಸದ್ಯದಲ್ಲೇ ಸಕ್ಕರೆ ಅಭಾವವು ಸಂಪೂರ್ಣವಾಗಿ ತಪ್ಪುವುದೆಂದು ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಒಳಪಂಗಡಗಳಿರಕೂಡದು

ಕಾಂಗ್ರೆಸ್ಸಿನಲ್ಲಿ ಒಳಪಂಗಡಗಳಿರಕೂಡದು. ಅದನ್ನು ನಿರ್ಮಿಸುವವರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದು. ಕಾಂಗ್ರೆಸ್ಸು ಸಂಸ್ಥೆ ಮತ್ತು ಸರ್ಕಾರವನ್ನು ಕಾಂಗ್ರೆಸ್ಸಿನ ಸದಸ್ಯರು ಬಹಿರಂಗವಾಗಿ ಟೀಕಿಸಬಾರದೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿ ತೀರ್ಮಾನಿಸಿದೆ.

ಕಾಂಗ್ರೆಸ್ ಕೋಶಾಧ್ಯಕ್ಷಿಣಿ

ಸರ್ದಾರ್ ಪಟೇಲರ ಪುತ್ರಿ ಶ್ರೀಮತಿ ಮಣಿಬೆನ್ ಪಟೇಲರನ್ನು ಅಖಿಲಭಾರತ ಕಾಂಗ್ರೆಸ್ಸಿನ ಕೋಶಾಧ್ಯಕ್ಷರಾಗಿ ನೇಮಕವಾಗಿದ್ದಾರೆ.

ಬೊಂಬಾಯಿನಲ್ಲಿ ಭೂಕಂಪ

ಬೊಂಬಾಯಿನಲ್ಲಿ ನಿನ್ನೆ ಬೆಳಗಿನ ಜಾವ ೫|| ಗಂಟೆ ವೇಳೆಯಲ್ಲಿ ಭೂಕಂಪವುಂಟಾಯಿತು. ನಷ್ಟವೇನೂ ಆಗಲಿಲ್ಲವೆಂದು ಹೇಳಲಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ಪೌರ ಸ್ವಾಗತ

ಮೈಸೂರು ಏ ೯

ಮೈಸೂರು ಪೌರಸಭೆಯು ಇಂದು ಸಂಜೆ ರಂಗಾಚಾರ್ಲು ಪುರಭವನ ಮೈದಾನದಲ್ಲಿ ಭಾರತ ರಾಷ್ಟ್ರಾಧ್ಯಕ್ಷ ಶ್ರೀ ಬಾಬು ರಾಜೇಂದ್ರಪ್ರಸಾದರಿಗೆ ಅಪೂರ್ವ ಸ್ವಾಗತನೀಡಿ ಪೌರರ ಪರವಾಗಿ ಗಂಧದ ಕರಂಡದಲ್ಲಿ ಬಿನ್ನವತ್ತಳೆಯನ್ನರ್ಪಿಸಿತು

ಸ್ವಾಗತ ಸಮಾರಂಭಕ್ಕೆ ಮಂತ್ರಿಗಳು ಪುರಜನರೇ ಆದಿಯಾಗಿ ಸಹಸ್ರಾರು ಜನರು ಆಗಮಿಸಿದ್ದರು

ರಾಷ್ಟ್ರಾಧ್ಯಕ್ಷರು, ಆಹಾರ ಸಂಶೋಧನಾ ಕೇಂದ್ರದ ಭೇಟಿಯನ್ನು ಮುಗಿಸಿಕೊಂಡು ಪುರಭವನಕ್ಕೆ ಆಗಮಿಸಿದರು. ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್, ಕಮಿಷನರ್ ಶ್ರೀ ಸಿ ನರಸಿಂಹಮೂರ್ತಿ, ಪೌರಸಭಾ ಸದಸ್ಯರು ಮುಂತಾದವರು ರಾಷ್ಟ್ರಾಧ್ಯಕ್ಷರನ್ನು ಸ್ವಾಗತಿಸಿದರು. ಪೌರರ ಪರವಾಗಿ ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಬಿನ್ನವತ್ತಳೆಯನ್ನರ್ಪಿಸಿದರು. ಅವರು ಬಿನ್ನವತ್ತಳೆಯಲ್ಲಿ ಈ ರೀತಿ ಹೇಳಿದರು.

ಸುಂದರವಾದ ಮತ್ತು ಚರಿತ್ರಾರ್ಹವಾದ ಈ ನಗರಕ್ಕೆ ತಮ್ಮನ್ನು ಬರಮಾಡಿಕೊಳ್ಳುವ ಸುಯೋಗವು ನಮಗೆ ಒದಗಿದ್ದಕ್ಕಾಗಿ ನಾವು ಅತ್ಯಂತ ಸಂತೋಷಪಡುತ್ತೇವೆ ತಾವು ಮೈಸೂರು ಸಂಸ್ಥಾನಕ್ಕಾಗಲೀ ಈ ನಗರಕ್ಕಾಗಲೀ ಹೊಸಬರಲ್ಲ. ಹಿಂದೆ ತಮ್ಮನ್ನು ಬರಮಾಡಿಕೊಳ್ಳುವ ಸುಯೋಗವು ನಮಗೆ ಒದಗಿದ್ದರೂ, ಭಾರತದ ರಾಷ್ಟ್ರಾಧ್ಯಕ್ಷ ಪದವಿಯನ್ನು ವಹಿಸಿದನಂತರ ತಾವು ಇಲ್ಲಿಗೆ ಭೇಟಿಯಿತ್ತಿರುವುದು ಇದೇ ಪ್ರಥಮ.

ಮೈಸೂರಿನಲ್ಲಿ ಏಪ್ರಿಲ್ ಮಾಹೆಯು ಅಷ್ಟು ಹಿತಕರವಾದ ಕಾಲವಲ್ಲ. ಬೇಸಿಗೆಯು ಪ್ರಾರಂಭವಾಗಿದೆ. ಉದ್ಯಾನಗಳೆಲ್ಲವೂ ಹಸುರಿನಿಂದ ಕೂಡಿಲ್ಲ. ಗಿಡಗಳಲ್ಲಿ ಎಲೆಗಳಿಲ್ಲ ನಗರದ ಸೌಂದರ್ಯವೆಲ್ಲವೂ ಈಗ ಮಾಯವಾಗಿದೆ ಆದರೆ ತಮ್ಮನ್ನು ನಮ್ಮ ಜೊತೆಯಲ್ಲಿ ಹೊಂದಿರಲು ನಾವು ಅತ್ಯಂತ ಸಂತೋಷ ಪಡುತ್ತಿದ್ದೇವೆ

ಭಾರತರಾಷ್ಟ್ರಾಧ್ಯಕ್ಷರನ್ನಾಗಿ ತಮ್ಮನ್ನು ಚುನಾಯಿಸಿ ತಮ್ಮ ಅತ್ಯಂತ ಶ್ಲಾಘನೀಯವಾದ ಜೀವನದಲ್ಲಿ ಉಚ್ಛಸ್ಥಾನವನ್ನು ಕೊಟ್ಟಿರುವುದು ತಕ್ಕುದಾಗಿದೆ. ಪ್ರಾರಂಭದಿಂದಲೂ ಸ್ವಾತಂತ್ರ್ಯಸಮರದಲ್ಲಿ ತಾವು ಮುಖ್ಯಪಾತ್ರವನ್ನು ವಹಿಸಿದ್ದೀರಿ. ಮಹಾತ್ಮ ಗಾಂಧಿಯವರಿಂದ ಕರೆಬಂದಾಗ ತಮ್ಮ ಉದ್ಯೋಗವನ್ನು ತ್ಯಜಿಸಿ, ತ್ಯಾಗ ಮತ್ತು ಸೇವಾರಂಗಕ್ಕೆ ಇಳಿದಿರಿ. ಮಹಾತ್ಮರ ಪಟ್ಟ ಶಿಷ್ಯರಲ್ಲಿ ಒಬ್ಬರಾಗಿದ್ದು ಸತ್ಯಾಗ್ರಹ ಚಳುವಳಿ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ಅವರ ಅನುವರ್ತಿಗಳಾಗಿದ್ದಿರಿ. ತಮ್ಮ ಸಹಾಯವಿಲ್ಲದೆ ಆ ಜಾನ್ ಕಾರ್ಯವನ್ನು ಮಾಡಲು ತಮಗೆ ಸಾಧ್ಯವಿಲ್ಲವೆಂದು ಮಹಾತ್ಮ ಗಾಂಧಿಯವರು ಹೇಳುತ್ತಾ ತಮ್ಮ ಸಹವಾಸವನ್ನು ಅವರು ಯಾವಾಗಲೂ ಬಯಸುತ್ತಲಿದ್ದರು. ಸಂಸ್ಕೃತಿ ಮತ್ತು ಸಾಮಾಜಿಕ ಜೀವನಕ್ಕೆ ತಾವು ವಿಶೇಷವಾಗಿ ಸಾಹಸ ಪಟ್ಟಿದ್ದೀರಿ ಪಾಟ್ನ ವಿಶ್ವವಿದ್ಯಾನಿಲಯ ಬೀಹಾರ ವಿದ್ಯಾಪೀಠ ಮತ್ತು ಭಾರತ ಇತಿಹಾಸ ಪರಿಷತ್ತಿನಲ್ಲಿ ತಾವು ಸಲ್ಲಿಸಿರುವ ಸೇವೆಯು ಅದ್ಭುತವಾದುದು. ಬೀಹಾರ ಯುವಕ ಚಳುವಳಿಯಲ್ಲಿ ಯುವಕರಿಗೆ ತಾವು ಮಾರ್ಗದರ್ಶಿಗಳಾಗಿ ಸ್ಫೂರ್ತಿಯನ್ನುಂಟುಮಾಡಿದಿರಿ ಬೀಹಾರ, ಕ್ವೆಟ್ಟಾ ಭೂಕಂಪ ಪರಿಹಾರ ಸಮಿತಿಗಳಲ್ಲಿ ತಾವು ಅಧ್ಯಕ್ಷರಾಗಿದ್ದುಕೊಂಡು ಮಾಡಿರುವ ಕೆಲಸಗಳನ್ನು ಭಾರತ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯತಕ್ಕದ್ದಾಗಿವೆ. ಭಾರತ ಕಾಂಗ್ರೆಸ್ ಸಂಸ್ಥೆಗೆ ತಾವು ಮೂರುಬಾರಿ ಅಧ್ಯಕ್ಷರಾಗಿದ್ದಿರಿ ಉತ್ಕಟ ಪರಿಸ್ಥಿತಿಯನ್ನು ತಾವು ಆಹಾರ ಮಂತ್ರಿಗಳಾಗಿ ಎದುರಿಸಿದಿರಿ ಭಾರತಕ್ಕೆ ಉತ್ತಮ ರಾಜ್ಯಾಂಗವನ್ನು ಕಲ್ಪಿಸಿ, ಪ್ರಜೆಗಳಿಗೆ ಎಲ್ಲಾ ವಿಧದಲ್ಲೂ ಸ್ವಾತಂತ್ರ್ಯವನ್ನು ಕೊಡಲು ತಕ್ಕ ರಾಜ್ಯಾಂಗವನ್ನು ತಾವು ರಾಜ್ಯಾಂಗ ಸಭೆಯ ಅಧ್ಯಕ್ಷರಾಗಿದ್ದು ರಚಿಸಿ, ಎಲ್ಲರಿಗೂ ಸಮಾನ ಸ್ವಾತಂತ್ರ್ಯವನ್ನುಂಟು ಮಾಡಿರುವಿರಿ.

ಭಾರತದಲ್ಲಿ ಈಗ ಕಷ್ಟ ಪರಂಪರೆಗಳು ಒದಗಿದೆ. ಭೂಕಂಪ, ಪ್ರವಾಹ ಮುಂತಾದವು ಆಹಾರ ಪರಿಸ್ಥಿತಿಯನ್ನು ಉತ್ಕಟವಾಗಿ ಮಾಡಿವೆ. ನಿತ್ಯ ಜೀವನಕ್ಕೆ ಬೇಕಾಗುವ ಸಾಮಾನುಗಳು ದೊರೆಯುವುದೇ ಕಷ್ಟ. ಬೆಲೆಯೋ ವಿಪರೀತವಾಗಿದೆ. ದೇಶದ ಮತ್ತು ಅಂತರ ರಾಷ್ಟ್ರೀಯ ಪರಿಸ್ಥಿತಿಗಳಿಂದ ಇನ್ನು ತೊಂದರೆಗಳು ಒದಗಬಹುದೆನ್ನಿಸುತ್ತವೆ. ಆದರೆ ಧೈರ್ಯದಿಂದ ಭಾರತ ಸರ್ಕಾರವು ತಮ್ಮ ಮಾರ್ಗದರ್ಶಕತ್ವದಿಂದ ಎಲ್ಲವನ್ನು ಎದುರಿಸುತ್ತಾ ಪ್ರಪಂಚದಲ್ಲಿ ಐಕ್ಯತೆ ಮತ್ತು ಶಾಂತಿ ಸ್ಥಾಪನೆಯನ್ನು ಮಾಡಲು ಕಾರ್ಯಕ್ರಮ ನಡೆಸುತ್ತಲಿದೆ.

ಸ್ಥಳೀಯ ಸಂಸ್ಥೆಯ ಸದಸ್ಯರಾಗಿ, ಹಿಂದೆ ತಾವು ಪಾಟ್ನಾ ಪೌರಸಭೆಯ ಅಧ್ಯಕ್ಷರಾಗಿದ್ದುದನ್ನು ಸ್ಮರಿಸಿಕೊಳ್ಳಲು ಸಂತೋಷಪಡುತ್ತೇವೆ ಶ್ರೀ ಜವಾಹರಲಾಲ್‌ರವರು ಅಲಹಾಬಾದ್, ದಿವಂಗತ ಸರ್ದಾರ್ ಪಟೇಲರು ಅಹಮದಾಬಾದ್ ಪೌರಸಭೆಯ ಅಧ್ಯಕ್ಷರಾಗಿದ್ದುದನ್ನು ಈ ಸಮಯದಲ್ಲಿ ಜ್ಞಾಪಿಸಿಕೊಳ್ಳಲಿಚ್ಛಿಸುತ್ತೇವೆ. ಈ ನಗರ ಪೌರ ಚಟುವಟಿಕೆಗಳನ್ನು ವಿಶದವಾಗಿ ಹೇಳುತ್ತಾ ತಮಗೆ ಬೇಸರವನ್ನುಂಟುಮಾಡಲು ನಾವು ಇಚ್ಛಿಸುವುದಿಲ್ಲ ಪುರಾಭಿವೃದ್ಧಿಯ ಕಾರ್ಯದಲ್ಲಿ ಹಿಂದಿನಿಂದಲೂ ಮಹಾರಾಜರು ಮತ್ತು ಅಧಿಕಾರಿಗಳು ಒಂದು ಉತ್ತಮ ಮೇಲ್ಪಂಕ್ತಿಯನ್ನು ಹಾಕಿ ಅನೇಕ ಅಭಿವೃದ್ಧಿ ಕಾರ್ಯಗಳನ್ನೆಸಗಿರುವರು. ಜನರ ಪ್ರತಿನಿಧಿಗಳಾಗಿ ಪೌರಾಭಿವೃದ್ಧಿಗಾಗಿ ನಾವೂ ಶ್ರಮಿಸುತ್ತಲಿದ್ದೇವೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಂಡು ಗಳಿಸಿದ ಹಣವನ್ನೆಲ್ಲಾ ಪೌರರ ಸೌಕರ್ಯಗಳಿಗಾಗಿಯೂ ಉಪಯೋಗಿಸಲು ನಾವು ಶ್ರಮಿಸುತ್ತಲಿರುವುದು ಪೌರರು ಗಮನಿಸಿರುವರು.

ನಮ್ಮ ಆಹ್ವಾನವನ್ನು ಮನ್ನಿಸಿ ತಾವು ಇಲ್ಲಿಗೆ ದಯಮಾಡಿಸಿದ್ದಕ್ಕಾಗಿ ತಮಗೆ ನಮ್ಮ ಅಭಿನಂದನೆಗಳನ್ನು ಅರ್ಪಿಸಲು ಇಚ್ಛಿಸುತ್ತೇವೆ. ಸತ್ಯ, ಧರ್ಮ ಮತ್ತು ಶಾಂತಿ ಮಾರ್ಗದಲ್ಲಿ ಇನ್ನೂ ಪ್ರಗತಿಯನ್ನು ಸಾಧಿಸಲು ತಾವು ನಮಗೆ ಇನ್ನೂ ಅನೇಕಕಾಲ ಮಾರ್ಗದರ್ಶಿಗಳಾಗಿರಲು ತಮಗೆ ಉತ್ತಮ ಆರೋಗ್ಯ ಮತ್ತು ದೀರ್ಘಾಯುಸ್ಸನ್ನು ಕೊಡಲಿಯೆಂದು ದೇವರನ್ನು ಪ್ರಾರ್ಥಿಸುತ್ತೇವೆ ಎಂದು ಹೇಳಿದರು.

ರಾಷ್ಟ್ರಾಧ್ಯಕ್ಷರ ಪೌರ ಸನ್ಮಾನಕ್ಕೆ ಶ್ರೀಮನ್ಮಹಾರಾಜರೂ ಹಾಜರಿದ್ದರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ. ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

MYSORE CITY MUNICIPALITY

NOTICE

Sealed tenders will be received up to 4 P M. on 17-4-1951 by the Municipal Engineer for (1) Constructing Model houses single block "B" Type and (2) 'C" Type Model houses.

Each tender should be accompanied with a chellan for having remitted in the Municipal Treasury Rs. 225/- and Rs. 350/- respectively as earnest money. Tenders without earnest money and tenders without furnishing full details of rate for the different kinds of work will not be considered on any account.

Please see detailed notification on the office notice board.

Sd. V.K. Mukundan
Municipal Engineer

—: ಹೊಸ ವರ್ಷದ ಹೊಂಗಾಣಿಕೆ :—

* ಒಲಂಪಿಯಾ *

೫—೪—೫೧ ರಿಂದ ದಿನವಹಿ ೩ ಆಟಗಳು

ಸದಾ ಹರ್ಷದಾಯಕಳಾದ ಪ್ರಖ್ಯಾತಿ ಚೆಲ್ವಬಾಲೆ

— ಮೀನಾ —

(' ಏಕ್—ಥಿ—ಲಡ್ಕಿ " ಯ " ಲಾರಾಲಪ್ಪಾ ಖ್ಯಾತಿ ") ಪಾತ್ರವಹಿಸಿರುವ ಕ್ವಾಟ್ರಾ ಆರ್ಟ್ಸ್‌ರವರ—

ಏಕ್ ತೇರಿ ನಿಶಾನಿ

ಸಹಾಯಕ ಪಾತ್ರ— ತ್ರಿಲೋಕ್ ಕಪೂರ್, ಓಂ ಪ್ರಕಾಶ್, ಕಕ್ಕು, ಶ್ಯಾಮ

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ: ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೦—೪—೧೯೫೧ನೇ ಮಂಗಳವಾರ [ಸಂಚಿಕೆ ೧೭೮

ಕಾಂಗ್ರೆಸ್ ಅಧ್ಯಕ್ಷರು ಬೆಂಗಳೂರಿಗೆ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಂಡನ್‌ರವರು ನಿನ್ನೆ ಬೆಂಗಳೂರಿಗೆ ಆಗಮಿಸಿದರು. ಇವರು ಮೈಸೂರು ಮಂತ್ರಿ ಮಂಡಲದ ಬಿಕ್ಕಟ್ಟನ್ನು ಚರ್ಚಿಸಿ ನಂತರ ತಿರುವಾಂಕೂರಿಗೆ ತೆರಳುವರು. ಅವರ ಜೊತೆಯಲ್ಲಿ ಕಾಂಗ್ರೆಸ್ ಜನರಲ್ ಸೆಕ್ರೆಟರಿ ಶ್ರೀ ಕಳಾ ವೆಂಕಟರಾವ್‌ರವರೂ ಬಂದಿರುವರು.

ಅಮೃತ್‌ಕೌರ್‌ರವರು ಜಿನೀವಾಕ್ಕೆ

ಭಾರತದ ಆರೋಗ್ಯ ಮಂತ್ರಿ ಶ್ರೀಮತಿ ರಾಜಕುಮಾರಿ ಅಮೃತ್‌ಕೌರ್‌ರವರು ಮೇ ೭ ರಲ್ಲಿ ಜಿನೀವಾದಲ್ಲಿ ನಡೆಯುವ ಪ್ರಪಂಚದ ಆರೋಗ್ಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಲು ಮೇ ಮೊದಲನೇ ವಾರದಲ್ಲಿ ಜಿನೀವಾಕ್ಕೆ ತೆರಳುವರು. ಅವರು ಬ್ರಿಟನ್ನಿಗೂ ಭೇಟಿ ಕೊಡುವರೆಂದು ಹೇಳಲಾಗಿದೆ.

ಭಾರತದಲ್ಲಿ ವಿದ್ಯಾಕ್ರಮವೆಲ್ಲವೂ ಮಾರ್ಪಡಬೇಕಾಗಿದೆ

ವಿದ್ಯಾರ್ಥಿಗಳು ಯಾವ ಗುರಿಯೂ ಇಲ್ಲದೆ ಪದವೀಧರರಾದರೆ ಪ್ರಯೋಜನವಿಲ್ಲ

ಮೈಸೂರು ಏ. ೧೦

ಭಾರತದಲ್ಲಿ ಇತ್ತೀಚೆಗೆ ವಿದ್ಯಾ ಸಂಸ್ಥೆಗಳು ವಿಶೇಷವಾಗಿ ಹೆಚ್ಚುತ್ತಲಿವೆ. ಹೈಸ್ಕೂಲುಗಳಲ್ಲಿ ಓದುವವರೆಲ್ಲರೂ ಪದವೀಧರರಾಗಲು ಬಯಸುವರು ಆದರೆ ಯಾವ ಧ್ಯೇಯವೂ ಇಲ್ಲದೆ ಪದವೀಧರರಾಗಿ ಅನಂತರ ಏನುಮಾಡಬೇಕೆನ್ನುವುದೇ ಅವರಿಗೆ ತಿಳಿಯದಾಗಿದೆ. ಈಗಿನ ವಿದ್ಯಾ ಕ್ರಮವು ಕೂಡಲೇ ಮಾರ್ಪಡಬೇಕಾಗಿದೆ ಎಂದು ರಾಷ್ಟ್ರಾಧ್ಯಕ್ಷರು ಇಂದು ಬೆಳಗ್ಗೆ ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಘಟಿಕೋತ್ಸವದಲ್ಲಿ, ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಸ್ವೀಕರಿಸಿದ ನಂತರ ಮಾಡಿದ ಭಾಷಣದಲ್ಲಿ ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ನನ್ನ ಬಾಲ್ಯದಲ್ಲಿ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಪಡೆಯಬೇಕೆಂಬ ಆಸೆ ನನಗೆ ವಿಶೇಷವಾಗಿತ್ತು. ಅದಕ್ಕಾಗಿ ಕಲ್ಕತ್ತೆಯಲ್ಲಿ ಓದುತ್ತಿದ್ದಾಗ ಒಂದು ಥೀಸಿಸ್ ಪ್ರಬಂಧವನ್ನು ಬರೆಯುತ್ತಲಿದ್ದೆ. ಮಹಾತ್ಮಾಜಿಯವರ ಕರೆ ಬಂದಾಗ ಮಧ್ಯದಲ್ಲೇ ಬಿಟ್ಟು ದೇಶ ಸೇವೆಗಾಗಿ ಹೊರಟೆ. ಈಗ ನನಗೆ ಭಾರತದ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಈ ಪ್ರಶಸ್ತಿಯನ್ನು ಕೊಟ್ಟಿರುವರು. ನನಗೆ ಅದು ಸಲ್ಲತಕ್ಕದೆಂದು ತಿಳಿಯದು.

ಮಹಾತ್ಮ ಗಾಂಧಿಯವರ ಅಹಿಂಸಾ ತತ್ವವನ್ನನುಸರಿಸಿ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಈ ಸ್ವಾತಂತ್ರ್ಯವನ್ನು ನಾವು ಬ್ರಿಟಿಷರ ಸಂತೋಷಪೂರ್ವಕವಾದ ಒಪ್ಪಿಗೆಯಿಂದ ಪಡೆದಿದ್ದೇವೆ. ನಮಗೂ ಅವರಿಗೂ ಈಗ ಬೇರೆ ರೀತಿಯಾದ ಸಂಬಂಧವುಂಟಾಗಿದೆ. ಭಾರತದಲ್ಲಿ ಇಂಗ್ಲೀಷರ ವಿಷಯದಲ್ಲಿ ಯಾರಿಗೂ ದ್ವೇಷವಿಲ್ಲ.

ವಿದ್ಯಾ ಸಂಸ್ಥೆಗಳ ಪಾಠಪ್ರವಚನ ಕ್ರಮವು ಬದಲಾವಣೆಯಾಗಿ ಎಲ್ಲರೂ ಸೇವಾಶಕ್ತರಾಗುವ ರೀತಿಯ ಶಿಕ್ಷಣವನ್ನು ಕೊಡಬೇಕಾಗಿದೆ. ಅಂತಹವರಿಂದ ಸಮಾಜ ಸೇವೆಯು ನಡೆದು ನಮ್ಮ ದೇಶವು ಉತ್ತಮಸ್ಥಿತಿಗೆ ಬರಬೇಕಾಗಿದೆ ಎಂದು ಹೇಳಿದರು.

ಘಟಿಕೋತ್ಸವಕ್ಕೆ ಶ್ರೀಮನ್ಮಹಾರಾಜರು, ಮಂತ್ರಿಗಳು ಅನೇಕ ಖಾಸಗೀ ಮಹನೀಯರು ಆಗಮಿಸಿದ್ದರು. ವಿಶೇಷ ಅಹ್ವಾನದ ಮೇಲೆ ಕರ್ನಾಟಕ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾದ ಶ್ರೀ ಜಹಗೀರ್‌ದಾರ್‌ರವರು ಬಂದಿದ್ದರು.

ಪ್ರಶಸ್ತಿಯನ್ನು ಕೊಡುವ ಮುನ್ನ ಶ್ರೀಮನ್ಮಹಾರಾಜರು ಭಾಷಣಮಾಡಿ ರಾಷ್ಟ್ರಾಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರು ಮಹಾತ್ಮಗಾಂಧಿಯವರ ಅನುವರ್ತಿಗಳಾಗಿದ್ದುಕೊಂಡು ದೇಶಕ್ಕೆ ಅವರು ಗೈದಿರುವ ಅಪಾರಸೇವೆಯನ್ನು ಪ್ರಶಂಸಿದರು.

೩ ಕೋಟಿ ರೂ. ಮಂಜೂರಾತಿ

ಕೇಂದ್ರ ಸಮಾಚಾರ ಮತ್ತು ರೇಡಿಯೋ ಶಾಖೆಯ ಮುಂದಿನ ವರ್ಷದ ವೆಚ್ಚಕ್ಕಾಗಿ ೩ ಕೋಟಿ ರೂ. ಗಳ ಬೇಡಿಕೆಯನ್ನು ಪಾರ್ಲಿಮೆಂಟು ಮಂಜೂರ್ಮಾಡಿದೆ.

ಅಪ್ಪಣೆ ಕೊಡಲಾಗಿದೆಯೆ?

ಮಂಜೂರಿಯಾ ಮೇಲೆ ಅಮೇರಿಕಾ ಸೈನ್ಯವು ಬಾಂಬುಗಳನ್ನು ಹಾಕಲು ಜನರಲ್ ಮೆಕಾರ್ಥರಿಗೆ ಅಮೇರಿಕಾವು ಅಪ್ಪಣೆಕೊಟ್ಟಿದೆಯೆ ಎಂದು ಭಾರತವು ಅಮೆರಿಕಾವನ್ನು ಕೇಳಿದೆ.

ಉಚಿತ ಹಿಂದಿ ತರಗತಿಗಳು

ತಾರೀಖು ೧೨-೪-೫೧ನೇ ಗುರುವಾರ ಸಂಜೆ ೬-೩೦ ರಿಂದ ಯುವಕ ಸಂಘದ ಆಶ್ರಯದಲ್ಲಿ, ಸಂಘದ ಆವರಣದಲ್ಲೇ ವಿವಿಧ ಪರೀಕ್ಷೆಗಳಿಗೆ ಕೂರಲಿರುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ಹಿಂದಿ ತರಗತಿಗಳು ಪ್ರತಿದಿನ ಸಂಜೆ ನಡೆಯಲಿವೆ. ವಿದ್ಯಾಭಿಮಾನಿಗಳೆಲ್ಲರೂ ಇದರಿಂದ ಸದುಪಯೋಗ ಪಡೆಯಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಅಂಚೆ ಬೆಲೆ ಹೆಚ್ಚಿಸಲು ಯೋಜನೆ

ಕಮ್ಯೂನಿಕೇಷನ್ ಮಂತ್ರಿ ಶ್ರೀ ರಫಿ ಅಹಮದ್ ಕಿದ್ವಾಯ್‌ರವರು ಭಾರತದಲ್ಲಿ ಅಂಚೆ ಕಾರ್ಡು ಕವರುಗಳನ್ನು ಬಿಟ್ಟು ಉಳಿದ ಎಲ್ಲಾ ಪದಾರ್ಥಗಳ ಮೇಲೂ ಬೆಲೆ ಹೆಚ್ಚಿಸಲು ಅಂಚೆ ಮತ್ತು ತಂತಿ ಇಲಾಖೆ ಯೋಚಿಸುತ್ತಿದೆಯೆಂದು ಪಾರ್ಲಿಮೆಂಟಿನಲ್ಲಿ ನಿನ್ನೆ ತಿಳಿಸಿದರು. ಹಾಗೆಯೇ ಅವರು ಕಮ್ಯೂನಿಕೇಷನ್ ಇಲಾಖೆಯು ೪೧.೫೫ ಕೋಟಿ ರೂ. ಗಳ ಬೇಡಿಕೆಯನ್ನು ಮಂಡಿಸುತ್ತಾ ೪೭ನೇ ಆಗಸ್ಟ್ ೧೫ರಿಂದ ಭಾರತದಲ್ಲಿ ಒಟ್ಟು ೨೨೪೬೧ ಹೊಸ ಪೋಸ್ಟಾಫೀಸುಗಳನ್ನು ಪ್ರಾರಂಭಿಸಿದೆ ಎಂದು ಹೇಳಿದರು.

ಅಪೀಲು ವಜಾ

ವಿದ್ಯಾ ಸಂಸ್ಥೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವಾಗ ಜಾತಿರೀತ್ಯಾ ಪದ್ಧತಿಯನ್ನನುಸರಿಸುವುದು ರಾಜ್ಯಾಂಗಕ್ಕೆ ವಿರುದ್ಧವೆಂದೂ ಅದಕ್ಕಾಗಿ ಸರ್ಕಾರವು ಮಾಡಿರುವ ಆಜ್ಞೆಯು ನ್ಯಾಯಬಾಹಿರವೆಂದೂ ಮದರಾಸು ಹೈ-ಕೋರ್ಟು ಇತ್ತಿದ್ದ ಆಜ್ಞೆಯ ಮೇಲೆ ಸರ್ಕಾರವು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಮಾಡಿತ್ತು. ಮದರಾಸು ಹೈಕೋರ್ಟಿನ ಆಜ್ಞೆಯನ್ನು ಎತ್ತಿ ಹಿಡಿದು ಸುಪ್ರೀಂಕೋರ್ಟು ಅಪೀಲನ್ನು ತಿರಸ್ಕರಿಸಿದೆ.

ಸರ್ಕಾರೀ ಕೆಲಸಗಳನ್ನು ಕೊಡುವಾಗಲೂ ಈ ಜಾತಿ ಪದ್ಧತಿಯನ್ನು ಅನುಸರಿಸಬೇಕೆಂಬ ಆಜ್ಞೆಯು ನ್ಯಾಯಬಾಹಿರವೆಂದು ಸುಪ್ರೀಂಕೋರ್ಟು ಆಜ್ಞೆಯಿತ್ತಿದೆ.

ರೈಲು ಅಪಘಾತ

ಮೊನ್ನೆ ಲಾಹೋರಿನ ಬಳಿ ಒಂದು ಗುಡ್ಸ್ ಟ್ರೈನು ಎಂಜಿನ್ನಿಗೆ ತಗಲಿ ಡ್ರೈವರ್ ಮತ್ತು ಫೈರ್‌ಮನ್ ಇಬ್ಬರೂ ಘಾಯಗೊಂಡಿದ್ದಾರೆ. ಗಾರ್ಡ್‌ಗಳಿಗೆ ಸ್ವಲ್ಪ ಘಾಯಗಳಾಗಿವೆ.

ಕ್ಯಾಬಿನೆಟ್ ಸ್ಥಾನ

ಸಮಾಚಾರ ಶಾಖಾ ಸಚಿವರಿಗೆ ಕ್ಯಾಬಿನೆಟ್ ಸ್ಥಾನವನ್ನು ಕೊಡಬೇಕೆಂದು ಕೆಲವು ಸದಸ್ಯರು ಪಾರ್ಲಿಮೆಂಟಿನಲ್ಲಿ ಅಭಿಪ್ರಾಯಪಟ್ಟರು.

ಪ್ರಾರಂಭ

೧೪ನೇ ತಾರೀಖು ಶನಿವಾರ ದಕ್ಷಿಣ ಭಾರತ ರೈಲ್ವೆಯು ಪ್ರಾರಂಭವಾಗಲಿದೆ. ಮೈಸೂರು ರೈಲ್ವೆ ಎಸ್. ಐ. ರೈಲ್ವೆ ಐಕ್ಯವಾಗಿ ದಕ್ಷಿಣ ರೈಲ್ವೆಯಾಗುವುದು.

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರವರಿಗೆ ಪೌರಸಭೆಯವರು ಏರ್ಪಡಿಸಿದ್ದ ಸನ್ಮಾನ ಸಭೆಗೆ ಮೈಸೂರಿನ ಮಹಾಜನರು ಬಂದು ಉತ್ಸಾಹಿಗಳಾಗಿ ಸಹಕಾರವನ್ನು ತೋರಿಸಿ, ಪೌರಸಭೆಗೆ ಸಹಕಾರ ನೀಡಿದುದಕ್ಕಾಗಿ, ಪೌರರೆಲ್ಲರಿಗೂ ಈ ಮೂಲಕ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ ಎಂದು ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿರುವರು.

ನೇತಾಜಿಯವರ ಪತ್ನೀ ಪುತ್ರರು ಭಾರತಕ್ಕೆ

ಸರ್ದಾರ್ ಪಟೇಲರು ತಮ್ಮ ಇಷ್ಟ ಕಾರ್ಯಗಳಿಗಾಗಿ ವಿನಿಯೋಗಿಸಿದ್ದ ಹಣವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ವಾಧೀನಕ್ಕೆ ತೆಗೆದುಕೊಂಡು ಈ ಹಣದ ವ್ಯಕ್ತಿ ಸುಮಾರು ೨೫೦೦೦೦ ರೂ. ಗಳನ್ನು ನೇತಾಜಿ ಸುಭಾಸ್‌ಚಂದ್ರ ಬೋಸರ ಕುಟುಂಬದ ಸಂರಕ್ಷಣೆಗೆ ಇಟ್ಟಿದ್ದ ಹಣವನ್ನು ಅವರು ಯೂರೋಪಿನಲ್ಲಿದ್ದಾಗ ಆಸ್ಟ್ರಿಯ ಜನಾಂಗದವರನ್ನು ವಿವಾಹವಾಗಿದ್ದ ಅವರ ಪತ್ನಿಗೆ ಕೊಡಲು ತೀರ್ಮಾನಿಸಿದೆ. ಹಣವು ನೇತಾಜಿಯವರಿಗೆ ಸಂಬಂಧ ಪಟ್ಟ ಅವರ ಪತ್ನಿ ಮತ್ತು ಒಂದು ಹೆಣ್ಣು ಮಗುವು ಭಾರತಕ್ಕೆ ಬಂದು ಇಲ್ಲೇ ನೆಲಸಲು ಆಹ್ವಾನಿಸಲಾಗಿದೆ.

ವಿಶ್ವದ ನಾನಾ ಭಾಗಗಳಿಂದ ಭಾರತಕ್ಕೆ ಆಹಾರ

ಆಹಾರ ವಿಷಯವಾಗಿ ಪಾರ್ಲಿಮೆಂಟನಲ್ಲಿ ಚರ್ಚೆ ನಡೆದಾಗ ಆಹಾರಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಎಷಣೆಯನ್ನೀಯುತ್ತಾ, ದೇಶದಲ್ಲಿ ಆಹಾರಪರಿಸ್ಥಿತಿಯನ್ನು ಎಲ್ಲರೂ ಧೈರ್ಯವಾಗಿ ಎದುರಿಸಬೇಕಾಗಿದೆ. ಪರದೇಶಗಳಿಂದ ಆಹಾರ ಬಂದಾಗ ಊಟ ಎಂಬ ಸ್ಥಿತಿಯುಂಟಾಗಿದೆ. ಸರ್ಕಾರವು ತನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ ಆಹಾರ ಪರಿಸ್ಥಿತಿಯನ್ನು ಎದುರಿಸುತ್ತಲಿದೆ. ಈ ವಿಷಯದಲ್ಲಿ ಸರ್ಕಾರವು ವಿಶೇಷ ಕಷ್ಟವನ್ನನುಭವಿಸುತ್ತಲಿದೆ. ವಿದೇಶಗಳಿಂದ ಕಳೆದ ತಿಂಗಳಲ್ಲಿ ೮ ಲಕ್ಷ ಟನ್ ಆಹಾರವು ಬಂದುದರಿಂದ ಪರಿಸ್ಥಿತಿಯನ್ನು ಸುಧಾರಿಸಲಾಯಿತು. ಈ ಮಾಹೆಯಲ್ಲಿ ೩|| ಲಕ್ಷ ಟನ್ ಆಹಾರ ಮುಂದಿನ ಮಾಹೆಯಲ್ಲಿ ಇನ್ನೂ ಹೆಚ್ಚಿಗೆ ಪ್ರಮಾಣದಲ್ಲಿ ಬರಲಿದೆ. ಆಹಾರವನ್ನು ಒದಗಿಸುತ್ತಲಿರುವ ಪರದೇಶಗಳಿಗೂ ನಾವು ಅತ್ಯಂತ ಕೃತಜ್ಞರಾಗಿರಬೇಕು. ಚೈನಾವು ಭಾರತಕ್ಕೆ ೧೦ ಲಕ್ಷ ಟನ್ ಆಹಾರ ಕೊಡಲು ಮುಂದೆ ಬಂದಿದೆ. ಈ ವಿಷಯವದಲ್ಲಿ ಉಭಯರಾಷ್ಟ್ರಗಳಿಗೂ ವ್ಯವಹಾರ ನಡೆಯುತ್ತಲಿದೆ. ಈಗಾಗಲೇ ಚೈನಾದಿಂದ ೫೦ ಸಾವಿರ ಟನ್ ಆಹಾರವು ಬರಲು ಏರ್ಪಾಡು ನಡೆದಿದೆ. ಆಗಲೇ ಆಹಾರವೂ ಒರುತ್ತಲಿದೆ. ರಷ್ಯಾವು ೫೦ ಸಾವಿರ ಟನ್ ಆಹಾರ ಕೊಡಲು ಒಪ್ಪಿದೆ. ಇನ್ನೂ ೫ ಲಕ್ಷ ಟನ್ ಗೋದಿಯನ್ನು ಕೆಲವು ಸರಕುಗಳ ಬದಲಿಗಾಗಿ ರಷ್ಯಾ ಕೊಡಲು ಸಿದ್ಧವಿದೆ. ಸರಕು ಬದಲಾವಣೆ ವಿಷಯದಲ್ಲಿ ಸಂಧಾನ ನಡೆಯುತ್ತಲಿದೆ. ಅಮೇರಿಕಾವು ಈಗಾಗಲೇ ೪ ಲಕ್ಷ ೨೯ ಸಾವಿರ ಟನ್ ಮೈಲೊವನ್ನು ಕೊಟ್ಟಿದೆ. ೭|| ಲಕ್ಷ ಟನ್ ಗೋಧಿ ಕೊಡಲಿದೆ. ಇಟಲಿಗೆ ಹೋಗಬೇಕಾಗಿದ್ದ ೫೦ ಸಾವಿರ ಟನ್ ಗೋಧಿಯು ಭಾರತಕ್ಕೆ ಬರಲಿದೆ. ಆಹಾರ ಸಾಮಗ್ರಿಗಳನ್ನು ತರಿಸಿಕೊಳ್ಳಲು ಹಡಗುಗಳ ಅಭಾವವುಂಟಾಗಲಾಗಿ ಬ್ರಿಟನ್ ೧೩ ಹಡಗುಗಳನ್ನು ಆಹಾರ ರವಾನೆಗೆ ಕೊಟ್ಟಿದೆ. ಬರ್ಮಾವು ೧ ಲಕ್ಷ ೨೦ ಸಾವಿರ ಟನ್ ಅಕ್ಕಿ, ಥೈಲಾಂಡ್ ೩ ಲಕ್ಷ ಟನ್ ಅಕ್ಕಿ, ವಿಯಟ್‌ನಾಮ್ ೩೦ ಸಾವಿರ ಟನ್ ಆಹಾರಧಾನ್ಯ ಕೊಡಲೊಪ್ಪಿವೆ. ಆಸ್ಟ್ರೇಲಿಯಾ, ಕೆನಡಾ ರಾಜ್ಯಗಳು ತಮ್ಮಲ್ಲಿರುವ ಹೆಚ್ಚಿಗೆ ಆಹಾರವನ್ನೆಲ್ಲಾ ಭಾರತಕ್ಕೆ ಕೊಡಲು ಸಿದ್ಧವಾಗಿದೆ. ಸಿಂಹಳವು ೧೦ ಸಾವಿರ ಟನ್ ಆಹಾರ ಧಾನ್ಯವನ್ನು ಸಾಲವಾಗಿ ಕೊಟ್ಟಿದೆ. ಈ ರೀತಿಯಾಗಿ ಸಮಗ್ರ ವಿಶ್ವವು ಭಾರತಕ್ಕೆ ಆಹಾರ ಒದಗಿಸುತ್ತಲಿವೆ. ಇವೆಲ್ಲವೂ ಪ್ರಧಾನಿ ನೆಹರೂರವರ ವಿದೇಶಾಂಗ ನೀತಿಯ ಪ್ರತಿಫಲ ಎಂದು ಹೇಳಿದರು.

ರಜಾ ಹೆಚ್ಚಿಸಲ್ಪಟ್ಟಿತು

ಡೆಪ್ಯುಟಿ ಕಮೀಷನರ್ ಜ|| ಮಹಮದ್ ಇಸ್ಮಾಯಿಲ್ ಷರೀಫರಿಗೆ ಫೆಬ್ರವರಿ ೨ರಿಂದ ೨ ತಿಂಗಳು ಕೊಟ್ಟಿದ್ದ ರಜಾವನ್ನು ಇನ್ನು ಒಂದು ತಿಂಗಳು ಪೂರ್ತಿ ಸಂಬಳದ ಮೇಲೆ ಹೆಚ್ಚಿಸಲ್ಪಟ್ಟಿದೆ.

ಚೀಫ್ ಇಂಜನೀಯರ್ ಶ್ರೀ ಎಂ. ಎಸ್. ಲಕ್ಷ್ಮಣರಾವ್‌ರವರಿಗೆ ೫ನೇ ಡಿಸಂಬರ್ ೧೯೫೦ರಿಂದ ಮೂರು ತಿಂಗಳು ಕಾಲ ಕೊಟ್ಟಿದ್ದ ರಜಾವನ್ನು ಮತ್ತೆ ಒಂದು ತಿಂಗಳು ಪೂರ್ತಿ ಸಂಬಳದ ಮೇಲೆ ಹೆಚ್ಚಿಸಲಾಗಿದೆ.

ಕಾರ್ಯಕ್ರಮ ನಿಲ್ಲಿಸಲಾಗಿಲ್ಲ

ಜನರಲ್ ಮೆಕಾರ್ಥರ್ ವಿರುದ್ಧ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಹಾಗೇನಾದರೂ ಮಾಡಿದರೆ ದೂರ ಪ್ರಾಂತ್ಯದ ಕಾರ್ಯಕ್ರಮಗಳಿಗೆ ಭಂಗತಂದಂತಾಗುವುದೆಂದು ಅಧ್ಯಕ್ಷ ಟ್ರೂಮನ್ನರು ತಿಳಿಸಿರುವುದಾಗಿ ವರದಿಯಾಗಿದೆ. ಜನರಲ್ ಮೆಕಾರ್ಥರ್‌ರವರು ಕೊರಿಯಾ ಬಗ್ಗೆ ಯಾವ ಹೇಳಿಕೆಗಳನ್ನು ಕೊಡದಂತೆ ಟ್ರೂಮನ್ನರು ತಿಳಿಸಿರುವುದಾಗಿ ವರದಿಯಾಗಿದೆ.

ಅನುಮತಿ ದೊರೆಯಲಿಲ್ಲ

೩ಲನೇ ಅಕ್ಷಾಂಶವನ್ನು ವಿಶ್ವಸಂಸ್ಥೆ ಸೈನ್ಯಗಳು ದಾಟಿರುವ ವಿಷಯವನ್ನು ಭಾರತ ಪಾರ್ಲಿಮೆಂಟಿನಲ್ಲಿ ಮಿ|| ಸಿಧ್ವಾರರವರು ಚರ್ಚಿಸಬೇಕೆಂದು ತಂದ ನಿರ್ಣಯಕ್ಕೆ ಸಭಾಸದ್ಯರು ಅನುಮತಿಯೀಯದೆ ಈ ವಿಷಯದಲ್ಲಿ ಭಾರತ ಸರ್ಕಾರವು ತನ್ನ ನೀತಿಯನ್ನು ವಿಶದೀಕರಿಸಿರುವುದರಿಂದ ಚರ್ಚಿಸಬೇಕಾದ ಅವಶ್ಯಕತೆಯಿಲ್ಲವೆಂದು ಹೇಳಿರುವರು.

ಸರ್ಕಾರಕ್ಕೆ ಅಪಜಯ

ಪಾರ್ಲಿಮೆಂಟನಲ್ಲಿ ರೇಷನ್ನಿಗೆ ಸಂಬಂಧಪಟ್ಟ ವಿಷಯದಲ್ಲಿನ ಚರ್ಚೆ ನಡೆದು ಮತ ಪಡೆದಾಗ ಬ್ರಿಟಿಷ್ ಸರ್ಕಾರಕ್ಕೆ ೨೩೭ ೨೧೯ ಓಟುಗಳಿಂದ ಅಪಜಯವಾಯಿತು.

ಭಾರತಕ್ಕೆ ಆಹಾರ

ಅಮೇರಿಕಾದಿಂದ ಬೊಂಬಾಯ್ ಬಂದರಿಗೆ ೯,೭೦೦ ಟನ್ ಅರ್ಜೆಂಟೈನಾದಿಂದ ೧೦ ಸಾವಿರ ಟನ್ ಗೋದಿಯು ಆಗಮಿಸಿದೆ.

ಜನಸಂಖ್ಯೆ

ಮದರಾಸು ಪ್ರಾಂತ್ಯದ ಜನಸಂಖ್ಯೆ ೫,೫೯,೭೦,೦೦೦ ಎಂದು ತಿಳಿಯಬರುತ್ತದೆ. ಪುರುಷ ಮತ್ತು ಸ್ತ್ರೀಯರ ಪ್ರಮಾಣ ೧೦೦೪. ೧೦೦೦. ವಿದೆ.

ಭಾರತದ ಐಕ್ಯತೆಯನ್ನು ಕಾಪಾಡಿ

ಮೈಸೂರು ಏ ೧೦

ವಿದೇಶಿಯರ ಆಳ್ವಿಕೆಯ ಕಾಲದಲ್ಲಿ ಎಲ್ಲರೂ ಅನೇಕ ರೀತಿ ಹೋರಾಡಿ ಸ್ವಾತಂತ್ರವನ್ನು ಗಳಿಸಿದ್ದೇವೆ. ಗಳಿಸಿದ ಸ್ವಾತಂತ್ರವನ್ನು ಕಾಪಾಡಿಕೊಳ್ಳಲು ನಾವೆಲ್ಲರೂ ಈಗ ಶ್ರಮಿಸಬೇಕಾಗಿದೆ. ನಮ್ಮಲ್ಲಿ ಉತ್ತಮವಾದ ಪ್ರಾಚೀನ ಸಂಪ್ರದಾಯಗಳಿಗೆ ಹೊಸ ಮತ್ತು ಹಳೆಯ ಸಂಪ್ರದಾಯಗಳೆರಡನ್ನೂ ಮಿಳಿತಮಾಡಿ ಉತ್ತಮವಾದ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಾಗಿದೆ. ಸ್ವಾತಂತ್ರ ಗಳಿಸುವ ಮುನ್ನ ಇದ್ದ ಕಾರ್ಯವೇ ಬೇರೆಯಾಗಿತ್ತು. ಈಗಿನ ನಮ್ಮ ಕರ್ತವ್ಯವೇ ಬೇರೆ. ನಿಧಾನವಾಗಿ ಯೋಚಿಸಿದಲ್ಲಿ ನಮ್ಮ ಮೇಲೆ ಹೊರೆಯು, ವಿಶೇಷವಾಗಿ ಕಷ್ಟಗಳು ಹೆಚ್ಚಿವೆ. ಅವುಗಳನ್ನೆಲ್ಲಾ ನಾವು ನಮ್ಮ ಬುದ್ಧಿ ಸಾಮರ್ಥ್ಯದಿಂದ ಎದುರಿಸಬೇಕಾಗಿದೆ ಎಂದು ರಾಷ್ಟ್ರಾಧ್ಯಕ್ಷರು ನಿನ್ನೆ ಪೌರ ಸನ್ಮಾನಕ್ಕೆ ಉತ್ತರವೀಯುತ್ತಾ ಹೇಳಿದರು. ತಮ್ಮ ಭಾಷಣವನ್ನು ಮುಂದುವರಿಸುತ್ತಾ ಅವರು ಈ ರೀತಿ ಹೇಳಿದರು.

ಕೆಲವು ಜನರು ಸಹಿ ಮಾಡಿ ಒಂದು ಪತ್ರವನ್ನು ನನಗೆ ಈಗ ಕಳುಹಿಸಿರುವರು. ಮೈಸೂರಿನಲ್ಲಿ ಉಪಹಾರ ಮಂದಿರಗಳು, ಸಿನಿಮಾ ಚಿತ್ರಮಂದಿರಗಳು ಹೆಚ್ಚುತ್ತಲಿವೆ. ಅದನ್ನು ತಡೆಗಟ್ಟಬೇಕೆಂದು ನನ್ನನ್ನೂ ಕೋರಿದ್ದಾರೆ. ಈ ರೀತಿ ತಡೆಗಟ್ಟುವುದು ನನ್ನಿಂದಾಗಲೀ ಯಾವ ಸರ್ಕಾರದಿಂದಲಾಗಲೀ ಸಾಧ್ಯವಿಲ್ಲ. ಪ್ರಜಾ ಸರ್ಕಾರವಿರುವಾಗ ಪ್ರಜೆಗಳೇ ಅದನ್ನು ತಡೆಗಟ್ಟಬೇಕಾಗಿದೆ. ಆಹಾರ, ಧಾನ್ಯಗಳು, ಮನೆ ಸಾಮಗ್ರಿ ಮುಂತಾದ ಅನೇಕ ವಿಧವಾಗಿ ಅಭಾವವಿರುವಾಗ ಕೆಲವರು ಉಪಹಾರ ಮಂದಿರಗಳಲ್ಲಿಯಾದರೂ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಲಿರುವರು. ಮನರಂಜನೆಗಾಗಿ ಅನೇಕರು ಚಿತ್ರಮಂದಿರಗಳಿಗೆ ಹೋಗುವರು. ಸಂಪೂರ್ಣವಾಗಿ ಅವುಗಳ ಬೆಳವಣಿಗೆಯನ್ನು ನಾವು ತಡೆಗಟ್ಟಲು ಕಷ್ಟವಾದರೂ ಭಾರತ ಪ್ರಾಂತ್ಯ ಸರ್ಕಾರಗಳೆಲ್ಲವೂ ಅವುಗಳು ಒಂದು ಮಿತಿಯಲ್ಲಿರುವಂತೆ ತಕ್ಕ ಕಾರ್ಯಕ್ರಮವನ್ನು ವಿಸಗಲಿರುವರು.

ಆಹಾರ ಅಭಾವವನ್ನು ನೀಗಿಸಲು ಸರ್ಕಾರವು ವಿಶೇಷ ಪ್ರಯತ್ನಪಡುತ್ತಲಿದೆ. ಪರರಾಷ್ಟ್ರಗಳು ಭಾರತಕ್ಕೆ ವಿಶೇಷವಾಗಿ ಆಹಾರ ಸರಬರಾಯಿ ಮಾಡುತ್ತಲಿರುವರು. ಈ ರೀತಿಯಾದ ಆಹಾರ ಪರಿಸ್ಥಿತಿಯು ೫೦ ವರ್ಷಗಳ ಹಿಂದೆ ಉಂಟಾಗಿದ್ದರೆ ಆಗಿನ ಸರ್ಕಾರಕ್ಕೆ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುತ್ತಲಿರಲಿಲ್ಲ. ನಾವೇ ದೇಶದಲ್ಲಿ ಇತ್ತೀಚಿನ ಕೆಲವು ತೊಂದರೆಗಳನ್ನು ಕಲ್ಪಿಸಿಕೊಳ್ಳುತ್ತಲಿದ್ದೇವೆ. ದೇಶದ ಹಿತದೃಷ್ಟಿಯಿಂದ ಭಾಷೆ, ಪಂಗಡ, ಪ್ರಾಂತ್ಯ ಮುಂತಾದುವನ್ನೆಲ್ಲಾ ಮರೆತು ಗಳಿಸಿದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವಂತೆ ಎಲ್ಲರೂ ಶ್ರಮಿಸಬೇಕಾಗಿದೆ.

ಸದ್ಯದಲ್ಲೇ ಮಹಾ ಚುನಾವಣೆಗಳು ನಡೆಯಲಿವೆ. ಪ್ರಜೆಗಳು ತಮಗಿರುವ ಓಟಿನ ಹಕ್ಕನ್ನು ಉಪಯೋಗಿಸಿಕೊಂಡು ದೇಶದ ಪ್ರಗತಿಯನ್ನು ಸಾಧಿಸತಕ್ಕಂಥವರನ್ನು ರಾಜ್ಯಾಡಳಿತಕ್ಕೆ ಚುನಾಯಿಸಬೇಕಾಗಿದೆ. ಆಗ ಯಾರೂ ಕರ್ತವ್ಯಭ್ರಷ್ಟರಾಗಬಾರದು ಎಂದು ಹೇಳಿದರು.

ಮೈಸೂರು ಸಂಸ್ಥಾನವು ಅನೇಕ ವರ್ಷಗಳಿಂದ ಹಿಂದಿನ ಬ್ರಿಟಿಷ್ ಪ್ರಾಂತ್ಯಗಳಿಗಿಂತ ವಿಶೇಷ ರೀತಿ ಮುಂದುವರಿದಿದೆ. ಅದನ್ನು ಕಾಪಾಡಿಕೊಂಡು ಬಂದ ಜನರ ಹಿತರಕ್ಷಣೆಗಾಗಿ ಎಲ್ಲರೂ ಶ್ರಮಿಸಬೇಕೆಂದು ಅವರು ಹೇಳಿದರು.

ರಾಷ್ಟ್ರಾಧ್ಯಕ್ಷರ ನಿರ್ಗಮನ

ಮೈಸೂರು ಏ. ೧೦

ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರು ಇಂದು ಬೆಳಿಗ್ಗೆ ವಿಶ್ವವಿದ್ಯಾನಿಲಯದ ಪಟಿಕೋತ್ಸವದಲ್ಲಿ ಭಾಗವಹಿಸಿ ೧೧-೧೫ ಗಂಟೆ ವೇಳೆಗೆ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದರು. ಅವರೊಡನೆ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತೆರಳಿದರು. ಶ್ರೀಮನ್ಮಹಾರಾಜರು ಮಂತ್ರಿಗಳು ಎಲ್ಲರೂ ವಿಮಾನನಿಲ್ದಾಣಕ್ಕೆ ಆಗಮಿಸಿ ಅವರಿಗೆ ಸುಖಪ್ರಯಾಣವನ್ನು ಕೋರಿದರು. ಮೈಸೂರು ರಾಷ್ಟ್ರಾಧ್ಯಕ್ಷರು ಹೊರಡುವ ಮುನ್ನ ಪುರಜನರು ಶ್ರೀಮನ್ಮಹಾರಾಜರು, ಈ ಭೇಟಿಯ ಕಾಲದಲ್ಲಿ ತಮಗಿತ್ತ ಸನ್ಮಾನಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಸಂಪಾದಕರು ಮತ್ತು ಪ್ರಕಾಶಕರು— ಜಿ ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೊ ಮೈಸೂರು. ಮುದ್ರಕರು ಬಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು. ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಹೆಚ್ಚಿನ ತೆರಿಗೆ

ಬ್ರಿಟನ್ನು ಮುಂದಿನ ವರ್ಷ ೧೪೯೦ ಮಿಲಿಯನ್ ಪೌಂಡುಗಳ ವೆಚ್ಚದ ಬಜೆಟ್ಟ ತಯಾರಿಸಿ ಪಾರ್ಲಿಮೆಂಟಿನ ಒಪ್ಪಿಗೆಗೆ ಇಟ್ಟಿದೆ. ಮೋಟಾರು, ರೇಡಿಯೋ ಮುಂತಾದ ಸಲಕರಣೆಗಳ ಮೇಲೆ ತೆರಿಗೆಯನ್ನು ಶೇ. ೩೩ ೧/೩ ರಿಂದ ೬೬ ೨/೩ ಹೆಚ್ಚಿಸಲಾಗುವುದೆಂದು ತಿಳಿಯಬರುತ್ತದೆ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೪—೧೯೫೧ನೇ ಬುಧವಾರ [ಸಂಚಿಕೆ ೧೭೯

ದೋಣಿ ಅನಾಹುತ

ಅಸ್ಸಾಂನಲ್ಲಿ ಬ್ರಹ್ಮಪುತ್ರಾ ನದಿಯಲ್ಲಿ ಹೋಗುತ್ತಲಿದ್ದ ದೋಣಿಯೊಂದು ಬಿರುಗಾಳಿ ಹೊಡೆತದಿಂದ ಮುಳುಗಿ ೩೪ ಜನರು ಮರಣ ಹೊಂದಿದರು. ದೋಣಿಯಲ್ಲಿದ್ದ ಇತರ ೧೪ ಜನರು ಈಜಿಕೊಂಡು ಬಂದು ಪಾರಾದರು.

ಮೇ ಒಂದರಿಂದ ಅಂಚೆದರ ಏರುವುದು

ಇಳಿದು ಹೋಗುತ್ತಲಿರುವ ನಮ್ಮ ಸ್ಥಿತಿಕ ಮಟ್ಟವನ್ನು ಉಳಿಸಿಕೊಳ್ಳಬೇಕು

ಮೇ ಒಂದರಿಂದ ಅಂಚೆ ದರವನ್ನು ಏರಿಸಿರುವುದಾಗಿ ಭಾರತ ಸರ್ಕಾರವು ನಿರ್ಧರಿಸಿ ಆಜ್ಞೆಮಾಡಿದೆ.

೧|| ಆಣೆ ಪತ್ರಗಳು ಜಾರಿಗೆ ಬಂದಿರುವುದರಿಂದ 'ಲೋಕಲ್' ಪತ್ರಗಳಿಗೆ ಇದ್ದ ಒಂದು ಆಣೆ ರಿಯಾಯಿತಿಯನ್ನು ರದ್ದುಗೊಳಿಸಲಾಗಿದೆ. ಆದರೆ ೬ ಕಾಸಿನ ಸ್ಥಳೀಯ ಕಾರ್ಡುಗಳ ರಿಯಾಯಿತಿ ಮುಂದುವರಿಯುವುದು.

ಮನಿಯಾರ್ಡರ್ ಕಮೀಷನ್ ದರವನ್ನು ೫ ರೂಪಾಯಿಗಳಿಗೆ ಎರಡಾಣೆಯಂತೆ ಹೆಚ್ಚಿಸಲಾಗಿದೆ (ಈಗ ೧೦ ರೂ. ಗೆ ೨ ಆಣೆ ಇತ್ತು). ಅನಂತರ ಪ್ರತಿ ೫ ರೂ. ಗೆ ೧ ಆಣೆ

ರಿಜಿಸ್ಟ್ರೇಷನ್ ದರವನ್ನು ೪ ಆಣೆಯಿಂದ ೪|| ಆಣೆಗೆ ಏರಿಸಲಾಗಿದೆ.

ವಿ. ಪಿ. ದರವನ್ನು ಹೆಚ್ಚಿಸಿ, ೨೫ ರೂ.ಗಳಿಗೆ ಮೀರಿದ ಪಾರ್ಸಲ್‌ಗಳನ್ನೆಲ್ಲಾ ಕಡ್ಡಾಯವಾಗಿ ಇನ್ಷೂರ್ ಮಾಡಬೇಕಾಗಿದೆ.

೭೦೦ ಮೈಲಿಗಳಿಗೆ ಮೀರಿದ ಪ್ರದೇಶಗಳಿಗೆ ಟ್ರಂಕ್‌ಟೆಲಿಫೋನ್ ದರಗಳನ್ನು ೧೨ ರೂ.ಗಳಿಂದ ೯ ರೂ. ಇಳಿಸಲಾಗಿದೆ.

ಪೋಸ್ಟು ಕಾರ್ಡು ಮತ್ತು ಕವರುಗಳ ಬೆಲೆಯಲ್ಲಿ ವ್ಯತ್ಯಾಸವಿಲ್ಲ.

ನೂತನ ರಾಜಕೀಯ ಪಕ್ಷ

ಭಾರತಾದ್ಯಂತ ಅನ್ವಯಿಸುವಂತೆ ಒಂದು ಹೊಸ ರಾಜಕೀಯ ಪಕ್ಷವನ್ನು ತಾವು ರಚಿಸುವುದಾಗಿ ಮಾಜಿ ಕೈಗಾರಿಕಾ ಮಂತ್ರಿ ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರು ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿರುವರು. ಈಗಿನ ಕಾಂಗ್ರೆಸ್ ನೀತಿಯಿಂದ ದೇಶದಲ್ಲಿ ಐಕ್ಯತೆ ಮತ್ತು ಭದ್ರತೆ ಒಡೆದು ಹೋಗುವುದೆಂದು ತಮಗೆ ಸಂಪೂರ್ಣ ಭರವಸೆಯಿರುವುದಾಗಿ ಹೇಳಿರುವರು.

ದಕ್ಷಿಣ ಪ್ರಾದೇಶಿಕ ರೈಲ್ವೆ

ದಕ್ಷಿಣ ಪ್ರಾದೇಶಿಕ ರೈಲ್ವೆಯು ಪ್ರಾರಂಭವು ೧೪ನೇ ತಾ|| ಶನಿವಾರ ವಿಧಿವತ್ತಾಗಿ ಪ್ರಾರಂಭವಾಗಲಿದೆ. ಪ್ರಾರಂಭೋತ್ಸವವನ್ನು ರೈಲ್ವೆ ಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಮದರಾಸಿನಲ್ಲಿ ಪ್ರಾರಂಭಿಸುವರು. ಮದರಾಸಿನ ಗವರ್ನರು ಈ ಸಮಾರಂಭದ ಅಧ್ಯಕ್ಷತೆವಹಿಸುವರು. ಭಾರತದಲ್ಲಿರುವ ಎಲ್ಲಾ ರೈಲ್ವೆಗಳನ್ನು ಕೇಂದ್ರೀಕರಿಸಿ, ೬ ವಿಭಾಗಗಳಾಗಿ ಮಾಡಬೇಕೆಂದಿರುವ ಯೋಜನೆಯ ಪ್ರಕಾರ ಪ್ರ[illegible]ವಾಗಿ ಈ ಪ್ರಾದೇಶಿಕ ರೈಲ್ವೆಯು ಪ್ರಾರಂಭವಾಗುವುದು. ಮೈಸೂರು ರೈಲ್ವೆ, ಸೌತ್ ಇಂಡಿಯ ರೈಲ್ವೆ, ಎಂ. ಎಸ್. ರೈಲ್ವೆ ಈ ಮೂರು ರೈಲ್ವೆಗಳೂ ಈ ಪ್ರಾದೇಶಿಕ ರೈಲ್ವೆಯಲ್ಲಿ ಸೇರಿ, ಒಟ್ಟು ೬೦೦೦ ಮೈಲಿ ಉದ್ದವಿರುತ್ತದೆ. ಇದರಲ್ಲಿ ೧೮೦೦ ಮೈಲಿ ಬ್ರಾಡ್‌ಗೇಜು ಸೇರುವುದು. ಪೂನಾದಿಂದ ತಿರುವನಂತಪುರದವರೆಗೆ ಈ ರೈಲ್ವೆಯು ವಿಸ್ತರಣಗೊಂಡಿರುತ್ತದೆ.

ಬರ್ಮಾಕ್ಕೆ ನಿಯೋಗ

ಭಾರತ ಬರ್ಮಾಗಳ ವ್ಯಾಪಾರ ಸಂಬಂಧವಾಗಿ ಮಾತುಕತೆ ನಡೆಸಲು ಈ ಮಾಹೆ ಮೂರನೇ ವಾರದಲ್ಲಿ ಭಾರತದಿಂದ ಒಂದು ನಿಯೋಗವು ರಂಗೂನಿಗೆ ಹೋಗಲಿದೆ. ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ನಿಯೋಗದ ಮುಖಂಡರು. ಭಾರತಕ್ಕೆ ಬರ್ಮಾ ಅಕ್ಕಿಯನ್ನು ತರಿಸಿಕೊಳ್ಳುವುದೇ ಪ್ರಥಮವಾಗಿ ನಿರ್ಧರಿಸಬೇಕಾಗಿದೆ. ಭಾರತದಿಂದ ಬರ್ಮಾವು ಬಟ್ಟೆ, ಉಕ್ಕು ಮತ್ತು ಕಬ್ಬಿಣವನ್ನು ಕೇಳುತ್ತಲಿದೆ. ರಂಗೂನಿಗೆ ಹೋಗುವ ಮುನ್ನ ಶ್ರೀ ಮುನ್ಷಿಯವರು ಬೊಂಬಾಯಿಗೆ ಹೋಗಿ ಬರ್ಮಾದೊಡನೆ ವ್ಯಾಪಾರ ಮಾಡುತ್ತಲಿರುವ ಕೆಲವು ವರ್ತಕರೊಡನೆ ಮಾತುಕತೆ ನಡೆಸುವರೆಂದು ತಿಳಿಯಬರುತ್ತದೆ.

ಜೀಪ್ ಪ್ರಕರಣ

ಭಾರತವು ವಿದೇಶದಿಂದ ೨೦೦೦ ಜೀಪ್‌ಗಳನ್ನು ಕೊಂಡ ವಿಷಯದಲ್ಲಿ ತಾವು ವಿಚಾರಣೆ ನಡೆಸಿದುದಾಗಿಯೂ ಈ ವ್ಯಾಪಾರದಲ್ಲಿ ಲಂಚದ ಅಥವಾ ಅಲಕ್ಷ್ಯದ ಚಿಹ್ನೆಗಳೇನೂ ಕಾಣಬಂದಿಲ್ಲ. ವ್ಯವಹಾರ ಸಮರ್ಪಕವಾಗಿ ನಡೆದಿದೆ ಎಂದು ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ರೈಲ್ವೆ ರಿಯಾಯಿತಿ

ಕೊಡೈಕೆನಾಲ್, ಊಟಿ ಮುಂತಾದ ಬೇಸಿಗೆಯ ವಿಹಾರ ಸ್ಥಳಗಳಿಗೆ ಪ್ರಯಾಣಮಾಡುವವರಿಗೆ ೧ ಮತ್ತು ೨ನೇ ರೈಲ್ವೆ ತರಗತಿಗಳಲ್ಲಿ ೧|| ಟಿಕೆಟ್ ದರದ ಮೇಲೆ ರಿಯಾಯಿತಿಗಳನ್ನು ಮೇ ೧ರಿಂದ ಕೊಡಲು ಸರ್ಕಾರವು ನಿರ್ಧರಿಸಿದೆ. ೨೫ ಮೈಲಿಗಳಿಗೆ ಮೀರಲ್ಪಟ್ಟ ಯಾವ ಸ್ಥಳದಿಂದ ಬೇಕಾದರೂ ರಿಯಾಯಿತಿ ದರದಮೇಲೆ ಟಿಕೆಟ್ಟುಗಳನ್ನು ಪಡೆಯಬಹುದು.

ರಾಷ್ಟ್ರಪತಿಗಳು ಬೆಂಗಳೂರಿನಲ್ಲಿ

ಬೆಂಗಳೂರು ಏ. ೧೦

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ತಮ್ಮ ಪರಿವಾರದೊಡನೆ, ಮೈಸೂರಿನಿಂದ ವಿಶೇಷ ವಿಮಾನದಲ್ಲಿ ೧೧-೫೦ ಗಂಟೆಗೆ ಬೆಂಗಳೂರು ಹಿಂದೂಸ್ತಾನ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅವರೊಡನೆ ಮೈಸೂರಿನಿಂದ ಬಂದರು. ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪ, ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯ, ಮೇಯರ್ ಶ್ರೀ ಅನಂತರಾಮನ್ ಮುಂತಾದವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಅವರುಗಳನ್ನು ಮುಖ್ಯ ಮಂತ್ರಿಗಳು ಪರಿಚಯಮಾಡಿಕೊಟ್ಟರು. ಅನಂತರ ರಾಷ್ಟ್ರಪತಿಗಳು ರೆಸಿಡೆನ್ಸಿಗೆ ತೆರಳಿದರು. ದಾರಿಯುದ್ದಕ್ಕೂ ಸಹಸ್ರಾರು ಜನರು ಹರ್ಷೋದ್ಗಾರಗಳಿಂದ ಅವರನ್ನು ಸ್ವಾಗತಿಸಿದರು.

ವಿಜ್ಞಾನ ಮಂದಿರಕ್ಕೆ ಭೇಟಿ

ಈ ಮಧ್ಯಾಹ್ನ ರಾಷ್ಟ್ರಪತಿಗಳು ಟಾಟಾ ವಿಜ್ಞಾನ ಮಂದಿರಕ್ಕೆ ಭೇಟಿಯಿತ್ತು ಪವರ್ ಇಂಜನೀಯರಿಂಗ್ ಶಾಖೆ, ಹೈ ವೋಲ್ಟೇಜ್ ಇಂಜನೀಯರಿಂಗ್ ಲ್ಯಾಬೊರೇಟರಿ ಪ್ರಾರಂಭೋತ್ಸವವನ್ನು, ಸಿವಿಲ್ ಮತ್ತು ಹೈಡ್ರಾಲಿಕ್ ಇಂಜನಿಯರಿಂಗ್ ಲ್ಯಾಬೊರೇಟರಿ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ವೈಜ್ಞಾನಿಕ ಅಭಿವೃದ್ಧಿಯು ನಮ್ಮ ದೇಶಕ್ಕೆ ಈಗ ಅತ್ಯಂತ ಅವಶ್ಯಕ. ಭಾರತದಲ್ಲಿ ಈಚೆಗೆ ೧೨ ಹೊಸ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯನ್ನು ಸ್ಥಾಪಿಸಿದ ಶ್ರೀ ಟಾಟಾರವರು ಬಹಳ ದೂರದರ್ಶಿತ್ವದಿಂದ, ದೇಶಾಭಿಮಾನದಿಂದ ಈ ಮಹಾ ಸಂಸ್ಥೆಯನ್ನು ಸ್ಥಾಪಿಸಿದರು. ಆ ಕಾಲದಲ್ಲಿ ಭಾರತದಲ್ಲಿ ಇನ್ಯಾವ ವೈಜ್ಞಾನಿಕ ಸಂಶೋಧನಾ ಮಂದಿರಗಳಿರಲಿಲ್ಲ. ಈ ಸಂಸ್ಥೆಯಲ್ಲಿ ಶಿಕ್ಷಣ ಹೊಂದಿದವರಿಂದ ಭಾರತ ಕೈಗಾರಿಕೆ ಅಭಿವೃದ್ಧಿಗೆ ಬಹಳ ಸಹಾಯವಾಗುತ್ತಿದೆ ಎಂದು ಹೇಳಿದರು.

(ಎರಡನೇ ಪುಟ ನೋಡಿ)

(ಒಂದನೇ ಪುಟದಿಂದ)

ರಾಷ್ಟ್ರಪತಿಗಳು ಬೆಂಗಳೂರಿನಲ್ಲಿ

ಕಾರ್ಪೊರೇಷನ್ ಮಾನಪತ್ರ

ಬೆಂಗಳೂರು ಏ. ೧೦

ಉತ್ಪತ್ತಿ ಹೆಚ್ಚಿಸಿ, ಉತ್ಪತ್ತಿ ಹೆಚ್ಚಿಸಿ, ಉತ್ಪತ್ತಿ ಹೆಚ್ಚಿಸಿ ಎಂಬ ಘೋಷಣೆಯು ಎಲ್ಲೆಡೆಯಲ್ಲಿಯೂ ಪ್ರಸರಿಸಬೇಕು. ಪ್ರತಿಯೊಬ್ಬ ಭಾರತೀಯರೂ, ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕನಾಗಲಿ, ಜಮೀನುಗಳಲ್ಲಿ ಬೇಸಾಯ ಉತ್ಪತ್ತಿಯನ್ನು ಅವಲಂಬಿಸಿರುವ ರೈತರಾಗಲಿ, ಕೈಗಾರಿಕೆಗಳಲ್ಲಿ ಉದ್ಯುಕ್ತರಾಗಿರುವ ಕೈಗಾರಿಕೋದ್ಯಮಿಗಳಾಗಲಿ, ಅಥವ ಸಚಿವ ಸ್ಥಾನಗಳಲ್ಲಿರುವ ಮಂತ್ರಿಗಳಾಗಲಿ, ಸರ್ವ ಕಾಲದಲ್ಲಿಯೂ. ಸರ್ವ ವಿಧದಲ್ಲಿಯೂ ದೇಶದ ಮತ್ತು ಜನರ ಅಭ್ಯುದಯ ಮತ್ತು ಪ್ರಗತಿಯ ದೃಷ್ಟಿಯನ್ನೇ ಗುರಿಯಾಗಿಟ್ಟುಕೊಂಡು ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ, ಧರ್ಮದಿಂದಲೂ ಮತ್ತು ಸತ್ಯದಿಂದಲೂ ಅವರವರ ಕರ್ತವ್ಯವನ್ನು ನಿರ್ವಹಿಸಿದರೆ ಈ ಅಭಾವ, ಅನ್ಯಾಯ, ಅಸೂಯೆ ಕಷ್ಟಕಾರ್ಪಣ್ಯಗಳು ದೂರದಾಗಿ ಜನರು ಸುಖವಾಗಿರಬಹುದು.

ಇತ್ತೀಚೆಗೆ ಎಲ್ಲೆಲ್ಲಿಯೂ ಪದಾರ್ಥಗಳನ್ನು ಹೆಚ್ಚಿನ ಹಣ ಗಳಿಸಬೇಕೆಂಬ ದುರಾಸೆಯಿಂದ ಅಧಿಕವಾಗಿ ಶೇಖರಿಸುವ ಮತ್ತು ಕಳ್ಳ ವ್ಯಾಪಾರ ನಡೆಸುವ ಮನೋಭಾವನೆ ಬೆಳೆಯುತ್ತಿದೆಯೆಂದು ವ್ಯಕ್ತಪಡುತ್ತಿದೆ. ಇದಕ್ಕೆ ಉತ್ಪತ್ತಿಕಾರರು, ವರ್ತಕರು ಮತ್ತು ಬಳಸುವವರು ಮುಖ್ಯ ಕಾರಣ. ಈ ಮೂವರಲ್ಲಿ ಯಾವ ಒಂದು ಪಕ್ಷದವರು ಅದನ್ನು ನಿಷೇಧಿಸಿದರೂ ಈ ದುರ್ವ್ಯಾಪಾರ ಉಳಿಯಲು ಸಾಧ್ಯವಿಲ್ಲ ಈ ಮೂರು ಗುಂಪುಗಳವರ ಸಹಕಾರದಿಂದ ಮಾತ್ರ ಸಾಧ್ಯವಿದು. ಸರ್ಕಾರದವರು ಪ್ರತಿಯೊಬ್ಬರನ್ನೂ ಕಾನೂನಿನ ಮೂಲಕ ಮಟ್ಟಹಾಕಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ನಡೆತೆಗಳನ್ನು ಉತ್ತಮಪಡಿಸಿಕೊಳ್ಳಬೇಕು. ತಮ್ಮ ನಡತೆಯನ್ನು ಜನ ಉತ್ತಮಪಡಿಸಿಕೊಂಡು ಸಚ್ಚಾರಿತ್ರ್ಯದಿಂದ ವರ್ತಿಸಿದರೆ ಸಮಾಜ ಉತ್ತಮಗೊಳ್ಳುವುದು ಜೊತೆಗೆ ರಾಷ್ಟ್ರವೂ ಉತ್ತಮಗೊಳ್ಳುವುದು, ಇದು ಅಸಾಧ್ಯವಾದ ವಿಷಯವೇನಲ್ಲ. ಪ್ರಯತ್ನ ಮಾತ್ರ ಬೇಕು. ಈ ವಿಚಾರದಲ್ಲಿ ಮೈಸೂರಿನವರಾದ ನೀವುಗಳೆಲ್ಲ ತಕ್ಕ ಕಾರ್ಯಕ್ರಮ ಕೈಗೊಂಡು ಇತರರಿಗೆ ಮಾರ್ಗದರ್ಶಕರಾಗುವಿರೆಂದು ಭಾವಿಸಿದ್ದೇನೆ.

ಎಂದು ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಇಂದು ಸಂಜೆ ರೇಸ್‌ಕೋರ್ಸಿನಲ್ಲಿ, ಬೆಂಗಳೂರು ಪೌರಸಭೆಯ ಕಾರ್ಪೊರೇಷನ್ನಿನವರು ಅರ್ಪಿಸಿದ ಮಾನಪತ್ರಕ್ಕೆ ಉತ್ತರವಿತ್ತು, ೪೦ ನಿಮಿಷಗಳ ಕಾಲ ಮಾಡಿದ ಭಾಷಣದಲ್ಲಿ ವ್ಯಕ್ತಪಡಿಸಿದರು.

ಜ॥ ಮೆಕಾರ್ಥರ ನಿವೃತ್ತಿ

ವಿಶ್ವಸಂಸ್ಥೆಯ ಮುಖ್ಯ ಸೈನ್ಯಾಧಿಕಾರಿ ಜನರಲ್ ಮೆಕಾರ್ಥರನ್ನು ಅಮೆರಿಕಾ ಅಧ್ಯಕ್ಷ ಟ್ರೂಮನ್ನರು ನಿವೃತ್ತಿಗೊಳಿಸಿರುವುದಾಗಿ ಪತ್ರಿಕಾಗೋಷ್ಠಿಯಲ್ಲಿ ನಿನ್ನೆ ರಾತ್ರಿ ಒಂದು ಗಂಟೆಯಲ್ಲಿ ತಿಳಿಸಿದರು. ಅವರ ಸ್ಥಾನದಲ್ಲಿ ಕೊರಿಯಾ ಯುದ್ಧರಂಗದಲ್ಲಿರುವ ಅಮೆರಿಕಾ ಅಷ್ಟಮ ದಳದ ಸೈನ್ಯಾಧಿಕಾರಿ ಜನರಲ್ ರಿಜ್ವೆಯವರನ್ನು ನೇಮಿಸಲಾಗಿದೆ. ಒಡನೆಯೇ ಜನರಲ್ ರಿಜ್ವೆಯವರಿಗೆ ಅಧಿಕಾರವನ್ನು ವಹಿಸಿಕೊಡಬೇಕೆಂದು ಜನರಲ್ ಮೆಕಾರ್ಥರಿಗೆ ತಂತಿ ಮೂಲಕ ಟ್ರೂಮನ್ನರು ಆಜ್ಞೆಯಿತ್ತಿದ್ದಾರೆ. ಪ್ರಭುತ್ವಕ್ಕೂ ಸೈನ್ಯಾಧಿಕಾರಿಗೂ ಭೇದಭಾವವು ತಲೆದೋರಿರುವುದರಿಂದ ಈ ಕಾರ್ಯಕ್ರಮ ಕೈಗೊಳ್ಳಲಾಗಿರುವುದಾಗಿ ತಿಳಿಯಬರುತ್ತದೆ. ಕಳೆದ ಜುಲೈನಲ್ಲಿ ಜ॥ ಮೆಕಾರ್ಥರು ವಿಶ್ವಸಂಸ್ಥೆಯ ಮುಖ್ಯ ಸೈನ್ಯಾಧಿಕಾರಿಗಳಾಗಿ ನೇಮಕವಾದರು, ೧೯೪೫ರಿಂದ ಜಪಾನಿನಲ್ಲಿ ಮಿತ್ರರಾಷ್ಟ್ರಗಳ ಆಕ್ರಮಣ ಸೇನೆಯ ಮುಖ್ಯ ಸೇನಾಧಿಪತಿಗಳಾಗಿದ್ದರು. ಸೈನ್ಯಾಧಿಪತಿಗಳಾಗಿದ್ದು ರಾಜಕೀಯ ಪ್ರಕಟಣೆಯಿತ್ತುದುದು ಸನೇಟಿಕ ಸದಸ್ಯರಿಗೆ ಪತ್ರ ಬರೆದು ಫೊರ್ಮೊಸಾದ ಸೈನ್ಯವನ್ನು ಉಪಯೋಗಿಸುವ ವಿಷಯದಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿರುವುದು ಚೈನಾ ಮತ್ತು ಉತ್ತರ ಕೊರಿಯಾ ಶಾಂತಿಗೆ ಬರದಿದ್ದಲ್ಲಿ ಭಾರಿ ಸಮರಕ್ಕೆ ಸಿದ್ಧರಾಗಬೇಕಾಗುವುದೆಂದು ತಿಳಿಸಿದುದೆಲ್ಲವೂ ಎಲ್ಲರಲ್ಲಿಯೂ ಅಸಮಾಧಾನವನ್ನುಂಟುಮಾಡಿತು. ಇದರ ಪ್ರತಿಫಲವೇ ಅವರ ನಿವೃತ್ತಿ.

ಬೆಂಕಿ ಅನಾಹುತ

ಗೌಹತಿಯ ಬಳಿ ರೈಲ್ವೆ ಕಾಲೋನಿಗೆ ಬೆಂಕಿಬಿದ್ದು ೪೦೦೦ ಜನರು ಮನೆಮಠಗಳನ್ನು ಕಳೆದುಕೊಂಡಿರುವರು.

ಮೈಸೂರು ಬ್ಯಾಂಕ್ ಛೇರ್ಮನ್

ಬೆಂಗಳೂರು ಏ. ೧೧

ಮೈಸೂರು ಬ್ಯಾಂಕ್ ಛೇರ್ಮನ್ನರಾಗಿ ರಾಜ ಸೇವಾಸಕ್ತ ಪಾಮಡಿ ಸುಬ್ಬರಾಮಶೆಟ್ಟರು ಚುನಾಯಿತರಾಗಿದ್ದಾರೆ.

ತುಂಗಭದ್ರಾ ಯೋಜನೆ

ತುಂಗಭದ್ರಾ ಯೋಜನೆಯಲ್ಲಿ ಹೈದರಾಬಾದ್ ಸರ್ಕಾರವು ೭೦ ಸಾವಿರ ಕಿಲೊವಾಟ್ ವಿದ್ಯುಚ್ಛಕ್ತಿಯ ತಯಾರಾಗುವುದಾಗಿ ಹೇಳಲಾಗಿದೆ.

ಪಾಕಿಸ್ತಾನದ ಸಾಲ

ಪಾಕಿಸ್ತಾನವು ಭಾರತಕ್ಕೆ ೩೦೦ ಕೋಟಿ ರೂ. ಗಳ ಸಾಲವನ್ನು ಭಾರತ ನಾಣ್ಯದಲ್ಲಿ ಕೊಡಬೇಕಾಗಿದೆ. ಈ ಹಣವು ೧೯೫೨ ಆಗಸ್ಟು ೧೫ರ ವೇಳೆಗೆ ಬರಬಹುದೆಂದು ಹೇಳಲಾಗಿದೆ.

† ತಾ॥ ೨೦-೪-೫೧ ರಿಂದ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ಬದನವಾಳಿನಿಂದ ಎರಡು ಮೈಲಿ ದೂರದಲ್ಲಿರುವ ದೇವನೂರು ಗ್ರಾಮದಲ್ಲಿ ಭಾರತ ಸೇವಾದಳದ ಶಿಬಿರವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಸುಮಾರು ೮೦ ಜನರಿಗೆ ಒಂದು ತಿಂಗಳಕಾಲ ಶಿಕ್ಷಣ ಕೊಡಲಾಗುವುದು. ಶಿಕ್ಷಣಪಡೆಯಲಿಚ್ಛಿಸುವವರು ೧೭-೪-೫೧ರ ಒಳಗೆ ಅರ್ಜಿಯನ್ನು ಸಲ್ಲಿಸಬೇಕು.

ವಿವರಗಳಿಗೆ ಜಿಲ್ಲಾ ಸೇವಾದಳದ ಕಾರ್ಯದರ್ಶಿಯವರಿಗೆ ಬರೆದು ತಿಳಿದುಕೊಳ್ಳಬಹುದು.

ಉಳಿತಾಯ

ಭಾರತ ವಿದೇಶಿ ರಾಯಭಾರಿ ಕಛೇರಿಗಳಲ್ಲಿ ಉಳಿತಾಯಮಾಡುವ ಉದ್ದೇಶದಿಂದ ತನಿಖೆಕ್ರಮಗಳು ಜರುಗುತ್ತಿರುವುದೆಂದು ಹಣಕಾಸಿನ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

† ಟೆಲಿಫೋನ್ ಇಲಾಖೆಯು ಇಂಡಿಯಾ ಸರ್ಕಾರಕ್ಕೆ ಸೇರಿದಂದಿನಿಂದ ಟೆಲಿಫೋನ್ ಚಂದಾದಾರರಿಗೆ ಆಗುತ್ತಿರುವ ತೊಂದರೆ ಹಾಗೂ ಇತ್ತೀಚೆಗೆ ಟ್ರಂಕ್ ಚಾರ್ಜ್ ಹೆಚ್ಚಿಸುವುದುಗಿ ತಿಳುವಳಿಕೆಕೊಟ್ಟಿರುವುದು ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸುವುದಾಗಿ ೧೧-೪-೫೧ನೇ ಗುರುವಾರ ಸಂಜೆ ೭ ಗಂಟೆಗೆ ದೊಡ್ಡ ಗಡಿಯಾರ ಚೌಕದಲ್ಲಿರುವ ಮೋಟಾರು ಕೆಲಸಗಾರ ಸಂಘದಲ್ಲಿ ನಗರದ ಟೆಲಿಫೋನ್ ಚಂದಾದಾರರ ಸಭೆ ಏರ್ಪಡಿಸಿದೆ ಆದ್ದರಿಂದ ಎಲ್ಲಾ ಚಂದಾದಾರರು ಬರಬೇಕಾಗಿ ವಿಜಯ ಏಜನ್ಸಿಸ್ ಸಂಚಾಲಕ ಶ್ರೀ ಎ. ರಾಮಣ್ಣನವರು ಪ್ರಾರ್ಥಿಸುತ್ತಾರೆ.

ಪಾಕಿಸ್ಥಾನದಲ್ಲಿ ಕಾಲನಿರ್ದಿಷ್ಟ

ಪೂರ್ವ ಪಾಕಿಸ್ತಾನದಲ್ಲಿ ಕಾಲನಿರ್ದಿಷ್ಟವು ಗ್ರೀನಿಚ್ ಟೈಂಗೆ ೬ ಗಂಟೆ ಮುಂಚೆ ಪಶ್ಚಿಮಪಾಕಿಸ್ತಾನದಲ್ಲಿ ಗ್ರೀನಿಚ್ ಟೈಂಗೆ ೪॥ ಗಂಟೆ ಮುಂಚೆ ಇರಬೇಕೆಂದ ಪಾಕಿಸ್ತಾನ ಸರ್ಕಾರವು ನಿರ್ಧರಿಸಿದೆ.

ಒಲಂಪಿಯಾ ಟಾಕೀಸ್

೧೨—೪—೫೧ರಿಂದ ಪ್ರತಿದಿನ ೩ ಆಟಗಳು

ರಾಮಕೃಷ್ಣ ಪಿಕ್ಚರ್ಸ್‌ರವರ—

* ರಾಮ ದರ್ಶನ್ *

ಪಾತ್ರ— ಭಾರತ್‌ಭೂಷಣ್, ಮೃದುಲಾ, ಶಶಿಕಪೂರ್.

ಪ್ರತಿಯೊಬ್ಬರೂ ನೋಡಬೇಕಾದ ಪೌರಾಣಿಕ ಸಂಗೀತಮಯ ಹಿಂದಿಚಿತ್ರ

ಬೆಳಗಿನ ಪ್ರದರ್ಶನ —— † —— ೧೩—೪—೫೧ರಿಂದ

ದಿಲೀಪ್ ಕುಮಾರ್, ನರ್ಗಿಸ್, ನಳಿನೀಜಯವಂತ್ ಪಾತ್ರವಹಿಸಿರುವ

“ ಅನೋಕ ಪ್ಯಾರ್ ”

ರಣಜಿತ್

೭—೪—೫೧ ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ಪ್ಯಾರ್-ಕಿ-ಮಂಜಿಲ್

ಪಾತ್ರ—ಮನಾವರ್ ಸುಲ್ತಾನ, ರೆಹಮಾನ್ ಗೋಪ್, ಕಮಲ ಮತ್ತಿತರರು

ನಿರೀಕ್ಷಿಸಿ †† ಎ. ವಿ. ಎಂ. ರವರ

—:: ಒಂದು ರಾತ್ರಿ ::—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨—೪—೧೯೫೧ನೇ ಗುರುವಾರ [ಸಂಚಿಕೆ ೧೮೦

ದಕ್ಷತೆ ಕಡಮೆಯಾಗಿದೆ

ಅಂಚೆ ಮತ್ತು ತಂತಿ ಇಲಾಖೆಯ ಈಗಿನ ದಕ್ಷತೆಯು ಕೆಲವು ವರ್ಷಗಳ ಹಿಂದೆ ಇದ್ದಷ್ಟು ಇಲ್ಲ. ಹಿಂದಿದ್ದಂತೆಯೇ ದಕ್ಷತೆಗೆ ಬರಲು ಸಾಧ್ಯವಾದ ಕಾರ್ಯಕ್ರಮವನ್ನೆಲ್ಲಾ ತೆಗೆದುಕೊಳ್ಳುತ್ತಲಿದ್ದೇವೆಂದು ಪಾರ್ಲಿಮೆಂಟಿನಲ್ಲಿ ಸಂಚಾರ ಶಾಖಾ ಸಚಿವ ಶ್ರೀ ಗಿಡ್ವಾಣಿಯವರು ಹೇಳಿರುವರು.

ಉದಾರ ದಾನ

ಮೈಸೂರು ಏ. ೧೦

ಮೈಸೂರು ನಗರದಲ್ಲಿ ಕಟ್ಟಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಕನ್ನೆಗೌಡನಕೊಪ್ಪಲು ಕಂಟ್ರಾಕ್ಟರಾಗಿದ್ದ ಶ್ರೀ ಬಸವೇಗೌಡರ ಮಕ್ಕಳು ಶ್ರೀ ಬಿ. ದೇವೇಗೌಡರು ತಮ್ಮ ಹೆಸರಿನಲ್ಲಿ ಊಟದ ಮನೆಯನ್ನು ಕಟ್ಟಿಸಿಕೊಡಲು ಒಪ್ಪಿರುತ್ತಾರೆ.

ಅಮೆರಿಕಾದ್ಯಂತ ಕೋಲಾಹಲ

ಅಧ್ಯಕ್ಷ ಟ್ರೂಮನ್ನರನ್ನು ರಾಜದ್ರೋಹ ಅಪಾದನೆಗೆ ಗುರಿಪಡಿಸಬೇಕು

ನೂತನ ಮಹಾದಂಡನಾಯಕ

ಲೆ॥ ಜ॥ ಜೇಮ್ಸ್ ರಿಡ್ಜ್‌ವೆ

ಜನರಲ್ ಮೆಕಾರ್ಥರನ್ನು ಅಧ್ಯಕ್ಷ ಟ್ರೂಮನ್ನರು ಹಠಾತ್ತನೆ ನಿವೃತ್ತಿಗೊಳಿಸಿರುವುದು ಅಮೆರಿಕಾದಲ್ಲೆಲ್ಲಾ ಅತ್ಯಂತ ಕೋಲಾಹಲವನ್ನುಂಟುಮಾಡಿದೆ. ರಿಪಬ್ಲಿಕನ್ ಗುಂಪಿಗೆ ಸೇರಿದ ವಿರೋಧ ಪಕ್ಷದವರು ಟ್ರೂಮನ್ನರನ್ನು ಟೀಕಿಸುತ್ತಾ ಅವರನ್ನು ರಾಜದ್ರೋಹ ಅಪಾದನೆಗೆ ಗುರಿಪಡಿಸಬೇಕೆಂದು ಹೇಳುತ್ತಿರುವುದಾಗಿ ವರದಿಯಾಗಿದೆ. ರಾಜಕೀಯ ನಿಯಂತ್ರಣಕ್ಕೆ ಸೈನ್ಯಾಧಿಕಾರಿಗಳು ಅಧೀನವಾಗಿರದೆ ಸ್ವತಂತ್ರವಾಗಿ ವರ್ತಿಸುವುದನ್ನು ವಿರೋಧಿಸುತ್ತಲಿದ್ದ ಅನೇಕ ರಾಷ್ಟ್ರಗಳು ಅಧ್ಯಕ್ಷ ಟ್ರೂಮನ್ನರ ಕಾರ್ಯವನ್ನು ಸಮರ್ಥಿಸಿವೆ.

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಾಗಿ ಈಗ ಕೊರಿಯಾ ಯುದ್ಧದಲ್ಲಿ ಭಾಗವಹಿಸುತ್ತಲಿರುವ ಬ್ರಿಟನ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಟ್ರೂಮನ್ನರ ಕಾರ್ಯಕ್ಕೆ ಸಮರ್ಥನೆಯನ್ನು ವ್ಯಕ್ತಪಡಿಸಿವೆ.

ಅಮೆರಿಕಕ್ಕೆ ಸದ್ಯದಲ್ಲೇ ಜ॥ ಮೆಕಾರ್ಥರು ಹಿಂತಿರುಗಿ ಕಾಂಗ್ರೆಸ್ ಉಭಯ ಪಕ್ಷ ಅಧಿವೇಶನಗಳಲ್ಲಿ ಒಂದು ಹೇಳಿಕೆಯನ್ನು ಕೊಡಲು ವರದಿಯನ್ನು ಈಗಾಗಲೇ ತಯಾರಿಸುತ್ತಲಿರುವುದಾಗಿ ಹೇಳಲಾಗಿದೆ.

ಈಗಾಗಲೇ ಅವರು ತಮ್ಮ ಕೈಕೆಳಗಿನ ಉನ್ನತಾಧಿಕಾರಿಗೆ ಅಧಿಕಾರವನ್ನು ವಹಿಸಿಕೊಟ್ಟಿರುವರು.

ನಿವೃತ್ತರಾದ

ಜ॥ ಮೆಕಾರ್ಥರ್

ನೇಪಾಳ ಸರ್ಕಾರವನ್ನು ಉರುಳಿಸುವ ಪ್ರಯತ್ನ

ರಾಣಾ ಕುಟುಂಬಕ್ಕೆ ಸೇರಿದ ಭಾರತ್ ಷಂಷೇರ್ ಎಂಬುವರು 'ಗೋರ್ಖ ದಳ' ವೆಂಬ ಹೆಸರಿನಲ್ಲಿ ಕೋಮುವಾರು ಪಕ್ಷವೊಂದನ್ನು ಕಟ್ಟಿ ಈಗತಾನೆ ರಚಿತವಾಗಿರುವ ಹೊಸ ಮಂತ್ರಿಮಂಡಲವನ್ನುರುಳಿಸುವ ಪಿತೂರಿಯಲ್ಲಿ ತೊಡಗಿದ್ದರೆಂದೂ, ಅದರಬಗ್ಗೆ ತಮಗೆ ಕಾಗದ ಪತ್ರಗಳು ದೊರೆತಿರುವುದಾಗಿಯೂ ಒಳಾಡಳಿತ ಮಂತ್ರಿ ಶ್ರೀ ಬಿ. ಪಿ. ಕೊಯಿರಾಲಾರವರು ತಿಳಿಸಿದ್ದಾರೆ.

ವಸ್ತು ಪ್ರದರ್ಶನ ಪ್ರಾರಂಭೋತ್ಸವ

ಬೆಂಗಳೂರು ಏ. ೧೧

ಅಖಿಲಭಾರತ ಕೈಗಾರಿಕೆ ಮತ್ತು ಲಲಿತಕಲಾ ಪ್ರದರ್ಶನದ ಪ್ರಾರಂಭೋತ್ಸವವನ್ನು ರಾಷ್ಟ್ರಾಧ್ಯಕ್ಷರು ಇಂದು ನಡೆಸಿದರು.

ನಿರಾಶ್ರಿತರು

ನೆಹರೂ ಲಿಯಾಕತ್ ಒಪ್ಪಂದವಾದ ಮೇಲೆ ಭಾರತಕ್ಕೆ ೧೨ ಲಕ್ಷಕ್ಕೂ ಮೇಲ್ಪಟ್ಟು ಮುಸಲ್ಮಾನರು ಹಿಂತಿರುಗಿರುವರು. ಅವರಿಗೆಲ್ಲಾ ಮರುವಸತಿಯನ್ನು ಕಲ್ಪಿಸಲಾಗಿದೆ. ಅವರ ಮನೆ ಮಠ, ಆಸ್ತಿ-ಪಾಸ್ತಿಗಳನ್ನೆಲ್ಲಾ ಅವರಿಗೆ ಹಿಂದಕ್ಕೆ ಕೊಡಲಾಗಿದೆ. ಪಶ್ಚಿಮ ಬಂಗಾಳ ೩೨ ಸಾವಿರ ಕುಟುಂಬಗಳಿಗೆ ಮರುವಸತಿ ಕಲ್ಪಿಸಿದೆ. ೧೦ ಲಕ್ಷ ರೂ. ಗಳಿಗಿಂತ ಹೆಚ್ಚಿನ ವೆಚ್ಚ ಮಾಡಿದೆ. ಅಸ್ಸಾಂ ೨೭೦೦೦ ಕುಟುಂಬಗಳಿಗೆ ಮರುವಸತಿ ಕೊಟ್ಟಿದೆ. ೨೫ ಲಕ್ಷ ರೂ. ವೆಚ್ಚ ಮಾಡಿದೆ. ಪಾಕಿಸ್ತಾನಕ್ಕೆ ಭಾರತದಿಂದ ಸುಮಾರು ೧೧ ಲಕ್ಷ ಜನರು ಹೋಗಿದ್ದಾರೆ. ಅಲ್ಲಿಗೆ ಹಿಂತಿರುಗಿದ ಹಿಂದುಗಳಿಗೆ ಸರಿಯಾಗಿರು ಮರುವಸತಿ ದೊರೆತಿಲ್ಲ. ಅವರ ಮನೆ, ಆಸ್ತಿ ಮುಂತಾದುವು ಯಾವುದೂ ದೊರೆಯದೆ ಅನೇಕರು ಭಾರತಕ್ಕೆ ಹಿಂತಿರುಗಿರುವರು ಎಂದು ತಿಳಿಯಬರುತ್ತದೆ.

ಅಕ್ರಮ ಸಾಗಾಣಿಕೆಯ ಚಿನ್ನದ ಪತ್ತೆ

ಗೋವಾದಿಂದ ಬೊಂಬಾಯಿಗೆ ಬಂದ ಪ್ರಯಾಣಿಕರ ಬಳಿ ೨೦,೦೦೦ ರೂ. ಬೆಲೆ ಬಾಳುವ ೧೯೦ ತೊಲ ಚಿನ್ನ ಪತ್ತೆಯಾಗಿದೆ.

ಶತಮಾನೋತ್ಸವ

ಮೈಸೂರು ಏ. ೧೨

ನಿನ್ನೆ ಸಂಜೆ ರಾಜಕಮಲ್ ಟಾಕೀಸಿನಲ್ಲಿ 'ರಾಜಾ ವಿಕ್ರಮ'ದ ಶತಮಾನೋತ್ಸವವು ಮೈಸೂರು ಜಿಲ್ಲಾಧಿಕಾರಿ ಜನಾಬ್ ಮಹಮದ್ ಅಹಮದ್‌ರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಜನಾಬ್ ಮಹಮ್ಮದ್ ಅಹಮ್ಮದ್‌ರವರು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ, ಈ ಪ್ರದರ್ಶನಗಳ ಉತ್ಪತ್ತಿಯಲ್ಲಿ ಸ್ವಲ್ಪ ಭಾಗವನ್ನು ಬಡಬಗ್ಗರಿಗೆ ಹಂಚಿದರೆ ಮಹದುಪಕಾರ ಮಾಡಿದಂತಾಗುವುದೆಂದು ಹೇಳಿದರು.

'ರಾಜಾ ವಿಕ್ರಮ' ಚಿತ್ರವನ್ನು ಅನಂತರ ಪ್ರದರ್ಶಿಸಲಾಯಿತು.

ರಾಜು ಮೊಕದ್ದಮೆ ವರ್ಗಕ್ಕೆ ರಾಷ್ಟ್ರಾಧ್ಯಕ್ಷರಲ್ಲಿ ಮನವಿ

ಬೆಂಗಳೂರು ಏ. ೧೧

ಮೈಸೂರು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ ಮೇದಪ್ಪನವರಿಗೆ ವಿಷಪ್ರಾಶನ ಮಾಡಿಸುವ ಪ್ರಯತ್ನದ ಸಂಬಂಧವಾಗಿ ಶ್ರೀ ಎಲ್. ಎಸ್. ರಾಜು ಮುಂತಾದವರ ಮೇಲೆ ಹೂಡಲಾಗಿರುವ ಮೊಕದ್ದಮೆಯನ್ನು ಮೈಸೂರು ಸಂಸ್ಥಾನದ ಹೊರಗಡೆ ಇರುವ ಯಾವುದಾದರೂ ನ್ಯಾಯಾಲಯಕ್ಕೆ ವರ್ಗ ಮಾಡಬೇಕೆಂದು ಇಲ್ಲಿ ಈಗಿರುವ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಲ್ಲಿ ಮದ್ರಾಸಿನ ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಶ್ರೀನಿವಾಸನ್‌ರವರು ಮನವಿ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ.

ನಿಧನ

ಮೈಸೂರು ಏ. ೧೧

ನಗರದಲ್ಲಿ ಸುಪ್ರಸಿದ್ಧ ಫೋಟೋಗ್ರಾಫರಾದ ಶ್ರೀ ಎ ವಿ. ವರದಾಚಾರ್‌ರವರು ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರಿಗೆ ೯೨ ವರ್ಷ ವಯಸ್ಸಾಗಿತ್ತು.

ಸಮಾಚಾರ

ತಾ|| ೧೨—೪—೧೯೫೧ನೇ ಗುರುವಾರ

ಶಿಸ್ತು ಬೆಳೆಯಬೇಕು

ಭಾರತವು ಸ್ವತಂತ್ರ ರಾಷ್ಟ್ರವಾಗಿ ನಾಲ್ಕು ವರ್ಷಗಳಾಗುತ್ತ ಬಂದಿತು. ಭಾರತದ ನೂತನ ರಾಜ್ಯಾಂಗವು ಜಾರಿಗೆ ಬಂದು, ಪ್ರಥಮ ರಾಷ್ಟ್ರಾಧ್ಯಕ್ಷರು ತಮ್ಮ ನೂತನ ಸ್ಥಾನವನ್ನು ಅಲಂಕರಿಸಿ ಒಂದು ವರ್ಷವಾಯಿತು. ಭಾರತದಲ್ಲಿರುವ ಪ್ರಜಾವರ್ಗದವರೆಲ್ಲರೂ ರಾಷ್ಟ್ರಾಧ್ಯಕ್ಷರ ಸ್ಥಾನಮಾನಗಳೇನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಸರ್ಕಾರಿ ನೌಕರರು ಸಹ ಅದನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಈ ವಿಷಯದಲ್ಲಿ ಎಲ್ಲಾ ಇಲಾಖೆಗಳಿಗೂ ತಕ್ಕ ತಿಳುವಳಿಕೆಯನ್ನು ಕೊಡುವುದಲ್ಲದೆ ಶಾಲೆಗಳಲ್ಲೂ ಸಹ ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಉಪಾಧ್ಯಾಯರು ತಿಳುವಳಿಕೆ ಕೊಡುವಂತೆ ಮಾಡುವುದು ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಮುಖ್ಯ ಕರ್ತವ್ಯ.

ಆಂಗ್ಲೇಯರ ಆಳ್ವಿಕೆಯಲ್ಲಿ ವೈಸರಾಯಿಗಳ ಭೇಟಿಯ ಕಾಲದಲ್ಲಿ ಸರ್ಕಾರಿ ಅಧಿಕಾರಿಗಳು, ಅದರಲ್ಲೂ ಪೋಲೀಸ್, ಮಿಲಿಟರಿ ಅಧಿಕಾರಿಗಳು ತಮ್ಮ ತಮ್ಮ ಹುದ್ದೆಗೆ ವಿಧಿವತ್ತಾಗಿ ನಿಯಮಿಸಿರುವ ಉಡುಪುಗಳನ್ನು ಧರಿಸಿಕೊಂಡು ತಮ್ಮ ಕಾರ್ಯದಲ್ಲಿ ನಿರತರಾಗುತ್ತಲಿದ್ದರು. ಅಲ್ಲದೆ ಆ ದಿನ ಶಾಲಾ ಕಾಲೇಜುಗಳಿಗೆಲ್ಲಾ ರಜವನ್ನು ಕೊಟ್ಟು ಎಲ್ಲಾ ಉಪಾಧ್ಯಾಯರೂ ಬಾಲಕ ಬಾಲಕಿಯರನ್ನು ಕರೆದುಕೊಂಡು ಬಂದು ಅತಿಥಿಗಳು ಆಗಮಿಸಿ ಮೆರವಣಿಗೆ ಹೋಗುವ ಕಾಲದಲ್ಲಿ ರಸ್ತೆಗಳ ಅಕ್ಕಪಕ್ಕಗಳಲ್ಲಿ ನಿಂತು ಹರ್ಷೋದ್ಗಾರಗಳಿಂದ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಲು ಕಡ್ಡಾಯವಾದ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಲಿದ್ದರು.

ಈಗ ನಮ್ಮ ರಾಷ್ಟ್ರಾಧ್ಯಕ್ಷರು ಬಂದಾಗ ಈ ರೀತಿಯಾದ ಸಮಾರಂಭವನ್ನು ಏರ್ಪಡಿಸಲು ಯಾವ ಪ್ರತಿಬಂಧಕವೇನಾದರೂ ಇತ್ತೆ? ಪ್ರಪಂಚ ಮಹಾರಾಷ್ಟ್ರಗಳಲ್ಲಿ ಭಾರತವು ಒಂದು ಹಿರಿಯ ರಾಷ್ಟ್ರ. ಭಾರತದ ರಾಷ್ಟ್ರಾಧ್ಯಕ್ಷರು ಭಾರತದ ಚಕ್ರವರ್ತಿಗಳು. ಹಿಂದೆ ವೈಸ್‌ರಾಯ್‌ಗಳಿಗೆ ಸಲ್ಲುತ್ತಿದ್ದ ಗೌರವಕ್ಕಿಂತಲೂ ಹೆಚ್ಚಿಗೆ ಗೌರವ ಇವರಿಗೆ ಸಲ್ಲಬೇಕಾಗಿದೆ. ಸಲ್ಲಿಸಬೇಕಾದುದು ಭಾರತದಲ್ಲಿರುವ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಈ ಕರ್ತವ್ಯ ಪರಿಪಾಲನೆಗೆ ಸರ್ಕಾರವು ಆಗಾಗ್ಗೆ ತಕ್ಕ ತಿಳುವಳಿಕೆ ಕೊಡಬೇಕಾಗಿದೆ. ಈಗಿನಿಂದ ನಮ್ಮ ಚಿಕ್ಕ ಮಕ್ಕಳುಗಳಲ್ಲಿ ದೇಶಭಕ್ತಿ, ರಾಷ್ಟ್ರಾಧ್ಯಕ್ಷರಿಗೆ ಗೌರವ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಮುಂತಾದ ವಿಷಯಗಳಲ್ಲಿ ತಮ್ಮ ಕರ್ತವ್ಯವೇನೆಂಬುದು ವಿಶೇಷವಾಗಿ ಬೆಳೆಯಬೇಕಾಗಿದೆ. ಈ ರೀತಿಯಾದ ಸಮಾರಂಭಗಳೇ ಅವರಿಗೆ ಮಾರ್ಗದರ್ಶಕವಾಗಿರುತ್ತವೆ.

ದಸರಾ, ವರ್ಧಂತಿ ಮೆರವಣಿಗೆ, ದರ್ಬಾರು ಸಂದರ್ಭಗಳಲ್ಲಿ ನಮ್ಮ ಮಿಲಿಟರಿ ಮತ್ತು ಪೋಲೀಸು ಅಧಿಕಾರಿಗಳು ತಮ್ಮ ತಮ್ಮ ಹುದ್ದೆಗೆ ನಿಗದಿಯಾದ ಉಡುಪುಗಳಿಂದ ಅಲಂಕೃತರಾಗಿ ಕರ್ತವ್ಯನಿಷ್ಠರಾಗುವರು. ರಾಷ್ಟ್ರಾಧ್ಯಕ್ಷರು ಬಂದಾಗಲೂ ಅದೇ ರೀತಿ ಉಡುಪು ಧರಿಸಿ ಶಿಸ್ತಿನಿಂದಿರಬೇಡವೇ? ಮೊನ್ನೆ ರಾಷ್ಟ್ರಾಧ್ಯಕ್ಷರು ರಾಜಧಾನಿಗೆ ಆಗಮಿಸಿದಾಗ ಒಬ್ಬ ಪೋಲೀಸ್ ಅಧಿಕಾರಿಯೂ ತನ್ನ ಪೂರ್ತಾ ಉಡುಪಿನಲ್ಲಿರಲಿಲ್ಲ. ಇವರಿಗಿರುವ ಪೋಲೀಸ್ ಉಡುಪು, ಕತ್ತಿ ಮುಂತಾದುವನ್ನೆಲ್ಲಾ ಅವರು ಈಗಲೂ ಯಾಕೆ ಧರಿಸಬಾರದಾಗಿತ್ತು. ಅದನ್ನು ಬಿಟ್ಟು ತಾವು ನಿತ್ಯವೂ ಹಾಕುವ ಸಾಧಾರಣ ಉಡುಪನ್ನು ಧರಿಸಿ, ಅದರಲ್ಲೂ ಬುಷ್‌ಕೋಟ್, ಕೈನಲ್ಲಿ ಸಣ್ಣ ದೊಣ್ಣೆ ಮುಂತಾದುವುಗಳಿಂದ ಓಡಾಡುತ್ತಲಿದ್ದುದು ಈ ಸಮಾರಂಭಕ್ಕೆ ತಕ್ಕ ಭೂಷಣವನ್ನು ಕೊಡುವುದೇ? ಕೊನೆಗೆ ವಿಮಾನನಿಲ್ದಾಣದಲ್ಲಿ ಕೂಡ ರಾಷ್ಟ್ರಾಧ್ಯಕ್ಷರಿಗೆ ಅಧಿಕಾರಿಗಳನ್ನು ಪರಿಚಯಮಾಡುವ ಸಮಯದಲ್ಲಿ ಪೋಲೀಸ್ ಮುಖ್ಯಾಧಿಕಾರಿಗಳು, ಆ ಸ್ಥಾನಕ್ಕೆ ನಿಗದಿಯಾಗ ಪೂರ್ತಾ ಪೋಲೀಸ್ ಡ್ರೆಸ್ ಹಾಜರಿನಲ್ಲಿ ಬುಷ್‌ಕೋಟ್ ಹಾಕಿಕೊಂಡು ತಮ್ಮ ದಿನಚರಿ ಉಡುಪಿನಲ್ಲಿದ್ದುದು ಅಷ್ಟು ವಿಹಿತವಲ್ಲ.

ಸರ್ಕಾರಿ ಅಧಿಕಾರಿಗಳೂ ಇತರರೂ ಇಂತಹ ಸಮಾರಂಭಗಳಲ್ಲಿ ಭಾಗವಹಿಸುವಾಗ ಒಂದು ನಿಗದಿಯಾದ ಉಡುಪು ಧರಿಸಿ ಇರುವಂತೇರ್ಪಡಿಸುವುದೂ ಸೂಕ್ತ.

ಈ ವಿಷಯಗಳನ್ನೆಲ್ಲಾ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಪರಿಶೀಲಿಸಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡು ಹಿಂದೆ ಚಕ್ರವರ್ತಿ, ವೈಸರಾಯ್ ಮುಂತಾದವರು ಬಂದಾಗ ಯಾವ ರೀತಿ ಶಿಸ್ತಿನಿಂದ ನಡೆಯುತ್ತಲಿದ್ದರೋ ಹಾಗೆಯೇ ನಡೆಯುವಂತೇರ್ಪಡಿಸಿ ನಮ್ಮ ದೇಶದ ಗೌರವವು ಇನ್ನೂ ಹೆಚ್ಚುವಂತೆ ಮಾಡುವರೆಂದು ನಂಬಿದೆ.

ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ

ಮೈಸೂರು ಏ. ೧೦

ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಸಭಾಪತಿಗಳಾದ ಶ್ರೀ ಜಹಗೀರ್‌ದಾರ್‌ರವರನ್ನು ಇಂದುಸಂಜೆ ಪತ್ರಿಕೋದ್ಯೋಗಿಸಂಘದವರು ಬರಮಾಡಿಕೊಂಡು ಸತ್ಕರಿಸಿದರು ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯವಾಗಿ ಅವರು ಮಾತನಾಡುತ್ತಾ ಇನ್ನೂ ಕೆಲವು ವರ್ಷಗಳಲ್ಲಿ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ಆಗಲು ಏರ್ಪಾಡುಮಾಡಲಾಗುವುದೆಂದು ಮೈಸೂರಿನ ವಿಶ್ವವಿದ್ಯಾನಿಲಯದ ಕನ್ನಡ ಪುಸ್ತಕ ಪ್ರಕಟಣ ಶಾಖೆಯವರ ಸಹಕಾರದಿಂದ ಕನ್ನಡ ಬೆಳವಣಿಗೆಗೆ ಮತ್ತು ಪಠ್ಯ ಮತ್ತು ಇತರ ಪುಸ್ತಕಗಳ ರಚನೆ ಮತ್ತು ಪ್ರಕಟಣೆ ನಡೆಯಬೇಕಾಗಿದೆ ಎಂದು ಅದಕ್ಕೆ ಮೈಸೂರಿನ ಎಲ್ಲಾ ಕನ್ನಡಿಗರ ಸಹಕಾರವನ್ನು ಕೋರಿ ಸಂಪೂರ್ಣ ಸಹಕಾರ ದೊರೆಯುವುದರಲ್ಲಿ ತಮಗೆ ಭರವಸೆ ಇರುವುದಾಗಿ ತಿಳಿಸುತ್ತಾರೆ.

ಬಾಲ್ಯವಿವಾಹ ಕಾನೂನು

ಭಾರತ ಬಾಲ್ಯವಿವಾಹ ನಿಷೇಧಕಾನೂನನ್ನು ಏಪ್ರಿಲ್ ೧ನೇ ತಾ|| ನಿಂದ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವುದೆಂದು ಆಜ್ಞೆ ಹೊರಟಿದೆ. ಈ ಕಾನೂನಿನಂತೆ ೧೫ ವರ್ಷಕ್ಕೆ ಕಡಮೆ ಇರುವ ಬಾಲಕಿಯರಿಗೆ, ೧೮ ವರ್ಷಕ್ಕೆ ಕಡಮೆಯಿರುವ ಬಾಲಕರಿಗೆ ವಿವಾಹ ಮಾಡಿದಲ್ಲಿ ಶಿಕ್ಷಾರ್ಹವಾಗಿದೆ.

ತೆಲಂಗಾಣದಲ್ಲಿ ಹಾವಳಿ

ಭಾರತದಲ್ಲೆಲ್ಲಾ ತೆಲಂಗಾಣವು ಕಮ್ಯೂನಿಸ್ಟರ ಹಾವಳಿಗೆ ಸಿಕ್ಕಿ ಬಹಳ ಕಷ್ಟಕ್ಕೀಡಾದ ಪ್ರದೇಶವಾಗಿದೆ. ಲೂಟಿ, ದರೋಡೆ, ಆಹಾರ ಸಾಮಗ್ರಿಗಳಿಗೆ ಬೆಂಕಿ ಹಾಕುವುದು, ಖೂನಿ ಮುಂತಾದ ದುಷ್ಕೃತ್ಯಗಳು ಇನ್ನೂ ನಿಂತಿಲ್ಲವೆಂದು ಗೃಹಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ರೂಪಾಯಿನ ಮೌಲ್ಯ ವ್ಯತ್ಯಾಸ

" ಭಾರತದ ಹಿತದೃಷ್ಟಿಯಿಂದ ಈ ಗರೂಪಾಯಿಯ ಬೆಲೆಯಲ್ಲಿ ವ್ಯತ್ಯಾಸಗೊಳಿಸುವುದು ಸರಿಯಲ್ಲವೆಂಬ ನಿರ್ಧಾರಕ್ಕೆ ಬಂದಿದ್ದೇನೆ ಹಾಗೆಮಾಡಿದ್ದಲ್ಲಿ ಒಳ್ಳೆಯದಕ್ಕಿಂತ ಕೇಡಿನ ಸಂಭವವೇ ಹೆಚ್ಚು. "

ಎಂಬುದಾಗಿ ಪಾರ್ಲಿಮೆಂಟಿನಲ್ಲಿ ಆರ್ಥಿಕಸಚಿವ ಚಿಂತಾಮಣಿ ದೇಶಮುಖ್‌ರವರು ತಿಳಿಸಿದರು.

ರೈಲ್ವೆ ಮುಷ್ಕರ ಅನಿವಾರ್ಯ

ಅಖಿಲಭಾರತ ರೈಲ್ವೆ ಫೆಡರೇಷನ್ನಿನ ಜನರಲ್ ಕೌನ್ಸಿಲ್ಲು ಮುಂಬೈಯಲ್ಲಿ ಈತಿಂಗಳು ೨೪-೨೫ ರಲ್ಲಿ ಸೇರುವುದೆಂದು ಫೆಡರೇಷನ್ ವಕ್ತಾರ ತಿಳಿಸುತ್ತಾನೆ.

ಆ ಸಮಯದಲ್ಲಿ, ಸಾಗಾಣಿಕೆಯ ಮೈತ್ರಿ ಒಪ್ಪಂದಕ್ಕೆ ಬರುವ ಮನೋಭಾವವನ್ನು ತೋರಿಸದಿದ್ದರೆ, ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಬ್ಯಾಲೆಟ್ ತೆಗೆದುಕೊಳ್ಳಲು ಅವಿರೋಧವಾಗಿ ನಿಶ್ಚಯಿಸಲ್ಪಡುವುದು, ಅನಿವಾರ್ಯವಾಗುವುದು, ಎಂದೂ ಅವರು ತಿಳಿಸಿದರು.

ಪ್ರಭಾ ಅಮೋಘ ಪ್ರಾರಂಭ ೧೩-೪-೫೧ ರಿಂದ
ಪ್ರತಿದಿನ ಮೂರು ಆಟಗಳು
ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ
* ಹಲ್ ಚಲ್ *
ಪಾತ್ರ— ನರ್ಗೀಸ್, ದಿಲೀಪ್ ಕುಮಾರ್, ಜೀವನ್, ಸಿತಾರ, ಯಾಕೂಬ್,
ದಿಗ್ದರ್ಶನ— ಎಸ್. ಕೆ. ಓಜ
ಏ. ಸೂ. 13, 14, ಮತ್ತು 15 ನೇ ತಾ||ಗಳಲ್ಲಿ ಮಹಿಳೆಯರಿಗೆ
ಪ್ರತ್ಯೇಕ ಸ್ಥಳದ ಏರ್ಪಾಡು ರದ್ದು ಮಾಡಿರುತ್ತೆ.
(ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು
4 ವಾರ ಮನ್ನಾ ಮಾಡಿರುತ್ತೆ.)

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಮುಂದುವರಿಯಿತು

ಬೆಂಗಳೂರು ಏ. ೧೨

ಸ್ವಾಗತ ಸಮಿತಿಯ ಕೋರಿಕೆಯ ಮೇಲೆ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧಿವೇಶನವು ೧೪, ೧೫ನೇ, ತಾರೀಖುಗಳಲ್ಲಿ ವಾಣೀವಿಲಾಸ ಸಾಗರದಲ್ಲಿ ನಡೆಯಬೇಕಾಗಿದ್ದುದನ್ನು ಮುಂದುವರಿಸಲಾಗಿದೆ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩—೪—೧೯೫೧ನೇ ಶುಕ್ರವಾರ [ಸಂಚಿಕೆ ೧೮೧

ತಾಂಡನ್ನರು ಬೆಂಗಳೂರಿಗೆ

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ತಾಂಡನ್ನರು ೧೪ನೇ ತಾರೀಖು ಬೆಂಗಳೂರಿಗೆ ಬರಲಿರುವರು. ಅಂದು ಸಂಜೆ ೬ ಗಂಟೆಗೆ ಕಾರ್ಯಕರ್ತರನ್ನುದ್ದೇಶಿಸಿ ರೆಸಿಡೆನ್ಸಿಯಲ್ಲಿ ಭಾಷಣ ಮಾಡುವರು.

ಜಗತ್ತಿನ ಶಾಂತಿಯು ವ್ಯಕ್ತಿಗಿಂತ ದೊಡ್ಡದು

ಮೂರನೇ ಮಹಾ ಯುದ್ಧವನ್ನು ತಡೆಗಟ್ಟಬೇಕೆನ್ನುವುದೇ ಅಮೆರಿಕಾದ ಮುಖ್ಯ ಗುರಿ. ಇದನ್ನು ಸಾಧಿಸಲು ದಕ್ಷರಾಗಿಲ್ಲದವರನ್ನು ಅಥವಾ ಅಮೆರಿಕಾನೀತಿಗೆ ವಿರುದ್ಧ ನಡೆಯುವವರನ್ನು ಕೆಲಸದಲ್ಲಿಟ್ಟುಕೊಂಡಿದ್ದರೆ ಪರಿಣಾಮವು ವಿಷಮಿಸುವುದು. ಅದಕ್ಕಾಗಿಯೇ ಜ॥ ಮೆಕಾರ್ಥರನ್ನು ಅವರ ಕೆಲಸದಿಂದ ನಿವೃತ್ತಿಗೊಳಿಸಬೇಕಾಗಿಯಿತು. ಅಮೆರಿಕಾ ನೀತಿಗೆ ವಿರೋಧವಾಗಿ ಅವರು ನಡೆದಿದ್ದಕ್ಕೆ ಅನೇಕ ದೃಷ್ಟಾಂತಗಳಿವೆ.

ಕೊರಿಯಾ ಯುದ್ಧವು ಅಲ್ಲಿಯೇ ಮುಕ್ತಾಯವಾಗಿ ಮುಂದಕ್ಕೆ ಬೆಳೆಯದಂತೆ ನಾವು ಕಾರ್ಯಾಚರಣೆ ನಡೆಸಬೇಕು. ಸಾಧ್ಯ ...ಷ್ಟು ... ಕದನ ಮುಕ್ತಾಯವಾಗಿ ಕೊರಿಯಾದಲ್ಲಿ ಶಾಂತಿ ತಲೆದೋರಿ ವಿದೇಶೀ ಸೈನ್ಯಗಳೆಲ್ಲಾ ಅಲ್ಲಿಂದ ಹೊರಗೆ ಹೊರಡಬೇಕು. ಎಂಬುದೇ ನಮ್ಮ ನೀತಿ. ಆದರೆ ಮೆಕಾರ್ಥರು ಹೇಳಿದಂತೆ ಮಂಚೂರಿಯಾ ಅಥವಾ ಚೀಣಾ ಮೇಲೆ ಬಾಂಬು ಮಾಡುವುದು, ನ್ಯಾಷನಲಿಸ್ಟ ಚೀಣಾ ಸೈನ್ಯದ ಸಹಾಯಪಡೆಯುವುದು ಇವೆಲ್ಲವೂ ಯುದ್ಧವನ್ನು ಬೆಳೆಸಿದಂತಾಗಿ ಮೂರನೇ ಮಹಾಯುದ್ಧಕ್ಕೆ ತಳಹದಿಯಾಗುವುದು. ಆದ್ದರಿಂದ ಜನರಲ್ ಮೆಕಾರ್ಥರನ್ನು ನಾವು ನಿವೃತ್ತಿಗೊಳಿಬೇಕಾಯಿತು. ಜಗತ್ತಿನ ಶಾಂತಿಯು ಮುಖ್ಯವೇ ಹೊರತು ವ್ಯಕ್ತಿಯದಕ್ಷತೆ ಮೈತ್ರಿವ್ಯವು ಅಷ್ಟು ಮುಖ್ಯವಲ್ಲವೆಂದು ಟ್ರೂಮನ್ನರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಹೇಳಿದರು.

ಈ ಬದಲಾವಣೆಯಿಂದ ದೂರಪ್ರಾಚ್ಯದಲ್ಲಿ ಅಮೆರಿಕಾ ನೀತಿಯಲ್ಲೇನೂ ಬದಲಾವಣೆಯಿಲ್ಲವೆಂದೂ ಹೇಳಿದರು.

ಜನರಲ್ ಮೆಕಾರ್ಥರನ್ನು ಅಮೆರಿಕಾಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಉಮೇದುವಾರರನ್ನಾಗಿ ರೂಪಿಸುವ ಉಪನ್ಯಾಸ ಪ್ರವಾಸಕ್ಕಾಗಿ ಹತ್ತುಲಕ್ಷ ಡಾಲರುಗಳನ್ನು ಕೊಡುವುದಾಗಿ ಜನರಲ್ಲರಿಗೆ ತಂತಿ ಮೂಲಕ ತಾವು ತಿಳಿಸಿರುವುದಾಗಿ

ಆಂಧ್ರ ಕಾಂಗ್ರೆಸ್ ಅಧ್ಯಕ್ಷರು

ಆಂಧ್ರಪ್ರಾಂತ್ಯ ಕಾಂಗೆಸ್ ಅಧ್ಯಕ್ಷರಾಗಿ ಶ್ರೀ ಸಂಜೀವರೆಡ್ಡಿಯವರು ಚುನಾಯಿತರಾದರು. ೫೯ ಓಟುಗಳು ಕಡಮೆಯಾಗಿ ಪ್ರೊ॥ ಎನ್. ಜಿ. ರಂಗಾರವರು ಪರಾಜಿತರಾದರು.

ಶಿಲಾಪೀಠ ದೊರೆಯಿತು

ಲಂಡನ್ನಿನ ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಮಾಯವಾಗಿದ್ದ ಶಿಲಾಪೀಠವು ಸ್ಕಾಟ್ಲೆಂಡಿನ ಒಂದು ಭಾಗದಲ್ಲಿ ದೊರೆಕಿದೆ.

ಬ್ಯಾಂಕುಗಳಿಗೆ ರಜಾ

೧೪ನೇ ತಾರೀಖು ಶನಿವಾರ ತಮಿಳು ಹೊಸವರ್ಷದ ಪ್ರಯುಕ್ತ ಸಂಸ್ಥಾನದ ಎಲ್ಲಾ ಬ್ಯಾಂಕುಗಳಿಗೆ ಪೂರಾ ರಜಾದಿನವನ್ನಾಗಿ ಸರ್ಕಾರ ಆಜ್ಞೆ ಮಾಡಿದೆ.

ದೆಹಲಿಗೆ ಹಿಂತಿರುಗಿದರು

ಬೆಂಗಳೂರು ಏ. ೧೨

ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರವರು ಈ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಹಿಂತಿರುಗಿದರು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಇತರ ಸಚಿವರು, ಅನೇಕ ಉನ್ನತಾಧಿಕಾರಿಗಳು ಬಾಸಗಿ ಮಹನೀಯರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಅವರನ್ನು ಬೀಳ್ಕೊಟ್ಟರು.

ಅಮೆರಿಕದ ಫ್ಲಾಗ್ ಫೌಂಡೇಷನ್ನಿನ ಸ್ಥಾಪಕರಾದ ಗ್ರಿಡ್ಲೆ ಆಡಮ್ಸ್‌ರವರು ಪ್ರಕಟಿಸಿರುವರು,

ಜನರಲ್ ಮೆಕಾರ್ಥರು ಈ ಸಂಸ್ಥೆಯ ಗೌರವಾಧ್ಯಕ್ಷರು, ಈ ಸಂಸ್ಥೆ ದೇಶಾಭಿಮಾನದ ಲಾಭ ಬಯಸದ ಸಂಸ್ಥೆಯೆಂದೂ ಅಮೆರಿಕದ ಧ್ವಜಗಳನ್ನು ರಾಷ್ಟ್ರೀಯ ಯೋಗ್ಯ ರೀತಿಯಲ್ಲಿ ಬಳಸುವ ಮತ್ತು ಪ್ರದರ್ಶಿಸುವ ವಿಧಾನಗಳನ್ನು ನಾಗರಿಕರಿಗೆ ಕಲಿಸಿಕೊಡುವುದೇ ಈ ಸಂಸ್ಥೆಯ ಉದ್ದೇಶವೆಂದೂ ಹೇಳಲಾಗಿದೆ.

೨೫ ಸಾವಿರ ರೂ. ಕೊಡಲಾಯಿತು

ಬೆಂಗಳೂರು ಏ. ೧೨

ಅಸ್ಸಾಂ ಪರಿಹಾರ ನಿಧಿ ಶೇಖರಣೆಗಾಗಿ ಏರ್ಪಡಿಸಿರುವ ಅಖಿಲ ಭಾರತ ಕೈಗಾರಿಕಾ ಮತ್ತು ಲಲಿತ ಕಲಾ ಪ್ರದರ್ಶನದ ಪ್ರಾರಂಭೋತ್ಸವವನ್ನು ಇಂದು ರಾಷ್ಟ್ರಾಧ್ಯಕ್ಷರು ನಡೆಸಿದರು.

ವಸ್ತು ಪ್ರದರ್ಶನದ ಅಧ್ಯಕ್ಷರಾದ ಶ್ರೀ ನಾಗಯ್ಯರೆಡ್ಡಿಯವರು ಸ್ವಾಗತ ಭಾಷಣ ಮಾಡುತ್ತಾ ಅಸ್ಸಾಂ ಪರಿಹಾರ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಶೇಖರಿಸಬೇಕೆಂದಿರುವೆವು ಎಂದು ತಿಳಿಸಿ ೨೫,೦೦೦ ರೂಪಾಯಿಗಳ ಚೆಕ್ಕನ್ನು ಗಂಧದ ಕರಂಡದಲ್ಲಿಟ್ಟು ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸಿದರು.

ಟ್ರೂಮನ್ನರ ವಿಚಾರಣೆ

ಜನರಲ್ ಮೆಕಾರ್ಥರ್‌ನ್ನು ಕೆಲಸದಿಂದ ನಿವೃತ್ತಿ ಮಾಡಿದ ವಿಷಯದಲ್ಲಿ ಟ್ರೂಮನ್ನರನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಹೇಳುತ್ತಲಿದ್ದ ರಿಪೊಬ್ಲಿಕ್ ಗುಂಪಿಗೆ ಸೇರಿದ ವಿರೋಧ ಪಕ್ಷದವರು, ಮೆಕಾರ್ಥರನ್ನು ಇದಷ್ಟು ಜಾಗ್ರತೆಯಾಗಿ ಅಮೆರಿಕಾಕ್ಕೆ ಬರಮಾಡಿಕೊಂಡು ನಿಜಾಂಶವನ್ನೆಲ್ಲಾ ಅರಿತುಕೊಂಡು ಅನಂತರ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿರುವರು. ಟ್ರೂಮನ್ನರ ವಿದೇಶಾಂಗ ನೀತಿಯ ವಿರುದ್ಧವಾಗಿ ಜನರಲ್ ಮೆಕಾರ್ಥರ್ ಪ್ರಚಾರವನ್ನು ನಡೆಯಿಸುವರೆಂದೂ ಕೆಲವರು ಹೇಳುತ್ತಲಿರುವರು.

ಮಸೂದೆ ಮುಂದೆ ಹೋಯಿತು

ವನಸ್ಪತಿ ತುಪ್ಪ ತಯಾರಿಕೆಯ ನಿಷೇಧಕ್ಕಾಗಿ ಪಂಡಿತ ಠಾಕೂರ'ದಾಸ' ಭಾರ್ಗವರವರು ಮಂಡಿಸಿದ್ದ ಖಾಸಗಿ ಮಸೂದೆಯನ್ನೂ ಗೋರಕ್ಷಣೆ ಮಸೂದೆಯನ್ನೂ ಬರುವ ಪಾರ್ಲಿಮೆಂಟು ಅಧಿವೇಶನಕ್ಕೆ ಮುಂದಕ್ಕೆ ಹಾಕಲಾಯಿತು.

† ಮೈಸೂರು ನಗರದ ಟೆಲಿಫೋನ್ ಚಂದಾದಾರರ ಸಭೆಯು ನಿನ್ನೆ ಪೋಸ್ಟಲ್ ಕೆಲಸಗಾರರ ಸಂಘದ ಕಛೇರಿಯಲ್ಲಿ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು.

೧. ಮೈಸೂರು ಸಂಸ್ಥಾನದ ಟೆಲಿಫೋನ್ ಇಲಾಖೆಯು ಕೇಂದ್ರ ಸರ್ಕಾರದ ಆಡಳಿತಕ್ಕೆ ಸೇರಿದಂದಿನಿಂದ ಅದರ ಆಡಳಿತವು ತೀರಾ ಕೆಟ್ಟುಹೋಗಿ ಟೆಲಿಫೋನ್ ಚಂದಾದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದಕ್ಕಾಗಿ ಟೆಲಿಫೋನ್ ಇಲಾಖಾ ಆಡಳಿತವನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ.

೨. ಬೆಂಗಳೂರು ಮೈಸೂರಿಗೆ ೩ ನಿಮಿಷಕ್ಕೆ ಟ್ರಂಕ್ ಕಾಲಿಗೆ ೦-೧೨-೦ ಇದ್ದುದನ್ನು ೨-೬-೦ ಗೆ ಏರಿಸಿರುವುದು ಹಾಗೂ ತಿಂಗಳ ಚಂದಾವನ್ನು ದೂರದ ಪ್ರಕಾರ ನಿರ್ಧರಿಸಿ ಅದರಂತೆ ಚಾರ್ಜು ಹೆಚ್ಚಿಸಿ ಅದರ ಮೇಲೆ ಸರ್ ಚಾರ್ಜು ವಸೂಲಿ ಮಾಡುವುದಾಗಿ ನೋಟೀಸ್ ಕೊಟ್ಟಿರುವುದರಿಂದ ಮೈಸೂರು ಸಂಸ್ಥಾನದ ಟೆಲಿಫೋನ್ ಚಂದಾದಾರರು ಮತ್ತು ಸಾರ್ವಜನಿಕರಿಗೆ ಹೊರಲಾರದ ಹೊರೆಯಾದ್ದರಿಂದ ಟ್ರಂಕ್ ಚಾರ್ಜನ್ನು ಕೂಡಲೇ ಮೊದಲಿನಷ್ಟಕ್ಕೆ ಇಳಿಸಬೇಕಾಗಿಯೂ ಮತ್ತು ತಿಂಗಳಚಂದಾವನ್ನು ಹೆಚ್ಚಿಸಬಾರದಾಗಿಯೂ ಈ ಸಭೆಯು ಇಂಡಿಯಾ ಸರಕಾರವನ್ನು ಒತ್ತಾಯಪಡಿಸುತ್ತದೆ.

೩. ಈಗ ಟೆಲಿಫೋನ್‌ಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸಬೇಕಾದರೆ ಒಂದು ಗೊತ್ತಾದ ಹಾಗೂ ಜವಾಬ್ದಾರಿಯುತವಾದ ಕಛೇರಿ ಈ ನಗರದಲ್ಲಿಲ್ಲದ ಮಾತ್ರವಲ್ಲದೆ ಮದ್ರಾಸ್ ಕಡೆತೋರಿಸುತ್ತಿರುವುದರಿಂದ ಚಂದಾದಾರರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ಟೆಲಿಫೋನ್ ಇರುವ ಊರುಗಳಲ್ಲಿ ಒಂದೊಂದು ಜವಾಬ್ದಾರಿಯುತ ಕಛೇರಿಯನ್ನು ತೆರೆಯಬೇಕೆಂತೆ ಈ ಸಭೆಯು ಒತ್ತಾಯಪಡಿಸುತ್ತದೆ.

೪. ಇತರ ವಿಚಾರಗಳ ಬಗ್ಗೆ ಅಧ್ಯಕ್ಷರು ವಿವರವಾದ ಅಂಕಿಅಂಶಗಳೊಡನೆ ಭಾರತ ಸರಕಾರದೊಡನೆ ಪತ್ರವ್ಯವಹಾರ ನಡೆಸಲು ಅಧಿಕಾರ ಕೊಡಲಾಯಿತು.

ಸಮಾಚಾರ

ತಾ|| ೧೨-೪-೧೯೫೧ನೇ ಗುರುವಾರ

ಶಿಸ್ತು ಬೆಳೆಯಬೇಕು

ಭಾರತವು ಸ್ವತಂತ್ರ ರಾಷ್ಟ್ರವಾಗಿ ನಾಲ್ಕು ವರ್ಷಗಳಾಗುತ್ತ ಬಂದಿತು ಭಾರತದ ನೂತನ ರಾಜ್ಯಾಂಗವು ಜಾರಿಗೆ ಬಂದು, ಪ್ರಥಮ ರಾಷ್ಟ್ರಾಧ್ಯಕ್ಷರು ತಮ್ಮ ನೂತನ ಸ್ಥಾನವನ್ನು ಅಲಂಕರಿಸಿ ಒಂದು ವರ್ಷವಾಯಿತು. ಭಾರತದಲ್ಲಿರುವ ಪ್ರಜಾವರ್ಗದವರೆಲ್ಲರೂ ರಾಷ್ಟ್ರಾಧ್ಯಕ್ಷರ ಸ್ಥಾನಮಾನಗಳೇನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ಸರ್ಕಾರಿ ನೌಕರರು ಸಹ ಅದನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಈ ವಿಷಯದಲ್ಲಿ ಎಲ್ಲಾ ಇಲಾಖೆಗಳಿಗೂ ತಕ್ಕ ತಿಳುವಳಿಕೆಯನ್ನು ಕೊಡುವುದಲ್ಲದೆ ಶಾಲೆಗಳಲ್ಲೂ ಸಹ ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಉಪಾಧ್ಯಾಯರು ತಿಳುವಳಿಕೆ ಕೊಡುವಂತೆ ಮಾಡುವುದು ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಮುಖ್ಯ ಕರ್ತವ್ಯ.

ಆಂಗ್ಲೇಯರ ಆಳ್ವಿಕೆಯಲ್ಲಿ ವೈಸರಾಯಿಗಳ ಭೇಟಿಯ ಕಾಲದಲ್ಲಿ ಸರ್ಕಾರಿ ಅಧಿಕಾರಿಗಳು, ಅದರಲ್ಲೂ ಪೋಲೀಸ್, ಮಿಲಿಟರಿ ಅಧಿಕಾರಿಗಳು ತಮ್ಮ ತಮ್ಮ ಹುದ್ದೆಗೆ ವಿಧಿವತ್ತಾಗಿ ನಿಯಮಿಸಿರುವ ಉಡುಪುಗಳನ್ನು ಧರಿಸಿಕೊಂಡು ತಮ್ಮ ಕಾರ್ಯದಲ್ಲಿ ನಿರತರಾಗುತ್ತಲಿದ್ದರು ಅಲ್ಲದೆ ಆ ದಿನ ಶಾಲಾ ಕಾಲೇಜುಗಳಿಗೆಲ್ಲಾ ರಜವನ್ನು ಕೊಟ್ಟು ಎಲ್ಲಾ ಉಪಾಧ್ಯಾಯರೂ ಬಾಲಕ ಬಾಲಕಿಯರನ್ನು ಕರೆದುಕೊಂಡು ಬಂದು ಅತಿಥಿಗಳು ಆಗಮಿಸಿ ಮೆರವಣಿಗೆ ಹೋಗುವ ಕಾಲದಲ್ಲಿ ರಸ್ತೆಗಳ ಅಕ್ಕಪಕ್ಕಗಳಲ್ಲಿ ನಿಂತು ಹರ್ಷೋದ್ಗಾರಗಳಿಂದ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಲು ಕಡ್ಡಾಯವಾದ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಲಿದ್ದರು

ಈಗ ನಮ್ಮ ರಾಷ್ಟ್ರಾಧ್ಯಕ್ಷರು ಬಂದಾಗ ಈ ರೀತಿಯಾಗ ಸಮಾರಂಭವನ್ನು ಏರ್ಪಡಿಸಲು ಯಾವ ಪ್ರತಿಬಂಧಕವೇನಾದರೂ ಇತ್ತೆ? ಪ್ರಪಂಚ ಮಹಾರಾಷ್ಟ್ರಗಳಲ್ಲಿ ಭಾರತವು ಒಂದು ಹಿರಿಯ ರಾಷ್ಟ್ರ. ಭಾರತದ ರಾಷ್ಟ್ರಾಧ್ಯಕ್ಷರು ಭಾರತದ ಚಕ್ರವರ್ತಿಗಳು. ಹಿಂದೆ ವೈಸ್‌ರಾಯ್‌ಗಳಿಗೆ ಸಲ್ಲುತ್ತಿದ್ದ ಗೌರವಕ್ಕಿಂತಲೂ ಹೆಚ್ಚಿಗೆ ಗೌರವ ಇವರಿಗೆ ಸಲ್ಲಬೇಕಾಗಿದೆ. ಸಲ್ಲಿಸಬೇಕಾದುದು ಭಾರತದಲ್ಲಿರುವ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಈ ಕರ್ತವ್ಯ ಪರಿಪಾಲನೆಗೆ ಸರ್ಕಾರವು ಆಗಾಗ್ಗೆ ತಕ್ಕ ತಿಳುವಳಿಕೆ ಕೊಡಬೇಕಾಗಿದೆ ಈಗಿನಿಂದ ನಮ್ಮ ಚಿಕ್ಕ ಮಕ್ಕಳುಗಳಲ್ಲಿ ದೇಶಭಕ್ತಿ, ರಾಷ್ಟ್ರಾಧ್ಯಕ್ಷರಿಗೆ ಗೌರವ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಮುಂತಾದ ವಿಷಯಗಳಲ್ಲಿ ತಮ್ಮ ಕರ್ತವ್ಯವೇನೆಂಬುದು ವಿಶೇಷವಾಗಿ ಬೆಳೆಯಬೇಕಾಗಿದೆ. ಈ ರೀತಿಯಾದ ಸಮಾರಂಭಗಳೇ ಅವರಿಗೆ ಮಾರ್ಗದರ್ಶಕವಾಗಿರುತ್ತವೆ

ದಸರಾ, ವರ್ಧಂತಿ ಮೆರವಣಿಗೆ, ದರ್ಬಾರು ಸಂದರ್ಭಗಳಲ್ಲಿ ನಮ್ಮ ಮಿಲಿಟರಿ ಮತ್ತು ಪೋಲೀಸು ಅಧಿಕಾರಿಗಳು ತಮ್ಮ ತಮ್ಮ ಹುದ್ದೆಗೆ ನಿಗದಿಯಾದ ಉಡುಪುಗಳಿಂದ ಅಲಂಕೃತರಾಗಿ ಕರ್ತವ್ಯನಿಷ್ಠರಾಗುವರು. ರಾಷ್ಟ್ರಾಧ್ಯಕ್ಷ[illegible]ಲೂ ಅದೇ ರೀತಿ ಉಡುಪು ಧರಿಸಿ ಶಿಸ್ತಿನಿಂದಿರಬೇಡವೇ? ಮೊನ್ನೆ ರಾಷ್ಟ್ರಾಧ್ಯಕ್ಷರು ರಾಜಧಾನಿಗೆ ಆಗಮಿಸಿದಾಗ ಒಬ್ಬ ಪೋಲೀಸ್ ಅಧಿಕಾರಿಯೂ ತನ್ನ ಪೂರ್ತಾ ಉಡುಪಿನಲ್ಲಿರಲಿಲ್ಲ. ಇವರಿಗಿರುವ ಪೋಲೀಸ್ ಉಡುಪು, ಕತ್ತಿ ಮುಂತಾದುವನ್ನೆಲ್ಲಾ ಅವರು ಈಗಲೂ ಯಾಕೆ ಧರಿಸಬಾರದಾಗಿತ್ತು. ಅದನ್ನು ಬಿಟ್ಟು ತಾವು ನಿತ್ಯವೂ ಹಾಕುವ ಸಾಧಾರಣ ಉಡುಪನ್ನು ಧರಿಸಿ, ಅದರಲ್ಲೂ ಬುಷ್‌ಕೋಟ್, ಕೈನಲ್ಲಿ ಸಣ್ಣ ದೊಣ್ಣೆ ಮುಂತಾದುವುಗಳಿಂದ ಓಡಾಡುತ್ತಲಿದ್ದುದು ಈ ಸಮಾರಂಭಕ್ಕೆ ತಕ್ಕ ಭೂಷಣವನ್ನು ಕೊಡುವುದೇ? ಕೊನೆಗೆ ವಿಮಾನನಿಲ್ದಾಣದಲ್ಲಿ ಕೂಡ ರಾಷ್ಟ್ರಾಧ್ಯಕ್ಷರಿಗೆ ಅಧಿಕಾರಿಗಳನ್ನು ಪರಿಚಯಮಾಡುವ ಸಮಯದಲ್ಲಿ ಪೋಲೀಸ್ ಮುಖ್ಯಾಧಿಕಾರಿಗಳು, ಆ ಸ್ಥಾನಕ್ಕೆ ನಿಗದಿಯಾದ ಪೂರ್ತಾ ಪೋಲೀಸ್ ಡ್ರೆಸ್ ಹಾಜರಿನಲ್ಲಿ ಬುಷ್‌ಕೋಟ್ ಹಾಕಿಕೊಂಡು ತಮ್ಮ ದಿನಚರಿ ಉಡುಪಿನಲ್ಲಿದ್ದುದು ಅಷ್ಟು ವಿಹಿತವಲ್ಲ

ಸರ್ಕಾರಿ ಅಧಿಕಾರಿಗಳೂ ಇತರರೂ ಇಂತಹ ಸಮಾರಂಭಗಳಲ್ಲಿ ಭಾಗವಹಿಸುವಾಗ ಒಂದು ನಿಗದಿಯಾದ ಉಡುಪು ಧರಿಸಿ ಇರುವಂತೇರ್ಪಡಿಸುವುದೂ ಸೂಕ್ತ.

ಈ ವಿಷಯಗಳನ್ನೆಲ್ಲಾ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಪರಿಶೀಲಿಸಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡು ಹಿಂದೆ ಚಕ್ರವರ್ತಿ, ವೈಸರಾಯ್ ಮುಂತಾದವರು ಬಂದಾಗ ಯಾವ ರೀತಿ ಶಿಸ್ತಿನಿಂದ ನಡೆಯುತ್ತಲಿದ್ದರೋ ಹಾಗೆಯೇ ನಡೆಯುವಂತೇರ್ಪಡಿಸಿ ನಮ್ಮ ದೇಶದ ಗೌರವವು ಇನ್ನೂ ಹೆಚ್ಚುವಂತೆ ಮಾಡುವರೆಂದು ನಂಬಿದೆ.

ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ

ಮೈಸೂರು ಏ. ೧೦

ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಶ್ರೀ ಜಹಗೀರ್‌ದಾರ್‌ರವರನ್ನು ಇಂದುಸಂಜೆ ಪತ್ರಿಕೋದ್ಯೋಗಿಸಂಘದವರು ಬಮಾಡಿಕೊಂಡು ಸತ್ಕರಿಸಿದರು ಕರ್ಣಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯವಾಗಿ ಅವರು ಮಾತನಾಡುತ್ತಾ ಇನ್ನೂ ಕೆಲವು ವರ್ಷಗಳಲ್ಲಿ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ಆಗಲು ಏರ್ಪಾಡುಮಾಡಲಾಗುವುದೆಂದು ಮೈಸೂರಿನ ವಿಶ್ವವಿದ್ಯಾನಿಲಯದ ಕನ್ನಡ ಪುಸ್ತಕ ಪ್ರಕಟಣ ಶಾಖೆಯವರ ಸಹಕಾರದಿಂದ ಕನ್ನಡ ಬೆಳವಣಿಗೆಗೆ ಮತ್ತು ಪಠ್ಯ ಮತ್ತು ಇತರ ಪುಸ್ತಕಗಳ ರಚನೆ ಮತ್ತು ಪ್ರಕಟಣೆ ನಡೆಯಬೇಕಾಗಿದೆ ಎಂದು ಅದಕ್ಕೆ ಮೈಸೂರಿನ ಎಲ್ಲಾ ಕನ್ನಡಿಗರ ಸಹಕಾರವನ್ನು ಕೋರಿ, ಸಂಪೂರ್ಣ ಸಹಕಾರ ದೊರೆಯುವುದರಲ್ಲಿ ತಮಗೆ ಭರವಸೆ ಇರುವುದಾಗಿ ತಿಳಿಸುತ್ತಾರೆ.

ಬಾಲ್ಯವಿವಾಹ ಕಾನೂನು

ಭಾರತ ಬಾಲ್ಯವಿವಾಹ ನಿಷೇಧಕಾನೂನನ್ನು ಏಪ್ರಿಲ್ ೧ನೇ ತಾ|| ನಿಂದ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವುದೆಂದು ಆಜ್ಞೆ ಹೊರಟಿದೆ. ಈ ಕಾನೂನಿನಂತೆ ೧೫ ವರ್ಷಕ್ಕೆ ಕಡಮೆ ಇರುವ ಬಾಲಕಿಯರಿಗೆ, ೧೮ ವರ್ಷಕ್ಕೆ ಕಡಮೆಯಿರುವ ಬಾಲಕರಿಗೆ ವಿವಾಹ ಮಾಡಿದಲ್ಲಿ ಶಿಕ್ಷಾರ್ಹವಾಗಿದೆ.

ತೆಲಂಗಾಣದಲ್ಲಿ ಹಾವಳಿ

ಭಾರತದಲ್ಲೆಲ್ಲಾ ತೆಲಂಗಾಣವು ಕಮ್ಯೂನಿಸ್ಟರ ಹಾವಳಿಗೆ ಸಿಕ್ಕಿ ಬಹಳ ಕಷ್ಟಕ್ಕೀಡಾದ ಪ್ರದೇಶವಾಗಿದೆ. ಲೂಟಿ, ದರೋಡೆ, ಆಹಾರ ಸಾಮಗ್ರಿಗಳಿಗೆ ಬೆಂಕಿ ಹಾಕುವುದು, ಖೂನಿ ಮುಂತಾದ ದುಷ್ಕೃತ್ಯಗಳು ಇನ್ನೂ ನಿಂತಿಲ್ಲವೆಂದು ಗೃಹಸಚಿವರು ಪಾರ್ಲಿಮೆಂಟನಲ್ಲಿ ತಿಳಿಸಿರುವರು.

ರೂಪಾಯಿನ ಮೌಲ್ಯ ವ್ಯತ್ಯಾಸ

"ಭಾರತದ ಹಿತದೃಷ್ಟಿಯಿಂದ ಈ ಗಡೂಪಾಯಿಯ ಬೆಲೆಯಲ್ಲಿ ವ್ಯತ್ಯಾಸಗೊಳಿಸುವುದು ಸರಿಯಲ್ಲವೆಂಬ ನಿರ್ಧಾರಕ್ಕೆ ಬಂದಿದ್ದೇನೆ ಹಾಗೆಮಾಡಿದ್ದಲ್ಲಿ ಒಳ್ಳೆಯದಕ್ಕಿಂತ ಕೇಡಿನ ಸಂಭವವೇ ಹೆಚ್ಚು."

ಎಂಬುದಾಗಿ ಪಾರ್ಲಿಮೆಂಟಿನಲ್ಲಿ ಅರ್ಥಸಚಿವ ಚಿಂತಾಮಣಿ ದೇಶಮುಖ್‌ರವರು ತಿಳಿಸಿದರು.

ರೈಲ್ವೆ ಮುಷ್ಕರ ಅನಿವಾರ್ಯ

ಅಖಿಲಭಾರತ ರೈಲ್ವೆ ಫೆಡರೇಷನ್ನಿನ ಜನರಲ್ ಕೌನ್ಸಿಲು ಮುಂಬೈಯಲ್ಲಿ ಈ ತಿಂಗಳು ೨೮ ೨೯ರಲ್ಲಿ ಸೇರುವುದೆಂದು ಫೆಡರೇಷನ್ ವಕ್ತಾರ ತಿಳಿಸುತ್ತಾನೆ.

ಆ ಸಮಯದಲ್ಲಿ, ಸರ್ಕಾರವು ಮೈತ್ರಿ ಒಪ್ಪಂದಕ್ಕೆ ಬರುವ ಮನೋಭಾವವನ್ನು ತೋರಿಸದಿದ್ದರೆ, ಸಾರ್ವತ್ರಿಕ ಮುಷ್ಕರವನ್ನು ನಡೆಸಲು ಬ್ಯಾಲೆಟ್ ತೆಗೆದುಕೊಳ್ಳಲು ಅವಿರೋಧವಾಗಿ ನಿಶ್ಚಯಿಸಲ್ಪಡುವುದು, ಅನಿವಾರ್ಯವಾಗುವುದು, ಎಂದೂ ಅವರು ತಿಳಿಸಿದರು.

ಪ್ರಭಾ ಅಮೋಘ ಪ್ರಾರಂಭ ೧೩-೪-೫೧ ರಿಂದ
ಪ್ರತಿದಿನ ಮೂರು ಆಟಗಳು
ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ
* ಹಲ್ ಚಲ್ *
ಪಾತ್ರ— ನರ್ಗೀಸ್, ದಿಲೀಪ್ ಕುಮಾರ್, ಜೀವನ್, ಸಿತಾರ, ಯಾಕೂಬ್,
ದಿಗ್ದರ್ಶನ— ಎಸ್. ಕೆ. ಓಜ
ಏ ಪ್ರೊ - 13, 14, ಮತ್ತು 15 ನೇ ತಾ||ಗಳಲ್ಲಿ ಮಹಿಳೆಯರಿಗೆ
ಪ್ರತ್ಯೇಕ ಸ್ಥಳದ ಏರ್ಪಾಡು ರದ್ದು ಮಾಡಿರುತ್ತೆ.
(ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು
4 ವಾರ ಮನ್ನಾ ಮಾಡಿರುತ್ತೆ.)

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್ ಸ್ವಾಮಿ, ಟೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩—೪—೧೯೫೧ನೇ ಶುಕ್ರವಾರ [ಸಂಚಿಕೆ ೧೮೧

ಮುಂದುವರಿಯಿತು

ಬೆಂಗಳೂರು ಏ. ೧೨

ಸ್ವಾಗತ ಸಮಿತಿಯ ಕೋರಿಕೆಯ ಮೇಲೆ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧಿವೇಶನವು ೧೪, ೧೫ನೇ ತಾರೀಖುಗಳಲ್ಲಿ ವಾಣೀವಿಲಾಸ ಸಾಗರದಲ್ಲಿ ನಡೆಯಬೇಕಾಗಿದ್ದುದನ್ನು ಮುಂದುವರಿಸಲಾಗಿದೆ.

ಟಾಂಡನ್ನರು ಬೆಂಗಳೂರಿಗೆ

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ ಟಾಂಡನ್ನರು ೧೪ನೇ ತಾರೀಖು ಬೆಂಗಳೂರಿಗೆ ಬರಲಿರುವರು. ಅಂದು ಸಂಜೆ ೬ ಗಂಟೆಗೆ ಕಾರ್ಯಕರ್ತರನ್ನುದ್ದೇಶಿಸಿ ರೆಸಿಡೆನ್ಸಿಯಲ್ಲಿ ಭಾಷಣ ಮಾಡುವರು.

ಜಗತ್ತಿನ ಶಾಂತಿಯು ವ್ಯಕ್ತಿಗಿಂತ ದೊಡ್ಡದು

ಮೂರನೇ ಮಹಾ ಯುದ್ಧವನ್ನು ತಡೆಗಟ್ಟಬೇಕೆನ್ನುವುದೇ ಅಮೆರಿಕಾದ ಮುಖ್ಯ ಗುರಿ. ಇದನ್ನು ಸಾಧಿಸಲು ದಕ್ಷರಾಗಿಲ್ಲದವರನ್ನು ಅಥವಾ ಅಮೆರಿಕಾನೀತಿಗೆ ವಿರುದ್ಧ ನಡೆಯುವವರನ್ನು ಕೆಲಸದಲ್ಲಿಟ್ಟುಕೊಂಡಿದ್ದರೆ ಪರಿಣಾಮವು ವಿಷಮಿಸುವುದು. ಆದಕಾರಣವೇ ಜ|| ಮೆಕಾರ್ಥರನ್ನು ಅವರ ಕೆಲಸದಿಂದ ನಿವೃತ್ತಿಗೊಳಿಸಬೇಕಾಗಿಯಿತು. ಅಮೆರಿಕಾ ನೀತಿಗೆ ವಿರೋಧವಾಗಿ ಅವರು ನಡೆದಿದ್ದಕ್ಕೆ ಅನೇಕ ದೃಷ್ಟಾಂತಗಳಿವೆ.

ಕೊರಿಯಾ ಯುದ್ಧವು ಅಲ್ಲಿಯೇ ಮುಕ್ತಾಯವಾಗಿ ಮುಂದಕ್ಕೆ ಬೆಳೆಯದಂತೆ ನಾವು ಕಾರ್ಯಾಚರಣೆ ನಡೆಸಬೇಕು. ಸಾಧ್ಯವಾಗಷ್ಟು ಬೇಗ ಕದನ ಮುಕ್ತಾಯವಾಗಿ ಕೊರಿಯಾದಲ್ಲಿ ಶಾಂತಿ ತಲೆದೋರಿ ವಿದೇಶೀ ಸೈನ್ಯಗಳೆಲ್ಲಾ ಅಲ್ಲಿಂದ ಹೊರಗೆ ಹೊರಡಬೇಕು. ಎಂಬುದೇ ನಮ್ಮ ನೀತಿ. ಆದರೆ ಮೆಕಾರ್ಥರು ಹೇಳಿದಂತೆ ಮಂಚೂರಿಯಾ ಅಥವಾ ಚೀಣಾ ಮೇಲೆ ಬಾಂಬು ಹಾಕುವುದು, ನ್ಯಾಷನಲಿಸ್ಟ ಚೀಣಾ ಸೈನ್ಯದ ಸಹಾಯಪಡೆಯುವುದು ಇವೆಲ್ಲವೂ ಯುದ್ಧವನ್ನು ಬೆಳೆಸಿದಂತಾಗಿ ಮೂರನೇ ಮಹಾಯುದ್ಧಕ್ಕೆ ತಳಹದಿಯಾಗುವುದು. ಆದ್ದರಿಂದ ಜನರಲ್ ಮೆಕಾರ್ಥರನ್ನು ನಾವು ನಿವೃತ್ತಿಗೊಳಿಬೇಕಾಯಿತು. ಜಗತ್ತಿನ ಶಾಂತಿಯು ಮುಖ್ಯವೇ ಹೊರತು ವ್ಯಕ್ತಿಯದಕ್ಷತೆ ಮೈತ್ರಿವ್ಯವು ಅಷ್ಟು ಮುಖ್ಯವಲ್ಲವೆಂದು ಟ್ರೂಮನ್ನರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಹೇಳಿದರು.

ಈ ಬದಲಾವಣೆಯಿಂದ ದೂರಪ್ರಾಚ್ಯದಲ್ಲಿ ಅಮೆರಿಕಾ ನೀತಿಯಲ್ಲೇನೂ ಬದಲಾವಣೆಯಿಲ್ಲವೆಂದೂ ಹೇಳಿದರು.

ಜನರಲ್ ಮೆಕಾರ್ಥರನ್ನು ಅಮೆರಿಕಾಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಉಮೇದುವಾರರನ್ನಾಗಿ ರೂಪಿಸುವ ಉಪನ್ಯಾಸ ಪ್ರವಾಸಕ್ಕಾಗಿ ಹತ್ತು ಲಕ್ಷ ಡಾಲರುಗಳನ್ನು ಕೊಡುವುದಾಗಿ ಜನರಲ್ಲರಿಗೆ ತಂತಿ ಮೂಲಕ ತಾವು ತಿಳಿಸಿರುವುದಾಗಿ

ಆಂಧ್ರ ಕಾಂಗ್ರೆಸ್ ಅಧ್ಯಕ್ಷರು

ಆಂಧ್ರಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಸಂಜೀವರೆಡ್ಡಿಯವರು ಚುನಾಯಿತರಾದರು. ೫೯ ಓಟುಗಳು ಕಡಮೆಯಾಗಿ ಪ್ರೊ|| ಎನ್. ಜಿ. ರಂಗಾರವರು ಪರಾಜಿತರಾದರು.

ಶಿಲಾಪೀಠ ದೊರೆಯಿತು

ಲಂಡನ್ನಿನ ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಮಾಯವಾಗಿದ್ದ ಶಿಲಾಪೀಠವು ಸ್ಕಾಟ್ಲೆಂಡಿನ ಒಂದು ಭಾಗದಲ್ಲಿ ದೊರಕಿದೆ.

ಬ್ಯಾಂಕುಗಳಿಗೆ ರಜಾ

೧೪ನೇ ತಾರೀಖು ಶನಿವಾರ ತಮಿಳು ಹೊಸ ವರ್ಷದ ಪ್ರಯುಕ್ತ ಸಂಸ್ಥಾನದ ಎಲ್ಲಾ ಬ್ಯಾಂಕುಗಳಿಗೆ ಪೂರ್ತಾ ರಜಾದಿನವನ್ನಾಗಿ ಸರ್ಕಾರ ಆಜ್ಞೆ ಮಾಡಿದೆ.

ದೆಹಲಿಗೆ ಹಿಂತಿರುಗಿದರು

ಬೆಂಗಳೂರು ಏ. ೧೨

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರವರು ಈ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಹಿಂತಿರುಗಿದರು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಇತರ ಸಚಿವರು, ಅನೇಕ ಉನ್ನತಾಧಿಕಾರಿಗಳು ಖಾಸಗಿ ಮಹನೀಯರು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಅವರನ್ನು ಬೀಳ್ಕೊಟ್ಟರು.

ಅಮೆರಿಕದ ಫ್ಲಾಗ್ ಫೌಂಡೇಷನ್ನಿನ ಸ್ಥಾಪಕರಾದ ಗ್ರಿಡ್ಲೆ ಆಡಮ್ಸ್‌ರವರು ಪ್ರಕಟಿಸಿರುವರು,

ಜನರಲ್ ಮೆಕಾರ್ಥರರು ಈ ಸಂಸ್ಥೆಯ ಗೌರವಾಧ್ಯಕ್ಷರು, ಈ ಸಂಸ್ಥೆ ವೇತನಾಭಿಮಾನದ ಲಾಭ ಬಯಸದ ಸಂಸ್ಥೆಯೆಂದೂ ಅಮೆರಿಕದ ಧ್ವಜಗಳನ್ನು ರಾಷ್ಟ್ರೀಯ ಯೋಗ್ಯ ರೀತಿಯಲ್ಲಿ ಬಳಸುವ ಮತ್ತು ಪ್ರದರ್ಶಿಸುವ ವಿಧಾನಗಳನ್ನು ನಾಗರಿಕರಿಗೆ ಕಲಿಸಿಕೊಡುವುದೇ ಈ ಸಂಸ್ಥೆಯ ಉದ್ದೇಶವೆಂದೂ ಹೇಳಲಾಗಿದೆ.

೨೫ ಸಾವಿರ ರೂ. ಕೊಡಲಾಯಿತು

ಬೆಂಗಳೂರು ಏ. ೧೨

ಅಸ್ಸಾಂ ಪರಿಹಾರ ನಿಧಿ ಶೇಖರಣೆಗಾಗಿ ಏರ್ಪಡಿಸಿರುವ ಅಖಿಲ ಭಾರತ ಕೈಗಾರಿಕಾ ಮತ್ತು ಲಲಿತ ಕಲಾ ಪ್ರದರ್ಶನದ ಪ್ರಾರಂಭೋತ್ಸವವನ್ನು ಇಂದು ರಾಷ್ಟ್ರಾಧ್ಯಕ್ಷರು ನಡೆಸಿದರು.

ವಸ್ತು ಪ್ರದರ್ಶನದ ಅಧ್ಯಕ್ಷರಾದ ಶ್ರೀ ನಾಗಯ್ಯರೆಡ್ಡಿಯವರು ಸ್ವಾಗತ ಭಾಷಣ ಮಾಡುತ್ತಾ ಅಸ್ಸಾಂ ಪರಿಹಾರ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಶೇಖರಿಸಬೇಕೆಂದಿರುವೆವು ಎಂದು ತಿಳಿಸಿ ೨೫,೦೦೦ ರೂಪಾಯಿಗಳ ಚೆಕ್ಕನ್ನು ಗಂಧದ ಕರಂಡದಲ್ಲಿಟ್ಟು ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸಿದರು.

ಟ್ರೂಮನ್ನರ ವಿಚಾರಣೆ

ಜನರಲ್ ಮೆಕಾರ್ಥರ್‌ರನ್ನು ಕೆಲಸದಿಂದ ನಿವೃತ್ತಿ ಮಾಡಿದ ವಿಷಯದಲ್ಲಿ ಟ್ರೂಮನ್ನರನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಹೇಳುತ್ತಲಿದ್ದ ರಿಪಬ್ಲಿಕ್ ಗುಂಪಿಗೆ ಸೇರಿದ ವಿರೋಧ ಪಕ್ಷದವರು, ಮೆಕಾರ್ಥರನ್ನು ಆದಷ್ಟು ಜಾಗ್ರತೆಯಾಗಿ ಅಮೆರಿಕಾಕ್ಕೆ ಬರಮಾಡಿಕೊಂಡು ನಿಜಾಂಶವನ್ನೆಲ್ಲಾ ಅರಿತುಕೊಂಡು ಅನಂತರ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿರುವರು. ಟ್ರೂಮನ್ನರ ವಿದೇಶಾಂಗ ನೀತಿಯ ವಿರುದ್ಧವಾಗಿ ಜನರಲ್ ಮೆಕಾರ್ಥರ್ ಪ್ರಚಾರವನ್ನು ನಡೆಯಿಸುವರೆಂದೂ ಕೆಲವರು ಹೇಳುತ್ತಲಿರುವರು.

ಮಸೂದೆ ಮುಂದೆ ಹೋಯಿತು

ವನಸ್ಪತಿ ತುಪ್ಪ ತಯಾರಿಕೆಯ ನಿಷೇಧಕ್ಕಾಗಿ ಪಂಡಿತ ಠಾಕೂರ'ದಾಸ' ಭಾರ್ಗವರವರು ಮಂಡಿಸಿದ್ದ ಖಾಸಗಿ ಮಸೂದೆಯನ್ನೂ ಗೋರಕ್ಷಣೆ ಮಸೂದೆಯನ್ನೂ ಬರುವ ಪಾರ್ಲಿಮೆಂಟು ಅಧಿವೇಶನಕ್ಕೆ ಮುಂದಕ್ಕೆ ಹಾಕಲಾಯಿತು.

† ಮೈಸೂರು ನಗರದ ಟೆಲಿಫೋನ್ ಚಂದಾದಾರರ ಸಭೆಯು ನಿನ್ನೆ ರೋಟಾರ್ಯ ಕ್ಲಬ್‌ನಗರಾರರ ಸಂಘದ ಕಛೇರಿಯಲ್ಲಿ ಶ್ರೀ ಬಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು.

೧. ಮೈಸೂರು ಸಂಸ್ಥಾನದ ಟೆಲಿಫೋನ್ ಇಲಾಖೆಯು ಕೇಂದ್ರ ಸರ್ಕಾರದ ಆಡಳಿತಕ್ಕೆ ಸೇರಿದಂದಿನಿಂದ ಅದರ ಆಡಳಿತವು ತೀರಾ ಕೆಟ್ಟುಹೋಗಿ ಟೆಲಿಫೋನ್ ಚಂದಾದಾರರಿಗೆ ಹಾಗೂ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದಕ್ಕಾಗಿ ಟೆಲಿಫೋನ್ ಇಲಾಖಾ ಆಡಳಿತವನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ.

೨. ಬೆಂಗಳೂರು ಮೈಸೂರಿಗೆ ೨ ನಿಮಿಷಕ್ಕೆ ಟ್ರಂಕ್ ಕಾಲಿಗೆ ೦-೧೨-೦ ಇದ್ದುದನ್ನು ೨-೨-೦ ಗೆ ಏರಿಸಿರುವುದು ಹಾಗೂ ತಿಂಗಳ ಚಂದಾವನ್ನು ದೂರದ ಪ್ರಕಾರ ನಿರ್ಧರಿಸಿ ಅದರಂತೆ ಚಾರ್ಜು ಹೆಚ್ಚಿಸಿ ಅದರ ಮೇಲೆ ಸರ್ ಚಾರ್ಜು ವಸೂಲಿ ಮಾಡುವುದಾಗಿ ನೋಟೀಸ್ ಕೊಟ್ಟಿರುವುದರಿಂದ ಮೈಸೂರು ಸಂಸ್ಥಾನದ ಟೆಲಿಫೋನ್ ಚಂದಾದಾರರು ಮತ್ತು ಸಾರ್ವಜನಿಕರಿಗೆ ಹೊರಲಾರದ ಹೊರೆಯಾದ್ದರಿಂದ ಟ್ರಂಕ್ ಚಾರ್ಜನ್ನು ಕೂಡಲೇ ಮೊದಲಿನದರಕ್ಕೆ ಇಳಿಸಬೇಕಾಗಿಯೂ ಮತ್ತು ತಿಂಗಳಚಂದಾವನ್ನು ಹೆಚ್ಚಿಸಬಾರದಾಗಿಯೂ ಈ ಸಭೆಯು ಇಂಡಿಯಾ ಸರಕಾರವನ್ನು ಒತ್ತಾಯಪಡಿಸುತ್ತದೆ.

೩. ಈಗ ಟೆಲಿಫೋನ್‌ಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸಬೇಕಾದರೆ ಒಂದು ಗೊತ್ತಾದ ಹಾಗೂ ಜವಾಬ್ದಾರಿಯುತವಾದ ಕಛೇರಿ ಈ ನಗರದಲ್ಲಿಲ್ಲವೆ ಮುತ್ತೆಲ್ಲವರೆ ಮದ್ರಾಸ್ ಕಡೆತೋರಿಸುತ್ತಿರುವುದರಿಂದ ಚಂದಾದಾರರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವ ಸಲು ಟೆಲಿಫೋನ್ ಇರುವ ಊರುಗಳಲ್ಲಿ ಒಂದೊಂದು ಜವಾಬ್ದಾರಿಯುತ ಕಛೇರಿಯನ್ನು ತೆರೆಯುವಂತೆ ಈ ಸಭೆಯು ಒತ್ತಾಯಪಡಿಸುತ್ತದೆ.

೪. ಇತರ ವಿಚಾರಗಳ ಬಗ್ಗೆ ಅಧ್ಯಕ್ಷರು ವಿವರವಾದಅಂಕಿಅಂಶಗಳೊಡನೆ ಭಾರತ ಸರಕಾರದೊಡನೆ ಪತ್ರವ್ಯವಹಾರ ನಡೆಸಲು ಅಧಿಕಾರ ಕೊಡಲಾಯಿತು.

ಸಮಾಚಾರ

ತಾ|| ೧೩—೪—೧೯೫೧ನೇ ಶುಕ್ರವಾರ

ಕೋಮುವಾರು ನೀತಿ

ವಿದ್ಯಾ ಸಂಸ್ಥೆಗಳಿಗೆ ಪ್ರವೇಶ, ಸರ್ಕಾರೀ ಉದ್ಯೋಗ ಕೊಡುವಾಗ ಅನುಸರಿಸುತ್ತಲಿರುವ ಮದರಾಸು ಸರ್ಕಾರದ ಕೋಮುವಾರು ನೀತಿಯು ರಾಜ್ಯಾಂಗಕ್ಕೆ ವಿರೋಧವೆಂದೂ, ಈ ವಿಷಯದಲ್ಲಿ ಸರ್ಕಾರ ವಿತ್ತಿರುವ ಆಜ್ಞೆಗಳೆಲ್ಲವೂ ನ್ಯಾಯಬಾಹಿರವೆಂದೂ ಭಾರತ ಶ್ರೇಷ್ಠ ನ್ಯಾಯಾಸ್ಥಾನವು ತೀರ್ಪಿತ್ತಿದೆ. ಈ ವಿಷಯದಲ್ಲಿ ಮದರಾಸು ಶ್ರೇಷ್ಠ ನ್ಯಾಯಾಸ್ಥಾನವು ಮೊದಲೇ ತೀರ್ಪನ್ನು ಕೊಟ್ಟಿತ್ತು. ಆ ತೀರ್ಪಿನ ಮೇಲೆ ಮದರಾಸು ಸರ್ಕಾರವು ಭಾರತ ಶ್ರೇಷ್ಠ ನ್ಯಾಯಾಸ್ಥಾನದಲ್ಲಿ ಅಪೀಲು ಹೂಡಿತು. ಮದರಾಸು ಶ್ರೇಷ್ಠ ನ್ಯಾಯಾಸ್ಥಾನದ ತೀರ್ಪನ್ನು ಎತ್ತಿ ಹಿಡಿದು ಭಾರತ ಶ್ರೇಷ್ಠ ನ್ಯಾಯಾಸ್ಥಾನವು ಸರ್ಕಾರದ ಅಪೀಲನ್ನು ತಿರಸ್ಕರಿಸಿದೆ.

ಭಾರತ ಶ್ರೇಷ್ಠ ನ್ಯಾಯಾಲಯವು ಈ ತೀರ್ಪನ್ನು ಕೊಟ್ಟಿರುವಾಗ ಕೋಮುವಾರು ನೀತಿಗೆ ಸಂಬಂಧಪಟ್ಟ ಆಜ್ಞೆಗಳು ದೇಶದ ಯಾವ ಯಾವ ಭಾಗಗಳಲ್ಲಿವೆಯೋ ಅವುಗಳನ್ನೆಲ್ಲಾ ಆಯಾ ಸರ್ಕಾರಗಳು ಕೂಡಲೇ ರದ್ದು ಮಾಡುವುದು ಉಚಿತವಾಗಿ ಕಾಣಬರುತ್ತದೆ.

ಭಾರತದ ಅನೇಕ ನಾಯಕರು, ಪ್ರವೀಣರು ಹೇಳಿರುವಂತೆ ಭಾರತಾದ್ಯಂತ ವಿವಿಧ ಶಾಖೆಗಳಲ್ಲಿ ದಕ್ಷರಾದವರು ವಿಶೇಷ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ದಕ್ಷರಾದವರು ದೊರೆಯಬೇಕಾದರೆ ಪಕ್ಷ, ಜಾತಿ ಮುಂತಾದುವುಗಳನ್ನು ಗಣನೆಗೆ ತರದಿದ್ದರೆ ಮಾತ್ರ ಸಾಧ್ಯ.

ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ವಿದ್ಯಾ ಸಂಸ್ಥೆಗಳಿಗೆ ಪ್ರವೇಶ, ಸರ್ಕಾರಿ ಉದ್ಯೋಗ ಮುಂತಾದುವುಗಳಲ್ಲಿ ಹಿಂದಿನ ಸರ್ಕಾರದ ಕೋಮುವಾರು ನೀತಿಯು ಇನ್ನೂ ಮುಂದುವರಿಯುತ್ತಲೇ ಇದೆ. ಮುಂದಕ್ಕೆ ಇದು ಹೆಚ್ಚುವ ಸೂಚನೆ ಕಾಣಬರುತ್ತಲಿದೆ.

ದಕ್ಷತೆಯು ಎಲ್ಲೆಲ್ಲೂ ಹೆಚ್ಚಿ ದೇಶೋಭ್ಯುದಯಕ್ಕೆ ಟೊಂಕ ಕಟ್ಟಿನಿಂತಿರುವುವೆಂದು ಹೇಳುತ್ತಲಿರುವ ಎಲ್ಲಾ ಪ್ರಜಾ ಸರ್ಕಾರಗಳೂ ರಾಜ್ಯಾಂಗಕ್ಕನುಗುಣವಾಗಿ ಈಗ ಭಾರತ ಶ್ರೇಷ್ಠ ನ್ಯಾಯಾಲಯವು ಇತ್ತಿರುವ ಆಜ್ಞೆಯನ್ನು ಗಣನೆಗೆ ತೆಗೆದುಕೊಂಡು ಕೋಮುವಾರು ನೀತಿಗೆ ಸಂಬಂಧಪಟ್ಟ ಎಲ್ಲಾ ಆಜ್ಞೆಗಳನ್ನು ಕೂಡಲೇ ರದ್ದುಗೊಳಿಸುವುದು ದೇಶದ ಹಿತದೃಷ್ಟಿಯಿಂದ ಪ್ರಥಮ ಕರ್ತವ್ಯವಾಗಿರುತ್ತದೆ. ರೋಗ ಬಂದು ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ಎಚ್ಚೆತ್ತು ಕೊಳ್ಳುವುದೇ ಉತ್ತಮ ಮಾರ್ಗ.

ನಮ್ಮ ಮೈಸೂರು ಸರ್ಕಾರವು ಈ ಕೋಮುವಾರು ನೀತಿಯನ್ನು ನಿರ್ಮೂಲ ಮಾಡುವುದರಲ್ಲಿ ಪ್ರಥಮ ಸ್ಥಾನವನ್ನು ಪಡೆಯುವುದೆಂದು ನಂಬಿದ್ದೇವೆ.

[illegible]

ಹಂಗೇರಿಯನ್ ಪತ್ನಿ!

ನೇತಾಜಿ ಸುಭಾಷ್ ಚಂದ್ರಬೋಸರು ೧೯೪೧-೪೨ ರಲ್ಲಿ ವಿಯನ್ನಾದಲ್ಲಿದ್ದಾಗ ಎಮಿಲ್ ಷೆಂಕ್ಲ್ ಎಂಬ ಹಂಗೇರಿಯನ್ ತರುಣಿಯನ್ನು ಮದುವೆಯಾಗಿದ್ದರೆಂಬ ಬಗ್ಗೆ ಕಲ್ಕತ್ತ ಪತ್ರಿಕೆಗಳಿಂದು ವಿವರವಾದ ಕತೆಗಳನ್ನು ಪ್ರಕಟಿಸಿವೆ

'ಹಿಂದೂಸ್ಥಾನ್ ಸ್ಟಾಂಡರ್ಡ್' ಪತ್ರಿಕೆಯು ನೇತಾಜಿ ಬೋಸರು ತಮ್ಮ ಅಣ್ಣ ಶರತ್‌ಬೋಸರಿಗೆ ಸ್ವಹಸ್ತಾಕ್ಷರದಲ್ಲಿ ಬರೆದಿಟ್ಟರೆಂದು ಹೇಳಲಾದ ಪತ್ರವೊಂದರ ಪಡಿಯಚ್ಚನ್ನೇ ಪ್ರಕಟಿಸಿವೆ.

ನೇತಾಜಿ ಬೋಸರು ೧೯೪೫ರ ಫೆಬ್ರವರಿ ೮ನೇ ತಾರೀಖು ಬರ್ಲಿನ್ನಿನಿಂದ ಜಪಾನಿಗೆ ತೆರಳುವ ಮುನ್ನ ಈ ಕಾಗದ ಬರೆದರೆಂದೂ ಪ್ರಕಟಿಸಲಾಗಿದೆ—"ನಾನಿಲ್ಲಿ ಮದುವೆಯಾದ್ದೇನೆ. ನನಗೆ ಹೆಣ್ಣುಮಗುವು ಆಗಿದೆ. ನಾನು ಈ ಜಗತ್ತಿನಲ್ಲಿಲ್ಲವಾದ ಮೇಲೆ ಇದುವರೆಗೂ ಹೇಗೆ ನೀವು ನನ್ನ ಮೇಲೆ ಪ್ರೀತಿ ತೋರಿಸುತ್ತಿದ್ದಿರೋ ಅದೇ ಪ್ರೀತಿಯನ್ನು ನನ್ನ ಪತ್ನಿಗೂ ಪುತ್ರಿಗೂ ತೋರಿಸಿ."

ಶರತ್‌ಚಂದ್ರಬೋಸರು ೧೯೪೮ರಲ್ಲಿ ಸ್ವಿಜರ್ಲೆಂಡಿಗೆ ಭೇಟಿಕೊಟ್ಟಾಗ ಈಕೆಯು ಈ ಪತ್ರವನ್ನು ಶರತ್ ಬೋಸರಿಗೆ ತಲುಪಿಸಿದರೆಂದೂ ಪ್ರಕಟಿಸಲಾಗಿದೆ.

ಈಗ ೪೨ ವರ್ಷ ವಯಸ್ಸಿನ ಈ ಎಮಿಲ್ ಷೆಂಕ್ಲ್‌ರವರು ತಮ್ಮ ೮ ವರ್ಷದ ಪುತ್ರಿ ಅನಿಟಾಳೊಡನೆ ವಿಯನ್ನಾದ ಫೆರೇಗಾಸ್ ಎಂಬಲ್ಲಿ ವಾಸಿಸುತ್ತಿರುವರೆಂದೂ ಹುಡುಗಿಯೂ ಶಾಲೆಯೊಂದರಲ್ಲಿ ಓದುತ್ತಿರುವಳೆಂದೂ ಹೇಳಲಾಗಿದೆ.

ಬೆಂಗಳೂರಿಗೆ ಮೆಹ್ತಾಬ್

ಕೇಂದ್ರ ಕೈಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ೨೦ನೇ ತಾರೀಖು ಬೆಂಗಳೂರಿಗೆ ಆಗಮಿಸುವರು.

ಒಲಿಂಪಿಯಾ ಟಾಕೀಸ್

೧೨—೪—೫೧ರಿಂದ ಪ್ರತಿದಿನ ೩ ಆಟಗಳು

ರಾಮಕೃಷ್ಣ ಎಕ್ಚರ್ಸ್‌ರವರ—

* ರಾಮ ದರ್ಶನ್ *

ಪಾತ್ರ— ಭಾರತ್‌ಭೂಷಣ್, ಮೃದುಲಾ, ಶಶಿಕಪೂರ್

ಪ್ರತಿಯೊಬ್ಬರೂ ನೋಡಬೇಕಾದ ಪೌರಾಣಿಕ ಸಂಗೀತಮಯ ಹಿಂದಿಚಿತ್ರ

ಬೆಳಗಿನ ಪ್ರದರ್ಶನ —— † —— ೧೩—೪—೫೧ರಿಂದ

ದಿಲೀಪ್ ಕುಮಾರ್, ನರ್ಗೀಸ್, ನಳಿನೀಜಯವಂತ್ ಪಾತ್ರವಹಿಸಿರುವ

" ಅ ನೋ ಕ ಪ್ಯಾ ರ್ "

ಪ್ರಭಾ ಅಮೋಘ ಪ್ರಾರಂಭ ೧೩-೪-೫೧ ರಿಂದ

ಪ್ರತಿದಿನ ಮೂರು ಆಟಗಳು

ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ

* ಹಲ್ ಚಲ್ *

ಪಾತ್ರ— ನರ್ಗೀಸ್, ದಿಲೀಪ್ ಕುಮಾರ್, ಜೀವನ್ ಸಿತಾರ, ಯಾಕೂಬ್,

ದಿಗ್ದರ್ಶನ— ಎಸ್. ಕೆ. ಓಜ

ಏ. ನೂ.- 13, 14, ಮತ್ತು 15 ನೇ ತಾ||ಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಸ್ಥಳದ ಏರ್ಪಾಡು ರದ್ದು ಮಾಡಿರುತ್ತೆ.

(ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು 4 ವಾರ ಮನ್ನಾ ಮಾಡಿರುತ್ತೆ.)

ಲಕಿಡಿಪ್

ಬೆಂಗಳೂರು ಏ. ೧೨

ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ನಿನ್ನೆ ಸಂಜೆ ಕಬ್ಬನ್‌ಪಾರ್ಕಿನಲ್ಲಿ ವಸ್ತು ಪ್ರದರ್ಶನದ ಪ್ರಾರಂಭೋತ್ಸವ ನೆರವೇರಿಸಿ ಒಳಗಡೆ ಹೋಗಿ ಸ್ಟಾಲುಗಳಿಗೆ ಭೇಟಿ ಕೊಡುತ್ತಿರುವಾಗ "ಲುಕ್ ಮಿ ಅಪ್" ಸ್ಟೋರ್ಸಿನ ಶ್ರೀ ಸಿ. ಎಸ್. ಎಲ್ ಪ್ರಸಾದ್‌ರವರು ರಾಷ್ಟ್ರಪತಿಗೆ 'ಲಕಿಡಿಪ' ನಂಬರೊಂದನ್ನು ಕೊಟ್ಟರು. ಅದನ್ನು ರಾಷ್ಟ್ರಪತಿಗಳು ಎತ್ತಲಾಗಿ ಅವರಿಗೆ ಅರ್ಧ ಪೌಂಡಿನಷ್ಟು ಸೋಜಿಯಿಂದ ಮಾಡಿದ ಮಿಠಾಯಿ ದೊರಕಿತು.

ಕೃಪಲಾನಿಯೊಡನೆ ಭೇಟಿ

ಕಾಂಗ್ರೆಸ್ ಸಂಸ್ಥೆಯಲ್ಲಿ ಐಕ್ಯತೆ ಕುದುರಿಸುವ ಸಲುವಾಗಿ ಡೆಮೊಕ್ರಾಟಿಕ್‌ಫ್ರಂಟಿನ ನಾಯಕರಾದ ಆಚಾರ್ಯ ಕೃಪಲಾನಿಯವರೊಡನೆ ಕಾಂಗ್ರೆಸ್ ಅಧ್ಯಕ್ಷ ಟಾಂಡನ್ ಪ್ರಧಾನ ಮಂತ್ರಿ ನೆಹರೂ, ಗೃಹ ಮಂತ್ರಿ ರಾಜಾಜಿ, ವಿದ್ಯಾ ಮಂತ್ರಿ ಅಜಾದ್ ಮುಂತಾದ ಪ್ರಮುಖ ಕಾಂಗ್ರೆಸ್ ನಾಯಕರುಗಳೂ ಒಂದು ಗಂಟೆ ಕಾಲ ಸಂಯುಕ್ತ ಚರ್ಚೆಗಳನ್ನು ನಡೆಸಿದರು. ಶ್ರೀ ಕಿದ್ವಾಯಿ ಮತ್ತು ಶ್ರೀ ಜಗಜೀವನರಾಂ ಕೂಡಾ ಇದ್ದರು. ಪುನಃ ಇನ್ನೊಂದು ಬಾರಿ ಸಭೆ ನಡೆಯುವ ಸಂಭವ ಇದೆ.

ರಣಜಿತ್ ಟಾಕೀಸ್

೧೪—೪—೧೯೫೧ ರಿಂದ ಅಮೋಘ ಪ್ರದರ್ಶನಾರಂಭ

ಪ್ರತಿದಿನ ೩ ಆಟಗಳು

—:: ಒಂದು ರಾತ್ರಿ ::—

ಎ. ವಿ. ಎಂ. ರವರ ನೂತನ ವರ್ಷದ ನವೀನ ರೀತಿಯ ಅತ್ಯುತ್ತಮ ತಮಿಳು ಚಿತ್ರ

ತಾರಾಗಣ— ಟಿ. ಎಸ್. ಬಾಲಯ್ಯ, ಕೆ. ಆರ್. ರಾಮಸ್ವಾಮಿ, ಲಲಿತ—ಪದ್ಮಿನಿ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜೆ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೪—೧೯೫೧ನೇ ಶನಿವಾರ [ಸಂಚಿಕೆ ೧೮೨

ಮಾನಪತ್ರ

ಬೆಂಗಳೂರು ಏ. ೧೩

ಇಂಡೋನೇಷ್ಯಾಕ್ಕೆ ಹೋಗಲಿರುವ ಮಾಜಿ ದಿವಾನರಾದ ಸರ್ ಮಿರ್ಜಾರವರಿಗೆ ಬೆಂಗಳೂರು ಕಾರ್ಪೋರೇಷನ್ನವರು ಪೌರಮಾನ ಪತ್ರವನ್ನು ಕೊಡಲು ೨೦೦೦ ರೂ ಹಣವನ್ನು ಖರ್ಚು ಮಾಡಲು ತೀರ್ಮಾನಿಸಿದೆ.

ಟ್ರೂಮನ್ನರ ಒಪ್ಪಿಗೆ

ಸಂಯುಕ್ತ ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡಲು ಜನರಲ್ ಮೆಕಾರ್ಥರನ್ನು ಆಹ್ವಾನಿಸುವ ಸಲಹೆಗೆ ಅಧ್ಯಕ್ಷ ಟ್ರೂಮನ್ನರು ತಮ್ಮ ಒಪ್ಪಿಗೆಯನ್ನು ಸೂಚಿಸಿ ಜನರಲ್ ಮೆಕಾರ್ಥರಿಗೆ ತಕ್ಕ ಸನ್ಮಾನವನ್ನು ಕೊಡಬೇಕೆಂದು ಹೇಳಿರುವುದಾಗಿ ತಿಳಿದುಬಂದಿದೆ.

ಭಾರತದ ಜನಸಂಖ್ಯೆ ೩೬ ಕೋಟಿಗೆ ಮೀರಿದೆ

ಬ ರೋ ಡಾ ಮ ಹಾ ರಾ ಜ ರ ಪ ದ ಚ್ಯು ತಿ

ಮು ಷ್ಕ ರ ವೆ?

ಮೈಸೂರು ಮೋಟಾರು ಕೆಲಸಗಾರರ ಸಂಘದ ಸರ್ವಸದಸ್ಯರಸಭೆಯು ನಿನ್ನೆ ನಡೆದು ಕೆಲಸಗಾರರ ಬೇಡಿಕೆಗಳನ್ನು ಇನ್ನು ಈಡೇರಿಸದಿರುವುದರಿಂದ ಎಲ್ಲಾ ಮಾಲೀಕರುಗಳಿಗೂ ಆರು ವಾರಗಳ ಮುಂಚಿತ ಮುಷ್ಕರ ನೋಟೀಸನ್ನು ಕೊಡಬೇಕೆಂದೂ ತೀರ್ಮಾನಿಸಿ ಈ ವಿಷಯದಲ್ಲಿ ಕಾರ್ಯಕ್ರಮ ಕೈಗೊಳ್ಳಲು ಒಂದು ಸಮಿತಿಯನ್ನು ನೇಮಿಸಿದೆ.

ನೂತನ ಪಕ್ಷ

ಆಂಧ್ರ ಕಾಂಗ್ರೆಸ್ ಮುಖಂಡರಾದ ಶ್ರೀ ಪ್ರಕಾಶಂ ಮತ್ತು ಶ್ರೀ ಎನ್. ಜಿ. ಸಂಗಾರವರು ತಮ್ಮ ಅನುಯಾಯಿಗಳೊಡನೆ ಕಾಂಗ್ರೆಸ್ಸನ್ನು ಬಿಟ್ಟು 'ಪ್ರಜಾ ಪಕ್ಷ' ವೆಂಬ ನೂತನ ರಾಜಕೀಯ ಪಕ್ಷವನ್ನು ಸ್ಥಾಪಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಮುಂದಿನ ಚುನಾವಣೆಗಳಲ್ಲಿ ಈ ಪಕ್ಷದವರು ಕಾಂಗ್ರೆಸ್ಸಿಗೆ ವಿರೋಧ ಪಕ್ಷವಾಗಿ ಸ್ಪರ್ಧಿಸುವರೆಂದು ಹೇಳಲಾಗಿದೆ.

ರಾಜ್ಯಾಂಗ ಮಾರ್ಪಡಿಸಿ

ಮದರಾಸು ರಾಜ್ಯದಲ್ಲಿ ಜಾರಿಯಲ್ಲಿರುವ ಕೋಮುವಾರು ಆಜ್ಞೆಯು ನ್ಯಾಯಬಾಹಿರವೆಂದು ಭಾರತ ಶ್ರೇಷ್ಠ ನ್ಯಾಯಾಲಯವು ತೀರ್ಪಿತ್ತಿರುವುದರಿಂದ, ಈ ಆಜ್ಞೆಯನ್ನು ನ್ಯಾಯಬದ್ಧವಾಗಿ ಮಾಡುವಂತೆ ಭಾರತ ರಾಜ್ಯಾಂಗದಲ್ಲಿ ತಕ್ಕ ತಿದ್ದುಪಡಿ ಮಾಡಬೇಕೆಂದು ಮದರಾಸು ಸರ್ಕಾರವು ಕೇಂದ್ರವನ್ನು ಕೇಳಿದೆ.

ಡಾ|| ಮೆಟ್‌ಕಾಫ್‌ರ ನಿಧನ

ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾಗಿದ್ದ ಡಾ|| ಇ. ಪಿ. ಮೆಟ್‌ಕಾಫ್‌ರವರು ಲಂಡನ್ನಿನಲ್ಲಿ ಮಾರ್ಚಿ ೨೩ ರಲ್ಲಿ ನಿಧನರಾದರೆಂದು ತಿಳಿದುಬರುತ್ತದೆ.

ಪ ದ ಚ್ಯು ತಿ

ಬರೋಡಾ ಮಹಾರಾಜ ಪ್ರತಾಪಸಿಂಗ್ ಗಾಯಕವಾಡರನ್ನು ಪದವಿಯಿಂದ ತೆಗೆದು ಭಾರತ ಸರ್ಕಾರವು ಅವರ ಮಗ ಯುವರಾಜ ಫತೇಸಿಂಗ್‌ರನ್ನು ಅವರ ಜಾಗದಲ್ಲಿ ಅಂಗೀಕರಿಸಿದೆ. ಬರೋಡಾ ಮಹಾರಾಜರು ಇತ್ತೀಚೆಗೆ ಭಾರತ ಸರ್ಕಾರದೊಡನೆ ವಿವಾದ ಪ್ರಾರಂಭಿಸಿ, ರಾಜ್ಯಾಂಗದ ಅಸ್ತಿತ್ವಕ್ಕೆ ಸವಾಲು ಹಾಕಿದ್ದರು.

ಈ ಪದಚ್ಯುತಿಯ ಫಲವಾಗಿ ಅರಸರು ತಮ್ಮ ಎಲ್ಲಾ ರಾಜಪ್ರಶಸ್ತಿ, ಹಕ್ಕು ಬಾಧ್ಯತೆಗಳನ್ನು ವರ್ಷಕ್ಕೆ ೨೬|| ಲಕ್ಷ ರೂಪಾಯಿಗಳ ರಾಜಾದಾಯವನ್ನು ಕಳೆದುಕೊಳ್ಳುವರು.

ಈಗ ಹೊಸದಾಗಿ ಅವರ ಜಾಗಕ್ಕೆ ಅಂಗೀಕಾರವಾಗಿರುವ ಯುವರಾಜ ಫತೇಸಿಂಗರಿಗೆ ೧೦ ಲಕ್ಷ ರೂ. ರಾಜಾದಾಯ ಕೊಡಲಾಗುವುದು.

ಪದಚ್ಯುತರಾದ ಮಹಾರಾಜರು ರಾಷ್ಟ್ರಾಧ್ಯಕ್ಷರಲ್ಲಿ ಅಪೀಲು ಹೂಡಲಿರುವರು.

ರಜಾ

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸನ್‌ರವರಿಗೆ ಇದೇ ಮಾಹೆ ೧೬ನೇ ತಾ|| ನಿಂದ ಮೇ ೨೦ರ ವರೆಗೆ ರಜಾ ಮಂಜೂರ್ಮಾಡಲಾಗಿದೆ. ಹಣಕಾಸಿನ ಕಾರ್ಯದರ್ಶಿಗಳು ಅವರ ಕೆಲಸವನ್ನು ನೋಡುವರು.

ಆಹಾರ ಪರಿಸ್ಥಿತಿ ಚಿಂತಾಜನಕವಾಗಿದೆ

ಬೀಹಾರಿನ ಆಹಾರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಕಲ್ಕತ್ತಾದಿಂದ ಪ್ರತಿ ದಿನವೂ ೩೦೦೦ ಟನ್ ಆಹಾರವನ್ನು ಬೀಹಾರಿಗೆ ಕಳುಹಿಸಲಾಗುತ್ತಲಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿವೆ.

ನೇಪಾಳದಲ್ಲಿ ವಿರೋಧ ಪ್ರದರ್ಶನ

ನೇಪಾಳ ಗೂರ್ಖಾ ದಳದ ಮಹಾಕಾರ್ಯದರ್ಶಿಯೂ, ನೇಪಾಳ ರಕ್ಷಣಾ ಸಚಿವ ಶ್ರೀ ಬಾಬರ್ ಷಂಷೇರ್ ಜಂಗ್ ಬಹದ್ದೂರ್ ರಾಣಾರವರ ಮೊಮ್ಮಗನೂ ಆದ ಶ್ರೀ ಭಾರತ ಷಂಷೇರ್ ಜಂಗ್ ಬಹದ್ದೂರ್ ರಾಣಾರವರನ್ನು ಗೂರ್ಖಾ ದಳದ ಮತ್ತೊಬ್ಬ ನಾಯಕರಾದ ಪ್ರೊಫೆಸರ್ ರಣಧೀರ್ ಸುಬಾರವರನ್ನು ಗೃಹ ಸಚಿವ ಶಾಖೆಯ ಆಜ್ಞೆ ರೀತ್ಯ ಬಂಧಿಸಲಾಯಿತು.

ಗೂರ್ಖಾ ದಳದ ಬೆಂಬಲಿಗರೆಂದು ಹೇಳಲಾದ ಕೋಪಗ್ರಸ್ತ ಜನರ ಗುಂಪು ಕೊತ್ವಾಲಿ ಬಂದೀಖಾನೆಗೆ ನುಗ್ಗಿ ಬಂಧಿತರಿಬ್ಬರನ್ನು ಬಿಡಿಸಿಕೊಂಡು ಹೋದರೆಂದು ವರದಿಯಾಗಿದೆ.

ಹೊಸ ಆಡಳಿತ ವ್ಯವಸ್ಥೆಯನ್ನು ರದ್ದುಪಡಿಸಿ ಹಳೆ ವ್ಯವಸ್ಥೆಯನ್ನೇ ಪುನುಸ್ಥಾಪನೆಗೊಳಿಸಬೇಕೆಂದು ಒತ್ತಾಯ ಪಡಿಸಲು ರಾಜರ ಅರಮನೆಯ ಮುಂದೂ ಪ್ರದರ್ಶನ ನಡೆಸಿದರೆಂದು ವರದಿಯಾಗಿದೆ.

ಪ್ರದರ್ಶನ ನಡದಾಗ ಕಾಂಗ್ರೆಸ್ ಸಚಿವರುಗಳು ಅರಮನೆಯಲ್ಲಿದ್ದರೆಂದು ವರದಿಯಾಗಿದೆ. ಪೋಲೀಸರು ವ್ಯವಸ್ಥೆ ನೆಲಗೊಳಿಸಲು ಶಕ್ತರಾಗಿ ದೆಂದೂ ರಾತ್ರಿಯೊತ್ತಿಗೆ ಪರಿಸ್ಥಿತಿ ಹತೋಟಿಗೆ ಬಂತೆಂದೂ ತಿಳಿದುಬರುತ್ತದೆ.

ವಿಶೇಷ ನ್ಯಾಯಾಸ್ಥಾನ

ಸರ್ಕಾರವನ್ನು ಬುಡಮೇಲು ಮಾಡಬೇಕೆಂದಿದ್ದರೆಂಬ ಆಪಾದನೆ ಮೇಲೆ ದಸ್ತಗಿರಿಯಾಗಿರುವ ಅಧಿಕಾರಿಗಳನ್ನು ವಿಚಾರಣೆ ನಡೆಸಲು ಪಾಕಿಸ್ಥಾನ ಸರ್ಕಾರವು ಒಂದು ವಿಶೇಷ ನ್ಯಾಯಾಸ್ಥಾನವನ್ನು ನೇಮಿಸುವ ಒಂದು ಮಸೂದೆಯನ್ನು ಅಲ್ಲಿಯ ಶಾಸನ ಸಭೆಯು ಅಂಗೀಕರಿಸಿತು. ವಿಚಾರಣೆಗಳೆಲ್ಲವೂ ರಹಸ್ಯವಾಗಿ ನಡೆಯುವುವು. ಅಪರಾಧಿಗಳಿಗೆ ಜಾಮೀನಿನ ಮೇಲೆ ಬಿಡಲು ಅನುಮತಿಯಿಲ್ಲ. ಪಂಚಾಯಿತಿ ಕ್ರಮದ ಪ್ರಕಾರ ವಿಚಾರಣೆ ನಡೆಯುವುದು.

ದಕ್ಷಿಣ ಭಾರತ ರೈಲ್ವೆ

ದಕ್ಷಿಣ ಭಾರತ ರೈಲ್ವೆಯು ವಿಧಿವತ್ತಾಗಿ ಇಂದು ಮದರಾಸಿನಲ್ಲಿ ಪ್ರಾರಂಭವಾಗಲಿದೆ.

ಈ ರೈಲ್ವೆಯು ಒಟ್ಟು ಉದ್ದ ೬೯೯೯ ಮೈಲಿಗಳಿರುವುವು. ಇದರಲ್ಲಿ ಬ್ರಾಡ್‌ಗೇಜು ೧೬೫೫ ಮೈಲಿ, ಮೀಟರ ಗೇಜು ೬೨೪೪ ಮೈಲಿ ಈ ಪ್ರಾದೇಶಿಕ ರೈಲ್ವೆಯು ಪೂರ್ವದಲ್ಲಿ ವಾಲ್ಟೇರು, ಪಶ್ಚಿಮದಲ್ಲಿ ಪೂನಾಗಳಿಂದ ದಕ್ಷಿಣದಲ್ಲಿ ತಿರುವಾಂಕೂರಿನ ವರೆಗೆ ಪ್ರಸರಿಸಿದೆ. ಬ್ರಾಡ್‌ಗೇಜ್ ವಿಭಾಗವು ಮದರಾಸಿನಲ್ಲಿರುವ ಕೇಂದ್ರ ಕಛೇರಿಯ ನೇರವಾದ ಆಡಳಿತದಲ್ಲಿರುವುದು. ಮೀಟರ್‌ಗೇಜು ವಿಭಾಗವನ್ನು ಉತ್ತರ ಮತ್ತು ದಕ್ಷಿಣ ಪ್ರಾದೇಶಿಕವಾಗಿ ಎರಡು ಭಾಗ ಮಾಡಿ ಪ್ರತ್ಯೇಕ ಉಪ ಕೇಂದ್ರ ಕಛೇರಿಗಳನ್ನು ಸ್ಥಾಪಿಸಲಾಗುವುದು. ಮೀಟರ್‌ಗೇಜಿನ ದಕ್ಷಿಣ ಭಾಗದ ಕಛೇರಿಯು ತಿರುಚನಾಪಲ್ಲಿಯಲ್ಲಿ ಉತ್ತರಭಾಗದ ಕಛೇರಿಯು ಸದ್ಯದಲ್ಲೇ ಮೈಸೂರಿನಲ್ಲಿರುವುವು. ಈ ೩ ಉಪಕೇಂದ್ರ ಕಛೇರಿಗಳಲ್ಲಿ ಆಪರೇಟಿಂಗ್ ಮೆಕಾನಿಕಲ್ ಇಂಜನೀಯರಿಂಗ್ ಮತ್ತು ಸಿವಿಲ್ ಇಂಜನೀಯರಿಂಗ್ ಶಾಖೆಗಳಿಗೆ ಉಪ ಮುಖ್ಯ ಅಧಿಕಾರಿಗಳಿರುವರು.

ಜಪಾನಿಗೆ ನಿಯೋಗ

ಬೊಂಬಾಯಿ ಸರ್ಕಾರವು ೪ ಸದಸ್ಯರ ನಿಯೋಗವೊಂದನ್ನು ಜಪಾನಿಗೆ ಕಳುಹಿಸಲಿದೆ. ನಿಯೋಗವು ಅಲ್ಲಿ ೩ ತಿಂಗಳ ಕಾಲ ಪ್ರವಾಸ ಮಾಡಿ ಸ್ಥಳೀಯ, ಸುವ್ಯವಸ್ಥಿತ ಕೈಗಾರಿಕೆ, ಕುಟೀರ ಕೈಗಾರಿಕ ಮುಂತಾದುವನ್ನೆಲ್ಲಾ ಪರಿಶೀಲಿಸಲಿದೆ.

ಶೀತಕ ಯಂತ್ರ

ಭಾರತದಲ್ಲಿ ಪ್ರಥಮವಾಗಿ ಒಂದು ಶೀತಕ ಯಂತ್ರವನ್ನು (ರೆಫ್ರಿಜಿರೇಟರ್) ಕಟಕ್‌ನಲ್ಲಿ ತಯಾರಿಸಲಾಗಿದೆ. ವಿದೇಶದಿಂದ ತರಿಸುವ ಯಂತ್ರಕ್ಕಿಂತ ೭೦೦ರೂ.ಗಳು ಕಡಮೆಯಾಗುವುದೆಂದು ಹೇಳಲಾಗಿದೆ.

ಪರಿಸ್ಥಿತಿ ಉಲ್ಬಣ ವಾಗುತ್ತಿದೆ

ದಕ್ಷಿಣ ಪರ್ಶಿಯಾದಲ್ಲಿ ಎಣ್ಣೆ ಗಣಿಗಳಿಗಿರುವ ಪ್ರದೇಶದಲ್ಲಿ ಪರಿಸ್ಥಿತಿಯು ಉಲ್ಬಣವಾಗಿದೆ. ಈಗಾಗಲೇ ಸರ್ಕಾರವು ಆ ಪ್ರದೇಶದಲ್ಲಿ ಶಾಂತಿಯನ್ನು ಕಾಪಾಡಲು ಸೈನ್ಯ ಮತ್ತು ಟ್ಯಾಂಕು ಪಡೆಗಳನ್ನು ಕಳುಹಿಸಿದೆ. ಮಂತ್ರಿ ಮಂಡಲದ ಮತ್ತು ಶಾಸನ ಸಭೆಯ ವಿಶೇಷ ಅಧಿವೇಶನಗಳು ಪರಿಸ್ಥಿತಿಯನ್ನು ಪರಿಶೀಲಿಸುತ್ತಲಿವೆ. ಗಲಭೆಗಳಲ್ಲಿ ಪಾತ್ರವಹಿಸುತ್ತಲಿರುವ ಅಪಾದನೆ ಮೇಲೆ ಅನೇಕ ಮಿಲಿಟರಿ ಮತ್ತು ಇತರ ಸರ್ಕಾರಿ ಅಧಿಕಾರಿಗಳನ್ನು ನಿವೃತ್ತಿ ಮಾಡಲು ಸರ್ಕಾರ ನಿರ್ಧರಿಸಿದೆ.

ಈ ಪರಿಸ್ಥಿತಿಯಿಂದ ಬ್ರಿಟನ್ನಿಗಾಗುವ ನಷ್ಟದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ವಿದೇಶಾಂಗ ಕಾರ್ಯದರ್ಶಿ ಮಿ|| ಮಾರಿಸನ್‌ರವರು ಮಾತನಾಡುತ್ತಾ, ಪರ್ಶಿಯಾದಲ್ಲಿ ಬ್ರಿಟನ್ನಿಗಾಗುತ್ತಲಿರುವ ನಷ್ಟವನ್ನೆಲ್ಲಾ ಪರ್ಶಿಯಾವು ಕೊಡಬೇಕಾಗಿದೆ. ಅಲ್ಲದೆ ಅಲ್ಲಿಯ ಗಲಭೆಗಳಲ್ಲಿ ಮಡಿದ ಬ್ರಿಟಿಷ್ ಪ್ರಜೆಗಳಿಗೆ ಪರಿಹಾರವನ್ನು ಅದು ಕೊಡಬೇಕಾಗಿದೆ. ಪರಿಸ್ಥಿತಿಯನ್ನೆದುರಿಸಲು ಮತ್ತು ಬ್ರಿಟನ್ನಿನ ಹಿತಾಸಕ್ತಿಗಳನ್ನು ಕಾಪಾಡಲು ರಾಯಲ್ ನೌಕಾ ಸೈನ್ಯದ ಹಡಗುಗಳನ್ನು ಕಳುಹಿಸಲಾಗುವುದೆಂದೂ ಅವರು ತಿಳಿಸಿದರು.

ಸಕ್ಕರೆ ನಿರ್ಬಂಧವಿಲ್ಲದೆ ಸಿಗುವುದು

ಪಡಿತರವಿರುವ ಜಾಗದಲ್ಲಿಯೇ ಸಕ್ಕರೆಯನ್ನು ಇತರ ಅಂಗಡಿಗಳಲ್ಲಿಯೂ ನಿರ್ಬಂಧವಿಲ್ಲದೆ ಮಾರಲು ಎಲ್ಲಾ ಸಂಸ್ಥಾನಗಳಲ್ಲಿಯೂ ಅವಕಾಶವನ್ನು ಕಲ್ಪಿಸಲಾಗಿದೆ, ಎಂದು ಪಾರ್ಲಿಮೆಂಟಿನಲ್ಲಿ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನಿಷಿಯವರು ತಿಳಿಸಿದರು.

ಮುಂದುವರಿದು, ಹೀಗೆ ನಿರ್ಬಂಧವಿಲ್ಲದೆ ಮಾರಲು ೫೦ ಸಾವಿರ ಟನ್ ಸಕ್ಕರೆಯನ್ನು ಒದಗಿಸಲಾಗಿದೆ. ಹೊರಗಿನಿಂದ ತರಿಸಿದ ಸಕ್ಕರೆಯನ್ನೂ ಸಹ ಮಾರುಕಟ್ಟೆಗೆ ಕೊಡಲು ಉದ್ದೇಶ ಪಡಲಾಗಿದೆ.

ಬ್ರಿಟನ್ ಸಲಹೆಗೆ ತಿರಸ್ಕಾರ

ಜಪಾನಿನ ಶಾಂತಿ ಕರಾರಿನಲ್ಲಿ ಪ್ರಜಾ ಚೀಣಾವು ಭಾಗವಹಿಸಬೇಕೆಂದು ಬ್ರಿಟನ್ ಮಾಡಿರುವ ಸಲಹೆಯನ್ನು ಅಮೇರಿಕಾ ತಿರಸ್ಕರಿಸಿದೆ. ಅಲ್ಲದೆ ವಿಶ್ವಸಂಸ್ಥೆಗೆ ಚೀಣಾವನ್ನು ಸೇರಿಸುವುದಕ್ಕೆ ತನ್ನ ಸಂಪೂರ್ಣ ವಿರೋಧವಿದೆಯೆಂದೂ ಹೇಳಿದೆ.

ಚಕ್ರಬಂಧ ಸ್ಪರ್ಧೆ ನಿಲ್ಲಿಸಲು ಸಾಧ್ಯವಿಲ್ಲ

ಮುಂಬಾಯಿ ಒಳಾಡಳಿತ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು, ಪತ್ರಿಕಾ ಕರ್ತರೊಂದಿಗೆ ಮಾತನಾಡುತ್ತಾ, ಚಕ್ರಬಂಧ ಸ್ಪರ್ಧೆಗಳ ಮೇಲೆ ಯಾವ ವಿಧವಾದ ಹತೋಟಿಯನ್ನಾಗಲಿ ಅಥವ ಪೂರ್ಣವಾಗಿ ನಿಷೇಧಿಸುವುದಕ್ಕಾಗಲಿ ಸರ್ಕಾರಕ್ಕೆ ಯಾವಮಾರ್ಗವೂ ಕಾಣಲಿಲ್ಲ. ಆದರೆ ಈ ಸ್ಪರ್ಧೆಗಳನ್ನು ನಡೆಯಿಸುವುದರಲ್ಲಿ ಯಾವ ವಿಧವಾದ ಮೋಸವೂ ನಡೆಯದಂತೆ ಮಾತ್ರ ನೋಡಿಕೊಳ್ಳಲಾಗುವುದು ಎಂದರು.

ಕೆಲವು ಕಾಲದ ಹಿಂದೆ ಚಕ್ರಬಂಧ ಸ್ಪರ್ಧೆಗಳ ಮೇಲೆ ನಿರ್ಬಂಧಗಳನ್ನು ಹಾಕಿ ಹೊಸ ಸ್ಪರ್ಧೆಗಳಿಗೆ ಅವಕಾಶವನ್ನು ಸಹ ಕೊಡುವುದಿಲ್ಲೆಂದು ತಿಳಿಸಿದ್ದರು. ಆದರೆ ಈಗ ಹೊಸದಾಗಿ ಸ್ಪರ್ಧೆಗಳಿಗೆ ಕೆಲವು ಷರತ್ತುಗಳೊಡನೆ ಅವಕಾಶಕೊಡುವುದಾಗಿಯೂ ತಿಳಿಸಿದ್ದಾರೆ.

ನೂತನ ಯೋಜನೆಗಳು

ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದಲ್ಲಿ ಭಾರತ ಸರ್ಕಾರವು ೨೮ ಯೋಜನೆಗಳನ್ನು ಕಳೆದ ಮಾಹೆಯಲ್ಲಿ ಮಂಜೂರ್ ಮಾಡಿದೆ. ಈ ಯೋಜನೆಗಳಿಗೆ ಕೇಂದ್ರವು ೧೮ ಲಕ್ಷ ೨೩ ಸಾವಿರ ವೆಚ್ಚ ಮಾಡುವುದಲ್ಲದೆ ೭ ಕೋಟಿ ೩೮ ಲಕ್ಷ ರೂಗಳ ಸಾಲವನ್ನು ಪ್ರಾಂತ್ಯ ಸರ್ಕಾರಗಳಿಗೆ ಮಂಜೂರ್ ಮಾಡಿದೆ.

ದೆಹಲಿಯಲ್ಲಿ ರಿಕ್ಷಾಗಳ ವಜಾ

ಇದೇ ಏಪ್ರಿಲ್ ೧೫ ನೆಯ ತಾರೀಖಿನಿಂದ ದೆಹಲಿಯ ನಗರದ ಬೀದಿಗಳಲ್ಲಿ ಜನರಿಂದ ಎಳೆಯಲ್ಪಡುವ ರಿಕ್ಷಾಗಳನ್ನು ರದ್ದು ಮಾಡಲಾಗುವುದು. ಅಂದಿನಿಂದ ಜನರ ಕೆಯ್ಯಿಂದ ಈ ವಾಹನಗಳ ಓಡಾಟಕ್ಕೆ ಅವಕಾಶವಿಲ್ಲ.' ಮಾನವೀಯ ತತ್ವದೃಷ್ಟಿಯಿಂದ ಈ ರಿಕ್ಷಾಗಳನ್ನು ರದ್ದು ಮಾಡಬೇಕೆಂದು ದೆಹಲಿಯ ಪೌರಸಭಾ ಸಮಿತಿಯು ಕೆಲವು ದಿವಸಗಳ ಹಿಂದೆ ತೀರ್ಮಾನಿಸಿತ್ತು.

ಮೆಕಾರ್ಥರ್ ಸೋಮವಾರ ಹೊರಡುವರು

ಬಲಾತ್ಕಾರ ನಿವೃತ್ತಿಗೊಳಗಾದ ಜನರಲ್ ಮೆಕಾರ್ಥರ್‌ರವರು ಸೋಮವಾರ ಟೋಕಿಯೋದಿಂದ ಹೊರಟು ಅಮೇರಿಕಕ್ಕೆ ಬರುವರೆಂದು ಗೊತ್ತಾಗಿದೆ.

ರಷ್ಯದಿಂದ ಗೋಧಿ

ರಷ್ಯ ಭಾರತಕ್ಕೆ ೫ ಲಕ್ಷ ಟನ್ ಗೋಧಿಕೊಡಲು ಒಪ್ಪಿದೆಯೆಷ್ಟೆ, ಆದರೆ ಆ ಭಾರತ ತೆಗೆದುಕೊಳ್ಳಲು ಸಾಧ್ಯವಿಲ್ಲೆಂದು ನಂಬಿಕೆ ಅರ್ಹವಾದೆಡೆಗಳಿಂದ ತಿಳಿದುಬಂದಿದೆ. ರಷ್ಯ ಗೋಧಿಗೆ ಬದಲಾಗಿ ಸೆಣಬು ಮತ್ತು ರಬ್ಬರ್ ಬೇಕೆಂದು ಕೇಳಿದೆಯಂತೆ. ಇವೆರಡು ಅಭಾವ ಪದಾರ್ಥಗಳು. ಭಾರತಕ್ಕೆ ಸಾಕಾಗಿ ರಷ್ಯಕ್ಕೆ ಸರಬರಾಜು ಮಾಡುವಷ್ಟು ಶಕ್ತಿ ಭಾರತಕ್ಕಿಲ್ಲ ಆದ್ದರಿಂದ ರಷ್ಯದಿಂದ ಭಾರತ ಮೇಲ್ಕಂಡ ಷರತ್ತುಗಳ ಮೇಲೆ ೫ ಲಕ್ಷ ಟನ್ ಗೋಧಿ ತೆಗೆದುಕೊಳ್ಳಲು ಸಾಧ್ಯವಿಲ್ಲ

ಚೀನಾದ ಅಕ್ಕಿ ಭಾರತಕ್ಕೆ

ಚೀನಾ ೧೦ ಲಕ್ಷ ಟನ್ ಆಹಾರ ಧಾನ್ಯ ಕೊಡಲು ಒಪ್ಪಿದೆ.

ಚೀನಾ ಕೂಡಲೆ ಭಾರತಕ್ಕೆ ಅತ್ಯಗತ್ಯವಾಗಿ ಬೇಕಾದ ೫ಲಕ್ಷ ಟನ್ ಅಕ್ಕಿಯನ್ನು ಕೊಡಲು ಮುಂದೆ ಬಂದಿದೆ. ಆ ಅಕ್ಕಿ ರವಾನಿಸಲು ಬ್ರಿಟಿಷ್ ಹಡಗು ಸೌಕರ್ಯವಿದೆ ಇದರ ಜೊತೆಗೆ ಅಕ್ಕಿಗೆ ಹೆಚ್ಚು ಪ್ರಮಾಣದ ಬೆಲೆಯನ್ನಾಗಲಿ ಅಥವ ಇನ್ನಾವ ಕಠಿಣವಾದ ವಿನಿಮಯ ಯೋಜನೆಯನ್ನು ಚೀನಾ ಮುಂದಿಟ್ಟಿಲ್ಲ.

ಭಾರತಕ್ಕೆ ಅಕ್ಕಿ ಸರಬರಾಜು ಮಾಡುವ ವಿಚಾರದಲ್ಲಿ ಚೀನಾ 'ಸ್ನೇಹ ಮತ್ತು ಸಹಾನುಭೂತಿಯುತವಾದ ಧೋರಣೆ' ತಾಳಿದೆಯೆಂದು ಹೇಳಲಾಗಿದೆ.

ಚೀನಾದಿಂದ ಅಕ್ಕಿ ಪಡೆವ ಬಗ್ಗೆ ಕರಾರುಗಳನ್ನು ಇತ್ಯರ್ಥಪಡಿಸಲು ಆಹಾರ ಶಾಖೆಯ ಸಹ ಕಾರ್ಯದರ್ಶಿ ಡಾಮ್ಲೆ ಯವರನ್ನು ಪೆಕಿಂಗ್‌ಗೆ ಕಳಿಸಲು ಭಾರತ ಸರ್ಕಾರ ನಿರ್ಧರಿಸಿದೆ.

ಡಾಮ್ಲೆಯವರು ಭಾನುವಾರ ಪೆಕಿಂಗ್‌ಗೆ ತೆರಳಿದ್ದಾರೆ.

ಎಂ. ಪಿ. ಸಿ. ಸಿ.

ಇದೇ ತಿಂಗಳು ೨೮, ೨೯, ವಾಣಿವಿಲಾಸಪುರದಲ್ಲಿ ಎಂ. ಪಿ. ಸಿ. ಸಿ. ಸಭೆ ನಡೆಯಬೇಕೆಂದು ಸಮಿತಿ ನಿರ್ಧರಿಸಿದೆ.

ಕಾಶ್ಮೀರ ಸರ್ಕಾರ ಉರುಳಿಸಲು ಪಿತೂರಿ

ಕಾಶ್ಮೀರದ ಮಾಜಿ ಪ್ರಧಾನಿಗಳಾದ ಪಂಡಿತ್ ರಾಮ ಚಂದ್ರಕಾಕ್‌ರು "ನಮ್ಮ ಮೇಲೆ ಪಿತೂರಿ ಹೂಡಲು,' ಪಾಕಿಸ್ತಾನ್ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆಂದು ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾ ತಿಳಿಸಿದರು.

ಭಾರತದ ಜನಸಂಖ್ಯೆ

ಈಗಿನ ಜನಗಣತಿಪ್ರಕಾರ ಭಾರತದ ಜನಸಂಖ್ಯೆಯು ೩೬ ಕೋಟಿ ೧೮ ಲಕ್ಷ ೨೦ ಸಾವಿರ ಇದೆಯೆಂದು ತಿಳಿಯಬರುತ್ತದೆ. ೧೯೪೧ ಜನಗಣತಿಗಿಂತ ೪ ಕೋಟಿ, ೨೦ ಲಕ್ಷ ೬೦ ಸಾವಿರ ಹೆಚ್ಚಿದೆ. ಅಂದರೆ ಶೇ. ೧೩-೪-೧ ಏರಿದೆ. ಒಟ್ಟು ಭಾರತದ ವಿಸ್ತೀರ್ಣವು ೧೧ಲಕ್ಷ ಚದುರ ಮೈಲಿಗಳು. ಕಾಶ್ಮೀರ ಮತ್ತು ಕೆಲವು ಬೆಟ್ಟ ಗುಡ್ಡ ನಾಡಿನ ಪ್ರದೇಶದ ಜನಸಂಖ್ಯೆಯನ್ನು ಬಿಟ್ಟರೆ ಭಾರತದ ಜನಸಂಖ್ಯೆಯು ೩೫ ಕೋಟಿ ೬೮ ಲಕ್ಷ ೯೬ ಸಾವಿರವಾಗುತ್ತದೆ. ಪುರುಷರ ಸಂಖ್ಯೆಯು ೧೮ ಕೋಟಿ ೩೩ ಲಕ್ಷ, ಸ್ತ್ರೀಯರು ೧೭-೩೫ ಲಕ್ಷ. ಈ ಅಂಕಿಗಳು ತಾತ್ಕಾಲಿಕವಾದವು.

ರಾಜೀನಾಮೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು ಕಾರ್ಯಕಾರೀ ಸಮಿತಿ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರೆಂದೂ, ಈ ವಿಷಯ ಕಳೆದ ಸಭೆ ಮತ್ತು ಇಂದೂ ಚರ್ಚೆಗೆ ಬಂದಿತ್ತೆಂದು ತಿಳಿದುಬಂದಿದೆ.

ಮೆಕಾರ್ಥರ್ ವಜಕ್ಕೆ ೫ ದಿನ ಮುನ್ನ ನಿರ್ಧಾರ

ಮೆಕಾರ್ಥರನ್ನು ವಜಾ ಮಾಡುವ ಆಜ್ಞೆಯನ್ನು ಪ್ರಕಟಿಸುವುದಕ್ಕೆ ೫ ದಿನ ಮುಂಚೆಯೇ ಟ್ರೂಮನ್ನರು ಈ ನಿರ್ಧಾರ ಮಾಡಿದರೆಂದು ಅಧಿಕೃತ ವರದಿಯಾಗಿದೆ. ಈ ಐದು ದಿನಗಳನ್ನು ದೂರ ಪ್ರಾಚ್ಯದ ದಂಡನಾಯಕತ್ವದ ಪುನರ್ವ್ಯವಸ್ಥೆಗೆ ಯೋಜನೆಯ ರಚನೆ ಜನರಲ್ ಮೆಕಾರ್ಥರರ ಮತ್ತು ಸಂಯುಕ್ತ ದಂಡನಾಯಕರ ಮಧ್ಯೆ ವರದಿ ವಿನಿಮಯಗಳಿಗಾಗಿ ವಿನಿಯೋಗಿಸಲಾಯಿತು.

ರಣಜಿತ್ ಟಾಕೀಸ್
೧೪—೪—೧೯೫೧ ರಿಂದ ಅಮೋಘ
ಪ್ರದರ್ಶನಾರಂಭ
ಪ್ರತಿದಿನ ೩ ಆಟಗಳು
—:: ಒಂದು ರಾತ್ರಿ ::—
ಎ. ವಿ. ಎಂ. ರವರ ನೂತನ ವರ್ಷದ
ನವೀನ ರೀತಿಯ ಅತ್ಯುತ್ತಮ
ತಮಿಳು ಚಿತ್ರ
ತಾರಾಗಣ:— ಟಿ. ಎಸ್. ಬಾಲಯ್ಯ, ಕೆ. ಆರ್. ರಾಮಸ್ವಾಮಿ, ಲಲಿತ—ಪದ್ಮಿನಿ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೪—೧೯೫೦ನೇ ಸೋಮವಾರ [ಸಂಚಿಕೆ ೧೮೩

ಅಧ್ಯಕ್ಷ ಸ್ಥಾನಕ್ಕೆ ಬಂದು ೫ ವರ್ಷ

ಏಪ್ರಿಲ್ ೧೨ಕ್ಕೆ ಅಮೆರಿಕಾ ಅಧ್ಯಕ್ಷರಾಗಿದ್ದ ರೂಸ್‌ವೆಲ್ಟ್‌ರವರು ಮಡಿದು ಟ್ರೂಮನ್ನರು ಅಧ್ಯಕ್ಷರಾಗಿ ೫ ವರ್ಷವಾಯಿತು. ರೂಸ್‌ವೆಲ್ಟರ ಮಡಿದ ದಿನವನ್ನು ಅವರ ಸ್ವಗೃಹವಾದ ಹೈಡ್ ಪಾರ್ಕಿನಲ್ಲಿ, ಅವರ ಪತ್ನಿ ಮತ್ತು ಕೆಲವು ಮಿತ್ರರು ನಿರಾಡಂಬರವಾಗಿ ಆಚರಿಸಿದರು.

ಯುನೆಸ್ಕೋ ಹುದ್ದೆ

ಬೆಂಗಳೂರು ಏ ೧೫- ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಯೋಜನೆಯ ವಿದ್ಯಾಪೀಠಗಳ ಡೈರೆಕ್ಟರಾದ ಶ್ರೀ ಎಸ್. ವಿ. ಶ್ರೀನಿವಾಸರಾಯರಿಗೆ ಸಿಂಹಳದಲ್ಲಿ ಅಕ್ಷರ ಪ್ರಚಾರ ತಜ್ಞರಾಗಿ ಯುನೆಸ್ಕೋ ಹುದ್ದೆ ದೊರಕಿದೆ.

ರಾಜ-ಮಹಾರಾಜರು ಕೇಂದ್ರ ಸರ್ಕಾರದ ಅಧೀನ

ಸ್ವರಕ್ಷಣೆಗಾಗಿ ಕಾಂಗ್ರೆಸ್ ಮಂತ್ರಿಗಳು ಗುಂಡು ಹಾರಿಸಿದರು

ಆಯಾಯಾ ಪ್ರಾಂತ್ಯಗಳ ಧರ್ಮ, ಕಟ್ಟಳೆಗಳಿಗೆ ಅನುಸಾರವಾಗಿ ಅನುವಂಶಿಕವಾಗಿ ರಾಜರಾಗುವ ಅಧಿಕಾರವನ್ನು ಭರವಸೆ ಕೊಡಲಾಗಿದೆ.

ರಿಪಬ್ಲಿಕನ್ ರಾಜ್ಯಾಂಗ ಜಾರಿಗೆ ಬಂದ ನಂತರ ರಾಜತ್ವದ ಉಳಿವು ಮತ್ತು ರಾಜ-ಮಹಾರಾಜರ ಹಕ್ಕುಬಾಧ್ಯತೆಗಳು ರಾಷ್ಟ್ರಾಧ್ಯಕ್ಷರು ಕಾಲಕಾಲಕ್ಕೆ ಈ ಹಕ್ಕುಗಳಿಗೆ ಕೊಡುವ ಮನ್ನಣೆಯನ್ನು ಅವಲಂಬಿಸುತ್ತದೆ.

ರಾಷ್ಟ್ರಾಧ್ಯಕ್ಷರು ತಮಗೆ ಅಗತ್ಯವೆಂದು ತೋರಿದಾಗ ಮನ್ನಣೆಯನ್ನು ವಾಪಸ್ಸು ತೆಗೆದುಕೊಳ್ಳ ಬಹುದಾಗಿದೆ.

ರಾಜರುಗಳಿಗೆ ಸಂದಾಯವಾಗುವ ಪ್ರೀವಿಪರ್ಸ್ ಭಾರತದ ಶೇಖರಿತ ನಿಧಿಗಳಿಂದ ಕೊಡಲಾಗುತ್ತದೆ. ಇದಕ್ಕೆ ಮಾತ್ರ ಆದಾಯ ತೆರಿಗೆ ಇಲ್ಲ. ರಾಷ್ಟ್ರಾಧ್ಯಕ್ಷರೇ ಆದಾಯ ತೆರಿಗೆ ಕೊಡುತ್ತಾರೆ.

ಒಂಬತ್ತು, ಹೆಚ್ಚು ಕುಶಾಲ ತೋಪು ಗೌರವವಿರುವ ಎಲ್ಲಾ ರಾಜರುಗಳನ್ನು 'ಹಿಸ್‌ಹೈನೆಸ್' ಎಂದು ಕರೆಯಬೇಕೆಂದು ನಿಯೋಜಿತವಾಗಿದೆ.

ಭಾರತ ಸರ್ಕಾರ ಮತ್ತು ರಾಜ-ಮಹಾರಾಜರುಗಳ ನಡುವಣ ಒಪ್ಪಂದ, ಸನ್ನದ್ ಮತ್ತು ಇತರ ವಿಷಯಗಳನ್ನು ಕಾರ್ಯಗತ ಮಾಡುವ ಸಂಬಂಧವಾದ ರಾಷ್ಟ್ರಾಧ್ಯಕ್ಷರ ನಿರ್ಧಾರಗಳ ಮೇಲೆ ಸವಾಲು ಹಾಕಲು ರಾಜರಿಗೆ ಅಧಿಕಾರವಿಲ್ಲ ಎಂದು ಭಾರತ ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ರಾಜ-ಮಹಾರಾಜರುಗಳ ಇತರ ಹಕ್ಕುಗಳಾವುವೆಂದರೆ ಪ್ರಾಂತ್ಯದಸಿವಿಲ್ ಮತ್ತು ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗಳನ್ನು ಕಾರ್ಯಗತಮಾಡುವಾಗ ಕೇಂದ್ರದ ಅನುಮತಿ ಪಡೆಯದೆ ಅವರ ಮೇಲೆ ಮೊಕದ್ದಮೆ ನಡೆಸಲಾಗದು, ಶಸ್ತ್ರ ಕಾನೂನಿನ ಕೆಲವು ಭಾಗಗಳು ರಾಜರಿಗೆ ಅನ್ವಯಿಸವು.

ಹೊಸ ಕಾಯಿದೆಗಳನ್ನು ಜಾರಿಗೆ ತರುವಾಗ ಮತ್ತು ಕೇಂದ್ರದ ಇಲ್ಲವೇ ಪ್ರಾಂತ್ಯದ ಕಾರ್ಯಾಧಿಕಾರವನ್ನು ಆಚರಣೆಗೆ ತರುವಾಗ ಸಂಸ್ಥಾನಗಳ ರಾಜರ ವೈಯಕ್ತಿಕ ಹಕ್ಕುಗಳು, ಗೌರವ, ಪ್ರತಿಷ್ಠೆಗಳಿಗೆ ಯುಕ್ತ ಮನ್ನಣೆ ಕೊಡಬೇಕೆಂದೂ ರಾಜ್ಯಾಂಗದಲ್ಲಿ ವಿಧಾಯಕ ಮಾಡಲಾಗಿದೆ.

ಸತ್ಕಾರ ಬೇಡ

ಜನರಲ್ ಮೆಕಾರ್ಥರು ಸೋಮವಾರ ಸಾನ್‌ಫ್ರಾನ್ಸಿಸ್ಕೋವಿಗೆ ಬರುವರೂ ಆದರೆ ಅವರಿಗೆ ಯಾವ ಸತ್ಕಾರಕೂಟಗಳನ್ನು ಏರ್ಪಡಿಸಲಾಗದೆಂದು ಅವರೇ ಇಲ್ಲಿನ ಮೇಯರರಿಗೆ ತಿಳಿಸಿದ್ದಾರೆ.

ಟ್ರೂಮನ್ನರ ವಿಚಾರಣೆ

ಅಮೆರಿಕನ್ ಕಾಂಗ್ರೆಸ್ಸಿನ ರಿಪಬ್ಲಿಕನ್ ಪಕ್ಷದ ಪ್ರತಿನಿಧಿಯಾದ ಎಫ್. ಆರ್. ಕೌಡರ್ಟ್‌ರವರು ರಾಜ್ಯಾಂಗ ತಿದ್ದುಪಾಟು ಮಸೂದೆಯೊಂದನ್ನು ತಂದಿದ್ದಾರೆ. ಈ ಮಸೂದೆಯಂತೆ ಸಭೆಯ ೩ನೆಯ ೨ ಭಾಗ ಬಹುಮತ ದೊರೆತಲ್ಲಿ ಅಧ್ಯಕ್ಷರನ್ನು ಅವಿಶ್ವಾಸ ಸೂಚನೆಯಂತೆ ಅಧಿಕಾರದಿಂದ ತೆಗೆಯಲು ಕಾಂಗ್ರೆಸ್ ಮತ್ತು ಸೆನೆಟ ಸಭೆಗಳಿಗೆ ಅಧಿಕಾರವಿರಬೇಕೆಂದು ಸೂಚಿಸಲಾಗಿದೆ.

ರಾಷ್ಟ್ರಾಧ್ಯಕ್ಷ ಟ್ರೂಮನ್ನರು ಜನರಲ್ ಮೆಕಾರ್ಥರವರನ್ನು ವಜಾ ಮಾಡಿರುವುದರಿಂದ ರಾಷ್ಟ್ರಾಧ್ಯಕ್ಷರನ್ನು ವಿಚಾರಣೆ ನಡೆಸುವ ಅಧಿಕಾರ ವಿಧಿಯನ್ನು ರಾಜ್ಯಾಂಗದಲ್ಲಿ ಸೇರಿಸಬೇಕೆಂದು ಅನೇಕ ಮಂದಿ ರಿಪಬ್ಲಿಕನ್ ಸದಸ್ಯರು ಇಚ್ಛಿಸುತ್ತಿದ್ದಾರೆಂದು ಗೊತ್ತಾಗಿದೆ. ಈ ವಿಧಿಯಂತೆ ಅಧ್ಯಕ್ಷರು ಮತ್ತು ಇತರ ಯಾವ ಅಧಿಕಾರಿಯನ್ನಾದರೂ ರಾಷ್ಟ್ರದ್ರೋಹಕಕ್ಕಾಗಿ ವಿಚಾರಣೆ ನಡೆಸಬಹುದು.

ಗೋಲೀಬಾರ್

ಗುರುವಾರ ಮಧ್ಯಾಹ್ನ ೩ ಗಂಟೆ ವೇಳೆಯಲ್ಲಿ ನೇಪಾಳದ ಗೃಹ ಸಚಿವ ಶ್ರೀ ಕೊಯಿರಾಲಾರವರು ಖಾಟ್ಮಂಡುವಿನಲ್ಲಿ ಕೈಗಾರಿಕಾ ಮಂತ್ರಿಗಳೊಡನೆ ಸಮಾಲೋಚನೆ ನಡೆಸುತ್ತಲಿದ್ದಾಗ ಉದ್ರೇಕಗೊಂಡ ಒಂದು ಗುಂಪು ತಮ್ಮ ಮನೆಗೆ ಪ್ರವೇಶಿಸುತ್ತಲಿರುವುದಾಗಿ ತಿಳಿದುಬಂದಿತು. ಇವರೆಲ್ಲರೂ ಗೋರ್ಖಾ ದಳಕ್ಕೆ ಸೇರಿ ಸರ್ಕಾರ ವಿರೋಧ ಘೋಷಣೆಗಳನ್ನು ಮಾಡುತ್ತ ಶ್ರೀ ಕೊಯಿರಾಲಾರವರನ್ನು ಕೊಲ್ಲುವುದಾಗಿ ಕೂಗುತ್ತಲಿದ್ದರು. ಪೋಲೀಸಿನವರು ಅಲ್ಲಿಗೆ ಒದಗುವುದರೊಳಗಾಗಿ ಗುಂಪಿನವರು ಅವರು ಮಲಗುವ ಕೊಠಡಿಯೊಳಗೆ ನುಗ್ಗಿದರು. ಮಿ|| ಕೊಯಿರಾಲಾರವರನ್ನು ಕೊಲ್ಲುವುದೆಂದು ಹೇಳುತ್ತಾ ಅವರ ಮೇಲೆ ಜನರು ಬಿದ್ದರು. ಸ್ವರಕ್ಷಣೆಗಾಗಿ ಮಿ|| ಕೊಯಿರಾಲಾರವರು ಗುಂಡು ಹಾರಿಸಿದರು. ಗುಂಪಿನಲ್ಲಿ ಒಬ್ಬನು ಮಡಿದನು. ಇನ್ನೊಬ್ಬನಿಗೆ ಗಾಯಗಳಾಯಿತು. ಕೂಡಲೇ ಇನ್ನು ಹೆಚ್ಚಿಗೆ ಮದ್ದು ಗುಂಡು ಮೊಂಡಾದ ಶಸ್ತ್ರಗಳನ್ನು ಒದಗಿಸಕೊಳ್ಳಲಾಯಿತು. ಅಷ್ಟರೊಳಗೆ ಪೋಲೀಸಿನವರು ಬಂದು ಎಲ್ಲರನ್ನು ರಕ್ಷಿಸಿದರು.

ಮಿ|| ಕೊಯಿರಾಲಾರವರು ಈ ವಿಷಯವನ್ನು ತಿಳಿಸಿರುವರು.

ನಿಗ್ರೋಗಳಿಗೆ ಸ್ಟೇಟ್ಸ್ ಶಾಖೆ ಉನ್ನತ ಹುದ್ದೆ

೧೫ ಮಂದಿ ನೀಗ್ರೋ ಪ್ರಮುಖರು ಅಮೇರಿಕಾ ಸ್ಟೇಟ್ಸ್ ಶಾಖಾ ಕಾರ್ಯದರ್ಶಿ ಡೀನ್ ಅಚಿಸನ್ನರನ್ನು ಭೇಟಿ ಮಾಡಿ ತಮ್ಮ ಶಾಖೆಯ ಉಪ ಕಾರ್ಯದರ್ಶಿ ಸ್ಥಾನಕ್ಕೆ ನೀಗ್ರೋ ಜನಾಂಗದ ವ್ಯಕ್ತಿಯೊಬ್ಬನನ್ನು ಆರಿಸುವಂತೆ ಮನವಿ ಮಾಡಿದರು.

ರಾಜಘಾಟ್ ಸಮಾಧಿ ಆಡಳಿತ

ಮಹಾತ್ಮ ಗಾಂಧಿಯವರ ಸ್ಮಾರಕವಾಗಿ ಕಟ್ಟಲ್ಪಟ್ಟಿರುವ ರಾಜಕೋಟೆ ಸಮಾಧಿಯ ದೇಗುಲವನ್ನು ತಕ್ಕ ಸ್ಥಿತಿಯಲ್ಲಿಡಲೂ ಮತ್ತು ಅದರ ಆಡಳಿತವನ್ನು ಉಸ್ತುವಾರಿ ನೋಡಿಕೊಳ್ಳಲೂ ಉತ್ಪತ್ತಿ ಮತ್ತು ಕಾಮಗಾರಿ ಉಪ ಸಚಿವರಾದ ಶ್ರೀ ಬಿ. ಎನ್. ಬುರಾಗೊ ಹೈನ್‌ರು ಪಾರ್ಲಿಮೆಂಟಿನ ಮಸೂದೆಯೊಂದನ್ನು ಮಂಡಿಸಿದರು.

ಶ್ರೀ ಟಾಂಡನ್ ಪ್ರಯಾಣ

ಬೆಂಗಳೂರು ಏ. ೧೫

ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಾಂಡನ್‌ರವರ ಪ್ರಧಾನ ಕಾರ್ಯದರ್ಶಿ ಶ್ರೀ ಕಳಾವೆಂಕಟರಾವ್, ಡಾ|| ಹೆಚ್. ಸಿ. ಮುಖರ್ಜಿಯವರೊಡನೆ ಇಂದು ಬೆಳಿಗ್ಗೆ ತಿರುವನಂತಪುರಕ್ಕೆ ಪ್ರಯಾಣ ಮಾಡಿದರು. ಮೈಸೂರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ. ಜಿ. ರಾಮಚಂದ್ರರಾಯರು ಬೀಳ್ಕೊಟ್ಟರು.

ಹೊಸ ಕಾಂಗ್ರೆಸ್ ಒಳ ಪಕ್ಷ

ತಾವು ಕಾಂಗ್ರೆಸ್ ಅಧ್ಯಕ್ಷರಿಗ ಸಲ್ಲಿಸಿದ ಮನವಿಗೆ ತೃಪ್ತಿಕರ ಜವಾಬು ಬರದಿದ್ದಲ್ಲಿ ಹೊಸ ಪಕ್ಷವೊಂದನ್ನು ಸ್ಥಾಪಿಸಬೇಕೆಂದು ಎರಡು ದಿನದಿಂದ ಇಲ್ಲಿ ಸಮಾಲೋಚನೆ ನಡೆಸಿದ ಪಂಡಿತ್ ಹೀರಾಲಾಲ್ ಶಾಸ್ತ್ರಿಯವರು ಕಾಂಗ್ರೆಸ್ ಗುಂಪಿನವರು ಜಯಪುರದಲ್ಲಿ ನಿರ್ಧರಿಸಿದ್ದಾರೆಂದು ತಿಳಿಯಬಂದಿದೆ.

ಪರಿಸ್ಥಿತಿ ಉಲ್ಬಣವಾಗುತ್ತಿದೆ

ದಕ್ಷಿಣ ಪರ್ಷಿಯಾದಲ್ಲಿ ಎಣ್ಣೆ ಗಣಿಗಳಿರುವ ಪ್ರದೇಶದಲ್ಲಿ ಪರಿಸ್ಥಿತಿಯು ಉಲ್ಬಣವಾಗಿದೆ. ಈಗಾಗಲೇ ಸರ್ಕಾರವು ಆ ಪ್ರದೇಶದಲ್ಲಿ ಶಾಂತಿಯನ್ನು ಕಾಪಾಡಲು ಸೈನ್ಯ ಮತ್ತು ಟ್ಯಾಂಕು ಪಡೆಗಳನ್ನು ಕಳುಹಿಸಿದೆ. ಮಂತ್ರಿ ಮಂಡಲದ ಮತ್ತು ಶಾಸನ ಸಭೆಯ ವಿಶೇಷ ಅಧಿವೇಶನಗಳು ಪರಿಸ್ಥಿತಿಯನ್ನು ಪರಿಶೀಲಿಸುತ್ತಲಿವೆ. ಗಲಭೆಗಳಲ್ಲಿ ಪಾತ್ರವಹಿಸುತ್ತಲಿರುವ ಅಪಾದನೆ ಮೇಲೆ ಅನೇಕ ಮಿಲಿಟರಿ ಮತ್ತು ಇತರ ಸರ್ಕಾರಿ ಅಧಿಕಾರಿಗಳನ್ನು ನಿವೃತ್ತಿ ಮಾಡಲು ಸರ್ಕಾರ ನಿರ್ಧರಿಸಿದೆ.

ಈ ಪರಿಸ್ಥಿತಿಯಿಂದ ಬ್ರಿಟನ್ನಿಗಾಗುವ ನಷ್ಟದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ವಿದೇಶಾಂಗ ಕಾರ್ಯದರ್ಶಿ ಮಿ|| ಮಾರಿಸನ್‌ರವರು ಮಾತನಾಡುತ್ತಾ, ಪರ್ಷಿಯಾದಲ್ಲಿ ಬ್ರಿಟನ್ನಿಗಾಗುತ್ತಲಿರುವ ನಷ್ಟವನ್ನೆಲ್ಲಾ ಪರ್ಷಿಯಾವು ಕೊಡಬೇಕಾಗಿದೆ. ಅಲ್ಲದೆ ಅಲ್ಲಿಯ ಗಲಭೆಗಳಲ್ಲಿ ಮಡಿದ ಬ್ರಿಟಿಷ್ ಪ್ರಜೆಗಳಿಗೆ ಪರಿಹಾರವನ್ನು ಅದು ಕೊಡಬೇಕಾಗಿದೆ. ಪರಿಸ್ಥಿತಿಯನ್ನೆದುರಿಸಲು ಮತ್ತು ಬ್ರಿಟನ್ನಿನ ಹಿತಾಶಯಗಳನ್ನು ಕಾಪಾಡಲು ರಾಯಲ್ ನೌಕಾ ಸೈನ್ಯದ ಹಡಗುಗಳನ್ನು ಕಳುಹಿಸಲಾಗುವುದೆಂದೂ ಅವರು ತಿಳಿಸಿದರು.

ಸಕ್ಕರೆ ನಿರ್ಬಂಧವಿಲ್ಲದೆ ಸಿಗುವುದು

ಪಡಿತರವಿರುವ ಜಾಗದಲ್ಲಿಯೇ ಸಕ್ಕರೆಯನ್ನು ಇತರ ಅಂಗಡಿಗಳಲ್ಲಿಯೂ ನಿರ್ಬಂಧವಿಲ್ಲದೆ ಮಾರಲು ಎಲ್ಲಾ ಸಂಸ್ಥಾನಗಳಲ್ಲಿಯೂ ಅವಕಾಶವನ್ನು ಕಲ್ಪಿಸಲಾಗಿದೆ, ಎಂದು ಪಾರ್ಲಿಮೆಂಟಿನಲ್ಲಿ ಆಹಾರ ಮಂತ್ರಿ ಶ್ರೀ ಕೆ. ಎಂ. ಮುನಿಷಿಯವರು ತಿಳಿಸಿದರು.

ಮುಂದುವರಿದು, ಹೀಗೆ ನಿರ್ಬಂಧವಿಲ್ಲದೆ ಮಾರಲು ೫೦ ಸಾವಿರ ಟನ್ ಸಕ್ಕರೆಯನ್ನು ಒದಗಿಸಲಾಗಿದೆ. ಹೊರಗಿನಿಂದ ತರಿಸಿದ ಸಕ್ಕರೆಯೂ ಸಹ ಮಾರುಕಟ್ಟೆಗೆ ಕೊಡಲು ಉದ್ದೇಶ ಪಡಲಾಗಿದೆ.

ಬ್ರಿಟನ್ ಸಲಹೆಗೆ ತಿರಸ್ಕಾರ

ಜಪಾನಿನ ಶಾಂತಿ ಕರಾರಿನಲ್ಲಿ ಪ್ರಜಾ ಚೀನಾವು ಭಾಗವಹಿಸಬೇಕೆಂದು ಬ್ರಿಟನ್ ಮಾಡಿರುವ ಸಲಹೆಯನ್ನು ಅಮೇರಿಕಾ ತಿರಸ್ಕರಿಸಿದೆ. ಅಲ್ಲದೆ ವಿಶ್ವಸಂಸ್ಥೆಗೆ ಚೀನಾವನ್ನು ಸೇರಿಸುವುದಕ್ಕೆ ತನ್ನ ಸಂಪೂರ್ಣ ವಿರೋಧವಿದೆಯೆಂದೂ ಹೇಳಿದೆ.

ಚಕ್ರಬಂಧ ಸ್ಪರ್ಧೆ ನಿಲ್ಲಿಸಲು ಸಾಧ್ಯವಿಲ್ಲ

ಬೊಂಬಾಯಿ ಒಳಾಡಳಿತ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು, ಪತ್ರಿಕಾ ಕರ್ತರೊಂದಿಗೆ ಮಾತನಾಡುತ್ತಾ, ಚಕ್ರಬಂಧ ಸ್ಪರ್ಧೆಗಳ ಮೇಲೆ ಯಾವ ವಿಧವಾದ ಹತೋಟಿಯನ್ನಾಗಲಿ ಅಥವ ಪೂರ್ಣವಾಗಿ ನಿಷೇಧಿಸುವುದಕ್ಕಾಗಲಿ ಸರ್ಕಾರಕ್ಕೆ ಯಾವಮಾರ್ಗವೂ ಕಾಣಲಿಲ್ಲ. ಆದರೆ ಈ ಸ್ಪರ್ಧೆಗಳನ್ನು ನಡೆಯಿಸುವುದರಲ್ಲಿ ಯಾವ ವಿಧವಾದ ಮೋಸವೂ ನಡೆಯದಂತೆ ಮಾತ್ರ ನೋಡಿಕೊಳ್ಳಲಾಗುವುದು ಎಂದರು.

ಕೆಲವು ಕಾಲದ ಹಿಂದೆ ಚಕ್ರಬಂಧ ಸ್ಪರ್ಧೆಗಳು ಮೇಲೆ ನಿರ್ಬಂಧಗಳನ್ನು ಹಾಕಿ ಹೊಸ ಸ್ಪರ್ಧೆಗಳಿಗೆ ಅವಕಾಶವನ್ನು ಸಹ ಕೊಡುವುದಿಲ್ಲೆಂದು ತಿಳಿಸಿದ್ದರು. ಆದರೆ ಈಗ ಹೊಸದಾಗಿ ಸ್ಪರ್ಧೆಗಳಿಗೆ ಕೆಲವು ಷರತ್ತುಗಳೊಡನೆ ಅವಕಾಶಕೊಡುವುದಾಗಿಯೂ ತಿಳಿಸಿದ್ದಾರೆ.

ನೂತನ ಯೋಜನೆಗಳು

ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮದಲ್ಲಿ ಭಾರತ ಸರ್ಕಾರವು ೨೮ ಯೋಜನೆಗಳನ್ನು ಕಳೆದ ಮಾಹೆಯಲ್ಲಿ ಮಂಜೂರ್ಮಾಡಿದೆ. ಈ ಯೋಜನೆಗಳಿಗೆ ಕೇಂದ್ರವು ೧೮ ಲಕ್ಷ ೨೩ ಸಾವಿರ ವೆಚ್ಚ ಮಾಡುವುದಲ್ಲದೆ ೨ ಕೋಟಿ ೧೮ ಲಕ್ಷ ರೂಗಳ ಸಾಲವನ್ನು ಪ್ರಾಂತ್ಯ ಸರ್ಕಾರಗಳಿಗೆ ಮಂಜೂರ್ಮಾಡಿದೆ.

ದೆಹಲಿಯಲ್ಲಿ ರಿಕ್ಷಾಗಳ ವಜಾ

ಇದೇ ಏಪ್ರಿಲ್ ೧೫ ನೆಯ ತಾರೀಖಿನಿಂದ ದೆಹಲಿಯ ನಗರದ ಬೀದಿಗಳಲ್ಲಿ ಜನರಿಂದ ಎಳೆಯಲ್ಪಡುವ ರಿಕ್ಷಾಗಳನ್ನು ರದ್ದು ಮಾಡಲಾಗುವುದು. ಅಂದಿನಿಂದ ಜನರೆಳೆಯುವ ಈ ವಾಹನಗಳ ಓಡಾಟಕ್ಕೆ ಅವಕಾಶವಿಲ್ಲ. ಮಾನವೀಯ ತತ್ವ ದೃಷ್ಟಿಯಿಂದ ಈ ರಿಕ್ಷಾಗಳನ್ನು ರದ್ದು ಮಾಡಬೇಕೆಂದು ದೆಹಲಿಯ ಪೌರಸಭಾ ಸಮಿತಿಯು ಕೆಲವು ದಿವಸಗಳ ಹಿಂದೆ ತೀರ್ಮಾನಿಸಿತ್ತು.

ಮೆಕಾರ್ಥರ್ ಸೋಮವಾರ ಹೊರಡುವರು

ಬಲತ್ಕಾರ ನಿವೃತ್ತಿಗೊಳಗಾದ ಜನರಲ್ ಮೆಕಾರ್ಥರ್‌ರವರು ಸೋಮವಾರ ಟೋಕಿಯಾದಿಂದ ಹೊರಟು ಅಮೆರಿಕಕ್ಕೆ ಬರುವರೆಂದು ಗೊತ್ತಾಗಿದೆ.

ರಷ್ಯದಿಂದ ಗೋಧಿ

ರಷ್ಯ ಭಾರತಕ್ಕೆ ೫ ಲಕ್ಷ ಟನ್ ಗೋಧಿಕೊಡಲು ಒಪ್ಪಿದೆಯೆಷ್ಟೆ, ಆದರೆ ಆ ಭಾರತ ತೆಗೆದುಕೊಳ್ಳಲು ಸಾಧ್ಯವಿಲ್ಲೆಂದು ನಂಬಿಕೆ ಅರ್ಹವಾದೆಡೆಗಳಿಂದ ತಿಳಿದುಬಂದಿದೆ. ರಷ್ಯ ಗೋಧಿಗೆ ಬದಲಾಗಿ ಸೆಣಬು ಮತ್ತು ರಬ್ಬರ್ ಬೇಕೆಂದು ಕೇಳಿದೆಯಂತೆ. ಇವೆರಡು ಅಭಾವ ಪದಾರ್ಥಗಳು. ಭಾರತಕ್ಕೆ ಸಾಕಾಗಿ ರಷ್ಯಕ್ಕೆ ಸರಬರಾಜು ಮಾಡುವಷ್ಟು ಶಕ್ತಿ ಭಾರತಕ್ಕಿಲ್ಲ. ಅದ್ದರಿಂದ ರಷ್ಯದಿಂದ ಭಾರತ ಮೇಲ್ಕಂಡ ಷರತ್ತುಗಳ ಮೇಲೆ ೫ ಲಕ್ಷ ಟನ್ ಗೋಧಿ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಚೀನಾದ ಅಕ್ಕಿ ಭಾರತಕ್ಕೆ

ಚೀನಾ ೧೦ ಲಕ್ಷ ಟನ್ ಆಹಾರ ಧಾನ್ಯ ಕೊಡಲು ಒಪ್ಪಿದೆ.

ಚೀನಾ ಕೂಡಲೆ ಭಾರತಕ್ಕೆ ಅತ್ಯಗತ್ಯವಾಗಿ ಬೇಕಾದ ೫ಲಕ್ಷಟನ್ ಅಕ್ಕಿಯನ್ನು ಕೊಡಲು ಮುಂದೆ ಬಂದಿದೆ. ಆ ಅಕ್ಕಿ ರವಾನಿಸಲು ಬ್ರಿಟಿಷ್ ಹಡಗು ಸೌಕರ್ಯವಿದೆ ಇದರ ಜೊತೆಗೆ ಅಕ್ಕಿಗೆ ಹೆಚ್ಚು ಪ್ರಮಾಣದ ಬೆಲೆಯನ್ನಾಗಲಿ ಅಥವ ಇನ್ಯಾವ ಕಠಿಣವಾದ ವಿನಿಮಯ ಯೋಜನೆಯನ್ನು ಚೀನಾ ಮುಂದಿಟ್ಟಿಲ್ಲ.

ಭಾರತಕ್ಕೆ ಅಕ್ಕಿ ಸರಬರಾಜು ಮಾಡುವ ವಿಚಾರದಲ್ಲಿ ಚೀನಾ 'ಸ್ನೇಹ ಮತ್ತು ಸಹಾನುಭೂತಿಯುತವಾದ ಧೋರಣೆ' ತಾಳಿದೆಯೆಂದು ಹೇಳಲಾಗಿದೆ.

ಚೀನಾದಿಂದ ಅಕ್ಕಿ ಪಡೆವ ಬಗ್ಗೆ ಕರಾರುಗಳನ್ನು ಇತ್ಯರ್ಥಪಡಿಸಲು ಆಹಾರ ಶಾಖೆಯ ಸಹ ಕಾರ್ಯದರ್ಶಿ ಡಾಮ್ಲೆಯವರನ್ನು ಪೆಕಿಂಗ್‌ಗೆ ಕಳಿಸಲು ಭಾರತ ಸರ್ಕಾರ ನಿರ್ಧರಿಸಿದೆ.

ಡಾಮ್ಲೆಯವರು ಭಾನುವಾರ ಪೆಕಿಂಗ್‌ಗೆ ತೆರಳಲಿದ್ದಾರೆ.

ಎಂ. ಪಿ. ಸಿ. ಸಿ.

ಇದೇ ತಿಂಗಳು ೨೮, ೨೯, ವಾಣಿವಿಲಾಸಪುರದಲ್ಲಿ ಎಂ. ಪಿ. ಸಿ. ಸಿ. ಸಭೆ ನಡೆಯಬೇಕೆಂದು ಸಮಿತಿ ನಿರ್ಧರಿಸಿದೆ.

ಕಾಶ್ಮೀರ ಸರ್ಕಾರ ಉರುಳಿಸಲು ಪಿತೂರಿ

ಕಾಶ್ಮೀರದ ಮಾಜಿ ಪ್ರಧಾನಿಗಳಾದ ಪಂಡಿತ್ ರಾಮ ಚಂದ್ರಕಾಕ್‌ರು "ನಮ್ಮ ಮೇಲೆ ಪಿತೂರಿ ಹೂಡಲು,' ಪಾಕಿಸ್ತಾನ್ ಅಧಿಕಾರಿಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆಂದು ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾ ತಿಳಿಸಿದರು.

ಭಾರತದ ಜನಸಂಖ್ಯೆ

ಈಗಿನ ಜನಗಣತಿಪ್ರಕಾರ ಭಾರತದ ಜನಸಂಖ್ಯೆಯು ೩೬ ಕೋಟಿ ೧೮ ಲಕ್ಷ ೨೦ ಸಾವಿರ ಇದೆಯೆಂದು ತಿಳಿಯಬರುತ್ತದೆ. ೧೯೪೧ ಜನಗಣತಿಗಿಂತ ೪ ಕೋಟಿ, ೨೦ ಲಕ್ಷ ೬೦ ಸಾವಿರ ಹೆಚ್ಚಿದೆ. ಅಂದರೆ ಶೇ. ೧೩-೪-೧ ಏರಿದೆ. ಒಟ್ಟು ಭಾರತದ ವಿಸ್ತೀರ್ಣವು ೧೧ಲಕ್ಷ ಚದುರ ಮೈಲಿಗಳು. ಕಾಶ್ಮೀರ ಮತ್ತು ಕೆಲವು ಬೆಟ್ಟ ಗುಡ್ಡ ನಾಡಿನ ಪ್ರದೇಶದ ಜನಸಂಖ್ಯೆಯನ್ನು ಬಿಟ್ಟರೆ ಭಾರತದ ಜನಸಂಖ್ಯೆಯು ೩೫ ಕೋಟಿ ೬೮ ಲಕ್ಷ ೯೬ ಸಾವಿರವಾಗುತ್ತದೆ. ಪುರುಷರ ಸಂಖ್ಯೆಯು ೧೮ ಕೋಟಿ ೩೩ ಲಕ್ಷ, ಸ್ತ್ರೀಯರು ೧೭-೩೫ ಲಕ್ಷ. ಈ ಅಂಕಿಗಳು ತಾತ್ಕಾಲಿಕವಾದವು.

ರಾಜೀನಾಮೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು ಕಾರ್ಯಕಾರೀ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿರುವರೆಂದೂ, ಈ ವಿಷಯ ಕಳೆದ ಸಭೆ ಮತ್ತು ಇಂದೂ ಚರ್ಚೆಗೆ ಬಂದಿತ್ತೆಂದು ತಿಳಿದುಬಂದಿದೆ.

ಮೆಕಾರ್ಥರ್ ವಜಕ್ಕೆ ೫ ದಿನ ಮುನ್ನ ನಿರ್ಧಾರ

ಮೆಕಾರ್ಥರನ್ನು ವಜಾ ಮಾಡುವ ಆಜ್ಞೆಯನ್ನು ಪ್ರಕಟಿಸುವುದಕ್ಕೆ ೫ ದಿನ ಮುಂಚೆಯೇ ಟ್ರೂಮನ್ನರು ಈ ನಿರ್ಧಾರ ಮಾಡಿದರೆಂದು ಅಧಿಕೃತ ವರದಿಯಾಗಿದೆ. ಈ ಐದು ದಿನಗಳನ್ನು ದೂರ ಪ್ರಾಚ್ಯದ ದಂಡನಾಯಕತ್ವದ ಪುನರ್ವ್ಯವಸ್ಥೆಗೆ ಯೋಜನೆಯ ರಚನೆ ಜನರಲ್ ಮೆಕಾರ್ಥರರ ಮತ್ತು ಸಂಯುಕ್ತ ದಂಡನಾಯಕರ ಮಧ್ಯೆ ವರದಿ ವಿನಿಮಯಗಳಿಗಾಗಿ ವಿನಿಯೋಗಿಸಲಾಯಿತು.

ರಣಜಿತ್ ಟಾಕೀಸ್

೧೪—೪—೧೯೫೧ ರಿಂದ ಅಮೋಘ ಪ್ರದರ್ಶನಾರಂಭ

ಪ್ರತಿದಿನ ೩ ಆಟಗಳು

—:: ಒಂದು ರಾತ್ರಿ ::—

ಎ. ವಿ. ಎಂ. ರವರ ನೂತನ ವರ್ಷದ ನವೀನ ರೀತಿಯ ಅತ್ಯುತ್ತಮ ತಮಿಳು ಚಿತ್ರ

ತಾರಾಗಣ— ಬಿ. ಎಸ್. ಬಲಯ್ಯ, ಕೆ. ಆರ್. ರಾಮಸ್ವಾಮಿ, ಲಲಿತ—ಪದ್ಮಿನಿ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೪—೧೯೫೧ನೇ ಸೋಮವಾರ [ಸಂಚಿಕೆ ೧೮೩

ಅಧ್ಯಕ್ಷ ಸ್ಥಾನಕ್ಕೆ ಬಂದು ೬ ವರ್ಷ

ಏಪ್ರಿಲ್ ೧೨ಕ್ಕೆ ಅಮೆರಿಕಾ ಅಧ್ಯಕ್ಷರಾಗಿದ್ದ ರೂಸ್‌ವೆಲ್ಟ್‌ರವರು ಮಡಿದು ಟ್ರೂಮನ್ನರು ಅಧ್ಯಕ್ಷರಾಗಿ ೬ ವರ್ಷವಾಯಿತು. ರೂಸ್‌ವೆಲ್ಟರ ಮಡಿದ ದಿನವನ್ನು ಅವರ ಸ್ವಗೃಹವಾದ ಹೈಡ್ ಪಾರ್ಕಿನಲ್ಲಿ, ಅವರ ಪತ್ನಿ ಮತ್ತು ಕೆಲವು ಮಿತ್ರರು ನಿರಾಡಂಬರವಾಗಿ ಆಚರಿಸಿದರು.

ಯುನೆಸ್ಕೋ ಹುದ್ದೆ

ಬೆಂಗಳೂರು ಏ. ೧೫- ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಯೋಜನೆಯ ವಿದ್ಯಾಪೀಠಗಳ ಡೈರೆಕ್ಟರಾದ ಶ್ರೀ ಎಸ್. ಏ. ಶ್ರೀನಿವಾಸರಾಯರಿಗೆ ಸಿಂಹಳದಲ್ಲಿ ಅಕ್ಷರ ಪ್ರಚಾರ ತಜ್ಞರಾಗಿ ಯುನೆಸ್ಕೋ ಹುದ್ದೆ ದೊರಕಿದೆ.

ರಾಜ-ಮಹಾರಾಜರು ಕೇಂದ್ರ ಸರ್ಕಾರದ ಅಧೀನ

ಸ್ವರಕ್ಷಣೆಗಾಗಿ ಕಾಂಗ್ರೆಸ್ ಮಂತ್ರಿಗಳು ಗುಂಡು ಹಾರಿಸಿದರು

ಆಯಾಯಾ ಪ್ರಾಂತ್ಯಗಳ ಧರ್ಮ, ಕಟ್ಟಳೆಗಳಿಗೆ ಅನುಸಾರವಾಗಿ ಅನುವಂಶಿಕವಾಗಿ ರಾಜರಾಗುವ ಅಧಿಕಾರವನ್ನು ಭರವಸೆ ಕೊಡಲಾಗಿದೆ.

ರಿಪಬ್ಲಿಕನ್ ರಾಜ್ಯಾಂಗ ಜಾರಿಗೆ ಬಂದ ನಂತರ ರಾಜತ್ವದ ಉಳಿವು ಮತ್ತು ರಾಜ-ಮಹಾರಾಜರ ಹಕ್ಕುಬಾಧ್ಯತೆಗಳು ರಾಷ್ಟ್ರಾಧ್ಯಕ್ಷರು ಕಾಲಕಾಲಕ್ಕೆ ಈ ಹಕ್ಕುಗಳಿಗೆ ಕೊಡುವ ಮನ್ನಣೆಯನ್ನು ಅವಲಂಭಿಸುತ್ತದೆ.

ರಾಷ್ಟ್ರಾಧ್ಯಕ್ಷರು ತಮಗೆ ಅಗತ್ಯವೆಂದು ತೋರಿದಾಗ ಮನ್ನಣೆಯದ್ದು ವಾಪಸ್ಸು ತೆಗೆದುಕೊಳ್ಳಬಹುದಾಗಿದೆ.

ರಾಜರುಗಳಿಗೆ ಸಂದಾಯವಾಗುವ ಪ್ರೀವಿಪರ್ಸ್ ಭಾರತದ ಶೇಖರಿತ ನಿಧಿಗಳಿಂದ ಕೊಡಲಾಗುತ್ತದೆ. ಇದಕ್ಕೆ ಮಾತ್ರ ಆದಾಯ ತೆರಿಗೆ ಇಲ್ಲ. ರಾಷ್ಟ್ರಾಧ್ಯಕ್ಷರೇ ಆದಾಯ ತೆರಿಗೆ ಕೊಡುತ್ತಾರೆ

ಒಂಬತ್ತು, ಹೆಚ್ಚು ಕುಶಾಲ ತೋಪು ಗೌರವವಿರುವ ಎಲ್ಲಾ ರಾಜರುಗಳನ್ನು 'ಹಿಸ್ ಹೈನೆಸ್' ಎಂದು ಕರೆಯಬೇಕೆಂದು ನಿಯೋಜಿತವಾಗಿದೆ.

ಭಾರತ ಸರ್ಕಾರ ಮತ್ತು ರಾಜ ಮಹಾರಾಜರುಗಳ ನಡುವಣ ಒಪ್ಪಂದ, ಸನ್ನದ್ ಮತ್ತು ಇತರ ವಿಷಯಗಳನ್ನು ಕಾರ್ಯಗತ ಮಾಡುವ ಸಂಬಂಧವಾದ ರಾಷ್ಟ್ರಾಧ್ಯಕ್ಷರ ನಿರ್ಧಾರಗಳ ಮೇಲೆ ಸವಾಲು ಹಾಕಲು ರಾಜರಿಗೆ ಅಧಿಕಾರವಿಲ್ಲ ಎಂದು ಭಾರತ ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ರಾಜ ಮಹಾರಾಜರುಗಳ ಇತರ ಹಕ್ಕುಗಳಾವುವೆಂದರೆ ಪ್ರಾಂತ್ಯದ ಸಿವಿಲ್ ಮತ್ತು ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗಳನ್ನು ಕಾರ್ಯಗತಮಾಡುವಾಗ ಕೇಂದ್ರದ ಅನುಮತಿ ಪಡೆಯದೆ ಅವರ ಮೇಲೆ ಮೊಕದ್ದಮೆ ನಡೆಸಲಾಗದು, ಶಸ್ತ್ರ ಕಾನೂನಿನ ಕೆಲವು ಭಾಗಗಳು ರಾಜರಿಗೆ ಅನ್ವಯಿಸವು.

ಹೊಸ ಕಾಯಿದೆಗಳನ್ನು ಜಾರಿಗೆ ತರುವಾಗ ಮತ್ತು ಕೇಂದ್ರದ ಇಲ್ಲವೇ ಪ್ರಾಂತ್ಯದ ಕಾರ್ಯಾಧಿಕಾರವನ್ನು ಆಚರಣೆಗೆ ತರುವಾಗ ಸಂಸ್ಥಾನಗಳ ರಾಜರ ವೈಯಕ್ತಿಕ ಹಕ್ಕುಗಳು, ಗೌರವ, ಪ್ರತಿಷ್ಠೆಗಳಿಗೆ ಯುಕ್ತ ಮನ್ನಣೆ ಕೊಡಬೇಕೆಂದೂ ರಾಜ್ಯಾಂಗದಲ್ಲಿ ವಿಧಾಯಕ ಮಾಡಲಾಗಿದೆ.

ಸತ್ಕಾರ ಬೇಡ

ಜನರಲ್ ಮೆಕಾರ್ಥರು ಸೋಮವಾರ ಸಾನ್‌ಫ್ರಾನ್ಸಿಸ್ಕೋವಿಗೆ ಬರುವರೂ ಆದರೆ ಅವರಿಗೆ ಯಾವ ಸತ್ಕಾರ ಕೂಟಗಳನ್ನು ಏರ್ಪಡಿಸಲಾಗದೆಂದು ಅವರೇ ಇಲ್ಲಿನ ಮೇಯರರಿಗ ತಿಳಿಸಿದ್ದಾರೆ.

ಟ್ರೂಮನ್ನರ ವಿಚಾರಣೆ

ಅಮೆರಿಕನ್ ಕಾಂಗ್ರೆಸ್ಸಿನ ರಿಪಬ್ಲಿಕನ್ ಪಕ್ಷದ ಪ್ರತಿನಿಧಿಯಾದ ಎಫ್. ಆರ್. ಕೌಡರ್ಟ್‌ರವರು ರಾಜ್ಯಾಂಗ ತಿದ್ದುಪಾಟು ಮಸೂದೆಯೊಂದನ್ನು ತಂದಿದ್ದಾರೆ. ಈ ಮಸೂದೆಯಂತೆ ಸಭೆಯು ಚುನಾಯಿ ೨ ಭಾಗ ಬಹುಮತ ದೊರೆತಲ್ಲಿ ಅಧ್ಯಕ್ಷರನ್ನು ಅವಿಶ್ವಾಸ ಸೂಚನೆಯಂತ ಅಧಿಕಾರದಿಂದ ತೆಗೆಯಲು ಕಾಂಗ್ರೆಸ್ ಮತ್ತು ಸೆನೆಟ್ ಸಭೆಗಳಿಗೆ ಅಧಿಕಾರವಿರಬೇಕೆಂದು ಸೂಚಿಸಲಾಗಿದೆ

ರಾಷ್ಟ್ರಾಧ್ಯಕ್ಷ ಟ್ರೂಮನ್ನರು ಜನರಲ್ ಮೆಕಾರ್ಥರವರನ್ನು ವಜಾ ಮಾಡಿರುವುದರಿಂದ ರಾಷ್ಟ್ರಾಧ್ಯಕ್ಷರನ್ನು ವಿಚಾರಣೆ ನಡೆಸುವ ಅಧಿಕಾರ ವಿಧಿಯನ್ನು ರಾಜ್ಯಾಂಗದಲ್ಲಿ ಸೇರಿಸಬೇಕೆಂದು ಅನೇಕ ಮಂದಿ ರಿಪಬ್ಲಿಕನ್ ಸದಸ್ಯರು ಇಚ್ಛಿಸುತ್ತಿದ್ದಾರೆಂದು ಗೊತ್ತಾಗಿದೆ. ಈ ವಿಧಿಯಂತೆ ಅಧ್ಯಕ್ಷರು ಮತ್ತು ಇತರ ಯಾವ ಅಧಿಕಾರಿಯನ್ನಾದರೂ ರಾಷ್ಟ್ರದ್ರೋಹಕ್ಕಾಗಿ ವಿಚಾರಣೆ ನಡೆಸಬಹುದು.

ಗೋಲಿಬಾರ್

ಗುರುವಾರ ಮಧ್ಯಾಹ್ನ ೨ ಗಂಟೆ ವೇಳೆಯಲ್ಲಿ ನೇಪಾಳದ ಗೃಹ ಸಚಿವ ಶ್ರೀ ಕೊಯಿರಾಲಾರವರು ಖಾಟ್ಮಂಡುವಿನಲ್ಲಿ ಕೈಗಾರಿಕಾ ಮಂತ್ರಿಗಳೊಡನೆ ಸಮಾಲೋಚನೆ ನಡೆಸುತ್ತಲಿದ್ದಾಗ ಉದ್ವೇಕಗೊಂಡ ಒಂದು ಗುಂಪು ತಮ್ಮ ಮನೆಗೆ ಪ್ರವೇಶಿಸುತ್ತಲಿರುವುದಾಗಿ ತಿಳಿದುಬಂದಿತು. ಅವರೆಲ್ಲರೂ ಗೋರ್ಖಾ ದಳಕ್ಕೆ ಸೇರಿ ಸರ್ಕಾರ ವಿರೋಧ ಘೋಷಣೆಗಳನ್ನು ಮಾಡುತ್ತ ಶ್ರೀ ಕೊಯಿರಾಲಾರವರನ್ನು ಕೊಲ್ಲುವುದಾಗಿ ಕೂಗುತ್ತಲಿದ್ದರು ಪೋಲೀಸಿನವರು ಅಲ್ಲಿಗೆ ಬರುವುದರೊಳಗಾಗಿ ಗುಂಪಿನವರು ಅವರು ಮಲಗುವ ಕೊಠಡಿಯೊಳಗೆ ನುಗ್ಗಿದರು. ಮಿ|| ಕೊಯಿರಾಲಾರವರನ್ನು ಕೊಲ್ಲುವೆವೆಂದು ಹೇಳುತ್ತಾ ಅವರ ಮೇಲೆ ಜನರು ಬಿದ್ದರು ಸ್ವರಕ್ಷಣೆಗಾಗಿ ಮಿ|| ಕೊಯಿರಾಲಾರವರು ಗುಂಡು ಹಾರಿಸಿದರು. ಗುಂಪಿನಲ್ಲಿ ಒಬ್ಬನು ಮಡಿದನು. ಇನ್ನೊಬ್ಬನಿಗೆ ಗಾಯಗಳಾಯಿತು. ಕೂಡಲೇ ಇನ್ನು ಹೆಚ್ಚಿಗೆ ಮದ್ದು ಗುಂಡು ಮುಂತಾದ ಶಸ್ತ್ರಗಳನ್ನು ಒದಗಿಸಕೊಳ್ಳಲಾಯಿತು. ಅಷ್ಟರೊಳಗೆ ಪೋಲೀಸಿನವರು ಬಂದು ಎಲ್ಲರನ್ನು ರಕ್ಷಿಸಿದರು.

ಮಿ|| ಕೊಯಿರಾಲಾರವರು ಈ ವಿಷಯವನ್ನು ತಿಳಿಸಿರುವರು.

ನಿಗ್ರೋಗಳಿಗೆ ಸ್ಟೇಟ್ಸ್ ಶಾಖೆ ಉನ್ನತ ಹುದ್ದೆ

೧೩ ಮಂದಿ ನೀಗ್ರೋ ಪ್ರಮುಖರು ಅಮೇರಿಕಾ ಸ್ಟೇಟ್ಸ್ ಶಾಖಾ ಕಾರ್ಯದರ್ಶಿ ಡೀನ್ ಅಚಿಸನ್ನರನ್ನು ಭೇಟಿ ಮಾಡಿ ತಮ್ಮ ಶಾಖೆಯ ಉಪ ಕಾರ್ಯದರ್ಶಿ ಸ್ಥಾನಕ್ಕೆ ನೀಗ್ರೋ ಜನಾಂಗದ ವ್ಯಕ್ತಿಯೊಬ್ಬನನ್ನು ಆರಿಸುವಂತೆ ಮನವಿ ಮಾಡಿದರು.

ರಾಜಘಾಟ್ ಸಮಾಧಿ ಆಡಳಿತ

ಮಹಾತ್ಮ ಗಾಂಧಿಯವರ ಸ್ಮಾರಕವಾಗಿ ಕಟ್ಟಲ್ಪಟ್ಟಿರುವ ರಾಜಕೋಟೆ ಸಮಾಧಿಯ ದೇಗುಲವನ್ನು ತಕ್ಕ ಸ್ಥಿತಿಯಲ್ಲಿಡಲೂ ಮತ್ತು ಅದರ ಆಡಳಿತವನ್ನು ಉಸ್ತುವಾರಿಕೊಳ್ಳಲೂ ಉತ್ಪತ್ತಿ ಮತ್ತು ಕಾಂಗಾರಿ ಉಪ ಸಚಿವರಾದ ಶ್ರೀ ಬಿ. ಎನ್. ಬುರಾಗೊ ಹೈನ್‌ರು ಪಾರ್ಲಿಮೆಂಟಿನ ಮಸೂದೆಯೊಂದನ್ನು ಮಂಡಿಸಿದರು.

ಶ್ರೀ ಟಾಂಡನ್ ಪ್ರಯಾಣ

ಬೆಂಗಳೂರು ಏ. ೧೫

ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಾಂಡನ್‌ರವರ ಪ್ರಧಾನ ಕಾರ್ಯದರ್ಶಿ ಶ್ರೀ ಕಳಾವೆಂಕಟರಾವ್, ಡಾ|| ಹೆಚ್. ಸಿ. ಮುಖರ್ಜಿಯವರೊಡನೆ ಇಂದು ಬೆಳಿಗ್ಗೆ ತಿರುವನಂತಪುರಕ್ಕೆ ಪ್ರಯಾಣ ಮಾಡಿದರು ಮೈಸೂರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ. ಜಿ. ರಾಮಚಂದ್ರರಾಯರು ಬೀಳ್ಕೊಟ್ಟರು.

ಹೊಸ ಕಾಂಗ್ರೆಸ್ ಒಳ ಪಕ್ಷ

ತಾವು ಕಾಂಗ್ರೆಸ್ ಅಧ್ಯಕ್ಷರಿಗೆ ಸಲ್ಲಿಸಿದ ಮನವಿಗೆ ತೃಪ್ತಿಕರ ಜವಾಬು ಬರದಿದ್ದಲ್ಲಿ ಹೊಸ ಪಕ್ಷವೊಂದನ್ನು ಸ್ಥಾಪಿಸಬೇಕೆಂದು ಎರಡು ದಿನದಿಂದ ಇಲ್ಲಿ ಸಮಾಲೋಚನೆ ನಡೆಸಿದ ಪಂಡಿತ್ ಹೀರಾಲಾಲ್ ಶಾಸ್ತ್ರಿಯವರು ಕಾಂಗ್ರೆಸ್ ಗುಂಪಿನವರು ಜಯಪುರದಲ್ಲಿ ನಿರ್ಧರಿಸಿದ್ದಾರೆಂದು ತಿಳಿಯಬಂದಿದೆ,

ಜ॥ ಮೆಕಾರ್ಥರ್ ಸ್ವದೇಶಕ್ಕೆ ಹಿಂತಿರುಗಿದರು

ಅವರ ಬೆಂಗಾವಲಿಗಾಗಿ ೧೮ ಫೈಟರ್ ಮತ್ತು ೩ ಸೂಪರ್ ಫೋರ್ಟ್ರೆಸ್ ವಿಮಾನಗಳು

ಅಧಿಕಾರದಿಂದ ನಿವೃತ್ತರಾದ ಜನರಲ್ ಮೆಕಾರ್ಥರ್‌ರವರು ಟೋಕಿಯೊದಿಂದ ಅಮೆರಿಕಾಕ್ಕೆ ತಮ್ಮ ಪತ್ನಿ, ಮಗು ಮತ್ತು ಖಾಸಗಿ ನೌಕರ ವರ್ಗದೊಡನೆ ವಿಮಾನದಲ್ಲಿ [illegible] [illegible] [illegible]ಗಾಗಿ ೧೮ ಫೈಟರ್ ಮತ್ತು ೩ ಸೂಪರ್ ಫೋರ್ಟ್ರೆಸ್ ವಿಮಾನಗಳು ಹೊರಟಿವೆ. ವಿಮಾನ ನಿಲ್ದಾಣದಲ್ಲಿ ನೂತನ ಶ್ರೇಷ್ಠ ದಂಡನಾಯಕ ಜನರಲ್ ರಿಡ್ಜ್‌ವೆ ಮತ್ತಿತರ ಸೈನ್ಯಾಧಿಕಾರಿಗಳು ಅವರನ್ನು ಬೀಳ್ಕೊಟ್ಟರು. ಅವರ ನಿವಾಸದಿಂದ ವಿಮಾನ ನಿಲ್ದಾಣದ ವರೆಗೆ ೧೫೦೦೦ ಜಪಾನ್ ಪೋಲೀಸ್ ಮತ್ತು ಅಮೆರಿಕಾ ಶಸ್ತ್ರ ಸಜ್ಜಿತ ಪಡೆಯವರು ರಸ್ತೆಗಳಲ್ಲಿ ಕಾವಲಿದ್ದರು.

ಅಮೆರಿಕಾ ಮತ್ತು ಕಾಮನ್ವೆಲ್ತ್ ಸೈನ್ಯ ಪಡೆಗಳಿಂದ ನಿಲ್ದಾಣದಲ್ಲಿ ಗೌರವ ರಕ್ಷೆಯನ್ನು ಸ್ವೀಕರಿಸಿ, ಅವರು ಪ್ರಯಾಣ ಹೊರಟರು.

ಶುಕ್ರವಾರ ದಿನ ಅವರು ಸಂಯುಕ್ತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಣ ಮಾಡುವರೆಂದು ಹೇಳಲಾಗಿದೆ.

ಡೆಮೊಕ್ರಾಟಿಕ್ ಫ್ರಂಟ್

ಬೆಂಗಳೂರು ಏ. ೧೪

ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೂ, ಡೆಮೊಕ್ರಾಟಿಕ್ ಫ್ರಂಟಿಗೂ ನಡೆಯುತ್ತಿರುವ ಮಾತುಕತೆಗಳು ತೃಪ್ತಿಕರವಾಗಿ ಕೊನೆಗೊಳ್ಳುವುದಾಗಿ ತಾವು ನಂಬುವುದಾಗಿಯೂ, ಯಾವ ರೀತಿಯಲ್ಲಿ ಎಂದು ಹೇಳಲು ಸಾಧ್ಯವಾಗುವುದಿಲ್ಲವಾಗಿಯೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಾಂಡನ್ ಸಂಜೆ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ತಿಳಿಸಿದರೆಂದು ಗೊತ್ತಾಗಿದೆ.

ಕಾರ್ಯಕಾರೀ ಸಮಿತಿಗೂ, ಡೆಮೊಕ್ರಾಟಿಕ್ ಫ್ರಂಟಿಗೂ, ಮೂಲಭೂತವಾದ ಭಿನ್ನಾಭಿಪ್ರಾಯಗಳೇನೂ ಇಲ್ಲವೆಂದೂ ಎಲ್ಲವೂ "ನೋಡುವ ದೃಷ್ಟಿ"ಯಲ್ಲಿ ವ್ಯತ್ಯಾಸವಿದೆಯೆಂದೂ ತಿಳಿಸಿದರೆಂದು ಗೊತ್ತಾಗಿದೆ.

ಬೆವಿನ್‌ರ ನಿಧನ

ಮಾಜೀ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಅರ್ನೆಸ್ಟ್ ಬೆವಿನ್ ಶನಿವಾರ ರಾತ್ರಿ ಹೃದಯಸ್ತಂಭನದಿಂದ ನಿಧನರಾದರು.

ಆರೋಗ್ಯ ಕಾರಣಗಳಿಗಾಗಿ ಮಾರ್ಚಿ ೯ ರಂದು ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಸ್ಥಾನಕ್ಕೆ ಬೆವಿನ್ನರು ರಾಜೀನಾಮೆ ಇತ್ತರು. ಹರ್ಬರ್ಟ್ ಮಾರಿಸನ್ನರು ಅವರ ಸ್ಥಾನಕ್ಕೆ ಬಂದರು. ಬೆವಿನರಿಗೆ ೭೦ ವರ್ಷ ವಯಸ್ಸಾಗಿತ್ತು.

ದೆಹಲಿಗೆ ಅರ್ಥ ಸಚಿವರು

ಬೆಂಗಳೂರು ಏ. ೧೫

ಆರ್ಥಿಕ ವಿಲೀನೀಕರಣ ಸಂಬಂಧವಾಗಿ ಕೆಲವು ವಿಷಯಗಳನ್ನು ಚರ್ಚಿಸಲು ಅರ್ಥಸಚಿವ ಶ್ರೀ ಎಚ್. ಸಿ. ದಾಸಪ್ಪನವರು ೧೮ನೇ ತಾ॥ ದೆಹಲಿಗೆ ತೆರಳುವರು.

ಮುಚ್ಚಲಾಯಿತು

ಪ್ರಪಂಚದಲ್ಲೆಲ್ಲಾ ಅತಿ ದೊಡ್ಡ ಎಣ್ಣೆಯ ಕೇಂದ್ರಗಳಿರುವ ಪರ್ಷಿಯಾ ದೇಶದಲ್ಲಿ, ಅಬದಾನ್ ಎಂಬಲ್ಲಿ ೧೦೦೦೦ ಮಂದಿ ಕೆಲಸಗಾರರು ಮುಷ್ಕರ ಹೂಡಿರುವುದರಿಂದ ಎಣ್ಣೆ ಕೇಂದ್ರವನ್ನು ಮುಚ್ಚಲಾಗಿದೆ.

ಶಾಂತಿ ಮನವಿಯೆ ?

ಉತ್ತರ ಕೊರಿಯಾ ಪ್ರಧಾನಿಯವರು ವಿಶ್ವಸಂಸ್ಥೆಗೆ ಒಂದು ಶಾಂತಿ ಮನವಿಯನ್ನು ಕಳುಹಿಸಿರುವರೆಂಬ ಸುದ್ದಿಯು ಹೊರಬಿದ್ದಿದೆ. ಮನವಿಯು ಇನ್ನು ವಿಶ್ವಸಂಸ್ಥೆಯ ಕಛೇರಿಗೆ ತಲುಪಿಲ್ಲ.

ಶ್ರೀ ವಿ. ಪಿ. ಮೆನನ್ ಒರಿಸ್ಸಾ ಗೌರ್ನರ್

ಸಂಸ್ಥಾನ ಶಾಖೆ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ನರನ್ನು ರಜದಮೇಲೆ ಹೋಗಲಿರುವ ಒರಿಸ್ಸಾ ಗೌರ್ನರ್ ಶ್ರೀ ಅಸಫ್ ಆಲಿಯವರ ಸ್ಥಾನದಲ್ಲಿ ಗೌರ್ನರಾಗಿ ರಾಷ್ಟ್ರಾಧ್ಯಕ್ಷರು ನೇಮಿಸಿದ್ದಾರೆ.

ಜಪಾನಿನ ಚಕ್ರವರ್ತಿ ಮೆಕಾರ್ಥರ್ ಭೇಟಿ

ಜಪಾನಿನ ಚಕ್ರವರ್ತಿ ಹಿರೋಹಿಟೋರವರು ನಿನ್ನೆ ಅಮೆರಿಕಾ ವಿದೇಶಾಂಗ ಕಛೇರಿಗೆ ಹೋಗಿ ಜನರಲ್ ಮೆಕಾರ್ಥರನ್ನು ಭೇಟಿಮಾಡಿದರು. ಸಾಮಾನ್ಯವಾಗಿ ಜಪಾನಿನ ಚಕ್ರವರ್ತಿ ವಿದೇಶೀಯ ಪ್ರಜೆಯನ್ನು ಭೇಟಿಮಾಡುವ ಸಂಪ್ರದಾಯವಿಲ್ಲ. ಈ ಸಂಪ್ರದಾಯಕ್ಕೆ ವಿರೋಧವಾಗಿ ಅವರು ಅಮೆರಿಕಾದ ಈಗ ಸಾಮಾನ್ಯ ಪ್ರಜೆಯಾದ ಜನರಲ್ ಮೆಕಾರ್ಥರನ್ನು ಭೇಟಿಮಾಡುವುದು ಜಪಾನಿನ ಚರಿತ್ರೆಯಲ್ಲಿ ಹೊಸದು.

ಪುನಃ ಭೂಕಂಪ

ಅಸ್ಸಾಂನ ದಿಬ್ರೂಘರಿನಲ್ಲಿ ನಿನ್ನೆಯ ದಿನ ಪುನಃ ೩೦ ಸೆಕೆಂಡುಗಳ ಕಾಲ ಭಾರಿ ಭೂಕಂಪವಾಯಿತು. ನಷ್ಟಗಳ ವಿಷಯವಾಗಿ ಇನ್ನೂ ವಿವರಗಳು ತಿಳಿದಿಲ್ಲ.

ಭೇದಭಾವ ತೊರೆಯಿರಿ

ಬೆಂಗಳೂರು ಏ. ೧೪

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಇಂದು ಸಂಜೆ ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡುತ್ತಾ, ಸಂಸ್ಥೆಯ ಆದರ್ಶಗಳಾದ ಸತ್ಯ, ಅಹಿಂಸೆ, ತ್ಯಾಗಗಳನ್ನು ಮರೆತು, ಅನೀತಿ ಮಾರ್ಗಕ್ಕಿಳಿಯಬೇಡಿರೆಂದು ಎಲ್ಲರೂ ಭೇದಭಾವವನ್ನು ತೊರೆಯಬೇಕೆಂದೂ ಹೇಳಿದರು.

ಖಾದಿಯ ವಿಷಯವಾಗಿ ಮಾತನಾಡುತ್ತಾ, ಸರ್ಕಾರಗಳು ಖಾದಿಗೆ ಪ್ರೋತ್ಸಾಹ ಸಾಕಷ್ಟು ಕೊಡುತ್ತಿಲ್ಲವೆಂದೂ ತಿಳಿಸಿದರು.

ನೀತಿ ಬದಲಾವಣೆಯಿಲ್ಲ

ಜನರಲ್ ಮೆಕಾರ್ಥರವರ ನಿವೃತ್ತಿ ವಿಷಯದಲ್ಲಿ ವಿರೋಧ ಪಕ್ಷಕ್ಕೆ ಸೇರಿದ ಡೆಮೊಕ್ರಾಟಿಕ್ ಸದಸ್ಯರು ಅಮೆರಿಕಾ ಸರ್ಕಾರ ನೀತಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಟೀಕಿಸುತ್ತಲಿರುವರು. ಕದನ ಮುಕ್ತಾಯ ಮಾಡಿ ಶಾಂತಿ ಸ್ಥಾಪಿಸಬೇಕೆಂದು ಸರ್ಕಾರವು ಬಯಸುತ್ತಿರುವಾಗ ಈ ಪಕ್ಷವು ಕದನವನ್ನು ಬೆಳೆಸುವಂತೆ ವರ್ತಿಸುತ್ತಿದ್ದಾರೆ. ಆದಾಗ್ಯೂ ಸರ್ಕಾರದ ನೀತಿಯಲ್ಲಿ ಏನೂ ಬದಲಾವಣೆಯಾಗುವುದಿಲ್ಲವೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವರು.

ಆಡಳಿತ ವ್ಯವಸ್ಥೆ ಬದಲಾವಣೆ

ನೇಪಾಳದ ಆಡಳಿತ ವ್ಯವಸ್ಥೆ ಮತ್ತು ಸಚಿವ ಸಂಪುಟದಲ್ಲಿ ಕೆಲವು ಬದಲಾವಣೆಗಳಾಗಲಿವೆ. ರಾಜ್ಯದಲ್ಲಿ ಗಲಭೆ ಕೋರತೆಗಳ ಆಪಾದನೆ ಮೇಲೆ ಮುಖ್ಯಮಂತ್ರಿ ರಾಣಾರವರ ಗುಂಪಿಗೆ ಸೇರಿದ ೩೫ ಜನರನ್ನು ದಸ್ತಗಿರಿ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ನೇತಾಜಿ ವಿವಾಹ ನಿಜ

ನೇತಾಜಿ ಸುಭಾಷ್‌ಚಂದ್ರಬೋಸರು ಶ್ರೀಮತಿ ಎಮಿಲಿ ಷೆಂಕ್ಲ್ ಎಂಬ ಆಸ್ಟ್ರಿಯ ಮಹಿಳೆಯನ್ನು ಮದುವೆಯಾಗಿದ್ದುದು ನಿಜವೆಂದು ದಿವಂಗತ ಶ್ರೀ ಶರತ್‌ಚಂದ್ರ ಬೋಸರ ಪತ್ನಿ ಶ್ರೀಮತಿ ಬಿಭಾವತಿಬೋಸ್‌ರು ತಿಳಿಸಿರುವರು. ವಿಯನ್ನಾಗೆ ತಮ್ಮ ಪತಿಯೊಡನೆ ತಾವೂ ಹೋಗಿದ್ದಾಗ ಶ್ರೀಮತಿ ಸುಭಾಷ್‌ಬೋಸರನ್ನು ಅವರು ಭೇಟಿ ಮಾಡಿದ್ದರೆಂದೂ ಅವರನ್ನು ಭಾರತಕ್ಕೆ ಕರೆಯಲಾಗಿ ತಮ್ಮ ಪತಿಯೊಡನೆ ಬರುವುದಾಗಿ ಹೇಳಿರುವುದಾಗಿಯೂ ಅವರು ಹೇಳಿದ್ದಾರೆ. ನೇತಾಜಿಯವರು ಇನ್ನೂ ಬದುಕಿರುವುದಾಗಿ ಆಕೆಯ ಭಾವನೆ.

ಜನರಲ್ ಮೆಕಾರ್ಥರ ವಜಾ ಚೀಣೀ- ಕೊರಿಯರ ವಿಜಯ

ಜನರಲ್ ಮೆಕಾರ್ಥರ್‌ರವರನ್ನು ವಜಾ ಮಾಡಿರುವುದು ಕೊರಿಯಾ ಮತ್ತು ಚೀಣೀಯರ ಮೇಲೆ ಅಮೆರಿಕನ್ನರ ಆಕ್ರಮಣ ತಡೆಗಟ್ಟುವ ಬಗ್ಗೆ ಚೀಣೀಯರ ಮತ್ತು ಕೊರಿಯನ್ನರ ಯಶಸ್ವಿ ಪ್ರಥಮ ಫಲವೆಂಬುದಾಗಿ ಪೀಕಿಂಗ್ ರೇಡಿಯೋ ಅಭಿಪ್ರಾಯ ಪಟ್ಟಿದೆ.

ರಣಜಿತ್ ಟಾಕೀಸ್

೧೪—೪—೧೯೫೧ ರಿಂದ ಅಮೋಘ ಪ್ರದರ್ಶನಾರಂಭ

ಪ್ರತಿದಿನ ೩ ಆಟಗಳು

—:: ಒಂದು ರಾತ್ರಿ ::—

ಎ. ವಿ. ಎಂ. ರವರ ನೂತನ ವರ್ಷದ ನವೀನ ರೀತಿಯ ಅತ್ಯುತ್ತಮ ತಮಿಳು ಚಿತ್ರ

ತಾರಾಗಣ— ಟಿ. ಎಸ್. ಬಾಲಯ್ಯ, ಕೆ. ಆರ್. ರಾಮಸ್ವಾಮಿ, ಲಲಿತ—ಪದ್ಮಿನಿ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೪—೧೯೫೧ನೇ ಮಂಗಳವಾರ [ಸಂಚಿಕೆ ೧೮೪

ಶ್ರೀ ಕೆ. ಟಿ. ಭಾಷ್ಯಂ

ಮೈಸೂರು ಏ. ೧೭

ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ಜರೂರು ಕಾರ್ಯ ಗೌರವದ ಮೇಲೆ ಇಂದು ಬೆಳಿಗ್ಗೆ ಮೈಸೂರಿಗೆ ಆಗಮಿಸಿ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿ ಮಧ್ಯಾಹ್ನ ಒಂದು ಗಂಟೆಗೆ ಬೆಂಗಳೂರಿಗೆ ಹಿಂತಿರುಗಿದರು.

ಹಿಮಾಲಯ ಪರ್ವತಾರೋಹಣ

ನ್ಯೂಜಿಲೆಂಡಿನ ನಾಲ್ವರು ಹಿಮಾಲಯಾ ಪರ್ವತಾರೋಹಣ ಮಾಡಲು ಮುಂದಿನ ವಾರ ಭಾರತಕ್ಕೆ ಬರಲಿರುವರು. ಅವರು ೨೪ ಸಾವಿರ ಅಡಿ ಎತ್ತರದ ವರೆಗೆ ಹತ್ತಲು ಸಿದ್ಧತೆ ಮಾಡಿಕೊಳ್ಳುತ್ತಲಿರುವುದಾಗಿ ಹೇಳಲಾಗಿದೆ.

ಕಾಶ್ಮೀರ ಸಮಸ್ಯೆ ಬಗೆಹರಿಯದಿರಲು ಭಾರತವೇ ಕಾರಣ

ಪಾಕಿಸ್ಥಾನದ ಆರೋಪಣೆ

ಭದ್ರತಾ ಸಮಿತಿಯಿಂದ ಅಂಗೀಕೃತವಾಗಿರುವ ನಿರ್ಣಯವು ಪರಿಸ್ಥಿತಿಗೆ ಅನುಗುಣವಾಗಿಲ್ಲ. ಆದರೂ ನಾವು ಈ ನಿರ್ಣಯವನ್ನು ಒಪ್ಪಿಕೊಂಡು, ವಿವಾದ ಪರಿಹಾರಕರಿಗೆ ಪೂರ್ಣ ಸಹಕಾರವನ್ನು ನೀಡಲು ಸಿದ್ಧರಾಗಿದ್ದೇವೆ.

'ಮೂರು ವರ್ಷಗಳಿಂದ, ಭದ್ರತಾ ಸಮಿತಿಯು, ಕಾಶ್ಮೀರ ಪ್ರಶ್ನೆಯ ಬಗ್ಗೆ ಚರ್ಚೆ ನಡೆಸುತ್ತ ಬಂದಿದ್ದರೂ ಭಾರತದ ಹಠಮಾರಿತನದಿಂದಾಗಿ ಎಳ್ಳಷ್ಟು ಪ್ರಯೋಜನವಾಗಿಲ್ಲ. ಕೆಲವು ಕಾರಣಗಳಿಂದ ಭದ್ರತಾ ಸಮಿತಿಯು ತನ್ನ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಿಲ್ಲ.

ಪಾಕಿಸ್ಥಾನವು ತನ್ನ ಸೇನೆಯನ್ನು ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದಿಂದ ಹಿಂದಕ್ಕೆ ಕರೆಸಿಕೊಳ್ಳಲು ಸಿದ್ಧವಾಗಿದೆಯೆಂಬ ವಿಚಾರ ಜಗತ್ತಿಗೇ ಗೊತ್ತಾಗಿದೆ ಆದರೆ ಎದುರು ಪಕ್ಷವು ಆ ರೀತಿ ಮಾಡದಿದ್ದಲ್ಲಿ ಸಮಸ್ಯೆಯು ಖಂಡಿತ ಬಗೆಹರಿಯಲಾರದು. ಭಾರತವು ತನ್ನ ಸೇನೆಯನ್ನು ಹಿಂದಕ್ಕೆ ಕರೆಯಿಸಿಕೊಳ್ಳುವುದಿಲ್ಲವೆಂದೂ ಭದ್ರತಾ ಸಮಿತಿಯ ನಿರ್ಣಯವನ್ನು ಒಪ್ಪುವುದಿಲ್ಲವೆಂದೂ ಈಗಾಗಲೇ ತಿಳಿಸಿಬಿಟ್ಟಿದೆ, ಆದ್ದರಿಂದ, ಕಾಶ್ಮೀರ ವಿವಾದ ಪರಿಹಾರಕರು ತಮ್ಮ ಮೂರು ತಿಂಗಳ ಕಾಲಾವಧಿಯ ನಂತರ 'ಸಾಧ್ಯವಾಗಲಿಲ್ಲ' ವೆಂದೇ ವರದಿ ಮಾಡಬೇಕಾಗುವುದು.

'ಒಂದೇ ಮಾತಿನಲ್ಲಿ ಹೇಳುವುದಾದರೆ ಭಾರತವು ತಿಳುವಳಿಕೆಯಿಂದ ನಡೆದುಕೊಳ್ಳದಿದ್ದಲ್ಲಿ ನಾವು ಖಂಡಿತವಾಗಿಯೂ ನಮ್ಮ ಕಾರ್ಯದಿಂದ ವಿಮುಖರಾಗಲಾರೆವು. ಭಾರತವು ಕಾಶ್ಮೀರಿಯನರನ್ನು ಮಿಲಿಟರಿ ಬಲದಿಂದ ಹತೋಟಿಯಲ್ಲಿಟ್ಟುಕೊಳ್ಳುವುದನ್ನು ಕಂಡು ನಾವು ಸಹಿಸಲಾರೆವು' ಎಂದು ಪಾಕಿಸ್ಥಾನದ ಕಾಶ್ಮೀರ ವ್ಯವಹಾರ ಮಂತ್ರಿ ಮಿ॥ ಗುರ್ಮಾನಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮಂತ್ರಿ ಮಂಡಲದ ಬದಲಾವಣೆಗೆ ಕೇಂದ್ರ ಸರ್ಕಾರದ ಅಪ್ಪಣೆ ಅಗತ್ಯ

'ಬಿ' ಸಂಸ್ಥಾನಗಳ ಮಂತ್ರಿಮಂಡಲದ ಬದಲಾವಣೆಗೆ ಕೇಂದ್ರ ಸರ್ಕಾರದ ಅಪ್ಪಣೆ ಪಡೆಯಬೇಕು ಎಂದು ಸಂಸ್ಥಾನ ಶಾಖೆಯ ಸಚಿವ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ. ಈ ವಿಷಯವನ್ನು ಎಲ್ಲಾ ಸಂಸ್ಥಾನಗಳಿಗೆ ತಿಳಿಸಲಾಗಿದೆ. ಮೈಸೂರು ಸಂಸ್ಥಾನಕ್ಕೂ ಇದು ಅನ್ವಯಿಸುವುದು.

ಮಂತ್ರಿಗಳೇ ತಮ್ಮ ಸರ್ಕಾರವನ್ನು ಟೀಕಿಸಿದರು

'ಅಂಬೇಡಕರ್ ಭವನ'ವೆಂಬ ಒಂದು ಹರಿಜನ ಕೇಂದ್ರದ ಶಂಕುಸ್ಥಾಪನಾ ಸಮಯದಲ್ಲಿ ಕೇಂದ್ರ ನ್ಯಾಯಸಚಿವ ಮಿ॥ ಅಂಬೇಡ್ಕರ್‌ರವರು ಕೇಂದ್ರ ಸರ್ಕಾರವು ಹರಿಜನರ ಹಿತರಕ್ಷಣಾ ಕಾರ್ಯವನ್ನು ಸರಿಯಾಗಿ ನಡೆಯಿಸುತ್ತಿಲ್ಲ. ಪಂಜಾಬಿನಲ್ಲಿ ಸಿಕ್ಕರು, ಹಿಂದುಗಳು ಅವರಿಗೆ ವಿಶೇಷ ತೊಂದರೆಯನ್ನು ಕೊಡುತ್ತಲಿರುವರು ಎಂದು ಟೀಕಿಸಿದರು.

ತಾವೂ ಮಂತ್ರಿಗಳಾಗಿರುವ ಸಚಿವ ಸಂಪುಟವನ್ನು ಅವರು ಟೀಕಿಸಿರುವ ವಿಷಯದಲ್ಲಿ ದೆಹಲಿಯ ರಾಜಕೀಯ ವೃತ್ತಗಳಲ್ಲಿ ಅಸಮಾಧಾನವುಂಟಾಗಿರುವುದೆಂದು ಹೇಳಲಾಗಿದೆ.

ಧೂಮಪಾನಿಗಳ ಉಚ್ಚಾಟನಾ ಮಸೂದೆ

ಮನರಂಜನಾ ಮಂದಿರಗಳಲ್ಲಿ ಧೂಮಪಾನ ಮಾಡುವವರನ್ನು ಮಂದಿರದ ಹೊರ ಹಾಕುವ ಮಸೂದೆಯನ್ನು ಮದ್ರಾಸ್ ಶಾಸನ ಸಭೆಯು ಅಂಗೀಕರಿಸಿದೆ.

ವಸ್ತು ಪ್ರದರ್ಶನದಲ್ಲಿ ಗೊಂದಲ

ಬೆಂಗಳೂರು, ಏ. ೧೭

ಕಬ್ಬನ್ ಪಾರ್ಕಿನಲ್ಲಿ ನಡೆಯುತ್ತಿರುವ ವಸ್ತುಪ್ರದರ್ಶನದ ಆವರಣಕ್ಕೆ ನಿನ್ನೆ ಸಂಜೆ ಅಸಾಧ್ಯ ಜನ ಸಂದಣಿಯಾಗಿದ್ದುದರ ಪರಿಣಾಮವಾಗಿ ಗೊಂದಲದಲ್ಲಿ ಅನೇಕರಿಗೆ ಗಾಯವಾಯಿತು.

ಸುಪ್ರಸಿದ್ಧ ಸಿನಿಮಾ ತಾರೆ ಶ್ರೀ ವೈಜಯಂತಿಮಾಲಾ ನೃತ್ಯವನ್ನು ನೋಡಲು ಆ ಜನ ಬಂದಿದ್ದುದು, ಅವರುಗಳನ್ನು ತಡೆಯುವುದೇ ಕಷ್ಟವಾಗಿ ಕೊನೆಗೆ ತಡಿಕೆ, ಬೊಂಬುಗಳು ಸಹ ಮುರಿದುಬಿದ್ದುವು. ಪೋಲೀಸರು. ಸ್ಕೌಟುಗಳು, ವ್ಯವಸ್ಥಾಪಕರು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತು.

ಮಹಾರಾಜರ ಎ.ಡಿ.ಸಿ.

ದರ್ಬಾರ್ ಭಕ್ಷಿಯಾದ ಸರದಾರ್ ಹೆಚ್. ಎಲ್. ದೇವರಾಜ ಅರಸುರವರನ್ನು ಶ್ರೀಮನ್ಮಹಾರಾಜರವರ ಎ. ಡಿ. ಸಿ. ಗಳನ್ನಾಗಿ ನೇಮಿಸಲಾಗಿದೆ.

ಅರ್ಥ ಸಚಿವರ ಪ್ರವಾಸ

ಅರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ೨೨ನೇ ತಾ॥ ಸಂಜೆ ಅರಸೀಕೆರೆಯಿಂದ ಮೈಸೂರಿಗೆ ಬರುವರು. ೨೩ನೇ ತಾ॥ ಬೆಳಗ್ಗೆ ನಗರ ಪರಿಶೀಲನೆ ನಡೆಸಿ, ಸಂಜೆ ರೈತರ ಸಂಘದ ಪ್ರಾರಂಭೋತ್ಸವವನ್ನು ನಡೆಸಲು ತಿಣಸೂರಿಗೆ ಹೋಗಿ ಬರುವರು. ೨೪ನೇ ತಾ॥ ಬೆಂಗಳೂರಿಗೆ ಹಿಂತಿರುಗುವರು.

ಪಾರ್ಲಿಮೆಂಟು ಒಪ್ಪಿಗೆ

ಭಾರತದಲ್ಲಿ ಈ ವರ್ಷಕ್ಕೆ ನಿವೃತ್ತಿ ನಿಧಿಯಿಂದ ಒಟ್ಟು ೩,೦೭೨ ಕೋಟಿ ೨೪ ಲಕ್ಷ ೫೫ ಸಾವಿರ ರೂಪಾಯಿ ಖರ್ಚು ಮಾಡಲು ಪಾರ್ಲಿಮೆಂಟ್ ಒಪ್ಪಿಗೆ ಕೊಟ್ಟಿತು.

ಬೆಂಗಳೂರಿನಲ್ಲಿ ಟಾಂಡನ್‌ರ ಭಾಷಣ

ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ್ ಟಾಂಡನ್‌ರವರೂ ಪ್ರಧಾನ ಕಾರ್ಯದರ್ಶಿ ಶ್ರೀ ಕಲಾ ವೆಂಕಟರಾಯರೂ ಏಪ್ರಿಲ್ ೨೦ನೇ ಶುಕ್ರವಾರ ಸಂಜೆ ೬-೩೦ ಗಂಟೆಗೆ ಸುಭಾಸ್ ನಗರದಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು.

ಕರ್ನಲ್ ಕ್ರಾಫರ್ಡ್‌ರ ನಿಧನ

ಸುಪ್ರಸಿದ್ಧ ಕಾಫಿ ಪ್ಲಾಂಟರೂ ಮತ್ತು ದಾನಿಗಳು ಆದ ರಾಜಸಭಾ ಭೂಷಣ ಕ॥ ಕ್ರಾಫರ್ಡ್‌ರವರು ತಮ್ಮ ಎಸ್ಟೇಟಿನಲ್ಲಿ ಕಳೆದ ೧೪ನೇ ತಾರೀಖು ಹೃದಯಕ್ರಿಯೆ ನಿಂತು ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರಿಗೆ ೮೭ ವರ್ಷ ವಯಸ್ಸಾಗಿತ್ತು.

ಶ್ರೀಯುತರು ಸಕಲೇಶಪುರದಲ್ಲಿ ಇರುವ ಆಸ್ಪತ್ರೆಗೆ ೧ ಲಕ್ಷ ರೂ. ಗಳನ್ನು ಉದಾರವಾಗಿ ಈಗಾಗಲೇ ದಾನ ಮಾಡಿದ್ದಾರೆ. ಅಲ್ಲದೆ ತಮ್ಮ ಮರಣ ಶಾಸನದಲ್ಲಿ ೫೦ ಸಾವಿರ ರೂಗಳನ್ನು ಒದಗಿಸಿದ್ದಾರೆ. ಮೈಸೂರಿನಲ್ಲಿ ಅವರ ನಾಮಾಂಕಿತದಲ್ಲಿ ಕಟ್ಟಲಾಗಿರುವ ಪದವೀದಾನ ಸಭಾ ಭವನಕ್ಕಾಗಿ ೫ ಲಕ್ಷ ರೂ. ಗಳನ್ನು ಅರ್ಪಿಸಿದ್ದಾರೆ.

ಬೀಹಾರಿನಲ್ಲಿ ಭೀಕರ ಕ್ಷಾಮ ತಲೆದೋರುವ ಸೂಚನೆಗಳು

ಬೀಹಾರಿನ ಅನೇಕ ಭಾಗಗಳನ್ನು ಕ್ಷಾಮಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಿಸಬೇಕೆಂದಿರುವುದಾಗಿ ಹೇಳಲಾಗಿದೆ.

ಬೀಹಾರಿನಲ್ಲಿ ಆಹಾರ—ಪರಿಸ್ಥಿತಿಯು ಪೂರಾ ಕೆಡಗೆಟ್ಟಿದೆ. ಕೇಂದ್ರದ ಆಹಾರ ಸರಬರಾಯಿಯು ಅಷ್ಟು ತೃಪ್ತಿಕರವಾಗಿಲ್ಲ. ತಲೆದೋರುತ್ತಲಿರುವ ಕ್ಷಾಮವನ್ನು ತಡೆಗಟ್ಟಲು ಕೂಡಲೇ ಆಹಾರವನ್ನು ಕಳುಹಿಸಿ ಇಲ್ಲವಾದರೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲವೆಂದು ಬೀಹಾರಿನ ಮಂತ್ರಿಮಂಡಲವು ಕೇಂದ್ರಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಷಾಪ್ ಅಸಿಸ್ಟೆಂಟು ಕಾನೂನು

ಔಷಧಿಗಳು, ಔಷಧ ಶಸ್ತ್ರಸಾಮಾನು ಮತ್ತು ಇತರ ವೈದ್ಯಕೀಯ ಸಾಮಾನುಗಳನ್ನು ಮಾರುವ ಅಂಗಡಿಗಳಿಗೆ ಷಾಪ್ ಅಸಿಸ್ಟೆಂಟು ಕಾನೂನು ವಿನಾ ಮಾಡಿ ಮೈಸೂರು ಸರ್ಕಾರ ಆಜ್ಞೆ ಹೊರಡಿಸಿರುವರು.

ರಾಷ್ಟ್ರೀಕರಣ

'ಡೆಕನ್ ಏರ್‌ವೇಸ್' ವಿಮಾನ ಸಂಚಾರಸಂಸ್ಥೆಯನ್ನು ಕೇಂದ್ರ ಸರ್ಕಾರವು ವಹಿಸಿಕೊಳ್ಳುವುದಾಗಿ ತಿಳಿಯಬರುತ್ತದೆ. ಇದರ ಆಡಳಿತಕ್ಕಾಗಿ ಒಂದು ಸರ್ವಾಧಿಕಾರ ಸಮಿತಿಯನ್ನು ನೇಮಕ ಮಾಡಲಾಗುವುದು.

ಕಬ್ಬಿನ ಸಿಪ್ಪೆಯಿಂದ ಕಾಗದ

ಕಬ್ಬಿನ ರಸವನ್ನು ತೆಗೆದುಕೊಂಡಮೇಲೆ ಉಳಿಯುವ ಸಿಪ್ಪೆಯಿಂದ ವೃತ್ತಪತ್ರಿಕೆಗಳಿಗಾಗುವಂಥಹ ಕಾಗದವನ್ನು ತಯಾರ್ಮಾಡಲು ಪರಿಶೋಧನೆಯು ಭಾರತದಲ್ಲಿ ನಡೆಯುತ್ತಲಿದೆ.

ಪುನಃ ಶಾಂತಿಪ್ರಯತ್ನ

ಭಾರತವು ಚೈನಾದಲ್ಲಿರುವ ತನ್ನ ರಾಯಭಾರಿಯ ಮೂಲಕ ಕೊರಿಯಾ ಯುದ್ಧ ಮುಕ್ತಾಯ ವಿಷಯದಲ್ಲಿ ಚೈನಾದೊಡನೆ ಪುನಃ ಶಾಂತಿಪ್ರಯತ್ನಕ್ಕೆ ತೊಡಗುವುದಾಗಿ ವರದಿಯಾಗಿದೆ. ಜನರಲ್ ಮೆಕಾರ್ಥರ ನಿವೃತ್ತಿಯಾದ ಮೇಲೆ ಈ ಪ್ರಯತ್ನವು ಪ್ರಾರಂಭವಾಗಿರುವುದಾಗಿ ಹೇಳಲಾಗಿದೆ.

ಕಾಶ್ಮೀರ ಗೌರವಕ್ಕೆ ಚ್ಯುತಿ

ಕಾಶ್ಮೀರದ ೧೦೦೦೦೦ ಕ್ಕಿಂತ ಹೆಚ್ಚಾಗಿ ಜನರು ಒಂದು ಪ್ರಚಂಡ ಸಭೆಯನ್ನು ನಡೆಸಿ, ಭಾರತ ಸರ್ಕಾರ ಮತ್ತು ಶೇಕ್ ಅಬ್ದುಲ್ಲಾ ಸರ್ಕಾರಗಳಲ್ಲಿ ತಮ್ಮ ಸಂಪೂರ್ಣ ನಂಬಿಕೆಯನ್ನು ವ್ಯಕ್ತಪಡಿಸಿ, ಕಾಶ್ಮೀರ ಹಿತರಕ್ಷಣೆಗೆ ಭಾರತಸೈನ್ಯವು ಇಲ್ಲಿಯೇ ಇರಬೇಕೆಂದೂ, ವಿಶ್ವಸಂಸ್ಥೆಯು ಅಂಗೀಕರಿಸಿರುವ ಆಂಗ್ಲೋ ಅಮೆರಿಕನ್ ನಿರ್ಣಯವು ಕಾಶ್ಮೀರದ ಗೌರವಕ್ಕೆ ಚ್ಯುತಿ ತರುವುದಾಗಿ ಅದನ್ನು ಖಂಡಿಸಿಯೂ ನಿರ್ಣಯಗಳನ್ನು ಮಾಡಿರುವರು.

ಟೀಕಿಸಬೇಡಿ

ಜನರಲ್ ಮೆಕಾರ್ಥರನ್ನು ಯಾರೂ ವೈಯುಕ್ತಿಕವಾಗಿ ಟೀಕಿಸಬಾರದೆಂದು ಅಧ್ಯಕ್ಷ ಟ್ರೂಮನ್ನರು ಅಮೆರಿಕಾದಲ್ಲಿ ಒಂದು ಮನವಿಯನ್ನು ಹೊರಡಿಸಿರುವರು.

ಆಹಾರ ಬೇಗ ಕಳುಹಿಸಿ

ಅಮೆರಿಕಾ ಸೆನೆಟ್ ವಿದೇಶ ವ್ಯವಹಾರ ಸಮಿತಿಯು ಭಾರತಕ್ಕೆ ೨೦ ಲಕ್ಷ ಟನ್ ಆಹಾರ ಸರಬರಾಯಿ ಮಾಡುವ ವಿಷಯವಾಗಿ ನಡೆಸುತ್ತಲಿರುವ ಚರ್ಚೆಗಳು ಇನ್ನು ಮುಕ್ತಾಯವಾಗಿಲ್ಲ. ಸೆಕ್ರೆಟರಿ ಆಫ್ ಸ್ಟೇಟ್ ಮಿ|| ಡೀನ್ ಅಚಿಸನ್‌ರವರ ಈ ಸಮಿತಿಯಲ್ಲಿ ಮಾತನಾಡುತ್ತಾ, ಭಾರತದಲ್ಲಿ ಕ್ಷಾಮದ ಭೀತಿಯು ತಲೆದೋರುತ್ತಲಿದೆ. ಆದಷ್ಟು ಬೇಗ ನಾವು ಅಲ್ಲಿಗೆ ಮೊದಲನೆ ಕಂತಿನಲ್ಲಿ ೧೦ ಲಕ್ಷ ಟನ್ ಆಹಾರವನ್ನು ಕಳುಹಿಸಬೇಕು ಅದಕ್ಕೆ ಸಂಬಂಧಪಟ್ಟ ಕಾನೂನಿಗೆ ಕಾಂಗ್ರೆಸ್ ಕೂಡಲೇ ಒಪ್ಪಿಗೆ ಕೊಡಬೇಕೆಂದು ತಿಳಿಸಿದರು.

ಮೆಕಾರ್ಥರ್‌ರ ಭಾಷಣ

ಜ|| ಮೆಕಾರ್ಥರ್‌ರವರು ಗುರುವಾರ ಸಂಜೆ ೫.೩೦ ಗಂಟೆಗೆ (ಜಿ.ಎಂ.ಟಿ.) (ಭಾರತೀಯ ಟೈಂ ಪ್ರಕಾರ ರಾತ್ರಿ ೧೧ ಗಂಟೆಗೆ) ಅಮೇರಿಕಾ ಕಾಂಗ್ರೆಸ್ಸಿನ ಎರಡು ಶಾಸನ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ಭಾಷಣಮಾಡುವರು.

ಅಮೆರಿಕಕ್ಕೆ ೧೫ ವರ್ಷಗಳ ನಂತರ ಮೊಟ್ಟಮೊದಲು ಆಗಮಿಸುತ್ತಿರುವ ಜ|| ಮೆಕಾರ್ಥರರಿಗೆ ಸಾನ್‌ಫ್ರಾನ್ಸಿಸ್ಕೋವಿನಲ್ಲಿ ಏರ್ಪಡಿಸಬೇಕೆಂದಿದ್ದ ಸ್ವಾಗತವನ್ನು ಅವರ ಕೋರಿಕೆಯಂತೆ ಬುಧವಾರಕ್ಕೆ ಮುಂದಕ್ಕೆ ಹಾಕಿದೆ.

ಆಕ್ರಮಣ ಹೆಚ್ಚುತ್ತಿದೆ

ಜನರಲ್ ಮೆಕಾರ್ಥರ ವಜಾ ಆದನಂತರ ಅಮೆರಿಕಾ ವಿಮಾನಗಳು ಚೀನಾ ಪ್ರದೇಶಗಳ ಮೇಲೆ ಬಾಂಬು ಹಾಕುತ್ತಲಿರುವುದರಿಂದ ಅಮೆರಿಕಾಕ್ಕೆ ಆಕ್ರಮಣ ಉದ್ದೇಶ್ಯವಿಲ್ಲವೆಂದು ಹೇಳಲು ಸಮರ್ಥನೆಯಿಲ್ಲ. ಚೀನಾವು ಈ ಆಕ್ರಮಣವನ್ನು ದುರಿಸಲು ಸರ್ವಪ್ರಯತ್ನ ಮಾಡುವುದಾಗಿಯೂ, ಉತ್ತರಕೊರಿಯಾಕ್ಕೆ ಸಹಾಯ ನೀಡುವುದಾಗಿಯೂ ಹೇಳಲಾಗಿದೆ.

ರಾಣಾ ಮೇಲೆ ಅಪಾದನೆ

ನೇಪಾಳ ಮುಖ್ಯ ಮಂತ್ರಿ ರಾಣಾ ಶಂಷೀರ್ ಜಂಗ್ ಮತ್ತು ಶ್ರೇಷ್ಠ ದಂಡನಾಯಕರು, ಪೂರ್ವಾ ದಂಡ ನಾಯಕ ಭರತ ಶಂಷೀರ್‌ರವರಿಗೆ ಬೆಂಬಲನೀಡುತ್ತಲಿರುವುದರಿಂದ ನೇಪಾಳದಲ್ಲಿ ಅನೇಕ ಘಟನೆ ನಡೆಯುತ್ತಲಿವೆಯೆಂದು ಹೇಳಲಾಗಿದೆ.

ರಾಜಾ ತ್ರಿಭುವನರವರು ನೇಪಾಳ ಸೈನ್ಯದ ಶ್ರೇಷ್ಠ ದಂಡನಾಯಕರ ಹುದ್ದೆಯನ್ನು ತಾವೇ ಈಗ ವಹಿಸಿಕೊಂಡಿರುವರು.

ಪರಿಸ್ಥಿತಿ ಸುಧಾರಿಸಿದೆ

ನೇಪಾಳದ ಪರಿಸ್ಥಿತಿಯು ಸುಧಾರಿಸಿರುವುದಾಗಿಯೂ ಅಲ್ಲಿಯ ಕಾಂಗ್ರೆಸ್ ಅಧ್ಯಕ್ಷ ಮಿ|| ಕೊಯಿರಾಲಾರವರು ತಿಳಿಸಿರುವರು. ಸರ್ಕಾರವು ತಾತ್ಕಾಲಿಕವಾಗಿ ಒಂದು ರಾಜ್ಯಾಂಗವನ್ನು ತಯಾರಿಸಿರುವುದಾಗಿಯೂ ಅದರಂತೆ ಪ್ರಜೆಗಳಿಗೆ ಕೆಲವು ಮೂಲಭೂತ ಹಕ್ಕುಗಳನ್ನು ಕೊಡುವುದಾಗಿಯೂ ಅವರು ತಿಳಿಸಿರುವರು.

ಶಾಂತಿ ಮನವಿಯುಲ್ಲ

ಉತ್ತರ ಕೊರಿಯನ್ ಸರ್ಕಾರವು ಅಮೆರಿಕಾಕ್ಕೆ ಕಳುಹಿಸಿರುವುದು ಶಾಂತಿ ಮನವಿಯುಲ್ಲ. ಆದರೆ ಕೊರಿಯಾದಿಂದ ವಿದೇಶ ಸೈನ್ಯಗಳನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಿ, ಆಗ ಮಾತ್ರ ಶಾಂತಿ ಸ್ಥಾಪನೆಯಾಗುವುದೆಂದು ಹಿಂದೆಯೇ ಅವರು ತಿಳಿಸಿರುವಂತೆ ಈಗಲೂ ತಿಳಿಸಿರುವುದಾಗಿ ವರದಿಯಾಗಿದೆ. ಇದರಿಂದ ಅಮೆರಿಕಾದ ಈಗಿನ ನೀತಿಯಲ್ಲಿ ಬದಲಾವಣೆಯೇನೂ ಇಲವೆಂದು ಹೇಳಲಾಗಿದೆ.

ನೂತನ ಪಕ್ಷ

ಮದ್ರಾಸಿನ ಮಾಜಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರು ಪ್ರಾರಂಭಿಸಿರುವ ಹೊಸ ಪಕ್ಷವಾದ 'ಪ್ರಜಾ ಪಾರ್ಟಿಯು' ಕಾಂಗ್ರೆಸ್ ಡೆಮೊಕ್ರಾಟಿಕ್ ಫ್ರಂಟ್ ಮತ್ತು ಕಿಸಾನ್ ಮಜ್ದೂರ್ ಪ್ರಜಾಸಂಘಗಳ ಸಂಯುಕ್ತ ಪಕ್ಷವಾಗಿರುವುದೆಂದು ಅವರು ವಿಜಯವಾಡದಲ್ಲಿ ನಡೆಸಿದ ಪ್ರಾಸ್ತಾವಿಕ ಸಭೆಯ ನಿರ್ಣಯದಿಂದ ವ್ಯಕ್ತಪಡುವುದು.

ಊಟಿಯಲ್ಲಿರುವ ಭವನ

ನೀಲಗಿರಿಗಾಗಿ ಕಾಲೇಜೊಂದನ್ನು ತೆರೆಯಲು ಉದಕಮಂಡಲದಲ್ಲಿರುವ ನಿಜಾಮರ ಭವನವಾದ 'ಜನಾನ ಮಹಲ್'ನ್ನೂ ಅದಕ್ಕೆ ಸೇರಿದಂತಿರುವ ಜಮೀನನ್ನೂ ದಾನವಾಗಿ ಕೊಡುವಂತೆ ಊಟಿ ಪೌರಸಭೆಯವರು ನಿಜಾಮರನ್ನು ಪ್ರಾರ್ಥಿಸಿಕೊಂಡಿದ್ದಾರೆ.

ಪ್ರಾರಂಭೋತ್ಸವ

ಮೈಸೂರು ಜಿಲ್ಲಾ ಭಾರತ ಸೇವಾದಳ ಶಿಬಿರದ ಪ್ರಾರಂಭೋತ್ಸವವು ನಂಜನಗೂಡು ತಾಲ್ಲೂಕು ದೇವನೂರಿನಲ್ಲಿ ೨೦ನೇ ತಾರೀಖು ಸಂಜೆ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಡಿ. ಎಂ. ಸಿದ್ದಯ್ಯನವರು ನಡೆಸುವರು. ಶ್ರೀ ರುಮಾಲೆ ಚನ್ನಬಸವಯ್ಯನವರು ಸೇವಾದಳದ ಬೆಳವಣಿಗೆ ವಿಷಯದಲ್ಲಿ ಭಾಷಣ ಮಾಡುವರು.

ವಿಶ್ವವಿದ್ಯಾನಿಲಯ ಒಂದುವಾರ ಮುಚ್ಚಲಾಗಿದೆ

ಕಲ್ಕತ್ತೆ ವಿಶ್ವವಿದ್ಯಾನಿಲಯದ ಸುಮಾರು ೨೦೦ಮಂದಿ ಉದ್ಯೋಗಿಗಳು ಏಪ್ರಿಲ್ ೧೧ ರಂದು ವೈಸ್ ಚಾನ್ಸಲರ ಕೊಠಡಿ ಮುಂದೆ ಅಡ್ಡಗಟ್ಟಿ ಕುಳಿತು, ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ಟಿನ ೧೫ ಮಂದಿ ಸದಸ್ಯರು ೮ ಗಂಟೆಕಾಲ ಕೊಠಡಿಯಿಂದ ಹೊರಗೆ ಬರದಂತೆ ತಡೆಮಾಡಿದ ಕಾರಣ, ಮುಂದಿನ ಗುರುವಾರದವರೆಗೂ ವಿಶ್ವವಿದ್ಯಾನಿಲಯವನ್ನು ಮುಚ್ಚಲು ಸಿಂಡಿಕೇಟ್ ನಿರ್ಧರಿಸಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೪—೧೯೫೧ನೇ ಗುರುವಾರ [ಸಂಚಿಕೆ ೧೮೫

ರಿಯಾಯಿತಿ

ಮೈಸೂರು ಸಂಸ್ಥಾನ ಸೈನ್ಯವು ಭಾರತದೊಡನೆ ಐಕ್ಯವಾದ ಪರಿಣಾಮವಾಗಿ ಕೆಲಸದಿಂದ ತೆಗೆದು ಹಾಕಲಾಗಿರುವ ನೌಕರರಿಗೆ ಭಾರತ ಸರ್ಕಾರವು ಕೊಟ್ಟಿರುವ ರಿಯಾಯಿತಿಯನ್ನು ಸ್ವಲ್ಪ ಹೆಚ್ಚಿಸಲಾಗಿದೆಯೆಂದು ಒಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ಆಹಾರಕ್ಕೆ ಸಹಾಯದ್ರವ್ಯ

ಭಾರತದಲ್ಲಿ ಸ್ವಾತಂತ್ರ್ಯಗಳಿಸಿದನಂತರ ಇಲ್ಲಿಯವರೆಗೆ ಆಹಾರ ಸಂಗ್ರಹಣೆಗಾಗಿ ಭಾರತ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ೬೩ ಕೋಟಿ ೧೩ ಲಕ್ಷ ರೂಪಾಯಿಗಳ ಸಹಾಯ ದ್ರವ್ಯ ನೀಡಿರುವುದಾಗಿ ತಿಳಿಯಬರುತ್ತದೆ.

ರಾಜಕೀಯ ರಂಗಕ್ಕೆ ಇಳಿಯುವುದಿಲ್ಲ

ಶ್ರೀ ಕೃಪಲಾನಿಯವರು ಸಚಿವರಾಗುವರೆ?

ಜನರಲ್ ಮೆಕಾರ್ಥರ್‌ರವರು ಸಾನ್ ಫ್ರಾನ್ಸಿಸ್ಕೋಗೆ ಆಗಮಿಸಿ, ಅಲ್ಲಿ ಮಾತನಾಡುತ್ತಾ ನನಗೆ ಅಮೆರಿಕಾ ರಾಜಕೀಯ ರಂಗಕ್ಕೆ ಪ್ರವೇಶಿಸಲು ಇಷ್ಟವಿಲ್ಲ. ನನ್ನ ಹೆಸರನ್ನು ಯಾರೂ ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳಬಾರದೆಂದು ಹೇಳಿರುವರು.

ಜ|| ಮೆಕಾರ್ಥರ್‌ರವರು ಸಾನ್ ಫ್ರಾನ್ಸಿಸ್ಕೋವಿಗೆ ತಮ್ಮ ಹೆಂಡತಿ ಮತ್ತು ೧೩ ವರ್ಷದ ಮಗನೊಡನೆ ಆಗಮಿಸಿ, ವಿಮಾನ ನಿಲ್ದಾಣದಲ್ಲಿ ಏರ್ಪಡಿಸಿದ್ದ ಅಭೂತಸ್ವಾಗತವನ್ನು, ಮಿಲಿಟರಿ ಗೌರವವನ್ನು ಸ್ವೀಕರಿಸಿ ಸೆಂಟ್ ಫ್ರಾನ್ಸಿಸ್ ಹೋಟೇಲಿಗೆ ತೆರಳಿದರು. ದಾರಿಯುದ್ದಕ್ಕೂ ೫|| ಲಕ್ಷದಷ್ಟು ಜನರು ಅವರನ್ನು ನೋಡಲು ನಿಂತಿದ್ದರು.

ಜ|| ಮೆಕಾರ್ಥರರವರು ಇಂದು ವಾಷಿಂಗ್‌ಟನ್ ಸೇರಲಿರುವರು. ವಿದೇಶಾಂಗ ಕಾರ್ಯದರ್ಶಿ ಮಿ|| ಮಾರ್ಷಲ್, ಕಾಂಗ್ರೆಸ್ಸಿನ ಪ್ರತಿನಿಧಿಗಳು, ಮಿಲಿಟರಿ ಅಧಿಕಾರಿಗಳು ಅವರನ್ನು ಸ್ವಾಗತಿಸುವರು.

ಕೋಮುವಾರು ಪ್ರಾತಿನಿಧ್ಯ

ವೃತ್ತಿ ಶಿಕ್ಷಣಾಲಯಗಳಿಗೆ ಪ್ರವೇಶ ಕೊಡುವಾಗ ಮತ್ತು ಸರ್ಕಾರಿ ಕೆಲಸಗಳನ್ನು ಕೊಡುವಾಗ ಎಲ್ಲಾ ಕೋಮಿನವರಿಗೆ ಸಮಾನ ಪ್ರಾತಿನಿಧ್ಯ ದೊರೆಯುವಂತೆ ಹಿತಕರವಾದ ಕ್ರಮಗಳನ್ನು ಅನ್ವಯಿಸಬೇಕೆಂಬ ನಿರ್ಣಯವನ್ನು ಮದರಾಸಿನ ಹಿರಿಯ ಶಾಸನಸಭೆಯು ಅಂಗೀಕಾರಮಾಡಿದೆ. ಈ ಸಂದರ್ಭದಲ್ಲಿ ನ್ಯಾಯಸಚಿವ ಶ್ರೀ ಮಾಧವ ಮೆನನ್‌ರವರು ಮಾತನಾಡುತ್ತ ಕೆಲವು ಕೋಮುಗಳಿಗೆ ಹಿತರಕ್ಷಣೆಯನ್ನು ಕೊಡಬೇಕಾಗಿದೆ. ಈ ನಿರ್ಣಯವನ್ನು ಭಾರತ ಸರ್ಕಾರಕ್ಕೆ ತಿಳಿಸಲಾಗುವುದೆಂದು ಹೇಳಿದರು.

ಕೃಪಲಾನಿಯವರಿಗೆ ಸಚಿವ ಪದವಿ ?

ಆಚಾರ್ಯ ಕೃಪಲಾನಿಯವರು ಭಾರತ ಸರ್ಕಾರದ ಆಡಳಿತ ಸೂತ್ರಗಳನ್ನು ವಹಿಸಿಕೊಳ್ಳಲು ಸಿದ್ಧರಾಗಿರುವುದಾದರೆ ಆಹಾರ ಶಾಖೆಯನ್ನು ವಹಿಸಿಕೊಳ್ಳಬಹುದಲ್ಲವೆಂದು ಭಾರತದ ಪ್ರಧಾನಿ ಜವಹರಲಾಲ್ ನೆಹರು ಆಚಾರ್ಯ ಕೃಪಲಾನಿಯವರಿಗೆ ತಿಳಿಸಿದರೆಂದು ರಾಜ್ಯ ಕ್ಷೇತ್ರದ ಅನಧಿಕೃತ ವದಂತಿ ತಿಳಿಸುತ್ತದೆ. ಆದರೆ ಈ ವಾರ್ತೆಗೆ ಸಮರ್ಥನೆ ದೊರೆತಿಲ್ಲ.

ಒಂದು ಪಕ್ಷ ಇದು ನಿಜವಾದ್ದಾದರೂ ಸಹ ಆಚಾರ್ಯ ಕೃಪಲಾನಿಯವರು ಆಹಾರ ಶಾಖೆಯನ್ನು ವಹಿಸಿಕೊಳ್ಳಲು ಒಪ್ಪಲಾರರೆಂದು ರಾಜಕೀಯ ಕ್ಷೇತ್ರಗಳಲ್ಲಿ ಅಭಿಪ್ರಾಯ ಪಡಲಾಗಿದೆ.

ರಾಷ್ಟ್ರದಲ್ಲಿ ಈಗ ತಲೆ ಹಾಕಿರುವ ಅತೃಪ್ತಿ ಮತ್ತು ಅಸಮಾಧಾನಗಳನ್ನು ಬಹುಮಟ್ಟಿಗೆ ನಿವಾರಿಸಲು ಒಳಾಡಳಿತ, ವಾರ್ತಾ ಮತ್ತು ಪ್ರಸಾರ ಶಾಖೆಗಳನ್ನು ತಮಗೆ ವಹಿಸಬೇಕೆಂದು ಅವರು ಕೋರಿದರೆಂದು ಇತರ ವಾದಿಗಳಿಂದ ವ್ಯಕ್ತಪಟ್ಟಿದೆ. ಒಳಾಡಳಿತ ಶಾಖೆಯ ಮೂಲಕ ಆಡಳಿತದಲ್ಲಿ ತಲೆ ಹಾಕಿರುವ ಅಸಮರ್ಥತೆಯನ್ನು ಹೋಗಲಾಡಿಸಿ, ರಾಷ್ಟ್ರವನ್ನೇ ಕರಾಳ ರೂಪದಿಂದ ಆವರಿಸಿರುವ ಕಳ್ಳ ವ್ಯಾಪಾರವನ್ನು ಪೂರ್ಣವಾಗಿ ನಾಶಪಡಿಸಬೇಕೆಂಬ ಉದ್ದೇಶದಿಂದ ಆ ಶಾಖೆಯನ್ನು ಅವರು ಕೇಳಿರಬಹುದೆಂದು ಭಾವಿಸಲಾಗಿದೆ.

ಆಚಾರ್ಯ ಕೃಪಲಾನಿಯವರ ಸೂಚನೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಸಹ ಒಪ್ಪಿಗೆ ಸಿಗುವಂತೆ ತೋರುವುದಿಲ್ಲ. ಆದರೆ ಆಚಾರ್ಯ ಕೃಪಲಾನಿಯವರು ತಮ್ಮ ಹೇಳಿಕೆಯಲ್ಲಿ ಕೇಂದ್ರ ಅಥವ ಪ್ರಾಂತೀಯ ಮಂತ್ರಿ ಮಂಡಲಗಳ ಪುನರ್ರಚನೆಯ ಪ್ರಸ್ತಾಪವೇ ಆಗಲಿಲ್ಲವೆಂದು ತಿಳಿಸಿದ್ದಾರೆ. ಆಚಾರ್ಯರ ಈ ಅಭಿಪ್ರಾಯವು ಸತ್ಯವಾಗಿರುವುದಾದರೂ ಪ್ರಧಾನಿ ನೆಹರೂರವರು ತಮ್ಮ ಸಲಹೆಯನ್ನು ಸೂಚಿಸಲು ಅಡ್ಡಿಯಿಲ್ಲವೆಂದು ಭಾವಿಸಲಾಗಿದೆ.

ಉಳಿತಾಯ

ಸರ್ಕಾರಿ ನೌಕರರ ಸಂಖ್ಯೆಗಳನ್ನು ಕಡಮೆ ಮಾಡಿ ಮದರಾಸು ಸರ್ಕಾರವು ಕಳೆದ ವರ್ಷದಲ್ಲಿ ೫೯ ಲಕ್ಷ ೪೦ ಸಾವಿರ ರೂ. ಗಳ ಉಳಿತಾಯ ಮಾಡಿರುವುದಾಗಿ ತಿಳಿಯಬರುತ್ತದೆ.

ಖಂಡನಾಪತ್ರ

ನ್ಯಾಯಾಂಗ ಮಂತ್ರಿ ಡಾ|| ಅಂಬೇಡ್ಕರ್‌ರವರು ಹರಿಜನನೀತಿಯ ಬಗ್ಗೆ ಸರ್ಕಾರವನ್ನು ಕಟುವಾಗಿ ಟೀಕಿಸಿದ್ದಕ್ಕಾಗಿ ಪಂಡಿತ ನೆಹರೂರವರು ಡಾ|| ಅಂಬೇಡ್ಕರ್‌ರವರನ್ನು ಖಂಡಿಸಿ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

ನಿರ್ಧಾರಕ್ಕೆ ಬಂದಿಲ್ಲ

ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಅಮೇರಿಕಾ ಸರಬರಾಯಿ ಮಾಡುವ ವಿಷಯದಲ್ಲಿ ಇನ್ನೂ ಪರಿಶೀಲನೆ ನಡೆಯುತ್ತಲಿದೆ.

ಆಗಮನ

ಬೆಂಗಳೂರು ಏ. ೧೯

ಮದರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ರೆವೆನ್ಯೂ ಮಂತ್ರಿ ಶ್ರೀ ಸೀತಾರಾಮರೆಡ್ಡಿಯವರು ನಾಳೆ ಬೆಂಗಳೂರಿಗೆ ಆಗಮಿಸುವರು.

ನಿವೃತ್ತಿ

ರೆವೆನ್ಯೂ ಕಮೀಷನರಾದ ಶ್ರೀ ಕೆ. ವೇದವ್ಯಾಸಾಚಾರ್ಯರವರು ಅಕ್ಟೋಬರ್‌ನಲ್ಲಿ, ಶ್ರೀ ಕೆ. ಸುಬ್ಬರಾಯರು ಮುಂದಿನ ತಿಂಗಳಲ್ಲಿ ನಿವೃತ್ತರಾಗುವರೆಂದು ತಿಳಿಯಬರುತ್ತದೆ.

ಶ್ರೇಷ್ಠ ಕಾರ್ಯದರ್ಶಿ

ಬೆಂಗಳೂರು ಏ. ೧೮

ಸ್ಪೆಷಲ್ ಡ್ಯೂಟಿ ಕಮೀಷನರಾಗಿದ್ದ ಶ್ರೀ ಇ. ವಿ. ಗಣಪತಿ ಅಯ್ಯರ್‌ರವರು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳಾಗಿ ನೇಮಕವಾಗಿ ಇಂದು ಸಂಜೆ ಅಧಿಕಾರವನ್ನು ವಹಿಸಿಕೊಂಡರು.

ಬೆಂಗಳೂರಿನಲ್ಲಿ ಕುದುರೆ ಜೂಜು

ಬೆಂಗಳೂರು ಏ ೧೮

ಮೇ ೨೩ನೇ ತಾರೀಖಿನಿಂದ ಜುಲೈ ೪ರ ವರೆಗೆ ೧೨ ದಿನಗಳ ಕುದುರೆ ಜೂಜು ಬೆಂಗಳೂರಿನಲ್ಲಿ ನಡೆಯುವುದೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಈ ಜೂಜಿನಲ್ಲಿ ಭಾಗವಹಿಸಲು ಈಗಾಗಲೇ ೨೫೦ ಕುದುರೆಗಳು ಬಂದಿವೆ. ಇನ್ನೂ ೬೦೦ ಕುದುರೆಗಳು ಬರಲಿವೆ.

ಚೈನಾ ಮೇಲೆ ಯುದ್ಧ ಘೋಷಿಸಿ

ಚೀನಾ ಮತ್ತು ಉತ್ತರ ಕೊರಿಯಾ ಮೇಲೆ ಯುದ್ಧವನ್ನು ಘೋಷಿಸಿ ಎಂಬ ನಿರ್ಣಯವನ್ನು ರಿಪಬ್ಲಿಕನ್ ಪಕ್ಷಕ್ಕೆ ಸೇರಿದ ಸೆನೆಟರ್ ಹ್ಯಾರಿ ಕಾಯ್ನ್ ಅಮೆರಿಕಾ ಸೆನೆಟಿನಲ್ಲಿ ಮಂಡಿಸಿರುವರು.

ಹೆಲ್ತ್ ಇನ್ಸ್‌ಪೆಕ್ಟರ ಸಭೆ

ಮೈಸೂರು ಸಂಸ್ಥಾನದ ಹೆಲ್ತ್ ಇನ್ಸ್‌ಪೆಕ್ಟರುಗಳ ೫ನೇ ವಾರ್ಷಿಕ ಸಮ್ಮೇಳನವು ದಾವಣಗೆರೆಯಲ್ಲಿ ಮೇ ತಿಂಗಳಿನಲ್ಲಿ ನಡೆಯುವುದು.

ಕಚ್ಚಾ ಸಾಮಾನಿನ ಅಭಾವ

ಕಚ್ಚಾ ಸಾಮಾನುಗಳು ಅದರಲ್ಲೂ ಗಂಧಕವು ಹೆಚ್ಚಾಗಿ ಬ್ರಿಟನ್ನಿಗೆ ಬಾರದಿದ್ದರೆ ಕೈಗಾರಿಕಾ ಕ್ಷೇತ್ರದಲ್ಲಿ ಭಾರಿ ವಿಪತ್ತು ಸಂಭವಿಸುವುದು. ವಾಷಿಂಗ್‌ಟನ್ನಿನಲ್ಲಿ ನಡೆಯುತ್ತಲಿರುವ ಸಂಭಾಷಣೆಯ ಮೇಲೆ ಇದು ನಿಂತಿದೆ ಎಂದು ಬ್ರಿಟನ್ನಿನ ವ್ಯಾಪಾರಮಂತ್ರಿ ಹೇಳಿರುವರು.

ಪ್ರತಿಸ್ಪರ್ಧಿಯ ಹಣವನ್ನು ಕಳೆದುಕೊಳ್ಳುವನು

ಪ್ರಜಾಸೇವೆಯೇ ನನ್ನ ಜೀವನ ಮುಖ್ಯ ಗುರಿ, ಎಂದೂ ಕೆಲಸ ಮಾಡುತ್ತಲಿದ್ದ ವನನಗೆ ಪ್ರತಿಸ್ಪರ್ಧಿಯಾಗಿ ಮುಂದಿನ ಚುನಾವಣೆಯಲ್ಲಿ ಯಾರು ನಿಂತರೂ ಅತನಿಗೆ ಸೋಲುಂಟಾಗುವುದಲ್ಲದೆ ಠೇವಣಿ ಹಣವನ್ನು ಸಹ ಕಳೆದುಕೊಳ್ಳುವನು ಎಂದು ಬೊಂಬಾಯಿನ ಗೃಹ ಸಚಿವ ಮೆ|| ಮೊರಾರ್ಜಿ ದೇಸಾಯಿಯವರು ಒಂದು ಸಾರ್ವತ್ರಿಕ ಸಭೆಯಲ್ಲಿ ಮಾತನಾಡುತ್ತಾ ಘೋಷಿಸಿರುವರು. ಚುನಾವಣೆಗಳಲ್ಲಿ ಜಯಗಳಿಸುವುದು ಅಥವಾ ಅಧಿಕಾರದಲ್ಲಿದ್ದರೆ ಮಾತ್ರ ಸೇವೆಯನ್ನು ಮಾಡಬಹುದೆಂದು ನ ಂಬುವುದನ್ನು ನಾನು ನಂಬುವುದಿಲ್ಲ ಚುನಾವಣೆಯಲ್ಲಿ ಜಯಗಳಿಸಿದರೆ ಜವಾಬ್ದಾರಿ ಹೆಚ್ಚುವುದೆಂದೂ ಚುನಾವಣೆಗಳಲ್ಲಿ ತಾವು ವಿಫಲರಾದರೂ ಸೇವೆಯನ್ನೆಸಗುವ ಧ್ಯೇಯವನ್ನು ತಾವು ಬಿಡುವುದಿಲ್ಲವೆಂದೂ ಹೇಳಿದರು.

ಬಾಂಬಿಂಗ್

ಬೆಂಗಳೂರು ಹೆಸರಪಟ್ಟದ ಒಳಿ ಭಾರತ ವಿಮಾನ ದಳದವರು ಅಭ್ಯಾಸಕ್ಕಾಗಿ ಇದೇ ತಿಂಗಳು ೧೯ ಮತ್ತು ೩೦ನೇ ತಾರೀಖಿನಂದು ಬಾಂಬಿಂಗ್ ನಡೆಸುವರು. ಆಗ ಓಡಾಡುವುದಾಗಲಿ, ದನಕರುಗಳನ್ನು ಆ ಸ್ಥಳದಲ್ಲಿ ಬಿಡುವುದಾಗಲಿ ಅಪಾಯಕಾರವೆಂದು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಎಚ್ಚರಿಕೆ ಕೊಡಲಾಗಿದೆ.

ಅಂದು ಭಾರತ ವಿಮಾನದಳ ಪತಿ ಏರ್ ಮಾರ್ಷಲ್ ಸುಬ್ರೋತೊ ದಂಡ ನಾಯಕ ಡಾ|| ರಾಮಯ್ಯನವರು ಬರುವ ಸಂಭವವಿದೆ.

ಭದ್ರತೆ

ಶಾಂತಿಸಾಗರ ಪ್ರದೇಶದಲ್ಲಿ ಭದ್ರತೆಗಾಗಿ ಅಮೆರಿಕಾ, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ರಾಜ್ಯಗಳು ಒಂದು ಒಪ್ಪಂದಕ್ಕೆ ಬರಲಿವೆ. ಇದರ ಪ್ರಕಾರ ಈ ಮೂರು ರಾಷ್ಟ್ರಗಳಲ್ಲಿ ಯಾವ ರಾಷ್ಟ್ರದ ಮೇಲೆ ಶತ್ರು ರಾಷ್ಟ್ರಗಳು ಆಕ್ರಮಣ ನಡೆಸಿದರೂ ಇತರರು ಸಹಾಯಕ್ಕೆ ಹೋಗಬೇಕಾಗುವುದು.

ಎಲ್ಲಾ ಭಾರತೀಯರಿಂದ ಉಪವಾಸ

ದಕ್ಷಿಣ ಆಫ್ರಿಕಾದಲ್ಲಿ ಸರ್ಕಾರದ ವರ್ಣಭೇದನೀತಿಯನ್ನು ಪ್ರತಿಭಟಿಸಿ ಉಪವಾಸ ಕೈಗೊಂಡಿರುವ ಶ್ರೀ ಮಣಿಲಾಲ್ ಗಾಂಧಿಯವರೊಡನೆ ಸಹಾನುಭೂತಿ ವ್ಯಕ್ತಪಡಿಸಲು ದಕ್ಷಿಣ-ಆಫ್ರಿಕಾದ್ಯಂತ ವಾಸಿಸುವ ಎಲ್ಲಾ ಭಾರತೀಯರು ಒಂದು ದಿನ ಉಪವಾಸ ಮಾಡಿದರು.

ಚಂದಾ ಎತ್ತಿ ಧಾನ್ಯ ಸಂಗ್ರಹ

ಪ್ರಪಂಚ ಸಂಸ್ಥೆ ಉದ್ಯೋಗಸ್ಥರು ತಮ್ಮಲ್ಲಿಯೇ ಚಂದಾ ವಸೂಲ್ಮಾಡಿ ಧಾನ್ಯವನ್ನು ಕೊಂಡು ಭಾರತಕ್ಕೆ ಕಳುಹಿಸಲು ನಿಶ್ಚಯಿಸಿ ಈ ಕಾರ್ಯಕ್ಕಾಗಿ ಒಂದು ಸಮಿತಿಯನ್ನು ರಚಿಸಿಕೊಂಡಿರುವರು. ... ಪ್ರಪಂಚ ಸಂಸ್ಥೆ ಕಾರ್ಯದರ್ಶಿ ಮಿ|| ಟ್ರಿಗ್ವಿ ಲೈಯವರ ಅನುಮತಿ ದೊರೆತಿದೆ. ತಮ್ಮ ಕೈಲಾದಷ್ಟು ಚಂದಾವನ್ನು ಸ್ವಂತವಾಗಿಯೂ ಸಾಮೂಹಿಕವಾಗಿಯೂ ಕೊಡಬೇಕೆಂದು ಕೋರಿ ಒಂದು ಪತ್ರವನ್ನು ತಯಾರ್ಮಾಡಿ ಎಲ್ಲರಿಗೂ ಹಂಚಲಾಗುತ್ತಲಿದೆ. ... ಉದ್ಯೋಗ ಮತ್ತು ಅಂಗ ಸಂಸ್ಥೆಗಳಲ್ಲಿರುವವರಲ್ಲಿಯೂ ಈ ವಿಷಯ ಮಾಡಿಕೊಳ್ಳಲಾಗುವುದು.

ದೇಶದಲ್ಲಿರುವ ಸ್ಮಾರಕಗಳು

ಭಾರತದಲ್ಲಿರುವ ಸ್ಮಾರಕಗಳಲ್ಲಿ ಕೇಂದ್ರ ಸರ್ಕಾರವು ತನ್ನ ಸೇರುವಾದ ಆ ಡಳಿತಕ್ಕೆ ಯಾವುವನ್ನು ವಹಿಸಿಕೊಳ್ಳಬೇಕೆಂಬ ವಿಷಯದಲ್ಲಿ ಪರಿಶೀಲನೆ ನಡೆಯುತ್ತಿದೆ.

ಭೂಕಂಪದ ಪರಿಣಾಮ

ಅಸ್ಸಾಂನಲ್ಲಿ ಭೂಕಂಪವಾದ ಪರಿಸ್ಥಿತಿಯನ್ನು ಪರಿಶೀಲಿಸಿ, ಮುಂದಿನ ಕಾರ್ಯಕ್ರಮವೇನೆಂಬ ವಿಷಯದಲ್ಲಿ ವರದಿಯನ್ನೊಪ್ಪಿಸಲು ಭಾರತ ಸರ್ಕಾರವು ನೇಮಿಸಿದ್ದ ಇಂಜಿನೀಯರುಗಳ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿ, ಬ್ರಹ್ಮಪುತ್ರ ಮತ್ತು ಅದರ ಉಪನದಿಗಳಿಂದ ಇನ್ನೂ ಹಾನಿ ನಷ್ಟವು ಸಂಭವಿಸಬಹುದೆಂದೂ ದಿಬ್ರೂಗರ್ ನಗರವು ವಿಶೇಷ ಅಪಾಯ ಸ್ಥಿತಿಯಲ್ಲಿರುವುದಾಗಿಯೂ ಎಂದಾದರೂ ಅದು ಜಲ ಸಮಾಧಿಯಾಗುವ ಸ್ಥಿತಿಯಲ್ಲಿರುವುದರಿಂದ ನದಿಯ ದಡದಲ್ಲಿ ೬ ಅಡಿ ಎತ್ತರದ ಕಟ್ಟೆಯನ್ನು ಉದ್ದಕ್ಕೂ ಕಟ್ಟಬೇಕೆಂದು ಸಲಹೆಯಿತ್ತಿರುವರು.

ಆಹಾರ ಕಾನೂನು ಉಲ್ಲಂಘನೆ

ಮಾರ್ಚಿ ೧೯ಕ್ಕೆ ಮುಕ್ತಾಯವಾಗುವ ಪಕ್ಷದಲ್ಲಿ ಮೈಸೂರು ನಗರದಲ್ಲಿ ಆಹಾರಕಾನೂನು ಉಲ್ಲಂಘನೆಗಾಗಿ ಆಗಿರುವ ಶಿಕ್ಷೆಗಳು—

ರಹದಾರಿಯಿಲ್ಲದೆ ಬತ್ತವನ್ನು ರವಾನಿಸುತ್ತಿದ್ದರೆಂಬ ಅಪಾದನೆ ಮೇಲೆ ಮೂವರಿಗೆ ಕೋರ್ಟು ಮುಗಿಯುವವರೆಗೆ ಸಜಾ ತಲಾ ೧೫ ರೂ. ಜುಲ್ಮಾನೆ, ಮತ್ತೊಬ್ಬರಿಗೆ ಇದೇ ಅಪಾದನೆ ಮೇಲೆ ೧೫ ರೂ. ೨೫ ರೂ. ಜುಲ್ಮಾನೆ, ರೇಷನ್ ಪದಾರ್ಥಗಳಿಂದ ತಿಂಡಿ ತಯಾರ್ಮಾಡಿದ್ದಕ್ಕೆ ಉಪಹಾರ ಮಂದಿರದ ಮಾಲೀಕರಿಬ್ಬರಿಗೆ ತಲಾ ೬೦ ರೂ. ಜುಲ್ಮಾನೆ, ಕೋರ್ಟು ಮುಗಿಯುವವರೆಗೆ ಸಜಾ, ರಹದಾರಿಯಿಲ್ಲದೆ ಸಕ್ಕರೆ ರವಾನಿಸುತ್ತಲಿದ್ದುದಕ್ಕೆ ಒಬ್ಬರಿಗೆ ೬೦ ರೂ. ಜುಲ್ಮಾನೆ ಕೋರ್ಟು ಮುಗಿಯುವವರೆಗೆ ಸಜಾ ಶಿಕ್ಷೆಗಳನ್ನು ವಿಧಿಸಲಾಗಿದೆ.

ಬಾಂಬು ಧಾಳಿಗೆ ತಡೆ

ಅಣುಬಾಂಬಿನ ನಿರೋಧಕವಾಗ ವೈಟ್‌ಹೌಸ್ ನಮೇಲೆ ಬಾಂಬು ಧಾಳಿಯನ್ನು ತಡೆಗಟ್ಟುವ ಯೋಜನೆಗಾಗಿ ಅಧ್ಯಕ್ಷ ಟ್ರೂಮನ್‌ರು ೮,೮೦,೦೦೦ ಡಾಲರುಗಳನ್ನು ಮಂಜೂರ್ಮಾಡಿರುವರು.

ಮನೆ ಬಿಕರಿಗಿದೆ

ಬಸವನಗುಡಿ ಪುರಂನಲ್ಲಿ 2 ಬೆಡ್‌ರೂಮ್ ಕಾಂಪೌಂಡ್ ಪ್ಲಸ್, ನಲ್ಲಿ, ದೀಪ, ಬಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್‌-ಕೊ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

ಕ್ಷಾಮದ ಪರಿಸ್ಥಿತಿ

ಬೀಹಾರಿನ ದರ್ಭಾಂಗ ಜಿಲ್ಲೆಯ ೩೦ ಗ್ರಾಮಗಳಿಗೆ ಭೇಟಿಯಿತ್ತ ದರ್ಭಾಂಗ ಜಿಲ್ಲಾ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷ ಡಾ|| ಸೂರ್ಯಕಾಂತರವರು ಒಂದು ಹೇಳಿಕೆ ಕೊಡುತ್ತಾ ತಾವು ಈ ಪ್ರಾಂತ್ಯದಲ್ಲಿ ಪ್ರವಾಸ ಕೈಕೊಂಡಾಗ ೧೫ ಜನರು ಆಹಾರವಿಲ್ಲದೆ ಸತ್ತಿರುವುದು ತಮಗೆ ವರದಿಯಾಗಿರುವುದಾಗಿಯೂ, ಸುಮಾರು ೬೦೦ ಜನರು ಆಹಾರವಿಲ್ಲದೆ ಉತ್ಕಟ ಪರಿಸ್ಥಿತಿಯಲ್ಲಿರುವುದಾಗಿಯೂ ಇನ್ನು ಒಂದು ವಾರದೊಳಗೆ ಆಹಾರವು ಅಲ್ಲಿಗೆ ಹೋಗದಿದ್ದಲ್ಲಿ ೩೦೦ ಜನರು ಸಾಯುವುದು ಖಂಡಿತವೆಂದೂ, ಕೇಂದ್ರವು ಎಷ್ಟು ಆಹಾರವನ್ನು ಕಳುಹಿಸಿದರೂ, ಉತ್ತರ ಬೀಹಾರಿನಲ್ಲಿ ಇನ್ನು ೬ ತಿಂಗಳ ಕಾಲ ಆಹಾರವಿಲ್ಲದೆ ಉಂಟಾಗುವ ಸಾವುಗಳನ್ನು ತಪ್ಪಿಸಲು ಸಾಧ್ಯವಿಲ್ಲವೆಂದೂ ಹೇಳಿರುವುದಾಗಿ ವರದಿಯಾಗಿದೆ.

ಬೀಹಾರ ಪ್ರಾಂತ್ಯಕ್ಕೆ ಸಾಧ್ಯವಾದಷ್ಟು ಹೆಚ್ಚಿಗೆ ಪ್ರಮಾಣದಲ್ಲಿ ಆಹಾರವನ್ನು ಸರಬರಾಯಿ ಮಾಡಲು ಕೇಂದ್ರವು ಕಾರ್ಯಕ್ರಮ ತೆಗೆದುಕೊಳ್ಳುತ್ತಲಿದೆ.

ಈಗಾಗಲೇ ಬೀಹಾರಿಗೆ ಕಳುಹಿಸುತ್ತಲಿರುವ ಆಹಾರ ಪ್ರಮಾಣವನ್ನು ಹೆಚ್ಚಿಸಲಾಗಿದೆ. ೭೨ ಗಂಟೆಗಳೊಳಗಾಗಿ ನಿನ್ನೆ ೬೫೦೦ ಟನ್ ಆಹಾರವನ್ನು ರವಾನಿಸಲಾಗಿದೆ. ಇನ್ನು ೫೦೦೦೦ ಟನ್ ಆಹಾರವನ್ನು ಕೇಂದ್ರವು ಸದ್ಯದಲ್ಲೇ ಕಳುಹಿಸಲಿದೆ ಉತ್ತರ ಪ್ರದೇಶವು ೨೨೦೦೦ ಟನ್ ಪಂಜಾಬು ೮೦೦೦ ಟನ್ ಆಹಾರವನ್ನು ಈಗಾಗಲೇ ಕಳುಹಿಸಿವೆ. ಪಂಜಾಬು ಇನ್ನು ೧೫,೦೦೦ ಟನ್ ಆಹಾರವನ್ನು ಕಳುಹಿಸುವುದು.

ಒಲಿಂಪಿಯಾ ಟಾಕೀಸ್
೧೯—೪—೪೮ರಿಂದ ಪ್ರತಿದಿನ ೩ ಆಟಗಳು
ಸಂಗೀತ ಪ್ರೇಮಿಗಳಿಗೆ ಸುಸಮಯ (ಒಂದು ವಾರ ಮಾತ್ರ)
ನ್ಯೂ ಥಿಯೇಟರ್ಸ್‌ರವರ—
ಸ್ಟ್ರೀಟ್ ಸಿಂಗರ್ (ಹೊಸ ಕಾಪಿ)
ಪಾತ್ರ— ಸೈಗಾಲ್, ಕನ್ನನ್‌ಬಾಲಾ.
ಬೆಳಗಿನ ಪ್ರದರ್ಶನ— ೨೦-೪-೪೮ ರಿಂದ ಮೂರು ದಿನಗಳು ಮಾತ್ರ
ಸುರಯ್ಯಾ, ಟ್ರೈಲಾಲ್, ಮಧುಬಾಲ ಪಾತ್ರವಹಿಸಿರುವ
—:: ಸಿಂಗಾರ್ ::—

ರಂಜಿತ್
೨೦—೪—೪೮ರಿಂದ
ಪ್ರತಿದಿನ ಮೂರು ಆಟಗಳು
ಮದುಬಾಲರವರ—
ಪರದೇಸ್
ಪಾತ್ರ— ರೆಹಮಾನ್, ಕರನ್‌ದಿವಾನ್, ಮದುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಬಿ. ಎಲ್. ಸ್ವಾಮಿ, ಟ್ಯುಟೋರಿಯಲ್ ಬ್ಯೂರೊ ಮೈಸೂರು. ಮುದ್ರಕರು ಬಿ.ಕೆ.ಚ್. ರಾಮರಾವ್, ಬಿ. ಎಸ್. ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೪—೧೯೫೧ನೇ ಶುಕ್ರವಾರ [ಸಂಚಿಕೆ ೧೮೭

ಟ್ರಾಕ್ಟರು ಕಾರ್ಖಾನೆ

ಒರಿಸ್ಸಾದಲ್ಲಿ ಟ್ರಾಕ್ಟರುಗಳ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರ್ಕಾರವು ನಿಶ್ಚಯಿಸಿದೆ. ಪ್ರತಿವರ್ಷವೂ ೧೫೦೦ ಟ್ರಾಕ್ಟರುಗಳು ಇಲ್ಲಿ ತಯಾರಾಗಿ ದೇಶದಲ್ಲಿ ಅಭಾವವು ತಪ್ಪುವುದೆಂದು ಹೇಳಲಾಗಿದೆ.

ಶ್ರೇಷ್ಠ ನ್ಯಾಯಾಲಯದ ವಕೀಲರು

ಭಾರತ ಶ್ರೇಷ್ಠ ನ್ಯಾಯಾಲಯದ ವಕೀಲರಿಗೆ ಭಾರತದಲ್ಲಿರುವ ಎಲ್ಲಾ ನ್ಯಾಯಾಲಯಗಳಲ್ಲೂ ಪ್ರವೇಶ ದೊರೆಯುವ ಒಂದು ಮಸೂದೆಯು ಪಾರ್ಲಿಮೆಂಟಿಗೆ ಬರಲಿದೆ.

ಭಾರತಕ್ಕೆ ಆಹಾರವನ್ನು ಸಾಲದ ರೂಪದಲ್ಲಿ ಕೊಡಿ

ಮೆಕಾರ್ಥರ್‌ರ ಸೈನಿಕ ಜೀವನ ಮುಕ್ತಾಯ

ಮೆಕಾರ್ಥರ್ ಭಾಷಣ

ಜನರಲ್ ಮೆಕಾರ್ಥರ್‌ರವರು ನಿನ್ನೆ ರಾತ್ರಿ ಅಮೆರಿಕಾ ಸಂಯುಕ್ತ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಕೊರಿಯಾ ನೀತಿಯನ್ನು ಸಮರ್ಥನೆ ಮಾಡಿ ಭಾಷಣಮಾಡಿದರು. ಫಾರ್ಮೋಸಾವು ಚೀನೀಯರ ವಶವಾಗದಂತೆ ನಾವು ನೋಡಿಕೊಳ್ಳಬೇಕು ಇಲ್ಲವಾದರೆ ಅಮೆರಿಕಾ ಸರಹದ್ದನ್ನು ಕ್ಯಾಲಿಫೋರ್ನಿಯಾ ಅಥವಾ ವಾಷಿಂಗ್‌ಟನ್ ವರೆಗೆ ಸರಿಸಬೇಕಾಗುವುದು. ಕೊರಿಯಾ ಪರಿಸ್ಥಿತಿಯಲ್ಲಿ ರಾಜಕೀಯವಾಗದ ಪ್ರವೇಶವು ಅವಶ್ಯಕವಾಗಿತ್ತು. ಅವರು ಪ್ರವೇಶಿಸದಿರುವುದಕ್ಕೆ ಅತ್ಯಂತ ವಿಷಾದಪಡಬೇಕಾಗಿದೆ. ಕೊರಿಯಾದಲ್ಲಿ ನಡೆಸಿದ ಎಲ್ಲಾ ಕಾರ್ಯಗಳಿಗೂ ಅಲ್ಲಿ ಭಾಗವಹಿಸಿದ ಎಲ್ಲಾ ರಾಷ್ಟ್ರಗಳ ಸೈನ್ಯಾಧಿಕಾರಿಗಳ ಅಭಿಪ್ರಾಯ ಮತ್ತು ಬೆಂಬಲ ದೊರೆತಿದೆ. ವಿಶ್ವಸಂಸ್ಥೆಯ ಜಾಯಿಂಟ್ ಚೀಫ್ ಆಫ್ ಸ್ಟಾಫ್‌ರವರು ಸಹ ತಮ್ಮ ಒಪ್ಪಿಗೆಯಿತ್ತಿರುವರು. ಈ ಯುದ್ಧವನ್ನು ತಡೆಗಟ್ಟಿ ಶಾಂತಿ ಸ್ಥಾಪನೆಯಾಗಬೇಕಾದರೆ ನಾವು ಮುಖ್ಯವಾಗಿ ಕಾರ್ಯಕ್ರಮವಿಡಬೇಕಾಗುವುದು, (೧) ನೌಕಾ ಪ್ರತಿಭಟನೆಯನ್ನು ಕಲ್ಪಿಸಿ ಚೈನಾ ನೌಕಾ ಪಡೆಗಳು ಎಲ್ಲಿಯೂ ಓಡಾಡದಂತೆ ಮಾಡಬೇಕು (೨) ಚೈನಾ ಮೇಲೆ ಆರ್ಥಿಕ ನಿರ್ಬಂಧ ವಿಧಿಸಬೇಕು. (೩) ಶತ್ರು ರಾಷ್ಟ್ರದ ಮೇಲೆ ವಿಮಾನಾಕ್ರಮಣಕ್ಕಿರುವ ನಿರ್ಬಂಧವನ್ನು ತೆಗೆದುಹಾಕಬೇಕು. (೪) ಫೋರ್ಮೋಸಾದಲ್ಲಿರುವ ಚಿಯಾಂಗ್ ಸೈನ್ಯವನ್ನು ಉಪಯೋಗಿಸಿಕೊಳ್ಳಬೇಕು. ಈ ರೀತಿ ಮಾಡಿದಲ್ಲಿ ಯುದ್ಧ ಮುಕ್ತಾಯವಾಗುವುದು. ಶತ್ರುಗಳು ಹೊರಗಿನ ಸಂಬಂಧಗಳಿಟ್ಟುಕೊಂಡು ನಮ್ಮ ಮೇಲೆ ಬಾಂಬುಗಳನ್ನು ಹಾಕುವಾಗ ಅವರ ನಿವಾಸವನ್ನು ನಾವು ಪವಿತ್ರ ಸ್ಥಾನವೆಂದು ಪರಿಗಣಿಸುವುದು ಶುದ್ಧ ತಪ್ಪೆಂದು ಹೇಳಿದರು. ಕೊನೆಯದಾಗಿ ತಾವು ಇನ್ನು ಸೈನಿಕ ಜೀವನದಿಂದ ಮುಕ್ತಾಯವಾಗಿ, ನಿವೃತ್ತ ಸೈನಿಕನಂತೆ ಮುಂದೆ ನಡೆಯುವುದಾಗಿ ತಿಳಿಸಿದರು.

ಸಹಗಮನ

ರಾಜಾಸ್ಥಾನದ ಕೋಟಾ ಜಿಲ್ಲಾ ನ್ಯಾಯಾಲಯದ ವಜೀರ್‌ರಾಗಿದ್ದ ೪೦ ವರ್ಷದ ಮಂಗೀಲಾಲ್ ಎಂಬುವರ ಪತ್ನಿ ೨೩ ವರ್ಷದ ಬನಾರಸಿಬಾಯಿಯೆಂಬುವರು ಗ್ವಾಲಿಯರಿನಲ್ಲಿ ತಮ್ಮ ಪತಿಯೊಡನೆ ಸಹಗಮನವನ್ನು ಮಾಡಿದರೆಂಬ ಸುದ್ದಿಯು ಬಂದಿದೆ. ಮಂಗೀಲಾಲ್‌ಗೆ ಈಕೆಯು ತೃತೀಯ ಪತ್ನಿಯೆಂದೂ ಈಕೆಗೆ ೪ ವರ್ಷದ ಮಗನಿರುವನೆಂದೂ ಹೇಳಲಾಗಿದೆ. ಸಹಗಮನವನ್ನು ಮಾಡುವಳೆಂಬ ವಿಷಯವು ತಿಳಿದೊಡನೆಯೇ ಆಕೆಯನ್ನು ನೋಡಲು ಸಹಸ್ರಾರು ಜನರು ಸೇರಿದ್ದರು. ಸಹಗಮನ ಮಾಡಬೇಡವೆಂದು ಎಷ್ಟು ಹೇಳಿದರೂ ಆಕೆಯು ಕೇಳಲಿಲ್ಲ.

ಸಹಗಮನ ಮಾಡಲು ಚಿತೆಯನ್ನು ಆಕೆಯು ಏರಿದೊಡನೆಯೇ ತಾನಾಗಿಯೇ ಚಿತೆಗೆ ಬೆಂಕಿ ಹತ್ತಿಕೊಂಡಿತೆಂದು ಹೇಳಲಾಗಿದೆ.

ಇಂಜನಿಯರುಗಳ ವರ್ಗ

ಬೆಂಗಳೂರು ಏ. ೧೮

ಮೈಸೂರು ಬಿಲ್ಡಿಂಗ್ ಡಿವಿಜನ್ನಿನ ಎಗ್ಸಿಕ್ಯುಟಿವ್ ಇಂಜನೀಯರಾದ ಶ್ರೀ ಎಂ. ವೇದವ್ಯಾಸಾಚಾರ್‌ರನ್ನು ಮಳವಳ್ಳಿ ಡಿವಿಜನ್ನಿಗೆ ವರ್ಗಾಯಿಸಿ ಅವರ ಜಾಗಕ್ಕೆ ರಜದ ಮೇಲಿರುವ ಶ್ರೀ ಎ. ವಿ. ವಿಜಯಕುಮಾರ್‌ರವರನ್ನು ವರ್ಗಮಾಡಲಾಗಿದೆ.

ರೇಡಿಯೋ ಕಾರ್ಯಕ್ರಮ

ಇಂದು ಸಂಜೆ ೮-೧೫ ಗಂಟೆಗೆ ಶ್ರೀ ಮಹಾರಾಜಪುರಂ ವಿಶ್ವನಾಥ ಅಯ್ಯರ್‌ರವರು ಮೈಸೂರು ಆಲ್-ಇಂಡಿಯಾ ರೇಡಿಯೋ ಕೇಂದ್ರದಲ್ಲಿ ಹಾಡುವರು.

ಅಮೆರಿಕಾ ಸಹಾಯ

ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಸರಬರಾಯಿ ಮಾಡುವ ವಿಷಯದಲ್ಲಿ, ೧೦ ಲಕ್ಷ ಟನ್ ಆಹಾರವನ್ನು ಕೂಡಲೇ ದಾನರೂಪದಲ್ಲಿ ಕೊಡಬೇಕೆಂದು ಅಧ್ಯಕ್ಷ ಟ್ರೂಮನ್ನರ ಸಲಹೆಯನ್ನು ಅಮೆರಿಕಾ ಪ್ರತಿನಿಧಿ ನಿಯಮಾವಳಿ ಸಭೆಯು ಚರ್ಚೆ ನಡೆಸಿ, ಸಾಲದ ರೂಪದಲ್ಲಿ ಕೊಡಬಹುದು, ಅದಕ್ಕೆ ತಕ್ಕಂತೆ ಕರಡು ಮಸೂದೆಯನ್ನು ತಿದ್ದುಪಡಿ ಮಾಡಬೇಕೆಂದು ವಿದೇಶಾಂಗ ವ್ಯವಹಾರಸಮಿತಿಗೆ ಸಲಹೆಕೊಟ್ಟಿರುವುದಾಗಿ ವರದಿಯಾಗಿದೆ. ಕರಡು ತಿದ್ದುಪಡಿಯು ಸೋಮವಾರದ ವೇಳೆಗೆ ಸಿದ್ಧವಾಗಬಹುದು.

ಸೌದೆ ರೂ. ಗೆ ೩॥ ಮಣ

ಮೈಸೂರು ಏ. ೧೯

ಸೌದೇ ಮಾಲೀಕರ ತೊಂದರೆಗಳನ್ನು ಪರಿಶೀಲಿಸಿ ಒಣದ ಸೌದೆಯನ್ನು ರೂ. ಗೆ ೩ ಮಣ ಒಳಯದಿದ್ದುದನ್ನು ೩॥ ಮಣ ಮಾರುವಂತೆ ನಿರ್ಧರಿಸಿ ಪೌರಸಭೆಯು ನಿನ್ನೆ ನಡೆದ ವಿಶೇಷಾಧಿವೇಶನದಲ್ಲಿ ನಿರ್ಣಯವಾಡಿದೆ.

ಭಾರತಕ್ಕೆ ಬರ್ಮಾ ಅಕ್ಕಿ

ಬರ್ಮಾವು ಭಾರತಕ್ಕೆ ಈಗ ಕೊಡಲು ಒಪ್ಪಿರುವ ೧ ಲಕ್ಷ ೭೦ ಸಾವಿರ ಟನ್ ಅಕ್ಕಿಯ ಜೊತೆಗೆ ಇನ್ನು ೧ ಲಕ್ಷ ೨೦ ಸಾವಿರ ಟನ್ ಅಕ್ಕಿಯನ್ನು ಕಳುಹಿಸಿ ಸಿದ್ಧವಿದೆಯೆಂದು ತಿಳಿಯಬರುತ್ತದೆ.

ಪಾನನಿರೋಧ

ಬೆಂಗಳೂರು ಏ. ೧೯

೧೯೫೧ನೇ ಜುಲೈ ಒಂದರಿಂದ ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರು ತಾ॥ ಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಲಾಗುವುದೆಂದು ಸರ್ಕಾರವು ನಿರ್ಧರಿಸಿದೆ.

ರಾಜ್ಯಾಂಗಕ್ಕೆ ತಿದ್ದುಪಡಿ

ಬೆಂಗಳೂರು ಏ. ೧೯

ಬಿ ಸಂಸ್ಥಾನಗಳ ಮೇಲೆ ಕೇಂದ್ರ ಹತ್ತು ವರ್ಷಕಾಲ ಮೇಲ್ವಿಚಾರಣೆ ಮತ್ತು ಹತೋಟಿಯಿಟ್ಟುಕೊಳ್ಳಲು ಸಂಬಂಧಿಸಿದ ರಾಜ್ಯಾಂಗದ ೩೭೧ನೇ ಪ್ರಕರಣದ ವ್ಯಾಪ್ತಿಗೆ ಮುಂದುವರಿದ ಮೈಸೂರು ರಾಜ್ಯವನ್ನು ಒಳಪಡಿಸದೆ ವಿನಾಯಿತಿಕೊಡುವ ಅವಕಾಶವನ್ನು ಕಲ್ಪಿಸುವಂತೆ ರಾಜ್ಯಾಂಗಕ್ಕೆ ಮೈಸೂರು ಸರ್ಕಾರವು ತಿದ್ದುಪಡಿಯನ್ನು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆಯೆಂದು ತಿಳಿಯಬರುತ್ತದೆ.

ಚಲನಚಿತ್ರೋದ್ಯಮಿಗಳ ನಿಯೋಗ

ಮೈಸೂರು ಸರ್ಕಾರವು ವಿಧಿಸಬೇಕೆಂದು ಸಂಕಲ್ಪಿಸಿರುವ ಥಿಯೇಟರುಗಳ ಆಸನಗಳ ಮೇಲಿನ ತೆರಿಗೆಯಿಂದ ಈ ಉದ್ಯಮದಲ್ಲಿರುವವರಿಗೆ ಒದಗುವ ತೊಂದರೆಗಳನ್ನು ವಿವರಿಸಿ ಹೇಳುವ ಸಲುವಾಗಿ ಕೈಗಾರಿಕಾ ಮತ್ತು ಅರ್ಥ ಸಚಿವರ ಬಳಿ ಒಂದು ನಿಯೋಗವು ಹೋಗಿ [illegible].

ಮಿ॥ ಬೆವಿನ್‌ರವರ ಶವ ಸಂಸ್ಕಾರ

ಕಳೆದ ಶನಿವಾರ ನಿಧನರಾದ ಬ್ರಿಟನ್ನಿನ ಮಾಜಿ ವಿದೇಶಾಂಗ ಮಂತ್ರಿ ಮಿ॥ ಅರ್ನೆಸ್ಟ್ ಬೆವಿನ್‌ರ ಶವ ಸಂಸ್ಕಾರವು ಅಂತರ ರಾಷ್ಟ್ರ ರಾಜಕಾರಣ ಪಟುಗಳ, ರಾಜಕೀಯ ಧುರೀಣರ, ಟ್ರೇಡ್ ಯೂನಿಯನ್ ನಾಯಕರುಗಳ ಮತ್ತು ಇತರ ಪ್ರಮುಖರ ಸಮ್ಮುಖದಲ್ಲಿ ಬುಧವಾರ ನಡೆಯಿತು.

ಪ್ರತಿಸ್ಪರ್ಧಿಯು ಹಣವನ್ನು ಕಳೆದುಕೊಳ್ಳುವನು

ಪ್ರಜಾಸೇವೆಯೇ ನನ್ನ ಜೀವನದ ಮುಖ್ಯ ಗುರಿ, ಎಂದೂ ಕೆಲಸ ಮಾಡುತ್ತಲಿರುವ ನನಗೆ ಪ್ರತಿಸ್ಪರ್ಧಿಯಾಗಿ ಮುಂದಿನ ಚುನಾವಣೆಯಲ್ಲಿ ಯಾರು ನಿಂತರೂ ಅತನಿಗೆ ಸೋಲುಂಟಾಗುವುದಲ್ಲದೆ ಠೇವಣಿ ಹಣವನ್ನು ಸಹ ಕಳೆದುಕೊಳ್ಳುವನು ಎಂದು ಬೊಂಬಾಯಿನ ಗೃಹ ಸಚಿವ ಮೆ|| ಮೊರಾರ್ಜಿ ದೇಸಾಯಿಯವರು ಒಂದು ಸಾರ್ವತ್ರಿಕ ಸಭೆಯಲ್ಲಿ ಮಾತನಾಡುತ್ತಾ ಘೋಷಿಸಿರುವರು. ಚುನಾವಣೆಗಳಲ್ಲಿ ಜಯಗಳಿಸುವುದು ಅಥವಾ ಅಧಿಕಾರದಲ್ಲಿದ್ದರೆ ಮಾತ್ರ ಸೇವೆಯನ್ನು ಮಾಡಬಹುದೆಂದು ಹೇಳುವುದನ್ನು ನಾನು ನಂಬುವುದಿಲ್ಲ. ಚುನಾವಣೆಯಲ್ಲಿ ಜಯಗಳಿಸಿದರೆ ಜವಾಬ್ದಾರಿ ಹೆಚ್ಚುವುದೆಂದೂ ಚುನಾವಣೆಗಳಲ್ಲಿ ತಾವು ವಿಫಲವಾದರೂ ಸೇವೆಯನ್ನೆಸಗುವ ಧ್ಯೇಯವನ್ನು ತಾವು ಬಿಡುವುದಿಲ್ಲವೆಂದೂ ಹೇಳಿದರು.

ಬಾಂಬಿಂಗ್

ಬೆಂಗಳೂರು ಹೆಸಂಘಟ್ಟದ ಬಳಿ ಭಾರತ ವಿಮಾನ ದಳದವರು ಅಭ್ಯಾಸಕ್ಕಾಗಿ ಇದೇ ತಿಂಗಳು ೧೯ ಮತ್ತು ೨೧ನೇ ತಾರೀಖಿನಂದು ಬಾಂಬಿಂಗ್ ನಡೆಸುವರು. ಅದನ ಓಡಾಡುವುದಾಗಲಿ, ದನಕರುಗಳನ್ನು ಆ ಸ್ಥಳದಲ್ಲಿ ಬಿಡುವುದಾಗಲಿ ಅಪಾಯಕರವೆಂದು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಎಚ್ಚರಿಕೆ ಕೊಡಲಾಗಿದೆ.

ಅಂದು ಭಾರತ ವಿಮಾನದಳ ಪತಿ ಏವ್ಹ ಚಾಪ್‌ಮನ್ ಮತ್ತು ಶ್ರೇಷ್ಠ ದಂಡನಾಯಕ ಜ|| ಕಾರಿಯಪ್ಪನವರು ಬರುವ ಸಂಭವವಿದೆ.

ಭದ್ರತೆ

ಶಾಂತಿಸಾಗರ ಪ್ರದೇಶದಲ್ಲಿ ಭದ್ರತೆಗಾಗಿ ಅಮೆರಿಕಾ, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ರಾಜ್ಯಗಳು ಒಂದು ಒಪ್ಪಂದಕ್ಕೆ ಬರಲಿದೆ. ಇದರ ಪ್ರಕಾರ ಈ ಮೂರು ರಾಷ್ಟ್ರಗಳಲ್ಲಿ ಯಾವ ರಾಷ್ಟ್ರದ ಮೇಲೆ ಶತ್ರು ರಾಷ್ಟ್ರಗಳು ಆಕ್ರಮಣ ನಡೆಸಿದರೂ ಇತರರು ಸಹಾಯಕ್ಕೆ ಹೋಗಬೇಕಾಗುವುದು.

ಎಲ್ಲಾ ಭಾರತೀಯರ ಉಪವಾಸ

ದಕ್ಷಿಣ ಆಫ್ರಿಕಾದಲ್ಲಿ ಸರ್ಕಾರದ ವರ್ಣಭೇದನೀತಿಯನ್ನು ಪ್ರತಿಭಟಿಸಿ ಉಪವಾಸ ಕೈಗೊಂಡಿರುವ ಶ್ರೀ ಮಣಿಲಾಲ್ ಗಾಂಧಿಯವರೊಡನೆ ಸಹಾನುಭೂತಿ ವ್ಯಕ್ತಪಡಿಸಲು ದಕ್ಷಿಣ-ಆಫ್ರಿಕಾದ್ಯಂತ ನರುವ ಎಲ್ಲಾ ಭಾರತೀಯರು ಒಂದು ದಿನ ಉಪವಾಸ ಮಾಡಲಿರುವರು.

ಚಂದಾ ಎತ್ತಿ ಧಾನ್ಯ ಸಂಗ್ರಹ

ಪ್ರಪಂಚ ಸಂಸ್ಥೆ ಉದ್ಯೋಗಸ್ಥರು ತಮ್ಮಲ್ಲಿಯೇ ಚಂದಾ ವಸೂಲ್ಮಾಡಿ ಧಾನ್ಯವನ್ನು ಕೊಂಡು ಭಾರತಕ್ಕೆ ಕಳುಹಿಸಲು ನಿಶ್ಚಯಿಸಿ ಈ ಕಾರ್ಯಕ್ಕಾಗಿ ಒಂದು ಸಮಿತಿಯನ್ನು ರಚಿಸಿಕೊಂಡಿರುವರು. ಇದಕ್ಕೆ ಪ್ರಪಂಚ ಸಂಸ್ಥೆ ಕಾರ್ಯದರ್ಶಿ ಮಿ|| ಟ್ರಿಗ್ವಿ ಲೈಯವರ ಅನುಮತಿ ದೊರೆತಿದೆ. ತಮ್ಮ ಕೈಲಾದಷ್ಟು ಚಂದಾವನ್ನು ಸ್ವಂತವಾಗಿಯೂ ಸಾಮೂಹಿಕವಾಗಿಯೂ ಕೊಡಬೇಕೆಂದು ಕೋರಿ ಒಂದು ಪತ್ರವನ್ನು ತಯಾರ್ಮಾಡಿ ಎಲ್ಲರಿಗೂ ಹಂಚಲಾಗುತ್ತಲಿದೆ. ವಿಶ್ವಸಂಸ್ಥೆ ಮತ್ತು ನಿಯೋಗ ಮತ್ತು ಅಂಗ ಸಂಸ್ಥೆಗಳಲ್ಲಿರುವವರಲ್ಲಿಯೂ ಈ ವಿಸ್ತಹ ಮಾಡಿಕೊಳ್ಳಲಾಗುವುದು.

ದೇಶದಲ್ಲಿರುವ ಸ್ಮಾರಕಗಳು

ಭಾರತಾದ್ಯಂತವಿರುವ ಸ್ಮಾರಕಗಳಲ್ಲಿ ಕೇಂದ್ರ ಸರ್ಕಾರವು ತನ್ನ ನೇರವಾದ ಆಡಳಿತಕ್ಕೆ ಯಾವುವನ್ನು ವಹಿಸಿಕೊಳ್ಳಬೇಕೆಂಬ ವಿಷಯದಲ್ಲಿ ಪರಿಶೀಲನೆ ನಡೆಯುತ್ತಲಿದೆ.

ಭೂಕಂಪದ ಪರಿಣಾಮ

ಅಸ್ಸಾಂನಲ್ಲಿ ಭೂಕಂಪವಾದ ಪರಿಸ್ಥಿತಿಯನ್ನು ಪರಿಶೀಲಿಸಿ, ಮುಂದಿನ ಕಾರ್ಯಕ್ರಮವೇನೆಂಬ ವಿಷಯದಲ್ಲಿ ವರದಿಯನ್ನೊಪ್ಪಿಸಲು ಭಾರತ ಸರ್ಕಾರವು ನೇಮಿಸಿದ್ದ ಇಂಜನೀಯರಿಂಗ್ ಪ್ರವೀಣರ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿ, ಬ್ರಹ್ಮಪುತ್ರ ಮತ್ತು ಅದರ ಉಪ ನದಿಗಳಿಂದ ಇನ್ನೂ ಭಾರಿ ನಷ್ಟವು ಸಂಭವಿಸಬಹುದೆಂದೂ ದಿಬ್ರೂಘರ್ ನಗರವು ವಿಶೇಷ ಅಪಾಯ ಸ್ಥಿತಿಯಲ್ಲಿರುವುದಾಗಿಯೂ ಎಂದಾದರೂ ಅದು ಜಲ ಸಮಾಧಿಯಾಗುವ ಸ್ಥಿತಿಯಲ್ಲಿರುವುದರಿಂದ ನದಿಯ ದಡದಲ್ಲಿ ೬ ಅಡಿ ಎತ್ತರದ ಕಟ್ಟೆಯನ್ನು ಉದ್ದಕ್ಕೂ ಕಟ್ಟಬೇಕೆಂದು ಸಲಹೆಯಿತ್ತಿರುವರು.

ಆಹಾರ ಕಾನೂನು ಉಲ್ಲಂಘನೆ

ಮಾರ್ಚ್ ೧೫ಕ್ಕೆ ಮುಕ್ತಾಯವಾಗುವ ಪಕ್ಷದಲ್ಲಿ ಮೈಸೂರು ನಗರದಲ್ಲಿ ಆಹಾರಕಾನೂನು ಉಲ್ಲಂಘನೆಗಾಗಿ ಆಗಿರುವ ಶಿಕ್ಷೆಗಳು—

ರಹದಾರಿಯಿಲ್ಲದೆ ಅಕ್ಕಿಯನ್ನು ರವಾನಿಸುತ್ತಿದ್ದರೆಂಬ ಅಪಾದನೆ ಮೇಲೆ ಮೂವರಿಗೆ ಕೋರ್ಟು ಮುಗಿಯುವವರೆಗೆ ಸಜಾ ತಲಾ ೧೫ ರೂ. ಜುಲ್ಮಾನೆ; ಮತ್ತೊಬ್ಬರಿಗೆ ಇದೇ ಅಪಾದನೆ ಮೇಲೆ ೧೫ ರೂ. ೨೫ ರೂ. ಜುಲ್ಮಾನೆ; ರೇಷನ್ ಪದಾರ್ಥಗಳಿಂದ ತಿಂಡಿ ತಯಾರ್ಮಾಡಿದ್ದಕ್ಕೆ ಉಪಹಾರ ಮಂದಿರದ ಮಾಲೀಕರಿಬ್ಬರಿಗೆ ತಲಾ ೪೦ ರೂ. ಜುಲ್ಮಾನೆ, ಕೋರ್ಟು ಮುಗಿಯುವವರೆಗೆ ಸಜಾ; ರಹದಾರಿಯಿಲ್ಲದೆ ಸಕ್ಕರೆ ರವಾನಿಸುತ್ತಲಿದ್ದುದಕ್ಕೆ ಒಬ್ಬರಿಗೆ ೪೦ ರೂ. ಜುಲ್ಮಾನೆ ಕೋರ್ಟು ಏಳುವವರೆಗೆ ಸಜಾ ಶಿಕ್ಷೆಗಳನ್ನು ವಿಧಿಸಲಾಗಿದೆ.

ಬಾಂಬು ಧಾಳಿಗೆ ತಡೆ

ಟ್ರೂಮನ್ನರ ನಿವಾಸವಾದ ವೈಟ್‌ಹೌಸ್‌ನ ಮೇಲೆ ಬಾಂಬು ಧಾಳಿಯನ್ನು ತಡೆಗಟ್ಟಲೋಸುಗ ಆಶ್ರಯ ಕಟ್ಟಲು ಅಧ್ಯಕ್ಷ ಟ್ರೂಮನ್ನರು ೮,೮೧,೦೦೦೦ ಡಾಲರುಗಳ ಖರ್ಚನ್ನು ಮಂಜೂರ್ಮಾಡಿರುವರು.

ಮನೆ ಬಿಕರಿಗಿದೆ

ಚಾಮುಂಡಿ ಪುರದಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಭೀಕರ ಪರಿಸ್ಥಿತಿ

ಬೀಹಾರಿನ ದರ್ಭಾಂಗ ಜಿಲ್ಲೆಯ ಕೆಲವು ೩೦ ಗ್ರಾಮಗಳಿಗೆ ಭೇಟಿಯಿತ್ತ ದರ್ಭಾಂಗ ಜಿಲ್ಲಾ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷ ಡಾ|| ಸೂರ್ಯಕಾಂತ್‌ರವರು ಒಂದು ಹೇಳಿಕೆ ಕೊಡುತ್ತಾ, ತಾವು ಈ ಪ್ರಾಂತ್ಯದಲ್ಲಿ ಪ್ರವಾಸ ಕೈಕೊಂಡಾಗ ೧೫ ಜನರು ಆಹಾರವಿಲ್ಲದೆ ಸತ್ತಿರುವುದು ತಮಗೆ ವರದಿಯಾಗಿರುವುದಾಗಿಯೂ, ಸುಮಾರು ೬೦೦ ಜನರು ಆಹಾರವಿಲ್ಲದೆ ಉತ್ಕಟ ಪರಿಸ್ಥಿತಿಯಲ್ಲಿರುವುದಾಗಿಯೂ ಇನ್ನು ಒಂದು ವಾರದೊಳಗೆ ಆಹಾರವು ಅಲ್ಲಿಗೆ ಹೋಗದಿದ್ದಲ್ಲಿ ೩೦೦ ಜನರು ಸಾಯುವುದು ಖಂಡಿತವೆಂದೂ, ಕೇಂದ್ರವು ಎಷ್ಟು ಆಹಾರವನ್ನು ಕಳುಹಿಸಿದರೂ, ಉತ್ತರ ಬೀಹಾರಿನಲ್ಲಿ ಇನ್ನು ೨ ತಿಂಗಳ ಕಾಲ ಆಹಾರವಿಲ್ಲದೆ ಉಂಟಾಗುವ ಸಾವುಗಳನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದೂ ಹೇಳಿರುವುದಾಗಿ ವರದಿಯಾಗಿದೆ.

ಬೀಹಾರ ಪ್ರಾಂತ್ಯಕ್ಕೆ ಸಾಧ್ಯವಾದಷ್ಟು ಹೆಚ್ಚಿಗೆ ಪ್ರಮಾಣದಲ್ಲಿ ಆಹಾರವನ್ನು ಸರಬರಾಯಿ ಮಾಡಲು ಕೇಂದ್ರವು ಕಾರ್ಯಕ್ರಮ ತೆಗೆದುಕೊಳ್ಳುತ್ತಲಿದೆ.

ಈಗಾಗಲೇ ಬೀಹಾರಿಗೆ ಕಳುಹಿಸುತ್ತಲಿರುವ ಆಹಾರ ಪ್ರಮಾಣವನ್ನು ಹೆಚ್ಚಿಸಲಾಗಿದೆ. ೨೪ ಗಂಟೆಗಳೊಳಗಾಗಿ ನಿನ್ನೆ ೪೫೦೦ ಟನ್ ಆಹಾರವನ್ನು ರವಾನಿಸಲಾಗಿದೆ. ಇನ್ನು ೫೦೦೦೦ ಟನ್ ಆಹಾರವನ್ನು ಕೇಂದ್ರವು ಸದ್ಯದಲ್ಲೇ ಕಳುಹಿಸಲಿದೆ. ಉತ್ತರ ಪ್ರದೇಶವು ೨೨೦೦೦ ಟನ್ ಪಂಜಾಬು ೮೦೦೦ ಟನ್ ಆಹಾರವನ್ನು ಈಗಾಗಲೇ ಕಳುಹಿಸಿವೆ. ಪಂಜಾಬು ಇನ್ನು ೧೬೦೦೦ ಟನ್ ಆಹಾರವನ್ನು ಕಳುಹಿಸುವುದು.

ರಣಜಿತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

ಪರದೇಸ್

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಒಲಂಪಿಯಾ ಟಾಕೀಸ್

೧೯—೪—೫೧ರಿಂದ ಪ್ರತಿದಿನ ೩ ಆಟಗಳು

ಸಂಗೀತ ಪ್ರೇಮಿಗಳಿಗೆ ಸುಸಮಯ (ಒಂದು ವಾರ ಮಾತ್ರ.)

ನ್ಯೂ ಥಿಯೇಟರ್ಸ್‌ರವರ—

* ಸ್ಟ್ರೀಟ್ ಸಿಂಗರ್ * (ಹೊಸ ಕಾಪಿ)

ಪಾತ್ರ— ಸೈಗಾಲ್, ಕನ್ನನ್‌ಬಾಲ.

ಬೆಳಗಿನ ಪ್ರದರ್ಶನ— ೨೦-೪-೫೧ರಿಂದ ಮೂರು ದಿನಗಳು ಮಾತ್ರ

ಸುರಯ್ಯಾ, ಜೈರಾಜ್, ಮಧುಬಾಲ ಪಾತ್ರವಹಿಸಿರುವ

—:: ಸಿಂಗಾರ್ ::—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೪—೧೯೫೧ನೇ ಶುಕ್ರವಾರ [ಸಂಚಿಕೆ ೧೦೭

ಟ್ರಾಕ್ಟರು ಕಾರ್ಖಾನೆ

ಬಿರಸ್ಪುರದಲ್ಲಿ ಟ್ರಾಕ್ಟರುಗಳ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸರ್ಕಾರವು ನಿಶ್ಚಯಿಸಿದೆ. ಪ್ರತಿವರ್ಷವೂ ೧೫೦೦೦ ಟ್ರಾಕ್ಟರುಗಳು ಇಲ್ಲಿ ತಯಾರಾಗಿ ದೇಶದಲ್ಲಿ ಅಭಾವವು ತಪ್ಪುವುದೆಂದು ಹೇಳಲಾಗಿದೆ.

ಶ್ರೇಷ್ಠ ನ್ಯಾಯಾಲಯದ ವಕೀಲರು

ಭಾರತ ಶ್ರೇಷ್ಠ ನ್ಯಾಯಾಲಯದ ವಕೀಲರಿಗೆ ಭಾರತದಲ್ಲಿರುವ ಎಲ್ಲಾ ನ್ಯಾಯಾಲಯಗಳಲ್ಲೂ ಪ್ರವೇಶ ದೊರೆಯುವ ಒಂದು ಮಸೂದೆಯು ಪಾರ್ಲಿಮೆಂಟಿಗೆ ಬರಲಿದೆ.

ಭಾರತಕ್ಕೆ ಆಹಾರವನ್ನು ಸಾಲದ ರೂಪದಲ್ಲಿ ಕೊಡಿ

ಮೆಕಾರ್ಥರ್‌ರ ಸೈನಿಕ ಜೀವನ ಮುಕ್ತಾಯ

ಮೆಕಾರ್ಥರ್ ಭಾಷಣ

ಜನರಲ್ ಮೆಕಾರ್ಥರವರು ನಿನ್ನೆ ರಾತ್ರಿ ಅಮೆರಿಕಾ ಸಂಯುಕ್ತ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಕೊರಿಯಾ ನೀತಿಯನ್ನು ಸಮರ್ಥನೆ ಮಾಡಿ ಮಾತನಾಡಿದರು. ಫಾರ್ಮೋಸಾವು ಚೀಣೀಯರ ವಶವಾಗದಂತೆ ನಾವು ನೋಡಿಕೊಳ್ಳಬೇಕು. ಇಲ್ಲವಾದರೆ ಅಮೆರಿಕಾ ಸಂಸದ್ದನ್ನು ಕ್ಯಾಲಿಫೋರ್ನಿಯಾ ಅಥವಾ ವಾಷಿಂಗ್‌ಟನ್ ವರೆಗೆ ಸರಿಸಬೇಕಾಗುವುದು. ಕೊರಿಯಾ ಪರಿಸ್ಥಿತಿಯಲ್ಲಿ ರಾಜ್ಯಭಾರಿವರ್ಗದ ಪ್ರವೇಶವು ಅವಶ್ಯಕವಾಗಿತ್ತು. ಅವರು ಪ್ರವೇಶಿಸುವ ನಿರ್ದಿಷ್ಟ ಉದ್ದೇಶ ಮಾಡದಿರಬೇಕಾಗಿದೆ. ಕೊರಿಯಾದಲ್ಲಿ ನಡೆಸಿದ ಎಲ್ಲಾ ಕಾರ್ಯಗಳಿಗೂ ಅಲ್ಲಿ ಭಾಗವಹಿಸಿದ ಎಲ್ಲಾ ರಾಷ್ಟ್ರಗಳ ಸೈನ್ಯಾಧಿಕಾರಿಗಳ ಅಭಿಪ್ರಾಯ ಮತ್ತು ಬೆಂಬಲ ದೊರಕಿದೆ. ವಿಶ್ವಸಂಸ್ಥೆಯ ಜಾಯಿಂಟ್ ಚೀಫ್ ಆಫ್ ಸ್ಟಾಫ್‌ರವರು ಸಹ ತಮ್ಮ ಒಪ್ಪಿಗೆಯಿತ್ತಿರುವರು. ಈ ಯುದ್ಧವನ್ನು ತಡೆಗಟ್ಟಿ ಶಾಂತಿ ಸ್ಥಾಪನೆಯಾಗಬೇಕಾದರೆ ನಾವು ಮುಖ್ಯವಾಗಿ ಕಾರ್ಯಕ್ರಮವೆಸಗಬೇಕಾಗುವುದು, (೧) ನೌಕಾ ಪ್ರತಿಭಟನೆಯನ್ನು ಕಲ್ಪಿಸಿ ಚೈನಾ ನೌಕಾ ಪಡೆಗಳು ಎಲ್ಲಿಯೂ ಓಡಾಡದಂತೆ ಮಾಡಬೇಕು (೨) ಚೈನಾ ಮೇಲೆ ಆರ್ಥಿಕ ನಿರ್ಬಂಧ ವಿಧಿಸಬೇಕು. (೩) ಶತ್ರು ರಾಷ್ಟ್ರದ ಮೇಲೆ ವಿಮಾನಾಕ್ರಮಣಕ್ಕಿರುವ ನಿರ್ಬಂಧವನ್ನು ತೆಗೆದುಹಾಕಬೇಕು. (೪) ಕೋಮಿಂಟಾಂಗ್ ಸೈನ್ಯವನ್ನು ಉಪಯೋಗಿಸಿಕೊಳ್ಳಬೇಕು. ಈ ರೀತಿ ಮಾಡಿದಲ್ಲಿ ಯುದ್ಧ ಮುಕ್ತಾಯವಾಗುವುದು. ಶತ್ರುಗಳು ಹೊರಗಿನ ಸಂಬಂಧಗಳಿದ್ದುಕೊಂಡು ನಮ್ಮ ಮೇಲೆ ಬಾಂಬುಗಳನ್ನು ಹಾಕುವಾಗ ಅವರ ನಿವಾಸವನ್ನು ನಾವು ಪವಿತ್ರ ಸ್ಥಾನವೆಂದು ಪರಿಗಣಿಸುವುದು ಶುದ್ಧ ತಪ್ಪೆಂದು ಹೇಳಿದರು. ಕೊನೆಯದಾಗಿ ತಾವು ಇನ್ನು ಸೈನಿಕ ಜೀವನದಿಂದ ಮುಕ್ತಾಯವಾಗಿ, ನಿವೃತ್ತ ಸೈನಿಕನಂತೆ ಮುಂದೆ ನಡೆಯುವುದಾಗಿ ತಿಳಿಸಿದರು.

ಸಹಗಮನ

ರಾಜಾಸ್ಥಾನದ ಕೋಟಾ ಜಿಲ್ಲಾ ನ್ಯಾಯಾಲಯದ ವಕೀಲರಾಗಿದ್ದ ೪೦ ವರ್ಷದ ಮಂಗೀಲಾಲ್ ಎಂಬುವರ ಪತ್ನಿ ೩೩ ವರ್ಷದ ಒನಾಸಿಬಾಯಿಯೆಂಬುವರು ಗ್ವಾಲಿಯರಿನಲ್ಲಿ ತಮ್ಮ ಪತಿಯೊಡನೆ ಸಹಗಮನವನ್ನು ಮಾಡಿದರೆಂಬ ಸುದ್ದಿಯು ಬಂದಿದೆ. ಮಂಗೀಲಾಲ್‌ಗೆ ಈಕೆಯು ತೃತೀಯ ಪತ್ನಿಯೆಂದೂ ಈಕೆಗೆ ೪ ವರ್ಷದ ಮಗನಿರುವನೆಂದೂ ಹೇಳಲಾಗಿದೆ. ಸಹಗಮನವನ್ನು ಮಾಡುವಾಗ ಪತಿಯು ತೀರಿಹೋದನೆಯೇ ಆಕೆಯನ್ನು ನೋಡಲು ಸಹಸ್ರಾರು ಜನರು ಸೇರಿದ್ದರು. ಸಹಗಮನ ಮಾಡಬೇಡವೆಂದು ಎಷ್ಟು ಹೇಳಿದರೂ ಆಕೆಯು ಕೇಳಲಿಲ್ಲ.

ಸಹಗಮನ ಮಾಡಲು ಚಿತೆಯನ್ನು ಆಕೆಯು ಏರಿದೊಡನೆಯೇ ತಾನಾಗಿಯೇ ಚಿತೆಗೆ ಬೆಂಕಿ ಹತ್ತಿಕೊಂಡಿತೆಂದು ಹೇಳಲಾಗಿದೆ.

ಇಂಜನಿಯರುಗಳ ವರ್ಗ

ಬೆಂಗಳೂರು ಏ. ೧೮

ಮೈಸೂರು ಬಿಲ್ಡಿಂಗ್ ಡಿವಿಜನ್ನಿನ ಎಗ್ಸಿಕ್ಯುಟಿವ್ ಇಂಜನೀಯರಾದ ಶ್ರೀ ಎಂ. ವೇದವ್ಯಾಸಾಚಾರ್‌ರನ್ನು ಮಳವಳ್ಳಿ ಡಿವಿಜನ್ನಿಗೆ ವರ್ಗಾಯಿಸಿ ಅವರ ಜಾಗಕ್ಕೆ ರಜದ ಮೇಲಿರುವ ಶ್ರೀ ಎ. ವಿ. ವಿಜಯ ರಾಮರ್‌ರವರನ್ನು ವರ್ಗಮಾಡಲಾಗಿದೆ.

ರೇಡಿಯೋ ಕಾರ್ಯಕ್ರಮ

ಇಂದು ಸಂಜೆ ೮-೧೫ ಗಂಟೆಗೆ ಶ್ರೀ ಮಹಾರಾಜಪುರಂ ವಿಶ್ವನಾಥ ಅಯ್ಯರ್‌ವರು ಮೈಸೂರು ಆಲ್-ಇಂಡಿಯಾ ರೇಡಿಯೋ ಕೇಂದ್ರದಲ್ಲಿ ಹಾಡುವರು.

ಅಮೆರಿಕಾ ಆಹಾರ

ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಸಹಾಯ ಮಾಡುವ ವಿಷಯದಲ್ಲಿ, ೧೦ ಲಕ್ಷ ಟನ್ ಆಹಾರವನ್ನು ಕೂಡಲೇ ದಾನರೂಪದಲ್ಲಿ ಕೊಡಬೇಕೆಂದು ಅಧ್ಯಕ್ಷ ಟ್ರೂಮನ್ನರ ಸಲಹೆಯನ್ನು ಅಮೆರಿಕಾ ಪ್ರತಿನಿಧಿ ನಿಯಮಾವಳಿ ಸಮಿತಿಯು ಚರ್ಚೆ ನಡೆಸಿ, ಸಾಲದ ರೂಪದಲ್ಲಿ ಕೊಡಬಹುದು, ಅದಕ್ಕೆ ತಕ್ಕಂತೆ ಕರಡು ಮಸೂದೆಯನ್ನು ತಿದ್ದುಪಡಿ ಮಾಡಬೇಕೆಂದು ವಿದೇಶಾಂಗ ವ್ಯವಹಾರಸಮಿತಿಗೆ ಸಲಹೆಕೊಟ್ಟಿರುವುದಾಗಿ ವರದಿಯಾಗಿದೆ. ಕರಡು ತಿದ್ದುಪಡಿಯು ಸೋಮವಾರದ ವೇಳೆಗೆ ಸಿದ್ಧವಾಗಬಹುದು.

ಸೌದೆ ರೂ. ಗೆ ೩|| ಮಣ

ಮೈಸೂರು ಏ. ೧೯

ಸೌದೇ ಮಾಲೀಕರ ತೊಂದರೆಗಳನ್ನು ಪರಿಶೀಲಿಸಿ ಒಣದ ಸೌದೆಯನ್ನು ರೂ. ಗೆ ೩ ಮಣ ಬಿಕರಿಯಾಗುತ್ತಿದ್ದದನ್ನು ೩|| ಮಣ ಮಾರುವಂತೆ ನಿರ್ಧರಿಸಿ ಪೌರಸಭೆಯು ನಿನ್ನೆ ನಡೆದ ವಿಶೇಷಾಧಿವೇಶನದಲ್ಲಿ ನಿರ್ಣಯಮಾಡಿದೆ.

ಭಾರತಕ್ಕೆ ಬರ್ಮಾ ಅಕ್ಕಿ

ಬರ್ಮಾವು ಭಾರತಕ್ಕೆ ಈಗ ಕೊಡಲು ಒಪ್ಪಿರುವ ೧ ಲಕ್ಷ ೭೦ ಸಾವಿರ ಟನ್ ಅಕ್ಕಿಯ ಜೊತೆಗೆ ಇನ್ನೂ ೧ ಲಕ್ಷ ೭೦ ಸಾವಿರ ಟನ್ ಅಕ್ಕಿಯನ್ನು ಕೊಡಲು ಸಿದ್ಧವಿದೆಯೆಂದು ತಿಳಿಯಬರುತ್ತದೆ.

ಪಾನನಿರೋಧ

ಬೆಂಗಳೂರು ಏ. ೧೯

೧೯೫೧ನೇ ಜುಲೈ ಒಂದರಿಂದ ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರು ತಾ|| ಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಲಾಗುವುದೆಂದು ಸರ್ಕಾರವು ನಿರ್ಧರಿಸಿದೆ.

ರಾಜ್ಯಾಂಗಕ್ಕೆ ತಿದ್ದುಪಡಿ

ಬೆಂಗಳೂರು ಏ. ೧೯

ಬಿ ಸಂಸ್ಥಾನಗಳ ಮೇಲೆ ಕೇಂದ್ರದ ಹತ್ತು ವರ್ಷಕಾಲ ಮೇಲ್ವಿಚಾರಣೆ ಮತ್ತು ಹತೋಟಿಯಿಟ್ಟುಕೊಳ್ಳಲು ಸಂಬಂಧಿಸಿದ ರಾಜ್ಯಾಂಗದ ೩೭೧ನೇ ಪ್ರಕರಣದ ವ್ಯಾಪ್ತಿಗೆ ಮುಂದುವರಿದ ಮೈಸೂರು ರಾಜ್ಯವನ್ನು ಒಳಪಡಿಸದೆ ವಿನಾಯಿತಿಕೊಡುವ ಅವಕಾಶವನ್ನು ಕಲ್ಪಿಸುವಂತೆ ರಾಜ್ಯಾಂಗಕ್ಕೆ ಮೈಸೂರು ಸರ್ಕಾರವು ತಿದ್ದುಪಡಿಯನ್ನು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆಯೆಂದು ತಿಳಿಯಬರುತ್ತದೆ.

ಚಲನಚಿತ್ರೋದ್ಯಮಿಗಳ ನಿಯೋಗ

ಮೈಸೂರು ಸರ್ಕಾರವು ವಿಧಿಸಬೇಕೆಂದು ಸಂಕಲ್ಪಿಸಿರುವ ಥಿಯೇಟರುಗಳ ಆಸನಗಳ ಮೇಲಿನ ತೆರಿಗೆಯಿಂದ ಈ ಉದ್ಯಮದಲ್ಲಿರುವವರಿಗೆ ಒದಗುವ ತೊಂದರೆಗಳನ್ನು ವಿವರಿಸಿ ಹೇಳುವ ಸಲುವಾಗಿ ಕೈಗಾರಿಕಾ ಮತ್ತು ಅರ್ಥ ಸಚಿವರ ಬಳಿ ಒಂದು ನಿಯೋಗವು ಹೋಗುವುದು.

ಮಿ|| ಬೆವಿನ್‌ರವರ ಶವ ಸಂಸ್ಕಾರ

ಕಳೆದ ಶನಿವಾರ ನಿಧನರಾದ ಬ್ರಿಟನ್ನಿನ ಮಾಜಿ ವಿದೇಶಾಂಗ ಮಂತ್ರಿ ಮಿ|| ಅರ್ನೆಸ್ಟ್ ಬೆವಿನ್‌ರ ಶವ ಸಂಸ್ಕಾರವು ಅಂತರ ರಾಷ್ಟ್ರ ರಾಜಕಾರಣ ಪಟುಗಳ, ರಾಜಕೀಯ ಧುರೀಣರ, ಟ್ರೇಡ್ ಮತ್ತು ಯೂನಿಯನ್ ನಾಯಕರುಗಳ ಮತ್ತು ಇತರ ಪ್ರಮುಖರ ಸಮ್ಮುಖದಲ್ಲಿ ಬುಧವಾರ ನಡೆಯಿತು.

ನಗರಾಭಿವೃದ್ಧಿ ಸಮಿತಿಗೆ ಚುನಾವಣೆ

ಮೈಸೂರು ಏ. ೧೯

ಮೈಸೂರು ಪೌರಸಭೆಯ ವಿಶೇಷಾಧಿವೇಶನವು ಇಂದು ಶ್ರೀ ಟಿ. ನರಸಿಂಹಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಸ್. ಲಿಂಗಣ್ಣ ಮತ್ತು ಪಿ. ಸೀತಾರಾಮಯ್ಯನವರು ಪೌರಸಭೆಯ ಪರವಾಗಿ ನಗರಾಭಿವೃದ್ಧಿ ಸಮಿತಿಯಲ್ಲಿರಲು ಚುನಾಯಿಸಲ್ಪಟ್ಟರು. ಶ್ರೀ ಕೃಷ್ಣಮೂರ್ತಿರಾಯರು ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಎಸ್. ಲಿಂಗಣ್ಣನವರ ಹೆಸರುಗಳನ್ನು ಸೂಚಿಸಿದರು.

ಡಾ|| ಬಿ. ಜಿ. ದಾಸ್‌ರವರು ಶ್ರೀಗಳಾದ ಎಸ್. ಲಿಂಗಣ್ಣ ಮತ್ತು ಬಿ. ಸುಬ್ಬಣ್ಣನವರ ಹೆಸರನ್ನು ಸೂಚಿಸಿದರು. ಓಟುಪಡೆಯಲಾಗಿ ಶ್ರೀ ಎಸ್. ಲಿಂಗಣ್ಣನವರಿಗೆ ೧೭, ಶ್ರೀ ಪಿ ಸೀತಾರಾಮಯ್ಯನವರಿಗೆ ೧೯ ಓಟುಗಳು ಬಂದು ಚುನಾಯಿತರಾದರು. ಶ್ರೀ ಸುಬ್ಬಣ್ಣನವರಿಗೆ ೨ ಓಟುಗಳು ಬಂದುವು.

ಈ ಸಂದರ್ಭದಲ್ಲಿ ಜನಾಬ್ ಅಹಮದ್‌ಖಾನ್, ಶ್ರೀ ಜಿ. ಬಿ ಯೂಸ್‌ರವರು ನಗರಾಭಿವೃದ್ಧಿ ಸಮಿತಿಯಲ್ಲಿದ್ದು ಸೇವೆಗೈಯಲು ಪ್ರತಿವರ್ಷವೂ ಹಳಬರನ್ನೇ ಚುನಾಯಿಸುವ ಬದಲು ಹೊಸಬರಿಗೆ ಅವಕಾಶ ಕಲ್ಪಿಸುವುದು ಉತ್ತಮವೆಂದು ಹೇಳಿದರು. ತತ್ವಶಃ ಇದು ಉತ್ತಮವಾದರೂ ಈಗಿನ ಪರಿಸ್ಥಿತಿಯಲ್ಲಿ ನಗರದಲ್ಲಿರುವ ಜನರ ಹಿತಾಶಯವನ್ನು ಕಾಯಲು ಅನುಭವಸ್ಥರಿರುವುದು ಸೂಕ್ತವೆಂದು ಶ್ರೀಗಳಾದ ಚೌಡಯ್ಯ, ಲಿಂಗಣ್ಣ, ರಾಜಯ್ಯ ಮುಂತಾದವರು ಅಭಿಪ್ರಾಯಪಟ್ಟರು.

ಶ್ರೀ ರಾಜಯ್ಯನವರು ಮಾತನಾಡುವಾಗ ನಗರಾಭಿವೃದ್ಧಿ ಸಮಿತಿಯು ಈಗಿನ ಕಾರ್ಯಕಲಾಪಗಳಿಂದ ಜನರಿಗೆ ಸ್ವಲ್ಪವೂ ಅನುಕೂಲವಾಗದೆ ಅನ್ಯಾಯವೇ ಹೆಚ್ಚಾಗುತ್ತಲಿದೆ. ಅದರಲ್ಲೂ ಹರಿಜನರಿಗೆ ಏನೂ ಉಪಕಾರವಾಗಿಲ್ಲವೆಂದೂ ಟೀಕಿಸಿದರು. ಒಂದು ಸಂಸ್ಥೆಯ ಸದಸ್ಯರು ಮತ್ತೊಂದು ಸಂಸ್ಥೆಯನ್ನು ಈರೀತಿ ಟೀಕೆ ಮಾಡಬಾರದೆಂದು ಅಧ್ಯಕ್ಷರು ಸೂಚಿಸಿದರು.

ರಜಾ

ಉಪಯೋಗಿಸಿಕೊಳ್ಳುವ ದಿನದಿಂದ ಒಂದು ತಿಂಗಳು ರಜಾವನ್ನು ವ್ಯವಸಾಯ ಮುಖ್ಯಾಧಿಕಾರಿ ಶ್ರೀ ಕೆ. ಹೆಚ್. ಶ್ರೀನಿವಾಸಚಾರವರಿಗೆ ಮಂಜೂರಾಗಿದೆ.

ಅಧಿಕ ಆಹಾರ ಕಮಿಷನರಾದ ಶ್ರೀ ಎಂ. ಕೆ. ಅಪ್ಪಾಜಪ್ಪನವರು ಈ ಕಾಲದಲ್ಲಿ ತಮ್ಮ ಕೆಲಸದ ಜೊತೆಗೆ ವ್ಯವಸಾಯ ಇಲಾಖಾ ಮುಖ್ಯಾಧಿಕಾರಿಗಳ ಕೆಲಸವನ್ನು ನೋಡಿಕೊಳ್ಳುವರು.

ಭಾರತ ಕಲ್ಲಿದ್ದಲಿಗೆ ಗಿರಾಕಿ

ಭಾರತದಲ್ಲಿ ದೊರೆಯುವ ಕಲ್ಲಿದ್ದಲನ್ನು ಬ್ರಿಟನ್, ಆಸ್ಟ್ರೇಲಿಯಾ ರಾಷ್ಟ್ರಗಳು ಕೇಳಿರುವುದಲ್ಲದೆ, ಬರ್ಮಾ, ಸಿಂಹಳ, ಹಾಂಕಾಂಗ್, ಇಟಲಿ, ನ್ಯೂಜಿಲೆಂಡ್, ಜಪಾನ್ ಡೆನ್ಮಾರ್ಕ್ ಮುಂತಾದ ರಾಜ್ಯಗಳೆಲ್ಲವೂ ಕೊಳ್ಳಲು ಬಂದಿವೆ. ಈಗಾಗಲೇ ಪಾಕೀಸ್ತಾನಕ್ಕೆ ೧೭ ಲಕ್ಷ ರೂ. ಬೆಲೆ ಬಾಳುವ ೭೩ ಸಾವಿರ ಟನ್ ಕಲ್ಲಿದ್ದಲನ್ನು ಸರಬರಾಯಿ ಮಾಡಲಾಗಿದೆ.

ಉಪವಾಸ

ಮಹಾತ್ಮ ಗಾಂಧಿಯವರ ಪುತ್ರ ಶ್ರೀ ಮಣಿಲಾಲ್ ಗಾಂಧಿಯವರು, ದಕ್ಷಿಣ ಆಫ್ರಿಕಾದ ವರ್ಣಭೇದನೀತಿಯನ್ನು ವಿರೋಧಿಸಿ, ಪ್ರಾರಂಭಿಸಿದ ಒಂದು ಪಕ್ಷದ ಉಪವಾಸವು ಇಂದು ಮುಕ್ತಾಯವಾಯಿತು. ನಿಶ್ಶಕ್ತರಾಗಿದ್ದರೂ ಅವರು ಹರ್ಷಚಿತ್ತರಾಗಿದ್ದಾರೆಂದು ವರದಿಯಾಗಿದೆ. ಅವರ ಮುಂದಿನ ಕಾರ್ಯಕ್ರಮವೇನೆಂಬುದು ಇನ್ನೂ ತಿಳಿದಿಲ್ಲ.

೫೧ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ಡೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೨೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೭—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವೂ ಎರಡು ಊಟ, ರೈಲ್ವೆ ಛಾರ್ಜು ಸೇರಿ ೨೯೫|- ರೂಗಳು.

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ

ಟೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

❋

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮೈಸೂರು

ಗುಜರಾತ್ ವಿದ್ಯಾಪೀಠದ ಸ್ಥಾನಪತಿ

ಗುಜರಾತಿನ ವಿದ್ಯಾಪೀಠದ ಸ್ಥಾನಪತಿಗಳಾಗಲು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಒಪ್ಪಿರುವರು. ಈ ವಿದ್ಯಾಪೀಠದ ಪ್ರಥಮ ಸ್ಥಾನಪತಿಗಳು ಮಹಾತ್ಮ ಗಾಂಧಿಯವರು, ಅನಂತರ ಸರ್ದಾರ್ ಪಟೇಲರು ಆಗಿದ್ದರು.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

—:: ಪ್ರಭಾ ::—

೨೦—೪—೫೧ರಿಂದ

ಅಮೋಘ ೨ನೇ ವಾರ

ಹಲ್ ಚಲ್

ಪಾತ್ರ— ನರ್ಗೀಸ್, ದಿಲೀಪ್ ಕುಮಾರ್ ಜೀವನ್, ಸಿತಾರ, ಯಾಕೂಬ್.

ರಣಜಿತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

ಪರದೇಸ್

ಪಾತ್ರ— ರೆಹಮಾನ್, ಕರನ್‌ದಿವಾನ್ ಮಧುಬಾಲಾ ಶಾಕುಂತಲಾ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್. ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೪—೧೯೫೧ನೇ ಶನಿವಾರ [ಸಂಚಿಕೆ ೧೮೭

ಪರೀಕ್ಷಾ ತ್ಯಾಗ

ಅಲಹಾಬಾದ್ ವಿಶ್ವವಿದ್ಯಾನಿಲಯದ ಬಿ. ಎ. ಪರೀಕ್ಷೆಗೆ ಕುಳಿತಿದ್ದ ೬೦೦ ವಿದ್ಯಾರ್ಥಿಗಳು ಪರೀಕ್ಷಾ ಪತ್ರವು ಪಾಠಪ್ರವಚನಗಳ ಹೊರಗಿನದಾಗಿ ಬಹಳ ಕಠಿಣವಾಗಿತ್ತೆಂದು ಪರೀಕ್ಷೆಯಲ್ಲಿ ಬರೆಯುವುದನ್ನು ಬಿಟ್ಟು ಹೊರಗೆ ಬಂದು ಪರೀಕ್ಷಾತ್ಯಾಗ ಮಾಡಿರುವರು.

ರಜಾ

ಲೇಬರ್ ಕಮೀಷನರ್ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರಿಗೆ ಉಪಯೋಗಿಸಿಕೊಳ್ಳುವ ದಿನದಿಂದ ಒಂದು ತಿಂಗಳು ರಜಾ ಮಂಜೂರಾಗಿದೆ.

ಅವರ ಹೆಡ್ ಕ್ವಾರ್ಟರ್ ಅಸಿಸ್ಟೆಂಟರು ತಮ್ಮ ಕೆಲಸದ ಜೊತೆಗೆ ಈ ಕೆಲಸವನ್ನು ನೋಡಿಕೊಳ್ಳುವರು.

ಕೇಂದ್ರ ಮಂತ್ರಿಮಂಡಲದಲ್ಲಿ ಬದಲಾವಣೆಯೆ?

ಮುಂದಿನ ತಿಂಗಳ ಮಧ್ಯ ಭಾಗದಲ್ಲಿ ಪ್ರಧಾನಿ ನೆಹರೂರವರು ತಮ್ಮ ಮಂತ್ರಿಮಂಡಲ ಪುನರ್ರಚಿಸುವುದಲ್ಲದೆ ವಿದೇಶೀ ರಾಯಭಾರಿಗಳಲ್ಲೂ ಬದಲಾವಣೆ ಮಾಡುವರೆಂದು ಹೇಳಲಾಗಿದೆ.

ಈಗ ಪ್ಲಾನಿಂಗ್ ಕಮೀಷನ್ನಿನಲ್ಲಿರುವ ಶ್ರೀಗಳಾದ ಜಿ. ಎಲ್. ಮೇಥಾ, ಗುಲ್ಜಾರಿಲಾಲ್‌ನಂದಾ ಮತ್ತು ಆರ್. ಕೆ. ಪಾಟೀಲರು ಸಚಿವರಾಗುವರೆಂದೂ ಶ್ರೀ ಮೆಹ್ತಾಬ್ ಇರುವುದು ಇನ್ನೂ ಅನುಮಾನವೆಂದೂ ಹೇಳಲಾಗಿದೆ. ಶ್ರೀ ಕೆ. ಎಂ. ಮುನ್ಷಿಯವರಿದ್ದರೂ ಅವರಿಗಿರುವ ಆಹಾರ ಶಾಖೆಯನ್ನು ಶ್ರೀ ಆರ್. ಕೆ. ಪಾಟೀಲರಿಗೆ ಕೊಡಲಾಗುವುದೆಂದು ತೀರ್ಮಾನಿಸಿದಂತಿದೆ.

ವಿದೇಶ ರಾಯಭಾರಿಗಳಲ್ಲಿ ಕೆಲವು ಅಧಿಕಾರಿ ವರ್ಗದ ಸಿಬ್ಬಂದಿಗಳ ವರ್ತನೆ ವಿಷಯವಾಗಿ ಈಗಾಗಲೇ ಅನೇಕರು ಖಂಡಿಸಿದ್ದಾರೆ. ಅವರಲ್ಲಿ ಕೆಲವು ಬದಲಾವಣೆಗಳಾಗುವ ಸೂಚನೆಗಳಿವೆ.

೧೨ ಲಕ್ಷ ರೂ. ದರೋಡೆ

ಬೊಂಬಾಯಿ ಲಾಯಿಡ್ಸ್ ಬ್ಯಾಂಕಿನಿಂದ ರಿಸರ್ವ್ ಬ್ಯಾಂಕಿಗೆ ಸಾಗಿಸುತ್ತಲಿದ್ದ ೧೨ ಲಕ್ಷ ರೂ. ಗಳನ್ನು ೫ ಜನ ಬಂದೂಕಧಾರಿಗಳು ಟ್ಯಾಕ್ಸಿಯ ಡ್ರೈವರನ್ನು ಗುಂಡುಹೊಡೆದು ಕೊಂದು, ಬ್ಯಾಂಕಿನ ನೌಕರರಿಗೆ ಗಾಯಪಡಿಸಿ ಅಪಹರಿಸಿ ಪರಾರಿಯಾದರು, ಸ್ವಲ್ಪಕಾಲಾನಂತರ ಟ್ಯಾಕ್ಸಿಯು ಬ್ಯಾಂಕಿಗೆ ಅರ್ಧ ಮೈಲಿ ದೂರದಲ್ಲಿ ಒಂದು ಸಿನಿಮಾ ಮಂದಿರದ ಬಳಿ ಪತ್ತೆಯಾಯಿತು. ಇದನ್ನು ಪೋಲೀಸಿನವರು ಪತ್ತೆಕ್ರಮ ನಡೆಸುತ್ತಲಿರುವರು.

ಎಲ್ಲರ ಸಲಹೆ ಮೇಲೆಯೇ ನಿವೃತ್ತಿ

ಪ್ರಮುಖ ಸಿವಿಲ್ ಮತ್ತು ಮಿಲಿಟರಿ ಸಲಹೆಗಾರರು ಮತ್ತು ಚೀಫ್-ಆಫ್ ಸ್ಟಾಫ್ ಮಂಡಲದ ಒಮ್ಮತದ ಶಿಫಾರಸಿನ ಮೇಲೆ ಜ|| ಮೆಕಾರ್ಥರನ್ನು ನಿವೃತ್ತಿಗೊಳಿಸಲಾಯಿತೆಂದು ಅಮೆರಿಕಾ ರಕ್ಷಣಾ ಇಲಾಖೆ ಪ್ರಕಟಿಸಿದೆ.

ಆರ್ಥಿಕಸಚಿವರು ದೆಹಲಿಯಲ್ಲಿ

ಬೆಂಗಳೂರು ಏ. ೨೦

ಆರ್ಥಿಕಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ೧೮ನೇ ತಾ|| ದೆಹಲಿಗೆ ಪ್ರಯಾಣಮಾಡಿ, ಜನರಲ್ ಕಾರಿಯಪ್ಪನವರ ಅತಿಥಿಗಳಾಗಿದ್ದುಕೊಂಡು, ಆಚಾರ್ಯ ಕೃಪಲಾನಿಯವರು, ಪಾರ್ಲಿಮೆಂಟಿನಲ್ಲಿರುವ ಮೈಸೂರು ಸದಸ್ಯರು, ರಾಷ್ಟ್ರಾಧ್ಯಕ್ಷರು, ಕೈಗಾರಿಕಾ ಮತ್ತು ಆರ್ಥಿಕ ಸಚಿವರುಗಳು, ಶ್ರೀ ವಿ. ಪಿ. ಮೆನನ್‌ರನ್ನು ಭೇಟಿ ಮಾಡಿ ಮಾತುಕಥೆ ನಡೆಸಿದರು. ನಾಳೆ ಅವರು ಬೆಂಗಳೂರಿಗೆ ಹಿಂತಿರುಗುವರು.

ಶ್ರೀ ಮಣಿಲಾಲ್ ಗಾಂಧಿ

ದಕ್ಷಿಣ-ಆಫ್ರಿಕಾ ವರ್ಣಭೇದನೀತಿಯನ್ನು ವಿರೋಧಿಸಿ ಉಪವಾಸವನ್ನು ಕೈಗೊಂಡಿದ್ದ ಶ್ರೀ ಮಣಿಲಾಲ್ ಗಾಂಧಿಯವರು ತಮ್ಮ ಉಪವಾಸವನ್ನು ಹಣ್ಣಿನ ರಸವನ್ನು ಸೇವಿಸಿ ಮುಕ್ತಾಯಗೊಳಿಸಿದರು. ಅವರು ೨೦ ಪೌಂಡು ತೂಕ ಕಡಮೆಯಾಗಿದ್ದಾರೆ. ಹರ್ಷಚಿತ್ತರಾಗಿ ಉತ್ತಮ ಆರೋಗ್ಯವನ್ನು ಹೊಂದಿರುವರು.

ಅಭೂತ ಸ್ವಾಗತ

ಜನರಲ್ ಮೆಕಾರ್ಥರ್‌ರವರು ನಿನ್ನೆ ನ್ಯೂಯಾರ್ಕ್ ನಗರಕ್ಕೆ ಹೋದಾಗ ೫೦ ಲಕ್ಷಕ್ಕಿಂತ ಹೆಚ್ಚಿಗೆ ಜನರು ಅವರಿಗೆ ಅಭೂತ ಸ್ವಾಗತವಿತ್ತರು. ಸಾಂಪ್ರದಾಯಿಕ ರೀತಿಯಾಗಿ ಅವರಿಗೆ ಅಲ್ಲಿಯ ಮೇಯರ್ ಸ್ವಾಗತಿಸಿದರು. ಈ ಪೌರಸನ್ಮಾನಕ್ಕೆ ವಿಶ್ವಸಂಸ್ಥೆಯ ಎಲ್ಲಾ ಸದಸ್ಯರಿಗೂ ಆಹ್ವಾನವಿತ್ತು. ಸಂತೋಷ ಕೂಟವಾದ್ದರಿಂದ ರಷ್ಯಾ ಪ್ರತಿನಿಧಿಯನ್ನು ಮಾತ್ರ ಆಹ್ವಾನಿಸಿರಲಿಲ್ಲ.

ದೆಹಲಿಗೆ

ನೇಪಾಳದ ಮುಖ್ಯಮಂತ್ರಿ ರಾಣಾ ಮೋಹನಶಂಷೇರ್‌ಜಂಗ್‌ರವರು ಸದ್ಯದಲ್ಲೇ ಭಾರತಕ್ಕೆ ಆಗಮಿಸಿ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ನೇಪಾಳದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲಿರುವರು.

ರಾಜರುಕೊಟ್ಟ ಬಹುಮಾನವನ್ನೆಲ್ಲಾ ಹಿಂದಕ್ಕೆ ಕೊಡಿ

ಕೇಂದ್ರದೊಡನೆ ಐಕ್ಯವಾಗಿರುವ ಸಂಸ್ಥಾನಗಳ ಹಿಂದಿನ ಮಹಾರಾಜರುಗಳು ತಮ್ಮ ನೌಕರರಿಗೆ ೫೦೦ ರೂ. ಗಳಿಗಿಂತ ಹೆಚ್ಚಿಗೆ ಕೊಟ್ಟಿರುವ ಬಹುಮಾನವನ್ನೆಲ್ಲಾ ಸರ್ಕಾರಕ್ಕೆ ಹಿಂದಕ್ಕೆ ಕೊಡಿ, ದಾನವಾಗಿ ಕೊಟ್ಟಿರುವ ಜಮೀನು ಮತ್ತು ಕಟ್ಟಡಗಳ ಬೆಲೆಯನ್ನು ಈಗ ಕೊಡಬೇಕೆಂದು ಸೌರಾಷ್ಟ್ರ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿದೆ. ದಾನವಾಗಿ ಕೊಟ್ಟ ಮೋಟಾರು ವಾಹನಗಳಿಗೆ ಇದು ಅನ್ವಯಿಸುವುದಿಲ್ಲ.

ರಾಜ್ಯದ ಆಸ್ತಿಯನ್ನು ರಾಜರು ದುಂದು ವಿನಿಯೋಗಮಾಡಿದರೆಂದು ಪ್ರಜೆಗಳು ಸರ್ಕಾರದ ಗಮನಕ್ಕೆ ತಂದಿರುವುದರಿಂದ ಈ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಗಿರಾಕಿ ಸಂಪಾದನೆ

ಮದರಾಸಿನ ಕೈಮಗ್ಗದ ಬಟ್ಟೆಗಳಿಗೆ ಗಿರಾಕಿಗಳನ್ನು ಸಂಪಾದನೆ ಮಾಡುವ ಉದ್ದೇಶ್ಯದಿಂದ ಮದ್ರಾಸು ಸರ್ಕಾರವು ಒಂದು ನಿಯೋಗವನ್ನು ಇಂಡೋನೇಷಿಯಾ ಮತ್ತು ದೂರ ಪ್ರಾಚ್ಯದ ಇತರ ರಾಷ್ಟ್ರಗಳಿಗೆ ಕಳುಹಿಸಲಿದೆ.

ಆಫ್ರಿಕಾ, ಏಡನ್, ಸಿಂಹಳ, ಬರ್ಮಾ ಮುಂತಾದ ರಾಷ್ಟ್ರಗಳು ಈ ಬಟ್ಟೆಯ ಈಗಿನ ಮುಖ್ಯ ಗಿರಾಕಿಗಳು.

೫೦ ಮೈಲಿಗೆ ೮ ವರ್ಷ ಪ್ರಯಾಣ

ಪಿರಿಯಾಪಟ್ಟಣದಿಂದ ೧೫-೧೧-೪೩ರಲ್ಲಿ ಶ್ರೀ ಜಿ. ನರಸಿಂಹಯ್ಯ ಎಂಬುವವರು, ಅಲ್ಲಿಂದ ೫೦ ಮೈಲಿ ದೂರದಲ್ಲಿರುವ ಹೊಸಹಳ್ಳಿ ಎಂಬಾ ಗ್ರಾಮದಲ್ಲಿರುವ ಶ್ರೀ ನರಸಿಂಹ ಪಂಡಿತ ಎಂಬುವರಿಗೆ ಹಾಕಿದ ಕಾರ್ಡು ೧೬—೪—೫೧ ರಲ್ಲಿ ತಲುಪಿದೆ.

ಬೈಸಿಕಲ್ ತಯಾರಿ

ಅಮೆರಿಕಾವು 1950ರಲ್ಲಿ 1,903,000 ಬೈಸಿಕಲ್ಲುಗಳನ್ನು ತಯಾರಿಸಿದೆ.

ಜನರು ಕಷ್ಟಪಟ್ಟು ದುಡಿಯಬೇಕು

ಬೆಂಗಳೂರು ಏ. ೨೦

ಸ್ವಾತಂತ್ರ್ಯ ಗಳಿಸಿದ ಇತರ ದೇಶಗಳಂತೆ ನಮ್ಮ ಜನತೆಯೂ ಪ್ರಾರಂಭದಲ್ಲಿ ಕಷ್ಟಪಟ್ಟು ದುಡಿಯದಿದ್ದಲ್ಲಿ ಸ್ವರಾಜ್ಯ ಸಾಧನೆಯ ಪೂರ್ಣ ಫಲ ದೊರೆಯುವುದಿಲ್ಲ.

ಬಾಹ್ಯ ಜೀವನದ ಸುಖಗಳಿಗೆ ಗಮನ ಕೊಡುವಾಗ ನೀತಿ ಮರೆಯಬಾರದು. ಬರೀ ಹಣ ಸಂಪಾದನೆಯೇ ಮುಖ್ಯ ಗುರಿಯಾಗಿಟ್ಟುಕೊಂಡಿರುವವರಿಗೆ ಎಂದಿಗೂ ನೆಮ್ಮದಿಯಿಲ್ಲ.

ಜನತೆಯ ಏಳಿಗೆಯ ಸಾಧನೆಯ ಗುರಿಯಿಲ್ಲದವರು ಅಧಿಕಾರ ವಹಿಸಿಕೊಳ್ಳಬಾರದು.

ಎಲ್ಲರೂ ಗಾಂಧಿಯ ಸಿದ್ಧಾಂತವನ್ನು ಅನುಸರಿಸಿ ಕೆಲಸ ಮಾಡಬೇಕು.

ಜನತೆಯ ನೀತಿ ಮಟ್ಟ ಹೆಚ್ಚಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಇಂದು ಸಂಜೆ ಸುಭಾಷ್ ನಗರದಲ್ಲಿ ಭಾಷಣಮಾಡುತ್ತಾ ಹೇಳಿದರು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ

ಬೆಂಗಳೂರು ಏ. ೨೦

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ ಇಂದು ಬೆಳಿಗ್ಗೆ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಎಂ. ಪಿ. ಸಿ. ಸಿ. ಮುಂದೆ ಬರಲಿರುವ ಖಾಸಗೀ ನಿರ್ಣಯಗಳನ್ನು ಪರಿಶೀಲಿಸಿತು.

ಈ ಸಾರಿಯ ಎಂ. ಪಿ. ಸಿ. ಸಿ. ಮುಂದೆ, ಚುನಾವಣೆಗಳ ಬಗ್ಗೆಯೂ, ರಾಜ್ಯಾಂಗದ ೩೭೧ನೇ ವಿಧಿಯ ಬಗ್ಗೆ ವಿನಾಯಿತಿ ಪಡೆಯುವ ಬಗ್ಗೆಯೂ ಅಧಿಕೃತ ನಿರ್ಣಯಗಳು ಬರುವುದೆಂದು ಗೊತ್ತಾಗಿದೆ. ಸಮಿತಿ ಮತ್ತೆ ೨೧ನೇ ತಾರೀಖು ಬೆಳಿಗ್ಗೆ ಸೇರುವುದು.

CITY IMPROVEMENT TRUST BOARD, MYSORE

Notification No B4. C 25/50-51 dated 20-4-51.

Applications are invited for the post of a Gollar in grade Rs 25-1-30 from Backward-Community candidates who have undergone the V Form course or have passed the Middle School Examination The candidates must be within 28 years of age The post is a permanent one governed by the rules under the Mysore Service Regulations. The selected candidate should furnish a cash security of Rs 200 - Intending candidates may apply in the prescribed form for recruitment to Government Service with particulars as to age, qualification etc., to the undersigned on or before 5-5 1951. The candidates must be prepared for an interview, at their own costs if called for.

(Sd) P Gopalakrishna Setty,
Chairman

ರಾಷ್ಟ್ರಾಧ್ಯಕ್ಷರಲ್ಲಿ ಅಪೀಲು

ಸ್ಥಾನಭ್ರಷ್ಟರಾದ ಬರೋಡಾ ಮಹಾರಾಜರು ರಾಷ್ಟ್ರಾಧ್ಯಕ್ಷರಲ್ಲಿ ಒಂದು ಮನವಿಯನ್ನು ಸಲ್ಲಿಸಿ ತಾವು ರಾಜ್ಯಾಂಗಕ್ಕೆ ವಿರೋಧವಾಗಿ ನಡೆಯಲಿಲ್ಲವೆಂದೂ ತಮ್ಮ ಮೇಲೆ ತೆಗೆದುಕೊಂಡಿರುವ ಕಾರ್ಯಕ್ರಮವನ್ನು ರದ್ದುಗೊಳಿಸಬೇಕೆಂದೂ ಕೇಳಿಕೊಂಡಿರುವರು

ರೈಲ್ವೇ ಕೋಚು ತಯಾರಿಕೆ

'ಬೆಂಗಳೂರಿನ ಹಿಂದೂಸ್ಥಾನ್ ಏರ್ ಕ್ರಾಫ್ಟಿನಲ್ಲಿ ಇದುವರೆಗಾಗಲೇ ೧೩೦ ರೈಲ್ವೇ ಕೋಚುಗಳನ್ನು ತಯಾರುಮಾಡಿದ್ದು ಇನ್ನೂ ೧೦೦ ಕೋಚುಗಳ ನಿರ್ಮಾಣ ನಡೆಯುತ್ತಿರುವುದಾದರೂ ಡಿಫೆನ್ಸ್ ಇಲಾಖೆಗೆ ಅಗತ್ಯವಾದ ಸೇವೆಯನ್ನು ಕಾರ್ಖಾನೆಯು ಸಲ್ಲಿಸಲು ಅನುಕೂಲಿಸುವಂತೆ ಅಲ್ಲಿ ಮುಂದೆ ರೈಲ್ವೇ ಕೋಚುಗಳ ತಯಾರಿಕೆ ನಿಲ್ಲಿಸಲಾಗುವುದು' ಎಂದು ಪಾರ್ಲಿಮೆಂಟಿನಲ್ಲಿ ಕೇಂದ್ರ ರೈಲ್ವೇ ಉಪಮಂತ್ರಿ ಶ್ರೀ ಕೆ. ಸಂತಾನಂ ತಿಳಿಸಿರುವರು.

ಜಲಿಯನ್ ವಾಲಾಬಾಗ್ ಮಸೂದೆ

೧೩-೪-೧೯೧೯ ರಲ್ಲಿ ಅಮೃತಸರದಲ್ಲಿ ಜಲಿಯನ್ ವಾಲಾಬಾಗಿನಲ್ಲಿ ನಡೆದ ಕೃತ್ಯದಲ್ಲಿ ಮಡಿದ ಜನರ ಸಂಬಂಧೀಕರಿಗೆ ಪರಿಹಾರವನ್ನು ಕೊಡಲು ಕಾಂಗ್ರೆಸ್ ಸಂಸ್ಥೆಯು ಸಂಗ್ರಹಿಸಿದ ನಿಧಿಯ ಟ್ರಸ್ಟನ್ನು ಕಾಯಂ ಮಾಡಲು ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಮಂಡಿಸಲಾಗಿದೆ ಚಂದಾ ಎತ್ತಿದ ೧೦ ಲಕ್ಷ ರೂಗಳ ಪೈಕಿ ಈಗ ಇನ್ನೂ ೩ ಲಕ್ಷ ರೂಪಾಯಿಗಳಿವೆ ಇದರ ಇಬ್ಬರು ಟ್ರಸ್ಟಿಗಳಲ್ಲಿ ಒಬ್ಬರು ಪಂಡಿತ ನೆಹರೂ ಇನ್ನೊಬ್ಬರು ದಿವಂಗತ ಸರ್ದಾರ್ ಪಟೇಲ್.

ಸಂಗೀತ

ಇಂದು ರಾತ್ರಿ ೮ ರಿಂದ ೯ ಗಂಟೆ ವರೆಗೆ ಮೈಸೂರಿನ ರೇಡಿಯೊ ಕೇಂದ್ರದಿಂದ ಶ್ರೀ ಚಂಬೈ ವೈದ್ಯನಾಥ ಭಾಗವತರ ಸಂಗೀತವನ್ನು ಪ್ರಸಾರ ಮಾಡಲಾಗುವುದು

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಆಹಾರವನ್ನು ಸರಬರಾಯಿ ಮಾಡುವ ವಿಚಾರದಲ್ಲಿ ಅಮೆರಿಕಾ ಉಭಯ ಕಾಂಗ್ರೆಸ್ ಸಮಿತಿಗಳು ಇನ್ನೂ ಒಮ್ಮತಕ್ಕೆ ಬಂದಿಲ್ಲ

ಪ್ರತಿನಿಧಿ ಸಭೆಯಲ್ಲಿ ೨೦ ಲಕ್ಷ ಟನ್ ಆಹಾರವನ್ನೆಲ್ಲಾ ಸಾಲದ ರೂಪದಲ್ಲಿ ಕೊಡಬೇಕೆಂದು ಅಭಿಪ್ರಾಯಪಟ್ಟಿದೆ. ಸನೇಟ್ ವಿದೇಶಾಂಗ ಸಮಿತಿಯು ೧೦ ಲಕ್ಷವನ್ನು ದಾನರೂಪವಾಗಿ ಉಳಿಕೆ ೧೦ ಲಕ್ಷವನ್ನು ಸಾಲವಾಗಿ ಕೊಡಬೇಕೆಂದು ದಾನವಾಗಿಕೊಟ್ಟ ೧೦ ಲಕ್ಷ ಟನ್ನಿನ ಆಹಾರವನ್ನು ಮಾರಿದ ಹಣವನ್ನು ಪ್ರತ್ಯೇಕ ನಿಧಿಯಾಗಿಟ್ಟು ಭಾರತದಲ್ಲಿ ವ್ಯವಸಾಯ, ಕೈಗಾರಿಕೆ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕೆಂದು ತೀರ್ಮಾನಿಸಿದೆ.

ಅಂತ್ಯವಾಗಿ ಕಾಂಗ್ರೆಸ್ ಸಭೆಯಲ್ಲಿ ಇದು ತೀರ್ಮಾನವಾಗಬೇಕಾಗಿದೆ

ಕಾಂಗ್ರೆಸ್ ನಾಯಕರ ಸಮ್ಮೇಳನ

ಮೇ ೧ ರಂದು, ಸಂಸ್ಥಾನದ ಮುಖ್ಯ ಮಂತ್ರಿಗಳ ಮತ್ತು ಪ್ರಮುಖ ಕಾಂಗ್ರೆಸ್ ನಾಯಕರ ಸಮ್ಮೇಳನವೊಂದನ್ನು ಪಂಡಿತ ನೆಹ್ರೂ ಕರೆದಿದ್ದಾರೆ. ದೇಶದ ಮುಂದಿರುವ ವಿವಿಧ ಸಮಸ್ಯೆಗಳ ಬಗ್ಗೆ ಅವರ ಯಥಾರ್ಥವಾದ ಅಭಿಪ್ರಾಯಗಳನ್ನು ತಿಳಿವುದೇ ಉದ್ದೇಶವೆಂದು ಗೊತ್ತಾಗಿದೆ.

ಸಮ್ಮೇಳನದಲ್ಲಿ ಕಾಂಗ್ರೆಸ್ ಸಂಸ್ಥೆಯ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯ ಚರ್ಚಿಸಲಾಗುವುದೆಂದು ಅಧಿಕೃತವಾಗಿ ತಿಳಿಸಲಾಗಿದೆ.

ಮುಂಬೈನ ಗೃಹ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ, ಬಿಹಾರಿನ ಆಹಾರ ಮಂತ್ರಿ ಶ್ರೀ ಅನುಗ್ರಹ ನಾರಾಯಣ ಸಿಹ್ನ ಇವರುಗಳಿಗೂ ಸಹ ಆಹ್ವಾನವೀಯಲಾಗಿದೆ.

ಸಂಸ್ಥಾನ ಕಾಂಗ್ರೆಸ್ ನಾಯಕರನ್ನು ಅಂತರಂಗಕ್ಕೆ ತೆಗದುಕೊಳ್ಳುವುದಾಗಿ ಪಂಡಿತ ನೆಹ್ರೂ ಸ್ಪಷ್ಟವಾಗಿ ತಿಳಿಸಿದ್ದಾರೆಂದು ವರದಿಯಾಗಿದೆ.

ಕಳೆದ ನಾಲ್ಕು ತಿಂಗಳಲ್ಲಿ ನಡೆದ ಘಟನಾವಳಿಗಳಿಂದಾಗಿ, ಮುಖ್ಯವಾಗಿ ಸರ್ದಾರ್ ಪಟೇಲರ ನಿಧನವಾದ ಮೇಲೆ ಕಾಂಗ್ರೆಸ್ ಸಂಸ್ಥೆ ಕಠಿಣ ತರವಾದ ಪರೀಕ್ಷೆಗೆ ಗುರಿಯಾಗಿದೆ.

ಪಂಡಿತ ನೆಹ್ರೂ ಅವರು ಕರೆದಿರುವ ಮುಖ್ಯ ಮಂತ್ರಿಗಳ ಸಮ್ಮೇಳನಕ್ಕೆ ಇದೊಂದು ಮುಖ್ಯ ಕಾರಣ.

ಇಂಜನ್ನುಗಳ ತಯಾರಿ

ಹೊಸದಾಗಿ ಕಲ್ಕತ್ತಾದಲ್ಲಿ ಸ್ಥಾಪಿತವಾದ ಲೋಕರಂಜನ ವರ್ಕ್‌ಷಾಪಿನಲ್ಲಿ ೭ ಬ್ರಾಡುಗೇಜು ರೈಲ್ವೆ ಇಂಜನ್ನುಗಳನ್ನು ತಯಾರಿಸಲಾಗಿದೆ. ಅವುಗಳನ್ನು ಬಿ. ಬಿ. ಸಿ. ಐ. ರೈಲ್ವೆಗೆ ಕೊಡಲಾಗುವುದು.

ಒಲಂಪಿಯಾ ಟಾಕೀಸ್

೧೯—೪—೫೧ ರಿಂದ ಪ್ರತಿದಿನ ೩ ಆಟಗಳು

ಸಂಗೀತ ಪ್ರೇಮಿಗಳಿಗೆ ಸುಸಮಯ (ಒಂದು ವಾರ ಮಾತ್ರ)

ನ್ಯೂ ಥಿಯೇಟರ್ಸ್‌ರವರ—

* ಸ್ಟ್ರೀಟ್ ಸಿಂಗರ್ *

(ಹೊಸ ಕಾಪಿ)

ಪಾತ್ರ— ಸೈಗಾಲ್, ಕನ್ನನ್‌ಬಾಲ.

ಬೆಳಗಿನ ಪ್ರದರ್ಶನ— ೨೦-೪-೫೧ ರಿಂದ ಮೂರು ದಿನಗಳು ಮಾತ್ರ

ಸುರಯ್ಯಾ, ಜೈರಾಜ್, ಮಧುಬಾಲ ಪಾತ್ರವಹಿಸಿರುವ

—:: ಸಿಂಗಾರ್ ::—

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವಹಿ ಎರಡು ಊಟ, ರೈಲ್ವೆ ಛಾರ್ಜು ಸೇರಿ **೨೯೫|-** ರೂಗಳು.

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

ಟೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರಣಜಿತ್

೨೦—೪—೫೧ ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ್ಲಾ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್.ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೪—೧೯೫೧ನೇ ಸೋಮವಾರ [ಸಂಚಿಕೆ ೧೮೮

RAGHULAL & Co.,
CHEMISTS
Sayyaji Rao Road,
MYSORE

RAGHULAL & Co., Bangalore
CHEMISTS
70, Arcot Srinivasa Char Street
BANGALORE—2

ಹಸಿದ ಪ್ರದರ್ಶನಕಾರರ ಮೇಲೆ ಗುಂಡು

ಶಾಂತಿ ಸ್ಥಾಪನೆಗಾಗಿ ಸೇನೆಗಳ ಸಹಾಯ

ಕಾನೂನು ಹಾಗೂ ವ್ಯವಸ್ಥೆ ಕಾಪಾಡುವುದರಲ್ಲಿ ಪೌರ ಅಧಿಕಾರಿಗಳಿಗೆ ನೆರವಾಗಲು ಕರೆಯಲಾದ ಸೇನೆಗಳು ನಿನ್ನೆ ಕೂಚ್'ಬಿಹಾರಿನ ರಸ್ತೆಗಳಲ್ಲಿ ಗಸ್ತು ತಿರುಗುತ್ತಿದ್ದುವು.

ಪರಿಸ್ಥಿತಿ ಪ್ರಕ್ಷುಬ್ಧಕರವಾಗಿದೆಯೆಂದು ಅಧಿಕೃತ ವಕ್ತಾರರು ನಿನ್ನೆ ವಿವರಿಸಿದರು.

ಜನರ ಗುಂಪೊಂದು ಪೋಲೀಸ್ ಜಿಲ್ಲಾ ಸೂಪರಿಂಟೆಂಡೆಂಟರ ಮನೆಯ ಮೇಲೆ ಧಾಳಿ ಮಾಡಿ ಅವರ ಹರೆಯದ ಪುತ್ರನಿಗೆ ಗಾಯ ಮಾಡಿತು.

ದಿನ್ಹಟದಲ್ಲಿ ಜನರ ಗುಂಪೊಂದು ಕಾಂಗ್ರೆಸ್ ಕಛೇರಿಯ ಮೇಲೆ ಧಾಳಿ ಮಾಡಿ ಅಲ್ಲಿನ ಮರ ಮುಟ್ಟುಗಳಿಗೆ, ರಿಕಾರ್ಡುಗಳಿಗೆ ಜಖಂ ಮಾಡಿತು. ಎರಡು ದಿನಗಳಿಂದ ಅಕ್ಕಿಗಾಗಿ ದೊಂಬಿಗಳೂ ನಗರದಲ್ಲಿ ನಡೆದಿವೆಯೆಂದು ವರದಿಯಾಗಿತ್ತು.

ಹಸಿದ ಪ್ರದರ್ಶಕರ ಮೇಲೆ ಮೊನ್ನೆ ಪೋಲೀಸರು ಗುಂಡು ಹಾರಿಸಿದಾಗ ಗಾಯಗೊಂಡ ಹದಿನಾರು ವಯಸ್ಸಿನ ಹುಡುಗಿಯೂ ನಿನ್ನೆ ಮೃತಳಾಗಿ, ಈ ಪ್ರಸಂಗದಲ್ಲಿ ಮೃತರಾದವರ ಸಂಖ್ಯೆ ಆರಕ್ಕೇರಿತು.

ಮೊನ್ನೆ ಬೆಳಿಗ್ಗೆ ಹದಿನೈದು ವರ್ಷ ವಯಸ್ಸಿನ ಹುಡುಗಿಯೊಬ್ಬಳು ಆ ಸ್ಥಳದಲ್ಲೇ ಹತಳಾದಳು. ಏಳು ವರ್ಷದ ಬಾಲಕನೂ ಗುಂಡಿನೇಟಿನ ಫಲವಾಗಿ ಮೃತನಾದ ಕೂಚ್'ಬಿಹಾರ್', ದಿನ್ಹಟ ಮತ್ತು ಮಾಥಾಭಾರಿಗ ಪ್ರದೇಶಗಳಲ್ಲೂ ಅಕ್ಕಿಗಾಗಿ ದೊಂಬಿಯಾಗಿದೆಯೆಂದೂ ಸಶಸ್ತ್ರ ಪೋಲೀಸರ ಪ್ರಬಲ ಪಡೆಯೊಂದು ದಿನ್ಹಟಕ್ಕೆ ತೆರಳಿದೆಯೆಂದೂ ತಿಳಿದುಬಂದಿದೆ.

ಮೊನ್ನೆಯ ಘರ್ಷಣೆಯಲ್ಲಿ ೩೨ ಮಂದಿ ಪ್ರದರ್ಶಕರೂ, ೨೪ ಮಂದಿ ಪೋಲೀಸರೂ ಗಾಯಗೊಂಡರು. ಗಾಯಗೊಂಡ ೧೨ ಮಂದಿ ಪ್ರದರ್ಶನಕಾರರ ಹಾಗೂ ಇಬ್ಬರು ಪೋಲೀಸರ ಸ್ಥಿತಿ ಕಳವಳಕ್ಕೆ ಆಸ್ಪದವಾಗಿದೆ

ಕಾರ್ಮಿಕರ ಜೀವನಾಧಾರ

ಕಾರ್ಮಿಕರಿಗೆ ಕೆಲಸವಿಲ್ಲದ ಕಾಲದ ಜೀವನಧಾರವಾಗಿ ಕೂಡಲು ಅಮೆರಿಕಾ ಸಾಮಾಜಿಕ ರಕ್ಷಣಾ ಸಂಸ್ಥೆಯು ಕಳೆದ ೫ ವರ್ಷಗಳಿಂದ ೭,೮೦೦ ಮಿಲಿಯನ್ ಡಾಲರು ಚಂದಾ ವಸೂಲ್ಮಾಡಿದೆ.

ಕಾಶ್ಮೀರ ಮಧ್ಯಸ್ಥಿಕೆಗೆ

ಕಾಶ್ಮೀರ ಮಧ್ಯಸ್ಥಿಕೆಗೆ ವಿಶ್ವಸಂಸ್ಥೆಯು ಅಮೆರಿಕಾದ ಮಾಜಿ ಸೆನೆಟರ್ ಮಿ|| ಫ್ರಾಂಕ್ ಗ್ರಹಾಂರವರನ್ನು ನೇಮಿಸುವರೆಂದು ಹೇಳಲಾಗಿದೆ.

ಮನೆ ತೆರಿಗೆ

ಹಾಸನ ಏ ೨೧

ಮನೆಗಳ ಮೇಲೆ ಈಗ ಬಾಡಿಗೆದರದ ಮೇಲೆ ವಿಧಿಸುತ್ತಲಿರುವ ತೆರಿಗೆಯನ್ನು ಇನ್ನು ಮುಂದೆ ಮನೆಯ ಬೆಲೆಯನ್ನನುಸರಿಸಿ ವಸೂಲ್ಮಾಡಬೇಕೆಂದು ಹಾಸನ ಪೌರಸಭೆಯು ನಿರ್ಧರಿಸಿದೆ.

ಅಮೆರಿಕಾದಲ್ಲಿ ವಿದ್ಯಾರ್ಥಿಗಳು

ಈ ಸಾಲಿನಲ್ಲಿ ಪ್ರಪಂಚದ ಇತರ ರಾಷ್ಟ್ರಗಳಿಗೆ ಸೇರಿದ ೩೦,೫೦೦ ವಿದ್ಯಾರ್ಥಿಗಳು ಅಮೆರಿಕಾದಲ್ಲಿ ವ್ಯಾಸಂಗ ಮಾಡುತ್ತಲಿರುವರು ಇದರಲ್ಲಿ ಭಾರತೀಯರ ಸಂಖ್ಯೆಯು ಹೆಚ್ಚು.
ಅಮೆರಿಕಾದ ಇವಾನ್ಸ್ಟೇಟ್' ಕಾಲೇಜಿನಲ್ಲಿ ಪದವಿಪಡೆದ ೩೧೮ ವಿದ್ಯಾರ್ಥಿಗಳಲ್ಲಿ ಭಾರತೀಯರೂ ಇರುವರು.

ಹುಯ್ಯೋ ಹುಯ್ಯೋ ಮಳೆರಾಯ !

ಕೇಂದ್ರದ ಸಹಾಯದಿಂದ ಪ್ರಾಂತ್ಯದಲ್ಲುಂಟಾಗಿರುವ ಕಠಿಣ ಆಹಾರ-ಪರಿಸ್ಥಿತಿಯನ್ನು ಈಗ ಎದುರಿಸಬಹುದಾದರೂ ದೇವರು ನಮ್ಮ ಮೇಲೆ ದಯತೋರಿದರೆ ಮಾತ್ರ ಉಲ್ಬಣವಾಗುತ್ತಲಿರುವ ಹಸಿವಿನ ದಾಹವು ಅಡಗುವುದು ಎಂದು ಬಿಹಾರಿನ ಆಹಾರ ಮಂತ್ರಿ ಶ್ರೀ ಅನುಗ್ರಹನಾರಾಯಣಸಿನ್ಹರವರು ಅಲ್ಲಿಯ ಆಹಾರ ಪರಿಸ್ಥಿತಿಯ ವಿಷಯವಾಗಿ ಮಾತನಾಡುತ್ತಾ ಹೇಳಿರುವರು.

೪ ವರ್ಷಗಳಿಂದಲೂ ವಿಶೇಷ ತೊಂದರೆಗಳನ್ನನುಭವಿಸುತ್ತಲಿರುವ ನಮ್ಮ ಮೇಲೆ ದೇವರು ಇನ್ನೂ ಕಠಿಣವಾಗಿ ವರ್ತಿಸಿ ಮಳೆ ಕೊಡದಿದ್ದರೆ ನಮ್ಮ ಮುಂದಿನ ಸ್ಥಿತಿಯೇನಾಗುವುದೆಂದು ಹೇಳಲಾರೆ. ಅವಶ್ಯಕವಿಲ್ಲದ ಕಡೆ ಈಗ ಒಂದು ವಾರದ ಕೆಳಗೆ ಮಳೆಯಾಗಿ ಫಸಲೆಲ್ಲಾ ಹಾಳಾಗಿವೆ. ಇನ್ನೂ ಒಂದು ವಾರಗಳಲ್ಲಿ ನೀರಿನ ಅಭಾವವು ನೀಗದಿದ್ದರೆ ಸುಮಾರು ೨ ಲಕ್ಷ ಟನ್ ಆಹಾರ ಬೆಳೆಯೇ ನಿಂತು ಹೋಗುತ್ತದೆ. ಸಕಾಲದಲ್ಲಿ ಮಳೆ ಬಂದರೆ ಬಿಹಾರದ ಕ್ಷಾಮವೆಲ್ಲವೂ ಸ್ವಲ್ಪಕಾಲದಲ್ಲಿಯೇ ನೀಗಿಹೋಗುವುದೆಂದೂ ಅವರು ಹೇಳಿರುವರು.

ಅಪಾಯ ಪರಿಸ್ಥಿತಿ

ಕೊರಿಯಾ ಯುದ್ಧರಂಗದಲ್ಲಿ ಚೈನಾ ಮತ್ತು ಉತ್ತರ ಕೊರಿಯನ್ನರು ತಮ್ಮ ಸೈನ್ಯ ಜಮಾವಣೆಯನ್ನು ವಿಶೇಷವಾಗಿ ಹೆಚ್ಚಿಸಿಕೊಳ್ಳುತ್ತ, ಭೂ ಮತ್ತು ವಿಮಾನ ಧಾಳಿಗೆ ಸಿದ್ಧರಾಗುತ್ತಲಿರುವುದು ಪರಿಸ್ಥಿತಿಯು ಬಹಳ ಅಪಾಯಕರವಾಗುತ್ತಲಿದೆಯೆಂದು ಹೇಳಲಾಗಿದೆ.

ಕೆನಡಾ ವಿದ್ಯಾರ್ಥಿವೇತನ

ಕೆನಡಾ ಸರ್ಕಾರವು ೬೦ ಜನ ವಿದೇಶೀಯರಿಗೆ 'ಇಂಜನಿಯರಿಂಗ್', ಜೀಯಾಲಜಿ, ವ್ಯವಸಾಯ ಮುಂತಾದುವುಗಳಲ್ಲಿ ಶಿಕ್ಷಣ ಕೊಡಲಿರುವರು. ಇದರಲ್ಲಿ ೨೫ ಸ್ಥಾನಗಳು ಭಾರತೀಯರಿಗೂ ಉಳಿದುವು ಪಾಕಿಸ್ತಾನ, ಸಿಂಹಳ ಮುಂತಾದ ರಾಷ್ಟ್ರಗಳಿಗೂ ಕೊಡಲಾಗಿದೆ.

ಮಹಾ ಕವಿಗೆ ರಷ್ಯಾ ಆಹ್ವಾನ

ಕೇರಳದ ಮಹಾ ಕವಿ ೭೨ ವರ್ಷದ ಶ್ರೀ ವಳ್ಳತ್ತೋಳ್'ರವರನ್ನು ರಷ್ಯಾದೇಶದ ಸಾಹಿತ್ಯಸಂಘದವರು ರಷ್ಯಾ ದೇಶಕ್ಕೆ ಭೇಟಿಮಾಡಬೇಕೆಂದು ಆಹ್ವಾನಿಸಿದ್ದಾರೆ. ಪ್ರಯಾಣ ರಹದಾರಿ ಬಂದೊಡನೆಯೇ ಅವರು ರಷ್ಯಾಕ್ಕೆ ತೆರಳುವರು.

೧೦೦೦೦ ರೂ. ಬಹುಮಾನ

ಲ್ಲಾಯಡ್ಸ್ ಬ್ಯಾಂಕಿನ ೨[illegible] ಲಕ್ಷ ರೂ. ದರೋಡೆಮಾಡಿದವರ ವಿಷಯವಾಗಿ ಸುದ್ದಿ ಕೊಡುವವರಿಗೆ ೧೦,೦೦೦ ರೂ. ಬಹುಮಾನ ಕೊಡುವುದಾಗಿ ಬೊಂಬಾಯಿನ ಪೋಲೀಸು ಕಮೀಷನರು ಪ್ರಕಟಣೆ ಹೊರಡಿಸಿರುವರು. ದರೋಡೆಕೋರರು ಇನ್ನೂ ಸಿಕ್ಕಿಲ್ಲ.

ಗಾದಿ ಬೇಡ

ಬರೋಡಾ ಮಹಾರಾಜ ಸರ್ ಪ್ರತಾಪಸಿಂಗ್'ರವರನ್ನು ಪದಚ್ಯುತರನ್ನಾಗಿ ಮಾಡಿ ಅವರ ಮಗ ರಾಜಕುಮಾರ ಫತೆಸಿಂಗರನ್ನು ಮಹಾರಾಜರನ್ನಾಗಿ ಕೇಂದ್ರ ಸರ್ಕಾರವು ನೇಮಿಸಿರುವುದು ತಮಗೆ ಬೇಡವೆಂದು ರಾಜಕುಮಾರ ಪ್ರತಾಪಸಿಂಗರವರು ಹೇಳಿರುವುದಾಗಿ ವರದಿಯಾಗಿದೆ.

ಕಾಂಗ್ರೆಸಿನಲ್ಲಿ ಐಕಮತ್ಯಕ್ಕೆ ಪ್ರಯತ್ನ

ಬೆಂಗಳೂರು ಏ. ೨೧

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ, ಐಕಮತ್ಯ ಉಂಟುಮಾಡುವ ದೃಷ್ಟಿಯಿಂದ ನಾನಾ ವಿಷಯಗಳನ್ನು ವಿಚಾರ ಮಾಡಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ನೇಮಕ ಮಾಡಿದ್ದ ನಾಲ್ವರು ಮುಖಂಡರಿಂದ ಕೂಡಿದ್ದ ಸಮಿತಿಯವರು ತಮ್ಮ ಕಾರ್ಯವನ್ನು ಇನ್ನೂ ಮುಗಿಸಿಲ್ಲ. ಮಾತುಕತೆಗಳು ಮುಂದುವರಿಯುತ್ತಿದೆ. ೨೮ ಮತ್ತು ೨೯ ರಲ್ಲಿ ಸೇರುವ ಎಂ. ಪಿ. ಸಿ. ಸಿ. ಹೊತ್ತಿಗೆ ಮಾತುಕತೆಗಳು ಮುಗಿದು ಒಂದು ತೀರ್ಮಾನಕ್ಕೆ ಬರಬಹುದೆಂದು ಆಶಿಸಲಾಗಿದೆ.

ಅಪೆಕ್ಸ್ ಬ್ಯಾಂಕ್ ಚುನಾವಣೆ

ಬೆಂಗಳೂರು ಏ. ೨೨

ಆಪೆಕ್ಸ್ ಬ್ಯಾಂಕಿಗೆ ಮೈಸೂರು ಸಿಟಿಯ ಪರವಾಗಿ ಮೈಸೂರಿನ ಪ್ರಮುಖ ಸಹಕಾರಿಗಳಾದ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು, ಜಿಲ್ಲಾ ಪರವಾಗಿ ಟಿ. ನರಸೀಪುರದ ಶ್ರೀ ಶ್ರೀನಿವಾಸಯ್ಯಂಗಾರ್, ಬೆಂಗಳೂರು ನಗರದ ಪರವಾಗಿ ಡಾ|| ಶ್ರೀಕಂಠೇಶ್ವರ್ ಸದಸ್ಯರಾಗಿ ಚುನಾಯಿತರಾಗಿದ್ದಾರೆ.

ಸೀಮೆಯೆಣ್ಣೆ ಮೇಲೆ ಸರ್ ಛಾರ್ಜಿಲ್ಲ

ಸೀಮೆಯೆಣ್ಣೆ ಮೇಲೆ ಶೇ. ೫ ರಂತೆ ಸರ್ ಛಾರ್ಜು ವಿಧಿಸಬೇಕೆಂದು ಅರ್ಥಿಕ ಸಚಿವರ ಸಲಹೆಯನ್ನು ಸೆಲೆಕ್ಟ್ ಕಮಿಟಿಯು ಹಿಂದಕ್ಕೆ ತೆಗೆದುಕೊಂಡಿದೆ. ಅಲ್ಲದೆ ೭೦೦೦ ರೂ. ಗಿಂತ ಕಡಮೆ ವರಮಾನವಿರುವ ಸರ್ ಛಾರ್ಜು ಮಾಡಕೂಡದೆಂದು ಮಸೂದೆಯನ್ನು ತಿದ್ದುಪಡಿ ಮಾಡಿವೆ.

ವಿಯಟ್‌ನಾಮ್ ಅಕ್ಕಿ ಭಾರತಕ್ಕೆ

ಭಾರತಕ್ಕೆ ವಿಯಟ್‌ನಾಮ್ ಅಕ್ಕಿಯನ್ನು ಸರಬರಾಯಿ ಮಾಡುವ ವಿಷಯದಲ್ಲಿ ಭಾರತ—ವಿಯಟ್‌ನಾಮ್ ಸರ್ಕಾರಗಳಿಗೆ ಮಾತುಕತೆ ನಡೆಯುತ್ತಲಿದೆ.

ಪುನಃ ಭೂಕಂಪ

ಗೌಹತಿಯಲ್ಲಿ ನಿನ್ನೆ ದಿನ ಪುನಃ ೩ ಸೆಕೆಂಡುಗಳ ಕಾಲ ಭೂಕಂಪವಾಗಿರುವುದು ವರದಿಯಾಗಿದೆ.

ಅಗ್ನಿಗಾಹುತಿಯಾದ ರಾಜಕುಮಾರನ ಪ್ರಸಂಗ

ಇದೇ ಮಾಹೆ ೪ನೇ ತಾರೀಖು ಡಾರ್ಜಿಲಿಂಗ್‌ನಲ್ಲಿ ಕೂಚ್ ಬಿಹಾರದ ಮಹಾರಾಜರ ತಮ್ಮ ರಾಜಕುಮಾರ್ ಜಿತೇಂದ್ರ ನಾರಾಯಣರವರು ತಮ್ಮ ಅರಮನೆಯಲ್ಲಿ ಬೆಂಕಿಗಾಹುತಿಯಾಗಿ ಜೀವಸಹಿತ ಸುಟ್ಟು ಹೋದ ವಿಷಯದಲ್ಲಿ ಸ್ವಾರಸ್ಯಕರವಾದ ಸುದ್ದಿಯು ಹೊರಬಿದ್ದಿದೆ.

ಮೃತಹೊಂದಿದ ರಾಜಕುಮಾರರಿಗೆ ೩೪ ವರ್ಷ. ಇವರಿಗೆ ಮದುವೆಯಾಗಿ ಪತ್ನಿ ಮತ್ತು ಮಕ್ಕಳಿಬ್ಬರು ಮದರಾಸು ಪ್ರಾಂತ್ಯದಲ್ಲಿ ವಾಸವಾಗಿರುವರು. ೨೮—೯—೧೯೫೦ ರಾಜಕುಮಾರರು ಅಮೆರಿಕಾದ ಎವಿಲಿನ್ ಬ್ರಿಡ್ಜಸ್ ಎಂಬ ೨೧ ವರ್ಷ ಸುಂದರ ಸ್ತ್ರೀಯನ್ನು ಹಿಂದೂ ಧರ್ಮಕ್ಕೆ ಸೇರಿಸಿಕೊಂಡು ಸುಶೀಲಾದೇವಿಯೆಂಬ ನೂತನ ಹೆಸರನ್ನಿಟ್ಟು ವಿವಾಹವಾದರು. ಈ ವಿವಾಹಕ್ಕೆ ತಾಯಿ, ತಂಗಿ ಮುಂತಾದವರೆಲ್ಲರ ವಿರೋಧವಿತ್ತು. ಇವರನ್ನಗಲಿಸಲು ಸರ್ವ ಪ್ರಯತ್ನಗಳು ನಡೆದು ಆಕೆಯನ್ನು ಭಾರತದಿಂದ ಲಂಡನ್ನಿಗೆ ತೆರಳುವಂತೆ ಮಾಡಿದರು. ಇದಕ್ಕೆ ಭಾರತ ಸರ್ಕಾರದ ನೆರವು ದೊರೆಯಿತೆಂದು ಹೇಳಲಾಗಿದೆ.

ಆಕೆಯು ಭಾರತಕ್ಕೆ ಹಿಂತಿರುಗಲು ರಾಜಕುಮಾರರು ಎಷ್ಟು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ. ಅವರು ಬರೆದ ಕಾಗದ ಪತ್ರ, ಕೇಬಲ್‌ಗಳು ಸಹ ಆಕೆಗೆ ತಲುಪುವುದೇ ಕಷ್ಟವಾಗಿತ್ತು.

ರಾಜಕುಮಾರಿ ಸುಶೀಲಾದೇವಿಯು ಭಾರತಕ್ಕೆ ಹಿಂತಿರುಗಲು ಸರ್ವ ಪ್ರಯತ್ನಪಟ್ಟಳು. ಆಕೆಗೆ ಪ್ರಯಾಣ ರಹದಾರಿಯೇ ದೊರೆಯಲಿಲ್ಲ. ಭಾರತ ಸರ್ಕಾರವು ಲಂಡನ್ನಿನ ತಮ್ಮ ರಾಯಭಾರಿಗಳಿಗೆ ಪ್ರಯಾಣ ರಹದಾರಿ ಕೊಡಕೂಡದೆಂದು ಆಜ್ಞೆ ಇತ್ತಿದೆಂದು ಹೇಳಲಾಗಿದೆ. ರಾಜಕುಮಾರಿಯು ಕಳ್ಳತನದಿಂದ ಭಾರತಕ್ಕೆ ಬಂದಿಳಿದಳು. ಅದೇ ದಿನ ಆಕೆಯ ಪತಿಯು ಅಗ್ನಿಗಾಹುತಿಯಾದನು. ಆಕೆ ಈ ವಿಷಯವನ್ನು ಬೊಂಬಾಯಿನಲ್ಲಿ ಪತ್ರಿಕೆಗಳ ಮೂಲಕ ತಿಳಿದುಕೊಂಡಳು. ಕುಚ್ ಬಿಹಾರಿಗೆ ತೆರಳಲು ಅಲ್ಲಿ ಆಕೆಗೆ ಎಲ್ಲಿಯೂ ಮನ್ನಣೆ ದೊರೆಯದೆ ಬೊಂಬಾಯಿಗೆ ಹಿಂತಿರುಗಿ ಕೈಯಲ್ಲಿ ಒಂದು ಕಾಸೂ ಇಲ್ಲದೆ ಒಂದು ಪತ್ರಿಕಾ ಕಛೇರಿಯನ್ನು ಪ್ರವೇಶಿಸಿ ಅಲ್ಲಿ ತನ್ನ ಚರಿತ್ರೆಯನ್ನೆಲ್ಲಾ ವಿವರಿಸಿ, ಸ್ವಲ್ಪ ಸಹಾಯ ಪಡೆದಳು. ಪತ್ರಿಕಾಲಯದವರು ಆಕೆಯನ್ನು ಅಮೆರಿಕಾ ರಾಯಭಾರಿ ಕಛೇರಿಗೆ ಒಪ್ಪಿಸಿದರು. ಮುಂದೆ ಆಕೆಯ ಗತಿ ಏನಾಯಿತೆಂಬುದು ತಿಳಿಯದಾಗಿದೆ.

ಡಾರ್ಜಿಲಿಂಗ್‌ನಲ್ಲಿ ಕಲ್ಲುಕಟ್ಟಡದ ಅರಮನೆಯಲ್ಲಿ ರಾಜಕುಮಾರರು ಬೆಂಕಿಗೆ ಆಹುತಿಯಾಗಿ ಮಡಿದುದು ಸಂಶಯಾತ್ಮಕ ಸಮಸ್ಯೆಯಾಗಿದೆ. ಅಂತಹ ಭಾರಿ ಅರಮನೆಗೆ ಬೆಂಕಿ ಹೇಗೆ ಬಿತ್ತು ? ಅಲ್ಲಿದ್ದವರಲ್ಲಿ ಯಾರಿಗೂ ಏನೂ ಆಗದೆ ರಾಜಕುಮಾರರಿಗೆ ಮಾತ್ರ ಬೆಂಕಿ ತಗುಲಿ, ಯಾರೂ ಅವರ ನೆರವಿಗೆ ಹೋಗದೆ ಸುಟ್ಟು ಹೋದುದು ದೈವೀಕವಾಗಿ ನಡೆದಂತೆ ಕಾಣಬರುವುದಿಲ್ಲ ತೆರೆಯಮರೆಯಲ್ಲಿ ಏನೋ ನಡೆದಿದೆಯೆಂಬ ಸಂಶಯವು ತಲೆದೋರಿದೆ. ಈ ಪ್ರಸಂಗದಲ್ಲಿ ಸರ್ಕಾರದ ಕೈವಾಡವಿದೆಯೆಂಬುದು ಮತ್ತೂ ಆಶ್ಚರ್ಯವಾಗಿದೆಯೆಂದು ಪತ್ರಿಕಾ ವರದಿ ಬಂದಿದೆ.

ವೃತ್ತ ಪತ್ರಿಕೆಗಳು

ಅಮೆರಿಕಾದಲ್ಲಿ ೧೭೮೦ ವೃತ್ತ ಪತ್ರಿಕೆಗಳಿವೆ. ಅವುಗಳ ಒಟ್ಟು ಹಂಚಿಕೆ ೫೪,೦೦೦,೦೦೦ ಪ್ರತಿಗಳು.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿಯುಳ್ಳ ತಿಂಗಳಿಗೆ ಸುಮಾರು 80 ರೂ ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು.

ರಣಜಿತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್.ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ ಮೈಸೂರು.

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮೈಸೂರಿನಿಂದ ಟ್ರೈನು ಹೊರಡುವುದು.

ದಿನವಹಿ ಎರಡು ಊಟ, ರೈಲ್ವೆ ಛಾರ್ಜು ಸೇರಿ ೨೯೫|- ರೂಗಳು

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

ಟ್ಯೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೪—೧೯೫೧ನೇ ಮಂಗಳವಾರ [ಸಂಚಿಕೆ ೧೮೯

ಭಾರತಕ್ಕೆ ಅಕ್ಕಿ ದಾನ

ಬರ್ಮಾವು ಭಾರತಕ್ಕೆ ದಾನವಾಗಿ ಕೊಟ್ಟಿರುವ ೪೦೦ ಟನ್ ಅಕ್ಕಿ, ಥೈಲ್ಯಾಂಡ್ ದಾನವಾಗಿ ಕೊಟ್ಟಿರುವ ೮೪೦ ಟನ್ ಅಕ್ಕಿ ಕಲ್ಕತ್ತಾಕ್ಕೆ ಬಂದಿದೆ.

ಬರ್ಮಾವು ಇನ್ನು ೧೬,೦೦೦ ಟನ್ ಅಕ್ಕಿಯನ್ನು ದಾನವಾಗಿ ಕಳುಹಿಸಲಿದೆ.

ಸಚಿವರ ಸಂಖ್ಯೆ ಕಡಮೆಯಾಗುವುದು

ಕಾಶ್ಮೀರ ಸರ್ಕಾರದ ಸಚಿವ ಸಂಖ್ಯೆಯು ೭ ರಿಂದ ೫ಕ್ಕೆ ಕಡಮೆಯಾಗುವುದು. ಅಲ್ಲದೆ ಈಗಿರುವ ೪ ಉಪಸಚಿವರ ಸ್ಥಾನವನ್ನು ರದ್ದುಗೊಳಿಸಲಾಗುವುದೆಂದು ಪ್ರಧಾನಿ ಷೇಕ್ ಅಬ್ದುಲ್ಲಾರವರು ಹೇಳಿರುವರು.

ಮಾಜಿ ಅರಸರ ಕ್ಷಮಾ ಭಿಕ್ಷೆ

ಬರೋಡಾ ಮಾಜಿ ರಾಜರಾದ ಸರ್ ಪ್ರತಾಪಸಿಂಗ್ ಗಾಯಕವಾಡರವರು ಪ್ರಧಾನಿ ನೆಹರೂರವರನ್ನು ಕಂಡು ತಮ್ಮ ತಪ್ಪಿತಕ್ಕಾಗಿ ಕ್ಷಮೆಯನ್ನು ಯಾಚಿಸಿರುವರೆಂದು ವರದಿಯಾಗಿದೆ.

ಭಾರತ ರಾಜ್ಯಾಂಗಕ್ಕೆ ವಿಧೇಯರಾಗಿ ನಡೆದುಕೊಳ್ಳುವುದಾಗಿಯೂ, ರಾಜಭಕ್ತಿಪೂರ್ಣರಾಗಿರುವುದಾಗಿಯೂ, ಭರವಸೆ ಇತ್ತಿರುವರೆಂದು ವರದಿಯಾಗಿದೆ.

ಬರೋಡದ ಮಾಜಿ ರಾಜರು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ಬಹು ಹೊತ್ತು ಮಾತುಕತೆ ನಡೆಸಿದರು. ಇದಕ್ಕೆ ಮುನ್ನ ಸಂಸ್ಥಾನ ಶಾಖೆಯ ಸಚಿವರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರನ್ನೂ ಸಹ ಅವರು ಭೇಟಿ ಮಾಡಿದ್ದರು.

ಮೇ ಡೇ

ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಗಾರರು ಮೇ ಡೇ ಆಚರಣೆಗಾಗಿ ರಜವನ್ನು ಅಪೇಕ್ಷಿಸಿ, ಏಪ್ರಿಲ್ ೨೯ನೇ ಭಾನುವಾರ ಪೂರ್ತಾ ಕೆಲಸ ಮಾಡಲು ಒಪ್ಪಿದಲ್ಲಿ, ಮೇ ಒಂದನೇ ತಾರೀಖು ಆ ಸಂಸ್ಥೆಗಳಿಗೆ ರಜಾ ಕೊಡಬಹುದೆಂದು ಸರ್ಕಾರಿ ಆಜ್ಞೆ ಮಾಡಿದೆ.

ಇದೇ ರೀತಿ ಇತರ ಖಾಸಗೀ ಸಂಸ್ಥೆಗಳು ನಡೆಯಬೇಕೆಂದು ಕೋರಿರುವರು.

ನಶ್ಯಕ್ಕೆ ಪ್ರಾಮುಖ್ಯತೆ

ಧೂಮಪಾನ ಮಾಡುವುದು ವಿಶೇಷ ದುಬಾರಿಯಾಗುತ್ತಿರುವುದರಿಂದ ಬ್ರಿಟನ್ನಿನಲ್ಲಿ ಧೂಮಪಾನ ಮಾಡುವವರ ಸಂಖ್ಯೆಯು ಕಡಿಮೆಯಾಗುತ್ತಾ ನಶ್ಯ ಏರಿಸುವವರ ಸಂಖ್ಯೆಯು ಹೆಚ್ಚುತ್ತಲಿದೆ.

ಧೂಮಪಾನಕ್ಕೆ ಬದಲಾಗಿ ನಶ್ಯವನ್ನು ಹಾಕಲಾರಂಭಿಸಿದರೆ ವೆಚ್ಚವು ಒಂದಕ್ಕೆ ನಾಲ್ಕರಷ್ಟು ಕಡಮೆಯಾಗುವುದೆಂದು ಅಂದಾಜು ಮಾಡಲಾಗಿದೆ.

ಚಾಲಕನಿಲ್ಲದೆ ವಿಮಾನ ಹಾರಿತು

ಇಂಗ್ಲೆಂಡಿನ ಶೇರ್‌ಬೇ ವಿಮಾನ ನಿಲ್ದಾಣದಲ್ಲಿ ವಿದ್ಯಾರ್ಥಿ ಚಾಲಕನು ವಿಮಾನದ ಪ್ರಾಪೆಲರ್ ತಿರುಗಿಸಿ, ಅದನ್ನು ಹತ್ತುವುದರೊಳಗಾಗಿ ವಿಮಾನವು ಮುಂದಕ್ಕೆ ಹೊರಟು, ಚಾಲಕನಿಲ್ಲದೆಯೇ ೮೦೦೦ ಅಡಿಗಳವರೆಗೆ ಹಾರಿಹೋಗಿ ೨ ಗಂಟೆಕಾಲ ಆಕಾಶದಲ್ಲಿ ಓಡಾಡಿ ಪೆಟ್ರೋಲ್ ಮುಗಿದೊಡನೆಯೇ ಒಂದು ಮೈದಾನದಲ್ಲಿ ಬಿದ್ದಿತು.

ನಿಮ್ಮನ್ನೂ ಅವರಲ್ಲಿಗೆ ಕಳುಹಿಸುತ್ತೇವೆ

ನಿಮ್ಮ ನೀತಿಯನ್ನು ಬದಲಾಯಿಸಿಕೊಳ್ಳದಿದ್ದರೆ ನಿಮ್ಮನ್ನೂ ಅವರಲ್ಲಿಗೇ ಕಳುಹಿಸುತ್ತೇವೆ. ನಾವಿಯಲು ಸಿದ್ಧರಾಗಿ ಇಲ್ಲವೇ ಹಿಂದಿನವರ ಮಾರ್ಗವನ್ನು ಹಿಡಿಯಬೇಡಿ ಎಂದು ಪರ್ಶಿಯಾದ ಫಿದಿಯಾನ್ ಸಂಗಡದ ಮುಖಂಡ ನವಾಬ್ ಸಫಾವಿಯವರು ಪರ್ಶಿಯಾದ ಮುಖ್ಯಮಂತ್ರಿ ಮಿ|| ಹುಸೇನ್ ಆಲಾರವರಿಗೆ ಎಚ್ಚರಿಕೆಯಿತ್ತಿರುವರು. ಮುಖ್ಯಮಂತ್ರಿ ಅಲಿರಜಮಾರರನ್ನು ಮಾರ್ಚಿ ೭ ರಲ್ಲಿ ಕೊಲೆ ಮಾಡಿದ ಮಸೀದಿಯಲ್ಲಿಯೇ ತಾವು ಸೇರಿ ವಿರೋಧ ಸಭೆ ನಡೆಸಲು ಈ ಸಂಗಡದವರು ಎತ್ನಿಸಿದುದನ್ನು ಪೋಲೀಸಿನವರು ತಡೆದರು.

ನೆಹರೂರೊಡನೆ ಭೇಟಿ

ನೇಪಾಳದ ಗೃಹ ಸಚಿವ ಶ್ರೀ ಕೊಯಿರಾಲಾರವರು ನಿನ್ನೆ ಭಾರತ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ಅಲ್ಲಿಯ ರಾಜಕೀಯ ಪರಿಸ್ಥಿತಿಯ ವಿಷಯದಲ್ಲಿ ಚರ್ಚೆ ನಡೆಸಿದರು. ನೇಪಾಳದ ಪ್ರಧಾನಿ ಮೋಹನ ಷಂಶೀರ್ ಜಂಗ್‌ರವರು ಶ್ರೀ ನೆಹರೂರವರನ್ನು ಈ ಮಾಸಾಂತ್ಯದಲ್ಲಿ ಭೇಟಿ ಮಾಡಲಿರುವರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿನ ಸಭೆಯಲ್ಲಿ ಚರ್ಚೆ

ಇತ್ತೀಚೆಗೆ ಜನರಲ್ ಮೆಕಾರ್ಥರ್‌ರವರು ಇತ್ತ ಭಾಷಣದ ಪರಿಣಾಮವಾಗಿ ಉಂಟಾಗಿರುವ ಪರಿಸ್ಥಿತಿಯನ್ನು ಸರ್ಕಾರವು ತನ್ನ ನೀತಿಯನ್ನು ಕಾಂಗ್ರೆಸ್ಸಿನ ಗಮನಕ್ಕೆ ತರುವುದಲ್ಲದೆ ಮಿಲಿಟರಿ ಉನ್ನತಾಧಿಕಾರಿಗಳೆಲ್ಲರೂ ತಮ್ಮ ನೀತಿಗೆ ಬೆಂಬಲವಿತ್ತರೆಂದು ಜ|| ಮೆಕಾರ್ಥರು ಹೇಳಿರುವುದನ್ನು ವಿಶದೀಕರಿಸಲು ಅಮೆರಿಕಾ ಕಾಂಗ್ರೆಸ್ಸಿನ ಮುಂದೆ ಚರ್ಚೆ ನಡೆಯಲಿದೆ. ಜನರಲ್ ಮೆಕಾರ್ಥರನ್ನು ಈ ಸಭೆಗೆ ಆಹ್ವಾನಿಸಲಾಗುವುದೆಂದು ಹೇಳಲಾಗಿದೆ.

ಟಿಬೆಟ್ ನಿಯೋಗ

ಚೈನಾದೊಡನೆ ಸಂಧಾನ ನಡೆಸಲು ತೆರಳಿರುವ ಟಿಬೆಟ್ ನಿಯೋಗವು ನಿನ್ನೆ ಪೀಕಿಂಗನಲ್ಲಿ ಸೇರಿತು. ಚೈನಾ ಪ್ರಧಾನಿ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ನಿಯೋಗದ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು.

ಬಿರುಸು ಕದನ

ವಿಶ್ವಸಂಸ್ಥೆ ಪಡೆಗಳಿಗೂ ಚೈನಾ, ಉತ್ತರ ಕೊರಿಯಾ ಪಡೆಗಳಿಗೂ ಕೊರಿಯಾ ರಣರಂಗದಲ್ಲಿ ಬಿರುಸಾದ ಕದನ ಪ್ರಾರಂಭವಾಗಿದೆ. ಎಲ್ಲೆಲ್ಲಿಯೂ ಚೈನಾ ಸೈನ್ಯೀಕರೇ ವಿಶೇಷವಾಗಿ ಕಾಣ ಬರುತ್ತಲಿರುವರೆಂದು ಹೇಳಲಾಗಿದೆ.

ಸೈನ್ಯ ಹಿಂದಕ್ಕೆ

ವಿಶ್ವಸಂಸ್ಥೆ ಸೈನ್ಯಗಳು ಕೊರಿಯಾ ಯುದ್ಧವನ್ನು ಚೈನಾದ ಕಡೆ ವಿಸ್ತರಿಸಿದಲ್ಲಿ ತಮ್ಮ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಸಿಕೊಳ್ಳುವುದಾಗಿ ದಕ್ಷಿಣ ಆಫ್ರಿಕಾ ಸರ್ಕಾರವು ತಿಳಿಸಿರುವುದಾಗಿ ವರದಿಯಾಗಿದೆ.

ವಿಚಾರಣೆ

ಕೂಚ್‌ಬಿಹಾರಿನಲ್ಲಿ ಹಸಿದವರ ಮೇಲೆ ಪೋಲೀಸಿನವರು ಗುಂಡು ಹಾರಿಸಿದುದನ್ನು ವಿಚಾರಣೆ ನಡೆಸಬೇಕೆಂದು ಪೂರ್ವ ಬಂಗಾಳಾ ಸರ್ಕಾರವು ಆಜ್ಞೆ ಮಾಡಿದೆ. ಭಾನುವಾರದಿಂದ ವಿಚಾರಣೆ ಪ್ರಾರಂಭವಾಗಲಿದೆ.

ಅರಸರಿಂದ ಸಶಸ್ತ್ರ ವಿಪ್ಲವ ?

ಇದುವರೆವಿಗೆ ಸಂಸ್ಥಾನಾಧೀಶರಾಗಿದ್ದ ಹಲವರು ವಿದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಹೊಂದಿಸಿಕೊಂಡು ಮಹಾ ಚುನಾವಣೆ ವೇಳೆಯಲ್ಲಿ ಸಶಸ್ತ್ರ ವಿಪ್ಲವ ನಡೆಸಲು ಇತ್ತೀಚೆಗೆ ನಡೆದ ರಹಸ್ಯ ಸಭೆಯಲ್ಲಿ ನಿರ್ಧರಿಸಿದ್ದರಂತೆ. ಈ ಅಂಶವು ಭಾರತ ಸರ್ಕಾರದ ಗಮನಕ್ಕೆ ಬಂದಿದೆ.

ಶಾಂತಿಗಾಗಿ ಮಹಾಯಜ್ಞ

ಕಾಶಿಯಿಂದ ಬಂದ ೩೩ ಮಹಾ ವಿದ್ವಾಂಸರು ದೆಹಲಿಯಲ್ಲಿ ಒಂದುವಾರ ಕಾಲ ಮಹಾ ಯಜ್ಞವನ್ನು ಮಾಡಲು ಇಂದಿನಿಂದ ಪ್ರಾರಂಭಿಸಿರುವರು. ದೇಶದ ನಾನಾಭಾಗಗಳಿಂದ ವಿದ್ವಾಂಸರುಗಳು ಸೇರಿರುವರು. ಅಖಿಲಭಾರತ ಸಂಘದ ಸಮ್ಮೇಳನಕ್ಕೆ ಆಗಮಿಸಿರುವ ಸಾಧುಗಳೆಲ್ಲಾ ಈ ಯಜ್ಞದಲ್ಲಿ ಭಾಗವಹಿಸಿ, ವೇದಘೋಷ ಮಾಡುತ್ತಾ ಎರಡು ಪಶುಗಳನ್ನು ಆಹುತಿಕೊಟ್ಟು ಯಜ್ಞವನ್ನು ಆರಂಭಿಸಿದರು.

ಕಂಚಿನ ಗಾಂಧಿ ಪ್ರತಿಮೆ

ಬೆಂಗಳೂರು ಏ ೨೩

ಜರ್ಮನಿಯ ಶಿಲ್ಪಿ ಹೆಚ್. ಕೆ. ಷೋರಿಂಗ್ ನಿರ್ಮಿಸಿರುವ ಮಹಾತ್ಮಾ ಗಾಂಧೀಜಿಯ ಕಂಚಿನ ಪ್ರತಿಮೆಯನ್ನು ಕೊಂಡು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಇಂದು ನಡೆದ ಕಾರ್ಪೊರೇಷನ್ ತೀರ್ಮಾನಿಸಿ ೨೦ ಸಾವಿರ ರೂ. ಮಂಜೂರು ಮಾಡಿತು.

ರೈತರ ಸಂಘ ಆರಂಭೋತ್ಸವ

ನಿನ್ನೆ ಮಧ್ಯಾಹ್ನ ಹುಣಸೂರಿನಲ್ಲಿ ಶ್ರೀಮಾನ್ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ರೈತರ ಸಂಘವು ಸೇರಿದ್ದಿತು ಸಂಘದ ಆರಂಭೋತ್ಸವವನ್ನು ಶ್ರೀ ದಾಸಪ್ಪನವರು ನಡೆಸಿದರು ಸ್ವಾಗತ ಭಾಷಣವಾದನಂತರ ಶ್ರೀ ದಾಸಪ್ಪನವರು ಭಾಷಣಮಾಡುತ್ತಾ ಸ್ವಾತಂತ್ರದಿಂದ ನಮ್ಮಲ್ಲಿ ಜನರಿಗೂ ಶಾಂತಿಸುಖವುಂಟಾಗಿಲ್ಲ ನಮ್ಮ ಹಳೆಯ ಸಂಸ್ಕೃತಿಯು ಉದ್ಧಾರವಾಗಬೇಕು. ನಾವೆಲ್ಲರೂ ಸಹೋದರಭಾವನೆಯಿಂದ ಕೂಡಿ ಕೆಲಸಕಾರ್ಯಗಳನ್ನು ನಡೆಸಬೇಕು. ನೀವು ಚುನಾಯಿಸಿರುವ ನಾಯಕರಿರುವ ಸರ್ಕಾರ ಮಾತ್ರ ಎಲ್ಲದಕ್ಕೂ ಜವಾಬ್ದಾರಿ ಎಂದು ತಿಳಿಯುವುದು ತಪ್ಪು. ರೈತರು ಮುಂದೆ ಬಂದು ದೇಶಕ್ಕೆ ಸಹಾಯಮಾಡಬೇಕು ರೈತರಿಗಾಗಿಯೇ ಸರ್ಕಾರ ದುಡಿಯುತ್ತಿದೆ ಪ್ರಜೆಗಳೂ ಸರ್ಕಾರ ಎರಡೂ ಒಟ್ಟು ಕೂಡಿದರೆ ಯಾವ ಕೆಲಸವಾದರೂ ಸುಗಮವಾಗಿ ನಡೆಯುವುದು, ರೈತರು ತಮ್ಮ ಆರ್ಥಿಕಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕಾದುದು ಬಹಳ ಮುಖ್ಯವಾದುದು, ಗ್ರಾಮಗಳಲ್ಲಿ ಗ್ರಾಮ ನೈರ್ಮಲ್ಯ ಮತ್ತು ವಿದ್ಯಾಭ್ಯಾಸ ಇವುಗಳಿಗೆ ಹೆಚ್ಚುಗಮನ ನೀಡಬೇಕು. ಮೈಸೂರು ಸರ್ಕಾರವು ಕಂಟ್ರೋಲ್ ಹಾಕಿದೆ ಎಂಬ ಭಾವನೆ ತಪ್ಪು, ಇದು ಕೇಂದ್ರ ಸರ್ಕಾರವು ಹಾಕಿರುವುದು ಎಂದು ಹೇಳಿದರು

ಶ್ರೀ ಚನ್ನಬಸಪ್ಪನವರು ಮಾತನಾಡುತ್ತಾ ಕಂಟ್ರೋಲ್ ಹೋಗಬೇಕು, ಕಂಟ್ರೋಲ್ ಇರುವುದರಿಂದ ಜನರಿಗೆ ಬಹಳ ತೊಂದರೆಯೇ ವಿನಹ ಅನುಕೂಲವಿಲ್ಲ. ರೈತರ ಆರ್ಥಿಕಪರಿಸ್ಥಿತಿ ಸುಧಾರಿಸಲು ಸರ್ಕಾರ ಸಹಾಯಮಾಡಬೇಕು.

ಸರ್ಕಾರದವರು ಹೆಚ್ಚು ಆಹಾರ ಬೆಳೆ ಮುಂತಾದ ಹೊಸಹೊಸ ಯೋಜನೆಗಳನ್ನು ತಯಾರುಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಲಕ್ಷಾಂತರ ರೂ. ಗಳನ್ನು ವೆಚ್ಚಮಾಡಿ ಅದರಿಂದ ಪ್ರಯೋಜನವಾಗಲಿಲ್ಲವೆಂದು ಪುನಃ ಬೇರೆ ಹೊಸಯೋಜನೆಗಳನ್ನು ಕೈಗೊಳ್ಳುವ ಬದಲು ಆ ಹಣವನ್ನೆಲ್ಲಾ ರೈತರಿಗೆ ಸಹಾಯನೀಡುವುದರಲ್ಲಿ ಉಪಯೋಗಿಸಿದರೆ ರೈತರ ಸ್ಥಿತಿಯು ಉತ್ತಮಗೊಳ್ಳುವುದೆಂದು ಹೇಳಿದರು.

ಪ್ರಚಂಡ ಮಾರುತ

ಡಾರ್ಜಿಲಿಂಗ್ ಬಳಿ ಪ್ರಚಂಡ ಮಾರುತವು ಬೀಸಿ ಅನೇಕ ಮನೆಗಳು ಹಾಳಾಗಿ ಸುಮಾರು ೩ ಲಕ್ಷ ರೂಪಾಯಿನ ನಷ್ಟ ಸಂಭವಿಸಿದೆ

ಲೇಬರ್ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟು

ಬ್ರಿಟನ್ನಿನ ಕಾರ್ಮಿಕ ಮಂತ್ರಿ ಮಿ॥ ಬೆವಾನ್‌ರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ. ಲೇಬರ್ ಸರ್ಕಾರದ ನೀತಿಯು ಸಮರ್ಪಕವಾಗಿಲ್ಲವೆಂದು ಹೇಳುತ್ತಾ ಅದರಲ್ಲೂ ಸೈನ್ಯ ವೆಚ್ಚವನ್ನು ಹೆಚ್ಚಿಸುತ್ತಲಿರುವುದರಲ್ಲಿ ಟೀಕಿಸಿರುವರು.

ನಿನ್ನೆದಿನ ಬೆವಿನ್‌ರ ವಾದವನ್ನೇ ಪುಷ್ಟೀಕರಿಸುತ್ತಾ ವಾಣಿಜ್ಯ ಮಂಡಲಿ ಅಧ್ಯಕ್ಷ ಮಿ॥ ವಿಲ್‌ಸನ್‌ರವರೂ ರಾಜೀನಾಮೆಯಿತ್ತಿರುವರು ಈ ಇಬ್ಬರ ರಾಜೀನಾಮೆಯಿಂದ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟುಂಟಾಗಿದೆ ಅದನ್ನು ಪರಿಶೀಲಿಸಲು ಮಂತ್ರಿ ಮಂಡಲದ ಸಭೆಯು ನಡೆಯುತ್ತಲಿದೆ

ಮಿ॥ ಬೆವಾನ್‌ರವರು ಪಾರ್ಲಿಮೆಂಟಿನಲ್ಲಿ ತಮ್ಮ ರಾಜೀನಾಮೆಗೆ ಕಾರಣವನ್ನು ವಿವರಿಸುತ್ತಾ ಹೇಳಿಕೆಯನ್ನಿತ್ತಿರುವರು

ಮಿ॥ ವಿಲ್‌ಸನ್‌ರವರೂ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡಲಿರುವರು

ರೈಲ್ವೆ ದರವನ್ನು ಹೆಚ್ಚಿಸಿದ ವಿಷಯದಲ್ಲಿ ನಿನ್ನೆ ಬ್ರಿಟನ್ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದು, ಲೇಬರ್ ಸರ್ಕಾರವು ೪ ಓಟುಗಳಿಂದ ಜಯ ಗಳಿಸಿತು.

ರಾಜಿನಾಮೆಯಿತ್ತ ಸಚಿವ ಮಿ॥ ಬೆವಾನ್‌ರವರು ಸರ್ಕಾರದ ಪರ ಓಟು ಕೊಟ್ಟರು.

ಈ ಇಬ್ಬರು ಸಚಿವರ ರಾಜೀನಾಮೆಯ ವಿಷಯ ಚರ್ಚಿಸಲು ಪಾರ್ಲಿಮೆಂಟಿನ ಲೇಬರ್ ಪಕ್ಷದ ಜರೂರು ಸಭೆಯನ್ನು ಕರೆಯಲಾಗಿದೆ.

೧೯ ಕೋಟಿ ಡಾಲರ್ ಸಾಲ

ಅಮೆರಿಕಾದಿಂದ ಭಾರತವು ೨೦ ಲಕ್ಷ ಟನ್ ಆಹಾರವನ್ನು ಕೊಳ್ಳಲು ವಿದೇಶ ವ್ಯವಹಾರ ಸಮಿತಿಯು ೧೯ ಕೋಟಿ ಡಾಲರುಗಳ ಸಾಲವನ್ನು ಮಂಜೂರ್ಮಾಡಿದೆ

ಮಂತ್ರಿಮಂಡಲ ಬದಲಾವಣೆ

ಹೈದರಾಬಾದಿನ ಮಂತ್ರಿಮಂಡಲದಲ್ಲಿ ಕೆಲವು ಬದಲಾವಣೆಗಳಾಗಿವೆಯೆಂದು ಹೇಳಲಾಗಿದೆ. ಸಚಿವಸಂಪುಟಕ್ಕೆ ಇನ್ನೂ ೨-೩ ಪ್ರಜಾಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದೆಂದೂ ಆದರೆ ಹಣಕಾಸು, ಗೃಹಶಾಖೆ ಮುಂತಾದುವು ಇನ್ನೂ ಕೆಲವುಕಾಲ ಸರ್ಕಾರಿ ಸಚಿವರ ವಶದಲ್ಲಿಯೇ ಇರಬೇಕೆಂದು ಕೇಂದ್ರದ ಅಭಿಪ್ರಾಯವಿರುವುದಾಗಿ ಹೇಳಲಾಗಿದೆ.

ಶಾಲೆಯ ಆರಂಭೋತ್ಸವ

ಮೈಸೂರು ಏ ೨೪

ಹುಣಸೂರು ತಾ॥ ಮನುಗ್ನಹಳ್ಳಿಯಲ್ಲಿ ಜಿಲ್ಲಾಬೋರ್ಡು ಮತ್ತು ಅಲ್ಲಿಯ ಸಾಹುಕಾರರಾದ ಶ್ರೀ ವೆಂಕಟರಮಣೇಗೌಡರು, ಕಟ್ಟಿಸಿರುವ ಪಾಠಶಾಲೆಯ ಕಟ್ಟಡದ ಆರಂಭೋತ್ಸವವನ್ನು ಆರ್ಥಿಕಸಚಿವ ಶ್ರೀ ದಾಸಪ್ಪನವರು ನಿನ್ನೆ ಬೆಳಿಗ್ಗೆ ನೆರವೇರಿಸಿದರು. ಜಿಲ್ಲಾಬೋರ್ಡು ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಚಪ್ಪಲಿ ಕಳ್ಳನಿಗೆ ಚಪ್ಪಲಿ ಹಾರ

ಕತ್ತಿನಸುತ್ತ ಚಪ್ಪಲಿಹಾರ, ಬೆನ್ನಿನ ಹಿಂದೆ ಸಿಕ್ಕಾಪಟ್ಟೆ ಅರಚುವ ಬಾಲರ ಪರಿವಾರ, ಸಾಲದ್ದಕ್ಕೆ ನಗರದ ಬೀದಿಗಳಲ್ಲೆಲ್ಲಾ ಈ ರೀತಿ ಮೆರವಣಿಗೆ ಇಂಥದೊಂದು ಶಿಕ್ಷೆಯನ್ನು ಜಮ್ಮುವಿನಲ್ಲಿ ಚಪ್ಪಲಿಕಳ್ಳನಿಗೆ ವಿಧಿಸಲಾಯಿತು. ಈತ ಸ್ಥಳೀಕ ದೇವಾಲಯಗಳಿಗೆ ನಿತ್ಯಾಹೋಗಿ ಚಪ್ಪಲಿ ಎಗರಿಸುತ್ತಿದ್ದನೆಂದು ಒಂದು ಗುರುದ್ವಾರದ ಬಳಿ ಇದೇ ರೀತಿ ಚಪ್ಪಲಿ ಹಾರಿಸಲೆತ್ನಿಸಿದಾಗ, ಪುರೋಹಿತರು ಆಸಾಮಿಯನ್ನು ಪೋಲೀಸರಿಗೊಪ್ಪಿಸದೆ ಈ ರೀತಿ ಶಿಕ್ಷೆ ವಿಧಿಸಿದರು.

ಕಳ್ಳ ಟೆಲಿಗ್ರಾಂ ಕಳುಹಿದ ಆಪಾದನೆ ಮೇಲೆ ಬಂಧನ

ಯಾರದೋ ಸಹಿಯನ್ನು ಹಾಕಿ ಪ್ರಧಾನಿ ಲಿಯಾಕತ್ ಅಲಿಯವರಿಗೆ ಅಯೋಗ್ಯ ಟೆಲಿಗ್ರಾಮ್ ಕಳುಹಿಸುತ್ತಿದ್ದನೆಂಬ ಆಪಾದನೆಯ ಮೇಲೆ ನಗರದ ಪ್ರಮುಖ ವಾಣಿಜ್ಯ ಸಂಸ್ಥೆಯೊಂದರ ನೌಕರನಾಗಿರುವ ಅಸ್ಗರ್ ಅಷ್ರದ್ ಎಂಬುವನನ್ನು ಪೋಲೀಸರು ಬಂಧಿಸಿದರು.

ಆಹಾರಾಜ್ಞೆ ಉಲ್ಲಂಘನೆ

ಮೈಸೂರು ನಗರದಲ್ಲಿ ಆಹಾರಾಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಮಾರ್ಚಿ ಮಾಹೆ ಅಖೈರಿನ ವರೆಗೆ ಆಗಿರುವ ಶಿಕ್ಷೆಗಳು —

ರಹದಾರಿಯಿಲ್ಲದೆ ೩೫ ಪಲ್ಲಾ ಭತ್ತವನ್ನು ಹೊಂದಿದ್ದಕ್ಕಾಗಿ ರಾಮರಾಜ ಮೊಹಲ್ಲಾ ನಿವಾಸಿಯೊಬ್ಬನಿಗೆ ೨೫ ರೂ. ಜುಲ್ಮಾನೆ.

೮ ಪಲ್ಲಾ ಜೋಳ, ೩ ಪಲ್ಲಾ ಅಕ್ಕಿ ೯೦ ಸೇರು ರಾಗಿ ದಾಸ್ತಾನು ಹೊಂದಿದ್ದ ದೇವರಾಜ ಮೊಹಲ್ಲಾ ನಿವಾಸಿಯೊಬ್ಬನಿಗೆ ೨ ತಿಂಗಳು ಕಠಿಣ ಸಜಾ ೩೦ ರೂ. ಜುಲ್ಮಾನೆ.

ಆದಿಕರ್ನಾಟಕಪುರದಲ್ಲಿ ರಹದಾರಿಯಿಲ್ಲದೆ ಹೋಟೇಲು ನಡೆಯಿಸುತ್ತಲಿದ್ದುದಕ್ಕಾಗಿ ಇಬ್ಬರಿಗೆ ತಲಾ ೨೫ ರೂ ಜುಲ್ಮಾನೆ, ಕೋರ್ಟು ಏಳುವ ವರೆಗೆ ಸಾದಾ ಶಿಕ್ಷೆ.

ಅಕ್ರಮವಾಗಿ ನಡೆದ ಆಪಾದನೆ ಮೇಲೆ ೧ನೇ ಡಿವಿಜನ್ನಿನ ಒಂದು ರೇಷನ್ ಡಿಪೋದ ರಹದಾರಿಯನ್ನು ರದ್ದುಗೊಳಿಸಲಾಗಿದೆ

ರ ಣ ಜಿ ತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪ ರ ದೇ ಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಒಲಂಪಿಯಾ ಟಾಕೀಸ್

೨೬—೪—೫೧ರಿಂದ ಪ್ರತಿದಿನ ೩ ಆಟಗಳು

ರಣಜಿತ್‌ರವರ

* ಗ ರೀ ಬಿ *

ಪಾತ್ರ—ಗೀತಾಬಾಲಿ, ನಿರೂಪರಾಯ್, ಜೈರಾಜ್, ಉಷಾಕಿರಣ್.

ಬಡವ ಮತ್ತು ಬಲ್ಲಿದರ ತಿಕ್ಕಾಟ, ಮಾನವನ ನಿತ್ಯಜೀವನವನ್ನು ಪ್ರತಿಬಿಂಬಿಸುವ ಉ ನ್ನ ತ ಮ ಟ್ಟ ದ ಚ ಲ ನ ಚಿ ತ್ರ

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯುರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೪—೧೯೫೧ನೇ ಶುಕ್ರವಾರ [ಸಂಚಿಕೆ ೧೯೦

ಶತ್ರುಪಡೆಯ ನಷ್ಟ

ವಿಶ್ವ ಸೈನ್ಯಗಳಿಗೂ ಉತ್ತರಕೊರಿಯಾ ಮತ್ತು ಚೈನಾಪಡೆಗಳಿಗೂ ಬಿರುಸಾಗಿ ಕಾದಾಟ ನಡೆದು ಮೊನ್ನೆ ಒಂದು ದಿನದಲ್ಲಿಯೇ ಶತ್ರುಸೈನ್ಯದಲ್ಲಿ ೮೦೦೦ ಕ್ಕಿಂತ ಹೆಚ್ಚು ಜನ ಮಡಿದು ಅಥವಾ ಗಾಯಗೊಂಡು ನಷ್ಟಹೊಂದಿರುವರೆಂದು ವಿಶ್ವ ಸೈನ್ಯ ಪ್ರಕಟಣೆ ತಿಳಿಸುತ್ತದೆ.

ರದ್ದುಗೊಳಿಸಕೂಡದು

ಬರೋಡಾ ಮಾಜಿ ಮಹಾರಾಜ ಪ್ರತಾಪಸಿಂಗರನ್ನು ಪದಚ್ಯುತರನ್ನಾಗಿ ಮಾಡಿರುವ ಆಜ್ಞೆಯನ್ನು ರದ್ದುಗೊಳಿಸಬಾರದು ಎಂದು 'ಬಿ' ವಿಭಾಗ ಪ್ರಾಂತ್ಯಗಳ ೧೫ ಮಂದಿ ಪಾರ್ಲಿಮೆಂಟಿನ ಸದಸ್ಯರು ಸಂಸ್ಥಾನಶಾಖಾ ಸಚಿವ ಶ್ರೀ ಎಂ. ಎ. ಗೋಪಾಲಸ್ವಾಮಯ್ಯಂಗಾರ'ರನ್ನು ಭೇಟಿ ಮಾಡಿ ಒತ್ತಾಯಪಡಿಸಿರುವರು.

ಆಹಾರ ಕೊರತೆ ನಿವಾರಣೆ ಪ್ರಥಮ ಕರ್ತವ್ಯ

ಅನಂತರ ಭಾಷಾವಾರು ಪ್ರಾಂತ್ಯರಚನೆ

ಭಾಷಾವಾರು ಪ್ರಾಂತ್ಯರಚನೆಯ ವಿಷಯದಲ್ಲಿ ಪಾರ್ಲಿಮೆಂಟಿನ ಸದಸ್ಯರಾದ ಶ್ರೀಗಳಾದ ಎಸ್. ನಿಜಲಿಂಗಪ್ಪ, ಶಂಕರರಾವ'ದೇವ್', ಬಿ. ಎಸ್. ಹಿರೆ, ದಾಮೋದರಮೆನನ್, ಟಿ. ಟಿ. ಕೃಷ್ಣಮಾಚಾರಿ ಮುಂತಾದವರು ಪ್ರಧಾನಿ ನೆಹರೂರವರಲ್ಲಿ ನಿಯೋಗ ಹೋಗಿದ್ದರು.

ಪಂಡಿತ ನೆಹರೂ ಈ ವಿಷಯವನ್ನು ತಾವು ಪರಿಶೀಲಿಸುವುದಾಗಿ ಭರವಸೆಯಿತ್ತರು. ಆದಾಗ್ಯೂ ಇಂದಿನ ಪರಿಸ್ಥಿತಿಯಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರದ ಆಡಳಿತ ವರ್ಗದವರೆಲ್ಲರೂ ಆಹಾರ ಕೊರತೆಯನ್ನು ನಿವಾರಿಸುವುದರಲ್ಲಿ ಮಗ್ನರಾಗಿರುವುದಾಗಿ ಪಂಡಿತ ನೆಹರೂ ಹೇಳಿರುವುದಾಗಿ ವರದಿಯಾಗಿದೆ. ಅಲ್ಲದೆ ಈ ವಿಷಯವನ್ನೆಲ್ಲಾ ಸಂಬಂಧಪಟ್ಟ ಪ್ರಾಂತ್ಯ ಮುಖಂಡರು ಸೇರಿ ತೀರ್ಮಾನಕ್ಕೆ ಬಂದು ಅನಂತರ ತಮ್ಮಲ್ಲಿ ಬರುವುದು ಉತ್ತಮವೆಂದು ಸೂಚಿಸಿರುವುದಾಗಿ ತಿಳಿಯಬರುತ್ತದೆ.

ಉಪನಯನ

ಮೈಸೂರು ನಗರದಲ್ಲಿ ಪಿ. ಟಿ. ಐ. ಮತ್ತು ಮೆಯಿಲ್ ಪತ್ರಿಕೆಯ ಬಾತ್ಮೀದಾರರಾದ ಶ್ರೀ ಎನ್. ಎನ್. ಶಾಸ್ತ್ರಿಗಳ ಮಗ ಚಿ|| ಶ್ರೀನಿವಾಸನಿಗೆ ನಿನ್ನೆ ಬ್ರಹ್ಮೋಪದ್ದೇಶವು ನಡೆಯಿತು. ನಗರದ ಅನೇಕ ಗಣ್ಯ ವ್ಯಕ್ತಿಗಳು ಪತ್ರಿಕೋದ್ಯೋಗಿಗಳು ಸತ್ಕಾರಕ್ಕೆ ದಯಮಾಡಿಸಿದ್ದರು.

ಇತರರಿಗೆ ನೌಕರಿಯಿಲ್ಲ

ಸಿಂಹಳದಲ್ಲಿರುವ ಪರ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಸಹ ಮುಂದಿನ ಮಾಹೆಯಿಂದ ಸಿಂಹಳರನ್ನು ವಿನಹ ಮತ್ಯಾರನ್ನು ನೌಕರಿಗೆ ತೆಗೆದುಕೊಳ್ಳದಿರುವಂತೆ ಒಪ್ಪಂದವು ಸರ್ಕಾರಕ್ಕೂ ಬ್ಯಾಂಕಿನ ಆಡಳಿತ ವರ್ಗಕ್ಕೂ ಆಗಿದೆ.

ಮಾಜಿ ರಾಣಿ ಅಡಿಗೆಯವಳಾಗಬೇಕಂತೆ

ಈಜಿಪ್ಟಿನ ದೊರೆಯಾಗಿದ್ದ ಖೇಡೈವ್ ಎರಡನೇ ಅಬ್ಬಾಸ್‌ಹಿಲಾಯ್'ರ ಪತ್ನಿ ೭೪ ವರ್ಷದ ದಿವಾವಿರ್ಡನ್ ರು ಈಗ ನಿರ್ಗತಿಕರಾಗಿ ಲಂಡನ್ನಿನಲ್ಲಿದ್ದು ಅಡಿಗೆ ಉದ್ಯೋಗವನ್ನು ಕೋರಿ ಪತ್ರಿಕೆಗಳಲ್ಲಿ ಜಾಹಿರಾತು ಮಾಡಿದ್ದರು. ಈಕೆಗೆ ೬೭ ಪತ್ರಗಳು ಬಂದಿವೆ. ರಾಯಲ್ ನೌಕಾಪಡೆಯಲ್ಲಿರುವ ೬೦ ವರ್ಷದ ಕ್ಯಾಪ್ಟನ್ ಒಬ್ಬನು ಇವಳನ್ನು ಮದುವೆಯಾಗಲು ಪತ್ರ ಬರೆದಿರುವನು.

ಭಾರತಕ್ಕೆ ಚೈನಾ ಆಹಾರ

ಭಾರತಕ್ಕೆ ಚೈನಾ ಈಗಾಗಲೇ ಕಳುಹಿಸಿರುವ ೫೦,೦೦೦ ಟನ್ ಆಹಾರದ ಜೊತೆಗೆ ಪುನಃ ೫೦೦೦೦ ಟನ್ ಆಹಾರವನ್ನು ಕಳುಹಿಸಲು ಭಾರತ—ಚೈನಾಕ್ಕೆ ಮೊನ್ನೆ ಒಪ್ಪಂದ ಸಹಿಯಾಗಿದೆ. ಸದ್ಯದಲ್ಲೇ ಈ ಆಹಾರವು ಭಾರತಕ್ಕೆ ಬರಲಿದೆ. ಚೈನಾವು ಭಾರತಕ್ಕೆ ೧೦ ಲಕ್ಷ ಟನ್ ಆಹಾರವನ್ನು ಸರಬರಾಯಿ ಮಾಡುವುದಾಗಿ ತಿಳಿಸಿದೆ.

ಸರ್ವರಿಗೂ ಪ್ರವೇಶ

ಎಲ್ಲಾ ಜಾತಿ, ಮತ, ಕೋಮುಗಳವರಿಗೂ, ವರ್ಗಗಳಿಗೂ ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಪ್ರವೇಶವಿರುವಂತೆ ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ.

ಉಳಿತಾಯ

ಭಾರತಸರ್ಕಾರದ ಆಯವ್ಯಯ ಪುನರ್ವಿಮರ್ಶೆ ಪ್ರಕಾರ ಈ ವರ್ಷ ಸುಮಾರು ೫೦-೫೫ ಕೋಟಿ ರೂಪಾಯಿ ಉಳಿತಾಯವಾಗುವ ಸಂಭವವಿದೆಯೆಂದು ಪಾರ್ಲಿಮೆಂಟಿನಲ್ಲಿ ಅರ್ಥಸಚಿವರು ಹೇಳಿರುವರು.

ನಟಶ್ರೇಷ್ಠ ಶ್ಯಾಮ್‌ನ ಅಕಾಲ ಮರಣ

ಈ ಉತ್ತಮ ನಾಯಕ, ನಟಶ್ರೇಷ್ಠನ ಜೀವನ ಕಥೆಗೆ ಮುಬ್ಬು ಇದ್ದಕ್ಕಿದ್ದಂತೆಯೇ ಕವಿಯಿತು. ತಾರುಣ್ಯದ ಉಚ್ಛಹಾಸದಲ್ಲಿ ಮೆರೆಯುತ್ತಿದ್ದ ಆತನ ಜೀವನ ನಾಟಕ ಅರಿಗೂ ಅರಿವಾಗದಂತೆಯೇ ಮುಗುಚಿಕೊಂಡಿತು. ಆತ ಮೃತ್ಯು ವಶನಾದ ಆಕಸ್ಮಿಕ ಭಾರಿಯಾದದ್ದೇನಲ್ಲ. ಫಿಲ್ಮಿಸ್ತಾನ್'ರವರ 'ಷಬೀಸ್ತಾನ್' ಎಂಬ ಚಿತ್ರದಲ್ಲಿ ಆತ ಕುದುರೆ ಸವಾರಿ ಮಾಡುವ ದೃಶ್ಯ ಒಂದು ಛಾಯಗ್ರಹಣವಾಗಬೇಕಿತ್ತು. ಶ್ಯಾಮ್ ವಿಖ್ಯಾತ ಸವಾರನೆಂದು ಎನಿಸಿಗೊಂಡಿದ್ದ.

ಛಾಯಗ್ರಹಣವಾದ ನಂತರ ಸ್ಥಳದಿಂದ ಶ್ಯಾಮ್ ಹಿಂದಿರುಗುತ್ತಿದ್ದ. ಇದ್ದಕ್ಕಿದ್ದಂತೆಯೇ ಆತ ಕುದುರೆಯಿಂದ ಉರುಳಿದ. ಕುದುರೆಯ ಓಟದ ವೇಗವೇನೂ ಅತಿಯಾಗಿರಲಿಲ್ಲ. ನಾವು ಆತನ ಸಹಾಯಕ್ಕೆಂದು ಓಡಿ ಆ ಸ್ಥಳಕ್ಕೆ ಹೋದಾಗ ಆತ ಮೆಲುಸಗೆ ಬಿರಿದ. ಸ್ವಲ್ಪ ತಲೆ ತಿರುಗುತ್ತಿದೆ ಎಂದು ಮೆಲ್ಲನುಸುರಿದ ಎಂದು ಫಿಲ್ಮಿಸ್ತಾನ್ ಕಂಪೆನಿಯ ತಯಾರಿಕಾಧಿಶ್ರೀ ಮುಖರ್ಜಿ ನುಡಿದಿರುವರು.

ಕಿವಿಯಿಂದ ಅಲ್ಪಪ್ರಮಾಣದಲ್ಲಿ ರಕ್ತ ಸುರಿಯಿತು. ಕೆನ್ನೆ ಊದಿಕೊಂಡಿತು. 'ಸ್ವಲ್ಪ ನೋವು' ಎಂದು ಶ್ಯಾಮ್ ನುಡಿದರು. ನೋವಿನ ಹೆಚ್ಚು ತೊಡಗಿದುದರಿಂದ ಆತನನ್ನು ನ್ಯೂಮೆರೀನ್ ಲೈನ್ಸ್‌ನಲ್ಲಿರುವ ಮುಂಬೈ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಅತ್ಯುತ್ತಮ ಔಷಧೋಪಚಾರ ಮಾಡಿಸಿದ್ದಾಯಿತು. ಆದರೆ ಅವರ ಸ್ಥಿತಿ ಉತ್ತಮವಾಗದೆ ಹೋಯಿತು. ಆತ ಮೃತನಾಗಿರುವನೆಂಬುದು ಸುತ್ತ ಮುತ್ತಲಿದ್ದವರಿಗೆ ಅರಿವಾಗುವುದರ ಮುನ್ನವೇ 'ಶ್ಯಾಮ್'ರ ಪ್ರಾಣ ಪಕ್ಷಿ ಹಾರಿಹೋಗಿದ್ದಿತು.

ಶ್ರೀ ಜಯಪ್ರಕಾಶ್ ನಾರಾಯಣರ ಘೋಷಣೆ

ಪ್ರಕೃತದ ಕಾಂಗ್ರೆಸ್ ಸರ್ಕಾರ ಕಾಗದದ ಮೇಲೆ ಯೋಜನೆಗಳನ್ನು ಸಿದ್ಧಗೊಳಿಸಿ ಮಹಾಜನರನ್ನು ಶೋಷಿಸಲು ಬಂಡವಾಳಗಾರರಿಗೆ ನೆರವಿತ್ತಿತ್ತು.

ಸರ್ಕಾರ ಕಾಂಗ್ರೆಸ್ಸಿನ ಸರ್ವೋದಯದ ಯೋಜನೆಯನ್ನು ಕಾರ್ಯಗತ ಮಾಡಲು ಸಿದ್ಧವಾದರೆ ನಾನು ಸಮತಾವಾದಿ ಪಕ್ಷವನ್ನು ಮುರಿದು ಕಾಂಗ್ರೆಸ್ಸಿಗೆ ಸೇರಲು ಸಿದ್ಧನಾಗಿದ್ದೇನೆ.

ಕಳೆದ ನಾಲ್ಕು ವರ್ಷಗಳ ಕಾಂಗ್ರೆಸ್ಸಿನ ಆಡಳಿತವನ್ನು ನೋಡಿ, ಅದರಲ್ಲೂ ಸರ್ದಾರ್ ಪಟೇಲರು ಕಣ್ಮರೆಯಾದ ಮೇಲಿನ ಈ ನಾಲ್ಕು ತಿಂಗಳ ಆಡಳಿತ ನೋಡಿದ ಮೇಲಂತೂ ನೆಹರೂ ಅವರಲ್ಲಿಯೂ ಅಥವಾ ಇನ್ನಾವುದೇ ವ್ಯಕ್ತಿಯಲ್ಲೂ ಆಶಾಭಾವನೆ ಹೊಂದಿರುವುದು ಸಾಧ್ಯವಿಲ್ಲವೆಂದು ನಾನು ಪರಮವಿಶಾದದಿಂದ ಸೂಚಿಸಬೇಕಾಗಿದೆ

ಎಂದು ಸಮತಾವಾದಿ ಪಕ್ಷದ ಮಹಾ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ಹೇಳಿರುವರು.

ಪಶುಗಣತಿ

ಎಲ್ಲಾ ಸಂಸ್ಥಾನಗಳು ತಮ್ಮ ಪ್ರದೇಶಗಳಿನ ಪಶುಸಂಪತ್ತಿಯ ಸಮಗ್ರ ಹಾಗೂ ವೈಜ್ಞಾನಿಕ 'ಗಣತಿ' ತೆಗೆದುಕೊಳ್ಳಬೇಕೆಂದು ಭಾರತ ಸರ್ಕಾರದವರು ಆದೇಶವಿತ್ತಿದ್ದಾರೆ.

ಮಿಂಚಿನಂತೆ ಸುದ್ದಿ ನಗರದಲ್ಲೆಲ್ಲಾ ಹಬ್ಬಿತು. ಸಹಸ್ರಾರು ಮಂದಿ ಆಸ್ಪತ್ರೆಯ ಆವರಣದಲ್ಲಿ ಕಿಕ್ಕಿರಿದು ನಿಂತರು. ಸಂಜೆ ಏಳು ಗಂಟೆಗೆ ದೇಹವನ್ನು ಹೊರಗೆ ತಂದು ಇಡಲಾಯಿತು. ದುಃಖವದನರಾದ ಜನತೆ ಅಂತಿಮ ದರ್ಶನ ಪಡೆದರು.

ಮೈಸೂರಿನಲ್ಲುದಯಿಸಿರುವ ನೂತನ ಪಕ್ಷದ ಕಾರ್ಯನೀತಿ

ಬೆಂಗಳೂರು ಏ. ೨೬

ಮೈಸೂರು ಜನತಾ ಪಕ್ಷದವರು ಈ ಬೆಳಿಗ್ಗೆ ನರಸಿಂಹರಾಜಾ ರಸ್ತೆಯಲ್ಲಿರುವ ತಮ್ಮ ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ಕರೆದಿದ್ದರು. ಪಕ್ಷದ ಮುಖಂಡರುಗಳಾದ ಶ್ರೀಗಳಾದ ಎಲ್. ಸಿದ್ದಪ್ಪ, ಬಿ. ವಿ. ಲಂಕಪ್ಪ, ಕೆ. ಎ. ನಾಗಣ್ಣ, ಎಂ. ಲಿಂಗೇಗೌಡ, ಎಂ. ಎಸ್. ಗುರುಪಾದಸ್ವಾಮಿ ಮುಂತಾದವರು ಹಾಜರಿದ್ದರು.

ಶ್ರೀ ಸಿದ್ದಪ್ಪನವರು ಸ್ವಾಗತ ಭಾಷಣ ಮಾಡಿದರು.

ನಂತರ ಪಕ್ಷದ ಚುನಾವಣಾ ಘೋಷಣೆಯ ಪ್ರಣಾಳಿಕೆಯನ್ನು ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಓದಿ ಹೇಳಿದರು. ಪಕ್ಷದ ಕಾರ್ಯಕ್ರಮ ಮತ್ತು ನೀತಿಯನ್ನು ವಿವರಿಸಿದರು.

ಕಾಂಗ್ರೆಸ್ ಪಕ್ಷದ ಕೀರ್ತಿ ಮತ್ತು ಪ್ರತಿಷ್ಠೆಗಳೆಲ್ಲಾ ಈಗ ಹೋಗಿಬಿಟ್ಟಿವೆ. ಅವರು ತಾವು ಮಾಡಿದ್ದ ಪ್ರತಿಜ್ಞೆಗಳನ್ನೆಲ್ಲಾ ಈಗ ಮುರಿದುಹಾಕಿದ್ದಾರೆ; ಅವರು ಮಾಡಿದ್ದ ಆಶ್ವಾಸನೆಗಳೆಲ್ಲಾ ಈಡೇರದೆ ನಿಂತಿವೆ. ಈ ಮಧ್ಯ ಜನರನ್ನು ಕೇಳುವವರೇ ಇಲ್ಲದಂತಾಗಿದೆ ಈ ದೃಷ್ಟಿಯಿಂದ ದೇಶದಲ್ಲಿ ಶಾಂತಿಯುತ ಪ್ರಜಾಪ್ರಭುತ್ವ ಕ್ರಾಂತಿ ಮಾಡುವುದಕ್ಕಾಗಿ ಜನತಾ ಪಕ್ಷವನ್ನು ಸ್ಥಾಪಿಸಲಾಗಿದೆ ಎಂಬುದಾಗಿ ಅವರು ವಿವರಿಸಿದರು.

ದೇಶದಲ್ಲೀಗ ಇಂತಹ ಶಾಂತಿಯುತ ಕ್ರಾಂತಿ ಪ್ರಾರಂಭವಾಗಿದೆಯೆಂದೂ ಅದನ್ನುರೂಢಿಸಿ ಪ್ರಗತಿಪರ ವಿರೋಧ ಪಕ್ಷವಾಗಬೇಕೆಂಬುದೇ ಜನತಾ ಪಕ್ಷದ ಉದ್ದೇಶವೆಂದೂ ಹೇಳಲಾಯಿತು.

ಕೆಲವರ ಕೈಯಲ್ಲೇ ಅಧಿಕಾರ ಕೇಂದ್ರೀಕೃತವಾಗುವುದನ್ನು ಜನತಾ ಪಕ್ಷವು ವಿರೋಧಿಸುತ್ತದೆ. ಜನತೆಗೆ ಸಂಪೂರ್ಣ ಅಧಿಕಾರ ವರ್ಗಾಯಿಸ ಬೇಕೆಂಬುದೇ ಪಕ್ಷದ ಪ್ರತಿಜ್ಞೆ ಎಂಬುದಾಗಿ ಶ್ರೀ ಗುರುಪಾದಸ್ವಾಮಿಗಳು ಹೇಳಿದರು.

ಆರ್ಥಿಕ, ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ ಮತ್ತು ಕಾರ್ಮಿಕ ಸಮಸ್ಯೆಗಳ ವಿಚಾರದಲ್ಲಿ ಸರ್ಕಾರದ ಆಡಳಿತ ನೀತಿಯನ್ನು ವಿಮರ್ಶಿಸಿ ಪಕ್ಷದ ನೀತಿಯನ್ನು ತಿಳಿಸಲಾಯಿತು.

ಈ ಪ್ರಣಾಳಿಕೆಯ ಆಧಾರದ ಮೇಲೆ ಸಾರ್ವತ್ರಿಕ ಚುನಾವಣೆಗಳಿಗೆ ಪಕ್ಷವು ತನ್ನ ಉಮೇದುವಾರರುಗಳನ್ನು ನಿಲ್ಲಿಸುವುದೆಂದೂ, ಎಲ್ಲಾ ಜಿಲ್ಲೆಗಳಲ್ಲೂ ತಾತ್ಕಾಲಿಕ ಸಮಿತಿಗಳನ್ನು ಸ್ಥಾಪಿಸಲಾಗುವುದೆಂದೂ, ಅಲ್ಲದೆ ಪಕ್ಷದ ಮುಖಂಡರಗಳು ಸಂಸ್ಥಾನಾದ್ಯಂತ ಪ್ರವಾಸ ಮಾಡುವರೆಂದೂ ತಿಳಿಸಲಾಯಿತು.

ಡಾ|| ಅಂಬೇಡ್ಕರರ ರಾಜಿನಾಮೆ ?

ನಿಮ್ಮ ವರ್ಗದವರ ಪ್ರಾತಿನಿಧ್ಯದ ಬಗ್ಗೆ ಡಾ|| ಅಂಬೇಡ್ಕರರು ಇತ್ತಿದ್ದ ಹೇಳಿಕೆಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದು ಒಳಾಡಳಿತ ಸಚಿವ ಶ್ರೀ ಸಿ. ರಾಜಗೋಪಾಲಚಾರ್ಯರು ಕೊಟ್ಟ ಉತ್ತರದ ಬಗ್ಗೆ ಡಾ|| ಅಂಬೇಡ್ಕರರು ಪ್ರಕೃತ ಒಳಾಡಳಿತ ಶಾಖೆಯೊಡನೆ ಪತ್ರವ್ಯವಹಾರ ನಡೆಸುತ್ತಿರುವರೆಂದು ವರದಿಯಾಗಿದೆ.

ಪತ್ರದಲ್ಲಿ ಅಡಕವಾಗಿರುವ ಅಂಶದ ಬಗ್ಗೆ ಏನೊಂದೂ ಹೊರಬಿದ್ದಿಲ್ಲವಾದರೂ ಡಾ|| ಅಂಬೇಡ್ಕರರು ತಮ್ಮ ಹುದ್ದೆಗೆ ರಾಜಿನಾಮೆಕೊಡಲು ಯೋಚಿಸುತ್ತಿರುವರೆಂದು ತಿಳಿಯುಬರುತ್ತದೆ.

ಹೈದರಾಬಾದಿಗೆ ಮತ್ತಿಬ್ಬರು ಸಚಿವರು

ಹೈದರಾಬಾದ್ ಸಚಿವ ಮಂಡಲಿಯನ್ನು ವಿಸ್ತರಿಸಿ ಮತ್ತಿಬ್ಬರು ಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಯ.ಬರುತ್ತದೆ.

ಪಾರ್ಲಿಮೆಂಟು ಸದಸ್ಯ ಡಾ|| ಎಂ. ಸಿ. ರೆಡ್ಡಿ ಮತ್ತು ಹೈದರಾಬಾದಿನ ಕರ್ನಾಟಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ವಿರೂಪಾಕ್ಷಪ್ಪನವರು ಮಂತ್ರಿಗಳಾಗುವರೆಂದು ಹೇಳಲಾಗಿದೆ.

ಭೂಕಂಪ

ಪೂನಾಕ್ಕೆ ೬೦೦ ಮೈಲಿ ದೂರದಲ್ಲಿ ಭೂಕಂಪವಾಗಿರುವುದನ್ನು ಪೂನಾ ಸ್ಟೇಷನ್ನಿನಲ್ಲಿ ನಿನ್ನೆ ರಿಕಾರ್ಡಾಗಿದೆ.

ಉಮೇದುವಾರಿಕೆ

ಸರ್ಕಾರಿ ಕಂಟ್ರಾಕ್ಟು ಮತ್ತು ಲೈಸನ್ಸುಗಳನ್ನು ಹೊಂದಿರುವವರು ಪಾರ್ಲಿಮೆಂಟು ಸದಸ್ಯತ್ವಕ್ಕೆ ಅನರ್ಹರೆಂಬ ಕಾನೂನನ್ನು ಸದ್ಯದಲ್ಲೇ ತಿದ್ದುಪಡಿಲಾಗುವುದೆಂದು ತಿಳಿದುಬರುತ್ತಗೆ

ಚಂಡಮಾರುತದ ಹಾವಳಿ

ಚಂಡ ಮಾರುತ ಹಾವಳಿಯಿಂದ ಪೂರ್ವಬಂಗಾಳದ ನಾರಾಯಣಗಂಜಿನ ಬಳಿ ಘಾಟುಲಾ ಎಂಬಲ್ಲಿ ಅಡಾಂಜೀ ಸೆಣಬು ಕಾರ್ಖಾನೆಯ ೨೫ ಅಂಗುಲದಪ್ಪವಿದ್ದ ಒಂದು ಗೋಡೆಯು ಉರುಳಿ ೧೦೦ ಜನರು ಅಲ್ಲಿ ಸಿಕ್ಕಿ ಮಡಿದರು. ಇಲ್ಲಿಯವರೆಗೆ ೯ ಹೆಣಗಳನ್ನು ತೆರೆಯಲಾಗಿದೆ.

ರ ಣ ಜಿ ತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪ ರ ದೇ ಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ನ್ಯೂಸ್‌ಪ್ರಿಂಟ್ ಬೆಲೆ

ನೂಸ್‌ಪ್ರಿಂಟ್‌ನ ಬೆಲೆಯು ಒಂದು ಟನ್ನಿಗೆ ೩೬ ಪೌಂಡುಗಳಿದ್ದುದು ಈಗ ೧೨೦ ಪೌಂಡುಗಳಾಗಿದೆ.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಡ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಷರ್ಟುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

*

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮೈಸೂರು

ಫಾರ್ಮೋಸಾಕ್ಕೆ ಅಮೆರಿಕಾ ನಿಯೋಗ

ಫಾರ್ಮೋಸಾಕ್ಕೆ ಅಮೆರಿಕದ ೫೦೦-೬೦೦ ಮಿಲಿಟರಿ ಅಧಿಕಾರಿಗಳು ಮತ್ತು ಸೈನಿಕರನ್ನೊಳಗೊಂಡ ಒಂದು ಮಿಲಿಟರಿ ನಿಯೋಗವು ಹೋಗಲಿದೆ. ಅಲ್ಲಿರುವ ಕೋಮಿಂಟಾಂಗ್ ಸೈನ್ಯಗಳಿಗೆ ಶಿಕ್ಷಣ ಕೊಡುವುದೇ ನಿಯೋಗದ ಉದ್ದೇಶ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೨೬—೪—೧೯೫೧ನೇ ಗುರುವಾರ [ಸಂಚಿಕೆ ೧೬೦

ಬರೋಡಾ ಮಹಾರಾಜರ ಭೇಟಿ

ಪದಚ್ಯುತರಾದ ಬರೋಡಾ ಮಹಾರಾಜರು ರಾಷ್ಟ್ರಾಧ್ಯಕ್ಷರನ್ನು ಭೇಟಿ ಮಾಡಿ ತಮ್ಮನ್ನು ಪದಚ್ಯುತರಾಗಿ ಮಾಡಿದ ವಿಷಯದಲ್ಲಿ ತಮ್ಮ ಅಹವಾಲನ್ನು ಅವರಿಗೆ ಒಪ್ಪಿಸಿದರು.

ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ ಬಿಡುವರೆ ?

ತಮ್ಮ ಹೊಸ ಪಕ್ಷವನ್ನು ವಿಸರ್ಜಿಸುವುದಿಲ್ಲವೆಂದು ಶ್ರೀ ನೆಹರೂಗೆ ಪತ್ರ

ಆಚಾರ್ಯ ಕೃಪಲಾನಿ ಮತ್ತು ಶ್ರೀ ಕಿದ್ವಾಯಿಯವರು ಪ್ರಧಾನಿ ನೆಹರೂಗೆ ಒಂದು ಪತ್ರವನ್ನು ಬರೆದು ತಾವು ಹೊಸದಾಗಿ ಸ್ಥಾಪಿಸಿರುವ 'ಡೆಮೊಕ್ರಾಟಿಕ್' ಸಂಗಡವನ್ನು ವಿಸರ್ಜಿಸುವುದಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ.

ಈ ಪಕ್ಷಕ್ಕೆ ಸೇರುವವರೆಲ್ಲರೂ ಕಾಂಗ್ರೆಸ್ ಸಂಸ್ಥೆಯನ್ನು ಬಿಡುವರೆಂದೂ, ಸ್ವಲ್ಪ ಸಂಖ್ಯೆಯಲ್ಲಿಯಾದರೂ ವಿರೋಧ ಪಕ್ಷವಾಗಿ ಕೆಲಸ ಮಾಡಲು ಸಿದ್ಧರಿರುವರೆಂದು ಅವರು ಅಭಿಪ್ರಾಯಪಟ್ಟಿರುವರೆಂದು ಹೇಳಲಾಗಿದೆ.

ವಿಸರ್ಜಿಸುವುದಿಲ್ಲ

ಈಗಿರುವ ಪಾರ್ಲಿಮೆಂಟ್ ಸಭೆಯ ಅವಧಿಯು ನವೆಂಬರ್- ಡಿಸೆಂಬರಿನಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲೇ ಆಗಲಿ ಅಥವಾ ಚುನಾವಣೆಗಳ ಫಲಿತಾಂಶ ಹೊರಬಿದ್ದ ತಕ್ಷಣವೇ ಆಗಲಿ ರದ್ದಾಗುವುದಿಲ್ಲ ಎಂಬುದಾಗಿ ನ್ಯಾಯಾಂಗ ಮಂತ್ರಿ ಡಾ|| ಅಂಬೇಡ್ಕರ್‌ರವರಿಂದು ಪಾರ್ಲಿಮೆಂಟಿನಲ್ಲಿ ಶ್ರೀ ಸೋನಾವನೆಯವರಿಗೆ ಉತ್ತರವಾಗಿ ಹೇಳಿದರು.

ಹೊಸದಾಗಿ ಚುನಾಯಿತವಾದ ಕೇಂದ್ರ ಶಾಸನ ಸಭೆಗಳ ಪ್ರಥಮ ಅಧಿವೇಶನ ಸೇರಲು ಆಹ್ವಾನ ಮಾಡಿದ ತಕ್ಷಣ ಈ ಪಾರ್ಲಿಮೆಂಟು ರದ್ದಾಗುವುದು ಎಂಬುದಾಗಿಯೂ ಅವರು ತಿಳಿಸಿದರು

ನೂತನ ಯೋಜನೆ

ಮದರಾಸು ಸರ್ಕಾರವು ೧೫ ವರ್ಷದ ಸುಮಾರು ೧೮೦ ಕೋಟಿ ರೂಗಳ ನೂತನ ಯೋಜನೆಗಳನ್ನು ತಯಾರಿಸಿದೆ. ಇದರ ವಿಷಯವಾಗಿ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ಇತರ ಮಂತ್ರಿಗಳು ಸದ್ಯದಲ್ಲೇ ಆಯೋಜನಾ ಸಮಿತಿಯೊಡನೆ ಮಾತುಕತೆ ನಡೆಸಲಿರುವರು.

ಸಿನಿಮಾ ನಟಿ ಶ್ಯಾಮ್‌ಗೆ ಅಪಮೃತ್ಯು

'ಪಾಟಿಸ್ಟಾರ್' ಎಂಬ ಚಿತ್ರ ರಚನೆಯಾಗುತ್ತಲಿದ್ದಾಗ ಸಿನಿಮಾ ನಟ ಶ್ಯಾಮ್ ನಿನ್ನೆ ಕುದುರೆಯಿಂದ ಬಿದ್ದು ತಲೆಯೊಡೆದು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು. ೬ ಗಂಟೆ ಕಾಲ ಪ್ರಜ್ಞೆ ತಪ್ಪಿದ್ದು ಅನಂತರ ಮೃತಹೊಂದಿದನು. ಇವನಿಗೆ ಹೆಂಡತಿ ಒಬ್ಬ ಮಗಳೂ ಇದ್ದಾರೆ ಈತನಿಗೆ ೩೦ ವರ್ಷ ವಯಸ್ಸು.

ಪಾರಿವಾಳದ ದಸ್ತಗಿರಿ

ಕಲ್ಕತ್ತಾ ಪೋಲೀಸಿನವರು ಬಂಕುರಾ ಜಿಲ್ಲೆಯಿಂದ ಒಂದು ಪಾರಿವಾಳವನ್ನು ಹಿಡಿದು ತಂದಿದ್ದಾರೆ. ರಾಯಪುರದ ಪೋಲೀಸ್ ಗಡಿಯಲ್ಲಿರುವ ದುಂದಾರ ಗ್ರಾಮದ ಬಳಿ ಇದನ್ನು ಹಿಡಿಯಲಾಯಿತು. ಗುಪ್ತವಾಗಿ ಸಮಾಚಾರವನ್ನು ಕೊಳ್ಳುವ ಚಾರನ ಕೆಲಸವನ್ನು ಇದು ಮಾಡುತ್ತಲಿತ್ತೆಂದು ಅದು ಎಲ್ಲಿಗೆ ಯೇನು ಸುದ್ದಿ ಒಯ್ಯುತ್ತಿತ್ತೆಂಬುದನ್ನು ಪತ್ತೆ ಹಚ್ಚಲಾಗುತ್ತಲಿದೆ.

ರಾಯಭಾರಿಗಳ ವಲಸೆನಗರ

ದೆಹಲಿಯಲ್ಲಿ ಬ್ರಿಟನ್ ಕೊಂಡುಕೊಂಡಿರುವ ೨೪|| ಎಕರೆಯಲ್ಲಿ ೧೦ ಲಕ್ಷ ಪೌಂಡುಗಳ ವೆಚ್ಚದಿಂದ ರಾಯಭಾರಿ ಕಛೇರಿಯಲ್ಲಿರುವ ಎಲ್ಲಾ ನೌಕರರು ಮತ್ತು ಅಧಿಕಾರಿಗಳಿಗಾಗಿ ವಸತಿ ಗೃಹಗಳನ್ನು ಕಟ್ಟಲಿದೆ. ಇದಕ್ಕಾಗಿ ಬ್ರಿಟನ್ನಿನ ಪ್ರಸಿದ್ಧ ಶಿಲ್ಪಿ ಮಿ|| ಹರ್‌ಬರ್ಟ್ ರೋಸ್‌ರವರು ದೆಹಲಿಗೆ ಆಗಮಿಸಿರುವರು. ಈ ವಲಸೆನಗರವನ್ನು ಪೂರ್ತಿ ಮಾಡಲು ೭ ವರ್ಷ ಕಾಲವಾಗುವುದೆಂದು ಹೇಳಲಾಗಿದೆ.

ಭೇಟಿ

ಆಫ್ಘನ್ ಪ್ರಧಾನಿ ನಿನ್ನೆ ದಿನ ಅಧ್ಯಕ್ಷ ಟ್ರೂಮನ್ನರನ್ನು ಭೇಟಿ ಮಾಡಿದರು.

ಪಾರ್ಲಿಮೆಂಟರಿ ಕಾರ್ಯದರ್ಶಿಗಳು

ರಾಜ್ಯಾಡಳಿತ ಶಿಕ್ಷಣವನ್ನು ಕೊಡಲು ಕಾಂಗ್ರೆಸ್ ಪಕ್ಷದ ಕೆಲವರನ್ನು ಗೌರವ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನಾಗಿ ನೇಮಕಮಾಡಿಕೊಳ್ಳಬೇಕೆಂದಿದ್ದ ಯೋಜನೆಯನ್ನು ಕಾರ್ಯಗತಮಾಡಲು ಕಷ್ಟವಾಗುವುದೆಂದು ಕೈಬಿಡಲಾಗಿದೆಯೆಂದು ತಿಳಿಯಬರುತ್ತದೆ.

ತಾತ್ಕಾಲಿಕ ರಾಜ್ಯಾಂಗ

ನೇಪಾಳದಲ್ಲಿ ತಾತ್ಕಾಲಿಕ ರಾಜ್ಯಾಂಗವನ್ನು ಪ್ರಕಟಿಸಲಾಗಿದೆ. ಇದರಪ್ರಕಾರ ರಾಜಾ ತ್ರಿಭುವನರಿಗೆ ವಿಶೇಷ ಅಧಿಕಾರಗಳನ್ನೂ ಕೊಡಲಾಗಿದೆ. ಈ ರಾಜ್ಯಾಂಗವು ಎರಡು ವರ್ಷ ಕಾಲವಾದರೂ ಜಾರಿಯಲ್ಲಿರುವುದು. ಇಂಡಿಯಾ ಆಕ್ಟನ್ನು ಅನುಸರಿಸಿ ಈ ತಾತ್ಕಾಲಿಕ ರಾಜ್ಯಾಂಗವನ್ನು ತಯಾರಿಸಲಾಗಿದೆ.

ಅಸ್ಸಾಂನಲ್ಲಿ ಅನಾಹುತ

ಅಸ್ಸಾಂ ಪಾಕಿಸ್ತಾನ ಗಡಿಯಲ್ಲಿ ನದಿಗಳಲ್ಲಿ ಪ್ರವಾಹವು ವಿಶೇಷವಾಗಿ ಬಂದು ಮನೆಮಠಗಳು, ಫಸಲು ಎಲ್ಲಾ ನಾಶವಾಗಿದೆ. ಪ್ರವಾಹ ಭೀತಿಯು ಇನ್ನೂ ಹೆಚ್ಚುತ್ತಲಿದೆ. ಜನರ ರಕ್ಷಣೆಗಾಗಿ ಮೋಟಾರು ಬೋಟು, ಲೈಫ್ ಬೋಟ್ ಮುಂತಾದುವನ್ನು ಸರ್ಕಾರದವರು ಒದಗಿಸುತ್ತಲಿರುವರು. ಅನೇಕ ಕಡೆ ಭೂಕಂಪವಾಗಿ ಅದರಿಂದಲೂ ನಷ್ಟವಾಗಿದೆ. ಗೌಹತಿಯ ಬಳಿ ಅಸಂಖ್ಯಾತ ಜನರು ಚಂಡಮಾರುತದ ಹೊಡೆತಕ್ಕೆ ಸಿಕ್ಕಿ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಅಮೆರಿಕಾ ಗೋಧಿ

ಅಮೆರಿಕಾದಿಂದ ಬೊಂಬಾಯಿ ರೇವೆಗೆ ೪೩೦೦ ಟನ್ ಗೋಧಿಯು ಬಂದಿದೆ.

ಹೊರನಾಡು ಕನ್ನಡಿಗರ ಸಮ್ಮೇಳನ

ಗ್ವಾಲಿಯರ್ ಮಿತ್ರಮಂಡಲಿ ಆಶ್ರಯದಲ್ಲಿ ಏಪ್ರಿಲ್ ೨೮ನೇ ತಾ|| ಹೊರನಾಡು ಕನ್ನಡಿಗರ ೬ನೇ ಸಮ್ಮೇಳನವು ನಡೆಯುವುದು. ಕರ್ನಾಟಕ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟನೆಮಾಡುವರು. ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಂ. ವಿ. ರಾಮರಾಯರು ಅಧ್ಯಕ್ಷತೆ ವಹಿಸುವರು.

ರಾಷ್ಟ್ರಾಧ್ಯಕ್ಷರ ಸಂತೋಷ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಪತ್ರವನ್ನು ಬರೆದು ಸಂಸ್ಥಾನಕ್ಕೆ ತಾವು ಭೇಟಿ ಕೊಟ್ಟ ಕಾಲದಲ್ಲಿ ಮಾಡಲಾಗಿದ್ದ ತೃಪ್ತಿಕರವಾದ ಏರ್ಪಾಡುಗಳಿಗಾಗಿ ಹರ್ಷವನ್ನು ವ್ಯಕ್ತಪಡಿಸಿರುತ್ತಾರೆ. ಮೈಸೂರು ಮತ್ತು ಬೆಂಗಳೂರು ಪ್ರಜೆಗಳು ತೋರಿಸಿದ ಉತ್ಸಾಹಕ್ಕಾಗಿ ಅವರು ಅಭಿನಂದನೆಯನ್ನು ಸೂಚಿಸಿ, ತಾವು ಭೇಟಿಯಿತ್ತ ಹಲವು ಸಂಸ್ಥೆಗಳಲ್ಲಿ ನಡೆಯುವ ಜನೋಪಯುಕ್ತ ಕೆಲಸಗಳ ಬಗ್ಗೆ ತೆಗೆದುಕೊಳ್ಳಲಾದ ಶ್ರಮಕ್ಕಾಗಿ ಪ್ರಶಂಸಿಸಿದ್ದಾರೆ.

ಮೋಟಾರು ತೆರಿಗೆ

ಭಾರತಾದ್ಯಂತ ಏಕ ರೀತಿಯಾದ ಮೋಟಾರು ತೆರಿಗೆಯಿರುವುದು. ಸ್ಥಳೀಯ ಸಂಸ್ಥೆಗಳು ಆಕ್ಟ್ರಾಯಿ ಮತ್ತು ಗಡಿ ತೆರಿಗೆಗಳನ್ನು ವಜಾ ಮಾಡುವುದು ವಾಹನ ತೆರಿಗೆಗಳನ್ನು ಮಾತ್ರ ಸ್ಥಳೀಯ, ಸಂಸ್ಥೆಗಳು ವಿಧಿಸುವುದು ಮುಂತಾದ ವಿಷಯಗಳು ಸರ್ಕಾರ ಪರಿಶೀಲಿಸುತ್ತಲಿದೆ. ಇದಕ್ಕೆ ಸಂಬಂಧಪಟ್ಟ ಕಾನೂನು ಸದ್ಯದಲ್ಲೇ ಹೊರಬೀಳಬಹುದು.

ಆಹಾರ ನಿಯೋಗ

ಭಾರತದಿಂದ ಆಹಾರಮಂತ್ರಿ ಶ್ರೀ ಮುನ್ಷಿಯವರ ಮುಖಂಡತ್ವದಲ್ಲಿ ಆಹಾರ ನಿಯೋಗವು ಒಸ್ಲೋಕ್ಕೆ ಮೇ ೧ನೇ ತಾ|| ಹೊರಡಲಿದೆ.

ವಜಾ ಆದಕಾರಣ ತಿಳಿಯದು

ತಮ್ಮನ್ನು ಯಾವ ಕಾರಣಕ್ಕಾಗಿ ಕೆಲಸದಿಂದ ನಿವೃತ್ತಿಗೊಳಿಸಲಾಯಿತೆಂದು ಜನರಲ್ ಮೆಕಾರ್ಥರಿಗೆ ಇನ್ನೂ ತಿಳಿಯದು. ನಿವೃತ್ತಿಗೊಳಿಸುವಾಗ ಯಾವ ಕಾರಣಗಳನ್ನು ಕೊಡಲಿಲ್ಲ ಎಂದು ಜ|| ಮೆಕಾರ್ಥರರ ಮಿಲಿಟರಿ ಸೆಕ್ರೆಟರಿ ಮೇಜರ್ ಜನರಲ್ ವಿಟ್ನಿಯವರು ಹೇಳಿರುವರು.

ಸತಿ ಮೆಕಾರ್ಥರ್ ತನ್ನ ಗಂಡನ ನಿವೃತ್ತಿ ವಿಷಯವನ್ನು ರೇಡಿಯೋ ಮೂಲಕ ಕೇಳಿ ತನ್ನ ಗಂಡನಿಗೆ ತಿಳಿಸಿದ ೨೦ ನಿಮಿಷಗಳ ಮೇಲೆ ಜನರಲ್ ಮೆಕಾರ್ಥರಿಗೆ ಅಧಿಕೃತವಾಗಿ ನಿವೃತ್ತಿ ಆಜ್ಞೆಯು ಬಂದಿತೆಂದೂ ಅವರು ಹೇಳಿರುವರು.

ಮೇಜರ್ ಜನರಲ್ ರುದ್ರ

ಮದರಾಸಸ್ಸು ಏರಿಯಾ ಆಫೀಸರ್ ಕಮ್ಯಾಂಡಿಂಗ್‌ರಾಗಿರುವ ಮೇಜರ್ ಜನರಲ್ ಎ. ಎ. ರುದ್ರರವರಿಗೆ ಮೇ ೧೫ರಿಂದ ನಿವೃತ್ತರಾಗುವ ಮುನ್ನ ರಜಾ ಕೊಡಲಾಗಿದೆ. ಇವರು ಭಾರತಸೈನ್ಯದಲ್ಲಿ ೩೨ ವರ್ಷ ಕೆಲಸ ಮಾಡಿರುವರು.

ನಿವೃತ್ತಿ

ಅಸ್ಸಾಂಗೌರ್ನರ್ ಮಿ|| ಅಸಫಾಲಿಯವರ ೩ ತಿಂಗಳ ರಜದ ಕಾಲದಲ್ಲಿ, ಶ್ರೀ ವಿ. ಪಿ. ಮೆನನ್ನರು ಗೌರ್ನರಾಗಿದ್ದು ಅನಂತರ ನಿವೃತ್ತರಾಗುವರು.

ರಾಜಸ್ಥಾನದ ಮುಖ್ಯಮಂತ್ರಿ ಶ್ರೀ ಸಿ.ಎಸ್. ವೆಂಕಟಾಚಾರ್ ಅಥವಾ ಮಧ್ಯಭಾರತದ ರೀಜನಲ್ ಕಮಿಷನರ್ ಶ್ರೀ ಪಿ. ಎಸ್. ರಾವ್‌ರವರಲ್ಲೊಬ್ಬರು ಸಂಸ್ಥಾನ ಶಾಖಾ ಕಾರ್ಯದರ್ಶಿಗಳಾಗುವರೆಂದು ಊಹಿಸಲಾಗಿದೆ.

ಉಗ್ರ ಕಾದಾಟ

ಕೊರಿಯಾ ರಣರಂಗದಲ್ಲಿ ವಿಶ್ವಸಂಸ್ಥೆ ಸೈನ್ಯಗಳಿಗೂ, ಉತ್ತರ ಕೊರಿಯಾ ಚೈನಾ ಪಡೆಗಳಿಗೂ ಉಗ್ರ ಕಾದಾಟ ನಡೆಯುತಲಿದೆ. ಉತ್ತರದವರು ಎಡೆಬಿಡದೆ ಕಾದಾಡುತ್ತಲಿರುವರು.

ವಿಶ್ವಾಸ ನಿರ್ಣಯ.

ಬ್ರಿಟನ್ನಿನ ಕಾರ್ಮಿಕಪಕ್ಷದ ಕಾರ್ಯನಿರ್ವಾಹಕ ಮಂಡಲಿಯವರು ಮಿ|| ಅಟ್ಲಿಯವರ ಸರ್ಕಾರದಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿರುವರು. ಸಾಮೂಹಿಕ ರಕ್ಷಣಾ ವ್ಯವಸ್ಥೆಗಾಗಿ ಸರ್ಕಾರದ ಹಣದ ಬೇಡಿಕೆಯು ಅತ್ಯಾವಶ್ಯಕವೆಂದು ಅದನ್ನು ಪುಷ್ಟೀಕರಿಸಿರುವರು.

ಮುಷ್ಕರ ಮುಕ್ತಾಯ

ಪರ್ಶಿಯಾದ ಅಬಡಾನ್‌ನಲ್ಲಿ ೧೨ ದಿನದಿಂದ ನಡೆಯುತ್ತಲಿದ್ದ ಎಣ್ಣೆ ಗಣಿ ಕಂಪೆನಿಗಳ ಮುಷ್ಕರ ಮುಕ್ತಾಯವಾಗಿ ೨೮೦೦೦ ಕೆಲಸಗಾರರ ಪೈಕಿ ೨೪೦೦೦ ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿರುವರು.

ಸೆನೆಟ್ ವಿಚಾರಣೆ

ಜನರಲ್ ಮೆಕಾರ್ಥರವರ ವಜಾ ಬಗ್ಗೆ ಅಮೆರಿಕಾ ಸೆನೆಟ್ ನಡೆಸಲಿರುವ ವಿಚಾರಣೆಯು ಮೇ ೩ನೇ ತಾರೀಖು ಬಹಿರಂಗವಾಗಿ ನಡೆಯಲಿದೆಯೆಂದು ತಿಳಿಯಬರುತ್ತದೆ.

ಒಲಿಂಪಿಯಾ ಟಾಕೀಸ್

೨೬—೪—೫೧ರಿಂದ ಪ್ರತಿದಿನ ೩ ಆಟಗಳು

ರಣಜಿತ್‌ರವರ

* ಗರೀಬಿ *

ಪಾತ್ರ— ಗೀತಾಬಾಲಿ, ನಿರೂಪರಾಯ್, ಜೈರಾಜ್, ಉಷಾಕಿರಣ್.

ಬಡವ ಮತ್ತು ಬಲ್ಲಿದರ ತಿಕ್ಕಾಟ, ಮಾನವನ ನಿತ್ಯಜೀವನವನ್ನು ಪ್ರತಿಬಿಂಬಿಸುವ ಉನ್ನತ ಮಟ್ಟದ ಚಲನಚಿತ್ರ

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವೂ ಎರಡು ಊಟ, ರೈಲ್ವೆ ಛಾರ್ಜು ಸೇರಿ **೩೯೫|-** ರೂಗಳು

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

ಟ್ಯೂರಿಸ್ಟ್ ಬ್ಯೂರೋ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.



ಕಲ್ಕತ್ತಾದಲ್ಲಿರುವ ಚಿತ್ರರಂಜನ ರೈಲ್ವೆ ವರ್ಕ್‌ಷಾಪಿನಲ್ಲಿ ತಯಾರಾದ ರೈಲ್ವೆ ಇಂಜನ್ನು

ನಿಮ್ಮನ್ನು ಜೈಲಿಗೆ ಯಾಕೆ ಕಳುಹಿಸಬಾರದು

ಶ್ರೇಷ್ಠನ್ಯಾಯಾಸ್ಥಾನದ ಆಜ್ಞೆಯನ್ನು ಉಲ್ಲಂಘಿಸಿ ಕೋರ್ಟಿಗೆ ಅವಮಾನ ಮಾಡಿರುವುದಕ್ಕಾಗಿ ನಿಮ್ಮನ್ನು ಜೈಲಿಗೆ ಯಾಕೆ ಕಳುಹಿಸಬಾರದು ಎಂದು ಕಲ್ಕತ್ತಾ ಶ್ರೇಷ್ಠನ್ಯಾಯಾಲಯ ನ್ಯಾಯಮೂರ್ತಿ ಶ್ರೀ ಎಸ್. ಆರ್. ದಾಸಗುಪ್ತರವರು ಕಲ್ಕತ್ತಾದ ಅಡಿಷನಲ್ ಚೀಫ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟ್ ಶ್ರೀ ಕೆ.ಕೆ ದಾಸಗುಪ್ತರವರನ್ನು ಕೇಳಿರುವರು.

ಮುಷ್ಕರಕ್ಕೆ ಮತಗಣನೆ

ರೈಲ್ವೆ ನೌಕರರಿಗೆ ಬೇಡಿಕೆಗಳನ್ನು ಸರ್ಕಾರವು ಇನ್ನು ಈಡೇರಿಸದಿರುವುದರಿಂದ ಭಾರತಾದ್ಯಂತ ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂಬ ವಿಷಯದಲ್ಲಿ ಮತಗಣನೆಯನ್ನು ಜೂನ್ ೩ನೇ ತಾರೀಖಿನೊಳಗೆ ತೆಗೆದುಕೊಳ್ಳಲು ಅಖಿಲ ಭಾರತ ರೈಲ್ವೆ ಕೆಲಸಗಾರರ ಮಹಾ ಸಮಿತಿ ನಿರ್ಧರಿಸಿದೆ.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಪ್ಲಷ್, ನಲ್ಲಿ, ದೀಪ, ಬಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

ರಣಜಿತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ ಮೈಸೂರು.

ರಿ. ನಂ. ಎಂ. ೫೩೧೮ — ದಿನ ಪತ್ರಿಕೆ — ಫೋನ್. ೫೭೪೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬-೪-೧೯೫೧ನೇ ಗುರುವಾರ [ಸಂಚಿಕೆ ೧೯೦

ಫಾರ್ಮೋಸಾಕ್ಕೆ ಅಮೆರಿಕಾ ನಿಯೋಗ

ಫಾರ್ಮೋಸಾಕ್ಕೆ ಅಮೆರಿಕದ ೫೦೦-೬೦೦ ಮಿಲಿಟರಿ ಅಧಿಕಾರಿಗಳು ಮತ್ತು ಸೈನಿಕರನ್ನೊಳಗೊಂಡ ಒಂದು ಮಿಲಿಟರಿ ನಿಯೋಗವು ಹೋಗಲಿದೆ. ಅಲ್ಲಿರುವ ಕೋಮಿಂಟಾಂಗ್ ಸೈನ್ಯಗಳಿಗೆ ಶಿಕ್ಷಣ ಕೊಡುವುದೇ ನಿಯೋಗದ ಉದ್ದೇಶ.

ಬರೋಡಾ ಮಹಾರಾಜರ ಭೇಟಿ

ಪದಚ್ಯುತರಾದ ಬರೋಡಾ ಮಹಾರಾಜರು ರಾಷ್ಟ್ರಾಧ್ಯಕ್ಷರನ್ನು ಭೇಟಿ ಮಾಡಿ ತಮ್ಮನ್ನು ಪದಚ್ಯುತರಾಗಿ ಮಾಡಿದ ವಿಷಯದಲ್ಲಿ ತಮ್ಮ ಅಹವಾಲನ್ನು ಅವರಿಗೆ ಒಪ್ಪಿಸಿದರು.

ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ ಬಿಡುವರೆ ?

ತಮ್ಮ ಹೊಸ ಪಕ್ಷವನ್ನು ವಿಸರ್ಜಿಸುವುದಿಲ್ಲವೆಂದು ಶ್ರೀ ನೆಹರೂಗೆ ಪತ್ರ

ಆಚಾರ್ಯ ಕೃಪಲಾನಿ ಮತ್ತು ಶ್ರೀ ಕಿದ್ವಾಯಿಯವರು ಪ್ರಧಾನಿ ನೆಹರೂಗೆ ಒಂದು ಪತ್ರವನ್ನು ಬರೆದು ತಾವು ಹೊಸದಾಗಿ ಸ್ಥಾಪಿಸಿರುವ 'ಡೆಮೊಕ್ರಾಟಿಕ್' ಸಂಗಡವನ್ನು ವಿಸರ್ಜಿಸುವುದಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ.

ಈ ಪಕ್ಷಕ್ಕೆ ಸೇರುವವರೆಲ್ಲರೂ ಕಾಂಗ್ರೆಸ್ ಸಂಸ್ಥೆಯನ್ನು ಬಿಡುವರೆಂದೂ, ಸ್ವಲ್ಪ ಸಂಖ್ಯೆಯಲ್ಲಿಯಾದರೂ ವಿರೋಧ ಪಕ್ಷವಾಗಿ ಕೆಲಸ ಮಾಡಲು ಸಿದ್ಧರಿರುವರೆಂದು ಅವರು ಅಭಿಪ್ರಾಯಪಟ್ಟಿರುವರೆಂದು ಹೇಳಲಾಗಿದೆ.

ವಿಸರ್ಜನೆ ಸಂಪ್ರುಟಲ್ಲ

ಈಗಿರುವ ಪಾರ್ಲಿಮೆಂಟ್ ಸಭೆಯು ಅವಧಿಯು ನವೆಂಬರ್- ಡಿಸೆಂಬರಿನಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲೇ ಆಗಲಿ ಅಥವಾ ಚುನಾವಣೆಗಳ ಫಲಿತಾಂಶ ಹೊರಬಿದ್ದ ತಕ್ಷಣವೇ ಆಗಲಿ ರದ್ದಾಗುವುದಿಲ್ಲ ಎಂಬುದಾಗಿ ನ್ಯಾಯಾಂಗ ಮಂತ್ರಿ ಡಾ|| ಅಂಬೇಡ್ಕರ್‌ರವರಿಂದು ಪಾರ್ಲಿಮೆಂಟಿನಲ್ಲಿ ಶ್ರೀ ಸೋನಾವನೆಯವರಿಗೆ ಉತ್ತರವಾಗಿ ಹೇಳಿದರು.

ಹೊಸದಾಗಿ ಚುನಾಯಿತವಾದ ಕೇಂದ್ರ ಶಾಸನ ಸಭೆಗಳ ಪ್ರಥಮ ಅಧಿವೇಶನ ಸೇರಲು ಆಹ್ವಾನ ಮಾಡಿದ ತಕ್ಷಣ ಈ ಪಾರ್ಲಿಮೆಂಟು ರದ್ದಾಗುವುದು ಎಂಬುದಾಗಿಯೂ ಅವರು ತಿಳಿಸಿದರು.

ನೂತನ ಯೋಜನೆ

ಮದರಾಸು ಸರ್ಕಾರವು ೧೫ ವರ್ಷದ ಸುಮಾರು ೧೮೦ ಕೋಟಿ ರೂಗಳ ನೂತನ ಯೋಜನೆಗಳನ್ನು ತಯಾರಿಸಿದೆ. ಇದರ ವಿಷಯವಾಗಿ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ಇತರ ಮಂತ್ರಿಗಳು ಸದ್ಯದಲ್ಲೇ ಆಯೋಜನಾ ಸಮಿತಿಯೊಡನೆ ಮಾತುಕತೆ ನಡೆಸಲಿರುವರು.

ಸಿನಿಮಾ ನಟಿ ಶ್ಯಾಮ್‌ಗೆ ಅಪಮೃತ್ಯು

'ಶಾಟಿಸ್ತಾನ್' ಎಂಬ ಚಿತ್ರ ರಚನೆಯಾಗುತ್ತಲಿದ್ದಾಗ ಸಿನಿಮಾನಟಿ ಶ್ಯಾಮ್ ನಿನ್ನೆ ಕುದುರೆಯಿಂದ ಬಿದ್ದು ತಲೆಯೊಡೆದು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು. ೬ ಗಂಟೆ ಕಾಲ ಪ್ರಜ್ಞೆ ತಪ್ಪಿದ್ದ ಅನಂತರ ಮೃತಹೊಂದಿದಳು. ಇವಳಿಗೆ ಗಂಡ ಒಬ್ಬ ಮಗಳೂ ಇದ್ದಾರೆ ಈಕೆಗೆ ೩೦ ವರ್ಷ ವಯಸ್ಸು.

ಪಾರಿವಾಳದ ದಸ್ತಗಿರಿ

ಕಲ್ಕತ್ತಾ ಪೋಲೀಸಿನವರು ಬಂಕುರಾ ಜಿಲ್ಲೆಯಿಂದ ಒಂದು ಪಾರಿವಾಳವನ್ನು ಹಿಡಿದು ತಂದಿರುವರು. ರಾಯಪುರದ ಪೋಲೀಸ್ ಗಡಿಯಲ್ಲಿರುವ ದುಂದಾರ ಗ್ರಾಮದ ಬಳಿ ಇದನ್ನು ಹಿಡಿಯಲಾಯಿತು. ಗುಪ್ತವಾಗಿ ಸಮಾಚಾರವನ್ನು ಕೊಳ್ಳುವ ಚಾರನ ಕೆಲಸವನ್ನು ಇದು ಮಾಡುತ್ತಲಿತ್ತೆಂದು ಅದು ಎಲ್ಲಿಗೆ ಯೇನು ಸುದ್ದಿ ಒಯ್ಯುತ್ತಿತ್ತೆಂಬುದನ್ನು ಪತ್ತೆ ಹಚ್ಚಲಾಗುತ್ತಲಿದೆ.

ರಾಯಭಾರಿಗಳ ವಲಸೆನಗರ

ದೆಹಲಿಯಲ್ಲಿ ಬ್ರಿಟನ್ ಕೊಂಡುಕೊಂಡಿರುವ ೨೫|| ಎಕರೆಯಲ್ಲಿ ೧೦ ಲಕ್ಷ ಪೌಂಡುಗಳ ವೆಚ್ಚದಿಂದ ರಾಯಭಾರಿ ಕಛೇರಿಯಲ್ಲಿರುವ ಎಲ್ಲಾ ನೌಕರರು ಮತ್ತು ಅಧಿಕಾರಿಗಳಿಗಾಗಿ ವಸತಿ ಗೃಹಗಳನ್ನು ಕಟ್ಟಲಿದೆ. ಇದಕ್ಕಾಗಿ ಬ್ರಿಟನ್ನಿನ ಪ್ರಸಿದ್ಧ ಶಿಲ್ಪಿ ಮಿ|| ಹರ್‌ಬರ್ಟ್ ರೋಸ್‌ರವರು ದೆಹಲಿಗೆ ಆಗಮಿಸಿರುವರು. ಈ ವಲಸೆನಗರವನ್ನು ಪೂರ್ತಿ ಮಾಡಲು ೭ ವರ್ಷ ಕಾಲವಾಗುವುದೆಂದು ಹೇಳಲಾಗಿದೆ.

ಭೇಟಿ

ಆಫ್ಘನ್ ಪ್ರಧಾನಿ ನಿನ್ನೆದಿನ ಅಧ್ಯಕ್ಷ ಟ್ರೂಮನ್ನರನ್ನು ಭೇಟಿ ಮಾಡಿದರು.

ಪಾರ್ಲಿಮೆಂಟರಿ ಕಾರ್ಯದರ್ಶಿಗಳು

ರಾಜ್ಯಾಡಳಿತ ಶಿಕ್ಷಣವನ್ನು ಕೊಡಲು ಕಾಂಗ್ರೆಸ್ ಪಕ್ಷದ ಕೆಲವರನ್ನು ಗೌರವ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನಾಗಿ ನೇಮಕಮಾಡಿಕೊಳ್ಳಬೇಕೆಂದಿದ್ದ ಯೋಜನೆಯನ್ನು ಕಾರ್ಯಗತಮಾಡಲು ಕಷ್ಟವಾಗುವುದೆಂದು ಕೈಬಿಡಲಾಗಿದೆಯೆಂದು ತಿಳಿಯಬರುತ್ತದೆ.

ತಾತ್ಕಾಲಿಕ ರಾಜ್ಯಾಂಗ

ನೇಪಾಳದಲ್ಲಿ ತಾತ್ಕಾಲಿಕ ರಾಜ್ಯಾಂಗವನ್ನು ಪ್ರಕಟಿಸಲಾಗಿದೆ. ಇದರಪ್ರಕಾರ ರಾಜಾ ತ್ರಿಭುವನರಿಗೆ ವಿಶೇಷ ಅಧಿಕಾರಗಳನ್ನೂ ಕೊಡಲಾಗಿದೆ. ಈ ರಾಜ್ಯಾಂಗವು ಎರಡು ವರ್ಷ ಕಾಲವಾದರೂ ಜಾರಿಯಲ್ಲಿರುವುದು. ಇಂಡಿಯಾ ಆಕ್ಟನ್ನನುಸರಿಸಿ ಈ ತಾತ್ಕಾಲಿಕ ರಾಜ್ಯಾಂಗವನ್ನು ತಯಾರಿಸಲಾಗಿದೆ.

ಅಸ್ಸಾಂನಲ್ಲಿ ಅನಾಹುತ

ಅಸ್ಸಾಂ ವಾಯುವ್ಯ ಗಡಿಯಲ್ಲಿ ನದಿಗಳಲ್ಲಿ ಪ್ರವಾಹವು ವಿಶೇಷವಾಗಿ ಬಂದು ಮನೆಮಠಗಳು, ಫಸಲು ಎಲ್ಲಾ ನಾಶವಾಗಿದೆ. ಪ್ರವಾಹ ಭೀತಿಯು ಇನ್ನೂ ಹೆಚ್ಚುತ್ತಲಿದೆ. ಜನರ ರಕ್ಷಣೆಗಾಗಿ ಮೋಟಾರು ಬೋಟು, ಲೈಫ್ ಬೋಟ್ ಮುಂತಾದುವನ್ನು ಸರ್ಕಾರದವರು ಒದಗಿಸುತ್ತಲಿರುವರು. ಅನೇಕ ಕಡೆ ಭೂಕಂಪವಾಗಿ ಅದರಿಂದಲೂ ನಷ್ಟವಾಗಿದೆ. ಗೌಹತಿಯ ಬಳಿ ಅಸಂಖ್ಯಾತ ಜನರು ಚಂಡಮಾರುತದ ಹೊಡೆತಕ್ಕೆ ಸಿಕ್ಕಿ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಅಮೆರಿಕಾ ಗೋಧಿ

ಅಮೆರಿಕಾದಿಂದ ಬೊಂಬಾಯಿ ರೇವಿಗೆ ೪೩೦೦ ಟನ್ ಗೋಧಿಯು ಬಂದಿದೆ.

ಹೊರನಾಡು ಕನ್ನಡಿಗರ ಸಮ್ಮೇಳನ

ಗ್ವಾಲಿಯರ್ ಮಿತ್ರಮಂಡಲಿ ಆಶ್ರಯದಲ್ಲಿ ಏಪ್ರಿಲ್ ೨೮ನೇ ತಾ|| ಹೊರನಾಡು ಕನ್ನಡಿಗರ ೬ನೇ ಸಮ್ಮೇಳನವು ನಡೆಯುವುದು. ಕರ್ನಾಟಕ ಪ್ರಾಂತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟನೆಮಾಡುವರು. ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಂ. ವಿ. ರಾಮರಾಯರು ಅಧ್ಯಕ್ಷತೆ ವಹಿಸುವರು.

ರಾಷ್ಟ್ರಾಧ್ಯಕ್ಷರ ಸಂತೋಷ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಪತ್ರವನ್ನು ಬರೆದು ಸಂಸ್ಥಾನಕ್ಕೆ ತಾವು ಭೇಟಿ ಕೊಟ್ಟ ಕಾಲದಲ್ಲಿ ಮಾಡಲಾಗಿದ್ದ ತೃಪ್ತಿಕರವಾದ ಏರ್ಪಾಡುಗಳಿಗಾಗಿ ಹರ್ಷವನ್ನು ವ್ಯಕ್ತಪಡಿಸಿರುತ್ತಾರೆ. ಮೈಸೂರು ಮತ್ತು ಬೆಂಗಳೂರು ಪ್ರಜೆಗಳು ತೋರಿಸಿದ ಉತ್ಸಾಹಕ್ಕಾಗಿ ಅವರು ಅಭಿನಂದನೆಯನ್ನು ಸೂಚಿಸಿ, ತಾವು ಭೇಟಿಯಿತ್ತ ಹಲವು ಸಂಸ್ಥೆಗಳಲ್ಲಿ ನಡೆಯುವ ಜನೋಪಯುಕ್ತ ಕೆಲಸಗಳ ಬಗ್ಗೆ ತೆಗೆದುಕೊಳ್ಳಲಾದ ಶ್ರಮಕ್ಕಾಗಿ ಪ್ರಶಂಸಿಸಿದ್ದಾರೆ.

ಮೋಟಾರು ತೆರಿಗೆ

ಭಾರತಾದ್ಯಂತ ಏಕ ರೀತಿಯಾದ ಮೋಟಾರು ತೆರಿಗೆಯಿರುವುದು ಸ್ಥಳೀಯ ಸಂಸ್ಥೆಗಳು ಆಕ್ಟ್ರಾಯಿ ಮತ್ತು ಗಡಿ ತೆರಿಗೆಗಳನ್ನು ವಜಾ ಮಾಡುವುದು ವಾಹನ ತೆರಿಗೆಗಳನ್ನು ಮಾತ್ರ ಸ್ಥಳೀಯ ಸಂಸ್ಥೆಗಳು ವಿಧಿಸುವುದು ಮುಂತಾದ ವಿಷಯಗಳು ಸರ್ಕಾರ ಪರಿಶೀಲಿಸುತ್ತಲಿದೆ. ಇದಕ್ಕೆ ಸಂಬಂಧಪಟ್ಟ ಕಾನೂನು ಸದ್ಯದಲ್ಲೇ ಹೊರಬೀಳಬಹುದು.

ಆಹಾರ ನಿಯೋಗ

ಭಾರತದಿಂದ ಆಹಾರಮಂತ್ರಿ ಶ್ರೀ ಮುನ್ಷಿಯವರ ಮುಖಂಡತ್ವದಲ್ಲಿ ಆಹಾರ ನಿಯೋಗವು ಒಸ್ಟ್ರೇಲಿಯಾಕ್ಕೆ ಮೇ ೧ನೇ ತಾ|| ಹೊರಡಲಿದೆ.

ವಜಾ ಆದಕಾರಣ ತಿಳಿಯದು

ತಮ್ಮನ್ನು ಯಾವ ಕಾರಣಕ್ಕಾಗಿ ಕೆಲಸದಿಂದ ನಿವೃತ್ತಿಗೊಳಿಸಲಾಯಿತೆಂದು ಜನರಲ್ ಮೆಕಾರ್ಥರಿಗೆ ಇನ್ನೂ ತಿಳಿಯದು. ನಿವೃತ್ತಿಗೊಳಿಸುವಾಗ ಯಾವ ಕಾರಣಗಳನ್ನು ಕೊಡಲಿಲ್ಲ ಎಂದು ಜ|| ಮೆಕಾರ್ಥರರ ಮಿಲಿಟರಿ ಸೆಕ್ರಿಟರಿ ಮೇಜರ್ ಜನರಲ್ ವಿಟ್ನಿಯವರು ಹೇಳಿರುವರು.

ಸತಿ ಮೆಕಾರ್ಥರ್ ತನ್ನ ಗಂಡನ ನಿವೃತ್ತಿ ವಿಷಯವನ್ನು ರೇಡಿಯೋ ಮೂಲಕ ಕೇಳಿ ತನ್ನ ಗಂಡನಿಗೆ ತಿಳಿಸಿದ ೨೦ ನಿಮಿಷಗಳ ಮೇಲೆ ಜನರಲ್ ಮಕಾರ್ಥರಿಗೆ ಅಧಿಕೃತವಾಗಿ ನಿವೃತ್ತಿ ಆಜ್ಞೆಯು ಬಂದಿತೆಂದೂ ಅವರು ಹೇಳಿರುವರು.

ಮೇಜರ್ ಜನರಲ್ ರುದ್ರ

ಮದರಾಸನ್ನು ಜನರಲ್ ಆಫೀಸರ್ ಕಮ್ಯಾಂಡಿಗ್‌ರಾಗಿರುವ ಮೇಜರ್ ಜನರಲ್ ಎ. ಎ. ರುದ್ರರವರಿಗೆ ಮೇ ೧೫ರಿಂದ ನಿವೃತ್ತರಾಗುವ ಮುನ್ನ ರಜಾ ಕೊಡಲಾಗಿದೆ. ಇವರು ಭಾರತಸೈನ್ಯದಲ್ಲಿ ೩೨ ವರ್ಷ ಕೆಲಸ ಮಾಡಿರುವರು

ನಿವೃತ್ತಿ

ಅಸ್ಸಾಂಗವರ್ನರ್ ಮಿ|| ಅಸಫಾಲ್ಲಿಯವರ ೩ ತಿಂಗಳ ರಜದ ಕಾಲದಲ್ಲಿ, ಶ್ರೀ ವಿ. ಪಿ. ಮೆನನ್ನರು ಗೌರ್ನರಾಗಿದ್ದು ಅನಂತರ ನಿವೃತ್ತರಾಗುವರು.

ರಾಜಸ್ತಾನದ ಮುಖ್ಯಮಂತ್ರಿ ಶ್ರೀ ಸಿ.ಎಸ್. ವೆಂಕಟಾಚಾರ್ ಅಥವಾ ಮಧ್ಯಭಾರತದ ರೀಜನಲ್ ಕಮಿಷನರ್ ಶ್ರೀ ಪಿ. ಎಸ್. ರಾವ್‌ರವರಲ್ಲೊಬ್ಬರು ಸಂಸ್ಥಾನ ಶಾಖಾ ಕಾರ್ಯದರ್ಶಿಗಳಾಗುವರೆಂದು ಊಹಿಸಲಾಗಿದೆ.

ಉಗ್ರ ಕಾದಾಟ

ಕೊರಿಯಾ ರಣರಂಗದಲ್ಲಿ ವಿಶ್ವಸಂಸ್ಥೆ ಸೈನ್ಯಗಳಿಗೂ, ಉತ್ತರ ಕೊರಿಯಾ ಚೈನಾ ಪಡೆಗಳಿಗೂ ಉಗ್ರ ಕಾದಾಟ ನಡೆಯುತಲಿದೆ. ಉತ್ತರದವರು ಎಡೆಬಿಡದೆ ಕಾದಾಡುತ್ತಲಿರುವರು.

ವಿಶ್ವಾಸ ನಿರ್ಣಯ

ಬ್ರಿಟನ್ನಿನ ಕಾರ್ಮಿಕ ಪಕ್ಷದ ಕಾರ್ಯನಿರ್ವಾಹಕ ಮಂಡಲಿಯವರು ಮಿ|| ಅಟ್ಲಿಯವರ ಸರ್ಕಾರದಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿರುವರು. ಸಾಮೂಹಿಕ ರಕ್ಷಣಾ ವ್ಯವಸ್ಥೆಗಾಗಿ ಸರ್ಕಾರದ ಹಣದ ಬೇಡಿಕೆಯು ಅತ್ಯಾವಶ್ಯಕವೆಂದು ಅದನ್ನು ಪುಷ್ಟೀಕರಿಸಿರುವರು.

ಮುಷ್ಕರ ಮುಕ್ತಾಯ

ಪರ್ಶಿಯಾದ ಅಬಡಾರ್ನ್‌ನಲ್ಲಿ ೧೨ ದಿನದಿಂದ ನಡೆಯುತ್ತಲಿದ್ದ ಎಣ್ಣೆ ಗಣಿ ಕಂಪೆನಿಗಳ ಮುಷ್ಕರ ಮುಕ್ತಾಯವಾಗಿ ೨೮೦೦೦ ಕೆಲಸಗಾರರ ಪೈಕಿ ೨೪೦೦೦ ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿರುವರು.

ಸೆನೆಟ್ ವಿಚಾರಣೆ

ಜನರಲ್ ಮೆಕಾರ್ಥರವರ ವಜಾ ಬಗ್ಗೆ ಅಮೆರಿಕ ಸೆನೆಟ್ ನಡೆಸಲಿರುವ ವಿಚಾರಣೆಯು ಮೇ ೩ನೇ ತಾರೀಖು ಬಹಿರಂಗವಾಗಿ ನಡೆಯಲಿದೆಯೆಂದು ತಿಳಿಯುಬರುತ್ತದೆ.

ಒಲಂಪಿಯಾ ಟಾಕೀಸ್

೨೬—೪—೫೧ರಿಂದ ಪ್ರತಿದಿನ ೩ ಆಟಗಳು

ರಣಜಿತ್‌ರವರ

* ಗರೀಬಿ *

ಪಾತ್ರ— ಗೀತಾಬಾಲಿ, ನಿರೂಪರಾಯ್, ಜೈರಾಜ್, ಉಷಾಕಿರಣ್.

ಬಡವ ಮತ್ತು ಬಲ್ಲಿದರ ತಿಕ್ಕಾಟ, ಮಾನವನ ನಿತ್ಯಜೀವನವನ್ನು ಪ್ರತಿಬಿಂಬಿಸುವ ಉನ್ನತ ಮಟ್ಟದ ಚಲನಚಿತ್ರ

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವಹಿ ಎರಡು ಊಟ, ರೈಲ್ವೆ ಛಾರ್ಜು ಸೇರಿ ೨೯೫|- ರೂಗಳು

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

ಟ್ಯೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.



ಕಲ್ಕತ್ತಾದಲ್ಲಿರುವ ಚಿತ್ರರಂಜನ ರೈಲ್ವೆ ವರ್ಕ್‌ಷಾಪಿನಲ್ಲಿ ತಯಾರಾದ ರೈಲ್ವೆ ಇಂಜನ್ನು

ನಿಮ್ಮನ್ನು ಜೈಲಿಗೆ ಯಾಕೆ ಕಳುಹಿಸಬಾರದು

ಶ್ರೇಷ್ಠನ್ಯಾಯಾಸ್ಥಾನದ ಆಜ್ಞೆಯನ್ನು ಉಲ್ಲಂಘಿಸಿ ಕೋರ್ಟಿಗೆ ಅವಮಾನ ಮಾಡಿರುವುದಕ್ಕಾಗಿ ನಿಮ್ಮನ್ನು ಜೈಲಿಗೆ ಯಾಕೆ ಕಳುಹಿಸಬಾರದು ಎಂದು ಕಲ್ಕತ್ತಾ ಶ್ರೇಷ್ಠನ್ಯಾಯಾಲಯ ನ್ಯಾಯಮೂರ್ತಿ ಶ್ರೀ ಎಸ್. ಆರ್. ದಾಸಗುಪ್ತರವರು ಕಲ್ಕತ್ತಾದ ಅಡಿಷನಲ್ ಚೀಫ್ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟ್ ಶ್ರೀ ಕೆ.ಕೆ. ದಾಸಗುಪ್ತರವರನ್ನು ಕೇಳಿರುವರು.

ಮುಷ್ಕರಕ್ಕೆ ಮತಗಣನೆ

ರೈಲ್ವೆ ನೌಕರರಿಗೆ ಬೇಡಿಕೆಗಳನ್ನು ಸರ್ಕಾರವು ಇನ್ನು ಈಡೇರಿಸದಿರುವುದರಿಂದ ಭಾರತಾದ್ಯಂತ ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂಬ ವಿಷಯದಲ್ಲಿ ಮತಗಣನೆಯನ್ನು ಜೂನ್ ೩ನೇ ತಾರೀಖಿನೊಳಗೆ ತೆಗೆದುಕೊಳ್ಳಲು ಅಖಿಲ ಭಾರತ ರೈಲ್ವೆ ಕೆಲಸಗಾರರ ಮಹಾ ಸಮಿತಿ ನಿರ್ಧರಿಸಿದೆ.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರ ಣ ಜಿ ತ್

೨೦—೪—೫೧ರಿಂದ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪ ರ ದೇ ಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜೆ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೨೮—೪—೧೯೫೧ನೇ ಶನಿವಾರ [ಸಂಚಿಕೆ ೧೯೨

ಅಭಿವೃದ್ಧಿ ತೆರಿಗೆ

ಮದರಾಸ್ ಪ್ರಾಂತ್ಯದಲ್ಲಿ ನಡೆಯು ೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಹಣ ನ್ನೊದಗಿಸಲು ಎಲ್ಲಾ ಜಮೀನುಗಳ ೇಲೂ ವರ್ಷವೊಂದಕ್ಕೆ ೧೦೦ ರಿಂದ ೦೦ ರೂ. ಗಳ ಅಭಿವೃದ್ಧಿ ತೆರಿಗೆಯನ್ನು ಧಿಸುವ ಕಾನೂನನ್ನು ಆಗಸ್ಟನಲ್ಲಿ ನಡೆ ಬಲಿರುವ ಶಾಸನ ಸಭೆಯಲ್ಲಿ ಸರ್ಕಾರ ಂಡಿಸಲಿದೆ

ಹಿಮಾಲಯದಲ್ಲಿ ನ್ಯೂಸ್‌ಪ್ರಿಂಟ್ ಕಾರ್ಖಾನೆ

ಹಿಮಾಲಯ ಪರ್ವತದಲ್ಲಿ ಒಂದು ನ್ಯೂಸ್‌ಪ್ರಿಂಟ್ ಕಾರ್ಖಾನೆಯನ್ನು ಸ್ಥಾಪಿಸ ಬೇಕೆಂದುದ್ದೇಶಿಸಿ ಭಾರತ ಸರ್ಕಾರವು ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಶಾಖೆಯನ್ನು ಅಲ್ಲಿಯ ೩ ತಜ್ಞರನ್ನು ಕಳುಹಿಸುವಂತೆ ಕೇಳಿದೆ.

ಸಕ್ಕರೆ ಸಾಗಾಣಿಕೆಗೆ ಪ್ರತಿಬಂಧಕವಿಲ್ಲ

ಫ್ರಾನ್ಸ್ ಮತ್ತು ಸಿರಿಯಾ ಮಂತ್ರಿಮಂಡಲಗಳ ರಾಜೀನಾಮೆ

ದೆಹಲಿಯಲ್ಲಿ ಮದರಾಸು ಸಚಿವರು

ಮದರಾಸಿನಲ್ಲಿ ನಡೆಯಬೇಕಾಗಿರುವ ೇಸಾಯ, ಗ್ರಾಮಾಭಿವೃದ್ಧಿ, ಸಮಾಜ ೇವೆ, ಮರುವಸತಿ, ವಿದ್ಯುಚ್ಛಕ್ತಿ ಮುಂ ಾದ ಶಾಖೆಗಳ ಅಭಿವೃದ್ಧಿ ಕಾರ್ಯಗಳ ಿಷಯದಲ್ಲಿ ರಾಷ್ಟ್ರೀಯ ಆಯೋಜನಾ ಂಡಲಿಯೊಡನೆ ಮದರಾಸಿನ ಮುಖ್ಯ ಂತ್ರಿ ಮತ್ತು ಇತರ ಮಂತ್ರಿಗಳು ಾತುಕಥೆ ಪ್ರಾರಂಭಿಸಿರುವರು. ನಿನ್ನೆ ನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾ ಬರಾಜರವರು ಪ್ರಧಾನಿ ನೆಹರೂರವರ ್ನು ಭೇಟಿ ಮಾಡಿ ಜಾತೀಯ ಆಜ್ಞೆ ವಿ ಾರವಾಗಿ ಚರ್ಚೆ ನಡೆಸಿದರೆಂದು ತಿಳಿ ುಬರುತ್ತದೆ.

್ರೀ ರಾಜುರವರ ಜಾಮೀನು ಅರ್ಜಿ ತಳ್ಳಿಹಾಕಲಾಯಿತು

ಬೆಂಗಳೂರು ಏ. ೨೭

ವಿಷಪ್ರಾಶನ ಪ್ರಯತ್ನ ಆರೋಪದ ೊಕದ್ದಮೆಯಲ್ಲಿ ತಮ್ಮನ್ನು ಜಾಮೀನು ೇಲೆ ಬಿಡುಗಡೆ ಮಾಡಬೇಕೆಂದು ಶ್ರೀ ಎಲ್. ಎಸ್. ರಾಜುರವರೂ ಅವರ ಪುತ್ರ ್ರೀ ಎಲ್. ಆರ್. ಜಯರಾಮನ್‌ರವರೂ ಲ್ಲಿಸಿದ್ದ ಅರ್ಜಿಗಳನ್ನು ಸೆಷನ್ಸ್ ನ್ಯಾ ಯಾಧೀಶರು ತಳ್ಳಿಹಾಕಿದ ಬಗ್ಗೆ ಹೈಕೋ ್ಟನಲ್ಲಿ ರಿವಿಜನ್ ಅರ್ಜಿ ಸಲ್ಲಿಸಲಾಗಿತ್ತು ್ತು ಈ ಸಂಬಂಧವಾಗಿ ಜಸ್ಟಿಸ್ ಶ್ರೀ ಪಿ. ಾಸುದೇವಮೂರ್ತಿಯವರಿಂದು ತೀರ್ಪಿ ್ತು ಅರ್ಜಿಗಳನ್ನು ವಜಾ ಮಾಡಿ ಿರು.

ಶ್ರೀ ಬಿ. ಎಂ. ಕೃಷ್ಣನ್

ರಜಾದ ಮೇಲಿದ್ದ ಶ್ರೀ ಬಿ. ಎಂ. ್ರೃಷ್ಣನ್‌ರವರು ಇನ್ಶೂರೆನ್ಸ್ ಸೆಕ್ರೆಟರಿಗ ಾಗಿ ಪುನಃ ನೇಮಕವಾಗಿದ್ದಾರೆ.

ಹಿಂದೂ ಮಹಾ ಸಭೆಯ ಗುರಿ

"ಹಿಂದೂ ಮಹಾ ಸಭೆಯವರು ಬರ ಲಿರುವ ಮೊದಲನೆ ಮಹಾ ಚುನಾವಣೆಗಳ ಲ್ಲಿ ಭಾಗವಹಿಸಬೇಕು. ಹಿಂದೂ ರಾ ಷ್ಟ್ರವನ್ನು ಸ್ಥಾಪಿಸುವುದೇ ಹಿಂದೂ ಮ ಹಾಸಭೆಯ ಗುರಿ. ಬಂಡವಾಳಶಾಹಿ ತ ತ್ವಕ್ಕೂ ಸಮಾಜ ಸ್ವಾಮ್ಯವಾದ ತತ್ವಕ್ಕೂ ಪರಸ್ಪರ ಸಮಂಜಸವಾದ ಆರ್ಥಿಕ ನೀತಿ ಅನುಸರಿಸುವುದು" ಎಂಬುದಾಗಿ ಅಖಿಲ ಭಾರತ ಹಿಂದೂ ಮಹಾ ಸಭೆಯ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಚುನಾವ ಣಾ ಪ್ರಸಿದ್ಧ ಪತ್ರಿಕೆಯನ್ನು ತಯಾರಿ ಸಿದ್ದಾರೆ. ಭಾಷಾವಾರು ಪ್ರಾಂತರಚನೆ ಯು ಹಿಂದೂ ಮಹಾಸಭೆಯ ಗುರಿಯಾ ಗಿದೆ.

ಪತ್ರಿಕಾ ತೆರಿಗೆ ರದ್ದು

ಮದರಾಸು ಮತ್ತು ಮುಂಬಯಿ ಪ್ರಾಂತ್ಯ ಸರ್ಕಾರಗಳು ವೃತ್ತ ಪತ್ರಿಕೆಗಳ ಮೇಲೆ ವಿಧಿಸುತ್ತಿದ್ದ ಮಾರಾಟ ಮತ್ತು ಜಾಹಿರಾತು ತೆರಿಗೆಗಳನ್ನು ರದ್ದುಮಾಡುವ ಮಸೂದೆಯನ್ನು ಪಾರ್ಲಿಮೆಂಟು ಅಂಗೀಕ ರಿಸಿದೆ.

ಮಂತ್ರಿ ಮಂಡಲ ರಾಜೀನಾಮೆ

ತೈಲ ಕೈಗಾರಿಕೆಯನ್ನು ರಾಷ್ಟ್ರೀಕ ರಣ ಮಾಡಿಕೊಳ್ಳುವ ವಿಷಯದಲ್ಲಿ ಭಿನ್ನಾ ಭಿಪ್ರಾಯವೆದ್ದಿರುವುದರಿಂದ ಪರ್ಶಿಯಾ ಮಂತ್ರಿಮಂಡಲವು ರಾಜೀನಾಮೆಯಿತ್ತಿದೆ.

ಬಡ್ತಿ

ಪೋಲೀಸ್ ಇನ್ಸ್‌ಪೆಕ್ಟರುಗಳಾದ ಶ್ರೀ ಗಳಾದ ಕೆ. ಬಸಪ್ಪ ಎಂ. ರಾಮಸ್ವಾಮಿ ಮತ್ತು ಹೆಚ್. ವರದರಾಜಯ್ಯಂಗಾರ್‌ರ ನ್ನು ಅಸಿಸ್ಟೆಂಟು ಸೂಪರಿಂಟೆಂಡೆಂಟರಾ ಗಿ ಬಡ್ತಿ ಮಾಡಲಾಗಿದೆ.

ಚುನಾವಣಾ ಲೇಖನಗಳ ಪ್ರಸಾರ

ಮಹಾ ಚುನಾವಣೆ ವಿಷಯದಲ್ಲಿ ಮ ತದಾರರಿಗೆ ತಕ್ಕ ತಿಳುವಳಿಕೆಗಳನ್ನು ಕೊಡ ಲು, ಅಖಿಲ ಭಾರತ ರೇಡಿಯೋ ಕೇಂದ್ರ ದಿಂದ ಸಾರ್ವಜನಿಕ ಲೇಖನಗಳನ್ನು ಪ್ರ ಸಾರ ಮಾಡಲಾಗುವುದೆಂದು ಸಮಾಚಾರ ರಾಜ್ಯ ಸಚಿವ ಶ್ರೀ ದಿವಾಕರ್‌ರವರು ನಾ ಗಪುರದಲ್ಲಿ ಮಾತನಾಡುತ್ತಾ ಹೇಳಿರುವ ರು. ರಾಜಕೀಯ ಪಂಗಡದವರು ಭಾಷ ಣ ಮಾಡಲು ಈ ಕೇಂದ್ರಗಳನ್ನು ಉಪ ಯೋಗಿಸಬಹುದೆಂಬ ವಿಷಯದಲ್ಲಿ, ಆ ಪಂ ಗಡಗಳವರು ಒಂದು ನಿಬಂಧನೆಯಾದ ಹಂತ ಕ್ಕೆ ಬಂದು ಅವರ ಧ್ಯೇಯಗಳನ್ನು ಸ್ಪಷ್ಟ ಪಡಿಸಿದಲ್ಲಿ ಅನಂತರ ಆ ವಿಷಯಗಳನ್ನು ಪರಿಶೀಲಿಸಬಹುದೆಂದು ಅವರು ಹೇಳಿರುವು ದಾಗಿ ವರದಿಯಾಗಿದೆ.

ತಿಳುವಳಿಕೆಯಿಲ್ಲದವರ ಮಾತು

ಭಾರತದಲ್ಲಿ ಬಟ್ಟೆ ಬೆಲೆಯು ವಿಶೇಷವಾ ಗಿ ಏರಿಸುತ್ತಲಿರುವರೆಂದು ಆಪಾದನೆಯು ತಿಳುವಳಿಕೆಯಿಲ್ಲದವರು ಹೇಳುವ ಮಾತಾ ಗಿದೆ. ವಿದೇಶಗಳಿಂದ ಬರುತ್ತಲಿರುವ ಹ ತ್ತಿಯ ಬೆಲೆಯು ವಿಪರೀತವಾಗಿ ಏರಿ ಹೋಗುತ್ತಲಿರುವಾಗ ನಮ್ಮ ದೇಶದಲ್ಲಿ ಆ ಹತ್ತಿಯಲ್ಲಿ ತಯಾರಿಸುವ ಬಟ್ಟೆಯ ಬೆಲೆ ಯು ಹಾಗಾಗಿಯೇ ಏರಬೇಕಾಗಿದೆ. ಈ ವಿಷಯವನ್ನು ಚೆನ್ನಾಗಿ ಅರಿತಿರುವವರು ಈ ರೀತಿ ಆಪಾದನೆ ಮಾಡುವುದಿಲ್ಲವೆಂದು ಕೇಂದ್ರ ಕೈಗಾರಿಕಾ ಮಂತ್ರಿ ಮಿ|| ಮ ಹತಾಬ್‌ರವರು ಹೇಳಿರುವರು.

ಮಿ|| ರಿಚರ್ಡ್ ಕ್ಯಾಸೀ

ಬಂಗಾಳದ ಮಾಜಿ ಗೌರ್ನರ್ ಮಿ|| ರಿಚರ್ಡ್ ಕ್ಯಾಸೀಯವರು ಆಸ್ಟ್ರೇಲಿಯಾ ವಿದೇಶಾಂಗ ಸಚಿವರಾಗಿ ನೇಮಕವಾಗಿ ದ್ದಾರೆ.

ಫ್ರೆಂಚ್ ಮಂತ್ರಿಮಂಡಲದ ರಾಜೀನಾಮೆ

ಸಾರ್ವಜನಿಕ ಚುನಾವಣೆ ವಿಷಯದ ಲ್ಲಿ ತಮಗೆ ಬೆಂಬಲ ದೊರೆಯಲಿಲ್ಲವೆಂದು ಫ್ರೆಂಚ್ ಸರ್ಕಾರವು ರಾಜೀನಾಮೆ ಕೊ ಟ್ಟಿದೆ. ಈ ರಾಜೀನಾಮೆಯನ್ನು ಫ್ರೆಂ ಚ್ ರಾಷ್ಟ್ರಾಧ್ಯಕ್ಷರು ನಿರಾಕರಿಸಿ ಪುನಃ ಆ ವಿಷಯವನ್ನು ಶಾಸನ ಸಭೆಯಲ್ಲಿ ಮಂ ಡಿಸಬೇಕೆಂದು ಸೂಚಿಸುತ್ತಿದ್ದಾರೆ.

ಕೇಡಿಗಳ ದಸ್ತಗಿರಿ

ಮೈಸೂರು ಏ. ೨೧

ಅನ್ವರ್ ಅಲಿಯಾಸ್ ಪೈಲ್ವಾನ್, ಬಾಲಾಜಿ ಅಲಿಯಾಸ್ ಬಾಲು, ಸಯ್ಯದ್ ಅಹ ಮ್ಮದ್, ಮಹಮದ್ ಉಸ್ಮಾನ್ ಅಲಿಯಾಸ್ ಗೋರೆಬಾಚೋರ್ ಪಾಷಾ ಅಲಿಯಾಸ್ ಪಾಷಾ, ಬಷೀರ್ ಅಹಮ್ಮದ್ ಅಲಿಯಾಸ್ ಬಷೀರ್ ಎಂಬ ೬ ಜನ ಹಳೆಯ ಕೇಡಿಗಳನ್ನು ಮೈಸೂರು ಸಿಟಿ ಕ್ರೈಂ ಬ್ರಾಂಚಿನವರು ದಸ್ತಗಿರಿ ಮಾಡಿರುವರು. ನಗರದಲ್ಲಿ ಇ ತ್ತೀಚೆಗೆ ಸುಮಾರು ೫೦೦೦ ರೂ. ಬೆಲೆ ಬಾಳುವ ಸಾಮಾನುಗಳ ಕಳುವಿನಲ್ಲಿ ಇ ವರುಗಳು ಸಂಬಂಧಪಟ್ಟವರಾಗಿರುವರು. ಕಳುವು ಮಾಡಿದ ಬಟ್ಟೆ, ಸೀರೆ, ಮುಂತಾ ದ ಕೆಲವು ಸಾಮಾನುಗಳನ್ನು ಪೋಲೀಸಿ ನವರು ಇವರಿಂದ ವಶಪಡಿಸಿಕೊಂಡಿರುವ ರು. ಸರ್. ಎ. ರಾಮಸ್ವಾಮಿ ಮೊದಲಿ ಯಾರ್‌ರ ಮನೆಯಲ್ಲಿ ವಿವಾಹ ಸಂದರ್ಭ ದಲ್ಲಿ ಕಳುವಾದ ಸಾಮಾನುಗಳೂ ದೊರೆ ತಿವೆ. ಅಲ್ಲದೆ ಈ ಕೇಡಿಗಳು ಊಟಿಗಾ ದಲ್ಲಿರುವ ಶ್ರೀ ಯು. ಎಲ್. ವಿಶ್ವನಾಥರಾ ವ್. ಪಂಜಾಬ್ ನ್ಯಾಷನಲ್ ಬ್ಯಾಂಕ್ ಮ್ಯಾನೇಜರು, ಶ್ರೀ ಬಾಪ್ಪ, ಊಟಿಗಾದ ಲ್ಲಿರುವ ಡಾ|| ವೆಂಕಟರಾಮ್, ಶ್ರೀ ಕೃ ಷ್ಣಸ್ವಾಮಿ ಶಾಸ್ತ್ರಿ ಇವರುಗಳ ಮನೆಯ ಲ್ಲಾದ ಕಳ್ಳತನಕ್ಕೂ ಸಂಬಂಧಪಟ್ಟಿರು ವರೆಂದು ತಿಳಿಯಬರುತ್ತದೆ.

ಪತ್ರವ್ಯವಹಾರ

ಸಮಾಚಾರ ಪತ್ರಿಕೆ ಸಂಪಾದಕರಲ್ಲಿ.—

ಸ್ವಾಮಿ,—

ಮೈಸೂರಿನಲ್ಲಿ ಸೀಮೆಂಟ್ ರೇಷನಿಂಗ್

ಸೀಮೆಂಟಿನ ಸರಬರಾಜು ಪರಿಸ್ಥಿತಿಯು ಉತ್ತಮಗೊಂಡಿದೆಯೆಂದು ಸರ್ಕಾರದವರು ಎರಡು ಟನ್ ಸೀಮೆಂಟನ್ನು ಯಾವ ರಹದಾರಿಯೂ ಇಲ್ಲದೆ ಪಡೆಯಬಹುದೆಂದೂ, ವ್ಯಾಪಾರಗಾರರು ತಮಗೆ ಬರುವ ಸರಬರಾಜಿನಲ್ಲಿ ಅರ್ಧ ಭಾಗವನ್ನಾದರೂ ಯಾವ ರಹದಾರಿಯೂ ಇಲ್ಲದೆ ಈ ಪ್ರಮಾಣದಲ್ಲಿ ಜನರಿಗೆ ಮಾರಬಹುದೆಂದೂ ಸರ್ಕಾರವು ಸೂಚನೆಯಿತ್ತಿದೆ. ಆದಾಗ್ಯೂ ಮೈಸೂರು ನಗರದಲ್ಲಿ ಸೀಮೆಂಟಿನ ಅಭಾವವು ವಿಶೇಷವಾಗಿರುತ್ತದೆ. ಎಷ್ಟು ದಿವಸ ಸೀಮೆಂಟ್ ವಿಕರಿಮಾಡುವ ಅಂಗಡಿಗೆ ಅಲೆದರೂ ಸೀಮೆಂಟೇ ದೊರೆಯುವುದಿಲ್ಲ. ಒಂದು ಅರ್ಜಿಯ ಫಾರಂನ್ನು ಡಿಪೋದಿಂದಲೇ ಸೀಮೆಂಟ್ ಬೇಕಾದವರು ಮುಂಗಡವಾಗಿ ಹತ್ತಾರುಗಂಟೆ ಕಾಲ ಕಾದು, ಅಲ್ಲಿಗೆ ಬರುವ ಪೌರಸಭಾ ಸದಸ್ಯರು ಬರುವನೊಡನೆ ಅದನ್ನು ಪಡೆಯಬೇಕು. ಅನಂತರ ಆ ಅರ್ಜಿಯನ್ನು ಭರ್ತಿ ಮಾಡಿ ಆಹಾರ ರೇಷನ್ ಕಾರ್ಡಿನೊಡನೆ ಕೊಡಬೇಕು. ೧೦ ಮೂಟೆ ಕೇಳಿದ್ದರೆ ಮಾರನೇ ದಿನ ಒಂದೆರಡು ದೊರೆಯುವುದು ಈ ರೇಷನ್ ಯಾಕೆ?

ಆಹಾರ ರೇಷನ್ ಕಾರ್ಡಿಗೂ ಸೀಮೆಂಟು ಕೊಡುವುದಕ್ಕೂ ಸಂಬಂಧವೇನು?

ಈ ವ್ಯವಹಾರದಲ್ಲಿ ಸಿಟಿ ಪೌರಸಭೆಯ ಸದಸ್ಯರ ಪ್ರವೇಶವೇಕೆ?

ಆಹಾರ ರೇಷನ್ ಕಾರ್ಡು ಸ್ಥಗಿತವಾದರೆ ಅದಕ್ಕೆ ಜವಾಬ್ದಾರರಾರು?

ಮಳೆಗಾಲ ಪ್ರಾರಂಭವಾಗಿದೆ. ಕಟ್ಟಡ ಕಟ್ಟುವುದಕ್ಕೆ ಅಲ್ಲದೆ ಸಣ್ಣಪುಟ್ಟ ರಿಪೇರಿಗಳಿಗೂ, ಒಂದೆರಡು ಚೀಲ ಬೇಕಾದರೆ ಇಲ್ಲದ ತೊಂದರೆಯನ್ನನುಭವಿಸಬೇಕಾಗಿದೆ.

ಸರಬರಾಯಿ ಪರಿಸ್ಥಿತಿ ಉತ್ತಮಗೊಂಡಿಯೆಂದು ಹೇಳುವಾಗ ಈ ರೀತಿ ಅವ್ಯವಸ್ಥೆಗೆ ಕಾರಣವೇನೆಂಬುದನ್ನು ಜಿಲ್ಲಾಧಿಕಾರಿಗಳು ಇತರ ಸಂಬಂಧಪಟ್ಟ ಅಧಿಕಾರಿಗಳೂ ಕೂಡಲೇ ಪರಿಶೀಲಿಸಿ ಜನರಿಗಾಗುತ್ತಲಿರುವ ತೊಂದರೆಯನ್ನು ನಿವಾರಿಸುವರೇ?

ನೊಂದವ.

ಹಡಗು ಸಿಡಿಯಿತು

ಮದ್ದು ಗುಂಡುಗಳನ್ನು ಹೊತ್ತು ಬರುತ್ತಲಿದ್ದ ಹಡಗೊಂದು ಜಿಬ್ರಾಲ್ಟರಿನಲ್ಲಿ ಸಿಡಿದು ಅನೇಕರು ಮಡಿದು ಅನೇಕರು ಗಾಯ ಹೊಂದಿರುವರೆಂದು ವರದಿಯಾಗಿದೆ.

ಜಾನುವಾರು

ಭಾರತದಲ್ಲಿ ಸುಮಾರು ೨೦ ಕೋಟಿ ದನಗಳಿವೆ. ಅವುಗಳಲ್ಲಿ ಶೇ. ೫೦ ರಷ್ಟು ನಿಷ್ಪ್ರಯೋಜಕವಾಗಿದೆಯೆಂದು ಹೇಳಲಾಗಿದೆ.

ಸ್ವಾಗತ

ಸರ್ವೋದಯ ಯೋಜನೆಯನ್ನು ಕಾಂಗ್ರೆಸ್ ಅನುಸರಿಸಿದರೆ ತಾವು, ತಮ್ಮ ಪಕ್ಷವೂ ಕಾಂಗ್ರೆಸ್ಸನ್ನು ಸೇರುವುದೆಂದು ಸಮತಾವಾದಿ ಪಕ್ಷದ ಮುಖಂಡ ಶ್ರೀ ಜಯಪ್ರಕಾಶ್ ನಾರಾಯಣ ಹೇಳಿರುವುದನ್ನು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಗೌತಮರವರು ಸ್ವಾಗತಿಸುತ್ತಾ ಕಾಂಗ್ರೆಸ್ ಧ್ಯೇಯವೂ ಅದೇ ಎಂದೂ ಅದನ್ನು ಸಂಪೂರ್ಣವಾಗಿ ಕಾಂಗ್ರೆಸ್ ಅನುಸರಿಸುವುದೆಂದು ಹೇಳಿರುವರು.

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವಹಿ ಎರಡು ಊಟ, ರೈಲ್ವೆ ಛಾರ್ಜು ಸೇರಿ ೨೯೫|-

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

ಟೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.



ಸಹಾಯ ಸೈನ್ಯ ಪದ್ಧತಿಯನ್ನೆ ಬಹಳ ಚುರುಕಾಗಿ ಮುಂದುವರಿಸುತ್ತಾ ಇಂಥಾ ಸಹಾಯ ಸೈನಿಕರ ತರಬೇತಿಗಾಗಿ ಬೇಕಾಗಬಹುದಾದ ಮೋಟಾರ್ ಸೈಕಲ್ಲುಗಳೇ ಮೊದಲಾಗಿ ಅಪಾರ ಯುದ್ಧ ಸಾಮಗ್ರಿಗಳನ್ನು ಸಜ್ಜುಗೊಳಿಸುವ ಒಂದು ದೃಶ್ಯ

ಸಕ್ಕರೆ ಪ್ರತಿಬಂಧಕವಿಲ್ಲ

ಬೆಂಗಳೂರು ಏ. ೨೭

ಸಕ್ಕರೆ ಕಾರ್ಖಾನೆಗಳಲ್ಲಿ ಭಾರತ ಸರಕಾರದವರು ನಿಗದಿಮಾಡಿರುವ ಬೇಸಿಕ್ ಕೋಟಾಕ್ಕಿಂತ ಹೆಚ್ಚಿಗೆ ಉತ್ಪತ್ತಿಯಾಗುವ ಸಕ್ಕರೆಯನ್ನು ಒಂದು ಸಂಸ್ಥಾನದಿಂದ ಮತ್ತೊಂದು ಸಂಸ್ಥಾನಕ್ಕೆ ತೆಗೆದುಕೊಂಡು ಹೋಗುವುದು ಭಾರತ ಸರ್ಕಾರದ ಹತೋಟಿಗೊಳಪಟ್ಟಿದೆ. ಆದರೆ ಅದನ್ನು ಸಂಸ್ಥಾನದೊಳಗೆ ಒಂದುಕಡೆಯಿಂದ ಮತ್ತೊಂದುಕಡೆಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರತಿಬಂಧಕವಿಲ್ಲ.

ಬೆಲೆಯ ಮೇಲೆ ಯಾವ ಹತೋಟಿಯೂ ಇರುವುದಿಲ್ಲ. ಆದರೆ ಈ ಸಕ್ಕರೆಯನ್ನು ಕಂಟ್ರೋಲ್ ಸಕ್ಕರೆ ವ್ಯಾಪಾರ ಮಾಡುವ ವ್ಯಾಪಾರಸ್ಥರು ರೇಷನ್ ಅಂಗಡಿ ಮೂಲಕ ಹಂಚಬಹುದಾಗಿಲ್ಲವೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸುತದ್ದೆ.

ಸಂಸ್ಕೃತ ಪ್ರೊ|| ರಿಗೆ ಸನ್ಮಾನ

ಮುಂದಿನ ತಿಂಗಳು ೧೧ ನೇ ತಾ|| ಸೌರಾಷ್ಟ್ರ ಪ್ರಭಾಸಪತ್ತನ ವೇರಾವಲಿನಿನಲ್ಲಿ ಭಗವಾನ್ ಶ್ರೀ ಸೋಮನಾಥ ಜ್ಯೋತಿರ್ಲಿಂಗ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಅಖಿಲಭಾರತೀಯ ಸಂಸ್ಕೃತ ಪರಿಷತ್ತಿಗೆ, ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ್ ಶ್ರೀ ಎಂ. ಲಕ್ಷ್ಮೀನರಸಿಂಹಯ್ಯನವರನ್ನು ಆಹ್ವಾನಿಸಲಾಗಿದೆ. ಶ್ರೀಯುತರು, ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಪರಿಷತ್ತಿನಲ್ಲಿ ಭಾಗವಹಿಸುವರು.

* ಪ್ರಭಾ *

೨೭—೪—೫೧ರಿಂದ

೩ನೆಯ ಕಡೇವಾರ

ಹಲ್ ಚಲ್

ಪಾತ್ರ— ನರ್ಗೀಸ್, ದಿಲೀಪ್ ಕುಮಾರ್ ಜೀವನ್, ಸಿತಾರ, ಯಾಕೂಬ್.

—ಮುಂದಿನ ಬದಲಾವಣೆ—

—: ಕಾಲೆ ಬಾದಲ್ :—

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಘುಲಾಲ್
ಅಂಡ್
ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೩೦–೪–೧೯೫೧ರ ಸೋಮವಾರ | ಸಂಚಿಕೆ ೧೯೭

RAGHULAL & Co.
CHEMISTS
Sayyaji Rao Road
MYSORE

ವಸ್ತುಪ್ರದರ್ಶನ ಅಗ್ನಿಗಾಹುತಿಯಾಗಿ ೫೦ ಲಕ್ಷ ರೂಪಾಯಿ ನಷ್ಟ

೬೦೦ ಅಂಗಡಿಗಳು ಭಸ್ಮವಾದುವು; ಪ್ರಾಣಹಾನಿಯೇನೂ ಇಲ್ಲ

ಬೆಂಗಳೂರು ಏ. ೨೯

ಕಬ್ಬನ್‌ಪಾರ್ಕಿನಲ್ಲಿ ಇದೇ ತಿಂಗಳು ೧೧ನೇ ತಾ|| ನಿಂದ ನಡೆಯುತ್ತಿದ್ದ ಅಖಿಲಭಾರತ ಕೈಗಾರಿಕೆ ಮತ್ತು ಲಲಿತಕಲಾ ಪ್ರದರ್ಶನಕ್ಕೆ ಈದಿನ ಮಧ್ಯಾಹ್ನ ಬೆಂಕಿ ಬಿದ್ದು ಬೆಂದುಹೋದ ಮಹಾ ದುರ್ಘಟನೆಯೊಂದು ನಡೆಯಿತು.

ಈ ದುರಂತದಿಂದ ೫೦ ಲಕ್ಷ ರೂ. ಮೀರಿ ನಷ್ಟವಾಗಿದೆಯೆಂದು ಹೇಳಲಾಗಿದೆ.

ಮಧ್ಯಾಹ್ನ ಸುಮಾರು ೧-೧೫ರ ವೇಳೆಗೆ ಅಗ್ನಿ ಸ್ಪರ್ಶವಾಗಿ ಕೇವಲ ಒಂದು ಗಂಟೆಯ ಕಾಲದಲ್ಲಿ ಸುಮಾರು ೬೦೦ ಸ್ಟಾಲುಗಳನ್ನು ಸುಟ್ಟು ಭಸ್ಮವಾದುವು.

ಸ್ಟಾಲುಗಳನ್ನು ಬಿದುರಿನ ತಡಿಕೆಗಳಿಂದ ಕಟ್ಟಿ ಮೇಲುಹೊದಿಕೆಗೆ ತೆರಗಿನಗರಿಯನ್ನು ಉಪಯೋಗಿಸಲಾಗಿತ್ತು. ಅವು ಬಿಸಲಿನಲ್ಲಿ ಒಣಗಿದ್ದುದರಿಂದ ಬಹುಬೇಗ ಬೇಗೆಗೆ ತುತ್ತಾದವು. ಸ್ಟಾಲುಗಳಲ್ಲಿ ಹತ್ತಿ ಉರಿಯುತ್ತಿದ್ದಾಗ ಎದ್ದ ಉರಿ ಮತ್ತು ಹೊಗೆ ನಗರದ ನಾನಾ ಭಾಗಗಳಿಗೆ ಕಂಡುಬಂದಿತು. ಉರಿಬಿದ್ದ ಕಾಲದಲ್ಲಿ ಒಂದೇಒಂದು ಅಗ್ನಿಶಾಮಕ ಯಂತ್ರವಿದ್ದು ನಂತರ ೮ ಯಂತ್ರಗಳು ಬಂದುವು. ಆದರೆ ನೀರಿನ ಸೌಕರ್ಯವಿಲ್ಲದಿದ್ದುದರಿಂದಲೂ ಉರಿ ಕಾಡ್ಗಿಚ್ಚಿನಂತೆ ಹರಡಿದುದರಿಂದಲೂ ಯಂತ್ರಗಳು ಉರಿಯನ್ನು ಶಮನಮಾಡಲು ಸಾಧ್ಯವಾಗಲಿಲ್ಲ. ವಸ್ತುಪ್ರದರ್ಶನದ ಆವರಣದಲ್ಲಿದ್ದ ಹುಣಸೆಮರಗಳು ಕೂಡ ಬೆಂದುನಿಂತಿವೆ.

ಬೆಂಕಿಬಿದ್ದ ಬಗ್ಗೆ ಕಾರಣ ಇನ್ನೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. 'ಒಂದು ವರದಿಯಂತೆ ಒಂದು ಹೊಟೇಲುಕಡೆಯಿಂದ ಅಗ್ನಿ ಆರಂಭವಾಯಿತು. ಮತ್ತೊಂದು ವರದಿಯಂತೆ ಒಂದು ಎಲೆಕ್ಟ್ರಿಕ್ ಕಂಪೆನಿಯ ಸ್ಟಾಲ್‌ಕಡೆ ಷಾರ್ಟ್ ಸರ್ಕ್ಯೂಟ್ ಆಯಿತು. ಜೂಜಾಟವಿದ್ದ ಸ್ಟಾಲ್ ಕಡೆಯಿಂದ ಬೆಂಕಿ ಆರಂಭವಾಯಿತೆಂದು ಕೆಲವರು ಹೇಳುತ್ತಾರೆ.' ಅಂತೂ ಈ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲ.

ಹಿಂದೂಸ್ಥಾನ್ ವಿಮಾನ ಕಾರ್ಖಾನೆ, ಮೈಸೂರು ಸರ್ಕಾರದ ಗ್ರಾಮಕೈಗಾರಿಕೆಗಳ ಸ್ಟಾಲು, ವಿಮಾನದಳದವರಿಟ್ಟಿದ್ದ ಸ್ಟಾಲು, ಜಾಲಹಳ್ಳಿಯ ಶಿಕ್ಷಣಕೇಂದ್ರದವರು ನಟ್ಟಿದ್ದ ಸಾಲುಗಳಿಗೆ ಬಹಳ ನಷ್ಟವಾಗಿದೆ.

ಖಾಸಗಿಯವರಲ್ಲಿ ಪೂರ್ಣಿಮಾ ಸಿಲ್ಕ್ ಹೌಸ್, ಶಾಂತಿ ಸಿಲ್ಕ್‌ಹೌಸ್, ರುಕ್ಮಿಣಿ ಹಾಲ್ ಕೇವಲ್‌ರಾಂ ಮುಂತಾದವರ ಬಟ್ಟೆ ಅಂಗಡಿಗಳು, ಕರ್ಣಾಟಕ, ನಾವೆಲ್ಟಿ, ಸೆಂಟ್ರಲ್ ಸ್ಟುಡಿಯೋಗಳು ಅನ್ನಪೂರ್ಣ ಕುಕ್ಕರ್, ಟ್ರಾಕ್ಟರುಗಳಿಟ್ಟಿದ್ದ ವೆಬ್ಸ್ ಕಂಪನಿ, ಕೋಲಾರದ ಕೆ. ಎಸ್. ಆರ್. ಇಂಡಸ್ಟ್ರೀಸ್ ಮೈಸೂರು ಕ್ರೋಂ ಮತ್ತು ಟ್ಯಾನಿಂಗ್ ಕಂಪನಿ ಭಾರಿ ನಷ್ಟಕ್ಕೊಳಗಾದ ಸ್ಟಾಲುಗಳಲ್ಲಿ ಕೆಲವು.

ಸುಂದರವಾಗಿ ಸಜ್ಜುಗೊಳಿಸಲ್ಪಟ್ಟಿದ್ದ ಕಲಾಮಂದಿರ, ಶ್ರೀ ಹನುಮಂತರಾವ್ ಮಾನೆಯವರು ನಿರ್ಮಿಸಿದ್ದ ಮಾದರಿ ಮರದ ಮನೆ ಹೋದ ಸುಂದರವಸ್ತುಗಳಲ್ಲಿ ಕೆಲವು.

ಸಾಮಾನುಗಳನ್ನು ರಕ್ಷಿಸುವ ಉದ್ದಿಶ್ಯದಿಂದ ತಂದುಹಾಕಿ ಹೋಗುತ್ತಿದ್ದ ಸಾಮಾನುಗಳನ್ನು ಅಪಹರಿಸಲು ಪ್ರಯತ್ನಿಸುತ್ತಿದ್ದ ಕೆಲವು ಮಂದಿಗಳನ್ನು ಪೋಲೀಸರು ಬಂಧಿಸಿದ್ದಾರೆ.

ಪೋಲೀಸರು ಮತ್ತು ಮಿಲಿಟರಿಯವರು ಪ್ರದರ್ಶನವಿದ್ದ ಸ್ಥಳವನ್ನು ಸುತ್ತುಗಟ್ಟಿ ನಿಂತಿದ್ದರು. ಬೆಂಕಿಬಿದ್ದ ಸುದ್ದಿ ಕೇಳಿದಕೂಡಲೇ ನಗರದಿಂದ ಲಕ್ಷಾಂತರ ಮಂದಿ ನೋಡಿ ಹೋಗುತ್ತಿದ್ದರು. ಮೇಯರ್‌ರವರಾದ ಶ್ರೀ ಆರ್. ಅನಂತರಾಮನ್‌ರವರು ಶಾಸನಸಭಾಧ್ಯಕ್ಷರಾದ ಶ್ರೀ ವಿ. ವೆಂಕಟಪ್ಪನವರು ಐ.ಜಿ.ಪಿ. ಯವರಾದ ಶ್ರೀ ಎಲ್. ನಾಗರಾಜರಾಯರು ಕಾರ್ಪೊರೇಷನ್ ಕಮಿಷನರ್ ಜನಾಬ್ ಸಫ್ದರ್ ಹುಸೇನ್‌ರವರು, ನಗರ ನ್ಯಾಯಾಧೀಶರಾದ ಶ್ರೀ ಎಲ್. ಲಕ್ಷ್ಮಣರಾಯರು, ಡಿ. ಎಸ್. ಪಿ. ಮತ್ತು ಎ. ಎಸ್. ಪಿ. ಗಳೂ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು.

ದುರ್ಘಟನೆಯ ಪರಿಣಾಮವಾಗಿ ಇಬ್ಬರಿಗೆ ಗಾಯವಾಯಿತು. ಅವರನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಲಾಗಿದೆ. ಅವರು ಉತ್ತಮಗೊಳ್ಳುತ್ತಿದ್ದಾರೆ.

ಪ್ರಪಂಚದಲ್ಲೆಲ್ಲಾ ಎತ್ತರವಾದ ಅಣೆಕಟ್ಟು

ಪಂಜಾಬಿನ ಮುಖ್ಯಮಂತ್ರಿ ಶ್ರೀ ಗೋಪೀಚಂದ ಭಾರ್ಗವರವರು ಸಿಟ್ಲೆಜ್ ನದಿಗೆ ಕಟ್ಟಲಾಗುವ ಭಕ್ರಾ ಅಣೆಕಟ್ಟಿನ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಅಣೆಕಟ್ಟಿನ ಎತ್ತರವು ೬೮೦ ಅಡಿ, ೪೦ ಚದುರಮೈಲಿ ವಿಸ್ತೀರ್ಣವನ್ನು ಜಲಾಶಯವು ಆಕ್ರಮಿಸಿಕೊಳ್ಳುವುದು. ೬೦೦ ಮೈಲಿ ಉದ್ದ ಕಾಲುವೆ ಮತ್ತು ೨೦೦೦ ಮೈಲಿಗಳ ಉದ್ದದ ಸಣ್ಣಸಣ್ಣ ಕಾಲುವೆಗಳನ್ನು ತೆಗೆಯಲಾಗುವುದು. ಈ ಅಣೆಕಟ್ಟೆಯು ೩೫ ಲಕ್ಷ ಎಕರೆಗಳ ಜಮೀನಿನ ಸಾಗುವಳಿಗೆ ಆಧಾರವಾಗುತ್ತದೆ.

ಸಿವಿಲ್ ಸಪ್ಲೈ ಮಂತ್ರಿಗಳ ಸಭೆ

ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ದೇಶದಲ್ಲಿ ಬಟ್ಟೆ ಹಂಚಿಕೆಯ ಕ್ರಮವನ್ನು ಉತ್ತಮಗೊಳಿಸಲು ಎಲ್ಲಾ ಪ್ರಾಂತ್ಯ ಸರ್ಕಾರಗಳ ಸಿವಿಲ್ ಸಪ್ಲೈ ಮಂತ್ರಿಗಳ ಸಭೆಯೊಂದನ್ನು ಕರೆದಿರುವರು. ಮೇ ೮ನೇ ತಾರೀಖು ದೆಹಲಿಯಲ್ಲಿ ಈ ಸಭೆ ಜರುಗಲಿದೆ.

ಮೈಸೂರಿನ ಮಂತ್ರಿ ಮಂಡಲದ ವಿಸ್ತಾರವೆ?

ವಾಣಿವಿಲಾಸಪುರ ಏ. ೨೯

ಮೈಸೂರು ಸಂಸ್ಥಾನದ ಮಂತ್ರಿ ಮಂಡಲವನ್ನು ವಿಸ್ತಾರಗೊಳಿಸಲಾಗುವುದೆಂದು ಸಂಬಳಕೆಗೆ ಅರ್ಹವಾದ ಕಡೆಗಳಿಂದ ವ್ಯಕ್ತಪಟ್ಟಿದೆ. ಶ್ರೀ ರೆಡ್ಡಿಯವರ ನಾಯಕತ್ವದಲ್ಲಿಯೇ ಮಂತ್ರಿ ಮಂಡಲವಿರುವುದೆಂದೂ ಈಗಿರುವವರ ಜೊತೆಗೆ ಈರ್ವರು ಅಥವ ಮೂವರೂ ಸೇರಬಹುದೆಂದೂ ಅದೇ ವೃತ್ತಗಳಿಂದ ಗೊತ್ತಾಗಿದೆ. ಶ್ರೀಗಳಾದ ಕೆ. ಹನುಮಂತಯ್ಯ, ಟಿ. ಸಿದ್ದಲಿಂಗಯ್ಯ ಮತ್ತು ಟಿ. ಸುಬ್ರಹ್ಮಣ್ಯಂರವರು ಸಚಿವರಾಗಲು ಇಷ್ಟಪಡಲಿಲ್ಲವೆಂದು ತಿಳಿದುಬಂದಿದೆ.

ಕಾಂಗ್ರೆಸ್ ನಾಯಕರ ಕೊಲೆ

ಜಲವಾರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಸ್ವಾಮಿಶಿವಾನಂದ ಜೀಯವರನ್ನು ವಾಧವಾನ್‌ನಲ್ಲಿ ಇಬ್ಬರೋ ದುರಾತ್ಮರು ಕುದುರೆಯ ಮೇಲೆ ಹೋಗಿ ಅರ್ಧ ರಾತ್ರಿಯಲ್ಲಿ ಗುಂಡುಹೊಡೆದು ಕೊಂದುಹಾಕಿರುವರು.

ಮೈಸೂರು ನಗರಾಭಿವೃದ್ಧಿ ಸಮಿತಿ ಪುನರ್‍ರಚನೆ

ಬೆಂಗಳೂರು ಏ. ೩೦

ಮೈಸೂರು ನಗರಾಭಿವೃದ್ಧಿ ಸಮಿತಿಯನ್ನು ಪುನರ್‍ರಚಿಸಿ ಸರ್ಕಾರದವರು ಆಜ್ಞೆ ಹೊರಡಿಸಿರುವರು (ಎರಡು ವರ್ಷ ಕಾಲ).

ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ (ಅಧ್ಯಕ್ಷರು) ಶ್ರೀ ಸರ್ದಾರ್ ಕೆ. ಬಸವರಾಜೇ ಅರಸ್, ಜನಾಬ್ ಮಹಮ್ಮದ್ ಸೇಟ್, ಶ್ರೀ ಎಲ್. ಕೃಷ್ಣಯ್ಯಂಗಾರ್, ಪುರಸಭಾ ಉಪಾಧ್ಯಕ್ಷರು, ಹೆಲ್ತ್ ಆಫೀಸರು ಮತ್ತು ಆರೋಗ್ಯ ಇಲಾಖಾ ಮುಖ್ಯಾಧಿಕಾರಿಗಳು. ಪೌರಸಭೆಯ ಪರವಾಗಿ ಶ್ರೀಗಳಾದ ಲಿಂಗಣ್ಣ ಮತ್ತು ಸೀತಾರಾಮಯ್ಯನವರು.

ಸಂಬಳದಲ್ಲಿ ಶೇಕಡ ೫ ರಷ್ಟು ಕಾಂಗ್ರೆಸ್ ನಿಧಿಗೆ

ಶಾಸನ ಸಭೆಗಳಲ್ಲಿ ಅಥವಾ ಮತ್ತಿತರ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ ಸದಸ್ಯರು ತಮ್ಮ ಸಂಬಳದಲ್ಲಿ ಶೇ|| ೫ ರಷ್ಟು ಭಾಗವನ್ನು ಪ್ರದೇಶ ಕಾಂಗ್ರೆಸ್ ಸಮಿತಿಯ ನಿಧಿಗೆ ಪಾವತಿಮಾಡಬೇಕೆಂದೂ ಆ ರೀತಿ ಚಂದಾಕೊಡದಿದ್ದಲ್ಲಿ ಅದನ್ನು ಶಿಸ್ತಿನ ಭಂಗ ಎಂದು ಪರಿಗಣಿಸಬೇಕೆಂದೂ ವಾಣಿವಿಲಾಸಸಾಗರದಲ್ಲಿ ನಡೆದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನ ವಿಶೇಷ ನಿರ್ಣಯವೊಂದನ್ನು ಅಂಗೀಕರಿಸಿತು. ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಭಾರತಕ್ಕೆ ಇರಾಕಿನಿಂದ ಗೋಧಿ

ಇರಾಕ್ ಸರಕಾರದ ಸರಬರಾಜು ಸಮಿತಿ ಭಾರತಕ್ಕೆ ೧೦ ಸಹಸ್ರ ಟನ್ ಗೋಧಿಯ ರಫ್ತಿಗೆ ಅನುಮತಿಕೊಡುವ ನಿರ್ಧಾರ ಮಾಡಿದೆ.

ರಾಜ್ಯಾಂಗ ತಿದ್ದುಪಡಿ ಕೂಡದು

ಅಖಿಲಭಾರತ ಹಿಂದೂ ಮಹಾಸಭೆ, ಭಾರತ ವಾಣಿಜ್ಯ ಮತ್ತು ಕೈಗಾರಿಕಾ ಸಂಘಟಿದಾ ಸಮಿತಿಯವರು, ರಾಜ್ಯಾಂಗವನ್ನು ಈಗಲೇ ತಿದ್ದುಪಡಿ ಮಾಡಕೂಡದೆಂದು ವಿರೋಧಿಸಿರುವರು.

ಮಹಾ ಮಸ್ತಕಾಭಿಷೇಕ

ದಕ್ಷಿಣ ಕನ್ನಡಾಜಿಲ್ಲೆಯ ಕಾರ್ಕಳದಲ್ಲಿ ಪ್ರಾರಂಭವಾದ ಗೋಮಟೇಶ್ವರ ಮಹಾ ಮಸ್ತಕಾಭಿಷೇಕ ಮಹೋತ್ಸವವು ನಿನ್ನೆ ಮುಕ್ತಾಯವಾಯಿತು. ಭಾರತದ ನಾನಾ ಪ್ರಾಂತ್ಯಗಳಲ್ಲಿ ಅನೇಕ ಭಕ್ತಾದಿಗಳು ಈ ಮಹೋತ್ಸವಕ್ಕೆ ಬಂದಿದ್ದರು. ಇನ್ನು ಮುಂದೆ ಈ ಮಹೋತ್ಸವವನ್ನು ೧೨ ವರ್ಷಕ್ಕೊಮ್ಮೆ ಮಾಡಬೇಕೆಂದು ನಿರ್ಧರಿಸಲಾಗಿದೆ. ಇಲ್ಲಿಯವರೆಗೂ ೩೦ ವರ್ಷಕ್ಕೊಮ್ಮೆ ನಡೆಯುತ್ತಲಿತ್ತು.

ಅಕ್ಕಿ ದಾನ

ಬರ್ಮಾದಲ್ಲಿರುವ ಭಾರತೀಯರೆಲ್ಲರೂ ಸೇರಿ ೧೦೦ ಟನ್ ಅಕ್ಕಿಯನ್ನು ಭಾರತಕ್ಕೆ ದಾನ ಮಾಡಿರುವರು. ಬರ್ಮಾಕ್ಕೆ ಹೊರಟಿರುವ ಅಕ್ಕಿ ನಿಯೋಗದ ನಾಯಕ ಶ್ರೀ ಕೆ. ಎಂ. ಮುನ್ಷಿಯವರು ಇದನ್ನು ಸ್ವೀಕರಿಸುವರು.

ಪಂಚವಾರ್ಷಿಕ ವರದಿ

೧೩೫ ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳ ಪಂಚವಾರ್ಷಿಕ ಯೋಜನೆಯನ್ನು ಮದರಾಸು ಸರ್ಕಾರವು ತಯಾರಿಸಿರುವುದನ್ನು ಕೇಂದ್ರ ಆಯೋಜನರ ಸಮಿತಿಯು ಪರಿಶೀಲಿಸುತ್ತಲಿದೆ. ಇದರಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ೮೦ ಕೋಟಿ ರೂ. ಗಳ ಯೋಜನೆಯೂ ಸೇರಿದೆ.

ರಾಷ್ಟ್ರೀಯ ಘನತೆಗೆ ಕುಂದು

ಭಾರತಕ್ಕೆ [illegible] ಜಿಸಿರುವ ಅಮೆರಿಕಾದ ಮಸೂದೆಯಲ್ಲಿ ಸೂಚಿತವಾಗಿರುವ ಷರತ್ತುಗಳು, ಭಾರತ ಸಾರ್ವಭೌಮತ್ವದ ಹಕ್ಕುಗಳಿಗೂ, ರಾಷ್ಟ್ರೀಯ ಘನತೆ ಗೌರವಗಳಿಗೂ ಕುಂದು ತರುವಂತಹುದಾಗಿದೆ ಎಂದು ಮಾಸ್ಕೋ ರೇಡಿಯೋ ಇಂಗ್ಲಿಷ್ ಭಾಷಣ ಪ್ರಸಾರದಲ್ಲಿ ತಿಳಿಸಿದೆ.

ನೆಹ್ರೂ ಭಾಷಣ

ಭಾರತ ಮಹಾ ಪ್ರಧಾನಿ ಪಂಡಿತ್ ನೆಹರೂರವರು ಮೇ ಒಂದನೆಯ ತಾರೀಖಿನಂದು ಅಖಿಲ ಭಾರತ ರೇಡಿಯೋ ದೆಹಲಿ ಕೇಂದ್ರದಿಂದ ರಾಷ್ಟ್ರವನ್ನುದ್ದೇಶಿಸಿ ಪ್ರಸಾರ ಭಾಷಣ ಮಾಡುವರು. ಎಲ್ಲಾ ಅಖಿಲ ಭಾರತ ರೇಡಿಯೋ ಕೇಂದ್ರಗಳಿಂದಲೂ ಮಹಾಪ್ರಧಾನಿಯವರು ಭಾಷಣವನ್ನು ಪುನಃಪ್ರಸಾರ ಮಾಡಲಾಗುವುದು.

ರಾಜಪಿಪ್ಲ ಮಹಾರಾಜರ ನಿಧನ

ಕುದುರೆ ಜೂಜಿನಲ್ಲಿ ಬಹಳ ಆಸಕ್ತಿವಂತರಾಗಿದ್ದ ೬೫ ವರ್ಷದ ರಾಜಪಿಪ್ಲದ ಮಹಾರಾಜರು ಲಂಡನ್ನಿನಲ್ಲಿ ನಿಧನರಾದರು.

ಪ್ರಪಂಚ ಪರ್ಯಟನ

ಬ್ರಿಟಿಷ್ ಕ್ರೀಡಾ ಮೋಟಾರಿನ ಕೆಲವು ಡ್ರೈವರುಗಳು ೩೦ ದಿನಗಳಲ್ಲಿ ಪ್ರಪಂಚ ಪರ್ಯಟನಕ್ಕಾಗಿ ಜೂನ್ ಒಂದನೇ ತಾರೀಖು ಹೊರಡಲಿರುವರು. ಪ್ರತ್ಯೇಕವಾಗಿ ತಯಾರಾದ ವಿಮಾನದಲ್ಲಿ ಈ ಮೋಟಾರು ವಾಹನಗಳು ಸಮುದ್ರವನ್ನು ದಾಟುವುವು. ಬೊಂಬಾಯಿಂದ ಕಲ್ಕತ್ತಾಗೆ ರಸ್ತೆ ಪ್ರಯಾಣವೂ ಈ ಸಂಚಾರದಲ್ಲಿ ಸೇರಿದೆ.

ಪರ್ಶಿಯಾ ನೂತನ ಪ್ರಧಾನಿ

ಪರ್ಶಿಯಾದ ವಿರೋಧ ಪಕ್ಷದ ನಾಯಕ ಡಾ|| ಮಹಮ್ಮದ್ ಮುಸ್ಸಾಡಿಕ್ ರವರು ಪರ್ಶಿಯಾ ನೂತನ ಪ್ರಧಾನಿಯಾಗಿ ಚುನಾಯಿತರಾಗಿದ್ದಾರೆ.

ಭಾರತ ಭಾಗವಹಿಸುವುದಿಲ್ಲ

ಕಾಶ್ಮೀರ ಮಧ್ಯಸ್ಥಿಕೆಗಾರರಾಗಿ ಡಾ|| ಫ್ರಾಂಕ್ ಗ್ರಹಾಂರನ್ನು ವಿಶ್ವಸಂಸ್ಥೆಯು ನೇಮಿಸುವ ಕಾಲದಲ್ಲಿ ಭಾರತವು ಅದರಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಯಬರುತ್ತದೆ.

ಪಾರ್ಲಿಮೆಂಟ್ ಅಧಿವೇಶನ ಮೇ ೨೩ರ ವರೆಗೆ

ಈಗ ನಡೆಯುತ್ತಲಿರುವ ಪಾರ್ಲಿಮೆಂಟು ಅಧಿವೇಶನವು ಮೇ ೨೩ರ ವರೆಗೂ ನಡೆಯುವುದೆಂದು ಹೇಳಲಾಗಿದೆ.

ಅಹಮದಾಬಾದಿನಲ್ಲಿ ಗೋಲಿಬಾರು

ಪೋಲೀಸಿನವರಿಗೂ ನಿರಾಶ್ರಿತರಿಗೂ ಘರ್ಷಣೆ ನಡೆದು ಅಹಮದಾಬಾದಿನಲ್ಲಿ ಪೋಲೀಸಿನವರು ಗುಂಡುಹಾರಿಸಿದರು.

ತೆರಿಗೆ ಹೆಚ್ಚಿಸುವ ಯೋಜನೆ

ಮನೆಗಂದಾಯ, ಉಪಹಾರ ಮಂದಿರಗಳ ಲೈಸನ್ಸ್ ಫೀಯನ್ನು ಹೆಚ್ಚಿಸಬೇಕೆಂದು ಬೆಂಗಳೂರು ಕಾರ್ಪೊರೇಷನ್ ಯೋಚಿಸುತ್ತಲಿದೆ.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಪ್ಲಷ್, ನಲ್ಲಿ, ದೀಪ, ಬಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್-ಕೊ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

೫೦ ದಿನಗಳ ಉತ್ತರ ಇಂಡಿಯಾ ಪ್ರವಾಸ

ಉತ್ತರ ಇಂಡಿಯಾದಲ್ಲಿ ಪ್ರಸಿದ್ಧವಾದ ಪಂಡರಾಪುರ, ಉಜ್ಜಯಿನಿ, ಆಗ್ರ, ಮಥುರಾ, ದೆಹಲಿ, ಹರಿದ್ವಾರ, ಕಾಶಿ, ಕಲ್ಕತ್ತಾ, ಗಯಾ, ಪೂರಿ ಮುಂತಾದ ೩೦ ಪ್ರಸಿದ್ಧ ಪಟ್ಟಣಗಳನ್ನು ನೋಡಲು ಸುಸಮಯ.

೧೧—೫—೧೯೫೧ ನೇ ತಾರೀಖು ಮದರಾಸಿನಿಂದ ರೈಲು ಹೊರಡುವುದು.

ದಿನವಹಿ ಎರಡು ಊಟ, ರೈಲ್ವೆ ಛಾರ್ಜು ಸೇರಿ ೨೯೫|-

ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿ

ಟ್ಯೂರಿಸ್ಟ್ ಬ್ಯೂರೊ (ಫೋನ್ ೫೭೪)

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ರ ಣ ಜಿ ತ್

೨೭—೪—೫೧ರಿಂದ

ಅಮೋಘವಾದ ೨ನೇ ವಾರ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪ ರ ದೇ ಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೫—೧೯೫೧ನೇ ಮಂಗಳವಾರ [ಸಂಚಿಕೆ ೧೯೫

ಡಕಾಯಿತರ ಪತ್ತೆ

ಬೊಂಬಾಯಿ ಲಾಯಡ್ಸ್ ಬ್ಯಾಂಕಿನಲ್ಲಿ ೧೨ ಲಕ್ಷ ರೂಪಾಯಿ ದರೋಡೆ ಮಾಡಿದವರ ಪೈಕಿ ೨೪ ವರ್ಷದ ಒಬ್ಬನು ಪೋಲೀಸಿನವರ ವಶದಲ್ಲಿರುವನು. ದರೋಡೆಗಾರರಲ್ಲವನೊಬ್ಬನೆಂದು ಗೊತ್ತು ಹಿಡಿಯಲಾಗಿದೆ. ಟ್ಯಾಕ್ಸಿ ಡ್ರೈವರನ್ನು ತಾನೇ ಕೊಂದಿರುವುದಾಗಿ ಅವನು ಒಪ್ಪಿಕೊಂಡಿರುವನೆಂದು ಹೇಳಲಾಗಿದೆ.

ರಕ್ಷಣಾ ಖರ್ಚು

ರಕ್ಷಣಾ ವ್ಯವಸ್ಥೆಗಾಗಿ ಅಧ್ಯಕ್ಷ ಟ್ರೂಮನ್ನರು ೬೦೦೦ ಕೋಟಿ ಡಾಲರುಗಳ ವೆಚ್ಚ ಮಂಜೂರಾತಿ ಕೇಳಿದ್ದಾರೆ. ಇದರ ಪೈಕಿ ೨೯ ಕೋಟಿ ಡಾಲರುಗಳು ಆಟಂಬಾಂಬು ತಯಾರಿಕೆಗೆ, ೨೨ ಕೋಟಿ ಡಾಲರುಗಳು ಆಟಂಬಾಂಬನ್ನು ಹೊರಲು ತಯಾರಿಸಲಿರುವ ೫೦೦೦೦ ಟನ್ನಿನ ಹಡಗು ನಿರ್ಮಾಣಕ್ಕಾಗಿ.

ಮಂತ್ರಿಮಂಡಲ ಬದಲಾವಣೆಗೆ ಅನುಮತಿಬೇಕಿಲ್ಲ

ಸೋಷಿಯಲಿಸ್ಟ್ ಪಂಗಡಕ್ಕೆ ಸೇರಿರೆಂದು ಶ್ರೀ ಕೃಪಲಾನಿಯವರಿಗೆ ಪತ್ರ

ಮೈಸೂರಿಗೆ ಪ್ರತ್ಯೇಕ ಮಾನ್ಯತೆ

ವಾಣೀವಿಲಾಸಪುರದಲ್ಲಿ ನಡೆದ ಎಂ. ಪಿ. ಸಿ. ಸಿ. ಸಭೆಯಲ್ಲಿ ಎ. ಮತ್ತು ಬಿ. ಪ್ರಾಂತ್ಯದ ತಾರತಮ್ಯ ಕೂಡದು ಎಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ನಾಯಕರ ಬಾಯಿಮಾತು

ಈ ನಿರ್ಣಯವನ್ನು ಮಂಡಿಸುವಾಗ ಶ್ರೀ ಎ. ಜಿ. ರಾಮಚಂದ್ರರಾಯರು ಭಾರತ ಸರ್ಕಾರದ ನಾಯಕರು ಮೈಸೂರಿನ ಮುಖ್ಯ ಮಂತ್ರಿಗಳಿಗೆ ಚರ್ಚೆಯ ಕಾಲದಲ್ಲಿ ಭಾಯಿ ಮಾತಿನಲ್ಲಿ ಭರವಸೆ ಕೊಟ್ಟಿದ್ದರು ಲಿಖಿತ ಮೂಲಕ ಭರವಸೆಬೇಕೆಂದು ಹೇಳಿದರು.

ಸರ್ದಾರರ ಅಭಿಪ್ರಾಯ

ಮೈಸೂರು ತಿರುವಾಂಕೂರು-ಕೊಚ್ಚಿನ್ ಒಕ್ಕೂಟದಂತಹ ಪ್ರಗತಿಯಲ್ಲಿರುವ ಸಂಸ್ಥಾನಗಳಿಗೆ ಈ ೩೭೧ನೇ ವಿಧಿ ಅನ್ವಯಿಸದಿರಬಹುದೆಂದು ಸರ್ದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ನಮಗೆ ಭರವಸೆ ದೊರೆಯಿತು ಎಂದು ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿದರು.

ಮಂತ್ರಿಮಂಡಲದ ಬದಲಾವಣೆಗೆ ಅನುಮತಿ

೩೭೧ನೇ ವಿಧಿಯಂತೆ ಮೈಸೂರಿಗೆ ವಿನಾಯಿತಿಯನ್ನು ರಾಷ್ಟ್ರಾಧ್ಯಕ್ಷರೇ ಕೊಡಲು ಅಧಿಕಾರವಿದೆ. ಮೈಸೂರಿನಲ್ಲಿ ಮಂತ್ರಿಮಂಡಲವನ್ನು ಬದಲಾಯಿಸಲು ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯ ಅನುಮತಿಪಡೆಯಬೇಕೆಂಬ ವಿಚಾರದಲ್ಲಿ ಕೇಂದ್ರದಿಂದ ತಮಗೇನೂ ಪತ್ರಬಂದಿಲ್ಲವೆಂದೂ ಶ್ರೀ ರೆಡ್ಡಿಯವರು ತಿಳಿಸಿದರು.

ಸಮಾನ ಹಕ್ಕು

ಹಿಂದುಳಿದ ಸಂಸ್ಥಾನಗಳ ಪ್ರಗತಿಯ ದೃಷ್ಟಿಯಿಂದಲೂ ಮತ್ತು ಭಾರತ ರಾಜ್ಯಾಂಗ ಶಾಸನದಂತೆ ಸರ್ವರಿಗೂ ಸಮಾನ ಹಕ್ಕುಬಾಧ್ಯತೆಗಳಿರಬೇಕಾಗಿರುವುದರಿಂದ ಎ ಮತ್ತು ಬಿ ಸಂಸ್ಥಾನಗಳಿಗೆ ತಾರತಮ್ಯವಿರಕೂಡದೆಂದು ಅಧ್ಯಕ್ಷ ಶ್ರೀ ಹನುಮಂತಯ್ಯನವರು ತಿಳಿಸಿದರು.

ಅನಂತರ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಪ್ರಮುಖ ನಾಯಕರ ದಸ್ತಗಿರಿ

ತೆಲಗಾಣದಲ್ಲಿ ನಡೆಯುತ್ತಲಿರುವ ಅತ್ಯಾಚಾರಗಳಿಗೆ ಕಾರಣಭೂತವಾದ ಕಮ್ಯೂನಿಸ್ಟ್ ನಾಯಕ ಡಾ॥ ರಾಜಬಹದ್ದೂರ್ ಗೌಡ ಎಂಬವವರನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆಂದು ತಿಳಿಯಬರುತ್ತದೆ. ದಸ್ತಗಿರಿಗೆ ಸಹಾಯ ಮಾಡುವವರಿಗೆ ಸರ್ಕಾರವು ವಿಶೇಷ ಬಹುಮಾನ ಕೊಡುವುದಾಗಿ ಪ್ರಕಟಿಸಿತ್ತು.

ರಾಮ ಪಟ್ಟಾಭಿಷೇಕ

ಮೈಸೂರು ಏ. ೩೦

ಮೈಸೂರು ಮಾಡರ್ನ್ ಕ್ಯಾಫೆ ಮಾಲೀಕರಾದ ಶ್ರೀ ಸೀತಾರಾಮರಾಯರು ಮತ್ತು ಅವರ ಅನುಯಾಯಿಗಳೆಲ್ಲರೂ ನಿನ್ನೆ, ಮೊನ್ನೆ 'ದಾಸಪ್ರಕಾಶ' ದಲ್ಲಿ ರಾಮಪಟ್ಟಾಭಿಷೇಕ ಮಹೋತ್ಸವವನ್ನು ಅತ್ಯಂತ ವೈಭವದಿಂದ ನಡೆಸಿದರು.

ಪೂಜಾ, ಬ್ರಾಹ್ಮಣ ಸಂತರ್ಪಣೆ ಸಂಗೀತಶಾಸ್ತ್ರವಿಶಾರದ ಶ್ರೀ ವಾಸುದೇವಾಚಾರ್‌ರವರ ಸಂಗೀತ, ಸಂಗೀತರತ್ನ ಶ್ರೀ ಟಿ. ಚೌಡಯ್ಯನವರ ಪಿಟೀಲು ಶ್ರೀ ರಾಮಭಜನೆ ಮಹಾ ಮಂಗಳಾರತಿ ಮುಂತಾದುವೆಲ್ಲವೂ ನಡೆದುವು.

ಕಾಂಗ್ರೆಸ್ಸಿನಿಂದ ಉಚ್ಚಾಟನೆಯೆ ?

ಕಾಂಗ್ರೆಸ್ ಪಕ್ಷದ ಶಿಸ್ತಿಗೆ ವಿರೋಧವಾಗಿ ವರ್ತಿಸುತ್ತಲಿರುವರೆಂಬ ಆಪಾದನೆ ಮೇಲೆ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸದಸ್ಯ ಶ್ರೀ ಹೆಚ್. ವಿ. ಕಾಮತ್‌ರವರನ್ನು ಪಕ್ಷದಿಂದ ತೆಗೆದುಹಾಕಬೇಕೆಂದು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿರುವುದಾಗಿ ತಿಳಿಯಬಂದಿದೆ. ಕೆಲವು ಮಸೂದೆಗಳಿಗೆ ಇವರು ತಿದ್ದುಪಡಿ ಸೂಚಿಸಿದ್ದೇ ಶಿಸ್ತುಭಂಗವಾಗಿದೆ.

ಸೋಷಲಿಸ್ಟ್ ಪಕ್ಷಕ್ಕೆ ಸೇರಿ

ಪ್ರತ್ಯೇಕವಾಗಿ ಪಕ್ಷವೊಂದನ್ನು ಏರ್ಪಡಿಸುವಬದಲು ಸೋಷಲಿಸ್ಟ್ ಪಕ್ಷಕ್ಕೆಸೇರಿ ರಚನಾತ್ಮಕ ಕಾರ್ಯದಲ್ಲಿ ತೊಡಗಿ ಎಂದು ಶ್ರೀ ಜೈಪ್ರಕಾಶರು ಆಚಾರ್ಯ ಕೃಪಲಾನಿಯವರಿಗೆ ಪತ್ರ ಬರೆದಿರುವರೆಂದು ತಿಳಿದು ಬಂದಿದೆ.

ವೃಥಾಅನಂತ ಪಕ್ಷಗಳು ಉದ್ಭವವಾದಲ್ಲಿ ಜನತೆಯ ಮನಸ್ಸಿನ ಮೇಲೆ ದುಷ್ಪರಿಣಾಮ ಉಂಟಾಗುವುದೆಂದು ಶ್ರೀಜೈಪ್ರಕಾಶರು ಪತ್ರದಲ್ಲಿ ತಿಳಿಸಿದ್ದಾರೆ.

ನೀತಿ ಬಗ್ಗೆ ಟೀಕೆ

ಹೊಸದಾಗಿ ರಚಿತವಾಗಿರುವ ಆಂಧ್ರ ಪ್ರಾಂತ ಕಾಂಗ್ರೆಸ್ಸಿನ ಕಾರ್ಯ ಸಮಿತಿ ಶ್ರೀ. ಟಿ. ಪ್ರಕಾಶಂ ಮತ್ತು ಪ್ರೊ॥ ರಂಗಾರವ ಇತ್ತೀಚಿನ ಚಟುವಟಿಕೆಗಳನ್ನು ನಿರ್ಣಯಮಾಡಿತು.

ಪ್ರಕಾಶಂ ಮುಂತಾದವರ ಭಾಷಣ ಈಚೀ ಕಾಂಗ್ರೆಸ್ ಸಂಸ್ಥೆಯನ್ನು ತೀವ್ರವಾಗಿ ಖಂಡಿಸುವಂತಿದೆ ಎಂದು ನಿರ್ಣಯಿಸಿತು.

ಅಟ್ಲಿ ಸರ್ಕಾರಕ್ಕೆ ನೋಟೀಸ್

ಕಚ್ಚಾವಸ್ತುಗಳ ನೀತಿಯ ಬಗ್ಗೆ ಮುಂದಿನ ಮಂಗಳವಾರ ತಾವು ಸರ್ಕಾರವನ್ನೆದುರಿಸುವುದಾಗಿ ವಿರೋಧಪಕ್ಷ ನಾಯಕ ವಿನ್‌ಸ್ಟನ್ ಚರ್ಚಿಲ್ ಅಟ್ಲಿ ಸರ್ಕಾರಕ್ಕೆ ನೋಟೀಸ್ ಕಳಿಸಿದ್ದಾರೆ.

ದೇಶದ ಪುನಶ್ಶಸ್ತ್ರೀಕರಣ ಕಾರ್ಯದ ದೃಷ್ಟಿಯಿಂದ ಕಚ್ಚಾವಸ್ತು ಸಂಗ್ರಹಣ ವಿವೇಚನೆ ಇಲ್ಲದೆ ನಡೆಯುತ್ತಿದೆಯೆಂದೂ ಅವರು ತಿಳಿಸಿದ್ದಾರೆ.

ಮಧ್ಯಸ್ಥಿಕೆಗಾರರ ನೇಮಕ

ಕಾಶ್ಮೀರದ ಮಧ್ಯಸ್ಥಿಕೆಗಾರರಾಗಿ ಡಾ॥ ಫ್ರಾಂಕ್ ಗ್ರಹಾಂರನ್ನು ವಿಶ್ವಸಂಸ್ಥೆಯು ನೇಮಿಸಿದೆ. ರಷ್ಯಾ, ಯುಗೋಸ್ಲೋವೇಕಿಯಾ, ನೆದರ್‌ಲ್ಯಾಂಡ್ಸ್, ಭಾರತ ಈ ನೇಮಕದಲ್ಲಿ ಭಾಗವಹಿಸಲಿಲ್ಲ. ಹಿರಿಯ ರಾಷ್ಟ್ರಕ್ಕೆ ಸೇರಿದ. ಅಮೆರಿಕನ್ನನ್ನು ನೇಮಿಸಿದ್ದಕ್ಕೆ ರಷ್ಯಾ ಪ್ರತಿನಿಧಿ ಟೀಕಿಸಿದರು.

ಎ. ಐ. ಸಿ. ಸಿ. ಗೆ ಆಯ್ಕೆ

ವಾಣೀವಿಲಾಸಪುರಪುರ ಏ. ೨೯

ಶ್ರೀ ಹೆಚ್. ಎಸ್. ರುದ್ರಪ್ಪನವರು ರಾಜೀನಾಮೆ ಕೊಟ್ಟ ಪರಿಣಾಮವಾಗಿ ಖಾಲಿಬಿದ್ದ ಎ. ಐ. ಸಿ. ಸಿ. ಸ್ಥಾನಕ್ಕೆ ನಿನ್ನೆ ರಾತ್ರಿ ಚುನಾವಣೆ ನಡೆಯಿತು.

ಶ್ರೀ ಪಿ.ಸಿ. ಬಸಪ್ಪನವರು ೬೩ ಓಟುಗಳ ಪಡೆದು ಚುನಾಯಿತರಾದರು. ಪ್ರತಿಸ್ಪರ್ಧಿಗಳಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿ ೧೮ ಓಟುಗಳನ್ನೂ ಜನಾಬ್ ಕೆ. ಎಂ ಹುಸೇನ್‌ಸಾಬರು ೧೦ ಓಟುಗಳನ್ನೂ ಪಡೆದರು. ಒಂದು ಓಟು ವ್ಯರ್ಥವಾಯಿತು

ಆಹಾರ-ಪರಿಸ್ಥಿತಿಯನ್ನು ಯುದ್ಧ ಸಮಸ್ಯೆಯಂತೆ ಎದುರಿಸಿ

ದೇಶದಲ್ಲಿ ಉಂಟಾಗಿರುವ ಆಹಾರ ಅಭಾವ ಪರಿಸ್ಥಿತಿಯನ್ನು ಯುದ್ಧಸಮಸ್ಯೆಯಂತೆ ಪರಿಗಣಿಸಿ ಎದುರಿಸಬೇಕಾಗಿದೆ. ಈ ಕರ್ತವ್ಯವು ಸರ್ಕಾರದ್ದೇ ಎಂದು ಯಾರೂ ಭಾವಿಸಬಾರದು. ಪ್ರಜೆಗಳೂ ತಮ್ಮ ಕರ್ತವ್ಯವನ್ನು ಮಾಡಬೇಕು. ಒಂದು ಭಾಗದಲ್ಲಿ ಪ್ರಜೆಗಳು ಕ್ಷಾಮಪೀಡಿತರಾಗಿ ಬಳಲುತ್ತಲಿರುವಾಗ ಮತ್ತೊಂದೆಡೆ ಆಹಾರವನ್ನು ಬಚ್ಚಿಟ್ಟುಕೊಳ್ಳುವುದು ತಪ್ಪಿಸಬೇಕು. ಪ್ರಜೆಗಳು ತಮ್ಮ ಕರ್ತವ್ಯವನ್ನರಿತು ತ್ಯಾಗಬುದ್ಧಿಯಿಂದ ಮುಂದೆ ಬರಬೇಕು. ಪರರಾಷ್ಟ್ರಗಳಿಂದ ನಮಗೆ ಬರುವ ಆಹಾರ ನಂಬಿಕೊಂಡಿರಬಾರದು. ಸ್ವಯಂಪೂರ್ಣತೆಗಾಗಿ ಎಲ್ಲರೂ ಕೆಲಸ ಮಾಡಬೇಕಾಗಿದೆ. ಆತ್ಮಗೌರವಕ್ಕೆ ಚ್ಯುತಿ ಬರುವಂತಹ ಷರತ್ತುಗಳಿಗೆ ನಾವು ಒಪ್ಪುವುದಿಲ್ಲ. ಉತ್ತಮಸ್ಥಾನ, ಅಧಿಕಾರ ಪಡೆಯಬೇಕೆಂಬ ದುರಾಶೆಯಿಂದ ಅನೇಕ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿನ ಧ್ಯೇಯಕ್ಕೇ ಧಕ್ಕೆತರುವಂತೆ ನಡೆಯುತ್ತಲಿರುವರು. ಅವನ್ನು ಸರಿಪಡಿಸಿಕೊಳ್ಳದೆ ದೇಶದ ಪ್ರಗತಹಿತದೃಷ್ಟಿಯ ಕಡೆ ಗಮನವೀಯದೆ ಚುನಾವಣೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾ ಹೋಗುವುದು ಅರ್ಥವಿಲ್ಲದ್ದು. ಸ್ವಾತಂತ್ರ್ಯಗಳಿಸಿದಾರಭ್ಯ ಇಲ್ಲಿಯವರೆಗೆ ಕೇಂದ್ರ ಪ್ರಾಂತ್ಯ ಸರ್ಕಾರಗಳು ಅನೇಕ ಕಾರ್ಯಗಳನ್ನು ಸಾಧಿಸಿವೆ. ಆದರೆ ತಪ್ಪು ಮಾಡಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಪ್ರಜೆಗಳು ಸಮಗ್ರಪರಿಸ್ಥಿತಿ ಅಳತೆ ಮಾಡಬೇಕು. ಬೀಹಾರಿನಲ್ಲುಂಟಾಗಿರುವ ಆಹಾರ-ಪರಿಸ್ಥಿತಿಯಲ್ಲಿ ಎಲ್ಲರೂ ತಮ್ಮ ಪಕ್ಷಧ್ಯೇಯ ಮುಂತಾದುವುಗಳ ಕಡೆ ಹೆಚ್ಚು ಗಮನವೀಯದೆ, ಐಕ್ಯತೆ, ಸಹಕಾರಮನೋಭಾವದಿಂದ ವರ್ತಿಸಿದರೆ ಎಂತಹ ಉತ್ಕಟಪರಿಸ್ಥಿತಿಯನ್ನು ಬೇಕಾದರೂ ಎದುರಿಸಬಹುದು ಎಂದು ಭಾರತಪ್ರಧಾನಿ ನೆಹರೂರವರು ಬುಲಂದಶಹರ್ ಎಂಬಲ್ಲಿ ಮಾತನಾಡುತ್ತಾ ಹೇಳಿರುವರು.

ಗೋವಿಂದಸಾಗರ್

ಪಂಜಾಬಿನಲ್ಲಿ ಕಟ್ಟಲಾಗುವ ಭಕರಾ ಆಣೆಕಟ್ಟಿನ ಜಲಾಶಯಕ್ಕೆ ಗೋವಿಂದ ಸಾಗರ' ಎಂಬ ಹೆಸರು ಕೊಡಲಾಗುವುದು. ಈ ಜಲಾಶಯವು ಭಾರತದಲ್ಲೆಲ್ಲಾ ಹಿರಿಯ ಜಲಾಶಯವಾಗುವುದು.

ಮಂತ್ರಿ ಮಂಡಲದ ವಿಸ್ತರಣ

ಬೆಂಗಳೂರು ಏ. ೩೦

ಮೈಸೂರು ಮಂತ್ರಿಮಂಡಲವನ್ನು ವಿಸ್ತರಗೊಳಿಸಲಾಗುವುದೆಂದು ನಂಬಿಕೆಗೆ ಅರ್ಹವಾದ ಕಡೆಗಳಿಂ ತಿಳಿದುಬಂದಿದೆ.

ಈಗಿರುವ ಆರು ಮಂತ್ರಿಸ್ಥಾನದ ಜೊತೆಗೆ ೩ ಅಥವಾ ನಾಲ್ಕು ಮಂತ್ರಿಸ್ಥಾನಗಳನ್ನು ಹೆಚ್ಚಿಸಲಾಗುವುದೆಂದು ಕಾಂಗ್ರೆಸ್ ರಾಜಕೀಯ ವೃತ್ತಗಳಲ್ಲಿ ಅಭಿಪ್ರಾಯಪಡಲಾಗಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಬೆಂಗಳೂರಿನಲ್ಲಿ ಮೇ ೩ನೇ ತಾರೀಖು, ಸೇರಿ ಯಾರ್ಯಾರು ಮಂತ್ರಿಗಳಾಗಬೇಕು.

ಇತ್ಯಾದಿ ವಿವರಗಳನ್ನು ಪರಿಶೀಲಿಸುವುದೆಂದು ತಿಳಿದುಬಂದಿದೆ.

ಅಸ್ಸಾಂ ಪರಿಹಾರ ಸಮಿತಿ

ಮೈಸೂರು ಪುರಸಭೆಯಿಂದ ನಿಯಮಿತವಾದ ನಗರದ ಅಸ್ಸಾಂ ಭೂಕಂಪ ಪರಿಹಾರ ಸಮಿತಿಯ ಮೀಟಿಂಗು ತಾ॥೨೪-೪-೩೧ನೇ ಮಂಗಳವಾರ ನಡೆಯಿತು.

ನಿಧಿಗೆ ಸಂಬಂಧಪಟ್ಟ ಲೆಕ್ಕಪಟ್ಟಿಯನ್ನು ಸಮಿತಿಯ ಖಜಾಂಚಿಯವರಾದ ಮುನಿಸಿಪಲ್ ಕಮೀಷನರವರಾದ ಶ್ರೀ ಸಿ. ನರಸಿಂಹಮೂರ್ತಿಯವರು ಮುಂದಿಟ್ಟರು.

ಇದು ವರೆಗೆ ಒಟ್ಟು ಶೇಖರಿಸಲ್ಪಟ್ಟಿರುವ ೧೬, ೪೨೯—೧೪—೩ರಲ್ಲಿ ಈಗಾಗಲೇ ೧೦,೦೦೦ ರೂ. ಗಳನ್ನು ಪ್ರಧಾನ ಮಂತ್ರಿಗಳ ಅಸ್ಸಾಂ ಭೂಕಂಪನಿಧಿಗೆ ಕಳುಹಿಸಲಾಗಿದೆ. ಅದರ ಜೊತೆಗೆ ಈಗ ೬೦೦೦ ರೂ. ಗಳನ್ನು ಸದ್ಯಕ್ಕೆ ಕಳುಹಿಸಿಕೊಡಬಹುದೆಂದೂ ಉಳಿಕೆ ಮೊಬಲಗನ್ನು ಪೂರ್ಣವಾಗಿ ಪರಿಶೀಲಿಸಿದ ನಂತರ ಕಳುಹಿಸಿ ಕೊಡಬಹುದೆಂದೂ ತೀರ್ಮಾನಿಸಲಾಯಿತು.

* ಪಿರಿಯಾ ಪಟ್ಟಣದ ತಾ॥ ರಾವಂದೂರಿನ ತಮ್ಮಯ್ಯನವರು ತಮ್ಮ ಮದುವೆಯ ಸಂದರ್ಭದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ೨೦ ರೂ. ಗಳನ್ನು ದಾನ ಮಾಡಿರುತ್ತಾರೆ.

ಎ. ಐ. ಸಿ. ಸಿ.

ಎ. ಐ. ಸಿ. ಸಿ. ಸಭೆಯು ಮುಂದಿನ ಶನಿವಾರ ದೆಹಲಿಯಲ್ಲಿ ನಡೆಯುವುದು.

ಚೈನಾ ಅಕ್ಕಿ

ಚೈನಾದಿಂದ ೯೦೦೦ ಟನ್ ಅಕ್ಕಿಯು ನಿನ್ನೆ ಬೊಂಬಾಯಿಗೆ ಬಂದಿದೆ. ಇದು ಎರಡನೇ ಕಂತು.

ಮದ್ರಾಸಿನ ಪಂಚವಾರ್ಷಿಕ ಯೋಜನೆ

೧೩೫ ಕೋಟಿ ರೂ. ಗಳ ವೆಚ್ಚದ ಮದರಾಸಿನ ಪಂಚವಾರ್ಷಿಕ ಯೋಜನೆಯನ್ನು ಕೇಂದ್ರ ಆ ಯೋಜನಾ ಸಮಿತಿಯು ಪರಿಶೀಲಿಸಿ ಒಪ್ಪಿಗೆಯಿತ್ತಿದೆ.

ಈ ಯೋಜನೆಗಾಗಿ ಕೇಂದ್ರವು ೨೦ ಕೋಟಿ ರೂ. ಸಹಾಯಮಾಡಲಿದೆ. ಉಳಿಕೆಹಣವನ್ನು ಮದರಾಸು ಸರ್ಕಾರವು ಸಾಲ, ಅಭಿವೃದ್ಧಿ ತೆರಿಗೆ, ಪ್ರಾಂತ್ಯದ ಸಾಮಾನ್ಯ ವರಮಾನಗಳಿಂದ ಪಡೆಯುವುದು.

ಪೌರಸಭೆಯ ಸಹಾನುಭೂತಿ

ಬೆಂಗಳೂರು ಏ. ೩೦

ಕಬ್ಬನ್ ಪಾರ್ಕ್ ಪ್ರದರ್ಶನದ ದುರಂತದಲ್ಲಿ ನೊಂದವರಿಗೆ ಸಹಾನುಭೂತಿ ವ್ಯಕ್ತಪಡಿಸುವ ಮತ್ತು ದುರಂತದ ಕಾರಣವನ್ನು ಕಂಡು ಹಿಡಿಯಲೂ ಸಂತ್ರಸ್ತರಿಗೆ ಪರಿಹಾರ ದೊರಕಿಸಲೂ ವಿಚಾರಣಾ ಸಮಿತಿಯೊಂದನ್ನು ಸ್ಥಾಪಿಸಬೇಕೆಂದು ಒತ್ತಾಯ ಮಾಡುವ ನಿರ್ಣಯವನ್ನು ಬೆಂಗಳೂರು ಕಾರ್ಪೋರೇಷನ್ ಈ ದಿನ ಮಾಡಿದೆ.

ರಷ್ಯಾದ ಆಕ್ರಮಣ ನೀತಿ

ಕೊರಿಯಾ ಯುದ್ಧವು ಇನ್ನು ಮುಕ್ತಾಯವಾಗದಿರುವುದಕ್ಕೆ ರಷ್ಯಾ ನೀತಿಯೇ ಕಾರಣವಾಗಿದೆ. ಸಮಗ್ರ ವಿಶ್ವವನ್ನೇ ವಶಪಡಿಸಿಕೊಳ್ಳಬೇಕೆಂಬುದು ರಷ್ಯಾ ನೀತಿ. ಮಂಚೂರಿಯಾ ಗಡಿಯಲ್ಲಿ ಬಾಂಬುಗಳನ್ನು ಹಾಕದೆ ಯುದ್ಧವನ್ನು ಕೊರಿಯಾದಲ್ಲಿಯೇ ಮುಕ್ತಾಯಗೊಳಿಸಬೇಕೆಂಬುದೇ ಅಮೇರಿಕಾ ನೀತಿಯೆಂದು ವಾಣಿಜ್ಯ ಸಂಘದಲ್ಲಿ ಮಾತನಾಡುತ್ತಾ ಮಿ॥ ಡೀನ್ ಅಚಿಸನ್‌ರವರು ಹೇಳಿರುವರು.

ಮಧ್ಯ ಭಾರತದಿಂದ ಬಿಹಾರಿಗೆ

ಮಧ್ಯ ಭಾರತವು ೬೫೦೦೦ ಟನ್ ಆಹಾರವನ್ನು ಈ ಮಾಹೆಯಲ್ಲಿ ಬಿಹಾರಿಗೆ ಒದಗಿಸಲಿದೆ.

ಮಂತ್ರಿಮಂಡಲ ಸಭೆ

ಪರ್ಷಿಯಾದಲ್ಲಿ ಉಂಟಾಗಿರುವ ಎಣ್ಣೆ ವಿವಾದವನ್ನು ಬ್ರಿಟಿಷ್ ಮಂತ್ರಿಮಂಡಲವು ಸೇರಿ ಪರಿಶೀಲಿಸುತ್ತಲಿದೆ.

ನೈಜಾಮರ ದೇಹಸ್ಥಿತಿ

ಕೆಲವು ದಿನಗಳಿಂದ ಅಸ್ವಸ್ಥರಾಗಿದ್ದ ನೈಜಾಮರ ದೇಹಸ್ಥಿತಿಯು ಉತ್ತಮಗೊಂಡಿದೆ

ಪತ್ರಿಕಾ ವೃತ್ತಿಗೆ

ಆಚಾರ್ಯ ಕೃಪಾಲನಿಯವರು ಮೇ ೧ ರಿಂದ ದೆಹಲಿ ನ್ಯೂಸ್ ಕ್ರಾನಿಕಲ್ ಪತ್ರಿಕಾ ಸಂಪಾದಕರ ಬೋರ್ಡಿನ ಅಧ್ಯಕ್ಷರಾಗಿ ಸೇರಲಿದ್ದಾರೆಂದು ಪ್ರಕಟವಾಗಿದೆ.

ಚೀಣಾ ವಶ

ಚೀಣಾದಲ್ಲಿ ಬ್ರಿಟಿಷರಿಗೆ ಸೇರಿದ ಏಷ್ಯಾಟಿಕ್ ಪೆಟ್ರೋಲಿಯಂ ಕಂಪೆನಿಗೆ ಸೇರಿದ ಆಸ್ತಿಪಾಸ್ತಿಗಳನ್ನೆಲ್ಲಾ ಚೀಣಾ ಸರ್ಕಾರವು ರಾಷ್ಟ್ರಭದ್ರತೆಗಾಗಿ ವಶಪಡಿಸಿಕೊಂಡಿರುವುದಾಗಿ ತಿಳಿಯಬರುತ್ತದೆ.

ಸಂಪಾದಕರು ಮತ್ತು ಪ್ರಕಾಶಕರು— ಜೆ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು, ಪ್ರಿಂಟಿಂಗ್ ಆಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಪ್ರಭಾ ಪಿಕ್ಚರ್ ಹೌಸ್
೪—೫—೫೧ರಿಂದ ಅಮೋಘ ಪ್ರಾರಂಭ
ದಿನವಹಿ ೩ ಆಟಗಳು
ನಿಮ್ಮ ಹೃದಯಾಂತರಾಳವನ್ನೇ ಕಲಕುವಂತಹ ಎನ್. ಎಫ್. ಐ. ರವರ
ಪ್ರಗತಿಶೀಲ ಭವ್ಯ ಸಾಮಾಜಿಕ ಚಿತ್ರ
* ಕಾಲೆ ಬಾದಲ್ (ಹಿಂದಿ) *
(ಕಾರ್ಮುಗಿಲು)
ಅಭಿನಯ— ಮೀನಾ, ಪುಷ್ಪಹಸ್, ಶ್ಯಾಮ್, ಗೋಪ್, ಜೀವನ್, ಬೇಬಿತಬಸ್ಸುಂ

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೫—೧೯೫೧ನೇ ಬುಧವಾರ [ಸಂಚಿಕೆ ೧೯೬

ದಾನವಾಗಿ ಕೊಡಬೇಕು

ಅಮೇರಿಕಾ ಔದ್ಯೋಗಿಕ ಸಂಸ್ಥೆಯು ಕಾಂಗ್ರೆಸ್ ಪಕ್ಷವು ಭಾರತಕ್ಕೆ ಆಹಾರವನ್ನು ಕಳುಹಿಸುವ ವಿಷಯದಲ್ಲಿ ಅಮೇರಿಕಾದ ನೀತಿಯನ್ನು ಪ್ರಸ್ತಾಪಿಸುತ್ತಾ, ಅರೆ ಮನಸಿನ ಮಹಾಸಭೆಯ ಪ್ರಯತ್ನವನ್ನು ಅಮೇರಿಕಾ ಕೈಗೊಂಡಿದೆ. ೨೦ ಲಕ್ಷ ಟನ್ ಆಹಾರವನ್ನೆಲ್ಲಾ ಭಾರತಕ್ಕೆ ದಾನರೂಪದಲ್ಲಿಯೇ ಕೊಡಬೇಕು. ಅದಕ್ಕನುಗುಣವಾಗಿ ಕಾನೂನು ಮಾಡಬೇಕೆಂದು ತಿಳಿಸಿದೆ

ಭಾರತ ಪಾಕಿಸ್ತಾನ ಮಾತುಕಥೆ

ಭಾರತ ಪಾಕಿಸ್ತಾನದ ಪುನರ್ವಸತಿ ಖಾತಾ ಸಚಿವರುಗಳು ಸ್ಥಳಾಂತರವಾದ ವಿಷಯವಾಗಿ ಮಾತುಕಥೆಗಳನ್ನು ದೆಹಲಿಯಲ್ಲಿ ಪ್ರಾರಂಭಿಸಿರುವರು. ಬಲಾತ್ಕಾರವಾಗಿ ಜಾತೀಯ ಬದಲಾವಣೆ ಮಾಡದೆ ನಡು ಶಿಕ್ಷಾರ್ಹವಾಗಿ ಮಾಡಬೇಕೆಂದು ಭಯಸಚಿವರು ಅಭಿಪ್ರಾಯಪಟ್ಟಿರುವರು

ಆತ್ಮಗೌರವಕ್ಕೆ ಕುಂದು ತರುವ ಸಹಾಯ ಬೇಡ

ವಾರಕೊಮ್ಮೆ ಒಂದು ಊಟ ಬಿಡಿ

ಆಹಾರದ ಪರಿಸ್ಥಿತಿಯು ರುದ್ರಾಕಾರವನ್ನು ತಾಳಿದೆ ಅದನ್ನು ದೂರದ ಘಟನೆಯಂತೆ ಪರಿಗಣಿಸದೆ ಈ ಕ್ಷಾಮ ಸಂಗ್ರಾಮವನ್ನು ನಮ್ಮ ಎಲ್ಲಾ ಸಾಧನಸಂಪತ್ತು ಸರ್ವಶಕ್ತಿಗಳಿಂದ ಎದುರಿಸಿ ಜಯಗಳಿಸಬೇಕು ಜಯಗಳಿಸುತ್ತೇವೆ ಎಂದು ಭಾರತ ಪ್ರಧಾನಿ ನೆಹರೂ ನಿನ್ನೆ ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರಭಾಷಣದಲ್ಲಿ ನುಡಿದರು.

ಕ್ಷಾಮದ ಪರಿಸ್ಥಿತಿ, ಹಸಿವಿನಿಂದ ಸಾವು ಈಗ ವರ್ಧಿಸುತ್ತಲಿರುವಷ್ಟು ವ್ಯಾಪಕವಾಗಿಲ್ಲ. ಆದರೆ ಕ್ಲೇಶಕರವಾಗಿದೆ. ದೂರದ ಘಟನೆಯಂತೆ ಪರಿಗಣಿಸದೆ ಕ್ಷಾಮಸಂಗ್ರಾಮವನ್ನು ಶಕ್ತಿಯುತ ಪ್ರಯತ್ನದಿಂದ ಹೋರಾಡಿ ಜಯಿಸಬೇಕಾಗಿದೆ. ವಿದೇಶ ರಾಜ್ಯಗಳಾದ ಅಮೇರಿಕಾ ಚೈನಾ ರಷ್ಯಾ ರಾಷ್ಟ್ರಗಳು ನಮಗೆ ಆಹಾರ ಸರಬರಾಯಿ ಮಾಡುತ್ತಲಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ. ವಿಶ್ವದ ಅಸಂಖ್ಯಾತ ಜನರೂ ಸಹಾನುಭೂತಿಯಿಂದ ವರ್ತಿಸಿ ನಮಗೆ ನೆರವು ನೀಡುತ್ತಿರುವುದಕ್ಕೆ ಅವರಿಗೆಲ್ಲಾ ನಮ್ಮ ಧನ್ಯವಾದಗಳು. ಆದರೆ ಈ ರೀತಿ ವಿದೇಶಗಳಿಂದ ಬರುವ ಸಹಾಯವು ಯಾವ ರಾಜಕೀಯ ಹಿಡಿತಕ್ಕೊಳಪಟ್ಟಿರಬಾರದು. ಆತ್ಮಗೌರವಕ್ಕೆ ಧಕ್ಕೆ ಬರುವಂತಹ ಷರತ್ತುಗಳಿಗೆ ಒಪ್ಪಿ ನಾವು ಆಹಾರ ಪಡೆಯುವವರಲ್ಲ. ಆಂತರಿಕ ಮತ್ತು ಅಂತರರಾಷ್ಟ್ರೀಯ ನೀತಿಯನ್ನು ಬದಲಾಯಿಸುವಂತಹ ಒತ್ತಾಯಕ್ಕೆ ನಾವು ಒಪ್ಪುವವರಲ್ಲ.

ನಾವು ಆಹಾರಕ್ಕಾಗಿ ಪರರಾಷ್ಟ್ರಗಳನ್ನೆಲ್ಲಾ ನಂಬಿಕೊಂಡಿರುವುದು ಅಪಾಯಕರ. ಸ್ವಯಂಪರಿಪೂರ್ಣತೆಗಾಗಿ ನಾವು ತಕ್ಕ ಕಾರ್ಯವೆಸಗಬೇಕು. ಪ್ರಜೆಗಳಿಗೆ ಸತ್ಯಾಂಶವು ತಿಳಿದರೆ ತ್ಯಾಗಕ್ಕೆ ಸಿದ್ಧರಿರುವರು. ಭಾರತದ ಒಂದೆಡೆ ಜನರು ಆಹಾರವಿಲ್ಲದೆ ತಪಿಸುತ್ತಲಿರುವಾಗ ಮತ್ತೊಂದೆಡೆ ಶೇಖರಿಸುವುದು ಮಹಾಪರಾಧ ಮತ್ತು ನಾಚಿಕೆಗೇಡು. ಆಹಾರವನ್ನು ಒದಗಿಸುವುದಕ್ಕೆ ಕೆಲವರು ವಿವಿಧ ಆಕಗಳಿಂದ ಅಡ್ಡ ಬರುತ್ತಿರುವರು ಅದು ಶುದ್ಧ ಅವಮಾನ.

ಬೀಹಾರ, ಮದರಾಸುಗಳಲ್ಲಿ ನಿರುದ್ಯೋಗದಿಂದ ಆಹಾರ ಕೊಳ್ಳಲು ಶಕ್ತಿಯು ಕಡಮೆಯಾಗಿದೆ ಕೂಡಲೇ ಬಾವಿ ತೆಗೆಯುವುದು ರಸ್ತೆ ರಿಪೇರಿ ಮುಂತಾದ ಸಣ್ಣ ಸಣ್ಣ ಯೋಜನೆಗಳನ್ನು ಪ್ರಾರಂಭಿಸಿ ಕೆಲಸವನ್ನು ಒದಗಿಸಬೇಕಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳೆಲ್ಲರೂ ಈಗ ನೆರವು ನೀಡಬೇಕಾಗಿದೆ.

ನನ್ನ ... ವಾರಕ್ಕೊಂದು ಊಟವನ್ನು ತ್ಯಜಿಸಿ ಕ್ಷಾಮವಿರುವ ಪ್ರದೇಶಗಳಿಗೆ ಈ ಆಹಾರವನ್ನು ಕಳುಹಿಸಿ ಸಹಾನುಭೂತಿ ಪ್ರದರ್ಶಿಸಬೇಕು. ಪ್ರತಿ ಗ್ರಾಮದಲ್ಲಿಯೂ ಒಂದೊಂದು ಸಮಿತಿಯನ್ನು ನೇಮಿಸಿಕೊಂಡು ಆಹಾರ ಬಚ್ಚಿಡುವುದನ್ನು ತಪ್ಪಿಸಿ ಸಾಧ್ಯವಾದಷ್ಟನ್ನು ಕೊರತೆ ಪ್ರದೇಶಗಳಿಗೆ ಕಳುಹಿಸುವಂತೆ ಮಾಡಬೇಕು.

ನಮ್ಮ ಆತ್ಮಗೌರವವನ್ನು ಕಾಪಾಡಿಕೊಂಡು ರುದ್ರಾಕಾರವಾದ ಈಗಿನ ಪರಿಸ್ಥಿತಿಯನ್ನು ನಮ್ಮ ಎಲ್ಲಾ ಸಾಧನ ಸಂಪತ್ತುಗಳಿಂದ ಎದುರಿಸಿ ನಾವು ಜಯಶೀಲರಾಗಬೇಕು. ಜಯಶೀಲರಾಗುತ್ತೇವೆಂಬ ಭರವಸೆ ನನಗಿದೆ ಎಂದು ಪಂಡಿತ ನೆಹರೂ ತಿಳಿಸಿದರು.

ಶ್ರೀ ಎಸ್. ಕೆ. ಬ್ಯಾನರ್ಜಿ

ಭಾರತ ಸರ್ಕಾರದ ಕಾರ್ಯದರ್ಶಿ ಶ್ರೀ ಎಸ್. ಕೆ. ಬ್ಯಾನರ್ಜಿಯವರನ್ನು ಲಾಹೋರಿನಲ್ಲಿ ಭಾರತ ಹೈ-ಕಮಿಷನರಾಗಿ ನೇಮಕಮಾಡಲಾಗಿದೆ.

ನಮ್ಮಲ್ಲಿ ತಯಾರಾದ ಸಾಮಾನುಗಳಿಗೆ ಉತ್ತೇಜನ ಕೊಡಿ

ಬೆಂಗಳೂರು ಏ. ೩೦

"ನಮ್ಮ ಸಂಸ್ಥಾನದಲ್ಲಿಯೇ ತಯಾರಾದ ಸಾಮಾನುಗಳನ್ನು ನಾವು ಉಪಯೋಗಿಸಿ ಸ್ಥಳೀಯ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಲ್ಲದೆ ನಮ್ಮ ಸಂಸ್ಥಾನದ ಕೀರ್ತಿಯು ಹೆಚ್ಚುವಂತೆ ನಾವು ಮಾಡಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿರುವ ಮೈಸೂರು ಲ್ಯಾಂಪ್ ವರ್ಕ್ಸ್‌ನಲ್ಲಿ ತಯಾರಾಗುವ ಎಲೆಕ್ಟ್ರಿಕ್ ಬಲ್ಬುಗಳಿಗೆ ಹೊರಗೆ ದೊರೆಕಿರುವಷ್ಟು ಪ್ರಾಮುಖ್ಯತೆ ನಮ್ಮ ಸಂಸ್ಥಾನದಲ್ಲಿ ದೊರೆಯದಿರುವುದು ವಿಷಾದಕರ" ಎಂದು ಸ್ವಾಗತಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಇಂದು ಮೈಸೂರು ಲ್ಯಾಂಪ್ ವರ್ಕ್ಸ್‌ನ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಹೇಳಿದರು.

ಈ ಸಂಸ್ಥೆಯು ತನಗೆಬೇಕಾದ ಕಚ್ಚಾ ಸಾಮಾನುಗಳನ್ನು ತಾವೇ ತಯಾರಿಸಲು ಪ್ರಯತ್ನಿಸುತ್ತಲಿರುವುದು ಶ್ಲಾಘನೀಯವಾಗಿದೆ. ಸಾಧ್ಯವಾದಷ್ಟು ಪರರಾಷ್ಟ್ರಗಳ ಮೇಲೆ ನಾವು ಅಧೀನವಾಗದೆ ಸ್ವಯಂಪರಿಪೂರ್ಣರಾಗಬೇಕು. ವಿದೇಶದಿಂದ ತರಿಸುತ್ತಿರುವ ಟಾರ್ಚ್‌ಲೈಟು, ಸೈಕಲ್ ಲ್ಯಾಂಪ್. ಟೆಲಿಫೋನ್ ಪೈಲಟ್ ಲ್ಯಾಂಪು ಮುಂತಾದುವನ್ನು ಈ ಸಂಸ್ಥೆಯು ತಯಾರಿಸಲಿರುವುದೆಂದು ಹೇಳುವುದು ಅತ್ಯಂತ ಸಂತೋಷ ವಿಷಯವಾಗಿದೆ.

ನಮ್ಮ ಸಂಸ್ಥಾನದ ಉಪಯೋಗಕ್ಕೆ ಪ್ರತಿವರ್ಷವೂ ೧೦ ಲಕ್ಷ ಬಲ್ಬುಗಳು ಬೇಕಾಗಿದೆ. ಭಾರತಕ್ಕೆ ೧೪೪ ಲಕ್ಷ ಬೇಕಾಗಿದೆ. ಈಗ ಕೇವಲ ೧೨ ಲಕ್ಷ ಬಲ್ಬು ಈ ಸಂಸ್ಥೆಯು ತಯಾರಿಸುತ್ತಲಿದೆ. ಇನ್ನು ಅಧಿಕ ಪ್ರಮಾಣದಲ್ಲಿ ಬೇಕಾಗಿದೆ. ಈ ಕಾರ್ಖಾನೆಯು ತನ್ನ ಉತ್ಪತ್ತಿಯನ್ನು ಅಧಿಕಗೊಳಿಸಿ ಅನೇಕ ವರ್ಷಗಳಿಂದ ನಮ್ಮ ಸಂಸ್ಥಾನವು ಗಳಿಸಿರುವ ಕೀರ್ತಿಯನ್ನು ಹೆಚ್ಚಿಸುವುದೆಂದು ಅತಿ ನಿರೀಕ್ಷೆಯಿಂದ ಅವರು ಹೇಳಿದರು.

ರಕ್ತ ಪತ್ರಗಳು

ಜ॥ ಮೆಕಾರ್ಥರನ್ನು ಹಿಂದಕ್ಕೆ ಕರೆಸಿಕೊಂಡುದಕ್ಕಾಗಿ ತಮ್ಮ ವ್ಯಸನವನ್ನು ವ್ಯಕ್ತಪಡಿಸಿ ಅನೇಕ ಜಪಾನೀಯರು ಅಮೇರಿಕಾಕ್ಕೆ ರಕ್ತದಿಂದ ಪತ್ರಗಳನ್ನು ಬರೆಯಲಾರಂಭಿಸಿರುವರು. ಇನ್ನೇಕೆಟೀ ಸಿಲ್ವೆ ಹಿಯು ತನ್ನ ಕೈಬೆರಳನ್ನು ಕತ್ತರಿಸಿ ಅದರ ರಕ್ತದಿಂದ 'ಸ್ಟಾರ್ಸ್ ಅಂಡ್ ಸ್ಟ್ರೈಪ್ಸ್' ಎಂಬ ಪತ್ರಿಕೆಗೆ ಒಂದು ಪತ್ರವನ್ನು ಬರೆಯುತ್ತಾ, ನಮಗಾಗಿರುವ ದುಃಖವನ್ನು ವ್ಯಕ್ತಪಡಿಸಲು ಜಪಾನೀಯರು ತಮ್ಮ ರಕ್ತವನ್ನು ಚೆಲ್ಲಲು ಸಿದ್ಧರಿರುವರೆಂದು ತಿಳಿಸಿದ್ದಾರೆ.

ಪೌರಸಭಾಧಿವೇಶನ

ಮೈಸೂರು ಮೇ ೧

ಪೌರಸಭೆಯ ಮಾಹೆಯಾನಾ ಅಧಿವೇಶನವು ನಿನ್ನೆ ಸಂಜೆ ಶ್ರೀ ಟಿ. ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಮೈಸೂರು ನಗರದಲ್ಲಿರುವ ವ್ಯವಸಾಯಗಾರರಿಗೂ ಮತ್ತು ಗಾಡಿಗಳನ್ನಿಟ್ಟುಕೊಂಡಿರುವವರಿಗೂ ಬೇಕಾದ ಕಬ್ಬಿಣ ಮತ್ತು ಇತರ ಮುಖ್ಯಗಳು ಸರಾಗವಾಗಿ ದೊರೆಯುವಂತೆ ಏರ್ಪಡಿಸಿ, ಹೆಚ್ಚು ಆಹಾರ ಬೆಳೆ ಚಳುವಳಿಯಲ್ಲಿ ಅವರೂ ಸಹಕರಿಸಲು ಅನುಕೂಲವಾಗುವಂತೆ ಸರ್ಕಾರದವರು ಏರ್ಪಡಿಸಬೇಕೆಂದು ಡಾ॥ ಬಿ. ಡಿ. ದಾಸಪ್ಪನವರು ಮಂಡಿಸಿದ್ದ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಅನಂತರ ಸಭೆಯು ತನ್ನ ಸಾಮಾನ್ಯ ಕಾರ್ಯಕಲಾಪಗಳನ್ನು ನಡೆಸಿತು.

ಊಟಿಗೆ ಹೋಗಿದ್ದ ಶ್ರೀಮನ್ಮಹಾರಾಜರು ನಿನ್ನೆ ರಾತ್ರಿ ತಮ್ಮ ಪರಿವಾರದೊಡನೆ ರಾಜಧಾನಿಗೆ ಹಿಂತಿರುಗಿದರು.

ಕ್ಯಾಂಪು ಕ್ಲಾರ್ಕ್ ಸಮಾಚಾರವು ... ಮತ್ತು ... ಗೆ ಊಟಿಯಲ್ಲಿ ಕಾಲರಾರೋಗ ತಗುಲಿ ಮಡಿದರೆಂದು ತಿಳಿಯಬರುತ್ತದೆ. ಶವಗಳನ್ನು ಮೈಸೂರಿಗೆ ತರಲಾಯಿತು.

ಪತ್ರವ್ಯವಹಾರ

ಸಮಾಚಾರ ಪತ್ರಿಕೆ ಸಂಪಾದಕರಲ್ಲಿ.—

ಸ್ವಾಮಿ,—

ಮೈಸೂರಿನಲ್ಲಿ ಸೀಮೆಂಟ್ ಹಂಚಿಕೆಯ ವ್ಯವಸ್ಥೆ

ತಮ್ಮ ಪತ್ರಿಕೆಯ ೨೮-೪-೧೯೫೧ನೇ ದಿವಾಂಕದ ಸಂಚಿಕೆಯಲ್ಲಿ ಮೈಸೂರು ಪುರನಿವಾಸಿಗಳಿಗೆ ಸೀಮೆಂಟ್ ಹಂಚಿಕೆಯ ವಿಷಯದಲ್ಲಿ ಕೆಲವು ನ್ಯೂನತೆಗಳನ್ನು ತಿಳಿಸಿ ಈ ಹಂಚಿಕೆಯ ಬಗ್ಗೆ ಒಬ್ಬ ಪೌರಸಭೆಯ ಸದಸ್ಯರ ಪ್ರವೇಶವೇಕೆ ಎಂದು ಪ್ರಶ್ನಿಸಿರುತ್ತೀರಿ

ಮೈಸೂರು ಸಿಟಿಯಲ್ಲಿ ಸೀಮೆಂಟಿನ ಅಭಾವವಿರುವುದೂ ೧-೨ ಮೂಟೆ ಸೀಮೆಂಟಿಗಾಗಿ ಜನಗಳು ಬಿಸಲು ಗಾಳಿಯನ್ನದೆ ಒಂದೇಸಮ ಕ್ಯೂನಲ್ಲಿ ನಿಂತು ಘಂಟೆಗಟ್ಲೆ ಕಾದು ನೂಕುನುಗ್ಗಲು ಗಲಾಟೆ ಮಾರಾಮಾರಿಯಿಂದ ಕೆಲವರಿಗೆ ದೊರಕಿ ಕೆಲವರು ನಿರಾಶರಾಗಿ ಶಪಿಸುತ್ತಾ ಪೇಚಾಡುತ್ತಿರುವುದು ಸರ್ವರಿಗೂ ತಿಳಿದ ವಿಷಯವಾಗಿರುತ್ತೆ.

ಈ ರೀತಿ ಹಂಚಿಗೆ ಮಾರಾಟವಾಗುತ್ತಿರುವುದು, ಲಷ್ಕರ್ ಮೊಹಲ್ಲಾ ಅಶೋಕ ರೋಡಿನಲ್ಲಿ. ನಾನು ಇದೇ ಲಷ್ಕರ್ ಮೊಹಲ್ಲಾ ಮಹಾಜನಗಳ ಪ್ರತಿನಿಧಿಯಾಗಿ ಮುನ್ಸಿಪಲ್ ಸದಸ್ಯನಾಗಿರುತ್ತೇನೆ. ಈ ರೀತಿ ಜನಗಳು ತೊಂದರೆಪಡುತ್ತಿರುವುದನ್ನು ಕಣ್ಣಾರ ನೋಡಿದೆ. ತೆಗೆದುಕೊಂಡವರೇ ತೆಗೆದುಕೊಳ್ಳುತ್ತಾ, ನಿಜವಾಗಿ ಬೇಕಾದವರಿಗೆ ದೊರಕದೆ ಪೇಚಾಡುತ್ತಾ ಜನಗಳು ನನ್ನಲ್ಲಿ ದೂರು ಹೇಳಿಕೊಂಡದ್ದರಿಂದ ನಾನು ಈ ಬಗ್ಗೆ ಸದರೀ ಏಜಂಟರಲ್ಲಿ ಸಮಾಲೋಚಿಸಿ ಇವರ ಮತ್ತು ಅಲ್ಲಿ ಸೀಮೆಂಟುಕೊಳ್ಳಲಿಕ್ಕೆ ಬಂದಿದ್ದ ಜನಗಳ ಅಭಿಪ್ರಾಯದಂತೆ ಸಿಕ್ಕಾಬಟ್ಟೆ ನೂಕುನುಗ್ಗಲಿನಲ್ಲಿ ನಿಂತು ತೆಗೆದುಕೊಂಡವರೇ ತೆಗೆದುಕೊಳ್ಳುವುದನ್ನು ತಪ್ಪಿಸಿ ಪ್ರತಿಯೊಬ್ಬರಿಗೂ ದೊರಕಲೆಂಬ ಸದುದ್ದೇಶದಿಂದ ಅವರವರ ರೇಷನ್ ಕಾರ್ಡಿನ ಮೇಲೆ ಸೀರಿಯಲ್ ನಂಬರಿನಿಂದ ಗುರ್ತಿಸಿ ಹಂಚಿಕೆಯಾಗುವ ವ್ಯವಸ್ಥೆಯನ್ನು ಏರ್ಪಾಡುಮಾಡಿ ಅಲ್ಲೆ ನಿಂತು ಅಲ್ಲಿದ್ದವರೆಲ್ಲರಿಗೂ ತೊಂದರೆಯಿಲ್ಲದೆ ಸೀಮೆಂಟು ಕೊಡಿಸಿದೆ.

ಇದು ನನ್ನ ಕರ್ತವ್ಯವೆಂದು ತಿಳಿದೇ ಮಾಡಿದ ಸೇವಾ ಕೆಲಸವೇ ಹೊರತು ಯಾರಿಗಾದರೂ ತೊಂದರೆವುಂಟುಮಾಡುವುದಕ್ಕಾಗಲೀ ಯಾವವಿಧವಾದ ಅಧಿಕಾರದರ್ಪವನ್ನು ತೋರಿಸಲಿಕ್ಕಾಗಲೀ ಅಲ್ಲ.

ಮೈಸೂರು ಸಿಟಿಯಲ್ಲಿ ಒಂದೇಕಡೆ ಹಂಚಿಕೆಯಾಗುವುದರಿಂದ ಜನಗಳಸಂದಣಿಯೂ ನೂಕುನುಗ್ಗಲೂ ಜಾಸ್ತಿಯಾಗಿ ೧-೨ ಮೂಟೆ ಸೀಮೆಂಟಿಗಾಗಿ ಬಹಳ ಹೊತ್ತು ಕಾಯಬೇಕಾಗಿರುತ್ತದೆ.

ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ನಾಲಕ್ಕಾರುಕಡೆ ಮಾರಾಟ ಹಂಚಿಕೆಯಾಗಲು ಅವಕಾಶಮಾಡಿ ಜನಗಳ ಈ ವಿಧವಾದ ತೊಂದರೆಯನ್ನು ನಿವಾರಣೆಮಾಡುವರೆಂದು ನಂಬಿರುತ್ತೇನೆ.

ಸೊಂದವ, ಅಭಿಮಾನಿ, ಬಿ. ಸುಬ್ಬಣ್ಣ,
ಮುನಿಸಿಪಲ್ ಕೌನ್ಸಿಲರ್ ಮೈಸೂರು.

ಹೆಂಡತಿಯ ಮೂಗನ್ನು ಕತ್ತರಿಸಿದ

ದೆಹಲಿಯ ಕಾಶ್ಮೀರ ಗೇಟ್ ಹತ್ತಿರದಲ್ಲಿದ್ದ ತರುಣದಂಪತಿಗಳಲ್ಲಿ ಸಣ್ಣ ಕಲಹವಾಗಿ ಗಂಡನು ಹೆಂಡತಿಯ ಮೂಗನ್ನೇ ಕತ್ತರಿಸಿದ್ದಾನೆ. ಆಪಾದಿತನನ್ನೀಗ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಸಾಮೂಹಿಕ ಸತ್ಯಾಗ್ರಹ

ಕೆಲಸದಿಂದ ತೆಗೆದುಹಾಕಿರುವ ತಮಗೆ ಒಂದು ತಿಂಗಳೊಳಗಾಗಿ ಕೆಲಸ ಒದಗಿಸದಿದ್ದಲ್ಲಿ ಬೊಂಬಾಯಿಯಲ್ಲಿರುವ ಭಂಡಾರಿಗಳೆಲ್ಲ ಜುಲೈ ೭ ದಿನಗಳಲ್ಲಿ ಹೆಂಡವನ್ನು ತೆಗೆಯಲಾರಂಭಿಸಿ ಸಾಮೂಹಿಕ ಸತ್ಯಾಗ್ರಹವನ್ನಾರಂಭಿಸುವುದಾಗಿ ಸರ್ಕಾರಕ್ಕೆ ಅಂತ್ಯ ನಿರ್ಧಾರ ತಿಳಿಸಿದ್ದಾರೆ.

ಪುನಃ ಪೆಟ್ರೋಲ್ ರೇಷನ್?

ಪೆಟ್ರೋಲ್ ರೇಷನಿಂಗ್ ಪುನಃ ಜಾರಿಗೆ ತರಬೇಕೇ ಎನ್ನುವುದು ಅಂತರರಾಷ್ಟ್ರೀಯ ಹಾಗೂ ಪರ್ಷಿಯಾದ ಪರಿಸ್ಥಿತಿ ಮೇಲೆ ಅವಲಂಬಿಸಿದೆ ಎಂದು ಉಪಸಚಿವ ಶ್ರೀ ಕೆ. ಸಂತಾನಂ ಹೇಳಿರುವರು.

ಭಾಷಣ

ತಾ॥ ೪-೫-೫೧ನೇ ಶುಕ್ರವಾರ ಬೆಳಗ್ಗೆ ೯ ಗಂಟೆಗೆ ಚಾಮರಾಜಪೇಟೆ ಗುಲ್ಲಿರವ ಸಹಕಾರಭವನದಲ್ಲಿ ಅಖಿಲಭಾರತ ಚರಖಾಸಂಘದ ಅಧ್ಯಕ್ಷರಾದ ಶ್ರೀ ಧೀರೇಂದ್ರಮಜುಂದಾರ್‌ರವರು 'ಖಾದಿ ಮತ್ತು ರಚನಾತ್ಮಕಕಾರ್ಯ' ಎಂಬ ವಿಷಯವಾಗಿ ಭಾಷಣಮಾಡುವರು.

ಭಾರತಕ್ಕೆ ಗೋಧಿ

ಬ್ರಿಟನ್ ತನಗೆ ಬಂದಿದ್ದ ೬೨೫೦೦ ಟನ್ ಆಸ್ಟ್ರೇಲಿಯಾ ಗೋಧಿಯನ್ನು ಭಾರತಕ್ಕೆ ಸರಬರಾಯಿ ಮಾಡಿದಕ್ಕೆ ಭಾರತವು ಮಾರ್ಚಿ ತಿಂಗಳಲ್ಲಿ ಕೊಡಬೇಕಾಗಿದ್ದ ಅದರ ಮೊಬಲಗನ್ನು ಜುಲೈ ಮಾಹೆಯಲ್ಲಿ ಕೊಡಲವಕಾಶವಿತ್ತಿದೆ.

ಕಾಂಗ್ರೆಸ್ ಸಮಿತಿಯೇ ರದ್ದಾಯಿತು

ಆಂಧ್ರದಲ್ಲಿನ ಕಾಗ್ರೆಸ್ ವಿದ್ಯಮಾನಗಳನ್ನು ನೋಡಿದರೆ ಕಾಂಗ್ರೆಸಿನಲ್ಲಿ ಪ್ರಾಮಾಣಿಕರಾದ ಗಾಂಧೀ ಅನುಯಾಯಿಗಳು ಇರುವುದಕ್ಕೇ ಸಾಧ್ಯವಿಲ್ಲವೆಂದು ಕಾಣುತ್ತದೆ ಎಂದು ಅಭಿಪ್ರಾಯಪಟ್ಟು ಗುಂಟೂರುಟೌನ್ ಕಾಂಗ್ರೆಸ್ ಸಮಿತಿಯು ರದ್ದಾಗಿದೆ. ಈ ಸಮಿತಿಯ ೪೭ ಸದಸ್ಯರುಗಳಲ್ಲಿ ೩೨ ಜನ ಈಗ ಪ್ರಕಾಶಂ ಮತ್ತು ಶ್ರೀ ರಂಗಾರವರ ಪ್ರಜಾಪಕ್ಷಕ್ಕೆ ಸೇರಿದ್ದಾರೆ.

ಭಾರತದ ಅಸಮಾಧಾನ?

ಅಮೆರಿಕಾವು ಭಾರತಕ್ಕೆ ಕಳುಹಿಸಬೇಕೆಂದಿರುವ ೨೦ ಲಕ್ಷ ಟನ್ ಆಹಾರದ ವಿಷಯದಲ್ಲಿ ಭಾರತ ಸರ್ಕಾರವು ಅಸಮಾಧಾನಪಟ್ಟಿದೆಯೆಂದು ದೆಹಲಿಯ ವೃತ್ತಗಳಲ್ಲಿ ಹೇಳಲಾಗಿದೆ. ಆಹಾರವನ್ನು ಕೊಡಬೇಕೆಂಬ ವಿಷಯದಲ್ಲಿ ಅಮೆರಿಕಾವು ಅನುಸರಿಸುತ್ತಲಿರುವ ನೀತಿಯು ಅಷ್ಟು ಹಿತಕರವಾಗಿಲ್ಲವೆಂದೂ, ಕೊರತೆಯಿರುವ ೬೦ ಲಕ್ಷ ಟನ್ ಆಹಾರವನ್ನು ಇನ್ಯಾವ ರೀತಿಯಲ್ಲಾದರೂ ತರಿಸಿ ಪರಿಸ್ಥಿತಿಯನ್ನು ಎದುರಿಸಲು ಭಾರತ ಸರ್ಕಾರವು ಪ್ರಯತ್ನಿಸುತ್ತಲಿರುವುದಾಗಿ ತಿಳಿಯಬರುತ್ತದೆ. ಜೈನಾವು ಕೊಡಲಿರುವ ೧೦ ಲಕ್ಷ ಟನ್ ಆಹಾರವನ್ನು ಬಿಟ್ಟು ಇತರ ಕಡೆಗಳಿಂದ ೪೦ ಲಕ್ಷ ಟನ್ ಆಹಾರವನ್ನು ಪಡೆಯಲು ಭಾರತವು ಈಗಾಗಲೇ ಒಪ್ಪಂದ ಮಾಡಿಕೊಂಡಿದೆಯೆಂದು ಹೇಳಲಾಗಿದೆ.

ಭಾರತದ ಮೇಲೆ ಅಪಾದನೆ

ಭಾರತದಲ್ಲಿ ಪ್ರವಾಹ, ಅನಾವೃಷ್ಟಿಯುಂಟಾಗಿದ್ದರೂ ಅಹಾರ ಅಭಾವವು ಸ್ವಾಭಾವಿಕವಾದುದಲ್ಲ. ಸರ್ಕಾರದವರೇ ಕಲ್ಪಿಸಿರುವ ಅಭಾವ. ಪಾಕಿಸ್ತಾನವು ಅಧಿಕ ಪ್ರಮಾಣದಲ್ಲಿ ಆಹಾರಕೊಡಲು ಸಿದ್ಧವಿದ್ದಾಗ್ಯೂ, ಬೆಲೆಯು ಇತರಕಡೆಗಿಂತ ಕಡಮೆಯಿದ್ದಾಗ್ಯೂ ಭಾರತ ಸರ್ಕಾರವು ಅದನ್ನು ತಿರಸ್ಕರಿಸಿದೆ. ಪಾಕಿಸ್ತಾನದ ಆರ್ಥಿಕಸ್ಥಿತಿಯನ್ನು ಮುರಿಯುವುದೇ ಭಾರತದ ಗುರಿ ಎಂದು ಭಾರತಕ್ಕೆ ಭೇಟಿಯಿತ್ತು ಅಮೇರಿಕಾಕ್ಕೆ ಹಿಂತಿರುಗಿದ ಸೆನಾಟರ್ ಗ್ರೀನ್‌ರವರು ಹೇಳುತ್ತಾ ಭಾರತವನ್ನು ದೂಷಿಸಿದ್ದಾರೆ.

ಬ್ಯಾಂಕು ನೌಕರರ ಮುಷ್ಕರ

ತಮ್ಮ ಬೇಡಿಕೆಗಳನ್ನು ಮೇ ೧೫ ರೊಳಗೆ ಈಡೇರಿಸದಿದ್ದಲ್ಲಿ ಭಾರತಾದ್ಯಂತವಿರುವ ೬೦೦೦೦ ಬ್ಯಾಂಕು ನೌಕರರೆಲ್ಲರೂ ಮುಷ್ಕರ ಹೂಡಲು ನಿಶ್ಚಯಿಸಿದ್ದಾರೆ.

೧೫ನೇ ಇಂಡಿಯನ್ ಮಾಂಟೆಸ್ಸೋರಿ ಶಿಕ್ಷಣ

ಮೈಸೂರು ನಗರದಲ್ಲಿ, ಮೇ ತಿಂಗಳಿಂದ ಸೆಪ್ಟಂಬರ್‌ವರೆಗೆ ಮಾಂಟೆಸ್ಸೋರಿ ಶಿಕ್ಷಣವನ್ನು ವಸ್ತುಪ್ರದರ್ಶನಾಲಯದಲ್ಲಿ ಕೊಡಲು ಏರ್ಪಡಿಸಿದೆ. ಸರ್ಕಾರವು ಉಚಿತ ಸೌಕರ್ಯಗಳೊಡನೆ ೫೦ ಉಪಾಧ್ಯಾಯರಿಗೆ ಶಿಕ್ಷಣಕ್ಕಾಗಿ ಕಳುಹಿಸಲಿದೆ. ಈ ಶಿಕ್ಷಣವನ್ನು ಪಡೆಯಲಪೇಕ್ಷೆಯುಳ್ಳವರು ರಮಾವಿಲಾಸ ಅಗ್ರಹಾರದಲ್ಲಿರುವ ಆರ್ಗನೈಜಿಂಗ್ ಸೆಕ್ರೆಟರಿಯವರಿಗೆ ಮೇ ೭ನೇ ತಾರೀಖಿನೊಳಗಾಗಿ ಬರೆದು ಸೌಕರ್ಯಗಳನ್ನು ಪಡೆಯಬಹುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಗ್ರಾಮಸ್ಥರೆಲ್ಲಾ ಬಂಧನ

ಎರಡು ವರ್ಷಗಳಿಂದ ಕ್ರಾಂತಿಕಾರರಿಗೆ ಸಹಾಯನೀಡುತ್ತಲಿದ್ದರೆಂಬ ಅಪಾದನೆ ಮೇಲೆ ಮಲಯದ ಬೋಸುಟ್ ಎಂಬ ಗ್ರಾಮದ ೪೫೦ ಜನರನ್ನೆಲ್ಲಾ ಬಂಧಿಸಿ, ಅವರು ಮನೆ ಮಠಗಳನ್ನೆಲ್ಲಾ ಕೆಡವಿ, ೧೪ ಮೈಲಿ ದೂರವಿರುವ ಮತ್ತೊಂದು ಗ್ರಾಮಕ್ಕೆ ಕೂಡಲೇ ಅವರ ಸಾಮಾನುಗಳೊಡನೆ ಹೋಗಲಾಜ್ಞೆಯಿತ್ತು ಗ್ರಾಮದ ಸುತ್ತಲೂ ರಕ್ಷಣಾ ವ್ಯೂಹವನ್ನು ಕಲ್ಪಿಸಲಾಗಿದೆ.

ಮನೆ ಬಿಕರಿಗಿದೆ

ಚಾಮುಂಡಿಪುರದಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್ ಕೋ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

ರಣಜಿತ್

೨೭—೪—೫೧ರಿಂದ

ಅಮೋಘವಾದ ೨ನೇ ವಾರ

ಪ್ರತಿದಿನ ಮೂರು ಆಟಗಳು

ಮಧುಬಾಲರವ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್,
ಮಧುಬಾಲ ಶಾಕುಂತಲ ಮತ್ತು
ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೪೧೮ ದಿನಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩—೫—೧೯೫೧ನೇ ಗುರುವಾರ [ಸಂಚಿಕೆ ೧೯೭

ಹೆಚ್ಚಿಗೆ ಸೌಕರ್ಯ

೧೦೦೦೦೦ಕ್ಕಿಂತ ಹೆಚ್ಚಿಗೆ ಪ್ರಜಾ ಸಂಖ್ಯೆಯಿರುವ ಪಟ್ಟಣಗಳಿಗೆಲ್ಲಾ ನೀರು, ವಿದ್ಯುಚ್ಛಕ್ತಿ ಸೌಕರ್ಯಗಳನ್ನು ಕೊಡಬೇಕೆಂದು ಹೈದರಾಬಾದ್ ಸರ್ಕಾರವು ಒಂದು ಹೊಸ ಯೋಜನೆಯನ್ನು ತಯಾರಿಸಿದೆ.

ರುಸುಂ ಮನ್ನಾ

ಭಾರತ-ಪರ್ಷಿಯಾಗಳಿಗೆ ಪ್ರಯಾಣ ಮಾಡಲು ಕೊಡಬೇಕಾಗಿದ್ದ ಪ್ರಯಾಣ ರುಸುಂ ಇನ್ನು ಮುಂದೆ ಕೊಡಬೇಕಾಗಿಲ್ಲದಂತೆ ಉಭಯ ರಾಷ್ಟ್ರಗಳೂ ತೀರ್ಮಾನಕ್ಕೆ ಬಂದಿವೆ. ಎರಡು ದೇಶಗಳಿಗೂ ಸಂಪರ್ಕ ಹೆಚ್ಚಲೆಂದು ಈ ರಿಯಾಯಿತಿ ಮಾಡಲಾಗಿದೆ.

ಕಾಳಸಂತೆ ವ್ಯಾಪಾರಕ್ಕೆ ಮರಣದಂಡನೆ ವಿಧಿಸಿ

ಕಾಳಸಂತೆ ವ್ಯಾಪಾರ ಮತ್ತು ಅಕ್ರಮ ಶೇಖರಣೆಗಳನ್ನು ಬುಡಮೇಲುಮಾಡುವ ಕಾರ್ಯಾಚರಣೆಯೆಂದು ಪರಿಗಣಿಸಿ, ತೀವ್ರ ಅಪರಾಧಿಗಳಿಗೆ ಮರಣದಂಡನೆ ವಿಧಿಸಬೇಕೆಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯ 'ಎಕನಾಮಿಕ್ ರಿವ್ಯೂ' ಪತ್ರಿಕೆಯು ತಿಳಿಸುತ್ತದೆ.

ಸಮಾಜ ದ್ರೋಹಿಗಳಿಗೆ ಸರ್ಕಾರ ಕರುಣೆ ತೋರಿಸಕೂಡದೆಂದೂ, ಎಷ್ಟೇ ದೊಡ್ಡವರಾದರೂ ಅಂತಹ ಅಪರಾಧಿಗಳನ್ನು ಶಾಸನರೀತ್ಯಾ ಶಿಕ್ಷೆಗೆ ಗುರಿಪಡಿಸಬೇಕೆಂದು, ಪತ್ರಿಕೆಯು ಅಗ್ರಲೇಖನದಲ್ಲಿ ಬರೆದಿದೆ.

ಅಭಾವವಿರುವ ಪ್ರದೇಶಗಳಲ್ಲಿ ಅಕ್ರಮ ಶೇಖರಣಾ ವಿರುದ್ಧ ದಳಗಳನ್ನೇರ್ಪಡಿಸಬೇಕೆಂದೂ, ಗ್ರಾಮ ಪಂಚಾಯಿತಿಗಳೂ, ಕಾಂಗ್ರೆಸ್ ಸಮಿತಿಗಳೂ ಸಹಕರಿಸಿ ಬಚ್ಚಿಟ್ಟ ಆಹಾರ ಧಾನ್ಯಗಳನ್ನು ಹೊರತೆಗೆಯಬೇಕೆಂದೂ ಪತ್ರಿಕೆಯು ವಾದಿಸಿದೆ.

ಸಕ್ಕರೆ ಸಾಗಾಣಿಕೆ

ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಕ್ರಿಸ್ಟಲ್ ಸಕ್ಕರೆಯನ್ನು ಸಾಗಿಸಲಿದ್ದ ನಿರ್ಬಂಧವನ್ನು ಸರ್ಕಾರದವರು ತೆಗೆದುಹಾಕಿರುವರು.

ಪಾಕಿಸ್ತಾನದ ಅಕ್ಕಿ

ಪಾಕಿಸ್ತಾನದಿಂದ ೯೦೦೧ಟನ್ ಅಕ್ಕಿಯನ್ನು ಹೊತ್ತು ಜಲರತ್ನ ಎಂಬ ಹಡಗು ಕೊಚ್ಚಿನ್‌ಗೆ ಬಂದಿದೆ.

ಶಾಸನಸಭಾಧಿವೇಶನ

ಬೆಂಗಳೂರು ಮೆ. ೨

ಮೈಸೂರು ಅಸೆಂಬ್ಲಿಯ ಮುಂದುವರೆದ ಅಧಿವೇಶನವು ಮೇ ೨೮ ರಿಂದ ಸೇರಲಿದೆ.

ಅಮೆರಿಕಾ ಹತ್ತಿ

ಅಮೆರಿಕಾದಿಂದ ಭಾರತಕ್ಕೆ ೧೧ ಸಾವಿರ ಬೇಲ್ ಹತ್ತಿಯು ಬರಲಿದೆ.

ಹೈದರಾಬಾದ್ ಸರ್ಕಾರದ ಚೀಫ್ ಸೆಕ್ರೆಟರಿ ಶ್ರೀ ಕೆ. ಶ್ರೀನಿವಾಸನ್

ಹೈದರಾಬಾದ್ ಸರ್ಕಾರಕ್ಕೆ ಖಾಯಂ ಚೀಫ್ ಸೆಕ್ರೆಟರಿಯವರನ್ನು ನೇಮಕ ಮಾಡುವ ಪ್ರಶ್ನೆ ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ. ಈ ನೇಮಕದ ಬಗ್ಗೆ ಮೈಸೂರಿನ ಚೀಫ್ ಸೆಕ್ರೆಟರಿಯವರಾಗಿದ್ದ ಶ್ರೀ ಕೆ. ಶ್ರೀನಿವಾಸನ್‌ರವರ ಹೆಸರುಪ್ರಾಮುಖ್ಯವಾಗಿ ಕೇಳಿಬರುತ್ತಿದೆ.

ಸಮಿತಿಗಳ ಮುಂದೆ ಹಾಜರು

ಅಮೆರಿಕಾವಲ್ಲಿ ಸೆನೆಟ್ ವಿದೇಶಾಂಗ ಸಮಿತಿ ಮತ್ತು ಶಸ್ತ್ರ ಸಮಿತಿಗಳ ಮುಂದೆ ಜನರಲ್ ಮೆಕಾರ್ಥರ್ [illegible] ದು ತಿಳಿಯಬರುತ್ತದೆ. ಅಧಿವೇಶನವು ರಹಸ್ಯವಾಗಿ ನಡೆಯುವುದು.

ಭಾರತಕ್ಕೆ ಆಹಾರ

ಪಾಕಿಸ್ತಾನದಿಂದ ಭಾರತಕ್ಕೆ ೫೦೦೦ ಟನ್ ಆಹಾರವು ನಿನ್ನೆ ಬಂದಿತು.

ಚೈನಾದಿಂದ ಪುನಃ ೫೦೦೦೦ ಟನ್ ಅಕ್ಕಿಯನ್ನು ತರಿಸಿಕೊಳ್ಳಲು ಸಾಧನ ನಡೆಯುತ್ತಲಿದೆ.

ಬರ್ಮಾದಿಂದ ಅಕ್ಕಿಯನ್ನು ತರಿಸಿಕೊಳ್ಳಲು ಭಾರತ ಸರ್ಕಾರದ ಆಹಾರಮಂತ್ರಿ ಶ್ರೀ ಮುನ್ಷಿಯವರ ನಾಯಕತ್ವದಲ್ಲಿ ಅಲ್ಲಿಗೆ ಹೋಗಿರುವ ವಾಣಿಜ್ಯನಿಯೋಗಕ್ಕೂ ಬರ್ಮಾ ಸರ್ಕಾರಕ್ಕೂ ಮಾತುಕಥೆ ನಡೆಯಲಾರಂಭವಾಗಿದೆ. ಶ್ರೀ ಮುನ್ಷಿಯವರು ಬರ್ಮಾ ಪ್ರಧಾನಿ ಥಾಕಿನ್ನೂನವರನ್ನು ಈಗಾಗಲೇ ಭೇಟಿ ಮಾಡಿದ್ದರು.

೪೫೭೭ ಎಕರೆ ದಾನ

ಹೈದರಾಬಾದಿನ ತೆಲಂಗಾಣ ಪ್ರಾಂತ್ಯದಲ್ಲಿ ಪ್ರವಾಸ ಕೈಗೊಂಡಿರುವ ಆಚಾರ್ಯವಿನೋಬಾಭಾವೆಯವರಿಗೆ ಅಲ್ಲಿಯ ೯ ಜಮೀನ್ದಾರರು ತಮಗೆ ಸೇರಿದ ೪೫೭೭ ಎಕರೆ ಜಮೀನಿನಲ್ಲಿ ಬಡವರಿಗೆ ಹಂಚಲು ದಾನ ಮಾಡಿರುತ್ತಾರೆ.

ವಿಮಾನ ಕಾರ್ಖಾನೆ ವಿಸ್ತರಣೆ

ಬೆಂಗಳೂರು ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಎಲ್ಲಾ ತರಹದ ವಿಮಾನಗಳನ್ನು ತಯಾರ್ಮಾಡಲನುಕೂಲವಾಗುವಂತೆ ೭೩ ಲಕ್ಷ ರೂಪಾಯಿಗಳ ವೆಚ್ಚದಿಂದ ಕಾರ್ಖಾನೆಯನ್ನು ವಿಸ್ತರಿಸಲು ಸರ್ಕಾರವು ನಿರ್ಧರಿಸಿದೆ. ಈ ಕೆಲಸಕ್ಕಾಗಿ ವಿದೇಶದಿಂದ ೨ ಅಥವಾ ೩ ಪ್ರವೀಣರನ್ನು ಕರೆಸಿಕೊಳ್ಳಲಾಗುವುದು.

ಚರ್ಚೆ ಮುಂದೆಹೋಯಿತು

ಭಾರತಕ್ಕೆ ಆಹಾರವನ್ನು ಸರಬರಾಯಿ ಮಾಡುವ ಮಸೂದೆಯನ್ನು ಅಮೆರಿಕಾ ಕಿರಿಯ ಶಾಸನ ಸಭೆಯು ಈಗ ಚರ್ಚೆ ಮಾಡಬೇಕಾಗಿದುದ್ದನ್ನು ಮುಂದಿನ ವಾರಕ್ಕೆ ಮುಂದುವರಿಸಿದೆ. ಸ್ವಂತಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಪರಿಶೀಲಿಸಬೇಕಾಗಿರುವುದರಿಂದ ಈ ವಿಷಯವನ್ನು ಮುಂದುವರಿಸಲಾಗಿದೆಯೆಂದು ಹೇಳಲಾಗಿದೆ.

ಸಮಾಲೋಚನೆ

ಮಂಚೂರಿಯಾದಲ್ಲಿರುವ ಚೈನಾ ಸೈನ್ಯ ಕ್ಷೇತ್ರಗಳ ಮೇಲೆ ಬಾಂಬು ಹಾಕುವ ವಿಷಯದಲ್ಲಿ ಬ್ರಿಟನ್ ಅಮೆರಿಕಾಗಳಲ್ಲಿ ಸಮಾಲೋಚನೆ ನಡೆಯುತ್ತಲಿದೆ.

ನೆಹರೂ-ಕೃಪಲಾನಿ ಭೇಟಿ

ಪ್ರಜಾ ಸತ್ತಾತ್ಮಕಪಕ್ಷದ ನಾಯಕರುಗಳಾದ ಆಚಾರ್ಯಕೃಪಲಾನಿ, ಮಿ|| ಕಿದ್ವಾಯಿಯವರುಗಳು ನಿನ್ನೆ ಪ್ರಧಾನಿ-ನೆಹರೂರವರನ್ನು ಅವರ ಗೃಹದಲ್ಲಿ ಭೇಟಿಮಾಡಿ ಚರ್ಚೆ ನಡೆಸಿದರೆಂದು ತಿಳಿಯಬರುತ್ತದೆ.

ರಿಯಾಯಿತಿ

ಮುಳಬಾಗಲ್ ತಾ|| ನ ೫೧೧ ಕೆರೆಗಳ ಆಶ್ರಯದಲ್ಲಿ ಆಗಬೇಕಾಗಿದ್ದ ಬೆಳೆಯು ಹಾಳಾಗಿರುವುದರಿಂದ ಸರ್ಕಾರದವರು ಅರ್ಧ ತೆರಿಗೆಯನ್ನು ರಿಯಾಯಿತಿ ಕೊಟ್ಟಿರುವರು. ಈ ಮೊಬಲಗು ರೂ. ೨೫೮೧೮-೪-೩ ಪೈ. ಆಗುವುದು.

ಹಿರೋಹಿಟೋ-ರಿಡ್ಜ್‌ವೇ ಭೇಟಿ

ಜಪಾನಿನ ಚಕ್ರವರ್ತಿ ವಿಶ್ವಸಂಸ್ಥೆಯ ಶ್ರೇಷ್ಠ ದಂಡನಾಯಕ ಜನರಲ್ ರಿಡ್ಜ್‌ವೇಯವರನ್ನು ಮೊದಲನೇ ಸಾರಿ ಭೇಟಿ ಮಾಡಿದರು.

ಪ್ರವೀಣರು ಭಾರತಕ್ಕೆ

ವಿದ್ಯಾಭ್ಯಾಸ, ಕೈಗಾರಿಕೆ ಮುಂತಾದ ನಾನಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಪಡೆಯಲು ಸಹಾಯ ಮಾಡಲು ವಿದೇಶಗಳಿಂದ ೨೯ ಜನ ಪ್ರವೀಣರು ಭಾರತಕ್ಕೆ ಬರಲಿರುವರು.

ಸೈನ್ಯದಿಂದ ನಿವೃತ್ತಿ

ಭಾರತ ಸೈನ್ಯದಿಂದ ಮಾರ್ಚಿ ಅಖೈರಿನ ವರೆಗೆ ೫೦೦೦೦ ಯೋಧರನ್ನು ನಿವೃತ್ತಿ ಮಾಡಲಾಗಿದೆ. ಉತ್ತಮ ದರ್ಜೆಯ ಸೈನ್ಯಕ್ಕೆ ಸೇರಲ್ಲದಿದ್ದುದರಿಂದ ಇವರನ್ನು ನಿವೃತ್ತಿಗೊಳಿಸಲಾಗಿದೆ.

ಭಾರತಕ್ಕೆ ರಷ್ಯಾ ಗೋಧಿ

ಭಾರತಕ್ಕೆ ರಷ್ಯಾದಿಂದ ಗೋಧಿಯನ್ನು ತರಿಸಿಕೊಳ್ಳಲು ವ್ಯವಹಾರ ನಡೆಯುತ್ತಲಿದೆ.

ಕಡಲೆ ಬೆಲೆ

ಮಾರ್ಚಿ ೩೦ನೇ ತಾರೀಖಿನಿಂದ ಕಡಲೆ ಬೆಲೆಯು ಪಲ್ಲಾ ಒಂದಕ್ಕೆ ರೂ. ೪೦-೦-೧೦ ಪೈ. ಅಥವಾ ಸೇರು ಒಂದಕ್ಕೆ ೦ ೬-೫ ಸಂತೆ ಮೈಸೂರು ಸರ್ಕಾರವು ನಿಗದಿ ಮಾಡಿದೆ.

ಪರೀಕ್ಷೆಯ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಫಲಿತಾಂಶ ಇದೇ ಮಾಹೆ ೭ನೇ ತಾರೀಖು ಹೊರಬೀಳುವುದು.

ಭಾರತ ನಾಣ್ಯ ಚಲಾವಣೆಯಿಲ್ಲ

ಇದೇ ಮಾಹೆ ಒಂದನೇ ತಾರೀಖಿನಿಂದ ಪಾಕಿಸ್ತಾನದಲ್ಲಿ ಭಾರತ ನಾಣ್ಯಗಳ ಚಲಾವಣೆಯಿಲ್ಲವೆಂದು ಪಾಕಿಸ್ತಾನ ಸರ್ಕಾರವು ತಿಳಿಸಿದೆ.

ಪಕ್ಷಗಳು ಬೇಡ ಐಕ್ಯತೆಯಿಂದ ದುಡಿಯಬೇಕು

ಹೊಸನಾಣ್ಯ, ನೂತನ ಆರ್ಥಿಕ ಪರಿಸ್ಥಿತಿ ಮತ್ತು ಹೊಸದಾಗಿ ಸ್ಥಾಪಿತವಾದ ಪಾಕಿಸ್ತಾನದಲ್ಲಿ ಜೀವನಮಟ್ಟ ಮತ್ತು ಭಾರತದ ಜೀವನಮಟ್ಟವನ್ನು ಪರಿಶೀಲಿಸಿದರೆ ಅಜಗಜಾಂತರ ವ್ಯತ್ಯಾಸವಿರುವುದು

ನಮ್ಮಲ್ಲಿ ಜೀವನಮಟ್ಟವು ಅತ್ಯಧಿಕವಾಗುತ್ತಲಿವೆ. ಇದಕ್ಕೆ ಆಹಾರ ಅಭಾವವೇ ಕಾರಣವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಹಿಂದಿನ ತಪ್ಪುಗಳನ್ನು ಎಣಿಸುತ್ತ ಕುಳಿತುಕೊಳ್ಳದೆ, ಪರಿಸ್ಥಿತಿಯನ್ನು ಐಕ್ಯತೆಯಿಂದ ಎದುರಿಸಬೇಕಾಗಿದೆ. ಈಗಿನ ಸ್ಥಿತಿಗೆ ಹೊಣೆಗಾರರಾರೆಂಬುದನ್ನು ನಾವು ಪರಿಶೀಲಿಸುತ್ತ ಹೋದರೆ ಭಾರತೀಯರೆಲ್ಲರೂ ಕಾರಣರಾಗುವರು.

ಭಾರತದಲ್ಲಿರುವ ಹಿರಿಯ, ಕಿರಿಯ ಪಂಗಡಗಳೆಲ್ಲವೂ ಅಧಿಕಾರಲಾಲಸೆಯಲ್ಲಿ ತೊಡಗಿರುವುವು. ದೇಶವು ಈಗ ಉದ್ಧಾರವಾಗಬೇಕಾದಲ್ಲಿ ಎಲ್ಲರೂ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳಬೇಕೆಂದು ಶ್ರೀ ಪಾಲ್ಮೆಯರವರು ಎಲ್ಲಾ ಪಂಗಡದವರಲ್ಲಿ ಬಿನ್ನವಿಸಿಕೊಂಡಿರುವರು.

ಕಾಂಗ್ರೆಸ್ ಈಗ ತನ್ನ ಪ್ರತಿಷ್ಠೆಯನ್ನು ಬದಿಗಿಟ್ಟು, ತನ್ನ ಜವಾಬ್ದಾರಿಯೇನೆಂಬುದನ್ನೂ ಸ್ವಾತಂತ್ರ್ಯಸಂಗ್ರಾಮಕಾಲದಲ್ಲಿತ್ತ ವಾಗ್ದಾನಗಳನ್ನು ಮರೆಯದೆ ತಾನೀಗ ಅನುಸರಿಸುತ್ತಲಿರುವ ನೀತಿಯನ್ನು ಬದಲಾಯಿಸಿಕೊಳ್ಳಬೇಕು. ಅಧಿಕಾರದಲ್ಲಿರುವವರು, ಅಧಿಕಾರಕ್ಕೆ ಬರಬೇಕೆಂದು ಪ್ರಯತ್ನಿಸುತ್ತಲಿರುವವರೂ, ಹೊಸ ಹೊಸ ಪಕ್ಷಗಳನ್ನು ಕಟ್ಟಿ ಅಧಿಕಾರಕ್ಕೆ ಹೋರಾಡುವುದನ್ನು ನಿಲ್ಲಿಸಿ, ತಮ್ಮ ತಮ್ಮ ವ್ಯತ್ಯಾಸಗಳನ್ನು ತಮ್ಮ ನೆಂಟರು, ಇಷ್ಟರು, ದೇಶದ ಹಿತದೃಷ್ಟಿಯಿಂದ ಬದಿಗಿಟ್ಟು ಎಲ್ಲರೂ ಐಕ್ಯತೆಯಿಂದ ಆಹಾರ, ಬಟ್ಟೆ, ವಾಸಕ್ಕೆ ಮನೆಗಳನ್ನು ಜನರಿಗೆ ಒದಗಿಸಿ ದೇಶದ ಇಂದಿನ ಉಗ್ರಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಪರಿಸ್ಥಿತಿಯು ಉತ್ತಮಗೊಂಡನಂತರ ವಿರೋಧಪಕ್ಷದವರು ಅಧಿಕಾರಕಕ್ಕಾಗಿ ಹೋರಾಡಬಹುದು.

ಈಗತಾನೇ ಸ್ಥಾಪಿತವಾಗಿರುವ ಪಾಕಿಸ್ತಾನದಲ್ಲಿ ಗೋಧಿಯ ಬೆಲೆಯು ಮಣಕ್ಕೆ ೭ರಿಂದ ೯ ರೂ. ಭಾರತದಲ್ಲಿ ರೇಷನ್ ಚಾರಿಯಲ್ಲಿರುವ ಕಡೆ ೧೫ ರೂ. ಇತರ ಕಡೆ ೨೦ ರಿಂದ ೪೦ ರೂ. ದ್ವಿದಳಧಾನ್ಯ ಪಾಕಿಸ್ತಾನದಲ್ಲಿ ೭ ರೂ. ಭಾರತದಲ್ಲಿ ೧೫ ರಿಂದ ೨೫ ರೂ. ಅಕ್ಕಿ ಪಾಕಿಸ್ತಾನದಲ್ಲಿ ಮಣಕ್ಕೆ ೧೧—೧೫ ರೂ. ಭಾರತದಲ್ಲಿ ೨೦ ರಿಂದ ೭೦ ರೂ. ಹಾಲು ಪಾಕಿಸ್ತಾನದಲ್ಲಿ ೧ ಸೇರು ೮ ಆಣೆ, ಭಾರತದಲ್ಲಿ ೧೨ ಆಣೆಯಿಂದ ೧|| ರೂ. ಉತ್ತಮವಾದ ತುಪ್ಪ ಭಾರತದಲ್ಲಿ ಸೇರಿಗೆ ೬—೭ ರೂ. ಪಾಕಿಸ್ತಾನದಲ್ಲಿ ೩||—೪, ವಿದೇಶಗಳಿಂದ ಬರುವ ಬೈಸಿಕಲ್, ಬಟ್ಟೆ ಮುಂತಾದ ಬೆಲೆ ಭಾರತಕ್ಕಿಂತಲೂ ಪಾಕಿಸ್ತಾನದಲ್ಲಿ ಕಡಮೆ. ನಮಗಿಂತ ಅನುಭವದಲ್ಲಿ ಕಡಮೆಯಿರುವ ಹೊಸರಾಷ್ಟ್ರವು ತನ್ನ ಜನರ ಹಿತರಕ್ಷಣೆಗೆ ಹೇಗೆ ಕಷ್ಟಪಡುತ್ತಲಿದೆಯೆಂಬುದಕ್ಕಾಗಿ ಈ ಉದಾಹರಣೆ ಕೊಡಲಾಗಿದೆ. ಬರೀ ಮಾತಿನಲ್ಲಿಯೇ ನಾವು ಕಾಲಕಳೆಯುತ್ತಾ ದೇಶದಲ್ಲಿ ಅನೇಕ ತೊಂದರೆಗಳನ್ನು ತಂದೊಡ್ಡಿದ್ದೇವೆಂದು ಅವರು ಹೇಳಿರುವರು.

ಅಂತರರಾಷ್ಟ್ರೀಯ ಸೆಮಿನಾರ್

ಗಾಂಧೀ ತತ್ವಗಳ ಬೋಧನೆಯ ಬಗ್ಗೆ ಅಂತರರಾಷ್ಟ್ರೀಯ ಸೆಮಿನಾರೊಂದು ಭಾರತದಲ್ಲಿ ಈ ವರ್ಷ ನಡೆಯುವುದೆಂದು ಪಾರ್ಲಿಮೆಂಟಿನಲ್ಲಿ ವಿದ್ಯಾ ಮಂತ್ರಿ ಅಜಾದ್ ತಿಳಿಸಿರುವರು.

ಒಲಂಪಿಯಾ ಟಾಕೀಸ್

೩—೫—೫೧ರಿಂದ ಅಮೋಘವಾದ ೨ನೇ ವಾರ

ಪ್ರತಿಯೊಬ್ಬರೂ ಕುಟುಂಬ ಸಮೇತರಾಗಿ ನೋಡಬಯಸುವ ಚಿತ್ರ

ರಣಜಿತ್‌ರವರ ಗರೀಬಿ

ಪಾತ್ರ— ಗೀತಾಬಾಲಿ, ನಿರೂಪರಾಯ್, ಜೈರಾಜ್, ಉಷಾಕಿರಣ್.

ಬೆಳಗಿನ ಪ್ರದರ್ಶನ:- ೫-೫-೫೧ರಿಂದ ೩ ದಿನಗಳು ಮಾತ್ರ

ಫಿಲ್ಮಿಸ್ತಾನ್‌ರವರ— "ಸಿಂಫೂರ್"



ಮಲೇರಿಯಾ ನಿರೋಧಕ್ಕೆ ಅತ್ಯಂತ ಉಪಯುಕ್ತವಾದ ಶಾಮಂತಿಗೆ ಜಾತಿಗೆ ಸೇರಿದ ಹೂವು. ಇದು ಕೆನ್ಯಾದಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಆಹಾರವಸ್ತುಗಳು ಕೆಡದಂತೆ ಇಡಲು ಈ ಹೂವನ್ನು ಉಪಯೋಗಿಸಬಹುದೆಂದು ಸಶೋಧನೆಗಳಿಂದ ಕಂಡುಹಿಡಿಯಲಾಗಿದೆ. ಒಂದು ಚೀಲದಲ್ಲಿ ಈ ಹೂವುಗಳನ್ನು ತುಂಬಿರುವುದನ್ನು ನೋಡಬಹುದು.

ಶ್ರೀ ದಾಸಪ್ಪನವರಿಗೆ ಅನಾರೋಗ್ಯ

ಆರ್ಥಿಕ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಚಿತ್ರದುರ್ಗದಿಂದ ಭದ್ರಾವತಿಗೆ ಬಂದನಂತರ ಹೊಟ್ಟೆಯಲ್ಲಿ ನೋವೆಂದು ಹೇಳಿದರೆಂದೂ ಸ್ಥಳೀಯ ವೈದ್ಯರುಗಳೂ ಅನಂತರ ಸೀನಿಯರ್ ಸರ್ಜನ್ ಡಾ|| ಪದಕೀಯವರೂ ಪರೀಕ್ಷಿಸಿದ ಮೇಲೆ ಅಪೆಂಡಿಸೈಟಿಸ್ ಎಂದು ಗೊತ್ತಾಯಿತೆಂದೂ ಅವರಿಗೆ ಸಂಪೂರ್ಣ ವಿಶ್ರಾಂತಿ ಸಲಹೆ ಮಾಡಲಾಗಿದೆಯೆಂದೂ ಗೊತ್ತಾಗಿದೆ. ಸಚಿವರೀಗೆ ಉತ್ತಮಗೊಳ್ಳುತ್ತಿದ್ದಾರೆ ಶ್ರೀಮತಿ ಯಶೋಧರಮ್ಮ ದಾಸಪ್ಪನವರೂ ಶ್ರೀಮತಿ ಲಕ್ಷ್ಮಿಕೃಷ್ಣಪ್ಪನವರೂ ಬಂದಿದ್ದಾರೆ.

ಮನೋಧಾರ್ಢ್ಯ ಉಂಟಾಗಿದೆ

ತೆಲಂಗಾಣ ಪ್ರದೇಶದಲ್ಲಿ ಆಚಾರ್ಯ ವಿನೋಬ ಭಾವೆಯವರ ಪ್ರವಾಸ ಅಲ್ಲಿಯ ಜನರಲ್ಲಿ ಭೀತಿಯು ತಪ್ಪಿ ಶಾಂತಿಯುಂಟು ಮಾಡಿದೆ. ಅನೇಕ ಶ್ರೀಮಂತರು ನೂರಾರು ಎಕರೆ ಜಮೀನುಗಳನ್ನು ಬಡವರಿಗೆ ಉಚಿತವಾಗಿ ಹಂಚಲು ದಾನ ಮಾಡಿರುವರು. ಅನೇಕ ಗ್ರಾಮಗಳಲ್ಲಿ ಜನರಲ್ಲಿದ್ದ ಭಿನ್ನಾಭಿಪ್ರಾಯ, ಜಗಳ ಮುಂತಾದುವುಗಳಲ್ಲಿ ಆಚಾರ್ಯರು ವಿಚಾರಣೆ ನಡೆಸಿ ತೀರ್ಪನ್ನಿತ್ತಿರುವರು. ಇವರ ಪ್ರವಾಸವು ತೆಲಂಗಾಣದಲ್ಲಿ ಉತ್ತಮ ಪರಿಣಾಮವನ್ನುಂಟುಮಾಡಿದೆ.

* ಪ್ರಭಾ *

೪—೫—೫೧ರಿಂದ

ದಿನವಹಿ 3 ಆಟಗಳು

ಎನ್. ಎಫ್. ಐ. ರವರ—

ಕಾಲೆಬಾದಲ್
(ಕಾರ್ಮುಗಿಲು)

ಅಭಿನಯ—ಮೀನಾ, ಪುಷ್ಪಹನ್ಸ್, ಶ್ಯಾಮ್, ಗೋಪ್, ಜೀವನ್, ಬೇಬಿತಬಂಬ್ ಸುಂ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮   ದಿನ ಪತ್ರಿಕೆ   ಫೋನ್. ೫೭೮೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧]   ೪—೫—೧೯೫೧ನೇ ಶುಕ್ರವಾರ   [ಸಂಚಿಕೆ ೧೯೮

ಪತ್ರಿಕಾಗೋಷ್ಠಿ

ಮೈಸೂರು, ಮೇ. ೪

ಮೈಸೂರು ಸೀಮೆಯ ಜನಗಣತಿ ಮುಖ್ಯಾಧಿಕಾರಿಗಳಾದ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಜನಗಣತಿ ವಿಷಯವಾಗಿ ವಿವರವನ್ನೀಯಲು ಇದೇ ಮಾಹೆ ೭ನೇ ತಾರೀಖು ಪತ್ರಿಕಾಗೋಷ್ಠಿಯನ್ನೇರ್ಪಡಿಸಿರುವರು.

ಭಾರತವನ್ನವಲಂಬಿಸಿದೆ

ಪ್ರಪಂಚ ಸಂಸ್ಥೆಯು ಕಾಶ್ಮೀರ ಪ್ರತಿನಿಧಿಯಾಗಿರುವ ಡಾ|| ಗ್ರಹಾಂರವರ ಯೋಗವು ಜಯಪ್ರದವಾಗುವುದು ಭಾರತದನೀತಿಯ ಮೇಲೆ ಅವಲಂಬಿಸಿಕೊಂಡಿ ಎಂಬುದಾಗಿ ಪಾಕಿಸ್ತಾನ ಪ್ರಧಾನ ಮಂತ್ರಿ ಮಿ|| ಲಿಯಾಖತ್ ಅಲಿಖಾನ್ ತಿಳಿಸಿದ್ದಾರೆ.

ಕೃಪಲಾನಿಯವರ ಪಕ್ಷವು ರದ್ದಾಯಿತು

ಪ್ರಕಾಶಂ ಪಕ್ಷದವರು ಕಾಂಗ್ರೆಸ್ಸಿಗೆ ಹಿಂತಿರುಗುವುದಿಲ್ಲ

ಕೃಪಲಾನಿಯವರು ಸ್ಥಾಪಿಸಿದ್ದ 'ಕಾಂಗ್ರೆಸ್ಸಿನ ಪ್ರಜಾ ಪ್ರಭುತ್ವ'ದ ಅಧಿವೇಶನವು ನಿನ್ನೆ ನಡೆದು ಪಕ್ಷವನ್ನು ವಿಸರ್ಜಿಸಬೇಕೆಂದು ತೀರ್ಮಾನಿಸಿತು. ಪ್ರಧಾನಿ ನೆಹರೂ ಮತ್ತು ಅಜಾದ್‌ರವರು ಅಧಿವೇಶನಕ್ಕಾಗಮಿಸಿ ಒಂದೂವರೆ ಗಂಟೆಕಾಲ ಹಾಜರಿದ್ದರು.

ಕಾಂಗ್ರೆಸ್ಸಿನಲ್ಲಿ ಐಕ್ಯತೆಯುಂಟಾಗಿ ಸಂಘಟನ ಕಾರ್ಯಗಳು ನಡೆಯಲು ಕಾಂಗ್ರೆಸ್ಸಿನಲ್ಲಿಯೇ ವಿವಿಧ ಪಕ್ಷಗಳಿರುವುದು ಅಷ್ಟು ಉಚಿತವಲ್ಲವಾಗಿ ಈ ಪಕ್ಷವನ್ನು ರದ್ದುಗೊಳಿಸಲಾಗಿದೆ. ಅಲ್ಲಿ ಸಾಧಿಸಬೇಕೆಂದಿದ್ದ ಕಾರ್ಯವನ್ನು ಸಾಧಿಸಲೇ ಬೇಕಾಗಿದೆ ಧ್ಯೇಯವನ್ನು ಮಾತ್ರ ಬಿಡಲಾಗುವುದಿಲ್ಲವೆಂದು ಆಚಾರ್ಯ ಕೃಪಲಾನಿಯವರು ಹೇಳಿರುವರು.

ಸಮ್ಮೇಳನಕ್ಕೆ ಹಾಜರಿದ್ದ ಶ್ರೀ ಟಿ. ಪ್ರಕಾಶಂರವರು ಮಾತನಾಡುತ್ತಾ ತಾವು ಕಾಂಗ್ರೆಸ್ಸನ್ನು ತ್ಯಜಿಸಿ ಹೊಸದಾಗಿ ಸ್ಥಾಪಿಸಿರುವ 'ಪ್ರಜಾಪಕ್ಷ'ವನ್ನು ರದ್ದುಗೊಳಿಸುವ ಅಥವಾ ಕಾಂಗ್ರೆಸ್ಸನ್ನು ಪುನಃ ಸೇರುವ ಪರಿಸ್ಥಿತಿಯೇನೂ ಇಲ್ಲವೆಂದೂ ತಮ್ಮ ಪಕ್ಷವು ತನ್ನ ಧ್ಯೇಯವನ್ನನುಸರಿಸಿ ಮುಂದಿನ ಕಾರ್ಯವನ್ನೆಸಗುವುದಾಗಿ ಹೇಳಿರುವರು.

ವಿಶೇಷ ಮಳೆ

ಕ್ವಿಲಾನ್, ತಿರುವನಂತಪುರದಲ್ಲಿ ಎರಡು ದಿವಸಗಳಿಂದ ವಿಶೇಷ ಮಳೆಯಾಗಿ ಸಂಚಾರ ಸೌಕರ್ಯಗಳಿಗೆಲ್ಲಾ ತೊಂದರೆಯುಂಟಾಗಿದೆ.

ಬೀಹಾರವನ್ನು ಬಿಡುತ್ತಿದ್ದಾರೆ

ಬೀಹಾರಿನಲ್ಲಿ ಆಹಾರ ಅಭಾವವು ಹೆಚ್ಚುತ್ತಲಿರುವುದರಿಂದ ಅಲ್ಲಿಯೇ ಜನರಲ್ಲನೇಕರು ಹೊಸ ಕೆಲಸಗಳನ್ನು ಹುಡುಕಿಕೊಂಡು ಪಶ್ಚಿಮ ಬಂಗಾಳಕ್ಕೆ ಹೋಗುತ್ತಲಿದ್ದಾರೆ.

ವಿಶ್ವಭಾರತಿ ಕೇಂದ್ರ ವಿಶ್ವವಿದ್ಯಾನಿಲಯವಾಯಿತು

ಕಲ್ಕತ್ತಾದಲ್ಲಿ ಕವಿ ರವೀಂದ್ರನಾಥರವರಿಂದ ಸ್ಥಾಪಿತವಾದ 'ವಿಶ್ವಭಾರತಿ'ಯು ವಿಶ್ವವಿದ್ಯಾನಿಲಯವಾಗಿ ಪರಿವರ್ತಿಸಿ ಸರ್ಕಾರದ ಆಡಳಿತದಲ್ಲಿರುವಂತೆ ಒಂದು ಮಸೂದೆಯು ನಿನ್ನೆ ಅಂಗೀಕಾರವಾಯಿತು. ಈ ವಿಶ್ವವಿದ್ಯಾನಿಲಯದ ಆಡಳಿತಕ್ಕಾಗಿ ಪ್ರತಿ ವರ್ಷಕ್ಕೆ ೪|| ಲಕ್ಷ ರೂಪಾಯಿಗಳು ಪ್ರಾರಂಭದಲ್ಲಿ ವಸತಿ ಮುಂತಾದುವನ್ನು ನಿರ್ಮಿಸಲು ಅನಾವೃತ್ತಿ ಸಹಾಯಗಳಿಗಾಗಿ ೫ ಲಕ್ಷ ರೂಗಳು ಮಂಜೂರಾದುವು. ಈ ವಿಶ್ವವಿದ್ಯಾನಿಲಯವನ್ನು ಕವಿ ರವೀಂದ್ರ ಧ್ಯೇಯಗಳನ್ನನುಸರಿಸಿ ನಡೆಸಲಾಗುವುದು.

ಸಮ್ಮೇಳನ

ಪ್ರಾಂತ್ಯ ಸರ್ಕಾರಗಳ ಸಿವಿಲ್ ಸಪ್ಲೈ ಸಚಿವರುಗಳ ಸಮ್ಮೇಳನವು ಮುಂದಿನ ಮಂಗಳವಾರ ದೆಹಲಿಯಲ್ಲಿ ಬಟ್ಟೆ ಮತ್ತು ನೂಲಿನ ಹಂಚಿಕೆ ವಿಷಯದಲ್ಲಿ ಚರ್ಚೆ ನಡೆಸಲು ಸೇರಲಿದೆ.

ಕೈಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಅಧ್ಯಕ್ಷತೆ ವಹಿಸುವರು.

ಪಾರ್ಲಿಮೆಂಟಿನಲ್ಲಿ ರಕ್ಷಣಾ ಮಂತ್ರಿಯ ಸಭಾತ್ಯಾಗ

ಚೀಣಕ್ಕೆ ಸಾಮಗ್ರಿಗಳನ್ನು ಸರಬರಾಜು ಮಾಡುವ ವಿಚಾರದಲ್ಲಿ ಈ ದಿನ ಕಾಮನ್ಸ್ ಸಭೆಯಲ್ಲಿ ಮಿ|| ವಿನ್ಸ್‌ಟನ್ ಚರ್ಚಿಲ್ ಮತ್ತು ಟೋರಿ ಪಕ್ಷದ ಇತರ ಮುಖಂಡರಿಗೂ ರಕ್ಷಣಾ ಮಂತ್ರಿ ಮಿ|| ಷಿನ್‌ವೆಲ್‌ರಿಗೂ ವಾಗ್ಯುದ್ಧ ನಡೆದು, ಅನಂತರ ಟೋರಿ ಪಕ್ಷದವರು ರಾಜೀನಾಮೆಕೊಡಿ ರಾಜೀನಾಮೆಕೊಡಿ ಎಂದು ಘೋಷಿಸುತ್ತಿದ್ದಾಗ, ಷಿನ್‌ವೆಲ್‌ರವರು ಸಭಾತ್ಯಾಗಮಾಡಿ ಹೊರಕ್ಕೆ ಹೋದರು.

ರಾಷ್ಟ್ರಾಧ್ಯಕ್ಷರ ನಿವೃತ್ತಿವೇತನ

ಭಾರತ ರಾಷ್ಟ್ರಾಧ್ಯಕ್ಷರ ನಿವೃತ್ತಿವೇತನವು ವರ್ಷಕ್ಕೆ ೧೫,೦೦೦ ರೂಗಳಿರಬೇಕೆಂಬ ಮಸೂದೆಯು ನಿನ್ನೆ ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಯಿತು

ಶಾಸನಕ್ಕೆ ಸಾರ್ವರ ಸಹಿ

ಪರ್ಷಿಯದ ಎಣ್ಣೆ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡುವ ಶಾಸನಕ್ಕೆ ಈ ದಿನ ಪರ್ಷಿಯದ ಷಾರವರು ಸಹಿ ಹಾಕಿದರು.

೨೦ ಕೋಟಿ ರೂ. ಯೋಜನೆ

ಅಭಿವೃದ್ಧಿ ಕಾರ್ಯಗಳಿಗಾಗಿ ಅಸ್ಸಾಂ ಸರ್ಕಾರವು ೨೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸುತ್ತಿದೆ. ಮುಂದಿನ ವಾರದಲ್ಲಿ ಅದು ಆಯೋಜನಾ ಸಮಿತಿಯ ಮುಂದೆ ಬರಲಿದೆ. ಬ್ರಹ್ಮಪುತ್ರ ನದಿಗೆ ೩ ಕೋಟಿ ರೂಗಳ ವೆಚ್ಚದಿಂದ ಒಂದು ಸೇತುವೆಯನ್ನು ಕಟ್ಟುವ ಕಾರ್ಯವೂ ಇದರಲ್ಲಿ ಸೇರಿದೆ.

ಮೆಕಾರ್ಥರ ಹೇಳಿಕೆ

ಜನರಲ್ ಮೆಕಾರ್ಥರವರು ವಿದೇಶಾಂಗ ವ್ಯವಹಾರ ಮತ್ತು ಶಸ್ತ್ರ ಸರಬರಾಜು ಸಮಿತಿಗಳ ಮುಂದೆ ತಮ್ಮ ಹೇಳಿಕೆಯನ್ನೀಯುತ್ತಾ ಕೊರಿಯಾದಲ್ಲಿ ತಾವೆಸಗಿದ ಎಲ್ಲಾ ಕಾರ್ಯಗಳೂ ಅಮೆರಿಕಾ ಮುಖ್ಯಾಧಿಕಾರಿಗಳ ಸಲಹೆಯಂತೆಯೇ ಮತ್ತೆ ಬೇರೆಯಲ್ಲ. ಚೈನಾಕ್ಕೆ ಸಮುದ್ರದ ಕಡೆ ದಿಗ್ಬಂಧನ ರಚನೆ ಮಂಚೂರಿಯಾದ ಮೇಲೆ ಬಾಂಬು ಹಾಕುವುದು, ಕೊಮಿಂಟಾಂಗ್ ಸೈನ್ಯಕ್ಕೆ ಮನ್ನಣೆ ಮುಂತಾದುವೆಲ್ಲವೂ ಅವರ ಸಲಹೆಗಳೇ ಎಂದು ಹೇಳಿರುವರು.

ಸ್ವರ್ಣ ಮಹೋತ್ಸವ

ಬೆಂಗಳೂರು, ಮೇ. ೩

ಶೃಂಗೇರಿ ಜಗದ್ಗುರುಗಳಾದ ಚಂದ್ರಶೇಖರ ಭಾರತೀ ಸ್ವಾಮಿಗಳ ಸ್ವರ್ಣ ಮಹೋತ್ಸವವನ್ನು ಬರುವ ವರ್ಷ ವಿಜೃಂಭಣೆಯಿಂದ ನೆರವೇರಿಸಲು ನಿಶ್ಚಯಿಸಲಾಗಿದೆ.

ಹಿಂದಿ ಸರ್ಕಾರಿ ಭಾಷೆ

ಹಿಂದಿಯನ್ನು ಸರ್ಕಾರಿ ಭಾಷೆಯನ್ನಾಗಿ ಅಂಗೀಕರಿಸುವ ಮಸೂದೆಯನ್ನು ಉತ್ತರ ಪ್ರದೇಶ ಸರ್ಕಾರವು ಮುಂದೆ ಬರುವ ಶಾಸನ ಸಭೆಯಲ್ಲಿ ಮಂಡಿಸಲಿದೆ.

ದೌರ್ಜನ್ಯ ಪ್ರಕರಣ

ಪೂರ್ವ ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾತರ ಮೇಲೆ ನಡೆದ ಲೂಟಿ, ಬೆಂಕಿ, ದೌರ್ಜನ್ಯ ಮುಂತಾದ ೬೭೧೭ ಪ್ರಕರಣಗಳನ್ನು ಭಾರತ ಸರ್ಕಾರ ಪಾಕಿಸ್ತಾನ ಸರ್ಕಾರದ ಗಮನಕ್ಕೆ ತಂದಿದೆ.

ಸತ್ಯಾಗ್ರಹ

ಕೂಚ್ ಬಿಹಾರಿನಲ್ಲಿ ಗುಂಪಿನ ಮೇಲೆ ಪೋಲೀಸರು ಗುಂಡುಹಾರಿಸಲು ಕಾರಣರಾದ ಅಧಿಕಾರಿಗಳನ್ನು ಮೇ ೫ರೊಳಗೆ ಸಸ್ಪೆಂಡ್ ಮಾಡಿ ವಿಚಾರಣೆಗೆ ಗುರಿ ಮಾಡದಿದ್ದರೆ, ಸತ್ಯಾಗ್ರಹ ಆರಂಭಿಸುವುದಾಗಿ ಪ್ರಜೆಗಳ ಕ್ರಿಯಾಸಮಿತಿ ತಿಳಿಸಿದೆ.

ಯಾವ ಬಟ್ಟೆ ಧರಿಸಲಿ

ಪತ್ನಿಯನ್ನು 'ನಾನು ಯಾವ ಬಟ್ಟೆ ಧರಿಸಲಿ' ಎಂದು ಕೇಳುವಷ್ಟು ಬಟ್ಟೆಗಳನ್ನು ಒಬ್ಬ ಸ್ತ್ರೀಯು ಇಟ್ಟುಕೊಂಡಿರಬೇಕೆಂಬುದೇ ನನ್ನ ಅಭಿಪ್ರಾಯವೆಂದು ಬ್ರಿಟನ್ನಿನ ವಾಣಿಜ್ಯ ಸಂಘದ ಅಧ್ಯಕ್ಷ ಮಿ|| ಹಾರ್ಟ್ಲಿ ಷಾಕ್ರಾಸ್‌ರವರು ಹೇಳಿರುವರು.

ರೋಡ್‌ಟ್ರಾನ್ಸ್‌ಪೋರ್ಟ್ ಇಲಾಖೆಯ ಅವ್ಯವಸ್ಥೆ

ಮೈಸೂರು ಜಿಲ್ಲಾ ಮೋಟಾರು ಕೆಲ ರರ ಸಂಘದ ಅಧ್ಯಕ್ಷರೂ ರೈತರ ದ ಕಾರ್ಯದರ್ಶಿಗಳೂ ಆದ ಶ್ರೀ ೩. ದೇವನಾಥ್‌ರವರು ಈ ಹೇಳಿಕೆಯ ದ್ದಾರೆ.

ನಮ್ಮ ಸರ್ಕಾರದವರು ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸುಗಳನ್ನು ರಾಷ್ಟ್ರೀಯ ಮಾಡಿ ಇಲಾಖೆಯನ್ನು ಸ್ಥಾಪನೆ ಡಿ ಕೆಲವು ವರ್ಷಗಳಾಗುತ್ತಾ ಬಂದಿ

ಇಲಾಖೆಯು ಅನೇಕ ಮುಖ್ಯ ರಿಗಳನ್ನು ಖಾಸಗಿಯವರಿಂದ ವಹಿಸಿ ಂಡು ತಮ್ಮ ಬಸ್ಸುಗಳನ್ನು ಓಡಿಸುತ್ತಿರೆ. ಇಲಾಖೆಯು ಲೈನುಗಳ ಮೇಲೆ ಸಾಪಲಿ ಮತ್ತು ಪ್ರೀಯಾರಿಟಿ ಆಫಿ ಮಿಂಗ್ಸ್ ಇಟ್ಟುಕೊಂಡೂ, ಬಸ್ಸುಗಳ ಸುವ್ಯವಸ್ಥಿತವಾಗಿಯೂ ಸಕಾಲಕ್ಕೆ ಓಡಿಸದೆ ಇರುವುದು ಎಲ್ಲರ ಅನುಭವವಾಗಿದೆ.

ಅನೇಕಸಲ ಬಸ್ಸುಗಳು ಸ್ಟಾಂಡಿಗೆ ಬರದೇಯಿರುವ ನಿದರ್ಶನಗಳಿವೆ. ಇತ್ತೀಚೆಗಂತು ಈ ಅವ್ಯವಸ್ಥೆ ಹೇಳತೀರದು. ಅನೇಕ ದಿನಗಳು ಕೆಲವು ಲೈನುಗಳಲ್ಲಿ ಬಸ್ಸನ್ನು ಓಡಿಸುತ್ತಿಲ್ಲ. ಇದ್ದಕ್ಕಿದ್ದ ಹಾಗೆಯೇ ಟ್ರಿಪ್‌ಗಳನ್ನು ವಜಾ ಮಾಡುತ್ತಾರೆ. ಸ್ಟಾಂಡಿಗೂ ಮತ್ತು ದಾರಿಯುದ್ದಕ್ಕೂ ಬಂದು ಕಾಯುವವರ ಗತಿಯೇ ? ಇದೇ ತಿಂಗಳು ೧೨ನೇ ತಾ|| ಮಧ್ಯಾಹ್ನ ೨—೩೦ಕ್ಕೆ ಕೆ ಜಿ ಎಫ್‌ಗೆ ೪ ಗಂಟೆಗೆ ತುಮಕೂರಿಗೆ, ೬ ಗಂಟೆಗೆ ಚಿತ್ರದುರ್ಗಕ್ಕೆ, ೨ ಗಂಟೆಗೂ ಹೊರಡಬೇಕಾದ ಬಸ್ಸುಗಳು ಕ್ರಮವಾಗಿ ಸಂಜೆ ೬—೪೫ಕ್ಕೆ, ೬—೩೦ ಕ್ಕೂ, ೮ ಗಂಟೆಗೂ, ೭ ಗಂಟೆಗೂ ಹೊರಟುವೆಂದು ತಿಳಿದುಬಂದಿದೆ. ದೇದಿನ ಹತ್ತು ಲೈನುಗಳನ್ನು ರದ್ದುಮಾಲಾಗಿದೆಯೆಂದು ತಿಳಿದುಬಂದಿದೆ. ಇದೇ ದರೂ ಸುಳ್ಳಾಗದಿದ್ದಲ್ಲಿ ಸಾರ್ವಜನಿಕಗೆ ಎಷ್ಟು ತೊಂದರೆಯಾಗಬಹುದೆಂದು ಇಲಾಖೆಯವರು ಯೋಚಿಸುತ್ತಾರೆಯೇ ? ಅನೇಕ ಬಸ್ಸುಗಳು ರಿಪೇರಿಯಿಲ್ಲದೆ ಷೆಡ್ಡಿನಲ್ಲೇ ನಿಂತಿವೆ. ಇರುವ ಕೆಲವು ಬಸ್ಸುಗಳನ್ನು ಮತ್ತು ಆದರ ಕೆಲಸಗಾರರನ್ನೂ ಡಬ್ಬಲ್ ಟ್ರಿಪ್ಪುಗಳಿಗೆ ಹಾಕಿ ಕೆಲಸಗಾರರಿಗೆ ಹೇರಳವಾಗಿ ತೊಂದರೆಯಾಗುತ್ತಿದೆ. ಕೆಲಸಗಾರರಿಗೆ ಯೂನಿಫಾರಂ ಕೊಡದೆ ಇರುವುದು ಶೋಚನೀಯ ಮತ್ತು ಅನುಭವಶಾಲಿಗಳಾದ ಕೆಲಸಗಾರರನ್ನು ಚಿಕ್ಕ-ಪುಟ್ಟ ತಪ್ಪುಗಳಿಗೆ ವಜಾ ಮಾಡುವುದು ಸಾಮಾನ್ಯವಾಗಿದೆ.

ಹೊಸ ಕೆಲಸಗಾರರನ್ನು ಅರ್ಹತೆಯಿಲ್ಲದಿದ್ದರೂ ಅವರ ಕೆಲಸವನ್ನು ಪರೀಕ್ಷಿಸದೆ ಅವರನ್ನು ಲೈನುಗಳ ಮೇಲೆ ಕಳುಹಿಸಿ ತೊಂದರೆಗೆ ಒಳಗಾಗುತ್ತಿರುವುದು ದಿನೇ ದಿನೇ ಗೋಚರವಾಗುತ್ತಿದೆ. ಕೆಲವು ಅನಾಹುತಗಳಾಗಿರುವುದೂ ವರದಿಯಾಗಿದೆ. ಇತ್ತೀಚೆಗೆ ಒಂದು ಬಸ್ಸು ಕೋಣನೂರಿನ ಹತ್ತಿರ ಕೆರೆಗೆಬಿದ್ದು ಬಸ್ಸಿಗೂ ಪ್ರಯಾಣಿಕರ ಆಸ್ತಿ-ಪಾಸ್ತಿಗಳೂ ನಷ್ಟವಾಯಿತು. ಹೆಬ್ಬಾಳಿನ ಹತ್ತಿರ ಒಬ್ಬ ಅನುಭವವಿಲ್ಲದ ಡ್ರೈವರ್ ಅತಿವೇಗದಿಂದ ಬಸ್ಸನ್ನು ತಿರುಗಿಸಿ ಬಸ್ಸು ಮಗುಚಿಕೊಂಡು ಒಬ್ಬ ಪ್ರಯಾಣಿಕನಿಗೆ ಗಾಯವಾಗಿ ಕೈ ಕತ್ತರಿಸಬೇಕಾಯಿತೆಂದು ಹೇಳಲ್ಪಡುತ್ತಿದೆ. ಇದು ನಿಜವಾಗಿದ್ದಲ್ಲಿ ಇದಕ್ಕೆ ಹೊಣೆಯಾರು ? ನಷ್ಟವನ್ನಾರು ವಹಿಸಿಕೊಳ್ಳುವರು ? ಈ ರೀತಿಯ ಆಡಳಿತದಿಂದ ರಾಷ್ಟ್ರೀಕರಣದ ತತ್ವಕ್ಕೂ ಪ್ರಜಾ ಸರ್ಕಾರಕ್ಕೂ ಅಪಕೀರ್ತಿ ಬರುತ್ತಿದೆ. ಡ್ರೈವರುಗಳು ಬಸ್ಸನ್ನು ಓಡಿಸುವಾಗ ನೆಟ್ಟಮನಸ್ಸಿನಿಂದ ಓಡಿಸಬೇಕು. ಇದಕ್ಕೆ ಅಡಚಣೆಯಾಗಿ ಟ್ರಿಪ್ ಸೀಟಿನ ಜವಾಬ್ದಾರಿಯನ್ನು ಮತ್ತೆ ಕಂಡಕ್ಟರಿನ ಜವಾಬ್ದಾರಿಯನ್ನು ಡ್ರೈವರಿನ ಮೇಲೆ ಹೊರಿಸಿರುವುದು ಅನುಚಿತ ಮತ್ತು ಅಸಾಧುವಾದುದು. ಕೆಲವು ದಿನಗಳ ಹಿಂದೆ ಮದರಾಸು ಸರ್ಕಾರದ ರಾಷ್ಟ್ರೀಕರಣದ ಯೋಜನೆಯನ್ನು ಇತ್ತೀಚೆಗೆ ಹೈದರಾಬಾದ್ ಸಂಸ್ಥಾನದಲ್ಲಿ ರಾಷ್ಟ್ರೀಕರಣದ ಯೋಜನೆಯನ್ನು ಪರಿಶೀಲಿಸುವ ಸುಯೋಗ ನನಗೆ ದೊರಕಿತ್ತು. ಹೈದರಾಬಾದಿನಲ್ಲಿ ಸುಮಾರು ೩ ಕೋಟಿ ರೂ. ಗಳನ್ನು ಬಂಡವಾಳ ಹಾಕಿ ಸುಮಾರು ಏಳನೂರು ಎಂಟನೂರು ಗಾಡಿಗಳನ್ನೊಳಗೊಂಡ ಇಲಾಖೆಯಿದೆ. ಸುವ್ಯವಸ್ಥಿತ [illegible] ಗಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಕೆಲಸಗಾರರಿಗೆ ರೈಲ್ವೆ ನೌಕರರಿಗೆ ಕೊಡುವ ಸಂಬಳ ಸಾರಿಗೆಗಳೂ ಮತ್ತೆ ಇತರ ಸೌಲಭ್ಯಗಳು ಕೆಲಸಗಾರರು ಉತ್ಸಾಹ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಕೆಲಸಮಾಡಲು ಸಾಧ್ಯವಾಗಿದೆ. ನಮ್ಮ ಇಲಾಖೆಯವರು ಸರಿಯಾದ ವ್ಯವಸ್ಥೆಯನ್ನು ಏರ್ಪಡಿಸಲಾರದೆಯೂ ಕೆಲಸಗಾರರ ಸಹಕಾರ ಮತ್ತು ಸಹಾನುಭೂತಿಯನ್ನೆ ಪಡೆಯಲಾರದೆ ಹೋರಾಡುತ್ತಿದ್ದಾರೆ. ಇಲಾಖೆಯವರು ಕೇವಲ ಕೆಲವು ಸಾವಿರ ರೂಪಾಯಿಗಳ ಲಾಭವನ್ನು ತೋರಿಸಿದರೆ ಸಾಕೆಂಬ ಭಾವನೆಯಲ್ಲಿದ್ದಾರೆ. ಎಲ್ಲಿಯ ವರೆವಿಗೂ ಇಲಾಖೆಯನ್ನು ಮತ್ತು ಸರ್ವಿಸ್ಸುಗಳನ್ನು ಸರಿಯಾಗಿ ನಡೆಸುವುದಿಲ್ಲವೋ ಮತ್ತು ಎಲ್ಲಿಯ ವರೆವಿಗೆ ಪ್ರಯಾಣಿಕರಿಗೆ ಅನುಕೂಲವನ್ನು ಕಲ್ಪಿಸುವುದಿಲ್ಲವೋ ಅಲ್ಲಿಯ ವರೆವಿಗೆ ಇಲಾಖೆಯು ದೇಶಕ್ಕೆ ಲಾಭದಾಯಕವಾಗಿದೆ ಎಂಬುದನ್ನು ಯಾರೂ ಒಪ್ಪಲಾರರು. ಕೆಲವು ಖಾಸಗೀ ಮಾಲೀಕರು ಸರ್ವಿಸುಗಳನ್ನು ತೃಪ್ತಿಕರವಾಗಿ ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇಲಾಖೆಯವರು ಎಲ್ಲಾ ಸೌಲಭ್ಯ ಮತ್ತು ಅಧಿಕಾರಗಳನ್ನು ಇಟ್ಟುಕೊಂಡು ಈ ಪ್ರಯತ್ನ ಸಾಧ್ಯವಾಗದಿದ್ದರೆ, ಅದು ನಮ್ಮ ದೇಶದ ದುರಾದೃಷ್ಟ. ಸರ್ಕಾರದವರು ಇತ್ತೀಚಿನ ಹೇಳಿಕೆಯಂತೆ ಇಲಾಖೆಯ ಕೆಲಸಕಾರ್ಯಗಳನ್ನು ಮತ್ತು ಪ್ರಗತಿಯನ್ನು ಪರಿಶೀಲಿಸಲು ಏರ್ಪಡಿಸಬೇಕೆಂದಿರುವ ಸಮಿತಿಯನ್ನು ಬೇಗನೆ ರಚಿಸಿ ಅದರ ಕಾರ್ಯಕಲಾಪಗಳನ್ನೇ ತ್ವರಿತಪಡಿಸಿ ಇಲಾಖೆಯನ್ನು ಸರಿಪಡಿಸಬೇಕೆಂದು ಕೋರುತ್ತೇನೆ

ಒಲಂಪಿಯಾ ಟಾಕೀಸ್

೩—೫—೫೧ರಿಂದ ಅಮೋಘವಾದ ೨ನೇ ವಾರ

ಪ್ರತಿಯೊಬ್ಬರೂ ಕುಟುಂಬ ಸಮೇತರಾಗಿ ನೋಡಬಯಸುವ ಚಿತ್ರ

ರಣಜಿತ್‌ರವರ **ಗರೀಬಿ**

ಪಾತ್ರ—ಗೀತಾಬಾಲಿ, ನಿರೂಪರಾಯ್, ಜೈರಾಜ್, ಉಷಾಕಿರಣ್.

ಬೆಳಗಿನ ಪ್ರದರ್ಶನ:- ೫-೫-೫೧ರಿಂದ ೩ ದಿನಗಳು ಮಾತ್ರ

ಫಿಲ್ಮಿಸ್ತಾನರವರ— "ಸಿಂಘೂರ್"

ಪ್ರಭಾ ಪಿಕ್ಚರ್ ಹೌಸ್

೬—೫—೫೧ರಿಂದ ಅಮೋಘ ಪ್ರಾರಂಭ

ದಿನವಹಿ ೩ ಆಟಗಳು

ನಿಮ್ಮ ಹೃದಯಾಂತರಾಳವನ್ನೇ ಕಲಕುವಂತಹ ಎಸ್. ಎಮ್. ಐ. ರವರ ಪ್ರಗತಿಶೀಲ ಭವ್ಯ ಸಾಮಾಜಿಕ ಚಿತ್ರ

* **ಕಾಲೆ ಬಾದಲ್** (ಹಿಂದಿ) *

(ಕಾರ್ಮುಗಿಲು)

ಅಭಿನಯ— ಮೀನಾ, ಪುಷ್ಪಹನ್ಸ್, ಶ್ಯಾಮ್, ಗೋಪ್, ಜೀವನ್, ಬೇಬಿತಬಸುಂ

ವುಡ್‌ಲ್ಯಾಂಡ್ಸ್

೨ನೇ ವಾರ

ಹನುಮಾನ್ **ಪಾತಾಳ ವಿಜಯ**

ಪಾತ್ರ—ಮೀನಾಕುಮಾರಿ, ಮಹಿಪಾಲ್

ಬರುತ್ತದೆ— "ಉಸ್ತಾದ್ ಪೆಡ್ರೊ"

ರಣಜಿತ್

೨೭—೪—೫೧ರಿಂದ

ಅಮೋಘವಾದ ೨ನೇ ವಾರ

ಪ್ರತಿದಿನ ಮೂರು ಆಟಗಳು

ಮಧುಬಾಲರವ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೫—೧೯೫೧ನೇ ಶನಿವಾರ [ಸಂಚಿಕೆ ೧೯೯

ಹಣಕಾಸಿನ ಸಮಿತಿ

ಸಂಸ್ಥಾನಗಳಿಗೆ ಸಹಾಯ ಮುಂತಾದ ವಿಷಯಗಳಲ್ಲಿ ಸಲಹೆಯನ್ನು ನೀಡಲು ಕೇಂದ್ರವು ಒಂದು ಹಣಕಾಸಿನ ಸಮಿತಿಯನ್ನು ನೇಮಿಸಲಿದೆ. ದೇಶದ ಅಭಿವೃದ್ಧಿ, ಹಣಕಾಸಿನ ಸ್ಥಿತಿ ಮುಂತಾದ ವಿಷಯದಲ್ಲಿ ಅರಿತುಕೊಂಡಿರುವವರನ್ನು ರಾಷ್ಟ್ರಾಧ್ಯಕ್ಷರು ಈ ಸಮಿತಿಯ ಸದಸ್ಯರನ್ನಾಗಿ ನೇಮಿಸುವರು.

ಸ್ವಾಗತಿಸಿದೆ

ಆಚಾರ್ಯ ಕೃಪಲಾನಿಯವರು ಸ್ಥಾಪಿಸಿದ ಪ್ರಜಾಸತ್ತಾತ್ಮಕ ಸಂಘದ ವಿಸರ್ಜನೆಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ವಾಗತಿಸಿ ನಿರ್ಣಯವನ್ನು ಮಾಡಿದೆ.

ಸರ್ಕಾರಿ ಕೆಲಸ ಯಾರಿಗೂ ಇಲ್ಲ

ಜಾತ್ಯಾಧಾರದ ಮೇಲೆ ಸರ್ಕಾರಿ ನೌಕರಿಯನ್ನು ಕೊಡುವುದು ರಾಜ್ಯಾಂಗಕ್ಕೆ ವಿರೋಧವೆಂದು ಭಾರತ ಶ್ರೇಷ್ಠ ನ್ಯಾಯಾಲಯವು ತೀರ್ಮಾನಿಸಿರುವುದರಿಂದ ಈ ವಿಷಯದಲ್ಲಿ ಅಂತ್ಯ ನಿರ್ಧಾರವಾಗುವವರೆಗೂ ಸರ್ಕಾರಿ ನೌಕರಿಗೆ ಯಾರನ್ನು ನೇಮಿಸಿಕೊಳ್ಳುವುದಿಲ್ಲವೆಂದು ಮದರಾಸು ಸರ್ಕಾರವು ತೀರ್ಮಾನಿಸಿದೆ. ಈ ವಿಷಯದಲ್ಲಿ ಇಲಾಖಾ ಮುಖ್ಯಾಧಿಕಾರಿಗಳು ಮುತ್ತಿತರಿಗೆ ಸೂಚನೆಯಿತ್ತಿದೆ.

ಪುನಃ ವಸ್ತುಪ್ರದರ್ಶನವೆ ?

ಅಸ್ಸಾಂ ಪರಿಹಾರ ನಿಧಿಗೆ ಕಾಣಿಕೆಯನ್ನೊಪ್ಪಿಸಲು ಬೆಂಗಳೂರಿನಲ್ಲಿ ಲಲಿತಕಲಾ ಪ್ರದರ್ಶನವನ್ನು ಪ್ರಾರಂಭಿಸಿ ಅಗ್ನಿದೇವನಿಗಾಹುತಿಯಾಯಿತು. ಅಗ್ನಿದೇವನು ಯಾರ‍್ಯಾರಿಗೆ ನಷ್ಟವನ್ನುಂಟು ಮಾಡಿಯನೊ ಅವರಿಗೆ ಪರಿಹಾರ ಕೊಡಲು ಅದೇ ಜಾಗದಲ್ಲಿ ಮತ್ತೊಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದು ಲಲಿತಕಲಾ ಪ್ರದರ್ಶನ ಸಮಿತಿಯವರು ಸಮಾಲೋಚನೆಯಲ್ಲಿ ತೊಡಗಿರುವರಂತೆ.

(ಈಗ ನಡೆದ ಪ್ರದರ್ಶನದಲ್ಲಿ ನಷ್ಟವಾಗಿರುವುದೆಂದು ಹೇಳಲಾಗುತ್ತಲಿರುವ ೫೦ ಲಕ್ಷ ಹಣವನ್ನು ಸುಲಭವಾಗಿ ಸಂಪಾದಿಸಲು ಜನರಿಗಾಕರ್ಷಣೀಯವಾದ ಯಾವರೀತಿಯ ಪ್ರದರ್ಶನವನ್ನು ನಡೆಸಬೇಕೆಂದಿರುವರೋ ನೋಡಬೇಕು. ಅಗ್ನಿದೇವನು ಪುನಃ ತನ್ನ ಪ್ರಭಾವವನ್ನು ಇಲ್ಲಿ ತೋರಿಸಿದರೆ ಮತ್ಯಾವ ಪ್ರದರ್ಶನ ಪ್ರಾರಂಭವಾಗಲಿದೆಯೋ ?)

ಕಲಾಶಾಲೆ

ತಿರುವಾಂಕೂರಿನಲ್ಲಿ ೫ ಲಕ್ಷ ರೂ.ಗಳ ವೆಚ್ಚದಿಂದ ಒಂದು ಕಲಾಶಾಲೆಯನ್ನು ಸ್ಥಾಪಿಸಬೇಕೆಂದು ಸರ್ಕಾರವು ತೀರ್ಮಾನಿಸಿದೆ. ಅದಕ್ಕಾಗಿ ಒಂದು ಸಲಹಾ ಸಮಿತಿಯನ್ನು ನೇಮಿಸಲಿದೆ.

ಸಂತೆ ಪ್ರಾರಂಭೋತ್ಸವ

ಕೃಷ್ಣರಾಜನಗರ ತಾಲ್ಲೂಕು ಹಾಡ್ಯ ಗ್ರಾಮದಲ್ಲಿ ನೆನ್ನೆ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಜನಾಬ್ ಮಹಮ್ಮದ್ ಅಹಮ್ಮದ್‌ರವರು ಸಂತೆ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಜಿಲ್ಲಾಬೋರ್ಡ್ ಸದಸ್ಯ ಶ್ರೀ ದೇವರಾಜ ಅರಸು ಮತ್ತು ಶ್ರೀ ಚನ್ನಬಸಪ್ಪನವರು ರೈತರ ಕರ್ತವ್ಯ, ತಮ್ಮ ತಮ್ಮ ಗ್ರಾಮಗಳ ಪ್ರಗತಿಗಾಗಿ ರೈತರ ಸರ್ಕಾರದವರ ನೆರವು ನಂಬಿಕೊಳ್ಳದೆ, ತಮ್ಮ ಕೈಲಾದಷ್ಟು ಕಾರ್ಯವನ್ನು ತಾವೆಸಗಲಾರಂಭಿಸಿದರೆ ಸರ್ಕಾರದವರೂ ಸಾಧ್ಯವಾದಷ್ಟು ಸಹಾಯ ಮಾಡುವರೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹಾಡ್ಯ ಗ್ರಾಮದ ಜನರು ಮತ್ತು ಸರ್ಕಾರ, ಜಿಲ್ಲಾಬೋರ್ಡ್ ಸೇರಿ ೩೦ ಸಾವಿರ ರೂಪಾಯಿಗಳ ವೆಚ್ಚದಿಂದ ಕಟ್ಟುತ್ತಲಿರುವ ಶಾಲೆಗೆ ಆಸ್ಪತ್ರೆಯ ವಿಷಯವಾಗಿ ಶ್ರೀ ಚನ್ನಬಸಪ್ಪನವರು ಮಾತನಾಡುತ್ತಾ ಆಸ್ಪತ್ರೆಗೆ ಬರಲಿರುವ ಡಾಕ್ಟರು, ಮತ್ತಿತರ ನೌಕರರು ವಾಸಿಸಲು ಮನೆಗಳು ಬೇಕಾಗಿರುವುದರಿಂದ ಮನೆಗಳನ್ನು ಗ್ರಾಮದವರು ಕಟ್ಟಿಸಿಕೊಡಬೇಕಾದುದು ಪ್ರಥಮ ಕರ್ತವ್ಯ. ದಾನಿಗಳಾದರೂ ಹಣವನ್ನು ಕೊಟ್ಟಲ್ಲಿ ಸರ್ಕಾರ ಜಿಲ್ಲಾಬೋರ್ಡ್ ವಸತಿಗಳನ್ನು ಕಟ್ಟಿಸುವುದು. ಇಲ್ಲವಾದಲ್ಲಿ ಗ್ರಾಮದಲ್ಲಿರುವವರಾದರೂ ತಮ್ಮ ಸ್ವಂತ ಖರ್ಚಿನಿಂದಲೇ ಮನೆಗಳನ್ನು ಕಟ್ಟಿಸಿಕೊಟ್ಟಲ್ಲಿ ಜಿಲ್ಲಾಬೋರ್ಡ್ ಅವರುಗಳಿಗೆ ಬಾಡಿಗೆಗಳನ್ನು ಕೊಡುವುದೆಂದು ತಿಳಿಸಿದರು.

ಹಾಡ್ಯದ ಪಟೇಲ್ ಶ್ರೀ ಪುಟ್ಟಬಸಪ್ಪನವರು ಮತ್ತು ಶ್ರೀ ವೀರಭದ್ರಪ್ಪನವರು ತಾವು ಒಂದೊಂದು ವಸತಿ ಕಟ್ಟಿಸಿಕೊಡ ಒಪ್ಪಿದರು.

ಕೇಂದ್ರದ ಸಲಹೆ ಪಡೆಯಬೇಕು

ಬಿ. ವಿಭಾಗದ ಸಂಸ್ಥಾನಗಳು ತಮ್ಮ ಚೀಫ್ ಸೆಕ್ರೆಟರಿಗಳನ್ನು, ಆರ್ಥಿಕ ಸೆಕ್ರೆಟರಿಗಳನ್ನು, ರೆವಿನ್ಯೂ ಬೋರ್ಡಿನ ಸೀನಿಯರ್ ಸದಸ್ಯರುಗಳು, ಐ. ಜಿ. ಪಿ. ಗಳು ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರುಗಳ ನೇಮಕದ ವಿಚಾರದಲ್ಲಿ ಭಾರತ ಸರ್ಕಾರದ ಸಲಹೆ ಪಡೆಯಬೇಕೆಂದು ತಿಳಿಸಲಾಗಿದೆ ಎಂದು ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಖಾತೆ ಮಂತ್ರಿ ಶ್ರೀ ಎನ್. ಜಿ. ಅಯ್ಯಂಗಾರ್ ತಿಳಿಸಿದರು.

೭-೫-೧೯೫೧ನೇ ಸೋಮವಾರದಿಂದ "ಸಮಾಚಾರ" ಪತ್ರಿಕೆಯು ಪ್ರತಿ ದಿನ ಪ್ರಾತಃಕಾಲ ಹೊರಡುವುದು.

ದರೋಡೆ-ದಸ್ತಗಿರಿ

ಬಾಣೆಟ್ ಸಂಸ್ಥೆಯ ಕೆಲಸಗಾರರ ಸಂಬಳಕ್ಕಾಗಿ ೧೧ ಸಾವಿರ ರೂ. ಗಳನ್ನು ಕೊಂಡೊಯ್ಯುತ್ತಿದ್ದಾಗ ಕಲ್ಕತೆಗೆ ಸೇರಿದ ಬರಾಂಗೋರಿನ ಬಳಿ ೪ ದರೋಡೆಕಾರರು ಗುಂಡುಹಾರಿಸಿ ಒಬ್ಬನನ್ನು ಕೊಂದು ಹಣವನ್ನು ದೋಚಿಕೊಂಡು ಹೋದರು. ಪೋಲೀಸಿನವರು ಅವರನ್ನಟ್ಟಿಸಿಕೊಂಡು ಹೋಗಿ ಹಣ ಸಮೇತ ಅವರನ್ನು ಹಿಡಿದಿರುವರು.

ಮೈಸೂರಿಗೆ ಗೋಧಿ

ಈ ತಿಂಗಳೊಳಗಾಗಿ ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ೬೦೦೦ ಟನ್ ಗೋಧಿಯನ್ನು ಕೊಡಲಿರುವುದಾಗಿ ಗೊತ್ತಾಗಿದೆ.

ಕೇಂದ್ರಕ್ಕೆ ಮೈಸೂರಿನ ಅಧಿಕಾರಿಗಳು

ಸ್ವಂ.ಸು. ಫೋನ್] ಬೆಂಗಳೂರು ೫
ಕಳೆದ ತಿಂಗಳು ಇಲ್ಲಿಗೆ ಆಗಮಿಸಿದ್ದ ಕೇಂದ್ರ ಸರ್ಕಾರದ ಸೆಲೆಕ್ಷನ್ ಬೋರ್ಡಿನವರು ಭೇಟಿಗಾಗಿ ಕರೆದಿದ್ದ ಸಂಸ್ಥಾನದ ಅಧಿಕಾರಿಗಳ ಪೈಕಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಶ್ರೀಗಳಾದ ಜಿ. ಎನ್. ನಾಗರಾಜರಾವ್, ಕೆ. ಗುರುದತ್ ಕೆ. ಶ್ರೀನಿವಾಸನ್, ಕೆ. ಪಿ. ರಾಮನಾಥಯ್ಯ, ಪಿ. ಕೆ. ಶ್ರೀನಿವಾಸಚಾರ್, ಕೆ. ಬಾಲಸುಬ್ರಹ್ಮಣ್ಯಂ, ಜಿ. ವೆಂಕಟಕೃಷ್ಣರಾವ್, ಸಿ. ನರಸಿಂಹಮೂರ್ತಿ ಮತ್ತು ಆರ್. ಜೆ. ರೇಗೊ, ಸಿವಿಲ್ ಸರ್ವಿಸ್ಸಿಗೆ ನಾಮಕರಣವಾದ ಶ್ರೀಗಳಾದ ಬಿ. ಟಿ. ಕೆಂಪಣ್ಣ, ಜಿ. ಬಿ. ಮಲ್ಲಾರಾಧ್ಯ, ಮತ್ತು ನಜೀರ್ ಹುಸೇನ್, ಮುಂತಾದ ೧೪ ಅಧಿಕಾರಿಗಳೂ, ಪೋಲೀಸು ವರ್ಗದಲ್ಲಿ ಶ್ರೀಗಳಾದ ಎನ್. ಬಿ. ಬಾಬುರೆಡ್ಡಿ, ಯು. ಕೆ. ಸೋಮಪ್ಪ ಮತ್ತು ಸಿ. ಐ. ಮಾಚಯ್ಯನವರೂ, ೬ ಜನ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರೂ, ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟರೂ ಕೇಂದ್ರಕ್ಕೆ ಆರಿಸಲ್ಪಟ್ಟಿರುವರೆಂದು ತಿಳಿದುಬಂದಿದೆ. ಮೇಲ್ಕಂಡವರನ್ನು ಸ್ಥಾನಗಳು ಖಾಲಿ ಬಿದ್ದಂತೆಲ್ಲಾ ತೆಗೆದುಕೊಳ್ಳುವುದೆಂದು ಗೊತ್ತಾಗಿದೆ. ೪-೫ ಜನ ಅಸಿಸ್ಟೆಂಟ್ ಕಮಿಷನರುಗಳನ್ನೂ ಆರಿಸಲಾಗಿದೆ.

ರೈತರ ಬಂಧನ

ಒಕ್ಕಲೆಬ್ಬಿಸುವ ಕ್ಷೇತ್ರಗಳಿಗೆ ಪ್ರವೇಶ ಮಾಡಕೂಡದೆಂಬ ಪಿ. ಜಿ. ಯವರ ಆಜ್ಞೆಯನ್ನು ರೈತರು ತಿರಸ್ಕರಿಸಿದ್ದಾರೆ. ಸಾಗರದ ರೈತರು ತಮ್ಮ ಅಧ್ಯಕ್ಷರಾದ ಶ್ರೀ ಕಡಿದಾಳ್ ಮಂಜಪ್ಪನವರೊಡನೆ ಸಮಾಲೋಚನೆ ನಡೆಸುವವರಾಗಿದ್ದಾರೆ. ಇನ್ನೂ ೨೦ ಮಂದಿ ರೈತರ ದಸ್ತಗಿರಿಯಾಗಿದೆ.

OFFICE OF THE PRESIDENT, DISTRICT BOARD, MYSORE

Sealed tenders will be received at the office of the President, District Board. Mysore up to 3 p.m. on 10-5-51 for the following works:

1 The works should be completed by end of October 51 and the monthly progress should not be less than Rs. 5,000/-.

2 Tenders should be quoted on percentage basis either above or below the sanctioned estimate.

3 Items not provided in the estimate will be calculated as per schedule of rates or as per date worked out during execution.

4 Each tender must be accompained by a duplicate challan for having credited into the treasury the deposit amount noted against each work.

5 The stipulated progress must be shown from the very commencement failing which the earnest money will be forfeited and the contract cancelled without further notice.

6 Controlled articles required for construction will be supplied departmentally at the prevailing rates and the incidental charges and centage will be charged in addition.

7 Plans and other details connected with the work can be seen in the office on any working day during office hours.

8 Successful tenderer will be required to produce an Income Tax clearance or varification certificate before executing the work.

9 The President reserves the right of accepting or rejecting the tender without assigning any reason

10 The decision of the District Board in respect of any dispute regarding rates and other matters arising will be final.

Sl. No.	Name of work.	Estimate amount. Rs.	Earnest money Rs
1	Construction of a High school building at Kuderu, Chamarajanagar Taluk.	30,000	750
2	Constructing a rest house at Periyapatna.	6,200	150
3	,, Musafirkhana at Hampapura.	6,600	150
4	,, Musafirkhana at Hura.	6,600	150
5	,, Primary School at Hondrakalli Chamarajanagar Taluk.	2500	150
6	Construction of Primary School at Ankanahally Hunsur Taluk.	2500	150

H. M. CHANNABASAPPA
President
DISTRICT BOARD, MYSORE.

ಭಾರತ ಸೇವಾದಳ

ಮೊದಲೇ ಪ್ರಕಟಿಸಿದ್ದಂತೆ ಭಾರತ ಸೇವಾದಳದ ಮಹಿಳಾ ಶಿಕ್ಷಣಶಿಬಿರವು ಮೇ ೫ನೇ ತಾ|| ಪ್ರಾರಂಭವಾಗುವುದು ಶಿಬಿರವು ೧೫ ದಿನಗಳವರೆಗೆ ನಡೆಯುವುದು. ಶಿಬಿರವು ಪಾರ್ಟ್‌ಟೈಂ (ಬೆಳಗ್ಗೆ ೬ ರಿಂದ ಸಂಜೆ ೮ ರವರೆಗೆ) ಶಿಬಿರವಾಗಿರುವುದು. ಶಿಕ್ಷಣವು ಉಚಿತವಾಗಿ ಕೊಡಲ್ಪಡುವುದು. ಸಂಸ್ಥಾನದ ಮಹಿಳೆಯರು ಸಮ್ಮೊಡನೆ ಸಹಕರಿಸಿ ಇದರ ಸದುಪಯೋಗವನ್ನು ಪಡೆಯಬೇಕೆಂದು ಪ್ರಾರ್ಥನೆ. ಶಿಕ್ಷಣ ಪಡೆಯಲಪೇಕ್ಷಿಸುವವರು ತಾ|| ೪-೫-೫೧ [illegible] ಕ್ಕೆ ತಮ್ಮ ಅರ್ಜಿಗಳನ್ನು ತಲುಪಿಸಬೇಕು.

ನಿಯಮಗಳು—೧. ಶಿಬಿರಕ್ಕೆ ೧೪ ವರ್ಷಕ್ಕೆ ಮೀರಿದ ಮಹಿಳೆಯರಿಗೆ ಮಾತ್ರ ಪ್ರವೇಶವುಂಟು. ೨. ಶಿಬಿರ ನಿವಾಸಿಗಳು ಶಿಬಿರದ ಎಲ್ಲಾ ನಿಯಮಗಳಿಗೂ ಬದ್ಧರಾಗಿರಬೇಕು. ೩. ಪ್ರತಿಯೊಬ್ಬರೂ ತಮ್ಮೊಡನೆ ಊಟದ ತಟ್ಟೆ, ಲೋಟಾಗಳನ್ನು ಕಡ್ಡಾಯವಾಗಿ ತರಬೇಕು. (ಬಿಳಿಯ ಸೀರೆಗಳನ್ನೂ ತಂದರೆ ಉತ್ತಮ.) ೪. ಮೈಸೂರು ನಗರದ ಶಿಕ್ಷಣಾಪೇಕ್ಷಿಗಳಿಗೆ ಪ್ರತಿನಿತ್ಯವೂ ಶಿಬಿರವು ಮುಗಿದನಂತರ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಲು ಅವಕಾಶವುಂಟು. ೫. ಶಿಬಿರದಲ್ಲಿಯೇ ವಾಸಮಾಡತಕ್ಕವರಿಗೆ ಊಟವಸತಿಗಳನ್ನು ಏರ್ಪಡಿಸಲಾಗುವುದು ಎಂದು ಸಂಚಾಲಕ ಶ್ರೀಮತಿ ಟಿ ಸುನಂದಮ್ಮನವರು ತಿಳಿಸುತ್ತಾರೆ.

ವುಡ್‌ಲ್ಯಾಂಡ್ಸ್

೨ನೇ ವಾರ

ಹಸುಮರ್ಾ **ಪ್ರಾತಾಳ**

ವಿ ಜ ಯ

ಪಾತ್ರ—ಮೀನಾಕುಮಾರಿ, ಮಹಿಪಾಲ್,

ಬರುತ್ತದೆ—

" ಉಸ್ತಾದ್ ಪೆಡ್ರೊ "

* ಪ್ರಭಾ *

೪—೫—೫೧ರಿಂದ

ದಿನವೂ 3 ಆಟಗಳು

ಎಸ್. ಎಫ್. ಏ. ರವರ—

ಕಾಲೆಬಾದಲ್
(ಕಾರ್ಮುಗಿಲು)

ಅಭಿನಯ—ಮೀನಾ, ಪುಷ್ಪಹನ್ಸ್,
ಶ್ಯಾಮ್, ಗೋಪ್, ಜೀವನ್,
ಬೇಬಿತಂಬ್ ಸುಂ,

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಭಿಕ್ಷುಕರ ಪರಿಹಾರ ಸಮಿತಿ ಛೇರ್‌ಮನ್ನರವರ ಆಫೀಸು. ಮೈಸೂರು

ತಾ|| 3—5—51

ಪ್ರ ಕ ಟ ಣೆ

ಇದೇ ಮೈಸೂರುನಗರದ ಸಂಜರಾಜ ಬಹದ್ದೂರ್ ಛತ್ರದ ಮೂರನೇ ಬ್ಲಾಕಿನಲ್ಲಿರುವ ಭಿಕ್ಷುಕರ ವಸತಿಗೃಹಕ್ಕೆ ಬೇಕಾಗುವ ಆಹಾರ ವಗೈರೆ ಸಾಮಾನುಗಳನ್ನು ಸಪ್ಲೈಮಾಡತಕ್ಕ ಬಗ್ಗೆ ಸೀಲುಮಾಡಿದ ಟೆಂಡರುಗಳನ್ನು ತಾ|| 23-5-51ನೇ ದಿನ 4-45ರ ಲಾಗಾಯ್ತು 5-00 ಗಂಟೆಯೊಳಗೆ ಸದರಿ ಭಿಕ್ಷುಕರ ಪರಿಹಾರ ಸಮಿತಿಯ ಛೇರ್‌ಮನ್ನರವರಾದ ಮುನಿಸಿಪಲ್ ಅಧ್ಯಕ್ಷರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ. ವಿವರಗಳನ್ನು ಸದರಿ ಛೇರ್‌ಮನ್ನರ ಆಫೀಸಿನಲ್ಲಿಯಾಗಲಿ, ಸಮಿತಿಯ ಕಾರ್ಯದರ್ಶಿಗಳ ಮತ್ತು ಭಿಕ್ಷುಕರ ವಸತಿ ಗೃಹದ ಸೂಪರಿಂಟೆಂಡೆಂಟರಾದ ಮುನಿಸಿಪಲ್ ಉಪಾಧ್ಯಕ್ಷರ ಆಫೀಸಿನಲ್ಲಾಗಲಿ ಅಥವಾ ಭಿಕ್ಷುಕರ ವಸತಿಗೃಹದ ಆಫೀಸಿನಲ್ಲಾಗಲಿ ಪಡೆಯಬಹುದು.

(ಸಹಿ) **ಟಿ. ನರಸಿಂಹಯ್ಯಂಗಾರ್**
ಛೇರ್‌ಮನ್ನರು
ಭಿಕ್ಷುಕರ ಪರಿಹಾರ ಸಮಿತಿ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ, ಮೈಸೂರು

ರಿ. ನಂ. ಎಂ. ೫೪೧೮ ದಿನ ಪತ್ರಿಕೆ ಫೋನ್. ೫೭೮

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬-೫-೧೯೫೧ನೇ ಸೋಮವಾರ [ಸಂಚಿಕೆ ೨೦೦

RAGHULAL & Co.
CHEMISTS
Sayyaji Rao Road
MYSORE

ತೆಲಂಗಾಣಾ ಖೈದಿಗಳಿಗೆ ರಾಷ್ಟ್ರಾಧ್ಯಕ್ಷರಿಂದ ಜೀವದಾನ

ಚುನಾವಣೆ ಮುಂದು ವರಿಯುವುದಿಲ್ಲ

ಭಾರತಾದ್ಯಂತ ಸಾರ್ವತ್ರಿಕ ಚುನಾವಣೆಯು ಡಿಸೆಂಬರಿನೊಳಗಾಗಿ ಮುಗಿದು ಹೋಗಿರಬೇಕೆಂಬುದೇ ಭಾರತ ಸರ್ಕಾರದ ಉದ್ದೇಶ. ಎರಡು ತಿಂಗಳ ಕಾಲದೊಳಗಾಗಿ ಎಲ್ಲಾ ಪ್ರಾಂತ್ಯಗಳಲ್ಲಿಯೂ ಚುನಾವಣೆ ಮುಗಿಯುವುದು. ಚುನಾವಣೆ ಮುಂದ ವರಿಸುವುದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಡಾ|| ಅಂಬೇಡ್ಕರ್‌ರವರು ಹೇಳಿರುವರು.

ನೋಟೀಸ್

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘವು ತಾ|| ೨೨-೪-೫೧ ರಲ್ಲಿ ಮತ್ತು ತಾ|| ೧೫-೨-೫೧ ರಲ್ಲಿ ನೋಟೀಸ್ ಆಫ್ ಛೇಂಜ್ ಮೂಲಕ ಮಂಡಿಸಿದ್ದ ಬೇಡಿಕೆಗಳನ್ನು ಈವರೆವಿಗೂ ಇತ್ಯರ್ಥ ಮಾಡಿಕೊಡದೆ ಇರುವ ಕಾರಣ ಮತ್ತು ಯಾವ ರೀತಿಯಲ್ಲೂ ಸಹ ಒಂದು ತೃಪ್ತಿಕರವಾದ ತೀರ್ಮಾನಕ್ಕೆ ಬರಲು ತಯಾರಿಲ್ಲದೆ ಇರುವುದರಿಂದ ಸಂಘದ ಬೇಡಿಕೆಗಳು ಒಂದು ನ್ಯಾಯವಾದ ರೀತಿಯಲ್ಲಿ ತೀರ್ಮಾನಕ್ಕೆ ಬರಲು ಮಾರ್ಗ ಇಲ್ಲದಂತಾಗಿದೆ. ಆದುದರಿಂದ ಒಳಗಾಗಿ ಸಂಧಾನದೊಡನೆ ಒಂದು ಒಪ್ಪಂದಕ್ಕೆ ಬಾರದಿದ್ದಲ್ಲಿ ಕಾನೂನುಬದ್ಧವಾದ ಮುಷ್ಕರ ಹೂಡಬೇಕಾಗುತ್ತದೆಂದು ತಮ್ಮ ಮಾಲೀಕರಿಗೆ ನೋಟೀಸು ಕೊಟ್ಟಿರುತ್ತಾರೆ.

ಶ್ರೀ ಕೆ. ಟಿ. ಭಾಷ್ಯಂ

ವಿದ್ಯುಚ್ಛಕ್ತಿ ಶಾಖಾಸಚಿವ ಶ್ರೀ ಕೆ. ಟಿ ಭಾಷ್ಯಂರವರು ಈ ತಿಂಗಳ ಕೊನೆಯಲ್ಲಿ ದೆಹಲಿಗೆ ಹೋಗಲಿರುವರು. ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಗಳಿಗಾಗಿ ಕೇಂದ್ರದಿಂದ ಹೆಚ್ಚಿಗೆ ಹಣ ಸಹಾಯ ಪಡೆಯುವ ವಿಷಯದಲ್ಲಿ ಇವರು ಸಮಾಲೋಚನೆಗಾಗಿ ತೆರಳುವರು.

ಭಾರತದ ಆದಾಯ

೧೯೫೦-೫೧ ರಲ್ಲಿ ಭಾರತದ ಆದಾಯವು ೬,೬೯೦ ಕೋಟಿ ರೂ. ಗಳು.

ಸಿಮೆಂಟು ರಿಯಾಯತಿ ರದ್ದು

ಸಿಮೆಂಟಿನ ಸರಬರಾಯಿ ಪರಿಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲವಾಗಿ, ೧೯೫-೫-೫೧ ರಿಂದ ೩ ತಿಂಗಳಕಾಲ ರಹದಾರಿಯಿಲ್ಲದೆ ಸಿಮೆಂಟನ್ನು ಕೊಡಬಹುದೆಂಬ ಆಜ್ಞೆಯನ್ನು ರದ್ದು ಗೊಳಿಸಲಾಗಿದೆ. ಸಿಮೆಂಟು ಬೇಕಾದವರು ಸಿವಿಲ್ ಸಪ್ಲೈ ಅಧಿಕಾರಿಗಳಿಗೆ ಅಥವಾ ಅಮಲ್ದಾರರಿಗೆ ಬರೆದುಕೊಂಡು ರಹದಾರಿ ಪಡೆಯಬೇಕಾಗಿದೆ.

ಕೇಂದ್ರ ಚುನಾವಣಾ ಸಮಿತಿ

ಕೇಂದ್ರ ಚುನಾವಣಾಸಮಿತಿಗೆ ಶ್ರೀಗಳಾದ ಗೋವಿಂದವಲ್ಲಭಪಂತ್, ಬಿ. ಸಿ. ರಾಯ್, ಕಾಮರಾಜನಾಡಾರ್, ಮುರಾರ್ಜಿ ದೇಸಾಯಿ ಮತ್ತು ನಿಜಲಿಂಗಪ್ಪನವರು ಚುನಾಯಿತರಾಗಿದ್ದಾರೆ.

ಪ್ರತಿಮೆಯ ಪ್ರತಿಷ್ಠೆ

ಮೈಸೂರು ಮೇ. ೬

ಘಾತಿಸಾ ದೇಶದಲ್ಲಿ ದರ್ಶನವಿತ್ತು ಅದ್ಭುತ ತೋರಿ ಜಗತ್ಪ್ರಖ್ಯಾತವಾದ ಖಾತಿಯನ್ನು ಸನ ಪ್ರತಿಮೆಯನ್ನು ಫಿಲೋಮಿನಾ ಚರ್ಚಿನಲ್ಲಿರುವ ಗವಿಯ ದ್ವಾರದಲ್ಲಿ ಪ್ರತಿಷ್ಠಿಸಲ್ಪಟ್ಟಿತು. ಇಂದು ಸಂಜೆ ದಿವ್ಯಾಲಂಕೃತವಾದ ಪ್ರತಿಮೆಯ ಮೆರವಣಿಗೆಯು ರಾಜ ಮರ್ಯಾದೆಯೊಡನೆ ನಡೆಯಿತು.

ತೆಲಂಗಾಣ ಖೈದಿಗಳಿಗೆ ಜೀವದಾನ

ಸ್ವಂ. ಸು] ಬೆಂಗಳೂರು ಮೇ ೬

ಹೈದರಾಬಾದಿನ ತೆಲಂಗಾಣದಲ್ಲಿ ಆರು ಜನ ರೈತರ ಮರಣಕ್ಕೆ ಕಾರಣರಾದ ೧೨ ಕಮ್ಯೂನಿಸ್ಟರಿಗೆ ಸುಪ್ರೀಂ ಕೋರ್ಟಿನಲ್ಲಿ ಮರಣದಂಡನೆ ವಿಧಿಸಲಾಗಿತ್ತಷ್ಟೆ. ರಾಷ್ಟ್ರಾಧ್ಯಕ್ಷರಲ್ಲಿ ಈ ಖೈದಿಗಳು ದಯಾಭಿಕ್ಷೆ ಕೋರಿ ಅರ್ಜಿ ಸಲ್ಲಿಸಿದ್ದರು. ರಾಷ್ಟ್ರಾಧ್ಯಕ್ಷರು ಈ ಖೈದಿಗಳ ಮರಣದಂಡನೆ ರದ್ದು ಮಾಡಿ ಜೀವಾವಧಿ ಶಿಕ್ಷೆ ಅನುಭವಿಸಬೇಕೆಂದು ತಿಳಿಸಿ ಆಜ್ಞೆ ಮಾಡಿರುವರು.

ಭಾರತದ ವಿಮಾನ ನಿಲ್ದಾಣದ ಪ್ರಗತಿ

ಕಳೆದ ವರ್ಷ ತ್ರಿಪುರಾದಲ್ಲಿ ನಿರ್ಮಿಸಿದ ನಾಲ್ಕು ವಿಮಾನ ನಿಲ್ದಾಣವೂ ಸೇರಿ ಕೇಂದ್ರ ಸರ್ಕಾರದ ಅಧೀನದಲ್ಲಿ ಈಗ ೨೨ ವಿಮಾನ ನಿಲ್ದಾಣ ಕೇಂದ್ರಗಳಿವೆ. ಕಳೆದ ವರ್ಷ ೧೬ ಸಾವಿರ ಪ್ರಯಾಣಿಕರು, ೧೨ ಲಕ್ಷದ ೨೦ ಸಾವಿರ ಟನ್ ಲಗ್ಗೇಜನ್ನು ವಿಮಾನಗಳು ಸಾಗಿಸಿವೆ. ಪ್ರಯಾಣಿಕರಿಗಾಗಿ ಎರಡು ಹೊಸ ವಿಮಾನ ಕಂಪನಿಗಳೂ ಆರಂಭವಾಗಿದೆ. ದೆಹಲಿ ಮತ್ತು ಕಲ್ಕತ್ತಾ ಮಧ್ಯೆ ಐದು ವಿಮಾನ ವಾರ್ತಾ ಕೇಂದ್ರ ಸ್ಥಾಪಿಸಲಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಿ ಪ್ರಕಟಣೆಯು ಹೊರಬಿದ್ದಿದೆ.

ಅಮೆರಿಕದ ಇಂಜನಿಯರುಗಳ ಸಹಾಯ

ಉತ್ತರ ಪ್ರದೇಶದಲ್ಲಿ ವ್ಯವಸಾಯವನ್ನು ಅಭಿವೃದ್ಧಿ ಪಡಿಸಿ ಹೆಚ್ಚು ಬೆಳೆತೆಗೆಯಲು ವೈಜ್ಞಾನಿಕ ಮಾರ್ಗದಲ್ಲಿ ಸಲಹೆ ನೀಡಲು ಅಮೆರಿಕಾದಿಂದ ಇಂಜನಿಯರುಗಳು ಸಧ್ಯದಲ್ಲಿಯೇ ಆಗಮಿಸುವರು.

ರೇಷ್ಮೆ ಸೆಮಿನಾರ್

ಮುಂದಿನ ವಾರ ಎರಡನೇ ವಾರದಲ್ಲಿ ರೇಷ್ಮೆ ಕೈಗಾರಿಕಾ ಸೆಮಿನಾರನ್ನು ನಂದೀಬೆಟ್ಟದಲ್ಲಿ ನಡೆಸಲೇರ್ಪಾಡಾಗಿದೆ. ವೆಚ್ಚಕ್ಕಾಗಿ ಸರ್ಕಾರದವರು ೧,೫೦೦ ರೂ. ಸಹಾಯಧನವನ್ನು ಕೊಟ್ಟಿರುವರು.

ಶಾಂತಿಯಿಂದ ಮೈತ್ರಿ ಬೆಳೆಸಲು ನಿರ್ಧಾರ

ಅಮೆರಿಕ ಹಿರಿಯ ಶಾಸನಸಭೆಯು ವಿಶ್ವದ ಎಲ್ಲಾ ರಾಷ್ಟ್ರಗಳೊಡನೆಯೂ ಶಾಂತಿಯುತವಾಗಿ ಮೈತ್ರಿಯನ್ನು ಬೆಳೆಸಿಕೊಳ್ಳಬೇಕೆಂದು ಸೂಚಿಸುವ ನಿರ್ಣಯವನ್ನು ಮಂಜೂರ್ಮಾಡಿದೆ.

ನ್ಯೂಯಾರ್ಕಿಗೆ ಮೆಕಾರ್ಥರ್

ವಾಷಿಂಗ್‌ಟನ್‌ನಲ್ಲಿ ಸಾಕ್ಷ್ಯಕೊಡಲು ಬಂದಿದ್ದ ಜ|| ಮೆಕಾರ್ಥರ್‌ರವರು ಸಾಕ್ಷ್ಯ ಮುಗಿಸಿ ನ್ಯೂಯಾರ್ಕಿಗೆ ಹಿಂತಿರುಗಿದರು.

ಮಿ|| ಡೀನ್ ಆಚಿಸನ್ನರು ಜ|| ಮೆಕಾರ್ಥರ್‌ರವರ ಬಗ್ಗೆ ಅಧ್ಯಕ್ಷ ಟ್ರೂಮನ್ನರು ಅನುಸರಿಸಿದ ನೀತಿಗೆ ಬೆಂಬಲವೀಯುವರೆಂದು ತಿಳಿಸಿ ಪ್ರಕಟಣೆ ಹೊರಬಿದ್ದಿದೆ.

ಎ. ಐ. ಸಿ. ಸಿ. ಸಭೆ ಮುಂದುವರಿಯಿತು

ದೆಹಲಿಯಲ್ಲಿ ಸಮಾವೇಶಗೊಂಡಿದ್ದ ಎ. ಐ. ಸಿ. ಸಿ. ಸಭೆಯು ಮುಂದುವರಿಯಿತು. ಸಭೆಯು ಕೇಂದ್ರ ಎಲೆಕ್ಷನ್ ಸಮಿತಿಗೆ ಸದಸ್ಯರನ್ನು ಚುನಾಯಿಸಿತು. ಶ್ರೀಗಳಾದ ಆಚಾರ್ಯ ಕೃಪಲಾನಿ ಮತ್ತು ಶ್ರೀ ಕಿದ್ವಾಯಿರವರುಗಳನ್ನು ಎಲೆಕ್ಷನ್ ಸಮಿತಿಗೆ ಸೇರಿಸಬೇಕೆಂದು ತಂದಿದ್ದ ಸೂಚನೆಗಳನ್ನು ವಾಪಸ್ ಪಡೆಯಲಾಯಿತು.

ಪಾರ್ಲಿಮೆಂಟಿನ ಮೆಂಬರಾದ ಶ್ರೀ ಪುರುಷೋತ್ತಮದಾಸ್ ಠಾಂಡನ್, ಮೌಲಾನಾ ಆಜಾದ್, ಬಿ. ಸಿ. ಮಿತ್ರ, ಸಿ. ರಾಜಗೋಪಾಲಚಾರಿ ಮತ್ತು ಶ್ರೀ ಜಗಜೀವನರಾಂರವರುಗಳೂ ಸಹ ಎಲೆಕ್ಷನ್ ಸಮಿತಿಯ ಸದಸ್ಯರಾಗಿರುವರು.

ಶ್ರೀ ಕೆ. ಹನುಮಂತಯ್ಯನವರು ಬಿ. ವಿಭಾಗದ ಸಂಸ್ಥಾನಗಳಿಂದ ಇರುವ ಬೇಧವನ್ನು ತೆಗೆದುಹಾಕಬೇಕೆಂದು ಸೂಚಿಸಿದ್ದ ನಿರ್ಣಯವನ್ನು ಸಭೆ ಚರ್ಚೆಗೆ ತೆಗೆದುಕೊಂಡಿತು.

ಶ್ರೀ ಶಂಕರರಾವ್‌ದೇವ್‌ರವರು ಸಲಹೆಯಂತೆ ಈ ನಿರ್ಣಯವನ್ನು ಕಾರ್ಯಕಾರಿ ಸಮಿತಿಗೆ ಬಿಡಬೇಕೆಂದು ತೀರ್ಮಾನಿಸಲಾಯಿತು. ಬಾಕಿಯಿದ್ದ ನಿರ್ಣಯಗಳು ಚರ್ಚೆಯಾದನಂತರ ಸಭೆಯನ್ನು ಮುಂದುವರಿಸಲಾಯಿತು.

ಸಕ್ಕರೆ ಮತ್ತು ಬಟ್ಟೆ ಮೇಲಿನ ಹತೋಟಿ ತೆಗೆಯುವುದಿಲ್ಲ

ಎ. ಐ. ಸಿ. ಸಿ. ಸಭೆಯ ಸದಸ್ಯ ಶ್ರೀ ಅಚಲಸಿಂಗರು ದೇಶದಲ್ಲಿ ಸಕ್ಕರೆ ಮತ್ತು ಬಟ್ಟೆ ಸರಬರಾಜು ಸುಧಾರಿಸಿರುವುದರಿಂದ ಅದರ ಮೇಲಿನ ಹತೋಟಿ ತೆಗೆಯಬೇಕೆಂದು ನಿರ್ಣಯ ಮಂಡಿಸಿದ್ದರು.

ಪಂಡಿತ ನೆಹ್ರೂರವರು ಈ ನಿರ್ಣಯದ ಮೇಲೆ ಮಾತಾಡಿ ಸಧ್ಯದ ಪರಿಸ್ಥಿತಿಯಲ್ಲಿ ಈ ಪದಾರ್ಥಗಳ ಮೇಲೆ ಹತೋಟಿ ತೆಗೆಯುವುದರಿಂದ ಆರ್ಥಿಕ ಪರಿಸ್ಥಿತಿ ಹದಗೆಡುವುದೆಂದು ಕೇಂದ್ರ ಸರ್ಕಾರದ ನಿರ್ಧಾರವನ್ನು ಈಗ ಬದಲಿಸುವುದು ಸಾಧ್ಯವಾಗಲಾರದೆಂದು ಪರಿಸ್ಥಿತಿ ಸುಧಾರಿಸುವುದನಂತರ ಹತೋಟಿಗಳನ್ನು ತೆಗೆದುಹಾಕಲಾಗುವುದೆಂದು ತಿಳಿಸಿದರು.

ಆಹಾರ ಹತೋಟಿ ಆಜ್ಞೆಯನ್ನು ಸಡಿಲಿಸ ಲಾಗುವುದೇ?

ಆಹಾರದ ಹತೋಟಿ ಜಾರಿಗೆ ಬಂದ ಮೇಲೆ ಕೆಲವು ಮಂದಿ ರೈತರು ಆಹಾರ ಧಾನ್ಯಗಳನ್ನು ಬಿಟ್ಟು ಇತರ ಬೆಳೆಗಳನ್ನು ಬೆಳೆಯುವುದು ಹೆಚ್ಚಾಗಿದೆ. ಮುಖ್ಯವಾಗಿ ಒಳ್ಳೆಯ ಬೆಲೆ ದೊರೆಯುವುದಾಗಿರತಕ್ಕಂಥ ಆಲೂಗೆಡ್ಡೆ, ಮೆಣಸಿನಕಾಯಿ— ಮೊದಲಾದ ಬೆಳೆಗಳನ್ನು ತಮ್ಮ ಜಮೀನುಗಳಲ್ಲಿ ಬೆಳೆಯುತ್ತಿದ್ದಾರೆ. ಸ್ವಂತ ಉಪಯೋಗಕ್ಕೆ ಬೇಕಾದುದಕ್ಕಿಂತ ಹೆಚ್ಚು ಬೆಳೆ ಬೆಳೆಯತಕ್ಕ ಪ್ರತಿಯೊಬ್ಬ ರೈತನೂ ಸರ್ಕಾರಕ್ಕೆ ಕೊಡಬೇಕಾದುದೆಂದು ಒಂದು ನಿರ್ದಿಷ್ಟಕ್ಕೆ 'ಕೋಟಾ' ಪರಿಮಾಣವನ್ನು ಗೊತ್ತುಮಾಡಿ, ಉಳಿದ ಭಾಗವನ್ನು ಅವನು ಮಾರಿಕೊಳ್ಳುವುದಕ್ಕೆ ಅವಕಾಶಕೊಡಬಹುದು. ಸರ್ಕಾರದವರು ಇಂಥ ಒಂದು ಕ್ರಮವನ್ನು ಜಾರಿಗೆ ತರುವುದನ್ನು ಪರ್ಯಾಲೋಚಿಸುತ್ತಿದ್ದಾರೆ. ಜಾಗ್ರತೆಯಾಗಿ ಈ ಪದ್ಧತಿಯನ್ನು ಆಚರಣೆಗೆ ತರಬಹುದು. ಅನಂತರ ಪ್ರತಿಯೊಬ್ಬರೂ ಆಹಾರ-ಧಾನ್ಯಗಳನ್ನು ಧಾರಾಳವಾಗಿ ಬೆಳೆಯುವುದು ಸಾಧ್ಯವಾಗುತ್ತದೆ. ಎಂದು ನ್ಯಾಯಾಂಗಸಚಿವ ಶ್ರೀ ಕೆ. ಟಿ. ಭಾಷ್ಯಂರವರು ರೇಡಿಯೋ ಭಾಷಣ ಮಾಡುತ್ತಾ ತಿಳಿಸಿರುವರು.

ಅವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿರುವರು.—ಆರ್ಥಿಕ ಪುರೋಭಿವೃದ್ಧಿ ಆದರ್ಶ ಪ್ರಜೆಗಳನ್ನೇ ಅವಲಂಬಿಸಿರುತ್ತೆ. ಪ್ರಜೆಗಳು ಕಷ್ಟಪಟ್ಟು ಕೆಲಸ ಮಾಡುವಂಥವರಾಗಿದ್ದರೆ ಸಾಕು, ಅವರು ಮೇಧಾವಿಗಳಾಗಿರಲಿ ಅಥವಾ ಇಲ್ಲದಿರಲಿ—ಅವರಿಗೆ ಪ್ರಕೃತಿಸಿದ್ಧವಾದ ಸಾಧನ ಸಂಪತ್ತುಗಳು ಇರಲಿ ಅಥವಾ ಇಲ್ಲದಿರಲಿ— ಅವರು ಒಂದು ಬಗೆಯ ತೃಪ್ತಿಯಿಂದ ಇರುತ್ತಾರೆ; ಬಹುಶಃ ಅವರು ಪುರೋಭಿವೃದ್ಧಿ ಹೊಂದಿ ಸುಖವಾಗಿ ಇದ್ದೇ ಇರುತ್ತಾರೆಂದೂ ಹೇಳಬಹುದು. ಏನಿದ್ದರೂ ಮೈಗಳ್ಳರಾದ ಅಥವಾ ಉದಾಸೀನದಿಂದ ನಡೆದುಕೊಳ್ಳುವವರಾದ ಜನಗಳು ಮಾತ್ರನೇ ಅತೃಪ್ತಿ ಅಸಮಾಧಾನದಿಂದ ಇರತಕ್ಕವರು. ಅವರ ಸಾಧನ ಸಂಪತ್ತುಗಳು ಎಷ್ಟೇ ಹೆಚ್ಚಾಗಿದ್ದರೂ, ಅವರು ಬೇರೆ ಅನ್ಯರನ್ನು ದೂಡಿಸಿಕೊಂಡು ಸುಖಪಡುವುದಿಲ್ಲ. ಸದಾ ಕರೆಕರೆ ಪಡುತ್ತಾ ಗೊಣಗುಟ್ಟುವುದೇ ಅವರ ಹಣೇ ಬರಹ.

ಭಾರತದಲ್ಲಿ ನಮಗೆ ಹೇರಳವಾದ ಸಾಧನ ಸಂಪತ್ತುಗಳನ್ನು ಪ್ರಕೃತಿದೇವಿಯು ಕೃಪೆಮಾಡಿದ್ದಾಳೆ; ಖನಿಜ ಸಂಪತ್ತು, ಸಮೃದ್ಧಿಯಾಗಿದೆ; ಅರಣ್ಯ ಸಂಪತ್ತು, ವ್ಯವಸಾಯದ ಭೂಮಿಗಳು, ನೀರಿನ ಸಾಧನಗಳು ಇವೆಲ್ಲಾ ಯಥೇಷ್ಟವಾಗಿವೆ. ಜನಬಲವಂತೂ ಅಪರಿಮಿತವಾಗಿದೆ. ಹೀಗಿದ್ದೂ ನಮ್ಮ ದೇಶದ ಬಹುಜನರಾದ ಬಡತನ; ನಮ್ಮ ಜೀವನ ಅಸಹ್ಯಕರ ಜೀವನ; ನಮ್ಮ ದೇಶದಲ್ಲಿ ಸರ್ವದಾ ಕ್ಷಾಮಭೀತಿ ಒಟ್ಟಿನಲ್ಲಿ ನಮ್ಮ ಜನಾಂಗವು ಶ್ರಮಪಟ್ಟು ದುಡಿಯುವ ಜನಾಂಗವಾಗಿಲ್ಲದಿರುವುದೇ ಇದಕ್ಕೆ ಕಾರಣ.

ನಾವು ಯಾವ ಕೆಲಸ ಮಾಡಿದರೂ ಶ್ರದ್ಧೆಯಿಂದ ಶ್ರಮಿಸಬೇಕು; ಅದೇ ನಾವು ಕಲಿಯಬೇಕಾದ ಮೊದಲನೇ ವಿಚಾರ ದುಡಿದಸ್ಟೂ ಧನಲಾಭ. ವ್ಯವಸಾಯವಾದಲ್ಲಿ ಕೈಗಾರಿಕೆಯಾಗಲಿ, ವ್ಯಾಪಾರವಾಗಲಿ ಅಥವಾ ವಾಣಿಜ್ಯವಾಗಲಿ, ಯಾವ ಕೆಲಸಮಾಡಿದರೂ, ಯಾವ ವೃತ್ತಿಯನ್ನೇ ಹಿಡಿದರೂ, ಯಾವ ನೌಕರಿಯನ್ನೇ ಕೈಕೊಂಡರೂ ಶ್ರಮಪಟ್ಟು ಶ್ರದ್ಧೆಯಿಂದ ದುಡಿಯಬೇಕು. ಅದೇ ಭಾಗ್ಯ ಅಭಯದ ಸುವರ್ಣದ್ವಾರ.

ನಮ್ಮ ಜನರು ಸ್ವಿಟ್ಜರ್ಲೆಂಡ್, ಜಪಾನ್, ಅಮೇರಿಕ ಮುಂತಾದ ದೇಶಗಳ ಜನರಂತೆ ದುಡಿದು, ನಮ್ಮಲ್ಲಿರುವ ಹೇರಳವಾದ ಸಾಧನ ಸಂಪತ್ತುಗಳನ್ನು ದುಡಿಸಿಕೊಂಡರೆ ಸಾಕು. ನಮ್ಮ ದೇಶವೇ, ಪ್ರಪಂಚದಲ್ಲೇ ಅತ್ಯಂತ ಅಭ್ಯುದಯ ಹೊಂದಿರುವ ದೇಶಗಳ ಗುಂಪಿಗೆ ಸೇರುವುದು ಸಾಧ್ಯ.

ಆಗ್ಗೆ, ಇತರ ದೇಶಗಳವರಲ್ಲಿ ಆಹಾರಕ್ಕಾಗಿ ಭಿಕ್ಷೆ ಬೇಡಿ ಕೈಯೊಡ್ಡುವ ಸಂಕಟವು ತಪ್ಪುತ್ತದೆ. ಆಹಾರ ಮಾತ್ರವೇ ಅಲ್ಲ. ಸುಖಜೀವನಕ್ಕೆ ಬೇಕಾದ ವಸ್ತುಗಳನೆಲ್ಲಾ ನಮ್ಮ ದೇಶದಲ್ಲೇ ಒದಗಿಸಿಕೊಳ್ಳುವುದು ಕೂಡ ಸಾಧ್ಯ. ಅದು ಸಾಧ್ಯವಾದರೆ ಜೀವನದ ಮಟ್ಟವು ಹೆಚ್ಚುತ್ತದೆ. ನಮ್ಮ ದೇಶದ ಅನೇಕ ಪ್ರದೇಶಗಳಲ್ಲಿ ಪುಷ್ಕಳವಾಗಿ ಬೆಳೆಯನ್ನು ತೆಗೆಯಬಹುದು. ವ್ಯವಸಾಯ ಯೋಗ್ಯವಾದ ೩೦ ಲಕ್ಷ ಎಕರೆಗಳು ಈಗ ಸಿದ್ಧವಾಗಿವೆ. ಅವುಗಳಲ್ಲಿ ವ್ಯವಸಾಯ ನಡೆದರೆ, ಬೇಕಾದಷ್ಟು ಬೆಳೆಯಾಗುತ್ತದೆ.

ಶಾಸ್ತ್ರೀಯವಾಗಿ ವ್ಯವಸಾಯ ನಡೆಯಬೇಕು. ಹಾಗೆ ಮಾಡಿದರೇ ಹೆಚ್ಚು ಫಲ. ಈಗ ಸರಾಸರಿ ಎಕರೆಗೆ ೬॥ ಪಲ್ಲಾ ಭತ್ತ ಬೆಳೆಯುತ್ತಾರೆ. ಶಾಸ್ತ್ರೀಯವಾಗಿ ನವೀನ ವಿಧಾನಗಳಲ್ಲಿ ವ್ಯವಸಾಯ ನಡೆದರೆ ಎಕರೆಗೆ ೩೦ ಪಲ್ಲಾ ಬೆಳೆಯಲು ಸಾಧ್ಯ. ಅದನ್ನು ನಾನೇ ನೋಡಿದ್ದೇನೆ, ಅಷ್ಟು ಬೇಡ, ಸರಾಸರಿ ಎಕರೆಗೆ ೧೦ ಪಲ್ಲಾ ಬೆಳೆಯುವುದು ಕಷ್ಟವಲ್ಲ.

ರೈತರು ವರ್ಷದಿಂದ ವರ್ಷಕ್ಕೆ ತಾವು ತೆಗೆಯತಕ್ಕ ಬೆಳೆಗಳನ್ನು ಬದಲಾಯಿಸುತ್ತಿರಬೇಕು. ಬೇರೆ ಬೇರೆ ಬೆಳೆಗಳನ್ನು ಇಡುವುದರಿಂದ ಜಮೀನಿನ ಸಾರವೂ ಚೆನ್ನಾಗಿರುತ್ತದೆ; ಬೆಳೆಯೂ ಹುಲುಸಾಗಿ ಬರುತ್ತದೆ.

ಜಾನುವಾರುಗಳ ಅಭಿವೃದ್ಧಿಯನ್ನು ವ್ಯವಸಾಯದ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಒಂದು ಭಾಗವನ್ನಾಗಿ ಪರಿಗಣಿಸಿ ಕೆಲಸ ಮಾಡಬೇಕು.

ಹೀಗೆ ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸಿ, ಬೆಳೆಯನ್ನು ಹೆಚ್ಚಿಸಿಕೊಂಡಲ್ಲಿ ನಾವು ಗ್ರಾಮಾಂತರ ವಾಸಿಗಳ ಜೀವನದ ಮಟ್ಟವನ್ನೂ ಹೆಚ್ಚಿಸಿ ಉತ್ತಮಗೊಳಿಸಬಹುದು; ಕೈಗಾರಿಕೆ ಅಭಿವೃದ್ಧಿಯನ್ನೂ ಸಾಧಿಸಬಹುದು. ಇವೆರಡೂ ಸಾಧ್ಯವಾದರೆ, ಅಲ್ಲಿಂದ ಮುಂದೆ ರಾಷ್ಟ್ರವು ಇತರ ವಿಧಗಳಲ್ಲಿ ಪ್ರಗತಿಯನ್ನು ಪಡೆದು ಅಭ್ಯುದಯ ಹೊಂದು ಸಹಜವಾಗಿಯೇ ಇರುತ್ತದೆ.

ಲಂಚ ನಿರೋಧ ಸಮಿತಿಯ ವರದಿ

ಫಾರೆಸ್ಟ್ ರೇಂಜ್ ಆಫೀಸರ್ ಶ್ರೀ ಚೌಡಪ್ಪ, ಬೆಂಗಳೂರು ಆಸ್ಪತ್ರೆಯ ಸೂಪರಿಂಟೆಂಡೆಂಟ್ ಶ್ರೀ ಸ್ವಾಮಿನಾಥನ್ ಫಾರೆಸ್ಟ್ ರೇಂಜರ್ ಶ್ರೀ ನಾರಾಯಣಸ್ವಾಮಿ, ಸಬ್ ಓವರ್ಸಿಯರ್ ಸಿ. ಕೆ. ಪುಟ್ಟಾಚಾರ್ ರೆವಿನ್ಯೂ ಇನ್ಸ್‌ಪೆಕ್ಟರ್ ಹೆಚ್.ಕೆ ಮಲ್ಲಾಚಾರ್, ಫಾರೆಸ್ಟ್ ಚೆಕಿಂಗ್ ಇನ್‌ಸ್ಪೆಕ್ಟರ್ ಜನಾಬ್ ಸಯ್ಯದ್ ಹಬೀಬ್, ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರ್ ಸಿದ್ದಯ್ಯ, ಸ್ಕೂಲ್ ಮಾಸ್ಟರ್ ಸಿ. ಕರಿಯಪ್ಪ, ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಎಂ. ಆರ್. ನರಸಿಂಗರಾವ್, ಫ್ರೀವಾನ್ ಮುದ್ದಪ್ಪಯ್ಯ, ಇವರುಗಳ ಮೇಲೆಯಿದ್ದ ಅನೇಕ ಅಪಾದನೆಗಳನ್ನು ಲಂಚ ನಿರೋಧ ಸಮಿತಿಯವರು ಪರಿಶೀಲಿಸಿ ಅವರಿಗೆ ಶಿಕ್ಷೆಯನ್ನು ವಿಧಿಸಿರುವರು.

ಸಿಲ್ಕ್ ಫ್ಯಾಕ್ಟರಿಯ ಜನರಲ್ ಮ್ಯಾನೇಜರ್, ಇಬ್ಬರು ಎಗ್ಸಿಕ್ಯೂಟೀವ್ ಇಂಜನಿಯರುಗಳು, ಮೂರು ಜನ ಅಸಿಸ್ಟೆಂಟ್ ಇಂಜನಿಯರುಗಳು, ಐದು ಜನ ಸಬ್ ಓವರ್ಸಿಯರು, ಒಬ್ಬ ಪಿ. ಡಬ್ಲ್ಯೂ. ಡಿ. ಸೂಪರ್‌ವೈಸರ್, ಕಬ್ಬಿಣದ ಕಾರ್ಖಾನೆಯ ಸೂಪರಿಂಟೆಂಡರು, ಒಬ್ಬ ಅಮಲ್ದಾರರು, ಒಬ್ಬ ಸ್ಪೆಷಲ್ ಶಿರಸ್ತೆದಾರರು, ನಾಲ್ಕು ರೆವಿನ್ಯೂ ಇನ್‌ಸ್ಪೆಕ್ಟರುಗಳು, ಒಬ್ಬ ಹೆಡ್ ಕ್ಲಾರ್ಕ್, ಒಬ್ಬ ಫುಡ್ ಅಕೌಂಟೆಂಟು, ನಾಲ್ಕು ಜನ ಶ್ಯಾನುಭೋಗರು, ಒಬ್ಬ ಪಟೇಲ್, ಒಬ್ಬ ಜವಾನ, ಒಬ್ಬ ದರಖಾಸ್ತು ಕ್ಲಾರ್ಕ್, ರೆವಿನ್ಯೂ ಇಲಾಖೆಯ ಇಬ್ಬರು ಡಿಪೋ ಕ್ಲಾರ್ಕುಗಳು, ಮೂರು ಜನ ಸಬ್ ರಿಜಿಸ್ಟ್ರಾರ್‌ಗಳು, ಇಬ್ಬರು ಸಬ್ ಇನ್‌ಸ್ಪೆಕ್ಟರುಗಳು, ೩ ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು, ಎರಡನೆಯ ದರ್ಜೆಯ ಒಬ್ಬ ಅಸಿಸ್ಟೆಂಟ್ ಸರ್ಜನ್, ಒಬ್ಬ ಚೀಫ್ ಜೈಲರ್ ಒಬ್ಬ ಡೆಪ್ಯುಟಿ ಜೈಲರ್ ಇಬ್ಬರು ಅಸಿಸ್ಟೆಂಟ್ ಡೈರೆಕ್ಟರುಗಳು, ರೇಷ್ಮೆ ಇಲಾಖೆಯ ಇನ್‌ಸ್ಪೆಕ್ಟರು, ಇಬ್ಬರು ಆಪರೇಟಿವ್‌ಗಳು, ಒಬ್ಬ ಅಕೌಂಟೆಂಟು ಮತ್ತು ಒಬ್ಬ ವ್ಯಾನ್ ಡ್ರೈವರು, ಸೇಲ್ಸ್‌ಟ್ಯಾಕ್ಸ್ ಇಲಾಖೆಯ ಒಬ್ಬ ಕ್ಲಾರ್ಕ್ ಇವರುಗಳ ಮೇಲೂ ಅಪಾದನೆಗಳನ್ನು ಹೊರಿಸಲಾಗಿದೆ.

೪ ಇಲಾಖಾ ಮುಖ್ಯಾಧಿಕಾರಿಗಳು, ವಾಣಿಜ್ಯ ಶಾಖೆಯ ಇನ್‌ಸ್ಪೆಕ್ಟರು, ಒಬ್ಬ ಆಡಿಟರು, ಮೆಡಿಕಲ್ ಸ್ಟೋರ್ಸ್ ಸೂಪರಿಂಟೆಂಡರು, ಆರೋಗ್ಯ ಇಲಾಖಾಧಿಕಾರಿ, ಒಬ್ಬ ಪೋಲೀಸ್ ಇನ್‌ಸ್ಪೆಕ್ಟರು, ಸ್ಪೆಷಲ್ ಶಿರಸ್ತೆದಾರ, ಒಬ್ಬ ಸ್ಟಿವರ್ಡ್, ಒಬ್ಬ ಅಕೌಂಟೆಂಟು ಸರ್ಕಾರಿ ಆಸ್ಪತ್ರೆ ಕ್ಲಾರ್ಕು, ಮುಂತಾದವರ ಅಪಾದನೆಗಳ ವಿಚಾರಣೆ ನಡೆಯುತ್ತಲಿದೆಯೆಂದು ಒಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ಕೃಪಲಾನಿ ಕಾರ್ಯಕಾರಿ ಸಮಿತಿಗೆ?

ಕಾಂಗ್ರೆಸ್ಸಿನಲ್ಲಿದ್ದ ಭಿನ್ನಾಭಿಪ್ರಾಯವನ್ನು ತೊಡೆದು ಹಾಕಲು ವಿಸರ್ಜಿಸಲ್ಪಟ್ಟ ಪ್ರಜಾಪ್ರಭುತ್ವಾತ್ಮಕ ಪಕ್ಷದ ನಾಯಕರಲ್ಲಿ ಆಚಾರ್ಯ ಕೃಪಲಾನಿ ಮತ್ತು ಮಿ॥ ರಫಿ ಅಹಮ್ಮದ್ ಕಿದ್ವಾಯಿಯವರನ್ನು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸೇರಿಸಿಕೊಳ್ಳುವ ಯೋಚನೆ ನಡೆಯುತ್ತಿದೆಯೆಂದು ತಿಳಿಯಬರುತ್ತದೆ.

ಅಧಿಕಾರಿಗಳ ಆಯ್ಕೆ

ಕೇಂದ್ರ ಸರ್ಕಾರವು ತಯಾರಿಸುವ ಆಯ್ಕೆ ಪಟ್ಟಿಯಲ್ಲಿ ಶ್ರೀಗಳಾದ ವಿ. ವೇದವ್ಯಾಸಾಚಾರ್, ಇ. ವಿ. ಗಣಪತಿ ಅಯ್ಯರ್, ಎಂ. ರಾಮಣ್ಣ, ಎನ್. ಮಾಧವರಾವ್, ಕೆ. ಸುಬ್ಬರಾವ್, ಕೆ. ಪಿ. ರಾಮನಾಥಯ್ಯ, ಕೆ. ಚಿಕ್ಕನಾರಾಯಣಸ್ವಾಮಿ ಇವರುಗಳ ಹೆಸರುಗಳು ಸೇರಿರುವುದಾಗಿ ತಿಳಿಯಬರುತ್ತದೆ.

ಈ ಪಟ್ಟಿಯ ಬಗ್ಗೆ ಮೈಸೂರು ಸರ್ಕಾರದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ.

ರಣಜಿತ್

೨೭—೪—೫೧ರಿಂದ

ಅಮೋಘವಾದ ೨ನೇ ವಾರ

ಪ್ರತಿದಿನ ಮೂರು ಆಟಗಳು

ಮಧುಬಾಲರವರ—

-:: ಪರದೇಸ್ ::-

ಪಾತ್ರ— ರೆಹಮಾನ್, ಕರನ್‌ದಿವಾನ್, ಮಧುಬಾಲ ಶಾಕುಂತಲ ಮತ್ತು ಜಯಂತ್

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ. ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ತಾರಸಿಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್ ಕೋ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೮೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೫—೧೯೫೧ನೇ ಮಂಗಳವಾರ [ಸಂಚಿಕೆ ೨೨೧

ವಿಮಾನ ಅಪಘಾತದಿಂದ ಮರಣ

ಬೆಂಗಳೂರು ಮೇ. ೭

ಬೆಂಗಳೂರು ವಿಮಾನ ಕಾರ್ಖಾನೆಯ ರೇಡಿಯೋ ಆಫೀಸರು ಶ್ರೀ ರಾಜಾರಾಯರು ವಿಮಾನದಲ್ಲಿ ಹೋಗುತ್ತಾ, ಇದ್ದಾಗ ಮದ್ರಾಸಿಗೆ ೪೦ ಮೈಲಿ ದೂರದಲ್ಲಿ ಆಕಸ್ಮಾತ್ತಾಗಿ ಮರಣ ಹೊಂದಿದರು.

ಹಾಸ್ಯಾಸ್ಪದವಾಗಿದೆ

ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯು ಆಡಳಿತಾಧಿಕಾರಿಗಳನ್ನಾಗಿ ಬಂದುಸಂಸ್ಥಾನದ ಮಾಜಿ ದಿವಾನರನ್ನು ನೇಮಿಸಿರುವುದು 'ಆ'ಸಂಸ್ಥಾನದ ಪ್ರಜೆಗಳಿಗೆ ಹಾಸ್ಯಾಸ್ಪದವಾಗಿದೆಯೆಂದು ಪಾರ್ಲಿಮೆಂಟು ಸದಸ್ಯ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡುವಾಗ ಹೇಳಿರುವುದಾಗಿ ತಿಳಿದುಬಂದಿದೆ.

ನೇಪಾಳದಿಂದ ಭಾರತಕ್ಕೆ ಹತ್ತು ಲಕ್ಷ ಟನ್ ಭತ್ತ ಸರಬರಾಜು

ಕಲ್ಕತ್ತಾದ ಚಿತ್ತರಂಜನ್ ಬಳಿ ಟೆಲಿಫೋನ್ ಕೇಬಲ್ ಕಾರ್ಖಾನೆಯ ಸ್ಥಾಪನೆ

ಪರೀಕ್ಷೆಯಲ್ಲಿ ಸ್ಥಾನಗಳಿಸಿದವರು

ಮೈಸೂರು ಮೇ. ೮

ನಿನ್ನೆ ಹೊರಬಿದ್ದ ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶಗಳಲ್ಲಿ ಇಂಟರ್ ಮೀಡಿಯೇಟ್‌ನಲ್ಲಿ ಮೊದಲನೆಯ ಹತ್ತು ಸ್ಥಾನಗಳಿಸಿದವರು.

ಇಂಟರ್‌ಮೀಡಿಯೇಟ್ ಆರ್ಟ್ಸ್—

1] ಅಬ್ದುಲ್ ರಹಿಂ ಎಂ. [469]

2] ಪರಲಕ್ಷ್ಮಿ ಎಸ್. [438]

3] ನೆಲ್'ಡಿಸೋಜಾ [457]

4) ಶಾಂತ ಆರ್. (437) ಅಮಿಯಂದಸ್ತರ್ (449) ರಾಮಶೇಷನ್ ಎನ್. (478)

5) ವತ್ಸಲ ಅಯ್ಯಂಗಾರ್ (380)

6) ಮೇರಿ ಆಂಜೇಲ ಡಿ ಡಿಸೋಜ ರೇಗೋ (446)

7) ಕೋಮಲವಲ್ಲಿ ಜಿ. (359)

8) ಶಾರದಮ್ಮ ಕೆ. ಎಸ್. (393)

ಎ. ವಿ. ರಾಬರ್ಟ್ಸನ್ (453)

ರಾಜು ಎನ್. (1032)

9) ಜಯರಾಜ್ (474)

10) ಜೋಸೆಫ್ ಪಿ. ಎನ್. (230)

ಇಂಟರ್ ಮೀಡಿಯೇಟ್ ಸೈನ್ಸ್

1) ಅಶ್ವತನಾರಾಯಣ ಜಿ. (2135)

2) ಶ್ರೀನಿವಾಸಮೂರ್ತಿ ಎ. (3330)

3) ಶೇಷಶಾಯಿ ಕ. (2098)

4) ಮಹಂತಪ್ಪ ಕೆ. ಟಿ. (3161)

5) ವೆಂಕಟೇಶಮೂರ್ತಿ ಎಂ. ವಿ (1430)

6) ಶೀಲಾಪ್ರಸಾದ್ (2621)

7) ನರಸಪ್ಪ ಎ. ಪಿ. (1226)

8) ಗೋಪಾಲರಾವ್ ಸಿ. ಪಿ (3283)

9) ಚಂದ್ರಶೇಖರಮೂರ್ತಿ ಎಸ್ 489)

10 ಸುಬ್ರಮಣ್ಯ ಜಿ. (1337)

ಬಿ. ಕಾಂ.

1) ನಾರಾಯಣನಾಯಕ್ (304)

2) ವಾಸುದೇವನ್ ಎ. (189)

3) ಆನಂದಕೃಷ್ಣಗುಪ್ತ ಬಿ. ಎನ್. (2)

4) ವಾಸುದೇವರಾವ್ ಎನ್. ಪಿ (190)

5) ವಿಜಯನಾರಾಯಣಸ್ವಾಮಿ ಟಿ. ಎನ್. (334)

6) ಶ್ರೀನಿವಾಸಮೂರ್ತಿ ಸಿ. ಕೆ. (೧೭೫

ಕಾಶ್ಮೀರದ ನಿಲುವಿಗೆ ಮುಸ್ಲಿಮರ ಬೆಂಬಲ

ಅಖಿಲ ಭಾರತ ಮುಸ್ಲಿಮರ ಸಮ್ಮೇಳನವು ಕಲ್ಕತ್ತಾದಲ್ಲಿ ಸಮಾವೇಶಗೊಂಡಿದ್ದು ಭಾರತವು ಕಾಶ್ಮೀರದ ಬಗ್ಗೆ ಅನುಸರಿಸುತ್ತಿರುವ ಧೋರಣೆಗೆ ತನ್ನ ಹೃತ್ಪೂರ್ವಕ ಬೆಂಬಲ ನೀಡಿದೆ. ಕಾಶ್ಮೀರದ ಸಮಸ್ಯೆಯನ್ನು ಕೇವಲ ಮತದ ಆಧಾರದ ಮೇಲೆ ತೀರ್ಮಾನಿಸಕೂಡದೆಂದೂ ಅದನ್ನು ರಾಜಕೀಯ ದೃಷ್ಟಿಯಿಂದ ಪರಿಶೀಲಿಸಬೇಕೆಂದೂ ನಿರ್ಣಯದಲ್ಲಿ ತಿಳಿಸಿ ಪಂಡಿತ ನೆಹರೂರವರು ಈ ವಿಷಯಕ್ಕೆ ಅನುಸರಿಸುತ್ತಿರುವ ನೀತಿಗೆ ಸಮ್ಮೇಳನವು ತನ್ನ ಬೆಂಬಲ ವ್ಯಕ್ತಪಡಿಸಿದೆ.

ಸಮ್ಮೇಳನವು ತನ್ನ ನಿರ್ಣಯದಲ್ಲಿ ಭಾರತದ ಮುಸ್ಲಿಮರು, ಷೇಕ್ ಅಬ್ದುಲ್ಲಾರವರ ನೀತಿಗೆ ತನ್ನ ಕೃತಜ್ಞತೆ ವ್ಯಕ್ತಪಡಿಸಿ ಕಾಶ್ಮೀರವು ಮತ್ತೊಂದು ಕೊರಿಯಾ ರಣರಂಗವಾಗದಿರಲೆಂದು ಆಶಿಸಿದೆ.

ಕಾಂಗ್ರೆಸ್ ಉಮೇದುವಾರಿಕೆಗೆ ೧೦,೦೦೦ ರೂ

ಮುಂಬರುವ ಚುನಾವಣೆಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯಶಾಸನಸಭೆಗಳಿಗೆ ಒಟ್ಟು ೩೨೦೦ ಸಂಸ್ಥಾನಗಳಿವೆ ಕಾಂಗ್ರೆಸ್ ಸಂಸ್ಥೆಗಳಿಗೆ ಈ ಚುನಾವಣೆಗಾಗಿ ೪ ಕೋಟಿ ರೂಪಾಯಿಗಳ ಖರ್ಚು ಅಂದಾಜು ಮಾಡಲಾಗಿದೆ. ಸೆಪ್ಟಂಬರ್ ಅಂತ್ಯದ ವೇಳೆಗೆ ಕಾಂಗ್ರೆಸ್ ಉಮೇದುವಾರರುಗಳನ್ನು ನಿರ್ಧರಿಸಲಾಗುವುದು. ಪ್ರತಿಯೊಬ್ಬ ಉಮೇದುವಾರನಿಗೂ ೧೦,೦೦೦ ರೂ. ಖರ್ಚು ಬೀಳುವುದು.

ಸಾಮಾಜಿಕ ಕೆಲಸಗಾರರ ಸಮ್ಮೇಳನ

ಅಂತರರಾಷ್ಟ್ರೀಯ ಸಾಮಾಜಿಕ ಕೆಲಸಗಾರರ ಸಮ್ಮೇಳನವು ಮುಂದಿನವರ್ಷ ಮದ್ರಾಸಿನಲ್ಲಿ ನಡೆಯುತ್ತದೆ.

† ಕಾಯಂ ರಕ್ಷಣಾ ಸಂಚಿಕೆ ಸಮಿತಿ ಏರ್ಪಡಿಸುವ ಬಿಲ್ಲನ್ನು ಪಾರ್ಲಿಮೆಂಟ್ ಸೆಲೆಕ್ಟ್ ಕಮಿಟಿಗೆ ಹಾಕಿದೆ.

ಭಾರತಕ್ಕೆ ಹತ್ತುಲಕ್ಷ ಟನ್ ಭತ್ತ

ನೇಪಾಳದ ಆಹಾರ ಇಲಾಖೆಯ ಸಚಿವರಾದ ಶ್ರೀ ಭಾರತ ಮುನಿಶಂರ್ಶರನವರು ಮದರಾಸ್ ಮತ್ತು ಬಿಹಾರದ ಪರಿಸ್ಥಿತಿಯನ್ನು ಗಮನಿಸಿ ಭಾರತ ಸರ್ಕಾರಕ್ಕೆ ಹತ್ತು ಟನ್ ಭತ್ತ ಸರಬರಾಜು ಮಾಡುವುದಾಗಿ ತಿಳಿಸಿದ್ದಾರೆ.

ಭಾರತಕ್ಕೆ ಕೆನಡಾ ಗೋಧಿ

ನಿನ್ನೆದಿನ ಮಧ್ಯಾಹ್ನ ಕೆನಡದಿಂದ ಬೊಂಬಾಯಿ ರೇವಿಗೆ ೧೪ ಸಾವಿರ ಟನ್ ಗೋಧಿಯನ್ನು ಹೊತ್ತು ತಂದ ಹಡಗು ಬಂದು ತಲಪಿದೆ.

ಯುದ್ಧ ಸಾಮಗ್ರಿಗಳ ಉತ್ಪಾದನೆ

ಯುದ್ಧ ಸಾಮಗ್ರಿಗಳನ್ನು ವಿಶೇಷವಾಗಿ ತಯಾರಿಸುತ್ತಾ ದೇಶದ ಆಸ್ತಿಯನ್ನೆಲ್ಲಾ ಅದಕ್ಕಾಗಿ ವೆಚ್ಚಮಾಡುತ್ತಾ ಬಂದರೆ ಮೂರನೆಯ ಮಹಾಯುದ್ಧವನ್ನು ತಡೆಗಟ್ಟಲಾಗುವುದೆಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ರಾಜೀನಾಮೆಯಿತ್ತ ಬ್ರಿಟನ್ ಸಚಿವರು ಹೇಳಿದರು.

ಕಾಂಗ್ರೆಸ್ಸು ಬಿಡಲು ನಿರ್ಧರಿಸಿಲ್ಲ

ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ಪಕ್ಷವನ್ನು ರದ್ದುಗೊಳಿಸುವ ವಿಷಯದಲ್ಲಿ ಆಚಾರ್ಯ ಕೃಪಲಾನಿಯವರು ಮಾತನಾಡುತ್ತಾ ತಾವು ಕಾಂಗ್ರೆಸ್ ಬಿಡುವುದು, ಬೇರೆ ಪಕ್ಷವನ್ನು ರಚಿಸುವುದು ಇದ್ಯಾವುದನ್ನೂ ಇನ್ನೂ ನಿರ್ಧರಿಸಿಲ್ಲವೆಂದು ಹೇಳಿದರು

ಭಾರತಕ್ಕೆ ಎಣ್ಣೆ ಸರಬರಾಯಿ

ಇರಾನಿನ ಮುಷ್ಕರದಿಂದ ಭಾರತಕ್ಕೆ ಪೆಟ್ರೋಲಿಯಂ ಸರಬರಾಜು ಏನೂ ತೊಂದರೆ ಇಲ್ಲದೆ ಬರುವುದೆಂದು ಹೇಳಲಾಗಿದೆ.

। ದಕ್ಷಿಣ ಆಫ್ರಿಕಾ ಸರ್ಕಾರದವರು ಭಾರತೀಯ ವೋಟುಗಳ ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸುವುದಾಗಿ ಶ್ರೀ ಕೇಪ್ಕರ್ ತಿಳಿಸಿರುವರು.

ಕಲ್ಕತ್ತಾ ಬಳಿ ಟೆಲಿಫೋನ್ ಕೇಬಲ್ ಕಾರ್ಖಾನೆ

ಕಲ್ಕತ್ತಾದ ಚಿತ್ತರಂಜನ್ ಬಳಿ ಭಾರತ ಸರ್ಕಾರವು ಟೆಲಿಫೋನ್ ಕೇಬಲ್ ಕಾರ್ಖಾನೆಯನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ಕಾರ್ಖಾನೆಗೆ ಬೇಕಾದ ಕಟ್ಟಡವನ್ನು ಕೇಂದ್ರ ಸರ್ಕಾರದ ಇಂಜನಿಯರಿಂಗ್ ಇಲಾಖೆಯವರು ಕಟ್ಟಲು ಆಜ್ಞೆ ಮಾಡಲಾಗಿದೆ. ಕಾರ್ಖಾನೆಯ ಒಳಗೆ ರೈಲು ಹಾಕಲು ಇ. ಐ. ಆರ್. ರೈಲ್ವೆಯವರು ಪೂರ್ವಭಾವಿ ಕೆಲಸ ಮುಗಿಸಿರುವರು. ಕೇಬಲ್ ಕಾರ್ಖಾನೆಗೆ ಬೇಕಾಗುವ ಕೆಲಸಗಾರರನ್ನು ಈಗಾಗಲೇ ತೆಗೆದುಕೊಳ್ಳಲಾಗುತ್ತಿದೆ. ಕಾರ್ಖಾನೆಗೆ ನೀರಿನ ಸರಬರಾಜು ಮಾಡಲು ಏರ್ಪಾಡಾಗಿದೆ.

ಈ ಕಾರ್ಖಾನೆಗೆ ಬೇಕಾದ ಸುಮಾರು ೩೫ ಲಕ್ಷ ರೂ. ಗಳ ಮೆಷೀನ್‌ಗಳನ್ನು ಕೊಳ್ಳಲು ಟೆಂಡರುಗಳನ್ನು ಇಂಗ್ಲೆಂಡಿನಲ್ಲಿರುವ ಹೈ ಕಮಿಷನರು ವಿದೇಶಿ ಕಂಪೆನಿಗಳಿಂದ ಸ್ವೀಕರಿಸಲು ತಿಳಿಸಲಾಗಿದೆ ಅತಿ ಶೀಘ್ರದಲ್ಲಿಯೇ ಕೇಬಲ್ ಕಾರ್ಖಾನೆಯು ಕೆಲಸ ಆರಂಭಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ರಚನಾತ್ಮಕ ಕಾರ್ಯಕ್ಕೆ ಸರ್ಕಾರ ಸಹಾಯನೀಡಲಿ

ಈ ಮಾಹೆಯ ಕೊನೆಯ ಒಳಗೆ ಹಿಂದೂಸ್ಥಾನ್ ಪಂಚಾಯಿತ್ ಮತ್ತು ಸೋಷಲಿಸ್ಟ್ ಪಾರ್ಟಿಯವರು ನಡೆಸಲಿರುವ ರಚನಾತ್ಮಕ ಕಾರ್ಯಗಳಿಗೆ ಭಾರತದ ರಾಜ್ಯ ಸರ್ಕಾರಗಳು ಸಹಾಯ ನೀಡಬೇಕೆಂದು ಪಂಡಿತ ನೆಹರೂರವರು ಕೋರಿದ್ದಾರೆ.

* ಭಾರತದಿಂದ ಪಾಕೀಸ್ತಾನಕ್ಕೆ ಹೋಗಿ ಬರಲು ರಹದಾರಿ ಪಡೆಯುವ ಬಗ್ಗೆ ಒಂದು ಸಮ್ಮೇಳನ ನಡೆಸಿ ಅನಂತರ ಈ ರಹದಾರಿ ವಜಾ ಮಾಡುವುದನ್ನು ಚರ್ಚಿಸಲು ಈ ಮಾಹೆ ೧೮ ಮತ್ತು ೧೯ನೇ ತಾ॥ ಸಮ್ಮೇಳನವನ್ನು ದೆಹಲಿಯಲ್ಲಿ ನಡೆಸಲಿದ್ದರು. ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿರುವುದರಿಂದ ೮ ಮತ್ತು ೯ನೇ ತಾ॥ ನ ಸಮ್ಮೇಳನವನ್ನು ಈ ರೀತಿ ಮುಂದುವರಿಸಲಾಗಿದೆ.

ಜನಗಣತಿಯಲ್ಲಿ ಜಾತಿ ಮತಗಳಿಗೆ ಪ್ರಾಮುಖ್ಯತೆ ಕೊಟ್ಟಿಲ್ಲ

ಮೈಸೂರು ಮೇ ೭

ಭಾರತಾದ್ಯಂತ ಏಕರೀತಿಯಾಗಿ ಜನಗಣತಿ ಕಾರ್ಯವು ನಡೆದಿದೆ. ಮುಂದಿನ ವರ್ಷ ಜೂನ್ ಅಖೈರಿನೊಳಗೆ ಸಂಪೂರ್ಣ ವರದಿಯನ್ನು ತಯಾರಿಸಿ ಪ್ರಕಟಿಸಬೇಕೆಂದಿರುತ್ತೇವೆ. ಎಲ್ಲಾ ಪ್ರಾಂತ್ಯಗಳ ವರದಿಗಳೂ ಏಕರೀತಿಯಾಗಿರುತ್ತವೆ. ೧೯೪೧ರಲ್ಲಿಯ ಜನಗಣತಿವರದಿಗಳಿಗೂ ೧೯೫೧ರ ವರದಿಗಳಿಗೂ ವಿಶೇಷವಾಗಿ ವ್ಯತ್ಯಾಸಗಳಿರುತ್ತವೆ. ಈಗ ರಾಜ್ಯಾಂಗ ಶಾಸನಪ್ರಕಾರ ಈಗ ಜನಗಣತಿಯಲ್ಲಿ ವಿವಿಧ ಜಾತಿಮತಗಳ ಜನಗಣತಿ ನಡೆಸಿಲ್ಲ. ಎಲ್ಲಾ ಪ್ರಾಂತ್ಯಗಳ ಜನಗಣತಿ ಕಮಿಷನರುಗಳ ಸಭೆಯು ದೆಹಲಿಯಲ್ಲಿ ಪ್ರಾರಂಭದಲ್ಲಿ ನಡೆದಾಗ, ರಾಜ್ಯಾಂಗ ಶಾಸನದಲ್ಲಿ ಕೋಮುವಾರು ಪ್ರಾತಿನಿಧ್ಯಕ್ಕೆ ಆಸ್ಪದವಿಲ್ಲದಿದ್ದರೂ, ಅಂಕಿ-ಅಂಶಗಳನ್ನು ಸಂಗ್ರಹಿಸಲು ಹಿಂದೆ ಜನಗಣತಿಯಲ್ಲಿ ಅನುಸರಿಸುತ್ತಿದ್ದಂತೆ ಈಗಲೂ ಜಾತಿ, ಮತಗಳ ಜನಗಣತಿಯನ್ನೂ ನಡೆಯಿಸುವುದು ಉತ್ತಮವೆಂದು ಬಹುಮತ ಕಮಿಷನರ ಅಭಿಪ್ರಾಯವಾಗಿತ್ತು. ಈ ವಿಷಯದಲ್ಲಿ ನಾನೂ ಮುಖ್ಯಪಾತ್ರವನ್ನು ವಹಿಸಿದ್ದೆ. ಕೇಂದ್ರ ಸಚಿವ ಮಂಡಲಿಯವರು ಗುಪ್ತವಾಗಿ ಸಭೆಸೇರಿ ನಮ್ಮ ಸಲಹೆಯನ್ನು ದೇಶದ ಮುಂದಿನ ಹಿತದೃಷ್ಟಿಯಿಂದ ತಳ್ಳಿಹಾಕಿದರು. ಇದರಿಂದ ನಮಗೆ ಕೆಲಸ ಕಡಮೆಯಾಯಿತು. ಅತ್ಯುತ್ತಮವಾದ ಜನಗಣತಿ ವರದಿಯು ಈಗ ತಯಾರಾಗುತ್ತದೆ ಎಂದು ಮೈಸೂರು ಪ್ರಾಂತ್ಯ ಜನಗಣತಿ ಕಮಿಷನರ್ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಇಂದು ಬೆಳಗ್ಗೆ ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿ, ಜನಗಣತಿವರದಿಯನ್ನು ಪ್ರಕಟಿಸಿರುವ ವಿಷಯದಲ್ಲಿ ವಿವರಗಳನ್ನಿತ್ತರು.

೧. ಈಗಿನ ಜನಗಣತಿಯಂತೆ ಎಲ್ಲಾ ಪ್ರಾಂತ್ಯಗಳ ಜನಸಂಖ್ಯೆಯು ಹೆಚ್ಚಿದೆ. ಇದಕ್ಕನುಗುಣವಾಗಿ ಮುಂದೆ ಬರುವ ಮಹಾಚುನಾವಣೆಗಳಲ್ಲಿ ಶಾಸನ ಸಭೆಗಳಿಗೆ ಸ್ಥಾನಗಳನ್ನು ಗೊತ್ತು ಮಾಡುವುದಿಲ್ಲ.

೨. ಸಂಸ್ಥಾನದಲ್ಲಿ ಜನಗಣತಿ ಕಾರ್ಯವು ಅಷ್ಟು ಸಮರ್ಪಕವಾಗಿ ನಡೆದಿಲ್ಲವೆಂಬ ದೂರುಗಳು ಬಂದಿವೆ. ಸಾಮಾನ್ಯವಾಗಿ ಯಾವರಾಷ್ಟ್ರದಲ್ಲಿಯೂ ಜನಗಣತಿಯು ಶೇಕಡ ೧೦೦ ರಷ್ಟು ಅಂಕಿಗಳು ನಿಜವಾದವೆಂದು ಹೇಳಲಾಗುವುದಿಲ್ಲ. ಕೊನೆಯ ಅಂಕಿಯವರೆಗೂ ನಿಜವೆಂದು ಹೇಳುವುದು ಕಷ್ಟ. ನಮ್ಮ ಪ್ರಾಂತ್ಯದಲ್ಲಿ ಜನಗಣತಿ ಕಾರ್ಯವು ಗೌರವಕಾರ್ಯಕರ್ತರಿಂದ ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಉತ್ತಮರೀತಿಯಲ್ಲಿ ನಡೆದಿದೆಯೆಂದೇ ಹೇಳಬೇಕಾಗಿದೆ. ತಪ್ಪಿನ ಪ್ರಮಾಣವು ತೀರ ಅತ್ಯಲ್ಪವಾಗಿರುವುದು.

೩. ವರದಿಯು ಮುಂದಿನ ವರ್ಷ ಜೂನ್ ಅಖೈರಿನೊಳಗೆ ಸಾಧ್ಯವಾಗುವ ನಿರೀಕ್ಷೆಯಿದೆ.

೪. ಜಾತಿಮತ ಆಧಾರಗಳ ಮೇಲೆ ಅಂಕಿಅಂಶಗಳನ್ನು ಸಂಗ್ರಹಿಸುವುದಿಲ್ಲ. ಆದರೆ ಷೆಡ್ಯೂಲ್ಡ್ ಪಂಗಡಗಳಿಗೆ ಸೇರಿದ ಆದಿಕರ್ನಾಟಕ, ಆದಿದ್ರಾವಿಡ, ಬಣಜಾರ, ಕೊರಮ, ಕೊರಚ ಮುಂತಾದ ೬ ಪಂಗಡಗಳು, ಬೆಟ್ಟಗುಡ್ಡ ನಿವಾಸಿಗಳಾದ ಕಾಡುಕುರುಬರು, ಜೇನುಕುರುಬರು ಮುಂತಾದ ಆ ಪಂಗಡಗಳು ಹಿಂದುಳಿದ ಪಂಗಡಗಳಾದ ಅನಿಮಿಸ್ಟ್, ಕಣಿಯಾರ್, ಅಗಸ, ಗಂಗಕುಲ, ಗಾಣಿಗ, ಈಡಿಗ, ಜೋಗಿ, ಕುಂಬಾರ, ಮೇದ, ನಾಯಿಂದ, ತಿಗಳ, ಉಪ್ಪಾರ, ಬೇಡ, ಕುರುಬ, ಈ ೧೪ ಪಂಗಡಗಳ ಜನಗಣತಿಯನ್ನು ಮಾತ್ರ ಪ್ರತ್ಯೇಕವಾಗಿ ತೆಗೆದುಕೊಳ್ಳಲಾಗಿದೆ. ವಿದ್ಯೆ, ಆರ್ಥಿಕ, ಮುಂತಾದ ಬಾಬುಗಳಲ್ಲಿ ಇವರು ಹಿಂದುಳಿದಿರುವುದರಿಂದ ಇವರ ನೆರವಿಗೆ ಬರಬೇಕಾದುದು ಸರ್ಕಾರದ ಕರ್ತವ್ಯವಾದುದರಿಂದ ಈ ರೀತಿ ಮಾಡಲಾಗಿದೆ.

ಹಿಂದಿನ ವರದಿಯಂತೆ ಈಗಿನ ವರದಿಯು ಪ್ರಕಟವಾಗುವುದೆಂದು ಜನರು ತಿಳಿದುಕೊಂಡಿದ್ದಾರೆ. ಅಂಥವರಿಗೆ ಸ್ವಲ್ಪ ನಿರಾಶೆಯುಂಟಾಗುವುದು. ಆದರೆ ರಾಜ್ಯಾಂಗಶಾಸನ ಭಾರತದ ಇಂದಿನ ಪರಿಸ್ಥಿತಿ ಮುಂತಾದುವುಗಳನೆಲ್ಲಾ ಗಣನೆಗೆ ತೆಗೆದುಕೊಂಡು ಭಾರತಾದ್ಯಂತ ಏಕರೀತಿಯಾದ ಜನಗಣತಿಯಿರುವಂತೆ ಈವರದಿ ಪ್ರಕಟಣೆಯಾಗುವುದೆಂದು ಅವರು ತಿಳಿಸಿದರು.

ಈ ವರದಿಗಳನ್ನು ಪ್ರಕಟಿಸುವುದಲ್ಲದೆ ಜಿಲ್ಲೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೊಳಗೊಂಡು ಎಲ್ಲರಿಗೂ ಅತ್ಯಂತ ಉಪಯುಕ್ತವಾಗುವ ರೀತಿಯಲ್ಲಿ ಜಿಲ್ಲಾ ಕೈಪಿಡಿಗಳನ್ನು ಪ್ರಕಟಿಸಲಾಗುವುದು. ಇದಕ್ಕೆ ಅಧಿಕಾರಿಗಳು, ಖಾಸಗೀ ಮಹನೀಯರೆಲ್ಲರೂ ನೆರವು ನೀಡಬೇಕೆಂದು ಕೋರಿದರು.

ಭಾರತಕ್ಕೆ ಅಮೆರಿಕಾದಿಂದ ಆಹಾರ

ಈ ಮಾಹೆಯಲ್ಲಿ ಭಾರತಕ್ಕೆ ೩,೭೫,೦೦೦ ಟನ್ ಅಮೆರಿಕಾ ಆಹಾರವು ಬರಲಿದೆ. ಈ ಸರಬರಾಯಿಯು ಅಮೆರಿಕಾ ಕೊಡಬೇಕೆಂದು ವಿವಾದ ನಡೆಯುತ್ತಲಿರುವ ೨೦ ಲಕ್ಷ ಟನ್ ಆಹಾರಕ್ಕೆ ಸೇರುವುದಿಲ್ಲ. ಜೂನ್ ಮಾಹೆಯಲ್ಲಿ ಒಂದು ಲಕ್ಷ ಟನ್ ಗೋಧಿ, ಒಂದು ಲಕ್ಷ ಟನ್ ಧಾನ್ಯ ಬರುವುದು. ಭಾರತವು ಇದಕ್ಕಾಗಲೇ ಹಣ ಕೊಟ್ಟಿದೆ.

೧೯೫೧ರಲ್ಲಿ ಭಾರತವು ಎಲ್ಲಾ ರಾಷ್ಟ್ರಗಳಿಂದಲೂ ೫೦ ಲಕ್ಷ ಟನ್ ಆಹಾರ ಕೊಳ್ಳಲಿದೆ.

ಮೈಸೂರು ಸಂಸ್ಥಾನದ ಹೆಲ್ತ್ ಇನ್‌ಸ್ಪೆಕ್ಟರುಗಳ ಸಮ್ಮೇಳನವು ಇದೇ ಮಾಹೆ ೧೮, ೧೯ನೇ ತಾ|| ಗಳಲ್ಲಿ ದಾವಣಗೆರೆಯಲ್ಲಿ ನಡೆಯುವುದು.

ಹಲ್ಲಿಯ ವಿಷದಿಂದ ಮರಣ

ಬೆಂಗಳೂರು ಮೇ ೭

ಬಸವನಗುಡಿ ಪೂರ್‌ಹೌಸ್ ಬ್ಲಾಕಿನಲ್ಲಿ ವಾಸಿಸುತ್ತಲಿರುವ ಸರ್ಕಾರದ ಮುದ್ರಣಾಲಯದ ಮ್ಯಾನೇಜರ್ ಶ್ರೀ ಸುಂದರ್ ಎಂಬುವವರ ಮಗ ತನಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯು ಮುಗಿದುದಕ್ಕೆ ಸರಸ್ವತೀಪೂಜೆ ಮಾಡಿ ರಸಾಯನವನ್ನು ಪ್ರಸಾದವಾಗಿ ಹಂಚಿದನು. ಅದನ್ನು ತಿಂದವರಿಗೆಲ್ಲಾ ತೀವ್ರವಾಗಿ ಬೇಧಿಯಾಯಿತು. ೧೪ ವರ್ಷದ ನಾಗರಾಜ್, ೬ ವರ್ಷದ ಪರಿಮಳ ಎಂಬ್ಬಿಬರು ಮೃತ್ಯು ಹೊಂದಿದರು. ಇತರರು ಗುಣಮುಖರಾಗುತ್ತಲಿದ್ದಾರೆ. ಪಂಚಾಮೃತದಲ್ಲಿ ವಿಷಪೂರಿತ ಅಂಶ ಬಿದ್ದಿತ್ತೆಂದು ಅನುಮಾನಿಸಲಾಗಿದೆ. ಪೋಲೀಸ್ ತನಿಖೆ ನಡೆಯುತ್ತಲಿದೆ.

ಗುಣಮುಖರಾಗುತ್ತಲಿರುವರು

ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಬೆಂಗಳೂರು ಬೌರಿಂಗ್ ಆಸ್ಪತ್ರೆಯಲ್ಲಿ ಉದರಬಾಧೆಗಾಗಿ ಚಿಕಿತ್ಸೆ ಪಡೆಯುತ್ತಾ ಈಗ ಗುಣಮುಖರಾಗುತ್ತಲಿರುವರು.

ಸೇವಕನೋಪಾದಿ ಕೆಲಸ ವಹಿಸಿಕೊಳ್ಳುವೆನು

ವಿಶ್ವಸಂಸ್ಥೆಯು ಮತ್ತು ಸಂಬಂಧಪಟ್ಟ ಮಾನವ ವರ್ಗದ ಸೇವಕನೋಪಾದಿಯಲ್ಲಿ ನಾನು ಮಧ್ಯಸ್ಥಿಕೆಗಾರನ ಕೆಲಸವನ್ನು ವಹಿಸಿಕೊಳ್ಳುವೆನು. ಪಾಕಿಸ್ಥಾನ, ಭಾರತಗಳ ಸಹಕಾರದಿಂದ ನನಗೆ ಒಪ್ಪಿಸಿರುವ ಕರ್ತವ್ಯವನ್ನು ಪಾಲಿಸಲು ತೊಡಗುವೆನು ಎಂದು ಹೊಸದಾಗಿ ಕಾಶ್ಮೀರ ಮಧ್ಯಸ್ಥಿಕೆಗಾರರಾಗಿ ನೇಮಕವಾಗಿರುವ ಡಾ|| ಗ್ರಹಾಂರವರು ಹೇಳಿರುವರು.

ದರ್ಜಿಯವಳು ಈಜಿಪ್ಟ್ ರಾಣಿಯಾದವಳು

೧೭ ವರ್ಷದ ನಾರಿಮನ್ ಸಾಡೆ ೨ ವರ್ಷಗಳ ಕೆಳಗೆ ಅಕಸ್ಮಿಕವಾಗಿ ಈಜಿಪ್ಟ್ ರಾಜ ಫರೂಕ್‌ರು ಒಂದು ಆಭರಣದ ಅಂಗಡಿಯಲ್ಲಿ ಭೇಟಿ ಮಾಡಿದರು. ಅವಳು ಸಾಮಾನ್ಯ ದರ್ಜಿ ಸಂಸಾರಕ್ಕೆ ಸೇರಿದವಳು. ಪ್ರೇಮಲಂಕುರಿಸಿತು. ನಿನ್ನೆ ರಾಜರು ಅವಳನ್ನು ಶಾಸ್ತ್ರೋಕ್ತವಾಗಿ ಪಾಣಿ ಗ್ರಹಣ ಮಾಡಿಕೊಂಡರು.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಅಂಗಿಗಳು ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

❋

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ., ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೩೯೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೫—೧೯೫೧ನೇ ಬುಧವಾರ [ಸಂಚಿಕೆ ೨೦೨

ಕಂದಾಯದ ರಿಯಾಯಿತಿ

ನಂಜನಗೂಡಿನ ಮೂರು ಕೆರೆಗಳಿಗೆ ಸಕಾಲದಲ್ಲಿ ಮಳೆಬಾರದೆ ನೀರು ತುಂಬಲಿಲ್ಲ. ಈ ಕೆರೆ ಕೆಳಗಿನ ಜಮೀನ್ದಾರರುಗಳಿಗೆ ೪೯-೫೦ನೇ ಸಾಲಿಗೆ ಫಸಲು ಬಾರದಿದ್ದುದರಿಂದ ಸರ್ಕಾರವು ಕಂದಾಯದಲ್ಲಿ ಅರ್ಧ ಭಾಗವನ್ನು ಮಾಫಿ ಮಾಡಿದೆ.

ಬೊಂಬಾಯಿ ಗೌರ್ನರ್‌ರವರ ಭೇಟಿ

ಸ್ವಂ.ಸು] ಬೆಂಗಳೂರು ೯

ಬೊಂಬಾಯಿನ ಗೌರ್ನರ್ ರಾಜಾ ಮಹಾರಾಜ್ ಸಿಂಗರು ನಾಳೆ ಬೊಂಬಾಯಿಂದ ಊಟಿಗೆ ತೆರಳುವಾಗ ಮಧ್ಯೆ ಬೆಂಗಳೂರಿಗೆ ಆಗಮಿಸುವರು.

ಕೇಂದ್ರ ಸರ್ಕಾರದಿಂದ ಮೈಸೂರಿಗೆ ೧॥ ಕೋಟಿ ರೂ. ಸಾಲ

ಮದ್ರಾಸ್ ಜಿಲ್ಲೆಯ ದಕ್ಷಿಣ ಆರ್ಕಾಟ್ ಬಳಿ ಕಲ್ಲಿದ್ದಲು ಗಣಿಯ ಪತ್ತೆ

ಕೋಮುವಾರು ಆಜ್ಞೆ ಮುಕ್ತಾಯ

ಮದ್ರಾಸಿನಲ್ಲಿ ಈಗಿರುವಂತೆ ಕೋಮುವಾರು ಆಜ್ಞೆಯು ಮುಂದೆ ಇರುವುದಿಲ್ಲ. ವೃತ್ತಿ ಕಾಲೇಜುಗಳಲ್ಲಿ ಹಿಂದುಳಿದವರ ಮತ್ತು ಹರಿಜನರಿಗೆ ಸ್ಥಾನಗಳನ್ನು ಕೊಡಲನುಕೂಲವಾಗುವಂತೆ ರಾಜ್ಯಾಂಗ ತಿದ್ದುಪಡಿಯು ಮುಂದಿನ ಪಾರ್ಲಿಮೆಂಟು ಅಧಿವೇಶನದಲ್ಲಿ ಮಾಡಲಾಗುವುದೆಂದು ಮದರಾಸಿನ ಹಣಕಾಸಿನ ಮಂತ್ರಿ ಶ್ರೀ ಗೋಪಾಲರೆಡ್ಡಿಯವರು ತಿಳಿಸಿದ್ದಾರೆ.

ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ಶ್ರೀ ಗೋಪಾಲರೆಡ್ಡಿಯವರು ಕೋಮುವಾರು ಆಜ್ಞೆಯ ವಿಷಯವಾಗಿ ದೆಹಲಿಗೆ ಹೋಗಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿಕೊಂಡು ಹಿಂತಿರುಗಿದನಂತರ ಈ ವಿಷಯವನ್ನು ಹೇಳಿರುವರು. ಕೇಂದ್ರದಲ್ಲಿ ಇವರ ವಾದಕ್ಕೆ ಪುರಸ್ಕಾರ ದೊರೆಯಲಿಲ್ಲವೆಂದು ಹೇಳಲಾಗಿದೆ.

ಶ್ರೀ ಕೆ. ಟಿ. ಭಾಷ್ಯಂರವರು

ನ್ಯಾಯಾಂಗ ಮತ್ತು ಕಾರ್ಮಿಕ ಇಲಾಖೆಯ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ಬೋಗಿಗೆ ತೆರಳಿದ್ದು ಈ ದಿನ ಮಧ್ಯಾಹ್ನ ಆಗಮಿಸುವರು.

ಆಡಳಿತ ವ್ಯವಸ್ಥೆ

ಭಾರತ ವಿಭಜನಾ ಕಾಲದಲ್ಲಿ ಅನುಭವಸ್ಥರಾದ ಕೆಲವು ಬ್ರಿಟಿಷ್ ಮತ್ತು ಮುಸ್ಲಿಂ ಅಧಿಕಾರಿಗಳ ನಿವೃತ್ತಿಯ ಪರಿಣಾಮ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರದ ಆಡಳಿತದಲ್ಲುಂಟಾಗಿದ್ದ ತೊಂದರೆಯನ್ನು ಈಗ ಸಂಪೂರ್ಣವಾಗಿ ಸರಿ ಪಡಿಸಲಾಗಿದೆಯೆಂದು ತಿಳಿದು ಬರುತ್ತದೆ. 'ಬಿ' ವಿಭಾಗದ ಪ್ರಾಂತ್ಯದ ಆಡಳಿತ ವ್ಯವಸ್ಥೆಯು ಸರಿಹೋಗಿದೆ 'ಬಿ' ವಿಭಾಗ ಪ್ರಾಂತ್ಯಗಳ ಆಡಳಿತ ವ್ಯವಸ್ಥೆಯೆಲ್ಲವೂ ಸೆಪ್ಟಂಬರ್ ಮಾಹೆಯೊಳಗೆ ಸರಿಹೋಗುವುದು ಎಂದು ತಿಳಿಯಬರುತ್ತದೆ. ಈ ಪ್ರಾಂತ್ಯಗಳಲ್ಲಿ ನಡೆಯ ಬೇಕಾಗುವ ಬದಲಾವಣೆಗಳೆಲ್ಲವೂ ಆ ಕಾಲಕ್ಕೆ ಪೂರ್ಣವಾಗುವುದೆಂದು ಹೇಳಲಾಗಿದೆ

ರ್‍ಯಾಂಕ್ ಗಳಿಸಿದ ಕಾಲೇಜುಗಳು

ಮೈಸೂರು ಮೇ ೯

ಈ ಬಾರಿ ನಡೆದ ಇಂಟರ್ ಮಿಡಿಯೇಟ್ ಸೈನ್ಸ್ ವಿಭಾಗದ ಪರೀಕ್ಷೆಯಲ್ಲಿ ಮೊದಲನೆಯ ರ್‍ಯಾಂಕ್ ಪಡೆದ ಶ್ರೀ ಜಿ. ಅಶ್ವತ್ಥನಾರಾಯಣ ಮತ್ತು ಮೂರನೇ ರ್‍ಯಾಂಕ್ ಪಡೆದ ಶ್ರೀ ಕೆ ಶೇಷಶಾಯಿ ಶಾರದ ವಿಲಾಸ ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳು.

ಇಂಟರ್ ಮಿಡಿಯೇಟ್ ಕಾಮರ್ಸ್ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಬಿ. ನಾರಾಯಣನಾಯಕ್ ಮತ್ತು ಐದನೇ ರ್‍ಯಾಂಕು ಗಳಿಸಿದ ಶ್ರೀ ಟಿ. ಎಸ್. ವಿಜಯನಾರಾಯಣ ಸ್ವಾಮಿ ಡಿ. ಬನುಮಯ್ಯನ ಕಾಲೇಜು ವಿದ್ಯಾರ್ಥಿಗಳು.

ಸರ್ಕಾರಿ ಆಜ್ಞೆ

ಬೆಂಗಳೂರು ಮೇ. ೮

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳ ವರ್ಗದಲ್ಲಿ ಬದಲಾವಣೆಗಳಾಗಿದೆ.

ಚಿತ್ರದುರ್ಗಕ್ಕೆ ವರ್ಗವಾಗಿರುವ ಶ್ರೀ ಹೆಚ್. ಕೆ. ಚಿಂದಯ್ಯನವರನ್ನು ಚಿಕ್ಕಮಗಳೂರಿಗೆ, ಮೈಸೂರಿನಿಂದ ಚಿಕ್ಕಮಗಳೂರಿಗೆ ವರ್ಗವಾಗಿರುವ ಶ್ರೀ ಸಿ. ನಾರಾಯಣಶೆಟ್ಟಿಯವರನ್ನು ಚಿತ್ರದುರ್ಗಕ್ಕೆ ವರ್ಗ ಮಾಡಲಾಗಿದೆ.

೬೯ ಜನ ದಸ್ತಗಿರಿ

ಬೊಂಬಾಯಿನಲ್ಲಿ ನಡೆದ ಗಲಭೆಗಳ ಪರಿಣಾಮವಾಗಿ ಇಲ್ಲಿಯವರೆಗೆ ೬೯ ಜನರ ದಸ್ತಗಿರಿಯಾಗಿವೆ. ಒಂದುವಾರ ಕಾಲ ೧೪೪ನೇ ಸೆಕ್ಷನ್ ಜಾರಿಮಾಡಿ ಸಭೆಗಳು ಮುಂತಾದುವನ್ನು ನಡೆಯದಂತೆ ತಡೆಗಟ್ಟಲಾಗಿದೆ. ಪರಿಸ್ಥಿತಿಯು ಉತ್ತಮಗೊಂಡಿರುವುದಾಗಿ ವರದಿಯಾಗಿದೆ

* ತುಮಕೂರಿನಲ್ಲಿ ಪ್ರಿನ್ಸಿಪಾಲರಾದ ಎಸ್. ಗೋವಿಂದಶರ್ಮರವರು ಪ್ರಿನ್ಸಿಪಲ್ ಮುನಸೀಫರು, ಎಂ. ಎಸ್. ರಾಮಸ್ವಾಮಿಯವರು ಅಡಿಷನಲ್ ಮುನಸೀಫರಾಗಿರುವಂತೆ ಆಜ್ಞೆಯಾಗಿದೆ.

ಮದರಾಸ್ ಬಳಿ ಕಲ್ಲಿದ್ದಲು ಪತ್ತೆ

ಮದರಾಸ್ ಜಿಲ್ಲೆಯ ದಕ್ಷಿಣ-ಆರ್ಕಾಟು ಬಳಿ ಲಿಗ್ನೈಟ್ ಎಂಬ ಹೊಸ ಕಲ್ಲಿದ್ದಲಿನ ಗಣಿ ಪತ್ತೆಯಾಗಿದೆ. ಈ ಗಣಿಯಲ್ಲಿ ಸುಮಾರು ೫೦ ಕೋಟಿ ಟನ್ ಕಲ್ಲಿದ್ದಲು ಸಿಕ್ಕಬಹುದೆಂದು ನಿರೀಕ್ಷಿಸಲಾಗಿದೆ. ಈ ಕಲ್ಲಿದ್ದಲು ಅಸಾಧಾರಣವಾದ ಶಕ್ತಿಯನ್ನು ಹೊಂದಿದ್ದು ಇದರಿಂದ ರೈಲ್ವೆಗೆ ವಿಶೇಷ ಸಹಾಯವಾಗುವುದೆಂದು ನಿರೀಕ್ಷಿಸಲಾಗಿದೆ.

ಕಮ್ಮಿ ಅಳತೆಗೆ ಜುಲ್ಮಾನೆ

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ೧೧ನೇ ನಂಬರು ರೇಷನ್ ಡಿಪೋವಿನ ಮಾಲೀಕರಾದ ಜನಾಬ್ ಬಷೀರ್ ಅಹಮ್ಮದ್ ಮತ್ತು ಫಜುಲುಲ್ಲಾ ಷರೀಫ್ ಎಂಬುವರು ಕಡಿಮೆ ಅಳತೆ ಸೇರಿನಲ್ಲಿ ಅಕ್ಕಿಯನ್ನು ಅಳತೆ ಮಾಡುತ್ತಿದ್ದರೆಂದೂ ಅಳತೆ ತೂಕದ ಇನ್ಸ್‌ಪೆಕ್ಟರು ನಗರದ ನ್ಯಾಯಾಧೀಶರಲ್ಲಿ ಮೊಕದ್ದಮೆ ಹೂಡಲಾಗಿ ೧ನೇ ಅಪರಾಧಿಗೆ ೪೦ ರೂ. ಜುಲ್ಮಾನೆಯನ್ನು ೨ನೇ ಅಪರಾಧಿಗೆ ತಲಾ ೧೦ ರೂ. ಜುಲ್ಮಾನೆಯನ್ನೂ ವಿಧಿಸಿದ್ದಾರೆ.

ಚನ್ನಪಟ್ಟಣದ ಶ್ರೀ ಕೆ. ಗವಿರಂಗಯ್ಯ ಎಂಬುವರು ಕಡಿಮೆ ತೂಕದ ಮತ್ತು ಸೀಲಿಲ್ಲದ ತೂಕದ ಬಟ್ಟಿನಲ್ಲಿ ತೂಕಮಾಡುತ್ತಿದ್ದರೆಂದೂ ಮತ್ತು ಮಳವಳ್ಳಿಯ ಶ್ರೀ ನಂಜುಂಡಪ್ಪ ಎಂಬುವರು ಕಡಿಮೆ ಸೇರಿನಲ್ಲಿ ಅಳತೆ ಮಾಡುತ್ತಿದ್ದರೆಂದೂ ಮೇಲ್ಕಂಡ ಇನ್ಸ್‌ಪೆಕ್ಟರು ಮಂಡ್ಯ ೨ನೇ ನ್ಯಾಯಾಧೀಶರಲ್ಲಿ ಮೊಕದ್ದಮೆ ಹೂಡಲಾಗಿ ಅಪರಾಧಿಗಳಿಗೆ ತಲಾ ೧೦ ರೂ. ಜುಲ್ಮಾನೆಯಾಯಿತು.

ಆಹಾರ ಸರಬರಾಜು

ಭಾರತದಲ್ಲಿ ಅಧಿಕ ಬೆಳೆಯ ಪ್ರಾಂತ್ಯಗಳಿಂದ ಕೊರತೆ ಪ್ರದೇಶಗಳಿಗೆ ಕಳೆದೆರಡು ಮಾಸಗಳಲ್ಲಿ ೨೧ ಲಕ್ಷ ಟನ್ ಆಹಾರವನ್ನು ರವಾನಿಸಲಾಗಿದೆ ಎಂದು ತಿಳಿದು ಬರುತ್ತದೆ.

ಮೈಸೂರಿಗೆ ಒಂದೂವರೆ ಕೋಟಿ ರೂ ಸಾಲ

ಸಂಸ್ಥಾನದ ವಿದ್ಯುಚ್ಛಕ್ತಿ ಮತ್ತು ವ್ಯವಸಾಯ ಅಭಿವೃದ್ಧಿಗಾಗಿ ಕೇಂದ್ರವು ಮೈಸೂರಿಗೆ ಒಂದೂವರೆ ಕೋಟಿ ರೂಪಾಯಿ ಸಾಲವನ್ನು ಈ ಸಾಲಿನಲ್ಲಿ ಕೊಡಲಿದೆ

ಉದಾರ ದಾನ

ಆಸ್ಟ್ರೇಲಿಯಾ, ಥೈಲೆಂಡು ಮತ್ತು ಇರಾಕ್‌ಗಳು ಭಾರತಕ್ಕೆ ಉಚಿತವಾಗಿ ೨೦೦೦ ಟನ್ ಅಕ್ಕಿ ೫೦,೦೦೦ ಟನ್ ಖರ್ಜೂರವನ್ನು ಕೊಟ್ಟಿವೆ.

ಗೋ ಸಂಪತ್ತು

ಭಾರತದಲ್ಲಿ ಗೋ ಸಂಪತ್ತನ್ನು ಅಭಿವೃದ್ಧಿ ಗೊಳಿಸುವುದಕ್ಕಾಗಿ ಒಂದು ಬಿಲ್ಲನ್ನು ಸರ್ಕಾರದವರು ಪಾರ್ಲಿಮೆಂಟಿನಲ್ಲಿ ಮಂಡಿಸಲಿರುವರು.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರವರು ಮಧ್ಯಭಾರತದಲ್ಲಿ ಪ್ರವಾಸವನ್ನು ಕೈಗೊಂಡಿರುವರು. ಇವರು ನವದೆಹಲಿಯಿಂದ ಇಂದೋರಿಗೆ ಪ್ರಯಾಣಮಾಡಿ ಅಲ್ಲಿಂದ ಉಜ್ಜಯಿನಿಗೆ ತೆರಳಿದರು.

ರಾಷ್ಟ್ರಾಧ್ಯಕ್ಷರು ಶ್ರೀ ವಿಕ್ರಮಕೀರ್ತಿ ಮಂದಿರದ ಶಂಕುಸ್ಥಾಪನೆ ಮಾಡಿ ಅಲ್ಲಿ ಆಳಿದ ವಿಕ್ರಮಾದಿತ್ಯರಾಜನ ಸಾತ್ವಿಕಗುಣಗಳ ಬಗ್ಗೆ ಚರಿತ್ರೆಕಾರರು ಚರಿತ್ರೆಯನ್ನು ರಚಿಸದಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ವಿಕ್ರಮಾದಿತ್ಯನ ಆಡಳಿತ ರೀತಿಯು ಈಗಿನ ಅಧಿಕಾರವರ್ಗಕ್ಕೆ ಆದರ್ಶವಾಗಲೆಂದು ರಾಷ್ಟ್ರಾಧ್ಯಕ್ಷರು ಹಾರೈಸಿದರು.

* ಹೈದ್ರಾಬಾದಿನಲ್ಲಿ ಮಹಾ ಚುನಾವಣೆಗಳನ್ನು ನವಂಬರ್ ಒಂದರಿಂದ ೨೧ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ಸ ಮಾ ಚಾ ರ

ತಾರೀಖು ೯ನೇ ಬುಧವಾರ

ಎ. ಮತ್ತು ಬಿ. ತಾರತಮ್ಯ

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದಲ್ಲಿ ಪ್ರಾಂತ್ಯಗಳ ತಾರತಮ್ಯವು ಅವಶ್ಯಕವಾಗಿತ್ತು. ಬ್ರಿಟಿಷರ ನೇರವಾದ ಆಳ್ವಿಕೆಗೆ ಕೆಲವು ಭಾಗಗಳು ಸೇರಿದ್ದುವು. ಆಶ್ರಿತ ಸಂಸ್ಥಾನಗಳೇ ಬೇರೆಯಾಗಿದ್ದುವು. ನೇರವಾಗಿ ಕೇಂದ್ರದ ಆಡಳಿತಕ್ಕೆ ಒಳಪಟ್ಟ ಪ್ರಾಂತ್ಯಗಳಲ್ಲಿ ಪ್ರಗತಿಯುಂಟಾಗಿರಲಿ, ಇಲ್ಲದಿರಲಿ ಆಶ್ರಿತ ಸಂಸ್ಥಾನಗಳಿಗಿಂತ ಅವು ಉತ್ತಮದರ್ಜೆಯವುಗಳೆಂದು ಪರಿಗಣಿಸಿ ಆಶ್ರಿತ ಸಂಸ್ಥಾನಗಳಲ್ಲಿ ಮುಂದುವರಿದ ಅನೇಕ ಸಂಸ್ಥಾನಗಳಿಗೆ ಸಲ್ಲತಕ್ಕ ಸ್ಥಾನವು ದೊರೆಯುತ್ತಿರಲಿಲ್ಲ.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಈ ಭಾಗಗಳ ಜನರು ಪ್ರಾಂತೀಯವಾಗಿ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾಗ್ಯೂ ಅಖಿಲಭಾರತ ಕಾಂಗ್ರೆಸ್ ಆಶ್ರಯದಲ್ಲಿ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಿದರು. ಸ್ವಾತಂತ್ರ್ಯದ ಗುರಿಯು ಯಾವ ಭಾರತೀಯನಿಗೂ ತಾರತಮ್ಯಭಾವನೆಯನ್ನು ತೋರ್ಪಡಿಸದಿಂತಹುದೊಂದಾಗಿದೆ.

೧೯೪೭ರಲ್ಲಿ ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ಅಖಂಡ ಭಾರತದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಲು ಸಾಧ್ಯವಾಯಿತು. ಸರದಾರ್ ಪಟೇಲರ ಜಾಣ್ಮೆ ಮತ್ತು ಚಾತುರ್ಯತೆಯಿಂದ ಬ್ರಿಟಿಷ್ ಅಧೀನವಾಗಿದ್ದ ೫೬೨ ದೇಶೀಯ ಸಂಸ್ಥಾನಗಳೆಲ್ಲವೂ, ಕೇವಲ ೯ ಪ್ರದೇಶಗಳಾಗಿ ಪರಿವರ್ತನವಾದುವು. ಇವು 'ಬಿ' ಪ್ರಾಂತ್ಯಗಳಾದುವು. ನೂತನ ರಾಜ್ಯಾಂಗದಲ್ಲಿ '೩೭೧'ನೇ ವಿಧಿಯನ್ನು ಸೇರಿಸಿ 'ಎ' ಮತ್ತು ಬಿ. ಪ್ರಾಂತ್ಯಗಳಿಗೆ ತಾರತಮ್ಯ ಕಲ್ಪಿಸಲಾಗಿದೆ. ಎ ಮತ್ತು ಬಿ ಭಾಗಗಳಲ್ಲಿ ತಾರತಮ್ಯವಿರಕೂಡದು. ನೂತನವಾಗಿ ಜಾರಿಗೆ ಬಂದಿರುವ ರಾಜ್ಯಾಂಗಶಾಸನದ ೩೭೧ನೇ ವಿಧಿಯನ್ನು ರದ್ದುಗೊಳಿಸಬೇಕೆಂದು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಎ. ಐ. ಸಿ. ಸಿ. ಯಲ್ಲಿ ನಿರ್ಣಯ ಮಂಡಿಸಿದರು. ಇದು ಕಾರ್ಯಕಾರಿ ಸಮಿತಿಯ ಸಲಹೆಗೆ ಒಪ್ಪಿಸಲಾಗಿದೆ. 'ಎ' ಭಾಗಗಳಲ್ಲಿ ರಾಜ್ಯಾಡಳಿತವು ಯಾವರೀತಿಯಾಗಿ ಸ್ವಾತಂತ್ರ್ಯವಾಗಿ ನಡೆಯುತ್ತಲಿದೆಯೋ ಅದನ್ನು ೩೭೧ನೇ ವಿಧಿಯು 'ಬಿ' ಪ್ರಾಂತ್ಯಗಳಿಗೆ ಮೊಟಕುಮಾಡಿದೆ. ಈ ವಿಧಿಯು ಬಿ ಪ್ರಾಂತ್ಯಗಳನ್ನು ಕೀಳುದರ್ಜೆಯಿಂದ ಕಾಣುವುದಕ್ಕೆ ಕಾರಣವಾದ ಶಾಸನವಾಗಿದೆ. ಕೇಂದ್ರದ ಹತೋಟಿಯು ಬಿ ಪ್ರಾಂತ್ಯಗಳ ಮೇಲೆ ಹೆಚ್ಚಾಗಿದೆ.

ತಾರತಮ್ಯಭಾವನೆಯು ಭಾರತ ರಾಜ್ಯಾಂಗಕ್ಕೆ ವಿರುದ್ಧವಾಗಿದೆ. ಶ್ರೀ ಕೆ. ಹನುಮಂತಯ್ಯನವರ ನಿರ್ಣಯದಲ್ಲಿ ಅಡಕವಾಗಿರುವ ತತ್ವವನ್ನು ಪ್ರಧಾನಿ ನೆಹರೂರವರು ಒಪ್ಪಿರುವರು.

ಭಾರತಾದ್ಯಂತ ಎಲ್ಲಾ ಜನರನ್ನು ಸಮಾನರೀತಿಯಲ್ಲಿ ಕಾಣುವುದಲ್ಲದೆ ಏಕರೀತಿಯಿಂದ ಸ್ವಾತಂತ್ರ್ಯವನ್ನನುಭವಿಸಲು ಯಾವ ತಾರತಮ್ಯವಿರುವುದು ಸಾಧ್ಯವಲ್ಲ. ಹಾಗೇನಾದರೂ ತಾರತಮ್ಯಕಂಡುಬಂದಲ್ಲಿ ಅದನ್ನು ಮೊದಲು ತೊಡೆದುಹಾಕುವುದು ಸರ್ಕಾರದ ಕರ್ತವ್ಯ.

ಮೈಸೂರು ತಿರುವಾಂಕೂರು-ಕೊಚ್ಚಿನ್ ಮುಂತಾದುವುಗಳಲ್ಲಿ ಆಡಳಿತ ಕ್ರಮವು ಇತರ ಅನೇಕ ಪ್ರಾಂತ್ಯಗಳಿಗಿಂತ ಉತ್ತಮವಾಗಿದೆಯೆಂದು ನಮ್ಮ ನಾಯಕರೆಲ್ಲರೂ ಮನಗೊಂಡಿರುವರು. ಅನೇಕ ವೇಳೆ ಮನಬಿಚ್ಚಿ ಒಪ್ಪಿಕೊಂಡಿರುವರು.

ಸರ್ಕಾರದ ಮತ್ತು ಶಾಸನಸಭೆ ೩೭೧ನೇ ವಿಧಿಯನ್ನು ಸಂಪೂರ್ಣವಾಗಿ ಈಗಲೇ ತೊಡೆದುಹಾಕದೆ ಕೆಲವು ಪ್ರದೇಶಗಳ ರಾಜ್ಯಾಡಳಿತಕ್ಕೆ, ಜನರ ಹಿತಕ್ಕೆ ಧಕ್ಕೆಬರುವುದೆಂದು ಅಭಿಪ್ರಾಯಪಟ್ಟಲ್ಲಿ ಮುಂದುವರಿದ ಪ್ರಾಂತ್ಯಗಳಿಗೆ ಈ ವಿಧಿಯು ಅನ್ವಯಿಸದೆಂತೆ ರಾಷ್ಟ್ರಾಧ್ಯಕ್ಷರ ಮೂಲಕ ಘೋಷಣೆಯನ್ನು ಹೊರಡಿಸುವುದು ಉತ್ತಮವೆಂದು ನಾವು ಒತ್ತಾಯಪೂರ್ವಕವಾಗಿ ಹೇಳುತ್ತೇವೆ.

ವಾರ ರಜಾಗಳ ಕಾನೂನು

ವಾರರಜಾಗಳ ಕಾನೂನನ್ನು ಬೆಂಗಳೂರು, ಮೈಸೂರು, ದಾವಣಗೆರೆ, ಕೆ. ಜಿ. ಎಫ್. ಸಿಟಿಗಳು ಮತ್ತು ಶಿವಮೊಗ್ಗಾ, ಚಿಕ್ಕಮಗಳೂರು ಟೌನುಗಳಿಗೆ ಅನ್ವಯಿಸುವುದೆಂದು ಸರ್ಕಾರ ಆಜ್ಞೆ ಮಾಡಿದೆ.

ಸಿಮೆಂಟು ಹತೋಟಿ ರಿಯಾಯಿತಿ

ಮೈಸೂರು, ಬೆಂಗಳೂರು ನಗರಗಳಲ್ಲಿ ವಿನಹ ಮಿಕ್ಕ ಕಡೆಗಳಲ್ಲಿ ಒಂದು ಟನ್ (೩೦ ಚೀಲ) ಸಿಮೆಂಟನ್ನು ಯಾವ ಪರವಾನಿ ಇಲ್ಲದೆ ಕೊಡಬಹುದೆಂಬ ರಿಯಾಯಿತಿಯನ್ನು ೧-೫-೫೧ರಿಂದ ಇನ್ನು ಎರಡು ತಿಂಗಳ ಕಾಲ ಮುಂದುವರಿಸಲಾಗಿದೆಯೆಂದು ೭-೫-೫೧ರ ಪತ್ರಿಕಾ ಪ್ರಕಟಣೆ ತಿಳಿಸುತ್ತದೆ.

ಪತ್ರವ್ಯವಹಾರ

ಸ್ವಾಮಿ.—

ಮೈಸೂರು ಪೌರಸಭೆಯ ಅಧಿಕಾರ ವರ್ಗದವರು ಗಮನಿಸುವರೆ?

ಮಂಡಿಮೊಹಲ್ಲಾ ಕಬೀರ್ ರೋಡಿನ ದಕ್ಷಿಣ ಭಾಗದ ಕ್ರಾಸ್‌ಗಳಲ್ಲಿ ಸವಲೂಮ್ಸ್‌ಗಳು ಬೆಳಗ್ಗೆ ೬ ಗಂಟೆಯಿಂದ ಸಂಜೆ ೯ ಗಂಟೆಗಳ ವರೆವಿಗೂ ನಡೆಯುತ್ತ. ಸದರಿ ಯಂತ್ರೋಪಕರಣಗಳಿಂದ ಅಕ್ಕಪಕ್ಕದ ಮನೆ ವಾಸಸ್ಥರಿಗೂ ವಿದ್ಯಾಭ್ಯಾಸಿಗಳಿಗೂ ಮನಶ್ಯಾಂತತೆಗೆ ಭಂಗವುಂಟಾಗಿದೆ.

ಸದರಿ ಪವರ್‌ಲೂಮ್ಸ್ ಮಾಲೀಕರುಗಳ ಪೈಕಿ ಬನ್ನಿಮಂಟಪದ ಬಡಾವಣೆಯಲ್ಲಿ ತಮ್ಮ ಸ್ವಂತ ಕಟ್ಟಡ ಕಟ್ಟಿಕೊಂಡು ತಮ್ಮ ಯಂತ್ರೋಪಕರಣಗಳನ್ನು ಅಲ್ಲಿಗೆ ವರ್ಗಾಯಿಸಿಕೊಳ್ಳಲು ಅವರುಗಳಿಗೆ ಏಕೆ ಒತ್ತಾಯಪಡಿಸಿಲ್ಲವೆಂಬುದು ಯೋಚಿಸಬೇಕಾದ ವಿಷಯವಾಗಿದೆ ಇದು ಅತ್ಯಗತ್ಯ. ಈಗ ಸದರಿ ಲೈಸನ್ಸುಗಳನ್ನು ರಿನ್ಯೂ ಮಾಡಿಸುವ ಕಾಲ ಸಮೀಪಿಸಬಂದಿದೆ.

ನಮ್ಮ ಘನ ಮುನಿಸಿಪಲ್ ಅಧಿಕಾರಿಗಳು, ಕೌನ್ಸಿಲರುಗಳು ದಯವಿಟ್ಟು ಅನಿರೀಕ್ಷಿತವಾಗಿ ಸದರಿ ಸ್ಥಳಕ್ಕೆ ಪರಿಶೋಧಿಸಿದರೆ ಅವರಿಗೆ ವೇದ್ಯವಾದೀತು. ಮೇಲ್ಕಂಡ ತೊಂದರೆಯನ್ನು ತಪ್ಪಿಸಿ ನೆಮ್ಮದಿಯನ್ನುಂಟು ಮಾಡಬೇಕೆಂದು ಅರ್ಜಿಗಳ ಮೂಲಕ ಮು॥ ಅಧಿಕಾರ ವರ್ಗದವರಿಗೂ, ಮು॥ ಕೌನ್ಸಿಲರುಗಳಿಗೂ ಅಲ್ಲಿನ ನಿವಾಸಿಗಳು ವಿಜ್ಞಾಪಿಸಿದ್ದಾರೆ.

ಮಂಡಿಮೊಹಲ್ಲಾ ನಿವಾಸಿಗಳು,

*ಚೀಫ್ ಇಂಜನಿಯರ್ ಶ್ರೀ ಎಂ. ಎಸ್. ಲಕ್ಷ್ಮಣರಾಯರಿಗೆ ೧೮-೪-೫೧ರಿಂದ ಇನ್ನು ಐದು ತಿಂಗಳು ರಜಾ ಮುಂದುವರಿಸಲಾಗಿದೆ.

*ಸೀನಿಯರ್ ಡೆಪ್ಯುಟಿ ಐ. ಜಿ.ಪಿ. ಯವರಾದ ಶ್ರೀ ಯು. ಕೆ. ಸೋಮಪ್ಪನವರಿಗೆ ೧-೩-೫೧ರಿಂದ ಇನ್ನು ೩ ತಿಂಗಳು ಕಾಲ ರಜಾ ಕೊಡಲಾಗಿದೆ.

ಒಲಿಂಪಿಯಾ ಟಾಕೀಸ್
೧೦—೫—೫೧ರಿಂದ ಪ್ರತಿದಿನ ೩ ಪ್ರದರ್ಶನಗಳು.
ಉತ್ತಮ ಸಂಗೀತ ಮತ್ತು ನವೀನರೀತಿಯ ನೃತ್ಯಗಳಿಂದ ಕೂಡಿದ
ಸಂಧ್ಯಾ ಪಿಕ್ಚರ್ಸ್‌ರವರ ಹಿಂದಿಚಿತ್ರ
* ಸಂಗೀತ *
ಪಾತ್ರ— ನಿಗಾರ್, ಮುಮ್ತಾಜ್‌ಅಲಿ, ಪ್ರಾಣ್,
ಅಕಾಲ ಮೃತ್ಯುವಿಗೆ ತುತ್ತಾದ ಸುಪ್ರಸಿದ್ಧ ನಟ ಶ್ಯಾಂ.
ಸಂಗೀತ ಸಿ. ರಾಮಚಂದ್ರ; ಕಥೆ ಮತ್ತು ಹಾಡುಗಳು ಸಂತೋಷಿ,

ಭಾರತ ಸೇವಾದಳ ಮಹಿಳಾ ಶಿಬಿರ

ಮೈಸೂರು ಮೇ ೮

ಭಾರತ ಸೇವಾದಳದ ಮಹಿಳಾ ಶಿಬಿರವು ೫-೫-೫೧ನೇ ತಾ॥ ಬೆಳಿಗ್ಗೆ ೯ ಗಂಟೆಗೆ ಧ್ವಜಾರೋಹಣಾನಂತರ ಉದ್ಘಾಟಿಸಲ್ಪಟ್ಟಿತು. ಸಭೆಗೆ ಮೈಸೂರಿನ ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು, ಅಧ್ಯಕ್ಷತೆವಹಿಸಿದ್ದರು. ಶ್ರೀಯುತರು ಸೇವಾದಳದ ಹಿರಿಮೆ, [ಮಹಿಳೆಯರಿಗೆ ದಳದ ಅವಶ್ಯಕತೆ ನಾವು ಧ್ವಜಕ್ಕೆ ಕೊಡಬೇಕಾದ ಗೌರವಗಳ ಬಗ್ಗೆ ಭಾಷಣ ಮಾಡಿದರು.

ನಂತರ ಶಿಬಿರದ ಸಂಚಾಲಕರು ವಂದನಾರ್ಪಣೆ ಮಾಡಿ ಹಿರಿಯರ ಮತ್ತು ಭಗವಂತನ ಆಶೀರ್ವಾದಗಳು ತಮಗೆ ಸಿಗಲೆಂದು ಆಶಿಸಿದನಂತರ ಸಭೆಯು ಮುಕ್ತಾಯವಾಯಿತು.

*೧೪-೫-೫೧ರಿಂದ ತುಮಕೂರಿನಲ್ಲಿ ಎರಡು ಮುನಸೀಫ್ ಕೋರ್ಟುಗಳಿರುವುವು.

ಮನೆ ಬಿಕರಿಗಿದೆ

ಚಾಮುಂಡಿಪುರಂನಲ್ಲಿ 2 ಔಟ್‌ಹೌಸ್ ಕಾಂಪೌಂಡ್ ಫ್ಲಷ್, ನಲ್ಲಿ, ದೀಪ, ಭಾವಿ ಉಳ್ಳ ತಿಂಗಳಿಗೆ ಸುಮಾರು 80 ರೂ ಬಾಡಿಗೆ ಬರುತ್ತಿರುವ ಹೊಸದಾಗಿ ಕಟ್ಟಿದ ವಾಸದಮನೆ ಬಿಕರಿಗಿದೆ. ಬೇಕಾದವರು ಈ ವಿಳಾಸದಲ್ಲಿ ವಿಚಾರಿಸಿ.

ಎಂ. ಸುಬ್ಬರಾಮಯ್ಯ ಅಂಡ್ ಕೋ
ಅಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್,
ಮೈಸೂರು.

ರ ಣ ಜಿ ತ್
೨೭—೪—೫೧ರಿಂದ
ಅಮೋಘವಾದ ೩ನೇ ವಾರ
ಪ್ರತಿದಿನ ಮೂರು ಆಟಗಳು
ಸುಧುಬಾಲರವರ—
-:: ಪ ರ ದೇ ಸ್ ::-
ಪಾತ್ರ— ರೆಹಮಾನ್, ಕರನ್‌ದಿವಾನ್,
ಮಧುಬಾಲ ಶಾಕುಂತಲ ಮತ್ತು
ಜಯಂತ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯುಟೋರಿಯಲ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈ ಸೂ ರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೦—೫—೧೯೫೧ನೇ ಗುರುವಾರ [ಸಂಚಿಕೆ ೨೦೨

ನೇಪಾಳ ಸಚಿವರು ದೆಹಲಿಯಲ್ಲಿ

ನೇಪಾಳದ ಮಂತ್ರಿಮಂಡಲದಲ್ಲುಂಟಾಗಿರುವ ಬಿಕ್ಕಟ್ಟಿನ ಪರಿಹಾರಕ್ಕಾಗಿ ನೇಪಾಳದ ಮುಖ್ಯಮಂತ್ರಿ ರಾಣಾಮೋಹನಸಂಶೇರ್ ಜಂಗ್, ಗೃಹಸಚಿವ ಶ್ರೀ ಕೊಯಿರಾಲಾ, ಅರ್ಥಸಚಿವ ಜನರಲ್ ಸುಬರ್ಣ ಶಂಷೇರ್ ಮುಂತಾದವರೆಲ್ಲರೂ ಪಂಡಿತ ನೆಹರೂರವರೊಡನೆ ಮಾತುಕಥೆ ನಡೆಸಲು ದೆಹಲಿಗೆ ಆಗಮಿಸಿರುವರು.

ಬಟ್ಟೆ ಹಂಚಿಕೆಗಾಗಿ ಸಮ್ಮೇಳನ

ಭಾರತದ ಎಲ್ಲಾ ಪ್ರಾಂತ್ಯಗಳ ಸಿವಿಲ್ ಸಪ್ಲೈ ಸಚಿವರುಗಳ ಸಭೆಯು ನಿನ್ನೆ ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರಿಕೃಷ್ಣ ಮೆಹತಾಬ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ದೇಶಾದ್ಯಂತ ಬಟ್ಟೆಯ ಹಂಚಿಕೆಯನ್ನು ಸುವ್ಯವಸ್ಥಿತಗೊಳಿಸುವುದೇ ಈ ಸಭೆಯ ಮುಖ್ಯೋದ್ದೇಶವಾಗಿದೆ.

ವಿಸರ್ಜಿಸಿದ ಮೈಸೂರು ಸೈನಿಕರಿಗೆ ಪುನರ್ವ್ಯವಸ್ಥೆ

ಶಾಸನಸಭೆಗಳಿಗೆ ಉಮೇದುವಾರರಾಗಿ ನಿಲ್ಲಲು ಅರ್ಹತೆಗಳು

ಪೂರ್ವ ಪಾಕಿಸ್ತಾನದಲ್ಲಿ ಹೊಟ್ಟೆಗಿಲ್ಲದೆ ಸಾವುಗಳು

ಶಾಸನಸಭಾ ಸದಸ್ಯ ಮಿ॥ ನಬೂರ್‌ರವರು ಮಾತನಾಡುತ್ತಾ, ಪೂರ್ವ ಪಾಕಿಸ್ತಾನ ಸರ್ಕಾರವು ಈ ಜಿಲ್ಲೆಯಲ್ಲಿ ಹತ್ತು ಗ್ರಾಮಗಳನ್ನು ಕ್ಷಾಮಪೀಡಿತ ಪ್ರದೇಶಗಳೆಂದು ಘೋಷಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಭಾಷಣಮಾಡುತ್ತಾ ಹೇಳಿರುವರು. ಈ ಪ್ರಾಂತ್ಯಗಳಲ್ಲಿ ಚಾಪೆಗಳು, ಪರಕಿ, ಹುಣಸೆಹಣ್ಣು ಮುಂತಾದುವುಗಳ ರಫ್ತನ್ನು ಸರ್ಕಾರವು ನಿಷೇಧಿಸಿರುತ್ತದರಿಂದ ಅದರಲ್ಲೇ ಜೀವನ ಮಾಡುವವರಿಗೆ ಆ ಸಾಮಾನುಗಳನ್ನು ಮಾರಿ ಆಹಾರಪದಾರ್ಥಗಳನ್ನು ಕೊಳ್ಳಲು ಹಣವಿಲ್ಲದೆ ಅನೇಕರು ಹೊಟ್ಟೆಗಿಲ್ಲದೆ ಸತ್ತು ಹೋಗುತ್ತಲಿರುವರೆಂದು ಹೇಳಿರುವರು.

ಕಿದ್ವಾಯಿ ರಾಜೀನಾಮೆಯೆ?

ಕೇಂದ್ರ ಸಂಚಾರ ಶಾಖಾ ಸಚಿವ ಮಿ॥ ಕಿದ್ವಾಯಿಯವರು ಸಚಿವಸ್ಥಾನಕ್ಕೆ ಪಾರ್ಲಿಮೆಂಟು ಅಧಿವೇಶನ ಮುಗಿಯುವ ವೇಳೆಗೆ ರಾಜಿನಾಮೆ ಕೊಡುವರೆಂದು ಹೇಳಲಾಗಿದೆ.

ಮಿ॥ ಕಿದ್ವಾಯಿ, ಆಚಾರ್ಯ ಕೃಪಲಾನಿ ಮತ್ತಿತರ ಅನೇಕ ಕಾಂಗ್ರೆಸ್ ನಾಯಕರು ಕಾಂಗ್ರೆಸ್ಸಿಗೆ ರಾಜಿನಾಮೆಯಿತ್ತು ಪ್ರತ್ಯೇಕ ಪಂಗಡವನ್ನು ರಚಿಸಲು ತೀರ್ಮಾನವಾಗಿದೆಯೆಂದು ಹೇಳಲಾಗಿದೆ. ಜೂನ್ ೧೫ನೇ ವಾರದಲ್ಲಿ ಈ ನಾಯಕರು ಹೊಸ ಪಕ್ಷಸ್ಥಾಪನೆಗಾಗಿ ಪಾಟ್ನಾದಲ್ಲಿ ಸೇರಲಿರುವರು.

ಪ್ರಾಚೀನ ಸಂಶೋಧನೆ

ಭಾರತ ಪ್ರಾಚೀನ ಸಂಶೋಧನ ಇಲಾಖೆಯವರು ಭಾರತದ ನಾನಾ ಭಾಗಗಳಲ್ಲಿ ಶೋಧನ ಕೆಲಸಗಳನ್ನು ನಡೆಸಲಿರುವರು. ಅತ್ಯಂತ ಹಿಂದಿನ ಕಾಲದ ನಾಗರಿಕತೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಕಂಡುಹಿಡಿದಿರುವರು. ಹಸ್ತಿನಾಪುರ, ಬೌದ್ಧವಿಹಾರ ಕ್ಷೇತ್ರ ಮುಂತಾದುವುಗಳಲ್ಲದೆ ಪೂರ್ವಕಾಲದ ಅನೇಕ ವಸ್ತು, ಕಟ್ಟಡಗಳನ್ನು ಪತ್ತೆಹಚ್ಚಿರುವರು.

ಗೃಹ ಕೈಗಾರಿಕೆಯ ಸಾಮಾನಿಗೆ ವಿಶೇಷ ಬೇಡಿಕೆ

ಉತ್ತರ ಪ್ರದೇಶದ ಫರೂಕಾಬಾದಿನ ಗೃಹ ಕೈಗಾರಿಕೆಯ ಪ್ರಿಂಟೆಡ್ ಬಟ್ಟೆಗಳು, ಕೆಳ್ನೆಯ ಕೆಲಸದ ಹಲವು ತಾಮ್ರದ ಪಾತ್ರೆಗಳು ಮತ್ತು ಟರ್ಕಿಯ ಮಾದರಿಯ ಟವಲ್ಲಿಗೆ ಹೊರ ದೇಶಗಳಲ್ಲಿ ವಿಶೇಷ ಬೇಡಿಕೆಯಿದೆಯೆಂದು ತಿಳಿದುಬಂದಿದೆ

ಪಾನನಿರೋಧದ ಮಹಾತ್ಮೆ

ಪಾನನಿರೋಧವನ್ನು ಜಾರಿಗೆ ತಂದಾಗಿನಿಂದ ಜನರಿಗೆ ಅನೇಕ ರೀತಿಯ ಪ್ರಯೋಜನಗಳಾಗಿವೆ. ಕೆಲಸಗಳಿಗೆ ಸಕಾಲದಲ್ಲಿ ಹೋಗುವುದು. ಮನೆಯಲ್ಲಿ ಶಾಂತಿ ಮತ್ತು ಸೌಖ್ಯ. ಬಟ್ಟೆ ಮತ್ತು ಆಹಾರಕ್ಕೆ ಹೆಚ್ಚು ವೆಚ್ಚಮಾಡುವುದು. ಸಾಲದ ಹೊರೆ ತಪ್ಪಿಸಿ ಕೊಳ್ಳುವುದು ಮುಂತಾದ ಅನೇಕ ಬದಲಾವಣೆಗಳು ಜೀವನದಲ್ಲಿ ಕಂಡುಬಂದಿವೆ. ಪಾನನಿರೋಧಕ್ಕೆ ಜನರ ಬೆಂಬಲವು ದೊರೆಯುತ್ತಿದೆ ಎಂಬುದಕ್ಕೆ ಇವು ಶಕ್ತ ನಿದರ್ಶನಗಳಾಗಿವೆ. ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಇದರಿಂದ ವಿಶೇಷ ಉತ್ತಮ ಗೊಂಡಿದೆಯೆಂಬ ವರದಿಗಳು ಎಲ್ಲೆಡೆಗಳಿಂದಲೂ ಬರುತ್ತಲಿವೆ ಎಂದು ಬೊಂಬಾಯಿನ ಸಚಿವ ಶ್ರೀ ಎಲ್. ಎ. ಪಾಟೀಲರು ಹೇಳಿರುವರು. ತಮ್ಮ ಪ್ರವಾಸ ಕಾಲದಲ್ಲಿ ಭೇಟಿಯೊಂದರಲ್ಲಿ ಪಾನನಿರೋಧ ನೀತಿಯನ್ನು ಬದಲಾಯಿಸಕೂಡದೆಂದು ಒತ್ತಾಯ ನಡೆಸಿರುವುದಾಗಿ ಅವರು ಹೇಳಿರುವರು.

೩೨೦೦೦ ರೂ. ದರೋಡೆ

ಬಂಗಾಳದ ಜಲಪಲ್ಗುರಿ ಜಿಲ್ಲೆಗೆ ಸೇರಿದ ಟೀ ತೋಟಕ್ಕೆ ಸೇರಿದ ಮೋಟಾರಿನಲ್ಲಿ ೩೨೦೦೦ ರೂ. ಕೊಂಡೊಯ್ಯುತ್ತಿದ್ದಾಗ ೫ ಜನ ಶಸ್ತ್ರಸಜ್ಜಿತ ಬಂಗಾಳಿ ಯುವಕರು ಮೋಟಾರನ್ನು ತಡೆದು ಅಲ್ಲಿದ್ದವರನ್ನು ಹೊಡೆದೂಡಿ ಹಣ ಸಮೇತ ಪರಾರಿಯಾದರೆಂದು ವರದಿಯಾಗಿದೆ. ತನಿಖೆ ನಡೆಯುತ್ತಲಿದೆ. ದರೋಡೆಗಾರರು ಸಿಕ್ಕಿಲ್ಲ.

* ಇರಾಕಿನ ಎಣ್ಣೆ ಕಂಪೆನಿಯ ಪ್ರತಿನಿಧಿಗಳಿಗೂ ಇರಾಕಿನ ಸರ್ಕಾರಕ್ಕೂ ಎಣ್ಣೆ ಕಂಪೆನಿ ರಾಷ್ಟ್ರೀಕರಣ ವಿಷಯದಲ್ಲಿ ಮಾತುಕಥೆ ಪ್ರಾರಂಭವಾಗಿವೆ.

ವಿಸರ್ಜಿಸಲ್ಪಟ್ಟ ಸೈನಿಕರ ಪುನರ್ವ್ಯವಸ್ಥೆ

ವಿಸರ್ಜಿಸಿದ ಸೈನಿಕರ ಪುನರ್ವ್ಯವಸ್ಥೆಗಾಗಿ ಸಲಹೆನೀಡಲು ಮೈಸೂರು ಸರ್ಕಾರವು ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದರಷ್ಟೆ.

ಈ ಸಮಿತಿಯು ಸಭೆ ನಡೆಸಿ ಸಹಕಾರ ಪಕ್ಷದ ಆಧಾರದ ಮೇಲೆ ಬೆಂಗಳೂರಿನಲ್ಲಿ ಸುಮಾರು ಆರು ಲಕ್ಷ ರೂಗಳ ಭಂಡವಾಳದಲ್ಲಿ ಒಂದು ಜನರಲ್ ಮೋಟಾರ್ ಸರ್ವೀಸ್ ಆರಂಭಿಸಬೇಕೆಂದು ತಿಳಿಸಿದೆ. ಸರ್ವೀಸ್ ವಾಹನಗಳು ಟ್ರಾಕ್ಟರುಗಳ ರಿಪೇರಿ ಮಾಡುವುದಲ್ಲದೆ ಬಾಡಿಗೆಗೆ ಸಹ ಮೋಟಾರ್ ಮತ್ತು ಬಸ್ ನಡೆಸಬೇಕೆಂದು ಸಲಹೆನೀಡಿದೆ.

ಇದೇ ರೀತಿಯಲ್ಲಿ ಮೈಸೂರು, ಚಿತ್ರದುರ್ಗ ಮತ್ತು ಶಿವಮೊಗ್ಗದಲ್ಲೂ ಸಹ ಆರು ಲಕ್ಷದಿಂದ ಎಂಟು ಲಕ್ಷ ರೂ ಬಂಡವಾಳದಲ್ಲಿ ಟ್ರಾಕ್ಟರ್, ಮೋಟಾರ್ ಮುಂತಾದುವನ್ನು ರಿಪೇರಿ ಮಾಡುವ ಸರ್ವೀಸ್ ಕೇಂದ್ರ ಸ್ಥಾಪಿಸಿ ಸೈನ್ಯದಿಂದ ವಿಸರ್ಜಿಸಿದವರನ್ನು ನೇಮಿಸಿಕೊಳ್ಳಬೇಕೆಂದು ಸಮಿತಿ ಸಲಹೆ ನೀಡಿದೆ.

ಕವಿ ರವೀಂದ್ರರ ಜಯಂತಿ

ವಿಶ್ವವಿಖ್ಯಾತಕವಿ ರವೀಂದ್ರರ ೯೧ನೇ ಜಯಂತಿಯನ್ನು ನಿನ್ನೆ ಭಾರತಾದ್ಯಂತ ವೈಭವದಿಂದ ಆಚರಿಸಲಾಯಿತು.

ಬಂಗಾಳದಲ್ಲಿ ಕವಿವರ್ಯರ ಜಯಂತಿಯನ್ನು ಒಂದು ವಾರಗಳ ಕಾಲ ಆಚರಿಸಲಾಗುವುದು. ಕವಿ ರವೀಂದ್ರರು ರಚಿಸಿದ ಗೀತಾಂಜಲಿ ಮತ್ತು ಇವರು ಸ್ಥಾಪಿಸಿದ ಶಾಂತಿನಿಕೇತನವು ವಿಶ್ವವಿಖ್ಯಾತಿಯನ್ನು ಗಳಿಸಿದೆ.

ಶ್ರೀ ಬಿ. ಎಂ ಕೃಷ್ಣನ್

ಮೈಸೂರು ಸರ್ಕಾರದ ಜೀವನಿಮೆ ಶಾಖೆಯ ಕಾರ್ಯದರ್ಶಿ ಶ್ರೀ ಬಿ. ಎಂ. ಕೃಷ್ಣನ್‌ರವರನ್ನು ಮೈಸೂರು ಜಿಲ್ಲೆಯ ಸೇಲ್ಸ್‌ಟ್ಯಾಕ್ಸ್ ಡೆಪ್ಯುಟಿ ಕಮೀಷನರಾಗಿ ವರ್ಗಾಯಿಸಲಾಗಿದೆ.

ಭಾರತದ ರಾಜರುಗಳ ಪ್ರಶಂಸೆ

ಸ್ವಾತಂತ್ರ್ಯ ಗಳಿಸುವುದಕ್ಕಾಗಿ ಭಾರತಾದ್ಯಂತ ಇದ್ದ ರಾಜರೆಲ್ಲರೂ ಸಹಕರಿಸಿದ್ದರ ಪರಿಣಾಮವಾಗಿ ಭಾರತದಲ್ಲಿ ಏಕಚಕ್ರಾಧಿಪತ್ಯವನು ಸ್ಥಾಪಿಸಲು ಅನುಕೂಲವಾಯಿತು. ಭಾರತದ ಪುನರ್ ನಿರ್ಮಾಣ ಕಾರ್ಯದಲ್ಲಿ ರಾಜರುಗಳು ಮಹತ್ವಪಾತ್ರವನ್ನು ಇನ್ನೂ ವಹಿಸಬೇಕಾಗಿದೆ. ಪ್ರಜೆಗಳನ್ನು ಪಾಲಿಸುವುದೇ ರಾಜರ ಕರ್ತವ್ಯವೆಂದು ಭಾರತದ ಹಿಂದಿನ ಅರಸರುಗಳು ಅರಿತು ಯಾವ ರೀತಿ ಕರ್ತವ್ಯನಿರತರಾಗಿದ್ದರೋ ಅದೇ ರೀತಿ ಈಗಿನವರೂ ಶ್ರಮಿಸಿ ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನೆರವಾಗಬೇಕಾಗಿದೆ.

ಹಾಗೆ ಮಾಡದೆ ಜನರ ಮೇಲು ಮಾಡುವ ಕಾರ್ಯದಲ್ಲಿ ತೊಡಗಿದರೆ ಅವರಿಗೆ ಮೇಲ್ಮೆಯುಂಟಾಗುವುದಿಲ್ಲ ಎಂದು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಗ್ವಾಲಿಯರ್‌ನಲ್ಲಿ ಮಹಾರಾಜ ಸಿಂಧಿಯಾರ ಪ್ರತಿಮೆ ಅನಾವರಣ ಮಾಡುತ್ತಾ ತಿಳಿಸಿದರು. ಇದೇ ಸಮಯದಲ್ಲಿ ಗ್ವಾಲಿಯರ್ ಪ್ರಜೆಗಳು ಬಿಹಾರದ ಪ್ರಜೆಗಳ ಸಹಾಯಕ್ಕಾಗಿ ೧೦೦ ಟನ್ನು ಅಕ್ಕಿ ದಾನ ಮಾಡಿದರು.

ಆರ್ಥಿಕ ಸಚಿವರ ಸಮ್ಮೇಳನ

ಭಾರತ ಪಾಕಿಸ್ತಾನಗಳ ಆರ್ಥಿಕ ವಿಷಯಗಳನ್ನು ಚರ್ಚಿಸಲು ಉಭಯರಾಷ್ಟ್ರಗಳ ಆರ್ಥಿಕ ಸಚಿವರುಗಳು ಈ ವಾರಾಂತ್ಯದಲ್ಲಿ ದೆಹಲಿಯಲ್ಲಿ ಸಭೆಸೇರಲಿರುವರು. ಭಾರತದ ವಿಭಜನೆಯ ಮುನ್ನ ಅನೇಕ ಕೆಲಸಕಾರ್ಯಗಳಿಗೆ ಸಂಬಂಧಿಸಿದ ಬಿಲ್‌ಗಳು, ಸ್ಥಳಾಂತರವಾದವರ ಪೆನ್ಷನ್ ಮತ್ತು ಭಾರತದ ರಿಸರ್ವ್ ಬ್ಯಾಂಕಿನಿಂದ ಪಾಕಿಸ್ತಾನಕ್ಕೆ ಸಂದಾಯವಾಗಬೇಕಾಗಿರುವ ಮೌಲ್ಯ, ಪಾಕಿಸ್ತಾನವು ಭಾರತಕ್ಕೆ ಕೊಡಬೇಕಾದ ಸಾಲದ ಮೊಬಲಗು ಮುಂತಾದವು ಈ ಸಮ್ಮೇಳನದಲ್ಲಿ ಚರ್ಚೆಯಾಗುವವು.

ಪದಚ್ಯುತ ರಾಜರಿಗೆ ಜೀವನಾಂಶ

ಪದಚ್ಯುತರಾದ ಬರೋಡಾ ಮಹಾರಾಜರ ಬೇಡಿಕೆಗಳನ್ನು ಪರಿಶೀಲಿಸಿದುದರ ಪರಿಣಾಮವಾಗಿ ರಾಷ್ಟ್ರಾಧ್ಯಕ್ಷರಿಂದ ಹೊಸ ಆಜ್ಞೆಯು ಈ ವಾರದಲ್ಲಿ ಹೊರಬೀಳಲಿದೆ. ತಮ್ಮನ್ನು ಸ್ಥಾನಪುನಃಸ್ಥಾಪನೆಗಾಗಿ ಮಾಡಕೂಡದೆಂಬ ಅವರ ಬೇಡಿಕೆಗೆ ಪುರಸ್ಕಾರ ದೊರೆಯುವಂತೆ ಕಾಣುವುದಿಲ್ಲ. ಅವರ ಹಿಂದಿನ ಸ್ಥಾನವನ್ನು ಗಮನಿಸಿ ಸುಮಾರು ೩ ಲಕ್ಷ ರೂ ಗಳ ವರಮಾನವನ್ನು ಮಂಜೂರ್ಮಾಡಬಹುದೆಂದು ಹೇಳಲಾಗಿದೆ. ಅವರು ತಮ್ಮ ಬಿರುದುಗಳನ್ನು ಹೊಂದುವವಕಾಶ ದೊರೆಯಬಹುದು.

ರಷ್ಯನರ ಬಾಯಿಗೆ ತುತ್ತಾಗದಂತೆ ನಾವು ನೋಡಿಕೊಳ್ಳುವೆವು

ಅಮೆರಿಕಾವು ಕೊರಿಯಾದಲ್ಲಿ ಯುದ್ಧ ವಿಸ್ತರಣ ಮಾಡಿದಲ್ಲಿ ಯುರೋಪಿನ ಮಿತ್ರರಾಷ್ಟ್ರಗಳ ಶಕ್ತಿಗುಂದುತ್ತದೆ. ಹಾಗಾದಲ್ಲಿ ರಷ್ಯಾಕ್ಕೆ ಬಹುವು ಹೆಚ್ಚಿನ ಬಲಗೆ ಬಿದ್ದು ನಮ್ಮ ಮಿತ್ರರಾಷ್ಟ್ರಗಳೆಲ್ಲವೂ ರಷ್ಯನರ ಬಾಯಿಗೆ ತುತ್ತಾಗದಂತೆ ನಾವು ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ ಎಂದು ಟ್ರೂಮನ್ನರು ತಮ್ಮ ಭಾಷಣದಲ್ಲಿ ಹೇಳಿರುವರು.

ಭಾರತಕ್ಕೆ ಅಕ್ಕಿ

ಬರ್ಮಾವು ಈ ಸಾಲಿನಲ್ಲಿ ೩,೫೦,೦೦೦ ಟನ್ ಅಕ್ಕಿಯನ್ನು, ಮುಂದಿನ ಸಾಲಿನಿಂದ ಪ್ರತಿ ವರ್ಷವೂ ೫ ವರ್ಷ ಕಾಲ ೩,೫೦,೦೦೦ ಟನ್ ಅಕ್ಕಿಯನ್ನು ಸರಬರಾಯಿ ಮಾಡಲು ಭಾರತ ಬರ್ಮಾ ಸರ್ಕಾರಗಳಿಗೆ ಒಪ್ಪಂದದ ಅಂತ್ಯಸಟ್ಟಿ ಹುಟ್ಟಿದೆಯೆಂದು ತಿಳಿಯಬರುತ್ತದೆ. ಈ ಅಕ್ಕಿಯ ಬೆಲೆಯು ಟನ್ನಿಗೆ ೪೦-೪೯ ಪೌಂಡುಗಳು.

ಭಾರತದಿಂದ ಈ ಆಹಾರ ಪದಾರ್ಥಕ್ಕೆ ಬದಲಾಗಿ ಹತ್ತಿ, ಬಟ್ಟೆ, ಹತ್ತಿ ನೂಲು ಮುಂತಾದ ಅತ್ಯಂತ ಉಪಯುಕ್ತ ಸಾಮಾನುಗಳನ್ನು ಕೊಡಲಾಗುವುದೆಂದು ತಿಳಿಯಬರುತ್ತದೆ.

ವಿಸರ್ಜಿತ ಸೈನ್ಯಕ್ಕೆ ಪುನರುದ್ಧರಣ

ಸೈನ್ಯದಿಂದ ವಿಸರ್ಜಿಸಲ್ಪಟ್ಟವರಿಗೆಲ್ಲಾ ಪೋಲೀಸ್, ರೈಲ್ವೆ ಮುಂತಾದ ಸರ್ಕಾರದ ಇತರ ಇಲಾಖೆಗಳಲ್ಲಿ ಈಗಾಗಲೇ ೮ ನೇ ಕರಿಗೆ ಕೆಲಸ ಕೊಡಲಾಗಿದೆ. ಇನ್ನು ಖಾಲಿಯಿರುವ ಸ್ಥಾನಗಳಿಗೆ ಇವರನ್ನು ತೆಗೆದುಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ರಕ್ಷಣಾ ಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ರಾಜ್ಯಾಂಗ ಶಾಸನ ಬದಲಾವಣೆಯಿಲ್ಲ

ವಿದ್ಯಾ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಸರ್ಕಾರಿ ಕೆಲಸಗಳನ್ನು ಕೊಡುವಾಗ ಜಾತ್ಯಾಧಾರದ ಮೇಲೆ ಕೊಡುವುದು ರಾಜ್ಯಾಂಗಕ್ಕೆ ವಿರೋಧವೆಂದು ಶ್ರೇಷ್ಠ ನ್ಯಾಯಾಲಯವಿತ್ತ ತೀರ್ಪಿನ ಮೇಲೆ ಮದರಾಸು ಸರ್ಕಾರವು ರಾಜ್ಯಾಂಗದ ೧೫ ಮತ್ತು ೨೯ನೆ ನಿಯಮಗಳಿಗೆ ತಿದ್ದುಪಡಿ ಸೂಚಿಸಿ ಮದ್ರಾಸಿನ ಮಂತ್ರಿಗಳು ಭಾರತ ಸರ್ಕಾರದೊಡನೆ ಈ ವಿಷಯದಲ್ಲಿ ಸಮಾಲೋಚನೆ ನಡೆಸಿದರು.

ರಾಜ್ಯಾಂಗದ ೧೫ ಮತ್ತು ೨೯ನೆ ನಿಯಮಗಳ ಪ್ರಕಾರ ಈಗ ನಡೆದುಕೊಳ್ಳಬೇಕಾಗಿದೆಯೇ ವಿನಹ ಇನ್ನೇನೂ ಮಾಡಲಾಗುವುದಿಲ್ಲವೆಂದು ಭಾರತ ಸರ್ಕಾರವು ಅಭಿಪ್ರಾಯಪಟ್ಟಿತೆಂದು ಮದ್ರಾಸಿನ ಕಂದಾಯ ಮಂತ್ರಿ ಶ್ರೀ ಸೀತಾರಾಮರೆಡ್ಡಿಯವರು ಹೇಳಿರುವರು.

ನವಂಬರ್ ತಿಂಗಳಲ್ಲಿ ಮಹಾ ಚುನಾವಣೆ

ಹೈದ್ರಾಬಾದ್‍ನಲ್ಲಿ ನವಂಬರ್ ಒಂದರಿಂದ ೨೧ನೇ ತಾರೀಖು ವರೆಗೆ ಮಹಾಚುನಾವಣೆ ನಡೆಸತಕ್ಕದೆಂದು ಹೈದರಾಬಾದ್ ಸರ್ಕಾರ ನಿರ್ಧರಿಸಿದೆ. ಹೈದರಾಬಾದನ್ನು ಮಹಾಚುನಾವಣೆಗಾಗಿ ಏಳು ವಿಭಾಗ ಮಾಡಲಾಗುತ್ತದು. ಒಂದು ಲಕ್ಷ ಓಟುಗಳ ಪೆಟ್ಟಿಗೆಯು ಬೇಕಾಗುವುದು ಎಂದು ನಿರೀಕ್ಷಿಸಲಾಗಿದೆ. ಇದಕ್ಕಾಗಿ ಐದು ಲಕ್ಷ ರೂ ಖರ್ಚಾಗುವುದೆಂದು ನಿರೀಕ್ಷಿಸಲಾಗಿದೆ

ನಿರ್ಬಂಧನ

ಚೈನಾಕ್ಕೆ ನಿರ್ಬಂಧನವನ್ನು ಹಾಕಿ ಅಲ್ಲಿಗೆ ಯಾವ ರೀತಿಯಾದ ಸಾಮಾನುಗಳೂ ಹೋಗದಂತೆ ತಡೆಯಬೇಕೆಂಬುದೇ ಮಿಲಿಟರಿ ಉನ್ನತಾಧಿಕಾರಿಗಳ ಅಭಿಪ್ರಾಯವೆಂದು ಅಮೆರಿಕಾ ರಕ್ಷಣಾ ಕಾರ್ಯದರ್ಶಿ ಜನರಲ್ ಮಾರ್ಷಲ್‍ರು ಹೇಳಿರುವರು

ಯೂರೋಪಿನಲ್ಲೆಲ್ಲಾ ಅತ್ಯಂತ ದೊಡ್ಡ ಎಣ್ಣೆಯ ಶೋಧನಾಗಾರ



ಸೌತ್‍ಹ್ಯಾಂಪ್ಟನ್ ಫಾಲೇ ಎಂಬಲ್ಲಿ ಹೊಸದಾಗಿ ಸ್ಥಾಪಿತವಾಗಲಿರುವ ಎಸ್ಸೊ ರಿಫೈನರಿ ಮೋಟಾರುಸ್ಪಿರಿಟ್, ಸೀಮೆಯೆಣ್ಣೆ, ಡಯಸಿಲ್ ಎಣ್ಣೆ, ಗ್ಯಾಸ್ ಎಣ್ಣೆ ಮುಂತಾದುವನ್ನು ದಿನ ಒಂದಕ್ಕೆ ೧೧ಲಕ್ಷ ಗ್ಯಾಲನ್‍ನಂತೆ ಇಲ್ಲಿ ತಯಾರಿಸಬಹುದು. ೧೯೫೪ರ ವೇಳೆಗೆ ಈ ರಿಫೈನರಿಯಲ್ಲಿ ವರ್ಷಕ್ಕೆ ಸುಮಾರು ೬೦ ಲಕ್ಷ ಟನ್ ಎಣ್ಣೆಯನ್ನು ತಯಾರ್ಮಾಡುವಂತೆ ವಿಸ್ತರಿಸಲಾಗುವುದು. ಬ್ರಿಟನ್ನಿನ ಪೆಟ್ರೋಲಿಯಂ ವಸ್ತುಗಳ ವ್ಯಾಪಾರದಲ್ಲಿ ಶೇಕಡ ೨೫ ರಷ್ಟು ಇಲ್ಲಿ ತಯಾರಾಗುವುದು.

ಅಂಚೆಕಾರ್ಡು ೪೫ ಮೈಲಿ ಹೋಗಲು ೨೫ ವರ್ಷ

೧೧-೭-೧೯೨೬ ರಲ್ಲಿ ನೌಕಾಲಿಯಲ್ಲಿ ಅಂಚೆಗೆ ಹಾಕಿದ ಒಂದು ಕಾರ್ಡು ೧೯೫೧ನೇ ಏಪ್ರಿಲ್ ೨ನೇ ತಾ॥ ಅಲ್ಲಿಗೆ ೪೫ ಮೈಲಿ ದೂರದ ಯುಸೆನಿ ಎಂಬ ಗ್ರಾಮದ ಒಬ್ಬರಿಗೆ ತಲುಪಿತು. ಕಾಗದವು ಸೇರುವ ಕೆಲವು ವರ್ಷಗಳ ಹಿಂದೆ ಅವರು ಸತ್ತುಹೋಗಿದ್ದರು.

ಶಾಸನಸಭಾ ಸದಸ್ಯರರ್ಹತೆ

ಶಾಸನಸಭಾ ಸದಸ್ಯರರ್ಹತೆ ವಿಷಯವಾಗಿ ಒಂದು ಕಾನೂನನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ. ಸರ್ಕಾರಿ ಕಂಟ್ರಾಕ್ಟ್ ಕೆಲಸ ಮಾಡುವವರು, ಕಂಟ್ರೋಲ್ ವಸ್ತುಗಳನ್ನು ಮಾರಲು ಲೈಸೆನ್ಸ್ ಪಡೆದಿರುವವರು, ಸರ್ಕಾರದ ಆಡಳಿತದಲ್ಲಿರುವ ಕಂಪೆನಿಗಳ ಡೈರೆಕ್ಟರಾಗಿರುವವರು, ಸರ್ಕಾರಿ ಅಧಿಕಾರಿಗಳು ಅಥವಾ ಸರ್ಕಾರಿ ಕೆಲಸದಿಂದ ವಜಾ ಮಾಡಲ್ಪಟ್ಟವರು ಸದಸ್ಯತ್ವಕ್ಕೆ ಅನರ್ಹರಾಗುವರೆಂದು ಈ ಕಾನೂನಿನಲ್ಲಿ ನಮೂದಾಗಿದೆ. ಈ ಕಾನೂನಿನ ವಿಷಯವಾಗಿ ಚರ್ಚೆ ಪ್ರಾರಂಭವಾಗಿದೆ.

ಪೆಟ್ರೋಲ್ ಅಭಾವವೇ ?

ಪೆಟ್ರೋಲ್ ರೇಷನ್ ಬರಬಹುದೆಂಬ ಊಹೆಯ ಮೇಲೆ ಅಹಮದಾಬಾದಿನಲ್ಲಿ ಪೆಟ್ರೋಲ್ ಕೊಳ್ಳುವುದು ವಿಶೇಷವಾಗಿ ಎಲ್ಲಾ ಟ್ಯಾಂಕುಗಳು ಖಾಲಿಯಾಗಿವೆ. ಪೆಟ್ರೋಲ್ ಸರಬರಾಯಿಯು ರೈಲ್ವೆ ಅಸಾಕರ್ಯಗಳಿಂದ ಬರುವುದು ತಡವಾಗಿದೆಯೆಂದೂ ಪೆಟ್ರೋಲ್ ರೇಷನ್ ಜಾರಿಗೆ ಬರುವುದೆಂಬುದು ಸತ್ಯಾಂಶಕ್ಕೆ ದೂರವೆಂದೂ ಒಂದು ಪ್ರಕಟಣೆ ತಿಳಿಸುತ್ತದೆ.

ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿಯ ಮುಷ್ಕರವು ಭಾರತಕ್ಕೆ ಪೆಟ್ರೋಲಿಯಂ ಸರಬರಾಜಿಗೆ ಏನೂ ದುಷ್ಪರಿಣಾಮವುಂಟಾಗುವುದಿಲ್ಲವೆಂದು ಸರಬರಾಜು ಶಾಖಾ ಮಂತ್ರಿ ಶ್ರೀ ಗಾಡ್ಗಿಲ್‍ರವರು ಹೇಳಿರುವರು.

ಬೊಂಬಾಯಿ ಗೌರ್ನರರು ರಾಜಧಾನಿಗೆ

ಬೊಂಬಾಯಿ ಗೌರ್ನರ್ ರಾಜಾ ಮಹಾರಾಜಸಿಂಗ್‍ರವರು ತಮ್ಮ ಪತ್ನಿ ಮತ್ತು ಪರಿವಾರದೊಡನೆ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿ ಉದಕಮಂಡಲಕ್ಕೆ ಇಂದು ತೆರಳುವರು.

ಸಂಪಾದಕರು ಮತ್ತು ಪ್ರಕಾಶಕರು— ಜೆ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್. ಮೈಸೂರು.

ರಿ. ನಂ. ಎಂ. ೫೪೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೫—೧೯೫೧ನೇ ಶುಕ್ರವಾರ [ಸಂಚಿಕೆ ೨೦೪

ವಿಸರ್ಜಿತ ಸೈನಿಕರಿಗೆ ಜಮೀನು

ವಿಸರ್ಜಿಸಲ್ಪಟ್ಟ ಪ್ರತಿಯೊಬ್ಬ ಸೈನಿಕರಿಗೂ ತಿರುವಾಂಕೂರು ಕೊಚ್ಚಿನ್ ಒಕ್ಕೂಟ ಸರ್ಕಾರವು ೩ ಎಕರೆ ಜಮೀನನ್ನು ಉಚಿತವಾಗಿ ಕೊಡುವುದಲ್ಲದೆ ಅವರು ವ್ಯವಸಾಯ ಮಾಡಲ್ಕು ಹಣ ಸಹಾಯ ಮಾಡಲಿದೆಯೆಂದು ತಿಳಿಯಬರುತ್ತದೆ.

ಮಂತ್ರಿ ಮಂಡಲ ನಿದ್ದೆ ಮಾಡುತ್ತಿದೆ

ನೇಪಾಳದ ನಾಗರಿಕ ಮಂತ್ರಿ ಶ್ರೀ ಭದ್ರಕಾಳಿ ಮಿಶ್ರರು ಪಾಟ್ನಾದಲ್ಲಿ ಮಾತನಾಡುತ್ತಾ, ನೇಪಾಳದ ಮಿಶ್ರ ಮಂಡಲಲ್ಲಿ ಸಹಕಾರವಿಲ್ಲದಿರುವುದರಿಂದ ಕೆಲ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಹೇಳಿರುವರು.

ಭಾರತಕ್ಕೆ ಚೈನಾ, ಆಸ್ಟ್ರೇಲಿಯಾ, ರಷ್ಯಾಗಳಿಂದ ಆಹಾರ

ಅಣುಶಕ್ತಿಗೆ ಸಂಬಂಧಪಟ್ಟ ಸಾಮಾನುಗಳನ್ನು ಯಾವ ರಾಷ್ಟ್ರಕ್ಕೂ ಕೊಡುವುದಿಲ್ಲ

ಪ್ರತ್ಯೇಕ ವಿರೋಧ ಪಕ್ಷ

ಆಚಾರ್ಯ ಕೃಪಲಾನಿಯವರು ಇದೇ ಮೇ ೧೭ನೇ ತಾರೀಖಿನವೇಳೆಗೆ, ಕೇಂದ್ರ ಸಚಿವ ಕಿದ್ವಾಯಿಯವರು ಈಗಿನ ಪಾರ್ಲಿಮೆಂಟು ಅಧಿವೇಶನ ಮುಕ್ತಾಯವಾಗುದೊಡನೆಯೇ ಕಾಂಗ್ರೆಸ್ಸನ್ನು ತ್ಯಜಿಸಿ ಅಖಿಲ ಭಾರತ ಪ್ರಜಾಪಕ್ಷವೆಂಬ ಪ್ರತ್ಯೇಕಪಕ್ಷವನ್ನು ಸ್ಥಾಪಿಸಲಿರುವರು. ಭಾರತಾದ್ಯಂತ ಅನೇಕ ಪ್ರಮುಖ ಕಾಂಗ್ರೆಸ್ಸಿನವರು ಕಾಂಗ್ರೆಸ್ಸನ್ನೂ ತ್ಯಜಿಸಿ ಈ ನೂತನ ಪಕ್ಷವನ್ನು ಸೇರುವರೆಂದು ಹೇಳಲಾಗಿದೆ. ದಕ್ಷಿಣ ಭಾರತದಲ್ಲಿ ಶ್ರೀ ಟಿ. ಪ್ರಕಾಶಂರವರು ಸ್ಥಾಪಿಸಿರುವ ಪ್ರಜಾ ಪಕ್ಷವೂ ಈ ಅಖಿಲ ಭಾರತ ಪಕ್ಷದ ಶಾಖೆಯಾಗುವುದೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿನಲ್ಲಿದ್ದು ವಿರೋಧ ಪಕ್ಷವಾಗಿ ಕೆಲಸ ಮಾಡಲು ಅಸಾಧ್ಯವೆಂದು ಕಂಡುಬಂದುದರಿಂದ ಪ್ರಜಾಸತ್ತಾತ್ಮಕ ಪಕ್ಷವನ್ನು ರೂಪುಗೊಳಿಸಲಾಯಿತೆಂದು ಆಚಾರ್ಯ ಕೃಪಲಾನಿಯವರು ಹೇಳಿಕೊಂಡಿರುವರು.

ನೂತನ ಪ್ರಜಾ ಪಕ್ಷವು ಜೂನ್ ೧೦ರಲ್ಲಿ ನಾಗಪುರದಲ್ಲಿ ಎಲ್ಲಾ ಮುಖಂಡರು ಸೇರಿದಾಗ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಕ್ರಮಬದ್ಧವಾಗಿದೆ

ಉತ್ತರಪ್ರದೇಶದಲ್ಲಿ ಜಾರಿಗೆ ಬಂದಿರುವ ಜಮೀನ್‌ದಾರಿ ರದ್ದು ಮತ್ತು ಭೂಸುಧಾರಣೆ ಶಾಸನ ಕ್ರಮಬದ್ಧವಾಗಿದೆ ಎಂದು ಅಲಹಾಬಾದ್ ಶ್ರೇಷ್ಠ ನ್ಯಾಯಾಲಯವು ತೀರ್ಮಾನವಿತ್ತಿದೆ.

ಪರಾರಿ

ಮೈಸೂರು ಜೈಲಿನಿಂದ ಅಬ್ದುಲ್ ರಹಮಾನ್ ಮತ್ತು ಮಹಮದ್ ಹುಸೇನ್ ಉರ್ಫ್ ಛೋಟಿ ಎಂಬ ಇಬ್ಬರು ಕೈದಿಗಳು ಮೊನ್ನೆರಾತ್ರಿ ಪರಾರಿಯಾಗಿರುವರು. ತಾವು ಮಲಗಿದ್ದ ಕೊಠಡಿಯ ಕಿಟಕಿಗಳನ್ನು ಮುರಿದು ಬೊಂಬಿನ ಸಹಾಯದಿಂದ ಆಚೆಗೆ ಹೊರಟುಹೋಗಿರುವರು. ಇವರು ಭಾರಿ ಕೇಡಿಗಳೆಂದು ತಿಳಿಯಬರುತ್ತದೆ.

ಬೊಂಬಾಯಿ ಗೌರ್ನರರು

ಬೆಂಗಳೂರು ಮೇ. ೧೦

ಊಟಿಗೆ ಹೋಗುವ ಪ್ರಯುಕ್ತ ಬೊಂಬಾಯಿ ಗೌರ್ನರ್ ಮಹಾರಾಜ ಸಿಂಗರವರು ತಮ್ಮ ಸಂಸಾರ ಸಮೇತ ಇಂದು ಬೆಳಿಗ್ಗೆ ೧೦-೩೦ ಗಂಟೆಗೆ ಇಲ್ಲಿಗೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂ, ಶ್ರೇಷ್ಠ ಕಾರ್ಯದರ್ಶಿ ಶ್ರೀ ಗಣಪತಿ ಅಯ್ಯರವರು ಸ್ವಾಗತಿಸಿದರು. ಸ್ವಲ್ಪಕಾಲ ವಿಶ್ರಮಿಸಿಕೊಂಡು ಗೌರ್ನರರು ಊಟಿಗೆ ತೆರಳಿದರು.

ವಿಶ್ವ ಬ್ಯಾಂಕು ಸದಸ್ಯರು

ವಿಶ್ವ ಬ್ಯಾಂಕಿನ ಎರಡು ಸದಸ್ಯರು ಭಾರತಕ್ಕೆ ಆಗಮಿಸಿರುವರು. ವ್ಯವಸಾಯ ಯಂತ್ರೋಪಕರಣ ಕೊಳ್ಳಲು ಬ್ಯಾಂಕು ೧ ಕೋಟಿ ಡಾಲರು ಸಾಲವನ್ನು ಕೊಟ್ಟಿತ್ತು.

ಶುದ್ಧ ಸುಳ್ಳು

ಭಾರತದಲ್ಲಿ ಪ್ರಸಿದ್ಧವಾದ ಸೋಮನಾಥಪುರದ ದೇವಾಲಯದ ಮಹಾದ್ವಾರಗಳು ಅಫ್ಘಾನಿಸ್ಥಾನದಲ್ಲಿದೆ ಅದಕ್ಕಾಗಿ ಭಾರತ ಅಫ್ಘಾನಿಸ್ಥಾನಗಳಿಗೆ ವ್ಯವಹಾರ ನಡೆಯುತ್ತಲಿದೆ ಎಂದು ಪಾಕೀಸ್ಥಾನ ಮಾಡುತ್ತಲಿರುವ ಪ್ರಚಾರದಲ್ಲಿ ಸತ್ಯಾಂಶವಿಲ್ಲವೆಂದು ಪಂಡಿತ ನೆಹರು ಹೇಳಿರುವರು.

ಮೆಕಾರ್ಥರ್-ರಿಡ್ಜ್‌ವೆ ಯುದ್ಧ ಪಾತಕಿಗಳು

ಜನರಲ್ ಮೆಕಾರ್ಥರ್ ಮತ್ತು ಜನರಲ್ ರಿಡ್ಜ್‌ವೆಯವರು ಉತ್ತರ ಕೊರಿಯಾ ಮೇಲೆ ಬಾಕ್ಟೀರಿಯಾ ರೋಗ ಬರುವಂತೆ ಧಾಳಿ ನಡೆಸಿರುವುದರಿಂದ ಇವರನ್ನು ಯುದ್ಧ ಪಾತಕಿಗಳಂತೆ ಪರಿಗಣಿಸಿ ವಿಚಾರಣೆ ನಡೆಸಿ ಎಂದು ಉತ್ತರ ಕೊರಿಯಾ ಸರ್ಕಾರವು ವಿಶ್ವ ಸಂಸ್ಥೆಗೆ ಕೇಬಲ್ ಕಳುಹಿಸಿದೆ.

ಶಾಂತವಾಗಿದೆ

ಬೊಂಬಾಯಿನಲ್ಲಿ ನಗರವು ಶಾಂತವಾಗಿದೆ. ಯಾವ ಹೆಚ್ಚಿನ ಘಟನೆಗಳು ನಡೆದಿಲ್ಲ ಒಂದೆಡೆಯಲ್ಲಿ ಮಾತ್ರ ಒಂದು ಇರಿತ ಪ್ರಸಂಗವು ವರದಿಯಾಗಿದೆ. ಇಂದಿನವರೆಗೆ ೨೦೫ ದಸ್ತಗಿರಿಗಳಾಗಿವೆ ಯೆಂದು ತಿಳಿಯ ಬರುತ್ತದೆ.

ಶಾಸನಸಭಾ ಸದಸ್ಯನು ಮತ್ತೊಬ್ಬನನ್ನು ಕಚ್ಚಿದ ಪ್ರಸಂಗ

ದಕ್ಷಿಣ ಕೊರಿಯಾದಲ್ಲಿ ರಾಷ್ಟ್ರೀಯ ಶಾಸನಸಭೆಯು ನಡೆಯುತ್ತಲಿದ್ದಾಗ ಒಬ್ಬ ಸದಸ್ಯನು, ವಿರೋಧಪಕ್ಷದ ಸದಸ್ಯನು ಒಂದು ಭಾಷಣವನ್ನು ಕೇಳುತ್ತಿದ್ದ ಸಮಯದಲ್ಲಿ, ಅವನ ಕೆನ್ನೆಯನ್ನು ಬಲವಾಗಿ ಕಚ್ಚಿದನು. ಸದಸ್ಯರೆಲ್ಲರೂ ಒಬ್ಬರ ಮೇಲೊಬ್ಬರು ಬಿದ್ದು ಗಲಭೆ ಪ್ರಾರಂಭವಾಯಿತು. ಅಧ್ಯಕ್ಷರು ಕೂಡಲೇ ಸಭೆಯನ್ನು ಬರಕಾಸ್ತು ಮಾಡಿ ಮುಂದುವರಿಸಿದರು. ಗಾಯಗೊಂಡವನನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು.

ಡೆಕ್ಕನ್ ಏರ್‌ವೇಸ್ ಕೇಂದ್ರ ವಹಿಸಿಕೊಳ್ಳುವುದಿಲ್ಲ

ಹೈದರಾಬಾದ್ ಸರ್ಕಾರವು ನಡೆಸುತ್ತಿರುವ ಡೆಕನ್ ಏರ್‌ವೇಸ್ ಸಂಸ್ಥೆಯನ್ನು ಕೇಂದ್ರ ಸರ್ಕಾರವು ಜೂನ್ ಒಂದನೇ ತಾರೀಖಿನಿಂದ ರಾಷ್ಟ್ರೀಕರಣ ಮಾಡಿಕೊಳ್ಳುವುದೆಂಬುದು ನಿಜವಲ್ಲ. ಈ ಸಂಸ್ಥೆಯ ಷೇರುಗಳಲ್ಲಿ ಶೇಕಡ ೭೮ ರಷ್ಟನ್ನು ಕೇಂದ್ರವು ತೆಗೆದುಕೊಳ್ಳುವುದು. ಈಗಿರುವ ಶೇ. ೧೫ ರಷ್ಟಿನ ಜೊತೆಗೆ ಇನ್ನೂ ತೆಗೆದುಕೊಳ್ಳುವುದರಿಂದ ಕಂಪೆನಿಯ ಆಡಳಿತದಲ್ಲಿ ಅದರ ಭಾಗವು ಹೆಚ್ಚುವುದೆಂದು ಕೇಂದ್ರ ಸರ್ಕಾರದ ಕಮ್ಯೂನಿಕೇಷನ್ ಕಾರ್ಯದರ್ಶಿ ಮಿ|| ಎ. ಪಿ. ಪೈರವರು ಹೇಳಿರುವರು.

ಪ್ರಧಾನಿಗಳ ಭೇಟಿ

ನೇಪಾಳ ಮುಖ್ಯ ಮಂತ್ರಿ ಮಹಾರಾಜ ಮೋಹನ ಷಂಷೇರ್ ಬಹದ್ದೂರ್ ರಾಣರವರು ನಿನ್ನೆ ಪ್ರಧಾನಿ ನೆಹ್ರೂರವರನ್ನು ಅವರ ಸ್ವಗೃಹದಲ್ಲಿ ಭೇಟಿ ಮಾಡಿದರು. ನಂತರ ಪ್ರಧಾನಿ ನೆಹ್ರೂ ಔಪಚಾರಿಕವಾಗಿ ರಾಣರ ಭೇಟಿ ನಡೆಸಿದರು.

ಭಾರತಕ್ಕೆ ಆಹಾರ

ಭಾರತಕ್ಕೆ ಚೈನಾವು ೫೦,೦೦೦ ಟನ್ ಅಕ್ಕಿಯನ್ನು ಕಳುಹಿಸಲು ಒಪ್ಪಿದೆ. ಆಸ್ಟ್ರೇಲಿಯಾವು ಭಾರತಕ್ಕೆ ೫೦೦೦೦ ಟನ್ ಗೋಧಿಯನ್ನು ಕಳುಹಿಸಲಿದೆ.

ಅಮೆರಿಕಾದಿಂದ ಭಾರತಕ್ಕೆ ಆಹಾರ

ಅಮೆರಿಕಾ ಭಾರತಕ್ಕೆ ೨೦ ಲಕ್ಷ ಟನ್ ಆಹಾರ ಸರಬರಾಯಿಯ ವಿಷಯವಾಗಿ ಭಾರತಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಎಲ್ಲಾ ರಾಷ್ಟ್ರಗಳಿಗೂ ಆಹಾರ ಸರಬರಾಯಿ ಮಾಡುವಾಗ ಇರುವ ನಿಬಂಧನೆಗಳಿಗೆ ನಾವು ಒಳಗಾಗುವೆವು. ಆದರೆ ಅಮೆರಿಕಾ ಕೇಳಿದ ಸಾಮಾನೆಲ್ಲಾ ನಾವು ಕೊಡಲು ಸಿದ್ಧವಿಲ್ಲ. ಆಹಾರ ಸರಬರಾಜಿಗೂ ರಾಜಕೀಯಕ್ಕೂ ಯಾವ ಸಂಬಂಧವನ್ನು ಕಲ್ಪಿಸಕೂಡದು. ನಮ್ಮಲ್ಲಿ ದೊರೆಯುವ ಕೊಡಬಹುದಾದ ಸಾಮಾನುಗಳನ್ನು ನಾವು ಅಮೆರಿಕಾಕ್ಕೆ ಕೊಡಲು ಸಿದ್ಧರಿದ್ದೇವೆ. ಆದರೆ ಅಣುಶಕ್ತಿಗೆ ಸಂಬಂಧಪಟ್ಟ ಯಾವ ವಸ್ತುಗಳನ್ನು ನಾವು ಯಾವ ರಾಷ್ಟ್ರಕ್ಕೂ ಕೊಡಲು ಸಿದ್ಧವಿಲ್ಲ. ಅಮೆರಿಕಾ ಸರ್ಕಾರ ಮತ್ತು ಜನತೆಯು ಭಾರತಕ್ಕೆ ಆಹಾರವನ್ನು ಒದಗಿಸಲೆಸಗುತ್ತಿರುವ ಪ್ರಯತ್ನಕ್ಕಾಗಿ ನಾವು ಕೃತಜ್ಞರಾಗಿದ್ದೇವೆಂದು ಹೇಳಿರುವರು.

ರಷ್ಯಾ ಗೋಧಿ ಭಾರತಕ್ಕೆ

ರಷ್ಯಾವು ಭಾರತಕ್ಕೆ ೫೦,೦೦೦ ಟನ್ ಗೋಧಿಯನ್ನು ಸರಬರಾಯಿ ಮಾಡಲು ಒಪ್ಪಂದವಾಗಿದೆ. ಸರಬರಾಜು ಈಗಾಗಲೇ ಅಲ್ಲಿಂದ ಹೊರಟಿದೆ. ಜುಲೈ ಅಂತ್ಯದವರೇಳಿಗೆ ಗೋಧಿಯೆಲ್ಲವೂ ಭಾರತಕ್ಕೆ ಬರಲಿದೆ. ರಷ್ಯಾವು ಭಾರತಕ್ಕೆ ಕೊಡುವುದಾಗಿ ಹೇಳಿರುವ ೧ ಲಕ್ಷ ಟನ್ ಆಹಾರ ವ್ಯವಹಾರಕ್ಕೆ ಇದು ಸಂಬಂಧಿಸಿದೆ.

ವುಡ್‌ಲ್ಯಾಂಡ್ಸ್

ದಿನವಹಿ ೩ ಆಟಗಳು

ತಾ|| ೧೧—೫—೫೧ರಿಂದ

ಬಿರ್ಹಾಕಿರಾತ್

ಪಾತ್ರ—ನರ್ಗೀಸ್, ದೇವಾನಂದ್

ಆಹಾರಕಾನೂನು ಉಲ್ಲಂಘನಾಪರಾಧಗಳು

ಮೈಸೂರು ನಗರದಲ್ಲಿ ಏಪ್ರಿಲ್ ೧೫ರ ವರೆಗೆ

ಸರ್ಕಾರಕ್ಕೆ ಸೇರಿದ ೨೫ ಗೋಣಿಚೀಲಗಳನ್ನು ಮಾರಿದ್ದಕ್ಕೆ ೩ನೇ ಡಿವಿಜನ್ನಿನ ಲೈಸನ್ಸ್‌ದಾರರೊಬ್ಬರಿಗೆ ೫೦ ರೂ ಜುಲ್ಮಾನೆ ವಿಧಿಸಿ ಚೀಲಗಳನ್ನೆಲ್ಲಾ ವಶಪಡಿಸಿಕೊಳ್ಳಲಾಗಿದೆ.

ರಹದಾರಿಯಿಲ್ಲದೆ ಅಕ್ಕಿ ಸಾಗಿಸುತ್ತಲಿದ್ದುದಕ್ಕೆ ೭ ಜನರಿಗೆ ೧೫ ರಿಂದ ೩೫ ರೂ. ಗಳ ವರೆಗೆ ಜುಲ್ಮಾನೆ, ಕೋರ್ಟ್ ಏಳುವವರೆಗೆ ಸಜಾ ವಿಧಿಸಲಾಗಿದೆ,

ಲೈಸನ್ಸಿಲ್ಲದೆ ಹೊಟೇಲು ನಡೆಸುತ್ತಲಿದ್ದುದಕ್ಕೆ ಒಬ್ಬನಿಗೆ ೨೫ ರೂ. ಜುಲ್ಮಾನೆ ಕೋರ್ಟ್ ಏಳುವವರೆಗೆ ಸಜಾ ವಿಧಿಸಲಾಗಿದೆ.

ಗೋಮಟೇಶ್ವರ ವಿಗ್ರಹ ಸಂರಕ್ಷಣೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾದ ಶ್ರವಣಬೆಳಗೊಳದ ಗೋಮಟೇಶ್ವರವಿಗ್ರಹವು ಅಪಘಾತಕ್ಕೆ ಸಿಕ್ಕಿಕೊಂಡ ಚಿಹ್ನೆಗಳು ಕಾಣಬರುತ್ತಿವೆ. ಅನೇಕ ಬಿರುಕುಗಳು ಸ್ಪಷ್ಟವಾಗಿ ಕಾಣಬರುತ್ತಲಿವೆ.

ಬಲಕಾಲಿನ ಹೊರಗಿನ ಕಣಿವೆಯಲ್ಲಿ ೧೦ ಅಡಿ ಉದ್ದದ ಸಣ್ಣ ಬಿರುಕು, ಬಲ ತೋಳು ಬೆರಳಿನ ಮೇಲೆ ಒಂದೂವರೆ ಅಡಿ ಉದ್ದದ ಬಿರುಕು, ಬಲಕಣ್ಣಿನ ಕೆಳಗೆ ಎರಡು ಸಣ್ಣ ಬಿರುಕುಗಳು, ಮೂಗಿನ ಬಲ ಹೊಳ್ಳೆಯ ಕೆಳಗೆ ಒಂದು ಬಿರುಕು ಮೊದಲಾಗಿ ಕಾಣಬರುತ್ತಲಿವೆ. ವಿಗ್ರಹದ ರಕ್ಷಣಾ ಕೆಲಸಗಳು ತ್ವರಿತವಾಗಿ ನಡೆಯುತ್ತಲಿವೆ.

ಗಿರಣಿ ಆಡಳಿತಗಾರರಿಗೆ ಜುಲ್ಮಾನೆ

ಬಾಂಬೆಯ ಲೋಕಮಾನ್ಯ ಗಿರಣಿಯ ಆಡಳಿತಗಾರರು ತಮ್ಮ ಕಾಮಗಾರರನ್ನು ರಜಾ ದಿನಗಳಲ್ಲಿ ಕೆಲಸ ಮಾಡಿದ್ದಕ್ಕೆ ಸಂಬಳ ಕೊಡದಿರಲು ಕಾರ್ಮಿಕ ನ್ಯಾಯಾಲಯವು ೧೦೦೦ ರೂಪಾಯಿ ಜುಲ್ಮಾನೆ ವಿಧಿಸಿದೆ.

ಸಿನಿಮಾಮಂದಿರಗಳಿಗೆ ಕಾಲ ನಿರ್ದಿಷ್ಟ

ಷಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಕಾನೂನುರೀತ್ಯಾ ಮೇ ೧೫ನೇ ತಾ|| ನಿಂದ ಬೆಂಗಳೂರು, ಮೈಸೂರು, ಕೆ. ಜಿ. ಎಫ್ ನಗರ ಮತ್ತು ಶಿವಮೊಗ್ಗಾ, ಚಿಕ್ಕಮಗಳೂರು ಟವುನ್‌ಗಳ ಥಿಯೇಟರುಗಳು, ಅಥವಾ ವಿನೋದ ಪ್ರದರ್ಶಗಳನ್ನು ಪ್ರಾತಃಕಾಲ ೯ ಗಂಟೆಯ ಮುನ್ನ ತೆರೆಯಬಾರದು, ರಾತ್ರಿ ೧೧ ಗಂಟೆಗೆ ಮುನ್ನ ಮುಚ್ಚಲಾಗದೆಂದು ಸರ್ಕಾರಿ ಆಜ್ಞೆಯಾಗಿದೆ.

ಹೊಟೇಲುಗಳಿಗೆ-ಕಾಲ ನಿರ್ದಿಷ್ಟ

ಷಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟು ಕಾನೂನುರೀತ್ಯಾ ಮೇ ೧೫ನೇ ತಾರೀಖಿನಿಂದ ಮೈಸೂರು, ಬೆಂಗಳೂರು, ಕೆ. ಜಿ. ಎಫ್ ನಗರ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಟವುನ್‌ಗಳಲ್ಲಿರುವ ಉಪಹಾರ ಅಥವಾ ಊಟದ ಮಂದಿರಗಳು ಪ್ರಾತಃಕಾಲ ೫ ಗಂಟೆ ಮುನ್ನ ತೆರೆಯಕೂಡದು, ರಾತ್ರಿ ೧೦ಕ್ಕೆ ಮುನ್ನ ಮುಚ್ಚಲಾಗದೆಂದು ಸರ್ಕಾರಿ ಆಜ್ಞೆ ಮಾಡಿದೆ.

ಭಾರತ ಸೇವಾದಳ

೯ ೫ ೫೧ನೇ ತಾ|| ಭಾರತ ಸೇವಾದಳದ ಮಹಿಳಾ ಶಿಬಿರದಲ್ಲಿ ಪೌರಸಭೆಯ ಕಮಿಷನರಾದ ಸಿ. ನರಸಿಂಹಮೂರ್ತಿಗಳು ಧ್ವಜಾರೋಹಣ ಮಾಡಿದರು. ಮಹಾತ್ಮಾಜಿಯವರ ಆಪ್ತರಾದ ಶ್ರೀ ಮಧುರದಾಸರು ಶಿಬಿರಕ್ಕೆ ಭೇಟಿಕೊಟ್ಟು ಭಾರತದ ಸ್ತ್ರೀಯರ ಮಹತ್ವ ಅವರು ದೇಶಕ್ಕೆ ಸಲ್ಲಿಸಬೇಕಾದ ಸೇವೆ ಮತ್ತು ಆಹಾರ, ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸುವ ವಿಷಯವಾಗಿ ಭಾಷಣಮಾಡಿದರು.

ಭಾರತ ಸೇವಾದಳದ ದಳಪತಿಗಳಾದ ಶ್ರೀ ವಿ. ಎಸ್. ಎ. ರಾಮಚಾರಿಯರು ವಿ. ಎಸ್. ಎ. ಇತಿಹಾಸವನ್ನು ಶಿಬಿರವಾಸಿಗಳಿಗೆ ಪರಿಚಯ ಮಾಡಿಕೊಟ್ಟರು.

ಈ ದಿವಸ (೧೦-೫-೫೧) ಬೆಳಗ್ಗೆ ಪತ್ರಿಕೋದ್ಯೋಗಿಗಳಾದ ಶ್ರೀ ಎಚ್. ಕೆ. ಕುಮಾರಸ್ವಾಮಿಗಳು ಧ್ವಜಾರೋಹಣ ಮಾಡಿದರು

ಸುಪ್ರೀಂ ಕೋರ್ಟ್ ರಜಾ

ಭಾರತ ಶ್ರೇಷ್ಠ ನ್ಯಾಯಾಲಯಕ್ಕೆ ಮೇ ೭ರಿಂದ ಸಪ್ಟಂಬರ್ ೧೦ರ ವರೆಗೆ ರಜಾ.

ಈ ರಜಾ ಕಾಲದಲ್ಲಿ ತುರ್ತಾದ ವ್ಯವಹಾರಗಳನ್ನು ನ್ಯಾಯಮೂರ್ತಿಗಳಾದ ಮೆಹರ್‌ಚಂದ್ ಮಹಾಜನ ಅಥವಾ ವಿವಿಯನ್ ಬೋಸ್‌ರವರು ಪರಿಶೀಲಿಸುವರು.

ರಜಾ

ಸರ್ಕಾರದ ವಿದ್ಯಾಶಾಖಾ ಕಾರ್ಯದರ್ಶಿ ಶ್ರೀ ಎ ಸಿ, ನಿರ್ವಾಣಿಗೌಡರಿಗೆ ನಿನ್ನೆಯಿಂದ ೨೫ ದಿನಗಳ ರಜಾ ಮಂಜೂರಾಗಿದೆ. ಸ್ಥಳೀಯ ಸಂಸ್ಥೆಗಳ ಶಾಖಾ ಸಚಿವರು ತಮ್ಮ ಕೆಲಸದ ಜೊತೆಗೆ ವಿದ್ಯಾಶಾಖಾ ಕೆಲಸವನ್ನು ನೋಡಿಕೊಳ್ಳುವರು.

ಕರ್ನಾಟಕ ಏಕೀಕರಣ ಸಮ್ಮೇಳನ

ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವು ಇದೇ ಮಾಹೇ ೨೫, ೨೬ನೇ ತಾರೀಖುಗಳಲ್ಲಿ ಮಂಗಳೂರಿನ ಶ್ರೀ ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬಿಳಿ ಕಾಗೆಗಳು

ಬೊಂಬಾಯಿ ಮತ್ತು ಭಾರತದ ಅನೇಕ ಕಡೆಗಳಲ್ಲಿ ಶ್ವೇತ ಕಾಗೆಗಳು ಕಾಣಬಂದಿವೆ. ಇದನ್ನು ವಿಜ್ಞಾನಿಗಳು 'ಆಲ್ಬಿನಾಸ್' ಎಂದು ಕರೆಯುವರು.

ಚೈನಾಕ್ಕೆ ಸಿಂಹಳದಿಂದ ರಬ್ಬರ್

ರಬ್ಬರ್ ಸ . . .ಗ ನ್ನು ಚೈನಾಕ್ಕೆ ಸರಬರಾಯಿ ಮಾಡಕೂಡದೆಂದು ಬ್ರಿಟನ್ ಅಮೆರಿಕಾ, ಹವಣಿಸುತ್ತಲಿದ್ದಾಗ್ಯೂ ಸಿಂಹಳವು ಚೈನಾ. ರಷ್ಯಾಗಳಿಗೆ ರಬ್ಬರ್ ಕಳಿಸಲು ರಹದಾರಿ ಕೇಳಿದಲ್ಲಿ ಯಾವ ಅಡಚಣೆಯು ಇಲ್ಲದೆ ಕೊಡಲಾಗುವುದು ಎಂದು ಸಿಂಹಳ ಸರ್ಕಾರಿ ವಕ್ತಾರರೊಬ್ಬರು ಹೇಳಿರುವರು.

ಪೆಟ್ರೋಲ್ ರೇಷನ್ ಇಲ್ಲ

ಅಮೆರಿಕಾ ಮತ್ತು ಕ್ಯೂಬಾಗಳಿಂದ ಭಾರತಕ್ಕೆ ತಕ್ಕಷ್ಟು ಪೆಟ್ರೋಲ್ ಬರಲಿದೆ. ಈಗಿರುವ ದಾಸ್ತಾನು ಇನ್ನೂ ೬ ತಿಂಗಳ ಕಾಲ ಬರುವುದು ಕೆಲವು ಕಡೆ ಸಾಕಾಣಿಕೆಯ ತೊಂದರೆಗಳಿಂದ ಸ್ವಲ್ಪ ಅಭಾವ ಕಾಣಬಂದಿತು. ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿಯ ಮುಷ್ಕರದಿಂದ ಭಾರತಕ್ಕೆ ಬರಲಿರುವ ಪೆಟ್ರೋಲಿಯಂ ವಸ್ತುಗಳಿಗೆ ಏನೂ ತೊಂದರೆಯಿಲ್ಲ. ಈಗಾಗಲೇ ಆ ಮುಷ್ಕರವೂ ಮುಕ್ತಾಯವಾಗಿದೆ.

ಅಂತರರಾಷ್ಟ್ರೀಯ ಪರಿಸ್ಥಿತಿಯು ಹದಗೆಟ್ಟರೆ ಆಗ ರೇಷನ್ . . .ವ ವಿಷಯವನ್ನು ಪರಿಗಣಿಸಬೇಕಾಗುವುದು. ಅಂತಹ ಪರಿಸ್ಥಿತಿ ಬಂದರೂ ಸರ್ಕಾರವು ಎದುರಿಸಲು ಸಿದ್ಧವಿದೆಯೆಂದು ಹೇಳಲಾಗಿದೆ.

ವಿಮಾನಗಳ ಡಿಕ್ಕಿ

ಎರಡು ಯುದ್ಧ ವಿಮಾನಗಳು ಹನ್ಸಾನ್ ಬಳಿ ಡಿಕ್ಕಿ ಹೊಡೆದವು. ಮೂವರು ಸತ್ತರು, ಒಬ್ಬನು ಪ್ಯಾರಚೂಟಿನಿಂದ ಸುರಕ್ಷಿತವಾಗಿ ಕೆಳಕ್ಕಿಳಿದನು.

ಅಪರಾಧಿಗೆ ವೈದ್ಯ ಚಿಕಿತ್ಸೆ ಕೊಡಿಸದಿದ್ದುದಕ್ಕಾಗಿ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ

ವೇಮುಲದೇವಿ ಧಾಳಿ ಮೊಕದ್ದಮೆಗೆ ಸಂಬಂಧಪಟ್ಟಂತೆ ಗಸ್ತಗಿರಿಯಾದ ಸಿ. ಸೂರ್ಯನಾರಾಯಣರಾಜು ಎಂಬುವವರಿಗೆ ಟೈಫಾಯಿಡ್ ಬಂದಾಗ ಸರಿಯಾದ ವೈದ್ಯ ಚಿಕಿತ್ಸೆ ನಡೆಯಿಸದಿದ್ದುದರಿಂದ ಅವರು ಸತ್ತುಹೋದರು. ಸರ್ಕಾರದ ಗೃಹ ಶಾಖೆಯ ಆಪಾದನೆ ಮೇಲೆ ನರಸಾಪುರದ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರು ಮತ್ತು ಸಬ್ ಇನ್‌ಸ್ಪೆಕ್ಟರುಗಳನ್ನು ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರು ಸಸ್ಪೆಂಡು ಮಾಡಿ ತನಿಖೆ ನಡೆಸುತ್ತಲಿದ್ದಾರೆ.

ಹೈದ್ರಾಬಾದು ಕಾಂಗ್ರೆಸ್ಸಿನ ನಿರಾಕರಣೆ

ಹೈದ್ರಾಬಾದಿನ ಮಂತ್ರಿ ಮಂಡಲವನ್ನು ವಿಸ್ತರಿಸಿ ೨-೩ ಕಾಂಗ್ರೆಸಿಗರಿಗೆ ಸ್ಥಾನವನ್ನು ಕೊಟ್ಟು ಈಗ ಕಾಂಗ್ರೆಸ್ಸು ಪಕ್ಷದ ಸಚಿವರುಗಳಿಗಿರುವ ಇಲಾಖೆಯನ್ನು ಅವರಿಗೆ ಹಂಚುವಂತೆ ಕೇಂದ್ರ ವಿತ್ತ ಸಲಹೆಯನ್ನು ಹೈದ್ರಾಬಾದು ಕಾಂಗ್ರೆಸ್ ನಿರಾಕರಿಸಿದೆ ಕಾಂಗ್ರೆಸ್ಸು ಸಚಿವರಿಗೆ ಇನ್ನೂ ಹೆಚ್ಚಿಗೆ ಅಧಿಕಾರಬೇಕೆಂಬುದೇ ಅವರ ಬೇಡಿಕೆ. ವಿಷಯ ಪುನಃ ಪರಿಶೀಲನೆಯಲ್ಲಿದೆ.

* ಪ್ರಭಾ *

೧೧—೫—೫೧ರಿಂದ

೨ನೇ ವಾರ

ದಿನವಹಿ ೪ ಆಟಗಳು

ಎನ್. ಎಫ್. ಐ. ರವರ—

ಕಾಲೀಬಾದಲ್

(ಕಾರ್ಮುಗಿಲು)

ಅಭಿನಯ—ನಿಗಾರ, ಪುಷ್ಪಹಸ್ಸ, ಶ್ಯಾಂ, ಗೋಪ್, ಜೀವನ್ ಬೇಬಿತಬ್ ಸುಂ.

ರಣಜಿತ್

೧೧—೫—೫೧ರಿಂದ

-:: ಸಗಾಯಿ ::-

ಪಾತ್ರ—ರೆಹನ, ಪ್ರೇಂನಾಥ್, ಯಾಕೂಬ್, ಗೋಪ್

ಒಲಿಂಪಿಯಾ ಟಾಕೀಸ್

೧೦—೫—೫೧ರಿಂದ ಪ್ರತಿದಿನ ೪ ಪ್ರದರ್ಶನಗಳು

ಉತ್ತಮ ಸಂಗೀತ ಮತ್ತು ನವೀನರೀತಿಯ ನೃತ್ಯಗಳಿಂದ ಕೂಡಿದ

ಸುಧಾ ಪಿಕ್ಚರ್ಸ್ ರವರ ಹಿಂದಿಚಿತ್ರ * ಸಂಗೀತ *

ಪಾತ್ರ— ನಿಗಾರ್, ಮುಮ್ತಾಜ್‌ಅಲಿ, ಪ್ರಾಣ್,

ಅಕಾಲ ಮೃತ್ಯುವಿಗೆ ತುತ್ತಾದ ಸುಪ್ರಸಿದ್ಧ ನಟ ಶ್ಯಾಂ

ಸಂಗೀತ ಸಿ ರಾಮಚಂದ್ರ, ಕಥೆ ಮತ್ತು ಹಾಡುಗಳು ಸಂತೋಷಿ,

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ-ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈ ಸೂ ರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್-ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨—೫—೧೯೫೧ನೇ ಶನಿವಾರ [ಸಂಚಿಕೆ ೨೦೬

ಮಕ್ಕಳ ಉದಾರತ್ವ

—ವಾರಕೊಮ್ಮೆ ಉಪವಾಸ ಎಂದು ಪ್ರಧಾನಿ ನೆಹರೂರವರ ಪ್ರಾರ್ಥನೆಯನ್ನು ಮನ್ನಿಸಿ ದೆಹಲಿಯಲ್ಲಿ ೭ರಿಂದ ೧೪ ವರ್ಷ ವಯಸ್ಸಿನ ಮಕ್ಕಳು ವಾರಕೊಮ್ಮೆ ಉಪವಾಸ ಮಾಡಿ, ಉಳಿದ ಆಹಾರವನ್ನು ಮದರಾಸು, ಬಿಹಾರ, ಜನಗಳಿಗೆ ಕಳುಹಿಸಲು ನಿರ್ಧರಿಸಿವೆ.

ಶ್ರೀ ಜಿ. ಬಿ. ಮಲ್ಲಾರಾಧ್ಯರವರು

ಸ್ವ. ಸು. ಬೆಂಗಳೂರು ಮೇ ೧೧

ಕೇಂದ್ರ ಯೋಜನಾ ಮಂಡಲಿಯ ವರೊಡನೆ ಮಾತು ಕಥೆ ನಡೆಸಲು ಮೈಸೂರು ಸರ್ಕಾರದ ಪರವಾಗಿ ಶ್ರೀ ಜಿ. ಬಿ. ಮಲ್ಲಾರಾಧ್ಯರನ್ನು ಸರ್ಕಾರವು ದೆಹಲಿಗೆ ಕಳುಹಿಸಲಿದೆ.

ಇಲಾಖಾ ಮುಖ್ಯಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ

ಸ್ವ. ಸು.] ಬೆಂಗಳೂರು ಮೇ ೧೧

ಸರ್ಕಾರದ ಆಡಳಿತದಲ್ಲಿ ಮಾಡಬೇಕಾಗಿರುವ ಬದಲಾವಣೆಗಳನ್ನು ಸೂಚಿಸುವಂತೆ ಮೈಸೂರು ಸರ್ಕಾರವು ಶ್ರೀನಿವಾಸ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಿತು.

ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೊಪ್ಪಿಸಿದೆ.

ನಾನ್ ಗೆಜೆಟೆಡ್ ಅಧಿಕಾರಿಗಳ ನೇಮಕ, ವರ್ಗ, ರಜಾ, ಪೆನ್‌ಷನ್ ಎಕ್ಸ್‌ಟೆನ್‌ಷನ್ ಮುಂತಾದುವನ್ನೆಲ್ಲಾ ಇನ್ನು ಮುಂದೆ ಇಲಾಖಾ ಮುಖ್ಯಾಧಿಕಾರಿಗಳಿಗೆ ವಹಿಸಬೇಕು. ಗೆಜೆಟೆಡ್ ಅಧಿಕಾರಿಗಳಾದ ಅಮಲ್ದಾರ್, ಹೆಲ್ತ್ ಆಫೀಸರು ಮುಂತಾದವರ ರಜಾ ಮಂಜೂರಾತಿ ವರ್ಗ ಮುಂತಾದುವನ್ನು ಅವರೇ ಮಾಡತಕ್ಕದ್ದು, ಇಲಾಖಾ ಕಛೇರಿಗಳ, ಸೆಕ್ರೆಟರಿಯೇಟ್ ಕಛೇರಿಗಳ ನೌಕರರಿಗೆ ಶಿಕ್ಷಣಕೊಡಲು ಆಡಳಿತಗಾರರ ಶಿಕ್ಷಣ ಶಾಲೆಯೊಂದನ್ನು ಸ್ಥಾಪಿಸಬೇಕೆಂದು ಸಲಹೆಯಿತ್ತಿದೆ.

ವಿವಾಹ

ಮೈಸೂರಿನ ಆರ್ಥಿಕಾಭಿವೃದ್ಧಿ ಮತ್ತು ಯೋಜನಾ ಕಮಿಷನರಾದ ಶ್ರೀ ಜಿ. ಬಿ. ಮಲ್ಲಾರಾಧ್ಯರ ಪುತ್ರಿ ಚಿ|| ಸೌ|| ಚಂದ್ರಮ್ಮ ಮತ್ತು ಶಿವಮೊಗ್ಗಾ ಜಿಲ್ಲಾ ವೈದ್ಯಾಧಿಕಾರಿ ಡಾ|| ಎ. ಬಿ. ರೇಣುಕರವರ ಪುತ್ರ ಚಿ|| ರಾ|| ಆನಂದಕುಮಾರ್ ಇವರ ವಿವಾಹವು ಗುರುವಾರದ ದಿನ ಮೈಸೂರಿನ ಮಹಾರಾಜಾ ಛತ್ರದಲ್ಲಿ ವಿಜೃಂಭಣೆಯಿಂದ ನೆರವೇರಿತು. ನಿನ್ನೆ ಸಂಜೆ ಬಂಧು ಮಿತ್ರರು ನಗರದ ಗಣ್ಯಮಹನೀಯರು, ಅಧಿಕಾರಿಗಳು ಆಹ್ವಾನಿತರಾಗಿದ್ದು ವಧೂವರರನ್ನು ಆಶೀರ್ವದಿಸಿದರು.

ರಾಷ್ಟ್ರೀಯ ಹೆದ್ದಾರಿಗಳ ರಿಪೇರಿ

ಭಾರತಾದ್ಯಂತ ಇದುವರೆಗೂ ರಾಷ್ಟ್ರೀಯ ಹೆದ್ದಾರಿಗಳನ್ನು ರಿಪೇರಿ ಮಾಡಲು ೬ ಕೋಟಿ ರೂ. ಖರ್ಚಾಗಿದೆ. ಹೊಸದಾಗಿ ೧೫೦ ಮೈಲಿ ರಸ್ತೆ ನಿರ್ಮಾಣ ೧೫೦೦ ಮೈಲಿ ರಸ್ತೆ ರಿಪೇರಿ, ಮತ್ತು ೫೧ ಸೇತುವೆಗಳ ನಿರ್ಮಾಣ ಕಾರ್ಯಗಳು ನಡೆಯುತ್ತಲಿವೆ.

ಸೋಮನಾಥ ದೇವಾಲಯ ಪುನರುದ್ಧಾರ

ಸಹಸ್ರಾರು ವರ್ಷಗಳ ಕಾಲ ಆಚ್ಛಾದನವಾಗಿದ್ದ ಸೌರಾಷ್ಟ್ರದ ಪ್ರಭಾಸ ಪಟ್ಟಣದಲ್ಲಿಯ ಸೋಮನಾಥ ಜ್ಯೋತಿರ್ಲಿಂಗ ಪ್ರತಿಷ್ಠಾಪನಾ ಸಮಾರಂಭವು ನಿನ್ನೆ ಪ್ರಾರಂಭವಾಯಿತು. ಇದರಲ್ಲಿ ಭಾಗವಹಿಸಲು ಸಹಸ್ರಾರು ಜನರು ದೇಶದ ನಾನಾಭಾಗಗಳಿಂದ ಪ್ರವಾಹದೋಪಾದಿಯಲ್ಲಿ ಅಲ್ಲಿಗೆ ಹೋಗಿ ಸೇರುತ್ತಲಿರುವರು.

ಅಲ್ಲಿಗೆ ಹೋಗಲು ಸರ್ಕಾರವು ವಿಶೇಷ ಸೌಕರ್ಯಗಳನ್ನೇರ್ಪಡಿಸಿದೆ.

ಎರಡು ಸಹಸ್ರ ವರ್ಷಗಳ ಹಿಂದೆ ಮಹಮದೀಯರ ಧಾಳಿಗೆ ಸಿಕ್ಕಿ ಈ ದೇವಸ್ಥಾನವೆಲ್ಲವೂ ವೈಭವವಿಹೀನವಾಗಿ ಪಾಳು ಬಿದ್ದಿದ್ದಿತು,

ಭಾರತದ ಇಬ್ಭಾಗವಾದನಂತರ ಜುನಾಘಡದ ನವಾಬರು ಪಾಕಿಸ್ತಾನಕ್ಕೆ ತಾವು ಸೇರುವುದಾಗಿ ತಿಳಿಸಿದಾಗ ಜನರು ವಿರೋಧಿಸಿದರು. ೧೯೪೮ ರಲ್ಲಿ ಭಾರತಸೇನೆ ಜುನಾಘಡ್ ಪ್ರವೇಶಿಸಿತು.

ಜುನಾಘಡವು ಭಾರತ ಆಡಳಿತಕ್ಕೆ ಸೇರಿದ ಕೆಲವು ದಿನಗಳಲ್ಲಿಯೇ ದೇವಸ್ಥಾನವನ್ನು ಪುನರುದ್ಧಾರ ಮಾಡಬೇಕೆಂಬ ಬಯಕೆ ಸರ್ದಾರ್ ಪಟೇಲರಲ್ಲಿ ಮೂಡಿತು. ಇದಕ್ಕೆ ಕಾಕಾ ಸಾಹೇಬ ಗಾಡ್ಗಿಲರು ಕಾರಣ ಕರ್ತರು ಅವರೇ ಸರ್ದಾರರ ಮನಸನ್ನು ಆತ್ತ ಎಳೆದರು. ಪುನರುದ್ಧಾರಕ್ಕಾಗಿ ಒಂದು ಲಕ್ಷ ರೂ ದಾನ ವಿತ್ತರು. ಎಲ್ಲಾ ಜನರೂ ಆಶ್ಚರ್ಯ, ಆನಂದ ಪರವಶರಾಗಿ ಒಂದೇ ದಿನದಲ್ಲಿ ಒಂದಾಷ್ಟಣವು ಬರಲಾರಂಭಿಸಿತು. ಅನೇಕರು ಟೆಲಿಗ್ರಾಂಗಳ ಮೂಲಕ ಕಳುಹಿಸಿದರು. ಪುನರ್ನಿರ್ಮಾಣ ಯೋಜನೆ ತಯಾರಾಗುವುದರೊಳಗಾಗಿ ಲಕ್ಷಾಂತರ ರೂಪಾಯಿ ಸೇರಿತು.

ಈಗಾಗಲೇ ಅಸಂಖ್ಯಾತ ಹಣವು ಸಂಗ್ರಹವಾಗಿದೆ. ದೇವಾಲಯ ನಿರ್ಮಾಣ ಕಾರ್ಯವು ೨-೩ ವರ್ಷ ತೆಗೆದುಕೊಳ್ಳುವದು,

ದೇಶದ ನಾನಾ ಭಾಗಗಳಿಂದ ವೈದೀಕ ಜನರು ಇಲ್ಲಿಗಾಗಮಿಸಿ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪನಾ ಕಾರ್ಯವು ನೆರವೇರಿತು.

ಈ ಸಮಾರಂಭದ ಸಂದರ್ಭದಲ್ಲಿ ರಾಷ್ಟ್ರಪತಿ ರಾಜೇಂದ್ರಪ್ರಸಾದರು ಮಾತನಾಡುತ್ತಾ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯೂ ಭಾರತದ ಸಂಸ್ಕೃತಿಗೆ ಸಂಬಂಧಪಟ್ಟ ಈ ಪುರಾತನ ದೇವಾಲಯ ಪುನರುದ್ಧಾರಕ್ಕಾಗಿ ತನ್ನ ಸಹಕಾರವನ್ನು ನೀಡಬೇಕೆಂದು ಹೇಳಿದರು

ಮೈಸೂರು ಮಂತ್ರಿಮಂಡಲ ಬದಲಾವಣೆ ಒಂದು ವಾರದಲ್ಲಿ ಇತ್ಯರ್ಥ

ಸ್ವ. ಸು. (ಫೋನ್) ಬೆಂಗಳೂರು ಮೇ ೧೧

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಪತ್ರಿಕಾ ಪ್ರತಿನಿಧಿಗಳು ಈದಿನ ಭೇಟಿಮಾಡಿ ಮಂತ್ರಿಮಂಡಲದ ಬದಲಾವಣೆ ವಿಷಯವಾಗಿ ಪ್ರಶ್ನಿಸಲಾಗಿ ಇನ್ನು ಒಂದು ವಾರದೊಳಗಾಗಿ ಮಂತ್ರಿಮಂಡಲದ ಪುನಃಚಿತ್ರವನ್ನು ನಿಮ್ಮ ಮುಂದಿಡುವೆವು. ಮಂತ್ರಿಮಂಡಲದಲ್ಲಿ ಸ್ಥಾನವಾವುದೂ ಖಾಲಿಯಿಲ್ಲ ಎಂದು ಹೇಳಿದರು.

ವಿಶ್ವವಿದ್ಯಾನಿಲಯಕ್ಕೆ ಉಚಿತ ನಿವೇಶನ

ರಾಜಾಸ್ಥಾನ ವಿಶ್ವವಿದ್ಯಾನಿಲಯದ ಕಟ್ಟಡಕ್ಕಾಗಿ ಜೈಪುರದಲ್ಲಿ ಸರ್ಕಾರವು ೨೦ ಎಕರೆ ಭೂಮಿಯನ್ನು ಉಚಿತವಾಗಿ ಕೊಟ್ಟಿದೆ.

ವರಮಾನ ತೆರಿಗೆ ಅಧಿಕಾರಿಗಳ ಸಭೆ

ಬಾಕಿ ಉಳಿದಿರುವ ವರಮಾನ ತೆರಿಗೆಯನ್ನು ವಸೂಲ್ ಮಾಡಲು ವರಮಾನ ತೆರಿಗೆ ಅಧಿಕಾರಿಗಳು ಇಂದು ದೆಹಲಿಯಲ್ಲಿ ಸಭೆ ಸೇರಿ ಚರ್ಚಿಸುವರು.

ವ್ಯವಸಾಯ ಪ್ರವೀಣರು

ವಿಶ್ವಸಂಸ್ಥೆಯ ವ್ಯವಸಾಯಾಭಿವೃದ್ಧಿ ಸಂಘದಿಂದ ಭಾರತದ ರೈತರಿಗೆ ವ್ಯವಸಾಯ ಕ್ರಮದಲ್ಲಿ ಹೆಚ್ಚಿಗೆ ತರಬೇತು ಕೊಡಲು ವ್ಯವಸಾಯ ಪ್ರವೀಣರು ಭಾರತಕ್ಕೆ ಬರಲಿರುವರು.

ಕೇಂದ್ರದ ಸಹಾಯ

ತಿರುವಾಂಕೂರಿನಲ್ಲಿ ನಾರಿನ ಕೈಗಾರಿಕೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ೫೦ ಲಕ್ಷ ರೂಪಾಯಿಗಳನ್ನು ಕೊಡಲಿದೆ.

ಪೋಲೀಸ್ ಇನ್ಸ್‌ಪೆಕ್ಟರಿಗೆ ಬಡ್ತಿ

ಸ್ವ ಸು ಫೋನ್] ಬೆಂಗಳೂರು ಮೇ ೧೧

ಪೋಲೀಸ್ ಇನ್‌ಸ್ಪೆಕ್ಟರು ಶ್ರೀಗಳಾದ ಕೆ. ಹನುಮಂತರಾವ್ ಮತ್ತು ಹೆಚ್. ಪಿ. ದೇವಯ್ಯನವರನ್ನು ಅಸಿಸ್ಟೆಂಟು ಸೂಪರಿಂಟೆಂಡೆಂಟರಾಗಿ ಬಡ್ತಿ ಮಾಡಿ ಕೋಲಾರ ಚಿನ್ನದಗಣಿಗೆ ಶ್ರೀ ಹನುಮಂತರಾವ್‌ರನ್ನು ಶ್ರೀ ದೇವಯ್ಯನವರನ್ನು ನಿರಾಶ್ರಿತ ಆಸ್ತಿಗೆ ಸಂಬಂಧಪಟ್ಟ ಅಧಿಕಾರಿಗಳನ್ನಾಗಿ ವರ್ಗಾಯಿಸಲಾಗಿದೆ.

ರಾತ್ರಿವೇಳೆ ನಡೆಯುವ ಅಂಚೆ ಕಛೇರಿ

ರಾತ್ರಿಯ ವೇಳೆ ಚಲಿಸುವ ಅಂಚೆ ಕಛೇರಿಗಳನ್ನು ಭಾರತದಲ್ಲಿ ನೇಮಿಸಲು ಭಾರತ ಸರ್ಕಾರ ಯೋಚಿಸುತ್ತಿದೆ. ನಾಗಪುರದಲ್ಲಿ ಒಂದು ಕಛೇರಿಯನ್ನು ಪ್ರಾರಂಭಿಸಿ ಅದು ಫಲಪ್ರದವಾಯಿತು.

ಭಾರತಕ್ಕೆ ಆಹಾರ ಕಳುಹಿಸಿ

ಕಾಶ್ಮೀರಕ್ಕೆ ಭಾರತವು ಮಾಡಿರುವ ಸಹಾಯವನ್ನು ಸ್ಮರಿಸಿಕೊಂಡು ಪ್ರತಿಯೊಬ್ಬ ಕಾಶ್ಮೀರಿಯೂ ಸಾಧ್ಯವಾದಷ್ಟು ಆಹಾರವನ್ನು ಭಾರತಕ್ಕೆ ಕಳುಹಿಸಲು ಶ್ರಮಿಸಬೇಕೆಂದು ಪ್ರಧಾನಿ ಶೇಕ್ ಅಬ್ದುಲ್ಲಾ ಕಾಶ್ಮೀರ ಜನರಲ್ಲಿ ಮನವಿಮಾಡಿಕೊಂಡಿರುವರು.

ಅಮೆರಿಕಾ ಆಹಾರ ಭಾರತಕ್ಕೆ

ಅಮೆರಿಕಾ ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಕೊಡುವ ವಿಷಯ ಇನ್ನು ಎರಡು ವಾರಗಳೊಳಗಾಗಿ ನಿರ್ಧಾರವಾಗಲಿದೆಯೆಂದು ಹೇಳಲಾಗಿದೆ.

ಪಶುಗಳ ಪುಷ್ಟೀಕರ ಆಹಾರಕೇಂದ್ರ

ಪಶುಗಳಿಗೆ ಪುಷ್ಟಿಕರವಾದ ಆಹಾರ ಪರಿಶೋಧನಾಕೇಂದ್ರವೊಂದನ್ನು ಮೈಸೂರಿನಲ್ಲಿ ಭಾರತ ಸರ್ಕಾರವು ಸ್ಥಾಪಿಸುವುದು.

ಭಾರತದಿಂದ ಅಮೆರಿಕಾಕ್ಕೆ

ಭಾರತದಿಂದ ಆಗಸ್ಟು ಮಾಹೆಯಲ್ಲಿ ೧೫೫ ಲಕ್ಷ ಗ್ಯಾಲನ್ ಮಧ್ಯಸಾರವು ಅಮೆರಿಕಾಕ್ಕೆ ರಫ್ತು ಮಾಡಲಾಗುವುದು. ೧೯೫೨ ಆಗಸ್ಟರ ವೇಳೆಗೆ ೨೦೦ ಲಕ್ಷ ಗ್ಯಾಲನ್ ರವಾನೆಗೆ ಏರ್ಪಾಡಾಗಿಯಿತ್ತಿದೆ.

ದರೋಡೆಗಾರರ ದಸ್ತಗಿರಿ

ಬೊಂಬಾಯಿಯ ಲಾಯಿಡ್ಸ್ ಬ್ಯಾಂಕಿನ ಮತ್ತು ದೆಹಲಿ ಅನೋಡಿಯ ಬ್ಯಾಂಕಿನ ಹಣ ದರೋಡೆ ಸಂಬಂಧದಲ್ಲಿ ದೆಹಲಿ ಪೋಲೀಸಿನವರು ಬೊಂಬಾಯಿ ಪೋಲೀಸಿನವರ ಸಹಾಯದಿಂದ ಉತ್ತರ ಪ್ರದೇಶದ ಬುಲಂದಶಹರ' ಎಂಬಲ್ಲಿ ಇಬ್ಬರನ್ನು ದಸ್ತಗಿರಿಮಾಡಿರುವುದಾಗಿ ತಿಳಿಯಬರುತ್ತದೆ. ಒಂದು ಮದುವೆಮನೆಯಲ್ಲಿ ಇವರನ್ನು ಹಠಾತ್ತನೆ ಹಿಡಿಯಲಾಗಿದೆ.

ಸಂಸ್ಕೃತ ಭಾಷಾ ಪರಿಷತ್ತು

ಅಖಿಲಭಾರತ ಸಂಸ್ಕೃತ ಭಾಷಾ ಪರಿಷತ್ತನ್ನು ನಿನ್ನೆ ಜಗತ್ಪ್ರಸಿದ್ಧ ಸೋಮನಾಥ ದೇವಾಲಯದ ಬಳಿ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಂಡನ್ನರು ಉದ್ಘಾಟಿಸಿದರು. ತಿರುವಾಂಕೂರು ಕೊಚ್ಚಿನ್ ರಾಜಪ್ರಮುಖ ಶಾಮುವರ್ಮರವರು ಅಧ್ಯಕ್ಷತೆ ವಹಿಸಿದ್ದರು. ಎರಡು ದಿನ ಸಮ್ಮೇಳನ ನಡೆಯಲಿದೆ.

ಸಚಿವರ ಭೇಟಿ

ನೇಪಾಳದ ಅರ್ಥಿಕಸಚಿವ ಶ್ರೀ ಸುಬರ್ಣಶಂಷೀರ್ ರಾಣಾ ಮತ್ತು ಗೃಹಸಚಿವ ಕೊಯಿರಾಲಾರವರು ನಿನ್ನೆ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಒಂದು ಗಂಟೆ ಕಾಲ ಮಾತುಕಥೆ ನಡೆಸಿದರು.

ವ್ಯಾಪಾರಕ್ಕೆ ಬಹಿಷ್ಕಾರ

ತಿಪಟೂರಿನಲ್ಲಿ ಮಾರಾಟದ ಮೇಲೆ ಸೇಲ್ಸ್‌ಟ್ಯಾಕ್ಸ್ ವಿಧಿಸಿರುವುದನ್ನು ವಿರೋಧಿಸಿ ಅಲ್ಲಿಯ ವ್ಯಾಪಾರಸ್ಥರೆಲ್ಲರೂ ಕೊಬ್ಬರಿ ವ್ಯಾಪಾರಕ್ಕೆ ಬಹಿಷ್ಕಾರ ಹಾಕಿರುವರು.

ಸಂತಾನ ಅಭಿವೃದ್ಧಿ

ಅಖ್ತಾರಿ ಹುಸೇನ್ ಎಂಬ ಮುಸ್ಲಿಂ ಸ್ತ್ರೀಯೊಬ್ಬಳು ಭಾಗಲ್ಪುರ ಆಸ್ಪತ್ರೆಯಲ್ಲಿ ಮೂರು ಮಕ್ಕಳನ್ನು ಹೆತ್ತಿರುವಳು. ಎರಡು ಹೆಣ್ಣು ಒಂದು ಗಂಡು ತಾಯಿ ಮಕ್ಕಳು ಆರೋಗ್ಯದಿಂದಿರುವರು.

ಭಾರತಕ್ಕೆ ರೈಲ್ವೆ ಇಂಜನ್ನುಗಳು

ವಿದೇಶಗಳಿಂದ ೨೦ ಕೋಟಿ ರೂ. ಬೆಲೆಯ ೧೮೨ ರೈಲ್ವೆ ಇಂಜನ್ನುಗಳು, ೭,೦೦೦ ರೈಲ್ವೆ ವ್ಯಾಗನ್, ಕೋಚುಗಳು ಈ ಸಾಲಿನಲ್ಲಿ ಬರಲಿವೆ.

ವಸಂತ ಸಾಹಿತ್ಯೋತ್ಸವ

ಕನ್ನಡ ಪರಿಷತ್ತಿನ ಆಶ್ರಯದಲ್ಲಿ ೧೩ನೇ ತಾ॥ ನಿಂದ ೨೦ನೇ ತಾ॥ ನವರೆಗೆ ಬೆಂಗಳೂರಿನಲ್ಲಿ ವಸಂತ ಸಾಹಿತ್ಯೋತ್ಸವವು ನಡೆಯುವುದು.

ಸಚಿವರ ಕ್ಷಮಾಯಾಚನೆ

ನ್ಯಾಯಾಂಗ ಸಚಿವ ಶ್ರೀ ಅಂಬೇಡ್ಕರ್‌ರವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ 'ಸದಸ್ಯರು ಹಿಮ್ಮೇಳದ ಹುಡುಗಿಯರಂತೆ' ಎಂದರು.

ಶ್ರೀ ಶ್ಯಾಮನಂದನ್ ನಾವೆಲ್ಲ ನೀವು ಹಾಗೆಂಬಹುದೆಂದರು.

ಡಾ॥ ಪಾಂಡೆಯವರು ನಾವೆಲ್ಲ ಹಿಮ್ಮೇಳದ ಹುಡುಗಿಯರಾದರೆ ಅವರು ಅಂಥ ಸಂಸ್ಥೆಯ ವ್ಯವಸ್ಥಾಪಕರು.

ಶ್ರೀ ರಾಜಗೋಪಾಲಾಚಾರಿ—ಹಾಗೆಂದರೆ ಹಿಮ್ಮೇಳದ ಹುಡುಗಿಯರು ಆಕ್ಷೇಪಣೆ ಮಾಡಿಯಾರು ಎಂದರು.

ಡಾ॥ ಅಂಬೇಡ್ಕರು ಮಹಿಳಾ ಸದಸ್ಯರಿಗೆ ಅವಮಾನವಾಗಿದ್ದರೆ ತಾವು ಕ್ಷಮಾಯಾಚನೆ ಮಾಡುವುದಾಗಿ ತಿಳಿಸಿದರು.

ಆಹಾರ ದಾನ

ಭಾರತಾದ್ಯಂತ ಯಾರು ಬೇಕಾದರೂ ಆಹಾರ ದಾನವನ್ನು ಜಿಲ್ಲಾ ನ್ಯಾಯಾಧೀಶರಿಗೆ ಸಲ್ಲಿಸಬಹುದೆಂದು ಅವುಗಳು ಆಹಾರ ಕೊರತೆಯಿರುವ ಮದರಾಸು ಮತ್ತು ಬಿಹಾರಗಳಿಗೆ ಕಳುಹಿಸಲೇರ್ಪಾಡು ಮಾಡಲಾಗುವುದೆಂದು ಪಂಡಿತ ನೆಹರೂ ಹೇಳಿರುವರು.

ಸರ್ಕಾರಿ ಆಜ್ಞೆ

ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಆರ್. ಡಿ. ಅಂದ್ರ್ಯೂರವರನ್ನು ಮಂಡ್ಯ ಜಿಲ್ಲೆಗೆ ವರ್ಗಮಾಡಲಾಗಿದೆ.

ಬಿಹಾರ ಪರಿಸ್ಥಿತಿ

ಬಿಹಾರ ಆಹಾರ ಪರಿಸ್ಥಿತಿಯು ಹತೋಟಿಗೆ ಬಂದಿದೆ. ದಿನವಹಿ ಸರಾಸರಿ ೩,೨೦೦ ಟನ್ ಆಹಾರಧಾನ್ಯವನ್ನು ಸರಬರಾಯಿ ಮಾಡಲಾಗುತ್ತಿದೆ. ೫,೦೦೦ ಫೇರ್‌ಪ್ರೈಸ್ ಡಿಪೋಗಳನ್ನು ಸ್ಥಾಪಿಸಲಾಗಿದೆ. ಈ ಮಾಹೆಯಲ್ಲಿ ೧,೧೨,೦೦೦ ಟನ್ ಆಹಾರವನ್ನು ಸರಬರಾಯಿ ಮಾಡಲಾಗುವುದೆಂದು ಆಹಾರ ಉಪಮಂತ್ರಿ ಶ್ರೀ ತಿರುಮಲರಾಯರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಸಚಿವ ಅಜಿತ್‌ಪ್ರಸಾದ್ ಜೈನರ ರಾಜೀನಾಮೆಯೆ?

ಸಚಿವ ರಫಿ ಅಹಮ್ಮದ್ ಕಿದ್ವಾಯಿಯವರು ಜೂನ್ ೫ ರಲ್ಲಿ ಈಗಿನ ಪಾರ್ಲಿಮೆಂಟು ಅಧಿವೇಶನ ಮುಗಿದೊಡನೆಯೇ ಸಚಿವಪದವಿಗೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ. ಅವರ ಅನುಯಾಯಿಗಳಾಗಿರುವ ರಾಜ್ಯ ಸಚಿವ ಶ್ರೀ ಅಜಿತ್ ಪ್ರಸಾದ್ ಜೈನ್‌ರೂ ರಾಜೀನಾಮೆ ಕೊಡುವರೆಂದು ತಿಳಿಯಬರುತ್ತದೆ.

ಮೇ ೧೬-೧೭ರ ವೇಳೆಗೆ ಆಚಾರ್ಯ ಕೃಪಲಾನಿ ಮತ್ತು ಶ್ರೀಮತಿ ಸುಚೇತ ಕೃಪಲಾನಿಯವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವರು. ಅನಂತರ ಇವರಿಬ್ಬರಲ್ಲದೆ ಅನೇಕ ಕಾಂಗ್ರೆಸ ಮುಖಂಡರು ಕಾಂಗ್ರೆಸ್ ಬಿಡುವರೆಂದು ಹೇಳಲಾಗಿದೆ.

ಅಮೆರಿಕನ್ನರ ಸಹಾಯ

ಭಾರತಕ್ಕೆ ಆಹಾರವನ್ನು ಒದಗಿಸಲು ಅಮೆರಿಕಾದಲ್ಲಿ ನಡೆಯುತ್ತಿರುವ ಚಳುವಳಿಯಲ್ಲಿ ಈಗಾಗಲೇ ೮೦೦೦ ಡಾಲರುಗಳು ಭಾರತ ರಾಯಭಾರಿ ಕಛೇರಿಯು ಅಮೆರಿಕನ್ನರಿಂದ ಪಡೆದಿದೆ.

ವಿಶ್ವಸಂಸ್ಥೆ ಸೈನ್ಯ ನಷ್ಟ

ಕೊರಿಯಾ ಯುದ್ಧದಲ್ಲಿ ಕಳೆದ ಜೂನ್‌ನಿಂದ ಪ್ರಾರಂಭವಾದ ಕಮ್ಯೂನಿಸ್ಟ ಧಾಳಿಯಲ್ಲಿ ವಿಶ್ವಸಂಸ್ಥೆಯಲ್ಲಿ ಸಾವು ನೋವುಗಳು ಮಾರ್ಚಿ ನೇ ತಾರೀಖಿನವರೆಗೆ ೨,೨೮,೯೪೧. ಇದರ ಪೈಕಿ ಅಮೆರಿಕನ್ನರ ಸಂಖ್ಯೆಯು ೫೭೦,೩೦. ಆಸ್ಟ್ರೇಲಿಯಾ ೭೨, ನದಾ ೭೮, ಫ್ರಾನ್ಸು ೩೯೭, ಗ್ರೀಸ ೮೯, ನ್ಯೂಜಿಲೆಂಡ್ ೯, ನೆದರ್‌ಲ್ಯಾಂಡ್ಸ್ ೧೧೨, ಫಿಲಿಪೈನ್ಸ್ ೫೫ ಕೊರಿಯನ್ನರು ೧,೭೮,೭೫೨, ದಕ್ಷಿಣ ಆಫ್ರಿಕಾ ೭, ಥೈಲಾಂಡ್ ೧೬೮, ಟರ್ಕಿ ೧೧೭೯, ಬ್ರಿಟನ್ ೮೯೨.

ನಾವಾಗಿಯೇ ವಜಾ ಮಾಡಿದೆವು

ಜನರಲ್ ಮೆಕಾರ್ಥರನ್ನು ವಜಾ ಮಾಡಬೇಕೆಂದು ಯಾವ ಮಿತ್ರ ರಾಷ್ಟ್ರವೂ ನಮಗೆ ಸಲಹೆ ಕೊಡಲಿಲ್ಲ. ನಾವಾಗಿಯೇ ತೆಗೆದುಹಾಕಿದೆವೆಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಾರ್ಷಲ್‌ರು ಹೇಳಿರುವರು.

ಹೆಚ್ಚಿಗೆ ಆಹಾರ

ಬರ್ಮಾದಿಂದ ಆಹಾರ ಬರಲಿರುವುದರಿಂದ ಮದರಾಸು, ಬೊಂಬಾಯಿ, ಬಿಹಾರ, ಅಸ್ಸಾಂ, ಹೈದ್ರಾಬಾದು ಪ್ರಾಂತ್ಯಗಳಿಗೆ ಕೊಡುವ ಆಹಾರ ಪರಿಮಿತಿಯನ್ನು ಹೆಚ್ಚಿಸಲಿದೆ.

ಮೇ ೧೫ರಿಂದ ಹಿಂದೀ ಕಾರ್ಯಕ್ರಮ

ಅಮೆರಿಕಾ ರೇಡಿಯೋ ಸಂಸ್ಥೆಯು (ವಾಯ್ಸ ಆಫ್ ಅಮೆರಿಕಾ) ಮೇ ೧೫ನೇ ತಾರೀಖಿನಿಂದ ದಿನವೂ ಸಂಜೆ ೭-೩೦ರಿಂದ ೯ ಗಂಟೆವರೆಗೆ (ಭಾರತ ಕಾಲ) ಹಿಂದಿಯಲ್ಲಿ ಪ್ರಸಾರ ಕಾರ್ಯಕ್ರಮವನ್ನು ಪ್ರಾರಂಭಿಸಲಿದೆ. ಹಿಂದಿಯಲ್ಲಿ ವಾರ್ತೆಗಳು ಸಂಗೀತ, ಮತ್ತಿತರ ಪ್ರಸಾರ ನಡೆಯುವುವು.

ಪಾನಿವಾಲ ಮಹಾರಾಜ್ ಒಂದು ಕೋಟಿ ರೂಪಾಯಿ ಉಳಿಸಿದರು

ಬೊಂಬಾಯಿ ಸರ್ಕಾರವು ಅಹಮದಬಾದ್ ಜಿಲ್ಲೆಯಲ್ಲಿ ಸುಮಾರು ೮೦೦ ಅಡಿ ಆಳದ ಬಾವಿಗಳನ್ನು ತೋಡಿಸಲು ಒಂದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕೆಂದು ಏರ್ಪಾಟುಮಾಡಿತು. ಅಹಮದಾಬಾದ್ ಜಿಲ್ಲಾ ಬೋರ್ಡಿನ ಅಪೇಕ್ಷೆಯಂತೆ ಭಾರತ ಸರ್ಕಾರವು ನೀರಿನ ಜ್ಞಾನಿಯಾದ ಪಾನಿ ಮಹಾರಾಜರನ್ನು ಅಲ್ಲಿಪರೀಕ್ಷೆಗಾಗಿ ಕಳುಹಿಸಿತು. ಈ ಪ್ರಾಂತ್ಯದಲ್ಲೆಲ್ಲಿಯೂ ನೀರು ದೊರೆಯುವ ಸಂಭವವಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಒಂದು ಕೋಟಿ ರೂಪಾಯಿನ ವೆಚ್ಚದಿಂದ ಮಾಡಬೇಕೆಂದಿದ್ದ ಕೆಲಸವನ್ನು ಬೊಂಬಾಯಿ ಸರ್ಕಾರವು ಕೈ ಬಿಟ್ಟಿತು.

ವುಡ್‌ಲ್ಯಾಂಡ್ಸ್
ಶ್ರೀ
ದಿನವಹಿ ೩ ಆಟಗಳು
ತಾ॥ ೧೧—೫—೫೧ರಿಂದ
ಬಹಾರ್‌ಕಿರಾತ್
ಪಾತ್ರ—ನರ್ಗೀಸ್, ದೇವಾನಂದ್

ರಣಜಿತ್
೧೧—೫—೫೧ರಿಂದ
-:: ಸಗಾಯಿ ::-
ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಘುಲಾಲ್
ಅಂಡ್
ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಿ. ನಂ. ಎಂ. ೫೩೧೮ ದಿನಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೫—೧೯೫೧ನೇ ಸೋಮವಾರ [ಸಂಚಿಕೆ ೨೦೬

RAGHULAL & Co.
CHEMISTS
Sayyaji Rao Road
MYSORE

ಚೈನಾಕ್ಕೆ ಸಾಮಾನುಗಳ ರಫ್ತನ್ನು ಬಹಿಷ್ಕರಿಸಿ

ಮೈಸೂರು ಅಧಿಕಾರಿಗಳ ವಿಲೀನೀಕರಣ ಪರಿಶೀಲನೆಯಲ್ಲಿದೆ

ವಿಶ್ವಸಂಸ್ಥೆಯ ರಾಷ್ಟ್ರಗಳೆಲ್ಲವೂ ಚೈನಾಕ್ಕೆ ಸಾಮಾನುಗಳನ್ನು ಕಳುಹಿಸುವುದನ್ನು ಬಹಿಷ್ಕರಿಸಬೇಕೆಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಮುಂದಿನವಾರ ನಿರ್ಣಯಮಾಡಲಿದೆ. ಭಾರತ, ಇಂಡೊನೇಷಿಯಾ ಈ ನಿರ್ಣಯವನ್ನು ವಿರೋಧಿಸುವ ಸಂಭವವುಂಟು ಆದಾಗ್ಯೂ ನಿರ್ಣಯವು ಮಂಜೂರಾಗುವ ನಿರೀಕ್ಷೆಯಿದೆ ೬೦ ಓಟುಗಳಲ್ಲಿ ೪೬ ಓಟುಗಳು ಪರವಾಗಿ ಬರಬಹುದೆಂದು ಹೇಳಲಾಗಿದೆ.

ಪತ್ರಿಕಾ ಶಾಸನ ರಚನೆ

ಪತ್ರಿಕಾ ಶಾಸನ ಸಮಿತಿಯು ಮಾಡಿರುವ ಶಿಫಾರಸ್ಸುಗಳು ಸದ್ಯದಲ್ಲೇ ಶಾಸನ ರೂಪವನ್ನು ತಾಳುವುವು.

ಅಂತಿಮ ಎಚ್ಚರಿಕೆ

ಕಾಂಗ್ರೆಸ್ ಪಕ್ಷದಲ್ಲಿದ್ದು ಸರ್ಕಾರವನ್ನು ಉಗ್ರವಾಗಿ ಟೀಕಿಸುತ್ತಲಿರುವ ಶ್ರೀ ಹೆಚ್. ವಿ. ಕಾಮತರನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ಬದಲು ಅವರಿಗೆ ಅಂತಿಮ ಎಚ್ಚರಿಕೆಯನ್ನು ಕೊಡಲು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ನಿರ್ಧರಿಸಿದೆ.

ಅಖಿಲ ಭಾರತ ಸಂಸ್ಕೃತ ಪರಿಷತ್ತು

ರಾಜಕೋಟೆಯಲ್ಲಿ ಸೇರಿದ್ದ ಅಖಿಲ ಭಾರತ ಸಂಸ್ಕೃತ ಸಮ್ಮೇಳನವು ಡಾ|| ರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ಒಂದು ಅಖಿಲಭಾರತ ಸಂಸ್ಕೃತ ಪರಿಷತ್ತನ್ನು ಸ್ಥಾಪಿಸಲು ನಿರ್ಧರಿಸಿದೆ.

ಮಂತ್ರಿಮಂಡಲ ವಿಸ್ತರಣೆ

ಮಂತ್ರಿಮಂಡಲಕ್ಕೆ ರಾಣಾ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಸೇರದ ಇನ್ನಿಬ್ಬ ಸಚಿವರನ್ನು ನೇಪಾಳ ಸರ್ಕಾರವು ನೇಮಿಸಿಕೊಳ್ಳುವುದೆಂದು ಹೇಳಲಾಗಿದೆ. ಅಲ್ಲದೆ ೬೦ ಸದಸ್ಯರ ಒಂದು ಸಲಹಾಸಮಿತಿಯು ನೇಮಕವಾಗಲಿದೆ.

ಭಾರತಕ್ಕೆ ೪೦ ಲಕ್ಷ ಟನ್ ಆಹಾರಬೇಕು

ಭಾರತ ಸರ್ಕಾರವು ಪ್ರಸ್ತುತ ಸಾಲಿನಲ್ಲಿ ೧೦ ರಾಷ್ಟ್ರಗಳಿಂದ ೪೦ ಲಕ್ಷ ಟನ್ ಆಹಾರವನ್ನು ಕೊಳ್ಳುವ ಯೋಜನೆ ಮಾಡಿದೆ. ಈಗಾಗಲೇ ಅಮೆರಿಕಾದಿಂದ ೮ ಲಕ್ಷ ಟನ್ ಧಾನ್ಯ ಕೊಂಡಿದೆ.

ಪಾಕಿಸ್ತಾನದಿಂದ ಆಹಾರ

ಪಾಕಿಸ್ತಾನದಿಂದ ೯,೮೦೦ ಟನ್ ಅಕ್ಕಿ ೮,೭೦೦ ಟನ್ ಗೋಧಿ ಭಾರತಕ್ಕೆ ಬಂದಿದೆ. ಇದೇ ಮಾರ್ಚ ೯ನೇ ತಾ||ನವರೆಗೆ ಭಾರತಕ್ಕೆ ಪಾಕಿಸ್ತಾನದಿಂದ ೫೦,೦೦೦ ಟನ್ ಅಕ್ಕಿ ಬಂದಿದೆ. ಪೂರ್ವ ಪಾಕಿಸ್ತಾನವು ೫೦೦ ಟನ್ ಅಕ್ಕಿಯನ್ನು ಸದ್ಯದಲ್ಲೇ ಕಳುಹಿಸಲಿದೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ದಾನ

ಹುಣಸೂರು ತಾ|| ರಾಮಂದೂರು ಸಾ|| ಲಿಂಗಪ್ಪಶೆಟ್ಟರ ಮಕ್ಕಳು ಶ್ರೀ ಆರ್. ಎಲ್. ಜಯದೇವಪ್ಪನವರಿಗೆ ಅತ್ತಿಗೋಡಿನ ಶ್ರೀ ಎ. ವಿ. ರಾಚಪ್ಪಶೆಟ್ಟರ ಮಗಳು ಶ್ರೀಮತಿ ಮರಿಯಮ್ಮ ಇವರುಗಳ ವಿವಾಹದ ಸಮಯದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ೭೫ ರೂ. ಗಳನ್ನು ದಾನ ಮಾಡಿರುತ್ತಾರೆ.

ಎ. ಐ. ಆರ್. ಕಾರ್ಯಕ್ರಮ

ಮೈಸೂರು, ಮೇ ೧೪

ಈ ದಿನ ರಾತ್ರಿ ಎ. ಐ. ಆರ್. ಮೈಸೂರು ಶಾಖೆಯಿಂದ ಶ್ರೀ ಜ. ಚೂಡೇಗೌಡರು ಹೆಚ್ಚು ಆಹಾರ ಬೆಳೆಯಿರಿ ಎಂಬ ವಿಷಯದ ಮೇಲೂ ಶ್ರೀ ಕೆ. ವಿ. ದೊರೆಸ್ವಾಮಿಯವರು ವಿದ್ಯಾಭ್ಯಾಸ ಕ್ರಮ ಎಂಬ ವಿಷಯದ ಮೇಲೂ ಭಾಷಣಮಾಡುವರು.

೬೦ ಲಕ್ಷ ರೂ. ಯೋಜನೆ

ಅಕ್ಕಿ ಹೆಚ್ಚಾಗಿ ಬೆಳೆಯಲು ಬೊಂಬಾಯಿ ಸರ್ಕಾರ ೬೦ ಲಕ್ಷ ರೂಗಳ ಒಂದು [illegible] ಯೋಜಿಸಿದೆ.

ಕೃಷ್ಣಮೋಕ್ಷ ಸ್ಮಾರಕ

ಕೃಷ್ಣಪರಮಾತ್ಮನು ತನ್ನ ಇಹದೇಹವನ್ನು ತ್ಯಜಿಸಿ ವೈಕುಂಠವನ್ನು ಸೇರಿದ ಪವಿತ್ರಸ್ಥಳದಲ್ಲಿ ಸ್ಮಾರಕವನ್ನು ನಿರ್ಮಿಸುವ ಕಾರ್ಯದ ಮೊದಲ ಹೆಜ್ಜೆ ಮೊನ್ನೆ ಪೂರ್ಣವಾಯಿತು. ಸೌರಾಷ್ಟ್ರದ ರಾಜಪ್ರಮುಖರಾದ ನವನಗರದ ಜಾಂ ಸಾಹೇಬರು ಅಲ್ಲಿಯ ದೇಹೋತ್ಸರ್ಗದಲ್ಲಿ ಈ ದಿನ ಸ್ಮಾರಕವೊಂದರ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಭಗವದ್ಗೀತೆಯ ೧೮ ಕಾಂಡಗಳನ್ನು ಪ್ರತಿನಿಧಿಸುವ ೧೮ ಕಂಬಗಳುಳ್ಳ ಮಂಟಪವೇ ಈ ಸ್ಮಾರಕ.

ಪ್ರಭಾಸತೀರ್ಥ ಎಂಬಲ್ಲಿಗೆ ಮುಕ್ಕಾಲು ಮೈಲಿ ದೂರದಲ್ಲಿರುವ ದೇಹೋತ್ಸರ್ಗದಲ್ಲಿ ಮರವೊಂದನ್ನು ಒರಗಿ ನಿದ್ರಿಸುತ್ತಿದ್ದ ಕೃಷ್ಣ ಪರಮಾತ್ಮನು, ಬೇಡನೊಬ್ಬನು ಹಕ್ಕಿಯೆಂಬ ಭ್ರಮೆಯಿಂದ ತನ್ನ ಅಂಗಾಲಿಗೆ ಗುರಿಯಿಟ್ಟು ಹೊಡೆದ ಬಾಣದಿಂದ ಪರಂಧಾಮವನ್ನೈದಿದನು.

ಕೃಷ್ಣಪರಮಾತ್ಮನ ಅನುಯಾಯಿಯೆಂದು ಹೇಳಿಕೊಳ್ಳುವ ಜಾಮ್ ಸಾಹೇಬರು ಮೋಕ್ಷ ಅಶ್ವತ್ಥವೃಕ್ಷದ ಬಳಿ ಸ್ವಸ್ತಿಕಗಳಿಂದ ಚಿತ್ರಿಸಲ್ಪಟ್ಟ ಅಸ್ತಿವಾರ ಶಿಲೆಯನ್ನು ಸ್ಥಾಪಿಸಿದರು.

ಪುರೋಹಿತರು ಮಂತ್ರಗಳನ್ನು ಹೇಳಿ ಭಗವದ್ಗೀತೆಯಿಂದ ಶ್ಲೋಕಗಳನ್ನು ಪಠಿಸುತ್ತಿದ್ದಂತೆ ಅನೇಕ ಕ್ಯಾಮರಗಳು ಚಿತ್ರಗ್ರಹಣ ಮಾಡಿದುವು.

ಶಂಕುಸ್ಥಾಪನೆ ಮಾಡಿದ ಮೇಲೆ ಜಾಮ್ ಸಾಹೇಬರು ಕೃಷ್ಣಪರಮಾತ್ಮನ ಚಿತ್ರವೊಂದಕ್ಕೂ, ಭಗವದ್ಗೀತೆಗೂ ಪೂಜೆ ಮಾಡಿ, ಮೋಕ್ಷ ಅಶ್ವತ್ಥಕ್ಕೆ ಪ್ರದಕ್ಷಿಣೆ ಹಾಕಿದರು.

ರಾಜೀನಾಮೆ ಅಂಗೀಕಾರವಾಗಿಲ್ಲ

ಸಂಚಾರ ಶಾಖಾ ಸಚಿವ ರಫಿ ಅಹಮದ್ ಕಿದ್ವಾಯಿಯವರಿತ್ತಿರುವ ರಾಜೀನಾಮೆಯನ್ನು ಪ್ರಧಾನಿ ನೆಹರೂ ಇನ್ನೂ ಅಂಗೀಕಾರಮಾಡಿಲ್ಲವೆಂದು ಹೇಳಲಾಗುತ್ತಲಿದೆ.

ಪುರಾತನ ವಸ್ತುಗಳ ಸಂಶೋಧನೆ

ಅಲಹಾಬಾದ್ ವಿಶ್ವವಿದ್ಯಾನಿಲಯದ ಪ್ರಾಚ್ಯಸಂಶೋಧನ ಇಲಾಖೆಯವರು ಕೋಶಾಂಬಿ ಬಳಿ ೧,೫೦೦ ಎಕರೆಗಳಲ್ಲಿ ಬೌದ್ಧಮತಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳನ್ನು ನಡೆಸುತ್ತಿರುವರಷ್ಟೆ, ಈಗ ಸಂಶೋಧನೆ ನಡೆಸಿದ್ದರಲ್ಲಿ ಹೊಸದೊಂದು ಪಟ್ಟಣವು ಇದ್ದುದ್ದು ಪತ್ತೆಯಾಗಿದೆ.

ಅಧಿಕ ಆಹಾರ ಬೆಳೆದಿದ್ದಕ್ಕೆ ಬಹುಮಾನ

ದೆಹಲಿಯ ಬಳಿಯಿರುವ ಗದ್ದೆಗಳಲ್ಲಿ ಮೂವರು ರೈತರು ಕ್ರಮವಾಗಿ ಒಂದು ಎಕರೆಗೆ ೩೦ ಮಣ ೩೭ ಸೇರು, ೩೦ ಮಣ ೧೫ ಮಣ ಬಾಜ್ರವನ್ನು ಬೆಳೆದಿದ್ದಕ್ಕೆ ಅವರಿಗೆ ಅಧಿಕ ಆಹಾರ ಬೆಳೆಯುವ ಯೋಜನೆ ಸಮಿತಿಯವರು ಬಹುಮಾನ ಕೊಡುವರು. ಇವರು ಉತ್ತಮವಾದ ಗೊಬ್ಬರವನ್ನು ಹಾಕಿ ಬೆಳೆ ತೆಗೆದಿದ್ದು ಮಿಕ್ಕ ಗದ್ದೆಗಳಲ್ಲಿ ಒಂದು ಎಕರೆಗೆ ೧೪ ಮಣ ಬೆಳೆಯಲಾಗಿದೆ.

ಜನರ ಓಡಾಟ ಕಡಿಮೆಯಾಗಿದೆ

ಸಿಂಹಳಕ್ಕೂ ಭಾರತಕ್ಕೂ ಮಧ್ಯೆ ಇದ್ದ ಸಂಚಾರವು ಕಳೆದ ವರ್ಷ ಕಡಿಮೆಯಾಗಿದೆ. ಸಿಂಹಳದಿಂದ ಭಾರತಕ್ಕೆ ಕಳೆದ ವರ್ಷ ೯೪,೦೦೦ ಪ್ರಯಾಣಿಕರು ಬಂದಿದ್ದು ಭಾರತದಿಂದ ಸಿಂಹಳಕ್ಕೆ ೧,೧೭,೦೦೦ ಜನರು ತೆರಳಿದ್ದರು.

ರೈಲ್ವೇ ದುರಂತದಲ್ಲಿ ೮ ಜನ ಮೃತರಾದರು

ಬಿಲಾಸ್‌ಪುರದ ರೈಲ್ವೇ ನಿಲ್ದಾಣದಲ್ಲಿ ನಡೆದ ಬೆಂಕಿ ಅಪಘಾತದಿಂದ ಮೃತರಾದವರ ಸಂಖ್ಯೆ ಎಂಟಕ್ಕೇರಿದೆ.

ದರ್ಭಾಂಗದಲ್ಲಿ ರೈಲ್ವೇ ದುರಂತದಲ್ಲಿ ಮೃತರಾದವರಿಗೂ ಡಾ|| ರಾಜೇಂದ್ರಪ್ರಸಾದ್, ರೈಲ್ವೇ ಸಚಿವರು ಮುಂತಾದವರು ಅನುತಾಪ ವ್ಯಕ್ತಪಡಿಸಿರುವರು.

ಕೊರಿಯಾದಲ್ಲಿ ಶಾಂತಿ ಸ್ಥಾಪನೆ ಪ್ರಥಮಕಾರ್ಯ

ಕೊರಿಯಾದಲ್ಲಿ ಯುದ್ಧವು ಇನ್ನೂ ನಡೆಯುತ್ತಲಿರುವಾಗ ಫಾರ್ಮೋಸಾದ ಭವಿಷ್ಯವನ್ನು ಚರ್ಚಿಸುವುದು ಉಚಿತವಲ್ಲ ವೆಂದು ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಮಿ|| ಮಾರಿಸನ್ ಹೇಳಿದ್ದಾರೆ.

ಚೈನಾಕ್ಕೆ ಆಮದು ನಿಷೇಧ

ಚೈನಾಕ್ಕೆ ಸಾಮಾನುಗಳನ್ನು ಕಳುಹಿಸಲು ಆಸ್ಟ್ರೇಲಿಯಾ ಸರ್ಕಾರವು ನಿಷೇಧಿಸಲಿದೆ.

ಸಮ್ಮೇಳನ

ಪ್ರಧಾನಿ ನೆಹರೂರವರು ಇಂದು ನೇಪಾಳದ ಪ್ರಧಾನಮಂತ್ರಿ, ಗೃಹ, ಆರ್ಥಿಕ ಸಚಿವರು ಮತ್ತು ಕೆಲವು ಮುಖಂಡರ ಒಂದು ಸಂಯುಕ್ತ ಸಮ್ಮೇಳನವನ್ನು ನಡೆಸಿ ನೇಪಾಳದ ಪರಿಸ್ಥಿತಿಯ ವಿಷಯವಾಗಿ ಮಾತುಕತೆ ನಡೆಸಿದರು.

ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ೨೦ನೇ ತಾರೀಖು ಜರುಗ್ಗ ಸೇರುವುದು.

ಸುಳ್ಳು ಸಾಕ್ಷ್ಯಕ್ಕೆ ಶಿಕ್ಷೆ ಮತ್ತು ಜುಲ್ಮಾನೆ

ನ್ಯೂಯಾರ್ಕ್ ನಗರದ ನೀರು ಸರಬರಾಯಿ ಶಾಖೆಯ ಮಾಜಿ ಕಮಿಷನರ್ ಮಿ|| ಜೇಮ್ಸ್ ಜಿ ಮೊರಾನರು ಅನೇಕ ವರ್ಷಗಳ ಅವಧಿಯಲ್ಲಿ ಲೂಯಿಸ್ ವೆಬ್ಬರ್ ರೆಂಬುವವನನ್ನು ಐದಾರು ಬಾರಿ ನೋಡಿರುವುದಾಗಿ ಹೇಳಿದರು. ಫೆಡರಲ್ ಕೋರ್ಟಿನಲ್ಲಿ ವಿಚಾರಣೆ ನಡೆದ ಕಾಲದಲ್ಲಿ ಮೊರಾನರನ್ನು ಲೂಯಿಸ್ ವೆಬ್ಬರ್ ೧೧೧ ಬಾರಿ ನೋಡಿದುದಾಗಿ ಧೃಡಪಟ್ಟಿತು. ಸುಳ್ಳು ಹೇಳಿದ್ದಕ್ಕಾಗಿ ಮಿ|| ಮೊರಾನರಿಗೆ ೫ ವರ್ಷ ಶಿಕ್ಷೆ ೨ ಸಾವಿರ ಡಾಲರ್ ಜುಲ್ಮಾನೆ ವಿಧಿಸ್ತು.

ಡಾ|| ಫ್ರಾಂಕ್ ಗ್ರಾಹಾಂರು ಭಾರತಕ್ಕೆ

ವಿಶ್ವಸಂಸ್ಥೆಯ ಮಧ್ಯಸ್ಥಿಕೆಗಾರರಾದ ಡಾ|| ಫ್ರಾಂಕ್ ಗ್ರಾಹಾಂರು ಜೂನ್ ತಿಂಗಳಲ್ಲಿ ಭಾರತಕ್ಕೆ ಬರಲಿರುವರು.

ಮದನಪಲ್ಲಿಯಿಂದ ಮೈಸೂರಿಗೆ ಕಾರ್ಡು ಸೇರಲು ೮ ತಿಂಗಳು

ಮದನಪಲ್ಲಿಯಿಂದ ಮೈಸೂರಿನವರಿಗೊಬ್ಬರಿಗೆ ೯-೯-೫೦ ಮತ್ತು ೧೭-೯-೫೦ ರಲ್ಲಿ ಬರೆದ ಕಾರ್ಡುಗಳು ೯-೫-೧೯೫೧ರಲ್ಲಿ ಸೇರಿವೆ. ಅಂದರೆ ೮ ತಿಂಗಳು ಕಾಲ ಹಿಡಿದಿದೆ. ಆ ಕಾರ್ಡುಗಳ ಮೇಲೆ ಮದನಪಲ್ಲಿ, ಮೈಸೂರಿನ ಮೊಹರುಗಳು ಮಾತ್ರವಿದೆ.

ಮಳೆಯಿಂದ ೪೦ ಸಾವಿರ ರೂ. ನಷ್ಟ

ಬೆಂಗಳೂರು ಮೇ ೧೨

ನಿನ್ನೆ ರಾತ್ರಿ ಬೆಂಗಳೂರಿನಲ್ಲಿ ೨೦ ನಿಮಿಷ ಕಾಲದಲ್ಲಿ ವಿಶೇಷವಾಗಿ ಮಳೆಯಾಗಿ ಆನೆಕಲ್ಲು ಸುರಿಯಿತು. ಈ ಸಮಯದಲ್ಲಿ ಬಿರುಸಾದ ಬಿರುಗಾಳಿಯೆದ್ದು ಮಳೆ ಬರಲು ಹಿಂದೂಸ್ತಾನ ವಿಮಾನ ಕಾರ್ಖಾನೆಯ ಆವಾರದ ಡಿಪೋ ಜ್ವಾಯಿಂಟ್ಸ್ ಕ್ವಾರ್ಟರ್ಸ್, ಸ್ಟೋರ್ಸ್ ಕಟ್ಟಡದ ಮೇಲ್ಭಾಗದ ಚಾವಣಿಗಳೆಲ್ಲಾ ಹಾರಿಹೋದವು. ವಿಮಾನ ನಿಲ್ದಾಣದಲ್ಲಿದ್ದ ಎರಡು ವಿಮಾನಗಳು ಉರುಳಿಕೊಂಡು ಜಖಂ ಆಯಿತು. ಸುಮಾರು ೪೦ ಸಾವಿರ ರೂ. ನಷ್ಟವಾಗಿದೆ.

ಸಾರ್ವಜನಿಕ ಬಿನ್ನವತ್ತಳೆ

ಇದೇ ಮಾಹೆ ೧೬ನೇ ತಾರೀಖು ಸಂಜೆ ೫-೩೦ ಗಂಟೆಗೆ ಬೆಂಗಳೂರು ಕಾರ್ಪೊರೇಷನ್ ನಗರ ಭವನದಲ್ಲಿ ಮಾಜಿ ದಿವಾನರಾದ ಸರ್ ಮಿರ್ಜಾರವರಿಗೆ ಬಿನ್ನವತ್ತಳೆ ಯನ್ನರ್ಪಿಸುವುದು.

ಸ್ವಯಂ ಪೂರ್ಣತೆ

ಬೆಂಗಳೂರು ಟೆಲಿಫೋನ್ ಕಾರ್ಖಾನೆಯಲ್ಲಿ ವಾರಕ್ಕೆ ೫೦೦ ರಂತೆ ಟೆಲಿಫೋನ್‌ಗಳು ತಯಾರಾಗುತ್ತಲಿವೆ. ಈ ಯಂತ್ರಕ್ಕೆ ಬೇಕಾದ ೩೭೫ ಭಾಗಗಳಲ್ಲಿ ೩೫೫ ಭಾಗಗಳು ಇಲ್ಲಿಯೇ ತಯಾರಾಗುತ್ತಲಿವೆ. ಇನ್ನೆರಡು ವರ್ಷಗಳಲ್ಲಿ ಸ್ವಯಂಪೂರ್ಣತೆಯನ್ನು ಈ ಕಾರ್ಖಾನೆಯು ಹೊಂದುವುದೆಂದು ಹೇಳಲಾಗಿದೆ.

ಕೇಂದ್ರ ಸಚಿವರ ಭೇಟಿ

ಕೇಂದ್ರ ಸರ್ಕಾರದ ವೈಜ್ಞಾನಿಕ ಸಂಶೋಧನೆ ಮತ್ತು ಸ್ವಾಭಾವಿಕ ಸಾಧನ ಸಂಪತ್ತುಗಳ ಶಾಖೆಯ ಸಚಿವ ಶ್ರೀ ಪ್ರಕಾಶರವರು ೨೨ನೇ ತಾರೀಖು ಬೆಂಗಳೂರಿಗೆ ಆಗಮಿಸಿ ೬ ದಿನ ಇರುವರು.

ಕೇಂದ್ರದೊಡನೆ ಐಕ್ಯತೆ

ಬೆಂಗಳೂರು ಮೇ ೧೨

ಪೋಲೀಸು ಮತ್ತು ಆಡಳಿತವರ್ಗದ ಅಧಿಕಾರಗಳು ಕೇಂದ್ರದೊಡನೆ ಐಕ್ಯವಾಗುವ ವಿಷಯದಲ್ಲಿ ಕೇಂದ್ರ ಮತ್ತು ಮೈಸೂರು ಸರ್ಕಾರಗಳಿಗೆ ಒಂದು ಒಪ್ಪಂದವಾಗಿದೆಯೆಂದು ಕೆಲವು ಪತ್ರಿಕೆಗಳು ಪ್ರಕಟಿಸಿವೆ. ಈ ವಿಷಯವು ಪರಿಶೀಲನೆಯಲ್ಲಿದೆ. ಇನ್ನೂ ಯಾವ ನಿರ್ಧಾರವೂ ಆಗಿಲ್ಲವೆಂದು ಮೈಸೂರು ಸರ್ಕಾರದವರು ಪತ್ರಿಕಾಪ್ರಕಟಣೆಯನ್ನು ಹೊರಡಿಸಿರುವರು.

ಎಲ್ಲಾ ಮಂತ್ರಿಗಳ ರಾಜೀನಾಮೆ

ಕೇಂದ್ರ ಅಥವಾ ಸಂಸ್ಥಾನ ಸರ್ಕಾರಗಳಲ್ಲಿ ಸಚಿವರುಗಳಾಗಿ ಆಚಾರ್ಯ ಕೃಪಲಾನಿಯವರ ಪಕ್ಷಕ್ಕೆ ಸೇರಿರುವವರೆಲ್ಲರೂ ರಾಜೀನಾಮೆಯಿತ್ತಿರುವರೆಂದು ತಿಳಿಯಬರುತ್ತದೆ.

ಶಾಸನಸಭಾ ಸದಸ್ಯರಿಗೆ ಹಾಸ್ಟಲ್

೬ ಲಕ್ಷ ರೂಪಾಯಿ ವೆಚ್ಚದಿಂದ ಮದರಾಸು ಸರ್ಕಾರವು ಶಾಸನಸಭಾ ಸದಸ್ಯರ ವಸತಿ ಸೌಕರ್ಯಕ್ಕಾಗಿ ೩ ಅಂತಸ್ತಿನ ಒಂದು ಹಾಸ್ಟಲನ್ನು ಸರ್ಕಾರಿ ಭವನದ ಎಸ್ಟೇಟಿನಲ್ಲಿ ಕಟ್ಟಿಸಲಿದೆ.

ರಷ್ಯಾ ಯುದ್ಧಕ್ಕೆ ಸಿದ್ಧವಾಗುತ್ತಲಿದೆ

ರಷ್ಯಾವು ಮೂರನೇ ಮಹಾಯುದ್ಧಕ್ಕೆ ಸಿದ್ಧವಾಗುತ್ತಲಿದೆ. ಕೊರಿಯಾ ರಣರಂಗದಲ್ಲಿ ಚೈನಾಕ್ಕೆ ರಷ್ಯಾದ ಸಹಾಯವೇ ವಿಶೇಷವಾಗಿದೆ ಎಂದು ಅಮೆರಿಕಾ ರಕ್ಷಣಾ ಕಾರ್ಯದರ್ಶಿ ಮಿ|| ಮಾರ್ಷಲ್‌ರು ಹೇಳಿದ್ದಾರೆ. ಆದರೆ ಯುದ್ಧಭೀತಿಯು ಪಶ್ಚಿಮ ಯೂರೋಪಿಗಿಂತ ದೂರ ಪ್ರಾಚ್ಯದಲ್ಲಿದೆಯೆಂದು ಹೇಳಿರುವರು.

ಮರುಭೂಮಿಯು ವನವಾಗುವುದು

ರಾಜಪುಟಾಣದ ಮರುಭೂಮಿಯಲ್ಲಿ ಸುಮಾರು ೫ ಸಾವಿರ ಗಿಡಗಳನ್ನು ನೆಟ್ಟು, ಮರುಭೂಮಿಯನ್ನು ಉತ್ತಮ ತರಹದ ವನವನ್ನಾಗಿ ಮಾರ್ಪಡಿಸಲು ಭಾರತ ಸರ್ಕಾರ, ರಾಜಸ್ಥಾನ ಸರ್ಕಾರಗಳು ಕಾರ್ಯಕ್ರಮ ತೆಗೆದುಕೊಳ್ಳುತ್ತಲಿವೆ.

ನೋಟುಗಳ ಚಲಾವಣೆ

ಭಾರತದಲ್ಲಿ ಈಗ ೧೩೦೨ ಕೋಟಿ ರೂಪಾಯಿಗಳ ನೋಟುಗಳು ಚಲಾವಣೆಯಲ್ಲಿವೆ.

ಮರುವಸತಿಕಾರ್ಯ ಮೂರು ವರ್ಷದಲ್ಲಿ ಮುಗಿಯಬೇಕು

ಭಾರತಾದ್ಯಂತ ಮರುವಸತಿ ಕಾರ್ಯವನ್ನು ೩ ವರ್ಷಗಳಲ್ಲಿ ಪೂರೈಸಬೇಕೆಂದು ಸರ್ಕಾರವು ತೀರ್ಮಾನಿಸಿದೆ.

ನಿರಾಶ್ರಿತರಿಗೆ ಕೈಗಾರಿಕೆ, ವ್ಯಾಪಾರ ಮುಂತಾದ ಕೆಲಸಗಳಿಗೆ ಸಹಾಯನೀಡಲು ಸರ್ಕಾರವು ಆರೂವರೆ ಕೋಟಿ ರೂಪಾಯಿ ಮಂಜೂರ್ಮಾಡಿದೆ.

ರಾಷ್ಟ್ರೀಯ ಯೋಜನೆಗಳಿಗೆ ೧೦೦೦ ಕೋಟಿ ರೂಪಾಯಿಗಳು

ಭಾರತ ರಾಷ್ಟ್ರೀಯ ಯೋಜನಾ ಮಂಡಲಿಯು ಪಂಚವಾರ್ಷಿಕ ಅಭಿವೃದ್ಧಿ ಯೋಜನೆಗಳಿಗೆ ಒಟ್ಟು ಒಂದು ಸಾವಿರ ಕೋಟಿ ರೂ. ಗಳು ವೆಚ್ಚವಾಗುವುದೆಂದು ತಿಳಿಯಬರುತ್ತದೆ.

ಭಾರತಕ್ಕೆ ದಾನ

ಭಾರತಕ್ಕೆ ಆಹಾರವನ್ನು ಒದಗಿಸಲು ನೆರವು ನೀಡಬೇಕೆಂದು ವಿಶ್ವಸಂಸ್ಥೆಯು ಮನವಿಗೆ ಈಗಾಗಲೇ ೧೧ ಸಾವಿರ ಡಾಲರುಗಳ ಕಾಣಿಕೆ ಬಂದಿದೆ.

ಕೊರಿಯಾ ಯುದ್ಧಸ್ಥಿತಿ

ಕೊರಿಯಾ ರಣರಂಗದಲ್ಲಿ ಕದನವು ಬಹಳ ಬಿರುಸಾಗಿ ಪ್ರಾರಂಭವಾಗಿದೆ.

ರ ಣ ಜಿ ತ್

೧೧—೫—೫೧ರಿಂದ

-:: ಸ ಗಾ ಯಿ ::-

ಪಾತ್ರ—ರೆಹನ, ಪ್ರೇಂನಾಥ್,

ಗೋಪ್, ಯಾಕೂಬ್

ಸಂಪಾದಕರು ಮತ್ತು ಪ್ರಕಾಶಕರು—ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಜಿ.ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ. ಮೈಸೂರು.



ಬ್ರಿಟನ್ನಿನಲ್ಲಿ ತಯಾರಾದ ಹೊಸ ಜೂಜಿನ ಮೋಟಾರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ... ಎಲ್. ...

ಸಂಪುಟ ೧] ೧೫—೫—೧೯೫೧ನೇ ಮಂಗಳವಾರ [ಸಂಚಿಕೆ ೨೦೭

ಶ್ರೀ ಕುಮಾರಸ್ವಾಮಿ ರಾಜಾರವರು

ಮದ್ರಾಸ್ ಮತ್ತು ಮೈಸೂರು ಸರ್ಕಾರಗಳ ಪ್ರತಿನಿಧಿಗಳ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ನಿನ್ನೆ ರಾತ್ರಿ ಬೆಂಗಳೂರಿಂದ ಮೈಸೂರಿಗೆ ಆಗಮಿಸಿ ಈ ದಿನ ಊಟಿಗೆ ತೆರಳಿದರು.

ಅಚಿಸನ್ ನಿವೃತ್ತಿ

ಅಮೆರಿಕಾ ವಿದೇಶಾಂಗ ಶಾಖಾ ಸಚಿವ ಮಿ|| ಅಚಿಸನ್ನರನ್ನು ಇನ್ನು ೫ ವಾರಗಳೊಳಗಾಗಿ ಕೆಲಸದಿಂದ ತೆಗೆದುಹಾಕಲಾಗುವುದೆಂದು ಸೆನೆಟ್‌ನಲ್ಲಿ ರಿಪಬ್ಲಿಕ್ ಪಕ್ಷದ ಸದಸ್ಯ ಮಿ|| ಜೋಸೆಫ್ ಮ್ಯಾಕಾರ್ಥಿಯವರು ಹೇಳಿರುವರು.

ಆಂಧ್ರ ಪ್ರಾಂತ್ಯ ರಚನೆ ಸಧ್ಯಕ್ಕೆ ಇಲ್ಲಾ

ಗಂಧದಮರದ ಮತ್ತು ಗೂಡಿಗಾರರ ರಕ್ಷಣೆಗೆ ಸಲಹಾಸಮಿತಿ

ಗಂಧದ ಮರದ ರಕ್ಷಣೆಗೆ ಸರ್ಕಾರದ ಪ್ರಯತ್ನ

ಸ್ವ. ಸು.] ಬೆಂಗಳೂರು ೧೫

ಮೈಸೂರು, ಮದರಾಸು ಮತ್ತು ಕೊಡಗಿನಲ್ಲಿರುವ ಗಂಧದ ಮರಗಳ ರಕ್ಷಣೆ ಮತ್ತು ಗಂಧದ ಕೆಲಸ ಮಾಡುವ ಗೂಡಿಗಾರರ ಪರಿಸ್ಥಿತಿಯನ್ನು ಸುಧಾರಿಸುವುದು ಇವೇ ಮುಂತಾದುವನ್ನು ಪರಿಶೀಲಿಸಿ ಒಂದು ಸಲಹಾಸಮಿತಿ ನಿರ್ಮಿಸಲು ಮೈಸೂರಿನ ಮತ್ತು ಮದರಾಸಿನ ಸಚಿವರ ಸಂಯುಕ್ತ ಸಭೆಯು ನಿನ್ನೆ ನಡೆಯಿತು. ಮೈಸೂರು ಸರ್ಕಾರದ ಪರವಾಗಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು, ಅರಣ್ಯ ಶಾಖೆಯ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಮತ್ತು ಪೌರಸಭೆಗಳ ಸಚಿವ ಶ್ರೀ ಆರ್. ಚೆನ್ನಿಗರಾಮಯ್ಯನವರೂ, ಮದರಾಸ್ ಸರ್ಕಾರದ ಪರವಾಗಿ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿರಾಜ ಮತ್ತು ಶ್ರೀ ಪೆರುಮಾಳ್‌ಸ್ವಾಮಿ ರೆಡ್ಡಿಯವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಆಂಧ್ರ ಪ್ರಾಂತ ರಚನೆ ಈಗ ಸೂಕ್ತವಲ್ಲ

ಆಹಾರಾಭಾವ, ಮಹಾ ಚುನಾವಣೆ ದೃಷ್ಟಿಯಿಂದ ಈಗ ಆಂಧ್ರ ಪ್ರಾಂತ್ಯ ರಚನೆ ಸೂಕ್ತವಲ್ಲವೆಂದು ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ಹೈಕಮ್ಯಾಂಡ್ ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ.

ಶ್ರೀ ಹೊಂಬೇಗೌಡರು ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜರು

ಸ್ವ. ಸು] ಬೆಂಗಳೂರು ೧೫

ಪಬ್ಲಿಕ್ ಸರ್ವಿಸ್ ಕಮಿಷನರ್ ಆಗಿರುವ ಶ್ರೀ ಹೊಂಬೇಗೌಡರನ್ನು ಬೆಂಗಳೂರು ಅಡಿಷನಲ್ ಜಿಲ್ಲಾ ನ್ಯಾಯಾಧೀಶರನ್ನಾಗಿ ನೇಮಕಮಾಡಲಾಗಿದೆ.

ಶ್ರೀ ಟಿ. ರಂಗಮಲ್ಲಯ್ಯನವರು ತಮ್ಮ ಕೆಲಸದ ಜೊತೆಗೆ ಪಬ್ಲಿಕ್ ಸರ್ವಿಸ್ ಕಮಿಷನರ್ ಕೆಲಸ ನೋಡಿಕೊಳ್ಳುವರು.

ಪ್ರಮುಖ ವರ್ತಕರಿಗೆ ಒಂದುವಾರ ಸಜಾ ಮತ್ತು ಸಾವಿರ ರೂ. ಜುಲ್ಮಾನೆ

ಮೈಸೂರು ೧೫

ನಗರದ ನ್ಯಾಯಾಧೀಶರು ಛತ್ರದ ದಾಸ್ತಾನಿನ ಬಗ್ಗೆ ಸರಿಯಾದ ಹೇಳಿಕೆ ಕೊಡಲಿಲ್ಲವೆಂಬ ಕಾರಣದ ಮೇಲೆ ಧರ್ಮದರ್ಶಿ ಕರ ಶ್ರೀ ಕೆ. ಸಂದೀಬಸಪ್ಪನವರಿಗೆ ಒಂದು ವಾರ ಸಾದಾ ಸಜಾ ಮತ್ತು ಒಂದು ಸಾವಿರ ರೂ. ಜುಲ್ಮಾನೆ ವಿಧಿಸಿರುವರು. ಜುಲ್ಮಾನೆ ಕೊಡದಿದ್ದರೆ ಒಂದು ತಿಂಗಳು ಸಾದಾ ಸಜಾ ಅನುಭವಿಸಬೇಕೆಂದು ತೀರ್ಪಿತ್ತಿರುವರು.

ಶ್ರೀ ಶಂಕರಾನಂದ ರೈಸ್ ಮಿಲ್ಲಿನ ಮಾಲೀಕರಾದ ಶ್ರೀ ತಬ್ಬಣ್ಣನವರು ಅಕ್ಕಿ ದಾಸ್ತಾನಿನ ಬಗ್ಗೆ ಸರಿಯಾದ ಡಿಕ್ಲರೇಷನ್ ಕೊಡಲಿಲ್ಲವೆಂದು ಸಿಟಿ ಮ್ಯಾಜಿಸ್ಟ್ರೇಟರು ಅವರಿಗೂ ಸಹ ೫೦೦ ರೂ. ಜುಲ್ಮಾನೆ ತಪ್ಪಿದರೆ ೧೮ ದಿನ ಸಾದಾ ಸಜಾ ವಿಧಿಸಿರುವರು.

ಶ್ರೀ ಕೆ ಸಂದೀಬಸಪ್ಪನವರನ್ನು ಜಾಮೀನಿನ ಮೇಲೆ ಬಿಡಲಾಗಿದ್ದು ಇವರು ಅಪೀಲು ಮಾಡಿರುವರು.

ಶ್ರೀ ದಾಸಪ್ಪನವರು ಛಾರ್ಜ್ ವಹಿಸಿಕೊಂಡರು

ಸ್ವಲ್ಪ ದಿನಗಳಿಂದ ಅಸ್ವಸ್ಥರಾಗಿದ್ದ ಅರಣ್ಯ ಶಾಖೆಯ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಈಗ ಆರೋಗ್ಯವಾಗಿದ್ದು ನಿನ್ನೆ ದಿನ ಛಾರ್ಜು ವಹಿಸಿಕೊಂಡರು.

ಪತ್ರಿಕಾಗೋಷ್ಠಿ

ಮದರಾಸಿನಲ್ಲಿ ಎಲ್ಲಾ ಸಚಿವರೂ ವಾರಕ್ಕೊಮ್ಮೆ ಪತ್ರಿಕಾಗೋಷ್ಠಿಯನ್ನು ತಪ್ಪದೆ ನಡೆಸಲು ಏರ್ಪಡಿಸಿರುವುದಾಗಿ ಸಮಾಚಾರ ಸಚಿವ ಶ್ರೀ ಭಕ್ತವತ್ಸಲಂ ಹೇಳಿರುವರು.

† ಉತ್ತರ ಪ್ರದೇಶದ ಅಸೆಂಬ್ಲಿ ಸದಸ್ಯರೂ ಭಾರತ ರಾಜ್ಯಾಂಗ ರಚನಾ ಸಭಾ ಸದಸ್ಯರೂ ಆಗಿದ್ದ ಮೌಲಾನಾ ಹಸರತ್ ಮೊಹಾನಿಯವರು ನೆನ್ನೆ ದಿನ ನಿಧನರಾದರು. ಅವರಿಗೆ ೭೭ ವರ್ಷ ವಯಸ್ಸಾಗಿತ್ತು.

ವಸ್ತುಪ್ರದರ್ಶನದ ವಿಚಾರಣಾ ಸಮಿತಿ

ಸ್ವ. ಸು ಫೋನ್] ಬೆಂಗಳೂರು ೧೫

ಸರ್ಕಾರದವರು ಈ ದಿನ ಒಂದು ಆಜ್ಞೆ ಹೊರಡಿಸಿ ಬೆಂಗಳೂರಿನಲ್ಲಿ ಅಗ್ನಿಗಾಹುತಿಯಾದ ವಸ್ತುಪ್ರದರ್ಶನದ ಬಗ್ಗೆ ವಿಚಾರಣೆ ನಡೆಸಲು ಮತ್ತು ಮುಂದೆ ಇಂತಹ ಅಪಘಾತಗಳು ಸಂಭವಿಸದಂತೆ ವಸ್ತು ಪ್ರದರ್ಶನ ನಡೆಸಲು ಸಲಹೆಕೊಡಲು ಒಂದು ಸಮಿತಿ ರಚಿಸಿರುತ್ತಾರೆ.

ಈ ಸಮಿತಿಗೆ ಶ್ರೀ ಟಿ. ಸಿಂಗಾರವೇಲು ಮೊದಲಿಯಾರ್ ಅಧ್ಯಕ್ಷರಾಗಿದ್ದು ಶ್ರೀಗಳಾದ ಚಾಮುಂಡಿ ಸುಬ್ರಾಮಶೆಟ್ಟಿ, ಕೆ. ಆರ್. ಮಾಧವರಾವ್, ಕೆ. ಪುಟ್ಟಸ್ವಾಮಿ, ಐ ಜಿ ಪಿ. ಯವರು, ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು ವಸ್ತುಪ್ರದರ್ಶನ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಕೈಗಾರಿಕೆಯ ಎಡಿಷನಲ್ ಡೈರೆಕ್ಟರ್‌ರವರು ಸದಸ್ಯರಾಗಿರುವರು.

ಇನ್ನೂ ನಿರ್ಧಾರವಿಲ್ಲ

ಕಾಂಗ್ರೆಸ್ಸನ್ನು ತ್ಯಜಿಸುವ ವಿಷಯದಲ್ಲಿ ಇನ್ನೂ ನಿರ್ಧಾರಕ್ಕೆ ಬಂದಿಲ್ಲ. ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನಲ್ಲಿದ್ದು ಈಗ ತ್ಯಜಿಸುವುದು ನನಗೆ ಅತ್ಯಂತ ಕಷ್ಟವಾಗಿ ತೋರುತ್ತದೆ. ನಾನು ಅಂತ್ಯ ನಿರ್ಧಾರಕ್ಕೆ ಬರಬೇಕಾದರೆ ಅನೇಕ ಯೋಚನೆಗಳನ್ನು ಮಾಡಬೇಕಾಗಿದೆ ಎಂದು ಆಚಾರ್ಯ ಕೃಪಲಾನಿಯವರು ಮದರಾಸಿನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಹೇಳಿರುವರು.

ನೀವು ಕಾಂಗ್ರೆಸ್ ಬಿಡದಿದ್ದರೆ ನಿಮ್ಮ ಅನುಯಾಯಿಗಳ ಗತಿಯೇನೆಂದು ಕೇಳಲಾಗಿ, ಅವರ ಕಾಲುಗಳ ಮೇಲೆ ಅವರು ನಿಲ್ಲಬೇಕೆಂದು ಹೇಳಿದರು.

ಮೋಟಾರು ಸೈಕಲ್ಲುಗಳು

ಕಲ್ಕತ್ತಾ, ಪೋಲೀಸಿನವರ ಉಪಯೋಗಕ್ಕಾಗಿ ಬರ್ಮಿಂಗ್‌ಹ್ಯಾಂನಲ್ಲಿರುವ ಒಂದು ಸಂಸ್ಥೆಯು ೩೨ ನೂತನಶತಪದ ಮೋಟಾರು ಸೈಕಲ್ಲುಗಳನ್ನು ಸರಬರಾಯಿ ಮಾಡಲಾಗಿದೆ.

ಉತ್ತರ ಪ್ರದೇಶ ಗ್ರಾಮ ಪಂಚಾಯಿತಿಗಳ ಅದ್ಭುತ ಕೆಲಸ

ಉತ್ತರ ಪ್ರದೇಶದ ೩೫ ಸಾವಿರ ಗ್ರಾಮ ಪಂಚಾಯಿತಿಗಳು ನವದಿನಕ್ಕೆ ಪ್ರಗತಿಯ ಮಾರ್ಗದಲ್ಲಿ ನಡೆಯುತ್ತಾ ಇವೆ. ಆಜಂಘರ್ ಜಿಲ್ಲೆಯ ಗ್ರಾಮಪಂಚಾಯಿತಿಗೆ ಸೇರಿದ ಜನರು ತಾವಾಗಿಯೇ ಮುಂದೆ ಬಂದು ಮದ್ಯಪಾನ ಮತ್ತು ಧೂಮಪಾನವನ್ನು ಮಾಡುವುದಿಲ್ಲವೆಂದು ತಿಳಿಸಿ ಪ್ರತಿಜ್ಞೆ ಮಾಡಿರುವರು.

ಫರೂಖಾಬಾದ್ ಜಿಲ್ಲೆಯ ಗ್ರಾಮ ಪಂಚಾಯಿತಿಗೆ ಸೇರಿದ ೩೦೦ ಜನರಿಗೆ ವಯಸ್ಕರ ಶಿಕ್ಷಣ ಸಮಿತಿಯ ಪ್ರಶಸ್ತಿ ಕೊಡಲಾಯಿತು.

ಗೋರಖಪುರ ಪಂಚಾಯಿತಿಯವರು ಹರಿಜನರಿಗೆ ಸ್ವಂತ ಮನೆಗಳನ್ನು ಕಟ್ಟಿಸಲು ನಿರ್ಧರಿಸಿರುವರು.

ಭಾರತಕ್ಕೆ ಆರು ಲಕ್ಷ ಟನ್ ಆಹಾರ ಬರುವುದು

ಭಾರತಕ್ಕೆ ಹೊರದೇಶಗಳಿಂದ ಈ ತಿಂಗಳ ಅಂತ್ಯ ಮತ್ತು ಮುಂದಿನ ತಿಂಗಳ ಮತ್ತನೇ ತಾ|| ವರಿಗೆ ೬,೦೦,೦೦೦ ಟನ್ ಆಹಾರ ಧಾನ್ಯವು ಸರಬರಾಜಾಗುವುದು. ಇದರಲ್ಲಿ ಅಮೆರಿಕಾವು ೩,೨೭,೯೦೦ ಟನ್ ಆಹಾರ ಧಾನ್ಯವನ್ನು ಸರಬರಾಜು ಮಾಡುವುದು. ಈಗ ಬರಲಿರುವ ಆರು ಲಕ್ಷ ಟನ್ ಆಹಾರದಲ್ಲಿ ೪,೫೦,೦೦೦ ಟನ್ ಗೋಧಿಯೂ, ೮೯,೮೦೦ ಟನ್ ಅಕ್ಕಿಯೂ ಮತ್ತು ೬೯,೦೦೦ ಟನ್ ಮೈಲೊ ಧಾನ್ಯವು ಇರುವುದೆಂದು ತಿಳಿದುಬಂದಿದೆ.

ಪಾನನಿರೋಧವಿಲ್ಲ

ಸರ್ಕಾರವು ಪೂರ್ಣ ಪಾನನಿರೋಧವನ್ನು ಜಾರಿಗೆ ತರುವ ಉದ್ದೇಶ್ಯ ಹೊಂದಿಲ್ಲ. ನಿಧಾನವಾಗಿ ಕಾರ್ಯಕ್ರಮ ಕೈಗೊಳ್ಳಲಿದೆ ಎಂದು ಹಿಮಾಚಲ ಉಪಸಚಿವ ಗುಲಾಟಿಯವರು ಹೇಳಿರುವರು.

೫೦ ಲಕ್ಷ ಸೈನ್ಯ

ಭಾರತರಕ್ಷಣೆಗೆ ೫೦ ಲಕ್ಷ ಸಂಖ್ಯೆ ಸೇನೆ ಅಗತ್ಯವೆಂದು ಭಾರತ ದಂಡನಾಯಕ ಜ|| ಕಾರಿಯಪ್ಪನವರು ಹೇಳಿರುವರು.

ಆಡಂಬರ ಜೀವನವೇ ಬಡತನಕ್ಕೆ ಕಾರಣ

ಭಾರತ ವೈದ್ಯ ಪಡೆಯ ಸಾಹಸ

ಭಾರತವು ಕೊರಿಯಾ ಯುದ್ಧಕ್ಕೆ ಕಳುಹಿಸಿರುವ ೬೦ನೇ ಇಂಡಿಯನ್ ಫೀಲ್ಡ್ ಆಂಬ್ಯುಲೆನ್ಸ್ ಪಡೆಯು ವಿಶ್ವ ಸೇನೆಯಲ್ಲಿ ಘಾಯಗೊಂಡವರಿಗೆ ತನ್ನ ಕೈಲಾದ ಸಹಾಯವನ್ನೆಲ್ಲಾ ನೀಡಲು ಅನೇಕ ಸಾಹಸ ಕಾರ್ಯಗಳನ್ನು ಮಾಡುತ್ತಲಿದೆ.

ಅಮೆರಿಕಾ ರೇಡಿಯೋ ಸಂಸ್ಥೆಯ ಪ್ರತಿನಿಧಿ ಮಿ॥ ರಾಬರ್ಟ್ ಲಾಸರ್ ಎಂಬುವವರು ಅವರ ಸಾಹಸವನ್ನು ಕಣ್ಣಾರ ನೋಡಿ ವಿಶೇಷವಾಗಿ ಪ್ರಶಂಸಿಸಿರುವರು.

ಮಾರ್ಚಿ ೨೩ನೇ ತಾರೀಖು ಭಾರತ ವೈದ್ಯರಲ್ಲಿ ೧೩ ಜನರು ಕೊರಿಯಾದ ಮುನ್ಸನ್‌ಗ್ ಬಳಿ ವಿಮಾನಗಳಿಂದ ಪ್ಯಾರಚ್ಯೂಟ್ ಮೂಲಕ ರಣರಂಗಕ್ಕಿಳಿದು ಗಾಯಗೊಂಡ ವಿಶ್ವ ಸೈನ್ಯದವರಿಗೆ ಚಿಕಿತ್ಸೆಯನ್ನು ಮಾಡಿದರು. ಕರ್ನಲ್ ರಂಗರಾಜ್ ಮೇಜರ್ ಬ್ಯಾನರ್ಜಿ ಮುಂತಾದ ೧೩ ಜನ ವೈದ್ಯರು ಸದಾಕಾಲದಲ್ಲಿಯೂ ವೈದ್ಯ ಸಾಮಾನುಗಳೊಡನೆ ಘಾಯಗೊಂಡವರ ಸೇವೆಗಾಗಿ ಕಾದಿರುವರು.

ಕೊರಿಯಾದಲ್ಲಿ ವಿಮಾನ ಕಾರ್ಯಾಚರಣೆ ಮೊನ್ನೆ ಮೇಜರ್ ಬ್ಯಾನರ್ಜಿ ಮತ್ತು ಕರ್ನಲ್ ರಂಗರಾಜರನ್ನು ಲೆಗ ಅಮೆರಿಕಾ ಅಷ್ಟ ಮಗಳ ದಂಡನಾಯಕರಾಗಿದ್ದ ಜನರಲ್ ರಿಡ್ಜ್‌ವೇಯವರಲ್ಲಿ ಮಾತನಾಡುತ್ತಾ ವಿಮಾನ ಕಾರ್ಯಾಚರಣೆಯಾದರೆ ತಾವು ಕಾರ್ಯಕ್ಕಾಗಿ ಸಿದ್ಧರಿರುವರೆಂದು ಹೇಳಿದಾಗ, ಜನರಲ್ ರಿಡ್ಜ್‌ವೇಯವರು ಸಂತೋಷ ವ್ಯಕ್ತಪಡಿಸಿ ಸುಮ್ಮನಾದರು.

ಕಾರ್ಯಾಚರಣೆ ಪ್ರಾರಂಭವಾಗುವ ಎರಡು ದಿನ ಮುನ್ನ ಜರಿಸಿ ಅಭ್ಯಾಸ ಮಾಡುತ್ತಿದ್ದಾಗ ಅವರಿಗೆ ಕರೆಬರಲು ಕೂಡಲೇ ಸಿದ್ಧರಾಗಿ ರಣರಂಗವನ್ನು ಪ್ರವೇಶಿಸಿ ವಿಮಾನದಿಂದ ಇಳಿದು ನೊಂದವರಿಗೆ ಚಿಕಿತ್ಸೆ ನಡೆಸಿದರು. ಇವರ ಚಿಕಿತ್ಸಾ ಕ್ರಮ, ಕಾರ್ಯತತ್ಪರತೆ ಶ್ಲಾಘನೀಯವಾಗಿದೆಯೆಂದು ಮಿ॥ ಲಾಸರ್ ಹೇಳಿರುವರು.

ಬೆಂಕಿ ಅನಾಹುತ

ಕ್ವಿಲಾನ್‌ನಿಂದ ೨೦ ಮೈಲಿ ಉತ್ತರದಲ್ಲಿ ಕಾಯಂಕುಳಂ ಬಂದರಿನ ಮೋಟಾರ್ ಶೆಡ್ಡಿನಲ್ಲಿ ಬೆಂಕಿಬಿದ್ದು ೨ ಲಕ್ಷ ರೂಪಾಯಿ ನಷ್ಟವಾಗಿದೆ. ಅಲ್ಲಿದ್ದ ಎಣ್ಣೆ, ತಂಬಾಕು ಎಲ್ಲವೂ ಉರಿದುಹೋಗಿದೆ.

ಮಲಬಾರ್ ಪೋಲೀಸ್ ಸ್ಟೇಷನ್ ಒಳಗೆ ಬೆಂಕಿಬಿದ್ದು ಅಲ್ಲಿದ್ದ ಗ್ರಾಮಫೋನ್‌ಗಳೆಲ್ಲಾ ಸುಟ್ಟುಹೋಗಿದೆ.

ಕಾನ್ಪುರಕ್ಕೆ ೨೪ ಮೈಲಿಯಲ್ಲಿರುವ ಬಿಲ್ಹಾರ್ ಎಂಬಲ್ಲಿ ಬೆಂಕಿ ಅನಾಹುತದಿಂದ ಒಂದು ಲಕ್ಷ ರೂ. ನಷ್ಟವಾದುದಲ್ಲದೆ ಮಕ್ಕಳಿಬ್ಬರು ಜೀವಸಹಿತ ಸುಟ್ಟು

ಮೈಸೂರು ೧೪

ವ್ಯಾಸಂಗವು ಒದಗಬೇಕಾದ ಕಾಲದಲ್ಲಿ ಇಂತಹ ಸ್ವತಂತ್ರ ಶಿಕ್ಷಣವು ಅತ್ಯಾವಶ್ಯಕ. ಮಹಿಳೆಯರು ಮುಂದೆ ಬಂದು ವಿಸ್ತೃತ ಶಿಕ್ಷಣಪಡೆಯುತ್ತಿರುವುದು ನನಗೆ ಅತ್ಯಾನಂದವನ್ನು ಉಂಟುಮಾಡಿದೆ. ಜಾಸ್ತಿ ಜನರ ಭಂಡ ಕೂಟಕ್ಕಿಂತ ಅಲ್ಪಜನರ ಹೃದಯ ಪರಿವರ್ತನೆಯೇ ಸ್ತುತ್ಯಾರ್ಹವಾದದು. ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ದೇಶದ ಯುವಕ, ಯುವತಿಯರು ಶ್ರಮಿಸಬೇಕು.

೧೫೦ ವರ್ಷಗಳ ಗುಲಾಮಗಿರಿಯ ವಾಸನೆ ಇನ್ನೂ ನಮ್ಮಲ್ಲಿ ಅಳಿಸಿಲ್ಲ. ಇದರಿಂದ ಸ್ವತಂತ್ರ ಸರ್ಕಾರಕ್ಕೆ ಬಹಳ ತೊಂದರೆಯಾಗಿದೆ. ಧಾನ್ಯಸಂಗ್ರಹ ಬಹು ಕಷ್ಟವಾಗಿದೆ. ಪಾಶ್ಚಾತ್ಯ ದೇಶಗಳು ಪಕೋಟಿಯ ಆಜ್ಞೆ ಪಾಲಿಸುವಂತೆ ನಮ್ಮ ಜನರು ಪಾಲಿಸುತ್ತಿಲ್ಲ. ಇದಕ್ಕೆ ಅದೇ ಕಾರಣ. ಈ ಶಿಸ್ತನ್ನು ಜನರಲ್ಲಿ ತರಲು ಸೇವಾದಳದ ಅದರಲ್ಲೂ ಸ್ವಯಂ ಸೇವಿಕೆಯರು ದುಡಿಯಬೇಕು. ಆಡಂಬರ ಜೀವನವೇ ಇಂದಿನ ಬಡತನಕ್ಕೆ ಕಾರಣ. ದೇಶದ ಬೆನ್ನೆಲುಬಾದ ಯುವತಿಯರು ಶಿಕ್ಷಿತರಾಗಿ ಸರಳ ಜೀವನವನ್ನು ಅವಲಂಬಿಸಬೇಕು. ಯಾವ ವಾದಕ್ಕೂ ಮಣಿಯದೆ, ಸರಿಯಾದ ಶಿಕ್ಷಣ ಪಡೆದು, ಜಾಗೃತರಾದ ಗಾಂಧೀಜಿಯ ಆದರ್ಶ ಪಾಲಿಸಬೇಕು. ದೇಶದ ಉತ್ಪನ್ನ ನ್ಯಾಯವಾಗಿ ಹಂಚಿಕೆಯಾಗುವಂತೆ ಸೇವಾದಳದ ದುಡಿಯಲಿ. ನೀವು ನಿಮ್ಮ ಭಜನ್ಯದ ಜೊತೆಗೆ ರಾಷ್ಟ್ರವನ್ನು ನೀತಿಯಿಂದ ಕಟ್ಟಿರಿ. ಇದೇ ಗಾಂಧೀಜಿಯ ರಾಮರಾಜ್ಯ. ಇದಕ್ಕೆ ಶ್ರಮಿಸಲು ಸರ್ವಶಕ್ತ ನಿಮಗೆ ಶಕ್ತಿ ನೀಡಲಿ.

ಮೈಸೂರು ಭಾರತ ಮಹಿಳಾ ಸೇವಾದಳದ ಶಿಬಿರದಲ್ಲಿ ನಿನ್ನೆ ಬೆಳಿಗ್ಗೆ ೯ ಗಂಟೆಗೆ ಶ್ರೀಯುತ ರಂಗರಾಮಯ್ಯನವರ ... ನೆರವೇರಿತು. ಅನಂತರ ಆಗಮಿಸಿದ್ದ ಹೋಂ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಸ್ವಯಂ ಸೇವಿಕೆಯರಿಗೆ ಹಿತೋಪದೇಶ ಮಾಡುತ್ತಾ ಹೇಳಿದರು.

ಲಂಡನ್ ಕಾಲಿಂಗ್ ಏಷ್ಯಾ

ನಿನ್ನೆಯಿಂದ ಲಂಡನ್ನಿನಲ್ಲಿರುವ ರೇಡಿಯೊ ಕೇಂದ್ರವು ಪ್ರತಿದಿನ ಸಂಜೆ ೬-೪೫ ರಿಂದ ೭-೩೦ರ ವರೆಗೆ 'ಲಂಡನ್ ಕಾಲಿಂಗ್ ಏಷ್ಯಾ' ಎಂಬ ಪ್ರಸಾರವನ್ನು ದಕ್ಷಿಣ ಏಷ್ಯಾ ಮತ್ತು ದೂರ ಪ್ರಾಚ್ಯಗಳಿಗಾಗಿ ಪ್ರಾರಂಭ ಮಾಡಿದೆ. ಏಷ್ಯಾ ವಿಚಾರಗಳಲ್ಲಿ ಬ್ರಿಟನ್ನಿನ ಟೀಕಗಳು, ಅಲ್ಲಿಯ ಮುಖ್ಯ ವಾರ್ತೆ ಮುಂತಾದುವನ್ನೆಲ್ಲಾ ಈ ಕಾಲದಲ್ಲಿ ಪ್ರಸಾರ ಮಾಡಲಾಗುವುದು.

ಕಾಶ್ಮೀರಕ್ಕೆ ಭೇಟಿ

ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಟ್ರಿಗ್ವೆಲಿಯವರ ಕಾರ್ಯದರ್ಶಿ ಮಿ॥ ಆಂಡ್ರೂ ಕಾರ್ಡಿಯರ್‌ರವರು ಕಾಶ್ಮೀರಕ್ಕೆ ಭೇಟಿ ಕೊಡಲಿರುವರು.

ಭಾರತಕ್ಕೆ ಎಂಬ ಬ್ರಿಟಿಷ್ ಯುದ್ಧ-ನೌಕಾ ಸೈನ್ಯದವರು ಕೊರಿಯಾದಲ್ಲಿ ಎಷ್ಟು ಛಳಿಯಾಗಿದ್ದಾಗ್ಯೂ ಕರ್ತವ್ಯನಿರತರಾಗಿ ಹಸನ್ಮುಖಿಗಳಾಗಿರುವ ದೃಶ್ಯ.

ಹಾಲಿನಿಂದ ರಬ್ಬರ್

ಅಮೆರಿಕಾ ವ್ಯವಸಾಯ ಶಾಖೆಯವರು ಸಂಶೋಧನೆಯನ್ನು ನಡೆಸಿ ಹಾಲಿನಿಂದ ರಬ್ಬರ್ ತಯಾರಿಸಿರುವುದನ್ನು ಕಂಡು ಹಿಡಿದಿರುವರು.

೭೧೯ ಜನ ಗಲ್ಲಿಗೆ

ಏಪ್ರಿಲ್ ೨೯ ಮತ್ತು ೩೦ ಈ ಎರಡು ದಿವಸಗಳಲ್ಲಿ ಚೈನಾ ಕಮ್ಯೂನಿಸ್ಟ್ ಸರ್ಕಾರವು ೭೧೯ ಜನರನ್ನು ಗಲ್ಲಿಗೆ ಹಾಕಿರುವುದಾಗಿ ವರದಿಯಾಗಿದೆ.

ಅಕ್ಕಿ ಬೆಳೆ ಸಂಶೋಧನೆ

ದಕ್ಷಿಣ ಏಷ್ಯಾದಲ್ಲಿ ಅಕ್ಕಿಯ ಬೆಳೆಯ ಸಂಶೋಧನೆ ನಡೆಸಲು ಅಮೆರಿಕಾ ವ್ಯವಸಾಯ ಶಾಖೆಯು ತಜ್ಞರನ್ನು ಕಳುಹಿಸಲಿದೆ.

ಪತ್ರವ್ಯವಹಾರ ಪ್ರಕಟಣೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಂಡನ್ ಮತ್ತು ಡೆಮೊಕ್ರಾಟಿಕ್ ಪಕ್ಷದ ನಾಯಕ ಆಚಾರ್ಯ ಕೃಪಲಾನಿಯವರಿಗೆ ನಡೆದ ಪತ್ರವ್ಯವಹಾರ ಪ್ರಕಟವಾಗಿದೆ.

ದುರಂತ ಮರಣ

ಬೆಂಗಳೂರು ಮೇ ೧೩

ನಿನ್ನೆಯದಿನ ಸಂಜೆ ಮಳೆ ಬಂದಾಗ ಗಾಂಧಿ ನಗರದಲ್ಲಿ ಸುಮಾರು ೪ ವರ್ಷದ ಗಂಡು ಮಗು ಚರಂಡಿಯಲ್ಲಿ ಬಿದ್ದು ಮರಣಹೊಂದಿತು.

ನಿನ್ನೆ ಸಂಜೆ ೫-೩೦ ಗಂಟೆ ವೇಳೆಯಲ್ಲಿ ಯಾದವ ಹಾಸ್ಟಲಿನ ಬಳಿ ಆಡುತ್ತಿದ್ದ ಮಕ್ಕಳ ಗುಂಪಿನಲ್ಲಿ ಒಂದು ಮಗು ಮಳೆ ಬಂದಕೂಡಲೇ ಗುಂಪನ್ನು ತಪ್ಪಿಸಿಕೊಂಡು ಬಂದು ಬಾರಿ ಚರಂಡಿಗೆ ಬಿದ್ದಿತು. ಅದು ಧರ್ಮಾಂಬುಧಿ ಕೆರೆಯವರೆಗೂ ಹೋಗಿ ಮೃತವಾಗಿತ್ತೆಂದು ಹೇಳಲಾಗಿದೆ.

೧೧ ಸಾವಿರ ಬಂಗಾರದ ನಾಣ್ಯಗಳ ಪತ್ತೆ

ಪುನರ್ರಚಿತವಾಗುತ್ತಿರುವ ತಿರುವನಂತಪುರದ ಬಳಿ ಶಬರಿಮಲೈ ದೇವಸ್ಥಾನದ ಸುತ್ತಮುತ್ತ ಅಗೆಯುತ್ತಿರುವಾಗ ಸುಮಾರು ೧೧ ಸಾವಿರ ಬಂಗಾರದ ಪುರಾತನ ನಾಣ್ಯಗಳು ಮತ್ತು ಕೆಲವು ಬಂಗಾರದ ವಿಗ್ರಹಗಳು ದೊರೆತಿವೆ.

ಸಂಪಾದಕರು ಮತ್ತು ಪ್ರಕಾಶಕರು:— ಜಿ. ಎಲ್. ಸ್ವಾಮಿ, ಟ್ಯುಟೋರಿಯಲ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಜ್, ಬಿ.ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೫—೧೯೫೧ನೇ ಬುಧವಾರ [ಸಂಚಿಕೆ ೨೦೮

ಸತ್ಯಾಗ್ರಹವೆ ?

ಶಿವಮೊಗ್ಗ ಜಿಲ್ಲಾ ಸಾಗರದಲ್ಲಿ ರೈತರಿಗುಂಟಾಗಿರುವ ಮಹಾ ತೊಂದರೆಗಳನ್ನು ಪರಿಶೀಲಿಸಿ ತಕ್ಕ ಸುವ್ಯವಸ್ಥೆಯನ್ನು ಮಂತ್ರಿಗಳು ಮಾಡದಿದ್ದಲ್ಲಿ ೨೬ನೇ ತಾರೀಖಿನ ನಂತರ ಮಹಾ ಸತ್ಯಾಗ್ರಹದಂತಹ ಕ್ರಮ ಕೈಗೊಳ್ಳಬೇಕಾದೀತೆಂದು ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿರುವರು.

ಸಂಯುಕ್ತ ಸಭೆ

ನೇಪಾಳದ ಗೃಹಸಚಿವರು ನಿನ್ನೆ ಪಂಡಿತ ನೆಹರೂರವರನ್ನು ಭೇಟಿಮಾಡಿ ಮಾತುಕಥೆ ನಡೆಸಿದರು.

ಈದಿನ ಮಧ್ಯಾಹ್ನ ಪಂಡಿತ ನೆಹರೂರವರೊಡನೆ ನೇಪಾಳದ ಮಂತ್ರಿಗಳ ಉಭಯ ಪಕ್ಷದವರ ಅಂತಿಮ ಸಭೆಯು ನಡೆಯುತ್ತದೆ.

ಸಿನಿಮಾ ಮಂದಿರಗಳ ಮೇಲೆ ಹೊಸ ತೆರಿಗೆ

ಶ್ರೀ ಕಡಿದಾಳ್ ಮಂಜಪ್ಪನವರ ನಾಯಕತ್ವದಲ್ಲಿ ಸಾಗರದ ರೈತರ ಸತ್ಯಾಗ್ರಹ ನಡೆಯುವುದೇ ?

ಸಚಿವರು ರಾಜೀನಾಮೆ ಕೊಡಲಾಗುವುದಿಲ್ಲ

ಒದಗಲಿರುವ ಚುನಾವಣಾ ಕಾಲದಲ್ಲಿ ಕೇಂದ್ರ ಸಚಿವ ಮಂಡಲದವರೆಲ್ಲರೂ ರಾಜೀನಾಮೆಯೀಯಬೇಕೆಂದು ಒಬ್ಬ ಸದಸ್ಯರು ಪಾರ್ಲಿಮೆಂಟಿನಲ್ಲಿ ಸಲಹೆಕೊಡಲು ಅದು ಅಸಾಧ್ಯ ಕೆಲಸ. ರಾಜ್ಯಾಂಗ ಪ್ರಕಾರ ಸಚಿವ ಮಂಡಲಿಯು ಇದ್ದೇ ಇರಬೇಕು. ಸುಮಾರು ೩ ತಿಂಗಳ ಕಾಲ ಸಚಿವ ಮಂಡಲಿಯಿಲ್ಲದೆ ಆಡಳಿತ ನಡೆಸಲಾಗುವುದಿಲ್ಲವೆಂದು ಸಚಿವ ಡಾ|| ಬಿ. ಅಂಬೇಡ್ಕರ್ ಉತ್ತರವಿತ್ತರು.

ದರೋಡೆಗಾರರ ದಸ್ತಗಿರಿ

ಲಾಯಿಡ್ಸ್ ಬ್ಯಾಂಕಿನ ದರೋಡೆ ಸಂಬಂಧದಲ್ಲಿ ದೆಹಲಿಯಲ್ಲಿ ದಸ್ತಗಿರಿಯಾದ ಸೋಹನಲಾಲ್ ಮತ್ತು ಸಾಧುರಿಯಾ ದಾಯೂಸ್ ಹರಿನಾರಾಯಣರನ್ನು ಬೊಂಬಾಯಿಗೆ ತರಲಾಗಿದೆ.

ಅಹಮದಾಬಾದಿನಲ್ಲಿ ಇದೇ ಸಂದರ್ಭದಲ್ಲಿ ಬನ್ನಿ ಪ್ರಸಾದ್ ಎಂಬಾತನನ್ನೂ ದಸ್ತಗಿರಿ ಮಾಡಲಾಗಿದೆ. ಇಲ್ಲಿಯವರೆಗೆ ನಾಲ್ವರನ್ನು ಹಿಡಿಯಲಾಗಿದೆ.

ಸೋಹನಲಾಲ್ ಎಂಬುವವನು ಭಾರಿ ವ್ಯಾಪಾರಿ, ದೆಹಲಿಯಲ್ಲಿ ಅನೇಕ ಟ್ಯಾಕ್ಸಿಗಳನ್ನಿಟ್ಟುಕೊಂಡಿರುವವನಲ್ಲದೆ ನಾಲ್ಕು ಹಿಟ್ಟಿನ ಗಿರಣಿಗಳೂ, ಅನೇಕ ಮನೆಗಳೂ ಇವೆ. ಅಲಹಾಬಾದಿನಲ್ಲಿ ಒಂದು ಸಿನಿಮಾ ಮಂದಿರವಿದೆ.

ಹರಿನಾರಾಯಣನೆಂಬುವವನು ಸೋಹನಲಾಲನ ಮಿತ್ರ.

ಇನ್ನೂ ಕೆಲವರನ್ನು ಕೊಲ್ಲಬೇಕಾಗಿದೆ

ನಮ್ಮ ನೀತಿಗೆ ವಿರೋಧವಾಗಿ ಇನ್ನೂ ಕೆಲವರು ನಡೆಯುತ್ತಲಿರುವರು ಅವರನ್ನೂ ಕೊಲ್ಲಬೇಕಾಗಿದೆ ಎಂದು ಪರ್ಷಿಯದ ಫಾದಿಯಾನ್ ಇಸ್ಲಾಂ ಪಕ್ಷದ ನಾಯಕ ಸಯ್ಯದ್ ಮಾಜ್‌ತಾಬ ನವಾಬ್ ಸಫಿಯವರು ಹೇಳಿರುವರು. ಮಾಜಿ ಪ್ರಧಾನಿ ರಜ್‌ಮಾರಾರನ್ನು ಕೊಲ್ಲಲು ತಮ್ಮ ಅನುಯಾಯಿಗಳಿಗೆ ತಾವೇ ತಿಳಿಸಿದ್ದುದಾಗಿಯೂ ಅವರು ಹೇಳಿರುವರು.

ಉದಾರ ದಾನ

ಮೈಸೂರು ಮೇ ೧೫

ನಿವೃತ್ತ ಅಸಿಸ್ಟೆಂಟು ಕಮಿಷನರ್ ಶ್ರೀ ಎಂ. ನಾರಾಯಣರಾಯರು ಮೈಸೂರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಗೆ ದಿವಂಗತ ರಾಜಮಂತ್ರ ಪ್ರವೀಣ ದಿವಾನ್ ಬಹದ್ದೂರ್ ರಾಮವೆ ... ಮತ್ತು ಕುಮಾರ ದಿವಂಗತ ಶ್ರೀ ಕೆ. ಆರ್. ಪೂರ್ಣಾರವರ ದಾನನಿಧಿಯಿಂದ ೧೦೦೦೦ ರೂಪಾಯಿಗಳನ್ನು ಕಳುಹಿಸುತ್ತಾ ಶ್ರೀ ಪೂರ್ಣಾ ರಾಘವೇಂದ್ರರಾಯರ ಆಸ್ತಿಪಾಸ್ತಿಗಳ ಹಕ್ಕುದಾರ ಲಂಡನ್ನಿನಲ್ಲಿ ಮೈಸೂರಿನ ಅಸಿಸ್ಟೆಂಟು ಟ್ರೇಡ್ ಕಮಿಷನರ್ ಶ್ರೀ ಆರ್. ಕೆ. ಮೂರ್ತಿಯವರು ಈ ದಾನವನ್ನು ಒಪ್ಪುವಂತೆ ತಮಗೆ ಅನುಜ್ಞೆ ಪ್ರದಾನಿಸಿಯೂ ಅಲ್ಲದೆ ಈ ಹಣವನ್ನು ಇಂಜನಿಯರಿಂಗ್ ಸಂಸ್ಥೆಯ ಪ್ರಗತಿಗೆ ಉಪಯೋಗಿಸಬೇಕೆಂದು ಕೋರಿದ್ದಾರೆ.

ನಿಮ್ಮ ಕೋರ್ಟು ಕೋರ್ಟಲ್ಲ ಸರ್ಕಾರ ಸರ್ಕಾರವಲ್ಲ

ಹೈದರಾಬಾದ್ ಮಾಜಿ ಮಂತ್ರಿಗಳ ಮೊಕದ್ದಮೆ ವಿಚಾರಣೆ ಕಾಲದಲ್ಲಿ ಅಪಾದಿತ ಸೈಯ್ಯದ್ ಕಾಸಿಂ ರಜ್ವಿಯು ಅಪಾದಿತರ ಮೇಲೆ ಆಪಾದನೆಗಳನ್ನು ಹೊರಿಸಿ ಹೊಸ ಪಟ್ಟಿಯನ್ನು ಹಾಜರ್ಪಡಿಸಿದ ಕಾಲದಲ್ಲಿ ನ್ಯಾಯಾಧೀಶರು ತಪ್ಪುಗಳನ್ನು ಪ್ರಾಸಿಕ್ಯೂಷನ್ನಿಗೆ ತೋರಿಸಕೂಡದೆಂದರು. ಆ ಸಮಯದಲ್ಲಿ ನ್ಯಾಯಾಧೀಶರು ರಜ್ವಿಗೆ ಶಿಸ್ತಿನಿಂದಿರಬೇಕೆಂದರು.

ಶ್ರೀ ರಜ್ವಿ ನಿಮ್ಮ ಕೋರ್ಟನ್ನು ನಾನು ಕೋರ್ಟೆಂದು ಭಾವಿಸುವುದಿಲ್ಲ. ಈ ಸರಕಾರವನ್ನು ಸರಕಾರವೆಂದು ನಾನು ಪರಿಗಣಿಸುವುದಿಲ್ಲ. ವಿಚಾರಣೆ ಕೇವಲ ನಾಟಕದಂತಿದೆಯೆಂದು ಹೇಳಿದರು.

ಭಾರತದ ಟ್ರಂಕ್ ಟೆಲಿಫೋನಿನ ಅಭಿವೃದ್ಧಿ

ಭಾರತ ಸರ್ಕಾರವು ಇನ್ನೂ ೨೨ ರಾಷ್ಟ್ರಗಳೊಡನೆ ಟೆಲಿಫೋನ್ ಸಂಬಂಧವನ್ನಿಟ್ಟುಕೊಳ್ಳಲು ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿದೆ.

ಪಾಕೀಸ್ಥಾನದಲ್ಲಿ ಸೇನಾ ಅಧಿಕಾರಿಗಳ ಬಂಧನ

ಪಾಕೀಸ್ಥಾನ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಿದರೆಂಬ ಅಪಾದನೆಯ ಮೇಲೆ ಪಾಕೀಸ್ಥಾನ ಸೈನ್ಯದ ಮತ್ತು ವಿಮಾನ ಪಡೆಗಳಿಗೆ ಸೇರಿದ ಹತ್ತು ಸೈನ್ಯಾಧಿಕಾರಿಗಳನ್ನು ನಿನ್ನೆ ದಿನ ಬಂಧಿಸಲಾಗಿದೆ. ಇವರೆಲ್ಲರನ್ನು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಲಾಗುವುದು.

ಸೀಟುಗಳನ್ನು ಮೀಸಲಾಗಿಡುವುದಿಲ್ಲ

ಬೊಂಬಾಯಿ ಸರ್ಕಾರವು ಮೆಡಿಕಲ್ ಕಾಲೇಜುಗಳಲ್ಲಿ ಕೆಲವು ಕೋಮಿನವರಿಗಾಗಿ ಕೆಲವು ಸೀಟುಗಳನ್ನು ಮೀಸಲಾಗಿಡುತ್ತಿತ್ತು. ಭಾರತದ ನೂತನ ರಾಜ್ಯಾಂಗಕ್ಕೆ ಈ ಪದ್ಧತಿಯು ವಿರೋಧವಾಗಿರುವುದರಿಂದ ಈ ರೀತಿ ಸೀಟುಗಳನ್ನು ಮೀಸಲಾಗಿಡುವುದಿಲ್ಲವೆಂದು ತಿಳಿಸಿ ಆಜ್ಞೆ ಹೊರಡಿಸಿದೆ.

ಹತ್ತು ನಿಯಮಗಳ ಅಂಗೀಕಾರ

ಭಾರತದ ಪಾರ್ಲಿಮೆಂಟ್‌ನಲ್ಲಿ ಪ್ರಜಾಪ್ರಾತಿನಿಧ್ಯ ಮಸೂದೆಗೆ ಸೂಚಿಸಿರುವ ೧೧೯ ತಿದ್ದುಪಡಿಗೆ ಈದಿನ ಪಾರ್ಲಿಮೆಂಟ್ ದೀರ್ಘ ಚರ್ಚೆಯಾದನಂತರ ೧೦ ತಿದ್ದುಪಡಿಗೆ ತನ್ನ ಒಪ್ಪಿಗೆ ಕೊಟ್ಟಿತು.

ಪಂಡಿತ ನೆಹರೂರವರು ಭಾರತದ ರಾಜ್ಯಾಂಗಕ್ಕೆ ತಿದ್ದುಪಡಿ ಮಂಡಿಸುವ ನಿರ್ಣಯವನ್ನು ಸೋಮವಾರ ಪಾರ್ಲಿಮೆಂಟ್ ಮುಂದೆ ಮಂಡಿಸುವರು.

ತಿರುವಾಂಕೂರ್-ಕೊಚ್ಚಿನ್ ಅಭಿವೃದ್ಧಿ ಯೋಜನೆ

ತಿರುವಾಂಕೂರ್ ಕೊಚ್ಚಿನ್ ಸರ್ಕಾರವು ತಮ್ಮ ದೇಶದ ಅಭಿವೃದ್ಧಿಗಾಗಿ ತಯಾರಿಸಿದ್ದ ೨೬ ಕೋಟಿ ರೂ.ನ ಯೋಜನೆಯನ್ನು ರಾಷ್ಟ್ರೀಯ ಯೋಜನಾ ಸಮಿತಿಯವರೊಡನೆ ಚರ್ಚಿಸಿ ಅಭಿವೃದ್ಧಿ ಕಾರ್ಯವನ್ನು ಮುಂದಿನ ವರ್ಷದಿಂದ ಆರಂಭಿಸುವುದಾಗಿ ತಿರುವಾಂಕೂರು ಕೊಚ್ಚಿನ್ನಿನ ಮುಖ್ಯಮಂತ್ರಿ ಶ್ರೀ ಕೇಶವನ್‌ರವರು ಮದ್ರಾಸಿನಲ್ಲಿ ನಿನ್ನೆ ತಿಳಿಸಿರುವರು.

ಶ್ರೀ ಕೇಶವನ್‌ರವರು ದೆಹಲಿಗೆ ತೆರಳಿದ್ದು ವಾಪಸ್ ತಿರುವಾಂಕೂರಿಗೆ ನಿನ್ನೆದಿನ ಮದ್ರಾಸ್ ಮೂಲಕ ಹೊರಟರು.

ಜಂಖಾನ ಮುತ್ತುರತ್ನಗಂಬಳಿ ತಯಾರಿಕೆ ಮಾತುಕಥೆ

ಸ್ವ. ಸು. ಫೋನ್] ಬೆಂಗಳೂರು ೧೫

ನಿನ್ನೆ ಮದರಾಸ ಮತ್ತು ಮೈಸೂರಿನ ಅಧಿಕಾರಿಗಳ ಸಭೆಯು ರತ್ನಗಂಬಳಿ ಮತ್ತು ಜಮಖಾನೆಗಳ ತಯಾರಿಕೆಯ ಅಭಿವೃದ್ಧಿ ಬಗ್ಗೆ ಪರಿಶೀಲಿಸಲು ಹಣಕಾಸು ಮತ್ತು ಕೈಗಾರಿಕಾ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರ ಛೇಂಬರಿನಲ್ಲಿ ನಡೆಯಿತು. ಮದರಾಸ್ ಸರ್ಕಾರದ ಪರವಾಗಿ ಸಚಿವ ಶ್ರೀ ಪರಮೇಶ್ವರನ್‌ರವರು ಮತ್ತು ಕೈಗಾರಿಕಾ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯು ಈ ಕೈಗಾರಿಕೆಯ ಅಭಿವೃದ್ಧಿಗಾಗಿ ೧೩ ಲಕ್ಷ ರೂ.ನ ಯೋಜನೆಯೊಂದನ್ನು ಒಪ್ಪಿ ಉಭಯ ಸರ್ಕಾರಗಳೂ ಅರ್ಧಾರ್ಧ ಹಣವನ್ನು ಹಾಕಬೇಕೆಂದು ತೀರ್ಮಾನಿಸಿತು.

ಈ ಕೈಗಾರಿಕೆ ಕೇಂದ್ರ ಬಂಗಲೂರ್‌ಪೇಟೆಯಲ್ಲಿರಬೇಕೆ ಅಥವಾ ಬೆಂಗಳೂರಿನಲ್ಲಿಯೇ ಆರಂಭಿಸಬೇಕೆ ಎಂಬುದನ್ನು ಸ್ಥಳ ಪರಿಶೀಲನೆಯಾದನಂತರ ತೀರ್ಮಾನಿಸಲು ಇದಕ್ಕಾಗಿ ಉಪಸಮಿತಿಯನ್ನು ರಚಿಸಲಾಯಿತು.

ಸಿನಿಮಾ ಸೀಟುಗಳ ಮೇಲೆ ನೂತನ ಟ್ಯಾಕ್ಸ್‌ಗಳು

ಕೂಡಲೇ ಜಾರಿಗೆ ಬರುವುದು

ಮೈಸೂರು ಸರ್ಕಾರದವರು ನಿನ್ನೆ ವಿಶೇಷ ಆಜ್ಞೆ ಹೊರಡಿಸಿ ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಕೆ. ಜಿ. ಎಫ್. ಸಿನಿಮಾ ಮಂದಿರಗಳಲ್ಲಿ ೫೦೦ಕ್ಕಿಂತ ಕಡಿಮೆಯಿರುವ ಸೀಟಿಗೆ ಒಂದು ಸೀಟಿಗೆ ೫ ರೂ. ೫೦೦ ರಿಂದ ೮೦೦ ಸೀಟುಗಳಿಗೆ ಪ್ರತಿಸೀಟಿಗೂ ಏಳು ರೂ, ೮೦೦ ಕ್ಕಿಂತ ಹೆಚ್ಚಿಗೆ ಇರುವ ಸೀಟುಗಳಿಗೆ ಸೀಟ್ ಒಂದಕ್ಕೆ ಹತ್ತು ರೂ. ಟ್ಯಾಕ್ಸ್ ವಿಧಿಸಿ ಈ ಆಜ್ಞೆಯು ಕೂಡಲೇ ಜಾರಿಗೆ ಬರುವುದೆಂದು ತಿಳಿಸಿರುವರು.

ಹಾಸನ, ಚಿಕ್ಕಮಗಳೂರು, ಮಂಡ್ಯ, ಕೋಲಾರ, ಶಿವಮೊಗ್ಗಾ ಮತ್ತು ತುಮಕೂರು ಮುಂತಾದ ಕಡೆಗಳಲ್ಲಿ ಮೇಲೆ ಸೂಚಿಸಿರುವ ಸೀಟುಗಳಿಗೆ ಕ್ರಮವಾಗಿ ೩, ೫ ಮತ್ತು ೭ ರೂಪಾಯಿ ತೆರಿಗೆ ವಿಧಿಸಿರುವರು. ಇತರ ಕಡೆಗಳಲ್ಲಿ ಮೇಲ್ಕಂಡ ಸಂಖ್ಯೆಯುಳ್ಳ ಸೀಟುಗಳಿಗೆ ಎರಡು, ಮೂರು ಮತ್ತು ನಾಲ್ಕು ರೂಗಳ ತೆರಿಗೆ ವಿಧಿಸಿರುವರು.

ಹೊಟೇಲು, ಸಿನಿಮಾ ಮಂದಿರ ಶೇಕಡ ೯೦ ರಷ್ಟು ಮುಚ್ಚಿಸಿ

೧. ಬಿಹಾರಿನ ಪ್ರಜೆಗಳ ಆಹಾರದ ಕಷ್ಟನಿವಾರಣೆಗಾಗಿ ಆಹಾರವನ್ನು ಕಳುಹಿಸಿಕೊಡಲು ನಗರದ ರೇಷನ್ ಹೋಲ್ಡರುಗಳು ತಮ್ಮ ಒಂದು ದಿವಸದ ರೇಷನನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕೆಂದೂ ಸಭೆಯು ಪ್ರಾರ್ಥಿಸಿ ಹೀಗೆ ಬಿಡುವ ಧಾನ್ಯವನ್ನೂ ಮತ್ತು ೧೯೫೧ನೇ ಜನವರಿ ಲಾಗಾಯ್ತು ರೇಷನ್ ಹೋಲ್ಡರುಗಳು ಕಾರಣಾಂತರದಿಂದ ಆಯಾಯ ತಿಂಗಳಲ್ಲಿ ತೆಗೆದುಕೊಳ್ಳದೆ ಉಳಿದಿರುವ ಮುಂದೆ ಉಳಿಯಬಹುದಾದ ಕೋಟಾ ಧಾನ್ಯವನ್ನೂ ಸಹ ನಮ್ಮ ಸರ್ಕಾರವು ಬಿಹಾರಿನ ಪ್ರಜೆಗಳ ಉಪಯೋಗಕ್ಕಾಗಿ ಕಳುಹಿಸಿಕೊಡಬೇಕೆಂದು ಈ ಸಭೆಯು ಹೃತ್ಪೂರ್ವಕವಾಗಿ ತೀರ್ಮಾನಿಸಿರುತ್ತದೆ.

೨ ರಾಷ್ಟ್ರಾಧ್ಯಕ್ಷರವರು ಸಂಘದ ವಿಜ್ಞಾಪನಾಪತ್ರಕ್ಕೆ ಕೊಟ್ಟ ಬಹಿರಂಗ ಹೇಳಿಕೆಯನ್ನು ಪರಿಶೀಲಿಸಿ ಆಹಾರದ ಅಭಾವಕ್ಕೂ, ಅನಾರೋಗ್ಯಕ್ಕೂ, ಆರ್ಥಿಕ ತೊಂದರೆಗೂ ಕಾರಣವಾದ ಹೋಟೆಲುಗಳನ್ನೂ ಮತ್ತು ನೇತ್ರರೋಗಗಳಿಗೂ, ಅನೈತಿಕ ವ್ಯಾಪಾರಕ್ಕೂ, ಆರ್ಥಿಕ ಅಭಾವಕ್ಕೂ ಕಾರಣವಾದ ಸಿನಿಮಾಮಂದಿರಗಳನ್ನೂ ಶೇಕಡ ೯೦ ರಷ್ಟನ್ನು ಮುಚ್ಚಿಸುವುದರ ಮೂಲಕ ಜನಜೀವನವನ್ನು ಉತ್ತಮಪಡಿಸಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನೂ ಮತ್ತು ನಮ್ಮ ಸರ್ಕಾರವನ್ನೂ ಒತ್ತಾಯದಿಂದ ಪ್ರಾರ್ಥಿಸುತ್ತದೆ.

೩. ಮುಖ್ಯ ಆಹಾರ-ಪದಾರ್ಥಗಳ ಮತ್ತು ಬಟ್ಟೆಯ ಮೇಲಿನ ಹತೋಟಿಯನ್ನು ಕೂಡಲೇ ರದ್ದುಪಡಿಸಬೇಕೆಂದೂ, ಈಗಾಗಲೇ ಧಾನ್ಯ ಮತ್ತು ಬಟ್ಟೆಯ ಶೇಖರಣೆ ಕಾರ್ಯವು ಪೂರೈಸಿರುವುದರಿಂದ ಹತೋಟಿ ರದ್ದುಪಡಿಸುವವರೆವಿಗೆ ಸರ್ಕಾರದ ಪಡಿತರ ಮತ್ತೂ ಹಂಚಿಕೆಯಲ್ಲಿ ಜನರಿಗೆ ಸಾಲದೆ ಬರುವುದನ್ನು ಕಾಳಸಂತೆಯಲ್ಲಿ ಕೊಳ್ಳುತ್ತಿರುವುದನ್ನು ತಪ್ಪಿಸಲು ಕಂಟ್ರೋಲ್ ಪದಾರ್ಥಗಳು ಫ್ರೀ ಮಾರ್ಕೆಟ್ಟಿನಲ್ಲಿ ದೊರೆಯುವಂತೆ ಸರ್ಕಾರ ಅವಕಾಶ ಕಲ್ಪಿಸಬೇಕು. ಈ ಬಗ್ಗೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಾಗುವುದರ ಹತೋಟಿಯನ್ನು ಇಟ್ಟುಕೊಂಡು, ಮಿತಿಯಾದ ದಾಸ್ತಾನಿನಿಂದ, ನಿಗದಿಯಾದ ಬೆಲೆಯಲ್ಲಿ ಮಾರಾಟಮಾಡುವ ನಿಬಂಧನೆಯಿಂದ ವ್ಯಾಪಾರಸ್ಥರಿಗೆ ಅವಕಾಶಕೊಡಬೇಕೆಂದೂ ಮತ್ತು ನಿತ್ಯಜೀವನಕ್ಕೆ ಅವಶ್ಯಕವಾದ ಪದಾರ್ಥಗಳ ಬೆಲೆಯು ಏರದಂತೆ ನೋಡಿಕೊಳ್ಳಬೇಕೆಂದು ಸಭೆಯು ಸರ್ಕಾರವನ್ನು ಒತ್ತಾಯಪಡಿಸುತ್ತದೆ.

ಮೂವತ್ತು ಜನಗಳನ್ನೊಳಗೊಂಡ ಪ್ರಕೇಷ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯವರಿಗೆ ಅಧಿಕಾರ ವರ್ಗದವರನ್ನೂ, ಅಗತ್ಯವಾದಲ್ಲಿ ಇನ್ನೂ ಕೆಲವು ಸದಸ್ಯರುಗಳನ್ನು ಸೇರಿಸಿಕೊಳ್ಳುವ ಮತ್ತು ಸಂಘಾಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸುವ ಅಧಿಕಾರವನ್ನು ಕೊಡಲಾಯಿತು.

ತಾ|| ೧೩-೫-೧೯೫೧ನೇ ಭಾನುವಾರ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಮುನಿಸಿಪಲ್ ಕೌನ್ಸಿಲರಾದ ಶ್ರೀ ಬಿ. ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಸಿಟಿ ರೇಷನ್‌ಕಾರ್ಡ್ ಹೋಲ್ಡರುಗಳ ಸಂಘದ ಬಹಿರಂಗಸಭೆಯಲ್ಲಿ ಈ ತೀರ್ಮಾನ ಮಾಡಿರುವರು.

* ಅಮೆರಿಕಾದಿಂದ ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಸರಬರಾಯಿಮಾಡುವ ಪರಿಶೀಲನೆಯು ನಿನ್ನೆ ಅಮೆರಿಕಾ ಸೆನೆಟ್ ಸಭೆಯಲ್ಲಿ ಪ್ರಾರಂಭವಾಗಿದೆ.

MYSORE CITY MUNICIPALITY.

NOTIFICATION

Dated 12th May 1951

Notice is hereby given to the inhabitants of the Municipality of Mysore, that the Municipal Council desire to amend the existing bye-law relating to dangerous and offensive trades contained in Chapter XXIV of the Mysore City Municipal Rules and Bye-laws with regard to the levy of license fee for the business of storing for sale petrol and Kerosene in storage godowns and tanks, so as to increase the rate of levy of the licensing fee to Rs. 5 per 1,000 gallons instead of the existing rate of Rs. 2 per 1,000 gallons subject to a minimum of Rs. 25 as against Rs. 14 now levied.

Any inhabitant of the Municipality objecting to the proposed amendment may within one month from the date of this notification send his objections in writing to the Council.

Sd C. Narasimha Moorty
Municipal Commissioner.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಘಾತ್ರುಕುಗಳು ಅಬಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ಕುಂಬಾಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

*

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು

ಚೈನಾಕ್ಕೆ ಸಾಮಾನುಗಳ ರಫ್ತು

ಚೈನಾವಿಗೆ ಯುದ್ಧಕ್ಕೆ ಉಪಯುಕ್ತವಾದ ಯಾವ ಸಾಮಾನುಗಳನ್ನೂ ಕಳುಹಿಸಕೂಡದೆಂದು ವಿಶ್ವಸಂಸ್ಥೆಯ ಮಂಜೂರಾತಿ ಸಮಿತಿಯು ನಿರ್ಣಯ ಮಾಡಿದೆ. ಈ ನಿರ್ಣಯ ರಾಜಕೀಯ ಸಮಿತಿ ಅನಂತರ ಜನರಲ್ ಅಸೆಂಬ್ಲಿಯ ಮುಂದು ಹೋಗುವುದು.

ಸೈನ್ಯದ ಉನ್ನತಾಧಿಕಾರಿಗಳ ಬೆಂಬಲ

ವಿಶ್ವಸಂಸ್ಥೆಯ ಪ್ರಬಲ ಸೈನ್ಯಾಧಿಕಾರಿಗಳೆಲ್ಲರೂ ಕೊರಿಯಾ ಯುದ್ಧವನ್ನು ವಿಸ್ತರಿಸಕೂಡದೆಂಬ ಟ್ರೂಮನ್ನರ ನೀತಿಗೆ ಬೆಂಬಲವಿತ್ತಿರುವರೆಂದು ರಕ್ಷಣಾ ಕಾರ್ಯದರ್ಶಿ ಮಾರ್ಷಲ್‌ರು ಹೇಳಿರುವರು.

ರೆಡ್‌ಕ್ರಾಸ್ ಸಂಸ್ಥೆಯ ಸಹಾಯ

ಆಸ್ಟ್ರೇಲಿಯಾ ರೆಡ್‌ಕ್ರಾಸ್ ಸಂಸ್ಥೆಯು ಭಾರತದಲ್ಲಿರುವ ಆಸ್ಪತ್ರೆ, ಶಿಶುಸಂರಕ್ಷಣಾಲಯ, ಗರ್ಭಿಣಿ ಸ್ತ್ರೀಯರ ಆಸ್ಪತ್ರೆ ಮುಂತಾದುವುಗಳ ಉಪಯೋಗಕ್ಕಾಗಿ ಆಹಾರವನ್ನು ಕಳುಹಿಸಲಿದೆ.

ಬೊಂಬಾಯಿಯಲ್ಲಿ ಕರ್ಫ್ಯೂ ತೆಗೆಯಲಾಯಿತು

ಬೊಂಬಾಯಿಯಲ್ಲಿ ಕಳೆದ ಎರಡು ದಿನಗಳಿಂದ ಪರಿಸ್ಥಿತಿ ಉತ್ತಮಗೊಂಡಿರುವುದರಿಂದ ಕರ್ಫ್ಯೂ ಆಜ್ಞೆಯನ್ನು ತೆಗೆಯಲಾಗಿದೆ. ಸಭೆ ಮತ್ತು ಮೆರವಣಿಗೆ ನಡೆಸಲು ಇದ್ದ ಪ್ರತಿಬಂಧಕ ಸಹ ತೆಗೆದುಹಾಕಲಾಗಿದೆ.

ಆಸ್ಟ್ರೇಲಿಯಾ ಗೋಧಿ ಭಾರತಕ್ಕೆ

ಆಸ್ಟ್ರೇಲಿಯಾವು ೯೦,೦೦೦ ಟನ್ ಗೋಧಿಯನ್ನು ಮಾತ್ರ ಭಾರತಕ್ಕೆ ಸರಬರಾಯಿ ಮಾಡುವುದು, ಹೆಚ್ಚಿಗೆ ಸದ್ಯಕ್ಕೆ ಸಾಧ್ಯವಿಲ್ಲವೆಂದು ಆಸ್ಟ್ರೇಲಿಯಾ ಸರ್ಕಾರವು ತಿಳಿಸಿದೆ.

ಬೈಸಿಕಲ್ ಕಾರ್ಖಾನೆ

ಡೆಹಲಿಗೆ ೨೮ ಮೈಲಿ ದೂರದಲ್ಲಿರುವ ಸೋನೆಪಟ್ ಎಂಬಲ್ಲಿ ಸೈಕಲ್ ಕಾರ್ಖಾನೆಯ ಶಂಕುಸ್ಥಾಪನೆಯನ್ನು ಕೈಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ನೆರವೇರಿಸಿದರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ. ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋ. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೫—೧೯೫೧ನೇ ಗುರುವಾರ [ಸಂಚಿಕೆ ೨೦೯

ಭಾರತಕ್ಕೆ ನ್ಯೂಸ್‌ಪ್ರಿಂಟ್

ಭಾರತಕ್ಕೆ ೧೬,೦೦೦ ಟನ್ ನ್ಯೂಸ್ ಪ್ರಿಂಟನ್ನು ಕಳುಹಿಸಲು ಪಲ್ಪ್ ಮತ್ತು ಪೇಪರ್ ಕಮಾಡಿಟಿ ಗ್ರೂಪ್ ನಿಶ್ಚಯಿಸಿರುವುದಾಗಿ ನ್ಯೂಯಾರ್ಕಿನಲ್ಲಿರುವ ಭಾರತ ಟ್ರೇಡ್ ಕಮಿಷನರ್ ಭಾರತ ಸರ್ಕಾರಕ್ಕೆ ತಿಳಿಸಿರುವರು.

೭೦೦ ಎಕರೆ ಜಮೀನು ದಾನ

ನಲಗೊಂಡಾ ಜಿಲ್ಲೆಯಲ್ಲಿ ಆಚಾರ್ಯ ವಿನೋಬ ಭಾವೆಯವರು ಪ್ರವಾಸ ಕೈಗೊಂಡ ಸಮಯದಲ್ಲಿ ಅಲ್ಲಿಯ ಶ್ರೀಮಂತರು ಬಡವರಿಗೆ ಉಚಿತವಾಗಿ ಹಂಚಲು ೭೦೦ ಎಕರೆ ಜಮೀನನ್ನು ದಾನವಾಗಿ ಕೊಟ್ಟಿರುವರು.

ನೇಪಾಳದ ಮಂತ್ರಿಮಂಡಲದ ಭಿನ್ನಾಭಿಪ್ರಾಯ ಬಗೆಹರಿಯಿತು

ಕೇಂದ್ರ ವಿದ್ಯಾಮಂತ್ರಿ ಮೌಲಾನಾ ಅಜಾದ್‌ರವರ ಪಾಶ್ಚಾತ್ಯ ದೇಶಗಳ ಪ್ರವಾಸ

ಭಾರತ—ಚೈನಾ ಮೈತ್ರಿಯ ಸಂಘ

ಭಾರತದಲ್ಲಿರುವ ಚೈನಾ ರಾಯಭಾರಿಯು ಬೊಂಬಾಯಿನಲ್ಲಿ 'ಭಾರತ ಚೈನಾ ಮೈತ್ರಿಯ ಸಂಘ' ಎಂಬ ನೂತನ ಸಂಘವನ್ನು ಉದ್ಘಾಟಿಸುತ್ತಾ ಭಾರತ ಚೈನಾಗಳಿಗೆ ೨೦೦೦ ವರ್ಷಗಳಿಂದ ಬಾಂಧವ್ಯವು ಬೆಳೆದುಕೊಂಡು ಬಂದಿದೆ ಅದನ್ನು ನಾವು ವೃದ್ಧಿಗೊಳಿಸಬೇಕಾಗಿದೆ. ಪ್ರಪಂಚ ಶಾಂತಿ, ಪ್ರಜಾಸತ್ತಾತ್ಮಕ ಸ್ಥಾಪನೆಗಾಗಿ ನಾವು ದುಡಿಯಬೇಕಾಗಿದೆ ಉಭಯ ರಾಷ್ಟ್ರಗಳಲ್ಲೂ ಪ್ರಾಚೀನ ಸ್ಥಿರಸ್ಥಾಯಿಯಾದ ಸಂಸ್ಕೃತಿಯು ಬೆಳೆದು ಬಂದಿದೆ ಎಂದು ಹೇಳಿರುವರು.

ಆಶಾದಾಯಕವಾಗಿಲ್ಲ

ಕಾಶ್ಮೀರ ಪರಿಸ್ಥಿತಿಯು ಆಶಾದಾಯಕವಾಗಿಯಾಗಲೀ ಅಥವಾ ಉಪಯುಕ್ತವಾಗಿಯಾಗಲೀ ಇಲ್ಲ. ಕಾಶ್ಮೀರ ಮಧ್ಯಸ್ಥಿಕೆಗಾರರಿಗೆ ಈಗಲೂ ವಿಫಲವಾದರೆ, ಉಭಯ ರಾಷ್ಟ್ರಗಳು ಪಂಚಾಯಿತಿ ತೀರ್ಮಾನಕ್ಕೆ ಒಪ್ಪಬೇಕು ಎಂದು ವಿಶ್ವಸಂಸ್ಥೆಯು ತಿಳಿಸಬೇಕು. ಭಾರತ ಒಪ್ಪದಿದ್ದರೂ ಪಾಕಿಸ್ತಾನ ಒಪ್ಪುವುದು ಎಂದು ಪಾಕಿಸ್ತಾನ ವಿದೇಶಾಂಗ ಮಂತ್ರಿ ಮಿ|| ಜಫರುಲ್ಲಾಖಾನರು ಹೇಳಿರುವರು

ಆಹಾರ ಪದಾರ್ಥ ತಿರಸ್ಕಾರ

ಪಾಕಿಸ್ತಾನವು ೨೨೦೦೦ ಟನ್ ಅಕ್ಕಿ ೨೯೦೦೦ ಟನ್ ನುಚ್ಚು ಸರಬರಾಯಿ ಮಾಡಲು ಸಿದ್ಧವಿತ್ತು. ಅದರ ಬೆಲೆಯು ವಿಶೇಷವಾದ್ದರಿಂದ ಅದನ್ನು ತಿರಸ್ಕರಿಸಬೇಕಾಯಿತು. ಬಲೂಚಿಸ್ತಾನವು ಕೊಡಲು ಸಿದ್ಧವಿದ್ದ ೬೬೦೦ ಟನ್ ಅಕ್ಕಿಯನ್ನು ಕಡಮೆ ದರ್ಜೆ ಅಕ್ಕಿಯೆಂದು ತಿರಸ್ಕರಿಸಬೇಕಾಯಿತೆಂದು ಆಹಾರ ಸಚಿವರು ಹೇಳಿರುವರು."

ದೇವರ ಪ್ರತಿಷ್ಠೆ

ಶಬರೀ ಮಲೈ ಮೇಲಿದ್ದ ದೇವರ ವಿಗ್ರಹವನ್ನು ಕಳೆದ ವರ್ಷ ಯಾರೋ ದುರಾತ್ಮರು ಒಡೆದು ಹಾಕಿದ್ದರಷ್ಟೆ. ಆ ದೇವರ ಪುನಃ ಪ್ರತಿಷ್ಠೆಯು ನಾಳಿದ್ದು ನಡೆಯುವುದು

ನೇಪಾಳದ ಭಿನ್ನಾಭಿಪ್ರಾಯ ಬಗೆ ಹರಿಯಿತು

ನೇಪಾಳದಲ್ಲಿ ರಚಿಸಲಾಗಿರುವ ತಾತ್ಕಾಲಿಕ ಸರ್ಕಾರದ ರಾಣಾಗುಂಪಿನ ಮಂತ್ರಿಗಳಿಗೂ ಕಾಂಗ್ರೆಸ್ ಪಕ್ಷದ ಮಂತ್ರಿಗಳಿಗೂ ಇದ್ದ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಎರಡು ಪಕ್ಷದವರೂ ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಪ್ರಧಾನಿ ನೆಹರೂರವರೊಡನೆ ಮಾತುಕಥೆ ನಡೆಸುತ್ತಿದ್ದರಷ್ಟೆ.

ನಿನ್ನೆ ದಿನ ಮಧ್ಯಾಹ್ನ ೩ ಗಂಟೆಗೆ ಪಂಡಿತ ನೆಹರೂರವರ ಸಮ್ಮುಖದಲ್ಲಿ ನಡೆದ ಮಾತುಕಥೆಗಳಿಂದ ಉಭಯಪಕ್ಷದವರಲ್ಲೂ ಸೌಹಾರ್ದಮೂಡಿ ಉಭಯತ್ತರೂ ಕಲೆತು ಒಮ್ಮನಸ್ಸಿನಿಂದ ನೇಪಾಳದ ರಾಜಕೀಯ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸಲು ಶ್ರಮಿಸಬೇಕೆಂದು ನಿರ್ಧರಿಸಿರುವರೆಂದು ತಿಳಿಸಿ ಕೇಂದ್ರ ಸರ್ಕಾರದ ವಿದೇಶಾಂಗ ಇಲಾಖೆಯು ಪ್ರಕಟಣೆ ಹೊರಡಿಸಿದ [illegible] ನೇಪಾಳದ ಮಂತ್ರಿಮಂಡಲ [illegible] ಅಧಿಕಾರ [illegible] ನಿನ್ನೆ ಮಾತುಕಥೆಗಳು ಸುಮಾರು ಮೂರೂವರೆ ಗಂಟೆಯ ಕಾಲ ನಡೆಯಿತೆಂದು ಹೇಳಲಾಗಿದೆ.

ಪುನರ್ವಿಮರ್ಶಿಸಿ

ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು, ಸಂಸ್ಥೆಯನ್ನು ಬಲಪಡಿಸುವ ಬದಲು ಕಾಂಗ್ರೆಸ್ಸನ್ನು ತ್ಯಜಿಸುವುದು ನಿಮ್ಮಂಥ ಯುವಕರಿಗೆ ಯುಕ್ತವಲ್ಲ. ಪ್ರಾಂತ್ಯ ಕಾಂಗ್ರೆಸ್ ಪಕ್ಷದಲ್ಲಿ ಪರಾಜಯರಾದ ಮಾತ್ರಕ್ಕೇ ಮನನೊಂದುಕೊಳ್ಳಬಾರದು, ನಿಮ್ಮ ತೀರ್ಮಾನವನ್ನು ಪುನರ್ವಿಮರ್ಶಿಸಿ ಎಂದು ಕಾಂಗ್ರೆಸ್ ಅಧ್ಯಕ್ಷ ಟಂಡನ್‌ರವರು ಆಂಧ್ರ ಕಾಂಗ್ರೆಸ್ ನಾಯಕ ಪ್ರೊ|| ಎನ್. ಜಿ. ರಂಗಾರವರಿಗೆ ಪತ್ರ ಬರೆದಿರುವರು.

ಹತ್ತಿಗೆ ಬೆಂಕಿ

ಲಾಹೋರಿನ ಪಂಜಾಬು ಹತ್ತಿ ಗಿರಣಿಯಲ್ಲಿ ಬೆಂಕಿ ಅನಾಹುತದಿಂದ ೧೪ ಲಕ್ಷ ರೂಪಾಯಿಗಳ ಬೆಲೆಬಾಳುವ ಹತ್ತಿಯು ನಷ್ಟವಾಗಿದೆ ಎಂದು ವರದಿಯಾಗಿದೆ.

ಮೌಲಾನಾ ಅಜಾದರ ಪಾಶ್ಚಾತ್ಯ ಪ್ರವಾಸ

ಕೇಂದ್ರ ಸರ್ಕಾರದ ವಿದ್ಯಾಮಂತ್ರಿಯವರಾದ ಮೌಲಾನಾ ಅಜಾದ್‌ರವರು ಯೂರೋಪ್ ಮತ್ತು ಮಧ್ಯ ಪ್ರಾಚ್ಯಗಳಲ್ಲಿ ಪ್ರವಾಸ ಮಾಡಲು ನಾಳೆಯ ದಿನ ದೆಹಲಿಯಿಂದ ಹೊರಡುವರು.

ಮೌಲಾನಾ ಅಜಾದರು ಜುಲೈ ಮೂರನೇ ತಾ|| ವಾಪಸ್ ಬರುವರು. ಇವರೊಡನೆ ವಿದ್ಯಾ ಇಲಾಖೆಯ ಸಹ ಕಾರ್ಯದರ್ಶಿ ಪ್ರೊ|| ಹುಮಾಯೂನ್ ಕಬೀರ್‌ರವರು ತೆರಳುವರು.

ಭಾರತದ ಸಹಾಯಕ್ಕೆ ಫುಟ್‌ಬಾಲ್ ಪಂದ್ಯ

ಯುಗೋಸ್ಲಾವಿಯಾವು ಭಾರತದ ಆಹಾರ ಪರಿಸ್ಥಿತಿ ಸುಧಾರಿಸಲು ದ್ರವ್ಯ ಸಹಾಯವೆಸಗುವ ಸಲುವಾಗಿ ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯವನ್ನು ಏರ್ಪಡಿಸುವುದು.

ಮೊಕದ್ದಮೆ ಆರಂಭ

ಪಾಕಿಸ್ತಾನ್ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸಿದರೆಂಬ ಅಪಾದನೆ ಮೇಲೆ ಬಂಧಿಸಲಾಗಿರುವವರ ಮೇಲೆ ತಕ್ಸೀರುಗಳನ್ನು ಹೊರಿಸಿ ಮುಂದಿನ ತಿಂಗಳಿಂದ ವಿಚಾರಣೆ ಆರಂಭಿಸಲಾಗುವುದು

ಆಹಾರಧಾನ್ಯಕ್ಕಾಗಿ ಮತ್ತೆ ಸಮಾಲೋಚನೆ

ಪಾಕೀಸ್ತಾನವು ಭಾರತಕ್ಕೆ ಕೊಡಲಿರುವ ಆಹಾರಧಾನ್ಯದ ಬಗ್ಗೆ ಮಾತುಕಥೆ ನಡೆಸಲು ಆಹಾರ ಇಲಾಖೆಯ ಕಾರ್ಯದರ್ಶಿ ಶ್ರೀ ವಿಷ್ಣು ಸಹಾಯ್‌ರವರು ಕರಾಚಿಗೆ ತೆರಳಿರುವರು.

ಯುದ್ಧ ಹೂಡಲು ಸಿದ್ಧವಿಲ್ಲ

ರಷ್ಯಾದೊಡನೆ ಅಮೆರಿಕಾ ಯುದ್ಧ ಹೂಡಲು ಸಿದ್ಧವಿಲ್ಲ ಎಂದು ಚೀಫ್ ಆಫ್ ಸ್ಟಾಫ್ ಅಧ್ಯಕ್ಷ ಜ|| ಬ್ರಾಡ್ಲೆಯವರು ಹೇಳಿರುವರು.

ಬೊಂಬಾಯಿಯ ಆಹಾರ-ಪರಿಸ್ಥಿತಿಯು ಸುಧಾರಿಸಿದೆಯೆಂದು ಊಟಿಯಲ್ಲಿರುವ ಬೊಂಬಾಯಿ ಗೌರ್ನರ್ ಸರ್ ಮಹಾರಾಜಸಿಂಗರು ತಿಳಿಸಿದ್ದಾರೆ.

ಸರ್. ಎಂ. ವಿ. ಯವರ ಯೋಜನೆ

ಸ್ವಂ ಸು ವರದಿ] ಬೆಂಗಳೂರು ೧೬. ಸರ್. ಎಂ. ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆಯನ್ನು ಇನ್ನು ಒಂದು ವರ್ಷಕಾಲ ಮುಂದುವರಿಸಲಾಗುವುದು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಮೈಸೂರು ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿಸಮಿತಿ ಸಭೆಯು ಇದೇ ೨೦ನೇ ತಾ|| ನಡೆಯಬೇಕಾಗಿದ್ದುದನ್ನು ಮುಂದುವರಿಸಲಾಗಿದೆ.

ಅಸಿಸ್ಟೆಂಟ್ ಇನ್‌ಫರ್‌ಮೇಷನ್ ಆಫೀಸರ್

ಗ್ರಾಮಾಭ್ಯುದಯ ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಜೀರಗೇಕಟ್ಟೆ ಬಸಪ್ಪನವರನ್ನು ಸರ್ಕಾರ ಉಪವಾರ್ತಾ ಶಾಖಾಧಿಕಾರಿಗಳಾಗಿ ೭೦೦-೨೦-೩೦೦ ರೂಗಳ ಸಂಬಳದ ಮೇಲೆ ನೇಮಿಸಲಾಗಿದೆ.

ಸಕ್ಕರೆ ಕಂಪೆನಿ ಛೇರ್ಮನ್

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಜನರಲ್ ಮ್ಯಾನೇಜರನ್ನು ಮಂಡ್ಯ ಸಕ್ಕರೆ ಕಂಪೆನಿ ಛೇರ್ಮನ್ನರಾಗಿ ಅವರ ಕೆಲಸದ ಜೊತೆಗೆ ನೇಮಿಸಲಾಗಿದೆ

ಭಾರತ ಭೂ ವಿಸ್ತೀರ್ಣ

ಭಾರತದ ಭೂ ವಿಸ್ತೀರ್ಣ ೮೧೦.೮ ದಶಲಕ್ಷ ಎಕರೆ, ಇದರಲ್ಲಿ ಬೇಳುವಿದ್ದಿರುವುದು ೩೪೭.೫ ದಶಲಕ್ಷ ಎಕರೆ ೧೯೪೯ರಲ್ಲಿ ಬೆಳೆ ತೆಗೆದು ಭೂ ವಿಸ್ತೀರ್ಣ ೨೫೩.೩ ದಶಲಕ್ಷ ಎಕರೆ.

ಪಾರ್ಲಿಮೆಂಟರಿ ಬೋರ್ಡ್ ಸಭೆ

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಸಭೆಯು ನಿನ್ನೆ ದೆಹಲಿಯಲ್ಲಿ ನಡೆದು ಪೂರ್ವ ಪಂಜಾಬಿನ ಮಂತ್ರಿಮಂಡಲ ಪುನರ್ರಚನೆ ಬಗ್ಗೆ ನಿರ್ಧರಿಸಿದ್ದ ಅಂಶವನ್ನು ಅಲ್ಲಿನ ಪ್ರಧಾನಿ ಡಾ|| ಭಾರ್ಗವರೊಡನೆ ಚರ್ಚಿಸಿತು.

ಮೈಸೂರು ಸರ್ಕಾರದ ಹೊಸ ಕಾನೂನುಗಳು

ಮೈಸೂರು ಸರ್ಕಾರದವರು ಮೇ ೧೧ ನೇ ಒಂದು ವಿಶೇಷ ಗೆಜೆಟ್ ಪ್ರಕಟಿಸಿ ಸಂಸ್ಥಾನಾದ್ಯಂತ (೧) ಶಾಸನಸಭೆಯ ಬಳಿ ಇತರ ಸಭಾ ನಿಷೇಧಾಜ್ಞೆ, (೨) ಸಿನಿಮಾ ನಲ್ಲಿ ಸ್ಥಾನಗಳ ಮೇಲೆ ಹೆಚ್ಚಿಗೆ ತೆರಿಗೆ, (೩) ಉಳುಮೆ ಮಾಡದ ಜಮೀನುಗಳಲ್ಲಿ ವ್ಯವಸಾಯ ಮಾಡುವುದು ಇವುಗಳಿಗೆ ಸಂಬಂಧಪಟ್ಟ ಮಸೂದೆಗಳು ಕೂಡಲೇ ಜಾರಿಗೆ ಬರುವುದಾಗಿ ಪ್ರಕಟಿಸಿರುವರು.

ಕಳೆದ ಶಾಸನಸಭೆಯು ಈ ಮಸೂದೆಗಳಿಗೆ ಅಂಗೀಕಾರವಿತ್ತಿತು. ಈಗ ಮಹಾರಾಜರ ಸಮ್ಮತಿ ಪಡೆದು ಶಾಸನವಾಗಿ ಪರಿಣಮಿಸಿದೆ.

ಈ ಶಾಸನಗಳ ರೀತ್ಯಾ—

೧) ಶಾಸನಸಭೆಯು ನಡೆಯುವ ಪ್ರದೇಶಕ್ಕೆ ಅರ್ಧ ಮೈಲಿ ಆವರಣದಲ್ಲಿ ೫೦ ಕ್ಕೆ ಮೀರಿ ಜನರ ಸಭೆ, ಮುಂತಾದುವು ನಿಷೇಧಿಸಲಾಗಿದೆ.

೨) ಸಿಟಿಗಳಲ್ಲಿರುವ ಸಿನಿಮಾ ಮಂದಿರಗಳು ಪ್ರದರ್ಶನ ಒಂದಕ್ಕೆ ೫ ರಿಂದ ೧೦ ರೂ. ವರೆಗೂ, ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ೩ ರಿಂದ ೭ರ ವರೆಗೆ ಇತರ ಪ್ರದೇಶಗಳಲ್ಲಿ ೨—೪ರ ವರೆಗೆ ತೆರಿಗೆಯನ್ನು ಕೊಡಬೇಕಾಗಿದೆ.

೩) ೧೦ ಎಕರೆಗಿಂತ ಹೆಚ್ಚಾಗಿ ತರಿ ೧೫ ಎಕರೆಗಿಂತ ಹೆಚ್ಚಾಗಿ ಖುಷ್ಕಿ, ಜಮೀನುಳ್ಳವರು ಜಮೀನು ಪಾಳುಬಿಟ್ಟುಕೊಂಡಿದ್ದರೆ ಅದರಲ್ಲಿ ಕಡ್ಡಾಯವಾಗಿ ವ್ಯವಸಾಯಮಾಡಲು ಅಮಲ್ದಾರ್ ಆಜ್ಞೆ ಯಿಡುವರು. ವ್ಯವಸಾಯ ಮಾಡದಿದ್ದಲ್ಲಿ ಆ ಜಮೀನನ್ನು ಸರ್ಕಾರ ವಹಿಸಿಕೊಂಡು ಇತರರಿಗೆ ೫ ವರ್ಷಕಾಲ ವ್ಯವಸಾಯಕ್ಕಾಗಿ ಕೊಡುವುದು. ಹಾಗೆ ವ್ಯವಸಾಯ ಮಾಡುವವರು ಬೆಳೆಯಲ್ಲಿ ಖುಷ್ಕಿಯಲ್ಲಿ ಕಾಲುಭಾಗ, ತರಿಯಲ್ಲಿ ಮೂರನೇ ಒಂದು ಸರ್ಕಾರಕ್ಕೆ ಕೊಡಬೇಕಾಗಿದೆ.

೪) ಲ್ಯಾಂಡ್‌ರೆವಿನ್ಯೂ ಮೇಲೆ ರೂ. ಒಂದಕ್ಕೆ ಅರ್ಧ ಆಣೆ, ವಿದ್ಯಾಭ್ಯಾಸ ತೆರಿಗೆ ವಿಧಿಸುತ್ತಲಿರುವ ಬಾಬುಗಳ ಮೇಲೆ ರೂ. ಗೆ ಒಂದಾಣೆಗೆ ವಿಸ್ತರಿಸಿ ಜನಾರೋಗ್ಯ ತೆರಿಗೆಯನ್ನು ವಿಧಿಸಲು ನಾಲ್ಕನೇ ಕಾನೂನು ಸಂಬಂಧಿಸಿದೆ.

† ಪ್ರಾಣಭಿಕ್ಷೆಯನ್ನು ಪಡೆದ ೧೨ ಜನ ತೆಲಂಗಾಣದ ಕೈದಿಗಳು ಹೈದರಾಬಾದಿನಿಂದ ಇತರ ಪ್ರಾಂತ್ಯಗಳಿಗೆ ಕಳುಹಿಲಾಗುವುದೆಂದು ತಿಳಿಯಬರುತ್ತದೆ.

* ಬಳ್ಳಾರಿಯಲ್ಲಿ ಸಚಿವ ಶ್ರೀ ಸೀತಾರಾಮರೆಡ್ಡಿಯವರು ಮೊನ್ನೆ ದಿನ ವಸ್ತುಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು.

೧೯೫೬ಕ್ಕೆ ರೈಲ್ವೇ ಸಾಮಾನುಗಳಲ್ಲಿ ಸ್ವಪರಿಪೂರ್ಣತೆ

ಭಾರತ ಸರ್ಕಾರವು ರೈಲ್ವೆಗೆ ಬೇಕಾದ ವಿದ್ಯುಚ್ಛಕ್ತಿ ಸಾಮಾನುಗಳನ್ನು ಮತ್ತು ಇಂಜನ್‌ಗೆ ಸಂಬಂಧಿಸಿದ ಹಲವು ಸಾಮಾನುಗಳನ್ನು ಬಿಟ್ಟು ಮಿಕ್ಕ—ಮಿಷನ್ ಮತ್ತು ಸ್ಪೇರ್ ಪಾರ್ಟ್ಸ್‌ಗಳಲ್ಲಿ ೧೯೫೬ನೇ ಇಸವಿಗೆ ಸ್ವಪರಿಪೂರ್ಣತೆ ಸಾಧಿಸುವುದೆಂದು ಆಶಿಸಲಾಗಿದೆ.

ಭಾರತ ಸರ್ಕಾರವು ೫೨ ಇಂಜನ್ ತಯಾರಿಸಲು ನಿರ್ಧರಿಸಿದೆ.

ಭೂತಾನಕ್ಕೆ ೩೭ ಮೈಲಿ ಸೇರಿತು

ಅಸ್ಸಾಮಿನ ಗಡಿಯನ್ನು ನಿರ್ಧರಿಸಿದ ಸಮಿತಿಯ ಸಲಹೆಯಂತೆ ೧೯೪೯ನೇ ಇಸವಿ ಕರಾರಿನ ಪ್ರಕಾರ ಅಸ್ಸಾಮ್‌ಗೆ ಸೇರಿದ್ದ ೩೭ ಚದುರ ಮೈಲಿ ಪ್ರದೇಶವು ಭೂತಾನಕ್ಕೆ ಸೇರುವುದು.

ಭಾರತದ ಜನಗಣತಿ ವರದಿ

ಭಾರತದ ಜನಗಣತಿ ವರದಿಯು ೧೯೫೨ನೇ ಜೂನ್ ವೇಳೆಗೆ ಪ್ರಕಟಿಸಲಾಗುವುದೆಂದು ಭಾರತ ಜನಗಣತಿ ಕಮಿಷನರ್ ಶ್ರೀ ಆರ್. ಎ. ಗೋಪಾಲಸ್ವಾಮಿಯವರು ಹೇಳಿರುವರು.

ಅಮೆರಿಕಾ ಎಚ್ಚರಿಕೆ

ಪರ್ಷಿಯಾ ಸರ್ಕಾರದ ಎಣ್ಣೆ ರಾಷ್ಟ್ರೀಕರಣ ಕ್ರಮವು ಸಮಂಜಸವಾಗಿಲ್ಲವೆಂದು ಅಮೆರಿಕಾ ಪರ್ಷಿಯಾಕ್ಕೆ ಎಚ್ಚರಿಕೆಯಿತ್ತಿದೆ.

* ಮದರಾಸಿನಲ್ಲಿ ಲೋತಾ ಮಾಡಿದ್ದ ಶೇಕಡಾ ಐವತ್ತು ಭಾಗ ವಿದ್ಯುಚ್ಛಕ್ತಿಯನ್ನು ಈಗ ಸರಬರಾಜು ಮಾಡಲಾಗಿದೆ.

೬ ಮಂದಿ ದುರ್ಮರಣ

ಬೆಂಗಳೂರು ಮೇ ೧೭. ನರಸಿಂಹರಾಜರಸ್ತೆಯ ಸಿಲ್ವರ್‌ಜೂಬಿಲಿ ಪಾರ್ಕ್ ರಸ್ತೆಯ ಬಳಿ ರಾತ್ರಿ ೮-೩೦ ಗಂಟೆಯಲ್ಲಿ ಒಂದು ಮನೆಯು ಕುಸಿದು ಬಿದ್ದು ೬ ಮಂದಿ ಕೂಡಲೇ ಮೃತರಾದರು. ಆ ಸಂಸಾರದಲ್ಲಿ ಒಂದು ಮಗು ಒಬ್ಬ ಮುದುಕ ಮಾತ್ರ ಉಳಿದುಕೊಂಡಿರುವರು.

† ತಿದ್ದುಪಡಿ:- ೧೭-೫-೫೧ರ ಪತ್ರಿಕೆಯಲ್ಲಿ 'ಸಿನಿಮಾ ಮಂದಿರಗಳ ಮೇಲೆ ನೂತನ ಟ್ಯಾಕ್ಸ್‌ಗಳು' ಎಂಬ ಶಿರೋನಾಮೆಯಲ್ಲಿ ಒಂದು ಸೀಟಿಗೆ ೫ ರೂ. ಎಂಬುವುದು ಒಂದು ಷೋಗೆ ಅದೇರೀತಿ ಸೀಟ್ ಎಂದಿರುವ ಕಡೆಯಲ್ಲಿ ಒಂದು ಷೋ ಎಂದು ಓದಿಕೊಳ್ಳಬೇಕು.

ದ್ವಾರಕಾನಾಥ ದೇವಾಲಯಕ್ಕೆ ಹರಿಜನರ ಪ್ರವೇಶ

ದ್ವಾರಕಾನಾಥ ದೇವಸ್ಥಾನಕ್ಕೆ ಭಾರತ ರಾಷ್ಟ್ರಾಧ್ಯಕ್ಷರು ಭೇಟಿಯಿತ್ತ ಫಲವಾಗಿ ದೇವಸ್ಥಾನಕ್ಕೆ ಹರಿಜನರ ಪ್ರವೇಶ ಮತ್ತು ಪೂಜೆಗೆ ವಿಶೇಷ ಸೌಕರ್ಯಗಳನ್ನು ಕಲ್ಪಿಸಲುಅಧಿಕಾರಿಗಳು ನಿಶ್ಚಯಿಸಿರುವರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಬಿ.ಹೆಚ್. ರಾಮರಾವ್, ಬಿ.ಎಸ್.ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್. ಮೈಸೂರು.

Municipal Offices, Mysore.
10—5—1951

NOTIFICATION

—★—

Notice is hereby given to the inhabitants of the Municipality that the Municipal Council desire to amend the existing byelaws for Barber-Shops, Hair-dressing and Shaving Saloons framed under Section 51 (1) (b) (vii) of the Mysore City Municipalities Act 1933, so as to reduce the levy of license from the present rate of Rs. 5/- Sanctioned in G. O. No. L. 5930—1/CM. 27-80-6 dated 1—9—1950 to Rs. 3/—per annum on each Barber-Shop, Hair dressing or Shaving Saloon.

Any inhabitant of the Municipality objecting to the Proposed amendment may within one month from the date of this notice send his objections in writing to the Municipal Council.

[SJ] C. NARASIMHA MOORTHY
Municipal Commissioner

* ಭಾರತದ ನೂತನ ತರಪೇತು ಹಡಗುಗಳಾದ ವೇಟಾಲವನ್ನು ವಿಶಾಖ ಪಟ್ಟಣದಲ್ಲಿ, ಭದ್ರವನ್ನು ಕಲ್ಕತ್ತಾದಲ್ಲಿ ಇಡಲಾಗಿದೆ.

ಪ್ರಭಾ * ೧೮-೫-೫೧ ರಿಂದ
ಅಮೋಘ ಪ್ರಾರಂಭ
ಪ್ರತಿದಿನ ೩ ಆಟಗಳು

ಲಾ ಜ ವಾ ಬ್
[ಹಿಂದಿ]
ಪಾತ್ರ—ರೆಹನ, ಕುಲ್‌ದೀಪ್, ಸೋಹರ್, ಡೇವಿಡ್.

ವುಡ್‌ಲ್ಯಾಂಡ್ಸ್
ದಿನವಹಿ ೩ ಆಟಗಳು
ತಾ॥ ೧೧—೫—೫೧ರಿಂದ
ಬಿರ್ಹಾ ಕಿ ರಾತ್
ಪಾತ್ರ—ನರ್ಗೀಸ್, ದೇವಾನಂದ್

ರ ಣ ಜಿ ತ್
೧೧—೫—೫೧ರಿಂದ
-:: ಸ ಗಾ ಯಿ ::-
ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಮಿ॥ ಆಲ್‌ಫರ್ಡ್ ರೋಬೆನ್ಸ್

ರಾಜೀನಾಮೆಯಿತ್ತ, ಮಿ॥ ಬೆವಾನ್ ರವರ ಸ್ಥಾನದಲ್ಲಿ ನೇಮಕವಾಗಿರುವ ಬ್ರಿಟನ್ನಿನ ಕಾರ್ಮಿಕ ಸಚಿವರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೫—೧೯೫೧ನೇ ಶುಕ್ರವಾರ [ಸಂಚಿಕೆ ೨೧೦

ಪ್ರಾಂತೀಯ ರಕ್ಷಣಾ ದಳ

ಉತ್ತರ ಪ್ರದೇಶದ ಪ್ರಾಂತೀಯ ರಕ್ಷಣಾ ದಳವು ಭೂ ಸೈನ್ಯವಾಗಿ ಪರಿವರ್ತನೆಯಾಗಿದೆ. ಇದರಲ್ಲಿ ೬ ಲಕ್ಷ ಜನರಿರುವರು ಪ್ರಾಂತ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಪೋಲೀಸ್ ಮತ್ತು ಮಿಲಿಟರಿಯವರೊಡನೆ ಸಹಕರಿಸಿ ಸಹಾಯ ನೀಡಲು ಈ ದಳವು ೧೯೪೭ರಲ್ಲಿ ಸ್ಥಾಪಿತವಾಯಿತು.

೬ ತಿಂಗಳು ಕಠಿಣ ಸಜಾ ೧೦೦೦ ರೂ. ಜುಲ್ಮಾನೆ

ಬಿರಿಕೆ ತುಪ್ಪ ಮಾರಿದ ಅಪಾದನೆಗಾಗಿ ಒಬ್ಬ ತುಪ್ಪದ ವ್ಯಾಪಾರಿಗೆ ಅಸಮದಾಬಾದಿನಲ್ಲಿ ೬ ತಿಂಗಳ ಕಠಿಣ ಸಜ ೧೦೦೦ ರೂ. ಜುಲ್ಮಾನೆ ವಿಧಿಸಲಾಗಿದೆ.

ಕಾಂಗ್ರೆಸ್ಸಿಗೆ ಆಚಾರ್ಯ ಕೃಪಲಾನಿಯವರ ರಾಜೀನಾಮೆ

ಪಂಡಿತ ನೆಹರೂರವರು ವಿಶ್ವಭಾರತಿ ವಿಶ್ವವಿದ್ಯಾನಿಲಯಕ್ಕೆ ಛಾನ್ಸಿಲರ್

ಆಚಾರ್ಯ ಶ್ರೀ ಕೃಪಲಾನಿಯವರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತಿರುವರು. ಅವರು ಪಾರ್ಲಿಮೆಂಟ್ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಿಲ್ಲ ಮತ್ತು ಪಾರ್ಲಿಮೆಂಟಿನಲ್ಲಿ ಯಾವ ವಿರೋಧಪಕ್ಷವನ್ನು ಕಟ್ಟುವುದಿಲ್ಲವೆಂದು ರಾಜೀನಾಮೆ ಪತ್ರದಲ್ಲಿ ತಿಳಿಸಿರುವರು.

ಶ್ರೀ ಕೃಪಲಾನಿಯವರು ಈಗ ಮದರಾಸಿನಲ್ಲಿರುವರು. ಮಿ|| ರಫಿ ಅಹಮದ್ ಕಿದ್ವಾಯಿಯವರು ನಿನ್ನೆ ಶ್ರೀ ಕೃಪಲಾನಿಯವರನ್ನು ಭೇಟಿಮಾಡಲು ಬಂದಿದ್ದರು.

ಅಲಂಕಾರ ಶಾಸ್ತ್ರಕ್ಕೆ ಸಂಭಾವನೆ

ಮೈಸೂರು ಫಸ್ಟ್‌ಗ್ರೇಡ್ ಕಾಲೇಜಿನ ಸಂಸ್ಕೃತ ಅಧ್ಯಾಪಕರಾಗಿದ್ದು ಈಗ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೌಲಗಿ ಶೇಷಾಚಾರ್ಯರು ಕನ್ನಡದಲ್ಲಿ ಬರೆದಿರುವ 'ಅಲಂಕಾರಶಾಸ್ತ್ರ' ಎಂಬ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದವರು ೧೬೦೦ ರೂಪಾಯಿಗಳ ಸಂಭಾವನೆಯನ್ನು ಕೊಟ್ಟಿದ್ದಾರೆ. ಇದೇ ಗ್ರಂಥಕ್ಕೆ ಮದರಾಸ್ ಸ್ಕೂಲ್‌ಬುಕ್ ಅಂಡ್ ಲಿಟ್ರೇಚರ್ ಸೊಸೈಟಿಯವರು ೫೦ ರೂಪಾಯಿಗಳ ಸಂಭಾವನೆಯನಿತ್ತಿದ್ದಾರೆ.

ವಿಶೇಷ ಕಾಂಗ್ರೆಸ್ ಅಧಿವೇಶನ

ಆಚಾರ್ಯ ಕೃಪಲಾನಿ ಮತ್ತು ಅವರ ಅನುಯಾಯಿಗಳು ಕಾಂಗ್ರೆಸ್ ತ್ಯಜಿಸುವುದನ್ನು ತಡೆಗಟ್ಟಲು ಕಾರ್ಯಕ್ರಮವೆಸಗಲು ಒಂದು ವಿಶೇಷ ಕಾಂಗ್ರೆಸ್ ಅಧಿವೇಶನವನ್ನು ನಡೆಯಬೇಕೆಂದು ಕೆಲವು ಕಾಂಗ್ರೆಸ್ ಮುಖಂಡರ ಕೋರಿಕೆಗೆ ಪ್ರಧಾನಿ ನೆಹರೂ ಸಮ್ಮತಿಸಿರುವರೆಂದು ತಿಳಿಯಬರುತ್ತದೆ. ಈ ಕೋರಿಕೆಯು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಂಡನ್ನರಿಗೆ ಹೋಗಲಿದೆ.

ಬಹಿರಂಗವಾಗಿ ಮರಣ ಶಿಕ್ಷೆ

ಇಡ್ಲ ಎಂಬ ೪೦ ವರ್ಷದ ಘೋರ ಡಕಾಯಿತನನ್ನು ಸಿಂಧ್ ಸರ್ಕಾರದ ಆಜ್ಞೆ ಪ್ರಕಾರ ಉತ್ತರ ಸಿಂಧ್‌ನ ಶಿಕಾರಿಪುರದಲ್ಲಿ ಬಹಿರಂಗವಾಗಿ ೧೫೦೦೦ ಪ್ರೇಕ್ಷಕರ ಎದುರಿನಲ್ಲಿ ಗಲ್ಲಿಗೆ ಹಾಕಲಾಯಿತು.

ಟೆಲಿಫೋನ್ ದರ

ಬೆಂಗಳೂರು ೧೭

ಮೈಸೂರು ವಾಣಿಜ್ಯ ಸಂಸ್ಥೆಯವರ ಮನವಿಯ ಮೇಲೆ ಮೈಸೂರು ಟೆಲಿಫೋನ್ ವ್ಯವಸ್ಥೆಗೆ ಸೇರಿದ ಟೆಲಿಫೋನ್‌ಗಳ ಬಾಡಿಗೆ ದರವನ್ನು ೧೯೫೧ನೇ ಡಿಸೆಂಬರ್ ಅಂತ್ಯದವರೆಗೆ ಏರಿಸಲಾಗುವುದಿಲ್ಲ. ೧೯೫೨ನೇ ಜನವರಿ ಒಂದನೇ ತಾರೀಖಿನಿಂದ ಹೊಸ ದರಗಳಲ್ಲಿ ಸ್ವಲ್ಪ ವ್ಯತ್ಯಾಸಮಾಡಿ ಆ ದರಗಳನ್ನು ಮತ್ತೊಂದು ವರ್ಷ ಪರ್ಯಂತ ಜಾರಿಯಲ್ಲಿರುವಂತೆ ಅಂಚೆ ಮತ್ತು ತಂತಿ ಇಲಾಖಾಧಿಕಾರಿಗಳು ಆಜ್ಞೆ ಮಾಡಿರುವರು.

ಮುಖ್ಯಮಂತ್ರಿ ಸುತ್ತ ಆಯುಧಪಾಣಿಗಳು

ಪರ್ಷಿಯಾ ಮುಖ್ಯಮಂತ್ರಿಯ ಜೀವವನ್ನು ತೆಗೆದುಹಾಕುತ್ತೇವೆಂಬ ಬೆದರಿಕೆಯನ್ನು ಶಾಸನ ಸಭೆಯಲ್ಲಿ ಮಂತ್ರಿಗಳು ಹೊರಗೆಡಹಿದರು. ಅವರ ಜೀವಾಪಾಯವಾಗದಂತೆ ಸದಸ್ಯರೆಲ್ಲರೂ ಅವರನ್ನು ಸುತ್ತುಗಟ್ಟಿ ಕಾಯುತ್ತಿರುವರು.

ಅವರು ರಾತ್ರಿ ಹಗಲೆಲ್ಲಾ ಅಲ್ಲಿಗೆ ಶಾಸನ ಸಭಾ ಭವನದಲ್ಲಿಯೇ ಒದಗಿಸಲಾಗಿದೆ. ಅಲ್ಲಿಯೇ ವಾಸವಾಗಿರುವರು ಸ್ವಾಸ್ಥ್ಯ ನೆಮ್ಮದಿ ಜಾಗರೂಕತೆಯಿಂದ ಮನೆಗಹೋಗಿ ಬರುತ್ತಲಿರುವರು,

† ನಿನ್ನೆ ಸಂಜೆ ಮಳೆ ಬಂದಾಗ ಹಳೇ ಆಗ್ರಹಾರದ ಒಂದು ಮನೆಯಲ್ಲಿ ವಿದ್ಯುಚ್ಛಕ್ತಿ ಮೀಟರಿಗೆ ಸಿಡಿಲುಬಡಿದು ಮೀಟರು ಬಿದ್ದುಹೋಗಿ ಮನೆಯ ಸೂರಿಗೆ ಬೆಂಕಿ ಹಿಡಿಯಿತು. ಕೂಡಲೇ ಆರಿಸಲಾಯಿತು. ಯಾವ ಅಪಾಯವೂ ಸಂಭವಿಸಲಿಲ್ಲ.

ಬಹಿರಂಗಪಡಿಸಲಾಗುವುದಿಲ್ಲ

ಸೆನೆಟ್ ಮುಂದೆ ಸಾಕ್ಷಿಯನ್ನು ಕೊಡುತ್ತಾ ಅಮೆರಿಕಾ ರಕ್ಷಣ ಕಾರ್ಯದರ್ಶಿ ಮಿ|| ಮಾರ್ಷಲ್‌ರವರು ಜನರಲ್ ಮೆಕಾರ್ಥರ ನಿವೃತ್ತಿ ಮುನ್ನ ವೈಟ್‌ಹೌಸ್‌ನಲ್ಲಿ ನಡೆದ ಬರೂರು ಸಭೆಯ ಕಾರ್ಯಕಲಾಪಗಳನ್ನು ತಾವು ಬಹಿರಂಗ ಪಡಿಸಲಾಗುವುದಿಲ್ಲವೆಂದು ಹೇಳಿರುವರು. ಇದು ಪರಿಣಾಮವೇನೆಂಬುದನ್ನು ಪರಿಶೀಲಿಸಬೇಕಾಗಿದೆ ಎಂದು ಹೇಳಲಾಗಿದೆ.

ಭಾರತಕ್ಕೆ ಅಮೆರಿಕಾ ಆಹಾರ

ಭಾರತಕ್ಕೆ ಅಮೆರಿಕಾ ೨೦ ಲಕ್ಷ ಟನ್ ಆಹಾರವನ್ನು ಸಾಲರೂಪವಾಗಿ ಕೊಡಬಹುದೆಂದು ಅಮೆರಿಕಾ ಸೆನೆಟ್ ಸಭೆಯು ಅಂತ್ಯವಾಗಿ ನಿರ್ಧರಿಸಿದೆ.

ಭಾರತವು ಈ ಸಾಲವನ್ನು ಹಣದ ರೂಪದಲ್ಲಿ ತೀರಿಸಬಹುದು. ಆದರೆ ಇಷ್ಟಪಟ್ಟಲ್ಲಿ ಪದಾರ್ಥಗಳನ್ನು ಕೊಟ್ಟು ಸಾಲ ತೀರಿಸಬಹುದು. ಮ್ಯಾಂಗನೀಸ್ ಮತ್ತು ಮೋನೋಸೈಟ್ ಲೋಹಗಳನ್ನು ಸಾಮಾನು ರೂಪದಲ್ಲಿ ಸಾಲ ತೀರಿಸುವುದಾದರೆ ಕೊಡಬೇಕು. ಈ ಹಣಕ್ಕೆ ಬರುವ ಬಡ್ಡಿಯನ್ನು ಭಾರತದಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಲಿರುವ ಅಮೆರಿಕನ್, ಅಮೆರಿಕಾದಲ್ಲಿ ವಿದ್ಯಾಭ್ಯಾಸಂಗ ಮಾಡುವ ಭಾರತೀಯರಿಗಾಗಿ ಖರ್ಚು ಮಾಡಬೇಕು ಎಂದು ತೀರ್ಮಾನವಾಗಿದೆ

ಸರ್ ಮಿರ್ಜಾರವರ ಪ್ರಯಾಣ

ಸ್ವಂ. ಸು. ಫೋ.] ಬೆಂಗಳೂರು ೧೭

ವಿಶ್ವಸಂಸ್ಥೆಯು ಇಂಡೋನೇಷ್ಯಾಕ್ಕೆ ಟೆಕ್ನಿಕಲ್ ಪರಿಣತರನ್ನಾಗಿ ಸರ್ ಮಿರ್ಜಾ ಇಸ್ಮೇಲ್‌ರವರನ್ನು ನೇಮಿಸಿರುವರಷ್ಟೆ. ಸರ್ ಮಿರ್ಜಾರವರು ತಮ್ಮ ನೂತನ ಹುದ್ದೆಯ ಅಧಿಕಾರ ವಹಿಸಿಕೊಳ್ಳಲು ಈದಿನ ಬೆಂಗಳೂರಿನಿಂದ ವಿಮಾನದಲ್ಲಿ ಕಲ್ಕತ್ತಾವಿಗೆ ತೆರಳಿದರು. ಅವರು ಅಲ್ಲಿಂದ ಜಕಾರ್ತವಿಗೆ ತೆರಳುವರು.

ರಾಜ್ಯಾಂಗಕ್ಕೆ ತಿದ್ದುಪಡಿ ಚರ್ಚೆ

ಪಂಡಿತ ನೆಹರೂ ಸೂಚಿಸಿರುವ ರಾಜ್ಯಾಂಗದ ತಿದ್ದುಪಡಿಗಳ ವಿಷಯದಲ್ಲಿ ನಿನ್ನೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯಿತು. ಅಖಿಲ ಭಾರತ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷ ಶ್ರೀ ದೇಶಬಂಧು ಗುಪ್ತರವರು ವಾಕ್ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕೆ ಈಗ ಸೂಚಿಸಿರುವ ತಿದ್ದುಪಡಿಯನ್ನು ಅಖಿಲ ಭಾರತ ಪತ್ರಿಕಾಕರ್ತರ ಸಲಹೆಯನ್ನೇ ಪಡೆಯದೇ ತಂದಿರುವುದಕ್ಕಾಗಿ ಟೀಕಿಸಿದರು.

ಶ್ರೀಗಳಾದ ಪಂಡಿತ ಕುಂಜ್ರು, ಕಾಮತ್ ಮುಂತಾದವರೂ ಈಗಿನ ತಿದ್ದುಪಡಿಯು ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದೆಂದು ಹೇಳಿದರು.

ಸರ್ಕಾರಿ ಆಜ್ಞೆ

ಸ್ವಂ. ಸು. ಫೋನ್] ಬೆಂಗಳೂರು ೧೭

* ಮೆಣಸಿನಕಾಯಿ, ಅಡಿಕೆ, ಕಬ್ಬು, ಬೆಳ್ಳುಳ್ಳಿ, ದ್ರಾಕ್ಷಿ ಇವುಗಳನ್ನು ವಾಣಿಜ್ಯ ಬೆಳೆಗಳೆಂದು ಸರ್ಕಾರ ಆಜ್ಞೆಮಾಡಿದೆ

* ೧೯೫೧-೫೨ ನೇ ಸಾಲಿಗೆ ವನಮಹೋತ್ಸವ ಖರ್ಚಿಗಾಗಿ ೧೫,೦೦೦ ರೂ. ಮಂಜೂರಾಗಿದೆ.

* ಇನ್ನು ಮುಂದೆ ೧೯೪೮ ನೇ ಕನಿಷ್ಠ ವೇತನ ಕಾನೂನು ಬೀಡಿ ನಶ್ಯ ಮತ್ತು ರಸಾಯನಿಕ ವಸ್ತುಗಳ ಕೈಗಾರಿಕೆಗೂ ಅನ್ವಯಿಸುವುದು.

ಒಲಂಪಿಯಾ * 17—7—51 ರಿಂದ ಯಶಸ್ವಿಯಾದ 2ನೇ ವಾರ

ಸುಧಾ ಪಿಕ್ಚರ್ಸ್‌ರವರ ಸಂಗೀತ ಮತ್ತು ನೃತ್ಯಗಳಿಂದ ಕೂಡಿದ ಉತ್ಕೃಷ್ಟ ಚಿತ್ರ

* ಸಂಗೀತ *

ಪಾತ್ರ— ಶ್ಯಾಮ್, ನಿಗಾರ್, ಮುಮ್ತಾಜ್ ಅಲಿ, ಪ್ರಾಣ್

ಬೆಳಗಿನ ಪ್ರದರ್ಶನ — T — 18-5-51 ರಿಂದ

ಅಶೋಕ್ ಕುಮಾರ್, ಮುಮ್ತಾಜ್ ಶಾಂತಿ ಪಾತ್ರವಹಿಸಿರುವ ಬಾಂಬೆ ಟಾಕೀಸ್‌ರವರ

—:: ಕಿಸ್ಮತ್ ::—

ಪಾತಕಿಗಳ ವಿಚಾರಣೆ

ಪಾಕಿಸ್ಥಾನದಲ್ಲಿ ಬುಡಮೇಲು ಮಾಡಲು ತೊಡಗಿದ್ದರೆಂಬ ಆಪಾದನೆ ಮಾಡಿರುವವರ ವಿಚಾರಣೆಯು ಮುಂದಿನ ವಾರದ ಮೊದಲನೇ ವಾರದಲ್ಲಿ ಇದಕ್ಕಾಗಿ ನೇಮಿಸಿರುವ ವಿಶೇಷ ಸಭೆಯು ಪ್ರಾರಂಭ ಮಾಡಲಿದೆ.

ಇದೇ ಆಪಾದನೆಮೇಲೆ ಮತ್ತೆ ೧೦ ಜನ ಉನ್ನತ ಮಿಲಿಟರಿ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ.

ಬಿರುಗಾಳಿ ಅನಾಹುತ

ಪೂರ್ವ ಬಂಗಾಳದಲ್ಲಿ ಬಿರುಗಾಳಿ ಉಂಟಾಗಿ ೨೮೦ ಜನರು ಸತ್ತು ೧೦೦೦ ಗ್ರಾಮಗಳು ನೆಲಸಮವಾಗಿವೆ. ೫ ಜನಕ್ಕಿಂತ ಹೆಚ್ಚಾಗಿ ಗಾಯಗೊಂಡಿರುವರು. ೨೦೦ ಜನರು ಪತ್ತೆಯಿಲ್ಲ.

ವುಡ್‌ಲ್ಯಾಂಡ್ಸ್ * ೧೮—೫—೫೧ರಿಂದ ಅಮೋಘಪ್ರಾರಂಭ!
ಮೋಹನ್ಸ್‌ರವರ— * ಭೀಮ್ ಸೇನ್ *
ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್ ರಾಣಸಿಂಗ್

ತೆಲಂಗಾಣ ಪ್ರಾಂತ್ಯದಲ್ಲಿ ಪ್ರವಾಸ ಕೈಗೊಂಡಿರುವ ಆಚಾರ್ಯ ವಿನೋಬ ಭಾವೆಯವರು ನಲಗೊಂಡ ಸೆರೆಮನೆಗೆ ಭೇಟಿಯಿತ್ತು ಕಮ್ಯೂನಿಸ್ಟ್ ಕೈದಿಗಳೊಡನೆ ಮಾತುಕಥೆ ನಡೆಸಿದರು.

ಸಂಪಾದಕರು ಮತ್ತು ಪ್ರಕಾಶಕರು— ಜಿ. . . ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ. ಮೈಸೂರು.

City Municipal Office, MYSORE.
Dated 10th May 1951.

NOTIFICATION

Notice is hereby given to the inhabitants of the Mysore City Municipality that the Municipal Council desire to further amend the existing byelaw No 4 as amended by G.O. No. L. 477—8CM. 27—50—2 dated the 31st July 1950. relating to the levy of license fees on bakeries, sweetmeat shops, hotels, tea and coffee houses, ice and aerated water manufacture, framed under Section (l) (b) (ii) of the Mysore City Municipalities Act 1931. and contained in Chapter XVI of the Mysore City Municipal Rules and Bylaws so as to levy the license fees on the basis of one month's rental value of the building where the business is carried in respect of Hotels, Restaurants, Tea and Coffee houses and Ice and aerated water manufacturing places, subject to a minimum of Rs, 25/- and a maximum of Rs. 500/- and to levy a minimum fee of Re. 1/-in respect of retail sweetmeat shops and to levy a license fee of Rs. 10/- only on sharabath shops and private meat stalls. The existing byelaw and the byelaw as per the proposed amendment will read as follows :—

Existing		Proposed	
The following fee shall be charged for licenses granted under this byelaw		The following fee shall be charged for licenses granted under this byelaw	
Kind of business	Rate os license fee	Kind of business	Rate of license fees
1. Hotels, Resaurants, Coffee aud Tea houes I Class 2. Hotels and Restaurants Coffee and Tea houses II Class 3. Bakeries & sweetmeat shops I Class 4. Bakeries & sweetmeat shops II Class 5. Private meat stalls 6. Ice Manufacture	One month's Rental value of the building in which the business is carried on subject to a minimum of Rs. 5/-	1. Hotel Restaurants, Coffee & Tea houses I and II Class 2. Bakeries& sweetmeat I and II Class	One month's rental value of the building in which the business is carried on subject to a minimum of Rs. 25/- and maximum of Rs. 500/-
		3 Private Meat stalls	Rs. 10/- (as sanctioned in G.O No. L 4899 901 Cm. 27-50-4 dated 3-8-51)
		4. Ice manufacture	Same as for (1) and (2)
7. Aerated water manufacture	Rs 20	5 Aerated water manufacture	Rs. 30 Provided that in the case of retail shops where sweetmeat is sold the Council may charge a minimun fee of Re 1/- provided also that in the case of Sharabath shops the Council may levy the license fee at Rs. 10/-

Any inhabitant of the Municipality objecting to the proposed amendment may within one month from the date of this Notice send his objections in writing to the Municipal Council.

(Sd) C. NARASIMHA MOORTY.
Municipal Commissioner.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೫—೧೯೫೧ನೇ ಶನಿವಾರ [ಸಂಚಿಕೆ ೨೧೧

ಅಜಾದರ ಪ್ರಯಾಣ

ಕೇಂದ್ರ ವಿದ್ಯಾಮಂತ್ರಿ ಮೌಲಾನಾ ಅಬ್ದುಲ್ ಕಲಾಂ ಅಜಾದರ್ ನಿನ್ನೆ ದೆಹಲಿಯಿಂದ ಯೂರೋಪು ಮತ್ತು ಈಜಿಪ್ಟಿಗೆ ಪ್ರವಾಸ ಹೊರಟರು. ಅವರನ್ನು ನಿಲ್ದಾಣದಲ್ಲಿ ಪಂಡಿತನೆಹರೂ, ಮತ್ತು ಆಹಾರಮಂತ್ರಿ ಶ್ರೀ ಮುನ್ಷಿಯವರು ಬೀಳ್ಕೊಟ್ಟರು.

ತೃಪ್ತಿಯಿಲ್ಲ

ಹಿಂದುಳಿದ ವರ್ಗಗಳ ವಿದ್ಯಾ ಮತ್ತಿತರ ಸೌಕರ್ಯಗಳ ವಿಷಯದಲ್ಲಿ ಪ್ರಧಾನರೂ ರಾಜ್ಯಾಂಗಶಾಸನಕ್ಕೆ ತಂದಿರುವ ತಿದ್ದುಪಡಿಯು ಮದ್ರಾಸ್ ಸರ್ಕಾರಕ್ಕೆ ಅಷ್ಟು ತೃಪ್ತಿಕರವಾಗಿಲ್ಲ. ವ್ಯಾಪ್ತಿಯು ವಿಶಾಲವಾಗಿರುವಂತೆ ತಿದ್ದುಪಡಿಮಾಡಬೇಕೆಂದು ಕೇಂದ್ರಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಮೈಸೂರಿನಲ್ಲಿ ಆಹಾರವಿಷಯ ಚರ್ಚಾಗೋಷ್ಠಿ

ರಾಜ್ಯಾಂಗ ತಿದ್ದುಪಡಿಯ ವಿಷಯದಲ್ಲಿ ಪತ್ರಿಕಾ ಸಂಪಾದಕರ ನಿಯೋಗ

ಪಬ್ಲಿಕ್ ಸರ್ವೀಸ್ ಕಮಿಷನ್ ರಚನೆ

ಸ್ವಂ ಸು. ಫೋನ್] ಬೆಂಗಳೂರು ೧೮

ಮೈಸೂರು ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ರಚಿಸಿರುತ್ತಾರೆ ಈ ಬಗ್ಗೆ ಪ್ರಕಟಣೆಯೊಂದು ತಿಳಿಸುವ ಪ್ರಕಾರ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಅದರ ಅಧ್ಯಕ್ಷರಾಗಿಯೂ, ಚಿಕ್ಕಮಗಳೂರು ಜಿಲ್ಲೆಯ ಶ್ರೀ ಹೆಚ್. ಎಂ. ಮಲ್ಲಿಕಾರ್ಜುನಸ್ವಾಮಿಯವರು ಮತ್ತು ಶ್ರೀ ಜಾನ್ ವ್ಯಾಥ್ಯೂರವರು ಕ್ರಮವಾಗಿ ಖಾಸಗಿ ಮತ್ತು ಅಧಿಕಾರಿ ಸದಸ್ಯರಾಗಿಯೂ ಇರುವರು.

ಕೈಗಾರಿಕೆಗಳ ಬಗ್ಗೆ ಕಸ್ತೂರಿ ಭಾಯಿಯವರ ವರದಿ

ಮೈಸೂರು ಸರ್ಕಾರಕ್ಕೆ ಅಹಮದಾಬಾದಿನ ಸುಪ್ರಸಿದ್ಧ ಗಿರಣಿ ಮಾಲೀಕರಾದ ಶ್ರೀ ಕಸ್ತೂರಿ ಬಾಯಿ ಲಾಲ್‌ಭಾಯಿಯವರು ಸಂಸ್ಥಾನದ ಕೈಗಾರಿಕೆಗಳ ಬಗ್ಗೆ ಒಂದು ವರದಿಯನ್ನು ಒಪ್ಪಿಸಿರುತ್ತಾರೆ ಸರ್ಕಾರದವರು ಕೈಗೊಂಡಿರುವ ಕಾರ್ಖಾನೆಗಳಿಗೆ ಹೆಚ್ಚು ಅಧಿಕಾರವಿರಬೇಕೆಂದೂ ಜನರಲ್ ಮ್ಯಾನೇಜರ್ ಅಥವಾ ಡೈರೆಕ್ಟರ್ ಸ್ಥಾನಕ್ಕೆ ಪ್ರವೀಣರನ್ನು ನೇಮಿಸಬೇಕೆಂದೂ ಸಲಹೆ ಮಾಡಿರುತ್ತಾರೆ.

ಆಹಾರ ಬೇಕು

ಮೇ ೧೧ನೇ ತಾರೀಖಿನವರೆಗೆ ಸಂಸ್ಥಾನದಲ್ಲಿ ೧೬,೨೨,೬೨೬ ಪಲ್ಲ ಭತ್ತ ೩,೫,೨೦,೩೭೭ ಪಲ್ಲ ರಾಗಿ ಮತ್ತಿತರ ಧಾನ್ಯ ಸಂಗ್ರಹಣೆಯಾಗಿದೆ. ಇತರ ಪ್ರದೇಶಗಳಿಗಿಂತ ಈ ಪ್ರಾಂತ್ಯದಲ್ಲಿ ಶೇಖರಣೆಯು ಚೆನ್ನಾಗಿ ನಡೆದಿದೆ ಆದಾಗ್ಯೂ ಇನ್ನೂ ೫೦ ಸಾವಿರ ಟನ್ ಆಹಾರವು ಬೇಕಾಗಿದೆ ಸರಬರಾಜಿಗಾಗಿ ಕೇಂದ್ರವನ್ನು ಪತ್ರವ್ಯವಹಾರ ಮಾಡಲಾಗುತ್ತಲಿದೆ ಎಂದು ಆಹಾರ ಸಚಿವ ಶ್ರೀ ಮರಿಯಪ್ಪನವರು ಹೇಳಿರುವರು.

*ಈಜಿಪ್ಟಿನಲ್ಲಿ ಸಾವಿರಾರು ಡಾಕ್ಟರುಗಳು ತಮಗೆ ಸಂಬಳ ಹೆಚ್ಚಿಸಬೇಕೆಂದು ಮುಷ್ಕರ ಹೂಡಿರುವರು.

ವಿವಾಹ

ಬೆಂಗಳೂರ ಮೇ ೧೮

ರೆವಿನ್ಯೂ ಸಚಿವ ಶ್ರೀ ಹೆಚ್. ಸಿದ್ಧಯ್ಯನವರ ಪುತ್ರಿ ಶ್ರೀಮತಿ ಗಿರಿಜಮ್ಮನನ್ನು ಧಾಳೆ ಹೊಳೆಮರದ ಕೈ| ಬಸಪ್ಪನವರ ಪುತ್ರ ಶ್ರೀ ರುದ್ರಯ್ಯನವರಿಗೆ ಕೊಟ್ಟು ವಿವಾಹವು ಬೆಂಗಳೂರಿನಲ್ಲಿ ೨೩ನೇ ತಾ|| ನಡೆಯುವುದು.

ಬೀಹಾರಕ್ಕೆ ಆಹಾರ

ಬೀಹಾರ ಪ್ರಾಂತ್ಯಕ್ಕೆ ಉಚಿತ ಧಾನ್ಯ ಶೇಖರಣೆ ವಿಷಯದಿಂದ ಕೇಂದ್ರದಿಂದೇನು ಸೂಚನೆ ಬಂದಿಲ್ಲ ಈ ಪ್ರಶ್ನೆಯು ಈಗ ಪರಿಶೀಲನೆಯಲ್ಲಿಲ್ಲವೆಂದು ಮೈಸೂರು ಆಹಾರ ಸಚಿವ ಶ್ರೀ ಮರಿಯಪ್ಪನವರು ಹೇಳಿರುವರು

ಪ್ರವಾಸ

ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಇದೇ ಮಾಹೆ ೨೦ನೇ ತಾ|| ನಿಂದ ೨೬ರ ವರೆಗೆ ಬೆಂಗಳೂರು, ತುಮಕೂರು, ಮಂಡ್ಯ, ಮೈಸೂರು ಜಿಲ್ಲಾ ಪ್ರವಾಸ ಕೈಗೊಳ್ಳುವರು.

ಸ್ಥಳೀಯಸಂಸ್ಥೆ ಸಚಿವ ಶ್ರೀ ಆರ್. ಚೆನ್ನಿಗರಾಮಯ್ಯನವರು ೨೦,೨೨ ರಲ್ಲಿ ಶಿವಮೊಗ್ಗಾ ಜಿಲ್ಲಾ ಪ್ರವಾಸ ಕೈಗೊಳ್ಳುವರು.

ಚೀಣಾಕ್ಕೆ ಬಹಿಷ್ಕಾರ

ವಿಶ್ವಸಂಸ್ಥೆಯ ರಾಜಕೀಯ ಸಂಸ್ಥೆಯಲ್ಲಿ ಚೀಣಾ ಮತ್ತು ಉತ್ತರ ಕೊರಿಯಾಕ್ಕೆ ಶಸ್ತ್ರಾಸ್ತ್ರ ರವಾನಿಸಬಾರದೆಂಬ ಠರಾವು ಚರ್ಚೆಗೆ ಬಂದಾಗ ರಷ್ಯಾವು ಚರ್ಚೆಯನ್ನು ಬಹಿಷ್ಕರಿಸಿರುವುದಾಗಿ ರಷ್ಯಾದ ಪ್ರತಿನಿಧಿಯು ತಿಳಿಸಿದರು. ನಿರ್ಣಯದ ಪರವಾಗಿ ೪೭ ರಾಜ್ಯಗಳು, ಮೊದಲು ನಿರಾಕರಿಸಿದವು. ರಾಷ್ಟ್ರಗಳು ತಟಸ್ಥವಾಗಿದ್ದವು. ಭಾರತದ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಗರಾಯರು ಚರ್ಚೆಯ ಉತ್ತರವೀಯುತ್ತಾ ಈ ಶಸ್ತ್ರಾಸ್ತ್ರಗಳ ಬಹಿಷ್ಕಾರದಿಂದ ಕೊರಿಯಾ ಸಮಸ್ಯೆಯು ಶಾಂತಿಯುತವಾಗಿ ಪರಿಹರಿಸಲು ತೊಂದರೆಯಾಗುವುದರಿಂದ ಭಾರತವು ತಟಸ್ಥವಾಗಿರುವುದೆಂದರು.

ಆಹಾರ ಚರ್ಚಾಕೂಟ

ಮೈಸೂರು ಮೇ ೧೮

ಇದೇ ಮಾಹೆ ೨೩-೨೪ನೇ ತಾ|| ಗಳಲ್ಲಿ ಕೇಂದ್ರ ಆಹಾರ-ಸಂಶೋಧನಾಲಯದಲ್ಲಿ ಆಹಾರ ವಿಷಯವಾಗಿ ಚರ್ಚಾಗೋಷ್ಠಿ ನಡೆಯಲಿದೆ ೨೩ನೇ ತಾ|| ಮದರಾಸಿನ ಆಹಾರಸಚಿವ ಶ್ರೀ ರೋಜೆ ವಿಕ್ಟೋರಿಯಾರವರು, ೨೪ನೇ ತಾ|| ಮೈಸೂರು ಆಹಾರಸಚಿವ ಶ್ರೀ ಟಿ. ಮರಿಯಪ್ಪನವರು ಚರ್ಚಾಗೋಷ್ಠಿಯ ಅಧ್ಯಕ್ಷತೆ ವಹಿಸುವರು.

ಯುನೆಸ್ಕೋ ಪ್ರತಿನಿಧಿ ಪ್ರೊ|| ಸಿ. ಚಂದ್ರಶೇಖರ್, ಅಣ್ಣಾಮಲೈ ವಿಶ್ವವಿದ್ಯಾನಿಲಯದ ಪ್ರೊ|| ಎಸ್. ಚಂದ್ರಶೇಖರ್, ಅಲಹಾಬಾದ್ ವಿಶ್ವವಿದ್ಯಾನಿಲಯದ ಪ್ರೊ|| ಶ್ರೀ ರಂಜನ್, ಆಹಾರ-ಸಂಶೋಧನಾ ಕೇಂದ್ರ ಡೈರೆಕ್ಟರ್ ಡಾ|| ಸುಬ್ರಹ್ಮಣ್ಯಂ, ಇಂಡಿಯನ್ ಸೈನ್ಸ್ ಇನ್‌ಸ್ಟಿಟ್ಯೂಟಿನ ಡಾ|| ಎ. ಶ್ರೀನಿವಾಸನ್, ಮುಂತಾದ ೨೭ ಜನರು ಆಹಾರ-ವಿಷಯದಲ್ಲಿ ಲೇಖನಗಳನ್ನು ಕೊಟ್ಟಿರುವರು.

ಒಪ್ಪಂದ ತೃಪ್ತಿಕರವಾಗಿ ನಡೆಯುತ್ತಿಲ್ಲ

ಅಕ್ಕಿ ರವಾನೆಗೆ ಸಂಬಂಧಪಟ್ಟಂತೆ ಇಂಡೋ ಪಾಕ್ ಒಪ್ಪಂದ ತೃಪ್ತಿಕರವಾಗಿ ನಡೆಯುತ್ತಿಲ್ಲ. ಇದರ ಬಗ್ಗೆ ಪಾಕ್ ಸರ್ಕಾರದೊಡನೆ ವಿಚಾರವಿನಿಮಯ ನಡೆಸಲು ಭಾರತದ ಆಹಾರ ಶಾಖೆ ಕಾರ್ಯದರ್ಶಿ ಶ್ರೀ ವಿಷ್ಣುಸಹಾಯ್ ಅವರು ನಿನ್ನೆ ದೆಹಲಿಯಿಂದ ಕರಾಚಿಗೆ ಆಗಮಿಸಿದ್ದಾರೆ.

ಪ್ರಧಾನಿಯವರ ಬಳಿಗೆ ನಿಯೋಗ

ಅಖಿಲ ಭಾರತ ಪತ್ರಿಕಾಸಂಪಾದಕರ ಒಂದು ನಿಯೋಗವು ಅದರ ಅಧ್ಯಕ್ಷರೊಡನೆ ಭಾರತದ ರಾಜ್ಯಾಂಗದ ತಿದ್ದುಪಡಿಯಲ್ಲಿ ತರಲಿರುವ ವಾಕ್ ಸ್ವಾತಂತ್ರ್ಯದ ಬಗ್ಗೆ ಚರ್ಚಿಸಲು ಪ್ರಧಾನಿ ನೆಹರೂರವರ ಬಳಿಗೆ ಭಾನುವಾರ ತೆರಳುವರು.

'ವೀಟ್‌ನಾಮ್' ಸರ್ಕಾರವು ಭಾರತಕ್ಕೆ ತನ್ನ ವಿಶ್ವಾಸ ವ್ಯಕ್ತಪಡಿಸಲು ೩೦೦೦ ಟನ್ ಅಕ್ಕಿಯನ್ನು ದಾನವಾಗಿ ಕೊಡಲಿದೆ

ತಲಕಾಡಿನಬಳಿ ೯ ಜನರ ದಸ್ತಗಿರಿ

ಮೈಸೂರು ಮೇ ೧೮

ನಿನ್ನೆ ದಿನ ಬೆಳಗ್ಗೆ ತಲಕಾಡಿನಲ್ಲಿ ಪೋಲೀಸಿನವರು ಸುಮಾರು ೫೮ ಚೀಲಗಳಲ್ಲಿ ಅಕ್ಕಿ ಭತ್ತವನ್ನು ಸಾಗಿಸುತ್ತಲಿದ್ದುದನ್ನು ಹಿಡಿಯಲೋಸುಗ ಅಲ್ಲಿ ಕಾವಲಿದ್ದ ಜಮೇದಾರ್ ಮತ್ತು ೮ ಜನ ಪೋಲೀಸಿನವರು ಸ್ವರಕ್ಷಣೆಗಾಗಿ ಗುಂಡುಹಾರಿಸಿ ಧಾನ್ಯವನ್ನೆಲ್ಲಾ ವಶಪಡಿಸಿಕೊಂಡು ೩ ಜನರನ್ನು ದಸ್ತಗಿರಿ ಮಾಡಿದರು.

ಇಂದು ಬೆಳಗ್ಗೆ ಮೈಸೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು ೧೨ ಜನ ಶಸ್ತ್ರಸಜ್ಜಿತ ಪೋಲೀಸಿನವರೊಡನೆ ಸ್ಥಳಕ್ಕೆ ಭೇಟಿಯಿತ್ತು ಎಲ್ಲವನ್ನು ಪರಿಶೀಲಿಸಿದರು. ಅಲ್ಲಿಂದ ನರೀಪುರಕ್ಕೆ ಹೋಗಿ ಮನೆಗಳಲ್ಲಿ ಕೆಲವನ್ನು ಶೋಧಿಸಿ ವಿಶೇಷವಾಗಿ ಆಹಾರಧಾನ್ಯ ಶೇಖರಣೆಯನ್ನು ಕಂಡು ಹಿಡಿದರು. ಹಿಂದಿನದಿನ ರಹದಾರಿಯಿಲ್ಲದೆ ಕಳ್ಳತನದಿಂದ ಸಾಗಿಸುತ್ತಿದ್ದವರಲ್ಲಿ ೯ ಜನರನ್ನು ದಸ್ತಗಿರಿ ಮಾಡಿದರು. ಅಲ್ಲಿಂದ ಟಿ. ನರಸೀಪುರಕ್ಕೆ ಹೋಗಿ ಅಲ್ಲಿಯ ಅಮಲ್ದಾರರನ್ನು ಕಂಡು, ನರೀಪುರಕ್ಕೆ ಕೂಡಲೇ ಭೇಟಿಯಿತ್ತು ಹೆಚ್ಚಿಗೆ ದವಸ ಕಂಡುಬಂದಲ್ಲಿ ಪರೀಕ್ಷಿಸಿ ತಮಗೆ ತಿಳಿಸಿದರೆ ಅದನ್ನು ವಶಪಡಿಸಿಕೊಳ್ಳಲು ಕಾರ್ಯಕ್ರಮವೆಸಗುವುದಾಗಿ ತಿಳಿಸಿ ರಾತ್ರಿ ೧೦ ಗಂಟೆ ವೇಳೆಗೆ ರಾಜಧಾನಿಗೆ ಹಿಂತಿರುಗಿದರು. ನಾಳೆಯೂ ಅಲ್ಲಿ ಅವರು ಭೇಟಿ ಕೊಡಲಿರುವರು.

* ಆಸ್ಟ್ರೇಲಿಯಾ ಗೋಧಿಯನ್ನು ಭಾರತಕ್ಕೆ ಕಳುಹಿಸಲು ಬೇಕಾದ ಹಡಗುಗಳ ಸಹಾಯ ಪಡೆಯಲು ಬ್ರಿಟನ್ನಿನೊಡನೆ ಪ್ರಯತ್ನಿಸುತ್ತಿದ್ದೆ.

* ಎಕ್ಸೈಜು ಕಮಿಷನರ್ ಶ್ರೀ ಕೆ. ಸುಬ್ಬರಾಯರಿಗೆ, ನಿವೃತ್ತರಾಗುವ ಮುನ್ನ ೬ ತಿಂಗಳು ರಜಾ ಕೊಡಲಾಗಿದೆ.

ಪತ್ರ ವ್ಯವಹಾರ
ಕನ್ನಡಿಗರಿಗೆ ಅನ್ಯಾಯ

ಸ್ವಾಮಿ,—

ಮೈಸೂರು ಸಂಸ್ಥಾನದ ಗಡಿಯಲ್ಲಿರುವ ಊಟಿಯಲ್ಲಿ ಬಡಗರೂ ಮೈಸೂರಿಂದ ಅನೇಕ ವರ್ಷಗಳ ಹಿಂದೆ ಹೋಗಿ ಸೇರಿಕೊಂಡಿರುವವರೂ ಸೇರಿ ಅಲ್ಲಿಯ ಜನಸಂಖ್ಯೆಯ ಅರ್ಧದಷ್ಟು ಮಂದಿ ಕನ್ನಡಿಗರಿದ್ದಾರೆ. ಆ ಜಿಲ್ಲೆಯು ತಮಿಳು ಪ್ರಾಬಲ್ಯಕ್ಕೆ ಸೇರಿದ ಮದ್ರಾಸ್ ಪ್ರಾಂತಕ್ಕೆ ಸೇರಿದೆ. ಮದ್ರಾಸ್ ಪ್ರಾಂತಕ್ಕೆ ನೀಲಗಿರಿಯಿಂದಲ್ಲದೆ ಇತರ ಕನ್ನಡ ಜಿಲ್ಲೆಗಳೂ ಸೇರಿವೆ. ಆದರೆ ಉತ್ತಮ ಹವಾಗುಣದಿಂದ ಕೂಡಿದ ಆ ಜಿಲ್ಲೆ ದೊಡ್ಡದೊಡ್ಡವರ ನಿವಾಸಸ್ಥಾನವಾಗಿ ಕನ್ನಡ ಭಾಷೆಗೆ ತಿಲಾಂಜಲಿಯನ್ನಿತ್ತಂತಾಗಿದೆ. ನಾನು ಮೊದಲೇ ಹೇಳಿದವಂತೆ ಬಹುಮಂದಿ ಕನ್ನಡಿಗರು ಅಲ್ಲಿದ್ದರೂ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಕನ್ನಡ ಸ್ಕೂಲುಗಳಿಲ್ಲದೆ ಮಾತೃಭಾಷೆ ಕನ್ನಡವಾಗಿದ್ದರೂ ತಮಿಳನ್ನೇ ಓದಿ ಈಗ ಅವರೆಲ್ಲರೂ ತಮಿಳರೆನ್ನುವಂತಾಗಿದ್ದಾರೆ. ಅದೇನೊ ಇತ್ತೀಚೆಗೆ ಒಂದು ತರಗತಿಯೇನೋ ಪ್ರಾರಂಭವಾಗಿದೆಯಂತೆ. ಅಷ್ಟು ಜನಸಂಖ್ಯೆಯುಳ್ಳ ಅಲ್ಲಿಗೊಂದು ತರಗತಿ ಸಾಕಾಗಲಾರದು. ಈ ರೀತಿ ಕನ್ನಡ ಸ್ಕೂಲುಗಳಿಲ್ಲದೆ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯ ಅಷ್ಟಿಷ್ಟಲ್ಲ. ಮದ್ರಾಸ್ ಸರಕಾರದ ಮಂತ್ರಿಮಂಡಲಿಯಲ್ಲಿ ಇಬ್ಬರು ಕನ್ನಡಿಗರಿದ್ದರೂ ಕನ್ನಡಿಗರಿಗೆ ಈ ದುರವಸ್ಥೆಯೇ ಎಂದು ನಾವಿಂದು ಮರುಗಬೇಕಾಗಿದೆ.

ಭಾಷಾಪ್ರಚಾರ, ನುಡಿಯ ಅಭಿವೃದ್ಧಿಗಾಗಿಯೇ ದುಡಿಯುತ್ತೇನೆಂದು ಹುಟ್ಟಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ಏಕೀಕರಣವೆಂಬ ರಾಜಕೀಯ ಸ್ಟಂಟಗೆ ಕೈಹಾಕುವ ಬದಲು ಈ ಭಾಷೆಗೆ ಆಗುತ್ತಿರುವ ಅನ್ಯಾಯವನ್ನು ಏಕೆ ತಡೆಗಟ್ಟಬಾರದು? ಮದ್ರಾಸಿನ ಅನೇಕ ವಿಧವಾದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ಕರ್ನಾಟಕ ಪ್ರಾಂತ ಕಾಂಗ್ರೆಸ್ ಈ ಕಾರ್ಯದಲ್ಲಿ ಏಕೆ ನಿರತರಾಗಿಲ್ಲವೋ ತಿಳಿಯದು. ಇವರೆಲ್ಲಾ ಸುಮ್ಮನಿರುವುದನ್ನು ನೋಡಿದರೆ ನಾಡುನುಡಿಯ ಪ್ರೇಮ ಬರೀ ಅಧಿಕಾರದ ಲಾಲಸೆಯಲ್ಲದೆ ಮತ್ತೇನಲ್ಲವೆಂದು ತೋರುತ್ತೆ. ಆದ್ದರಿಂದ ಈಗಲಾದರೂ ಕನ್ನಡಿಗರೆಲ್ಲರೂ ನೀಲಗಿರಿಯ ಕನ್ನಡಿಗರಿಗಾಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಪ್ರಯತ್ನಿಸಬೇಕಾಗಿ ಕೋರುತ್ತೇನೆ.

ಎ. ರಾಮಣ್ಣ, ಮೈಸೂರು.

ಶ್ರೀ ಪ್ರಕಾಶರ ಪ್ರವಾಸ ರದ್ದು

ಕೇಂದ್ರ ಸಚಿವ ಶ್ರೀ ಶ್ರೀ ಪ್ರಕಾಶರವರು ೨೩ನೇ ತಾ|| ಮೈಸೂರಿಗೆ ಬರಬೇಕಾಗಿದ್ದ ಪ್ರವಾಸ ರದ್ದಾಗಿದೆ.

ಉಚಿತ ಪೆನಿಸಿಲಿನ್

ಭಾರತದಲ್ಲಿ ಐದು ಪೆನಿಸಿಲಿನ್ ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವಸಂಸ್ಥೆಯು ನೆರವುನೀಡುವುದು. ಇದಕ್ಕೆ ೨ ಕೋಟಿ ರೂ. ಗಳು ವೆಚ್ಚವಾಗುವುದು. ಪ್ರಪಂಚ ಆರೋಗ್ಯ ಸಂಸ್ಥೆಯು ೩|| ಲಕ್ಷ ಡಾಲರು ವೆಚ್ಚ ತಗಲುವ ಟೆಕ್ನಿಕಲ್ ಸಹಾಯನೀಡುವುದು. ವಿಶ್ವಸಂಸ್ಥೆ ಮಕ್ಕಳ ಸಹಾಯಸಂಸ್ಥೆಯು ೮|| ಲಕ್ಷ ಡಾಲರುಗಳ ಯಂತ್ರೋಪಕರಣಗಳನ್ನು ಒದಗಿಸುವುದು. ಅಷ್ಟೇ ಬೆಲೆಯ ಪೆನಿಸಿಲಿನ್ ಭಾರತ ಸ್ತ್ರೀಯರ ಮತ್ತು ಮಕ್ಕಳ ಉಪಯೋಗಕ್ಕಾಗಿ ಉಚಿತವಾಗಿ ಹಂಚಲಾಗುವುದು.

ರಾಷ್ಟ್ರ ಅತಿಥಿ

ಜ|| ಡಗ್ಲಾಸ್ ಮೆಕಾರ್ಥರ್‌ರವರನ್ನು ಆಜೀವಪರ್ಯಂತ ಜಪಾನ್ ರಾಷ್ಟ್ರದ ಅತಿಥಿಗಳೆಂದು ಪರಿಗಣಿಸುವ ಮಸೂದೆಯೊಂದನ್ನು ಜಪಾನಿನ ಮಂತ್ರಿಮಂಡಲವು ನಿನ್ನೆ ದಿನ ಚರ್ಚಿಸಿತು. ಅದನ್ನು ಸೆನೆಟ್ಟಿನ ಒಪ್ಪಿಗೆ ಕಳುಹಿಸಲಾಗುವುದು.

ಪೋಲೀಸರು ಊಟ ಬಿಡುತ್ತಾರೆ

ಪ್ರಧಾನಿ ಜವಾಹರಲಾಲ್‌ರವರ ಕರೆಗೆ ಮನ್ನಣೆ ಇತ್ತು ಪತ್ತೇಘರ್ ಸಾಹೆಬ್ (ಪೆಪ್ಸು) ಜಿಲ್ಲೆಯ ಪೋಲಿಸ್ ದಳದವರು ವಾರಕ್ಕೆ ಒಂದ ದಿನ ಊಟ ಬಿಡಲು ನಿಶ್ಚಯಿಸಿದ್ದಾರೆ.

ಪ್ರಭಾ

ತಾ|| ೧೮—೫—೫೧ ರಿಂದ
ಅಮೋಘ ಪ್ರಾರಂಭ
ಪ್ರತಿದಿನ ೩ ಆಟಗಳು

ಲಾಜವಾಬ್

[ಹಿಂದಿ]

ಪಾತ್ರ—ರೆಹನ, ಕುಲ್‌ದೀಪ್, ಸೋಹನ್, ಡೇವಿಡ್

ವುಡ್‌ಲ್ಯಾಂಡ್ಸ್ * ೧೮—೫—೫೧ರಿಂದ ಅಮೋಘ ಪ್ರಾರಂಭ

ಮೋಹನ್ಸ್ ರವರ— * ಭೀಮ್ ಸೇನ್ *

ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್- ರಾಂಸಿಂಗ್.



ಕೊರಿಯಾ ಯುದ್ಧದಲ್ಲಿ ವಿಶ್ವಸಂಸ್ಥೆ ಸೇನೆಗಳು ಉಪಯೋಗಿಸುತ್ತಲಿರುವ ಜೆಟ್ ವಿಮಾನಗಳು.

ಪಾರ್ಲಿಮೆಂಟ್ ಸದಸ್ಯರಿಗೆ ೩೦೦ ರೂ. ಜುಲ್ಮಾನೆ

ಭಾರತ ಪಾರ್ಲಿಮೆಂಟ್ ಸದಸ್ಯ ಮತ್ತು ಅಖಿಲಭಾರತ ಆಂಗ್ಲೋ ಇಂಡಿಯನ್ ಸಂಘದ ಅಧ್ಯಕ್ಷ ಶ್ರೀ ಫ್ರಾಂಕ್ ಆಂಥೋನಿಯವರಿಗೆ ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಮಾನನಷ್ಟ ಮೊಕದ್ದಮೆಯಲ್ಲಿ ೩೦೦ ರೂ. ಜುಲ್ಮಾನೆ ವಿಧಿಸಿರುವರು. ಶ್ರೀ ಆಂಥೋನಿಯವರು ಕೂಡಲೇ ಜುಲ್ಮಾನೆ ಹಣವನ್ನು ಸಲ್ಲಿಸಿದರು.

ಭಾರತ ಬರ್ಮಾ ರೈಲ್ವೆ ಕೆಲಸಗಾರರ ರಾಷ್ಟ್ರೀಯ ಸಂಘದ ಕಾರ್ಯದಲ್ಲಿ ಮಿ|| ಚೆರಿಯನ್‌ರವರು ಸಂಘದ ಹಣವನ್ನು ದುರುಪಯೋಗಪಡಿಸಿದರೆಂದು ಅಪಾದನೆ ಮಾಡಿ ಒಂದು ಲೇಖನವನ್ನು ಬರೆದು ಅದನ್ನು ರುಜುವಾತು ಮಾಡಲಾರದೆ ಹೋದ್ದರಿಂದ ಈ ಶಿಕ್ಷೆ ವಿಧಿಸಲಾಗಿದೆ.

ಸಂಗೀತ ಸ್ಪರ್ಧೆ

ನ್ಯೂಯಾರ್ಕಿನಲ್ಲಿ ಕೊಲಂಬಿಯಾ ಪ್ರಸಾರ ಸಂಸ್ಥೆಯಲ್ಲಿ ನಡೆದ ಸಂಗೀತ ಸ್ಪರ್ಧೆಯಲ್ಲಿ ಬೊಂಬಾಯಿನ ದಿನ್‌ಸು ಎಂ ಟೋಡಿವಾಲಾ ಎಂಬುವವರಿಗೆ ೨೦೦ ಡಾಲರ್ ಬಹುಮಾನ ಬಂದಿತು. 'ದಿನಿಷ' ಎಂಬ ಹಾಡನ್ನು ಇವರು ಹಾಡಿದರು. ಅಮೆರಿಕಾ ಜಾಸ್ಡನ್ನಿನಲ್ಲಿ ಸಂಗೀತಶಿಕ್ಷಣ ಪಡೆಯುತ್ತಲಿರುವರು.

ರಾಜೀನಾಮೆಯಿಲ್ಲ

'ರಾಜೀನಾಮೆ ಕೊಡುವ ಉದ್ದೇಶ್ಯವೇನೂ ಇಲ್ಲ' ಎಂದು ಅಮೆರಿಕದ ಕಾರ್ಯದರ್ಶಿ ಡೀನ್ ಅಚೆಸನ್ ನಿನ್ನೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ನೀವು ರಾಜೀನಾಮೆ ಕೊಡುತ್ತೀರೆಂಬ ಸುದ್ದಿ ಹಬ್ಬಿತ್ತಲ್ಲ? ಎಂದು ಕೇಳಿದ ಪ್ರಶ್ನೆಗೆ ಉತ್ತರವೀಯುತ್ತ 'ಪ್ರೆಸಿಡೆಂಟ್ ಟ್ರುಮನ್ನರು ನಾನು ಎಲ್ಲಿಯವರೆಗೆ ಅಧಿಕಾರದಲ್ಲಿರಬೇಕೆಂದು ಬಯಸುತ್ತಾರೋ ಅಲ್ಲಿಯತನಕ ಇರುತ್ತೇನೆ' ಎಂದರು.

ರಣಜಿತ್

೧೧—೫—೫೧ರಿಂದ

-:: ಸಗಾಯಿ ::-

ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು ಮತ್ತು ಪ್ರಕಾಶಕರು ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ., ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಘುಲಾಲ್
ಅಂಡ್
ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ
ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೫—೧೯೫೧ನೇ ಸೋಮವಾರ [ಸಂಚಿಕ ೨೧೨

RAGHULAL & Co.
CHEMISTS
Sayyaji Rao Road
MYSORE

ಕೇಂದ್ರ ಸರ್ಕಾರದ ನೂತನ ಯೋಜನೆಗೆ ಹೊಸತೆರಿಗೆಯೇ?

ತಲಕಾಡಿನ ನರೀಪುರದ ಬಳಿ ೧೩೫ ಪಲ್ಲಾ ಧಾನ್ಯದ ಪತ್ತೆ ಮತ್ತು ದಸ್ತಗಿರಿಗಳು

ಅಕ್ರಮ ದಾಸ್ತಾನು ಬತ್ತ ಪತ್ತೆ ಕೆಲವರ ದಸ್ತಗಿರಿ

ಮೈಸೂರು ಮೇ ೨೦

ಇಂದು ಬೆಳಗ್ಗೆ ಜಿಲ್ಲಾಧಿಕಾರಿಗಳು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು ಕೆಲವು ಪೋಲೀಸು ಸಿಬ್ಬಂದಿಯೊಡನೆ ತಲಕಾಡಿನ ಬಳಿ ನರೀಪುರಕ್ಕೆ ಭೇಟಿಯಿತ್ತು, ಗ್ರಾಮದಲ್ಲಿಯ ಬತ್ತದ ದಾಸ್ತಾನನ್ನು ಪರಿಶೀಲಿಸಿ, ಅಕ್ರಮವಾಗಿ ಶೇಖರಿಸಿದ್ದ ೧೩೫ ಪಲ್ಲಾವನ್ನು ಸರ್ಕಾರದ ವಶಪಡಿಸಿಕೊಂಡರು. ರಹದಾರಿಯಿಲ್ಲದೆ ಕಳ್ಳತನದಲ್ಲಿ ಹೊರಗೆ ಸಾಗಿಸಲೋಸುಗ ಈ ಬತ್ತವನ್ನು ಶೇಖರಿಸಿದ್ದಂತೆ ತೋರಬಂದಿತು. ಚೀಲಗಳಲ್ಲಿ ಒಂದೇ ರೀತಿಯ ಬತ್ತವಿಲ್ಲದೆ ಬೆರಕೆ ಬತ್ತವು ಕಂಡುಬಂದಿತು.

ಈದಿನವೂ ಕೆಲವರ ದಸ್ತಗಿರಿಯಾದುವು, ಇಲ್ಲಿಯವರೆಗೆ ೧೫ ದಸ್ತಗಿರಿಗಳಾಗಿವೆ. ಗ್ರಾಮದಲ್ಲಿ ಮತ್ತು ಗಡಿ ಪ್ರದೇಶದಲ್ಲಿ ಪೋಲೀಸು ಬಂದೋಬಸ್ತು ಹೆಚ್ಚಿಸಲಾಗಿದೆ.

ಹೊಳೇನರಸೀಪುರದ ಬಳಿ ನಡೆದ ದುರ್ಘಟನೆ

ಹೊಳೇನರಸೀಪುರದಿಂದ ಹುಣಸೂರಿಗೆ ಹೋಗುತ್ತಿದ್ದ ಮಂಜನಾಥ ಮೋಟಾರ್ ಸರ್ವಿಸ್ ಹೊಳೇನರಸೀಪುರಕ್ಕೆ ನಾಲ್ಕು ಮೈಲಿ ದೂರದಲ್ಲಿ ಮೊನ್ನೆ ಸಂಜೆ ಅಪಘಾತಕ್ಕೆ ಒಳಗಾಗಿ ಸ್ಥಳೀಯ ವಕೀಲರಾದ ಶ್ರೀ ಆರ್. ಎಸ್. ರಾಮಣ್ಣನವರು ಸ್ಥಳದಲ್ಲಿಯೇ ಮೃತರಾದರು. ಒಳಗಿದ್ದ ಇತರರಾರಿಗೂ ಪೆಟ್ಟಾಗಲಿಲ್ಲ. ಬಸ್ ತಲೆಕೆಳಕ್ಕಾಗಿ ಮುಂದಿನ ಎರಡು ಚಕ್ರಗಳು ಸುಮಾರು ಎಂಟು ಅಡಿ ದೂರದಲ್ಲಿ ಬಿದ್ದಿದ್ದುವು. ಪೋಲೀಸಿನವರು ಮುಂದಿನ ತನಿಕ್ರಮ ನಡೆಸುತ್ತಿರುವರು.

ಮೃತರಿಗೆ ಧರ್ಮಪತ್ನಿಯೂ ಮತ್ತು ಆರು ಮಕ್ಕಳೂ ಇರುತ್ತಾರೆ.

ಧ್ವಜಾರೋಹಣ

ಭಾರತ ಸೇವಾದಳದ ಮಹಿಳಾ ಶಿಬಿರದಲ್ಲಿ ನೆನ್ನೆ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಧ್ವಜಾರೋಹಣ ನಡೆಸಿ ಧ್ವಜದ ಸಂಕೇತವನ್ನು ವಿವರಿಸಿದರು.

ಶ್ರೀ ಮುದ್ದರಾಜೇ ಅರಸಿನವರ ವೃತ್ತಿ

ಮೈಸೂರು ಮೇ ೨೦

ಮಹಾರಾಜರ ಸೆಕ್ರಿಟರಿ ಇನ್-ವೇಟಿಂಗ್‌ರಾದ ಶ್ರೀ ಮುದ್ದರಾಜೇ ಅರಸಿನವರನ್ನು ನಿವೃತ್ತರಾಗುವ ಮುನ್ನ ಇದೇ ೧-೬-೫೧ ತಾ|| ನಿಂದ ೬ ತಿಂಗಳು ರಜಾ ಕೊಡಲಾಗಿದೆ

ಲೆ|| ಕ|| ಡಿ. ಮದನಗೋಪಾಲರಾಜೇ ಅರಸಿನವರನ್ನು ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರಿಟರಿಗಳಾಗಿಯೂ, ಕ್ಯಾಪ್ಟನ್ ಆರ್. ಮಹದೇವ್‌ರವರನ್ನು ಅರಮನೆ ಹೌಸ್‌ಹೋಲ್ಡ್ ಕಂಟ್ರೋಲರಾಗಿಯೂ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ

ರಾಜಘಾಟ್ ಬಳಿ ನಿರಾಶ್ರಿತರಿಗೆ ವಸತಿ

ದೆಹಲಿಯ ರಾಜಘಾಟ್ ಬಳಿ ಸ್ಥಳಾಂತರರಾದವರಿಗೆ ಗೃಹನಿರ್ಮಾಣ ಮಾಡಲು ಪೂರ್ವಭಾವಿ ಕಾರ್ಯಕ್ರಮ ಆರಂಭವಾಗಿ ಈದಿನ ಜರಂಡಿಗಳನ್ನು ತೋಡುವ ಕೆಲಸ ಮುಗಿದಾಯಿತು.

ಖೈದಿಗಳು ವಾರಕೊಮ್ಮೆ ಉಪವಾಸ

ಭೂಜ್ ಸೆಂಟ್ರಲ್‌ಜೈಲಿನ ಖೈದಿಗಳೆಲ್ಲರೂ ವಾರಕ್ಕೊಮ್ಮೆ ಉಪವಾಸ ಮಾಡಲು ನಿಶ್ಚಯಿಸಿರುವರು. ಇದರಿಂದ ಉಳಿದ ಆಹಾರವನ್ನು ಬೀಹಾರಕ್ಕೆ ಕಳುಹಿಸಲಾಗುವುದು.

ಯಾವಾಗಲೂ ಸಿದ್ಧ

ಶಾಂತಿ ಮತ್ತು ಗೌರವ ರೀತಿಯಲ್ಲಿ ಕೊರಿಯಾ ಯುದ್ಧ ಮುಕ್ತಾಯಕ್ಕೆ ಸಲಹೆಯನ್ನು ಸ್ವಾಗತಿಸಲು ಅಮೆರಿಕಾ ಸದಾ ಸಿದ್ಧವಾಗಿದೆಯೆಂದು ಅಮೆರಿಕಾ ಸರ್ಕಾರದ ವಕ್ತಾರರೊಬ್ಬರು ಹೇಳಿರುವರು.

ಭಾರತ ಸೇವಾದಳ ಮಹಿಳಾ ಶಿಬಿರ

ಮೈಸೂರು ಮೇ ೨೧

ಮಹಾರಾಣಿ ಹೈಸ್ಕೂಲಿನಲ್ಲಿ ೫ನೇ ತಾ|| ನಿಂದ ಶ್ರೀಮತಿ ಸುನಂದಮ್ಮನವರ ನೇತೃತ್ವದಲ್ಲಿ ನಡೆಯುತ್ತಿದ್ದ ಭಾರತ ಸೇವಾದಳದ ಮಹಿಳಾ ಶಿಬಿರ ಸಮಾರೋಪ ಸಮಾರಂಭವು ನೆನ್ನೆ ಸಂಸ್ಥಾನ ವಿದ್ಯಾಧಿಕಾರಿಗಳಾದ ಶ್ರೀ ಕೆ. ಗುರುದತ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಮಾರಂಭಕ್ಕೆ ಪೌರಸಭಾಧ್ಯಕ್ಷರು, ಉಪಾಧ್ಯಕ್ಷರು, ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ, ಎಂ. ಎನ್. ಜೋಯಿಸರು, ಡಿ. ಇ. ಒ ಶ್ರೀ ಕಾಳಪ್ಪನವರು, ಐ. ಎಸ್. ಎ. ರಾಮರಾಯರು, ಶ್ರೀಮತಿಗಳಾದ ಬಿ. ಇಂದಿರಮ್ಮನವರು, ಡಾ|| ಹನುಮಟ್ಟೇಕರ್ ಮತ್ತು ಲಕ್ಷ್ಮಮ್ಮನವರು ಇವರಲ್ಲದೆ ನೂರಾರು ಜನ ಮಹಿಳೆಯರು ಮತ್ತು ಮಹನೀಯರು ದಯಮಾಡಿಸಿದ್ದರು. ಸೇವಾದಳದಲ್ಲಿ ಶಿಕ್ಷಣ ಪಡೆದ ಸೇವಕಿಯರು ಅಧ್ಯಕ್ಷರಿಗೆ ಗೌರವರಕ್ಷೆಯಿತ್ತರು.

ವಂದೇಮಾತರಂ ಗೀತೆಯನಂತರ ಸ್ವಾಗತ ಭಾಷಣವಾಯಿತು. ನಂತರ ಶಿಬಿರದ ಅಧಿಪತಿ ಶ್ರೀಮತಿ ಸುನಂದಮ್ಮನವರು ಶಿಬಿರದ ವರದಿಯನ್ನು ಓದಿ ಈ ಶಿಬಿರಕ್ಕೆ ಒಟ್ಟು ೩೦ ಮಹಿಳೆಯರು ಬಂದು ಶಿಕ್ಷಣ ಪಡೆದರು. ಇವರಲ್ಲಿ ಬೆಂಗಳೂರಿನಿಂದ ಮೂವರು, ಯಳಂದೂರಿನಿಂದ ಒಬ್ಬರು ಮತ್ತು ಮೈಸೂರಿನವರು ೨೬ ಜನರಿರುವರೆಂದು ತಿಳಿಸಿದರು. ಮಹಿಳೆಯರಿಗೆ ಕೊಡುವ ಶಿಕ್ಷಣಕ್ಕಾಗಿ ಒಂದು ಹೊಸ ಕರಿಕ್ಯುಲಂ ತಯಾರು ಮಾಡಲಾಯಿತೆಂದು ಶ್ರೀಮತಿಯವರು ತಿಳಿಸಿ ಶಿಬಿರದ ಸಕಲ ಕಾರ್ಯಕಲಾಪಗಳಿಗೂ ಸಂಪತ್ತವನ್ನು ವಂದಿಸಿದರು.

ನಂತರ ಸೇವಕಿಯರಿಂದ ವ್ಯಾಯಾಮ ಮತ್ತು ಲೆಜಿಂ ಪ್ರದರ್ಶನವಾಯಿತು. ಅಧ್ಯಕ್ಷರು ಮತ್ತು ಅತಿಥಿಗಳು ಪ್ರದರ್ಶನವನ್ನು ನೋಡಿ ಮೆಚ್ಚಿಗೆ ವ್ಯಕ್ತಪಡಿಸಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಹಿಳೆಯರು ಶೀಲವತಿಯರಾಗಿ ಪುರಾತನ ಸಂಸ್ಕೃತಿಯನ್ನು ಕಾಪಾಡಿ ಉತ್ತಮವಾದ ಸಮಾಜ ರಚನೆ ಮಾಡುವುದಕ್ಕೆ ಶ್ರಮಿಸಬೇಕೆಂದರು.

ಭಂಡವಾಳಗಾರರು ನೂತನ ಯೋಜನೆಗೆ ಹಣ ಹಾಕಲಿ

ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಎನ್. ವಿ. ಗ್ಯಾಡ್ಗಿಲ್ಲರು ನೂತನ ಯೋಜನೆಗಳನ್ನು ಪ್ರಸ್ತಾಪಿಸಿ ಭಾಷಣ ಮಾಡುತ್ತಾ ಭಂಡವಾಳಗಾರರು ಈ ಯೋಜನೆಗಳಿಗಾಗಿ ಹೆಚ್ಚು ಹೆಚ್ಚು ಹಣಹಾಕಬೇಕೆಂದು ತಿಳಿಸಿದರು. ಈ ಯೋಜನೆಗಳಿಗಾಗಿ ಕೇಂದ್ರವು ನೂತನ ತೆರಿಗೆ ವಿಧಿಸಿದರೆ ಅದನ್ನು ಕೊಡುವುದಕ್ಕೆ ಯಾರೂ ಹಿಂಜರಿಯಬಾರದೆಂದರು. ಈ ಯೋಜನೆಗಳು ಕಾರ್ಯಗತವಾದಲ್ಲಿ ಸಾಮಾನ್ಯ ಮನುಷ್ಯನ ಜೀವನ ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು.

ನೆಹರೂರವರೊಡನೆ ಭೇಟಿ

ಅಖಿಲಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದ ಸ್ಥಾಯಿಸಮಿತಿಯ ೧೨ ಸದಸ್ಯರು ಈದಿನ ಬೆಳಿಗ್ಗೆ ಪಂಡಿತ ನೆಹರೂರವರನ್ನು ಭೇಟಿಮಾಡಿ ರಾಜ್ಯಾಂಗ ತಿದ್ದುಪಡಿ ಮಾಡುವಾಗ ಪತ್ರಿಕೆಗಳಿಗೆ ಸಂಬಂಧಿಸಿದ ಕಾನೂನು ತಿದ್ದುಪಡಿ ಮಾಡುವ ಅಂಶಗಳನ್ನು ಕುರಿತು ಚರ್ಚಿಸಿದರು.

ಮೌಲಾನಾ ಅಜಾದ್ ಲಂಡನ್ ತಲುಪಿದರು

ಕೇಂದ್ರದ ವಿದ್ಯಾ ಮಂತ್ರಿ ಮೌಲಾನಾ ಅಜಾದರು ಈ ದಿನ ಲಂಡನ್ ತಲುಪಿದರು. ಇವರು ೧೫ ದಿನಗಳ ಕಾಲ ಯೂರೋಪ್ ಮತ್ತು ಮಧ್ಯ ಪ್ರಾಚ್ಯ ಪ್ರವಾಸ ಕೈಗೊಳ್ಳುವರು.

ವುಡ್‌ಲ್ಯಾಂಡ್ಸ್ * ೧೮—೫—೫೧ರಿಂದ ಅಮೋಘಪ್ರಾರಂಭ
ಮೋಹನ್ಸ್‌ರವರ— * ಭೀಮ್ ಸೇನ್ *
ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್- ರಾಂಸಿಂಗ್.

ಹಿಂದುಳಿದ ಪಂಗಡವೆಂದರೆ ಹಿಂದುಳಿದ ಜಾತಿಯೆಂದಲ್ಲ

ಕೇಂದ್ರದಲ್ಲಿ ಉದ್ಯೋಗವನ್ನು ಕೊಡುವಾಗ ಜಾತ್ಯಾಧಾರದ ಮೇಲೆ ಕೊಡುವುದಿಲ್ಲ. ಇದ ರಾಜ್ಯಾಂಗದ ಪ್ರಕಾರ ವಿರೋಧವಾಗುತ್ತದೆ. ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಎಂದರೆ ಸರ್ಕಾರಿ ಉದ್ಯೋಗಗಳನ್ನು ಬಿಟ್ಟು ಇತರ ಬಾಬುಗಳಲ್ಲಿ ಅವರ ಅಭಿವೃದ್ಧಿಗಾಗಿ ಏರ್ಪಡಿಸಿದರೆ ನಿರ್ವಹಣೆ, ಹಿಂದುಳಿದ ಪಂಗಡಗಳ ಸರ್ಕಾರವು ಅದಕ್ಕಾಗಿ ನೇಮಕ ಮಾಡುವ ಕಮಿಷನ್ನಿನ ವರದಿಯು ಬಂದನಂತರ ತಿಳಿಯುವುದು ಎಂದು ಕೇಂದ್ರ ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಸ್ಥಾನಗಳು

ಮೈಸೂರು ಸಂಸ್ಥಾನದಿಂದ ಭಾರತ ಪಾರ್ಲಿಮೆಂಟಿಗೆ ೧೨ ಸ್ಥಾನಗಳು (ಅದರ ಪೈಕಿ ೨ ಷೆಡ್ಯೂಲ್ ಕ್ಯಾಸ್ಟ್‌ಗಳಿಗೆ) ಸಂಸ್ಥಾನ ಶಾಸನ ಸಭೆಗೆ ೧೧೯ (ಅವುಗಳಲ್ಲಿ ೨೦ ಷೆಡ್ಯೂಲ್ ಕ್ಯಾಸ್ಟ್‌ಗಳಿಗೆ) ಎಂದು ರಾಷ್ಟ್ರಾಧ್ಯಕ್ಷರು ಮಾಡಿರುವ ಆಜ್ಞೆಯನ್ನು ಪಾರ್ಲಿಮೆಂಟಿನಲ್ಲಿ ನ್ಯಾಯಾಂಗ ಸಚಿವ ಶ್ರೀ ಅಂಬೇಡ್ಕರರು ಮಂಡಿಸಿರುವರು.

ಭಿಕ್ಷಾಟನೆ

ಭಾರತದಲ್ಲಿ ಭಿಕ್ಷಾಟನೆಯು ಕಾನೂನು ಬಾಹಿರವೆಂದು ಮಾಡುವುದು ಸುಲಭ. ಆದರೆ ಕಾರ್ಯಾಚರಣೆಗೆ ತರುವುದು ಕಷ್ಟ. ಈ ರೀತಿ ಪೋಷಣೆ ಕೊಡಿಸಲು ಸರ್ಕಾರವೇನೂ ಯೋಚಿಸುತ್ತಲಿಲ್ಲ ಎಂದು ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಹೇಳಿರುವರು.

ಸ್ಥಳಾಂತರರಾದವರ ಜೀವನಾಂಶ

ಭಾರತ ಸರ್ಕಾರವು ಇಲ್ಲಿಯವರೆಗೆ ಸ್ಥಳಾಂತರರಾದವರಿಗೆ ಕೊಡುತ್ತಿದ್ದ ಸಂಭಾವನೆಯನ್ನು ಪುನರ್ವಿಮರ್ಶಿಸಿ ಈ ಸಂಭಾವನೆಯನ್ನು ಇನ್ನು ಒಂದು ವರ್ಷ ಕೊಡಬೇಕೆಂದು ನಿರ್ಧರಿಸಿರುವರು.

ಪಾಕೀಸ್ಥಾನದಲ್ಲಿ ೪೦ ರೂ. ಪಡೆಯುತ್ತಿದ್ದವರಿಗೆ ಇಲ್ಲೂ ೪೦ ರೂ. ಕೊಡಬೇಕೆಂದು ತಿಳಿಸಿರುವರು.

ಸುಮಾರು ೩೬೦೦ ಜನರು ೪೦ ರೂಗಳಿಂದ ೧೦೦ ರೂ. ವರೆಗೆ ಸಂಭಾವನೆ ಪಡೆಯುತ್ತಿರುವರೆಂದು ಹೇಳಲಾಗಿದೆ. ಸುಮಾರು ೧೦,೦೦೦ ಜನರಿಗೆ ಒಂದು ರೂನಿಂದ ಹಿಡಿದು ೪೦ ರೂ. ವರೆವಿಗೂ ಸಂಭಾವನೆ ಕೊಡಲಾಗಿದ್ದು ಇವರಲ್ಲಿ ಬಹುಮಂದಿ ವೃದ್ಧರಿರುವರೆಂದು ಹೇಳಲಾಗಿದೆ.

* ದೆಹಲಿಯಲ್ಲಿ ನಡೆದ ಮಾತುಕಥೆಗಳಿಂದ ನೇಪಾಳದ ಮಂತ್ರಿಮಂಡಲ ವಿಸ್ತಾರವಾಗುವುದಿಲ್ಲವೆಂದು ಶ್ರೀ ಕೊಯಿರಾಲ ತಿಳಿಸಿದ್ದಾರೆ.

ಶ್ರೀ ಕೆ. ಟಿ. ಭಾಷ್ಯಂರ ಪ್ರಯಾಣ

ಬೆಂಗಳೂರು ಮೇ ೨೦

ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ಇಂದು ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡಿದರು. ಭಾರತ ಸರ್ಕಾರದ ಆಯೋಜನಾ ಸಮಿತಿಯೊಡನೆ ಸಂಸ್ಥಾನದ ಅಭಿವೃದ್ಧಿ ಯೋಜನೆಗ್ಗೆ ಮಾತುಕಥೆ ನಡೆಸುವರು. ಹಲವು ಇಲಾಖಾ ಮುಖ್ಯಾಧಿಕಾರಿಗಳೂ, ಕಾರ್ಯದರ್ಶಿಗಳೂ ಇವರೊಡನೆ ಹೊರಟರು.

ಶ್ರೀ ಕೆ. ಟಿ. ಭಾಷ್ಯಂರವರು ೨೯ನೇ ತಾ|| ಬೆಂಗಳೂರಿಗೆ ಹಿಂತಿರುಗುವ ನಿರೀಕ್ಷೆಯಿದೆ.

ಜೀವದಾನ

ಸಂಸ್ಥಾನದ ಎಲ್ಲಾ ಜಿಲ್ಲಾ ಬೋರ್ಡುಗಳು, ಟವನ್ ಮುನಿಸಿಪಾಲಿಟಿಗಳ ಅವಧಿಯನ್ನು ೧೯೫೧ನೇ ಜೂನಿನಿಂದ ಒಂದು ವರ್ಷಕಾಲ ವಿಸ್ತರಿಸಿ ಸರ್ಕಾರ ಆಜ್ಞೆ ಮಾಡಿದೆ.

ಮದರಾಸಿನ ಶ್ರೇಷ್ಠ ನ್ಯಾಯಾಲಯಕ್ಕೆ

ಜಿಲ್ಲಾ ನ್ಯಾಯಾಧೀಶರಾದ ಶ್ರೀ ಪಿ. ಎನ್. ರಾಮಸ್ವಾಮಿ, ಶ್ರೀ ಕೆ. ರಾಮಸ್ವಾಮಿಗೌಡರು ಮತ್ತು ಅಡ್ವೋಕೇಟ್ ಶ್ರೀ ಟಿ. ಎಲ್. ವೆಂಕಟರಾಮಯ್ಯನವರನ್ನು ಮದರಾಸಿನ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕ ಮಾಡಲಾಗಿದೆ.

ಎಕ್ಸೈಜು ಕಮಿಷನರು

ರಜದ ಮೇಲಿರುವ ಶ್ರೀ ಕೆ. ಶ್ರೀನಿವಾಸನ್‌ರವರನ್ನು ಎಕ್ಸೈಜು ಕಮಿಷನರಾಗಿ ನೇಮಿಸಲಾಗಿದೆ.

ಕಾಂಗ್ರೆಸ್ಸಿಗೆ ರಾಜೀನಾಮೆ

ಮದರಾಸಿನ ಮಾಜಿ ಪ್ರಧಾನಿ ಶ್ರೀ ಟಿ. ಪ್ರಕಾಶಂರವರು ನಿನ್ನೆ ದಿನ ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು ಸಲ್ಲಿಸಿರುವರೆಂದು ತಿಳಿಯಬರುತ್ತದೆ.

೧೫ ಬಾರಿ ಎಂ. ಎ. ಪದವಿ

ಶ್ರೀ ರಾಮಕುಮಾರ ಬಂಬೆ ಎಂಬ ೫೫ ವರ್ಷದ, ಕಾಶಿವಿಶ್ವವಿದ್ಯಾನಿಲಯದ ಅಸಿಸ್ಟೆಂಟು ಪ್ರೊಫೆಸರ್ ೧೫ ಬಾರಿ ಎಂ.ಎ. ಡಿಗ್ರಿಯನ್ನು ಪಡೆದಿರುವರು. ೧೫ನೇ ಸಲ ಮನಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದರು.

ಸೋಷಲಿಸ್ಟ್ ಪಾರ್ಟಿಯ ಕಾರ್ಯದರ್ಶಿ ಬಂಧನ

ಸಾಗರದಲ್ಲಿ ಕಾಗೋಡು ರೈತರ ಚಳುವಳಿಯ ಸಂಬಂಧದಲ್ಲಿ ಮೊನ್ನೆ ದಿನ ಪೋಲೀಸರು ೫ ಮಂದಿ ರೈತರನ್ನೂ ಮೈಸೂರು ಸಂಸ್ಥಾನದ ಸೋಷಲಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ ಸದಾಶಿವರಾಯರನ್ನು ದಸ್ತಗಿರಿ ಮಾಡಿದ್ದಾರೆ.

ರೈಲ್ವೆ ಸ್ಟೇಷನ್‌ಗಳಲ್ಲಿ ವನಮಹೋತ್ಸವ

ಭಾರತಾದ್ಯಂತ ಎಲ್ಲಾ ರೈಲ್ವೆ ಸ್ಟೇಷನ್‌ಗಳಲ್ಲೂ ಹಣ್ಣುಗಳನ್ನು ಬಿಡುವ ಗಿಡಗಳನ್ನು ವನಮಹೋತ್ಸವ ಸಂದರ್ಭದಲ್ಲಿ ಜುಲೈ ಮೊದಲನೇ ವಾರದಲ್ಲಿ ನೆಡಬೇಕೆಂಬ ಸರ್ಕಾರ ಆಜ್ಞೆಯಾಗಿದೆ. ಈ ಗಿಡಗಳನ್ನು ನೆಡುವುದೇ ಅಲ್ಲದೆ ರೈಲ್ವೆ ನೌಕರರು ಅವುಗಳ ಬೆಳವಣಿಗೆಯನ್ನು ನೋಡಿಕೊಳ್ಳುವುದು ಅವರ ಜವಾಬ್ದಾರಿಯಾಗಿರುತ್ತದೆ.

ಜೈಲಿನಲ್ಲಿ ವಿಚಾರಣೆ

ಸರ್ಕಾರ ವಿರುದ್ಧ ಪಿತೂರಿಗಾರರನ್ನು ಇಡಲು ಮತ್ತು ವಿಚಾರಣೆ ನಡೆಸಲು ಸಿಂಧ್ ಪ್ರಾಂತದ ಹೈದರಾಬಾದಿನ ಸೆಂಟ್ರಲ್ ಜೈಲಿನಲ್ಲಿ ಗಾಳಿ ಬೆಳಕು ಚೆನ್ನಾಗಿ ಬರುವಂತಹ ಕೊಠಡಿಗಳನ್ನು ಕಟ್ಟಲಾಗುತ್ತಿದೆ.

ಲಾಹೋರಿನಲ್ಲಿ ಪಾಕಿಸ್ತಾನ ಸೈನ್ಯದ ದಂಡನಾಯಕರಾದ ಮೇಜರ್ ಜನರಲ್ ನಜೀರ್ ಅಹಮದ್‌ರವರನ್ನು ಪಾಕಿಸ್ತಾನ ಆಪಾದಿತ ಪಿತೂರಿ ಸಂದರ್ಭದಲ್ಲಿ ನಿನ್ನೆ ದಸ್ತಗಿರಿ ಮಾಡಲಾಗಿದೆ.

ಸೈನ್ಯ ಕಳುಹಿಸುವುದಿಲ್ಲ

ಪಾಕಿಸ್ತಾನ್ ಸರ್ಕಾರವು ಕೊರಿಯಾಕ್ಕೆ ಸೇನೆಗಳನ್ನು ಕಳುಹಿಸುವುದಿಲ್ಲವೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಬೆಂಗಳೂರು ಮೇ ೨೦

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ೨೭ನೇ ತಾರೀಖು ಭಾನುವಾರ ಬೆಳಗ್ಗೆ ೧೦ ಗಂಟೆಗೆ ಕಾಂಗ್ರೆಸ್ ಭವನದಲ್ಲಿ ಸೇರುವುದು.

ಸರ್ ಮಿರ್ಜಾರವರು ಸಿಂಗಪುರಿನಲ್ಲಿ

ಇಂಡೋನೇಷಿಯಾಕ್ಕೆ ಸಲಹೆಗಾರರಾಗಿ ನೇಮಕವಾಗಿರುವ ಮೈಸೂರಿನ ಮಾಜಿ ದಿವಾನ್ ಸರ್ ಮಿರ್ಜಾರವರು ಒಕಾರ್ಟಾವಿಗೆ ತೆರಳುವ ಮಾರ್ಗದಲ್ಲಿ ಸಿಂಗಪುರಕ್ಕೆ ಆಗಮಿಸಿರುವರು. ಅಲ್ಲಿ ಮಾತನಾಡುತ್ತಾ ಹಿಂದುಳಿದ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ ಮತ್ತಿತರ ಪ್ರಗತಿಕಾರ್ಯದಲ್ಲಿ ತಮ್ಮ ಕೈಲಾದ ಸಹಾಯ ನೀಡಲು ಇಂಡೋನೇಷಿಯಾಕ್ಕೆ ತೆರಳುತ್ತಿರುವುದಾಗಿ ಹೇಳಿರುವರು.

ಬಾಂಬು ಸುರಿಯಬೇಕು

ಚೀಣಾದ ಮೇಲೆ ಬಾಂಬುಗಳನ್ನು ಸುರಿದು ಪಟ್ಟಣಗಳನ್ನೆಲ್ಲಾ ನಿರ್ಮೂಲ ಮಾಡಿದರೆ ಮಾತ್ರ ಮೂರನೇ ಸಲ ಮಹಾಯುದ್ಧವನ್ನು ತಡೆಗಟ್ಟಬಹುದೆಂದು ಬ್ರಿಟನ್ ಯುದ್ಧ ಸಚಿವರು ಹೇಳಿರುವಂತೆ ವರದಿಯಾಗಿದೆ.

ವಿದ್ಯುಚ್ಛಕ್ತಿಯಿಂದ ಏಕಕಾಲದಲ್ಲಿ ಎರಡು ಎಮ್ಮೆಗಳ ಮರಣ

ಮೈಸೂರು ಮೇ ೨೦

ಈ ದಿನ ಬೆಳಗ್ಗೆ ೧೦ ಗಂಟೆ ವೇಳೆಯಲ್ಲಿ ಲಕ್ಷ್ಮೀಪುರದಲ್ಲಿ ಕರ್ನಲ್ ಸಂಜೀವರಾವ್ ಬಹದ್ದೂರರವರ ಮನೆ ಹಿಂಭಾಗದಲ್ಲಿ ಅವರಿಗೆ ಸೇರಿದ ಎರಡು ಭಾರಿ ಎಮ್ಮೆಗಳಿಗೆ ಎಮ್ಮೆಗಳಿಗೆ ಎಲೆಕ್ಟ್ರಿಕ್ ಷಾಕ್ ಹೊಡೆದು ಏಕಕಾಲದಲ್ಲಿ ಮಡಿದುವು. ನಿವೃತ್ತ ಇಂಜನಿಯರ್ ಶ್ರೀ ಹನುಮಂತರಾಯರ ಮನೆಗೆ ತೆಗೆದುಕೊಂಡಿದ್ದ ಕನೆಕ್ಷನ್ ಕೆಟ್ಟು ಹೋಗಿ ಕಂಭದಲ್ಲಿ ವಿದ್ಯುಚ್ಛಕ್ತಿ ಲೀಕ ಆಗುತ್ತಲಿದ್ದುದರಿಂದ ಈ ದುರಂತವಾಯಿತೆಂದು ತಿಳಿಯಬರುತ್ತದೆ. ಇಲಾಖೆಯವರು ಕೂಡಲೇ ಬಂದು ಆ ಮನೆಗೆ ಕೊಟ್ಟಿದ್ದ ಸರಬರಾಯಿಯನ್ನು ನಿಲ್ಲಿಸಿದರು.

ವಿಶ್ವಸಂಸ್ಥೆ ಸೈನ್ಯ ಹಿಂದಕ್ಕೆ

ಕೊರಿಯಾ ಯುದ್ಧದಲ್ಲಿ ಉತ್ತರದವರ ಪ್ರತಿಭಟನೆ ತೀವ್ರವಾಗಿದೆ. ವಿಶ್ವಸಂಸ್ಥೆ ಸೈನ್ಯಗಳು ಹಿಮ್ಮೆಟ್ಟುತ್ತಲಿವೆಯೆಂದು ವರದಿಯಾಗಿದೆ.

ಸದಸ್ಯತ್ವಕ್ಕೆ ಠೇವಣಿ

ಭಾರತ ಪಾರ್ಲಿಮೆಂಟು ಸದಸ್ಯತ್ವಕ್ಕೆ ನಿಲ್ಲುವವರು ೫೦೦ ರೂಪಾಯಿ, ಪ್ರಾಂತ್ಯ ಶಾಸನ ಸಭೆಗಳಿಗೆ ನಿಲ್ಲುವವರು ೨೫೦ ರೂಪಾಯಿ ಠೇವಣಿಯನ್ನು ಕೊಡಬೇಕೆಂಬ ಮಸೂದೆಯು ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಯಿತು.

ಜೂನ್ ೧೬ಕ್ಕೆ ಖಾಟ್ಮಂಡುವಿಗೆ

ಪ್ರಧಾನಿ ನೆಹರೂ ಜೂನ್ ೧೬ಕ್ಕೆ, ನೇಪಾಳ ಸರ್ಕಾರದ ಆಹ್ವಾನವನ್ನು ಮನ್ನಿಸಿ, ಖಾಟ್ಮಂಡುವಿಗೆ ಹೋಗುವರು.

ನೂರಾರು ಜನರು ಮಡಿದರು

ಕೊರಿಯಾ ರಣರಂಗದಲ್ಲಿ ಅಮೆರಿಕಾ ಟ್ಯಾಂಕುಗಳನ್ನು ಎದುರಿಸಲು ಹೋಗಿ ನೂರಾರು ಚೈನಾ ಪಡೆಯವರು ಸತ್ತರೆಂದು ಹೇಳಲಾಗಿದೆ.

* ಪೆನ್ಸಿಲ್ವೇನಿಯಾದ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ಪ್ಯಾಸೆಂಜರ್ ಟ್ರೈನು ಇಂಜನ್ನಿಗೆ ಡಿಕ್ಕಿ ಹೊಡೆದುದರಿಂದ ೧೧ ಜನ ಸತ್ತು ೬೦ ಜನರಿಗೆ ಗಾಯವಾಗಿದೆ.

* ದೆಹಲಿಯಲ್ಲಿ ಶೀಘ್ರದಲ್ಲಿಯೇ ಪ್ರಾಯೋಗಿಕವಾಗಿ ಸಂಚಾರಿ ಪೋಸ್ಟಾಫೀಸನ್ನು ತೆರೆಯಲಾಗುವುದೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜೆ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ ಮೈಸೂರು, ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಿ. ನಂ. ಎಂ. ೫೩೧೮ ದಿನಪತ್ರಿಕೆ ಫೋನ್. ೫೭೮

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೫—೧೯೫೧ನೇ ಮಂಗಳವಾರ [ಸಂಚಿಕೆ ೨೧೮

ಎ. ಐ. ಆರ್. ಕಾರ್ಯಕ್ರಮ

ಮೈಸೂರು ಮೇ ೨೨

ಈದಿನ ಸಂಜೆ ಎ. ಐ. ಆರ್ ಮೈಸೂರು ಶಾಖೆಯಿಂದ ಮಲೆನಾಡಿನ ಗುಡ್ಡಗಾಡಿನ ಜನರು ಎಂಬ ವಿಷಯವಾಗಿ ಶ್ರೀ ಗೋಪಾಲರಾಮಸ್ವಾಮಿ ಅಯ್ಯಂಗಾರ್‌ರವರು ಭಾಷಣ ಮಾಡುವರು. ಶ್ರೀ ಆರ್. ಕೆ. ಶ್ರೀಕಂಠನ್‌ರವರ ಸಂಗೀತವಿದೆ.

೩೭ ಮುಸಲ್ಮಾನರು ಮಹಾ ಸಭೆಗೆ ಸೇರಿದರು

ಅಖಿಲಭಾರತ ಹಿಂದೂ ಮಹಾಸಭೆಗೆ ಲಕ್ನೋದಲ್ಲಿ ೩೭ ಮುಸಲ್ಮಾನರು ಸೇರಿರುವರು. ಭಾರತದಲ್ಲಿರುವ ಹಿಂದುಗಳ ವಿಶ್ವಾಸವನ್ನು ಗಳಿಸಲು ತಾವು ಈ ತೀರ್ಮಾನ ಮಾಡಿರುವುದಾಗಿ ಅವರಲ್ಲೊಬ್ಬರು ಹೇಳಿರುವರು.

ಬರೋಡಾ ರಾಜರ ಮನವಿಗೆ ಪುರಸ್ಕಾರ ದೊರೆಯಲಿಲ್ಲ

ಮಹಾ ಚುನಾವಣೆಗಳಲ್ಲಿ ಸ್ಥಾನಬದ್ಧರಿಗೂ ಸಹ ಓಟುಮಾಡುವ ಹಕ್ಕು

೧೦೦ ರೂ. ಜುಲ್ಮಾನೆ ಮತ್ತು ೨ ತಿಂಗಳು ಕಠಿಣ ಸಜಾ

ಮೈಸೂರು ಮೇ ೨೧

ಮೈಸೂರು ಕೊತ್ವಾಲರಾಮಯ್ಯನವರ ಬೀದಿಯಲ್ಲಿ ವಾಸವಾಗಿರುವ ಮೈಸೂರು ತಾ|| ರೇಷನ್ ಡಿಪೋವಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಲಿಂಗಯ್ಯ ಎಂಬಾತನು ರಹದಾರಿ ಇಲ್ಲದೆ ೮ ಪಲ್ಲ ಜೋಳ, ೨ ಪಲ್ಲ ಭತ್ತ, ೯೦ ಸೇರು ರಾಗಿಯನ್ನು ಇಟ್ಟುಕೊಂಡಿದ್ದನೆಂದು ಫುಡ್‌ಸೈಡ್ ಪಾರ್ಟಿಯವರು ೧ನೇ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದು ೩೧-೩-೫೧ ರಲ್ಲಿ ಅಪರಾಧಿಗೆ ೨ ತಿಂಗಳು ಕಠಿಣ ಸಜಾ ಮತ್ತು ೩೦೦ ರೂ. ಜುಲ್ಮಾನೆ ವಿಧಿಸಲಾಗಿತ್ತು. ಅಪರಾಧಿಯು ಸೆಷನ್ ಕೋರ್ಟಿಗೆ ಅಪೀಲ್ ಮಾಡಿದಾಗ ಸೆಷನ್ ಜಡ್ಜರಾದ ಶ್ರೀ ಕೆ. ಸಿ. ಲಿಂಗಯ್ಯಗೌಡರು ಅಪರಾಧಿಗೆ ೨ ತಿಂಗಳು ಕಠಿಣ ಸಜಾವನ್ನು ಖಾಯಂ ಮಾಡಿ ಜುಲ್ಮಾನೆಯನ್ನು ೧೦೦ ರೂ. ಗಳಿಗೆ ಇಳಿಸಿರುತ್ತಾರೆ.

ಮೈಸೂರು ಸಬರ್‌ಬಾದ್‌ನಲ್ಲಿರುವ ನಿಂಗಮ್ಮ ಮತ್ತು ಕೆಂಪಮ್ಮ ಎಂಬುವರು ಒಟ್ಟು ೨೨ ಸೇರು ಅಕ್ಕಿಯನ್ನು ರಹದಾರಿ ಇಲ್ಲದೆ ಸಾಗಿಸುತ್ತಿದ್ದರೆಂದು ಫುಡ್‌ಸೈಡ್ ಪಾರ್ಟಿಯವರು ೧ನೇ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದು ವಿಚಾರಣೆಯಾಗಿ ಅಪರಾಧಿಗಳಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ತಲಾ ೪೦ ಮತ್ತು ೩೦ ರೂ. ಜುಲ್ಮಾನೆ ತಪ್ಪಿದರೆ ೧೫ ದಿನ ಸಾದಾ ಸಜವನ್ನು ವಿಧಿಸಲಾಗಿದೆ.

೧೫೦೦ ಜನ ರಾಜೀನಾಮೆ

ಮುಂಬಯಿ ಪ್ರಾಂತ್ಯದಲ್ಲಿ ಸಾಟಾರಾದಲ್ಲಿ ಸಮ್ಮೇಳನಾನಂತರ ಸುಮಾರು ೧೫೦೦ ಜನರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವುದು ಖಚಿತವೆಂದೂ ಹೇಳಲಾಗಿದೆ. ಕೇಂದ್ರ ಸಚಿವ ರಫಿ ಅಹಮದ್ ಕಿದ್ವಾಯ್‌ರವರ ರಾಜೀನಾಮೆಯನಂತರ ಶ್ರೀಗಳಾದ ಮಹವೀರತ್ಯಾಗಿ ಮತ್ತು ಅಜಿತ್‌ಪ್ರಸಾದ್ ಜೈನ್‌ರವರು ರಾಜೀನಾಮೆ ಕೊಡುವರೆಂದು ಕೇಳಲಾಗಿದೆ.

ಬುದ್ಧ ಜಯಂತಿ ಉತ್ಸವಗಳು

ನಿನ್ನೆದಿನ ದೆಹಲಿಯಲ್ಲಿ ಬುದ್ಧ ಜಯಂತಿ ಪ್ರಯುಕ್ತ ಪ್ರಾರ್ಥನಾ ಸಭೆ ಮತ್ತು ಪೂಜೆಗಳನ್ನು ನೆರವೇರಿದುವು.

ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ಹಂಚಲಾಯಿತು.

ಡಾ|| ಅಂಬೇಡ್ಕರ್‌ರವರು ಸಭೆಯಲ್ಲಿ ಭಾಷಣ ಮಾಡಿದರು.

ಕಲ್ಕತ್ತಾದಲ್ಲೂ ಸಹ ಅಖಿಲ ಭಾರತ ಮಹಾಬೋಧಿ ಸಂಘದಾಶ್ರಯದಲ್ಲಿ ಬುದ್ಧ ಜಯಂತಿಯನ್ನು ನೆರವೇರಿಸಲಾಯಿತು. ಬುದ್ಧನ ಪ್ರಿಯ ಶಿಷ್ಯರಾದ ಮಹಾಮೊಗ್ಗಲಾನ ಮತ್ತು ಸಾರಿ ಪುತ್ರರ ಅವಶೇಷಗಳಿಗೆ ಪೂಜೆ ಸಲ್ಲಿಸಲಾಯಿತು.

ಒಂದು ಎಕರೆಗೆ ೫೩ ಮಣ ಜೋಳ

ಬೊಂಬಾಯಿ ಪ್ರಾಂತದ ರೈತನೊಬ್ಬನು ಒಂದು ಎಕರೆ ಭೂಮಿಯಲ್ಲಿ ೫೩ ಮಣ ಜೋಳ ಬೆಳೆದಿರುವನು. ಅಲ್ಲಿನ ಸರ್ಕಾರವು ಅವನಿಗೆ ಬಹುಮಾನರೂಪವಾಗಿ ಹಣವನ್ನು ಕೊಡುವುದು. ಉತ್ತಮ ಗೊಬ್ಬರ ಹಾಕಿ, ಕಾಲಕ್ಕೆ ಸರಿಯಾಗಿ ನೀರು ಬಿಟ್ಟು ಶ್ರದ್ಧೆಯಿಂದ ವ್ಯವಸಾಯ ಮಾಡಿ ಈ ರೈತನು ಕೇವಲ ೫ ಮಣದಿಂದ ಈಗ ೫೩ ಮಣ ಬೆಳೆದಿರುವನು.

ಕೆರೆ ಕಟ್ಟುವ ಕಾರ್ಯಾರಂಭ

ದೆಹಲಿಯ ರಾಜಘಾಟ್ ಬಳಿ ನೂತನವಾಗಿ ರಚಿಸಲಿರುವ ಪಟ್ಟಣಕ್ಕೆ ಸಮೀಪದಲ್ಲಿ ಒಂದು ಕೆರೆಯನ್ನು ಕಟ್ಟುವ ಕಾರ್ಯವು ಈ ದಿನ ೨೫೦ ಸ್ವಯಂಸೇವಕರಿಂದ ಆರಂಭವಾಯಿತು.

ಸ್ಥಳೀಯ ಸಂಸ್ಥೆಗಳ ಚುನಾವಣೆ

ಮದರಾಸ್ ಪ್ರಾಂತ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಡೆಯಬೇಕಾಗಿದ್ದ ಚುನಾವಣೆಗಳನ್ನು ಒಂದು ವರ್ಷಕಾಲ ಮುಂದು ಹಾಕಲಾಗಿದೆ, ಮಹಾ ಚುನಾವಣೆಗಳನಂತರ ಈ ಚುನಾವಣೆಗಳನ್ನು ನಡೆಸಲಾಗುವದೆಂದು ಹೇಳಲಾಗಿದೆ.

ಬರೋಡಾ ರಾಜರ ಮನವಿಗೆ ನಿರಾಕರಣೆ

ಬರೋಡದ ರಾಜಾ ಸರ್ ಪ್ರತಾಪ್ ಸಿಂಗ್‌ರವರು ತಮ್ಮ ಪ. ಪತ್ನಿ ಸಿಂಹಾಸನಾಧಿಕಾರಿಗಳನ್ನಾಗಿ ಮಾಡಬೇಕೆಂದು ಕೋರಿ ರಾಷ್ಟ್ರಾಧ್ಯಕ್ಷರಲ್ಲಿ ಮನವಿ ಸಲ್ಲಿಸಿದ್ದರಷ್ಟೆ.

ರಾಷ್ಟ್ರಾಧ್ಯಕ್ಷರು ಈ ಮನವಿಯ ಬಗ್ಗೆ ಸಂಸ್ಥಾನ ಶಾಖೆಯ ಸಚಿವರು ಮತ್ತು ಪ್ರಧಾನ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿ ಮತ್ತೆ ಅವರಿಗೆ ರಾಜ್ಯಾಧಿಕಾರವನ್ನು ಕೊಡುವುದಿಲ್ಲವೆಂದು ತಿಳಿಸುವ ಉತ್ತರವನ್ನು ಬರೋಡದ ಮಾಜೀ ರಾಜರಿಗೆ ಕೊಡಲಾಯಿತೆಂದು ಕೇಂದ್ರ ಸಂಸ್ಥಾನ ಶಾಖೆಯ ಪ್ರಕಟಣೆ ಹೊರಬಿದ್ದಿದೆ. ರಾಷ್ಟ್ರಾಧ್ಯಕ್ಷರ ಉತ್ತರದಲ್ಲಿ ಸರ್ ಗಾಯಕವಾಡರು ಇಚ್ಛೆಪಟ್ಟಲ್ಲಿ ಹಿಸ್‌ಹೈನೆಸ್ ಎಂಬ ಹೆಸರಿನ ಜೊತೆಗೆ ಸೇರಿಸಿಕೊಳ್ಳಬಹುದೆಂದು ತಿಳಿಸಲಾಗಿದೆ.

ಶ್ರೀಮತಿ ಮಹಾರಾಣಿಯವರು ಸಹ ಅವರ ಹಕ್ಕುಗಳನ್ನು ಮರ್ಯಾದೆಗಳನ್ನು ಹೊಂದಿ ಹೆಸರಿನ ಜೊತೆಗೆ ಹರ್‌ಹೈನೆಸ್ ಎಂದು ಸೇರಿಸಿಕೊಳ್ಳಬಹುದೆಂದು ಪ್ರಕಟಣೆ ತಿಳಿಸುತ್ತದೆ.

ಬರೋಡದ ಸರ್ ಗಾಯಕವಾಡರು ತಮ್ಮ ವಿರಾಮ ವೇತನ,ವಾಸಸ್ಥಳ ಮತ್ತು ಆಸ್ತಿಯ ವಿಷಯಕ್ಕೆ ಸರ್ಕಾರಕ್ಕೆ ಮನವಿ ಕಳುಹಿಸಿದರೆ ಸೂಕ್ತವಾಗಿ ಪರಿಗಣಿಸಲಾಗುವುದೆಂದು ರಾಷ್ಟ್ರಾಧ್ಯಕ್ಷರ ಆಜ್ಞೆಯಲ್ಲಿ ತಿಳಿಸಲಾಗಿದೆ.

ಪ್ರಜಾ ಪ್ರಾತಿನಿಧ್ಯ ಮಸೂದೆ

ನಿನ್ನೆದಿನ ಕೇಂದ್ರ ಶಾಸನ ಸಭೆಯಲ್ಲಿ ಪ್ರಜಾ ಪ್ರಾತಿನಿಧ್ಯ ಮಸೂದೆ ಬಗ್ಗೆ ಚರ್ಚೆಗಳನ್ನು ಮುಂದುವರಿಸಲಾಯಿತು.

ಮದರಾಸಿನಲ್ಲಿ ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸುವ ಬಗ್ಗೆ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿವೆ. ಮದರಾಸ್ ಪ್ರಾಂತಕ್ಕೆಲ್ಲಾ ಒಟ್ಟು ೨೦,೦೦೦ ಗ್ರಾಮ ಪಂಚಾಯಿತಿಗಳನ್ನು ರಚಿಸಲಾಗುವುದು. ಪ್ರತಿ ೫೦೦ ಜನರಿರುವ ಹಳ್ಳಿಗೆ ಒಂದು ಗ್ರಾಮ ಪಂಚಾಯಿತಿಯನ್ನು ರಚಿಸಲಾಗುವದೆಂದು ಹೇಳಲಾಗಿದೆ.

ಏಕೀಕರಣ ಕಾರ್ಯಕರ್ತರ ಸಭೆ

ಸ್ವಂ. ಸು. ಫೋನ್] ಬೆಂಗಳೂರು ೨೧

ಕರ್ನಾಟಕ ಏಕೀಕರಣ ಕಾರ್ಯಕರ್ತರ ಸಭೆಯು ಈ ದಿನ ... ಪರಿಷನ್ಮಂದಿರದಲ್ಲಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸ್ಥಾನಬದ್ಧರೂ ಸಹ ಓಟು ಮಾಡಬಹುದು

ಭಾರತದ ಪಾರ್ಲಿಮೆಂಟಿನಲ್ಲಿ ಈ ದಿನ ಪ್ರಜಾ ಪ್ರಾತಿನಿಧ್ಯದ ಮಸೂದೆಯ ಬಗ್ಗೆ ಚರ್ಚೆ ನಡೆದು ಮಹಾ ಚುನಾವಣೆಯಲ್ಲಿ ಸ್ಥಾನಬದ್ಧರೂ ಸಹ ಓಟು ಮಾಡಬಹುದೆಂಬ ಕಾನೂನು ಅಂಗೀಕೃತವಾಯಿತು.

ಪೆಡ್ಯೂಲ್ ಪಂಗಡದವರು ತಮ್ಮ ಕ್ಷೇತ್ರದಿಂದಲ್ಲದೆ ಸಾರ್ವತ್ರಿಕ ಚುನಾವಣಾ ಕ್ಷೇತ್ರದಿಂದಲೂ ಮಹಾ ಚುನಾವಣೆಗಳಲ್ಲಿ ಉಮೇದುವಾರರಾಗಬಹುದೆಂದು ಅಂಗೀಕರಿಸಲಾಯಿತು.

ವಿಷಪ್ರಾಶನ ಯತ್ನದ ಮೊಕದ್ದಮೆ

ಶ್ರೀ ಮೇದಪ್ಪನವರಿಗೆ ವಿಷಪ್ರಾಶನ ಯತ್ನ ನಡೆಯಿತೆಂದು ಹೇಳಲಾದ ಮೊಕದ್ದಮೆಯಲ್ಲಿ ಈ ದಿನ ಜ್ಯೋತಿಷ್ಯ ಶ್ರೀ ಡಿ. ಕೆ. ಮೂರ್ತಿಯವರು ಸಾಕ್ಷ್ಯ ಹೇಳುತ್ತಾ ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ಕೇಂದ್ರ ಪಾರ್ಲಿಮೆಂಟಿನಲ್ಲಿ ಉಪಾಧ್ಯಕ್ಷರಾಗಿರುವ ಶ್ರೀ ಅನಂತಶಯನಂ ಅಯ್ಯಂಗಾರ್‌ರವರ ಮೂಲಕ ತಿದ್ದುಪಡಿ ಮಾಡಿಸಿ ತಮ್ಮ ಮೇಲಿನ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ತಮಗೆ ಶ್ರೀ ರಾಜುರವರು ಹೇಳಿದರೆಂದು ಕೋರ್ಟಿನಲ್ಲಿ ತಿಳಿಸಿದರು.

ನಂದಿಬೆಟ್ಟಕ್ಕೆ ಮುಖ್ಯಮಂತ್ರಿ

ಸಂಸ್ಥಾನದ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ನಂದಿಬೆಟ್ಟಕ್ಕೆ ತೆರಳಿದರು.

* ಪರ್ಶಿಯಾ ಎಣ್ಣೆ ವಿವಾದವು ಅಂತರ ರಾಷ್ಟ್ರೀಯ ನ್ಯಾಯಾಲಯದ ವ್ಯಾಪ್ತಿಗೆ ಸೇರಿಲ್ಲವೆಂದು] ಪರ್ಶಿಯಾ ಸರ್ಕಾರ ತಿಳಿಸಿದೆ.

ಆಹಾರ ಮತ್ತು ಪ್ರಜಾ ಸಂಖ್ಯೆ

ಮೈಸೂರು ಮೇ ೨೧

'ಆಹಾರ ಮತ್ತು ಜನಸಂಖ್ಯೆ' ಮತ್ತು 'ಆಹಾರ ಕೈಗಾರಿಕಾಭಿವೃದ್ಧಿ' ಎಂಬಿವು ಮುಖ್ಯವಾದ ವಿಷಯಗಳಲ್ಲಿ, ಕೇಂದ್ರ ಆಹಾರ ಸಂಶೋಧನಾ ಕೇಂದ್ರದವರು ಇದೇ ೨೩, ೨೪ನೇ ತಾರೀಖುಗಳಲ್ಲಿ ಚರ್ಚಾ ಕೂಟಗಳನ್ನು ಏರ್ಪಡಿಸಲಿರುವರು. ಈ ಚರ್ಚಾ ಕೂಟದಲ್ಲಿ ಅಧ್ಯಕ್ಷತೆ ವಹಿಸಲು ಕೇಂದ್ರ ಸಚಿವ ಶ್ರೀ ಪ್ರಕಾಶರವರು ಒಪ್ಪಿದ್ದರು. ಆದರೆ ಕಾರಣಾಂತರದಿಂದ ಅವರು ಬರುವುದಿಲ್ಲ.

೨೩ನೇ ತಾರೀಖಿನ ದಿನ ಮದರಾಸಿನ ಆಹಾರ ಸಚಿವ ಶ್ರೀ ಬೋಸ್ ವೆಂಕಟ್ಟರೆಡ್ಡಿಯಾರವರು, ೨೪ನೇ ತಾರೀಖಿನ ದಿನ ಮೈಸೂರು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು.

'ಆಹಾರ ಮತ್ತು ಜನಸಂಖ್ಯೆ' ಚರ್ಚಾಗೋಷ್ಠಿಯಲ್ಲಿ ವಿಶ್ವಸಂಸ್ಥೆಯ ಪ್ರಜಾಸಂಖ್ಯೆಯ ಪರಿಶೀಲನಾ ಸಮಿತಿಯ ಡೈರೆಕ್ಟರ್ ಡಾ|| ಚಂದ್ರಶೇಖರ್, ಸರ್ ದಾತಾರ್‌ಸಿಂಗ್, ಸರ್ ಎಸ್. ವಿ. ರಾಮಮೂರ್ತಿ, ಡಾ|| ಬಿ. ವಿಶ್ವನಾಥ್, ಡಾ|| ಕೆ ಮಿತ್ರ ಮತ್ತು ಡಾ|| ವಿ ಸುಬ್ರಹ್ಮಣ್ಯಂರವರು ಭಾಗವಹಿಸುವರು. ಆಹಾರ ಸ್ವಯಂಪರಿಪೂರ್ಣತೆ ಮುಂತಾದ ವಿಷಯಗಳ ಚರ್ಚೆ ನಡೆಯುವುದು.

'ಆಹಾರ ಕೈಗಾರಿಕೆ' ಚರ್ಚಾಗೋಷ್ಠಿಯಲ್ಲಿ ಹಿಟ್ಟಿನ ಮಿಲ್ಲು, ಬಿಸ್ಕತ್ತು, ಸಕ್ಕರ, ಚಾಕಲೇಟ್, ಹಣ್ಣು ಮತ್ತು ತರಕಾರಿ, ಪಾನೀಯ, ವನಸ್ಪತಿ ಇವುಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ಪ್ರತಿನಿಧಿಗಳು ಭಾಗವಹಿಸುವರು.

ರೇಷನ್‌ಕಾರ್ಡುದಾರರ ಸಂಘ

ಮೈಸೂರು ಸಿಟಿ ರೇಷನ್‌ಕಾರ್ಡುದಾರರ ಕಾರ್ಯಕಾರಿ ಸಮಿತಿಯ ಸಭೆ ೨೦ನೇ ತಾ|| ಭಾನುವಾರ ನಡೆದು ಮುಂದಿನ ಸಾಲಿನ ಅಧಿಕಾರ ವರ್ಗದವರನ್ನು ಚುನಾಯಿಸಲಾಯಿತು.

ಶ್ರೀ ಬಿ. ಜಿ ದಾಸ್ (ಅಧ್ಯಕ್ಷರು)— ಶ್ರೀ ಜಿ. ನರಸಿಂಹಯ್ಯ, ಜನಾಬ್ ಮಹಮದ್ ಯಾಕೂಬ್‌ಸಾಹೇಬ್‌ರು ಉಪಾಧ್ಯಕ್ಷರು, ಶ್ರೀ ಟಿ. ಎನ್. ಮುದ್ದಯ್ಯ ಕೋಶಾಧ್ಯಕ್ಷ, ಶ್ರೀಗಳಾದ ಕೆ. ಅನಂತ ಸುಬ್ಬರಾಯ ಮತ್ತು ಎಂ. ಸಿ. ನರಸಿಂಹಯ್ಯನವರು ಕಾರ್ಯದರ್ಶಿಗಳಾಗಿ ಚುನಾಯಿತರಾದರು.

* ಅಮೆರಿಕಾದಲ್ಲಿ ಪ್ರತಿಯೊಬ್ಬನೂ ಸಂಪಾದಿಸುವ ಒಂದು ಡಾಲರಿಗೆ ೩೫ ಸೆಂಟುಗಳನ್ನು ತೆರಿಗೆಗಾಗಿ ಕೊಡುವನು.

ಮಿಲ್ಲು ಬಟ್ಟೆ ಕೊಳ್ಳುವಾಗ ಬೇರೆಬಟ್ಟೆ ಕೊಳ್ಳಬೇಕಾಗಿಲ್ಲ

ಬೆಂಗಳೂರು ಮೇ ೨೦

ಸಂಸ್ಥಾನದ ಕೆಲವು ಭಾಗಗಳಲ್ಲಿ ಮಿಲ್ಲು ಬಟ್ಟೆ ಕೊಳ್ಳುವಾಗ ಕೈಮಗ್ಗದ ಅಥವಾ ಪವರ್‌ಲೂಮಿನ ಬಟ್ಟೆಗಳನ್ನು ಕಡ್ಡಾಯವಾಗಿ ಕೊಳ್ಳಬೇಕೆಂದು ವರ್ತಕರು ಒತ್ತಾಯಪಡಿಸುತ್ತಲಿರುವುದಾಗಿ ತಿಳಿಯಬಂದಿದೆ. ಈ ಬಲಾತ್ಕಾರಕ್ಕೆ ಅವಕಾಶವಿಲ್ಲ. ಹಾಗೆ ವರ್ತಕರು ಒತ್ತಾಯಪಡಿಸಿದರೆ ಅವರ ಲೈಸನ್ಸನ್ನು ರದ್ದುಗೊಳಿಸಲಾಗುವುದೆಂದು ಸಿವಿಲ್ ಸಪ್ಲೈ ಶಾಖೆ ಪ್ರಕಟಣೆ ಹೊರಡಿಸಿದೆ.

ಬಿಹಾರಿನ ಆಹಾರ ಹಂಚಿಕೆಯ ನೀತಿ ಪ್ರಶಂಸೆ

ದೆಹಲಿಯ ಸ್ಕೂಲ್ ಆಫ್ ಎಕನಾಮಿಕ್ಸಿನ ಐವರು ಪ್ರೊಫೆಸರುಗಳು ಬಿಹಾರಿಗೆ ತೆರಳಿ ಅಲ್ಲಿನ ಸರ್ಕಾರವು ಆಹಾರಾಭಾವ ತಡೆಗಟ್ಟಲು ಅನುಸರಿಸುತ್ತಿರುವ ನೀತಿಯನ್ನು ಪ್ರಶಂಸಿಸಿರುವರು. ಸರ್ಕಾರವು ರೇಷನ್ ಡಿಪೋ ತೆಗೆದ ಪ್ರಯುಕ್ತ ಜನರಲ್ಲಿ ತೃಪ್ತಿಮೂಡಿ ಆಹಾರವು ಸರಿಯಾಗಿ ಹಂಚಿಕೆಯಾಗುತ್ತಿದೆಯೆಂದು ಹೇಳಿ ಇದರಿಂದ ಆಹಾರ ಧಾನ್ಯಗಳ ಬೆಲೆ ಸಹ ಕಡಿಮೆಯಾಗಿದೆಯೆಂದು ಹೇಳಿರುವರು.

ಕೋಮುವಾರು ಪ್ರಾತಿನಿಧ್ಯ ರದ್ದು

ಮೆಡಿಕಲ್ ಮತ್ತಿತರ ಕಾಲೇಜುಗಳಲ್ಲಿ ಕೋಮುವಾರು ಆಧಾರದ ಮೇಲೆ ಸೀಟುಗಳನ್ನು ವಿಭಾಗಿಸುತ್ತಲಿದ್ದುದನ್ನು ಬಿಹಾರ ಸರ್ಕಾರವು ರದ್ದುಗೊಳಿಸಿದೆ.

* ಅಮೆರಿಕಾದಲ್ಲಿ ೧೮,೧೦೦,೦೦೦ ಮಹಿಳಾ ಕೆಲಸಗಾರರಿರುವರು.

ಭಾರತಕ್ಕೆ ಸಹಾಯನೀಡಲು ಒತ್ತಾಯ

ಬ್ರಿಟನ್ನಿನ ಪಾರ್ಲಿಮೆಂಟ್ ಸದಸ್ಯ ಮಿ|| ಕ್ಲೆಮೆಂಟ್‌ಡೇವಿಸ್‌ರವರು ಮಹಾಪ್ರಧಾನಿಗೆ ಪತ್ರಬರೆದು ಕಾಮನ್‌ವೆಲ್ತ್‌ನಲ್ಲಿರುವ ಭಾರತದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಬಿಹಾರಕ್ಕೆ ಸಹಾಯ ನೀಡಬೇಕೆಂದು ತಿಳಿಸಿ ಇದಕ್ಕಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸಿರುವರು. ವಿಶ್ವಸಂಸ್ಥೆಯೂ ಸಹ ಸಹಾಯ ನೀಡುವಂತೆ ತಿಳಿಸಿ ನಿರ್ಣಯ ಮಾಡಬೇಕೆಂದು ತಿಳಿಸಿರುವರು.

ಸಿರಿಯಾ ಎಣ್ಣೆ ಗಣಿಗಳು ಅಮೆರಿಕಾಕ್ಕೆ

ಸಿರಿಯಾದಲ್ಲಿರುವ ಎಣ್ಣೆ ಗಣಿಗಳಲ್ಲಿ ಅಮೆರಿಕನ್ ಸಂಸ್ಥೆಗಳು ಎಣ್ಣೆ ತೆಗೆಯಲು ಬರಲು ಸಿರಿಯಾ ಸರ್ಕಾರ ಸ್ವಾಗತಿಸಿರುವುದಾಗಿ ವರದಿಯಾಗಿದೆ

ಕಾಂಗ್ರೆಸ್ಸಿನಲ್ಲಿರಲು ಇಷ್ಟ

ಕಾಂಗ್ರೆಸ್ಸಿನಲ್ಲಿರಲು ತಮಗೆ ಆಸಕ್ತಿ ಹೆಚ್ಚಾಗಿದೆಯೆಂದೂ ಆದರೆ ಅದಕ್ಕೆ ತಕ್ಕ ವಾತಾವರಣವು ಸೃಷ್ಟಿಯಾಗಬೇಕೆಂದು ಮಿ|| ರಫಿ ಅಹಮದ್ ಕಿದ್ವಾಯಿಯವರು ಹೇಳಿರುವರು.

ಬ್ಯಾಂಕ್ ಲೂಟಿಹಣ ವಶ

ಬೊಂಬಾಯಿ ಲಾಯಿಡ್ಸ್ ಬ್ಯಾಂಕಿನಲ್ಲಿ ದರೋಡೆಯಾದ ೧೨ ಲಕ್ಷ ರೂಪಾಯಿಗಳ ಪೈಕಿ ೬|| ಲಕ್ಷ ರೂ. ಗಳು, ದರೋಡೆಗಾರರು ಉಪಯೋಗಿಸಿದ ೩ ರಿವಾಲ್ವರುಗಳು ಪೋಲೀಸಿನವರ ವಶವಾಗಿದೆ

* ೧೯೫೦ ರಲ್ಲಿ ಅಮೆರಿಕಾದಲ್ಲಿ ೨೧೦,೦೦೦ ಹಾಲು ಕರೆಯುವ ಯಂತ್ರಗಳನ್ನು ಉಪಯೋಗಿಸಿರುವರು.

ಹೊಸ ಬ್ರಿಟಿಷ್ ಏರ್‌ಕ್ರಾಫ್ಟ್



ಬ್ರಿಟನ್ನಿನಲ್ಲಿ ಹೊಸದಾಗಿ ನಿರ್ಮಿಸಿರುವ ಜೆಟ್ ಏರ್‌ಕ್ರಾಫ್ಟ್. ಇದು ೨೬ ೩ ಅಂಗುಲ ಉದ್ದವಿದೆ. ಒಬ್ಬ ಮನುಷ್ಯನು ಕೂರುವ ಸಣ್ಣ ವಿಮಾನ ಏರೋಪ್ಲೇನ್.

ನಿಮಗೆ ಗೊತ್ತೆ?

ಮನುಷ್ಯನು ತೆಗೆದುಕೊಳ್ಳುವ ಅನ್ನ ಐದರಲ್ಲಿ ಐದನೇ ಒಂದು ಭಾಗವನ್ನು ಅವನ ಮಿದುಳಿಗೆ ಉಪಯೋಗಿಸಿಕೊಳ್ಳುವುದು.

೧೯೫೦ ರಲ್ಲಿ ಅಮೆರಿಕಾದಲ್ಲಿ ೩,೮೦೦,೦೦೦ ಟ್ರಾಕ್ಟರುಗಳನ್ನು ಹೊಲಗಳಲ್ಲಿ ಉಪಯೋಗಿಸುವರು.

೧೯೫೦ ರಲ್ಲಿ ೩೦೦,೦೦೦ ಅಮೆರಿಕನ್ನರು ಪಶ್ಚಿಮ ಯೂರೋಪಿಗೆ ಪ್ರವಾಸ ಮಾಡಿ ೨,೩೦೦ ಲಕ್ಷ ಡಾಲರುಗಳನ್ನು ಖರ್ಚು ಮಾಡಿರುವರು

ಅಮೆರಿಕಾದಲ್ಲಿ ೧೨,೦೦೦ ವಿಮಾನಗಳು ಜನರ ಓಡಾಟಕ್ಕಾಗಿವೆ.

೧೯೫೦ ರಲ್ಲಿ ಅಮೆರಿಕಾವು ೫,೦೮೦ ಲಕ್ಷ ಪೌಂಡುಗಳ ತರಕಾರಿಯನ್ನು ವಿಶ್ವದ ನಾನಾ ರಾಷ್ಟ್ರಗಳಿಗೆ ಕಳುಹಿಸಿದೆ. ಇದರಲ್ಲಿ ಚೈನಾವು ಸೇರಿದೆ.

ಅಮೆರಿಕಾ ಸರ್ಕಾರದಲ್ಲಿ ೨,೧೬೫,೩೬೨ ಜನ ನೌಕರರಿರುವರು.

ಮಲೇರಿಯಾ ನಿವಾರಣೆ

ಪ್ರಪಂಚದಲ್ಲೆಲ್ಲಾ ಮಲೇರಿಯಾ ರೋಗವು ೩೦೦,೦೦೦,೦೦೦ ಜನರನ್ನು ಆಕ್ರಮಿಸಿಕೊಂಡಿದೆ.

ಅಮೆರಿಕಾದಲ್ಲಿ ಈ ರೋಗ ನಿವಾರಣೆಗೆ ಒಂದು ಹೊಸ ಔಷಧವನ್ನು ಕಂಡುಹಿಡಿದಿರುವರು ಸುಮಾರು ೫ ವರ್ಷ ಕಾಲ ಒಬ್ಬ ರೋಗಿಗೆ ಈ ಔಷಧವನ್ನು ಆಗಾಗ್ಗೆ ಕೊಡುತ್ತಲಿದ್ದಾರೆ. ರೋಗ ನಿವಾರಣೆಯಾಗಿ ಪುನಃ ಆ ರೋಗವು ಅವನನ್ನು ಮುಟ್ಟುವುದಿಲ್ಲ.

ಭಾರತಕ್ಕೆ ಚೈನಾದಿಂದ ಆಹಾರ

ಭಾರತಕ್ಕೆ ಚೈನಾವು ೧೦ ಲಕ್ಷ ಟನ್ ಆಹಾರವನ್ನು ಮಾರಲು ಸಿದ್ಧವಾಗಿ, ಭಾರತವು ಅದಕ್ಕೆ ಹಣವನ್ನು ಕೊಡಬೇಕಾಗಿ ಮಾತುಕಥೆ ನಡೆಯಲಾರಂಭವಾಗಿತ್ತು. ಚೈನಾಕ್ಕೆ ರಬ್ಬರ್ ಟೈರು, ಸೆಣಬು ಮುಂತಾದುವುಗಳ ರಫ್ತನ್ನು ಬಹಿಷ್ಕರಿಸಬೇಕೆಂದು ವಿಶ್ವಸಂಸ್ಥೆಯು ನಿಶ್ಚಯಿಸಿರುವುದರಿಂದ ಹಣಕ್ಕೆ ಬದಲಾಗಿ ಈ ಸಾಮಾನುಗಳನ್ನು ಚೈನಾವು ಭಾರತವನ್ನು ಕೇಳಲಾರಂಭಿಸಿದೆಯೆಂದೂ, ಇದರಿಂದ ಭಾರತಕ್ಕೆ ಆಹಾರವನ್ನು ಚೈನಾದಿಂದ ತರಿಸಿಕೊಳ್ಳಲು ತೊಂದರೆಗಳುಂಟಾಗುತ್ತಲಿವೆಯೆಂದು ಹೇಳಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಿ. ನಂ. ಎಂ. ೫೪೧೮ ದಿನಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೫—೧೯೫೧ನೇ ಬುಧವಾರ [ಸಂಚಿಕೆ ೨೧೪

ಇದು ಬರೀ ಒಳಸಂಚು

ಬಗ್ಗಟ್ಟಿನ ಪ್ರಯತ್ನಕ್ಕಾಗಿ ಎ. ಐ. ಸಿ. ಸಿ. ಯನ್ನು ಕರೆಯಬೇಕೆಂಬುದು ನಮ್ಮ ಪ್ರಯತ್ನದಲ್ಲಿ ಒಳಸಂಚು ನಡೆಸುವ ಒಂದು ಪ್ರಯತ್ನ ಎಂದು ಆಚಾರ್ಯ ಕೃಪಲಾನಿಯವರು ದೆಹಲಿಯಲ್ಲಿ ಮಾತನಾಡುತ್ತಾ ಹೇಳಿರುವುದಾಗಿ ವರದಿಯಾಗಿದೆ.

ಪರ್ಷಿಯಾಕ್ಕೆ ರಷ್ಯಾ ಸೇನೆ

ಪರ್ಷಿಯಾದ ಅಬಡಾನ್ ಎಣ್ಣೆ ಗಣಿ ಪ್ರದೇಶಕ್ಕೆ ಬ್ರಿಟಿಷ್ ಸೇನೆ ಬರುವುದಾದರೆ ಪರ್ಷಿಯಾದ ಉತ್ತರ ಭಾಗಕ್ಕೆ ರಷ್ಯಾವು ತನ್ನ ಸೇನೆಯನ್ನು ಕಳುಹಿಸಲು ಮುಂದೆ ಬಂದಿರುವುದನ್ನು ಪರ್ಷಿಯಾ ಸರ್ಕಾರವು ಒಪ್ಪಿಕೊಂಡಿರುವುದಾಗಿ ವರದಿಯಾಗಿದೆ.

ಭಾರತದ ಆಹಾರ ಪರಿಸ್ಥಿತಿ ಸುಧಾರಿಸಿದೆ

ಲಕ್ಷ ರೂ ಮೋಸಗೊಳಿಸಿದ ಆಪಾದನೆ

ಬೆಂಗಳೂರು ಮೇ ೨೨

ನಗರದ ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಶ್ರೀ ಎ. ಎಸ್. ರಾಮಚಂದ್ರರಾವ್, ಐ. ಪಿ. ಸಿ. ೪೨೦ನೇ ಸೆಕ್ಷನ್ ರೀತ್ಯಾ (ಮೋಸಗೊಳಿಸಿದ ಆಪಾದನೆ) ಶ್ರೀ ಬಿ. ಎನ್. ಗೋಪಾಲರಾಯರ ಮೇಲೆ ಛಾರ್ಜ್ ಹೊರಿಸಿದರು.

ತಮ್ಮಲ್ಲಿ ಹಣವಿಟ್ಟ ಕಕ್ಷಿಗಾರರು ಅಧಿಕ ಲಾಭಗಳಿಸಿರುವರೆಂದೂ ತಾವು ರೇಸ್ನ ವ್ಯಾಪಾರಮಾಡುತ್ತಿದ್ದು ಅಧಿಕ ಲಾಭಗಳಿಸುತ್ತಿರುವುದಾಗಿಯೂ ಸುಳ್ಳು ಹೇಳಿ, ೧೯೪೬ ಜುಲೈ ೧೮ ಮತ್ತು ನವಂಬರ್ ೨೬ರ ಮಧ್ಯದಲ್ಲಿ ಹಿಂದೂಸ್ಥಾನ್ ಕೋಆಪರೇಟೀವ್ ಇನ್ಶೂರೆನ್ಸ್ ಸೊಸೈಟಿ ಬ್ರಾಂಚ್ ಮ್ಯಾನೇಜರ್ ಶ್ರೀ ಕೆ. ಎನ್. ರಾಮಯ್ಯನವರಿಂದ ೧ ಲಕ್ಷ ರೂ ಪಡೆದು ಮೋಸಗೊಳಿಸಿದರೆಂದು ಶ್ರೀ ಗೋಪಾಲರಾಯರ ಮೇಲೆ ಮೊದಲನೇ ಆಪಾದನೆ ಹೊರಿಸಲಾಗಿದೆ.

ಶ್ರೀ ಫರ್ನಿಸ್ ಎಂಬುವರಿಂದ ೧೨ ಸಾವಿರ ರೂ ಪಡೆದು ಮೋಸಗೊಳಿಸಿದರೆಂದು ಆಪಾದನೆ ಹೊರಿಸಲಾಗಿದೆ.

ವಜಾ ಮಾಡಲಾಗುವುದಿಲ್ಲ

ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುವ ರೋಗಿಗಳಿಗೆ ರುಸುಂ ವಸೂಲ್ಮಾಡುವುದನ್ನು ತಪ್ಪಿಸಬೇಕೆಂದು ಮೈಸೂರು ಪೌರಸಭೆಯ ಕೋರಿಕೆಯನ್ನು ಸರ್ಕಾರದವರು ತಳ್ಳಿಹಾಕಿ, ಈಗ ರುಸುಂ ವಸೂಲ್ಮಾಡುತ್ತಲಿರುವುದರಿಂದ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯೊಂದರಲ್ಲೇ ವರ್ಷಕ್ಕೆ ೯೦೦೦ ರೂ. ಬರುತ್ತಿರುವುದರಿಂದ ರುಸುಂ ತೆಗೆದುಹಾಕುವುದು ಸಾಧ್ಯವಿಲ್ಲವೆಂದು ಹೇಳಿರುವರು.

ಅಕ್ಕಿ ಪಾಲಿಷ್

ಅಕ್ಕಿಯನ್ನು ಇನ್ನೂ ಹೆಚ್ಚಿಗೆ ಪ್ರಮಾಣದಲ್ಲಿ ಪಾಲಿಷ್ ಮಾಡಿಸಿ ಜನರಿಗೆ ಮಾರಬೇಕೆಂದು ಮೈಸೂರು ಪೌರಸಭೆಯು ಮಾಡಿದ್ದ ನಿರ್ಣಯಕ್ಕೆ ಸರ್ಕಾರದವರು ಒಪ್ಪಲಾಗುವುದಿಲ್ಲವೆಂದು ಉತ್ತರವಿತ್ತಿರುವರು.

ಪುರಸಭಾಧಿವೇಶನ

ಮೈಸೂರು ಮೇ ೨೨

ಮೈಸೂರು ಪುರಸಭೆಯ ಮಹಾಸಭಾಧಿವೇಶನವು ೨೪ನೇ ತಾರೀಖು ಗುರುವಾರ ಸಂಜೆ ೪ ಗಂಟೆಗೆ ನಡೆಯುವುದು.

ನಗರದಲ್ಲಿ ಪ್ರತ್ಯೇಕವಾಗಿ ಒಂದು ಕುದುರೆಗಾಡಿ ನಿಲ್ದಾಣ, ಹುಲ್ಲು ಶೇಖರಣೆ ಸ್ಥಳ, ದನಗಳ ಕೊಟ್ಟಿ ಮುಂತಾದುವನ್ನು ತಕ್ಕ ಸ್ಥಳಗಳಲ್ಲಿ ಏರ್ಪಡಿಸುವುದನ್ನು ಪರಿಶೀಲಿಸಿ ತಕ್ಕ ಸಲಹೆಯನ್ನೀಯಲು ಪುರಸಭೆಯ ಒಂದು ಉಪಸಮಿತಿಯನ್ನು ರಚಿಸಬೇಕೆಂದು ಶ್ರೀ ಲಿಂಗಣ್ಣನವರು ಒಂದು ಠರಾವನ್ನು ಮಂಡಿಸಿರುವರು.

ಚಾಮುಂಡೀಪುರದಲ್ಲಿ ಮೂರನೇ ವ್ಯಾಯಾಮಶಾಲೆಯ ಬಳಿ ಒಂದು ರೇಡಿಯೋವನ್ನು ಸ್ಥಾಪಿಸಬೇಕೆಂದು ಶ್ರೀ ಕೃಷ್ಣಮೂರ್ತಿಯವರು ಒಂದು ನಿರ್ಣಯವನ್ನು ಮಂಡಿಸಿದರು.

ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ಅಂಗಡಿಗಳನ್ನು ಕಳೆದುಕೊಂಡವರ ಉಪಯೋಗಕ್ಕಾಗಿ ಪುರಭವನ ಮೈದಾನದಲ್ಲಿ ಷಾಪಿಂಗ್ ಬಜಾರನ್ನು ತ್ವರಿತವಾಗಿ ಕಟ್ಟಬೇಕೆಂದೂ ಅಲ್ಲಿಯವರೆಗೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನಲ್ಲಿರುವವರನ್ನು ತೊಂದರೆಪಡಿಸಬಾರದೆಂತೆ ನಗರಾಭಿವೃದ್ಧಿ ಸಮಿತಿಯನ್ನು ಕೋರಬೇಕೆಂದು ಶ್ರೀ ಬಿ. ಜಿ. ದಾಸ್‌ರವರು ಒಂದು ನಿರ್ಣಯ ಮಂಡಿಸಿರುವರು.

ನಗರ ನಿರ್ಮಲೀಕರಣ ಕಾರ್ಯವನ್ನು ಪುನಃ ಪ್ರಾರಂಭಿಸಬೇಕೆಂದು ಮತ್ತೊಂದು ನಿರ್ಣಯವನ್ನು ಅವರು ಮಂಡಿಸಿರುವರು.

ಫೆರೋ ಅಲಾಯಿ ಫ್ಯಾಕ್ಟರಿ ಭದ್ರಾವತಿಗೆ

ಮೈಸೂರು ಮೇ ೨೨

ಮೈಸೂರಿನಲ್ಲಿರುವ ಫೆರೋ ಅಲಾಯಿ ಫ್ಯಾಕ್ಟರಿಯನ್ನು ಭದ್ರಾವತಿಗೆ ವರ್ಗಾಯಿಸಲು ಸರ್ಕಾರವು ಆಜ್ಞೆಮಾಡಿದೆ. ಭದ್ರಾವತಿ ಕಬ್ಬಿಣಕಾರ್ಖಾನೆಯ ಡೈರೆಕ್ಟರು ತಕ್ಕ ಕಾರ್ಯವನ್ನು ತೆಗೆದುಕೊಳ್ಳುವರೆಂದು ಸರ್ಕಾರದವರು ಮೈಸೂರು ನಗರ ಪೌರಸಭೆಗೆ ತಿಳಿಸಿರುವರು.

ತೈಲ ಕೆಲಸಗಾರರು ಲಂಡನ್ನಿಗೆ

ಬ್ರಿಟನ್ನಿನ ಎಣ್ಣೆ ಕಂಪನಿಯ ಅತಿಥಿಗಳಾಗಿ ೫೪ ರಾಷ್ಟ್ರಗಳ ತೈಲ ಕೆಲಸಗಾರರು 'ಫೆಸ್ಟಿವಲ್ ಆಫ್ ಬ್ರಿಟನ್' ನ್ನು ನೋಡಲು ಹೋಗುವರು. ಇದರಲ್ಲಿ ಭಾರತೀಯರೂ ಸೇರಿರುವರು. ಈ ಕೆಲಸಗಾರರೆಲ್ಲರೂ ಈ ಕಂಪನಿಯ ನೌಕರರು. ಇವರು ತಮ್ಮ ಪತ್ನಿಯರೊಂದಿಗೆ ಹೋಗುವರು.

ಪಾಕಿಸ್ಥಾನಕ್ಕೆ ತೆರಳಿದ ಭೂಪಾಲ್ ರಾಜಕುಮಾರಿ

ಭೂಪಾಲಿನ ರಾಜಕುಮಾರಿ ಶ್ರೀಮತಿ ಅಬೀದಾಸುಲ್ತಾನ ಪಾಕಿಸ್ಥಾನಕ್ಕೆ ಹೋಗಿ ನೆಲೆಸಿರುವರು. ಇವರು ಕ್ರಮವಾಗಿ ಭಾರತ ಸರ್ಕಾರದ ರಹದಾರಿ ಪಡೆದು ಹೋಗಿಲ್ಲ. ಇವರಿಗೆ ಕೊಡುತ್ತಿದ್ದ ಒಂದು ಲಕ್ಷ ರೂ. ಮಾಸಾಶನ ನಿಲ್ಲಿಸಲಾಗಿದೆ. ಇವರ ಆಸ್ತಿಗಳನ್ನೆಲ್ಲಾ ನಿರಾಶ್ರಿತರ ಆಸ್ತಿಯೆಂದು ಪರಿಗಣಿಸಲಾಗಿದೆ ಎಂದು ಶ್ರೀ ಎನ್. ಗೋಪಾಲಸ್ವಾಮಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಮನರಂಜನ ತೆರಿಗೆಯಿಲ್ಲ

ಸ್ವ. ಸು. ಫೋನ್] ಬೆ. ಮೇ ೨೨

ನಾಟಕ ಸರ್ಕಸ್‌ಗಳಿಗೆ ವಿಧಿಸುತ್ತಲಿದ್ದ ಮನರಂಜನ ತೆರಿಗೆಯನ್ನು ಸರ್ಕಾರದವರು ಮನ್ನಾ ಮಾಡಿರುವರೆಂದು ಆಜ್ಞೆ ಇತ್ತಿರುವರು.

ಕಿರೀಟನಗಗಳ ಭದ್ರತೆ

ಬ್ರಿಟನ್ನಿನ ಜಗತ್ಪ್ರಸಿದ್ಧವಾದ ಕಿರೀಟದ ನಗಗಳ ಭದ್ರತೆಯು ಇಲ್ಲಿಯವರೆಗೆ ಒಂದು ಪ್ರೇಕ್ಷಕ ಪೆಟ್ಟಿಗೆಯಲ್ಲಿಟ್ಟು ಅದನ್ನು ವಿಶೇಷ ಕಾವಲಿಡಲಾಗಿತ್ತು. ರಕ್ಷಣಾ ಕ್ರಮವು ಕಣ್ಣಿಗೆ ಕಾಣದ ಒಂದು ಹೊಸ ರೀತಿಯಲ್ಲಿ ಅದನ್ನು ಟವರ್ ಆಫ್ ಲಂಡನ್ನಿನಲ್ಲಿಡಲು ಹೊಸ ರಕ್ಷಣಾ ಮಾರ್ಗವನ್ನು ಕಂಡು ಹಿಡಿಯಲಾಗಿದೆ.

ಹಿಂದೂಸ್ಥಾನ್ ಹಮಾರ

ಭಾರತ ಪಾಕೀಸ್ಥಾನವನ್ನೆಲ್ಲಾ ಮುಸಲ್ಮಾನರ ಆಳ್ವಿಕೆಗೆ ಒಳಪಡಬೇಕೆಂದು ಧ್ಯೇಯವನ್ನಿಟ್ಟುಕೊಂಡು ಪಾಕೀಸ್ಥಾನದಲ್ಲಿ "ಹಿಂದೂಸ್ಥಾನ್ ಹಮಾರ" ಎಂಬ ಒಂದು ಪಕ್ಷವು ಉದ್ಭವಿಸಿರುವುದು ಭಾರತ ಸರ್ಕಾರದ ಗಮನಕ್ಕೆ ಬಂದಿರುವುದಾಗಿ ವಿದೇಶಾಂಗ ಉಪ ಸಚಿವ ಡಾ॥ ಕೇಸ್ಕರ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಸಹಕಾರಭವನದ ಬಳಿ ೨೦೦೦ ರೂಗಳ ದರೋಡೆ

ಮೈಸೂರು ಮೇ ೨೨

ಈದಿನ ಬೆಳಗ್ಗೆ ೧೦ ಗಂಟೆ ವೇಳೆಯಲ್ಲಿ, ಗಾಯತ್ರಿ ಟಾಕೀಸ್ ಹಿಂಭಾಗದಲ್ಲಿ ವಾಸವಾಗಿರುವ ಶ್ರೀ ಮಲ್ಲಪ್ಪ ಎಂಬುವರು ೧೯ ನೂರು ರೂಪಾಯಿನ ನೋಟುಗಳು ೧೦೦ ರೂಪಾಯಿನ ಚಿಲ್ಲರೆ ಹಣವನ್ನೂ ಬ್ಯಾಂಕ್ ಪಾಸ್‌ಬುಕ್ಕನ್ನೂ ಜೇಬಿನಲ್ಲಿಟ್ಟುಕೊಂಡು, ಮೈಸೂರು ಸಹಕಾರಭವನದ ಬಳಿ ನಿಂತಿರುವಾಗ್ಗೆ ಯಾರೋ ಮೂರುಜನರು ಬಂದು ಅವರ ಬಟ್ಟೆಗೆ ಹೇಸಿಗೆಯನ್ನು ಮೆತ್ತಿ ಅದನ್ನು ಅವರ ಗಮನಕ್ಕೆ ತಂದರು. ಅವರು ಬಟ್ಟೆಗಾಗಿದ್ದ ಹೇಸಿಗೆಯನ್ನು ತೊಳೆದುಕೊಳ್ಳಲು ಶ್ರೀ ಸಹಕಾರಭವನದಲ್ಲಿರುವ ನೀರಿನ ನಲ್ಲಿಯ ಬಳಿಗೆ ಹೋಗಿ, ಕೋಟು ಬಿಚ್ಚಿಟ್ಟು ಶರಟನ್ನು ತೊಳೆದುಕೊಳ್ಳುತ್ತಿದ್ದಾಗ ೨೦೦೦ ರೂ. ಹಣದೊಡನೆ ಕೋಟನ್ನು ಆ ಮೂವರು ಹಾರಿಸಿಕೊಂಡು ಪರಾರಿಯಾದರು. ಶ್ರೀ ಮಲ್ಲಪ್ಪನವರು ಕೂಡಲೇ ಕೃಷ್ಣರಾಜ ಪೋಲೀಸ್ ಸ್ಟೇಷನ್ನಿಗೆ ಈ ವಿಷಯವನ್ನು ತಿಳಿಸಿದರು. ಇನ್ನು ಯಾರೂ ಪತ್ತೆಯಾಗಿಲ್ಲ. ಶ್ರೀ ಕೃಷ್ಣಪ್ಪ ಎಂಬುವವರು ಕುಕ್ಕರಹಳ್ಳಿ ಕೆರೆಯಲ್ಲಿ ಸ್ನಾನ ಮಾಡಿಕೊಂಡು ಬರುತ್ತಿದ್ದಾಗ ತಮಗೆ ಒಂದು ಪಾಸ್ ಬುಕ್ ಸಿಕ್ಕಿತೆಂದು ಈ ಸಂಜೆ ಕೃಷ್ಣರಾಜ ಪೋಲೀಸ್ ಸ್ಟೇಷನಿಗೆ ತಂದುಕೊಟ್ಟರು, ಅದು ಶ್ರೀ ಮಲ್ಲಪ್ಪನವರಿಗೆ ಸೇರಿದ ಪಾಸು ಬುಕ್ಕಾಗಿದೆ. ಪೋಲೀಸಿನವರು ತನಿಖೆ ನಡೆಸುತ್ತಲಿರುವರು.

ಕಾಂಗ್ರೆಸ್ಸಿನಲ್ಲಿ ಐಕ್ಯತೆಗೆ ಪುನಃ ಪ್ರಯತ್ನ

ಆಚಾರ್ಯ ಕೃಪಲಾನಿಯವರ ರಾಜೀನಾಮೆಯು ಇನ್ನೂ ಅಂಗೀಕಾರವಾಗಿಲ್ಲ. ಕೂಡಲೇ ಎ. ಐ. ಸಿ. ಸಿ. ಯ ವಿಶೇಷ ಅಧಿವೇಶನವನ್ನು ಕರೆದು ಕಾಂಗ್ರೆಸ್ಸಿನಲ್ಲುಂಟಾಗಿರುವ ಒಡಕನ್ನು, ದೇಶದ ಹಿತದೃಷ್ಟಿಯಿಂದ ಸರಿಪಡಿಸಲು, ಆಚಾರ್ಯ ಕೃಪಲಾನಿಯವರ ಪಕ್ಷಕ್ಕೂ ಇತರ ಕಾಂಗ್ರೆಸ್ಸಿಗರಿಗೂ ಐಕ್ಯತೆಯನ್ನುಂಟು ಮಾಡಲು ಕೊನೆಯ ಪ್ರಯತ್ನ ಮಾಡಬೇಕೆಂದು ಪಂಡಿತ ನೆಹರೂ ಮುಂತಾದ ಹಲವರು ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ. ವಿಶೇಷ ಅಧಿವೇಶನವು ಜುಲೈ ಮಾಹೆಯಲ್ಲಿ ನಡೆಯಬಹುದು.

ಈಗಾಗಲೇ ಕೆಲವು ಸದಸ್ಯರು ಎ. ಐ. ಸಿ. ಸಿ. ಯ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ಸೂಚನಾ ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಾಂಡನ್ನರಿಗೆ ಸಲ್ಲಿಸಿರುವರು. ಈಗಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಬೇಕೆಂದು ಸಲಹೆ ಈ ಪತ್ರದಲ್ಲಿ ಕೊಡಲಾಗಿದೆಯೆಂದು ತಿಳಿಯಬರುತ್ತದೆ.

ಸುಮಾರು ಒಂದು ಸಾವಿರ ಮಾಜಿ ಕಾಂಗ್ರೆಸ್ಸಿಗರು ಜೂನ್ ೧೦ನೇ ತಾರೀಖು ಶ್ರೀ ಕೃಪಲಾನಿಯವರ ವಿಸರ್ಜಿತ ಡೆಮೊಕ್ರಾಟಿಕ್ ಫ್ರಂಟ್ ಸಮ್ಮೇಳನದಲ್ಲಿ ಭಾಗವಹಿಸಲಿರುವರು. ದೇಶದಲ್ಲಿ ಶಕ್ತಿಯುತ ವಿರೋಧ ಪಕ್ಷವನ್ನು ರಚಿಸುವುದೇ ಈ ಸಮ್ಮೇಳನದ ಮುಖ್ಯೋದ್ದೇಶವಾಗಿದೆಯೆಂದು ಹೇಳಲಾಗಿದೆ.

೩೫೦೦ ಎಕರೆ ಜಮೀನು ದಾನ

ಬಡವರಿಗೆ ಉಚಿತವಾಗಿ ಹಂಚಲು ೩೫೦೦ ಎಕರೆ ಜಮೀನುಗಳನ್ನು ಆಚಾರ್ಯ ವಿನೋಬಭಾವೆಯವರಿಗೆ ತೆಲಂಗಾಣದ ಜಮೀನ್ದಾರರು ಕೊಟ್ಟಿರುವರು.

ಅಮೆರಿಕಾ ಸಹಾಯ ನಿಲ್ಲಿಸಲಾಗುವುದು

ಚೈನಾಕ್ಕೆ ಯುದ್ಧಸಾಮಗ್ರಿಗಳನ್ನು ಸರಬರಾಯಿ ಮಾಡುವ ರಾಷ್ಟ್ರಗಳಿಗೆ ಅಮೆರಿಕಾ ಸಹಾಯವನ್ನು ನಿಲ್ಲಿಸಲಾಗುವುದೆಂದು ತೀರ್ಮಾನವಾಗಿದೆ.

ಪಿತೂರಿಗಾರರ ವಿಚಾರಣೆ

ಪಾಕಿಸ್ತಾನ ಪಿತೂರಿಗಾರರ ವಿಚಾರಣೆಯು ಮುಂದಿನ ಮಾಹೆ ಪ್ರಾರಂಭವಾಗಲಿವೆ. ಅಪರಾಧಿಗಳು ತಮ್ಮ ಕಡೆ ವಾದಿಸಲು ಯಾವ ವಕೀಲರನ್ನು ನೇಮಿಸಿಕೊಳ್ಳಲು ಸಹ ಅವಕಾಶವಿಲ್ಲದೆ ವಿಚಾರಣೆಯು ಅತ್ಯಂತ ಗುಪ್ತವಾಗಿ ನಡೆಯುವುದು. ಉನ್ನತಾಧಿಕಾರಿಗಳಾಗಿದ್ದ ೧೬ ಜನರು ಇಲ್ಲಿಯವರೆಗೆ ದಸ್ತಗಿರಿಯಾಗಿರುವರು.

ಕಾಮನ್ವೆಲ್ತ್ ವಿದ್ಯಾರ್ಥಿಗಳ ಸಮಿತಿ

ಲಂಡನ್ನಿನ ಎಲ್ಲಾ ಪೌರಕಛೇರಿಗಳಲ್ಲೂ ಕಾಮನ್ವೆಲ್ತ್ ವಿದ್ಯಾರ್ಥಿಗಳ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಲಂಡನ್ನಿಗೆ ನಾನಾ ಬ್ರಿಟಿಷ್ ಕಾಲೋನಿಗಳಿಂದ ಬರುವ ವಿದ್ಯಾರ್ಥಿಗಳ ಸೌಕರ್ಯಗಳನ್ನು ನೋಡಿಕೊಳ್ಳುವುದು ಈ ಸಮಿತಿಗಳ ಕೆಲಸ.

ಸಂಧಾನ ವಿಫಲ?

ಜೂನ್ ತಿಂಗಳ ಮೊದಲನೆಯ ವಾರದ ವೇಳೆಗೆ ಹೈದರಾಬಾದ್ ಮಂತ್ರಿಮಂಡಲಕ್ಕೆ, ಇನ್ನಿಬ್ಬರು ಕಾಂಗ್ರೆಸ್ ಮಂತ್ರಿಗಳನ್ನು ಸೇರಿಸಲಾಗುವುದೆಂಬ ಸುದ್ದಿ ಹೊರಬಿತ್ತಷ್ಟೆ. ಆದರೆ ಅನೇಕ ಕಾರಣಗಳಿಂದ ವಿಂದೂ ಅಯ್ಯಂಗಾರ್ ಸಂಧಾನ ಮುರಿದುಬಿತ್ತೆಂದು ಈಗ ಖಚಿತವಾಗಿದೆ. ಇದರಿಂದ ರಾಜಕೀಯ ಚಟುವಟಿಕೆಗಳೆಲ್ಲಾ ನಿಂತಿವೆ.

ಈ ಸಂಧಾನ ವಿಫಲವಾಗಲು ಕಾರಣಗಳು ಬಹಳ ಇವೆ. ಮುಖ್ಯವಾಗಿ ಕಾಂಗ್ರೆಸ್ಸಿನಲ್ಲಿ ಸ್ವಲ್ಪವೂ ಒಗ್ಗಟ್ಟಿಲ್ಲ. ಮೇಲಾಗಿ, ಕಾಂಗ್ರೆಸ್ಸಿಗೆ ಇನ್ನು ಹೆಚ್ಚಿನ ಅಧಿಕಾರ ದಾನಮಾಡಲು ಸಾಧ್ಯವಿಲ್ಲವೆಂದೂ ಈಗ ಕಾಂಗ್ರೆಸ್ಸಿನ ಕೈಗಿತ್ತಿರುವ ಅಧಿಕಾರವನ್ನೇ ಹಂಚಿಕೊಳ್ಳಬೇಕೆಂದೂ ಸಂಸ್ಥಾನ ಶಾಖೆ ಸಚಿವ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಸಲಹೆ ಇತ್ತರೆಂದೂ, ಆದರೆ, ಕಾಂಗ್ರೆಸ್ ಮಂತ್ರಿಗಳು ತಮ್ಮ ಕೈಲಿರುವ ಸೂತ್ರಗಳನ್ನು ಬಿಟ್ಟುಕೊಡಲು ಒಪ್ಪಲಿಲ್ಲವೆಂದೂ ವರದಿಯಾಗಿದೆ.

ಇದರಿಂದ ವಿಫಲರಾದ ಕಾಂಗ್ರೆಸ್ ಅಧ್ಯಕ್ಷ ವಿಂದೂರವರು ಸಂಸ್ಥಾನ ಗೃಹಶಾಖೆಯನ್ನು ತಮ್ಮ ಕೈವಶಮಾಡಬೇಕೆಂದು ಕೇಂದ್ರದ ಸ[illegible]ಶಾಖೆಯನ್ನು ಒತ್ತಾಯಪಡಿಸಿದರೆಂದೂ, ಆದರೆ ಕಮ್ಯೂನಿಸ್ಟ ಉಪಟಳ ಶಮನವಾಗುವವರೆಗೆ ಇದು ಸಾಧ್ಯವಿಲ್ಲವೆಂದು ಕೇಂದ್ರದಿಂದ ಆದೇಶ ಬಂದಿತೆಂದು ಒಂದು ವರ್ಗದವರ ಅಭಿಪ್ರಾಯ.

ಈ ಕೊಡರಿನ ಜೊತೆಗೆ ಸಮಾಜವಾದಿ ಪಕ್ಷ ನಾಯಕರಾದ ಶ್ರೀ ಮಹದೇವ ಸಿಂಗ್‌ರವರು, ಕಾಂಗ್ರೆಸ್ಸಿಗೆ ಗೃಹಶಾಖೆ ವಶಪಡಿಸಿದಲ್ಲಿ ಚುನಾವಣಾ ಕಾಲದಲ್ಲಿ ದುರುಪಯೋಗಪಡಿಸಿಕೊಳ್ಳುವ ಸಂಭವ ಹೆಚ್ಚಾಗಿರುವುದರಿಂದ, ತಾವು ಇದನ್ನು ವಿರೋಧಿಸುವುದಾಗಿ ಹೇಳಿಕೆ ಹೊರಡಿಸಿದರು. ಹೀಗಾಗಿ ಸಂಧಾನ ಮುರಿದುಬಿತ್ತು.

ಐ. ಎನ್. ಟಿ. ಯು. ಸಿ. ಉಪಾಧ್ಯಕ್ಷರು

ಮೈಸೂರು ಮೇ ೨೨

ಐ. ಎನ್. ಟಿ. ಯು. ಸಿ. ಉಪಾಧ್ಯಕ್ಷರಾದ ಜನಾಬ್ ಅಜೀದಾಲಿ ಜಾಫರ್ ಬಾಯ್‌ಯವರು ೨೪ನೇ ತಾರೀಖು ಬೆಳಗ್ಗೆ ಭದ್ರಾವತಿಯಿಂದ ಮೈಸೂರಿಗೆ ಆಗಮಿಸುವರು.

ನಿಧನ

ಮೈಸೂರು ನಗರದ ಗಣ್ಯ ವ್ಯಕ್ತಿಗಳೂ, ದಾನಿಗಳೂ, ಆದ ಧರ್ಮಪ್ರವರ್ತ ಎಸ್. ರಂಗಸ್ವಾಮಯ್ಯಂಗಾರ್‌ರವರು ನಿನ್ನೆರಾತ್ರಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ [illegible] ವಿಷಾದಿಸುತ್ತೇವೆ.

ಬ್ರಿಟನ್ನಿಗೆ ಕಲ್ಲಿದ್ದಲು

ಬ್ರಿಟನ್ನಿಗೆ ಭಾರತವು ಇನ್ನು ಕಲ್ಲಿದ್ದಲನ್ನು ಸರಬರಾಯಿ ಮಾಡುವುದು. ಈಗಾಗಲೇ ೩.೨೦ ಲಕ್ಷ ಟನ್ ಸರಬರಾಯಿ ಮಾಡಿದೆ.

ಬಿರುಗಾಳಿ

ಕಲ್ಕತ್ತಾದಲ್ಲಿ ಬಾರಿ ಬಿರುಗಾಳಿ ಬಂದು ಒಂದು ಮುದುಕಿಯು ಸತ್ತಳು. ಅನೇಕ ಮನೆಗಳು ಉರುಳಿ ಬಿದ್ದಿವೆ. ಬೇರು ಸಹಿತ ಸಾಲ್ಕಾರು ಮರಗಳು ಕಿತ್ತು ಹೋಗಿವೆ.

ಮೌಲಾನಾ ಅಜಾದರು ಆಸ್ಪತ್ರೆಯಲ್ಲಿ

ಪರೀಕ್ಷೆಗಾಗಿ ಮೌಲಾನಾ ಅಜಾದರು ಆಸ್ಪತ್ರೆಗೆ ಲಂಡನ್ನಿನಲ್ಲಿ ದಾಖಲಾಗಿರುವರು. ಒಂದುವಾರಕಾಲ ಅವರು ಚಿಕಿತ್ಸೆ ಪಡೆಯುವರು.

ಅಂತರರಾಷ್ಟ್ರೀಯ ಸಮ್ಮೇಳನ

ಅಂತರರಾಷ್ಟ್ರೀಯ ಫ್ರೀ ಟ್ರೇಡ್ ಯೂನಿಯನ್‌ಗಳ ಪ್ರಥಮ ಏಷ್ಯಾ ಸಮ್ಮೇಳನವು ಕರಾಚಿಯಲ್ಲಿ ಇದೇ ಮಾಹೆ ೨೮ರಿಂದ ೩೧ರ ವರೆಗೆ ನಡೆಯುವುದು. ಏಷ್ಯಾಕ್ಕೆ ಮತ್ತು ದೂರಪ್ರಾಚ್ಯಕ್ಕೆ ಒಂದು ರೀಜನಲ್ ಕಛೇರಿಯನ್ನು ಸ್ಥಾಪಿಸುವುದೇ ಈ ಸಮ್ಮೇಳನದ ಮುಖ್ಯೋದ್ದೇಶ. ಆರ್ಥಿಕ ಬೆಳವಣಿಗೆ, ಟ್ರೇಡ್ ಯೂನಿಯನ್ನುಗಳ ಹಕ್ಕುಬಾಧ್ಯತೆ, ಕಾರ್ಮಿಕ ಶಾಸನ ಮುಂತಾದುವನ್ನು ಈ ಸಮ್ಮೇಳನವು ಪರಿಶೀಲಿಸುವುದು.

ಸಿದ್ಧರಾಮನ ಹುಂಡಿಯಲ್ಲಿ ವಿರುದ್ಧ ಪಕ್ಷಗಳ ಘರ್ಷಣೆ

ಮೈಸೂರು ಮೇ ೨೧

ಮೈಸೂರಿಗೆ ೧೩ ಮೈಲಿಗಳ ದೂರದಲ್ಲಿರುವ ಸಿದ್ಧರಾಮನ ಹುಂಡಿ ಎಂಬ ಗ್ರಾಮದಲ್ಲಿ ಈ ದಿನ ಎರಡು ವಿರುದ್ಧ ಗುಂಪುಗಳಿಗೆ ಘರ್ಷಣೆ ಸಂಭವಿಸಿ ಆ ಸ್ಥಳದಲ್ಲಿಯೇ ಒಬ್ಬರು ಹತರಾದರು. ೭ ಮಂದಿಗೆ ಘಾಯ ಸಂಭವಿಸಿತು. ಘಾಯಗೊಂಡವರನ್ನು ಮೈಸೂರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತು. ಆ ಪೈಕಿ ಒಬ್ಬರು ಮೃತರಾದರು. ಮೈಸೂರು ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ.

ಅಂತರರಾಷ್ಟ್ರೀಯ ಸ್ಥಳೀಯ ಸಂಸ್ಥೆಗಳ ಸಮ್ಮೇಳನ

ಬ್ರಿಟನ್ನಿನಲ್ಲಿ ಜೂನ್ ೨೩ರಿಂದ ೩೦ರ ವರೆಗೆ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಅಂತರರಾಷ್ಟ್ರೀಯ ಸಮಿತಿಯ ೧೦ನೇ ಅಧಿವೇಶನಕ್ಕೆ ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳಿಂದ ಪ್ರತಿನಿಧಿಗಳು ಹೋಗಲಿರುವರು. ಭಾರತದಿಂದ ಶ್ರೀ ಆರ್. ಕೆ. ಸಿಧ್ವಾರವರ ನಾಯಕತ್ವದಲ್ಲಿ ನಿಯೋಗ ಹೋಗಲಿದೆ.

ಆಹಾರ ಪರಿಸ್ಥಿತಿ

ಭಾರತವು ಈ ವರ್ಷದಲ್ಲಿ ಸರಬರಾಜಿಗಾಗಿ ಇಲ್ಲಿಯವರೆಗೂ ೩೬ ಲಕ್ಷ ಟನ್ ಆಹಾರವನ್ನು ಖರೀದಿಮಾಡಿದೆ. ಅಮೆರಿಕಾ, ಆಸ್ಟ್ರೇಲಿಯಾ, ರಷ್ಯಾ, ಕೆನಡಾ, ಉರಗ್ವೆಗಳಿಂದ ೧೯ ಲಕ್ಷ ಟನ್ ಗೋಧಿ, ಥೈಲ್ಯಾಂಡ್, ಬರ್ಮ, ಪಾಕಿಸ್ತಾನ, ಚೈನ, ಈಜಿಪ್ಟ್‌ಗಳಿಂದ ೯॥ ಲಕ್ಷ ಟನ್ ಅಕ್ಕಿ, ಅಮೆರಿಕಾ, ಚೈನಾಗಳಿಂದ ೭ಲಕ್ಷ ಟನ್ ಮೈಲೋ ಇಲ್ಲಿಯವರೆಗೆ ಕೊಂಡಿದೆ.

ಈ ಮಾಹೆ ಅಂತ್ಯದೊಳಗೆ ಪಾಕಿಸ್ತಾನವು ಒಂದು ಲಕ್ಷ ಟನ್ ಆಹಾರ ಸರಬರಾಯಿ ಮಾಡಬೇಕಾಗಿದೆಯೆಂದು ತಿಳಿಯಬರುತ್ತದೆ.

ರ ಣ ಜಿ ತ್
೧೮—೫—೫೧ರಿಂದ
ಅಮೋಘವಾದ ೨ನೇ ವಾರ
-:: ಸ ಗಾ ಯಿ ::-
ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ವುಡ್‌ಲ್ಯಾಂಡ್ಸ್ * ೧೮—೫—೫೧ರಿಂದ ಅಮೋಘಪ್ರಾರಂಭ
ಮೋಹನ್ಸ್‌ರವರ— * ಭೀಮ್‌ಸೇನ್ *
ಪಾತ್ರ— ನಿರೂಪರಾಯ್, ವಸಂತರಾವ್ ಪೆಹಲ್ವಾನ್, ತ್ರಿಲೋಕ್ ಕಪೂರ್, ರಾಜಸಿಂಗ್.

ಸಂಪಾದಕರು ಮತ್ತು ಪ್ರಕಾಶಕರು— ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೊ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ.ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್: ೯೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೪—೧೯೫೨ನೇ ಗುರುವಾರ [ಸಂಚಿಕೆ ೨೧೫

ಉಷ್ಣ ಮಾರುತದಿಂದ ೩೫ ಜನರ ಮರಣ

ಪಾಕೀಸ್ತಾನದ ಸಕ್ಕೂರ್ ಬಳಿ ಉಷ್ಣಮಾರುತವು ಬೀಸಿ ೩೫ ಜನರು ಮೃತರಾದರು. ಉಷ್ಣಾಂಶವು ೧೧೬ ಡಿಗ್ರಿಗೆ ಏರಿತ್ತು. ಇದರಲ್ಲಿ ಮೂರು ಮಕ್ಕಳು ಸೇರಿವೆ.

ಭಾರತದ ನಿಯೋಗ

ಶೀಘ್ರವಾಗಿ ನಡೆಯುವ ಭಾರತ ಮತ್ತು ಪಾಕೀಸ್ತಾನದ ಸರ್ಕಾರಗಳ ಹಣಕಾಸಿನ ಸಂಬಂಧವಾದ ಮಾತುಕಥೆಗಳಲ್ಲಿ ಭಾರತ ಸರ್ಕಾರದ ಪರವಾಗಿ ಹಣಕಾಸಿನ ಸಚಿವ ಶ್ರೀ ದೇಶಮುಖ್, ರಿಸರ್ವ್ ಬ್ಯಾಂಕ್ ಗೌರ್‍ನರ್ ಶ್ರೀ ಬಿ. ಎನ್. ರಾಮರಾವ್ ಮತ್ತು ಇಬ್ಬರು ಸದಸ್ಯರು ಇರುವರು.

ಪೆಪ್ಸು ಸಂಸ್ಥಾನದಲ್ಲಿ ಪ್ರಜಾ ಸರ್ಕಾರ ಸ್ಥಾಪನೆ

ನಿರಾಶ್ರಿತರ ಗೃಹವಸತಿಗಾಗಿ ಕೇಂದ್ರ ಸರ್ಕಾರ ೧೨|| ಕೋಟಿ ರೂ.ಗಳ ವೆಚ್ಚ ಮಾಡುವುದು

ಸಚಿವರುಗಳ ಆಗಮನ.

ಸ್ವಂ. ಸು. ಫೋನ್] ಬೆಂಗಳೂರು ೨೩

ಕೇಂದ್ರ ಸರ್ಕಾರದ ಯೋಜನಾ ಮಂಡಲಿಯ ಸದಸ್ಯರೊಡನೆ ಮಾತುಕಥೆ ನಡೆಸಲು ತೆರಳಿದ್ದ ಸಂಸ್ಥಾನದ ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂ, ಗೃಹ ಶಾಖೆಯ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಈ ದಿನ ದೆಹಲಿಯಿಂದ ಆಗಮಿಸಿದರು.

ಅಕೆಡಮಿಕ್ ಕೌನ್ಸಿಲ್ ಸಭೆ

ಈ ದಿನ ಮಧ್ಯಾಹ್ನ ಗಣಿತ ಶಾಸ್ತ್ರ ಭವನದಲ್ಲಿ ವಿಶ್ವವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್ ಸಭೆಯು ವೈಸ್ ಛಾನ್ಸಲರ್ ಡಾ|| ಬಿ. ಎಲ್. ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ದಿವಂಗತರುಗಳಾದ ಶ್ರೀ ೧ ೬೦ ಟವಸ್ತಾಧನ್, ಕರ್ನಲ್ ಕೆ ಕ್ರಾಫರ್ಡ್, ಡಾ|| ಸಿ. ಆರ್. ರೆಡ್ಡಿಯವರುಗಳ ಗುಣಗಾನ ಮಾಡಿ ಅವರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯವನ್ನು ವೈಸ್‌ಛಾನ್ಸಲರ್‌ರವರು ಸಭೆಯಲ್ಲಿ ಮಂಡಿಸಿದರು. ಸಭೆಯು ನಿರ್ಣಯವನ್ನು ಮೌನದಿಂದ ಎದ್ದುನಿಂತು ಅಂಗೀಕರಿಸಿತು.

ವಿಶ್ವವಿದ್ಯಾನಿಲಯದ ಸೇವೆಯಿಂದ ವಿಶ್ರಾಂತರಾದ ಡಾ|| ಸಿದ್ಧಲಿಂಗಯ್ಯ, ಪ್ರೊ|| ಸುಂದರಾಚಾರ್, ಶ್ರೀ ವೆಂಕಟರಾಮಯ್ಯನವರ ಸೇವೆಯನ್ನು ಪ್ರಶಂಸೆ ಮಾಡಿದ್ದ ನಿರ್ಣಯಕ್ಕೆ ಸಭೆ ತನ್ನ ಒಪ್ಪಿಗೆಯನ್ನು ಕೊಟ್ಟಿತು.

ಅಕೆಡಮಿಕ್ ಕೌನ್ಸಿಲ್‌ನ ಡಾ|| ಸಿದ್ಧಲಿಂಗಯ್ಯನವರ ಸ್ಥಾನಕ್ಕೆ ಡಾ|| ವಿ. ಆರ್. ನಾಯುಡುರವರನ್ನು ಸದಸ್ಯರನ್ನಾಗಿ ಚುನಾಯಿಸಲಾಯಿತು. ಸಭೆಯು ಬಿ. ಎ. ತರಗತಿಗೆ ಪ್ರತಿಕೋದ್ಯಮವನ್ನು ಐಚ್ಛಿಕ ವಿಷಯವನ್ನಾಗಿ ಬೋಧಿಸಲು ಸಂಬಂಧಿಸಿದ್ದಂತೆ ಮಾಡಿದ್ದ ನಿರ್ಣಯಕ್ಕೆ ಒಪ್ಪಿಗೆ ನೀಡಿತು.

ಕುದುರೆ ಜೂಜಿನ ತೆರಿಗೆ

ಕುದುರೆ ಜೂಜಿಗೆ ತೆರಿಗೆಯನ್ನು ಶೇ. ೧೭|| ವರೆಯಿಂದ ೧೫ಕ್ಕೆ ಸರ್ಕಾರದವರು ಇಳಿಸುವುದಾಗಿ ತಿಳಿಯಬರುತ್ತದೆ.

ಆಹಾರ ಚರ್ಚಾಕೂಟ

ಮೈಸೂರು ಮೇ ೨೩

ಕೇಂದ್ರ ಆಹಾರ ಪರಿಶೋಧನಾ ಕೇಂದ್ರದಲ್ಲಿ ಇಂದು ಮದರಾಸಿನ ಆಹಾರ ಸಚಿವ ಶ್ರೀ ರೋಚಿ ವಿಕ್ಟೋರಿಯಾರವರ ಅಧ್ಯಕ್ಷತೆಯಲ್ಲಿ 'ಆಹಾರ ಚರ್ಚಾಕೂಟವು' ಪ್ರಾರಂಭವಾಯಿತು.

ಕೇಂದ್ರದ ಡೈರೆಕ್ಟರಾದ ಡಾ|| ಸುಬ್ರಹ್ಮಣ್ಯಂರವರು ಎಲ್ಲರನ್ನು ಸ್ವಾಗತಿಸಿ ಭಾಷಣಮಾಡುತ್ತಾ ಭಾರತದಲ್ಲಿ ಈಗ ಉಂಟಾಗಿರುವ ಆಹಾರ ಪರಿಸ್ಥಿತಿ ಯಾವ ಯಾವ ಉತ್ತಮ ಮಾರ್ಗಗಳಿಂದ ಎದುರಿಸಲು ಸಾಧ್ಯವೆಂಬುದನ್ನು ಕಂಡುಹಿಡಿದು ಅದನ್ನು ಕಾರ್ಯರೂಪಕ್ಕೆ ತರಲು ತಜ್ಞರ ಈ ಚರ್ಚಾಕೂಟವು ಸೇರಿದೆ ಎಂದು ನುಡಿದರು.

ಈ ಸಮಯದಲ್ಲಿ ಬೊಂಬಾಯಿನ 'ಪ್ಯೂರ್ ಡ್ರಿಂಕ್ಸ್ ಲಿಮಿಟೆಡ್'ನ ಶ್ರೀ ಮೋಹನಸಿಂಗ್‌ರವರು ಈ ಆಹಾರ ಕೇಂದ್ರದ ಕೆಲಸ ಕಾರ್ಯಗಳಿಗಾಗಿ ೫೦೦೦ ರೂಗಳನ್ನು ಮೊದಲನೇ ಕಂತಾಗಿ ಕೊಟ್ಟರು.

ಈ ಸಮಾರಂಭಕ್ಕೆ ಕೇಂದ್ರ ಸಚಿವ ಶ್ರೀ ಶ್ರೀಪ್ರಕಾಶರವರು ಬರಬೇಕಾದದ್ದು ಕಾರ್ಯಗೌರವದಿಂದ ದೆಹಲಿಯನ್ನು ಬಿಟ್ಟು ಬರಲಾಗದೆ ಚರ್ಚಾಕೂಟವು ಯಶಸ್ವಿಯಾಗಿ ನಡೆಯಲೆಂದು ಒಂದು ಸಂದೇಶವನ್ನು ಕಳುಹಿಸಿದ್ದರು. ಅದನ್ನು ಡಾ|| ಸುಬ್ರಮಣ್ಯಂರವರು ಓದಿದರು. ಮೈಸೂರು ಆರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು, ಕೇಂದ್ರ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಸಮಾರಂಭಕ್ಕೆ ಯಶಸ್ಸನ್ನು ಕೋರಿ ಸಂದೇಶವನ್ನು ಕಳುಹಿಸಿದ್ದರು.

ಚರ್ಚೆ ಮಧ್ಯಾಹ್ನವು ನಡೆಯಿತು ಸಂಜೆ ೫.೩೦ ಗಂಟೆಗೆ ಆಹಾರ ಕೇಂದ್ರದ ಆಡಳಿತದವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

* ಕಳೆದ ವರ್ಷ ಭಾರತದಲ್ಲಿ ಹತ್ತು ಲಕ್ಷ ಜನರಿಗೆ ಕ್ಷಯರೋಗ ನಿರೋಧದ ಬಿ.ಸಿ.ಜಿ. ಇನಾಕ್ಯುಲೇಷನ್ ಮಾಡಲಾಯಿತು. ೩೦ ಲಕ್ಷ ಜನರನ್ನು ಪರೀಕ್ಷಿಸಲಾಯಿತು.

ಅಖಿಲ ಭಾರತ ಉಪಾಧ್ಯಾಯರ ಸಂಘ

ಭಾರತ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳನ್ನೊಳಗೊಂಡ ಅಖಿಲ ಭಾರತ ಪ್ರೈಮರಿ ಉಪಾಧ್ಯಾಯರ ಸಂಘವೊಂದು ನಿನ್ನೆ ಮುಂಬಯಿಯಲ್ಲಿ ಬೊಂಬಾಯಿ ಕಾರ್ಪೊರೇಷನ್ ಸಭಾಧ್ಯಕ್ಷರಾದ ಶ್ರೀ ಎ. ಪಿ. ದೊಂಡೆಯವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಅಕ್ಟೋಬರ್ ಮೊದಲನೇ ವಾರದಲ್ಲಿ ಈ ಸಂಘದ ಸಮ್ಮೇಳನವು ಬೊಂಬಾಯಿನಲ್ಲಿ ನಡೆಯುವುದು.

ಕೈಮಗ್ಗದವರ ಸಮ್ಮೇಳನ

ಮೈಸೂರು ಪ್ರಾಂತೀಯ ಕೈಮಗ್ಗದವರ ಸಮ್ಮೇಳನವು ಬೆಂಗಳೂರಿನಲ್ಲಿ ಗೃಹ ಸಚಿವ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಜೂನ್ ೭ನೇ ತಾ|| ನಡೆಯುವುದು.

ಪೆಪ್ಸುವಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆ

ಪಾಟಿಯಾಲ ಮತ್ತು ಪೂರ್ವ ಪಂಜಾಬಿನ ಹಲವು ಸಂಸ್ಥಾನಗಳು ಸೇರಿ ಆಗಿರುವ ಯೂನಿಯನ್ನಿನಲ್ಲಿ ಪ್ರಜಾ ಸರ್ಕಾರವು ಸ್ಥಾಪಿಸಲ್ಪಟ್ಟು ಅಲ್ಲಿನ ರಾಜಪ್ರಮುಖರು ಈ ಬಗ್ಗೆ ಘೋಷಣೆ ಹೊರಡಿಸಿರುವರು. ದೇಶದ ವಿವಿಧ ರಾಜಕೀಯ ಪಕ್ಷಗಳು ಐಕ್ಯತೆಯಿಂದ ನೀಡಿದ ಸಹಕಾರ ಮತ್ತು ಕೇಂದ್ರ ಸರ್ಕಾರದ ಸಲಹೆಗನುಗುಣವಾಗಿ ಪ್ರಜಾ ಸರ್ಕಾರ ಸ್ಥಾಪಿಸಲಾಗಿದೆಯೆಂದು ಘೋಷಣೆಯಲ್ಲಿ ತಿಳಿಸಲಾಗಿದೆ.

ನಿನ್ನೆ ದಿನ ಕರ್ನಲ್ ರಘುವೀರ್‌ಸಿಂಗರು ಪ್ರಧಾನ ಸಚಿವರಾಗಿಯೂ ಮತ್ತು ಇತರ ಆರು ಜನರು ಮಂತ್ರಿಮಂಡಲದ ಸದಸ್ಯರಾಗಿಯೂ ಪ್ರತಿಜ್ಞಾ ವಚನ ಸ್ವೀಕರಿಸಿರುವರು. ನೂತನ ಮಂತ್ರಿಮಂಡಲದ ಸಚಿವರಲ್ಲಿ ಇಬ್ಬರು ಹರಿಜನರ ಪ್ರತಿನಿಧಿಗಳಿರುವರು

* ರಾಜ್ಯಾಂಗ ತಿದ್ದುಪಡಿಗೆ ಸ್ವಾತಂತ್ರವಾಗಿ ತಾವು ಓಟುಮಾಡಲು ಎಲ ಪಾರ್ಲಿಮೆಂಟ್ ಕಾಂಗ್ರೆಸ್ ಸದಸ್ಯರು ಪ್ರಧಾನಿಯವರ ಅನುಮತಿ ಕೇಳಿರುವರು.

ಪರ್ಶಿಯಾ ಪ್ರಧಾನಿ ಎಲ್ಲಿ?

ಪರ್ಶಿಯಾ ಪ್ರಧಾನಿ ಮಿ|| ಮುಸಾದಿಕರು ಸೋಮವಾರ ರಾತ್ರಿ ಪಾರ್ಲಿಮೆಂಟ್ ಭವನ ಬಿಟ್ಟು ಹೊರಟುಹೋದವರು ಎಲ್ಲಿರುವರೆಂದು ಇನ್ನು ಸರಿಯಾಗಿ ತಿಳಿದಿಲ್ಲ.

ಗಲಭೆಕೋರರ ದಸ್ತಗಿರಿ

ಮೈಸೂರು ೨೩

ಮೈಸೂರು ತಾಲ್ಲೋಕು ಸಿದ್ದರಾಮನ ಹುಂಡಿಯಲ್ಲಿ ನಡೆದ ಗಲಭೆಗಳ ಸಂಬಂಧದಲ್ಲಿ ಇಲ್ಲಿಯವರೆಗೆ ಹಲವು ಜನರ ದಸ್ತಗಿರಿಯಾಗಿದೆ. ಸುಮಾರು ೨೫ ಜನರು ಪತ್ತೆಯಿಲ್ಲವಾಗಿದ್ದಾರೆ. ಪೊಲೀಸಿನವರು ಉತ್ತಮ ಕೈಗೊಳ್ಳುತ್ತಿರುವರು.

ನಿರಾಶ್ರಿತರ ಗೃಹವಸತಿಗೆ ಕೇಂದ್ರದ ಸಹಾಯ

ಭಾರತ ಸರ್ಕಾರವು ನಿರಾಶ್ರಿತರ ಗೃಹವಸತಿ ನಿರ್ಮಾಣಕಾರ್ಯಕ್ಕಾಗಿ ೧೨|| ಕೋಟಿ ರೂ. ಗಳನ್ನು ಸಾಲವಾಗಿ ವೆಚ್ಚಮಾಡುವುದು. ಈ ಹಣದಲ್ಲಿ ಬೊಂಬಾಯಿಗ ೨|| ಕೋಟಿ ಮತ್ತು ದೆಹಲಿಗೆ ೪ ಕೋಟಿ ರೂ. ಗಳನ್ನು ಕೊಡಲಾಗುವುದು. ಮೈಸೂರು, ಸೌರಾಷ್ಟ್ರ ಮತ್ತು ಬಿಹಾರ್ ಮುಂತಾದೆಡೆಗಳಲ್ಲಿರುವ ನಿರಾಶ್ರಿತರಿಗೆ ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರವು ಸಾಲರೂಪದಲ್ಲಿ ಹಣ ಕೊಡುವುದು. ಇವರ ಪುನರ್ವ್ಯವಸ್ಥೆಯ ಕಾರ್ಯದಲ್ಲಿ ನಿರಾಶ್ರಿತರಿಗೆ ಬರೀ ಮನೆಗಳಲ್ಲದೆ ಅಂಗಡಿ, ಆಸ್ಪತ್ರೆ ಮತ್ತು ಸ್ಕೂಲು ಕಟ್ಟಡಗಳನ್ನೂ ಸಹ ಕಟ್ಟಿಸಿಕೊಡಲಾಗುವುದೆಂದು ಹೇಳಲಾಗಿದೆ.

ಕಳ್ಳನ ಪತ್ತೆ

ಶಿವಮೊಗ್ಗದ ಕೊಟ್ರಪ್ಪ ಎಂಬಾತನು ಅನೇಕ ಕಡೆಗಳಲ್ಲಿ ಕಳ್ಳತನ ಮಾಡಿದ್ದು ಮಂಡಿ ಪೋಲೀಸರು ಅವನನ್ನು ದಸ್ತಗಿರಿ ಮಾಡಿರುವರು. ಮುಂದಿನ ತನಿಖೆ ಕ್ರಮ ನಡೆಯುತ್ತಿದೆ.

* ನಿನ್ನೆ ದಿನ ಬಾಂಬೆಯ ಉಷ್ಣಾಂಶವು ೧೧೪ ಡಿಗ್ರಿ ಗಳಿತ್ತು. ಮೊನ್ನೆ ೧೧೫ ಇದ್ದಿತು.

ಜವಾಬ್ದಾರಿ ಸರ್ಕಾರ ಸ್ಥಾಪನೆ ಆಲೋಚನೆಯಿಲ್ಲ

ಹೈದರಾಬಾದಿನ ಸುಧಾರಣೆಗಳ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಶ್ರೀ ರತ್ನಸ್ವಾಮಿಯವರು ಪ್ರಶ್ನಿಸಲಾಗಿ ಜವಾಬಾರಿ ಸರ್ಕಾರ ಸ್ಥಾಪನೆಯ ಆಲೋಚನೆಯೆ ಸದ್ಯಕ್ಕಿಲ್ಲವೆಂದು ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್‌ರವರು ಹೇಳಿದರು.

ಭಾರತದಲ್ಲಿ ಬುದ್ಧಿ ವಿಹೀನರು

ಭಾರತದಲ್ಲ ಹುಚ್ಚಾಸ್ಪತ್ರೆ ,ಯಲ್ಲಿರ ಬಹುವಾದ ೭ಲಕ್ಷ ಬುದ್ಧಿ ವಿಕಲ್ಪರಾದವರು ಎಲ್ಲೆಲ್ಲಿಯೂ ಅಲೆಯುತ್ತಿರುವರು. ಕೇವಲ ೧೭೩೦೪ ಜನ ಮಾತ್ರ ಆಸ್ಪತ್ರೆಗಳಲ್ಲಿರುವರು ಬುದ್ಧಿ ವಿಕಲ್ಪತೆಗೆ ಸಾಮಾನ್ಯವಾಗಿ ಗೃಹಕ್ಲೇಶಗಳೇ ಮುಖ್ಯ ಕಾರಣಗಳಾಗಿ ಕಂಡು ಬರುವುದೆಂದು ವೈಜ್ಞಾನಿಕರು ಅಭಿಪ್ರಾಯ ಪಟ್ಟಿರುವರು.

ಪ್ರಪಂಚದಲ್ಲೆಲ್ಲಾ ರಷ್ಯಾ ವಿಮಾನಬಲ ಅಧಿಕ

ಅಮೆರಿಕಾದ ಸೈನ್ಯಬಲವು ರಷ್ಯಾದಷ್ಟಿಲ್ಲ. ರಷ್ಯಾದ ಯುದ್ಧರೀತಿ, ಭೂಸೈನ್ಯ ವಿಮಾನಬಲವನ್ನು ಅಮೇರಿಕಾದೊಡನೆ ಹೋಲಿಸಿದರೆ ಅಮೆರಿಕಾದ ಸೈನ್ಯಬಲದ ಶಕ್ತಿ ಕಡಮೆ ಎಂದು ಅಮೆರಿಕಾ ವಿಮಾನಬಲದ ಕಾರ್ಯದರ್ಶಿ ಮಿ॥ ಥಾಮಸ್ ಫಿನ್‌ಲೆಟರ್ ರವರು ಹೇಳಿರುವರು.

ಪ್ರಪಂಚದಲ್ಲೆಲ್ಲಾ ರಷ್ಯಾವು ಅದಿಕ ವಿಮಾನಬಲವನ್ನು ಹೊಂದಿದೆ. ರಷ್ಯಾವು ತನ್ನ ಜೆಟ್‌ಫೈಟರು ದಳ, ಸಾಸಿರಾರು ಬಾಂಬುಗಳು ಮತ್ತು ಆಟಾಮಿಕ್ ಬಾಂಬುಗಳ ವಿಸ್ತರಣೆಯನ್ನು ಹೆಚ್ಚಿಸಿಕೊಳ್ಳುತ್ತಲಿದೆ ಎಂದು ಅಮೇರಿಕಾ ಸೈನ್ಯಬಲದ ಮುಖ್ಯಾಧಿಕಾರಿ ಜನರಲ್ ವೆಂಡರ್‌ಬರ್ಗ್‌ರವರು ಹೇಳಿರುವರು.

ಪಾಕಿಸ್ತಾನ ರಾಯಭಾರಿ

ಹೇಗ್‌ನಲ್ಲಿ ಭಾರತ ರಾಯಭಾರಿಯಾಗಿರುವ ಡಾ॥ ಮೋಹನ್‌ಸಿಂಗ್ ಮೆಹ್ತಾರವರನ್ನು ಪಾಕಿಸ್ತಾನ ರಾಯಭಾರಿಯಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

೨೩೦ ಲಕ್ಷದ ಹೊಸಕಟ್ಟಡ

ಭಾರತ ರಕ್ಷಣಾಶಾಖೆಯ ಕೇಂದ್ರ ಕಾರ್ಯಸ್ಥಾನಕ್ಕೆ ೨೩೦ ಲಕ್ಷ ರೂ. ಗಳ ವೆಚ್ಚದಿಂದ ಪ್ರತ್ಯೇಕ ಕಟ್ಟಡವನ್ನು ಕಟ್ಟಲಾಗುವುದೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿಗೆ ರಾಜೀನಾಮೆ

ಶ್ರೀಮತಿ ಸುಚೇತಾ ಕೃಪಲಾನಿಯವರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತಿರುವರು.

ಕಾಶ್ಮೀರದಲ್ಲಿ ಐದುಲಕ್ಷ ಮೇಹ ರೋಗಗಳು

ಕಾಶ್ಮೀರದಲ್ಲಿ ೫ ಲಕ್ಷ ಜನರು ಮೇಹ ರೋಗಗಳಿಂದ ನರಳುತ್ತಿರುವುದಾಗಿ ಹೇಳಲಾಗಿದೆ ಈ ರೋಗ ನಿವಾರಣೆಗಾಗಿ ಸರ್ಕಾರದದು ಪ್ರಪಂಚ ಆರೋಗ್ಯ ಸಂಸ್ಥೆಯಲ್ಲಿ ತರಬೇತಾದ ಇಬ್ಬರು ಪ್ರವೀಣರನ್ನು ನೇಮಕ ಮಾಡಿ ಕೊಂಡಿರುವರು.

ಭಾಷಾವಾರು ಪ್ರಾಂತ್ಯ ರಚನೆ

ಮುಂಬರುವ ಮಹಾ ಚುನಾವಣೆಗಳ ಮುಂಚೆಯೇ ಭಾಷಾವಾರು ಪ್ರಾಂತ್ಯಗಳ ಸಮಸ್ಯೆ ನಿರ್ದಿಷ್ಟ ರೂಪುಗೊಳ್ಳುವ ಸಂಭವವಿದೆ, ಎಂದು ಕೆ ಪಿ ಸಿ ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ಹೇಳಿರುವರು.

ಲಾಯಡ್ಸ್ ಬ್ಯಾಂಕ್ ದರೋಡೆ ಹಣ ಪತ್ತೆ

ದೇಶಾದ್ಯಂತ ದರೋಡೆ ತಂಡ

ಕಳೆದ ವಾರದಲ್ಲಿ ಬೊಂಬಾಯಿ ಲಾಯಡ್ಸ್ ಬ್ಯಾಂಕಿನಲ್ಲಿ ದರೋಡೆಯಾದ ೧೨ ಲಕ್ಷ ರೂಪಾಯಿಗಳ ಪೈಕಿ ಈಗಾಗಲೇ ೭॥ ಲಕ್ಷ ರೂಪಾಯಿಗಳು ನಗದಾಗಿ ಸಿಕ್ಕಿದೆ. ಉಳಿಕೆ ಹಣವೆಲ್ಲವೂ ಪತ್ತೆಯಾಗಿರುವುದಾಗಿ ವರದಿಯಾಗಿದೆ. ಈವರೆಗೆ ಸುಮಾರು ಏಳು ಸಂಸ್ಥರ ವಸ್ತಗಿರಿಗಳಾಗಿವೆ. ದಸ್ತಗಿರಿಗಳ ಸಂಖ್ಯೆಯು ೫೦ಕ್ಕೆ ಏರಬಹುದೆಂದು ಹೇಳಲಾಗಿದೆ ಈ ದರೋಡೆಗಾರರ ಒಂದು ತಂಡವೇ ದೇಶಾದ್ಯಂತ ವ್ಯಾಪಿಸಿರುವುದಾಗಿ ಕಂಡು ಬರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರಾಚಿ, ದೆಹಲಿ, ಕಲ್ಕತ್ತಾದಲ್ಲೆರಡು ಬ್ಯಾಂಕುಗಳ ದರೋಡೆಗಳನ್ನು ಈ ತಂಡವೇ ನಡೆಸಿದೆಯೆಂದು ಊಹಿಸಲಾಗಿದೆ. ಇನ್ನು ಒಂದು ವಾರದೊಳಗಾಗಿ ಪತ್ತೆ ಕಾರ್ಯವೆಲ್ಲವೂ ಮುಗಿಯಬಹುದೆಂದು ಹೇಳಲಾಗಿದೆ. ಈಗ ದಸ್ತಗಿರಿಯಾಗಿರುವವರ ಪೈಕಿ ಅಸೋಕ ಲಾಲ್ ಎಂಬುವವನು ಏಪ್ರಿಲ್ ೩೦ರಲ್ಲಿ ೧೨ ಸಾವಿರ ರೂಪಾಯಿಗಳಿಗೆ ಕೊಂಡಿದ್ದ ಒಂದು ಮೋಟಾರನ್ನೂ, ಹರಿಯ ಎಂಬ ಮತ್ತೊಬ್ಬನ ಸಂಬಂಧಿಯೊಬ್ಬನ ಮೋಟಾರನ್ನೂ ದೆಹಲಿ ಪೋಲೀಸಿನವರು ವಶಪಡಿಸಿಕೊಂಡಿರುವರು.

ಬೊಂಬಾಯಿ ಪೋಲೀಸಿನವರು, ದೆಹಲಿ ಪೋಲೀಸಿನವರೊಡನೆ ಅತ್ಯಂತ ಚಾಕಚಕ್ಯತೆಯಿಂದ ಪತ್ತೆ ಕಾರ್ಯದಲ್ಲಿ ನಿರತರಾಗಿರುವರು.

ವ್ಯಾಪಾರ ತೆರಿಗೆ ವಿನಾಯಿತಿ

ಸಹಾಯಾರ್ಥವಾಗಿ ನಡೆಯುತ್ತಲಿರುವ ಸಂಸ್ಥೆಗಳು ಮತ್ತು ಅನಾಥಾಲಯಗಳಿಗೆ ಯಾವ ಲಾಭವೂ ಇಲ್ಲದೆ ಮಾರತಕ್ಕ ಸಾಮಾನುಗಳಿಗೆ ವ್ಯಾಪಾರ ತೆರಿಗೆ ವಿನಾಯಿತಿ ಕೊಡಬೇಕೆಂದು ಮದರಾಸು ಸರ್ಕಾರವು ಆಜ್ಞೆ ಮಾಡಲಿದೆಯೆಂದು ಗೊತ್ತಾಗಿದೆ.

ಬರ್ಮಾ ಮನ್ನಣೆ ಕೊಡುವುದಿಲ್ಲ

ಚೈನಾಕ್ಕೆ ಯುದ್ಧಸಾಮಗ್ರಿಗಳನ್ನು ಸರಬರಾಯಿ ಮಾಡಕೂಡದೆಂದು ವಿಶ್ವಸಂಸ್ಥೆಯ ಮಾಡಿರುವ ನಿರ್ಧಾರಕ್ಕೆ ಬರ್ಮಾ ಮನ್ನಣೆ ಕೊಡುವುದಿಲ್ಲವೆಂದೂ ಕಳೆದ ವರ್ಷ ನಿರ್ಧಾರ ಮಾಡಿದಂತೆ ಸಾಮಾನುಗಳನ್ನು ಯಾವ ಆತಂಕವೂ ಇಲ್ಲದೆ ಕಳುಹಿಸುವುದೆಂದೂ ಹೇಳಲಾಗಿದೆ.

ಟೀ ಕಂಟ್ರೋಲರ್ ಕಛೇರಿ ರದ್ದು

ಭಾರತ ಟೀ ಕಂಟ್ರೋಲರ್ ಕಛೇರಿಯನ್ನು ಮುಚ್ಚಲಾಗಿದೆಯೆಂದು ತಿಳಿಯಬರುತ್ತದೆ

ಒಲಂಪಿಯಾ ಟಾಕೀಸ್

೨೪—೫—೧೯೫೧ ರಿಂದ ಪ್ರತಿದಿನ ೩ ಆಟಗಳು

ಕೊಲಂಬಿಯಾರವರ:—

ಸೂಪರ್ ಮ್ಯಾನ್

ಇಂತಹ ಅದ್ಭುತ ಸಾಹಸ ಚಿತ್ರವನ್ನು ಈವರೆಗೆ ನೀವು ನೋಡಿರಲಾರಿರಿ. ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರದರ್ಶಿತವಾಗಿ ಪ್ರಶಂಸೆ ಪಡೆದಿದೆ. ಅಮೇರಿಕಾದ 200 ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶಿತವಾದ ಅದ್ವಿತೀಯ ಚಿತ್ರ, ಮುಂಬಯಿಯ 6 ಚಿತ್ರಮಂದಿರಗಳಲ್ಲಿ 25 ವಾರಗಳಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿದೆ. ಬೆಂಗಳೂರಿನಲ್ಲಿ ಒಂದು ವಾರದಲ್ಲಿ 20,000 ರೂಪಾಯಿಗಳನ್ನು ಗಳಿಸಿದೆ. ನಿಮ್ಮ ಕಲ್ಪನೆಗೆ ನಿಲುಕದ ಸಾಹಸ ಕೃತ್ಯಗಳನ್ನು ಪ್ರತ್ಯಕ್ಷವಾಗಿ ನೋಡಿ.

ಮೈಸೂರು ರೇಷ್ಮೆಯ ಉಡುಪುಗಳು

ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು

"ಮೈಸೂರು ರೇಷ್ಮೆ" ಬಟ್ಟೆಗಳು ತುಂಬಾ ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ

ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ

ಪರೀಕ್ಷಿಸಿ ಸಂತುಷ್ಟರಾಗಿರಿ

*

ಗೌರ್ನ್ಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಮೈಸೂರು

ಸಂಪಾದಕರು ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು ಹಿ. ಶಾ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೫—೧೯೫೧ ಶುಕ್ರವಾರ [ಸಂಚಿಕೆ ೨೧೬

ಬೊಂಬಾಯಿ ಗೌರ್ನರ್‌ರವರ ಪ್ರಯಾಣ

ಸ್ವ. ಸು. ಫೋನ್] ಬೆಂಗಳೂರು ೨೪

ಬೊಂಬಾಯಿ ಗೌರ್ನರ್ ಸರ್ ಮಹಾರಾಜಸಿಂಗ್‌ರು ನಿನ್ನೆ ಊಟಿಯಿಂದ ಕಾರಿನಲ್ಲಿ ಆಗಮಿಸಿ ಈ ದಿನ ಬೆಳಿಗ್ಗೆ ವಿಮಾನದಲ್ಲಿ ಬೊಂಬಾಯಿಗೆ ತೆರಳಿದರು.

ಸಾಮಾಜಿಕ ಬಿಕ್ಕಟ್ಟಿನ ಸಂಶೋಧನೆ

ಕೇಂದ್ರ ಸರ್ಕಾರವು ಸಾಮಾಜಿಕ ಬಿಕ್ಕಟ್ಟುಗಳ ಪರಿಶೀಲನೆ ಮಾಡಿ ಈ ಬಗ್ಗೆ ಸಂಶೋಧನೆ ನಡೆಸಲು ಒಂದು ಲಕ್ಷ ರೂಗಳನ್ನು ಮಂಜೂರ್ ಮಾಡಿದೆ. ಯುನೆಸ್ಕೋವು ಕಳೆದ ವರ್ಷ ೪೫ ಸಾವಿರ ರೂ. ಕೊಟ್ಟಿತು.

ಪರ್ಷಿಯಾ ಎಣ್ಣೆ ವಿವಾದಕ್ಕೆ ಭಾರತ ಮಧ್ಯಸ್ಥಿಕೆಯೇ ?

ಮೈಸೂರು ಅಭಿವೃದ್ಧಿ ಕಾರ್ಯಗಳಿಗೆ ೮ ಕೋಟಿ ರೂ. ಕೇಂದ್ರ ಸಹಾಯ

ಜಾನುವಾರು ಹೊಂದಿರುವವರಿಗೆ ಸೂಚನೆ

ಮೈಸೂರು ಮೇ ೨೪

ಜಾನುವಾರುಗಳ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸುವ ಕಾರ್ಯ ಈಗಾಗಲೇ ಆರಂಭವಾಗಿದೆ ಜಾನುವಾರು ಹೊಂದಿರುವರು ಎನ್ಯೂಮರೇಟರುಗಳಿಗೆ ವಿವರಗಳನ್ನು ಕೊಟ್ಟು ಸಹಕರಿಸಬೇಕೆಂದು ಮೈಸೂರು ಕಮಿಷನರವರು ತಿಳಿಸಿ ಪ್ರಕಟನೆ ಹೊರಡಿಸಿರುತ್ತಾರೆ.

ಆಸ್ಪತ್ರೆಯ ಕ್ವಾರ್ಟರ್ಸ್‌ಗಳಿಗೆ ಉದಾರ ದಾನ

ಗುಂಡ್ಲುಪೇಟೆ ತಾಲ್ಲೋಕು ಹುಂಡೀಪುರದ ಸಾಹುಕಾರ್ ಶ್ರೀ ಕರಿಯಪ್ಪನವರ ಮಗ ಶ್ರೀ ಹೆಚ್. ಕೆ. ಶಿವರುದ್ರಪ್ಪನವರು ಆಸ್ಪತ್ರೆ ಕಟ್ಟಡಕ್ಕೆ [illegible] ರೂ. ಕೊಟ್ಟಿದ್ದು ಡಾಕ್ಟರ್ ಮತ್ತು ನರ್ಸ್‌ಗಳಿಗೆ ಕ್ವಾರ್ಟರ್ಸ್ ಕಟ್ಟಿಸಲು ಮತ್ತೆ ೪೦೦೦ ರೂ. ಉದಾರವಾಗಿ ಕೊಟ್ಟಿರುವರು. ಇದಕ್ಕೆ ತಗಲುವ ಉಳಿಕೆ ೪೭೦೦ ರೂಗಳನ್ನು ಜಿಲ್ಲಾ ಬೋರ್ಡ್ ವಹಿಸಿಕೊಳ್ಳುವುದು.

ನಂದಿನಾಥಪುರದಲ್ಲಿ ಡಾಕ್ಟರ್ ಮತ್ತು ಮಿಡ್‌ವೈಫ್ ವಾಸಿಸಲು ವಾಸದ ಮನೆ ಕಟ್ಟಿಸಿಕೊಡಲು ಹೊಮ್ಮರಗನಹಳ್ಳಿಯ ಶ್ರೀ ಬಸಪ್ಪನವರು ಮತ್ತು ಹುಂಡೀಪುರದ ಶ್ರೀ ಶಿವಪ್ಪನವರು ತಲಾ ೨೫೦ ರೂಗಳನ್ನು ಶ್ರೀ ಭೋಗಿಮಲ್ಲಯ್ಯನವರು ನೂರು ರೂಪಾಯಿಗಳನ್ನೂ ಉದಾರವಾಗಿತ್ತಿರುವರು.

ಬೇಗೂರು ಆಸ್ಪತ್ರೆಗೆ ದಾನ

ಗುಂಡ್ಲುಪೇಟೆಯ ತಾ|| ಬೇಗೂರು ಹೋಬಳಿ ಸೋಮನಹಳ್ಳಿಯ ಶ್ರೀ ಎಸ್. ಎಲ್. ಸುಬ್ಬಣ್ಣನವರು ಬೇಗೂರಿನಲ್ಲಿ ಆಸ್ಪತ್ರೆ ಕಟ್ಟಿಸಲು ೫೦೦೦ ರೂ. ಉದಾರವಾಗಿ ಕೊಟ್ಟಿರುವರು.

* ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನಂದೀ ಬೆಟ್ಟಕ್ಕೆ ತೆರಳಿ ಅಲ್ಲಿ ನಡೆದ ಮಾತುಕಥೆಗಳನ್ನು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ತಿಳಿಸಿ ನಿನ್ನೆ ವಾಪಸ್ಸು ಬಂದರು.

* ಮುಖ್ಯಮಂತ್ರಿಯವರು ನಂದಿಬೆಟ್ಟದಿಂದ ೨೭ನೇ ತಾ|| ವಾಪಸ್ಸು ಬರುವರು.

ಶ್ರೀ ಟಿ. ಮರಿಯಪ್ಪನವರು

ಮೈಸೂರು ಮೇ ೨೪

ಆಹಾರ ಚರ್ಚಾಕೂಟದಲ್ಲಿ ಇಂದು ಅಧ್ಯಕ್ಷತೆ ವಹಿಸಲು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರು ಮೈಸೂರಿಗೆ ಆಗಮಿಸಿದರು

ಸ್ವಾಭಾವಿಕ ಸಾಧನ ಸಂಪತ್ತುಗಳ ಪೂರ್ಣಫಲ ಪಡೆಯಬೇಕು

ನಮ್ಮ ದೇಶದಲ್ಲಿ ಸ್ವಾಭಾವಿಕ ಸಾಧನ ಸಂಪತ್ತುಗಳ ಪೂರ್ಣಫಲವನ್ನು ನಾವು ಪಡೆಯುತ್ತಲಿಲ್ಲ. ಮಲೆನಾಡು ಪ್ರಾಂತ್ಯದಲ್ಲಿ ವಿಶೇಷ ಬೆಳೆ ಆದರೂ ಹಣ್ಣಿನ ಬೆಳೆಯನ್ನು ಅತಿಶಯವಾಗಿ ಬೆಳೆಯಲು ಸೌಕರ್ಯಗಳಿವೆ. ಆಹಾರ ಪರಿಶೋಧನಾ ಕೇಂದ್ರವು ಈ ಕಾರ್ಯದಲ್ಲಿ ತೊಡಗಿದರೆ ಆಹಾರ ಅಭಾವವು ಸ್ವಲ್ಪ ಕಡಮೆಯಾಗುವುದು. ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಇನ್ನೂ ಟೇಪಿಯೋಕಾದ ಬೆಳೆಯ, ಉಪಯೋಗದ ವಿಷಯ ಚೆನ್ನಾಗಿ ತಿಳಿದಿಲ್ಲ. ತಿರುವಾಂಕೂರಿನಲ್ಲಿ ಬೆಳೆಯುವಂತೆ ನಮ್ಮಲ್ಲಿಯೂ ಈ ಬೆಳೆಗೆ ಹೆಚ್ಚು ಗಮನ ನೀಡಬೇಕು ಎಂದು ಆಹಾರ ಸಚಿವ ಶ್ರೀ ಟಿ ಮರಿಯಪ್ಪನವರು ಇಂದು ಆಹಾರ ಸಂಶೋಧನಾ ಕೇಂದ್ರದಲ್ಲಿ ನಡೆಯುತ್ತಲಿರುವ 'ಆಹಾರ ಚರ್ಚಾಕೂಟದ' ಅಧ್ಯಕ್ಷತೆಯ ಭಾಷಣದಲ್ಲಿ ಹೇಳಿದರು.

ಆನೇಕಾಲು ರೋಗ ಪರಿಹಾರ ಸಮಿತಿ

ಒರಿಸ್ಸಾ ಸರ್ಕಾರವು ಅಲ್ಲಿನ ಹಲವು ಪ್ರಜೆಗಳಿಗಿರುವ ಆನೇಕಾಲು ರೋಗದ ಬಗ್ಗೆ ಸಂಶೋಧನೆ ನಡೆಸಿ ಅದನ್ನು ಪರಿಹಾರ ಮಾಡಲು ಮತ್ತು ಈ ರೋಗವು ಹರಡದಂತೆ ಮಾಡಲು ಭಾರತದ ನಿಪುಣರಾದ ಡಾಕ್ಟರುಗಳಿಂದ ಕೂಡಿದ ಸಮಿತಿಯೊಂದನ್ನು ರಚಿಸಲಿದೆ. ಮುಖ್ಯವಾಗಿ ಈ ರೋಗವು ಸಮುದ್ರ ತೀರಗಳ ಪಟ್ಟಣಗಳಾದ ಮಲಬಾರ್, ತಿರುವಾಂಕೂರ್, ಕೊಚ್ಚಿನ್, ಬಂಗಾಳಾ ಮತ್ತು ಒರಿಸ್ಸಾಗಳಲ್ಲಿ ಅನೇಕ ಜನರಿಗೆ ಇದೆಯೆಂದು ತಿಳಿದುಬಂದಿದೆ.

* ರೋಂನಲ್ಲಿ ಭಾರತ ವಾಣಿಜ್ಯ ಸಂಘವು ಸ್ಥಾಪಿತವಾಗಿದೆ. ಭಾರತ ಇಟಲಿಗಳ ವಾಣಿಜ್ಯವನ್ನು ಹೆಚ್ಚಿಸುವುದೇ ಈ ಸಂಘದ ಉದ್ದೇಶವಾಗಿದೆ.

ಭಾರತ ಮಧ್ಯಸ್ಥಿಕೆವಹಿಸಲು ಪ್ರಾರ್ಥನೆಯೇ ?

ನಿನ್ನೆ ಬೆಳಿಗ್ಗೆ ನವದೆಹಲಿಯಲ್ಲಿ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ಶ್ರೀ ಗಿರಿಜಾಶಂಕರ್ ಬಾಜ್‌ಪೈರವರನ್ನು ಭಾರತದಲ್ಲಿರುವ ಬ್ರಿಟನ್ನಿನ ಹೈ ಕಮಿಷನರ್ ಸರ್ ಆರ್ಚಿಬಾಲ್ಡ್ ನೈರವರು ಭೇಟಿ ಮಾಡಿದ್ದರು. ಈ ಸಾರಿ ಮಾತುಕಥೆಗಳು ಪರ್ಷಿಯಾದ ಎಣ್ಣೆ ಗಣಿಗಳ ರಾಷ್ಟ್ರೀಕರಣಕ್ಕೆ ಸಂಬಂಧಿಸಿದ್ದು ಆಗಿದೆಯೆಂದು ಹೇಳಲಾಗಿದೆ.

ದೆಹಲಿಯಲ್ಲಿ ಎದ್ದಿರುವ ಊಹೆಯಂತೆ ಭಾರತವು ಪರ್ಷಿಯಾ ಮತ್ತು ಬ್ರಿಟನ್ನಿನ ಎಣ್ಣೆ ಸಮಸ್ಯೆಯನ್ನು ಪರಿಹರಿಸಲು ಮಧ್ಯಸ್ಥಿಕೆ ವಹಿಸಿಕೊಳ್ಳಬೇಕೆಂದು ಬ್ರಿಟನ್ನು ಪ್ರಾರ್ಥಿಸಿದೆಯೆಂದು ಹೇಳಲಾಗಿದೆ.

ಬ್ರಿಟನ್ನು ಇದೇ ರೀತಿ ಪರ್ಷಿಯಾದೊಡನೆ ಮಧ್ಯಸ್ಥಿಕೆಮಾಡಲು ಇರಾಕ್ ಮತ್ತು ಫ್ರಾನ್ಸನ್ನು ಪ್ರಾರ್ಥಿಸಿದೆಯೆಂದು ಊಹಾಪೋಹ ಎದ್ದಿದೆ.

ಭಾರತ ಮತ್ತು ಪರ್ಷಿಯಾಗಳು ತಮ್ಮಲ್ಲಿನ ಕೈಗಾರಿಕೆಗಳನ್ನು ರಾಷ್ಟ್ರೀಕರಣಮಾಡುವ ಹಿರಿಯಾಸೆ ಹೊಂದಿರುವುದರಿಂದ ಭಾರತ ಈ ಮಾತುಕಥೆಗಳಲ್ಲಿ ಪ್ರವೇಶಿಸುವುದಿಲ್ಲವೆಂದು ಹೇಳಲಾಗಿದೆ

ಪಂಡಿತ ನೆಹರೂರವರು ಈಗಾಗಲೇ ಪಾರ್ಲಿಮೆಂಟಿನಲ್ಲಿ ಈ ವಿಷಯದ ಮೇಲೆ ಹೇಳಿಕೆ ಕೊಡುತ್ತಾ ಭಾರತವು ಯಾವ ದೇಶದ ಅಂತರಂಗ ವ್ಯವಹಾರದಲ್ಲಿ ಕೈಹಾಕುವುದಿಲ್ಲವೆಂದೂ ಸಹ ತಿಳಿಸಿರುವರು

LATEST

ಮೈಸೂರಿಗೆ ಕೇಂದ್ರದ ಸಹಾಯ

ಸ್ವ.ಸು. ಫೋನ್] ಬೆಂಗಳೂರು ಮೇ ೨೪

ಮೈಸೂರಿನ ಅಭಿವೃದ್ಧಿ ಯೋಜನೆ ವಿಷಯದಲ್ಲಿ ಮುಖ್ಯಮಂತ್ರಿಗಳು ಸೋಮವಾರ ಭಾರತ ಆಯೋಜನಾ ಮಂಡಲಿಯೊಡನೆ ಚರ್ಚೆ ನಡೆಸಲಿರುವರು ೫೨ ಕೋಟಿ ರೂಗಳ ಪಂಚವಾರ್ಷಿಕ ಮಂಡಿ ತಯಾರಾಗಿದೆ ಅದರ ಪೈಕಿ ೮ ಕೋಟಿ ರೂ. ಕೇಂದ್ರವು ಸಹಾಯ ಕೊಡಲಿದೆ ೧೮ ಕೋಟಿ ರೂ ಕೂಡ ನ್ಯವೆಂಬ ಸುದ್ದಿ ನಿರಾಧಾರವಾದುದು.

ಹೊಸ ಇಂಜನಿಯರಿಂಗ್ ಕಾಲೇಜು

ದಾವಣಗೆರೆಯಲ್ಲಿ ಈ ವರ್ಷದಿಂದ ಹೊಸ ಇಂಜನಿಯರಿಂಗ್ ಕಾಲೇಜು ಸ್ಥಾಪಿಸಲ್ಪಡುವುದೆಂದು ಗೊತ್ತಾಗಿದೆ

ಡಿ. ಎಸ್. ಪಿ. ಗಳ ವರ್ಗ

ಕೋಲಾರ ಜಿಲ್ಲಾ ಡಿ. ಎಸ್. ಪಿ. ಶ್ರೀ ಹಬೀಬುಲ್ಲಾರನ್ನು ಬೆಂಗಳೂರು ನಗರಕ್ಕೂ, ಅಲ್ಲಿಯ ಶ್ರೀ ಎಂ. ನರಸಿಂಹಯ್ಯನವರನ್ನು ಕೋಲಾರಕ್ಕೆ ವರ್ಗ ಮಾಡಲಾಗಿದೆ

ಯುದ್ಧವಾದರೆ ಭಾರತ ರಷ್ಯಾ ಕಡೆಗೆ ?

ಭಾರತ ಈಗಾಗಲೇ ಕಮ್ಯೂನಿಸ್ಟರ ತತ್ವಗಳನ್ನು ಅಂಗೀಕರಿಸಿದೆ ಯುದ್ಧವೇನಾದರೂ ಆದರೆ ಭಾರತ ಅಮೇರಿಕಾಕ್ಕೆ ವಿರುದ್ಧವಾಗಿ ರಷ್ಯದವರ ಸೇರಿಕೊಳ್ಳುವ ಸಂಭವವಿದೆ. ಆದ್ದರಿಂದ ಭಾರತಕ್ಕೆ ಆಹಾರ ಸರಬರಾಯಿ ಕೂಡದೆಂದು ಡೆಮಾಕ್ರಾಟ್ ಸೆನೆಟರ್ ಮಿ. ಯೂಜೆಸಿ ಕಾಕ್ಸ್ ಭಾರತಕ್ಕೆ ಧಾನ್ಯ ಸಹಾಯ ಮಸೂದೆಯನ್ನು ವಿರೋಧಿಸಿರುವರು.

ಪೆಟ್ರೋಲ್ ಹತೋಟಿ

ಪೆಟ್ರೋಲ್ ಅಭಾವದಿಂದ ಪಾಟಿಯಾಲಾ ಮತ್ತು ಪೂರ್ವ ಪಂಜಾಬ ಪ್ರಾಂತ್ಯದಲ್ಲಿ ಪೆಟ್ರೋಲ್ ಹತೋಟಿಯನ್ನು ಜಾರಿಗೆ ತರಲಾಗಿದೆ

ಚೈನಾಕ್ಕೆ ಸಾಮಾನು ಸರಬರಾಜು ಬಹಿಷ್ಕಾರ

ಒಕ್ಕೂಟವು ಚೈನಾಕ್ಕೆ ಯುದ್ಧ ಸಾಮಗ್ರಿಗಳನ್ನು ರಫ್ತು ಮಾಡುವುದನ್ನು ಬಹಿಷ್ಕರಿಸಿದೆ

ಮತ್ತೆ ೪ ಲಕ್ಷ ಟನ್ ಅಕ್ಕಿ

ಚೀನಾ ಭಾರತಕ್ಕೆ ಮತ್ತೆ ೪ ಲಕ್ಷ ಟನ್ ಅಕ್ಕಿ ಸರಬರಾಜಿಗೆ ಒಪ್ಪಂದವಾಗಿದೆಯೆಂದು ತಿಳಿದು ಬರುತ್ತದೆ

† ಪ್ರತಿ ಮಾಹೆಯಲ್ಲೂ ಅಮೇರಿಕಾವು ಭಾರತಕ್ಕೆ ೧ ಲಕ್ಷ ಟನ್ ಆಹಾರವನ್ನು ರವಾನೆ ಮಾಡುತ್ತಲಿದೆ. ಇನ್ನು ಮುಂದೆ ೫|| ಲಕ್ಷ ಟನ್ ರವಾನೆ ಮಾಡುವುದು ಈ ಕಾರ್ಯಕ್ಕಾಗಿ ೩೩ ಹಡಗುಗಳನ್ನು ನಿಯಮಿಸಲಾಗುತ್ತಿದೆ ಎಂದು ಅಮೇರಿಕಾ ವ್ಯವಸಾಯ ಇಲಾಖಾ ವ್ಯಾಪಾರಪ್ರತಿನಿಧಿ ಹೇಳಿರುವರು.

ಪ್ರಜೋತ್ಪತ್ತಿ ತಡೆಯಲು ಕ್ರಮಗಳನ್ನು ಮುಂದಿಡಿ

ಮೈಸೂರು ಮೇ ೨೪

ಈ ಚರ್ಚಾಕೂಟದಲ್ಲಿ ಸೇರಿರುವ ಪ್ರಾಜ್ಞರೆಲ್ಲರೂ ಭಾರತದಲ್ಲಿ ಪ್ರಜೋತ್ಪತ್ತಿ ಹೆಚ್ಚುತ್ತಲಿರುವುದೂ ಆಹಾರ ಅಭಾವಕ್ಕೆ ಒಂದು ಮುಖ್ಯ ಕಾರಣವೆಂದು ಹೇಳುತ್ತಲಿರುವರು. ಆದರೆ ಅದನ್ನು ತಡೆಗಟ್ಟಲು ಸಾಧನಗಳೇನೆಂಬುದನ್ನು ಯಾರೂ ತಿಳಿಸಿಲ್ಲ. ವ್ಯಕ್ತಿ ಮತ್ತು ಸಮುದಾಯ ರೀತ್ಯಾ ಸರ್ಕಾರದ ಸಹಾಯವನ್ನಪೇಕ್ಷಿಸದೆಯೇ ಸಂಸಾರ ಸುವ್ಯವಸ್ಥ ರೀತಿಯಲ್ಲಿ ನಡಸಲು ಕಾರ್ಯಕ್ರಮವನ್ನು ಸ್ತ್ರೀಯರು ಪ್ರಾರಂಭಿಸಬೇಕಾಗಿದೆ ಎಂದು ನಿನ್ನೆ ಶ್ರೀಮತಿ ಎಸ್. ಚಾರಿಯವರು ಆಹಾರ-ಸಂಶೋಧನಾ ಕೇಂದ್ರದಲ್ಲಿ ನಡೆಯುತ್ತಲಿರುವ 'ಆಹಾರ ಮತ್ತು ಜನಸಂಖ್ಯೆ'ಯ ಚರ್ಚಾಕೂಟದಲ್ಲಿ ಮಾತನಾಡುತ್ತಾ ಹೇಳಿದರು.

ಕೇಂದ್ರದ ಡೈರೆಕ್ಟರಾದ ಡಾ|| ಸುಬ್ರಹ್ಮಣ್ಯಂರವರು ಆಹಾರದ ಪರಿಸ್ಥಿತಿಯ ವಿಷಯವಾಗಿ ಮಾತನಾಡುತ್ತಾ ಈಗ ಬೆಳೆಯುತ್ತಲಿರುವ ಆಹಾರವನ್ನೇ ಅಧಿಕ ಪ್ರಮಾಣದಲ್ಲಿ ನಾವು ಬೆಳೆಯಲು ಸಾಧ್ಯವಿಲ್ಲ. ಇಂದಿನ ಆಹಾರ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಶೇ. ೨೫ ರಷ್ಟಾದರೂ ಹೊಸ ರೀತಿಯ ಆಹಾರವನ್ನು ತಯಾರಿಸಿ ಉಪಯೋಗಿಸಬೇಕಾಗಿದೆ.

ಸಂಶೋಧನೆಗಳಿಂದ ಮರಗೆಣಸಿನಿಂದ ಉತ್ತಮ ತರಹದ ಕೃತಕ ಅಕ್ಕಿಯನ್ನು ತಯಾರಿಸಬಹುದೆಂದು ಕಂಡು ಹಿಡಿಯಲಾಗಿದೆ. ಇದರಿಂದ ಆಹಾರದ ಸತ್ವವೇನೂ ಕಡಮೆಯಾಗುವುದಿಲ್ಲ. ಇದನ್ನು ತಯಾರಿಸಿ ಕಡ್ಡಾಯವಾಗಿ ಪಡಿತರದೊಡನೆ ಕೊಟ್ಟಲ್ಲಿ ನಮ್ಮ ದೇಶದಲ್ಲಿ ಈಗ ಉದ್ಭವಿಸಿರುವ ಆಹಾರ ಅಭಾವವು ಕಡಮೆಯಾಗುವುದು. ಪರದೇಶಗಳಿಂದ ವಿಶೇಷ ದ್ರವ್ಯ ವ್ಯಯ ಮಾಡಿ ಆಹಾರವನ್ನು ತರಿಸಿಕೊಳ್ಳುವುದು ನಿಲ್ಲುವುದೆಂದು ಹೇಳಿದರು.

ಶ್ರೀಮತಿ ಪಿ ಎಸ್. ರೆಡ್ಡಿಯವರು ಮಾತನಾಡುತ್ತಾ ಈಗಿನ ನಮ್ಮ ಆಹಾರ ಸೇವನಾ ಕ್ರಮದಲ್ಲಿ ಬದಲಾವಣೆ ಮಾಡಬೇಕಾದರೆ ಬಾಲಕರಿಗೆ ತಕ್ಕ ತಿಳುವಳಿಕೆಯನ್ನು ಕೊಡಬೇಕಾಗಿದೆ. ಪ್ರಾಥಮಿಕ ಪಾಠಶಾಲೆಗಳಲ್ಲೇ ಈ ಶಿಕ್ಷಣ ಕಾರ್ಯ ಪ್ರಾರಂಭವಾಗಬೇಕು. ನಮ್ಮ ದೇಶದ ಸ್ತ್ರೀಯರೆಲ್ಲರೂ ಈ ಕೇಂದ್ರಕ್ಕೆ ಬಂದು ಎಲ್ಲಾ ವಿಷಯವನ್ನು ತಿಳಿದುಕೊಂಡು ಹೋಗಲಾಗುವುದಿಲ್ಲ. ಸರ್ಕಾರವು ಪ್ರಚಾರಕಾರ್ಯವನ್ನು ಹೆಚ್ಚಿಸಬೇಕೆಂದು ಸಲಹೆಯಿತ್ತರು.

ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಶ್ರೀ ಕೋದಂಡರಾಯರು ಮಾತನಾಡುತ್ತಾ, ಕೆಲವು ತಿಂಗಳೊಳಗೆ ಉಂಟಾಗುವ ಆಹಾರ-ಅಭಾವವನ್ನು ಹೇಗೆ ನಿವಾರಿಸಬೇಕೆಂಬುದನ್ನು ಇಲ್ಲಿ ಸೇರಿರುವ ಪ್ರವೀಣರು ಚರ್ಚಿಸಿ ಸರ್ಕಾರಕ್ಕೆ ಸೂಕ್ತ ಸಲಹೆಯನ್ನು ಕೊಡಬೇಕೆಂದು ಹೇಳಿದರು.

ಚರ್ಚಾಕೂಟದ ಅಧ್ಯಕ್ಷತೆವಹಿಸಿದ್ದ ಮದರಾಸಿನ ಆಹಾರಮಂತ್ರಿ ಶ್ರೀ ರೋಚೆ ವಿಕ್ಟೋರಿಯಾರವರು ಕೊನೆಯದಾಗಿ ಮಾತನಾಡುತ್ತಾ, ಈಗಿರುವ ಆಹಾರದಾಸ್ತಾನು ಆಗಸ್ಟ್ ಮಾಹೆ ಅಂತ್ಯದವರೆಗೆ ಮಾತ್ರ ಬರುವುದೆಂದು, ಕೇಂದ್ರ ಆಹಾರಸಚಿವ ಶ್ರೀ ಕೆ. ಎ. ಮುನ್ಷಿಯವರು ಹೇಳಿರುವುದನ್ನು ಇಲ್ಲಿ ಸೇರಿರುವ ಪ್ರವೀಣರು ನೆನಪಿನಲ್ಲಿಟ್ಟುಕೊಂಡು ಮುಂದೆ ಬರುವ ತೊಂದರೆಯನ್ನು ಹೇಗೆ ಎದುರಿಸಬಹುದೆಂಬುದಕ್ಕೆ ತಕ್ಕ ಸಲಹೆಯನ್ನು ಕೊಡಬೇಕೆಂದೂ ಇತರೇ ಆಹಾರ ಪದಾರ್ಥಗಳನ್ನು ಮನೆಯಲ್ಲುಪಯೋಗಿಸಲು ದೇಶಾದ್ಯಂತ ತಕ್ಕ ಪ್ರಚಾರಕಾರ್ಯ ನಡೆಯಬೇಕೆಂದೂ ತಿಳಿಸಿದರು.

* 'ಮೈಸೂರು ದೊಡ್ಡಪೇಟೆ ಶ್ರೀ ಕನ್ಯಕಾಪರಮೇಶ್ವರೀ ವೈಶ್ಯ ಅನಾಥಾಲಯವು ತಾ|| ೧೬ ೬ ೫೧ರ ಆಗಾಯಿತು ತೆರೆಯಲ್ಪಡುತ್ತದೆ. ಮಾಧ್ಯಮಿಕ ಶಾಲೆಯ ವೈಶ್ಯ ಜನಾಂಗದ ಬಡ ವಿದ್ಯಾರ್ಥಿಗಳು ಇಬ್ಬರು ದೊಡ್ಡ ಮನುಷ್ಯರುಗಳ ಶಿಫಾರಸ್ಸಿನೊಂದಿಗೆ ತಾ|| ೩೦ ೫ ೫೧ ರೊಳಗಾಗಿ ಅಧ್ಯಕ್ಷರಿಗೆ ಅರ್ಜಿ ಹಾಕಿಕೊಳ್ಳತಕ್ಕದ್ದು ಎಂದು ವೈಶ್ಯ ಅನಾಥಾಲಯದ ಕಾರ್ಯದರ್ಶಿಗಳು ತಿಳಿಸುತ್ತಾರೆ.

* ಭಾರತಕ್ಕೆ ಚೀಣಾವು ೪ ಲಕ್ಷ ಟನ್ ಮೈಲೋವನ್ನು ಸರಬರಾಯಿ ಮಾಡಲು ಕಳೆದ ಮಂಗಳವಾರದಿನ ಒಪ್ಪಂದವಾಗಿದೆ.

ಪರ್ಷಿಯಾಕ್ಕೆ ಸ್ವಿಸ್ ಪ್ರವೀಣರು

ಪರ್ಷಿಯಾದ ಎಣ್ಣೆ ಕಂಪನಿಗೆ ಸಲಹೆಗಾರರಾಗಿ ೮ ಜನ ಸ್ವಿಸ್ ಪೆಟ್ರೋಲಿಯಂ ಪ್ರವೀಣರು ನೇಮಕವಾಗಿದ್ದಾರೆ. ಎಣ್ಣೆ ವಿವಾದಕ್ಕೆ ಸಂಬಂಧಪಟ್ಟಂತೆ ಫ್ರೆಂಚ್ ಲಾಯರ್ ಪ್ರೊಫೆಸರ್ ನರ್ ಜಿಡೆಲ್ ರನ್ನೂ ನ್ಯಾಯಾಂಗ ಸಲಹೆಗಾರರಾಗಿ ಪರ್ಷಿಯಾ ಸರ್ಕಾರವು ನೇಮಿಸಿ ಕೊಂಡಿದೆ.

ದಾನಕ್ಕಾಗಿ ೩೫೦೦ ಎಕರೆ

ಆಚಾರ್ಯ ವಿನೋಬಾಭಾವೆಯವರ ವಶಕ್ಕೆ ತೆಲಂಗಾಣ ಜಿಲ್ಲೆಯಲ್ಲಿ ಒಡೆಯರಿಗೆ ಹಂಚಲು ೩೫೦೦ ಎಕರೆ ಜಮೀನು ಇಲ್ಲಿಯವರೆಗೆ ದಾನವಾಗಿ ಬಂದಿದೆ.

ವಿವಾಹ ಮಹೋತ್ಸವ

ಪೌರಸಭೆಯ ಮಾಜಿ ಅಧ್ಯಕ್ಷರೂ ಮತ್ತು ನಗರಾಭಿವೃದ್ಧಿ ಸಮಿತಿ ಸದಸ್ಯರೂ ಆದ ಶ್ರೀ ಎಸ್ ಲಿಂಗಣ್ಣನವರು ತಮ್ಮ ಸೋದರಸೊಸೆ, ಶ್ರೀ ಎಂ ಎಸ್. ಶಿವಲಿಂಗಯ್ಯನವರ ಪುತ್ರಿ ಚಿ|| ಸೌ|| ಸಂಜಮ್ಮನನ್ನು ಮಂಡ್ಯದ ಮಾಗಡಿ ಶ್ರೀ ಕಾಳೇಗೌಡರ ಪುತ್ರ ಶ್ರೀ ಎನ್. ಕೆಂಪಯ್ಯನವರಿಗೆ ಕೊಟ್ಟು ವಿವಾಹವನ್ನು ಮೊನ್ನೆ ನೆರವೇರಿಸಿದರು.

ಸಂಜೆ ನಡೆದ ಆರತಕ್ಷತೆಗೆ ನೂರಾರು ಜನ ಆಹ್ವಾನಿತ ಗಣ್ಯಮಹನೀಯರೂ ಮಹಿಳೆಯರೂ ದಯಮಾಡಿ ವಧೂವರರನ್ನು ಆಶೀರ್ವದಿಸಿದರು. ಶ್ರೀಮತಿ ಜೊಕ್ಕಮ್ಮನವರ ಸಂಗೀತ ನಡೆಯಿತು.

ವಿಶ್ವವಿದ್ಯಾನಿಲಯ ತರಗತಿಗಳ ಶುಲ್ಕ

ಬೆಂಗಳೂರು ಮೇ ೨೪

ಇಂಟರ್ ಆರ್ಟ್ಸ್, ಬಿ. ಎ. ಇಂಟರ್ ಕಾಮರ್ಸ್, ಬಿ ಎ (ಆನರ್ಸ್) ಎಂ. ಎ. ತರಗತಿ ಶುಲ್ಕವನ್ನು ಹೆಚ್ಚಿಸಿಲ್ಲ. ವಿಜ್ಞಾನವಿಭಾಗದ ತರಗತಿಗಳ ಶುಲ್ಕವನ್ನು ಹೆಚ್ಚಿಸಲಾಗಿದೆ.

ನಿನ್ನೆ ಬೆಂಗಳೂರಿನಲ್ಲಿ ನಡೆದ ಅಕೆಡಮಿಕ್ ಕೌನ್ಸಿಲ್ ಸಭೆಯು ೨೪-೮ ಮತಗಳಿಂದ ಈ ಬದಲಾವಣೆಯನ್ನು ಅಂಗೀಕರಿಸಿತು.

ಕಾಲೇಜಿಗೆ ಸೇರುವ ವರ್ಷದ ಜುಲೈ ಒಂದನೇ ತಾರೀಖಿನಿಂದ ವಿದ್ಯಾರ್ಥಿಗೆ ಕೂನೆಯ ಪಕ್ಷ ೧೫ ವರ್ಷ ವಯಸ್ಸಾಗಿದ್ದರೆ ಮಾತ್ರ ಇಂಟರ್‌ಮೀಡಿಯೇಟ್‌ಗೆ ಸೇರಬಹುದು. ಎಸ್ ಎಸ್ ಎಲ್. ಸಿ ಪರೀಕ್ಷೆಯಲ್ಲಿ ಪ್ರತಿಸಾರದಲ್ಲಿಯೂ ಶೇ|| ४೦ ರಷ್ಟು ಅಂಕಗಳನ್ನು ಗಳಿಸಿದ್ದರೆ ಮಾತ್ರ ವಿಶ್ವವಿದ್ಯಾನಿಲಯದ ತರಗತಿಗೆ ಸೇರಬಹುದೆಂಬ ನಿರ್ಣಯ ಅಂಗೀಕೃತವಾಯಿತು.

ವಿದ್ಯಾರ್ಥಿಗಳು ಮೆಡಿಕಲ್ ಪರೀಕ್ಷೆಗೆ ಇನ್ನುಮುಂದೆ ೧ ರೂ. ಬದಲು ೨ ರೂ. ಕೊಡಬೇಕೆಂದೂ, ರಿಜಿಸ್ಟ್ರೇಷನ್‌ಗಾಗಿ ಇಂಟರ್‌ಮೀಡಿಯೇಟ್ ವಿದ್ಯಾರ್ಥಿಗಳು ೨ ರೂ, ಪ್ರೊಫೆಷನಲ್ ಕೋರ್ಸ್ ವಿದ್ಯಾರ್ಥಿಗಳು ೩ ರೂ ಕೊಡಬೇಕೆಂದು ನಿರ್ಧರಿಸಲಾಯಿತು.

೧೮ ಕೋಟಿ ರೂ. ಸಾಲ

ಬೆಂಗಳೂರು ಮೇ ೨೪

ಮೈಸೂರಿನ ಆರ್ಥಿಕ ಯೋಜನೆಗಳಿಗೆ ಭಾರತ ಸರ್ಕಾರವು ೧೮ ಕೋಟಿ ರೂಗಳ ಸಾಲ ಕೊಡಲಿದೆಯೆಂದು ತಿಳಿಯಬರುತ್ತದೆ.

ಮಹಾಚುನಾವಣೆ ಇಲ್ಲವೆ?

ಈ ವರ್ಷ ಸಾರ್ವತ್ರಿಕ ಚುನಾವಣೆಗಳಾಗುವುದು ನನಗೇನೋ ಅನುಮಾನ ಎಂದು ಶ್ರೀ ಜಯಪ್ರಕಾಶ ನಾರಾಯಣರು ಹೇಳಿರುವರು.

ಭಾರತದ ಸಹಾಯ

ವಿಶ್ವಸಂಸ್ಥೆಯ ಮಕ್ಕಳ ನಿಧಿಗೆ ಭಾರತವು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ಅಮೋಘ ೨ನೇ ವಾರ

ಮೋಹನ್ಸ್‌ರವರ— * ಭೀಮ್ ಸೇನ್ *

ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್, ರಾಂಸಿಂಗ್

ಒಲಂಪಿಯಾ ಟಾಕೀಸ್

೨೪—೫—೧೯೫೧ ರಿಂದ ಪ್ರತಿದಿನ ೩ ಆಟಗಳು

ಕೊಲಂಬಿಯಾರವರ:—

ಸೂ ಪ ರ್ ಮ್ಯಾ ನ್

ಇಂತಹ ಅದ್ಭುತ ಸಾಹಸ ಚಿತ್ರವನ್ನು ಈವರೆಗೆ ನೀವು ನೋಡಿರಲಾರಿರಿ. ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರದರ್ಶಿತವಾಗಿ ಪ್ರಶಂಸೆ ಪಡೆದಿದೆ. ಅಮೇರಿಕಾದ 200 ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶಿತವಾದ ಅದ್ವಿತೀಯ ಚಿತ್ರ, ಮುಂಬಯಿಯ 6 ಚಿತ್ರಮಂದಿರಗಳಲ್ಲಿ 25 ವಾರಗಳಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿದೆ. ಬೆಂಗಳೂರಿನಲ್ಲಿ ಒಂದು ವಾರದಲ್ಲಿ 20,000 ರೂಪಾಯಿಗಳನ್ನು ಗಳಿಸಿದೆ. ನಿಮ್ಮ ಕಲ್ಪನೆಗೆ ಎಟುಕದ ಸಾಹಸ ಕೃತ್ಯಗಳನ್ನು ಪ್ರತ್ಯಕ್ಷವಾಗಿ ನೋಡಿ.

ರ ಣ ಜಿ ತ್

೨೫—೫—೫೧ರಿಂದ

ಅಮೋಘವಾದ ೩ನೇ ವಾರ

-:: ಸ ಗಾ ಯಿ ::-

ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು:—ಜಿ. ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು:—ಹಿ. ಕಾ. ಸುಬ್ಬರಾವ್,
ಮೋಹನ್ ಮುದ್ರಣಾಲಯ, ಮೈಸೂರು

ಪ್ರವಾಹದಿಂದ ನಷ್ಟ

ಅಸ್ಸಾಂನ ಸಮೀಪ ... ಪಟ್ಟಣದಲ್ಲಿ ಅಧಿಕ ಪ್ರವಾಹ ಬಂದು ಪಟ್ಟಣ ಜಲಮಯವಾಗಿದೆ. ವಿಮಾನದ್ವಾರವೂ ನೀರಿನಿಂದ ತುಂಬಿಕೊಂಡು ವಿಮಾನಗಳು ಇಳಿಯಲಾಗಲಿಲ್ಲ. ಪ್ರಾಣಾಪಾಯವೇನೂ ಆಗಿಲ್ಲವೆಂದು ಹೇಳಲಾಗಿದೆ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬—೫—೧೯೫೧ನೇ ಶನಿವಾರ [ಸಂಚಿಕೆ ೨೧೭

ಶ್ರೀ ಕೆ. ಟಿ. ಭಾಷ್ಯಂ ಮೈಸೂರಿನಲ್ಲಿ

ಮೈಸೂರು ಮೇ ೨೫

ಇಂದು ಬೆಂಗ್ಳೂರು ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಮೈಸೂರಿಗೆ ಆಗಮಿಸಿ ಸಂಜೆ ರೇಷ್ಮೆ ಕಾರ್ಖಾನೆಗೆ ಭೇಟಿ ಇತ್ತು, ಕಾರ್ಮಿಕರೊಡನೆ ಮಾತುಕಥೆ ನಡೆಸಿದರು. ನಾಳೆ ಬೆಳಗ್ಗೆ ಅವರು ಬೆಂಗಳೂರಿಗೆ ಹೊರಡುವರು.

ಹಿಂದುಳಿದ ವಂಗಡ ಜಾತಿಯನ್ನವಲಂಬಿಸುವುದಿಲ್ಲ

ಪರ್ಷಿಯಾ ಎಣ್ಣೆ ವ್ಯವಹಾರದಲ್ಲಿ ಭಾರತ ಮಧ್ಯಸ್ಥಿಕೆ ಸಂಭವವಿಲ್ಲ

ಕಾಂಗ್ರೆಸ್ಸಿಗೆ ಸಿದ್ದಲಿಂಗಯ್ಯನವರ ರಾಜೀನಾಮೆ ?

ಮೈಸೂರು ಕಾಂಗ್ರೆಸ್ ಪ್ರಥಮ ಅಧ್ಯಕ್ಷರೂ, ಮಾಜಿ ವಿದ್ಯಾಮಂತ್ರಿಗಳೂ ಆದ ಶ್ರೀ ಟಿ. ಸಿದ್ದಲಿಂಗಯ್ಯನವರು ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹನುಮಂತಯ್ಯನವರಿಗೆ ಪತ್ರ ಬರೆದು ತಮ್ಮನ್ನು ಕಾಂಗ್ರೆಸ್ಸಿನಿಂದ ಬಿಡುಗಡೆ ಮಾಡಬೇಕೆಂದು ಕೇಳಿರುವುದಾಗಿ ವರದಿಯಾಗಿದೆ. ಜೂನ್ ೫ ರವೇಳೆಗೆ ಬಹಿರಂಗ ಹೇಳಿಕೆ ಕೊಟ್ಟು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ. ಆಚಾರ್ಯ ಕೃಪಲಾನಿಯವರ ನೂತನ ಪಕ್ಷದ ಆಶ್ರಯದಲ್ಲಿ ಮೈಸೂರಿನಲ್ಲಿಯೂ ಒಂದು ನೂತನ ಪಕ್ಷವನ್ನು ಇವರು ರಚಿಸುವ ಸಂಭವವಿದೆಯೆಂದು ತಿಳಿದು ಬರುತ್ತದೆ

ಶಾಸನ ಸಭಾಧ್ಯಕ್ಷರುಗಳ ಸಮ್ಮೇಳನ

ಕೇಂದ್ರ ಮತ್ತು ಪ್ರಾಂತ್ಯಗಳ ಶಾಸನ ಸಭೆಗಳ ಅಧ್ಯಕ್ಷರುಗಳ ಸಮ್ಮೇಳನವು ಜುಲೈ ೩ನೇ ತಾರೀಖು ತಿರುವಾಂಕೂರಿನಲ್ಲಿ ನಡೆಯುವುದು. ಭಾರತ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಜಿ. ವಿ. ಮಾವಲಂಕರರು ಅಧ್ಯಕ್ಷತೆ ವಹಿಸುವರು. ಕಾರ್ಯದರ್ಶಿಗಳು, ಉಪಾಧ್ಯಕ್ಷರು ಎಲ್ಲರೂ ಒಟ್ಟು ೪೫ ಸದಸ್ಯರು ಈ ಸಭೆಯಲ್ಲಿ ಭಾಗವಹಿಸುವರು. ಸಭೆಯು ೩ ದಿನ ನಡೆಯುವುದು.

೩॥ ಲಕ್ಷ ರೂ. ವಜ್ರ ಪತ್ತೆ

ಸುಮಾರು ೩॥ ಲಕ್ಷ ರೂ. ಬೆಲೆಬಾಳುವ ವಜ್ರವನ್ನು ಯೂರೋಪಿಯನ್ ಪ್ರಯಾಣಿಕನು ಗುಪ್ತವಾಗಿ ತರುತ್ತಲಿದ್ದುದನ್ನು ಬೊಂಬಾಯಿನಲ್ಲಿ ಪತ್ತೆಹಚ್ಚಿ, ವಶಪಡಿಸಿಕೊಳ್ಳಲಾಗಿದೆ.

ಭಾರತ ಮಧ್ಯಸ್ಥಿಕೆ ವಹಿಸುವ ಸಂಭವವಿಲ್ಲ

ಬ್ರಿಟನ್ನಿನ ಕೋರಿಕೆ ಮೇಲೆ ಭಾರತವು ಪರ್ಷಿಯಾ ಎಣ್ಣೆ ವಿವಾದದಲ್ಲಿ ಮಧ್ಯಸ್ಥಿಕೆಯನ್ನು ವಹಿಸುವ ಸಂಭವವಿಲ್ಲವೆಂದು ಅಧಿಕೃತವಾಗಿ ಹೇಳಲಾಗುತ್ತಲಿದೆ.

ರೈಲ್ವೆ ಮುಷ್ಕರದ ಬ್ಯಾಲೆಟ್

ಮೈಸೂರು ರೈಲ್ವೇ ಕೆಲಸಗಾರರ ಸಭೆಯು ೨೪ನೇ ತಾರೀಖು ನಡೆದು, ರೈಲ್ವೆ ಮುಷ್ಕರದ ವಿಷಯವಾಗಿ ಬ್ಯಾಲೆಟ್ ಪಡೆಯಲು ಶ್ರೀ ಜಿ. ಎಚ್. ಪದ್ಮನಾಭರಾಯರಿಗೆ ಅಧಿಕಾರವನ್ನು ವಹಿಸಿಕೊಟ್ಟಿದೆ.

ಭಾಷಣ

ಮೈಸೂರು ಕೌನ್ಸಿಲ್ ಮಂಡಲಿಯ ಆಶ್ರಯದಲ್ಲಿ ಇಂದು ಸಂಜೆ ೬ ಘಂಟೆಗೆ ಸಹಕಾರ ಭವನದಲ್ಲಿ ಬೊಂಬಾಯಿನ ವಿಶ್ವವಿದ್ಯಾನಿಲಯದ ಮಾಜಿ ವೈಸ್ ಛಾನ್ಸಲರ್ ಡಾ॥ ಪಿ. ವಿ. ಕಾಣೆಯವರು ಭಾಷಣ ಮಾಡುವರು.

ಶ್ರೀ ಟಿ. ಮರಿಯಪ್ಪ

ಆಹಾರ ಸಚಿವ ಶ್ರೀ ಮರಿಯಪ್ಪನವರು ನಿನ್ನೆ ದಿನ ಮೈಸೂರಿನಿಂದ ಬೆಂಗಳೂರಿಗೆ ಆಗಮಿಸಿದರು.

೧೫ನೇ ವಿಧಿಯ ತಿದ್ದುಪಡಿ

ರಾಜ್ಯಾಂಗ ಶಾಸನದ ೧೫ನೇ ವಿಧಿಯನ್ನು ತಿದ್ದುಪಡಿಮಾಡ ಬೇಕಾದುದು ಅವಶ್ಯಕ. ಯಾವ ಜಾತಿ ಕೋಮು ಭಾವನೆಯಿಲ್ಲದೆ ಹಿಂದುಳಿದ ವಂಗಡದವರಿಗೆ ವಿದ್ಯಾಭ್ಯಾಸ, ಸಂಸ್ಕೃತಿ, ಮುಂತಾದ ಅಭಿವೃದ್ಧಿಗಾಗಿ ಅವಕಾಶವನ್ನು ಕಲ್ಪಿಸಬೇಕಾಗಿದೆ ಇದು ಜಾತ್ಯಾಧಾರದ ಮೇಲೆ ನಡೆಯುವುದಿಲ್ಲ. ಬ್ರಾಹ್ಮಣ ಕೋಮಿನಲ್ಲಿ ಹಿಂದುಳಿದವರಿದ್ದರೆ, ಅವರಿಗೂ ಉತ್ತೇಜನ ಕೊಡಲು ಈಗಿನ ತಿದ್ದುಪಡಿ ಅನ್ವಯಿಸುತ್ತದೆ ಎಂದು ಪಾರ್ಲಿಮೆಂಟಿನ ಸದಸ್ಯ ಶ್ರೀ ವೆಂಕಟರಾಮನ್‌ರು ಮದ್ರಾಸಿನಲ್ಲಿ ತಿಳಿಸಿದರು.

ರಕ್ತದ ಬ್ಯಾಂಕ್

ಉದಕಮಂಡಲದಲ್ಲಿ ಒಂದು ರಕ್ತದ ಬ್ಯಾಂಕನ್ನು ಸ್ಥಾಪಿಸಲು ಮದರಾಸ್ ಸರ್ಕಾರವು ೪,೦೦೦ ರೂಗಳನ್ನು ಮಂಜೂರ್ ಮಾಡಿದೆ.

೩೮ನೇ ಅಕ್ಷಾಂಶ ದಾಟಿದುವು

ಪೂರ್ವ ಕೊರಿಯಾದಲ್ಲಿ ವಿಶ್ವಸಂಸ್ಥೆ ಸೇನೆಗಳು ೩೮ನೇ ಅಕ್ಷಾಂಶವನ್ನು ದಾಟಿ ಉತ್ತರ ಕೊರಿಯಾಕ್ಕೆ ಪ್ರವೇಶಿಸಿವೆ.

ವಸ್ತು ಪ್ರದರ್ಶನ ದುರಂತದ ವಿಚಾರಣೆ

ಸ್ವಂ.ಸು ಫೋನ್] ಬೆಂ. ಮೇ ೨೫

ವಸ್ತು ಪ್ರದರ್ಶನ ದುರಂತದ ಕಾರಣ ವನ್ನು ವಿಚಾರಿಸಲು ಸರ್ಕಾರದಿಂದ ನೇಮಿಸಲ್ಪಟ್ಟಿರುವ ಸಮಿತಿ ಸಭೆಯು ಈದಿನ ಶ್ರೀ ಸಿಂಗಾರವೇಲು ಮೊದಲಿಯಾರರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಮುಂದಿನ ತಿಂಗಳು ಮೂರನೇ ತಾ॥ ಗೆ ಸಭೆಯನ್ನು ಮುಂದುವರಿಸಲಾಯಿತು. ಸಮಿತಿಯು ಆ ದಿನದಿಂದ ಸಾಕ್ಷ್ಯವನ್ನು ತೆಗೆದುಕೊಳ್ಳುವುದೆಂದು ತಿಳಿದು ಬಂದಿದೆ.

ಸಮಿತಿ ಸದಸ್ಯರ ಸಂಭಾವನೆ

ಸ್ವಂ.ಸು. ಫೋನ್] ಬೆಂ. ಮೇ ೨೫

ಶ್ರೀ ಗೋಪಾಲರಾವ್ ವಿಚಾರಣಾಸಮಿತಿಯ ಸದಸ್ಯರುಗಳಾದ ಶ್ರೀ ಗಳಾದ ಟಿ ಸುಬ್ರಮಣ್ಯಂ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರುಗಳಿಗೆ ಸರ್ಕಾರವು ೨೦ ಸಾವಿರ ರೂಗಳ ಸಂಭಾವನೆ ಕೊಡಲು ಆಜ್ಞೆಮಾಡಿದೆಯೆಂದು ತಿಳಿದು ಬಂದಿದೆ.

ಸರ್. ಎ. ರಾಮಸ್ವಾಮಿ ಮೊದಲಿಯರ್ ತಿರುವಾಂಕೂರು ವೈಸ್ ಛಾನ್ಸಲರ್

ಸರ್. ಎ. ರಾಮಸ್ವಾಮಿ ಮೊದಲಿಯಾರ್‌ರವರನ್ನು ತಿರುವಾಂಕೂರಿನ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾಗಿ ನೇಮಕ ಮಾಡಲಾಗುವುದೆಂದು ಹೇಳಲಾಗಿದೆ.

ಸಲಹೆಗಾಗಿ ಕೋರಿಕೆ

ಮದ್ರಾಸ್ ಮತ್ತು ಬಿಹಾರ್‌ಗಳಿಗೆ ಉಚಿತವಾಗಿ ಭಾರತದ ಇತರ ಪ್ರಾಂತ ಮತ್ತು ಸಂಸ್ಥಾನಗಳು ಕೊಡುವ ಆಹಾರವನ್ನು ಹಂಚುವ ಬಗ್ಗೆ ಕೇಂದ್ರವು ಇವುಗಳ ಸಲಹೆಗಳನ್ನು ಕೇಳಿದೆಯಲ್ಲದೆ ಈ ಧಾನ್ಯ ಸಂಗ್ರಹಣೆಯ ಬಗ್ಗೆ ನಿರ್ದಿಷ್ಟವಾದ ನೀತಿಯನ್ನು ಸೂಚಿಸಿ ವಿವರವಾಗಿ ಪ್ರಕಟಣೆ ಹೊರಡಿಸಿರುವರು.

† ಭಾರತ ಮತ್ತು ಪಾಕೀಸ್ಥಾನಗಳ ಹಣಕಾಸಿನ ಸಚಿವರ ಸಭೆಯು ಈ ದಿನ ದೆಹಲಿಯಲ್ಲಿ ಆರಂಭವಾಯಿತು

ನೇಪಾಳದಲ್ಲಿ ಕಲ್ಲಿದ್ದಲಗಣಿ

ನೇಪಾಳದ ಪಶ್ಚಿಮಭಾಗದಲ್ಲಿ ಭಾರಿ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರುಗಳ ಗಣಿಯೊಂದು ಪತ್ತೆಯಾಗಿದೆ. ಈ ಗಣಿಯು ಭಾರತದಲ್ಲೆಲ್ಲಾ ದೊಡ್ಡಗಣಿಯೆಂದು ಸಂಬಲಾಗಿದೆ.

ಆಹಾರ ಸಂಗ್ರಹಣೆ ಕಡಿಮೆಯಾಗಿದೆ

ಏಪ್ರಿಲ್ ನಿಂದ ಇಲ್ಲಿಯವರಿಗೆ ೧,೨೧,೦೦೦ ಸಾವಿರ ಟನ್ ಆಹಾರವನ್ನು ಭಾರತದಲ್ಲಿ ಸಂಗ್ರಹಿಸಲಾಗಿದ್ದು, ಕಳೆದ ವರ್ಷ ಈ ತಿಂಗಳುಗಳಲ್ಲಿ ಸಂಗ್ರಹಿಸಿದ್ದಕ್ಕಿಂತ ೨೯,೦೦೦ ಸಾವಿರ ಟನ್ ಆಹಾರ ಕಡಿಮೆಯಾಗಿದೆ ಎಂದು ಉಪಸಚಿವ ಶ್ರೀ ತಿರುಮಲರಾಯರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಚೈನಾವು ಇಲ್ಲಿಯವರಿಗೆ ೪೦ ಸಾವಿರ ಟನ್ ಆಹಾರ ಕೊಟ್ಟಿದ್ದು ಇನ್ನೂ ೨ ಲಕ್ಷ ಟನ್ ಕೊಡುವುದೆಂದು ತಿಳಿಸಿವೆ. ರಷ್ಯಾದಿಂದ ಆಹಾರಪಡೆಯುವ ಬಗ್ಗೆ ಇನ್ನೂ ಮಾತುಕಥೆ ನಡೆಯುತ್ತಿದೆಯೆಂದು ಉಪಸಚಿವರು ತಿಳಿಸಿದರು.

ಕಾಗೋಡಿಗೆ ಭೇಟಿ

ಸ್ವಂಸು ಫೋನ್] ಬೆಂ, ಮೇ ೨೫

ಸಾಗರ ತಾಲ್ಲೋಕಿನ ಕಾಗೋಡಿಗೆ ಸಚಿವರುಗಳಾದ ಶ್ರೀ ಟಿ. ಮರಿಯಪ್ಪನವರು ಮತ್ತು ಹೆಚ್ ಸಿದ್ಧಯ್ಯನವರು ಇಂದು ತೆರಳಿದರು ಅಲ್ಲಿನ ಪರಿಸ್ಥಿತಿ ಬಿಗಡಾಯಿಸಿದೆಯೆಂದು ಸಚಿವರುಗಳಿಗೆ ತಂತೀ ಬಂದಿತ್ತೆಂದು ಹೇಳಲಾಗಿದೆ.

* ವಿದ್ಯಾ ಮಂತ್ರಿಗಳ ಛೇಂಬರಿನಲ್ಲಿ ನಿನ್ನೆ ದಿನ ವೈಸ್‌ಛಾನ್ಸಲರ್, ಸರ್ಕಾರದ ಆರ್ಕಿಟೆಕ್ಟ್ ಮತ್ತು ವಿದ್ಯಾಧಿಕಾರಿಗಳ ಸಭೆ ನಡೆದು ಕಾಲೇಜು ಕಟ್ಟಡಗಳನ್ನು ಏಕರೀತಿ ನಿರ್ಮಿಸುವ ಬಗ್ಗೆ ಮಾತುಕಥೆ ನಡೆಯಿತೆಂದು ಹೇಳಲಾಗಿದೆ.

* ಭಾರತದ ದಂಡನಾಯಕ ಜನರಲ್ ಕಾರಿಯಪ್ಪನವರು ಶನಿವಾರ ಬೆಂಗಳೂರಿಗೆ ಬರುವರು

ಸಮಾಚಾರ

ಶನಿವಾರ ತಾ|| ೨೬-೫-೧೯೫೧

ಶುಲ್ಕ ಏರಿಸಿರುವುದು ತರವಲ್ಲ

ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ತರಗತಿಗಳಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸುವುದಕ್ಕೆ ವಿಶ್ವವಿದ್ಯಾನಿಲಯದ ಅಕೆಡಮಿಕ್ ಕೌನ್ಸಿಲ್ಲು ತನ್ನ ಅಂಗೀಕಾರವಿತ್ತಿದೆ. ವಿರುದ್ಧವಾಗಿ ನಾಲ್ಕಾರು ಜನ ಮಾತ್ರ ಮತವಿತ್ತರು.

ಕೇವಲ ಒಂದು ಹೊತ್ತು ಕೂಡ ಊಟ ಸಿಕ್ಕದೆ ತೊಂದರೆಯಾಗಿರುವ ಈ ಕಾಲದಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸುವುದು ಸರಿಯಲ್ಲವೆಂದು ಶ್ರೀ ಭೀಮಪ್ಪನಾಯ್ಕರು ಅಭಿಪ್ರಾಯಪಟ್ಟಿರುವುದಲ್ಲದೆ ಶುಲ್ಕ ಏರಿಸಲು ಇದು ಸಕಾಲವಲ್ಲವೆಂದು ಸಹ ಸ್ಪಷ್ಟವಾಗಿ ಹೇಳಿರುವರು.

ಶುಲ್ಕವನ್ನು ಏರಿಸುವಾಗ ಅಕೆಡಮಿಕ್ ಕೌನ್ಸಿಲ್ಲಿನವರು ಇಂದಿನ ಆರ್ಥಿಕ ಪರಿಸ್ಥಿತಿ, ಏರುಪೇರುಗಳಿರುವ ಜನಜೀವನ ಮಟ್ಟ, ಮುಂತಾದುವನ್ನು ಸರಿಯಾಗಿ ಪರಿಶೀಲಿಸಿದ್ದರೆ ಇದಕ್ಕೆ ಸಮ್ಮತಿಯೀಯುತ್ತಿರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ವೆಚ್ಚವು ಅಧಿಕವಾಗುತ್ತಿರಬಹುದು ಆದರೆ ವಿದ್ಯಾರ್ಥಿಗಳ ಮೇಲೆ ಈ ಹೊರೆ ಹೊರಿಸುವುದು ಸಮಂಜಸವಲ್ಲ. ಈಗಾಗಲೇ ಪ್ರಜೆಗಳ ಮೇಲೆ ನಾನಾ ರೀತಿಯ ಹೊರೆ ಬೀಳುತ್ತಲಿದೆ ಶ್ರೀ ಭೀಮಪ್ಪನಾಯ್ಕರು ಹೇಳಿರುವಂತೆ ಒಂದು ಹೊತ್ತು ಊಟ ಸಿಕ್ಕುವುದೂ ಕಷ್ಟ. ಸಿಕ್ಕಿದರೂ ಅದನ್ನು ಪಡೆಯಲು ಮತ್ತೂ ಕಷ್ಟ ಇಂತಿರುವಲ್ಲಿ ವ್ಯಾಸಂಗಕ್ಕಾಗಿ ಶುಲ್ಕವನ್ನು ಏರಿಸಿದರೆ ಮಧ್ಯಮ ವರ್ಗ ಮತ್ತು ಬಡವರು ವಿದ್ಯೆಗೆ ತಿಲಾಂಜಲಿಯನ್ನೀಯಬೇಕಾಗುವುದು. ವಿಶ್ವವಿದ್ಯಾನಿಲಯವು ಇನ್ನು ಮುಂದೆ ಕೇವಲ ಶ್ರೀಮಂತರಿಗೇ ಮೀಸಲಾಗಿಟ್ಟಂತಾಗುವುದೇ ವಿನಹ ಮತ್ತೇನೂ ಇಲ್ಲ. ಇದರಿಂದ ದೇಶದ ಪ್ರಗತಿಗೆ ಅಡ್ಡಿ ತಂದಂತಾಗುವುದು. ಅಲ್ಲದೆ ಎಲ್ಲರಿಗೂ ಓದಲು ಸರಿಯಾದ ಸೌಕರ್ಯಗಳನ್ನು ನಮ್ಮ ಜನತಾ ಸರ್ಕಾರ ಒದಗಿಸಿಕೊಟ್ಟಂತಾಗದೆ ಮತ್ತು ವ್ಯಾಸಂಗ ಮೊಟಕು ಮಾಡಿದಂತಾಗುವುದು ಈ ಹೆಚ್ಚಿಗೆ ಶುಲ್ಕ ವಿಧಿಸುವುದನ್ನು ಮುಂಚೆ ಸರ್ಕಾರ ಪರಿಶೀಲಿಸುವುದು ಉತ್ತಮಮಾರ್ಗವಾಗಿರುತ್ತದೆ

ಕಡ್ಲೆ ಬೆಲೆ

ಇಂಪೀರಿಯಲ್ ಮಣ ಒಂದಕ್ಕೆ ಕಡ್ಲೆ ೧೭ ರೂ ಬಟಾಣಿ ೧೮ ರೂ ಎಂದು ಮೈಸೂರು ನಗರದ ಪರವಾನಿ ಬೆಲೆಯನ್ನು ಗೊತ್ತು

* ಮೈಸೂರು ಹಿಂದೂಸ್ಥಾನ್ ಪ್ರೆಸ್ ಕೆಲಸಗಾರರಿಗೆ ಉಂಟಾಗಿದ್ದ ಅಸಮಾಧಾನವನ್ನು ಹೋಗಲಾಡಿಸಲು ಮಾಲೀಕರಿಗೂ ಲೇಬರ್ ಅಸಿಸ್ಟೆಂಟ್ ಕಮೀಷನರಿಗೂ ಸಹ ನಡೆದ ನಾಲ್ಕು ದಿನಗಳ ಸಂಧಾನವು ಸಫಲವಾಯಿತು ಈ ವಿಚಾರದಲ್ಲಿ ಲೇಬರ್ ಅಸಿಸ್ಟೆಂಟ್ ಕಮೀಷನರೂ ಮತ್ತು ಜನರಲ್ ಆಸ್ಪತ್ರೆಯಲ್ಲಿ ಹಾಸಿಗೆಯಲ್ಲಿದ್ದ ಈ ಸಂಘದ ಕಾರ್ಯದರ್ಶಿಯವರಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಮತ್ತು ಸಂಘದ ಕ್ಯಾಷಿಯರ ಶ್ರೀ ಸಿ. ವೀರಭದ್ರಪ್ಪನವರು ಮತ್ತು ಅಸಿಸ್ಟೆಂಟ್ ಕಾರ್ಯದರ್ಶಿ ಎಂ. ವಿ ಶ್ರೀನಿವಾಸನಾಯ್ಡು ಮತ್ತು ಸದಸ್ಯರಾದ ವಿ. ಸಿ ಎಸ್ ರಾಮಾನುಜ ಪಂಡಿತರವರು ಪಟ್ಟ ಶ್ರಮಕ್ಕಾಗಿ ೨೪-೫-೫೧ರಲ್ಲಿ ಜರುಗಿದ ಸಭೆಯು ಇವರುಗಳಿಗೆ ಅನಂತಧನ್ಯವಾದಗಳನ್ನು ಈ ಸಂಘದ ಪರವಾಗಿ ಸಮರ್ಪಿಸುತ್ತದೆ ಮತ್ತು ಮುಂದೆ ಈ ವೃತ್ತಿ ಪ್ರತಿಯೊಬ್ಬರೂ ಸೌಹಾರ್ದ ಮನೋಭಾವದಿಂದ ವರ್ತಿಸಲೆಂದು ಹಾರೈಸುತ್ತದೆ

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ೬ ನೋಮ -೨ನೇ ವಾರ

ಮೋಪಸ್ಸಾರವರ— * ಭೀಮ್ ಸೇನ್ *

ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್, ರಾಂಸಿಂಗ್.

ರೇಷನಿಂಗ್ ಆಫೀಸರ ಕಛೇರಿ, ಮೈಸೂರು.

ಟೆಂಡರ್ ನೋಟಿಫಿಕೇಷನ್ ನಂ ಎ ಎಸ್. 3 ಪಿ ಆರ್. 6 | 51—52

1951ನೇ ಮೇ 1ನೇ ತಾರೀಖು—ಮೈಸೂರು ನಗರದಲ್ಲಿ ಆಹಾರ ಸಾಮಾನು ಸಾಗಾಣಿಕೆಗಾಗಿ

1—7—1951ರಿಂದ 31—3—1952ರ ವರೆಗೆ ಆಹಾರ ಧಾನ್ಯಗಳ ಮತ್ತು ಇತರ ಪದಾರ್ಥಗಳನ್ನು ಈ ಕೆಳಗೆ ನಮೂದಿಸಿರುವ ಸಪ್ಲೈ ಮತ್ತು ಡಿಸ್ಟ್ರಿಬ್ಯೂಷನ್ ಕೇಂದ್ರಗಳಿಗೆ ಸಾಗಿಸಲು, 1951ನೇ ಜೂನ್ ಒಂದನೇ ತಾರೀಖು 4 ಗಂಟೆಯವರೆಗೆ ಈ ಕೆಳಗೆ ರುಜು ಮಾಡಿರುವವರಿಂದ ಟೆಂಡರುಗಳು ಸ್ವೀಕರಿಸಲ್ಪಡುವುದು

1. ರೈಲ್ವೆ ಗುಡ್‌ಷೆಡ್, ಸರ್ಕಾರಿ ಸೆಂಟ್ರಲ್ ಡಿಪೋ, ರಿಸರ್ವ್ ಗೋಡೌನ್ ಮತ್ತು ಸಬ್ ಗೋಡೌನ್‌ಗಳು

2. ಸಬ್ ಗೋಡೌನ್‌ಗಳಿಂದ ಚಿಲ್ಲರೆ ವಿಕರಿ ಅಂಗಡಿಗಳಿಗೆ ಮತ್ತು ಅಲ್ಲಿಂದ ಸಬ್ ಗೋಡೌನ್‌ಗಳಿಗೆ

ನಿಗದಿಯಾದ ಫಾರಂನ್ನು ರೇಷನ್ ಕಛೇರಿಯಲ್ಲಿ ಪಡೆದು ಅದನ್ನು ಭರ್ತಿಮಾಡಿ ಮೈಸೂರು ಸಿಟಿ ರೇಷನ್ ಆಫೀಸರ ಹೆಸರಿನಲ್ಲಿ 250|- ರೂಪಾಯಿಗಳನ್ನು ಮೈಸೂರು ಬ್ಯಾಂಕ್ ಅಥವಾ ಅದರ ಶಾಖೆಗಳಲ್ಲಿ ಡಿಪಾಜಿಟ್ಟು ಮಾಡಿದ ಚಲನ್ ಮತ್ತು ತಾವು ವಾಸವಾಗಿರುವ ತಾಲ್ಲೂಕಿನ ಅಮಲ್ದಾರರಿಂದ ಪಡೆದ ಒಂದು ಸಾಲ್ವೆನ್ಸಿ ಸರ್ಟಿಫಿಕೆಟ್‌ಗಳನ್ನು ಕವರಿನಲ್ಲಿಟ್ಟು ಸೀಲ್ ಮಾಡಿ ಅದರ ಮೇಲೆ 'ಮೈಸೂರಿನಲ್ಲಿ ಆಹಾರ ಧಾನ್ಯಗಳ ಸಾಗಾಣಿಕೆಗೆ ಟೆಂಡರ್' ಎಂದು ನಮೂದಿಸಿ ರೇಷನ್ ಆಫೀಸಿಗೆ ಕೊಡಬೇಕು ಯಶಸ್ವಿಯಾಗದ ಟೆಂಡರ್‌ದಾರರ ಹಣವನ್ನು ಹಿಂದಕ್ಕೆ ಕೊಡಲಾಗುವುದು

ಯಶಸ್ವಿಯಾದ ಟೆಂಡರುದಾರನು 1000|- ರೂ. ಠೇವಣಿಯನ್ನು ಕೊಡಬೇಕು. ಸ್ಥಳೀಯ ಅಧಿಕಾರಿಯ ಸೂಚನೆ ಪ್ರಕಾರ, ತನ್ನ ಸ್ವಂತ ಖರ್ಚಿನಿಂದ ಸಾಮಾನುಗಳನ್ನು ತೂಕ ಮಾಡುವುದು, ತುಂಬುವುದು, ಹೊರಕ್ಕೆ ತೆಗೆದುಹಾಕುವುದು ಮುಂತಾದ ಕೆಲಸಗಳಿಗೆ ಸಂಬಂಧಪಟ್ಟ ವೆಚ್ಚ ಮತ್ತು ೯೦ ಸೇರಿನ ಮೂಟೆಯ ಪ್ರಮಾಣಕ್ಕೆ ತಕ್ಕಂತೆ ದರವನ್ನು ಕೊಡಬೇಕು.

ಇಷ್ಟವುಳ್ಳ ಟೆಂಡರ್‌ದಾರನು ಮೇಲೆ ನಮೂದಿಸಿರುವ ಒಂದು ಅಥವಾ ಎಲ್ಲಾ ಕೆಲಸಗಳಿಗೂ ಟೆಂಡರ್ ಕೊಡಬಹುದು.

ಟೆಂಡರುಗಳಿಗೆ ಸಂಬಂಧಪಟ್ಟ ಕಾನೂನು ರೀತ್ಯಾ ಟೆಂಡರುಗಳ ವಿಲೆಮಾಡಲಾಗುವುದು. ಕಡಮೆ ದರದ ಟೆಂಡರ್ ಒಪ್ಪಿಕೊಳ್ಳಲು, ಅಥವಾ ತಿರಸ್ಕಾರಮಾಡಿದ ಟೆಂಡರಿಗೆ ಕಾರಣ ಕೊಡಲು ಈ ಕೆಳಗೆ ರುಜು ಮಾಡಿರುವ ಅಧಿಕಾರಿಗಳು ಬದ್ಧರಾಗಿಲ್ಲ

ಮೈಸೂರು ಸಿಟಿ ರೇಷನ್ ಆಫೀಸರ ಕಛೇರಿಯ ಕೆಲಸ ಕಾಲದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು.

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ,
ರೇಷನ್ ಆಫೀಸರು, ಮೈಸೂರು.

ನಾವೇ ಸ್ವಂತವಾಗಿ ನಡೆಸುವೆವು

ಬ್ರಿಟಿಷರು ಕೆಲಸ ಮಾಡಲಿ ಮಾಡದಿರಲಿ ಎಲ್ಲಾ ಎಣ್ಣೇ ಕೇಂದ್ರಗಳನ್ನು ನಾವೇ ನಡೆಸುವೆವು. ನಡೆಸಲಾಗದ ಕೇಂದ್ರಗಳನ್ನು ಮುಚ್ಚುತ್ತೇವೆ. ಬ್ರಿಟಿಷ್ ಅಮೆರಿಕನ್ ಕೆಲಸಗಾರರು ನಮ್ಮ ಆಡಳಿತದಲ್ಲಿರುವ ಈ ಕೇಂದ್ರದಲ್ಲಿ ಕೆಲಸ ಮಾಡದೇ ಹೋದಲ್ಲಿ ಆ ರಾಷ್ಟ್ರಗಳು ತೊಂದರೆಯನ್ನನುಭವಿಸಬೇಕಾಗುವುದು. ತಮ್ಮ ಕೈವಶವಾಗದ ಕೇಂದ್ರಗಳನ್ನು ನಮ್ಮ ನ್ಯಾಯಸ್ಥಾನಗಳ ಸಹಾಯದಿಂದ ಪಡೆಯುತ್ತೇವೆ ಎಂದು ಪರ್ಷಿಯಾ ಅರ್ಥ ಸಚಿವರು ಎಣ್ಣೆ ಕಂಪೆನಿ ಕೇಂದ್ರೀಕರಣ ವಿಷಯದಲ್ಲಿ ಹೇಳಿರುವರು.

ವ್ಯವಸಾಯ ಮಾಡಬೇಕಾದ ಭೂಮಿ

ಪ್ರಪಂಚದಲ್ಲಿ 1,000,000,000 ಎಕರೆ ತೇವದಿಂದ ಕೂಡಿದ ಭೂಮಿ, 2,000,000,000 ಎಕರೆ ತಣೀ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಅದನ್ನು ಉತ್ತಮಗೊಳಿಸಿಕೊಳ್ಳಬೇಕಾಗಿದೆ ಎಂದು ಅಮೆರಿಕಾ ವ್ಯವಸಾಯಶಾಖಾ ವಕ್ತಾರರೊಬ್ಬರು ಹೇಳಿರುವರು. ಪ್ರಪಂಚದ ರಾಷ್ಟ್ರಗಳೆಲ್ಲಾ ಉತ್ತಮರೀತಿಯಲ್ಲಿ ವ್ಯವಸಾಯವನ್ನು ನಡೆಸಿದಲ್ಲಿ ಯಾವ ರಾಷ್ಟ್ರದಲ್ಲಿಯೂ ಆಹಾರ ಅಭಾವವಿರುವುದಿಲ್ಲವೆಂದು ಅವರು ಹೇಳಿರುವರು.

ಐ. ಎನ್. ಟಿ. ಯು. ಸಿ. ಸಮ್ಮೇಳನ

ಕಾರಣಾಂತರದಿಂದ ಮುಂದುವರಿಸಲಾದ ಐ ಎನ್. ಟಿ ಯು ಸಿ. ಮೈಸೂರು ಪ್ರಾಂತಿಕ ಸಮ್ಮೇಳನವು ಮೈಸೂರು ನಗರದಲ್ಲಿ ಜೂನ್ ೧೬ ಮತ್ತು ೧೭ ತಾರೀಖುಗಳಲ್ಲಿ ನಡೆಸಲು ನಿರ್ಧರಿಸಿದೆ ಐ ಎನ್ ಟಿ ಯು ಸಿ. ಯ ಕೇಂದ್ರ ಸಂಸ್ಥೆಯ ಉಪಾಧ್ಯಕ್ಷ ಜ|| ಅಬೀದಾ ಅಲಿ ಜಾಫರ್‌ಬಾಯಿಯವರು ಸಮ್ಮೇಳನದ ಆರಂಭೋತ್ಸವ ನೆರವೇರಿಸುವರು ಸಭೆ ನಡೆಯುವ ಜಾಗ ಮತ್ತು ಕಾಲವನ್ನು ಮುಂದೆ ತಿಳಿಸಲಾಗುವುದು, ಎಂದು ಸ್ವಾಗತ ಸಮಿತಿ ಕಾರ್ಯದರ್ಶಿಗಳು ತಿಳಿಸುತ್ತಾರೆ,

* ಸಿಟಿ ರೇಷನ್ ಕಾರ್ಡು ಹೋಲ್ಡರುಗಳ ಸಂಘ ತಾ|| ೨೭-೫-೫೧ನೇ ಭಾನುವಾರ ಸಂಜೆ ೬-೩೦ಕ್ಕೆ ಕಾರ್ಯಕಾರಿ ಸಮಿತಿ ಮೀಟಿಂಗು ಒನುಮಯ್ಯನವರ ಹೈಸ್ಕೂಲ್ ಹಿಂಬಾಗದಲ್ಲಿರುವ ಸಾಹುಕಾರ್ ಲೇಟ್ ದೊಡ್ಡಮಲ್ಲಣ್ಣನವರ ಗೃಹದಲ್ಲಿ ನಡೆಯುತ್ತದೆ.

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು :—ಪಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ, ಮೈಸೂರು

ರಿ. ಸಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೫—೧೯೫೧ ಸೋಮವಾರ [ಸಂಚಿಕೆ ೨೧೮

RAGHULAL & Co.
CHEMISTS
Sayyaji Rao Road
MYSORE

ಮಹಾ ಚುನಾವಣೆಗಳು ಮುಂದುವರಿಯುವುದಿಲ್ಲ

ಟಿಬೆಟ್ಟು ಚೈನಾಕ್ಕೆ ಅಧೀನ ರಾಜ್ಯವಾಯಿತು

ಸಂಸ್ಕೃತ ಭಾಷೆ ಅಭಿವೃದ್ಧಿ

ಮೈಸೂರು ಮೇ ೨೮

ಇತ್ತೀಚೆಗೆ ಸಂಸ್ಕೃತ ಭಾಷೆಗೆ ಪುರಸ್ಕಾರವು ಕಡಮೆಯಾಗುತ್ತಾ ಬಂದು ಸಂಸ್ಕೃತ ಭಾಷೆಯು ಅದೃಶ್ಯವಾಗುವ ಸ್ಥಿತಿಗೆ ಬಂದಿದೆ. ಭಾರತದ ನಾನಾ ಭಾಷೆಗಳ ಮೂಲ ಭಾಷೆಯು ಸಂಸ್ಕೃತವೆಂಬುದು ಜನರು ಮರೆತಂತೆ ಕಾಣುತ್ತದೆ. ಸಂಸ್ಕೃತ ಪಂಡಿತರಿಗೆ ತಕ್ಕ ಸನ್ಮಾನ ದೊರೆಯದಿರುವುದೇ ಇದಕ್ಕೆ ಕಾರಣ. ಸಂಸ್ಕೃತ ಭಾಷೆಯು ಪುನರುದ್ಧಾರವಾಗಬೇಕಾದರೆ ಕೇಂದ್ರ ಸಂಸ್ಕೃತ ಸಂಸ್ಥೆಯನ್ನು ಸ್ಥಾಪಿಸಬೇಕು ಎಂದು ಬೋಂಬಾಯಿ ವಿಶ್ವವಿದ್ಯಾನಿಲಯದ ಮಾಜಿ ವೈಸ್ ಛಾನ್ಸಲರ ಮಹಾಮಹೋಪಾಧ್ಯಾಯ ಡಾ|| ಕೆ ವಿ. ಕಾಣೆಯವರು ನಿನ್ನೆ ಸಹಕಾರ [illegible] ಮಾತನಾಡುತ್ತಾ ಹೇಳಿರುವರು.

ಕಾಗೋಡು ಸತ್ಯಾಗ್ರಹಕ್ಕೆ ಮೈಸೂರಿನಿಂದ

ಸಾಗರ ತಾಲ್ಲೋಕು ಕಾಗೋಡಿನಲ್ಲಿ ನಡೆಯುತ್ತಿರುವ ಸತ್ಯಾಗ್ರಹದಲ್ಲಿ ಭಾಗವಹಿಸುವುದಕ್ಕಾಗಿ ಮೈಸೂರು ಜಿಲ್ಲೆ ಸೋಷಲಿಸ್ಟ್ ಪಕ್ಷದ ಪರವಾಗಿ ಶ್ರೀ ಬಿ. ಶ್ರೀಕಂಠಪ್ಪನವರ ನಾಯಕತ್ವದಲ್ಲಿ ಸತ್ಯಾಗ್ರಹಿಗಳ ಮೊದಲನೇ ತಂಡವು ನಿನ್ನೆ ಬೆಳಗ್ಗೆ ರೈಲಿನಲ್ಲಿ ಪ್ರಯಾಣ ಮಾಡಿದರು.

ಮೈಸೂರು ಜಿಲ್ಲಾ ಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಕೆ. ಪಿ. ಶಾಂತಮೂರ್ತಿ, ಟಿ. ವಿ. ಶ್ರೀನಿವಾಸರಾವ್, ಹೊಳೆನರಸೀಪುರದ ಕ್ರಾಂತಿಕಾರಿಗಳು ರವರು ಹಾಸನದ ಜಿ. ಎಲ್. ಸುರೇಂದ್ರನಾಥ್ ಮುಂತಾದವರು ಈ ತಂಡದಲ್ಲಿ ತೆರಳಿದರು.

ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ

ಪರ್ಷಿಯಾ ಸರ್ಕಾರವು ಎಣ್ಣೆಯ ವಿವಾದವನ್ನು ಸರಿಯಾಗಿ ಪರಿಹರಿಸಲು ಪಂಚಾಯಿತಿ ವಿಧಾನಕ್ಕೆ ಒಪ್ಪದಿದ್ದರೆ ಅಂತರರಾಷ್ಟ್ರೀಯ ನ್ಯಾಯಾಲಯದ ಸಹಾಯವನ್ನು ನಾವು ಅಪೇಕ್ಷಿಸುತ್ತೇವೆಂದು ಬ್ರಿಟನ್ ಹೇಳಿರುವುದಾಗಿ ವರದಿಯಾಗಿದೆ

ಎಸ್. ಎಸ್. ಎಲ್. ಸಿ. ಪರೀಕ್ಷೆ ಫಲಿತಾಂಶಗಳು

ಬೆಂಗಳೂರು ಮೇ ೨೭

ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ., ಆನರ್ಸ್, ಟೆಕ್ಸ್‌ಟೈಲ್ಸ್ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶಗಳು ಮೇ ೩೯ ರಂದು ಪ್ರಾತಃಕಾಲ ೯ ಗಂಟೆಗೆ ಹೊರಬೀಳುವುದು.

ಶಿಕ್ಷಣ ಶುಲ್ಕ ಹೆಚ್ಚಿಸಲು ಸೆನೆಟ್ ಒಪ್ಪಿಗೆ ಕೊಡಲಿಲ್ಲ

ಬೆಂಗಳೂರು ಮೇ ೨೭

ನಿನ್ನೆ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನ ವಿಶೇಷ ಸಭೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸಬೇಕೆಂಬ ಸೂಚನೆ ಬಗ್ಗೆ ದೀರ್ಘ [illegible] ನಡದು ನಿರ್ಣಯದ ವಿರುದ್ಧವಾಗಿ ಮತಕೊಡಲಾಯಿತು ನಿರ್ಣಯದ ಪರವಾಗಿ ಹತ್ತುಮಂದಿ ಸದಸ್ಯರೂ ವಿರೋಧವಾಗಿ ಹದಿನೈದು ಮಂದಿ ಮತವಿತ್ತರು. ವೈಸ್ ಛಾನ್ಸಲರ್ ಡಾ|| ಜಿ. ಎಲ್. ಮಂಜುನಾಥ್‌ರವರು ಅಧ್ಯಕ್ಷತೆವಹಿಸಿದ್ದರು.

ಬಹಿರಂಗ ವಿಚಾರಣೆ

ಬೆಂಗಳೂರು ಮೇ ೨೭

ಕಬ್ಬನ್‌ಪಾರ್ಕ್ ವಸ್ತುಪ್ರದರ್ಶನ ವಿಚಾರಣಾ ಸಮಿತಿ ಕಾರ್ಯಕಲಾಪಗಳು ಬಹಿರಂಗವಾಗಿರುವುದು ಸಾರ್ವಜನಿಕರಿಗೂ ಪತ್ರಿಕಾಪ್ರತಿನಿಧಿಗಳಿಗೂ ಅವಕಾಶವಿದೆ

ಕಲ್ಲುಸಕ್ಕರೆ ಬೆಲೆಯ ಹತೋಟಿ

ಕಲ್ಲುಸಕ್ಕರೆಯ ಒಟ್ಟು ಮತ್ತು ಚಿಲ್ಲರೆಯ ವ್ಯಾಪಾರದ ಬೆಲೆಯ ಮೇಲೆ ಇದ್ದ ಹತೋಟಿಯನ್ನು ರದ್ದುಗೊಳಿಸಲಾಗಿದೆಯೆಂದು ಭಾರತ ಸರ್ಕಾರದ ಆಹಾರದ ಶಾಖೆ ಪ್ರಕಟಿಸಿದೆ.

ಸಾಲದ ಹೊರೆ

ಕೇಂದ್ರ ಮತ್ತು ಸಂಸ್ಥಾನಗಳ ಸರ್ಕಾರಗಳ ಸಾರ್ವಜನಿಕ ಸಾಲವನ್ನು ಲೆಕ್ಕಹಾಕಿ ನೋಡಿದಲ್ಲಿ ಹೆಚ್ಚು ಕಡಿಮೆ ಪ್ರತಿಯೊಬ್ಬ ಭಾರತೀಯನಿಗೂ ೬೬ ರೂ. ಸಾಲದ ಹೊರೆಯು ಇದೆ, ಎಂದು ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು

ಅಂಗಡಿಗಳ ಲೂಟಿ ಮಿಲಿಟರಿಯವರಿಂದ ಗೋಲಿಬಾರು

ನೇಪಾಳದ ಬೀರ್‌ಗಂಜ್‌ನಲ್ಲಿ ಕೆಲಸಗಾರರು ರೈತರು ಎಲ್ಲರೂ ಸೇರಿ ಒಂದು ಪ್ರದರ್ಶನವನ್ನು ಮಾಡಿ ಗಲಾಟೆಯಾಯಿತು. ಇದರ ಪರಿಣಾಮವಾಗಿ ೬೦ ಮಂದಿಗೆ ಗಾಯಗಳಾದುವು. ಗಲಾಟೆ ನಡೆಸಿ ಕೆಲವು ಅಂಗಡಿಗಳನ್ನು ಜನರು ಲೂಟಿಮಾಡಿದರು. ಮಿಲಿಟರಿಯವರು ಬಂದು ಗುಂಡುಹಾರಿಸಿ ಪರಿಸ್ಥಿತಿಯನ್ನು ಸುಧಾರಿಸಬೇಕಾಯಿತು. ಗುಂಡುಹಾರಿಸಿದುದರ ಪರಿಣಾಮವಾಗಿ ೩ ಜನ ಮಡಿದರು. ೧೩ ಜನ ಗಾಯಗೊಂಡಿರುವರೆಂದು ವರದಿಯಾಗಿದೆ.

ರಕ್ಷಾ ಸಹಾಯವಿಲ್ಲ

ಇಂದಿನ ಎಣ್ಣೆ ರಾಷ್ಟ್ರೀಕರಣಕ್ಕೆ ರಕ್ಷಾ ಸಹಾಯವನ್ನು ನಾವು ಪಡೆಯುವುದಿಲ್ಲವೆಂದು ಪರ್ಷಿಯಾ ಸರ್ಕಾರ ಹೇಳಿರುವುದು.

ಕಾಶ್ಮೀರ ಅಭಿವೃದ್ಧಿ ಕಾರ್ಯಕ್ಕೆ

ಕಾಶ್ಮೀರದಲ್ಲಿ ಅಭಿವೃದ್ಧಿಕಾರ್ಯಗಳ ವಿಷಯದಲ್ಲಿ ಭಾರತ ರಾಷ್ಟ್ರೀಯ ಆಯೋಜನಾ ಮಂಡಲಿಯವರು ಕಾಶ್ಮೀರ ಪ್ರಧಾನಿ ಮತ್ತಿತರ ಅಧಿಕಾರಿಗಳೊಡನೆ ಚರ್ಚೆ ನಡೆಸಲಿರುವರು.

ಮಹಾಚುನಾವಣೆಯು ಮುಂದುವರಿಯುವುದಿಲ್ಲ

ಈ ವರ್ಷ ನವಂಬರ್-ಡಿಸೆಂಬರ್ ತಿಂಗಳಲ್ಲಿ ನಡೆಯುವ ಮಹಾಚುನಾವಣೆಯು ತಾ|| ಒದಗಾವಣೆಯಾಗುವ ಸಂಭವವಿಲ್ಲ, ಎಂದು ಭಾರತ ಸರ್ಕಾರದ ನ್ಯಾಯಾಂಗ ಸಚಿವರಾದ ಡಾ|| ಬಿ. ಆರ್. ಅಂಬೇಡ್ಕರ್‌ರವರು ತಿಳಿಸಿರುವರು.

ಪ್ರಪಂಚದ ಜನಸಂಖ್ಯೆ

ಪ್ರಪಂಚದ ಜನಸಂಖ್ಯೆಯು ೨೪೦ಕೋಟಿ. ೧೨೫ಕೋಟಿ ಜನರು ಏಷ್ಯಾ ಖಂಡದಲ್ಲಿಯೇ ಇರುವರು.

ಈ ವಾರಾಂತ್ಯದಲ್ಲಿ ೮೨,೭೦೦ ಟನ್ ಧಾನ್ಯವನ್ನು ಕೇಂದ್ರ ಸರ್ಕಾರವು ಇತರ ಪಾಂತಗಳಿಗೆ ಹಂಚಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸಭೆಯು ಮುಂದಿನ ತಿಂಗಳು ಹನ್ನೆರಡನೇ ತಾರೀಖು ಡೆಲ್ಲಿಯಲ್ಲಿ ನಡೆಯುತ್ತದೆ.

ಕಾಂಗ್ರೆಸ್ಸಿನ ೩೯ ಸದಸ್ಯರು ವಿಶೇಷ ಎ. ಐ. ಸಿ. ಸಿ ಸಭೆಯನ್ನು ಕರೆಯಬೇಕೆಂದು ತಿಳಿಸಿರುವುದನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪರಿಶೀಲಿಸಲಾಗುವುದು.

ಬಿಹಾರಿನ ಕ್ಷಾಮನಿವಾರಣೆಗೆ ಸರ್ಕಾರದ ಪ್ರಯತ್ನ

ಬಿಹಾರ್ ಸರ್ಕಾರವು ಅಲ್ಲಿನ ಕ್ಷಾಮವನ್ನು ತಡೆಗಟ್ಟಲು ಒಟ್ಟು ೮೦೦೦ ಪರಿಹಾರದ ಅಂಗಡಿಗಳನ್ನು ತೆರೆದಿದೆ. ಇದರಲ್ಲಿ ೪೦೦೦ ಅಂಗಡಿಗಳು ಹಳ್ಳಿಗಾಡಿನಲ್ಲಿ ಇವೆ. ಸರ್ಕಾರವು ಈ ಪರಿಹಾರದ ಅಂಗಡಿಗಳಿಗೆ ಸಾಮಾನುಗಳನ್ನು ಸಾಗಿಸಿಕೊಡುವ ವೆಚ್ಚವನ್ನು ವಹಿಸಿಕೊಂಡಿದೆ,

ಕ್ಷಾಮ ಪೀಡಿತ ಪ್ರದೇಶಗಳ ಪರಿಹಾರ ಕಾರ್ಯಕ್ಕಾಗಿ ೧೨೦ ಜನ ಮ್ಯಾಜಿಸ್ಟ್ರೇಟರುಗಳನ್ನು ನೇಮಿಸಲಾಗಿದೆ.

ಸರ್ಕಾರವು ಇದಲ್ಲದೆ ಸಾವಿರಾರು ಜನ ನಿರ್ಗತಿಕರಿಗೆ ಉಚಿತವಾಗಿ ಆಹಾರವನ್ನು ಹಂಚುತ್ತಿದೆ. ಇದಲ್ಲದೆ [illegible] ಗೃಹಕೈಗಾರಿಕೆಗಳನ್ನು ಸಹ ಆರಂಭಿಸಿದೆ

ಚೈನಾ ಟಿಬೆಟ್ಟು ಒಪ್ಪಂದ

ಚೈನಾಕ್ಕೂ ಟಿಬೆಟ್ಟಿಗೂ ನಿನ್ನೆ ಒಪ್ಪಂದವಾಗಿದೆ ಇದರ ಪ್ರಕಾರ ಟಿಬೆಟ್ಟು ಚೈನಾದ ಅಧೀನ ರಾಜ್ಯವಾಗಿ ಒಂದು ಪ್ರಾಂತ್ಯದಂತೆ ಪರಿಗಣಿಸಲಾಗುವುದು ಒಳಾಡಳಿತದಲ್ಲಿ ಚೈನಾ ಪ್ರವೇಶಿಸುವುದಿಲ್ಲ ಟಿಬೆಟ್ ಸೈನ್ಯವೆಲ್ಲವೂ ಚೈನಾದ ಒಂದು ಭಾಗವಾಗುವುದೆಂದು ಇದರಿಂದ ಚೈನಾ ಟಿಬೆಟ್ಟುಗಳಿಗಿದ್ದ ಬಿಕ್ಕಟ್ಟು ಪರಿಹಾರವಾಯಿತೆಂದು ಹೇಳಲಾಗಿದೆ.

+ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ನಿನ್ನೆ ಬೆಳಗ್ಗೆ ಭಾರತದ ನೌಕಾದಳಕ್ಕೆ ರಾಷ್ಟ್ರಾಧ್ಯಕ್ಷರ ಧ್ವಜವನ್ನು ಇತ್ತರು

ಕೂಚ್ ಬಿಹಾರ ರಾಜಕುಮಾರಿ

ಕಳೆದ ಮಾಸದಲ್ಲಿ ಡಾರ್ಜಿಲಿಂಗ್‌ನಲ್ಲಿ ಅರಮನೆಗೆ ಬೆಂಕಿತಗುಲಿದಾಗ ಜೀವಸಹಿತ ಸುಟ್ಟುಹೋದ ಕೂಚ್ ಬಿಹಾರ ರಾಜಕುಮಾರ ಇಂದ್ರಜಿತ್ ಜಿತೇಂದ್ರ ನಾರಾಯಣರವರು ಪತ್ನಿಯೆಂದು ಹೇಳಿಕೊಳ್ಳುವ ಒಲ್ಲಿಎರಿಕ್ ಬರ್ಡ್ ಎಂಬಾಕೆಯು ಕಲ್ಕತ್ತಾಕ್ಕೆ ಆಗಮಿಸಿ ಗಂಡನ ಆಸ್ತಿಪಾಸ್ತಿಗಳನ್ನು ಪಡೆಯಲು ಕಾರ್ಯಕ್ರಮವೆಸಗುವುದರಲ್ಲಿರುವಳೆಂದು ಹೇಳಲಾಗಿದೆ. ಪಶ್ಚಿಮ ಬಂಗಾಳದ ಪೋಲೀಸು ಮುಖ್ಯಾಧಿಕಾರಿಗಳು ಅವಳ ಗಂಡನ ಮರಣದ ವಿಷಯವಾಗಿ ತನಿಖೆ ನಡೆಸುವುದಾಗಿ ಭರವಸೆಯಿತ್ತಿರುವರೆಂದು ತಿಳಿಯಬರುತ್ತದೆ.

ಡಿಸೆಂಬರಿನಲ್ಲಿ ಚುನಾವಣೆ

ಮಹಾ ಚುನಾವಣೆಗಳು ಡಿಸೆಂಬರಿನಲ್ಲಿ ನಡೆಸಲು ಮದ್ರಾಸ್ ಸರ್ಕಾರ ಸಿದ್ಧತೆಗಳನ್ನು ಮಾಡುತ್ತಲಿದೆ.

ಪುನಃ ೬೨೫೦ರೂ ಪತ್ತೆ ನಾಲ್ವರ ದಸ್ತಗಿರಿ

ಲಾಯಿಡ್ಸ್ ಬ್ಯಾಂಕ್ ದರೋಡೆ ಸಂಬಂಧದಲ್ಲಿ ಮತ್ತೆ ೬೨೫೦ ರೂಪಾಯಿಗಳನ್ನು ನಾಲ್ವರ ಹತ್ತಿರ ದೆಹಲಿಯಲ್ಲಿ ದೊರೆತಿದೆ ಹಣವನ್ನು ಬೊಂಬಾಯಿ ಪೋಲೀಸಿನವರು ವಶಪಡಿಸಿ ಕೊಂಡು ಅವರನ್ನು ದಸ್ತಗಿರಿ ಮಾಡಿರುವರು. ಇನ್ನೂ ಕೈವಶವಾಗದ ಉಳಿಕೆ ಹಣವೆಲ್ಲಾ ಇನ್ನೂ ತಲೆಮರಿಸಿ ಕೊಂಡಿರುವವನೊಬ್ಬನ ಬಳಿ ಸೇರಿದೆಯೆಂದು ಗೊತ್ತಾಗಿದೆ

ರಾಜೀನಾಮೆಯೆ ?

ಪ್ರಾಂತಿಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ರಾಮಚಂದ್ರರಾಯರು ಮತ್ತು ಕಾರ್ಯಕಾರಿ ಸದಸ್ಯ ಶ್ರೀ ಟಿ. ಸುಬ್ರಮಣ್ಯಂರವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವರೆಂದು ಬಲವಾದ ಸುದ್ದಿ ಹಬ್ಬಿದೆ

ಕುಡಿಯಲಾಸ್ಪದ ದೊರೆತಿದ್ದಕ್ಕೆ ಆನಂದ

ಬೊಂಬಾಯಿ ಶ್ರೇಷ್ಠ ನ್ಯಾಯಾಸ್ಥಾನವು ಹಿಂದೆ ಪಾನ ನಿರೋಧ ವಿಷಯದಲ್ಲಿ ತೀರ್ಪಿದ್ದರ ಪರಿಣಾಮವಾಗಿ ಯುದ್ಧನೌಕೆಗಳಲ್ಲಿ ಮತ್ತು ಮಿಲಿಟರಿ ಕ್ಯಾಂಟೀನುಗಳನ್ನು ಪಾನ ನಿರೋಧವು ಅನ್ವಯಿಸಲಾಗಿತ್ತು. ಈಗ ಭಾರತ ಶ್ರೇಷ್ಠ ನ್ಯಾಯಾಲಯವು ಈ ತೀರ್ಪನ್ನು ನ್ಯಾಯ ವಿರುದ್ಧವೆಂದು ತೀರ್ಮಾನಿಸಿರುವುದರಿಂದ ರಕ್ಷಣಾ ಬಲದ ವೃತ್ತಗಳಲ್ಲಿ ಎಲ್ಲರಿಗೂ ಅತಿಶಯ ಸಂತೋಷವನ್ನುಂಟುಮಾಡಿದೆ. ಹವಾಮಾನ ಮತ್ತು ಧಣಿವಾರಿಸಿಕೊಳ್ಳಲು ಈ ಪಾನೀಯ [illegible] ಶ್ಯಕ ಇದನ್ನು ಸೈನ್ಯಕ್ಕೆ ಅನೇಕ ವೇಳೆ ಕಡ್ಡಾಯವಾಗಿ ಕೊಡುತ್ತಲಿದ್ದರು ಇದು ಈಚೆಗೆ ನಿಂತು ಹೋಗಿತ್ತು. ಈಗ ಪುನಃ ಪ್ರಾರಂಭವಾಗುವುದು

ಏರ್ ಲೆಟರ್

ಜೂನ್ ಒಂದನೇ ತಾರೀಖಿನಿಂದ ಭಾರತದಿಂದ ಪಾಕೀಸ್ತಾನ್ ಮತ್ತು ಸಿಂಹಳಕ್ಕೆ ೩ ಆಣೆ ಏರ್ ಲೆಟರ್ ಅಂಚೆ ವ್ಯವಸ್ಥೆ ಪ್ರಾರಂಭವಾಗುವುದು.

ರೈಲ್ವೆ ಮುಷ್ಕರ ತೀರ್ಮಾನ

ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘವು ಜೂನ್ ೨ನೇ ತಾರೀಖು ಸೇರಿ ರೈಲ್ವೆ ಮುಷ್ಕರದ ವಿಷಯ ತೀರ್ಮಾನ ಮಾಡಲಿರುವರು

ದೋರ್ನಹಳ್ಳಿ ಜಾತ್ರೆ ಇಲ್ಲ

ಮಂಡ್ಯ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಇನ್ನೂ ಕಾಲರ ಸೋಂಕಿರುವುದರಿಂದ ಜೂನ್ ೨ನೇ ವಾರದಲ್ಲಿ ದೋರ್ನಹಳ್ಳಿಯಲ್ಲಿ ನಡೆಯುವ ಜಾತ್ರೆಗೆ ಜನ ಸೇರಬಾರದೆಂದು ಸೂಚಿಸಲಾಗಿದೆ. ಈ ಜಾತ್ರೆಯು ಈ ವರ್ಷ ನಡೆಯುವಂತೆ ಆಜ್ಞೆ ಮಾಡಬೇಕೆಂದು ಜಿಲ್ಲಾ ಆರೋಗ್ಯ ಅಧಿಕಾರಿಗಳು ಮೈಸೂರು ಜಿಲ್ಲಾ ನ್ಯಾಯಾಧೀಶರಿಗೆ ಶಿಫಾರಸು ಮಾಡಿದ್ದಾರೆ. ಆದ್ದರಿಂದ ಈ ವರ್ಷದ ಜಾತ್ರೆಗಾಗಿ ಜನರು ಸೇರಬಾರದೆಂದು ಪ್ರಾರ್ಥಿಸಲಾಗಿದೆ.

* ಪ್ರಭಾ *
೨೫-೫-೫೧ರಿಂದ ೨ನೇ ವಾರ
ಪ್ರತಿದಿನ ಮೂರು ಆಟಗಳು
ಲಾ ಜವಾಬ್
(ಹಿಂದಿ)
ಪಾತ್ರ—ರೆಹಮಾನ್, ಕುಲದೀಪ್,
ನೂತನ್, ದೇವಿದ್

ಸಂಪಾದಕರು :—ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು
ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ, ಮೈಸೂರು

ರೇಷನಿಂಗ್ ಆಫೀಸರ ಕಛೇರಿ, ಮೈಸೂರು.

ಟೆಂಡರ್ ನೋಟಿಫಿಕೇಷನ್ ಸಂ. ಎ. ಎಸ್. 3 ಪಿ ಆರ್. 6 | 51—52
1951ನೇ ಮೇ 1ನೇ ತಾರೀಖು—ಮೈಸೂರು ನಗರದಲ್ಲಿ
ಆಹಾರ ಸಾಮಾನು ಸಾಗಾಣಿಕಗಾಗಿ

1—7—1951ರಿಂದ 31—3—1952ರ ವರೆಗೆ ಆಹಾರ ಧಾನ್ಯಗಳ ಮತ್ತು [illegible] ಪದಾರ್ಥಗಳನ್ನು ಈ ಕೆಳಗೆ ನಮೂದಿಸಿರುವ ಸಪ್ಲೈ ಮತ್ತು ಡಿಸ್ಟ್ರಿಬ್ಯೂಷನ್ ಕೇಂದ್ರಗಳಿಗೆ ಸಾಗಿಸಲು, 1951ನೇ ಜೂನ್ ಒಂದನೇ ತಾರೀಖು 4 ಗಂಟೆಯ ವರೆಗೆ ಈ ಕೆಳಗೆ ರುಜು ಮಾಡಿರುವವರಿಂದ ಟೆಂಡರುಗಳು ಸ್ವೀಕರಿಸಲ್ಪಡುವುದು

1. ರೈಲ್ವೆ ಗುಡ್‌ಷೆಡ್, ಸರ್ಕಾರಿ ಸೆಂಟ್ರಲ್ ಡಿಪೋ, ರಿಸರ್ವ್ ಗೋಡೌನ್ ಮತ್ತು ಸಬ್‌ಗೋಡೌನ್‌ಗಳು.

2. ಸಬ್‌ಗೋಡೌನ್‌ಗಳಿಂದ ಚಿಲ್ಲರೆ ಬಿಕರಿ ಅಂಗಡಿಗಳಿಗೆ ಮತ್ತು ಅಲ್ಲಿಂದ ಸಬ್‌ಗೋಡೌನ್‌ಗಳಿಗೆ

ನಿಗದಿಯಾದ ಫಾರಂನ್ನು ರೇಷನ್ ಕಛೇರಿಯಲ್ಲಿ ಪಡೆದು ಅದನ್ನು ಭರ್ತಿಮಾಡಿ ಮೈಸೂರು ಸಿಟಿ ರೇಷನ್ ಆಫೀಸರ ಹೆಸರಿನಲ್ಲಿ 250|- ರೂಪಾಯಿಗಳನ್ನು ಮೈಸೂರು ಬ್ಯಾಂಕ್ ಅಥವಾ ಅದರ ಶಾಖೆಗಳಲ್ಲಿ ಡಿಪಾಜಿಟ್ಟು ಮಾಡಿದ ಚಲನ್ ಮತ್ತು ತಾವು ವಾಸ ಮಾಡುವ ತಾಲ್ಲೂಕಿನ ಅಮಲ್ದಾರರಿಂದ ಪಡೆದ ಒಂದು ಸಾಲ್ವೆನ್ಸಿ ಸರ್ಟಿಫಿಕೇಟ್‌ಗಳನ್ನು ಕವರಿನಲ್ಲಿಟ್ಟು ಸೀಲ್‌ಮಾಡಿ ಅದರ ಮೇಲೆ 'ಮೈಸೂರಿನಲ್ಲಿ ಆಹಾರ ಧಾನ್ಯಗಳ ಸಾಗಾಣಿಕೆಗೆ ಟೆಂಡರ್' ಎಂದು ನಮೂದಿಸಿ ರೇಷನ್ ಆಫೀಸಿಗೆ ಕೊಡಬೇಕು. ಯಶಸ್ವಿಯಾಗದ ಟೆಂಡರ್‌ದಾರರ ಹಣವನ್ನು ಹಿಂದಕ್ಕೆ ಕೊಡಲಾಗುವುದು.

ಯಶಸ್ವಿಯಾದ ಟೆಂಡರುದಾರರು 1000|- ರೂ. ಠೇವಣಿಯನ್ನು ಕೊಡಬೇಕು. ಸ್ಥಳೀಯ ಅಧಿಕಾರಿಯ ಸೂಚನೆ ಪ್ರಕಾರ, ತನ್ನ ಸ್ವಂತ ಖರ್ಚಿನಿಂದ ಸಾಮಾನುಗಳನ್ನು ತೂಕ ಮಾಡುವುದು, ತುಂಬುವುದು, ಹೊರಕ್ಕೆ ತೆಗೆದುಹಾಕುವುದು ಮುಂತಾದ ಕೆಲಸಗಳಿಗೆ ಸಂಬಂಧಪಟ್ಟ ವೆಚ್ಚ ಮತ್ತು ೯೦ ಸೇರಿನ ಮೂಟೆಯ ಪ್ರಮಾಣಕ್ಕೆ ತಕ್ಕಂತೆ ದರವನ್ನು ಕೊಡಬೇಕು.

ಇಷ್ಟವುಳ್ಳ ಟೆಂಡರ್‌ದಾರರು ಮೇಲೆ ನಮೂದಿಸಿರುವ ಒಂದು ಅಥವಾ ಎಲ್ಲಾ ಕೆಲಸಗಳಿಗೂ ಟೆಂಡರ್ ಕೊಡಬಹುದು.

ಟೆಂಡರುಗಳಿಗೆ ಸಂಬಂಧಪಟ್ಟ ಕಾನೂನು ರೀತ್ಯಾ ಟೆಂಡರುಗಳ ವಿಲೆಮಾಡಲಾಗುವುದು. ಕಡಮೆ ದರದ ಟೆಂಡರ್ ಒಪ್ಪಿಕೊಳ್ಳಲು, ಅಥವಾ ತಿರಸ್ಕಾರ ಮಾಡಿದ ಟೆಂಡರಿಗೆ ಕಾರಣ ಕೊಡಲು ಈ ಕೆಳಗೆ ರುಜು ಮಾಡಿರುವ ಅಧಿಕಾರಿಗಳು ಒಡ್ಡರಾಗಿಲ್ಲ.

ಮೈಸೂರು ಸಿಟಿ ರೇಷನ್ ಆಫೀಸರ ಕಛೇರಿಯ ಕೆಲಸ ಕಾಲದಲ್ಲಿ ಇತರ ವಿಷಯಗಳನ್ನು ತಿಳಿದುಕೊಳ್ಳಬಹುದು.

(ಸಹಿ) **ಹೆಚ್. ಜಿ. ವಿಜಯರಾಘವರೆಡ್ಡಿ,**
ರೇಷನ್ ಆಫೀಸರ್, ಮೈಸೂರು.

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ಅಮೋಘ ೨ನೇ ವಾರ
ಮೋಹನ್ಸ್‌ರವರ— * ಭೀಮ್ ಸೇನ್ *
ಪಾತ್ರ-ನಿರೂಪರಾಯ್, ವಸಂತರಾವ್ ಪೈಲವಾನ್, ತ್ರಿಲೋಕ್ ಕಪೂರ್, ದಾರಾಸಿಂಗ್.

ಕಸೂತಿ ಕೆಲಸದ ಪ್ರದರ್ಶನ



ಸೆಂಟ್‌ಜೋಸೆಫ್ಸ್ ಅನಾಥಸಭೆಯಲ್ಲಿ ರಾಜಮಾತೆಯವರ ಕಸೂತಿ ಶಾಲೆಯವರು ಏರ್ಪಡಿಸಿದ್ದ ಪ್ರದರ್ಶನದ ಆರಂಭೋತ್ಸವವನ್ನು ಮಹಾರಾಣಿಯವರು ನೆರವೇರಿಸಿದರು. ಅವರು ಮಾಡಿದ ಕಸೂತಿ ಕೆಲಸದ ಸಾಮಾನುಗಳನ್ನು ಈ ಚಿತ್ರದಲ್ಲಿ ಕಾಣಬಹುದು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೯—೫—೧೯೫೧ ಮಂಗಳವಾರ [ಸಂಚಿಕೆ ೨೧೯

ರಾಜಾಧೀಶರು ಚುನಾವಣೆಗೆ

ಕ್ರಿಮಿನಲ್ ಮತ್ತು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ತಮಗೆ ಇತ್ತಿರುವ ವಿನಾಯತಿಗಳನ್ನು ತೊರೆದು ರಾಜಾಧೀಶರು ಚುನಾವಣೆಗೆ ನಿಲ್ಲಬಹುದೆಂಬ ಮಸೂದೆಯು ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಯಿತು.

ಪರ್ಷಿಯಾದ ನಿಶ್ಚಯ

ತನ್ನ ಎಣ್ಣೆಯ ವಿವಾದದ ತೀರ್ಮಾನವನ್ನು ಯಾವ ಅಂತರ ರಾಷ್ಟ್ರೀಯ ಮಿತಿಗೂ ವಹಿಸುವುದಿಲ್ಲ ಮತ್ತು ಆ ಸಮಿತಿಯ ತೀರ್ಮಾನಕ್ಕೆ ತಾವು ಕಟ್ಟುಬೀಳುವುದಿಲ್ಲವೆಂದು ಪರ್ಷಿಯಾ ಸರ್ಕಾರ ನಿರುವುದಾಗಿ ವರದಿಯಾಗಿದೆ

ಅಂತರರಾಷ್ಟ್ರೀಯ ನ್ಯಾಯಾಲಯ ತೀರ್ಪುಕೊಡಲಧಿಕಾರವಿ

ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ

ಬೆಂಗಳೂರು ಮೇ ೨೮

ನಿನ್ನೆ ಬೆಳಿಗ್ಗೆ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದಲ್ಲಿ ನಡೆದ ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಸ್ಥಾಯೀ ಸಮಿತಿ ಭಾರತದ ರಾಜ್ಯಾಂಗದ 19 (2)ನೇ ವಿಧಿಗೆ ಸೂಚಿಸಲಾಗಿರುವ ತಿದ್ದುಪಡಿ ವಾಕ್ ಹಾಗೂ ವಿಚಾರ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದರಿಂದ ತಿದ್ದುಪಡಿಯನ್ನು ಕೈ ಬಿಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಮಾಡಿ ನಿರ್ಣಯ ಮಾಡಿತು.

ಸಮ್ಮೇಳನದ ಅಧ್ಯಕ್ಷ ಶ್ರೀ ಕೆ. ಜೀವಣ್ಣರಾಯರು ಅಧ್ಯಕ್ಷತೆವಹಿಸಿದ್ದರು.

ಕಾರ್ಯಕಾರೀ ಸಮಿತಿ ಚರ್ಚೆ

ಬೆಂಗಳೂರು ಮೇ ೨೮

ಮಂತ್ರಿಮಂಡಲದ ವಿಸ್ತರಣೆಯ ಪ್ರಶ್ನೆಯನ್ನು ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಚರ್ಚಿಸಿತೆಂದು ತಿಳಿದುಬಂದಿದೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯ ಮತ್ತು ಉಪಾಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರ ಗೈರು ಹಾಜರಿಯಲ್ಲಿ ಶ್ರೀ ಎಸ್ ಚನ್ನಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಮಿತಿ ನೇಮಕ

ಬೆಂಗಳೂರು ಮೇ ೨೮

ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಕಾಗೋಡು ಪರಿಸ್ಥಿತಿಯನ್ನು ಚರ್ಚಿಸಿತು. ರೈತರು ಹಾಗೂ ಜಮೀನುದಾರರಲ್ಲಿ ಒಂದು ಒಪ್ಪಂದವನ್ನುಂಟು ಮಾಡುವುದರಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳಲು ಶ್ರೀಗಳಾದ ಎಸ್. ಚನ್ನಯ್ಯ, ಟಿ. ಸುಬ್ರಹ್ಮಣ್ಯಂ, ಹೆಚ್. ಕೆ. ವೀರಣ್ಣಗೌಡ, ವೈ. ಎಂ. ಚಂದ್ರಶೇಖರಯ್ಯ ಮತ್ತು ಎಸ್. ನಾರಾಯಣರಾವ್‌ರವರನ್ನೊಳಗೊಂಡ ಸಮಿತಿಯೊಂದನ್ನು ನೇಮಕ ಮಾಡಲಾಯಿತು

ಶ್ರೀ ಹೆಚ್. ಕೆ. ವೀರಣ್ಣಗೌಡರು ಸಮಿತಿಯ ಸಂಚಾಲಕರು.

ಆಹಾರ, ಬಟ್ಟೆ ಕೊರತೆಗೆ ಕಾರಣ

ದೇಶದಲ್ಲಿ ಉಂಟಾಗಿರುವ ಆಹಾರ ಬಟ್ಟೆ ಕೊರತೆಗೆ ಸರ್ಕಾರವೇನು ಕಾರಣವಲ್ಲ ಕಳೆದ ಮಹಾ ಯುದ್ಧವೇ ಕಾರಣವೆಂಬುದನ್ನು ಜನರು ಮರತಿರುವಂತೆ ಕಾಣುತ್ತಿದೆ. ಭಾರತವು ಪ್ರತಿ ವರ್ಷವೂ ಬರ್ಮಾದಿಂದ ೧೫ ಲಕ್ಷ ಟನ್ ಆಹಾರವನ್ನು ಪಡೆಯುತ್ತಲಿತ್ತು. ವಿದೇಶಗಳಲ್ಲಿಯೂ ಯುದ್ಧ ಪರಿಣಾಮದಿಂದುಂಟಾಗಿರುವ ತೊಂದರೆಗಳಿಂದ ನಾವು ನಮಗೆ ಬೇಕಾದ ಪದಾರ್ಥಗಳನ್ನು ತರಿಸಿಕೊಳ್ಳಲಾಗದೆ ಕೊರತೆಯುಂಟಾಗಿದೆ ಎಂದು ಕೈಗಾರಿಕಾ ಸಚಿವ ಶ್ರೀ ಮೆಹತಾಬ್‌ರವರು ಹೇಳಿರುವರ.

ಯುದ್ಧ ನಿಲ್ಲಿಸಲು ಸಲಹೆಯೆ ?

ವಿಶ್ವಸಂಸ್ಥೆಯ ಅಂಗವಾಗಿ ಕೆಲಸಮಾಡುತ್ತಲಿರುವ ಗುಡ್ ಆಫೀಸಸ್ ಕಮಿಟಿ ಅಥವಾ ವಿಶ್ವಸಂಸ್ಥೆಯ ೧೧ ಸದಸ್ಯ ರಾಷ್ಟ್ರಗಳು ಯುದ್ಧವನ್ನು ಕೂಡಲೇ ನಿಲ್ಲಿಸಬೇಕೆಂದು ಸಲಹೆಯನ್ನು ಚೈನಾ ಮತ್ತು ಕೊರಿಯಾ ರಾಷ್ಟ್ರಗಳಿಗೆ ನೀಡುವುವೆಂದು ಹೇಳಲಾಗಿದೆ.

ಭಾರತಕ್ಕೆ ಹಿಂತಿರುಗುವರು

ಭಾರತಕ್ಕೆ ತಾವು ಹಿಂತಿರುಗಬೇಕೆಂದು ಇಂಡೋನೇಷಿಯಾದಲ್ಲಿ ಭಾರತದ ರಾಯಭಾರಿಯಾದ ಶ್ರೀ ಸುಬ್ಬರಾಯನ್‌ರವರ ಕೋರಿಕೆಯನ್ನು ಭಾರತ ಸರ್ಕಾರವು ಮನ್ನಿಸಿದೆ.

ಚೈನಾ ಪಡೆ ಕೈವಶ

೧೫೦ ಜನರನ್ನೊಳಗೊಂಡ ಒಂದು ಚೈನಾ ಪಡೆಯು ಶಸ್ತ್ರಾಸ್ತ್ರಗಳೊಡನೆ ವಿಶ್ವಸೈನ್ಯಕ್ಕೆ ಶರಣಾಗತವಾಯಿತೆಂದು ತಿಳಿಯಬರುತ್ತದೆ.

ಪತ್ರಿಕಾಕರ್ತರ ಬಂಧನ

ಲಾಹೋರಿನ ಇಬ್ಬರು ಪತ್ರಿಕಾಕರ್ತರನ್ನು ಕಮ್ಯೂನಿಸ್ಟರೆಂಬ ಆಪಾದನೆ ಮೇಲೆ ಪಾಕಿಸ್ಥಾನ ಸರ್ಕಾರವು ಬಂಧಿಸಿದೆ.

ಕೊರಿಯಾ ಯುದ್ಧ

ಕೊರಿಯಾ ಯುದ್ಧವು ಬಹಳ ಬಿರುಸಾಗಿ ಕೆಲವೆಡೆ ನಡೆಯುತ್ತಲಿರುವುದಾಗಿ ವ

ಏಕಕಾಲದಲ್ಲಿ ದಂಪತಿಗಳ ಮರಣ

ಮೈಸೂರು ಪಾಣೆಂಪುರಾಸಂಸ್ಥೆಯಲ್ಲಿ ಕ್ಯಾತನಹಳ್ಳಿ ಸಾಹುಕಾರರ ಹಾಸ್ಟಲಿನ ಹಿಂಭಾಗದಲ್ಲಿ ಫ್ಲೋರ್ ಮಿಲ್ ಇಟ್ಟಿದ್ದ ಶ್ರೀ ರಾಮಪ್ಪ ಎಂಬುವವರು ಕೆಲವು ದಿನಗಳಿಂದ ಟೈಫಾಯಿಡ್‌ನಿಂದ ನರಳುತ್ತಿದ್ದು ನಿಧನರಾದರು ಆಸ್ಪತ್ರೆಯಲ್ಲಿದ್ದ ಅವರ ಹೆಂಡತಿಗೆ ಈ ವಿಷಯವು ತಿಳಿದೊಡನೆಯೇ ಆಕೆಯೂ ಮೃತಳಾದಳು. ದಂಪತಿಗಳ ಶವಗಳನ್ನು ಏಕಕಾಲದಲ್ಲಿ ಸಂಸ್ಕಾರಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಸಹ ವಿದ್ಯಾಭ್ಯಾಸಕ್ಕೆ ವಿರೋಧ

ಪಾಕಿಸ್ತಾನದಲ್ಲಿ ಸಹ ವಿದ್ಯಾಭ್ಯಾಸವನ್ನು ತಕ್ಷಣವೇ ರದ್ದುಗೊಳಿಸಬೇಕೆಂದು ರಾವಲ್ಪಿಂಡಿಯ ವಿದ್ಯಾರ್ಥಿ ಸಂಸ್ಥೆ 'ಇಸ್ಲಾಮಿ ಜಮೈಯತ್—ಎ—ತುಲಾಬಾ' ಪ್ರಾಂತೀಯ ಸರ್ಕಾರಗಳನ್ನು ಒತ್ತಾಯಗೊಳಿಸಿ ನಿರ್ಣಯ ಮಾಡಿದೆ.

ಪರ್ಷಿಯಾ ಎಣ್ಣೆ ವಿವಾ

ಪರ್ಷಿಯಾದ ಎಣ್ಣೆ ವಿವಾದವನ್ನು ಅಂತರರಾಷ್ಟ್ರೀಯ ನ್ಯಾಯಾಲಯ ತೀರ್ಮಾನಿಸಬೇಕೆಂದು ಬ್ರಿಟನ್ ಕೇಳಿದ್ದಿತು. ಹೇಗ್‌ನಲ್ಲಿರುವ ನ್ಯಾಯಾಲಯವು ಈ ವಿವಾದವನ್ನು ಪರ್ಷಿಯಾಕ್ಕೆ ತಿಳಿಸಿತು. ಆಂಗ್ಲೋ-ಇರಾನಿಯನ್ ವಿವಾದದಲ್ಲಿ ತೀರ್ಮಾನವನ್ನು ಕೊಡಲು ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಅಧಿಕಾರವಿಲ್ಲವೆಂದು ಪರ್ಷಿಯಾ ಸರ್ಕಾರವು ಉತ್ತರವಿತ್ತಿದೆಯೆಂದು ತಿಳಿಯುತ್ತದೆ.

ಸಮಾಚಾರ ಕಾರ್ಯಾಲಯ

ಪೀಕಿಂಗ್‌ನಲ್ಲಿ ಭಾರತವು ಒಂದು ಸಮಾಚಾರ ಕಾರ್ಯಾಲಯವನ್ನು ಸ್ಥಾಪಿಸಬೇಕೆಂದಿರುವುದಾಗಿ ತಿಳಿಯ ಬರುತ್ತದೆ

* ಅಂತರರಾಷ್ಟ್ರೀಯ ಅಮೋಘ ಸಂಸ್ಥೆಯು ೮-೧೦ ವಿದ್ಯಾರ್ಥಿವೇತನವನ್ನು ಡಾಕ್ಟರೇಟ್ ಪದವಿಗೆ ಓದುವ ಘತದ ವಿದ್ಯಾರ್ಥಿಗಳಿಗೆ ಕೊಡಲಿದೆ

ಪ್ರಭಾ ಪಿಕ್ಚರ್ ಹೌಸ್

1-6-51 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಲಾರಲಪ್ಪ ಲಾರಲಪ್ಪ ಹಾಡಿದ ತಾರೆ ಮೀನ

ಹುಲ್ಲಗುಲ್ಲ ಹುಲ್ಲಗುಲ್ಲ ಹಾಡಿರುವ

ಶೂರೀಫಿಲಂಸ್‌ರವರ:—

ಢೋಲಕ್ * DHOLAK

ನಟವರ್ಗ—ಮೀನ, ಅಜಿತ್, ಯಶೋದರಕಟ್ಟು ಮಜ್ನು ಮತ್ತು ರಜನಿ

ವಿಶೇಷ ಸೂಚನೆ—ತಾ|| 1—6—51ನೇ ಶುಕ್ರವಾರದಿಂದ 0—12—0ಯ ತರಗತಿಗೆ 0—13—0 ಛಾರ್ಜು ಮಾಡಲ್ಪಡುತ್ತದೆ. ಮತ್ತು ಕಡೆಯ ಎರಡು ತರಗತಿಗಳನ್ನು ಅಂದರೆ 0—4—0 ಮತ್ತು 0—6—0 ತರಗತಿಗಳನ್ನು ತೆಗೆದುಹಾಕಿ ಕಡೇ ತರಗತಿಗೆ 0—5—0 ಛಾರ್ಜು ಮಾಡಲ್ಪಡುತ್ತದೆ.

ಸಮಾಚಾರ

ಮಂಗಳವಾರ ತಾ|| ೨೯-೫-೧೯೫೧

ಹಣ್ಣುಗಳ ಬೆಳವಣಿಗೆ

ಈಚೆಗೆ ಆಹಾರ ಸಂಶೋಧನಾ ಕೇಂದ್ರದಲ್ಲಿ ಭಾರತದ ಅನೇಕ ತಜ್ಞರು ಸೇರಿ ಆಹಾರ ಅಭಾವವನ್ನು ನೀಗಲು ಹಣ್ಣುಗಳ ಬೆಳವಣಿಗೆ ಹೆಚ್ಚಿಸಬೇಕೆಂದು ಸಲಹೆ ಮಾಡಿರುತ್ತಾರೆ ಈ ಸಲಹೆ ಅತಿ ಮುಖ್ಯವೆಂಬುದನ್ನು ಹೇಳಲೆಬೇಕಾಗಿಲ್ಲ. ಅದರಲ್ಲಿಯೂ ಮೈಸೂರು ಸರ್ಕಾರಕ್ಕೆ ಈ ಸಲಹೆ ಹೊಸದಲ್ಲ. ನಮ್ಮ ದೇಶದ ಸರ್ವತೋನ್ನತಿಗೆ ಕಾರಣರಾದ ಶ್ರೀ ಎಂ. ವಿಶ್ವೇಶ್ವರಯ್ಯನವರ ದಿವಾನ್‌ಗಿರಿಯಲ್ಲಿಯೇ ಈ ಸಲಹೆ ಸಂಪದಭಿವೃದ್ಧಿ ಇಲಾಖೆಯ ಅಂಗವಾಗಿ ಪ್ರಾರಂಭಿಸಲ್ಪಟ್ಟ ಹಾರ್ಟಿಕಲ್ಚರಲ್ ಇಲಾಖೆ ಏರ್ಪಾಡಾಯಿತು. ಆ ಮಹನೀಯರ ಎಲ್ಲಾ ಸಲಹೆಗಳೂ, ಅವರ ಅಧಿಕಾರಾನಂತರ ಕಾರಣಾಂತರಗಳಿಂದ ಶಿಥಿಲವಾದಂತೆಯೇ ಈ ಇಲಾಖೆಯೂ ನೆಪಮಾತ್ರಕ್ಕೆ ಕೆಲಸ ಮಾಡುತ್ತಿದೆಯೇ ವಿನಹ ಅಪೇಕ್ಷಿಸಿದ ಫಲಿತಾಂಶ ಮಾತ್ರ ದೊರೆತಿಲ್ಲ. ಹಣ್ಣುಗಳನ್ನು ಬೆಳೆಸುವ ಉದ್ಯಮಕ್ಕೆ ನಮ್ಮ ದೇಶದಲ್ಲಿ ಶ್ರೇಷ್ಟವಾದ ಪ್ರದೇಶಗಳಿವೆ. ಅಲ್ಲದೆ ಅತ್ಯುತ್ತಮವಾದ ಹಣ್ಣುಗಳನ್ನು ಬೆಳೆಯುವ ತಕ್ಕ ವಿದ್ಯಾವನ್ನು ಅರಿತ ಜನಾಂಗವೊಂದು ನಮ್ಮಲ್ಲಿ ಇದೆ. ತಕ್ಕ ಶ್ರದ್ಧೆ ಮತ್ತು ಪ್ರೋತ್ಸಾಹ ದೊರೆತರೆ ಈ ಸಲಹ ಮೇರೆಗೆ ಉತ್ತಮ ಫಲ ದೊರೆಯುವುದರಲ್ಲಿ ಸಂಶಯವಿಲ್ಲ.

ಮೈಸೂರು ಬೆಂಗಳೂರು ನಗರಗಳಲ್ಲಿ ಶ್ರೀ ಕೃಷ್ಣರಾಜಸಾಗರ ಮತ್ತು ನಂದಿ ಬೆಟ್ಟ ಕೆರೆಗಳ ಹತ್ತಿರದಲ್ಲೂ ಮಾದರಿ ಫಾರಂಗಳನ್ನು ಕೆಲವು ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿವೆ. ಇವುಗಳು ಕೇವಲ ಮಾದರಿ ತೋಟಗಳಾಗಿ ಮಾತ್ರ ಉಳಿದಿವೆ ಹೊರತು, ಜನ ಸಾಮಾನ್ಯಕ್ಕೆ ತಕ್ಕ ತಿಳುವಳಿಕೆ ಈ ಫಾರಂಗಳಿಂದ ದೊರೆಯುತ್ತಲೇ ಇಲ್ಲ. ಇಲ್ಲಿ ಬೆಳೆಯುತಕ್ಕ ಹಣ್ಣುಗಳ ಉತ್ಪತ್ತಿಯಂತೂ ಅತ್ಯಲ್ಪವಾಗಿ ವ್ಯಾಪಾರರೀತ್ಯ ಫಲದಾಯಕವಾಗುತ್ತಲಿಲ್ಲ. ಈಗಲಾದರೂ ತಜ್ಞರ ಸಲಹೆಯನ್ನು ಗಮನಿಸಿ ನಮ್ಮ ಸರ್ಕಾರವೂ ತಮ್ಮಲ್ಲಿ ಆಗಲೇ ಏರ್ಪಟ್ಟಿರುವ ಇಲಾಖೆ ಮುಖಾಂತ್ರ ಕ್ರಮವಾದ ಪ್ರಚಾರ ಕಾರ್ಯ ನಡಿಸಿ, ಸೂಕ್ತವಾದ ಕಡೆಗಳಲ್ಲಿ ತಕ್ಕ ಪ್ರೋತ್ಸಾಹವನ್ನು ಕೊಡುವುದರ ಮೂಲಕ ಆಹಾರಕ್ಕೆ ಯೋಗ್ಯವಾದ ಹಣ್ಣುಗಳ ಬೆಳವಣಿಗೆ ಹೆಚ್ಚಿಸಿ ಈಗಿನ ದುಸ್ಥಿತಿಯನ್ನು ನೀಗುವ ನೆರವು ನೀಡಬೇಕು.

ಅಲ್ಲದೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿಶಾಲವಾದ ಮೈದಾನಗಳು, ಮನೆಗಳಲ್ಲಿ ಹಿತ್ತಿಲು ಇವೆ ಇವುಗಳಲ್ಲಿಯೂ ನಾನಾ ಹಣ್ಣುಗಳನ್ನು ಬೆಳೆಯುವಂತೆ ಆಯಾ ಪೌರಸಭೆಯವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಉದಾಹರಣೆಗೆ ಮೈಸೂರು ನಗರದಲ್ಲಿ ಪೌರಸಭೆ, ಅರಮನೆ, ಉದ್ಯಾನ ಇಲಾಖೆ ಮುಂತಾದುವುಗಳಿಗೆ ಸೇರಿದ ನೂರಾರು ಎಕರೆ ಭೂಮಿ ಪಾಳು ಬಿದ್ದಿದೆ ಅಲ್ಲಿ ಹಣ್ಣುಗಳನ್ನು ಯಾಕೆ ಬೆಳಸಬಾರದು ? ಬರೀ ಸಮ್ಮೇಳನಗಳನ್ನು ನಡೆಸುವುದು, ಅದರಲ್ಲಿ ಭಾಗವಹಿಸಿ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟು ಸುಮ್ಮನೆ ಕುಳಿತುಕೊಳ್ಳದೆ ಕಾರ್ಯತಃ ಏನಾದರೂ ಸಾಧಿಸಲು ಎತ್ನಿಸಬೇಕು ಅದರಿಂದ ಎಷ್ಟೋ ಜನತೆಗೆ ಸಹಾಯವಾಗುವುದು.

ಹಿಮಾಲಯ ಪ್ರದೇಶದಲ್ಲಿ ನ್ಯೂಸ್‌ಪ್ರಿಂಟ್ ತಯಾರಿಕೆ

ಕಳೆದ ವರ್ಷದಲ್ಲಿ ಹಿಮಾಲಯಾ ಪರ್ವತಾರೋಹಿಯೊಬ್ಬನು ಸಟ್ಲೆಜ್ ಮತ್ತು ಬೀಯಾಸ್‌ನ ಶ್ರೇಣಿಗಳಲ್ಲಿ ಹೋಗುತ್ತಿರುವಾಗ ಅಲ್ಲಿಯ ದಟ್ಟವಾದ ಕಾಡುಗಳಲ್ಲಿ ಬೆಳೆದಿರುವ 'ಶಂಕುಫಲ' ಎಂಬ ಒಂದು ಜಾತಿಯ ಮರದಿಂದ ನ್ಯೂಸ್ ಪ್ರಿಂಟ್ ಕಾಗದವನ್ನು ತಯಾರಿಸ ಬಹುದೆಂಬ ಸಲಹೆ ಕೊಟ್ಟನು.

ಕೆನಡಾ ಮತ್ತು ಸ್ಕ್ಯಾಂಡಿನೇವಿಯಾ ರಾಜ್ಯಗಳಲ್ಲಿ ನ್ಯೂಸ್ ಪ್ರಿಂಟಿಗೆ ಉಪಯೋಗಿಸುವ ಈ ಶಂಕುಫಲ ಮತ್ತು ಅದರ ಜಾತಿಗೆ ಸೇರಿದ ಇತರ ಮರಗಳು ಹಿಮಾಲಯ ಪ್ರದೇಶದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬೆಳೆಯುತ್ತಲಿವೆ. ಈ ಮರಗಳನ್ನು ಕಡಿದು ಸಾಗಿಸುವುದು ಅತ್ಯಂತ ಕಷ್ಟತರವಾದ ಕೆಲಸವಾದ್ದರಿಂದ ಈ ಮರಗಳು ಮನಸೋಇಚ್ಛೆ ಬೆಳೆದು ಯಾವುದಕ್ಕೂ ಪ್ರಯೋಜನವಿಲ್ಲದೆ ಕ್ರಿಮಿರೋಗಗಳಿಗೆ ಆವಾಸಸ್ಥಾನವಾಗಿ ಹೋಗಿದೆ ಆದ್ದರಿಂದ ಈ ಮರಗಳಿಂದ ಪ್ರಯೋಜನವಾಗದೆ ವಿನಾಶಕಾರಕವು ಹೆಚ್ಚಾಗಿ ಅದನ್ನು ತಡೆಗಟ್ಟಲು ವಿಶೇಷ ಹಣ ವ್ಯಯ ವಾಗುತ್ತಲಿದೆ.

ಈ ಮರಗಳನ್ನು ಕತ್ತರಿಸಿ ಅವುಗಳನ್ನು ನ್ಯೂಸ್ ಪ್ರಿಂಟ್ ಕಾಗದದ ತಯಾರಿಕೆಗೆ ಉಪಯೋಗವಾಗುವಂತೆ ಮಾಡಲು ಅಷ್ಟು ಶ್ರಮಸಾಧ್ಯ ಕೆಲಸವಾಗುವುದಿಲ್ಲ

ವಿಶ್ವದಲ್ಲಿ ಅಮೆರಿಕಾ ದೇಶವನ್ನು ಬಿಟ್ಟರೆ ಇತರ ದೇಶಗಳಲ್ಲಿ ನ್ಯೂಸ್ ಪ್ರಿಂಟ್ ಅಭಾವವು ತಲೆ ದೋರಿದೆ ವೃತ್ತಾಂತ ಪತ್ರಿಕೆಗಳು ತಮ್ಮ ಪತ್ರಿಕೆಗಳ ಬೆಲೆ ಏರಿಸಿ ಪ್ರಮಾಣ ಕಡಮೆ ಮಾಡ ಬೇಕಾಗಿ ಬಂದಿದೆ. ವಿಶ್ವದ ನ್ಯೂಸ್ ಪ್ರಿಂಟ್ ಬಳಕೆಯ ಶೇಕಡ ೬೦ರಷ್ಟು ಅಮೆರಿಕಾ ದೇಶದಲ್ಲಿದೆ ಕಳೆದ ಸಾಲಿನಲ್ಲಿ 10,604 ಸಾವಿರ ಟನ್ ನ್ಯೂಸ್ ಪ್ರಿಂಟ್ ಬೇಕಾದದ್ದು, 9,391 ಸಾವಿರ ಮಾತ್ರ ತಯಾರಾಗಿದೆ

ಭಾರತದಲ್ಲಿ ಸಾಮಾನ್ಯ ಕಾಗದವನ್ನು ತಯಾರಿಸತಕ್ಕ ಅನೇಕ ಕಾರ್ಖಾನೆಗಳಿವೆ. ಈ ವರ್ಷದಲ್ಲಿ ಬೇಕಾಗುವ 60,000 ಟನ್ 1956 ರವೇಳೆಗೆ ಬೇಕಾಗುವ 100,000 ಟನ್ ನ್ಯೂಸ್ ಪ್ರಿಂಟ್‌ನ ಸಂಬರಾಯಿಗೆ ಪರ ರಾಷ್ಟ್ರಗಳನ್ನು ನಾವು ನಂಬಿ ಕೂಂಡಿರ ಬೇಕಾಗಿದೆ.

ಭಾರತದಲ್ಲಿ ನ್ಯೂಸ್ ಪ್ರಿಂಟ್ ಬೆಲೆಯು 750 ರೂಪಾಯಿಂದ 1,000 ಇರುವುದು ನಾವೇ ನಮಗೆ ಬೇಕಾದ ನ್ಯೂಸ್ ಪ್ರಿಂಟ್ ತಯಾರಿಸಿ ಕೊಂಡಲ್ಲಿ ಬೆಲೆಯು ಬದಲಾವಣೆಯೂ ಅಲ್ಲದೆ ವಿದೇಶಗಳ ಮೇಲಿನ ಅಧೀನದಲ್ಲಿ ಸಾಗಿಸುವುದು ತಪ್ಪುವುದು.

ಹಿಮಾಲಯ ಪ್ರದೇಶದಲ್ಲಿ ಈಗ ನ್ಯೂಸ್ ಪ್ರಿಂಟ್ ತಯಾರಿಕೆಗೆ ಸಲಹೆ ನೀಡಲು ಪ್ರವೀಣರೊಬ್ಬರು ಸದ್ಯದಲ್ಲೇ ಭಾರತಕ್ಕೆ ಬರಲಿರುವರು ಅಲ್ಲದೆ ಇಬ್ಬರು ಭಾರತೀಯರನ್ನೂ, ತಕ್ಕ ಪರಿಶ್ರಮ ಪಡೆದು ಕೊಂಡುಬರಲು ಸ್ಕ್ಯಾಂಡಿನೇವಿಯಕ್ಕೆ ಕಳುಹಿಸಲಾಗುವುದು.

ಈ ಹೊಸ ಉದ್ಯಮದಿಂದ ಕಾಗದದ ಅಭಾವವು ಕಡಿಮೆಯಾಗಿ, ಸೂಕ್ತವಾದ ಲಾಭ ಬರುವುದರಲ್ಲಿ ಸಂಶಯವಿಲ್ಲ.

೩೦ ದಿನಗಳಲ್ಲಿ ಪ್ರಪಂಚ ಪರ್ಯಟನ

ಎ—೪೦ ಎಂಬ ಕ್ರೀಡಾ ಮೋಟಾರಿನಲ್ಲಿ ೪ ಜನರು ಮುಂದಿನ ಜೂನ್ ತಿಂಗಳಲ್ಲಿ ಪ್ರಪಂಚವನ್ನೆಲ್ಲಾ ೩೦ ದಿನಗಳಲ್ಲಿ ಪರ್ಯಟನ ಮಾಡಲು ಹೊರಡುವರು. ಸಾಧ್ಯವಾದೆಡೆಯಲ್ಲೆಲ್ಲಾ ಇವರು ಮೋಟಾರಿನಲ್ಲಿಯೇ ಪ್ರಯಾಣಮಾಡುವರು ಸಮುದ್ರಗಳ ಮೇಲೆ ಮಾತ್ರ ಪ್ರತ್ಯೇಕವಾದ ಒಂದು ವಿಮಾನದಲ್ಲಿ ತೆರಳುವರು. ಅವರು ಇಂಗ್ಲೆಂಡಿನಿಂದ ಹೊರಟು ಮುಖ್ಯವಾಗಿ ಫ್ರಾನ್ಸ್, ಸ್ವಿಟ್ಸರ್‌ಲೆಂಡ್, ಇಟಲಿ, ಲೆಬನಾನ್, ಸಿರಿಯಾ, ಟ್ರಾನ್ಸ್-ಜೋರ್ಡಾನ್, ಇರಾಕ್ ಇಂಡಿಯಾ, ಅಮೆರಿಕಾ ಕೆನಡಾ ದೇಶಗಳಿಗೆ ಭೇಟಿ ಕೊಡುವರು.

ವಿವಾಹ ಮಹೋತ್ಸವ

ಟಿ. ನರಸೀಪುರದ ಜೋಡಿದಾರ್ ಮತ್ತು ಮುನಿಸಿಪಲ್ ಕೌನ್ಸಿಲರ್ ಶ್ರೀ ಎನ್. ಎಸ್. ಕೃಷ್ಣಶಾಸ್ತ್ರಿಗಳ ತಮ್ಮ ಶ್ರೀ ಎನ್. ಎಸ್. ವೆಂಕಟೇಶಶಾಸ್ತ್ರಿಗಳಿಗೆ ಅನಂತಪುರ ಜಿಲ್ಲಾ ರಾಯಲ್ ಚೆರುವಿನಲ್ಲಿರುವ ಮುದಿಯನೂರ್ ಶ್ರೀ ಸುಬ್ರಹ್ಮಣ್ಯಂರವರ ಪುತ್ರಿ ಶ್ರೀಮತಿ ಸರೋಜಮ್ಮನನ್ನು ಕೊಟ್ಟು ವಿವಾಹ ಮಹೋತ್ಸವವು ಮೈಸೂರಿನಲ್ಲಿ ವಿಜೃಂಭಣೆಯಿಂದ ಮೊನ್ನೆ ನಡೆಯಿತು

ವಾರ್ಷಿಕೋತ್ಸವ

ಸರಸ್ವತೀಪುರಂನಲ್ಲಿರುವ ಗಾಯತ್ರೀ ಸಮಾಜದ ವಾರ್ಷಿಕೋತ್ಸವವು ನಿನ್ನೆ ಸಂಜೆ ಮಹಾರಾಜಾ ಕಾಲೇಜು ಜ್ಯೂನಿಯರ್ ಬಿ. ಎ. ಹಾಲಿನಲ್ಲಿ ಶ್ರೀಮತಿ ರಾಮಲಕ್ಷ್ಮಮ್ಮ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ರಣಜಿತ್

೨೫—೫—೫೧ರಿಂದ

ಅಮೋಘವಾದ ೩ನೇ ವಾರ

-:: ಸಗಾಯಿ ::-

ಪಾತ್ರ—ರೆಹನ, ಪ್ರೇಂನಾಥ್,

ಗೋಪ್, ಯಾಕೂಬ್

ಸಂಪಾದಕರು :—ಟಿ. ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೋ ಮೈಸೂರು.

ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ, ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೫—೧೯೫೧ ಬುಧವಾರ [ಸಂಚಿಕೆ ೨೨೦

ವಿರೋಧ ಪ್ರದರ್ಶನ

ದಕ್ಷಿಣ ಆಫ್ರಿಕಾ ಸರ್ಕಾರವು ವರ್ಣೀಯ ಓಟರುಗಳ ಪ್ರತ್ಯೇಕತೆಯ ಬಗ್ಗೆ ಅನುಸರಿಸಿರುವ ನೀತಿಯನ್ನು ಪ್ರತಿಭಟಿಸಿ ಕೇಪ್‌ಟೌನ್‌ನಲ್ಲಿ ಆಫ್ರಿಕಾದ ಮಾಜಿ ಸೈನಿಕರುಗಳ ದಂಡುಗಳ ಭಾರಿ ವಿರೋಧ ಪ್ರದರ್ಶನವನ್ನು ಸಭೆ ಮೆರವಣಿಗೆಗಳನ್ನು ನಡೆಸಿದುವು.

ಜಾನುವಾರು ಗಣತಿ

ಮೈಸೂರು, ಮೇ ೨೯

ಮೈಸೂರು ನಗರದಲ್ಲಿ ಪೌರಸಭೆಯ ಆಶ್ರಯದಲ್ಲಿ ಜಾನುವಾರುಗಳ ಗಣತಿಯನ್ನು ಇದೇ ಮಾಹೆ ೩೧ನೇ ತಾರೀಖು ತೆಗೆದುಕೊಳ್ಳಲು ಮನೆಗಳಿಗೆ ಬರುವ ಎನ್ಯೂಮರೇಟರುಗಳಿಗೆ ತಕ್ಕ ವಿವರಗಳನ್ನು ಕೊಟ್ಟು ಜನರು ಸಹಕರಿಸಬೇಕೆಂದು ಮುನಿಸಿಪಲ್ ಕಮಿಷನರು ಪ್ರಾರ್ಥಿಸುತ್ತಾರೆ.

ಮೈಸೂರಿನಲ್ಲಿ ಇಂಜನಿಯರಿಂಗ್ ಕಾಲೇಜು ಸ್ಥಾಪನೆ ?

ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ೧೮೭೩

ಸ್ವಂ.ಸು. ಫೋನ್] ಬೆಂ. ಮೇ ೨೯

ಮೈಸೂರಿನಲ್ಲಿ ಸರ್ಕಾರದವರು ಒಂದು 'ಇಂಜನಿಯರಿಂಗ' ಕಾಲೇಜನ್ನು ಸ್ಥಾಪಿಸಿ ಮೊದಲನೇ ತರಗತಿಯನ್ನು ತೆರೆಯಬೇಕೆಂದಿರುವರೆಂದು ತಿಳಿಯಬರುತ್ತದೆ.

ಶಾಸನ ಸಭೆಯ ಕಾರ್ಯಕಲಾಪಗಳು

ಸ್ವಂ.ಸು. ಫೋನ್] ಬೆಂ. ಮೇ ೨೯

ಮೈಸೂರು ಶಾಸನಸಭೆಯ ಮುಂದುವರಿದ ಅಧಿವೇಶನವು ಈದಿನ ಮಧ್ಯಾಹ್ನ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಸಂಸ್ಥಾನದಲ್ಲಿ ೨೬,೯೮೩ ಕೈ ಮಗ್ಗಗಳಿವೆಯೆಂದೂ, ೧,೩೦೫ ವಿದ್ಯುಚ್ಛಕ್ತಿ ಸಹಾಯದಿಂದ ನಡೆಯುವ ಮಗ್ಗಗಳಿವೆಯೆಂದೂ ತಿಳಿಸಿದರು.

ಜೂನ್ ಅಂತ್ಯದ ವೇಳೆಗೆ ಸಂಸ್ಥಾನದಲ್ಲಿ ಬಟ್ಟೆ ಪರಿಸ್ಥಿತಿ ಸುಧಾರಿಸಬಹುದೆಂದು ತಾವು ಆಶಿಸಿರುವುದಾಗಿ ತಿಳಿಸಿದರು.

ಕೈಮಗ್ಗದವರಿಗೆ ನೂಲಿನ ಸರಬರಾಜು ಉತ್ತಮವಾಗಿದ್ದು ಪ್ರತಿಯೊಬ್ಬ ನೇಯುವವನಿಗೂ ದಿನಕ್ಕೆ ೨ ಬಂಡಲು ನೂಲು ಕೊಡಲಾಗುತ್ತಿದೆಯೆಂದರು.

ಕೈಗಾರಿಕೆಗಳ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಸಂಸ್ಥಾನದ ನಾನಾ ಕೈಗಾರಿಕೆಗಳ ಅಭಿವೃದ್ಧಿಯನ್ನು ಉತ್ತಮಗೊಳಿಸಲು ಯೋಜನೆಗಳನ್ನು ವಿವರಿಸಿದರು.

ಕೇಂದ್ರ ಸರ್ಕಾರವು ಹಲವು ಅಭಿವೃದ್ಧಿಯೋಜನೆಗಳಿಗಾಗಿ ಸಂಸ್ಥಾನಕ್ಕೆ ಈ ವರ್ಷ ಒಂದೂವರೆಕೋಟಿ ರೂ.ಗಳನ್ನೂ ಮುಂದಿನಸಾಲಿಗೆ ೧॥ ಕೋಟಿ ರೂ.ಗಳನ್ನೂ ಸಾಲವಾಗಿ ಕೊಡುವುದೆಂದು ತಿಳಿಸಿದರು.

ಭೂ ಸುಧಾರಣೆ ಪ್ರತಿಫಲ

ಕಾಶ್ಮೀರದಲ್ಲಿ ಭೂ ಸುಧಾರಣೆಯನ್ನು ಕಳೆದ ಅಕ್ಟೋಬರ್ ಮಾಹೆಯಲ್ಲಿ ಸರ್ಕಾರವು ಜಾರಿಗೆ ತಂದಾಗಿನಿಂದ ಇಲ್ಲಿಯವರೆಗೆ ೩೭,೦೦೦ ಎಕರೆ ವರ್ಗಾವಣೆಯಾಗಿರುವುದಾಗಿ ತಿಳಿಯಬರುತ್ತದೆ.

ಎಸ್. ಎಸ್. ಎಲ್. ಸಿ. ಯಲ್ಲಿ ರ್‍ಯಾಂಕ್ ಗಳಿಸಿದವರು

ಈ ಬಾರಿ ಎಸ್. ಎಸ್. ಎಲ್. ಸಿ. ಯಲ್ಲಿ 1873 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮೊದಲನೆಯ 10 ಸ್ಥಾನ ಗಳಿಸಿದವರು.—

1 10273 ಕೆ. ಸುಂದರೇಶನ್, ಶಾರದಾವಿಲಾಸ ಹೈಸ್ಕೂಲ್.
2 1240 ಎ. ವಿ ಶ್ರೀಧರನ್, ಮಲ್ಲೇಶ್ವರಂ ಹೈಸ್ಕೂಲ್
3 10889 ಎಚ್ ಬಿ ಮೀನಾಕ್ಷಿ, ಮೈಸೂರು ಗುಡ್‌ಷೆಪರ್ಡ್ ಕಾನ್ವೆಂಟ್
4 7306 ರಾಘವೇಂದ್ರರಾವ್, ತುಮಕೂರ್ ಗೌ॥ ಹೈಸ್ಕೂಲ್
5 6890 ಎಸ್ ಎನ್ ರಾಮಚಂದ್ರನ್, ಮಾಲೂರು ಮುನಿಸಿಪಲ್ ಹೈಸ್ಕೂಲ್
6 6369 ಎ ಕೆ. ರಂಗನಾಥರಾವ್, ಬಂಗಾರಪೇಟೆ ಮುನಿಸಿಪಲ್ ಹೈಸ್ಕೂಲ್
7 13797 ನಾಗರಾಜ, ಹೊಳೇನರಸೀಪುರದ ಮುನಿಸಿಪಲ್ ಹೈಸ್ಕೂಲ್
14635 ಸಿ ಎಲ್ ಅನಂತರಾವ್, ಶಿರಾಳಕೊಪ್ಪ ಮುನಿಸಿಪಲ್ ಹೈಸ್ಕೂಲ್
8 2828 ಸುಬ್ಬರಾಯ, ಬೆಂಗಳೂರು ನ್ಯಾಷನಲ್ ಹೈಸ್ಕೂಲ್
9 1519 ಪ್ರಸನ್ನ, ಮಲ್ಲೇಶ್ವರಂ ಹೈಸ್ಕೂಲ್
10 2745 ಆರ್ ಕೆ ಸಿಂಹ, ಬೆಂಗಳೂರು ಆಚಾರ್ಯ ಹೈಸ್ಕೂಲ್
5939 ನಾಗರಾಜ, ಚಿಂತಾಮಣಿ ಗೌ॥ ಹೈಸ್ಕೂಲ್

ಪ್ರಜಾ ಪ್ರಾತಿನಿಧ್ಯ ಮಸೂದೆ

ಪ್ರಜಾ ಪ್ರಾತಿನಿಧ್ಯ ಮಸೂದೆಯ ೨ನೇ ವಾಚನವು ಪಾರ್ಲಿಮೆಂಟಿನಲ್ಲಿ ಮುಕ್ತಾಯವಾಯಿತು.

ಶಾಸನಸಭೆಗಳಿಗೆ ಉಮೇದುವಾರರಾಗಲು ಅರ್ಹತೆ ವಿಷಯದಲ್ಲಿ ಮಸೂದೆಯು ಅಂಗೀಕೃತವಾಯಿತು.

ಸರ್ಕಾರಿ ಲೈಸನ್ಸ್, ಪರ್ಮಿಟ್ಟು ಪಡೆದವರು ಉಮೇದುವಾರರಾಗಿ ನಿಲ್ಲಬಾರದು. ಸರ್ಕಾರದ ಆರ್ಥಿಕ ಹಿತಾಶಯವಿರುವ ಸಂಸ್ಥೆಯ ಡೈರೆಕ್ಟರ್ ಅಥವಾ ಅಧಿಕಾರ ಸ್ಥಾನದಲ್ಲಿರುವವರು ಅನರ್ಹರು. ಅವರು ಯಾರೆಂಬುದನ್ನು ಪಾರ್ಲಿಮೆಂಟು ನಿರ್ಧರಿಸಬೇಕಾಗಿದೆ,

ಸರ್ಕಾರಿ ಉದ್ಯೋಗದಿಂದ ವಜಾ ಆದ ೫ ವರ್ಷ ಅನಂತರ ಉಮೇದುವಾರರಾಗಿ ನಿಲ್ಲಬಹುದು. ೨ ವರ್ಷಕ್ಕಿಂತ ಕಡಮೆ ಜೈಲು ಶಿಕ್ಷೆಯನ್ನನುಭವಿಸಿದವರು ೫ ವರ್ಷ ನಂತರ ಉಮೇದುವಾರರಾಗಬಹುದು.

‡ ಬ್ರಿಟನ್ನಿನ ಬಳಿ ಇರುವ ಕಲ್ಲಿದ್ದಲು ಗಣಿಯೊಂದರಲ್ಲಿ ನಿನ್ನೆ ಆಸ್ಫೋಟನೆಯಾಗಿ ೭೮ ಜನರು ಮೃತಪಟ್ಟರು, ೭ ಜನರು ಗಾಯಗೊಂಡಿರುವರು, ಏಳು ಮೃತ್ಯದೇಹಗಳು ಮಾತ್ರ ಸಿಕ್ಕಿವೆ.

ಜಿಲ್ಲಾಬೋರ್ಡ್ ಪೌರಸಭೆಗಳಿಗೆ ಜೀವದಾನ

ಮೈಸೂರು ಸಂಸ್ಥಾನದ ಜಿಲ್ಲಾ ಬೋರ್ಡು ಮತ್ತು ಪೌರಸಭೆಗಳ ಅವಧಿಯನ್ನು ಒಂದು ವರ್ಷಕಾಲ ಹೆಚ್ಚಿಸಲು ಮೈಸೂರು ಶಾಸನ ಸಭೆಯು ಮಸೂದೆಯನ್ನು ಅಂಗೀಕರಿಸಿದೆ.

ಪ್ರತ್ಯೇಕತೆಗಾಗಿ ಪ್ರದರ್ಶನ

ಬ್ರಿಟಿಷ್ ರಾಜ ದಂಪತಿಗಳು ಜೂನ್ ಒಂದನೇ ತಾರೀಖಿನಿಂದ ೪ ದಿನಗಳ ಪ್ರವಾಸವನ್ನು ಐರ್ಲೆಂಡಿನಲ್ಲಿ ಕೈಗೊಳ್ಳಲು ಬೆಲ್‌ಫಾಸ್ಟ್‌ಗೆ ಹೋಗುವರು. ಉತ್ತರ ಐರ್ಲೆಂಡನ್ನು ಬ್ರಿಟನ್ನಿನಿಂದ ಪ್ರತ್ಯೇಕಿಸಬೇಕು ಮತ್ತು ಐರಿಷ್‌ರಿಪಬ್ಲಿಕ್ಕಿನ ಜನತೆಗೆ ಒಟ್ಟುಗೂಡಿಸಬೇಕೆಂದು ರಿಪಬ್ಲಿಕನ್ ಪಕ್ಷದವರು ಪ್ರತಿಭಟನಾ ಪ್ರದರ್ಶನಗಳನ್ನು ಮಾಡಲು ಸಿದ್ಧರಾಗುತ್ತಲಿರುವರು ಈ ಪಕ್ಷದ ಮುಖಂಡರುಗಳನ್ನೆಲ್ಲಾ ಉತ್ತರ ಐರ್ಲೆಂಡ್ ಸರ್ಕಾರವು ಬಂಧಿಸಿ ಸೆರೆಯಲ್ಲಿಡುವುದೆಂದು ಹೇಳಲಾಗಿದೆ ಬ್ರಿಟಿಷ್ ದಂಪತಿಗಳು ತಮ್ಮ ಪ್ರವಾಸವನ್ನು ರದ್ದುಗೊಳಿಸಿರುವುದಾಗಿ ಹೇಳಲಾಗಿದೆ.

‡ ಕೊರಿಯಾದಲ್ಲಿ ಶಾಂತಿ ಸಂಧಾನದ ವಾರ್ತೆಯು ಹಬ್ಬಿರುವ ಬಗ್ಗೆ ಅಮೆರಿಕ ಮತ್ತು ವಿಶ್ವಸಂಸ್ಥೆಯಲ್ಲಿ ಈ ವಾರ್ತೆಯನ್ನು ಅಲ್ಲಗಳೆಯಲಾಗಿದೆ

ಹೊಸ ಉಪಸಚಿವರು

೧೯೪೬-೫೦ರ ವರೆಗೆ ಭಾರತಪುರದ ಶಾಸನಸಭಾ ಸದಸ್ಯರಾಗಿದ್ದು ಈಗ ಪಾರ್ಲಿಮೆಂಟಿನಲ್ಲಿ ಸದಸ್ಯರಾಗಿರುವ ಶ್ರೀ ರಾಜಬಹದ್ದೂರರು ಕೇಂದ್ರ ಸರ್ಕಾರದ ಉಪಸಚಿವರಾಗಿ ನೇಮಕವಾಗಿ ನಿನ್ನೆ ಅಧಿಕಾರ ಸ್ವೀಕರಿಸಿದರು.

ಬ್ರಿಟನ್ ಈಜಿಪ್ಟ್ ಒಪ್ಪಂದ

೧೯೩೬ರಲ್ಲಿ ನಡೆದಿದ್ದ ಒಪ್ಪಂದವನ್ನು ಪುನರ್ವಿಮರ್ಶಿಸಬೇಕೆಂದು ಬ್ರಿಟನ್ನು ಈಜಿಪ್ಟನ್ನು ಪ್ರಾರ್ಥಿಸಿತ್ತು. ಈ ಒಪ್ಪಂದದಿಂದ ಈಜಿಪ್ಟಿಗೆ ಯಾವ ರೀತಿಯ ಪ್ರಯೋಜನವೂ ಇಲ್ಲವೆಂದೂ ಈಜಿಪ್ಟ್ ಸರ್ಕಾರವು ತಿಳಿಸಿ ಬ್ರಿಟನ್ನಿನ ಕೋರಿಕೆಯನ್ನು ನಿರಾಕರಿಸಿದೆ.

ಬೊಂಬಾಯಿ ಸರ್ಕಾರದ ವಿಶೇಷಾಜ್ಞೆ

ಬೊಂಬಾಯಿ ಸರ್ಕಾರವು ಒಂದು ಆಜ್ಞೆ ಹೊರಡಿಸಿ ರಕ್ಷಣಾ ಖಾತೆಯವರು ಮತ್ತು ಪರವಾನೆಯನ್ನು ಪಡೆದು ವಿದೇಶಿಯರೂ ಸಹ ಮದ್ಯವನ್ನು ಹೊಂದಲು ಅಭ್ಯಂತರವಿಲ್ಲವೆಂದು ತಿಳಿಸಿದೆ.

ಬಿರುಗಾಳಿಯ ಅಪಘಾತ

ದೆಹಲಿಯಲ್ಲಿ ನಿನ್ನೆ ಪಾರ್ಲಿಮೆಂಟ್ ಭವನದ ಬಳಿ ಬಿರುಗಾಳಿಯು ಘಂಟೆಗೆ ೬೦ ಮೈಲಿ ವೇಗದಲ್ಲಿ ಬೀಸಿತು. ಉಷ್ಣಾಂಶವು ೧೭ ಡಿಗ್ರಿಗಳಷ್ಟು ಕಡಮೆಗೆ ಇಳಿದಿತ್ತೆಂದು ಹೇಳಲಾಗಿದೆ. ಪಾರ್ಲಿಮೆಂಟ್ ಭವನದ ಎರಡು ಕಂಬಗಳು ಬಿರುಗಾಳಿಯಿಂದ ಮುರಿದುಬಿತ್ತೆಂದೂ, ಎ ಐ ಆರ್ ಸ್ಟೇಷನ್ ಬಳಿ ಒಂದು ಮರವು ಬಿದ್ದು ಸಹಿತ ಹಲವರು ಜನರು ಗಾಯಗೊಂಡಿರುವುದಾಗಿ ತಿಳಿದುಬಂದಿದೆ.

ಪರ್ಷಿಯಾ ಒಪ್ಪಂದವಾಗದಿದ್ದರೆ ೩ನೇ ಮಹಾ ಯುದ್ಧವೇ

ಪರ್ಷಿಯಾಕ್ಕೂ ಬ್ರಿಟನ್ನಿಗೂ ಈಗ ಉಂಟಾಗಿರುವ ಸಮಸ್ಯೆಯು ಶಾಂತಿಯುತವಾಗಿ ಬಗೆಹರಿಯದಿದ್ದರೆ ಈ ಸಮಸ್ಯೆಯು ಮೇಲೆ ಕಾಣಿಸ ಪರಿಸ್ಥಿತಿಯಲ್ಲಿ ವಿಶ್ವದ ೩ನೇ ಸಂಗ್ರಾಮ ಆರಂಭವಾಗಬಹುದೆಂದು ಅಮೆರಿಕದ ಸೆನೆಟರು ಒಬ್ಬರು ತಿಳಿಸಿರುವರು.

ಚುನಾವಣೆ ಅಕ್ರಮ

ಬೆಂಗಳೂರು ಮೇ ೨೯

ಬೆಂಗಳೂರು ನಗರ ಕ್ಷೇತ್ರದಿಂದ ಶಾಸನ ಸಭೆಗೆ ಆರಿಸಲ್ಪಟ್ಟ ಶ್ರೀ ವಿ ಎಸ್. ನಾರಾಯಣರಾಯರ ಆಯ್ಕೆ ಅಕ್ರಮವೆಂದು ಶ್ರೀ ಎಂ ಕೃಷ್ಣಸ್ವಾಮಿಪಿಳ್ಳೆಯವರ ಅರ್ಜಿಯ ಮೇಲೆ ಚುನಾವಣಾ ಟ್ರಿಬ್ಯೂನಲ್ ತೀರ್ಪಿತ್ತು, ಚುನಾವಣಾ ಕಮೀಷನ್‌ಗೆ ತನ್ನ ವರದಿ ಕಳುಹಿಸಿತ್ತಷ್ಟೆ. ಆ ವರದಿಯನ್ನು ಒಪ್ಪಿ ಚುನಾವಣಾ ಕಮೀಷನ್ ಅದನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿದೆ. ನಿನ್ನೆ ಸರ್ಕಾರ ವಿಶೇಷ ಗೆಜೆಟ್ ಪ್ರಕಟಣೆ ಹೊರಡಿಸಿ ಶ್ರೀ ವಿ. ಎಸ್. ನಾರಾಯಣರಾಯರ ಚುನಾವಣೆಯನ್ನು ಅಕ್ರಮವೆಂದು ಸಾರಿದೆ. ಚುನಾವಣೆಯನ್ನು ವಿರೋಧಿಸಿ ಅರ್ಜಿ ಹಾಕಿದ್ದ ಶ್ರೀ ಎಂ. ಕೃಷ್ಣಸ್ವಾಮಿಪಿಳ್ಳೆಯವರಿಗೆ ಶ್ರೀ ವಿ. ಎಸ್. ನಾರಾಯಣರಾಯರು ೧,೦೦೦ ರೂ. ಖರ್ಚನ್ನು ಕೊಡಬೇಕೆಂದೂ ಸೂಚನೆ ಕೊಟ್ಟಿದೆ

ಸೆನೆಟ್ಟಿಗೆ ಹೆಚ್ಚಿಗೆ ಸ್ಥಾನಗಳು

ವಿಶ್ವವಿದ್ಯಾನಿಲಯಕ್ಕೆ ಶಾಸನ ಸಭೆಯಿಂದ ೮ ಪ್ರತಿನಿಧಿಗಳಿಗೆ ಬದಲು ೧೨ ಜನರಿರಬೇಕೆಂಬ ಮಸೂದೆಗೆ ಅಂಗೀಕಾರದೊರೆತಿದೆ.

ವದಂತಿ ಸುಳ್ಳು

ಶ್ರೀಗಳಾದ ಎ. ಜಿ ರಾಮಚಂದ್ರರಾವ್, ಟಿ. ಸಿದ್ದಲಿಂಗಯ್ಯ ಮತ್ತು ಟಿ ಸುಬ್ರಹ್ಮಣ್ಯಂರವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವರೆಂಬ ಸುದ್ದಿ ನಿರಾಧಾರವಾದುದೆಂದು ಶ್ರೀ ಎ ಜಿ. ರಾಮಚಂದ್ರರಾಯರು ತಿಳಿಸಿರುವರು.

ಹೊಸಪಕ್ಷ ರಚನೆ

ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವುಳ್ಳ ಸದಸ್ಯರು ಜೂನ್ ೧೬ ಮತ್ತು ೧೭ ರಂದು ಪಾಟ್ನಾದಲ್ಲಿ ಸೇರಿ ರಾಷ್ಟ್ರದಲ್ಲಿ ಹೊಸ ಪ್ರಜಾಸತ್ತಾತ್ಮಕ ಪಕ್ಷವನ್ನು ರಚಿಸುವ ಬಗ್ಗೆ ಚರ್ಚೆ ಮಾಡುವರು.

ಈ ಅಂಶವನ್ನು ಪ್ರಕಟಿಸುತ್ತಾ ಆಚಾರ್ಯ ಕೃಪಲಾನಿಯವರು ಈ ಸಮಾವೇಶದ 'ಅಡ್‌ಹಾಕ' ಸಮಿತಿಯು ಜೂನ್ ೧೪ರ ಮಧ್ಯಾಹ್ನ ಪಾಟ್ನಾದಲ್ಲಿ ಸೇರುವುದೆಂದಿದ್ದಾರೆ.

ಸಮಾವೇಶದ ವಿಷಯ ನಿಯಾಮಕ ಸಮಿತಿಯಲ್ಲಿ ವಿವಿಧ ಪ್ರಾಂತಗಳ ಸುಮಾರು ನೂರುಮಂದಿ ಪ್ರತಿನಿಧಿಗಳು ಸೇರಿ ಬಹಿರಂಗಾಧಿವೇಶನಕ್ಕೆ ಕರಡು ನಿರ್ಣಯಗಳನ್ನೂ ಕಾರ್ಯಕ್ರಮವನ್ನೂ ತಯಾರಿಸುವರು. ಹೊಸಪಕ್ಷದ ಅಂಗರಚನೆಯನ್ನು ಸಮಾವೇಶವು ನಿರ್ಧರಿಸುವುದಲ್ಲದೆ ಪಕ್ಷದ ಕಾರ್ಯಕ್ರಮವನ್ನು ನಿಶ್ಚಯಿಸುವುದು.

ರಾಜಕೀಯದಲ್ಲಿ ಪಾತ್ರ ವಹಿಸಕೂಡದು

ಇನ್‌ಷೂರೆನ್ಸ್ ಏಜೆಂಟರಿಗೆ ಆಜ್ಞೆ

ಮೈಸೂರು ಸರ್ಕಾರದ ವಿಮಾಶಾಖೆಯವರು ತಮ್ಮ ವಿಮಾ ಏಜೆಂಟರುಗಳಿಗೆ ಇದೇ ೨೨ನೇ ತಾ॥ ಒಂದು ಗುಪ್ತ ಪ್ರಸಾರಣ ಪತ್ರ ಕಳುಹಿಸಿ 'ಏಜೆಂಟರುಗಳು ರಾಜಕೀಯ ಚಿಚ್ಚಾಸೆಗಳಲ್ಲಿಯೂ ಮತ್ತು ರಾಜಕೀಯ ಪಕ್ಷಪಾತ ಅಥವಾ ಪಕ್ಷದ್ವೇಷಗಳಲ್ಲಿಯೂ ಯಾವ ವಿಧವಾದ ಪಾತ್ರ ವಹಿಸಕೂಡದೆಂದೂ ಈ ಸಕ್ಯೂಲರಿಗೆ ವ್ಯತಿರಿಕ್ತವಾಗಿ ನಡೆದ ಪ್ರಸಂಗಗಳೇನಾದರೂ ಗಮನಕ್ಕೆ ಬಂದಲ್ಲಿ ತೀವ್ರವಾದ ಕ್ರಮವನ್ನು ಕೈಗೊಳ್ಳಲಾಗುವುದು' ಎಂದು ಕಟ್ಟಾಜ್ಞೆಯಿತ್ತಿರುವರು.

[ಪೂರ್ಣ ಸರ್ಕಾರಿ ನೌಕರರಿಗೆ ಈ ರೀತಿಯಾದ ಆಜ್ಞೆಯಿಕ್ಕುವಾಗಲೂ ಸರ್ಕಾರವು ಈಗಿನ ರಾಜ್ಯಾಂಗಕ್ಕೆ ವಿರೋಧವಾಗುತ್ತದೆಯೇ ಎಂಬುದನ್ನು ಪರಿಗಣಿಸಬೇಕಾಗಿದೆ. ಹೀಗಿರುವಲ್ಲಿ ಖಾಸಗಿಯ ಸರ್ಕಾರಿ ಜೀವಾವಿಮಾ ಏಜಂಟರುಗಳಿಗೆ ಈ ರೀತಿಯಾದ ಕಟ್ಟಾಜ್ಞೆಯನ್ನಿತ್ತಿರುವುದು ಅತ್ಯಂತ ವಿಚಿತ್ರವಾಗಿದೆ. ಈ ಆಜ್ಞೆಯನ್ನು ಮಾಡಲು ಕಾರಣವೇನು ?—ಸಂ.]

ಟೆಲಿವಿಷನ್ ಕಂಡು ಹಿಡಿದವರಾರು ?

ಟೆಲಿವಿಷನ್ ತಾವು ಕಂಡು ಹಿಡಿದು, ೪೦ ವರ್ಷಗಳ ಹಿಂದೆಯೇ ಅದರ ಮೂಲಕ ವಿಶ್ವಪ್ರಸಾರಮಾಡಲಾಯಿತೆಂದು ರಷ್ಯನರು ಹೇಳಿರುವರು. ಅದರ ೪೦ನೇ ವರ್ಷೋತ್ಸವವನ್ನು ಲೆನಿನ್ ಗ್ರಾಡ'ನಲ್ಲಿ ರಷ್ಯನರು ನಡೆಸಿದರು.

ಪರೀಕ್ಷೆಗೆ ಬಹಿಷ್ಕಾರ

ಕಲ್ಕತ್ತಾದಲ್ಲಿ ಎಂ. ಬಿ. ಬಿ. ಎಸ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದ್ದ ೭೦೦ ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಬಹಿಷ್ಕಾರ ಹಾಕಿರುವರು.

ನೆಹರೂ ನೇಪಾಳಕ್ಕೆ

ಪ್ರಧಾನಿ ನೆಹರೂ ಖಟ್ಮಂಡುವಿಗೆ ಮುಂದಿನ ತಿಂಗಳು ೧೬ನೇ ತಾ॥ ಭೇಟಿ ಕೊಡುವರು,

ಸರ್ಕಾರಿ ಆಜ್ಞೆಗಳು

ಬೆಂಗಳೂರು ಮೇ ೨೯

ಮೈಸೂರು ಸೇಲ್ಸ್‌ಟ್ಯಾಕ್ಸ್ ಆಫೀಸರ್ ಶ್ರೀ ಡಿ ಎನ್ ಪುಟ್ಟಣ್ಣನವರನ್ನು ಚಿತ್ರದುರ್ಗ ಸರ್ಕಲ್ಲಿಗೆ, ಅಲ್ಲಿದ್ದ ಶ್ರೀ ಎನ್ ನಾರಾಯಣಸ್ವಾಮಿ ಎಂಬವರನ್ನು ಮೈಸೂರಿಗೆ ವರ್ಗಾಯಿಸಲಾಗಿದೆ

ಡೆಪ್ಯುಟಿ ಚೀಫ್ ಇಂಜನಿಯರಾಗಿದ್ದ ಶ್ರೀ ಕೆ ಎಸ್. ವೆಂಕಟರಾಮಣನ್'ರವರಿಗೆ ನಿವೃತ್ತರಾಗುವ ಮುನ್ನ ಉಪಯೋಗಿಸಿಕೊಳ್ಳುವ ದಿನದಿಂದ ೨೯-೧೧ ೫೧ರ ವರೆಗೆ ರಜಾ ಕೊಡಲಾಗಿದೆ

ಮೈಸೂರು ಮೈನ್ಸ್ ಮತ್ತು ಎಕ್ಸ್‌ಪ್ಲೋಸೀವ್ಸ್ ಇಲಾಖೆಯು ಕೇಂದ್ರದೊಡನೆ ಐಕ್ಯವಾಗಿ ಹೋಗಿರುವುದರಿಂದ ೧-೪-೫೧ರ ಲಾಗಾಯ್ತು ಈ ಇಲಾಖೆಯು ಎರಡು ಭಾಗವಾಗಿ, ಗಣಿಗಳಶಾಖೆಯು ಉರಿಗಾಂನಲ್ಲಿರುವ ಇನ್‌ಸ್ಪೆಕ್ಟರ್ ಆಫ್ ಮೈನ್ಸ್, ಎಕ್ಸ್‌ಪ್ಲೋಸೀವ್ಸ್ ಶಾಖೆಯು ಮದ್ರಾಸಿನಲ್ಲಿರುವ ಇನ್‌ಸ್ಪೆಕ್ಟರ್ ಆಫ್ ಎಕ್ಸ್‌ಪ್ಲೋಸೀವ್ಸ್‌ರ ಅಡಳಿತಕ್ಕೊಳಪಟ್ಟಿದೆಯೆಂದು ಒಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಬಿ. ಎಲ್. ಬಂದೂಕಗಳನ್ನು ೧೦ ಎಕರೆಗಳಿಗಿಂತ ಹೆಚ್ಚಾಗಿ ಜಮೀನುಳ್ಳವರೆಲ್ಲರೂ ಪಡೆಯುವಂತೆ ಸರ್ಕಾರದವರು ಬಂದೂಕ ಲೈಸೆನ್ಸ್ ಆಜ್ಞೆಯನ್ನು ತಿದ್ದುಪಡಿ ಮಾಡಿರುವರು.

ಕಾಂಗ್ರೆಸ್ಸಿಗೆ ಸ್ವತಂತ್ರ ಸ್ಥಾನವಿಲ್ಲ

ಬ್ರಿಟಿಷರನ್ನು ಭಾರತದಿಂದ ಹೊರದೂಡಲು ಶ್ರಮಿಸಿದ ಕಾಂಗ್ರೆಸ್ ಸಂಸ್ಥೆಯು ಈಗ ಜೀವರಹಿತವಾಗಿದೆ ಅಥವಾ ಸರ್ಕಾರದ ವಶದಲ್ಲಿದೆ. ಅದಕ್ಕೆ ಸ್ವಾತಂತ್ರ್ಯ ಸ್ಥಾನವೇಯಿಲ್ಲ ಎಂದು ಹೇಳಿ ಬೀಹಾರಿನ ಹಿರಿಯ ಕಾಂಗ್ರೆಸ್ ನಾಯಕ ಶ್ರೀ ರಾಮನಾರಾಯಣಸಿಂಗ್'ರವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿರುವರು.

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ಅಮೋಘ ೨ನೇ ವಾರ

ಮೋಹನ್ಸ್‌ರವರ— * ಭೀಮ್ ಸೇನ್ *

ಪಾತ್ರ-ನಿರೂಪರಾಯ್, ವಸಂತರಾವ್‌ಪೈಲ್ವಾನ್, ತ್ರಿಲೋಕ್‌ಕಪೂರ್, ರಾಜಸಿಂಗ್.

ಪತ್ರವ್ಯವಹಾರ

ನರಗಳ ರೋಗಗಳಿಗೆ ಅದ್ಭುತ ಚಿಕಿತ್ಸೆ

ಡಾ॥ ಮುತ್ತುಕೃಷ್ಣ ಎಂಬುವರು ಈಗ ಸುಮಾರು ಎರಡು ತಿಂಗಳಿಂದಲೂ ಮೈಸೂರು ತೀರ್ಥರಾಮಶೆಟ್ಟಿ ಚಾಮುಂಡೇಶ್ವರಿ ಭವನದಲ್ಲಿ ಬಿಡಾರಮಾಡಿ ಅನೇಕವಿಧವಾದ ನರಸಂಬಂಧವಾದ ರೋಗಗಳಿಗೆ ತುಂಬಾ ಫಲಕಾರಿಯಾದ ಚಿಕಿತ್ಸೆ ನಡೆಸುತ್ತಿದ್ದಾರೆ ಇವರ ಚಿಕಿತ್ಸೆಯ ವೈಶಿಷ್ಟ್ಯವೇನೆಂದರೆ ಶರೀರದ ಮೇಲೆ ಲೇಪನಾದಿಗಳನ್ನು ಮಾಡುವುದಲ್ಲದೆ ಮಾನಸಿಕವಾದ ವಶೀಕರಣ ಚಿಕಿತ್ಸೆ ಮಾಡುತ್ತಾರೆ. ಇದಕ್ಕೆ ಅವರು 'ಸೈಕೊ ಟ್ರೀಟ್‌ಮೆಂಟ್' ಎಂದು ಹೇಳುತ್ತಾರೆ ಈವರೆಗೆ ಅನೇಕ ಪಾರ್ಶ್ವವಾಯು, ಕೀಲು ಬೇನೆ ಮತ್ತು ನರಗಳ ದೌರ್ಬಲ್ಯದಿಂದ ಕೈಕಾಲು ನಡುಕ—ಮೂರ್ಛೆರೋಗ (ಮೂರ್ಛೆ) ಮುಂತಾದುವುಗಳಿಗೆ ತುಂಬಾ ಪರಿಣಾಮಕಾರಿಯಾದ ಚಿಕಿತ್ಸೆಮಾಡಿ ಅನೇಕ ಬಡವ ಬಲ್ಲಿದರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈಚೆಗೆ ಒಂದೆರಡು ಪತ್ರಿಕೆಗಳಲ್ಲಿ ಅವರ ಚಿಕಿತ್ಸೆಯ ಮೇಲೆ ಸ್ವಲ್ಪ ಟೀಕೆ ಬಂದಿರುವುದನ್ನು ನೋಡಿ, ಸಾಮಾನ್ಯವಾಗಿ ಜನರಿಗೆ ಡಾಕ್ಟರವರ ಸಾಮರ್ಥ್ಯದ ಬಗ್ಗೆ ಸಂಶಯ ಬರಬಹುದು. ಹಾಗೆ ಯಾರೂ ಸಂದೇಹಪಡಬೇಕಾಗಿಲ್ಲ ಡಾಕ್ಟರವರಲ್ಲಿ ನನ್ನ ಮಗನಿಗೆ ಈಗ ೮—೧೦ ದಿವಸಗಳಿಂದ ನಾನೂ ಚಿಕಿತ್ಸೆ ಮಾಡಿಸುತ್ತಿದ್ದೇನೆ. ಅವನಿಗೆ ಗುಣವಾಗುತ್ತಿರುವುದು ನನ್ನ ಅನುಭವಕ್ಕೆ ಬಂದಿರುತ್ತೆ. ಆದ್ದರಿಂದ ನರ ಸಂಬಂಧವಾದ ರೋಗಗಳಿಂದ ನರಳುವವರು ಈ ಸದವಕಾಶವನ್ನು ಉಪಯೋಗಿಸಿಕೊಂಡು ತಮ್ಮ ಕರ್ಮಶೇಷವನ್ನು ನೀಗಿಸಿಕೊಳ್ಳಲೆಂದು ಈ ಮೂಲಕ ಬಯಸುತ್ತೇನೆ—

ಎಸ್. ರಂಗಾಚಾರ್ಯ,
೨೯೭೯ ಆರನೇ ಮೇನ್ ರಸ್ತೆ
ವಾಣಿವಿಲಾಸಮೊಹಲ್ಲಾ, ಮೈಸೂರು

‡ ಉತ್ತರ ಪ್ರದೇಶದಲ್ಲಿ ಸುಮಾರು 7000 ಮಕ್ಕಳಿಗೆ ಮತ್ತು ತಾಯಂದಿರಿಗೆ ಉಚಿತವಾಗಿ ಹಂಚಲು ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಸಂಸ್ಥೆಯು ಹಾಲನ್ನು ದಾನವಾಗಿ ಕೊಟ್ಟಿದೆ.

‡ ಏಷ್ಯಾ ದೇಶಗಳ ಸ್ವತಂತ್ರ ಟ್ರೇಡ್ ಯೂನಿಯನ್ನುಗಳ ಸಮ್ಮೇಳನವು ಮೊನ್ನೆಯಿಂದ ಕರಾಚಿಯಲ್ಲಿ ಆರಂಭವಾಗಿದೆ

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೋ ಮೈಸೂರು
ಮುದ್ರಕರು :—ಹಿ. ಕಾ. ಸುಬ್ಬರಾವ್, ನ್ಯೂ ಮುದ್ರಣಾಲಯ, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೧—೫—೧೯೫೧ ಗುರುವಾರ [ಸಂಚಿಕೆ ೨೭೧

ಶ್ರೀ ಕಾರಿಯಪ್ಪನವರ ಕಾರ್ಯಕ್ರಮ

ಮೈಸೂರು ಮೇ ೩೦

ಭಾರತ ಸೇನೆಗಳ ಸಿ. ಇನ್. ಸಿ. ಜ|| ಕಾರಿಯಪ್ಪನವರು ನಾಳೆ ಮಡಿಕೇರಿಯಿಂದ ಆಗಮಿಸಿ ಅವರಿಗಾಗಿ ಕ್ಯಾತೇದೇವರ ಗುಡಿಯಲ್ಲಿ ನಾಲ್ಕು ದಿನ ಏರ್ಪಡಿಸಿರುವ ಷೂಟಿಂಗ್ ಕ್ಯಾಂಪಿಗೆ ತೆರಳುವರು.

ಒಂದೂವರೆ ಮೈಲಿಗೊಂದು ಸ್ಕೂಲ್

ಉತ್ತರ ಪ್ರದೇಶ ಸರ್ಕಾರವು ಐದು ವರ್ಷಗಳ ಯೋಜನೆಯೊಂದನ್ನು ತಯಾರಿಸಿ ಉತ್ತರ ಪ್ರದೇಶದಲ್ಲೆಲ್ಲಾ ೧|| ಮೈಲಿಗೊಂದರಂತೆ ಪ್ರತಿಹಳ್ಳಿಯಲ್ಲಿಯೂ ಪ್ರೈಮರಿ ಶಾಲೆಗಳನ್ನು ಸ್ಥಾಪಿಸುವುದು. ಈ ಯೋಜನೆಯಂತೆ ಈ ವರ್ಷ ೨೫೦೦ ಪ್ರೈಮರಿ ಶಾಲೆಗಳನ್ನು ತೆರೆಯುವುದು.

ಕಾಂಗ್ರೆಸ್ ಧ್ಯೇಯ ಅರಿತುಕೊಳ್ಳದಿರುವವರು ಸಂಸ್ಥೆ ತ್ಯಜಿಸಲಿ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಶ್ರೀ ಹನುಮಂತಯ್ಯನವರಿಗೆ ವಿಶೇಷ ಆಹ್ವಾನ

ಸಂಸ್ಥಾನದ ಅಭಿವೃದ್ಧಿಗೆ ೩೨ ಕೋಟಿ ರೂ. ಯೋಜನೆ

ಸ್ವ.ಸು. ಫೋನ್] ಬೆಂ. ಮೇ ೩೦

ಶಾಸನ ಸಭೆಯು ಈದಿನ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನಡದು ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಪುನರ್‍ರಚನೆಯ ತಿದ್ದುಪಡಿ ಮಸೂದೆಗಳನ್ನು ಸಭೆಯು ಅಂಗೀಕರಿಸಿತು. ಸಂಸ್ಥಾನದ ಅಭಿವೃದ್ಧಿಗಾಗಿ ಸರ್ಕಾರವು ೩೨ ಕೋಟಿ ರೂ.ಗಳ ಒಂದು ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದೆಯೆಂದೂ ಕೇಂದ್ರ ಸರ್ಕಾರದ ಆಯೋಜನಾಮಂಡಲಿಯು ಮುಂದೆ ಈ ಯೋಜನೆಗಳಿರುವುದರಿಂದ ಸಧ್ಯಕ್ಕೆ ಅದನ್ನು ಹೊರಗೆಡಹಲಾಗುವುದಿಲ್ಲವೆಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈದಿನ ಶಾಸನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಮುಂದಿನ ತಿಂಗಳ ಮೊದಲನೇ ವಾರದ ಒಳಗೆ ಈ ಯೋಜನೆಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರಲಾಗುವುದೆಂದೂ ಕೇಂದ್ರ ಸರ್ಕಾರವು ಈ ಯೋಜನೆಗಳಿಗಾಗಿ ೮ ಕೋಟಿ ರೂ. ಗಳನ್ನು ಕೊಡುವುದೆಂದು ಶ್ರೀ ಕೆ. ಸಿ. ರೆಡ್ಡಿಯವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಕಂದಾಯದ ರಿಯಾಯಿತಿ

ಒಂಗಾರು ಪೇಟೆಯ ೭೫ ಗ್ರಾಮಗಳಲ್ಲಿ ಕಳೆದ ವರ್ಷ ಮಳೆ ಸಕಾಲಕ್ಕೆ ಬರದೆ ಬೆಳೆಯಾಗದಿದ್ದ ಜಮೀನುಗಳ ಕಂದಾಯದ ಬಗ್ಗೆ ಸರ್ಕಾರದವರು ೧೧,೨೭೧ ರೂ. ಕಂದಾಯದ ರಿಯಾಯಿತಿ ಕೊಟ್ಟಿರುವರು.

ಆದಾಯ ಹೆಚ್ಚಿತು

ಮದ್ರಾಸ್ ಪ್ರಾಂತ್ಯಕ್ಕೆ ಈ ಸಾಲಿಗೆ ಅರಣ್ಯದ ಬಾಬ್ತಿನಲ್ಲಿ ಏಳು ಲಕ್ಷ ರೂಗಳ ಹೆಚ್ಚಿನ ಆದಾಯ ಬಂದಿದೆ. ಈ ಆದಾಯವು ಗಂಧದ ಮರದ ಮಾರಾಟದಿಂದ ಹೆಚ್ಚಿದೆ.

ಭಾರತ ಇರಾಕ್ ವಾಣಿಜ್ಯ ಒಪ್ಪಂದ

ದೆಹಲಿಯಲ್ಲಿ ನಿನ್ನೆದಿನ ಭಾರತಕ್ಕೂ ಈ ರಾಕಿಗೂ ವಾಣಿಜ್ಯ ಒಪ್ಪಂದವಾಗಿ ಭಾರತ ಸರ್ಕಾರದ ಪರವಾಗಿ ಕೈಗಾರಿಕಾ ಮತ್ತು ವಾಣಿಜ್ಯ ಸಚಿವ ಶ್ರೀ ಹರೇಕೃಷ್ಣ ಮೆಹತಾಬರೂ ದೆಹಲಿಯಲ್ಲಿರುವ ಇರಾಕ್ ಪ್ರತಿನಿಧಿಯೂ ಈ ಒಪ್ಪಂದಕ್ಕೆ ಸಹಿ ಹಾಕಿರುವರು. ಈ ಒಪ್ಪಂದದಿಂದ ಉಭಯ ದೇಶಗಳಲ್ಲೂ ಸಾಮಾನು ಸರಂಜಾಮುಗಳ ಸಾಗಾಣಿಕೆಯು ಉತ್ತಮಗೊಂಡು ಉಭಯ ದೇಶಗಳಲ್ಲೂ ಸುಂಕದ ರಿಯಾಯಿತಿಯನ್ನೇರ್ಪಡಿಸಲಾಗಿದೆ.

ತುಟ್ಟೀ ಭತ್ಯ

ಉಪಾಧ್ಯಾಯರಿಗೆ ತುಟ್ಟೀ ಭತ್ಯವನ್ನು ಕೊಡಲು ಪ್ರಸ್ತುತ ಆರ್ಥಿಕ ಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದು ಮೈಸೂರು ಶಾಸನ ಸಭೆಯಲ್ಲಿ ವಿದ್ಯಾ ಸಚಿವರು ಹೇಳಿರುವರು.

ಪ್ರಜಾ ಪ್ರಾತಿನಿಧ್ಯ ಮಸೂದೆ

ಪಾರ್ಲಿಮೆಂಟಿನಲ್ಲಿ ಮಂಡಿಸಿರುವ ಪ್ರಜಾ ಪ್ರಾತಿನಿಧ್ಯ ಮಸೂದೆಯನ್ನು ಭಾರತದ ಪ್ರಮುಖ ಭಾಷೆಗಳಿಗೆ ತರ್ಜುಮೆ ಮಾಡಲಾಗುವುದು.

ನ್ಯಾಯ ಸಮ್ಮೇಳನ

ಆಸ್ಟ್ರೇಲಿಯಾದಲ್ಲಿ ಜೂಬಿಲಿ ಮಹೋತ್ಸವ ಅಂಗವಾಗಿ ನಡೆಯಲಿರುವ ನ್ಯಾಯ ಸಮ್ಮೇಳನದಲ್ಲಿ ಭಾರತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹಿರಾಲಾಲ್ ಕನಿಯಾರವರು ಭಾಗ ವಹಿಸಲು ಹೋಗುವರು.

ಭಾರತಕ್ಕೆ ನಾರ್ವೆ ಸಹಾಯ

ಅಮೆರಿಕಾದಿಂದ ಆಹಾರ-ಪದಾರ್ಥಗಳನ್ನು ತ್ವರಿತವಾಗಿ ಭಾರತಕ್ಕೆ ತರಲು ನಾರ್ವೆಯು ಹಡಗುಗಳ ಸರಬರಾಯಿ ಮಾಡಲಿದೆಯೆಂದು ಹೇಳಲಾಗಿದೆ.

ಆಹಾರ ಪರಿಸ್ಥಿತಿ ಹದಗೆಟ್ಟಿದೆ

ಮದರಾಸು ಪ್ರಾಂತ್ಯದ ಧರ್ಮಪುರಿ ತಾ|| ನಲ್ಲಿ ಆಹಾರ-ಪರಿಸ್ಥಿತಿ ಉತ್ತಮವಾಗಿಲ್ಲವೆಂದು ಮದರಾಸಿನ ಮುಖ್ಯಮಂತ್ರಿ ಹೇಳಿರುವರು.

ರಾಜ್ಯಾಂಗಕ್ಕೆ ತಿದ್ದುಪಡಿ ಮಸೂದೆ

ಪಂಡಿತ ನೆಹರೂರವರ ಸ್ಪಷ್ಟೋಕ್ತಿ

ಭಾರತದ ಪ್ರಧಾನಿ ಪಂಡಿತ ನೆಹರೂರವರು ಮೊನ್ನೆ ಪಾರ್ಲಿಮೆಂಟಿನಲ್ಲಿ ಚುನಾಯಿತ ಸಮಿತಿಯವರು ರಾಜ್ಯಾಂಗಕ್ಕೆ ತಿದ್ದುಪಡಿ ಸೂಚಿಸಿರುವ ಮಸೂದೆಯನ್ನು ಮಂಡಿಸಿ ರಾಜ್ಯಾಂಗವು ದೇಶಕ್ಕೆ ಪವಿತ್ರವಾದ ಅಂಗವೆಂದೂ ಇದು ಸಚೇತವಾಗಿರುವಂತೆ ಮಾಡುವುದೇ ಸರ್ಕಾರದ ಉದ್ದಿಶ್ಯವೆಂದು ತಿಳಿಸಿದರು. ಹೀಗೆ ರಾಜ್ಯಾಂಗ ಸಚೇತವಾಗಿರಬೇಕಾದರೆ ಅಗತ್ಯವಾದ ಬದಲಾವಣೆಗೆ ಅವಕಾಶವಿರಬೇಕೆಂದರು.

ಅಸಮಾನರಾಗಿ ತೀರಾ ಹಿಂದುಳಿದವರ ಅಸಮಾನತೆಯನ್ನು ಹೋಗಲಾಡಿಸಲು ಅಂಥವರಿಗೆ ಹಲವು ಸೌಕರ್ಯ ಕಲ್ಪಿಸಲಾಗಿದೆಯೆಂದೂ ಆದರೆ ಯಾರೂ ಕೇವಲ ತಮ್ಮ ಮತ ಅಥವಾ ಕೋಮಿನ ಹಿತದೃಷ್ಟಿಯಿಂದ ದೇಶದ ಹಿತವನ್ನು ಬಿಟ್ಟುಕೊಡಬಾರದೆಂದರು.

ಜಾತ್ಯಾತೀತ ಸರ್ಕಾರವನ್ನು ಸ್ಥಾಪಿಸಬೇಕೆಂದಿರುವ ಭಾರತದ ಮುಖ್ಯ ಗುರಿಗೆ ಯಾವ ಸರ್ಕಾರವೂ ವಿರುದ್ಧವಾಗಿ ಹೋಗುವುದಿಲ್ಲವೆಂದು ತಾವು ಭಾವಿಸುವುದಾಗಿ ನೆಹರೂರವರು ತಿಳಿಸಿದರು.

ವಾಕ್ ಮತ್ತು ನಿರೂಪಣಾ ಸ್ವಾತಂತ್ರ್ಯವನ್ನು ಪಂಡಿತ ನೆಹರೂರವರು ಪ್ರಸ್ತಾಪಿಸಿ ಭಾರತ ಸರ್ಕಾರವು ಪತ್ರಿಕಾ ಸ್ವಾತಂತ್ರವನ್ನು ಕಸಿದುಕೊಳ್ಳುವುದಿಲ್ಲವೆಂದು ಹೇಳಿದರು. ಈ ತಿದ್ದುಪಡಿ ಮಸೂದೆಯ ಮೇಲೆ ಪ್ರೊ|| ಕೆ. ಟಿ. ಷಾ ಮತ್ತು ಜ|| ನಜೀರ್ ಉದ್ದೀನ್ ಅಹಮದ್‌ರವರು ಮಾತಾಡಿದರು. ಸಭೆಯಲ್ಲಿ ಚರ್ಚೆಯನ್ನು ಮುಂದುವರಿಸಲಾಯಿತು.

ಮಂತ್ರಿಗಳ ತುಟ್ಟಿಭತ್ಯ ಅತಿಕಡಮೆ

ಎಲ್ಲಾ ಪ್ರಾಂತ್ಯಗಳಿಗಿಂತ ಮೈಸೂರಿನಲ್ಲಿ ಮಂತ್ರಿಗಳು ಅತಿಕಡಮೆ ತುಟ್ಟಿಭತ್ಯ ತೆಗೆದುಕೊಳ್ಳುತ್ತಲಿರುವುದಾಗಿ ಮುಖ್ಯಮಂತ್ರಿಗಳು ಇಂದು ಶಾಸನಸಭೆಯಲ್ಲಿ ತಿಳಿಸಿದರು

ಸ್ವ ಸು ಫೋನ್] ಬೆಂ. ಮೇ ೩೦

ಮುಂದಿನ ತಿಂಗಳು ೧೨ನೇ ತಾ|| ನಡೆಯಲಿರುವ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯನವರಿಗೆ ವಿಶೇಷ ಆಹ್ವಾನ ಬಂದಿದೆ

ಶ್ರೀ ಸಿ. ಡಿ. ದೇಶಮುಖ್‌ರ ಹೇಳಿಕೆ

ಭಾರತ ಪಾರ್ಲಿಮೆಂಟಿನಲ್ಲಿ ನಿನ್ನೆ ಆರ್ಥಿಕ ಸಚಿವ ಶ್ರೀ ಸಿ. ಡಿ. ದೇಶಮುಖ್ ಹೇಳಿಕೆ ಕೊಟ್ಟು ಉಭಯ ಸರ್ಕಾರಗಳಲ್ಲೂ ಹಲವು ಅಂಶಗಳ ಬಗ್ಗೆ ವಿವರಣೆ ಬೇಕಾಗಿದ್ದುದರಿಂದ ಭಾರತ ಮತ್ತು ಪಾಕಿಸ್ಥಾನಗಳ ಸಮ್ಮೇಳನವನ್ನು ಮುಂದುವರಿಸಲಾಯಿತೆಂದು ತಿಳಿಸಿರುವರು. ಬಹುಶಃ ಸಮ್ಮೇಳನವು ಕರಾಚಿಯಲ್ಲಿ ಜುಲೈ ಕೊನೆಯವಾರ ಅಥವಾ ಆಗಸ್ಟ್‌ನಲ್ಲಿ ನಡೆಯಬಹುದೆಂದು ಸಚಿವರು ತಿಳಿಸಿರುವರು.

ಕಾರ್ಮಿಕ ಸಮ್ಮೇಳನ

ಕರಾಚಿಯಲ್ಲಿ ನಡೆಯುತ್ತಿರುವ ಏಷ್ಯಾ ಪ್ರಾದೇಶಿಕ ಕಾರ್ಮಿಕ ಸಮ್ಮೇಳನದಲ್ಲಿ ಹೋಟೇಲು ಕೆಲಸಗಾರರ ಪರಿಸ್ಥಿತಿಯನ್ನು ಚರ್ಚಿಸಲಾಯಿತು.

ಕೈಗಾರಿಕಾ ಸಮಿತಿ

ಮೈಸೂರು ಸರ್ಕಾರದವರು ೯ ಸದಸ್ಯರುಳ್ಳ ಕೈಗಾರಿಕಾ ಸಮಿತಿಯನ್ನು ನೇಮಿಸಲಿರುವರು.

ಬಿಹಾರಿಗೆ ೫೦,೦೦೦ ರೂ.

ಪ್ರಧಾನ ಮಂತ್ರಿಯವರ ರಿಲೀಫ್ ಫಂಡಿನಿಂದ ಪ್ರಧಾನಿ ಪಂಡಿತ ನೆಹರೂರವರು ೫೦ ಸಾವಿರ ರೂಗಳನ್ನು ಬಿಹಾರಿಗೆ ಕೊಟ್ಟಿರುವರು.

ಪಾರ್ಲಿಮೆಂಟಿನ ಅಧಿವೇಶನ

ಪಾರ್ಲಿಮೆಂಟಿನಲ್ಲಿ ನಿನ್ನೆ ರಾಜ್ಯಾಂಗಕ್ಕೆ ತಿದ್ದುಪಡಿ ಮಂಡಿಸುವ ಮಸೂದೆಯ ಮೇಲೆ ಡಾ|| ಶ್ಯಾಮಪ್ರಸಾದ್ ಮುಖರ್ಜಿ, ಆಚಾರ್ಯ ಕೃಪಲಾನಿ, ಠಾಕೂರ್. ದಾಸ್‌ಭಾರ್ಗವ ಮತ್ತು ಶ್ರೀ ಎಸ್.ಎಸ್ ಗುರುಸ್ವಾಮಿರವರು ಮಾತಾಡಿದರು. ಪ್ರತಿಯೊಬ್ಬರೂ ಅಭಿಪ್ರಾಯ ಮತ್ತು ನಿರೂಪಣದ ಸ್ವಾತಂತ್ರ್ಯವನ್ನು ಮೊಟಕುಮಾಡಬಾರದೆಂದು ತಿಳಿಸಿರುವರು.

ವ್ಯವಸಾಯ ಸಾಮಗ್ರಿಗಳ ಸರಬರಾಜು

ಮೈಸೂರು ಜಿಲ್ಲಾ ರೈತರ ಸಂಘದ ಕಾರ್ಯದರ್ಶಿಗಳಾದ ಸಿ ಜಿ ದೇವನಾಥ'ರವರೂ ಮತ್ತು ಮೈಸೂರು ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಶಿವನಂಜೇಗೌಡರು ಈ ರೀತಿ ಹೇಳಿಕೆಯನ್ನಿತ್ತಿದ್ದಾರೆ

ಈಗಾಗಲೇ ನಮ್ಮ ಜಿಲ್ಲೆಯಲ್ಲೂ ಮತ್ತು ಸಂಸ್ಥಾನದ ಇತರ ಭಾಗಗಳಲ್ಲಿ ಮಳೆಯಾಗಿ ರೈತರು ವ್ಯವಸಾಯೋದ್ಯಮವನ್ನು ಕೈಗೊಂಡಿದ್ದಾರೆ ಯಾವ ಕೈಗಾರಿಕೆ ಅಥವಾ ಕಸಬಾಗಲೀ ಸಲಕರಣೆಗಳಿಲ್ಲದಿದ್ದರೆ ಎಲ್ಲಾ ಪ್ರಯತ್ನದ ಉತ್ಸಾಹ ಮತ್ತು ಕಾರ್ಯ ತತ್ಪರತೆ ನಿಷ್ಫಲವಾಗುತ್ತದೆ ರೈತರಿಗೆ ಈಗ ಹೇರಳವಾಗಿಯೂ ಮತ್ತು ಎಲ್ಲಾ ಕಡೆಗಳಲ್ಲಿಯೂ ಕಂಟ್ರೋಲ್ ದರಗಳಿಗೆ ಗುಳ, ಗುದ್ದಲಿ, ಗಾಡಿಪಟ್ಟಿ, ಮತ್ತಿತರ ಸಲಕರಣೆಗಳು ಅತ್ಯಗತ್ಯವಾಗಿ ಬೇಕಾಗಿದೆ ಸರ್ಕಾರದವರು ಈ ಸಮಯದಲ್ಲಿ ಸಕಾಲದಲ್ಲಿ ಈ ವ್ಯವಸಾಯ ಸಾಮಗ್ರಿಗಳನ್ನು ರೈತನಿಗೆ ಸರಬರಾಜು ಮಾಡುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ ಈ ಪವಿತ್ರ ಕರ್ತವ್ಯದಲ್ಲಿ ಅಧಿಕಾರಿ ವರ್ಗದವರು ಸಮಾಧಾನಕರವಾಗಿ ನಿರ್ವಹಿಸಲು ಸಾಧ್ಯವಾಗದಿದ್ದರೆ ಅದು ನಮ್ಮ ದೌರ್ಭಾಗ್ಯ ಮಳೆ ಬಿದ್ದು ವ್ಯವಸಾಯ ಕಾರ್ಯಾಚರಣೆಯನ್ನು ರೈತನು ಕೈಗೊಳ್ಳುವ ಸಮಯದಲ್ಲಿ ಅವನಿಗೆ ಸಾಮಗ್ರಿಗಳು ದೊರೆಯದಿದ್ದರೆ ಅವನ ತಪ್ಪೇನು? ವರ್ಷದ ಕೊನೆಯಲ್ಲಿ ಹೆಚ್ ಎಸ್ ಲೆಕ್ಕಗಳನ್ನು ಬರೆದು ಧಾನ್ಯ ವಸೂಲಿಯನ್ನು ಕೈಗೊಂಡಿರುವ ಅಧಿಕಾರ ವರ್ಗದವರೂ ಈ ತಮ್ಮ ಕರ್ತವ್ಯವನ್ನೇ ಪರಿಪಾಲಿಸಬೇಕು. ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಲೋಪಬಂದರೆ ಸುಗ್ಗಿ ಸಮಯದಲ್ಲಿ ರೈತನಿಂದ ಧಾನ್ಯ ವಸೂಲ್ಮಾಡುವುದಕ್ಕೆ ಯಾವ ನೈತಿಕ ಆಧಾರವು ಇಲ್ಲ ಮತ್ತೆ ಧರ್ಮವೂ ಅಲ್ಲ ಈ ವಿಷಯದಲ್ಲಿ ಸರಬರಾಜು ಸ್ವಲ್ಪ ತಡವಾದರೂ ಅಷ್ಟೇ ಪ್ರಯೋಜನಕಾರಿಯಾಗುವುದಿಲ್ಲ ಹಲ್ಲಿದ್ದಾಗ ಕಡಲೆ ಇಲ್ಲ ಕಡಲೆಯಿದ್ದಾಗ ಹಲ್ಲಿಲ್ಲವೆಂಬ ನಾಣ್ಣುಡಿಯಂತೆ ಆಗುವುದು ಈಗಾಗಲೇ ಅನೇಕ ಕಡೆ ಸರಬರಾಜು ತೃಪ್ತಿಕರವಾಗಿಲ್ಲವೆಂದು ತಿಳಿದು ಬರುತ್ತದೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ರೈತರು ಹೆಚ್ಚಿನ ಬೆಲೆ ಕೊಟ್ಟು ಕೊಳ್ಳಬೇಕಾದ ಸಂದರ್ಭ ಬಂದಿದೆ ಉದಾಹರಣೆಗಾಗಿ ೧೪ ಆಣೆಯಿರುವ ಗುಳಕ್ಕೆ ೧||ರೂಪಾಯಿ ೩೪ ರೂಪಾಯಿ ಗಾಡಿ ಪಟ್ಟಿಗೆ ೧೧೦-೧೨೦ ರೂಪಾಯಿಗಳು ಕೊಡಬೇಕು ಗಾಡಿ ಸಾಮಾನು ಪಟ್ಟಿ, ಅರೆಕಾಲು, ಈ ಹಿಂದೆ ೫೦-೬೦ ರೂಪಾಯಿಗಳಿಗೆ ಸರ್ಕಾರದವರೇ ಡಿಪೋ ಇಟ್ಟು ಸರಬರಾಜು ಮಾಡುತ್ತಿದ್ದರು ಈಗ ಡಿಪೋಗಳು ರದ್ದಾಗಿವೆ ರೈತರು ೧೫೦ ರೂಪಾಯಿಗಳನ್ನು ಇದ್ದಿಲ್ಲದೆ ಪಾರಿ

ಅಡ್ಡಕುಟ್ಟೆ, ಗುಂಬಿ ಇತರ ಮರ ಇವುಗಳಿಗೆ ಬೇರೆ ಬೆಲೆ ಕೊಡಬೇಕು ರೈತರು ಈ ಧಾರಣೆಗಳನ್ನು ಕೊಟ್ಟರೂ ಅವರಿಗೆ ಈ ಸಾಮಾನುಗಳು ದೊರೆಯುತ್ತಿಲ್ಲ ಈ ಕಲವು ವಿಷಯಗಳನ್ನು ಪರಿಶೀಲಿಸಿ ರೈತರಿಗೆ ಸಲಕರಣೆಗಳನ್ನು ಸಕಾಲದಲ್ಲಿ ಸರಬರಾಜು ಮಾಡದಿದ್ದರೆ ಹೆಚ್ಚಿಗ ಆಹಾರ ಬೆಳೆಯುವ ಯೋಜನೆಗಳು ಹೇಗೆ ಯಶಸ್ವಿಯಾಗುತ್ತದೆ ರೈತನು ಯಾವ ಉತ್ಸಾಹ ಮತ್ತು ಆಸಕ್ತಿಯಿಂದ ವ್ಯವಸಾಯ ಮಾಡುತ್ತಾನೆ ಸರ್ಕಾರದವರು ಕೂಡಲೇ ಈ ವಿಷಯದ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿ ಎಲ್ಲಾ ಪ್ರಯತ್ನಗಳನ್ನು ಮಾಡುವ ರೈತರಿಗೆ ಈ ಅನುಕೂಲಗಳನ್ನು ದೊರಕಿಸಿಕೊಡುವರೆಂದು ನಂಬಿರುತ್ತೇವೆ

ಕಾರ್ಮಿಕರ ಮುಷ್ಕರ

ಬೊಂಬಾಯಿ ಕಾರ್ಮಿಕನೊಬ್ಬನನ್ನು ಪೋಲೀಸ್ ಅಧಿಕಾರಿಯು ಚಾಟಿಯಿಂದ ಹೊಡೆದನೆಂಬ ವದಿಯನ್ನು ಕೇಳಿ ಬಿಹಾರಿಗೆಂದು ಆಹಾರವನ್ನೊಯ್ಯುತ್ತಿದ್ದ ಏಳು ಹಡಗುಗಳಿಂದ ಸಾಮಾನುಗಳನ್ನಿಳಿಸುವ ಕಾರ್ಯಾಚರಣೆಯನ್ನು ಬೊಂಬಾಯಿಯ ಸಮುದ್ರ ತೀರದಲ್ಲಿನ ೨೦೦೦ ಮಂದಿ ಕಾರ್ಮಿಕರು ನಿಲ್ಲಿಸಿಬಿಟ್ಟರು.

ಇನ್ಸ್‌ಪೆಕ್ಟರು ಚಾಟಿಯಿಂದ ಕಾರ್ಮಿಕನೊಬ್ಬನಿಗೆ ಹೊಡೆದ ಪ್ರಸಂಗದ ಬಗ್ಗೆ ತನಿಖೆ ನಡೆಸಲು ಪೋಲೀಸ್ ಕಮಿಷನರ್‌ರವರು ಭರವಸೆ ಕೊಟ್ಟ ಬಳಿಕ ಮಧ್ಯಾಹ್ನ ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿದರು

ಭಾರತ ರಾಜ್ಯಾಂಗದ ನಿಯಮಾನುಸಾರವಾಗಿ ೧೦ ವರ್ಷಗಳೊಳಗಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡಲು ಸರ್ಕಾರದ ಯೋಜನೆ ತಯಾರಾಗುತ್ತಲಿದೆ.

ಜೀವಾವಧಿ ಲೈಸೆನ್ಸ್ ರದ್ದು

ಮಾನ್ಯ ಸಚಿವ ಶ್ರೀ ಟಿ. ಮರಿಯಪ್ಪನವರು ಮತ್ತು ಶ್ರೀ ಹೆಚ್ ಸಿದ್ದಯ್ಯನವರು ಶಿವಮೊಗ್ಗೆಗೆ ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ೨೬ನೇ ತಾರೀಖು ಬೆಳಿಗ್ಗೆ ಕಡೂರಿನಿಂದ ಬೀರೂರಿಗೆ ಬರುವವರೆಗೂ ಸುಮಾರು ೩ ಮೈಲಿಗಳಿಂದ ಖಾಜಿ ಗರೀಬ್ ನವಾಜ್ ಟ್ರಾನ್ಸ್‌ಪೋರ್ಟ್ ಲಾರಿಯ ಡ್ರೈವರ್ [ಎಂ ವೈ. ೫೦೨ ಜಡ್] ಅನೇಕ ಬಾರಿ ಕಾರಿನ ಹಾರ್ನ್ ಶಬ್ದ ನೀಡಿದಾಗ್ಯೂ ಸೈಡ್ ಕೊಡದೆ ಇದ್ದುದರಿಂದ ಕೊನೆಗೆ ಮಂತ್ರಿಗಳು ಕಾರನ್ನು ಡ್ರೈವರ್ ಲಾರಿಗೆ ಅಡ್ಡವಾಗಿ ನಿಲ್ಲಿಸಿ ಇಲ್ಲಿಯ ಪೋಲೀಸ್ ಸ್ಟೇಷನ್‌ಗೆ ತಂದು ಪೋ|| ಸ|| ಇನ್ಸ್‌ಪೆಕ್ಟರ್, ದಫೇದಾರರಿಗೆ ಹೇಳಿಕಳಿಸಿ ಸುಮಾರು ಅರ್ಧ ಘಂಟೆವರೆಗೂ ಕಾದರು. ನಂತರ ದಫೇದಾರ್ ಬಂದಾಗ ಆತನ ವಶಕ್ಕೆ ಡ್ರೈವರ್ ಲಾರಿಯನ್ನು ಕೊಟ್ಟು ಈತನಿಗೆ ಜೀವಾವಧಿ ಡ್ರೈವಿಂಗ್ ಲೈಸನ್ಸ್ ವಜಾ ಮಾಡುವಂತೆಯೂ ಮತ್ತು ಲಾರಿ ಒಂದು ವರ್ಷಕಾಲ ಓಡಾಡದಂತೆ ಕ್ರಮ ಜರುಗಿಸುವಂತೆ ಆಜ್ಞೆ ಮಾಡಿದರು ಡ್ರೈವರ್ ಕುಡಿದಿದ್ದನೆಂದು ಹೇಳಲಾಗಿದೆ

ಬಟ್ಟೆ ಹಂಚಿಕೆ

ಪ್ರಾಂತಗಳಿಗೆ ಬಟ್ಟೆ ಕೋಟಾವನ್ನು ೧೯೫೧ರ ಜನಗಣತಿಯ ಆಧಾರದ ಮೇಲೆ ಪುನಃ ಗೊತ್ತುಮಾಡಿ, ಗಿರಣಿಗಳು ನಿರ್ಬಂಧವಿಲ್ಲದೆ ಮಾರಾಟ ಮಾಡಬಹುದಾದ ಉತ್ಪಾದನಾ ಪ್ರಮಾಣವನ್ನು ಜೂನ್‌ನಿಂದ ಶೇ. ೩೩ರಿಂದ ಶೇ. ೨೦ಕ್ಕೆ ಇಳಿಸಲು ಭಾರತ ಸರ್ಕಾರ ನಿರ್ಧರಿಸಿದೆಯೆಂದು ಖಚಿತವಾಗಿ ಗೊತ್ತಾಗಿದೆ

ಪ್ರಭಾ ಪಿಕ್ಚರ್ ಹೌಸ್
೦೭೭

1-6-51 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಲಾರಲಪ್ಪ ಲಾರಲಪ್ಪ ಹಾಡಿದ ತಾರೆ ಮೀನ
ಹುಲ್ಲಗುಲ್ಲ ಹುಲ್ಲಗುಲ್ಲ ಹಾಡಿರುವ
ಶೂರೀ ಫಿಲಂಸ್‌ರವರ:—
ಢೋಲಕ್ * DHOLAK
ನಟವರ್ಗ—ಮೀನ, ಅಜಿತ್, ಯಶೋದರಕಟ್ಟು
ಮಜ್ನು ಮತ್ತು ರಜನಿ

ವಿಶೇಷ ಸೂಚನೆ—ತಾ|| 1—6—51ನೇ ಶುಕ್ರವಾರದಿಂದ ೦—12—೦ಯ ತರಗತಿಗೆ ೦—13—೦ ಛಾರ್ಜು ಮಾಡಲ್ಪಡುತ್ತದೆ ಮತ್ತು ಕಡೆಯ ಎರಡು ತರಗತಿಗಳನ್ನು ಅಂದರೆ 0—4—0 ಮತ್ತು 0—6—0 ತರಗತಿಗಳನ್ನು ತೆಗೆದುಹಾಕಿ ಕಡೇ ತರಗತಿಗೆ ೦—5—೦ ಛಾರ್ಜು ಮಾಡಲ್ಪಡುತ್ತದೆ

ದಾವಣಗೆರೆಗೆ ಎಂಜನಿಯರಿಂಗ್ ಕಾಲೇಜ್

ದಾವಣಗೆರೆಯಲ್ಲಿ ಕೂಡಲೇ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವಂತೆ ಒತ್ತಾಯಪಡಿಸಲು ಶ್ರೀಗಳಾದ ಎ. ಭೀಮಪ್ಪನಾಯಕ್ ಮತ್ತು ಶ್ರೀ ಗಾಂಜಿ ವೀರಪ್ಪನವರ ನಾಯಕತ್ವದಲ್ಲಿ ಜೂನ್ ೧ನೇ ತಾ|| ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರ ಬಳಿ ನಿಯೋಗ ಒಂದು ಹೋಗಲಿದೆ

ಎಂಜಿನಿಯರಿಂಗ್ ಕಾಲೇಜಿಗಾಗಿ ಶ್ರೀ ಜಿ ಟಿ ಚಂದ್ರಣ್ಣ ಎಂಬುವರು ಈಗಾಗಲೇ ೧|| ಲಕ್ಷ ರೂಗಳು ದೇಣಿಗೆ ಕಟ್ಟಿದ್ದಾರೆ

ಲ್ಯಾಬೊರೆಟರಿಗಾಗಿ ಸಾರ್ವಜನಿಕರು ೫೦,೦೦೦ ರೂ. ಕೂಡಿಸಲು ಸಿದ್ಧವಾಗಿದ್ದಾರೆ ಕಾಲೇಜನ್ನು ಆರಂಭಿಸಲು ೨|| ಲಕ್ಷ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿತವಾಗುತ್ತಿರುವ ಪೌರಸಭಾ ಕಟ್ಟಡವನ್ನು ಬಿಟ್ಟುಕೊಡಲು ಒಪ್ಪಲಾಗಿದೆ

ಕಾಂಗ್ರೆಸ್ ಧ್ಯೇಯ ಅರ್ಥಮಾಡಿಕೊಳ್ಳದಿರುವವರು ಸಂಸ್ಥೆಗೆ ಹೊರೆ

ಕಾಂಗ್ರೆಸ್ ಸಂಸ್ಥೆಯ ಧ್ಯೇಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದವರು ಸಂಸ್ಥೆಗೆ ಹೊರೆಯೇ ವಿನಃ ಆಸ್ತಿಯಲ್ಲವೆಂದು ಎ ಐ ಸಿ ಸಿ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಂ ತಿಳಿಸಿದರು ಅಂಥವರು ಎಷ್ಟುಬೇಗ ಕಾಂಗ್ರೆಸ್ ತ್ಯಜಿಸಿದರೆ ಅಷ್ಟು ಕ್ಷೇಮವೆಂದರು

ಪೋಲೀಸರ ಗದಾ ಪ್ರಹಾರ

ಹಚ್ಚಿದ ಪಂಜುಗಳ ಪೆಟ್ಟಿಗೆ ಸಿಕ್ಕಿ ದಕ್ಷಿಣ ಆಫ್ರಿಕಾ ಪೋಲೀಸರು 'ಟಾರ್ಚ್ ಲೈಟ್ ಕಮ್ಯಾಂಡ್' ವಿರುದ್ಧ ಗದಾ ಪ್ರಹಾರ ಮಾಡಿದರು ಪಾರ್ಲಿಮೆಂಟ್ ಭವನದ ಬಳಿ ಈ ಪ್ರದರ್ಶನ ನಡೆದ ಬಳಿಕ ನಡೆದ ಘರ್ಷಣೆಯಲ್ಲಿ ಮೂವತ್ತು ಮಂದಿ ಗಾಯಗೊಂಡವರಿಗೆ ಚಿಕಿತ್ಸೆ ನೀಡಲಾಯಿತು.

ರೇಷನ್ ತೆಗೆದುಕೊಂಡು ಬನ್ನಿ

ಪಾಟ್ನಾದಲ್ಲಿ ನಡೆಯಲಿರುವ ಕಾಂಗ್ರೆಸ್ ತ್ಯಜಿಸುವವರ ಸಮ್ಮೇಳನಕ್ಕೆ ಸದಸ್ಯರು ರೇಷನ್ ತಂದು ಕೊಡಬೇಕೆಂದು ಆಚಾರ್ಯ ಕೃಪಲಾನಿಯವರು ಹೇಳಿರುವರು

ಸಂಪಾದಕರು —ಜಿ. ಎಲ್ ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು, ಮುದ್ರಕರು —ಹಿ. ಶಾ ಸುಬ್ಬರಾವ್, ಮೋಹನ್ ಮುದ್ರಣಾಲಯ, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೬—೧೯೪೭ ಶುಕ್ರವಾರ [ಸಂಚಿಕೆ ೨೨೨

ಉಪನ್ಯಾಸ

ಮೈಸೂರು ಮೇ ೩೧

ನಾಳೆ ಸಂಜೆ ೬ ಘಂಟೆಗೆ ಅಶೋಕ ಚಕ್ರ ಸಂಘದಾಶ್ರಯದಲ್ಲಿ ಸಾಧ್ವಿ ಕಛೇರಿಯಲ್ಲಿ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೌಲಗಿ ಶೇಷಾಚಾರ್ಯರವರಿಂದ 'ಧರ್ಮ' ವಿಷಯದಲ್ಲಿ ಭಾಷಣ ಮಾಡುವರು.

ಬೊಂಬಾಯಿ ಮುಖ್ಯ ಮಂತ್ರಿಗಳು ತುಮಕೂರಿಗೆ

ಬೊಂಬಾಯಿನ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರ್‌ರವರು ಹಿಂದೀಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲು ೧೨-೬-೪೭ಕ್ಕೆ ತುಮಕೂರಿಗೆ ಬರಲಿರುವರು.

ಮೈಸೂರು ಶಾಸನಸಭಾ ಭವನದ ಮುಂದೆ ಪ್ರದರ್ಶನ

ಪ್ರದರ್ಶನ ಮಾಡಿದ ಹಲವು ಸೋಷಲಿಸ್ಟರ ಮತ್ತು ರೈತರ ಬಂಧನ

ಸಚಿವರ ಸಂಚಾರ ಭತ್ಯ

ಬೆಂಗಳೂರು. ಮೇ ೩೧

೧೯೪೬ನೇ ಅಕ್ಟೋಬರ್‌ನಿಂದ ೧೯೪೭ನೇ ಫೆಬ್ರವರಿ ಅಂತ್ಯದವರೆಗೆ ಮೈಸೂರು ಸರ್ಕಾರ ಸಚಿವರು ಒಟ್ಟು ೧,೪೫,೫೬೩ ರೂ ೪ ಆಣೆ ಸಂಚಾರ ಭತ್ಯವನ್ನು ತೆಗೆದುಕೊಂಡಿರುವುದಾಗಿ ಮುಖ್ಯ ಮಂತ್ರಿಗಳು ಶಾಸನ ಸಭೆಯಲ್ಲಿ ನಿನ್ನೆ ತಿಳಿಸಿದರು.

ಇತರ ಪ್ರಾಂತ್ಯಗಳ ಸಚಿವರು ತೆಗೆದುಕೊಳ್ಳುತ್ತಿರುವ ಪ್ರಯಾಣ ಭತ್ಯವನ್ನು ಗಮನಿಸಿದರೆ ನಮ್ಮ ಸಚಿವರು ತೆಗೆದುಕೊಳ್ಳುತ್ತಿರುವ ಭತ್ಯ ಅಷ್ಟು ಹೆಚ್ಚಾದುದೇನು ಅಲ್ಲವೆಂದು ಹೇಳಿದರು.

ಜಿಲ್ಲಾ ಬೋರ್ಡುಗಳಿಗೆ ಜೀವದಾನ

ಬೆಂಗಳೂರು. ಮೇ ೩೧

ಹೊಸದಾಗಿ ಜಿಲ್ಲಾ ಬೋರ್ಡು ಮತ್ತು ಪೌರಸಭೆಗಳ ಕಾನೂನು ರಚಿಸಿ ಶಾಸನ ಸಭೆಯ ಮಂಜೂರಾತಿ ಪಡೆದು ಜಾರಿಗೆತರ ಬೇಕಾಗಿರುವ ಪ್ರಯುಕ್ತ ೩೦-೫-೪೭ಕ್ಕೆ ಮುಗಿದು ಹೋಗಬೇಕಾಗಿದ್ದ ಜಿಲ್ಲಾ ಬೋರ್ಡುಗಳ ಅವಧಿಯನ್ನು ೬ ತಿಂಗಳಕಾಲ ಮುಂದುವರಿಸಲಾಗಿದೆ.

ಆಡಳಿತ ಕೇಂದ್ರ ವಹಿಸಿಕೊಳ್ಳಲಿ

ಪ್ರಖ್ಯಾತ ಕೈಗಾರಿಕಾ ಕರ್ತ ಲಾಲಾ ಮೋಹನಲಾಲರ ನೇತೃತ್ವದಲ್ಲಿ ಪೂರ್ವ ಪಂಜಾಬಿನ ನಿಯೋಗವೊಂದು ಮೊನ್ನೆಯ ದಿನ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರನ್ನು ಭೇಟಿಮಾಡಿ ಪ್ರಾಂತದ ಆಡಳಿತವನ್ನು ಕೇಂದ್ರ ಸರ್ಕಾರವು ವಹಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು.

ಇಂದಿನ ಅಭದ್ರವಾದ ಮತ್ತು ದಕ್ಷತೆಯಿಲ್ಲದ ಮಂತ್ರಿಮಂಡಲದ ಕೆಳಗೆ ಪ್ರಾಂತದ ಆಡಳಿತವು ದಿನೇ ದಿನೇ ಕೆಡುತ್ತಿರುವುದರಿಂದ ರಾಜ್ಯಾಂಗ ಶಾಸನದ ೩೫೨ನೇ ವಿಧಿಯಂತೆ ರಾಷ್ಟ್ರಾಧ್ಯಕ್ಷರು ತೀವ್ರಕ್ರಮವನ್ನು ಕೈಗೊಳ್ಳಬೇಕೆಂದು ನಿಯೋಗ ಒತ್ತಾಯ ಮಾಡಿತು. ನಿಯೋಗದಲ್ಲಿ ಇಬ್ಬರು ಹಿಂದೂ ಮಹಾಸಭಾ ಸದಸ್ಯರೂ ಇದ್ದರು.

ಸ್ವಂ.ಸು. ಪ್ರೊ॥] ಬೆಂಗಳೂರು ಮೇ ೩೧

ಕಾಗೋಡಿನಿಂದ ಬಂದ ಕೆಲವು ರೈತರು ಮತ್ತು ಶ್ರೀಗಳಾದ ಶಾಂತವೇರಿ ಗೋಪಾಲಗೌಡ, ಮುಲ್ಕಾ ಗೋವಿಂದರೆಡ್ಡಿ ಮತ್ತು ಡಾ॥ ಕೆ. ಆರ್. ಶ್ರೀಕಂಠೇಶ್ವರನ್ ಮುಂತಾದ ಮೂವತ್ತು ಜನ ಸೋಷಲಿಸ್ಟರು ಈ ದಿನ ಶಾಸನಸಭಾ ಭವನದ ಮುಂದೆ ಪ್ರದರ್ಶನ ನಡೆಸಲು ಪ್ರಯತ್ನಿಸಿದರು.

ಶಾಸನಸಭಾ ಭವನಕ್ಕೆ ಸ್ವಲ್ಪ ದೂರದಲ್ಲಿಯೇ ಮೇಲ್ಕಂಡವರೆಲ್ಲರೂ ಬಂಧಿತರಾದರು. ಎಲ್ಲರನ್ನೂ ಪೋಲೀಸ್ ವ್ಯಾನಿನಲ್ಲಿ ಸೆಂಟ್ರಲ್ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು.

ಮಧ್ಯರಾತ್ರಿಗೆ ಇವರೆಲ್ಲರನ್ನೂ ಬಿಡುಗಡೆ ಮಾಡಬಹುದೆಂದು ವದಂತಿ ಹಬ್ಬಿದೆ.

‡ ಬೆಂಗಳೂರಿನಲ್ಲಿರುವ ಸಾಬೂನು ಕಾರ್ಖಾನೆ, ಮೈಸೂರು ರೇಷ್ಮೆ ಕಾರ್ಖಾನೆ ಮುಂತಾದ ೬ ಸರ್ಕಾರಿ ಕೈಗಾರಿಕೆ ಸಂಸ್ಥೆಗಳು ಖಾಸಗಿಯವರಿಗೆ ವಹಿಸಲಾಗುವುದು.

ಅಮೆರಿಕಾದಲ್ಲಿ ಆಹಾರ ಸಂಗ್ರಹಣೆ

ಭಾರತಕ್ಕೆ ಆಹಾರ ಧಾನ್ಯ ಸಹಾಯ ಮಾಡಲಿಕ್ಕಾಗಿ ಧಾನ್ಯವನ್ನು ಕೂಡಿಸಲು ನ್ಯೂಯಾರ್ಕಿನಲ್ಲೆಲ್ಲಾ ಲಾರಿಗಳು ಸಂಚಾರ ಮಾಡುತ್ತಿವೆ. ಸಂಗ್ರಹ ಕಾರ್ಯ ಭರದಿಂದ ಸಾಗಿದೆ. ಜನಗಳು ಉಲ್ಲಾಸದಿಂದ ಕೊಡುತ್ತಲಿದ್ದಾರೆ.

ಈ ಕಾರ್ಯಕ್ರಮದ ವ್ಯವಸ್ಥೆಯನ್ನು ಶ್ರೀಮತಿ ಇರ್ವಿನ್ ಪೊಲ್ಲಾಕ್‌ರವರು ನೋಡಿಕೊಳ್ಳುತ್ತಲಿದ್ದಾರೆ. ಇವರು ಭಾರತಕ್ಕೆ ಆಹಾರವನ್ನೊದಗಿಸಲು ನಿರ್ಮಿತವಾಗಿರುವ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಯುದ್ಧಕ್ಕೆ ಮುಂಚೆ ಭಾರತ ಮತ್ತು ಪೂರ್ವ ದೇಶಗಳಲ್ಲಿದ್ದವರು ಬಹಳ ಜವಾಬ್ದಾರಿ ವಹಿಸಿದ್ದಾರೆ.

ಮನೆಯ ಹೆಂಗಸರೆಲ್ಲಾ ತಮ್ಮ ಅಡಿಗೆ ಮನೆಗಳಲ್ಲಿ ಕೂಡಿಸಿಟ್ಟಿರುವ ಆಹಾರ ಧಾನ್ಯವನ್ನೆಲ್ಲಾ ಉತ್ಸಾಹದಿಂದ ಕೊಡುತ್ತಲಿದ್ದಾರೆ. ಒಂದುವಾರ ಹಾಕಿಕೊಂಡಿರುವ ಈ ಸಂಗ್ರಹ ಕಾರ್ಯಕ್ರಮದ ಮೊದಲನೆ ದಿನವೇ ಮೂರು ಟನ್ ಆಹಾರ ಧಾನ್ಯ ಸಂಗ್ರಹವಾಯಿತು. ಲಾರಿಗಳು ತುಂಬಿ ಬಿಟ್ಟವು.

ಮನೋರೋಗ ಚಿಕಿತ್ಸೆ

ಮೈಸೂರು ದೇಶದ ಗಂಧದೆಣ್ಣೆ ಕಾರ್ಖಾನೆಗಳ ಜನರಲ್ ಮ್ಯಾನೇಜರಾಗಿದ್ದು ನಿವೃತ್ತರಾಗಿರುವ ಶ್ರೀ ಕೆ. ಆರ್. ಶ್ರೀನಿವಾಸರಾವ್ ಬಿ.ಎ. ಇವರ ಪತ್ರ.

ನರಮಂಡಲ ರೋಗಗಳ ಬಗ್ಗೆ ಅದ್ಭುತ ಚಿಕಿತ್ಸೆ ನಡೆಸುತ್ತಿರುವ ಡಾ॥ ಮುತ್ತುಕೃಷ್ಣನ್‌ರವರ ವಿಷಯ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾದ್ದನ್ನು ನೋಡಿ ನಾನು ಮೊಟ್ಟಮೊದಲನೇ ಸಾರಿಗೆ ಡಾ॥ ಮುತ್ತುಕೃಷ್ಣನ್‌ರವರನ್ನು ತಾ॥ ೨೮-೩-೪೭ರಲ್ಲಿ ಭೇಟಿ ಮಾಡಿದೆನು. ಆವಾಗ್ಗೆ ಅವರು ಮೈಸೂರಿನಲ್ಲಿ ಕೇವಲ ಕೆಲವು ದಿನಗಳು ಮಾತ್ರ ಇದ್ದರು. ನನ್ನ ಮಗಳು ಸುಮಾರು ೨೦ ವರ್ಷಗಳಿಂದ ಮೂರ್ಛೆರೋಗದಿಂದ ನರಳುತ್ತಿದ್ದಳು. ಪಾಶ್ಚಾತ್ಯ ಮತ್ತು ಪೌರಾತ್ಯರೀತ್ಯಾ ಚಿಕಿತ್ಸೆಗಳನ್ನು ನಡೆಸಿ ಏನೂ ಗುಣಕಾಣದೆ ಈ ರೋಗವು ಗುಣವಾಗುವುದೇ ಇಲ್ಲವೆಂದು ತೀರ್ಮಾನಕ್ಕೆ ಬಂದಿದ್ದೆನು. ಬಹು ದೀರ್ಘ ಪರ್ಯಾಲೋಚನೆಯನ್ನು ಮಾಡಿ ೩ ದಿನಗಳನಂತರ ನನ್ನ ಮಗಳನ್ನು ಡಾ॥ ಮುತ್ತುಕೃಷ್ಣನ್‌ರವರ ಬಳಿಗೆ ಚಿಕಿತ್ಸೆಗಾಗಿ ೧-೪-೪೭ರಲ್ಲಿ ಕರೆದುಕೊಂಡು ಹೋದೆನು. ಈ ೨ ತಿಂಗಳು ಸುಮಾರಿನ ಚಿಕಿತ್ಸೆಯ ಆದಿಭಾಗದಲ್ಲೇ ಅವಳ ಮೂರ್ಛೆ ರೋಗವೂ ನಡುಕವೂ ಸಹ ನಿಂತುಹೋಯಿತು. ಇದರಿಂದ ನನಗೆ ಸಂತೋಷವೂ ಮತ್ತು ಆಶ್ಚರ್ಯವೂ ಉಂಟಾಗುವಂತೆ ಆಯಿತು. ಈ ಚಿಕಿತ್ಸೆಯು ಇನ್ನೇನು ಮುಗಿಯಬೇಕಾಗಿರುವುದರಿಂದ ಈ ಅವಕಾಶವನ್ನು ಉಪಯೋಗಿಸಿಕೊಂಡು ನಾನು ಡಾ॥ ಮುತ್ತುಕೃಷ್ಣನ್‌ರವರ ಚಿಕಿತ್ಸೆ ಬಗ್ಗೆ ಅವರಿಗೆ ಅತ್ಯಂತ ಋಣಿಯಾಗಿರುತ್ತೇನೆ. ಮತ್ತು ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇನೆ. ಈಗಲೂ ಸಹ ನನ್ನ ಮಗಳಿಗೆ ಮೂರ್ಛೆ ಬರುವುದು ನಿಂತುಹೋಗಿದೆ.

ಡಾ॥ ಮುತ್ತುಕೃಷ್ಣನ್‌ರವರು ತರುಣರೂ, ಒಳ್ಳೆಯ ಸ್ವಭಾವವುಳ್ಳವರೂ, ನರರೋಗಗಳಿಂದ ನರಳುತ್ತಿರುವ ಮೈಸೂರಿನ ರೋಗಿಗಳಿಗೆ ಅತ್ಯಂತ ಆದರ ಪೂರ್ವಕವಾಗಿ, ಈ ಹೊಸದಾದ ಮನಶ್ಶಾಸ್ತ್ರರೀತ್ಯಾ ಚಿಕಿತ್ಸೆ ಮಾಡಲು ಉತ್ಸಾಹಿಗಳಾಗಿಯೂ ಇರುತ್ತಾರೆ. ಅವರು ಸುಸಜ್ಜಿತವಾದ ಕೊಠಡಿಯಲ್ಲಿ ಮೈಸೂರಲ್ಲಿ ಶ್ರೇಷ್ಠವಾದ ಹೋಟೇಲಿನಲ್ಲಿ ಇದ್ದುಕೊಂಡಿರಬೇಕಾದಲ್ಲಿ ಹೆಚ್ಚು ಹಣ ಖರ್ಚಾಗುತ್ತಿದ್ದರೂ ಸಹ ಅವರಿಗೆ ಹಣ ಸಂಪಾದನೆಯಲ್ಲಿ ಕೇವಲ ಆಸೆಯಿಲ್ಲ. ಅವರು, ಅನೇಕಾನೇಕ ಬಡ ರೋಗಿಗಳನ್ನು ಉಚಿತವಾಗಿಯೂ ಅಥವಾ ಅಲ್ಪ ಹಣವನ್ನು ಸ್ವೀಕರಿಸಿ ತಕ್ಕ ಚಿಕಿತ್ಸೆ ನಡೆಸಿ ಗುಣಪಡಿಸಿರುತ್ತಾರೆ. ಇನ್ನು ಕೆಲವು ಕೇವಲ ನಿರ್ಗತಿಕ ರೋಗಿಗಳಿಗೆ ಅವರೇ ಹಣ ಕೊಟ್ಟು ಅವರ ಊಟ ತಿಂಡಿಗಳಿಗೂ ಸಹ ಸೌಕರ್ಯಗಳನ್ನು ಏರ್ಪಡಿಸಿ ಅವರ ಖಾಯಿಲೆಗಳನ್ನು ಗುಣ ಪಡಿಸುತ್ತಾರೆ.

ಹಣ ಕೊಡಲೀ ಅಥವಾ ಉಚಿತವಾಗಿಯಾಗಲೀ, ಅವರು ರೋಗಿಗಳನ್ನು ಚಿಕಿತ್ಸೆ ಮಾಡುವ ವಿಷಯದಲ್ಲಿ ಬಡವನಾಗಲೀ ಭಾಗ್ಯವಂತನಾಗಲೀ ಏಕರೀತಿಯಾದ ನಿಷ್ಠೆಯಿಂದಲೂ, ಪ್ರೀತಿಗೌರವದಿಂದಲೂ ನಡೆದುಕೊಳ್ಳುತ್ತಾರೆ ರೋಗಿಯ ಜಾತಿಯನ್ನು, ಮತ ವಯಸ್ಸು ಈ ಬಗ್ಗೆ ಯಾವ ಭೇದಭಾವಗಳನ್ನೂ ಮಾಡುವುದಿಲ್ಲ. ಸರ್ವರನ್ನೂ ಒಂದೇ ರೀತಿಯಿಂದ ಕಾಣುತ್ತಾರೆ. ಅವರು ಜುವ್ವಾಂಘಾತ್ಮರು, ಹೆಣ್ಣು ಮಕ್ಕಳು ಮತ್ತು ಹೆಂಗಸರ ವಿಷಯದಲ್ಲಿ ಅವರ ನಡವಳಿಕ ಪ್ರಶಂಸಾರ್ಹವೂ ಮತ್ತು ಉದಾರ್ಹವಾಗಿಯೂ ಇವೆ.

ಇವರ ಚಿಕಿತ್ಸೆ ಮನಶಾಸ್ತ್ರರೀತ್ಯಾ ಇರುವುದರಿಂದ, ಶೀಘ್ರವಾಗಿ ಗುಣಕಾಣಬೇಕಾದಲ್ಲಿ ರೋಗಿಗಳ ಮನಸ್ಸಿನ ಮೇಲುಂಟಾಗುವ ಪರಿಣಾಮದಿಂದಲೂ ಡಾಕ್ಟರವರಲ್ಲಿ ಸಂಪೂರ್ಣ ನಂಬಿಕೆ, ಸಹನೆ ಮತ್ತು ಶಾಂತಿಯಿಂದ ವರ್ತಿಸುವುದರಿಂದಲೂ ಖಂಡಿತ ಸಾಧ್ಯವಾಗುವುದು. ಹಣವಂತರಾದ ಮೈಸೂರಿನವರು ಡಾ॥ ಮುತ್ತುಕೃಷ್ಣರವರನ್ನು ಮೈಸೂರಲ್ಲಿ ಇನ್ನೂ ಕೆಲವು ಕಾಲ ಇಟ್ಟುಕೊಂಡಿದ್ದು ಅವರ ಚಿಕಿತ್ಸಾ ಲಾಭವನ್ನು ರೋಗಿಗಳಿಗೆ ಉಂಟಾಗುವುದಕ್ಕೆ ಮತ್ತು ಈ ಹೊಸ ರೀತಿ ಚಿಕಿತ್ಸೆಯ ಪ್ರಚಾರಕ್ಕೆ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಮೂರ್ಛೆ, ಉನ್ಮಾದ, ಅಪಸ್ಮಾರ, ಮುಂತಾದ ಕಠಿಣವಾದ ರೋಗಗಳನ್ನು ಚಿಕಿತ್ಸೆಮಾಡಿರುವ ಡಾ॥ ಮುತ್ತುಕೃಷ್ಣನವರಿಗೆ ಭಗವಂತನು ಆಯುರಾರೋಗ್ಯ-ಐಶ್ವರ್ಯಾದಿಗಳನ್ನು ಕೊಟ್ಟು ಇನ್ನೂ ಯಶಸ್ವಿಯಾಗಿ ಮಾಡುವಂತೆ ಪ್ರಾರ್ಥಿಸುತ್ತೇನೆ.

ಕೆ. ಆರ್. ಶ್ರೀನಿವಾಸರಾವ್ ಬಿ.ಎ. ರಿಟೈರ್ಡ್ ಜನರಲ್ ಮ್ಯಾನೇಜರ್ ಗಂಧದ ಕಾರ್ಖಾನೆ. ೯೬೬-೧ ಸಿಮೆಂಟ್ ಬ್ಲಾಕ್ ಚಾಮುಂಡಿಪುರಂ ಮೈಸೂರು.

ಭಾರತ-ಪಾಕೀಸ್ಥಾನ ವ್ಯಾಪಾರ

ಕಳೆದ ಎರಡು ತಿಂಗಳಲ್ಲಿ ಭಾರತ ಪಾಕೀಸ್ಥಾನಗಳ ವ್ಯಾಪಾರವು ವಿಶೇಷವಾಗಿ ನಡೆದಿದೆ. ಭಾರತಕ್ಕೆ ಸುಮಾರು ೩ಕೋಟಿ ೨೪ ಲಕ್ಷ ರೂಪಾಯಿಗಳ ಸಾಮಾನು ಪಾಕೀಸ್ಥಾನದಿಂದ, ಪಾಕೀಸ್ಥಾನಕ್ಕೆ ಭಾರತದಿಂದ ೨ಕೋಟಿ ೩೪ ಲಕ್ಷ ರೂಗಳ ಸಾಮಾನು ರವಾನೆಯಾಗಿವೆಯೆಂದು ತಿಳಿಯಬರುತ್ತದೆ.

ತ್ರಿಮೂರ್ತಿಗಳ ಸಮಿತಿ

ಬ್ರಿಟ-ಪರ್ಷಿಯಾ ಎಣ್ಣೆ ವಿವಾದವನ್ನು ಪರಿಶೀಲಿಸಲು ಪರ್ಷಿಯಾ ಸರ್ಕಾರವು ತ್ರಿಮೂರ್ತಿಗಳ ಒಂದು ಸಮಿತಿಯನ್ನು ನೇಮಿಸಿದೆ.

ಈಗ ರಾಷ್ಟ್ರೀಕರಣವಾಗಿರುವ ಎಲ್ಲಾ ಎಣ್ಣೇ ಕೇಂದ್ರಗಳಲ್ಲಿಯೂ ಕೆಲಸ ಮಾಡುತ್ತಿರುವ ವಿದೇಶಿಯರೆಲ್ಲರೂ ರಾಷ್ಟ್ರೀಕರಣವಾದ ಎಣ್ಣೆ ಕೇಂದ್ರಗಳೆಂದು ಪರಿಗಣಿಸಿ ಈ ಸಂಸ್ಥೆಗಳಲ್ಲಿಯೂ ಕೆಲಸ ಮಾಡಬಹುದೆಂದು ಪರ್ಷಿಯಾ ಸರ್ಕಾರ ಆಜ್ಞೆ ಮಾಡಿರುವುದಾಗಿ ಹೇಳಲಾಗಿದೆ.

ಚೈನಾ ಕೇಳಿಲ್ಲ

ಸೆಣಬು ಮತ್ತು ರಬ್ಬರನ್ನು ತನಗೆ ಕಳುಹಿಸಬೇಕೆಂದು ಭಾರತವನ್ನು ಚೈನಾ ಕೇಳಿಲ್ಲ. ಯಾವ ರಾಷ್ಟ್ರಕ್ಕೂ ರಫ್ತು ಮಾಡುವ ಪ್ರಮಾಣದಲ್ಲಿ ನಮ್ಮಲ್ಲಿ ಸರಕಿಲ್ಲ. ವಿಶ್ವಸಂಸ್ಥೆಯು ಚೈನಾದ ಮೇಲೆ ವಿಧಿಸಿರುವ ರಫ್ತಿನ ನಿರ್ಬಂಧನೆಯು ಭಾರತ ಚೈನಾ ವ್ಯಾಪಾರ ಸಂಬಂಧಕ್ಕೇನೂ ಅಡ್ಡಿ ಬರುವುದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಮೆಹತಾಬ್‌ರವರು ಹೇಳಿರುವರು.

ಜಯಪುರದ ಮಹಾರಾಜರ ವಿದೇಶಯಾತ್ರೆ

ಉತ್ತರ ಪ್ರದೇಶದ ರಾಜಪ್ರಮುಖರಾದ ಜಯಪುರದ ಮಹಾರಾಜರು ಯೂರೋಪು ಯಾತ್ರೆಗಾಗಿ ಹೊರಡಲಿರುವರು. ಅವರ ಐವಜಿನಲ್ಲಿ ಕೋಟಾ ಮಹಾರಾಜರು ರಾಜಪ್ರಮುಖರಾಗಿರುವರು.

೨೪ ಗಂಟೆಗಳೊಳಗೆ ಹೊರಡಿ

ಬ್ರಿಟಿಷ್ ಪತ್ರಿಕೋದ್ಯೋಗಿಗಳೆಲ್ಲರೂ ಟೆಹರಾನನ್ನು ೨೪ ಗಂಟೆಗಳೊಳಗೆ ಬಿಟ್ಟು ಹೊರಡಿ ಎಂದು ಪರ್ಷಿಯಾ ಸರ್ಕಾರ ತಿಳಿಸಿರುವುದಾಗಿ ವರದಿಯಾಗಿದೆ.

ಭಾರತದಿಂದ ಆಸ್ಟ್ರೇಲಿಯಾಕ್ಕೆ ಕಲ್ಲಿದ್ದಲು

ಭಾರತದಿಂದ ಆಸ್ಟ್ರೇಲಿಯಾಕ್ಕೆ ೬|| ಲಕ್ಷ ಟನ್ ಕಲ್ಲಿದ್ದಲನ್ನು ಜೂನ್ ಆಖೈರಿನ ವೇಳೆಗೆ ಸರಬರಾಯಿ ಮಾಡಬೇಕಾದ್ದುದು ಹಡಗುಗಳ ತೊಂದರೆಯಿಂದ ನಿಧಾನವಾಗಿದೆ. ಇಲ್ಲಿಯ ವರೆಗೆ ೨ ಲಕ್ಷ ಟನ್ ಕಳುಹಿಸಲಾಗಿದೆ.

ಮಗನಿಗೆ ಉತ್ತೇಜನ ಕೊಡಲು ತಾಯಿಯೂ ಓದಬೇಕಾಯಿತು

೪೦ ವರ್ಷ ವಯಸ್ಸಿನ [illegible]ಮ್ಮ [illegible]ತ್ತು ಆಕೆಯ ೧೬ ವರ್ಷದ ಮಗ ಈರ್ವರೂ ಈ ಬಾರಿ ಗುಜರಾತ್ ವಿಶ್ವವಿದ್ಯಾನಿಲಯದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಸೋಮಾರಿಯಾಗಿದ್ದ ಮಗನನ್ನು ಉತ್ತೇಜಿಸಿ ಓದುವಂತೆ ಮಾಡುವ ಸಲುವಾಗಿ ತಾಯಿಯಾದವಳು ತಾನೂ ಅವನೊಂದಿಗೆ ಕುಳಿತು ಓದಿ ಪರೀಕ್ಷೆಗೆ ಕಟ್ಟಿ ಪಾಸದಳೆಂದು ವರದಿಯಾಗಿದೆ.

ಸ್ಥಳೀಯ ಕಾಲೇಜ್ ಪ್ರೊಫೆಸರರ ಹೆಂಡತಿ ಈಕೆ.

೧೦೦೦೦ ಮಣ ಆಹಾರ ದಾನ

ಪ್ರಧಾನಿ ನೆಹರೂರವರ ಕೋರಿಕೆಯ ಮೇಲೆ ಭಾರತ ಸೈನ್ಯವು ತನ್ನ ಆಹಾರವನ್ನು ಉಳಿತಾಯ ಮಾಡಿ ೧೦೦೦೦ ಮಣ ಆಹಾರವನ್ನು ಮದ್ರಾಸು ಮತ್ತು ಬಿಹಾರ ಪ್ರಾಂತ್ಯಗಳಿಗೆ ದಾನವಾಗಿ ಕೊಡಲಿದೆ.

ನೆಹರೂರವರ ಉದಾರತೆ

ರಾಜಕೀಯದಲ್ಲಿ ನೊಂದ ರಾಮನಾಡಿನ ಶ್ರೀ ಬೂತಿ ಸಿಗ್ಮಣಿ ನಾದಾರ್‌ರವರು ಬಹಳ ಕಷ್ಟದಲ್ಲಿದ್ದಾರೆಂದು ಸುದ್ದಿ ಕೇಳಿ, ಪ್ರಧಾನಿ ನೆಹರೂರವರು ೩೦೦ ರೂಪಾಯಿಗಳ ಚೆಕ್ಕೊಂದನ್ನು ಕಳುಹಿಸಿದ್ದಾರೆ.

ಆಯುರ್ವೇದ ವೈದ್ಯರ ಸಭೆ

ಮೈಸೂರು-ಮೇ ೩೧

ತಾ|| ೩-೬-೫೧ನೇ ಭಾನುವಾರ ಸಂಜೆ ೬ ಘಂಟೆಗೆ ಸರಿಯಾಗಿ ಶ್ರೀರಾಮಪೇಟೆ ಈವನಿಂಗ್ ಬಜಾರ್ ಮಹಡಿ ಮೇಲೆ ವೈದ್ಯ ಸಂಘದ ವಿಶೇಷ ಸಭೆಯು ಡಾ|| ವೆಂಕಟರಾಮ ಪಂಡಿತರ ಅಧ್ಯಕ್ಷತೆಯಲ್ಲಿ ಸೇರುವದು.

ಆಯುರ್ವೇದ ವೈದ್ಯರಿಗೆ ಕೊಡುತ್ತಿದ್ದ ಸಹಾಯದ್ರವ್ಯವನ್ನು ನಿಲ್ಲಿಸಬೇಕೆಂದು ಸಿಟಿ ಮುನಿಸಿಪಾಲಿಟಿಯವರು ನಿರ್ಣಯಿಸಿದ ವಿಚಾರವನ್ನೂ, ಆಯುರ್ವೇದದಲ್ಲಿ ಉಚ್ಚ ಶಿಕ್ಷಣಕ್ಕಾಗಿ ನೇಮಿಸಿದ ಸಮಿತಿಯ [illegible]ವುದು. ವೈದ್ಯರೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

೧೦೦೦೦ ಜನರು ಕೈಸೆರೆ

ಕೊರಿಯಾ ಯುದ್ಧದಲ್ಲಿ ಏಪ್ರಿಲ್ ಮಾಹೆಯಲ್ಲಿ ೧೦೦೦೦ ಉತ್ತರದ ಸೈನಿಕರನ್ನು ಸೆರೆ ಹಿಡಿಯಲಾಗಿದೆಯೆಂದು ಅಷ್ಟಮ ದಳದವರು ತಿಳಿಸಿರುವರು.

೩೩೪ ಕೋಟಿ ರೂ. ಯೋಜನೆ

ಮುಂದಿನ ೬ ವರ್ಷಗಳಲ್ಲಿ ಭಾರತ ಸರ್ಕಾರವು ೩೩೪ ಕೋಟಿ ರೂಪಾಯಿಗಳ ನೀರಾವರೀ ಯೋಜನೆಗಳನ್ನು ಕೈಗೊಳ್ಳಲಿದೆ.

ಕೈಗಾರಿಕೆಗಳಿಗೆ ಸಹಾಯ

ಬೋರ್ಡ್ ರಚನೆ

ಮೈಸೂರಿನಲ್ಲಿ ಕೈಗಾರಿಕೆಗಳಿಗೆ ಸರ್ಕಾರ ಸಹಾಯವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಕೊಡುವ ಉದ್ದೇಶದಿಂದ ಬೋರ್ಡೊಂದನ್ನು ರಚಿಸಲಿದೆ.

ಬೋರ್ಡಿನಲ್ಲಿ ಸರ್ಕಾರ ಐವರುಮಂದಿಯನ್ನು ನಾಮಕರಣ ಮಾಡುವುದು. ವಾಣಿಜ್ಯ ಸಂಸ್ಥೆಯ ಪ್ರತಿನಿಧಿಗಳೊಬ್ಬರು, ಲೆಜಿಸ್ಲೆಟಿವ್ ಅಸೆಂಬ್ಲಿಯಿಂದ ಮೂವರು ಚುನಾಯಿಸಲ್ಪಡುವರು. ಮೈಸೂರು ಬ್ಯಾಂಕಿನ ಮ್ಯಾನೇಜರ್ ಸದಸ್ಯರಾಗಿರುವರು.

ಸಂಧಾನ ಯತ್ನ ವಿಫಲವೆ?

ಕಾಗೋಡಿನಲ್ಲಿ ಉಂಟಾಗಿರುವ ರೈತರ ವಿವಾದವನ್ನು ಸ್ವಂತ ತಿಳಿದು ಸಂಧಾನ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಸಾಗರಕ್ಕೆ ಹೋಗಿ ಟಿ. ಬಿ. ಯಲ್ಲಿ ತಾ|| ೨೬-೨೭ರಲ್ಲಿ ಇಲ್ಲಿಯ ರೈತರ ಮುಖಂಡರುಗಳಾದ ಕಣಸೆ ಜಟ್ಟಪ್ಪ, ಸವಾಜಿ ಬೀರಪ್ಪ ಮೊದಲಾದವರನ್ನು ಕರೆಸಿ ಸಂಧಾನಕ್ಕೆ ಬಹಳ ಪ್ರಯತ್ನಿಸಿದರೆಂದು ಗೊತ್ತಾಗಿದೆ. ಸಾಗರದ ತಾ|| ರೈತ ಸಂಘದ ಅಧ್ಯಕ್ಷರಾದ ಶ್ರೀ ಮೂಕಪ್ಪನವರನ್ನು ಕರೆಸಿ ಸಂಧಾನಕ್ಕೆ ಪ್ರಯತ್ನಿಸಬೇಕೆಂದು ಮಾನ್ಯ ಮಂತ್ರಿಗಳು ಎರಡುಸಾರಿ ಕರೆಕಳಿಸಿದ್ದಾಗ್ಯೂ ಮಂತ್ರಿಗಳನ್ನು ಕಾಣಲು ಶ್ರೀ ಮೂಕಪ್ಪನವರು ಬರಲಿಲ್ಲವೆಂದು ಗೊತ್ತಾಗಿದೆ.

ಉಪನಯನ

ಮೈಸೂರು ಮೇ ೩೧

ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನ ಸಂಸ್ಕೃತ ಅಧ್ಯಾಪಕರಾಗಿದ್ದು ಈಗ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀ ಕೌಲಗಿ ಶೇಷಾಚಾರ್ಯರವರ ಪುತ್ರ ಚಿ|| ಕೆ. ರಂಗನಾಥನಿಗೆ ನಿನ್ನೆ ದಿನ ಉಪನಯನವು ನಡೆಯಿತು.

ಮೈಸೂರು ವಿಶ್ವ ವಿದ್ಯಾನಿಲಯದ ಲೈಬ್ರರಿಯನ್ ಶ್ರೀ ಜಿ. ಹನುಮಂತರಾಯರ ಪುತ್ರ ಚಿ|| ಕೃಷ್ಣಮೂರ್ತಿಗೆ ಉಪನಯನವು ನಡೆಯಿತು.

ಸಂಜೆ ಉನ್ನತಾಧಿಕಾರಿಗಳು ನಗರ ಪ್ರಮುಖರು ಆಹ್ವಾನಿತರಾಗಿದ್ದರು.

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ಅಮೋಘ ೨ನೇ ವಾರ
ಮೋಹನ್ಸ್‌ರವರ— * ಭೀಮ್‌ಸೇನ್ *
ಪಾತ್ರ-ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್‌ಕಪೂರ್, ರಾಂಸಿಂಗ್

ಪ್ರಭಾ ಪಿಕ್ಚರ್ ಹೌಸ್
ಇಂದಿನಿಂದ ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಲಾಲಲಪ್ಪ ಲಾಲಲಪ್ಪ ಹಾಡಿದ ತಾರೆ ಮೀನ
ಘುಲ್ಲಗುಲ್ಲ ಹುಲ್ಲಗುಲ್ಲ ಹಾಡಿರುವ
ಶೂರೀಫಿಲಂಸ್‌ರವರ:—
ಢೋಲಕ್ * DHOLAK
ನಟವರ್ಗ—ಮೀನ, ಅಜಿತ್, ಯಶೋದರಕಟ್ಟು ಮಜ್ನು ಮತ್ತು ರಜನಿ
ವಿಶೇಷ ಸೂಚನೆ—ತಾ|| 1—6—51ನೇ ಶುಕ್ರವಾರದಿಂದ ೦—12—೦ಯ ತರಗತಿಗೆ ೦—13—೦ ಛಾರ್ಜು ಮಾಡಲ್ಪಡುತ್ತದೆ. ಮತ್ತು ಕಡೆಯ ಎರಡು ತರಗತಿಗಳನ್ನು ಅಂದರೆ 0—4—0 ಮತ್ತು 0—6—0 ತರಗತಿಗಳನ್ನು ತೆಗೆದುಹಾಕಿ ಕಡೇ ತರಗತಿಗೆ ೦—5—೦ ಛಾರ್ಜು ಮಾಡಲ್ಪಡುತ್ತದೆ.

ರಣಜಿತ್
೨೫—೫—೫೧ರಿಂದ ಅಮೋಘವಾದ ೩ನೇ ವಾರ
-:: ಸಗಾಯಿ ::-
ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಕಾ. ಸುಬ್ಬರಾವ್,

ದೆಹಲಿಯಲ್ಲಿ ಪ್ರತಿಬಂಧಕ

ದೆಹಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ಆಜ್ಞೆಯನ್ನು ಹೊರಡಿಸಿ ಸೆಕ್ರಟರಿಯೇಟ್ ಪಾರ್ಲಿಮೆಂಟ್ ಭವನ ರಾಷ್ಟ್ರಾಧ್ಯಕ್ಷರ ನಿವಾಸಸ್ಥಾನ ಈ ಸರಹದ್ದಿನೊಳಗೆ ಮೆರವಣಿಗೆ ಪ್ರದರ್ಶನ ಮತ್ತು ೫ ಜನರಿಗಿಂತ ಹೆಚ್ಚಾಗಿ ಜನರು ಒಟ್ಟಿಗೆ ಸೇರುವುದನ್ನು ಪ್ರತಿಬಂಧಿಸಿದ್ದಾರೆ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨-೬-೧೯೪೮ ಶನಿವಾರ [ಸಂಚಿಕೆ ೨೨೩

ಸಿಮೆಂಟಿನ ಬೆಲೆ ಏರಿತು

ಸಿಮೆಂಟನ್ನು ಗೋಣೀ ಚೀಲಗಳಲ್ಲಿ ಹಾಕಿ ಸರಬರಾಯಿ ಮಾಡಿದರೆ ಟನ್ ಒಂದಕ್ಕೆ ಈಗಿನ ಬೆಲೆಗಿಂತ ೧೪|| ರೂ. ಹೆಚ್ಚಿಸಲಾಗಿದೆಯೆಂದು ತಿಳಿಯುತ್ತದೆ. ಬೊಂಬಾಯಿ ಮದರಾಸು ಸರ್ಕಾರಗಳು ಈ ವಿಷಯದಲ್ಲಿ ಸರ್ಕಾರಿ ಪ್ರಕಟಣೆ ಹೊರಡಿಸಿವೆ.

ಮೈಸೂರು ಮಂತ್ರಿಮಂಡಲ ವಿಸ್ತರಣೆ ಪ್ರಶ್ನೆಗೆ ಉತ್ತರವಿಲ್ಲ

ಹೈಸ್ಕೂಲುಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರಲು ನಿಪುಣರ ಸಲಹಾ ಸಮಿತಿ

೧೧ ಕಮ್ಯೂನಿಸ್ಟರಿಗೆ ಮರಣ ದಂಡನೆ

ವಾರಂಗಲ್ಲಿನ ವಿಶೇಷ ನ್ಯಾಯಾಧೀಶರಾದ ಡಾ|| ಲಕ್ಷ್ಮಣರಾವ್‌ರವರು ೧೧ ಕಮ್ಯೂನಿಸ್ಟರಿಗೆ ಮರಣದಂಡನೆ ವಿಧಿಸಿರುವರು. ೨೦ ಜನರ ಮೇಲೆ ಅಪಾದನೆ ವಿಚಾರಣೆ ನಡೆಸಿ ೯ ಜನರನ್ನು ಸರಿಯಾದ ರುಜುವಾತಿಲ್ಲವೆಂದು ಬಿಡುಗಡೆ ಮಾಡಿದರು.

ಪತ್ರಿಕಾ ಪ್ರತಿನಿಧಿಗಳಿಗೆ ಉಚ್ಚಾಟನೆ

ಟೆಹರಾನಿನಲ್ಲಿರುವ ರಾಯಿಟರ್ ವಿಶೇಷ ಪ್ರತಿನಿಧಿ, ಲಂಡನ್ ಡೈಲಿ ಎಕ್ಸ್‌ಪ್ರೆಸ್ ಸುದ್ದಿಗಾರ ಮುಂತಾದವರಿಗೆಲ್ಲಾ ಪರ್ಷಿಯಾವನ್ನು ೨೪ ಗಂಟೆಗಳೊಳಗಾಗಿ ಬಿಟ್ಟು ಹೊರಡಬೇಕೆಂದು ಪರ್ಷಿಯಾ ಸರ್ಕಾರ ಸೂಚನೆಯಿತ್ತಿದೆ. ಎಲ್ಲರೂ ಪರ್ಷಿಯಾ ಬಿಟ್ಟು ಹೊಂಟಿರುವರು.

ಐ. ಎನ್. ಎ.ಯವರು ಸೈನ್ಯದಲ್ಲಿ

ನೇತಾಜಿಬೋಸರ ಐ. ಎನ್. ಎ. ಗೆ ಸೇರಿದ 7 ಜನ ಅಧಿಕಾರಿಗಳು ಮತ್ತು 1038 ಜನ ಜೆ. ಸಿ. ಒ ಗಳನ್ನು ಭಾರತ ಸೈನ್ಯಕ್ಕೆ ಸೇರಿಸಿ ಕೊಳ್ಳಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ಉಪಸಚಿವ ಮೇಜರ್-ಜನರಲ್ ಹಿಮತ್ ಸಿಂಗ್ಜೀಯವರು ಹೇಳಿರುವರು.

ರಾಜಾಸ್ಥಾನದಲ್ಲಿ ಯುರೇನಿಯಂ

ಅಣುಬಾಂಬು ತಯಾರಿಕೆಗೆ ಅತ್ಯಂತ ಉಪಯುಕ್ತ ವಸ್ತುವಾದ ಯುರೇನಿಯಂ ಎಂಬ ಲೋಹವು ರಾಜಾಸ್ಥಾನದಲ್ಲಿ ವಿಶೇಷವಾಗಿ ದೊರೆಯುವುದೆಂಬುದನ್ನು ಭೂಶೋಧನಾ ಇಲಾಖೆಯವರು ಕಂಡು ಹಿಡಿದಿರುವರು.

ರೇಷನ್ ಜಾರಿಗೆ ತರಲು ಪ್ರಾಂತ್ಯಗಳಿಗೆ ಅಧಿಕಾರ

ಆವಶ್ಯಕ ಬಿದ್ದರೆ ಪೆಟ್ರೋಲ್ ರೇಷನ್ ಜಾರಿಗೆ ತರಲು ಎಲ್ಲಾ ಪ್ರಾಂತ್ಯಗಳಿಗೂ ಕೇಂದ್ರ ಸರ್ಕಾರವು ಅಧಿಕಾರವನ್ನು ಕೊಟ್ಟಿದೆ.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ ಫಲಿತಾಂಶ

ಜೂನ್ ೫ನೆಯ ತಾರೀಖು ಪ್ರಕಟಣೆ

ಬೆಂಗಳೂರು ಜೂನ್ ೧

ಮೈಸೂರು ಮಿಡ್ಲ್‌ಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷೆಗಳ ಫಲಿತಾಂಶವು ಜೂನ್ ೫ನೆಯ ತಾರೀಖು ಸೋಮವಾರ ಪ್ರಾತಃಕಾಲ ೮ ಗಂಟೆಗೆ ಪ್ರಕಟವಾಗುವುದೆಂದು ತಿಳಿದುಬಂದಿದೆ.

ಉತ್ತರ ಧ್ರುವದ ಮೇಲೆ ವಿಮಾನ ಪ್ರಯಾಣ

ಅಮೇರಿಕಾ ವಿಮಾನ ಮಾರ್ಗಗಳ ಪೈಲಟ್ ಕ್ಯಾಪ್ಟನ್ ಚಾರ್ಲ್ಸ್ ಬ್ಲೇರ್‌ರವರು, ಒಂದೇ ಎಂಜಿನ್ ಇರುವ ವಿಮಾನದಲ್ಲಿ ಉತ್ತರಧ್ರುವದ ಮೇಲೆ ಹಾರಿ ನ್ಯೂಯಾರ್ಕಿಗೆ ಹಿಂತಿರುಗಿದರು. ನಾರ್ವೆಯ ಉತ್ತರ ಭಾಗದಿಂದ ಅಲಾಸ್ಕಾಗೆ ೩,೩೦೦ ಮೈಲಿಗಳ ದೂರ ಜಗತ್ತಿನ ಸುತ್ತ ಮುಸ್ತಾಂಗ್ ಫೈಟರ್ ವಿಮಾನದಲ್ಲಿ ಕುಳಿತು ಕ್ಯಾಪ್ಟನ್ ಬ್ಲೇರ್ ಒಬ್ಬರೇ ಅಮೇರಿಕಾಗೆ ಹಾರಿ ಹೋದರು.

೧೨೦ ಮಂದಿ ಬಂಧನ

ಕಾಗೋಡು ಸತ್ಯಾಗ್ರಹ ಸಂಬಂಧದಲ್ಲಿ ಈವರೆಗೆ ರೈತ ಮತ್ತು ಸೋಶಲಿಸ್ಟ್ ಸತ್ಯಾಗ್ರಹಿಗಳೆಲ್ಲಾ ಸೇರಿ ೧೨೦ ಮಂದಿಯು ದಸ್ತಗಿರಿಯಾಗಿದೆ. ಬಂಧಿತರನ್ನೆಲ್ಲಾ ಸಾಗರದಲ್ಲಿಡಲಾಗಿದೆ.

ತಿದ್ದುಪಡಿ ಅಂಗೀಕಾರ

ಭಾರತ ರಾಜ್ಯಾಂಗದ ೧೫ನೇ ವಿಧಿಯ ತಿದ್ದುಪಡಿಯನ್ನು ಭಾರತ ಪಾರ್ಲಿಮೆಂಟು ೨೪೩-೨೯ ಓಟುಗಳಿಂದ ಅಂಗೀಕರಿಸಿತು.

ಸಾಮಾಜಿಕ, ಆರ್ಥಿಕ ಮತ್ತು ವಿದ್ಯಾಭ್ಯಾಸದಲ್ಲಿ ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಪ್ರಾಂತ್ಯ ಸರ್ಕಾರಗಳು ರಿಯಾಯತಿಗಳನ್ನು ಕಲ್ಪಿಸಲವಕಾಶವಾಗುವುದು.

ಪರ್ಷಿಯಾ ತಿರಸ್ಕಾರ

ಸಂಧಾನಕ್ಕಾಗಿ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಬ್ರಿಟನ್ನಿನ ಸಲಹೆಯನ್ನು ಪರ್ಷಿಯಾ ತಿರಸ್ಕರಿಸಿದೆ.

ಮಕ್ಕಳ ಅಪರಾಧ ತಪ್ಪಿಸಲು ಶಾಲೆ

ಶಾಸನಸಭೆಯ ಕಾರ್ಯಕಲಾಪಗಳು

ಸಂ.ಸು] ಬೆಂಗಳೂರು ೧

ಶಾಸನಸಭೆಯ ಕಾರ್ಯಕಲಾಪಗಳು ಈದಿನ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಬಾಲಕರ ಮತ್ತು ಹುಡುಗರ ಅಪರಾಧವನ್ನು ತಪ್ಪಿಸಲು ಸಂಸ್ಥಾನದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಲಾಗುವುದೆಂದೂ ಇದಕ್ಕಾಗಿ ೨-೩ ಲಕ್ಷ ರೂ ಗಳನ್ನು ವೆಚ್ಚ ಮಾಡಲಾಗುವುದೆಂದು ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು.

ಸಂಸ್ಥಾನದ ಅಧಿಕಾರಿಗಳನ್ನು ಭಾರತದ ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳಿಗೆ ಸೇರಿಸಿಕೊಳ್ಳುವ ಬಗ್ಗೆ ಕೇಂದ್ರದಿಂದ ಇನ್ನೂ ಅಜ್ಞೆ ಬಂದಿಲ್ಲವೆಂದೂ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು.

ಯಾವ ಅಧಿಕಾರಿಯನ್ನೂ ಬಲವಂತದಿಂದ ಪರಿಶೀಲನಾ ಸಮಿತಿ ಮುಂದೆ ಕಳುಹಿಸಿಲ್ಲವೆಂದು ಸಚಿವರು ತಿಳಿಸಿದರು.

ಸಂಸ್ಥಾನದಲ್ಲಿ ಗಾಂಧಿಸ್ಮಾರಕನಿಧಿಗಾಗಿ ಇದುವರೆಗೆ ೨೩,೬೯,೩೯೦ ರೂ. ವಸೂಲಾಗಿದ್ದು ನಂದೀಬೆಟ್ಟದಲ್ಲಿ ಗಾಂಧಿ ಸ್ಮಾರಕ ಮ್ಯೂಸಿಯಂ ಸ್ಥಾಪಿಸಲಾಗುವುದೆಂದು ಸಚಿವ ಶ್ರೀ ಹೆಚ್. ಸಿ ದಾಸಪ್ಪನವರು ಶಾಸನ ಸಭೆಯಲ್ಲಿ ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು.

ಮದರಾಸಿನಲ್ಲಿ ಹಸಿವಿನಿಂದ ಮರಣ

ಮದರಾಸಿನ ಸೆಂಟ್ರಲ್‌ಸ್ಟೇಷನ್ ಕಾಂಪೋಂಡಿನಲ್ಲಿ ತೀರಾ ನಿಶ್ಶಕ್ತ ಅಪರಿಚಿತ ವ್ಯಕ್ತಿಯೊಬ್ಬನು ಭಿಕ್ಷೆ ಬೇಡುತ್ತಿದ್ದನು. ಆತನನ್ನು ಜನರಲ್ ಆಸ್ಪತ್ರೆಗೆ ಸಾಗಿಸಲಾಯಿತು. ಆತ ಆಸ್ಪತ್ರೆಯಲ್ಲಿ ಮೃತನಾದನು. ಅತಿ ತೀವ್ರ ಹಸಿವೆಯೇ ಆತನ ಮರಣಕ್ಕೆ ಕಾರಣವೆಂದು ಹೇಳಲಾಗಿದೆ.

ಆ ಮುಖ್ಯಾಸ್ಪತ್ರೆಯ ಕಾರ್ಯದರ್ಶಿಯವರನ್ನಾಗಿ ಶ್ರೀ ಮಂಚೇಗೌಡರನ್ನು ನೇಮಿಸಲಾಗಿದೆ.

ಮಂತ್ರಿಮಂಡಲ ವಿಸ್ತರಣೆ ಪ್ರಶ್ನೆಗೆ ಉತ್ತರವಿಲ್ಲ

ಸ್ವ ಸು. ಫೋನ್] ಬೆಂಗಳೂರು ೧

ಈ ದಿನ ಶಾಸನಸಭೆಯಲ್ಲಿ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ಮೈಸೂರಿನ ಮಂತ್ರಿಮಂಡಲವನ್ನು ವಿಸ್ತರಿಸಲಾಗುವುದೇ ? ಯಾವಾಗ ವಿಸ್ತರಿಸಲಾಗುವುದು ಎಂಬ ಪ್ರಶ್ನೆಗಳಿಗೆ ಅಧ್ಯಕ್ಷರ ಮೂಲಕ ಈ ಪ್ರಶ್ನೆಗೆ ಸಂಬಂಧಿಸಿದ ಮಂತ್ರಿಗಳು ಉತ್ತರ ಕೊಡಲು ಇಚ್ಛಿಸುವುದಿಲ್ಲವೆಂದು ಲಿಖಿತ ಉತ್ತರ ಕೊಡಲಾಯಿತು.

ಹೈಸ್ಕೂಲ್‌ಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಕನ್ನಡದಲ್ಲೇ ಕೊಡುವ ಬಗ್ಗೆ ಪರಿಶೀಲಿಸಿ ಸಲಹೆನೀಡಲು ನಿಪುಣರ ಸಮಿತಿ ರಚಿಸಲಾಗುವುದೆಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ವಿದ್ಯಾಮಂತ್ರಿ ಶ್ರೀ ಆರ್. ಚೆನ್ನಿಗರಾಮಯ್ಯನವರು ತಿಳಿಸಿದರು.

ನಿಮ್ನ ವರ್ಗದವರ ಅಭಿವೃದ್ಧಿಗಾಗಿ ೫ ವರ್ಷಗಳ ಅವಧಿಯ ಒಂದು ಕೋಟಿ ರೂಪಾಯಿನ ಯೋಜನೆಯೊಂದನ್ನು ತಯಾರಿಸಲಾಗಿದೆಯೆಂದೂ ಇದರಲ್ಲಿ ಹರಿಜನರಿಗೆ ಮನೆ ಕಟ್ಟಿಸಲು ಸಹಾಯ ಮುಂತಾದುವು ಸೇರಿ ಕೇಂದ್ರದ ಯೋಜನಾ ಮಂಡಲಿಯು ಈ ಯೋಜನೆಗೆ ಒಪ್ಪಿಗೆಯಿತ್ತಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ಫೇಲಾದುದಕ್ಕೆ ಕೆರೆಗೆ ಬಿದ್ದ

ಹರಿ ಎಂಬ ಹದಿನಾರು ವರ್ಷದ ಹುಡುಗನು ನಿನ್ನೆ ಕೆಂಪಾಬುದಿ ಕೆರೆಯಲ್ಲಿ ಮುಳುಗಿ ಮೃತನಾದನು. ಇವನು ಎಸ್. ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದನೆಂದೂ ಅದರಲ್ಲಿ ತೇರ್ಗಡೆಯಾಗದೆ ಈರೀತಿ ಚಿಗುಪ್ಸೆಯಿಂದ ಮೃತನಾದನೆಂದು ಹೇಳಲಾಗಿದೆ.

ಶಾಸನಸಭೆಯ ಅನುತಾಪ

ಭಾರತದ ರಾಜ್ಯಾಂಗ ರಚನಾ ಸಭೆಯ ಮತ್ತು ಉತ್ತರ ಪ್ರದೇಶದ ಶಾಸನಸಭೆಯ ಸದಸ್ಯೆಯಾಗಿದ್ದ ಶ್ರೀಮತಿ ಪೂರ್ಣಿಮಾ ಬ್ಯಾನರ್ಜೀಯವರ ನಿಧನಕ್ಕೆ ಕೇಂದ್ರಶಾಸನಸಭೆಯು ತನ್ನ ಅನುತಾಪವನ್ನು ವ್ಯಕ್ತಪಡಿಸಿ ಸಭೆ ಒಂದು ನಿಮಿಷ ಮೌನ ತಾಳಿತು,

ಭಾರತ-ಪಾಕೀಸ್ಥಾನ ವ್ಯಾಪಾರ

ಕಳೆದ ಎರಡು ತಿಂಗಳಲ್ಲಿ ಭಾರತ ಪಾಕೀಸ್ಥಾನಗಳ ವ್ಯಾಪಾರವು ವಿಶೇಷವಾಗಿ ನಡೆದಿದೆ ಭಾರತಕ್ಕೆ ಸುಮಾರು ೩ಕೋಟಿ ೨೪ ಲಕ್ಷ ರೂಪಾಯಿಗಳ ಸಾಮಾನು ಪಾಕೀಸ್ಥಾನದಿಂದ, ಪಾಕೀಸ್ಥಾನಕ್ಕೆ ಭಾರತದಿಂದ ೨ಕೋಟಿ ೩೪ ಲಕ್ಷ ರೂಗಳ ಸಾಮಾನು ರವಾನೆಯಾಗಿವೆಯೆಂದು ತಿಳಿಯಬರುತ್ತದೆ.

ತ್ರಿಮೂರ್ತಿಗಳ ಸಮಿತಿ

ಬ್ರಿಟಿಷ್-ಪರ್ಷಿಯಾ ಎಣ್ಣೆ ವಿವಾದವನ್ನು ಪರಿಶೀಲಿಸಲು ಪರ್ಷಿಯಾ ಸರ್ಕಾರವು ತ್ರಿಮೂರ್ತಿಗಳ ಒಂದು ಸಮಿತಿಯನ್ನು ನೇಮಿಸಿದೆ.

ಈಗ ರಾಷ್ಟ್ರೀಕರಣವಾಗಿರುವ ಎಲ್ಲಾ ಎಣ್ಣೆ ಕೇಂದ್ರಗಳಲ್ಲಿಯೂ ಕೆಲಸ ಮಾಡುತ್ತಿರುವ ವಿದೇಶಿಯರೆಲ್ಲರೂ ರಾಷ್ಟ್ರೀಕರಣವಾದ ಎಣ್ಣೆ ಕೇಂದ್ರಗಳೆಂದು ಪರಿಗಣಿಸಿ ಈ ಸಂಸ್ಥೆಗಳಲ್ಲಿಯೂ ಕೆಲಸ ಮಾಡಹುದೆಂದು ಪರ್ಷಿಯಾ ಸರ್ಕಾರ ಆಜ್ಞೆ ಮಾಡಿರುವುದಾಗಿ ಹೇಳಲಾಗಿದೆ.

ಚೈನಾ ಕೇಳಿಲ್ಲ

ಸೆಣಬು ಮತ್ತು ರಬ್ಬರ್‌ನ್ನು ತನಗೆ ಕಳುಹಿಸಬೇಕೆಂದು ಭಾರತವನ್ನು ಚೈನಾ ಕೇಳಿಲ್ಲ. ಯಾವ ರಾಷ್ಟ್ರಕ್ಕೂ ರಫ್ತು ಮಾಡುವ ಪ್ರಮಾಣದಲ್ಲಿ ನಮ್ಮಲ್ಲಿ ಸರಕಿಲ್ಲ. ವಿಶ್ವಸಂಸ್ಥೆಯು ಚೈನಾದ ಮೇಲೆ ವಿಧಿಸಿರುವ ಶಸ್ತ್ರನಿರ್ಬಂಧನೆಯು ಭಾರತ ಚೈನಾ ವ್ಯಾಪಾರ ಸಂಬಂಧಕ್ಕೇನೂ ಅಡ್ಡಿಬರುವುದಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಮೆಹತಾಬ್‌ರವರು ಹೇಳಿರುವರು.

ಜಯಪುರದ "ಮಹಾರಾಜರ ವಿದೇಶಯಾತ್ರೆ

ಉತ್ತರ ಪ್ರದೇಶದ ರಾಜಪ್ರಮುಖರಾದ ಜಯಪುರದ ಮಹಾರಾಜರು ಯೂರೋಪು ಯಾತ್ರೆಗಾಗಿ ಹೊರಡಲಿರುವರು. ಅವರ ಐವಜಿನಲ್ಲಿ ಕೋಟಾ ಮಹಾರಾಜರು ರಾಜಪ್ರಮುಖರಾಗಿರುವರು.

೨೪ ಗಂಟೆಗಳೊಳಗೆ ಹೊರಡಿ

ಬ್ರಿಟಿಷ್ ಪತ್ರಿಕೋದ್ಯೋಗಿಗಳೆಲ್ಲರೂ ಟೆಹರಾನನ್ನು ೨೪ ಗಂಟೆಗಳೊಳಗೆ ಬಿಟ್ಟು ಹೊರಡಿ ಎಂದು ಪರ್ಷಿಯಾ ಸರ್ಕಾರ ತಿಳಿಸಿರುವುದಾಗಿ ವರದಿಯಾಗಿದೆ.

ಭಾರತದಿಂದ ಆಸ್ಟ್ರೇಲಿಯಾಕ್ಕೆ ಕಲ್ಲಿದ್ದಲು

ಭಾರತದಿಂದ ಆಸ್ಟ್ರೇಲಿಯಾಕ್ಕೆ ೬|| ಲಕ್ಷ ಟನ್ ಕಲ್ಲಿದ್ದಲನ್ನು ಜೂನ್ ಅಖೈರಿನ ವೇಳೆಗೆ ಸರಬರಾಯಿ ಮಾಡಬೇಕಾದ್ದುದು ಹಡಗುಗಳ ತೊಂದರೆಯಿಂದ ನಿಧಾನವಾಗಿದೆ. ಇಲ್ಲಿಯ ವರೆಗೆ ೨ ಲಕ್ಷ ಟನ್ ಕಳುಹಿಸಲಾಗಿದೆ.

ಮಗನಿಗೆ ಉತ್ತೇಜನ ಕೊಡಲು ತಾಯಿಯೂ ಓದಬೇಕಾಯಿತು

೪೦ ವರ್ಷ ವಯಸ್ಸಿನ ತಾಯಿ ಮತ್ತು ಆಕೆಯ ೧೬ ವರ್ಷದ ಮಗ ಈರ್ವರೂ ಈ ಬಾರಿ ಗುಜರಾತ್ ವಿಶ್ವವಿದ್ಯಾನಿಲಯದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಸೋಮಾರಿಯಾಗಿದ್ದ ಮಗನನ್ನು ಉತ್ತೇಜಿಸಿ ಓದುವಂತೆ ಮಾಡುವ ಸಲುವಾಗಿ ತಾಯಿಯಾದವಳು ತಾನೂ ಅವನೊಂದಿಗೆ ಕುಳಿತು ಓದಿ ಪರೀಕ್ಷೆಗೆ ಕಟ್ಟಿ ಪಾಸದಳೆಂದು ವರದಿಯಾಗಿದೆ.

ಸ್ಥಳೀಯ ಕಾಲೇಜ್ ಪ್ರೊಫೆಸರರ ಹೆಂಡತಿ ಈಕೆ.

೧೦೦೦೦ ಮಣ ಆಹಾರ ದಾನ

ಪ್ರಧಾನಿ ನೆಹರೂರವರ ಕೋರಿಕೆಯ ಮೇಲೆ ಭಾರತ ಸೈನ್ಯವು ತನ್ನ ಆಹಾರವನ್ನು ಉಳಿತಾಯ ಮಾಡಿ ೧೦೦೦೦ ಮಣ ಆಹಾರವನ್ನು ಮದ್ರಾಸು ಮತ್ತು ಬಿಹಾರ ಪ್ರಾಂತ್ಯಗಳಿಗೆ ದಾನವಾಗಿ ಕೊಡಲಿದೆ.

ನೆಹರೂರವರ ಉದಾರತೆ

ರಾಜಕೀಯದಲ್ಲಿ ನೊಂದ ರಾಮನಾಡಿನ ಶ್ರೀ ಬೂತಿ ಸಿಗ್ಮಣಿ ನಾದಾರ್‌ರವರು ಬಹಳ ಕಷ್ಟದಲ್ಲಿದ್ದಾರೆಂದು ಸುದ್ದಿ ಕೇಳಿ, ಪ್ರಧಾನಿ ನೆಹರೂರವರು ೩೦೦ ರೂಪಾಯಿಗಳ ಚೆಕ್ಕೊಂದನ್ನು ಕಳುಹಿಸಿದ್ದಾರೆ.

ಆಯುರ್ವೇದ ವೈದ್ಯರ ಸಭೆ

ಮೈಸೂರು ಮೇ ೩೧

ತಾ|| ೩-೬-೫೧ನೇ ಭಾನುವಾರ ಸಂಜೆ ೬ ಘಂಟೆಗೆ ಸರಿಯಾಗಿ ಶ್ರೀರಾಮಪೇಟೆ ಈವನಿಂಗ್ ಬಜಾರ್ ಮಹಡಿ ಮೇಲೆ ವೈದ್ಯ ಸಂಘದ ವಿಶೇಷ ಸಭೆಯು ಡಾ|| ವೆಂಕಟರಾಮ ಪಂಡಿತರ ಅಧ್ಯಕ್ಷತೆಯಲ್ಲಿ ಸೇರುವುದು.

ಆಯುರ್ವೇದ ವೈದ್ಯರಿಗೆ ಕೊಡುತ್ತಿದ್ದ ಸಹಾಯದ್ರವ್ಯವನ್ನು ನಿಲ್ಲಿಸಬೇಕೆಂದು ಸಿಟಿ ಮುನಿಸಿಪಾಲಿಟಿಯವರು ನಿರ್ಣಯಿಸಿದ ವಿಚಾರವನ್ನೂ, ಆಯುರ್ವೇದದಲ್ಲಿ ಉಚ್ಚ ಶಿಕ್ಷಣಕ್ಕಾಗಿ ನೇಮಿಸಿದ ಸಮಿತಿಯ ನಿರ್ಣಯಗಳನ್ನು ಚರ್ಚಿಸಲಾಗುವುದು. ವೈದ್ಯರೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

೧೦೦೦೦ ಜನರು ಕೈಸೆರೆ

ಕೊರಿಯಾ ಯುದ್ಧದಲ್ಲಿ ಏಪ್ರಿಲ್ ಮಾಹೆಯಲ್ಲಿ ೧೦೦೦೦ ಉತ್ತರದ ಸೈನಿಕರನ್ನು ಸೆರೆ ಹಿಡಿಯಲಾಗಿದೆಯೆಂದು ಅಷ್ಟಮ ದಳದವರು ತಿಳಿಸಿರುವರು.

೩೩೪ ಕೋಟಿ ರೂ. ಯೋಜನೆ

ಮುಂದಿನ ೬ ವರ್ಷಗಳಲ್ಲಿ ಭಾರತ ಸರ್ಕಾರವು ೩೩೪ ಕೋಟಿ ರೂಪಾಯಿಗಳ ನೀರಾವರೀ ಯೋಜನೆಗಳನ್ನು ಕೈಗೊಳ್ಳಲಿದೆ.

ವುಡ್‌ಲ್ಯಾಂಡ್ಸ್ * ೨೫—೫—೫೧ರಿಂದ ಅಮೋಘ ೨ನೇ ವಾರ

ಮೋಹನ್ಸ್‌ರವರ— * ಭೀಮಸೇನ್ *

ಪಾತ್ರ- ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್, ರಾಂಸಿಂಗ್.

ಪ್ರಭಾ ಪಿಕ್ಚರ್ ಹೌಸ್

ಇಂದಿನಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಲಾರಲಪ್ಪ ಲಾರಲಪ್ಪ ಹಾಡಿದ ತಾರೆ ಮೀನ

ಹುಲ್ಲಗುಲ್ಲ ಹುಲ್ಲಗುಲ್ಲ ಹಾಡಿರುವ

ಶೂರೇಫಿಲಂಸ್‌ರವರ:—

ಢೋಲಕ್ * DHOLAK

ನಟವರ್ಗ—ಮೀನ, ಅಜಿತ್, ಯಶೋದರಕಟ್ಜು ಮಜ್ನು ಮತ್ತು ರಜನಿ

ವಿಶೇಷ ಸೂಚನೆ—ತಾ|| 1—6—51ನೇ ಶುಕ್ರವಾರದಿಂದ ೦—12—೦ಯ ತರಗತಿಗೆ ೦—13—೦ ಛಾರ್ಜು ಮಾಡಲ್ಪಡುತ್ತದೆ. ಮತ್ತು ಕಡೆಯ ಎರಡು ತರಗತಿಗಳನ್ನು ಅಂದರೆ 0—4—0 ಮತ್ತು 0—6—0 ತರಗತಿಗಳನ್ನು ತೆಗೆದುಹಾಕಿ ಕಡೇ ತರಗತಿಗೆ ೦—5—೦ ಛಾರ್ಜು ಮಾಡಲ್ಪಡುತ್ತದೆ.

ಕೈಗಾರಿಕೆಗಳಿಗೆ ಸಹಾಯ

ಬೋರ್ಡ್ ರಚನೆ

ಮೈಸೂರಿನಲ್ಲಿ ಕೈಗಾರಿಕೆಗಳಿಗೆ ಸರ್ಕಾರ ಸಹಾಯವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಕೊಡುವ ಉದ್ದಿಶ್ಯದಿಂದ ಬೋರ್ಡೊಂದನ್ನು ರಚಿಸಲಿದೆ.

ಬೋರ್ಡಿನಲ್ಲಿ ಸರ್ಕಾರ ಐದುಮಂದಿಯನ್ನು ನಾಮಕರಣ ಮಾಡುವುದು. ವಾಣಿಜ್ಯ ಸಂಸ್ಥೆಯ ಪ್ರತಿನಿಧಿಗಳೊಬ್ಬರು, ಲೆಜಿಸ್ಲೆಟಿವ್ ಅಸೆಂಬ್ಲಿಯಿಂದ ಮೂವರು ಚುನಾಯಿಸಲ್ಪಡುವರು. ಮೈಸೂರು ಬ್ಯಾಂಕಿನ ಮ್ಯಾನೇಜರ್ ಸದಸ್ಯರಾಗಿರುವರು.

ಸಂಧಾನ ಯತ್ನ ವಿಫಲವೆ

ಕಾಗೋಡಿನಲ್ಲಿ ಉಂಟಾಗಿರುವ ರೈ ರ ವಿವಾದವನ್ನು ಸ್ವಂತ ತಿಳಿದು ಸಂಧಾ ಮಾಡಿಸಬೇಕೆಂದು ಮಾನ್ಯ ಮಂತ್ರಿಗ ದ ಶ್ರೀ ಟಿ. ಮರಿಯಪ್ಪನವರು ಸಾಗರ ಬಂದು ಟಿ. ಬಿ. ಯಲ್ಲಿ ತಾ|| ೨೬-೨ ರಲ್ಲಿ ಇಲ್ಲಿಯ ರೈತರ ಮುಖಂಡರುಗಳಾ ಕಣಸೆ ಜಟ್ಟಪ್ಪ, ಸವಾಜಿ ಬೀರಪ್ಪ ಮೊ ಲಾದವರನ್ನು ಕರೆಸಿ ಸಂಧಾನಕ್ಕೆ ಒ ಪ್ರಯತ್ನಿಸಿದರೆಂದು ಗೊತ್ತಾಗಿದೆ. ಸ ಗರದ ತಾ|| ರೈತ ಸಂಘದ ಅಧ್ಯಕ್ಷರಾ ಶ್ರೀ ಮೂಕಪ್ಪನವರನ್ನು ಕರೆಸಿ ಸಂಧಾನಕ್ಕೆ ಪ್ರಯತ್ನಿಸಬೇಕೆಂದು ಮಾನ್ಯ ಮಂತ್ರಿಗಳು ಒಂದೆರಡುಸಾರಿ ಕರೆಕಳಿಸಿದಾಗ್ಯೂ ಮಂತ್ರಿಗಳನ್ನು ಕಾಣಲು ಶ್ರೀ ಮೂಕಪ್ಪನವರು ಬರಲಿಲ್ಲವೆಂದು ಗೊತ್ತಾಗಿ

ಉಪನಯನ

ಮೈಸೂರು ಮೇ ೩

ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನ ಸಂಸ್ಕೃತ ಅಧ್ಯಾಪಕರಾಗಿದ್ದು ಈ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಲರಾಗಿರುವ ಶ್ರೀ ಕೌಲಗಿ ಶೇಷಚಾರ್ಯರ ಪುತ್ರ ಚಿ|| ಕೆ. ರಂಗನಾಥನಿಗೆ ನಿ ದಿನ ಉಪನಯನವು ನಡೆಯಿತು.

ಮೈಸೂರು ವಿಶ್ವ ವಿದ್ಯಾನಿಲಯದ ಲೈಬ್ರರಿಯನ್ ಶ್ರೀ ಜಿ. ಹನುಮಂತರಾಯರ ಪುತ್ರ ಚಿ|| ಕೃಷ್ಣಮೂರ್ತಿಗೆ ಉಪನಯನವು ನಡೆಯಿತು.

ಸಂಜೆ ಉನ್ನತಾಧಿಕಾರಿಗಳು ನ ಪ್ರಮುಖರು ಆಹ್ವಾನಿತರಾಗಿದ್ದರು.

ರಣಜಿತ್

೨೫—೫—೫೧ರಿಂದ

ಅಮೋಘವಾದ ೩ನೇ ವಾ

-:: ಸಗಾಯಿ ::-

ಪಾತ್ರ—ರೆಹನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು :—ಜಿ. ಎಲ್. ಸ್ವಾ ಟ್ಯೂರಿಸ್ಟ್ ಬ್ಯೂರೋ ಮೈಸೂರ ಮುದ್ರಕರು :—ಸಿ. ಕಾ. ಸುಬ್ಬರಾವ ಮೋಹನ್ ಮುದ್ರಣಾಲಯ, ಮೈಸೂರ

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೬೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨-೬-೧೯೫೧ ಶನಿವಾರ [ಸಂಚಿಕೆ ೭೨೩

ದೆಹಲಿಯಲ್ಲಿ ಪ್ರತಿಬಂಧಕ

ದೆಹಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ಆಜ್ಞೆಯನ್ನು ಹೊರಡಿಸಿ ಸೆಕ್ರಟರಿಯೇಟ್ ಪಾರ್ಲಿಮೆಂಟ್ ಭವನ ರಾಷ್ಟ್ರಾಧ್ಯಕ್ಷರ ನಿವಾಸಸ್ಥಾನ ಈ ಸರಹದ್ದಿನೊಳಗೆ ಮೆರವಣಿಗೆ ಪ್ರದರ್ಶನ ಮತ್ತು ೫ ಜನರಿಗಿಂತ ಹೆಚ್ಚಾಗಿ ಜನರು ಒಟ್ಟಿಗೆ ಸೇರುವುದನ್ನು ಪ್ರತಿಬಂಧಿಸಿದ್ದಾರೆ.

ಸಿಮೆಂಟಿನ ಬೆಲೆ ಏರಿಕೆ

ಸಿಮೆಂಟನ್ನು ಗೋಣೀ ಚೀಲಗಳಲ್ಲಿ ಹಾಕಿ ಸರಬರಾಯಿ ಮಾಡಿದರೆ ಟನ್ ಒಂದಕ್ಕೆ ಈಗಿನ ಬೆಲೆಗಿಂತ ೧೪॥ ರೂ. ಹೆಚ್ಚಿಸಲಾಗಿದೆಯೆಂದು ತಿಳಿಯಬರುತ್ತದೆ. ಬೊಂಬಾಯಿ ಮದರಾಸು ಸರ್ಕಾರಗಳು ಈ ವಿಷಯದಲ್ಲಿ ಸರ್ಕಾರಿ ಪ್ರಕಟಣೆ ಹೊರಡಿಸಿವೆ.

ಮೈಸೂರು ಮಂತ್ರಿಮಂಡಲ ವಿಸ್ತರಣೆ ಪ್ರಶ್ನೆಗೆ ಉತ್ತರವಿಲ್ಲ

ಹೈಸ್ಕೂಲುಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರಲು ನಿಪುಣರ ಸಲಹಾ ಸಮಿತಿ

೧೧ ಕಮ್ಯೂನಿಸ್ಟರಿಗೆ ಮರಣ ದಂಡನೆ

ವಾರಂಗಲ್ಲಿನ ವಿಶೇಷ ನ್ಯಾಯಾಧೀಶರಾದ ಡಾ॥ ಲಕ್ಷ್ಮಣರಾವ್‌ರವರು ೧೧ ಕಮ್ಯೂನಿಸ್ಟರಿಗೆ ಮರಣದಂಡನೆ ವಿಧಿಸಿರುವರು. ೨೦ ಜನರ ಮೇಲೆ ಅಪಾದನೆ ವಿಚಾರಣೆ ನಡೆಸಿ ೯ ಜನರನ್ನು ಸರಿಯಾದ ರುಜುವಾತಿಲ್ಲವೆಂದು ಬಿಡುಗಡೆ ಮಾಡಿದರು.

ಪತ್ರಿಕಾ ಪ್ರತಿನಿಧಿಗಳಿಗೆ ಉಚ್ಚಾಟನೆ

ಟೆಹರಾನಿನಲ್ಲಿರುವ ರಾಯಿಟರ್ ವಿಶೇಷ ಪ್ರತಿನಿಧಿ, ಲಂಡನ್ ಡೈಲಿ ಎಕ್ಸ್‌ಪ್ರೆಸ್ ಸುದ್ದಿಗಾರ ಮುಂತಾದವರಿಗೆಲ್ಲಾ ಪರ್ಷಿಯಾವನ್ನು ೨೪ ಗಂಟೆಗಳೊಳಗಾಗಿ ಬಿಟ್ಟು ಹೊರಡಬೇಕೆಂದು ಪರ್ಷಿಯಾ ಸರ್ಕಾರ ಸೂಚಿಸುತ್ತಿವೆ. ಎಲ್ಲರೂ ಪರ್ಷಿಯಾ ಬಿಟ್ಟು ಹೊರಟಿರುವರು.

ಐ. ಎನ್. ಎ.ಯವರು ಸೈನ್ಯದಲ್ಲಿ

ನೇತಾಜಿಬೋಸರ ಐ. ಎನ್. ಎ. ಗೆ ಸೇರಿದ 7 ಜನ ಅಧಿಕಾರಿಗಳು ಮತ್ತು 1038 ಜನ ಜೆ. ಸಿ. ಓ.ಗಳನ್ನು ಭಾರತ ಸೈನ್ಯಕ್ಕೆ ಸೇರಿಸಿ ಕೊಳ್ಳಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ಉಪಸಚಿವ ಮೇಜರ್-ಜನರಲ್ ಹಿಮತ್ ಸಿಂಗ್ಜೀಯವರು ಹೇಳಿರುವರು.

ರಾಜಾಸ್ಥಾನದಲ್ಲಿ ಯುರೇನಿಯಂ

ಅಣುಬಾಂಬು ತಯಾರಿಕೆಗೆ ಅತ್ಯಂತ ಉಪಯುಕ್ತ ವಸ್ತುವಾದ ಯುರೇನಿಯಂ ಎಂಬ ಲೋಹವು ರಾಜಾಸ್ಥಾನದಲ್ಲಿ ಹೇರಳವಾಗಿ ದೊರೆಯುವುದೆಂಬುದನ್ನು ಭೂಶೋಧನಾ ಇಲಾಖೆಯವರು ಕಂಡು ಹಿಡಿದಿರುವರು.

ರೇಷನ್ ಜಾರಿಗೆ ತರಲು ಪ್ರಾಂತ್ಯಗಳಿಗೆ ಅಧಿಕಾರ

ಅವಶ್ಯಕ ಬಿದ್ದರೆ ಪೆಟ್ರೋಲ್ ರೇಷನ್ ಜಾರಿಗೆ ತರಲು ಎಲ್ಲಾ ಪ್ರಾಂತ್ಯಗಳಿಗೂ ಕೇಂದ್ರ ಸರ್ಕಾರವು ಅಧಿಕಾರವನ್ನು ಕೊಟ್ಟಿದೆ.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ ಫಲಿತಾಂಶ

ಜೂನ್ ೪ನೆಯ ತಾರೀಖು ಪ್ರಕಟಣೆ

ಬೆಂಗಳೂರು ಜೂನ್ ೧

ಮೈಸೂರು ಮಿಡ್ಲ್‌ಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷೆಗಳ ಫಲಿತಾಂಶವು ಜೂನ್ ೪ನೆಯ ತಾರೀಖು ಸೋಮವಾರ ಪ್ರಾತಃಕಾಲ ೮ ಗಂಟೆಗೆ ಪ್ರಕಟವಾಗುವುದೆಂದು ತಿಳಿದುಬಂದಿದೆ.

ಉತ್ತರ ಧ್ರುವದ ಮೇಲೆ ವಿಮಾನ ಪ್ರಯಾಣ

ಅಮೆರಿಕಾ ವಿಮಾನ ಮಾರ್ಗಗಳ ಪೈಲಟ್ ಕ್ಯಾಪ್ಟನ್ ಚಾರ್ಲ್ಸ್ ಬ್ಲೇರ್‌ರವರು, ಒಂದೇ ಎಂಜಿನ್ ಇರುವ ವಿಮಾನದಲ್ಲಿ ಉತ್ತರಧ್ರುವದ ಮೇಲೆ ಹಾರಿ ನ್ಯೂಯಾರ್ಕಿಗೆ ಹಿಂತಿರುಗಿದರು. ನಾರ್ವೆಯ ಉತ್ತರ ಭಾಗದಿಂದ ಅಲಾಸ್ಕಾಗೆ ೩,೩೦೦ ಮೈಲಿಗಳ ದೂರ ಜಗತ್ತಿನ ಸುತ್ತ ಮಸ್ಟಾಂಗ್ ಫೈಟರ್ ವಿಮಾನದಲ್ಲಿ ಕುಳಿತು ಕ್ಯಾಪ್ಟನ್ ಬ್ಲೇರ್ ಕೆನಡಾ, ಅಮೆರಿಕಾಗಳ ಮೇಲೆ ಹಾರಿಹೋದರು

೧೨೦ ಮಂದಿ ಬಂಧನ

ಕಾಗೋಡು ಸತ್ಯಾಗ್ರಹ ಸಂಬಂಧದಲ್ಲಿ ಈವರೆಗೆ ರೈತ ಮತ್ತು ಸೋಷಲಿಸ್ಟ್ ಸತ್ಯಾಗ್ರಹಿಗಳೆಲ್ಲಾ ಸೇರಿ ೧೨೦ ಮಂದಿಯು ದಸ್ತಗಿರಿಯಾಗಿದೆ. ಬಂಧಿತರನ್ನೆಲ್ಲಾ ಸಾಗರದಲ್ಲಿಡಲಾಗಿದೆ.

ತಿದ್ದುಪಡಿ ಅಂಗೀಕಾರ

ಭಾರತ ರಾಜ್ಯಾಂಗದ ೧೫ನೇ ವಿಧಿಯ ತಿದ್ದುಪಡಿಯನ್ನು ಭಾರತ ಪಾರ್ಲಿಮೆಂಟು ೨೪೩-೫ ಓಟುಗಳಿಂದ ಅಂಗೀಕರಿಸಿತು.

ಸಾಮಾಜಿಕ, ಆರ್ಥಿಕ ಮತ್ತು ವಿದ್ಯಾಭ್ಯಾಸದಲ್ಲಿ ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಪ್ರಾಂತ್ಯ ಸರ್ಕಾರಗಳು ರಿಯಾಯತಿಗಳನ್ನು ಕಲ್ಪಿಸಲವಕಾಶವಾಗುವುದು.

ಪರ್ಷಿಯಾ ತಿರಸ್ಕಾರ

ಸಂಧಾನಕ್ಕಾಗಿ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಟ್ರೂಮನ್ನಿನ ಸಲಹೆಯನ್ನು ಪರ್ಷಿಯಾ ತಿರಸ್ಕರಿಸಿದೆ.

ಮಕ್ಕಳ ಅಪರಾಧ ತಪ್ಪಿಸಲು ಶಾಲೆ

ಶಾಸನಸಭೆಯ ಕಾರ್ಯಕಲಾಪಗಳು

ಸಂ.ಸು.] ಬೆಂಗಳೂರು ೧

ಶಾಸನಸಭೆಯ ಕಾರ್ಯಕಲಾಪಗಳು ಈದಿನ ಶ್ರೀ ಎ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಬಾಲಕರ ಮತ್ತು ಹುಡುಗರ ಅಪರಾಧಗಳನ್ನು ತಪ್ಪಿಸಲು ಸಂಸ್ಥಾನದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಲಾಗುವುದೆಂದೂ ಇದಕ್ಕಾಗಿ ೨-೩ ಲಕ್ಷ ರೂಗಳನ್ನು ವೆಚ್ಚ ಮಾಡಲಾಗುವುದೆಂದು ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು.

ಸಂಸ್ಥಾನದ ಅಧಿಕಾರಿಗಳನ್ನು ಭಾರತದ ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳಿಗೆ ಸೇರಿಸಿಕೊಳ್ಳುವ ಬಗ್ಗೆ ಕೇಂದ್ರದಿಂದ ಇನ್ನೂ ಆಜ್ಞೆ ಬಂದಿಲ್ಲವೆಂದೂ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು.

ಯಾವ ಅಧಿಕಾರಿಯನ್ನೂ ಬಲವಂತದಿಂದ ಪರಿಶೀಲನಾ ಸಮಿತಿ ಮುಂದೆ ಕಳುಹಿಸಿಲ್ಲವೆಂದು ಸಚಿವರು ತಿಳಿಸಿದರು.

ಸಂಸ್ಥಾನದಲ್ಲಿ ಗಾಂಧಿಸ್ಮಾರಕನಿಧಿಗಾಗಿ ಇದುವರೆಗೆ ೨೩,೬೯,೩೯೦ ರೂ. ವಸೂಲಾಗಿದ್ದು ನಂದೀಬೆಟ್ಟದಲ್ಲಿ ಗಾಂಧೀ ಸ್ಮಾರಕ ಮ್ಯೂಸಿಯಂ ಸ್ಥಾಪಿಸಲಾಗುವುದೆಂದು ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಶಾಸನ ಸಭೆಯಲ್ಲಿ ಪ್ರಶ್ನೆಗೊಂದಕ್ಕೆ ಉತ್ತರವಾಗಿ ತಿಳಿಸಿದರು

ಮದರಾಸಿನಲ್ಲಿ ಹಸಿವಿನಿಂದ ಮರಣ

ಮದರಾಸಿನ ಸೆಂಟ್ರಲ್‌ಸ್ಟೇಷನ್ ಕಾಂಪೌಂಡಿನಲ್ಲಿ ತೀರಾ ನಿಶ್ಶಕ್ತ ಅಪರಿಚಿತ ವ್ಯಕ್ತಿಯೊಬ್ಬನು ಭಿಕ್ಷೆ ಬೇಡುತ್ತಿದ್ದನು. ಆತನನ್ನು ಜನರಲ್ ಆಸ್ಪತ್ರೆಗೆ ಸಾಗಿಸಲಾಯಿತು. ಆತ ಆಸ್ಪತ್ರೆಯಲ್ಲಿ ಮೃತನಾದನು. ಅತಿ ತೀವ್ರ ಹಸಿವೆಯೇ ಆತನ ಮರಣಕ್ಕೆ ಕಾರಣವೆಂದು ಹೇಳಲಾಗಿದೆ.

‡ ಮುಜರಾಯಿ ಇಲಾಖೆಯ ಕಾರ್ಯದರ್ಶಿಯವರನ್ನಾಗಿ ಶ್ರೀ ಮಂಚೇಗೌಡರನ್ನ ನೇಮಿಸಲಾಗಿದೆ.

ಮಂತ್ರಿಮಂಡಲ ವಿಸ್ತರಣೆ ಪ್ರಶ್ನೆಗೆ ಉತ್ತರವಿಲ್ಲ

ಸ್ವ ಸು. ಫೋನ್] ಬೆಂಗಳೂರು ೧

ಈ ದಿನ ಶಾಸನಸಭೆಯಲ್ಲಿ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ಮೈಸೂರಿನ ಮಂತ್ರಿಮಂಡಲವನ್ನು ವಿಸ್ತರಿಸಲಾಗುವುದೇ? ಯಾವಾಗ ವಿಸ್ತರಿಸಲಾಗುವುದು ಎಂಬ ಪ್ರಶ್ನೆಗಳಿಗೆ ಅಧ್ಯಕ್ಷರ ಮೂಲಕ ಈ ಪ್ರಶ್ನೆಗೆ ಸಂಬಂಧಿಸಿದ ಮಂತ್ರಿಗಳು ಉತ್ತರ ಕೊಡಲು ಇಚ್ಛಿಸುವುದಿಲ್ಲವೆಂದು ಲಿಖಿತ ಉತ್ತರ ಕೊಡಲಾಯಿತು.

ಹೈಸ್ಕೂಲ್‌ಗಳಲ್ಲಿ ಶಿಕ್ಷಣ ಮಾಧ್ಯಮವನ್ನು ಕನ್ನಡದಲ್ಲೇ ಕೊಡುವ ಬಗ್ಗೆ ಪರಿಶೀಲಿಸಿ ಸಲಹೆನೀಡಲು ನಿಪುಣರ ಸಮಿತಿ ರಚಿಸಲಾಗುವುದೆಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ವಿದ್ಯಾಮಂತ್ರಿ ಶ್ರೀ ಆರ್. ಚೆನ್ನಿಗರಾಮಯ್ಯನವರು ತಿಳಿಸಿದರು.

ನಿಮ್ನ ವರ್ಗದವರ ಅಭಿವೃದ್ಧಿಗಾಗಿ ೫ ವರ್ಷಗಳ ಅವಧಿಯ ಒಂದು ಕೋಟಿ ರೂಪಾಯಿನ ಯೋಜನೆಯೊಂದನ್ನು ತಯಾರಿಸಲಾಗಿದೆಯೆಂದೂ ಬಡವರಿಗೆ ಮನೆ ಕಟ್ಟಿಸಲು ಸಹಾಯ ಮುಂತಾದುವು ಸೇರಿ ಕೇಂದ್ರದ ಯೋಜನಾ ಮಂಡಲಿಯು ಈ ಯೋಜನೆಗೆ ಒಪ್ಪಿಗೆಯಿತ್ತಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ಫೇಲಾದುದಕ್ಕೆ ಕೆರೆಗೆ ಬಿದ್ದ

ಹು ಎಂಬ ಹದಿನಾರು ವರ್ಷದ ಹುಡುಗನು ನಿನ್ನೆ ಕೆಂಪಾಂಬುದಿ ಕೆರೆಯಲ್ಲಿ ಮುಳುಗಿ ಮೃತನಾದನು. ಇವನು ಎಸ್. ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದನೆಂದೂ ಅದರಲ್ಲಿ ತೇರ್ಗಡೆಯಾಗದೆ ಈರೀತಿ ಬಿಗುಪ್ಸೆಯಿಂದ ಮೃತನಾದನೆಂದು ಹೇಳಲಾಗಿದೆ.

ಶಾಸನಸಭೆಯ ಅನುತಾಪ

ಭಾರತದ ರಾಜ್ಯಾಂಗ ರಚನಾ ಸಭೆಯ ಮತ್ತು ಉತ್ತರ ಪ್ರದೇಶದ ಶಾಸನಸಭೆಯ ಸದಸ್ಯೆಯಾಗಿದ್ದ ಶ್ರೀಮತಿ ಪೂರ್ಣಿಮಾ ಬ್ಯಾನರ್ಜಿಯವರ ನಿಧನಕ್ಕೆ ಕೇಂದ್ರಶಾಸನಸಭೆಯು ತನ್ನ ಅನುತಾಪವನ್ನು ವ್ಯಕ್ತಪಡಿಸಿ ಸಭೆ ಒಂದು ನಿಮಿಷ ಮೌನ ತಾಳಿತು.

ಕಾರ್ಪೊರೇಷನ್ ಅಧಿಕಾರ ಮೊಟಕುಮಾಡಲಾಗಿದೆ

ನಿನ್ನೆ ಶಾಸನಸಭೆಯಲ್ಲಿ ಮಂಜೂರಾದ ಬೆಂಗಳೂರು ಕಾರ್ಪೊರೇಷನ್ ತಿದ್ದುಪಡಿ ಮಸೂದೆಯ ಮುಖ್ಯಾಂಶ—

ಕಾರ್ಪೊರೇಷನ್ ಕಮಿಷನರ್ ಮಾಡಬಹುದಾದ ವೆಚ್ಚವನ್ನು ೫೦೦೦ ರೂ.ನಿಂದ ೨೦೦೦ಕ್ಕೆ ಇಳಿಸಲಾಗಿದೆ.

ಕಾರ್ಪೊರೇಷನ್ ಸ್ಥಾಯಿ ಸಮಿತಿ ೨೫,೦೦೦ ರೂ.ಗಳ ಅಂದಾಜು ಮಂಜೂರ್ಮಾಡಬಹುದಾಗಿದ್ದುದನ್ನು ೧೦,೦೦೦ ರೂ. ಇಳಿಸಲಾಗಿದೆ.

ಕಾರ್ಪೊರೇಷನ್ ಸ್ವತಂತ್ರವಾಗಿ ಒಂದು ಲಕ್ಷ ರೂಗಳ ವೆಚ್ಚವನ್ನು ಮಂಜೂರ್ಮಾಡಬಹುದಾಗಿದ್ದುದನ್ನು ೫೦,೦೦೦ಕ್ಕೆ ಮಿತಿಗೊಳಿಸಲಾಗಿದೆ.

ಕಾರ್ಪೊರೇಷನ್ ಬಜೆಟ್ಟು ಸರ್ಕಾರಕ್ಕೆ ಕಳುಹಿಸಿದ ೨ ತಿಂಗಳ ಅವಧಿಯಲ್ಲಿ ಸರ್ಕಾರ ಅಜ್ಞೆ ಒದಿದ್ದಲ್ಲಿ ಅಂಗೀಕಾರವಾಗಿದೆಯೆಂದು ಭಾವಿಸಬಹುದು.

೨೦೦೦ ರೂಗೆ ಹೆಚ್ಚಿಗೆ ಬೆಲೆಬಾಳುವ ಚರ ಸ್ಥಿರ ಸ್ವತ್ತುಗಳನ್ನು ಹರಾಜಿನ ಮೂಲಕವೇ ಮಾರಬೇಕು.

೨೦೦೦ ರೂ. ಗಳಿಗಿಂತ ಹೆಚ್ಚಿಗೆ ಬೆಲೆ ಬಾಳುವ ಚರ ಸ್ಥಿರ ಸ್ವತ್ತುಗಳನ್ನು ಸರ್ಕಾರದ ಮಂಜೂರಾತಿಯಿಲ್ಲದೆ ಕಾರ್ಪೊರೇಷನ್ ಉಚಿತವಾಗಿ ಕೊಡುವಂತಿಲ್ಲ.

೨೫೦ ರೂ.ಗಳಿಗಿಂತ ಹೆಚ್ಚಿಗೆ ಸಂಬಳದ ಮೇಲೆ ಅಧಿಕಾರಗಳ ನೇಮಕಕ್ಕೆ ಸರ್ಕಾರದ ಮಂಜೂರಾತಿ ಪಡೆಯಬೇಕು.

ಕಾಂಗ್ರೆಸ್ಸಿಗೆ ವಿರೋಧವಾಗಿ ಪ್ರಚಾರ ಮಾಡುವೆವು

ಮುಂಬರುವ ಮಹಾ ಚುನಾವಣೆಗಳೊಳಗಾಗಿ ಆಂಧ್ರ ಪ್ರಾಂತ್ಯ ರಚನೆ ಮಾಡದಿದ್ದಲ್ಲಿ ನಾವೆಲ್ಲರೂ ಕಾಂಗ್ರೆಸ್ಸಿಗೆ ವಿರೋಧವಾಗಿ ಪ್ರಚಾರ ಮಾಡುವೆವು ಎಂದು ಬಾಷಾ ಪ್ರಾಂತ್ಯ ಸಮಿತಿಯ ಆಂಧ್ರ ಶಾಖೆಯ ಅಂಗ ಸಮಿತಿಯು ಒಂದು ನಿರ್ಣಯವನ್ನು ಮಾಡಿದೆ.

ರಾಷ್ಟ್ರಗೀತೆ

ರಾಷ್ಟ್ರಗೀತೆಯನ್ನು ಮುಖ್ಯ ಸಮಾರಂಭಗಳಲ್ಲಿ ಮಾತ್ರ ಹಾಡಬೇಕು. ಸಿನಿಮಾ ಮುಂತಾದ ಖಾಸಗಿ ಸಮಾರಂಭಗಳಲ್ಲಿ ಹಾಡಬಾರದೆಂದು ಗೃಹ ಸಚಿವ ಶ್ರೀ ರಾಜಗೋಪಾಲಾಚಾರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಭೂಕಂದಾಯ ಧಾನ್ಯ ರೂಪದಲ್ಲಿ

ಹೈದರಾಬಾದಿನಲ್ಲಿ ಭೂಕಂದಾಯವನ್ನು ಧಾನ್ಯರೂಪದಲ್ಲಿ ತೆಗೆದುಕೊಳ್ಳುವಂತೆ ಸರ್ಕಾರವು ಒಂದು ಹೊಸ ಯೋಜನೆಯನ್ನು ಪರಿಶೀಲಿಸುತ್ತಲಿರುವುದಾಗಿ ತಿಳಿಯಬಂದಿದೆ.

ವಿಶ್ವ ವಿದ್ಯಾನಿಲಯ ಕಾನೂನು ತಿದ್ದುಪಡಿ

ಕಾಶ್ಮೀರ ವಿಶ್ವವಿದ್ಯಾನಿಲಯದ ಛಾನ್ಸಲರೂ ಸಂಸ್ಥಾನದ ರೀಜೆಂಟರಾದ ಯುವರಾಜ ಕರಣಸಿಂಗರವರು ಸೆಪ್ಟಂಬರಿನಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯದ ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದಿರುವುದರಿಂದ ವಿಶ್ವವಿದ್ಯಾನಿಲಯದ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ.

ಶ್ರೀ ನೆಹರೂ ಭಾಗವಹಿಸುವರು

ಜೂನ್ ೩ನೇ ತಾ|| ಶ್ರೀನಗರದಲ್ಲಿ ನಡೆಯಲಿರುವ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಧಾನಿ ನೆಹರೂ ಭಾಗವಹಿಸುವರು.

ಕಾಗೋಡಿಂದ ಕಾಡಿಗೆ

ಸಾಗರದ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ ಮೂವರನ್ನು ದಸ್ತಗಿರಿ ಮಾಡಿ ಕೊಂಡೊಯ್ದು ಕಾಗೋಡು ಸಾಗರದ ಮಧ್ಯೆ ಬಿಡಲಾಯಿತೆಂದೂ ಅವರು ಪತ್ತೆಯಾಗಿಲ್ಲವೆಂದೂ ವರದಿಯಾಗಿದೆ.

ದೌರ್ಜನ್ಯ ಕೃತ್ಯ ಕಂಡುಹಿಡಿಯಲು ನೂತನ ಕ್ರಮ

ಭಾರತದಲ್ಲಿ ವೈಜ್ಞಾನಿಕ ರೀತ್ಯಾ ದೌರ್ಜನ್ಯ ಕೃತ್ಯಗಳನ್ನು ಕಂಡುಹಿಡಿಯಲೋಸುಗ ಪಾಶ್ಚಿಮಾತ್ಯ ಪ್ರವಾಸವನ್ನು ಮುಗಿಸಿಕೊಂಡು ಬಂದಿರುವ ಪೋಲೀಸು ಗುಪ್ತ ಶಾಖಾ ಡೈರೆಕ್ಟರವರು ಸಮಾಲೋಚನೆ ನಡಸುತ್ತಲಿರುವರು. ಎಲ್ಲಾ ಪ್ರಾಂತ್ಯಗಳ ಪೋಲೀಸು ಮುಖ್ಯಾಧಿಕಾರಿಗಳ ಸಲಹೆಯನ್ನು ಪಡೆದು ಮುಂದಿನ ಕ್ರಮವಿಡುವರು.

ಉಪಹಾರಕ್ಕಾಗಿ ಕಾರ್ಪೊರೇಷನ್ ಮಸೂದೆ ತಿದ್ದುಪಡಿ

ಬೆಂಗಳೂರು ಜೂನ್ ೧

ಸ್ಥಾಯಿ ಸಮಿತಿಗಳು ಮತ್ತು ಕಾರ್ಪೊರೇಷನ್ ಸಭೆಗಳ ಕಾಲದಲ್ಲಿ ಉಪಹಾರಕ್ಕೆ ಕಾರ್ಪೊರೇಷನ್ ಬಜೆಟ್ಟಿನಲ್ಲಿ ಹಣವೊದಗಿಸಬಹುದೆಂದು ತಿದ್ದುಪಡಿ ಮಸೂದೆಯು ನಿನ್ನೆ ನಡೆದ ಶಾಸನ ಸಭೆಯಲ್ಲಿ ಅಂಗೀಕಾರವಾಯಿತು.

ಸರಸ್ವತೀ ಪೂಜೆ

ಮೈಸೂರು ಪಾಠಶಾಲೆಯಲ್ಲಿ ಸಂಸ್ಕೃತಿ ಪೂಜೆ ಉದ್ಘಾಟನ ಸಮಾರಂಭವು ನಿನ್ನೆ [illegible] ಪ್ರೊಫೆಸರ್ ವಿ. ಎಂ. ಇನಾಂದಾರ್‌ರವರು ನಡೆಸಿದರು.

ಕಾಂಗ್ರೆಸ್ಸಿಗೆ ರಾಜೀನಾಮೆ

ಹೊಸಂಗಾಬಾದ್ ಜಿಲ್ಲೆಯ ೬೦ ಜನ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗೆ ರಾಜೀನಾಮೆಯನ್ನು ಸಲ್ಲಿಸಿರುವರು. ಉತ್ತಾರುವ ರ್ಷಗಳಿಂದ ದುಡಿದ ಹಿರಿಯ ಕಾಂಗ್ರೆಸ್ಸಿಗರೂ ಇವರಲ್ಲಿ ಅನೇಕರಿರುವರು.

೬೩೦೦ ಕೋತಿಗಳ ಕೊಲೆ

ಬೆಳೆಗಳನ್ನು ಹಾಳುಮಾಡುವುವೆಂಬುದಾಗಿ ಮಿಡ್ನಾಪುರ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ೬೩೦೦ ಕೋತಿಗಳನ್ನು ಸಂಹಾರ ಮಾಡಲಾಗಿದೆ.

† ಸಿಟಿ ರೇಷನ್ ಕಾರ್ಡುದಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ೩-೬-೫೧ನೇ ಭಾನುವಾರ ಸಾ|| ದೊಡ್ಡ ಮಲ್ಲಣ್ಣನವರ ಗೃಹದಲ್ಲಿ ನಡೆಯುವುದೆಂದು ಕಾರ್ಯದರ್ಶಿ ಶ್ರೀ ಎಂ.ಸಿ. ನರಸಿಂಹಯ್ಯನವರು ತಿಳಿಸುತ್ತಾರೆ.

ಬ್ರಿಟನ್ನರನ್ನು ಸಮುದ್ರಕ್ಕೆ ಬಿಸಾಡುತ್ತೇವೆ

ಕಳೆದ ಮಂಗಳವಾರ ಸಂಜೆ ಟೆಹರಾನಿನಲ್ಲಿ ಎಣ್ಣೆ ರಾಷ್ಟ್ರೀಕರಣ ಪ್ರದರ್ಶನವನ್ನು ಸುಮಾರು ೩೦,೦೦೦ ಜನರು ವಿಧವಿಧ ಘೋಷಣೆಗಳನ್ನು ಮಾಡುತ್ತಾ ನಡೆಸಿದರು.

೫೦ ವರ್ಷಗಳಿಂದ ಎಣ್ಣೆ ಕಂಪೆನಿಯು ಪರ್ಷಿಯಾವನ್ನು ಲೂಟಿಮಾಡಿದೆ. ಸ್ವಲ್ಪವೂ ತಡವಿಲ್ಲದೆ ಅವರ ಅಧೀನದಿಂದ ಅದು ತಪ್ಪಬೇಕು. ಬ್ರಿಟನ್ನರು ಕೂಡಲೇ ಹೊರಹೊರಡದಿದ್ದರೆ ಅವರನ್ನೆಲ್ಲಾ ಸಮುದ್ರಕ್ಕೆ ಬಿಸಾಡುತ್ತೇವೆ—ಎಚ್ಚರಿಕೆ. ಅಮೆರಿಕನ್ನರು ನಮಗೆ ಸಹಾನುಭೂತಿಯನ್ನು ತೋರಿಸದೆ ಬ್ರಿಟನ್ನಿಗೆ ನೆರವು ನೀಡಬೇಕೆಂದಿರುವರು ಎಂದು ಬರೆದ ಝಂಡಾ ಹಿಡಿದುಕೊಂಡು ಪ್ರದರ್ಶನ ನಡೆಸಿದರು.

ಚತುರ್ರಾಷ್ಟ್ರಗಳ ಸಮ್ಮೇಳನ

ಚತುರ್ರಾಷ್ಟ್ರಗಳ ಮಹಾ ಸಮ್ಮೇಳನವನ್ನು ವಾಷಿಂಗ್ಟನ್ನಿನಲ್ಲಿ ಮುಂದಿನ ವಾರ ನಡೆಸಲು ಫ್ರೆಂಚ್, ಬ್ರಿಟನ್ ಮತ್ತು ಅಮೆರಿಕಾ ರಾಷ್ಟ್ರಗಳು ರಷ್ಯಾಕ್ಕೆ ಸೂಚಿಸಿವೆ.

ಮಹಿಳೆಯರು ಸತ್ಯಾಗ್ರಹ ಮಾಡಬೇಕು

ತೆಲಂಗಾಣ ಪ್ರಾಂತ್ಯದಲ್ಲಿ ಕಮ್ಯೂನಿಸ್ಟರು ದೌರ್ಜನ್ಯ ಕೃತ್ಯಗಳನ್ನು ಸ್ತ್ರೀಯರು ಸತ್ಯಾಗ್ರಹಮಾಡಿ ತಡೆಗಟ್ಟಬೇಕೆಂದು ಆ ಪ್ರಾಂತ್ಯ ಪ್ರವಾಸ ಕೈಗೊಂಡಿರುವ ಆಚಾರ್ಯ ವಿನೋಬಾಭಾವೆಯವರು ಹೇಳಿರುವರು. ಅವರು ೬೦೦೦ ಎಕ್ರೆ ಜಮೀನನ್ನು ಕಾಣಿಕೆಯಾಗಿ ಒಡವರಿಗೆ ಹಂಚಲು ಪಡೆದಿರುವರು.

ಪ್ರಯಾಣ ಪರವಾನಿಗೆ

ನಿಮ್ಮ ಹೆಂಡತಿ ಮಕ್ಕಳುಗಳನ್ನು ಪರ್ಷಿಯಾದಿಂದ ಹೊರಕ್ಕೆ ಕಳುಹಿಸಲು ಉಚಿತವಾಗಿ ವಾಯು ಅಥವಾ ಸಮುದ್ರ ಪ್ರಯಾಣಕ್ಕೆ ಏರ್ಪಾಡು ಮಾಡಿರುತ್ತೇವೆ ಎಂದು ಎಣ್ಣೆ ಕಂಪನಿಯವರು ಟೆಹರಾನಿನಲ್ಲಿ ಕಮ್ಮಲ್ಲಿರುವ ಬ್ರಿಟಿಷ್, ಪಾಕೀಸ್ಥಾನ, ಭಾರತ ಕೆಲಸಗಾರರಿಗೆ ತಿಳಿಸಿರುವರು. ೩-೪ ಸಾವಿರ ಬ್ರಿಟನ್ನರು ನೂರಾರು ಜನ ಪಾಕೀಸ್ಥಾನ, ಭಾರತೀಯರು ಈ ಕಂಪನಿಯಲ್ಲಿ ಕೆಲಸ ಮಾಡುತ್ತಿರುವರು.

ರಷ್ಯಾ ಆಹಾರ ಧಾನ್ಯ

ರಷ್ಯಾದಿಂದ 6600 ಸಾವಿರ ಟನ್ ಆಹಾರ ಧಾನ್ಯಗಳು ಬೊಂಬಾಯಿಗೆ ಬಂದಿವೆ. ಈ ವಾರಾಂತ್ಯದಲ್ಲಿ ಇನ್ನೂ ಎರಡು ಹಡಗಗಳ ಆಹಾರ ಬರುವುದು

ಸಮ್ರಾಟರಿಂದ ಬ್ರಿಟನ್ ಉತ್ಸವದ ಉದ್ಘಾಟನೆ



ಬ್ರಿಟನ್ನಿನ ಸಮ್ರಾಟರಾದ ಆರನೇ ಜಾರ್ಜ್ ನಾಡಹಬ್ಬದ ಉದ್ಘಾಟನೆ ನಡೆಸಿದರು. ಮೇಲಿನ ಚಿತ್ರದಲ್ಲಿ ರಾಜಕುಮಾರಿ ಎಲಿಜಬೇತ್ ಮತ್ತು ಆಕೆಯ ಪತಿ ಡ್ಯೂಕ್ ಆಫ್ ಎಡಿನ್‌ಬರೋ ಸಮಾರಂಭಕ್ಕೆ ಹೋಗುತ್ತಿದ್ದಾರೆ.

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು :—ಪಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ, ಮೈಸೂರು.

ರಘುಲಾಲ್
ಅಂಡ್
ಕಂಪೆನಿ
ಔಷಧಿ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೦

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೪—೬—೧೯೫೧ ಸೋಮವಾರ [ಸಂಚಿಕೆ ೩೩೪

RAGHULAL & Co.
CHEMISTS
Sayyaji Rao Road
MYSORE

ಸುಪ್ರೀಂ ಕೋರ್ಟಿನಲ್ಲಿ ಭಾರತೀಯರಿಗೆ ಮಾತ್ರ ಸ್ಥಾನ

ಪಾನನಿರೋಧಿಸುವುದು ಅಥವಾ ಪ್ರೋತ್ಸಾಹಿಸುವುದು ನಮ್ಮ ಉದ್ದೇಶವಲ್ಲ—ಷೇಕ್ ಅಬ್ದುಲ್ಲಾ

ಶಾಸನಸಭಾಧಿವೇಶನ ಮುಕ್ತಾಯ

ಬೆಂಗಳೂರು ಜೂನ್ ೩

ಬೆಂಗಳೂರಿನಲ್ಲಿ ನಡೆಯುತ್ತಲಿದ್ದ ಶಾಸನಸಭಾಧಿವೇಶನವು ನಿನ್ನೆಗೆ ಮುಕ್ತಾಯವಾಯಿತು.

ಸರ್ಕಾರಿ ಆಜ್ಞೆ

ಬೆಂಗಳೂರು ಜೂನ್ ೪

ವ್ಯವಸಾಯ ಇಲಾಖಾ ಡೈರೆಕ್ಟರ್ ಶ್ರೀ ಕೆ. ಹೆಚ್. ಶ್ರೀನಿವಾಸರಾವರನ್ನು, ಅವರ ಕೆಲಸದ ಜೊತೆಗೆ ಹೂ-ತೋಟಗಳ ಸೂಪರಿಂಟೆಂಡೆಂಟರಾಗಿ ನೇಮಕವಾಗಿದೆ.

ಬೇಸಿಗೆ ಶಿಕ್ಷಣ ಶಿಬಿರ

ಮೈಸೂರು ಜೂನ್ ೩

ಭಾರತ ಸೇವಾದಳದ ಬೇಸಿಗೆ ಶಿಕ್ಷಣ ಶಿಬಿರ ಮುಕ್ತಾಯ ಸಮಾರಂಭವನ್ನು ಸಂಜನಗೂಡು ತಾ|| ದೇವನೂರಿನಲ್ಲಿ ಆರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ನಿನ್ನೆ ಸಂಜೆ ನೆರವೇರಿಸಿದರು

ಕಾರು ಢಿಕ್ಕಿಯಿಂದ ಮರಣ

ಮೈಸೂರು ಜೂನ್ ೪

ನಿನ್ನೆ ಬೆಂಗಳೂರಿಗೆ ಹೋಗಿ ಅಲ್ಲಿಂದ ವಿಮಾನದ ಮೂಲಕ ಪ್ರಯಾಣ ಬೆಳೆಸಲು ಹೊರಟಿದ್ದ ಕಾರು ಬೆಳಿಗ್ಗೆ ಚನ್ನಪಟ್ಟಣದ ಬಳಿ ಮರಕ್ಕೆ ಡಿಕ್ಕಿಹೊಡೆದು ಅದರಲ್ಲಿದ್ದ ಮೂವರು ಸಿಂಧೀಯರು ಮೃತರಾದರೆಂದೂ ವರದಿಬಂದಿದೆ.

ಸಿಮೆಂಟ್ ಕಾರ್ಖಾನೆ

ಉತ್ತರ ಪ್ರದೇಶ ಸರ್ಕಾರದ ಅಭಿವೃದ್ಧಿಯೋಜನೆಯಲ್ಲಿ ಮಿರ್ಜಾಪುರದ ಬಳಿ ಸಿಮೆಂಟ್ ಕಾರ್ಖಾನೆ ಸ್ಥಾಪಿಸುವ ಏರ್ಪಾಡನ್ನು ಸೇರಿದ್ದು ಈಗಾಗಲೇ ತತ್ಸಂಬಂಧವಾದ ಕೆಲಸಕಾರ್ಯಗಳು ಪ್ರಾರಂಭವಾಗುತ್ತಾ ಬಂದು ಈ ವರ್ಷಾಂತ್ಯದಿಂದ ಸಿಮೆಂಟ್ ಉತ್ಪಾದನೆ ಮಾಡಲಾಗುವುದು. ಈ ಕಾರ್ಖಾನೆಯಲ್ಲಿ ದಿನಕ್ಕೆ ೭೦೦ ಟನ್ ಸಿಮೆಂಟ್ ಉತ್ಪಾದನೆಯಾಗುವುದೆಂದು ಹೇಳಲಾಗಿದೆ. ಈಗಾಗಲೇ ೧ ಕೋಟಿ ೫೦ ಲಕ್ಷ ರೂ ಗಳ ಯಂತ್ರಗಳನ್ನು ತರಿಸಿ ಅಳವಡಿಸಲಾಗಿದೆ. ಇದಕ್ಕೆ ೫೦ ಕೋಟಿ ರೂ. ತಗಲುವುದೆಂದು ಹೇಳಲಾಗಿದೆ.

ರಾಷ್ಟ್ರಾಧ್ಯಕ್ಷರಿಗೆ ಜನತಾ ಪ್ರಣಾಳಿಕೆ ಅರ್ಪಣೆ

ಹಿಂದೂ ಮಜ್ದೂರ್ ಸಭಾ, ಕಿಸಾನ್ ಪಂಚಾಯತ್ ಮತ್ತು ಸೋಷಲಿಸ್ಟ್ ಪಕ್ಷದ ಸದಸ್ಯರ ಮೆರವಣಿಗೆಯು ನಿನ್ನೆ ನವದೆಹಲಿಯಲ್ಲಿ ನಡೆಯಿತು. ಮೆರವಣಿಗೆಯನ್ನು ಕಿಂಗ್ಸ್‌ವೇ ಬಳಿ ತಡೆಯಲಾಯಿತು. ಅನಂತರ ಮೆರವಣಿಗೆಯಲ್ಲಿದ್ದ ಶ್ರೀ ಜೈಪ್ರಕಾಶ್ ನಾರಾಯಣ್ ಮತ್ತು ಡಾ|| ಲೋಹಿಯಾರವರು ರಾಷ್ಟ್ರಾಧ್ಯಕ್ಷರ ಭವನದ ಒಳಕ್ಕೆ ತೆರಳಿ ರಾಷ್ಟ್ರಾಧ್ಯಕ್ಷರಿಗೆ ಜನತಾ ಪ್ರಣಾಳಿಕೆಯನ್ನು ಅರ್ಪಿಸಿದರು ಮತ್ತು ಅರ್ಧ ಗಂಟೆಗಿಂತಲೂ ಹೆಚ್ಚಿಗೆ ರಾಷ್ಟ್ರಾಧ್ಯಕ್ಷರೊಡನೆ ಪ್ರಣಾಳಿಕೆಯ ಬಗ್ಗೆ ಚರ್ಚೆ ನಡೆಸಿದರು.

ಪ್ರಣಾಳಿಕೆಯು ಭೂಸ್ವತ್ತಿನ ಸಿವರ್ಣ ಜಮೀನ್ದಾರಿ ರದ್ದುಮಾಡುವುದು ಮತ್ತು ಯುವಕರು ಕಡ್ಡಾಯವಾಗಿ ಒಂದು ಘಂಟೆ ಕಾಲ ಕೆಲಸ ಮಾಡುವುದು ಇವೇ ಮುಂತಾದ ಅಂಶಗಳನ್ನು ಒಳಗೊಂಡಿತ್ತೆಂದು ಹೇಳಲಾಗಿದೆ.

ಸುಪ್ರೀಂ ಕೋರ್ಟಿನಲ್ಲಿ ಭಾರತೀಯರಿಗೆ ಮಾತ್ರ ಸ್ಥಾನ

ಶ್ರೇಷ್ಠನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿರುವ ಭಾರತೀಯರಲ್ಲದವರನ್ನು ಅದೇ ನ್ಯಾಯಾಲಯದ ಶ್ರೇಷ್ಠನ್ಯಾಯಾಧೀಶರಾಗಿ ಅಥವಾ ಇತರ ಶ್ರೇಷ್ಠನ್ಯಾಯಾಸ್ಥಾನಗಳ ನ್ಯಾಯಾಧೀಶ ಅಥವಾ ಶ್ರೇಷ್ಠನ್ಯಾಯಾಧೀಶರಾಗಿ ನೇಮಿಸಬಹುದೆಂಬ ರಾಜ್ಯಾಂಗ ತಿದ್ದುಪಡಿ ಕಾನೂನಿಗೆ ಪಾರ್ಲಿಮೆಂಟು ಒಪ್ಪಿಗೆಯಿತ್ತಿದೆ.

ಸುಪ್ರೀಂ ಕೋರ್ಟಿಗೆ ಮಾತ್ರ ಭಾರತೀಯರಲ್ಲದೆ ಇತರರನ್ನು ನೇಮಿಸಕೂಡದೆಂಬ ಶ್ರೀ ಕೆ. ಟಿ. ಷಾರವರ ತಿದ್ದುಪಡಿಯು ಅಂಗೀಕಾರವಾಯಿತು.

ಪಾರ್ಲಿಮೆಂಟು ಅಧಿವೇಶನ

ಭಾರತ ಪಾರ್ಲಿಮೆಂಟಿನ ಈಗಿನ ಅಧಿವೇಶನವು ಜೂನ್ ೯ನೇ ತಾರೀಖು ಮುಕ್ತಾಯವಾಗುವ ದು.

ಓದುವಾಗ ದ್ರವ್ಯಾರ್ಜನೆಗೆ ಮಾರ್ಗ

ಭವಾನಗರ, ರಾಜಕೋಟೆ, ಜುನಾಘಡ್ ಆರ್ಟ್ಸ್ ಕಾಲೇಜುಗಳಲ್ಲಿ ಆರ್ಥಿಕ ದುಸ್ಥಿತಿಯಿಂದ ವಿದ್ಯಾರ್ಥಿಗಳು ಓದುವ ಸ್ಥಿತಿ ಕಡಮೆಯಾಗುತ್ತಿರುವುದನ್ನು ಸರ್ಕಾರದವರು ಪರಿಶೀಲಿಸಿ, ವಿದ್ಯಾರ್ಥಿಗಳು ಓದುವ ಕಾಲದಲ್ಲಿ ಸಂಪಾದನೆಗೆ ಮಾರ್ಗವನ್ನು ಕಲ್ಪಿಸಲು ಎಲ್ಲಾ ಕಾಲೇಜುಗಳನ್ನು ಬೆಳಗಿನ ವೇಳೆ ಮಾತ್ರ ಮಾಡುವಂತೆ ಸರ್ಕಾರ ತೀರ್ಮಾನಿಸಿದೆ.

ಸೀನಿಯಾರಿಟಿ ಗಮನಿಸುವುದಿಲ್ಲ

ಸರ್ಕಾರಿ ಉದ್ಯೋಗಗಳಲ್ಲಿ ಬಡ್ತಿಯನ್ನು ಕೊಡುವಾಗ ಕೇವಲ ಅರ್ಹತೆಯನ್ನು ಗಮನಿಸಲಾಗುವುದೇ ವಿನಹ ಸೀನಿಯಾರಿಟಿ ಪ್ರಾಧಾನ್ಯವಾಗಿ ತೆಗೆದುಕೊಳ್ಳುವುದಿಲ್ಲವೆಂದು ಬೊಂಬಾಯಿ ಸರ್ಕಾರ ನಿರ್ಧರಿಸಿದೆ.

ಪಂಡಿತ ನೆಹರೂ ಭಾಷಣ

ಭಾರತದ ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ದೆಹಲಿಯಿಂದ ಕಾಶ್ಮೀರಕ್ಕೆ ವಿಮಾನದಲ್ಲಿ ಪ್ರಯಾಣ ಬೆಳೆಸಿ ಶ್ರೀನಗರವನ್ನು ತಲುಪಿದರು. ವಿಮಾನ ನಿಲ್ದಾಣದಲ್ಲಿ ಜ|| ಷೇಕ್ ಅಬ್ದುಲ್ಲಾ, ಯುವರಾಜ ಕರಣಸಿಂಗ್ ಮತ್ತು ಇತರ ಸಚಿವರುಗಳು ಪ್ರಧಾನಿಯವರನ್ನು ಸ್ವಾಗತಿಸಿದರು.

ಪ್ರಧಾನಿ ನೆಹರೂರವರು ವಿಮಾನ ನಿಲ್ದಾಣದಲ್ಲಿ ಗೌರವರಕ್ಷೆ ಸ್ವೀಕರಿಸಿದರು. ರಾಷ್ಟ್ರೀಯ ಪರಿಷತ್ತಿನ ಪ್ರತಿನಿಧಿಗಳ ಪರಿಚಯವಾದನಂತರ ಕಾಶ್ಮೀರದ ಸೇನೆಯ ಹಸ್ತೆದ ಅಧಿಕಾರಿಗಳಿಗೆ ಅಧಿಕಾರದಾನ ಭಾರವನ್ನು ನಿಯೋಗಿಸಿ ಭಾಷಣ ಮಾಡುತ್ತಾ ಕಾಶ್ಮೀರ ಸಮಸ್ಯೆಯ ಪ್ರಾಮುಖ್ಯತೆ ವಿವರಿಸಿದರು.

ಪ್ರತಿಯೊಬ್ಬರೂ ದೇಶವನ್ನು ಭದ್ರಪಡಿಸುವ ಕಾರ್ಯದಲ್ಲಿ ತೊಡಗಬೇಕೆಂದರು. ಲಾಂಛನ ಪಡೆದ ಅಧಿಕಾರಿಗಳು ಕರ್ತವ್ಯವನ್ನು ಶ್ರದ್ಧಾಭಕ್ತಿಯಿಂದ ಪರಿಪಾಲಿಸಬೇಕೆಂದು ತಿಳಿಸಿದರು.

ನೆಹರೂ ಶ್ರೀನಗರಕ್ಕೆ

ಪಂಡಿತ ನೆಹರೂರವರು ಶ್ರೀನಗರಕ್ಕೆ ತೆರಳಿದರು. ಅವರ ಜೊತೆಯಲ್ಲಿ ಸಚಿವರುಗಳಾದ ಶ್ರೀ ... ಕಾಟ್ಜು, ರಂಗನಾಥ ದಿವಾಕರ್ ಮತ್ತು ಮಹಾವೀರ್ ತ್ಯಾಗಿ ಮುಂತಾದವರು ಹೋಗಿರುವರು.

ಎಚ್ಚರಿಕೆ

ಕೊರಿಯಾ ಯುದ್ಧವು ಕೂಡಲೇ ಮುಕ್ತಾಯವಾಗದಿದ್ದರೆ ವಿಶ್ವಸಂಸ್ಥೆಯ ಮಿತ್ರರಾಷ್ಟ್ರಗಳೆಲ್ಲಾ ರಣರಂಗಕ್ಕೆ ಹೆಚ್ಚಿಗೆ ಸೈನ್ಯ ಸಹಾಯ ಮಾಡಬೇಕಾಗುವುದೆಂದು ವಿಶ್ವಸಂಸ್ಥೆ ಸೆಕ್ರೆಟರಿ ಜನರಲ್ ಮಿ|| ಟ್ರಿಗ್ವೆಲಿರವರು ಎಚ್ಚರಿಸಿರುವರು.

ಬೆಂಗಳೂರು ವಾರ್ತೆ

ಸ್ವಂತ ವರದಿಗಾರರಿಂದ] ಬೆಂ. ಜೂನ್ ೩

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ದೆಹಲಿಯಿಂದ ಬೆಂಗಳೂರಿಗೆ ಇಂದು ಆಗಮಿಸಿದರು. ಮಂತ್ರಿಗಳೆಲ್ಲರೂ ಮೈಸೂರಿಗೆ ಆಗಮಿಸಿರುವ ಪ್ರಯುಕ್ತ ಕಾರ್ಯಕಾರಿ ಸಮಿತಿಯು ನಾಳೆಯಿಂದ ನಡೆಯುವ ಸಂಭವವಿಲ್ಲ.

ಅಗ್ನಿದೇವನಿಗಾಹುತಿಯಾದ ವಸ್ತುಪ್ರದರ್ಶನದ ವಿಚಾರಣಾ ಸಮಿತಿಯು ತನ್ನ ಕಾರ್ಯಕಲಾಪಗಳನ್ನು ಇಂದು ಪ್ರಾರಂಭಿಸಿತು. ವಸ್ತುಪ್ರದರ್ಶನದ ಕಾರ್ಯದರ್ಶಿಗಳಾಗಿದ್ದ ಶ್ರೀ ದೀನದಯಾಳು ನಾಯುಡುರವರು ಸುಮಾರು ೩ ಗಂಟೆ ಕಾಲ ತಮ್ಮ ಹೇಳಿಕೆಯನ್ನಿತ್ತರು.

ಮಂಡ್ಯದ ಬಳಿ ಆದ ಮೋಟಾರು ಅಪಘಾತದಲ್ಲಿ ಒಬ್ಬರು ಸತ್ತು ಇಬ್ಬರಿಗೆ ಗಾಯವಾಗಿದೆಯೆಂದು ವರದಿಯಾಗಿದೆ.

ಬೆಂಗಳೂರಿನ ಕಂಟೋನ್ಮೆಂಟ್ ನಲ್ಲಿ ... ಪಂಜಾಬಿನ ನ್ಯಾಷನಲ್ ವಾರಿಯರ್ಸ್ ಟೀಮಿಗೂ ಆದ ಪಂದ್ಯದಲ್ಲಿ ಮೈಸೂರು ೩-೧ ಗೋಲುಗಳಿಂದ ಗೆದ್ದಿತು.

ಸಂಸ್ಥಾನದ ಮಂತ್ರಿಗಳೆಲ್ಲರೂ ರಾಜಧಾನಿಗೆ ಆಗಮಿಸಿ ಇಂದು ಬಂಡೀಪುರಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಶ್ರೀಮನ್ಮಹಾರಾಜರವರು ಎರಡು ದಿನಗಳಿಂದ ಕ್ಯಾಂಪ್ ಮಾಡಿರುತ್ತಾರೆ

ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನ ಮೀಸಲು

ಬೆಂಗಳೂರು ಜೂನ್ ೩

" ಮೈಸೂರು ಸಂಸ್ಥಾನದ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಸಂಬಂಧದಲ್ಲಿ ಕೋಮುವಾರು ಪ್ರಭುತ್ವಾಜ್ಞೆ ಇಲ್ಲ, ಆದರೆ ಹಿಂದುಳಿದ ಕೋಮಿನ ವಿದ್ಯಾರ್ಥಿಗಳಿಗೆ ಟೆಕ್ನಿಕಲ್ ಶಾಲೆಗಳಲ್ಲಿ ಶೇ ೭೦ರಷ್ಟು ಸ್ಥಾನಗಳನ್ನು ಮೀಸಲಿರಿಸಬೇಕೆಂದು ಸರ್ಕಾರದ ಆಜ್ಞೆ ಜಾರಿಯಲ್ಲಿದೆ,

—ಎಂಬುದಾಗಿ ಶ್ರೀ ಆರ್ ಚೆನ್ನಿಗರಾಮಯ್ಯನವರು ಶಾಸನ ಸಭೆಯಲ್ಲಿ ತಿಳಿಸಿದರು.

ಸಚಿವರು ಮುಂದುವರೆದು " ಟೆಕ್ನಿಕಲ್ ಶಾಲೆಗಳಲ್ಲಿ ಹಿಂದುಳಿದ ಕೋಮಿನವರಿಗೆ ಸ್ಥಾನಗಳನ್ನು ಮೀಸಲಿರಿಸುವ ಸಂಬಂಧದಲ್ಲಿ ಮದ್ರಾಸ್ ಸರಕಾರ ಸಲ್ಲಿಸಿದ್ದ ಅಪೀಲಿನ ಬಗ್ಗೆ ಸುಪ್ರೀಂ ಕೋರ್ಟಿನ ತೀರ್ಪು ಭಾರತಕ್ಕೆಲ್ಲಾ ಅನ್ವಯಿಸುವುದು ಭಾರತರಾಜ್ಯಾಂಗದ ತಿದ್ದುಪಡಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ನಡೆಯುತ್ತಿರುವ ಚರ್ಚೆಯ ಪರಿಣಾಮದ ಮೇಲೆ ಆ ತೀರ್ಪಿನ ಬಗ್ಗೆ ಕ್ರಮ ಕೈಗೊಳ್ಳಲಾಗುವುದು" ಎಂದರು.

ಸಿಮೆಂಟ್ ಬೆಲೆಯಲ್ಲಿ ಏರಿಕೆ

ಗೋಣಿಚೀಲಗಳ ಬೆಲೆ ವಿಪರೀತ ಏರುವ ಪರಿಣಾಮ ಬ್ರಾಡ್‌ಗೇಜ್ ಮತ್ತು ನ್ಯಾರೋಗೇಜ್ ಗಳಲ್ಲಿರುವ ಮೈಸೂರು ಸಂಸ್ಥಾನದಲ್ಲಿನ ಸ್ಟೇಷನ್ ಗಳಲ್ಲಿ ಸಿಮೆಂಟ್ ಟನ್ನಿಗೆ ೮೭ರೂಪಾಯಿಯಂತೆ ಮಾರಾಟ ಮಾಡಲಾಗುವುದು ಸಂಸ್ಥಾನದ ಇತರ ಕಡೆಗಳಲ್ಲಿ ಟನ್ನಿಗೆ ೮೮-೪-೦ ಯಂತೆ ಮಾರಾಟ ಮಾಡಲಾಗುವುದು.

ಈ ಮೇಲಿನ ಬೆಲೆ ಗೋಣಿಚೀಲದಲ್ಲಿ ತುಂಬಿರುವ ಸಿಮೆಂಟಿಗೆ ಮಾತ್ರ ಅನ್ವಯಿಸುತ್ತದೆ

ಅಂದರೆ ಈಗಿರುವ ಸಿಮೆಂಟ್ ಬೆಲೆಯ ಜೊತೆಗೆ ಪ್ಯಾಕಿಂಗ್ ಬೆಲೆಯಾಗಿ ೧೧-೮-೦ ರೂ ಸೇರಿಸಲಾಗಿದೆ.

ಪ್ರಕೃತ ಈಗ ೧೦೦ ಚೀಲಗಳಿಗೆ ೧೩೦ರೂಪಾಯಿನಷ್ಟು ಬೆಲೆಯಾಗುತ್ತದೆ. ಅಂದರೆ ಟನ್ನಿಗೆ ಸುಮಾರು ೨೬ ರೂ.ಬೆಲೆಯಾಗುವುದು.

ಗೋಣಿಚೀಲಗಳಿಲ್ಲದೆ ಬಿಡಿಯಾಗಿ ತುಂಬುವ ಸಿಮೆಂಟಿನ ಬೆಲೆ ಜೂನ್ ೧ನೇ ತಾರೀಖಿನಿಂದ ಈ ಕೆಳಗೆ ಕಂಡಂತಿದೆ ಸಂಸ್ಥಾನದ ಬ್ರಾಡ್‌ಗೇಜ್ ಸ್ಟೇಷನ್ ಗಳಿಗೆ ಮತ್ತು ಬೆಂಗಳೂರು ಬಂಗಾರಪೇಟೆ ರೈಲಿನಲ್ಲಿ ಸ್ಟೇಷನ್ ಗಳಿಗೆ ಬೆಂಗಳೂರು ದಂಡಿನ ಪ್ರದೇಶಗಳಿಗೆ ಟನ್ನಿಗೆ ೭೮-೮-೦ ಯಂತೆ ಮಾರಾಟ ಮಾಡಬೇಕಾಗುವುದು.

ಸಂಸ್ಥಾನದ ಇತರ ಪ್ರದೇಶಗಳಲ್ಲಿ ಟನ್ನಿಗೆ ೭೬-೧೩-೦ ಯಂತೆ ಮಾರಾಟ ಮಾಡಲಾಗುವುದು.

ಪಾನ ನಿರೋಧ ಯಶಸ್ವಿಯಾಗುವುದಿಲ್ಲ

ಕಾಶ್ಮೀರದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದು ನಮ್ಮ ಸರ್ಕಾರದ ಯೋಜನೆಯಲ್ಲಿಲ್ಲ ಜನಗಳಿಗೆ ಕುಡಿಯಲೇಬೇಡಿ ಎಂದು ಒತ್ತಾಯಮಾಡುವುದಾಗಲೀ, ಅಥವಾ ಕುಡಿತವನ್ನು ಪ್ರೋತ್ಸಾಹಿಸುವುದಾಗಲೀ ನಮ್ಮ ಉದ್ದೇಶದಲ್ಲಿಲ್ಲ. ಎಂದು ಪ್ರಧಾನಿ ಶೇಕ್ ಮಹಮ್ಮದ್ ಅಬ್ದುಲ್ಲಾರವರು ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ ತಿಳಿಸಿದರು.

" ನಮ್ಮ ಸರ್ಕಾರಕ್ಕೆ ಯಾರಮೇಲೂ ನಿರ್ಬಂಧ ಹಾಕುವ ಉದ್ದೇಶವಿಲ್ಲ ಉತ್ತರ ಪ್ರದೇಶ ಸರ್ಕಾರ ಈಗಾಗಲೇ ಪಾನ ನಿರೋಧವನ್ನು ಮುಸ್ಸೂರಿ ಮೊದಲಾದ ಪ್ರವಾಸ ಕೇಂದ್ರಗಳಲ್ಲಿ ರದ್ದುಗೊಳಿಸಿದೆ. ಇಲ್ಲಿ ಅದು ಯಶಸ್ವಿಯಾಗದು. '

ಎಂದು ಶೇಕ್ ಅಬ್ದುಲ್ಲಾ ನುಡಿದರು ಕುಡಿಯುವ ಚಟ ಕಾಶ್ಮೀರದ ಬಹುಸಂಖ್ಯೆಯ ಜನರಲ್ಲಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಪ್ರೆಸ್ ಟ್ರಸ್ಟ್ ಆಫ್ ಸಿಲೋನ್

ಸಿಲೋನಿನಲ್ಲಿ ಸಹಕಾರ ರೀತಿಯಲ್ಲಿ ಪ್ರೆಸ್ ಟ್ರಸ್ಟ್ ಆಫ್ ಸಿಲೋನ್ ಎಂಬ ಹೆಸರಿನಿಂದ ವಾರ್ತಾ ಪ್ರಸಾರ ಸಂಸ್ಥೆಯು ಆರಂಭವಾಗಿದೆ.

ಸ್ಥಿತಿ ಹದಗೆಡುತ್ತಿದೆ

ಪರ್ಷಿಯಾ ಎಣ್ಣೆ ವಿವಾದವು ಹದಗೆಡುತ್ತಿದೆ ಇದರಿಂದ ಮಹಾ ಯುದ್ಧದ ಭೀತಿಯುಂಟಾಗಿದೆ ಎಂದು ಮಿ॥ ಡೀನ್ ಅಚಿಸನ್‌ರವರು ಹೇಳಿರುವರು

ಬ್ರಿಟನ್ ನಿಯೋಗ

ಪರ್ಷಿಯಾ ಎಣ್ಣೆ ವಿವಾದ ವಿಷಯವಾಗಿ ಪರ್ಷಿಯಾಕ್ಕೆ ಬರಬೇಕೆಂದಿರುವ ಬ್ರಿಟನ್ ನಿಯೋಗದ ಕಾರ್ಯವೇನೆಂಬುದನ್ನು ಸ್ಪಷ್ಟಪಡಿಸಿದ ಹೊರತು ಅವರಿಗೆ ಪರ್ಷಿಯಕ್ಕೆ ಪ್ರವೇಶವಿಲ್ಲವೆಂದೂ ಪರ್ಷಿಯಾ ಸರ್ಕಾರ ಹೇಳಿದೆ.

ಅಮೆರಿಕಾ ಗೋಧಿ

ಅಮೆರಿಕಾದಿಂದ ೧೮೦೦೦ ಟನ್ ಗೋಧಿಯನ್ನು ಹೊತ್ತುತಂದ ಹಡಗು ಕಲ್ಕತ್ತಾಗೆ ಆಗಮಿಸಿದೆ. ಈ ವಾರಾಂತ್ಯದೊಳಗೆ ಅಮೆರಿಕದಿಂದ ೩ ಲಕ್ಷದ ೫೩ ಸಾವಿರದ ೪ನೂರು ಟನ್ ಆಹಾರ ಅಮೆರಿಕಾದಿಂದ ಭಾರತಕ್ಕೆ ಬಂದಿದೆ.

ರಾಜ್ಯಾಂಗ ತಿದ್ದುಪಡಿ ಮಸೂದೆಗೆ ಸಮ್ಮತಿ

ಪಾರ್ಲಿಮೆಂಟು ರಾಜ್ಯಾಂಗ ತಿದ್ದುಪಡಿ ಮಸೂದೆಯು ತೃತೀಯ ವಾಚನಕ್ಕೆ ಒಪ್ಪಿಗೆ ನೀಡಿತು. ಮಸೂದೆಯ ಪರವಾಗಿ ೨೨೮ ಮಂದಿಯೂ, ವಿರೋಧವಾಗಿ ೨೦ ಮಂದಿಯೂ ಮತವಿತ್ತರು.

ಲಾಟರಿ ಸ್ಪರ್ಧೆ ಹತೋಟಿ ಕಾನೂನು

ಬಹುಮಾನ ಸ್ಪರ್ಧೆ ಲಾಟರಿ ಮುಂತಾದುವಕ್ಕೆ ಸಂಬಂಧಪಟ್ಟ ಕಾನೂನನ್ನು ಮೈಸೂರು ಸರ್ಕಾರದವರು ರಾಷ್ಟ್ರಪತಿ [illegible] ಬಂದಮೇಲೆ ಜಾರಿಗೆ ತರಲಿರುವರು.

ರೈಲುಗಾಡಿ ತಯಾರಿ

ಕಲ್ಕತ್ತಾದಲ್ಲಿ ಸದ್ಯದಲ್ಲಿಯೇ ೩ನೇ ತರಗತಿಯ ಉಪಯೋಗಕ್ಕಾಗಿ ನೂತನ ತರಹದ ೧೭೪ ರೈಲು ಗಾಡಿಗಳು ತಯಾರಾಗಿವೆ

ತೀವ್ರ ಪ್ರತಿಭಟನೆ

ಕಳೆದ ಮಾಹೆ ೨೬ನೇ ತಾ॥ ಭಾರತದಲ್ಲಿ ಅಫ್ಘಾನಿಸ್ಥಾನದ ರಾಯಭಾರಿಯವರು ಅಖಿಲ ಭಾರತ ರೇಡಿಯೋ ಕೇಂದ್ರದಿಂದ ಪಾಕಿಸ್ತಾನ ವಿರುದ್ಧ ಭಾಷಣವನ್ನು ಮಾಡಲು ಭಾರತ ಸರ್ಕಾರವು ಅನುಮತಿಯಿತ್ತಿದುದು ಅಂತರರಾಷ್ಟ್ರೀಯ ನ್ಯಾಯ ಮತ್ತು ಒಪ್ಪಂದಗಳಿಗೆ ವಿರುದ್ಧವೆಂದು ಒಂದು ಪ್ರತಿಭಟನಾ ಪತ್ರವನ್ನು ಭಾರತ ಸರ್ಕಾರಕ್ಕೆ ಪಾಕಿಸ್ತಾನ ಸರ್ಕಾರ ಬರೆದಿರುವುದಾಗಿ ಹೇಳಲಾಗಿದೆ.

ಪ್ರತಿಭಟಿಸಿ ರಾಜೀನಾಮೆ

ರಾಜ್ಯಾಂಗ ತಿದ್ದುಪಡಿಯ ಮೂಲಕ ವಾಕ್ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದೆಂದು ಪ್ರತಿಭಟಿಸಿ, ಪಾರ್ಲಿಮೆಂಟ್ ಸದಸ್ಯರೂ ಅಲಹಾಬಾದ್ ವಿಶ್ವವಿದ್ಯಾನಿಲಯದ ಪ್ರೊಫೆಸರು ಆದ ಶ್ರೀ ಭಟ್ಟಾಚಾರ್ಯರವರು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷ ಮತ್ತು ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ ಕೊಟ್ಟಿರುವರು.

ಎಲ್ಲಾ ಮತೀಯರಿಗೂ ಅವಕಾಶ

ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಮತೀಯರಿಗೂ ಸಮಾನ ಅವಕಾಶ ದೊರೆಯುವಂತೆ ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ.

ವಿಪುಲ ಸಾಗುವಳಿ ಯೋಜನೆ

ಮದರಾಸು ಸರ್ಕಾರವು ಇತ್ತೀಚೆಗೆ ಒಂದು ಕೋಟಿ ರೂಪಾಯಿನ ೧೩೫ ವಿಪುಲ ಸಾಗುವಳಿ ಯೋಜನೆಗಳನ್ನು ಪೂರೈಸಿದೆ. ಇದರಿಂದ ೫೩ ಸಾವಿರ ಎಕರೆಗಳಲ್ಲಿ ಸಾಗುವಳಿ ಪ್ರಾರಂಭವಾಗಿದೆ.

ಕಾರಿನಲ್ಲಿ ಹೋಗುವಾಗ ಮರಣ

ಅಹಮದ್ ನಗರದ ಡಿ. ಎಸ್. ಪಿ. ಶ್ರೀ ಪಿ ಬಿ. ಮೋರೆಯವರು ಶನಿವಾರ ಅಹಮದ್‌ನಗರದಿಂದ ಸತಾರಕ್ಕೆ ಹೋಗುತ್ತಿದ್ದಾಗ ಹೃದಯ ಕ್ರಿಯೆನಿಂತು ತಮ್ಮ ಕಾರಿನಲ್ಲಿಯೇ ಮೃತಪಟ್ಟರು.

ಬ್ರಿಟನ್ನಿನ ಸಂಧಾನ ಯತ್ನ

ಫ್ರಾನ್ಸ್, ಕಾಮನ್‌ವೆಲ್ತ್ ರಾಷ್ಟ್ರಗಳು, ವಿಶ್ವಸಂಸ್ಥೆ ಮುಂತಾದುವುಗಳೊಡನೆ ಬ್ರಿಟನ್ನು ಚೈನಾ ಸಂಧಾನಯತ್ನಕ್ಕಾಗಿ ಚರ್ಚೆ ಪ್ರಾರಂಭ ಮಾಡಿದೆಯೆಂದು ಹೇಳಲಾಗಿದೆ.

ಈ ವಿಷಯವು ತಮಗೆ ತಿಳಿಯದೆಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಡೀನ್ ಅಚಿಸನ್‌ರವರು ಹೇಳಿರುವರು.

ಕದನ ಮುಕ್ತಾಯವೆ?

೩೮ನೇ ಅಕ್ಷಾಂಶದ ಬಳಿ ಕದನ ಮುಕ್ತಾಯವಾಗುವ ಭರವಸೆಯಿದ್ದಲ್ಲಿ ಅಮೆರಿಕಾವು ಸಂಧಾನಕ್ಕೆ ಒಪ್ಪಬಹುದೆಂದು ಆದರೆ ನೂತನ ಚೀನಾಕ್ಕೆ ವಿಶ್ವಸಂಸ್ಥೆಯಲ್ಲಿ ಮಾನ್ಯತೆ, ಫಾರ್ಮೋಸಾ ಪ್ರಶ್ನೆ ಮುಂತಾದ ಶಾಂತಿಶರತ್ತುಗಳಿಗೆ ಮಾತ್ರ ಒಪ್ಪಲಾಗುವುದಿಲ್ಲವೆಂದು ಮಿ॥ ಡೀನ್ ಅಚಿಸನ್‌ರವರು ಹೇಳಿರುವರು.

೧೪೩ ಎಕರೆ ದಾನ

ಹೈದರಾಬಾದ್ ಕರೀಂನಗರ ಜಿಲ್ಲೆಯಲ್ಲಿ ೧೪೩ ಎಕರೆ ಜಮೀನನ್ನು ಆಚಾರ್ಯ ವಿನೋಬಭಾವೆಯವರು ಬಡವರಿಗೆ ಹಂಚಲು ಉಚಿತವಾಗಿ ಸ್ವೀಕರಿಸಿರುವರು.

ನಿವೃತ್ತ ಸೈನ್ಯಕ್ಕೆ ಮರುವಸತಿ

ಹೈದರಾಬಾದಿನಲ್ಲಿ ನಿವೃತ್ತರಾದ ೭ ಸಾವಿರ ಸೈನಿಕರಲ್ಲಿ ೨ ಸಾವಿರ ಜನಕ್ಕೆ ಮರುವಸತಿ ಕಲ್ಪಿಸಲಾಗಿದೆ.

ಕಾರ್ಯಕಾರಿ ಸಮಿತಿ ಸಭೆ

ಬೆಂಗಳೂರು ಜೂನ್ ೩

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಜೂನ್ ೩-೪ರಲ್ಲಿ ಬೆಂಗಳೂರಿನಲ್ಲಿ ನಡೆಯುವುದು.

ವುಡ್‌ಲ್ಯಾಂಡ್ಸ್ * ೧—೬—೫೧ರಿಂದ ಅಮೋಘ ೩ನೇ ವಾರ
ಮೋಹನ್‌ರವರ— * ಭೀಮ್‌ಸೇನ್ *
ಪಾತ್ರ-ನಿರೂಪರಾಯ್, ವಸಂತರಾವ್ ಪೈಲ್ವಾನ್, ತ್ರಿಲೋಕ್ ಕಪೂರ್, ರಾಂಸಿಂಗ್.

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು :—ಪಿ. ಕಾ. ಸುಬ್ಬರಾವ್. ಮೋಡರ್ನ್ ಮುದ್ರಣಾಲಯ, ಮೈಸೂರು.

ಆರ್. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜೆ. ಎಲ್. ಸ್ವಾಮಿ

ಸಂಪುಟ ೧] ೫—೬—೧೯೫೫ ಮಂಗಳವಾರ [ಸಂಚಿಕೆ ೨೨೫

ಅಂಚೆ ಸ್ಟ್ಯಾಂಪುಗಳನ್ನು ಹಚ್ಚುವ ವಿಧಾನ

ಕೇಂದ್ರ ಸಮಾಚಾರ ಶಾಖೆಯು ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಅಂಚೆ ಕಾಗದಗಳಿಗೆ ಜಾಗ್ರತೆಯಾಗಿ ಮುದ್ರೆಯೊತ್ತಲನುಕೂಲವಾಗುವಂತೆ ಯಾವಾಗಲೂ ಅಂಚೆ ಸ್ಟ್ಯಾಂಪುಗಳನ್ನು ಕಾಗದದ ಬಲಗಡೆ ಮೇಲುಭಾಗದಲ್ಲಿ ಹತ್ತಿಸಬೇಕಾಗಿ ತಿಳಿಸಿದೆ.

೨ ತಿಂಗಳು ಕಠಿಣಸಜಾ

ಕೃಷ್ಣರಾಜ ಪೋಲೀಸ್ ಸ್ಟೇಷನ್ನಿನಲ್ಲಿರುವ ಕಾನ್ಸ್ಟೇಬಲ್ ಲಿಂಗಯ್ಯ ಎಂಬುವವರನ್ನು ಸೀತಾವಿಲಾಸ ಛತ್ರದ ಬಳಿ ಅಬ್ದುಲ್ ರಜಾಕ್ ಎಂಬುವವನು ಹೊಡೆದುದಕ್ಕಾಗಿ, ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ಅಬ್ದುಲ್‌ರಜಾಕ್‌ಗೆ ೨ ತಿಂಗಳ ಕಠಿಣ ಸಜಾವನ್ನು ವಿಧಿಸಿದ್ದಾರೆ.

ವಸ್ತುಪ್ರದರ್ಶನದ ಬೆಂಕಿ ಅನಾಹುತಕ್ಕೆ ದೌರ್ಜನ್ಯಕಾರರೇ ಕಾರಣ

ಮೈಸೂರಿನಲ್ಲೂ ಆಹಾರ ಶಾಖೆಯು ಶ್ರೀ ಕೆ. ಸಿ. ರೆಡ್ಡಿಯವರಿಗೆ

ಹೊಸದಾಗಿ ೭॥ ಲಕ್ಷ ಎಕರೆ ಸಾಗುವಳಿ

ಕಾರಾವಾರದಲ್ಲಿ ಈ ವರ್ಷದೊಳಗೆ ೭॥ ಲಕ್ಷ ಎಕರೆ ಜಮೀನನ್ನು ಸಾಗುವಳಿಗೆ ತರಲಾಗುವುದೆಂದು ಅಲ್ಲಿನ ಐ. ಸಿ. ಎಸ್. ಅಧಿಕಾರಿಗಳಾದ ಜ॥ ತಯೊಬ್ಜಿ ತಿಳಿಸಿದ್ದಾರೆ. ಇದಕ್ಕಾಗಿ ಒಂದು ಲಕ್ಷ ರೂಗಳನ್ನು ಮೀಸಲಾಗಿಟ್ಟಿರುವುದಲ್ಲದೆ ರೈತರಿಗೆ ಈಗಾಗಲೇ ೧೪೫೦ ಎಕರೆ ಬೀಳು ಜಮೀನು ಹಂಚಲಾಗಿದೆ.

ರೈತರಿಗೆ ಒಂದು ಎಕರೆಗೆ ೫೦ ರೂಗಳನ್ನು ಗೊಬ್ಬರ ಮತ್ತು ಬೀಜದ ಬತ್ತದ ರೂಪದಲ್ಲಿ ಸಾಲವಾಗಿ ಕೊಡಲಾಗುವುದು.

ಸೆಕ್ಯೂರಿಟಿ ಕೌನ್ಸಿಲ್ ಅಧ್ಯಕ್ಷತೆ

ಜೂನ್ ಮಾಹೆಯಲ್ಲಿ ಸೆಕ್ಯೂರಿಟಿ ಕೌನ್ಸಿಲ್‌ನ ಅಧ್ಯಕ್ಷತೆಯನ್ನು ವಿಶ್ವಸಂಸ್ಥೆಯ ರಷ್ಯಾ ಪ್ರತಿನಿಧಿ ಮಿ॥ ಜಾಕಬ್ ಮಲಿಕ್‌ರವರು ವಹಿಸಿಕೊಳ್ಳುವರು.

ನಾಣ್ಯಗಳ ತಯಾರಿ

೧೯೫೪ರಲ್ಲಿ ಪರರಾಷ್ಟ್ರಗಳಿಗಾಗಿ ಅಮೆರಿಕಾವು ೯೪,೨೬೭,೯೪೪ ನಾಣ್ಯಗಳನ್ನು ತಯಾರಿಸಿದೆ. ಇಥಿಯೋಪಿಯಾದ ನಾಣ್ಯಗಳೇ ಹೆಚ್ಚು ಸಂಖ್ಯೆಯಲ್ಲಿವೆ.

ಪನಾಮನಾಲಾ ಪ್ರವಾಸ

೪೭ ವರ್ಷಗಳ ಹಿಂದೆ ತೆರೆದ ಪನಾಮ ನಾಲಾದಲ್ಲಿ ಇಲ್ಲಿಯವರೆಗೆ 150,000 ದೊಡ್ಡ ಹಡಗುಗಳು ಪ್ರವಾಸ ಮಾಡಿವೆ.

ಬೈಬಲ್ ಭಾಷಾಂತರ

ಬೈಬಲ್ಲು ೧೯೧ ಭಾಷೆಗಳಲ್ಲಿ ಭಾಷಾಂತರವಾಗಿದೆ. ಬೈಬಲ್ಲಿನ ಕೆಲವು ಭಾಗಗಳು ೧೦೩೪ ಭಾಷೆಗಳಲ್ಲಿ ಭಾಷಾಂತರವಾಗಿದೆ.

ಪದವೀಧರರು

೧೯೫೦ರಲ್ಲಿ ಅಮೆರಿಕಾದಲ್ಲಿ ೪೯೮,೫೮೯ ಸ್ತ್ರೀ ಮತ್ತು ಪುರುಷರು ವಿವಿಧ ಕಾಲೇಜುಗಳಲ್ಲಿ ಪದವೀಧರರಾಗಿರುವರು.

ಭವಾನಿ ಅಣೆಕಟ್ಟು ಯೋಜನೆ

ಕೊಯಮುತ್ತೂರು ಬಳಿ ನಡೆಯುತ್ತಿರುವ ಕೆಳಗಣ ಭವಾನಿ ಅಣೆಕಟ್ಟು ಯೋಜನೆಯು ನಿರೀಕ್ಷಿಸಿದಷ್ಟು ಕಾಲಕ್ಕಿಂತ ಬೇಗ ಮುಕ್ತಾಯವಾಗಬಹುದೆಂದು ಹೇಳಲಾಗಿದೆ. ಈ ಅಣೆಕಟ್ಟು ೫॥ ಮೈಲಿ ಉದ್ದವಿದೆ. ಇದರಿಂದ ತೆಗೆಯುವ ಕಾಲುವೆಯು ೧೨೦ ಮೈಲಿ ದೂರದವರೆಗೆ ಹೋಗುವುದು. ಇದರಿಂದ ಎರಡು ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡಲಾಗುವುದೆಂದು ಹೇಳಲಾಗಿದೆ. ಈ ಅಣೆಕಟ್ಟಿಗೆ ೯ ಕೋಟಿ ರೂ. ವೆಚ್ಚವಾಗಿದೆ.

ಯು. ಎನ್. ಒ. ಖಂಡನೆ

ಶ್ರೀನಗರದಲ್ಲಿ ನಿನ್ನೆ ಪ್ರಧಾನಿ ಷೇಕ್ ಅಬ್ದುಲ್ಲಾ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷ ಭಾಷಣ ಮಾಡುತ್ತಾ, ಕಾಶ್ಮೀರದಲ್ಲಿ ರಾಜ್ಯಾಂಗ ರಚನಾ ಸಭೆಯನ್ನು ಸ್ಥಾಪಿಸಿ ಅಲ್ಲಿಗೆ ಪ್ರತಿನಿಧಿಗಳನ್ನು ವಯಸ್ಕರ ಮತದಾನದ ಆಧಾರದ ಮೇಲೆ ಚುನಾಯಿಸಲಾಗುವುದೆಂದರು.

ಜ॥ ಷೇಕ್ ಅಬ್ದುಲ್ಲಾರವರು ಮುಂದುವರಿದು ವಿಶ್ವಸಂಸ್ಥೆಯು ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಅಸಮರ್ಥವಾಗಿದೆಯೆಂದು ತಿಳಿಸಿದರು. ವಿಶ್ವಸಂಸ್ಥೆಯ ದೌರ್ಬಲ್ಯವನ್ನು ಖಂಡಿಸಿದರು.

ಪುನಃ ರಷ್ಯಾ ಗೋಧಿ

ರಷ್ಯಾದಿಂದ ಪುನಃ ೬೬೦೦ ಟನ್ ಗೋಧಿಯು ಬೊಂಬಾಯಿ ಬಂದರಿಗೆ ನಿನ್ನೆ ಬಂದಿದೆ.

ವಿದ್ಯುಚ್ಛಕ್ತಿ ತಯಾರಿಕೆ

ಭಾರತದಲ್ಲಿ ಕಳೆದ ೧೧ ವರ್ಷಗಳಲ್ಲಿ ವಿದ್ಯುಚ್ಛಕ್ತಿ ತಯಾರಿಕೆಯು ಶೇಕಡ ೧೫೭ ರಷ್ಟು ಹೆಚ್ಚಿದೆ.

‡ ದಕ್ಷಿಣಕೊರಿಯಾ ಸರ್ಕಾರದ ಸಚಿವ ಮಿ॥ ಕಾಂಗ್‌ಹೂ ರಾಜೀನಾಮೆ ಕೊಟ್ಟಿರುವರು.

† ಶುಕ್ರವಾರ ಗ್ವಾಟೀಮಾಲಾದಲ್ಲಿ ಭೂಕಂಪವಾಯಿತೆಂದು ವರದಿಯಾಗಿದೆ.

ಬಿಹಾರಿಗೆ ಕಳುಹಿಸಿರುವ ಧಾನ್ಯ

ಇಲ್ಲಿಯವರೆಗೆ ಬಿಹಾರಿಗೆ ಒಂದು ಲಕ್ಷದ ೫೪ ಸಾವಿರ ಟನ್ ಆಹಾರ-ಧಾನ್ಯವನ್ನು ಕಳುಹಿಸಲಾಗಿದೆ. ದರ್ಭಾಂಗ ಜಿಲ್ಲೆಯಲ್ಲಿ ರಸ್ತೆ, ಕೆರೆ ಮತ್ತು ಕಾಲುವೆಗಳ ರಿಪೇರಿ ಕಾರ್ಯ ಆರಂಭವಾಗಿದೆ. ಅನೇಕ ಕ್ಷಾಮ ಪರಿಹಾರಕಾರ್ಯಗಳನ್ನು ಆರಂಭಿಸಿ ಇಲ್ಲಿಯವರೆಗೂ ೧೪೦ ಸಾವಿರ ಜನಕ್ಕೆ ಕೆಲಸ ಒದಗಿಸಲಾಗಿದೆ.

ಖಂಡನಾಪತ್ರ

ಪಶ್ಚಿಮ ಬಂಗಾಳದ ಗಡಿಬಳಿ ಪಾಕ್‌ಸ್ತಾನಿಯರು ಕಳೆದ ತಿಂಗಳು ೧೮ನೇ ತಾ॥ ಕೆಲವು ಬಂಬಿಗರ ಮೇಲೆ ಗುಂಡು ಹಾರಿಸಿ ೯ ಜನ ಮರಣಕ್ಕೆ ಕಾರಣವಾದ ಬಗ್ಗೆ ಪಶ್ಚಿಮ ಬಂಗಾಳಾ ಸರ್ಕಾರವು ಪೂರ್ವ ಬಂಗಳಾ ಸರ್ಕಾರಕ್ಕೆ ಒಂದು ಖಂಡನಾಪತ್ರವನ್ನು ಕಳುಹಿಸಿದೆ.

ಸಂಧಾನಕ್ಕೆ ಸಿದ್ಧ

ನಿರಾಶ್ರಿತರ ಆಸ್ತಿಪಾಸ್ತಿಗಳ ಬಗ್ಗೆ ಭಾರತ ಸರ್ಕಾರವು ಪಾಕಿಸ್ತಾನದ ಸರ್ಕಾರದೊಡನೆ ಸಂಧಾನ ನಡೆಸಲು ಸಿದ್ಧವಿದೆ ಎಂದು ಕೇಂದ್ರ ಸಚಿವ ಶ್ರೀ ಅಜಿತ್ ಪ್ರಸಾದ್ ಜೈನ್‌ರವರು ನಿನ್ನೆ ತಿಳಿಸಿದ್ದಾರೆ.

† ಭಾರತವು ಈಗ ಅನುಭವಿಸುತ್ತಿರುವ ಕಷ್ಟಗಳು ಇನ್ನು ೩ ಅಥವಾ ೪ ವರ್ಷಗಳಲ್ಲಿ ನಿವಾರಣೆಯಾಗಬಹುದೆಂದು ಭಾರತದ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮಹತಾಬ್‌ರವರು ಹೇಳಿದ್ದಾರೆ.

‡ ಸಂಘದ ಬೇಡಿಕೆಗಳ ಬಗ್ಗೆ ಮಾಲೀಕರು ಯಾವ ತೀರ್ಮಾನವನ್ನೂ ಮಾಡದೆ ಇದ್ದ ಪ್ರಯುಕ್ತ ಇದೇ ೧೫ನೇ ತಾರೀಖಿನಿಂದ ನ್ಯಾಯಬದ್ಧವಾದ ಸಾಮೂಹಿಕ ಮುಷ್ಕರವನ್ನು ಹೂಡುವ ವಿಚಾರದಲ್ಲಿ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯು ತಾರೀಖು ೫-೬-೫೫ನೇ ಮಂಗಳವಾರ ಸಾಯಂಕಾಲ ೬ ಘಂಟೆಗೆ ಸಂಘದ ಕಛೇರಿಯಲ್ಲಿ ನಡೆಯುತ್ತದೆ.

† ಮದರಾಸಿನಲ್ಲಿ ಈ ಬಾರಿಯ ಚುನಾವಣೆಗೆ ೩ ಲಕ್ಷದ ೨೦ ಸಾವಿರ ಬುಕ್ಕಿನ ಪೆಟ್ಟಿಗೆಗಳು ಅಲ್ಲೇ ತಯಾರಾಗುತ್ತಿರುವುದಾಗಿ ವರದಿಯಾಗಿದೆ.

ಬೆಂಗಳೂರು ವಾರ್ತೆ

ಸ್ವಂ. ಫೋನ್] ಬೆಂ. ಜೂನ್ ೪

ಆಹಾರ ಶಾಖೆಯನ್ನು ಮುಖ್ಯಮಂತ್ರಿಗಳೇ ವಹಿಸಿಕೊಳ್ಳಬೇಕೆಂಬ ಸಂಭಾವಿತ ಸಲಹೆಯು ... ಮೈಸೂರು ಸರ್ಕಾರಕ್ಕೂ ಬಂದಿದೆ. ಶ್ರೀ ಕೆ. ಸಿ. ರೆಡ್ಡಿಯವರೇ ಈ ಶಾಖೆಯನ್ನು ವಹಿಸಿಕೊಳ್ಳುವರು.

ಈ ವರ್ಷ ವಸ್ತುಪ್ರದರ್ಶನವು ಅಕ್ಟೋಬರ್ ೨ರಿಂದ ೧೭ರವರೆಗೆ ನಡೆಯುವುದು.

ಜ॥ ಇಸ್ಮಾಯಿಲ್ ಷರೀಫ್‌ರವರ ರಜವನ್ನು ಇನ್ನೂ ಒಂದು ತಿಂಗಳು ಹೆಚ್ಚಿಸಲಾಗಿದೆ.

ಹೈದರಾಬಾದ್ ಮುಖ್ಯಮಂತ್ರಿ, ಶ್ರೀ ಕೆ. ವೆಲ್ಲೋಡಿಯವರು ಊಟಿಯಿಂದ ಬೆಂಗಳೂರಿಗೆ ಆಗಮಿಸಿದರು. ನಾಳೆ ಹೈದರಾಬಾದಿಗೆ ತೆರಳುವರು.

ಮದ್ದೂರಿನ ಬಳಿ ಮೋಟಾರು ಅಪಘಾತದಲ್ಲಿ ಸತ್ತವರ ಸಂಖ್ಯೆ ೫ಕ್ಕೇರಿದೆ.

ಅಗ್ನಿ ಗಾಹುತಿಯಾದ ವಸ್ತುಪ್ರದರ್ಶನದ ಕಾರ್ಯದರ್ಶಿ ಶ್ರೀ ದೀನದಯಾಳು ನಾಯ್ಡುರವರು ನಿನ್ನೆ ಮತ್ತು ಈ ದಿನ ವಿಚಾರಣಾ ಸಮಿತಿ ಮುಂದೆ ಸಾಕ್ಷ್ಯವಿತ್ತರು. ಏಕಕಾಲದಲ್ಲಿ ೩ ಕಡೆ ಬೆಂಕಿಯು ಹತ್ತಿಕೊಂಡಿತು. ಇದು ದೌರ್ಜನ್ಯಕಾರರ ಕೆಲಸವೇ ವಿನಹ ಮತ್ತೇ ಬೇರೆಯಲ್ಲ. ವಿದ್ಯುಚ್ಛಕ್ತಿಯಿಂದ ಈ ಪ್ರಮಾದವಾಗಿಲ್ಲ. ಒಟ್ಟು ನಷ್ಟವು ೧೦ ಲಕ್ಷಕ್ಕೆ ಏರಿಲ್ಲ. ಲಲಿತ—ಪದ್ಮಿನಿ ನೃತ್ಯ ನಡೆದ ದಿನ ೧೦ ಸಾವಿರ ರೂ. ವಸೂಲಾಗಿದೆಯೆಂದು ಹೇಳಿರುವರು.

ಭಾರತಕ್ಕೆ ವಾಪಸ್ಸು

ಇಂಡೋನೇಷ್ಯಾದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಪಿ. ಸುಬ್ಬರಾಯನ್‌ರವರು ಭಾರತಕ್ಕೆ ನಿನ್ನೆ ಜಕಾರ್ತಾದಿಂದ ಹೊರಟರು. ಅವರು ತಮ್ಮನ್ನು ಕೆಲಸದಿಂದ ನಿವೃತ್ತಿಗೊಳಿಸಬೇಕೆಂದು ಭಾರತ ಸರ್ಕಾರವನ್ನು ಕೇಳಿದ್ದರು. ಅದರಂತೆಯೇ ಹೀಗೆ ಹಿಂತಿರುಗುತ್ತಿರುವುದು

ಪತ್ರವ್ಯವಹಾರ— ಪೋಲೀಸ್ ಅಧಿಕಾರಿಗಳು ಗಮನಿಸಿಲ್ಲವೇ ?

ಸ್ವಾಮಿ,—

ಮೈಸೂರು ನಗರದಲ್ಲಿ ಇತ್ತೀಚಿಗೆ ಸಣ್ಣ ಪುಟ್ಟ ರಸ್ತೆಗಳು, ಕರ್ನ ಸರ್ವೀಸ್ ರಸ್ತೆಗಳು, ಕೊನೆಗೆ ದೊಡ್ಡ ದೊಡ್ಡ ರಾಜಮಾರ್ಗಗಳು ಸಹ ಮೋಟಾರು ಲಾರಿ, ಬಸ್ಸುಗಳ ಆವಾಸ ಸ್ಥಾನವಾಗಿ ಹೋಗಿದೆ. ಈ ವಾಹನಗಳು ನಿಂತಿರುವುದು ಸದಾ ಪೋಲಿಸ್ ಅಧಿಕಾರಿಗಳ ಕಣ್ಣಿಗೆ ಬೀಳುತ್ತಲಿದ್ದರೂ ಯಾವ ಕಾರ್ಯಕ್ರಮವನ್ನು ಕೈಗೊಳ್ಳದಿರುವುದು ಆಶ್ಚರ್ಯವಾಗಿರುತ್ತದೆ.. ಈ ಕಾರ್ಯವು ಟ್ರಾಫಿಕ್‌ನವರಿಗೆ ಸೇರಿದುದಾಗಿಲ್ಲವೇ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಏನಾದರೂ ಅಡ್ಡಿ ಆತಂಕಗಳಿವೆ ಅಥವಾ ಇಲಾಖೆಯ ದಕ್ಷತೆ ಕಡಿಮೆಯಾಗುತ್ತಲಿದೆ ? ತಿಳಿಯಬೇಕಾಗಿದೆ.

ಉದಾಹರಣೆಗೆ—ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನ ಹಿಂಭಾಗದಲ್ಲಿ ಸದಾ ಕಾಲದಲ್ಲಿಯೂ ಹೆಂಡದ ಲಾರಿಗಳು ನಿಂತಿರುತ್ತವೆ ಅನೇಕ ವೇಳೆ ಗಂಟೆ ಗಟ್ಲೆ ದಿನಗಟ್ಲೆ ಜಗನ್ಮೋಹನ ಪ್ಯಾಲೇಸ್ ರಸ್ತೆಯಲ್ಲಿ ನಿಂತಿರುತ್ತವೆ. ಪೋಲೀಸ್ ಅಧಿಕಾರಿಗಳೇ ಅಲ್ಲ ಮಂತ್ರಿಗಳು, ಮಹಾರಾಜರು ಸಹ ರಸ್ತೆಯಲ್ಲಿ ಓಡಾಡುವಾಗ ಇದು ಅವರ ಕಣ್ಣಿಗೆ ಬದ್ದೇ ಇರುತ್ತದೆ.

ಶ್ರೀ ಪರಕಾಲಸ್ವಾಮಿ ಮಠದ ಮುಂಭಾಗದಲ್ಲಿರುವ ಚೌಕದಲ್ಲಿ ಸದಾ ಕಾಲದಲ್ಲಿಯೂ ಲಾರಿಗಳು ನಿಂತಿರುತ್ತವೆ. ಅಷ್ಟೇ ಅಲ್ಲ ಅವುಗಳ ರಿಪೇರಿಗಳು ಸಹ ಅಲ್ಲೇ ನಡೆಯುತ್ತಲಿರುತ್ತದೆ. ಎಲ್ಲಾ ಅಧಿಕಾರಿಗಳು ಇಲ್ಲಿ ಓಡಾಡುವಾಗ ಕಣ್ಣಿಗೆ ಬಿದ್ದಿರುತ್ತವೆ. ಜಗನ್ಮೋಹನ ಭವನವನ್ನು ನೋಡಲು ರಸ್ತೆಯಲ್ಲಿ ಜನರ ಓಡಾಟವು ವಿಶೇಷವಾಗಿರುತ್ತದೆ. ಸದಾ ಕಾಲದಲ್ಲಿಯೂ ಈ ಚೌಕದಲ್ಲಿ ಒಬ್ಬ ಪೋಲೀಸು ಕಾನ್‌ಸ್ಟೇಬಲನ್ನು ಹಾಕಿ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ ? ಜಗನ್ಮೋಹನ ಭವನದ ಎಡಗಡೆ ಬಸ್ಸುಗಳಿಗೆ ಲೋಡಿಂಗ್, ಅನ್‌ಲೋಡಿಂಗ್, ತೊಗರಿ ಒಣಹಾಕಿರುವುದು. ಈ ದೃಶ್ಯಗಳು ಹೇಳತೀರವು. ಸುಂದರವೆಂದು ಹೇಳಿಸಿಕೊಳ್ಳುವ ಮೈಸೂರಿಗೆ ಪ್ರೇಕ್ಷಕರು ಚಿತ್ರಶಾಲೆಗೆ ಹೋಗುವಾಗ ಈ ದೃಶ್ಯಗಳನ್ನು ಕಂಡರೆ ಅವರೇನೆಂದಾರು ಎಂಬುದರ ಅರಿವಿದೆಯೆ ?

ದೊಡ್ಡ ರಸ್ತೆಗಳಲ್ಲಿಯೇ ಈ ರೀತಿಯಿರುವಾಗ ಸಣ್ಣ ಪುಟ್ಟ ರಸ್ತೆಗಳ ವಿಷಯ ಹೇಳತೀರದು

ರಮಾವಿಲಾಸ ಅಗ್ರಹಾರದ ಹಿಂಭಾಗ ಮತ್ತು ಅದರ ಸುತ್ತಮುತ್ತ ಇರುವ ಅಗ್ರಹಾರಗಳಲ್ಲಿ ತೊಗರಿ ಒಣಹಾಕಿರುವುದರಿಂದ ವಾಹನಗಳ ಓಡಾಟವೇ ಅಲ್ಲ ಜನರ ಓಡಾಟಕ್ಕೂ ವಿಶೇಷ ಅಡಚಣೆಯಾಗಿರುತ್ತದೆ.

ಮತ್ತೊಂದು ವಿಶೇಷ ತೊಂದರೆಯೇನೆಂದರೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನ ಹತ್ತಿರ ಕಟ್ಟಿರುವ ಹೊಸ ಸ್ಟ್ಯಾಚು ಹತ್ತಿರ ರಸ್ತೆಯ ನಡುವೆ ಸಿಟಿ ಬಸ್ಸುಗಳು ಬಂದು ನಿಂತು ಜನರೆಲ್ಲರೂ ಅಲ್ಲಿ ಇಳಿಯುವರು. ಹತ್ತಿರದಲ್ಲಿಯೇ ಬಸ್ ಸ್ಟ್ಯಾಂಡ್ ಇರುವಾಗ ಇಲ್ಲಿ ನಿಲ್ಲಿಸಬೇಕಾದ ಅವಶ್ಯಕತೆಯೇನು ? ಇದರಿಂದ ಇತರ ವಾಹನಗಳ ಜನರ ಸಂಚಾರಕ್ಕೆ ವಿಶೇಷ ಅಡಚಣೆಯುಂಟಾಗುತ್ತದೆ.

ಇವುಗಳನ್ನೆಲ್ಲಾ ಪೋಲೀಸ್ ಟ್ರಾಫಿಕ್ ಶಾಖೆಯವರು ತಮ್ಮ ಕರ್ತವ್ಯದೃಷ್ಟಿಯಿಂದ ಅರಿತುಕೊಂಡು ಈ ಅವ್ಯವಸ್ಥೆಯನ್ನು ತಪ್ಪಿಸುವರೆಂದು ನಂಬಿದೆ.

ಓರ್ವಪ್ರಜೆ,

ಲೋಯರ್ ಸೆಕೆಂಡರಿ ಪರೀಕ್ಷೆ ಫಲಿತಾಂಶ ಜೂನ್ ೯ ರಂದು ಪ್ರಕಟಣೆ

ಬೆಂಗಳೂರು ಜೂನ್ ೪

೧೯೫೧ನೇ ಲೋಯರ್ ಸೆಕೆಂಡರಿ ಪರೀಕ್ಷೆ ಫಲಿತಾಂಶವು ಜೂನ್ ೯ರಂದು ಪ್ರಾತಃಕಾಲ ೮ ಘಂಟೆಗೆ ಪ್ರಕಟವಾಗುವುದೆಂದು ಅಧಿಕಾರಿಯುತ ಪ್ರಕಟಣೆ ತಿಳಿಸುತ್ತದೆ.

ಅಂದು ಸಂಸ್ಥಾನದ ಎಲ್ಲಾ ಭಾಗದ ಫಲಿತಾಂಶವನ್ನು ಪ್ರಾತಃಕಾಲ ೮ ಗಂಟೆಗೆ ನ್ಯೂ ಪಬ್ಲಿಕ್ ಆಫೀಸಿನಲ್ಲಿ ಪ್ರಕಟಿಸಲಾಗುವುದು.

ಅಲ್ಲದೆ ಬೆಂಗಳೂರು ಕೇಂದ್ರದ ಫಲಿತಾಂಶವನ್ನು ಫೋರ್ಟ್ ಹೈಸ್ಕೂಲಿನಲ್ಲಿಯೂ, ಮಲ್ಲೇಶ್ವರಂ ಸರ್ಕಾರಿ ಬಾಯ್ಸ್ ಹೈಸ್ಕೂಲಿನಲ್ಲಿಯೂ ಅದೇ ಕಾಲಕ್ಕೆ ಪ್ರಕಟಿಸಲಾಗುವುದು.

ಮೈಸೂರು ಜಿಲ್ಲಾ ಫಲಿತಾಂಶವನ್ನು ಮಾತ್ರ ಮೈಸೂರಿನ ಮಹಾರಾಜಾ ಹೈಸ್ಕೂಲಿನಲ್ಲಿ ಪ್ರಕಟಿಸಲಾಗುವುದು.

ಉಳಿದ ಭಾಗಗಳ ಫಲಿತಾಂಶವನ್ನು ಆಯಾ ಸ್ಥಳಗಳಲ್ಲಿ ಪ್ರಕಟಿಸುವ ಏರ್ಪಾಟು ಮಾಡಲಾಗುವುದು.

ಕೊರಿಯಾದಲ್ಲಿ ಪರಿಹಾರಕ್ಕೆ

ಕೊರಿಯಾದಲ್ಲಿ ಪರಿಹಾರ ಕಾರ್ಯಕ್ಕಾಗಿ ವಿಶ್ವಸಂಸ್ಥೆಯು ೧೧೨,೩೦೦,೦೦೦ ಡಾಲರುಗಳನ್ನು ಮುಂದಿನ ಜುಲೈ ಮಾಹೆಯಿಂದ ವೆಚ್ಚ ಮಾಡಲಿದೆ. ಇದರಲ್ಲಿ ಅಮೆರಿಕಾವು ೬೫,೦೦೦,೦೦೦ ಡಾಲರುಗಳನ್ನು ಕೊಡಲಿದೆ. ಥೈಲಾಂಡು ೧೦,೦೦೦,೦೦೦ ಡಾಲರುಗಳ ಅಕ್ಕಿಯನ್ನು ಭಾರತವು ೧,೦೦೦,೦೦೦ ಡಾಲರುಗಳ ಚೀಲಗಳನ್ನು ಕೊಟ್ಟಿದೆ.

ದೆಹಲಿ ವೈಮಾನಿಕ ಕಛೇರಿಯಿಂದ ೯೦೦ ರೂ. ಕಳವು

ಲಾಯ್ಡ್ಸ್ ಬ್ಯಾಂಕ್ ದರೋಡೆ ಮತ್ತು ಏರ್‌ವೇಸ್ ಕಾರ್ಯಾಲಯದ ಬಳಿ ದರೋಡೆಯನಂತರ ಮತ್ತೊಂದು ವಿಚಿತ್ರದರೋಡೆ ವರದಿಯಾಗಿದೆ.

ನವದೆಹಲಿಯ ವಿಮಾನ ಪ್ರಯಾಣ ಕಂಪನಿಯ ಕಾರ್ಯಾಲಯಕ್ಕೆ ಇಂದು ಇಬ್ಬರು ಬಂದು ನೂರು ರೂ. ನೋಟಿಗೆ ಚಿಲ್ಲರೆಯನ್ನು ಕೇಳಿದರು. ಅಲ್ಲಿನ ಗುಮಾಸ್ತೆ ಚಿಲ್ಲರೆಯನ್ನೆಣಿಸುತ್ತಿರಲು ಇದ್ದಕ್ಕಿದ್ದಂತೆಯೇ ಟೆಲಿಫೋನ್ ಗಂಟೆಶಬ್ದ ಮಾಡಿತು. ಆದರ ಬಳಿಗೆ ಗುಮಾಸ್ತನು ಹೋಗಲು ಚಿಲ್ಲರೆ ಕೇಳಿದ ಇಬ್ಬರು ೯೦೦ ರೂ. ಗಳನ್ನು ನಗದು ಪೆಟ್ಟಿಗೆಯಿಂದ ಎತ್ತಿಕೊಂಡು ಪತ್ತೆಯಿಲ್ಲದೆ ಹೊರಟು ಹೋದರು.

ಪೋಲೀಸರು ಪತ್ತೆತರಬೇಕಾದನ್ನು ನಡೆಸುತ್ತಿದ್ದಾರೆ.

ಕೊರಿಯಾ ಯುದ್ಧ ನಿಲ್ಲುವ ಸೂಚನೆ

ಉತ್ತರ ಕೊರಿಯಾದಲ್ಲಿ ವಿಶ್ವಸಂಸ್ಥೆ ಸೇನೆಯು ತನ್ನ ಪ್ರತಿಭಟನಾ ಧಾಳಿಯ ಕಾರ್ಯವನ್ನು ಮುಕ್ತಾಯಮಾಡಿತು.

ಎಂದು ಲೆ॥ ಜ॥ ವಾನ್‌ಫ್ಲೀಟ್‌ರವರು ಪ್ರಕಟಿಸಿದ ಮೇಲೆ ವಿಶ್ವಸಂಸ್ಥೆಯ ವರ್ತುಲಗಳಲ್ಲಿ ಕೊರಿಯಾ ಯುದ್ಧಸ್ತಂಭನದ ಭರವಸೆ ಬಹಳವಾಗಿ ಮೂಡಿದೆ.

ಸ್ವಯಂ ವ್ಯಾಪಾರ ಯಂತ್ರಗಳು

ಸಿಗರೇಟು, ಸೋಡ, ಐಸ್‌ಕ್ರೀಂ, ಸಕ್ಕರೆ ಮಿಠಾಯಿ ಮುಂತಾದುವನ್ನು ಸ್ವಯಂ ವ್ಯಾಪಾರ ಮಾಡುವ ಯಂತ್ರಗಳು ಅಮೆರಿಕಾದಲ್ಲಿ ೨,೫೦೦೦,೦೦೦ ಇವೆ. ಇನ್ನೂ ಕೆಲವು ಯಂತ್ರಗಳು ಕಾಫಿ ಬೇಯಿಸಿದ ವಸ್ತು ಮುಂತಾದುವನ್ನು ಮಾರುವುವು.

ಪರಿಹಾರ

ಸರ್ಕಾರಿ ಮೋಟಾರುಗಳಲ್ಲಿ ಪ್ರಯಾಣ ಮಾಡುವಾಗ ಅಪಘಾತಕ್ಕೀಡಾದರೆ ಸರ್ಕಾರದವರು ಪರಿಹಾರವನ್ನು ಕೊಡುವುದಾಗಿ ಮಧ್ಯಭಾರತ ಸರ್ಕಾರವು ಆಜ್ಞೆ ಮಾಡಿದೆ.

ಜಿಲ್ಲಾ ಮ್ಯಾಜಿಸ್ಟ್ರೇಟರು ಅಪಘಾತಕ್ಕೀಡಾದರೆ ವಿಚಾರಣೆ ನಡೆಸಿ ಟ್ರಾನ್ಸ್‌ಪೋರ್ಟ್ ಕಮಿಷನರಿಗೆ ವರದಿಯನ್ನೊಪ್ಪಿಸಬೇಕು ೫೦೦ ರೂಗಿಂತ ಕಡಿಮೆ ಪರಿಹಾರವಾದರೆ ಟ್ರಾನ್ಸ್‌ಪೋರ್ಟ್ ಕಮಿಷನರು ಕೊಡುವರು. ಇಲ್ಲವಾದರೆ ಸರ್ಕಾರಕ್ಕೆ ಕಳುಹಿಸಲಾಗುವುದು.

ಭಾರತ ಸೇವಾದಳದ ಸ್ಥಾಪನೆ

ದೆಹಲಿಯಲ್ಲಿ ಮೊನ್ನೆ ಭಾರತ ಆಯೋಜನಾ ಮಂಡಲಿಯ ಆಶ್ರಯದಲ್ಲಿ ಸಾಮಾಜಿಕ ಕೆಲಸ ನಡೆಸುತ್ತಿರುವ ಪ್ರತಿನಿಧಿಗಳ ಸಭೆಯು ನಡೆದು ಭಾರತದ ಅಭಿವೃದ್ಧಿಗಾಗಿ ಸರ್ವತೋಮುಖವಾಗಿ ಶ್ರಮಿಸಿ ಜನರಲ್ಲಿರುವ ಸದ್ಭಾವನೆಗಳನ್ನೂ ಶಕ್ತಿಯನ್ನೂ ರಾಷ್ಟ್ರಾಭಿವೃದ್ಧಿಕಾರ್ಯಕ್ಕೆ ವಿನಿಯೋಗಿಸಿಕೊಳ್ಳಲು ಭಾರತ ಸೇವಾದಳ ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. ಆಯೋಜನಾ ಮಂಡಲಿಯ ಸದಸ್ಯ ಶ್ರೀ ಗುಲ್ಜಾರಿಲಾಲ್ ನಂದರವರು ಸಭೆಯನ್ನುದ್ದೇಶಿಸಿ ಭಾಷಣಮಾಡಿದರು.

ನೂತನವಾಗಿ ಸ್ಥಾಪಿಸಲಿರುವ ... ವು ರಾಜಕೀಯ ಮತ್ತು ಮತದ ಗೊ... ಲಗಳಿಂದ ದೂರವಾಗಿ ಭಾರತದ ಅಭಿ... ದ್ಧಿಗಾಗಿ ಶ್ರಮಿಸುವುದೇ ಈ ಪ... ಮುಖ್ಯ ಗುರಿಯಾಗಿರುವುದು. ಸ... ಹಿಂದ್ ಮಜ್ದೂರ್ ಸಭಾ, ಕಸ್ತೂ... ಸಂಸ್ಥೆ, ರಾಮಕೃಷ್ಣಾಶ್ರಮ ಮತ್ತು ... ಲಭಾರತ ಮಹಿಳಾ ಸಮ್ಮೇಳನದ ... ನಿಧಿಗಳು ಬಂದಿದ್ದರು.

ಹಾಸಿಗೆಯಲ್ಲಿ ಎಲಕ್ಟ್ರಿಕ್ ಮೋಟಾರು

ಆಸ್ಪತ್ರೆಯಲ್ಲಿ ರೋಗಿಗಳು ಆಯಾಸವಿಲ್ಲದೆ ಮಲಗಲು ಅಮೆರಿಕಾದ ಒಂದು ಸಂಸ್ಥೆಯು ಹೊಸತರಹದ ಹಾಸಿಗೆಗ... ತಯಾರಿಸಿದೆ. ಇದರಲ್ಲಿ ಸಣ್ಣದಾದ ಒ... ಮೋಟಾರನ್ನಿಡಲಾಗಿದೆ.

ಆಹಾರ ಶಾಖೆ ಮುಖ್ಯಮಂತ್ರಿಗಳಿಗೆ

ಎಲ್ಲಾ ಪ್ರಾಂತ್ಯಗಳಲ್ಲಿಯೂ ಆಹಾರ ಖಾತೆಯನ್ನು ಮುಖ್ಯ ಮಂತ್ರಿಗಳೇ ವ... ಹಿಸಿಕೊಳ್ಳಬೇಕೆಂದು ಪ್ರಧಾನಿ ನೆಹರೂರವರು ಎಲ್ಲಾ ಸರ್ಕಾರಗಳಿಗೂ ಸೂಚನೆ... ರುವುದಾಗಿ ವರದಿಯಾಗಿದೆ. ಈ ಆ... ಸಮಸ್ಯೆಯನ್ನು ಯುದ್ಧ ಸಮಸ್ಯೆಯ... ಪರಿಗಣಿಸಲು ಈ ಏರ್ಪಾಡು ಮಾಡ... ಗಿದೆಯೆಂದು ಹೇಳಲಾಗಿದೆ.

ರ ಣ ಜಿ ತ್

೧—೬—೫೧ರಿಂದ

ಅಮೋಘವಾದ ಅನೇ ವ...

-:: ಸ ಗಾ ಯಿ ::-

ಪಾತ್ರ—ರತನ, ಪ್ರೇಂನಾಥ್, ಗೋಪ್, ಯಾಕೂಬ್

ಸಂಪಾದಕರು :—ಜಿ. ಎಲ್. ಟ್ಯೂರಿಸ್ಟ್ ಬ್ಯೂರೋ ಮೈ...
ಮುದ್ರಕರು :—ಹಿ. ಶಾ. ಸುಬ್ಬ... ಮೋಹನ್ ಮುದ್ರಣಾಲಯ, ಮೈ...

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬-೬—೧೯೫೧ ಬುಧವಾರ [ಸಂಚಿಕೆ ೨೨೬

ಶಂಕುಸ್ಥಾಪನೆ

ಮೈಸೂರು ನಜರ್‌ಬಾದ್ ಬಳಿ ಕಟ್ಟಲಾಗುವ ಧರ್ಮ ರತ್ನಾಕರ ಶ್ರೀ ಸಿ. ಪೆರುಮಾಳ್ ಚೆಟ್ಟಿಯಾರ್‌ರವರ ಗರ್ಭಿಣಿಯರ ಆಸ್ಪತ್ರೆಯ ಶಂಕು ಸ್ಥಾಪನೆಯನ್ನು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೧೦ನೇ ತಾರೀಖು ಭಾನುವಾರ ಬೆಳಿಗ್ಗೆ ೯-೩೦ ಘಂಟೆಗೆ ನಡೆಸುವರು.

ಪಾರ್ಸಲ್ ಕಳ್ಳರ ಬಂಧನ

ದಕ್ಷಿಣದ ಸಿದ್ಧ ಕಾಂಡ ಗಾಂಗಿರನಾಟಿ ಸುತ್ತಿದ ಪಾರ್ಸಲ್‌ಗಳನ್ನು ಅಪಹರಿಸುತ್ತಿದ್ದ ೮ ಮಂದಿ ರೈಲ್ವೆ ನೌಕರ್‌ಗಳನ್ನು ಬಂಧಿಸಲಾಗಿದೆ.

ಬಂಧಿತರ ಬಳಿ ನಾಲ್ಕು ಸಾವಿರ ರೂ. ಬೆಲೆಬಾಳುವ ಸೀರೆ-ಪಂಚೆಗಳು ದೊರೆತಿವೆ.

ಆವಶ್ಯಕವಸ್ತುಗಳ ಹತೋಟಿ ಮುಂದುವರಿಸಲು ನಿರ್ಣಯ

ಮೋಟಾರು - ಬೈಸಿಕಲ್ಲು ಡಿಕ್ಕಿ ಹೊಡೆದು ಬಾಲಕನ ಮರಣ

ಸಂಸ್ಥಾನಕ್ಕೆ ಕೇಂದ್ರದ ಕೈಗಾರಿಕಾ ಸಚಿವರು

ಸ್ವಂ.ಸು ಫೋನ್] ಬೆಂ. ಜೂನ್ ೫

ಇದೇ ತಿಂಗಳು ೨೮ನೇ ತಾ|| ಕೊಳ್ಳೇಗಾಲದಲ್ಲಿ ನಡೆಯುವ ಸಿಲ್ಕ್‌ಟ್ಯಾರಿಫ್ ಬೋರ್ಡ್ 'ಸಭೆಯಲ್ಲಿ' ಭಾಗವಹಿಸಲು ಕೇಂದ್ರದ ಕೈಗಾರಿಕಾ ಸಚಿವ ಶ್ರೀ ಹರೇ ಕೃಷ್ಣ ಮೆಹತಾಬ್‌ರವರು ೨೫ನೇ ತಾ|| ಬೆಂಗಳೂರಿಗೆ ಬರುವರು.

ಮದ್ರಾಸ್ ಗೌರ್ನರ್ ಬಂಡೀಪುರಕ್ಕೆ

ಈ ತಿಂಗಳು ೧೬ನೇ ತಾ|| ಮದರಾಸ್ ಗೌರ್ನರ್ ಭಾವನಗರ ಮಹಾರಾಜರು ಮೈಸೂರಿಗೆ ಆಗಮಿಸಿ ಬಂಡೀಪುರದಲ್ಲಿ ಏರ್ಪಡಿಸಿರುವ ಶಿಕಾರಿಗೆ ತೆರಳುವರು.

ಬಿಹಾರಿನವರಿಗೆ ಸಹಾಯ

ದೆಹಲಿಗೆ ಸ್ವಲ್ಪ ದೂರದಲ್ಲಿರುವ ಹಳ್ಳಿಯೊಂದರಲ್ಲಿ ಅಲ್ಲಿನ ಜನರು ೧೫ ಮಣ ಆಹಾರ-ಧಾನ್ಯವನ್ನು ಬಿಹಾರಿನ ನೊಂದ ಜನಕ್ಕೆ ಕೊಡಲು ನಿನ್ನೆದಿನ ಬೆಳಿಗ್ಗೆ ಆಹಾರ-ಸಚಿವ ಶ್ರೀ ಕೆ. ಎಂ. ಮುನ್ಷಿಯವರಿಗೆ ಒಪ್ಪಿಸಿದರು.

ಮಾರ್ಷಲ್ ಲಾ

ಪರ್ಷಿಯಾ ದಕ್ಷಿಣ ಭಾಗದಲ್ಲಿ ಎಣ್ಣೆ ಕೇಂದ್ರಗಳಿರುವ ಪ್ರದೇಶಗಳಲ್ಲಿ ಮಾರ್ಷಲ್ ಲಾವನ್ನು ಇನ್ನೂ ಎರಡು ತಿಂಗಳಕಾಲ ಮುಂದುವರಿಸಲಾಗಿದೆ,

ಭೀಕರ ಕದನ

ಕೊರಿಯಾ ಮಧ್ಯಭಾಗದಲ್ಲಿ ೩೮ನೇ ಅಕ್ಷಾಂಶಕ್ಕೆ ೨೦ ಮೈಲಿ ಉತ್ತರದಲ್ಲಿ ಚೈನಾ, ಉತ್ತರದ ಪಡೆಗಳು, ವಿಶ್ವಪಡೆಗಳಿಗೂ ಭೀಕರ ಕದನವಾಗುತ್ತಲಿದೆ.

ಕಟ್ಟಡ ನಿರ್ಮಾಣ ಪ್ರತೀಕ್ಷಾ ಸಮಿತಿ

ಎಂಜನಿಯರಿಂಗ್ ಮತ್ತು ಕಟ್ಟಡ ನಿರ್ಮಾಣದ ವಿಷಯದಲ್ಲಿ ಪರೀಕ್ಷೆಗಳನ್ನು ನಡೆಸುವುದು ಮತ್ತು ಸರ್ಟಿಫಿಕೇಟ್ ಕೊಡುವುದಕ್ಕೆ ಸಂಬಂಧಪಟ್ಟ ಯೋಜನೆಯೊಂದನ್ನು ತಯಾರಿಸುವ ಸಮಿತಿ ಅಧ್ಯಕ್ಷರನ್ನಾಗಿ ಶ್ರೀ ಅನಂತಶಯನಂ ಅಯ್ಯಂಗಾರ್ ಅವರನ್ನು ನೇಮಿಸಲಾಗಿದೆ.

ಟೆಲಿಫೋನ್ ಕಛೇರಿಯಲ್ಲಿ ವಿದ್ಯುದುಪಘಾತ

ನಿನ್ನೆ ಬೆಳಿಗ್ಗೆ ಕಲ್ಕತ್ತಾದ ಟೆಲಿಫೋನ್ ಕಛೇರಿಯಲ್ಲಿ ವಿದ್ಯುತ್ತಿನ ಷಾರ್ಟ್ ಸರ್ಕ್ಯೂಟ್ ಆಗಿ ಅಗ್ನಿಪ್ರಮಾದವಾಯಿತು. ದೆಹಲಿ ಮತ್ತು ಕಲ್ಕತ್ತಾ ಮಧ್ಯೆ ಇರುವ ೬೪ ಲೈನ್‌ಗಳು ಬೆಂಕಿಗಾಹುತಿಯಾದುವು.

ನಿನ್ನೆ ಸಂಜೆವೇಳೆಗೆ ಎಲ್ಲವೂ ರಿಪೇರಿಯಾಗಿ ಮಾಮೂಲಿನಂತೆ ಕಾರ್ಯ ಆರಂಭವಾಯಿತು.

ಹತೋಟಿ ಮುಂದುವರಿಸಲು ಸಭೆಯ ಒಪ್ಪಿಗೆ

ಆವಶ್ಯಕ ವಸ್ತುಗಳ ಮೇಲಿನ ಹತೋಟಿ ಸಂಬಂಧಪಟ್ಟ ಕಾನೂನುಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವನ್ನು ಮತ್ತೊಂದು ವರ್ಷಕಾಲ ಹೆಚ್ಚಿಸುವಂತೆ ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಹರೇ ಕೃಷ್ಣ ಮೆಹತಾಬ್‌ರವರು ಒಂದು ನಿರ್ಣಯವನ್ನು ಮಂಡಿಸಿರುವರು. ಈ ವಿಷಯದಲ್ಲಿ ಮಾತನಾಡುತ್ತಾ ಆವಶ್ಯಕ ವಸ್ತುಗಳ ಹತೋಟಿಯು ಉತ್ತಮ ರೀತಿಯ ಪರಿಣಾಮವನ್ನುಂಟುಮಾಡಿದೆ. ಈಗಾಗಲೇ ದೇಶಾದ್ಯಂತ ಸುಮಾರು ೨೦೦೦ ಜನರನ್ನು ಅತಿಕ್ರಮಿಸಿ ನಡೆದುದಕ್ಕಾಗಿ ಬಂಧಿಸಲಾಗಿದೆ ಎಂದು ಹೇಳಿರುವರು.

ಸ್ವಾಗತ

"ಕಾಶ್ಮೀರದ ಭವಿಷ್ಯ ರಾಷ್ಟ್ರೀಯ ಸಮ್ಮೇಳನದ ಮೇಲೆಯೇ ಹೆಚ್ಚಾಗಿ ಅವಲಂಬಿಸಿದೆ"

ಎಂದು ಪ್ರಧಾನಿ ಪಂಡಿತ ನೆಹರೂ ರಾಷ್ಟ್ರೀಯ ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು.

"ಕಾಶ್ಮೀರ ಸಂಘಾನಕಾರರು ಭಾರತಕ್ಕೆ ಬಂದರೆ ನಾವು ಗೌರವಯುತವಾಗಿ ಸ್ವಾಗತಿಸಿ ನಮ್ಮ ಅಭಿಪ್ರಾಯವನ್ನು ಅವರ ಮುಂದಿಡುತ್ತೇವೆ."

ಆದರೆ ನಾವು ಶಿಸ್ತಿನ ಇನ್ನಿತರ ಭದ್ರತಾ ಸಮಿತಿಯ ನಿರ್ಣಯವನ್ನು ಕಾರ್ಯಗತ ಮಾಡುವುದರಲ್ಲಿ ಮಾತ್ರ ನಾವು ಸಹಕರಿಸುವುದಿಲ್ಲ ಎಂದು ಪ್ರಧಾನಿ ನೆಹರು ತಿಳಿಸಿದರು.

ರೇಷ್ಮೆ ಕೈಗಾರಿಕೆ ಅಭಿವೃದ್ಧಿಯ ಸೆಮಿನಾರ್

ಈ ಮಾಹೆ ೧೮ರಿಂದ ನಂದೀಬೆಟ್ಟದಲ್ಲಿ ನಡೆಯಲಿರುವ ರೇಷ್ಮೆ ಕೈಗಾರಿಕೆಯ ವಿಚಾರ ಗೋಷ್ಠಿಯಲ್ಲಿ ಭಾಗವಹಿಸುವಂತೆ ಕೇಂದ್ರದ ಕೈಗಾರಿಕಾ ಸಚಿವ ಶ್ರೀ ಮೆಹತಾಬ್ ಮತ್ತು ಉಪ ಸಚಿವ ಶ್ರೀ ಡಿ. ಪಿ. ಕರ್‌ಮರ್‌ಕರ್‌ರವರಿಗೆ ಆಹ್ವಾನ ಕಳುಹಿಸಲಾಗಿದೆ.

ರಾಜಘಾಟ್ ಅಭಿವೃದ್ಧಿಗೆ ಬಿಲ್

ರಾಜಘಾಟಿನ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಮಸೂದೆಯೊಂದನ್ನು ರಚಿಸಿ ನಿನ್ನೆ ಕೇಂದ್ರ ಶಾಸನಸಭೆಯಲ್ಲಿ ಮಂಡಿಸಲಾಯಿತು.

೮೦,೦೦೦ ಡಾಲರು ಬಹುಮಾನ

ಮಲಯಾ ಕಮ್ಯೂನಿಸ್ಟ್ ಪಕ್ಷದ ಶ್ರೇಷ್ಠ ಕಾರ್ಯದರ್ಶಿಯನ್ನು ಜೀವಂತವಾಗಿ ತಂದೊಪ್ಪಿಸಿದವರಿಗೆ ೮೦ ಸಾವಿರ ಡಾಲರು ಅಥವಾ ಆತನ ಶವವನ್ನು ತಂದವರಿಗೆ ೬೦ ಸಾವಿರ ಡಾಲರುಗಳು, ಪಕ್ಷದ ನಾಯಕರನ್ನು ಕರೆತಂದರೆ ೬೫ ಸಾವಿರ ಡಾಲರುಗಳನ್ನು ಕೊಡುವುದಾಗಿ ಮಲಯ ಸರ್ಕಾರವು ಪ್ರಕಟಿಸಿದೆ.

ಗಂಧದಮರ ಬೆಳೆಯಲು ಯೋಜನೆ

ಮದರಾಸ್, ಮೈಸೂರು ಮತ್ತು ಕೊಡಗು ಸರ್ಕಾರಗಳು ಗಂಧದ ಮರದ ಬೆಳವಣಿಗೆ ಮತ್ತು ಕೈಗಾರಿಕೆ ಹೆಚ್ಚಿಸಲು ಸಂಯುಕ್ತ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಮೈಸೂರಿನಲ್ಲಿ ಗಂಧದಮರದ ಸಾಮಗ್ರಿಗಳ ಉತ್ಪಾದನೆ ಹೆಚ್ಚಾಗಿದೆ.

ಭಾರತದಲ್ಲಿ ವರ್ಷಂಪ್ರತಿ ೨೫ ಲಕ್ಷ ರೂ. ಗಳಷ್ಟು ಗಂಧದ ಎಣ್ಣೆ ಮತ್ತು ಸಾಮಾನುಗಳ ವ್ಯಾಪಾರವಾಗುತ್ತಿದೆ.

ಆಹಾರ ಸಂಗ್ರಹಣೆ

ಉತ್ತರ ಪ್ರದೇಶ ಸರ್ಕಾರವು ೩೪ ಲಕ್ಷ ಟನ್ ಆಹಾರವನ್ನು ಸಂಗ್ರಹಿಸಿದೆ. ಕಳೆದ ವರ್ಷಕ್ಕಿಂತ ಸಂಗ್ರಹಣೆ ಕಾರ್ಯವು ಉತ್ತಮವಾಗಿದ್ದು ಇದರಲ್ಲಿ ೧ ಲಕ್ಷದ ೭೩ ಸಾವಿರ ಟನ್ ಭತ್ತ ಸಂಗ್ರಹಿಸಲಾಯಿತೆಂದು ತಿಳಿದುಬಂದಿದೆ.

ಆದಾಯ ತೆರಿಗೆಯನ್ನು ಕೊಡದಿರುವವರು

ಭಾರತ ಸರ್ಕಾರವು ಇಲ್ಲಿಯವರೆಗೆ ಆದಾಯ ತೆರಿಗೆ ಕೊಡದೆ ತಪ್ಪಿಸಿಕೊಂಡಿರುವ ಸುಮಾರು ೧೪೭೫ ಜನ ಮಂದಿ ಮೊಕದ್ದಮೆ ಹೂಡಿ ೪೮೬ ಮೊಕದ್ದಮೆಗಳನ್ನು ಫೈಸಲ್ ಮಾಡಲಾಗಿದೆ. ಇಲ್ಲಿಯವರೆಗೆ ೨೨ ಕೋಟಿ ರೂ.ಗಳನ್ನು ವಸೂಲು ಮಾಡಲಾಗಿದೆಯೆಂದು ತಿಳಿದುಬಂದಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ೩೬ ಮೊಕದ್ದಮೆಗಳನ್ನು ಪೂರ್ಣಗೊಳಿಸಲಾಗಿದೆಯೆಂದು ಗೊತ್ತಾಗಿದೆ.

ಬೆಂಗಳೂರು ವಾರ್ತೆ

ಸ್ವ.ಸು ಫೋನ್] ಬೆಂ. ಜೂನ್ ೫

ಇಂದು ಮಧ್ಯಾಹ್ನ ೧-೩೦ ಗಂಟೆಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನ ಕಡೆಯಿಂದ ಅಂಜನೇಯ ಎಂಬ ೧೬ ವರ್ಷದ ಬಾಲಕನು ಬೈಸಿಕಲ್ಲಿನ ಮೇಲೆ ಬರುತ್ತಿರುವಾಗ, ಶೇಷಾದ್ರಿ ರಸ್ತೆಯಿಂದ ಬಂದ ಒಂದು ಮೋಟಾರು ಗಾಡಿಯು ಬೈಸಿಕಲ್ಲಿಗೆ ಢಿಕ್ಕಿ ಹೊಡೆಯಿತು. ಮೋಟಾರಿನ ಮುಂಭಾಗದ ಗಾಜುಗಳೆಲ್ಲಾ ಒಡೆದ, ಬಾಲಕನು ಅದರೊಳಗೆ ಸಿಕ್ಕಿಕೊಂಡು ತೀವ್ರ ಗಾಯಹೊಂದಿ ಸ್ಥಳದಲ್ಲಿಯೇ ಮೃತಹೊಂದಿದನು. ದೃಶ್ಯವು ಅತ್ಯಂತ ಭೀಕರವಾಗಿದ್ದಿತು.

ವಸ್ತುಪ್ರದರ್ಶನ ವಿಚಾರಣಾ ಸಮಿತಿಯ ಮುಂದೆ ಸಹ ಕಾರ್ಯದರ್ಶಿಗಳಾಗಿದ್ದ ಶ್ರೀ ಬಿ. ನಂಜಪ್ಪನವರು ಇಂದು ಸಾಕ್ಷ್ಯವಿತ್ತರು. ವಸ್ತುಪ್ರದರ್ಶನಾರಂಭದ ದಿನ ರಾಜಾಸ್ಟ್ರೋಫ್ಲಕ್ಸ್‌ರಿಗೆ ೨೫ ಸಾವಿರ ರೂ. ಚೆಕ್ಕು ಕೊಟ್ಟಾಗ ಬ್ಯಾಂಕಿನಲ್ಲಿ ಹಣವಿತ್ತು. ಆದು ಕ್ಯಾಷ್ ಆಗಲು ಬಂದಾಗ ೩೦ ಸಾವಿರ ರೂ. ಮಾತ್ರ ಇತ್ತು. ಬ್ಯಾಂಕಿನವರು ಫೋನ್ ಮೂಲಕ ಇದನ್ನು ತಿಳಿಸಿದಾಗ ಅಧ್ಯಕ್ಷರಾಗಿದ್ದ ಶ್ರೀ ನಾಗಯ್ಯರೆಡ್ಡಿಯವರು ಸಮಿತಿಗೆ ೧೦೦೦೦ ಸಾಲ ಕೊಟ್ಟು ಹಣ ಭರ್ತಿ ಮಾಡಿದರೆಂದು ಅವರು ಸಮಿತಿಯ ಸಭೆಯೊಂದರಲ್ಲಿ ತಿಳಿಸಿದರೆಂದೂ ಕಲಾವಿದರು, ಕಂಟ್ರಾಕ್ಟರುಗಳಿಗೂ ಹಣಕೊಟ್ಟಿದುದರಿಂದ ಈ ಹಣವು ಕಡಮೆಯಾಯಿತೆಂದೂ ತಮ್ಮ ಹೇಳಿಕೆಯಲ್ಲಿ ತಿಳಿಸಿದರು.

ಪತ್ರವ್ಯವಹಾರ—
ನಿಯಮಾವಳಿ ರಚನಾ ಸಮಿತಿಗೊಂದು ಸಲಹೆ

ಮೈಸೂರುನಗರದ ರೇಷನ್ ಕಾರ್ಡುದಾರರ ಸಂಘದ ಸಭೆಯು ತಾ|| ೩-೬-೫೧ ರಲ್ಲಿ ಸೇರಿ ಸಂಘಕ್ಕೆ ಅವಶ್ಯಕವಾಗಿಬೇಕಾಗಿರುವ ನಿಯಮಾವಳಿಯನ್ನು ತಯಾರಿಸಲು ಸುಪ್ರಸಿದ್ಧ ಅಡ್ವೊಕೇಟರೂ, ಸಮಾಜ ಸೇವಕರೂ, ಸಂಘದ ಲೀಗಲ್ ಅಡ್ವೈಸರೂ ಆದ ಶ್ರೀಮಾನ್ ಎಸ್. ಕೆ. ಅನಂತಶೆಟ್ಟರು ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ನಿಯಮಾವಳಿಯನ್ನು ತಯಾರಿಸುವಾಗ ಇಡೀ ನಗರದ ಎರಡೂಕಾಲು ಲಕ್ಷ ರೇಷನ್ ದಾರರುಗಳ ಆಗುಹೋಗುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಬೇಕಾಗಿದೆ. ಆದ್ದರಿಂದ ಇಂತಹ ನಿಯಮಾವಳಿ ತಯಾರಿಸುವಾಗ ಸಮಿತಿಗೆ ಅಮೂಲ್ಯವಾದ ಸಲಹೆ, ಅಭಿಪ್ರಾಯ ಅಗತ್ಯವಾಗಿಬೇಕಾಗಿದೆ. ಆದ್ದರಿಂದ ಸಮಿತಿಯವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಗರದ ರೇಷನ್ ದಾರರುಗಳಲ್ಲಿ ದಕ್ಷರಾದವರುಗಳಿಂದ ಸಲಹೆಗಳನ್ನು ಆಹ್ವಾನಿಸಿ ಉಪಯುಕ್ತವಾದುವುಗಳನ್ನು ಅಂಗೀಕರಿಸಿ, ನಗರದ ಪ್ರತಿ ರೇಷನ್ ದಾರರುಗಳು ಕಣ್ಣು ತೆರೆಯುವಂತಹ ಇದರಿಂದ ಹೆಚ್ಚಿನ ಉಪಯೋಗಪಡೆಯುವಂತಹ ನಿಯಮಾವಳಿಯನ್ನು ತಯಾರಿಸಲೆಂದು ಆಶಿಸುತ್ತೇನೆ.

ಸದಸ್ಯ ಕಾರ್ಯಕಾರೀ ಸಮಿತಿ, ಮೈಸೂರು ರೇಷನ್ ಕಾರ್ಡುದಾರರುಗಳ ಸಂಘ.

ಮಾತುಕತೆ

ಟೆಹರಾನಿನಲ್ಲಿರುವ ಬ್ರಿಟನ್ನಿನ ರಾಯಭಾರಿಯವರು ತಮ್ಮ ಸರ್ಕಾರದ ಅಪ್ಪಣೆಯ ಮೇರೆ ಮೊನ್ನೆ ಪರ್ಷಿಯಾ ಪ್ರಧಾನಿ ಡಾ|| ಮೊಸಾದಿಕ್‌ರವರನ್ನು ಭೇಟಿ ಮಾಡಿ ಪರ್ಷಿಯಾ ಎಣ್ಣೆ ವಿವಾದದ ಬಗ್ಗೆ ಚರ್ಚೆ ನಡೆಸಿ ಹೊಸ ಸಲಹೆಗಳನ್ನು ಮುಂದಿಟ್ಟಿದ್ದಾರೆ.

ಆಹಾರ ಶಾಖೆ ಮುಖ್ಯ ಮಂತ್ರಿಗಳ ಕೈವಶ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ಪ್ರಧಾನಿ ನೆಹರೂರವರ ಪತ್ರದಂತೆ ತಾವು ಸಂಸ್ಥಾನದ ಆಹಾರ ಶಾಖೆಯನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ

ಲಂಚ ಆಪಾದನೆ ಮೇಲೆ ೩೬ ಅಧಿಕಾರಿಗಳ ವಜಾ

ಜನವರಿಯಿಂದ ಏಪ್ರಿಲ್‌ವರಗೆ ಪಂಜಾಬಿನ ಸಿವಿಲ್ ಸಪ್ಲೈ ಇಲಾಖೆಯ ೩೬ ಅಧಿಕಾರಿಗಳು ಲಂಚ ರುಷವತ್ತು ಆಪಾದನೆ ಮೇಲೆ ವಜಾ ಆಗಿದ್ದಾರೆ.

ಭಾರತಕ್ಕೆ ಬೇಕಾಗುವ ಪೆಟ್ರೋಲ್

ಭಾರತದಲ್ಲಿ ಬಳಕೆಗೆ ಬೇಕಾಗುವ ಪೆಟ್ರೋಲಿನಲ್ಲಿ ಶೇ|| ೭೪ರಷ್ಟು ಇರಾನಿನಿಂದ ಬರುತ್ತಿದೆ. ಭಾರತದಲ್ಲೇ ಉತ್ಪತ್ತಿಯಾಗುವುದು ಶೇ|| ೫ ಭಾಗ ಮಾತ್ರ ಎಂಬುದಾಗಿ ಸಂಬರಾಜು ಶಾಖಾ ಮಂತ್ರಿ ಶ್ರೀ ಎನ್. ವಿ. ಗಾಡ್ಗಿಲ್‌ರವರು ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು. ಬಹರೆನ್ ದ್ವೀಪ, ಸಾದಿಅರೆಬಿಯಾದಿಂದ ಪೆಟ್ರೋಲ್ ಆಮದು ಮಾಡಲಾಗುತ್ತಿದೆ ಎಂದರು.

೧೯೪೯ರಲ್ಲಿ ೧೬೮ ದಶ ಲಕ್ಷ ಗ್ಯಾಲನ್ ೧೯೫೦ ರಲ್ಲಿ ೧೯೩ ಮುಕ್ಕಾಲು ದಶ ಲಕ್ಷ ಗ್ಯಾಲನ್ ಪೆಟ್ರೋಲನ್ನು ಆಮದು ಮಾಡಲಾಯಿತು.

೧೯೫೧ರಲ್ಲಿ ೨೩೬ ದಶಲಕ್ಷ ಗ್ಯಾಲನ್ ಪೆಟ್ರೋಲನ್ನು ಆಮದು ಮಾಡಬೇಕಾಗಿ ಬರಬಹುದೆಂದು ಅಂದಾಜು ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಲ್ಲಿದ್ದಲಿಂದ ಕೃತಕ ಪೆಟ್ರೋಲ್ ತಯಾರಿಸಲು ಬಹಳ ವೆಚ್ಚವಾಗುವುದೆಂದೂ ಸರ್ಕಾರ ಅದನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದರು.

ಬರ್ಮಾದಿಂದ ಸದ್ಯಕ್ಕೆ ಪೆಟ್ರೋಲ್ ಪಡೆದಿಲ್ಲವೆಂದೂ ಸಹ ಸಚಿವರು ತಿಳಿಸಿದರು.

ಟೆಲಿಗ್ರಾಫ್ ಕಛೇರಿಯಲ್ಲಿನ ಅಚಾತುರ್ಯ

ಅಂಚೆಗೆ ಕಳುಹಿಸುವ ಕಾಗದಗಳಲ್ಲಿ ಬದಲಾವಣೆಯಾದ ಫಲವಾಗಿ ಅಧ್ಯಕ್ಷ ಟ್ರೂಮನ್ನರು ಬ್ರಿಟಿಷ್ ಪ್ರಧಾನಿಗಳಿಗೆ ಬರೆದಿದ್ದ ಪತ್ರವು ಪರ್ಷಿಯಾದ ಪ್ರಧಾನಿಗಳ ಕೈಸೇರಿತೆಂದು ಅಮೆರಿಕಾದ ವಿದೇಶಾಂಗ ಶಾಖೆ ಈ ದಿನ ಪ್ರಕಟಣೆಯ ಮೂಲಕ ತಿಳಿಸಿದೆ.

ಈ ಅಂಶವನ್ನು ಮೊದಲು ಟೆಹರಾನ್ ರೇಡಿಯೋ ಪ್ರಸಾರ ಮಾಡಿತು. ಅಮೆರಿಕಾದಲ್ಲಿ ಬಳಿಕ ಈ ವಾರ್ತೆಗೆ ಸಮರ್ಥನೆ ದೊರೆಯಿತು.

ಆದರೆ ಈ ಪತ್ರಗಳಲ್ಲಿ [illegible] ಬದಲಾವಣೆಗಳೇನಿರಲಿಲ್ಲವೆಂದು ಹೇಳಲಾಗಿದೆ.

ಇದು ಟೆಲಿಗ್ರಾಫಿಕ್ ಶಾಖೆಯಲ್ಲಿ ನಡೆದಿರುವ ಅಚಾತುರ್ಯವೆಂದು ಹೇಳಲಾಗಿದೆ.

ಭಾರತವು ಸಹಕರಿಸುವುದಿಲ್ಲ

ಪ್ರಧಾನಿ ಪಂಡಿತ ನೆಹರೂರವರು ಶ್ರೀನಗರದಲ್ಲಿ ಬಹಿರಂಗ ಸಭೆಯೊಂದರಲ್ಲಿ ಮಾತನಾಡುತ್ತಾ ಕಾಶ್ಮೀರದ ಬಗ್ಗೆ ಭದ್ರತಾ ಸಮಿತಿಯು ಇತ್ತೀಚೆಗೆ ಮಾಡಿರುವ ಹೊಸ ನಿರ್ಣಯಗಳನ್ನು ಕಾರ್ಯಗತ ಮಾಡಲು ಭಾರತ ಸರ್ಕಾರವು ಯಾವ ರೀತಿಯೂ ಸಹಕರಿಸುವುದಿಲ್ಲ. ಮಧ್ಯಸ್ಥಿಕೆಗಾರರನ್ನೇ ಆದಾರದಿಂದ ಸ್ವಾಗತಿಸಿ ಅವರಿಗೆ ಕಾಶ್ಮೀರದ ವಿಷಯವನ್ನು ಸಂಪೂರ್ಣವಾಗಿ ತಿಳಿಸುವೆವು. ಪಾಕ್ ಸರ್ಕಾರವು ಭಾರತದ ಮೇಲೆ ಇಲ್ಲದಸಲ್ಲದ ಆರೋಪಣೆಗಳನ್ನು ಹೊರಿಸಿ ಆಕ್ಷೇಪಣೆ ಮಾಡುತ್ತಿರುವುದನ್ನು ಭದ್ರತಾ ಸಮಿತಿಗೆ ತಿಳಿಸಿದಲ್ಲಿ ಅದು ಯಾವ ಕ್ರಮವೂ ತೆಗೆದುಕೊಳ್ಳಲಿಲ್ಲ. ಆದರೆ ಕಾಶ್ಮೀರದಲ್ಲಿ ರಾಜ್ಯಾಂಗ ರಚನಾ ಸಮಿತಿ ನೇಮಿಸಲು ಭಾರತವು ಸಹಕಾರ ನೀಡುವುದೆಂದು ಹೇಳಿದ್ದಕ್ಕೆ ಭದ್ರತಾ ಸಮಿತಿಯು ಭಾರತವನ್ನು ಆಕ್ಷೇಪಿಸಿತು. ಇದೇರೀತಿ ಮುಂದುವರೆದಲ್ಲಿ ಭದ್ರತಾ ಸಮಿತಿಯು ಭಾರತದ ವಿಶ್ವಾಸವನ್ನು ಕಳೆದುಕೊಳ್ಳುವುದು. ೧೯೪೭ರಲ್ಲಿ ಭಾರತವು ಕಾಶ್ಮೀರಕ್ಕೆ ಇತ್ತ ಭರವಸೆಗಳನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವುದು. ಕಾಶ್ಮೀರದಲ್ಲಿ ಭಾರತ ಸೈನ್ಯವು ಇರಕೂಡದೆಂದು ಅಲ್ಲಿಯ ಪ್ರಜೆಗಳು ಹೇಳಿದಲ್ಲಿ ಒಂದು ನಿಮಿಷವೂ ಅಲ್ಲಿ ಸೈನ್ಯವನ್ನಿಡುವುದಿಲ್ಲ. ಆದರೆ ಪರಕೀಯರ ಧಾಳಿಯನ್ನು ಭಾರತವು ಸಹಿಸುವುದಿಲ್ಲ ಭಾರತವು ಕಾಶ್ಮೀರದ ಅಂತರಿಕ ವಿಷಯದಲ್ಲಿ ಎಂದಿಗೂ ಕೈ ಹಾಕುವುದಿಲ್ಲ ಎಂದು ಹೇಳಿದರು.

ಪ್ರಧಾನಿಯವರು ನಿನ್ನೆ ಮಧ್ಯಾಹ್ನ ಶ್ರೀನಗರದಿಂದ ದೆಹಲಿಗೆ ಎರಡು ದಿವಸದ ಪ್ರವಾಸ ಮುಗಿಸಿಕೊಂಡು ಹಿಂತಿರುಗಿದರು.

ಆರ್ಥಿಕ ಸಚಿವರ ಸುಲಿಗೆ

ಇಬ್ಬರು ಆಗಂತುಕರು ಮುಂಬೈನ ಹಣಕಾಸಿನ ಮಂತ್ರಿ ವೈಕುಂಠ ಎಲ್. ಮೆಹತಾ ಅವರನ್ನು ಅಡ್ಡಗಟ್ಟಿ ಅವರ ಚಿನ್ನದ ಗುಂಡಿಗಳನ್ನು ಪಾಕೆಟ್ ಡೈರಿ, ಕನ್ನಡಕಗಳನ್ನು ಕಸಿದು ಕೊಂಡರು.

ಸಚಿವರು ಅಂಧೇರಿಯಲ್ಲಿರುವ ಪಾರ್ಕ್ ಒಂದರಲ್ಲಿ ಪ್ರಾತಃಕಾಲದ ವಾಯುಸೇವನೆ ಮುಗಿಸಿ ಹಿಂತಿರುಗುವಾಗ ಈ ಘಟನೆ ನಡೆಯಿತು, ಪೋಲೀಸರು ಈ ಸಂಬಂಧದಲ್ಲಿ ೧೦ ಮಂದಿಯನ್ನು ಬಂಧಿಸಿದ್ದಾರೆ.

ವುಡ್‌ಲ್ಯಾಂಡ್ಸ್ * ೯—೬—೫೧ರಿಂದ ಅಮೋಘ ಪ್ರಾರಂಭ
ಉಮರ್ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ
* ಉಸ್ತಾದ್ ಪೆಡ್ರೊ *
ಪಾತ್ರ— ಶೇಖ್ ಮುಖ್ತಾರ್, ಬೇಗಂಪ್ಯಾರ, ಶಮ್ಮಿ, ಸಪ್ರು, ಅನ್ಸಾರಿ.

ಮೈಸೂರು ರೇಷ್ಮೆಯ ಉಡುಪುಗಳು
ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು
"ಮೈಸೂರು ರೇಷ್ಮೆ" ಬಟ್ಟೆಗಳು ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ
ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟಿವೆ
ಪರೀಕ್ಷಿಸಿ ಸಂತುಷ್ಟರಾಗಿರಿ
*
ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ
ಮೈಸೂರು

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು :—ಪಿ. ಕಾ. ಸುಬ್ಬರಾವ್. ಮೋಹನ ಮುದ್ರಣಾಲಯ, ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೬—೧೯೫೧ ಗುರುವಾರ [ಸಂಚಿಕೆ ೨೨೭

ಆಹಾರ ಪಡಿತರ ಹೆಚ್ಚಿಗೆ ಇಲ್ಲ

ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದ್ದರೂ ಸದ್ಯಕ್ಕೆ ಆಹಾರ ಪಡಿತರವನ್ನು ಹೆಚ್ಚಿಸಲಾಗುವುದಿಲ್ಲವೆಂದು ಆಹಾರ ಉಪಮಂತ್ರಿ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಗಾಂಧೀ ಸ್ಮಾರಕ

ಸಬರಮತಿಯಲ್ಲಿ ಮಹಾತ್ಮ ಗಾಂಧೀ ಸ್ಮಾರಕವಾಗಿ ಒಂದು ಮ್ಯೂಸಿಯಂ ಮತ್ತು ಲೈಬ್ರರಿಯನ್ನು ಇಡಲಾಗುವುದು. ಕಟ್ಟಡಗಳಿಗಾಗಿ ೨೦ ಲಕ್ಷ ರೂ. ವೆಚ್ಚವಾಗುವುದು. ಹೊರಗಿನಿಂದ ಗಾಂಧೀ ತತ್ವವನ್ನು ಓದಲು ಇಲ್ಲಿಗೆ ಬರುವವರಿಗೆ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.

ಭಾರತಾದ್ಯಂತ ಭೂಸೇನೆ ರಚಿಸಲಾಗುವುದು

ಪಾರ್ಲಿಮೆಂಟ್ ಸದಸ್ಯರ ನಡತೆ ಬಗ್ಗೆ ವಿಚಾರಣಾ ಸಮಿತಿ ನೇಮಕ

ಹೆಂಗಸಿನ ಕೈಕಾಲು ಕಟ್ಟಿಹಾಕಿ ದರೋಡೆ

ಚಿಕ್ಕಮಗಳೂರು ಟೌನ್‌ವಾಸಿ ಗಫೂರ್ ಖಾನ್ ಎಂಬುವನ ಮನೆಗೆ ಯಾರೋ ದುರಾತ್ಮರು ತಾ|| ೩ನೇ ಬೆಳಗಿನ ಜಾವ ನುಗ್ಗಿ ಗಫೂರ್ ಖಾನ್ ಹೆಂಡತಿಯನ್ನು ಕೈಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿ ಮನೆಯಲ್ಲಿದ್ದ ನಗನಾಣ್ಯಗಳನ್ನು ಅಪಹರಿಸಿ ದರೋಡೆ ಮಾಡಿರುತ್ತಾರೆ. ಮನೆಯ ಯಜಮಾನ ಗಫೂರ್ ಖಾನ್ ಪತ್ತೆಯಿಲ್ಲವಾಗಿಯೂ ಮನೆಯ ಮುಂದೆ ರಕ್ತದ ಕಲೆಗಳು ಅಲ್ಲಲ್ಲಿ ಬಿದ್ದಿರುವುದಾಗಿಯೂ ಸ್ಥಳೀಯ ಪೋಲೀಸಿಗೆ ದೂರು ಬಂದು ಪೋಲೀಸಿನವರು ತನಿಖೆಕ್ರಮವನ್ನು ನಡೆಸುತ್ತಿದ್ದಾರೆ.

ಬಿಡುಗಡೆ

ಕೆಳಗಿನ ಕೋರ್ಟು ಮಾಡಿದ್ದ ಶಿಕ್ಷೆಯನ್ನು ರದ್ದುಗೊಳಿಸಿ ೧೮ ಮಂದಿ ದ್ರಾವಿಡ ಕಜಗಂ ಸದಸ್ಯರನ್ನು ಬಿಡುಗಡೆಮಾಡಬೇಕೆಂದು ಮದ್ರಾಸ್ ಹೈಕೋರ್ಟು ಆಜ್ಞೆಮಾಡಿತು.

ರಾಜ್ಯಾಂಗ ರಚನಾ ಸಭೆಗೆ ಚುನಾವಣೆ

ಕಾಶ್ಮೀರದ ರಾಜ್ಯಾಂಗ ರಚನಾ ಸಭೆಗೆ ಸೆಪ್ಟಂಬರ್ ೨೩ನೇ ತಾ|| ಚುನಾವಣೆ ಆರಂಭವಾಗುವುದು.

ವಿಚಾರಣೆ

ಕೃತಕ ಗೊಬ್ಬರಕ್ಕೆ ಸಂಬಂಧಪಟ್ಟ ವ್ಯವಹಾರದಲ್ಲಿ ಒಬ್ಬ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡಿದ್ದಾಗಿದೆ. ಸ್ವತಂತ್ರವಾಗಿ ವಿಚಾರಣೆ ನಡೆಸಲು ಏರ್ಪಾಡು ಮಾಡಲಾಗುವುದೆಂದು ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ತಿಳಿಸಿರುವರು.

ಪೆಟ್ರೋಲ್ ರೇಷನ್

ಪೆಟ್ರೋಲ್ ಸರಿಯಾಗಿ ಹಂಚಲನುಕೂಲವಾಗುವಂತೆ ಒರಿಸ್ಸಾದಲ್ಲಿ ಪೆಟ್ರೋಲ್ ರೇಷನ್ ಜಾರಿಗೆ ಬರಲಿದೆ.

ವಿಮಾನ ಅಂಚೆ ಸೌಕರ್ಯ

ಭಾರತದಿಂದ ಖಟ್ಮಂಡುವಿಗೆ ವಿಮಾನ ಅಂಚೆ ಸೌಕರ್ಯ ಪ್ರಾರಂಭವಾಗಿದೆ.

‘ಭೂಮಿಸೇನಾ’ ಆರಂಭೋತ್ಸವ

ದೆಹಲಿಗೆ ೧೦ ಮೈಲಿ ದೂರದಲ್ಲಿ ಭಾರತ ರಾಷ್ಟ್ರಾಧ್ಯಕ್ಷರು ‘ಭೂಮಿಸೇನಾ’ ಸ್ಥಾಪನ ಸಮಾರಂಭವನ್ನು ನಿನ್ನೆ ನಡೆಸಿದರು. ವ್ಯವಸಾಯ ರಾಷ್ಟ್ರವಾದ ಭಾರತದಲ್ಲಿ ಆಹಾರ ಅಭಾವವುಂಟಾಗಿರುವುದು ಅತ್ಯಂತ ಶೋಚನೀಯ. ಕಡಿಮೆ ಬೀಳುವ ಶೇ. ೧೦ ರಷ್ಟನ್ನು ನಾವು ಉತ್ಪತ್ತಿಮಾಡುವುದು ಕಷ್ಟವಲ್ಲ. ವಿದ್ಯಾವಂತರೆಲ್ಲರೂ ಸ್ವಲ್ಪ ಶ್ರಮಿಸಬೇಕಾಗಿದೆ ಎಂದು ತಿಳಿಸಿದರು. ಅದೇ ಸಮಯದಲ್ಲಿ ಆಹಾರ-ಮಂತ್ರಿ ಶ್ರೀ ಕೆ. ಎ. ಮುನ್ಷಿಯವರು ಮಾತನಾಡುತ್ತಾ ಭೂಸೇನಾ ಸ್ಥಾಪನೆಯನ್ನು ಮಾಡಬೇಕೆಂದು ಎಲ್ಲಾ ಪ್ರಾಂತ್ಯಗಳಿಗೂ ಕೇಂದ್ರದ ತಿಳುವಳಿಕೆಯನ್ನೂ ಕೊಡಲಾಗಿದೆ. ಈಗ ಹೊಸದಾಗಿ ಸ್ಥಾಪಿತವಾದ ಭೂಸೇನೆಗೆ ದೆಹಲಿ ವಿಶ್ವವಿದ್ಯಾನಿಲಯದ ೫೦ ಜನ ವಿದ್ಯಾರ್ಥಿಗಳು, ಅನೇಕ ಉಪಾಧ್ಯಾಯರು ಎಲ್ಲರೂ ಸೇರಿರುವರು. ಇಲ್ಲಿ ಸ್ವಲ್ಪಕಾಲ ತರಪೇತುಪಡೆದು ಗ್ರಾಮಾಂತರಗಳಿಗೆ ಹೋಗಿ ವ್ಯವಸಾಯಾಭಿವೃದ್ಧಿಯನ್ನು ಅವರು ಮಾಡಲಿರುವರೆಂದು ಹೇಳಿದರು.

ನೊಂದವರಿಗೆ ಚಿಕಿತ್ಸಾ ಕೇಂದ್ರ

ಕಳೆದ ಯುದ್ಧದಲ್ಲಿ ಘಾಯಗೊಂಡು ಕೈ ಮತ್ತು ಮಂಡಿಯ ಮೂಳೆ ಮುರಿದುಕೊಂಡಿರುವವರಿಗೆ ಉಚಿತವಾಗಿ ಚಿಕಿತ್ಸೆ ನಡೆಸಲು ಪೂನಾ ಬಳಿ ಚಿಕಿತ್ಸಾ ಕೇಂದ್ರವನ್ನು ತೆರೆಯಲಾಗಿದೆ. ನಿವೃತ್ತರಾದ ಸೈನಿಕರೂ ಸಹ ಈ ಕೇಂದ್ರದಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದು. ಕಳೆದ ಯುದ್ಧದಲ್ಲಿ ಸೇವೆ ಸಲ್ಲಿಸಿ ಅಂಗವಿಕಲರಾದ ಸೈನಿಕರಿಗೂ ಪರಿಹಾರವನ್ನು ಸಹ ಈ ಕೇಂದ್ರದಲ್ಲಿ ಒದಗಿಸಲಾಗುವುದು.

ಆಹಾರ ಅಭಾವವೇ ವಿನಹ ಕ್ಷಾಮವಲ್ಲ

ಭಾರತದಲ್ಲಿ ಆಹಾರ ಅಭಾವವು ತಲೆದೋರಿದೆಯೇ ವಿನಹ ಕ್ಷಾಮವಲ್ಲ ಎಂದು ಬ್ರಿಟನ್ನಿನಲ್ಲಿರುವ ಹೈಕಮಿಷನರ್ ಶ್ರೀ ಕೃಷ್ಣಮೆನನ್‌ರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿರುವರು.

ಸದಸ್ಯರ ನಡತೆ ಬಗ್ಗೆ ವಿಚಾರಣೆ

ಬೊಂಬಾಯಿನ ‘ಬುಲಿಯನ್’ ಸಂಘಕ್ಕೆ ಕೆಲವು ರಿಯಾಯತಿಗಳನ್ನು ಕೊಡಿಸಲೋಸುಗ ತಮ್ಮ ಸ್ಥಾನಪ್ರಭಾವವನ್ನು ಉಪಯೋಗಿಸಿಕೊಂಡು ಪಾರ್ಲಿಮೆಂಟಿನ ಘನತೆಗೆ ಧಕ್ಕೆ ತರುವ ರೀತಿ ಪಾರ್ಲಿಮೆಂಟ್ ಸದಸ್ಯ ಶ್ರೀ ಹೆಚ್. ಜಿ. ಮುದ್ಗಲ್‌ರವರು ನಡೆದರೇ ಎಂಬುದನ್ನು ವಿಚಾರಣೆ ನಡೆಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಒಂದು ನಿರ್ಣಯವನ್ನು ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಮಂಡಿಸಿರುವರು. ಈ ಸಂಘಕ್ಕೆ ರಿಯಾಯತಿಗಳನ್ನು ಪಡೆಯಲು ೫೦೦೦ ರೂ. ವೆಚ್ಚವನ್ನು ಮಂಜೂರ್ಮಾಡಿತ್ತು. ಅದರ ಪೈಕಿ ಶ್ರೀ ಮುದ್ಗಲ್‌ರವರು ಸ್ವಲ್ಪ ಹಣವನ್ನು ಪಡೆದಿರುವರೆಂದೂ ಆಪಾದನೆ ಬಂದಿದೆ.

ತಾವು ಸದಸ್ಯತನವನ್ನು ದುರುಪಯೋಗಪಡಿಸಿಕೊಂಡು ಪಾರ್ಲಿಮೆಂಟಿನ ಘನತೆಗೆ ಧಕ್ಕೆ ಬರುವ ರೀತಿ ನಡೆದಿಲ್ಲವೆಂದೂ ವಿಚಾರಣಾನಂತರ ಸಮಿತಿಯ ತೀರ್ಮಾನಕ್ಕೆ ತಾವು ತಲೆಬಾಗುವುದಾಗಿಯೂ ಶ್ರೀ ಮುದ್ಗಲ್‌ರು ಹೇಳಿದರು.

ಈ ಸಮಿತಿಯು ವಿಚಾರಣೆ ನಡೆಸಿ ನಿಜಾಂಶವನ್ನು ಹೊರಗೆಡಹಿ ಶ್ರೀ ಮುದ್ಗಲ್‌ರು ಹೇಳಿರುವುದು ನಿಜವಾಗಲೆಂದೇ ತಾವು ಆಶಿಸುವುದಾಗಿ ಪಂಡಿತ ನೆಹರೂ ಹೇಳಿದರು.

ನಾಳೆಯ ದಿನ ಈ ನಿರ್ಣಯ ಚರ್ಚೆಗೆ ಬರಲಿದೆ.

ಪುನಃ ೧೦೦೦ ಎಕರೆ ದಾನ

ವಾರಂಗಲ್ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರುವ ಆಚಾರ್ಯ ವಿನೋಬಾಭಾವೆಯವರಿಗೆ, ಬಡವರಿಗೆ ಹಂಚಲು ೧೦೦೦ ಎಕರೆ ಜಮೀನನ್ನು ಉಚಿತವಾಗಿ ಕೊಡಲಾಗಿದೆ. ಇಲ್ಲಿಯವರೆಗೆ ೭೦೦೦ ಎಕರೆ ಜಮೀನನ್ನು ಅವರು ಪಡೆದಿರುವರು.

ಶುಭಾಶಯ

ಇಂಡೊನೇಷಿಯ ರಾಷ್ಟ್ರಾಧ್ಯಕ್ಷ ಡಾ|| ಸುಕರ್ನೋರವರ ವರ್ಷವರ್ಧಂತ್ಯುತ್ಸವವು ಸಮಾರಂಭದಲ್ಲಿ ಶುಭಾಶಯವನ್ನು ಕೋರಿ ಪಂಡಿತ ನೆಹರೂ ತಂತಿ ಕಳುಹಿಸಿರುವರು.

ಮಾನೋಸೈಟ್ ಸರಬರಾಯಿ ಇಲ್ಲ

ಭಾರತಕ್ಕೆ ಅಮೇರಿಕಾವು ೨೦ ಲಕ್ಷ ಟನ್ ಆಹಾರ ಸರಬರಾಯಿ ಮಾಡಿದರೆ ಭಾರತವು ಅಣುಬಾಂಬಿಗೆ ಅತ್ಯಂತ ಆವಶ್ಯಕ ವಸ್ತುವಾದ ಮಾನೋಸೈಟನ್ನು ಕೊಡಬೇಕೆಂಬ ನಿಬಂಧನೆಯನ್ನು ಹಾಕಬಾರದೆಂದು ಅಮೇರಿಕಾ ಉಭಯ ಶಾಸನ ಸಭೆಗಳು ತೀರ್ಮಾನಿಸಿವೆ. ಅಂತ್ಯ ತೀರ್ಮಾನಕ್ಕಾಗಿ ಸೆನೆಟ್ ಸಭೆಗೆ ಹೋಗಲಿದೆ.

ಚೈನಾಕ್ಕೆ ವಾಣಿಜ್ಯನಿರೋಧ ಕೂಡದು

ಚೈನಾಕ್ಕೆ ಉಪಯುಕ್ತ ಸಾಮಾನುಗಳನ್ನು ಯಾವ ರಾಷ್ಟ್ರವೂ ಕಳುಹಿಸಕೂಡದೆಂಬ ನಿಷೇಧವನ್ನು ಜಾರಿಸಕೂಡದೆಂದು ಕೆನೇಡಿಯನ್ ವಿದೇಶಾಂಗ ಕಾರ್ಯದರ್ಶಿ ಮಿ|| ಪಿಯರ್‌ಸನ್‌ರವರು ಹೇಳಿರುವುದಾಗಿ ವರದಿಯಾಗಿದೆ.

ಬೆಂಗಳೂರು ವಾರ್ತೆ

ಸ್ವ. ಸು. ಪ್ರೋ.] ಬೆಂ. ಜೂನ್ ೬

ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ೮, ೯ನೇ ತಾರೀಖುಗಳಲ್ಲಿ ಶಿಂಷಾ ವಿದ್ಯುತ್ಕೇಂದ್ರಕ್ಕೆ ಭೇಟಿ ಕೊಡಲಿರುವರು.

ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ಪತ್ರಿಕಾ ಗೋಷ್ಠಿಯನ್ನು ಕರೆದಿರುವರು.

ಶ್ರೀ ರಾಜುರವರ ಮೊಕದ್ದಮೆಯಲ್ಲಿ ಮೊದಲನೆ ಅಪಾದಿತರ ವಕೀಲರಾದ ಶ್ರೀ ಕೆ ರಂಗಯ್ಯಂಗಾರ್‌ರು ಭಾರತ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶ ಶ್ರೀ ವಿಜಯನ್‌ಬೋಸ್‌ರವರು ಶ್ರೀ ರಾಜುರವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಬೇಕೆಂದು ಆಜ್ಞೆಯಿತ್ತು ಅದನ್ನು ಸಂಬಂಧಪಟ್ಟವರು ಅಕ್ಷರಶಃ ಪಾಲಿಸಬೇಕೆಂದು ತಿಳಿಸಿರುವುದನ್ನು ಕೋರ್ಟಿನ ಗಮನಕ್ಕೆ ತಂದು ಆಜ್ಞೆಯ ಅಧಿಕೃತ ನಕಲನ್ನು ಹಾಜರ್ಪಡಿಸಿದರು. ಸೂಕ್ತ ಕಾರ್ಯಕ್ರಮಕ್ಕೆ ಅದನ್ನು ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟರಿಗೆ ಕಳುಹಿಸಲಾಯಿತು.

ಸಂಬಳ ಹೆಚ್ಚಿಸಲು ಸಾಧ್ಯವಿಲ್ಲ

ಆರ್ಥಿಕ, ರೈಲ್ವೆ ಮಂತ್ರಿಗಳಿಗೂ ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯ ಸಮಿತಿಯವರಿಗೂ ಮಾತುಕತೆ ನಡೆಯಿತು. ದೇಶದ ಇಂದಿನ ಆರ್ಥಿಕ ಸ್ಥಿತಿಯಲ್ಲಿ ರೈಲ್ವೆ ಕಲಸಗಾರರಿಗೆ ಸಂಬಳ ಹೆಚ್ಚಿಸಲು ಸಾಧ್ಯವಿಲ್ಲವೆಂದು ಆರ್ಥಿಕ ಸಚಿವರು ತಿಳಿಸಿದರು. ಆದರೆ ಆಹಾರ ಧಾನ್ಯವನ್ನು ರಿಯಾಯತಿ ದರದಲ್ಲಿ ಕೊಡಲೇರ್ಪಾಡು ಮಾಡಲಾಗುವುದೆಂದು ಹೇಳಿದರು.

ಬಟ್ಟೆ ಮೇಲಿನ ರಫ್ತು ತೆರಿಗೆ ಹೆಚ್ಚಿತು

ಮಧ್ಯಮ ತರಗತಿಯ ಮತ್ತು ಒರಟು ಬಟ್ಟೆಯ ಮೇಲಿನ ರಫ್ತಿನ ತೆರಿಗೆಯನ್ನು ಶೇಕಡ ೧೦ರಿಂದ ೨೫ಕ್ಕೆ ಹೆಚ್ಚಿಸಲಾಗಿದೆ. ಇದು ಜೂನ್ ಒಂದರಿಂದ ಜಾರಿಗೆ ಬರಲಿದೆ

ಪಂಡಿತ ನೆಹರೂ ದಕ್ಷಿಣ ಭಾರತಕ್ಕೆ

ಜುಲೈ ಮಾಹೆಯಿಂದ ಟ್ಯುಟಿಕೊರಿನ್‌ನಲ್ಲಿ ಪ್ರಾರಂಭವಾಗುವ ಆರ್ಟ್ಸ್ ಕಾಲೇಜಿನ ಪ್ರಾರಂಭೋತ್ಸವವನ್ನು ಪ್ರಧಾನಿ ನೆಹರೂರವರು ನಡೆಸಲು ಬರುವರೆಂದು ತಿಳಿಯಬರುತ್ತದೆ.

ವಿದ್ಯುತ್ಕಾರ್ಖಾನೆಯ ಪ್ರಾರಂಭೋತ್ಸವ

ದೆಹಲಿಗೆ ೧೮ ಮೈಲಿಯಲ್ಲಿರುವ ಫರೀದಾಬಾದಿನಲ್ಲಿ ಪ್ರಧಾನಿ ನೆಹರೂರವರು ವಿದ್ಯುತ್ಕಾರ್ಖಾನೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಗಡಿನಾಡು ಪ್ರಾಂತ್ಯದಿಂದ ಬಂದ ೧೫ ಸಾವಿರ ಜನರು ಇಲ್ಲಿ ಹೊಸದಾಗಿ ಪಟ್ಟಣವನ್ನು ನಿರ್ಮಿಸಿಕೊಂಡಿರುವರು. ಇಲ್ಲಿ ಒಂದು ಆಸ್ಪತ್ರೆಯ ಪ್ರಾರಂಭೋತ್ಸವವನ್ನು ಶ್ರೀ ಪಂಡಿತ ನೆಹರೂ ನೆರವೇರಿಸಿದರು. ಅದಕ್ಕೆ ಖಾನ್ ಸಹೋದರರ ನಾಮಾಂಕಿತವನ್ನಿಡಲಾಯಿತು. ಆ ಸಮಯದಲ್ಲಿ ಮಾತನಾಡುತ್ತಾ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಖಾನ್ ಸಹೋದರರು ಬಂಧನದಲ್ಲಿರುವುದು ಹೃದಯಕ್ಕೆ ದೊಡ್ಡ ಬೇನೆಯನ್ನುಂಟುಮಾಡಿದೆ. ಅವರ ಸಹೋದ್ಯೋಗಿಗಳು ಭಾರತದಲ್ಲಿ ರಾಜ್ಯಕಡಿವಾಣ ಹಿಡಿದಿರುವಾಗ ಅವರು ಜೈಲುವಾಸವನ್ನನುಭವಿಸುತ್ತಲಿರುವುದು ನಮ್ಮ ದುರಾದೃಷ್ಟವೆಂದು ಹೇಳಿದರು.

೧೧೦೦ ಮೊಕದ್ದಮೆ

ಬೆಲೆಕಟ್ಟುಗಳನ್ನು ಮೀರಿದರೆಂಬ ಆಪಾದನೆ ಮೇಲೆ ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ೧೧೦೦ ಮೊಕದ್ದಮೆ ಹೂಡಲಾಗಿದೆ. ೭ ಮೊಕದ್ದಮೆಗಳಲ್ಲಿ ಶಿಕ್ಷೆ ವಿಧಿಸಿ ೫೮೦೦೦ ರೂ ಜುಲ್ಮಾನೆ ವಸೂಲಾಗಿದೆ.

ಪಂಜಾಬ್ ಮಂತ್ರಿಗಳ ವರ್ತನೆಬಗ್ಗೆ ವಿಚಾರಣೆ ನಡೆಯಲಿ

ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಲಾಲಾಜಗತ್ ನಾರಾಯಣ್‌ರವರು ಮೊನ್ನೆ ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರನ್ನು ಭೇಟಿಮಾಡಿದ್ದರು. ಪಂಜಾಬ್ ಮಂತ್ರಿ ಸಂಪುಟದವರು ಮತ್ತು ಪ್ರಧಾನ ಸಚಿವರುಗಳ ಪ್ರವಾಸ ಮತ್ತು ಅವರ ಕಾರ್ಯಕ್ರಮವನ್ನು ಕಾಂಗ್ರೆಸ್ ಅಧ್ಯಕ್ಷರೊಡನೆ ಚರ್ಚಿಸಲಾಯಿತೆಂದೂ ಇದರ ವಿಚಾರಣೆಗಾಗಿ ಒಂದು ಉಪ ಸಮಿತಿಯು ರಚನೆಯಾಗಬೇಕೆಂದೂ ಪಂಜಾಬ್ ಕಾಂಗ್ರೆಸ್ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಪ್ರಾರ್ಥಿಸಿರುವರು.

ಮಂತ್ರಿಗಳು ತಮ್ಮ ಗುಪ್ತಪ್ರವಾಸ ಕಾಲದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಅನುಸರಿಸುತ್ತಿರುವ ಕಾರ್ಯನೀತಿಯನ್ನು ಟೀಕಿಸಿರುವರು.

ಕಾಂಗ್ರೆಸ್ ಅಧ್ಯಕ್ಷರೂ ಸಹ ಈ ಬಗ್ಗೆ ಆಧಾರಸಹಿತವಾದ ಲಿಖಿತ ಹೇಳಿಕೆಯನ್ನು ಕೊಡಲು ನಿಯೋಗದವರಿಗೆ ತಿಳಿಸಿರುವರೆಂದು ಹೇಳಲಾಗಿದೆ.

ಆಹಾರ ಶಾಖೆಯನ್ನು ಬದಲಾಯಿಸುವುದಿಲ್ಲ

ಎಲ್ಲ ಪ್ರಾಂತ್ಯಗಳ ಮುಖ್ಯ ಮಂತ್ರಿಗಳೇ ಆಹಾರ ಶಾಖೆಯನ್ನು ವಹಿಸಿಕೊಳ್ಳಬೇಕು ಎಂದು ಪ್ರಧಾನಿ ನೆಹರು ಸೂಚಿಸಿದ್ದ ಮೇರೆಗೆ ಬೊಂಬಾಯಿ ಮಂತ್ರಿ ಮಂಡಲದವರು ಆ ಬಗ್ಗೆ ಚರ್ಚೆ ನಡೆಸಿದ ನಂತರ ಪ್ರಧಾನಿ ಶ್ರೀ ಖೇರ್ ಒಂದು ಹೇಳಿಕೆ ಇತ್ತು "ಆಹಾರ ಶಾಖೆಯನ್ನು ಬದಲಾಯಿಸುವುದು ಸರಿಯಲ್ಲ. ಸಿವಿಲ್ ಸಪ್ಲೈಸ್ ಶಾಖೆಯ ಸಚಿವರು ಕಳೆದ ಐದು ವರ್ಷಗಳಲ್ಲಿ ಅಪಾರ ಅನುಭವಗಳಿಸಿದ್ದಾರೆ. ಅದನ್ನು ನಾವು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

ಐ. ಎನ್. ಟಿ. ಯು. ಸಿ. ಸಮ್ಮೇಳನ

ಇದೇ ತಿಂಗಳು ೧೬ ಮತ್ತು ೧೭ನೇ ತಾರೀಖುಗಳಲ್ಲಿ ರಾಜಧಾನಿಯಲ್ಲಿ ನಡೆಯಲಿರುವ ಐ. ಎನ್. ಟಿ. ಯು. ಸಿ. ಸಮ್ಮೇಳನವು ರಂಗಾಚಾರ್ಲು ಸ್ಮಾರಕ ಭವನದಲ್ಲಿ ನಡೆಯುವುದು. ಪ್ರತಿನಿಧಿಗಳಿಗೆ ಊಟ ವಸತಿಗಾಗಿ ಕಾವೇರಿಪಟ್ಟಂ ಸುಬ್ಬರಾಯ ಶ್ರೇಷ್ಠಿ ಛತ್ರದಲ್ಲಿ ಏರ್ಪಡಿಸಿದೆ. ೧೬ನೇ ತಾರೀಖು ಶನಿವಾರ ಸಂಜೆ ೫ ಗಂಟೆಗೆ ಡಾ|| ಅಬೀದ್ ಅಲಿಜಾಫರ್ ಭಾಯಿಯವರ ಆರಂಭೋತ್ಸವ ನೆರವೇರಿಸುವರು. ಪ್ರಾಂತೀಯ ಸಮಿತಿ ಅಧ್ಯಕ್ಷ ಶ್ರೀ ಎನ್. ಕೇಶವಯ್ಯಂಗಾರ್ [illegible] ವರು. ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣ ಮಾಡಲು ಮೈಸೂರಿನ ಕಾರ್ಮಿಕ ಮಂತ್ರಿ ಶ್ರೀ ಕೆ. ಟಿ ಭಾಷ್ಯಂರವರನ್ನು ಕೋರಲಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸಲಿರುವ ಪ್ರತಿನಿಧಿಗಳಿಗೆ ಉಚಿತ ಊಟ ವಸತಿ ಏರ್ಪಾಡು ಮಾಡಲಾಗಿದೆ. ಬರುವವರು ತಾವು ಬರುವ ತಾರೀಖು ಮತ್ತು ಕಾಲವನ್ನು ಮೂರು ದಿನ ಮುಂಚಿತವಾಗಿ ಸ್ವಾಗತ ಸಮಿತಿ ಕಛೇರಿಗೆ ತಿಳಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಪರ್ಷಿಯಾ ಎಣ್ಣೆ ವಿವಾದ

ಯಂತ್ರಗಳನ್ನು ವಶಪಡಿಸಿ ಕೊಳ್ಳಲು ಪ್ರಾರಂಭ

ಆಂಗ್ಲೋ-ಇರಾನಿಯನ್ ಎಣ್ಣೆ ಕಂಪನಿಯನ್ನು ವಶಪಡಿಸಿಕೊಳ್ಳಲು ಪರ್ಷಿಯಾ ಸರ್ಕಾರದಿಂದ ನೇಮಕವಾಗಿರುವ ತ್ರಿಮೂರ್ತಿ ಸಮಿತಿಯು ನಾಳೆ ಆಬಡಾನಿಗೆ ತೆರಳುವುದೆಂದು ಟೆಹರಾನ್ ಪತ್ರಿಕೆಗಳು ವರದಿ ಮಾಡಿವೆ.

‡ ಅಸ್ಸಾಂನಲ್ಲಿ ಒಂದು ಲಕ್ಷ ಎಕ್ರೆ ಭೂಮಿಯಲ್ಲಿ ಸೆಣಬನ್ನು ಬೆಳೆಯಲಾಗಿದೆ

§ ಭಾರತದಲ್ಲಿ ಒಟ್ಟು ೧೭,೪೦೦೦೦ ಟನ್ ಆಹಾರ ಧಾನ್ಯ ದಾಸ್ತಾನಿದೆ

ಸಕ್ಕರೆ ಎಂದು ಹೇಳಿ ಮರಳು ಕೊಟ್ಟು ಮೋಸ

"ಮೂಕನೂರು ಸಿದ್ದಪ್ಪ ಎಂಬ ರೈತನಿಗೆ ಪರಿಚಯವಿಲ್ಲದ ವ್ಯಕ್ತಿಯು ಬಂದು ತಮ್ಮಲ್ಲಿ ೫ ಚೀಲ ಸಕ್ಕರೆ ಇದೆ ಬೇಕಾದರೆ ತಮಗೆ ಅಗ್ಗದಲ್ಲಿ ಕೊಡುವುದಾಗಿ ಹೇಳಿದನು. ಬಂದು ಕೇಳಿದಾಗ ರಾತ್ರಿ ೧೧ ಘಂಟೆ ಆಗಿತ್ತು. ಹಣವನ್ನು ಬೆಳಿಗ್ಗೆ ಕೊಡುವುದಾಗಿ ಹೇಳಿದರು. ಆದರೆ ಸಕ್ಕರೆ ವ್ಯಕ್ತಿಯು ತಾವು ಪುನಃ ಹೋಗಿ ಸಣ್ಣ ಅಕ್ಕಿ ತರಬೇಕಾಗಿದೆ ಅದನ್ನು ಕೂಡಲೆ ತಮಗೆ ಬೇಕಾದರೆ ಕಡಿಮೆ ದರದಲ್ಲಿ ಕೊಡುತ್ತೇನೆ ಈಗ ಹಣ ಕೊಡಿ ಎಂದು ಕೇಳಿದ. ಸಿದ್ದಪ್ಪನವರಲ್ಲಿ ಹಣ ಇಲ್ಲದ್ದರಿಂದ ತಮ್ಮ ೬ ತೊಲ ಬಂಗಾರದ ಟೀಕೆ ಒತ್ತೆ ಇಡಲು ಪ್ರಯತ್ನಿಸಿದರು. ರಾತ್ರಿಯಾದ್ದರಿಂದ ಎಲ್ಲೂ ಹಣ ಸಿಕ್ಕಲಿಲ್ಲ ಉಪಾಯವಿಲ್ಲದೆ ಟೀಕೆಯನ್ನೇ ಸಕ್ಕರೆ ಮನುಷ್ಯನಿಗೆ ಕೊಟ್ಟು ಇದನ್ನು ತೆಗೆದು ಕೊಂಡುಹೋಗಿ ಹಣ ತೆಗದು ಕೊಳ್ಳಿ ನಾನು ನಂತರ ಬಿಡಿಸಿ ಕೊಳ್ಳುತ್ತೇನೆ ಎಂದು ಹೇಳಿ ಕೊಟ್ಟರು. ಇದುವರೆಗೂ ಸಕ್ಕರೆ ವ್ಯಕ್ತಿ ಪತ್ತೆ ಇಲ್ಲ ಮೇಲು ಭಾಗದಲ್ಲಿ ಸಕ್ಕರೆ ಇತ್ತು ಎಂಬುದಾಗಿ ಹೇಳಲಾಗಿದೆ.

ವಿವಾಹ ಮಹೋತ್ಸವ

ಆಹಾರ ಸಂಶೋಧನಾ ಕೇಂದ್ರದ ಡೈರೆಕ್ಟರ್ ಡಾ|| ವಿ. ಸುಬ್ರಹ್ಮಣ್ಯಂರವರ ಪುತ್ರಿ ಶ್ರೀಮತಿ ಸುಲೋಚನಾ (ಜಯಲಕ್ಷ್ಮೀ) ಯವರನ್ನು, ಕೊಯಂಬತ್ತೂರ್ ಟೆಕ್ಸ್‌ಟೈಲ್ ಅಡ್ವೈಸರ್ ಶ್ರೀ ಆರ್. ಪಂಚನಾದ ಅಯ್ಯರ್‌ರವರ ಪುತ್ರ ಶ್ರೀ ಸಿ. ಪಿ. ನಟರಾಜನ್‌ರವರಿಗೆ ಕೊಟ್ಟು ವಿವಾಹಮಹೋತ್ಸವವು ಇದೇ ೧೮ನೇ ತಾರೀಖು ಸೋಮವಾರ ನಡೆಯಲಿದೆ.

ಪೌರಸಭಾ ಸದಸ್ಯ ಮತ್ತು ಅಡ್ವೊಕೇಟ್ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರ ಪುತ್ರಿ ಶ್ರೀಮತಿ ರಾಜಲಕ್ಷ್ಮಿಯವರಿಗೂ ಶ್ರೀ ಸಂಪತ್ಕುಮಾರ ಚಕ್ರವರ್ತಿಯವರ ಪುತ್ರ ಮದರಾಸಿನ ಇನ್‌ಕಂಟ್ಯಾಕ್ಸ್ ಆಫೀಸರು ಶ್ರೀ ಎಲ್. ಎಸ್. ಎನ್. ಚಕ್ರವರ್ತಿಯವರಿಗೂ ೧೩ನೇ ತಾ|| ಬುಧವಾರ ವಿವಾಹ ನಡೆಯಲಿದೆ.

ರಣಜಿತ್

೮—೬—೫೧ರಿಂದ

ಅಮೋಘವಾದ ಪ್ರಾರಂಭ

‡ ವಿನಾನಾ, ‡ ರಹಿಮಾನ್,

‡ ಕಪೂರ್ ನಟಿಸಿರುವ

-:: ರಾಜಾ-ರಾಣಿ ::-

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ರೂ ನ್ಯೂಸ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಕಾ. ಸುಬ್ಬರಾವ್, ವೋಹನ್ ಮುದ್ರಣಾಲಯ, ಮೈಸೂರು.

ಒಲಂಪಿಯಾ ಟಾಕೀಸ್

೩೧—೫—೧೯೫೧ರಿಂದ ಅಮೋಘವಾದ ೨ನೇ ವಾರ

ಪ್ರತಿದಿನ ೩ ಆಟಗಳು

ಕೊಲಂಬಿಯಾರವರ:—

ಸೂಪರ್ ಮ್ಯಾನ್

ಇಂತಹ ಅದ್ಭುತ ಸಾಹಸ ಚಿತ್ರವನ್ನು ಈವರೆಗೆ ನೀವು ನೋಡಿರಲಾರಿರಿ ಪ್ರಪಂಚದ ಅನೇಕ ಭಾಗಗಳಲ್ಲಿ ಪ್ರದರ್ಶಿತವಾಗಿ ಪ್ರಶಂಸೆ ಪಡೆದಿದೆ. ಅಮೇರಿಕಾದ 200 ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶಿತವಾದ ಅದ್ವಿತೀಯ ಚಿತ್ರ ಮುಂಬಯಿಯ 6 ಚಿತ್ರಮಂದಿರಗಳಲ್ಲಿ 25 ವಾರಗಳಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿದೆ. ಬೆಂಗಳೂರಿನಲ್ಲಿ ಒಂದು ವಾರದಲ್ಲಿ 20,200 ರೂಪಾಯಿಗಳನ್ನು ಗಳಿಸಿದೆ. ನಿಮ್ಮ ಕಲ್ಪನೆಗೆ ಎಟುಕದ ಸಾಹಸ ಕೃತ್ಯಗಳನ್ನು ಪ್ರತ್ಯಕ್ಷವಾಗಿ ನೋಡಿ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೬—೧೯೫೧ ಶುಕ್ರವಾರ [ಸಂಚಿಕೆ ೨೨೮

ವಿದೇಶಾಂಗ ಕಾರ್ಯದರ್ಶಿ ಸಲಹೆಗಾರ ಭಾರತಕ್ಕೆ

ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ|| ಡೀನ್ ಅಚಿಸನ್‌ರವರ ಸಲಹೆಗಾರರಾದ ಮಿ|| ವಿಲಿಯಂ, ಡಿ. ಪಾಲೆಯವರು ಭಾರತದ ಸ್ಥಿತಿಗಳನ್ನು ವೀಕ್ಷಿಸಲು ಇಲ್ಲಿಗೆ ಬರಲಿರುವರು.

ಕಡಲೆಯ ಸಂಗ್ರಹ

ಉತ್ತರ ಪ್ರದೇಶದಲ್ಲಿ ಈ ಸಾಲಿಗೆ ೨೦ ಸಾವಿರ ಟನ್ ಕಡಲೆ ಸಂಗ್ರಹವಾಗಿದ್ದು ಅಲ್ಲಿಗೆ ಹೆಚ್ಚಾಗಿರುವ ೩,೦೦೦ ಟನ್ ಕಡಲೆಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅಧೀನಕ್ಕೆ ಕೊಡುವುದು.

ಮಂತ್ರಿಮಂಡಲ ಪುನರ್ರಚನೆಗಿಂತ ಕಾಂಗ್ರೆಸ್ ಐಕತೆ ಮುಖ್ಯ

ಆಹಾರ ಇಲಾಖೆಯನ್ನು ಮುಖ್ಯಮಂತ್ರಿಗಳೇ ವಹಿಸಿಕೊಳ್ಳಬೇಕೆಂಬ ಸಲಹೆ ನಿರಾಕರಣೆ

ಆಂಧ್ರ ಭಾಷಾವಾರು ಪ್ರಾಂತ್ಯ

೧೯೫೧ನೇ ಜನಗಣತಿಯ ಪ್ರಕಾರ ಮದ್ರಾಸಿನ ಜನಸಂಖ್ಯೆಯಲ್ಲಿ ತೆಲಗರು ಶೇಕಡ ೪೫-೪೬ ಇರುವುದಾಗಿ ತಿಳಿದು ಬಂದಿರುವುದರಿಂದ ಮದ್ರಾಸ್ ಭಾಷಾವಾರು ಪ್ರಾಂತ್ಯ ವಿಷಯವನ್ನು ಪುನರ್ವಿಮರ್ಶಿಸಬೇಕಾಗಿದೆ ಎಂದು ಆಂಧ್ರ ಪ್ರಜಾ ಪಕ್ಷದವರು ಒಂದು ನಿರ್ಣಯ ಮಾಡಿರುವರು.

ಟೆಲಿಫೋನ್ ಕೆಲಸಗಾರರ ಮುಷ್ಕರ

ಮೈಸೂರು ಸಂಸ್ಥಾನದ ಟೆಲಿಫೋನ್ ಕೆಲಸಗಾರರಿಗೆ ಭಾರತದ ಸಂಬಳದ ಸ್ಕೇಲನ್ನು ಇಲ್ಲಿಯವರೆಗೆ ಕೊಡದಿರುವುದರಿಂದ ಮುಷ್ಕರವನ್ನು ಹೂಡಬೇಕಾಗಿದೆ. ಅದಕ್ಕಾಗಿ ಮುಷ್ಕರ ಗಣತಿಯನ್ನು ಒಂದು ತಿಂಗಳೊಳಗಾಗಿ ತೆಗೆದು ಕೊಳ್ಳಬೇಕೆಂದು ಅಂಚೆ ಮತ್ತು ತಂತಿ ಕೆಲಸಗಾರರ ಕೇಂದ್ರ ಸಮಿತಿಯನ್ನು ಬೆಂಗಳೂರಿನಲ್ಲಿ ಸಭೆನಡೆಸಿ ಕೇಳಿರುವರು.

ಅಲ್ಲದೆ ಬೆಂಗಳೂರಿನಲ್ಲಿ ಟೆಲಿಫೋನ್ ವ್ಯವಸ್ಥೆಯನ್ನು ಉತ್ತಮ ಗೊಳಿಸಬೇಕೆಂದು ಅವರು ಕೋರಿರುವರು.

ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ

ಆಹಾರ ಪರಿಸ್ಥಿತಿಯನ್ನು ಎದುರಿಸಲು ಭೂಸೈನ್ಯವನ್ನು ನಿರ್ಮಿಸುವುದೇ ಸುಗಮವಾದ ಮಾರ್ಗ. ಈಗಾಗಲೇ ಅನಾವ್ಯಯವಾಗಿ ಸರ್ಕಾರ ಹೆಚ್ಚು ಆಹಾರ ಬೆಳೆ ಯೋಜನೆಗೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಿದೆಯೆಂದು ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್‌ರವರು ಹೇಳಿರುವರು.

ವ್ಯಾಪಾರ ನಿಯೋಗ

ಭಾರತದಲ್ಲಿ ಭಾರತ—ಪಾಕಿಸ್ತಾನಗಳ ಒಪ್ಪಂದವು ಯಾವ ರೀತಿಯಾಗಿ ಕಾರ್ಯಗತವಾಗುತ್ತಲಿದೆಯೆಂಬುದನ್ನು ಪರಿಶೀಲಿಸಲು ಒಂದು ವ್ಯಾಪಾರ ನಿಯೋಗವು ಪಾಕಿಸ್ತಾನದಿಂದ ಭಾರತಕ್ಕೆ ಬರಲಿದೆ.

ರಾಯಭಾರಿಗಳಿಗೆ ಉಚ್ಚಾಟನೆ

ಬೆಲ್ಗ್ರೇಡಿನಲ್ಲಿದ್ದ ಹಂಗೇರಿ ರಾಯಭಾರಿ ಮಿ|| ಇಸ್ತವಾನ್ ಹಾಬ್ರೆಡ್‌ರು ಒಂದು ಜಗಳದಲ್ಲಿ ಕಾರಣರಾದರೆಂಬ ಅಪವಾದನೆ ಮೇಲೆ ಯುಗೊಸ್ಲೋವೆಕಿಯಾ ಸರ್ಕಾರವು ಇವರನ್ನು ಬೆಲ್ಗ್ರೇಡಿಗೆ ಕಳುಹಿಸಕೂಡದೆಂದು ಹಂಗೇರಿಯಾ ಸರ್ಕಾರಕ್ಕೆ ತಿಳಿಸಿದೆ. ಬುಡಾಪೆಸ್ಟನಲ್ಲಿರುವ ಯುಗಸ್ಲಾವ್ ರಾಯಭಾರಿಯು ೨೪ ಗಂಟೆಗಳೊಳಗೆ ಹಂಗೇರಿ ಪ್ರದೇಶ ಬಿಟ್ಟು ಹೊರಡಬೇಕೆಂದು ಹಂಗೇರಿ ಸರ್ಕಾರ ಆಜ್ಞೆ ಮಾಡಿದೆ.

ಪಟೇಲ್ ಸ್ಮಾರಕ ನಿಧಿ

ಭಾರತಾದ್ಯಂತ ಪಟೇಲ್ ಸ್ಮಾರಕ ನಿಧಿಯನ್ನು ೧೫ನೇ ಜುಲೈ ಮಾಸಾಂತ್ಯದೊಳಗೆ ವಸೂಲ್ಮಾಡಬೇಕೆಂದು ಎಲ್ಲಾ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳಿಗೆ ಎ. ಐ. ಸಿ. ಸಿ. ಕಛೇರಿಯು ತಿಳಿಸಿರುತ್ತದೆ. ವಸೂಲಾದ ಹಣದಲ್ಲಿ ಶೇಕಡ ೭೫ ರಷ್ಟನ್ನು ಆ ಪ್ರಾಂತ್ಯದಲಿಯೇ ಖರ್ಚು ಮಾಡಲಾಗುವುದು. ಉಳಿಕೆ ಹಣವು ಕೇಂದ್ರ ನಿಧಿಗೆ ಸೇರುವುದು.

ಹೆಂಡತಿಯನ್ನು ಕೊಂದ ಠಾಕೂರ್ ಸಾಹೇಬ

ಬರೋಡಾ ಸಂಸ್ಥಾನಕ್ಕೆ ಹಿಂದೆ ಸೇರಿದ್ದ ಗಾಡ'ಬೊರಿಯಾನಧಿಂಕೂರ' ಸಾಹೇಬ' ರಣಧೀರ' ಸಿನ್ಹಜೀ ಚಂದ್ರಸಿನ್ಹಜೀ ಆತನ ತಾಯಿ ಸುಂದರಕುನ್ವರ'ಬಾ, ಮತ್ತು ಆತನ ಕಾರ್ಯದರ್ಶಿ ರತಿಲಾಲ್ ದೀಪ್‌ಚಂದ' ಎಂಬುವವರನ್ನು ಮುಂಬಾಯಿನ ಪೋಲೀಸಿನವರು ದಸ್ತಗಿರಿ ಮಾಡಿರುವರು. ಠಾಕೂರ' ಸಾಹೇಬರ ೧೮ ವರ್ಷದ ತರಿಯ ಹೆಂಡತಿಯಾದ ಧೀರಜ' ಕುನ್ವರ'ಬಾ ಎಂಬುವವರನ್ನು ಮೇ ೨೫ನೇ ತಾರೀಖು ಜೀವಸಹಿತ ಸುಟ್ಟರೆಂಬುದೇ ಇವರ ಮೇಲಿರುವ ಅಪಾದನೆ.

ಕಾರ್ಮಿಕರ ದಸ್ತಗಿರಿ

ಪೂರ್ವ ಪಾಕಿಸ್ತಾನದಲ್ಲಿ ಕಾರ್ಮಿಕ ಸಂಘಗಳ ಅಧ್ಯಕ್ಷ ಜ|| ಫಯೀನ್ ಅಶ್ರಾಫ್'ರವರನ್ನು ದಸ್ತಗಿರಿಮಾಡಲಾಗಿದೆ.

ಶಾಂತಿ ಶಿಸ್ತಿನ ಪಾಲನೆ ಉತ್ತಮವಾಗಿದೆ

ಮದ್ರಾಸ್ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿರಾಜಾರವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಅಲ್ಲಿನ ಜನರು ಶಾಂತಿಶಿಸ್ತನ್ನು ಸರಿಯಾಗಿ ಪಾಲಿಸುತ್ತಿರುವರೆಂದೂ ಕರ್ನೂಲ್ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪ ಅಶಾಂತಿ ವಾತಾವರಣವಿದೆಯೆಂದೂ ತಿಳಿಸಿ ಗ್ರಾಮರಕ್ಷಕಾಪಡೆಗಳು ಉತ್ತಮವಾಗಿ ಕೆಲಸ ಮಾಡುತ್ತಿವೆಯೆಂದು ತಿಳಿಸಿರುವರು.

ರೈಲ್ವೆ ಲೈನ್ ರಕ್ಷಣೆ

ಮದ್ರಾಸಿನ ಹಲವ, ಭಾಗಗಳಲ್ಲಿ ರೈಲ್ವೆ ಲೈನನ್ನು ಹಳ್ಳಿಯವರು ಸಂಜೆಯಿಂದ ಮುಂಜಾನೆಯ ವರೆವಿಗೆ ರಕ್ಷಣೆ ಮಾಡಲು ಒಂದು ಯೋಜನೆ ತಯಾರು ಮಾಡಲಾಗಿದೆಯೆಂದು ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ತಿಳಿಸಿರುವರು. ಹೀಗೆ ರಕ್ಷಣೆ ಮಾಡುವವರಿಗೆ ಪಾರಿತೋಷಕ ದ್ರವ್ಯ ಸಹ ಕೊಡಲಾಗುವುದು.

ಅಮೆರಿಕಾ ರೆಡ್'ಕ್ರಾಸ್ ಸಂಸ್ಥೆಯು ಭಾರತಕ್ಕೆ ಆಹಾರ ಪದಾರ್ಥಗಳನ್ನು ಕಳುಹಿಸಲು ೨೦೦,೦೦೦ ಡಾಲರುಗಳನ್ನು ಮಂಜೂರ್ಮಾಡಿದೆ.

ಆ ಹಾ ರ ಖಾ ತೆ ವಹಿಸಿಕೊಳ್ಳುವುದಿಲ್ಲ

ಮದರಾಸಿನ ಮುಖ್ಯಮಂತ್ರಿಯವರು ಆಹಾರಖಾತೆ ವಹಿಸಿಕೊಳ್ಳುವುದಿಲ್ಲವೆಂದು ತಿಳಿಸಿದ್ದಾರೆ

ಮದರಾಸ್ ಜಿಲ್ಲೆಯಲ್ಲಿ ಕಾಳಸಂತೆ ಸಂಬಂಧವಾಗಿ ಸುಮಾರು ೪೬೯ ಜನರ ಮೇಲೆ ಮೊಕದ್ದಮೆ ಹೂಡಲಾಗಿದೆಯೆಂದು ಹೇಳಲಾಗಿದೆ ಮೊಕದ್ದಮೆಗೆ ಸಂಬಂಧಿಸಿದ ವಸ್ತುಗಳ ಬೆಲೆ ಸುಮಾರು ೩,೦೦೦ ರೂ.

ಚುನಾವಣೆಗಾಗಿ ಪರಿಶೀಲನೆ

ಉತ್ತರ ಪ್ರದೇಶದಲ್ಲಿ ಮಹಾ ಚುನಾವಣೆಗೆ ಸ್ಥಳ ಮತ್ತು ಕಟ್ಟಡ ಪರಿಶೀಲಿಸಲು ಅಲ್ಲಿನ ೫೭ ಅಧಿಕಾರಿಗಳು ರಾಜ್ಯದ ವಿವಿಧಭಾಗಗಳಲ್ಲಿ ಪರಿಶೀಲನೆ ಮುಗಿಸಿರುವರು.

ವಯಸ್ಕರ ಶಿಕ್ಷಣಕ್ಕೆ

ವಯಸ್ಕರ ಶಿಕ್ಷಣಕ್ಕಾಗಿ ಅಮೆರಿಕಾದಲ್ಲಿ, ಹೆನ್ರಿ ಫೋರ್ಡ್‌ರು ಸ್ಥಾಪಿಸಿದ ನಿಧಿಯಿಂದ ೫೦ ಮಿಲಿಯನ್ ಡಾಲರುಗಳನ್ನು ವಿನಿಯೋಗಿಸಲಾಗಿದೆ.

ಮಂತ್ರಿಮಂಡಲ ಪುನರ್ರಚನೆಗಿಂತ ಐಕ್ಯತೆ ಅಗತ್ಯ

ಸ್ವ.ಸು. ಫೋನ್] ಬೆಂಗಳೂರು ಜೂನ್ ೭

ಸಂಸ್ಥಾನದ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಪತ್ರಿಕಾಗೋಷ್ಠಿಯಲಿ ಮಾತನಾಡುತ್ತಾ ಮಂತ್ರಿಮಂಡಲ ವಿಸ್ತರಣೆಯ ಮಾತುಕತೆಯು ಇನ್ನೂ ಮುಗಿದಿಲ್ಲ. ಸಧ್ಯದಲ್ಲಿ ಮಂತ್ರಿಮಂಡಲ ವಿಸ್ತರಣೆಗಿಂತ ಕಾಂಗ್ರೆಸ್‌ನಲ್ಲಿ ಐಕ್ಯತೆ ಅಗತ್ಯವೆಂದು ಅಧ್ಯಕ್ಷರು ತಿಳಿಸಿದರು. ತಾವು ೧೨ನೇ ತಾ|| ದೆಹಲಿಗೆ ತೆರಳಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಬಂದನಂತರ ಮೈಸೂರಿನಲ್ಲಿ ೧೫ನೇ ತಾ|| ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕರೆದಿರುವುದಾಗಿಯೂ ಮಂತ್ರಿಮಂಡಲ ಪುನರ್ರಚನೆಯ ಚರ್ಚೆ ಪುನಃ ನಡೆವುದಾಗಿ ತಿಳಿಸಿದರು.

ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವ ವಿಷಯ ಪ್ರಸ್ತಾಪಿಸಿದಾಗ ಅಖಿಲ ಭಾರತ ಕಾಂಗ್ರೆಸ್ಸಿಗೂ ಮೈಸೂರು ಪ್ರಾಂತ ಕಾಂಗ್ರೆಸ್ಸಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈಗ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವುದರಲ್ಲಿ ಅರ್ಥವಿಲ್ಲ ಶ್ರೀ ಟಿ ಸಿದ್ಧಲಿಂಗಯ್ಯನವರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತಿಲ್ಲವೆಂದೂ ಕಾರ್ಯಕಾರಿ ಸಮಿತಿಗೆ ಮಾತ್ರ ರಾಜೀನಾಮೆ ಇತ್ತಿರುವರೆಂದೂ ತಿಳಿಸಿದರು. ರಾಜ್ಯಾಂಗಕ್ಕೆ ತಿದ್ದುಪಡಿಯಾದುದರಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ತಗಲುವುದಿಲ್ಲ ಹಿಂದುಳಿದ ವರ್ಗದವರನ್ನು ಯಾರೆಂದು ಕೇಂದ್ರ ಸರ್ಕಾರವು ನಿರ್ಧರಿಸುವುದು. ಇನ್ನು ಮುಂದೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರೆಂಬ ಭೇದವು ಅಳಿಯುವುದೆಂದು ತಿಳಿಸಿದರು.

ಕಾಗೋಡಿನ ವರದಿಯು ಪೂರ್ತಿ ಬಂದಿಲ್ಲವಾದುದರಿಂದ ಆ ಬಗ್ಗೆ ತಾವು ಅಭಿಪ್ರಾಯ ತಿಳಿಸಲಾಗುವುದಿಲ್ಲವೆಂದು ಹೇಳಿದರು.

ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು

ಶಾಸನಕರ್ತರು, ಕಾರ್ಯನಿರ್ವಾಹಕರು, ನ್ಯಾಯಾಧಿಪತಿಗಳು ಒಬ್ಬರ ಕ್ಷೇತ್ರದಲ್ಲಿ ಮತ್ತೊಬ್ಬರು ಅತಿಕ್ರಮಿಸದಂತೆ ನೋಡಿಕೊಳ್ಳುವುದು, ಇಂದಿನ ಪರಿಸ್ಥಿತಿಯಲ್ಲಿ, ಭಾರತದ ಪ್ರತಿಯೊಬ್ಬ ಪ್ರಾಮಾಣಿಕ ಮತ್ತು ಸ್ವಾವಲಂಬಿಯಾದ ಪ್ರಜೆಯ ಮುಖ್ಯಕರ್ತವ್ಯ. ಈ ಮೂರು ಅಂಗಗಳು ಅವರವರ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕೆಲಸ ಮಾಡಿದರೆ ಮಾತ್ರ ಸಮಾಜೋದ್ಧಾರವಾಗುವುದು ಎಂದು ಭಾರತ ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠನ್ಯಾಯಮೂರ್ತಿ ಶ್ರೀ ಹರಿಲಾಲ್ ಕನಿಯಾರವರು ಬೊಂಬಾಯಿನಲ್ಲಿ ಮಾತನಾಡುತ್ತಾ ಹೇಳಿರುವರು

ನ್ಯಾಯಾಸ್ಥಾನಗಳು ತಮ್ಮ ಕರ್ತವ್ಯವೇನೆಂಬುದನ್ನು ಅರಿತು ಕೊಳ್ಳದಿದ್ದರೆ ಎಲ್ಲೆಲ್ಲಿಯೂ ಸರ್ವಾಧಿಕಾರತ್ವ ತಲೆದೋರುವುದು. ಸಮಾಜೋದ್ಧಾರಕ್ಕೆ ನ್ಯಾಯವು ಹೇಗೆ ಅತ್ಯಾವಶ್ಯಕವೋ ಹಾಗೆಯೇ ಶಾಸನ ಸಭೆಯು ರಾಜ್ಯಾಂಗಕ್ಕನುಗುಣವಾಗಿ ಶಾಸನಗಳನ್ನು ಮಾಡಿದೆ. ಕಾರ್ಯನಿರ್ವಾಹಕರು ಮಾಡಿರುವ ಕಾರ್ಯವು ಶಾಸನ ಬದ್ಧವಾಗಿದೆಯೇ ಎಂಬುದನ್ನು ವಿಮರ್ಶಿಸಿ ತೀರ್ಮಾನಿಸಲು ನ್ಯಾಯಾಸ್ಥಾನಗಳ ಆವಶ್ಯಕತೆಯಿದೆ.

ವಿಶ್ವದಲ್ಲೆಲ್ಲಾ ಭಾರತದಲ್ಲಿರುವ ಶ್ರೇಷ್ಠ ನ್ಯಾಯಾಲಯವು ಅದ್ವಿತೀಯ ಸಂಸ್ಥೆಯಾಗಿದೆ. ಪ್ರಾಂತ್ಯಗಳ ವಿವಾದವನ್ನು ತೀರ್ಮಾನಿಸುವುದು, ರಾಷ್ಟ್ರಾಧ್ಯಕ್ಷರಿಗೆ ಸಲಹೆನೀಡುವುದೂ ಈ ಸಂಸ್ಥೆಯ ಕೆಲಸವಾಗಿ ಶಾಸನದ ಒಂದು ಭಾಗವನ್ನು ಪ್ರಜೆಯು ಪ್ರತಿಭಟಿಸಿದರೆ ಶಾಸನವು ಸರಿಯೇ ತಪ್ಪೇ ಎಂದು ಹೇಳುವುದು ಶ್ರೇಷ್ಠನ್ಯಾಯಾಲಯದ ಮುಖ್ಯ ಕರ್ತವ್ಯವಾಗಿದೆ ಎಂದು ಅವರು ಹೇಳಿರುವರು.

ಪತ್ರವ್ಯವಹಾರ— ರೇಷನ್‌ಕಾರ್ಡುದಾರರುಗಳಲ್ಲಿ ಮನವಿ

ರೇಷನ್ ಕಾರ್ಡುದಾರರುಗಳ ಸಂಘಕ್ಕೆ ಆವಶ್ಯಕವಾಗಿ ಬೇಕಾಗಿರುವ ನಿಯಮಾವಳಿಯನ್ನು ತಯಾರಿಸಲು ಸಮಿತಿಯವರು ಕಾರ್ಯ ಕೈಗೊಂಡಿದ್ದಾರೆ ಆದ್ದರಿಂದ ರೇಷನ್‌ಕಾರ್ಡುದಾರರುಗಳು ಈ ವಿಚಾರದಲ್ಲಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ತಾರೀಖು ೧೦-೬-೫೧ರ ಬೆಳಿಗ್ಗೆ ೯ ಘಂಟೆ ಒಳಗಾಗಿ ನಿಯಮಾವಳಿ ರಚನಾ ಸಮಿತಿ ಅಧ್ಯಕ್ಷರಿಗಾಗಲೀ ಅಥವಾ ಸಂಘದ ಕಾರ್ಯದರ್ಶಿಗಳಿಗಾಗಲಿ ಕಳುಹಿಸಿಕೊಟ್ಟರೆ ಆದರದಿಂದ ಸ್ವೀಕರಿಸಲಾಗುವುದು.

ಎಸ್. ಕೆ. ಅನಂತಶೆಟ್ಟಿ,
ಅಧ್ಯಕ್ಷ, ನಿಯಮಾವಳಿ ರಚನಾ ಸಮಿತಿ.

ರಾಜಕೀಯ ಪಕ್ಷಗಳ ಸಭೆ

ಜುಲೈ ಮಾಸಾಂತ್ಯದಲ್ಲಿ ಎಲ್ಲಾ ರಾಜಕೀಯಪಕ್ಷಗಳ ಸಭೆಯನ್ನು ಕೇಂದ್ರ ಚುನಾವಣಾಧಿಕಾರಿಗಳು ಆಹ್ವಾನಿಸಿರುವರು. ಮುಂಬರುವ ಮಹಾ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ಸಂಕೇತ ನಿರ್ಧಾರದ ಬಗ್ಗೆ ಈ ಸಭೆಯನ್ನು ಕರೆಯಲಾಗಿದೆ. ಒಂದೊಂದು ರಾಜಕೀಯ ಪಕ್ಷಕ್ಕೆ ಒಂದೇ ಸಂಕೇತ ಅತ್ಯಾವಶ್ಯಕ. ಆ ಸಂಕೇತ ಚಿನ್ಹೆಯು ಚುನಾವಣಾ ಪೆಟ್ಟಿಗೆಯ ಹೊರಗಡೆ ಒಳಗಡೆ ಗುರ್ತಿಸಲಾಗುವುದು. ಸೈಕಲ್, ಮೋಟಾರು, ಕೈ, ಮರ, ಮೃಗಗಳು ಇವುಗಳನ್ನು ಮಾತ್ರ ಸಂಕೇತ ಚಿನ್ಹೆಗಳಾಗಿ ಉಪಯೋಗಿಸಲಾಗುವುದು. ಹಸು, ದೇವಸ್ಥಾನ, ಮಸೀದಿ, ಚರಕ, ಧ್ವಜ ಮುಂತಾದುವುಗಳ ಉಪಯೋಗವನ್ನು ನಿಷೇಧಿಸಲಾಗುವುದು ಇತ್ಯಾದಿ ವಿಷಯಗಳನ್ನು ಈ ಸಭೆಯಲ್ಲಿ ಚರ್ಚಿಸಲಾಗುವುದು.

ಪ್ರಾಂತ ಸರ್ಕಾರಗಳು ಇದೇ ರೀತಿ ಸಭೆ ನಡೆಸಬೇಕೆಂದು ಅವರಿಗೂ ತಿಳುವಳಿಕೆ ಕೊಡಲಾಗಿದೆಯೆಂದು ತಿಳಿಯಬರುತ್ತದೆ

ರಾಜಕೀಯ ಪಕ್ಷಗಳಿಗೆ ಆಹ್ವಾನ

ಮುಂಬರುವ ಚುನಾವಣೆಗಳಿಗಾಗಿ ಸಂಬಂಧ ಪಟ್ಟ ವಿಷಯಗಳ ಸಮಾಲೋಚನೆಗೆ ಚುನಾವಣಾ ಕಮೀಷನರು ಕಾಂಗ್ರೆಸ್, ಸೋಷಲಿಸ್ಟ್, ಹಿಂದೂಮಹಾಸಭೆ ಅಖಿಲ ಭಾರತ ರಾಮರಾಜ್ಯ ಪರಿಷತ್ತು, ಫಾರ್ವರ್ಡ್ ಬ್ಲಾಕ್, ಮತ್ತು ಭಾರತದ ಸೋಷಲಿಸ್ಟರ ಒಕ್ಕೂಟ ಸಂಸ್ಥೆ ಇವುಗಳಿಗೆ ಆಹ್ವಾನ ಕಳುಹಿಸಿರುವರು. ಕಮ್ಯೂನಿಸ್ಟ್ ಪಕ್ಷ ಮುಂತಾದ ಕೆಲವು ಪಕ್ಷಗಳ ವಿಳಾಸ ತಿಳಿಯದಿರುವುದರಿಂದ ಅವರಿಗೆ ಆಹ್ವಾನ ಹೋಗಿಲ್ಲ. ಆದಾಗ್ಯೂ ಈ ಪಕ್ಷಗಳ ಪ್ರತಿನಿಧಿಗಳು ತಾವಾಗಿ ಬರಬೇಕೆಂದು ಕೋರಲಾಗಿದೆ.

ಲೂಟಿ

ಮೆಟ್ಟೂರು ಕೆಮಿಕಲ್ಸ್‌ಗೆ ಸೇರಿದ ವಾಸದ ಗೃಹಗಳನ್ನು ೪೦೦ ಜನರು ಲೂಟಿ ಮಾಡಿ ಹಣ, ಒಡವೆ ಮುಂತಾದುವನ್ನೆಲ್ಲಾ ಅಪಹರಿಸಿಕೊಂಡು ಹೋಗಿರುವರು. ಇಲ್ಲಿಯವರೆಗೆ ೪೦ ಜನರ ದಸ್ತಗಿರಿಯಾಗಿದೆ.

ಮೋಟಾರು ಕೆಲಸಗಾರರ ಮುಷ್ಕರ

ಮೈಸೂರು ಜೂನ್ ೭

೫ನೇ ತಾರೀಖು ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಇದೇ ಮಾಹೆ ೧೫ನೇ ತಾರೀಖಿನಿಂದ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರು ಸಾಮೂಹಿಕ ಮುಷ್ಕರವನ್ನು ಹೂಡಲು ತೀರ್ಮಾನಿಸಿರುವರು.

ಮುಷ್ಕರವು ಯಶಸ್ವಿಯಾಗಿ ನಡೆಯಲು ಒಂದು ಮುಷ್ಕರ ಸಮಿತಿ, ಪ್ರಚಾರ ಸಮಿತಿಗಳನ್ನು ನೇಮಿಸಲಾಗಿದೆ.

ಸಿ. ಪಿ. ಸಿ. ಮಾಲೀಕರು ವರ್ಕ್‌ಷಾಪಿನಲ್ಲಿ ರಾತ್ರಿ ೮ ೯ [illegible] ಕೆಲಸಗಾರರಿಂದ ಕೆಲಸ ಮಾಡಿಸುತ್ತಲಿರುವುದನ್ನು ಖಂಡಿಸಿ ಸೂಕ್ತ ವಿಚಾರಣೆ ನಡೆಸಬೇಕೆಂದು ನಿರ್ಣಯ ಮಾಡಿರುವರು.

ಜಗಳವಾಡಿದ್ದಕ್ಕಾಗಿ ಜೈಲು

ಅಮೆರಿಕಾದಲ್ಲಿ ೧೧ ಜನ ಕಮ್ಯೂನಿಸ್ಟರಿಗೆ ಶಿಕ್ಷೆವಿಧಿಸಿದ್ದಕ್ಕಾಗಿ ೬ ಜನ ಲಾಯರುಗಳು ಜಿಲ್ಲಾ ನ್ಯಾಯಾಧೀಶರೊಡನೆ ಜಗಳವಾಡಿದ್ದಕ್ಕಾಗಿ ೭ ಜನ ಲಾಯರುಗಳಿಗೂ ಒಂದು ತಿಂಗಳಿಂದ ೬ ತಿಂಗಳವರೆಗೆ ಶಿಕ್ಷೆಯನ್ನು ವಿಧಿಸಲಾಗಿದೆ.

ಸರ್ಕಾರಿ ಆಜ್ಞೆ

ರಜಾದ ಮೇಲಿರುವ ಚೀಫ್ ಇಂಜನಿಯರ್ ಶ್ರೀ ಎಂ. ಎನ್ ಲಕ್ಷ್ಮಣರಾಯರಿಗೆ ತಾ॥ ೧೮-೫-೫೧ ರಿಂದ ಮತ್ತೊಂದು ತಿಂಗಳು ರಜಾ ಕೊಡಲಾಗಿದೆ.

ಅಸಿಸ್ಟೆಂಟ್ ಕಮಿಷನರ್ ಶ್ರೀ ಸಿ. ನರಸಿಂಹಯ್ಯನವರನ್ನು ವ್ಯಾಪಾರ ತೆರಿಗೆ ಪರಿಶೀಲನಾ ಸಮಿತಿಯ ಕಾರ್ಯದರ್ಶಿಗಳಾಗಿ ಎರಡು ತಿಂಗಳಕಾಲ ನೇಮಿಸಲಾಗಿದೆ.

ಸರ್ಕಾರದ ಅಸಿಸ್ಟೆಂಟ್ ಸೆಕ್ರಟರಿ ಶ್ರೀ ಪಿ ಹೊನ್ನಪ್ಪನವರನ್ನು ಅವರ ಕೆಲಸದ ಜೊತೆಗೆ ಸ್ಪೋರ್ಟ್ಸ್ ಸರ್ವೀಸ್ ಕಮಿಟಿ ಕಾರ್ಯದರ್ಶಿಗಳಾಗಿ ನೇಮಕ ಮಾಡಲಾಗಿದೆ.

ಜನರಲ್ ಕಾರಿಯಪ್ಪ

ಜನರಲ್ ಕಾರಿಯಪ್ಪನವರು ನಾಳೆ ಇಲ್ಲಿಗೆ ಆಗಮಿಸಿ ಬೆಂಗಳೂರಿಗೆ ತೆರಳುವರು. ಅಲ್ಲಿ ೩ ದಿನ ಬಿಡಾರ ಮಾಡುವರು ಅಲ್ಲಿಂದ ೧೧ನೇ ತಾರೀಖು ಅರಕೋಣಂಗೆ ಪ್ರಯಾಣ ಮಾಡುವರು.

ವುಡ್‌ಲ್ಯಾಂಡ್ಸ್ * ೯—೬—೫೧ರಿಂದ ಅಮೋಘ ಪ್ರಾರಂಭ
ಉಮರ್ ಖಯ್ಯಾಂನ ಅಮೋಘವಾದ ಅತಿಸಾಹಸದ ಚಿತ್ರ
* ಉಸ್ತಾದ್ ಪೆಡ್ರೊ *
ಪಾತ್ರ— ಶೇಖ್‌ಮುಖ್ತಾರ್, ಬೇಗಂಪ್ಯಾರ, ಶಮ್ಮಿ, ಸವ್ವು, ಅನ್ಸಾರಿ.

ಎಸ್. ಎಸ್. ಎಲ್. ಸಿ. ಪರೀಕ್ಷೆ

ಎಸ್. ಎಸ್. ಎಲ್. ಸಿ. ಪರೀಕ್ಷೆಯು ಇನ್ನೂ ೩ ವರ್ಷಕಾಲ ನಡೆಯುವುದಾಗಿ ಪ್ರಕಟಿಸಲಾಗಿದೆ. ೧೯೫೧ನೇ ಮಾರ್ಚಿ ಪರೀಕ್ಷೆಗಿಟ್ಟಿದ್ದ ಪಾಠ ಪುಸ್ತಕಗಳನ್ನು ಬರುವ ಸೆಪ್ಟೆಂಬರ್ ಪರೀಕ್ಷೆಗೆ ಇಡಲಾಗಿದೆ.

ವ್ಯವಹಾರ ಷರತ್ತು ತಿಳಿಸಲು ಸಾಧ್ಯವಿಲ್ಲ

ಚೈನಾದೊಡನೆ ಭಾರತವು ಆಹಾರ ಸರಬರಾಜಿಗಾಗಿ ಮಾಡಿಕೊಂಡಿರುವ ಷರತ್ತುಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸಲು ಸಾಧ್ಯವಿಲ್ಲವೆಂದು ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮೊಕದ್ದಮೆ ವಿಚಾರಣೆ

ಬ್ರಿಟನ್ನು ಪರ್ಷಿಯಾ ಎಣ್ಣೆ ವಿವಾದದಲ್ಲಿ ಅಂತರ ರಾಷ್ಟ್ರೀಯ ಕೋರ್ಟಿನಲ್ಲಿ ಹೂಡಿರುವ ಮೊಕದ್ದಮೆಯನ್ನು ನ್ಯಾಯಸ್ಥಾನವು ವಿಚಾರಣೆ ನಡೆಸುವುದಾಗಿ ಪ್ರಕಟಿಸಿದೆ.

ಪ್ರತಿನಿಧಿ ಸಭೆ ಒಪ್ಪಿಗೆ

ಭಾರತಕ್ಕೆ ೨೦ ಲಕ್ಷ ಟನ್ ಧಾನ್ಯವನ್ನು ಶರತ್ತಿಲ್ಲದೆ ರವಾನಿಸಬೇಕೆಂಬ ಮಸೂದೆಗೆ ಅಮೆರಿಕಾ ಪ್ರತಿನಿಧಿ ಸಭೆ ಒಪ್ಪಿಗೆಯಿತ್ತಿದೆ

ಕೇರಳ ಮಂತ್ರಿಮಂಡಲ ಸುವ್ಯವಸ್ಥೆಗೆ ಕೇಂದ್ರದ ಪ್ರವೇಶ

ತಿರುವಾಂಕೂರು—ಕೊಚ್ಚಿನ್‌ನಲ್ಲಿ ೩ ತಿಂಗಳುಗಳಿಂದ ಯಾವ ತೀರ್ಮಾನವೂ ಆಗದೆ ಬೆಳೆದುಬರುತ್ತಲಿರುವ ಮಂತ್ರಿಮಂಡಲಿ ಬಿಕ್ಕಟ್ಟನ್ನು ಪರಿಹರಿಸಲು ಕೇಂದ್ರ ಸರ್ಕಾರವು ವಿಧಿಯಿಲ್ಲದೆ ಪ್ರವೇಶಿಸಿದೆ. ಮದ್ರಾಸ್ ಸರ್ಕಾರದ ಸಚಿವ ಶ್ರೀ ಮಾಧವ ಮೆನನ್‌ರು ಅಲ್ಲಿಯ ವಿದ್ಯಮಾನಗಳನ್ನು ಪರಿಶೀಲಿಸಿ ತಕ್ಕ ತೀರ್ಪನ್ನು ಕೊಡಲು ಏರ್ಪಾಡುಮಾಡಿದೆ

ರಷ್ಯಾ ವಿಮಾನ ಶಕ್ತಿ

ರಷ್ಯಾವು ೧೯೦೦೦ ಏರ್‌ಕ್ರಾಫ್ಟ್ ಮತ್ತು ೧೦೦೦೦ ಜೆಟ್ ವಿಮಾನಗಳನ್ನು ೧೫೦,೦೦೦ ಪ್ಯಾರಚೂಟ್ ಸೈನ್ಯವನ್ನು ಹೊಂದಿದೆಯೆಂದು ರಾಯಲ್ ಏರ್ ಫೋರ್ಸ್ ಪತ್ರಿಕೆಯು ತಿಳಿಸುತ್ತದೆ.

‡ ಪಂಜಾಬಿನಲ್ಲಿರುವ ಲಿಯಾಖತ್ ಅಲೀಖಾನರ ಆಸ್ತಿ ೩,೭೦,೫೩೫ ರೂ.

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು :—ಪಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೬—೧೯೫೧ ಶನಿವಾರ [ಸಂಚಿಕೆ ೨೨೯

ಕೃತಕ ಗೊಬ್ಬರ ತಯಾರಿ ಕಾರ್ಖಾನೆ

ಬಿಹಾರಿನ ಸಿಂಧ್ರಿಯಲ್ಲಿ ಕೃತಕ ಗೊಬ್ಬರ ತಯಾರಿಸುವ ಕಾರ್ಖಾನೆಯು ಈ ವರ್ಷ ಆರಂಭವಾಗುವುದು. ಈ ವರ್ಷ ಇಲ್ಲಿಂದ ೧,೭೫,೦೦೦ ಟನ್ ಅಮೋನಿಯಂ ಸಲ್ಫೇಟನ್ನು ತಯಾರು ಮಾಡಲಾಗುವುದೆಂದು ಹೇಳಲಾಗಿದೆ.

ಲಾರ್ಡ್ ಟೆನಿಸನ್ ನಿಧನ

ಪ್ರಸಿದ್ಧ ಆಂಗ್ಲ ಕವಿ ಲಾರ್ಡ್ ಟೆನಿಸನ್‌ನ ಪೌತ್ರ ಮಾಜಿ ಕ್ರಿಕೆಟ್ ಕ್ಯಾಪ್ಟನ್ನಾಗಿದ್ದ ಲಾರ್ಡ್ ಟೆನಿಸನ್‌ರು ತಮ್ಮ ೬೧ನೇ ವಯಸ್ಸಿನಲ್ಲಿ ಬೆಕ್ಸ್‌ಹಿಲ್ಲಿನಲ್ಲಿ ತಮ್ಮ ನಿವಾಸದಲ್ಲಿ ಇದೇ ೬ನೇ ತಾರೀಖು ನಿಧನರಾದರು.

ಲೈಸನ್ಸ್ ಫೀ ಹೆಚ್ಚಿಸಿದ್ದಕ್ಕೆ ಹೋಟೇಲ್ ಮಾಲೀಕರ ಪ್ರತಿಭಟನೆ

ಬೀಹಾರಿನ ಆಹಾರ ಪರಿಸ್ಥಿತಿ ಪರಿಶೀಲಿಸಲು ಪಂಡಿತ ನೆಹರೂ ಭೇಟಿ

ಕೋಮುವಾರು ಸಂಸ್ಥೆಗೆ ಬೆಂಬಲನೀಡಬೇಡಿ

ಇಡೀ ನಾಡಿನ ಹಿತವನ್ನು ಗಮನದಲ್ಲಿಟ್ಟುಕೊಂಡು ಕೋಮುವಾರು ಸಂಸ್ಥೆಗಳಿಗೆ ಅಥವಾ ವಿದ್ರೋಹಾತ್ಮಕ ಚಟುವಟಿಕೆಗಳಿಗೆ ಬೆಂಬಲನೀಡಕೂಡದು ಎಂದು ನೇಪಾಳ ಪ್ರಧಾನಿ ಮಹಾರಾಜ ಮೋಹನ್ ಶಂಷೇರ್ ಜಂಗ್‌ರವರು ತಮ್ಮ ನಾಡಿನ ಜನರನ್ನು ಮತ್ತು ಬಂಧುಗಳನ್ನು ಉದ್ದೇಶಿಸಿ ಮನವಿ ಮಾಡಿಕೊಂಡಿದ್ದಾರೆ.

ಭೀಕರ ಕೊಲೆ

ಪೆಪ್ಸು ಸರ್ಕಾರದ ಪುನರ್ವ್ಯವಸ್ಥಾ ಶಾಖೆಯ ಅಧಿಕಾರಿಗಳಾದ ಸರ್ದಾರ್ ರಾಮ ಪ್ರಸಾದ್ ಸಿಂಗ್‌ರು ನಿನ್ನೆ ರಾತ್ರಿ ಕೊಲೆಮಾಡಲ್ಪಟ್ಟರು. ಯಾರೋ ದುರಾತ್ಮರು ರಾತ್ರಿ ಅವರ ಮನೆನುಗ್ಗಿ ಅತ್ಯಂತ ಹರಿತವಾದ ಆಯುಧಗಳಿಂದ ಅವರ ಸೇದ ಮೇಲೆ ಲೆಕ್ಕವಿಲ್ಲದಷ್ಟು ಗಾಯಮಾಡಿ ಸಿಂಗರನ್ನು ಘೋರವಾದ ಸಾವಿಗೆ ಈಡುಮಾಡಿದರು.

ಕೊಲೆಮಾಡಲ್ಪಟ್ಟ ಸಿಂಗರ ದೇಹ ರಕ್ತ ಮಡುವಿನಲ್ಲಿತ್ತು. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಕೊಲೆಗೀಡಾದ ರಾಮ ಪ್ರಸಾದ ಸಿಂಗರು ಕೇವಲ ಎರಡು ವಾರದಹಿಂದೆ ಮದುವೆ ಮಾಡಿಕೊಂಡಿದ್ದರು.

ಬೀಹಾರಿಗೆ ನೆಹರೂ

ಬೀಹಾರಿನ ಆಹಾರ-ಪರಿಸ್ಥಿತಿಯನ್ನು ಪರಿಶೀಲಿಸಲು ಪಂಡಿತನೆಹರೂ ಬಿಹಾರಿಗೆ ಸದ್ಯದಲ್ಲೇ ಭೇಟಿ ಕೊಡಲಿರುವರು.

ವಿಚಾರಣಾ ಸಮಿತಿ ನೇಮಕ

ಶ್ರೀ ಹೆಚ್. ಡಿ. ಮುದ್ಗಲ್‌ರವರ ವ್ಯವಹಾರವನ್ನು ವಿಚಾರಣೆ ನಡೆಸಲು ಪಾರ್ಲಿಮೆಂಟ್ ಶ್ರೀ ಟಿ.ಟಿ. ಕೃಷ್ಣಮಾಚಾರ್‌ರವರ ಅಧ್ಯಕ್ಷತೆಯಲ್ಲಿ ೫ ಜನರ ಸಮಿತಿಯನ್ನು ನೇಮಿಸಿದೆ

‡ ಟೆಹರಾನಿನಿಂದ ಇಬ್ಬರು ಅಧಿಕಾರಿಗಳು ಈದಿನ ಆ ಬಡಾನಿಗೆ ತೆರಳಿ ಎಣ್ಣೆ ಕಂಪೆನಿಯ ಅಧಿಕಾರ ಸೂತ್ರ ವಹಿಸಿಕೊಳ್ಳುವರು. ನಾಳೆ ಇನ್ನೊಬ್ಬ ಅಧಿಕಾರಿಗಳು ಆ ಬಡಾನಿಗೆ ತೆರಳುವರು.

ಕೋಸಿ ಅಣೆಕಟ್ಟು ಯೋಜನೆ ಪರಿಶೀಲನೆ

ನೇಪಾಳ ಮತ್ತು ಬಿಹಾರದ ಮಧ್ಯೆ ಹರಿಯುವ ಕೋಸಿ ನದಿಗೆ ಅಣೆಕಟ್ಟೆ ಕಟ್ಟುವ ಯೋಜನೆಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಏಳು ಜನರನ್ನೊಳಗೊಂಡ ನಿಪುಣರ ಸಮಿತಿ ರಚಿಸಿರುವುದು ಶ್ರೀ ಎಸ್. ಸಿ. ಮಜುಂದಾರ್‌ರವರು ಈ ಸಮಿತಿಯ ಅಧ್ಯಕ್ಷರು.

ಈ ನದಿಯ ಅಣೆಕಟ್ಟಿನ ಯೋಜನೆಯನ್ನು ಸುಲಭವಾಗಿ ಏಳು ಹಂತಗಳಲ್ಲಿ ನಿರ್ಮಿಸಲಾಗುವುದು. ಮೊದಲನೇ ಹಂತಕ್ಕೆ ಸುಮಾರು ಹತ್ತು ಕೋಟಿ ರೂಗಳು ವೆಚ್ಚವಾಗಬಹುದೆಂದು ನಿರೀಕ್ಷಿಸಲಾಗಿದೆ ಮೊದಲನೆ ಹಂತದ ಕಾರ್ಯಕ್ರಮದಲ್ಲಿ ಅಣೆಕಟ್ಟು ... ನವರಿಗೆ ರೈಲ್ವೆ ಮತ್ತು ವಿದ್ಯುತ್ ಹಾಕಲಾಗುವುದು.

ಸಿಲೋನಿಗೆ ಇನ್ಷೂರ್ ಪಾರ್ಸಲ್

ಸಿಲೋನಿಗೆ ಇನ್ಷೂರ್ ಮಾಡಿದ ಪಾರ್ಸಲ್‌ಗಳನ್ನು ವಾಯು ಮಾರ್ಗದಲ್ಲಿ ಕೊಂಡೊಯ್ಯಲು ತೆಗೆದುಕೊಳ್ಳುವುದಿಲ್ಲ ಎಂದು ಮದರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ಪ್ರಕಟಿಸಿದ್ದಾರೆ.

ಸಕ್ಕರೆ ಮೇಲಿನ ಹತೋಟಿ ತೆಗೆಯುವುದಿಲ್ಲ

ಸಕ್ಕರೆ ಮೇಲಿನ ಹತೋಟಿಯನ್ನು ತೆಗೆಯುವುದಿಲ್ಲ. ಈಗಿನಂತೆಯೇ ಸಕ್ಕರೆಯನ್ನು ಕಂಟ್ರೋಲ್ ದರದಲ್ಲಿ ರೇಷನ್ ಡಿಪೋಗಳಲ್ಲಿ ಮಾರಲಾಗುವುದು. ಅಧಿಕ ಪ್ರಮಾಣದಲ್ಲಿ ಸಕ್ಕರೆ ತಯಾರಿಸುವ ಕಾರ್ಖಾನೆಗಳು ಹೆಚ್ಚು ಸಕ್ಕರೆಯನ್ನು ಸ್ವತಂತ್ರವಾಗಿ ಮಾರಲು ಅವಕಾಶ ಈಗಿನಂತೆಯೇ ಮುಂದುವರಿಯುವುದು

ರಂಜಾನ್‌ಗಾಗಿ ಖೈದಿಗಳ ಬಿಡುಗಡೆ

ಇಂಡೋನೇಷ್ಯಾದಲ್ಲಿ ಸುಮಾರು ಸಾವಿರಮಂದಿ ಮಹಮದೀಯ ಖೈದಿಗಳನ್ನು ರಂಜಾನ್‌ಹಬ್ಬ ಆಚರಿಸಲು ಬಿಡುಗಡೆ ಮಾಡಲಾಗಿದೆ.

ರಷ್ಯಾಕ್ಕೆ ಭಾರತದ ವಿಜ್ಞಾನಿಗಳು

ರಷ್ಯಾದ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಸಂಘವು ಇತ್ತ ಆಹ್ವಾನವನ್ನು ಈವರೆಗೆ ಡಾ|| ಚಿನೋಯ್ ಡಾ|| ಮಹಲನೋಬಿ ಮತ್ತು ಭಟ್ಟ ಒಪ್ಪಿಕೊಂಡಿದ್ದಾರೆ. ಡಾ|| ಭಾಟ್ನಗರ್‌ರವರೂ ಸಹ ಸಾಧ್ಯವಾದರೆ ರಷ್ಯಾ ಪ್ರವಾಸ ಕೈಗೊಳ್ಳುವರು ಎಂಬುದಾಗಿ ಡಾ|| ಕೇಸ್ಕರ್‌ರವರು ಶ್ರೀ ಎಸ್. ಎನ್. ದಾಸ್‌ರವರ ಪ್ರಶ್ನೆಗೆ ಪಾರ್ಲಿಮೆಂಟಿನಲ್ಲಿ ಉತ್ತರ ಕೊಡುತ್ತಾ ತಿಳಿಸಿದರು.

ಪತ್ರಿಕೋದ್ಯೋಗಿಯ ದಸ್ತಗಿರಿ

ಪೂರ್ವ ಪಾಕೀಸ್ಥಾನ್ ಸರ್ಕಾರವು ಪತ್ರಿಕೋದ್ಯೋಗಿ ಜ|| ಅಹಮದ್ ಅಲಿಖಾನ್‌ರವರ ಜೊತೆಗೆ ನಾಲ್ವರನ್ನು ದಸ್ತಗಿರಿಮಾಡಿರುವುದನ್ನು ಪಶ್ಚಿಮ ಬಂಗಾಳ ಪತ್ರಿಕೋದ್ಯೋಗಿ ಸಂಘವು ಖಂಡಿಸಿ ಅವರನ್ನು ಕೂಡಲೇ ಬಿಡುಗಡೆಮಾಡಬೇಕೆಂದು ತಿಳಿಸಿದೆ.

ಅಧಿಕ ರೇಷನ್

ರೇಷನ್ ಪ್ರಮಾಣವನ್ನು ಪುನಃ ೧೨ ಔನ್ಸ್‌ಗಳಿಗೆ ಒರುವ ಆಗಸ್ಟುವೇಳೆಗೆ ಏರಿಸಬಹುದೆಂದು ಬೊಂಬಾಯಿನಲ್ಲಿ ಅಧಿಕಾರಿಗಳೊಬ್ಬರು ಹೇಳಿರುವರು.

ಹಿಂದೀ ಪರೀಕ್ಷೆ

ಸರ್ಕಾರೀ ಅಧಿಕಾರಿಗಳು ಇಲಾಖೆ ಪರೀಕ್ಷೆಗಳಲ್ಲಿ ಹಿಂದೀ ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕೆಂದು ಭಾರತ ಸರ್ಕಾರವು ನಿರ್ಧರಿಸಿದೆ

ಆಹಾರದ ಇಲಾಖೆ ವಹಿಸಿಕೊಳ್ಳುವುದಿಲ್ಲ

ಮೈಸೂರಿನ ಮುಖ್ಯಮಂತ್ರಿಗಳಿಗೆ ವಿಶೇಷ ಕಾರ್ಯಗೌರವಗಳಿರುವುದರಿಂದಲೂ ಮತ್ತು ದಿನಂಪ್ರತಿ ಆ ಇಲಾಖೆಯ ಕಾರ್ಯಕಲಾಪಗಳಿಗೆ ವಿಶೇಷ ಗಮನಕೊಡಬೇಕಾಗಿರುವುದರಿಂದಲೂ ಆಹಾರದ ಇಲಾಖೆಯನ್ನು ಮುಖ್ಯಮಂತ್ರಿಗಳು ವಹಿಸಿಕೊಳ್ಳುವುದಿಲ್ಲವೆಂದು ಹೇಳಲಾಗಿದೆ.

‡ ಶ್ರೀ ಎಲ್.ಎಸ್. ರಾಜುರವರನ್ನು ಮೊನ್ನೆ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು.

ಜನರಲ್ ಕಾರಿಯಪ್ಪ

ಸ್ಪೆ.ಸ. ಫೋನ್] ೯. ಜೂನ್ ೮

ಜನರಲ್ ಕಾರಿಯಪ್ಪನವರು ಬೆಂಗಳೂರಿಗೆ ಮೈಸೂರಿನಿಂದ ೧೨-೩೦ ಗಂಟೆಗೆ ಆಗಮಿಸಿದರು ರೆಸಿಡೆನ್ಸಿಯಲ್ಲಿ ಸರ್ಕಾರದ ಕಾರ್ಯದರ್ಶಿ, ರೆವಿನ್ಯೂ ಸೆಕ್ರೆಟರಿ ಸ್ವಾಗತಿಸಿದರು. ಮೈಸೂರು ಲಾನ್ಸರ್ಸ್‌ನವರು ಗೌರವರಕ್ಷೆ ಸಲ್ಲಿಸಿದರು. ಮಧ್ಯಾಹ್ನ ಜನರಲ್ ಕಾರಿಯಪ್ಪನವರು ಕೃಷ್ಣರಾಜೇಂದ್ರ ಜ್ಯೂಬಿಲಿ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್, ಜಯಚಾಮರಾಜೇಂದ್ರ ಆಕುಪೇಷನಲ್ ಇನ್‌ಸ್ಟಿಟ್ಯೂಟ್, ಸೋಪ್ ಫ್ಯಾಕ್ಟರಿಗಳಿಗೆ ಭೇಟಿಯಿತ್ತರು.

ಈ ಕೇಂದ್ರಗಳಲ್ಲಿ ಕೆಲವು ನಿವೃತ್ತ, ಸೈನ್ಯೀಕರಿಗೆ ಪಂಪೇತು ಕೊಡಲೇರ್ಪಡಿಸಬೇಕೆಂದು ಸಲಹೆಯಿತ್ತರು. ಜಯಚಾಮರಾಜೇಂದ್ರ ಆಕುಪೇಷನಲ್ ಇನ್‌ಸ್ಟಿಟ್ಯೂಟಿಗೆ ೩೦ ಜನರನ್ನು ತೆಗೆದುಕೊಳ್ಳಲಾಗುವುದೆಂದು ಸ್ಪೆಷಲ್ ಆಫೀಸರ್ ಸಮ್ಮತಿಯನ್ನು ವ್ಯಕ್ತಪಡಿಸಿದರು.

‡ ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಬಾಷ್ಯಂರವರು ೯ನೇ ತಾ||ನಿಂದ ೧೬ನೇ ತಾ||ನ ವರೆಗೆ ಮಂಡ್ಯ, ಮೈಸೂರು ಜಿಲ್ಲೆ ಮತ್ತು ಊಟಿ ಪ್ರವಾಸ ಕೈಗೊಳ್ಳುವರು.

ಮೈಸೂರಿನಲ್ಲಿ ಈ ಸಲ ಅವರು 'ವೆಸ್ಟ್ ಲೇಕ್'ನಲ್ಲಿ ಬಿಡಾರ ಮಾಡುವರು.

ಹೋಟೇಲು ಮಾಲೀಕರ ವಿರೋಧ

ಮೈಸೂರು ಜೂನ್ ೮

ಮೈಸೂರು ನಗರ ಪೌರಸಭೆಯು ಹೋಟೇಲುಗಳ ಲೈಸೆನ್ಸ್‌ಫೀಯನ್ನು ೨೫ ರೂ.ಗೆ ಕಡಿಮೆಯಿಲ್ಲದೆ ೫೦೦ ರೂ.ಗೆ ಹೆಚ್ಚಿಗೆಯಿಲ್ಲದೆ, ಅವರು ಕೊಡುತ್ತಿರುವ ಹೋಟೇಲುಗಳ ಒಂದು ಬಾಡಿಗೆ ಹಣವೆಂದು ನಿಷ್ಕರ್ಷಿಸಿರುವುದನ್ನು ತಮ್ಮ ೯-೫-೩೧ ಮತ್ತು ೪-೬,೫೧ರಲ್ಲಿ ನಡೆಸಿದ ಸಭೆಯಲ್ಲಿ ವಿರೋಧಿಸಿ, ಇದು ಮಾಲೀಕರಿಗೆ ವಿಶೇಷ ನಷ್ಟವನ್ನುಂಟುಮಾಡುವುದಲ್ಲದೆ ಭಾರತದಲ್ಲಿ ಎಲ್ಲಿಯೂ ಈರೀತಿ ಇಲ್ಲವೆಂದು ಠರಾವು ಮಾಡಿರುವರು,

‡ ಬೊಂಬಾಯಿನ ಬೆಳಗಾಮ್ ಜಿಲ್ಲೆಯಲ್ಲಿ ಶ್ರೀ ಎಸ್. ಕೆ. ಕಲ್ಯಾಣಿ ಮತ್ತು ಶ್ರೀ ಎಸ್. ಜಿ. ಕುಂಬಾರವಾಡಿ ಎಂಬುವವರು ಎರಡೆಯೊಂದಕ್ಕೆ ೫೧೪ ಮತ್ತು ೬೩೧೫ ಪೌಂಡು ಒತ್ತವನ್ನು ಬೆಳೆದಿರುವರು.

ವಿದೇಶಗಳಲ್ಲಿ ಭಾರತ ರಾಯಭಾರಿಗಳು

ವಿದೇಶ ರಾಷ್ಟ್ರಗಳಲ್ಲಿ ಭಾರತದ ೩೦ ರಾಯಭಾರಿಗಳಿದ್ದಾರೆ. ಆದರೆ ಭಾರತದಲ್ಲಿ ೩೮ ಮಂದಿ ವಿದೇಶ ರಾಯಭಾರಿಗಳಿದ್ದಾರೆ

* ಮೈಸೂರು ರೇಷನ್ ಕಾರ್ಡುದಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಡಾ|| ಬಿ. ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಈ ತೀರ್ಮಾನಗಳನ್ನು ಮಾಡಿದೆ.

1] ಮೇ ಮಾಹೆಯಲ್ಲಿ ಕಾರ್ಡುದಾರರು ರೇಷನ್ ತೆಗೆದುಕೊಳ್ಳದೆ ಉಳಿಕೆ ಆಗಿರುವ ಧಾನ್ಯವನ್ನು ಬಿಹಾರಿನ ಕ್ಷಾಮನಿಧಿಯಿಂದಲಾದರೂ ಅಥವಾ ಸರ್ಕಾರಿ ಫಂಡಿನಿಂದಲಾದರೂ ಕೊಂಡು ಬಿಹಾರಿನ ಕ್ಷಾಮ ಪೀಡಿತರಿಗೆ ಸರ್ಕಾರವು ತುರ್ತು ಕಳುಹಿಸಿಕೊಡಬೇಕೆಂದೂ, ೧೯೫೧ನೇ ಜನವರಿ ಆರಂಭವಾಯಿತು ಮೇ ಮಾಹೆವರಗಿನ ಮೇಲ್ಕಂಡ ಉಳಿತಾಯವಾಗಿರುವ ಲೆಖ್ಖವನ್ನು ಕೊಡಬೇಕೆಂದು ಸಭೆಯು ಪ್ರಾರ್ಥಿಸುತ್ತದೆ

2] ಆಹಾರ ಮತ್ತು ಬಟ್ಟೆಗಳ ಮೇಲಿನ ಹತೋಟಿಯನ್ನು ರದ್ದು ಪಡಿಸುವವರೆಗೆ ಇತರ ಪ್ರಾಂತ್ಯಗಳಲ್ಲಿ ಕೊಡುತ್ತಿರುವಂತೆ ಮೈಸೂರು ನಗರದಲ್ಲಿಯೂ ರೇಷನ್ ಹೆಚ್ಚಿಸಬೇಕೆಂದೂ, ಶೂಕದ ಮೂಲ್ಕ ಶುದ್ಧವಾದ ಪದಾರ್ಥಗಳನ್ನು ಕೊಡಬೇಕೆಂದೂ ಹಾಲು, ಮೊಸರು, ಸೌದೆ, ವಗೈರೆ ನಿತ್ಯ ಜೀವನಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಸುಲಭ ಬೆಲೆಯಿಂದ ಒದಗಿಸಿಕೊಳ್ಳಲು ಕಾಳಸಂತೆಗೆ ಒಡಲು ಬಹಿರಂಗಸಂತೆಗೆ ಅವಕಾಶ ಕೊಡಬೇಕೆಂದು ಸಮಿತಿಯು ಸರಕಾರವನ್ನು ಪ್ರಾರ್ಥಿಸುತ್ತದೆ

3] ನಗರವಾಸಿಗಳಾದ ವ್ಯಾಪಾರಿ ಹೋಲ್ಡರುಗಳು ಮತ್ತು ಶ್ರೀಮಂತ ಬಾಂಧವರು ತಮ್ಮ ಸಂತೋಷಾನುಸಾರ ಬಿಹಾರ್ ಕ್ಷಾಮ ಪೀಡಿತ ಬಾಂಧವರಿಗೆ ತಮ್ಮ ಸಹಾಯವನ್ನು ಅಧ್ಯಕ್ಷರ ಹೆಸರಿಗೆ ಕಳುಹಿಸಿ ಕೊಡಬೇಕೆಂದು ಪ್ರಾರ್ಥಿಸುತ್ತದೆ.

4] ಈ ಸಂಘವು ಇದುವರೆಗೂ ಅನೇಕ ವೇಳೆ ತೊಂದರೆಗಳನ್ನು ಸರಿಪಡಿಸುವಂತೆ ಕೇಳಿಕೊಳ್ಳುತ್ತಿದ್ದಾಗ್ಯೂ ಸರ್ಕಾರವು ಪ್ರಜೆಗಳ ಬೇಡಿಕೆಯನ್ನು ಲೇಶವೂ ಈಡೇರಿಸದಿರುವುದಕ್ಕಾಗಿ ಈ ಸಭೆಯು ತೀವ್ರಪ್ರತಿಭಟನೆಯನ್ನು ಸೂಚಿಸಿ ಇನ್ನು ಒಂದು ತಿಂಗಳೊಳಗಾಗಿಯಾದರೂ ಸಂಘದ ಬೇಡಿಕೆಗಳನ್ನು ನಡೆಸಿಕೊಡಬೇಕೆಂದು ಕಟ್ಟಕಡೆಯದಾಗಿ ಸರ್ಕಾರವನ್ನು ಸಭೆಯು ಒತ್ತಾಯ ಪಡಿಸುತ್ತದೆ.

5] ಕಾನೂನು ಭಂಗ ಮತ್ತು ಸತ್ಯಾಗ್ರಹವನ್ನು ಮಾಡಬೇಕೆಂಬ ಸಲಹೆಯನ್ನು ಮುಂದುವರಿಸಿ ಕಾಲೋಚಿತವಾಗಿ ವಿಮರ್ಶೆಗೆ ತೆಗೆದು ಕೊಳ್ಳಬೇಕೆಂದು ತೀರ್ಮಾನಿಸಲಾಯಿತು

ಗ್ರಾಮಾಧಿಕಾರಿಗಳು ಸರ್ಕಾರಿ ನೌಕರರಲ್ಲ

ಅವರಿಗಿರುವ ಹಕ್ಕುಬಾಧ್ಯತೆಗಳನ್ನು ಮೊಟಕು ಮಾಡಬಾರದು

ಮೈಸೂರು ಜೂನ್ ೮

ಸರ್ಕಾರದ ಆಡಳಿತವನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಬೇಕಾದರೆ ಗ್ರಾಮಾಧಿಕಾರಿಗಳ ನೆರವನ್ನು ಪಡೆಯದೆ ಸಾಧ್ಯವಿಲ್ಲ. ಯಾವ ಪಕ್ಷವು ಅಧಿಕಾರಕ್ಕೆ ಬಂದರೂ ಗ್ರಾಮಗಳಲ್ಲಿ ಪ್ರಭಾವಶಾಲಿಗಳಾಗಿರುವ ಗ್ರಾಮಾಧಿಕಾರಿಗಳ ಸಹಾಯವು ಬೇಕಾಗುತ್ತದೆ. ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ಸಿನವರು ಗ್ರಾಮಾಧಿಕಾರಿಗಳು ಸರ್ಕಾರಿ ನೌಕರರಲ್ಲವೆಂದು ಹೇಳುತ್ತಲಿದ್ದು ಅಧಿಕಾರಕ್ಕೆ ಬಂದಮೇಲೆ ಅವರನ್ನು ಸರ್ಕಾರಿ ಅಧಿಕಾರಿಗಳೆಂದು ಹೇಳುತ್ತಾ ಅವರು ಯಾವ ಚುನಾವಣೆ ಮುಂತಾದ ರಾಜಕೀಯದಲ್ಲಿ ಭಾಗವಹಿಸಕೂಡದೆಂದು ಹೇಳಿದರೆ ಆಶ್ಚರ್ಯವಾಗುತ್ತದೆ. ಗ್ರಾಮಾಧಿಕಾರಿಗಳು ಪರ್ಮಿಟ್, ಲೈಸನ್ಸ್‌ದಾರರು, ಕಂಟ್ರಾಕ್ಟರುಗಳಿಗಿಂತ ಕಡಮೆಯಿಲ್ಲ ಅವರು ಚುನಾವಣೆಗೆ ನಿಲ್ಲಬಹುದೆಂದು ಹೇಳುವಾಗ ಗ್ರಾಮಾಧಿಕಾರಿಗಳನ್ನು ತಡೆಗಟ್ಟುವುದು ನ್ಯಾಯವಲ್ಲವೆಂದು ಹೈದರಾಬಾದಿನ ಮಾಜಿ ಮಂತ್ರಿ ಶ್ರೀ ಪಿ. ಹಚ್. ಕೃಷ್ಣರಾಯರು ಇಂದು ಬೆಳಗ್ಗೆ ದಕ್ಷಿಣಭಾರತ ಗ್ರಾಮಾಧಿಕಾರಿಗಳ ಪ್ರಥಮಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು. ನಿವೃತ್ತ ಎಕ್ಸೈಜು ಕಮಿಷನರ್ ಶ್ರೀ ಎ ಸುಬ್ರಹ್ಮಣ್ಯಅಯ್ಯರ್ ಅಧ್ಯಕ್ಷತೆವಹಿಸಿದ್ದರು. ತಮಿಳುನಾಡು, ಮಲಬಾರ್, ಆಂಧ್ರ, ರಾಯಲಸೀಮೆ, ಕರ್ನಾಟಕ ಮುಂತಾದ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಶ್ರೀ ಕೃಷ್ಣರಾಯರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಗ್ರಾಮಾಧಿಕಾರಿಗಳು ಒಂದು ಪ್ರತ್ಯೇಕ ಪಂಗಡಕ್ಕೆ ಸೇರಿ, ತಮ್ಮ ತಮ್ಮ ಸರಹದ್ದಿನೊಳಗೆ ಮಾನ್ಯತೆ ಪಡೆಯುವುದನ್ನು ಸಹಿಸಲಾರದ ಕೆಲವರು ಅವರ ಮೇಲೆ ಆರೋಪಣೆಗಳನ್ನು ತರಲಾರಂಭಿಸಿರುವರು. ? ಸಮಿತಿ... ರತ್ವವು ವಂಶಪಾರಂಪರ್ಯವಾಗಿ ಬರುತ್ತಲಿರುವುದು ಅನೇಕರಿಗೆ ಬೇಸರಿಕೆಯನ್ನುಂಟು ಮಾಡಿದೆ ಈಗ ಇವರ ವಿಷಯವಾಗಿ ಉದ್ಭವಿಸುವುದು ವಂಶಪಾರಂಪರ್ಯವಾಗಿ ಗ್ರಾಮಾಧಿಕಾರತ್ವ ಪಡೆದಿರುವುದು. ಅವರ ವೇತನ ಮತ್ತು ಅವರು ಸರ್ಕಾರಿ ನೌಕರರೇ ಅಲ್ಲವೇ ಎಂಬ ಅವರ ಅಂತಸ್ತು ಅನಾದಿಯಿಂದಲೂ ಗ್ರಾಮಾಧಿಕಾರಿಗಳು ಆಡಳಿತದಲ್ಲಿ ದಕ್ಷತೆಯನ್ನು ಕಾಪಾಡಿಕೊಂಡು ಬಂದಿರುವರು. ಬ್ರಿಟಿಷರ ಆಳ್ವಿಕೆಯು ಪ್ರಾರಂಭವಾದಾಗಿನಿಂದ ಇವರ ಸ್ಥಿತಿಯು ಹೀನ ಸ್ಥಿತಿಗೆ ಬರಲು ಪ್ರಾರಂಭವಾಯಿತು ಆದಾಗ್ಯೂ ಈಗಲೂ ಇವರಿಲ್ಲದೆ ಸರ್ಕಾರಿ ಆಡಳಿತ ನಡೆಸಲಾಗುವುದಿಲ್ಲ. ಇಂದಿನ ಸ್ಥಿತಿಯಲ್ಲಿ ಇವರ ಹಕ್ಕುಬಾಧ್ಯತೆಗಳನ್ನು ಕಿತ್ತೊಗೆದು ಸರ್ಕಾರಿ ನೌಕರರನ್ನಾಗಿ ಸಂಬಳದ ಮೇಲೆ ನೇಮಿಸುವುದು ಹಿತಕರವಲ್ಲ ಇವರ ಕೆಲಸಕಾರ್ಯಗಳು ಸುಗಮವಾಗಿ ಇದರಿಂದ ನಡೆಯಲಾರವು. ಅವಶ್ಯಬಿದ್ದೊಡೆ ಮಾತ್ರ ಒದಲಾಯಿಸಬೇಕು. ಗ್ರಾಮಾಧಿಕಾರಿಗಳ ಪ್ರಾಮುಖ್ಯತೆಯೇನೆಂಬುದನ್ನು ಅರಿತುಕೊಂಡು ಅವರ ದರ್ಜೆಯನ್ನಿಳಿಸಕೂಡದು.

ಗ್ರಾಮಾಧಿಕಾರಿಗಳು ಇಂದಿನ ಸ್ವಾತಂತ್ರ ಗಳಿಸಿದ ರಾಷ್ಟ್ರದಲ್ಲಿ ಅಲ್ಪಸ್ವಲ್ಪ ಸ್ವಾರ್ಥಕ್ಕೆ ಧಕ್ಕೆ ಬಂದರೂ ಅದನ್ನು ಪರಿಗಣಿಸದೆ ದೇಶದ ಹಿತದೃಷ್ಟಿಯಿಂದ ದೇಶದ ಏಳಿಗೆಗಾಗಿ ದುಡಿಯಬೇಕು ಎಂದು ಹೇಳಿದರು.

ಈ ಸಮ್ಮೇಳನವನ್ನು ಏರ್ಪಡಿಸುವುದರಲ್ಲಿ ಆಸಕ್ತರಾಗಿ ತಮ್ಮ ತಮ್ಮ ಕರ್ತವ್ಯವನ್ನು ಸರಿಯಾಗಿ ಪಾಲಿಸುತ್ತಾ ಬಂದು, ಸರ್ಕಾರವೂ ಈ ಗುಂಪಿಗೆ ಕೊಡಬೇಕಾದ ಮಾನ್ಯತೆಯನ್ನು ಕೊಡುವಂತಾಗಲೆಂದು ಅಧ್ಯಕ್ಷರು ಹಾರೈಸಿದರು.

ನೀರು ನಿಲ್ಲಿಸಲಾಗುವುದು

ಮೈಸೂರು ಸಿಟಿಯಲ್ಲಿ ಕೆಲವು ಕಡೆ ಪೈಪ್‌ಲೈನ್ ಕಾಮಗಾರಿ ನಡೆಯಬೇಕಾಗಿರುವುದರಿಂದ ತಾ|| ೯-೬-೧೯೫೧ನೇ ಶನಿವಾರ ಸಾಯಂಕಾಲ ೪ ಗಂಟೆಯಿಂದ ತಾ|| ೧೦-೬-೫೧ನೇ ಭಾನುವಾರ ಬೆಳಗ್ಗೆ ೬ ಗಂಟೆ ವರೆವಿಗೆ ಮೈಸೂರು ಸಿಟಿಯಲ್ಲಿ ನೀರಿನ ಸರಬರಾಜು ನಿಲ್ಲಿಸಲಾಗುತ್ತೆ. ಆದ್ದರಿಂದ ಪುರಜನರು ಪೂರ್ವಭಾವಿಯಾಗಿ ಸಾಕಾದಷ್ಟು ನೀರನ್ನು ಶೇಖರಿಸಿ ಇಟ್ಟುಕೊಳ್ಳಬೇಕಾಗಿ ಮುನಿಸಿಪಲ್ ಕಮೀಷನರ್ ವಿನಂತಿ ಮಾಡಿಕೊಂಡಿರುವರು.

ಒಲಂಪಿಯಾ * ಕಿಕ್ಕಿರಿದ 3ನೇ ವಾರ

7—6—51ರಿಂದ ದಿನವಹಿ 3 ಆಟಗಳು

ಸೂ ಪ ರ್ ಮ್ಯಾ ನ್

ಇದರಲ್ಲಿ ಜೊತೆಯಲ್ಲಿ 'ಎ ನೈಟ್ ವಿತ್ ಸ್ಟಾರ್ಸ್'

ಎಂಬ ರೀಲನ್ನು ಪ್ರದರ್ಶಿಸಲಾಗುತ್ತೆ

—: ಮುಂದಿನ ಬದಲಾವಣೆ:—

* ಹ ಮಾ ರಿ ಶಾ ನ್ *

ಪಾತ್ರ— ಯಾಕೂಬ್, ದುರ್ಗಾಖೋಟೆ, ಆಗ, ಭಾರತ್‌ಭೂಷಣ್,

ಯಶೋಧರ ಕಟ್ಟು, ಡೇವಿಡ್, ವೀರ ಮತ್ತಿತರರು

ಬೆಳಗಿನ ಪ್ರದರ್ಶನ —— ‡‡ —— 8-6-51ರಿಂದ

ಶಾಂತಾರಾಂರವರ 'ಡಾಕ್ಟರ್ ಕೊಟ್ನಿಸ್'

ಪ್ರಭಾ ೮-೬-೫೧ರಿಂದ ಅಮೋಘ ೨ನೇ ವಾರ

ಲಾರಲಪ್ಪ ಲಾರಲಪ್ಪ ಹಾಡಿದತಾರೆ ಮೀನ

ಹುಲ್ಲಗುಲ್ಲ ಹಾಡಿರುವ

ಶೂರೆ ಫಿಲಂಸ್‌ರವರ—

ಢೋಲಕ್

ಪಾತ್ರ— ಮೀನ, ಅಜಿತ್, ಯಶೋಧರ ಕಟ್ಟು, ಮಜ್ನು, ರಜನಿ,

FOR SALE

BUNGALOW WITH TWO OUT HOUSES

Fetching monthly Rent Rs. 100

Contact Box No. 4 SAMACHARA Mysore.

ರ ಣ ಜಿ ತ್

೮—೬—೫೧ರಿಂದ

ಅಮೋಘವಾದ ಪ್ರಾರಂಭ

‡ ಮೀನಾ, ‡ ರಹಿಮಾನ್,

‡ ಕಪೂರ್ ನಟಿಸಿರುವ

-:: ರಾಜಾ-ರಾಣಿ ::-

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಶಾ. ಸುಬ್ಬರಾವ್, ಮೋಹನ್ ಮುದ್ರಣಾಲಯ ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಿ. ನಂ. ಎ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೬—೧೯೫೧ ಸೋಮವಾರ [ಸಂಚಿಕೆ ೨೩೦

RAGHULAL & Co.
CHEMISTS
Sayyaji Rao Road
MYSORE

ಚಿರಾಪುಂಜಿಯಲ್ಲಿ ೨೪ ಗಂಟೆಗಳಲ್ಲಿ ೧೨ ಅಂಗುಲ ಮಳೆ

ಮೈಸೂರು ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಗಳಿಗೆ ಮಧುರಬಾಂಧವ್ಯವನ್ನುಂಟುಮಾಡಲಾಗುವುದು

೭ ಪ್ರಾರ್ಥನಾ ಮಂದಿರ ಭಸ್ಮ

ರಂಗೂನಿನಲ್ಲಿ ಜಗತ್ಪ್ರಸಿದ್ಧವಾದ ಶ್ವೇಡೆಗಾನ್ ದೇವಾಲಯಕ್ಕೆ ಬೆಂಕಿಬಿದ್ದು ೭ ಪ್ರಾರ್ಥನಾ ಮಂದಿರಗಳು ಭಸ್ಮವಾಗಿವೆ. ಬೆಂಕಿಗೆ ಕಾರಣ ತಿಳಿಯದು.

ಅಂಚೆ ಇಲಾಖೆ ದಕ್ಷತೆ?

ಮೈಸೂರು ಸರ್ಕಾರಿ ವಾರ್ತಾ ಕಛೇರಿಯಿಂದ ಕಳೆದ ಮಾಹೆ ೨೨ನೇ ತಾ|| ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನರಾಗಿರುವ ಶ್ರೀ ಹೆಚ್. ಬಿ. ಗುಂಡಪ್ಪಗೌಡರವರ ಬೆಂಗಳೂರಿನ ಮನೆಯ ವಿಳಾಸಕ್ಕೆ ಹಾಕಿದ್ದ ಒಂದು ಬುಕ್‌ಪೋಸ್ಟ್ ಕವರು (ವಿಳಾಸವನ್ನು ಟೈಪು ಮಾಡಿ ಕವರಿನ ಮೇಲೆ ಹತ್ತಿಸಲಾಗಿದೆ.) ಬೆಂಗಳೂರಿನಲ್ಲಿ ಅವರ ಮನೆಗೆ ತಲುಪದೆ ಮೈಸೂರಿಗೆ ೨೩ನೇ ತಾ|| ಬಂದು ಮೈಸೂರು ಪತ್ರಿಕೋದ್ಯೋಗಿ ಸಂಘದಲ್ಲಿ ಹಾಕಲಾಗಿತ್ತು. ಅದರ ಮೇಲೆ ಮೈಸೂರು ೨೩ನೇ ತಾ|| ನ ಅಂಚೆ ಗುರ್ತಿದೆ.

ಸರಿಯಾದ ವಿಳಾಸ ಬರೆದಿದ್ದರೂ ಮೈಸೂರಿಗೆ ಬಂದಿರುವುದು ಆಶ್ಚರ್ಯ.

ಮೈಸೂರುನಗರದಲ್ಲಿ ಜಾನುವಾರು

ಕಳೆದ ಮಾಹೆಯಲ್ಲಿ ನಡೆದ ಜಾನುವಾರು ಗಣತಿಯ ಪ್ರಕಾರ ಮೈಸೂರುನಗರದಲ್ಲಿ 3211 ಎತ್ತು, 26 ಕೋಣ, 5077 ಹಸು, 2640 ಎಮ್ಮೆ, 393 ಕುದುರೆ, 244 ಕತ್ತೆ,-13176 ಕೋಳಿ, 1443 ಮರಿದ ನೇಗಿಲು, 160 ಕಬ್ಬಿಣದ ನೇಗಿಲು, 1217 ಗಾಡಿಗಳೂ ಇವೆ.

ಪತ್ತೆಯಿಲ್ಲದ ಅಧಿಕಾರಿಗಳು

೧೫ ಸಾವಿರ ಗುಪ್ತ ಪೋಲೀಸಿನವರು ಬ್ರಿಟನ್ನಿನಿಂದ ಮಾಯವಾದ ಇಬ್ಬರು ನಿ ದೇಶ[illegible]ು ಅಧಿಕಾರಿಗಳನ್ನು ಸಿಕಲಿಯರಿದ [illegible]ಪಟ್ಟಣದ ವರೆಗೆ ಹುಡುಕುತ್ತಲಿರುವರು. ಅವರು ಪ್ರೇಗ್‌ಗೆ ಹೋಗಿರಬಹುದೆಂದು ಹೇಳಲಾಗಿದೆ.

ಗ್ರಾಮಸೇವಾ ಶಿಬಿರ

ಮೈಸೂರು ಜೂನ್ ೧೦

ಚಾಮರಾಜನಗರ ತಾಲ್ಲೂಕು ಹೆಬ್ಬಸೂರಿನಲ್ಲಿ ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯವರು ಏರ್ಪಡಿಸಿದ್ದ ಗ್ರಾಮಸೇವಾ ಶಿಬಿರ ಮುಕ್ತಾಯ ಸಮಾರಂಭವನ್ನು ಇಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಜನಾಬ್ ಕೆ. ಮಹಮ್ಮದ್ ಅಹಮದ್, ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಶ್ರೀ ಮಾದಯ್ಯಗೌಡ, ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ಕೃಷ್ಣರಾಯರು, ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ರಂಗರಾಮಯ್ಯ, ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ ಕೃಷ್ಣಮೂರ್ತಿ ಮುಂತಾದ ಅನೇಕ ಅಧಿಕಾರಿಗಳು ಆಗಮಿಸಿದ್ದರು.

ಚಾಮರಾಜನಗರ ಹೈಸ್ಕೂಲ್ ಉಪಾಧ್ಯಾಯರಾದ ಶ್ರೀ ಸಂಪತ್ಕುಮಾರಾಚಾರ್ಯರವರಿಂದ ಸ್ವಾಗತಗೀತೆಯಾದ ಮೇಲೆ ಚೀಫ್ ಎಕ್ಸಿಕ್ಯುಟಿವ್ ಆಫೀಸರು ಶಿಬಿರವು ೬-೫-೫೧ರಲ್ಲಿ ಪ್ರಾರಂಭವಾದುದು ಇಲ್ಲಿಯವರೆಗೆ ಗ್ರಾಮದಲ್ಲಿ ರಸ್ತೆ ರಿಪೇರಿ ಗ್ರಾಮನೈರ್ಮಲ್ಯ ಮುಂತಾದ ನಾನಾ ಕಾರ್ಯಗಳನ್ನು ಗ್ರಾಮಸ್ಥರ ಸಹಕಾರದಿಂದ ನಡೆಸಿರುವುದನ್ನೆಲ್ಲಾ ವಿವರಿಸಿದರು. ಸುಮಾರು ೭೫೦೪|- ರೂ. ಬೆಲೆಯ ಕಾರ್ಯವನ್ನೆಸಗಿರುವರು

ಶ್ರೀಗಳಾದ ರಂಗರಾಮಯ್ಯ ಮಾದಯ್ಯಗೌಡ ಮುಂತಾದವರ ಭಾಷಣವಾದ ಮೇಲೆ ಮುಖ್ಯಮಂತ್ರಿಗಳು ಮಾತನಾಡುತ್ತಾ, ಗ್ರಾಮ ಶಿಬಿರ ವ್ಯವಸ್ಥಾಪಕರು ವಿದ್ಯಾರ್ಥಿಗಳು, ಉಪಾಧ್ಯಾಯರು, ಗ್ರಾಮಸ್ಥರು ಮುಂತಾದವರ ಸಹಕಾರದಿಂದ ಮಾಡಿರುವ ಕೆಲಸಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಈ ಕಾರ್ಯವು ಮುಗಿದು ಎಲ್ಲರೂ ತೊರಟುಹೋಗುವಂತಾಗಿದ್ದಾರೆ. ಆದರೆ ಗ್ರಾಮವು ಈಗ ಎಷ್ಟು ಸೊಬಗಿನಿಂದ ಕಾಣುತ್ತಲಿದೆಯೋ ಅದನ್ನು ಗಮನಿಸಿ ಸದಾಕಾಲದಲ್ಲಿಯೂ ಒಂದೇ ರೀತಿ ಇರುವಂತೆ ಚಿಕ್ಕವರು, ದೊಡ್ಡವರು, ಧನಿಕರು, ಭಾಗ್ಯವಂತರು ಸ್ತ್ರೀಯರು, ಪುರುಷರು ಎಲ್ಲರೂ ಶ್ರಮಿಸಬೇಕೆಂದು ಹೇಳಿದರು

೨೫,೦೦೦ ಮಂದಿ ಕಾಂಗ್ರೆಸಿಗೆ ರಾಜೀನಾಮೆ

೨೫೦೦೦ ಮಂದಿ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರು ೧೭೨೦ ಕಾರ್ಯಕರ್ತರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತು ಪ್ರಜಾಪಕ್ಷಕ್ಕೆ ಸೇರಿದ್ದಾರೆಂದು ಪ್ರಜಾಪಕ್ಷದ ಕಛೇರಿಯಿಂದ ತಿಳಿದ ಬಂದಿದೆ.

ಉಚಿತ ಸೌಕರ್ಯ

ಮೈಸೂರು ಪೌರಸಭೆಯು ಬಡ ವಿದ್ಯಾರ್ಥಿಗಳ ಭೋಜನ ಸಮಿತಿಯಾಶ್ರಯದಲ್ಲಿ ಮಾಮೂಲಿನಂತೆ, ಮೈಸೂರು ನಗರದಲ್ಲಿ ಓದುವ ಎಲ್ಲಾ ಕೋಮಿನ ಬಡ ಹುಡುಗರಲ್ಲಿ ಕೆಲವರಿಗೆ ಭೋಜನ ಸೌಕರ್ಯಗಳನ್ನು ಏರ್ಪಡಿಸಲಾಗುತ್ತದೆ. ೧೯೫೧ ನೇ ಜುಲೈ ೧೬ನೇ ತಾ|| ಯೊಳಗಾಗಿ ಬಡವಿದ್ಯಾರ್ಥಿಗಳಿಂದ ಅರ್ಜಿಯನ್ನು ಸ್ವೀಕರಿಸಲಾಗುತ್ತದೆ. ಆಫೀಸು ಕೆಲಸ ಮಾಡುವ ಕಾಲದಲ್ಲಿ, ಬೆಳಗ್ಗೆ ೧೧ ಗಂಟೆಯಿಂದ ಸಂಜೆ ೫ ರವರೆಗೆ, ಮುನಿಸಿಪಲ್ ಆಫೀಸಿನ ಸೂಪರಿಂಟೆಂಡೆಂಟರಿಂದ ಅರ್ಜಿ ಫಾರಂಗಳನ್ನು ಪಡೆಯಬಹುದೆಂದು ಪೌರ ಸಭಾಧ್ಯಕ್ಷರು ತಿಳಿಸುತ್ತಾರೆ.

ಶ್ರೀ ಎಂ. ಸಿ. ಮಲ್ಲಪ್ಪ

ಮೈಸೂರು ಜೂನ್ ೧೦

ಮೈಸೂರು ಪ್ರಾಂತ್ಯ ಹಿಂದೂಮಹಾಸಭೆಯ ಅಧ್ಯಕ್ಷ ಶ್ರೀ ಎಂ. ಸಿ. ಮಲ್ಲಪ್ಪನವರು ಕಾಗೋಡಿನ ಪರಿಸ್ಥಿತಿಯನ್ನು ಅರಿತುಕೊಳ್ಳಲು ನಿನ್ನೆ ಸಾಗರ ಮಾರ್ಗವಾಗಿ ಕಾಗೋಡಿಗೆ ಪ್ರಯಾಣ ಮಾಡಿದರು. ಅವರು ಬೆಂಗಳೂರಿನಲ್ಲಿ ಶ್ರೀಗಳಾದ ಕೆ. ಹನುಮಂತಯ್ಯ, ಎ. ಜಿ. ರಾಮಚಂದ್ರರಾವ್ ಮುಂತಾದವರನ್ನು ಭೇಟಿ ಮಾಡಲಿರುವರು. ಮುಂಬರುವ ಚುನಾವಣೆಗಳ ಉಮೇದುವಾರರನ್ನು ಚುನಾಯಿಸಲು ಶಿವಮೊಗ್ಗಾ ಜಿಲ್ಲಾ ಪ್ರವಾಸ ಮಾಡುವರು.

ರಷ್ಯಾಕ್ಕೆ ಪರವಾನಿಗೆ

ರಷ್ಯಾಕ್ಕೆ ಹೋಗಲು ಭಾರತೀಯರಲ್ಲಿ ಅನೇಕರಿಗೆ ಪರವಾನಿಗೆಯನ್ನು ಕೊಟ್ಟಿದೆ. ಕೆಲವು ವ್ಯಕ್ತಿಗಳಿಗೆ ಮಾತ್ರ ಅವಶ್ಯಕವಾದ್ದರಿಂದ ನಿರಾಕರಣೆ ಮಾಡಲಾಗಿದೆ ಎಂದು ಭಾರತ ಸರ್ಕಾರವು ಪ್ರಕಟಿಸಿದೆ

೨೪ ಗಂಟೆಯಲ್ಲಿ ೧೨ ಅಂಗುಲ ಮಳೆ

ಅಸ್ಸಾಂನಲ್ಲಿ ವಿಶೇಷ ಮಳೆಯುಂಟಾಗಿ ಅನೇಕ ಕಡೆ ರಸ್ತೆ ಮುಂತಾದ ಸಂಚಾರ ಸೌಕರ್ಯಗಳೆಲ್ಲಾ ನಷ್ಟವಾಗಿದೆ ೨೪ ಗಂಟೆಯೊಳಗೆ ಚಿರಾಪುಂಜಿಯಲ್ಲಿ ೧೨ ಅಂಗುಲ, ಶಿಲಾಂಗಿನಲ್ಲಿ ೫ ಅಂಗುಲ ಮಳೆಯಾಗಿದೆ.

ಬಲಾತ್ಕಾರ ಮಿಲಿಟರಿ ಶಿಕ್ಷಣ ಸಾಧ್ಯವಿಲ್ಲ

ಭಾರತದಲ್ಲಿ ಬಲಾತ್ಕಾರ ಮಿಲಿಟರಿ ಶಿಕ್ಷಣ ಜಾರಿಗೆ ತರುವುದು ಕಾರ್ಯಸಾಧ್ಯವಾದ ಮಾತಲ್ಲವೆಂದು ಪಾರ್ಲಿಮೆಂಟಿನಲ್ಲಿ ರಕ್ಷಣಾ ಉಪಮಂತ್ರಿಗಳು ಹೇಳಿರುವರು.

ಪಾಟ್ನಾದಲ್ಲಿ ಸಭೆ

ಕಾಂಗ್ರೆಸ್ಸನ್ನು ಬಿಟ್ಟವರ ಮುಂದಾಳುಗಳ ಸಭೆಯು ೯ನೇ ತಾರೀಖು ಪಾಟ್ನಾದಲ್ಲಿ ಪ್ರಾರಂಭವಾಗಿ ಆಚಾರ್ಯ ಕೃಪಲಾನಿ, ಶ್ರೀ ಪಿ. ಸಿ. ಘೋಷ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸುಮಾರು ೪,೦೦೦ ಜನರು ಸೇರಿದ್ದರು.

ಎಂ. ಎಸ್. ಪರೀಕ್ಷೆ

ಬೆಂಗಳೂರು ಜೂನ್ ೯

ಈ ಸಾಲಿನಲ್ಲಿ ಮೈಸೂರು ಎಂ.ಎಸ್. ಪರೀಕ್ಷೆಗೆ ಕುಳಿತಿದ್ದ ೭೮,೦೬೭ ವಿದ್ಯಾರ್ಥಿಗಳ ಪೈಕಿ ೨೭,೦೧೭ ಜನ ತೇರ್ಗಡೆ ಹೊಂದಿರುವರು. ೭,೯೨೬ ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರು.

ಪಾರ್ಲಿಮೆಂಟರಿ ಕಾರ್ಯದರ್ಶಿಗಳು

ಪ್ರೊಫೇಸರ್ ಎಸ್.ಎನ್. ಮಿಶ್ರಾ ಮತ್ತು ಶ್ರೀ ಸತೀಶಚಂದ್ರರವರು ಪ್ರಧಾನ ಸಚಿವರ ಗೌರವ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ನೇಮಕವಾಗಿದ್ದಾರೆ

ಆಹಾರ ಸಂಗ್ರಹಣೆ ಆಜ್ಞೆ

ಮೈಸೂರಿನಲ್ಲಿ ಆಹಾರ ಸಂಗ್ರಹಣೆ ಆಜ್ಞೆಯನ್ನು ಈ ಮಾಸಾಂತ್ಯದ ನಂತರ ನಡಿಲಿಸಲಾಗುವುದೆಂದು ತಿಳಿಯಬರುತ್ತದೆ.

ಆಸ್ಪತ್ರೆಗಳ ಸಂಖ್ಯೆ ಹೆಚ್ಚಿಸುವುದಕ್ಕಿಂತಲೂ ಸ್ಥಾಪಿಸಿರುವುದನ್ನು ಸುವ್ಯವಸ್ಥೆಗೊಳಿಸಬೇಕು

ಮೈಸೂರು ಜೂನ್ ೧೦

ಹೊಸದಾಗಿ ಆಸ್ಪತ್ರೆಗಳನ್ನು ಸ್ಥಾಪಿಸುವುದಕ್ಕಿಂತಲೂ ಸ್ಥಾಪಿಸಿರುವ ಆಸ್ಪತ್ರೆಗಳು ಸುವ್ಯವಸ್ಥಿತ ರೀತಿಯಲ್ಲಿ ನಡೆದುಕೊಳ್ಳುವಂತೆ ತಕ್ಕ ಕಾರ್ಯಕ್ರಮವನ್ನೆಸಗಬೇಕೆಂಬುದೇ ಸರ್ಕಾರದ ಮುಂದಿನ ನೀತಿ. ಗ್ರಾಮಾಂತರದಲ್ಲಿ ನೂತನವಾಗಿ ತೆರೆದ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದೆ ತೊಂದರೆಯುಂಟಾಗಿದೆ. ಅವುಗಳನ್ನು ಮೊದಲು ಸರಿಪಡಿಸಬೇಕಾಗಿದೆ. ಡಾಕ್ಟರುಗಳ ಅಭಾವವು ವಿಶೇಷವಾಗಿದ್ದರೂ ಗ್ರಾಮಾಂತರ ಆಸ್ಪತ್ರೆಗಳಿಗೆ ವರ್ಗವಾದ ಡಾಕ್ಟರು ಯಾವುದಾದರೂ ಒಂದು ಕಾರಣದಿಂದ ಅಲ್ಲಿಗೆ ಹೋಗುವುದನ್ನು ತಪ್ಪಿಸಿಕೊಂಡು ನಗರಗಳಲ್ಲಿಯೇ ಇರಬೇಕೆಂದು ಶ್ರಮಿಸುತ್ತಲಿದ್ದಾರೆ. ಅದು ತಪ್ಪಬೇಕು. ಅದನ್ನು ತಪ್ಪಿಸಲು ಸರ್ಕಾರವು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರಲ್ಲಿದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ನಜರಬಾದ್ ಮೊಹಲ್ಲಾದಲ್ಲಿ ದಿವಂಗತ ಧರ್ಮರತ್ನಾಕರ ಶ್ರೀ ಪೆರುಮಾಳ್‌ಚೆಟ್ಟಿಯಾರ್‌ರವರ ಹೆಸರಿಗೆ ಆಸ್ಪತ್ರೆ ಶಂಕುಸ್ಥಾಪನಾ ಸಮಯದಲ್ಲಿ ಹೇಳಿದರು.

ಪ್ರಾರಂಭದಲ್ಲಿ ಮೈಸೂರು ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್ ಈ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನಡೆಸಬೇಕೆಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಕೋರುತ್ತಾ, ಶ್ರೀ ಪೆರುಮಾಳ್‌ಚೆಟ್ಟಿಯಾರ್‌ರವರು ಹೆಸರಿಗೆ ಆಸ್ಪತ್ರೆ ಕಟ್ಟಲು ೩೦,೦೦೦ ರೂ., ವೃತ್ತಿ ಶಿಕ್ಷಣಾಲಯಕ್ಕೆ ೧॥ ಲಕ್ಷ ರೂ., ಮಹಾಜನ ಶಾರದಾವಿಲಾಸ ಹೈಸ್ಕೂಲು ಕಾಲೇಜುಗಳು, ವನಿತಾಸದನ ಮುಂತಾದುವಕ್ಕೆ ೫೦ ಸಾವಿರ ರೂಗಳ ದಾನ ಮಾಡಿರುವುದನ್ನು ವಿವರಿಸುತ್ತಾ ಅವರ ಧಾರ್ಮಿಕ ಕಾರ್ಯಗಳನ್ನು ಪ್ರಶಂಸಿಸಿದರು.

ಈ ಆಸ್ಪತ್ರೆಯ ಕಟ್ಟಡಕ್ಕೆ ೬೫೦೦೦ ರೂ. ಅಂದಾಜಾಗಿದೆ. ಅದರ ಪೈಕಿ ಸರ್ಕಾರದವರು ೩೫೦೦೦ ರೂ ಕೊಡುವರು. ಆಸ್ಪತ್ರೆಗೆ ಸಲಕರಣೆ, ಪ್ರತಿವರ್ಷ ಔಷಧಿ ಮುಂತಾದುವುಗಳ ವೆಚ್ಚವನ್ನು ನಗರ ಪೌರಸಭೆಯು ವಹಿಸುವುದು. ಮೈಸೂರು ನಗರದಲ್ಲಿ ಕೃಷ್ಣರಾಜೇಂದ್ರ, ಚಲುವಾಂಬಾ, ಕ್ಷಯರೋಗ ಮುಂತಾದ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆಯು ಹೆಚ್ಚಾಗಿ ಸೌಕರ್ಯಗಳು ಕಡಮೆಯಾಗುತ್ತಲಿರುವ ಅಂಶವನ್ನು ಪ್ರಸ್ತಾಪಿಸಿ, ಸರ್ಕಾರದವರು ಕೂಡಲೇ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೋರಿದರು.

ಪೌರಸಭೆ ನಗರಾಭಿವೃದ್ಧಿ ಸಮಿತಿಗಳ ವಿಷಯವಾಗಿ ಮಾತನಾಡುತ್ತಾ ಈ ಸಂಸ್ಥೆಗಳಿಗೆ ನಿಕಟಬಾಂಧವ್ಯವು ಅವಶ್ಯಕವಾಗಿದೆ. ಅದಕ್ಕಾಗಿ ಸರ್ಕಾರವು ತಕ್ಕ ಏರ್ಪಾಡು ಮಾಡಬೇಕೆಂದು ಹೇಳಿದರು.

ದಾನಿಗಳ ಪರವಾಗಿ ಶ್ರೀ ಪೆರುಮಾಳ್‌ಚೆಟ್ಟಿಯಾರ್‌ರವರ ಪುತ್ರ ಶ್ರೀ. ಜಾನಕೀರಾಂರವರು ಮುಖ್ಯಮಂತ್ರಿಗಳು ಈ ಕಾರ್ಯವನ್ನೆಸಗಲು ಆಗಮಿಸಿದ್ದಕ್ಕಾಗಿ ಅವರನ್ನು ವಂದಿಸಿದರು.

ಮುಖ್ಯಮಂತ್ರಿಗಳು, ಧರ್ಮರತ್ನಾಕರ ಪೆರುಮಾಳ್ ಚೆಟ್ಟಿಯಾರ್‌ರವರ ಔದಾರ್ಯವನ್ನು ಕೊಂಡಾಡುತ್ತಾ ಮೈಸೂರು ಸಂಸ್ಥಾನದಲ್ಲಿ ಇತರ ಸಂಸ್ಥಾನಗಳಿಗಿಂತ ಹೆಚ್ಚಿಗೆ ವೈದ್ಯ ಸೌಕರ್ಯಗಳಿವೆ. ಆದರಲ್ಲೂ ಪಟ್ಟಣಗಳಲ್ಲಿ ಹೆಚ್ಚಾಗಿವೆ. ಪಟ್ಟಣಗಳ ವೈದ್ಯ ಸೌಕರ್ಯಗಳಿಗೆ ಸರ್ಕಾರವು ಗಮನ ಕೊಡುವುದು ಹೆಚ್ಚೆಂಬ ಅಪಾದನೆಯು ಬರುತ್ತಲಿದೆ. ಆದಾಗ್ಯೂ ೪-೫ ವರ್ಷಗಳಿಂದ ಸಂಸ್ಥಾನದಲ್ಲಿ ಆಸ್ಪತ್ರೆ, ಶಾಲೆ, ರಸ್ತೆ, ಮುಂತಾದ ಕಾರ್ಯಕ್ರಮಗಳು ವೇಗವಾಗಿ ನಡೆದಿವೆ. ಸಂಖ್ಯೆ ದೃಷ್ಟಿಯಿಂದ ಹೆಚ್ಚಿಗೆ ಸ್ಥಾಪಿಸುವ ಬದಲು ಸ್ಥಾಪಿಸಿರುವುದನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಸರ್ಕಾರವು ಏರ್ಪಡಿಸುವುದು ಈಗಿನ ನೀತಿಯಾಗಿದೆ. ಇವುಗಳಿಗೆ ಸಾರ್ವಜನಿಕರ ಸಹಕಾರವೂ ಅತ್ಯಗತ್ಯ. ನಮ್ಮ ಸೀಮೆಯಲ್ಲಿ ಸಾರ್ವಜನಿಕರು ಈ ಮಹತ್ಕಾರ್ಯಗಳಿಗೆ ವಿಶೇಷ ಸಹಾಯನೀಡುತ್ತಿರುವರು ಎಂದರು.

ವೃತ್ತಿ ಶಿಕ್ಷಣಾಲಯದ ವಿಷಯವಾಗಿ ಮಾತನಾಡುತ್ತಾ ಶ್ರೀ ಪೆರುಮಾಳ್‌ಚೆಟ್ಟಿಯಾರ್‌ರವರು ವೃತ್ತಿ ಶಿಕ್ಷಣಾಲಯಕ್ಕಾಗಿ ೧॥ ಲಕ್ಷ ರೂ. ಗಳನ್ನು ದಾನಮಾಡಿರುವರು. ಈ ಶಿಕ್ಷಣಾಲಯವನ್ನು ಈ ವರ್ಷದಿಂದಲೇ ಮೈಸೂರು ನಗರದಲ್ಲಿ ಸ್ಥಾಪಿಸಲಾಗುವುದೆಂದು ತಿಳಿಸಿದರು.

ನಗರಾಭಿವೃದ್ಧಿ ಮತ್ತು ಪೌರಸಭೆಗಳ ಮಧುರ ಬಾಂಧವ್ಯದ ವಿಷಯವಾಗಿ ಮುಖ್ಯಮಂತ್ರಿಗಳು ಮಾತನಾಡುತ್ತಾ ಸರ್ಕಾರದ ಗಮನಕ್ಕೆ ಇಂದಿನ ಪರಿಸ್ಥಿತಿಯೆಲ್ಲವೂ ಬಂದಿದೆ. ಈಗ ಪೌರಸಭಾಧ್ಯಕ್ಷರು ಬಹಿರಂಗವಾಗಿಯೂ ಹೇಳಿರುವರು. ಈ ವಿಷಯದಲ್ಲಿ ಸರ್ಕಾರವು ತೀವ್ರಾಲೋಚನೆಯಲ್ಲಿದೆ. ಉಭಯ ಕ್ಷೇತ್ರಗಳಲ್ಲಿಯೂ ಸಾಮರಸ್ಯವುಂಟಾಗಬೇಕೆಂಬುದೇ ಸರ್ಕಾರದ ಆಶಯ. ಸದ್ಯದಲ್ಲೇ ಸರ್ಕಾರವು ಈ ವಿಷಯದಲ್ಲಿ ತೀರ್ಮಾನಕ್ಕೆ ಬರಲಿದೆಯೆಂದು ಹೇಳಿದರು.

ಸಮಾರಂಭ ಮುಕ್ತಾಯವಾಗುವ ಮುನ್ನ ಶಂಕುಸ್ಥಾಪನೆಮಾಡಿದ ಬೆಳ್ಳಿಕರಣೆಯನ್ನು ಹರಾಜು ಹಾಕಲಾಯಿತು. ಪೌರಸದಸ್ಯ ಶ್ರೀ ಬಿ. ಸುಬ್ಬಣ್ಣನವರು ೨೦೧ ರೂ.ಗೆ ಬೀಟು ಮಾಡಿದರು. ಶ್ರೀ ಪೆರುಮಾಳ್‌ಚೆಟ್ಟಿಯವರ ಮಕ್ಕಳು ೫೦೧ ರೂ. ಗೆ ತಾವೇ ತೆಗೆದುಕೊಂಡರು.

ರಾಜಪ್ರಮುಖರು ಕೊಯಮತ್ತೂರಿಗೆ

ಮೈಸೂರು ರಾಜಪ್ರಮುಖರು ಕೊಯಮತ್ತೂರಿನಲ್ಲಿ ಇದೇ ೩೦ನೇ ತಾರೀಖು ಅರಣ್ಯ ಶಾಲೆಯ ಪ್ರಾರಂಭೋತ್ಸವವನ್ನು ನಡೆಸಲು ಭಾರತ ಸರ್ಕಾರದ ಆಹ್ವಾನವನ್ನು ಸ್ವೀಕರಿಸಿರುವರು.

ವಿಚಾರಣೆ

ಕೊಮೆಂಟಾಂಗ್ ಸೈನ್ಯಕ್ಕೆ ಬೆಂಬಲಿಗರ ವಿಚಾರಣೆ ನಡೆಸಬೇಕೆಂದು ಅಧ್ಯಕ್ಷ ಟ್ರೂಮನ್ನರು ಆಜ್ಞಾಪಿಸಿರುವರು.

ಭಾಷಾವಾರು ಪ್ರಾಂತ್ಯದ ಬಗ್ಗೆ ಸಮಾಲೋಚನೆ

ಪಾರ್ಲಿಮೆಂಟಿನ ಸದಸ್ಯರ ನಿಯೋಗವೊಂದು ಪ್ರಧಾನಿ ನೆಹರೂರವರನ್ನು ಭೇಟಿನೋಡಿ ಆದಷ್ಟು ಬೇಗ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವ ಪ್ರಶ್ನೆಯನ್ನು ಪ್ರಸ್ತಾಪಿಸಿತು.

ಈ ನಿಯೋಗದಲ್ಲಿ ಶ್ರೀಗಳಾದ ಶಂಕರರಾವ್‌ದೇವ್, ಪಿ.ಎಸ್. ಹಿರೆ, ದೇಶ್‌ಪಾಂಡೆ ಗಿರಿಕರ್ ಎಸ್. ನಿಜಲಿಂಗಪ್ಪ, ಮುನವಳ್ಳಿ, ಯು.ಎಸ್ ಮುಲ್ಕಿ ಮತ್ತು ಕಲಾಪಂಕೆಟರಾವ್ ಇದ್ದರು.

ಆಗಸ್ಟು ತಿಂಗಳಲ್ಲಿ ಪಾರ್ಲಿಮೆಂಟ್ ಅಧಿವೇಶನವು ಮತ್ತೆ ಸೇರುವುದಕ್ಕೆ ಮೊದಲು ಭಾಷಾವಾರು ಪ್ರಾಂತ ನಿರ್ಮಾಣದ ತತ್ವದ ಬಗ್ಗೆ ಇತ್ಯರ್ಥಕ್ಕೆ ಬರಲಾಗುವುದೆಂದು ನಿಯೋಗದ ಸದಸ್ಯರು ತಿಳಿಸಿದರು. ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿ ಮುಂದಿನ ತಿಂಗಳ ಹೊತ್ತಿಗೆ ನೆಹರೂರವರಿಗೆ ಒಪ್ಪಿಸಲಾಗುವುದು

೨೨ ಗಂಟೆ ಕಾಲ ಸಭೆ

ಬ್ರಿಟಿಷ್ ಕಾಮನ್ಸ್ ಸಭೆಯು ಒಂದೇ ಸಮನೆ ೨೨ ಗಂಟೆ ೩ ನಿಮಿಷ ಕಾಲ ಬಜೆಟ್ ವಿಷಯವಾಗಿ ಚರ್ಚೆನಡೆಸಿತು.

ಭೀಕರಕೊಲೆ

ಶಿವಮೊಗ್ಗಾ ಜೂನ್ ೯

ರೈಲು ಇಲ್ಲಿಗೆ ಬಂದಾಗ, ಅದರ ೧ನೇ ತರಗತಿಯಲ್ಲಿನ ಕಕ್ಕಸಿನಲ್ಲಿ ಭೀಕರರೀತಿಯಲ್ಲಿ ಕೊಲೆ ಸುಮಾರು ೩೦ ವಯಸ್ಸಿನ ಮಹಿಳೆಯ ಕೊಲೆಮಾಡಲ್ಪಟ್ಟು ಮೃತದೇಹ ಅಲ್ಲಿದ್ದುದು ಗೋಚರವಾಯಿತು. ಮುಖದ ಮೇಲೆ ತೀವ್ರವಾದ ಗಾಯಗಳಿದ್ದುವು. ಅಲ್ಲದೆ ಬಟ್ಟೆಗಳೆಲ್ಲಾ ರಕ್ತಮಯವಾಗಿದ್ದುವು. ಮೂಗು ಮತ್ತು ಎದೆಯಲ್ಲಿ ಸಹ ತೀವ್ರ ಗಾಯಗಳಾಗಿದ್ದುದು ಕಂಡುಬಂತು. ಕೈ ಬಳೆಗಳು ಚೆಲ್ಲಾಪಿಲ್ಲಿಯಾಗಿ ಕೆಳಗೆ ಬಿದ್ದಿದ್ದುವು. ತನಿಖೆ ಸಾಗುತ್ತಿದೆ.

ಜೈಹಿಂದ್ ತಬಲ ವರ್ಕ್ಸ್

ಅಶೋಕ ಈಸ್ಟ್‌ಕ್ರಾಸ್ ೨೫ ವೀರನಗೆರೆ ಮೈಸೂರು

ನಮ್ಮಲ್ಲಿ ಸಂಗೀತಕ್ಕೆ ಬೇಕಾದ ಎಲ್ಲಾ ತರಹದ ಮೃದಂಗ, ತಬಲ, ಕಂಜರ ಮುಂತಾದ ವಾದ್ಯಗಳು ದೊರೆಯುತ್ತವೆ.

ಪ್ರೊ॥ ಆರ್. ವೆಂಕಟಸ್ವಾಮಿ,

ವುಡ್‌ಲ್ಯಾಂಡ್ಸ್ * ೯—೬—೫೧ರಿಂದ ಅಮೋಘ ಪ್ರಾರಂಭ

ಉಮರಾ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ

* ಉಸ್ತಾದ್ ಪೆಡ್ರೊ *

ಪಾತ್ರ.— ಶೇಖ್‌ಮುಕ್ತಾರ್. ಬೇಗಂಪಾರ. ಕಮ.. ನವ.. ಅನಾರಿ.

ರಣಜಿತ್

೮—೬—೫೧ರಿಂದ

ಅಮೋಘವಾದ ಪ್ರಾರಂಭ

ಮೀನಾ, ರಹಿಮಾನ್,

ಕಪೂರ್ ನಟಿಸಿರುವ

-:: ರಾಜಾ-ರಾಣಿ ::-

ಸಂಪಾದಕರು :—ಜಿ. ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು :—ಹಿ. ಕಾ. ಸುಬ್ಬರಾವ್.

ನೋಟ್ ಮುದ್ರಣಾಲಯ ಮೈಸೂರು

ಸುಳ್ಳು ಸುದ್ದಿ

ಕಾಂಗ್ರೆಸ್ಸಿಗೆ ೨೦,೦೦೦ ಜನರು ಈಗಾಗಲೇ ರಾಜೀನಾಮೆ ಕೊಟ್ಟಿರುವರೆಂಬುದು ಆಧಾರ ರಹಿತ. ಇಲ್ಲಿಯ ವರೆಗೆ ಕೇವಲ ೧೦೧ ಜನರ ರಾಜೀನಾಮೆ ಮಾತ್ರ ಬಂದಿದೆ ಎಂದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕ ಳಾ ವೆಂ ಕ ಟ ರಾ ಯ ರು ತಿಳಿಸಿರುವರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨–೬–೧೯೫೧ ಮಂಗಳವಾರ [ಸಂಚಿಕೆ ೨೩೧

ರಾಜೀನಾಮೆ

ಇಂದು ನಡೆಯುತ್ತಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತೀರ್ಮಾನಗಳನ್ನು ನೋಡಿಕೊಂಡು ಅನಂತರ ಸಚಿವ ಕಿದ್ವಾಯಿಯವರ ರಾಜೀನಾಮೆಯ ಪ್ರಶ್ನೆ ತೀರ್ಮಾನವಾಗಲಿದೆಯೆಂದು ಹೇಳಲಾಗಿದೆ. ಮರುವಸತಿ ಶಾಖಾ ಮಂತ್ರಿ ಮಿ|| ಜೈನ್‌ರವರು ಸದ್ಯದಲ್ಲೇ ರಾಜೀನಾಮೆ ಕೊಡಲಿರುವರೆಂದು ತಿಳಿಯಬರುತ್ತದೆ.

ಪ್ರಾಂತದಿಂದ ಪ್ರಾಂತಕ್ಕೆ ಸಕ್ಕರೆ ಸಾಗಾಣಿಕೆ ನಿರ್ಬಂಧ ತಪ್ಪಿತು

ಮುಖ್ಯಮಂತ್ರಿಗಳಲ್ಲಿ ನಿಯೋಗ

ಮೈಸೂರು ಜೂನ್ ೧೧

ಮೈಸೂರಿನಲ್ಲಿರುವ ಐ. ಎನ್. ಟಿ. ಯು. ಸಿ. ಪ್ರತಿನಿಧಿಗಳ ಸಭೆಯು ನಿನ್ನೆ ಸೇರಿ, ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರು ೧೨ನೇ ತಾರೀಖು ಭಾನುವಾರ ರಾತ್ರಿಯಿಂದ ಸಾರ್ವತ್ರಿಕ ಮುಷ್ಕರವನ್ನು ಮಾಡಲು ನಿರ್ಧರಿಸಿರುವ ವಿಷಯವನ್ನು ಪರಿಶೀಲಿಸಿತು, ಐ. ಎನ್. ಟಿ. ಯು. ಸಿ. ಪರವಾಗಿ ನಾಲ್ಕು ಮಂದಿಗಳ ನಿಯೋಗವು ಮುಖ್ಯಮಂತ್ರಿಗಳನ್ನು ಭೇಟಿಮಾಡಿ, ಮುಷ್ಕರವಾಗದಂತೆ ಕಾರ್ಯಕ್ರಮವನ್ನು ಸರ್ಕಾರವು ಕೂಡಲೇ ಕೈಗೊಳ್ಳಬೇಕೆಂದು ತೀರ್ಮಾನಿಸಿತು.

ಶ್ರೀಗಳಾದ ಕೆ. ಪುಟ್ಟಸ್ವಾಮಿ, ಎ. ರಾಮಣ್ಣ, ಬಿ. ಬಾಲಯ್ಯ ಮತ್ತು ಕಲ್ಕರ್ಣಿ ಇವರು ಈ ಕಾರ್ಯವನ್ನು ಮಾಡತಕ್ಕದೆಂದು ನಿಷ್ಕರ್ಶೆಯಾಯಿತು. ಇಂದು ಬೆಳಗ್ಗೆ ಇವರು ಮುಖ್ಯಮಂತ್ರಿಗಳನ್ನು ಭೇಟಿಮಾಡಿ ವಿಷಯಗಳನ್ನು ಅವರ ಅವಗಾಹನೆಗೆ ತರಲು, ತಾವು ಬೆಂಗಳೂರಿಗೆ ಹಿಂತಿರುಗಿದೊಡನೆಯೇ ನ್ಯಾಯಾಂಗ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿ ಮುಷ್ಕರ ನಡೆಯದಂತೆ ತಕ್ಕ ಕಾರ್ಯಕ್ರಮವೆಸಗುವುದಾಗಿ ಮುಖ್ಯಮಂತ್ರಿಗಳು ಭರವಸೆಯಿತ್ತರು.

ಐ. ಎನ್. ಟಿ. ಯು. ಸಿ. ಸಮ್ಮೇಳನ

ಇದೇ ಮಾಹೆ ೧೬, ೧೭ನೇ ತಾರೀಖುಗಳಲ್ಲಿ ಮೈಸೂರಿನಲ್ಲಿ ನಡೆಯುವ ಐ. ಎನ್. ಟಿ. ಯು. ಸಿ. ಸಮ್ಮೇಳನದ ಸ್ವಾಗತ ಸಮಿತಿಯು ನಿನ್ನೆ ಸಭೆ ಸೇರಿ ಕೆಲವು ಉಪ ಸಮಿತಿಗಳನ್ನು ನೇಮಿಸಿತು.

ಅಧಿಕಾರ ವರ್ಗ

ಮೈಸೂರು ಕೋ-ಆಪರೇಟಿವ್ ಸೊಸೈಟಿಗೆ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎ. ಕೃಷ್ಣಮೂರ್ತಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಎಸ್. ಚಿನ್ನಸ್ವಾಮಿ ಶೆಟ್ಟರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುವರು.

ಮಹಾರಾಜರ ಶಿಲಾಪ್ರತಿಮೆ ಅನಾವರಣ

ಮೈಸೂರು ಜೂನ್ ೧೧

ಸಯ್ಯಾಜಿರಾವ್ ರಸ್ತೆಯಲ್ಲಿ ಕಟ್ಟಲಾಗುತ್ತಿರುವ ಸ್ಟಾಚ್ಯೂ ಕೆಲಸಕಾರ್ಯಗಳು ದಸರಾ ವೇಳೆಗೆ ಮುಗಿಯುವುದೆಂದೂ ದಸರಾದಲ್ಲಿ ಆಳಿದ ಮಹಾಪ್ರಭುಗಳಾದ ಶ್ರೀ ಕೃಷ್ಣರಾಜ ಒಡೆಯರವರ ವಿಗ್ರಹವನು ಪ್ರತಿಷ್ಠಾಪಿಸಲಾಗುವುದೆಂದೂ ತಿಳಿಯಬರುತ್ತದೆ.

ಮುಖ್ಯ ಮಂತ್ರಿಯವರ ಭೇಟಿ

ಡಾ|| ಬಿ. ಜಿ. ದಾಸ್‌ರವರ ನಾಯಕತ್ವದಲ್ಲಿ ಹಲವು ಮಹನೀಯರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಭೇಟಿಮಾಡಿ ಸ್ಟ್ಯಾಚ್ಯೂಬಳಿ ಅಂಗಡಿಗಳನ್ನು ಒಡೆಯುವುದರಿಂದ ಅಲ್ಲಿರುವವರಿಗೆ ಆಗುವ ಅನಾನುಕೂಲಗಳನ್ನು ವಿವರಿಸಿದರು. ಈ ಅಂಗಡಿಗಳವರಿಗೆ ಟೌನ್‌ಹಾಲ್ ಬಳಿ ನಿವೇಶನಕೊಡಬೇಕೆಂದು ಕೋರಿದರೆಂದು ತಿಳಿಯಬರುತ್ತದೆ. ಮುಖ್ಯಮಂತ್ರಿಯವರು ನಿಯೋಗದವರಿಗೆ ಉತ್ತರಕೊಡುತ್ತಾ ಅಂಗಡಿಯವರಿಗೆ ಸಾಕಷ್ಟು ಕಾಲಾವಕಾಶ ಕೊಡಲಾಗಿತ್ತೆಂದೂ ಟೌನ್‌ಹಾಲಿನ ಬಳಿ ಅವಕಾಶಕೊಡಲಾಗುವುದಿಲ್ಲವೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ

ಮಹಾಜನ ವಿದ್ಯಾಪೀಠ

ವಾಣೀವಿಲಾಸಪುರದಲ್ಲಿರುವ ಮೇಲ್ಕಂಡ ವಿದ್ಯಾಪೀಠದಿಂದ ಈಬಾರಿ ೧೨ ಜನ ವಿದ್ಯಾರ್ಥಿಗಳು ಎಂ.ಎಸ್. ಪರೀಕ್ಷೆಗೆ ತೆರಳಿದ್ದು ೯ ಜನರು ಉತ್ತೀರ್ಣರಾಗಿರುವರು. ಇವರಲ್ಲಿ ೫ ಜನರು ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾಗಿರುವರು.

ವಿವಾಹಮಹೋತ್ಸವ

ಯಡಗಟಿಯ ಶ್ರೀ ಲಕ್ಷ್ಮಣಶಾಸ್ತ್ರಿಯವರ ಪುತ್ರ ಚಿ|| ರಾ|| ವೈ. ಎಲ್. ನಾರಾಯಣರವರಿಗೆ ತುಮಕೂರಿನ ಶ್ರೀ ಎ. ಎಲ್. ಸೂರ್ಯನಾರಾಯಣರಾಯರ ಪುತ್ರಿ ಚಿ|| ಸೌ|| ಶಾರದಾಂಬರವರನ್ನು ತಂದುಕೊಂಡು ವಿವಾಹಮಹೋತ್ಸವವು ತುಮಕೂರಿನ ಬ್ರಾಹ್ಮಣ ವಿದ್ಯಾರ್ಥಿನಿಲಯದಲ್ಲಿ ನಾಳೆ ನಡೆಯುತ್ತದೆ.

ಕೋಲಾರಪುರಕ್ಕೆ ಮುಖ್ಯ ಸಚಿವರು

ಮೈಸೂರು ಜೂನ್ ೧೧

ಮುಖ್ಯಮಂತ್ರಿಯವರಾದ ಶ್ರೀ ಕೆ.ಸಿ. ರೆಡ್ಡಿಯವರು ಈದಿನ ಮಧ್ಯಾಹ್ನ ಕೋಲಾರಪುರಕ್ಕೆ ತೆರಳಿದರು..

ಗಾಂಧಿಯನ್ನು ಹೋಲುವ ವ್ಯಕ್ತಿ

ಬ್ರಿಟಿಷ್ ಎಣ್ಣೆ ಕಂಪನಿಯೊಂದರಲ್ಲಿ ನೌಕರರಾಗಿರುವ ಶ್ರೀ ಒಕ್ಟ್ಸ್ಟ್ರೀ ಚಂದ್ ಎಂಬವರಿಗೆ ಮಹಾತ್ಮ ಗಾಂಧೀ ಜೀವಿತವನ್ನು ಚಲನ ಚಿತ್ರದಲ್ಲಿ ತಯಾರಿಸಬೇಕೆಂದಿರುವ ಪ್ರಯತ್ನದಲ್ಲಿ ಗಾಂಧೀಜಿ ಪಾತ್ರವನ್ನು ವಹಿಸಿ ವಿಶ್ವ ವಿಖ್ಯಾತರಾಗುವ ಅವಕಾಶ ಬಂದಿದೆ.

ವಿಶ್ವವೇ ತೊಂದರೆ ಪಡಬೇಕಾದೀತು

ಪರ್ಷಿಯಾ ಜನತೆಯ ನ್ಯಾಯ ಪೂರ್ಣ ಬೇಡಿಕೆಗಳನ್ನು ಎಣ್ಣೆ ಕಂಪನಿ ನಿರಾಕರಿಸುವುದಾದ್ದರಿಂದ ಇಡೀ ವಿಶ್ವವೇ ಕಷ್ಟಾನುಭವ ಪಡಬೇಕಾದೀತು ಎಂಬುದಾಗಿ ಪರ್ಷಿಯಾ ಸರ್ಕಾರ ತಿಳಿಸಿದೆ. ಈ ಅಂಶ ಪರ್ಷಿಯಾ ಸರ್ಕಾರದೊಂದಿಗೆ ಸಂಭಾಷನ ನಡೆಸಲು ಎಣ್ಣೆ ಕಂಪನಿಯ ನಿಯೋಗ ಹೊರಡುವ ಮುನ್ನ ಪರ್ಷಿಯಾ ಸರಕಾರ ಮಾಡಿದ್ದ ವಿಶ್ವಸಣ ಭಾಷಣದಲ್ಲಿ ತಿಳಿಸಲಾಗಿದೆ

ಪುನಃ ಪ್ರಯತ್ನ

ಇಂದು ನಡೆಯಲಿರುವ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಪಂಡಿತ ನೆಹರೂರವರು ಆಚಾರ್ಯಕೃಪಲಾನಿ ಮುಂತಾದ ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆಕೊಟ್ಟಿರುವುದನ್ನು ತಡೆಗಟ್ಟಿ ಸಂಸ್ಥೆಯಲ್ಲುಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಕೊನೆಯಪ್ರಯತ್ನ ಮಾಡಲಿರುವರು.

ಪ್ರತಿನಿಧಿಗಳ ಸಭೆ

ಬಿ ಮತ್ತು ಸಿ ಪ್ರಾಂತ್ಯಗಳ ಪಾರ್ಲಿಮೆಂಟ್ ಸದಸ್ಯರು ದೆಹಲಿಯಲ್ಲಿ, ಶ್ರೀ ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ. ಎ.ಬಿ.ಸಿ. ಪ್ರಾಂತ್ಯಗಳಿಗಿರುವ ವ್ಯತ್ಯಾಸವನ್ನು ರದ್ದುಗೊಳಿಸಬೇಕೆಂದು ತೀರ್ಮಾನಿಸಿರುವರು.

ಸ್ವ.ಸು. ಫೋನ್] ಬೆಂ. ಜೂನ್ ೧೧

ಸಕ್ಕರೆಯನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಸಾಗಿಸಲು ಇದ್ದ ನಿರ್ಬಂಧವನ್ನು ತೆಗೆದುಹಾಕಿರುವುದಾಗಿ ಮೈಸೂರು ಸರ್ಕಾರದವರ ಪ್ರಕಟಣೆಯು ತಿಳಿಸುತ್ತದೆ.

ರಜಾ

ಕೋಲಾರ ಜಿಲ್ಲಾಧಿಕಾರಿ ಶ್ರೀ ತಿಪ್ಪೆರುದ್ರಯ್ಯನವರಿಗೆ ಒಂದು ತಿಂಗಳು ರಜಾ ಮಂಜೂರಾಗಿದೆ. ಆ ಕಾಲದಲ್ಲಿ ಕೆ. ಜಿ ಎಫ್‌ನಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಬಾಲಸುಬ್ರಹ್ಮಣ್ಯಂರವರು ತಮ್ಮ ಕೆಲಸದ ಜೊತೆಗೆ ಜಿಲ್ಲಾಧಿಕಾರಿಗಳ ಕೆಲಸವನ್ನು ನೋಡಿಕೊಳ್ಳುವರು.

ಪ್ರದರ್ಶನ ವಿಚಾರಣಾ ಸಮಿತಿ

ವಸ್ತುಪ್ರದರ್ಶನ ವಿಚಾರಣಾ ಸಮಿತಿ ಮುಂದೆ ಖಜಾಂಚಿ ಶ್ರೀ ಕಾಳಪ್ಪನವರು ಸಾಕ್ಷಿ ನೀಡುತ್ತಾ ವಸ್ತುಪ್ರದರ್ಶನದಿಂದ ರೂ ೬೫೧೪೩-೧೦-೬ ಪೈ ಉತ್ಪತ್ತಿಯಾಗಿ ೬೪೫೬೩-೨-೯ ವೆಚ್ಚವಾಗಿ ಉಳಿಕೆ ಹಣ ಬ್ಯಾಂಕ್‌ನಲ್ಲಿದೆಯೆಂದು ತಿಳಿಸಿದರು. ಕಾರ್ಯದರ್ಶಿ ಶ್ರೀ ವಿದ್ಯಾನಂದಸಾಗರ ಮತ್ತು ಮ್ಯಾನೇಜರ್ ಶ್ರೀ ಸಿ ಆರ್. ಶ್ರೀನಿವಾಸಮೂರ್ತಿಯವರ ಸಾಕ್ಷ್ಯ ನಡೆಯಿತು.

ಸಮ್ಮೇಳನ

ಕೈಮಗ್ಗದವರ ಸಮ್ಮೇಳನ ಇಂದು ಪುರಭವನದಲ್ಲಿ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ತಮ್ಮ ಕೈಗಾರಿಕೆಯನ್ನು ಸಂಘದ ಮೂಲಕ ನಡೆಸಿದಲ್ಲಿ ಲಾಭದಾಯಕವಾಗುವುದೆಂದು ಸಚಿವರು ನುಡಿದರು.

ಮುಖ್ಯಮಂತ್ರಿಗಳು ದೆಹಲಿಗೆ

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ೨೦ನೇ ತಾರೀಖು ದೆಹಲಿಗೆ ಪ್ರಯಾಣ ಮಾಡಿ ಅಲ್ಲಿ ೩ ದಿನವಿದ್ದು ಹಿಂತಿರುಗುವರು.

ಸಮಾಚಾರ

೧೨-೬-೫೧ನೇ ಮಂಗಳವಾರ

ನಗರಾಭಿವೃದ್ಧಿ ಸಮಿತಿ ರದ್ದಾಗಲಿ

ಮೈಸೂರು ನಗರಾಭಿವೃದ್ಧಿ ಸಮಿತಿ ಮತ್ತು ಪೌರಸಭೆಗಳಲ್ಲಿ ಇತ್ತೀಚೆಗೆ ವೈಮನಸ್ಯವು ಬೆಳೆದು ಜನರಿಗೆ ವಿಶೇಷ ತೊಂದರೆಗಳುಂಟಾದ ಅನೇಕ ನಿದರ್ಶನ ಕಾಣಬರುತ್ತಲಿವೆ. ಪ್ರತ್ಯಕ್ಷ ಪರೋಕ್ಷವಾಗಿ ಒಂದು ಸಂಸ್ಥೆಯು ಮತ್ತೊಂದನ್ನು ನಿಂದಿಸಿದ ಅನೇಕ ಪ್ರಸಂಗಗಳೂ ನಡೆದಿವೆ. ಮೊನ್ನೆ ಮೈಸೂರಿನಲ್ಲಿ ಮುಖ್ಯಮಂತ್ರಿಗಳು ನಡೆಸಿದ ಧರ್ಮರತ್ನಾಕರ ಪೆರುಮಾಳ್ ಚೆಟ್ಟಿಯಾರ್‌ರವರ ಹೆರಿಗೆ ಆಸ್ಪತ್ರೆ ಶಂಕುಸ್ಥಾಪನಾ ಸಮಯದಲ್ಲಿ ಮೈಸೂರು ನಗರ ಪುರಸಭಾಧ್ಯಕ್ಷರು ಈ ಉಭಯ ಸಂಸ್ಥೆಗಳ ನಿಕಟ ಬಾಂಧವ್ಯವು ದೂರವಾಗುತ್ತಿರುವ ಅಂಶವನ್ನು ಸೂಕ್ಷ್ಮವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ಬಹಿರಂಗವಾಗಿ ತಂದು ಸರ್ಕಾರದವರು ಅದನ್ನು ಸರಿಪಡಿಸಬೇಕೆಂಬ ಸೂಚನೆಯಿತ್ತರು. ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾ, ಈ ಸಂಸ್ಥೆಗಳಲ್ಲುಂಟಾಗಿರುವ ಭಿನ್ನತೆಯು ಸರ್ಕಾರದ ಗಮನಕ್ಕೆ ಬಂದಿರುವುದಾಗಿಯೂ ಅದನ್ನು ಸರಿಪಡಿಸಲು ಸರ್ಕಾರ ಸಭ್ಯದಲ್ಲೇ ತಕ್ಕ ಕಾರ್ಯಕ್ರಮ ವಹಿಸಗುವುದಾಗಿ ಹೇಳಿದರು.

ಮೈಸೂರು ನಗರಾಭಿ ಸಮಿತಿಯು ಮೊಟ್ಟಮೊದಲು ಮೈಸೂರಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ೧೯೦೩ರಲ್ಲಿ ಸ್ಥಾಪಿತವಾಯಿತು. ಸಮಿತಿಯ ಸದಸ್ಯರನ್ನೆಲ್ಲಾ ಸರ್ಕಾರವೇ ನಾಮಕರಣ ಮಾಡಲಾರಂಭಿಸಿದರು. ಪುರಸಭೆ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಒಬ್ಬರೇ ಆಗಿದ್ದುದರಿಂದ ನಗರದ ಅನೇಕ ಅಭಿವೃದ್ಧಿ ಕಾರ್ಯಗಳು ಯಾವ ಅಂತಕವೂ ಇಲ್ಲದೆ ನಡೆದುವು.

೧೯೪೮ರಲ್ಲಿ ಪೌರಸಭೆಗೆ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕು ದೊರೆಯಿತು. ಆ ವರ್ಷ ಅವರೇ ನಗರಾಭಿವೃದ್ಧಿ ಸಮಿತಿಯ ಖಾಸಗೀ ಅಧ್ಯಕ್ಷರಾಗಿದ್ದರು. ೧೯೪೯ರಿಂದ ಸರ್ಕಾರದವರು ಈ ಉಭಯ ಸಂಸ್ಥೆಗಳನ್ನು ಸಂಪೂರ್ಣವಾಗಿ ಬೇರ್ಪಡಿಸಿ ನಗರಾಭಿವೃದ್ಧಿ ಸಮಿತಿಗೆ ಪ್ರತ್ಯೇಕವಾಗಿ ಖಾಸಗಿಯವರನ್ನು ನೇಮಕ **ಮಾಡಿದರು.** ಕೆಲಸ ಕಾರ್ಯಗಳು ಉತ್ತಮಗೊಳ್ಳಲೆಂದು ಭಾವಿಸಿದ್ದಾಗ್ಯೂ ಅಂದಿನಿಂದ ಈ ಉಭಯ ಸಂಸ್ಥೆಗಳು ಭಿನ್ನವಾಗಿ ನಗರಾಭಿವೃದ್ಧಿ ಕಾರ್ಯಗಳು ನಡೆಯಲು ಅಂತಕ ಪ್ರಾರಂಭವಾಯಿತು. ಹಿಂದೆ ಯಾವ ಅಭಿವೃದ್ಧಿ ಕಾರ್ಯವಾಗ ಬೇಕಾದರೂ ಯಾವ ಪ್ರತ್ಯೇಕತೆಯು ಮನೋಭಾವವಿಲ್ಲದೆ ನಡೆಯುತ್ತಲಿದ್ದುದು ಈಗ ಪ್ರತಿಬಾಬಿನಲ್ಲೂ ಪ್ರತ್ಯೇಕತೆ ಪ್ರಾರಂಭವಾಗಿ ಜನತೆಗೆ ತೊಂದರೆಯುದ್ಭವಿಸಿತು.

ನಗರದಲ್ಲಿ ಹೊಸ ಬಡಾವಣೆ ಮಾಡುವುದು, ಹೊಸ ರಸ್ತೆಗಳನ್ನು ಮಾಡುವುದು ಡ್ರೈನೇಜು ಕೆಲಸಗಳು ನಗರಾಭಿವೃದ್ಧಿ ಸಮಿತಿಯ ಮುಖ್ಯಕರ್ತವ್ಯ. ಅವುಗಳನ್ನು ಕಾಪಾಡಿಕೊಂಡು ಬರುವುದು ಪೌರಸಭೆಯ ಪಾಲಿಗೆ ಸೇರಿದುದು. ಸುಮಾರು ೫೦ ವರ್ಷಗಳಿಂದ ನಗರದಲ್ಲಿ ನಾನಾಮುಖವಾದ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಇತ್ತೀಚೆಗೆ ಕೆಲವು ವರ್ಷಗಳಲ್ಲಿ ಹೊಸ ಬಡಾವಣೆ ಪ್ರಾರಂಭವಾಗಿ ಜನರಿಗೆಲ್ಲಾ ನಿವೇಶನಗಳನ್ನು ಮಾರಿದ್ದಾಯಿತು. ಆ ನಿವೇಶನಗಳಲ್ಲಿ ಶೇ|| ೧೦ ರಲ್ಲಿಯೂ ಕಟ್ಟಡಗಳಾಗಿಲ್ಲ. ಅದಕ್ಕೆ ನಾನಾಕಾರಣಗಳಿವೆ. ಇನ್ನೂ ನಗರಾಭಿವೃದ್ಧಿ ಸಮಿತಿ ಹೊಸ ನಿವೇಶನಗಳನ್ನು ಸದ್ಯದಲ್ಲಿ ಮಾಡುವ ಅವಶ್ಯಕತೆಯೇ ಕಾಣಬರುವುದಿಲ್ಲ. ಈಗ್ಗೆ ಎರಡು ಮೂರು ವರ್ಷಗಳ ಹಿಂದೆ ಸಮಿತಿಯು ಹತ್ತಾರು ಮಾದರಿ ಮನೆಗಳನ್ನು ಕಟ್ಟಿ, ಅವುಗಳನ್ನು ಕೆಲವು ಜನರಿಗೆ ಮಾರಿದ್ದಾಯಿತು. ವಾಸಕ್ಕೆ ಬೇಕಾದ ಸೌಕರ್ಯಗಳನ್ನು ಇನ್ನೂ ಕಲ್ಪಿಸಿಲ್ಲವಾಗಿ ಮನೆಗಳು ಹಾಳಾಗುತ್ತಲಿವೆ. ಹೊಸ ರಸ್ತೆಯ ವಿಷಯ ಈಗಿರುವ ರಸ್ತೆಗಳನ್ನು ಕಾಪಾಡುವುದೆ ಆರ್ಥಿಕ ದುಸ್ಥಿತಿಯಿಂದ ಕಷ್ಟವಾಗಿರುತ್ತದೆ. ಡ್ರೈನೇಜು ಕೆಲಸವು ಇದೇ ರೀತಿಯಾಗಿದೆ. ಹೀಗಿರುವಲ್ಲಿ ನಗರಾಭಿವೃದ್ಧಿ ಸಮಿತಿಗೆ ಕೆಲಸವೇನಾದರೂ ವಿಶೇಷವಾಗಿದೆಯೆ? ನಗರಾಭಿವೃದ್ಧಿ ಸಮಿತಿಯು ಮಾಡಬೇಕಾದ ಕಾರ್ಯಗಳಲ್ಲಿ ಅನೇಕ ಭಾಗವನ್ನು ಈಗ ಪೌರಸಭೆಯೇ ನಡೆಸುತ್ತಲಿದೆ. ವರ್ಷಾಸುಗಟ್ಟಲೆ ಹಿಂದೆ ನಗರಾಭಿವೃದ್ಧಿ ಸಮಿತಿಯ ಹರಾಜು ಮಾಡಿ ಮಾರಿದ ನಾಲ್ಕಾರು ಮನೆಗಳಿಗೆ ದೀಪ, ನಲ್ಲಿ ಸೌಕರ್ಯಗಳನ್ನು ಕಲ್ಪಿಸಲು ಇಲ್ಲದ ಬೇಧಭಾವನೆಗಳನ್ನು ಕಲ್ಪಿಸಿಕೊಂಡು ಮನೆ ಕೊಂಡವರಿಗೆ ಹಣಕ್ಕೆ ಬಡ್ಡಿಯಿಲ್ಲ, ವಾಸಕ್ಕೆ ಮನೆಯಿಲ್ಲದಂತೆ ಮಾಡಿರುವ ಸಂಸ್ಥೆ ಜನಂಗೆ ಏನು ಪ್ರಯೋಜನ?

ಈ ಅಲ್ಪ ಕೆಲಸವನ್ನು ಸುಸೂತ್ರವಾಗಿ ಮಾಡಲಾಗದೇ ಹೋದ ಸಂಸ್ಥೆಯೇಕೆ ಇರಬೇಕು? ಪ್ರತ್ಯೇಕತೆ ಮನೋಭಾವ, ಅಧಿಕಾರದರ್ಪ, ಬೆಳೆಸುವವು ಕೈಲಿ ಈ ಸಂಸ್ಥೆಯಿದ್ದೇನು ಪ್ರಯೋಜನ?

ಸರ್ಕಾರದವರು ಇದನ್ನೆಲ್ಲಾ ಪರಿಗಣಿಸಿ, ನಗರಾಭಿವೃದ್ಧಿ ಸಮಿತಿಯು ಮಾಡಬೇಕಾದ ಕಾರ್ಯಗಳನ್ನೆಲ್ಲಾ ಪೌರಸಭೆಯೇ ಮಾಡುವಂತೇರ್ಪಡಿಸಿ ಅದಕ್ಕೆ ಕೊಡುತ್ತಲಿದ್ದ ದ್ರವ್ಯ ಸಹಾಯ ಮತ್ತು ಇತರ ಸೌಕರ್ಯಗಳನ್ನು ನಗರ ಸಭೆಗೇ ನೀಡಿ ಖಾಸಗೀ ಸರ್ಕಾರದಿಂದ ನಾಮಕರಣ ಸದಸ್ಯರನ್ನೊಳಗೊಂಡ ಈ ನಗರಾಭಿವೃದ್ಧಿ ಸಮಿತಿಯನ್ನು ರದ್ದುಗೊಳಿಸುವುದು ಸೂಕ್ತ. ಇಲ್ಲವಾದರೆ ಕೆಲವು ವ್ಯಕ್ತಿಗಳಿಗೆ ಅಧಿಕಾರವನ್ನು ಕೊಟ್ಟಂತಾಗುವುದೇ ವಿನಹ ಪ್ರಜೆಗಳಿಗೆ ಏನೂ ಪ್ರಯೋಜನವಿಲ್ಲ.

ಮೋಟಾರು ಕೆಲಸಗಾರರ ಸಾರ್ವತ್ರಿಕ ಮುಷ್ಕರ

ಮೋಟಾರು ಕೆಲಸಗಾರರ ಸಂಘ ಅನೇಕ ವರ್ಷಗಳಿಂದ ತಮ್ಮ ನ್ಯಾಯುವಾದ ಬೇಡಿಕೆಗಳನ್ನು ಆಡಳಿತಮಂಡಲಿಯು ಮುಂದಿಟ್ಟು ಅವುಗಳನ್ನು ಈಡೇರಿಸಿಕೊಡದಿರಲು ಕಾನೂನು ಪ್ರಕಾರ ೬ ವಾರಗಳ ನೋಟೀಸ್ ಕೊಟ್ಟಿದ್ದಾಗ್ಯೂ ಪ್ರಯೋಜನವಿಲ್ಲವಾಗಿದೆ.

ಆದ್ದರಿಂದ ೧೬-೬-೫೧ನೇ ಭಾನುವಾರ ಮಧ್ಯರಾತ್ರಿಯಿಂದ ಸಾರ್ವತ್ರಿಕ ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಗಿದೆ. ಎಲ್ಲ ಕೆಲಸಗಾರರೂ, ಸಾರ್ವಜನಿಕರೂ ಜೂನ್ ೧೮ನೇ ತಾ|| ೧ನೆ ಮೈಸೂರು ನಗರದಿಂದ ಒಂದು ಬಸ್ಸೂ ಹೊರಡದಂತೆ ಮಾಡಿ ಮುಷ್ಕರ ಯಶಸ್ವಿಯಾಗುವಂತೆ ಮಾಡಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರುತ್ತಾರೆ.

ಶ್ರೀ ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೇಂದ್ರ ಮಂದಿರ ಮತ್ತು ಶಾಖೆಗಳಿಂದ ಮೈಸೂರು ಸರ್ಕಾರದ ೧೯೫೧ನೇ ಸಾಲಿನಲ್ಲಿ ಸಂಗೀತಪರೀಕ್ಷೆಗಳಿಗೆ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳು ಹಾಡುಗಾರಿಕೆ ಮತ್ತು ವಾದ್ಯದಲ್ಲಿ ಉತ್ತಮದರ್ಜೆಯಲ್ಲಿ ಉತ್ತೀರ್ಣರಾಗಿ ಮಂದಿರವು ಶೇ|| ೯೫ ರಷ್ಟು ಶುಭ ಫಲಿತಾಂಶವನ್ನು ಗಳಿಸಿರುತ್ತದೆ. ಈ ಪೈಕಿ ಶೇ|| ೪೬ ರಷ್ಟು ಶುಭಫಲಿತಾಂಶವೇ ಆಗಿರುತ್ತದೆ.

ರಂಜಾನಿಗೆ ಬಟ್ಟೆ

ರಂಜಾನ್ ಕಾಲದಲ್ಲಿ ಮುಸ್ಲಿಮರಿಗೆ ಮೈಸೂರು ಬೆಂಗಳೂರು ನಗರಗಳಲ್ಲಿ ಹೋಲ್‌ಸೇಲ್ ವ್ಯಾಪಾರಿಗಳು ಪ್ರತಿಯೊಂದು ರೇಷನ್ ಕಾರ್ಡಿಗೂ ೧೨ ಗಜ ಲಾಂಗ್ ಕ್ಲಾತ್ ಕೊಡುವರು. ಇತರ ಕಡೆಗಳಲ್ಲಿ ಅಮಲ್ದಾರರು ಅಥವಾ ಜಿಲ್ಲಾಧಿಕಾರಿಗಳ ಸೂಚನೆಯಂತೆ ಬಟ್ಟೆ ಹಂಚಲಾಗುವುದೆಂದು ತಿಳಿಯಬರುತ್ತದೆ.

ಗೋಣಿನ ಶವಸಂಸ್ಕಾರಕ್ಕೆ ೩೦೦೦೦ ಜನರು

ವಿದ್ಯುಚ್ಛಕ್ತಿಗೆ ಸಿಕ್ಕಿ ಮರಣ ಹೊಂದಿದ್ದ ಘಸವನ್ನು ಶವಸಂಸ್ಕಾರ ಮಾಡಲು ಉದಯಪುರದಲ್ಲಿ ೧೦,೦೦೦ ಜನರು ಸೇರಿದ್ದರು.

ಮುಂದಿನ ಪಾರ್ಲಿಮೆಂಟ್ ಅಧಿವೇಶನ

ಮುಂದಿನ ಪಾರ್ಲಿಮೆಂಟ್ ಅಧಿವೇಶನವು ಆಗಸ್ಟ್ ಮಾಹೆ ಮೊದಲನೆ ವಾರದಲ್ಲಿ ನಡೆಯಬಹುದೆಂದು ಹೇಳಲಾಗಿದೆ.

ತಿರುವಾಂಕೂರು ಕೊಚ್ಚಿನ್ ಸಂಸ್ಥಾನದಲ್ಲಿ ರಿಯಾಯತಿ ಅಂಚೆದರ

ತಿರುವಾಂಕೂರು ಮತ್ತು ಕೊಚ್ಚಿನ್ ಸಂಸ್ಥಾನದಲ್ಲಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಕಳಿಸುವ ಅಂಚೆ 'ಲೋಕಲ್ ಡಿಲಿವರಿ' ಎಂದು ಪರಿಗಣಿಸಿ ಪ್ರತಿಯೊಂದು ತೊಲಕ್ಕೆ ಒಂದು ಆಣೆ ಅಂಚೆದರ ಆಚರಣೆಗೆ ಬಂದಿದೆ.

ಉಪ್ಪಿನ ಹಂಚಿಕೆ

ಉಪ್ಪಿನ ಹಂಚಿಕೆಯನ್ನು ಸಂಸ್ಥಾನದ ಸರಕಾರಗಳೇ ವಹಿಸಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಬೇಕೆಂದು, ತಾವು ಸೂಚಿಸಿರುವುದಾಗಿ ಬೊಂಬಾಯಿ ಸರಬರಾಜು ಶಾಖೆಯ ಉಪಮಂತ್ರಿ ಶ್ರೀ ಎಸ್. ಬರ್ಮನ್‌ರವರು, ಉಪ್ಪು ಸಲಹಾ ಸಮಿತಿಯನ್ನುದ್ದೇಶಿಸಿ ಭಾಷಣಮಾಡುತ್ತಾ ತಿಳಿಸಿದರು.

'ಉಪ್ಪಿನ ತೆರಿಗೆಯನ್ನು ರದ್ದುಗೊಳಿಸಿರುವುದರಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬರುತ್ತಿದ್ದ ೧೦ರಿಂದ ೧೧ ಕೋಟಿ ರೂ.ಗಳ ವರಮಾನ ನಿಂತಿತು. ಆದರೆ, ಉಪ್ಪಿನ ತೆರಿಗೆ ರದ್ದಾದ ಮೇಲೆ ಬಳಸುವವರಿಗೆ ಅದರಿಂದಾವ ಲಾಭವಾಗಲೀ ಪ್ರಯೋಜನವಾಗಲೀ ಆಗುತ್ತಿಲ್ಲ ಎಂದು ಉಪಮಂತ್ರಿಗಳು ತಿಳಿಸಿದರು.

"ಸಂಸ್ಥಾನದ ಸರಕಾರಗಳು ಉಪ್ಪಿನ ಹಂಚಿಕೆಯನ್ನು ವಹಿಸಿಕೊಂಡರೆ, ಜನರು ಲಾಭ ಪಡೆಯುವ ವಿಷಯಕ್ಕೆ ಗುರಿಯಾಗುವುದಿಲ್ಲ"

ಸಂಸ್ಥಾನದ ಸರ್ಕಾರಗಳ ಅಭಿಪ್ರಾಯವನ್ನು ಸಂಗ್ರಹಿಸಿ ಅನಂತರ ಈ ಕ್ರಮವನ್ನು ಕಾರ್ಯಗತ ಮಾಡಲಾಗುವುದು ಎಂದು ಉಪಮಂತ್ರಿಗಳು ತಿಳಿಸಿದರು.

ಸಚಿವ ಮಂಡಲ ಪುನರ್ರಚನೆ

ನೇಪಾಳ ಸಚಿವ ಮಂಡಲವು ಪುನರ್ರಚನೆಯಾಯಿತು. ಈಗ ೧೦ ಸಚಿವರಿರುವರು. ಮುಖ್ಯಮಂತ್ರಿ ಮಹಾರಾಜ ಮೋಹನ ಶಂಷೇರ್ ಜಂಗ ಬಹದ್ದೂರ್ ರಾಣಾರವರು ಗೃಹ ಮತ್ತು ರಕ್ಷಣಾ ಶಾಖೆಯನ್ನು ವಹಿಸಿಕೊಂಡಿರುವರು

FOR SALE

A BUNGALOW WITH TWO OUT HOUSES

at Chamundipuram

Fetching monthly Rent

Rs. 100

Contact Box No. 4

Samachara Mysore.

ಸಂಪಾದಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು :—ಹಿ. ಕಾ ಸುಬ್ಬರಾವ್, ಮೋಹನ್ ಮುದ್ರಣಾಲಯ ಮೈಸೂರು.

ಸರ್ ಸಿ. ಪಿ. ಮುಂದಿನ ಚುನಾವಣೆಗೆ

ತಾವು ಮುಂದಿನ ಮಹಾ ಚುನಾವಣೆ ನಿಲ್ಲಬೇಕೆಂಬ ಸಲಹೆ ಬಂದಿರುವುದಾಗಿಯೂ ಭಾರತಕ್ಕೆ ಹಿಂತಿರುಗಿದನಂತರ ತಾವು ನಿರ್ಧರಿಸುವುದಾಗಿ ಸರ್ ಸಿ. ಪಿ. ರಾಮಸ್ವಾಮಯ್ಯಂ'ರವರು ಲಂಡನ್ನಿನಲ್ಲಿ ಹೇಳಿರುವರು.

ರಿ. ನಂ. ಎಂ. ೫೩೧೮   ದಿನ ಪತ್ರಿಕೆ   ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧]   ೧೩—೬—೧೯೫೧ ಬುಧವಾರ   [ಸಂಚಿಕೆ ೭೩

ಪತ್ರಿಕೆಗಳ ಸ್ಥಿತಿಗತಿ ಪರಿಶೀಲನೆ

ಭಾರತದ ವೃತ್ತಪತ್ರಿಕೆಗಳ ಸ್ಥಿತಿಗತಿ [ಪ]ರಿಶೀಲನೆಗಾಗಿ ಇಂಗ್ಲೆಂಡಿನಲ್ಲಿರುವಂತೆ [ರಾ]ಯಲ್ ಕಮಿಷನ್ನಿನ ರೀತಿಯಲ್ಲಿ ಒಂ[ದು] ಕಮಿಷನನ್ನು ಏರ್ಪಡಿಸುವುದು ಒ[ಳ್ಳೆ]ಯದೆಂದು ಪ್ರಧಾನಿ ನೆಹರೂ ಅಭಿಪ್ರಾಯ ಪಟ್ಟಿದ್ದಾರೆ

ಮೈಸೂರಿಗೆ ಹೆಚ್ಚಿಗೆ ಆಹಾರ

ಮೈಸೂರು ಪ್ರಾಂತ್ಯಕ್ಕೆ ಈಗ ಭಾರತ ಸರ್ಕಾರವು ೫೦ ಸಾವಿರ ಟನ್ ಆಹಾರ ಧಾನ್ಯವನ್ನು ಹೆಚ್ಚಾಗಿ ಕೊಡುವುದು. ೭೫ ಸಾವಿರದಿಂದ ೧ ಲಕ್ಷ ೨೫ ಸಾವಿರಕ್ಕೆ ಏರಿಸಲಾಗಿದೆ.

ಸೋಷಲಿಸ್ಟ್ ನಾಯಕರ ದಸ್ತಗಿರಿ

ಸ್ವಂ.ಸು. ಫೋನ್]   ಬೆಂ ಜೂನ್ ೧೨

ಕಾಗೋಡು ಸತ್ಯಾಗ್ರಹ ಸಂದರ್ಭದಲ್ಲಿ ಸೋಷಲಿಸ್ಟ್ ಪಕ್ಷದ ಮೈಸೂರು ಶಾಖೆಯ ಅಧ್ಯಕ್ಷ ಶ್ರೀ ಸಿ. ಜಿ. ಕೆ. ರೆಡ್ಡಿ, ಮತ್ತು ಶ್ರೀಗಳಾದ ತಣ್ಣೀರ್, ರಹಿಮಾನ್ ಮುಂತಾದವರನ್ನು ಇಂದು ಬೆಳಗ್ಗೆ ೧೧ ಗಂಟೆ ವೇಳೆಯಲ್ಲಿ ಸಾಗರ ರೈಲ್ವೆ ನಿಲ್ದಾಣದಲ್ಲಿ ದಸ್ತಗಿರಿಯಾದರು ಶಿವಮೊಗ್ಗಾಕ್ಕೆ ಕರದೊಯ್ಯಲಾಯಿತು.

ಅಖಿಲಭಾರತ ಸೋಷಲಿಸ್ಟ್ ನಾಯಕ ಡಾ|| ರಾಮ್‌ಮನೋಹರಲೋಹಿಯಾರವರು ಇಂದು ಬೆಂಗಳೂರಿಗೆ ಆಗಮಿಸಿ ಶ್ರೀಗಳಾದ ಶಾದ್ರಿ ರಾಮಣ್ಣ, ಹನುಮಂತಪ್ಪ, ಪ್ರಭುದೇವರೊಡನೆ ಕಾಗೋಡಿಗೆ ಪ್ರಯಾಣ ಮಾಡಿದರು.

ಡಿಯರ್‌ನೆಸ್ ಅಲೋಯನ್ಸ್ ಹೆಚ್ಚಿತು

ಭಾರತ ಸರ್ಕಾರದಲ್ಲಿ ೨೫೦ ರೂಗೆ ಕಡಮೆ ಸಂಬಳ ಬರುವವರಿಗೆಲ್ಲಾ ೧-೬-೧೯೫೧ರಿಂದ ಡಿಯರ್‌ನೆಸ್ ಅಲೋಯನ್ಸನ್ನು ೫ ರೂಪಾಯಿ ಹೆಚ್ಚಿಸಲಾಗಿದೆ. ಇದು ರೈಲ್ವೆ ನೌಕರರಿಗೂ ಅನ್ವಯಿಸುತ್ತದೆ.

ನಾಣ್ಯ ವಿನಿಮಯವಿಲ್ಲ

ಇತರ ರಾಷ್ಟ್ರಗಳಲ್ಲಿ ನಾಣ್ಯ ವಿನಿಮಯವಾದರೆ ಭಾರತದಲ್ಲಿ ಆ ಪ್ರಶ್ನೆಯೇಳುವುದೆಂದು ಆರ್ಥಿಕ ಸಚಿವರು ಹೇಳಿರುವರು.

ಅಧ್ಯಕ್ಷರ ಒಪ್ಪಿಗೆ

ಮಧ್ಯ ಪ್ರದೇಶದಲ್ಲಿ ಜಮೀನ್ದಾರಿ ರದ್ದು ಶಾಸನಕ್ಕೆ ಅಧ್ಯಕ್ಷರ ಒಪ್ಪಿಗೆ ದೊರೆತಿದೆ.

ಕಾಮನ್ವೆಲ್ತ್ ತ್ಯಜಿಸುವುದು

ದಕ್ಷಿಣ ಆಫ್ರಿಕಾವು ಕಾಮನ್ವೆಲ್ತನ್ನು ತ್ಯಜಿಸುವುದೆಂದು ಹೇಳಲಾಗಿದೆ.

ಮೊಹಲ್ಲಾ ದಿನಾಚರಣೆ

ಮೈಸೂರು ಜೂನ್ ೧೨

ಚಾಮರಾಜಮೊಹಲ್ಲಾ ಕನ್ನೇಗೌಡನ ಕೊಪ್ಪಲಿನಲ್ಲಿ ನಿನ್ನೆ ಪುರಸಭೆಯವರು ಮೊಹಲ್ಲಾ ದಿನಾಚರಣೆಯನ್ನು ನಡೆಸಿದರು.

ರಸ್ತೆಗಳನ್ನು ಶುಚಿಯಾಗಿಟ್ಟುಕೊಂಡಿರುವುದು, ದನಗಳಿಗೆ ಪ್ರತ್ಯೇಕವಾದ ಕೊಟ್ಟಿಗೆಗಳನ್ನು ಕಟ್ಟಿ ಅವುಗಳನ್ನು ಶುದ್ಧಗೊಳಿಸುವುದು, ಮಕ್ಕಳಿಗೆ ದೇವಿಹಾಕುವುದು, ಗರ್ಭಿಣಿ ಸ್ತ್ರೀಯರ ಮಕ್ಕಳ ಆರೋಗ್ಯ ಪರೀಕ್ಷೆ ಆಗಾಗ್ಗೆ ನಡೆಯುವುದು ಈ ವಿಷಯವಾಗಿ ಜನರಿಗೆ ತಿಳುವಳಿಕೆ ಕೊಡಲಾಯಿತು.

ಶ್ರೀಗಳಾದ ಎಸ್. ಲಿಂಗಣ್ಣ, ಬಿ ಜಿ. ದಾಸ್, ಶ್ರೀಮತಿ ಸುನಂದಮ್ಮ ಮುಂತಾದವರೂ ಕೆಲವು ಹಿತವಚನಗಳನ್ನು ಹೇಳಿ ತಾವೂ ದಿನಾಚರಣೆಯಲ್ಲಿ ಭಾಗವಹಿಸಿದರು. ಶ್ರೀಮತಿ ಸುನಂದಮ್ಮನವರು ಮಾತನಾಡುತ್ತಾ ಮಕ್ಕಳು, ಮನೆ, ಮುಂತಾದುವನ್ನು ಶುಚಿಯಾಗಿಟ್ಟುಕೊಳ್ಳಬೇಕಾದುದು ಸ್ತ್ರೀಯರ ಕರ್ತವ್ಯ ಅವರು ತಮ್ಮ ಕರ್ತವ್ಯವನ್ನರಿತು ಮಕ್ಕಳ ಬೆಳವಣಿಗೆ, ಶುಚಿತ್ವ ಮುಂತಾದುವನ್ನು ಕಾಪಾಡಿಕೊಂಡು ಬರಬೇಕು ಎಂದೂ ಸ್ತ್ರೀಯರ ಪ್ರತಿನಿಧಿಗಳಿಲ್ಲರೂ ಪೌರಸಭೆಯಲ್ಲಿಲ್ಲದಿರುವುದು ಶೋಚನೀಯವೆಂದು ಹೇಳಿದರು,

ಬ್ರಿಟನ್ ನಿರಾಕರಣೆ

ಜಪಾನ್ ಶಾಂತಿಕರಾರಿಗೆ ಚೈನಾ ಅಥವಾ ಕೋಮಿಂಟಾಂಗ್ ಪ್ರತಿನಿಧಿಗಳನ್ನು ಬಿಟ್ಟು ತಾನು ಒಪ್ಪಿಗೆ ಕೊಡುವುದಿಲ್ಲವೆಂದು ಬ್ರಿಟನ್ ಅಮೆರಿಕಾದ ಶಾಂತಿಕರಾರಿನ ಸಲಹೆಯನ್ನು ನಿರಾಕರಿಸಿರುವುದಾಗಿ ತಿಳಿದುಬರುತ್ತದೆ.

ಕುಡಿದವನಿಗೆ ಶಿಕ್ಷೆ

ಕೃಷ್ಣರಾಜ ಮೊಹಲ್ಲಾ ಹುಲ್ಲಿನವೀದಿಯ ನಿವಾಸಿ ನಂಗಯ್ಯನೆಂಬುವವರ ಮಗ ಹಾಲಿನ ಭೈರಪ್ಪ ಎಂಬುವವನು ಅತಿಯಾಗಿ ಕುಡಿದು ವಾಣಿವಿಲಾಸ ಮಾರ್ಕೆಟ್ಟಿನ ಬಳಿ ಸಂಜೆ ೫|| ಗಂಟೆಯಲ್ಲಿ ಗಲಾಟೆಮಾಡುತ್ತಿದ್ದುದನ್ನು ಪೋಲೀಸಿನವರು ಕಂಡು ಅವನನ್ನು ಆಸ್ಪತ್ರೆಗೆ ಸಾಗಿಸಿದರು. ೧೧ನೇ ತಾ|| ಒಂದನೇ ಮ್ಯಾಜಿಸ್ಟ್ರೇಟರು ಅವನಿಗೆ ೫ ರೂ. ಜುಲ್ಮಾನೆ ವಿಧಿಸಿದರು.

ಮಹಾಜನರಲ್ಲಿ ಡಾ|| ಮುತ್ತುಕೃಷ್ಣನ್‌ರವರ ವಿನಂತಿ

ಡಾ|| ಮುತ್ತುಕೃಷ್ಣನ್‌ರವರು ಮಹಾಜನರಲ್ಲಿ ಒಂದು ಅರಿಕೆಯನ್ನು ಸಲ್ಲಿಸಿ ತಮ್ಮಲ್ಲಿಗೆ ಬರುವ ಮೈಸೂರಿನ ವ್ಯಾಧಿಗ್ರಸ್ಥರಿಗೆ ತಾವು ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಪರೀಕ್ಷಿಸಿ ಸೇವೆಸಲ್ಲಿಸುತ್ತಿರುವುದಾಗಿ ಈ ರೀತಿ ತಿಳಿಸಿದ್ದಾರೆ.

ನನ್ನಲ್ಲಿ ಬರುವ ರೋಗಿಗಳನ್ನು ಬಡವ ಬಲ್ಲಿದ, ವಿದ್ಯಾವಂತ ಅವಿದ್ಯಾವಂತ, ಎಂದು ಭೇದ ಕಲ್ಪಿಸದೆ ನನ್ನ ಮನಸ್ಸಾಕ್ಷಿಯಾಗಿ ಉತ್ತಮವಾದ ಚಿಕಿತ್ಸೆಯನ್ನು ಎಲ್ಲರಿಗೂ ಮಾಡುತ್ತಿರುವುದಲ್ಲದೆ ಎಲ್ಲಾ ರೋಗಿಗಳನ್ನು ಗೌರವದಿಂದ ಕಾಣುತ್ತಾ ಚಿಕಿತ್ಸೆ ನಡೆಸುತ್ತಿದ್ದೇನೆ.

ನನ್ನಲ್ಲಿ ಬರುವ ರೋಗಿಗಳಲ್ಲಿ ವಿದ್ಯಾವಂತರು, ವ್ಯಾಪಾರಸ್ಥರು, ಅಧಿಕಾರಿಗಳು ವಿದ್ಯಾರ್ಥಿಗಳು, ಖಾಸಗಿಯವರು ಮತ್ತು ಇತರ ನ ಕಾನೀಯರುಗಳಿದ್ದು ಇವರುಗಳು ನಾನಾ ವರ್ಗಗಳಿಗೆ ಸೇರಿದವರು ಮೇಲ್ಕಂಡ ಎಲ್ಲಾ ವರ್ಗದ ಖಾಯಿಲೆಯವರಿಗೆ ನಾನು ಸಮಸಮವಾದ ಆಸಕ್ತಿಯಿಂದ ಚಿಕಿತ್ಸೆಮಾಡುತ್ತಿರುವುದಲ್ಲದೆ ಸ್ಥಳದಲ್ಲಿಯೇ ಕೂಡಲೆ ಕೆಲವರಿಗೆ ಪರಿಹಾರ ಮಾಡುತ್ತಿರುತ್ತೇನೆ. ನನ್ನಲ್ಲಿ ಚಿಕಿತ್ಸೆಪಡೆದು ಗುಣವಾಗಿರುವ ಮಹನೀಯರೇ ಇದಕ್ಕೆ ಸಾಕ್ಷಿ.

ನಾನು ಮೈಸೂರಿನಲ್ಲಿ ವಿವಿಧವಾದ ಸಗಳ ಮತ್ತು ಮನೋದೌರ್ಬಲ್ಯಗಳಿಂದ ನರಳುತ್ತಿರುವ ೭೪೫ ಜನರಿಗೆ ಚಿಕಿತ್ಸೆ ಮಾಡಿದ್ದೇನೆ. ಇವರುಗಳು ನನ್ನ ಚಿಕಿತ್ಸಾಕ್ರಮದ ಬಗ್ಗೆ ಪೂರ್ಣವಾದ ನಂಬಿಕೆ ಹೊಂದಿರುವರಲ್ಲದೆ ಇವರು ಗುಣಮುಖರಾಗುತ್ತಲಿರುವರೆಂದೂ ಹೇಳಿರುತ್ತಾರೆ. ತಮ್ಮ ಖಾಯಿಲೆಗಳನ್ನು ಗುಣಪಡಿಸಿಕೊಳ್ಳಬೇಕೆಂದು ಧೃಡಮನಸ್ಸಿನಿಂದ ಬರುವ ರೋಗಿಗಳು ನನ್ನಿಂದ ಗುಣಪಡಿಯುವರಲ್ಲದೆ ನಾನು ಎಂದಿಗೂ ನನ್ನ ಕರ್ತವ್ಯದಲ್ಲಿ ವಿಮುಖನಾಗಿಲ್ಲ.

ಕೆಲವು ಜನರು ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿರುವುದು ಇತ್ತೀಚೆಗೆ ನನ್ನ ಗಮನಕ್ಕೆ ಬಂದಿದೆ. ಈ ಅಪಪ್ರಚಾರವನ್ನು ಮಹಾಜನರು ಗಮನಿಸದೆ ನೇರವಾ[ಗಿ] ನನ್ನಲ್ಲಿಗೆ ಬಂದು ನನ್ನ ಚಿಕಿತ್ಸಾಕ್ರ[ಮ]ವನ್ನು ತಿಳಿದುಕೊಂಡು ನಾನು ಕೊಡುವ ಮನಶ್ಶಾಸ್ತ್ರ ರೀತಿಯ ಚಿಕಿತ್ಸೆ[ಯ] ಸತ್ಯಾಂಶವನ್ನು ಅರಿಯಲೆಂದು ಪ್ರಾರ್ಥಿಸುತ್ತೇನೆ. ನಾನು ಇಲ್ಲಿಗೆ ಬಂದಿರು[ವು]ದು ಹಣವನ್ನು ಸೂರೆಮಾಡಿಕೊಂಡು ಕ[ಣ್ಣು]ಕಾಣದೆ ಓಡಿಹೋಗುವುದಕ್ಕೆ[ಲ್ಲ]. ನಾನು ಸಂಪಾದಿಸುವ ಹಣಕ್ಕಿಂತ ಗೌರವ[ಯು]ತವಾದ ಸೇವೆ ಮಾಡುವುದು ಮುಖ್ಯವೆಂದು ಸ್ಪಷ್ಟಪಡಿಸುತ್ತೇನೆ. ವ[ಿವಿಧ] ರೋಗಗಳಿಂದ ನರಳುತ್ತಿರುವ ಮಹನೀಯರು ನನ್ನಲ್ಲಿಗೆ ಬಂದು ತಮ್ಮ ಖಾಯಿಲೆಯನ್ನು ಗುಣಪಡಿಸಿಕೊಳ್ಳಲಿ. ನಾನು ಗುಣಪಡಿಸುತ್ತೇನೆಂದು ಭರವಸೆ ಕೊಟ್ಟು ಅವರಿಗೆ ಗುಣಪಡಿಸುವೆನಲ್ಲದೆ ನನ್ನ ಕರ್ತವ್ಯದಲ್ಲಿ ಹಿಂದೆಬಿದ್ದಿಲ್ಲವೆಂದು ಹೇಳುತ್ತೇನೆ. ನಾನು ಮೈಸೂರಿನಲ್ಲಿ ಇನ್ನೂ ಸ್ವಲ್ಪ ವಾರಗಳ ಕಾಲವಿದ್ದು ನಾನು ಹೊರಡುವ ಮುನ್ನ ನನ್ನ ಚಿಕಿತ್ಸಾಕ್ರಮಗಳಿಂದ ಹೆಚ್ಚಿನ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸುತ್ತೇನೆಂದು ನನಗೆ ಭರವಸೆಯಿದೆ.

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಮಧ್ಯಸ್ಥಿಕೆಗಾರರಾಗಿ [ನೇ]ಮಕವಾಗಿರುವ ಡಾ|| ಗ್ರಹಾಂರವರು ಭಾರತಕ್ಕೆ ಬಂದರೆ ಸುಸ್ವಾಗತ ನೀಡುತ್ತೇವೆಯಾದ ವಿಷಯದಲ್ಲಿ ಚರ್ಚೆ ನಡೆಸ[ಲು] ನಾವು ಸಿದ್ಧ ಆದರೆ ವಿಶ್ವಸಂಸ್ಥೆಯು ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಮಾಡಿದ ತೀರ್ಮಾನಗಳಿಗೆ ನಾವು ಕಟ್ಟುಬೀಳುವುದಿಲ್ಲ. ಪಾಕೀಸ್ಥಾನವು ಆಕ್ರಮಣ ವಿಷಯವನ್ನು ಅಭೂತವಾಗಿ ಕಲ್ಪಿಸಿ ಪರರಾಷ್ಟ್ರಗಳ ಮುಂದಿಟ್ಟಿದೆ. ಕಾಶ್ಮೀರದಲ್ಲಿ ಪ್ಲೆಬಿಸೈಟ್ ನಡೆಯಲು ಪಾಕೀಸ್ಥಾನವೇ ಅ[ಡ್ಡಿ] ತರುತ್ತಲಿದೆ. ಏನೇ ಆಗಲಿ ನಮ್ಮ ಧ್ಯೇಯ ಮತ್ತು ನೀತಿಯಲ್ಲಿ ಸ್ವಲ್ಪವೂ ಬದಲಾವಣೆಯಿಲ್ಲವೆಂದು ಪಂಡಿತ ನೆಹರೂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು

ವಿಮಾನ ಯಾನ ಶಿಕ್ಷಣ

ವಿಮಾನಯಾನದಲ್ಲಿ ತರಪೇತು, ಪಡೆಯಬಯಸುವವರು ಜಕ್ಕೂರ್ ನಿಲ್ದಾಣದಲ್ಲಿರುವ ಸರ್ಕಾರದ ವಿಮಾನಯಾನ ಶಿಕ್ಷಣ ಶಾಲೆಯಲ್ಲಿ ಪಡೆಯಬಹುದೆಂದು ಯಾವ ಜಾತಿ, ಮತ, ಭೇದವಿಲ್ಲದೆ ಎಲ್ಲಾ ಅ[ಭ್ಯ]ರ್ಥಿಯರಿಗೂ ಅವಕಾಶ ವಿದೆಯೆಂದು ಸರ್ಕಾರಿ ಪ್ರಕಟಣೆ ತಿಳಿಸುತದೆ.

ಯಂತ್ರಯುಗದಲ್ಲಿ ನೇಕಾರರ ಸಂಘಟನೆ ಅತ್ಯಗತ್ಯ

"ಇಂದಿನ ಈ ಯಂತ್ರಯುಗದಲ್ಲಿ ನೇಕಾರರ ಸಂಘಟನೆ ಅತ್ಯಗತ್ಯ. ನೇಕಾರರ ಸ್ಥಿತಿ ಈಗ ನಿಕೃಷ್ಟವಾಗಿದ್ದರೂ ಅವರು ಸಂಘಟಿತರಾಗಿ, ಬುದ್ಧಿ ಕುಶಲತೆಯಿಂದ ಶ್ರಮಪಟ್ಟು ಕೆಲಸ ಮಾಡಿದರೆ ಯಂತ್ರಯುಗ ಸಾಧಿಸದೇ ಇರುವುದನ್ನು ಸಾಧಿಸಬಲ್ಲರು"

ಎಂದು ಮೈಸೂರು ಸಂಸ್ಥಾನದ ಗೃಹಸಚಿವಂಥದ ಸನ್ಮಾನ್ಯ ಶ್ರೀ ಟಿ. ಮರಿಯಪ್ಪನವರು ಕೈಮಗ್ಗದವರ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ತಿಳಿಸಿದರು.

'ಪ್ರಮಾಣಿಕತೆ ಹೆಚ್ಚಬೇಕು. ಶ್ರಮಸಹಿಷ್ಣುತೆ, ಸಂಘಟನೆಗಳಿಂದ ನೀವು ಪ್ರಗತಿ ಸಾಧಿಸಬಲ್ಲಿರಿ ಹೊಚ್ಚೇನು ? ಆದ್ದರಿಂದಲೇ ನಿಮ್ಮ ಪುರೋಭಿವೃದ್ಧಿ.

'ಸಹಕಾರ ತತ್ವದ ಮೇಲೆ ರೂಪಿತವಾಗಿರುವ ನಿಮ್ಮ ಸಂಘಕ್ಕೆ ಸದಸ್ಯ ಸಂಪತ್ತು ಇನ್ನೂ ಹೆಚ್ಚಬೇಕಾಗಿದೆ ಆ ಕಡೆಗೆ ವೃತ್ತಿಬಾಂಧವರ ಗಮನ ಹೆಚ್ಚಾಗಿ ಹೋಗಬೇಕಾಗಿದೆ.

"ಹಳ್ಳಿಗಳಲ್ಲಿ, ತಾಲ್ಲೋಕುಗಳಲ್ಲಿ ಇರುವ ಸಹಕಾರ ಸಂಸ್ಥೆಗಳನ್ನು ಬಲಪಡಿಸಬೇಕು ನೂಲು ಹಂಚಿಕೆಯ ಬಗ್ಗೆ ಸಂಘದ ಮೇಲೆ ಆಕ್ಷೇಪಣೆ ಹೊರಿಸದೇ ಸರ್ವರೂ, ಸಂಘಟಿಸಿ ಕೆಲಸ ಮಾಡಬೇಕು" ಎಂದು ಸಚಿವರು ನುಡಿದರು.

ರೇಷನ್ ಹೆಚ್ಚಿಸಲಾಗುವುದು

ಭಾರತದಲ್ಲಿ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುತ್ತಲಿದೆ. ವಿದೇಶಗಳಿಂದ ಆಹಾರ ಸರಬರಾಜು ತಡವಿಲ್ಲದೆ ಆಗುತ್ತಲಿದೆ. ಅಮೆರಿಕಾದಿಂದ ೨೦ ಲಕ್ಷ ಟನ್ ಆಹಾರ ಸರಬರಾಜಾಗುವುದನ್ನು ಪರಿಗಣಿಸಿದಲ್ಲಿ, ಈಗ ಕೊಡುತ್ತಿರುವ ಪಡಿತರ ಪ್ರಮಾಣವನ್ನು ಸದ್ಯದಲ್ಲೇ ಹೆಚ್ಚಿಸಬಹುದೆಂದು ಪ್ರಧಾನಿ ನೆಹರೂ ಹೇಳಿರುವರು.

ಚೈನಾದಿಂದ ಮೈಲೊ

ಚೈನಾದಿಂದ ಬೊಂಬಾಯಿಗೆ ೧೦ ಸಾವಿರ ಟನ್ ಮೈಲೊ ತುಂಬಿದ ಹಡಗು ಬಂದಿದೆ. ಇನ್ನು ಒಂದು ಲಕ್ಷ ಟನ್ ಮೈಲೊ ಸದ್ಯದಲ್ಲೆ ಬರಲಿದೆ.

ತಿದ್ದುಪಡಿ

ನಿನ್ನೆಯ ಪತ್ರಿಕೆಯಲ್ಲಿ 'ಮುಖ್ಯಮಂತ್ರಿಗಳ ನಿಯೋಗ' ಎಂಬ ಶಿರೋನಾಮೆಯಲ್ಲಿ ತಾ|| ೧೨ ಎಂದಿರುವುದನ್ನು ತಾ|| ೧೬ ಎಂದೂ, ೨ನೇ ಪುಟದಲ್ಲಿ 'ಮೋಟಾರು ಕೆಲಸಗಾರರ ಸಾರ್ವತ್ರಿಕ ಮುಷ್ಕರ' ಎಂಬಲ್ಲಿ ೧೬ನೇ ತಾ||ಗೆ ಬದಲು ೧೭ನೇ ತಾ|| ಎಂದು ಓದಿಕೊಳ್ಳಬೇಕು

ಮೋಟಾರು ಕೆಲಸಗಾರರ ಮುಷ್ಕರವು ಪ್ರಾರಂಭವಾಗುವುದು. ೧೭ನೇ ತಾ|| ಭಾನುವಾರ ರಾತ್ರಿ ೧೨ ಗಂಟೆಗೆ.

ಶಿಂಷಾ ವಿಸ್ತರಣೆ ಯೋಜನೆ

ಶಿವನ ಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರದ ಯಂತ್ರಗಳು ಹಳೆಯದಾಗಿರುವುದರಿಂದ ಅವುಗಳನ್ನು ಬದಲಾಯಿಸಬೇಕಾಗಿದೆ ಎಂದೂ ಅಲ್ಲಿ ಹೊಸ ಯಂತ್ರಗಳನ್ನು ಸ್ಥಾಪಿಸುವ ಬದಲು ಶಿಂಷಾದಲ್ಲಿಯೇ ಅವುಗಳನ್ನು ಸ್ಥಾಪಿಸಿ ಶಿಂಷಾ ಕೇಂದ್ರವನ್ನು ವಿಸ್ತರಿಸಿ ಶೇಕಡ ೫೦ರಷ್ಟು ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಹುದೆಂದೂ ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆಯ ದಿನ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಶಿಂಷಾವನ್ನು ವಿಸ್ತರಿಸುವುದರಿಂದ ಕಾವೇರಿನದಿ ನೀರನ್ನು ಶಿಂಷಾ ಸ್ಟೇಷನ್ನಿಗೆ ಒದಗಿಸಲಾಗುವುದು. ಆಗ ಶಿವನ ಸಮುದ್ರ ಕೇಂದ್ರವನ್ನು ಕಾಲಿಕ ಕೇಂದ್ರವನ್ನಾಗಿ ಪರಿವರ್ತಿಸಿ ಜನವರಿಯಿಂದ ಜೂನ್‌ವರೆಗೆ ಆರು ತಿಂಗಳುಕಾಲ ನಡೆಸಬೇಕಾಗುವುದು.

ಶಿಂಷಾ ವಿಸ್ತರಣಾ ಯೋಜನೆಯನ್ನು ವಿವರಿಸುತ್ತಾ ಸಚಿವರು ಅದಕ್ಕಾಗಿಯೂ ಮೂರೂವರೆ ಕೋಟಿ ರೂ ವೆಚ್ಚವಾಗುವುದೆಂದೂ ತಿಳಿಸಿದರು. ಇದಕ್ಕಾಗಿ ಸಾಲ ಎತ್ತಬೇಕಾಗುವುದು.

ಶಿಂಷಾದಲ್ಲಿ ಈಗ ೧೬,೨೦೦೦೦ ಕಿ. ವಾ. ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲಾಗುತ್ತಿದೆ. ವಿಸ್ತರಿಸಲಾದ ನಂತರ ೬೨ ಸಾವಿರ ಕಿ. ವಾ. ಉತ್ಪತ್ತಿಯಾಗುವುದು ಸರ್ವೆ ಮಾಡಲು ಆಜ್ಞೆಯಾಗಿದೆ. ೬ ತಿಂಗಳಲ್ಲಿ ಸರ್ವೆ ಕೆಲಸ ಮುಗಿಯುವ ನಿರೀಕ್ಷೆಯಿದೆ.

ಎ.ಐ.ಸಿ.ಸಿ. ಬೆಂಗಳೂರಿನಲ್ಲಿ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ೧೩ನೇ ತಾರೀಖು ಬೆಂಗಳೂರಿನಲ್ಲಿ ೩ ದಿನ ನಡೆಯುವಂತೆ ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಪ್ರೌಢ ವ್ಯಾಸಂಗ ಮಾಡುವವರು

ಭಾರತಾದ್ಯಂತ ವಿಭಾಗವಾದ ಮೇಲೆ ಪ್ರೌಢ ವಿದ್ಯಾಭ್ಯಾಸ ಮಾಡುತ್ತಿರುವವರ ಸಂಖ್ಯೆಯು ೨ ಲಕ್ಷಕ್ಕೇರಿದೆ.

ದೆಹಲಿಯಲ್ಲಿ ಕೋಮುವಾರು ಗಲಭೆ

ಬಜಾರ್ ಸೀತಾರಾಮ್ ಕ್ಷೇತ್ರದಲ್ಲಿ ಭಾನುವಾರ ಇದ್ದಕ್ಕಿದ್ದಂತೆಯೇ ಕೋಮುವಾರು ಗಲಭೆ ಪ್ರಾರಂಭವಾಯಿತು ಇಟ್ಟಿಗೆಗಳು, ಸೋಡಾಬಾಟ್ಲುಗಳೂ, ಧಾರಾಳವಾಗಿ ಬಳಸಲ್ಪಟ್ಟವು. ಅರ್ಧಗಂಟೆಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಗಾಯಗೊಂಡ ೧೨ ಜನರಲ್ಲಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ಮಸೀದಿಯ ಮುಂದೆ ಲಗ್ನದ ಮೆರವಣಿಗೆ ಹೋಗುತ್ತಿದ್ದಾಗ ಗಲಭೆ ಮೊದಲಾಯಿತು. ೧೨ ಜನ ಬಂಧಿಸಲ್ಪಟ್ಟಿದ್ದಾರೆ.

ರಷ್ಯಕ್ಕೆ ಹೋಗಲು ೩೦ ಜನಕ್ಕೆ ರಹದಾರಿ

ರಷ್ಯಕ್ಕೆ ಸಂದರ್ಶನಕ್ಕೀಯಬೇಕೆಂದು ೩೯ ಜನಕ್ಕೆ ಆಹ್ವಾನ ಬಂದಿದೆ. ಅವರಲ್ಲಿ ೩೦ ಜನಕ್ಕೆ ಪಾಸ್‌ಪೋರ್ಟ್ ಕೊಡಲಾಗಿದೆ.

ಎಂದು ಪ್ರಧಾನಿ ನೆಹರೂ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

'ಕೆಲವರಿಗೆ ಅವಕಾಶ ಕೊಡಲಿಲ್ಲವಲ್ಲ ಎಂದು ಕೇಳಿದ್ದಕ್ಕೆ ಕೆಲವರು ಅಲ್ಲಿಗೆ ಹೋಗುವುದು ಸರಕಾರದವರಿಗೆ ಸರಿ ಎನಿಸಲಿಲ್ಲ. ಆದ್ದರಿಂದ " ಎಂದು ನೆಹರು ನುಡಿದರು.

ಪಾಟ್ನಾ ಸಮ್ಮೇಳನಕ್ಕೆ ೧೨ ಸಂಸ್ಥಾನಗಳ ಪ್ರತಿನಿಧಿಗಳು

ಪ. ಬಂಗಾಳ; ದೆಹಲಿ, ಬೊಂಬಾಯಿ, ಗುಜರಾತ್, ಉತ್ತರ ಪ್ರದೇಶ, ಮಲಬಾರ್, ಮದ್ರಾಸ್, ಒರಿಸ್ಸಾ, ಹೈದರಾಬಾದ್ ಆಸ್ಸಾಂ ಮತ್ತು ಅಂಧ್ರ ಈ ಹನ್ನೆರಡು ಸಂಸ್ಥಾನಗಳಿಂದ ಜೂನ್ ೧೬-೧೭ರಲ್ಲಿ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ನಡೆವ ಅಖಿಲ ಭಾರತ ರಾಜಕೀಯ ಸಮ್ಮೇಳನಕ್ಕೆ ಪ್ರತಿನಿಧಿಗಳು ಬರಲಿದ್ದಾರೆ.

ಕದನ ಮುಕ್ತಾಯ ಸೂಚನೆಯಿಲ್ಲ

ಕೊರಿಯಾದಲ್ಲಿ ಕದನವು ಸದ್ಯದಲ್ಲೇ ಮುಕ್ತಾಯವಾಗುವ ಹಾಗೆ ಕಾಣುವುದಿಲ್ಲವೆಂದು ಪ್ರಧಾನಿ ಪಂಡಿತ ನೆಹರೂ ಹೇಳಿರುವರು,

ನೇಪಾಳಕ್ಕೆ ಭೇಟಿ

ಈ ವಾರದಲ್ಲಿ ಪಂಡಿತ ನೆಹರೂ ನೇಪಾಳಕ್ಕೆ ಭೇಟಿ ಕೊಡುವರು.

ಭಯೋತ್ಪಾದಕ ಕೃತ್ಯಗಳ ಕಮ್ಯೂನಿಸ್ಟ್ ಪಕ್ಷ ವಿರೋಧಿ

ನಿರ್ಣಯವೊಂದರಿಂದ, ಇಂದಿನ ಪ್ರಜಾ ಪ್ರಭುತ್ವ ವಿರೋಧಿ ಸರ್ಕಾರವನ್ನು ಉಳಿಸಿ ನಿಜವಾದ ಪ್ರಜಾಪ್ರಭುತ್ವ ಸರಕಾರವನ್ನು ರಚಿಸುವುದೇ ಕಮ್ಯೂನಿಸ್ಟ್ ಪಕ್ಷದ ಗುರಿ.

ದೇಶದಲ್ಲಿನ ವ್ಯಕ್ತಿಗತವಾದ ತಂತ್ರಿಗಳು ಮತ್ತು ಭಯೋತ್ಪಾದಕ ಕೃತ್ಯಗಳಿಗೂ ಪಕ್ಷಕ್ಕೂ ಸಂಬಂಧವಿಲ್ಲವೆಂದೂ ನಿರ್ಣಯವೊಂದನ್ನು ತಮಿಳುನಾಡು ಕಮ್ಯೂನಿಸ್ಟ್ ಪಕ್ಷವು ತನ್ನ ಅಧಿವೇಶನದಲ್ಲಿ ನಿರ್ಣಯಮಾಡಿದೆ.

ಮದ್ರಾಸಿಗೆ ಖರ್ಜೂರ

ಮದ್ರಾಸಿನಲ್ಲಿ ಆಹಾರ ಅಭಾವವುಂಟಾಗಿರುವ ಕೆಲವು ಪ್ರದೇಶಗಳಿಗೆ ಸುಲಭದರದಲ್ಲಿ ಸರಬರಾಯಿ ಮಾಡಲು ೧೦೦೦ ಟನ್ ಖರ್ಜೂರವನ್ನು ಭಾರತ ಸರ್ಕಾರವು ಮದ್ರಾಸಿಗೆ ಕಳುಹಿಸಿದೆ.

ತುಮಕೂರಿನಲ್ಲಿ ಆರ್ಟ್ಸ್ ವಿಭಾಗ

ತುಮಕೂರು ಪ್ರಥಮದರ್ಜೆ ಕಾಲೇಜಿನಲ್ಲಿ ಈ ವರ್ಷದಿಂದಲೇ ಆರ್ಟ್ಸ್ ವಿಭಾಗವನ್ನು ತೆರೆಯಲಾಗುವುದು.

ಅಧ್ಯಕ್ಷ ಟ್ರೂಮನ್ನರ ಸಹಿಗೆ

ಭಾರತಕ್ಕೆ ೨೦ ಲಕ್ಷ ಟನ್ ಆಹಾರವನ್ನು ಸರಬರಾಯಿ ಮಾಡುವ ಮಸೂದೆಗೆ ಅಮೆರಿಕಾ ಹಿರಿಯ, ಕಿರಿಯ ಶಾಸನಸಭೆಗಳು ಒಪ್ಪಿಗೆಯಿತ್ತಿದೆ. ಮಾನೆಸ್ಸೈಟನ್ನು ಭಾರತವು ಸರಬರಾಯಿ ಮಾಡಬೇಕೆಂಬ ನಿರ್ಬಂಧವೇನೂ ಈಗ ಇಲ್ಲ. ಆ ವಸ್ತುವನ್ನೂ ಸರಬರಾಯಿ ಮಾಡಬಹುದೆಂಬ ಸೂಚನೆಮಾತ್ರ ಇದೆ. ಮಸೂದೆಯೂ ಈಗ ಟ್ರೂಮನ್ನರ ಸಹಿಗೆ ಹೋಗಿದೆ. ಸಹಿಯಾದ ಒಂದೆರಡು ವಾರಗಳಲ್ಲಿ ಆಹಾರ ಸಾಗಾಣಿಕೆಯು ಪ್ರಾರಂಭವಾಗುತ್ತದೆ. ಈಗಾಗಲೇ ಸಾಗಾಣಿಕೆ ಕಾರ್ಯಕ್ಕೆ ಹಡಗುಗಳು ಸಿದ್ಧವಾಗುತ್ತಲಿರುವುದಾಗಿ ತಿಳಿಯಬರುತ್ತದೆ.

ಶ್ರೀ ಸಿ. ಆರ್ ಮದ್ರಾಸಿಗೆ

ಗೃಹಸಚಿವ ಶ್ರೀ ಸಿ. ರಾಜಗೋಪಾಲಚಾರಿ ಮತ್ತು ರೈಲ್ವೇ ಮತ್ತು ಸಂಸ್ಥಾನ ಶಾಖಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಮುಂದಿನವಾರ ಮದರಾಸಿಗೆ ಬರಲಿರುವರು.

ವುಡ್‌ಲ್ಯಾಂಡ್ಸ್ * ೯—೬—೫೧ರಿಂದ ಅಮೋಘ ಪ್ರಾರಂಭ
ಉಮರ್ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ
* ಉಸ್ತಾದ್ ಪೆಡ್ರೊ *
ಪಾತ್ರ— ಶೇಖ್ ಮುಖ್ತಾರ್, ಬೇಗಂಪ್ಯಾರ, ಶಮ್ಮಿ, ಸಪ್ರು, ಅನ್ಸಾರಿ.

ಸಂಪಾದಕರು:—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು :—ಸಿ. ಕಾ. ಸುಬ್ಬರಾವ್, ಮೋಹನ ಮುದ್ರಣಾಲಯ ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೬—೧೯೪೬ ಗುರುವಾರ [ಸಂಚಿಕೆ ೨೩೩

ಮುಷ್ಕರ

ತಮ್ಮ ಸಂಬಳಗಳನ್ನು ಹೆಚ್ಚು ಮಾಡಿ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಷ್ಕರವನ್ನು ೨೦ ತಾ|| ನಿಂದ ಹೂಡು ವುದಾಗಿ ಬೊಂಬಾಯಿಯ ಒಂದರು ಕೆಲಸ ಗಾರರು ಮುಷ್ಕರ ಸೂಚನೆ ನೋಟೀ ಸನ್ನು ಕೊಟ್ಟಿರುವರು.

ಭಾರತಕ್ಕೆ ಆಹಾರ ರವಾನೆ

ಅಮೆರಿಕಾದಿಂದ ಸದ್ಯದಲ್ಲೇ ಕೆಲವು ತಿಂಗಳುಕಾಲ, ಪ್ರತಿದಿನವೂ ಆಹಾರ ತುಂಬಿಕೊಂಡು ಒಂದು ಹಡಗು ಬರುವುದೆಂದು. ಭಾರತದಲ್ಲಿರುವ ಅಮೆರಿಕಾ ರಾಜ್ಯ ಭಾರಿ ಮಿ|| ಅಲಾಯ್'ಹೆಂಡರ'ಸನ್ ಹೇಳಿರುವರು.

ಜುಲೈನಿಂದ ಬೊಂಬಾಯಿ ಮದ್ರಾಸ್‍ನಲ್ಲಿ ೧೨ ಔನ್ಸ್ ರೇಷನ್

ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನಿಯಮ

ಬೆಂಗಳೂರು ಜೂನ್ ೧೩

ಔದ್ಯೋಗಿಕ ಶಿಕ್ಷಣ ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳನ್ನು ಭಾರತ ರಾಜ್ಯಾಂಗಕ್ಕನುಗುಣವಾಗಿರುವಂತೆ ಮಾಡುವ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಇಂಜನಿಯರಿಂಗ್ ಕಾಲೇಜು, ಇಂಜನಿಯರಿಂಗ್ ಸ್ಕೂಲು ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಶೇ. ೭೫ರಷ್ಟು ಸೀಟುಗಳನ್ನು ಹಿಂದುಳಿದ ಪಂಗಡದವರಿಗೆ ಕಾದಿರಿಸಬೇಕೆಂದು ಸರ್ಕಾರದ ಆಜ್ಞೆಯಿದೆ. ಹಿಂದುಳಿದ ಪಂಗಡದವರು ಎಂದರೆ ಹಿಂದುಳಿದ ಕೋಮಿನವರು ಎಂದು ಅರ್ಥವಲ್ಲವೆಂದು ಹೇಳಲಾಗುತ್ತಿದ್ದು, ಹಿಂದುಳಿದ ಕೋಮುಗಳಿಗೆ ರಿಯಾಯಿತಿಗಳನ್ನು ತೋರಿಸುವುದು ರಾಜ್ಯಾಂಗಕ್ಕೆ ವಿರೋಧವಾಗಿರುವಾಗ, ಮೈಸೂರಿನಲ್ಲಿ ಬ್ರಾಹ್ಮಣೇತರರಿಗೆ ಅವರನ್ನು ಹಿಂದುಳಿದ ಪಂಗಡದವರೆಂದು ಪರಿಗಣಿಸಿ, ಸೀಟುಗಳನ್ನು ಕಾದಿರಿಸುತ್ತಿರಲಾಗಿದೆ. ಈ ತೊಡಕು ಮತ್ತು ಸಂದೇಹಗಳನ್ನು ನಿವಾರಿಸಲು, ನಿಯಮಗಳನ್ನು ತಿದ್ದುಪಾಟು ಮಾಡಲು ಯೋಚಿಸಲಾಗಿದೆ. ಈ ಪ್ರಶ್ನೆಯನ್ನು ಮುಂದಿನ ಮಂತ್ರಿಮಂಡಲದ ಸಭೆಯಲ್ಲಿ ಪರಿಶೀಲಿಸಲಾಗುವುದೆಂದು ತಿಳಿದುಬಂದಿದೆ.

ಬಿ. ಇ. ಪರೀಕ್ಷೆ ಪ್ರಥಮಸ್ಥಾನ

ಈ ಸಾಲಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಪರೀಕ್ಷೆಯಲ್ಲಿ ಮೈಸೂರಿನ ಶ್ರೀ ಎಸ್. ನರಸಿಂಹನ್'ರವರು ಪ್ರಥಮ ದರ್ಜೆಯಲ್ಲಿ ಪ್ರಥಮಸ್ಥಾನವನ್ನು ಗಳಿಸಿರುವರು. ಇವರು ಮೈಸೂರಿನ ಅಡ್ವೋಕೇಟ್ ಶ್ರೀ ಎಸ್ ಆರ್. ಸಪ್ತರ್ಷ್ಯಂಗಾರ್'ರವರ ತೃತೀಯ ಕುಮಾರರು.

ಒಂದು ಎಕರೆಗೆ ೪೧ ಮಣ ಗೋಧಿ

ರಾಜಾಸ್ಥಾನದಲ್ಲಿ ಅರ್ಜುನ ಸಿಂಗ್ ಎಂಬ ರೈತನು ಒಂದು ಎಕರೆಗೆ ೪೧ ಮಣ ಗೋಧಿಯನ್ನು ಬೆಳೆದಿರುವನು.

ಬಿಹಾರ್ ಮತ್ತು ಮದ್ರಾಸಿಗೆ ಸಹಾಯನೀಡಿ

ಸ್ವಂ.ಸು.] ಬೆಂಗಳೂರು ಜೂನ್ ೧೩

ಸರ್ಕಾರದವರು ಪತ್ರಿಕಾ ಪ್ರಕಟಣೆ ಹೊರಡಿಸಿ ಭಾರತದ ಇತರ ಭಾಗಗಳ ಮಹಾಜನರು ಬಿಹಾರ್ ಮತ್ತು ಮದ್ರಾಸಗಳಲ್ಲಿ ಆಹಾರಾಭಾವದಿಂದ ನರಳುತ್ತಿರುವವರಿಗೆ ಧನಧಾನ್ಯ ಸಹಾಯನೀಡುತ್ತಿರುವಂತೆ ಸಂಸ್ಥಾನದವರೂ ಸಹ ಸಹಾಯನೀಡಬೇಕೆಂದು ಕೋರಿರುತ್ತಾರೆ.

ಬೆಂಗಳೂರಿನ ಕೆಮಿಕಲ್ ಇಂಜನಿಯರ್ ಇಂಡೋನೇಷಿಯಾಕ್ಕೆ

ವಾಷಿಂಗ್'ಟನ್ ಜೂನ್ ೧೧

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎ. ಮತ್ತು ಎಂ.ಎ. ಡಿಗ್ರಿಗಳನ್ನು ಪಡೆದು ೧೯೪೦ರಲ್ಲಿ ಉಚ್ಚ ಶಿಕ್ಷಣಕ್ಕಾಗಿ ಅಮೆರಿಕಾಕ್ಕೆ ತೆರಳಿದ ಬೆಂಗಳೂರಿನ ಶ್ರೀ ಕೆ. ನಾಗರಾಜ್'ರವರನ್ನು ಇಂಡೋನೇಷಿಯಾ ಸರ್ಕಾರವು ತನ್ನ ದೇಶದಲ್ಲಿ ಗೃಹಕೈಗಾರಿಕೆಗಳ ಅಭಿವೃದ್ಧಿ ಸಲಹೆಗಾರರನ್ನಾಗಿ ನೇಮಿಸಿಕೊಂಡಿದೆ. ಶ್ರೀ ನಾಗರಾಜರಾಯರು ಆಹಾರ-ಪದಾರ್ಥಗಳ ಸಂರಕ್ಷಣೆಯಲ್ಲಿ ತಜ್ಞರು. ಚಿಕಾಗೋ ವಿಶ್ವವಿದ್ಯಾನಿಲಯದ ಗ್ಯಾಸ್ ಟೆಕ್ನಾಲಜಿ ಶಾಖೆಯಲ್ಲಿ ಕೆಮಿಕಲ್ ಇಂಜನಿಯರಾಗಿ ಕೆಲಸ ಮಾಡಿರುವರು. ಕೊರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಕೆಮಿಕಲ್ ಇಂಜನಿಯರಿಂಗ್ ಶಾಖೆಯನ್ನು ತೆರೆಯಲೋಸುಗ ಜೂನ್ ೧೯೫೦ರಲ್ಲಿ ಸಿಯೋಲ್'ಗೆ ತೆರಳಿದ ಎರಡು ವಾರಗಳಲ್ಲಿಯೇ ಕಮ್ಯೂನಿಸ್ಟ್ ಆಕ್ರಮಣ ಪ್ರಾರಂಭವಾಗಲು ಅಮೆರಿಕಾಕ್ಕೆ ತೆರಳಿ ಅಲ್ಲಿಯೇ ಇದ್ದರು.

ಆಹಾರ-ಪದಾರ್ಥಗಳ ಸಂರಕ್ಷಣೆ ವಿಷಯದಲ್ಲಿ ಅವರು ಬರೆದಿರುವ ಲೇಖನವನ್ನು ಅಮೆರಿಕನ್ ಕೆಮಿಕಲ್ ಸೊಸೈಟಿಯು ಸದ್ಯದಲ್ಲೇ ಪ್ರಕಟಿಸಲಿದೆ.

ರೇಷ್ಮೆ ವಿಚಾರಗೋಷ್ಠಿ

ಕೈಗಾರಿಕಾ ಸಚಿವ ಶ್ರೀ ಎಚ್. ಸಿ. ದಾಸಪ್ಪನವರು ನಂದಿಬೆಟ್ಟಕ್ಕೆ ತೆರಳಿದರು. ಅಲ್ಲಿ ಇದಿನ ರೇಷ್ಮೆ ಸಂಬಂಧಪಟ್ಟ ವಿಚಾರಗೋಷ್ಠಿಯ ಆರಂಭೋತ್ಸವ ನೆರವೇರಿಸುವರು.

ಭಾರತದ ಮಕ್ಕಳಿಗೆ ಸಹಾಯ

ಅಮೆರಿಕಾದಲ್ಲಿರುವ ಇಂಟರ್ ನ್ಯಾಷನಲ್ ಚಿಲ್ಡ್ರನ್ಸ್ ಫಂಡಿನಿಂದ ಮದ್ರಾಸಿನಲ್ಲಿ ಆಹಾರಾಭಾವದಿಂದ ನರಳುತ್ತಿರುವ ಮಕ್ಕಳಿಗೆ ೩ ಲಕ್ಷ ಪೌಂಡ್ ಟಿನ್'ಮಿಲ್ಕ್ ಒದಗಿಸಲಾಗಿದೆ.

ರೋಮಿನಲ್ಲಿ ಮೌಲಾನ ಅಜಾದರು

ಭಾರತ ಸರ್ಕಾರದ ವಿದ್ಯಾ ಮಂತ್ರಿ ಜ|| ಮೌಲಾನ ಅಜಾದ'ರವರು ರೋಮಿನಲ್ಲಿ ಇಂಡೋ ಇಟಾಲಿಯನ್ ಕಲ್ಚರಲ್ ಕೇಂದ್ರದ ಆರಂಭೋತ್ಸವ ನೆರವೇರಿಸಿದರು.

ಪ್ರಾಂತ್ಯ ಸರ್ಕಾರಗಳಿಗೆ ಅಧಿಕಾರ

ಈಗ ತಮ್ಮಲ್ಲಿರುವ ಆಹಾರದ ದಾಸ್ತಾನಿಗೆ ತಕ್ಕಂತೆ ಸಾಧ್ಯವಾದಷ್ಟುಬೇಗ ೯ ಔನ್ಸು ಪಡಿತರವನ್ನು ೧೨ ಔನ್ಸುಗಳಿಗೆ ಹೆಚ್ಚಿಸಲು ಎಲ್ಲ ಪ್ರಾಂತ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಅಧಿಕಾರಕೊಟ್ಟಿದೆ.

ಉಪವಾಸ ಆರಂಭ

ಮೈಸೂರು ಜೂನ್ ೧೪

ಸಿಟಿ ಕೋ ಆಪರೇಟಿವ್ ಬ್ಯಾಂಕ್ ಕಾರ್ಯದರ್ಶಿ ಡಾ|| ಬಿ. ಎಸ್. ಸೂರ್ಯನಾರಾಯಣರಾಯರ ಮೇಲೆ ಮೊನ್ನೆ ನಡೆದ ಡೈರೆಕ್ಟರುಗಳ ಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಜೂರಾದುದರಿಂದ ಡಾ|| ಸೂರ್ಯನಾರಾಯಣರಾಯರು ನಿನ್ನೆಯಿಂದ ಬ್ಯಾಂಕಿನ ಒಳಿ ಮತ್ತೆ ಉಪವಾಸ ಆರಂಭಿಸಿರುವರು.

ಈ ವಿಷಯವನ್ನು ಸಹಕಾರ ಮಂತ್ರಿ ಶ್ರೀ ಮರಿಯಪ್ಪನವರಿಗೆ ತಂತಿಮೂಲಕ ತಿಳಿಸಲಾಗಿದೆ. ಅವಿಶ್ವಾಸನಿರ್ಣಯ ಮಾಡಿರುವುದು ನ್ಯಾಯಬಾಹಿರವೆಂದು ಅ|| ರಿಜಿಸ್ಟ್ರಾರಕೋರ್ಟಿನಲ್ಲಿ ಕೇಸು ಸಹ ಶ್ರೀ ಸೂರ್ಯನಾರಾಯಣರಾಯರು ದಾಖಲ್ಮಾಡಿರುವರು.

† ಆಸ್ಟ್ರೇಲಿಯಾದಲ್ಲಿ ಇಂಜನೀರಾಗಿದ್ದು ಪ್ರಧಾನಸಚಿವರಾಗಿದ್ದ ಜೋಸೆಫ್'ಚಿಪ್ಲೆ ನಿಧನರಾದರು.

ರೇಷನ್ ಹೆಚ್ಚುವುದು

ಮುಂದಿನ ತಿಂಗಳು ೧ನೇ ತಾ|| ನಿಂದ ಬೊಂಬಾಯಿನಲ್ಲಿ ಘೋಷಿತಾ ಮಾಡಿದ್ದ ಆಹಾರ ಪ್ರಮಾಣವನ್ನು ಸಂತೂಗಿಸಿ ೧೨ ಔನ್ಸ್ ರೇಷನ್ ಕೊಡಲಾಗುವುದು.

ಮದ್ರಾಸಿನಲ್ಲೂ ಸಹ ೧ನೇ ತಾ|| ನಿಂದ ಘೋಷಿತಾ ಮಾಡಿದ್ದ ಆಹಾರದ ಪಡಿತರವನ್ನು ಸಂತೂಗಿಸಿ ೧೨ ಔನ್ಸ್ ಒದಗಿಸಲಾಗುವುದು.

ಬಿಹಾರ'ನಲ್ಲಿ ನಿನ್ನೆಯಿಂದಲೇ ಪಡಿತರವನ್ನು ೧೨ ಔನ್ಸಗೆ ಹೆಚ್ಚಿಸಲಾಗಿದೆ.

ಟ್ರೂಮನ್‍ರಿಗೆ ಉತ್ತರ

ಅಮೆರಿಕಾ ಅಧ್ಯಕ್ಷ ಟ್ರೂಮನ್‍ರು ಪರ್ಷಿಯಾ ಸರ್ಕಾರಕ್ಕೆ ಎಣ್ಣೆ ವಿವಾದದಲ್ಲಿ ಬರೆದ ಪತ್ರಕ್ಕೆ ಪರ್ಷಿಯಾ ಸರ್ಕಾರವು ಉತ್ತರ ನೀಡುತ್ತಾ ಪರ್ಷಿಯಾ ಒಳಾಡಳಿತದಲ್ಲಿ ಪ್ರವೇಶಿಸಲು ಬ್ರಿಟನ್ನಿಗೇನೂ ಸಂಬಂಧವಿಲ್ಲವೆಂದು ತಿಳಿಸಿದೆ

ಥೈಲಾಂಡಿನಿಂದ

ಥೈಲಾಂಡಿನ ಬಾಂಕಾಕಿನಲ್ಲಿರುವ ಭಾರತ ರಾಯಭಾರಿಕಛೇರಿಯವರು ಥೈಲಾಂಡಿನಲ್ಲಿ ಅಕ್ಕಿಯನ್ನು ಕೊಂಡು ಬಿಹಾರಿಗೆ ಕಳುಹಿಸಲು ೧೫೦೦೦ ರೂ. ದಾನ ಕೊಟ್ಟಿರುವರು.

ತುಟ್ಟಿ ಭತ್ಯ

ಭಾರತದ ಕೇಂದ್ರ ಸರ್ಕಾರವು ೨೫೦ ರೂಗಳಿಗಿಂತ ಕಡಮೆ ಸಂಬಳ ಪಡೆಯುತ್ತಿರುವವರಿಗೆ ೫ ರೂಪಾಯಿ ತುಟ್ಟಿ ಭತ್ಯವನ್ನು ಹೆಚ್ಚಿಸಿರುವುದು ಕೇಂದ್ರ ಸರ್ಕಾರದ ಸಿವಿಲ್, ಮಿಲಿಟರಿ, ರೈಲ್ವೇ ಇತ್ಯಾದಿ ಎಲ್ಲಾ ಇಲಾಖೆಗಳ ನೌಕರರಿಗೆ ಇದು ಅನ್ವಯಿಸುತ್ತದೆ. ಗ್ರೈನ್‌ಷಾಪ್ ರಿಯಾಯಿತಿ ಪಡೆಯುತ್ತಿರುವ ರೈಲ್ವೇ ನೌಕರರಿಗೆ ಇದು ಅನ್ವಯಿಸುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಇದರಿಂದ ೯.೧೦ ಕೋಟಿ ರೂ. ವೆಚ್ಚವಾಗುತ್ತದೆ. ಅದರ ಪೈಕಿ ರೈಲ್ವೆಯ ನೌಕರರಿಗೆ ಅರ್ಧ ಹಣ ಸೇರುವುದು.

‡ ಶ್ರೀ ಎಲ್ ಎಸ್ ರಾಜುರವರ ಮೇಲೆ ಹೂಡಿರುವ ಮೊಕದ್ದಮೆಯಲ್ಲಿ ನಿನ್ನೆ ಪ್ರೊ|| ಎಲ್ ರಾಮರಾಯರ ಸಾಕ್ಷ್ಯವಾಯಿತು.

ಸಮಾಚಾರ

ಗುರುವಾರ ತಾರೀಖು ೧೪

ನಗರಾಭಿವೃದ್ಧಿಗೆ ಏಕಸಂಸ್ಥೆ ಸಾಕು

೧೯೪೮ರಲ್ಲಿ ಮೈಸೂರು ಪುರಸಭೆಯು ಖಾಸಗೀ ಅಧ್ಯಕ್ಷರನ್ನು ಪಡೆಯುವ ಹಕ್ಕನ್ನು ಪಡೆಯಿತು. ಅದಕ್ಕೆ ಮುನ್ನ ಡೆಪ್ಯುಟೀ ಕಮಿಷನರ ದರ್ಜೆಯ ಸರ್ಕಾರಿ ಅಧ್ಯಕ್ಷರೇ ಇದ್ದರು. ಅವರು ಇದಲ್ಲದೆ ನಗರಾಭಿವೃದ್ಧಿ ಸಮಿತಿ ಆಕಾಶವಾಣಿ ಸಮಿತಿ ನಗರ ಸ್ಕೌಟು ಸಮಿತಿಗಳ ಅಧ್ಯಕ್ಷರಾಗಿಯೂ ಚೀಫ್‌ಆಫೀಸರಾಗಿಯೂ ಇದ್ದರು. ಪೌರಸಭೆಗೆ ಖಾಸಗೀ ಅಧ್ಯಕ್ಷರು ಒದೊಡನೆಯೇ ಡೆಪ್ಯುಟೀ ಕಮಿಷನರ್ ದರ್ಜೆಯ ಅಧಿಕಾರಿಗಳನ್ನೇ ಪೌರಸಭೆಯ ಕಮಿಷನರಾಗಿ ಸರ್ಕಾರ ನೇಮಿಸಿತು. ಚೀಫ್‌ಆಫೀಸರ್ ಆಫೀಸರ ಕೆಲಸ ವಿನಹ ಮಿಕ್ಕ ಕೆಲಸವೆಲ್ಲವೂ ಅವರಿಗೆ ತಪ್ಪಿತು. ನಗರಾಭಿವೃದ್ಧಿ-ಸಮಿತಿಗೆ ಪ್ರತ್ಯೇಕವಾದ ಅಧ್ಯಕ್ಷರ ನೇಮಕವಾಯಿಯಿತು. ಇದರಿಂದ ಈಗ ಪೌರಸಭೆಯ ಕಮಿಷನರಾಗಿ ಇರುವ ಡೆಪ್ಯುಟೀ ಕಮಿಷನರ ದರ್ಜೆಯ ಅಧಿಕಾರಿಗಳಿಗೆ ಕೆಲಸವು ಬಹಳ ಕಡಮೆಯಾಗಿದೆ. ಹಿಂದೆ ಶ್ರೀ ರಾಘವೇಂದ್ರರಾವ್ ಮುಂತಾದ ಪೌರಸಭಾ ಅಧ್ಯಕ್ಷರು ಇಷ್ಟು ಕೆಲಸವನ್ನು ನಿರ್ವಹಿಸಿಕೊಂಡು, ಕೆಲಸವು ತಮಗೆ ಸಾಲದೆಂದು ಹೇಳುತ್ತಿದ್ದರು. ಅಂತಿರುವಲ್ಲಿ ಈಗಿನ ಪೌರಸಭಾ ಕಮಿಷನರಿಗೆ ಕೆಲಸ ತೀರ ಕಡಮೆಯೆಂದು ಸಂಕೋಚವಿಲ್ಲದೆ ಹೇಳಬಹುದಾಗಿದೆ.

ಮೈಸೂರಿನಲ್ಲಿ ಅಭಿವೃದ್ಧಿ ಕಾರ್ಯಗಳೆಲ್ಲವೂ ಈಗಾಗಲೇ ಮುಗಿದುಹೋಗಿರುವುದರಿಂದ ಹೊಸದಾಗಿ ನೇಮಕವಾಗಿರುವ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಿಗೂ ಕೆಲಸವು ತೀರ ಕಡಮೆ. ದೇಶದ ಇಂದಿನ ಆರ್ಥಿಕ ಪರಿಸ್ಥಿತಿ, ನಗರಗಳಿಗಿಂತ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರ ಮುಖ್ಯ ಗಮನ ವೀಯಬೇಕಾದುದು ಮುಂತಾದವುಗಳಿಂದ ಮೈಸೂರು ನಗರಾಭಿವೃದ್ಧಿ ಕೆಲಸಗಳಿಗೆ ಹಣವನ್ನೊದಗಿಸುವುದೂ ಈಗ ಕಡಮೆಯಾಗಿದೆ ಮುಖ್ಯವಾಗಿ ಡ್ರೈನೇಜು ಕೆಲಸ ಮಾತ್ರ ಇನ್ನೂ ಮೈಸೂರು ನಗರದಲ್ಲಿ ಆಗಬೇಕಾದುದು ಉಳಿದಿದೆ. ಅದನ್ನು ಪೌರಸಭೆಯೇ ಮಾಡಬಹುದಾಗಿದೆ.

ಮೈಸೂರು ನಗರದಲ್ಲಿ ನಿವೇಶನಗಳನ್ನು ತೆಗೆದುಕೊಂಡಿರುವವರು ಪೌರಸಭೆಯಿಂದ ಲೈಸನ್ಸ್ ಪಡೆದು ಮನೆಗಳನ್ನು ಕಟ್ಟಬೇಕಾಗಿದೆ. ಕಟ್ಟಡದ ಪ್ಲಾನನ್ನು ನಗರಾಭಿವೃದ್ಧಿ ಸಮಿತಿ ಮಂಜೂರ್ಮಾಡಬೇಕು. ಅನಂತರ ಅದಕ್ಕೆ ಪೌರಸಭೆ ತನ್ನ ಒಪ್ಪಿಗೆಯಿತ್ತು ಲೈಸನ್ಸ್ ಕೊಡಬೇಕಾಗಿದೆ. ನಗರಾಭಿವೃದ್ಧಿ ಸಮಿತಿ ಮಂಜೂರ್ಮಾಡಿದ್ದರೂ, ಪೌರಸಭೆಯಿಂದ ಲೈಸನ್ಸ್ ಪಡೆಯದೆ ಕಟ್ಟುವ ಹಾಗಿಲ್ಲ. ನಗರಾಭಿವೃದ್ಧಿ ಸಮಿತಿ ಒಪ್ಪಿರುವ ಪ್ಲಾನನ್ನು ಪೌರಸಭೆ ಒಪ್ಪಬೇಕೆಂದು ನಿಯಮವಿಲ್ಲ. ಉಭಯ ಸಂಸ್ಥೆಗಳು ಏಕರೀತಿ ಒಪ್ಪುವುದೆಂದು ಹೇಳುವುದಾಗುವುದಿಲ್ಲ. ನಗರಾಭಿವೃದ್ಧಿ ಸಮಿತಿ ಒಪ್ಪಿಗೆಯೊಂದನ್ನೇ ಪಡೆದು ಕಟ್ಟಡ ಕಟ್ಟಿದರೆ ಪೌರಸಭೆಯು ಅದನ್ನು ಕೀಳಿಸಬಹುದು. ಪೌರಸಭೆ ಒಪ್ಪಿಗೆಯೊಂದನ್ನೇ ಪಡೆದು ಕಟ್ಟಿದರೆ ನಗರಾಭಿವೃದ್ಧಿ ಸಮಿತಿ ಟೈಟಲ್ ಡೀಡು ಕೊಡುವುದಿಲ್ಲ. ಇತ್ತೀಚೆಗೆ ಈ ಎರಡು ಸಂಸ್ಥೆಗಳಲ್ಲಿ ಒಮ್ಮತವಿಲ್ಲವಾಗಿ ಜನರಿಗೆ ಇದರಿಂದ ಅನೇಕ ತೊಂದರೆಯುಂಟಾಗಲು ಮಾರ್ಗವಾಗಿದೆ.

ಈ ವಿಷಯಗಳನ್ನೆಲ್ಲಾ ಸರ್ಕಾರದವರು ಪರಿಶೀಲಿಸಿ ಉಭಯ ಸಂಸ್ಥೆಗಳನ್ನು ಏಕಸಂಸ್ಥೆಯನ್ನಾಗಿ ಪರಿವರ್ತಿಸಿ ನಗರ ಪೌರಸಭೆಯೇ ಈ ಕಾರ್ಯಗಳನ್ನು ಮಾಡುವಂತೆ ಏರ್ಪಡಿಸುವುದು ಉತ್ತಮ. ಅವಶ್ಯಕ ಕಂಡುಬಂದಲ್ಲಿ ಮುನಿಸಿಪಲ್ ಕಮಿಷನರನ್ನೇ ನಗರಾಭಿವೃದ್ಧಿ ಸಮಿತಿಯ ಕೆಲಸಗಳನ್ನು ಮಾಡಲು ಚೀಫ್ ಎಕ್ಸಿಕ್ಯುಟಿವ್ ಆಫೀಸರಾಗಿ ನೇಮಿಸಬಹುದಾಗಿದೆ. ಇವರು ರೆವಿನ್ಯೂ ಅಧಿಕಾರಿಗಳಾಗಿರುವುದರಿಂದ ಅಕ್ವಿಸಿಷನ್ ಮುಂತಾದ ಕೆಲಸವು ಸುಸೂತ್ರವಾಗಿ ನಡೆಯಲು ಸಹಾಯಕವಾಗುತ್ತದೆ. ಹೀಗೆ ಮಾಡಿದಲ್ಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರ ವೇತನ, ಮೋಟಾರುಕಾರು ಖರ್ಚು, ಸಿಬ್ಬಂದಿ ಮುಂತಾದ ಸುಮಾರು ವರ್ಷಕ್ಕೆ ೫೦-೬೦ ಸಾವಿರ ರೂಪಾಯಿ ವೆಚ್ಚವು ಉಳಿದು, ಅದನ್ನು ಜನತೆಯ ಸೌಕರ್ಯಗಳಿಗೆ ವ್ಯಯ ಮಾಡಬಹುದಾಗಿದೆ.

ಡಾ|| ಭಾರ್ಗವಾ ರಾಜೀನಾಮೆ ಕೊಡಬೇಕು

ಪಂಜಾಬಿನ ಮುಖ್ಯಮಂತ್ರಿ ಡಾ|| ಗೋಪಿಚಂದ್ ಭಾರ್ಗವಾರವರು ರಾಜೀನಾಮೆಯನ್ನು ಕೊಡಬೇಕೆಂದು ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ತಿಳಿಸಿದೆ.

ನೇಗಿಲು ಕಾಂಗ್ರೆಸ್ ಉಮೇದುವಾರರ ಚುನಾವಣಾ ಚಿಹ್ನೆ

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರ ಚುನಾವಣಾ ಚಿಹ್ನೆ 'ನೇಗಿಲು' ಆಗಿರಬೇಕೆಂದು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ನಿರ್ಧರಿಸಿದೆ.

ಚುನಾವಣಾ ಚಿಹ್ನೆಗಳ ಬಗ್ಗೆ ಸರ್ವಪಕ್ಷ ಸಮ್ಮೇಳನವಾದ ಮೇಲೆ ಚುನಾವಣಾ ಕಮಿಷನರು ಪ್ರತಿಯೊಂದು ಪಕ್ಷಕ್ಕೂ [illegible]

ಐ. ಎನ್. ಟಿ. ಯು. ಸಿ. ಕಾರ್ಯಕಾರಿ ಸಮಿತಿ

ಸಮ್ಮೇಳನದ ಮುಂದಿಡ ಬಹುದಾದ ನಿರ್ಣಯಗಳ ಪರಿಶೀಲನೆಗಾಗಿ ಐ. ಎನ್. ಟಿ. ಯು. ಸಿ. ಮೈಸೂರು ಪ್ರಾಂತೀಯ ಕಾರ್ಯಕಾರಿ ಸಮಿತಿ ಸಭೆಯು ತಾರೀಖು ೧೬-೬-೫೧ನೇ ಶನಿವಾರ ರಾತ್ರಿ ೯ ಗಂಟೆಗೆ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಛೇರಿಯಲ್ಲಿ ನಡೆಯುವುದು ಸದಸ್ಯರು ತಪ್ಪದೇ ಬರಬೇಕಾಗಿ ವಿನಂತಿ.

ಪತ್ರವ್ಯವಹಾರ—

ಸ್ವಾಮಿ—

ಮೈಸೂರು ಸಿಟಿ ಲ್ಯಾನ್ಸ್‌ಡೌನ್ ಬಜಾರ್ ವರ್ತಕರ ವಿನಂತಿ ಏನೆಂದರೆ—

ತಾ|| ೧೨-೬-೫೧ನೇ ಮಧ್ಯಂ ಪತ್ರಿಕೆಯಲ್ಲಿ ಪ್ರಕಟಿಸಿರುವ ಸಮಾಚಾರ ತಾರೀಖು ೧೧-೬-೫೧ರಲ್ಲಿ ಶ್ರೀಮಾನ್ ಡಾ|| ಬಿ. ಜಿ. ದಾಸ್‌ರವರ ಮುಂದಾಳತ್ವದಲ್ಲಿ ಮುಖ್ಯ ಮಂತ್ರಿಗಳಲ್ಲಿ ನಿಯೋಗ ಹೋಗಿದ್ದ ವಿಷಯವೇನೋ ನಿಜ. ಬಾಕಿ ವಿಚಾರವೆಲ್ಲಾ ನಿರಾಧಾರವಾದದ್ದು. ಆದರೆ ವಿಚಾರವೇನೂ ಈ ಕೆಳಗೆ ಕಂಡತೆ ಇರುವ ಕಾರಣ ಈ ದಿನ ಪತ್ರಿಕೆಯಲ್ಲಿ ಆ ರೀತಿ ಪ್ರಕಟಿಸಬೇಕಾಗಿ ಪ್ರಾರ್ಥನೆ

ಈಗ್ಗೆ ಸುಮಾರು ನಾಲ್ಕುವರ್ಷಗಳಿಂದಲೂ ಮೈಸೂರು ಸಿಟಿ ಮುನಿಸಿಪಲ್ ಅಧಿಕಾರಿಗಳು ಟೌನ್‌ಹಾಲ್ ಮೈದಾನದಲ್ಲಿ ೨೪ ಅಂಗಡಿಗಳನ್ನು ಕಟ್ಟಿಸಿಕೊಡಬೇಕೆಂತಲೂ ಮಾಡುತ್ತಿರುವ ಏರ್ಪಾಡುಗಳನ್ನು ಆದಷ್ಟು ಜಾಗ್ರತೆ ಪೂರೈಸಿ ಕೊಡುವಂತೆಯೂ ಅದುವರೆವಿಗೂ ಈಗ ಹಾಲಿ ಇರತಕ್ಕ ವರ್ತಕರಿಗೆ ತೊಂದರೆಯಾಗದಂತೆಯೂ ಮಾನ್ಯಮಂತ್ರಿಗಳು ಡಾ|| ಬಿ. ಜಿ. ದಾಸ್‌ರವರ ಸಲಹೆಯನ್ನು ಮನ್ನಿಸಿ ನಮ್ಮೆಲ್ಲರಿಗೂ ಸೂಕ್ತ ಭರವಸೆಯನ್ನು ಕೊಟ್ಟಿರುತ್ತಾರೆ.

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಬಜಾರ್ ವರ್ತಕರು, ಮೈಸೂರು.

೨೦೦೦ ಕಾಂಗ್ರೆಸ್ಸಿಗರ ರಾಜೀನಾಮೆ

ಕಾನ್‌ಪುರದ ಎಂಟು ವಾರ್ಡುಗಳಿಂದ ಒಟ್ಟು ೨೦೦೦ ಮಂದಿ ಕಾಂಗ್ರೆಸ್ಸಿಗರು ರಾಜೀನಾಮೆ ಸಲ್ಲಿಸಿದ್ದಾರೆ.

ಶ್ರೀ ಬಿ. ಎಸ್. ಪುಟ್ಟಸ್ವಾಮಿ ರಾಜೀನಾಮೆ

ಸಂಸ್ಥಾನದ ಲೇಬರ್ ಕಮಿಷನರಾಗಿರುವ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರು ತಮ್ಮ ಹುದ್ದೆಗೆ ರಾಜೀನಾಮೆಯಿತ್ತಿರುವುದಾಗಿಯೂ ಅವರು ಮುಂದಿನ ಮಹಾಚುನಾವಣೆಗಳಲ್ಲಿ ಭಾಗವಹಿಸುವುದಾಗಿಯೂ [illegible]

ಕ್ಷಮಾಪಣೆ?

ದಾವಣಗೆರೆಯ ಶ್ರೀ ವೀರಭದ್ರಪ್ಪನವರ ನಾಯಕತ್ವದಲ್ಲಿ ಕಾಗೋಡು ಸತ್ಯಾಗ್ರಹಕ್ಕೆಂದು ಬಂದ ಸೋಶಲಿಸ್ಟರಾದ ದುರ್ಗಪ್ಪ, ಸಂಕಪ್ಪ, ಮತ್ತು ಹೆಚ್. ದುರ್ಗಪ್ಪ ಎಂಬುವರು ನ್ಯಾಯಸ್ಥಾನದ ಮುಂದೆ ಕ್ಷಮಾಪಣೆಯನ್ನೊಪ್ಪಿಸಿ, ತಾವು ತಪ್ಪುದಾರಿಗೆಳೆಯಲ್ಪಟ್ಟವರೆಂದು ತಿಳಿಸಿ ಜಿಲ್ಲಾಧಿಕಾರಿಗಳ ಬಳಿಗೆ ತಮ್ಮ ವಿಷಾದವನ್ನು ತಿಳಿಸಲು ತೆರಳಿದರು.

ಇದುವರಗೆ ಜಾಮೀನು ಕೊಡಲು ನಿರಾಕರಿಸುತ್ತಿದ್ದ ೩೫ ಮಂದಿ ರೈತರು ನಿನ್ನೆ ಜಮೀನು ಕೊಟ್ಟು ತೆರಳಿದರು ಎನೂ ಆರಿಯದ ಕೆಲವು ರೈತರು ಸೋಷಲಿಸ್ಟ್ ನಾಯಕರಿಂದ ತಾವು ತಪ್ಪುದಾರಿಗೆಳೆಯಲ್ಪಟ್ಟವರೆಂದು ಕ್ಷಮಾಪಣೆಯನ್ನು ಸಲ್ಲಿಸಿದರು ಎಂದು ತಿಳಿಯಬರುತ್ತದೆ.

ಯುದ್ಧಕ್ಕೆ ಸಿದ್ಧರಾಗಿ

೧೯೫೩ನೇ ವರ್ಷಕ್ಕೆ ದೇಶವೆಲ್ಲಾ ಯುದ್ಧಕ್ಕೆ ಸಿದ್ಧವಾಗಿರಬೇಕು ಎಂದು ಆಸ್ಟ್ರೇಲಿಯಾದ ಪಾರ್ಲಿಮೆಂಟಿನ ೫೦ನೇ ವರ್ಷದ ಜ್ಯೂಬಿಲಿ ಮಹೋತ್ಸವವನ್ನಾರಂಭಿಸುತ್ತಾ ಗೌವರ್ನರ್ ಜನರಲ್ ಡಬ್ಲ್ಯು ಜೆ ಮ್ಯಾಕಲ್‌ರವರು ತಿಳಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನ 1951

(ಅಕ್ಟೋಬರ್ 2ರಿಂದ 17ನೇ ತಾ|| ವರೆಗೆ —2 ದಿನಗಳೂ ಸೇರಿ)

ಮೇಲ್ಕಂಡ ಪ್ರದರ್ಶನದ ಪ್ರಾಸ್ಪೆಕ್ಟಸ ಅಚ್ಚಿನಲ್ಲಿದೆ. ಅದರಲ್ಲಿ ಕೆಲವು ಪುಟಗಳನ್ನು ಜಾಹೀರಾತಿಗಾಗಿ ಕಾದಿರಿಸಿದೆ ಜಾಹೀರಾತು ದರ ಈ ಕೆಳಕಂಡಂತಿದೆ

ಹೊದಿಕೆಯ ಹಿಂಭಾಗದ ಹೊರಪುಟ ರೂ. 30.

ಒಳಪುಟ ಪ್ರತಿಯೊಂದಕ್ಕೂ ರೂ 20.

ಸಾಧಾರಣ ಪೂರ್ಣ ಪುಟ ರೂ. 15.

ಸಾಧಾರಣ ಅರ್ಧ ಪುಟ ರೂ. 8.

ಪ್ರಾಸ್ಪೆಕ್ಟಸ್‌ನ ಆಕಾರ 8 ಅಂಗುಲx೫ಅಂ.

ಜಾಹೀರಾತುಗಳನ್ನು ಇದ್ದರೆ ಬ್ಲಾಕ್, ವಿಷಯ ಮುಂತಾದವುಗಳನ್ನೂ, ಅದರ ಬಾಬ್ತು ಪೂರ್ತಾಹಣ [ಮುಂಗಡವಾಗಿ] ವನ್ನೂ ಸ್ವೀಕರಿಸಲು ಇದೇ 30—6—51 ನೇ ತಾ|| ಕೊನೇ ದಿನ

ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ.

ಕಾರ್ಯದರ್ಶಿ
ವಸ್ತುಪ್ರದರ್ಶನ ಸಮಿತಿ
ಮೈಸೂರು.

ಸಂಪಾದಕರು ಪ್ರಕಾಶಕರು :—ಜೆ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ [illegible]

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೫—೬—೧೯೫೧ ಶುಕ್ರವಾರ [ಸಂಚಿಕೆ ೩೩೪

ರೈಲ್ವೆ ನೌಕರರಿಗೆ ತೃಪ್ತಿಯಿಲ್ಲ

ಭಾರತ ಸರ್ಕಾರವು ತುಟ್ಟಿಭತ್ಯವನ್ನು ೫ ರೂ ಹೆಚ್ಚಿಸಿರುವುದು ನಮ್ಮ ಬೇಡಿಕೆಗಳನ್ನು ಪೂರ್ತಿಗೊಳಿಸಿದಂತಾಗುವುದಿಲ್ಲ. ಆದನ್ನು ರೈಲ್ವೆ ಫೆಡರೇಷನ್ ಗಮನಕ್ಕೆ ತೆಗೆದುಕೊಳ್ಳಲಾರದು. ಎಂದು ಅಖಿಲ ಭಾರತ ರೈಲ್ವೆ ಫೆಡರೇಷನ್ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ಹೇಳಿರುವರು.

ದೆಹಲಿಯಲ್ಲಿ ವಿಪರೀತ ಮಳೆ

ನಿನ್ನೆದಿನ ಮಧ್ಯಾಹ್ನದಿಂದ ವಿಪರೀತವಾಗಿ ಮಳೆಯು ದೆಹಲಿಯಲ್ಲಿ ಬೀಳಲಾರಂಭಿಸಿದೆ. ಗಾಳಿಯು ಘಂಟೆಗೆ ಸುಮಾರು ೪೦ ಮೈಲಿ ವೇಗದಲ್ಲಿ ಬೀಸುತ್ತಿದೆ. ಉಷ್ಣಾಂಶವು ೭೭ ಡಿಗ್ರಿಗೆ ಇಳಿದಿದೆ. ಪ್ರತಿವರ್ಷವೂ ಈ ಕಾಲದಲ್ಲಿ ಇದೇ ರೀತಿ ಇರುವುದೆಂದು ಹೇಳಲಾಗಿದೆ.

ಸಿಲೋನಿನ ಪ್ರಜೆಗಳಲ್ಲದವರಿಗೆ ಸರ್ಕಾರಿ ನೌಕರಿಯಿಂದ ವಜಾ

ಅನಿರ್ಬಂಧಿತ ವ್ಯಾಪಾರಕ್ಕೆ ಇನ್ನೂ ಹೆಚ್ಚಿನಸಕ್ಕರೆ ಒದಗಿಸಲಾಗುವುದು

ಪಾರ್ಲಿಮೆಂಟರಿ ಸಮಿತಿ ಆಜ್ಞೆಗೆ ತಿರಸ್ಕಾರವೆ?

ಪಂಜಾಬಿನಲ್ಲಿ ಕೂಡಲೇ ಶಾಸನಸಭೆಯನ್ನು ವಿಲೀನಮಾಡಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ನಿರ್ಣಯಮಾಡಿರುವುದಾಗಿ ವರದಿಯಾಗಿದೆ. ಪಂಜಾಬ್ ಮುಖ್ಯಮಂತ್ರಿ ಡಾ॥ ಗೋಪಿಚಂದ್ ಭಾರ್ಗವಾರನ್ನು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆಕೊಡಬೇಕೆಂದು ಪಾರ್ಲಿಮೆಂಟರಿ ಸಮಿತಿ ಸೂಚನೆಯಿತ್ತಿದೆ.

ಮುಂದಿನ ಚುನಾವಣೆಗಳಾಗುವವರೆಗೆ ಈಗಿನ ಶಾಸನಸಭೆ ಮತ್ತು ಮಂತ್ರಿಮಂಡಲವನ್ನು ವಿಲೀನೀಕರಿಸಿದರೆ ಕೆಲವು ಸಲಹೆಗಾರರ ಸಹಾಯದಿಂದ ಗೌರ್ನರೇ ಆಡಳಿತ ನಡೆಸಬೇಕಾಗುವುದು.

ಪಂಜಾಬಿನಲ್ಲುಂಟಾಗಿರುವ ಕಾಂಗ್ರೆಸ್ ಬಿಕ್ಕಟ್ಟನ್ನು ಪರಿಹರಿಸಲು ಈ ರೀತಿ ಪಾರ್ಲಿಮೆಂಟರಿ ಸಮಿತಿ ನಿರ್ಧರಿಸಿದೆ. ಈ ನಿರ್ಧಾರಕ್ಕೆ ಬರುವ ಮುನ್ನ ಪಂಡಿತ ನೆಹರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ಯಿತ್ತಿದ್ದರೆಂದೂ ಈನಿರ್ಧಾರವಾದ ಮೇಲೆ ರಾಜೀನಾಮೆ ಹಿಂದಕ್ಕೆ ಪಡೆದರೆಂದೂ ಹೇಳಲಾಗಿದೆ.

ಪಾರ್ಲಿಮೆಂಟರಿ ಆಜ್ಞೆಯನ್ನು ತಿರಸ್ಕರಿಸಿ ಡಾ॥ ಭಾರ್ಗವಾರವರು ಕಾಂಗ್ರೆಸ್ಸೇತರ ಸರ್ಕಾರವನ್ನು ರಚಿಸುವರೆಂದೂ ಹೇಳಲಾಗಿದೆ. ಪಾರ್ಲಿಮೆಂಟರಿ ಸಲಹೆಯನ್ನು ಪರಿಶೀಲಿಸಲು ಡಾ॥ ಭಾರ್ಗವಾರವರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಜರೂರು ಸಭೆಯನ್ನು ಕರೆದಿರುವರೆಂದೂ ತಿಳಿಯಬಂದಿದೆ.

ಮದರಾಸಿನ ಕೋತಿಗಳು ಬೇಕೆ?

ಬೆಳೆಗಳಿಗೆ ಮತ್ತು ಹಣ್ಣಿನ ತೋಟಗಳಿಗೆ ಕೋತಿಗಳು ವಿಶೇಷವಾಗಿ ನಷ್ಟವನ್ನುಂಟು ಮಾಡುತ್ತಲಿರುವುದರಿಂದ ವಿದೇಶ ರಾಷ್ಟ್ರಗಳಲ್ಲಿ ಯಾವುದಾದರೂ ತಮ್ಮಲ್ಲಿರುವ ಕೋತಿಗಳನ್ನೆಲ್ಲಾ ತರಿಸಿಕೊಳ್ಳಲು ಸಿದ್ಧವಿದೆಯೇ ಎಂದು ಮದರಾಸು ಸರ್ಕಾರವು ಭಾರತ ಸರ್ಕಾರವನ್ನು ಕೇಳಿದೆ.

ಐ.ಎನ್.ಟಿ.ಯು.ಸಿ. ಸಮ್ಮೇಳನ

ಮೈಸೂರು ಜೂನ್ ೧೪

ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಮೈಸೂರು ಪ್ರಾಂತ್ಯಶಾಖೆಯ ಪ್ರಥಮ ಸಮ್ಮೇಳನವು ೧೬-೧೭ನೇ ತಾ॥ ಗಳಲ್ಲಿ ಮೈಸೂರು ರಂಗಾಚಾರ್ಲು ಪುರಭವನದಲ್ಲಿ ಶ್ರೀ ಎನ್. ಕೇಶವಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಐ.ಎನ್.ಟಿ.ಯು.ಸಿ. ಅಧ್ಯಕ್ಷರಾದ ಜನಾಬ್ ಅಬೀದ್ ಅಲಿಜಾಫರ್ ಭಾಯಿಯವರು ಆರಂಭೋತ್ಸವ ನೆರವೇರಿಸುವರು. ಕಾರ್ಮಿಕಸಚಿವ ಶ್ರೀ ಕೆ.ಟಿ. ಭಾಷ್ಯಂರವರು ಭಾಷಣಮಾಡುವರು.

ಪಡಿತರ ಹೆಚ್ಚಿಸುವ ಪ್ರಶ್ನೆ

ಬೆಂಗಳೂರು ಜೂನ್ ೧೪

ಮೈಸೂರು ಸರ್ಕಾರವು ಪಡಿತರವನ್ನು ೯ ಔನ್ಸ್‌ಗಳಿಗೆ ಹೆಚ್ಚಿಸುವ ವಿಷಯವನ್ನು ಪರಿಶೀಲಿಸುತ್ತಿದೆ ಪಡಿತರ ಪ್ರಮಾಣವನ್ನು ೧೨ ಔನ್ಸುಗಳಿಗೆ ಹೆಚ್ಚಿಸಿದರೆ ಇನ್ನೂ ಒಂದು ಲಕ್ಷ ಟನ್ ಆಹಾರ ಬೇಕಾಗುತ್ತದೆ. ಸದ್ಯಕ್ಕೆ ಸಂಸ್ಥಾನದಲ್ಲಿ ೪೮ ಸಾವಿರ ಟನ್ ಅಕ್ಕಿ ೩ ಸಾವಿರ ಟನ್ ಗೋಧಿ, ೨೩ ಸಾವಿರ ಟನ್ ಧಾನ್ಯ ಇದೆ. ಕೇಂದ್ರವು ಕೊಡಬೇಕಾದ ೭೫ ಸಾವಿರ ಟನ್ ಪೈಕಿ ಇನ್ನು ೩೧ ಸಾವಿರ ಟನ್ ಮಾತ್ರ ಸರಬರಾಜಾಗಿದೆ. ಉಳಿಕೆ ಇನ್ನೂ ಬಂದಿಲ್ಲ ಇದರ ಜೊತೆಗೆ ಈಗ ಹೆಚ್ಚಿಸಿರುವ ೫೦ ಸಾವಿರ ಟನ್ ಬರಬೇಕಾಗುತ್ತದೆ.

ರೈಲ್ವೆ ಮುಷ್ಕರ ಬೇಡ

ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಖಂಡೂಭಾಯಿದೇಸಾಯಿಯವರು ಇಂದಿನ ದೇಶದ ಪರಿಸ್ಥಿತಿಯಲ್ಲಿ ರೈಲ್ವೇ ಮುಷ್ಕರ ಬೇಡವೆಂದು ಮನವಿ ಮಾಡಿಕೊಂಡಿರುವರು.

ನ್ಯೂಸ್ ಪ್ರಿಂಟ್

ಅಮೆರಿಕಾದಿಂದ ಭಾರತಕ್ಕೆ ಈ ವಾರದಲ್ಲಿ ೨೦೦೦ ಟನ್ ನ್ಯೂಸ್ ಪ್ರಿಂಟ್ ಕಾಗದ ಬರಲಿದೆ.

ಅನಿರ್ಬಂಧಿತ ವ್ಯಾಪಾರಕ್ಕೆ ಹೆಚ್ಚು ಸಕ್ಕರೆ

ಕೇಂದ್ರ ಸರ್ಕಾರವು ಹೆಚ್ಚು ಸಕ್ಕರೆಯನ್ನು ಅನಿರ್ಬಂಧಿತ ವ್ಯಾಪಾರಕ್ಕೆ ಬಿಡುವ ಬಗ್ಗೆ ಪರಿಶೀಲಿಸುತ್ತದೆ. ಈಗ ಸಕ್ಕರೆ ಕಾರ್ಖಾನೆಗಳಲ್ಲಿ ತಯಾರಾಗಿ ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಟ್ಟ ನಂತರ ಉಳಿಯುವ ಸಕ್ಕರೆಯ ಅರ್ಧಭಾಗವನ್ನು ಮಾರ್ಕೆಟ್ಟುಗಳಲ್ಲಿ ಮಾರಲು ಅವಕಾಶಕೊಡಲಾಗಿದೆ. ಇದನ್ನು ಇನ್ನೂ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರೇಷ್ಮೆ ಕೈಗಾರಿಕೆಗೆ ಸಂಶೋಧನಾ ಕೇಂದ್ರ

ನಿನ್ನೆಯದಿನ ನಂದೀಬೆಟ್ಟದ ಕಬ್ಬನ್ ಬಂಗಲೆಯಲ್ಲಿ ಹಣಕಾಸಿನ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ರೇಷ್ಮೆ ಸೆಮಿನಾರಿನ ಆರಂಭೋತ್ಸವ ಮಾಡಿದರು. ಮೊದಲು ಜ॥ ಹಂಸುದ್ದೀನ್‌ಖಾನ್‌ರವರು ಸ್ವಾಗತ ಭಾಷಣ ಮಾಡಿ ರೇಷ್ಮೆ ಕೈಗಾರಿಕೆಗೆ ಕಷ್ಟ ಒದಗಿರುವ ಈ ಸಮಯದಲ್ಲಿ ಈ ಸೆಮಿನಾರ್ ಏರ್ಪಡಿಸಿದ್ದು ಉತ್ತಮವಾದ ಅಂಶವೆಂದರು. ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ಮ್ಯಾತಾಡಿ ಸರ್ಕಾರವು ಈ ಕೈಗಾರಿಕೆಯನ್ನು ಉತ್ತಮಪಡಿಸಲು ಮತ್ತು ಅಭಿವೃದ್ಧಿಗೊಳಿಸಲು ಯೋಜನೆಹೊಂದಿದೆಯೆಂದರು, ಈ ಕೈಗಾರಿಕೆಯ ಪ್ರಗತಿಗೆ ಒಂದು ಸಂಶೋಧನಾ ಕೇಂದ್ರವನ್ನು ತೆರೆಯಲು ಯೋಚಿಸಲಾಗುತ್ತಿದೆಯೆಂದರು.

ಸಿಂಹಳದ ನೂತನ ಆಜ್ಞೆ

ಸಿಂಹಳದ ಸರ್ಕಾರೀ ನೌಕರಿಯಲ್ಲಿರುವ ಸಿಂಹಳದ ಪ್ರಜೆಗಳಲ್ಲದವರನ್ನು ನೌಕರಿಯಿಂದ ಆಗಸ್ಟ್ ತಿಂಗಳೊಳಗೆ ವಜಾ ಮಾಡಲು ಸರ್ಕಾರವು ನಿರ್ಧರಿಸಿದೆಯೆಂದು ಹೇಳಲಾಗಿದೆ.

ತಮ್ಮ ಕೆಲಸಗಳನ್ನು ಉಳಿಸಿಕೊಳ್ಳಬೇಕಾದರೆ ಆಗಸ್ಟ್ ತಿಂಗಳೊಳಗೆ ಅವರು ಸಿಂಹಳದ ಪೌರತ್ವದ ಹಕ್ಕನ್ನು ಹೊಂದಿರಬೇಕೆಂದು ಸೂಚಿಸಲಾಗಿದೆ.

‡ ರೆವೆನ್ಯೂ ಕಮಿಷನರ್ ಶ್ರೀ ವೇದವ್ಯಾಸಾಚಾರ್ಯರಿಗೆ ನಿವೃತ್ತರಾಗುವ ಮುನ್ನ ಜೂನ್ ೨೧ರಿಂದ ೬ ತಿಂಗಳ ರಜಾ ಕೊಡಲಾಗಿದೆ

ಕಾರ್ಯದರ್ಶಿ ನೇಮಿಸಿಕೊಳ್ಳಲು ಆಜ್ಞೆ

ಸ್ವ-ಸು. ಫೋನ್] ಬೆಂ. ಜೂನ್ ೧೪

ಶ್ರೀಮನ್ಮಹಾರಾಜರು ಈ ದಿನ ಆಜ್ಞೆಯೊಂದನ್ನು ಹೊರಡಿಸಿ ಶಾಸನ ಸಭಾಧ್ಯಕ್ಷರು ಶಾಸನ ಸಭೆಗೆ ಕಾರ್ಯದರ್ಶಿಗಳೊಬ್ಬರನ್ನು ೮೦೦-೫೦ ೧೨೦೦ ರೂಗಳ ಸಂಬಳದ ಮೇಲೆ ನೇಮಿಸಿಕೊಳ್ಳಬಹುದೆಂದು ತಿಳಿಸಿರುತ್ತಾರೆ.

ಮುಷ್ಕರವನ್ನು ನಿಲ್ಲಿಸಿ

ಮೈಸೂರು ಜೂನ್ ೧೪

ಮೈಸೂರು ಸರ್ಕಾರದವರು ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘಕ್ಕೆ ಪತ್ರವನ್ನೊಂದು ಬರೆದು ಕೆಲಸಗಾರರಿಗೂ, ಮಾಲೀಕರಿಗೂ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ತಾವು ಒಂದು ಟ್ರಿಬ್ಯುನಲ್ ನೇಮಿಸುವುದಾಗಿಯೂ, ತಮ್ಮ ಬೇಡಿಕೆಯನ್ನು ಅದರ ಮುಂದಿಡಬೇಕೆಂದೂ ೧೭ನೇ ತಾರೀಖಿನಿಂದ ಪ್ರಾರಂಭಿಸಬೇಕೆಂದಿರುವ ಮುಷ್ಕರವನ್ನು ಮಾಡಬಾರದೆಂದು ತಿಳಿಸಿರುವರು

ಐ ಎನ್ ಟಿ ಯು ಸಿ ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ನ್ಯಾಯಾಂಗ ಮಂತ್ರಿಗಳಿಗೆ ಒಂದು ತಂತಿಯನ್ನು ಕೊಟ್ಟು, ಟ್ರಿಬ್ಯುನಲ್ಲನ್ನು ಕೂಡಲೇ ರಚಿಸಬೇಕೆಂದು ಕೋರಿರುವರು.

ವೈಜಯಂತಿಮಾಲಾ ಪಾರ್ಟಿಗೆ ಅಪಘಾತ

ಮೈಸೂರು ಜೂನ್ ೧೪

ಶ್ರೀಮತಿ ವೈಜಯಂತಿಮಾಲಾರವರ ಪಾರ್ಟಿಯವರು ನಿನ್ನೆ ಬಳ್ಳಾರಿಯಿಂದ ಮೈಸೂರಿಗೆ ಬರುತ್ತಿದ್ದಾಗ ಚಳ್ಳಕೆರೆ ಬಳಿ ಬಸ್ಸು ಅಪಘಾತಕ್ಕೀಡಾಯಿತು ಪಾರ್ಟಿಯಲ್ಲಿ ಕೆಲವರಿಗೆ ಗಾಯಗಳಾಗಿವೆ ಶ್ರೀಮತಿಯವರು ರಾತ್ರಿಯೇ ತಮ್ಮ ಸ್ವಂತ ಕಾರಿನಲ್ಲಿ ಮೈಸೂರಿಗೆ ಬಂದರು ಪಾರ್ಟಿಯವರು ನಾಳೆ ಬೆಳಗ್ಗೆ ಬರಲಿರುವರು

ಜಪಾನ್ ಶಾಂತಿ ಸಂಧಾನ

ಜಪಾನ್ ಶಾಂತಿ ಸಂಧಾನದ[*] ಕರಡು ಪ್ರತಿಗೆ ಬ್ರಿಟನ್ ಒಪ್ಪಿಗೆ ಕೊಟ್ಟಿದೆ.

ಸಮಾಚಾರ

ಶುಕ್ರವಾರ ತಾರೀಖು ೧೫

ಅಕ್ಕಿ ಹೆಚ್ಚಾಗಿ ಕೊಡಿ

ಶ್ರೀ ಕೆ. ಎಂ. ಮುನ್ಷಿಯವರು ಮೊನ್ನೆ ತಮ್ಮ ರೇಡಿಯೋ ಭಾಷಣದಲ್ಲಿ ಭಾರತದಲ್ಲಿ ಆಹಾರ ಪರಿಸ್ಥಿತಿ ಉತ್ತಮಗೊಂಡಿದೆ. ಎಲ್ಲಾ ಪ್ರಾಂತ್ಯಗಳಿಗೂ ಹೆಚ್ಚಿಗೆ ಪ್ರಮಾಣದಲ್ಲಿ ಆಹಾರವನ್ನು ಒದಗಿಸಲಾಗುತ್ತಿದೆ. ಕಳೆದ ಫೆಬ್ರವರಿಯಲ್ಲಿನ ರೇಷನ್ ಖೋತಾವನ್ನು ಸರಿಪಡಿಸಿ ಭಾರತಾದ್ಯಂತ ೧೨ ಔನ್ಸ್ ಪಡಿತರ ಕೊಡುವಂತೆ ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೂ ಆಜ್ಞೆ ಮಾಡಲಾಗಿದೆಯೆಂಬುದನ್ನು ಕೇಳಿ ಲಕ್ಷಾಂತರ ಜನರಿಗೆ ಹರ್ಷವನ್ನುಂಟು ಮಾಡಿದೆ. ಇನ್ನು ಮೇಲಾದರೂ ಉಪವಾಸ ಮಾಡುವುದು ಸ್ವಲ್ಪ ತಪ್ಪಬಹುದು. ಆದಿನ ಯಾವಾಗ ಬರುತ್ತದೆಯೋ ಎಂದು ಕಾತುರತೆಯಿಂದ ಎಲ್ಲರ ದೃಷ್ಟಿಯೂ ಬೆಂಗಳೂರು ಆಹಾರ ಕಛೇರಿಯ ಕಡೆ ಹಾತೊರೆಯುತ್ತಾ ನೆಳೆಯಲ್ಪಟ್ಟಿದೆ. ಸರ್ಕಾರದವರು ಅದರಲ್ಲಿ ಆಹಾರ ಮಂತ್ರಿಗಳು ತಮ್ಮ ಇತರ ಎಲ್ಲಾ ಕೆಲಸಗಳನ್ನು ಸ್ವಲ್ಪ ಬದಿಗಿಟ್ಟು ಪ್ರಾಂತ್ಯದ ಆಹಾರ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಕೂಲಂಕುಷವಾಗಿ ಪರಿಶೀಲಿಸಿ ಪಡಿತರವನ್ನು ೧೨ ಔನ್ಸುಗಳಿಗೇರಿಸಿರುವುದಾಗಿ ಆಜ್ಞೆ ಮಾಡಬೇಕಾದುದು ಪ್ರಥಮ ಕರ್ತವ್ಯವಾಗಿರುತ್ತದೆ.

ಈಗ ಕೇವಲ ೬ ಔನ್ಸ್ ಅಕ್ಕಿ, ೩ ಔನ್ಸ್ ಇತರ ಧಾನ್ಯಗಳನ್ನು ಪಡೆಯುತ್ತಲಿರುವ ಮೈಸೂರು ಜನತೆಗೆ ನಿತ್ಯಜೀವನ ನಡೆಸುವುದೇ ಕಷ್ಟವಾಗಿರುತ್ತದೆ. ಭಾರತದ ಇತರ ಪ್ರಾಂತ್ಯಗಳಲ್ಲಿ ೧೨ ಔನ್ಸ್ ಆಹಾರ ಕೊಡುತ್ತಿದ್ದಾಗ್ಯೂ ಮೈಸೂರಿನಲ್ಲಿ ೯ ಔನ್ಸುಗಳೇ ಕೊಡುತ್ತಿದ್ದರು. ಮದರಾಸ್ ಪ್ರಾಂತ್ಯದಲ್ಲಿ ೭ ಔನ್ಸ್ ಅಕ್ಕಿ ಕೊಡುತ್ತಿದ್ದಾಗ ನಮ್ಮಲ್ಲಿ ೫ ಚಿಲ್ಲರೆ ಔನ್ಸ್ ಕೊಡುತ್ತಲಿದ್ದರು. ಕೇವಲ ಅಕ್ಕಿಯನ್ನು ಬಳಸುವ ಮೈಸೂರು ಸಂಸ್ಥಾನದಲ್ಲಿ ಇಷ್ಟು ಕಡಿಮೆ ಪಡಿತರ ಪಡೆದು ಜೀವಿಸುವುದೇ ಕಷ್ಟವಾಗಿದೆ ಒಟ್ಟು ಆಹಾರ ಪಡಿತರವನ್ನು ಇಷ್ಟು ಕಡಿಮೆ ಮಾಡುತ್ತಿದ್ದಾಗ್ಯೂ ಎಲ್ಲರೂ ಪೂರ್ಣವಾಗಿ ತಮ್ಮ ಅಕ್ಕಿ ಪಡಿತರವನ್ನು ಮಾತ್ರ ಪಡೆದು ಅರೆಹೊಟ್ಟೆ ಉಪವಾಸ ಮಾಡುತ್ತಲಿರುವರು. ಗೋಧಿ ಮತ್ತಿತರ ಪದಾರ್ಥಗಳನ್ನು ಈಗಲೂ ಎಲ್ಲರೂ ತಮ್ಮ ಪೂರ್ಣ ಪ್ರಮಾಣವನ್ನು ಪಡೆಯುತ್ತಲೇ ಇಲ್ಲ ಈ ವಿಚಾರವೆಲ್ಲಾ ಆಹಾರ ಇಲಾಖೆಗೆ ತಿಳಿಯದೆಯಿಲ್ಲ ಈಗ ಕೇಂದ್ರ ಆಹಾರ ಸಚಿವರು ಹೇಳಿರುವಂತೆ ನಮ್ಮಲ್ಲಿಯೂ ಆಹಾರ ಪಡಿತರವನ್ನು ಹೆಚ್ಚಿಸುವಾಗ ೯ ಔನ್ಸ್ ಅಕ್ಕಿ ೩ ಔನ್ಸ್ ಇತರ ಧಾನ್ಯಗಳನ್ನು ಕೊಡುವಂತೇರ್ಪಡಿಸಿ ಒಟ್ಟಿನಲ್ಲಿ ಎಲ್ಲರಿಗೂ ೧೨ ಔನ್ಸ್ ದೊರೆತು ಅಕ್ಕಿ ಪಡಿತರ ಹೆಚ್ಚಾಗಿ ಬರುವಂತೇರ್ಪಡಿಸಿದರೆ ಜನರಲ್ಲಿ ಹುಟ್ಟಿರುವ ಹಾಹಾಕಾರ, ಜಿಗುಪ್ಸೆ, ಕಾಳಸಂತೆ ಮುಂತಾದವೆಲ್ಲವೂ ಮಾಯವಾಗುವುದರಲ್ಲಿ ಸಂದೇಹವಿಲ್ಲ.

ನಮ್ಮ ಆಹಾರ ಮಂತ್ರಿಗಳು ಕೂಡಲೇ ಈ ಆಹಾರ ಸಮಸ್ಯೆಯನ್ನು ಜನತೆಗೆ ಉಪಯುಕ್ತವಾಗುವಂತೆ ಪರಿಹರಿಸುವರೆಂದು ನಂಬಿರುತ್ತೇವೆ

ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿರುವ ಬಿಹಾರದಲ್ಲಿ ೧೨ ಔನ್ಸ್ ಆಹಾರವನ್ನು ಈಗಾಗಲೇ ಕೊಡಲಾರಂಭಿಸಿರುವರು. ಬೊಂಬಾಯಿನಲ್ಲಿ, ಮದರಾಸಿನಲ್ಲಿ ಮುಂದಿನ ಮಾಹೆಯಿಂದ ಹೆಚ್ಚಿಗೆ ಆಹಾರ ಕೊಡಲಿರುವರು. ನಮ್ಮ ಪ್ರಾಂತ್ಯದಲ್ಲಿಯೂ ಕೂಡಲೇ ಪಡಿತರವನ್ನು ಹೆಚ್ಚಿಸುವುದರಲ್ಲಿ ಸಂದೇಹವಿಲ್ಲವೆಂದು ಜನತೆಯೆಲ್ಲಾ ಕಾತುರತೆಯಿಂದ ಎದುರು ನೋಡುತ್ತಿದ್ದೇವೆ.

ಈಗ ಆಹಾರ ಸಂಗ್ರಹಣೆ ಕಾರ್ಯವನ್ನು ಸರ್ಕಾರವು ಮುಗಿಸಿ ನಿಗದಿಯಾಗಿರುವ ಪ್ರಮಾಣವನ್ನು ವಸೂಲ್ಮಾಡಲಾಗಿದ್ದರೆ, ಜನರಲ್ಲಿ ಉಳಿಕೆಯಿರುವ ಆಹಾರವನ್ನು ಯಾವ ಅಡ್ಡಿಯೂ ಇಲ್ಲದೆ ಬಹಿರಂಗವಾಗಿ ಮಾರಬಹುದೆಂದು ಆಜ್ಞೆಯನ್ನು ಈಸಮಯದಲ್ಲಿಯೇ ಕೊಟ್ಟರೆ ಒಂದೆರಡು ತಿಂಗಳೊಳಗಾಗಿ ಆಹಾರ ಅಭಾವವು ಸ್ವಲ್ಪವೂ ಇರುವುದಿಲ್ಲ. ಕಾಳಸಂತೆಯು ತಾನಾಗಿಯೇ ತಪ್ಪುತ್ತದೆ.

---

‡ ಮೈಸೂರು ನಗರದಲ್ಲಿ ನಡೆಯಲಿರುವ ಐ. ಎನ್. ಟಿ. ಯು. ಸಿ. ಯ ಪ್ರಥಮ ಸಮ್ಮೇಳನಕ್ಕೆ ನಗರದ ಈ ಕೆಳಗಿಕಂಡ ಕೆಲಸಗಾರರ ಸಂಘಗಳು ಕೆಳಗೆ ಕಂಡಂತೆ ಹಣ ಸಹಾಯ ಮಾಡಿವೆ.

೧) ಕೃಷ್ಣರಾಜೇಂದ್ರಮಿಲ್ ಕೆಲಸಗಾರರ ಸಂಘ ೫೦೦ ರೂ, ೨) ಮೋಟಾರು ಕೆಲಸಗಾರರ ಸಂಘ ೧೧೦, ೩) ಗಂಧದೆಣ್ಣೆ ಕೆಲಸಗಾರರ ಸಂಘ ೧೦೦, ೪) ರೇಷ್ಮೆ ನೇಯ್ಗೆ ಕಾರ್ಖಾನೆ ಕೆಲಸಗಾರರ ಸಂಘ ೯೨, ೫) ಚಾಮುಂಡಿಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘ ೭೦, ೬) ಬ್ರಾಪಿನ್ ಫ್ಯಾಕ್ಟರಿ ಕೆಲಸಗಾರರ ಸಂಘ ೬೬, ೭) ಅರಗು ಮತ್ತು ಬಣ್ಣದ ಕಾರ್ಖಾನೆ ೧೭. ೨) ಮುದ್ರಣ ಕೆಲಸಗಾರರ ಸಂಘ ೧೦, ಒಟ್ಟು ೯೬೭

ಮುಷ್ಕರ ತಡೆಗಟ್ಟಬೇಕು

ಐ. ಎನ್. ಟಿ. ಯು. ಸಿ. ಮೈಸೂರು ಪ್ರಾಂತೀಯ ಸೆಕ್ರೆಟರಿ ಶ್ರೀ ಎ. ರಾಮಣ್ಣನವರ ಹೇಳಿಕೆ.

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘ ಅವರ ನ್ಯಾಯಬದ್ಧವಾದ ಹಾಗೂ ಬಹುದಿನಗಳ ಕೆಲವು ಬೇಡಿಕೆಗಳು ಈಡೇರದಿರುವ ಕಾರಣದಿಂದ ಹಾಗೂ ಬೇಡಿಕೆಗಳ ಈಡೇರುವಿಕೆಗಾಗಿ ಸಂಘ ಕೈಗೊಂಡ ಕಾನೂನು ಬದ್ಧವಾದ ರೀತಿಗಳಿಗೆ ಸರ್ಕಾರದ ಕಾರ್ಮಿಕ ಇಲಾಖೆಯ ಸಹಕಾರ ದೊರೆಯದೆ ಕೆಲಸಗಾರರು ನಿರುತ್ಸಾಹ ಭರಿತರಾಗಿರುವುದರಿಂದ ಮುಷ್ಕರ ಒಂದೇ ದಾರಿ ಎಂದು ಈಗ ನಿರ್ಧರಿಸಿದ್ದಾರೆ

ಭಾರತಕ್ಕೆ ಸ್ವತಂತ್ರ ಬಂದನಂತರ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂದು ರಾಷ್ಟ್ರ ನಾಯಕರೆಲ್ಲಾ ಹೇಳುತ್ತಿರುವ ಕಾಲದಲ್ಲಿ ಉತ್ಪತ್ತಿಗೆ ಧಕ್ಕೆಯಾಗದ ರೀತಿಯಲ್ಲಿ ಕಾರ್ಮಿಕರ ಮಾಲೀಕರ ಮಧ್ಯೆ ಬೇಡಿಕೆಗಳ ಇತ್ಯರ್ಥವಾಗಬೇಕೆಂಬುದೇ ನನ್ನ ಆಶಯ. ಅದನ್ನು ಮನಗಂಡೇ ಮೈಸೂರಿನ ಐ. ಎನ್. ಟಿ. ಯು. ಸಿ. ಯ ಪ್ರತಿನಿಧಿಗಳ ಸಭೆಯು ಮುಷ್ಕರವನ್ನು ತಡೆಗಟ್ಟಿ ಕಾರ್ಮಿಕರ ಬೇಡಿಕೆಗಳು ಈಡೇರುವಂತಹ ಕಾರ್ಯಕ್ರಮ ಕೈಗೊಳ್ಳಲು ಮುಖ್ಯ ಮಂತ್ರಿಗಳನ್ನು ಕಂಡು ಮಾತುಕತೆ ನಡೆಸಲು ನಾಲ್ಕು ಮಂದಿ ನಿಯೋಗವನ್ನು ನಿಯಮಿಸಿದ್ದು ಆ ನಿಯೋಗ ಮುಖ್ಯ ಮಂತ್ರಿಗಳನ್ನು ಕಂಡಾಗ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಆಶಾದಾಯಕವಾಗಿದ್ದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಅವರಾದರೋ ಬೆಂಗಳೂರಿನಲ್ಲಿ ಕಾರ್ಮಿಕ ಸಚಿವರೊಡನೆ ಸಮಾಲೋಚಿಸಿ ಅತಿ ಶೀಘ್ರದಲ್ಲಿ ಏನನ್ನು ಮಾಡಲು ಸಾಧ್ಯವೋ ಅದನ್ನು ಮಾಡುವುದಾಗಿ ತಿಳಿಸಿದ್ದಾರೆ ಶೀಘ್ರದಲ್ಲೇ ಮಾಡಲು ಸಾಧ್ಯವಾಗಬಹುದಾದ್ದು ಕೈಗಾರಿಕಾ ಕೋರ್ಟಿನ ನೇಮಕ ಹಾಗೆ ಕೋರ್ಟು ನೇಮಕವಾಗಿ ಬೇಗ ವಿಚಾರಣೆ ಮಾಡಿದ್ದೇ ಆದರೆ ಮೋಟಾರು ಕೆಲಸಗಾರರು ಮುಷ್ಕರವನ್ನು ನಿಲ್ಲಿಸಿ ಕೋರ್ಟಿನೊಡನೆ ಸಹಕರಿಸಬಲ್ಲರೆಂಬ ಭರವಸೆ ನನಗಿದೆ. ಆದ್ದರಿಂದ ಮುಖ್ಯ ಮಂತ್ರಿಗಳೂ, ಕಾರ್ಮಿಕ ಮಂತ್ರಿಗಳೂ, ಕೂಡಲೇ ಮನಸ್ಸು ಮಾಡಿ ೧೬ನೇ ತಾರೀಖಿನೊಳಗಾಗಿಯೇ ಕೈಗಾರಿಕೆ ಕೋರ್ಟನ್ನು ರಚಿಸಿ ಮುಷ್ಕರ ನಡೆಯದಂತೆ ಮಾಡಬೇಕೆಂಬುದೇ ನನ್ನ ಬಿನ್ನಹ. ಕಾರ್ಮಿಕ ಸಂಘವೂ ದುಡುಕಬಾರದು. ಮಾಲೀಕರು ತಮ್ಮ ಬಿಗುಮನದಿಂದಿರದೆ ಕೋರ್ಟಿನೊಡನೆ ಸಹಕರಿಸಿ ಬಹುದಿನಗಳಿಂದ ಇತ್ಯರ್ಥವಾಗದಿರುವ ಈ ಬೇಡಿಕೆಗಳು ತೀರ್ಮಾನವಾಗಲು ಸಹಕರಿಸಬೇಕೆಂದು ಮನವಿ ಮಾಡುತ್ತೇನೆ.

ವಿವಾಹ ಮಹೋತ್ಸವಗಳು

ರಾಜಧಾನಿಯಲ್ಲಿ ಅಡ್ವೋಕೇಟ್ ಮತ್ತು ಪೌರಸಭಾಸದಸ್ಯ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರ ಪುತ್ರಿ ಶ್ರೀಮತಿ ರಾಜಲಕ್ಷ್ಮಿ, ಮದರಾಸಿನ ಆದಾಯತೆರಿಗೆ ಆಫೀಸರ್ ಶ್ರೀ ಎಚ್. ಎಸ್. ಎಸ್. ಚಕ್ರವರ್ತಿಯವರ ವಿವಾಹ ಮತ್ತು ಅವರ ಪುತ್ರ ಶ್ರೀ ರಂಗನಾಥನ್‌ರ ಉಪನಯನವು ನಿನ್ನೆ ಅತ್ಯಂತ ವೈಭವದಿಂದ ನಡೆಯಿತು. ಸಂಜೆ ನಡೆದ ಸಭೆಯಲ್ಲಿ ಉನ್ನತಾಧಿಕಾರಿಗಳು, ಪುರಪ್ರಮುಖರು ಮುಂತಾದವರು ಆಗಮಿಸಿ ವಧುವರರಿಗೆ ಆಶೀರ್ವದಿಸಿದರು.

ಬಿ.ಟಿ. ಕಂಪೆನಿಯ ಶ್ರೀ ಟಿ. ವಸುಪಾಲರಾವ್ ಮಗಳು ಶ್ರೀ ಚಂದ್ರಪತಿ, ತುಮಕೂರಿನ ಶ್ರೀ ಡಿ. ವೆಂಕಟರಾಯಪ್ಪನವರ ಮಗ ಶ್ರೀ ವಿ. ನವರತ್ನರವರಿಗೂ ಶ್ರೀ ವಸುಪಾಲರಾವ್ ಮಗ ಶ್ರೀ ಶಾಂತಕುಮಾರ, ಸಾಂಗ್ಲಿ ಶ್ರೀ ತಾಲ್ಯಾಸಾಹೇಬ್ ಅರವಾಡಿಯವರ ಮಗಳು, ಶ್ರೀಮತಿ ತ್ರಿಶಾಲದೇವಿಯವರಿಗೂ ವಿವಾಹವು ಮೊನ್ನೆ ವಾಣಿವಿಲಾಸ ಮೊಹಲ್ಲಾದಲ್ಲಿ ಅತ್ಯಂತ ವೈಭವಪೂರಿತವಾಗಿ ನಡೆಯಿತು.

ಉಡ್‌ಲ್ಯಾಂಡ್ಸ್ ಸಿನಿಮಾಮಂದಿರದ ಮಾಲೀಕರಾದ ರಾವ್‌ಸಾಹೇಬ್ ಶ್ರೀ ಬಿ. ಮುನಿವೆಂಕಟಪ್ಪನವರ ಪುತ್ರ ಶ್ರೀ ಲಕ್ಷ್ಮಣಮೂರ್ತಿಗೂ, ಶ್ರೀ ಜಿ. ಆರ್. ಬೈರಪ್ಪನವರ ಪುತ್ರಿ ಲಲಿತಾರವರಿಗೂ ನಿನ್ನೆ ಬೆಂಗಳೂರು ಬಸವನಗುಡಿಯಲ್ಲಿ ವಿವಾಹವು ಜರುಗಿತು.

ಡಿ. ವೆಲರಾ

ಮಿ|| ಡಿ. ವೆಲರಾರವರು ಐರ್ಲೆಂಡಿನ ಮುಖ್ಯಮಂತ್ರಿಯಾಗಿ ಚುನಾಯಿತರಾಗಿದ್ದಾರೆ.

ರಣಜಿತ್

೮—೬—೫೧ರಿಂದ

ಅಮೋಘವಾದ ಪ್ರಾರಂಭ

‡ ವಿನಾನಾ, ‡ ರಹಿಮಾನ್,

‡ ಕಪೂರ್ ನಟಿಸಿರುವ

-:: ರಾಜಾ-ರಾಣಿ ::-

ವುಡ್‌ಲ್ಯಾಂಡ್ಸ್ * ೯—೬—೫೧ರಿಂದ ಅಮೋಘ ಪ್ರಾರಂಭ

ಉಮರ್‌ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ

* ಉಸ್ತಾದ್ ಪೆಡ್ರೊ *

ಪಾತ್ರ— ಶೇಖ್‌ಮುಕ್ತಾರ್, ಬೇಗಂಪಾರ್‍ರ, ಶಮ್ಮಿ, ಸಪ್ರು, ಅನ್ವರಿ.

ಸಂಪಾದಕರು ಪ್ರಕಾಶಕರು :—ಜಿ. ಎಚ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ ಮೈಸೂರು.

ರಿ. ನಂ. ಎಂ. ೫೪೧೮   ದಿನ ಪತ್ರಿಕೆ   ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧]   ೧೬—೬—೧೯೫೧ ಶನಿವಾರ   [ಸಂಚಿಕೆ ೨೩೫

೧೦ ಪೌಂಡು ಬಟ್ಟೆ

ರೈಲ್ವೆ, ರಸ್ತೆ, ಭೂ, ವಾಯು ಸಂಚಾರ ಮಾರ್ಗಗಳಲ್ಲಿ ಪ್ರಯಾಣ ಮಾಡುವವರು ೧೦ ಪೌಂಡು ಬಟ್ಟೆ ಅಥವಾ ನೂಲನ್ನು ರಹದಾರಿಯಿಲ್ಲದೆ ತೆಗೆದುಕೊಂಡು ಹೋಗಬಹುದೆಂದು ಭಾರತ ಸರ್ಕಾರದ ಟೆಕ್ಸ್‌ಟೈಲ್ ಕಮಿಷನರು ಪ್ರಕಟಣೆ ಹೊರಡಿಸಿರುವರು.

ಅನರ್ಹತೆ ವಜಾ

ಪಾರ್ಲಿಮೆಂಟರಿ ಕಾರ್ಯದರ್ಶಿಗಳು, ಸರ್ಕಾರಿ ಕಾಲೇಜುಗಳ ಅಲ್ಪಕಾಲದ ಪ್ರೊಫೆಸರ್ ಮತ್ತು ಲೆಕ್ಚರರುಗಳು, ನ್ಯಾಷನಲ್ ಕ್ಯಾಡೆಟ್‌ಕೋರಿನ ಅಧಿಕಾರಿಗಳು ಬೊಂಬಾಯಿ ಶಾಸನಸಭೆಗಳಿಗೆ ಉಮೇದುವಾರರಾಗಲು ಅನರ್ಹತೆಯಿರುವುದನ್ನು ತೆಗೆದುಹಾಕಲಾಗುವುದೆಂದು ತಿಳಿಯಬರುತ್ತದೆ.

ಕಾಗೋಡಿನಲ್ಲಿ ಡಾ|| ಲೋಹಿಯಾರವರ ದಸ್ತಗಿರಿ

ಆಚಾರ್ಯ ಕೃಪಲಾನಿಯವರ ನೇತೃತ್ವದಲ್ಲಿ ಕೃಷಕ್ ಪ್ರಜಾ ಮಜ್ದೂರ್‌ಪಕ್ಷ ಸ್ಥಾಪನೆ

...ಗಳಲ್ಲಿ ನೂತನ ...ದಲ್ಲಿ ಶಿಕ್ಷಣ

ಮೈಸೂರು ಜೂನ್ ೧೫

...ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪ್ರಕಟಣೆ ಹೊರಡಿಸಿ ಇಂಟರ್‌ಮೀಡಿಯೆಟ್ ಮತ್ತು ಬಿ. ಎಸ್‌ಸಿ. ತರಗತಿಗಳಲ್ಲಿ ಸೈನ್ಸ್ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗುತ್ತಿರುವುದರಿಂದಲೂ, ಆರ್ಟ್ಸ್ ವಿಭಾಗಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದಲೂ, ಇದನ್ನು ಸಮತೂಕಮಾಡಲು ಹೊಸ ಹೊಸ ಸಬ್ಜೆಕ್ಟುಗಳಲ್ಲಿ ಶಿಕ್ಷಣಕೊಡಲು ಏರ್ಪಡಿಸಿರುವರು.

ಇದರಂತೆ ಬಿ. ಎಸ್‌ಸಿ ಮತ್ತು ಬಿ. ಎ ತರಗತಿಗಳಲ್ಲಿ ಪತ್ರಿಕೋದ್ಯಮ, ಮರ್ಕಂಟೈಲ್‌ಲಾ ಮತ್ತು ಪೊಲಿಟಿಕಲ್ ಸೈನ್ಸ್ ಮುಂತಾದುವನ್ನು ಬೋಧಿಸಲಾಗುವುದು. ಇಂಟರ್‌ಮೀಡಿಯೆಟ್ ತರಗತಿಗಳಲ್ಲಿಯೂ ಸಹ ೯ ನೂತನ ಸಬ್ಜೆಕ್ಟುಗಳನ್ನು ಆರಂಭಿಸಿ ಬೋಧಿಸಲಾಗುವುದು.

ಭಾರತ ಆಹಾರಕ್ಕೆ ೬೦೦ ಡಾಲರು ದಾನ

ಅಮೆರಿಕಾ ಸೆನೆಟರ್ ವಿಲಿಯಂ ಬೆನ್‌ಟರ್‌ರವರು ತಮ್ಮ ಮನೆಯಲ್ಲಿರುವ ೬ ಜನರ ಪ್ರಮಾಣಕ್ಕೆ ತಕ್ಕಂತೆ ೬ ಟನ್ ಗೋಧಿಯನ್ನು ಭಾರತಕ್ಕೆ ಕಳುಹಿಸಲು ೬೦೦ ಡಾಲರುಗಳನ್ನು ಅಮೆರಿಕಾದಲ್ಲಿರುವ ಭಾರತ ರಾಯಭಾರಿ ಶ್ರೀಮತಿ ವಿಜಯ ಲಕ್ಷ್ಮಿಯವರಿಗೆ ಕಳುಹಿಸಿರುವರು.

ಪಡಿತರ ಹೆಚ್ಚಿತು

ದೆಹಲಿಯಲ್ಲಿ ನಿನ್ನೆಯಿಂದಲೇ ಪಡಿತರವನ್ನು ಪನ್ನೆರಡು ಔನ್ಸಿಗೆ ಏರಿಸಲಾಗಿದೆ.

ಹೊಗೆಸೊಪ್ಪಿನ ಬೆಲೆ

ಭಾರತಾದ್ಯಂತ ಈ ಸಾಲಿನಲ್ಲಿ ೮ ಲಕ್ಷ ಎಕರೆಯಲ್ಲಿ ಹೊಗೆಸೊಪ್ಪನ್ನು ಬೆಳೆಯಲಾಗಿದೆ.

† ಬೊಂಬಾಯಿಯಲ್ಲಿ ನಿನ್ನೆ ೧ ಗಂಟೆ ಕಾಲದಲ್ಲಿ ೧|| ಇಂಚು ಮಳೆ ಬಿದ್ದಿದೆ. ಕಾರವಾರದಲ್ಲೂ ಸಹ ಇದೇ ರೀತಿ ಮಳೆಯಾಗಿದೆ.

ಬಿಹಾರಿನ ಆಹಾರ ಪರಿಸ್ಥಿತಿ

ಬಿಹಾರಿನಲ್ಲಿ ಆಹಾರಾಭಾವವನ್ನು ಎದುರಿಸಿ ಜನಕ್ಕೆ ಸರಿಯಾಗಿ ಆಹಾರ ಹಂಚಲು ೬,೩೦೦ ಡಿಪೋಗಳನ್ನು ತೆರೆಯಲಾಗಿದೆ. ಇವುಗಳ ಪೈಕಿ ೬,೦೦೦ ಡಿಪೋಗಳು ಗ್ರಾಮಾಂತರ ಪ್ರದೇಶದಲ್ಲಿವೆ. ಬಿಹಾರಿನ ಸುಮಾರು ೩ ಲಕ್ಷ ಜನರಿಗೆ ಮರಾಮತ್ ಇಲಾಖೆಯಲ್ಲಿ ಕೆಲಸ ಕೊಡಲಾಗಿದೆ, ವ್ಯವಸಾಯಗಾರರಿಗೆ ಸುಮಾರು ೧೫ ಲಕ್ಷ ರೂ. ವರಿಗೆ ತಕಾವಿಸಾಲ ಕೊಡಲಾಗಿದೆ.

ವಿವಾಹ ಮಹೋತ್ಸವ

ಮೈಸೂರು ಜೂನ್ ೧೬

ಶ್ರೀ ಎಂ.ಎಸ್. ಬಸವರಾಜಪ್ಪನವರು ದಿವಾನ್‌ರಸ್ತೆಯಲ್ಲಿರುವ ಸ್ವಗೃಹದಲ್ಲಿ ತಮ್ಮ ಪುತ್ರಿ ಚಿ|| ಸೌ|| ಜಗದೀಶ್ವರಿಯನ್ನು ಶ್ರೀ ಕೆ. ಶಂಭುಲಿಂಗಪ್ಪನವರ ಪುತ್ರ ಚಿ|| ಎಂ. ಎಸ್. ನಂಜುಂಡಸ್ವಾಮಿಗೆ ಕೊಟ್ಟು ವಿವಾಹವನ್ನು ಮೊನ್ನೆ ಬಹು ವೈಭವದಿಂದ ನೆರವೇರಿಸಿದರು.

ನಿನ್ನೆ ನಡೆದ ಆರತಕ್ಷತೆಗೆ ಸಾವಿರಾರು ಜನ ಗಣ್ಯ ಮಹನೀಯರು ದಯಮಾಡಿಸಿ ವಧೂವರರನ್ನು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಸಿನಿಮಾ ತಾರೆ ಶ್ರೀಮತಿ ವೈಜಯಂತಿಮಾಲಾರವರ ನೃತ್ಯವನ್ನು ಏರ್ಪಡಿಸಲಾಗಿತ್ತು.

ಚಾಮುಂಡಿಪುರಂನಲ್ಲಿರುವ ಶ್ರೀ ಪದಕಿ ಗೋವಿಂದರಾಯರು ತಮ್ಮ ತೃತೀಯ ಪುತ್ರಿ ಚಿ|| ಸೌ|| ಸೀತಾಬಾಯಿಯನ್ನು ನಂಜನಗೂಡಿನಲ್ಲಿರುವ ಆಗರದ ಶ್ರೀ ಭೀಮಸೇನಾಚಾರ್ಯರ ತಮ್ಮ ಶ್ರೀಪತಿರಾಯರ ಪುತ್ರ ಚಿ|| ಎಸ್. ನಾರಾಯಣರಾವ್‌ರವರಿಗೆ ಕೊಟ್ಟು ವಿವಾಹವನ್ನು ಮೊನ್ನೆ ಧನ್ವಂತರಿ ವಿಲಾಸ ಅಗ್ರಹಾರದಲ್ಲಿರುವ ಪದಕೀ ಹೌಸಿನಲ್ಲಿ ನೆರವೇರಿಸಿದರು. ಸಂಜೆ ನಡೆದ ರಿಸೆಪ್ಷನ್ನಿಗೆ ಆಹ್ವಾನಿತ ಮಹಿಳೆಯರು ಮತ್ತು ಮಹನೀಯರು ದಯಮಾಡಿಸಿ ವಧೂವರರನ್ನು ಆಶೀರ್ವದಿಸಿದರು.

† ಭಾರತ ಸರ್ಕಾರವು ಮುಂದಿನ ಸಾಲಿನಲ್ಲಿ ಬಟ್ಟೆಯ ನೀತಿಯಲ್ಲಿ ಏನನ್ನೂ ಬದಲಾಯಿಸುವುದಿಲ್ಲವೆಂದು ತಿಳಿಸಿ ಪ್ರಕಟಣೆ ಹೊರಡಿಸಿದೆ.

ಕೂಡಲೇ ರಾಜೀನಾಮೆ ಕೊಡಿ

ಮುಖ್ಯಮಂತ್ರಿ ಮತ್ತು ಶಾಸನಸಭೆಯ ನಾಯಕ ಸ್ಥಾನಗಳಿಗೆ ಕೂಡಲೇ ರಾಜೀನಾಮೆ ಕೊಡಿ ಎಂದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರವರು ೩ನೇ ಬಾರಿ ಪಂಜಾಬ್ ಮುಖ್ಯಮಂತ್ರಿ ಡಾ|| ಗೋಪಿಚಂದ್ ಭಾರ್ಗವಾರವರಿಗೆ ತಿಳಿಸಿದ್ದಾರೆ.

ಹಣಕೊಟ್ಟ ಹೊರತು ಸಂಧಾನಾರಂಭವಿಲ್ಲ

ಎಣ್ಣೆ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಮಾರ್ಚ್ ೨೦ ರಲ್ಲಿ ತೀರ್ಮಾನವಾದಾಗಿನಿಂದ ಇದುವರೆಗಿನ ಎಣ್ಣೆ ಮಾರಾಟದ ನಾಲ್ಕನೆ ಮೂರು ಭಾಗಕ್ಕಿಂತ ಹೆಚ್ಚು ಹಣವನ್ನು ಕೊಟ್ಟ ಹೊರತು ಮಾತುಕಥೆಗಳು ಆರಂಭವಾಗಲು ಸಾಧ್ಯವಿಲ್ಲವೆಂದು ಬ್ರಿಟನ್ನಿನ ಎಣ್ಣೆ ನಿಯೋಗದವರಿಗೆ ಪರ್ಷಿಯಾ ಸರ್ಕಾರವು ತಿಳಿಸಿದೆ.

ಪ್ರಯಾಣ ಮುಂದುವರಿಯಿತು

ಚಾಟ್ಕಂಡಿಗೆ ಪಂಡಿತ ನೆಹರೂರವರ ಪ್ರಯಾಣವು ಈ ದಿನ ಆಗಬೇಕಾದುದು ಹವಾನಿಮಿತ್ತ ಮುಂದುವರಿಸಲಾಗಿದೆಯೆಂದು ತಿಳಿಯಬರುತ್ತದೆ.

ಉಪನಯನ ಮಹೋತ್ಸವ

ಮೈಸೂರು. ಜೂನ್ ೧೬

ಪ್ರಸಿದ್ಧ ವಕೀಲರಾದ ಶ್ರೀ ಎಸ್. ಆರ್ ಸಂಪತ್ಕೈಂಗಾರ್‌ರವರು ಮೊನ್ನೆ ತಮ್ಮ ಪುತ್ರ ಚಿ|| ನರಸಿಂಹನ್‌ರವರಿಗೆ ಬ್ರಹ್ಮೋಪದೇಶವನ್ನು ವಾಣೀವಿಲಾಸ ಮೊಹಲ್ಲಾದಲ್ಲಿರುವ ತಮ್ಮ ಸ್ವಗೃಹದಲ್ಲಿ ನೆರವೇರಿಸಿದರು.

ನಿನ್ನೆ ಮತ್ತು ಈ ದಿನ ಅನೇಕ ಪುರಪ್ರಮುಖರು, ವಕೀಲರು, ಪತ್ರಿಕೋದ್ಯೋಗಿ ಮಿತ್ರರು ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು.

† ಕೇಂದ್ರ ಸರ್ಕಾರದ ವಿದ್ಯಾಮಂತ್ರಿ ಮೌಲಾನಾ ಆಜಾದ್‌ರವರು ಈ ದಿನ ಪ್ಯಾರಿಸ್ಸಿಗೆ ತಲುಪಿದರು.

ಡಾ|| ಲೋಹಿಯರವರ ದಸ್ತಗಿರಿ

ಸ್ಪೆ.ನ. ಪೋನ್] ಬೆಂ. ಜೂನ್ ೧೫

ಕಾಗೋಡಿನಲ್ಲಿ ನಿನ್ನೆ ಸೋಷಲಿಸ್ಟ್ ಪಕ್ಷದ ನಾಯಕ ಡಾ|| ರಾಮಮನೋಹರ ಲೋಹಿಯಾ, ಶ್ರೀಗಳಾದ ಶಾಂತವೇರಿ ಗೋಪಾಲಗೌಡ, ಶಾಸ್ತ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಪ್ರಭುದೇವ್ ಮತ್ತು ಐದು ಜನರನ್ನು ದಸ್ತಗಿರಿ ಮಾಡಲಾಯಿತು.

ಡಾ|| ಲೋಹಿಯಾರವರನ್ನು ಈ ದಿನ ಬೆಂಗಳೂರಿಗೆ ಕರೆತರುವರೆಂದು ನಿರೀಕ್ಷಿಸಲಾಗಿತ್ತು. ಉಳಿದವರ ಮೇಲೆ ಸಾಗರದಲ್ಲಿ ಮೊಕದ್ದಮೆ ಹೂಡಿರುವರು.

ಬೆಂಗಳೂರು ನಗರದ ಸೋಷಲಿಸ್ಟರು ಇದನ್ನು ಪ್ರತಿಭಟಿಸಿ ಚಿಕ್ಕಲಾಲ್‌ಬಾಗಿನಲ್ಲಿ ನಾಳೆ ಸಭೆ ಕರೆದಿರುವರು.

† ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಾಸಿಕ್ ನಗರ ಸ್ವಾಗತ ಸಮಿತಿಯನ್ನು ರಚಿಸುವುದು.

ಕೃಷಕ್ ಪ್ರಜಾ ಮಜ್ದೂರ್ ಪಕ್ಷ

ಆಚಾರ್ಯ ಕೃಪಲಾನಿಯವರ ನಾಯಕತ್ವದಲ್ಲಿ ಹೊಸದಾಗಿ ಸ್ಥಾಪಿಸಿರುವ ಪಕ್ಷಕ್ಕೆ ಕೃಷಕ್ ಪ್ರಜಾ ಮಜ್ದೂರ್ ಪಕ್ಷವೆಂದು ಹೆಸರು ಕೊಟ್ಟಿರುವರು.

ಪಾಕೀಸ್ಥಾನ ಉರುಳಿಸುವ ಪಿತೂರಿ ಮೊಕದ್ದಮೆ

ಮೂರು ತಿಂಗಳ ಹಿಂದೆ ಪಾಕೀಸ್ಥಾನ್ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಿದರೆಂಬ ಆಪಾದನೆಯ ಮೇಲೆ ಹದಿನಾಲ್ಕು ಮಂದಿ ಮಿಲಿಟರಿ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿತ್ತಷ್ಟೆ. ಇವರುಗಳ ಮೇಲೆ ಹೂಡಿದ್ದ ಮೊಕದ್ದಮೆಯ ವಿಚಾರಣೆಯು ನಿಂದ್ ಹೈದ್ರಾಬಾದಿನ ಸೆಂಟ್ರಲ್ ಜೈಲಿನಲ್ಲಿ ನಿನ್ನೆಯಿಂದ ಆರಂಭವಾಯಿತು. ವಿಚಾರಣೆಯನ್ನು ಗೋಪ್ಯವಾಗಿ ಮಾಡಲಾಗುತ್ತಿದೆ.

† ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್‌ಖಾನ್‌ರವರನ್ನು ಮಾಂಟಿಗೋಮರಿ ಜೈಲಿನಿಂದ ರಾವಲ್ಪಿಂಡಿ ಜೈಲಿಗೆ ವರ್ಗಾಯಿಸಿ ನಿನ್ನೆ ಅವರನ್ನು ಸೆರೆತರಲಾಯಿತು. ಇವರೊಡನೆ ಗಡಿನಾಡಿನ ಚ|| ಆಸಾಫ್‌ಖಾನ್‌ರವರನ್ನು ಸಹ ರಾವಲ್ಪಿಂಡಿ ಜೈಲಿಗೆ ಸೇರಿಸಲಾಯಿತು.

ಪಕ್ಷಪಾತ ವರ್ಣಬೇಧ ನಿರ್ಮೂಲವಾಗಬೇಕು

ಬೆಂಗಳೂರು ಜೂನ್ ೧೫

"ಭಾರತ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿಲ್ಲ. ಅನೇಕ ಘನ ಕೈಗಾರಿಕೆಗಳ ಅಭಿವೃದ್ಧಿಗೆ ಅವಕಾಶವಿಲ್ಲವಾಗಿದೆ. ಉತ್ಸಾಹ ಮತ್ತು ಶ್ರದ್ಧೆಯಿಂದ ಮುಂದೆ ಬರುವವರಿಗೆ ಸಾಕಷ್ಟು ಉತ್ತೇಜನ ಕೊಡುತ್ತಿಲ್ಲ. ಎಲ್ಲಿಯವರಿಗೆ ಭಾರತದಲ್ಲಿ ಪಕ್ಷಪಾತ, ಸ್ವಜನರಲ್ಲಿ ವಿಶೇಷಾಸಕ್ತಿ ಮತ್ತು ಲಂಚ-ರುಸುವತ್ತುಗಳು ಇರುವುವೋ ಅಲ್ಲಿಯವರೆಗೆ ದೇಶ ಉದ್ಧಾರವಾಗುವುದಿಲ್ಲ. ಭಾರತವು ಜಗತ್ತಿನಲ್ಲಿ ಪ್ರಥಮ ಶ್ರೇಣಿಯ ರಾಷ್ಟ್ರದ ಮಟ್ಟಕ್ಕೆ ಎಂದಿಗೂ ಬರಲಾರದು. ಅಮೆರಿಕಾದಲ್ಲಿ ವಿಶೇಷ ಶ್ರದ್ಧೆ ಮತ್ತು ಆಸಕ್ತಿ ತೋರಿ ಮುಂದೆ ಬರುವವರಿಗೆ ಸರ್ವವಿಧವಾದ ಉತ್ತೇಜನವನ್ನೂ ಕೊಡಲಾಗುವುದು. ಆದರೆ ಭಾರತದಲ್ಲಿ ಆಸಕ್ತಿ ತೋರಿ ಮುಂದೆ ಬರುವವರನ್ನು ಸಂಶಯದಿಂದ ಕಾಣಲಾಗುವುದು. ಹಲವು ಸಂದರ್ಭಗಳಲ್ಲಿ ಅದಕ್ಕೆ ಅವಕಾಶವನ್ನೂ ಕೊಡದಿರುವ ಪ್ರಸಂಗ ಸಹ ನಡೆದಿವೆ. ಈ ರೀತಿ ಆಗುವುದು ವಿಷಾದಕರ."

ಎಂದು, ಮೈಸೂರಿನ ಮಾಜಿ ದಿವಾನರೂ ಮತ್ತು ಅಖಿಲಭಾರತ ತಯಾರಿಕೆಗಾರರ ಸಂಘದ ಅಧ್ಯಕ್ಷರೂ ಆಗಿರುವ ಸರ್. ಎಂ. ವಿಶ್ವೇಶ್ವರಯ್ಯನವರು ಇಂದು ಸಂಜೆ, ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುವ ಕಾಲದಲ್ಲಿ ತಿಳಿಸಿದರು.

ಆಹಾರ ಅಭಾವದ ಜೊತೆಗೆ ಬಟ್ಟೆ ಅಭಾವ

ಬಿಹಾರಿನಲ್ಲಿ ಪ್ರಪಂಚಕ್ಕೆಲ್ಲಾ ತಿಳಿದಿರುವಂತೆ ಆಹಾರ ಅಭಾವವುಂಟಾಗಿರುವುದಲ್ಲದೆ, ಬಟ್ಟೆಯ ಅಭಾವವುಂಟಾಗಿದೆ. ಬಟ್ಟೆಯ ಸರಬರಾಯಿ ಹೆಚ್ಚಾಗಿ ಬೇಕಾಗಿದೆಯೆಂದು ಬಿಹಾರ ಆರ್ಥಿಕ ಮಂತ್ರಿ ಹೇಳಿರುವರು.

ವ್ಯಾಪಾರ ತೆರಿಗೆ ಇಲ್ಲಾ ?

ಬಟ್ಟೆಯನ್ನು ಅವಶ್ಯಕ ವಸ್ತುಗಳ ಪಟ್ಟಿಯಲ್ಲಿ ಸೇರಿಸಿ ವ್ಯಾಪಾರ ತೆರಿಗೆಯನ್ನು ಮನ್ನಣೆ ಮಾಡಲು ಕೇಂದ್ರ ಸರ್ಕಾರವು ಎಲ್ಲಾ ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯ ಪಡೆಯಲು ವ್ಯವಹಾರ ನಡೆಸುತ್ತಿರುವುದಾಗಿ ಹೇಳಲಾದೆ.

ವಿರೋಧ ಸೂಚನೆ

ಎಲ್ಲಾ ಪ್ರಾಂತ್ಯಗಳ ಆಹಾರ ಪರಿಸ್ಥಿತಿಯನ್ನು ಪರಿಗಣಿಸಿ ಆಯಾ ಸರ್ಕಾರಗಳ ಅಭಿಪ್ರಾಯ ಪಡೆಯದೆ ಕೇಂದ್ರ ಆಹಾರ ಮಂತ್ರಿಗಳು ರೇಷನ್ ಪ್ರಮಾಣ ಹೆಚ್ಚಿಸುತ್ತೇವೆಂದು ಹೇಳಿರುವರೆಂದು ಉತ್ತರ ಪ್ರದೇಶ ಸರ್ಕಾರವು ಕೇಂದ್ರಕ್ಕೆ ತನ್ನ ವಿರೋಧವನ್ನು ಸೂಚಿಸಿರುವದಾಗಿ ಹೇಳಲಾಗಿದೆ.

ಸದ್ಯದಲ್ಲೇ ೧೨ ಔನ್ಸ್ ರೇಷನ್

ಬೆಂಗಳೂರು. ಜೂನ್ ...

ಈ ಸಾಲಿನಲ್ಲಿ ಮೈಸೂರು ಪ್ರಾಂತ್ಯಕ್ಕೆ ಕೇಂದ್ರವು ೭೫ ಸಾವಿರ ಟನ್ ಆಹಾರಕ್ಕೆ ಬದಲು ಒಂದೂಕಾಲು ಲಕ್ಷ ಟನ್ ಕೊಡಲಿದೆ. ಇದರ ಪೈಕಿ ೨೫೦೦೦ ಸಾವಿರ ಟನ್ ಅಕ್ಕಿ ಬೇಕೆಂದು ಕೇಳಲಾಗಿದೆ. ಆದುದರಿಂದ ಸದ್ಯದಲ್ಲೇ ಮೈಸೂರಿನಲ್ಲಿ ಪಡಿತರವನ್ನು ೧೨ ಔನ್ಸುಗಳಿಗೆ ಹೆಚ್ಚಿಸಲಾಗುವುದೆಂದು ಆಹಾರ ಮಂತ್ರಿಗಳು ಹೇಳಿರುವರು.

ಬೊಂಬಾಯಿನಲ್ಲೂ ಹೆಚ್ಚು ತುಟ್ಟಿಭತ್ಯ

ಜೀವನಮಟ್ಟ ಏರುತ್ತಿರುವುದನ್ನು ಪರಿಶೀಲಿಸಿ ಬೊಂಬಾಯಿ ಸರ್ಕಾರವು ಕಡಮೆ ಸಂಬಳ ಬರುವ ಸರ್ಕಾರಿ ನೌಕರರಿಗೆಲ್ಲಾ ತುಟ್ಟಿಭತ್ಯ ಹೆಚ್ಚಿಸುವ ವಿಷಯವನ್ನು ಪರಿಶೀಲಿಸುತ್ತಿರುವುದಾಗಿ ಅಲ್ಲಿಯ ಆರ್ಥಿಕ ಮಂತ್ರಿಗಳು ಹೇಳಿರುವರು.

ಮಹಾಸಭೆ ಚಿನ್ಹೆ

ಹಿಂದೂಮಹಾಸಭೆಯು ಮುಂಬರುವ ಚುನಾವಣೆಗಳಲ್ಲಿ 'ಉರಿಯುತ್ತಿರುವ ಕೊಳ್ಳಿ' ಯನ್ನು ತನ್ನ ಚಿನ್ಹೆಯ ಸಂಕೇತವಾಗಿಟ್ಟುಕೊಳ್ಳಲು ನಿರ್ಧರಿಸಿದೆ.

ಸೆಪ್ಟಂಬರ್ ಪರೀಕ್ಷೆಗಳು

ವಿಶ್ವವಿದ್ಯಾನಿಲಯದ ಇಂಟರ್ ಮೀಡಿಯೆಟ್, ಬಿ. ಎ. ಮುಂತಾದ ಪರೀಕ್ಷೆಗಳು ಎಂದಿನಂತೆ ಸೆಪ್ಟಂಬರ್‌ನಲ್ಲಿ ಅಥವಾ ದಸರಾ ಕಾಲದಲ್ಲಿ ನಡೆಯುತ್ತವೆ.

ನೂತನ ಪಕ್ಷ

ದೇಶದ ನಾನಾ ಪ್ರಾಂತ್ಯಗಳಿಂದ ಆಗಮಿಸಿದ್ದ ಅನೇಕ ಪ್ರತಿನಿಧಿಗಳು ಪಾಟ್ನಾದಲ್ಲಿ, ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಜೂನ್ ೧೬ರಲ್ಲಿ ನೂತನ ರಾಜಕೀಯ ಪಕ್ಷದ ತಾತ್ಕಾಲಿಕ ಸಮಿತಿಯು ಸೇರಿತ್ತು.

ಪಕ್ಷಕ್ಕೆ ಐದು ಹೆಸರುಗಳು ಸೂಚನೆಯಾಗಿದೆ. ಜನತಾ ಪಕ್ಷ, ಜನತಾ ಕಾಂಗ್ರೆಸ್, ಪ್ರಜಾ ಕಾಂಗ್ರೆಸ್, ಕಿಸಾನ್ ಮಜ್ದೂರ್ ಪ್ರಜಾಪಕ್ಷ, ಪ್ರಜಾಪಕ್ಷ ಎಂಬುದಾಗಿ ಯಾವ ಹೆಸರನ್ನಿಡಬೇಕೆಂಬುದಿನ್ನು ತೀರ್ಮಾನವಾಗಿಲ್ಲ. ನೂತನ ಪಕ್ಷದ ಸದಸ್ಯ ಶುಲ್ಕ ೪ ಆಣೆಯಿರಬೇಕೆಂದು ನಿರ್ಧರಿಸಿದೆ

ಉಪ್ಪಿನ ಬೆಲೆ ಇಳಿಯಿತು

ಮದ್ರಾಸ್ ಪ್ರಾಂತ್ಯದಲ್ಲಿ ಉಪ್ಪಿನ ಬೆಲೆಯು ಶೇಕಡ ೨೫ ರಷ್ಟು ಇಳಿದಿರುವುದಾಗಿ ತಿಳಿಯಬರುತ್ತದೆ.

ಪ್ರವಾಹ

ಬಿಹಾರಿನಲ್ಲಿ ಅನೇಕ ನದಿಗಳಲ್ಲಿ ಪ್ರವಾಹ ಬರುತ್ತಲಿದೆ.

ಗಾಂಧಿ ಮ್ಯೂಸಿಯಂ ನಂದಿಯಲ್ಲಿ

ಬೆಂಗಳೂರು, ಜೂನ್ ೧೫

ಗಾಂಧಿ ಸ್ಮಾರಕ ಮ್ಯೂಸಿಯಂನ್ನು ನಂದಿಯಲ್ಲಿ ಸ್ಥಾಪಿಸಲು ಅಖಿಲ ಭಾರತ ರಾಷ್ಟ್ರೀಯ ಸ್ಮಾರಕ ಸಮಿತಿಯವರು ಒಪ್ಪಿಗೆ ಕೊಟ್ಟಿರುವುದಾಗಿ ಹೇಳಲಾಗಿದೆ. ಇದಕ್ಕೆ ತಕ್ಕ ಸ್ಥಳ ಪರಿಶೀಲನೆಯನ್ನು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಮಾಡಿರುವುದಾಗಿ ತಿಳಿದುಬಂದಿದೆ.

ಬ್ರಹ್ಮಪುತ್ರಾದಲ್ಲಿ ಅತ್ಯಧಿಕ ಪ್ರವಾಹ

ಬ್ರಹ್ಮಪುತ್ರಾದಲ್ಲಿ ಅತ್ಯಧಿಕ ಪ್ರವಾಹ ಬರುತ್ತಿದೆ. ಕಳೆದ ವರ್ಷ ಭೂಕಂಪ ಸಮಯದಲ್ಲಿ ಬಂದಂತೆ ಒಹುಜೋರಾಗಿ ಬರುತ್ತಿದೆ. ೬೦ ಹಳ್ಳಿಗಳಿಗೆ ಅಪಾಯವೊದಗಿದೆ. ಈಗಾಗಲೇ ನೂರಾರು ದನಕರುಗಳು ಕೊಚ್ಚಿ ಹೋದವೆಂದು ಹೇಳಲಾಗಿದೆ. ಮನುಷ್ಯರ ಸಾವು ನೋವು ಇನ್ನು ತಿಳಿದು ಬಂದಿಲ್ಲ. ಇನ್ನು ಮಳೆ ಏನಾದರೂ ಬಂದಲ್ಲಿ ಪರಿಸ್ಥಿತಿ ಹದಗೆಡುತ್ತದೆಂದು ಭೀತಿಪಡಲಾಗಿದೆ.

ಪಂಡಿತ ನೆಹರೂಗೆ ಅಭಿನಂದನೆ

ಪಂಡಿತ ನೆಹರೂರವರು ಪತ್ರಿಕಾ ಗೋಷ್ಠಿಯಲ್ಲಿ ಪರ್ಷಿಯಾ ಎಣ್ಣೆ ರಾಷ್ಟ್ರೀಕರಣವನ್ನು ಸ್ವಾಗತಿಸುವುದಕ್ಕೆ ಪರ್ಷಿಯಾ ಪ್ರಧಾನಿ ಭಾರತದಲ್ಲಿರುವ ತಮ್ಮ ರಾಯಭಾರಿ ಮೂಲಕ ಪಂಡಿತ ನೆಹರೂರವರಿಗೆ ಅಭಿನಂದನೆಯನ್ನು ಕಳುಹಿಸಿರುವರು.

ಸಹಕಾರ ಕೇಳಿದರೆ ?

ಡಾ. ಫ್ರಾಂಕ್ ಗ್ರಹಾಂರವರು ಭೇಟಿಯನ್ನು ಕೊಡುವಾಗ ಅಧಿಕೃತವಾಗಿ ಯಾರು ಬಂದು ಕಾಶ್ಮೀರ ಸರ್ಕಾರವನ್ನು ಕೇಳುವರೋ ಆಗ ಅವರ ಬಗ್ಗೆ ಯಾವ ರೀತಿ ಕಾಶ್ಮೀರ ನಡೆದುಕೊಳ್ಳಬೇಕೋ ಅದನ್ನ ನಿರ್ಧರಿಸಲಾಗುವುದು ಎಂದು ತಿಳಿದುಬಂದಿದೆ.

ಇದುವರಿಗೆ ಯಾರೂ ಆ ರೀತಿ ಕೇಳಿಲ್ಲವೆಂದು ವಕ್ತಾರನೊಬ್ಬ ತಿಳಿಸಿದ್ದಾನೆ.

ಗುಪ್ತ ಅಧಿವೇಶನ

೪೫ ರಾಷ್ಟ್ರಗಳ ಪ್ರತಿನಿಧಿಗಳು ವಿಶ್ವದ ಗೋಧಿಯ ಪರಿಸ್ಥಿತಿಯನ್ನು ಪರಿಶೀಲಿಸಲು ಲಂಡನ್ನಿನಲ್ಲಿ ಗುಪ್ತ ಅಧಿವೇಶನ ನಡೆಸುತ್ತಲಿವೆ

ರೇಷನ್ ಹೆಚ್ಚಿಗೆ

ಹೈದರಾಬಾದಿನಲ್ಲಿ ಆಗಸ್ಟು ಮಾಹೆಯಿಂದ ರೇಷನ್ ಹೆಚ್ಚಿಸಲಾಗುವುದೆಂದು ಹೇಳಲಾಗಿದೆ. ಪಂಜಾಬಿನಲ್ಲಿ ಇಂದಿನಿಂದ ಹೆಚ್ಚಿಸಲಾಗಿ!

‡ ಉತ್ತರ ಪ್ರದೇಶದಲ್ಲಿ ಶನಿವಾರದಿಂದ ಆಹಾರ ಪಡಿತರ ಹೆಚ್ಚಿಸಲಾಗುವುದು.

ಬೀಹಾರ ಮದ್ರಾಸಿಗೆ ಆಹಾರ ದಾನ

ಮೈಸೂರು ಜೂನ್ ೧೫

ಮೈಸೂರು ನಗರದಲ್ಲಿ ಬೀಹಾರ ಮದ್ರಾಸ್ ಪ್ರಾಂತ್ಯಗಳಿಗೆ ಆಹಾರ ದಾನ ಮಾಡುವವರ ಸೌಕರ್ಯಕ್ಕಾಗಿ ಸ್ವಾಚಿಸ್ಟ್ಸ್ ಸ್ಕ್ವೇರಿನಲ್ಲಿರುವ ೧ನೇ ಸರ್ಕಲಿನ ಮತ್ತು ಗಾಯತ್ರಿ ಟಾಕೀಸು ಬಳಿಯಿರುವ ೨ನೇ ಸರ್ಕಲಿನ ಅ॥ ರೇಷನ್ ಆಫೀಸರರ ಕಛೇರಿಗಳಲ್ಲಿ ಧಾನ್ಯವನ್ನು ಹಾಕಲು ಪೆಟ್ಟಿಗೆಯನ್ನಿಡಲಾಗಿದೆ, ದಾನಿಗಳು ಆ ಪೆಟ್ಟಿಗೆಯೊಳಗೆ ಧಾನ್ಯವನ್ನು ಹಾಕಿ ಆಫೀಸರಿಂದ ರಸೀತಿ ಪಡೆಯಬಹುದೆಂದು ನಗರ ರೇಷನ್ ಅಧಿಕಾರಿಗಳು ತಿಳಿಸುತ್ತಾರೆ.

ಪ್ರಾಂತ್ಯಗಳ ಹಂಚಾಣಿಕೆ ಬೇಡ

ಉಪ್ಪನ್ನು ಪ್ರಾಂತ್ಯ ಸರ್ಕಾರಗಳ ಮೂಲಕ ಹಂಚುವ ವ್ಯವಸ್ಥೆಯಿಂದ ಏನೂ ಪ್ರಯೋಜನವಾಗುವುದಿಲ್ಲ ಆದ್ದರಿಂದ ಆ ವ್ಯವಸ್ಥೆ ಬೇಡವೆಂದು ಬೊಂಬಾಯಿ ಮತ್ತು ಮದರಾಸು ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಿವೆ.

ವ್ಯಾಪಾರ ನಿಯೋಗ

ಭಾರತ ತುರ್ಕಿ ರಾಷ್ಟ್ರಗಳ ವ್ಯಾಪಾರವನ್ನು ಅಧಿಕಗೊಳಿಸಲು ತುರ್ಕಿಯಿಂದ ನಾಲ್ವರ ಒಂದು ವ್ಯಾಪಾರವು ನಿಯೋಗವು ದೆಹಲಿಗೆ ಬರಲಿದೆ.

ನಿರಾಕರಣೆ

ಪರ್ಷಿಯಾ ಸರ್ಕಾರದ ಪ್ರತಿನಿಧಿಗಳಿಗೆ ಆಂಗ್ಲೊ-ಇರಾನಿಯನ್ ಎಣ್ಣೆ ಕಂಪನಿಯು ಕಾಗದ ಪತ್ರಗಳನ್ನು ಕೊಡಲು ನಿರಾಕರಿಸಿವೆ.

೭ ಇಂಟರ್ ಕಾಲೇಜುಗಳು

ಆಂಧ್ರ ದೇಶದಲ್ಲಿ ಈ ಸಾಲಿನಲ್ಲಿ ೭ ಇಂಟರ್ ಕಾಲೇಜುಗಳನ್ನು ಸ್ಥಾಪಿಸಲಾಗುವುದು.

‡ ರಾಮನಾಡಿನ ಟಿಂಡಿ ಮತ್ತು ಕಡಲೂರಿನಲ್ಲಿ ಆಹಾರದ ಹಡಗು ನಿಲ್ಲಿಸಲು ಮದ್ರಾಸ್ ಸರ್ಕಾರ ಯೋಚಿಸುತ್ತಿದೆ.

FOR SALE

A BUNGALOW WITH TWO OUT HOUSES
at Chamundipuram
Fetching monthly Rent Rs. 100

Contact Box No. 4
Samachara Mysore.

ಸಂಪಾದಕರು ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋರ್ಡನ್ ಮುದ್ರಣಾಲಯ ಮೈಸೂರು.

ರಘುಲಾಲ್
ಅಂಡ್
ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ಬಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೬—೧೯೫೧ ಸೋಮವಾರ [ಸಂಚಿಕೆ ೨೩೬

RAGHULAL & Co.
CHEMISTS
Sayyaji Rao Road
MYSORE

ಶ್ರೀ ಮರಿಯಪ್ಪ ಶ್ರೀ ರಮಾನಂದ ಮಿಶ್ರಾರ ಭೇಟಿ

ಮೈಸೂರಿಗೆ ಕೇಂದ್ರದಿಂದ ಐದು ವರ್ಷಕಾಲ ೩೭೫ ಲಕ್ಷ ರೂಪಾಯಿ ಸಹಾಯ

ಸ್ವಾರ್ಥಪರರ ಪಕ್ಷ

ಆಚಾರ್ಯ ಕೃಪಲಾನಿಯವರು ಸ್ಥಾಪಿಸಲಿರುವ ನೂತನ ಪಕ್ಷವು ಅಧಿಕಾರ ಲಾಲಸೆಗಾಗಿ ಕೃಪ್ಲುಸಿ ಪರಾಜಿತರಾದ ಕೆಲವು ಸ್ವಾರ್ಥಿಗಳಿಂದ ಕೂಡಿದೆ. ಅವರ ಧ್ಯೇಯೋದ್ದೇಶಗಳು ಕಾಂಗ್ರೆಸ್ಸನ್ನು ಶುದ್ಧಗೊಳಿಸುವುದು ಮತ್ತು ಕಾಂಗ್ರೆಸ್ಸಿನ ಮತ್ತು ನೂತನ ಪಕ್ಷದ ಧ್ಯೇಯಗಳು ಒಂದೇ ಅವರು ಹೇಳುತ್ತಿರುವಾಗ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡದೆ ಅದೇ ಪಕ್ಷದಲ್ಲಿದ್ದುಕೊಂಡು ಸರಿಪಡಿಸಬಹುದಾಗಿತ್ತೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್ನರು ಟೀಕಿಸಿರುವರು.

ಕಾಲೋಚಿತವಾಗಿ ಬೇಡಿಕೆಗಳಿಗೆ ಮನ್ನಣೆಕೊಡಬೇಕು

ಸರ್ಕಾರಗಳು ಕಾಲೋಚಿತವಾಗಿ ಬೇಡಿಕೆಗಳಿಗೆ ಮನ್ನಣೆಯನ್ನೀಯಬೇಕು. ನೇಪಾಳ ಸ್ವಾತಂತ್ರ್ಯವು ನೇಪಾಳಕ್ಕೇ ಅಲ್ಲ. ಭಾರತ, ಪ್ರಪಂಚ ಎಲ್ಲದಕ್ಕೂ ಅತ್ಯಾವಶ್ಯಕವಾದುದು. ನೇಪಾಳದಲ್ಲಿ ಸ್ವಾತಂತ್ರ್ಯ ಉದಯಿಸಿದ್ದಕ್ಕಾಗಿ ಭಾರತಕ್ಕೆ ಮಿಗಿಲಾದ ಆನಂದವುಂಟಾಗಿದೆ. ಮೈತ್ರಿತ್ವವು ಇನ್ನೂ ಬೆಳೆಯುವುದು. ನೇಪಾಳದ ಆಂತರಿಕ ವ್ಯವಸ್ಥೆಯಲ್ಲಿ ಭಾರತವು ಪ್ರವೇಶಿಸುವುದಿಲ್ಲ ಏನಾದರೂ ಸಹಾಯ ಕೋರಿದರೆ ಭಾರತವು ಸೌಹಾರ್ದದಿಂದ ನೀಡುವುದು ಎಂದು ಭಾರತ ಪ್ರಧಾನಿ ನೆಹರೂರವರು ಖಟ್ಮಂಡುವಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ನೇಪಾಳ ದೊರೆ ತ್ರಿಭುವನರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನಾಲ್ಕು ತಿಂಗಳಕಾಲ ವಿಚಾರಣೆ

ಪಾಕಿಸ್ತಾನ ಸರ್ಕಾರ ಉರುಳಿಸಲು ಪ್ರಯತ್ನಿಸಿದರೆಂಬ ಮೇಲೆ ಪ್ರಾರಂಭವಾಗಿರುವ 'ರಾವಲ್ಪಿಂಡಿ ಪಿತೂರಿ' ಮೊಕದ್ದಮೆಯ ವಿಚಾರಣೆಯು ನಾಲ್ಕು ತಿಂಗಳ ಕಾಲ ನಡೆಯುವುದೆಂದು ಹೇಳಲಾಗಿದೆ.

‡ ಹೈದರಾಬಾದಿನಲ್ಲಿ ಪೆಟ್ರೋಲ್ ಎಲ್ಲಿಯೂ ಇಲ್ಲದೆ ಮೋಟಾರುವಾಹನ ಸಂಚಾರವು ಕುಸಿದುಬಿದ್ದಿದೆಯೆಂದು ತಿಳಿಯಬರುತ್ತದೆ.

ಮರಿಯಪ್ಪ ಮಿಶ್ರಾರವರ ಭೇಟಿ

ಸ್ವ.ಸು. ಪ್ರೂ.] ಬೆಂ. ಜೂನ್ ೧೭

ಸೋಷಲಿಸ್ಟ್ ಮುಖಂಡರಾದ ಶ್ರೀ ರಮಾನಂದ ಮಿಶ್ರಾರವರು ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರ ಭೇಟಿ ನಡೆದು ಕಾಗೋಡಿನ ಪರಿಸ್ಥಿತಿ ಅಲ್ಲಿನ ಸತ್ಯಾಗ್ರಹ ಇತ್ಯಾದಿಗಳ ಬಗ್ಗೆ ಈ ದಿನ ವಿಚಾರವಿನಿಮಯವನ್ನ ಮಾಡಿಕೊಂಡರೆಂದು ತಿಳಿದುಬಂದಿದೆ

ಶ್ರೀ ರಾಮಾನಂದ ಮಿಶ್ರಾರವರು ಇಂದು ವಿಮಾನದಲ್ಲಿ ಆಗಮಿಸಿದರು.

ಸ್ವಾಗತ ಸಮಿತಿ ರಚನೆ

ಬರುವ ತಿಂಗಳು ಎ. ಐ. ಸಿ. ಸಿ. ವಿಶೇಷ ಸಭೆ ಬೆಂಗಳೂರಿನಲ್ಲಿ ನಡೆಯಲಿರುವುದರಿಂದ ಇದರ ಏರ್ಪಾಡುಗಳಿಗಾಗಿ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರನ್ನು ಅಧ್ಯಕ್ಷರನ್ನಾಗಿ ಒಳಗೊಂಡ ಸ್ವಾಗತ ಸಮಿತಿ ರಚಿಸಲಾಯಿತು.

ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಕಾಗೋಡಿನ ಒಂದು ಸಣ್ಣ ವಿಷಯವನ್ನು ಸೋಷಲಿಸ್ಟರು ತಮ್ಮ ರಾಜಕೀಯ ಪಕ್ಷದ ಬೆಳವಣಿಗೆಗಾಗಿ ಉಪಯೋಗಿಸಿಕೊಂಡಿರುವುದನ್ನು ಖಂಡಿಸಿರುವರು.

‡ ಪಂಡಿತ ನೆಹರೂರವರು ಜುಲೈ ಒನೇ ತಾರೀಖು ಬೆಂಗಳೂರಿಗೆ ಬರುವರೆಂದು ತಿಳಿಯಬರುತ್ತದೆ.

ಹೊಸ ಕೈಗಾರಿಕೆಗಳ ಸ್ಥಾಪನೆ

ಅಲ್ಯೂಮಿನಿಯಂ, ಸೈಕಲ್ ಕೃತಕ ಕಲ್ಲು ತಯಾರಿ ಮುಂತಾದ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮದರಾಸ್ ಸರ್ಕಾರವು ಅಂಗೀಕಾರವಿತ್ತಿದೆ ಅಲ್ಯೂಮಿನಿಯಂ ಕೈಗಾರಿಕಾ ಕಾರ್ಖಾನೆ ಸೇಲಂನಲ್ಲಿ ಕೃತಕ ಕಲ್ಲು ತಯಾರಿಕಾ ಕೇಂದ್ರವು ಮದರಾಸಿನಲ್ಲಿ ಸ್ಥಾಪಿತವಾಗಲಿದೆ ಸ್ಪಿರ್ಟ ಸಾಲೆಂಬಿನ ಒಂದು ಸಂಸ್ಥೆಯು ಕೃತಕ ಕಲ್ಲು ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸುವುದು

ಮೋಟಾರು ಕೆಲಸಗಾರರ ಸಂಘಗಳ ಸಂಯುಕ್ತ ಸಂಸ್ಥೆ

ಮೈಸೂರು ಜೂನ್ ೧೭

ಅಖಿಲ ಮೈಸೂರು ಮೋಟಾರು ಕೆಲಸಗಾರರ ಸಂಘಗಳ ಸಂಯುಕ್ತ ಸಂಸ್ಥೆಯ ಪ್ರಾರಂಭೋತ್ಸವವು ನಿನ್ನೆ ಕಾರ್ಮಿಕಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನೆರವೇರಿಸಿದರು.

ಐ. ಎನ್. ಟಿ. ಯು ಸಿ.ಯ ಉಪಾಧ್ಯಕ್ಷ ಜನಾಬ್ ಅಬೀದ್ ಅಲಿ ಜಾಫರ್ ಭಾಯ್‌ರವರು ಉದ್ಘಾಟಿಸಿದರು.

ಒಳದೇಶದ ಸಂಚಾರವ್ಯವಸ್ಥೆಗೆ ಮೋಟಾರು ಕೆಲಸಗಾರರು ಒಂದು ಮುಖ್ಯಾಂಗವಾಗಿರುವರು. ನಿಮ್ಮ ಅಧಿಕ ಜವಾಬ್ದಾರಿಯನರಿತು ನೀವು ಕರ್ತವ್ಯನಿಷ್ಠರಾಗಬೇಕಾದುದು ಪ್ರಥಮಕರ್ತವ್ಯ. ಸಂಚಾರವ್ಯವಸ್ಥೆಯು ಈಗ ಅತ್ಯಂತ ಮುಖ್ಯವಾದುದು. ೧೫ ವರ್ಷಗಳ ಹಿಂದೆ ಮೈಸೂರಿನಲ್ಲಿ ೫೭೬ ಬಸ್ಸುಗಳು, ೩೮೪ ಲಾರಿಗಳು ಚಲಿಸುತ್ತಲಿದ್ದವು. ಈಗ ೧೬೮೧ ಬಸ್ಸುಗಳು, ೩೦೪೯ ಲಾರಿಗಳಿವೆ. ಅಂದರೆ ನಿಮ್ಮ ಕರ್ತವ್ಯವು ಮಿಗಿಲಾಗಿದೆ. ನಿಮ್ಮ ಸಂಖ್ಯೆಯು ೧೦,೦೦೦ಕ್ಕೇರುವುದು. ಈಗ ಒಂದು ಸಂಯುಕ್ತ ಸಂಸ್ಥೆಯನ್ನು ಸ್ಥಾಪಿಸಿಕೊಂಡರೆ ಎಲ್ಲಾ ಕೆಲಸಗಾರರ ಹಿತದೃಷ್ಟಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇತ್ತೀಚೆಗೆ ನಮ್ಮ ಜನರು ತಮ್ಮ ಕರ್ತವ್ಯವನ್ನಲ್ಲದೆ ತಮ್ಮ ಹಕ್ಕುಬಾಧ್ಯತೆಗಳ ಕಡೆ ಗಮನವೀಯುತ್ತಲಿರುವರು. ಕಾರ್ಮಿಕರ ತಮ್ಮ ಕ್ಷೇತ್ರಕ್ಕೆ ತಕ್ಕ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಉದ್ಯುಕ್ತರಾಗಿರುವುದು ಎಂದು ಎಲ್ಲರಿಗೂ ಸಂತೋಷವಿಷಯ ಎಂದು ಹೇಳಿದರು.

ನ್ಯೂಸ್‌ಪ್ರಿಂಟ್

ಪತ್ರಿಕಾ ಮುದ್ರಣಕ್ಕಲ್ಲದೆ ಇತರ ಮುದ್ರಣ ಕಾರ್ಯಗಳಿಗೂ ನ್ಯೂಸ್‌ಪ್ರಿಂಟ್ ಕಾಗದವನ್ನು ಉಪಯೋಗಿಸಲು ಅನುಮತಿ ಕೊಡಲಾಗುವುದೆಂದು ಭಾರತ ಸರ್ಕಾರ ಪ್ರಕಟಿಸಿದೆ. ಜೂನ್ ೧೫ರಿಂದ ೬ ತಿಂಗಳ ಕಾಲ ಈ ಆಜ್ಞೆ ಜಾರಿಯಲ್ಲಿರುತ್ತದೆ.

ಮೈಸೂರಿಗೆ ೩೭೫ ಲಕ್ಷ ರೂ. ಗ್ರಾಂಟ್

ಆರ್ಥಿಕ ವಿಲೀನೀಕರಣವಾದ್ದರಿಂದ ಕೇಂದ್ರ ಸರ್ಕಾರವು ೧೯೫೦ ನೇ ಸಾಲಿನಿಂದ ೫ ವರ್ಷಕಾಲ ಪ್ರತಿವರ್ಷವೂ ೩೭೫ ಲಕ್ಷ ರೂ. ಮೈಸೂರು ಸರ್ಕಾರಕ್ಕೆ ಗ್ರ್ಯಾಂಟ್ ರೂಪದಲ್ಲಿ ಕೊಡುವುದು ಇದೇ ರೀತಿ ಹೈದರಾಬಾದಿಗೆ ೧೩೫ ಲಕ್ಷ, ತಿರುವಾಂಕೂರು ಕೊಚ್ಚಿನ್‌ಗೆ ೨೮೦ ಲಕ್ಷ, ಸೌರಾಷ್ಟ್ರಕ್ಕೆ ೨೭೫ ಲಕ್ಷ ಕೊಡುವುದು

ಅಲ್ಲದೆ ಈ ಬಿ. ಪ್ರಾಂತ್ಯಗಳ ಸಾಲದ ಬಾಬಿನಲ್ಲಿಯೂ ಅರ್ಧವನ್ನು ಕೇಂದ್ರವು ವಹಿಸಿಕೊಳ್ಳುವುದು. ಮೈಸೂರು ಪ್ರಾಂತ್ಯದಲ್ಲಿರುವ ಸರ್ಕಾರದ ಸಾಲದಲ್ಲಿ ಕೇಂದ್ರವು ೪೮೦ ಲಕ್ಷ ರೂ. ಗಳನ್ನು, ತಿರುವಾಂಕೂರು ಕೊಚ್ಚಿನ್ನಿನಲ್ಲಿ ೨೭೬.೪ ಲಕ್ಷ ರೂ. ಗಳನ್ನು ಭಾರತ ಸರ್ಕಾರವೇ ವಹಿಸಿಕೊಂಡಿದೆ.

ಮಹಾರಾಜರುಗಳಿಗೆ ಕೊಡುವ ಪ್ರಿವಿಪರ್ಸ್ ೪.೮ ಕೋಟಿ ರೂ. ಖರ್ಚನ್ನು ಕೇಂದ್ರವು ಈಗಾಗಲೇ ವಹಿಸಿಕೊಂಡಿದೆ.

ಮಂತ್ರಿಮಂಡಲ ರಚಿಸಲು ಆಶಕ್ತ

ಪಂಜಾಬಿನ ಗೌರ್ನರ್ ಶ್ರೀ ಚಂದೂಲಾಲ್ ತ್ರಿವೇದಿಯವರು. ಪೂರ್ವ ಪಂಜಾಬಿನ ಕಾಂಗ್ರೆಸ್ ನಾಯಕರಾದ ಶ್ರೀ ಭೀಮಸೇನಸಾಚಾರ್ ಮತ್ತು ಶ್ರೀ ಪ್ರತಾಪಸಿಂಗ್ ಕೈರಾನ್‌ರವರುಗಳನ್ನು ನಿನ್ನೆ ಕರೆಸಿ ಮಾತನಾಡಿ ಪಂಜಾಬ್ ಮಂತ್ರಿಮಂಡಲ ರಚಿಸಬೇಕೆಂದು ತಿಳಿಸಿದರು. ಈ ಸನ್ನಿವೇಶದಲ್ಲಿ ಮಂತ್ರಿಮಂಡಲ ರಚಿಸಲು ಸಾಧ್ಯವಿಲ್ಲವೆಂದು ಗೌರ್ನರರವರಿಗೆ ತಾವು ತಿಳಿಸಿದರೆಂದು ಸುದ್ದಿಗಾರರಿಗೆ ಶ್ರೀ ಸಾಚಾರ್‌ರವರು ಗೌರ್ನರ್‌ರೊಡನೆ ಭೇಟಿಯಾದನಂತರ ತಿಳಿಸಿದರು

‡ ಆಚಾರ್ಯ ಕೃಪಲಾನಿಯವರ ನಾಯಕತ್ವದಲ್ಲಿ ಸ್ಥಾಪಿತವಾಗಿರುವ ಕೃಷಕ್ ಮಜ್ದೂರ್ ಪ್ರಜಾ ಪಕ್ಷಕ್ಕೆ ತಮ್ಮ ಪಕ್ಷವು ಸಂಪೂರ್ಣ ಬೆಂಬಲ ನೀಡುವುದಾಗಿ ಶ್ರೀ ಜೈಪ್ರಕಾಶ್ ನಾರಾಯಣರು ಹೇಳಿರುವರು.

OFFICE OF THE PRESIDENT, DISTRICT BOARD, MYSORE

TENDER NOTIFICATION

Sealed tenders will be received at the office of the President, District Board, Mysore up to 3 p.m., on 20—6—1951 for the work noted below.

1. Construction of a Primary School Building at Hangala, Gundlupet taluk. Amount of estimate is Rs. 10,000.
2. The work is to be completed by the end of December 1951 and the monthly progress should not be less than Rs. 2,000.
3. Tenders should be quoted on percentage basis either above or below the sanctioned estimate
4. Items not provided in the estimate will be calculated as per schedule rates or as per date worked out during the execution of the work.
5. Each tender must be accompanied by the duplicate chellan for having credited into the treasury the deposit amount of Rs. 250 to the District Funds Mysore.
6. The stipulated progress must be shown from the very commencement failing which the earnest money will be forfeited and the contract cancelled without further notice.
7. Controlled articles required for construction will be supplied Departmentally at the prevailing rates and the incidential charges and centage will be charged in addition
8. Plan and other details connected with the work can be seen in the office on any working day during office hours.
9. The successful tenderer will be required to produce an Income-Tax clearance or verification certificate before executing the work.
10. The President reserves the right of accepting or rejecting the tender without assigning any reason.
11. The decision of the District Board in respect of any dispute regarding rates and other matters arising will be final.

H M Channabasappa,
President,
Mysore District Board.

ಕಾರ್ಮಿಕರಿಂದಲೇ ದೇಶೋದ್ಧಾರ

ಮೈಸೂರು ಜೂನ್ ೧೭

ಕಾರ್ಮಿಕರು ದೇಶದ ಮಾಲೀಕರು ಮತ್ತು ತಮ್ಮ ಸ್ವಂತ ಅಭಿವೃದ್ಧಿಯನ್ನು ಗಮನಿಸಿ ಕರ್ತವ್ಯ ನಿಷ್ಠರಾಗಬೇಕು. ಭಾರತದಲ್ಲಿ ಸ್ವಾತಂತ್ರ್ಯಗಳಿಸಲು ಕಾರ್ಮಿಕರು ಮುಖ್ಯಪಾತ್ರವನ್ನು ವಹಿಸಿದ್ದರು. ಅವರು ಮಾಡಿರುವ ತ್ಯಾಗ ಮತ್ತು ತಾಳ್ಮೆಯಿಂದ ಜನಗೆ ಬೇಕಾದ ಸೌಕರ್ಯಗಳನ್ನು ಸರಕಾರ ನೀಡಲೆಂದು ಕಾಯುತ್ತಲಿರುವರು ಅನೇಕ ಬಾರಿ ತಮ್ಮ ಸೌಕರ್ಯಗಳನ್ನು ವಿಧಿವತ್ತಾಗಿ ಪಡೆಯಲು ಮುಷ್ಕರಗಳನ್ನು ಹೂಡಬೇಕಾದ ಸಂಧರ್ಭಗಳು ಬಂದವು. ಈಗ ಐ. ಎನ್. ಟಿ. ಯು. ಸಿ. ಧ್ಯೇಯವೆ ಬೇರೆಯಾಗಿದೆ. ಸಾಧ್ಯವಾದಷ್ಟು ಶಾಂತ ರೀತಿಯಿಂದ ತನ್ನ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂಬುದೇ ಈ ಸಂಸ್ಥೆಯ ನೀತಿ ಎಂದು ಐ. ಎನ್. ಟಿ. ಯು ಸಿ ಸಂಸ್ಥೆಯ ಮೈಸೂರು ಶಾಖೆಯನ್ನು ಉದ್ಘಾಟಿಸುತ್ತಾ, ಉಪಾಧ್ಯಕ್ಷ ಮಿ|| ಅಬೀದ್ ಅಲಿ ಘಾಫರ್ ಬಾಖ್‌ಯವರು ಹೇಳಿದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಅಥಿತಿಗಳನ್ನು ಸ್ವಾಗತಿಸಿ ಭಾಷಣಮಾಡುತ್ತಾ, ಮಹಾತ್ಮರ ತತ್ವವನ್ನನುಸರಿಸಿಯೇ ಭಾರತದಲ್ಲಿ ಧರ್ಮರಾಜ್ಯಸ್ಥಾಪನೆಯಾಗಬೇಕಾಗಿದೆ ಅದಕ್ಕಾಗಿಯೇ ಐ. ಎನ್. ಟಿ. ಯು. ಸಿ. ಸಂಸ್ಥೆಯು ದುಡಿಯುತ್ತಲಿದೆ ದೇಶದಲ್ಲುಂಟಾಗಿರುವ ಅನೇಕ ದುಃಸ್ಥಿತಿಗಳನ್ನು ಎದುರಿಸಬೇಕಾದರೆ ಕಾರ್ಮಿಕರಿಂದಲೇ ಸಾಧ್ಯ. ಪರರಾಷ್ಟ್ರಗಳನ್ನು ಭಾರತವು ನಂಬಿಕೊಂಡಿರುವುದನ್ನು ಕಾರ್ಮಿಕರ ದುಡಿಮೆಯಿಂದ ತಪ್ಪಬೇಕೆಂದು ಹೇಳಿದರು.

ಮೈಸೂರು ಕಾರ್ಮಿಕ ಸಚಿವ ಶ್ರೀ ಕೆ ಟಿ ಭಾಷ್ಯಂರವರು ಸಮಾರಂಭದಲ್ಲಿ ಮಾತನಾಡುತ್ತಾ, ಕಳೆದ ಎರಡು ಮೂರು ವರ್ಷಗಳಲ್ಲಿ ಮೈಸೂರು ಸರ್ಕಾರವು ಕಾರ್ಮಿಕರ ಹಿತದೃಷ್ಟಿಯನ್ನು ಗಮನಿಸಿ ಸೌಕರ್ಯಗಳನ್ನು [illegible] ಅನೇಕ ಕಾನೂನುಗಳನ್ನು ಸಹ ರಚಿಸಿದೆ. ಕಾರ್ಮಿಕರ ಹಿತದೃಷ್ಟಿಯನ್ನು ಕಾಪಾಡಬೇಕಾದರೆ ಐ. ಎನ್. ಟಿ ಯು. ಸಿ ಸಂಸ್ಥೆಯೇ ತಕ್ಕ ಸಂಘ ಈ ಸಂಸ್ಥೆಗೆ ತಮ್ಮ ಜೀವಮಾನವೆಲ್ಲಾ ಕಾರ್ಮಿಕರ ಹಿತ ಸಾಧನೆಗೆ ಅರ್ಪಿಸಿರುವ ಜ|| ಅಬೀದ್ ಅಲಿಯಂತಹ ಮಹನೀಯರ ನೆರವು ವಿಶೇಷವಾಗಿ ಅವಶ್ಯಕ.

ಕಾರ್ಮಿಕರು ದೇಶದ ಅಭ್ಯುದಯಕ್ಕಾಗಿ ತಾವೂ ನೆರವಾಗಬೇಕೆಂಬುದನ್ನು ಈಚೆಗೆ ಅರಿತುಕೊಂಡು ಕಾರ್ಖಾನೆಗಳಾರಂಭಿಸಿರುವವರು ಸರ್ಕಾರಗಳೂ ತಮ್ಮ ಮನೋಭಾವವನ್ನು ಬದಲಾಯಿಸಿದೆ. ಕಾರ್ಮಿಕರ ವಿವಾದಗಳನ್ನು ಉಭಯ ಪಕ್ಷದವರೂ ಒಂದೆಡೆಸೇರಿ ವಿಚಾರ ವಿನಿಮಯಗಳಿಂದ ಪರಿಹರಿಸಿಕೊಳ್ಳಬೇಕಾಗಿದೆ ಇದನ್ನು ಎಲ್ಲರೂ ಅರಿತಿರುವರು ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರಿಗೆ ವಾಸಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ೧೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಿದೆ, ಕೇಂದ್ರ ಸರ್ಕಾರವು ಈ ಉದ್ಯಮಕ್ಕೆ ೨೦ ಲಕ್ಷ ರೂಪಾಯಿಗಳನ್ನು ಕೊಡಲಿದೆ.

ಸದ್ಯದಲ್ಲೇ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ವಿವಾದವನ್ನು ಪರಿಹರಿಸಲು ಒಂದು ಟ್ರಿಬ್ಯುನಲ್ಲನ್ನು ನೇಮಿಸಲಾಗುತ್ತದೆ ವಿವಾದವು ನಿಷ್ಪಕ್ಷಪಾತವಾಗಿ ಕಾರ್ಮಿಕರಿಗೆ ಪ್ರತಿಕೂಲವಾಗದಂತೆ ತೀರ್ಮಾನವಾಗುವುದೆಂದು, ನ್ಯಾಯ, ಸಂಬತ್ತೀನೆ ಈಗ ಮುಷ್ಕರ ಹೂಡಬೇಕಾದ ಅವಶ್ಯಕವಿಲ್ಲವೆಂದು ಹೇಳಿದರು.

ವ್ಯವಸಾಯ ಪ್ರಧಾನವಾದ ಭಾರತದಲ್ಲಿ ಆಹಾರ ಅಭಾವವುಂಟಾಗಿರುವುದು ಅತ್ಯಂತ ಶೋಚನೀಯ, ಅದನ್ನು ಪರಿಹಾರ ಮಾಡಲು ವ್ಯವಸಾಯ ಕಾರ್ಮಿಕರೆಲ್ಲರೂ ದುಡಿದು, ರಾಷ್ಟ್ರದ ಸಂಪದಭಿವೃದ್ಧಿಯನ್ನು ಹೆಚ್ಚಿಸಬೇಕಾಗಿ ಕೋರಿದರು.

ರೇಷನ್ ಸದ್ಯಕ್ಕೆ ಹೆಚ್ಚಿಸುವುದಿಲ್ಲ

ಇನ್ನೂ ಒಂದು ಲಕ್ಷ ಟನ್ ಆಹಾರವು ನಮಗೆ ಹೆಚ್ಚಾಗಿ ಬೇಕಾಗಿದೆ, ಆಗ ರೇಷನ್ ಹೆಚ್ಚಿಸಲು ಸಾಧ್ಯವಾಗುತ್ತದೆ ಸದ್ಯಕ್ಕೆ ರೇಷನ್ ಪ್ರಮಾಣವನ್ನು ೯ ಔನ್ಸುಗಳಿಂದ ೧೨ ಔನ್ಸ್ ಮಾಡುವುದಿಲ್ಲವೆಂದು ಪಶ್ಚಿಮಬಂಗಾಳ ಆಹಾರಸಚಿವರು ಹೇಳಿರುವುದಾಗಿ ವರದಿಯಾಗಿದೆ

ತುಟ್ಟಿಭತ್ಯ

ಪಶ್ಚಿಮ ಬಂಗಾಳ ಸರ್ಕಾರವು ೩೦೦ ರೂಪಾಯಿ ಗರಿಷ್ಠ ಸಂಬಳ ಬರುವ ಸರ್ಕಾರಿ ನೌಕರರಿಗೆಲ್ಲಾ ೫ ರೂ. ತುಟ್ಟಿಭತ್ಯ ಹೆಚ್ಚಿಸಿದೆ. ಇದರಿಂದ ವರ್ಷಕ್ಕೆ ೬೫ ಲಕ್ಷ ರೂ. ಹೆಚ್ಚು ವೆಚ್ಚವಾಗುತ್ತದೆ

ಕೈಗಾರಿಕಾ ನ್ಯಾಯಸ್ಥಾನ

ಬೆಂಗಳೂರು ಜೂನ್ ೧೬

ಮೈಸೂರು ಸರ್ಕಾರದವರು ಶ್ರೀ ಟಿ. ಸಿಂಗಾರವೇಲು ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕೈಗಾರಿಕಾ ನ್ಯಾಯಸ್ಥಾನವನ್ನು ನೇಮಿಸಿರುವರು ಶ್ರೀ ರಂಗರಾಮಯ್ಯ ಮತ್ತು ಜ|| ಮುಸ್ತಫಾ ಷರೀಫ್‌ರವರು ಸದಸ್ಯರು.

ವುಡ್‌ಲ್ಯಾಂಡ್ಸ್ * ೧೭—೬—೫೧ರಿಂದ ಎರಡನೇ ವಾರ
ಉಮರ್ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ
* ಉಸ್ತಾದ್ ಪೆಡ್ರೊ *
ಪಾತ್ರ— ಶೇಖ್ ಮುಕ್ತಾರ್, ಬೇಗಂಪ್ಯಾರ, ಶಮ್ಮಿ, ಪತ್ರ, ಅನ್ಸಾರಿ.

ಜೈಹಿಂದ್ ತಬಲ ವರ್ಕ್ಸ್
ಅಶೋಕ ಈಸ್ಟ್ ಕ್ರಾಸ್ ೨೫ ವೀರನಗೆರೆ ಮೈಸೂರು
ನಮ್ಮಲ್ಲಿ ಸಂಗೀತಕ್ಕೆ ಬೇಕಾದ ಎಲ್ಲಾ ತರಹದ ಮೃದಂಗ, ತಬಲ, ಬಾಂಜೊ ಮುಂತಾದ ವಾದಗಳು ದೊರೆಯುತ್ತವೆ.
ಪ್ರೊ|| ಆರ್. ವೆಂಕಟಸ್ವಾಮಿ

ಒಲಂಪಿಯಾ
21-6-51ರಿಂದ ಪ್ರತಿದಿನ 3 ಪ್ರದರ್ಶನಗಳು
ನಜೀರ್ ಖಾನ್, ಗೀತಾಬಾಲಿ, ಡೇವಿಡ್, ನಾರೋ, ಜೀವನ್ ನಟಿಸಿರುವ
* ನಖ್ರೆ *
ಉತ್ತಮ ಸಾಮಾಜಿಕ ಹಿಂದಿಚಿತ್ರ

ಸಂಪಾದಕರು ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ಯೂಟೋರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಹಿ ಕಾ. ಸುಬ್ಬರಾವ್, ಮೋರ್ಡನ್ ಮುದ್ರಣಾಲಯ ಮೈಸೂರು.

ರಿ. ನಂ. ಎಂ. ೫೪೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೬—೧೯೫೧ ಮಂಗಳವಾರ [ಸಂಚಿಕೆ ೨೩೭

ಸ್ಮಟ್ಸರ ಶಿಲಾಪ್ರತಿಮೆ

ಕಾಮನವೆಲ್ತ್‌ನಲ್ಲಿ ಪ್ರಮುಖ ನಾಯಕರಲ್ಲೊಬ್ಬರಾಗಿದ್ದ ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರಲ್ಲಿ ತಮಗಿದ್ದ ವಿಶ್ವಾಸವನ್ನು ತೋರ್ಪಡಿಸಲು ಅವರ ಶಿಲಾ ಪ್ರತಿಮೆಯನ್ನು ವೆಸ್ಟ್ ಮಿನಿಸ್ಟರ್‌ನಲ್ಲಿಡಲಾಗುವುದೆಂದು ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ಹೇಳಿರುವರು.

ಭಾರತಕ್ಕೆ ಜೂಜಿನ ಕುದುರೆಗಳು

ಭಾರತದಲ್ಲಿ ಜೂಜಿನ ಕುದುರೆಗಳ ಮಾಲೀಕರಾದ ಶ್ರೀಮತಿ ಶಾರದ ಬ್ಯಾಂಕರ್‌ರವರು ಕೊಂಡುಕೊಂಡಿರುವ ೨ ಜೂಜಿನ ಕುದುರೆಗಳು ಸದ್ಯದಲ್ಲೇ ಭಾರತಕ್ಕೆ ಬರಲಿವೆ. ಆಕೆಯ ಬಳಿ ಈಗ ೩೦ ಕುದುರೆಗಳಿವೆ.

ಜುಲೈ ೮ನೇ ತಾ|| ಪಂಡಿತ ನೆಹರೂ ಮೈಸೂರಿಗೆ

ರಾಜ್ಯಾಂಗ ತಿದ್ದುಪಡಿಗೆ ರಾಷ್ಟ್ರಾಧ್ಯಕ್ಷರ ಸಹಿಯಾಯಿತು

ಕಾಂಗ್ರೆಸ್ಸಿಗರು ಸಲಹೆಗಾರರಾಗಕೂಡದು

ಪಂಜಾಬಿನಲ್ಲಿ ಮಂತ್ರಿಮಂಡಲ ರಾಜೀನಾಮೆಯಿತ್ತಿದೆ. ಸದ್ಯದಲ್ಲೇ ರಾಷ್ಟ್ರಾಧ್ಯಕ್ಷರು ರಾಜಶಾಸನವನ್ನು ಹೊರಡಿಸಿ ಗೌರ್ನರೇ ಸಲಹೆಗಾರರ ಸಹಾಯದೊಡನೆ ಆಡಳಿತ ನಡೆಸುವಂತೆ ಆಜ್ಞೆಮಾಡಲಿರುವರು.

ಕಾಂಗ್ರೆಸ್ಸಿಗರಾರು ಈ ಸಲಹೆಗಾರರ ಸ್ಥಾನವನ್ನು ಒಪ್ಪಿಕೊಳ್ಳಬಾರದೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರವರು ಹೇಳಿರುವರು.

ವಿವಾಹ ಮಹೋತ್ಸವ

ಮೈಸೂರು ಜೂನ್ ೧೮

ಆಹಾರ ಸಂಶೋಧನಾ ಕೇಂದ್ರದ ಡೈರೆಕ್ಟರು ಡಾ|| ವಿ. ಸುಬ್ರಮಣ್ಯಂರವರ ಪುತ್ರಿ ಶ್ರೀಮತಿ ಸುಲೋಚನ (ಬಿಯಲ್ ಕ್ಷಿ.) ಮತ್ತು ಕೊಯಮತ್ತೂರಿನ ಟೆಕ್ಸ್‌ಟೈಲ್‌ಅಡ್ವೈಸರ್ ಶ್ರೀ ಆರ್ ಪಂಚವದ ಅಯ್ಯರ್‌ರವರ ಪುತ್ರ ಸಿ. ಪಿ. ಸಟರಾಜ್‌ರವರ ವಿವಾಹ ಅತ್ಯಂತ ವೈಭವಪೂರಿತವಾಗಿ ಇಂದು ನಡೆಯಿತು ನಗರದ ಅನೇಕ ಗಣ್ಯವ್ಯಕ್ತಿಗಳು, ಅಧಿಕಾರಿಗಳು ಎಲ್ಲರೂ ಸಂಜೆ ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು.

ಮೈಸೂರು ಪುರಸಭಾ ಸದಸ್ಯ ಶ್ರೀ ಜಿ. ಆರ್. ರಂಗಸ್ವಾಮಯ್ಯನವರ ಪುತ್ರ ಶ್ರೀ ಆರ್. ಸತ್ಯನಾರಾಯಣರಿಗೂ ಶ್ರೀ ನಾಗಪ್ಪನವರ ಪುತ್ರಿ ಶ್ರೀಮತಿ ನಾಗಮ್ಮನವರಿಗೂ ನಿನ್ನೆ ವಿವಾಹ ನಡೆಯಿತು.

ಇಂಗ್ಲಿಷ್ ಯಾವಾಗಲೂ ಕಡ್ಡಾಯವಾಗಿ ಕಲಿಯಬೇಕಾಗಿದೆ

ಇಂಗ್ಲೀಷು ಭಾಷೆಯಿಂದ ಭಾರತವು ಪಡೆದಿರುವ ಪ್ರಯೋಜನವನ್ನು ಅದು ಮರೆಯಲಾರದು. ಇಂಗ್ಲಿಷ್ ಯಾವಾಗಲೂ ಕಡ್ಡಾಯವಾಗಿ ಕಲಿಯುವ ಭಾಷೆಯಾಗಿರುವುದೆಂದು ಭಾರತದ ವಿದ್ಯಾಮಂತ್ರಿ ಮೌಲಾನ ಆಜಾದರು ಲಂಡನ್ನಿನಲ್ಲಿ ಒಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿರುವರು.

ಬ್ರಿಟನ್ನಿಗೆ ಎಣ್ಣೆ ಸರಬರಾಯಿಯಿಲ್ಲ

ತನ್ನ ಉತ್ಪತ್ತಿಯಲ್ಲಿ ಶೇಕಡ ೫೦ರಷ್ಟನ್ನು ಸರ್ಕಾರಕ್ಕೆ ಕೊಡುವ ವಿಷಯದಲ್ಲಿ ಸರಿಯಾಗಿ ಉತ್ತರಕೊಡದಿದ್ದರೆ ಬ್ರಿಟನ್ನಿಗೆ ಎಣ್ಣೆ ಸರಬರಾಯಿಯನ್ನು ಪರ್ಷಿಯಾ ಸರ್ಕಾರ ನಿಲ್ಲಿಸುವ ಯೋಚನೆಯಲ್ಲಿದೆಯೆಂದು ಹೇಳಲಾಗಿದೆ.

ಟೈಪು ರೈಟರುಗಳು

೧೮೭೮ನೇ ಜೂನ್ ೨೩ನೇ ತಾರೀಖು ಅಮೆರಿಕಾದಲ್ಲಿ ಮೊದಲನೇ ಟೈಪ್ ರೈಟರ್ ತಯಾರಾಯಿತು. ಈಗ ಅಮೆರಿಕಾದಲ್ಲಿ ೨೮ ಕಂಪನಿಗಳು ಟೈಪ್ ರೈಟರ್‌ಗಳನ್ನು ತಯಾರಿಸುತ್ತಲಿವೆ. ೧೯೫೦ರಲ್ಲಿ ೮೫೦೦೦೦ ಮಿಷಿನ್‌ಗಳು ತಯಾರಾಗಿವೆ.

ಉಪಾಧ್ಯಾಯರ ವೇತನ

ಸಾಮಾನ್ಯವಾಗಿ ಅಮೆರಿಕಾದಲ್ಲಿ ಒಬ್ಬ ಉಪಾಧ್ಯಾಯನ ಸಂಬಳ. ವೇತನ ವರ್ಷಕ್ಕೆ ೩,೦೮೦ ಡಾಲರುಗಳು (ಅಂದರೆ ೧೪೭೬೦ ರೂಪಾಯಿಗಳು)

ಬದುಕಿರುವವರಿಗೆ ಜೈಕಾರ ಬೇಡ

ಜೈಕಾರವನ್ನು ನೀವು ಯಾರಿಗೆ ಮಾಡಿದಿರೋ ಅವರಿಗೆ ನೀವು ಈಗ ಕಪ್ಪು ಬಾವುಟವನ್ನು ತೋರಿಸುವಿರಿ. ನನಗಿಂತ ಉತ್ತಮರಾದವರು ಈಗ ಅಧಿಕಾರಸ್ಥಾನದಲ್ಲಿ ಕುಳಿತು ನಿಮ್ಮನ್ನು ವಂಚಿಸಿದರು. ನಾನೂ ಅಧಿಕಾರವನ್ನು ಪಡೆದರೆ ಯಾವರೀತಿಯಾಗುತ್ತೇನೋ? ಮಹಾತ್ಮ ಗಾಂಧಿ ಭಾರತ ಮಾತ್ರ ಇವರಿಗೆ ಜೈಕಾರ ಮಾಡಿ, ಬದುಕಿರುವ ಯಾವ ರಾಜಕಾರಣಿಗೂ ಜೈಕಾರ ಬೇಡ ಎಂದು ಆಚಾರ್ಯ ಕೃಪಲಾನಿಯವರು ಪಾಟ್ನಾದಲ್ಲಿ ಹೇಳಿರುವರು.

ಜಿಲ್ಲಾಬೋರ್ಡು ಸಭೆ

ಮೈಸೂರು ಜಿಲ್ಲಾಬೋರ್ಡು ಸಭೆಯು ಇದೇ ಮಾಹೆ ೨೯ನೇ ತಾ|| ಕಾರಾಪುರದಲ್ಲಿ ನಡೆಯುವುದು.

ಸಿ. ಆರ್. ಮದ್ರಾಸಿಗೆ

ಭಾರತ ಗೃಹ ಸಚಿವ ಶ್ರೀ ಸಿ. ಆರ್‌ರವರು ನಿನ್ನೆ ಮದ್ರಾಸಿಗೆ ಆಗಮಿಸಿದರು.

ಸೇನೆಗಳ ವಿಲೀನೀಕರಣ

ಮೈಸೂರು ಜೂನ್ ೧೮

ಶ್ರೀಮನ್ ಮಹಾರಾಜರ ಸ್ವಂತ ಪದಾತಿದಳ ಮತ್ತು ಬಾಡಿಗಾರ್ಡ್ ದಳಗಳನ್ನು ವಿಲೀನಮಾಡಿ ಇನ್ನು ಮುಂದೆ ಮೈಸೂರು ಪ್ಯಾಲೇಸ್ ಗಾರ್ಡ್ ಎಂದು ಒಂದೇ ಸೇನೆ ಆಗುವುದೆಂದು ಹೇಳಲಾಗಿದೆ

ಈಗ ಇರುವ ಈ ಎರಡು ದಳಗಳನ್ನೂ ಪರಿಶೀಲಿಸಿ ಸೂಕ್ತ ಸಲಹೆನೀಡಲು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು, ಐ. ಜಿ. ಪಿ.ಯವರು, ಹುಜೂರು ಸೆಕ್ರೆಟರಿಯವರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಸೂಪರಿನ್‌ಟೆನ್‌ಡೆಂಟರು, ಸ್ಟೇಷನ್ ಕಮಾಂಡೆಂಟರು, ಅಂಡರ್ ಸೆಕ್ರೆಟರಿ ಶ್ರೀ ವೆಂಕಟಕೃಷ್ಣರಾಯರು ಈದಿನ ಬೆಳಿಗ್ಗೆ ಎರಡು ಸೇನೆಗಳನ್ನೂ ಪರಿಶೀಲಿಸಿ ಪೂರ್ವಭಾವಿ ಮಾತುಕಥೆ ನಡೆಸಿದರು. ಇವರು ವರದಿಕೊಟ್ಟನಂತರ ಸರ್ಕಾರದವರು ಆಜ್ಞೆ ಹೊರಡಿಸುವರೆಂದು ಹೇಳಲಾಗಿದೆ

ವಿಶೇಷ ಪರಿಸ್ಥಿತಿ ಎಂದು ಘೋಷಿಸಿ

ಪೂರ್ವಪಂಜಾಬಿನ ಮುಖ್ಯ ಮಂತ್ರಿ ಶ್ರೀ ಭಾರ್ಗವಾರವರು ರಾಜೀನಾಮೆಯಿತ್ತಿರುವುದರಿಂದಲೂ ಮತ್ಯಾವಶಾಸನಸಭಾ ಸದಸ್ಯರೂ ಮಂತ್ರಿಮಂಡಲ ರಚಿಸಲು ಮುಂದೆ ಬಂದಿಲ್ಲವಾದುದರಿಂದ ರಾಷ್ಟ್ರಾಧ್ಯಕ್ಷರು ರಾಜ್ಯಾಂಗದ ೩೫೬ನೇ ಕಾನೂನಿನ ಪ್ರಕಾರ ಪಂಜಾಬಿಗೆ ವಿಶೇಷ ಪರಿಸ್ಥಿತಿ ಎಂದು ಘೋಷಿಸಬೇಕೆಂದು ಕೋರಿ ಅಲ್ಲಿನ ಗೌರ್ನರ್ ಶ್ರೀ ಚಂದೂಲಾಲ್ ತ್ರಿವೇದಿಯವರು ರಾಷ್ಟ್ರಾಧ್ಯಕ್ಷರಿಗೆ ಮನವಿ ಸಲ್ಲಿಸಿರುತ್ತಾರೆ.

ಮದ್ರಾಸಿನಲ್ಲಿ ೧೨ ಔನ್ಸ್ ಪಡಿತರ

ಮದ್ರಾಸ್ ಪ್ರಾಂತ್ಯದಲ್ಲಿ ಮುಂದಿನ ಭಾನುವಾರದಿಂದ ೧೨ ಔನ್ಸ್ ಪಡಿತರವನ್ನು ಕೊಡಲಾಗುವುದು, ಇದರಲ್ಲಿ ೮ ಔನ್ಸ್ ಅಕ್ಕಿ ಮತ್ತು ನಾಲ್ಕು ಔನ್ಸ್ ಇತರ ಧಾನ್ಯಗಳು.

ನೆಹರೂ ಮೈಸೂರಿಗೆ

ಸ್ವ.ಸು ಫೋನ್] ಬೆಂ ಜೂನ್ ೧೮

ಪಂಡಿತ ನೆಹರೂ ೮ನೇ ತಾರೀಖು ದೆಹಲಿಯಿಂದ ನೇರವಾಗಿ ಮೈಸೂರಿಗೆ ಆಗಮಿಸಿ, ಇಲ್ಲಿಂದ ಹಳೇಬೀಡು ಬೇಲೂರುಗಳಿಗೆ ಭೇಟಿಯಿತ್ತು, ಅನಂತರ ಬೆಂಗಳೂರಿಗೆ ತೆರಳುವರೆಂದು ತಿಳಿಯಬರುತ್ತದೆ.

ಅಂತರರಾಷ್ಟ್ರೀಯ ರೇಷ್ಮೆ ಸಮ್ಮೇಳನ

ಅಂತರರಾಷ್ಟ್ರೀಯ ರೇಷ್ಮೆ ಸಮ್ಮೇಳನವು ಮೈಸೂರಿನಲ್ಲಿ ನಡೆಯಲಿದೆ.

ಕ್ರಿಸೆಂಟ್ ಹೌಸಿನಿಂದ ಸೆಂಟ್ರಲ್ ಜೈಲಿಗೆ

ಶ್ರೀ ರಾಮಮನೋಹರ ಲೋಹಿಯಾರವರನ್ನು ಕ್ರಿಸೆಂಟ್ ಭವನದಿಂದ ಸೆಂಟ್ರಲ್ ಜೈಲಿಗೆ ರವಾನಿಸಲಾಗಿದೆ.

ಮಿಶ್ರಾರ ಭೇಟಿ

ಸೋಷಲಿಸ್ಟ್ ನಾಯಕ ಶ್ರೀ ರಮಾನಂದ ಮಿಶ್ರಾರವರು ನಾಳೆ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಭೇಟಿಮಾಡುವರು.

ರೈತರಿಗೂ ಜಮಾಲೀಕರಿಗೂ ಉಂಟಾಗಿರುವ ವಿವಾದವನ್ನು ಕೋರ್ಟಿನ ತೀರ್ಮಾನಕ್ಕೆ ಹೋಗುವುದು ಉತ್ತಮವೆಂದು ಶ್ರೀ ಮಿಶ್ರಾರವರು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವರು.

ಹುಬ್ಬಳ್ಳಿಬಳಿ ವಿಮಾನ ನಿಲ್ದಾಣ

೧೪ ಲಕ್ಷ ರೂಪಾಯಿಗಳ ವೆಚ್ಚದಿಂದ ಹುಬ್ಬಳ್ಳಿಯ ಬಳಿ ಭಾರತ ಸರ್ಕಾರವು ಒಂದು ವಿಮಾನನಿಲ್ದಾಣವನ್ನು ಸ್ಥಾಪಿಸಲಿದೆ.

ರಾಷ್ಟ್ರಾಧ್ಯಕ್ಷರ ಸಹಿ

ಪಾರ್ಲಿಮೆಂಟ್ ಮಾಡಿರುವ ರಾಜ್ಯಾಂಗ ತಿದ್ದುಪಡಿ ಮಸೂದೆಗೆ ರಾಷ್ಟ್ರಾಧ್ಯಕ್ಷರು ನಿನ್ನೆ ತಮ್ಮ ಸಹಿ ಹಾಕಿ ಒಪ್ಪಿಗೆಯನ್ನಿತ್ತಿರುವರು ನಿನ್ನೆಯಿಂದ ಈ ತಿದ್ದುಪಡಿ ಜಾರಿಗೆ ಬಂದಿದೆ.

ಸಮಾಚಾರ

ಮಂಗಳವಾರ ತಾರೀಖು ೧೯

ಮೈಸೂರು ಮಂತ್ರಿಮಂಡಲ ಬಿಕ್ಕಟ್ಟು

ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಮಂತ್ರಿಮಂಡಲ ಬಿಕ್ಕಟ್ಟು ಮತ್ತು ಐಕ್ಯತಾ ವಿಚಾರದಲ್ಲಿ ಮಾಡಿದ ಪ್ರಶ್ನೆಗೆ 'ಅಂತ್ಯವಿಲ್ಲದಂತೆ ಮುಂದುವರೆಯುತ್ತಿದ್ದ ಮಾತುಕಥೆಗಳು ನಿಂತಿವೆ. ಮತ್ತೆ ಪ್ರಾರಂಭವಾದರೂ ಆಗಬಹುದು' ಎಂದು ಹೇಳಿರುವರು

ಮೈಸೂರಿನ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗಿ ಅನೇಕ ತಿಂಗಳುಗಳಾದುವು. ಮಂತ್ರಿಮಂಡಲ ಬದಲಾವಣೆಯಾಗಬೇಕೆಂದು ಅನೇಕರು ಅನೇಕ ರೀತಿ ಪ್ರಯತ್ನಪಟ್ಟಿದ್ದಾಯಿತು. ಅನೇಕ ಸಾರಿ ಈ ವಿಷಯದಲ್ಲಿ ಚರ್ಚೆಗಳಾದುವು. ಬಿಸಿಬಿಸಿ ಮಾತುಕತೆ ಜರುಗಿದುವು. ಕೊನೆಗೆ ಏನೂ ಹೊರಬರಲಿಲ್ಲ. ಹಿಂದೆ ಶ್ರೀ ಹನುಮಂತಯ್ಯನವರು ಪತ್ರಿಕಾಗೋಷ್ಠಿಯಲ್ಲಿ ಮಂತ್ರಿಮಂಡಲದ ಬದಲಾವಣೆಗಿಂತ ಕಾಂಗ್ರೆಸ್ಸಿನ ಐಕ್ಯತೆಗೆ ಹೆಚ್ಚು ಗಮನಕೊಡಬೇಕೆಂದು ಹೇಳಿದ್ದರು ಈಗ ಮಂತ್ರಿಮಂಡಲದ ಮಾತುಕತೆ ನಿಂತಿದೆಯೆಂದು ಹೇಳಿರುವರು

ಈಗಿನ ದೇಶದ ಪರಿಸ್ಥಿತಿಯಲ್ಲಿ ಮಂತ್ರಿಮಂಡಲದಲ್ಲಿ ಕೆಲವು ಬದಲಾವಣೆಗಳಾದರೆ ಏನಾದರೂ ಜನರಿಗೆ ಪ್ರಯೋಜನವಾಗಬಹುದೆಂದು ಕೆಲವರು ಬದಲಾವಣೆಯನ್ನು ಸ್ವಾಗತಿಸುವರು. ಆದರೆ ಇನ್ನು ೬ ತಿಂಗಳೊಳಗಾಗಿ ಮಹಾ ಚುನಾವಣೆಗಳಾಗುವುವು. ಅನಂತರ ಸ್ವಾಭಾವಿಕವಾಗಿಯೇ ಮಂತ್ರಿಮಂಡಲದಲ್ಲಿ ಬದಲಾವಣೆಗಳಾಗುತ್ತವೆ ಈ ಅಲ್ಪ ಕಾಲದೊಳಗೆ ಬದಲಾವಣೆಗಳಾದರೆ ಜನತೆಗೆ ಏನೂ ಪ್ರಯೋಜನವಾಗುವುದಿಲ್ಲ. ಬಿಕ್ಕಟ್ಟು ಮುಕ್ತಾಯವಾದಂತಾಗುವುದಿಲ್ಲ. ದೇಶದ ನಾನಾ ಕಡೆಯಲ್ಲಿಯೂ ಕಾಂಗ್ರೆಸ್ ಸಂಸ್ಥೆಯ ವಿಷಯದಲ್ಲಿ ಜನರಿಗೆ ಪ್ರೀತಿ ವಿಶ್ವಾಸವಿದ್ದರೂ, ಕಾಂಗ್ರೆಸ್ಸಿಗರ ವಿಷಯದಲ್ಲಿ ಎಲ್ಲರ ಮನಸ್ಸು ಕಲುಷಿತವಾಗಿದೆ ಕಲುಷಿತವಾಗಿರುವ ಈ ಮನಸ್ಸನ್ನು ಹೋಗಲಾಡಿಸಲು ಕಾಂಗ್ರೆಸ್ಸಿಗರೆಲ್ಲರೂ ಒಗ್ಗಟ್ಟಿನಿಂದ ಸ್ವಾತಂತ್ರ್ಯ ಗಳಿಸುವುದಕ್ಕಾಗಿ ಯಾವ ರೀತಿ ಹೋರಾಡಿದರೋ ಅದನ್ನು ಮನನಮಾಡಿಕೊಂಡು ಕುಂದ ಹೋಗುತ್ತಲಿರುವ ಸಂಸ್ಥೆಯ ಗೌರವವನ್ನು ಕಾಪಾಡಲು ಬದ್ಧಕಂಕಣರಾಗಬೇಕು. ವ್ಯಕ್ತಿ,

ಐ. ಎನ್. ಟಿ. ಯು. ಸಿ. ಪ್ರಾಂತೀಯ ಸಮಿತಿ

ಪ್ರಾಂತೀಯ ಐ. ಎನ್. ಟಿ. ಯು. ಸಿ ಯ ಕಾರ್ಯಕಾರಿ ಸಮಿತಿಯು ನಿನ್ನೆ ನೇಮಕವಾಯಿತು. ಶ್ರೀಗಳಾದ ಎನ್. ಕೇಶವಯ್ಯಂಗಾರ್, (ಅಧ್ಯಕ್ಷರು) ಡಿ. ವೆಂಕಟೇಶ್, ಕೆ. ಪುಟ್ಟಸ್ವಾಮಿ, ಮತ್ತು ಸಿ. ಜಿ ದೇವನಾಥ್ ಉಪಾಧ್ಯಕ್ಷರು, ಶ್ರೀಗಳಾದ ಎ. ರಾಮಣ್ಣ, ಕೇಶವ ಕುಲಕರ್ಣಿ, ಕಾರ್ಯದರ್ಶಿಗಳು, ಶ್ರೀ ಎಲ್ ರಾಮಯ್ಯ ಖಜಾಂಚಿ.

ಜನಾಬ್ ಅಬೀದ್ ಅಲಿ

ಪ್ರಾಂತೀಯ ಐ ಎನ್. ಟಿ ಯು ಸಿ. ಸಮ್ಮೇಳನ ಉದ್ಘಾಟಿಸಲು ಆಗಮಿಸಿದ್ದ ಜನಾಬ್ ಅಬೀದ್ ಅಲಿ ಜಾಫರ್ ಬಾಯಿಯವರು ನಿನ್ನೆ ಮಧ್ಯಾಹ್ನ ಗುಂತಕಲ್ಲು ಮಾರ್ಗವಾಗಿ ಬೊಂಬಾಯಿಗೆ ತೆರಳಿದರು.

ಕೋಮು, ಅಧಿಕಾರ ಮುಂತಾದುವುಗಳಿಗೆ ಗಮನಕೊಡದೆ, ಸ್ವಾರ್ಥರಹಿತರಾಗಿ ದೇಶಾಭ್ಯುದಯವೇ ತಮ್ಮ ಧ್ಯೇಯವಾಗಿಟ್ಟುಕೊಂಡು ಸೇವೆಯನ್ನೆಸಗುವವರನ್ನೇ ಮುಂಬರುವ ಚುನಾವಣೆಗೆ ಉಮೇದುವಾರರನ್ನಾಗಿ ನಿಲ್ಲಿಸಿ ಸಂಸ್ಥೆಯನ್ನು ಶುದ್ಧಿಕರಿಸಿ, ಸಂಸ್ಥೆಯಲ್ಲಿ ಐಕ್ಯತೆಯನ್ನುಂಟುಮಾಡುವುದನ್ನೇ ಪ್ರಥಮ ಕರ್ತವ್ಯವೆಂದು ತಿಳಿದು ಮುಂದಿನಕಾರ್ಯವನ್ನೆಸಗಬೇಕಾಗಿದೆಯೇ ವಿನಹ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗಿದೆಯೆಂದು ಮಂತ್ರಿಮಂಡಲ ಬದಲಾವಣೆಯನ್ನೇ ಮುಖ್ಯ ಕರ್ತವ್ಯವೆಂದು ಅದಕ್ಕಾಗಿ ಶ್ರಮಿಸುವುದು ವ್ಯರ್ಥವ್ಯರ್ಥವೇ ವಿನಹಾ ಮತ್ತೆ ಬೇರೆಯಲ್ಲ ಮಂತ್ರಿಮಂಡಲ ಬದಲಾವಣೆ ವಿಷಯದಲ್ಲಿ ಮಾತುಕತೆ ಇಲ್ಲಿಗೇ ಮುಕ್ತಾಯವಾಗಲಿ.

ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಫೆಡರೇಷನ್

ತಾ|| ೧೬-೬-೫೧ನೇ ಶನಿವಾರ ಮೋಟಾರು ಕೆಲಸಗಾರರ ಕಾರ್ಮಿಕ ಸಚಿವರಾದ ಮಾನ್ಯ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಾಡಿದ ನಿರ್ಣಯಗಳು—

1] ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಮೋಟಾರು ಕೆಲಸಗಾರರ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸಲು ಸಂಸ್ಥಾನದ ಎಲ್ಲಾ ಕಾರ್ಮಿಕ ಸಂಯುಕ್ತ ಸಂಸ್ಥೆಯೊಂದು ಅಗತ್ಯವೆಂದು ಇಂದು [illegible] "ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಫೆಡರೇಷನ್" ಒಂದನ್ನು ಸ್ಥಾಪಿಸತಕ್ಕದೆಂದು ತೀರ್ಮಾನಿಸುತ್ತದೆ.

2] ಈ ಫೆಡರೇಷನ್ನಿಗೆ ಎಲ್ಲಾ ಮೋಟಾರು ಕೆಲಸಗಾರರ ಸಂಘಗಳನ್ನು ಅಫಿಲಿಯೇಟ್ ಮಾಡಿಸಿ ಒಂದು ಸಮಿತಿಯನ್ನು ರಚಿಸಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಶ್ರೀಗಳಾದ ಸಿ. ಜಿ. ದೇವನಾಥ್, ಟಿ. ಎಸ್. ಸುಬ್ಬಣ್ಣ, ಎಂ. ಸಿ. ವಗ್ಗಪ್ಪ, ಹಾರನಹಳ್ಳಿ ರಾಮಸ್ವಾಮಿ, ರಂಗಸ್ವಾಮಿ, ಜಿ ಜಾರ್ಜ್, ಮತ್ತು ಎಂ. ಕೆ. ನಂಜುಂಡಯ್ಯ ಇವರನ್ನೊಳಗೊಂಡ ಸಮಿತಿಯನ್ನು ರಚಿಸಿ ಈ ಸಮಿತಿಗೆ ಅಧಿಕಾರವನ್ನು ಕೊಡುತ್ತದೆ

ಸಂಪಾದಕರು ಪ್ರಕಾಶಕರು :—ಜೆ ಎಲ್ ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಸಿ. ಕಾ. ಸುಬ್ಬರಾವ್, ಮೋಹನ್ ಮುದ್ರಣಾಲಯ ಮೈಸೂರು.

ಐ. ಎನ್. ಟಿ. ಯು. ಸಿ. ಸಮ್ಮೇಳನ

ಮೈಸೂರು ಜೂನ್ ೧೮

ನಿನ್ನೆ ನಡೆದ ಐ. ಎನ್. ಟಿ ಯು. ಸಿ ಸಮ್ಮೇಳನದಲ್ಲಿ ಈ ಕೆಳಗಿನಂತೆ ನಿರ್ಣಯಗಳಾದವು.—

1] ಸರ್ಕಾರಿ ಕೈಗಾರಿಕಾ ಸಂಸ್ಥೆಗಳ ಕೆಲಸಗಾರರಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿಮಾಡಲು ಶ್ರೀಗಳಾದ ಎನ್. ಕೇಶವಯ್ಯಂಗಾರ್- ಎ. ರಾಮಣ್ಣ, ಮತ್ತು ಕೇಶವ ಕುಲಕರ್ಣಿಯವರನ್ನೊಳಗೊಂಡಿರುವ ಸಮಿತಿ ರಚನೆಯಾಯಿತು

2] ಸರ್ಕಾರಿ ಕೈಗಾರಿಕಾ ಸಂಸ್ಥೆಗಳನ್ನು ಖಾಸಗಿಯವರಿಗೆ ವಹಿಸಕೂಡದೆಂದು ತೀರ್ಮಾನವಾಯಿತು

3] ಕೈಗಾರಿಕಾ ಕೋರ್ಟುಗಳ ಕೆಲಸವು ನಿಧಾನವಾಗಿ ನಡೆಯುತ್ತಲಿರುವುದನ್ನು ಸರ್ಕಾರವು ತಪ್ಪಿಸಿ ಜಾಗ್ರತೆ ಕೆಲಸನಡೆಯುವಂತೆ ಏರ್ಪಡಿಸಬೇಕು.

4] ಕೈಗಾರಿಕಾ ನ್ಯಾಯಾಲಯಗಳ ತೀರ್ಪಿನಮೇಲೆ ಇತರ ಕೋರ್ಟುಗಳ ವ್ಯಾಪ್ತಿಯಿರಕೂಡದು

5] ಮೈಸೂರು ಸಂಸ್ಥಾನದಲ್ಲಿರುವ ಕಾಫೀ, ಟೀ ತೋಟಗಳಲ್ಲಿಯ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರ ತ್ವರಿತ ಕಾರ್ಯಕ್ರಮ ತೆಗೆದುಕೊಳ್ಳಬೇಕು

6] ಜವಳಿ ಗಿರಣಿಗಳಲ್ಲಿ ಕಾರ್ಮಿಕರ ಕನಿಷ್ಠ ಸಂಬಳವನ್ನು ಜಾಗ್ರತೆ ನಿಷ್ಕರ್ಷೆ ಮಾಡಬೇಕು

7] ಮೈಸೂರು ಸರ್ಕಾರದ ಲೇಬರ್ ಇಲಾಖೆಯು ಪ್ರಕಟಿಸುತ್ತಲಿರುವ ಅಂಕಿ ಅಂಶಗಳು ದೋಷಪೂರಿತವಾಗಿವೆ ಸರಿಯಾದ ಅಂಕೆ ಅಂಶಗಳು ಪ್ರಕಟವಾಗುವಂತೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು

8] ಸರ್ಕಾರ ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ತುಟ್ಟಿಭತ್ಯವನ್ನು ಹೆಚ್ಚಿಸಬೇಕೆಂಬ ಕೋರಿಕೆಯನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕು.

ರಷ್ಯಾ ಗೋಧಿ

ಕಲ್ಕತ್ತಾಕ್ಕೆ ಮೊದಲನೇ ಬಾರಿ ರಷ್ಯಾದಿಂದ ೭೩೦೯ ಟನ್ ಗೋಧಿ ಆಗಮಿಸಿದೆ ಭಾರತಕ್ಕೆ ಆಹಾರವನ್ನು ತಂದ ಹಡಗುಗಳಲ್ಲಿ ಇದು ಮೂರನೆಯದು.

ರಣಜಿತ್

೧೫—೬—೫೧ರಿಂದ

ಅಮೋಘವಾದ ೨ನೇ ವಾರ

‡ ವಿನಾನಾ, ‡ ರಹಿಮಾನ್,

‡ ಕಪೂರ್ ನಟಿಸಿರುವ

-:: ರಾಜಾ-ರಾಣಿ ::-

ಬ್ರಿಟನ್ನಿನಲ್ಲಿ ಇರಾಕಿ ಪತ್ರಿಕೋದ್ಯೋಗಿಗಳು

ಇರಾಕಿ ಪತ್ರಿಕೋದ್ಯೋಗಿಗಳ ಪ್ರತಿನಿಧಿಗಳು ಬ್ರಿಟಿಷ್ ವಿದೇಶಾಂಗ ಕಛೇರಿಯ ಅತಿಥಿಗಳಾಗಿ ಬ್ರಿಟನ್ ಅದ್ಯಂತ ಪ್ರವಾಸ ಕೈಗೊಂಡಿದ್ದರು ಬ್ರಿಟಿಷ್ ಜನರ ಜೀವನಸ್ಥಿತಿ, ಅನೇಕ ಕೈಗಾರಿಕಾ ಕೇಂದ್ರ, ಪಾಠಶಾಲೆಗಳು, ಎಸ್ಟೇಟ್ಟುಗಳನ್ನು ಇವರು ಪರಿಶೀಲಿಸಿದರು. ಈ ಪ್ರತಿನಿಧಿಗಳು ದಕ್ಷಿಣ ವೇಲ್ಸ್‌ನಲ್ಲಿ ಎಣ್ಣೆ ಕೇಂದ್ರವನ್ನು ಪರಿಶೀಲಿಸುತ್ತಲಿರುವ ದೃಶ್ಯ.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೬

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೬—೧೯೫೧ ಬುಧವಾರ [ಸಂಚಿಕೆ ೨೩೯

ರಾಜ್ಯಾಂಗ ತಿದ್ದುಪಡಿ ನ್ಯಾಯಬದ್ಧವಲ್ಲ

ಭಾರತ ರಾಜ್ಯಾಂಗಕ್ಕೆ ಈಗಿನ ಪಾರ್ಲಿಮೆಂಟು ತಿದ್ದುಪಡಿ ಮಾಡಲು ಹಕ್ಕಿಲ್ಲ. ಈಗ ಮಾಡಿರುವ ತಿದ್ದುಪಡಿ ನ್ಯಾಯಬದ್ಧವಲ್ಲವೆಂದು ೧೦ ಜನ ಜಮೀನ್ದಾರರು ಸುಪ್ರೀಂ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವರು.

ಬಲಾತ್ಕಾರ ವಶ

ಆಂಗ್ಲೋ ಇರಾನಿಯನ್ ಕಂಪೆನಿಯವರು ಎಣ್ಣೆ ಕೇಂದ್ರಗಳನ್ನು ವಶಪಡಿಸದಿದ್ದಲ್ಲಿ ಸಲಕರಣೆಗಳನ್ನೆಲ್ಲಾ ಬಲಾತ್ಕಾರವಾಗಿ ವಶಪಡಿಸಿಕೊಳ್ಳಲಾಗುವುದು. ಈಗಿನ ಎಣ್ಣೆ ತಯಾರಿಕೆಯಲ್ಲಿ ಕಾಲುಭಾಗವನ್ನು ಪರ್ಷಿಯಾ ತಯಾರಿಸಿದರೆ ಸಾಕೆಂದು ಹೇಳಿರುವರು.

ಮದರಾಸು ಕಾಲೇಜುಗಳಲ್ಲಿ 'ಮೆರಿಟ್'ಗೆ ಪ್ರಾಮುಖ್ಯತೆ

ಡಾ|| ಲೋಹಿಯಾ ದಸ್ತಗಿರಿಗಾಗಿ ಲಂಡನ್ ಮತ್ತು ನ್ಯೂಯಾರ್ಕ್‌ಗಳಲ್ಲಿ ಪ್ರತಿಭಟನಾ ಸಭೆ?

ಪಶುವೈದ್ಯಶಾಲಾ ಪ್ರಾರಂಭೋತ್ಸವ

ಮೈಸೂರು ಜೂನ್ ೧೯

ಚಾಮುಂಡೀ ಬಡಾವಣೆಯಲ್ಲಿ ಕಟ್ಟಿರುವ ಧರ್ಮಪ್ರವರ್ತಕ ಶ್ರೀ ಬಿ. ಸುಬ್ಬಣ್ಣನವರ ಪಶುವೈದ್ಯಶಾಲಾ ಪ್ರಾರಂಭೋತ್ಸವವನ್ನು ರೆವಿನ್ಯೂ ಮಂತ್ರಿ ಶ್ರೀ ಹೆಚ್. ಸಿದ್ದಯ್ಯನವರು ನಾಳಿದ್ದು ಬೆಳಗ್ಗೆ ೯ ಗಂಟೆಗೆ ನಡೆಸುವರು.

ಭಾರತ ನೀತಿ

ಚೈನಾಕ್ಕೆ ಯುದ್ಧ ಉಪಯುಕ್ತವಾದ ವಸ್ತುಗಳ ರವಾನೆ ಕೂಡದೆಂದು ಪಶ್ಚಿಮ ಸಂಸ್ಥೆಯ ನಿರ್ಣಯದ ವಿಷಯವಾಗಿ ಭಾರತದ ನೀತಿಯೊಂದು ಹೊರಬಿದ್ದಿದೆ. ಭಾರತಕ್ಕೆ ಬೇಕಾಗುವ ವಸ್ತುಗಳನ್ನೆಲ್ಲಾ ಪರರಾಷ್ಟ್ರಗಳಿಂದ ತರಿಸಿಕೊಳ್ಳಲಾಗುತ್ತಲಿದೆ. ಪರರಾಷ್ಟ್ರಗಳಿಗೆ ಕಳುಹಿಸಬಹುದಾದ ಯುದ್ಧ ಉಪಯುಕ್ತ ವಸ್ತುಗಳು ನಮ್ಮಲ್ಲಿಲ್ಲ. ದೇಶೀಯ ವಸ್ತುಗಳ ಮೇಲೆ ಯಾವ ರೀತಿ ನಿರ್ಬಂಧವೂ ಇಲ್ಲ. ಆದರೆ ಇವುಗಳಿಗೆ ಬೇಡಿಕೆ ಬಂದಿಲ್ಲ. ಆದ್ದರಿಂದ ಈ ನಿರ್ಣಯವು ಭಾರತಕ್ಕೆ ಅನ್ವಯಿಸುವುದಿಲ್ಲ.

೧೦೦೦ ಚದುರ ಮೈಲಿ ನೀರಿನಲ್ಲಿ

ಅಸ್ಸಾಂ ದಿಬ್ರೂಘರ್ ಪ್ರದೇಶದಲ್ಲಿ ೧೦೦೦ ಚದುರ ಮೈಲಿ ಭೂಮಿ ವಿಶೇಷ ಮಳೆಯಿಂದ ನೀರಿನಲ್ಲಿ ಮುಳುಗಿಹೋಗಿದೆ

ಹಡಗು ಕೆಲಸಗಾರರ ಮುಷ್ಕರ

ಅಮೆರಿಕಾದಲ್ಲಿ ಪ್ರಾರಂಭವಾಗಿರುವ ಹಡಗು ಕೆಲಸಗಾರರ ಮುಷ್ಕರದಿಂದ ಭಾರತಕ್ಕೆ ಆಹಾರ ರವಾನೆಗೆ ಏನೂ ಅಡಚಣೆಯುಂಟಾಗುವುದಿಲ್ಲವೆಂದು ಹೇಳಲಾಗಿದೆ.

ಹೆಸರು ಬದಲಾವಣೆ

ಲೋಕಲ್ ಫಂಡು ಅಕೌಂಟ್ಸ್ ಎಕ್ಸಾಮಿನರನ್ನು ಇನ್ನು ಮುಂದೆ 'ಕಂಟ್ರೋಲರ್, ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್' ಎಂದು ಕರೆಯಲಾಗುವುದೆಂದು ಮೈಸೂರು ಸರ್ಕಾರ ಪ್ರಕಟಿಸಿದೆ.

ಮದ್ರಾಸ್ ಸರ್ಕಾರವು ಅಲ್ಲಿನ ಮೆಡಿಕಲ್, ಇಂಜನಿಯರಿಂಗ್, ವ್ಯವಸಾಯ ಮತ್ತು ಪಶು ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದೆ. ಮೆಡಿಕಲ್ ಇಂಜನಿಯರಿಂಗ್ ಮತ್ತು ಇತರ ಕಾಲೇಜುಗಳಿಗೆ ಸೀಟುಕೊಡುವ ವಿಷಯಕ್ಕೆ ಆಂಧ್ರ ತಮಿಳುನಾಡು ಮತ್ತು ಅಣ್ಣಾಮಲೈ ವಿಶ್ವವಿದ್ಯಾನಿಲಯಗಳ ಉಪಸ್ಥಾನಪತಿಗಳ ಅಧ್ಯಕ್ಷತೆಯಲ್ಲಿ ಪ್ರತ್ಯೇಕವಾದ ೩ ಸಮಿತಿಗಳನ್ನು ರಚಿಸಲಾಗಿದೆ.

ಈ ಸಮಿತಿ ಅರ್ಜಿ ಹಾಕಿರುವ ವಿದ್ಯಾರ್ಥಿಯು ಇಂಟರ್ ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಿ, ಆಟಪಾಟಗಳಲ್ಲಿನ ಪಾತ್ರ ಮತ್ತು ವಿಶೇಷ ವೃತ್ತಿಗಳನ್ನು ಗಮನಿಸುವುದು.

ಮೇಲ್ಕಂಡ ಕಾಲೇಜುಗಳಲ್ಲಿ ಶೇಕಡ ೧೫ ಸ್ಥಾನಗಳನ್ನು ಹಿಂದುಳಿದ ಪಂಗಡದವರಿಗೂ, ಶೇಕಡ ೨೫ ಸೀಟುಗಳನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮಾಪಿಳ್ಳೆ, ಮತಾಂತರ ಹೊಂದಿದ ಕ್ರೈಸ್ತರು ಇವರೇ ಮುಂತಾದವರಿಗೆ ಮೀಸಲಾಗಿಡಲಾಗುವುದು.

ಇನ್ನುಳಿದ ಸೀಟುಗಳನ್ನು ಮೆರಿಟ್‌ಗೆ ಅನುಗುಣವಾಗಿ ಹಂಚಲಾಗುವುದು. ಈ ವಿಧಾನದಿಂದ ೨೦ ವರ್ಷಗಳಿಂದ ಜಾರಿಯಲ್ಲಿದ್ದ ಕೋಮುವಾರು ನೀತಿಯು ಕೊನೆಗಾಣುವುದು. ವೈದ್ಯಕೀಯ ಕಾಲೇಜುಗಳಲ್ಲಿ ಶೇಕಡ ೨೦ ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿದೆ.

ಸರ್ಕಾರಿ ನೌಕರರಿಗೆ ನೀತಿಯ ವಿಷಯದಲ್ಲಿಯೂ ಹೊಸ ಆಜ್ಞೆಯು ಹೊರಬೀಳುವುದೆಂದು ಸಚಿವ ಶ್ರೀ ಭಕ್ತವತ್ಸಲಂ ತಿಳಿಸಿದ್ದಾರೆ.

ದೆಹಲಿಗೆ ಸಚಿವರುಗಳು

ಸಂಸ್ಥಾನದ ಅಭಿವೃದ್ಧಿ ಯೋಜನೆಗಳನ್ನು ಕೇಂದ್ರ ಆಯೋಜನಾಮಂಡಲಿಯ ಸದಸ್ಯರೊಡನೆ ಚರ್ಚಿಸಿ ನಿರ್ಧಾರವನ್ನು ಮಾಡಿಕೊಳ್ಳಲು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ದೆಹಲಿಗೆ ಇಂದು ತೆರಳಿ ೨೬ನೇ ತಾ|| ಗೆ ವಾಪಸ್ಸು ಬರುವರು.

ಶ್ರೀ ಕೆ. ಶ್ರೀನಿವಾಸನ್ ರೆವಿನ್ಯೂ ಕಮೀಷನರ್

ಸ್ವಂತ ಫೋನ್] ಬೆಂ. ಜೂನ್ ೧೯

ಶ್ರೀ ಕೆ. ಶ್ರೀನಿವಾಸನ್‌ರವರು ರೆವಿನ್ಯೂ ಕಮೀಷನರಾಗಿಯೂ, ಜ|| ಮಿರ್ ಸಫ್ದರ್ ಹುಸೇನ್‌ರವರು ಎಕ್ಸೈಸ್ ಕಮೀಷನರಾಗಿಯೂ ನೇಮಕವಾಗಿದ್ದಾರೆ.

ಗ್ರಾಮಾಭಿವೃದ್ಧಿ ಕಮೀಷನರ್ ಮತ್ತು ಸಹಕಾರಸಂಘಗಳ ರಿಜಿಸ್ಟ್ರಾರ್ ಶ್ರೀ ಎಸ್. ಎಸ್. ಹಿರಿಯಣ್ಣಯ್ಯನವರನ್ನು ಬೆಂಗಳೂರು ಕಾರ್ಪೊರೇಷನ್ ಕಮಿಷನರಾಗಿಯೂ, ರಜದ ಮೇಲಿರುವ ಶ್ರೀ ಕೆ. ತಿಪ್ಪೇರುದ್ರಯ್ಯನವರನ್ನು ಗ್ರಾಮಾಭಿವೃದ್ಧಿ ಕಮೀಷನರಾಗಿಯೂ ನೇಮಿಸಿ ಸರ್ಕಾರಿ ಆಜ್ಞೆ ಹೊರಬಿದ್ದಿದೆ.

ಮಿಶ್ರಾ-ರೆಡ್ಡಿ ಭೇಟಿ

ಸೋಷಲಿಸ್ಟ್ ನಾಯಕ ಶ್ರೀ ರಮಾನಂದ ಮಿಶ್ರಾರವರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಭೇಟಿಮಾಡಿ ಕಾಗೋಡಿನ ವಿಷಯದಲ್ಲಿ ಮಾತುಕಥೆ ನಡೆಸಿದರು. ಟೆನೆನ್ಸಿ ಬಿಲ್ ಜಾರಿಗೆ ಬರುವವರೆವಿಗೆ ರೈತರ ಹಿತ ಕಾಪಾಡಲು ಕೂಡಲೇ ಒಂದು ಆರ್ಡಿನೆನ್ಸ್ ಹೊರಡಿಸಬೇಕೆಂದು ಶ್ರೀ ಮಿಶ್ರಾ ಸಲಹೆಯಿತ್ತರೆಂದು ಹೇಳಲಾಗಿದೆ. ಇಂದು ಮಂತ್ರಿಮಂಡಲದ ಸಭೆಯಲ್ಲಿಯೂ ಕಾಗೋಡಿನ ಪರಿಸ್ಥಿತಿ ಚರ್ಚಿಸಲಾಯಿತು.

ಶ್ರೀ ಮಿಶ್ರಾರವರು ನಾಳೆ ಬೆಳಗ್ಗೆ ಸಾಗರಕ್ಕೆ ತೆರಳಿ ೨೩ ನೇ ತಾ|| ಬೆಂಗಳೂರಿಗೆ ಬಂದು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಪುನಃ ಭೇಟಿಮಾಡುವರು.

ಪ್ರತಿಭಟನಾ ಸಭೆ

ಡಾ|| ರಾಮಮನೋಹರಲೋಹಿಯಾರವರನ್ನು ಕಾಗೋಡಿನಲ್ಲಿ ದಸ್ತಗಿರಿ ಮಾಡಿದ್ದಕ್ಕೆ ಲಂಡನ್ ಮತ್ತು ನ್ಯೂಯಾರ್ಕ್‌ಗಳಲ್ಲಿ ಪ್ರತಿಭಟನಾಸಭೆ ನಡೆಯುವುದೆಂದು ಹೇಳಲಾಗಿದೆ.

ರೈಲ್ವೇ ಮುಷ್ಕರ ಬೇಡ

ಕೋಟ್ಯಾಂತರ ಜನರ ಹಿತಕ್ಕೆ ಧಕ್ಕೆ ತರುವ ರೈಲ್ವೇ ಮುಷ್ಕರವನ್ನು ಮಾಡಬಾರದೆಂದು ಕಾರ್ಮಿಕ ಸಚಿವ ಶ್ರೀ ಜಗಜೀವನ್‌ರಾಂ ಹೇಳಿರುವರು.

ಶ್ರೀಮನ್ ಮಹಾರಾಜರ ಕಾರ್ಯಕ್ರಮ

ಸ್ವಂತ ಫೋನ್] ಬೆಂ. ಜೂನ್ ೧೯

ಶ್ರೀಮನ್ ಮಹಾರಾಜರು ಇದೇ ೨೫ನೇ ತಾ|| ಬೆಂಗಳೂರಿನಲ್ಲಿ ಪ|| ಶ್ರೀ ಚಾಮರಾಜೇಂದ್ರರ ನಾಮಾಂಕಿತ ಆಸ್ಪತ್ರೆಯ ಆರಂಭೋತ್ಸವವನ್ನು, ೨೬ನೇ ತಾ|| ಶಂಕರಪುರದಲ್ಲಿ ವೇದಪಾಠಶಾಲೆಯ ಆರಂಭೋತ್ಸವವನ್ನು ನೆರವೇರಿಸಿ ೨೭ನೇ ತಾ|| ಮೈಸೂರಿಗೆ ವಾಪಸ್ ಬರುವರು.

ಶ್ರೀ. ಕೆ. ಟಿ. ಭಾಷ್ಯಂ

ಮೈಸೂರು ಜೂನ್ ೧೯

ನ್ಯಾಯಾಂಗ ಸಚಿವ ಶ್ರೀ. ಕೆ. ಟಿ. ಭಾಷ್ಯಂರವರು ನಿನ್ನೆ ಸಂಜೆ ಊಟಿಯಿಂದ ರಾಜಧಾನಿಗೆ ಆಗಮಿಸಿ, ಇಂದು ಬೆಳಗ್ಗೆ ಶ್ರೀ ಮನ್ಮಹಾರಾಜರನ್ನು ಭೇಟಿಮಾಡಿ, ಬೆಂಗಳೂರಿಗೆ ತೆರಳಿದರು.

ವಿಶೇಷ ಅಧಿವೇಶನ

ಮೈಸೂರು ಜೂನ್ ೧೯

ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ೨೨ನೇ ತಾರೀಖು ನಡೆಯಲಿದೆ. ಮೈಸೂರು ಬ್ಯಾಂಕಿನಲ್ಲಿ ಪೌರಸಭೆಯು ೫ ಲಕ್ಷ ರೂಪಾಯಿಗಳ ಓವರ್ ಡ್ರಾಫ್ಟ್ ಪಡೆಯುವುದು, ಮಾರ್ಕೆಟ್ಟುಗಳಲ್ಲಿ ಜಾಡಿಗೆ, ಮೈಸೂರು ನಗರವನ್ನು ವಾರ್ಡುಗಳನ್ನಾಗಿ ವಿಭಾಗಿಸುವುದು ಮತ್ತು ಹೋಟೆಲ್ ಲೈಸನ್ಸ್ ಹೆಚ್ಚಿಸಲು ಬಂದಿರುವ ತಕರಾರು ಅರ್ಜಿ ಮುಂತಾದ ವಿಷಯಗಳ ಪರಿಶೀಲನೆ ನಡೆಯುವುದು.

ಪರ್ಷಿಯಾದ ಹಣಕಾಸಿನ ಸಚಿವರ ರಾಜೀನಾಮೆ

ಟೆಹರಾನಿನಲ್ಲಿರುವ ಬ್ರಿಟನ್ನಿನ ರಾಯಭಾರಿಯವರು ನಿನ್ನೆ ದಿನ ಪರ್ಷಿಯಾದ ಷಾರವರನ್ನು ಭೇಟಿಮಾಡಿದ್ದರು. ಪರ್ಷಿಯಾದ ಎಣ್ಣೆ ಕಂಪನಿಗಳಿಂದ ಬರುವ ಆದಾಯದ ಮುಕ್ಕಾಲು ಭಾಗವನ್ನು ಪರ್ಷಿಯಾಕ್ಕೆ ಕೊಡಬೇಕೆಂದು ಬ್ರಿಟನ್ನನ್ನು ಕೇಳಿದ್ದು ಕ್ಯಾಬಿನೆಟ್ಟಿನ ಉತ್ತರವನ್ನು ರಾಯಭಾರಿ ಕೊಟ್ಟಿರುವರೆಂದು ಹೇಳಲಾಗಿದೆ. ಈ ಮಧ್ಯೆ ಪರ್ಷಿಯಾದ ಹಣಕಾಸಿನ ಸಚಿವ ಡಾ|| ವರ್ಷೇನರಾಸ್ತೇ ರಾಜೀನಾಮೆಯನ್ನು ಕೊಟ್ಟಿರುವರು.

ಪತ್ರಿಕೆಗಳ ಪ್ರತಿಭಟನಾ ಮುಷ್ಕರ

ಭಾವಲ್‌ಪುರದ ವಾರ ಪತ್ರಿಕೆಗಳ ಪ್ರಕಟಣೆಗೆ ಸರ್ಕಾರವು ಅಡ್ಡಿ ಹಾಕಿರುವುದನ್ನು ಪ್ರತಿಭಟಿಸಿ ಪಾಕಿಸ್ತಾನದ ಎಲ್ಲಾ ಪತ್ರಿಕೆಗಳೂ ಒಂದು ದಿನ ಸಾಂಕೇತಿಕ ಮುಷ್ಕರ ಹೂಡುವುದು.

ಗಣಿಯೇ ಉರಿಯುತ್ತಲಿದೆ

ಅಫ್ಘಾನಿಸ್ಥಾನದಲ್ಲಿ ಒಂದು ಕಲ್ಲಿದ್ದಲಿನ ಗಣಿಯು ಒಂದು ವಾರದಿಂದ ಏಕಪ್ರಕಾರವಾಗಿ ಉರಿಯುತ್ತಲಿದೆ. ಬೆಂಕಿಯನ್ನು ಆರಿಸಲು ಅಮೆರಿಕದ ಗಣಿ ಪ್ರವೀಣರು ವಿಮಾನದಲ್ಲಿ ಆಗಮಿಸಿರುವರು. ೧ ವಾರದೊಳಗೆ ಬೆಂಕಿಯನ್ನು ಅವರು ಆರಿಸುವರು.

ಅರ್ಜಿ ನಾಳೆ ಪರಿಶೀಲನೆ

ಕಾರಣವನ್ನು ಕೊಡದೆ ತಮ್ಮನ್ನು ಬಂಧಿಸಿರುವುದು ನ್ಯಾಯಬದ್ಧವಲ್ಲವೆಂದೂ ರಾಜ್ಯಾಂಗಶಾಸನದಲ್ಲಿ ವ್ಯಕ್ತಪಡಿಸಿರುವ ಮೂಲಭೂತ ಹಕ್ಕುಗಳಿಗೆ ಈ ಬಂಧನದಕ್ಕೆ ತರಲಿದೆಯೆಂದು ಡಾ|| ಲೋಹಿಯಾರವರು ಮೈಸೂರು ಹೈಕೋರ್ಟಿನಲ್ಲಿ ಸಲ್ಲಿಸಿರುವ ಅರ್ಜಿಯು ನಾಳೆ ಪರಿಶೀಲನೆಗೆ ಬರುವುದು.

ಪಾಕೀಸ್ತಾನದಲ್ಲಿ ನಡೆದ ರೈಲ್ವೇ ಅಪಘಾತ

ಪಾಕೀಸ್ತಾನಕ್ಕೆ ಮುನ್ನೂರು ಮೈಲಿ ದೂರದಲ್ಲಿ ನಡೆದ ರೈಲ್ವೇ ಅಪಘಾತದ ವರದಿ ಹೊರಬಿದ್ದಿದೆ.

ಗೋಲ್ಡ್ರ ಎಂಬ ಸ್ಟೇಷನ್ನಿನಲ್ಲಿ ನಿಂತಿದ್ದ ಪ್ಯಾಸೆಂಜರ್ ಟ್ರೈನಿಗೆ ಗೂಡ್ಸ್ ಗಾಡಿಯ ಎಂಜಿನೊಂದು ವೇಗವಾಗಿ ಬಂದು ಢಿಕ್ಕಿ ಹೊಡೆದುದರ ಪರಿಣಾಮವಾಗಿ ೬ ಭೋಗಿಗಳು ಕೆಳಗೆ ಉರುಳಿದವು. ೩೦ ಜನರು ಕೂಡಲೇ ಮೃತಪಟ್ಟರು. ೬೦ ಜನರಿಗೆ ತೀವ್ರ ಘಾಯಗಳಾಗಿವೆ.

ಸೀಟುಗಳನ್ನು ಕೊಡುವ ಪ್ರಶ್ನೆ

ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯು ಎರಡು ದಿನಗಳ ಕಾಲ ನಡೆದು ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಸ್ಥಳೀಯ ರಾಜ್ಯಾಂಗಕ್ಕನುಗುಣವಾಗಿ ಸೀಟುಗಳನ್ನು ಕೊಡುವ ಅಂಶವನ್ನು ಚರ್ಚಿಸಿತೆಂದು ಹೇಳಲಾಗಿದೆ. ಈ ವಿಷಯದಲ್ಲಿ ಯಾವ ನಿರ್ಧಾರವೂ ಆಗಿಲ್ಲವೆಂದೂ ಪುನಃ ಸಭೆಯು ೨೨ನೇ ತಾ|| ನಡೆದು ಖಚಿತವಾದ ನಿರ್ಧಾರಕ್ಕೆ ಬರುವುದೆಂದು ಹೇಳಲಾಗಿದೆ.

ಸಿಂಹಳಕ್ಕೆ ಬರಕೂಡದು

ಬ್ರಿಟಿಷ್ ವೈಜ್ಞಾನಿಕ ಮಿ|| ಜೆ. ಜಿ. ಕ್ರೌಥರ್‌ರವರು ಕೊಲಂಬೋವಿಗೆ ಹೋಗಲು ಸಿಂಹಳ ಸರ್ಕಾರವು ಅನುಮತಿ ನಿರಾಕರಿಸಿದೆ.

ಸುಪ್ರೀಂ ಕೋರ್ಟು

ತನ್ನಲ್ಲಿದ್ದ ಒತ್ತುವಸ್ತುಗಳೆಲ್ಲಾ ಸರ್ಕಾರಕ್ಕೆ ಕೊಡಬೇಕೆಂದು ಸರ್ಕಾರ ಆಜ್ಞೆ ಮಾಡಿರುವುದು ನ್ಯಾಯಬಾಹಿರವೆಂದು ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯದ ಅಯ್ಯಪ್ಪನ್ ಚೀರಪ್ಪಾನ್ ಎಂಬ ಹರಿಜನ ರೈತನ ಫಿರ್ಯಾದನ್ನು ಮನ್ನಿಸಿ ಭಾರತದ ಸುಪ್ರೀಂ ಕೋರ್ಟು ಆತನ ಅರ್ಜಿಯನ್ನು ವಿಚಾರಣೆಗೆ ತಮ್ಮಲ್ಲಿಗೆ ಕಳುಹಿಸಬೇಕೆಂದು ತಿರುವಾಂಕೂರ್-ಕೊಚ್ಚಿನ್ ಒಕ್ಕೂಟದ ಮುಖ್ಯ ನ್ಯಾಯಾಲಯಕ್ಕೆ ಆಜ್ಞೆಯಿತ್ತಿದೆ. ಸುಪ್ರೀಂ ಕೋರ್ಟಿಗೆ ಅಪೀಲ್ ಮಾಡಿದ ಆತನ ಅರ್ಜಿಯನ್ನು ಮುಖ್ಯ ನ್ಯಾಯಾಲಯವು ಸುಪ್ರೀಂ ಕೋರ್ಟಿಗೆ ಕಳುಹಿಸದೆ ತನ್ನಲ್ಲಿಯೇ ಇಟ್ಟುಕೊಂಡಿರುವುದರಿಂದ ಸುಪ್ರೀಂ ಕೋರ್ಟು ಈ ಆಜ್ಞೆ ಮಾಡಿದೆ.

ರೇಷನ್ ಹೆಚ್ಚಿಸುವುದಿಲ್ಲ

ಮಧ್ಯಪ್ರದೇಶಕ್ಕೆ ಕೇಂದ್ರವು ಕೊಡಬೇಕಾದ ೧,೫೦,೦೦೦ ಟನ್ ಆಹಾರದ ಪೈಕಿ ಕೇವಲ ೨೫೦೦೦ ಟನ್ ಕೊಟ್ಟಿದೆ. ಹೆಚ್ಚಾಗಿ ಆಹಾರ ಬರುವವರೆಗೂ ಪಡಿತರವನ್ನು ಹೆಚ್ಚಿಸುವುದಿಲ್ಲವೆಂದು ಆಹಾರ ಶಾಖಾ ವಕ್ತಾರರೊಬ್ಬರು ಹೇಳಿರುವರು.

ಕಾಂಗ್ರೆಸ್ಸನ್ನು ಹೊರದೂಡುವೆವು

ಉತ್ತರ ಪ್ರದೇಶ, ಬಂಗಾಳ, ಬೀಹಾರ, ಆಂಧ್ರ ಈ ಪ್ರಾಂತ್ಯಗಳ ಒಟ್ಟು ಜನಸಂಖ್ಯೆ ಭಾರತದ ಜನಸಂಖ್ಯೆಗೆ ಅರ್ಧಕ್ಕಿಂತ ಹೆಚ್ಚಾಗಿದೆ. ಹೊಸದಾಗಿ ಸ್ಥಾಪಿಸಿರುವ ಪ್ರಜಾಪಕ್ಷವು ಈ ಜನರ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡುವುದು. ಸೋಷಲಿಸ್ಟ್ ಪಕ್ಷ ಮತ್ತು ಈಗ ತಾನಾಗಿ ಸ್ಥಾಪಿತವಾಗಿರುವ ಪ್ರಜಾಪಕ್ಷಗಳಿಂದ ಕಾಂಗ್ರೆಸ್ ಪಕ್ಷವನ್ನು ಬಂಗಾಳದಿಂದ ಹೊರದೂಡಿ ಸರ್ಕಾರಾಡಳಿತ ಭಾರವನ್ನು ನಾವು ವಹಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಇದರ ಪ್ರಕ್ರಿಯೆಗಳಲ್ಲಿ ಸ್ವಲ್ಪ ನಿಧಾನವಾಗಬಹುದೆಂದು ಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾರವರು ಸೂರತ್ತಿನಲ್ಲಿ ಹೇಳಿರುವರು.

ಅಮೆರಿಕಾ ಆಹಾರ

೨೦ ಲಕ್ಷ ಟನ್ ಆಹಾರದ ಪೈಕಿ ಮೊದಲನೇ ಕಂತಿನ ಆಹಾರವನ್ನು ತೆಗೆದುಕೊಂಡು ಹಡಗುಗಳು ಇಂದು ಅಮೆರಿಕಾದಿಂದ ಭಾರತಕ್ಕೆ ಹೊರಡಲಿವೆ.

ವುಡ್‌ಲ್ಯಾಂಡ್ಸ್ * ೧೭—೬—೫೧ರಿಂದ ಎರಡನೇ ವಾರ
ಉಮರ್ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ
* ಉಸ್ತಾದ್ ಪೆಡ್ರೊ *
ಪಾತ್ರ— ಶೇಖ್‌ಮುಖ್ತಾರ್, ಬೇಗಂಪ್ಯಾರ, ಶಮ್ಮಿ, ಪದ್ಮ, ಅನ್ವಾರಿ.

ಮೈಸೂರು ರೇಷ್ಮೆಯ ಉಡುಪುಗಳು
ಸೀರೆಗಳು, ಆಕರ್ಷಕವಾದ ಟೆನ್ನಿಸ್ ಫ್ರಾಕುಗಳು ಆಟಗಾರರ ಮತ್ತು ಮಕ್ಕಳ ಉಡುಪುಗಳಿಗೆ "ಮೈಸೂರು ರೇಷ್ಮೆ" ಬಟ್ಟೆಗಳು ಆದರ್ಶನೀಯವಾದುವು
"ಮೈಸೂರು ರೇಷ್ಮೆ" ಬಟ್ಟೆಗಳು ಹುಂಬಾ ಚೆನ್ನಾಗಿ ಬಾಳಿಕೆ ಬರುತ್ತವೆ ಮತ್ತು ಬೇಗ ಮಡಿಯಾಗುತ್ತವೆ
ಇವು ಶುದ್ಧವಾದ ಮೈಸೂರು ರೇಷ್ಮೆಯಿಂದಲೇ ತಯಾರಿಸಲ್ಪಟ್ಟವೆ
ಪರೀಕ್ಷಿಸಿ ಸಂತುಷ್ಟರಾಗಿರಿ
*
ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಮೈಸೂರು

ನೂತನಪಕ್ಷದಲ್ಲಿ ಭಿನ್ನತೆ

ಆಂಧ್ರ ಮತ್ತು ಬಂಗಾಳದ ಕೆಲವು ಪ್ರತಿನಿಧಿಗಳು ಆಚಾರ್ಯ ಕೃಪಲಾನಿಯವರ ನಾಯಕತ್ವದಲ್ಲಿ ಸ್ಥಾಪಿತವಾದ ಪಕ್ಷದ ಹೆಸರು ಮತ್ತು ಕಾರ್ಯಕ್ರಮ ವಿಷಯದಲ್ಲಿ ಭಿನ್ನಾಭಿಪ್ರಾಯದಿಂದ ಸಮಾವೇಶವನ್ನು ಬಹಿಷ್ಕರಿಸಿದರು. ಪ್ರೊ|| ರಂಗಾರವರು ಸಮಾವೇಶದಲ್ಲಿ ಭಾಗವಹಿಸದೆ ಕಲ್ಕತ್ತಾಕ್ಕೆ ತೆರಳಿದರು. ಇದೇ ರೀತಿ ಶ್ರೀ ಪ್ರತಾಪಚಂದ್ರಗುಹಾರಾಯರ ನೇತೃತ್ವದಲ್ಲಿ ಜುಗಾಂತರ್ ಪಕ್ಷಕ್ಕೆ ಸೇರಿದ ಕೆಲವು ಬಂಗಾಳದವರು ಪಾಟ್ನಾಕ್ಕೆ ಆಗಮಿಸಿದ್ದು ಸಮಾವೇಶದಲ್ಲಿ ಭಾಗವಹಿಸಲಿಲ್ಲ.

ಪಾಕಿಸ್ತಾನದಲ್ಲೂ ಉಚ್ಚಾಟನೆ

ಹೈದರಾಬಾದಿನ ಮಾಜಿ ಪ್ರಧಾನಿ ಮೀರ್ ಲಾಯಕ್ ಅಲಿಯವರು ಪಾಕಿಸ್ತಾನದಲ್ಲಿ ರಕ್ಷಣಾ ಶಾಖಾ ಸಲಹೆಗಾರರ ಪದವಿಗೆ ರಾಜೀನಾಮೆ ಕೊಟ್ಟಿರುವರೆಂದು ಹೇಳಲಾಗಿದೆ. ಸರ್ಕಾರದೊಡನೆ ತಮ್ಮ ಧೋರಣೆ ವಿಷಯದ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣ.

ಕನ್ನಡ ಮಾಧ್ಯಮ

ಒಂದೇ ಸೆಕ್ಷನ್ ಇರುವ ಹೈಸ್ಕೂಲುಗಳಲ್ಲಿ ಶಿಕ್ಷಣ ಮಾಧ್ಯಮವು ಕನ್ನಡ ಅಥವಾ ಇಂಗ್ಲೀಷು ಇರಬಹುದು. ಒಂದಕ್ಕಿಂತ ಹೆಚ್ಚಾಗಿ ಸೆಕ್ಷನ್‌ಗಳಿರುವ ಹೈಸ್ಕೂಲುಗಳಲ್ಲಿ ಒಂದು ತರಗತಿಯಲ್ಲಿ ಮಾತ್ರ ಇಂಗ್ಲೀಷು ಮಾಧ್ಯಮದಲ್ಲಿ ಪಾಠಪ್ರವಚನಗಳು ನಡೆಯಬೇಕು. ಇತರ ಸೆಕ್ಷನ್‌ಗಳಲ್ಲಿ ಕನ್ನಡದಲ್ಲೇ ಪಾಠಪ್ರವಚನಗಳು ನಡೆಯಬೇಕೆಂದು ವಿದ್ಯಾಭ್ಯಾಸದ ಸ್ಟ್ಯಾಂಡಿಂಗ್ ಕಮಿಟಿಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದೆ. ಇಂಗ್ಲೀಷು ಮಾಧ್ಯಮದಲ್ಲೇ ಹೆಚ್ಚಿಗೆ ಸೆಕ್ಷನ್‌ಗಳಲ್ಲಿ ಪಾಠ ಹೇಳಿಕೊಡಬೇಕಾದಲ್ಲಿ ವಿದ್ಯಾ ಇಲಾಖಾ ಡೈರೆಕ್ಟರ ಅಪ್ಪಣೆ ಪಡೆಯಬೇಕು. ಈ ಆಜ್ಞೆಯು ಖಾಸಗೀ ಸ್ಕೂಲುಗಳಿಗೂ ಅನ್ವಯಿಸುವುದು.

ಒಲಂಪಿಯಾ
21-6-51ರಿಂದ ಪ್ರತಿದಿನ 3 ಪ್ರದರ್ಶನಗಳು
ನಜೀರ್ ಖಾನ್, ಗೀತಾಬಾಲಿ, ಡೇವಿಡ್, ಪಾರೋ, ಜೀವನ್ ನಟಿಸಿರುವ
* ನಖ್ರೆ *
ಉತ್ತಮ ಸಾಮಾಜಿಕ ಹಿಂದಿಚಿತ್ರ

ಸಂಪಾದಕರು ಪ್ರಕಾಶಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು. ಮುದ್ರಕರು :—ಹಿ. ಕಾ. ಸುಬ್ಬರಾವ್, ಮೋಡರ್ನ್ ಮುದ್ರಣಾಲಯ ಮೈಸೂರು

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೬—೧೯೫೧ ಗುರುವಾರ [ಸಂಚಿಕೆ ೨೪೦

೮ ಔನ್ಸ್ ಅಕ್ಕಿ ಒದಗಿಸಲು ಪ್ರಯತ್ನ

ಮದರಾಸು ತಿರುವಾಂಕೂರುಗಳಂತೆ ಮೈಸೂರಿಗೂ ೬ ಔನ್ಸುಗಳಿಂದ ೮ ಔನ್ಸಿನ ಷ್ಟು ಅಕ್ಕಿಯನ್ನು ಕೊಡಬೇಕೆಂದು ಮೈಸೂರು ಸರ್ಕಾರವು ಭಾರತ ಸರ್ಕಾರವನ್ನು ಒತ್ತಾಯಪಡಿಸುತ್ತಿದೆಯೆಂದು ಗೊತ್ತಾಗಿದೆ.

ಲಂಚದ ಆಪಾದನೆ

ಲಂಚ ನಿರೋಧ ದಳದ ಅಧಿಕಾರಿಗಳು, ಬೆಂಗಳೂರಿನ ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಛೇರಿಯ ಸೂಪರ್ನೈಟೆಂಡರಾದ ಜಿ. ಎಸ್. ಕೃಷ್ಣಸ್ವಾಮಿ ಎಂಬುವರನ್ನು, ಸರ್ವೆ ಆಫೀಸಿನ ಸೂಪರಿಂಟೆಂಡೆಂಟರ ರೂಮಿನಲ್ಲಿ, ಲಂಚವನ್ನು ಸ್ವೀಕರಿಸುತ್ತಿದ್ದಾಗ ಹಿಡಿದು ಬಂಧಿಸಿದರು. ಮುಂದಿನ ವಿಚಾರಣೆ ನಡೆಯುತ್ತಿದೆ.

ರಾಷ್ಟ್ರಾಧ್ಯಕ್ಷರು ಪಂಜಾಬಿನ ಆಡಳಿತ ಅಧಿಕಾರ ವಹಿಸಿಕೊಂಡರು

ಭಾರತ ಸರ್ಕಾರದ ವಿಶೇಷ ಗೆಜೆಟ್ ಪ್ರಕಟಣೆಯು ನಿನ್ನೆ ದಿನ ಹೊರಬಿದ್ದು ಪಂಜಾಬಿನ ಗವರ್ನರವರು ಪಂಜಾಬಿನಲ್ಲಿ ವಿಶೇಷ ಪರಿಸ್ಥಿತಿ ಉದ್ಭವಿಸಿದೆಯೆಂದು ವರದಿ ಕಳುಹಿಸಿದ ಮೇಲೆ ರಾಜ್ಯಾಂಗದ ೩೫೬ನೇ ಸೆಕ್ಷನ್ನಿನ ಆಧಾರದ ಮೇಲೆ ವಿಶೇಷ ಘೋಷಣೆಯನ್ನು ಹೊರಡಿಸಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಪಂಜಾಬಿನ ಸರ್ವ ವ್ಯವಹಾರಗಳನ್ನು ತಾವೇ ವಹಿಸಿಕೊಂಡಿರುವುದಾಗಿ ನಿರೂಪಿಸಲಾಗಿದೆ. ಘೋಷಣೆಯಲ್ಲಿ ಪಂಜಾಬಿನ ಗವರ್ನರವರು ಅಲ್ಲಿನ ಆಡಳಿತವನ್ನು ನಡೆಸಬೇಕೆಂದು ತಿಳಿಸಿರುವುದಲ್ಲದೆ ಇವರ ಮೇಲೆ ಕಾರ್ಯಭಾರ ನಡೆಸುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರು ಹೊಂದಿರುವರೆಂದು ಹೇಳಿರುವರು

ಜುಲೈ ೧ ರಿಂದ ಮೈಸೂರಲ್ಲಿ ೧೨ ಔನ್ಸ್ ರೇಷನ್

ಸ್ವ. ಸು. ಫೋನ್] ಬೆಂ. ಜೂನ್ ೨೧

ಜುಲೈ ಒಂದನೇ ತಾರೀಖಿನಿಂದ ರೇಷನ್ ೧೨ ಔನ್ಸುಗಳಿಗೆ ಹೆಚ್ಚಿಸಲಾಗಿದೆ. (ಕೃಷಿಜೀವಿಗಳಿಗೆ ೧೫ ಔನ್ಸು) ಒಂದೇ ಜಿಲ್ಲೆಯಲ್ಲಿ ತಾಲ್ಲೂಕಿನಿಂದ ತಾಲ್ಲೂಕಿಗೆ ೩೦ ಸೇರು ಆಹಾರಧಾನ್ಯವನ್ನು ರಹದಾರಿಯಿಲ್ಲದೆ ಸಾಗಿಸಬಹುದು. ನಿನ್ನೆಯವರೆಗೆ ಸಂಸ್ಥಾನದಲ್ಲಿ ೧೬,೯,೨೩೬ ಪಲ್ಲಾ ಬತ್ತ, ೩,೫೧,೭೪೫ ಪಲ್ಲಾ ರಾಗಿ, ೨೪೮೧೨ ಪಲ್ಲಾ ಜೋಳ, ೧೬೮೪೧ ಪಲ್ಲಾ ಇತರ ಧಾನ್ಯಗಳ ದಾಸ್ತಾನಿದೆ. ಅಕ್ಕಿಯನ್ನು ೮ ಔನ್ಸುಗಳಿಗೇರಿಸಲು ಬೇಕಾದ ೩೫೦೦೦ ಟನ್ನು ಭಾರತ ಸರ್ಕಾರವು ಕೊಡಬೇಕೆಂದು ಪ್ರಾರ್ಥಿಸಲಾಗಿದೆ ಎಂದು ಆಹಾರ ಮಂತ್ರಿ ಶ್ರೀ ಮುನಿಯಪ್ಪನವರು ಇಂದು ತಿಳಿಸಿರುವರು.

ಕಾಗೋಡು ಸತ್ಯಾಗ್ರಹ ಪತ್ರಿಕಾ ಪ್ರಕಟನೆ

ಸ್ವ. ಸು. ಫೋನ್] ಬೆಂ. ಜೂನ್ ೨೦

ಸರ್ಕಾರದವರು ಕಾಗೋಡು ಸತ್ಯಾಗ್ರಹದ ವಿಷಯದಲ್ಲಿ ಪತ್ರಿಕಾ ಪ್ರಕಟನೆ ಹೊರಡಿಸಿ ಕಾಗೋಡಿನ ವಿಷಯವು ಅಲ್ಲಿನ ರೈತರು ಮತ್ತು ಜಮೀನ್ದಾರುಗಳಿಗೆ ಸಂಬಂಧಪಟ್ಟ ಸಮಸ್ಯೆಯೆಂದು ಅಲ್ಲಿನ ರೈತರು ಇದನ್ನು ಪರಿಹರಿಸಿಕೊಳ್ಳಲು ಕಾನೂನು ಮೀರಿ ಪ್ರಯತ್ನಿಸುತ್ತಿದ್ದುದರಿಂದ ಮಧ್ಯೆ ಪ್ರವೇಶಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತೆಂದೂ ಡಾ|| ಲೋಹಿಯಾರವರು ಅಲ್ಲಿನ ಪರಿಸ್ಥಿತಿಯ ವಿಷಯದಲ್ಲಿ ಇತ್ತಿರುವ ಹೇಳಿಕೆಯು ಸತ್ಯಾಂಶಕ್ಕೆ ದೂರವಾಗಿದೆಯೆಂದು ತಿಳಿಸಿ ಅಲ್ಲಿ ಲಾಠಿ ಛಾರ್ಜ್ ನಡೆಸಿಲ್ಲವೆಂದು ಪ್ರಕಟಣೆಯಲ್ಲಿ ವ್ಯಕ್ತಪಡಿಸಿರುತ್ತಾರೆ.

ಟ್ರಾಕ್ಟರ್ ಬಹುಮಾನ

೧೯೫೦-೫೧ನೇ ಸಾಲಿನಲ್ಲಿ ಅತ್ಯಧಿಕವಾಗಿ ಆಹಾರ ಬೆಳೆ ತೆಗೆದ ಜಮೀನ್ದಾರನಿಗೆ ೫,೦೦೦ ರೂ. ಬಹುಮಾನ ಕೊಡಲಾಗುವುದೆಂದು ಕೇಂದ್ರ ಸರ್ಕಾರವು ಘೋಷಿಸಿತ್ತಷ್ಟೆ. ಆದರೀಗ ಕೇಂದ್ರ ಸರ್ಕಾರವು ಹಣಕ್ಕೆ ಬದಲು ಒಂದು ಟ್ರಾಕ್ಟರನ್ನು ಕೊಡಲಾಗುವುದೆಂದು ತಿಳಿಸಿದೆ.

ಕಳೆದ ಸಾಲಿನಲ್ಲಿ ಉತ್ತರಪ್ರದೇಶದ ಶ್ರೀ ಜಗದೀಶ ಪ್ರಸಾದ್ ಎಂಬುವರು ಒಂದು ಎಕರೆಗೆ ೫೮ ಮಣ ೧೩ ಸೇರು ಗೋಧಿ ಬೆಳೆಯನ್ನು ಬೆಳೆದಿರುವರು.

ಕೂಲಿಯವರೊಡನೆ ಶ್ರೀ ನೆಹರೂ ಭೂಮಿ ಅಗೆದರು

[illegible] ಪಂಡಿತ ನೆಹರೂರವರು ನಿನ್ನೆ ಬೆಳಿಗ್ಗೆ ಕೋಸಿ ಅಣೆಕಟ್ಟಿನ ಕಾರ್ಯಕಲಾಪಗಳನ್ನು ೫,೦೦೦ ಅಡಿ ಎತ್ತರದಿಂದ ವಿಮಾನದಲ್ಲಿ ಕುಳಿತು ವೀಕ್ಷಿಸಿದರು.

ನಂತರ ನೆಹರೂರವರು ದರ್ಭಾಂಗದ ಬಳಿ ರೈತರೊಡನೆ ಮಾತನಾಡಿ ಸರ್ಕಾರವು ಆಹಾರಾಭಿವೃದ್ಧಿಗೆ ಮತ್ತು ರೈತರ ಹಿತರಕ್ಷಣೆಗೆ ಮಾಡಿರುವ ಕೆಲಸಕಾರ್ಯ ವಿವರಿಸಿ ದೇಶದ ಅಭಾವಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ಕಷ್ಟಪಟ್ಟು ದುಡಿದು ಆಹಾರಾಭಾವವನ್ನು ನೀಗಿಸಲು ಶ್ರಮಿಸಬೇಕೆಂದರು.

ನೂತನಪಕ್ಷವನ್ನು ಪ್ರಸ್ತಾಪಿಸಿ ಭಾರತದ ಅಭಿವೃದ್ಧಿಗೆ ರಚನಾತ್ಮಕವಾದ ನೆಲ ಹೆಸೇಡುವ ವಿರುದ್ಧಪಕ್ಷವನ್ನು ತಾವು ಸ್ವಾಗತಿಸುವುದಾಗಿ ತಿಳಿಸಿದರು.

ನಂತರ ನೆಹರೂರವರು ೧೩ ಮೈಲಿ ಉದ್ದ ತೋಡಲಿರುವ ಕಾಲುವೆಯ ಕೂಲಿಯವರೊಂದಿಗೆ ತಾವೂ ಸೇರಿ ಪಿಕಾಸಿಯಿಂದ ಸ್ವಲ್ಪ ಭೂಮಿಯನ್ನು ಅಗೆದರು.

† ಲೋಹಿಯಾರವರನ್ನು ಸಾಗರಕ್ಕೆ ಕರೆದೊಯ್ದು ಅಲ್ಲಿ ಅವರ ಜೊತೆಗೆ ೨೫ ಜನರ ಮೇಲೆ ಕೇಸ್ ಹಾಕಲಾಯಿತು.

ಬ್ಯಾಂಕುಗಳಲ್ಲಿ ಬಡ್ಡಿ ದರ

ಸೆಕ್ಯೂರಿಟಿ ಕೇಸರಿಸಿದ ಸಾಮಾನುಗಳು ಮತ್ತು ರವಾನೆಯಲ್ಲಿರುವ ಸಾಮಾನುಗಳ ಮೇಲೆ ಬ್ಯಾಂಕುಗಳು ಕೊಡುವ ಸಾಲದ ಬಡ್ಡಿಯನ್ನು ಶೇಕಡ ಅರ್ಧದಷ್ಟು ಹೆಚ್ಚಿಸಲಾಗುವುದೆಂದು ಹೇಳಲಾಗಿದೆ.

ಅಮೆರಿಕಾ ಧೃಢನಿಶ್ಚಯ

ದೇವರದಯೆ, ಶಾಂತತೆ ಮತ್ತು ಧೃಢನಿಶ್ಚಯದಿಂದ ಪ್ರಪಂಚದಲ್ಲಿ ಶಾಂತಿಯನ್ನುಂಟುಮಾಡಲು ಅಮೆರಿಕಾ ತನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸುವುದೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವರು.

ಪರ್ಷಿಯಾ ಸಂಧಾನ ಮುರಿದು ಬಿತ್ತು

ಪರ್ಷಿಯಾ ಸರ್ಕಾರಕ್ಕೂ ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿ ಪರ ಬ್ರಿಟಿಷ್ ಪ್ರತಿನಿಧಿಗಳು ನಡೆಸುತ್ತಿದ್ದ ಮಾತುಕತೆಗಳು ನಿನ್ನೆದಿನ ಮುರಿದುಬಿದ್ದಿತು.

ಪರ್ಷಿಯಾ ಸರ್ಕಾರದ ಮಂತ್ರಿಮಂಡಲದ ಸಭೆಯು ನಡೆದು ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿಯು ಕೆಲಸಮಾಡುವುದನ್ನು ನಿಲ್ಲಿಸಿ ಅವರ ಕಾರ್ಯಕಲಾಪಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲವೆಂಬುದಾಗಿ ತಿಳಿಸಿ ಅಬಡಾನಿನ ಅಧಿಕಾರಿಗಳು ಎಣ್ಣೆ ಕಂಪೆನಿಯ ಅಧಿಕಾರ ವಹಿಸಿಕೊಳ್ಳಲಾಗುವಂತೆ ತಿಳಿಸಲಾಗಿದೆ.

ಮಧ್ಯಪ್ರಾಚ್ಯದಲ್ಲಿ ವಿಮಾನದಳಗಳಿಗೆ ಎಚ್ಚರಿಕೆ ಕೊಟ್ಟು ೩೫೦೦ ಪ್ಯಾರಾಚೂಟ್ ಸೈನಿಕರು ಸಿದ್ಧರಾಗಿರಲು ಆಜ್ಞೆ ಮಾಡಲಾಗಿದೆ.

ಶ್ರೀ. ಸಿ. ಆರ್. ಊಟಿಗೆ

ಕೇಂದ್ರ ಗೃಹಸಚಿವ ಶ್ರೀ. ಸಿ. ಆರ್. ರಾಜಗೋಪಾಲಾಚಾರಿಯವರು ಇಂದು ಮದರಾಸಿನಿಂದ ಊಟಿಗೆ ತೆರಳುವರು. ಜುಲೈ ಒಂದನೇ ತಾರೀಕಿಗೆ ಮದರಾಸಿಗೆ ಹಿಂತಿರುಗಿ ೭ ನೇ ತಾರೀಖು ಬೆಂಗಳೂರಿಗೆ ಆಗಮಿಸುವರು.

‡ ಒಂದು ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗ ಅವರನ್ನು ಬೇರೆ ಕಡೆಗೆ ಕರೆದುಕೊಂಡು ಹೋಗಿ ಅವರ ಮೇಲೆ ಮೊಕದ್ದಮೆ ಹೂಡುವುದರಿಂದ ಕಂಟೆಂಪ್ಟ್ ಆಫ್ ಕೋರ್ಟ್ ಆಗುವುದೆಂದು ಡಾ|| ಲೋಹಿಯಾರವರ ಪರ ಮೈಸೂರು ಹೈಕೋರ್ಟಿಗೆ ಅರ್ಜಿ ಸಲ್ಲಿಸಲಾಗಿದೆ.

ಸಮಾಚಾರ

ಗುರುವಾರ ತಾರೀಖು ೨೧

ಮದರಾಸು ನೀತಿ ಸಾಧುವಾಗಿದೆ

ಔದ್ಯೋಗಿಕ ಕಾಲೇಜುಗಳಾದ ವೈದ್ಯ ಇಂಜನಿಯರಿಂಗ್ ಮುಂತಾದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಲಿದ್ದ ಕೋಮುವಾರು ದಾಮಾಷಾ ನೀತಿಯನ್ನು ಮದರಾಸು ಸರ್ಕಾರವು, ಹೊಸ ರಾಜ್ಯಾಂಗ ತಿದ್ದುಪಡಿಪ್ರಕಾರ ಪರಿಶೀಲಿಸಿ ಹೊಸದಾಗಿ ಆಜ್ಞೆಯನ್ನಿತ್ತಿರುವರು. ಈ ಕಾಲೇಜುಗಳಲ್ಲಿ ಶೇಕಡ 60 ರಷ್ಟು ಸ್ಥಾನಗಳನ್ನು ಇಂಟರ್‌ಮಿಡಿಯೆಟ್ ಮುಂತಾದ ಪರೀಕ್ಷೆಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ಗಮನಿಸಿ, ಯೋಗ್ಯತಾನುಸಾರವಾಗಿ ಹಂಚಬೇಕೆಂದು ಆಜ್ಞೆಯನ್ನಿತ್ತಿರುವರು. ಶೇ|| 40ನ್ನು ಹಿಂದುಳಿದ ಪಂಗಡಗಳಿಗೆ ಮತ್ತು ಗುಡ್ಡಗಾಡಿನ ಜನರಿಗೆ ವಿಭಾಗಿಸಲಾಗಿದೆ. ಅನೇಕ ವರ್ಗಗಳಿಂದ ಈ ಪ್ರಾಂತ್ಯದಲ್ಲಿ ತಲೆದೋರಿದ್ದ ಕೋಮುವಾರು ನೀತಿಯು ಈ ಹೊಸ ಆಜ್ಞೆಯ ಪ್ರಕಾರ ನಿರ್ಮೂಲವಾದಂತಾಯಿತು. ರಾಜ್ಯಾಂಗ ತಿದ್ದುಪಡಿಕಾಲದಲ್ಲಿ ಸರ್ಕಾರದ ಘೋಷಣೆ ನೀತಿಯನ್ನು ಯಾವರೀತಿ ಹೊರಡಿಸುವರೋ ಎಂದು ಅನೇಕರು ಆತಂಕಪಡುತ್ತಲಿದ್ದರು. ಈಗಿನ ಮದರಾಸು ನೀತಿಯು ಸಾಧುವಾಗಿದೆ.

ನಮ್ಮ ಸಂಸ್ಥಾನದಲ್ಲಿಯೂ ಇದೇ ನೀತಿಯನ್ನನುಸರಿಸಿ ಕೋಮುವಾರು ನೀತಿಯನ್ನು ಬಿಡುವರೆಂದು ನಂಬಿದೆ. 1951ನೇ ಜನಗಣತಿಯನ್ನು ತೆಗೆದುಕೊಂಡಾಗ ಹಿಂದುಳಿದ ಪಂಗಡಗಳಾವುವೆಂಬುದನ್ನು ಮೈಸೂರು ಸರ್ಕಾರವೂ ಭಾರತ ಸರ್ಕಾರದ ಅನುಮತಿಯನ್ನು ಪಡೆದು ನಿರ್ಧರಿಸಿ ಅದರಂತೆ ಜನಗಣತಿ ನಡೆಸಿದೆ. ಇವು ಕೇವಲ 13 ಪಂಗಡಗಳು. ಇವು ಹಿಂದುಳಿದ ಪಂಗಡಗಳೆಂದು ಹೇಳಿದರೆ ಯಾವದೂ ಅಭ್ಯಂತರವಿಲ್ಲ. ಬೆಟ್ಟ-ಗುಡ್ಡ ನಿವಾಸಿಗಳಾದ ಕಾಡು ಕುರುಬರು, ಜೇನು ಕುರುಬರು ಮುಂತಾದ ಆರು ಪಂಗಡಗಳಲ್ಲದೆ, ಅನಿಮಿಸ್ಟ್, ಪರಿಶಿಷ್ಟ, ಅಗಸ, ಗಂಗಕುಲ, ಗಾಣಿಗ, ಈಡಿಗ, ಜೋಗಿ, ಕುಂಬಾರ, ಮೇದ, ನಾಯಿಂದ, ತಿಗಳ, ಉಪ್ಪಾರ, ಬೇಡ, ಲಂಬಾಣಿ ಈ 14 ಪಂಗಡಗಳನ್ನು ಜನಗಣತಿಯಲ್ಲಿ ಹಿಂದುಳಿದ ಪಂಗಡಗಳೆಂದು ಪರಿಗಣಿಸಲಾಗಿದೆ. ಎಲ್ಲಾ ಕಾಲೇಜುಗಳಲ್ಲೂ ಈ ಹಿಂದುಳಿದ ಪಂಗಡಗಳಿಗೆ ವಿಭಾಗಿಸಲಿಕ್ಕಾಗಿ ಕೆಲವು ಸ್ಥಾನಗಳನ್ನಿಟ್ಟು ಉಳಿದವುಗಳನ್ನೆಲ್ಲಾ ಯೋಗ್ಯತಾನುಸಾರ ಕೊಡುವಂತಾಜ್ಞಾಪಿಸಿ, ಮದರಾಸ್ ನೀತಿಯನ್ನೇ ನಮ್ಮ ಸಂಸ್ಥಾನವೂ ಅನುಸರಿಸುವುದೆಂದು ನಂಬಿದ್ದೇವೆ.

ಸೇವಾದಳ ಪರೀಕ್ಷಾ ಕಾಲ ಬಂದಿದೆ

ನಿಮ್ಮ ಪಕ್ಷಾತೀತ ಭಾರತ ಸೇವಾದಳದ ಶಕ್ತಿಯನ್ನು ಪರೀಕ್ಷೆ ಮಾಡುವ ಕಾಲವು ಬಹುಬೇಗ ಒದಗಿಬಂದಿದೆ. ಬೆಂಗಳೂರಿನಲ್ಲಿ ಮೊಟ್ಟಮೊದಲನೆಯದಾಗಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾಲಕ್ಕೆ ದೇಶದ ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳು ಬರಲಿದ್ದಾರೆ. ಇವರ ಮನಮೆಚ್ಚುವಂತೆ ಸೇವೆ ಮಾಡುವುದು ಮೂಲಕ ಈ ಪ್ರತಿನಿಧಿಗಳು ತಮ್ಮ ತಮ್ಮ ಸ್ಥಳಗಳಲ್ಲಿ ನಿಮ್ಮ ರೀತಿ, ನೀತಿಯ ಸೇವಾದಳ ರಚಿಸಲು ಆಶಿಸಿ, ಈ ಕಾರ್ಯಸಾಧನೆಗಾಗಿ ನಿಮ್ಮಗಳಿಗೆ ಆಹ್ವಾನ ಕೊಡುವಂತಾಗಬೇಕು. ಆ ದಿನ ನಿಮ್ಮ ಈಚಿನ ಮೂರು ವರ್ಷಗಳ ಸೇವಾದಳ ಸಂಘಟನೆಯನ್ನು ನೀವು ಯಶಸ್ವೀಗೊಳಿಸಿದಿರೆಂದು ನಾನು ಭಾವಿಸುತ್ತೇನೆ—ಎಂದು, ಸೇವಾದಳದ ಜನಕರಾದ ಡಾ|| ಎನ್. ಎಸ್. ಹರ್ಡೀಕರ್ ಮರಿಯಪ್ಪ ವಿದ್ಯಾರ್ಥಿನಿಲಯದಲ್ಲಿ ಸೇವಾದಳ ಶಿಕ್ಷಕ ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣ ಮಾಡುವಾಗ ತಿಳಿಸಿದರು.

ಮುಂದುವರಿದು ಡಾ|| ಹರ್ಡೀಕರರು "ಕಾಂಗ್ರೆಸ್ ಸಂಸ್ಥೆಯು ಇಲ್ಲಿನ ಪರಿಸ್ಥಿತಿಗೆ ತಕ್ಕಂತೆ ಸ್ವಯಂಸೇವಕರನ್ನು ಭಾರತ ಸೇವಾದಳದಿಂದ ಕಳುಹಿಸುವಂತೆ ಕೇಳಬಹುದು. ಆ ಕಾಲಕ್ಕೆ ರಾಷ್ಟ್ರದ ನಾಯಕರನ್ನು ನೋಡದೆಯೇ ನಿಮ್ಮ ನಿಮ್ಮ ಸ್ಥಳಗಳಲ್ಲಿಯೇ ಇದ್ದು ಭಾರತ ಸೇವಾದಳದ ಸಂಘಟನೆ ಮಾಡಬೇಕಾಗುವುದು. ನಿಮ್ಮ ಕೇಂದ್ರ ಕಛೇರಿಯು ಕೊಡಲಿರುವ ಆಜ್ಞೆಯನ್ನು ಮರುಮಾತಾಡದೆ ಸಂತೋಷದಿಂದ ಶಿಸ್ತಿನಿಂದ ಪರಿಪಾಲಿಸತಕ್ಕ ಪರೀಕ್ಷೆಯಲ್ಲಿ ನೀವುಗಳು ಉತ್ತೀರ್ಣರಾಗಬೇಕಾಗಿದೆ.

ಜಗತ್ತಿನಲ್ಲಿ ಯಾವ ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ ಕಡೆಗೆ ರಾಷ್ಟ್ರವಾಗಲೀ ಅಹಂಕಾರದ ದಾರಿ ಹಿಡಿದಲ್ಲಿ ಎಂತಹ ಮಹಾ ವ್ಯಕ್ತಿಯೇ ಆಗಲೀ, ವ್ಯವಸ್ಥಿತ ಸಂಸ್ಥೆಯೇ ಆಗಲೀ ಇಲ್ಲವೆ ರಾಷ್ಟ್ರವಾಗಲೀ ನಾಶವಾಗುವುದು ಖಂಡಿತ. ಅಲ್ಲದೆ ಇಂದಿನ ಪ್ರಪಂಚದ ತೀವ್ರಗತಿಯಲ್ಲಿ ಯಾರೂ ಸಹ ತನ್ನ ಪಾಡಿಗೆ ತಾನೆಂದು ಪ್ರತ್ಯೇಕವಾಗಿ ಬದುಕಲೂ ಸಾಧ್ಯವಿಲ್ಲ" ಎಂದರು.

ಕಾಂಗ್ರೆಸ್ಸಿನ ಇಂದಿನ ನೀತಿಯನ್ನು ಪ್ರಸ್ತಾಪಿಸುತ್ತಾ 'ಕಾಂಗ್ರೆಸ್' ಮಹಾಸಂಸ್ಥೆಯು ಹಿಂದೆ ಕೈಂಕರ್ಯ ಭಾವನೆಯಿಂದ ತುಂಬಿದ್ದಿತು. ಈಗ ಪರಿಸ್ಥಿತಿ ಬದಲಾಗಿದೆ. ಈ ಸಂಸ್ಥೆಯ ಹಲವು ನಾಯಕರ ಮನೋವೃತ್ತಿಗೆ ಪ್ರಧಾನ್ಯತೆ ದೊರೆತು ಕಾಂಗ್ರೆಸ್ ಸಂಸ್ಥೆಯಿಂದ ಯಾರೂ ಹೊರಬಿದ್ದರೂ ತನಗೆ ಚಿಂತೆಯಿಲ್ಲ ಎಂಬ ದುರಹಂಕಾರದಿಂದ ಈ ಸಂಸ್ಥೆಯು ಮುಂದುವರಿಯುವುದೇ ಆದರೆ ಕಾಂಗ್ರೆಸ್ ನುಚ್ಚುನೂರಾಗುವುದು ಖಂಡಿತ. ಇದೇ ರೀತಿ ಭಾರತ ಸೇವಾದಳವು ಕೇವಲ ಪಕ್ಷಾತೀತವೆಂದು ತನ್ನ ಪಾಡಿಗೆ ತಾನೇ ಉಳಿದುಕೊಳ್ಳಲೂ ಸಾಧ್ಯವಿಲ್ಲವೆಂಬ ಅಂಶವನ್ನೂ ನೀವೂ ಹಾಗೂ ನಿಮ್ಮ ಅಧಿಕಾರ ವರ್ಗವೂ ಸಹ ತಿಳಿಯಬೇಕಾಗಿದೆ' ಎಂದು ಎಚ್ಚರಿಸಿದರು.

ಮಾಜಿಸೈನಿಕರಿಗೆ ಬಸ್ಸು ಲೈಸನುಗಳು

ಮೈಸೂರು ಸೈನ್ಯದಲ್ಲಿದ್ದು ನಿವೃತ್ತರಾದ ಕೆಲವರು ತಮಗೆ ಹೊಸದಾಗಿ ಅಥವಾ ಈಗಿರುವ ಬಸ್ಸು ಲೈಸನುಗಳನ್ನು ಕೊಡಿಸಿಕೊಡಬೇಕೆಂದು ಮಾಡಿರುವ ಮನವಿಯನ್ನು ಸರ್ಕಾರದವರು ಪರಿಶೀಲಿಸಿ, ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ಸಮಾಲೋಚನೆ ನಡೆಸದೆ ಲೈಸನುಗಳನ್ನು ಕೊಡಲಾಗುವುದಿಲ್ಲ. ಹಾಗೆ ಮಾಡಲು ಕಾಲ ವಿಳಂಬವಾಗುವುದು. ಆದ್ದರಿಂದ ಹೊಸ ಲೈಸನುಗಳನ್ನು ಪಡೆಯಲು ಅಥವಾ ಖಾಲಿ ಇರುವ ಲೈಸನುಗಳನ್ನು ಪಡೆಯಲಿಚ್ಛಿಸುವವರು ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಬರೆದುಕೊಳ್ಳತಕ್ಕದ್ದೆಂದು ಸೂಚಿಸಿರುವರು. ಈ ಬೇಡಿಕೆಗಳಿಗೆ ಪ್ರಥಮಸ್ಥಾನ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯಿತ್ತಿದೆಯೆಂದು ತಿಳಿಸಿರುವರು.

ಶ್ರೀ ರಂಗಾರವರು ಪುನಃ ಕಾಂಗ್ರೆಸ್ಸಿಗೆ

ಆಂಧ್ರಕಿಸಾನ್ ನಾಯಕ ಪ್ರೊ|| ಎನ್. ಜಿ. ರಂಗಾರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕಳುಹಿಸಿರುವ ತಮ್ಮ ರಾಜೀನಾಮೆಯನ್ನು ಹಿಂದಕ್ಕೆ ಪಡೆದು ಕಾಂಗ್ರೆಸ್ಸಿನಲ್ಲೇ ಉಳಿಯುವರೆಂದು ಹೇಳಲಾಗಿದೆ.

ತಮ್ಮ ವಾದಕ್ಕೆ ನೂತನವಾಗಿ ಸ್ಥಾಪಿತವಾದ ಪ್ರಜಾಪಕ್ಷವು ಬೆಂಬಲಕೊಡಲಿಲ್ಲವೆಂದು ಅವರು ಪ್ರಜಾಪಕ್ಷವನ್ನು ಬಹಿಷ್ಕರಿಸಿದರು. ಈಗ ಪುನಃ ಕಾಂಗ್ರೆಸ್ಸಿನಲ್ಲೇ ಉಳಿಯಲು ಯತ್ನಿಸುತ್ತಲಿರುವರೆಂದು ತಿಳಿಯಬರುತ್ತದೆ.

ಐ.ಎನ್.ಟಿ.ಯು.ಸಿ. ಪ್ರಾಂತೀಯ ಸಮ್ಮೇಳನ

ಮೈಸೂರು ನಗರದಲ್ಲಿ ೧೬ ಮತ್ತು ೧೭ನೇ ತಾ|| ಗಳಲ್ಲಿ ನಡೆದ ಐ.ಎನ್.ಟಿ.ಯು.ಸಿ. ಮೈಸೂರು ಪ್ರಾಂತಿಕ ಪ್ರಥಮ ಸಮ್ಮೇಳನವನ್ನು ಯಶಸ್ವಿಗೊಳ್ಳಲು ಸಹಕರಿಸಿದವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ. ಈ ಸಮ್ಮೇಳನಕ್ಕೆ ಸ್ವಾಗತಸಮಿತಿಯವರು ಯಾರಲ್ಲಿಯೂ ಹಣ ವಸೂಲಿಗೆ ಹೋಗದೆ ಕೆಲಸಗಾರರಿಂದಲೇ ವಸೂಲು ಮಾಡಿಸಿ ಸಂತೋಷವಾಗಿ ಕೊಟ್ಟು ಉಪಕಾರಮಾಡಿದ್ದಕ್ಕಾಗಿ ವಂದನೆಗಳು.

ಹಾಗೆಯೇ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದ ಜ|| ಅಬೀದ್ ಅಲಿಯವರಿಗೂ ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣಮಾಡಿದ ಶ್ರೀ ಕೆ.ಟಿ. ಭಾಷ್ಯಂರವರಿಗೂ ನಾನಾ ವಿಧವಾಗಿ ಸಹಾಯನೀಡಿದ ಸಂಘಸಂಸ್ಥೆಗಳು, ಸಾರ್ವಜನಿಕರು ಹಾಗೂ ಪತ್ರಿಕೆಗಳಿಗೆ ಸ್ವಾಗತಸಮಿತಿಯ ಪರವಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇವೆ. ಎಂದು ಶ್ರೀಗಳಾದ ಎ. ರಾಮಣ್ಣ ಮತ್ತು ಬಿ. ಬಾಲಯ್ಯನವರು ತಿಳಿಸುತ್ತಾರೆ.

LOST

Motor car Switch key M. R.N. 30 on friday near chamundi temple on the hills.
Finder will be rerwarded
CONTACT. SAMACHAR

Office of The Municipal Commissioner
Mysore, Dated 15-6-1951

ಹರಾಜು ಇಸ್ತಿಹಾರ್

ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಇದೇ ಮುನಿಸಿಪಾಲಿಟಿಗೆ ಸೇರಿದ ಒಂದು ಹಳೆಯ 'Inspection Van' ಅದು ಈಗಿರುವ ಪರಿಸ್ಥಿತಿಯಲ್ಲಿ ತಾ|| 30—6—1951 ಶನಿವಾರ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಮುಂಗಡವಾಗಿ ರೂ. 100/- ಗಳನ್ನು ಠೇವಣಿ ಇಟ್ಟು ಬಿಡ್ಡು ಮಾಡತಕ್ಕದ್ದು.

ಈ ಹರಾಜಿನ ಹೆಚ್ಚಿಗೆ ವಿವರಗಳನ್ನು ಆಫೀಸು ವೇಳೆಯಲ್ಲಿಯೂ ಮತ್ತು ನೋಟೀಸು ಬೋರ್ಡಿನಲ್ಲಿಯೂ ತಿಳಿಯಬಹುದು.

(Sd) ಸಿ. ನರಸಿಂಹಮೂರ್ತಿ
ಮು|| ಕಮೀಷನರ್

ರಣಜಿತ್

22—6—51ರಿಂದ ದಿನವೂ 3 ಆಟಗಳು
ಸುಲೋಚನಾ ಚಟರ್ಜಿ, ಮನೋರಮಾ, ಪ್ರೇಮ್ ಅದೀಬ್, ಗೋಪ್, ಕಕ್ಕೂ
ಪಾತ್ರವಹಿಸಿರುವ

-: ನಾ ಕಾ ಸ್ವಾರ್ :-
(ತಾಣಿಯ ಪ್ರೇಮ)

ಸಂಪಾದಕರು ಪ್ರಕಾಶಕರು :—
ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ
ಮೈಸೂರು.
ಮುದ್ರಕರು:— ಹಿ. ಕಾ. ಸುಬ್ಬರಾವ್,
ಮೋಹನ ಮುದ್ರಣಾಲಯ, ಮೈಸೂರು.

ರಿ. ನಂ. ಎಂ. ೫೩೧೮ ದಿನ ಪತ್ರಿಕೆ ಫೋನ್. ೫೭೪

ಸಮಾಚಾರ

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೬—೧೯೫೧ ಶುಕ್ರವಾರ [ಸಂಚಿಕೆ ೨೪೧

ಐಕ್ಯತೆಯಿಲ್ಲ ಆದರೆ ಸಂಪೂರ್ಣ ಸಹಕಾರ

ಸೋಷಲಿಸ್ಟ್ ಪಕ್ಷವನ್ನು ನೂತನ ಪ್ರಜಾಪಕ್ಷದೊಡನೆ ಐಕ್ಯತೆ ಮಾಡುವ ಪ್ರಶ್ನೆಯೇ ಇಲ್ಲ. ಆದರೆ ಉಭಯ ಪಕ್ಷಗಳೂ ಸಂಪೂರ್ಣ ಸಹಕಾರ ಮನೋಭಾವದಿಂದ ಕೆಲಸ ಮಾಡುತ್ತವೆ ಎಂದು ಆಚಾರ್ಯ ಕೃಪಲಾನಿಯವರು ಹೇಳಿರುವರು.

ಆಹ್ವಾನ

ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನಮಂದಿರದ ಡೈರೆಕ್ಟರಿಗೆ ಅಮೆರಿಕಾ ಸರ್ಕಾರದ ಪರವಾಗಿ ದೆಹಲಿಯಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಲಾಯ್ ಹೆಂಡರ್‌ಸನ್‌ರವರು ಅಮೆರಿಕಾದ ಆಧುನಿಕ ಯಂತ್ರ ವಿದ್ಯಾಕುಶಲತೆಯ ಪರಿಶೋಧನೆಯನ್ನು ವೀಕ್ಷಿಸಲು ಆಹ್ವಾನಿಸಿರುವರು.

ಡಾ|| ಲೋಹಿಯಾರವರ ಅರ್ಜಿ ಹೈಕೋರ್ಟಿನಲ್ಲಿ ನಿರಾಕರಣೆ

ಆಹಾರ ಮತ್ತು ಸಿವಿಲ್ ಸಪ್ಲೈ ಶಾಖೆಗಳು ಮುಖ್ಯಮಂತ್ರಿಯವರಿಗೆ

ಮೊದಲನೆ ಹಡಗು ಹೊರಟಿತು

ಅಮೆರಿಕಾವು ಭಾರತಕ್ಕೆ ಸರಬರಾಯಿ ಮಾಡುವ ೨೦ ಲಕ್ಷ ಟನ್ ಆಹಾರಧಾನ್ಯದಲ್ಲಿ ೯೬೦೦ ಟನ್ ಆಹಾರ-ಪದಾರ್ಥವನ್ನು ಹೊತ್ತ ಮೊದಲನೆಯ ಹಡಗು ೧೯ನೇ ತಾ|| ಫಿಲಡಲ್‌ಫಿಯಾದಿಂದ ಹೊರಟಿತು. ಭಾರತದ ಪರವಾಗಿ ಅಮೆರಿಕಾ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿಯವರು ಆಹಾರ-ಪದಾರ್ಥಗಳನ್ನು ಸ್ವೀಕರಿಸಿದರು.

ಬಟ್ಟೆ ಬೆಲೆ ಇಳಿಯಿತು

ಕೇಂದ್ರ ಸರ್ಕಾರದವರು ಸೂಪರ್ ಫೈನ್‌ಬಟ್ಟೆಯ ಬೆಲೆಯನ್ನು ಶೇಕಡ ಒಂದರಷ್ಟು, ಫೈನ್ ಬಟ್ಟೆಯ ಬೆಲೆ ಶೇಕಡ ಒಂದೂಕಾಲರಷ್ಟು ಇಳಿಸಿರುವರು. ಮುಂದಿನ ತಿಂಗಳು ಒಂದರಿಂದ ಜಾರಿಗೆ ಬರುವುದು.

ಬಿಹಾರಿಗೆ ದಾನ

ರಾಜಾಸ್ಥಾನದಲ್ಲಿರುವ ಜಮಯಿತ್ ಉಲ್ ಉಲೇಮಾಸಂಸ್ಥೆಯವರು ಬಿಹಾರಿನಲ್ಲಿರುವ ನೊಂದ ಜನರಿಗೆ ೪೧ ಮಣ ಅಕ್ಕಿ ದಾನಮಾಡಿರುವರು.

ಗಡಿನಾಡಿನ ಗಾಂಧಿಯವರು

ಪಾಕಿಸ್ಥಾನದ ರಾವಲ್‌ಪಿಂಡಿ ಜೈಲಿನಲ್ಲಿರುವ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್‌ಗಫಾರ್‌ಖಾನ್‌ರವರನ್ನು ಆರೋಗ್ಯಚಿಕಿತ್ಸೆಗಾಗಿ ಲಾಹೋರ್ ಜೈಲಿಗೆ ವರ್ಗಾಯಿಸಲಾಗಿದೆ.

ವಿವಾಹಮಹೋತ್ಸವ

ಬೆಂಗಳೂರು ಜೂನ್ ೨೧

ಶ್ರೀ ಷಣ್ಮುಗಂ ಪ್ರೋಸೆಸ್ ಸ್ಟುಡಿಯೋವಿನ ಮಾಲೀಕರಾದ ಶ್ರೀ ಎ. ಸುಂದರಮೂರ್ತಿಯವರು ತಮ್ಮ ಕುಮಾರ್ತಿ ಶ್ರೀಮತಿ ಸರಸ್ವತಿ ಅಮ್ಮಾಳ್‌ರವರನ್ನು ದಿವಂಗತ ಶ್ರೀ ಎಂ. ಸಿ. ಲಕ್ಷ್ಮಿಸ್ವಾಮಿಪಿಳ್ಳೆಯವರ ಪುತ್ರ ಚಿ|| ಎಂ. ಎಲ್. ವೆಂಕಟೇಶನ್‌ರವರಿಗೆ ಕೊಟ್ಟು ವಿವಾಹವನ್ನು ಮದ್ರಾಸಿನ ಟ್ರಿಪ್ಲಿಕೇನ್‌ನಲ್ಲಿರುವ ಕಲ್ಯಾಣಮಂಟಪದಲ್ಲಿ ನೆರವೇರಿಸಿದರು.

ಆಂಧ್ರಪ್ರಾಂತರಚನೆಗೆ ಸತ್ಯಾಗ್ರಹ

ಆಂಧ್ರಪ್ರಾಂತ್ಯವನ್ನು ಯಾವಾಗ, ಯಾವರೀತಿ ರಚನೆಯಾಗುವುದೆಂಬುದನ್ನು ಆಗಸ್ಟ್ ೧೫ನೇ ತಾ|| ಯೊಳಗೆ ನಿಷ್ಕರ್ಷೆ ಮಾಡದಿದ್ದರೆ ತಾವು ಸತ್ಯಾಗ್ರಹ ಹೂಡುವುದಾಗಿ ವಿನಯಾಶ್ರಮದ ಸ್ವಾಮಿ ಸೀತಾರಾಮರವರು ರಾಷ್ಟ್ರಾಧ್ಯಕ್ಷರಿಗೆ ಮತ್ತು ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವುದಾಗಿ ತಿಳಿಸಿರುವರು.

ಬಹುಮಾನದ ಪರಮಾವಧಿ ಮೊತ್ತ

ಬೊಂಬಾಯಿ ಸರ್ಕಾರವು ಅಲ್ಲಿನ ಹಲವು ವೃತ್ತಪತ್ರಿಕೆಗಳು ನಡೆಸುವ ಚಕ್ರಬಂಧಸ್ಪರ್ಧೆಯ ಬಹುಮಾನದ ಮೊತ್ತವನ್ನು ನಿಗದಿಮಾಡಿದೆ. ಇದರಂತೆ ಪರಮಾವಧಿ ಮೊತ್ತವು ೩೦,೦೦೦ ರೂ.ಗಳಿಗೆ ಮೀರಕೂಡದೆಂದು ಅಲ್ಲಿನ ಗೃಹಮಂತ್ರಿ ಶ್ರೀ ಮೊರಾರ್ಜಿದೇಸಾಯಿರವರು ತಿಳಿಸಿದ್ದಾರೆ. ಈ ಆಜ್ಞೆಯು ಬೊಂಬಾಯಿಯಲ್ಲಿ ಪ್ರಕಟವಾಗಿದ್ದು ಪತ್ರಿಕೆಗಳವರು ನಡೆಸುತ್ತಿರುವ ಚಕ್ರಬಂಧ ಸ್ಪರ್ಧೆಗಳಿಗೆ ಅನ್ವಯಿಸುವುದು.

ಲಿಗ್ನೈಟ್ ತೆಗೆಯಲು ಪರಿಶೀಲನೆ

ಮದರಾಸಿನ ದಕ್ಷಿಣ ಆರ್ಕಾಟ್ ಬಳಿ ಇರುವ ಲಿಗ್ನೈಟ್ ಎಂಬ ಕಲ್ಲಿದ್ದಲನ್ನು ಗಣಿಯಿಂದ ತೆಗೆಯಲು ಮತ್ತು ಇದರ ಉಪಯೋಗವನ್ನು ಪೂರ್ಣವಾಗಿ ತಿಳಿಯಲು ನಾಲ್ವರು ಅಮೆರಿಕನ್ ಪರಿಣತರು ಈ ಕಲ್ಲಿದ್ದಲನ್ನು ಪರಿಶೀಲಿಸುವರು.

ಒಲಿಂಪಿಯಾ

21-6-51ರಿಂದ ಪ್ರತಿದಿನ 3 ಪ್ರದರ್ಶನಗಳು

ನರ್ಗೀಸ್ ಖಾನ್, ಗೀತಾಬಾಲಿ, ಜೇಪಿಡ್, ಯಾಕೂಬ್, ಜೀವನ್ ನಟಿಸಿರುವ

* ನಖ್ರೆ *

ಉತ್ತಮ ಸಾಮಾಜಿಕ ಹಿಂದಿಚಿತ್ರ

ಪಾರ್ಲಿಮೆಂಟಿನ ಕೊನೆಯ ಅಧಿವೇಶನ

ಮಹಾ ಚುನಾವಣೆಗಳಿಗೆ ಮುನ್ನ ಪಾರ್ಲಿಮೆಂಟಿನ ಕೊನೆಯ ಅಧಿವೇಶನವು ಆಗಸ್ಟ್ ೬ನೇ ತಾ|| ಪ್ರಾರಂಭವಾಗಿ ಸೆಪ್ಟಂಬರ್ ೧೫ರವರೆಗೆ ನಡೆಯುವುದು. ರಾಷ್ಟ್ರಾಧ್ಯಕ್ಷರು ಪ್ರಾರಂಭ ಭಾಷಣವನ್ನು ಮಾಡುವರು.

ಚುನಾವಣೆಗಳ ಫಲಿತಾಂಶ

ಫ್ರಾನ್ಸ್‌ನಲ್ಲಿ ನಡೆದ ಮಹಾ ಚುನಾವಣೆಗಳ ಅಂತಿಮ ಫಲಿತಾಂಶವು ಹೊರಬಿದ್ದು ಸೋಷಲಿಸ್ಟರಿಂದ ಕೂಡಿದ ಸರ್ಕಾರಿ ಸಂಯುಕ್ತ ಪಕ್ಷವು ೨೮೫ ಸ್ಥಾನ ಡಿಗಾಲೆಪಕ್ಷವು ೧೧೮ ಸ್ಥಾನ ಕಮ್ಯೂನಿಸ್ಟಪಕ್ಷವು ೧೧೩ ಮಾಡರೇಟರುಗಳು ೯೦ ಸ್ಥಾನ ಮತ್ತು ಇತರರು ೨೩ ಸ್ಥಾನಗಳನ್ನೂ ಗಳಿಸಿರುವರು.

ದೆಹಲಿಗೆ ನೆಹರೂ

ನೇಪಾಳ ಮತ್ತು ಬಿಹಾರಿನಲ್ಲಿ ಪ್ರವಾಸ ಕೈಗೊಂಡಿದ್ದ ಪ್ರಧಾನಿ ನೆಹರೂರವರು ನಿನ್ನೆದಿನ ದೆಹಲಿಗೆ ವಾಪಸ್ ಬಂದರು.

ಸ್ವ.ಸು ಫೋನ್] ಬೆಂ. ಜೂನ್ ೨೧

ಸೋಷಲಿಸ್ಟ್ ನಾಯಕ ಡಾ|| ರಾಮಮನೋಹರ ಲೋಹಿಯಾರವರು ಮೈಸೂರು ಹೈಕೋರ್ಟಿನಲ್ಲಿ ತಮ್ಮ ಬಂಧನವು ಅಕ್ರಮವೆಂದು ತಮ್ಮನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ತಿಳಿಸಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರಷ್ಟೆ. ಅರ್ಜಿಯು ಈ ದಿನ ಚೀಫ್ ಜಸ್ಟಿಸ್ ಶ್ರೀ ಮೇದಪ್ಪ ಮತ್ತು ಜಸ್ಟಿಸ್ ಶ್ರೀ ವಾಸುದೇವಮೂರ್ತಿಯವರ ಮುಂದೆ ಪರಿಶೀಲನೆಯಾಗಿ ವಾದವಿವಾದಗಳನಂತರ ಅರ್ಜಿಯನ್ನು ತಳ್ಳಿಹಾಕಲಾಗಿದೆಯೆಂದು ತೀರ್ಪಿತ್ತಿರುವರು.

ಇಲಾಖೆಗಳ ವರ್ಗಾವಣೆ

ಭಾರತದ ಪ್ರಧಾನಿ ಪಂಡಿತ ನೆಹರೂರವರು ತಿಳಿಸಿದ್ದಂತೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಆಹಾರ ಮತ್ತು ಸಿವಿಲ್‌ಸಪ್ಲೈ ಇಲಾಖೆಗಳನ್ನು ವಹಿಸಿಕೊಳ್ಳುವರು. ಇದುವರೆವಿಗೂ ರೆವಿನ್ಯೂ ಸಚಿವರು ನೋಡಿಕೊಳ್ಳುತ್ತಿದ್ದ ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ಗೃಹ ಸಚಿವರಿಗೆ ವರ್ಗಾಯಿಸಲಾಗಿದೆ.

ಎಣ್ಣೆ ಕಂಪೆನಿ ಕಛೇರಿಗೆ ಬೀಗಮುದ್ರೆ

ಟೆಹರಾನಿನಲ್ಲಿ ಪ್ರದರ್ಶನಗಳು

ಪರ್ಷಿಯಾದ ಪೋಲೀಸರು ಈದಿನ ಆಂಗ್ಲೋ ಇರಾನಿಯನ್ ಕಂಪೆನಿಗೆ ಪ್ರವೇಶಿಸಿ ಕಛೇರಿಯನ್ನು ವಶಪಡಿಸಿಕೊಂಡು ಕಛೇರಿಗೆ ಸೀಲ್ ಮಾಡಿರುವರು.

ಪರ್ಷಿಯಾದ ಟೆಹರಾನಿನಲ್ಲಿರುವ ಆಂಗ್ಲೋ ಇರಾನಿಯನ್ ಎಣ್ಣೆ ಕಂಪನಿ ಪ್ರದೇಶದಲ್ಲಿ ನಿನ್ನೆ ಬೆಳಗ್ಗೆ ಸಾವಿರಾರು ಜನರ ಪ್ರದರ್ಶನವು ನಡೆದು ಕಂಪನಿಯ ಒಳಕ್ಕೆ ಜನರು ನುಗ್ಗಿ ಬಂದು ಲೈಟ್ ಒಡೆದರೆಂದೂ, ಕಂಪನಿಯ ಮೇಲೆ ಪರ್ಷಿಯದ ಧ್ವಜ ಹಾರಿಸಿದರೆಂದೂ ಪ್ರದರ್ಶನ ನಡೆದಾಗ ಒಬ್ಬರಿಗೂ ಘಾಯಗಳಾಗಲಿಲ್ಲವೆಂದೂ ತಿಳಿದುಬಂದಿದೆ.

ಪರ್ಷಿಯಾ ಸರ್ಕಾರದೊಡನೆ ಬ್ರಿಟನ್ನಿನ ಪ್ರತಿನಿಧಿಗಳು ನಡೆಸುತ್ತಿದ್ದ ಮಾತುಕಥೆಗಳು ಮುರಿದುಬಿದ್ದಿರುವ ಅಂಶವನ್ನು ಕಾಮನ್ಸ್ ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ. ಬ್ರಿಟನ್ನಿನಲ್ಲಿ ಮಂತ್ರಿಮಂಡಲದ ಸಭೆಯೂ ಸಹ ನಡೆದು ಅಲ್ಲಿಯೂ ಈ ಅಂಶವನ್ನು ಪರಿಶೀಲಿಸಲಾಯಿತು.

ಪರ್ಷಿಯಾದ ಈ ಕಾರ್ಯನೀತಿಯ ವಿಷಯದಲ್ಲಿ ಅಲ್ಲಿನ ಶಾಸನಸಭೆಗಳ ವಿಶ್ವಾಸಗಳಿಸಲು ಮುಖ್ಯಮಂತ್ರಿ ಡಾ|| ಮುಸಾದಿಕರವರು ಕಿರಿಯಶಾಸನ ಸಭೆಯನ್ನು ಕರೆದಿದ್ದರು. ಸಭೆಯು ಕೋರಂ ಇಲ್ಲದೆ ನಡೆಯಲಿಲ್ಲ, ಪುನಃ ಸಭೆ ಕರೆದಿರುವರು.

ಪಶುವೈದ್ಯಶಾಲಾ ಪ್ರಾರಂಭೋತ್ಸವ

ಮೈಸೂರು ಜೂನ್ ೨೧

ಸಂಸ್ಥಾನದಲ್ಲಿ ೧೯೩ ಪಶುವೈದ್ಯ ಶಾಲೆಗಳಿವೆ. ವ್ಯವಸಾಯದ ರಾಯಲ್ ಕಮಿಷನ್ನಿನ ವರದಿಯು ೨೫ ಸಾವಿರ ಪಶುಗಳಿಗೆ ಒಂದು ಆಸ್ಪತ್ರೆಯಿರಬೇಕೆಂಬ ಸಲಹೆಯಂತೆ ಇನ್ನು ೧೦೭ ವೈದ್ಯ ಶಾಲೆಗಳನ್ನು ಸ್ಥಾಪಿಸಿದರೆ ನಮ್ಮ ಕಾರ್ಯಕ್ರಮ ಮುಗಿದಂತಾಗುತ್ತದೆ. ಪಶುವೈದ್ಯ ಶಾಲೆಗಳನ್ನು ಸ್ಥಾಪಿಸುವುದರಲ್ಲಿ ಇತರ ಪ್ರಾಂತ್ಯಗಳಿಗಿಂತ ಮೈಸೂರು ಮುನ್ನಡೆಯಲ್ಲಿದೆ. ವಿದೇಶಿಯರೆಲ್ಲರೂ ನಮ್ಮ ಸಂಸ್ಥಾನದಲ್ಲಿರುವ ಪಶುವೈದ್ಯ ಶಾಲೆಯು ಅತ್ಯಂತ ಉತ್ತಮವಾದುದೆಂದು ಅಭಿಪ್ರಾಯಪಿತ್ತಿರುವರು ಎಂದು ಇಂದು ಬೆಳಗ್ಗೆ ಧರ್ಮಪ್ರವರ್ತ ಶ್ರೀ ಬಿ. ಸುಬ್ಬಣ್ಣನವರ ಪಶುವೈದ್ಯ ಶಾಲಾ ಪ್ರಾರಂಭೋತ್ಸವವನ್ನು ನಡೆಸುತ್ತಾ ರೆವೆನ್ಯೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಹೇಳಿದರು.

ಪೌರಸಭಾಧ್ಯಕ್ಷ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಸಚಿವರನ್ನು ಸ್ವಾಗತಿಸುತ್ತಾ, ಶ್ರೀ ಬಿ. ಸುಬ್ಬಣ್ಣನವರು ಈ ಆಸ್ಪತ್ರೆಗಾಗಿ ೨೫,೦೦೦ ರೂಪಾಯಿಗಳನ್ನು ಕೊಟ್ಟಿರುವರು. ಪೌರಸಭೆಯು ಆಸ್ಪತ್ರೆಯ ಸಲಕರಣೆಗಳಿಗೆ ೧೦೦೦ ರೂಪಾಯಿ ಕೊಡುವುದಲ್ಲದೆ ವರ್ಷಂಪ್ರತಿ ಆಸ್ಪತ್ರೆಯ ವೆಚ್ಚವನ್ನು ವಹಿಸಿಕೊಳ್ಳುವುದಾಗಿ ಹೇಳಿದರು.

ಒತ್ತಾಯ ಸೈನ್ಯಶಿಕ್ಷಣ

ರಾಷ್ಟ್ರಾಧ್ಯಕ್ಷ ಟ್ರೂಮನ್ನರು ಇಂದು ಒತ್ತಾಯ ಸೈನ್ಯಶಿಕ್ಷಣದ ಶಾಸನಕ್ಕೆ ರುಜು ಹಾಕಿದರು. ಇದರ ಪರಿಣಾಮವಾಗಿ ೧೮॥ ವರ್ಷಕ್ಕೆ ಮೇಲ್ಪಟ್ಟು ಇಪ್ಪತ್ತೈದು ವರ್ಷದೊಳಗಿರುವವರು ಮಿಲಿಟರಿ ಶಿಕ್ಷಣವನ್ನು ಪಡೆದೇ ತೀರಬೇಕು. ಹದಿನೆಂಟು ವರ್ಷದವರು ಸಹ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು.

ಬೆಲ್ಲದ ರವಾನೆ ನಿರ್ಬಂಧವಿಲ್ಲ

ಬೆಲ್ಲವನ್ನು ಬೊಂಬಾಯಿ ಪ್ರಾಂತ್ಯದಿಂದ ಹೊರಗಡೆ ಸಾಗಿಸುವ ಬಗ್ಗೆ ಸರ್ಕಾರ ವಿಧಿಸಿದ್ದ ನಿರ್ಬಂಧವನ್ನು ಇಂದಿನಿಂದ ತಗೆದುಹಾಕಿದೆ.

ಪ್ರಧಾನಿಗೆ ನೇಪಾಳದ ಪಾರಿತೋಷಕ

ನೇಪಾಳದ ಸರ್ಕಾರವು, ಅಲ್ಲಿಯ ದೊರೆ ಮತ್ತು ಪ್ರಜೆಗಳ ಪರವಾಗಿ ಭಾರತದ ಪ್ರಧಾನಿಗೆ ಅಪೂರ್ವವಾದ ಕುಸುರಿಕೆಲಸದ ವಸ್ತುಗಳು ದಂತದ ಕೆತ್ತನೆಯ ಸಾಮಗ್ರಿಗಳು ಮತ್ತು ಲೋಹದ ಸಾಮಾನುಗಳನ್ನು ಅರ್ಪಿಸಿತೆಂದು ಗೊತ್ತಾಗಿದೆ.

ಕಾಶ್ಮೀರದ ಭವಿಷ್ಯ ರಣರಂಗದಲ್ಲಿ

ಆಜಾದ್ ಕಾಶ್ಮೀರದ ಸ್ವಾತಂತ್ರ್ಯ ಚಳುವಳಿಯ ನಾಲ್ಕು ವರ್ಷಗಳ ಇತಿಹಾಸವನ್ನು ಅವಲೋಕಿಸಿದರೆ ಕಾಶ್ಮೀರದ ಭವಿಷ್ಯವು ಲೇಕ್ ಸಕ್ಸೆಸ್ಸಿನಲ್ಲಿ ಇತ್ಯರ್ಥವಾಗದೆ ರಣರಂಗದಲ್ಲೇ ನಿರ್ಧರಿಸಲ್ಪಡುವುದೆಂಬ ಅಂಶವು ಅನುಮಾನಕ್ಕೆ ಎಡೆಯಿಲ್ಲದಂತೆ ವ್ಯಕ್ತಪಡುವುದು.

ಎಂದು ಆಜಾದ್ ಕಾಶ್ಮೀರದ ಮಾಜಿ ಅಧ್ಯಕ್ಷ ಸರದಾರ್ ಮಹಮದ್ ಇಬ್ರಾಹಿಂರವರು ತಿಳಿಸಿದರು.

ಆನೆ ರಫ್ತಿಗೂ ಹತೋಟಿ

ವಿದೇಶಕ್ಕೆ ಸಾಗಿಸಬಹುದಾದ ವಸ್ತುಗಳ ವಿಚಾರದಲ್ಲಿ ನಿಯಂತ್ರಣ ವಿಧಿಸಿ ಸರ್ಕಾರ ಹೊರಡಿಸಿರುವ ಆಜ್ಞೆಯಲ್ಲಿ ಆನೆಗಳನ್ನೂ ಸೇರಿಸಲಾಗಿದೆ.

ದಾವಣಗೆರೆಯಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್

ದಾವಣಗೆರೆಯಲ್ಲಿ ವ್ಯಾಪಾರಸ್ಥರ ಸೌಕರ್ಯಕ್ಕಾಗಿ ಟೆಲಿಫೋನ್ ಎಕ್ಸ್‌ಚೇಂಜ್ ಇಡಲು, ಸ್ಥಳ ಸೌಕರ್ಯ ಒದಗಿಸಿಕೊಟ್ಟರೆ ಬೇಕಾದ ಸಕಲಯತ್ನ ಮಾಡಲಾಗುವುದೆಂದು ಪೋಸ್ಟ್ ಮಾಸ್ಟರ್ ಜನರಲ್‌ರವರು ಮೈಸೂರು ವಾಣಿಜ್ಯ ಸಂಸ್ಥೆಯವರಿಗೆ ತಿಳಿಸಿರುವರು.

ಅಧಿಕಾರ ಸೂತ್ರ

ರಾಷ್ಟ್ರಾಧ್ಯಕ್ಷರ ಪರವಾಗಿ ಗೌರ್ನರ್ ಚಂದೂಲಾಲ್ ತ್ರಿವೇದಿಯವರು ಪಂಜಾಬಿನ ಸರ್ಕಾರದಾಡಳಿತನ್ನು ಮೊನ್ನೆ ದಿನ ವಹಿಸಿಕೊಂಡರು.

ರೈಲ್ವೆ ಮುಷ್ಕರ ನಡೆಯುವುದು

'ರೈಲ್ವೆಮುಷ್ಕರ ನಡೆಯುವುದು ಅನಿವಾರ್ಯವೆಂದು ಕಾಣುತ್ತದೆ' ಎಂಬುದಾಗಿ ಅ॥ ಭಾ॥ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷ ಶ್ರೀಜೈಪ್ರಕಾಶ ನಾರಾಯಣರು ಸಂದರ್ಶನವೊಂದರಲ್ಲಿ ತಿಳಿಸಿದರು.

ಜಯಪ್ರಕಾಶರು ಮುಂದುವರೆದು 'ರೈಲ್ವೆ ಫೆಡರೇಷನ್ನಿನವರು ಮನೋಭಿಪ್ರಾಯ ಬದಲಿಸುವಂತಹ ಯಾವೊಂದು ಘಟನೆ ನಡೆದಿಲ್ಲ. ತುಟ್ಟಿಭತ್ಯದಲ್ಲಿ ೫ ರೂಗಳನ್ನು ಸರ್ಕಾರ ಹೆಚ್ಚಿಸಿರುವುದು ತೀರ ಸಾಲದು' ಎಂದರು.

'ಸಂಬಳಸಾರಿಗೆ ಸಮಿತಿಯ ಶಿಫಾರಸಿಗೆ ಅನುಗುಣವಾಗಿ, ಹೆಚ್ಚಿಸುವ ಜೀವನ ವೆಚ್ಚ ಸರಿದೂಗಿಸುವಷ್ಟು ತುಟ್ಟಿಭತ್ಯ ಕೊಡಬೇಕೆಂಬುದು ಫೆಡರೇಷನ್ನಿನ ಕೇಳಿಕೆ. ಸಂಬಳ ಸಮಿತಿಯು ಶಿಫಾರಿಸಿನಂತೆ, ೨೫೦ ರೂಗಳಿಗಿಂತ ಕಡಿಮೆ ಸಂಬಳ ಬರುವ ಕೆಲಸಗಾರರಿಗೆಲ್ಲ ೬೦ ರೂ ನಷ್ಟು ಭತ್ಯ ಹೆಚ್ಚಿಸಬೇಕು. ೫ ರೂ. ಹೆಚ್ಚಿಸಿರುವುದು ತೀರ ಅಲ್ಪ' ಎಂದರು.

ಉತ್ಕಟ ಪರಿಸ್ಥಿತಿ

ಬ್ರಿಟಿಷ್-ಪರ್ಷಿಯಾ ಎಣ್ಣೆ ವಿವಾದ ಇತ್ಯರ್ಥವಾಗದೆ ಮುರಿದುಬಿದ್ದುದರಿಂದ ಉತ್ಕಟ ಪರಿಸ್ಥಿತಿ ಉದ್ಭವವಾಗಿದೆಯೆಂದು ಅಮೆರಿಕಾ ಸಂಸ್ಥಾನ ಶಾಖಾಸಚಿವ ಮಿ॥ ಡೀನ್ ಅಚಿಸನ್ ರವರು ಹೇಳಿರುವರು.

ವುಡ್‌ಲ್ಯಾಂಡ್ಸ್ * ೧೭—೬—೫೧ರಿಂದ ಎರಡನೇ ವಾರ

ಉಮರ್ ಖಯ್ಯಾಂರವರ ಅಮೋಘವಾದ ಅತಿಸಾಹಸದ ಚಿತ್ರ

* ಉಸ್ತಾದ್ ಪೆಡ್ರೊ *

ಪಾತ್ರ— ಶೇಖ್‌ಮುಕ್ತಾರ್, ಬೇಗಂಪ್ಯಾರ, ಶಮ್ಮಿ, ಸಪ್ರು, ಅನ್ಸಾರಿ.

ಪ್ರಭಾ ಪಿಕ್ಚರ್ ಹೌಸ್

22-6-51ರಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಫೇಮಸ್ ಪಿಕ್ಚರ್ಸ್‌ರವರ ಅತ್ಯುತ್ತಮ ಪೌರಾಣಿಕ ಹಿಂದಿ ಚಿತ್ರ

* ಭೋಲಾ ಶಂಕರ್ *

(ಮೋಹಿನಿ ಭಸ್ಮಾಸುರ)

ಪಾತ್ರ— ಸಾಧನಾಬೋಸ್, ವಿಜಯಲಕ್ಷ್ಮಿ, (ಮಹಲ್ ಪ್ರಖ್ಯಾತಿ) ಪ್ರೇಂ ಆದಿಬ್ ಮತ್ತು ಭಗವಾನ್

ಬೆಳಗಿನ ಪ್ರದರ್ಶನ 22—6—51ರಿಂದ 3 ದಿನಗಳು ಮಾತ್ರ

ಲಾರೆಲ್ ಮತ್ತು ಹಾರ್ಡಿ ನಟಿಸಿರುವ— "ಅವರ್ ರಿಲೇಷನ್ಸ್"

ಸರ್ಕಾರಿ ಕೆಲಸಗಳಿಗೆ ನೂತನ ಆಜ್ಞೆ

ಸರ್ಕಾರಿ ಕೆಲಸಗಳಲ್ಲೂ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಲು ಮಾಡುವ ಆಜ್ಞೆಯ ನೀತಿಯನ್ನೇ ಅನುಸರಿಸಲಾಗುವುದೆಂದು ಮಗರಾಸಿನ [illegible] ಕೃಮತ್ತಲಂರವರು ಹೇಳಿರುವರು.

ಗೌರ್ನರ್ ಆಡಳಿತ ವಹಿಸಲು ಅವಕಾಶವಿಲ್ಲ

ರಾಜ್ಯಾಂಗ ಶಾಸನ ೩೫೬ನೇ ವಿಧಿಯ ಪ್ರಕಾರ ಒಂದು ಪ್ರಾಂತ್ಯದ ಅಧಿಕಾರ ರಾಷ್ಟ್ರಾಧ್ಯಕ್ಷರು ವಹಿಸಿಕೊಳ್ಳಬೇಕೇ [illegible] ಸಹ ಗೌರ್ನರರಿಗೆ ವಹಿಸಲು ಅವಕಾಶವಿಲ್ಲವೆಂದು ಪಂಜಾಬಿನ ಶಾಸನ ತಜ್ಞರೊಬ್ಬರು ಹೇಳಿರುವುದಾಗಿ ವರದಿಯಾಗಿದೆ.

ರೈಲ್ವೆ ನೌಕರರ ಸ್ಥಿತಿ

ರೈಲ್ವೆ ನೌಕರರು ಇತರ ಸರ್ಕಾರಿ ನೌಕರರಿಗಿಂತ ಉತ್ತಮ ಸ್ಥಿತಿಯಲ್ಲಿರುವರು. ರೈಲ್ವೆ ಮುಷ್ಕರವು ವರ್ಷಂಪ್ರತಿಯ ಪ್ರಶ್ನೆಯಾಗಿದೆ. ಸರ್ಕಾರವು ಇದರಿಂದ ಹೆದರುವುದಿಲ್ಲ. ಅಂದರೆ ನಾವು ಮಿಲಿಟರಿ ಪೋಲೀಸನ್ನು ಉಪಯೋಗಿಸುತ್ತೇನೆಂದು ಅರ್ಥವಲ್ಲ. ಆದರೆ ಕೋಟ್ಯಾಂತರ ಜನರ ಹಿತದ ಕಡೆ ದೃಷ್ಟಿಯಿಡಬೇಕೆಂದು ಕೇಂದ್ರ, ಕಾರ್ಮಿಕ ಸಚಿವ ಶ್ರೀ ಜಗಜೀವನ್‌ರಾಂರವರು ರೈಲ್ವೆ ನೌಕರರಿಗೆ ಎಚ್ಚರಿಸಿರುವರು.

ವಿರುದ್ಧಪಕ್ಷಗಳ ಅವಶ್ಯಕತೆ

ವಿರುದ್ಧ ಪಕ್ಷಗಳಿಲ್ಲದಿದ್ದರೆ ಪ್ರಬಲ ಪ್ರಭುತ್ವ ಪಕ್ಷ ಊಡೇರುವುದಿಲ್ಲವೆಂಬುದು ಸಹಜ. ಆದರೆ ಅಂತಹ ವಿರುದ್ಧಪಕ್ಷಗಳು ಸಂಪೂರ್ಣ ಜವಾಬ್ದಾರಿಯುತವಾಗಿರಬೇಕೆಂದು ಶ್ರೀ ಗಾಡ್ಗಿಲ್ಲರು ಹೇಳಿರುವರು.

ಟ್ರಂಕ್ ಟೆಲಿಫೋನ್ ದರ

ಮೈಸೂರು ಸಂಸ್ಥಾನದಲ್ಲಿನ ಸ್ಥಳಗಳಿಗೆ ಟ್ರಂಕ್ ಟೆಲಿಫೋನ್ ದರವನ್ನು ಇಳಿಸಬೇಕೆಂದು, ಮೈಸೂರು ವಾಣಿಜ್ಯ ಸಂಸ್ಥೆಯ ಸಮಿತಿಯವರು ಮದ್ರಾಸಿನ ಪೋಸ್ಟ್‌ಮಾಸ್ಟರ್ ಜನರಲ್ಲರನ್ನು ಭೇಟಿಮಾಡಿ ಕೇಳಿದಾಗ ಈ ವಿಚಾರವು ಸರ್ಕಾರ ಪರಿಶೀಲಿಸುತ್ತಿರುವುದಾಗಿ ಹೇಳಿರುವರು.

ಸರಸ್ವತೀಪೂಜೆ

ಮುನಿಸಿಪಲ್ ಕೌನ್ಸಿಲರ್ ಶ್ರೀ ಸಿ. ನರಸಿಂಹಮೂರ್ತಿಯವರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ಪದ್ಮಲಕ್ಷ್ಮೀ ಸಂಗೀತ ವಿದ್ಯಾಮಂದಿರ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ಸರಸ್ವತಿ ಪೂಜೆ ನಡೆಯುವುದು.

ಸಂಪಾದಕರು, ಪ್ರಕಾಶಕರು.- ಜಿ. ಎಲ್. ಸ್ವಾಮಿ ಟ್ಯೂಟರ್ಸ್ ಬ್ಯೂರೋ ಮೈಸೂರು.

ಮುದ್ರಕರು- ಬಿ. ಕಾ. ಸುಬ್ಬರಾವ್. ಮೋಹನ್ ಮುದ್ರಣಾಲಯ, ಮೈಸೂರು